JJ50
(B) 025236

ಕರ್ನಾಟಕ ಸರ್ಕಾರ

# ಕರ್ನಾಟಕ ವಿಧಾನ ಸಭೆಯ ನಡವಳಿಕೆಗಳು
# KARNATAKA LEGISLATIVE ASSEMBLY DEBATES

## ಅಧಿಕೃತ ವರದಿ
## OFFICIAL REPORT

ಹನ್ನೆರಡನೇ ವಿಧಾನಸಭೆಯ ಮೊದಲನೇ ಅಧಿವೇಶನ
**FIRST SESSION OF THE TWELTH LEGISLATIVE ASSEMBLY**

**ಸಂಪುಟ - 8 (ಕ್ರಮಾಂಕ 4 ರಿಂದ 5)** **Volume - VIII (No 4 to 5)**

**ಭಾಗ-2** **Part-2**

**(4ನೇ ಆಗಸ್ಟ್ 2004 ಹಾಗೂ 5ನೇ ಆಗಸ್ಟ್ 2004)**
(4th August 2004 and 5th August 2004)



**ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು**
**Karnataka Legislative Assembly Secretariat, Bangalore**

(15)025236

ಕರ್ನಾಟಕ ಸರ್ಕಾರ

# ಕರ್ನಾಟಕ ವಿಧಾನ ಸಭೆಯ ನಡವಳಿಕೆಗಳು
# KARNATAKA LEGISLATIVE ASSEMBLY DEBATES

## ಅಧಿಕೃತ ವರದಿ
## OFFICIAL REPORT

ಹನ್ನೆರಡನೇ ವಿಧಾನಸಭೆಯ ಮೊದಲನೇ ಅಧಿವೇಶನ

**FIRST SESSION OF THE TWELTH LEGISLATIVE ASSEMBLY**

ಸಂಪುಟ – 8 (ಕ್ರಮಾಂಕ 4 ರಿಂದ 5) **Volume - VIII (No 4 to 5)**

ಭಾಗ–2 **Part-2**

**(4ನೇ ಆಗಸ್ಟ್ 2004 ಹಾಗೂ 5ನೇ ಆಗಸ್ಟ್ 2004)**

(4th August 2004 and 5th August 2004)

ಕರ್ನಾಟಕ ವಿಧಾನಸಭೆಯ ಸಚಿವಾಲಯ, ಬೆಂಗಳೂರು

**Karnataka Legislative Assembly Secretariat, Bangalore**

111-1

# ಕರ್ನಾಟಕ ವಿಧಾನಸಭೆ

ಅಧ್ಯಕ್ಷರು

ಶ್ರೀ ಕೃಷ್ಣ

ಕಾರ್ಯದರ್ಶಿ

ಶ್ರೀ ಟಿ ರಾಜಣ್ಣ

# ಕರ್ನಾಟಕ ವಿಧಾನಸಭೆಯ ಕಡತವಳಿಕೆಗಳು
## ವಿಷಯಾನುಕ್ರಮಣಿಕೆ
## ಸಂಪುಟ–8 (ಕ್ರಮಾಂಕ 4 ರಿಂದ 5)
## (4ನೇ ಆಗಸ್ಟ್ 2004, ಮತ್ತು 5ನೇ ಆಗಸ್ಟ್ 2004)
## ಬುಧವಾರ, ದಿನಾಂಕ 4ನೇ ಆಗಸ್ಟ್ 2004

ಪುಟ ಸಂಖ್ಯೆ


**1) ಪ್ರಶ್ನೋತ್ತರಗಳು** 611–681

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು (28–07–04 ಅನುಬಂಧ–I)

**2) ಸಭೆಯ ಮುಂದಿಡಲಾದ ಕಾಗದ ಪತ್ರಗಳು** 682

**3) ಹಕ್ಕುಚ್ಯುತಿ ಪ್ರಸ್ತಾವ** 682–685

ವಿಧಾನ ಸಭೆಯಲ್ಲಿ ಸಿ ಇ ಟಿ ಮಸೂದೆ ಅಂಗೀಕಾರವಾಗಿರುವುದರ ಬಗ್ಗೆ

–ಶ್ರೀ ಕೆ ಎನ್ ರಾಜಣ್ಣ

**4) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು** 685–690

1) ದಿನಾಂಕ 2–8–04ರಂದು ಹಿರೇಕೆರೂರು ತಾಲ್ಲೂಕಿನ ಸ್ಟೇಷನ್ ವ್ಯಾಪ್ತಿಗೆ ಬರುವ ಗುಬ್ಬಿ ಗ್ರಾಮದಲ್ಲಿ ನಡೆದಿರುವ ಘಟನ ಕುರಿತು

–ಶ್ರೀ ಬಿ ಸಿ ಪಾಟೀಲ್

–ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು)

11) 2003ನೇ ಸಾಲಿನ ಮಹಾಲೇಖಪಾಲರ ವರದಿಯಲ್ಲಿ ಕುದುರೆಮುಖ ಅದಿರು ಕಂಪನಿ 139 ಕೋಟಿ ರೂಗಳನ್ನು ಸರ್ಕಾರಕ್ಕೆ ಬಾಕಿ ಉಳಿಸಿಕೊಂಡಿದೆ ಎಂದು ಉಲ್ಲೇಖವಾಗಿರುವ ಬಗ್ಗೆ 690–692

–ಶ್ರೀ ಸಿ ಟಿ ರವಿ

–ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)

–ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

111) ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ವಿವಿಧ ಇಲಾಖೆಗಳಲ್ಲಿ ಸುಮಾರು 385 ಹುದ್ದೆಗಳು ಖಾಲಿ ಇರುವುದರ ಬಗ್ಗೆ 692–694

–ಶ್ರೀ ಆಲ್ಕೋಡು ಹನುಮಂತಪ್ಪ

–ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು)

1v) ಶಿಡ್ಲಘಟ್ಟದಲ್ಲಿ ರೈತರಿಗೆ ಕಳಪೆ ರಸಗೊಬ್ಬರವನ್ನು ಸರಬರಾಜು ಮಾಡಿರುವ ಬಗ್ಗೆ 694–696

–ಶ್ರೀ ಜೆ ವಿ ಶ್ರೀರಾಮರೆಡ್ಡಿ

–ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

V)ಹೊನ್ನಾವರ ತಾಲ್ಲೂಕಿನ ಶರಾವತಿ ಮತ್ತು ಉಂಬಳ ನದಿಗಳು ತುಂಬಿ ಹರಿಯುದ್ದು ತಗ್ಗು ಪ್ರದೇಶದಲ್ಲಿರುವ ಮನೆಗಳು ಬಿದ್ದು ಹೋಗಿರುವ ಕಡೆ ಪುನರ್ ವ್ಯವಸ್ಥೆ ಕಲ್ಪಿಸುವ ಬಗ್ಗೆ. 696–700

–ಶ್ರೀ ಶಿವಾನಂದ ನಾಯ್ಕ

–ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ

–ಶ್ರೀ ಕೆ ರಘುಪತಿ ಭಟ್

–ಶ್ರೀ ಎನ್ ಯೋಗೀಶ್ ಭಟ್

–ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು)

–ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)

VI) ಬಚಾವತ್ ಆಯೋಗದ ಬಗ್ಗೆ

–ಶ್ರೀ ವೈಜನಾಥ್ ಪಾಟೀಲ್ 701–704

VII) ಮಂಗಳೂರಿನಿಂದ ಬೆಂಗಳೂರಿಗೆ ಎಂ ಆರ್ ಪಿ ಎಲ್ ಕಂಪನಿ ಯವರು ಸರಬರಾಜು ಮಾಡುತ್ತಿದ್ದ ತೈಲ ಸೋರಿಕೆಯಿಂದಾಗಿ ಪರಿಸರ ಹಾಗೂ ಜಲಚರ ಪ್ರಾಣಿಗಳಿಗೆ ಆಗುತ್ತಿರುವ ತೊಂದರೆ ಕುರಿತು

– ಶ್ರೀ ಹೆಚ್ ಎಂ ವಿಶ್ವನಾಥ್

–ಶ್ರೀ ಎಂ ಪಿ ಪ್ರಕಾಶ್

–(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

VIII) ಚಿಕ್ಕಮಗಳೂರು ಜಿಲ್ಲೆಗೆ ಜಿಲ್ಲಧಿಕಾರಿಗಳನ್ನು ನೇಮಿಸುವ ಬಗ್ಗೆ

–ಶ್ರೀ ಎಸ್ ಎಲ್ ಧರ್ಮೇಗೌಡ 704

–ಶ್ರೀ ಎಂ ಪಿ ಪ್ರಕಾಶ್

–(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**5) ಸದಸ್ಯರ ವರ್ತನೆ ಬಗ್ಗೆ ಅಧ್ಯಕ್ಷರ ಆಕ್ರೋಶ** 705

**6) ಅಧ್ಯಕ್ಷರು ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯುಗಳು (ಮುಂದು)** 706–708

IX) ರಾಜ್ಯ ಸರ್ಕಾರ ಆಯವ್ಯಯವನ್ನು ಮಂಡಿಸಿದ ಮೇಲೆ ಆರ್ಥಿಕ ನೀತಿಯಿಂದ ಪರಭಾಷಾ ಚಿತ್ರಗಳಿಗ ಅಪಾರವಾದ ಬೆಂಬಲವನ್ನು ನೀಡಿದಂತಾಗಿರುವ ಬಗ್ಗೆ

–ಶ್ರೀ ವಾಟಾಳ್ ನಾಗರಾಜ್

–ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

X) ತುಂಗಾ ಏತ ನೀರಾವರಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ 708–710

– ಶ್ರೀ ಎಂ ರೇಣುಕಾಚಾರ್ಯ

–ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

–ಶ್ರೀ ಹೆಚ್ ಹಾಲಪ್ಪ

XI) ಶೃಂಗೇರಿ ಕ್ಷೇತ್ರದಲ್ಲಿ ನಕ್ಸಲೀಯರ ಚಟುವಟಿಕೆ 710–713

–ಶ್ರೀ ಡಿ ಎಸ್ ಜೀವರಾಜ್

–ಶ್ರೀ ಎಂ ಪಿ ಪ್ರಕಾಶ್
–(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

**7) ವಿತ್ತೀಯ ಕಾರ್ಯಕಲಾಪಗಳು**

2004–05ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲಿನ ಚರ್ಚೆ ಹಾಗೂ ಉತ್ತರ 713–751
–ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)
–ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು)
–ಶ್ರೀ ಜೆ ಸಿ ಮಾಧುಸ್ವಾಮಿ
–ಶ್ರೀ ವಾಟಾಳ್ ನಾಗರಾಜ್
–ಶ್ರೀ ಜಿ ವಿ ಶ್ರೀರಾಮರೆಡ್ಡಿ
–ಶ್ರೀ ಎಸ್ ರಾಜೇಂದ್ರನ್
–ಶ್ರೀ ಕೆ ಉಯಪ್ರಾಕಾಶ್ ಹಗ್ಡೆ
–ಶ್ರೀ ಜಗದೀಶ್ ಶೆಟ್ಟರ್
–ಶ್ರೀ ಅರಗ ಜ್ಞಾನೇಂದ್ರ
–ಶ್ರೀ ಎಂ ಗೋವಿಂದ ಕಾರಜೋಳ
–ಶ್ರೀ ಸಿದ್ಧರಾಮಯ್ಯ
–(ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸು ಮತ್ತು ಅಬ್ಕಾರಿ ಸಚಿವರು)
–ಅಂಗೀಕರಿಸಲಾಯಿತು)

**8) ಶಾಸನ ರಚನೆ –**

ಅ)ವಿಧೇಯಕ ಮಂಡನೆ ಪರ್ಯಾಲೋಚನೆ ಮತ್ತು ಅಂಗೀಕಾರ 751–752
ಕರ್ನಾಟಕ ಧನವಿನಿಯೋಗ (ಸಂಖ್ಯೆ–2) ವಿಧೇಯಕ, 2004 (ಅನುಬಂಧ–II)
–ಶ್ರೀ ಸಿದ್ಧರಾಮಯ್ಯ
–(ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಮತ್ತು ಅಬ್ಕಾರಿ
–ಸಚಿವರು)
–(ಅಂಗೀಕರಿಸಲ್ಪಟ್ಟಿತು)

**9) ನಿಯಮ 69ರ ಮೇರೆಗೆ (ಮುಂದುವರೆದ ಚರ್ಚೆ)** 752–791

ಅ) ಬೆಂಗಳೂರಿನಲ್ಲಿ ವಿವಿಧ ಯೋಜನೆಗಳಿಗೆ ಭೂ ಸ್ವಾಧೀನ ಮಾಡಿರುವಲ್ಲಿ ಹಾಗೂ ಬಿ ಡಿ ಎ ಯಿಂದ ಹಂಚಿಕೆಯಾಗಿರುವ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ನಡೆದಿದೆ ಎನ್ನಲಾದ ಹಗರಣಗಳ ಬಗ್ಗೆ
–ಡಾ॥ ಕ ಅನ್ನದಾನಿ
–ಶ್ರೀ ಕೆ ಜಯಪ್ರಕಾಶ್ ಹೆಗ್ಡೆ
–ಶ್ರೀ ವಾಟಾಳ್ ನಾಗರಾಜ್
–ಶ್ರೀ ಬಸವರಾಕ್ ರಾಯರೆಡ್ಡಿ

**10)ಅನುಬಂಧ–I,II** 791–853

## ಗುರುವಾರ, ದಿನಾಂಕ 5ನೇ ಆಗಸ್ಟ್ 2004


1) ಸಂತಾಪ ಸೂಚನೆ 854–857

2) ಪ್ರಶ್ನೋತ್ತರ 857–960

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು 960

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

(ದಿ 29–7–04 ಮತ್ತು 30–7–04 ಅನುಬಂಧ–1)

3) ಸಭೆಯ ಮುಂದಿಡಲಾದ ಕಾಗದ ಪತ್ರಗಳು 960

4) ಅರ್ಜಿಯನ್ನೊಪ್ಪಿಸುವುದು 961

5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು 962

1) ತಿಮ್ಮಪ್ಪನಾಯಕನ ಕೊಲೆ ಮತ್ತು ಇತರ ವಿಷಯಗಳ ಬಗ್ಗೆ ಸರ್ಕಾರದ ವತಿಯಿಂದ ಉತ್ತರ ನೀಡದಿರುವ ಬಗ್ಗೆ.

– ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)

– ಶ್ರೀ ಕೆ ಜಯಪ್ರಕಾಶ್ ಹೆಗ್ಡೆ

– ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು)

– ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

2) 'ತಿಮ್ಮಪ್ಪನಾಯಕನ ಕೊಲೆ ಬಗ್ಗೆ ಮುಖ್ಯಮಂತ್ರಿಗಳಿಂದ ಉತ್ತರ 963–970

– ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

– ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)

– ಶ್ರೀ ಶಿವಾನಂದ ನಾಯಕ್

3) ಬೆಂಗಳೂರು ನಗರದ ತಿಲಕ್ ನಗರ ಬಡಾವಣೆಯಲ್ಲಿ ಸಾಗರ್ ಅಪೋಲೋ ಆಸ್ಪತ್ರೆ ಮತ್ತು ಗಾಂಧಿನಗರದಲ್ಲಿರುವ ಲೋಟಸ್ ಲ್ಯಾಬೋರೇಟರಿಗಳು ಹಣದ ಆಮಿಷ ತೋರಿಸಿ ವಂಚಿಸುತ್ತಿರುವ ಬಗ್ಗೆ 970

– ಶ್ರೀ ಬಿ ಆರ್ ಪಾಟೀಲ್

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

4) ಪಾಲಿಟೆಕ್ನಿಕ್‌ಗಳಲ್ಲಿ ಸೇರಿದ ವಿದ್ಯಾರ್ಥಿಗಳ ಸಮಸ್ಯೆ 970

– ಶ್ರೀ ಕೆ ಜಯಪ್ರಕಾಶ್ ಹೆಗ್ಡೆ

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

5) ಕರ್ನಾಟಕದಲ್ಲಿ ಛತ್ರಪತಿ ಶಿವಾಜಿ ಜಯಂತಿಯನ್ನು ಸಾರ್ವತ್ರಿಕ ರಜೆಯನ್ನಾಗಿ ಘೋಷಿಸುವ ಬಗ್ಗೆ. 971

– ಶ್ರೀ ಪ್ರಕಾಶ್ ಖಂಡ್ರೆ

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

6) ಬೆಣ್ಣೆ ತೊರೆ ಯೋಜನೆ ಕುರಿತು 972–977
– ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್
– ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)
7) ತುಂಗಾ ಮೇಲ್ದಂಡೆ ಯೋಜನೆಯಿಂದ ಬ್ಯಾಡಗಿ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಬಗ್ಗೆ 977
– ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ
– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)
8) ಗುಲ್ಬರ್ಗಾ ಜಿಲ್ಲೆಯಲ್ಲಿನ ಕಾಗಿನಾ ನದಿಗೆ ಬ್ಯಾರೇಜ್ ನಿರ್ಮಾಣ 978
– ಶ್ರೀ ಸುನೀಲ್ ವಲ್ಲಾಪುರೆ
– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)
9) Construction of bridges and roads in Belgaum and Khanapur Taluks 979
- Sri Manohar Kallappa kinekar
- Sri K Srinivasa Gowda (Min for Agriculture)
10) ಮರಗಳ ಕಳ್ಳ ಸಾಗಾಣಿಕೆ ಸಂದರ್ಭದಲ್ಲಿ ವಶಪಡಿಸಿಕೊಳ್ಳಲಾದ ವಾಹನಗಳನ್ನು ಸೀಜ್ ಮಾಡುವ ಬಗ್ಗೆ. 980
– ಶ್ರೀ ಡಿ ಎನ್ ಜೀವರಾಜ್
– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)
11) ನಕಲಿ ಶಿಕ್ಷಕರುಗಳನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳುವ ಕುರಿತು 980
– ಶ್ರೀ ಸಿ ಟಿ ರವಿ
– ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)
12) ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅವಧಿಯು ಮುಗಿದಿದ್ದು, ವಿಧಾನ ಸಭಾ ಸದಸ್ಯರಿಗೆ ನೋಂದಾಯಿತ ಪೋಷಕರ ಪಟ್ಟಿಯಿಂದ 9 ಜನ ಪೋಷಕರನ್ನು ಆಯ್ಕೆ ಮಾಡುವ ಅಧಿಕಾರ ನೀಡಿರುವ ಬಗ್ಗೆ 981–983
– ಶ್ರೀ ಶಿವರಾಜ್ ಸಜ್ಜನರ್
– ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)
– ಶ್ರೀ ಸಿ ಎಂ ಉದಾಸಿ
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)
13) ಕೇಂದ್ರ ಸರ್ಕಾರದ ಯೋಜನೆಯಂತೆ ಕರ್ನಾಟಕದಲ್ಲೂ ಶಿಕ್ಷಣ ಯೋಜನೆಯಡಿಯಲ್ಲಿ ಪ್ರೇರಕ, ಉಪ ಪ್ರೇರಕರಿಗೆ ಗೌರವ ಧನ ಮಂಜೂರು ಮಾಡದಿರುವ ಬಗ್ಗೆ 983

– ಶ್ರೀ ಕೆ ಪ್ರಭಾಕರ ಬಂಗೇರ

– ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

14) ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯು ಒದಗಿಸಿರುವ ಸೌಲಭ್ಯಗಳ ಬಗ್ಗೆ 984–986

– ಶ್ರೀಮತಿ ಟಿ ಭಾಗೀರಥಿ

– ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

15) ನರಗುಂದ ಕ್ಷೇತ್ರದ ರೋಣ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಕಾಡುದನಗಳ ಹಾವಳಿ

– ಶ್ರೀ ಸಿ.ಸಿ ಪಾಟೀಲ್

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

16) ಸುಳ್ಯ ಕ್ಷೇತ್ರದಲ್ಲಿ ಚಲಾವಣೆ ಆಗುತ್ತಿರುವ ಖೋಟಾ ನೋಟು ಪ್ರಕರಣದ ಬಗ್ಗೆ 986–989

– ಶ್ರೀ ಎಸ್ ಅಂಗಾರ

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

17) ಹೊಸನಗರ ತಾಲ್ಲೂಕಿನ ಸರ್ಕಾರಿ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ತೆರೆಯುವ ಬಗ್ಗೆ 989–990

– ಶ್ರೀ ಹೆಚ್ ಹಾಲಪ್ಪ

– ಶ್ರೀ ಆರಗ ಜ್ಞಾನೇಂದ್ರ

– ಶ್ರೀ ಡಿ, ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

18) ಸಂಕಷ್ಟಕ್ಕೊಳಗಾದ ದಲಿತ ಕುಟುಂಬಕ್ಕೆ ಪರಿಹಾರ ಒದಗಿಸುವುದು

– ಶ್ರೀ ಎಂ ವೈ. ಪಾಟೀಲ್ 990–991

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

19) ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಟೆಕ್ವಿಪ್ ಪ್ರೋಗ್ರಾಂನ್ನು ಜಾರಿಗೊಳಿಸುವ ಬಗ್ಗೆ 991–992

– ಶ್ರೀ ವೀರಣ್ಣ ಚಂದ್ರಶೇಖರಯ್ಯ

– ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

20) ಕಾವೇರಿ ನೀರಾವರಿ ನಿಗಮಕ್ಕೆ ಹೆಚ್ಚಿನ ಧನ ಸಹಾಯ ಒದಗಿಸುವ ಬಗ್ಗೆ 992–993

– ಶ್ರೀ ಎಂ ಟಿ ಕೃಷ್ಣಪ್ಪ

– ಶ್ರೀ ಎಸ್ ಶಿವಣ್ಣ

– ಶ್ರೀ ಹೆಚ್ ನಿಂಗಪ್ಪ

– ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

21) ಕೃಷ್ಣ ನದಿಯ ಹಿನ್ನೀರಿನ ಬಳಕೆ ಪರವಾನಗಿ ನೀಡುವ ಕುರಿತು 993–994

– ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

22) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಹಾಗೂ ಬಿರುಗಾಳಿಯಿಂದ ಮನೆಗಳು ವಿದ್ಯುತ್ ಕಂಬಗಳು ಮರಗಳು ಬಿದ್ದು ಸಾರ್ವಜನಿಕರಿಗೆ ತೊಂದರೆಯಾಗಿರುವುದರ ಬಗ್ಗೆ 994–995

– ಶ್ರೀ ಕೆ ರಘುಪತಿ ಭಟ್

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

23) ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿ ಡಿ ಎಫ್ ಓ ಅವರು ಗಂಧದ ಮರಗಳನ್ನು ಸಾಗಿಸುತ್ತಿರುವುದರ ಬಗ್ಗೆ ಹಾಗೂ ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ ಚಳುವಳಿ ಮಾಡುತ್ತಿರುವುದರ ಬಗ್ಗೆ 995–997

– ಶ್ರೀ ಎಸ್ ಎಲ್ ಧರ್ಮೇಗೌಡ

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

24) ಮಂಡ್ಯ ತಾಲ್ಲೂಕಿನ ಬಿಳಿದೇಗಿಲು ಗ್ರಾಮದಲ್ಲಿ ತಮ್ಮೇಗೌಡ ಉರುಫ್ ಪುಟ್ಟಸ್ವಾಮಿ ಅವರು ಸಾಲದ ಬಾಧೆ ತಡೆಯಲಾರದೆ ಆತ್ಮಹತ್ಯೆ ಮಾಡಿಕೊಂಡಿರುವುದರ ಬಗ್ಗೆ 997–998

– ಶ್ರೀ ಎನ್ ಚಲುವರಾಯಸ್ವಾಮಿ

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

25) ಕೆ.ಹೆಚ್.ಎಸ್ ಡಿ.ಸಿ. ವತಿಯಿಂದ ವೆನ್ ಲಾಕ್ ಆಸ್ಪತ್ರೆಯಲ್ಲಿ ಸುಮಾರು 5 ಕೋಟಿ ರೂ ಗಳ ಕಾಮಗಾರಿ ನಡೆದಿದ್ದರೂ ಸೌಕರ್ಯ ಇಲ್ಲದಿರುವುದರ ಬಗ್ಗೆ 998–999

– ಶ್ರೀ ಎನ್ ಯೋಗೀಶ್ ಭಟ್

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

26) ಕಮಲಾಪುರ ಕ್ಷೇತ್ರದಲ್ಲಿ ಗ್ರಾಮಗಳಿಗೆ ರಸ್ತೆ ಸೌಕರ್ಯ ಮತ್ತು ಅವುಗಳ ನಿರ್ವಹಣೆ ಮಾಡುವ ಬಗ್ಗೆ. 999–1000

– ಶ್ರೀ ರೇವುನಾಯಕ್ ಬೆಳಮಗಿ

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

27) ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಿಂದ ಸಂಗ್ರಹಿಸಿದ ಶುಲ್ಕವನ್ನು ರೇಷ್ಮೆ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದ ಮೂಲಕ ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗಿಸುವ ಬಗ್ಗೆ 1000–1002

– ಶ್ರೀ ಆರ್ ಧ್ರುವನಾರಾಯಣ

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

28) ಮಾಲೇಕಲ್ ತಿರುಪತಿಯಲ್ಲಿ ರಥ ಯಾತ್ರೆಯ ಸಂದರ್ಭದಲ್ಲಿ ಗೋಪುರ ಕುಸಿದು ಸತ್ತವರಿಗೆ ಮತ್ತು ಗಾಯಗೊಂಡವರಿಗೆ ಪರಿಹಾರ ನೀಡುವ ಬಗ್ಗೆ 1002

– ಶ್ರೀ ಹೆಚ್ ಡಿ ಬಸವರಾಜ್

– ಶ್ರೀ ಬಿ ನಂಜಾಮರಿ

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

29) ಪಶುಸಂಗೋಪನಾ ಇಲಾಖೆಯವರು ಔಷಧಿ ಖರೀದಿ ಹಣದ ದುರುಪಯೋಗ ಮಾಡಿರುವ ಬಗ್ಗೆ 1002–1005

– ಶ್ರೀ ಆರಗ ಜ್ಞಾನೇಂದ್ರ

– ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

30) ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ಬೊಮ್ಮನಹಳ್ಳಿ ನಗರ ಸಭಾ ವ್ಯಾಪ್ತಿಗೆ ಬರುವ ಕೋಡಿ ಚಿಕ್ಕನಹಳ್ಳಿ ಗ್ರಾಮದ ಪ್ರೌಢ ಶಾಲೆಗೆ ಕಾದಿರಿಸಿದ ಗೋಮಾಳವನ್ನು ಖಾಸಗಿಯವರಿಗೆ ನೀಡಿರುವುದು 1005–1007

– ಡಾ ಕೆ ಅನ್ನದಾನಿ

– ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಸಚಿವರು)

31) ಮೇಲ್ಮನೆಯಲ್ಲಿ ತುಮಕೂರು ಜಿಲ್ಲಾ ಪರಿಷತ್ತಿನಲ್ಲಿ ನಡೆದ ಘಟನೆ ಬಗ್ಗೆ ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿ ಹಕ್ಕುಚ್ಯುತಿ ಸಮಿತಿಯ ಪರಿಶೀಲನೆಗೆ ಕಳುಹಿಸಿರುವುದರ ಬಗ್ಗೆ 1007–1009

– ಶ್ರೀ ಜೆ ಸಿ ಮಾಧುಸ್ವಾಮಿ

– ಶ್ರೀ ಕೆ ಎನ್ ರಾಜಣ್ಣ

– ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಸಚಿವರು)

**6) ಪ್ರಕಟಣೆ** 1009

**7) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

1) ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ಸ್ ಆಡಳಿತಾಧಿಕಾರಿ ನೇಮಿಸುವ ಬಗ್ಗೆ 1010–1021

– ಶ್ರೀ ವಾಟಾಳ್ ನಾಗರಾಜ್

– ಶ್ರೀ ಜಿ ವಿ ಶ್ರೀರಾಮರೆಡ್ಡಿ

– ಶ್ರೀ ಕೆ ಆರ್ ರಮೇಶ್ ಕುಮಾರ್

– ಶ್ರೀ ಜೆ ಸಿ ಮಾಧುಸ್ವಾಮಿ

– ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು)

– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

2) ಮಾದಿಗ ಜನಾಂಗದವರಿಗೆ ಒಳ ಮೀಸಲಾತಿ ಹಂಚಿಕೆಯಲ್ಲಿ ವ್ಯತ್ಯಾಸ ಆಗಿರುವುದರ ಬಗ್ಗೆ 1021–1032

– ಶ್ರೀ ಹೆಚ್ ಆಂಜನೇಯ

– ಶ್ರೀ ಎ ನಾರಾಯಣಸ್ವಾಮಿ

– ಶ್ರೀ ಆಲ್ಕೋಡ್ ಹನುಮಂತಪ್ಪ
– ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)
3) ಕೊಡಗಿನಲ್ಲಿ ಮಳೆ ಹಾನಿಯಿಂದ ಆಸ್ತಿಪಾಸ್ತಿ ಕಳೆದುಕೊಂಡವರಿಗೆ ಪರಿಹಾರ ನೀಡುವ ಬಗ್ಗೆ 1032–1040
– ಶ್ರೀ ಹೆಚ್ ಡಿ ಬಸವರಾಜ್
– ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಸಚಿವರು)
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

**8) ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ** 1040–1097

ಕೂಲಿಗಾಗಿ ಕಾಳು ಯೋಜನೆಗೆ ಮೀಸಲಿಟ್ಟ ಅಕ್ಕಿ ಹಾಳಾಗುತ್ತಿರುವುದು ಹಾಗೂ ಸದರಿ ಯೋಜನೆ ಸ್ಥಗಿತವಾಗಿರುವ ಬಗ್ಗೆ
– ಶ್ರೀ ಎ ಟಿ ರಾಮಸ್ವಾಮಿ
– ಶ್ರೀ ಎಂ ಪಿ ವೆಂಕಟೇಶ್
– ಶ್ರೀ ಜಿ ಟಿ ದೇವೇಗೌಡ
– ಶ್ರೀ ಸಿ ಎಸ್ ಪುಟ್ಟೇಗೌಡ
– ಶ್ರೀ ಹೆಚ್.ಸಿ ಬಾಲಕೃಷ್ಣ
– ಶ್ರೀ ಜಿ ಚಂದ್ರಣ್ಣ
– ಶ್ರೀ ಮಹಾದೇವ್ ಎಂ
– ಶ್ರೀ ಚಲುವರಾಯಸ್ವಾಮಿ ಎನ್
– ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಸಚಿವರು)

**9) ನಿಯಮ 69ರ ಮೇರೆಗೆ ಚರ್ಚೆ** 1098–1172

ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆದಿದೆ ಎನ್ನಲಾದ ಭೂಹಗರಣದ ಬಗ್ಗೆ
–(ಮುಂದುವರೆದ ಚರ್ಚೆ)
– ಶ್ರೀ ಬಸವರಾಜ್ ರಾಯರೆಡ್ಡಿ
– ಶ್ರೀ ಆರ್ ವಿ ದೇಶಪಾಂಡೆ
– ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಸಚಿವರು)
– ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ
– ವ್ಯವಹಾರಗಳ ಸಚಿವರು)
– ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು)
– ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

**10) ಅನುಬಂಧ–1** 1172–1392

# ಕರ್ನಾಟಕ ವಿಧಾನ ಸಭೆ

## ಬುಧವಾರ 4ನೇ ಆಗಸ್ಟ್ 2004 ರಂದು

## ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

## ಬೆಳಿಗ್ಗೆ 10-10 ಗಂಟೆಗೆ ಸಮಾವೇಶಗೊಂಡಿತು

## ಅಧ್ಯಕ್ಷರು (ಶ್ರೀ ಕೃಷ್ಣ) ರವರು

## ಪೀಠವನ್ನು ಅಲಂಕರಿಸಿದ್ದರು

## 1) ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

### ಅನುದಾನಿತ ಕಾಲೇಜುಗಳ ಲಾಸ್ ಆಫ್ ಫೀ ಇನ್‌ಕಮ್

91(237) ಶ್ರೀ ಮಾಧುಸ್ವಾಮಿ ಕೆ (ಚಿಕ್ಕನಾಯಕನಹಳ್ಳಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಖಾಸಗಿ ಅನುದಾನಿತ ಕಾಲೇಜುಗಳಿಗೆ ಸರ್ಕಾರ ಅನುದಾನ (ಲಾಸ್-ಆಫ್ ಫೀ ಇನ್ ಕಮ್) ಕೊಡಬೇಕಾದುದು ಸರ್ಕಾರದ ಗಮನದಲ್ಲಿದೆಯೇ

ಆ) ಹಾಗೆ ಕೊಡಬೇಕಾದ ಬಾಕಿ ಮೊತ್ತವೆಷ್ಟು ಹಾಗೂ ಎಷ್ಟು ವರ್ಷಗಳಿಂದ ಬಾಕಿ ಇದೆ.

ಇ) ಈ ಹಣವನ್ನು ಬಿಡುಗಡೆ ಮಾಡಲು ಈಗಲಾದರೂ ಕ್ರಮ ಜರುಗಿಸಲಾಗುವುದೇ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಹೌದು

ಆ) ರೂ 6,74,23,285-00 1993-94ನೇ ಸಾಲಿನಿಂದ 2003-04ನೇ ಸಾಲಿನವರೆಗೆ ಬಾಕಿ ಇರುತ್ತದೆ (ವಿವರ ಅನುಬಂಧ-1ರಲ್ಲಿರುವಂತೆ)

ಇ) ಹೌದು ಈ ಹಣವನ್ನು ಸಮಾಜ ಕಲ್ಯಾಣ ಇಲಾಖೆಯುವರು ಬಿಡುಗಡೆ ಮಾಡಬೇಕಾಗಿರುತ್ತದೆ ಇದರ ಬಗ್ಗೆ ಸಮಾಜ ಕಲ್ಯಾಣ ಇಲಾಖೆಗೆ ಪತ್ರ ಬರೆಯಲಾಗುವುದು

## ANNEXURE

| Sl No | Year | Regional Officer | | | | | | |
|---|---|---|---|---|---|---|---|---|
| | | Bangalore | Mysore | Mangalore | Shimoga | Gulbarga | Dharwad | Total |
| 1 | 1993-94 | 0 | 103600 | 0 | 0 | 0 | 5000 | 108600 |
| 2 | 1994-95 | 0 | 9230 | 0 | 0 | 15965 | 15000 | 40195 |
| 3 | 1995-96 | 0 | 0 | 0 | 0 | 46050 | 60000 | 106050 |
| 4 | 1996-97 | 0 | 0 | 0 | 0 | 66840 | 80000 | 146840 |
| 5 | 1997-98 | 0 | 0 | 0 | 0 | 155680 | 105000 | 260680 |
| 6 | 1998-99 | 0 | 0 | 0 | 0 | 335900 | 115000 | 450900 |
| 7 | 1999-2000 | 349735 | 35211 | 0 | 0 | 572600 | 390000 | 997811 |
| 8 | 2000-01 | 1005022 | 1774760 | 0 | 2772465 | 1394501 | 445000 | 6386726 |
| 9 | 2001-02 | 1571122 | 3855578 | 0 | 1399317 | 1640614 | 510000 | 7405509 |
| 10 | 2002-03 | 1630834 | 6827894 | 0 | 4177506 | 3980817 | 650000 | 15636217 |
| 11 | 2003-04 | 102803 | 7066516 | 20872284 | 3895479 | 3449478 | 600000 | 35883757 |
| | **Total** | **4659516** | **19672789** | **20872284** | **12244767** | **11658445** | **2975000** | **67423285** |

ಶ್ರೀ ಜೆ ಸಿ ಮಾಧುಸ್ವಾಮಿ . ಸನ್ಮಾನ್ಯ ಅಧ್ಯಕ್ಷರೇ, ಈ ಕಾಲೇಜುಗಳಿಗೆ ಲಾಸ್ ಆಫ್ ಫೀ ಇನ್‌ಕಮ್ ಎಂದು ಹೇಳಿ, ಫಸ್ಟ್ ಗ್ರೇಡ್ ಕಾಲೇಜುಗಳಿಗೆ, ಯೂನಿವರ್ಸಿಟಿಯವರಿಗೆ, ಸರ್ಕಾರದಿಂದ ಅನುದಾನ ಕೊಡುವುದು ಬಾಕಿ ಇದೆ ಎಷ್ಟು ಬಾಕಿ ಇದೆಯೆಂದರೆ 6 ಕೋಟಿ 74 ಲಕ್ಷ ರೂಪಾಯಿಗಳಿವೆ ಹೀಗಾದರೆ ಕಾಲೇಜುಗಳನ್ನು ನಡೆಸುವುದು ಹೇಗೆ? ಅದರಲ್ಲೂ ರೂರಲ್ ಭಾಗದಲ್ಲಿರತಕ್ಕ ಕಾಲೇಜುಗಳ ಗತಿ ಏನು? ಆಯಾ ವರ್ಷಕ್ಕೆ ಲಾಸ್ ಆಫ್ ಫೀ ಇನ್‌ಕಮ್‌ನ್ನು ಸರ್ಕಾರ ಬಿಡುಗಡೆ ಮಾಡುದೇ ಹೋದರೆ ಆ ಸಂಸ್ಥೆಗಳ ಗತಿ ಏನು? ಇನ್ನೊಂದು ಸಲ ಈ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು, ಫಸ್ಟ್‌ಗ್ರೇಡ್ ಕಾಲೇಜು ನಡೆಸುವವರು ಮತ್ತು ಪಿ ಯು ಸಿ ಕಾಲೇಜ್ ನಡೆಸುವವರು ಸರ್ಕಾರಕ್ಕೆ ಒತ್ತಾಯ ತಂದು ಈ ಲಾಸ್ ಆಫ್ ಫೀ ಇನ್‌ಕಮ್‌ನ್ನು ರಿಲೀಸ್ ಮಾಡಬೇಕು ಮತ್ತೆ ಏಡೆಡ್ ಸಂಸ್ಥೆಗಳಲ್ಲಿ ಖಾಲಿ ಇರತಕ್ಕ ವೇಕೆನ್ಸಿಗಳನ್ನು ಭರ್ತಿ ಮಾಡಲಿಕ್ಕೆ ಪರವಾನಗಿ ಕೊಡಬೇಕು ಈ ಬಗ್ಗೆ ಒತ್ತಾಯ ತಂದಾಗ ಸರ್ಕಾರದವರು ಒಪ್ಪಿದರು 2003–04ನೇ ಸಾಲಿಗೆ ಭರ್ತಿ ಮಾಡುವ ವಿಚಾರದಲ್ಲಿ ಮಾನ್ಯ ಹೊರಟ್ಟಿಯವರು ದೊಡ್ಡ ಹೋರಾಟ ಮಾಡಿದ್ದಾರೆ ಈ ಬಗ್ಗೆ ಸರ್ಕಾರದ ನಿಲುವೇನು? ಈ ಬಾರಿ ಬಾಕಿಯನ್ನು ಕೊಡುತ್ತೀರಾ? ಮ್ಯಾನೇಜ್‌ಮೆಂಟ್‌ಗಳಿಗೆ ಲಾಸ್ ಆಫ್ ಫೀ ಇನ್‌ಕಮ್ ಏನು ಕೊಡಬೇಕಾಗಿದೆ, ಅದನ್ನು ಯಾವಾಗ ಕೊಡುತ್ತೀರಾ? ಈ ಬಗ್ಗೆ ಸರ್ಕಾರದಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉನ್ನತ ಶಿಕ್ಷಣ ಸಚಿವರು ಪರವಾಗಿ)** ಮಾನ್ಯ ಸದಸ್ಯರು ಹೇಳಿದಂತೆ ಇದು ಕೊಡಲೇ ಬೇಕಾಗಿರತಕ್ಕ ಹಣ 1983–84ನೇ ಸಾಲಿನಿಂದ 2003–04ನೇ ಸಾಲಿನವರೆಗೆ 6 ಕೋಟಿ 74 ಲಕ್ಷದ 23 ಸಾವಿರದ 285 ರೂಪಾಯಿಗಳನ್ನು ನಾವು ಈ loss of fee income ಬಾಕಿಯನ್ನು ಕಾಲೇಜುಗಳಿಗೆ ಕೊಡಬೇಕಾಗಿರತಕ್ಕ ಹಣ ಇದು ಸಂಪನ್ಮೂಲದ ಕೊರತೆ ಇರತಕ್ಕ ಕಾರಣದಿಂದ ಇದುವರೆಗೆ ಅದನ್ನು ಕೊಡಲು ಆಗಿಲ್ಲ ಆದರೆ ಇದನ್ನು ಕೊಡಲೇಬೇಕು ಎಂಬ ನಿರ್ಧಾರ ಮಾಡಿದ್ದೇವೆ, ಅದರ ಪ್ರಕಾರ ಜಂಟಿ ನಿರ್ದೇಶಕರು ಮೇಲು ಸಹಿಯನ್ನು ಮಾಡಿ ಕಳುಹಿಸಬೇಕಾಗಿರತಕ್ಕದ್ದು ಇದೆ ಈ ವಿಚಾರವನ್ನು ಈಗಾಗಲೆ ಹಣಕಾಸು ಇಲಾಖೆಯವರ ಗಮನಕ್ಕೂ ತಂದಿದ್ದೇವೆ. ಖಂಡಿತವಾಗಿ ಇನ್ನು ಸ್ವಲ್ಪ ದಿವಸಗಳಲ್ಲಿ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಅದನ್ನು ಮುಕ್ತಾಯ ಮಾಡಿ ಅವರಿಗೆ ಹಣವನ್ನು ಕೊಡುತ್ತೇವೆ

**ಶ್ರೀ ಜೆ ಸಿ ಮಾಧುಸ್ವಾಮಿ** ಇದು ಅವರಿಗೆ ಅನುದಾನದ ಪೂರೈಕೆ ಮೇಲೆ ನಿರ್ಧಾರವಾಗುವುದರಿಂದ ನಾನು ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ Professional courses or lucrative courses ನಡೆಸುವವರು ಸಿಟಿಗಳಲ್ಲಿ ಅಂಥ ಕಾಲೇಜುಗಳಿಂದ ಸ್ವಲ್ಪ ಹಣವನ್ನು ಮಾಡಿಕೊಳ್ಳಬಹುದಾಗುತ್ತದೆ ಮತ್ತು ಅದರಿಂದ ಕಾಲೇಜುಗಳನ್ನು ಮೇನ್‌ಟೇನ್ ಮಾಡಿಕೊಳ್ಳಬಹುದಾಗುತ್ತದೆ ಆದರೆ ಹಳ್ಳಿಗಳಲ್ಲಿ ಬರೀ ಬಿ ಎ ಬಿ ಕಾಂ ಡಿಗ್ರಿ ಕಾಲೇಜುಗಳನ್ನು ನಡೆಸುವವರಿಗೆ ಬಹಳ ತೊಂದರೆಯಾಗಿದೆ ಆದ್ದರಿಂದ ಆ ಹಣವನ್ನು ಕೊಡುವಾಗ ಆದ್ಯತೆಯ ಮೇರೆಗೆ ಗ್ರಾಮೀಣ ಪ್ರದೇಶದಲ್ಲಿರುವ ಕಾಲೇಜುಗಳಿಗೆ ಇದನ್ನು ಕೊಡಬೇಕು, ಮತ್ತು ಬಿ ಎ., ಬಿ ಕಾಂ ಕೋರ್ಸ್‌ನಂಥ ಹಣ ಬರಲಾರದಂಥ ಕೋರ್ಸ್‌ಗಳನ್ನು ನಡೆಸುವವರಿಗೇನಾದರೂ ಪ್ರಥಮ ಆದ್ಯತೆಯಲ್ಲಿ ಹಣವನ್ನು ಬಿಡುಗಡೆ ಮಾಡಲು ಆಗುತ್ತದೆಯೇ ಎಂದು ಕೇಳುತ್ತಿದ್ದೇನೆ

**ಶ್ರೀ ಎಂ ಪಿ. ಪ್ರಕಾಶ್** ಇದು ಖಂಡಿತವಾಗಿ ಬಹಳ ಅವಶ್ಯಕವಾದ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ ಫಸ್ಟ್ ಏಡ್ ಕಾಲೇಜ್ ಇರಲಿ, ಸಂಪನ್ಮೂಲವನ್ನು ಕ್ರೋಢೀಕರಿಸಲು ಶಕ್ತಿ ಇಲ್ಲದಂಥ ಕಾಲೇಜುಗಳಿಗೆ ಆದ್ಯತೆಯ ಪಟ್ಟಿಯನ್ನು ಮಾಡಿದಾಗ ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡಿದಂಥ ಸಂದರ್ಭದಲ್ಲಿ ಈ ರೀತಿಯ ಬಿ ಎ, ಬಿ ಕಾಂ, ಮೊದಲಾದ ಪದವಿ ಕಾಲೇಜುಗಳನ್ನು ನಡೆಸತಕ್ಕ ಕಾಲೇಜುಗಳಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು ಅವರಿಗೆ ಹಣವನ್ನು ಬಿಡುಗಡೆ ಮಾಡುವ ವ್ಯವಸ್ಥೆ ಮಾಡುತ್ತೇವೆ ಅದರಲ್ಲಿ ಗ್ರಾಮೀಣ ಪ್ರದೇಶದ ಕಾಲೇಜುಗಳಿಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು ಎಂದು ಹಿಂದುಳಿದ ವರ್ಗ ಮತ್ತು ಪಂಗಡ ಸಮಾಜ ಕಲ್ಯಾಣ ಇಲಾಖೆಯವರಿಗೂ ಇದನ್ನು ತಿಳಿಸುತ್ತೇವೆ

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಪ್ರಕಾಶ್‌ರವರು loss of fee income ಬಗ್ಗೆ ಹೇಳಿದ್ದಾರೆ ಈಗ ವೇತನದಲ್ಲಿ 15 ಪರ್‌ಸೆಂಟ್ ಅನುದಾನ ಕಡಿತವೆಂದು ಮೊನ್ನೆ ಮಾನ್ಯ ಮಂಜುನಾಥ್‌ರವರು ಉತ್ತರವನ್ನು ಕೊಟ್ಟಿದ್ದಾರೆ ಯಾವ ಕಾರಣದ ಸಲುವಾಗಿ ಇದನ್ನು ಕಡಿತ ಮಾಡುತ್ತಿದ್ದಾರೆ ಎಂಬ ಬಗ್ಗೆ ಸ್ಪಷ್ಟೀಕರಣ ಮಾಡಬೇಕು ಆ ರೀತಿ ಕಡಿತವಾಗಬಾರದು ಎಂಬುದು ನಮ್ಮ ಒತ್ತಾಯ ಅನಂತರ ರಿಟೈರ್‌ಮೆಂಟ್, ಡೆತ್ ಆದರೆ ಪೋಸ್ಟ್ ಖಾಲಿ ಇರುತ್ತದೆ, ಅದನ್ನು fill-up ಮಾಡಲು ಅವಕಾಶವೇ ಇಲ್ಲ ಈ ರೀತಿ ನೀತಿಯಾದರೆ ನಾಳೆ ಅನುದಾನಿತ ಕಾಲೇಜೆಂದು ತಾವು ಅವರಿಗೆ ರೆಕಗ್ನಿಷನ್ ಕೊಡುವುದು ಆದರೆ ನಿವೃತ್ತಿಯಿಂದ ಮತ್ತು ಮೃತಪಟ್ಟಿದ್ದರಿಂದ ಪೋಸ್ಟ್ ಖಾಲಿ ಆಗಿದ್ದರೆ ಅದನ್ನು ಭರ್ತಿ ಮಾಡಲು ತಾವು ಅವಕಾಶವನ್ನೇ ಕೊಡದಿದ್ದರೆ ಬಹಳ ತೊಂದರೆಯಾಗುತ್ತದೆ ಆದ್ದರಿಂದ ಆ ರೀತಿ ಇರುವುದನ್ನು ಬದಲಾವಣೆ ಮಾಡಬೇಕು ಮತ್ತು 15 ಪರ್‌ಸೆಂಟ್ ವೇತನ ಕಡಿತವೇನಿದೆ ಅದನ್ನು ದಯವಿಟ್ಟು ವಾಪಸ್ ಪಡೆಯಬೇಕಾಗಿ ಕೋರುತ್ತೇನೆ

**ಶ್ರೀ ಎಂ ಪಿ ಪ್ರಕಾಶ್** ಮಾನ್ಯ ಸದಸ್ಯರ ವಾದದಲ್ಲಿ ಬಹಳಷ್ಟು ಒತ್ತಡವಿದೆ ನ್ಯಾಯಸಮ್ಮತವಾದ ವಿಚಾರ ಕೂಡ ಇದೆ ಆದರೆ ಇದು ಮುಖ್ಯವಾಗಿರತಕ್ಕ ಪ್ರಶ್ನೆಗೆ ಸಂಬಂಧಪಡುವುದಿಲ್ಲ ಆದ್ದರಿಂದ ತಕ್ಷಣ ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ ಈ ಬಗ್ಗೆ ಉನ್ನತ ಶಿಕ್ಷಣ ಸಚಿವರು ಈಗಾಗಲೇ ಹೇಳಿಕೆಯನ್ನು ಕೊಟ್ಟಿದ್ದಾರೆ ಇದು ನೀತಿಗೆ ಸಂಬಂಧಪಟ್ಟ ವಿಚಾರ ಅನುದಾನ ಬಿಡುಗಡೆ ಮಾಡತಕ್ಕ ವಿಚಾರದಲ್ಲಿ Grant in aid code ಗೆ ಒಂದು ನೀತಿಯನ್ನು ಸರ್ಕಾರ ನಿರ್ಧಾರ ಮಾಡಬೇಕಾಗುತ್ತದೆ

**Sri Jagadish Shetter** 15% ಅನುದಾನ ಕಡಿತವೆಂದು finance department ನವರು obstacle ಹಾಕಿದ್ದಾರೆ ಅದು ಸರ್ಕಾರದ ನೀತಿಯಲ್ಲ

**ಶ್ರೀ ಜೆ ಸಿ ಮಾಧುಸ್ವಾಮಿ** ಅನುದಾನವಾಗಿರುವಂಥ ಪೋಸ್ಟ್‌ಗಳಿಗೆ vacancy create ಆಗಿರುವುದಕ್ಕೆ ಫಿಲ್ ಮಾಡಲು ಸರ್ಕಾರದವರು ಬಿಟ್ಟಿಲ್ಲ ಬೇರೆ ಕಡೆಯಿಂದ transfer ಮಾಡುತ್ತೇವೆಂದು ಈ ಹಿಂದೆ ಇದ್ದವರು ಒಪ್ಪಿಕೊಂಡಿದ್ದವರು ಟ್ರಾನ್ಸ್‌ಫರ್‌ನ್ನೂ ಕೊಟ್ಟಿಲ್ಲ ಪ್ರೈವೇಟ್ ಮೆನೇಜ್‌ಮೆಂಟ್‌ನ ಫಸ್ಟ್‌ಗ್ರೇಡ್ ಕಾಲೇಜುಗಳಿಗೆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿಯನ್ನು ಕೊಟ್ಟಿಲ್ಲ ಇಂಗ್ಲೀಷ್ ಮತ್ತು ಎಕನಾಮಿಕ್ಸ್ ಅಂಥ ಕೋರ್ಸ್‌ಗಳನ್ನು ಅಲ್ಲಿ ಇವತ್ತು ನಡೆಸಲು ಆಗುತ್ತಿಲ್ಲ ಆದ್ದರಿಂದ ಇದರ ಬಗ್ಗೆ ದಯವಿಟ್ಟು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು ಅನುದಾನ ಇರುವ ಪೋಸ್ಟ್‌ಗೆ, ಖಾಲಿಯಾಗಿರುವ ಪೋಸ್ಟ್‌ಗಳನ್ನಾದರೂ fill-up ಮಾಡಿಕೊಳ್ಳಲು ಅವಕಾಶ ಕೊಡಿ ಅನುದಾನ ಇಲ್ಲದಿರುವ ಪೋಸ್ಟ್‌ಗಳು ಬೇಡ

**ಶ್ರೀ ಎಸ್ ಎಸ್ ಪಾಟೀಲ್** ಇದರ ಬಗ್ಗೆ ಈ ಹಿಂದೆ ಕೂಡ ಇದೇ ಅಧಿವೇಶನದಲ್ಲಿ ಚರ್ಚೆಯಾಗಿ ಆ 15 ಪರ್‌ಸೆಂಟ್ ವೇತನದ ಅನುದಾನವನ್ನು ಕಟ್ ಮಾಡುವುದಿಲ್ಲವೆಂದು ಹೇಳಿದ್ದರು ಈಗಲೂ ಅಲ್ಲಿ ಹೇಳಿದ್ದಾರೆ ಇವರು ಮಾಡುತ್ತಿರುವುದೆಲ್ಲಾ ಉತ್ತರ ಕರ್ನಾಟಕಕ್ಕೆ ಬಹಳ ಅನ್ಯಾಯವಾಗುತ್ತದೆ ಅದು ತಮಗೂ ಗೊತ್ತಿದೆ ಎಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳು ನೂರಕ್ಕೆ ತೊಂಭತ್ತು ಭಾಗ ಉತ್ತರ ಕರ್ನಾಟಕದಲ್ಲಿವೆ ಆ ಕಾರಣದಿಂದ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗುತ್ತದೆ, ಆದ್ದರಿಂದ ದಯವಿಟ್ಟು ಪರ್ಸೆಂಟ್ ವೇತನ ಅನುದಾನವನ್ನು ಕಟ್ ಮಾಡಬಾರದೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಪ್ರಕಾಶ್‌ರವರೂ ಉತ್ತರ ಕರ್ನಾಟಕದಿಂದ ಬಂದವರೇ

**ಶ್ರೀ ಕೆ ಶ್ರೀನಿವಾಸ ಗೌಡ** ದಯವಿಟ್ಟು ಈ ಮನೆಯಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದು ಪದೇ ಪದೇ ಹೇಳುವುದರಿಂದ, ಇಡೀ ರಾಜ್ಯ ಒಂದಾಗಿರುವಾಗ ಈ ಕರ್ನಾಟಕ ಆ ಕರ್ನಾಟಕ ಎಂದು ಹೇಳುವುದರಿಂದ ನಾವೇ ಭಾಗಗಳನ್ನು ಮಾಡುವಂಥದ್ದು ಆಗುತ್ತದೆ ಅಭಿವೃದ್ಧಿಯ ಬಗ್ಗೆ ಒತ್ತು ಕೊಡಿ, ಆ ಜಿಲ್ಲೆಯ ಹೆಸರನ್ನು ಹೇಳಿ, ಆದರೆ ಇದು ಉತ್ತರ ಕರ್ನಾಟಕ ಎಂದು ಹೇಳಿಕೊಂಡು ..

**ಗೊಂದಲ**

**ಶ್ರೀ ಎಸ್ ಎಸ್ ಪಾಟೀಲ್** ಆ ಭಾಗದ ಜನರಿಗೆ ಅನ್ಯಾಯವಾಗಿದೆ

**ಶ್ರೀ ಜಗದೀಶ್ ಶೆಟ್ಟರ್** ಅದನ್ನೇಕೆ ಹೇಳಬಾರದು? ಹೇಳುವುದೇನು ತಪ್ಪೆ?

**ಗೊಂದಲ**

**ಅಧ್ಯಕ್ಷರು** . ಅವರವರ ಭಾವನೆಗಳನ್ನು ವ್ಯಕ್ತಪಡಿಸಿ. ಅದನ್ನು ಬಿಟ್ಟು ಹೀಗೆ ಮಾತನಾಡುತ್ತೀರಿ? ಇದು ಒಳ್ಳೆಯ ಲಕ್ಷಣವಲ್ಲ

**ಶ್ರೀ ಕೆ ಶ್ರೀನಿವಾಸಗೌಡ** ನಾನು ಎಲ್ಲರಲ್ಲೂ ಪ್ರಾರ್ಥನೆ ಮಾಡುವುದೇನೆಂದರೆ, ತಾವು ಜಿಲ್ಲೆಯ ಬಗ್ಗೆ ಮಾತನಾಡಿ, ಆದರೆ ಆ ಕರ್ನಾಟಕ ಈ ಕರ್ನಾಟಕ ಎಂಬ ಭಾವನೆಗಳನ್ನು ಕೆರಳಿಸುವಂಥದ್ದು ಬಹಳ ತಪ್ಪಾಗುತ್ತದೆ ನಾವು ಈಗಾಗಲೇ ಛಿದ್ರಛಿದ್ರವಾಗಿದ್ದೇವೆ ಆದ್ದರಿಂದ ದಯವಿಟ್ಟು ನಿಮ್ಮ ನಮ್ಮ ಜಿಲ್ಲೆಯ ಬಗ್ಗೆ ಹೇಳಿ ಅಥವಾ ಈ ಜಿಲ್ಲೆಯಲ್ಲಿ ಹೀಗಿದೆ, ಧಾರವಾಡದಲ್ಲಿ ಹೀಗಿದೆ, ಬೀದರ್‌ನಲ್ಲಿ ಈ ರೀತಿ ಇದೆ, ರಾಯಚೂರಿನಲ್ಲಿ ಈ ರೀತಿ ಇದೆ ಎಂದು ಹೇಳಿ

**ಗೊಂದಲ**

**ಅಧ್ಯಕ್ಷರು** ಎಲ್ಲರು ದಯವಿಟ್ಟು ಕುಳಿತುಕೊಳ್ಳಿ

**ಶ್ರೀ ಎಂ ಪಿ ಪ್ರಕಾಶ್** ಮಾನ್ಯ ಶ್ರೀನಿವಾಸಗೌಡರು ಪ್ರಸ್ತಾಪ ಮಾಡಿದಂತೆ, ಈ ಭಾವೈಕ್ಯತೆಯ ವಿಚಾರ ಬಂದಾಗ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದು ಮಾತನಾಡಬಾರದು ಎಂಬ ತಮ್ಮ ಆಸೆ ಏನಿದೆ ಅದು ಮೆಚ್ಚುವಂಥದ್ದು ಆದರೆ ಮಾನ್ಯ ಜಗದೀಶ್‌ಶೆಟ್ಟರ್ ಮತ್ತು ಎಸ್ ಎಸ್ ಪಾಟೀಲರು ಪ್ರಸ್ತಾಪ ಮಾಡಿದ ವಿಚಾರವಿಷ್ಟೆ, ನಮ್ಮಲ್ಲಿ ಹಳೆ ಮೈಸೂರು ಭಾಗದಲ್ಲಿ ಉತ್ತಮವಾದ ಸಂಪ್ರದಾಯಗಳನ್ನು ಹಾಕಿದ ಒಳ್ಳೆಯ ಆಡಳಿತವನ್ನು ಕೊಟ್ಟಂಥ ಮಹಾರಾಜರಿದ್ದರು, ಅವರು ಶಿಕ್ಷಣಕ್ಕೆ ಒತ್ತನ್ನು ಕೊಟ್ಟಿದ್ದರಿಂದ ಇಲ್ಲಿ ಸರ್ಕಾರಿ ಕಾಲೇಜುಗಳು ಆದವು ಆ ಕಾಲದಲ್ಲಿ ದಿವಾನ್ ವಿಶ್ವೇಶ್ವರಯ್ಯರಂಥವರು, ಮಿರ್ಜಾಇಸ್ಮಾಯಿಲ್‌ನಂತವರು, ಮಾಧವರಾಯ್‌ನಂಥವರು ಇವರೆಲ್ಲರೂ ಮಾಡಿದ್ದರಿಂದ ಇಲ್ಲಿ ಖಾಸಗಿ ವಲಯದ ಮೂಲಕವಾಗಿ ಕಾಲೇಜುಗಳನ್ನು ಸ್ಥಾಪನೆ

ಮಾಡುವಂಥ ಅವಶ್ಯಕತೆ ಇರಲಿಲ್ಲ. ಆದರೆ ಉತ್ತರ ಕರ್ನಾಟಕ ಭಾಗದಲ್ಲಿ ಕೆಲವು ನಿಜಾಂ ಭಾಗದಲ್ಲಿದ್ದವು. ಕೆಲವು ಮದ್ರಾಸ್ ಪ್ರಾಂತ್ಯದಲ್ಲಿದ್ದರು, ಕೆಲವು ಮುಂಬೈ ಭಾಗದಲ್ಲಿದ್ದವು ಆಗ ಅಲ್ಲಿರುವಂಥ ಸರ್ಕಾರಗಳು ಮಲತಾಯಿ ಧೋರಣೆ ತಾಳಿದ್ದರಿಂದ ಕನ್ನಡ ನಾಡಿನ ಪ್ರದೇಶದಲ್ಲಿ ಅಲ್ಲಿ ಖಾಸಗಿ ವಲಯದಲ್ಲಿ ಸ್ಥಾಪನೆಯಾಗಿರುವಂಥ ಕಾಲೇಜುಗಳು ಹೆಚ್ಚು ಇದೆ. ಅನುದಾಣಿತ ಕಾಲೇಜುಗಳನ್ನು ಶೇಕಡ 15ರಷ್ಟನ್ನು ಕಡಿತ ಮಾಡಿದರೆ ಮತ್ತು ಸಾಂದರ್ಭಿಕವಾಗಿ ಖಾಲಿ ಬಿದ್ದಿರುವ ಹುದ್ದೆಗಳನ್ನು ತುಂಬದಿದ್ದರೆ ಅಲ್ಲಿ ಇದರಿಂದ ಹೆಚ್ಚು ಪರಿಣಾಮವಾಗುತ್ತದೆ ಎಂಬ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ ಇದು ಮುಖ್ಯವಾದ ಪ್ರಶ್ನೆಗೆ ಸಂಬಂಧಪಟ್ಟ ವಿಚಾರವಲ್ಲದಿದ್ದರೂ ಶೇಕಡ 15 ರಷ್ಟು ಕಡಿತ ಮಾಡಬೇಕು ಎಂಬ ವಿಚಾರದಲ್ಲಿ ಈಗಾಗಲೇ ಇಲಾಕೆಯವರು ಮಾತುಕತೆ ನಡೆಸಿದ್ದಾರೆ ಹಣಕಾಸಿನ ಸಚಿವರ ಜೊತೆ ಸಹ ಮಾತನಾಡುತ್ತಿದ್ದಾರೆ They are formulating a particular policy ಆ ಕಾರಣಕ್ಕಾಗಿ ಇನ್ನು ಸ್ವಲ್ಪ ಸಮಯದಲ್ಲಿ ಉನ್ನತ ಶಿಕ್ಷಣ ಸಚಿವರು ಬರುತ್ತಾರೆ, ತಮಗೆ ಸಂತೃಪ್ತಿಯಾಗುವಂಥ ಉತ್ತರವನ್ನು ಅವರು ಕೊಡುತ್ತಾರೆಂದು ಹೇಳುತ್ತೇನೆ ನಾನೂ ಕೂಡ ಆವತ್ತಿನ ಹೋರಾಟದ ಭಾಗವಾಗಿದ್ದೆ ಹುಬ್ಬಳ್ಳಿಯಲ್ಲಿ ನಡೆದಂಥ ಹೋರಾಡದಲ್ಲಿ ನಾನೂ ಕೂಡ ಭಾಗವಾಗಿದ್ದರಿಂದ ಈ ವಿಚಾರದಲ್ಲಿ ಹೆಚ್ಚು ಗಮನ ಕೊಡುತ್ತೇನೆ

**ಶ್ರೀ ಡಿ.ಆರ್ ಪಾಟೀಲ್** ಮುಖ್ಯ ಪ್ರಶ್ನೆಗೆ ಸಂಬಂಧಪಟ್ಟಂತೆ, ಮಾನ್ಯ ಪ್ರಕಾಶ್‌ರವರು ಬಹಳ ಬುದ್ಧಿವಂತರು, ಶಬ್ದದ ಮೇಲೆ ಅವರ ಹಿಡಿತ ಭಾರಿ ಇದೆ ಕೆಲವೇ ದಿವಸದಲ್ಲಿ ಬಾಕಿ ಕೊಡಲಾಗುವುದು ಎಂದು ಹೇಳಿದಿರಿ ಕೆಲವೇ ದಿವಸಗಳು ಎಂಬುದರ ಬದಲಾಗಿ ಒಂದು ನಿಗದಿಯಾದ ದಿನಾಂಕವನ್ನು ನಿಗದಿ ಮಾಡಿದರೆ ಒಳ್ಳೆಯದು ಹತ್ತು ವರ್ಷದಿಂದ ಇದು ಬಾಕಿ ಇದೆ ಆದ್ದರಿಂದ ಆಗಸ್ಟ್ 31, ಸೆಪ್ಟಂಬರ್ 30, ಇಲ್ಲವೇ ಅಕ್ಟೋಬರ್ 31 ರೊಳಗೆ ಎಂದು ಒಂದು ಡೇಟನ್ನು ನಿಗದಿ ಮಾಡಿ ದಯವಿಟ್ಟು

**ಶ್ರೀ ಎಂ.ಪಿ ಪ್ರಕಾಶ್** ಇಲ್ಲಿ ಭಾಷೆಯ ಮೇಲೆ ಹಿಡಿತದ ಪ್ರಶ್ನೆಯಲ್ಲ ಸಂಪನ್ಮೂಲದ ಮೇಲೆ ಹಿಡಿತ ಇದೆ ಇವತ್ತು ಹಣಕಾಸಿನ ಸ್ಥಿತಿ ನಾವು ಅಂದುಕೊಂಡಷ್ಟು ಉತ್ತಮ ಸ್ಥಿತಿಯಲ್ಲಿ ಇಲ್ಲ ಸಂಪನ್ಮೂಲವನ್ನು ಕ್ರೋಢೀಕರಿಸಬೇಕಾದ ಸಂದರ್ಭ ಇರುವುದರಿಂದ, ಇದರ ಬಗ್ಗೆ ನಿಗದಿತವಾದ ಸಮಯವನ್ನು ಹೇಳಲಾರೆ. ಆದರೆ ನಿಜವಾಗಿಯೂ 6 ಕೋಟಿ 75 ಲಕ್ಷ ರೂ ಗಳು ಕೊಡಬೇಕಾಗಿರುವ ಹಣವಾಗಿರುವುದರಿಂದ ಅದಕ್ಕೆ ಸರ್ಕಾರ ಬದ್ಧವಾಗುತ್ತದೆ ಖಂಡಿತವಾಗಿ ಸ್ವಲ್ಪ ದಿವಸಗಳಲ್ಲಿ ಅದನ್ನು ಕೊಡತಕ್ಕ ವ್ಯವಸ್ಥೆ ಮಾಡುತ್ತೇನೆ

**ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ಪಶುಸಂಪತ್ತಿನ ವಿವರಗಳು**

93(207) ಶ್ರೀ ಕೃಷ್ಣ ಪಾಲೇಮಾರ್ ಜೆ (ಸೂರತ್ಕಲ್) ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪಶುಸಂಪತ್ತಿನ ವಿವರಗಳನ್ನು ಸಂಗ್ರಹಿಸಲಾಗಿದೆಯೇ ಹೌದಾದಲ್ಲಿ ವಿವರಗಳೇನು?

ಆ) ಜಿಲ್ಲೆಗಳ ಪ್ರತಿಯೊಂದು ತಾಲ್ಲೂಕುಗಳಲ್ಲಿ ಪಶು ಆಸ್ಪತ್ರೆಗಳಿವೆಯೇ

ಇ) ಸದರಿ ಜಿಲ್ಲೆಗಳಲ್ಲಿ ಇರುವ ಸಂಚಾರಿ ಪಶು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು

ಈ) ಪಶುಸಂಗೋಪನಾ ಇಲಾಖೆಯ ಪ್ರಮುಖ ಕಾರ್ಯ ಚಟುವಟಿಕೆಗಳೇನು?

ಶ್ರೀ ಮೀರಾಜುದ್ದೀನ್ ಪಟೇಲ್ (ಪಶುಸಂಗೋಪನಾ ಮತ್ತು ವಕ್ಫ್ ಸಚಿವರು)

ಅ) ಹೌದು (2003ರ ಜಾನುವಾರು ಗಣತಿ ಪ್ರಕಾರ)

**ವಿವರ ಈ ಕೆಳಕಂಡಂತಿದೆ**

| | **ದಕ್ಷಿಣ ಕನ್ನಡ ಜಿಲ್ಲೆ** | **ಉಡುಪಿ ಜಿಲ್ಲೆ** |
|---|---|---|
| ದನಗಳು | 339638 | 337913 |
| ಎಮ್ಮೆಗಳು | 26062 | 49187 |
| ಕುರಿಗಳು | 420 | 10 |
| ಮೇಕೆಗಳು | 16671 | 2047 |
| ಹಂದಿಗಳು | 8378 | 1402 |
| ನಾಯಿಗಳು | 207251 | 120686 |
| ಇತರೆ | 579 | 163 |
| **ಒಟ್ಟು** | **598999** | **511408** |

ಆ) ಇವೆ

ಇ) ದಕ್ಷಿಣ ಕನ್ನಡ-5 (ಪ್ರತಿ ತಾಲ್ಲೂಕಿಗೆ ಒಂದರಂತೆ) ಉಡುಪಿ-3 (ಪ್ರತಿ ತಾಲ್ಲೂಕಿಗೆ ಒಂದರಂತೆ)

ಈ) 1) ಜಾನುವಾರುಗಳ ಆರೋಗ್ಯ ರಕ್ಷಣೆ

2) ಮುಂಜಾಗ್ರತಾ ಲಸಿಕೆ ಕಾರ್ಯಕ್ರಮ

3) ತಳಿ ಸಂವರ್ಧನಾ ಸೇವೆಗಳು

4) ಜಾನುವಾರು ಆರೋಗ್ಯ ಮತ್ತು ಬರಡು ರಾಸುಗಳ ಶಿಬಿರ

5) ರೋಗ ನಿರ್ಣಯ ಸೇವೆಗಳು

6) ಮೇವು ಅಭಿವೃದ್ಧಿ

7) ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನ

**ಶ್ರೀ ಜೆ ಕೃಷ್ಣಪಾಲೇಮರ್** ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ದಕ್ಷಿಣ ಕನ್ನಡಜಿಲ್ಲೆಯಲ್ಲಿ 5, ಉಡುಪಿ ಜಿಲ್ಲೆಯಲ್ಲಿ 3 ಸಂಚಾರಿ ಪಶುಚಿಕಿತ್ಸಾಲಯಗಳಿವೆ ಎಂದು ಹೇಳಿದ್ದಾರೆ ಆದರೆ ಆ ಯಾವ ಆಸ್ಪತ್ರೆಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ, ಒಬ್ಬ ವೈದ್ಯರು, ಒಬ್ಬ ಅಟೆಂಡೆರ್, ಒಬ್ಬ ಡ್ರೈವರ್ ಸುಮ್ಮನೆ ಕುಳಿತುಕೊಂಡು ವ್ಯರ್ಥವಾಗಿ ಕಾಲಹರಣ ಮಾಡುತ್ತಿದ್ದಾರೆ ಆದಷ್ಟು ಬೇಗ ಆ ಸಂಚಾರಿ ಆಸ್ಪತ್ರೆಯನ್ನು ಸರಿಪಡಿಸುವುದಕ್ಕೆ ಹೆಚ್ಚು ಹಣವನ್ನು ಒದಗಿಸಿದರೆ ಒಳ್ಳೆಯದು. ಇವತ್ತು ಹುಚ್ಚುನಾಯಿಗಳ ಕಾಟ ಬಹಳ ಹೆಚ್ಚಾಗಿದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀದಿನಾಯಿಗಳ ಹಾವಳಿಯಿಂದಾಗಿ, ಹುಚ್ಚುನಾಯಿ ಕಡಿತದಿಂದಾಗಿ ಹಲವಾರು ಜನರು ಇವತ್ತು ಮೃತಪಟ್ಟಿದ್ದಾರೆ, ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ಅದರ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳುತ್ತಿದ್ದೀರಿ ಚಿಕಿತ್ಸಾಲಯವನ್ನು ಅಪ್‌ಗ್ರೇಡ್ ಮಾಡುವ ಬಗ್ಗೆ ಸರ್ಕಾರ ಹೇಳುತ್ತಿದೆಯೇ ಹೊರತು ಯಾವುದನ್ನು ಅಪ್‌ಗ್ರೇಡ್ ಮಾಡುತ್ತಿಲ್ಲ, ಇದನ್ನು ಅಪ್‌ಗ್ರೇಡ್ ಮಾಡುವಂತಹ ಒಂದು ವ್ಯವಸ್ತೇ ಸರ್ಕಾರದಲ್ಲಿ ದೆಯೇ, ಇದನ್ನು ದಯವಿಟ್ಟು ತಿಳಸಬೇಕೆಂದು ಹೇಳುತ್ತಿದ್ದೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) (ಪಶುಸಂಗೋಪನಾ ಸಚಿವರ ಪರವಾಗಿ)** ಮಾನ್ಯ ಅಧ್ಯಕ್ಷರೆ ದಕ್ಷಿಣ ಕನ್ನಡದಲ್ಲಿ 5 ಉಡುಪಿಯಲ್ಲಿ 3 ಏನು ಸಂಚಾರಿ ಪಶು ಚಿಕಿತ್ಸಾಯಲಯಗಳಿವೆ, ಅವು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಈಗಾಗಲೇ ಸೂಚನೆಯನ್ನು ಕೊಡುತ್ತೇನೆ, ಅಲ್ಲೇನಾದರೂ ರಿಪೇರಿ ಇದ್ದರೆ ರಿಪೇರಿ ಮಾಡಿ, ವೈದ್ಯರಿಲ್ಲದಿದ್ದರೆ ವೈದ್ಯರನ್ನು ಹಾಕಿ ಅಲ್ಲಿ ಕೆಲಸ ಂಆಡುವುದಕ್ಕೆ ನಾನು ಅವರಿಗೆ ಸೂಚನೆಯನ್ನು ಕೊಡುತ್ತೇನೆ ಎರಡನೆಯದಾಗಿ ಹುಚ್ಚು ನಾಯಿಗಳ ಕಡಿತಕ್ಕೆ ಔಷಧಗಳಿಲ್ಲವೆಂದು ಹೇಳುತ್ತಿದ್ದೀರಿ, ಈ ಮನೆಯಲ್ಲಿ ನಾವು ವಿರೋಧಪಕ್ಷದಲ್ಲಿದಾಗ ಸಾಕಷ್ಟು ಸಾರಿ ಈ ಬಗ್ಗೆ ಹೇಳಿದ್ದೇವೆ, ಆ ಔಷಧಗಳನ್ನು ಇಡಬೇಕಾಗುತ್ತದೆ ಏಕೆಂದರೆ ಹಳ್ಳಿಗಾಡಿನಲ್ಲಿ ಹುಚ್ಚು ನಾಯಿ ಕಡಿದಾಗ ಔಷಧಗಳನ್ನು ಇಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಸೂಚನೆ ಕೊಡುತ್ತೇನೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ

**ಶ್ರೀ ಜೆ ಕೃಷ್ಣಪಾಲೇಮಾರ್** ಹುಚ್ಚು ನಾಯಿ ಕಡಿತಕ್ಕೆ ಔಷಧಿಯನ್ನು ಸರ್ಕಾರ ಸಮರ್ಪಕವಾಗಿ ಒದಗಿಸುತ್ತಿಲ್ಲ, ಅದನ್ನು, ಒದಗಿಸಲು ಸರ್ಕಾರ ಹೆಚ್ಚು ಹಣವನ್ನು ಇಟ್ಟರೆ ಒಳ್ಳೆಯದೆಂದು ಕಾಣುತ್ತದೆ

**ಶ್ರೀ ಎನ್ ಯೋಗೀಶ್ ಭಟ್** ಮಾನ್ಯ ಅಧ್ಯಕ್ಷರೆ, ಈ ಆಂಟಿ ರ‍್ಯಾಬಿಸ್‌ಗೆ ಸಂಬಂಧಪಟ್ಟ ಔಷಧಗಳು ವಿಶೇಷವಾಗಿ ಜಿಲ್ಲಾ ಆಸ್ಪತ್ರೆಗಳಲ್ಲೂ ಆಸ್ಪತ್ರೆಗೆ ಬರುತ್ತಿದ್ದಾರೆ, ಅಲ್ಲಿ ಔಷಧಿಯನ್ನು ಕೊಡುವ ಸ್ಥಿತಿಯಲ್ಲಿ ಬೆಂಗಳೂರಿನಿಂದ ಔಷಧಿ ಕೊರಿಯರ್‌ನಲ್ಲಿ ಬರುತ್ತಿದೆ, ಅದಕ್ಕಾಗಿ ನಾವು ಕಾಯುತ್ತಿದ್ದೇವೆ ಒಂದು ವಾರ ಕಾಲ ಕಾಯಬೇಕಾಗುತ್ತದೆ ಬಹುಶಃ ತಕ್ಷಣ ಅಲ್ಲಿ ಚಿಕಿತ್ಸೆ ಸಿಗದಿದ್ದರೆ ಆಗುವಂತಹ ಅನಾಹುತಗಳೇನು ಎಂಬುದು ತಮಗೆ ಗೊತ್ತಿದೆ, ಇದರ ಬಗ್ಗೆ ವಿಳಂಬಿತ ನೀತಿಯನ್ನು ಅನುಸರಿಸದೆ, ತಕ್ಷಣ ಅದು ಎಲ್ಲಾ ಆಸ್ಪತ್ರೆಗಳಲ್ಲಿ ಸಿಗುವಂತಹ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ

**ಶ್ರೀ ಸಿ ಟಿ ರವಿ** ಇವತ್ತು ಪಶು ಆಸ್ಪತ್ರೆಗಳನ್ನು ರಿಪೇರಿ ಮಾಡಲು ಜಿಲ್ಲಾಪಂಚಾಯಿತಿ ತಾಲ್ಲೂಕು ಪಂಚಾಯಿತಿಗಳಲ್ಲಿ ಹಣವಿಲ್ಲವೆಂದು ಹೇಳುತ್ತಿದ್ದಾರೆ, ಮಲೆನಾಡಿನ ಎಲ್ಲಾ ಆಸ್ಪತ್ರೆಗಳ ಕಟ್ಟಡಗಳು ಸೋರುತ್ತಿವೆ ಆಸ್ಪತ್ರೆ ಕಟ್ಟಡಗಳು ದುರಸ್ತಿಯಾಗಿಲ್ಲ ನಾನು ಹಿಂದೆ ಜಿಲ್ಲಾ ಪಂಚಾಯಿತಿ ಸದಸ್ಯನಾಗಿದ್ದೆ ಆ ಸಂದರ್ಭದಲ್ಲೂ ಕೂಡ ನಮ್ಮ ಹತ್ತಿರ ಹಣ ಕೇಳುತ್ತಿದ್ದರು ಆ ರಿಪೇರಿ ಕೆಲಸವನ್ನು ಯಾರು ಮಾಡಬೇಕೆನ್ನುವುದು ಇಡೀ ಗ್ರಾಮಸ್ಥರಿಗೆ ಸಮಸ್ಯೆಯಾಗಿದೆ ಈ ಬಗ್ಗೆ ಸರ್ಕಾರ ಸ್ಪಷ್ಟವಾದ ನಿರ್ಧಾರವನ್ನು ತೆಗೆದುಕೊಂಡು ಆಸ್ಪತ್ರೆ ಕಟ್ಟಡಗಳ ದುರಸ್ತಿ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಈಗಿರುವ ಬಹುತೇಕ ಆಸ್ಪತ್ರೆಗಳು ಬಿದ್ದುಹೋಗುವಂತಹ ಪರಿಸ್ಥಿತಿಯಲ್ಲಿವೆ, ಸರ್ಕಾರ ಈ ಬಗ್ಗೆ ಹೆಚ್ಚು ಗಮನಹರಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೆ, ಅವರು ಕೇಳಿದ ಪ್ರಶ್ನೆಯಲ್ಲಿಯೇ ಉತ್ತರ ಇದೆ, ಅವರೇ ಜಿಲ್ಲಾಪಂಚಾಯಿತಿಯ ಸದಸ್ಯನಾಗಿದ್ದೆ ಎಂದು ಹೇಳುತ್ತಿದ್ದಾರೆ, ಇದನ್ನು ರಿಪೇರಿ ಮಾಡಿಸುವುದು ಜಿಲ್ಲಾಪಂಚಾಯಿತಿಯವರೇ ಎಸ್‌ಜೆಆರ್‌ವೈನಲ್ಲಿ ಹಣವಿದೆ, ಈಗ ಹಣವನ್ನು ಬಿಡುಗಡೆ ಮಾಡಿದ್ದೇವೆ, ಇದರಲ್ಲಿ ಆಯಾ ಜಿಲ್ಲೆಯಲ್ಲಿ ರಿಪೇರಿ ಕೆಲಸವನ್ನು ಮಾಡಬೇಕೆಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ

**ಶ್ರೀ ಸಿ ಟಿ ರವಿ** ನಾವು ಗ್ರಾಮಾಂತರದಿಂದ ಬಂದವರು, ಆದರೆ ಪಟ್ಟಣದಲ್ಲಿ ಹೇಗೆ ಮಾಡಬೇಕೆನ್ನುವುದು ಪ್ರಶ್ನೆಯಾಗಿದೆ

ಶ್ರೀ ಕೆ ಶ್ರೀನಿವಾಸಗೌಡ ಜಿಲ್ಲಾ ಪಂಚಾಯಿತಿಗಳು ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆ ಕಟ್ಟಡಗಳನ್ನು ದುರಸ್ತಿ ಮಾಡಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ, ಸರ್ಕಾರ ವೈದ್ಯರನ್ನು ಕೊಡುವ ವ್ಯವಸ್ಥೆ ಮಾಡುತ್ತದೆ ಆದರೆ ಅಲ್ಲಿನ ಜಿಲ್ಲಾ ಪಂಚಾಯಿತಿಗಳು ಕಟ್ಟಡಗಳನ್ನು ರಿಪೇರಿ ಮಾಡಿಸುವುದು, ಔಷಧಿಗಳನ್ನು ಕೊಡುವುದು ಇವೆಲ್ಲವು ಸಾಕಷ್ಟು ಆಯಾ ಜಿಲ್ಲಾಪಂಚಾಯಿತಿಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಆದುದರಿಂದ ಆ ರಿಪೇರಿಗೆ ತಗಲುವ ಹಣವನ್ನು ಆಯಾ ಜಿಲ್ಲಾಪಂಚಾಯಿತಿಗಳ ವತಿಯಿಂದ ಮಾಡಬೇಕಾಗುತ್ತದೆ

ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐದು ಲಕ್ಷದ ತ್ತೊಂಬತ್ತೆಂಟು ಸಾವಿರದ ಒಂಬೈನೂರ ತ್ತೊಂಬತ್ತೊಂಬತ್ತು ಜಾನುವಾರುಗಳಿವೆ ಎಂದು ಇಲ್ಲಿ ಲೆಕ್ಕಾ ಕೊಟ್ಟಿದ್ದಾರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯಾವುದೇ ಆಸ್ಪತ್ರೆಗಳಲ್ಲಿ ಜಾನುವಾರುಗಳಿಗೆ ಭೇದಿಯಾದರೆ ಅದಕ್ಕೆ ಬೇಕಾದ ಔಷಧಿಗಳು ಸಿಗುತ್ತಿಲ್ಲ, ತಾವು ತಾಲ್ಲೂಕಿಗೆ ಒಂದು ಆಸ್ಪತ್ರೆ ಇದೆ ಎಂದು ಕೊಟ್ಟಿದ್ದೀರಿ ಇನ್ನು ಅನೇಕ ಉಪ ಕೇಂದ್ರಗಳಿವೆ ಅವಕ್ಕೆ ಔಷಧಿಗಳೇ ಇಲ್ಲ ಮೂರ್ನಾಲ್ಕು ಕಿ ಮೀ ಗೆ ಒಂದು ಉಪಕೇಂದ್ರ ಆಸ್ಪತ್ರೆಗಳಿವೆ ಹಳ್ಳಿಗಳಲ್ಲಿ ಪಶುಸಂಗೋಪನೆ ಎನ್ನುವುದು ರೈತರ ಅಭಿವೃದ್ಧಿಯ ಒಂದು ಅಂಗ, ಇಂತಹ ಜಾನುವಾರು ಆಸ್ಪತ್ರೆಗಳಿಗೆ ಹೆಚ್ಚು ಔಷಧಗಳನ್ನು ಒದಗಿಸುವುದು, ಮೂರು ಕಿ ಮೀ ಗೆ ಒಂದಾದರೂ ಪ್ರಾಥಮಿಕ ಪಶು ಚಿಕಿತ್ಸಾಯ ತೆರೆಯುವ ಕೆಲಸವನ್ನು ಸರ್ಕಾರ ಹಮ್ಮಿಕೊಳ್ಳಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಅಧ್ಯಕ್ಷರೆ, ಅದನ್ನು ಸರ್ಕಾರಿ ಪರಿಶೀಲಿಸುತ್ತದೆ

## ಸಿ ಇ ಟಿ ವತಿಯಿಂದ ಇಂಜಿನಿಯರ್ ಕೋರ್ಸ್‌ಗಳ ಗೊಂದಲ ನಿವಾರಣೆ

95(453) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸಿ ಇ ಟಿ ವತಿಯಿಂದ ಇಂಜಿನಿಯರಿಂಗ್ ಕೋರ್ಸುಗಳ ಗೊಂದಲ ನಿವಾರಣೆಗೆ ಶಾಶ್ವತ ಪರಿಹಾರವನ್ನು ಒದಗಿಸುವ ಚಿಂತನೆಯು ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ ಶಾಶ್ವತ ಪರಿಹಾರದ ಕಾರ್ಯರೂಪಗಳೇನು (ವಿವರ ನೀಡುವುದು)?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಇದೆ

ಆ) ಶಾಶ್ವತ ಪರಿಹಾರ ಕಂಡು ಹಿಡಿಯಲು ಅಖಿಲ ಭಾರತ ಮಟ್ಟದಲ್ಲಿ ಸಾಮಾನ್ಯವಾದ ಕಾಯಿದೆಯನ್ನು ರೂಪಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ

**ಶ್ರೀ ಕೆ ರಘುಪತಿ ಭಟ್** ಮಾನ್ಯ ಅಧ್ಯಕ್ಷರೆ, ನಾನು ಸಿಇಟಿ ಗೊಂದಲದ ಬಗ್ಗೆ ಪ್ರಶ್ನೆ ಕೇಳಿದ್ದೆ, ಈ ವರ್ಷ ನಮ್ಮ ವಿದ್ಯಾರ್ಥಿಗಳು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಓದಬೇಕೆಂದು ಕಾಯ್ದು ಕುಳಿತ್ತಿದ್ದಾರೆ, ಅವರಿಗೆ ಈ ವರ್ಷಕ್ಕೆ ಏನು ಪರಿಹಾರ ಕೊಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು ಸಮಯ ಮೀರಿ ಹೋಗುತ್ತಿರುವುದರಿಂದ ವಿದ್ಯಾರ್ಥಿಗಳೆಲ್ಲಾ ಗೊಂದಲದಲ್ಲಿದ್ದಾರೆ, ಇನ್ನು ಫೀ ಬಗ್ಗೆ ಹೇಳುವುದಾದರೆ, ಪ್ರತಿಭಾವಂತ ಬಡವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ಸರ್ಕಾರ ಫೀ ಬಗ್ಗೆ ಹೇಳಬೇಕು ಏಕೆಂದರೆ ಮುರುಗೋಡು ಸಮಿತಿ ಕೊಟ್ಟಂತಹ ವರದಿಯ ಪ್ರಕಾರವೇ ಫೀ ಕಟ್ಟಬೇಕೆಂದು ಹೊಸ ಕಾಯಿದೆಯಲ್ಲಾಗಿದೆ ಅದನ್ನು ಕಟ್ಟಿ ಇವತ್ತು ಯಾವುದೇ ಒಬ್ಬ ಪ್ರತಿಭಾವಂತ ಬಡ ವಿದ್ಯಾರ್ಥಿ ವಿದ್ಯಾಭ್ಯಾಸ ಮಾಡುವಂತಿಲ್ಲ, ಈ ಬಗ್ಗೆ ಸರ್ಕಾರ ಏನಾದರು ಕ್ರಮಕೈಗೊಳ್ಳುವುದೇ ಎಂಬುದನ್ನು

ಸ್ಪಷ್ಟಪಡಿಸಬೇಕು ಸಿಇಟಿ ಪರೀಕ್ಷೆಯಲ್ಲಿ ರ್‍ಯಾಂಕ್ ಬಂದವರಿಗೆ ಬೇರೆ ಯಾವುದಾದರು ಖಾಸಗಿ ಸಂಸ್ಥೆಯಲ್ಲಿ ಸೇರ್ಪಡೆಗೊಳಿಸಬೇಕೆಂದು ಹೋದರೆ, ಅವರದ್ದೇ ಆದ ಬೇರೆ ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ನ ಪರೀಕ್ಷೆಯನ್ನು ಕಟ್ಟಲಿಲ್ಲವೆನ್ನುವುದಾದರೆ ಅವರಿಗೆ ಪ್ರವೇಶಕ್ಕೆ ಅವಕಶವಿಲ್ಲವೆಂದು ಅವರಿಗೆ ಪ್ರವೇಶವನ್ನು ನಿರಾಕರಿಸುತ್ತಾರೆ, ಇದು ಮಾಹೆ ಸಂಸ್ಥೆಯಲ್ಲಿರಬಹುದು, ನಿಟ್ಟೆ ಸಂಸ್ಥೆಯಲ್ಲಿರಬಹುದು, ಅವರದೇ ಆದ ಬೇರೆ ಬೇರೆ ಪರೀಕ್ಷೆಗಳನ್ನು ಕಟ್ಟಿದರೆ ಮಾತ್ರ ಅವರಿಗೆ ಅವಕಾಶವಿದೆ ಹಾಗಾದರೆ, ಸಿಇಟಿ ಎನ್ನುವುದು ಸರ್ಕಾರದ ವತಿಯಿಂದ ನಡೆಯುವ ಒಂದು ಪರೀಕ್ಷೆ, ಇದರಲ್ಲಿ ರ್‍ಯಾಂಕಿಂಗ್‌ನಲ್ಲಿ ಜಾಸ್ತಿ ಅಂಕ ಬಂದವರಿಗೆ ಅಲ್ಲಿ ಕೊಡುವಂತಹ ಒಂದು ವ್ಯವಸ್ಥೆ ಇಲ್ಲ, ಈ ಬಗ್ಗೆ ಸರ್ಕಾರದ ನಿಲುವೇನು? ಸಿಇಟಿಯಲ್ಲಿ ರ್‍ಯಾಂಕ್ ಬಂದವರಿಗೆ ಈ ವರ್ಷ ಅಲ್ಲದಿದ್ದರೂ ಮುಂದಿನ ವರ್ಷದಿಂದಾದರೂ ಸರ್ಕಾರಿ ಸೀಟು ಬಿಟ್ಟು ಮ್ಯಾನೇಜ್‌ಮೆಂಟ್ ಸೀಟ್‌ನಲ್ಲೂ ಕೂಡ ಅವರಿಗೆ ಕೊಡುವಂತಹ ವ್ಯವಸ್ಥೆಯನ್ನು ಇಟ್ಟುಕೊಳ್ಳುತ್ತದೆಯೇ ಎಂದು ಸರ್ಕಾರದವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅಖಿಲಭಾರತ ಮಟ್ಟದಲ್ಲಿ ಕಾಯಿದೆ ರೂಪಿಸಲು ಒತ್ತಾಯಿಸಲಾಗುವುದೆಂದು ಸರ್ಕಾರ ಹೇಳಿದೆ, ಇದನ್ನು ಬರುವ ಶೈಕ್ಷಣಿಕ ವರ್ಷದಲ್ಲಾದರೂ ಕೇಂದ್ರ ಹಾಗೂ ರಾಜ್ಯದಲ್ಲಿ ಒಂದು ಕಾನೂನನ್ನು ಸಮಾನವಾಗಿ ತಂದುಕೊಳ್ಳಬೇಕು, ಏಕೆಂದರೆ ಕೇಂದ್ರದಲ್ಲಿ ಕಾಂಗ್ರೆಸ್ ಸಮ್ಮಿಶ್ರ ಸರ್ಕಾರವಿದೆ, ಇಲ್ಲಿಯೂ ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರವಿರುವುದರಿಂದ ಒತ್ತಡತಂದು ಬರುವ ವರ್ಷವಾದರೂ ವಿದ್ಯಾರ್ಥಿಗಳಿಗೆ ಸಮಾನವಾಗಿ ನ್ಯಾಯ ಸಿಗುವ ರೀತಿಯಲ್ಲಿ, ಕೇಂದ್ರದಲ್ಲಿ ಶಾಸನವನ್ನು ತರುವುದಕ್ಕೆ ತಾವು ಪ್ರಯತ್ನ ಮಾಡುತ್ತೀರವೆಂಬುದನ್ನು ಸ್ಪಷ್ಟಪಡಿಸಬೇಕು

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉನ್ನತ ಶಿಕ್ಷಣ ಸಚಿವರು ಪರವಾಗಿ)** ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಈ ಸದನದಲ್ಲಿ ಬಹಳ ಕಾಲ ಚರ್ಚೆ ಮಾಡಲಾಗಿದೆ, ಇದು ಎಲ್ಲಾ ಮಾನ್ಯ ಸದಸ್ಯರಿಗೆ ಗೊತ್ತಿರುವುದು, ಈ ಬಗ್ಗೆ ನಾವು ಸರ್ವಾನುಮತದಿಂದ ಒಂದು ತೀರ್ಮಾನವನ್ನು ಮಾಡಿ ಗೊತ್ತುವಳಿಯನ್ನು ಪಾಸ್ ಮಾಡಿದ್ದೇವೆ, ತಾವು ಕೂಡ ಇದರಲ್ಲಿ ಭಾಗಿಗಳಾಗಿದ್ದೀರಿ ಈ ಎಲ್ಲಾ ಪ್ರಶ್ನೆಗಳು ಉದ್ಭವವಾಗಿರುವುದು ಉನ್ನಿಕೃಷ್ಣನ್‌ರವರ ತೀರ್ಮಾನದ ನಂತರ ನಡೆದಿರುವ ಬೆಳವಣಿಗೆಗಳು ಸರ್ವಶ್ರೇಷ್ಠ ನ್ಯಾಯಲಯ ಕೊನೆಯ ದಿವಸ ಕೊಟ್ಟ ತೀರ್ಮಾನವೇನಿದೆ, ಅದು ಅನೇಕ ಪ್ರಶ್ನೆಗಳಿಗೆ ಕಾರಣಿ ಭೂತವಾಗಿದೆ ಮತ್ತು ಈ ಎಲ್ಲಾ ತೊಂದರೆಗಳಾಗಿವೆ ಆದಾದನಂತರ ಇಸ್ಲಾಮಿಕ್ ಎಜ್ಯುಕೇಷನ್ ಆಕಾಡೆಮಿಯವರ ಒಂದು ರಿಟ್ ಪಿಟಿಷನ್ ಆಧಾರದ ಮೇಲೆ ಒಂದು ಸ್ಪಷ್ಟೀಕರಣ ತೀರ್ಪನ್ನು ಕೊಟ್ಟ ಕಾರಣ ಮತ್ತೆ ಈ ವಿಚಾರಗಳ ಬಗ್ಗೆ ಪ್ರಶ್ನೆಗಳಾಗಿ ಎರಡು ಸಮಿತಿಗಳನ್ನು ನೇಮಕಾತಿ ಮಾಡಿರುವುದು ಒಂದು ವೆಂಕಟರಾಮನ್‌ರವರ ಸಮಿತಿ ಅದರ ಉಸ್ತುವಾರಿ ಏನೆಂದರೆ ಅನುಪಾತ ಎಷ್ಟರಲ್ಲಿರಬೇಕು ಎಂಬುದನ್ನು ನೋಡುವುದು 75 25 ಅಥವಾ 50 50 ಈ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ಇದೆ ಇನ್ನೊಂದು ನ್ಯಾಯಮೂರ್ತಿ ಮುರಗೋಡ್ ನೇತೃತ್ವದ ಸಮಿತಿ ಬೋಧನಾ ಶುಲ್ಕ ಎಷ್ಟಿರಬೇಕು ಮತ್ತು ವಿವಿಧ ಕಾಲೇಜುಗಳ ಲೆಕ್ಕಪತ್ರಗಳನ್ನು ಪರಿಶೀಲಿಸಿ ನಿರ್ಣಯ ಮಾಡಬೇಕೆಂದು ಮಾಡಿರುವ ಸಮಿತಿ ಈ ಬಗ್ಗೆ ಖಾಸಗಿ ಅನುದಾನರಹಿತವಾಗಿರತಕ್ಕ ಕಾಲೇಜಿನವರು ಮುರುಗೋಡು ಸಮಿತಿಯವರು ಕೊಟ್ಟಿರುವ ಪ್ರಕಾರ ಬೋಧನಾ ಶುಲ್ಕ ಮಾಡಿರುವುದು ಬಹಳ ಕಡಿಮೆಯಾದ ಮೊತ್ತ ಅದನ್ನು ಒಪ್ಪುವುದಿಲ್ಲ ಎಂದು ಹೈಕೋರ್ಟಿನಲ್ಲಿ ರಿಟ್ ಹಾಕಿದ್ದಾರೆ ಇವತ್ತು ಅದು ಮುಂದೂಡಲ್ಪಟ್ಟಿದ್ದು ವಿಚಾರಣಾ ಹಂತದಲ್ಲಿದೆ ಆದಾದನಂತರ ನಾವು ಶೇಕಡ 75ರಷ್ಟು ಸರ್ಕಾರ

ಮತ್ತು ಶೇಕಡ 25ರಷ್ಟು ಸೀಟುಗಳನ್ನು ಖಾಸಗಿ ಕಾಲೇಜುಗಳು ಇಟ್ಟುಕೊಳ್ಳಬೇಕೆಂದು ಮಾಡಿದ ನಂತರ ಅದರ ಬಗ್ಗೆ ಸರ್ವಶ್ರೇಷ್ಟ ನ್ಯಾಯಾಲಯ 17 7 04ರಂದು ಒಂದು ಮಧ್ಯಂತರ ಆದೇಶ ಹೊರಡಿಸಿ ಶೇಕಡ 50.50 ರಷ್ಟಿರಬೇಕೆಂಬ ವಿಚಾರವನ್ನು ಪ್ರಸ್ತಾಪ ಮಾಡಿದ ಮೇಲೆ ಇಲ್ಲೆಲ್ಲಾ ಆಗಿರುವ ಬೆಳವಣಿಗೆಯನ್ನು ತಾವು ನೋಡಿದ್ದೀರಿ ಈ ವಿಚಾರದಲ್ಲಿ ನಾವು ಒಂದು ಕಾನೂನನ್ನೂ ರಚಿಸಿದ್ದೇವೆ ಅದರ ಸಿಂಧುತ್ವವನ್ನು ನಾವು ಪ್ರಶ್ನಿಸುತ್ತೇವೆ ಎಂದು ಅನುದಾನರಹಿತ ಖಾಸಗಿ ಕಾಲೇಜುಗಳ ಕೆಲವು ವಕ್ತಾರರು ಪ್ರಯತ್ನಪಡುತ್ತಿದ್ದಾರೆ ಈಗ ಸಿಇಟಿ ಕೆಲಸ ಕೂಡ ನಡೆದಿದೆ ಆದರೆ ಒಟ್ಟಿನಲ್ಲಿ ಹೇಳಬೇಕಾದರೆ ಅಧ್ಯಕ್ಷರೇ, ಇದಕ್ಕೊಂದು ಶಾಶ್ವತ ಪರಿಹಾರ ಬೇಕು ಅನ್ನುವುದಾದರೆ, ಕೈಗೆಟುಕದ ಈ ಶುಲ್ಕವನ್ನು ಭರಿಸುವಂತಹ ಬಗ್ಗೆಯಾದರೂ ಕೇಂದ್ರ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ ಅಥವಾ ಅದಕ್ಕೆ ಬೇಕಾಗಿರುವಂತಹ ನಿಯಮಾವಳಿಗಳನ್ನು ರಚನೆ ಮಾಡುವಂತಹ ಕಾನೂನನ್ನು ಅವರು ಮಾಡಿದಾಗ ಮಾತ್ರ ನಾವು ಈ ಕಾನೂನಿನ ಸರ್ವಶ್ರೇಷ್ಠ ನ್ಯಾಯಾಲಯದ ತೀರ್ಪಿನ ಕಗ್ಗಂಟಿನಿಂದ ಹೊರಗೆ ಬರಲು ಸಾಧ್ಯವಾಗುತ್ತದೆ ತಾವು ಹೇಳಿದಿರಿ, ಮೇಲೆ ಕೂಡ ಸಮ್ಮಿಶ್ರ ಕಾಂಗ್ರೆಸ್ ಸರ್ಕಾರ ಇದೆ, ಇಲ್ಲಿ ಸಮ್ಮಿಶ್ರ ಸರ್ಕಾರ ಇದೆ ನೀವು ಹೋಗಿ ಅವರ ಮೇಲೆ ಒತ್ತಡ ತರಬೇಕು ಎಂದು ಹೌದು ಒತ್ತಡವನ್ನು ಖಂಡಿತವಾಗಿ ತರುತ್ತೇವೆ ಇದು ತೀರ್ಮಾನವಾಗಿ ಸುಮಾರು 4-5 ವರ್ಷಗಳೇ ಆಗಿಹೋದುವು, ಆಗಲೂ ಸರ್ವಶ್ರೇಷ್ಠ ನ್ಯಾಯಾಲಯದ ತೀರ್ಮಾನವಾದಾಗ ಅಲ್ಲಿ ಪ್ರಜಾಸತ್ತಾತ್ಮಕ ,ಕೂಟದ ಸರ್ಕಾರ ಇತ್ತು ಅದರಲ್ಲಿ ನಿಮ್ಮ ಪಕ್ಷದವರೇ ಪ್ರಧಾನಮಂತ್ರಿಗಳೂ ಆಗಿದ್ದರು, ಬಹುಮತದಲ್ಲಿ ಅವರೇ ಇದ್ದರು

**ಗೊಂದಲ**

**ಶ್ರೀ ಜಗದೀಶ ಶೆಟ್ಟರ್** ಆಗ ಇಲ್ಲಿದ್ದ ರಾಜ್ಯ ಸರ್ಕಾರ ಏನು ಮಾಡುತ್ತಿತ್ತು?

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೆ, ಅವರ ಪಕ್ಷದ್ದು ಎತ್ತಿದರೆ ಇವರಿಗೆ ಕುಳಿತು ಕೊಳ್ಳುವುದಕ್ಕೆ ಆಗುವುದಿಲ್ಲ ನೋಡಿ ಅವರಿಗೆ ಉತ್ತರ ಕೊಡುತ್ತಿದ್ದಾರೆ

**ಶ್ರೀ ಜಗದೀಶ್ ಶೆಟ್ಟರ್** ಆಗ ಇಲ್ಲಿ ಸರ್ಕಾರವಿತ್ತಲ್ಲಾ ಅದು ಮಲಗಿಕೊಂಡುಬಿಟ್ಟಿತ್ತೇ?

**ಶ್ರೀ ಎಂ ಪಿ ಪ್ರಕಾಶ್** ದಯಮಾಡಿ ತಾವು ಸಹಕರಿಸಬೇಕು, ಹಿರಿಯರು ಬಸವ ನೆಂದೊಡೆ ಪಾಪ ಎಂದು ಕಾಮ ಯಾಕೆ ಹಾಕುತ್ತೀರಿ? ದೆಸೆಗೆಟ್ಟು ಪೋಪುದು ಎಂಬುದನ್ನು ನೀವು ಕೇಳುವುದೇ ಇಲ್ಲವಲ್ಲಾ ಬಸವನೆಂದೊಡೆ ಪಾಪ ದೆಸೆಗೆಟ್ಟು ಪೋಪುದು ಎಂದು ನಾನು ಹಾಡುತ್ತೇನೆ ಆದರೆ ನೀವು ಅಲ್ಲಿಗೆ ಕಾಮ ಹಾಕಿಬಿಟ್ಟು ಎದ್ದರೆ, ನಾನು ಏನು ಹೇಳುತ್ತಿದ್ದೇನೆ ಅಂದರೆ ಅವತ್ತಿನ ಕಾಲಕ್ಕೆ ತಮಗೆ ಯಾವ ತೊಂದರೆಗಳಿದ್ದವೋ ಆಗಿನ ಪ್ರಜಾಸತ್ತಾತ್ಮಕ ಒಕ್ಕೂಟದ ಸರ್ಕಾರ ಕೇಂದ್ರದಲ್ಲಿ ಉಚ್ಚ ನ್ಯಾಯಾಲಯ ಕೊಟ್ಟ ತೀರ್ಪಿನ ಕಗ್ಗಂಟನ್ನು ಬಗೆಹರಿಸಲಿಕ್ಕೆ, ಕಾನೂನು ತರಲಿಕ್ಕೆ ಯಾವ್ಯಾವ ತೊಂದರೆಗಳಿದ್ದವೋ, ಆ ತೊಂದರೆಗಳು ಈಗಲೂ ಕೂಡ ನಮಗಿದೆ ಅಲ್ಲಿ ಒಂದು ಸಮ್ಮಿಶ್ರ ಸರ್ಕಾರ ಇದೆ ಅಂದ ತಕ್ಷಣವೇ ಎಲ್ಲವು ಆಗಿಬಿಡುತ್ತದೆ ಎಂಬ ಪ್ರಶ್ನೆಯಲ್ಲ ಆಗ ಇಲ್ಲ ಸರ್ಕಾರ ಇತ್ತು ಒಪ್ಪಿಕೊಳ್ಳುತ್ತೇನೆ ಅದಕ್ಕೆ ಬೇರೆ ಬೇರೆ ಕಾರಣಗಳಿರಬಹುದು ಅವೂ ಕಗ್ಗಂಟಿಗೆ ಕಾರಣವಾಗಿವೆ ಎಂಬುದನ್ನೂ ನಾನು ಒಪ್ಪುತ್ತೇನೆ ಆದರೆ ಶಾಶ್ವತ ಪರಿಹಾರ ತಾವೇನು ಕೇಳುತ್ತಿದ್ದೀರಿ ಅದು ಕೇಂದ್ರ ಸರ್ಕಾರದ ಕಾನೂನಿನಿಂದ ಮಾತ್ರ ಸಿಗುತ್ತದೆ

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** ಸಿಇಟಿ ವಿಷಯದಲ್ಲಿ ನಾನು ಒಂದೇ ಒಂದು ಕೇಳಲು ಬಯಸುವುದು,

**ಶ್ರೀ ಜೆ.ಸಿ. ಮಾಧುಸ್ವಾಮಿ** - ಇಷ್ಟು ದಿನ ಅದರ ಮೇಲೇ ಚರ್ಚೆ ನಡೆದಿದ್ದು ಈಗ ಮತ್ತೆ ಅದನ್ನೇ ಇಲ್ಲಿ ಎತ್ತಿಕೊಂಡರೆ, ನಾವು ಎತ್ತ ಹೋಗುತ್ತಿದ್ದೇವೆ ಅಧ್ಯಕ್ಷರೇ?

**ಶ್ರೀ ಜಗದೀಶ್ ಶೆಟ್ಟರ್** ಇವತ್ತಿನ ದಿವಸ ವಿದ್ಯಾರ್ಥಿಗಳು ಗೊಂದಲದಲ್ಲಿದ್ದಾರೆ ಇವತ್ತಿನವರೆಗೆ ಆ ಗೊಂದಲ ನಿವಾರಣೆಯಾಗಲಿಲ್ಲ

**ಅಧ್ಯಕ್ಷರು** ಅದರ ಬಗ್ಗೆ ವಿವರವಾಗಿ ಚರ್ಚೆ ಆಗಿದೆ ಈಗ ಹೊಸ ಬೆಳಕು ಚೆಲ್ಲುವುದಕ್ಕೆ ಮಾನ್ಯ ಸಚಿವರಿಗೂ ಆಗುವುದಿಲ್ಲ

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಅಧ್ಯಕ್ಷರೇ, 7ನೇ ತಾರೀಖು ಕೌನ್ಸಿಲಿಂಗ್ ಎಂದು ಹೇಳಿದ್ದಾರೆ, ಸೀಟಿನ ಪ್ರಮಾಣವನ್ನು ಶೇಕಡ 50.50 ಮಾಡುವರೋ ಅಥವಾ 75 25 ಮಾಡುತ್ತಾ ಇದ್ದಾರೋ ಇಂಜಿನಿಯರಿಂಗ್ ವಿದ್ಯಾರ್ಥಿಗಳದ್ದು ಅದನ್ನು ಕ್ಲಾರಿಫೈ ಮಾಡಲಿ ಈಗ ಈ ಗೊಂದಲ ನಿರ್ಮಾಣವಾಗಿ ಮುಂದುವರೆಯುತ್ತಾ ಇದೆ ಇವತ್ತಿನವರೆಗೆ ವಿದ್ಯಾರ್ಥಿಗಳ ಮತ್ತು ಪೋಷಕರ ತೊಂದರೆ ನಿವಾರಣೆಯಾಗಲಿಲ್ಲ

**ಶ್ರೀ ಜೆ.ಸಿ ಮಾಧುಸ್ವಾಮಿ** ಜಗದೀಶ್ ಶೆಟ್ಟರ್ ಅವರೆ, ನನ್ನದು ಕ್ರಿಯಾಲೋಪವಿಧೆ, 15 ದಿವಸಗಳ ಹಿಂದೆ ಕ್ವೊಶ್ಚಿನ್ಸ್ ಇಲ್ಲಿಗೆ ನಾವು ಹಾಕುವುದು, ಅದಾದ ಮೇಲೆ ಚರ್ಚೆಯಾಗಿರುವ ವಿಷಯಗಳನ್ನೇ, ಅವರಿಗೆ ಉತ್ತರವನ್ನೇ ಹೇಳಬಾರದಾಗಿತ್ತು ಸನ್ಮಾನ್ಯ ಸಚಿವರು ಬೇಕಾದಷ್ಟು ಇಲ್ಲಿ ಡೆಲಿಬರೇಶನ್ಸ್ ಆದಮೇಲೂ ಅದನ್ನೇ ಕುಳಿತುಕೊಂಡು ಚರ್ಚೆ ಮಾಡುವುದರಲ್ಲಿ ಏನರ್ಥ ಇದು ನಮಗೆ ಗೊತ್ತಾಗುವುದಿಲ್ಲ

**ಶ್ರೀ ಜಗದೀಶ್ ಶೆಟ್ಟರ್** ಪ್ರಶ್ನೆ ಬಂದಾಗ ಸರ್ಕಾರ ಉತ್ತರ ಕೊಡಬೇಕು, ಸ್ಪಷ್ಟೀಕರಣ ಕೇಳುವುದು ನಮ್ಮ ಹಕ್ಕಿದೆ ಇಲ್ಲಿ ಪ್ರಶ್ನೆ ಬಂದಿದೆ, ಅವರು ಉತ್ತರ ಕೊಡುತ್ತಾರೆ, ಕೇಳಲಿಕ್ಕೆ ನಮಗೆ ಹಕ್ಕಿದೆ ಹೀಗಾಗಬಾರದು ಎಂದು ಅನ್ನುವುದು ಸರಿಯಲ್ಲ

**ಅಧ್ಯಕ್ಷರು** ನಾನು ಮೂರು ಉಪ ಪ್ರಶ್ನೆಗಳಿಗೆ ಅವಕಾಶ ಕೊಡಬಹುದು ಎಷ್ಟು ಜನ ಕೇಳಿದ್ದೀರಿ ಈಗ ಎಷ್ಟು ಉಪ ಪ್ರಶ್ನೆಗಳಾಗಿವೆ? ಹಾಗಾದರೆ ಇದೊಂದೇ ಪ್ರಶ್ನೆಗೆ ಇರುವ ಸಮಯವನ್ನೆಲ್ಲಾ ಮುಗಿಸಿಬಿಡುವುದಾ? ಬೇರೆ ಪ್ರಶ್ನೆಗಳಿಗೆ ಹೋಗಬಾರದೇ? ನೀವು ಸ್ವಲ್ಪ ಸಹಕರಿಸಬೇಕು ಆಯಿತು, ಏನಾದರೂ ಒಂದು ಕೇಳಿ ಬೇಗ, ದಯಮಾಡಿ

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** ಈಗ ಸರ್ಕಾರಕ್ಕೆ ಸಮಸ್ಯೆ ಹೇಗೆ ಉಲ್ಬಣವಾಗಿದೆ ಎಂದು ಮನವರಿಕೆಯಾಗಿದೆ ಎಂದು ಅಂದುಕೊಂಡಿದ್ದೇನೆ ಯಾವುದೇ ಹೃದಯ ಇರುವಂಥ, ಕಿವಿ, ಕಣ್ಣು, ಮೂಗು ಪಂಚೇಂದ್ರೀಯಗಳಿರುವಂತಹ ಒಂದು ಸರ್ಕಾರಕ್ಕೆ ಸಮಸ್ಯೆಗಳು ಉಲ್ಬಣವಾಗಿರುವುದು ಅರಿವಾಗಿರುತ್ತದೆ ನಾನು ಯಾಕೆ ಹೇಳುತ್ತಿದ್ದೇನೆ ಅಂದರೆ ವಿದ್ಯಾರ್ಥಿಗಳ ಮತ್ತು ಅವರ ಪಾಲಕರ ಗೋಳು ಏನು ಎಂದು ನಿಮಗೂ ಗೊತ್ತಿದೆ ಅವರಿಗೆ ಎಲ್ಲಿ ಯಾವರೀತಿ ಅಡ್‌ಮಿಶನ್ ಮಾಡಬೇಕು ಎಂದು ಗೊತ್ತಾಗುತ್ತಿಲ್ಲ ಶುಲ್ಕವನ್ನು ಹೇಗೆ ತುಂಬುವುದು ಎಂದು ಗೊತ್ತಾಗುತ್ತಿಲ್ಲ ದಿನನಿತ್ಯ ಅವರ ಕಣ್ಣೀರಿನ ಕಥೆ ಕೇಳುತ್ತಿದ್ದೇವೆ ಈಗ ನಾನು ಸರ್ಕಾರಕ್ಕೆ ಒತ್ತಾಯಿಸುವುದು, ಸರ್ಕಾರ ಸ್ಪಷ್ಟವಾಗಿ ಹೇಳಬೇಕಾದ್ದು 65 ಕೋಟಿ ರೂಗಳನ್ನು ಈ ವರ್ಷದ ಫೀಜಿಗೆ ನಾವು ಡಿಫರೆನ್ಸ್ ಹಣವನ್ನು ತುಂಬಿಕೊಡುತ್ತೇವೆ ಎಂಬುದನ್ನು ಸರ್ಕಾರ ಅವರ ಈ ಕಣ್ಣೀರ ಕಥೆಯನ್ನಾದರೂ ಕೇಳಿ ಹೇಳಲಿ

**ಶ್ರೀ ಎಂ.ಪಿ. ಪ್ರಕಾಶ್** ಸನ್ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಕೇಳುವ ಸ್ಪಷ್ಟೀಕರಣ ಕೇಳುವ ಅಧಿಕಾರ ಅವರಿಗಿದೆ ಈ ಬಗ್ಗೆ ಅನೇಕ ಬಾರಿ ಚರ್ಚೆ ಮಾಡಿದ್ದೇವೆ ಮೂಲಪ್ರಶ್ನೆ ಕೇಳಿದವರಿಗೆ ಸಮಯ ಇದನ್ನೆಲ್ಲಾ ನೋಡಿ ತಾವು ಅವಕಾಶ ಕೊಡಬೇಕಾಗುತ್ತೆ ಪಂಚೇಂದ್ರಿಯಗಳನ್ನೆಲ್ಲ ಜಾಗೃತವಾಗಿಟ್ಟುಕೊಂಡಿದ್ದರಿಂದಲೇ 75:25ರ ಅನುಪಾತದ ಕಾನೂನನ್ನು ಮಾಡಿ ನಾವು ಹೋರಾಟ ಮಾಡುತ್ತಿದ್ದೇವೆ 65 ಕೋಟಿ ರೂ ಗಳನ್ನು ಅವರಿಗೆ ಕೊಡಬೇಕೇ ಬೇಡವೇ ಎಂಬ ವಿಚಾರದಲ್ಲಿ ನಿಮಗೆಷ್ಟು ಕಾಳಜಿ ಇದೆ ನಮಗೂ ಕೂಡ ಅಷ್ಟೇ ಕಾಳಜಿ ಇದೆ ಆದರೆ ಸರ್ಕಾರ ಮಾಡಬೇಕಾಗಿರುವ ಅನೇಕ ಅಬ್ಲಿಗೇಟರಿ ಫಂಕ್ಷನ್ಸ್ ಇವೆ, ಮ್ಯಾನ್ ಅಡೇಟರಿ ಫಂಕ್ಷನ್ಸ್ ಇವ ಅವುಗಳನ್ನು ಮಾಡುವಾಗ ನೀವಿಲ್ಲಿದ್ದಾಗಲೂ ಅಲ್ಲಿದ್ದಾಗಲೂ ಅದೇ ಪ್ರಶ್ನೆ. ಎನ್‌ಡಿಎ ಸರ್ಕಾರದಲ್ಲಿ ಪಂಚೇಂದ್ರಿಯಗಳನ್ನೆಲ್ಲಾ ಚೆನ್ನಾಗಿಯೇ ಇಟ್ಟುಕೊಂಡಿದ್ದರು ಆದರೆ ಕಾನೂನು ಮಾಡುವುದಕ್ಕೆ ಆಗಲಿಲ್ಲ ಇಲ್ಲಿರುವವರೂ ಕೂಡ ಪಂಚೇಂದ್ರಿಯಗಳನ್ನು ಚೆನ್ನಾಗಿ ಇಟ್ಟುಕೊಂಡಿದ್ದರು, ಅವರೂ ಕಾನೂನು ಮಾಡುವುದಕ್ಕೆ ಆಗಲಿಲ್ಲ ಅವೆಲ್ಲಾ ತೊಂದರೆಗಳ ನಡುವೆ ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ ಈಗೇನಿದೆ, ಸರ್ಕಾರ ಆ ವಿದ್ಯಾರ್ಥಿಗಳ ಪರವಾಗಿ ನಿಲ್ಲುತ್ತದೆ ಅವರ ಪರವಾಗಿ ಈಗಾಗಲೇ ಶಾಸನ ಮಾಡಿದ್ದೇವೆ, 75 25 ಅನುಪಾತವನ್ನೂ ಮಾಡಿದ್ದೇವೆ ನಂತರ ಹಣ ಕೊಡಬೇಕಾಗಿರುವ ವಿಚಾರದಲ್ಲಿ ಸರ್ಕಾರ ಯೋಚನೆ ಮಾಡುತ್ತದೆ ಭಿನ್ನಾಭಿಪ್ರಾಯ ಬಂದ್ದು ಅಧ್ಯಕ್ಷರೇ, ಆ ಬಗ್ಗೆ ನೀವು ಸದನದಲ್ಲಿ ಪ್ರಕಟ ಮಾಡಬೇಕು ಎಂದು ಹೇಳಿದರು, ಸದನದಲ್ಲಿ ಪ್ರಕಟ ಮಾಡುವುದಕ್ಕೆ ಸಾಧ್ಯವಿಲ್ಲ, ನಮ್ಮ ಸಂಪನ್ಮೂಲಗಳ ಇತಿಮಿತಿ ನೋಡಿ ನಾವು ಮುಂದೆ ಅದರ ಬಗ್ಗೆ ಪ್ರಶ್ನೆ ಮಾಡುತ್ತೇವೆ ಸುಪ್ರೀಂಕೋರ್ಟಿನ ತೀರ್ಮಾನ ಅಗಲಿ ಎಂದು ಹೇಳಿದ್ದೇವೆ ಆ ಕಾರಣಕ್ಕಾಗಿಯೇ ನಾವು ಪ್ರಯತ್ನ ಮಾಡುತ್ತೇವೆ ಅನೇಕ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಬಗ್ಗೆ ಪ್ರಸ್ತಾಪ ತಾವು ಮಾಡಿದ್ದೀರಿ ಅವರೆಲ್ಲ 75:25 ಅನುಪಾತಕ್ಕೆ ಒಪ್ಪಿದ್ದಾರೆ ಶುಲ್ಕದಲ್ಲಿ ವೈದ್ಯಕೀಯ, ದಂತವೈದ್ಯಕೀಯ ಕಾಲೇಜುಗಳಲ್ಲಿ ವ್ಯತ್ಯಾಸದ ಹಣ ಬಹಳ ಇದೆಯೇ ವಿನಹ ಇಂಜಿನಿಯರಿಂಗ್ ಕಾಲೇಜಿನಲ್ಲಿ ದೊಡ್ಡ ಗೊಣಗಾಟ ಇಲ್ಲ ಆ ಕಾರಣಕ್ಕಾಗಿ ಸಂಪೂರ್ಣ ಬಡವರ ಪರವಾಗಿ ಪ್ರತಿಭಾನ್ವಿತ ವಿದ್ಯಾರ್ಥಿಗಳ ಪರವಾಗಿ ಸರ್ಕಾರ ನಿಲ್ಲುತ್ತದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರೇ, ತಾವು ಹಿರಿಯರಿದ್ದೀರಿ ಉತ್ತರ ಕೊಟ್ಟಿದ್ದೀರಿ, ಪ್ರಶ್ನೆಯೇನು, ಮೆಡಿಕಲ್ ಕಾಲೇಜು ಓದುವಂತಹವರ ತಂದೆತಾಯಿಗಳು ಕಣ್ಣೀರು ಇಡುತ್ತಿರುವುದನ್ನು ಪ್ರತಿ ದಿವಸ ತಾವು ನೋಡುತ್ತಿದ್ದೀರಿ ಡೇಟ್ ಮುಗಿಯುತ್ತಾ ಬರುತ್ತಾ ಇದೆ ಯಾರು ನಿಜವಾದ ಬಡವರಿದ್ದಾರೆ ಅವರು ಮೆಡಿಕಲ್ ಓದುವುದಕ್ಕೆ ಆಗುವುದಿಲ್ಲ ತಾವು ಅದನ್ನು ಭರ್ತಿ ಮಾಡಿಕೊಡುತ್ತೇವೆ ಎಂದು ಹೇಳಿಬಿಟ್ಟರೆ ಆ ಮಕ್ಕಳು ಮೆಡಿಕಲ್ ಶಿಕ್ಷಣದ ಬಗ್ಗೆ ಯೋಚನೆ ಮಾಡುತ್ತಾರೆ ಇಲ್ಲದಿದ್ದರೆ ಆಗುವುದಿಲ್ಲವಲ್ಲಾ ಎಂಬುದಕ್ಕಾಗಿ ಚಿಂತೆ ಇದು ಅಡ್ಮಿಶನ್ ಟೈಂನಲ್ಲಿ ತೆಗೆದುಕೊಳ್ಳಬೇಕಾದ ತೀರ್ಮಾನ, ಇನ್ನು ಆರು ತಿಂಗಳ ಮೇಲೆ ತೆಗೆದುಕೊಳ್ಳುವ ತೀರ್ಮಾನವಲ್ಲ, ಅವನಿಗೆ ಆ ಶಕ್ತಿ ಇರದಿದ್ದರೆ ಅವನು ಮೆಡಿಕಲ್‌ಗೆ ಅಡ್ಮಿಟ್ ಆಗುವುದಿಲ್ಲ ಅದನ್ನೇ ನಾವು ಅವತ್ತಿನಿಂದ ಚರ್ಚೆ ಮಾಡುತ್ತಿರುವುದು

**ಶ್ರೀ ಎಂ ಪಿ ಪ್ರಕಾಶ್** ನಿಮಗೆಷ್ಟು ಕಾಳಜಿ ಇದೆ ಸರ್ಕಾರದಲ್ಲಿರುವ ನಮಗೂ ಅಷ್ಟೇ ಕಾಳಜಿ ಇದೆ ನಮ್ಮ ಮಕ್ಕಳೂ ಅದರಲ್ಲಿದ್ದಾರೆ ಪ್ರತಿಭಾವಂತ ಹುಡುಗರ ಗೋಳು ನಿಮಗೆ ಎಷ್ಟೋ ನಮಗೂ ಅಷ್ಟೇ ಆಗಿದೆ ಬಹಳ ವರ್ಷಗಳ ಹಿಂದೆ ಎಂತಹ ಪರಿಸ್ಥಿತಿ ಇತ್ತು ಎಂದರೆ ಡೆಕ್ಕನ್ ಹೆರಾಲ್ಡ್‌ನಲ್ಲಿ ಮೂರ್ತಿಯವರು ಒಂದು ಕಾರ್ಟೂನ್ ಬರೆದಿದ್ದರು ಜಪಾನ್‌ನಲ್ಲಿ ಎಕ್ಸ್‌ಪೋ-70

ಸಂಬಂಧ ದೊಡ್ಡ ಜಗಳವಾದಾಗ ಲಾಠಿಚಾರ್ಜ್, ಅಶ್ರುವಾಯು ಎಲ್ಲಾ ಮಾಡಿದಾಗ ಪೊಲೀಸರಿಗೆಲ್ಲಾ ಏಟು ಬಿತ್ತು ವಿದ್ಯಾರ್ಥಿಗಳಿಗೆ ಏಟು ಬಿತ್ತು ಅವರು ವಾಪಸ್ ಮನೆಗೆ ಬಂದಾಗ ಮೂರ್ತಿಯವರ ಕಾರ್ಟೂನ್‌ನಲ್ಲಿ ಒಬ್ಬ ಪೊಲೀಸ್ ಬ್ಯಾಂಡೇಜ್ ಹಾಕಿಕೊಂಡು ಮನೆಗೆ ಬರುತ್ತಾನೆ, ಅವನ ಮಗನೂ ಬ್ಯಾಂಡೇಜ್ ಹಾಕಿಕೊಂಡು ಮನೆಗೆ ಬರುತ್ತಾನೆ ಈ ಪರಿಸ್ಥಿತಿ ಇವತ್ತಿಗೂ ಇದೆ ಆ ಕಾರಣಕ್ಕಾಗಿಯೇ ನಿಮ್ಮಷ್ಟೇ ಕಳಕಳಿ ನಮಗಿದೆ, ಇದಕ್ಕೆ ಸಂಪನ್ಮೂಲಗಳ ಇತಿಮಿತಿಯಲ್ಲಿ ಪರಿಹಾರವನ್ನು ಕಂಡುಹಿಡಿಯುತ್ತೇವೆ, ಈ ಸದನದಲ್ಲಿ ಉತ್ತರ ಕೊಟ್ಟ ಮೇಲೆ ಅದಕ್ಕೆ ನಾವು ಬದ್ಧರಾಗಿರಬೇಕಾಗುತ್ತದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಬಡ ಮಕ್ಕಳ ಸಹಾಯಕ್ಕೆ ಬನ್ನಿ ಎಂದು ನಾವು ಕೇಳುತ್ತಿದ್ದೇವೆ ಸಂಪನ್ಮೂಲಗಳ ಇತಿಮಿತಿ ಅಂದರೆ ನಿಮಗೆ ಬೇಕಾದ್ದಕ್ಕೆ ಖರ್ಚು ಮಾಡುವುದಕ್ಕೆ ದುಡ್ಡಿದೆ, ಆ ಬಡ ಮಕ್ಕಳಿಗೆ ರಕ್ಷಣೆ ಕೊಡುವುದಕ್ಕೆ ದುಡ್ಡಿಲ್ಲವೆ? ಹಾಗಾದರೆ ಆ ಮಕ್ಕಳ ಗತಿಯೇನು? ಅದಕ್ಕೆ ತಾನೇ ನಾವು ಕೇಳುತ್ತಿರುವುದು ನಮ್ಮಷ್ಟೇ ಕಾಳಜಿ ನಿಮಗಿಲ್ಲ ಎಂದು ನಾವು ಹೇಳುತ್ತಿಲ್ಲ ಅದನ್ನು ಪದೇ ಪದೇ ಹೇಳಬೇಡಿ ನಿಮಗೆ ಕಾಳಜಿ ಇದ್ದರೆ 2002–03 ಫೀ ಸ್ಟ್ರಕ್ಚರಿನ ವ್ಯತ್ಯಾಸವನ್ನು ಭರ್ತಿ ಮಾಡಿ ಇಷ್ಟು ಪರ್ಸೆಂಟ್ ವಿದ್ಯಾರ್ಥಿಗಳಿಗೆ ನಾವು ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿದರೆ ಮುಗಿದುಹೋಯಿತಲ್ಲ ಅದು ಬಿಟ್ಟು ನೀವು ನಿಮ್ಮ ಸಂಪನ್ಮೂಲದ ಕತೆ ಹೇಳಿಕೊಂಡು ಕುಳಿತರೆ ಈ ಮನೆಯಲ್ಲಿ ನಾವ್ಯಾಕೆ ಪ್ರಶ್ನೆ ಕೇಳಬೇಕು?

**ಶ್ರೀ ಎಂ ಪಿ ಪ್ರಕಾಶ್** ಅದೇ ಕತೆಯನ್ನು ಹಗಲೆಲ್ಲಾ ಹೇಳಿ ಬಡವರ ಕಣ್ಣೀರು, ಪ್ರತಿಭಾವಂತರ ಕಣ್ಣೀರಿನ ಬಗ್ಗೆ ಹೇಳಬೇಕಾದ ಅಗತ್ಯ ಇಲ್ಲ ಸಂಪನ್ಮೂಲಗಳನ್ನು ಕಾದಿರಿಸುತ್ತೇವೆ ಎಂದು ಹೇಳಿದ್ದೇವೆ ಸಂಪನ್ಮೂಲಗಳನ್ನು ಕಾದಿರಿಸುತ್ತೇವೆ ಆ ಕತೆಯನ್ನು ಹೇಳುವುದಿಲ್ಲ, ಅದರ ಬಗ್ಗೆ ನಿಲುವನ್ನು ತೆಗೆದುಕೊಳ್ಳುತ್ತೇವೆ ಯಾವುದೇ ಸರ್ಕಾರ ನಿಂತ ಬೈಟಾಕಿಯಲ್ಲಿ ಇದಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ

**ಶ್ರೀ ಕೆ ರಘುಪತಿ ಭಟ್** ಮಾನ್ಯ ಅಧ್ಯಕ್ಷರೆ, ಸಿ ಇ ಟಿ ಪರೀಕ್ಷೆಗಳ ಬಗ್ಗೆ ..

**ಅಧ್ಯಕ್ಷರು** ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು ನಿಮ್ಮ ನಾಯಕರೆಲ್ಲಾ ಕೇಳಿದ್ದಾರೆ ಇನ್ನು ಅನೇಕ ಪ್ರಶ್ನೆಗಳಿವೆ ಎಲ್ಲಾ ಸ್ಪಷ್ಟೀಕರಣವನ್ನು ಕೇಳಿದರು ಹೀಗೆ ಮತ್ತೆ ಮತ್ತೆ ನಿಂತುಕೊಂಡರೆ ಹೇಗೆ? ನಿಮ್ಮದೊಂದೇ ಪ್ರಶ್ನೆ ಅಲ್ಲ ಇನ್ನೂ ಅನೇಕ ಪ್ರಶ್ನೆಗಳಿವೆ ದಯಮಾಡಿ ಕುಳಿತುಕೊಳ್ಳಿ ಮಾನ್ಯ ಸಿದ್ಧರಾಮಪ್ಪ ಖೂಬಾ ಅವರು ತಮ್ಮ ಪ್ರಶ್ನೆಯನ್ನು ಕೇಳಿ

**ಶ್ರೀ ಕೆ ರಘುಪತಿ ಭಟ್** ನನ್ನ ಪ್ರಶ್ನೆಗೆ ಉತ್ತರ ಸಿಗಲಿಲ್ಲ ಅಧ್ಯಕ್ಷರೇ,

**ಅಧ್ಯಕ್ಷರು** ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು ಈ ರೀತಿ ಸ್ವಭಾವವನ್ನು ನಾನು ಸಹಿಸುವುದಿಲ್ಲ

**ಶ್ರೀ ಕೆ ರಘುಪತಿ ಭಟ್** ನನಗೆ ಉತ್ತರ ಸಿಗಲಿಲ್ಲ ನಾನು 32 ಪ್ರಶ್ನೆಯನ್ನು ಕೇಳಿದ್ದೇನೆ ಇವತ್ತು ಒಂದು ಪ್ರಶ್ನೆಗೆ ಉತ್ತರ ಕೇಳತಕ್ಕದ್ದಕ್ಕೂ ಅವಕಾಶ ಇಲ್ಲವೇ? ನನಗೆ ಹಕ್ಕಿಲ್ಲವೇ ಅಧ್ಯಕ್ಷರೇ?

**ಅಧ್ಯಕ್ಷರು** ಉತ್ತರ ಏನು ಸಿಗಲಿಲ್ಲ? ನಿಮ್ಮ ನಾಯಕರು ಅನೇಕ ಉಪಪ್ರಶ್ನೆಗಳನ್ನು ಕೇಳಿದ್ದಾರೆ ಅದಕ್ಕೆ ಸರ್ಕಾರದವರು ಉತ್ತರ ಹೇಳಿದ್ದಾರೆ ಏನು ಇದರ ಅರ್ಥ This is very bad

**ಎಂ ಪಿ ಪ್ರಕಾಶ್** ಮಾನ್ಯ ಅಧ್ಯಕ್ಷರೇ, ಎಷ್ಟೆಲ್ಲಾ ಉಪಪ್ರಶ್ನೆಗಳಿಗೆ ಅವಕಾಶವನ್ನು ಮಾನ್ಯ ಅಧ್ಯಕ್ಷರು ಕೊಡಬೇಕೋ ಅಷ್ಟನ್ನು ಕೊಡುತ್ತಾರೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ,

ಇದಾದಮೇಲೆ ತಾವು ಬನ್ನಿ, ನಮ್ಮ ಅಧಿಕಾರಿಗಳಿದ್ದಾರೆ, ಅವರ ಜೊತೆಯಲ್ಲಿ ಮಾತನಾಡಿ ತಮಗೆ ಸಮಜಾಯಿಷಿಯನ್ನು ನಾನು ಕೊಡುತ್ತೇನೆ ಏಕೆಂದರೆ ಎಲ್ಲಾ ಕಾಲವನ್ನು ಉಪಪ್ರಶ್ನೆಗೆ ಕೊಡುವುದಕ್ಕಾಗುವುದಿಲ್ಲ ಏಕೆಂದರೆ ಇನ್ನು ಬೇರೆ ಮಾನ್ಯ ಸದಸ್ಯರುಗಳು ಕೊಟ್ಟಿರುವ ಪ್ರಶ್ನೆಗಳು ದಯವಿಟ್ಟು ತಾವು ಸಹಕಾರವನ್ನು ಮಾಡಬೇಕು ತಾವು ಹೊರಗಡೆ ಬನ್ನಿ, ಹೇಳುತ್ತೇನೆ

## ಪವರ್ ಟಿಲ್ಲರ್ ಖರೀದಿಗೆ ಸಬ್ಸಿಡಿ ಹಣ

98(844) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಸಾಲಿನಲ್ಲಿ ರೈತರು ಪವರ್ ಟಿಲ್ಲರ್ ಖರೀದಿಸುವುದಕ್ಕಾಗಿ ಸರ್ಕಾರ ನಿಗಧಿಪಡಿಸಿದ ಸಹಾಯಧನ ಎಷ್ಟು

ಆ) ಈ ಹಣದಲ್ಲಿ ರಾಜ್ಯ ಮತ್ತು ಕೇಂದ್ರದ ಸರ್ಕಾರದ ಪಾಲು ಎಷ್ಟು?

ಇ) ಈ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ನಿಗದಿಪಡಿಸಿದ ಹಣ ಎಷ್ಟು?

ಈ) ಎಷ್ಟು ಫಲಾನುಭವಿಗಳಿಗೆ ಸಹಾಯಧನ ಎತರಿಸಲಾಗುವುದು?

ಶ್ರೀ ಕೆ ಶ್ರೀನಿವಾಸಗೌಡ ( ಕೃಷಿ ಸಚಿವರು)

ಅ) ಕಳೆದ ಸಾಲಿನಲ್ಲಿ ರೈತರು ಪವರ್ ಟಿಲ್ಲರ್ ಖರೀದಿಸುವುದಕ್ಕಾಗಿ ರೂ 349 82ಲಕ್ಷಗಳಷ್ಟು ಸಹಾಯಧನ ನಿಗಧಿಪಡಿಸಲಾಗಿತ್ತು

ಆ) ರೂ 349 82 ಲಕ್ಷಗಳ ಸಹಾಯಧನದಲ್ಲಿ ರಾಜ್ಯದ ಪಾಲು ರೂ 172 95 ಮತ್ತು ಕೇಂದ್ರದ ಸರ್ಕಾರದ ಪಾಲು ರೂ 176 87 ಲಕ್ಷ ಆಗಿತ್ತು

ಇ) ಈ ಸಾಲಿನಲ್ಲಿ ರೂ 250 00 ಲಕ್ಷಗಳಷ್ಟು ಅನುದಾನವನ್ನು ಈ ಉದ್ದೇಶಕ್ಕಾಗಿ ತಾತ್ಕಾಲಿಕವಾಗಿ ನಿಗದಿಪಡಿಸಲಾಗಿದೆ

ಈ) ಒಟ್ಟು 467 ಫಲಾನುಭಿಗಳಿಗೆ ಈ ಸಹಾಯಧನ ವಿತರಿಸಲು ಉದ್ದೇಶಿಸಲಾಗಿದೆ

**ಶ್ರೀ ಅರಗ ಜ್ಞಾನೇಂದ್ರ** ಮಾನ್ಯ ಅಧ್ಯಕ್ಷರೇ, ನಾನು ಈ ರಾಜ್ಯದ ರೈತರು ಕೊಳ್ಳುತ್ತಿರುವ ಪವರ್ ಟಿಲ್ಲರ್ ಮೇಲೆ ಸರ್ಕಾರ ಕೊಡುತ್ತಿರುವ ಸಬ್ಸಿಡಿ ಪರವಾಗಿ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ ಕಳೆದ ಸಾರಿ ಇವರು ಪವರ್ ಟಿಲ್ಲರ್‌ಗೋಸ್ಕರ 349 82 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದರು ಆದರೆ ಈ ಸಾರಿ 250 ಲಕ್ಷ ರೂಪಾಯಿಗಳನ್ನು ಮಾತ್ರ ನಿಗದಿ ಮಾಡಿದ್ದಾರೆ ನನ್ನ ವಿನಂತಿ ಇಷ್ಟೇನೆ ಕಳೆದ ಸಾಲಿನಲ್ಲಿ ಒಂದು ಟಿಲ್ಲರ್‌ಗೆ ಎಷ್ಟು ಸಹಾಯಧನವನ್ನು ಕೊಡುತ್ತಿದ್ದೀರಿ? ಈ ಸಾಲಿನಲ್ಲಿ ಒಂದು ಟಿಲ್ಲರ್‌ಗೆ ಎಷ್ಟು ಸಹಾಯಧನ ಎಂದು ಹೇಳಿ ಈಗಾಗಲೇ ನಿಗದಿ ಮಾಡಿದ್ದೀರಿ? ಈ ಸಾರಿ ಸಹಾಯಧನವನ್ನು ಹೆಚ್ಚಿಗೆ ಮಾಡಿದ್ದೀರಾ ಅಥವಾ ಕಡಿಮೆ ಮಾಡಿದ್ದೀರಾ?

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, ಸಹಾಯಧನವನ್ನು ಅರ್ಧ ಭಾಗ ಕೇಂದ್ರ ಸರ್ಕಾರ, ಅರ್ಧ ಭಾಗವನ್ನು ರಾಜ್ಯ ಸರ್ಕಾರ ಕೊಡುತ್ತದೆ ಅದರಲ್ಲಿ 42 ಸಾವಿರ ರೂಪಾಯಿಗಳನ್ನು ಎರಡೂ ಸರ್ಕರಗಳು ಸೇರಿ ಕೊಡುತ್ತಿವೆ.50 ಪರ್‌ಸೆಂಟ್ ಸಬ್ಸಿಡಿಯನ್ನು ಮಾತ್ರ ಪವರ್ ಟಿಲ್ಲರ್‌ಗೆ ಕೊಡುತ್ತಿದ್ದೇವೆ

**ಶ್ರೀ ಅರಗ ಜ್ಞಾನೇಂದ್ರ** ನಾನು ಕೇಳಿದ್ದು ಒಂದು ಪವರ್ ಟಿಲ್ಲರ್‌ನ ಸಹಾಯಧನ ಎಷ್ಟಿತ್ತು? ಈ ಸಾರಿ ಎಷ್ಟಿದೆ?

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, 42 ಸಾವಿರ ಎಂದು ಹೇಳಿದೆ ಈ ಸಾರಿಯೂ ಅಷ್ಟೇ ಇದೆ

**ಶ್ರೀ ಅರಗ ಜ್ಞಾನೇಂದ್ರ** ಮಾನ್ಯ ಅಧ್ಯಕ್ಷರೇ, ನಾವೆಲ್ಲಾ ಮಲೆನಾಡಿನ ರೈತರು ನಮ್ಮಲ್ಲಿ ದೊಡ್ಡ ದೊಡ್ಡ ಟ್ರಾಕ್ಟರ್‌ಗಳು ನಡೆಯುವುದಿಲ್ಲ ನಾವು ಈ ಪ್ರಶ್ನೆಯನ್ನು ಕೇಳಿದ ಉದ್ದೇಶವೇ ಅದು ನಾವು ನೇಗಿಲು ಬಿಟ್ಟರೆ ಪವರ್ ಟಿಲ್ಲರ್ ಮೇಲೆ ಅವಲಂಬಿತರಾಗಿರುವವರು ನಮ್ಮ ತಾಲ್ಲೂಕುಗಳಿಗೆ ಹೆಚ್ಚಿನ ಸಹಾಯಧನವನ್ನು ಇದರಲ್ಲಿ ಒದಗಿಸುವುದು ಅವಶ್ಯಕತೆ ಇದೆ ಬಯಲುಸೀಮೆ ರೈತರಿಗೆ ಟ್ರಾಕ್ಟರ್‌ಗಳನ್ನು ಕೊಳ್ಳುವುದಕ್ಕೆ ಸಬ್ಸಿಡಿಯನ್ನು ಕೊಡಬಹುದು ದಯಮಾಡಿ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ, ಕಳೆದ ವರ್ಷ 349 82 ಲಕ್ಷ ರೂಪಾಯಿಗಳು, ಆಗಲೇ ತುಂಬಾ ಡಿಮ್ಯಾಂಡ್ ಇತ್ತು ತುಂಬಾ ಕಡಿಮೆಯಾಗಿದೆ ನೀವು ರೈತರ ಪರವಾಗಿರುವ ಸರ್ಕಾರ ಎಂದು ಹೇಳುವ ಜನ ನೀವು ಈ ಸಾರಿ ಕಡಿಮೆ ಮಾಡಿದ್ದೀರಿ ಹೇಗೆ? 250 ಲಕ್ಷ ರೂಪಾಯಿಗಳನ್ನು ಮಾತ್ರ ಮೀಸಲಾಗಿಟ್ಟಿದ್ದೀರಿ ಈ ರೀತಿಯಾದರೆ ಎಲ್ಲಾ ರೈತರು ಪವರ್ ಟಿಲ್ಲರ್‌ಗಳನ್ನು ಕೊಂಡುಕೊಳ್ಳುವುದಕ್ಕಾಗುತ್ತದೆಯೇ? ದಯವಿಟ್ಟು ಯಾವುದಾದರೂ ರೀತಿ ಇದನ್ನು ಪುನರ್ ಪರಿಶೀಲನೆಯನ್ನು ಮಾಡಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹತ್ತು ಕೋಟಿ ರೂಪಾಯಿಗಳನ್ನಾದರೂ ಇಡಿ ಇನ್ನೇನು ಮಾಡುವುದಕ್ಕಾಗುವುದಿಲ್ಲ ಇದೊಂದನ್ನೇ ಮಾಡಿ ನೇರವಾಗಿ ಅವರಿಗೆ ಕೊಡುವಂಥದ್ದು ದಯಮಾಡಿ ತಾವು ಈ ಇಲಾಖೆಯನ್ನು ವಹಿಸಿಕೊಂಡಿದ್ದೀರಿ, ಈ ಸಂದರ್ಭದಲ್ಲಿ ಸಹಾನುಭೂತಿಯಿಂದ ರೈತರ ಪರವಾಗಿ ಇಂಥ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂದು ವಿನಂತಿ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, ಮಾನ್ಯ ಅರಗ ಜ್ಞಾನೇಂದ್ರರವರು ಕೇಳುತ್ತಿರುವುದು ನಿಜ ಹಣದ ಲಭ್ಯತೆಗಳನ್ನು ನೋಡಿಕೊಂಡು ಆಯವ್ಯಯದಲ್ಲಿ ಇಟ್ಟಿದ್ದಾರೆ. ಈಗ 250 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ ಅವರು ಹೇಳುವ ಪ್ರಕಾರ ನಾನು ಈಗಲೂ ಕೂಡ ನಮ್ಮ ಆರ್ಥಿಕ ಮಂತ್ರಿಗಳನ್ನು ಕೇಳುತ್ತಿದ್ದೇನೆ, ನಾನು ಕನಿಷ್ಟ ಹತ್ತು ಪವರ್ ಟಿಲ್ಲರ್‌ಗಳನ್ನಾದರೂ ಒಂದೊಂದು ಕ್ಷೇತ್ರಕ್ಕೆ ಕೊಡಬೇಕಾಗುತ್ತದೆ ಎಂದು ನಿಮ್ಮ ಹಾಗೆ ಪವರ್ ಟಿಲ್ಲರ್‌ನ್ನು ನಾನೂ ಕೂಡ ಇಟ್ಟುಕೊಂಡಿರುವ ಮನುಷ್ಯ ಆದರೆ ಆರ್ಥಿಕ ಲಭ್ಯತೆಗಳನ್ನು ನೋಡಿಕೊಂಡು ನಾವು ಇತಿಮಿತಿಗಳಲ್ಲಿ ಹೋಗಬೇಕಾಗುತ್ತದೆ ಆ ಹಂತದಲ್ಲಿ ನಾವು ರೈತರ ಪರ ಇರುವ ಸರ್ಕಾರ, ಅದಕ್ಕೆ ಹೆಚ್ಚಿನ ಚಿಂತನೆಯನ್ನು ಕೊಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ

**ಶ್ರೀ ಆರ್ ಅಶೋಕ್** ಮಾನ್ಯ ಅಧ್ಯಕ್ಷರೇ, ಹೋದಸಾರಿಗಿಂತ ಕಡಿಮೆ ಮಾಡಿಬಿಟ್ಟು ನೀವು ರೈತರ ಪರ ಎಂದು ಹೇಗೆ ಹೇಳುತ್ತೀರಿ? ಹೋದ ಸರ್ಕಾರ ಪರ ಇರಲಿಲ್ಲ ನೀವು ರೈತರ ಪರ ಇಲ್ಲ ಎಂದು ಹೇಳಿಬಿಟ್ಟು ಅಧಿಕಾರಕ್ಕೆ ಬಂದಿರುವುದು ನೀವು ಕಡಿಮೆ ಮಾಡಿದ್ದೀರಲ್ಲಾ, ರೈತರ ಪರ ಹೇಗೆ ಆಗುತ್ತೀರಿ? ಹಾಗಾದರೆ ಹೋದ ಸಾರಿಯೇ ಒಳ್ಳೆಯ ಸರ್ಕಾರ ಇತ್ತು ಎಂದಾಗುತ್ತದೆ ಈಗ ಒಳ್ಳೆಯ ಸರ್ಕಾರ ಇಲ್ಲ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, ಅವರು ಹೇಳಿದ ರೀತಿಯಲ್ಲಿ ನಾನೂ ಕೂಡ ಹತ್ತು ಪವರ್ ಟಿಲ್ಲರ್‌ಗಳನ್ನು ಒಂದು ಕ್ಷೇತ್ರಕ್ಕೆ ಕೊಡಬೇಕು ಎಂದು ಹೇಳಿದೆ ತಾವು ಅದನ್ನು ಕೇಳಿಸಿಕೊಳ್ಳಲಿಲ್ಲ ನಿಮಗೆ ಬೇಕಾಗಿರುವುದನ್ನು ಮಾತ್ರ ಕೇಳಿಸಿಕೊಳ್ಳುತ್ತೀರಿ ಬೇಡದೇ ಇರುವುದನ್ನೂ ಕೇಳಿಸಿಕೊಳ್ಳಿ ಕೊಡಬೇಕು ಎಂದು ಇಚ್ಛೆ ಇರುವವನು ನಾನು 5 ಟ್ರಾಕ್ಟರ್‌ಗಳನ್ನು ಕೊಡಬೇಕೆಂದು

ಇಚ್ಛೆ ಇರುವವನು ನಾನು. ಆದರೆ ನಮ್ಮ ... ಸ್ಥಿತಿಗಳನ್ನೂ ನೋಡಬೇಕಾಗುತ್ತದೆ ಅದರಿಂದ ಕಡಿಮೆಯಾಗಿದೆ ಅದಕ್ಕೆ ಕನಿಷ್ಟ ಹೋದ ವರ್ಷದ್ದನ್ನು ತೂಗಿಸುವುದಕ್ಕೆ ಏನು ಮಾಡಬೇಕು ಎಂದು ನಾನು ಅದನ್ನು ಪರಿಶೀಲಿಸುವ ಕೆಲಸವನ್ನು ಮಾಡುತ್ತಿದ್ದೇನೆ

**ಶ್ರೀ ಅರಗ ಜ್ಞಾನೇಂದ್ರ** ಮಾನ್ಯ ಅಧ್ಯಕ್ಷರೇ, ನಾವು ಕೇಳಿದ ಹಾಗೆ ಮಾನ್ಯ ಸಚಿವರೂ ಕೇಳುತ್ತಿದ್ದಾರೆ ಅವರು ಧೈರ್ಯವಾಗಿ ಹೇಳಬೇಕು ಈಗ ಅವರು ಮಂತ್ರಿಯಾಗಿದ್ದಾರೆ ನಾನು ಕೊಡಿಸುತ್ತೇನೆ, ನೀವೇನೂ ಯೋಚನೆ ಮಾಡಬೇಡಿ ಇಂಥ ಇಂಥ ಕ್ಷೇತ್ರಕ್ಕೆ ಕಳುಹಿಸಿಕೊಡುತ್ತೇನ ಎಂದು ಹೇಳಬೇಕೇ ಹೊರತು ನಾನು ಆರ್ಥಿಕ ಸಚಿವರ ಹತ್ತಿರ ಒತ್ತಾಯ ಮಾಡುತ್ತಿದ್ದೇನೆ, ಅಂದರ ನಾವೇನು ಮಾಡುವುದು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನೀವು ಧೈರ್ಯವಾಗಿ ಹೇಳಿ

**ಶ್ರೀ ಆರ್ ಅಶೋಕ್** ನೀವೇ ಅರ್ಜಿ ಹಿಡಿದು ನಿಂತುಕೊಂಡರೆ ಹೇಗೆ?

**ಶ್ರೀ ಅರಗ ಜ್ಞಾನೇಂದ್ರ** ಮಾನ್ಯ ಅಧ್ಯಕ್ಷರೇ, ಅರ್ಥಸಚಿವರೂ ಮತ್ತು ಕೃಷಿ ಸಚಿವರೂ ಇಬ್ಬರೂ ಒಂದೇ ಪಕ್ಷದಿಂದ ಬಂದವರು ನಿಮ್ಮ ಹತ್ತಿರ ಎರಡೂ ಪವರ್ಸ್ ಇದೆ ಕೃಷಿಕರಿಗ ಸಹಾಯವನ್ನು ಮಾಡುವುದಕ್ಕೆ

**ಅಧ್ಯಕ್ಷರು** ಅವರಿಗೂ ಅಡೆತಡೆಗಳು ಇವೆ ಆದ್ದರಿಂದ ಮುಂದೆ ಹೋಗೋಣ

## ರಾಜ್ಯದಲ್ಲಿ ಕಳಪೆ ಬಿತ್ತನೆ ಬೀಜಗಳ ವಿತರಣೆ

99(752) ಶ್ರೀ ಕ್ಯಾತ್‌ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳಪೆ ಬಿತ್ತನೆ ಬೀಜಗಳನ್ನು ವಿತರಣೆ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಈ ಬಗ್ಗೆ ಬಂದಿರುವ ದೂರುಗಳ ಸಂಖ್ಯೆ ಎಷ್ಟು, ಯಾವ ಯಾವ ತಾಲ್ಲೂಕುಗಳ ರೈತರುಗಳಿಗೆ ಈ ರೀತಿ ಮೋಸ ಮಾಡಲಾಗಿದೆ,

ಇ) ಕಳಪೆ ಬಿತ್ತನೆ ಬೀಜ ಮಾರಾಟ ಮಾಡಿರುವ ಕಂಪನಿಗಳು ಯಾವುವು ಅವುಗಳ ಮೇಲ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು,

ಈ) ಕಳಪೆ ಬಿತ್ತನೆ ಬೀಜ ಉಪಯೋಗಿಸಿರುವುದರಿಂದ ರೈತರುಗಳಿಗೆ ಆಗಿರುವ ನಷ್ಟದ ಪ್ರಮಾಣ ಎಷ್ಟು

ಉ) ರೈತರುಗಳಿಗೆ ಉಂಟಾಗಿರುವ ನಷ್ಟವನ್ನು ತುಂಬಿಕೊಡುವ ಬಗ್ಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು?

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಹೌದು

ಆ) ರಾಜ್ಯದಲ್ಲಿ 5 ಪ್ರಕರಣಗಳು ಬಂದಿರುತ್ತವೆ ಜಿಲ್ಲಾವಾರು/ತಾಲ್ಲೂಕುವಾರು ಹಾಗೂ ಬೆಳೆವಾರು ವಿವರಗಳು ಕೆಳಕಂಡಂತಿವೆ

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಬೆಳೆ |
|---|---|---|---|
| 1 | ದಾವಣಗೆರೆ | ದಾವಣಗೆರೆ | ಮು ಜೋಳ |
| 2 | ಗದಗ | ಮುಂಡರಗಿ ರೋಣ, ಗದಗ | ಹೆಸರು |

| 1 | 2 | 3 | 4 |
|---|---|---|---|
| 3 | ತುಮಕೂರು | ತುರುವೇಕೆರೆ | ಭತ್ತ |
| 4 | ಕೋಲಾರ | ಗೌರಿಬಿದನೂರು | ಮು ಜೋಳ |
| 5 | ಹಾವೇರಿ | ಹಾವೇರಿ | ನೆಲಗಡಲೆ |

ಆದರೆ ನಿರ್ದಿಷ್ಟವಾಗಿ ಬೀಜ ದೋಷದಿಂದ ಮೋಸ ಆಗಿರುವ ಬಗ್ಗೆ ಯಾವುದೇ ವರದಿ ಇಲ್ಲ

ಇ) ಉದ್ಭವಿಸುವುದಿಲ್ಲ
ಈ) ಉದ್ಭವಿಸುವುದಿಲ್ಲ
ಉ) ಉದ್ಭವಿಸುವುದಿಲ್ಲ

**ಶ್ರೀ ಕ್ಯಾತ್‌ಸಂದ್ರ ಎನ್ ರಾಜಣ್ಣ** ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಕಳಪೆ ಬಿತ್ತನೆ ಬೀಜವನ್ನು ವಿತರಣೆ ಮಾಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದಿದ್ದಕ್ಕೆ "ಹೌದು" ಎಂದಿದ್ದಾರೆ ಎಷ್ಟು ಪ್ರಕರಣಗಳು ವರದಿಯಾಗಿದೆ ಎಂದರೆ "ಐದು" ಎಂದು ಉತ್ತರದಲ್ಲಿ ಹೇಳಿದ್ದಾರೆ ಕ್ರಮ ಏನು ತೆಗೆದುಕೊಂಡಿದ್ದೀರಿ ಎಂದರೆ "ಉದ್ಭವಿಸುವುದಿಲ್ಲ" ಎಂದು ಹೇಳಿದ್ದಾರೆ ಇದು ಯಾವುದು ಸತ್ಯ? ಯಾವುದು ಅಸತ್ಯ? ಅಥವಾ ಸರ್ಕಾರದ ಗಮನಕ್ಕೆ ಈ ರೀತಿಯ ಕಳಪೆ ಬೀಜಗಳ ಪ್ರಕರಣ ಬಂದಿಲ್ಲವೆಂದರೆ ಕ್ರಮ ತೆಗೆದುಕೊಳ್ಳುವುದು ಉದ್ಭವಿಸುವುದಿಲ್ಲವೆಂದರೆ ಸರಿಹೋಗುತ್ತದೆ ಮೇಲುಗಡೆ ಕಳಪೆ ಬಿತ್ತನೆ ಬೀಜಗಳ ವಿತರಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ 'ಹೌದು' ಎನ್ನುತ್ತಾರೆ ಇಲ್ಲಿ ಕ್ರಮ ಏನು ತೆಗೆದುಕೊಂಡಿದ್ದೀರಿ ಎಂದರೆ ಅದು 'ಉದ್ಭವಿಸುವುದಿಲ್ಲ' ಎನ್ನುತ್ತಾರೆ ಇದರಲ್ಲಿ ಯಾವುದು ಸರಿ? ಯಾವುದು ಸರಿ ಇಲ್ಲವೆಂದು ಹೇಳಿದರೆ ಮುಂದೆ ಇನ್ನೊಂದು ಉಪಪ್ರಶ್ನೆ ಇದೆ ಮಾನ್ಯ ಅಧ್ಯಕ್ಷರೇ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜಣ್ಣನವರು ಕೇಳಿರುವುದರಲ್ಲಿ ಐದು ಜಿಲ್ಲೆಗಳಲ್ಲಿ ಕಳಪೆ ಬಿತ್ತನೆ ಬೀಜಗಳನ್ನು ಕೊಟ್ಟಿದ್ದಾರೆ ಎಂದು ಹೇಳಿ ವರದಿಯಾಗಿತ್ತು ಅದರ ಆಧಾರದ ಮೇಲೆ ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಸಂಪರ್ಕಿಸಿ ಏನೇನು ಆಗಿದೆ ಎಂದು ಅದರ ವಿವರವನ್ನು ತರಿಸಿ ನೋಡಿದಾಗ ಗೌರಿಬಿದನೂರಿನಲ್ಲಿ ಮೈಜ್ ಹಾಕಿದ ಜಾಗದಲ್ಲಿ ಬುದಾ ರೋಗ ಬಂದಿತ್ತು ಉಳಿದ ಜಾಗದಲ್ಲಿ ಅವರ ಲೈಸೆನ್ಸ್‌ಗಳನ್ನು ರದ್ದು ಮಾಡಬೇಕು ಎನ್ನುವ ಬಗ್ಗೆ ಹೇಳಿದ್ದೇನೆ ಅದು ಎಷ್ಟು ಕ್ವಾಂಟಮ್ ಎಂಬುದನ್ನು ನೋಡಿ ಇನ್ನೂ ಹೆಚ್ಚಿಗೆ ಮೋಸವಾಗಿದ್ದರೆ ಅವರನ್ನು ಜೈಲಿಗೆ ಹಾಕುವ ಕೆಲಸವನ್ನೂ ಕೂಡ ಮಾಡಬೇಕು ಎನ್ನುವ ಸೂಚನೆಯನ್ನು ನಮ್ಮ ಅಧಿಕಾರಿಗಳಿಗೆ ಕೊಟ್ಟಿದ್ದೇನೆ

**ಶ್ರೀ ಕ್ಯಾತ್‌ಸಂದ್ರ ಎನ್ ರಾಜಣ್ಣ** ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಶ್ರೀನಿವಾಸಗೌಡರು ಏನು ಸಚಿವರಿದ್ದಾರೆ, ಅವರೂ ಕೂಡ ರೈತರೇ, ಅವರ ಖಾತೆ ಕೂಡ ಅವರ ಮಾರ್ಗದರ್ಶಕರು ಭೈರೇಗೌಡರ ಖಾತೆ ಭೈರೇಗೌಡರು ಇವರಿಗೆ ಈ ರೀತಿ ಉತ್ತರ ಕೊಡುವುದಕ್ಕೆ ಹೇಳಿದ್ದಾರೆಂದರೆ ನಾನು ಪ್ರಶ್ನೆಯನ್ನು ಕೇಳುವುದೇ ಇಲ್ಲ ನಾನು ಸುಮ್ಮನೆ ಕುಳಿತುಕೊಳ್ಳುತ್ತೇನೆ ಏಕೆಂದರೆ ಎಷ್ಟು ಪ್ರಕರಣಗಳು ಗಮನಕ್ಕೆ ಬಂದಿದೆ ಎಂದರೆ ಐದು ಎಂದು ಹೇಳುತ್ತಾರೆ ಕ್ರಮ ಏನು ತೆಗೆದುಕೊಳ್ಳುತ್ತಿದ್ದೀರಿ ಎಂದರೆ ಉದ್ಭವಿಸುವುದಿಲ್ಲ ಎಂದು ಹೇಳುತ್ತಾರೆ ಆದ್ದರಿಂದ ನೀವು ಈ ಉತ್ತರವನ್ನು ಮಾರ್ಪಾಡು ಮಾಡತಕ್ಕದ್ದು ಮಾಡಬೇಕು ಯಾವ ಅಧಿಕಾರಿಗಳು ಈ ರೀತಿ ಬರೆದುಕೊಡುತ್ತಾರೆ, ಅವರಮೇಲೆ

ನೀವು ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರ ಜೊತೆಯಲ್ಲಿ ಇದು ನಿಮ್ಮದೇ ಜಿಲ್ಲೆ. ಶಿಡ್ಲಘಟ್ಟದಲ್ಲಿ ಯಾರೋ ಒಬ್ಬರು ಇರುವ ಒಡವೆಯನ್ನು ಇಟ್ಟು ಗೊಬ್ಬರವನ್ನು ತೆಗೆದುಕೊಂಡು ಹೋಗಿ ಹಾಕಿದರೆ ಆ ಗೊಬ್ಬರ ಸರಿ ಇಲ್ಲ ಎಂದು ಹೇಳಿ ವಾಪಸ್ ಕೊಡುವುದಕ್ಕೆ ಬಂದರೆ ಅವರು ವಾಪಸ್ ತೆಗೆದುಕೊಳ್ಳದೆ ಅಲ್ಲೆಲ್ಲಾ ದಾಂಧಲೆಯಾಗಿರುವುದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಇದು ನಿನ್ನೆ ಶೀಡ್ಲಘಟ್ಟದಲ್ಲಿ ನಡೆದಿರುವುದು ಈ ರೀತಿ ನಿಮ್ಮ ಕಣ್ಮುಂದೆಯೇ ನಡೆಯುತ್ತಿವೆ ಒಂದು ಕಠಿಣವಾದ ಕ್ರಮಗಳನ್ನು ತಾವು ತೆಗೆದುಕೊಳ್ಳತಕ್ಕ ಸೂಚನೆ ಅಧಿಕಾರಿಗಳಿಗೆ ಹೋಗದಿದ್ದರೆ ಮೂರು–ನಾಲ್ಕು ವರ್ಷ ಸತತವಾಗಿ ಬರಗಾಲದಲ್ಲಿ ಬೆಂದಿರುವ ರೈತರು ಈಗೇನೋ ಮಳೆ ಬಿದ್ದಿದೆ ಎಂದು ಹೇಳಿ ಬಿತ್ತನೆ ಮಾಡತಕ್ಕ ಪ್ರಯತ್ನವನ್ನು ಮಾಡಿದಾಗ ಈ ರೀತಿ ಮೋಸದ ಪ್ರಕರಣಗಳು ಬಂದರೆ ಮತ್ತೆ ರೈತರನ್ನು ನಾವು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೇವೆ ಎನ್ನುವ ಬಗ್ಗೆ ತಾವು ಸ್ಪಷ್ಟೀಕರಣವನ್ನು ಕೊಡಬೇಕು

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, ನಿನ್ನೆ ಶಿಡ್ಲಘಟ್ಟದಲ್ಲಿ ಆದ ಘಟನೆ ಬಗ್ಗೆ ನಿನ್ನೆಯೇ ನನ್ನ ಗಮನಕ್ಕೆ ತಂದರು ನಾನು ಸಂಬಂಧಪಟ್ಟ ನಮ್ಮ ರಕ್ಷಣಾಧಿಕಾರಿಗಳಿಗೆ ಹೇಳಿ ಈಗ ಯಾರು ಆ ರೀತಿ ಕಳಪೆ ಗೊಬ್ಬರವನ್ನು ಮಾರುತ್ತಿದ್ದರು, ಅವರನ್ನು ಜೈಲಿನಲ್ಲಿಟ್ಟಿದ್ದೇವೆ ಅದನ್ನು ಮಾನ್ಯ ರಾಜಣ್ಣನವರು ಆಗಲೇ ಹೇಳಿದರು, ಭೈರೇಗೌಡರು ಈ ರೀತಿಯ ಉತ್ತರ ಕೊಡುತ್ತಾರೆಂದು, ಮಾನ್ಯ ಭೈರೇಗೌಡರು ಮಾಡಿದಂತೆಯೇ ನಾನೂ ಮಾಡಿದ್ದೇನೆ ಅವರು ಜೈಲಿನಲ್ಲಿದ್ದಾರೆ ಬೇಕಾದರೆ ನಾಳೆ ಅವರು ಯಾರನ್ನಾದರೂ ವಿಚಾರಿಸಿಕೊಳ್ಳಲಿ ಆ ರೀತಿ ಕಳಪೆ ಬಿತ್ತನೆ ಬೀಜ ಇರಬಹುದು, ಕಳಪೆ ಗೊಬ್ಬರ ಆಗಿರಬಹುದು, ಈ ರೀತಿಯಾದರೆ ರಾಜ್ಯದಲ್ಲಿ ರೈತರಿಗೆ ತೊಂದರೆ ಆಗುವ ಹಾಗೆ ಇದ್ದರೆ ನನಗೆ ಈ ಹುದ್ದೆ ಮುಖ್ಯವಲ್ಲ, ಅವರು ಮುಖ್ಯ ಆ ರೈತರಿಗೆ ಆಗುವ ಸಂಕಷ್ಟಕ್ಕೆ ನಾನು ಯಾರಿಗೂ ಕೂಡ ಮುಲಾಜು ನೋಡುವವನಲ್ಲ ಅವರ ಮೇಲೆ ಕಠಿಣವಾದ ಕ್ರಮಗಳನ್ನು ಜರುಗಿಸುತ್ತೇನೆ ಎನ್ನುವುದಕ್ಕೆ ನಿನ್ನೆ ಆದಂಥ ಉದಾಹರಣೆ ಸಾಕ್ಷಿ ಮಾನ್ಯ ಅಧ್ಯಕ್ಷರೇ,

**ಶ್ರೀ ಜೆ ಸಿ ಮಾಧುಸ್ವಾಮಿ** ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಈ ಬೀಜಕ್ಕೆ ಏನು ಸಬ್ಸಿಡಿಯನ್ನು ಕೊಡುತ್ತಾರೆ ಅದು ಜೂನ್ ತಿಂಗಳಿಗೆ ಮುಗಿದು ಹೋಗಿ ರೈತರಿಗೆ ಈ ಬೀಜದ ಸಬ್ಸಿಡಿ ಇಲ್ಲದೆ ಬೀಜವನ್ನೇ ತೆಗೆದುಕೊಂಡಿಲ್ಲ, ಇದನ್ನು ನಿಮ್ಮ ಗಮನಕ್ಕೆ ತಂದಿದ್ದೇವೆ ಇಡೀ ಜುಲೈ ತಿಂಗಳಲ್ಲಿ ತಾವು ಹಣವನ್ನು ರಿಲೀಜ್ ಮಾಡಲಿಲ್ಲ ಕಲಾಮೆಟೀಸ್ ರಿಲೀಫ್ ಫಂಡ್‌ನಲ್ಲಿ ಬಂದಂತಹ ಸಬ್ಸಿಡಿಯನ್ನು ಬಿಟ್ಟರೆ ಸರ್ಕಾರ ತಾವೇನೂ ಕೊಡಲಿಲ್ಲ ಈಗಲಾದರೂ ಆ ಸಬ್ಸಿಡಿ ಕೊಟ್ಟು ಪ್ರತಿ ತಾಲ್ಲೂಕಿನಲ್ಲಿ 60 ಲಕ್ಷ 70 ಲಕ್ಷ ರೂಪಾಯಿ ಬಾಕಿ ಇದೆ ಎಂದು ಹೇಳಿ, ಸಬ್ಸಿಡಿ ಬಾಕಿ ಇದೆ ಎಂದು ಅದನ್ನು ಕೊಟ್ಟು ಮತ್ತೆ ಸಬ್ಸಿಡಿಯನ್ನು ಎಕ್ಸ್‌ಟೆಂಡ್ ಮಾಡುತ್ತೀರಾ ಹೇಗೆ ಎಂದು ದಯವಿಟ್ಟು ಹೇಳಬೇಕು

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಬಿತ್ತನೆ ಬೀಜಕ್ಕೆ ಎಲ್ಲಿ ಸಿ ಆರ್ ಎಫ್ ನಲ್ಲಿ ಏನು ಹಣ ಬಂತು ಆ ಹಣ ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಕೊಟ್ಟಿದ್ದೇವೆ ಎಲ್ಲಿ ಆ ಹಣ ಕಡಿಮೆಯಾಗಿದೆ ಅಲ್ಲಿಗೆ ಮೊನ್ನೆ ಕೂಡ 8 ಕೋಟಿ ರೂ ಹಣವನ್ನು ಇಡೀ ರಾಜ್ಯದಲ್ಲಿ ಜಿಲ್ಲಾವಾರು ಹಂಚಿದ್ದೇವೆ ಎಲ್ಲಿ ಹಿಂದೆ ಬಿತ್ತನೆ ಆಗುತ್ತಿದೆ ಈಗ ಉದಾಹರಣೆಗೆ ರಾಗಿ, ಭತ್ತ ಈಗ ಬಿತ್ತನೆಯಾಗುತ್ತಿದೆ ಇದಕ್ಕೆ ಎಲ್ಲೆಲ್ಲಿ ಅಗತ್ಯವಿದೆ ಅಲ್ಲಿ ಅದು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಡುವಂತಹ ಕೆಲಸ ಮಾಡಿದ್ದೇವೆ. ಅದು ಸಾಲದಿದ್ದರೆ ಇನ್ನು ಕೂಡ ಸರ್ಕಾರ ಕೊಡುವುದಕ್ಕೆ

ಸಿದ್ಧವಿದೆ ಆದರೆ ಬಿತ್ತನೆ ಕಾರ್ಯ ಎಲ್ಲಾ ಜಿಲ್ಲೆಗಳಲ್ಲಿ ಬಹಳಷ್ಟು ವೇಗವಾಗಿ ಆಗುತ್ತಿದೆ ಕೆಲವು ಜಿಲ್ಲೆಗಳು ಬೆಂಗಳೂರು ಗ್ರಾಮಾಂತರ ತುಮಕೂರು ಮತ್ತು ಕೋಲಾರ ಈ ಜಿಲ್ಲೆಗಳಲ್ಲಿ ಇನ್ನೂ ನಿಧಾನವಾಗಿ ಈಗತಾನೇ ಬಿತ್ತನೆ ಕಾರ್ಯ ಶುರುವಾಗಿದೆ ಅದಕ್ಕೆ ಹಣದ ಕೊರತೆ ಇಲ್ಲ ಅದೂ ಕೂಡ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಎನ್ನುವಂತಹ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ ನೀವು ವಿಮೆ ಬಗ್ಗೆ ಹೇಳಿದಿರಿ ಎಂದು ಅನಿಸುತ್ತದೆ ವಿಮೆಯದು ಜುಲೈ 31ರವರೆಗೂ ಇಟ್ಟಿದ್ದೇವೆ ಎಲ್ಲಿ ಬಿತ್ತನೆಗಳು ನಿಧಾನವಾಗಿ ಆಗುತ್ತವೆ ಆ ಡೇಟ್‌ಗಳನ್ನು ನಾವು ಮುಂದಿನ ದಿನಗಳಲ್ಲಿ ಪ್ರಕಟ ಮಾಡುತ್ತೇವೆ

ಶ್ರೀ ಲಕ್ಷ್ಮಣ ಸಂಗಪ್ಪಸಾವದಿ ಮಾನ್ಯ ಅಧ್ಯಕ್ಷರೇ, ಅಥಣಿ ತಾಲ್ಲೂಕಿನಲ್ಲಿ ಸಿ ಆರ್ ಎಫ್ ನಲ್ಲಿ ಸಣ್ಣ ರೈತರಿಗೆ ಸೋಯಾಬಿನ್ ಬೀಜವನ್ನು ಸುಮಾರು 4224 ಕ್ವಿಂಟಾಲ್ 25 ಕೆ ಜಿ ಬೀಜವನ್ನು ವಿತರಣೆ ಮಾಡಿದ್ದಾರೆ ಇವತ್ತಿನದಿವಸ ತಾವು ಏನು ಬೀಜವನ್ನು ಕೊಟ್ಟಿದ್ದೀರಿ ಕೊಟ್ಟಂತಹ ಬೀಜವನ್ನು ಸುಮಾರು 40 ಸಾವಿರ ಎಕರೆ ಜಮೀನಿನಲ್ಲಿ ರೈತ ಇವತ್ತು ಬಿತ್ತಿದ್ದಾನೆ ಇವತ್ತು ಏನಾಗಿದೆ ಅಂದರೆ ಆ 40 ಸಾವಿರ ಎಕರೆಯಲ್ಲಿ ಈ ಸೋಯಾಬಿನ್ ಬೀಜ ಚೆನ್ನಾಗಿ ಬೆಳೆದಿದ್ದರೂ ಇವತ್ತು ಅದು ಕಾಯಿ ಆಗಿಲ್ಲ ಸುಮಾರು ನಮ್ಮ ತಾಲ್ಲೂಕಿನಲ್ಲಿ 48 ರಿಂದ 50 ಕೋಟಿ ರೂಪಾಯಿ ಹಣ ಲಾಸ್ ಆಗಿದೆ ರೈತರು ಕಣ್ಣೀರು ಹಾಕುತ್ತಿದ್ದಾರೆ ಅದರ ಬಗ್ಗೆ ಸರ್ಕಾರ ದಯವಿಟ್ಟು ಗಮನ ಹರಿಸಿ ರೈತರಿಗೆ ಆಗಿರತಕ್ಕಂಥ ನಷ್ಟಕ್ಕೆ ಪರಿಹಾರವನ್ನು ಕೊಡಲಿಕ್ಕೆ ತಾವೇನಾದರೂ ಯೋಚನೆ ಮಾಡುತ್ತೀರಾ?

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಅಧ್ಯಕ್ಷರೇ, ನಾವು ಕೊಟ್ಟಂತಹ ಬೀಜದಲ್ಲಿ ಆ ತರಹದ ಪರಿಸ್ಥಿತಿಯಾಗಿಲ್ಲ ಅದು ಆ ರೀತಿ ಆಗುವುದಕ್ಕೆ ಸಾಧ್ಯ ಇಲ್ಲ ಏಕೆಂದರೆ ನಾವು ಆ ಕಂಪನಿಗಳ ಮೇಲೆ ಬಹಳ ಹಿಡಿತವನ್ನು ಇಟ್ಟು ಕೊಂಡಿದ್ದೇವೆ ಇವರು ಇಡೀ 40 ಸಾವಿರ ಎಕರೆಗಳಲ್ಲಿ ಈ ರೀತಿ ಆಗಿದೆ ಎಂದು ಹೇಳಿ ನಿನ್ನೆ ಕೂಡ ಸಿಕ್ಕಿದ್ದರು ಆಗ ಅದನ್ನು ಹೇಳಲಿಲ್ಲ ನಿನ್ನೆ ನಾನು ಲಾಂಜ್‌ನಲ್ಲಿ ಭೇಟಿ ಮಾಡಿದೆ ಆಗಲೂ ಹೇಳಲಿಲ್ಲ ಈ ಹೇಳುತ್ತಿದ್ದಾರೆ ನೀವು ಹೇಳಿದ್ದು ನಿಜವಿದ್ದರೆ, ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ ನಾಳೆ ನಾನು ನಿಮಗೆ ಅದರ ಡಿಟೇಲ್ಸ್‌ನ್ನು ಪೂರ್ತಿ ಕೊಡುತ್ತೇನೆ ಆ ರೀತಿ ಏನಾದರೂ ಆಗಿದ್ದರೆ ಸಂಬಂಧಪಟ್ಟ ಸೀಡ್ ಕಂಪನಿಗಳ ಮೇಲೆ ಕ್ರಮ ಜರುಗಿಸುತ್ತೇನೆ ರೈತರಿಗೆ ಆಗಿರುವ ನಷ್ಟವನ್ನು ಏನು ಮಾಡಬೇಕು ಎನ್ನುವುದರ ಬಗ್ಗೆ ಕೂಡ ಪರಿಶೀಲಿಸುತ್ತೇನೆ

## ಡಾ ಶಿವರಾಮ ಕಾರಂತ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸುವುದು

100(617) ಶ್ರೀ ಅಂಗಾರ್ ಎಸ್ (ಸೂಳ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಡಾ ಶಿವರಾಮ ಕಾರಂತ ಪ್ರಥಮ ದರ್ಜೆ ಕಾಲೇಜು, ಬೆಳ್ಳಾರೆ ಈ ಕಟ್ಟಡದ ಅಂದಾಜು ವೆಚ್ಚ ರೂ 36 00 ಲಕ್ಷವಾಗಿದ್ದು, ಕೇವಲ ರೂ 6 00 ಲಕ್ಷ ಅನುದಾನ ಒದಗಿಸಿ ಕಡೆ ಗಾಣಿಸಿರುವುದು ನಿಜವೇ,

ಆ) ಹಾಗಿದ್ದಲ್ಲಿ ಆ ಕಾಲೇಜು ಕಟ್ಟಡಕ್ಕೆ ಪೂರ್ತಿ ಅನುದಾನ ಒದಗಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ

ಈ ಕಟ್ಟಡದ ಸಮಸ್ಯೆಯನ್ನು ಮನಗಂಡು ಹುಡ್ಕೋ ಯೋಜನೆಯ ನೆರವಿನಡಿ ವಿಸ್ತರಣೆಗಾಗಿ ರೂ 10 00ಲಕ್ಷಗಳನ್ನು ಒದಗಿಸಲು ಉದ್ದೇಶಿಸಲಾಗಿತ್ತು ಆದರೆ ಕಟ್ಟಡಗಳ ವಿಸ್ತರಣೆಗಾಗಿ ಹುಡ್ಕೋ ಸಂಸ್ಥೆಯಿಂದ ಸಾಲದ ನೆರವನ್ನು ಸರ್ಕಾರದ ಆರ್ಥಿಕ ಮಿತವ್ಯಯದ ಕಾರಣದಿಂದ ಪಡೆಯಲಾಗಲಿಲ್ಲ ಆದುದರಿಂದ ಉದ್ದೇಶಿತ ಅನುದಾನ ಬಿಡುಗಡೆ ಮಾಡಲಾಗಿಲ್ಲ

ಆ) 2004–05ನೇ ಸಾಲಿಗೆ ಒದಗಿಸಿಕೊಂಡಿರುವ ಅನುದಾನದಲ್ಲಿ ಈ ಕಾಲೇಜಿಗೆ ಅನುದಾನ ಒದಗಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ

**ಶ್ರೀ ಎಸ್ ಅಂಗಾರ** ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಿದ್ದಾರೆ ನನ್ನ ಸೂಳ್ಯ ತಾಲ್ಲೂಕಿನ ಗ್ರಾಮೀಣ ಹಾಗೂ ಮಲೆನಾಡು ಪ್ರದೇಶದಲ್ಲಿರುವಂತಹ ಡಾಕ್ಟರ್ ಶಿವರಾಮ್ ಕಾರಾಂತರ ಕಾಲೇಜು ಅದು 1991ರಲ್ಲಿ ಮಂಜೂರಾಗಿದೆ ಮಂಜೂರಾಗಿ 13 ವರ್ಷಗಳಾದರೂ ಕೂಡ ಆ ಕಾಲೇಜಿನ ಕಟ್ಟಡಕ್ಕೆ ಕೊಟ್ಟಿರುವುದು ಕೇವಲ 6 ಲಕ್ಷ ರೂಪಾಯಿಗಳು ಮಾತ್ರ ಆದರೆ ಇದರ ಜೊತೆಗೆ ಮಂಜೂರಾದ ಕಾಲೇಜುಗಳಿಗೆ ಅದು ವಿಟ್ಲ ಇರಬಹುದು, ಬೆಟ್ಟಂಪಾಡಿ ಇರಬಹುದು ಅಥವಾ ಉಪ್ಪಿನಂಗಡಿ ಇರಬಹುದು ಈ ಎಲ್ಲಾ ಕಾಲೇಜುಗಳಿಗೂ ಕೂಡ ಕಟ್ಟಡಕ್ಕೆ ಬೇಕಾಗಿರುವಂತಹ ಅನುದಾನವನ್ನು ಒದಗಿಸಿದ್ದಾರೆ ಮತ್ತು ಕಟ್ಟಡ ಕೂಡ ಆಗಿದೆ ನನ್ನ ಈ ಒಂದು ಮೀಸಲಾತಿ ಇರುವ ಕ್ಷೇತ್ರದ ಕಾಲೇಜಿಗೆ ಕೇವಲ 6 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿ ಒಂದೇ ಒಂದು ಕ್ಲಾಸ್ ನಡೆಸುವುದಕ್ಕೆ ಕೂಡ ಕೊಠಡಿ ಇಲ್ಲದಂತಹ ಪರಿಸ್ಥಿತಿಯಾಗಿದೆ ನಾನು 3 ಬಾರಿ ಆಯ್ಕೆಯಾದಂತಹ ಸಂದರ್ಭದಲ್ಲೂ ಸಹ ಪ್ರಶ್ನೆ ಕೇಳಿದೆ ಉತ್ತರವನ್ನು ಮಾತ್ರ ಒಂದೇ ರೀತಿಯಲ್ಲಿ ಕೊಡುತ್ತಿದ್ದಾರೆ ಈ ಸಂದರ್ಭದಲ್ಲಿ ಕೂಡ ಅವರು ಅದೇ ಉತ್ತರವನ್ನು ಕೊಟ್ಟಿದ್ದಾರೆ ಹಿಂದೆ ಹುಡ್ಕೋದಲ್ಲಿ 10 ಲಕ್ಷ ರೂಪಾಯಿಗಳನ್ನು ಒದಗಿಸುವುದಕ್ಕೆ ನಾವು ಉದ್ದೇಶಿಸಿದ್ದೇವು ಆದರೆ ಸರ್ಕಾರದ ಆರ್ಥಿಕ ಮಿತವ್ಯಯದ ಕಾರಣ ಹಣ ಒದಗಿಸುವುದಕ್ಕೆ ಆಗಿಲ್ಲವೆಂದು, ಮತ್ತೆ ಈಗ ಹೇಳುತ್ತಿದ್ದಾರೆ ಮಾನ್ಯ ಅಧ್ಯಕ್ಷರೇ, 2004–2005ನೇ ಸಾಲಿಗೆ ಒದಗಿಸಿಕೊಂಡಿರುವ ಅನುದಾನದಲ್ಲಿ ಈ ಕಾಲೇಜಿಗೆ ಅನುದಾನವನ್ನು ಒದಗಿಸಿಕೊಡುತ್ತೇವೆ ಆ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತೇವೆ ಎನ್ನುವ ಉತ್ತರ ಕೊಟ್ಟಿದ್ದಾರೆ ನನಗೆ ಸ್ಪಷ್ಟವಾದ ಉತ್ತರ ಕೊಡಬೇಕು ನಾನು ಪ್ರಶ್ನೆಯನ್ನು ಕೇಳಿರುವಂತಾದ್ದು 1991ನೇ ಇಸವಿಯಲ್ಲಿ ಪ್ರಾರಂಭವಾದ ಎಲ್ಲಾ ಕಾಲೇಜುಗಳ ಕಟ್ಟಡಕ್ಕೆ ಬೇಕಾದಂತಹ ಅನುದಾನವನ್ನು ಕೊಟ್ಟಿದ್ದೀರಿ, ನನ್ನ ಕಾಲೇಜಿಗೆ ಸಂಬಂಧಪಟ್ಟ ಹಾಗೆ ಅನುದಾನವನ್ನು ಕೊಡದೇ ಕಡೆಗಣಿಸಿದ್ದೀರಿ ಈಗಲಾದರೂ ಕೂಡ ಆ ಒಂದು ಕಾಲೇಜಿಗೆ ಅವಶ್ಯಕತೆ ಇರುವಂತಹ ಎಲ್ಲಾ ಅನುದಾನವನ್ನು ಒದಗಿಸಿಕೊಡುತ್ತಾರೆಯೇ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉನ್ನತ ಶಿಕ್ಷಣ ಸಚಿವರ ಪರವಾಗಿ)** ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಹೇಳಿರುವಂತಹ ವಿಚಾರ ಸತ್ಯವಾದುದು 36 ಲಕ್ಷ ರೂಪಾಯಿಗಳಿಗೆ ಒಂದು ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟ ನಂತರ ಬಿಡುಗಡೆಯಾಗಿದ್ದು 6 ಲಕ್ಷ ರೂಪಾಯಿಗಳು, ಅದರಂತೆ ಕೆಲಸ ಕೂಡ ಆಗಿದೆ ಅದಾದನಂತರ ಹುಡ್ಕೋ ಸ್ಕೀಮ್ ಕೆಳಗೆ ನಮಗೆ ಹಣ ಬರುತ್ತದೆಂದು ಹೇಳಿ 18 71 ಕೋಟಿ ರೂಪಾಯಿಗಳಿಗೆ ಅರ್ಜಿಯನ್ನು ಸಲ್ಲಿಸಿತ್ತು ಅವರು ಮಂಜೂರಾತಿ ಮಾಡಿದ್ದು ಕೇವಲ 13 28

ಕೋಟಿ ರೂ ಗಳು ಕನಿಷ್ಟ 10 ಲಕ್ಷ ರೂಪಾಯಿಗಳನ್ನಾದರೂ ಕೊಡಬೇಕು ಎನ್ನುವ ಉದ್ದೇಶ ಇದರಿಂದ ವಿಫಲವಾಯಿತು ಆ ಕಾರಣಕ್ಕಾಗಿಯೇ ಈ ಸಾಲಿನಲ್ಲಿ ಹೆಚ್ಚಿನ ಹಣ ಕೊಡಬೇಕು ಎಂದು ಪ್ರಯತ್ನ ಮಾಡಿದಾಗ ಕೂಡ 2004–2005ರಲ್ಲಿ ಕೇವಲ 50 ಲಕ್ಷ ರೂಪಾಯಿಗಳನ್ನು ಮಾತ್ರ ಇಂತಹ ಹೊಸ ಕಟ್ಟಡಗಳಿಗೆ ಕೊಟ್ಟಿದ್ದಾರೆ ವಿಸ್ತರಣೆ ಮೊದಲಾದವುಗಳಿಗೆ ಹಣ ಕೊಟ್ಟಿಲ್ಲ ಆದರೂ ಹೆಚ್ಚಿನ ಪ್ರಯತ್ನವನ್ನು ಮಾಡಿ ಇಲ್ಲಿ ಅಗತ್ಯತೆ ಹೆಚ್ಚು ಇರುವುದರಿಂದ ಈ 50 ಲಕ್ಷ ರೂಪಾಯಿಗಳನ್ನು ಹೆಚ್ಚುವರಿ ಮಾಡಬೇಕೆನ್ನುವ ಪ್ರಯತ್ನವನ್ನು ಕೂಡ ಹಣಕಾಸಿನ ಇಲಾಖೆ ಜೊತೆಗೆ ಉನ್ನತ ಶಿಕ್ಷಣ ಇಲಾಖೆಯವರು ಮಾತನಾಡುತ್ತಿದ್ದಾರೆ ಹೆಚ್ಚಿನ ಹಣ ಬರುತ್ತದೆ ಎನ್ನತಕ್ಕಂಥ ಒಂದು ನಂಬಿಕೆಯನ್ನೂ ಕೂಡ ಅವರು ಇಟ್ಟುಕೊಂಡಿದ್ದಾರೆ ಇದರ ಜೊತೆಗೆ ಲಭ್ಯವಾಗುವಂತಹ 50 ಲಕ್ಷ ರೂಪಾಯಿಗಳಲ್ಲಿ ಈ ಕಾಲೇಜು ಕಟ್ಟಡದ ವಿಸ್ತರಣೆಗೆ ಹಣ ಕೊಡುತ್ತಾರೆ

**ಶ್ರೀ ಎಸ್ ಅಂಗಾರ** ಮಾನ್ಯ ಅಧ್ಯಕ್ಷರೇ, 50 ಲಕ್ಷ ರೂಪಾಯಿಗಳನ್ನು ಈ ವರ್ಷ ಒದಗಿಸಿದ್ದಾರೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದರು ಆದರೆ ನನಗೆ ಮುಖ್ಯವಾಗಿರುವಂಥಾದ್ದು ಕಾಲೇಜು ನಡೆಸುವುದಕ್ಕೆ ಕೊಠಡಿ ಇಲ್ಲ 6 ಲಕ್ಷ ರೂ.ಗಳಲ್ಲಿ ಆಫೀಸ್‌ಗೆ ಮಾತ್ರ ಒಂದು ಕೊಠಡಿಯನ್ನು ಮಾಡಿದ್ದಾರೆ 1991ರಲ್ಲಿ ಮಂಜೂರಾಗಿದೆ ಇಷ್ಟರವರೆಗೆ ಒಂದು ಕೊಠಡಿಯನ್ನು ಮಾಡಲಿಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲವೆಂದು ಆದರೆ ಯಾವ ರೀತಿಯಲ್ಲಿ ನಾವು ಕಾಲೇಜು ನಡೆಸಬೇಕು? ಏಕೆಂದರೆ ನಮ್ಮನ್ನು ಕ್ಷೇತ್ರದಲ್ಲಿ ಹೋಗುವುದಕ್ಕೆ ಬಿಡುವುದಿಲ್ಲ ಬೇರೆ ಎಲ್ಲಾ ಕಾಲೇಜುಗಳು ಅನುದಾನ ಪಡೆದುಕೊಂಡು ಕಟ್ಟಡ ಆಗಿದೆ, ಈ ಕಾಲೇಜಿಗೆ ಹಣ ಏಕೆ ಬಿಡುಗಡೆ ಮಾಡಿಲ್ಲ ಎಂದು ನಮ್ಮನ್ನು ಕೂಡ ಜನ ಪ್ರಶ್ನೆ ಮಾಡುತ್ತಾರೆ ಈ ರೀತಿಯ ಉತ್ತರ ಕೊಟ್ಟರೆ ಸಾಧ್ಯವಿಲ್ಲ ಏಕೆಂದರೆ ನಾವೂ ಕೂಡ ಕ್ಷೇತ್ರದಲ್ಲಿ ಓಡಾಟ ಮಾಡಬೇಕು ನಮಗೆ ಪೂರ್ತಿ ಅನುದಾನ ಕೊಡುತ್ತೇವೆ ಎನ್ನುವ ಭರವಸೆ ಕೊಟ್ಟರೆ ನಮಗೆ ಕ್ಷೇತ್ರಕ್ಕೆ ಹೋಗುವುದಕ್ಕೆ ಸಾಧ್ಯವಾಗುತ್ತದೆ ಅಲ್ಲಿ ಕ್ಲಾಸ್ ಮಾಡುವುದಕ್ಕೆ ಸಾಧ್ಯವಿಲ್ಲ ಅದಕ್ಕೆ ಮಾನ್ಯ ಸಚಿವರು ಸ್ಪಷ್ಟವಾಗಿ ಉತ್ತರ ಕೊಡಬೇಕು

**ಮಾನ್ಯ ಸದಸ್ಯರು** ಮಾನ್ಯ ಅಧ್ಯಕ್ಷರೇ, ಒಟ್ಟಾರೆ ಎಲ್ಲಾ ಕ್ಷೇತ್ರಗಳಲ್ಲಿ ಇದೇ ಸಮಸ್ಯೆಯಾಗಿದೆ ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಿಬ್ಬಂದಿ ಇರಬಹುದು, ಕಟ್ಟಡ ಇರಬಹುದು ಅವುಗಳನ್ನು ಪೂರ್ಣ ಮಾಡುವುದಕ್ಕೆ ಸರ್ಕಾರ ಏನಾದರೂ ಯೋಜನೆ ಹಾಕಿಕೊಂಡಿದೆಯೇ? ಆ ಬಗ್ಗೆ ತಾವು ಉತ್ತರ ಕೊಡಬೇಕಾಗುತ್ತದೆ ಈಗಾಗಲೇ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ ನಾವು ಕ್ಷೇತ್ರಕ್ಕೆ ಹೋಗುವಂತಿಲ್ಲ ಬೇಡಿಕೆಗಳು ಕೂಡ ಜಾಸ್ತಿಯಾಗಿದೆ ಕಟ್ಟಡ ಇಲ್ಲ, ಸಿಬ್ಬಂದಿ ಇಲ್ಲ, ಉಪನ್ಯಾಸಕರಂತೂ ಇಲ್ಲವೇ ಇಲ್ಲ ನಾವು ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡಿ ಉಪನ್ಯಾಸಕರನ್ನು ಪಾರ್ಟ್ ಟೈಮ್‌ಗೆ ತೆಗೆದುಕೊಂಡು ಅವರಿಗೆ ಗೌರವಧನ ಕೊಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಂಡು ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

**ಶ್ರೀಮತಿ ಶಕುಂತಲ ಟಿ ಶೆಟ್ಟಿ** ಮಾನ್ಯ ಅಧ್ಯಕ್ಷರೇ, ಉಪ್ಪಿನಂಗಡಿ ಹಾಗೂ ಬೆಟ್ಟಂಪಾಡಿ ಕಾಲೇಜುಗಳ ಕಟ್ಟಡ ನಿರ್ಮಾಣ ಕಾರ್ಯ ಮಾನ್ಯ ಅಂಗಾರರವರು ಹೇಳಿದ ಹಾಗೆ ಪೂರ್ತಿಯಾಗಿಲ್ಲ ಕಟ್ಟಡದ ಗೋಡೆಗಳು ಮಾತ್ರ ಎದ್ದು ನಿಂತಿದೆ ಇನ್ನೂ ಪೂರ್ತಿಯಾಗಲಿಲ್ಲ ಅದಕ್ಕೂ ಹಣದ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

**ಶ್ರೀ ಎಂ ಪಿ ಪ್ರಕಾಶ್** ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಮೂಲ ಪ್ರಶ್ನೆ ಕೇಳಿದ ಹಾಗೆ ಆ ಕಾಲೇಜು ಡಾಕ್ಟರ್ ಶಿವರಾಮ ಕಾರಾಂತರ ಹೆಸರಿನಲ್ಲಿರುವುದರಿಂದ ಇದಕ್ಕೆ ಆದ್ಯತೆಯನ್ನು ಕೊಡಬೇಕಾಗುತ್ತದೆ 6 ಲಕ್ಷ ರೂಪಾಯಿಗಳಿಂದ ಕಾಲೇಜಿನ ಕೊಠಡಿಗಳೇ ಆಗಿಲ್ಲ, ಬರೀ ಕಛೇರಿ ಕಟ್ಟಡ ಆಗಿದೆ ಎನ್ನುವಂತಹ ನಿಮ್ಮ ಮಾತಿನಲ್ಲಿ ಬಹಳ ಅರ್ಥ ಇದೆ ಆದರ ಇದಕ್ಕೆ ಸಂಪನ್ಮೂಲಗಳ ಕೊರತೆ ಇರುವುದರಿಂದ ಹುಡ್ಕೋದಿಂದ ಸಾಲ ತೆಗೆದುಕೊಳ್ಳುವಂತಹ ಒಂದೇ ಒಂದು ಪ್ರಯತ್ನ ನಡೆದಿದೆ 18 71 ಕೋಟಿ ರೂ ಗಳಿಗೆ ಅರ್ಜಿ ಹಾಕಿದ್ದು ಅದು ಬರುತ್ತದೆಂದು ನಿರೀಕ್ಷಿಸಲಾಗಿತ್ತು ಆದರೆ ಬಂದಿರತಕ್ಕಂಥ ಹಣ 13 28 ಕೋಟಿ ರೂ ಗಳು ಅದು ಹೊಸ ಕಟ್ಟಡಗಳು ಆಗಬೇಕು, ವಿಸ್ತರಣೆಗಾಗಲಿ ಮತ್ತು ಅಪೂರ್ಣಗೊಂಡಿರತಕ್ಕಂಥ ಕಟ್ಟಡಕ್ಕೆ, ನಿರ್ಮಾಣಕ್ಕೆ ಹಣ ಬರಲಿಲ್ಲ ಈ ವರ್ಷ ಹೆಚ್ಚಿನ ಹಣ ಸಿಗುತ್ತದೆಂದು ಪ್ರಯತ್ನ ಮಾಡಿದರೆ 50 ಲಕ್ಷ ರೂಪಾಯಿಗಳು ಮಾತ್ರ ಹೊಸ ಕಟ್ಟಡಗಳಿಗೆ ಒದಗಿಸಿರತಕ್ಕಂಥಾದ್ದು ಇದೆ ಇದನ್ನು ವಿಸ್ತರಣೆ ಮೊದಲಾಗಿರತಕ್ಕಂಥಾದ್ದು ಏನಿದೆ ತಾವು ಏನು ಪ್ರಸ್ತಾಪ ಮಾಡಿದ್ದೀರಿ ಅವರು ಕೂಡ ಪ್ರಸ್ತಾಪ ಮಾಡಿದ್ದಾರೆ, ಈ 50 ಲಕ್ಷ ರೂ ಗಳಿಂದ ಏನೂ ಆಗುವುದಿಲ್ಲ, ಹೆಚ್ಚು ಹಣ ಕೊಡಬೇಕೆಂದು ಹೇಳಿ ಹಣಕಾಸು ಇಲಾಖೆ ಜೊತೆ ಉನ್ನತ ಶಿಕ್ಷಣ ಇಲಾಖೆಯವರೂ ಕೂಡ ಮಾತುಕತೆ ನಡೆಸಿದ್ದಾರೆ ಹೆಚ್ಚು ಹಣ ಲಭ್ಯವಾಗುತ್ತದೆ ಎನ್ನುವಂತಹ ಭರವಸೆ ಕೂಡ ಇದೆ ಅದರ ಜೊತೆಗೆ ಹುಡ್ಕೋದವರ ಜೊತೆ ಕೂಡ ಮತ್ತೆ ಪ್ರಯತ್ನವನ್ನು ಮಾಡುತ್ತಾರೆ ಇದರ ಮೂಲಕ ಡಾಕ್ಟರ್ ಶಿವರಾಮ ಕಾರಂತರ ಪ್ರಥಮ ದರ್ಜೆ ಕಾಲೇಜಿಗೆ ಆದ್ಯತೆಯನ್ನು ಕೊಟ್ಟು ಈ 50 ಲಕ್ಷ ರೂ ಗಳಲ್ಲಿಯೇ ಹೆಚ್ಚು ಹಣವನ್ನು ಕೊಡಲಿಕ್ಕೆ ನಾನು ಸರ್ಕಾರದ ಮೂಲಕ ಪ್ರಯತ್ನ ಮಾಡುತ್ತೇನೆ

**ಮಂಗಳೂರಿನ ಪಣಂಬೂರಿನಲ್ಲಿ ಎ ಪಿ ಎಂ ಸಿ ಗೋದಾಮುಗಳಿಗೆ ಭದ್ರತೆ ವ್ಯವಸ್ಥೆ**

101(562) ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರಿನ ಪಣಂಬೂರಿನಲ್ಲಿ ಎ ಪಿ ಎಂ ಸಿ ಗೋದಾಮುಗಳಿಗೆ ಒದಗಿಸಲಾಗಿರುವ ಭದ್ರತೆ ಮತ್ತು ಪಹರೆ ವ್ಯವಸ್ಥೆಗಳಾವುವು (ವಿವರ ನೀಡುವುದು)

ಆ) ಈ ಗೋದಾಮುಗಳಿಗೆ ಸೂಕ್ತ ಭದ್ರತೆ ಮತ್ತು ಪಹರೆ ವ್ಯವಸ್ಥೆ ಇಲ್ಲದಿದ್ದುದರಿಂದ ಅಲ್ಲಿಗೆ ಬರತಕ್ಕ ಆಹಾರ ಸಾಮಗ್ರಿಗಳು ಮತ್ತಿತರ ವಸ್ತುಗಳ ಸಾಗಾಣಿಕೆ–ಮರು ಸಾಗಾಣಿಕೆಗಳಲ್ಲಿ ಅಕ್ರಮಗಳು ನಡೆಯಲು ಆಸ್ಪದಾಗಿರುವುದು ನಿಜವೇ

ಇ) ಇಂತಹ ಅವ್ಯವಸ್ಥೆಯಿಂದ ಸರ್ಕಾರಕ್ಕೆ ಬರುವ ಆದಾಯವು ತಪ್ಪಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಬಂದಿದ್ದಲ್ಲಿ, ಆ ಕುರಿತು ಸರ್ಕಾರದ ಕ್ರಮಗಳೇನು?

ಶ್ರೀ ಪ್ರಕಾಶ್ ಬಾ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಸಮಿತಿಯ ಬೈಕಂಪಾಡಿ ಮಾರುಕಟ್ಟೆ ಪ್ರಾಂಗಣದ ಭದ್ರತಾ ವ್ಯವಸ್ಥೆಗಾಗಿ ಖಾಸಗಿ ಸೆಕ್ಯೂರಿಟಿ ಸಂಸ್ಥೆಯಿಂದ ಸೇವೆಯನ್ನು ಪಡೆಯಲಾಗಿದೆ ಮತ್ತು ಪಾಳಿಯಲ್ಲಿ ಭದ್ರತಾ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ

ಆ) ಇಲ್ಲ ಬೈಕಂಪಾಡಿ ಮಾರುಕಟ್ಟೆ ಪ್ರಾಂಗಣದ ಒಳಗೆ ಬರುವ ಕೃಷಿ ಹುಟ್ಟುವಳಿ ಹಾಗೂ ಹೊರಗೆ ಸಾಗಣಿಕೆ ಆಗುವ ಕೃಷಿ ಹುಟ್ಟುವಳಿಗಳ ವಿವರಗಳನ್ನು ಪ್ರವೇಶದ್ವಾರದಲ್ಲಿ ಇಟ್ಟಿರುವ ವಹಿಯಲ್ಲಿ ದಾಖಲಿಸಿ, ವಹಿವಾಟನ್ನು ನಿಯಂತ್ರಿಸಲಾಗುತ್ತಿದೆ

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ

**ಶ್ರೀ ಎನ್ ಯೋಗೀಶ್ ಭಟ್** ಸನ್ಮಾನ್ಯ ಅಧ್ಯಕ್ಷರೇ, ಭದ್ರತಾ ವ್ಯವಸ್ಥೆಯನ್ನು ಮಾಡಿ ನಿಯಂತ್ರಣ ತಂದಿದ್ದೇವೆ ಎಂದು ನೀವು ಹೇಳಿದ್ದರೂ ಕೂಡ ಅಲ್ಲಿ ಕಳಪೆ ಕಾಮಗಾರಿಗಳಾಗಿವೆ ಗೋಡೌನ್‌ಗಳ ಗೋಡೆಗಳಲ್ಲಿ, ಮಾಡುಗಳಲ್ಲಿ ಬಿರುಕು ಬಿಟ್ಟು, ಮಳೆಗಾಲದಲ್ಲಂತೂ ನೀರು ಸಾಕಷ್ಟು ಒಳಗೆ ಸೇರಿ, ದಾಸ್ತಾನು ಮಾಡಲಿಕ್ಕೆ ಅಸಹಾಯಕವಾಗುವಂತಹ ಒಂದು ಸ್ಥಿತಿ ಇದೆ ಅಂತಹ ಒಂದು ಸ್ಥಿತಿಯಲ್ಲಿರುವಂತಹ ಗೋಡೌನ್‌ಗಳು ಇರುವುದರಿಂದ ವ್ಯಾಪಾರಿಗಳು ಬರುತ್ತಿಲ್ಲ ಎನ್ನುವಂತಹ ದೂರುಗಳಿವೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ದುರಸ್ತಿಪಡಿಸಲಿಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂಬ ಬಗ್ಗೆ ನಾನು ವಿವರಣೆ ಕೇಳುತ್ತಿದ್ದೇನೆ

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಮಾನ್ಯ ಅಧ್ಯಕ್ಷರೇ, ಈ ಮಾರುಕಟ್ಟೆಯಲ್ಲಿ ಸುಮಾರು 146 ಗೋಡೌನ್‌ಗಳಿವೆ ಈಗಾಗಲೇ ಶಾಸಕರು ಹೇಳಿದ ಪ್ರಕಾರ ಗೋಡೌನ್‌ಗಳು ನಾದುರಸ್ಥಿಯಾಗಿರುವುದು ಕಂಡುಬಂದಿದೆ ಈಗಾಗಲೇ ಆ ನಾದುರಸ್ಥಿಯಾದ ಗೋಡೌನ್‌ಗಳನ್ನು ರಿಪೇರಿ ಮಾಡಲಿಕ್ಕೆ 34 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಂದಾಜು ಪತ್ರವನ್ನು ತಯಾರು ಮಾಡಲಾಗಿದೆ, ಈಗ ಅದು ನಮ್ಮ ಬೋರ್ಡ್‌ಗೆ ಬಂದಿದೆ ಆ 34 ಲಕ್ಷ ರೂಪಾಯಿಗಳ ಅಂದಾಜಿಗೆ ಮಂಜೂರಾತಿಯನ್ನು ನೀಡಲಿಕ್ಕೆ ನಾನು ಹೇಳಿ, ತಕ್ಷಣ ಆ ಕಾಮಗಾರಿಗಳನ್ನು ಮಾಡಿ, ವ್ಯವಸ್ಥಿತವಾಗಿ ಗೋಡೌನ್‌ಗಳನ್ನು ರಿಪೇರಿ ಮಾಡಿ ಸಾಮಗ್ರಿಗಳನ್ನು ಇಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ತಮ್ಮ ಮೂಲಕ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ

**ಶ್ರೀ ಎನ್ ಯೋಗೀಶ್ ಭಟ್** ಎಷ್ಟು ಕೋಟಿ ರೂಪಾಯಿಗಳು ಈ ಗೋಡೌನ್‌ಗಳನ್ನು ಕಟ್ಟಲಿಕ್ಕೆ ಖರ್ಚಾಯಿತು? ಹಾಗೆಯೇ ಎಷ್ಟು ಕೋಟಿ ರೂಪಾಯಿಗಳು ಇವುಗಳ ದುರಸ್ಥಿಗಾಗಿ ಖರ್ಚಾಗಿದೆ?

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಮಾನ್ಯ ಅಧ್ಯಕ್ಷರೇ, ಈಗಾಗಲೇ 34 ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ತಯಾರು ಮಾಡಿದ್ದೇವೆ APMC ನಲ್ಲಿ ಹಣ ಇದ್ದರೆ APMC ಯಿಂದ ಕೊಡುತ್ತೇವೆ, ಇಲ್ಲದಿದ್ದರೆ ಬೋರ್ಡ್‌ನಿಂದ ಕೊಟ್ಟು ನಿಮ್ಮ ಈ ಎಲ್ಲಾ ಗೋಡೌನ್‌ಗಳನ್ನು ರಿಪೇರಿ ಮಾಡಿ ಅಲ್ಲಿ ಸಾಮಗ್ರಿಯನ್ನು ಇಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ

**ಶ್ರೀ ಎನ್ ಯೋಗೀಶ್ ಭಟ್** ನನ್ನ ಮೂಲ ಪ್ರಶ್ನೆಗೆ ಉತ್ತರ ಕೊಡದಿದ್ದರೂ ಸಹಿತ ನಾನು ಇನ್ನೊಂದು ಪ್ರಶ್ನೆಯನ್ನು ತಮಗೆ ಕೇಳುತ್ತಿದ್ದೇನೆ ಸುಮಾರು 17 ಸಾವಿರ ಟನ್‌ಗಳಷ್ಟು ಅಕ್ಕಿ ನೇರವಾಗಿ ಖಾಸಗಿ ಗೋಡೌನ್‌ಗಳಲ್ಲಿ ಅಕ್ರಮವಾಗಿ ಸಂಗ್ರಹವಾಗಿ ಈಗ ಅದು ಕೊಳೆಯುತ್ತಿದೆ 'ಅಕ್ಕಿ ಹಗರಣ'ದಿಂದ ಇದೆಲ್ಲವೂ ಬೆಳಕಿಗೆ ಬಂದಿರುವುದು ತಮ್ಮ ಗಮನಕ್ಕೆ ಈಗಾಗಲೇ ಬಂದಿದೆ ಸಾರಾಸಗಟಾಗಿ ಈ ರೀತಿ ಬೆಳಕಿಗೆ ಬಂದಿರತಕ್ಕಂಥ ಹಿನ್ನೆಲೆಯಲ್ಲಿ ತಾವು ಇಂತಹವರ ಮೇಲೆ ಎ ಪಿ ಎಂ ಸಿ ಕಡೆಯಿಂದ ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದಿರಾ? 'ಬಿ' ರಿಪೋರ್ಟ್ ಹಾಕಿ ಅಪರಾಧಿಗಳನ್ನು ನಿರಪರಾಧಿಗಳನ್ನಾಗಿ ಮಾಡುವಂತಹ ಹುನ್ನಾರಗಳು ನಡೆಯುತ್ತಿದೆ ಎನ್ನುವಂತಹ

ಸುದ್ದಿಗಳು ಇವತ್ತು ನಮ್ಮ ಜಿಲ್ಲೆಯಲ್ಲಿ ಇದೆ ಇದರ ಬಗ್ಗೆ ಕೂಡ ತಮ್ಮಲ್ಲಿ ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ ಕನಿಷ್ಟ ಪಕ್ಷ ಕೊಳೆಯುವ ಅಥವಾ ಹಾಳಾಗುವ ಮೊದಲೇ ಈ ಅಕ್ಕಿಯನ್ನು ಬಡವರಿಗೆ ಉಚಿತವಾಗಿ ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೀರಾ?

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಮಾನ್ಯ ಅಧ್ಯಕ್ಷರೇ, ಈ ಬೈಕಂಪಾಡಿ ಮರುಕಟ್ಟೆ ಪ್ರಾಂಗಣದಲ್ಲಿ ಯಾವುದೇ ಅಕ್ಕಿ ಗೋಡೌನ್‌ಗಳು ಆಗಿರುವುದಿಲ್ಲ ಅಕ್ಕಿ ನಮ್ಮ ಯಾವುದೇ ಗೋಡೌನ್‌ನಲ್ಲಿ ಬಂದಿರುವುದಿಲ್ಲ ಬಂದಿದ್ದರೂ, ಅದು ನಮ್ಮ APMC ಹೊರಗಡೆ ಇರಬಹುದೇ ಹೊರತಾಗಿ ನಮ್ಮ APMC ಯಾರ್ಡ್‌ನಲ್ಲಿ ಯಾವುದೇ ಅಕ್ಕಿ ಸಂಗ್ರಹಣೆ ಆಗಿರುವುದಿಲ್ಲ ಎಂದು ತಮ್ಮ ಮೂಲಕ ಹೇಳಲಿಕ್ಕೆ ಬಯಸುತ್ತಿದ್ದೇನೆ ಈಗಾಗಲೇ ನಾನು ಎಲ್ಲಾ ಕಡೆ APMC ಗಳಿಗೆ ಈ ತರಹ ಎಲ್ಲಿಯಾದರೂ ಅಕ್ಕಿ ದಾಸ್ತಾನು ಆಗಿದೆಯೇ ಎಂದು ಕೇಳಿದ್ದೇನೆ ನಮ್ಮ APMC ಯಾರ್ಡ್‌ನಲ್ಲಿ ಎಲ್ಲಿಯೂ ಸಹ ಅಕ್ಕಿ ದಾಸ್ತಾನು ಆಗಿರುವುದಿಲ್ಲ, ಹೊರಗಡೆ ಆಗಿರಬಹುದು ಇನ್ನು ಅಕ್ಕಿ ಬಿಡುಗಡೆ ಮಾಡುವ ಬಗ್ಗೆ ನಮ್ಮ ಕಂದಾಯ ಸಚಿವರು ಉತ್ತರ ಹೇಳಬೇಕು ಏಕೆಂದರೆ ಕೂಲಿಗಾಗಿ ಕಾಳು' ಯೋಜನೆಯ ಬಗ್ಗೆ ಅವರು ಉತ್ತರ ಕೊಡಬೇಕು ಅದರ ಬಗ್ಗೆ ನಾನು ಉತ್ತರ ಕೊಡುವುದಕ್ಕೆ ಬರುವುದಿಲ್ಲ ದಯವಿಟ್ಟು ಮಾನ್ಯ ಕಂದಾಯ ಸಚಿವರನ್ನು ಆ ಪ್ರಶ್ನೆ ಕೇಳಿ, ಅವರು ನಿಮಗೆ ಉತ್ತರ ಕೊಡುತ್ತಾರೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಸದಸ್ಯರ ಕಳಕಳಿ ಒಂದೇ ಒಂದು ಮಾನ್ಯ ಕಂದಾಯ ಸಚಿವರು ಇಲ್ಲೇ ಇದ್ದಾರೆ ತಮಗೆ ಗೊತ್ತಿರುವ ಹಾಗೆ ಮಂಗಳೂರಿಗೆ ನಾನೇ ಹೋಗಿ ಅಲ್ಲಿನ ಗೋಡೌನ್‌ಗಳಿಗೆ ಭೇಟಿ ನೀಡಿ ನೋಡಿದ್ದೇನೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ seize ಆದ ಅಕ್ಕಿಯನ್ನು ನೋಡಬಹುದು ಎಂದುಕೊಂಡಿದ್ದೆವು ಆ ಅಕ್ಕಿ ಹೊರದೇಶಕ್ಕೆ ಹಡಗಿನಲ್ಲಿ ಹೋಗುವುದಕ್ಕೆ ಸಿದ್ದವಿತ್ತು, ಆ ಸಂದರ್ಭದಲ್ಲಿ ಅದನ್ನು seize ಮಾಡಿದ್ದಾರೆ ನಿಮ್ಮ ಅಂದಾಜಿನ ಪ್ರಕಾರ ಸುಮಾರು 13 ಕೋಟಿ ರೂಪಾಯಿಗಳ ಬೆಲೆ ಬಾಳುವ ಅಕ್ಕಿ ಸುಮಾರು 20 ದಿವಸಗಳಿಂದ ಅಲ್ಲಿ ಕೊಳೆಯುತ್ತಿದೆ ನಾನು ಅಲ್ಲಿಗೆ ಹೋಗಿ ನೋಡಿದಾಗಲೇ ಅದು ಶೇಕಡ 25–30ರಷ್ಟು ನಾಶವಾಗಿತ್ತು ಮಾನ್ಯ ಮುಖ್ಯಮಂತ್ರಿಗಳು ಮಂಗಳೂರಿಗೆ ಹೋಗಿದ್ದರು ಅವರೂ ಸಹ ಗೋಡೌನ್ ವಿಸಿಟ್ ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು ತಮ್ಮಲ್ಲಿ ನನ್ನ ಕಳಕಳಿ ಇಷ್ಟೇ ತಾವು ಈ 1 ರಿಂದ 16 ಕೋಟಿ ರೂಪಾಯಿಗಳ ಬೆಲೆ ಬಾಳುವ ಅಕ್ಕಿಯನ್ನು dispose ಮಾಡಲಿಲ್ಲ ಕೋರ್ಟ್ ಆದೇಶದ ಪ್ರಕಾರ ತಾವು ಅದನ್ನು ಹರಾಜು ಹಾಕಿ ಹಣವನ್ನು diposit ಮಾಡಲಿಲ್ಲ ಅಥವಾ ಅದನ್ನು ಸಾರ್ವಜನಿಕರಿಗೂ ಕೂಡ ವಿತರಣೆ ಮಾಡಲಿಲ್ಲ PDS ಮೂಲಕ ಅದನ್ನು ವಿತರಣೆ ಮಾಡಬೇಕು ಎಂಬ ಕಾರಣ ಹೇಳಿಕೊಂಡು ಅದು ಡಿಲೇಯಾಯಿತು ಈಗ ಸಂಪೂರ್ಣವಾಗಿ ಹಾಳಾಗುವಂತಹ ದುಸ್ಥಿತಿಗೆ ಬಂದಿದೆ ಕೊನೆಯ ಪಕ್ಷ ಅದನ್ನು ಯಾರಾದರೂ ಹೋಗಿ ನೋಡುತ್ತೀರಾ? ಅದಕ್ಕೇನಾದರೂ ಪರಿಹಾರ ಹುಡುಕುತ್ತೀರಾ? ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಆಮೇಲೆ ನೋಡಿ ಕೇಂದ್ರ ಸರ್ಕಾರ ಮುಕ್ತಟೆಯಾಗಿ ಕೊಟ್ಟಂತಹ ಅಕ್ಕಿ ಇಲ್ಲಿ ಬಡವರಿಗೆ ಸಿಗದೆ ಸಂಪೂರ್ಣವಾಗಿ ನಾಶವಾಗುತ್ತಿದೆ ಇದರ ಬಗ್ಗೆ ಏನಾದರೂ ನೋಡಿದ್ದೀರಾ? ಯಾರ ಮೇಲಾದರೂ ಕ್ರಮ ತೆಗೆದುಕೊಂಡಿದ್ದೀರಾ?

**ಶ್ರೀ ಎಂ ಪಿ ಪ್ರಕಾಶ್** ಸನ್ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಮುಖ್ಯ ಪ್ರಧಾನ ಕಾರ್ಯದರ್ಶಿಗಳು ಹೋಗಿ ಕ್ರಮವನ್ನೂ ಕೂಡ ಅಲ್ಲಿ ತೆಗೆದುಕೊಂಡಿದ್ದಾರೆ ಅದಾದ ನಂತರ ಸರ್ಕಾರ ಕೋರ್ಟಿಗೆ ಮನವಿಯನ್ನೂ ಕೂಡ ಕೊಟ್ಟು

ಅದರ ವಿಲೇವಾರಿ ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು ಅನ್ನತಕ್ಕಂಥ ಮಾತನ್ನೂ ಕೂಡ ಅಲ್ಲಿ ಹೇಳಿದ ಮೇಲೆ, ಅಲ್ಲಿಯ ನ್ಯಾಯಾಲಯ ಸುಮಾರು 30 ದಿವಸದೊಳಗಾಗಿ ಅದನ್ನು ಹರಾಜು ಮಾಡಿ, ಅದನ್ನು ಕೊಡಬೇಕು ಎನ್ನತಕ್ಕಂಥ ಒಂದು ತೀರ್ಮಾನವನ್ನು ಕೊಟ್ಟಿತು ಆ ತೀರ್ಮಾನದ ಪ್ರಕಾರ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳುವಂತಹ ಸಂದರ್ಭದಲ್ಲಿ ಇದು ತಮ್ಮದು-ಅಕ್ಕಿ ಎಂದು ವಾದಿಸುತ್ತಿರವಂತಹದು ಶಾರ್ಪ್ ಮೆಂಥಾಲ್ ಎನ್ನುವಂತಹ ದೆಹಲಿಯಲ್ಲಿರುವ ಕಂಪನಿಯೇನಿದೆ, ಆ ಕಂಪನಿಯವರು ಹೈಕೋರ್ಟಿಗೆ ಹೋಗಿ ಹರಾಜು ಮಾಡಬಾರದು ಎಂದು stay order ಅನ್ನು ತಂದಿದ್ದಾರೆ ಈ stay order ಇರುವುದನ್ನು ಇಂಥಿಂಥ ಕಾರಣಗಳಿಗಾಗಿ ತೆರವುಗೊಳಿಸಬೇಕು ಎಂದು ಸರ್ಕಾರ ಈಗಾಗಲೇ ಅರ್ಜಿ ಹಾಕಿದೆ ಅದರ ತೀರ್ಮಾನಕ್ಕಾಗಿ ನಾವು ಕಾಯುತ್ತಿದ್ದೇವೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ಅಲ್ಲಿ ಸುಮಾರು 25–30% ರಷ್ಟು ಅಕ್ಕಿ ಹಾಳಾಗುವಂತಹ ಸಂಭವ ಇರುತ್ತದೆ ಅಲ್ಲಿಯ ವಾತಾವರಣದಲ್ಲಿ ಹಸಿ ತೇವಾಂಶ ಇರುವುದು, ಮಳೆಗಾಲವಾದ್ದರಿಂದ ಮಳೆ ಬೀಳುತ್ತಿರುವುದರಿಂದ fumigation ಮಾಡಲಿಕ್ಕೆ ಸಾಧ್ಯ ಇಲ್ಲದೆ ಇರತಕ್ಕಂಥ ಕಾರಣದಿಂದ ಹಾಳಾಗುತ್ತಿದೆ ಈ ತರಹದ ತೊಂದರ ಇರುವುದರಿಂದ, ಅದನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡುವುದಕ್ಕಾಗಿ, ಬಡವರ ಕಾರ್ಡ್‌ಗಳಿಗೆ ಹಂಚುವಂತಹ ಪ್ರಯತ್ನಕ್ಕಾಗಿ ಈ ತಡೆಯಾಜ್ಞೆಯನ್ನು ತೆರವು ಮಾಡಬೇಕೆಂದು ನಾವು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುತ್ತಿದ್ದೇವೆ ತಾವು ಹೇಳಿದಂತೆ 13 ಸಾವಿರ ಟನ್ ಅಲ್ಲ, 17 ಸಾವಿರ ಟನ್ ಅಕ್ಕಿ ಅವತ್ತು seize ಆಗಿರುವಂತಾದ್ದು ಆಗಿದೆ ನನಗೆ ಈಗ ಬಂದ ವರದಿಯ ಪ್ರಕಾರ ಈ 17 ಸಾವಿರ ಟನ್ ಅಕ್ಕಿ ಏನಿದೆ, ಅದನ್ನು ಈಗ exporters ಗೆ ಕೊಡಬೇಕು, ಬಿಡುಗಡೆ ಮಾಡಬೇಕು ಎಂದು ಹೈಕೋರ್ಟ್‌ನವರು ಆದೇಶವನ್ನು ಕಳುಹಿಸಿಕೊಟ್ಟಿದ್ದಾರೆ ಈ ಕೇಸು ಅವರ ಪರವಾಗಿ ನಿರ್ಣಯವಾಗಿದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಸರ್ಕಾರದವರು ಒಂದು ಉತ್ತರವನ್ನು ಹೇಳುತ್ತೀರಿ ಅದಕ್ಕೇ ನಮ್ಮ ಅಭ್ಯಂತರ ಇಲ್ಲ ತಮಗೆ ಅಧಿಕಾರ ಕೊಟ್ಟಿರುವಾಗ ತಾವು ಅದನ್ನು ಮಾಡಬೇಕಾಗುತ್ತದೆ, ಮಾಡಿ ಕೋರ್ಟ್ 30 days ಒಳಗಾಗಿ ಅದನ್ನು ಹರಾಜು ಮಾಡಿ, ಹಣವನ್ನು deposit ಮಾಡಿ ಎಂದು ಹೇಳಿತು ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಸಮಾಲೋಚನೆ ಮಾಡಿದೆ, ಮಂಗಳೂರಿಗೂ ಹೋದೆ ತಾವೇನು ಮಾಡಿದಿರಿ? ಈ ಅಕ್ಕಿಯನ್ನು ನಾವು PDS ಮೂಲಕ ಹಂಚುತ್ತೇವೆ ಎಂದು ಹೈಕೋರ್ಟ್‌ನ ಮುಂದೆ ಹೇಳಿಕೊಂಡು ಡಿಲೇ ಮಾಡಿದಿರಿ ಅದರ ಪರಿಣಾಮ, ಯಾರು export ಮಾಡುತ್ತಿದ್ದನೋ, ಆ ಮಾಲಿಕ, ಅವನು ಕೋರ್ಟಿಗೆ ಹೋಗಿ, ಅದರ shelter ತೆಗೆದುಕೊಂಡು, ಅವನು ಜೈಲಿಗೆ ಹೋಗುವುದನ್ನು ತಪ್ಪಿಸಿಕೊಂಡು, ಇವತ್ತು ಅವನು ಕೋರ್ಟಿನಿಂದ ಅನುಮತಿಯನ್ನು ತೆಗೆದುಕೊಂಡಿದ್ದಾನೆ ಎಂದು ನೀವು ಹೇಳುತ್ತಿದ್ದೀರಿ ನನ್ನ point ಏನು ಅಂದರೆ, ಒಂದು ಸಾರಿ ಕೋರ್ಟ್ ಹೇಳಿದ ತಕ್ಷಣ, ತಕ್ಷಣವೇ ಅದನ್ನು ಹರಾಜು ಮಾಡದೆ, ಕೊಳೆಯುತ್ತಿರುವುದನ್ನು ನಾವು PDS ಮೂಲಕ ಹಂಚುತ್ತೇವೆ ಎಂದು ಹೇಳಿಕೊಂಡು, ಪರೋಕ್ಷವಾಗಿ ಯಾರು ಹೊರದೇಶಕ್ಕೆ ಸಾಗಾಣಿಕೆ ಮಾಡುವುದಕ್ಕೆ ಹೊರಟಿದ್ದನೋ, ಆ ಕಳ್ಳನಿಗೆ ನೀವು ಡಿಲೇ ಮಾಡಿದ್ದರಿಂದಾಗಿ ರಕ್ಷಣೆ ಮಾಡುವಂತಾದ್ದು ಆಗಲಿಲ್ಲವೇ? 24 hours ನಲ್ಲಿ ನೀವು ಆ್ಯಕ್ಷನ್ ತೆಗೆದುಕೊಳ್ಳಬಹುದಾಗಿತ್ತು ಅಂದರೆ ಎಲ್ಲೋ ಒಂದು ಕಡೆ ಈ ಪ್ರಕರಣ ಬೆಳಕಿಗೆ ಬಂದರೆ, ನಮ್ಮ ಮೈಮೇಲೆ ಬರುತ್ತದೆ, ಸರ್ಕಾರದ ಮೇಲೆ ಬರುತ್ತದೆ ಎಂದು ಮುಚ್ಚಿ ಹಾಕುವಂತಹ ಪ್ರಯತ್ನ ಇದು ಎಂದು ಇದರಿಂದ ಜನ ಮಾತನಾಡಿಕೊಳ್ಳುವುದಿಲ್ಲವೇ? ಈ ಬಗ್ಗೆ ನಾನು ಅವತ್ತೇ ಮಾತನಾಡಿದೆ **ಅವತ್ತೇ ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದೆ ಆದರೆ ನೀವು ಈಗ ಈ ಮಾತನ್ನು ಹೇಳುತ್ತಿದ್ದೀರಿ**

**ಶ್ರೀ ಎನ್ ಯೋಗೀಶ್ ಭಟ್** ಸಾಕ್ಷ್ಯಾಧಾರಗಳು ಸಾಕಷ್ಟು ಇಲ್ಲವೆಂದು 'ಬಿ' ರಿಪೋರ್ಟ್ ಹಾಕುವಂತಹ ಹುನ್ನಾರ ನಡೆಯುತ್ತಿದೆ ಎಂದು ನಮ್ಮ ಜಿಲ್ಲೆಯಲ್ಲಿ ವದಂತಿ ಇದೆ ಇದರ ಬಗ್ಗೆ ಕೂಡ ಸ್ಪಷ್ಟೀಕರಣ ಕೊಡಬೇಕು

ಶ್ರೀ ಎಂ ಪಿ ಪ್ರಕಾಶ್ ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಬಂದಿರತಕ್ಕಂಥ ಪ್ರಶ್ನೆ ಅಲ್ಲಿ ಸರ್ಕಾರ ನ್ಯಾಯಾಲಯದಲ್ಲಿ ಈ ವಿಚಾರದಲ್ಲಿ ವಾದ ಮಾಡಿದೆ ತಮ್ಮ ಹತ್ತಿರ ಇರುವಂತಹ ದಾಖಲಾತಿಗಳನ್ನೆಲ್ಲಾ ಕೊಟ್ಟಿದೆ PDS ಮೂಲಕ ನಾವು ಹಂಚುತ್ತೇವೆ ಎನ್ನುವಂತಹ ಅಭಿಪ್ರಾಯ ಸರ್ಕಾರದ್ದಾಗಿದ್ದರೂ ಸಹ ನ್ಯಾಯಾಲಯ 30 ದಿವಸದೊಳಗಾಗಿ, ಈ ದಾಸ್ತಾನೇನಿದೆ ಇದನ್ನು ಹರಾಜು ಮಾಡಬೇಕೆಂದು ಆಜ್ಞೆಯನ್ನು ಮಾಡಿತ್ತು ಆ ರೀತಿ ದಾಸ್ತಾನು ಮಾಡಿರುವುದನ್ನು ಹರಾಜು ಮಾಡತಕ್ಕಂಥದ್ದರ ಜೊತೆಗೆ ಅಲ್ಲಿರತಕ್ಕಂಥ exporter ಕರ್ನಾಟಕ ಹೈಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದರು ಇತ್ತೀಚೆಗೆ ಹೈಕೋರ್ಟಿನವರೇ ಈ 17 ಸಾವಿರ ಟನ್ ಅಕ್ಕಿಯನ್ನು ಅರ್ಜಿದಾರನಿಗೆ ಬಿಡುಗಡೆ ಮಾಡಿಕೊಡಬೇಕು ಎಂದು ಆದೇಶ ನೀಡಿದ್ದಾರೆ ಇದರಲ್ಲಿ ಸರ್ಕಾರ ವಿಳಂಬ ಮಾಡಿಲ್ಲ ಯಾರಿಗೂ ರಕ್ಷಣೆ ಕೊಡತಕ್ಕಂಥ ಪ್ರಯತ್ನ ಮಾಡಿಲ್ಲ 'ಬಿ' ರಿಪೋರ್ಟ್ ಕೊಡುವಂತಹ ಪ್ರಯತ್ನ ನಡೆಯುತ್ತಿದೆ ಎನ್ನುವಂತಹ ಮಾತನ್ನು ತಾವು ಹೇಳುತ್ತಿದ್ದೀರಿ ಅಲ್ಲಿ COD ಯವರು ತನಿಖೆ ನಡೆಸುತ್ತಿದ್ದಾರೆ, ಬೇರೆ ಕಡೆಗೂ ಕೂಡ ತನಿಖೆ ನಡೆಸುತ್ತಿದ್ದಾರೆ ಆದರೆ ತಮ್ಮ ಈ ಮಾಹಿತಿಯ ಆಧಾರದ ಮೇಲೆ, ಪೊಲೀಸರ ಜೊತೆಗೆ ನಾವು ಮಾತನಾಡುತ್ತೇವೆ ಅವರಿಂದ ಸರಿಯಾದ ಮಾಹಿತಿಯನ್ನು ಪಡೆದುಕೊಂಡು ನಾನು ತಮಗೆ ಒದಗಿಸಿಕೊಡುತ್ತೇನೆ

**ಕೃಷಿ ಮಾರುಕಟ್ಟೆ ಮುಖಾಂತರ ರೈತರ ಹಿತರಕ್ಷಣೆ**

102(448) ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ಉತ್ತರಿಸುವರೆ ?

ಅ) ಎ ಪಿ ಎಂ ಸಿ ಗಳ ಮುಖಾಂತರ ರೈತರ ಹಿತರಕ್ಷಿಸಲು ಹಾಗೂ ಆತನ ಶೋಷಣೆ ಕಡಿಮೆ ಮಾಡಲು ಅನೇಕ ಕಾನೂನುಗಳು ಈವರೆಗೆ ಕಾರ್ಯಾಚರಣೆಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಈ ವೈಫಲ್ಯದಿಂದಾಗಿ ರೈತರ ಶೋಷಣೆ ನಿರಂತರವಾಗಿ ಮುಂದುವರಿದಿದ್ದು, ಅದನ್ನು ತಪ್ಪಿಸಲು ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದೇ, (ವಿವರ ನೀಡುವುದು)

ಇ) ಕಾನೂನು ಬಾಹಿರವಾಗಿ ದಲ್ಲಾಳಿಗಳು ರೈತರಿಂದ ಹಣ ವಸೂಲಿ ಮಾಡುತ್ತಿರುವುದನ್ನು ನಿಲ್ಲಿಸುವ ಉದ್ದೇಶದಿಂದ ರಚಿಸಲಾದ ಕಾನೂನುಗಳನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು

ಈ) ರೈತಪರ ಕಾನೂನುಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು

ಉ) ಶಾಸಕಾಂಗ ಅಂಗೀಕರಿಸಿರುವ ಕಾನೂನುಗಳನ್ನು ಅನುಷ್ಠಾನ ಗೊಳಿಸಬೇಕಾದ ಇಲಾಖೆ ತನ್ನ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲವಾಗಿದ್ದು ಅದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಪ್ರಕಾಶ್ ಬಾ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಸ್ತುತ ಜಾರಿಯಲ್ಲಿರುವ ಕಾಯ್ದೆಯನ್ವಯ ರೈತರಿಂದ ದಲ್ಲಾಲಿ ವಸೂಲಿ ಮಾಡಲು ಅವಕಾಶವಿಲ್ಲ ಸದರಿ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಇದಕ್ಕೆ ಸಂಬಂಧಿಸಿದಂತೆ ಶ್ರೀ ಡಿ ಆರ್ ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದು, ಅದರ ಶಿಫಾರಸ್ಸು ಆಧಾರದ ಮೇಲ್ಕೆ ಕಾಯ್ದೆಗೆ ತಿದ್ದುಪಡಿಗಳನ್ನು ಮಾಡುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಮೇಲಿನಂತೆ

ಉ) ಸರ್ಕಾರವು ಅಧಿಸೂಚಿಸಿರುವ ಎಲ್ಲಾ ಕಾನೂನುಗಳನ್ನು ಜಾರಿಗೊಳಿಸಲು ಇಲಾಖೆ ಕ್ರಮ ಕೈಗೊಂಡಿರುತ್ತದೆ ಹಾಗೂ ಮಾರುಕಟ್ಟೆ ರಂಗದಲ್ಲಿ ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಅನುಗುಣವಾಗಿ ಕಾನೂನಿಗೆ ತಿದ್ದುಪಡಿಗಳನ್ನು ತರುವ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿದೆ

**ಶ್ರೀ ಡಿ ಆರ್ ಪಾಟೀಲ್** ಮಾನ್ಯ ಅಧ್ಯಕ್ಷರೇ, "ಶಾಸಕಾಂಗ ಅಂಗೀಕರಿಸಿರುವ ಕಾನೂನುಗಳನ್ನು ಅನುಷ್ಠಾನಗೊಳಿಸಬೇಕಾದ ಇಲಾಖೆ ತನ್ನ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲವಾಗಿದ್ದು ಅದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?" ಎಂಬ ನನ್ನ ಪ್ರಶ್ನೆಗೆ "ಸರ್ಕಾರವು ಅಧಿಸೂಚಿಸಿರುವ ಎಲ್ಲಾ ಕಾನೂನುಗಳನ್ನು ಜಾರಿಗೊಳಿಸಲು ಇಲಾಖೆ ಕ್ರಮ ಕೈಗೊಂಡಿರುತ್ತದೆ " ಎಂದು ಮಾನ್ಯ ಸಚಿವರು ಉತ್ತರಿಸಿದ್ದಾರೆ ಇದು ಸತ್ಯಕ್ಕೆ ದೂರವಾದಂತಹ ಉತ್ತರವಾಗಿದೆ 1998ರಲ್ಲಿ ಮಾನ್ಯ ಜೆ ಎಚ್ ಪಟೇಲ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಕಾನೂನನ್ನು ನಾವು ಇಲ್ಲಿ ರಚಿಸಿದ್ದೆವು ದಲ್ಲಾಳರಿಗೆ ವ್ಯಾಪಾರಸ್ಥರಿಂದ, ರೈತರಿಗೆ ದಲ್ಲಾಳರಿಂದ ಆಗತಕ್ಕ ಶೋಷಣೆಯನ್ನು ತಪ್ಪಿಸಬೇಕು ಎಂದು ಹೇಳಿ ಕಾನೂನನ್ನು ರಚಿಸಿದ್ದೆವು ಆ ಕಾನೂನು ಇನ್ನೂ ಅನುಷ್ಠಾನಗೊಂಡಿಲ್ಲ ಸಾರ್ ಇದು ಆರನೆಯ ವರ್ಷ ಅದಕ್ಕೆ ನಾನು ಒಂದು ಮಾತನ್ನು ಸವಚಿವರಲ್ಲಿ ಕೇಳುತ್ತೇನೆ ಆ ಕಾನೂನನ್ನು ನೀವು ಯಾವ ತಾರೀಖಿನಿಂದ ಈ ವರ್ಷ ಅನುಷ್ಠಾನಗೊಳಿಸುತ್ತೀರಿ? ಅದು ನವೆಂಬರ್ 1ಕ್ಕೆ ಮಾಡುತ್ತೀರೋ ಡಿಸೆಂಬರ್ 1ಕ್ಕೆ ಮಾಡುತ್ತೀರೋ? ಜನವರಿ 1ನೇ ತಾರೀಖಿಗೆ ಮಾಡುತ್ತೀರೋ? ಯಾವಾಗ ಮಾಡುತ್ತೀರೆಂದು definite date you must tell me now

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಮಾನ್ಯ ಅಧ್ಯಕ್ಷರೆ, ಈ ಕಾನೂನ್ನು ಮಾಡಲಿಕ್ಕೆ, ಆಕ್ಟ್‌ಗೆ ಅವರ ಅಧ್ಯಕ್ಷತೆಯಲ್ಲಿಯೇ ಒಂದು ಕಮಿಟಿಯನ್ನೂ ಕೂಡ ಮಾಡಿದ್ದೇವೆ ಈಗಾಗಲೇ ಈ ಕಮಿಟಿಯ ವರದಿಯ ಬಗ್ಗೆ ನಾನು ಶ್ರೀ ಡಿ ಆರ್ ಪಾಟೀಲ್ ಅವರ ಜೊತೆ ಚರ್ಚೆ ಮಾಡಿದ್ದೇನೆ ಆದಷ್ಟು ಬೇಗನೆ ಅನುಷ್ಠಾನ ಮಾಡುತ್ತೇವೆ ನಮಗೂ ಕೂಡ ಕಳಕಳಿ ಇದೆ ರೈತರಿಗೆ ನೇರವಾಗಿ ವ್ಯಾಪಾರಸ್ಥರ ಕಡೆಯಿಂದ ಹಣ ಮುಟ್ಟಬೇಕು ದಲ್ಲಾಳಿಗಳ ಮುಖಾಂತರ ಹೋಗಬಾರದು ಒಂದೇ ಕಂತಿನಲ್ಲಿ ಆ ರೈತರಿಗೆ ಹಣ ಮುಟ್ಟಬೇಕು ಎನ್ನತಕ್ಕ ವ್ಯವಸ್ಥೆ ಮಾಡಬೇಕೆಂದು ವ್ಯವಸ್ಥೆ ಆಗಬೇಕು ಅದರ ವ್ಯವಸ್ಥೆ ಸಲುವಾಗಿ ಹೇಳುವುದಾದರೆ ನಮ್ಮ ಎಪಿಎಂಸಿಯಲ್ಲಿ 5–6 ಮಂದಿ ನೌಕರರು ಇರುತ್ತಾರೆ ದಿವಸ ಲಕ್ಷ ಗಟ್ಟಲೆ ವ್ಯವಹಾರ ಆಗುತ್ತದೆ ಆ ಚೆಕ್‌ಗಳನ್ನು ನಾವು ರೈತರಿಗೆಲ್ಲಾ ಮುಟ್ಟಿಸುವ ವ್ಯವಸ್ಥೆ ಆಗಬೇಕು ಹೀಗಾಗಿ ಏನಾಗುತ್ತದೆ ಎಂದರೆ ಪ್ರತಿ ಒಂದು ಎಪಿಎಂಸಿಯಲ್ಲಿ, ಪ್ರತಿ ಅಂಗಡಿಯಲ್ಲಿ

ಮೂರ್‍ನಾಲ್ಕು ಜನ ಗುಮಾಸ್ತರು ಇರುತ್ತಾರೆ ವ್ಯಾಪಾರಸ್ಥರು ಗುಮಾಸ್ಥರು ಚೆಕ್ಕನ್ನು ಬರೆದು ಅಥವಾ ಹಣದ ರೂಪದಲ್ಲಿ ರೈತರಿಗೆ ಕೊಡುತ್ತಾರೆ ಆದರೆ ಈಗ ನಮ್ಮ ರಾಜ್ಯದಲ್ಲಿ ಸುಮಾರು 10 ಸಾವಿರ ಕೋಟಿ ರೂ.ಗಳಷ್ಟು ಈ ಎಪಿಎಂಸಿ ರೈತರಿಗೆ ಕೊಡುತ್ತಾರೆ ಆದರೆ ಈಗ ನಮ್ಮ ರಾಜ್ಯದಲ್ಲಿ ಸುಮಾರು 10 ಸಾವಿರ ಕೋಟಿ ರೂ ಗಳಷ್ಟು ಈ ಎಪಿಎಂಸಿ ಮುಖಾಂತರ ವ್ಯವಹಾರಗಳು ಆಗುತ್ತಿವೆ ಆ ದೃಷ್ಟಿಯಿಂದ ನಾವು ಇದನ್ನು ಜಾರಿ ಮಾಡಬೇಕೆಂದು ಅನ್ನಿಸುತ್ತಿದೆ ಮಾನ್ಯ ಡಿ ಆರ್ ಪಾಟೀಲ್ ಅವರು ಹೇಳಿದ್ದು ಬಹಳ ಸಮಂಜಸ ಅನ್ನಿಸುತ್ತಿದೆ ಅವರ ಜೊತೆ ನಾನು ಮಾತನಾಡಿ ಆದಷ್ಟು ಬೇಗ ಇದನ್ನು ಜಾರಿಗೊಳಿಸುವ ವ್ಯವಸ್ಥೆಯನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ತಮ್ಮ ಮುಖೇನ ಹೇಳುತ್ತೇನೆ ಸಾರ್

**ಶ್ರೀ ಡಿ ಆರ್ ಪಾಟೀಲ್** ಮಾನ್ಯ ಅಧ್ಯಕ್ಷರೆ, ದಯವಿಟ್ಟು ಹೀಗೆ ವೇಗ್ ಅನ್ಸರ್ ಬೇಕಾಗಿಲ್ಲ ಆರು ವರ್ಷ ನಾವು ಈ ಕಾನೂನು ಇಂಪ್ಲಿಮೆಂಟಿಗೆ ನೋಟಿಫೈ ಮಾಡಲಿಕ್ಕೆ ತಡೆದುಕೊಂಡಿದ್ದೇವೆ Six years we have waited

**ಅಧ್ಯಕ್ಷರು** ಈಗ ನಿಮ್ಮ ಜೊತೆ ಮಾತನಾಡುತ್ತೇನೆಂದು ಹೇಳುತ್ತಿದ್ದಾರಲ್ಲಾ

**ಶ್ರೀ ಡಿ ಆರ್ ಪಾಟೀಲ್** ಮಾತನಾಡುವುದು ಬೇಡ ಸಾರ್ ಡೆಫನೆಟ್ ಆಗಿ ಹೇಳಬೇಕು ಈ ಹಣಕಾಸು ವರ್ಷದಲ್ಲಾದರೂ ನಾನು ಮಾಡುತ್ತೇನೆ ಎಂಬ ಭರವಸೆಯನ್ನು ಮಾನ್ಯ ಸಚಿವರು ಕೊಡಬೇಕು ಹೇಗೆ ಮಾಡಬೇಕು ಎಂಬ ಬಗ್ಗೆ ನಾವೂ ಅವರೂ ಕೂಡಿ ಡಿಸ್ಕಸ್ ಮಾಡಿ ಬೇಕಾದರೆ ಮಾಡೋಣ ಆದರೆ definite date must be mentioned here

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಮಾನ್ಯ ಅಧ್ಯಕ್ಷರೇ, ಕಾನೂನಿಗೆ ಅವರೇ ಎಲ್ಲಾ ಮಾಡಿದ್ದಾರೆ ಅವರ ಅಧ್ಯಕ್ಷತೆಯೊಳಗೇ

**ಶ್ರೀ ಡಿ ಆರ್ ಪಾಟೀಲ್** ನೀವು ಹೇಳುವುದು ಬೇರೆ ಸಾರ್

**ಅಧ್ಯಕ್ಷರು** ಅವರು ಉತ್ತರ ಕೊಡಲಿ, ನೀವು ಮಧ್ಯ ಏಕೆ ಇಂಟರ್‌ಫಿಯರ್ ಮಾಡುತ್ತೀರಿ?

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಇಡೀ ಎಪಿಎಂಸಿ ಬಗ್ಗೆ ಅವರು ಸಾಕಷ್ಟು ತಿಳಿದುಕೊಂಡಿದ್ದಾರೆ ಎಪಿಎಂಸಿಯಲ್ಲಿ ಸುಧಾರಣೆ ಆಗಬೇಕು ಎಂದು ಹೇಳಿ ಅವರ ಮಾರ್ಗದರ್ಶದಲ್ಲೇ ನಾವು ನಡೆಯುತ್ತಿದ್ದೇವೆ ಅವರ ಜೊತೆ ಮಾತನಾಡುತ್ತೇನೆ ಅವರು ಹೇಳಿದ್ದು ಸರಿ ಇದೆ ಆ ಕಾನೂನು ಬೇರೆ, ಈ ಕಾನೂನು ಬೇರೆ ಎಂದು ಗೊತ್ತಿದೆ ಆ ಕಾನೂನಿಗೆ ತಿದ್ದುಪಡಿ ಕೂಡ ಇಲ್ಲಿ ತಂದಿದ್ದಾರೆ ಸನ್ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಜೆಎಚ್ ಪಟೇಲ್ ಅವರ ಸರ್ಕಾರದಲ್ಲಿ ಅದನ್ನು ಮಾಡಿದ್ದಾರೆಂದು ನಾನು ಸಹ ಈಗ ನೋಡಿದ್ದೇನೆ ಆದರೂ ಕೂಡ ಸ್ವಲ್ಪ ನಾವು ಸರಿ ಮಾಡಿಕೊಳ್ಳಬೇಕಲ್ಲಾ ಅಧ್ಯಕ್ಷರೆ ಚೆಕ್ ಕೊಡಬೇಕಾದರೆ, ರೈತರಿಗೆ ಸರಿಯಾಗಿ ಹಣ ಮುಟ್ಟಿಸಬೇಕಾದರೆ, ಸರಿಯಾಗಿ ಮುಟ್ಟಿಸಬೇಕು ಇಲ್ಲ ಎಂದರೆ, ಈಗ ಇರುವ ಪರಿಸ್ಥಿತಿಯನ್ನೆ ಸರಿ ಮಾಡಲಿಲ್ಲ ಎಂದರೆ ರೈತರು ಅದರ ಬಗ್ಗೆ ನಮ್ಮ ಮೇಲೆ ಕ್ರಮ ತೆಗೆದುಕೊಳ್ಳುವುದಾಗಲೀ ಅಥವಾ ಅಲ್ಲಿ ಗಲಾಟೆ ಆಗುವ ಸಂಭವ ಇರುತ್ತದೆ ಒಂದು ಮಾತು ಹೇಳುತ್ತೇನೆ ಯಾವುದೇ ಪರಿಸ್ಥಿತಿಯಲ್ಲಿ ಆದಷ್ಟು ಬೇಗನೆ, ನಾನು ಈ ಕಾನೂನು ಜಾರಿಯಲ್ಲಿ ಬರುವಂತಹ ವ್ಯವಸ್ಥೆ ಮಾಡುತ್ತೇನೆ ಅದಷ್ಟು ಬೇಗನೆ ಎಂದು ಹೇಳಿದ ಮೇಲೆ ಮುಗಿದು ಹೋಯಿತು

**ಅಧ್ಯಕ್ಷರು** ಆಯಿತು, ಪಾಟೀಲ್ ಅವರೇ, ಮಾನ್ಯ ಯಡಿಯೂರಪ್ಪನವರು ಹೇಳಿ

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಸಚಿವರಲ್ಲಿ ಒಂದು ಮಾತು..

**ಶ್ರೀ ಸಿ ಜಿ ಪಾಟೀಲ್** ರೈತರ ಬಗೆಗಿನ ಕಳಕಳಿಗೆ ನನ್ನ ಸಹಮತಿಯನ್ನು ವ್ಯಕ್ತಪಡಿಸುತ್ತಾ ನೇರವಾಗಿ ಎಪಿಎಂಸಿ ಮುಖಾಂತರ ರೈತರಿಗೆ ಹಣವನ್ನು ಪಾವತಿ ಮಾಡುವ ಸಂದರ್ಭ ಒದಗಿದಲ್ಲಿ

ಅದು ವ್ಯಾಪಾರಸ್ಥರಿಂದ ರೈತರಿಗೆ, ಆಗಬಹುದಾದ ಕಿರುಕುಳವನ್ನು ತಪ್ಪಿಸಿದ ಹಾಗೆ ಆಗುತ್ತದೆ ಎನ್ನುವುದರಲ್ಲಿ ಎರಡನೇ ಮಾತಿಲ್ಲ ಆದರೆ ಇವತ್ತು ರೈತ ಸಮುದಾಯಕ್ಕೆ ಯಾವಾಗ ಬೇಕಾದಾಗ ಸಾಲವನ್ನು, ಆತನಿಗೆ ಬೇಕಾದಂತಹ ಹಣಕಾಸಿನ ನೆರವನ್ನು ಇವತ್ತು ದಲ್ಲಾಳಿ ಲೈಸೆನ್ಸ್ ಪಡೆದಂತಹ ದಲ್ಲಾಳಿಗಳು ರಾತ್ರಿ 12 00 ಗಂಟೆ ಇರಲಿ, ಬೆಳಗಿನ ಜಾವ ಇರಲಿ, ಮಧ್ಯಾಹ್ನ ಇರಲಿ, ಮನೆಯಲ್ಲಿ ಯಾರಾದರೂ ಸತ್ತರೆ ಮನೆಯಲ್ಲಿ ಲಗ್ನಕ್ಕಾಗಿ ನೂರೋ, ಸಾವಿರವೋ, ಐದು ಸಾವಿರವೋ, ಹತ್ತು ಸಾವಿರವೋ, ಹೀಗೆ ಹತ್ತು ಸಾವಿರ ರೂಗಳ ವರೆಗೆ ಕೊಡುವಂತಹ ಒಬ್ಬ ಮಧ್ಯವರ್ತಿ ಇವತ್ತು ದಲ್ಲಾಳಿ ಎಂಬುದನ್ನು ಸರ್ಕಾರ ಮರೆಯಬಾರದು ಎನ್ನುವುದನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ ಈ ರೀತಿ ಒಂದು ಕಾನೂನು ರೂಪಿತವಾದಲ್ಲಿ ರೈತರಿಗೆ ಯಾವಾಗ ಬೇಕಾದರೂ ಹಣಕಾಸಿನ ಒಂದು ಸೌಲಭ್ಯ ಸಿಗುತ್ತಿತ್ತಲ್ಲಾ, ಅದನ್ನು ಕೊಡುವುದನ್ನು ದಲ್ಲಾಳಿಗಳು ಮಾಡುವುದಿಲ್ಲ ಆವಾಗ ರೈತ ಸಮುದಾಯ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿ ಹಾಕಿಕೊಳ್ಳುತ್ತಾನೆ ಎನ್ನುವಂತಹ ಅಂಶವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು, ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಒಂದು ಶಾಸನವನ್ನು ಜಾರಿಗೆ ತರುವಾಗ ರೈತರಿಗೆ ಆಗಬಹುದಾದಂತಹ ಈ ಕಿರುಕುಳವನ್ನು ಗಮನದಲ್ಲಿಟ್ಟುಕೊಂಡು ತರಬೇಕು ಎನ್ನುವಂತಹ ವಿಚಾರವನ್ನು ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ

**ಶ್ರೀ ಡಿ ಆರ್ ಪಾಟೀಲ್** ದಲ್ಲಾಳಿಗಳು ರೈತರಿಗೆ ಹಣ ಕೊಡುತ್ತಾರೆ ಇಲ್ಲ ಎಂದು ನಾನು ಹೇಳುವುದಿಲ್ಲ ಆದರೆ ಅವರು ಪುಕ್ಕಟೆ ಕೊಡುತ್ತಾರಾ? 36 ಪರ್ಸೆಂಟ್ 48 ಪರ್ಸೆಂಟ್ ಬಡ್ಡಿ ಹಾಕುತ್ತಾರೆ, ಕೊಡುತ್ತಾರೆ ಅದನ್ನು ಮುರಿದುಕೊಳ್ಳಬೇಡಿ ಎಂದೇನೂ ನಾವು ಹೇಳುವುದಿಲ್ಲ ಮುರಿದುಕೊಳ್ಳಿರಿ ಕಾನೂನು ಬಾಹಿರವಾಗಿ ರೈತರಿಂದ ದಲ್ಲಾಳಿ ವಸೂಲಿ ಮಾಡುತ್ತೀರಲ್ಲಾ, ಅದನ್ನು ನಿಲ್ಲಿಸಿ ಮಾನ್ಯ ಸಿ ಜಿ ಪಾಟೀಲ್ ಅವರು ಹೇಳಲಿ ದಲ್ಲಾಳರು ಕಾನೂನು ಬಾಹಿರವಾಗಿ ಹಣವನ್ನು ರೈತರಿಂದ ವಸೂಲಿ ಮಾಡುತ್ತಾರೋ ಇಲ್ಲವೋ ಎಂಬುದನ್ನು ಹೇಳಲಿ ಇದರಿಂದ ಸುಮಾರು 500 ರಿಂದ 600 ಕೋಟಿ ರೂಪಾಯಿ ಗಳಷ್ಟು ಹಣ ಪ್ರತಿ ವರ್ಷ, ನಮಗೆ ಶೋಷಣೆ ಆಗುತ್ತದೆ ಇದನ್ನು ನಾವು ತಡೆದುಕೊಂಡು ಹಾಗೆಯೇ ಸುಮ್ಮನೇ ನಿಲ್ಲಬೇಕು ಎಂದರೆ ಹೇಗೆ? ಕಾನೂನಿನಲ್ಲಿ ದಲ್ಲಾಳಿ ತೆಗೆದುಕೊಳ್ಳಬಾರದು ಎಂದು ಇದೆ ಆದು ಆಗಲಾರದ ಹಾಗೆ ಏನು ಮಾಡಬೇಕು? ಹೇಗೆ ವ್ಯವಸ್ಥೆ ಮಾಡುತ್ತಾರೆಂದು ಮಾನ್ಯ ಸಿ ಜಿ ಪಾಟೀಲ್ ಅವರು ಹೇಳಲಿ ನಾನು ಅದಕ್ಕೆ ಒಪ್ಪುತ್ತೇನೆ

**ಶ್ರೀ ಸಿ ಜಿ ಪಾಟೀಲ್** ದಲ್ಲಾಳರ ಪರವಾಗಿ ನಾನು ಮಾತನಾಡುತ್ತಿದ್ದೇನೇನೋ ಎಂಬ ಭಾವನೆ ಮಾನ್ಯ ಡಿ ಆರ್ ಪಾಟೀಲ್‌ರವರ ಮನಸ್ಸನಲ್ಲಿದ್ದರೆ ದಯವಿಟ್ಟು ಅದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ ರೈತರಿಗೆ ಸಮಯಕ್ಕೆ, ಸಂದರ್ಭಕ್ಕೆ, ಆತನಿಗೆ ಯಾವಾಗ ಬೇಕಾದರೂ ಏನು ವ್ಯಾಪಾರಸ್ಥ ಬಂಧುಗಳಿಂದ ಹಣಕಾಸಿನ ನೆರವು ಸಿಗುತ್ತದಲ್ಲ, ಅದು ಈ ಕಾನೂನಿನ ಮುಖಾಂತರ ನಿಲ್ಲಬಾರದು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಈ ಸದನದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತಿದ್ದೇನೆ ನಾನು ಒಪ್ಪಿಕೊಳ್ಳುತ್ತೇನೆ, ದಲ್ಲಾಳರು ಕಾನೂನು ಬಾಹಿರವಾಗಿ ದಲ್ಲಾಳಿಯನ್ನು ಮುರಿದುಕೊಳ್ಳುತ್ತಿರುವಂತಹ ಹಲವಾರು ಸಂದರ್ಭಗಳು ಈ ರಾಜ್ಯದಲ್ಲಿ ಇದ್ದಾವೆ ಆದರೆ ದಲ್ಲಾಳಿಯನ್ನು ಮುರಿದುಕೊಳ್ಳುವುದನ್ನು ತಡೆಗಟ್ಟಲಿಕ್ಕೆ ಕಟ್ಟುನಿಟ್ಟಿನ ನಿಯಮಗಳನ್ನು ತರಲಿ ಆದರೆ ಒಟ್ಟಾರೆಯಾಗಿ ರೈತನ ಹಣವನ್ನು ಮಾರುಕಟ್ಟೆ ಮುಖಾಂತರ, ನೀವು ಚೆಕ್ ಮುಖಾಂತರ ವಿತರಿಸುವುದು ಆದಾಗ ಇವತ್ತು ರೈತರೂ ಕೂಡ ವ್ಯಾಪಾರಸ್ಥರಿಂದ ಪಡೆದುಕೊಂಡಂತಹ ಸಾಲವನ್ನು

ಮರಳಿ ಕೊಡುವುದಿಲ್ಲ ಎನ್ನುವಂತಹದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂಬ ಒಂದೇ ಒಂದು ಕಳಕಳಿಯನ್ನು ನಾನು ಸರ್ಕಾರಕ್ಕೆ ಹಾಗೂ ಮಾನ್ಯ ಹಿರಿಯ ಶಾಸಕರಾದಂತಹ ಶ್ರೀಮಾನ್ ಡಿ ಆರ್ ಪಾಟೀಲ್ ಅವರಿಗೆ ನಿವೇದನೆ ಮಾಡಿಕೊಳ್ಳಲು ಇಚ್ಛೆಪಡುತ್ತಿದ್ದೇನೆ

**ಅಧ್ಯಕ್ಷರು** ಮಾನ್ಯ ಡಿ ಆರ್ ಪಾಟೀಲ್ ಅವರೇ, ಈಗ ಪ್ರಶ್ನೋತ್ತರದಲ್ಲಿ ಪ್ರಶ್ನೆಯನ್ನು ಸರ್ಕಾರಕ್ಕೆ ಕೇಳುವುದು ಸಚಿವರು ಉತ್ತರ ಹೇಳುವುದು ಸರಿ ಈ ಪಾಟೀಲರು, ಆ ಪಾಟೀಲರ ಮಧ್ಯೆ ಚರ್ಚೆ ಆದರೆ ಹೇಗೆ ಆದ್ದರಿಂದ ಪಾಟೀಲ್‌ರುಗಳು ಹೊರಗಡೆ ಮಾತನಾಡಿಕೊಳ್ಳುವುದು ಬೆಟರ್

**ಶ್ರೀ ಡಿ ಆರ್ ಪಾಟೀಲ್** ಸಾರ್ ದಯವಿಟ್ಟು, ತಾವು ಪ್ರಶ್ನೆಯ ಗಂಭೀರತೆಯನ್ನು ಒಪ್ಪಿಕೊಂಡಿದ್ದೀರಿ ಎಂದು ನಾನು ಭಾವನೆ ಮಾಡುತ್ತೇನೆ ರೈತರಿಂದ ಗೈರು ಕಾನೂನು ದಲ್ಲಾಳಿ ವಸೂಲಿ ಆಗುತ್ತದೆ ಎಂದು ಹೇಳಿ ಮಾನ್ಯ ಪಾಟೀಲ್ ಅವರೂ ಒಪ್ಪಿಕೊಳ್ಳುತ್ತಾರೆ, ನಾವು ಒಪ್ಪಿ ಕೊಳ್ಳುತ್ತೇವೆ ಇಲಾಖೆಯ ಅಧಿಕಾರಿಗಳೂ ಒಪ್ಪಿಕೊಳ್ಳುತ್ತಾರೆ ಅದನ್ನು ನಿಲ್ಲಿಸುವುದಕ್ಕೆ ಸಾಕಷ್ಟು ಚರ್ಚೆ ಆಗಿ ಕಾನೂನನ್ನು 1998ರಲ್ಲಿ ತಂದಿದ್ದು ಆ ಕಾನೂನು ಬರಬೇಕಾದರೆ ಮಾನ್ಯ ಉದಾಸಿ ಅವರ ನೇತೃತ್ವದಲ್ಲಿ ಇದ್ದಂತಹ ಸಬ್ಜೆಕ್ಟ್ ಕಮಿಟಿ, ನನ್ನ ನೇತೃತ್ವದಲ್ಲಿ ಇದ್ದಂತಹ ಸಬ್ಜೆಕ್ ಕಮಿಟಿ ಯುನಾನಿಮಸ್ ಆಗಿ ನಾವು ಸರ್ಕಾರಕ್ಕೆ ರೆಕ್ಮಂಡ್ ಮಾಡಿದ್ದೇವೆ ಒಮ್ಮೆ ಆ ಕಾನೂನು ಅಜೆಂಡಾಲ್ಲಿ ಇತ್ತು ಅಜೆಂಡಾದಲ್ಲಿ ಇದ್ದಂತಹ ಕಾನೂನ್ನು ಹೌಸ್‌ನೊಳಗೆ ಇಂಟ್ರಡ್ಯೂಸ್ ಮಾಡಲಿಲ್ಲ ಮಾನ್ಯ ಜೆ ಹೆಚ್ ಪಟೇಲ್ ಅವರು ದೆಹಲಿಯಲ್ಲಿ ಇದ್ದರು ಅವರಿಗೇನೋ ಬೇರೆ ಮಾಹಿತಿ ಕೊಟ್ಟು ಹೌಸ್ ನೊಳಗೆ ಇಂಟ್ರಡ್ಯೂಸ್ ಆಗಲಿಲ್ಲ ಅವರು ದೆಹಲಿಯಿಂದ ಬಂದ ಕೂಡಲೇ ಇದರಿಂದ ಏನು ತೊಂದರೆ ಆಗಿದೆ ಎನ್ನುವುದನ್ನು ಅವರ ಗಮನಕ್ಕೆ ತಂದಾಗ ಅವರು ಮುಂದಿನ ಅಧಿವೇಶನದಲ್ಲಿ ಅದನ್ನು ಇಂಟ್ರಡ್ಯೂಸ್ ಮಾಡಲಿಕ್ಕೆ ಅನುಕೂಲ ಮಾಡಿಕೊಟ್ಟರು ಇಂಟ್ರಡ್ಯೂಸ್ ಆಯಿತು, ಕಾನೂನು ಆಯಿತು ಇಲ್ಲೆಲ್ಲಾ ಚರ್ಚೆ ಆಗಿ ಒಮ್ಮತದಿಂದ ಅದನ್ನು ಒಪ್ಪಿಕೊಂಡೆವು ಆರು ವರ್ಷ ಆದರೂ ನೋಟಿಫೈ ಆಗುವುದಿಲ್ಲ ಎಂದರೆ ಏನು ಸಾರ್? ನಾವು ಇನ್ನೂ ಸುಮ್ಮನೇ ಕೊಡುವುದಕ್ಕೆ ಆಗುತ್ತದೆಯೇ?

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಹೇಳುತ್ತೇನೆ

**ಅಧ್ಯಕ್ಷರು** ಮಾನ್ಯ ಸಚಿವರೇ, ಮಾಣ್ಯ ಡಿ ಆರ್ ಪಾಟೀಲ್ ಅವರು ತಂದಿರುವ ವಿಚಾರ ಬಹಳ ಗಂಭಿರವಾದಂತಹ ವಿಚಾರ ನಿಮ್ಮ ಅಧಿಕಾರಿಗಳಿಗೆ ಆರು ವರ್ಷಗಳಾದರೂ ನೋಟಿಫೈ ಮಾಡುವುದಕ್ಕೆ ಆಗಲಿಲ್ಲವೆ? ಅದಕ್ಕೆ ಹೇಳಿ

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಅದರಲ್ಲಿ ಕಾನೂನಿನ ತೊಡಕುಗಳು ಇವೆ ಈಗಾಗಲೇ ಮಾನ್ಯ ಸಿ ಜಿ ಪಾಟೀಲ್ ಅವರು ಹೇಳಿದ ಹಾಗೆ, ಮಾನ್ಯ ಡಿ ಆರ್ ಪಾಟೀಲ್ ಅವರು ಹೇಳಿದ ಹಾಗೆ, ಅಲ್ಲಿ ಏನೇನು ತೊಡಕುಗಳು ಇವೆ ಅವುಗಳನ್ನು ನಾವು ಸರಪಡಿಸಿಕೊಳ್ಳಬೇಕು

**ಅಧ್ಯಕ್ಷರು** 60 ವರ್ಷ ಬೇಕಾ? ಈಗ ಆರು ವರ್ಷ ಆಗಿದೆ, ನೋಟಿಫೈ ಆಗಲು 60 ವರ್ಷ ಬೇಕಾ ಮಾನ್ಯ ಸಚಿವರೇ? ಆರು ವರ್ಷವಾಗಿದೆ ಎಂದು ಮಾನ್ಯ ಪಾಟೀಲ್ ಅವರು ಹೇಳುತ್ತಿದ್ದಾರೆ ನಿಮ್ಮ ಅಧಿಕಾರಿಗಳಿಗೆ 60 ವರ್ಷ ಬೇಕಾ ಹೇಳಿ?

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಈಗ ಹೇಳಿದ ಹಾಗೆ ಏನೇನು ತೊಂದರೆಗಳು ಇವೆ ಅವನ್ನು ನಾವು ವಿಚಾರ ಮಾಡಬೇಕು

**ಅಧ್ಯಕ್ಷರು** ತೊಂದರೆಗಳು ಇದ್ದರೆ ಅದನ್ನು ನಿವಾರಿಸಿ ಬೇಗ ನೋಟಿಫೈ ಮಾಡಿಸಿ ಮಾರಾಯ್ರೇ

**ಶ್ರೀ ಡಿ ಆರ್ ಪಾಟೀಲ್** ನನ್ನನ್ನು ಕೇಳಲಿ ಮಾನ್ಯ ಸಚಿವರು ತೊಂದರೆ ಹೇಗೆ ಬಗೆಹರಿಸಬೇಕು ಎಂದು ನನ್ನನ್ನು ಕೇಳಿದರೆ ನಾನು ಅವರಿಗೆ ಸಹಾಯ ಮಾಡುತ್ತೇನೆ

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಮಾನ್ಯ ಅಧ್ಯಕ್ಷರೆ, ಅವರ ಸಲಹೆಯನ್ನು ತೆಗೆದುಕೊಂಡು ಅದಷ್ಟು ಬೇಗನೆ ಕಾನೂನನ್ನು ಜಾರಿಗೆ ತರುತ್ತೇನೆಂದು ಹೇಳಿದ್ದೇನೆ

**ಶ್ರೀ ಡಿ ಆರ್ ಪಾಟೀಲ್** ಸಾರ್, 'ಆದಷ್ಟು ಬೇಗ ಎನ್ನುವುದು ದಯವಿಟ್ಟು ಬೇಡ

**ಅಧ್ಯಕ್ಷರು** ಮಾನ್ಯ ಡಿ ಆರ್ ಪಾಟೀಲ್ ಅವರೇ, ಮಾನ್ಯ ಸಚಿವರು ಹೊಸಬರು ಇದ್ದಾರೆ ನೀವು ಎತ್ತಿರತಕ್ಕ ವಿಚಾರ ತುಂಬಾ ಗಂಭೀರವಾದಂತಹ ವಿಚಾರ ಇದೆ ಆ ಕಾರಣದಿಂದ ಕುಳಿತು ಚರ್ಚೆ ಮಾಡಿ ಈಗ ಅದಷ್ಟು ಬೇಗ ನೋಟಿಫೈ ಆಗಬೇಕು ಅದಕ್ಕೆ ಮಾನ್ಯ ಸಚಿವರಿಗೆ ಸಹಾಯ ಮಾಡಿ

**ಶ್ರೀ ಡಿ ಆರ್ ಪಾಟೀಲ್** ಸಾರ್, ನಾನು ಒಪ್ಪಿಕೊಳ್ಳುತ್ತೇನೆ ಆದಷ್ಟು ಬೇಗ ಎಂದರೆ ಇನ್ನೂ ಐದು ವರ್ಷ ಹೋಗಬಾರದಲ್ಲಾ ಈ ಹಣಕಾಸು ವರ್ಷದಲ್ಲಿ ಎನ್ನುವ ಕಮಿಟ್‌ಮೆಂಟ್ ಬರಲಿ ಆದಷ್ಟು ಬೇಗ ಎಂದರೆ ನೀವು ಇನ್ನೂ ಐದು ವರ್ಷ ಸುಮ್ಮನೇ ಇರಬೇಕು ಎಂದು ನೀವು ಹೇಳಿದರೆ ಸುಮ್ಮನೇ ಇರುತ್ತೇವೆ ಏನಾದರೂ ಒಂದು ಕಮಿಟ್‌ಮೆಂಟ್ ಇಲ್ಲ ಎಂದರೆ ಹೇಗೆ?

**ಶ್ರೀ ಅರಗ ಜ್ಞಾನೇಂದ್ರ** ಆರು ವರ್ಷಗಳಿಂದ ಹಾಗೆಯೇ ಇದೆ ಎಂದರೆ ಇಂತಹ ಸರ್ಕಾರಿ ಯಂತ್ರ ನಡೆಸಿದಂತಹ ಪಕ್ಷಕ್ಕೆ ಮತ್ತೂ ಅಂಟಿಕೊಂಡಿದ್ದೀರಿ ಡಿ ಆರ್ ಪಾಟೀಲ್ ಅಂತಹವರು ದಯವಿಟ್ಟು ಪ್ರತಿಭಟನೆ ಮಾಡಿ ಹೊರಗೆ ಬನ್ನಿ

**ಶ್ರೀ ಡಿ ಆರ್ ಪಾಟೀಲ್** ಏನು ಮಾಡುವುದು ದುರ್ದೈವ? ಏನಾದರೂ ರೈತರಿಗೆ ಅನುಕೂಲವಾಗುವುದಾದರೆ, ಅದು ಇದೇ ಪಕ್ಷದಿಂದ ಆಗಬೇಕು ಅಲ್ಲಿಗೆ ಬಂದರೆ ಅದೂ ಕೂಡ ಇಲ್ಲ

**ಗೊಂದಲ**

**ಅಧ್ಯಕ್ಷರು** ಈಗ ಮುಂದಿನ ಪ್ರಶ್ನೆಗೆ ಹೋಗೋಣ

**ಶ್ರೀ ಡಿ ಆರ್ ಪಾಟೀಲ್** ಸಾರ್ ದಯವಿಟ್ಟು ಈ ಹಣಕಾಸು ವರ್ಷದಲ್ಲೇ ಇದನ್ನು ಇಂಪ್ಲಿಮೆಂಟ್ ಮಾಡಿಸುತ್ತೇವೆ ಎನ್ನುವಂತಹ ಜವಾಬ್ದಾರಿಯನ್ನು ತಾವು ತೆಗೆದುಕೊಂಡರೆ ನಾನು ಕುಳಿತುಕೊಳ್ಳುತ್ತೇನೆ

**ಅಧ್ಯಕ್ಷರು** ಮಾನ್ಯ ಸಚಿವರು ನಿಮ್ಮ ಮಾರ್ಗದರ್ಶನವನ್ನು ಕೇಳುತ್ತಿದ್ದಾರೆ ನೀವೂ ಸಹ, ನಾನು ಅವರಿಗೆ ಎಲ್ಲಾ ರೀತಿಯಿಂದಲೂ ಹೇಗಾಗಬೇಕು ಎಂಬುದರ ಬಗ್ಗೆ ಹೇಳಿಕೊಡುತ್ತೇನೆ ಎಂದೂ ಸಹ ಕಿವಿ ಮಾತು ಹೇಳಿಬಿಟ್ಟಿದ್ದೀರಿ ನೀವಿಬ್ಬರೂ ಕುಳಿತುಕೊಂಡು ಚರ್ಚೆ ಮಾಡಿ, ಆದಷ್ಟು ಬೇಗನೆ ಮಾಡಿಸಿ

**ಶ್ರೀ ಡಿ ಆರ್ ಪಾಟೀಲ್** ಸಾರ್, ನಾವಿಬ್ಬರೇ ಕುಳಿತು ಚರ್ಚೆ ಮಾಡಿದರೆ ಇದು ಬಗೆಹರಿಯುತ್ತದೆ ಆದರೆ ಏನು ಮಾಡುವುದು? ಅವರು ತಮ್ಮ ಜೊತೆಗೆ ಅವರ ಅಧಿಕಾರಿಗಳನ್ನೂ ಕೂಡ ಕುಳ್ಳಿರಿಸಿಕೊಳ್ಳುತ್ತಾರಲ್ಲ? ಅಧಿಕಾರಿಗಳು ಇದ್ದ ಸಿಸ್ಟಮ್ಮೇ ಕಂಟಿನ್ಯೂ ಆಗಬೇಕೆನ್ನುತ್ತಾರೆ

**ಶ್ರೀ ವಾಟಾಳ್ ನಾಗರಾಜ್** ನೀವು ಹೇಳಿದಂತೆ ನಾನು ಕೇಳುತ್ತೇನೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರಲ್ಲಾ?

**ಶ್ರೀ ಡಿ ಆರ್ ಪಾಟೀಲ್** ಹಾಗಾದರೆ ನಾನು ಹೇಳಿದಂತೆ ಇದನ್ನು ಈ ಹಣಕಾಸು ವರ್ಷದಲ್ಲೇ ಇಂಪ್ಲಿಮೆಂಟ್ ಮಾಡಿಸಲಿ

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ನಾನು ಅಧಿಕಾರಿಗಳ ಮಾತನ್ನು ಕೇಳುತ್ತೇನೆ ಎಂದು ಹೇಳುತ್ತಿದ್ದಾರೆ ನಾನು ಅಧಿಕಾರಿಗಳ ಮಾತನ್ನು ಕೇಳುವ ಸಲುವಾಗಿ ಇಲ್ಲಿ ಮಂತ್ರಿಯಾಗಿಲ್ಲ ನಾನೂ ಕೂಡ ರೈತ ಕುಟುಂಬದಿಂದ ಬಂದವನಾಗಿದ್ದೇನೆ ನನಗೂ ಇದರ ಆಗುಹೋಗುಗಳ ಬಗ್ಗೆ ತಿಳುವಳಿಕ ಇದೆ ಅದರ ಸಾಧಕ–ಬಾಧಕಗಳನ್ನು ವಿಚಾರ ಮಾಡಿ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ ಹೀಗೆ ಮಾಡಿ, ಇವತ್ತೇ ಮಾಡಿ ಎಂದರೆ ಹೇಗೆ ಮಾಡುವುದಕ್ಕಾಗುತ್ತದೆ?

**ಶ್ರೀ ಡಿ ಆರ್ ಪಾಟೀಲ್** ದಯವಿಟ್ಟು ಕ್ಷಮಿಸಿ, ನಾನು ಇವತ್ತೇ ಮಾಡಿ ಎಂದು ಹೇಳಲೇ ಇಲ್ಲ ಮಾನ್ಯ ಅಧ್ಯಕ್ಷರೇ, ದಯವಿಟ್ಟು ತಾವು ನನ್ನ ರಕ್ಷಣೆಗೆ ಬರಬೇಕು ನಾವು ಈಗಾಗಲೇ 6 ವರ್ಷ ತಡೆದುಕೊಂಡಿದ್ದೇವೆ ಇನ್ನೆಷ್ಟು ವರ್ಷ ನಾವು ಕಾಯಬೇಕು?

**ಗೊಂದಲ**

**ಶ್ರೀ ಬಿ ಎಸ್ ಯಡಿಯೂರಪ್ಪ** ಅವರ ಪ್ರಾಬ್ಲಮ್ ಏನು ಎಂದರೆ, ನಿಮ್ಮ ಕಾಂಗ್ರೆಸ್ ಮತ್ತು ಜೆ ಡಿ (ಎಸ್) ಶಾಸಕರುಗಳು ಒಟ್ಟಿಗೆ ಸೇರುವುದಿಲ್ಲ ಅವರಿಗೆ ಅಲ್ಲೂ ಅವರ ಸಮಸ್ಯೆ ಹೇಳಿಕೊಳ್ಳಲಿಕ್ಕೆ ಅವಕಾಶ ಇಲ್ಲ ಇಲ್ಲೂ ಪರಿಹಾರ ಸಿಗುವುದಿಲ್ಲ ಮಾನ್ಯ ಸಚಿವರು ಇದನ್ನು ಮಾಡಲಿಕ್ಕಾಗುತಿಲ್ಲ ಎನ್ನುತ್ತಿದ್ದಾರೆ

**ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ** ನಮ್ಮ ಹುಕ್ಕೇರಿಯವರು, ಡಿ ಆರ್ ಪಾಟೀಲರು ಮತ್ತು ನಾನೂ ಸೇರಿಕೊಂಡು ಆದಷ್ಟು ಬೇಗನೆ ನೀವು ಹೇಳಿದ ಪ್ರಕಾರ ಒಂದು ತೀರ್ಮಾನಕ್ಕೆ ಬರೋಣ, ಅದೇನೂ ದೊಡ್ಡ ಕೆಲಸವಲ್ಲ

**ಶ್ರೀ ಎಸ್ ಎಸ್ ಪಾಟೀಲ್** ಸನ್ಮಾನ್ಯ ಅಧ್ಯಕ್ಷರೇ, ಇದು ಸುಮ್ಮನೆ ಮಾತನಾಡಿದರೆ ಬಗೆಹರಿಯುವುದಿಲ್ಲ ಹಿಂದೆ ನಮ್ಮ ಸರ್ಕಾರ ಇದ್ದಾಗ ಕೂಡ ನಾವು ಪ್ರಯತ್ನ ಮಾಡಿದ್ದೇವೆ ಮಾನ್ಯ ಕೃಷಿ ಸಚಿವರು ಸುಮ್ಮನೆ ಹೀಗೆ ಹೇಳಿದರೆ ಅದು ಆಗುವುದಿಲ್ಲ ನಿಜವಾಗಿ ಇಲ್ಲಿ ಸಮಸ್ಯೆ ಇರುವುದು ಎಲ್ಲಿ ಎಂದರೆ, ಈ ಕಾಯಿದೆ ಜಾರಿಗೆ ತಂದರೆ ವ್ಯಾಪಾರಸ್ಥರು ಅಸಹಕಾರ ಮಾಡುತ್ತಾರೆ ಅವರು ಅಸಹಕಾರ ಮಾಡಿ ಖರೀದಿಗೆ ಬರುವುದಿಲ್ಲ ಆಗ ಸರ್ಕಾರ ಖರೀದಿಸಲು ತಯಾರಾಗಬೇಕಾಗುತ್ತದೆ ಅದು ಇಲ್ಲದ್ದಕ್ಕೆ ಇದು ನಿಂತಿದೆ Marketing Federation ನಿಂದ ಖರೀದಿ ಮಾಡುವಂತಹ ವ್ಯವಸ್ಥೆ ಎಲ್ಲಿಯವರೆಗೆ ಆಗುವುದಿಲ್ಲವೋ ಅಲ್ಲಿಯವರೆಗೂ ಇದನ್ನು ಜಾರಿಗೆ ಕೊಡುವುದಕ್ಕಾಗುವುದಿಲ್ಲ ಸುಮ್ಮನೆ ನಾವು ಇಲ್ಲಿ ಚರ್ಚೆ ಮಾಡುತ್ತೇವೆ ಅಷ್ಟೇ ಸರ್ಕಾರ ಖರೀದಿ ಮಾಡಲಿಕ್ಕೆ ತಯಾರಾಗಬೇಕಾಗುತ್ತದೆ, ದಯವಿಟ್ಟು ಆ ತಯಾರಿಯನ್ನು ಮಾಡಿಕೊಳ್ಳಿ ಆ ತಯಾರಿ ಇಲ್ಲದಿದ್ದರೆ ಈ 6 ವರ್ಷಗಳ ಅವಧಿ ಹೀಗೆ ಮುಂದುವರೆದುಕೊಂಡು ಹೋಗುತ್ತದೆ ಅಷ್ಟೇ

**ಶ್ರೀ ಕೆ ಶ್ರೀನಿವಾಸಗೌಡ ಕುಡುವನಹಳ್ಳಿ** ಮಾನ್ಯ ಎಸ್ ಎಸ್ ಪಾಟೀಲರ ಕಾಲದಲ್ಲಿ ಈ ಬಿಲ್ ಅನ್ನು ತರಲಾಯಿತು

**ಶ್ರೀ ಎಸ್ ಎಸ್ ಪಾಟೀಲ್** ನೀವು ತಯಾರಿ ಮಾಡಿಕೊಳ್ಳಿ ವ್ಯಾಪಾರಸ್ಥರು ಖರೀದಿಗೆ ಬರದಿದ್ದರೆ ನಾವು ಟೆಂಡರ್ ಕರೆದು ಖರೀದಿ ಮಾಡಬೇಕಾಗುತ್ತದೆ

**ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ** ಮಾನ್ಯ ಎಸ್ ಎಸ್ ಪಾಟೀಲರನ್ನೂ ಸೇರಿಸಿಕೊಳ್ಳೋಣ ಅದನ್ನು ರೈತರಿಗೆ ಅನುಕೂಲವಾಗುವಂತೆ ಮಾಡೋಣ ಅದರಲ್ಲಿ ಎರಡನೇ ಮಾಡಿಲ್ಲ ಸರ್ಕಾರ ರೈತರ ಪರವಾಗಿ ಯಾವತ್ತೂ ಇದೆ, ಇವತ್ತೂ ಇದೆ, ಮುಂದೆಯೂ ಇರುತ್ತದೆ ರೈತರ ಪರವಾಗಿ ಏನು ತೀರ್ಮಾನ ಮಾಡಬೇಕೋ ಆ ತೀರ್ಮಾನವನ್ನು ಸರ್ಕಾರ ಮಾಡುತ್ತದೆ

**ಅಧ್ಯಕ್ಷರು** ಆಯಿತು, ಆ ರೀತಿ ಮಾಡಿ

**ಶ್ರೀ ಡಿ ಆರ್ ಪಾಟೀಲ್** ವ್ಯವಸ್ಥೆ ಬದಲಾವಣೆ ಆದಾಗ, ಆ ಬದಲಾಗುವಂತಹ ವ್ಯವಸ್ಥೆಯಿಂದ ಯಾರಿಗೆ ತೊಂದರೆಯಾಗುತ್ತದೋ ಅವರು ಅಸಹಕಾರ ಮಾಡುವುದು ಸ್ವಾಭಾವಿಕ ಆದರೆ ಅವರು ಖಾಯಂ ಅಸಹಕಾರ ಮಾಡುವುದಕ್ಕಾಗುವುದಿಲ್ಲ ಅವರು ವ್ಯಾಪಾರ ಮಾಡಲೇಬೇಕು ವ್ಯಾಪಾರ ಬಿಟ್ಟರೆ ಅವರ ಹೊಟ್ಟೆ ತುಂಬಬೇಕಲ್ಲಾ! 10 ದಿವಸ, 15 ದಿವಸ ಅಥವಾ 1 ತಿಂಗಳು ಅವರು ಅಸಕಾರ ಮಾಡಬಹುದು ಆ ಪ್ರಸಂಗದಲ್ಲಿ ಸರ್ಕಾರ ರೈತರ ರಕ್ಷಣೆಗೆ ಬಂದು ನಿಲ್ಲಬೇಕು ಇದು ವಾಸ್ತವ ಸಂಗತಿ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ ಅವರು ಅಸಹಕಾರ ಮಾಡುತ್ತಾರೆಂದು ಹೇಳಿ, ನಾವು ರೈತರಿಗೆ ಹೀಗೆಯೇ ಶೋಷಣೆ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇವೆ ಎನ್ನುವುದಾದರೆ, ನಾನು ಸರ್ಕಾರದ ಜೊತೆಗೆ ಒಪ್ಪುವುದಿಲ್ಲ

**ಅಧ್ಯಕ್ಷರು** ಆಯಿತು ಪಾಟೀಲರೇ, ದಯಮಾಡಿ ಕುಳಿತುಕೊಳ್ಳಿ

**ಶ್ರೀ ಸಿ ಎಂ ಉದಾಸಿ** ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಇಷ್ಟೆ. ಸನ್ಮಾನ್ಯ ಡಿ ಆರ್ ಪಾಟೀಲರು APMC ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ ಈಗ ನಾನು ಹೇಳುವುದೇನೆಂದರೆ, ನೀವು ಪ್ರಾಯೋಗಿಕವಾಗಿ ಗದಗ್‌ನಲ್ಲಾದರೂ ಪ್ರಾರಂಭ ಮಾಡಿ 5 ವರ್ಷವಾದರೂ ಅದಕ್ಕೆ ದಿನಾಂಕ ಗೊತ್ತು ಮಾಡುವುದಕ್ಕೆ ಸಾಧ್ಯವಾಗಿಲ್ಲ ಸರ್ಕಾರಕ್ಕೆ ಸಾಧಿಸಬೇಕು ಎನ್ನುವಂತಹ ಗುರಿ ಇದ್ದರೆ, ಒಂದು, ಒಂದು ತಾಲ್ಲೂಕಿನಲ್ಲಾದರೂ ಪ್ರಾರಂಭ ಮಾಡಲಿ ಆಗಸ್ಟ್ 15ಕ್ಕೆ ಒಳ್ಳೆಯ ಮುಹೂರ್ತ ಇದೆ, ಅವರು ಅಂದಿನಿಂದಲೇ ಅದನ್ನು ಪ್ರಾರಂಭ ಮಾಡಲಿ ಆ ಪ್ರಯೋಗ ಅಲ್ಲಿ ಯಶಸ್ವಿಯಾದರೆ ಅದನ್ನು ಇಡೀ ರಾಜ್ಯಾದ್ಯಂತ ಜಾರಿಗೆ ತರಲಿಕ್ಕೆ ಸಾಧ್ಯತೆ ಇದೆ ಅದಕ್ಕೆ ವಿಳಂಬ ಮಾಡುವುದು ಬೇಡ

**ಶ್ರೀ ಡಿ ಆರ್ ಪಾಟೀಲ್** ಸಾರ್ ದಯವಿಟ್ಟು ಅದಕ್ಕೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು

**ಅಧ್ಯಕ್ಷರು** ತಮ್ಮದೊಂದೇ ಪ್ರಶ್ನೆಯನ್ನೇ ನಾವು ಬಹಳ ಹೊತ್ತು ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ

**ಶ್ರೀ ಡಿ ಆರ್ ಪಾಟೀಲ್** ಸಾರ್, ನಾನು ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ ಮಾನ್ಯ ಉದಾಸಿಯವರು ಲೀಡಿಂಗ್ ವ್ಯಾಪಾರಸ್ಥರಾಗಿದ್ದಾರೆ ಅವರಿಗೆ ಇದರ ಸಾಧಕ–ಬಾಧಕ ಎಲ್ಲವೂ ಕೂಡ ಅರ್ಥವಾಗುತ್ತದೆ ಅವರು ಗದಗ್‌ನಲ್ಲಿ ಮಾತ್ರ ಇದನ್ನು ಜಾರಿಗೆ ತನ್ನಿ ಎನ್ನುವುದಾದರೆ, ನಾಳೆ ಗದಗ್ ಮಾರ್ಕೆಟ್‌ನಲ್ಲಿ ಯಾವ ವ್ಯಾಪಾರಸ್ಥರೂ ಬರುವುದಿಲ್ಲ, ಆಗ ಟ್ರೇಡ್ ಗದಗ್ ಮಾರ್ಕೆಟ್‌ನಿಂದ ಬೇರೆ ಕಡೆಗೆ ಶಿಫ್ಟ್ ಆಗುತ್ತದೆ ಎಲ್ಲಿ ಅವರಿಗೆ ಅನುಕೂಲವಾಗುತ್ತದೋ ಅಲ್ಲಿಂದ ಅವರು ಖರೀದಿ ಮಾಡುತ್ತಾರೆ ಆದ್ದರಿಂದ ಈ ಕಾನೂನು ಇಡೀ ರಾಜ್ಯಾದ್ಯಂತ ಎಲ್ಲಾ ತಾಲ್ಲೂಕುಗಳಲ್ಲಿ ಏಕಕಾಲಕ್ಕೆ ಇಂಪ್ಲಿಮೆಂಟ್ ಆಗಬೇಕು ಇದು ಅವರಿಗೆ ಗೊತ್ತಿದೆ ಗದಗ್‌ನಲ್ಲಿ ಮಾತ್ರ ಇದನ್ನು **ಜಾರಿಗೊಳಿಸಿ, ಅಲ್ಲಿ ಡಿ ಆರ್ ಪಾಟೀಲರನ್ನು ಫೇಲ್ ಮಾಡಿಸಿ, ಆಮೇಲೆ ಈ ಕಾನೂನು ಉಲ್ಟಾ ಮಾಡಿಸಿಕೊಳ್ಳುವಂತಹ ಉದ್ದೇಶ ಯಾರದ್ದಾದರೂ ಇದ್ದರೆ, ಆ ಉದ್ದೇಶ ಸಫಲವಾಗಬಾರದು**

**ಅಧ್ಯಕ್ಷರು** ಆಯಿತು, ಮುಂದೆ ಹೋಗೋಣ

**ಗೊಂದಲ**

**ಶ್ರೀ ಕೆ ಶ್ರೀನಿವಾಸಗೌಡ** ಅವರು ಹೇಳಿರುವಂತೆ ರೈತರ ಪರವಾಗಿ ನಾವು ಎಲ್ಲಾ ಕ್ರಮಗಳನ್ನು ಜರುಗಿಸಬೇಕಾಗುತ್ತದೆ ಯಾರಿಗೆ

**ಗೊಂದಲ**

**ಶ್ರೀ ಕೆ ಶ್ರೀನಿವಾಸಗೌಡ** ಉದಾಸಿಯವರು ಟ್ರೇಡರ್ಸ್ ಪರವಾಗಿ ಮಾತನಾಡುವುದು, ನಾನು ರೈತರ ಪರವಾಗಿ ಮಾತನಾಡುವುದು, ಇವ್ಯಾವೂ ಬೇಡ ರೈತರ ಹಿತವನ್ನು ಕಾಪಾಡುವಂತಹ ಕೆಲಸ ಸರ್ಕಾರದ ಆದ್ಯತೆಯಲ್ಲಿದೆ ಅದನ್ನು ನೀವು ಮತ್ತು ನಾವು ಕುಳಿತು ತೀರ್ಮಾನ ಮಾಡೋಣ ಇದನ್ನು ಬಿಡಿ, APMC ಗೆ ಹೋಗೋಣ

ಅಧ್ಯಕ್ಷರು ಮುಂದಿನ ಪ್ರಶ್ನೆ ಮಾನ್ಯ ಯಡಿಯೂರಪ್ಪನವರದ್ದು ಮಾನ್ಯ ಉದಾಸಿಯವರೇ, ದಯಮಾಡಿ ಕುಳಿತುಕೊಳ್ಳಿ

**ಗೊಂದಲ**

**ಶ್ರೀ ಎ ಎಸ್ ಬಸವರಾಜ್** ಮಾನ್ಯ ಅಧ್ಯಕ್ಷರೇ, ಹೊಬರಿಗೂ ಮಾತನಾಡಲು ಅವಕಾಶ ಕೊಡಿ

**ಅಧ್ಯಕ್ಷರು** ಸ್ವಾಮಿ ನಿಮಗೆಲ್ಲಾ ಗೊತ್ತಿದೆ ಈಗಾಗಲೇ ಅರ್ಧ ಗಂಟೆಯಾಗಿದೆ

**ಶ್ರೀ ಎ ಎಸ್ ಬಸವರಾಜ್** ನಾನು ಇದರ ಬಗ್ಗೆ ಒಂದು ಉಪ ಪ್ರಶ್ನೆ ಕೇಳುತ್ತಿದ್ದೇನೆ ಮಾನ್ಯ ಸಚಿವರು ದಯಮಾಡಿ ಇದರ ಬಗ್ಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನ ಅರಸೀಕೆರೆ ತಾಲ್ಲೂಕಿನಲ್ಲಿ APMC ಯಿಂದ ಆಗಿರತಕ್ಕಂಥ ಲಿಂಕ್ ರೋಡ್ ಎಷ್ಟು ಮಾಡುತ್ತಿದ್ದೀರಿ? ಇದು ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಬರುವುದಿಲ್ಲ, ಹಾಗೆಯೇ ಇದು PWD ಗೂ ಕೂಡ ಬರುವುದಿಲ್ಲ ಇಂತಹ ರೋಡ್‌ಗಳನ್ನು ಎಷ್ಟು ಮಾಡುತ್ತಿದ್ದೀರಿ?

**ಅಧ್ಯಕ್ಷರು** ಬಸವರಾಜ್‌ರವರೇ ಪ್ರಶ್ನೆಗೆ ಸಂಬಂಧಪಡದ ಉಪ ಪ್ರಶ್ನೆ ಕೇಳಿದರೆ ಅವರು ಹೇಗೆ ಉತ್ತರ ಕೊಡಲು ಸಾಧ್ಯ? ಹೇಳಿದರೆ ನಿಮಗೆ ಅರ್ಥವಾಗುವುದಿಲ್ಲವೇ?

**ಶ್ರೀ ಪ್ರಕಾಶ್ ಬಿ ಹುಕ್ಕೇರಿ** ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಮ್ಮ ಮಾರ್ಕೆಟ್‌ಗೆ ಏನು ಆಗಬೇಕು ಎಂಬುದರ ಬಗ್ಗೆ ಅವರು ನನಗೊಂದು ಪತ್ರ ಕಳುಹಿಸಲಿ ಅಲ್ಲಿಗೆ ಏನು ಆಗಬೇಕೋ ಅದನ್ನು ನಾನು ಮಾಡಿಕೊಡುತ್ತೇನೆ

**ಅಧ್ಯಕ್ಷರು** ಈ ಪ್ರಶ್ನೆ ಮುಗಿದಿದೆ ಈಗ ಮಾನ್ಯ ಯಡಿಯೂರಪ್ಪನವರದು

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಅಧ್ಯಕ್ಷರೇ, ನನ್ನದೊಂದು ಪ್ರಶ್ನೆ ಇದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ನನ್ನದು ಆದ ಮೇಲೆ ನಿಮ್ಮದು

**ಶ್ರೀ ವಾಟಾಳ್ ನಾಗರಾಜ್** ಹೌದೇ, ನಿಮ್ಮದು ಇದೆಯೇ?

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ವಾಟಾಳ್ ನಾಗರಾಜ್‌ರವರದ್ದು ಏನಿದ್ದರೂ special question ಅದು ಎಲ್ಲರದ್ದೂ ಮುಗಿದ ಮೇಲೆ ತೆಗೆದುಕೊಳ್ಳಬೇಕು ಅಷ್ಟೊತ್ತಿಗೆ ನಾವೆಲ್ಲರೂ ಹೊರಗೆ ಹೋಗಿರುತ್ತೇವೆ ಆಮೇಲೆ ನೀವು ಎದ್ದು ಕೇಳುವಿರಂತೆ

**ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಸಾಲದ ಬಾಕಿ ತಾಳಲಾರದೆ ರೈತರ ಆತ್ಮಹತ್ಯೆ ಕುರಿತು**

103(873) ಶ್ರೀ ಯಡಿಯೂರಪ್ಪ ಬಿ ಎಸ್ (ಶಿಕಾರಿಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಸಾಲದ ಬಾಕಿ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ನೀಡಲಾದ ಪರಿಹಾರದ ವಿವರ ನೀಡುವುದು ಹಾಗೂ ಎಷ್ಟು ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ

ಇ) ರೈತರ ಕುಟುಂಬಗಳಿಗೆ ಪರಿಹಾರ ಪಾವತಿಸಲು ಬಾಕಿ ಇರುವ ಪ್ರಕರಣಗಳೆಷ್ಟು? ಹಾಗೂ ಯಾವಾಗ ಪಾವತಿಸಲಾಗುವುದು?

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಸಾಲದ ಬಾಧೆ ತಾಳಲಾರದೆ ಆತ್ಯಹತ್ಯೆ ಮಾಡಿಕೊಂಡ ರೈತರ ಸಂಖ್ಯೆಯನ್ನು ವರ್ಷವಾರು ಈ ಕೆಳಗೆ ನೀಡಲಾಗಿದೆ

| ವರ್ಷ | 2001–02 | 2002–03 | 2003–04 |
|---|---|---|---|
| ಸಂಖ್ಯೆ | 81 | 52 | 708 |

ಜಿಲ್ಲಾವಾರು ವಿವರಗಳನ್ನು ಅನುಬಂಧ 1 ರಿಂದ 3 ರಲ್ಲಿ ನೀಡಲಾಗಿದೆ

ಆ) ಆತ್ಮಹತ್ಯೆ ಮಾಡಿ ಕೊಂಡ ರೈತರ ಕುಟುಂಬಗಳಿಗೆ ನೀಡಲಾದ ಪರಿಹಾರದ ವಿವರಗಳನ್ನು ವರ್ಷವಾರು ಈ ಕೆಳಗೆ ನೀಡಲಾಗಿದೆ

| | | | | |
|---|---|---|---|---|
| 1) | ವರ್ಷ | 2001–02 | 2002–03 | 2003–04 |
| 2) | ಸಾಲದ ಬಾಧೆಯಿಂದ ಆತ್ಮಹತ್ಯೆಗೊಂಡ ಒಟ್ಟು ಪ್ರಕರಣಗಳ ಸಂಖ್ಯೆ | 81 | 52 | 708 |
| 3) | ಈ ಪೈಕಿ ಪರಿಹಾರ ನೀಡಲಾದ ಪ್ರಕರಣಗಳ ಸಂಖ್ಯೆ | 23 | 7 | 195 |
| 4) | ನೀಡಲಾದ ಪರಿಹಾರ (ರೂ ) | 2,30,000 | 62,000 | 195 00 ಲಕ್ಷ |

ಜಿಲ್ಲಾವಾರು ವಿವರಗಳನ್ನು ಅನುಬಂಧ 1 ರಿಂದ 3 ರಲ್ಲಿ ನೀಡಲಾಗಿದೆ

ಇ) 2003–04ನೇ ಸಾಲಿನಿಂದ, ಸರ್ಕಾರದ ಆದೇಶದ ಸಂಖ್ಯೆ ಕೃತೋಇ/280/ಕೃಉಇ/2003, ಬೆಂಗಳೂರು ದಿನಾಂಕ 18–7–2003ರ ಪ್ರಕಾರ ಕರ್ನಾಟಕ ರಾಜ್ಯ ಸರ್ಕಾರವು ಒಂದು ವಿಶೇಷ ಯೋಜನೆಯನ್ನು ಜಾರಿಗೊಳಿಸಿ ಅಧಿಕೃತ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ಪರಿಹಾರ ಧನವನ್ನು ತಲಾ ರೂ 1 00 ಲಕ್ಷದಂತೆ ಅರ್ಹ ಪ್ರಕರಣಗಳಿಗೆ ನೀಡಲು ಆದೇಶಿಸಿದೆ ಈ ಪ್ರಕರಣಗಳನ್ನು 2003–04ನೇ ಸಾಲಿನಲ್ಲಿ ರಚಿಸಲಾಗಿರುವ ಉಪ ವಿಭಾಗ ಮಟ್ಟದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಅರ್ಹ ಪ್ರಕರಣಗಳಿಗೆ ಪರಿಹಾರ ಧನವನ್ನು ಮಂಜೂರು ಮಾಡಲು ಸೂಚಿಸಲಾಗಿತ್ತು

ಮೇಲ್ಕಂಡ ಯೋಜನೆಯ ಅನುಷ್ಠಾನದಂತೆ, 2003–04ರಲ್ಲಿ 708 ಪ್ರಕರಣಗಳ ಪೈಕಿ 195 ಅರ್ಹ ಪ್ರಕರಣಗಳಿಗೆ ಒಟ್ಟು ರೂ 195 00 ಲಕ್ಷಗಳನ್ನು (ತಲಾ ರೂ 1 00 ಲಕ್ಷದಂತೆ) ಪರಿಹಾರವನ್ನಾಗಿ ನೀಡಲಾಗಿದೆ 2003–04ನೇ ಸಾಲಿನಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದ 11 ಪ್ರಕರಣಗಳ

ಪೈಕಿ 2004–05ರಲ್ಲಿ 9 ಪ್ರಕರಣಗಳನ್ನು ಅರ್ಹ ಪ್ರಕರಣಗಳೆಂದು ಸಮಿತಿಯು ತೀರ್ಮಾನಿಸಿದೆ ಈ 9 ಪ್ರಕರಣಗಳ ಪೈಕಿ 7 ಪ್ರಕರಣಗಳಿಗೆ ಈಗಾಗಲೇ ರೂ 7 00 ಲಕ್ಷಗಳ ಪರಿಹಾರ ಧನವನ್ನು ನೀಡಲಾಗಿದೆ ಹಾಗೂ ಉಳಿದ 2 ಅರ್ಹ ಪ್ರಕರಣಗಳಿಗೆ ರೂ 2 00 ಲಕ್ಷಗಳ ಪರಿಹಾರವನ್ನು ಸಧ್ಯದಲ್ಲಿಯೇ ಪಾವತಿಸಲಾಗುವುದು ಇತ್ಯರ್ಥವಾಗದ ಇನ್ನೂ 2 ಪ್ರಕರಣಗಳ ಸಂಬಂಧ ಹೆಚ್ಚಿನ ಮಾಹಿತಿಯು ಸಂಗ್ರಹಣೆಗಾಗಿ ಸಮಿತಿಯ ಮುಂದೆ ಉಳಿದಿರುತ್ತದೆ

2004–05ರಲ್ಲಿ ಸಾಲದ ಬಾಧೆಯಿಂದ ಆತ್ಮಹತ್ಯೆಗೊಂಡ 17 ಅರ್ಹ ಪ್ರಕರಣಗಳ ಪೈಕಿ, ಈಗಾಗಲೇ 10 ಪ್ರಕರಣಗಳಿಗೆ ರೂ 10 00 ಲಕ್ಷಗಳ ಪರಿಹಾರವನ್ನು ನೀಡಲಾಗಿದೆ ಹಾಗೂ ಉಳಿದ 7 ಪ್ರಕರಣಗಳಿಗೆ ಪರಿಹಾರವನ್ನು ಸಧ್ಯದಲ್ಲಿಯೇ ಪಾವತಿಸಲಾಗುವುದು

## ಅನುಬಂಧ–1

## 2001–02

| ಕ್ರ ಸಂ | ಜಿಲ್ಲೆ | ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ | ನೀಡಲಾದ ಪರಿಹಾರ |
|---|---|---|---|
| 1 | ಬಾಗಲಕೋಟೆ | 1 | – |
| 2. | ಬೆಂಗಳೂರು ನಗರ | – | – |
| 3 | ಬೆಂಗಳೂರು (ಗ್ರಾ) | 2 | – |
| 4 | ಬೆಳಗಾಂ | 2 | – |
| 5 | ಬಳ್ಳಾರಿ | 5 | – |
| 6. | ಬೀದರ್ | – | – |
| 7 | ಬಿಜಾಪುರ | 1 | 10000/–ಎನ್ ಎಸ್ ಎ ಪಿ ಯೋಜನೆಯಡಿ (ಕಂದಾಯ ಇಲಾಖೆ) |
| 8 | ಚಾಮರಾಜನಗರ | – | – |
| 9 | ಚಿಕ್ಕಮಗಳೂರು | 8 | 10000/– ರಾಷ್ಟ್ರೀಯ ಭದ್ರತಾ ಯೋಜನೆಯಡಿ |
| 10 | ಚಿತ್ರದುರ್ಗ | 1 | – |
| 11 | ದಾವಣಗೆರೆ | 9 | – |
| 12. | ಧಾರವಾಡ | 9 | 60000/– ಎನ್ ಎಸ್ ಎ ಪಿ ಯೋಜನೆಯಡಿ |
| 13 | ಗದಗ್ | 3 | 30000/– ಎನ್ ಎಸ್ ಬಿ ಎಸ್ ಯೋಜನೆಯಡಿ (ಕೇಂದ್ರ ಸರ್ಕಾರ) |

| 1 | 2 | 3 | 4 |
|---|---|---|---|
| 14 | ಗುಲ್ಬರ್ಗಾ | – | – |
| 15 | ಹಾಸನ | 9 | 80000/– ಸಾ ರಾ ಕು ನೆ ಯೋಜನೆಯಡಿ 1 ಪ್ರಕರಣ ಪರಿಶೀಲನೆಯಲ್ಲಿದೆ |
| 16 | ಹಾವೇರಿ | 14 | – |
| 17 | ಉತ್ತರ ಕನ್ನಡ | 8 | – |
| 18 | ಕೋಲಾರ | 1 | 10000/– ರಾಷ್ಟ್ರೀಯ ಕುಟುಂಬ ಪರಿಹಾರ ಯೋಜನೆ |
| 19 | ಕೊಪ್ಪಳ | – | – |
| 20 | ಕೊಡಗು | 2 | – |
| 21 | ಮಂಡ್ಯ | – | – |
| 22. | ದ ಕನ್ನಡ | – | – |
| 23 | ಮೈಸೂರು | – | – |
| 24 | ರಾಯಚೂರು | 1 | – |
| 25 | ಶಿವಮೊಗ್ಗ | 4 | 30000/– ರಾಷ್ಟ್ರೀಯ ಕುಟುಂಬ ಪರಿಹಾರ ಯೋಜನೆ |
| 26 | ತುಮಕೂರು | 1 | – |
| 27 | ಉಡುಪಿ | – | – |
| | ಒಟ್ಟು | 81 | 230000/– 23 ಜನರಿಗೆ ಪರಿಹಾರ ತಲಾ 10000/–ರೂ ನಂತೆ ಪರಿಹಾರ ನೀಡಿದೆ |

## ಅನುಬಂಧ–2
## 2002–03

| ಕ್ರ.ಸಂ | ಜಿಲ್ಲೆ | ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ | ನೀಡಲಾದ ಪರಿಹಾರ (ರೂ ) |
|---|---|---|---|
| 1 | ಬಾಗಲಕೋಟೆ | – | – |
| 2. | ಬೆಂಗಳೂರು ನಗರ | 1 | 2,000=00 ಜಿಲ್ಲಾಧಿಕಾರಿಗಳಿಂದ ಸಾರ್ವಜನಿಕ ವಂತಿಕೆ ಮೂಲಕ 25,000=00 ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ |

| 1 | 2 | 3 | 4 |
|---|---|---|---|
| | | | ಮಂಜೂರು ಮಾಡಲು ಶಿಫಾರಸ್ಸು ಮಾಡಿದೆ |
| 3 | ಬೆಂಗಳೂರು (ಗ್ರಾ) | 3 | 10,000=00 ಜಿಲ್ಲಧಿಕಾರಿಗಳಿಂದ ಸಾರ್ವಜನಿಕ ವಂತಿಕೆ ಮೂಲಕ |
| 4 | ಬೆಳಗಾಂ | 3 | – |
| 5 | ಬಳ್ಳಾರಿ | 4 | 10,000=00 ರಾಷ್ಟ್ರೀಯ ಭದ್ರತಾ ಯೋಜನೆಯಡಿ (ಕಂದಾಯ ಇಲಾಖೆ) |
| 6 | ಬಿಜಾಪುರ | 1 | – |
| 7 | ಚಾಮರಾಜನಗರ | 1 | – |
| 8 | ಚಿಕ್ಕಮಗಳೂರು | 6 | – |
| 9 | ಚಿತ್ರದುರ್ಗ | – | – |
| 10 | ದಾವಣಗೆರೆ | 7 | – |
| 11 | ಧಾರವಾಡ | 3 | – |
| 12 | ಗದಗ್ | – | – |
| 13 | ಗುಲ್ಬರ್ಗಾ | – | – |
| 14 | ಹಾಸನ | 9 | 30,000=00 ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿ ಎರಡು ಪ್ರಕರಣಗಳಲ್ಲಿ ಪರಿಹಾರ ನೀಡಲು ಕಡತ ನಡವಳಿಯಲ್ಲಿದೆ |
| 15 | ಹಾವೇರಿ | 4 | – |
| 16 | ಉತ್ತರ ಕನ್ನಡ | 2 | – |
| 17 | ಕೋಲಾರ | – | – |
| 18 | ಕೊಪ್ಪಳ | 1 | – |
| 19 | ಕೊಡಗು | 2 | – |
| 20 | ಮಂಡ್ಯ | – | – |
| 21 | ದ ಕನ್ನಡ | – | – |
| 22 | ಮೈಸೂರು | – | – |
| 23 | ರಾಯಚೂರು | 1 | – |
| 24 | ಶಿವಮೊಗ್ಗ | 2 | 10,000=00 ರಾಷ್ಟ್ರೀಯ ಕುಟುಂಬ ಪರಿಹಾರ ಯೋಜನೆ ಅಡಿಯಲ್ಲಿ |

| 1 | 2 | 3 | 4 |
|---|---|---|---|
| 25 | ತುಮಕೂರು | 2 | – |
| 26 | ಉಡುಪಿ | – | – |
| 27 | ಬೀದರ್ | – | – |
| | ಒಟ್ಟು | 52 | 62,000=00 |

## ಅನುಬಂಧ-3

### ಜಿಲ್ಲಾವಾರು ರೈತರ ಆತ್ಮಹತ್ಯೆ ವಿವರಗಳು 1-4-2003 ರಿಂದ 31-3-2004ರ ವರೆಗೆ

| ಕ್ರ ಸಂ | ಜಿಲ್ಲೆಗಳು | ವರದಿಯಾದ ಪ್ರಕರಣಗಳು | ಸಮಿತಿ ಮುಂದೆ ಮಂಡಿಸಿದ ಪ್ರಕರಣಗಳು | ತಿರಸ್ಕರಿಸಿದ ಪ್ರಕರಣಗಳು | ಚೆಕ್ ವಿತರಿಸಿದ ಪ್ರಕ್ರಣಗಳು |
|---|---|---|---|---|---|
| 1 | ಬಾಲಕೋಟೆ | 24 | 23 | 19 | 4 |
| 2 | ಬೆಂಗಳೂರು ಗ್ರಾಂ | 30 | 30 | 10 | 20 |
| 3 | ಬೆಂಗಳೂರು ನಗರ | 2 | 2 | 0 | 2 |
| 4 | ಬೆಳಗಾಂ | 41 | 40 | 30 | 10 |
| 5 | ಬಳ್ಳಾರಿ | 31 | 31 | 21 | 10 |
| 6 | ಬೀದರ್ | 32 | 32 | 24 | 8 |
| 7 | ಬಿಜಾಪುರ | 22 | 22 | 18 | 4 |
| 8 | ಚಾಮರಾಜನಗರ | 10 | 10 | 9 | 1 |
| 9 | ಚಿಕ್ಕಮಗಳೂರು | 24 | 24 | 14 | 10 |
| 10 | ಚಿತ್ರದುರ್ಗ | 55 | 50 | 35 | 15 |
| 11 | ದಕ್ಷಿಣ ಕನ್ನಡ | 9 | 9 | 7 | 2 |
| 12 | ದಾವಣಗೆರೆ | 39 | 39 | 33 | 6 |
| 13 | ಧಾರವಾಡ | 31 | 31 | 27 | 4 |
| 14 | ಗದಗ | 13 | 13 | 5 | 7 |
| 15 | ಗುಲ್ಬರ್ಗ | 18 | 18 | 9 | 9 |
| 16 | ಹಾಸನ | 69 | 64 | 53 | 11 |
| 17 | ಹಾವೇರಿ | 38 | 38 | 30 | 8 |
| 18 | ಕೊಡಗು | 12 | 12 | 2 | 5 |
| 19 | ಕೋಲಾರ | 18 | 18 | 9 | 9 |
| 20 | ಕೊಪ್ಪಳ | 20 | 20 | 17 | 3 |
| 21 | ಮಂಡ್ಯ | 46 | 46 | 39 | 7 |
| 22 | ಮೈಸೂರು | 18 | 15 | 14 | 1 |
| 23 | ರಾಯಚೂರು | 5 | 4 | 2 | 2 |

| 1 | 2 | 3 | 4 | 5 | 6 |
|---|---|---|---|---|---|
| 24 | ಶಿವಮೊಗ್ಗ | 50 | 49 | 38 | 11 |
| 25 | ತುಮಕೂರು | 41 | 39 | 20 | 19 |
| 26 | ಉತ್ತರ ಕನ್ನಡ | 7 | 7 | 0 | 7 |
| 27 | ಉಡುಪಿ | 3 | 3 | 3 | 0 |
| | ಒಟ್ಟು | **708** | **689** | **488** | **195** |

ಅನುಬಂಧ-4

**2004-05**

| ಕ್ರ ಸಂ | ಜಿಲ್ಲೆ | ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ | ನೀಡಲಾದ ಪರಿಹಾರ ಲಕ್ಷರೂ ಗಳು | ನೀಡಬೇಕಾದ ಪರಿಹಾರ ಲಕ್ಷ ರೂ.ಗಳು |
|---|---|---|---|---|
| 1 | ಬೆಂಗಳೂರು (ಗ್ರಾ) | 1 | 1 00 | – |
| 2 | ಚಿಕ್ಕಮಗಳೂರು | 1 | 1 00 | – |
| 3 | ಹಾವೇರಿ | 2 | 2 00 | – |
| 4 | ಕೊಪ್ಪಳ | 1 | 1 00 | – |
| 5 | ಶಿವಮೊಗ್ಗ | 1 | 1 00 | – |
| 6 | ಬೆಳಗಾಂ | 3 | – | 3 00 |
| 7 | ದಾವಣಗೆರೆ | 2 | 2 00 | – |
| 8 | ಗುಲ್ಬರ್ಗಾ | 2 | 2 00 | – |
| 9 | ಬಿಜಾಪುರ | 4 | – | 4 00 |
| | ಒಟ್ಟು | 17 | 10 00 | 7 00 |

ಘೋಷ್ವಾರೆ

| | 2001-02 | 2002-03 | 2003-04 | 2004-05 |
|---|---|---|---|---|
| ಆತ್ಮಹತ್ಯೆ ಪ್ರಕರಣಗಳು | 81 | 52 | *195 | 17 |
| ಪರಿಹಾರ ನೀಡಿದ ಮೊತ್ತ | 2 30 ಲಕ್ಷ | 0 62 ಲಕ್ಷ | 195 ಲಕ್ಷ | 10 ಲಕ್ಷ |

(7 ಲಕ್ಷ ಬಾಕಿ ಇರುತ್ತವೆ

*ಸಾಂಸ್ಥಿಕ ಸಾಲ

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಸಚಿವರು ಕೊಟ್ಟಿರುವ ಉತ್ತರದ ಪ್ರಕಾರ 2001-02ರಿಂದ ಇವತ್ತಿನವರೆಗೆ ಒಟ್ಟು 858 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ 1 ಲಕ್ಷ ರೂಪಾಯಿಗಳಂತೆ ಪರಿಹಾರವನ್ನು 235 ಕುಟುಂಬಗಳಿಗೆ ಕೊಡಲಾಗಿದೆ ತಾವೇನು ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದೀರಿ, ಆ ಸಮಿತಿಯ ವರದಿ ಸ ಇಲ್ಲ ಹೀಗಾಗಿ ಅವತ್ತು ಒಟ್ಟು 2003-04ರಲ್ಲಿ 708 ಜನ ಆತ್ಮಹತ್ಯೆ ಮಾಡಿಕೊಂಡರೆ, ನೀವು ಪರಿಹಾ

ಕೊಟ್ಟಿರುವುದು 195 ಜನರಿಗೆ ಮಾತ್ರ ಅದಕ್ಕಾಗಿ ನಾನು ನಿಮಗೆ ಒತ್ತಾಯ ಮಾಡುತ್ತಿದ್ದೇನೆ, ನಾವು ಆ ಸಂದರ್ಭದಲ್ಲಿ ಸತ್ತ ಕುಟುಂಬದ ಕತ್ತಾರು ಮನೆಗಳಿಗೆ ಹೋಗಿ, ಅಲ್ಲಿಯ ಪರಿಸ್ಥಿತಿಯನ್ನು ಕಣ್ಣಾರೆ ಕಂಡು, ಪರಿಹಾರ ಕೊಡುವಂತೆ ಸರ್ಕಾರವನ್ನು ಒತ್ತಾಯಿಸಿದ್ದೆವು ಅವರ್ಯಾರಿಗೂ ಒಂದು ಲಕ್ಷ ರೂಪಾಯಿಗಳ ಪರಿಹಾರ ಬಂದಿಲ್ಲ ಅಲ್ಲಿರುವಂತಹ ರಿವಿನ್ಯೂ ಅಧಿಕಾರಿಗಳು ಆ ದಾಖಲಾತಿಗಳನ್ನು ತಯಾರು ಮಾಡುವುದರೊಳಗೆ ಈ ಕಮಿಟಿ ಇರಲಿಲ್ಲ ಆತ್ಮಹತ್ಯೆ ಮಾಡಿಕೊಂಡ ಬಹಳ ದಿವಸಗಳ ನಂತರ ಅವರು ವಿಚಾರಣೆಗೆ ಹೋದರು ಆಗ ಜನ ಏನು ಉತ್ತರ ಕೊಟ್ಟರೋ, ಆ ಉತ್ತರದಿಂದ ತೃಪ್ತರಾಗಿ ಇವತ್ತು ಈ ಪರಿಸ್ಥಿತಿ ಬಂದಿದೆ ಇದನ್ನು ಮರು ಪರಿಶೀಲನ ಮಾಡಿ, ಆ ಸತ್ತಂತಹ ಕುಟುಂಬಗಳವರಿಗೆ ಪರಿಹಾರ ಕೊಡುತ್ತೀರಾ? ಎಂಬುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ ಎರಡನೆಯದಾಗಿ, ಈ ವರ್ಷ ನೀವು ಅಧಿಕಾರಕ್ಕೆ ಬಂದ ಮೇಲೆ 17 ಜನ ರೈತರು ಆತ್ಮಹತ್ಯೆ ಮಾಡಿಕೊಂಡರು ನಿಮ್ಮ ಉತ್ತರದಲ್ಲಿ ನೀವು ಇದರಲ್ಲಿ 10 ಜನರಿಗೆ ಪರಿಹಾರ ಕೊಟ್ಟಿದ್ದೇವೆ, ಇನ್ನುಳಿದ 7 ಜನರಿಗೆ ಸದ್ಯದಲ್ಲೇ ಕೊಡುತ್ತೇವೆ ಎಂದು ಹೇಳಿದ್ದೀರಿ Atleast ಸತ್ತ ಕುಟುಂಬಕ್ಕೆ ತಕ್ಷಣ ಜಿಲ್ಲಾಧಿಕಾರಿಗಳು ಹೋಗಿ 1 ಲಕ್ಷ ರೂಪಾಯಿಗಳನ್ನು ಕೊಟ್ಟು ಬರುವುದಕ್ಕೂ ನಮ್ಮ ಸರ್ಕಾರ ದಿವಾಳಿಯಾಗಿದೆಯಾ ಸ್ವಾಮಿ? ಮಾನವೀಯತೆಯ ದೃಷ್ಟಿಯಿಂದ ಆ ಕುಟುಂಬದವರಿಗೆ ತಕ್ಷಣ ಪರಿಹಾರ ಕೊಡಬೇಕಲ್ಲವೇ? ಮೂರನೆಯದಾಗಿ, ಆತ್ಮಹತ್ಯೆಗಳು ಈಗಲೂ ಮುಂದುವರೆಯುತ್ತಲೇ ಇರುವುದರಿಂದ, ಆತ್ಮಹತ್ಯೆಗೆ ಒಳಗಾಗದೆ ಶಾಶ್ವತವಾಗಿ ಬರಗಾಲಕ್ಕೆ ತುತ್ತಾದಂತಹ ರೈತರಿಗೆ ಏನಾದರೂ ಪರಿಹಾರ ಕೊಡುವಂತಹ ಯೋಜನೆ ತಮ್ಮ ಕಣ್ಣ ಮುಂದೆ ಇದೆಯೇ ಸ್ವಾಮಿ?

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, ಇದು ಬಹಳ ಗಹನವಾದಂತಹ ವಿಷಯ 1997–98ರಲ್ಲಿ ಶ್ರೀ ಜೆ ಬಿ ಶಿವಕುಮಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸದನದ ಸಮಿತಿಯನ್ನು ರಚಿಸಲಾಗಿತ್ತು, ಆ ಸಮಿತಿ ಮಾಡಿದ ಅನೇಕ ಶಿಫಾರಸ್ಸುಗಳ ಪೈಕಿ ಒಂದು ಉನ್ನತ ಮಟ್ಟದ ತಜ್ಞರ ಸಮಿತಿ ರಚಿಸಿ ಇದನ್ನು ನೋಡಬೇಕು ಎಂಬುದಾಗಿತ್ತು ಅದರಂತೆ ಮಾಜಿ ಉಪ ಕುಲಪತಿಗಳಾದಂತಹ ಶ್ರೀ ವೀರೇಶ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಇಡೀ ಆತ್ಮಹತ್ಯೆಗಳ ಬಗ್ಗೆ ಪರಿಶೀಲನೆಯನ್ನು ನಡೆಸಲಾಯಿತು ಅವರ ರಿಪೋರ್ಟ್ ಪ್ರಕಾರ ಅಸಿಸ್ಟೆಂಟ್ ಕಮಿಷನರ್‌ರವರ ಅಧ್ಯಕ್ಷತೆಯಲ್ಲಿ ಆಯಾ ತಾಲ್ಲೂಕಿನಲ್ಲಿ ಆತ್ಮಹತ್ಯೆ ನಡೆದಂತಹ ಜಾಗದಲ್ಲಿ ಅವರು ರಿಪೋರ್ಟ್ ಮಾಡಿ ಇಮ್ಮೀಡಿಯಟ್ಟಾ ಆಗಿ ಸರ್ಕಾರಕ್ಕೆ ಕೊಡಬೇಕು ಅದು ಜೆನಾಯಿನ್ನೇ ಅಲ್ಲವೇ ಎಂದು ನೋಡಿ ಸರ್ಕಾರ ಜೆನಾಯಿನ್ ಇದ್ದರೆ ಪರಿಹಾರ ಕೊಡಬೇಕೆನ್ನುವ ತೀರ್ಮಾನಕ್ಕೆ ಬಂದಿರುವುದರಿಂದ ಆ ತೀರ್ಮಾನದ ಪ್ರಕಾರ ಇವತ್ತು ನಡೆಯುತ್ತಿದೆ ಇದಕ್ಕೆ ಒಂದು ಉದಾಹರಣೆಯನ್ನು ನಾನು ಕೊಡುವುದಕ್ಕೆ ಇಚ್ಛೆಪಡುತ್ತೇನೆ ಮಾನ್ಯ ಯಡಿಯೂರಪ್ಪನವರೇ ನಾನೂ ರೈತನಾಗಿರುವವನು ರೈತರು ಆದಷ್ಟು ಮೋಸ ಮಾಡುವುದಿಲ್ಲ ಎಂಬ ನಂಬಿಕೆ ಇಟ್ಟುಕೊಂಡಿರುವವನು ನಾನು ಹಿಂದೆ ಇಫ್ಕೋ ಸಂಸ್ಥೆಯ ಅಧ್ಯಕ್ಷನಾಗಿದ್ದೆ ಅಲ್ಲಿ ನಾನು ಅಧ್ಯಕ್ಷನಾದ ಮೇಲೆ ಇಫ್ಕೋಗೆ ಒಂದು ಇನ್‌ಶ್ಯೂರೆನ್ಸ್ ಸ್ಕೀಮ್ ತೆಗೆದುಕೊಂಡು ಬಂದೆ ದೇಶದ ಯಾವುದೇ ಸಹಕಾರ ಸಂಘಗಳಲ್ಲಿ ಎಲ್ಲಿಯಾದರೂ ಒಂದು ಮೂಟೆ ಗೊಬ್ಬರವನ್ನು ತೆಗೆದುಕೊಳ್ಳಲಿ ಅದಕ್ಕೆ ನಾಲ್ಕು ಸಾವಿರ ರೂಪಾಯಿ ಇನ್‌ಶ್ಯೂರೆನ್ಸ್ ಕೊಡುವುದು ಬರೀ ರಸೀದಿ ಅಷ್ಟೆ. ಅವನು ನಮ್ಮ ಫರ್ಟಿಲೈಸರ್‌ಗಳಾದ ಇಫ್ಕೋ, ಕ್ರಿಫ್ಕೋ ಮತ್ತು ಐಪಿಎಲ್ ಗೊಬ್ಬರಗಳನ್ನು ತೆಗೆದುಕೊಂಡರೆ ಅವನು ರಸೀದಿಯನ್ನು ಹೊಂದಿರಬೇಕು 25 ಮೂಟೆಗೆ ಒಂದು ಲಕ್ಷ ರೂಪಾಯಿ ಹಣವನ್ನು ಕೊಡುವಂತಹ ಸ್ಕೀಮ್ ನಾನೇ ತಂದೆ ನಿಮಗೆ ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದಾದ ಒಂದು ವರ್ಷದಲ್ಲಿ ಒಂದು ದಿನ ನಾನು ನನ್ನ ಮನೆಯಲ್ಲಿ

ಕುಳಿತಿರುವಾಗ, ಬಹಳ ಹಿಂದೆ ನಾನು ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಅಧ್ಯಕ್ಷನಾಗಿದ್ದಾಗ ಅಲ್ಲಿ ಒಬ್ಬ ಗುಮಾಸ್ತನಿಗೆ ಸೇರಿಸಿದ್ದೆ, ಅವನು ಆಕ್ಸಿಡೆಂಟ್ ಆಗಿ, ಅವನು ಬೇರೆ ವಿಧದಲ್ಲಿ ಆಕ್ಸಿಡಂಟ್ ಆದರೆ 23 ಮೂಟೆಗೆ ಗೊಬ್ಬರದ ರಸೀದಿ ಹಾಕಿಸಿ ಕೊಡುತ್ತೇನೆ, ನೀವು ನನಗೆ ದುಡ್ಡು ಕೊಡಿಸಬೇಕೆಂದು ಕೇಳಿದರು ಈ ವ್ಯವಸ್ಥೆ ಹೇಗಿದೆ ಎಂದರೆ, ಎಲ್ಲರೂ ಹೀಗೆಯೇ ಮಾಡುತ್ತಾರೆಂದು ನಾನು ಹೇಳುವುದಿಲ್ಲ ಅವತ್ತು ಇದನ್ನು ಕೇಳಿ ನನಗೆ ಏತಕ್ಕಾದರೂ ಈ ಸ್ಕೀಮ್ ತಂದೆ ನಾನು ಎಂದು ನೋವಾಯಿತು ಯಾರೂ ಇದನ್ನು ನಿಜವಾಗಿ ಉಪಯೋಗಿಸಿಕೊಳ್ಳುತ್ತಾರೆ ಅವರಿಗೆ ಇದು ಮಾರಕವಾಗುತ್ತದೆ ಈ ತರಹ ಉಪಯೋಗಿಸುವುದರಿಂದ ನಿಜವಾದ ರೈತರಿಗೆ ಮಾರಕವಾಗುತ್ತದೆ ಅದಕೋಸ್ಕರ ನಾವು ಅಸಿಸ್ಟೆಂಟ್ ಕಮಿಷನರ್‌ಗಳ ಮೂಲಕ ಈ ಸಮಿತಿ ಮಾಡಿ ಆ ರಿಪೋರ್ಟ್ ಮೂಲಕ ಕೊಡುವುದು ಸರಿ ಎಂದು ಭಾವನೆ ಇಟ್ಟುಕೊಂಡು ಹಿಂದಿನ ಸರ್ಕಾರ ತಂದಿದೆ, ಅದೇ ರೀತಿ ಕೊಡುತ್ತಿದ್ದೇವೆ ಈ ವರ್ಷದಲ್ಲಿ ನೀವು ಹೇಳುವ ಪ್ರಕಾರ ಇವತ್ತು ತಕ್ಷಣ ಕೊಡಬೇಕೆನ್ನುವುದಕ್ಕೆ ಕಾರಣ ಈ ಉಪ ವಿಭಾಗಾಧಿಕಾರಿಗಳ ರಿಪೋರ್ಟ್ ಕೊಟ್ಟ ಮೇಲೆ ಕೊಡುವಂತಹ ಕೆಲಸವನ್ನು ಮಾಡುತ್ತೇವೆ ಮೂರನೆಯದಾಗಿ ಈ ವರ್ಷದಲ್ಲಿ ಸತ್ತಂತಹವರಿಗೆ ಇನ್ನು ಏಳು ಜನರಿಗೆ ಕೊಡಬೇಕು ಅದು ಬಿಜಾಪುರದಲ್ಲಿ ಎರಡು, ಬಾಗೇವಾಡಿ ಒಂದು, ಸಿಂದಗಿ ಒಂದು, ಬೈಲಹೊಂಗಲ ಎರಡು, ಮತ್ತು ಹುಕ್ಕೇರಿ ಒಂದು, ಈ ತರಹ ಏಳು ಜನರಿಗೂ ಕೂಡ ಇನ್ನು ಕೆಲವೇ ದಿವಸಗಳಲ್ಲಿ ಆ ಹಣವನ್ನು ತಲುಪಿಸುವಂತಹ ಕೆಲಸ ಮಾಡುತ್ತೇವೆನ್ನುವಂತಹ ಮಾತನ್ನು ತಮ್ಮ ಮೂಲಕ ಮಾನ್ಯ ಯಡಿಯೂರಪ್ಪನವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರೇ, ನನಗೆ ಮಾನ್ಯ ಸಚಿವರ ಬಗ್ಗೆ ಗೌರವ ಇದೆ ಇವತ್ತು ನಾನು ಯೋಚನೆ ಮಾಡಬೇಕಾಗಿದೆ ಏಕೆಂದರೆ, ಒಬ್ಬ ರೈತನ ಮಗನಾಗಿ ಬರಗಾಲದಿಂದ ಜನ ತತ್ತರಿಸಿ ಹೋಗುತ್ತಿರತಕ್ಕಂತಹ ಸಂದರ್ಭದಲ್ಲಿ ಸುಮಾರು 700 ರಿಂದ 800 ಜನ 2003–04ನೇ ಸಾಲಿನಲ್ಲಿ ಆತ್ಮಹತ್ಯೆ ಮಾಡಿಕೊಂಡಂತಹ ಸಂದರ್ಭದಲ್ಲಿ 195 ಜನರಿಗೆ ಮಾತ್ರ ನಾವು ಪರಿಹಾರ ಕೊಟ್ಟಿದ್ದೇವೆ, ಆಗ ನಿಮ್ಮ ಸಮಿತಿ ಇರಲಿಲ್ಲ, ಶ್ರೀ ವೀರೇಶ್ ಕಮಿಟಿ ಬಂದು ನಿಮ್ಮ ಸಮಿತಿ ಹೋಗುವುದರೊಳಗೆ ಆ ದಾಖಲೆಗಳು ಏನೇನೋ ಆಗಿದ್ದವು, ಅವರು ಏನೋ ಒಂದು ವರದಿ ಕೊಟ್ಟಿದ್ದಾರೆ, ಅದನ್ನು ಪುನರ್ ಪರಿಶೀಲನೆ ಮಾಡಿ ಸರಿಯಾದಂತಹವರಿಗೆ ಪರಿಹಾರ ಕೊಡಿ ಎಂದು ನಾನು ಮೊದಲನೇ ಪ್ರಶ್ನೆ ಕೇಳಿದೆ ಎರಡನೆಯದು, ಒಂದು ಮಾತು ನಾನು ತಮಗೆ ಹೇಳುತ್ತೇನೆ ಇವತ್ತು ಈ ರೈತರ ಸಾಲದ ಅವಾಂತರಗಳಿಂದ ಈ ರೈತರ ಆತ್ಮಹತ್ಯೆಗಳು ಆಗುತ್ತಿವೆ ಅದರ ಬಗ್ಗೆ ಎರಡು ಮಾತಿಲ್ಲ ಯಾವುದೋ ಒಂದೆರಡು ಎಕ್ಸಪ್‌ಶನ್ ಕೇಸ್ ಇದ್ದರೆ ರೈತ ಸಮೂಹಕ್ಕೆ ನಾವು ಅವಮಾನ ಮಾಡುವ ಹಾಗೆ ಈ ಸದನದಲ್ಲಿ ನಾವು ಮಾತನಾಡುವುದು ಬೇಡ ಯಾರೋ ಒಬ್ಬರು ಪಾಪ ಯಾವುದೋ ಒಂದು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಕೊಡಿ ಅಥವಾ ಅವರಿಗೆ ಪರಿಹಾರ ಕೊಡಬೇಡಿ ಇವತ್ತು ಮೂರು ವರ್ಷಗಳ ಬರಗಾಲದಿಂದ ರೈತ ತತ್ತರಿಸಿ ಹೋಗುತ್ತಿದ್ದಾನೆ, ನಾನು ನಿಮಗೆ ನೇರವಾಗಿ ಒಂದು ಮಾತು ಕೇಳುತ್ತೇನೆ, ಇಲ್ಲಿ ನಮ್ಮ ಶ್ರೀ ಎಂ ಪಿ ಪ್ರಕಾಶ್‌ರವರು ಎಲ್ಲರೂ ಇದ್ದಾರೆ, ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆ ನಾಶವಾದ ಬಗ್ಗೆ 4–12–2003ರಲ್ಲಿ ಒಂದು ಸರ್ಕಾರಿ ಆಜ್ಞೆ ಹೊರಡಿಸಿ ಕಬ್ಬು ನಾಶವಾದಂತಹ ರೈತರಿಗೆ ಸುಮಾರು ಆರೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ, ಒಂದು ಎಕರೆಗೆ 1240 ರೂಪಾಯಿ ಎಂದು ಪರಿಹಾರ ಕೊಟ್ಟಿದ್ದಾರೆ ಅಂದರೆ ಆರು ಕೋಟಿ 50 ಲಕ್ಷ ರೂ ಗಳನ್ನು ಅಲ್ಲಿ ಮಂಜೂರು ಮಾಡಿ ಒಂದು ಎಕರೆಗೆ 1240 ರೂಪಾಯಿಗಳನ್ನು ಕೊಟ್ಟಿದ್ದನ್ನು ನಾನು ಸ್ವಾಗತ ಮಾಡುತ್ತೇನೆ ಆದರೆ ಒಂದು ಕಣ್ಣಿಗೆ

ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಇದು ಸರಿಯೇ? ಅವರು ಮಾನ್ಯ ಎಸ್ ಎಂ ಕೃಷ್ಣರವರು ಮಂಡ್ಯ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದರು ಎಂದು ಮಂಡ್ಯ ಜಿಲ್ಲೆಯ ರೈತರು ಮಾತ್ರ ಇಂತಹ ಪರಿಹಾರಕ್ಕೆ ಅರ್ಹರೇ/ ಬೇರೆ ಯಾರ ಬಗ್ಗೆಯೂ ಮಾನವೀಯತೆ ದೃಷ್ಟಿಯಿಂದ ನೋಡುವುದು ಬೇಡವಾ? ಈಗಾಲಾದರೂ ಈ ಬರಗಾಲಕ್ಕೆ ತುತ್ತಾಗಿರತಕ್ಕಂತಹ ರೈತರ ಬಗ್ಗೆ ನಾವು ಏನು ಕೇಳುತ್ತಿದ್ದೇವೆ, ಕೃಷಿ ಸಚಿವರು ಮತ್ತು ಕಂದಾಯ ಸಚಿವರು ನೀವಿಬ್ಬರೂ ಇಲ್ಲಿಯೇ ಕುಳಿತಿದ್ದೀರಿ ನಾವು ನೀವು ಸಾಲ ಮನ್ನಾ ಮಾಡಿ ಎಂದು ಕೇಳುತ್ತಿಲ್ಲ ಒಂದು ಜವಾಬ್ದಾರಿ ಸ್ಥಾನದಲ್ಲಿ ನೀವು ಕುಳಿತಿದ್ದೀರಿ, ನಿಮ್ಮ ಪರಿಸ್ಥಿತಿ ನಮಗೆ ಅಧವಾಗುತ್ತದೆ ಮಂಡ್ಯದ ರೈರಿಗೆ ಆ ಸಂದರ್ಭದಲ್ಲಿ ಕೊಟ್ಟಂತಹ ಪರಿಹಾರವನ್ನು ರಾಜ್ಯದ ಇತರೆ ಪ್ರದೇಶಗಳಲ್ಲಿ ಇದ್ದೇ ರೀತಿ ತೊಂದರೆಗೊಳಗಾದ ರೈತರಿಗೆ ಏಕೆ ಕೊಡಲಿಲ್ಲ? ಈಗ ನಿಮ್ಮ ಬಳಿ ದಾಖಲೆ ಇದೆ ನೀವು ದಾಖಲೆಗಳನ್ನು ಹೊಸದಾಗಿ ಹುಡುಕಬೇಕಾಗಿಲ್ಲ ಬೆಳೆ ನಾಶವಾಗಿದೆ, ಬೆಳೆ ವಿಮೆ ಮಾಡಿಸಿದವರ ಸಂಖ್ಯೆ ಬಹಳ ಕಡಿಮೆ ಇದೆ ಬೆಳೆ ವಿಮೆ ಪರಿಹಾರ ಯಾರಿಗೆ ಸಿಗುತ್ತದೆ? ಅವರಿಗೆ ಬಿಟ್ಟು ಉಳಿದಂತಹ ರೈತರಿಗೆ ಇಲ್ಲಿ ಪರಿಹಾರ ಕೊಡುವುದರ ಬಗ್ಗೆ ಸರ್ಕಾರ ಮಂಡ್ಯ ಜಿಲ್ಲೆಯಂತೆ ಇತರೆ ಜಿಲ್ಲೆಗಳ ರೈತರಿಗೂ ಪರಿಹಾರ ಕೊಡುವುದಕ್ಕೆ ನೀವು ಏನಾದರೂ ಯೋಚನೆ ಮಾಡಿದ್ದೀರಾ? ಆಗ ಈ ರೀತಿಯ ಆತ್ಮಹತ್ಯೆಗಳು ಕೊನೆಯಾಗಬಹುದು ಇದರ ಬಗ್ಗೆ ಹೇಳಿ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೆ, ಮೂಲಭೂತವಾಗಿ ಎಲ್ಲಾ ಸರ್ಕಾರಗಳು ಸೇರಿ ಕ್ರೆಡಿಟ್ ಸಿಸ್ಟಮನ್ನು ಹಾಳು ಮಾಡಿಕೊಂಡು ಇಟ್ಟಿದ್ದೇವೆ ಕ್ರೆಡಿಟ್ ಸಿಸ್ಟಮ್ ಹಾಳಾಗಿದೆ ಆದ್ದರಿಂದ ಆತ್ಮಹತ್ಯೆ ಪ್ರಕರಣಗಳು ಜಾಸ್ತಿಯಾಗಿವೆ ಎಂದು ತಾವೇ ಹೇಳಿದಿರಿ ನಾನು ಅದಕ್ಕೆ ಉತ್ತೆ ಕೊಡದಿದ್ದರೆ ಹೇಗೆ ಯಡಿಯೂರಪ್ಪನವರೇ, ನೀವು ಹೇಳಿದ ಮೇಲೆ ನಾನು ಹೇಳುತ್ತಿದ್ದೇನೆ ಕ್ರೆಡಿಟ್ ಸಿಸ್ಟಮ್ ಬಗ್ಗೆ ಇವತ್ತಿಗೂ ನೀವು ಹೇಳುತ್ತಿದ್ದೀರಿ, ಸಾಲ ಮನ್ನಾ ಮಾಡಿ ಬಡ್ಡಿ ಮನ್ನಾ ಮಾಡಿ ಎಂದು ಹೇಳುತ್ತಿದ್ದೀರಿ ಈ ದೇಶದಲ್ಲಿ ಏನು ಸಹಕಾರಿ ಸಂಘಗಳು ಮತ್ತು ಕೋ–ಅಪರೇಟಿವ್ ಸೆಕ್ಟಾರ್ ಏನಿತ್ತು ಈ ರಾಜ್ಯದಲ್ಲಿ ಇದನ್ನು ಹಾಳು ಮಾಡಿದವರು ನಾವುಗಳೇ, ಇವತ್ತು ಆತ್ಮಹತ್ಯೆಗಳು ಜಾಸ್ತಿಯಾಗುತ್ತಿವೆ ಸಲೀಸಾಗಿ ಸಹಕಾರಿ ಸಂಘಗಳಲ್ಲಿ ಸಾಲ ಸಿಗುತ್ತಿಲ್ಲ ಖಾಸಗಿಯವರ ಹತ್ತಿರ ಹೋಗಿ 100ಕ್ಕೆ 10 ರೂಪಾಯಿ ಬಡ್ಡಿ ಕೊಟ್ಟು ಸಾಲ ತರುವಂತಹ ಪರಿಸ್ಥಿರಿ ರೈತರಿಗೆ ಬಂದಿದೆ ಇದಕ್ಕೆ ಯಾರು ಕಾರಣರು? ನಾವೆಲ್ಲರೂ ಇದರಲ್ಲಿ ಸೇರಿದ್ದೇವೆ ನೀವು ಇಷ್ಟು ಹೊತ್ತು ಭಾಷಣ ಮಾಡಿದಿರಿ, ಮೂರು ವರ್ಷ ಬರ ಇದೆ, ಅಸಲು ಮನ್ನಾ ಮಾಡಬೇಕು, ಬಡ್ಡಿ ಬೇಡ ಸ್ವಾತಿ ಬಡ್ಡಿ ಮನ್ನಾ ಮಾಡಿ ಎಂದು ಹೇಳುವವರು ಕ್ರೆಡಿಟ್ ಸಿಸ್ಟಮ್‌ಗೆ ಏಕೆ ಸ್ಟೆಂಧನ್ ಮಡುತ್ತೀರಿ / ವಾಸ್ತಾವಾಂಶವನ್ನು ನಾವು ಮರೆ ಮಾಚದೆ, ಇರುವ ವಾಸ್ತವಾಂಶವನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ ಆಡಳಿತ ನಡೆಸಿದಂತಹ ಎಲ್ಲಾ ಸರ್ಕಾರಗಳು ನಾನು ಆ ಸರ್ಕಾರ ಈ ಸರ್ಕಾರ ಎಂದು ಹೇಳುವುದಿಲ್ಲ ಎಲ್ಲಾ ಸರ್ಕಾರಗಳೂ ಕೂಡ ಇದರಲ್ಲಿ ಭಾಗಿಯಾಗಿವೆ ಇವತ್ತು ಹಳ್ಳಿ ಮಟ್ಟದಲ್ಲಿ ಸಹಕಾರಿ ಸಂಘಗಳಲ್ಲಿ ಸಾಲ ಕೇಳಿದರೆ ಸಾಲ ಕೊಡುವ ಪರಿಸ್ಥಿತಿಯಲ್ಲಿ ಜಿಲ್ಲಾ ಬ್ಯಾಂಕುಗಳು ಇಲ್ಲ ಆದ್ದರಿಂದ ಇವತ್ತು ಆತ್ಮಹತ್ಯೆಗಳು ಜಾಸ್ತಿಯಾಗುತ್ತಿವೆ ಎನ್ನುವಂಥದ್ದನ್ನು ತಮ್ಮ ಗಮನಕ್ಕೆ ತರುತ್ತಾ, ಮಂಡ್ಯ ಜಿಲ್ಲೆಯಲ್ಲಿ ಹೋದ ಸಾರಿ ಆದ ಘಟನೆಯನ್ನು ನೀವು ನನ್ನ ಗಮನಕ್ಕೆ ತಂದಿದ್ದೀರಿ, ಈ ವಿಷಯದಲ್ಲಿ ಇರಲಿಲ್ಲ ನಾನು ಕಡತ ತರಿಸಿ ಅದನ್ನು ಪರಿಶೀಲಿಸಿ ತಮಗೆ ಮುಂದಿನ ದಿನಗಳಲ್ಲಿ ಪತ್ರ ಬರೆಯುತ್ತೇನೆ ನೀವು ಹೇಳುವುದು ನಿಜ ಇದೆ ಒಂದೇ ಒಂದು ಜಿಲ್ಲೆಗೆ ಕೊಟ್ಟು ಉಳಿದ ಜಿಲ್ಲೆಗೆ ಏಕೆ ಕೊಡಲಿಲ್ಲವೆಂದು ನಿಜವಾಗಿ ಕೂಡ ಬಹಳ ಗಂಭೀರವಾದ ಆರೋಪ ಆದರೆ ನನಗನ್ನಿಸುತ್ತದೆ, ಕಾವೇರಿ ನದಿ ನೀರು ಅಲ್ಲಿಗೆ ಬಿಡಲಿಲ್ಲವೆಂದು ಆ ಕಾರಣಕ್ಕಾಗಿ ಏನಾದರೂ ಕೊಡಲಿಲ್ಲವೋ ಎನೋ ತಿಳಿದುಕೊಳ್ಳುತ್ತೇನೆ ಯಾವುದಕ್ಕೂ 'ಈ ವಿಷಯದಲ್ಲಿ ಪೂರ್ಣ ಮಾಹಿತಿ ತರಿಸಿಕೊಂಡು ತಮಗೆ ಪತ್ರ ಬರೆಯುತ್ತೇನೆ

**ಶ್ರೀ ಬಿ ಎಸ್ ಯಡಿಯೂರಪ್ಪ** ನಾನೂ ಮಂಡ್ಯ ಜಿಲ್ಲೆಯವನೇ ಕೊಟ್ಟಿದ್ದರ ಬಗ್ಗೆ ನನಗೇನೂ ನೋವಿಲ್ಲ ನಾನು ಹೇಳುವುದೇನೆಂದರೆ, ಕಾವೇರಿ ನೀರು ತಲುಪಲಿಲ್ಲ, ಕಬ್ಬು ಹಾಳಾಗಿ ಹೋಯಿತು, ಪರಿಹಾರ ಕೊಟ್ಟರು ಇಲ್ಲಿ ನೀರೇ ಇಲ್ಲದೇ ಕಬ್ಬು ಒಣಗಿ ಹೋಗಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಏಕೆ ಹಚ್ಚುತ್ತೀರಿ? ಆ ವರ್ಷ ಯಾವ ರೀತಿ ಮಂಡ್ಯ ಜಿಲ್ಲೆಗೆ ಪರಿಹಾರ ಕೊಟ್ಟರೋ, ಬೆಳೆ ನಾಶವಾಗಿರುವ ಇತರೇ ರೈತರಿಗೆ ಇದನ್ನು ಅನುಸರಿಸಿ, ವಿಸ್ತರಿಸಿ ಎನ್ನುವುದು ಒಂದು ಎರಡನೆಯದು ಈ ಆತ್ಮಹತ್ಯೆ ಪ್ರಕರಣಗಳನ್ನು ಮರುಪರಿಶೀಲನೆ ಮಾಡುತ್ತೀರಾ ಎಂದು ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಲಿಲ್ಲ 700 ಚಿಲ್ಲರೆ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ, 200 ಚಿಲ್ಲರೆ ಜನರಿಗೆ ಮಾತ್ರ ಪರಿಹಾರ ಕೊಟ್ಟಿದ್ದೀರಿ ಉಳಿದಿರುವವರ ಬಗ್ಗೆ ಮರುಪರಿಶೀಲನೆ ಮಾಡುತ್ತೀರಾ?

**ಶ್ರೀ ಹೆಚ್ ಎಂ ವಿಶ್ವನಾಥ್** ವಿರೋಧ ಪಕ್ಷದ ನಾಯಕರು ಎತ್ತಿದ ವಿಚಾರಕ್ಕೆ ಅವರಿಗೆ ಅನುಕೂಲವಾಗಲಿ ಎಂದು ಒಂದು ವಿಷಯ ಹೇಳುತ್ತಿದ್ದೇನೆ ಅಪ್ಪ ಕೃಷಿ ಗೋಸ್ಕರ ಸಾಲ ಮಾಡಿದ್ದನ್ನು ನೋಡಿ ಮಗ ಆತ್ಮಹತ್ಯೆ ಮಾಡಿಕೊಂಡು ಸತ್ತರೆ ಅದಕ್ಕೆ ಪರಿಹಾರವಿಲ್ಲವೆಂದು ಎಪಿಎಂಸಿಯವರು ರಿಜೆಕ್ಟ್ ಮಾಡುತ್ತಿದ್ದಾರೆ ಸಕಲೇಶಪುರದಲ್ಲಿ ಶ್ರೀ ನಾಗರಾಜ್ ಎನ್ನುವವನು ಒಬ್ಬ ಸತ್ತು ಹೋಗಿದ್ದಾನೆ "ಮೃತನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಅವನ ಹೆಸರಿನಲ್ಲಿ ಯಾವುದೇ ಬೆಳೆ ಸಾಲ ಇಲ್ಲ ಈ ಆತ್ಮಹತ್ಯೆ ಸಾಲದ ಬಾಧೆಯಿಂದ ಆಗಿದೆ ಎಂದು ದೃಢಪಡದ ಕಾರಣ ಪ್ರಕರಣವನ್ನು ತಿರಸ್ಕರಿಸಲಾಗಿದೆ" ಎಂದು ಎಸಿಯವರು ರಿಪೋರ್ಟ್ ಕೊಡುತ್ತಾರೆ ಅವನು ಸಾಲಗಾರ, ಅವನ ಖಾತೆಯಲ್ಲಿ ಅವನ ಪಾಲು ಬಂದಿದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಅವರು ಹೇಳುವುದು ಇಷ್ಟೇ, ಯಾರೋ ಒಬ್ಬ ರೈತನ ತಂದೆ ಸಾಲ ಮಾಡಿದ್ದಾನೆ ಮಗ ಆ ಪರಿಸ್ಥಿತಿಯನ್ನು ನೋಡಲಾರನೆ, ಮನೆಯ ಪರಿಸ್ಥಿತಿ ನೋಡಲಾರದೆ ಆತ್ಮಹತ್ಯೆ ಮಾಡಿಕೊಂಡ ವರದಿ ಕೊಡುವ ಸಂದರ್ಭದಲ್ಲಿ ಅಸಿಸ್ಟೆಂಟ್ ಕಮಿಷನರ್‌ರವರು ಏನು ವರದಿ ಕೊಟ್ಟರು, ಮಗನ ಹೆಸರಿನಲ್ಲಿ ಸಾಲ ಇಲ್ಲ ಆದ್ದರಿಂದ ಇವನಿಗೆ ಪರಿಹಾರ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ ಒಂದೇ ಕುಟುಂಬದಲ್ಲಿದ್ದಾರೆ ಅಪ್ಪ ಮಾಡಿದ ಸಾಲ ತೀರಿಸುವುದಕ್ಕಾಗಲಿಲ್ಲ ಎಂದು ಮಗ ಆತ್ಮಹತ್ಯೆ ಮಾಡಿಕೊಂಡ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಂತಹ ಪ್ರಕರಣಗಳಿವೆ ಹಾವೇರಿ ಜಿಲ್ಲೆಯಲ್ಲಿ ಮೊನ್ನೆ ನಾನು ಹೋಗಿ ಎರಡು ಕುಟುಂಬಗಳನ್ನು ಕಣ್ಣಾರೆ ನೋಡಿಕೊಂಡು ಬಂದಿದ್ದೇನೆ ಈ ಹಿನ್ನೆಲೆಯಲ್ಲಿ ನಿಮ್ಮ ಅಸಿಸ್ಟೆಂಟ್ ಕಮಿಷನರ್‌ಗೆ ತಲೆ ಇದೆಯಾ? ಬುದ್ಧಿ ಇದೆಯಾ? ಏನೆಂದು ನೀವು ಹೇಳಿದ್ದೀರಿ? ಅವನೇ ಸಾಲ ತೆಗೆದುಕೊಂಡಿರಬೇಕು, ಅವನೇ ನೇಣು ಹಾಕಿಕೊಳ್ಳಬೇಕು ಮನೆಯವರು ನೇಣು ಹಾಕಿಕೊಂಡು ಸಂಬಂಧವಿಲ್ಲವೆಂದು ಹೇಳಿದ್ದೀರೋ ಕುಟುಂಬದಲ್ಲಿ ಈ ಪರಿಸ್ಥಿತಿಯಲ್ಲಿ ಯಾರೇ ನೇಣು ಹಾಕಿಕೊಂಡರೂ ಕೊಡಬೇಕು ಎಂದು ಇದ್ದರೂ ಏನ್ ಸ್ವಾಮಿ ಹೀಗೆ? ನಿಮ್ಮ ನಿರ್ದೇಶನ ಏನು ಎಂಬುದನ್ನಾದರೂ ಹೇಳಿ ನಾವ್ ಹೇಳಿಬಿಡುತ್ತೇವೆ ಇನ್ನು ಮೇಲೆ ಆತ್ಮಹತ್ಯೆ ಮಾಡಿಕೊಳ್ಳುವುದಾದರೆ ನಿಮ್ಮಪ್ಪ ಸಾಲ ಮಾಡಿದ್ದರೆ ಅವನನ್ನೇ ನೇಣು ಹಾಕಿ, ಮಗ ಸಾಲ ತೆಗೆದುಕೊಂಡಿದ್ದರೆ ಮಗನನ್ನೇ ನೇಣು ಹಾಕಿ ಎಂದು ಬೇಕಾದರೆ ಹೇಳೋಣ ನಿಮ್ಮ ಕಾನೂನು ಅದೇ ಆದರೆ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವನಾಥ್‌ರವರು ಕೇಳಿರುವಂಥ ವಿಷಯ ಬಹಳ ಗಂಭೀರವಾದುದೇ ಆಗಿದೆ. ತಂದೆ ಸಾಲ ಮಾಡಿದ್ದು ಮಗನಿಗೆ ಬರುವುದಿಲ್ಲವೆಂದು ಹೇಳಲು ಬರುವುದಿಲ್ಲ ನಮ್ಮ ಕಾನೂನಿನ ಪ್ರಕಾರ ಮಗನಿಗೂ ಬರುತ್ತದೆ ಅದನ್ನು ಪರಿಶೀಲನೆ ಮಾಡಿ ಆ ರೀತಿ ಆಗಿರುವುದಕ್ಕೂ ಕೂಡ ಆತ್ಮಹತ್ಯೆ ಮಾಡಿಕೊಂಡಿದ್ದರೆ ಅವರ ಕುಟುಂಬದವರಿಗೆ ಹಣವನ್ನು ಕೊಡುವಂಥ ಕೆಲಸವನ್ನು ನಾವು ಮಾಡುತ್ತೇವೆ.

**ಶ್ರೀ ಆರ್ ಅಶೋಕ್** ಈ ರೀತಿಯಲ್ಲಿ ಬೇಜವಾಬ್ದಾರಿತನದಲ್ಲಿ ಅಧಿಕಾರಿಗಳು ನಡೆದುಕೊಳ್ಳುತ್ತಾರಲ್ಲಾ ಅಂಥವರ ಬಗ್ಗೆ ಕ್ರಮ ತೆಗೆದುಕೊಳ್ಳಲು ತಾವು ಯೋಚನೆ ಮಾಡಬೇಕು

**ಶ್ರೀ ಕೆ ಶ್ರೀನಿವಾಸಗೌಡ** : ಅಧಿಕಾರಿಗಳ ಮೇಲೆ ನೇರವಾಗಿ ಆಪಾದನೆ ಮಾಡುವುದಕ್ಕಾಗುವುದಿಲ್ಲ ನಾವು ಕಾನೂನು ಮಾಡಿ ಅದನ್ನು ಇಂಪ್ಲಿಮೆಂಟ್ ಮಾಡಿ ಎಂದು ಹೇಳುತ್ತೇವೆ ಅದನ್ನು ಇಂಪ್ಲಿಮೆಂಟ್ ಮಾಡುತ್ತಾರೆ ಈಗ ನಾವು ಕಾನೂನನ್ನು ಬೇರೆ ರೀತಿ ಮಾಡಿದರೆ ಅದೇ ಪ್ರಕಾರ ಅವರು ಇಂಪ್ಲಿಮೆಂಟ್ ಮಾಡುತ್ತಾರೆ

**ಶ್ರೀ ಅರಗ ಜ್ಞಾನೇಂದ್ರ** ಅದೇನು ಬೇರೆ ರೀತಿ ಮಾಡಿದ್ದೀರಿ. ಅದರ ನಕಲು ಪ್ರತಿಯನ್ನು ಎಲ್ಲಾ ಶಾಸಕರಿಗೂ ಕಳುಹಿಸಿಕೊಡಿ ನಾರ್ಮ್ಸ್ ಏನು ಎಂದು ನಾವೂ ಕೂಡ ನೋಡಬೇಕಾಗುತ್ತದೆ

## ರೈತರು ಪಡೆದ ಬೆಳೆ ವಿಮೆ ಹಣ

104(552) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2002–03 ಸಾಲಿನ ಹಿಂಗಾರು ಹಾಗೂ 2003–04ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಸಾಲುಗಳಲ್ಲಿ ರಾಜ್ಯದ ಎಷ್ಟು ಜನ ರೈತರು ಪಡೆದ ಬೆಳೆ ವಿಮೆ ಹಣ ಎಷ್ಟು ಜಿಲ್ಲಾವಾರು ವಿವರ ನೀಡುವುದು

ಆ) ರೈತರು ಪಡೆದ ಬೆಳೆ ವಿಮೆ ಮೇಲೆ ಸರ್ಕಾರ ಇಲ್ಲಿಯವರೆಗೆ ನಿರ್ಧರಿಸಲಾದ ನಷ್ಟ ಹಾಗೂ ಪರಿಹಾರ ಹಣ ಎಷ್ಟು ಇದರಲ್ಲಿ ಇಲ್ಲಿಯವರೆಗೆ ಎಷ್ಟು ನಷ್ಟ ಪರಿಹಾರ ಹಣ ನೀಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು).

ಇ) ಸರಿಯಾದ ಸಮಯಕ್ಕೆ ಬೆಳೆವಿಮೆ ನಷ್ಟ ಪರಿಹಾರ ಹಣ ನೀಡದೆ ಇರುವುದರಿಂದ ರೈತರು ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಈ) ಬಂದಿದ್ದಲ್ಲಿ, ಬೆಳೆ ವಿಮೆ ಹಣ ಬಿಡುಗಡೆ ಯಾವಾಗ ಮಾಡಲಾಗುವುದು (ವಿವರ ನೀಡುವುದು)

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) :

ಅ) 2002–03ನೇ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಒಟ್ಟು 140954 ರೈತರು ಭಾಗವಹಿಸಿದ್ದು, ತನಿಖೆಗೆ ಒಳಪಡದ ಜಿಲ್ಲೆಗಳ 36531 ರೈತರ ಬೆಳೆ ವಿಮಾ ನಷ್ಟ ಪರಿಹಾರವಾದ ರೂ 5 92 ಕೋಟಿಗಳನ್ನು ಇತ್ಯರ್ಥಪಡಿಸಲಾಗಿದೆ 2002–03ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ 3 ಜಿಲ್ಲೆಗಳಾದ ಹಾಸನ, ಹಾವೇರಿ ಮತ್ತು ಗದಗ ಇವುಗಳಲ್ಲಿ ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ತನಿಖೆ ತೆಗೆದುಕೊಂಡಿದ್ದು, ತನಿಖೆಯು ಪೂರ್ಣ ಗೊಂಡಿರುತ್ತದೆ ತನಿಖೆಯು ಪೂರ್ಣಗೊಂಡ ನಂತರ ಈ ಜಿಲ್ಲೆಗಳ ಒಟ್ಟು ಬೆಳೆ ವಿಮಾ ನಷ್ಟ ಪರಿಹಾರ ರೂ 17 02 ಕೋಟಿಗಳನ್ನು ಇತ್ಯರ್ಥಪಡಿಸಬೇಕಾಗಿದೆ

2003ರ ಮುಂಗಾರು ಹಂಗಾಮಿನಲ್ಲಿ ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು 7 ಬೆಳೆಗಳಾದ ಭತ್ತ, ಮುಸುಕಿನ ಜೋಳ, ಜೋಳ, ರಾಗಿ, ನೆಲಗಡಲೆ (ಶೇಂಗಾ), ಆಲೂಗಡ್ಡೆ ಮತ್ತು ಈರುಳ್ಳಿ ಇವುಗಳ ಮೇಲೆ ತನಿಖೆ ತೆಗೆದುಕೊಂಡಿದ್ದು, ತನಿಖೆಯು ಪೂರ್ಣಗೊಂಡಿರುತ್ತದೆ ತನಿಖೆಯು ಪೂರ್ಣಗೊಂಡ ನಂತರ 2003ರ ಮುಂಗಾರು ಹಂಗಾಮಿನ ಒಟ್ಟು ಬೆಳೆ ವಿಮಾ ನಷ್ಟ ಪರಿಹಾರ ರೂ. 276 91 ಕೋಟಿಗಳನ್ನು ರೈತರಿಗೆ ಇತ್ಯರ್ಥ ಪಡಿಸಬೇಕಾಗಿದೆ 2002–03ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಇತ್ಯರ್ಥ ಪಡಿಸಲಾದ ಬೆಳೆ ವಿಮಾ ನಷ್ಟ ಪರಿಹಾರದ ಜಿಲ್ಲಾವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ 2002–03ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಹಾಗೂ 2003ರ ಮುಂಗಾರು ಹಂಗಾಮಿನ ಇತ್ಯರ್ಥಪಡಿಸಬೇಕಾದ ಬೆಳೆ ವಿಮಾ ನಷ್ಟ ಪರಿಹಾರದ ಜಿಲ್ಲಾವಾರು ವಿವರಗಳು ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಿದ ನಂತರ ಲಭ್ಯವಾಗುತ್ತದೆ

2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ಕಟಾವು ಆಧಾರದ ಮೇಲೆ ಕಂಡು ಹಿಡಿಯಲಾದ ಇಳುವರಿ ಮಾಹಿತಿಯು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಜುಲೈ 2004ರ ಅಂತ್ಯದೊಳಗೆ ವಿಮಾ ಸಂಸ್ಥೆಗೆ ಕಳುಹಿಸಿಕೊಡಬೇಕಾಗಿದೆ ನಂತರ ವಿಮಾ ಸಂಸ್ಥೆಯು ಈ ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕ ಹಾಕಿ ರಾಜ್ಯ ಸರ್ಕಾರದ ಪಾಲನ್ನು ತಿಳಿಸುತ್ತದೆ

ಆ) ಯೋಜನೆ ಪ್ರಾರಂಭವಾದಾಗಿನಿಂದ 2002–03ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನವರೆಗೂ ಬೆಳೆ ವಿಮಾ ನಷ್ಟ ಪರಿಹಾರ ರೂ 434 39 ಕೋಟಿಗಳೆಂದು ನಿರ್ಧರಿಸಿ, ಇದುವರೆವಿಗೂ ರೂ 417 37 ಕೋಟಿಗಳನ್ನು 9,16,929 ರೈತರಿಗೆ ಇತ್ಯರ್ಥಪಡಿಸಲಾಗಿದೆ ಇದುವರೆವಿಗೂ ಇತ್ಯರ್ಥಪಡಿಸಲಾದ ಬೆಳೆ ವಿಮಾ ನಷ್ಟ ಪರಿಹಾರದ ಜಿಲ್ಲಾವಾರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ

ಇ) 2002–03ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 3 ಜಿಲ್ಲೆಗಳಲ್ಲಿ ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು ತನಿಖೆಗೆ ಒಳಪಡಿಸಿದ ಪ್ರಯುಕ್ತ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರದ ಹಣವನ್ನು ಇತ್ಯರ್ಥಪಡಿಸುವುದು ತಡವಾಗಿರುತ್ತದೆ. 2003ರ ಮುಂಗಾರು ಹಂಗಾಮಿನಲ್ಲಿ ಜಮೀನುಗಳಲ್ಲಿ ಬೆಳೆ ಇದ್ದಾಗಲೇ ತನಿಖೆ ಕೈಗೊಂಡ ಪ್ರಯುಕ್ತ ಬೆಳೆ ವಿಮಾ ನಷ್ಟ ಪರಿಹಾರ ವಿತರಿಸುವುದು ತಡವಾಗುವುದಿಲ್ಲ

ಈ) 2004–05ನೇ ಸಾಲಿನ ಆಯವ್ಯಯದಲ್ಲಿ ರೂ 241 00 ಕೋಟಿಗಳನ್ನು ನಿಗದಿಪಡಿಸಿದ್ದು, ಶೀಘ್ರದಲ್ಲೆ ರಾಜ್ಯ ಸರ್ಕಾರದ ಪಾಲನ್ನು ಬಿಡುಗಡೆ ಮಾಡಿ 2002–03ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಉಳಿದ ಬೆಳೆ ವಿಮಾ ನಷ್ಟ ಪರಿಹಾರವನ್ನು ಹಾಗೂ 2003ರ ಮುಂಗಾರು ಹಂಗಾಮಿನ ಪೂರ್ಣ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುವುದು

## ಅನುಬಂಧ–1

### 2002–03ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಪಾಲ್ಗೊಂಡ ರೈತರ ಸಂಖ್ಯೆ ಇದುವರೆವಿಗೂ ಇತ್ಯರ್ಥಪಡಿಸಲಾದ ಬೆಳೆ ವಿಮಾ ನಷ್ಟ ಪರಿಹಾರ ಹಾಗೂ ಫಲಾನುಭವಿಗಳ ಸಂಖ್ಯೆ

| ಕ್ರ ಸಂ. | ಜಿಲ್ಲಾ ಹೆಸರು | 2002–03 ಹಿಂಗಾರು ಮತ್ತು ಬೇಸಿಗೆ ಪಾಲ್ಗೊಂಡ ರೈತರ ಸಂಖ್ಯೆ | ಫಲಾನುಭವಿ ರೈತರ ಸಂಖ್ಯೆ | ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ) |
|---|---|---|---|---|
| 1 | ಬೆಂಗಳೂರು | 51 | 0 | 0 00 |
| 2 | ಬೆಳಗಾವಿ | 19782 | 13[illegible]8 | 152 45 |

| 1 | 2 | 3 | 4 | 5 |
|---|---|---|---|---|
| 3 | ಬಳ್ಳಾರಿ | 1577 | 939 | 21 17 |
| 4 | ಬೀದರ್ | 397 | 2 | 0 00 |
| 5 | ಬಿಜಾಪುರ | 1215 | 19 | 1 27 |
| 6 | ಚಿಕ್ಕಮಗಳೂರು | 0 | 0 | 0 00 |
| 7 | ಚಿತ್ರದುರ್ಗ | 539 | 40 | 0 53 |
| 8 | ದಕ್ಷಿಣ ಕನ್ನಡ | 12 | 7 | 0 07 |
| 9 | ಧಾರವಾಡ | 3472 | 1601 | 35 00 |
| 10 | ಗುಲಬರ್ಗಾ | 3878 | 105 | 0 17 |
| 11 | ಹಾಸನ | 16123 | 0 | 0 00 |
| 12 | ಕೋಲಾರ | 3055 | 3013 | 67 19 |
| 13 | ಮಂಡ್ಯ | 2130 | 2130 | 40 29 |
| 14 | ಮೈಸೂರು | 10449 | 10005 | 26 09 |
| 15 | ರಾಯಚೂರು | 2051 | 328 | 21 60 |
| 16 | ಶಿವಮೊಗ್ಗ | 258 | 22 | 0 35 |
| 17 | ತುಮಕೂರು | 89 | 38 | 1 05 |
| 18 | ಉತ್ತರ ಕನ್ನಡ | 0 | 0 | 0 00 |
| 19 | ಕೊಡಗು | 0 | 0 | 0 00 |
| 20 | ಕೊಪ್ಪಳ | 3915 | 1705 | 79.69 |
| 21 | ಚಾಮರಾಜನಗರ | 12376 | 33 | 0 23 |
| 22 | ದಾವಣಗೆರೆ | 3656 | 2603 | 95 02 |
| 23 | ಬಾಗಲಕೋಟೆ | 465 | 59 | 1 22 |
| 24 | ಗದಗ | 43104 | 647 | 46 39 |
| 25 | ಹಾವೇರಿ | 12358 | 77 | 2 40 |
| 26 | ಉಡುಪಿ | 2 | 0 | 0 00 |
| | ಒಟ್ಟು | 140954 | 36531 | 592 18 |

## ಅನುಬಂಧ-2

### ಬೆಳೆ ವಿಮಾ ಯೋಜನೆಯಡಿಯಲ್ಲಿ 2000-01 ರಿಂದ 2002-03ರವರೆಗೆ ವಾರ್ಷಿಕವಾರು, ಜಿಲ್ಲಾವಾರು, ಪಾಲ್ಗೊಂಡ ರೈತರ, ಫಲಾನುಭವಿ ರೈತರ ಮತ್ತು ಇತ್ಯರ್ಥ ಪಡಿಸಲಾದ ಬೆಳೆ ವಿಮಾ ನಷ್ಟ ಪರಿಹಾರದ ವಿವರ

| ಕ್ರ ಸಂ. | ಜಿಲ್ಲೆಯ ಹೆಸರು 1 | 2000-01 | | | 2001-02 | | |
|---|---|---|---|---|---|---|---|
| | | ಪಾಲ್ಗೊಂಡ ರೈತರ ಸಂಖ್ಯೆ | ಫಲಾನುಭವಿ ರೈತರ ಸಂಖ್ಯೆ | ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ) | ಪಾಲ್ಗೊಂಡ ರೈತರ ಸಂಖ್ಯೆ | ಫಲಾನುಭವಿ ರೈತರ ಸಂಖ್ಯೆ | ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ) |
| 1 | ವೆಂಗಳೂರು | 131 | 0 | 0 00 | 177 | 0 | 0 14 |
| | ವೆಳಗಾವಿ | 6786 | 1031 | 2.38 | 41215 | 25210 | 343 15 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 3 | ಬಳ್ಳಾರಿ | 11240 | 123 | 0 94 | 10396 | 644 | 7 40 |
| 4 | ಬೀದರ್ | 28693 | 9311 | 154 19 | 132270 | 29105 | 255.01 |
| 5 | ಬಿಜಾಪುರ | 33923 | 27 | 0 27 | 18726 | 567 | 1 71 |
| 6 | ಚಿಕ್ಕಮಗಳೂರು | 5480 | 68 | 0 38 | 5061 | 5061 | 2230 |
| 7 | ಚಿತ್ರದುರ್ಗ | 6356 | 872 | 3.38 | 3.38 | 12060 | 4576 |
| 8 | ದಕ್ಷಿಣ ಕನ್ನಡ | 1142 | 307 | 0 91 | 0 91 | 722 | 1 |
| 9 | ಧಾರವಾಡ | 7248 | 0 | 0 00 | 0 00 | 37693 | 37755 |
| 10 | ಗುಲಬರ್ಗಾ | 69365 | 3791 | 24 88 | 24.88 | 116658 | 55062 |
| 11 | ಹಾಸನ | 936 | 341 | 3.68 | 3.68 | 5642 | 3735 |
| 12 | ಕೋಲಾರ | 2785 | 0 | 0 00 | 0 00 | 7988 | 6832 |
| 13 | ಮಂಡ್ಯ | 4159 | 458 | 1.61 | 1.61 | 5940 | 198 |
| 14 | ಮೈಸೂರು | 7217 | 0 | 0 00 | 0 00 | 13181 | 5394 |
| 15 | ರಾಯಚೂರು | 17509 | 442 | 8.86 | 8.86 | 17231 | 3309 |
| 16 | ಶಿವಮೊಗ್ಗ | 26580 | 84 | 0 65 | 0.65 | 35864 | 31226 |
| 17 | ತುಮಕೂರು | 3025 | 195 | 1 75 | 1 75 | 14522 | 11594 |
| 18 | ಉತ್ತರ ಕನ್ನಡ | 28369 | 5013 | 11 26 | 11 26 | 39103 | 32482 |
| 19 | ಕೊಡಗು | 10722 | 0 | 0 00 | 0 00 | 9121 | 0 |
| 20 | ಕೊಪ್ಪಳ | 12638 | 4 | 0 03 | 0 03 | 13378 | 1253 |
| 21 | ಚಾಮರಾಜನಗರ | 421 | 0 | 0 00 | 0 00 | 20036 | 16422 |
| 22 | ದಾವಣಗೆರೆ | 23949 | 22 | 0 47 | 0 47 | 28192 | 8060 |
| 23 | ಬಾಗಲಕೋಟೆ | 17170 | 131 | 0 59 | 0 59 | 5978 | 1997 |
| 24 | [illegible] | 14683 | 446 | 110 72 | 110 72 | 39855 | 33059 |
| 25 | ಹಾವೇರಿ | 36143 | 0 | 0 00 | 0 00 | 44473 | 39895 |
| 26 | ಉಡುಪಿ | 1309 | 0 | 0 00 | 0 00 | 1053 | 0 |
| | ಒಟ್ಟು | 367979 | 22666 | 326 95 | 326 95 | 676535 | 350606 |

| 2002–03 | | | ಮಹಾ ಮೊತ್ತ | | |
|---|---|---|---|---|---|
| ಪಾಲ್ಗೊಂಡ ರೈತರ ಸಂಖ್ಯೆ | ಫಲಾನುಭವಿ ರೈತರ ಸಂಖ್ಯೆ | ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷರೂ) | ಪಾಲ್ಗೊಂಡ ರೈತರ ಸಂಖ್ಯೆ | ಫಲಾನುಭವಿ ರೈತರ ಸಂಖ್ಯೆ | ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ) |
| 1012 | 180 | 5 84 | 1320 | 180 | 5 98 |
| 112526 | 83117 | 2787 31 | 160527 | 109358 | 3132 84 |
| 9793 | 3543 | 105 93 | 31429 | 4310 | 114 27 |
| 123007 | 40652 | 539.54 | 283970 | 79068 | 948 74 |

| 1 | 2 | 3 | 4 | 5 | 6 |
|---|---|---|---|---|---|
| 59084 | 10857 | 236 52 | 111733 | 11451 | 238 50 |
| 18100 | 15848 | 224 79 | 28641 | 18146 | 251 38 |
| 9811 | 4357 | 193 95 | 28227 | 9805 | 320 89 |
| 764 | 106 | 35 61 | 2628 | 414 | 36 52 |
| 21990 | 14830 | 1072 53 | 66931 | 52585 | 2477 92 |
| 86980 | 12685 | 325 64 | 273003 | 71538 | 2460 79 |
| 90659 | 56732 | 5016 04 | 97237 | 60808 | 5046 59 |
| 15667 | 13273 | 442 51 | 26440 | 20105 | 668 22 |
| 5036 | 2456 | 29 86 | 15135 | 3112 | 33.30 |
| 29811 | 20643 | 193 49 | 50209 | 26037 | 247 85 |
| 25515 | 6353 | 289 21 | 60255 | 10104 | 352 39 |
| 53949 | 42594 | 2098 28 | 116393 | 73904 | 3857 21 |
| 21750 | 13372 | 445 88 | 39297 | 25161 | 1350 07 |
| 37215 | 26685 | 1870 59 | 104687 | 64180 | 3872 48 |
| 7751 | 4604 | 170 1 | 27594 | 4604 | 170 10 |
| 16170 | 3788 | 104 01 | 42186 | 5045 | 120.28 |
| 36647 | 21614 | 680 86 | 57104 | 38036 | 957 86 |
| 32624 | 24304 | 1048 87 | 84765 | 32386 | 1307 10 |
| 26995 | 6059 | 242.4 | 50143 | 8187 | 245 09 |
| 78252 | 31081 | 2084 52 | 132790 | 64586 | 3215 59 |
| 107740 | 83924 | 7553.53 | 178356 | 123819 | 10305 11 |
| 906 | 0 | 0 | 3268 | 0 | 0 00 |
| **1029754** | **543657** | **27797.81** | **2074268** | **916929** | **41737 07** |

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಮೊದಲಿನಿಂದಲೂ ನಾವು ರೈತರ ಪರವಾಗಿ ಇದ್ದೇವೆ ಎಂದು ಮಾನ್ಯ ಶ್ರೀನಿವಾಸಗೌಡರು ಹೇಳುತ್ತಲೇ ಬಂದಿದ್ದರು ರೈತರ ಪರವಾಗಿ ಹಿಂದೆಯೂ ಇದ್ದೆ, ಈಗಲೂ ಇದ್ದೇನೆ ಹಾಗೆಯೇ ಮುಂದೆಯೂ ಇರುತ್ತೇನೆ ಎಂದಿದ್ದರು ಆದರೆ ಇವರ ಉತ್ತರ ನೋಡಿದರೆ ರೈತರಿಗೆ ಮೋಸ ಮಾಡುವಂಥ ಉತ್ತರವನ್ನು ಕೊಟ್ಟಿದ್ದಾರೆ ನಾವು ಕೇಳಿದಂಥ ಪ್ರಶ್ನೆ ಬಹಳ ಕ್ಲಿಯರ್ ಇದೆ. 2002–2003ನೇ ಸಾಲಿನ ಹಿಂಗಾರು ಬೆಳೆ ವಿಮೆ ಪರಿಹಾರದ ಹಣ ಬಿಡುಗಡೆ ಆಗಲಿಲ್ಲ ಅದೇ ರೀತಿ 2003–2004 ನೇ ಸಾಲಿನಲ್ಲಿ ಮುಂಗಾರು ಹಾಗೂ ಹಿಂಗಾರು ಬೆಳೆ ವಿಮೆ ಹಣ ಇವೊತ್ತಿಗೂ ಬಿಡುಗಡೆ ಆಗಲಿಲ್ಲ ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದರೆ ಇವರ ಉತ್ತರ ಕೇವಲ 2002–2003ನೇ ಇಸವಿ ಬಗ್ಗೆ ತಿಳಿಸಿ ಹಿಂಗಾರು ಬೆಳೆ ವಿಮೆ 5 ಕೋಟಿ 92 ಲಕ್ಷ ರೂಪಾಯಿಗಳನ್ನು ಬಿಡುಗಡೆದ ಮಾಡಲಾಗಿದೆ ಎಂದು ಇಷ್ಟೇ ಹೇಳಿದ್ದೀರಿ. ಆದರೆ ಉತ್ತರದಲ್ಲಿ ಮುಂದುವರಿದು

ಮೂರು ಜಿಲ್ಲೆಗಳಾದ ಹಾಸನ, ಹಾವೇರಿ ಮತ್ತು ಗದಗ್‌ನಲ್ಲಿ ಭಾರತೀಯ ಕೃಷಿ ವಿಮಾ ಕಂಪನಿಯವರು ತನಿಖೆಯನ್ನು ಕೈಗೊಂಡಿದ್ದು ಆ ತನಿಖೆ ಇನ್ನೂ ಪೂರ್ಣಗೊಂಡಿಲ್ಲ ಅದರ ಸಲುವಾಗಿ ಇನ್ನೂ 17 ಕೋಟಿ ರೂಪಾಯಿಗಳು ಕೊಡಬೇಕಾದ ಬಾಕಿ ಇದೆ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ ಈ ತನಿಖೆ ಏಕೆ ಆಗುತ್ತಿದೆ? 2002–2003ನೇ ಸಾಲಿನದು ಇದು ಇಲ್ಲಿಯವರೆಗೆ ತನಿಖೆ ಮುಗಿಯದಿರಲು ಕಾರಣವೇನು? ಹೀಗಾದರೆ ಆ ಮೂರು ಜಿಲ್ಲೆಯ ರೈತರ ಗತಿಯೇನು? ಹೀಗಾಗಿ ಈ ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಟ್ಟು ಏಕೆ ತನಿಖೆಯಾಗುತ್ತಿದೆ ಎಂಬುದನ್ನು ಹೇಳಬೇಕು ಇನ್ನೊಂದು ಅಂಶವೆಂದರೆ ನಾನು ಕೇಳಿದ್ದು 2003–2004ನೇ ಸಾಲಿಗೆ ಸಂಬಂಧಪಟ್ಟಂತೆ ಹಿಂಗಾರು ಮತ್ತು ಮುಂಗಾರು ಬೆಳೆ ವಿಮೆ ಪ್ರಶ್ನೆ, ಸರ್ವೆ ಆಗಿದೆಯೇ, ಇಲ್ಲವೋ ಸರ್ವೆ ಆದಮೇಲಿ ಇವೊತ್ತಿನವರೆಗೆ ರೈತರಿಗೆ ಎಷ್ಟು ಕ್ಲೈಮ್ ಸೆಟ್ಲ್ ಮಾಡಿದ್ದೀರಿ? 2003–2004ನೇ ಸಾಲಿಗೆ ಹಿಂಗಾರು ಮತ್ತು ಮುಂಗಾರು ಬೆಳೆ ವಿಮ ಬಗ್ಗೆ ಯಾವ ಉತ್ತರವನ್ನೂ ಕೊಟ್ಟಿಲ್ಲ ಕೊನೆಯಲ್ಲಿ ನೀವು ಜಿಲ್ಲಾವಾರು ವಿವರ ಕೊಟ್ಟು 2000–2001, 2001–2002ರ ಬಗ್ಗೆ ಹೇಳಿದ್ದೀರಿ ಆದರೆ, ಈ ವಿವರವನ್ನು ನಾವು ಕೇಳಿಯೇ ಇಲ್ಲ ನಾನು ಯಾವುದನ್ನು ಕೇಳಿದ್ದೇನೆ ಅದಕ್ಕೆ ಉತ್ತರವೇ ಇಲ್ಲ 2003–2004ಕ್ಕೆ ಉತ್ತರವೇ ಇಲ್ಲ ಆದರೆ ನೀವೇನು ಕೊನೆಯಲ್ಲಿ ಹೇಳಿದ್ದೀರೆಂದರೆ 2002, 2003, 2004 ಹಿಂಗಾರು ಮತ್ತು ಬೇಸಿಗೆ ಹಂಗಾಮಿ ಬೆಳೆ ಕಟಾವು ಆಧಾರದ ಮೇಲೆ ಕಂಡುಹಿಡಿಯಲಾದ ಇಳುವರಿ ಮಾಹಿತಿಯು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಜುಲೈ 2004ರ ಅಂತ್ಯದೊಳಗಾಗಿ ವಿಮಾ ಸೂಚನೆಯನ್ನು ಕಳುಹಿಸಿಕೊಡಬೇಕಾಗಿದೆ ಇನ್ನೂ ಪೆಂಡಿಂಗ್‌ನಲ್ಲಿಯೇ ಇದೆ ಜುಲೈ ಅಂತ್ಯದೊಳಗೆ ಎಂದು ಹೇಳುತ್ತಿದ್ದೀರಿ ಇಷ್ಟರೊಳಗೆ ಆಗಿಬಿಡಬೇಕಾಗಿತ್ತು ಇನ್ನು ಮತ್ತೆ ಹೊಸದಾಗಿ ಬೆಳೆ ವಿಮಾ ಹಣ ತುಂಬುವ ಕಾರ್ಯ ಇದುವರೆಗೂ ಆಗಲಿಲ್ಲ ನೀವು ರೈತರ ಪರವಾಗಿ ಇದ್ದೇವೆ ಎಂದು ಹೇಳಿಕೊಳ್ಳುತ್ತೀರಿ ಬಹುಶಃ ನನಗನ್ನಿಸುತ್ತದೆ, ಹಿಂದೆ ಶ್ರೀ ಎಸ್ ಎಂ ಕೃಷ್ಣಾರವರ ಸರ್ಕಾರದಲ್ಲೂ ಪ್ರತಿ ಬಾರಿ ಪ್ರತಿಭಟನೆ ಆದಮೇಲೆಯೇ ಬೆಳೆ ವಿಮೆ ಹಣ ಬಿಡುಗಡೆಯಾಯಿತು ನೀವು ರೈತರ ಪರವಾಗಿದ್ದೇವೆ, ರೈತರ ಪರವಾಗಿದ್ದೇವೆ ಎಂದು ಹೇಳಿಕೊಳ್ಳುತ್ತಿದ್ದೀರಲ್ಲಾ, ಕಡೇ ಪಕ್ಷ ನೀವು ಬಂದ ತಕ್ಷಣದಲ್ಲಿಯೇ ಈ ಬೆಳೆ ವಿಮೆ ಹಣ ಬಿಡುಗಡೆಯಾಗುತ್ತದೆ ಎಂದು ತಿಳಿದು ಕೊಂಡಿದ್ದೆವು ಆದರೂ ಆಗಲಿಲ್ಲ ರೈತರ ದುರ್ದೈವ ಇನ್ನು ಎಷ್ಟು ಹಣ ಬಿಡುಗಡೆಯಾಗಬೇಕಾಗಿದೆ ಎಂಬ ಬಗ್ಗೆ ತಾವು ಸ್ಪಷ್ಟಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್ ಅವರು ಬೆಳೆ ವಿಮೆ ಹಣದ ಬಿಡುಗಡೆ ಬಗ್ಗೆ ಕೇಳಿದ್ದಾರೆ ಈಗಾಗಲೇ ಅವರಿಗೆ ಉತ್ತರಿಸಿರುವಂತೆ 2000–2001ನೇ ಸಾಲಿನಲ್ಲಿ 326 94 ಲಕ್ಷ ರೂಪಾಯಿಗಳನ್ನು ಪೂರ್ಣವಾಗಿ ಪಾವತಿಸಿದ್ದೇವೆ 2001–2002ರಲ್ಲಿ 13751 22 ಲಕ್ಷ ರೂಪಾಯಿಗಳನ್ನು ಪೂರ್ಣವಾಗಿ ಪಾವತಿಸಿದ್ದೇವೆ 2002ರಲ್ಲಿ 26824 ಲಕ್ಷ ರೂಪಾಯಿ ಪೂರ್ತಿ ಪಾವತಿಯಾಗಿದೆ 2002ರಲ್ಲಿ 5 ಕೋಟಿ 92 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಇನ್ನು 17 ಕೋಟಿ 2 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ 2002ರದ್ದು ಹಿಂಗಾರಿನದು ಇದು 2003ರ ಹಿಂಗಾರಿನಲ್ಲಿ 276 91 ಕೋಟಿ ರೂ ಗಳನ್ನು ಕೂಡ ಬೇಕಾಗಿದೆ ಅದರಲ್ಲಿ ನಮ್ಮ ಸ್ಟೇಟ್ ಶೇರ್ 122 7 ಕೋಟಿ ರೂ ಇದೆ ಅದನ್ನು ಮತ್ತು 2003ಕ್ಕೆ 120 ಕೋಟಿ ರೂ ಸ್ಟೇಟ್ ಶೇರ್ ಕೊಡಬೇಕಾಗುತ್ತದೆ ಮಾನ್ಯ ಆರ್ಥಿಕ ಸಚಿವರು ಹೋದ ಸಾರಿ ಬಜೆಟ್‌ನಲ್ಲಿ 241 ಕೋಟಿ ರೂಪಾಯಿಗಳನ್ನು ಇಟ್ಟಿದ್ದರಿಂದಾಗಿ ನೀವೆಲ್ಲರೂ ಮೊನ್ನೆ ತಾನೇ ಬಜೆಟ್‌ನ್ನು ಪಾಸ್ ಮಾಡಿಕೊಟ್ಟಿದ್ದೀರಿ ಅದು ಪ್ರೋಸಸ್ ಆಗುತ್ತಿದೆ ಆದಷ್ಟು ಬೇಗ ಅಂದರೆ ಸಾಧ್ಯವಾದರೆ ಆಗಸ್ಟ್ ಅಂತ್ಯದೊಳಗೆ ಅಥವಾ ಸೆಪ್ಟೆಂಬರ್ 15ನೇ

ತಾರೀಖಿನೊಳಗೆ ಹಣವನ್ನು ಕೊಡುವಂಥ ಪ್ರಯತ್ನವನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರೆ, ಈಗ ಹಣಕಾಸಿನ ಸಚಿವರು ಇಲ್ಲಿಯೇ ಇದ್ದಾರೆ ತಾವೇನು ಹೇಳುತ್ತಿದ್ದೀರಿ ಅಂದರೆ, 2002–2003ನೇ ಸಾಲಿನ ಬಗ್ಗೆ ಬೆಳೆ ವಿಮೆ ಪರಿಹಾರದ ಹಣ ಇನ್ನೂ 17 ಕೋಟಿ 2 ಲಕ್ಷ ರೂಪಾಯಿಗಳನ್ನು ಇನ್ನೂ ಕೊಡಬೇಕಾಗಿದೆ ತನಿಖೆ ನಡೆಯುತ್ತಿದೆ., ಅದು ಇತ್ಯರ್ಥಗೊಳ್ಳಬೇಕು ಎಂದು ಹೇಳಿದ್ದೀರಿ ಇದರ ಬಗ್ಗೆ ನಾವು ಯಾವಾಗ ಹೇಳಿದ್ದೆವು ಹೇಳಿ ಈಗ ಯಾವ ಇಸವಿಯಲ್ಲಿ ನಾವಿದ್ದೇವೆ ಹೇಳಿ ಏನಾದರೂ ಗೊಂದಲ ಇದ್ದರೆ ನಿಮ್ಮ ಕ್ರಾಪ್ ಕಟ್ಟಿಂಗ್ ಎಕ್ಸ್‌ಪೆರಿಮೆಂಟ್ ಎಲ್ಲಾ ಫೆಬ್ರವರಿಯೊಳಗೆ ಮುಗಿದ ಮೇಲೆ ಮಾರ್ಚ್ ಏಪ್ರಿಲ್‌ನಲ್ಲಿ ಅವನಿಗೆ ಬೆಳೆ ವಿಮೆ ಕೊಡಬೇಕಾಗಿದ್ದರೆ ಇವೊತ್ತಿಗೂ ಒಂದೂವರೆ ವರ್ಷವಾಗಿದ್ದರೂ ಇನ್ನೂ ಇತ್ಯರ್ಥಪಡಿಸುತ್ತಿದ್ದೇವೆ, ದಾಖಲೆಗಳನ್ನು ಇದಕ್ಕಾಗಿ ನೋಡುತ್ತಿದ್ದೇವೆ ಎಂದರೆ ಇನ್ನೂ ಯಾವ ರೀತಿಯಲ್ಲಿ ನಿಮಗೆ ಹೇಳಬೇಕು ಈಗಾಗಲೇ ನಿಮಗೆ 2003–2004ಕ್ಕೆ ಸಂಬಂಧಪಟ್ಟಂತೆ ಭಾರತೀಯ ಕೃಷಿ ವಿಮಾ ಕಂಪನಿ ನಿಮಗೆ ಪತ್ರವನ್ನು ಬರೆದಿದೆ ಕೇಂದ್ರದ ಪ್ರಶ್ನೆಯೇ ಇಲ್ಲ ಸ್ಟೇಟ್ಸ್ ಶೇರ್‌ನಿಂದ ಇಷ್ಟು ಹಣ ಕಳುಹಿಸಿಕೊಡಿ ಎಂದಿದ್ದಾರೆ ಆ ಪತ್ರದ ಕಾಪಿ ನನ್ನ ಹತ್ತಿರ ಇದೆ ಈ ಪತ್ರ ಬಂದು ಒಂದೂವರೆ ತಿಂಗಳ ಮೇಲಾಗಿದೆ ಈಗ ಈ ಹಣವನ್ನು ಇನ್ನೊಂದು ವಾರದೊಳಗಾಗಿ ಬಿಡುಗಡೆ ಮಾಡಿ ಈಗೇನು ನಿಮಗೆ ತೊಂದರೆ ಇದೆ? ಈಗಾಗಲೇ ನಿಮಗೆ ಬಜೆಟ್ ಪಾಸ್ ಮಾಡಿಕೊಟ್ಟಿದ್ದೇವೆ ರೈತರಿಗೆ ನ್ಯಾಯಬದ್ಧವಾಗಿ ಸಲ್ಲಬೇಕಾಗಿರುವ ಹಣವನ್ನು ನಾವು ತೆಗೆದಿಟ್ಟುಕೊಂಡಿದ್ದೇವೆ ಆದುದರಿಂದ ಇನ್ನೊಂದು ವಾರದೊಳಗೆ ಹಣ ಪಾವತಿ ಮಾಡುವುದಕ್ಕೆ ನಿಮಗೆ ಕಷ್ಟವೇನಿದೆ? ಈಗ ಸಿದ್ಧರಾಮಯ್ಯನವರೇ ಹಣಕಾಸಿನ ಸಚಿವರಾಗಿರುವುದರಿಂದ ರೈತರ ಹಿತದೃಷ್ಟಿಯಿಂದ ದಯಮಾಡಿ 2002–2003ನೇ ಸಾಲಿಗೆ ಬಾಕಿ ಏನಿದೆ ಅದನ್ನು ಸರಿಪಡಿಸಬೇಕು ದಾಖಲೆಗಳೆಲ್ಲವೂ ಇರುವುದರಿಂದ ಅದನ್ನು ತಕ್ಷಣ ಕೊಡುವಂಥ ಕೆಲಸವಾಗಬೇಕು ಇನ್ನು 2003–2004ನೇ ಸಾಲಿಗೆ ಹಣವನ್ನು ಇನ್ನು ನಾಲ್ಕೈದು ದಿವಸದಲ್ಲಿ ಅಥವಾ ಇನ್ನೊಂದು ವಾರದಲ್ಲಿ ಪಾವತಿ ಮಾಡುತ್ತೇವೆಂದು ನಿರ್ದಿಷ್ಟವಾಗಿ ಹೇಳುತ್ತೀರಾ ಸ್ವಾಮಿ?

**ಶ್ರೀ ಡಿ ಆರ್ ಪಾಟೀಲ್** ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ರೈತರಿಗೆ ಕೊಡಬೇಕಾದ ಹಣವನ್ನು ಕೊಡುವುದಕ್ಕೆ ಒಂದು ಟೈಂ ಲಿಮಿಟ್‌ನ್ನು ನಾವು ಇಟ್ಟುಕೊಳ್ಳಬಕಾಗುತ್ತದೆ ಏಕೆಂದರೆ ಮುಂದಿನ ಮಾನ್‌ಸೂನ್ ವೇಳೆಗೆ ರೈತರಿಗೆ ಆ ಹಣ ಸಿಕ್ಕಿದ್ದರೆ ಏನಾದರೂ ಅನುಕೂಲವಾಗುತ್ತದೆ ಇಲ್ಲದಿದ್ದರೆ ರೈತರು ಬಹಳ ತೊಂದರೆಗೆ ಒಳಗಾಗುತ್ತದೆ ಆದುದರಿಂದ ಸಚಿವರು ವೈಯಕ್ತಿಕ ನಿಗಾವಹಿಸಿ ಈ ಹಣ ಬೇಗ ರೈತರಿಗೆ ತಲುಪುವಂತೆ ವ್ಯವಸ್ಥೆಯನ್ನು ಮಾಡಬೇಕು.

**ಶ್ರೀ ಸಿ.ಎಂ ಉದಾಸಿ** ಮಾನ್ಯ ಅಧ್ಯಕ್ಷರೆ, 2002–2003ನೇ ಸಾಲಿನ ಹಿಂಗಾರು ಬೆಳೆಗೆ ಸಂಬಂಧಪಟ್ಟಂತೆ ಬೆಳೆ ವಿಮೆ ಪರಿಹಾರ ಹಣವನ್ನು ಒಂದು ವರ್ಷದ ಹಿಂದೆಯೇ ಕೊಡಬೇಕಾಗಿತ್ತು ಇನ್ನು 2003–04ನೇ ಸಾಲಿನ ಹಿಂಗಾರು ಬೆಳೆ ವಿಮೆ ಪರಿಹಾರದ ಹಣವನ್ನು ಜೂನ್ 30ರೊಳಗೆ ಕೊಡಬೇಕಾಗಿತ್ತು ಸನ್ಮಾನ್ಯ ಕೃಷಿ ಸಚಿವರೂ ಕೂಡ ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ತಿಳಿದುಕೊಂಡು ಹಿಂದೆ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದವರಾಗಿದ್ದಾರೆ ಮುಂಗಾರು ಬೆಳೆ ಸಾಲ ತೆಗೆದುಕೊಂಡಾಗ ಮಾರ್ಚ್ 31ಕ್ಕೆ ಡ್ಯೂ ಡೇಟ್ ಇದೆ ಹಿಂಗಾರು ಬೆಳೆ ಸಾಲಕ್ಕೆ ಜೂನ್ 30ಕ್ಕೆ ಡ್ಯೂ ಡೇಟ್ ಎಂದು ಇರುವಾಗ ಬೆಳೆ ಸಾಲದ ವಿಮೆಯಾಗಲಿ, ಬೆಳೆ

ವಿಮೆಯಾಗಲಿ ಕೊಡಬೇಕಾದಂಥ ದಿನಾಂಕ ಕಟ್ ಆಫ್ ಡೇಟ್ ಅದನ್ನೇ ನಿರ್ದಿಷ್ಟವಾಗಿ ಹಿಡಿದುಕೊಳ್ಳಬೇಕೇ ಹೊರತು ಅದನ್ನು ಹಿಡಿದುಕೊಳ್ಳದೇ ಇದ್ದರೆ ಹೇಗೆ? ಏಕೆಂದರೆ 2002ನೇ ಇಸವಿ ಹಿಂಗಾರು ಬೆಳೆಯದು 2003ನೇ ಇಸವಿ ಜೂನ್ 30ಕ್ಕೆ ಹಣ ಬಿಡುಗಡೆಯಾಗಬೇಕಾಗಿತ್ತು ಈಗ ನಾವು 2004ನೇ ಇಸವಿ ಆಗಸ್ಟ್ ತಿಂಗಳಿನಲ್ಲಿ ಇದ್ದೇವೆ ಒಂದು ವರ್ಷ ವಿಳಂಬವಾದರೆ ಇದಕ್ಕೆ 22 ಕೋಟಿ ರೂಪಾಯಿಗಳಷ್ಟು ಪರಿಹಾರವನ್ನು ಇಡೀ ರಾಜ್ಯಾದ್ಯಂತ ರೈತರಿಗೆ ಕೊಡಬೇಕಾಗಿರುವುದಕ್ಕೆ ಒಂದು ವರ್ಷ ವಿಳಂಬವಾದರೆ ಆ ವಿಳಂಬವಾದ ಒಂದು ವರ್ಷಕ್ಕೆ ರೈತರಿಗೆ ಬಡ್ಡಿ ಹೊರೆ ಎಷ್ಟಾಗುತ್ತದೆ ಹೇಳಿ ಈ ಬಗ್ಗೆಯೂ ಸ್ವಲ್ಪ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ, ಇದರ ಜೊತೆಗೆ 2002-2003ರಲ್ಲಿ ಮುಂಗಾರು ಬೆಳೆಗೆ ನಾಲ್ಕೈದು ಕೋಟಿ ರೂಪಾಯಿಗಳನ್ನು ಇಡೀ ರಾಜ್ಯಾದ್ಯಂತ ವಿಭಿನ್ನ ಭಾಗದಲ್ಲಿ ಬಟವಾಡೆ ಆಗಬೇಕಾಗಿದೆ ಅದರಲ್ಲಿ ಮೊದಲಿಗೆ 5 ಹೋಬಳಿಗಳಿಗೆ ಎಂದು ಏನು ತೀರ್ಮಾನ ಮಾಡಿದ್ದೀರಿ ಅದರಲ್ಲಿ ಹಾನಗಲ್ ತಾಲ್ಲೂಕಿನಲ್ಲಿ ಮತ್ತು ಹಾವೇರಿ ಮತ್ತು ಹಾಸನ ಜಿಲ್ಲೆಯ ಕೆಲವು ಹೋಬಳಿಗಳಿಗೆ ಬರಬೇಕಾಗಿರುವಂಥ ಹಣ ಇನ್ನೂ ನಾಲ್ಕೈದು ಕೋಟಿ ರೂಪಾಯಿ ಮುಂಗಾರು ಬೆಳೆಗೂ ಸಹಿತ ಬರಬೇಕಾಗಿದೆ ಶಿಕಾರಿಪುರ ತಾಲ್ಲೂಕಿನಲ್ಲಿ ಬರಬೇಕಾಗಿದೆ ಆ ಹಣ ಇನ್ನೂ ಬಿಡುಗಡೆಯಾಗಿಲ್ಲ, 2003 ರದ್ದು ನಾನು ಕೇಳುತ್ತೇನೆ, ನೀವು ಎಲ್ಲದಕ್ಕೂ ಕಟ್ ಆಫ್ ಡೇಟ್ ಫಿಕ್ಸ್ ಮಾಡಿದ್ದೀರಿ ಇದಕ್ಕೆ ಏಕೆ ಕಟ್ ಆಫ್ ಡೇಟ್ ಇಲ್ಲ ಬೆಳೆ ವಿಮೆ ಕಂತು ಕಟ್ಟಿಸಿಕೊಳ್ಳಬೇಕಾದರೆ ಜುಲೈ 31ನೇ ತಾರೀಖಿಗೆ ಅವಧಿ ಮುಗಿದುಹೋಯಿತು ಎನ್ನುತ್ತೀರಿ ಬೆಳೆ ಸಾಲದ ವಿಮೆ ಸೆಪ್ಟೆಂಬರ್ 30ಕ್ಕೆ ಮುಗಿದು ಹೋಗುತ್ತದೆ ಆದರೆ ಬೆಳೆ ವಿಮೆ ಪರಿಹಾರ ಕೊಡಬೇಕಾದರೆ ಕಟ್ ಆಫ್ ಡೇಟ್ ಏಕೆ ಇಲ್ಲ ಎಂದು ಸಾರ್ವತ್ರಿಕವಾಗಿ ಕೇಳತಕ್ಕಂಥ ಪ್ರಶ್ನೆಯಾಗಿದೆ

ದಯವಿಟ್ಟು ಈ ವಿಮೆ ಪರಿಹಾರವನ್ನು ಕೊಡುವುದಕ್ಕೆ ವಿಳಂಬವಾದರೆ, ಅದಕ್ಕೆ ಬಡ್ಡಿ ಸೇರಿಸಿ ಕೊಡುತ್ತಿರಾ? ಇಲ್ಲಿ ರೈತರು ಒಂದು ದಿವಸ ವಿಳಂಬವಾಗಿ ಹಣ ಪಾವತಿ ಮಾಡಿದರೆ, ರೈತರ ಸಾಲದ ಮೇಲೆ ಬಡ್ಡಿಯನ್ನು ವಸೂಲು ಮಾಡುವಂತಹ ಪರಿಸ್ಥಿತಿ ಇದೆ ಈಗ ತಾವು ಕೊಡಬೇಕಾದಂತಹ ಪರಿಹಾರದ ಹಣ ವಿಳಂಬವಾದರೆ, ಅದಕ್ಕೆ ಬಡ್ಡಿಯನ್ನು ಸೇರಿಸಿ ಕೊಡುವಂತಹ ವ್ಯವಸ್ಥೆಯನ್ನು ಏನಾದರೂ ಮಾಡುತ್ತಿರಾ? ಇದನ್ನು ತಾವು ಹೇಳಬೇಕು ಮತ್ತೆ 2003-04ನೇ ಇಸವಿಯಲ್ಲಿ ಬೆಳೆ ವಿಮೆಗೆ ಸಂಬಂಧಪಟ್ಟಂತೆ ತಾವು ಕೊಟ್ಟಿರುವಂತಹ ಉತ್ತರದಲ್ಲಿ 7 ಬೆಳೆ ಗಳಿಗೆ ಮಾತ್ರ 275 ಕೋಟಿ ರೂಪಾಯಿಗಳನ್ನು ಇಟ್ಟು ಈ ತೀರ್ಮಾನಕ್ಕೆ ಬಂದಿರುವುದು ಇಲ್ಲಿ ಒಟ್ಟು 19 ಬೆಳೆಗಳು ಇವೆ ಈ 19 ಬೆಳೆಗಳಿಗೆ ನನ್ನ ಲೆಕ್ಕದಲ್ಲಿ ಸುಮಾರು 400 ಕೋಟಿ ರೂಪಾಯಿಗಳು ವಿಮೆ ಪರಿಹಾರಕ್ಕೆ ಹಣ ಬೇಕಾಗುತ್ತದೆ ಇದರ ಜೊತೆಗೆ ಹಿಂಗಾರಿನ ಬೆಳೆಗೆ, 19 ಲಕ್ಷ ಜನ ರೈತರು ಬೆಳೆ ವಿಮೆಯನ್ನು ಮಾಡಿಸಿದ್ದಾರೆ. ಒಟ್ಟು 541 ಕೋಟಿ ರೂಪಾಯಿಗಳು ಬೆಳೆ ವಿಮೆ ಪರಿಹಾರಕ್ಕೆ ಬೇಕಾಗುತ್ತದೆ ಇವತ್ತು ಸರ್ಕಾರ 241 ಕೋಟಿ ರೂಪಾಯಿಗಳನ್ನು ಇಟ್ಟಿರುವಂಥಾದ್ದು ಕಡಿಮೆಯೆಂಬುದನ್ನು ಇಲಾಖಾಧಿಕಾರಿಗಳು ತಮ್ಮ ಗಮನಕ್ಕೆ ತಂದಿರಬಹುದೆಂದು ನಾನು ಭಾವಿಸಿಕೊಂಡಿದ್ದೇನೆ ಆ ಕಾರಣದಿಂದ ಇಲ್ಲಿ ತಾವು ಇಟ್ಟಿರುವಂತಹ ಹಣವೂ ಕಡಿಮೆ, ಮತ್ತು ಈ ವರ್ಷದ ಬೆಳೆ ವಿಮೆ ಏನಾಗಿದೆಯೆಂಬುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ

**ಅಧ್ಯಕ್ಷರು** ಮಾನ್ಯ ಉದಾಸಿಯವರೇ, ಈಗ ತಾವು ಭಾಷಣ ಮಾಡುತ್ತೀದ್ದಿರೋ, ಅಥವಾ ಪ್ರಶ್ನೆಯನ್ನು ಕೇಳುತ್ತಿದ್ದಿರೋ?

**ಗೊಂದಲ**

**ಶ್ರೀ ಸಿ ಎಂ ಉದಾಸಿ** ಮಾನ್ಯ ಅಧ್ಯಕ್ಷರೇ, ಇದಕ್ಕೆ ಉತ್ತರ ಬೇಕು ಈ ವರ್ಷ ಬೆಳೆ ವಿಮೆ ಮಾಡಿಸುವಂಥಾದ್ದಕ್ಕೆ ಡಿಸ್ ಕರೇಜ್ ಮಾಡುವಂತಹ, ವ್ಯವಸ್ಥೆಯನ್ನು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಸೇರಿಕೊಂಡೇ, ಮಾಡುತ್ತಿದೆ ಇದನ್ನು ಸರ್ಕಾರ ಏನಾದರೂ ಪರಿಗಣಿಸುತ್ತದೆಯೇ ಎಂಬುದನ್ನು ಕೇಳಬೇಕಾಗಿದೆ ಇಲ್ಲಿ ಏನಾಗಿದೆಯೆಂದರೆ ಬೆಳೆ ವಿಮೆಗೆ ಕಂತುಗಳನ್ನು ಹೆಚ್ಚಿಗೆ ಮಾಡಿದ್ದಾರೆ ಇಲ್ಲಿ ಕಟ್ಟಬೇಕಾದಂತಹ ಪ್ರೀಮಿಯಮ್ ಧರವನ್ನು ಕಡಿಮೆ ಮಾಡಿದ್ದಾರೆ, ಶೇಕಡವಾರು ಹಿಂದಿನ 5 ವರ್ಷಗಳ ಸರಾಸರಿ ಇಳುವರಿಯನ್ನು ಶೇಕಡ 80ರ ಬದಲಾಗಿ ಶೇ 60ಕ್ಕೆ ತಂದಿದ್ದಾರೆ, 150 ಪಟ್ಟು ಮಾರಬೇಕಾದಾಗ ಅವರು ಕಟ್ಟಬೇಕಾದಂತಹ ವಿಮೆ ಕಂತುಗಳ ದರ ಹೆಚ್ಚಿಗೆ ಆಗುತ್ತದೆ ಆದುದರಿಂದ ಇದನ್ನು ಏನಾದರೂ ಮರು ಪರಿಶೀಲನೆ ಮಾಡುತ್ತೀರಾ ಎಂದು ಕೇಳುತ್ತೇನೆ ಈ ಪರಿಹಾರಗಳನ್ನು ಯಾವಾಗ ಕೊಡುತ್ತೀರಾ ಎಂಬುದರ ಜೊತೆಗೆ ಇವತ್ತು ಮಾಡಿರುವಂತಹ ಯೋಜನೆಗಳು ಏನಿವೆ, ಇದರಲ್ಲಿ ಡಿಸ್‌ಕರೇಜ್ ಮಾಡುವಂತಹ ಯೋಜನೆ ಏನಿದೆ, ಇದನ್ನು ಸರ್ಕಾರ ಮರು ಪರಿಶೀಲನೆ ಮಾಡುತ್ತದೆಯೇ ಎಂದು ಕೇಳಬಯಸುತ್ತೇನೆ

**ಮಾನ್ಯ ಸದಸ್ಯರು** ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಹಿಂಗಾರಿನಲ್ಲಿ ಹಿಂಗಾರಿ ಬೆಳೆಗೆ ಕಟ್ಟಿದಂತಹ ಕಂತುಗಳನ್ನು, ಕೇವಲ ಪ್ರತಿಶತ ಶೇಕಡಾ 100 ಅನ್ನು ಮಾತ್ರ ಇಟ್ಟುಕೊಂಡು, 150ರೂ ಗಳನ್ನು ಕಟ್ಟಿದಂತಹ ಕಂತನ್ನು ಈಗ ಕಳೆದ ಜುಲೈ ತಿಂಗಳಿನಿಂದ ವಾಪಸ್ಸು ಮಾಡುತ್ತಿದ್ದಾರೆ ಇದು ಯಾವ ನ್ಯಾಯ ಎಂಬುದು ನಮಗೆ ಅರ್ಥವಾಗುತ್ತಿಲ್ಲ ಇವರು ಹಣವನ್ನು ತುಂಬಿಸಿಕೊಳ್ಳಬೇಕಾದರೆ 150ರೂ ಗಲು ಪ್ರತಿಶತ ಕಂತನ್ನು ಕಟ್ಟಿಸಿ ಕೊಂಡಿದ್ದಾರೆ ಕಳೆದ ಜುಲೈ ತಿಂಗಳಿನಿಂದ ಶೇ 100ರಷ್ಟು ಇಟ್ಟುಕೊಂಡು, ಪ್ರತಿಶತ 150ರಷ್ಟು ಕಟ್ಟಿದಂತಹ ರೈತರಿಗೆ ವಾಪಸ್ಸು ಮಾಡುತ್ತಿದ್ದಾರೆ ತಾವು ಇದನ್ನು ಸಹ ಪರಿಶೀಲಿಸಬೇಕು ಇದನ್ನು ಏಕೆ ವಾಪಸ್ಸು ಮಾಡಿದ್ದಾರೆಂಬ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ

**ಶ್ರೀ ಎಸ್ ಎಸ್ ಪಾಟೀಲ್** ಮಾನ್ಯ ಅಧ್ಯಕ್ಷರೇ, ನಾನೂ ಕೂಡ ಇದಕ್ಕೆ ಸಂಬಂಧಪಟ್ಟಂತೆ ಒಂದು ಪ್ರಶ್ನೆಯನ್ನು ಕೊಟ್ಟಿದ್ದೆ ಅದು ಅನ್‌ಸ್ಟಾರ್ಡ್ ಆಗಿದೆ, ಇವತ್ತು ರಾಜ್ಯದಲ್ಲಿ ಪಾರದರ್ಶಕ ಕಾಯಿದೆ ಇದೆ ಇದರಲ್ಲಿ ಎಷ್ಟು ಮೋಸವಿದೆ ಎಂದರೆ, ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ. ಅದಕ್ಕೆ ಇವತ್ತು ಉತ್ತರ ಬಂದಿದೆ ಅದು ಅನ್ ಸ್ಟಾರ್ಡ್ ಆಗಿದೆ, ಅದನ್ನು ನಮಗೆ ಕೊಡುವುದಿಲ್ಲ ಅದುದರಿಂದ ನಾನು ಇಲ್ಲಿ ಕೇಳುತ್ತೇನೆ ಇವತ್ತು ಪಾರದರ್ಶಕ ಕಾಯಿದೆ ಇದೆ, ಆದರೂ ಇವರು ಹೇಳದೆ ಮುಚ್ಚಿಡುತ್ತಾರೆ ಇಲ್ಲಿ ಥ್ರೆಶೋಲ್ಡ್ ಯೀಲ್ಡ್ ಬಗ್ಗೆ ಯಾರಿಗೂ ಹೇಳುವುದಿಲ್ಲವೆಂದು, ಹೇಳುತ್ತಾರೆ, ಮುಚ್ಚಿಡುತ್ತಾರೆ ಇದರ ಬಗ್ಗೆ ಹಿಂದೆ ಒಮ್ಮೆ ಪ್ರಶ್ನೆಯಾಗಿತ್ತು ರಾಜ್ಯದಲ್ಲಿ ಬೆಳೆ ವಿಮೆಯ ಬಗ್ಗೆ ಅನುಸರಿಸುತ್ತಿರುವಂತಹ ನಿಯಮಗಳು ಏನು? ಥ್ರೆಶೋಲ್ಡ್ ಯೀಲ್ಡ್ ಬಗ್ಗೆ ಪ್ರತಿ ಬೆಳೆಗೆ, ಪ್ರತಿ ಹೋಬಳಿವಾರು ವಿವರವನ್ನು ನೀಡುವುದು ಹಿಂದಿನ ಅಧಿವೇಶನದಲ್ಲಿ ಎಲ್ಲಾ ಪಂಚಾಯತ್‌ಗಳಲ್ಲಿ ಥ್ರೆಶೋಲ್ಡ್ ಯೀಲ್ಡ್ ಪ್ರಕಟಿಸುವುದಾಗಿ ಹೇಳಿಕೆಯನ್ನು ನೀಡಲಾಗಿದ್ದು, ಇದುವರೆಗೂ ಯಾವ ಪಂಚಾಯಿತ್‌ನಲ್ಲೂ ಪ್ರಕಟಸದೇ ಇರುವುದರಿಂದ, ಇದು ಪಾರದರ್ಶಕತೆಯ ಕಾಯಿದೆ ಉಲ್ಲಂಘನೆ ಮಾಡಿದೆ ಹಾಗೆ ಅಲ್ಲವೇ? ಈ ಪ್ರಶ್ನೆಯನ್ನು ಹಾಕಿದ್ದೆ ಈ ಥ್ರೆಶೋಲ್ಡ್ ಯೀಲ್ಡ್ ಇಟ್ಟುಕೊಂಡು ಇಲ್ಲಿ ರೈತರಿಗೆ ಮೋಸ, ಇದನ್ನು ಯಾರಿಗೂ ಹೇಳುವುದಿಲ್ಲ ಅಲ್ಲಿ ರೈತರಿಗೆ ಥ್ರೆಶೋಲ್ಡ್ ಯೀಲ್ಡ್ ಎಷ್ಟು ಎಂಬುದು ಗೊತ್ತಿಲ್ಲ ಇದನ್ನು ಹೇಳುವುದಿಲ್ಲವೆಂದು ಹೇಳುತ್ತಾರೆ ಹಿಂದಿನ ಸಚಿವರು ಏನು ಹೇಳಿದ್ದರೆಂದರೆ, ಅಧಿವೇಶನದಲ್ಲಿ ಎಲ್ಲಾ ಪಂಚಾಯತ್‌ಗಳಲ್ಲೂ ಥ್ರೆಶೋಲ್ಡ್ ಯೀಲ್ಡ್ ಎಂದು

ಹೇಳಿದರು ಇವತ್ತಿನವರೆಗೂ ಅದನ್ನು ಪ್ರಕಟಿಸಿಲ್ಲ ಅದನ್ನು ಮುಚ್ಚಿಡುತ್ತಾರೆ ನಾನು ನಮ್ಮ ಗದಗ್ ಜಿಲ್ಲೆಯದನ್ನು ಹೇಳುತ್ತೇನೆ, ಇಲ್ಲಿ 2001ರಲ್ಲಿ 14,683 ಜನರು ಇನ್‌ಶೂರನ್ಸ್ ಮಾಡಿಸಿದ್ದು, ಅವರಲ್ಲಿ 446 ಜನರಿಗೆ ಮಾತ್ರ ಇದು ದೊರೆತಿದೆ ಅಂದರೆ ಇಲ್ಲಿ ರೈತರಿಂದ ಇನ್‌ಶ್ಯೂರೆನ್ಸ್ ಪ್ರಿಮಿಯಮ್ ತೆಗೆದುಕೊಂಡು ಅದನ್ನೇ ಕೊಡುವುದು ಇದು ವ್ಯವಸ್ಥಿತವಾಗಿ ನಡೆಯುವಂತಹ ಪಿತೂರಿಯಾಗಿದೆ ಇವರು ಎಲ್ಲಿಯವರೆಗೆ ರೈತರಿಗೆ ಥ್ರೆಶೋಲ್ಡ್ ಯೋಲ್ಡ್ ಅನ್ನು ಹೇಳುವುದಿಲ್ಲವೋ, ಅಲ್ಲಿಯವರೆಗೂ ಇದು ಮೋಸವಾಗುತ್ತದೆ ನಾನು ಈ ಥ್ರೆಶೋಲ್ಡ್ ಯೀಲ್ಡ್ ಬಗ್ಗೆ ಮಾತನಾಡುವುದಿಲ್ಲ ಈಗಾಗಲೇ ನಾನು ಮಾತನಾಡುವ ಮುನ್ನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ ಈಗ ಮಾನ್ಯ ಸಚಿವರು ಹೇಳಬೇಕಾಗುತ್ತದೆ ಈ ಥ್ರೆಶೋಲ್ಡ್ ಯೀಲ್ಡ್ ಅನ್ನು ಎಲ್ಲಾ ಪಂಚಾಯತ್‌ಗಳಲ್ಲೂ ಹೆಚ್ಚುತ್ತೀರಾ ಹೇಗೆ? ಈ ಥ್ರೆಶೋಲ್ಡ್ ಯೀಲ್ಡ್ ಬಗ್ಗೆ ಈಗಾಗಲೇ ಉತ್ತರ ಬಂದಿದೆ ಆದರೆ, ತಾವು ಆ ಉತ್ತರವನ್ನು ತರಿಸಿ ಹೇಳುವುದಕ್ಕೆ ರೆಡಿ ಇಲ್ಲ ನನ್ನ ಇವತ್ತಿನ ಪ್ರಶ್ನೆಗೆ ಅನ್‌ಸ್ಟಾರ್ಡ್‌ನಲ್ಲಿ ಉತ್ತರ ಬಂದಿದೆ ಅದು ತಮ್ಮ ಬಳಿ ಮಾಹಿತಿ ಇರುತ್ತದೆ ದಯಮಾಡಿ ಅದನ್ನು ತೆಗೆದು ಇಲ್ಲಿ ಉತ್ತರವನ್ನು ಹೇಳಿ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, ಮಾನ್ಯ ಎಸ್ ಎಸ್ ಪಾಟೀಲ್‌ರವರು ಹೇಳಿರುವಂಥಾದ್ದು ನಿಜ ಮೊದಲು ತಾಲ್ಲೂಕುವೈಸ್ ಥ್ರೆಶೋಲ್ಡ್ ಯೀಲ್ಡ್ ಅನ್ನು ಮಾಡುತ್ತಿದ್ದರು, ಆನಂತರ ಅದು ಹೋಬಳಿ ಮಟ್ಟಕ್ಕೆ ಬಂತು, ಈಗ ಅದು ಪಂಚಾಯತ್ ಮಟ್ಟಕ್ಕೆ ಬರಬೇಕೆಂದು ತೀರ್ಮಾನವನ್ನು ಮಾಡಿದ್ದೇವೆ ಅದು 2004-05ನೇ ಇಸವಿಯಿಂದ ಪಂಚಾಯತ್‌ವೈಸ್ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆಂಬ ಮಾತನ್ನು ಹೇಳುತ್ತೇನೆ ಇನ್ನು ಮಾನ್ಯ ಸಿ ಎಂ ಉದಾಸಿಯವರು ಪ್ರಸ್ತಾಪಿಸಿದಂತೆ, ವಿಮೆ ಜಾಸ್ತಿಯಾಗಿರುವಂಥಾದ್ದು ಆ ಭಾಗದ ಎರಡು, ಮೂರು ತಾಲ್ಲೂಕುಗಳಲ್ಲಿ, ಹಾಗಾಗಿ ನನಗಿಂತಲೂ ಅವರಿಗೆ ಹೆಚ್ಚಿನ ಅನುಭವವಿದೆ ನಾನು ಖಾಸಗಿಯಾಗಿಯೂ ಎರಡು, ಮೂರು ಸಾರಿ ಹೇಳಿದೆ ಇಡೀ ದೇಶದಲ್ಲಿ ನಮ್ಮ ರಾಜ್ಯದಲ್ಲೇ ವಿಮೆಯನ್ನು ಹೆಚ್ಚಿಗೆ ಕೊಟ್ಟಿರುವಂಥಾದ್ದು ಇಲ್ಲಿ ವಿಮಾ ಕಂಪೆನಿಯವರಿಂದ ನಮ್ಮಷ್ಟೇ ಆಂಧ್ರ ಪ್ರದೇಶದಲ್ಲಿ ಬರ ಪೀಡಿತವಾಗಿದ್ದರೂ, ಕೂಡ ನಮ್ಮಷ್ಟು ವಿಮೆ ಹಣ ಆ ಭಾಗಕ್ಕೆ ಹೋಗಿಲ್ಲ ಈ ಭಾಗದಲ್ಲಿ ಮಾತ್ರ ಹೆಚ್ಚು ಆಗಿದೆ, ಉಳಿದ ಭಾಗದಲ್ಲಿ ವಿಮೆ ಕ್ಲೈಮ್ ಮಾಡಿಲ್ಲ ಅದಕ್ಕೆ ರೈತರಿಗೆ ಅವೇರ್‌ನೆಸ್ ಇಲ್ಲದೇ ಇರಬಹುದು, ಅಥವಾ ಅಧಿಕಾರಿಗಳು ಅವೇರ್‌ನೆಸ್ ಮಾಡದೇ ಇರಬಹುದು ಇವೆಲ್ಲಾ ಕಾರಣಗಳು ಇದ್ದರೂ, ಇರಬಹುದು ಮಾನ್ಯ ಸಿ ಎಂ ಉದಾಸಿಯವರಂಥವರು ಊರು ಊರಿಗೆ ಹೋಗಿ ಹೇಳಿರಬಹುದು ನಾನು ಇಲ್ಲವೆಂದು ಹೇಳುವುದಿಲ್ಲ ಈ ಎಲ್ಲಾ ಕಾರಣಗಳಿಂದ, ಅವರು ನಮ್ಮ ರಾಜ್ಯದಲ್ಲಿ ಇಷ್ಟು ಕೋಟಿ ರೂಪಾಯಿ ಜಾಸ್ತಿಯಾಗುತ್ತಿದೆ ನಾನು ಈಗಲೂ ಕೂಡ ಇನ್‌ಶ್ಯೂರೆನ್ಸ್ ಕಂಪನಿಯ ಅಧ್ಯಕ್ಷನಾಗಿದ್ದೇನೆ, ನಾವು ಈ ಕಂಪನಿಯನ್ನು ಹೇಗೆ ನಡೆಸುವುದು, ಎಂದು ಭಾವನೆಯನ್ನು ವ್ಯಕ್ತಪಡಿಸುತ್ತಿದ್ದಾರೆ

**ಶ್ರೀ ಬಿ ಎಸ್ ಯಡಿಯೂರಪ್ಪ** ತಾವು ಏಕೆ ಆ ಕಂಪನಿಯವರ ಬಗ್ಗೆ ಚಿಂತೆ ಮಾಡುತ್ತಿರಾ? ಕಂಪೆನಿಯವನು ಏನು ಅವರ ಅಪ್ಪನ ಜೇಬಿನಿಂದ ಕೊಡುತ್ತಾನೆಯೇ? ಈ ಹಣ ಕೇಂದ್ರ ಸರ್ಕಾರದ್ದು ಮತ್ತು ರಾಜ್ಯ ಸರ್ಕಾರದ್ದು, ನೀವು ಅವರ ಬಗ್ಗೆ ಏನು ಯೋಚನೆ ಮಾಡುವುದು?

**ಶ್ರೀ ಕೆ ಶ್ರೀನಿವಾಸಗೌಡ** ಅದನ್ನೇ ನಾನು ಹೇಳುತ್ತಿರುವಂಥಾದ್ದು, ವ್ಯವಸ್ಥೆಯನ್ನು ಹಿಡಿತದಲ್ಲಿಡಬೇಕು ಎಂದು

**ಶ್ರೀ ಬಿ ಎಸ್ ಯಡಿಯೂರಪ್ಪ** ಇಲ್ಲಿ ಕಂಪನಿಯ ಅಳಿವು-ಉಳಿವಿನ ಪ್ರಶ್ನೆ ಅಲ್ಲ, ರೈತರ ಅಳಿವು, ಉಳಿವಿನ ಪ್ರಶ್ನತೆಯಾಗಿದೆ ಆ ಕಂಪನಿ ಹಾಳಾಗಿ ಹೋಗಲಿ, ಅದನ್ನು ...

ತೆಗೆದುಕೊಂಡು ಏನು ಮಾಡುತ್ತೀರಾ? ಇಲ್ಲಿ ಕೇಂದ್ರ ಸರ್ಕಾರ ಅರ್ಧ ದುಡ್ಡು ಕೊಡುತ್ತಾರೆ, ಇಲ್ಲಿ ನಾವು ರಾಜ್ಯ ಸರ್ಕಾರದಿಂದ ಅರ್ಧ ಕೊಡುತ್ತೇವೆ

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಮಂತ್ರಿಯವರೇ, ನೀವು ನಮ್ಮ ಕಡೆ ಕುಳಿತಾಗ ಹೇಳುತ್ತಿದ್ದಿರಿ, ಮಂತ್ರಿಗಳಾಗಿಯೂ ದಯವಿಟ್ಟು ಅದೇ ರೀತಿಯಲ್ಲಿ ಮಾತನಾಡಿ

**ಶ್ರೀ ಕೆ ಶ್ರೀನಿವಾಸಗೌಡ** ಹೌದು, ನಾನು ಆ ಕಡೆ ಕುಳಿದಾಗ, ತಾವು ವಿರೋಧ ಪಕ್ಷದ ನಾಯಕರಾಗಿದ್ದಾಗ, ನಾಣು ಏನು ಮಾತನಾಡಿದ್ದನೋ, ಅದನ್ನೇ ಈಗಲೂ ಮಾತನಾಡುತ್ತೇನೆ ಅದು ರೈತರ ವಿಷಯ ಬಂದಾಗ ಅದರಲ್ಲಿ ಎರಡನೇ ಮಾತಿಲ್ಲ ಇವತ್ತು ಈ ಪರಿಸ್ಥಿತಿ ಇರುವುದರಿಂದ ಸ್ವಲ್ಪ ಡಿಲೇ ಆಗಿದೆ ನಮ್ಮ ಆರ್ಥಿಕ ಮುಗ್ಗಟ್ಟು ಇದ್ದುದ್ದರಿಂದ ಹೋದ ಸಲ ಕೊಡದೇ ಇದ್ದುದ್ದರಿಂದ, ಈ ಬಾರಿ ನಮ್ಮ ಆರ್ಥಿಕ ಮಂತ್ರಿಗಳು, ದೊಡ್ಡ ಮನಸ್ಸು ಮಾಡಿ 241 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದರಿಂದ 2003ರದ್ದು ಬಾಕಿ ಏನಿದೆ ಅದು ಎಲ್ಲವನ್ನು ಕೊಡುತ್ತೇವೆ ಇನ್ನು 2004ನೇ ಇಸವಿಯದು ಜುಲೈ ತಿಂಗಳೊಳಗೆ ಥ್ರೆಶೋಲ್ಡ್ ಯೀಲ್ಡ್‌ನದು ಬರಬೇಕಾಗುತ್ತದೆ ಅದೆಲ್ಲವನ್ನು ನಾವು ಕಳುಹಿಸಿಕೊಟ್ಟಿದ್ದೇವೆ ಅದನ್ನು ಪ್ಯಾರಲಲ್ ಆಗಿ ನಾಲ ಫೈನಾನ್ಸ್ ಡಿಪಾರ್ಟ್‌ಮೆಂಟಿಗೂ ಕಳುಹಿಸಿದ್ದೇವೆ ಇದಕ್ಕೆ ಇಷ್ಟು ಹಣ ಬೇಕಾಗುತ್ತದೆಂದು ತಿಳಿಸಿದ್ದೇವೆ ಆ ಹಣದ ಲಭ್ಯತೆಯನ್ನು ನೋಡಿ ಆದಷ್ಟು ಬೇಗನೆ, ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಇದು ಸ್ವಲ್ಪ ಡಿಲೇಯಾಗುತ್ತಿದೆ ಇನ್ನು ಮುಂದೆ ಡಿಲೇಯಾಗದ ಹಾಗೆ ನೋಡಿಕೊಳ್ಳುವಂತಹ ಜವಾಬ್ದಾರಿಯನ್ನು ನಾವು ವಹಿಸಿಕೊಳ್ಳುತ್ತೇವೆಂದು ಹೇಳುತ್ತೇವೆ

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಶ್ರೀನಿವಾಸಗೌಡರು, ಸ್ಪಷ್ಟವಾಗಿ ಇಷ್ಟನೇ ತಾರೀಕಿನೊಳಗಾಗಿ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಬೇಕು

**ಶ್ರೀ ಕೆ ಶ್ರೀನಿವಾಸಗೌಡ** ಇದಕ್ಕೆ ಸೆಪ್ಟೆಂಬರ್ 15ನೇ ತಾರೀಖಿನೊಳಗಾಗಿ ಹಣವನ್ನು ಬಿಡುಗಡೆ ಮಾಡುವಂತಹ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಿದ್ದೇನೆ ಇನ್ನು 15 ದಿವಸಗಳಲ್ಲಿ ಸ್ಟೇಟ್‌ನ ಹಣ ಹೋಗುತ್ತದೆ, ಮತ್ತೆ ಕೇಂದ್ರ ಸರ್ಕಾರದ ಹಣ ಬರಬೇಕು, ಇದು ನಿಮಗೆಲ್ಲಾ ಗೊತ್ತಿದೆ ಈಗ ಸೆಂಟ್ರಲ್ ಗೌವರ್ನಮೆಂಟ್ ಹಣ ಬರಲಿ, ಆನಂತರ ನಮ್ಮ ಸರ್ಕಾರದ ಹಣ ಎಲ್ಲವನ್ನೂ ಸೇರಿಸಿ, ಒಟ್ಟಿಗೆ ಕೊಡುತ್ತೇವೆ

**ಮಾನ್ಯ ಸದಸ್ಯರು** ಮಾನ್ಯ ಕೃಷಿ ಸಚಿವರು, ಬೆಳೆ ವಿಮೆಯ ಹಣಕ್ಕೆ ಸಂಬಂಧಪಟ್ಟಂತೆ ಈ ಕಡೆ ಸ್ವಲ್ಪ ಗಮನ ಹರಿಸಬೇಕು ನಾನು ಈಗಾಗಲೇ ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೆ

**ಗೊಂದಲ**

**ಅಧ್ಯಕ್ಷರು** ಇದೇ ನಿದು? ಮಾನ್ಯ ಸದಸ್ಯರು ಇದೇ ರೀತಿಯಲ್ಲಿ ವರ್ತಿಸಿದರೆ, ಕಷ್ಟವಾಗುತ್ತದೆ. ಮಾನ್ಯ ಮಂತ್ರಿಯವರು ಉತ್ತರವನ್ನು ಕೊಡುತ್ತಿದ್ದಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

**ಮಾನ್ಯ ಸದಸ್ಯರು** ಇದರಲ್ಲಿ ಗದಗ್ ಜಿಲ್ಲೆಯನ್ನು ಕೂಡಿಸಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ

**ಶ್ರೀ ಜಗದೀಶ್ ಶೆಟ್ಟರ್** ಇದು ಬಹಳ ಮಹತ್ವವಾದ ವಿಷಯವಾಗಿದೆ, ನಾಳೆ ಅಧಿವೇಶನದನವನ್ನು ಮುಗಿಸುತ್ತಿದ್ದೀರಿ ನೀವು ಪಾರಾಗಿ ಹೋಗಬೇಕೆಂದು ಇದ್ದೀರಾ, ಹಾಗೆ ಹೊರಟು ಹೋಗಿ ಬಿಡುತ್ತೀರಾ?

**ಶ್ರೀ ಸಿದ್ಧರಾಮಯ್ಯ** ನಾವು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇವೆ

**ಶ್ರೀ ಜಗದೀಶ್ ಶೆಟ್ಟರ್** ನೀವು ಬರೀ ಉತ್ತರವನ್ನು ಕೊಟ್ಟಿದ್ದೀರಿ, ಅಷ್ಟೆ.

**ಶ್ರೀ ವಿಶ್ವೇಶ್ವರ ಹೆಗಡೆ** ಕಾಗೇರಿ ನೀವು ಉತ್ತರವನ್ನು ಕೊಟ್ಟಿದ್ದೀರಿ, ಹಣವನು ಕೊಡುತ್ತೇವೆಂದು ಹೇಳಿಲ್ಲ ನೀವು ಹಣವನ್ನು ಇಂಥ ದಿವಸದಲ್ಲಿ ಕೊಡುತ್ತೇವೆಂದು ಗಟ್ಟಿಯಾಗಿ ಹೇಳಿ

**ಶ್ರೀ ಬಿ ಎಸ್ ಯಡಿಯೂರಪ್ಪ** ನಾವು ಬಜೆಟ್ ಪಾಸು ಮಾಡಿಕೊಟ್ಟಿದ್ದೇವೆ

**ಶ್ರೀ ಸಿದ್ಧರಾಮಯ್ಯ** ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ ನಾವು ಆಗಸ್ಟ್ ತಿಂಗಳೊಳಗೆ ನಮ್ಮ ಪಾಲಿನದ್ದು 2003–04ನೇ ಇಸವಿಗೆ ಸಂಬಂಧಪಟ್ಟಿದ್ದು ಕೊಡುತ್ತೇವೆಂದು ಹೇಳಿದ್ದೇವೆ ನಾವು ಇವತ್ತೇ ಕೊಡುತ್ತೇವೆ ಇಂತಹ ತಾರೀಖಿನಂದು ಕೊಡುತ್ತೇವೆನ್ನುವುದು ಅಲ್ಲ ಈಗ 240 ಕೋಟಿ ರೂಪಾಯಿಗಳನ್ನು ನೀವೆಲ್ಲಾ ಮಂಜೂರು ಮಾಡಿಕೊಟ್ಟಿದ್ದೀರಿ ಇದನ್ನು ರೈತರಿಗೆ ಕೊಡಬೇಕೆಂದು ಎಂದು ತೀರ್ಮಾನ ಮಾಡಿದ್ದೇವೆ

**ಶ್ರೀ ಜಗದೀಶ್ ಶೆಟ್ಟರ್** 2003–04ರದ್ದು ಇದೆ, ನಾವು ಅದಕ್ಕೆ ಹೋರಾಟ ಮಾಡಿದ್ದೇವೆ

**ಶ್ರೀ ಸಿದ್ಧರಾಮಯ್ಯ** ಆಗ ನೀವು ಲೀಡರ್ ಆಗಿದ್ದಿರಿ, ಆಗ ನೀವು ಇಷ್ಟು ಒತ್ತಾಯ ಮಾಡಲಿಲ್ಲವೆಂದು ಕಾಣಿಸುತ್ತದೆ ನೀವು (ಶ್ರೀ ಜಗದೀಶ್‌ಶೆಟ್ಟರ್ ರವರನ್ನು ಉದ್ದೇಶಿಸಿ), ವಿರೋಧ ಪಕ್ಷದ ನಾಯಕರಾಗಿದ್ದರಲ್ಲಾ, ಆಗ ನೀವು, ಯಡಿಯೂರಪ್ಪನವರಷ್ಟು ಒತ್ತಾಯ ಮಾಡಿದ ಹಾಗೆ ಕಾಣುವುದಿಲ್ಲ ಮಾಡಿದ್ದರೆ, ಈಗ ಬಾಕಿ ಉಳಿದುಕೊಳ್ಳುತ್ತಲೇ ಇರಲಿಲ್ಲ ಎಂದು ಕಾಣಿಸುತ್ತದೆ. ಈಗ ರೈತರಿಗೆ ಸಹಾಯ ಮಾಡಬೇಕು ಎನ್ನುವ ಒಳ್ಳೆಯ ಉದ್ದೇಶದಿಂದ ನಾವು ಇದನ್ನು ಮಾಡಿದ್ದೇವೆ ಆದ್ದರಿಂದ, ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡಲು ಹೋಗಬೇಡಿ ಅದನ್ನು ನಾವು ಕೊಟ್ಟೇ ಕೊಡುತ್ತೇವೆ ಮಾನ್ಯ ಕೃಷಿ ಮಂತ್ರಿಗಳು ಏನು ಹೇಳಿದ್ದಾರೆ, ಆ ರೀತಿ ಕೊಡುತ್ತಾರೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಹಣಕಾಸಿನ ಸಚಿವರೇ, ನಾನು ಇವತ್ತು ಪ್ರಸ್ತಾಪ ಮಾಡುತ್ತಿರುವಂಥಾದ್ದು 2002–03ನೇ ಸಾಲಿನದ್ದು ಬರಗಾಲಕ್ಕೆ ತುತ್ತಾದಂಥ ರೈತನಿಗೆ ಸಾಲವೂ ಸಿಗದೇ, ಬೆಳೆ ವಿಮೆಯೂ ಸಿಗದೆ, ಆತನ ಪರಿಸ್ಥಿತಿ ಏನಾಗಿರಬಹುದು ಎಂದು ತಾವು ಒಂದು ಕ್ಷಣ ಯೋಚನೆ ಮಾಡಿ ಅಧಿಕಾರಿಗಳಿಗೆ, ಕ್ಲೈಮ್ ಗೊಂದಲ ಇತ್ತು ಎಂದರೆ, ಅವರು ಸ್ಥಳ ತನಿಖೆ ಮಾಡಿ ಪರಿಹಾರಧನ ಫೈನಲೈಸ್ ಮಾಡಲು ಒಂದೂವರೆ ವರ್ಷ ಟೈಂ ಬೇಕೇ? ಹಿಂದೆ, ಎರಡೂ ಮನೆಗಳಲ್ಲಿ ಈ ಬಗ್ಗೆ ಚರ್ಚೆಯಾದಾಗ, ಮುಂದಿನ ವರ್ಷದ ಏಪ್ರಿಲ್ ಒಳಗಾಗಿ ಬೆಳೆ ವಿಮೆಯನ್ನು ಕೊಡಲು ನಾವು ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಮನೆಯಲ್ಲಿ ನಮಗೆ ಕೊಟ್ಟಿದ್ದರು ಇದರ ಬಗ್ಗೆ ದಿವಸಗಟ್ಟಳೆ ಚರ್ಚೆಯಾಗಿದೆ ಇವತ್ತು ನಾನು ನಿಮ್ಮನ್ನು ಇಷ್ಟೇ ಕೇಳುವುದು, ತಾವೇ ಹೇಳಿದಂತೆ, ಈಗಾಗಲೇ ಇದಕ್ಕೆ ಬಜೆಟ್‌ನಲ್ಲಿ 230 ಕೋಟಿ ರೂಪಾಯಿಗಳ ಪ್ರಾವಿಷನ್ ಮಾಡಿರುವಂಥ ಈ ಸಂದರ್ಭದಲ್ಲಿ, ನೀವು ಆದ್ಯತೆಯ ಮೇಲೆ ಆಗಸ್ಟ್ 15ರೊಳಗಾಗಿ, ಇದುವರೆವಿಗೆ ಇರುವಂಥ ಎಲ್ಲಾ ಬೆಳೆ ವಿಮೆ ಬಾಕಿಯನ್ನು ಪಾವತಿ ಮಾಡಲು ಆಗುತ್ತದೆಯೋ, ಇಲ್ಲವೋ? ಯಾವ ಕಾರಣಕ್ಕೂ ಸಹ ಯಾರೂ ಈ ಹೌಸನ್ನು ಮಿಸ್–ಗೈಡ್ ಮಾಡುವುದು ಬೇಡ. ನಮ್ಮ ಹಣಕಾಸಿನ ಸಚಿವರಿಗೆ ಗೊತ್ತಿದೆ ಇದಕ್ಕೆ ಕೇಂದ್ರ ಸರ್ಕಾರ ಏನೂ ದುಡ್ಡು ಕಟ್ಟುವ ಅಗತ್ಯವಿಲ್ಲ ಕೇಂದ್ರ ಸರ್ಕಾರದ ಭಾರತೀಯ ಕೃಷಿ ವಿಮಾ ನಿಗಮವಿದೆ ಅದು ಬ್ಯಾಂಕು, ಅದರಲ್ಲಿ ದುಡ್ಡಿದೆ ಈ ರಾಜ್ಯದ ಪಾಲನ್ನು ಕಟ್ಟಿದ ತಕ್ಷಣ ಅವರು ಪೇಮೆಂಟ್ ಮಾಡುತ್ತಾರೆ ರಾಜ್ಯದ ಪಾಲನ್ನು ಕಟ್ಟಿ ಎಂದು ನಿಮಗೆ ಅವರು ತಿಳಿಸಿ ಒಂದು ತಿಂಗಳಾಯಿತು ಆ ದಾಖಲೆ ನನ್ನ ಹತ್ತಿರ ಇದೆ ಬರಗಾಲಕ್ಕೆ ಬಿದ್ದ ರೈತರ ಪರವಾಗಿ ನಿಮ್ಮಲ್ಲಿ ನಾನು ವಿನಂತಿ ಮಾಡುವುದು, ಒತ್ತಾಯ

ಮಾಡುವುದು ಏನೆಂದರೆ, ಆಗಸ್ಟ್ 15ರೊಳಗಾಗಿ 2002-03 ಮತ್ತು 2003-04ರ ಬೆಳೆ ವಿಮೆ ಹಣವನ್ನು ಸಂಪೂರ್ಣ ಪಾವತಿ ಮಾಡುತ್ತೇವೆ ಎಂದು ನೀವು ಸ್ಪಷ್ಟವಾಗಿ ಹೇಳುತ್ತೀರೋ, ಇಲ್ಲವೋ? ನಾವು ನಮ್ಮ ಕ್ಷೇತ್ರಗಳಿಗೆ ಹೋಗಿ ಜನಗಳಿಗೆ ಏನು ಉತ್ತರ ಹೇಳಬೇಕು ಆದ್ದರಿಂದ ನಮಗೆ ಈ ಬಗ್ಗೆ ಸ್ಪಷ್ಟವಾಗಿ ಉತ್ತರ ಬೇಕು, ಅಡ್ಡಗೋಡೆಯ ಮೇಲೆ ದೀಪ ಇಟ್ಟಹಾಗೆ ಉತ್ತರ ಬೇಡ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಾವು ಕೊಡುತ್ತೇವೆ ಎಂದರೆ ಅಷ್ಟು ಹೊತ್ತಿಗೆ ಇನ್ನೊಂದಷ್ಟು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಬೇಡದೇ ಇರುವುದನ್ನು ನಾವು ಕೇಳುತ್ತಿಲ್ಲ ಅವರ ಹಕ್ಕು ಇದು ಒಬ್ಬರು ಸತ್ತರೆ ಯಾವ ರೀತಿ ಇನ್‌ಷೂರೆನ್ಸ್ ಹಣವನ್ನು ಕೊಡಬೇಕೋ, ಅದೇ ರೀತಿಯಲ್ಲಿ ಇದು ಅವರ ಹಕ್ಕು

**ಶ್ರೀ ಸಿದ್ಧರಾಮಯ್ಯ** ಇನ್ನು ಮೇಲೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ

**ಶ್ರೀ ಬಿ ಎಸ್ ಯಡಿಯೂರಪ್ಪ** ನೀವು ಬಂದಮೇಲೆ 17 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ನೀವು ಯಾವ ಘಳಿಗೆಯಲ್ಲಿ ಕಾಲಿಟ್ಟೀರೋ, 17 ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಸ್ವಾಮಿ ಇವರೇ ಉತ್ತರ ಕೊಟ್ಟಿದ್ದಾರೆ ನಾನು ಉತ್ತರ ಕೊಟ್ಟಿದ್ದಲ್ಲ ಇದು

**ಗೊಂದಲ**

**ಮಾನ್ಯ ಸದಸ್ಯರು** ದಯಮಾಡಿ ಆ ಮಾತು ವಾಪಸ್ಸು ತೆಗೆದುಕೊಳ್ಳಬೇಕು ನಾವು ಬಂದಮೇಲೇ ಮಳೆ ಜೋರಾಗಿ ಬರುತ್ತಿರುವುದು

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ** ನೀವು ನೀವೇ ಏಕೆ ಮಾತನಾಡುತ್ತಿದ್ದೀರಿ? ನೀವೆಲ್ಲರೂ ಸುಮ್ಮನೆ ಕೂರಿಯಪ್ಪಾ

**ಶ್ರೀ ಬಿ ಎಸ್ ಯಡಿಯೂರಪ್ಪ** ರೈತರು ಸಾಯುತ್ತಿದ್ದಾರೆ

**ಅಧ್ಯಕ್ಷರು** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

**ಮಾನ್ಯ ಸದಸ್ಯರು** ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೆ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, 2002-03ನೇ ಸಾಲಿನ ಬೆಳೆ ವಿಮೆಯನ್ನು ಈ ತಿಂಗಳ ಕೊನೆಯೊಳಗಾಗಿ ಅಥವಾ ಮುಂದಿನ ತಿಂಗಳ 15ರೊಳಗಾಗಿ ಕೇಂದ್ರ ಸರ್ಕಾರಕ್ಕೆ ಕಟ್ಟುತ್ತೇವೆ 2003-04ನೇ ಸಾಲಿನ ಹಿಂಗಾರಿನ ಬೆಳೆ ವಿಮೆಯದು ಈ ಜುಲೈನಲ್ಲಿ ಹೋಗಬೇಕಾಗಿತ್ತು ಅದರ ಥ್ರೆಶೋಲ್ಡ್ ಯೀಲ್ಡನ್ನು ನಾವು ಈಗಾಗಲೇ ಫೈನ್ಯಾನ್ಸ್ ಡಿಪಾರ್ಟ್‌ಮೆಂಟಿಗೆ ಕಳುಹಿಸಿದ್ದೇವೆ ಅದನ್ನೂ ಕೂಡ ಆದಷ್ಟು ಬೇಗನೇ ಕಟ್ಟುತ್ತೇವೆ ಎನ್ನುವ ಮಾತನ್ನು ನಾನು ಈ ಸಭೆಯಲ್ಲಿ ಹೇಳಲು ಇಚ್ಛೆಪಡುತ್ತೇನೆ 'ಏಕೆಂದರೆ, ಯಡಿಯೂರಪ್ಪನವರು ಎಲ್ಲದಕ್ಕೂ ಡೌಟ್ ಬೀಳುವುದು ಬೇಡ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ ನಾವು ರೈತರ ಪರವಾಗಿದ್ದೇವೆ, ರೈತರ ಪರವಾಗಿಯೇ ಇರುತ್ತೇವೆ, ರೈತರ ಜೊತೆಯಲ್ಲೇ ಇರುತ್ತೇವೆ ನಾವು ಅದನ್ನು ಬರೀ ಬಾಯಿಯಲ್ಲಿ ಹೇಳುವುದಿಲ್ಲ ಇದನ್ನು ನೀವು ಜ್ಞಾಪಕದಲ್ಲಿಟ್ಟುಕೊಳ್ಳಿ

**ಗೊಂದಲ**

**ಅಧ್ಯಕ್ಷರು** ದಯವಿಟ್ಟು ಗಲಾಟೆ ಮಾಡಬೇಡಿ ದಯಮಾಡಿ ಕೇಳಿ

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** ' ಸರ್ಕಾರದಲ್ಲಿ ಪವರ್ ಟಿಲ್ಲರ್‌ಗೆ ಹಣವಿಲ್ಲ, ಬೆಳೆ ವಿಮೆಗೆ ಹಣವಿಲ್ಲ, ಕಾಲೇಜು ಕಟ್ಟುವುದಕ್ಕೆ ಹಣ ಇಲ್ಲ, ವಿದ್ಯಾರ್ಥಿಗಳ ಫೀಸ್ ತುಂಬಲು ಹಣ ಇಲ್ಲ, ಸರ್ಕಾರ ಖಾಲಿಯಾಗಿದೆ, ದಿವಾಳಿಯಾಗಿದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ನಾನು ಇಷ್ಟೇ ಹೇಳುತ್ತೇನೆ, ಹಣಕಾಸಿನ ಸಚಿವರು ಇಲ್ಲೇ ಇರುವ ಈ ಸಮಯದಲ್ಲಿ ಅವರು ಒಂದು ಕ್ಷಣವೂ ತಡಮಾಡದೆ, ರೈತರಿಗೆ ಅನುಕೂಲಕರವಾದ ಉತ್ತರವನ್ನು ಕೊಡುತ್ತಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ ಆಗಸ್ಟ್ 15ರೊಳಗಾಗಿ ಈ ರಾಜ್ಯದ ರೈತರಿಗೆ ಬೆಳೆ ವಿಮೆ ಬಾಕಿಯನ್ನು, ಅದನ್ನು ಕೊಡಲು ತಾವು ಏನು ಸರ್ವೆ ಮಾಡುತ್ತೀರೋ, ಏನು ದಾಖಲೆ ಪರಿಶೀಲನೆ ಮಾಡುತ್ತೀರೋ, ಇದೆಲ್ಲವನ್ನೂ ಪೂರ್ಣ ಮಾಡಿ, ಆಗಸ್ಟ್ 15ರೊಳಗಾಗಿ ಬೆಳೆ ವಿಮೆಯ ಹಣವನ್ನು ಸಂಪೂರ್ಣ ಪಾವತಿ ಮಾಡಬೇಕು ಮಾನ್ಯ ಸಿದ್ಧರಾಮಯ್ಯನವರೇ, ಆಗಸ್ಟ್ 15ರೊಳಗೆ ನೀವು ಅದನ್ನು ಮಾಡಲಿಲ್ಲವೆಂದರೆ, ಈ ಭಾಗದಲ್ಲಿರುವಂಥ ಎಲ್ಲಾ ಶಾಸಕರು, ನಾನು ನಮ್ಮ ಸ್ನೇಹಿತರಾದ ಜಿದ್ದಿಯವರನ್ನು ಕರೆದುಕೊಂಡು ಬಂದು ವಿಧಾನಸೌಧದ ಮುಂದೆ ಧರಣಿ ಸತ್ಯಾಗ್ರಹ ಮಾಡುವುದು ಅನಿವಾರ್ಯವಾಗುತ್ತದೆ ನಾಳೆ ಅಧಿವೇಶನ ಮುಗಿದ ಮೇಲೆ ನಾವು ಜನಗಳಿಗೆ ಮುಖ ತೋರಿಸಲು ಆಗುವುದಿಲ ರೈತರಿಗೆ ಭರವಸೆ ಕೊಟ್ಟು ಬಂದ ನೀವು, ಬೆಳೆ ನಾಶವಾದಂಥಾದ್ದಕ್ಕೆ ಪರಿಹಾರ ಕೊಡಲು, ಬೆಳೆ ವಿಮೆ ಹಣವನ್ನು ಕೊಡಲು ನೀವು ತಾರತಮ್ಯ ಮಾಡಿಕೊಂಡು, ನೋಡುತ್ತೇವೆ, ಸೆಪ್ಟೆಂಬರ್‌ವರೆಗೆ ಟೈಂ ಬೇಕು, ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಹೇಳುತ್ತೇವೆ ಎನ್ನುವ ನಿಮ್ಮ ಈ ರೈತ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ಬೆಳೆ ವಿಮೆ ಹಣವನ್ನು ನೀವು ಆಗಸ್ಟ್ 15ರೊಳಗಾಗಿ ಸಂದಾಯ ಮಾಡಬೇಕು, ಇಲ್ಲದಿದ್ದರೆ, . ನೇ ತಾರೀಖಿನಿಂದ ನಾವೆಲ್ಲಾ ಶಾಸಕರು ಅನಿರ್ದಿಷ್ಟ ಕಾಲದವರೆಗೆ ಇಲ್ಲಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ ಎಂದು ಹೇಳಿ, ನಿಮ್ಮ ನೀತಿಯನ್ನು ವಿರೋಧ ಮಾಡಿ ನಾವು ವಾಕ್‌ಔಟ್ ಮಾಡುತ್ತಿದ್ದೇವೆ

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ವಿರೋಧ ಪಕ್ಷದ ನಾಯಕರಾದ ಶ್ರೀ ಬಿ ಎಸ್ ಯಡಿಯೂರಪ್ಪನವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)**

**ಅಧ್ಯಕ್ಷರು** ಆಯಿತು, ನೀವು ಹೋಗಿ ಬನ್ನಿ, ಆದರೆ ಗಲಾಟೆ ಮಾಡಬೇಡಿ

**ಗೊಂದಲ**

## ಕೆ ಜಿ ಎಫ್‌ನ ಗೋಲ್ಡನ್ ವ್ಯಾಲಿ ಟ್ರಸ್ಟ್‌ರವರು ನಡೆಸುವ ಕಾಲೇಜಿಗೆ ಆಡಳಿತಾಧಿಕಾರಿಯನ್ನು ನೇಮಿಸುವುದು

105(819) ಶ್ರೀ ರಾಜೇಂದ್ರನ್ ಎಸ್.(ಕೆ.ಜಿ ಎಫ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೆ ಜಿ ಎಫ್ ಗೋಲ್ಡನ್ ವ್ಯಾಲಿ ಇಜುಕೇಷನ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಕೆ ಜಿ ಎಫ್ ಪ್ರಥಮ ದರ್ಜೆ ಕಾಲೇಜು (ಅನುದಾನಿತ) ಇಲ್ಲಿ ಇರುವ ಈ ಕೆಳಕಂಡ ಅವ್ಯವಸ್ಥೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ

1) ಎಸ್ ಸಿ / ಎಸ್ ಟಿ ವಿದ್ಯಾರ್ಥಿಗಳಿಂದ ಹೆಚ್ಚಿನ ಶುಲ್ಕವನ್ನು ವಸೂಲಿ ಮಾಡಿರುವ ಬಗ್ಗೆ
2) ದುರಾಡಳಿತ ಹಾಗೂ ಎಸ್ ಸಿ / ಎಸ್ ಟಿ ವಿದ್ಯಾರ್ಥಿ ವೇತನದ ದುರ್ಬಳಕೆ ಬಗ್ಗೆ
3) ಟ್ರಸ್ಟೀಗಳ ಮಧ್ಯೆ ನಡೆಯುತ್ತಿರುವ ಒಳಜಗಳಗಳ ಬಗ್ಗೆ
4) ತರಗತಿಗಳನ್ನು ಸರಿಯಾಗಿ ನಡೆಸದಿರುವ ಬಗ್ಗೆ
5) ಕಾಲೇಜಿನಲ್ಲಿ ಸಮಾಜ ವಿರೋಧಿ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ
6) ಟ್ರಸ್ಟ್‌ನಿಂದ ಹಣದ ದುರ್ಬಳಕೆ ಬಗ್ಗೆ

ಬಿ) ಸದರಿ ಕಾಲೇಜಿಗೆ ಆಡಳಿತ ಅಧಿಕಾರಿಯನ್ನು ನೇಮಿಸುವ ಬಗ್ಗೆ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

1) ಈ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ

2) ಈ ಬಗ್ಗೆ ದಿನಾಂಕ 22-07-2004ರಂದು ದೂರು ಸ್ವೀಕೃತವಾಗಿದ್ದು, ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ

3) ಈ ವಿಷಯ ಕೆ ಜಿ ಎಫ್ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇದೆ

4) ತರಗತಿಗಳು ಸರಿಯಾಗಿಯೇ ನಡೆಯುತ್ತಿವೆ

5) ಈ ವಿಷಯಕ್ಕೆ ಸಂಬಂಧಿಸಿದಂತೆ, ಕೆ ಜಿ ಎಫ್ ಪೋಲೀಸ್ ಠಾಣೆಯಲ್ಲಿ ದೂರುಗಳು ದಾಖಲಾಗಿರುತ್ತದೆ

6) ಕೆ ಜಿ ಎಫ್ ಗೋಲ್ಡನ್ ವ್ಯಾಲಿ ಎಜುಕೇಷನ್ ಟ್ರಸ್ಟ್‌ನ ಹಣದ ದುರ್ಬಳಕೆ ಬಗ್ಗೆ ಸರ್ಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ

ಆದಾಗ್ಯೂ ಟ್ರಸ್ಟ್ ವ್ಯಾಪ್ತಿಗೆ ಒಳಪಟ್ಟ ಕೆಜಿಎಫ್ ಪ್ರಥಮ ದರ್ಜೆ ಕಾಲೇಜಿನ ಸಿಬ್ಬಂದಿ ವೇತನಕ್ಕಾಗಿ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ

ಈ ಅಕೌಂಟ್ಸ್‌ನ್ನು ನಿರ್ವಹಿಸುವ ಅಧಿಕಾರ ಆಡಳಿತ ಮಂಡಳಿಗೆ ಇರುವುದಿಲ್ಲ ಟ್ರಸ್ಟ್‌ನಿಂದ ಸರ್ಕಾರದ ಹಣ ದುರ್ಬಳಕೆ ಆಗಿರುವುದಿಲ್ಲ

ಬಿ) ಇಲ್ಲ ಏಕೆಂದರೆ, ವಿವಾದವು ಕೆ ಜಿ ಎಫ್ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇದ್ದು, ನ್ಯಾಯಾಲಯವು ದಿನಾಂಕ 21-11-2002ರಂದು ನೀಡಿರುವ ಮಧ್ಯಂತರ ಆದೇಶದ ಪ್ರಕಾರ ಹಾಲಿ ಡಾ ಟಿ ತಿಮ್ಮಯ್ಯ ಇವರನ್ನೆ ಸದರಿ ಟ್ರಸ್ಟ್‌ನ ಅಧ್ಯಕ್ಷರಾಗಿ ಮುಂದುವರೆಸಿರುವುದರಿಂದ, ಆಡಳಿತಾಧಿಕಾರಿಯನ್ನು ನೇಮಿಸುವ ಪ್ರಶ್ನೆ ಉದ್ಭವಿಸುವುದಿಲ್ಲ

**ಶ್ರೀ ಎಸ್ ರಾಜೇಂದ್ರನ್** ಸನ್ಮಾನ್ಯ ಸಭಾಧ್ಯಕ್ಷರೇ, ಇವರು ಉತ್ತರ ಕೊಟ್ಟಿರುವುದು ಸ್ಯಾಟಿಸ್‌ಫ್ಯಾಕ್ಟರಿಯಾಗಿಲ್ಲ ನಾನು ಏನು ಕೇಳಿದ್ದೇನೆಂದರೆ, Collection of excess fees from the students belonging to SC/STs ಎಂಬುದಕ್ಕೆ No complaint received ಎಂದು ಹೇಳಿದ್ದಾರೆ ನನ್ನ ಬಳಿ ರಸೀಟ್ಸ್, ಫೇಕ್ ಡಾಕ್ಯುಮೆಂಟ್ ಇದೆ ಎರಡನೆಯದು, Mal-administration and misuse of SC/ST's scholarships, ಎಂದು ಕೇಳಿದರೆ they have said complaint in this regard has been received on 22 7 2004 and necessary action is being taken, I do not know what action they have taken, As regards, Infighting among trustees a case is pending in K G F civil Court ಎಂದು ಹೇಳಿದ್ದೀರಿ What type of case? what is the case No ? Nothing has been given here They cannot conduct the classes regularly, ಸುಮಾರು ಟೀಚರ್‌ಗಳು, ಸ್ಟ್ಯಾಫ್‌ಗಳೆಲ್ಲಾ ಬೇಕೆಂದು ಸರ್ಕಾರಕ್ಕೆ ಬರೆದಿದ್ದಾರೆ The whole documents are here You have said that you have not received it so far Financial irregularities ಬಗ್ಗೆ ನೀವು ಉತ್ತರ ಕೊಟ್ಟಮೇಲೆ ನಾನು ಮಾತನಾಡುತ್ತೇನೆ If so, whether there is a proposal of appointing an Administrator ಎಂದು ಕೇಳಿದರೆ, ಇಲ್ಲ ಅವರು ಕೋರ್ಟ್ ಮುಖಾಂತರ ಪ್ರೆಸಿಡೆಂಟ್ ಆಗಿದ್ದಾರೆ ಎಂದು ತಾವು ಹೇಳಿದ್ದೀರಿ So I am not much satisfied I have all the document Kindly clarify Sir

Then I will ask one more supplementary question in the interest of students of Scheduled Castes and Scheduled Tribes

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಉನ್ನತ ಶಿಕ್ಷಣ ಸಚಿವರ ಪರವಾಗಿ)** ಮಾನ್ಯ ಅಧ್ಯಕ್ಷರೇ, ಗೋಲ್ಡನ್ ವ್ಯಾಲಿ ಎಜುಕೇಷನ್ ಟ್ರಸ್ಟ್, ಕೆ.ಜಿ.ಎಫ್‌ನ ಆಡಳಿತ ವ್ಯಾಪ್ತಿಯಲ್ಲಿ ಡಾ ಟಿ ತಿಮ್ಮಯ್ಯ ಮತ್ತು ಶ್ರೀ ಅಶೋಕ ಕೃಷ್ಣಪ್ಪ ಎನ್ನುವವರ ನಡುವೆ ವಿವಾದ ನಿರಂತರವಾಗಿ ನಡೆಯುತ್ತಲೇ ಇದೆ ಅವರಿಬ್ಬರ ವಿವಾದದ ಹಿನ್ನಲೆಯಲ್ಲಿ, ಆಡಳಿತದಲ್ಲಿ ಅನೇಕ ತೊಂದರೆಗಳಾಗಿರತಕ್ಕ ವಿಚಾರದಲ್ಲಿ, ಕೆ ಜಿ ಎಫ್‌ನ ಸಿವಿಲ್ ನ್ಯಾಯಾಲಯದಲ್ಲಿ 359/2002 ಎನ್ನುವಂಥ ಒಂದು ಒರಿಜಿನಲ್ ಸೂಟ್ ದಾಖಲಾಗಿದೆ ಅದರ ತೀರ್ಮಾನ ಇನ್ನೂ ಆಗಬೇಕಾಗಿದೆ ಆದರೆ ಕೆ ಜಿ.ಎಫ್‌ನ ಸಿವಿಲ್ ನ್ಯಾಯಾಲಯ ಒಂದು ಮಧ್ಯಂತರ ಆಜ್ಞೆಯನ್ನು ಕೊಟ್ಟು, ಡಾ ಟಿ ತಿಮ್ಮಯ್ಯನವರೇ ಅಧ್ಯಕ್ಷರಾಗಿ ಮುಂದುವರಿಯುಬೇಕೆಂದು ಹೇಳಿದೆ ಇಲ್ಲಿ, ವಿದ್ಯಾರ್ಥಿ ವೇತನದ ದುರ್ಬಳಕೆ ಬಗ್ಗೆ ನಾಗರಾಜ್ ಎನ್ನುವ ಅಟೆಂಡರ್ ಒಬ್ಬರು ದೂರು ಕೊಟ್ಟಿದ್ದರು ಗುಣಶೇಖರ್ ಮತ್ತು ಮುನಿಕೃಷ್ಣಪ್ಪ ಎನ್ನುವವರೂ ಕೂಡ ದೂರನ್ನು ಕೊಟ್ಟಿದ್ದು, ಇದರ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಈಗಲೂ ವಿಚಾರಣೆ ನಡೆಯುತ್ತಿದೆ ಕಾಲೇಜಿನಲ್ಲಿ ಪ್ರಸ್ತುತ ವಾತಾವರಣ ಸರಿಯಾಗಿಲ್ಲ ಎನ್ನುವುದರ ಬಗ್ಗೆ ಜಾಯಿಂಟ್ ಡೈರೆಕ್ಟರನ್ನು ಕಳುಹಿಸಿಕೊಟ್ಟಿದ್ದು, ಅವರು ಅಲ್ಲಿಗೆ ಹೋಗಿದ್ದು ಈಗ ಸ್ವಲ್ಪ ತಾತ್ಕಾಲಿಕ ವ್ಯವಸ್ಥೆಯಾಗಿದೆ, ವಾತಾವರಣ ಎಷ್ಟೋ ಸುಧಾರಿಸಿದೆ ಎನ್ನುವ ಮಾತನ್ನು ಹೇಳುತ್ತಾರೆ ಈ ಪ್ರಥಮದರ್ಜೆ ಕಾಲೇಜಿಗೆ ಒಬ್ಬ ಪ್ರಾಂಶುಪಾಲರಿಲ್ಲ ಆ ಪ್ರಾಂಶುಪಾಲರ ವಿಚಾರಕ್ಕಾಗಿಯೇ ವಿವಾದವಾಗಿರತಕ್ಕಂಥ ಕಾರಣಕ್ಕಾಗಿಯೇ, ಅಲ್ಲಿ ಪ್ರಾಂಶುಪಾಲರು ಇಲ್ಲದೇ ಇರುವ ಕಾರಣದಿಂದಾಗಿಯೇ ಜಾಯಿಂಟ್ ಡೈರೆಕ್ಟರ್‌ರವರು, ಅವರ ಜಂಟಿ ಅಕೌಂಟಿನಲ್ಲಿ ದುಡ್ಡು ಇಟ್ಟುಕೊಂಡು ಪ್ರತಿತಿಂಗಳು ಸಂಬಳವನ್ನು ಕೊಡುತ್ತಿದ್ದಾರೆ ಈ ಟ್ರಸ್ಟ್‌ನಿಂದ ಹಣದ ದುರ್ಬಳಕೆಯಾಗಲು ಸಾಧ್ಯತೆ ಏಕಿಲ್ಲ ಎಂದರೆ, ಈ ಹಣವನ್ನು ಜಮಾ ಮಾಡಿದ್ದಾರೆ, ಇಬ್ಬರೂ ಸಹಿ ಮಾಡಬೇಕು ಎನ್ನುವ ಕಾರಣವಿರುವುದರಿಂದ ಈ ಟ್ರಸ್ಟ್‌ನಲ್ಲಿ ಹಣದ ದುರ್ಬಳಕೆ ಆಗಿಲ್ಲ, ಲೆಕ್ಕಪರಿಶೋಧಕರು ಕಾಲಕಾಲಕ್ಕೆ ಲೆಕ್ಕ ಪರಿಶೋಧನೆ ಮಾಡಿ ಅದಕ್ಕೆ ಪ್ರಮಾಣಪತ್ರವನ್ನೂ ಕೂಡ ಕೊಟ್ಟಿದ್ದಾರೆ ಈ ಹಿನ್ನೆಲೆಯಲ್ಲಿ ಟ್ರಸ್ಟ್‌ನ ಆಯ್ಕೆ ವಿಚಾರದಲ್ಲಿ ವಿವಾದ ಏನಿದೆ ಅದರ ಮಧ್ಯಂತರ ಆಜ್ಞೆಯನ್ನು ನಾವು ಪರಿಪಾಲಿಸಲೇಬೇಕಾಗುತ್ತದೆ 21-11-2002ರಂದು ಹಾಲಿ ಡಾ ತಿಮ್ಮಯ್ಯರವರನ್ನೇ ಸದರಿ ಟ್ರಸ್ಟ್‌ನ ಅಧ್ಯಕ್ಷರಾಗಿ ಮುಂದುವರಿಸಬೇಕೆನ್ನತಕ್ಕಂಥ, ಆ ಆಡಳಿತಾಧಿಕಾರಿಯ ನೇಮಕ ಮಾಡುವಂಥ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದು ನಾನು ಉತ್ತರ ಕೊಟ್ಟಿದ್ದೇನೆ I think our Hon'ble Member is satisfied with this reply

**ಶ್ರೀ ಆರ್ ಶ್ರೀನಿವಾಸ್** ಮಾನ್ಯ ಅಧ್ಯಕ್ಷರೆ, ಇದು ನನ್ನ ಪ್ರಾಂತ್ಯಕ್ಕೆ ಸೇರಿರತಕ್ಕಂಥದ್ದು, ಬಹುಶಃ ಈ ಗೋಲ್ಡನ್ ವ್ಯಾಲಿ ಎಜುಕೇಷನ್ ಟ್ರಸ್ಟ್‌ನ್ನು ದಿವಂಗತ ಎಂ ವಿ ಕೃಷ್ಣಪ್ಪನವರು 1962ರಲ್ಲಿ ಪ್ರಾರಂಭ ಮಾಡಿದರು ಈ ಕಾಲೇಜಿಗೆ ಮುಳಬಾಗಿಲು ವ್ಯಾಪ್ತಿಯಿಂದ ಬಹುತೇಕ ವಿದ್ಯಾರ್ಥಿಗಳೂ ಕೂಡ ಅಲ್ಲಿಗೆ ಪ್ರವೇಶ ಮಾಡಿದ್ದಾರೆ ಅಲ್ಲಿ ಈ ಒಂದು ಕಮಿಟಿ ಗೊಂದಲದಿಂದ ಸುಮಾರು ಒಂದೂವರೆ-ಎರಡು ವರ್ಷಗಳಿಂದ ಕೂಡ ಅಲ್ಲಿ ಗೂಂಡಾಗಿರಿ ಜಾಸ್ತಿಯಾಗಿದೆ ಹಳ್ಳಿಯಿಂದ ಹೋಗತಕ್ಕಂಥ ಜನಗಳಿಗೆಲ್ಲಾ ಕಿರುಕುಳ ಕೊಟ್ಟು, ಸರಿಯಾದ ರೀತಿಯಲ್ಲಿ ವ್ಯವಸ್ಥೆ ನಡೆಯುತ್ತಿಲ್ಲ ಆ ಕಾರಣದಿಂದ ಇಲ್ಲಿ ಬಹಳ ದುರುಪಯೋಗ ಸಹ ಆಗುತ್ತಿದೆ ಆದ್ದರಿಂದ ಇದನ್ನು ಯಾವುದೇ

ಒಂದು ಕಮಿಟಿ ಇಲ್ಲದೆ ಸರ್ಕಾರದ ಆದೇಶದಂತೆ ಮಾಡುವುದು ಬಹಳ ಉತ್ತಮ ಇಲ್ಲದಿದ್ದರೆ ಬಹಳಷ್ಟು ಜನರಿಗೆ ಇದರಿಂದ ತೊಂದರೆಯಾಗುತ್ತದೆ ಇಲ್ಲಿ ಇಂಜಿನಿಯರಿಂಗ್ ಕಾಲೇಜು ಕೂಡ ನಡೆಯುತ್ತಿರುವುದರಿಂದ 360 ದಿನಗಳಲಿ ಸುಮಾರು 150 ದಿನಗಳು ಕೂಡ ಪಾಠ ನಡೆಯುತ್ತಿಲ್ಲ ಅಲ್ಲಿ ರಾಜಕೀಯ ಒತ್ತಡ ಜಾಸ್ತಿಯಾಗುತ್ತಿದೆ ಅಲ್ಲಿ ಲೆಕ್ಚರರ್ಸ್ ಕೂಡ ರಾಜಕೀಯ ಭಿನ್ನಬಿಪ್ರಾಯದಿಂದ ಶಾಲೆಗಳಿಗೆ ಕೂಡ ಹೋಗುತ್ತಿಲ್ಲ ಆದ್ದರಿಂದ ತಮ್ಮ ಮುಖಾಂತರ ಸರ್ಕಾರದ ಗಮನ ಸೆಳೆಯುವುದೇನೆಂದರೆ, ಈ ಟ್ರಸ್ಟ್‌ನ್ನು ರದ್ದುಪಡಿಸಿ ಸರ್ಕಾರವೇ ವಹಿಸಿಕೊಳ್ಳಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ

**ಶ್ರೀ ಎಸ್ ರಾಜೇಂದ್ರನ್** ಮಾನ್ಯ ಅಧ್ಯಕ್ಷರೆ, ನಮ್ಮ ಮಿನಿಸ್ಟರ್‌ರವರು ಬಹಳ ಗಂಭೀರವಾಗಿ ಹೇಳಿದರು ಡಾ ತಿಮ್ಮಯ್ಯ ಪ್ರೆಸಿಡೆಂಟ್ ಆಗಿ ಇರಬೇಕೆಂದು ಕೋರ್ಟ್ ಆರ್ಡರ್ ಇದೆಯೆಂದು ಹೇಳಿದರು On one side they are accepting the Court verdict and giving more value for that But ನನ್ನ ಕೈಯಲ್ಲಿ ಒಂದು ಕೋರ್ಟ್ ಆರ್ಡರ್ ಇದೆ Dr Thimmaiah has taken a permanent injunction order where the General Secretary Mr Bhaktavatsalam Mr Pyarejan and Mr Athaulla ಈ ಮೂರು ಜನ permanent injunction order ನಲ್ಲಿ ನಮ್ಮ ಕಾಲೇಜಿನೊಳಗಡೆ ಬರಬಾರದೆಂದು ಹೇಳಿದ್ದಾರೆ ಆ ಕೋರ್ಟ್ ಕಾಪಿ ಸಹ ಇಲ್ಲಿದೆ Very much it is here The case number is O S 264/84 Permanent injunction order ಇಟ್ಟುಕೊಂಡು ಅವರು ಮತ್ತೆ ಭಕ್ತವತ್ಸಲಂ ಸೆಕ್ರೆಟರಿ ಆಗಿದ್ದಾರೆಂದು ಫೋಟೋ ಹಾಕಿದ್ದಾರೆಂದರೆ, is it not violating the Court order? One side you are obliging ಡಾ ತಿಮ್ಮಯ್ಯ ಪ್ರಸಿಡೆಂಟ್ ಆಗಿರಬೇಕೆಂದು ಕೋರ್ಟ್ ಆರ್ಡರ್ ಕೊಟ್ಟಿದೆ ಎಂದು, ಇನ್ನೊಂದು ಸೈಡ್ ಭಕ್ತವತ್ಸಲಂ ಒಳಗಡೆಯೇ ಹೋಗಬಾರದೆಂದು ಕೋರ್ಟ್ ಆರ್ಡರ್ ಕೊಟ್ಟಿದ್ದರೆ, ಅಂಥವರು ಅಲ್ಲಿ ಸೆಕ್ರೆಟರಿ ಆಗಿದ್ದಾರೆಂದರೆ, that Thimmaiah is using extra-constitutional power Maladministrationಗೆ ಅದು ಒಂದು ಉದಾಹರಣೆ ಜೊತೆಗೆ ಮಿಸ್‌ಯೂಸ್ ಏನೂ ಮಾಡಿಲ್ಲವೆಂದು ತಾವು ಹೇಳಿದಿರಿ Employee of the First Grade College, Golden Valley Educational Trust, Annavi-number of cheques, Basavaraj- number of cheques,ಇಷ್ಟು ಚೆಕ್‌ಗಳನ್ನು ಕೊಟ್ಟಿದ್ದಾರೆ How can they give cheque on a single employee who is working there to draw more than Rs 85,000/- and Rs 1 lakh? Approximately, they have allowed misappropriation of Rs 2 crore This is the evidence Apart from that there is a guideline from the Government What is says? The appointing Authority may place an employee under suspension under the following Circumstances and conditions after obtaining the necessary permission from the controlling Authority, failing which the management shall be held responsible for the consequences Without permission from the

government, they have suspended a Lecturer His name is Madangopal Earlier, an English Lecturer Mr Borjoe has been suspended He went to the Court and faught and got his money around Rs 15 lakh

**ಅಧ್ಯಕ್ಷರು** ಶ್ರೀ ರಾಜೇಂದ್ರನ್‌ರವರೇ, ತಾವು ಪ್ರಶ್ನೆ ಕೇಳುತ್ತಿದ್ದೀರೋ ಅಥವಾ ಏನು ಮಾಡುತ್ತಿದ್ದೀರಿ? ನೇರವಾಗಿ ಪ್ರಶ್ನೆ ಕೇಳಿ ಅಲ್ಲಿಯ ಕಥೆಯೆಲ್ಲಾ, ಹಿನ್ನೆಲೆಯೆಲ್ಲಾ ಹೇಳುತ್ತಾ ಹೋದರೆ ಆಗುವುದಿಲ್ಲ

**ಶ್ರೀ ಎಸ್ ರಾಜೇಂದ್ರನ್** ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ.

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಮಾನ್ಯ ಅಧ್ಯಕ್ಷರೆ, ಒಂದು ಕೆಲಸ ಮಾಡಿ ಇದು ಬಹಳ ಗಂಭೀರವಾದಂಥ ವಿಚಾರ ಇದೆ ಇದು ಪ್ರಶ್ನೋತ್ತರದಲ್ಲಿ ಆಗತಕ್ಕಂಥದ್ದು ಅಲ್ಲ ಇದನ್ನು ಅರ್ಧ ಗಂಟೆ ಕಾಲಾವಕಾಶದಲ್ಲಿ ಚರ್ಚೆಗೆ ತೆಗೆದುಕೊಂಡು ನಾಳೆ ಬೆಳಿಗ್ಗೆ ಅವಕಾಶ ಮಾಡಿಕೊಡಿ

**ಅಧ್ಯಕ್ಷರು** ಅರ್ಧ ಗಂಟೆ ಚರ್ಚೆಗೆ ಹಾಕಬಹುದು ಆದರೆ ನಾಳೆ ಬೆಳಿಗ್ಗೆಯೇ ಕೊಡಬೇಕೆಂದು ಹೇಳಿದರೆ ಆಗುವುದಿಲ್ಲ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಪ್ರಶ್ನೋತ್ತರದಲ್ಲಿ ಇದು ಪೂರ್ತಿ ಆಗುವಂಥದ್ದಲ್ಲ ಸುಮಾರು ವರ್ಷಗಳಿಂದ ಇದು ಪೆಂಡಿಂಗ್‌ನಲ್ಲಿದೆ ಇವರು ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದಾರೆ ಪ್ರಶ್ನೋತ್ತರದಲ್ಲಿ ಅದಕ್ಕೆಲ್ಲಾ ಉತ್ತರ ಕೊಡಲಿಕ್ಕೆ ಬರುವುದಿಲ್ಲ ಆದ್ದರಿಂದ ದಯವಿಟ್ಟು ಅರ್ಧಗಂಟೆ ಕಾಲಾವಕಾಶ ಚರ್ಚೆಯಲ್ಲಿ ನಾಳೆ ಬೆಳಿಗ್ಗೆ ತೆಗೆದುಕೊಂಡರೆ ಒಳ್ಳೆಯದಂದು ನನ್ನ ಅಭಿಪ್ರಾಯ

**ಅಧ್ಯಕ್ಷರು** ಆಯಿತು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಇದನ್ನು ತೆಗೆದುಕೊಳ್ಳುವುದಕ್ಕೆ ಬರೆದುಕೊಡಿ

**ಶ್ರೀ ಎಂ ಪಿ ಪ್ರಕಾಶ್** ಸನ್ಮಾನ್ಯ ಅಧ್ಯಕ್ಷರೆ, ನಾಳೆ ಅಧಿವೇಶನದ ಕೊನೆಯ ದಿನವಾಗಿದೆ ಎಲ್ಲದಕ್ಕೂ ಸದನದಲ್ಲೇ ಉತ್ತರ ಬರತಕ್ಕಂಥದ್ದು ಬಹಳ ಕಷ್ಟ. ಅರ್ಧ ಗಂಟೆ ಚರ್ಚೆಗೆ ನಾಳೆಗೂ ಕೂಡ ಬೇಕಾದಷ್ಟು business ಇದೆ, ತಾವೇ ಇದನ್ನು ಮಾಡುತ್ತೀರಿ ಇವತ್ತು ಅವರ ಹತ್ತಿರ ಏನು ಕಾಗದಪತ್ರಗಳು ದಾಖಲೆಗಳು ಇವೆ, ಇಲ್ಲಿಯೇ ನಮ್ಮ ಉನ್ನತ ಅಧಿಕಾರಿಗಳು ಇದ್ದಾರೆ, ಪ್ರಧಾನ ಕಾರ್ಯದರ್ಶಿಗಳು ಇದ್ದಾರೆ, ಆ ದಾಖಲೆಗಳನ್ನು ತಾವು ಕೊಟ್ಟರೆ, ನಿಮ್ಮ ಜೊತೆಯಲ್ಲಿಯೇ ಮಾತನಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು ಈಗ ಏನು ಉತ್ತರ ಕೊಟ್ಟಿದ್ದೇವೆ ಆ ಉತ್ತರ ಇದಲ್ಲ ಈಗ ಪ್ರಧಾನ ಕಾರ್ಯದರ್ಶಿಗಳ ಕಡೆಗೆ ತಾವು ಕೊಟ್ಟರೆ ಮಾತನಾಡಿ ಇದರ ಬಗ್ಗೆ ಏನು ತನಿಖೆ ನಡೆಸಬೇಕೋ ಅದೆಲ್ಲಕ್ಕೂ ನಾವು ತಯಾರಿದ್ದೇವೆ

**ಶ್ರೀ ಎಸ್ ರಾಜೇಂದ್ರನ್** ಇಲ್ಲಿಯೇ ತಾವು ante-chamberಗೆ ಬಂದರೆ ಎಲ್ಲಾ ಡಾಕ್ಯುಮೆಂಟ್‌ಗಳನ್ನು ಕೊಡುತ್ತೇವೆ ಅದರ ಮೇಲೆ ಪರಿಶೀಲನೆ ಮಾಡಿ ನೀವು just appoint an Administrator to find out what the culprits have done

**ಶ್ರೀ ಆರ್ ಶ್ರೀನಿವಾಸ್** ಹಣ ಒಂದೇ ಅಲ್ಲ, ಇಲ್ಲಿ ವಿದ್ಯಾರ್ಥಿಗಳಿಗೂ ಕೂಡ ಬಹಳ ತೊಂದರೆಯಾಗುತ್ತಿದೆ ಬಹಳ ಜನರಿಗೂ ಕೂಡ ತೊಂದರೆಯಾಗುತ್ತಿದೆ ಎನ್ನುವುದೂ ಸಹ ನಮ್ಮ ಗಮನಕ್ಕೆ ಬಂದಿದೆ ಅದರ ಬಗ್ಗೆ ಬಹಳ ಸೂಕ್ತ ಕ್ರಮವನ್ನು ತಾವೆಲ್ಲ ತೆಗೆದುಕೊಳ್ಳಬೇಕು

**ಶ್ರೀ ಎಂ ಪಿ ಪ್ರಕಾಶ್** ಮಾನ್ಯ ಅಧ್ಯಕ್ಷರೆ, ಈ ಉತ್ತರದ ನಂತರವೂ ಕೂಡ ಮಾನ್ಯ ರಾಜೇಂದ್ರನ್‌ರವರು ಹೇಳಿದಂಥ ವಿಚಾರಗಳೂ ಸಹ ಇಲ್ಲಿ ಪ್ರಸ್ತಾಪಿಸಲ್ಪಡಬೇಕಾಗುತ್ತದೆ ಈಗ ನಮಗೆ

ಬಂದಿರತಕ್ಕಂಥ ಮಾಹಿತಿಯಲ್ಲಿ ಬೋಧನಾ ಶುಲ್ಕವನ್ನು ವಿದ್ಯಾರ್ಥಿಗಳಿಂದ ನಾವೇನು ಸಂಗ್ರಹ ಮಾಡಿದ್ದೇವೆ ಅದು ಜಂಟಿ ಅಕೌಂಟ್‌ಗೆ ಹೋಗುತ್ತದೆ, ಜಂಟಿ ಅಕೌಂಟ್‌ನಲ್ಲಿ ಜಾಯಿಂಟ್ ಡೈರೆಕ್ಟರ್ ಇರುತ್ತಾರೆ ಪ್ರಾಂಶುಪಾಲರು ಇರುತ್ತಾರೆ, ಆದ್ದರಿಂದ ಅಲ್ಲಿ ದುರುಪಯೋಗವಾಗಿಲ್ಲ ಎನ್ನುವ ಮಾತನ್ನು ಹೇಳಿದ್ದೇವೆ ಮತ್ತು ಭಕ್ತವತ್ಸಲಂರವರಿಗೆ permanent injunction ಇದೆ ಎನ್ನತಕ್ಕಂಥ ಮಾತು ಮತ್ತೊಂದು ದಾವಾದಲ್ಲಿರತಕ್ಕಂಥದ್ದು, ನಾನು ಇಲ್ಲಿ ಪ್ರಸ್ತಾಪಿಸಿರುವುದು 359/02 ರ ದಾವಾದಲ್ಲಿ ಮಧ್ಯಂತರ ಅವಧಿಯಲ್ಲಿ ಡಾ ತಿಮ್ಮಯ್ಯರವರನ್ನು ಅಧ್ಯಕ್ಷರಾಗಿ ಮುಂದುವರಿಸಬೇಕೆಂದು ಹೇಳಿದ್ದಾರೆ ಇನ್ನೊಂದು ವಿಚಾರವಾಗಿ ಅವರು ಏನು ಹೇಳಿದ್ದಾರೆ ಬೇರೆ ದಾವಾ ಇದೆ ಎನ್ನತಕ್ಕಂಥದ್ದರ ಬಗ್ಗೆ ಇಲ್ಲಿ ಮಾಹಿತಿ ಇಲ್ಲ ಅವರಲ್ಲಿ ಅನೇಕ ದಾಖಲೆಗಳು ಇರತಕ್ಕಂಥ ಹಿನ್ನೆಲೆಯಲ್ಲಿ ಗುರುತರವಾದಂಥ ಆಪಾದನೆಗಳು ಇರಬಹುದು, ಆ ಕಾರಣಕ್ಕಾಗಿಯೇ ಮಾನ್ಯ ಶಾಸಕರು ಆ ಕಾಗದಪತ್ರಗಳನ್ನು ಕೊಟ್ಟರೆ ನಮ್ಮ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಜೊತೆಗೆ ಚರ್ಚೆ ಮಾಡಿ ಆ ವಿಚಾರ ತಿಳಿಸಿ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ

**Sri S Rajendran** Thank you very much

**ರಾಜ್ಯದಲ್ಲಿ ಉತ್ಪತ್ತಿಯಾಗುತ್ತಿರುವ ಹಾಲಿನ ಬಳಕೆ**

97(813) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನೆರೆ ರಾಜ್ಯಗಳಿಂದ ರಾಜ್ಯಕ್ಕೆ ಬರುತ್ತಿರುವ ಹಾಲಿನ ಪ್ರಮಾಣವೆಷ್ಟು, (ಪೂರ್ಣ ವಿವರಗಳನ್ನು ನೀಡುವುದು)

ಆ) ರಾಜ್ಯದಲ್ಲಿ ಉತ್ಪತ್ತಿಯಾಗುತ್ತಿರುವ ಹಾಲಿನ ಪ್ರಮಾಣಕ್ಕೆ ತಕ್ಕಂತೆ ಬೇಡಿಕೆ ಇದೆಯೇ,

ಇ) ಬೇಡಿಕೆ ಇಲ್ಲದಿದ್ದಲ್ಲಿ, ನೆರೆ ರಾಜ್ಯಗಳಿಂದ ಬರುತ್ತಿರುವ ಹಾಲಿನ ಮೇಲೆ ಹೆಚ್ಚು ತೆರಿಗೆ ವಿಧಿಸಿ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುವ ಹಾಲಿನ ಬಳಕೆಗೆ ಪ್ರೋತ್ಸಾಹವನ್ನು ನೀಡಲು ಕ್ರಮಕೈಗೊಳ್ಳಲಾಗುವುದೇ?

ಶ್ರೀ ಧರಮಸಿಂಗ್ (ಮುಖ್ಯಮಂತ್ರಿ)

ಅ) ಜೂನ್ 2004ರ ಮಾಹೆಯಲ್ಲಿ ದಿನವಹಿ ಸರಾಸರಿ 2 81 ಲಕ್ಷ ಲೀಟರ್ ಪ್ಯಾಕೆಟ್ ಹಾಲು ಹೊರರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ಬಂದಿರುತ್ತದೆ

**ವಿವರಗಳು ಈ ಕೆಳಕಂಡಂತಿವೆ**

| | | (ಲಕ್ಷ ಲೀಟರ್ ಗಳಲ್ಲಿ) |
|---|---|---|
| 1 | ಹೆರಿಟೇಜ್ | 0 74 |
| 2. | ಆರೋಗ್ಯ | 0 75 |
| 3 | ನೀಲಗಿರೀಸ್ | 0.39 |
| 4 | ದೋಡ್ಲ | 0 18 |
| 5 | ಜರ್ಸಿ | 0 22 |
| 6. | ಕೆ ಸಿ ಎ | 0 07 |
| 7 | ದೂದ್‌ಪಂಡರಿ | 0 20 |
| 8 | ಮಯೂರ್ | 0 06 |

| | | |
|---|---|---|
| 9 | ಭರತ್ | 0 18 |
| 10 | ಸ್ಫೂರ್ತಿ | 0 02 |
| | ಒಟ್ಟು | **2 81** |

ಆ) ಇಲ್ಲ

ಇ) ಹೊರೆ ರಾಜ್ಯದಿಂದ ಬರುವ ಹಾಲಿಗೆ ತಾರತಮ್ಯ ತೋರಿ ಪ್ರತ್ಯೇಕವಾಗಿ ತೆರಿಗೆಯನ್ನು ವಿಧಿಸಲು ಅವಕಾಶವಿರುವುದಿಲ್ಲ

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಅಧ್ಯಕ್ಷರೇ, ಹೊರಗಡೆ ರಾಜ್ಯದಿಂದ ಬರತಕ್ಕ ಹಾಲಿನ ಪ್ರಮಾಣದಿಂದ ಕರ್ನಾಟಕದಲ್ಲಿ ಉತ್ಪತ್ತಿ ಮಾಡತಕ್ಕಂಥ ಉತ್ಪಾದಕರಿಗೆ ಬಹಳ ತೊಂದರೆಯಾಗುತ್ತಿದೆ ಹೊರಗಡೆಯಿಂದ ಬರತಕ್ಕಂಥ ಹಾಲನ್ನು ತಡೆಯುವಂಥ ಯೋಜನೆಯನ್ನೇನಾದರೂ ಸರ್ಕಾರದ ಕಡೆಯಿಂಧ ಮಾಡಿದ್ದೀರಾ? ಆ ರೀತಿ ನೀವು ತಡೆಯುಲಿಲ್ಲವೆಂದರೆ ಕರ್ನಾಟಕದಲ್ಲಿರತಕ್ಕಂಥ ಹಾಲು ಉತ್ಪಾದಕರಿಗೆ ಈಗಾಗಲೇ ಬಹಳ ತೊಂದರೆಯಾಗಿದೆ ಆ ತೊಂದರೆಯನ್ನು ತಪ್ಪಿಸುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಾ?

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು ಮುಖ್ಯ ಮಂತ್ರಿಗಳ ಪರವಾಗಿ)** ಮಾನ್ಯ ಅಧ್ಯಕ್ಷರೆ, ಬೇರೆ ರಾಜ್ಯಗಳಿಂದ ಹಾಲು ನಮ್ಮ ರಾಜ್ಯಕ್ಕೆ ಬರುತ್ತಿದೆ ನಮ್ಮಲ್ಲಿ ಬೇಕಾದಷ್ಟು ಹಾಲು ಉತ್ಪತ್ತಿ ಆಗುತ್ತಿದ್ದರೂ ಕೂಡ ಸುಮಾರು 2 ಲಕ್ಷದ 71 ಸಾವಿರ ಲೀಟರ್ ಹಾಲು ಪ್ರತಿದಿವಸ ಬೇರೆ ರಾಜ್ಯದಿಂದ ಬೆಂಗಳೂರಿಗೆ ಬರುತ್ತಿದೆ ಇದನ್ನು ನಿಲ್ಲಿಸಬೇಕೆಂದು ಮೂರು ದಿವಸದ ಹಿಂದೆ ಗೌರಿಬಿದನೂರಿನಲ್ಲಿ ಸುಮಾರು 10000 ಜನ ರೈತರು ಸೇರಿ ಬೇರೆ ರಾಜ್ಯದಿಂದ ಹಾಲು ಬರಬಾರದೆಂದು ಅದನ್ನು ತಡೆಹಿಡಿಯುವಂಥ ಕೆಲಸವನ್ನು ಮಾಡುತ್ತಿದ್ದಾರೆ ನಮ್ಮ ರಾಜ್ಯದಲ್ಲೇ ಸುಮಾರು 27 25 ಲಕ್ಷ ಲೀಟರ್ ಹಾಲನ್ನು ಉತ್ಪತ್ತಿ ಮಾಡುತ್ತಿದ್ದರೆ ಅದರಲ್ಲಿ 15 5 ಲಕ್ಷ ಲೀಟರ್ ಹಾಲನ್ನು ನಮ್ಮ ರಾಜ್ಯದಲ್ಲಿಯೇ ಮಾರಾಟ ಮಾಡುತ್ತಿದ್ದೇವೆ ಈ ಮೊಸರು ಮತ್ತು ಇತರೆ products ಗೆ ಸುಮಾರು 1 5 ಲಕ್ಷ ಲೀಟರ್ ಹಾಲನ್ನು ಮಾರುತ್ತಿದ್ದೇವೆ ಶ್ರೀ ವಾಟಾಳ್ ನಾಗರಾಜ್‌ರವರು ಇದನ್ನೆಲ್ಲಾ ಮತ್ತೆ ಕೇಳುತ್ತಾರೆಂದು ಮೊದಲೇ ನಾನು ಹೇಳುತ್ತಿದ್ದೇನೆ ಆ ನಂತರ surplus 10 75 ಲಕ್ಷ ಲೀಟರ್ ಹಾಲು ನಮ್ಮಲ್ಲಿ ಇದ್ದರೂ ಕೂಡ ಬೇರೆ ರಾಜ್ಯಗಳಿಂದ ಬರುತ್ತಿದೆ ಇಲ್ಲಿ ಏನಾಗಿದೆ ಎಂದರೆ, WTO ಆದಮೇಲೆ ಹಾಲನ್ನು ಯಾರು ಎಲ್ಲಿ ಬೇಕಾದರೂ ಮಾರಬಹುದು ಯಾವುದನ್ನು ಪ್ರಪಂಚದ ಎಲ್ಲಿ ಬೇಕಾದರೂ ಮಾರಬಹುದು ಈ ಹಿನ್ನೆಲೆಯಲ್ಲಿ ಬೇರೆ ರಾಜ್ಯದವರೂ ಕೂಡ ಇಲ್ಲಿ ಮಾರುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ ಆದರೆ ನಮ್ಮ ಕೆ ಎಂ ಎಫ್ ಇರಬಹುದು, ನಮ್ಮ ಯೂನಿಯನ್‌ಗಳಿಗೆ ಹಾಲನ್ನು ಕಮ್ಮಿ ಬೆಲೆಗೆ ಕೊಟ್ಟು ಅವರಿಗೇ compete ಮಾಡಲಿಕ್ಕೆ ಅವಕಾಶ ಇದೆಯಾ ಎನ್ನುವ ಪ್ರಯತ್ನಗಳನ್ನೂ ಸಹ ಮಾಡುತ್ತಿದ್ದೇವೆ ಆದರೆ ಬೇರೆ ರಾಜ್ಯದಿಂದ ಬರತಕ್ಕಂಥ ಹಾಲನ್ನು ನಿಲ್ಲಿಸುವುದಕ್ಕೆ ಯಾವುದೇ ಕಾನೂನಿನ ಕ್ರಮವನ್ನು ಜರುಗಿಸಿಲ್ಲ ಎನ್ನುವ ಮಾತನ್ನು ನಾನು ಈ ಸಮಯದಲ್ಲಿ ತಮಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಡತಕ್ಕಂಥ ಸಂಧರ್ಭದಲ್ಲಿ WTO ದಿಂದಾಗಿ ಸಮಸ್ಯೆ ಆಗುತ್ತಿದೆ ಎಂದು ಹೇಳಿದರು WTO ಗೂ ಆಂಧ್ರ ರಾಜ್ಯದಿಂದ ಇಲ್ಲಿಗೆ ಬರತಕ್ಕಂಥದ್ದಕ್ಕೂ ಸಂಬಂಧ ಇಲ್ಲ ಈಗ ಇವರು ಆಂಧ್ರದ ಹೆರಿಟೇಜ್

ಕಂಪನಿಯವರಿಗೆ ಇಲ್ಲಿ ಹಾಲು ಮಾರುವುದಕ್ಕೆ ಅನುಮತಿ ಕೊಟ್ಟಿದ್ದಾರೆ ನಮ್ಮ ಹಾಲು ಗೋವಾಗೆ ಹೋಗುತ್ತದೆ ಅಲ್ಲಿ ಅವರು ನಮ್ಮ ಹಾಲಿಗೆ ಸೆಸ್ ಹಾಕುತ್ತಾರೆ ಆದರೆ, ಆಂಧ್ರದಿಂದ ಹೆರಿಟೇಜ್ ಕಂಪನಿ ಮೂಲಕ ನಮ್ಮ ರಾಜ್ಯಕ್ಕೆ ಬರುವ ಹಾಲಿನ ಮೇಲೆ ಇವರು ಸೇಸ್ ಹಾಕುವುದಿಲ್ಲ ನಾನು ಉದಾಹರಣೆಗೆ ಹೇಳುತ್ತಿದ್ದೇನೆ ನಾನು ಕೇಳುವುದೇನೆಂದರೆ, ಮೊದಲನೆಯದಾಗಿ ಹಿಂದಿನ ಸರ್ಕಾರವೇನು ಬೇರೆ ರಾಜ್ಯಗಳಿಂದ ಕಂಪನಿಗಳು ಬಂದು ಇಲ್ಲಿ ವ್ಯಾಪಾರ ಮಾಡಿ ಹಾಲನ್ನು ಮಾರಾಟ ಮಾಡಬಹುದೆಂದು ಅನುಮತಿ ಕೊಟ್ಟಿತ್ತು, ಅದನ್ನು ತಕ್ಷಣ ಸರ್ಕಾರ ವಾಪಸ್ಸು ಪಡೆಯಬೇಕು ಮತ್ತು ಹೊರ ರಾಜ್ಯಗಳ ಯಾವುದೇ ಹಾಲ ಬಂದರೂ ಕೂಡ, ಮಿನಿಮಂ 2 ಪರ್ಸೆಂಟ್ ಸೆಸ್ ಹಾಕಬೇಕು ನಮ್ಮ ಹಾಲು ಗೋವಾಗೆ ಹೋಗುತ್ತದೆ ಅದರ ಮೇಲೆ ಗೋವಾ ಸರ್ಕಾರ 2 ಪರ್ಸೆಂಟ್ ಸೆಸ್ ಹಾಕುತ್ತಿದೆ ನೀವು ಆ ರೀತಿಯಾಗಿ ಸೆಸ್ ಹಾಕಿ ಇಲ್ಲವಾದರೆ, ಅದನ್ನು ನಿಲ್ಲಿಸಿ ಇಲ್ಲದಿದ್ದರೆ, ಇದನ್ನು ತಡೆಯಲಿಕ್ಕಾಗುವುದಿಲ್ಲ ಏಕೆಂದರೆ, ಇವತ್ತು ರೈತರು ಜೀವನ ಮಾಡುವುದಕ್ಕೆ ಆಧಾರವಿರುವುದನ್ನು ಬೇರೆ ರಾಜ್ಯಗಳವರು ಬಂದು ಕಾಂಪಿಟಿಷನ್ ಮಾಡಿ, ಈಗಾಗಲೇ ನಮ್ಮ ರೈತರು ಪಾಪರ್ ಆಗುತ್ತಿದ್ದಾರೆ, ಬೇರೆ ರಾಜ್ಯಗಳವರು ಇಲ್ಲಿ ಬಂದು ಮಾರಾಟ ಮಾಡಿದರೆ, ಹಾಲಿನ ದರ ಕಡಿಮೆಯಾಗಿ, ಉತ್ಪಾದಕರು ನಾಶವಾಗುತ್ತಾರೆ ಆದುದರಿಂದ, ದಯವಿಟ್ಟು ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಪರಿಶೀಲನೆ ಮಾಡುತ್ತೇವೆಂದು ಮಾಮೂಲಿನಂತೆ ಉತ್ತರ ಹೇಳಬೇಡಿ

**ಶ್ರೀ ಸಿ ಬಿ ಕೃಷ್ಣ ಬೈರೇಗೌಡ** ಮಾನ್ಯ ಅಧ್ಯಕ್ಷರು ಒಂದು ನಿಮಿಷ ಸಮಯ ಕೊಡಬೇಕು ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ, ನಮ್ಮ ರಾಜ್ಯದಿಂದ ನಾವು ಗೋವಾ, ಕೇರಳ, ಆಂಧ್ರಕ್ಕೆ ಹಾಲನ್ನು ಕಳುಹಿಸಿಕೊಡುತ್ತಿದ್ದೇವೆ ಗೋವಾ ರಾಜ್ಯದಲ್ಲಿ ನಮ್ಮ ಪ್ರತಿ ಲೀಟರ್ ಹಾಲಿಗೆ 15 ಪೈಸೆ ಸೆಸ್ ಹಾಕುತ್ತಿದ್ದಾರೆ ಅದರ ಜೊತೆಗೆ, ಶೇ 1 ರಷ್ಟು ಮಾರುಕಟ್ಟೆ ಶುಲ್ಕವನ್ನು ನಮಗೆ ವಿಧಿಸುತ್ತಿದ್ದಾರೆ ಹಾಗೆ, ಕೇರಳ ರಾಜ್ಯದಲ್ಲಿ ಹಾಲಿಗೆ ಶೇ 2 ರಂತೆ ತೆರಿಗೆ ವಿಧಿಸುತ್ತಿದ್ದಾರೆ ಅಂಕಿ–ಅಂಶ ಕೊಡುವುದಾದರೆ, 2003–04ನೇ ವರ್ಷದಲ್ಲಿ ಕೋಲಾರ ಹಾಲು ಒಕ್ಕೂಟ ಒಂದೇ ನಾವು ಸುಮಾರು 12 ಲಕ್ಷ 28 ಸಾವಿರ ರೂಪಾಯಿಗಳ ಮಾರುಕಟ್ಟೆ ಶುಲ್ಕ ಕಟ್ಟಿದ್ದೇವೆ ನಾವು ಸಹಕಾರಿ ರಂಗದಲ್ಲಿದ್ದುಕೊಂಡು, ಶುಲ್ಕ ಕೊಡಬೇಕಾಗಿ ಬಂದಿದೆ ಆದರೆ, ಇವತ್ತು ಬೇರೆ ರಾಜ್ಯಗಳಿಂದ ಖಾಸಗಿ ಸಂಸ್ಥೆಗಳಿಂದ ಹಾಲು ಯಥೇಚ್ಛವಾಗಿ ನಮ್ಮ ರಾಜ್ಯಕ್ಕೆ ಬರುತ್ತಿದೆ ಅದನ್ನು ತಡೆಯುವುದಕ್ಕೆ ಏನೂ ಕ್ರಮ ತೆಗೆದುಕೊಳ್ಳದಿದ್ದರೂ, ಕನಿಷ್ಠಪಕ್ಷ ಅದರ ಮೇಲೆ ಸೂಕ್ತವಾದ ಒಂದು ಶುಲ್ಕವನ್ನು, ಸೆಸ್ ಅನ್ನು ವಿಧಿಸುವ ಕ್ರಮವನ್ನು ಸರ್ಕಾರ ತೆಗೆದು ಕೊಳ್ಳಲೇಬೇಕಾಗುತ್ತದೆ ಇಲ್ಲವಾದರೆ, ನಮ್ಮ ಸಹಕಾರಿ ರಂಗವೇ ಒಂದು ಕೊನೆಯ ಪರಿಸ್ಥಿತಿ ಕಾಣಬೇಕಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉದ್ಭವವಾಗುತ್ತದೆ ನಮ್ಮ ಸಹಕಾರಿ ಸಂಘಗಳನ್ನು ಉಳಿಸಬೇಕೆನ್ನುವ ಸಂಕಲ್ಪ ಸರ್ಕಾರಕ್ಕಿದೆ ಎನ್ನುವುದಾದರೆ, ಇದರ ಮೇಲೆ ತೀಕ್ಷ್ಣವಾದ ಒಂದು ಸೆಸ್ ಅನ್ನು ವಿಧಿಸಲೇಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸಲಿಚ್ಛೆ ಪಡುತ್ತೇನೆ

**ಶ್ರೀ ಎನ್ ಹೆಚ್ ಶಿವಶಂಕರ್ ರೆಡ್ಡಿ** ಗೌರಿಬಿದನೂರಿನಲ್ಲಿ ಹೆರಿಟೇಜ್ ಕಂಪನಿಯವರು ಚಿಲ್ಲಿಂಗ್ ಸೆಂಟರ್ ಅನ್ನು ತೆಗೆಯಬೇಕೆಂದು ಪ್ರಯತ್ನ ನಡೆಸುತ್ತಿದ್ದಾರೆ ಅದರ ಬಗ್ಗೆ 4 ದಿನಗಳ ಹಿಂದೆ ದೊಡ್ಡ ಪ್ರತಿಭಟನೆಯಾಯಿತು ಸುಮಾರು 10–15 ಸಾವಿರ ರೈತರು ಸೇರಿ ಯಾವುದೇ

ಕಾರಣಕ್ಕೂ ಪ್ರೈವೇಟ್ ಹಾಲಿಗೆ ಅವಕಾಶ ಕೊಡಬಾರದೆಂದು ಪ್ರತಿಭಟನೆಯಾಗಿದೆ ಮಾನ್ಯ ಶ್ರೀರಾಮರೆಡ್ಡಿಯವರೂ ಅಲ್ಲಿಗೆ ಬಂದಿದ್ದರು ಹಾಗಾಗಿ ಸಹಕಾರಿ ಸಂಸ್ಥೆಗಳ ಅಸ್ತಿತ್ವಕ್ಕೆ ಬಹಳ ಧಕ್ಕೆ ಬರುವ ಸಂದರ್ಭ ಒದಗಿ ಬರುವುದರಿಂದ, ಹೊರ ರಾಜ್ಯಗಳಿಂದ ಬರುವ ಹಾಲನ್ನು ನಿಷೇಧ ಮಾಡುವುದಕ್ಕೆ ಆ ಸೆಸ್ ಅನ್ನು ವಿಧಿಸಿದರೆ, ನಮ್ಮ ಸಹಕಾರಿ ಸಂಘಗಳೇನಿವೆ, ಅವುಗಳ ಅಸ್ತಿತ್ವ ಉಳಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇಲ್ಲದಿದ್ದರೆ, ಬಹಳ ಧಕ್ಕೆ ಬಂದು ಅನೇಕ ಸಂಘ–ಸಂಸ್ಥೆಗಳನ್ನು ಮುಚ್ಚುವ ಪರಿಸ್ಥಿತಿ ಬರುತ್ತದೆ ನಮ್ಮ ಸಹಕಾರಿ ಸಂಘಗಳನ್ನು ಉಳಿಸಿಕೊಳ್ಳುವ ದೃಷ್ಟಿಯಲ್ಲಿ ಆ ಸೆಸ್ ಅನ್ನು ವಿಧಿಸುವ ಕ್ರಮವನ್ನು ಸರ್ಕಾರ ಮಾಡಲೇಬೇಕೆಂದು ಒತ್ತಾಯಿಸಿ, ನನ್ನ ಮಾತು ಮುಗಿಸುತ್ತೇನೆ

**ಶ್ರೀ ಆರ್ ಶ್ರೀನಿವಾಸ್** ಕೋಲಾರ ಜಿಲ್ಲೆ, ಹಾಗೂ ತುಮಕೂರು ಜಿಲ್ಲೆಗಳಲ್ಲಿ ಇದರ ಮೇಲೆ ಬಹುತೇಕ ಜನ ಆಧಾರವಾಗಿದ್ದಾರೆ ತಿರುಮಲ ಎಂದು ಹೇಳಿ ಆಂಧ್ರದಿಂದ ಬಂದ ಒಂದು ಸಂಸ್ಥೆ ನಮ್ಮಲ್ಲಿ ಪ್ರಾರಂಭವಾಗಿದೆ ಪ್ರತ್ಯೇಕವಾಗಿ, ಮುಳಬಾಗಿಲು ತಾಲ್ಲೂಕಿನಲ್ಲಿ ಹಳ್ಳಿ ಹಳ್ಳಿಯಲ್ಲಿ ಕೂಡ ಅದನ್ನು ಪ್ರಾರಂಭ ಮಾಡುತ್ತಿದ್ದಾರೆ ಎಲ್ಲಿ ಕೆಎಂಎಫ್ ಇದೆ, ಅಲ್ಲಿ ಕಾಂಪಿಟಿಷನ್ ಆಗಿ ಒಂದೊಂದನ್ನು ಪ್ರಾರಂಭ ಮಾಡುತ್ತಿದ್ದಾರೆ ಅವರು ರೇಟ್ ಅನ್ನು ತಾತ್ಕಾಲಿಕವಾಗಿ ಕಡಿಮೆ ಮಾಡಿ ಜನರು ನಮ್ಮ ಈ ಸಂಘ–ಸಂಸ್ಥೆಗಳಿಗೆ ಹಾಲನ್ನು ಕೊಡದಿರುವ ವ್ಯವಸ್ಥೆ ಮಾಡುತ್ತಿದ್ದಾರೆ ಆದುದರಿಂದ, ನೀವು ಸೆಸ್ ವಿಧಿಸಿದರೆ ಮಾತ್ರ ಇದನ್ನು ತಡೆಯುವುದಕ್ಕಾಗುತ್ತದೆಯೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ ಕೆಎಂಎಫ್‌ನಲ್ಲಿ 6 ಲಕ್ಷ 25 ಸಾವಿರ ಲೀಟರ್ ಹಾಲನ್ನು ಇವತ್ತು ನಮ್ಮ ಕೋಲಾರ ಜಿಲ್ಲೆಯಿಂದ ಮಾರುತ್ತಿದ್ದಾರೆ ಮಾರುಕಟ್ಟೆಯಲ್ಲಿ ಸಹ ಹಾಲನ್ನು ಗೋವಾ, ಮಹಾರಾಷ್ಟ್ರ, ಡೆಲ್ಲಿಗೆ ಕಳುಹಿಸುವ ವ್ಯವಸ್ಥೆ ಇದೆ ದಯವಿಟ್ಟು ತಾವು ಬೇರೆ ರಾಜ್ಯಗಳಿಂದ ಬರುವ ಹಾಲಿಗೆ ಸೆಸ್ ಅನ್ನು ವಿಧಿಸುವ ವ್ಯವಸ್ಥೆ ಮಾಡಬೇಕು, ಮತ್ತು ಬೇರೆ ರಾಜ್ಯಗಳಿಂದ ಬರುವ ಹಾಲನ್ನು ನಿಲ್ಲಿಸುವುದಕ್ಕೆ ಆದಷ್ಟೂ ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದವನ್ನು ಒತ್ತಾಯಿಸುತ್ತೇನೆ

**ಶ್ರೀ ಎಸ್ ಎಲ್ ಧರ್ಮೇಗೌಡ** ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ, ಕರ್ನಾಟಕ ರಾಜ್ಯದಲ್ಲಿ ಬರುವ ಸುಮಾರು 17 ಒಕ್ಕೂಟಗಳ ವತಿಯಿಂದ ಇದು ಇವತ್ತಿನ ಸಮಸ್ಯೆಯಲ್ಲ ಕಳೆದ 4 ವರ್ಷಗಳಿಂದ ಈ ಸಮಸ್ಯೆ ಬಗ್ಗೆ ವಿಧಾನಸೌಧದೊಳಗೆ ಚರ್ಚೆಯಾಗುತ್ತಿದೆ ಆದರೆ, ಪರಿಹಾರ ಕಾಣಲಿಕ್ಕಾಗಲಿಲ್ಲ ದಯವಿಟ್ಟು, ಈ ವಿಷಯದಲ್ಲಿ ಸರ್ಕಾರ ಸೂಕ್ಷ್ಮವಾಗಿ, ತಕ್ಷಣ ಕ್ರಮ ಕೈಗೊಳ್ಳದೇ ಹೋದರೆ ಪ್ರತಿನಿತ್ಯ ಕರ್ನಾಟಕ ರಾಜ್ಯದಿಂದ ಸುಮಾರು 2 ಲಕ್ಷ ಲೀಟರ್ ಹಾಲು ತಮಿಳುನಾಡಿನ ಈರೋಡ್‌ಗೆ ಪೌಡರ್ ಆಗಿ ಹೋಗುತ್ತಿದೆ ಅಂಥ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ಬರುವ ಎಲ್ಲ ಒಕ್ಕೂಟಗಳೂ ನಷ್ಟ ಅನುಭವಿಸುವುದಕ್ಕೆ ಅವಕಾಶವಾಗುತ್ತದೆ ಅದೇ ರೀತಿ, ರೈತರಿಗೆ ಕೊಡುವ ಹಾಲಿನ ಬಟವಾಡೆ ಸಹ ತಡವಾಗುತ್ತಿದೆ ಇವತ್ತು ಪದೇ ಪದೇ 15 ದಿವಸಗಳಿಗೆ ಒಂದು ಸಾರಿ ರೈತರಿಗೆ ಸಿಗಬೇಕಾದ ಹಾಲಿನ ಬಟವಾಡೆ 2 ತಿಂಗಳಾದರೂ ಸಿಗದಿರುವುದಕ್ಕೆ ಕಾರಣ ಇದೇ ಗುಡ್ ಮಾರ್ನಿಂಗ್, ಹೆರಿಟೇಜ್ ಮತ್ತು ಬೇರೆ ಬೇರೆ ಖಾಸಗಿ ಕಂಪನಿಗಳು ಬಂದು ಇಲ್ಲಿ ಹಾಲನ್ನು ಪ್ಯಾಕೆಟ್ ಮೂಲಕ ವಿತರಣೆ ಮಾಡುತ್ತಿರುವುದರಿಂದ ನಮ್ಮ ನಂದಿನಿ ಹಾಲಿಗೆ ಮಾರುಕಟ್ಟೆಯಲ್ಲಿ

ಡಿಮಾಂಡ್ ಬರುತ್ತಿಲ್ಲ ಜನರು ಕೇಳುತ್ತಿಲ್ಲ ಈ ಸಂದರ್ಭದಲ್ಲಿ ರೈತರು ಉತ್ಪಾದನೆ ಮಾಡುವ ಹಾಲಿನ ಬೆಲೆ ಇಳಿಯಲೂ ಸಹಾಯ ವಾಗುತ್ತದೆ ಒಕ್ಕೂಟಗಳ ಹಾಲು ಪೌಡರ್ ಆಗಿ ಪರಿವರ್ತನೆಯಾಗಲು ಹೊರ ರಾಜ್ಯಗಳಿಗೆ ಹೋಗುತ್ತದೆ ಹೊರ ರಾಜ್ಯಗಳಿಗೆ ಹೋಗುವುದರಿಂದ ಆಟೋಮ್ಯಾಟಿಕ್ ಆಗಿ ಹಾಲಿನ ದರ ಕಡಿಮೆಯಾಗುತ್ತದೆ ಅದಕ್ಕೋಸ್ಕರ, ದಯವಿಟ್ಟು ಈ ಸಮಸ್ಯೆಯನ್ನು ಬಗೆಹರಿಸಬೇಕು ಬಹಳಷ್ಟು ವರ್ಷಗಳಿಂದ ನಾವು ಈ ಸಮಸ್ಯೆ ಬಗ್ಗೆ ಸದನದಲ್ಲಿ ಚರ್ಚೆಯಾಗುತ್ತಿರುವುದನ್ನು ನಾವು ಹೊರಗಡೆ ಕುಳಿತು ನೋಡುತ್ತಿದ್ದೇವೆ ಇದರ ಬಗ್ಗೆ ಸುಮಾರು 8-10 ವರ್ಷಗಳಿಂದ ದೀರ್ಘವಾಗಿ ಚರ್ಚೆಯಾಗುತ್ತಿದೆ ಆದರೆ, ಪರಿಹಾರ ಕಾಣಲಿಲ್ಲ ಈಗಲಾದರೂ ಸರ್ಕಾರ ಇದರ ಬಗ್ಗೆ ಬಹಳಷ್ಟು ಗಮನವನ್ನು ಕೊಡದೇ ಹೋದ ಸಂದರ್ಭದಲ್ಲಿ, ಇಡೀ ರಾಜ್ಯದ ರೈತರು, ಹಾಲು ಉತ್ಪಾದಕರು ಕಣ್ಣೀರಲ್ಲಿ ಕೈ ತೊಳೆಯಬೇಕಾಗುತ್ತದೆ ಅದರ ಬಗ್ಗೆ ನಾನು ಸರ್ಕಾರ ಗಮನಹರಿಸಬೇಕೆಂದು ಒತ್ತಾಯಿಸುತ್ತೇನೆ

**ಶ್ರೀ ವಿನಯ್ ಕುಲಕರ್ಣಿ** ಧಾರವಾಡ ಹಾಲು ಒಕ್ಕೂಟದ್ದೊಂದೇ ಅಲ್ಲ ಮೈಸೂರು, ಬೆಂಗಳೂರು ಭಾಗದಲ್ಲಿ ಅಷ್ಟೇ ಅಲ್ಲ, ಬೆಳಗಾಂ, ಧಾರವಾಡ, ಹುಬ್ಬಳ್ಳಿಯಲ್ಲಿ ಕೂಡ ಮಹಾರಾಷ್ಟ್ರದಿಂದ ಸಾಕಷ್ಟು ಪ್ರಮಾಣದಿಂದ ಹಾಲು ಬರುತ್ತಿದೆ ನಮ್ಮ ಧಾರವಾಡ ಒಕ್ಕೂಟದಲ್ಲಿ ಇವತ್ತು ನಮ್ಮ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತಿಲ್ಲ ಇವತ್ತು ಮಹಾರಾಷ್ಟ್ರದಿಂದ ಬರುವ ಹಾಲಿನ ಉತ್ಪಾದನೆಗೆ ಸಂಪೂರ್ಣವಾಗಿ ಕಾಂಪಿಟಿಷನ್ ಇರುವುದು ನಮ್ಮ ಕೆಎಂಎಫ್ ಜೊತೆ ಮಾತ್ರ ನಮ್ಮ ಕೆಎಂಎಫ್ ಹಾಲಿನ ಸೇಲ್ಸ್ ಪ್ರಮಾಣ ಕೂಡ ಕಡಿಮೆಯಾಗಿದೆ ಬೆಳಗಾಂನಿಂದ ಹಿಡಿದು ಧಾರವಾಡ, ಹುಬ್ಬಳ್ಳಿವರೆಗೆ ಮಹಾರಾಷ್ಟ್ರದಿಂದ ಹಾಲು ಏನು ಬರುತ್ತದೆ, ಅಲ್ಲಿ ಕೂಡ ತಾವು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ, ಶ್ರೀಯುತರುಗಳಾದ ವಾಟಾಳ್ ನಾಗರಾಜ್, ಕೃಷ್ಣ ಬೈರೇಗೌಡ, ಶ್ರೀನಿವಾಸ್, ಶಿವಶಂಕರ ರೆಡ್ಡಿ, ವಿನಯ ಕುಲಕರ್ಣಿ ಮತ್ತು ಧರ್ಮೇಗೌಡರವರು ಬಹಳ ಗಹನವಾಗಿ ಇದರ ವಿಷಯವನ್ನು ಹೇಳಿದ್ದಾರೆ ಈಗ ನಮ್ಮ ರಾಜ್ಯಕ್ಕೆ ಬರುವುದು 2 ಲಕ್ಷದ 81 ಸಾವಿರ ಲೀಟರ್ ಹಾಲು ನಮ್ಮ ರಾಜ್ಯದಿಂದ ಡೆಲ್ಲಿ, ಆಂಧ್ರ, ಗೋವಾಗೆ ಹೋಗುವುದು 3 ಲಕ್ಷ ಲೀಟರ್ ಹಾಲು ನಮ್ಮಲ್ಲಿ ಗೋವಾ ಬಿಟ್ಟರೆ, ಇನ್ನೆಲ್ಲೂ ಕೂಡ, ನಮ್ಮ ಹಾಲಿನ ಮೇಲೆ ಸೆಸ್ ಹಾಕುತ್ತಿಲ್ಲ ಗೋವಾಗೆ ಕೂಡ ನಮ್ಮದು ಸಹಕಾರ ಸಂಘವಾಗಿರುವುದರಿಂದ ನಮ್ಮ ಹಾಲಿಗೆ ನೀವು ಸೆಸ್ ಹಾಕಬಾರದೆಂದು ಅವರನ್ನು ಪ್ರಾರ್ಥನೆ ಮಾಡಿದ್ದೇವೆ, ಕೇಳಿಕೊಂಡಿದ್ದೇವೆ. ಅದಕ್ಕೆ ಮಾತುಕತೆಗಳು ನಡೆಯುತ್ತಿವೆ. ಅವರು ಇಲ್ಲಿ ಬರುವುದು, ನಾವು ಆ ಕಡೆ ಹೋಗುವಾಗ, ಅನಗತ್ಯವಾದ ಕಾಂಪಿಟಿಷನ್ ಆಗಬಹುದೇನೋ ಎಂಬ ಭಾವನೆ ವ್ಯಕ್ತಪಡಿಸುತ್ತಾ, ನಮ್ಮ ರೈತರ ಹಿತ ನಮಗೆ ಬಹಳ ಮುಖ್ಯ ಆದುದರಿಂದ, ಇದಕ್ಕೆ ಏನು ಸೆಸ್ ಹಾಕಬೇಕು ಅದನ್ನು ನಾವು ಪರಿಶೀಲನೆ ಮಾಡುತ್ತೇವೆ ಸರ್ಕಾರ ಇದರ ಮೇಲೆ ಕ್ರಮ ಜರುಗಿಸುತ್ತದೆ ಆಗಸ್ಟ್‌ನಿಂದ ಹಿಡಿದು ಡಿಸೆಂಬರ್‌ವರೆಗೆ ಕೂಡ ಹಾಲಿನ ದರವನ್ನು ಎಲ್ಲಾ ಯೂನಿಯನ್‌ಗಳೂ ಕಡಿಮೆ ಮಾಡುತ್ತವೆ ಕೋಲಾರ ಜಿಲ್ಲೆಯೊಂದರಲ್ಲೇ 71/2 ಲಕ್ಷ ಲೀಟರ್ ಹಾಲು ಒಂದೇ ದಿವಸಕ್ಕೆ ಉತ್ಪತ್ತಿಯಾಗುತ್ತದೆ ಇವೆಲ್ಲಾ ಕಾರಣಗಳಿಂದ ರೈತರಿಗೆ

ದರವನ್ನು ಕಡಿಮೆ ಮಾಡುವ ಪರಿಸ್ಥಿತಿ ಕೂಡ ಬರುತ್ತದೆ ಹಾಗಾಗಿ ಇದರ ಮೇಲೆ ಕ್ರಮ ಜರುಗಿಸುತ್ತೇನೆಂದು ನಾನು ತಮ್ಮ ಮೂಲಕ ಅವರಿಗೆ ಹೇಳಲಿಚ್ಛೆಪಡುತ್ತೇನೆ

**ಶ್ರೀ ಜೆಸಿ ಮಾಧುಸ್ವಾಮಿ** ನೀವು ಸೆಸ್ ಹಾಕುವುದಕ್ಕೆ ಆಗುವುದಿಲ್ಲ ಫುಡ್ ಅಡಲ್ಟರೇಷನ್ ಆಕ್ಟ್ ಮೇಲೆ ನಿಮ್ಮ ಡಿಸಿಗಳೇ ಅವರ ಮೇಲೆ ಕ್ರಮ ಜರುಗಿಸಬಹುದು ಅಲ್ಲಿ ಡಬಲ್ ಆಕ್ಸೆಸಿನಲ್ಲೇ ಹಾಲು ಕಲೆಕ್ಟ್ ಮಾಡುತ್ತಾರೆ ಹಸು ಹಾಲು ಬೇರೆ, ಎಮ್ಮೆ ಹಾಲು ಬೇರೆ ಎಂದು ಕಲೆಕ್ಟ್ ಮಾಡುತ್ತಾರೆ ಕರ್ನಾಟಕಕ್ಕೆ ಬರುವ ಹಾಲು ಸ್ಟಾಂಡರ್ಡೈಸ್ಡ್ ಮಿಲ್ಕ್ ಅಲ್ಲ ಮೂರುವರೆ ಪರ್ಸೆಂಟ್ ಫ್ಯಾಟ್, ಎಂಟೂವರೆ ಪರ್ಸೆಂಟ್ ಎಸ್‌ಎನ್ ಎಫ್ ಇರುವ ಹಾಲು ಇಲ್ಲಿ ಬರುತ್ತಿಲ್ಲ ಗಂದಿ ಹಾಲು ಅದನ್ನು homogeneous ಮಾಡಿ, ಕಡೆದು, ಬೆಳ್ಳಗೆ ಮಾಡಿ ಇಲ್ಲಿ ತಂದು ಮಾರುತ್ತಿದ್ದಾರೆ ಸ್ವಲ್ಪ ಡಿ ಸಿ ಗಳನ್ನು ಕರೆದು, ಸ್ವಲ್ಪ ತೆಗೆದುಕೊಂಡು ಹೋಗಿ ಲ್ಯಾಬ್‌ಗೆ ಕೊಡಿ ಎಂದು ಹೇಳಿ ಪೂರಾ ಹೆರಿಟೇಜ್ ಹಾಲು, ಮತ್ತೊಂದು ಕಂಪನಿ ಹಾಲು ನಿಲ್ಲಿಸಬಹುದು, ಅವರು ಬೆಣ್ಣೆ ಎಲ್ಲಾ ತೆಗೆದುಕೊಂಡು ಇಲ್ಲಿ ಬಿಳಿ ನೀರು ಕೊಡುತ್ತಿದ್ದಾರೆ ಬೆಣ್ಣೆ ಇದ್ದರೆ ತಮಗೆ ಗೊತ್ತು, ತಾವು ಅನಿಮಲ್ ಹಸ್ಬೆಂಡ್ರಿ ಮಿನಿಸ್ಟರ್ ಆಗಿದ್ದವರು, ಅದು ಹಳದಿ ಬಣ್ಣಕ್ಕೆ ಬರುತ್ತದೆ ಜನರಿಗೆ ಬಿಳಿ ಬಣ್ಣದ ಮೇಲೆ ಸ್ವಲ್ಪ ಆಸಕ್ತಿ ಜಾಸ್ತಿ ಇರುವುದರಿಂದ ಆ ಹಾಲಿನ ಕಡೆಗೆ ಹೋಗುತ್ತಿದ್ದಾರೆ ಫುಡ್ ಅಡಲ್ಟ್ರೇಷನ್ ಆಕ್ಟ್ ಕೆಳಗಡೆ ಕ್ರಮ ಜರುಗಿಸಬಹುದು ಆ ಕ್ರಮ ಕೈಗೊಳ್ಳುತ್ತೀರಾ ಎಂದು ನಾನು ಕೇಳುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ** ಅದರ ಬಗ್ಗೆ ಪರಿಶೀಲಿಸುತ್ತೇನೆ

**ಶ್ರೀ ವಾಟಾಳ್ ನಾಗರಾಜ್** ನಮ್ಮ ರಾಜ್ಯದ ಹಾಲು ಉತ್ಪಾದಕರಿಗೆ ತೊಂದರೆ ಇದೆ ಎಂಬುದು ತಮಗೆ ಗೊತ್ತಿಗೆ. ಸುಮಾರು 4–6 ವರ್ಷಗಳಿಂದ ತೊಂದರೆ ಕೊಡುತ್ತಿದ್ದಾರೆ ಹೇಗಾದರೂ ಮಾಡಿ ಇದನ್ನು ತಡೆಹಿಡಿಯುವುದಕ್ಕೆ ತೀವ್ರವಾದ ಕ್ರಮವನ್ನು ತಾವು ಕೈಗೊಳ್ಳಬೇಕಾಗುತ್ತದೆ ಆ ರೀತಿ ತಾವು ಕ್ರಮ ಕೈಗೊಳ್ಳಲಿಲ್ಲವೆಂದರೆ ನಮ್ಮ ರಾಜ್ಯದ ಉತ್ಪಾದಕರಿಗೆ ಬಹಳ ತೊಂದರೆಯಾಗುತ್ತದೆ ಅದರ ಜೊತೆಗೆ ನಮ್ಮಲ್ಲಿ ತಯಾರಾಗತಕ್ಕ ಹಾಲಿನಲ್ಲಿ ಎಮ್ಮೆ ಹಾಲು ಎಷ್ಟು? ಹಸುವಿನ ಹಾಲು ಎಷ್ಟು? ನಿಮಗೆ ಏನಾದರೂ ಮಾಹಿತಿ ಇದೆಯೇ? ಎಮ್ಮೆ ಹಾಲು ಕುಡಿದರೆ ಮಂದಗತಿ ಎನ್ನುವುದು ಇದೆ, ಹಸುವಿನ ಹಾಲು ಕುಡಿದರೆ ಚುರುಕು ಎಂದು ಇದೆ, ನೀವು ಎಮ್ಮೆ ಹಾಲನ್ನು ಎಲ್ಲಿ ಹಂಚುತ್ತೀರಿ? ಹಸುವಿನ ಹಾಲನ್ನು ಎಲ್ಲಿ ಹಂಚುತ್ತೀರಿ ಅಥವಾ ಒಟ್ಟಿಗೆ ಎರಡನ್ನೂ ಬೆರಕೆ ಮಾಡಿ ಹಂಚುತ್ತೀರಾ? ಇವೆರಡು ಅಂಶಗಳನ್ನು ತಾವು ದಯಮಾಡಿ ಸ್ಪಷ್ಟಪಡಿಸಬೇಕು ನಾನು ಹಾಸ್ಯ ಮಾಡಲಿಕ್ಕೆ ಕೇಳುತ್ತಿಲ್ಲ, ತಾವು ಸ್ಪಷ್ಟವಾಗಿ ಹೇಳಬೇಕು ಎಮ್ಮೆ ಹಾಲು ಕುಡಿದರೆ ಬುದ್ಧಿಮಾಂದ್ಯವೆಂದು ಹೇಳುತ್ತಾರೆ, ಹಸುವಿನ ಹಾಲು ಕುಡಿದರೆ ಚುರುಕು ಎಂದು ಹೇಳುತ್ತಾರೆ, ಇವರೆಡನ್ನೂ ಒಟ್ಟಿಗೆ ಹಾಕಿದರೆ ಏನಾಗಬಹುದು? ಆದ್ದರಿಂದ ತಾವು ಪರಿಣಿತರು ಈ ಬಗ್ಗೆ ಹೇಳಬೇಕು

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಎರಡು ಒಟ್ಟಿಗೆ ಆದರೆ ಅದು ವಾಟಾಳ್ ನಾಗರಾಜ್ ತರಹ ಆಗುತ್ತದೆ ಎಮ್ಮೆ ಹಾಲು ಹಸುವಿನ ಹಾಲು ಎರಡೂ ಒಗ್ಗಟ್ಟು ಆದರೆ ವಾಟಾಳ್ ನಾಗರಾಜ್ ತರಹ ಇರುತ್ತದೆ ಇಲ್ಲಾಂದ್ರೆ ಇವರ ತರಹ ಇರುತ್ತದೆ

**ಶ್ರೀ ಜೆ.ಸಿ ಮಾಧುಸ್ವಾಮಿ** ಮೇಕೆ ಹಾಲು ಎಷ್ಟು ಚುರುಕು ಎಂಬುದನ್ನು ಹೇಳಿ

**ಶ್ರೀ ಕೆ ಶ್ರೀನಿವಾಸಗೌಡ** ನಿಮ್ಮಷ್ಟು ಚುರುಕು ಇಲ್ಲಿ ಯಾರಿಗೂ ಇಲ್ಲ, ಅಷ್ಟು ಚುರುಕು ಇದ್ದೀರಿ, ಅದುದರಿಂದ ನೀವು ಹಸುವಿನ ಹಾಲನ್ನೇ ಕುಡಿಯುತ್ತೀರಿ, ನಾವು ಎಮ್ಮೆ

ಹಾಲನ್ನೇ ಕುಡಿಯುತ್ತೇವೆ, ಆದರೆ ನೀವು ಕೇಳಿದಂಥ ಮಾಹಿತಿ ಈಗ ನನ್ನ ಹತ್ತಿರ ಇಲ್ಲ ನಂತರ ತರಿಸಿ ತಮಗೆ ಕಳುಹಿಸುತ್ತೇನೆ

**ಶ್ರೀ ವಾಟಾಳ್ ನಾಗರಾಜ್** ಮಂತ್ರಿಗಳ ಮನೆಗಳಿಗೆ ಹಸುವಿನ ಹಾಲು ಕಳುಹಿಸುತ್ತಾರೆ, ಶಾಸಕರ ಭವನಕ್ಕೆ ಎಮ್ಮೆ ಹಾಲನ್ನೇ ಕಳುಹಿಸುತ್ತಾರೆ, ಈ ತಾರತಮ್ಯ ಏಕೆ? ಹೀಗಾಗಿ ಶಾಸಕರಿಗೆ ಚುರುಕು ಇಲ್ಲದೇ ಸ್ವಲ್ಪ ಯದ್ವತದ್ವಾ ಆಗುವ ಪರಿಸ್ಥಿತಿ ಇದೆಯೆಂದು ನಾನು ತಿಳಿದಿದ್ದೇನೆ, ಮಾನ್ಯ ಸಚಿವರಿಗೆ ನಾನು ಕೇಳಿಕೊಳ್ಳುತ್ತೇನೆ, ಇದು ಒಳ್ಳೆಯದಲ್ಲ, ತಾವು ಮಂತ್ರಿಗಳ ಮನೆಗಳಿಗೆ ಮಾತ್ರ ಹಸುವಿನ ಹಾಲು ಕಳುಹಿಸುವುದು, ಇಲ್ಲಿ ಶಾಸಕರ ಭವನಕ್ಕೆ ಎಮ್ಮೆ ಹಾಲು ಕಳುಹಿಸತಕ್ಕಂಥದ್ದು, ಸರಿಯಲ್ಲ ನಾನು ಬಹಳ ತೀವ್ರವಾಗಿ ಇದನ್ನು ಆಕ್ಷೇಪಣೆ ಮಾಡುತ್ತೇನೆ ಅದುದರಿಂದ, ಮಾನ್ಯ ಸಚಿವರು ಬಹಳ ಸ್ಪಷ್ಟವಾಗಿ ಹೇಳಬೇಕು

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಇವರು ಸುಳ್ಳು ಹೇಳುತ್ತಿದ್ದಾರೆ

**ಶ್ರೀ ಜೆ ಸಿ ಮಾಧುಸ್ವಾಮಿ** ನಮ್ಮದು ಒಂದು ತಕರಾರು ಇದೆ

**ಶ್ರೀ ಎಂ ಪಿ ಪ್ರಕಾಶ್** ಯದ್ವತದ್ವಾ ಆಗುವುದು ಹಾಲಿನಿಂದ ಅಲ್ಲ ಆಲ್ಕೋಹಾಲ್‌ನಿಂದ!

**ಶ್ರೀ ಜೆ ಸಿ ಮಾಧುಸ್ವಾಮಿ** ಎಮ್ಮೆ ಹಾಲನಲ್ಲಿ ಬೆಣ್ಣೆ ಅಂಶ ಜಾಸ್ತಿ ಇರುತ್ತದೆ ನಮಗೆ ಒಂದಿಷ್ಟು ಎಮ್ಮೆ ಹಾಲು ಕಳುಹಿಸಲಿಕ್ಕೆ ಹೇಳಿ, ಶ್ರೀ ವಾಟಾಳ್ ನಾಗರಾಜ್‌ರವರಿಗೆ ಹಸುವಿನ ಹಾಲು ಕಳುಹಿಸಿಬಿಡಿ ನಾವು ಹೇಳುತ್ತಿರುವುದು, ನಿಮ್ಮ ಹಸುವಿನ ಹಾಲಿನಲ್ಲಿ ನೀರು ಜಾಸ್ತಿ, ಬೆಣ್ಣೆ ಕಡಿಮೆ ಎಂದರೆ, ಅವರು ಎದ್ದುಬಿಟ್ಟು ಎಮ್ಮೆ ಹಾಲು ಕಳುಹಿಸಬೇಡಿ, ನಮಗೆ ಹಸುವಿನ ಹಾಲು ಕಳುಹಿಸಿಕೊಡಿ ಎಂದರೆ ಶಾಸಕರೆಲ್ಲರ ಕೋಆಪರೇಷನ್ ಇದಕ್ಕೆ ಇಲ್ಲ ಅವರು ಬೇಕಾದರೆ ತರಿಸಿಕೊಳ್ಳಲಿ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಇವರು ಸುಳ್ಳು ಹೇಳುತ್ತಿದ್ದಾರೆ, ಶಾಸಕರಿಗೆ ಎಮ್ಮೆ ಹಾಲು ಬರುತ್ತಿಲ್ಲ, ಇದೂ ಬರುತ್ತಿಲ್ಲ, ಮೇಕೆ ಹಾಲು ಕುಡಿದರೆ ಮಾತ್ರ ಬಾರೀ ಚುರುಕು, ಅದನ್ನು ಮಾನ್ಯ ವಾಟಾಳ್ ನಾಗರಾಜ್ ಅವರು ಯಾರಿಗೂ ಗೊತ್ತು ಇಲ್ಲದ ಹಾಗೆ ಕದ್ದು ಕುಡಿಯುತ್ತಿದ್ದಾರೇನೋ? ಇಲ್ಲಿ ಸುಮ್ಮನೆ ಅಪವಾಸ ಮಾಡುತ್ತಿದ್ದಾರೆ ಅವರು

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಮಂತ್ರಿಗಳು, ಹೊರಗಡೆಯಿಂದ ಬರತಕ್ಕಂಥ ಹಾಲನ್ನು ತಡೆಯುವುದಕ್ಕೆ ತಾವು ಸ್ಪಷ್ಟವಾದ ಉತ್ತರವನ್ನು ನನಗೆ ಕೊಡಬೇಕು

**ಶ್ರೀ ಶ್ರೀನಿವಾಸಗೌಡ** ಹೊರಗಡೆಯಿಂದ ಬರತಕ್ಕ ಹಾಲನ್ನು ತಡೆಯಬೇಕು ಎನ್ನುವುದರಲ್ಲಿ ಎರಡನೇ ಮಾತಿಲ್ಲ ಅದಕ್ಕೆ ಸಹಕಾರ ಸಂಘಗಳಿಂದ ಬರುವಂಥ ಹಾಲಿಗೆ ನಾವು ಸೆಸ್ ಹಾಕಲಿಕ್ಕೆ ಬರುವುದಿಲ್ಲ ಪ್ರೈವೇಟ್ ನಿಂದ ಬರುವಂಥ ಹಾಲಿಗೆ ನಾವು ಸೆಸ್ ಹಾಕಬೇಕಾಗುತ್ತದೆ ಎನ್ನುವ ತೀರ್ಮಾನಕ್ಕೆ ಸರ್ಕಾರ ಬರಬೇಕಾಗುತ್ತದೆ, ನಮ್ಮ ಹಾಲನ್ನು ಕಳುಹಿಸುವಾಗ ನೀವು ಸೆಸ್ ಹಾಕಬಾರದು ಎಂದು ಹೇಳುವುದು ಒಂದು ಕಡೆ, ಇನ್ನೊಬ್ಬರ ಹಾಲು ಬರುವಾಗ ನೀವು ಸೆಸ್ ಹಾಕಬೇಕು ಎಂದು ಹೇಳುವುದು ತಪ್ಪಾಗುತ್ತದೆ ಎಲ್ಲರಿಗೂ ಒಂದೇ ರೀತಿಯಲ್ಲಿ ನೋಡಬೇಕಾಗುತ್ತದೆ ಹೀಗಾಗಿ ಪ್ರೈವೇಟ್‌ನಿಂದ ಬರುವಂಥದ್ದನ್ನು ನಿಲ್ಲಿಸುವುದಕ್ಕೆ, ಸೆಸ್ ಹಾಕುವಂಥ ಕೆಲಸ ಮಾಡುವಂತೆ ಸೂಚನೆ ಕೊಡೋಣ

**ಗೊಂದಲ**

**ಶ್ರೀ ವಾಟಾಳ್ ನಾಗರಾಜ್** ಸರ್ಕಾರ ತೆಗೆದುಕೊಂಡಿರತಕ್ಕಂಥದ್ದು ತೀರ್ಮಾನ ಹಾಲು ಉತ್ಪಾದಕರಿಗೆ ಮಾರಕ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ ಏಕೆಂದರೆ, ಕೋಲಾರ ಜಿಲ್ಲೆಯಿಂದ ಬಂದಿರತಕ್ಕಂಥ ನಮ್ಮ ಮಾನ್ಯ ಬೈರೇಗೌಡರವರು ಇಲ್ಲಿಯೇ ಕುಳಿತಿದ್ದರು, ಅವರನ್ನು ಇವತ್ತು ನೆನಪಿಸಿಕೊಳ್ಳಬೇಕು, ಇದರ ಬಗ್ಗೆ ಆಳವಾಗಿ ಅಭ್ಯಾಸ ಮಾಡಿ ತೀವ್ರವಾಗಿ ಹೋರಾಟ ಮಾಡಿದಂಥ ವ್ಯಕ್ತಿ, ಇವತ್ತು ಅವರನ್ನು ನೆನಪಿಸಿಕೊಳ್ಳಬೇಕು, ತಾವು ಬಂದಿದ್ದೀರಿ, ಈ ಬಗ್ಗೆ ಸ್ಪಷ್ಟವಾಗಿ ಹೇಳಿ, ಖಂಡಿತ ನಾವು ನಾಳೆಯಿಂದ ನಿಲ್ಲಿಸುತ್ತೇವೆ, ಅಧಿಕಾರಿಗಳಿಗೆ ಹೇಳುತ್ತೇವೆ, ಜಿಲ್ಲಾಧಿಕಾರಿಗಳಿಗೆ ಹೇಳುತ್ತೇವೆ, ಪೊಲೀಸ್ ಇಲಾಖೆಗೆ ಹೇಳುತ್ತೇವೆ, ಗಡಿಯಲ್ಲಿ ತಡೆಯುತ್ತೇವೆ, ಅದು ತಾವು ಸ್ಪಷ್ಟವಾಗಿ ಹೇಳಬೇಕು

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಸರ್ಕಾರಕ್ಕೆ ತಡೆಹಿಡಿಯಲಿಕ್ಕ ಬೇರೆ ರೀತಿಯ ವಿಧಾನಗಳು ಇವೆ ಎಲ್ಲಾ ವಿಧಾನಗಳನ್ನು ಉಪಯೋಗಿಸಿ, ಏಕೆ ನೀವು ಬಿಡುತ್ತೀರಿ? ಮಾನ್ಯ ಮಾಧುಸ್ವಾಮಿ ಯವರು ಒಂದು ಸಲಹೆ ಹೇಳಿದರು, ಡಿಸಿಗಳ ಮುಖಾಂತರ ಅಡಲ್ಟ್ರೇಷನ್ ಆ್ಯಕ್ಟ್‌ನಲ್ಲ ಕೇಸ್ ಬುಕ್ ಮಾಡಿ, ಅವರು ಬರುವುದಿಲ್ಲವೆಂದು ಹೇಳಿದರು ಆ ರೀತಿಯಾದ ಹಲವಾರು ರೀತಿಯಾಗಿಂದ ಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ಸರ್ಕಾರಕ್ಕೆ ಸಾಧ್ಯತೆಯಿದೆ ಅದುದರಿಂದ, ಆ ಎಲ್ಲಾ ಸಾಧ್ಯತೆಗಳನ್ನು ಉಪಯೋಗಿಸಿ ಹಾಲನ್ನು ಖಂಡಿತವಾಗಿ ನಮ್ಮ ಜಿಲ್ಲೆಗೆ ಅಥವಾ ನಮ್ಮ ರಾಜ್ಯಕ್ಕ ಬಾರದೇ ಇರುವ ರೀತಿಯಲ್ಲಿ ಮಾಡುತ್ತೇನೆ ಎನ್ನುವ ಭರವಸೆ ಕೊಡಿ ಏಕೆ ನೀವು ಹಿಂದು ಮುಂದು ನೋಡುತ್ತೀರಿ?

**ಶ್ರೀ ಕೆ ಶ್ರೀನಿವಾಸಗೌಡ** ಏನೇನು ಕ್ರಮಗಳನ್ನು ಜರುಗಿಸಬೇಕು ಎನ್ನುವುದನ್ನು ಪರಿಶೀಲಿಸಿ ಕ್ರಮವನ್ನು ಜರುಗಿಸುತ್ತೇನೆ

**ಗೊಂದಲ**

**ಅಧ್ಯಕ್ಷರು** ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು, ಈ ಪ್ರಶ್ನೋತ್ತರಗಳು ಆರಂಭವಾಗಿ ಎರಡೂವರೆ ಗಂಟೆಗಳ ಕಾಲ ಆಯಿತು ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

**ಗೊಂದಲ**

**ಶ್ರೀ ವಾಟಾಳ್ ನಾಗರಾಜ್** ಸರ್ಕಾರದ ಉತ್ತರ ನಮಗೆ ತೃಪ್ತಿಯಾಗಿಲ್ಲ, ಹೀಗಾಗಿ ಇದರ ಬಗ್ಗೆ ಪ್ರತಿಭಟನೆ ನಾನು ಸಭಾತ್ಯಾಗ ಮಾಡುತ್ತೇನೆ

**(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಸಭಾತ್ಯಾಗ ಮಾಡಿದರು)**

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು–**

**(ದಿ 28-7-2004)**

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ, ಮತ್ತು, ಸಂಸದೀಯ ವ್ಯವಹಾರಗಳ ಸಚಿವರು)** ಮಾನ್ಯ ಅಧ್ಯಕ್ಷರೇ, ದಿನಾಂಕ 28–7–2004ರ 7ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 80 ಪ್ರಶ್ನೆಗಳ ಪೈಕಿ 68 ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ (ಅನುಬಂಧ–I)

**ಅಧ್ಯಕ್ಷರು** *ಮಂಡಿಸಲಾಯಿತು * ಅನುಬಂಧ–I

## 2 ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರು)** ಮಾನ್ಯ ಅಧ್ಯಕ್ಷರೆ, ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ 2002ರ ಸೆಕ್ಷನ್ 3(1)ರ ಮೇರೆಗೆ – **"ಪ್ರಸ್ತುತ ಆರ್ಥಿಕ ವರ್ಷದ ಕರ್ನಾಟಕ ಮಧ್ಯಮಾವಧಿ ಆರ್ಥಿಕ ಯೋಜನೆ 2004-05 ರಿಂದ 2007-08ರ"ರ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ**

**ಅಧ್ಯಕ್ಷರು** ಮಂಡಿಸಲಾಯಿತು

**ಅಧ್ಯಕ್ಷರು** ಈಗ ಶೂನ್ಯವೇಳೆ ಮಾನ್ಯ ಬಿ.ಸಿ ಪಾಟೀಸಲ್‌ರವರು.. ನಾನು ಅವರನ್ನು ಕರೆದಿದ್ದೇನೆ, ಎಲ್ಲರೂ ಕುಳಿತುಕೊಳ್ಳಿ ಎಲ್ಲರಿಗೂ ಅವಕಾಶ ಕೊಡುತ್ತೇನೆ.

## 3 ಹಕ್ಕುಚ್ಯುತಿ ಪ್ರಸ್ತಾವ

### ವಿಧಾನ ಸಭೆಯಲ್ಲಿ ಸಿ ಇ ಟಿ ಮಸೂದೆ ಅಂಗೀಕಾರವಾಗಿರುವುದರ ಬಗ್ಗೆ

**ಶ್ರೀ ಕೆ.ಎನ್ ರಾಜಣ್ಣ** ನಾನು ಕಳೆದ ಮೂರು ದಿವಸಗಳಿಂದಲೂ ಬಹಳ ಮಹತ್ತರವಾದ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ತಮ್ಮನ್ನು ಕೇಳುತ್ತಿದ್ದೇನೆ. ದಯಮಾಡಿ ನನಗೆ ಅವಕಾಶ ಮಾಡಿಕೊಡಿ...

**ಅಧ್ಯಕ್ಷರು** ರಾಜಣ್ಣನವರೇ, ನಾನು ಈಗ ಮಾನ್ಯ ಪಾಟೀಲರನ್ನು ಕರೆದಿದ್ದೇನೆ

**ಶ್ರೀ ಕೆ ಎನ್ ರಾಜಣ್ಣ** ನಾನು ನಿಮ್ಮ ಹತ್ತಿರ ಬಂದು ನಿಯಾಮಾವಳಿ 191ರ

**ಅಧ್ಯಕ್ಷರು** ರಾಜಣ್ಣನವರೇ, ನಿಮಗೂ ಅವಕಾಶ ಕೊಡುತ್ತೇನೆ, ಈಗ ನಾನು ಅವರನ್ನು ಕರೆದಿದ್ದೇನೆ..

**ಶ್ರೀ ಕೆ ಸನ್ ರಾಜಣ್ಣ** ತಾವು ಏನು ಹೇಳಿದಿರಿ ಅಂದರೆ, ಪ್ರಶ್ನೋತ್ತರ ಮುಗಿದು ಶೂನ್ಯವೇಳೆ ತೆಗೆದುಕೊಳ್ಳುವುದಕ್ಕಿಂತ ಮುಂಚೆ ನಿಮ್ಮನ್ನು ಕರೆಯುತ್ತೇನೆಂದು ಹೇಳಿದಿರಿ ಅದಕೋಸ್ಕರ ನಾನು ತಮ್ಮ ಅಪಣೆ ಪಡೆದು ಎದ್ದುನಿಂತು ಈ ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆ

**ಅಧ್ಯಕ್ಷರು** ಪಾಟೀಲ್‌ರೇ, ನಂತರ ನಿಮಗೆ ಅವಕಾಶ ಕೊಡುತ್ತೇನೆ ದಯಮಾಡಿ ಕುಳಿತುಕೊಳ್ಳಿ

**ಶ್ರೀ ಕೆ ಎನ್ ರಾಜಣ್ಣ (ಬೆಳ್ಳಾವಿ)** ಸನ್ಮಾನ್ಯ ಅಧ್ಯಕ್ಷರೇ, ಈ ನಿಯಾಮಾವಳಿ 191ರನ್ವಯ ನಾನು 2ನೇ ತಾರೀಖು ನಿಮಗೆ ಒಂದು ಸೂಚನೆಯನ್ನು ಕೊಟ್ಟು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅನುಮತಿ ಕೇಳಿದ್ದೆ, ತಾವು ಅನುಮತಿ ಕೊಟ್ಟಿದ್ದೀರಿ ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಿಯಾಮಾವಳಿ 191 ಹಕ್ಕುಬಾಧ್ಯತಾ ಪ್ರಶ್ನೆ, ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಸದಸ್ಯರ ಅಥವಾ ಸದನದ ಅಥವಾ ಸದನ ಸಮಿತಿಯ ಹಕ್ಕುಚ್ಯುತಿ ವಿಷಯವನ್ನು ಎತ್ತಬಹುದು ಇದು ನಿಯಾಮಾವಳಿಯಲ್ಲಿ ಇರುವುದು ತಾವು ಈಗಾಗಲೇ ನನಗೆ ಅನುಮತಿಯನ್ನು ಕೊಟ್ಟಿದ್ದೀರಿ ನನ್ನ ಪ್ರಮುಖವಾದ ವಿಚಾರ ಎಂದರೆ, ಈ ರಾಜ್ಯದಲ್ಲಿ ಸಿಇಟಿ ರಾಮಾಯಣ ಬಹಳ ಗೊಂದಲವನ್ನುಂಟು ಮಾಡಿರುವುದು ಅದು ರಾಮಾಯಣ ನಡೆಯುತ್ತಿದೆ ಇದರ ಪೂರಕವಾಗಿ ಈ ಸಭೆಯಲ್ಲಿ ಕೂಡ ಈ ಸದನ ಏನು ಒಂದು ಐತಿಹಾಸಿಕ ರರಾವನ್ನು ಕೂಡ ಪಾಸ್ ಮಾಡಿದೆ

ಮತ್ತು ಐತಿಹಾಸಿಕ ಮಸೂದೆಯನ್ನು ಕೂಡ ಪಾಸ್ ಮಾಡಿದೆ ಎನ್ನುವ ಹೆಗ್ಗಳಿಕೆಯನ್ನು ಈ ವಿಧಾನ ಮಂಡಲ ತೆಗೆದುಕೊಂಡಿದೆ ಆದರೆ, ತಾವು ಮಸೂದೆಯನ್ನು ಮತಕ್ಕೆ ಹಾಕುವ ಸಂದರ್ಭದಲ್ಲಿ ಪರವಾಗಿ ಇರತಕ್ಕಂಥವರು ಹೌದು, ಎನ್ನಬೇಕು ಎಂದು ಮೂರು ಸಲ ಕರೆಯುತ್ತೀರಿ, ನಾವು ಎಲ್ಲಾ ಕುಳಿತುಕೊಂಡು ಹೌದು, ಹೌದು, ಹೌದು, ಎಂದು ಮೂರು ಸಾರಿ ಕೂಗಿ ಹೇಳಿರುತ್ತೇವೆ, ನಂತರ ನೀವು ಮಸೂದೆ ಪಾಸ್ ಆಗಿದೆ ಪಾಸ್ ಆಗಿದೆ ಎಂದು ನೀವು ಹೇಳುತ್ತೀರಿ, ಇದು ಈ ಸದನ ಒಂದು ಮಸೂದೆಯನ್ನು ಅಂಗೀಕಾರ ಮಾಡತಕ್ಕಂಥ ಸಂದರ್ಭದಲ್ಲಿ ನಡೆಯತಕ್ಕಂಥ ನಡವಳಿಕೆ, ನನ್ನ ಆಕ್ಷೇಪ, ನನ್ನ ಒಂದು ಪ್ರಶ್ನೆ ತಮ್ಮ ಮುಂದೆ ಹೇಳುವುದು ಏನೆಂದರೆ, ಇಲ್ಲಿ 75:25ರ ಅನುಪಾತಕ್ಕೆ ಒಪ್ಪಿ ನಾವು ನಿರ್ಣಯವನ್ನು ಹಾಗೂ ಮಸೂದೆಯನ್ನು ಪಾಸ್ ಮಾಡಲಿಕ್ಕೆ ಒಪ್ಪಿಗೆಯನ್ನು ಕೊಟ್ಟಿರುವ ಬಹುತೇಕ ಗೌರವಾನ್ವಿತ ಸದಸ್ಯರುಗಳು, ಅವರು ಕಾಮೆಡ್-ಕೆ ನಲ್ಲಿ ಸದಸ್ಯರಾಗಿ ಆ ಮೂಲಕ ನಾವು ಇದನ್ನು ಒಪ್ಪುವುದಿಲ್ಲ ಎನ್ನುವ ರೀತಿಯಲ್ಲಿ ಸುಪ್ರೀಂಕೋರ್ಟಿಗೆ ಹೋಗತಕ್ಕಂಥ......

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ನಾನು ಪಾಯಿಂಟ್ ಅಫ್ ಆರ್ಡ್‌ರ್ ಎತ್ತುತ್ತೇನೆ ಜೀರೋ ಅವರ್‌ನಲ್ಲಿ ಪ್ರಿವಿಲೇಜ್ ಮೋಷನ್ ಬಗ್ಗೆ ಮೂವ್ ಮಾಡುವುದು ಸರಿಯಾದ ಕ್ರಮವಲ್ಲ ಅದಕ್ಕ ಬೇರೆ ನಿಯಮ ಇದೆ, ನಿಯಮದಡಿಯಲ್ಲಿ ಮಾತ್ರ ಅದನ್ನು ಎತ್ತಬೇಕಾಗುತ್ತದೆ ಜೀರೋ ಅವರ್ ನಲ್ಲಿ ಎತ್ತತಕ್ಕ ಪ್ರಶ್ನೆಯಲ್ಲ, ಅದುದರಿಂದ ಇದು ಸರಿಯಾದ ಕ್ರಮ ಅಲ್ಲವೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ

**ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್** ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡ್‌ರ್ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ

**ಅಧ್ಯಕ್ಷರು** ಮಾನ್ಯ ರಾಜಣ್ಣನವರೆ, ತಾವು ಏನು ಹೇಳಬೇಕೆಂದು ಇದ್ದೀರೋ ಅದನ್ನು ಬೇಗ ಹೇಳಿ ತಮ್ಮ ಮಾತನ್ನು ಮುಗಿಸಿ

**ಶ್ರೀ ಕೆ ಎನ್ ರಾಜಣ್ಣ** ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ನಾನು ಈಗಾಗಲೇ ನಿಯಮಾವಳಿ ಪ್ರಕಾರವೇ ಸೂಚನಾ ಪತ್ರವನ್ನು ಕೊಟ್ಟಿದ್ದೇನೆ ತಾವು ನನಗೆ ವಿಷಯ ಪ್ರಸ್ತಾಪಿಸಲು ಅನುಮತಿ ಕೊಟ್ಟಿದ್ದೀರಿ ಆದರೂ ಕೂಡ ಮಾನ್ಯ ಸದಸ್ಯರು ಕ್ರಿಯಾಲೋಪವನ್ನು ಎತ್ತುತ್ತಿದ್ದಾರೆ

**ಅಧ್ಯಕ್ಷರು** ಆ ವಿಷಯ ಮುಗಿಯಿತು ಈಗ ತಾವೇನು ಹೇಳಬೇಕಾಗಿದೆಯೋ ಅದನ್ನು ಬೇಗ ಹೇಳಿ

**ಶ್ರೀ ಕೆ ಎನ್ ರಾಜಣ್ಣ** ಸನ್ಮಾನ್ಯ ಅಧ್ಯಕ್ಷರೆ, ವೃತ್ತಿ ಶಿಕ್ಷಣ ಕೋರ್ಸ್‌ಗೆ 75 25ರ ಅನುಪಾತಕ್ಕೆ ನಾವೆಲ್ಲರೂ ಒಪ್ಪಿ ಮಸೂದೆಯನ್ನು ಪಾಸ್ ಮಾಡಿಕೊಟ್ಟಿದ್ದೇವೆ. ಇಲ್ಲಿ ಮತ್ತು ಆ ಮನೆಯಲ್ಲಿರತಕ್ಕಂಥ ಸದಸ್ಯರುಗಳು ಕಾಮೇಡ್-ಕೆ ಸದಸ್ಯರುಗಳಾಗಿ, ನಾವು ಇಲ್ಲಿ ಮಾಡಿರತಕ್ಕಂಥದ್ದನ್ನು ಒಪ್ಪುವುದಿಲ್ಲವೆಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಹೇಳುವುದರ ಮೂಲಕ ಉಭಯ ಸದನಗಳನ್ನು ಅಪಮಾನಕ್ಕೆ ಈಡುಮಾಡತಕ್ಕಂಥ ಒಂದು ಪರಿಸ್ಥಿತಿಯನ್ನು ಉದ್ಭವ ಮಾಡಿರ ತಕ್ಕಂಥದ್ದನ್ನು ತಮ್ಮ ಗಮನಕ್ಕೆ ತಂದು, ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸ್ಪಷ್ಟ ಮಾಡುವುದಕ್ಕೆ ನಾನು ಬಯಸುತ್ತೇನೆ ಇಲ್ಲ

ಅಗತಕ್ಕಂಥ ಮಸೂದೆಗಳನ್ನು ಪ್ರಶ್ನೆ ಮಾಡತಕ್ಕಂಥ ಹಕ್ಕು ಇವತ್ತಿನದಿವಸ ಎಲ್ಲಾ ನಾಗರೀಕರಿಗೂ ಕೂಡ ಇದೆ ನಾಗರೀಕರು ಪ್ರಶ್ನೆ ಮಾಡತಕ್ಕಂಥದ್ದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ ಆದರೆ ನನ್ನ ಆಕ್ಷೇಪ ಇರತಕ್ಕಂಥದ್ದು ಏನೆಂದರೆ, ನಮ್ಮ ಸದನದ ಗೌರವಕ್ಕೆ ಕುಂದು ಬಂದಿದೆ ಎನ್ನತಕ್ಕಂಥ ಮಾತನ್ನು ಹೇಳತಕ್ಕಂಥದ್ದು, ಈ ಸದನದಲ್ಲಿ ನಾವು ಸದಸ್ಯರಾಗಿ ಕುಳಿತು ಮಸೂದೆಗಳನ್ನು ಇಲ್ಲಿ ಪಾಸ್ ಮಾಡಿದ ನಂತರ ಆ ಮಸೂದೆ ಲಾ ಆಫ್ ದಿ ಲ್ಯಾಂಡ್ (ನೆಲದ ಕಾನೂನಾಗಿ) ಬಂದ ನಂತರ ಇಲ್ಲಿ ಪಾಸ್ ಮಾಡಿದಂಥವರೇ ಇದು ಸರಿಯಿಲ್ಲ ಎಂಬ ವಾದವನ್ನು ಹೊರಗಡೆ ಮಾಡಿದರೆ ಈ ಸದನಕ್ಕೆ ಅಗೌರವವನ್ನು ಸೂಚಿಸಿದಂತೆ ಆಗುತ್ತದೆ ಎನ್ನತಕ್ಕಂಥದ್ದು ನನ್ನ ವಾದವಾಗಿದೆ ಸಿ ಇ ಟಿ ರಾಮಾಯಣ ಏನು ನಡೆಯುತ್ತಿದೆ ಎಂದು ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ ಈ ರಾಮಾಯಣ ಇನ್ನೂ ಸಂಪೂರ್ಣ ರಾಮಾಯಣ ಆಗಿಲ್ಲ ಈ ಒಂದು ಸಿ ಇ ಟಿ ರಾಮಾಯಣದಲ್ಲಿ ರಾವಣದ ಪಾತ್ರ ಮತ್ತು ರಾಮನ ಪಾತ್ರವನ್ನು ಕೂಡ ಒಬ್ಬರೇ ಮಾಡುತ್ತಿದ್ದಾರೆ ಇದು ನಿಜಕ್ಕೂ ಕೂಡ ಅಪಹಾಸ್ಯಕರವಾದ ಒಂದು ಪ್ರಸಂಗ ಈ ಒಂದು ಹಿನ್ನಲೆಯಲ್ಲಿ ನಾನು ಈಗಾಗಲೇ ನಿಯಮಾವಳಿ 191ರ ಪ್ರಕಾರ ಸೂಚನೆ ಕೊಟ್ಟಿರುವಂತೆ ಇದನ್ನು ತಾವು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಬೇಕೆಂಬುದು ನನ್ನ ಆಗ್ರಹ ಮತ್ತೆ ಈ ಒಂದು ಹಕ್ಕುಬಾಧ್ಯತಾ ಸಮಿತಿಯಲ್ಲಿ ಈ ಎಲ್ಲಾ ವಿಷಯಗಳನ್ನು ವಿವರವಾಗಿ ಪರಿಶೀಲನೆ ಮಾಡಿ ಕ್ರಮವನ್ನು ಜರುಗಿಸತಕ್ಕಂಥದ್ದು ಸೂಕ್ತವೆಂದು ಹೇಳುತ್ತಾ ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಬೇಕೆಂದು ನಾನು ತಮ್ಮಲ್ಲಿ ಆಗ್ರಹ ಮಾಡುತ್ತೇನೆ

**ಅಧ್ಯಕ್ಷರು** ಇದನ್ನು ಪರಿಶೀಲನೆ ಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಆದ್ದರಿಂದ ತಾವು ದಯಮಾಡಿ ಕುಳಿತುಕೊಳ್ಳಬೇಕು ಈಗ ಮಾನ್ಯ ಬಿ ಸಿ ಪಾಟೀಲ್‌ರವರೆ, ತಾವು ಮಾತನಾಡಿ

**ಶ್ರೀ ಕೆ ಎನ್ ರಾಜಣ್ಣ** ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇಧರ ಬಗ್ಗೆ ಅವರ ಪ್ರತಿಕ್ರಿಯೆ ಏನು ಎಂಬುದನ್ನು ಹೇಳಬೇಕು

**ಅಧ್ಯಕ್ಷರು** ಅದನ್ನು ನಾನು ಪರಿಶೀಲನೆ ಮಾಡಿ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ

**ಶ್ರೀ ಕೆ ಎನ್ ರಾಜಣ್ಣ** ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಪ್ರತಿಕ್ರಿಯೆಯನ್ನು ಕೇಳಬೇಕಾಗುತ್ತದೆ ನಾನು ಹೇಳಿದ ನಂತರ ಸುಮ್ಮನೆ ಕುಳಿತು ಕೊಂಡರೆ ಏನು ಪ್ರಯೋಜನವಾಗುವುದಿಲ್ಲ ಇದೊಂದು ರೀತಿಯಲ್ಲಿ ಏನಾಗುತ್ತದೆಂದರೆ, ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ

**ಅಧ್ಯಕ್ಷರು** ಇದು ಪ್ರಿವಿಲೇಜ್‌ಗೆ ಬರುತ್ತದೆಯೇ ಅಥವಾ ಇಲ್ಲವೇ ಎನ್ನತಕ್ಕಂಥದ್ದನ್ನು ಮೊದಲು ಪರಿಶೀಲನೆ ಮಾಡಬೇಕಾಗಿದೆ ಮತ್ತೆ ಇದನ್ನು ಸರ್ಕಾರದ ಗಮನಕ್ಕೆ ತಂದು ಇದಕ್ಕೆ ಏನು ವ್ಯವಸ್ಥೆ ಮಾಡಬೇಕಾಗಿರುತ್ತದೆಯೋ ಅದನ್ನು ನಾನು ಖಂಡಿತ ಮಾಡುತ್ತೇನೆ ಆದ್ದರಿಂದ ತಾವು ದಯಮಾಡಿ ಕುಳಿತುಕೊಳ್ಳಬೇಕು

**ಶ್ರೀ ಕೆ ಎನ್ ರಾಜಣ್ಣ** ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಪ್ರತಿಕ್ರಿಯೆಯನ್ನು ನಾವು ಕೇಳಬೇಕಾಗುತ್ತದೆ ಇದರ ಬಗ್ಗೆ ಸರ್ಕಾರದಿಂದ ಯಾವುದೇ ರೀತಿಯ ಪ್ರತಿಕ್ರಿಯೆ ಬಾರದೇ ಹೋದರೆ ನಾವು ಇಲ್ಲಿ ಪ್ರಸ್ತಾಪ ಮಾಡಿದರೂ ಕೂಡ ಏನು ಪ್ರಯೋಜನವಾಗುವುದಿಲ್ಲ

**ಅಧ್ಯಕ್ಷರು** ಇದು ಹಕ್ಕುಚ್ಯುತಿ ಆಗುತ್ತದೆ ಎನ್ನತಕ್ಕಂಥ ಪ್ರಶ್ನೆಯನ್ನು ತಾವು ಪ್ರಸ್ತಾಪ ಮಾಡಿದ್ದೀರಿ ಇದು ಹಕ್ಕುಬಾಧ್ಯತಾ ಸಮಿತಿಗೆ ಬರುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ನಾವು ಪರಿಶೀಲನೆ ಮಾಡಬೇಕಾಗುತ್ತದೆ ಆದ್ದರಿಂದ ಸಂಬಂಧಪಟ್ಟವರಿಗೆ ಇದನ್ನು ರೆಫರ್ ಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ತಾವು ದಯಮಾಡಿ ಕುಳಿತುಕೊಳ್ಳಬೇಕು ಮಾನ್ಯ ಬಿ.ಸಿ ಪಾಟೀಲ್‌ರವರು ಈಗ ಮಾತನಾಡಬೇಕು

**ಶ್ರೀ ಕೆ ಎನ್ ರಾಜಣ್ಣ** ತಾವು ಸಂಬಂಧಪಟ್ಟವರಿಗೆ ಸೂಚನೆ ಕೊಟ್ಟರೆ ಸಾಕು

## 4 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು

### 1 ದಿ 2–8–04ರಂದು ಹಿರೇಕೆರೂರು ತಾಲ್ಲೂಕಿನ ಸ್ಟೇಷನ್ ವ್ಯಾಪ್ತಿಗೆ ಬರುವ ಗುಬ್ಬಿ ಗ್ರಾಮದಲ್ಲಿ ನಡೆದಿರುವ ಘಟನೆ ಕುರಿತು

**ಶ್ರೀ ಬಿ ಸಿ ಪಾಟೀಲ್ (ಹಿರೇಕೆರೂರು)** ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 2–8–2004 ರಂದು ಬೆಳಿಗ್ಗೆ 10–30 ರಿಂದ 11–00 ಗಂಟೆಯೊಳಗೆ, ಹಿರೇಕೆರೂರು ತಾಲ್ಲೂಕಿನ ರಟ್ಟಿಹಳ್ಳಿ ಪೋಲೀಸ್ ಸ್ಟೇಷನ್ ವ್ಯಾಪ್ತಿಗೆ ಬರುವ ದೊಡ್ಡಗುಬ್ಬಿ ಗ್ರಾಮದಲ್ಲಿ ಮುನೀರ್ ಅಹಮದ್ ಮತ್ತು ಬಸವರಾಜು ಎಂಬುವವರ ಮಧ್ಯೆ ಒಂದು ಘಟನೆ ನಡೆಯಿತು ಬಸವರಾಜ್ ಎಂಬುವರು ಗ್ರಾಮಪಂಚಾಯತಿಯ ಸದಸ್ಯರಾಗಿದ್ದಾರೆ ಅವರ ಊರಿನಲ್ಲಿ ಒಂದು ಚರಂಡಿ ಮಾಡಿಸುವ ವಿಷಯಕ್ಕೆ ಸಂಬಂಧಪಟ್ಟಂತೆ ಬಸವರಾಜು ಮತ್ತು ಮುನೀರ್ ಅಹಮದ್‌ರವರ ಗುಂಪುಗಳ ನಡುವೆ ವಾಗ್ವಾದ ನಡೆಯಿತು. ಇದು ಹಿಂದು–ಮುಸ್ಲಿಮ್ ನಡುವಿನ ಘಟನೆಯಲ್ಲ ಇದು ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ನಡೆದ ಘಟನೆ ಇದನ್ನು ನೀವ್ಯಾರು ಕೇಳುವುದಕ್ಕೆಂದು ಬಸವರಾಜ್‌ರವರು ಮುನೀರ್ ಅಹಮದ್‌ರವರ ಕಿವಿಯನ್ನು ಕಚ್ಚಿದರು ನಂತರ, ಅಲ್ಲಿನ ಪೋಲೀಸ್ ಸ್ಟೇಷನ್‌ಗೆ ಮುನೀರ್ ಅಹಮದ್‌ರವರು ಹೋಗಿ ಈ ಘಟನೆ ಬಗ್ಗೆ ವರದಿ ಮಾಡಿದರು ಈ ಘಟನೆ ಬಗ್ಗೆ ರಟ್ಟಿಹಳ್ಳಿ ಪೋಲೀಸ್ ಸ್ಟೇಷನಲ್ಲಿ ಕ್ರೈಂ ನಂ 52 4ರ ಅಡಿಯಲ್ಲಿ ಕೇಸ್ ದಾಖಲಾಯಿತು ಈ ಕೇಸ್‌ನಲ್ಲಿ ಬಸವರಾಜು, ರಾಮಪ್ಪ, ಆನಂದ ಮತ್ತು ಹನುಮಂತ ಹಾಗು ಸಣ್ಣೀಗೌಡ ಎಂಬ ಆರೋಪಿಗಳ ಮೇಲೆ ಕೇಸ್ ದಾಖಲಾಯಿತು ಈ ವಿಷಯ ನನಗೆ ತಿಳಿದ ತಕ್ಷಣವೇ ಸಬ್ ಇನ್ಸ್‌ಪೆಕ್ಟರ್ ಜೊತೆ ಮಾತನಾಡಿ ನಾನು ಏನು ಹೇಳಿದೆ ಎಂದರೆ, ಇದು ಸೂಕ್ಷ್ಮವಾದ ಒಂದು ಸೆನ್ಸಿಟೀವ್ ಗ್ರಾಮ ಆದ್ದರಿಂದ, ಇದರ ಬಗ್ಗೆ ತಕ್ಷಣ ಕ್ರಮ ಜರುಗಿಸಬೇಕು ಇಲ್ಲದಿದ್ದರೆ ಇಲ್ಲಿ ಲಾ–ಅಂಡ್–ಆರ್ಡರ್ ಪ್ರಾಬ್ಲೆಮ್ ಆಗುತ್ತದೆ ಎಂದು ಹೇಳಿದ್ದಕ್ಕೆ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸುತ್ತೇನೆಂದು ಸಬ್ ಇನ್ಸ್‌ಪೆಕ್ಟರವರು ಹೇಳಿದರು ಆದರೆ, ಅದೇ ದಿನ ಆರೋಪಿಗಳನ್ನು ಪೋಲೀಸ್ ಸ್ಟೇಷನ್‌ಗೆ ಕರೆಸಿ ಅವರ್ಯಾರನ್ನು ಅರೆಸ್ಟ್ ಮಾಡದೆ ವಾಪಸ್ಸು ಕಳುಹಿಸಿದ್ದಾರೆ ಮತ್ತೆ ಅದೇ ರಾತ್ರಿ ಸುಮಾರು 8 ಅಥವಾ 8–30 ಗಂಟೆಗೆ ಮೂರು ಜನ ಪೋಲೀಸರನ್ನು ಆ ಊರಿಗೆ ಕಳುಹಿಸಿದ್ದರು ಆ ರಾತ್ರಿ ಪೋಲೀಸರು ಈ ಊರಿನಲ್ಲಿ ಗಸ್ತಿದ್ದರು ಪೋಲೀಸ್‌ನವರು ರಾತ್ರಿ ಸಮಯದಲ್ಲಿ ಗಸ್ತಿದ್ದಂಥ ಸಂದರ್ಭದಲ್ಲಿ ಮುನೀರ್ ಅಹಮದ್ ಎಂಬುವರ ಕಡೆಯವರಾದ ರಾಜು ಎಂಬುವವರ ತಂದೆಯಾದ ಹನುಮಂತಪ್ಪ ಮತ್ತು ಮಂಜಪ್ಪ ಎಂಬುವವರು ಹೊಲಕ್ಕೆ ನೀರು ಹಾಯಿಸುವುದಕ್ಕೆ ಹೋದಾಗ

ಬೆಳಿಗ್ಗೆ ಪೊಲೀಸ್ ಸ್ಟೇಷನ್‌ನಲ್ಲಿ ದೂರು ನೀಡಿ ಕೇಸ್ ದಾಖಲು ಮಾಡಿಕೊಂಡಿದ್ದಂಥ ಕ್ರೈಂ ನಂ 52 4ರಲ್ಲಿ ಆರೋಪಿಗಳಾಗಿದ್ದಂಥವರಲ್ಲಿ ಸುಮಾರು 15 ರಿಂದ 20 ಜನ ಗುಂಪು ಕಟ್ಟಿಕೊಂಡು ರಾಜು ಎಂಬುವವರಿಗೆ ಚಾಕುವಿನಿಂದ ತಿವಿದರು ಈ ಸಂದರ್ಭದಲ್ಲಿ ಗಸ್ತು ಇದ್ದ ಪೊಲೀಸ್‌ರೂ ಕೂಡ ಅದೇ ಗ್ರಾಮದಲ್ಲಿ ವಾಸ್ತವ್ಯವಿದ್ದರು ರಾಜು ಎಂಬುವವರನ್ನು ದಾವಣಗೆರೆ ಆಸ್ಪತ್ರೆಗೆ ಕರೆದುಕೊಂಡ ಬರಲಾಗಿತ್ತು ದಿನಾಂಕ 3–8–2004ರಂದು ಬೆಳಿಗ್ಗೆ 7 ಗಂಟೆ 10 ನಿಮಿಷಕ್ಕೆ ರಾಜು ಎಂಬುವವರು ಆಸ್ಪತ್ರೆಯಲ್ಲಿ ಮೃತಪಟ್ಟರು ಈ ವಿಷಯದ ಬಗ್ಗೆ ಮುಂಚಿತವಾಗಿಯೇ ಸಬ್‌ಇನ್ಸ್‌ಪೆಕ್ಟ್‌ರ್‌ರವರ ಗಮನಕ್ಕೆ ತಂದಿದ್ದೇವೆ ಕ್ರೈಂ ನಂ 52 4 ರಲ್ಲಿದ್ದಂಥ ಆರೋಪಿಗಳನ್ನು ತಕ್ಷಣವೇ ಅರೆಸ್ಟ್ ಮಾಡಿದ್ದರೆ ರಾಜು ಎಂಬುವವರಿಗೆ ಆಗಿರತಕ್ಕಂಥ ಕೊಲೆಯನ್ನು ತಪ್ಪಿಸಬಹುದಾಗಿತ್ತು ಕ್ರೈಂ ನಂ 52 4ರಲ್ಲಿ ಆರೋಪಿಗಳಾಗಿರತಕ್ಕಂಥವರು ಈಗಾಗಲೇ ಸಾಕಷ್ಟು ಕೇಸ್‌ಗಳಲ್ಲಿ ಭಾಗಿಯಾಗಿದ್ದಾರೆ ಮತ್ತು ಈ ಊರು ಫ್ಯಾಕ್ಷಿಯಸ್ ವಿಲೇಜ್ ಎಂಬುದು ಪೊಲೀಸ್ ಗಮನದಲ್ಲಿತ್ತು ಇಲ್ಲಿಗೆ ಸಬ್ ಇನ್ಸ್‌ಪೆಕ್ಟರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಹಾಗೂ ಡಿ ಎಸ್.ಪಿ.ಯವರೂ ಕೂಡ ಭೇಟಿ ಮಾಡಲಿಲ್ಲ ಅದೇ ದಿವಸ ಹಾವೇರಿಯಲ್ಲಿ ನಡೆದಂತೆ ಉತ್ತರ ವಲಯದ ಐ.ಜಿ ಪಿ ಯವರು ನಡೆಸಿದಂಥ ಸಭೆಯಲ್ಲಿ ಡಿ ಎಸ್ ಪಿ ಯವರು ಭಾಗವಹಿಸಿದ್ದರು ಈ ಸಂದರ್ಭದಲ್ಲಿ ಅಲ್ಲಿದ್ದಂಥ ಪೊಲೀಸ್ ಅಧಿಕಾರಿಗಳು ನಮ್ಮ ಮೇಲೆ ಇವತ್ತಿನದಿವಸ ಯಾವರೀತಿಯಾದ ಆಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದರೆ, ಶಾಸಕರು ನಮ್ಮ ಕಾರ್ಯಗಳ ಮಧ್ಯ ತಲೆ ತೂರಿಸುತ್ತಿದ್ದಾರೆ ಇಂಟರ್‌ಫಿಯರ್ ಆಗುತ್ತಿದ್ದಾರೆ ಎಂಬ ಭಾವನೆಯನ್ನು ತರುತ್ತಿದ್ದಾರೆ ಕ್ರೈಂ ನಂ.52 4ರಲ್ಲಿ ಆರೋಪಿಗಳಾಗಿದ್ದಂಥವರನ್ನು ಸಬ್ ಇನ್ಸ್‌ಪೆಕ್ಟರ್‌ರವರು ಅವರನ್ನು ತಕ್ಷಣವೇ ಅರೆಸ್ಟ್ ಮಾಡಿದ್ದರೆ, ಅಥವಾ ಕಾನೂನು ರೀತಿಯಲ್ಲಿ ಅವರ ಮೇಲೆ ಕ್ರಮವನ್ನು ಜರುಗಿಸಿದ್ದರೆ ಮುಂದೆ ಆಗತಕ್ಕಂಥ ಅನಾಹುತಗಳನ್ನು ತಪ್ಪಿಸಬಹುದಾಗಿತ್ತು. ಹಾಗೆಯೇ ಪ್ರಾಣ ಕಳೆದುಕೊಂಡಿರತಕ್ಕಂಥ ರಾಜು ಎಂಬುವವನ್ನು ಕೂಡ ಬದುಕಿಸಬಹುದಾಗಿತ್ತು ಪೊಲೀಸ್‌ನವರ ನಿರ್ಲಕ್ಷ್ಯತೆ ಎಲ್ಲೆಲ್ಲಿ ಕಂಡು ಬರುತ್ತದೆ ಎಂಬುದು ನಮ್ಮ ಗಮನಕ್ಕೆ ಬಂದಂಥ ಸಂದರ್ಭದಲ್ಲಿ ನಾವು ಪೊಲೀಸ್ ಸ್ಟೇಷನ್‌ಗೆ ಫೋನ್ ಮಾಡಿದ್ದಕ್ಕೆ ನಾವು ಇಂಟರ್‌ಫಿಯರೆನ್ಸ್ ಆಗುತ್ತಿದ್ದೇವೆಂದು ಅವರು ವ್ಯಾಖ್ಯಾನ ಮಾಡುತ್ತಿದ್ದಾರೆ ಇಪ್ಪತ್ತೆರಡೂವರೆ ವರ್ಷಗಳ ಕಾಲ ನಾನು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದೇನೆ ಪೊಲೀಸ್ ಇಲಾಖೆಯ ಒಳ ಮತ್ತು ಹೊರಗುಗಳು ಚೆನ್ನಾಗಿ ಗೊತ್ತು ಪೊಲೀಸ್‌ನವರ ಗಮನಕ್ಕೆ ಯಾವ ವಿಷಯಗಳನ್ನು ತರಬೇಕೆಂದು ಮತ್ತು ಯಾವರೀತಿಯಾಗಿ ಕಾರ್ಯಗಳನ್ನು ನಿರ್ವಹಿಸಬೇಕೆಂಬುದು ನನಗೆ ಗೊತ್ತಿರುವುದರಿಂದ ಅವರಿಗೆ ಹೇಳುತ್ತೇನೆ ಯಾರಾದರೂ ಅರ್ಜಿದಾರರು ಪೊಲೀಸ್ ಸ್ಟೇಷನ್‌ನಲ್ಲಿ ದೂರು ಕೊಟ್ಟು ಎಫ್ ಐ ಆರ್ ನ್ನು ತಂದಾಗ ಅದರಲ್ಲಿ ಕೆಲವೊಂದು ಸೆಕ್ಷನ್‌ಗಳು ಬಿಟ್ಟು ಹೋಗಿದ್ದು ಮತ್ತು ನೀವು ತಪ್ಪು ಮಾಡಿದ್ದೀರೆಂದು ಹಾಗೂ ಇದರಲ್ಲಿ ಇಂಥ ಸೆಕ್ಷನ್‌ಗಳನ್ನು ಹಾಕಬೇಕೆಂದು ಹೇಳುತ್ತೇನೆ ಆದರೆ, ನಾನು ಹೇಳತಕ್ಕಂಥದ್ದು ತಪ್ಪು ಎನ್ನತಕ್ಕಂಥ ಭಾವನೆ ಮತ್ತು ನಾನು ಇಂಟರ್‌ಫಿಯರೆನ್ಸ್ ಮಾಡುತ್ತಿದ್ದೇನೆ ಎನ್ನತಕ್ಕಂಥ ಭಾವನೆಯನ್ನು ಪೊಲೀಸ್‌ನವರು ಹಿರಿಯ ಅಧಿಕಾರಿ ಗಮನಕ್ಕೆ ತರುತ್ತಿದ್ದಾರೆ ಅದೇ ದಿವಸ ರಾಣೆಬೆನ್ನೂರಿನಲ್ಲಿರತಕ್ಕಂಥ ಎಸ್.ಪಿ ಕಛೇರಿಯಲ್ಲಿ ಐ.ಜಿ ಪಿ ಯವರು

ಇದ್ದಂಥ ಸಭೆಯಲ್ಲಿ ನಾನು ಇಂಟರ್‌ಫಿಯರೆನ್ಸ್ ಆಗುತ್ತಿದ್ದೇನೆ ಎಂಬ ವಿಷಯವನ್ನು ಡಿ.ಎಸ್ ಪಿ ಯವರು ಐ ಜಿ ಪಿರವರ ಗಮನಕ್ಕೆ ತಂದರು ಆ ಸಂದರ್ಭದಲ್ಲಿ ಐ.ಜಿ ಪಿ.ನವರು ಏನು ಹೇಳಿದರೆಂದರೆ, ಅವರೂ ಕೂಡ ಪೋಲೀಸ್ ಅಧಿಕಾರಿಯಾಗಿದ್ದಂಥವರು. ಆದ್ದರಿಂದ ಅವರಿಗೂ ಕೂಡ ಎಲ್ಲಾ ಗೊತ್ತಿರುತ್ತದೆ ಅವರು ಹೇಳಿರತಕ್ಕಂಥ ವಿಷಯವನ್ನು ಕಾನೂನುಬದ್ಧವಾಗಿ ಮಾಡಿ ಎಂದು ಹೇಳಿದ್ದಕ್ಕೆ ಅಲ್ಲಿದ್ದಂಥ ಡಿ ಎಸ್ ಪಿ ಯವರು ಏನು ಹೇಳಿದರೆಂದರೆ, ಈಗಾಗಲೇ ಆತನಿಗೆ ಹಿಂದೆ ಒಟ್ಟು 15 ದಿವಸಗಳ ಕಾಲ ಜೈಲಿಗೆ ಕಳುಹಿಸಿದ್ದೇವೆ ಮತ್ತೆ ಆತನಿಗೆ ಬುದ್ಧಿ ಕೂಡ ಹೇಳಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಮತ್ತೆ ಈ ಶಾಸನ ಸಭೆಯಲ್ಲಿ ಶಾಸಕನಾಗಿರುವ ಬಗ್ಗೆ ಐ.ಜಿ.ಪಿ ರವರ ಹತ್ತಿರ ಡಿ ಎಸ್ ಪಿಯವರು ಎದೆ ತಟ್ಟಿಕೊಂಡು ಈ ರೀತಿ ಉತ್ತರ ಕೊಟ್ಟಿದ್ದಾರೆ ಯಾವುದೇ ಒಂದು ಕೊಲೆ ಮೊಕದ್ದಮೆ ಮೇಲೆ ನಮ್ಮನ್ನು ಜೈಲಿಗೆ ಕಳುಹಿಸಿಲ್ಲ ಬೆಳೆ ವಿಮೆ ವಿಷಯಕ್ಕೆ ಸಂಬಂಧಪಟ್ಟಂತೆ ರೈತರ ಪರವಾಗಿ ಹೋರಾಟ ಮಾಡಿದ್ದ ಉದ್ದೇಶಕ್ಕೆ ಜೈಲಿಗೆ ಕಳುಹಿಸಿ, ಇವತ್ತಿನ ದಿವಸ ಒಬ್ಬ ಅಧಿಕಾರಿ ಒಬ್ಬ ಶಾಸಕರ ಬಗ್ಗೆ ಇಷ್ಟೊಂದು **ತೃಣವಾಗಿ** ಮಾತನಾಡತಕ್ಕಂಥ ಅಧಿಕಾರಿಗಳನ್ನು ನಾವು ಅಲ್ಲಿಟ್ಟುಕೊಂಡು ಯಾವರೀತಿಯಾಗಿ ಕೆಲಸ ನಿರ್ವಹಿಸುವುದಕ್ಕೆ ಆಗುತ್ತದೆ?

**ಅಧ್ಯಕ್ಷರು** ಮಾನ್ಯ ಪಾಟೀಲ್‌ರವರೆ, ಶೂನ್ಯ ವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ ಇದನ್ನು ಸಂಕ್ಷಿಪ್ತವಾಗಿ ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ ಆದ್ದರಿಂದ ಸಂಪೂರ್ಣವಾದ ವಿವರಕ್ಕೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ

**ಶ್ರೀ ಬಿ ಸಿ ಪಾಟೀಲ್** ಮಾನ್ಯ ಅಧ್ಯಕ್ಷರೇ, ಇಲ್ಲಿ ಸಂಪೂರ್ಣವಾಗಿ ಪೋಲೀಸ್‌ನವರ ನಿರ್ಲಕ್ಷ್ಯತನ ಇದೆ ಮತ್ತೆ ಪೋಲೀಸ್ ಆಡಳಿತ ಸಂಪೂರ್ಣವಾಗಿ ಸತ್ತು ಹೋಗಿದೆ ಆದ್ದರಿಂದ ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ರಟ್ಟಿಹಳ್ಳಿ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಹಿರೇಕೆರೂರು ಸರ್ಕಲ್ ಇನ್ಸ್‌ಪೆಕ್ಟರ್ ಹಾಗು ರಾಣೆಬೆನ್ನೂರಿನ ಡಿ ಎಸ್ ಪಿ ಯವರನ್ನು ಅಲ್ಲಿಂದ ತತ್‌ಕ್ಷಣ ವರ್ಗಾವಣೆ ಮಾಡಬೇಕು ಮತ್ತು ಇಲಾಖಾ ವಿಚಾರಣೆಯನ್ನು ನಡೆಸಬೇಕು ಮತ್ತೆ ಅವರನ್ನು ಸಸ್ಪೆಂಡ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ ನನ್ನ ಪ್ರಶ್ನೆಗೆ ಸರ್ಕಾರದಿಂದ ಉತ್ತರ ಬೇಕು ಬಹುಶಃ ಇದು ನನ್ನೊಬ್ಬನ ಪ್ರಶ್ನೆಯಲ್ಲ ಈ ರೀತಿಯಾಗಿ ಎಲ್ಲಾ ಕಡೆ ಆಗುತ್ತಿದೆ

**ಶ್ರೀ ಅಲ್ಕೋಡ್ ಹನುಮಂತಪ್ಪ** ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಈ ವಿಷಯವನ್ನು ಈಗಾಗಲೇ ಮಾನ್ಯ ಬಿ.ಸಿ. ಪಾಟೀಲ್‌ರವರು ಪ್ರಸ್ತಾಪ ಮಾಡಿದ್ದಾರೆ ಆದ್ದರಿಂದ ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡುವುದಲ್ಲದೆ ಅವರನ್ನು ತನಿಖೆಗೆ ಒಳಪಡಿಸಬೇಕು

**ಅಧ್ಯಕ್ಷರು** ಈಗಾಗಲೇ ಮಾನ್ಯ ಬಿ.ಸಿ ಪಾಟೀಲ್‌ರವರು ಈ ವಿಷಯವನ್ನು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ ಆದ್ದರಿಂದ ಬೇರೆಯವರು ಮತ್ತೆ ಮತ್ತೆ ಇದರಲ್ಲಿ ಇಂಟರ್‌ಫಿಯರ್ ಆಗುವುದಕ್ಕೆ ಹೋಗಬೇಡಿ

**ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ ಮಾನ್ಯ ಬಿ.ಸಿ ಪಾಟೀಲ್‌ರವರು ಹಿಂದೆ ಇನ್ಸ್‌ಪೆಕ್ಟರ್ ಆಗಿದ್ದರು. ಆದ್ದರಿಂದ ಇದರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ ಮಾನ್ಯ ಬಿ ಸಿ ಪಾಟೀಲ್ ರವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರದ ಬಗ್ಗೆ ಎಲ್ಲಾ ವಿವರಗಳನ್ನು ತರಿಸಿ ಅವರಿಗೆ ಸರ್ಕಾರದ ಕಡೆಯಿಂದ ಉತ್ತರ ಕೊಡಿಸುತ್ತೇವೆ

**ಶ್ರೀ ಸಿ ಟಿ ರವಿ** ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಮಗೊಂದು ಪತ್ರ ಕೊಟ್ಟಿದ್ದೇನೆ ಆದ್ದರಿಂದ, ಒಂದು ಮಹತ್ವವಾದ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ

**ಅಧ್ಯಕ್ಷರು** ಈ ರೀತಿಯಾಗಿ ಎಲ್ಲರೂ ಒಂದೇ ಸಾರಿ ಎದ್ದು ನಿಂತುಕೊಂಡರೆ ಏನೂ ಮಾಡುವುದಕ್ಕೆ ಆಗುವುದಿಲ್ಲ ನಿಮ್ಮ ಮೇಲೆ ನಾನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ನಾನು ಯಾರನ್ನು ಮಾತನಾಡುವುದಕ್ಕೆ ಹೇಳುತ್ತೇನೆಯೋ ಅವರು ಮಾತ್ರ ಮಾತನಾಡಿ ಈ ರೀತಿ ಎಲ್ಲರೂ ಎದ್ದುನಿಂತುಕೊಂಡರೆ ಹೇಗೆ? ನಾನು ಎಷ್ಟು ಸಾರಿ ಹೇಳಿದರೂ ಕೂಡ ಮತ್ತು ಎಷ್ಟು ಸಾರಿ ಅವಕಾಶ ಕೊಟ್ಟರೂ ಕೂಡ ಈ ರೀತಿ ಏಕೆ ಮಾಡುತ್ತಿದ್ದೀರಿ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರೆ, ತಾವು ಯಾರ ಹೆಸರನ್ನು ಸೂಚಿಸುತ್ತೀರೋ ಅವರು ಮಾತ್ರ ಎದ್ದುನಿಂತುಕೊಂಡು ಮಾತನಾಡಲಿ

**ಶ್ರೀ ಬಿ.ಸಿ ಪಾಟೀಲ್** ಸಂಬಂಧಪಟ್ಟವರ ಮೇಲೆ ಇಲಾಖಾ ವಿಚಾರಣೆ ನಡೆಸಬೇಕು

**ಅಧ್ಯಕ್ಷರು** ಈಗ ಮಾನ್ಯ ಸಚಿವರು, ಮಾನ್ಯ ಬಿ.ಸಿ ಪಾಟೀಲ್‌ರು ತಮ್ಮ ಉತ್ತರದಿಂದ ಸಮಾಧಾನವಾಗಿರುವುದಿಲ್ಲ, ಅದರ ಬಗ್ಗೆ ತಾವು ಹೇಳಿ

**ಶ್ರೀ ಸಿದ್ಧರಾಮಯ್ಯ** ಮಾನ್ಯ ಸದಸ್ಯರಾದ ಶ್ರೀ ಬಿ ಸಿ ಪಾಟೀಲ್‌ರವರಿಗೆ ಸಮಾಧಾನವಾಗುವಂತಹ ರೀತಿಯಲ್ಲಿ ಅಲ್ಲಿ ಏನೇನು ಆಗಿದೆ ಅದರ ಬಗ್ಗೆ ಸಂಪೂರ್ಣವಾದಂತಹ ಮಾಹಿತಿಯನ್ನು ಪಡೆದುಕೊಂಡು ಉತ್ತರವನ್ನು ಒದಗಿಸಲಾಗುವುದು ಈ ಸದನದಲ್ಲಿ ಅದರ ಬಗ್ಗೆ ಉತ್ತರವನ್ನು ಕೊಡಿಸುತ್ತೇನೆ

**ಅಧ್ಯಕ್ಷರು** ಮಾನ್ಯ ರವಿಯವರೆ, ತಾವು ಮಾತನಾಡಿ

**ಶ್ರೀ ಬಿ ಸಿ ಪಾಟೀಲ್** ಮಾನ್ಯ ಅಧ್ಯಕ್ಷರೆ, ನಮಗೆ ಅತ್ಯಂತ ಅವಮಾನಕರವಾದ ವಿಷಯವಾಗಿದೆ

**ಅಧ್ಯಕ್ಷರು** ಮಾನ್ಯ ಪಾಟೀಲ್‌ರವರೆ, ತಾವು ದಯಮಾಡಿ ಕುಳಿತುಕೊಳ್ಳಬೇಕು ಇಲ್ಲಿ ಒಂದು ತಾವು ಮಾತನಾಡಿ ಮಾನ್ಯ ಮಂತ್ರಿಗಳ ಪರವಾಗಿ ಉಪಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ

**ಶ್ರೀ ಸಿದ್ಧರಾಮಯ್ಯ** ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ, ಉತ್ತರವನ್ನು ತರಿಸಿಕೊಡುತ್ತೇವೆ

**ಗೊಂದಲ**

**ಅಧ್ಯಕ್ಷರು** ಈಗ ಮಾನ್ಯ ಶಾಸಕರು ಏತಕ್ಕಾಗಿ ಈ ರೀತಿಯಾಗಿ ನಿಂತು ಕೊಳ್ಳುತ್ತಿದ್ದಾರೆಂಬುದು ಗೊತ್ತಾಗುತ್ತಿಲ್ಲ ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು ಈಗ ನಾನು ರವಿಯವರ ಹೆಸರನ್ನು ಕರೆದಿದ್ದೇನೆ

**ಗೊಂದಲ**

**ಅಧ್ಯಕ್ಷರು** ಈಗ ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು ಏನು ಇದು? ದಯಮಾಡಿ ಕುಳಿತುಕೊಳ್ಳಿ

**ಶ್ರೀ ಬಿ ಸಿ ಪಾಟೀಲ್** ಮಾನ್ಯ ಅಧ್ಯಕ್ಷರೆ ..

**ಅಧ್ಯಕ್ಷರು** ಮಾನ್ಯ ಪಾಟೀಲ್‌ರವರೆ ದಯಮಾಡಿ ತಾವು ಕುಳಿತುಕೊಳ್ಳಿ

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರು ಎದ್ದು ನಿಂತುಕೊಂಡಾಗ ಮಾನ್ಯ ಶಾಸಕರುಗಳು ಕುಳಿತುಕೊಳ್ಳಬೇಕು

**ಅಧ್ಯಕ್ಷರು** ಏನು? ಎಷ್ಟು ತಿಳುವಳಿಕೆಯನ್ನು ಹೇಳಿದರೂ ಕೂಡ ಇವರಿಗೆ ತಿಳುವಳಿಕೆ ಬರುವುದಿಲ್ಲ ಇವರು ಕಲಿತುಕೊಳುವುದೂ ಇಲ್ಲ

**ಶ್ರೀ ಬಿ ಸಿ ಪಾಟೀಲ್** ಮಾನ್ಯ ಅಧ್ಯಕ್ಷರೆ

**ಅಧ್ಯಕ್ಷರು** ಮಾನ್ಯ ಪಾಟೀಲ್‌ರವರೆ, ಈ ತರಹ ತಾವು ಆದರೆ ನನಗೆ ಅರ್ಥವಾಗುವುದಿಲ್ಲ ನಿಮಗೆ ಮಾನ್ಯ ಸಚಿವರ ಪರವಾಗಿ ಉತ್ತರವನ್ನು ಕೊಟ್ಟಿದ್ದಾರೆ ಉತ್ತರವನ್ನು ತರಿಸಿಕೊಡುತ್ತಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು

**ಗೊಂದಲ**

**ಮಾನ್ಯ ಸದಸ್ಯರು** ಸಸ್ಪೆಂಡ್ ಮಾಡಬೇಕು

**ಅಧ್ಯಕ್ಷರು** ಈಗ ದಯಮಾಡಿ, ಈ ತರಹ ತಾವು ನಿಂತುಕೊಂಡರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ ಈ ಸದನವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು

**ಶ್ರೀ ಆರ್ ಅಶೋಕ್** ಮಾನ್ಯ ಸದಸ್ಯರಾದ ಶ್ರೀ ಬಿ.ಸಿ ಪಾಟೀಲ್‌ರವರು ಪೊಲೀಸ್ ಇಲಾಖೆಯಲ್ಲಿ ಇದ್ದವರೇ ಪೊಲೀಸ್‌ನವರು ಏನೂ ಆಕ್ಷನ್ ತೆಗೆದುಕೊಳ್ಳುವುದಿಲ್ಲ ಅದಕ್ಕೋಸ್ಕರ ಇಲಾಖೆಯ ಮೇಲೆ ಅವರಿಗೆ ನಂಬಿಕೆ ಇಲ್ಲ ಬಿ ಸಿ ಪಾಟೀಲ್‌ರವರು ಪೊಲೀಸ್ ಡಿಪಾರ್ಟ್‌ಮೆಂಟಿನಲ್ಲಿದ್ದವರು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ಅವರಿಗೆ ನಂಬಿಕೆ ಇಲ್ಲ

**ಅಧ್ಯಕ್ಷರು** ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಿ, ಏನಿದು?

**ಶ್ರೀ ಆರ್ ಅಶೋಕ್** ಅವರು ಆಡಳಿತ ಪಕ್ಷದ ಸದಸ್ಯರು, ಅವರಿಗೆ ನಂಬಿಕೆ ಇಲ್ಲ

**ಅಧ್ಯಕ್ಷರು** ಏನು ಅಶೋಕ್‌ರವರೇ, ತಾವು ಹಿರಿಯ ಸದಸ್ಯರಾಗಿದ್ದು ಈ ರೀತಿಯಾಗಿ ಮಾಡುತ್ತೀದ್ದೀರಿ? ದಯಮಾಡಿ ಕುಳಿತುಕೊಳ್ಳಿ ನಿನ್ನೆ ದಿನ ನಾನು ಶೂನ್ಯ ವೇಳೆಯಲ್ಲಿ ಕೆಲವು ಸದಸ್ಯರುಗಳಿಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡುತ್ತೇನೆಂದು ಹೇಳಿದ್ದೆ ನೀವು ಎಲ್ಲಾ ಸದಸ್ಯರು ಒಟ್ಟಿಗೆ ಎದ್ದು ನಿಂತುಕೊಂಡರೆ ನಾನು ಶೂನ್ಯ ವೇಳೆಯನ್ನು ರದ್ದುಮಾಡಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರೆ, ನಿಮ್ಮ ನೂತನ ಸದಸ್ಯರಿಗೆ ಸ್ವಲ್ಪ ತಿಳುವಳಿಕೆಯನ್ನು ಹೇಳಬೇಕು ಈ ರೀತಿಯಾಗಿ ಎಲ್ಲಾ ಸದಸ್ಯರು ಕೈ ಎತ್ತಿ ನಿಂತುಕೊಂಡು ಬಿಟ್ಟರೆ ನಾವು ಯಾವ ರೀತಿಯಾಗಿ ಸದನವನ್ನು ನಡೆಸುವುದು? ನಾನು ಎಷ್ಟು ಜನರಿಗೆ ಸಾಧ್ಯವಾಗುತ್ತದೆಯೋ ಅಷ್ಟು ಜನರ ಹೆಸರನ್ನು ಕರೆಯುತ್ತೇನೆ ನಾನು ಯಾರ ಹೆಸರನ್ನು ಕರೆಯುತ್ತೇನೆಯೋ, ಅವರು ಎದ್ದು ಕೇಳಲಿ ಈ ತರಹ ಆದರೆ ಸದನವನ್ನು ನಡೆಸುವುದಕ್ಕಾಗುವುದಿಲ್ಲ ನಾನು ಮಾನ್ಯ ರವಿಯವರ ಹೆಸರನ್ನು ಕರೆದಿದ್ದೇನೆ, ತಾವು ಮಾತನಾಡಿ

**ಶ್ರೀ ಬಿ.ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ತಾವು ಯಾರಿಗೆ ಪರ್ಮಿಶನ್ ಕೊಡುತ್ತೀರಿ ಅವರ ಹೆಸರನ್ನು ಕರೆದಾಗ ಅವರು ಎದ್ದು ನಿಂತು ಮಾತನಾಡಬೇಕು.

**ಅಧ್ಯಕ್ಷರು** ನಾನು ಮಾನ್ಯ ರವಿಯವರ ಹೆಸರನ್ನು ಕರೆದಿದ್ದೇನೆ. ಉಳಿದವರೆಲ್ಲರೂ ಎದ್ದು ನಿಂತುಕೊಂಡರೆ ಏನು ಮಾಡುವುದು ಯಡಿಯೂರಪ್ಪನವರೇ?

**ಶ್ರೀ ಬಿ.ಎಸ್ ಯಡಿಯೂರಪ್ಪ** ಖಂಡಿತಾ ಸಾರ್, ನೀವು ಏನು ಮಾಡುವುದಕ್ಕಾಗುವುದಿಲ್ಲ ನಾವು ಸಹಕಾರವನ್ನು ಕೊಡದೆ ಇದ್ದರೆ ಎಲ್ಲರೂ ಎದ್ದು ನಿಂತುಕೊಂಡರೆ ತಾವು ಏನೂ ಮಾಡುವುದಕ್ಕಾಗುವುದಿಲ್ಲ

**ಅಧ್ಯಕ್ಷರು** ಮಾನ್ಯ ರವಿಯವರೆ, ತಾವು ಮಾತನಾಡಿ

## 2 2003ನೇ ಸಾಲಿನ ಮಹಾಲೇಖಪಾಲರ ವರದಿಯಲ್ಲಿ ಕುದುರೆಮುಖ ಅದಿರು ಕಂಪನಿಯು 139 ಕೋಟಿ ರೂ ಗಳನ್ನು ಸರ್ಕಾರಕ್ಕೆ ಬಾಕಿ ಉಳಿಸಿಕೊಂಡಿದೆ ಎಂದು ಉಲ್ಲೇಖವಾಗಿರುವ ಬಗ್ಗೆ

**ಶ್ರೀ ಸಿ ಟಿ ರವಿ (ಚಿಕ್ಕಮಗಳೂರು)** ಮಾನ್ಯ ಅಧ್ಯಕ್ಷರೆ, ಅತಿ ಮುಖ್ಯವಾದ ವಿಚಾರವೊಂದನ್ನು ಪ್ರಸ್ತಾಪ ಮಾಡುವ ಬಗ್ಗೆ ಶೂನ್ಯ ವೇಳೆಯಲ್ಲಿ ತಾವು ಅವಕಾಶವನ್ನು ಮಾಡಿಕೊಟ್ಟಿದಕ್ಕಾಗಿ ತಮಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ 2003ರ ಮಹಾಲೇಖಪಾಲರ ವರದಿಯಲ್ಲಿ ಕುದುರೆಮುಖ ಅದಿರು ಕಂಪನಿ 139 ಕೋಟಿ ರೂಪಾಯಿಗಳನ್ನು ಇವತ್ತು ಸರ್ಕಾರಕ್ಕೆ ಬಾಕಿ ಉಳಿಸಿಕೊಂಡಿದೆ ಎಂಬುದು ವರದಿಯಲ್ಲಿ ಉಲ್ಲೇಖವಾಗಿದೆ. ಆ ಬಾಕಿಯನ್ನು ವಸೂಲು ಮಾಡುವ ಬಗ್ಗೆ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ ಎಂಬುದರ ಬಗ್ಗೆ ಸಭೆಯ ಗಮನಕ್ಕೆ ತರಬೇಕಾಗುತ್ತದೆ ಹಾಗೆಯೇ ಇವತ್ತು ತಮ್ಮ ಭಾಗದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮಳೆಯಾಗುತ್ತಿದೆ ಇವತ್ತು ಭದ್ರಾ ಮತ್ತು ತುಂಗಾ ನದಿಗಳು ಕುದುರೆಮುಖ ವ್ಯಾಪ್ತಿಯಿಂದ ಹರಿದು ಬರತಕ್ಕಂತಹ ಹೊಳೆಯನ್ನು ತಾವು ಬಂದು ನೋಡಬೇಕು, ಅಥವಾ ಸದನದ ಸಮಿತಿಯನ್ನು ಅಲ್ಲಿಗೆ ಕಳುಹಿಸಬೇಕು ಇವತ್ತಿನದಿವಸ ಬಹಳ ದೊಡ್ಡ ಪ್ರಮಾಣದಲ್ಲಿ ಕುದುರೆಮುಖ ಗಣಿಗಾರಿಕೆಯಿಂದಾಗಿ ದೊಡ್ಡ ಪ್ರಮಾಣದಲ್ಲಿ ಹೂಳು ಇವತ್ತು ಆ ಹೊಳೆಯಲ್ಲಿ ಸೇರಿಹೋಗುತ್ತಿದೆ ಇದರಿಂದಾಗಿ ನೀರನ್ನು ಸ್ಟೋರೇಜ್ ಮಾಡತಕ್ಕಂತಹ ಅಣೆಕಟ್ಟುಗಳು ಹೂಳನಿಂದ ಬಹಳ ಬೇಗ ಅವು ತುಂಬಿ ಹೋಗುತ್ತಿದೆ ಇಷ್ಟು ಮಾತ್ರವಲ್ಲ ಏನು ನೀರಾವರಿ ಪ್ರದೇಶದ ಜಮೀನಿನಲ್ಲಿಯೂ ಕೂಡ ಆ ಕುದುರೆಮುಖ ಅದಿರು ಕಂಪನಿಯಿಂದ ಸೋರಿಹೋಗುವಂತಹ ಕಬ್ಬಿಣದ ಸರಿ ತುಂಬಿ ಕೊಂಡು ನಮ್ಮ ಆ ಫಲವತ್ತಾಗಿರುವಂತಹ ಭೂಮಿ ಇವತ್ತು ಏತಕ್ಕೂ ಉಪಯೋಗವಾಗದಿರುವಂತಹ ಸ್ಥಿತಿಗೆ ಮುಟ್ಟಿದೆ ಈ ಹಿನ್ನೆಲೆಯಲ್ಲಿ ತಾವು ಭಾರೀ ಪ್ರಮಾಣದ ಹೂಳನ್ನು ತಡೆಯುವುದಕ್ಕೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುತ್ತಿದೆ? ಇದರಿಂದಾಗಿ ರೈತರಿಗೆ ಆಗುತ್ತಿರುವಂತಹ ನಷ್ಟವನ್ನು ತಪ್ಪಿಸುವ ಬಗ್ಗೆ ಏನು ಯೋಚನೆಯನ್ನು ಮಾಡಿದೆ ಈ ಎಲ್ಲಾ ಸತ್ಯಸಂಗತಿಗಳನ್ನು ಚಿತ್ರಸಹಿತವಾಗಿ ವರದಿ ಮಾಡಿರುವಂತಹ ವರದಿಗಾರರಿಗೆ ಮತ್ತು ಪರಿಸರ ಪ್ರೇಮಿಗಳ ಮೇಲೆ ಅಲ್ಲಿರುವಂತಹ ಡಿ.ಸಿ.ಎಫ್ ಮೂರು–ನಾಲ್ಕು ಸುಳ್ಳು ಮೊಕದ್ದಮ್ಮೆಗಳನ್ನು ಹಾಕಿ ಅವರ ಬಾಯಿಯನ್ನು ಮುಚ್ಚಿಸುವಂತಹ ಕೆಲಸವನ್ನು ಮಾಡುತ್ತಿದ್ದಾರೆ ಈ 139 ಕೋಟಿ ರೂಪಾಯಿಗಳ ಬಾಕಿ ವಸೂಲಿಯ ಬಗ್ಗೆಯಾಗಲಿ,...

**ಅಧ್ಯಕ್ಷರು** ಮಾನ್ಯ ಸದಸ್ಯರೆ, ತಾವು ಸಂಕ್ಷಿಪ್ತವಾಗಿ ಹೇಳಿ

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ಮಾನ್ಯ ರವಿಯವರೆ, ಒಂದು ನಿಮಿಷ ತಾಳಿ, ಮಾನ್ಯ ಅಧ್ಯಕ್ಷರೆ, ತಾವು ತಪ್ಪುತಿಳಿದುಕೊಳ್ಳದೆ ಹೋದರೆ, ಈ ಸರ್ಕಾರದ ಮಂತ್ರಿಗಳು ಯಾರು ಇರುತ್ತಾರೆ ಅವರ ಪೈಕಿ ಯಾರಾದರೂ ಒಬ್ಬರು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡಿದಾಗ ಗಮನ ಹರಿಸಬೇಕಾಗುತ್ತಿದೆ 100ಕ್ಕೆ 70 ಭಾಗ ಮುಂಚೆಯೇ ನೋಟಿಸ್ ಕೊಟ್ಟಿದ್ದರೆ ಅದಕ್ಕೆ ಉತ್ತರ ಕೊಟ್ಟಿರುವ ಬಗ್ಗೆ ಅನೇಕ ದಾಖಲೆಗಳು ಇವೆ. ಇದು ಇಲ್ಲಿ ನಡೆದುಕೊಂಡು ಬಂದಿರುವಂತಹ ಪದ್ಧತಿಯಾಗಿದೆ ಅಥವಾ ಅದರ ಬಗ್ಗೆ ಯಾರಾದರೂ ಪೂರ್ಣ ಗಮನವನ್ನು ತೆಗೆದುಕೊಂಡು ಇಲ್ಲಿ ಸದನದಲ್ಲಿ ಉತ್ತರವನ್ನು ಕೊಡುವುದು ಇದ್ದರೆ ಉತ್ತರವನ್ನು ಕೊಟ್ಟಿದ್ದು ಉಂಟು ಬೇರೆ ಸಂದರ್ಭಗಳಲ್ಲಿ ಪ್ರಮುಖವಾಗಿದ್ದರೆ ಅದರ ಬಗ್ಗೆ ಬೇಕಾದಂತಹ ದಾಖಲೆಗಳನ್ನು ತರಿಸಿಕೊಂಡು ಉತ್ತರ ಕೊಡುವುದುಂಟು ಆದರೆ ಇಲ್ಲಿ ಯಾರೊಬ್ಬರೂ ಕೂಡ ಗಮನವನ್ನು ಕೊಡುವುದಿಲ್ಲವಲ್ಲಾ? ಅವರು ಒಂದು ವರದಿಯನ್ನು ಒಪ್ಪಿಸುವಂತಹ ರೀತಿಯಲ್ಲಿ ಸದನದಲ್ಲಿ ವರದಿಯನ್ನು ಒಪ್ಪಿಸಬೇಕು. ಆಮೇಲೆ ನೋಡೋಣ. ಸದನ ಮುಗಿಯಲಿ ಎನ್ನುವ ರೀತಿಯಲ್ಲಿ ಚರ್ಚೆಯಾಗುವುದಾಗಿದ್ದರೆ, ವಿಷಯ ಅದರ ಮಹತ್ವವನ್ನು ಕಳೆದುಕೊಳ್ಳುತ್ತದೆ. ಜವಾಬ್ದಾರಿಯುತವಾದ ಶಾಸಕರು ಅಪರೂಪಕ್ಕೆ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ರಾಜ್ಯದ ಜನತೆಗೆ ಸಂಬಂಧಪಟ್ಟಂಥ ಪ್ರಮುಖವಾದ ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ಯಾರಾದರೊಬ್ಬರು ಇದರ ಬಗ್ಗೆ ಗಮನವನ್ನು ಕೊಟ್ಟು ಉತ್ತರವನ್ನು ಪ್ರಯತ್ನ ಮಾಡದೆ ಹೋದರೆ ಹೇಗೆ?

**ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು)** ಎಲ್ಲಾ ಮಾನ್ಯ ಸದಸ್ಯರುಗಳು ಎತ್ತಿರತಕ್ಕಂತಹ ಸಮಸ್ಯೆಗಳ ಬಗ್ಗೆ ಕೇಳುತ್ತಿದ್ದೇವೆ ನೀವು ಪ್ರಶ್ನೆಯನ್ನು ಎತ್ತಿದ ತಕ್ಷಣ ಎಲ್ಲದಕ್ಕೂ ಉತ್ತರವನ್ನು ಕೊಡುವುದಕ್ಕೆ ಆಗುವುದಿಲ್ಲ ಇವತ್ತಿನ ಒಳಗಡೆ ಅಥವಾ ನಾಳೆಯ ದಿವಸ ಅವರು ಏನೇನು ಸಮಸ್ಯೆಗಳನ್ನು ಎತ್ತಿದ್ದಾರೆ ಅದಕ್ಕೆಲ್ಲ ಅವರಿಗೆ ಸಮರ್ಪಕವಾದ ಉತ್ತರವನ್ನು ಕೊಡುತ್ತೇನೆ

**ಶ್ರೀ ಅರಗ ಜ್ಞಾನೇಂದ್ರ** ಮಾನ್ಯ ಅಧ್ಯಕ್ಷರೆ, ಬಹುಶಃ ಎರಡು-ಮೂರು ದಿವಸಕ್ಕೆ ಮುಂಚಿತವಾಗಿ ನಾವು ಮಾನ್ಯ ಅಧ್ಯಕ್ಷರಿಗೆ ಸೂಚನೆಯನ್ನು ಕೊಟ್ಟಿರುತ್ತೇವೆ ಬಹುಶಃ ಅವರು ಇದರ ಬಗ್ಗೆ ಸರ್ಕಾರಕ್ಕೆ ಕಳುಹಿಸಿರುತ್ತಾರೆ ಒಂದು ಉತ್ತರವನ್ನು ಕೊಡದೆ ಒಂದು ಸಾಮಾನ್ಯವಾದ ಸ್ಟೇಟ್‌ಮೆಂಟ್‌ನ್ನು ಮಾಡದೆ ಹೋದರೆ ಹೇಗೆ?

**ಅಧ್ಯಕ್ಷರು** ಅವರು ಏನು ಹೇಳುತ್ತಾರೆ ಕೇಳಿ

**ಶ್ರೀ ಸಿ ಟಿ ರವಿ** ನಾನು ಈಗ 2ನೇ ತಾರೀಖು ಮಾನ್ಯ ಅಧ್ಯಕ್ಷರಿಗೆ ಕೇಳಿದ್ದೇನೆ ಇದು ಅಲ್ಲದೆಯೇ ನೋಟಿಫೈ ಆಗದೆ ಇರತಕ್ಕಂತಹ ಅಭಯಾರಣ್ಯದ ವ್ಯಾಪ್ತಿಯೊಳಗಡೆಯೂ ಕೂಡ ಗಣಿಗಾರಿಕೆಯನ್ನು ಮಾಡಿ ನದಿಯ ಮೂಲಕ್ಕೆ ಕುತ್ತು ತರುವಂತಹ ಕೆಲಸ ನಡೆಯುತ್ತಿದೆ ಬಹುಶಃ ಭದ್ರೆಯೇ ಮುಂದೊಂದು ದಿನ ಬತ್ತಿಹೋಗಬಹುದು ಆಗ ಈ ಕೃಷ್ಣಗೆ ನೀರು ಬರತಕ್ಕಂತಹದ್ದು ನಿಂತುಹೋಗುತ್ತದೆ. ಅದನ್ನು ಅವಲಂಬಿತವಾಗಿರುವಂತಹ ನೀರಾವರಿ ಪ್ರದೇಶಗಳೂ ಕೂಡ ವಿಜಯನಗರದ ಹಳೆಯ ಕಥೆಯನ್ನು ಹೇಳುವಂತಹ ಸ್ಥಿತಿಗೆ ಬಂದುಬಿಡುತ್ತದೆ. ಹಾಗಾಗಬಾರದೆಂದರೆ, ಈ ಬಗ್ಗೆ ಸೂಕ್ತವಾದಂತಹ ತನಿಖೆ ನಡೆಸಬೇಕು ಇದರೊಳಗೆ ಸಾಕಷ್ಟು ವಿವರಗಳು ಇದೆ. ಅಧ್ಯಕ್ಷರು ತಾವು ಅನುಮತಿ ಕೊಟ್ಟರೆ, ನನ್ನ ಹತ್ತಿರ ಸಾಕಷ್ಟು ವಿವರಗಳು ಇವೆ ನನಗೆ ಶೂನ್ಯವೇಳೆಯಲ್ಲಿ ಬೆಳಕನ್ನು ಚೆಲ್ಲುವುದಕ್ಕೆ ಸಮಯ ಸಾಕಾಗುವುದಿಲ್ಲ

**ಅಧ್ಯಕ್ಷರು** ರವಿಯವರೆ, ನಿಮ್ಮ ಹತ್ತಿರ ಅನೇಕ ದಾಖಲಾತಿಗಳು ಇವೆ ವಿಷಯವನ್ನು ತಾವು ಸರ್ಕಾರದ ಗಮನಕ್ಕೆ ತಂದಿದ್ದೀರಿ ಅವುಗಳ ಬಗ್ಗೆ ಎಲ್ಲಾ ಮಾಹಿತಿಗಳನ್ನು ಸಂಬಂಧಪಟ್ಟಂತಹ ಸಚಿವರಿಗೆ ಕೊಡಿ ಅವರು ಉತ್ತರವನ್ನು ಕಳುಹಿಸುತ್ತಾರೆ ಈಗ ಸಚಿವರು ಮಾತನಾಡುತ್ತಾರೆ ಕುದುರೆಮುಖದಲ್ಲಿ ಗಣಿಗಾರಿಕೆ ನಡೆಯುತ್ತಿದೆ, ಅದರ ಬಗ್ಗೆ ಹೇಳಿ

**ಶ್ರೀ ಸಿದ್ಧರಾಮಯ್ಯ (ಉಪಮುಖ್ಯ ಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿ ಉತ್ತರವನ್ನು ಒದಗಿಸಿಕೊಡಲಾಗುವುದು ಅದರ ಬಗ್ಗೆ ಮಾನ್ಯ ರವಿಯವರು ತಮ್ಮ ಹತ್ತಿರ ಇರುವ ದಾಖಲಾತಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲಿ

**ಶ್ರೀ ಬಿ ಎಸ್ ಯಡಿಯೂರಪ್ಪ** ಅಧ್ಯಕ್ಷರು ಯಾರ ಹೆಸರನ್ನು ಕರೆಯುತ್ತಾರೋ ಅವರು ಮಾತನಾಡಿ

**ಅಧ್ಯಕ್ಷರು** ಈಗ ಮಾನ್ಯ ಅಲ್ಕೋಡು ಹನುಮಂತಪ್ಪನವರು ಮಾತನಾಡಿ

## 3 ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ವಿವಿಧ ಇಲಾಖೆಗಳಲ್ಲಿ ಸುಮಾರು 385 ಹುದ್ದೆಗಳು ಖಾಲಿ ಇರುವುದರ ಬಗ್ಗೆ

**ಶ್ರೀ ಅಲ್ಕೋಡು ಹನುಮಂತಪ್ಪ(ದೇವದುರ್ಗ)** ಮಾನ್ಯ ಅಧ್ಯಕ್ಷರೆ, ನನಗೆ ತಾವು ಶೂನ್ಯವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ತಮಗೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ರಾಯಚೂರು ಜಿಲ್ಲೆಯ ನನ್ನ ಮತಕ್ಷೇತ್ರವಾದ ದೇವದುರ್ಗ ತಾಲ್ಲೂಕು ಬಹಳ ದೊಡ್ಡ ಹೆಸರನ್ನು ಪಡೆದಿದೆ ಎಲ್ಲಾ ತಾಲ್ಲೂಕುಗಳು ಅಭಿವೃದ್ಧಿಯತ್ತ ತನ್ನ ಹೆಸರನ್ನು ಪಡೆದುಕೊಂಡಿದ್ದರೆ, ನನ್ನ ತಾಲ್ಲೂಕು ಇಡೀ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ ದೇಶದಲ್ಲಿ ಭಾರತ ಏಷ್ಯ ಖಂಡದಲ್ಲಿ ಬಹಳ ಹಿಂದುಳಿದಿರುವಂತಹ ತಾಲ್ಲೂಕು ಎಂದು ಸರ್ಕಾರದ ಎಲ್ಲಾ ಪುಸ್ತಕಗಳಲ್ಲಿ ಇದನ್ನು ಮುದ್ರಿಸಿದ್ದರು ನಮ್ಮ ಕ್ಷೇತ್ರದಲ್ಲಿ ಏನೆಂದರೆ, ಸುಮಾರು 385 ಹುದ್ದೆಗಳು ಖಾಲಿ ಇದೆ ಅಲ್ಲಿ ಉಳಿದವರು ಯಾರು ಎಂಬುದು ನಮಗೆ ಚಿಂತೆ ಆಗಿದೆ ಒಂದು ತಾಲ್ಲೂಕಿನಲ್ಲಿ 385 ಹುದ್ದೆಗಳು ಖಾಲಿ ಇವೆ ಎಂದರೆ ನಾವು ಆ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆಯೇ ಎಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ಪ್ರಾಥಮಿಕ ಶಾಲಾ ಶಿಕ್ಷಕರ 75 ಹುದ್ದೆಗಳು ಖಾಲಿ ಇವೆ, ಸರ್ಕಾರಿ ಪ್ರೌಢಶಾಲೆಯಲ್ಲಿ 38 ಹುದ್ದೆಗಳು ಖಾಲಿ ಇವೆ, ಬಿಇಒ ಆಫೀಸ್‌ನಲ್ಲಿ 3 ಹುದ್ದೆಗಳು ಖಾಲಿ ಇವೆ, ಬಾಲಕ–ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ 9 ಹುದ್ದೆಗಳು ಖಾಲಿ ಇವೆ, ಪ್ರಥಮ ದರ್ಜೆ ಕಾಲೇಜಿನಲ್ಲಿ 9 ಹುದ್ದೆಗಳು ಖಾಲಿ ಇವೆ, ಕೃಷಿ ಇಲಾಖೆಯಲ್ಲಿ 28 ಹುದ್ದೆಗಳು, ಸಮಾಜ ಕಲ್ಯಾಣ ಇಲಾಖೆಯಲ್ಲಿ 48 ಹುದ್ದೆಗಳು, ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಒಂದು ಹುದ್ದೆ ಖಾಲಿ ಇದೆ ರೇಷ್ಮೆ ಇಲಾಖೆಯಲ್ಲಿ 4 ಹುದ್ದೆಗಳು ಖಾಲಿ ಇವೆ, ತೋಟಗಾರಿಕೆ ಇಲಾಖೆಯಲ್ಲಿ 3 ಹುದ್ದೆಗಳು ಖಾಲಿ ಇವೆ, ಶಿಶುಪಾಲನಾ ಅಭಿವೃದ್ಧಿ ಯೋಜನೆಯ ಇಲಾಖೆಯಲ್ಲಿ 4 ಹುದ್ದೆಗಳು, ಪಶುಸಂಗೋಪನಾ ಮತ್ತು ವೈದ್ಯಕೀಯ ಇಲಾಖೆಯಲ್ಲಿ 23 ಹುದ್ದೆಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 93 ಹುದ್ದೆಗಳು, ದೇವದುರ್ಗ ತಾಲ್ಲೂಕು ಪಂಚಾಯಿತಿ ಕಾರ್ಯಾಲಯದಲ್ಲಿ 10 ಹುದ್ದೆಗಳು ಖಾಲಿ ಇವೆ, ತಹಶೀಲ್ದಾರರ ಕಛೇರಿಯಲ್ಲಿ 13 ಹುದ್ದೆಗಳು ಖಾಲಿ ಇವೆ.

**ಅಧ್ಯಕ್ಷರು** ಮಾನ್ಯ ಹನುಮಂತಪ್ಪನವರೇ ಒಟ್ಟು ಎಷ್ಟು ಹುದ್ದೆಗಳು ಖಾಲಿ ಇವೆ ಅಷ್ಟರ ಬಗ್ಗೆ ಒಟ್ಟಿಗೆ ಒಂದೇ ಸಾರಿ ಹೇಳಿ.

**ಶ್ರೀ ಅಲ್ಕೋಡು ಹನುಮಂತಪ್ಪ** ಇಷ್ಟು ಹುದ್ದೆಗಳು ಖಾಲಿ ಇದ್ದ ಮೇಲೆ ನಾವು ಈ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಹೇಗೆ ಸಾಧ್ಯ ಎಂಬುದರ ಬಗ್ಗೆ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ನಾವು ಒಂದೊಂದು ಸಲ ಸಂಬಂಧಪಟ್ಟಂತಹ ಮಂತ್ರಿಗಳಿಗೆ ಈ ಹುದ್ದೆಗಳನ್ನು ತುಂಬಿರಿ ಎಂದು ಹೇಳಿ ಪತ್ರವನ್ನು ಕೊಟ್ಟರೆ ಅದರ ಮೇಲೆ ಪರಿಶೀಲಿಸುತ್ತೇನೆ, ಪರಿಶೀಲಿಸಿ, ಕಡತ ಮಂಡಿಸಿ ಎಂದು ಬರೆಯುತ್ತಾರೆ ಇವರು ಪರಿಶೀಲಿಸಿ ಎಂದು ಹೇಳಿದರೆ ನಾವು ಪರಿಶೀಲಿಸಿ ಎಂದು ಬರೆದಿರುವಂತಹ ಪತ್ರವನ್ನು ತೆಗೆದುಕೊಂಡು ಇಲಾಖೆಗಳಿಗೆ ಹೋದರೆ ಇಲಾಖೆಯ ಮುಖ್ಯಸ್ಥರು, ಪ್ರಿನ್ಸಿಪಲ್ ಸೆಕ್ರೆಟರಿಯವರು, ಸ್ವಾಮಿ ಇದರಲ್ಲಿ ಪರಿಶೀಲಿಸಿ ಎಂದು ಬರೆದಿದ್ದಾರೆ, ಅದಕಾರಣ ವರ್ಗ ಮಾಡುವುದಕ್ಕೆ ಬರುವುದಿಲ್ಲ, ವರ್ಗ ಮಾಡಿ ಎಂದು ಆದೇಶ ಕೊಟ್ಟರೆ ಅನುಕೂಲವಾಗುತ್ತದೆ

**ಅಧ್ಯಕ್ಷರು** ನಿಮ್ಮ ಮನವಿಯನ್ನು ಸರ್ಕಾರಕ್ಕೆ ಹೇಳಿಬಿಡಿ ಅದರ ಬಗ್ಗೆ ಸರ್ಕಾರ ಉತ್ತರ ಕೊಡುತ್ತದೆ

**ಶ್ರೀ ಅಲ್ಕೋಡು ಹನುಮಂತಪ್ಪ** ನಾನು ಮನವಿಯನ್ನು ಹೇಳುತ್ತಿದ್ದೇನೆ, ನನಗೆ ಇರತಕ್ಕಂತಹ ತೊಂದರೆಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಏನಾಗಿದೆ ವರ್ಗಾಯಿಸಿ ಎಂದು ಬರೆದರೆ ಮಾತ್ರ ವರ್ಗ ಮಾಡುತ್ತೇವೆ, ಪರಿಶೀಲಿಸಿ ಎಂದು ಬರೆದರೆ ಮಾಡುವುದಿಲ್ಲ ಎಂದು ಹೇಳತಕ್ಕಂತಹ ಮಾತನ್ನು ಹೇಳುವುದದಾದರೆ, ನಾನು ತಮ್ಮ ಗಮನಕ್ಕೆ ತರುತ್ತೇನೆ ಇಷ್ಟು ಹುದ್ದೆಗಳನ್ನು ಸರ್ಕಾರ ಯಾವಾಗ ತುಂಬುತ್ತದೆ ಎಂಬುದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಕೇಳಬಯಸುತ್ತೇನೆ ಇದನ್ನು ಯಾವಾಗ ತುಂಬುತ್ತಾರೆಂಬ ಬಗ್ಗೆ ಪುನಃ ಮಾತನಾಡುವ ಬಗ್ಗೆ ಅವಕಾಶವನ್ನು ಮಾಡಿಕಡಬೇಕು ಎಂದು ಮತ್ತೊಮ್ಮೆ ತಮ್ಮನ್ನು ಅರಿಕೆ ಮಾಡುತ್ತೇನೆ

**ಅಧ್ಯಕ್ಷರು** ಅವರ ಕ್ಷೇತ್ರದಲ್ಲಿ 348 ಹುದ್ದೆಗಳು ಖಾಲಿ ಇವೆ ಅದರ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ

**ಶ್ರೀ ಸಿದ್ಧರಾಮಯ್ಯ (ಉಪಮುಖ್ಯ ಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, ದೇವದುರ್ಗ ತಾಲ್ಲೂಕಿನಲ್ಲಿ 300ಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ ಎಂದು ಅವರು ಹೇಳಿದ್ದಾರೆ ಅಲ್ಲದೆ, ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆ ಎಂಬುದರ ಬಗ್ಗೆ ಕೂಡ ಹೇಳಿದ್ದಾರೆ ಎಷ್ಟು ಸ್ಯಾಂಕ್ಷನ್ಡ್ ಪೋಸ್ಟ್‌ಗಳು ಇವೆ, ಸ್ಯಾಂಕ್ಷನ್ ಆಗದೆ ಇರುವಂತಹ ಪೋಸ್ಟ್‌ಗಳು ಎಷ್ಟು ಇವೆ ಎಷ್ಟು ಹುದ್ದೆಗಳು ಯಾವ ಯಾವ ಇಲಾಖೆಯಲ್ಲಿ ರಿಫಾರ್ಮ್ಸ್ ಬಂದ ಮೇಲೆ ಕಟ್ ಆಗಿದೆ ಇವೆಲ್ಲವನ್ನೂ ನೋಡಿ ಉಳಿದಂತಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡತಕ್ಕಂತಹ ಕ್ರಮ ತೆಗೆದುಕೊಳ್ಳುತ್ತೇವೆ

**ಅಧ್ಯಕ್ಷರು** ಹನುಮಂತಪ್ಪನವರೆ, ಕೇಳಿ ಈಗ ಮತ್ತೆ ಮತ್ತೆ ಇದರ ಬಗ್ಗೆ ಶೂನ್ಯ ವೇಳೆಯಲ್ಲಿ ಕೇಳುವುದಕ್ಕೆ ಅವಕಾಶವಿಲ್ಲ ನೀವು ಏನು ಕೊಡಬೇಕು ಅದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು

ಇದ್ದಾರೆ, ಅವರ ಹತ್ತಿರ ದಾಖಲಾತಿಗಳನ್ನು ಕೊಟ್ಟುಬಿಡಿ, ಅವರು ಮಾಡಿಕೊಡುತ್ತಾರೆ ಈಗ ಶ್ರೀ ರಾಮರೆಡ್ಡಿಯವರು ಮಾತನಾಡಿ

**4 ಶಿಡ್ಲಘಟ್ಟದಲ್ಲಿ ರೈತರಿಗೆ ಕಳಪೆ ರಸಗೊಬ್ಬರವನ್ನು ಸರಬರಾಜು ಮಾಡಿರುವ ಬಗ್ಗೆ**

**ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ)** ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕೃಷಿ ಇಲಾಖೆಯ ಮಂತ್ರಿಗಳು ಇರಬೇಕಾಗಿತ್ತು, ಕಳಪೆ ರಸಗೊಬ್ಬರಗಳನ್ನು ವಿತರಣೆ ಮಾಡತಕ್ಕಂತಹ ಘಟನೆಗಳು ಇಡೀ ರಾಜ್ಯದಲ್ಲಿ ನಡೆಯುತ್ತಿದೆ ಅದರ ಭಾಗವಾಗಿ ನಿನ್ನೆ ಶಿಡ್ಲಘಟ್ಟದಲ್ಲಿ ರೈತರಿಗೆ ಕಳಪೆ ರಸಗೊಬ್ಬರವನ್ನು ಸರಬರಾಜು ಮಾಡಿ ಅದರಿಂದಾಗಿ ಸಂಪೂರ್ಣ ಹೊಲ ಮತ್ತು ಗದ್ದೆ ನಾಶ ವಾಗಿರುವುದರ ವಿರುದ್ಧ ಅದರ ಬಗ್ಗೆ ಕೇಳಲಿಕ್ಕೆ ಬಂದಂತಹ ಸಂದರ್ಭದಲ್ಲಿ ಆ ಮಾಲೀಕರ ಪರವಾಗಿ ಪೊಲೀಸ್‌ನವರು ನಿಂತುಕೊಂಡು ರೈತರ ಮೇಲೆ ಲಾರಿಚಾರ್ಜ್ ಮಾಡಿರುವಂತಹ ಘಟನೆಯೂ ಕೂಡ ನಡೆದಿರುತ್ತದೆ. ಇವತ್ತು ಬೆಂಗಳೂರು ಜಿಲ್ಲೆಯ ರೈತರುಗಳು ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ಪ್ರತಿಭಟನೆಯನ್ನು ಮಾಡುತ್ತಿದ್ದಾರೆ, ಏಕೆಂದರೆ, ಇಡೀ ರಾಜ್ಯದಲ್ಲಿ ಕಳಪೆ ರಸಗೊಬ್ಬರ ವಿತರಣೆ ಮಾಡುತ್ತಿರುವಂತಹ ಒಂದು ದೊಡ್ಡದಾದಂತಹ ಜಾಲ ಹುಟ್ಟಿ ಕೊಂಡಿದೆ ಅವರಿಗೆ ಎಲ್ಲಾ ರೀತಿಯಿಂದಲೂ ರಕ್ಷಣೆ ಸಿಗುತ್ತಿದೆ ಇದರ ಪರಿಣಾಮವಾಗಿ ರೈತರು ಇವತ್ತು ಸಂಪೂರ್ಣವಾಗಿ ನಾಶವಾಗುತ್ತಿದ್ದಾರೆ ಸಾಲ ಮತ್ತು ಸೋಲವನ್ನು ಮಾಡಿ ರಸಗೊಬ್ಬರಗಳನ್ನು ತೆಗೆದುಕೊಂಡು ಹೋಗಿ ಹಾಕಿದರೆ ಅವು ಯವುದಕ್ಕೂ ಇವತ್ತು ನಿಷ್ಪ್ರಯೋಜನವಾಗಿ ಗದ್ದೆಗಳು ನಾಶವಾಗಿ ಇವತ್ತಿನ ದಿವಸ ರೈತರು ಸಾಲಗಾರನಾಗಿ ಸಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ ಆದರೆ ಇವತ್ತು ನಿನ್ನೆ ಈ ಘಟನೆಯೂ ಪ್ರಾರಂಭವಾಗಿದೆ ಶಿಡ್ಲಘಟ್ಟದಲ್ಲಿ ಲಾರಿಚಾರ್ಜ್ ಆಗಿದೆ, ಹತ್ತಾರು ಜನ ರೈತರಿಗೆ ಹೊಡೆತವಾಗಿದೆ, ಇದು ಇಡೀ ರಾಜ್ಯದಲ್ಲಿ ಇವತ್ತು ಮರುಕಳುಹಿಸುವಂತಹ ಸಂದರ್ಭವಿದೆ ಆದ್ದರಿಂದ ನಾನು ಇದನ್ನು ಸರ್ಕಾರದ ಗಮನಕ್ಕೆ ತಂದು ತಕ್ಷಣ ಇಡೀ ರಾಜ್ಯದಲ್ಲಿ ಈ ಕಳಪೆ ರಸಗೊಬ್ಬರವನ್ನು ಸರಬರಾಜು ಮಾಡತಕ್ಕಂತಹ ಕಂಪನಿಗಳು ಯಾವುದು ಇವೆ ಅವುಗಳಿಗೆ ಪರವಾನಗಿ ಎಲ್ಲಿಂದ ಬಂತು? ಪರವಾನಗಿ ಇಲ್ಲದೆ ಇರುವಂತಹವರು ಇವತ್ತು ಬ್ಲಾಕ್‌ನಲ್ಲಿ ಗೊತ್ತಿಲ್ಲದಂತೆ ಅಂಗಡಿಗಳಲ್ಲಿ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಾರೆ, ಅವರಿಗೆ ಯಾವ ಡಿಪಾರ್ಟ್‌ಮೆಂಟ್‌ನವರು ಅನುಮತಿಯನ್ನು ಕೊಟ್ಟಿದ್ದಾರೆ? ಸರ್ಕಾರ ಬೇರೆ ಏನಾದರೂ ಅವರಿಗೆ ಲೈಸೆನ್ಸ್ ಕೊಡತಕ್ಕಂತಹ ವ್ಯವಸ್ಥೆ ಏನಾದರೂ ಮಾಡಿದೆಯೋ? ಯಾವ ಆಧಾರದ ಮೇಲೆ ಅವರು ಮಾರಾಟ ಮಾಡುತ್ತಿದ್ದಾರೆ? ಮಾರಾಟ ಮಾಡುವಂತಹವರ ಮೇಲೆ ಕಳಪೆ ರಸ ಗೊಬ್ಬರಗಳನ್ನು ಮಾರಿದರೆ ಅದನ್ನು ನಿಯಂತ್ರಣ ಮಾಡುವ ಬಗ್ಗೆ ಸರ್ಕಾರ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಂಡಿದೆ ಎಂಬುದರ ಬಗ್ಗೆ ಯೋಚನೆ ಮಾಡಿದೆ ಇದರ ಬಗ್ಗೆ ದಯವಿಟ್ಟು ಸರ್ಕಾರ ಹೇಳಬೇಕು, ಏಕೆಂದರೆ ಇದು ರೈತಸಮುದಾಯಕ್ಕೆ ಮತ್ತೊಂದು ಹೊಡೆತವಾಗಿದೆ, ಒಂದು ಕಡೆ ಬಿತ್ತನೆಯ ಸಂದರ್ಭದಲ್ಲಿ ಕಳಪೆ ಬೀಜಗಳು ಈಗ ರಸಗೊಬ್ಬರಗಳು ಕಳಪೆಯದಾಗಿದೆ ರಸಗೊಬ್ಬರಗಳು ಕಳಪೆ, ಬಿತ್ತನೆಯ ಬೀಜಗಳು ಸಹ ಕಳಪೆಯದಾಗಿದೆ, ಪೆಸ್ಟಿಸೈಡ್ಸ್ ಕಳಪೆಯದಾಗಿದೆ ಎಲ್ಲವೂ ಕಳಪೆಯಾಗಿ ಈಗಾಗಲೇ ಸಾಯುಸುತ್ತಿರುವಂತಹ ರೈತರಿಗೆ ಇನ್ನೂ

ಬೇಗ ಸಾಯಲಿ ಎನ್ನತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಶಿಡ್ಲಘಟ್ಟದಲ್ಲಿ ಯಾರು ರೈತರ ಮೇಲೆ ಲಾರಿಚಾರ್ಜ್ ಮಾಡಿದ್ದಾರೆ ಅವರ ಮೇಲೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು, ಕಳಪೆ ರಸಗೊಬ್ಬರಗಳ ಜಾಲವನ್ನು ಪತ್ತೆಹಚ್ಚಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು, ಅವರಿಗೆ ಸೂಕ್ತವಾದಂತಹ ಶಿಕ್ಷೆಯನ್ನು ಕೊಡಬೇಕು ಎಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ನಿನ್ನೆ ಈ ವಿಷಯ ನನ್ನ ಗಮನಕ್ಕೆ ಬಂತು ಶಿಡ್ಲಘಟ್ಟದಲ್ಲಿ ಒಂದು ಅಂಗಡಿಯಲ್ಲಿ ಡಿಎಪಿ ಗೊಬ್ಬರಕ್ಕೆ ಕಲ್ಲುಗಳನ್ನು (ಬೆಣಚುಕಲ್ಲು) ಮಿಕ್ಸ್ ಮಾಡಿ ಅದು ಸ್ವಲ್ಪ ಬೆಳ್ಳಗೆ ಇರುತ್ತದೆ, ಗೊತ್ತಾಗುವುದಿಲ್ಲ ಅದನ್ನು ಸೇರಿಸಿ ಮಾರಿದ್ದಾರೆ ಎನ್ನುವಂತಹ ವಿಚಾರ ನನ್ನ ಗಮನಕ್ಕೆ ಬಂದಿದೆ ನಾನು ಆಗಲೇ ಸಂಬಂಧಪಟ್ಟಂತಹ ರಕ್ಷಣಾಧಿಕಾರಿಗಳಿಗೆ ಫೋನ್ ಮೂಲಕ ಮಾತನಾಡಿ ಅವರುಗಳನ್ನು ಅರೆಸ್ಟ್ ಮಾಡಿಸಿ ಈಗ ಅವರುಗಳು ಜೈಲಿನಲ್ಲಿದ್ದಾರೆ ಎಲ್ಲಾ ರೈತರುಗಳು ಸೇರಿ ಗಲಾಟೆಯಾದಾಗ, ಆಗ ಸ್ವಲ್ಪ ಲಘು ಲಾರಿಚಾರ್ಜ್ ಆಗಿದೆ, ಅದನ್ನು ನಿಯಂತ್ರಣ ಮಾಡುವುದಕ್ಕೆ ಸ್ವಲ್ಪ ಲಾರಿಚಾರ್ಜ್ ಮಾಡಿದ್ದಾರೆ ಅವರಿಂದ ಏನಾದರು ತಪ್ಪಾಗಿದ್ದರೆ ಅತಿರೇಕಕ್ಕೆ ಹೋಗಿದ್ದರೆ ಅವರ ಮೇಲೆ ಕ್ರಮವನ್ನು ಜರುಗಿಸುವ ಬಗ್ಗೆ ನಾವೇನೂ ಹಿಂದಕ್ಕೆ ಹೋಗುವುದಿಲ್ಲ ರೈತರ ಮೇಲೆ ನಾವು ಯಾವುದೇ ಪರಿಸ್ಥಿತಿಯಲ್ಲಿಯೂ ಕೂಡ ಕೈ ಎತ್ತಬಾರದು ಅದನ್ನು ನಾನು ನೇರವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಡೀ ರಾಜ್ಯದಲ್ಲಿ ನಾನೂ ಕೂಡ ಅನೇಕ ಸಂಘಸಂಸ್ಥೆಗಳಲ್ಲಿ ಗೊಬ್ಬರದ ಕಂಪನಿಗಳಲ್ಲಿ ಅಧ್ಯಕ್ಷನಾಗಿದ್ದೇನೆ ಪ್ರಪಂಚದಲ್ಲಿ ಅತಿ ದೊಡ್ಡದಾದ ಕಂಪನಿಗಳಾದ ಇಫ್ಕೋ ಮತ್ತು ಕ್ರಿಭ್ಕೋ ಕಂಪನಿಗಳಲ್ಲಿ ಅಧ್ಯಕ್ಷನಾಗಿದ್ದೇನೆ, ಸುಮಾರು 21 ವರ್ಷಗಳ ಕಾಲ ಈ ರಾಜ್ಯದಲ್ಲಿ ಗೊಬ್ಬರಗಳ ಮಾರಾಟವನ್ನು ನಿಯಂತ್ರಣ ಮಾಡುವುದರಲ್ಲಿ, ರಾಜ್ಯ ಸಹಕಾರ ಮಾರಾಟ ಮಂಡಳಿಯ ಮೂಲಕ ಮಾಡುತ್ತಿದ್ದೇವೆ ಇದರಲ್ಲಿ ಕೆಲವು ಎಂಪಿಕೆ ಗೊಬ್ಬರಗಳನ್ನು ಕೆಲವು ಪ್ರೈವೇಟ್ ಏಜೆನ್ಸಿಯವರು ಮಿಕ್ಸ್ ಮಾಡುತ್ತಾರೆ ಇವರು ಯಾವ ಡಿಎಪಿಯಿಂದ ತೆಗೆದುಕೊಂಡು ಹೋಗಿ ಮಿಕ್ಸ್ ಮಾಡಿ ಮಾರುವಂತಹದ್ದನ್ನು ಮಾಡುತ್ತಾರೆ ಅಲ್ಲಿ ಈ ತರಹ ಕಳಪೆಯಾಗುತ್ತದೆ ಯಾವ ಕಂಪನಿಗಳಿಂದ ಮಾಡಿದ್ದಾವೋ ಅವು ಸಾಧ್ಯವಿಲ್ಲ ಇಲ್ಲದೆ ಇದ್ದರೆ ಯಾರೂ ಸಗಟು ವ್ಯಾಪಾರಸ್ಥರಿದ್ದಾರೆ, ಆ ವ್ಯಾಪಾರಸ್ಥರು ಅಲ್ಲಿ ಮಿಕ್ಸ್ ಮಾಡುವುದಕ್ಕೆ ಅವಕಾಶವಿದೆ ಬ್ಯಾಗ್ ಹೊಲಿಯುವಂತಹ ಮಿಷನ್ ಕೂಡ ಅವನ ಹತ್ತಿರ ಇರಬೇಕು, ಇಲ್ಲದೇ ಇದ್ದರೆ ಆ ಮಿಷನ್ ಕೂಡ ಬಹಳ ಮುಖ್ಯವಾದಂತಹ ಐಟಂ ಆಗಿದೆ ಆ ಬ್ಯಾಗ್ ಮಾಡಲಿಕ್ಕೆ ಆ ತರಹ ಯಾರೇ ಆಗಿದ್ದರೂ ಕೂಡ ಇಡೀ ರಾಜ್ಯದಲ್ಲಿ ಇವತ್ತೇ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಎಲ್ಲಾ ಜಾಯಿಂಟ್ ಡೈರೆಕ್ಟರ್‌ಗಳಿಗೆ ಸೂಚನೆ ಕೊಡುತ್ತೇನೆ. ಈ ತರಹ ಮಾಹಿತಿಯನ್ನು ತರಿಸಿಕೊಂಡು ಎಲ್ಲಿ ಗೊಬ್ಬರಗಳು ಈ ತರಹ ಆಗಿದ್ದರೆ ಅವರ ಮೇಲೆ ಕಾನೂನು ರೀತಿಯ ಕ್ರಮ ಜರುಗಿಸುತ್ತೇವೆಂಬ ಮಾತನ್ನು ಹೇಳುತ್ತೇನೆ ಶಿಡ್ಲಘಟ್ಟದಲ್ಲಿ ನಡೆದಿರುವ ಘಟನೆ ಬಗ್ಗೆ ಅವರನ್ನು ಜೈಲಿಗೇ ಹಾಕಿಸಿದ್ದೇವೆ, ಅವರ ಮೇಲೂ ಕೂಡ ಅದೇ ರೀತಿಯಲ್ಲಿ ಕ್ರಮವನ್ನು ಜರುಗಿಸುತ್ತೇವೆನ್ನುವಂತಹ ಮಾತನ್ನು ಹೇಳುವುದರ ಜೊತೆಗೆ ನಾನು ಆಗಲೇ ಉತ್ತರವನ್ನು ಕೊಟ್ಟಿದ್ದೇನೆ, ಸೀಡ್ಸ್ ಬಗ್ಗೆ ಐದು ಜಾಗದಲ್ಲಿ ಈ ರೀತಿಯಾಗಿದೆ, ಅದು ಪ್ರೈವೇಟ್ ಕಂಪನಿಗಳು ಏನಾಯಿತು? ಆಂಧ್ರದಿಂದ ಬಂದು ಒಂದು

ಲಾರಿಯಲ್ಲಿ ತಂದು ಗೌರಿಬಿದನೂರಿನಲ್ಲಿ ಮಾರಿಕೊಂಡು ಹೋದರು ಅದನ್ನು ನಮ್ಮ ರೈತರು ಕೆಲವಾರು ವರ್ಷಗಳಿಂದ ತೆಗೆದುಕೊಳ್ಳುತ್ತಿದ್ದರು ಅದನ್ನು ತೆಗೆದುಕೊಂಡು ಹೋಗಿ ಹೂಳಿದರು ಆಗ ಸ್ವಲ್ಪ ಮೋಸವಾಗಿದೆ, ಯಾವ ನಮ್ಮ ಅಪ್ರೂವ್ಡ್ ಲಿಸ್ಟ್ ಅಫ್ ಸೀಡ್‌ಗ್ರೋಯರ್ಸ್ ಏನು ಇರುತ್ತಾರೆ, ಅವರ ಸೀಡ್ ಕಂಪನಿಗಳು ಏನು ಇರುತ್ತವೆ, ಆ ತರಹವಾದರೆ ಅವರ ಮೇಲೆ ಕ್ರಮವನ್ನು ಜರುಗಿಸುತ್ತೇವೆ, ಆ ಲೈಸೆನ್ಸ್‌ನ್ನು ರದ್ದು ಮಾಡುವಂತಹದ್ದರ ಬಗ್ಗೆ ಕೂಡ ನಾವು ಈಗಾಗಲೇ ಸೂಚನೆಯನ್ನು ಕೊಟ್ಟಿದ್ದೇವೆ ಎಂಬುದರ ಬಗ್ಗೆ ತಮ್ಮ ಮೂಲಕ ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ

**ಅಧ್ಯಕ್ಷರು** ಈಗ ಮಾನ್ಯ ಶಿವಾನಂದ ನಾಯಕರ್‌ರವರು ಮಾತನಾಡಿ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಮಾನ್ಯ ಅಧ್ಯಕ್ಷರೆ, ಸಾರ್ ಒಂದೇ ಒಂದು

**ಅಧ್ಯಕ್ಷರು** ದಯಮಾಡಿ ಇದಕ್ಕೆ ಅವಕಾಶವಿಲ್ಲ ನೋ, ನೋ, ಮಾನ್ಯ ಶಿವಾನಂದ ನಾಯಕ್‌ರವರೇ ಮಾತನಾಡಿ

## 5. ಹೊನ್ನಾವರ ತಾಲ್ಲೂಕಿನ ಶರಾವತಿ ಮತ್ತು ಉಂಬಳ ನದಿಗಳು ತುಂಬಿ ಹರಿಯುತ್ತಿದ್ದು ತಗ್ಗು ಪ್ರದೇಶದಲ್ಲಿರುವ ಮನೆಗಳು ಬಿದ್ದು ಹೋಗಿರುವ ಕಡೆ ಪುನರ್ ವ್ಯವಸ್ಥೆ ಕಲ್ಪಿಸುವ ಬಗ್ಗೆ

**ಶ್ರೀ ಶಿವಾನಂದ ನಾಯಕ್ (ಭಟ್ಕಳ)** ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕುದಿವಸಗಳಿಂದ ಹೊನ್ನಾವರದ ನಮ್ಮ ಕರಾವಳಿಯ ಉದ್ದಕ್ಕೂ ಮಳೆಯು ಜಾಸ್ತಿಯಾಗಿದೆ, ಅದರಲ್ಲಿ ವಿಶೇಷವಾಗಿ ಹೊನ್ನಾವರ ತಾಲ್ಲೂಕಿನ ಶರಾವತಿ ನದಿ ಮತ್ತು ಉಂಬಳ ನದಿ ತುಂಬಿ ಹರಿಯುತ್ತಿದೆ, ತಗ್ಗುಪ್ರದೇಶದಲ್ಲಿರುವಂತಹ ಸುಮಾರು 350 ಮನೆಗಳು ಈಗಾಗಲೇ ಬಿದ್ದು ಹೋಗಿವೆ ತಗ್ಗುಪ್ರದೇಶದಲ್ಲಿರುವಂತಹ ಜನರು ಈಗಾಗಲೇ ಶಾಲೆ ಮತ್ತು ಬೇರ ಬೇರೆ ಗುಡ್ಡದಲ್ಲಿ ಸೇರಿಕೊಂಡಿದ್ದಾರೆ ಇದುವರೆವಿಗೂ ಅಲ್ಲಿ ಗಂಜಿ ಕೇಂದ್ರದ ವ್ಯವಸ್ತೆಯಾಗಿರುವುದಿಲ್ಲ ಈಗಾಗಲೇ ಅಲ್ಲಿ ಬಿದ್ದು ಹೋಗಿರುವಂತಹ ಮನೆಗೆ ಪುನರ್ ವ್ಯವಸ್ಥೆ ಮಾಡುವಂತಹ ವ್ಯವಸ್ಥೆಯಾಗಬೇಕು ಅದರ ಜೊತೆಗೆ ಗಂಜಿ ಕೇಂದ್ರವನ್ನು ತಕ್ಷಣ ತೆರೆಯುವಂತಹ ಒಂದು ಕೆಲಸ ಆಗಬೇಕು ಇದೇರೀತಿ ಸಾಂಪ್ರದಾಯಿಕ ಮೀನುಗಾರಿಕೆ ಹೋದಂಥ ಮೂರು ಜನ ಮೀನುಗಾರರು ಸಮುದ್ರದ ಪಾಲಾಗಿದ್ದಾರೆ ಅವರಲ್ಲಿ ಇಬ್ಬರು ತೀರಿಕೊಂಡಿದ್ದಾರೆ ಅವರಿಗೆ ಪರಿಹಾರವನ್ನು ಕೊಡುವ ಕೆಲಸ ಆಗಬೇಕು ಇಲ್ಲಿ ಪ್ರತಿವರ್ಷ ಸಹ ಈ ರೀತಿ ಅನಾಹುತ ಆಗುತ್ತಿದೆ ನಾನು ಮೊನ್ನೆ ಕೂಡ ಬಜೆಟ್‌ನಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ಹೇಳಿದ್ದೇನೆ ನಮ್ಮ ಕರಾವಳಿಯಲ್ಲಿ ಅತಿವೃಷ್ಟಿಯಿಂದ ಅತಿಹೆಚ್ಚು ಹಾನಿಯಾಗಿದೆ ನಮಗೆ ಬರಕ್ಕಾಗಿ ಬರುವಂತಹ ಯಾವುದೇ ರೂಪದ ಯೋಜನೆ ಬರಲಿಲ್ಲ ಕಳೆದ ಒಂದು ವಾರದಿಂದ ಮಳೆಯಿಂದ ಈ ರೀತಿಯ ತೊಂದರೆಯಾಗಿದೆ ಸಾವಿರಾರು ಎಕರೆ ಭೂಮಿ ಸಹ ಹಾನಿಯಾಗಿದೆ ಮತ್ತು ತೋಟಗಳು ಇರುವಂತಹ ಪ್ರದೇಶಗಳಲ್ಲಿ ಅಲ್ಲಿರುವಂಥ ಅಡಿಕೆ, ತೆಂಗು ಮರಗಳು ಇವತ್ತು ಅತಿ ಹೆಚ್ಚು ಗಾಳಿ ಬೀಸಿದ್ದರಿಂದ ಅವೆಲ್ಲಾ ಮುರಿದುಬಿದ್ದಿವೆ ಅದಕ್ಕೂ ಕೂಡ

ಪರಿಹಾರವನ್ನು ಕೊಡಬೇಕೆಂದು ನಾನು ಹೇಳುತ್ತೇನೆ ನಮ್ಮ ಜಿಲ್ಲೆಯಲ್ಲಿ ಈ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸುವಂಥ ಜಿಲ್ಲಾಧಿಕಾರಿಗಳು ಅಲ್ಲಿ ಇಲ್ಲ ಅಲ್ಲಿ ಯಾರೋ ಹೊಸಬರು ಬಂದಿದ್ದಾರಂತೆ ಅವರು ಇನ್ನೂ ತನಕ ಚಾರ್ಜ್ ತೆಗೆದುಕೊಂಡಿಲ್ಲ ಆದ್ದರಿಂದ ಅಲ್ಲಿ ಜನರ ತೊಂದರೆಗಳನ್ನು ಕೇಳುವಂಥ ಅಧಿಕಾರಿಗಳು ಯಾರೂ ಇಲ್ಲ ಮೊನ್ನೆ ಇದೇ ವಿಷಯದಲ್ಲಿ .... ....

**ಅಧ್ಯಕ್ಷರು** ಸಂಕ್ಷಿಪ್ತವಾಗಿ ಹೇಳಿ

**ಶ್ರೀ ಶಿವಾನಂದ ನಾಯ್ಕ** ಮೊನ್ನೆ ನಾನು ನೋಟೀಸ್ ಕೊಟ್ಟಿದ್ದೇನೆ ನಾನು, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆಯವರು ಸೇರಿ ಒಂದು ನೋಟೀಸ್ ಕೊಟ್ಟಿದ್ದೇವೆ ಸಮುದ್ರ ಕೊರೆತ ಆಗಿ ಅದರ ಬಗ್ಗೆ ಈಗಾಗಲೇ ನಾನು ಏನೇನು ಹಾನಿ ಆಗಿದೆಯೆಂದು ಫೋಟೋಗಳನ್ನು ಸಮೇತ ತೆಗೆದುಕೊಂಡು ಬಂದಿದ್ದೇನೆ ಆ ಫೋಟೋಗಳನ್ನು ಮಾನ್ಯ ಸವಚಿವರಿಗೆ ಕೊಡುತ್ತೇನೆ ತಾವು ಹಿಂದಿನ ಬಜೆಟ್‌ನಲ್ಲಿ ಇಟ್ಟಂಥ ಒಂಬತ್ತು ಕೋಟಿ ಹಣವನ್ನು ವಾಪಸ್ಸು ತೆಗೆದುಕೊಂಡಿದ್ದೀರಿ ಈ ಸಮುದ್ರ ಕೊರೆತಕ್ಕೆ ಸಂಬಂಧಪಟ್ಟಂತೆ ತುರ್ತಾಗಿ ಆಗಬೇಕಾದ ಎಲ್ಲಾ ಕೆಲಸಗಳು ಕೂಡ ನಿಂತುಹೋಗಿವೆ ಈಗ ಮನೆಗಳು ಬಿದ್ದು ಹೋಗುತ್ತಿವೆ ಮೀನುಗಾರರು ತುಂಬಾ ಹಾನಿಗೊಳಗಾಗಿದ್ದಾರೆ ಆದ್ದರಿಂದ ತಕ್ಷಣ ಆ ಕೆಲಸವನ್ನು ಮಾಡಬೇಕೆಂದು ನಾ..ು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ)** ಮಾನ್ಯ ಅಧ್ಯಕ್ಷರೇ, ಶ್ರೀಯುತ ಶಿವಾನಂದ ನಾಯ್ಕ ಅವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ನಿನ್ನೆ, ಮೊನ್ನೆ ಮತ್ತು ಇವತ್ತು ಈ ಕ್ಷಣದ ತನಕವೂ ನನ್ನ ಜಿಲ್ಲೆಯಾದ ಉತ್ತರ ಕನ್ನಡದಲ್ಲಿ ಕರಾವಳಿಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಮಳೆಯಾಗುತ್ತಿರುವುದರಿಂದ ಜನಜೀವನ ಪೂರ್ಣ ಅಸ್ತವ್ಯಸ್ಥಗೊಳ್ಳುತ್ತಿದೆ ಇದು ಎಲ್ಲಿಯತನಕ ಎಂದರೆ ವಿದ್ಯುತ್ ಇಲ್ಲ ವಿದ್ಯುತ್ ಕಂಬದ ಲೈನ್‌ಗಳ ಮೇಲೆ ಮರಗಳು ಬಿದ್ದು ಅಲ್ಲಿ ಇವತ್ತು ಕರೆಂಟ್ ಇಲ್ಲ ಈಗ ಕೆ ಇ ಬಿ ಅವರ ಹತ್ತಿರ ನಾವು ಕಂಬಗಳನ್ನು ಕೇಳುವುದಕ್ಕೆ ಹೋದರೆ ಕಂಬಗಳನ್ನು ಇನ್ನು ತರಿಸಿಕೊಡಬೇಕು ಎಂದು ಹೇಳುತ್ತಾರೆ ಇದಕ್ಕೆ ಅವರು ವಿಳಂಬ ಮಾಡುತ್ತಾರೆ ಮಳೆಯಿಂದಾಗಿ ರಸ್ತೆಗಳೆಲ್ಲಾ ಹಾಳಾಗಿ ಕೊಚ್ಚಿಕೊಂಡು ಹೋಗುತ್ತಿವೆ ಈ ಫ್ಲಡ್‌ನಲ್ಲಿ ಹಣ ಬರಬೇಕು ಎಂದರೆ ಇವರು ರಿಪೋರ್ಟ್ ಮಾಡಿ ಅದು ಕೇಂದ್ರ ಸರ್ಕಾರಕ್ಕೆ ಹೋಗಿ ಕೇಂದ್ರ ಸರ್ಕಾರದಿಂದ ರಾಜ್ಯಸರ್ಕಾರಕ್ಕೆ ಬಂದು ಅಲ್ಲಿ ಹೋಗುವ ತನಕ ಬಹಳ ವಿಳಂಬವಾಗುತ್ತದೆ. ತಕ್ಷಣದಲ್ಲಿ ಈ ಕೆಲಸವನ್ನು ಮಾಡಬೇಕಾಗಿದೆ ಸೇತುವೆಗಳು ಕುಸಿದುಹೋಗಿವೆ ಭಾರವಾದ ಟ್ರಕ್‌ಗಳು ಓಡಾಡಿದರೆ ಸೇತುವೆ ಕುಸಿಯುತ್ತಿದ್ದು ಈಗ ಅತಿವೃಷ್ಟಿಯಿಂದ, ಮಳೆಯಿಂದ ಕುಸಿದಿದ್ದು ರಸ್ತೆಗಳು ಕಟ್ ಆಗಿವೆ ಇವತ್ತು ಸಿರ್ಸಿ-ಕುಮಟಾ ರಸ್ತೆ ಮೇಲಿನ ಸೇತುವೆ ಕುಸಿದು ರಸ್ತೆ ಕಟ್ ಆಗಿರುವುದ್ದರಿಂದ ಬಸ್ಸುಗಳು, ದೊಡ್ಡ ವಾಹನಗಳು ಹೋಗುತ್ತಿಲ್ಲ ಕೇವಲ ಕಾರುಗಳು ಮಾತ್ರ ಹೋಗುತ್ತಿವೆ ಹಾಗಾಗಿ ಜನಜೀವನ ಪೂರ್ತಿಯಾಗಿ ಅಸ್ತವ್ಯಸ್ಥವಾಗಿದೆ ತಕ್ಷಣ ಅಲ್ಲಿ ಗಂಜಿಕೇಂದ್ರವನ್ನು ತೆಗೆಯಬೇಕು ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಇಲ್ಲ, ಸಿ ಇ.ಓ ಇಲ್ಲ, ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲ ಹಾಗಾಗಿ ಆಡಳಿತ ಯಂತ್ರಕ್ಕೆ ತಕ್ಷಣ ಅಲ್ಲಿ ಸ್ಪಂದಿಸುವುದಕ್ಕೆ ಬೇಕಾದಂಥ ಸೂಚನೆ ಇಲ್ಲಿಂದ ಹೋಗಬೇಕು

ಮತ್ತು ಅಲ್ಲಿಗೆ ವಿಶೇಷ ಅಧಿಕಾರಿಗಳನ್ನು ಕಳಿಸಬೇಕು ಈ ಎಲ್ಲಾ ಪರಿಸ್ಥಿತಿಯನ್ನು ನಿವಾರಿಸುವುದಕ್ಕೆ ವಿಶೇಷ ಅಧಿಕಾರಿಯನ್ನು ಕೂಡಲೇ ಕಳಿಸಬೇಕೆಂದು ನಾನು ಹೇಳುತ್ತೇನೆ ಏಕೆಂದರೆ ಅಲ್ಲಿ ಈಗ ಡೆಪ್ಯುಟಿ ಕಮಿಷನರ್ ಇಲ್ಲ, ಸಿ ಇ ಓ ಇಲ್ಲ ಮತ್ತು ಜಿಲ್ಲಾ ಮಂತ್ರಿಗಳು ಕೂಡ ಇಲ್ಲ ಅಲ್ಲಿ ನಾವು ಕೇಳಿದರೆ ನಾವೇನು ಮಾಡುವುದು ಎಂದು ಹೇಳುತ್ತಾರೆ ಅವರೆಲ್ಲ ಅಲ್ಲಿ ಕೈಚೆಲ್ಲಿ ಕುಳಿತಿದ್ದಾರೆ....

**ಅಧ್ಯಕ್ಷರು** ಆಯಿತು

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** ಇನ್ನು ಸಮುದ್ರ ಕೊರೆತದಂಥ ದೊಡ್ಡ ವಿಷಯ ಇದೆ ಅತಿವೃಷ್ಟಿಯಿಂದ ಅಂತೂ ಜನಜೀವನ ಎಲ್ಲಾ ಅಸ್ತವ್ಯಸ್ಥವಾಗಿದೆ ತಕ್ಷಣದಲ್ಲಿ ವಿಶೇಷ ಅಧಿಕಾರಿಗಳನ್ನು ಕಳುಹಿಸಬೇಕು ಮತ್ತು ನಮ್ಮ ಜಿಲ್ಲೆಯ ಮೇಲುಸ್ತುವಾರಿಯನ್ನು ಅವರು ಇದ್ದು ನೋಡಿ ತಕ್ಷಣ ಸಮಸ್ಯೆಗೆ ಸ್ಪಂದಿಸಬೇಕೆಂದು ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** ಮಾನ್ಯ ಅಧ್ಯಕ್ಷರೇ, ಈಗ ನನ್ನ ಸ್ನೇಹಿತರು ಹೇಳಿದರು ಅದೇ ರೀತಿಯಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸಮುದ್ರ ಕೊರೆತ ಇದೆ ಇದನ್ನು ಮೊನ್ನೆ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೆ ಸರ್ಕಾರ ಕೊಟ್ಟ ಪಟ್ಟಿಯಲ್ಲಿ ಕೋಟಾ, ಮಣೂರು, ಉದ್ಯಾವರ ಇಂತಹ ಅನೇಕ ಭಾಗಗಳನ್ನು ಕೊಟ್ಟಿದ್ದಾರೆ ತೀವ್ರ ಸಮುದ್ರ ಕೊರೆತ ಆಗುತ್ತಾ ಇರುವುದರಿಂದ ಕೆಲವು ಮನೆಗಳು ಬೀಳುವ ಸ್ಥಿತಿಯಲ್ಲಿವೆ ಎಂದು ಈಗ ನನಗೆ ಫೋನ್ ಬಂದಿತ್ತು ನಾನು ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರನ್ನು ಸಂಪರ್ಕ ಮಾಡುವ ಪ್ರಯತ್ನ ಮಾಡಿದೆ, ಅದು ಆಗಲಿಲ್ಲ ಆದರೆ ಅವರು ಏನು ಹೇಳುತ್ತಾರೆ ಎಂದರೆ ಸರ್ಕಾರದಿಂದ ಆದೇಶ ಬರದೆ ನಮಗೆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ನಾವು ಶಾಶ್ವತ ತಡೆಗೋಡೆಯನ್ನು ಕೇಳುತ್ತಿಲ್ಲ ತಾತ್ಕಾಲಿಕ ತಡೆಗೋಡೆಯಾದರೂ ತಕ್ಷಣದಲ್ಲಿ ಮಾಡದೇ ಇದ್ದರೆ ಅನೇಕ ಮನೆಗಳು ಬೀಳುವ ಸಾಧ್ಯತೆ ಇದೆ ಅದಕ್ಕೆ ನಾನು ತಮ್ಮ ಮೂಲಕ ಮಾನ್ಯ ಆರ್ಥಿಕ ಮಂತ್ರಿಗಳನ್ನು ಕೇಳುತ್ತೇನೆ ಹಣವನ್ನು ಬಿಡುಗಡೆ ಮಾಡುತ್ತೇವೆ, ಕೆಲಸವನ್ನು ಪ್ರಾರಂಭ ಮಾಡಿ ಎಂದು ಪೋರ್ಟ್ ಅಂಡ್ ಫಿಶರೀಸ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಉಡುಪಿ–ಹಾಗೂ ಉತ್ತರ ಕನ್ನಡಕ್ಕೆ ಫೋನ್ ಮಾಡಿ ಆದೇಶವನ್ನು ಕೊಡಬೇಕೆಂದು ನಾನು ತಮ್ಮ ಮುಖೇನ ಕೇಳಿಕೊಳ್ಳುತ್ತೇನೆ

**ಅಧ್ಯಕ್ಷರು** ಎಲ್ಲಾ ದಕ್ಷಿಣ ಕನ್ನಡ ಜಿಲ್ಲೆಯವರು ಒಂದೇ ವಿಚಾರದ ಬಗ್ಗೆ ಎದ್ದು ನಿಂತು ಕೇಳುಬೇಕು ಎಂದರೆ ಅದು ಎಷ್ಟು ಸಮಂಜಸ ಎಂದು ನೀವೇ ಹೇಳಿ

**ಶ್ರೀ ಕೆ ರಘುಪತಿ ಭಟ್ (ಉಡುಪಿ)** ನಮ್ಮಲ್ಲಿ ಮಳೆ ಜಾಸ್ತಿ ಇದೆ ಮತ್ತು ನಮ್ಮ ಕ್ಷೇತ್ರದಲ್ಲಿ ಈಗಾಗಲೇ ಎರಡು ಶಾಲೆಗಳು ಮಳೆಯಿಂದ ಬಿದ್ದುಹೋಗಿವೆ ಸುಮಾರು ನೂರೈವತ್ತು ಮನೆಗಳು ಬಿದ್ದಿವೆ ಆದ್ದರಿಂದ ಇದರ ಬಗ್ಗೆ ತಕ್ಷಣ ಅಧಿಕಾರಿಗಳನ್ನು ಕಳುಹಿಸಿ ಪರಿಹಾರವನ್ನು ಕೊಡುವಂಥ ಕೆಲಸವನ್ನು ಮಾಡಬೇಕು ಎಂದು ನಾನು ತಮ್ಮ ಮುಖೇನ ಸರ್ಕಾರವನ್ನು ಕೇಳುತ್ತೇನೆ.

**ಶ್ರೀ ಎನ್ ಯೋಗೀಶ್ ಭಟ್ (ಮಂಗಳೂರು)** ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಷಯ ಕಡಲ ಕೊರೆತಕ್ಕೆ ಸಂಬಂಧಪಟ್ಟಂತೆ ಹಣ ಸ್ಯಾಂಕ್ಷನ್ ಆಗಿರುವಂಥಾದ್ದು ಏನಿದೆ ಅದು 9 ಕೋಟಿ 65 ಲಕ್ಷ ರೂಗಳಲ್ಲಿ 9 ಕೋಟಿ ರೂ ಗಳನ್ನು ಏಕೆ ವಿತ್‌ಡ್ರಾ ಮಾಡಿದ್ದೀರಿ? ಅದನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ ಇದರಿಂದ ತುರ್ತಾಗಿ ತಾವು

ನೆರವಿಗೆ ಬರಲಿಕ್ಕೆ ಸಾಧ್ಯವಾಗುತ್ತದೆ ಈ ಹಿನ್ನೆಲೆಯಲ್ಲಿ ಆ 9 ಕೋಟಿಯನ್ನು ತಕ್ಷಣ ಬಿಡುಗಡೆ ಮಾಡಬೇಕು ಮತ್ತು ವ್ಯಾಪಕವಾದ ಭಾರಿ ಮಳೆಯಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಅನೇಕ ಮನೆಗಳು ಬಿದ್ದಿವೆ, ಮರಗಳು ಉರುಳಿಬಿದ್ದಿವೆ ಮತ್ತು ಇದರಿಂದ ವಿದ್ಯುತ್ ಹಾನಿ ಕೂಡ ಆಗುತ್ತಿದೆ ಈ ಹಿನ್ನೆಲೆಯಲ್ಲಿ ತಕ್ಷಣ ಪರಿಹಾರವನ್ನು ಈ ಕ್ಲುಪ್ತ ಸಮಯದಲ್ಲಿ ಕೊಡಲಿಕ್ಕೆ ತಾವು ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ

**ಶ್ರೀ ಕೆ ಶ್ರೀನಿವಾಸ ಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು)** ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಶೂನ್ಯವೇಳೆಯಲ್ಲಿ ಕೇಳಿದಂಥ ವಿಷಯಗಳಿಗೆ ಉತ್ತರ ಕೊಡುತ್ತಾ ಒಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಅಲ್ಲಿ ಜನರಿಗೆ ತೊಂದರೆ ಆಗಿರುವುದರಿಂದ ಅಲ್ಲಿ ಗಂಜಿ ಕೇಂದ್ರಗಳನ್ನು ಬೇಗನೆ ಕೊಡಬೇಕು ನಾನು ಇವತ್ತೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಆ ಗಂಜಿ ಕೇಂದ್ರಗಳನ್ನು ಶುರು ಮಾಡುತ್ತೇವೆ ಎಂದು ಹೇಳುತ್ತಾ, ಮಾನ್ಯ ಹೆಗ್ಡೆಯವರು ಹೇಳಿದ ಹಾಗೆ ತಾತ್ಕಾಲಿಕ ತಡಗೋಡೆಗಳನ್ನು ಹಾಕಲಿಕ್ಕೆ ಅಂದರೆ, ಮರಳು ಮೂಟೆಗಳನ್ನು ಹಾಕಿ ಮಾಡುವುದಕ್ಕೂ ಕೂಡ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ ಎಂದು ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ಮಾನ್ಯ ಅಧ್ಯಕ್ಷರೇ, ನಾವು ಮಂತ್ರಿಗಳನ್ನು ಯಾಕೆ ಮಾಡಲಿಲ್ಲ, ಜಿಲ್ಲಾ ಉಸ್ತುವಾರಿ ಸಚಿವರನ್ನು ಏಕೆ ಮಾಡಲಿಲ್ಲ ಎಂದು ಕೇಳುವುದಿಲ್ಲ ಈಗ ಇರುವ ಹನ್ನೆರಡು ಜನರೇ ಎಲ್ಲವನ್ನೂ ನೀವೇ ನೋಡಿಕೊಳ್ಳಿ ಇದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ ನಮಗೆ ಏನು ಬೇಕಾಗಿದೆ ಎಂದರೆ, ಇವತ್ತು ಕಳೆದ ಮೂರು-ನಾಲ್ಕು ದಿವಸದಿಂದ ಧಾರಾಕಾರವಾಗಿ ಮಳೆಯಾಗುತ್ತಿದೆ ಮತ್ತು ನಮ್ಮ ಎಲ್ಲಾ ಜಲಾಶಯಗಳು ತುಂಬಿ ತುಳುಕುತ್ತಿವೆ ಮನೆಮರಗಳು ಮುಳುಗಿ ಈಗತಾನೇ ನಮ್ಮ ಶಾಸಕರು ಹೇಳಿದಂತೆ 250 ಮನೆಗಳು ಬಿದ್ದಿವೆ, ರೋಡ್ ಕಟ್ ಆಗಿದೆ ಮತ್ತು ಸೇತುವೆಗಳು ಕುಸಿದಿವೆ ಈ ವಾತಾವರಣ ಇದ್ದಾಗ ನಿಮ್ಮ ಹತ್ತಿರ ಅಲ್ಲಿ ಇರುವಂತಹ ರೆವಿನ್ಯೂ ಅಧಿಕಾರಿಗಳು ರಿಪೋರ್ಟ್ ಮಾಡಬೇಕಲ್ಲ? ನಿಮ್ಮ ಹತ್ತಿರ ಮಾಹಿತಿಗಳು ಇರಬೇಕಲ್ಲ ಈಗ ಸದನ ನಡೆಯುತ್ತಿದೆ ಮತ್ತು ಮಾನ್ಯ ಸದಸ್ಯರುಗಳು ಈಗ ತಾನೇ ಪ್ರಸ್ತಾಪ ಮಾಡಿದರು ಈ ತರಹ ಪರಿಸ್ಥಿತಿ ಇರುವಾಗ ಸರ್ಕಾರ ಎಂದು ಇದ್ದರೆ ಅದು ಚಟುವಟಿಕೆಯಲ್ಲಿ ತೊಡಗಬೇಕಲ್ಲಾ? ಉದಾಹರಣೆಗೆ ಡೆಪ್ಯುಟಿ ಕಮಿಷನರ್ ಅವರು ಇಂತಹ ಒಂದು ಸಂದರ್ಭದಲ್ಲಿ ಒಬ್ಬ ಡೆಪ್ಯುಟಿ ಕಮಿಷನರ್‌ಗೆ ಎಷ್ಟು ಪ್ರಮುಖವಾದ ಪಾತ್ರ ಇರುತ್ತದೆ ಅವರಿಗೆ ಅಧಿಕಾರ ಇರುತ್ತದೆ ಆತನಲ್ಲಿ ಇರುವಂತಹ ಹಣವನ್ನು ಖರ್ಚು ಮಾಡುವುದಕ್ಕೆ ಅಧಿಕಾರ ಇರುತ್ತದೆ. ಇದ್ದ ಹಣವನ್ನು ಖರ್ಚುಮಾಡಿ ನಂತರ ಪರ್ಮಿಶನ್ ತೆಗೆದುಕೊಳ್ಳಬಹುದು ಈ ಅಧಿಕಾರ ಅವರಿಗೆ ಇದೆ ಕಾರವಾರದಂತಹ ದೊಡ್ಡ ಜಿಲ್ಲೆಯಲ್ಲಿ ಡೆಪ್ಯುಟಿ ಕಮಿಷನರ್ ಅವರೇ ಇಲ್ಲವೆಂದರೆ ಹೇಗೆ? ಇವತ್ತು ಕರಾವಳಿ ಭಾಗದ ಉಡುಪಿ, ಮಂಗಳೂರು ಇರಬಹುದು, ಅಥವಾ ಕಾರವಾರವೇ ಇರಬಹುದು ಈ ಜಿಲ್ಲೆಗಳಲ್ಲಿ ಇರುವಂತಹ ಜನರ ಸ್ಥಿತಿಗತಿಗಳು ಏನಾಗಬೇಕು? ಒಂದು ಮನೆ ಬಿದ್ದವರಿಗೆ ಧಾವಿಸಿ ಹೋಗಿ ಏನು ಪರಿಹಾರ ಕೊಡಬೇಕೋ ಅದನ್ನು ಕೊಡಬೇಕು ಪರಿಹಾರ ಕೊಡುವಂಥ ವ್ಯವಸ್ಥೆ ಮೊದಲು ಆಗಬೇಕು ಮತ್ತು ಅಲ್ಲಿ ವ್ಯವಸ್ಥೆಯಾಗುವವರೆಗೆ ಊಟತಿಂಡಿ

ಗೋಸ್ಕರ ವ್ಯವಸ್ಥೆ ಮಾಡಬೇಕು ಇದು ಸಹಜವಾಗಿ ಮಾಡುವಂಥಾದ್ದು ಬರಗಾಲ ಕಾಮಗಾರಿಗೆಂದು ಬಂದಂಥ ಹಣವನ್ನು ಅತಿವೃಷ್ಟಿಗೆ ನಾವು ಖರ್ಚು ಮಾಡಬೇಕಾಗುತ್ತದೆ ಆದ್ದರಿಂದ ಕಾರವಾರ ಡಿ ಸಿ ಹತ್ತಿರ ಈಗ ದುಡ್ಡಿದೆ ಅವರು ರಜೆಮೇಲೆ ಹೋಗಿದ್ದರೆ ಅಥವಾ ಟ್ರಾನ್ಸ್‌ಫರ್ ಆಗಿದ್ದರೆ ಬೇರೆಯವರು ಆ ಕೆಲಸ ಮಾಡಬೇಕಲ್ಲಾ? ಕಡಲ ಕೊರೆತದ ಬಗ್ಗೆ ಈಗತಾನೇ ಪ್ರಸ್ತಾಪ ಮಾಡಿದರು ಇದು ಬಹಳ ಪ್ರಮುಖವಾದ ವಿಷಯ ಬಿಡುಗಡೆಯಾದಂಥ 9 ಕೋಟಿ ರೂಪಾಯಿಗಳನ್ನು ನೀವು ಏಕೆ ವಾಪಸ್ಸು ತೆಗೆದುಕೊಂಡಿದ್ದೀರಿ? ಹೆಚ್ಚು ಹಣವನ್ನು ಕೊಡುವಂಥ ಜಾಗದಲ್ಲಿ ಕೊಟ್ಟ ಹಣವನ್ನು ಸಹ ನೀವು ವಾಪಸ್ಸು ತೆಗೆದುಕೊಂಡರೆ ಆ ಮೀನುಗಾರರು ಮತ್ತು ಅವರ ಕುಟುಂಬದವರ ಸ್ಥಿತಿ ಏನಾಗಬೇಕು? ಇದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ ಆ ಡೆಪ್ಯುಟಿ ಕಮಿಷನರ್ ಅವರನ್ನು ಕೂಡಲೇ ಅಲ್ಲಿಗೆ ನೇಮಕ ಮಾಡಿ ಅಲ್ಲಿ ಯಾರನ್ನಾದರೂ ಹಾಕಿ ಅವರನ್ನು ನೇಮಕ ಮಾಡಿ ಜನರಿಗೆ ಪರಿಹಾರವನ್ನು ಕೊಡುವಂಥ ಕೆಲಸವನ್ನು ನೀವೇನಾದರೂ ಮಾಡದೇ ಇದ್ದರೆ ಬಹುಶಃ ಆ ಭಾಗದಲ್ಲಿ ಅಂದರೆ ಉಡುಪಿ, ಮಂಗಳೂರು, ಕಾರವಾರ ಆ ಭಾಗದಲ್ಲಿ ಕಡಲ ಕೊರತದಿಂದ ಮತ್ತು ಅತಿವೃಷ್ಟಿಯಿಂದ ಅನೇಕ ಅನಾಹುತಗಳು ಆಗಿವೆ, ಸೇತುವೆಗಳು ಕುಸಿದುಹೋಗಿವೆ, ಸಾರಿಗೆ ವ್ಯವಸ್ಥೆ ನಿಂತು ಹೋಗಿದೆ, ಮನೆಗಳು ಬಿದ್ದುಹೋಗಿವೆ ಅಲ್ಲಿ ಡೆಪ್ಯುಟಿ ಕಮಿಷನರ್ ಅವರಿಲ್ಲ ಮತ್ತು ಯಾವುದೇ ಪರಿಹಾರ ಕಾರ್ಯ ಶುರುವಾಗಿಲ್ಲ ನೊಂದ ಜನರಿಗೆ ಊಟತಿಂಡಿಗೆ ಪರ್ಯಾಯ ವ್ಯವಸ್ಥೆ ಮಾಡುವಂಥಾದ್ದು ಯಾವುದನ್ನೂ ಮಾಡಿಲ್ಲ ಗಂಜಿ ಕೇಂದ್ರಗಳನ್ನು ಇನ್ನೂ ತೆರೆದಿಲ್ಲ ಹಾಗಾದರೆ ಸರ್ಕಾರ ಇದೆಯೇನು? ಸರ್ಕಾರ ಈ ಕಡೆಗೆ ಗಂಭೀರವಾಗಿ ಏನಾದರೂ ಉತ್ತರ ಕೊಟ್ಟು ಇವತ್ತು ಸಾಯಂಕಾಲದೊಳಗೆ ನಾವು ಇದನ್ನು ಸರಿಪಡಿಸುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಬೇಕಲ್ಲಾ? ದಯಮಾಡಿ ಅದೇನು ಮಾಡುತ್ತೀರೋ ನೋಡಿ

**ಶ್ರೀ ಕೆ ಶ್ರೀನಿವಾಸಗೌಡ** ` ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದೆ ಗಂಜಿ ಕೇಂದ್ರಗಳಿಗೆ ಈಗಲೇನೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ ಮಾನ್ಯ ವಿರೋಧ ಪಕ್ಷದ ನಾಯಕರು ಅಲ್ಲಿ ಜಿಲ್ಲಾಧಿಕಾರಿಗಳು ಇಲ್ಲವೆಂದು ಹೇಳಿದರು ಜಿಲ್ಲಾಧಿಕಾರಿಗಳು ಇಲ್ಲದಿದ್ದರೆ ಯಾರಾದರೂ ಇನ್‌ಚಾರ್ಜ್ ಇರುತ್ತಾರೆ ಇನ್‌ಚಾರ್ಜ್ ಮೂಲಕ ನಾವು ಆ ಕೆಲಸವನ್ನು ಮಾಡುತ್ತೇವೆ ಜಿಲ್ಲಾಧಿಕಾರಿಗಳು ಇಲ್ಲದಿದ್ದರೆ ಅದನ್ನು ಮಾಡುವಂತಹ ಕೆಲಸವನ್ನೂ ಕೂಡ ನಾವು ಮಾಡುತ್ತೇವೆ ಮಾನ್ಯ ಮುಖ್ಯಮಂತ್ರಿಗಳು ಈಗ ಹೇಳುತ್ತಿದ್ದಾರೆ ಏನೆಂದರೆ ಅಲ್ಲಿಗೆ ಜಿಲ್ಲಾಧಿಕಾರಿಗಳನ್ನೂ ಕೂಡ ಪೋಸ್ಟ್ ಮಾಡಿದ್ದಾರಂತೆ ಇವತ್ತು ಬಿಟ್ಟು ನಾಳೆ ಅವರು ಚಾರ್ಜ್ ತೆಗೆದುಕೊಳ್ಳುತ್ತಾರೆ ಇತರ ಕಾರ್ಯ ಕ್ರಮಗಳನ್ನು ನಾವು ಜರುಗಿಸುತ್ತೇವೆ

**ಗೊಂದಲ**

**ಅಧ್ಯಕ್ಷರು** ಮಾನ್ಯ ಸಚಿವರು ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ ಮೇಲೂ ಮತ್ತೆ ಮತ್ತೆ ನೀವು ಈ ರೀತಿ ಮಾಡುತ್ತಿದ್ದರೆ ಇದೇನಿದು? ನೀವು ಪೋಲೀಸ್ ಇನ್ಸ್‌ಪೆಕ್ಟರ್ ಆಗಿದ್ದವರು ಪೋಲೀಸ್ ಇಲಾಖೆಯವರೆಲ್ಲ ಹೀಗಾದರೆ ಏನಪ್ಪ ಗತಿ?

**ಶ್ರೀ ಬಿ ಸಿ ಪಾಟೀಲ್** ಪೋಲೀಸ್ ಕೆಲಸದಲ್ಲಿ ನಾವು ಈ ರೀತಿ ಮಾಡಲಿಲ್ಲ

**ಅಧ್ಯಕ್ಷರು** ಬಿ ಸಿ ಪಾಟೀಲರೇ, ದಯಮಾಡಿ ಕುಳಿತುಕೊಳ್ಳಿ

9 ಬಚಾವತ್ ಆಯೋಗದ ಬಗ್ಗೆ

**ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ)** ಮಾನ್ಯ ಅಧ್ಯಕ್ಷರೇ, ಬಚಾವತ್ ಆಯೋಗದ ಪ್ರಕಾರ 1975ರಲ್ಲಿ ನೀರು ಹಂಚಿಕೆಯಾಯಿತು "ಬಿ" ಸ್ಕೀಮ್‌ಗೋಸ್ಕರ ಒಂದು ಟ್ರಿಬ್ಯುನಲ್ ಕಾನ್‌ಸ್ಟಿಟ್ಯೂಟ್ ಆಗಿದೆ ಅದರ ಕಾರ್ಯ ಪ್ರಾರಂಭವಾಗಿದೆ ಗವರ್ನಮೆಂಟ್ ಆಫ್ ಇಂಡಿಯಾ ಕೂಡ ನೋಟಿಫಿಕೇಷನ್ ಮಾಡಿದೆ ಈ ಮಧ್ಯದಲ್ಲಿ ಕೆಲವು ನದಿಗಳಿಂದ ಕೆಲವು ಯೋಜನೆಗಳಿಗೆ ನೀರು ಹಂಚಿಕೆಯಾಗಿತ್ತು ಬಹಳಷ್ಟು ಕಡೆ ಆಗಿದೆ ವಿಶೇಷವಾಗಿ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಲೋಯರ್ ಮುಲ್ಲಾಮಾರಿ, ಅಪ್ಪರ್ ಮುಲ್ಲಾಮಾರಿ, ಹತ್ತಿಕುಳಿ .

**ಶ್ರೀ ಬಿ ಎಸ್ ಯಡಿಯೂರಪ್ಪ** ಇವತ್ತಿನ ಅಜೆಂಡಾದಲ್ಲಿ ನಿಯಮ 69ರ ಮೇರೆಗೆ ಈ ವಿಷಯ ಬಂದಿದೆ ಆಗ ಸಮಗ್ರವಾಗಿ ಅವರು ಮಾತನಾಡಬಹುದು ಈ ವಿಷಯವನ್ನು ಶೂನ್ಯವೇಳೆಯಲ್ಲಿ ಏಕೆ ತೆಗೆದುಕೊಳ್ಳುತ್ತೀರಿ?

**ಅಧ್ಯಕ್ಷರು** ಆ ನೀರಿನ ಹಂಚಿಕೆಯ ಬಗ್ಗೆ ನಿಯಮ 69ರ ಮೇರೆಗೆ ಇವತ್ತಿನ ಅಜೆಂಡಾದಲ್ಲಿ ಇದೆ ಆದ್ದರಿಂದ, ಆ ಸಂದರ್ಭದಲ್ಲಿ ತಾವು ಮಾತನಾಡುಬಹುದು ಹೆಚ್ಚು ವಿಷಯವನ್ನು ಪ್ರಸ್ತಾಪ ಮಾಡಬಹುದು ಇವತ್ತಿನ ಅಜೆಂಡಾದಲ್ಲಿರುವುದರಿಂದ ಚರ್ಚೆಗೆ ಬರುತ್ತದೆ, ಆಗ ಮಾತನಾಡಿ

**ಶ್ರೀ ವೈಜನಾಥ್ ಪಾಟೀಲ್** ಏಕೆಂದರೆ, ಮೊದಲು ಏನು ನೀರು ಹಂಚಿಕೆಯಾಗಿತ್ತು ಈಗ ಅದಕ್ಕಿಂತ ಕಡಿಮೆ ಮಾಡಿ, ರೀ ಅಲೋಕೇಟ್ ಮಾಡಿ, ಬೇರೆ ಯೋಜನೆಗಳಿಗೆ ಮಾಡಿದ್ದಾರೆ ಈಗಾಗಲೇ ಲೋಯರ್ ಮುಲ್ಲಾಮಾರಿ, ಅಪ್ಪರ್ ಮುಲ್ಲಾಮಾರಿ, ಹತ್ತಿಕುಣಿ ಈ ಯೋಜನೆಗಳು

**ಅಧ್ಯಕ್ಷರು** ಅದನ್ನು ಆಗ ಮಾತನಾಡಿ, ತಮಗೆ ಅವಕಾಶ ಕೊಡುತ್ತೇನೆ

7 ಮಂಗಳೂರಿನಿಂದ ಬೆಂಗಳೂರಿಗೆ ಎಂ ಆರ್ ಪಿ ಎಲ್ ಕಂಪನಿಯವರು ಸರಬರಾಜು ಮಾಡುತ್ತಿದ್ದ ತೈಲ ಸೋರಿಕೆಯಿಂದಾಗಿ ಪರಿಸರ ಹಾಗು ಜಲಚರ ಪ್ರಾಣಿಗಳಿಗೆ ಆಗುತ್ತಿರುವ ತೊಂದರೆ ಕುರಿತು

**ಶ್ರೀ ಹೆಚ್ ಎಂ ವಿಶ್ವನಾಥ್ (ಸಕಲೇಶಪುರ)** ಮಾನ್ಯ ಅಧ್ಯಕ್ಷರೇ, 23-3-2004ರಲ್ಲಿ ಮಂಗಳೂರಿನಿಂದ ಬೆಂಗಳೂರಿಗೆ ಏನು ಎಂ ಆರ್ ಪಿ ಎಲ್ ಕಂಪನಿಯವರು ತೈಲವನ್ನು ಕೊಳವೆ ಮುಖಾಂತರ ತೆಗೆದುಕೊಂಡು ಹೋಗುತ್ತಿದ್ದರು ಅದನ್ನು ಯಾರೋ ಕಳ್ಳರು ಕೊರೆದು ರಾತ್ರಿ ಹೊತ್ತು, ಪೈಪುಗಳಲ್ಲಿ ತೂತು ಮಾಡಿದರು ತೂತು ಮಾಡಿ, ಅವರು ಬಿಟ್ಟು ಹೊರಟು ಹೋದರು ಅದು ರಂಧ್ರ ಆದಮೇಲೆ ಭಾರಿ ಪ್ರಮಾಣದಲ್ಲಿ ಡೀಸೆಲ್ ಮೇಲುಗಡೆ ಬಂತು ಸುಮಾರು 35 ಗಂಟೆಗಳ ಕಾಲ ತೈಲ ಭೂಮಿಯೊಳಗಡೆ ಸೇರಿ ಹೋಯಿತು ಸುಮಾರು 8 ರಿಂದ 10 ಲಕ್ಷ ಲೀಟರಷ್ಟು ತೈಲ ಹೊರಟುಹೋಯಿತು ಆದರೆ, ಅದನ್ನು ನಿಲ್ಲಿಸುವುದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ ಕೊನೆಗೆ ಎರಡು ದಿನಗಳ ಮೇಲೆ ನಿಲ್ಲಿಸಿದರು ಏನು 8 ರಿಂದ 10 ಲಕ್ಷ ಲೀಟರ್ ತೈಲ ಕೆಳಗಡೆ, ತಗ್ಗಿನ ಭಾಗದಲ್ಲಿ ಹೋಗಿ ಶೇಖರಣೆಯಾಗಿ, ಭೂಮಿಯೊಳಗಡೆ ಇಂಗಿಕೊಂಡಿತು, ಈಗ ಭಾರಿ ಮಳೆ ಬರುತ್ತಿರುವುದರಿಂದ, ಅಲ್ಲಿ ಭೂಮಿಯಲ್ಲಿನ ನೀರಿನ ಜೊತೆ ತೈಲ ಮೇಲಕ್ಕೆ ಬರುತ್ತಾ ಇದೆ ಅದು ಚಿಕ್ಕಹಳ್ಳ ಎಂಬತಕ್ಕ ಹೊಳೆಗೆ ಸೇರಿಕೊಳ್ಳುತ್ತಿದೆ ಸುಮಾರು 500 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ

ಆ ಹಳ್ಳದ ನೀರು ಹೋಗುತ್ತದೆ ಅದಲ್ಲದೆ, ಸುತ್ತಮುತ್ತಲಿರತಕ್ಕ ತೋಟಗಳಿಗೆ, ಶುಂಠಿ ಇರಬಹುದು, ಬೇರೆ ಬೇರೆ ಬೆಳೆಗಳಿಗೆ ಆ ನೀರು ಹರಿದು ಹೋಗುತ್ತಾ ಇದೆ ಇದರ ಪರಿಣಾಮ ಏನಾಗಿದೆ ಈಗ? ಅಲ್ಲಿರತಕ್ಕ ಜಲಚರ ಪ್ರಾಣಿಗಳೆಲ್ಲಾ ಸತ್ತು ಹೋಗಿವೆ ಆ ಗದ್ದೆಗಳಲ್ಲಿ ಹಾಕಿದ್ದ ಪೈರುಗಳಿಗೆ ಡೀಸೆಲ್ ತಾಗಿ, ಪೈರುಗಳೆಲ್ಲಾ ನಷ್ಟ ಆಗಿದೆ ಏಲಕ್ಕಿ ಸಸಿಗಳಿಗೆ ನಷ್ಟ ಆಗಿದೆ ಇನ್ನೂ ದೊಡ್ಡ ಸಮಸ್ಯೆ ಎಂದರೆ, ಅದು ಹೋಗಿ ಜಪಾವತಿ ದಿಗೆ ಸೇರುತ್ತದೆ ಜಪಾವತಿ ಹೇಮಾವತಿಗೆ ಬರುತ್ತದೆ ಅಲ್ಲಿಂದ ಉದ್ದಕ್ಕೂ ಕುಡಿಯುವ ನೀರಿನ ವ್ಯವಸ್ಥೆ ಕೂಡ ಈ ನದಿಯ ಮೇಲೆ ಡಿಪೆಂಡ್ ಆಗಿದೆ ಹಾಗಾಗಿ, ಇವತ್ತು ಆ ಭಾಗದಲ್ಲಿ ಆದ ತೈಲದ ಸೋರಿಕೆಯಿಂದ ಆಗುತ್ತಿರುವ ಸಮಸ್ಯೆಯನ್ನು ತಡೆಗಟ್ಟುವುದಕ್ಕೆ, ಅಧಿಕಾರಿಗಳೊಬ್ಬರೂ ತಲೆಹಾಕಿಲ್ಲ ಇಲ್ಲೊಂದು ವರದಿ ಕೊಟ್ಟಿದ್ದಾರೆ, ಅದು ಸುಳ್ಳು ವರದಿ ಅವರು ಅಲ್ಲಿ ಬಂದಿಲ್ಲ, ಆ ಪ್ರದೇಶಕ್ಕೆ ಬಂದಿಲ್ಲ ಸುತ್ತಮುತ್ತ ಇರತಕ್ಕ ಸುಮಾರು 10 ಹಳ್ಳಿಗಳಿಗೆ ಆಗತಕ್ಕ ಸಮಸ್ಯೆಯನ್ನು ಬಂದು ನೋಡಿಲ್ಲ ಆ ತೈಲ ಕಂಪನಿಯವರು ಮಾರ್ಚ್‌ನಲ್ಲಿ ಹೋದವರು ಇವತ್ತಿನವರೆಗೂ ಆ ಕಡೆ ತಲೆ ಹಾಕಿಲ್ಲ ದಯಮಾಡಿ, ತಕ್ಷಣವೇ ಆ ತೈಲ ಕಂಪನಿಯವರನ್ನು ಅಲ್ಲಿಗೆ ಕಳುಹಿಸಿ, ಆ ಎರಡು ಎಕರೆ ಪ್ರದೇಶದಲ್ಲಿರತಕ್ಕ ತೈಲವನ್ನು ಹೊರಕ್ಕೆ ತೆಗೆಯುವುದಕ್ಕೆ, ಅದನ್ನು ಶುದ್ಧೀಕರಣ ಮಾಡಿ, ಅದನ್ನು ನೀರಿಗೆ ಬಿಡದಹಾಗೆ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಜೊತೆಗೆ ಈಗ ಭಾರಿ ಮಳೆ ಬೀಳುತ್ತಾ ಇತ್ತೀಚೆಗೆ ನನಗೆ ವರದಿ ಬಂದ ಪ್ರಕಾರ ಎರಡು ಶಾಲೆಗಳು, 15 ಮನೆಗಳು ಬಿದ್ದುಹೋಗಿವೆ ಕಳೆದ ಬಾರಿ 150 ಮನೆಗಳು ಬಿದ್ದು ಹೋಗಿದ್ದವು ಸುಮಾರು 4 ಶಾಲೆಗಳು ಬಿದ್ದು ಹೋಗಿದ್ದವು ಆದರೆ, ಪರಿಹಾರ ಏನೂ ಕೂಡ ಬರಲಿಲ್ಲ ಅಲ್ಲಿ ದೊಡ್ಡ ಮಳೆ ಬಿದ್ದು ಸಮಸ್ಯೆಯಾಗುತ್ತಾ ಇದೆ ದಯಮಾಡಿ ಅಧ್ಯಕ್ಷರೇ, ಸರ್ಕಾರಕ್ಕೆ ಸೂಚನೆ ಕೊಟ್ಟು ನನಗೆ ಡಿ ಸಿ ಯವರ ಮುಖಾಂತರ ಎರಡು ಕೋಟಿ ರೂಪಾಯಿಗಳ ಹಣವನ್ನು ಕೊಡಿಸಬೇಕು ಕಳೆದ ಬಾರಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಭಾಗಕ್ಕೆ ಬಂದಾಗ, ಈ ವಿಷಯವನ್ನು ಅವರ ಗಮನಕ್ಕೂ ತಂದಿದ್ದೇನೆ ದಯಮಾಡಿ ಎರಡು ಕೋಟಿ ರೂಪಾಯಿಗಳನ್ನು ತುರ್ತಾಗಿ, ಅಲ್ಲಿಯ ಕೆಲಸಕ್ಕೆ ಬಿಡುಗಡೆ ಮಾಡಬೇಕೆಂದು ಕೇಳುತ್ತೇನೆ ಪ್ರಾಥಮಿಕ ಶಾಲೆಗಳಲ್ಲಿ 121 ಮೇಷ್ಟ್ರುಗಳು ಇಲ್ಲ ಹಾಗೆಯೇ ಪ್ರೌಢಶಾಲೆಗಳಲ್ಲಿ 45 ಮೇಷ್ಟ್ರುಗಳಿಲ್ಲ ನಾವು ಈಗ ಶಾಲೆ ನಡೆಸಬೇಕು ಮಲೆನಾಡು ಭಾಗದಲ್ಲಿ ಯಾರೂ ಬರುತ್ತಾ ಇಲ್ಲ ದಯಮಾಡಿ, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.. ಅಲ್ಲಿರತಕ್ಕ ಎರಡು ತಾಲ್ಲೂಕುಗಳಿಂದ ಸುಮಾರು 225 ಮಾಸ್ತರುಗಳು ಇಲ್ಲ ಮಕ್ಕಳು ಹೇಗೆ ಓದುವುದು ಸ್ವಾಮಿ? ದಯಮಾಡಿ, ತಾವು ಮುಖ್ಯಮಂತ್ರಿಗಳಿಗೆ ಸೂಚನೆ ಕೊಟ್ಟು, ಸರ್ಕಾರಕ್ಕೆ ಸೂಚನೆ ಕೊಟ್ಟು ನನಗೆ ಮೇಷ್ಟ್ರುಗಳನ್ನು ಹಾಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ಹಾಗೂ ಕಾನೂನು ಸಚಿವರು)** ಮಾನ್ಯ ಅಧ್ಯಕ್ಷರೆ,

ಮೆ ಪೆಟ್ರೋನೆಟ್ ಎಮ್‌ಹೆಚ್‌ಬಿ ಲಿಮಿಟೆಡ್ (Petronet MHB Limited) ಎಂಬ ಸಂಸ್ಥೆಯು ಮಂಗಳೂರಿನಿಂದ ಬೆಂಗಳೂರಿಗೆ ಮಂಗಳೂರು ತೈಲಾಗಾರದಿಂದ ಖನಿಜ ತೈಲವನ್ನು (Petroleum products) ಸಾಗಿಸಲು 362 3 ಕಿ ಮೀ ಉದ್ದದ ಕೊಳವೆ ಮಾರ್ಗವನ್ನು ನಿರ್ಮಿಸಿರುತ್ತದೆ

ದಿನಾಂಕ 23–3–2004 ರಂದು ಬೆಳಗಿನ ಜಾವ ಮಂಗಳೂರಿನಿಂದ 116 56 ಕಿ ಮೀ ದೂರದಲ್ಲಿ ಸಕಲೇಶಪುರ ತಾಲ್ಲೂಕಿನ ಹುರುಡಿ ಗ್ರಾಮದ ಬಳಿ ಹಾದು ಹೋಗುವ ಕೊಳವೆ ಮಾರ್ಗದಲ್ಲಿ ದುಷ್ಕರ್ಮಿಗಳು 3/4 {inch} ಇಂಚಿನ ರಂಧ್ರವನ್ನು ಕೊರೆದು ಇದಕ್ಕೆ ಒಂದು ಹೊಸ ಕೊಳವೆ ಮತ್ತು ವಾಲ್ವ್ ಅನ್ನು ಜೋಡಿಸಿ ತೈಲವನ್ನು ಕಳವು ಮಾಡಲು ಪ್ರಯತ್ನಿಸಿದ್ದರು ಈ ಸಮಯದಲ್ಲಿ ತೈಲವು ಕೊಳವೆಯಿಂದ ಬೃಹತ್ ಪ್ರಮಾಣದಲ್ಲಿ ಹೊರ ಬಂದ ಕಾರಣ ದುಷ್ಕರ್ಮಿಗಳು ಸ್ಥಳದಿಂದ ಪಲಾಯನ ಮಾಡಿರುತ್ತಾರೆ ಈ ಸಮಯದಲ್ಲಿ ಕೊಳವೆ ಮಾರ್ಗಕ್ಕೆ ಆದ ಹಾನಿಯಿಂದ ಸುಮಾರು 80,000 ಲೀಟರ್ ನಷ್ಟ ಡೀಸೆಲ್ ಈ ಪ್ರದೇಶದಲ್ಲಿ ಸುರಿದಿರುತ್ತದೆ

ಸುರಿದ ತೈಲವು ಹರಿದು ಹೋಗದಂತೆ ಪೆಟ್ರೋನೆಟ್ ಸಂಸ್ಥೆಯು ಕೂಡಲೇ ಕ್ರಮ ಕೈಗೊಂಡು ಪಕ್ಕದಲ್ಲಿರುವ ನಾಲೆಗೆ ಅಡ್ಡವಾಗಿ ಚೀಲಗಳನ್ನು ಹಾಗೂ ನೆಲದ ಮೇಲೆ ಹರಡಿದ್ದ ತೈಲವನ್ನು ಹೀರಲು absorbent ನ್ನು ಹಾಕಿ ತೈಲವು ಮುಂದೆ ಸೋರದಂತೆ ಕ್ರಮ ಕೈಗೊಂಡಿರುತ್ತಾರೆ ಈ ಸಮಯದಲ್ಲಿ ಸುತ್ತಮುತ್ತಲಿನ ಜನರು ಗುಂಡಿಗಳನ್ನು ತೆಗೆದು ತೈಲವನ್ನು ಸಂಗ್ರಹಿಸಿರುತ್ತಾರೆ ಕೊಳವೆ ಮಾರ್ಗಕ್ಕೆ ಆಗಿದ್ದ ಹಾನಿಯನ್ನು 23–3–2004ರ ಮಧ್ಯಾಹ್ನ 2–30 ರ ಹೊತ್ತಿಗೆ ಸರಿಪಡಿಸಲಾಗಿದೆ ಹಾಗೂ ಈ ಮುಂದೆಯೇ ಕೊಳವೆಯಲ್ಲಿ ತೈಲದ ಹರಿಯುವಿಕೆಯನ್ನು ನಿಯಂತ್ರಿಸಲಾಯಿತು

ದಿನಾಂಕ 27–7–2004ರಂದು ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ವರದಿಯ ಮೇರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗಳು ಹಿಂದೆ ಸಂಭವಿಸಿದ್ದ ಪ್ರದೇಶಕ್ಕೆ ಭೇಟಿ ನೀಡಿ ಪರಿವೀಕ್ಷಣೆ ನಡೆಸಿರುತ್ತಾರೆ

ಅಲ್ಲದೆ ಉದ್ದಿಮೆಯ, ಮ್ಯಾನೇಜರ್ ಶ್ರೀ ರವೀಂದ್ರ ರವರೊಡನೆ ಚರ್ಚೆ ನಡೆಸಿ ಈ ಕೆಳಕಾಣಿಸಿದ ಅಂಶಗಳನ್ನು ವರದಿ ಮಾಡಿರುತ್ತಾರೆ

1 ಹುರುದಿ ಮತ್ತು ಸಕಲೇಶ್ವರ ಮಾರ್ಗದ ತೈಲ ಕೊಳವೆ ಮಾರ್ಗಕ್ಕೆ ಯಾವುದೇ ಹೊಸ ಹಾನಿ ಆಗಿರುವುದಿಲ್ಲ

2. ಈ ಹಿಂದೆ ನಡೆದ ಘಟನೆಯಲ್ಲಿ ಇಂಗಿದ್ದ ತೈಲವು ಈ ಪ್ರದೇಶದಲ್ಲಿ ಬೀಳುತ್ತಿರುವ ಮಳೆಯಿಂದಾಗಿ ಭೂಮಿಯಿಂದ ಹೊರಬರುತ್ತಿದೆ

3 ಕೊಳವೆ ಮಾರ್ಗದ ಬಳಿ ಇರುವ ಸುಮಾರು 1 ರಿಂದ 2 ಎಕರೆ ಪ್ರದೇಶದ ಖಾಸಗಿ ಜಮೀನಿನಲ್ಲಿ ನೀರು ನಿಂತಿದ್ದು ಇದರ ಮೇಲೆ ತೈಲವು ಇರುವುದು ಕಂಡು ಬಂದಿರುತ್ತದೆ ಹಾಗೂ ಇಲ್ಲಿ ಬೆಳೆದಿರುವ ಹುಲ್ಲಿಗೆ ಹಾನಿಯಾಗಿರುವುದನ್ನು ವರದಿ ಮಾಡಲಾಗಿದೆ

4 ಹಿಂದೆ ತೈಲವನ್ನು ಸಂಗ್ರಹಿಸಲು ತೋಡಿದ್ದ ಗುಂಡಿಯಲ್ಲಿ ಸಂಗ್ರಹವಾಗಿರುವ ನೀರಿನ ಮೇಲೂ ತೈಲ ನಿಂತಿರುವುದು ಕಂಡು ಬಂದಿರುತ್ತದೆ

5 ಸುಮಾರು 200 ಮೀಟರ್ ದೂರದಲ್ಲಿ ಹರಿಯುವ ಚಿಕ್ಕ ಹಳ್ಳದ ನೀರಿನ ಮೇಲೂ ತೈಲದ ಅಂಶ ಕಂಡು ಬಂದಿದೆ

6. ಸುಮಾರು 2 ಮತ್ತು 5 ಕಿ ಮೀ ದೂರದಲ್ಲಿ ಹರಿಯುವ ಜಪಾವತಿ ಮತ್ತು ಹೇಮಾವತಿ ನದಿಯ ನೀರು ತೈಲದಿಂದ ಕಲುಷಿತಗೊಂಡಿರುವುದಿಲ್ಲ

7 ಜಲಚರಗಳಿಗೆ ಯಾವುದೇ ಹಾನಿಯುಂಟಾಗಿರುವುದಿಲ್ಲ

8 ಪರಿವೀಕ್ಷಣೆ ಸಮಯದಲ್ಲಿ ಬೆಳೆ ಹಾನಿ ಕಂಡು ಬಂದಿರುವುದಿಲ್ಲ

ಈ) ಪ್ರದೇಶದಲ್ಲಿ ಬೀಳುತ್ತಿರುವ ಹೆಚ್ಚು ಮಳೆಯಿಂದಾಗಿ ಅಂತರ್ಜಲದ (Ground Water) ಮಟ್ಟವು ಹೆಚುತ್ತಿರುವುದರಿಂದ ಹಾಗೂ ಈ ಪ್ರದೇಶದಲ್ಲಿನ ರೂಪ ರೇಖೆಯಿಂದಾಗಿ ಹಿಂದೆ ಇಂಗಿತ ತೈಲದ ಅಂಶವು ಮಳೆ ನೀರಿನೊಂದಿಗೆ ಬೆರೆತು ಹೊರಬರುತ್ತಿದೆ

ಈ ಪ್ರದೇಶದಲ್ಲಿ ಆಗಿರುವ ಹಾನಿಯನ್ನು ಪೂರ್ವಸ್ಥಿತಿಗೆ ತರುವಂತೆ ಸರ್ಕಾರವು ಉದ್ಧಿಮೆಯವರಿಗೆ ನಿರ್ದೇಶನವನ್ನು ನೀಡಲಿದೆ

## 8 ಚಿಕ್ಕಮಗಳೂರು ಜಿಲ್ಲೆಗೆ ಜಿಲ್ಲಾಧಿಕಾರಿಗಳನ್ನು ನೇಮಿಸುವ ಬಗ್ಗೆ

**ಶ್ರೀ ಎಸ್ ಎಲ್ ಧರ್ಮೇಗೌಡ (ಬೀರೂರು)** ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ನಮ್ಮ ಸ್ನೇಹಿತರಾದ ವಿಶ್ವನಾಥರವರು ಮಾತನಾಡಿದಹಾಗೆ, ಚಿಕ್ಕಮಗಳೂರು ಜಿಲ್ಲೆಯ ನನ್ನ ಬೀರೂರು ಕ್ಷೇತ್ರದ ವ್ಯಾಪ್ತಿಯ ಮತ್ತು ಚಿಕ್ಕಮಗಳೂರಿನ ಸಂಬಂಧಪಟ್ಟಂಥ ತಾಂತ್ರಿಕ ಅಧಿಕಾರಿಗಳು ಈಗಾಗಲೇ ಮೊನ್ನೆ ದೂರವಾಣಿ ಮುಖಾಂತರ ಮಾತನಾಡಿದರು ನಿನ್ನೆ ರಾತ್ರಿ ಮತ್ತು ಮೊನ್ನೆಯಿಂದ ಸುಮಾರು ಸತತವಾಗಿ ಆರು ಇಂಚಿಗಿಂತಲು ಹೆಚ್ಚು ಮಳೆಯಾಗಿದೆ ಮತ್ತು ನಮ್ಮ ಭಾಗದಲ್ಲಿ ಬರತಕ್ಕಂಥಾದ್ದರಲ್ಲಿ, ಚಿಕ್ಕಮಗಳೂರಿನಲ್ಲಿ 13 ಇಂಚು ಆಗಿದೆ, ನನ್ನ ಭಾಗದಲ್ಲಿ ಆರು ಇಂಚು ಮಳೆಯಾಗಿದೆ. ಬಹುತೇಕವಾಗಿ ಬಹಳಷ್ಟು ಶಾಲಾ ಕೊರಡಿಗಳಿಗೆ ಹಾನಿಯಾಗಿರುವುದು ಕಂಡುಬಂದಿದೆ ಆದ್ದರಿಂದ, ತಾವು ದಯಮಾಡಿ ನಾನು ಒತ್ತಾಯ ಮಾಡತಕ್ಕಂಥಾದ್ದು, ಮೊದಲು ನಮ್ಮ ಜಿಲ್ಲೆಗೆ, ಜಿಲ್ಲಾಧಿಕಾರಿಗಳ ಅವಶ್ಯಕತೆ ಇದೆ ಏಕೆಂದರೆ, ಮಳೆಯಿಂದ ಅಗತಕ್ಕ ಅನಾಹುತಗಳನ್ನು ಸಮೀಕ್ಷೆ ಮಾಡಲಿಕ್ಕೆ, ನೋಡಿ ಪರಿಹಾರ ಮಾಡಲಿಕ್ಕೆ ಮತ್ತು ಜನರ ಬಳಿಗೆ ಹೋಗಲಿಕ್ಕೆ ಯಾರು ಅಧಿಕಾರಿಗಳು ಇಲ್ಲದೇ ಇರುವುದರಿಂದ ದಯಮಾಡಿ ತಕ್ಷಣ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಬೇಕು ಇಲ್ಲದೇ ಹೋದರೆ ಅಲ್ಲಿ ಕಷ್ಟ ಆಗುತ್ತದೆಂಬ ಮಾತನ್ನು ಒತ್ತಾಯಪೂರ್ವಕವಾಗಿ ಹೇಳಿ, ಈ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ

**ಶ್ರೀ ಎಂ ಪಿ ಪ್ರಕಾಶ್** ಜಿಲ್ಲಾಧಿಕಾರಿಗಳು ಇಲ್ಲ ಎಂದು ಹೇಳುತ್ತಿದ್ದಾರೆ

**ಶ್ರೀ ಸಿ ಟಿ ರವಿ** ನಮ್ಮ ಜಿಲ್ಲಗೆ ಜಿಲ್ಲಾಧಿಕಾರಿಗಳನ್ನು ಹಾಕದೇ 2 ತಿಂಗಳಾಗಿದೆ ಈ ರೀತಿ ತುರ್ತು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ವಿಳಂಬವಾಗುತ್ತದೆ. ಈ ಮಾತನ್ನು ಮಾನ್ಯ ಧರ್ಮೇಗೌಡರು ಹೇಳುತ್ತಿದ್ದಾರೆ ಅದಕ್ಕೆ ನನ್ನ ಸಹಮತ ಸಹ ಇದೆ ಮಾನ್ಯ ಸದಸ್ಯರಾದ ಧರ್ಮೇಗೌಡರು ಸರಿಯಾಗಿ ಹೇಳಿದ್ದಾರೆ

**ಶ್ರೀ ಎಂ.ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** ಮಾನ್ಯ ಅಧ್ಯಕ್ಷರೆ, ಅವರ ಜೊತೆಗೆ ಮಾತನಾಡಿ ಅವರ ಸಮಸ್ಯೆ ಏನಿದೆ ಎಂಬುದನ್ನು ತಿಳಿದುಕೊಂಡು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಅವರೊಡನೆಯೂ ಮಾತುಕತೆ ನಡೆಸಿ ಈ ದಿವಸ ಸಾಯಂಕಾಲವೇ ಅವರಿಗೆ ಉತ್ತರ ಕೊಡಿಸುತ್ತೇನೆ

## 5 ಸದಸ್ಯರ ವರ್ತನೆ ಬಗ್ಗೆ ಅಧ್ಯಕ್ಷರ ಆಕ್ರೋಶ

**ಅಧ್ಯಕ್ಷರು** ಈಗ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು .. ..ಸಂಬಂಧಪಟ್ಟ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ ಮಾನ್ಯ ಶಾಸಕರ ಮನವಿಗಳನ್ನು ಮಾನ್ಯ ಮುಖ್ಯ ಮಂತ್ರಿಗಳೂ ಸಹ ಆಲಿಸುತ್ತಿದ್ದಾರೆ

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಅಧ್ಯಕ್ಷರೇ

**ಶ್ರೀ ಬಿ ಸಿ ಪಾಟೀಲ್** ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ದಯಮಾಡಿ ಉತ್ತರವನ್ನು ಕೊಡಿಸಿ

**ಅಧ್ಯಕ್ಷರು** ಉತ್ತರ ಕೊಡುತ್ತಾರೆ ದಯಮಾಡಿ ಕುಳಿತುಕೊಳ್ಳಿ

**ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೇ, ಯಾರು ತಮ್ಮ ಕರ್ತವ್ಯ ಲೋಪ ಮಾಡಿದ್ದಾರೆ ಅವರು ಸಬ್ ಇನ್ಸ್‌ಪೆಕ್ಟರ್ ಇರಬಹುದು, ಇನ್ಸ್‌ಪೆಕ್ಟರ್ ಇರಬಹುದು, ಮತ್ತು ಡಿವೈಎಸ್‌ಪಿ ಇರಬಹುದು ಮತ್ತೆ ಯಾರು ಅಗೌರವವಾಗಿ ವರ್ತಿಸಿದ್ದಾರೆ, ಆ ಬಗ್ಗೆ ಸರ್ಕಾರ ವರದಿ ತರಿಸಿ ಕೊಂಡು ಕಾನೂನು ಪ್ರಕಾರವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ

**ಅಧ್ಯಕ್ಷರು** ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ

**ಶ್ರೀ ಸಿದ್ಧರಾಮಯ್ಯ** ಮಾನ್ಯ ಅಧ್ಯಕ್ಷರೇ, ಇಲಾಖಾ ವಿಚಾರಣೆಯನ್ನು ಮಾಡಿಸಿ ತಪ್ಪಿತಸ್ಥರ ಮೇಲೆ ಅಗತ್ಯವಾದ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು

**ಶ್ರೀ ಬಿ ಸಿ ಪಾಟೀಲ್** ಮಾನ್ಯ ಅಧ್ಯಕ್ಷರೇ, ಅಲ್ಲಿಯವರೆಗೆ ಅವರನ್ನು ಸಸ್ಪೆಂಡ್ ಮಾಡಿ ಆಮೇಲೆ ವಿಚಾರಣೆ ಮಾಡಿ

**ಗೊಂದಲ**

**ಅಧ್ಯಕ್ಷರು** ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು ಇದೇನು ಈ ತರಹ ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ?

**ಗೊಂದಲ**

**ಅಧ್ಯಕ್ಷರು** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಇದೇನ್ರಿ ಇದು ಸಂತೆ ಮಾಡಿಕೊಂಡಿದ್ದೀರಿ ನೀವು ದಯಮಾಡಿ ಕುಳಿತುಕೊಳ್ಳಿ ಪಾಟೀಲರೇ, ಏನ್ರಿ ನೀವು? ನೀವು ಇನ್ಸ್‌ಪೆಕ್ಟರ್ ಆಗಿದ್ದವರು ಈ ತರಹ ಮಾಡಿದರೆ ಹೇಗೆ? ಜವಾಬ್ದಾರಿಯಿಂದ ನಡೆದು ಕೊಳ್ಳಬೇಕು ಉತ್ತರ ಬೇಕು ಅಂದಿರಿ ಉತ್ತರ ಕೊಟ್ಟಿದ್ದಾರೆ ನೀವು ಬಯಸಿದ ಉತ್ತರ ಕೊಡಿಸುವುದಕ್ಕಾಗುತ್ತದೇನು? ತಾವು ಈ ರೀತಿ ಮಾಡಿದರೆ ನಾನು ಶಿಸ್ತಿನ ಕ್ರಮ ತೆಗೆದು ಕೊಳ್ಳಬೇಕಾಗುತ್ತದೆ ದಯಮಾಡಿ ಕುಳಿತುಕೊಳ್ಳಿ ಈಗ ಬಹಳ ಜನ ಸದಸ್ಯರು ಏನು ಮಾಡುತ್ತಿದ್ದಾರೆಂದರೆ ಇಲ್ಲಿಗೆ ಬಂದಿರುವುದು ಸ್ವಚ್ಛಂದವಾಗಿ ತಮಗೆ ಇಷ್ಟ ಬಂದ ರೀತಿಯಲ್ಲಿ ವರ್ತಿಸುವುದಕ್ಕೆಂದು ತಿಳಿದುಕೊಂಡಿದ್ದಾರೆ ಹೊಸ ಸದಸ್ಯರಿಗೆ ನಾನು ಈಗ ವಾರನ್ ಮಾಡುತ್ತಿದ್ದೇನೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು ನೀವು ಆಡಳಿತ ಪಕ್ಷದವರು ನಿಮಗೆ ಜವಾಬ್ದಾರಿ ಇದೆಯೇನು? ಯಾರಿಗೂ ಏನೂ ಜವಾಬ್ದಾರಿ ಇದ್ದಂತೆ ಇಲ್ಲ ಮಾನ್ಯ ಸಚೇತಕರೇ, ನಿಮ್ಮ ಸದಸ್ಯರನ್ನು ನೀವು ನಿಯಂತ್ರಣ ಮಾಡಿ ನಿಯಂತ್ರಣ ಮಾಡಲು ಆಗದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಏನಿದು ಸಂತೆಯಲ್ಲಿ ವರ್ತಿಸುವಂತೆ

ವರ್ತಿಸುತ್ತಿದ್ದಾರೆ? ಏನಿದು ಇವರಿಗೆ ಜವಾಬ್ದಾರಿಯೇ ಇಲ್ಲ ನೋಡಿ ನಿಮ್ಮ ಸದಸ್ಯರು ಇಷ್ಟೊಂದು ಬೇಜವಾಬ್ದಾರಿ ರೀತಿಯಲ್ಲಿ ಈ ರೀತಿ ಪ್ರತಿಯೊಂದಕ್ಕೂ ನಿಂತುಕೊಂಡರೆ ಇದನ್ನು ನಾನು ಸಹಿಸುವುದಕ್ಕೆ ಸಾಧ್ಯವಿಲ್ಲ ನೋಡಿ ಯಾವ ರೀತಿ ವರ್ತಿಸುತ್ತಿದ್ದಾರೆ ಅವರಿಗೆ ಏನಾಗಿದೆ ಅಂದರೆ ನಾವು ಏನು ಬೇಕಾದರೂ ಮಾಡಬಹುದು,............ ಈಗ ಮಾನ್ಯ ರಾಜಾಜೀಯವರು ಏನು ಹೇಳಿದರು ಅಂದರೆ, Liberty is not Licence" ಆದರೆ ಈ ಸದಸ್ಯರು ಲೈಸೆನ್ಸ್ ತೆಗೆದುಕೊಂಡಿದ್ದಾರೆ ಒಳಗೆ ಬಂದಿರುವುದೇ ಇವರಿಗೆ ಒಂದು ಲೈಸೆನ್ಸ್ ಪ್ರತಿಯೊಬ್ಬರೂ ನಿಮ್ಮ ನಿಮ್ಮ ಜವಾಬ್ದಾರಿಗಳನ್ನು ಅರ್ಥ ಮಾಡಿಕೊಳ್ಳಬೇಕು ಏನಿದು?

**ಶ್ರೀ ಸಿದ್ಧರಾಮಯ್ಯ** ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ

**ಅಧ್ಯಕ್ಷರು** ಈ ಕಡೆ ಸದಸ್ಯರು ಅಷ್ಟೇ, ಆ ಕಡೆಯ ಸದಸ್ಯರು ಅಷ್ಟೇ ಯಾರಿಗೂ ಜವಾಬ್ದಾರಿ ಇಲ್ಲ

**ಗೊಂದಲ**

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರೇ, ನಮ್ಮ ಕಡೆ ಸದಸ್ಯರು ನೋಡಿ ಎಷ್ಟು ಗಂಭೀರವಾಗಿ ವರ್ತಿಸುತ್ತಿದ್ದಾರೆ ತಾವು ಆ ಕಡೆಯ ಸದಸ್ಯರಿಗೆ ಹೇಳಬೇಕು

**ಗೊಂದಲ**

**ಅಧ್ಯಕ್ಷರು** ಹೊಸ ಸದಸ್ಯರುಗಳು ಇದ್ದಾರಲ್ಲಾ ಅವರುಗಳಿಗೆ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕು ಎನ್ನುವ ಆಸೆ ನಾಳೆ ಸದನ ಕೊನೆಯಾಗುತ್ತದೆ ಇದು ನನಗೆ ಅರ್ಥವಾಗುತ್ತದೆ ನಾನು ಬಹಳ ಜನರಿಗೆ ಅವಕಾಶ ಕೊಡುತ್ತಿದ್ದೇನೆ ಈಗಾಗಲೇ ಒಂದೂಮುಕ್ಕಾಲು ಗಂಟೆ ಆಯಿತು ಈಗ ಇಷ್ಟೊಂದು ಗಲಾಟೆಯಾಯಿತು ಇಷ್ಟರಲ್ಲಿ ನಾಲ್ಕು ಜನ ಸದಸ್ಯರು ಸರ್ಕಾರದ ಗಮನ ಸೆಳೆಯಬಹುದಾಗಿತ್ತು ಅವರವರ ವಿಷಯ ಎತ್ತಬಹುದಾಗಿತ್ತು ಈ ರೀತಿ ಗಲಾಟೆ ಮಾಡಿದರೆ ಹೇಗೆ? ನೀವು ಶಾಸಕರು, ಶಾಸನ ಮಾಡತಕ್ಕಂಥವರು ಜವಾಬ್ದಾರಿವುಳ್ಳವರು ಈ ಐದೂವರೆ ಕೋಟಿ ಜನರ ರಕ್ಷಣೆ ಮಾಡುವುದಕ್ಕೆ ಜನ ಪ್ರತಿನಿಧಿಗಳಾಗಿ ಬಂದಿರುವವರು ನೀವೇ ಈ ರೀತಿ ವರ್ತನೆ ಮಾಡಿದರೆ ಜನ ಹೇಗೆ ವರ್ತನೆ ಮಾಡಬಹುದು? ನಿಮ್ಮ ಅಧಿಕಾರಿಗಳು ಹೇಗೆ ವರ್ತನೆ ಮಾಡಬಹುದು, ಇನ್ನೊಬ್ಬರು ಹೇಗೆ ವರ್ತನೆ ಮಾಡಬಹುದು? No, No, ಈಗ ನಾನು ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರನ್ನು ಕರೆದಿದ್ದೇನೆ. ದಯಮಾಡಿ ತಾವೆಲ್ಲರೂ ಕುಳಿತುಕೊಳ್ಳಬೇಕು ವಾಟಾಳ್ ನಾಗರಾಜ್‌ರವರೇ, ತಾವು ದಯಮಾಡಿ ಮಾತನಾಡಿ

**6 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು (ಮುಂದು)**

**9 ರಾಜ್ಯ ಸರ್ಕಾರ ಆಯವ್ಯಯವನ್ನು ಮಂಡಿಸಿದ ಮೇಲೆ ಆರ್ಥಿಕ ನೀತಿಯಿಂದ ಪರಭಾಷಾ ಚಿತ್ರಗಳಿಗೆ ಅಪಾರವಾದ ಬೆಂಬಲವನ್ನು ನೀಡಿದಂತಾಗಿರುವ ಬಗ್ಗೆ**

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸರ್ಕಾರ ಆಯವ್ಯಯವನ್ನು ಮಂಡಿಸಿದ ಮೇಲೆ ಆರ್ಥಿಕ ನೀತಿಯಿಂದ ಪರಭಾಷಾ

ಚಿತ್ರಗಳಿಗೆ ಅಪಾರವಾದ ಬೆಂಬಲವನ್ನು ನಾವೇ ಕೊಟ್ಟಂತೆ ಆಗಿದೆ ಬಹುಶಃ ಪರಭಾಷಾ ಚಿತ್ರಗಳು ಅವರ ರಾಜ್ಯದಲ್ಲಿ ತಯಾರಾದ ತಕ್ಷಣ ಅಲ್ಲಿ ಬಿಡುಗಡೆಯಾದ ದಿವಸವೇ ಇಲ್ಲೂ ಬಿಡುಗಡೆ ಮಾಡುತ್ತಾರೆ ಒಂದೊಂದು ಪರಭಾಷಾ ಚಿತ್ರಗಳಿಗೆ ಕರ್ನಾಟಕ ರಾಜ್ಯದಲ್ಲಿ ಕನ್ನಡ ಚಿತ್ರಗಳಿಗಿಂತ ಹೆಚ್ಚಾಗಿ ಮೂರು ಕೋಟಿ ರೂಪಾಯಿ ಒಂದೊಂದು ಚಿತ್ರ ತನ್ನ ಗಳಿಕೆಯನ್ನು ಮಾಡತಕ್ಕಂಥಾದ್ದು ಇದೆ. ನನಗನಿಸುತ್ತದೆ, ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನ ಇಲ್ಲ ತಮಿಳುನಾಡು ಇರಬಹುದು, ಆಂಧ್ರ ಪ್ರದೇಶ ಇರಬಹುದು, ಕೇರಳ ಇರಬಹುದು, ಇಂಡಿಯಾ ದೇಶದಲ್ಲಿ ಯಾವ ಮೂಲೆಯಲ್ಲೂ ಕನ್ನಡ ಚಿತ್ರಗಳ ಪ್ರದರ್ಶನ ಇಲ್ಲ ಆದರೆ ಕರ್ನಾಟಕ ರಾಜ್ಯದಲ್ಲಿ ಮಾತ್ರ ಎಲ್ಲಾ ಭಾಷೆಯ ಚಿತ್ರಗಳು ಇಲ್ಲಿ ಹಣ ಸಂಪಾದನೆ ಮಾಡುತ್ತವೆ ಆದರೆ ಕನ್ನಡ ಚಿತ್ರಗಳು ಅವಸಾನದ ಅಂಚಿಗೆ ಬಂದಿದೆ ಒಂದು ಕಾಲದಲ್ಲಿ ಕರ್ನಾಟಕದಲ್ಲಿ ಕನ್ನಡ ಚಿತ್ರಗಳ ಬೆಳವಣಿಗೆಗಾಗಿ ಅನೇಕ ಯೋಜನೆಗಳು ತಯಾರಾಗಿ ಸಹಾಯಧನ ಕೊಡತಕ್ಕಂಥಾದ್ದು ಆರಂಭವಾದುದು ಸುಮಾರು 1972ನೇ ಇಸವಿಯಲ್ಲಿ ಆಗಿನಿಂದ ಸಹಾಯಧನ ಕೊಡುತ್ತಿದ್ದೇವೆ, ತಮಿಳುನಾಡಿನಲ್ಲಿರತಕ್ಕಂಥ ಚಿತ್ರಗಳೆಲ್ಲಾ ಕರ್ನಾಟಕ ರಾಜ್ಯಕ್ಕೆ ಬರಬೇಕು, ನಿಮಗೆ ಎಲ್ಲಾ ರೀತಿಯ ಬೆಂಬಲ ಕೊಡುತ್ತೇವೆ ಸ್ಟುಡಿಯೋ ಅನುಕೂಲ ಕೊಡುತ್ತೇವೆ ಪ್ರತಿಯೊಂದನ್ನು ಮಾಡುತ್ತೇವೆಂದು ಹೇಳಿ ನಾವು ಅವರನ್ನೆಲ್ಲಾ ಕರೆದುಕೊಂಡು ಬಂದಿದ್ದು ಆಯಿ ು ಆದರೆ ಇವತ್ತು ಬೆಂಗಳೂರು ಸೇರಿದಂತೆ ಕರ್ನಾಟಕದ ಎಲ್ಲಾ ಕಡೆ ಮೊದಲನೇ ಸ್ಥಾನ ಪಡೆದಿರತಕ್ಕಂಥಾವು ಪರಭಾಷಾ ಚಿತ್ರಗಳು, 3–4ನೇ ಸ್ಥಾನದಲ್ಲಿವೆ ಇವತ್ತು ಸರ್ಕಾರದ ಧೋರಣೆ ಬದಲಾವಣೆಯಾಗಬೇಕು ಪರಭಾಷಾ ಚಿತ್ರಗಳನ್ನು ಇಲ್ಲಾ ನೇರವಾಗಿ ನಾವು ಕರ್ನಾಟಕ ರಾಜ್ಯದಲ್ಲಿ ಬಹಿಷ್ಕಾರ ಮಾಡುತ್ತೇವೆ ಪರಭಾಷಾ ಚಿತ್ರಗಳು ಬೇಡ ಎಂದು ಹೇಳಬೇಕು ಇಲ್ಲಾ ಪರಭಾಷಾ ಚಿತ್ರಗಳು ಅಲ್ಲಿ ಆರಂಭವಾಗಿ ಹೊಸ ಚಿತ್ರಗಳ ಪ್ರದರ್ಶನಕ್ಕೆ 4 ವಾರಗಳು ಅದ ನಂತರ ಇಲ್ಲಿಗೆ ಬರಬೇಕೇ ಹೊರತು ಹೊಸ ಪರಭಾಷಾ ಚಿತ್ರಗಳು ಇಲ್ಲಿಗೆ ಬರಬಾರದು 9ನೇ ತಾರೀಖು ಕರ್ನಾಟಕ ರಾಜ್ಯಾದ್ಯಂತ ಕನ್ನಡ ಚಿತ್ರೋದ್ಯಮ ಬಂದ್ ಆಗತಕ್ಕಂಥ ವ್ಯವಸ್ಥೆ ಇದೆ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ ಬಂದ್ ಆಗುವಂತಹ ವ್ಯವಸ್ಥೆ ಇರತಕ್ಕದ್ದು 9ನೇ ತಾರೀಖು ಆದರೆ ತಮಗೆ ನಾನು ಹೇಳುತ್ತಿದ್ದೇನೆ ಮಾನ್ಯ ಅಧ್ಯಕ್ಷರೇ ಕನ್ನಡ ಚಿತ್ರಗಳ ಬೆಳವಣಿಗೆ ಹಿತದೃಷ್ಟಿಯಿಂದ ಕನ್ನಡ ಚಿತ್ರಗಳು ಅದ್ದೂರಿಯ ಒಂದು ಉನ್ನತ ಶಿಖರಕ್ಕೆ ಏರಬೇಕೆನ್ನುವ ಉದ್ದೇಶದಿಂದ ನಾವು ಪರಭಾಷಾ ಚಿತ್ರಗಳನ್ನು ಮೊದಲನೆಯದಾಗಿ ಕರ್ನಾಟಕ ರಾಜ್ಯದಲ್ಲಿ ಬಹಿಷ್ಕರಿಸಬೇಕು ಮತ್ತು ಅವರಿಗೆ ತೆರಿಗೆಯನ್ನು ಏನು ಕಡಿಮೆ ಮಾಡಿದ್ದೀರಿ ಆ ತೆರಿಗೆಯನ್ನು ಜಾಸ್ತಿ ಮಾಡಲೇಬೇಕು ಇದು ನನ್ನ ಅತ್ಯಂತ ಕಳಕಳಿಯ ಮನವಿ

**ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೇ ಕನ್ನಡೇತರ ಚಿತ್ರಗಳು ಮತ್ತು ಕನ್ನಡ ಚಲನಚಿತ್ರಗಳು, ಕನ್ನಡ ಚಲನಚಿತ್ರಗಳಿಗೆ ಸಂಪೂರ್ಣವಾಗಿ ನೂರಕ್ಕೆ ನೂರರಷ್ಟು ತೆರಿಗೆಯನ್ನು ವಿನಾಯಿತಿ ಮಾಡಿದ್ದೇವೆ ಒಂದು ಪೈಸೆ ತೆರಿಗೆ ಇಲ್ಲ. ಈ ಕನ್ನಡ ಚಿತ್ರೋದ್ಯಮದಲ್ಲಿ ಇಡೀ ಫಿಲಂ ಇಂಡಸ್ಟ್ರಿಯಲ್ಲಿ ಪ್ರೊಡ್ಯೂಸರ್ಸ್‌ದ್ದು ಒಂದು ಅಸೋಸಿಯೇಷನ್ ಇದೆ ಡೈರೆಕ್ಟರ್ಸ್ ಅಸೋಸಿಯೇಷನ್ ಇದೆ ಮತ್ತೆ ಎಗ್ಜಿಬ್ಯುಟರ್ಸ್ ಅಸೋಸಿಯೇಷನ್ ಇದೆ ಇನ್ನೂ

4-5 ಈ ತರಹದ ಅಸೋಸಿಯೇಷನ್ಸ್ ಇವೆ ಮತ್ತು ಕಿರುಚಿತ್ರಗಳನ್ನು ಮಾಡುವವರ ಒಂದು ಅಸೋಸಿಯೇಷನ್ ಇದೆ ದೊಡ್ಡ ಚಿತ್ರಗಳನ್ನು ತಯಾರು ಮಾಡುವವರ ಒಂದು ಅಸೋಸಿಯೇಷನ್ ಇದೆ ಈ ರೀತಿ ಎಲ್ಲಾ ಇವೆ, ನಾನು ಆಯವ್ಯಯದಲ್ಲಿ ಈ ನಾನ್ ಕನ್ನಡ ಚಲನಚಿತ್ರಗಳಿಗೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ 70 ಪರ್ಸೆಂಟ್ ಹಿಂದೆ ಇದ್ದುದನ್ನು 40 ಪರ್ಸೆಂಟಿಗೆ ಇಳಿಸಿದ್ದೇನೆ ಎಗ್ಸಿಬ್ಯುಟರ್ಸ್ ಬಹಳ ದಿನಗಳಿಂದ ನಮಗೆ 70 ಪರ್ಸೆಂಟ್ ಬಹಳ ಜಾಸ್ತಿ ನಮಗೆ ಕಷ್ಟವಾಗುತ್ತದೆ ನಾವು ಕೊಡುವುದಕ್ಕಾಗುವುದಿಲ್ಲ ಎಂದು ಒಂದು ಮನವಿಯನ್ನು ಪದೇ ಪದೇ ಮಾಡುತ್ತಿದ್ದರು ಎರಡನೆಯದು ಕೆಲವು ಕಡೆಗಳಲ್ಲಿ ಚಿತ್ರಮಂದಿರಗಳ ಮುಂದೆ ಕನ್ನಡ ಚಲನಚಿತ್ರಗಳ ಬೋರ್ಡ್ ಹಾಕುವುದು ಮತ್ತು ಅಲ್ಲಿ ಬೇರೆ ಭಾಷೆಯ ಚಲನಚಿತ್ರಗಳನ್ನು ನಡೆಸುವುದು ಹೀಗಾಗಿ ನಮಗೆ ತೆರಿಗೆ ಬರುತ್ತಿರಲಿಲ್ಲ, ಏಕೆಂದರೆ ಕನ್ನಡ ಸಿನಿಮಾಗಳಿಗೆ ಪೂರ್ತಿ ತೆರಿಗೆ ವಿನಾಯಿತಿ ಇದೆ, ಅದಕ್ಕೆ ತೆರಿಗೆ ಒಂದು ಪೈಸೆ ಕೊಡುವಂತಿಲ್ಲ ತಮಿಳು ಚಿತ್ರವಿರಬಹುದು ಮಲೆಯಾಳಂ ಚಿತ್ರವಿರಬಹುದು, ತೆಲುಗು ಚಿತ್ರವಿರಬಹುದು, ಹಿಂದಿ ಚಿತ್ರವಿರಬಹುದು ಮರಾಠಿ ಚಿತ್ರಇರಬಹುದು ತುಳು, ಕೊಡುಗು ಇತ್ಯಾದಿ ಭಾಷೆಗಳ ಚಿತ್ರಗಳಿಗೂ ಕೂಡ, ಕನ್ನಡ ಜೊತೆಗೆ ತೆರಿಗೆ ವಿನಾಯಿತಿ ಇದೆ ಅದಕ್ಕೆ 70 ರಿಂದ 40ಕ್ಕೆ ಇಳಿದಿದೆ ಬೇರೆ ರಾಜ್ಯಗಳಲ್ಲಿ ಆಯಾ ರಾಜ್ಯಗಳ ಭಾಷೆಗಳನ್ನು ಬಿಟ್ಟು ಬೇರೆ ಭಾಷೆಗಳ ಚಿತ್ರಗಳಿಗೆ ಅಲ್ಲಿ 25 ಪರ್ಸೆಂಟ್ ತರಿಗೆಗಳಿಗೆ. ತಮಿಳುನಾಡು ಇತ್ಯಾದಿ ಕಡೆಗಳಲ್ಲಿ ಕನ್ನಡ ಚಲನಚಿತ್ರಗಳು ಹೆಚ್ಚು ಪ್ರದರ್ಶನಗಳಾಗುವುದಿಲ್ಲವೆನ್ನುವ ನಿಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ, ಅದೇ ರೀತಿ ಆಂಧ್ರದಲ್ಲಿ ಹೆಚ್ಚು ಪ್ರದರ್ಶನವಾಗುವುದಿಲ್ಲ, ಕೇರಳದಲ್ಲಿ ಹೆಚ್ಚು ಪ್ರದರ್ಶನವಾಗುವುದಿಲ್ಲ, ಈ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡುತ್ತೇವೆಂದು ಮೇಲ್ಮನೆಯಲ್ಲಿ ಒಪ್ಪಿಕೊಂಡಿದ್ದೇವೆ, ನನ್ನ ಪರವಾಗಿ ಜಲಸಂಪನ್ಮೂಲ ಸಚಿವರು ಅಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ, ನಾನು ಕೂಡ ಅದನ್ನು ಒಪ್ಪಿಕೊಂಡಿದ್ದೇನೆ. ಅದಕ್ಕೊಂದು ಸಮಿತಿ ಮಾಡುತ್ತೇವೆ, ಕನ್ನಡ ಚಲನಚಿತ್ರೋದ್ಯಮ ಬೆಳೆಯಬೇಕಾದರೆ, ಬೇರೆ ಚಿತ್ರಗಳ ಬಗ್ಗೆಯ ಗಮನದಲ್ಲಿಟ್ಟುಕೊಂಡು ಏನು ಮಾಡಬಹುದೆಂಬುದರ ಬಗ್ಗೆ ಒಂದು ಸ್ಪಷ್ಟವಾದಂಥ ಒಂದು ವರದಿಯನ್ನು ಕೊಟ್ಟರೆ, ಅದರ ಆಧಾರದ ಮೇಲೆ ತೀರ್ಮಾನ ಮಾಡುತ್ತೇವೆ

## 10 ತುಂಗಾ ಏತನೀರಾವರಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ

**ಶ್ರೀ ಎಂ ಪಿ ರೇಣುಕಾಚಾರ್ಯ (ಹೊನ್ನಾಳಿ)** ಮಾನ್ಯ ಸಭಾಧ್ಯಕ್ಷರೆ, ತುಂಗಾ ಏತನೀರಾವರಿ ಸೌಲಭ್ಯಕ್ಕಾಗಿ 1997ರಲ್ಲಿ ಆಡಳಿತಾತ್ಮಕ ತಾಂತ್ರಿಕ ಅನುಮೋದನೆ ದೊರೆತಿದ್ದು, 1997-98ರ ಆಯವ್ಯಯದಲ್ಲಿ ಇಪ್ಪತ್ನಾಲ್ಕು ಕೋಟಿ ಹದಿನೆಂಟು ಲಕ್ಷ ರೂಪಾಯಿಗಳನ್ನು ಒದಗಿಸುತ್ತೇವೆಂದು ಹೇಳಿದ್ದರು ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ದಿ ಜೆ.ಹೆಚ್ ಪಟೇಲರು, ಈ ತುಂಗಾ ಏತನೀರಾವರಿ ಯೋಜನೆಗೆ ಬಂದು ಪೂಜೆಯನ್ನು ಕೂಡ ಸಲ್ಲಿಸಿ ಅಡಿಗಲ್ಲನ್ನು ಹಾಕಿದರು, ಆದರೆ ಇದುವರೆವಿಗೂ ಏತನೀರಾವರಿ ಯೋಜನೆ ಕಾರ್ಯ ಆರಂಭವಾಗಿಲ್ಲ ಅಂದಿನ ನೀರಾವರಿ ಸಚಿವರಾಗಿದ್ದ ದಿ ನಾಗೇಗೌಡರನ್ನು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳುತ್ತೇನೆ ಸಣ್ಣ ನೀರಾವರಿ ಇಲಾಖೆಯಲ್ಲಿರುವ ಈ ತುಂಗಾ ಯೋಜನೆಯನ್ನು ದೊಡ್ಡ ನೀರಾವರಿ ಇಲಾಖೆಗೆ ಹಸ್ತಾಂತರಗೊಳಿಸಿ ಇದನ್ನು ಮಾಡಲೇಬೇಕೆಂದು ಎರಡು ಸಾರಿ ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದರು ಈ ಯೋಜನೆ ಜಾರಿಗೆ ಬಂದರೆ ಐಹೊಳೆ, ಗೌಡನಕೆರೆ, ಬಾರೆಹಳ್ಳಿಗಳಲ್ಲಿ ಕೆರೆಗಳು ತುಂಬುತ್ತವೆ, 16 ಟಿಎಂಸಿ ನೀರನ್ನು

ಸಂಗ್ರಹ ಮಾಡಬಹುದಾಗಿರುವುದರಿಂದ, ಅಂದಿನ ಸಂದರ್ಭದಲ್ಲಿ ದಿ ಜೆ ಹೆಚ್ ಪಟೇಲರೂ ಕೂಡ ಹೇಳಿದ್ದರು, ಈ ಯೋಜನೆ ಬಹಳ ಮುಖ್ಯವಾಗಿದ್ದು, ಏತನೀರಾವರಿಯಿಂದ ಗೌಡನಕೆರೆಗೆ ನೀರು ಬಂದರೆ ನನ್ನ ತಾಲ್ಲೂಕಿನ ಆ ಭಾಗದ ಸವಳಂಗ ರೈತಕಾಯಕ ಹೊಸಕೆರೆಗೆ ನೀರು ಸಂಗ್ರಹವಾಗಿ ಆ ಭಾಗದ ಚೆಕ್ಕಳ್ಳಿ, ಗೊಳ್ಳಳ್ಳಿ, ಗಂಜಿನಹಳ್ಳಿ ಗ್ರಾಮಗಳ ರೈತರ ಸುಮಾರು ಹತ್ತು ಸಾವಿರ ಎಕರೆ ನೀರಾವರಿಯಾಗುತ್ತದೆ ಇದರ ಜೊತೆಗೆ ನ್ಯಾಂತಿ, ಸುರುಹೊನ್ನೆಗಳಲ್ಲಿ ಸುಮಾರು 20 ಸಾವಿರ ಜನಸಂಖ್ಯೆ ಇದೆ, ಅವರು ಕುಡಿಯುವ ನೀರಿಗಾಗಿ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ದಿ. ಜೆ ಹೆಚ್ ಪಟೇಲರು, ಮುಖ್ಯಮಂತ್ರಿಯಾಗಿದ್ದಾಗ ತುಂಗಾ ಏತನೀರಾವರಿಗೆ ಅವರೇ ಹೋಗಿ ಶಂಕುಸ್ಥಾಪನೆ ಮಾಡಿ ಇನ್ನೇನು ಕೆಲಸ ಪ್ರಾರಂಭವಾಗುವ ಹಂತಕ್ಕೆ ಬಂತು ಇವತ್ತು ಇಷ್ಟು ದೊಡ್ಡ ಪ್ರಮಾಣದಲ್ಲಿ ಮಳೆ ಯಾಗುತ್ತಿದ್ದರೂ ಕೂಡ, ಹೊಸನಗರದ ಕೆಲವು ಭಾಗಗಳಾದ, ಹಾರನಹಳ್ಳಿ, ಕುಂಸಿ, ಹೊನ್ನಾಳಿಗಳಲ್ಲಿ ಇವತ್ತೂ ಕೂಡ ಕುಡಿಯುವ ನೀರಿಗಾಗಿ ಹಾಹಾಕಾರವಿದೆ, ಅಂತಹದ್ದಕ್ಕೆ ಇದೊಂದು ಯೋಜನೆ ಮಂಜೂರಾಗಿದೆ, ಆದರೆ ಇದುವರೆವಿಗೂ ಯಾವ್ಯಾವುದೋ ಕಾರಣಕ್ಕೆ ಕೆಲಸ ಪ್ರಾರಂಭವಾಗಿಲ್ಲ, ದಯಮಾಡಿ ತಾವು ಇದಕ್ಕೆ ಒತ್ತುಕೊಟ್ಟು ಕೆಲಸ ಪ್ರಾರಂಭ ಮಾಡಿಸಬೇಕೆಂದು ಶಿವಮೊಗ್ಗ ಜಿಲ್ಲೆಯ ಹಿತದೃಷ್ಟಿಯಿಂದ ಆ ಕ್ಷೇತ್ರದ ಶಾಸಕರು ಕೇಳುತ್ತಿದ್ದಾರೆ, ಅದನ್ನು ಮಂಜೂರು ಮಾಡಿ ಕೆಲಸ ಪ್ರಾರಂಭ ಮಾಡಿಸಿಕೊಡಿ ಎಂದು ಕೇಳುತ್ತಿದ್ದೇನೆ

**ಶ್ರೀ ಧರಮ್‌ಸಿಂಗ್ (ಮುಖ್ಯಮಂತ್ರಿಗಳು)** ಸನ್ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರು ಹೇಳಿದಂತೆ ಹಿಂದಿನ ಮುಖ್ಯಮಂತ್ರಿಗಳಾದ ದಿ ಜೆ ಹೆಚ್ ಪಟೇಲರ ಕಾಲದಲ್ಲಿ ಆ ತುಂಗಾ ಯೋಜನೆಗೆ ಮಂಜೂರಾತಿಯನ್ನು ಮಾಡಿದ್ದಾರೆ, ಇನ್ನು ಕೆಲಸ ಪ್ರಾರಂಭಮಾಡಿಲ್ಲವೆಂದು ಹೇಳುತ್ತಿದ್ದಾರೆ ಆ ಭಾಗದ ಸಂಬಂಧಪಟ್ಟ ಶಾಸಕರು ಸಹ ಹೇಳಿದ್ದಾರೆ ನಾನು ಖರ್ಗೆಯವರು ಜೊತೆಯಲ್ಲಿ ಮಾತನಾಡಿ, ಅದು ಮಂಜೂರಾತಿಯಾಗಿದ್ದರೆ, ಹಣ ಬಿಡುಗಡೆಯಾಗದೆ ಇದ್ದರೆ ಬಹಳ ತ್ವರಿತಗತಿಯಲ್ಲಿ ಅಲ್ಲಿ ಕೆಲಸ ಪ್ರಾರಂಭ ಮಾಡುಸುವ ಆಶ್ವಾಸನೆಯನ್ನು ನಾನು ಕೊಡುತ್ತೇನೆ

**ಶ್ರೀ ಹೆಚ್ ಹಾಲಪ್ಪ (ಹೊಸನಗರ)** ಮಾನ್ಯ ಅಧ್ಯಕ್ಷರೆ, ಅದು ನನ್ನ ಕ್ಷೇತ್ರದ ಶಿವಮೊಗ್ಗ ರೂರಲ್‌ಗೆ ಬರುತ್ತದೆ, ಆ ಭಾಗದಲ್ಲಿ ಶರಾವತಿಯ ಮುಳುಗಡೆಯ ರೈತರು ಅಲ್ಲಿ ಜಮೀನು ಕೊಡುವ ಸಂದರ್ಭದಲ್ಲಿ ಅದನ್ನು ಮಾಡಿಕೊಡುತ್ತೇವೆಂದು ಹಿಂದೆ ಕೂಡ ಹೇಳಿದ್ದರು, ಶರಾವತಿ ಯೋಜನೆಯಿಂದ ಮುಳುಗಡೆಯಾಗಿ ನಿರಾಶ್ರಿತರಾಗಿ ಬಂದಂತಹ ರೈತರು ಅಲ್ಲಿದ್ದಾರೆ, ಇಷ್ಟೊಂದು ಮಳೆಯಾಗುತ್ತಿದ್ದರೂ ಕೂಡ ಆ ಭಾಗದಲ್ಲಿ ಮಳೆಯಾಗುತ್ತಿಲ್ಲ, ಅದನ್ನು Rain Shadow area ಅಂದರೆ ಮಳೆಯ ನೆರಳಿನ ಪ್ರದೇಶವೆಂದು ಹೇಳುತ್ತಾರೆ, ಅದುದರಿಂದ ಅದನ್ನು ಮಾಡಿಕೊಡಬೇಕು ಅಲ್ಲೊಂದು ಸಣ್ಣ ಕಾನೂನಿನ ತೊಡಕಿದೆ, 173 ಎಕರೆ ಅರಣ್ಯ ಭೂಮಿ ಇದೆ, ಆ ಲ್ಯಾಂಡನ್ನು ರೆವಿನ್ಯೂ ಲ್ಯಾಂಡ್ ಬದಲಿ ಮಾಡಿಕೊಡಬೇಕು ಆ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಂಡು ಆ ಅರಣ್ಯಭೂಮಿ ಏನಿದೆ ಅದಕ್ಕೆ ಬದಲಿ ರೆವಿನ್ಯೂ ಭೂಮಿಯನ್ನು ಕೊಟ್ಟು ಕೂಡಲೇ ಯೋಜನೆಯನ್ನು ಕಾರ್ಯಗತಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ

**ಶ್ರೀ ಎಂ ಪಿ ರೇಣುಕಾಚಾರ್ಯ** ಈ ಏತ ನೀರಾವರಿ ಯೋಜನೆಯಿಂದ.. ..

**ಅಧ್ಯಕ್ಷರು** ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ ದಯಮಾಡಿ ಕುಳಿತುಕೊಳ್ಳಿ; ಈಗ ಜೀವರಾಜ್ ಅವರು ಹೇಳಿ

**ಶ್ರೀ ಬಿ ಎಸ್ ಯಡಿಯೂರಪ್ಪ** ದಿ ಜೆ ಹೆಚ್ ಪಟೇಲರ ಕಾಲದಲ್ಲಿ ತುಂಗಾ ಏತ ನೀರಾವರಿ ಯೋಜನೆ ಮಂಜೂರಾಗಿದ್ದರೆ, ನಾನು ಹಣಕಾಸಿನ ನೆರವು ಕೊಡಿಸಿ, ನೀರಾವರಿ ಸಚಿವರೊಡನೆ ಮಾತನಾಡಿ ಕೆಲಸ ಪ್ರಾರಂಭ ಮಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮೇಲೆ ಸಾಕು, ಮತ್ತೆ ಬೇರೆ ಸಮಯದಲ್ಲಿ ಮಾತನಾಡೋಣ ಅವಕಾಶ ಸಿಗುತ್ತದೆ, ಮುಖ್ಯಮಂತ್ರಿಗಳೇ ಭರವಸೆ ಕೊಟ್ಟ ಮೇಲೆ ಚರ್ಚೆ ಮಾಡಿ ಏನು ಮಾಡುತ್ತೀರಿ? ದಯವಿಟ್ಟು ಸಹಕರಿಸಿ

## 11 ಶೃಂಗೇರಿ ಕ್ಷೇತ್ರದಲ್ಲಿ ನಕ್ಸಲೀಯರ ಚಟುವಟಿಕೆ ಕುರಿತು

**ಶ್ರೀ ಡಿ ಎನ್ ಜೀವರಾಜ್ (ಶೃಂಗೇರಿ)** ಮಾನ್ಯ ಅಧ್ಯಕ್ಷರೆ, ಶೃಂಗೇರಿ ಒಂದು ರಾಷ್ಟ್ರ ಪ್ರಸಿದ್ಧಿ ಕ್ಷೇತ್ರ ಶೃಂಗೇರಿಯಂಥ ಕ್ಷೇತ್ರದಲ್ಲಿ ಈ ನಕ್ಸಲೀಯರ ಚಟುವಟಿಕೆ ಇದೆ ಎನ್ನುವುದು ಈಗ ದೇಶದ ತುಂಬಾ ಪ್ರಚಾರಕ್ಕೆ ಬಂದಿದೆ, ಇದು ನನಗೆ ಬಹಳ ದುಃಖ ಕೊಡುತ್ತಿದೆ ಶೃಂಗೇರಿ ಎಂದರೆ ನಾವು ತಿಳಿದುಕೊಂಡಿರುವುದು ಶಾರದಾಂಬೆಯ ಕ್ಷೇತ್ರ ಈಗ ಶೃಂಗೇರಿ ಎಂದ ತಕ್ಷಣ ನಕ್ಸಲ್ ಎಂದು ಚರ್ಚೆ ಬರುವುದಕ್ಕೆ ಪ್ರಾರಂಭವಾಗಿದೆ, ಇದು ನನಗೆ ದುಃಖ ಕೊಡುತ್ತಿದೆ ಶೃಂಗೇರಿಯಲ್ಲಿರುವ ಯಾವುದೇ ಮೂಲನಿವಾಸಿಗಳು ನಕ್ಸಲೇಟ್ಸ್ ಆಗಿಲ್ಲ, ಅಲ್ಲಿರುವಂತಹ ಯಾವುದೇ ಗಿರಿಜನರು ನಕ್ಸಲೀಯರಲ್ಲ, ಅಲ್ಲಿರುವ ರೈತರು ನಕ್ಸಲೀಯರಲ್ಲ ಅಲ್ಲಿರುವ ಗಿರಿಜನರಿಗೆ, ರೈತರಿಗೆ ಪ್ಯಾಕೇಜ್ ಕೊಡುತ್ತೇವೆಂದು ಸರ್ಕಾರ 60 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿತ್ತು, ಈವರೆವಿಗೂ ಆ ಹಣ ಬಿಡುಗಡೆಯಾಗಿಲ್ಲ, ಆ ಗಿರಿಜನರ ಮನೆ ಮುಂದುಗಡೆ ರೈತರ ಮನೆಯ ಮುಂದುಗಡೆ ಸರ್ಕಾರ ಒಂದೊಂದು ಫಲಕವನ್ನು ನೆಟ್ಟಿದೆ "ನೀವು ಇಲ್ಲಿ ವಾಸ ಮಾಡುವುದಾದರೆ ಮಾಡಬಹುದು, ಹೊರಗೆ ಹೋಗುವುದಾದರೆ ಹೋಗಬಹುದು" ಎಂದು ಅಲ್ಲಿರುವ ಶಾಲೆಗಳಿಗೆ ಅಧ್ಯಾಪಕರನ್ನು ಹಾಕುತ್ತಿಲ್ಲ, ರಸ್ತೆ, ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ, ಅರಣ್ಯ ಇಲಾಖೆಯವರು ಅವಕಾಶ ಮಾಡಿಕೊಡುತ್ತಿಲ್ಲ, ಜೊತೆಗೆ ಆ ರೈತರು ಗಿರಿಜನರಿಗೆ ಹಕ್ಕುಪತ್ರವನ್ನು ಕೊಟ್ಟರೆ, ಈ ನಕ್ಸಲ್ ಎನ್ನುವ ಸಮಸ್ಯೆ ಬಗೆಹರಿದು ಹೋಗುತ್ತದೆ ಮೊದಲು ಸರ್ಕಾರ ಮಾಡಬೇಕಾದ ಆದ್ಯತೆಯ ಕೆಲಸ, ಆ ಭಾಗದಲ್ಲಿ ವಾಸ ಮಾಡುವ ಜನರಿಗೆ ಕಾಯಂ ಸಾಗುವಳಿ ಚೀಟಿಯನ್ನು ಕೊಡುವ ವ್ಯವಸ್ಥೆಯಾಗಬೇಕು, ಅಲ್ಲಿರುವ ಯಾವುದೇ ರೈತರು, ಗಿರಿಜನರು ನಕ್ಸಲ್ ಅಲ್ಲ, ಆ ನಕ್ಸಲ್ ಎನ್ನುವ ಪದವನ್ನು ಉಪಯೋಗಿಸಿಕೊಂಡು, ಪ್ರಾತಿಪರ ಹೆಸರಿನಲ್ಲಿ ಮಾಡುತ್ತಿರುವ ಚಟುವಟಿಕೆ ಶೃಂಗೇರಿಗೆ ಕರಾಳಛಾಯೆ ಬರುವಂತಹ, ಕೆಟ್ಟಹೆಸರು ಬರುವಂತಹ ವ್ಯವಸ್ಥೆಯಾಗಿದೆ ಮಾನ್ಯ ಮುಖ್ಯಮಂತ್ರಿಗಳು ಅವರೊಡನೆ ಮಾತುಕತೆ ಮಾಡುತ್ತೇವೆಂದು ಹೇಳಿದ್ದಾರೆ, ಆ ಮಾತುಕತೆ ಮಾಡಬೇಕಾದರೆ ಆ ಭಾಗದಲ್ಲಿರುವಂತಹ, ಕುದುರೆ ಮುಖ ರಾಷ್ಟ್ರೀಯ ಉದ್ಯಾನವನದ ಸುತ್ತ ಇರುವಂತಹ ಶಾಸಕರನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು, ಆ ಐದು ಜನ ಶಾಸಕರನ್ನು ಗಣನೆಗೆ ತೆಗೆದುಕೊಂಡು ಮಾತುಕತೆ ಮಾಡಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ ಜೊತೆಗೆ ಅಲ್ಲಿಯ ಪೋಲೀಸ್ ವ್ಯವಸ್ಥೆ ಇನ್ನೂ ಬಂದೋಬಸ್ತ್

ಆಗಬೇಕಾಗಿದೆ, ಶೃಂಗೇರಿಯಲ್ಲಿರುವ ಈಗಿನ ಪೊಲೀಸ್ ವ್ಯವಸ್ಥೆ ಬಲವಾಗಿಲ್ಲ, ಸರ್ಕಲ್ ಇನ್‌ಸ್ಪೆಕ್ಟರ್ ರಜೆ ಹಾಕಿಹೋಗಿ ಎರಡು ತಿಂಗಳಾಗಿದೆ, ಈವರೆಗೆ ಅವರು ಕರ್ತವ್ಯಕ್ಕೆ ಹಾಜರಾಗಿಲ್ಲ ಅಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ನಕ್ಸಲ್ ಚಟುವಟಿಕೆಗೆ ನಿಗ್ರಹ ದಳವನ್ನು ಮಾಡಿದ್ದಾರೆ ಅದರಲ್ಲಿರುವ ಸರ್ಕಲ್ ಇನ್‌ಸ್ಪೆಕ್ಟರ್ ಎರಡು ತಿಂಗಳಾಗಿದೆ, ಈವರೆಗೆ ಅವರು ಕರ್ತವ್ಯಕ್ಕೆ ಹಾಜರಾಗಿಲ್ಲ ಅಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದಲ್ಲಿ ನಕ್ಸಲ್ ಚಟುವಟಿಕೆಗೆ ನಿಗ್ರಹ ದಳವನ್ನು ಮಾಡಿದ್ದಾರೆ ಅದರಲ್ಲಿರುವ ಸರ್ಕಲ್ ಇನ್‌ಸ್ಪೆಕ್ಟರ್ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಸರ್ಕಾರ ಶಹಭಾಷ್‌ಗಿರಿಯನ್ನೂ ಕೂಡ ಕೊಡಬೇಕಾಗಿದೆ, ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಅವರ ಬಗ್ಗೆ ನಾನು ಇಲ್ಲಿ ಹೇಳುವುದು ನನ್ನ ಜವಾಬ್ದಾರಿ ಎಂದು ಭಾವಿಸಿದ್ದೇನೆ ಅಲ್ಲಿ ಕಂದಾಯ ಭೂಮಿ, ಅರಣ್ಯ ಇಲಾಖೆಗೆ ಏನು ಕೊಡಲಾಗಿದೆ ಮತ್ತೆ ಅದು ಕಂದಾಯ ಇಲಾಖೆಗೆ ವಾಪಸ್ ಬರಬೇಕಾಗಿದೆ, ಅದು ಬಂದಾಗ ಈ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತದೆ ಈಗ ಮಾನ್ಯ ರವಿಯವರು ಹೇಳಿದರು, ಕುದುರೆಮುಖ ರಾಷ್ಟ್ರೀಯ ಉದ್ಯಾನವನದೊಳಗಡೆ ಕುದುರೆಮುಖ ಫ್ಯಾಕ್ಟರಿ ಇದೆ ಎಂದು ಫ್ಯಾಕ್ಟರಿ ಮಾಡಲಿಕ್ಕೆ ಅವಕಾಶ ಕೊಡುತ್ತಾರೆ ರೈತರಿಗೆ ಹಕ್ಕುಪತ್ರ ಕೊಡಬೇಕು ಅಂದರೆ ರಾಷ್ಟ್ರೀಯ ಉದ್ಯಾನವನ ಮಾಡಿದ್ದೇವೆ ಎಂದು ಹೇಳುತ್ತಾರೆ ಇದು ಯಾವರೀತಿ ಅನ್ನುವುದು ನನಗೆ ಅರ್ಥವಾಗುತ್ತಿಲ್ಲ ಫ್ಯಾಕ್ಟರಿಯಿಂದ ತೊಂದರೆಯಾಗುತ್ತಿದೆ ಎಂಬುದನ್ನು ಬಿಟ್ಟರೆ ಅಲ್ಲಿರುವ ರೈತರಿಂದ ಯಾವುದೇ ತೊಂದರೆಯಾಗಿಲ್ಲ ಅಲ್ಲಿರುವ ಗಿರಿಜನರು ಕಾಡನ್ನು ಬಹಳ ಆತ್ಮೀಯತೆಯಿಂದ ಕಾದುಕೊಂಡು ಬಂದಿದ್ದಾರೆ ನನ್ನ ಕ್ಷೇತ್ರ ಶೃಂಗೇರಿಗೆ ಒಂದು ಕಡೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಈ ಕಡೆ ಬಂದರೆ ಭದ್ರಾ ಅಭಿಯಾರಣ್ಯ, ಈ ಕಡೆ ಬಂದರೆ ಜೈವಿಕ ಅರಣ್ಯ, ಇನ್ನೊಂದು ಕಡೆ ಬಂದರೆ ಭದ್ರಾ ಡ್ಯಾಮ್‌ನಲ್ಲಿ ಮುಳುಗಡೆಯಾಗಿದೆ, ಮಧ್ಯ ಶೃಂಗೇರಿ ಕ್ಷೇತ್ರ ಇದೆ ನಾವು ಯಾವರೀತಿ ಬದುಕಬೇಕು ಅನ್ನುವುದೇ ಅರ್ಥವಾಗುತ್ತಿಲ್ಲ ಹಾಗಾಗಿ ಅಲ್ಲಿರುವ ಜೈವಿಕ ಅರಣ್ಯ ಅನ್ನುವುದನ್ನೂ ತೆಗೆಯಬೇಕು ಅಲ್ಲೇನಾದರೂ ನಿಜವಾಗಿಯೂ ನಕ್ಸಲೈಟರು ಒಳಗಡೆ ತುಂಬಿಕೊಂಡಿದ್ದೇ ಹೌದಾದರೆ ರಾಯಚೂರು ಕಡೆಯೆಲ್ಲ ಕಾಡೇ ಇಲ್ಲ, ಅಲ್ಲೇ ನಕ್ಸಲೈಟರ್ಸರನ್ನು ಹದ್ದುಬಸ್ತಿಗೆ ತರಲು ಆಗಿಲ್ಲ ನನ್ನ ಕ್ಷೇತ್ರದ ಸುತ್ತ ಇರುವಂತಹ ಕಾಡುಗಳಲ್ಲಿ ಯಾವರೀತಿ ಹದ್ದುಬಸ್ತಿಗೆ ತರಲು ಆಗುತ್ತದೆ? ದಯಮಾಡಿ ಇದನ್ನು ಹದ್ದುಬಸ್ತಿಗೆ ತರಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಹಿಂದೆ ಕೂಡ ಚರ್ಚೆಯಾಗಿದೆ ನಕ್ಸಲ್‌ಬಾರಿ ಎಂಬ ಒಂದು ಪ್ರದೇಶದಲ್ಲಿ ಪಶ್ಚಿಮ ಬಂಗಾಳದಲ್ಲಿ ಕನೂಸನ್ಯಾಲ್ ಎಂಬುವರು ಈ ಚಳುವಳಿಯನ್ನು ಪ್ರಾರಂಭ ಮಾಡಿದರು ಅವರು ಇಡೀ ಪ್ರಜಾಪ್ರಭುತ್ವದ ವ್ಯವಸ್ಥೆ ಈ ತರಹದ ನಮ್ಮ ದೂರುಗಳನ್ನು ನಮ್ಮ ಸಂಕಷ್ಟಗಳನ್ನು ಪರಿಹರಿಸಲಿಕ್ಕೆ ಸಾಧ್ಯವಾಗುವಂತಹ ಒಂದು ರಾಜಕೀಯ ವ್ಯವಸ್ಥೆಯಲ್ಲ ಈ ರಾಜಕೀಯ ವ್ಯವಸ್ಥೆಯಲ್ಲಿ ಮತಪಟ್ಟಿಗೆ ಮೂಲಕ ಪರಿವರ್ತನೆ ತರುವುದರ ಬದಲು ಬಂದೂಕಿನ ಮೂಲಕವಾಗಿ ಈ ಪರಿವರ್ತನೆಯನ್ನು ತರುತ್ತೇವೆ ಎಂಬ ವಿಚಾರಗಳಲ್ಲಿ ನಂಬಿಕೆ ಇಟ್ಟುಕೊಂಡವರು ಆ ಕಾರಣಕ್ಕಾಗಿ ಅವರು ಈ ವ್ಯವಸ್ಥೆಯ ಅಂಗವಾಗಿ ಕೆಲಸ ಮಾಡತಕ್ಕಂತಹ ಪೊಲೀಸ್ ಇಲಾಖೆ ಮೇಲೆ ಪ್ರಥಮ ಶತ್ರುಗಳು ಎಂದು ಸಾರಿ ಅವರನ್ನು ಕೊಲ್ಲಲಿಕ್ಕೆ ಪ್ರಾರಂಭ ಮಾಡಿದರು ಆ ರೀತಿಯಾಗಿ

ಯಾವುದೇ ತರಹದ ವಿವೇಚನೆ ಇಲ್ಲದೆ ಕಲ್ಕತ್ತಾ ಮತ್ತು ಬಂಗಾಳದ ಬೇರೆಬೇರೆ ಪ್ರಾಂತ್ಯಗಳಲ್ಲಿ ಪೋಲೀಸರನ್ನು ಕೊಲ್ಲಲಿಕ್ಕೆ ಪ್ರಾರಂಭವಾದ ಮೇಲೆ ಕನೂಸನ್ಯಾಲರು ಈ ಹಿಂಸೆಯ ಮೂಲಕ ಒಂದು ವ್ಯವಸ್ಥೆಯ ಭಾಗವಾಗಿರುವ ಒಬ್ಬ ವ್ಯಕ್ತಿಯ ಮೇಲೆ ಸೇಡು ತೀರಿಸಿಕೊಳ್ಳಬಾರದು, ಇದನ್ನು ಇಡೀ ವ್ಯವಸ್ಥೆಯನ್ನು ಬುಡಮೇಲು ಮಾಡುವಂತಹ ರೀತಿಯಲ್ಲಿ ಪ್ರಯತ್ನ ಮಾಡಬೇಕು ಎಂದು ಒಂದು ಸಿದ್ಧಾಂತಕ್ಕೆ ಬಂದರು ಆ ಕಾರಣವಾಗಿಯೇ ಕಮ್ಯುನಿಸ್ಟ್ ಪಕ್ಷದಲ್ಲಿ ಬೇರೆಬೇರೆ ವಿಭಜನೆಗಳಾದ ಮೇಲೆ ಪ್ರತ್ಯೇಕ ವಿಭಜನೆಯಾಗಿ ನಕ್ಸಲೈಟ್ ಎಂದು ಈಗ ನಾವೇನು ಹಣೆಪಟ್ಟಿ ಕಟ್ಟುತ್ತಿದ್ದೇವೆ ಅದು ನೀವು ಹೇಳಿದಂತೆ ನಮ್ಮ ರಾಯಚೂರು, ಅನಂತಪುರ, ಬಳ್ಳಾರಿ ಈ ಗಡಿ ಪ್ರದೇಶದಲ್ಲಿ ಪೀಪಲ್ಸ್‌ವಾರ್ ಗ್ರೂಪ್ ಎಂದು ಇದೆ, ಸೀತಾರಾಮಯ್ಯನವರ ನೇತೃತ್ವದಲ್ಲಿ ನಡೆಯತಕ್ಕಂಥದ್ದು ಅಂದರೆ ಅವರು ಆ ಹಿಂಸೆಯಲ್ಲಿ ನಂಬಿಕೆ ಇಟ್ಟುಕೊಂಡಿರುವವರು ಆದರೆ ಆದರ್ಶದಿಂದ ಪ್ರೇರೇಪಿತ ರಾಗಿರುವವರು ಹಿಂಸೆ ಹಿಂಸೆಗಾಗಿ ಅಲ್ಲ ತಾವು ಬಯಸಿದ ನಂಬಿದ ತತ್ವಗಳನ್ನು ಅನುಷ್ಠಾನ ಗೊಳಿಸಬೇಕಾದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದನ್ನು ಮಾಡಲಿಕ್ಕೆ ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿಯೇ ಅವರು ಇಂತಹ ಒಂದು ಉಪಕ್ರಮವನ್ನು ಕೈಗೊಂಡಿದ್ದಾರೆ ಈಗ ಅದು ಶೃಂಗೇರಿಯಲ್ಲಿ ಆಗಿರುವುದು ತಮ್ಮ ಮಾತನ್ನು ನಾನು ಸಂಪೂರ್ಣ ಒಪ್ಪುತ್ತೇನೆ ಅಲ್ಲಿರುವ ಆದಿವಾಸಿಗಳಿಗೆ ಇರುವ ಸಮಸ್ಯೆ ಮತ್ತೆ ತುಂಗಾ ಮೂಲವನ್ನು ಉಳಿಸಬೇಕು ಎಂದು ನಮ್ಮ ವಿರಲ ಹೆಗಡೆ ಮೊದಲಾದವರು ಮಾಡಿದಂತಹ ಹೋರಾಟದ ಪ್ರತಿಫಲ ಅದಾದನಂತರ ಅನಂತ ಮೂರ್ತಿಯವರು ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದಾಗ ನಮ್ಮ ಮಹಿಮಾ ಪಾಟೀಲರು ಕೂಡ ನಮ್ಮ ಜೊತೆಗೆಲ್ಲಾ ಬಂದು ತುಂಗಾ ಭದ್ರಾ ನದಿಗಳೆರಡನ್ನೂ ಉಳಿಸಿಕೊಳ್ಳಬೇಕಾಗುತ್ತದೆ ಅಲ್ಲಿ ನೀರಿನ ಜೊತೆಗೇ ಬರುವಂತಹ ಮಣ್ಣು ಏನಿದೆ ಈ ಕುದುರೆಮುಖ ಗಣಿಗಾರಿಕೆಯಿಂದ ಬಂದಿರುವ ಸೆಡಿಮೆಂಟ್ ಏನಿದೆ ಹೂಳು ಇದು ನಮ್ಮ ಅಣೆಕಟ್ಟುಗಳ ವಯಸ್ಸನ್ನು ಕಡಿಮೆ ಮಾಡುತ್ತದೆ ಆ ಕಾರಣಕ್ಕಾಗಿಯೇ ನಾವು ಅದನ್ನು ಉಳಿಸಿಕೊಳ್ಳಬೇಕು ಎಂಬ ಪ್ರಯತ್ನ ನಡೆಯಿತು ಈ ಎಲ್ಲಾ ಪ್ರಯತ್ನಗಳ ಒಟ್ಟು ಅಭಿಪ್ರಾಯ, ಅಲ್ಲಿರುವ ಗಿರಿಜನರನ್ನು ಒಕ್ಕಲೆಬ್ಬಿಸುವ ಕೆಲಸ ನಾವು ಮಾಡಬಾರದು ಅಲ್ಲಿರುವ ರೈತರಿಗೆ ಸಂಬಂಧಪಟ್ಟ ಅನೇಕ ಅನುಕೂಲಗಳನ್ನು ನಾವು ಕಲ್ಪಿಸಿಕೊಡಬೇಕು ಎಂದು ಈಗಾಗಲೇ 2005ಕ್ಕೆ ಕುದುರೆಮುಖದ ಗಣಿಗಾರಿಕೆಯನ್ನು ಮುಚ್ಚಬೇಕು ಎಂದು ಕೇವಲ ಅಲ್ಲಿಯವರೆಗೆ ಮಾತ್ರ ಅದಕ್ಕೇ ಕೇಂದ್ರ ಸರ್ಕಾರ ಪರವಾನಿಗೆ ಕೊಟ್ಟಿತ್ತು, ನಮ್ಮ ರಾಜ್ಯ ಸರ್ಕಾರ ಅದನ್ನು ಶಿಫಾರಸ್ಸೂ ಮಾಡಿತ್ತು ಆದಾದ ನಂತರವೂ ಈಗ ಮತ್ತೆ 20 ವರ್ಷಗಳ ಕಾಲ ಗಣಿಗಾರಿಕೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕು ಎಂದು ಅವರ ಅರ್ಜಿ ಇದೆ ಅದನ್ನು ಬೇಕಾದರೆ ಬಳ್ಳಾರಿ ಜಿಲ್ಲೆಯ ಸಂಡೂರು ಪ್ರದೇಶದಲ್ಲಿ ಮಾಡಬಹುದು ಎಂದು ಹೇಳಿದ್ದೇವೆ ಅದು ಇನ್ನೂ ಒಂದು ಮಟ್ಟದಲ್ಲಿ ಚರ್ಚೆ ನಡೆದಿದೆ ಅದನ್ನು ಅವರು ಜಪಾನಿನ ಒಂದು ಸಂಸ್ಥೆಗೆ ಮಾರಾಟ ಮಾಡುತ್ತಾರೆ ಅದು ಡಿಸ್‌ಇನ್ವೆಸ್ಟ್‌ಮೆಂಟ್ ಎಂದು ಒಂದು ಇಲಾಖೆ ಬಂದಿರುವ ಸಂದರ್ಭದಲ್ಲಿ ಇಂತಹ ಒಂದು ಆತಂಕಗಳು ಕೂಡ ಇದ್ದವು. ಅದು ಒಂದು ಭಾಗದಲ್ಲಿ ನಡೆದಿದೆ, ಮತ್ತೊಂದು ಕಡೆಗೆ ಕೆಲವು ಸಲ ರೈತರ ವಿಚಾರದಲ್ಲಿ ಇರುವ ಆದರ್ಶದಿಂದ ಪ್ರೇರೇಪಿತರಾದ ಕೆಲವು ಯುವಕರು ಬಂದೂಕುಧಾರಿಗಳಾಗಿದ್ದಾರೆ ಅದರ ಮೂಲಕವಾಗಿ ಕ್ರಮ ಕೈಗೊಳ್ಳುತ್ತೇವೆ ಎಂಬ ಮಾತನ್ನೂ ಹೇಳಿದ್ದಾರೆ ಅಲ್ಲಿ ಈಗ ರಾಷ್ಟ್ರೀಯ ಉದ್ಯಾನವನ ಅನ್ನುವುದು ಬಂದಿದೆ ಅಧ್ಯಕ್ಷರೇ ಆ ರಾಷ್ಟ್ರೀಯ ಉದ್ಯಾನವನದ ಒಳಗಡೆ ಇರುವ ಜನರು ಅವರು ಯಾರೇ ಆಗಿರಲಿ ಅವರನ್ನು ಆ

ಉದ್ಯಾನವನದ ಹೊರಗಡೆ ಇರಿಸಲು ಪ್ರಯತ್ನ ಮಾಡಬೇಕು ಎಂದು ಒಂದು ವಾದ ಇದೆ ಅದಕ್ಕಾಗಿ ಕೆಲವು ಸ್ವಯಂಸೇವಾ ಸಂಸ್ಥೆಗಳು ಪ್ರಯತ್ನ ಮಾಡುತ್ತಾ ಇವೆ ಉಲ್ಲಾಸ ಕಾರಂತರ ನೇತೃತ್ವದ ಒಂದು ಸಮಿತಿ ಕೂಡ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದೆ ಆದರೆ ಇಲ್ಲಿ ಬಂದಿರುವ ಪ್ರಶ್ನೆ ಇಷ್ಟೆ ಇತ್ತೀಚಿನ ದಿನಮಾನಗಳಲ್ಲಿ ಯಾರು ಅರಣ್ಯ ಬಿಟ್ಟು ಹೊರಗಡೆ ಹೋಗುವುದಿಲ್ಲ ಎನ್ನುತ್ತಾರೆ ಅವರ ಮೇಲೆ ಬಲಾತ್ಕಾರ ಮಾಡಬಾರದು ಎಂಬುದೂ ಇದೆ ಯಾರು ಅರಣ್ಯದಿಂದ ಹೊರಗಡೆಗೆ ಬಂದು ನಾವು ಸಾಗುವಳಿ ಭೂಮಿ ಪಡೆದು ಕೆಲಸ ಮಾಡುತ್ತೇವೆ ಎಂದು ಹೇಳುತ್ತಾರೆ ಅದನ್ನೂ ಮಾಡಬೇಕೆಂದು ಇದೆ ಗಡಿಪ್ರದೇಶದಲ್ಲಿ ರಾಯಚೂರು ಮೊದಲಾಡ ಭಾಗಗಳಲ್ಲಿ ನಕ್ಸಲೀಯರ ಹಾವಳಿ ಇದೆ ಅನ್ನುವಂತಹ ಕಾರಣ ಇಷ್ಟೇ ಅನಭಿವೃದ್ಧಿಗಳು ಇದಕ್ಕೆ ಸಂಬಂಧಪಟ್ಟಿರುವಂಥದ್ದು ವಿದ್ಯಾವಂತರಾಗಿರುವ ಅನಕ್ಷರರಾಗಿರುವಂತಹ ಯುವಕರಿಗೆ ಉದ್ಯೋಗಗಳಿಲ್ಲ, ಮಳೆ ಆಧಾರಿತ ಪ್ರದೇಶದಲ್ಲಿ ಒಂದು ಸಮಸ್ಯೆ ಇದ್ದರೆ, ಮಳೆ ಇಲ್ಲದೆ ಬಯಲುಸೀಮೆಯಲ್ಲಿ ಮತ್ತೊಂದು ಬಗೆಯ ಸಮಸ್ಯೆ, ಹೆಚ್ಚು ಬಡ್ಡಿ ಕೊಡುವ ವ್ಯವಸ್ಥೆ ಇರುವ ಜನ ಕಾಡಿನಲ್ಲಿರುವ ಎಲೆಗಳು ಮತ್ತು ಅದರ ಉಪ ಉತ್ಪನ್ನಗಳೇನಿವೆ ಅದರಲ್ಲಿ ದಲ್ಲಾಳಿಗಳು ಹೆಚ್ಚು ಶೋಷಣೆ ಮಾಡಿ ಅಲ್ಲಿರುವ ಬುಡಕಟ್ಟು ಜನಾಂಗಕ್ಕೆ ಅನ್ಯಾಯ ಮಾಡುತ್ತಿರುವ ವಿಚಾರಗಳು ಇವೆಲ್ಲ ಸೇರಿರುವ ಕಾರಣಕ್ಕಾಗಿ ನಕ್ಸ್‌ಲೈಟು ಚಟುವಟಿಕೆ ಹೆಚ್ಚಾಗಿದೆ ಆದ್ದರಿಂದ ತಪ್ಪುದಾರಿಗೆ ಹೋಗಿರುವ ಯುವಕರನ್ನು ಅವರ ಸಮ ್ಯೆಗಳನ್ನು ಬಗೆಹರಿಸುವ ಮೂಲಕವಾಗಿ, ಅವರ ಜೊತೆಗೆ ನಮ್ಮ ಸೌಹಾರ್ದಯುತವಾದ ಮಾತುಕ ೆಗಳ ಮೂಲಕವಾಗಿ ಅವರನ್ನು ಸರಿದಾರಿಗೆ ತರುವುದು ಮುಖ್ಯವಾಹಿನಿಗೆ ತರತಕ್ಕಂಥಾದ್ದು ಮುಂತಾದ ಉದ್ದೇಶಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಅವರ ಜೊತೆಗೆ ಮಾತನಾಡುತ್ತೇವೆ ಎಂದು ಹೇಳಿದ್ದಾರೆ ಮಾತನಾಡುವಂತಹ ಸಂದರ್ಭದಲ್ಲಿ ಶಾಸಕರಾದ ತಮ್ಮನ್ನೂ ಕುಡ ಕರೆಸುತ್ತಾರೆ ಅಲ್ಲಿರುವ ಎಲ್ಲಾ ಶಾಸಕರನ್ನೂ ಕರೆಸಿ ಸಮಗ್ರವಾದ ಬೇಡಿಕೆಗಳೇನಿವೆ ಅವುಗಳನ್ನು ನೆರವೇರಿಸಿ, ಅನ್ಯಾಯ ಬಹಳ ವರ್ಷಗಳ ಕಾಲ ಮುಂದುವರೆಯದಂತೆ ಉತ್ತಮ ಆಡಳಿತವನ್ನು ಕೊಟ್ಟಾಗ ಮಾತ್ರ ಇಂತಹ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಲು ಸಾಧ್ಯತೆ ಆಗುತ್ತದೆ ಮಾನ್ಯ ಮುಖ್ಯಮಂತ್ರಿಗಳು ತಮ್ಮನ್ನು ಕೂಡ ಅಹ್ವಾನಿಸುತ್ತಾರೆ ಅಲ್ಲಿರುವಂತಹ ಇತರ ಸಂಘಟನೆಗಳೂ ಕೂಡ ಭಾಗವಹಿಸುತ್ತವೆ ಆ ಮೂಲಕ ಈ ಹಾವಳಿಯನ್ನು ತಪ್ಪಿಸುವ ಪ್ರಯತ್ನ ಸರ್ಕಾರ ಮಾಡುತ್ತದೆ ನಿಮ್ಮ ಸಲಹೆಯನ್ನು ನಾವು ಎತ್ತಿಹಿಡಿಯುತ್ತೇವೆ

ಅಧ್ಯಕ್ಷರು ಸದನವನ್ನು ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡಲಾಗಿದೆ

**(ಸದನವು ಮಧ್ಯಾಹ್ನ 2 ಗಂಟೆ 7 ನಿಮಿಷಕ್ಕೆ ಮುಂದೂಡಲಟ್ಟು ಪುನಃ 3 ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಿಯಿಸಿತು)**

**ಸದನವು ಪುನಃ ಮಧ್ಯಾಹ್ನ 3 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು**

## 7 ವಿತ್ತೀಯ ಕಾರ್ಯಕಲಾಪಗಳು

## 2004-05ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲಿನ ಚರ್ಚೆ ಹಾಗೂ ಉತ್ತರ

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಹಣಕಾಸು ಸಚಿವರು 2004–05ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತು, ಸುಮಾರು 7,336 58 ಲಕ್ಷ ರೂಪಾಯಿಗಳಷ್ಟು ಒಟ್ಟು ಮೊತ್ತಕ್ಕೆ ಸಾದಿಲ್ವಾರು ನಿಧಿಯಿಂದ

ಮಂಜೂರಾದ ಮುಂಗಡಗಳಿಗೆ ಸಂಬಂಧಿಸಿದಂತೆ ಅನುಮೋದನೆಗಾಗಿ ಮಂಡಿಸಿದ್ದಾರೆ ಈ ಪೂರಕ ಅಂದಾಜುಗಳನ್ನು ಬಜೆಟ್‌ನಲ್ಲಿ ಅಲೋಕೇಶನ್ ಮಾಡಿರುವುದಿಲ್ಲ ಬೇರೆ ಅಡ್ಜಸ್ಟ್‌ಮೆಂಟ್ ಮಾಡುವ ದೃಷ್ಟಿಯಿಂದ ಈ ಸದನದ ಗಮನಕ್ಕೆ ತಂದು ಮಂಜೂರಾತಿ ಮಾಡಿಸಿಕೊಳ್ಳುವಂಥದ್ದು ಸಾಮಾನ್ಯವಾಗಿ ನಡೆದುಕೊಂಡು ಬಂದಿರುವ ಪದ್ಧತಿಯಾಗಿದೆ ಆದರೆ, ನನ್ನ ಒಂದು ಆರೋಪವೇನೆಂದರೆ, ಈ ಬಜೆಟ್ ತಯಾರಿಸುವ ಸಂದರ್ಭದಲ್ಲಿ ಅನಿವಾರ್ಯವಾದ ಅಥವಾ ಇನ್ಯಾವುದೋ ವಿಶೇಷ ಕಾರಣಕ್ಕೆ ಹಣವನ್ನು ತೆಗೆದಿಡಬೇಕು ಖರ್ಚು ಮಾಡಿದ್ದರೆ ಅದಕ್ಕೆ ಅನುಮೋದನೆ ಕೇಳುವ ಪರಿಸ್ಥಿತಿ ಇರಬೇಕೇ ಹೊರತು ಬಜೆಟ್ ಮಂಡಿಸುವ ಸಮಯದಲ್ಲಿ ಇದರ ಬಗ್ಗೆ ಯಾವುದೇ ಪೂರ್ವಭಾವಿ ಚಿಂತನೆ ಇಲ್ಲದೆ ಈ ತರಹ ಬೇಡಿಕೆ ಇಟ್ಟುಕೊಳ್ಳುವಂತಾದ್ದು ಒಂದು ವಾಡಿಕೆಯಾಗಿದೆ. ಇದನ್ನು ಕೊನೆಗೊಳಿಸುವ ಪ್ರಯತ್ನವನ್ನು ಮಾನ್ಯ ಹಣಕಾಸು ಸಚಿವರು ಕೈಗೊಳ್ಳಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಈ ವರ್ಷದ ತ್ರೈಮಾಸಿಕದಲ್ಲಿ ಯಾವುದೇ ರೀತಿಯಾಗಿ ಹಣಕಾಸು ಉಪಯೋಗಿಸದೆ ರಾಜ್ಯದ ಅಭಿವೃದ್ಧಿಗೆ ತೊಂದರೆಯಾಗಿದೆ ಏಕೆಂದರೆ, ನಾವು ಎಸ್ ಎಂ ಕೃಷ್ಣರವರು ಮುಖ್ಯಮಂತ್ರಿಯಾಗಿದಾಗ ಬಜೆಟ್ ಅನುಮೋದಿಸಿ ಕೊಟ್ಟಿದ್ದೆವು. ಒಂದು ರೀತಿಯಲ್ಲಿ ಫೆಬ್ರವರಿಯಲ್ಲಿ ಚುನಾವಣಾ ಪ್ರಕ್ರಿಯೆ ಪ್ರಾರಂಭವಾದಾದಿನಿಂದ ಇವೊತ್ತಿನವರೆಗೂ ಯಾವುದೇ ರಾಜ್ಯದಲ್ಲೂ ಅಭಿವೃದ್ಧಿ ಕಾರ್ಯವಾಗಲಿಲ್ಲ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಯಿತೆನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಅಧಿಕಾರಿಗಳು ಮುಜುಗರಕ್ಕೊಳಗಾದರು ಹೀಗಾಗಿ, ಮೊದಲೇ ಕ್ವಾರ್ಟರ್‌ನಲ್ಲಿ ನಮ್ಮ ರಾಜ್ಯದಲ್ಲಿ ಏನು ಅಭಿವೃದ್ಧಿ ಕಾರ್ಯಗಳು ಜರುಗಬೇಕಾಗಿತ್ತು ಅತ್ತ ಕಡೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಹಣ ಬಿಡುಗಡೆಯಾಗಲಿಲ್ಲ, ಖಜಾನೆಯಲ್ಲೂ ದುಡ್ಡಿರಲಿಲ್ಲ ಇವೊತ್ತು ಆಗಸ್ಟ್ 4ನೇ ತಾರೀಖು ಆಗಿದ್ದು, ಈಗಲೂ ಸಹ ನೀವೇನಾದರೂ ಟ್ರೆಜರಿಗೆ ಕ್ಲಿಯರೆನ್ಸ್ ಕೊಟ್ಟು ಆಯಾ ಬಿಲ್ಲುಗಳನ್ನು ಚುಕ್ತಾ ಮಾಡಿ ಎಂದು ಸೂಚನೆ ಕೊಟ್ಟಿದ್ದರೆ ನನಗೇನೂ ಅನಿಸುವುದಿಲ್ಲ ಇವೊತ್ತು almost ನೀವು ಕೊಟ್ಟಿದ್ದರೂ ಸಹ ವಾಡಿಕೆಯಂತೆ ಕೊಟ್ಟಿರಬಹುದು ಆದರೆ, ತಾವು ಉತ್ತರಿಸುವ ಸಂದರ್ಭದಲ್ಲಿ ಕಳೆದ ಬಜೆಟ್ ಪಾಸ್ ಆದನಂತರ ಎಷ್ಟು ಬಿಲ್ಲುಗಳು ಪಾಸ್ ಆಗಿವೆ? ಎಷ್ಟು ವ್ಯವಹಾರಗಳು ನಡೆದಿವೆ? ಎಂಬುದರ ಅಂಕಿ–ಅಂಶಗಳನ್ನು ತೆಗೆದು ನೋಡಿದರೆ, ಬೀಗ ಹಾಕಿದ್ದು ಮಾರ್ಚ್ 15ರಂದು ಇನ್ನೂ ಕೂಡ ಅದೇ ಪರಿಸ್ಥಿತಿಯಲ್ಲಿ ಮುಂದುವರಿದಿದೆಯೇ ಹೊರತು ಯಾವುದೇ ಪರಿಸ್ಥಿತಿ ಇವೊತ್ತು ಮುಂದುವರೆದಿಲ್ಲ, ಸ್ವಾಮಿ, ಇವೊತ್ತು ಸರ್ಕಾರ ಬಂತು ನನಗೆ ಭಯವಾಗುತ್ತಿರುವುದೇನೆಂದರೆ ಸರ್ಕಾರ ಇದೆಯೇ? ನೀವು ಈ ನಿಮಿಷದವರೆಗೂ ರಾಜಕಾರಣದಲ್ಲಿ ಮುಳುಗಿದ್ದೀರಿ ರಾಜ್ಯದ ಅಭಿವೃದ್ಧಿ ಕುರಿತು ಇರುವ ಸಚಿವರಾದರೂ ಕುಳಿತು ಚಿಂತನೆ ಮಾಡಿ ಕೆಲಸ ಮಾಡುವುದಕ್ಕೂ ಪುರುಸೊತ್ತು ಇದೆಯೆಂದು ನನಗನ್ನಿಸುವುದಿಲ್ಲ ಈಗತಾನೇ ನಾನು ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರ ಹತ್ತಿರ ಮಾತನಾಡಿದೆ ಅವರಿಗೆ ಬಹಳ ವರ್ಷಗಳ ಅನುಭವವಿದೆ ಸದನದಲ್ಲಿ ಯಾವುದೇ ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಿದರೂ ನೀವು ಯಾವುದೋ ಗುಂಗಿನಲ್ಲಿರುವುದರಿಂದ ನಿಮ್ಮ ತಲೆಗೆ ಯಾವುದೂ ಹೋಗುತ್ತಿಲ್ಲದಿರುವುದನ್ನೂ ಸಹ ಬಹಳ ಸೂಕ್ಷ್ಮವಾಗಿ ನಾವು ಗಮನಿಸುತ್ತಿದ್ದೇವೆ ಏನೋ ಒಂದು ಉತ್ತರ ಕೊಡುವಂಥ ಪ್ರಯತ್ನವನ್ನು....

**ಶ್ರೀ ಕೆ ಶ್ರೀನಿವಾಸಗೌಡ** ಹಾಗಾದರೆ ನಾವೆಲ್ಲರೂ ಎಮ್ಮೆ ಹಾಲು ಕುಡಿದಿದ್ದೇವೆಂದು ನಿಮ್ಮ ಲೆಕ್ಕಾಚಾರವೇ?

**ಶ್ರೀ ಬಿ ಎಸ್ ಯಡಿಯೂರಪ್ಪ** ಇಲ್ಲ, ಅದು ಬೇರೆ ಹಾಲು ಅದೊಂದು ರೀತಿ ಮತ್ತು ಬರುವಂಥ ಹಾಲೆಂದು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದರಲ್ಲಾ ಬೇರೆ ಹಾಲು ಕೊಡುತ್ತಿದ್ದೇರೆಂದಾಗ ಮಾನ್ಯ ಕಂದಾಯ ಸಚಿವರು ಬೇರೆ ವಿಷಯ ಎಳೆದುಕೊಂಡು ಬೇರೇನೋ ಹೇಳಿದರು ನಾನು ಹೇಳಿದೆ ಬಜೆಟ್ ಬಗ್ಗೆ ಮಾತನಾಡುವ ಕಾಲದಲ್ಲಿ ಬಹುಶಃ ರಾಜ್ಯದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಎಂಟು ತಿಂಗಳ ಬಜೆಟ್ ಮಂಡಿಸುವ ಸಂದರ್ಭದಲ್ಲಿ 2003-04ನೇ ಸಾಲಿನಲ್ಲಿ ಒಟ್ಟು 40 ಪರ್ಸೆಂಟ್ ಬಜೆಟ್ ಅಲೋಕೇಶನ್ ಮಾಡಿದ ಹಣವನ್ನು ಕಟ್ ಮಾಡಿದಿರಿ ಅಂದರೆ, ಯಾವುದಕ್ಕೆ 100 ಪರ್ಸೆಂಟ್ ಪ್ರಾವಿಜನ್ ಮಾಡಿಕೊಂಡಿದ್ದಿರಿ, ಖರ್ಚಾಗಿರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದು ಕೇವಲ ಇಡೀ ರಾಜ್ಯದಲ್ಲಿ 60 ಪರ್ಸೆಂಟ್‌ಗೆ ಮಾತ್ರ. ಏನಾದರೂ ಸ್ಪೆಸಿಫಿಕ್ಕಾಗಿ ಯಾವುದಾದರೂ ಕೆಲವು ಇಲಾಖೆಗಳಲ್ಲಿ ಆ ರೀತಿ ಮಾಡಿದ್ದಾರೆಯೇ ಎಂದರೆ ಹಾಗೇನೂ ಇಲ್ಲ ಬಹಳ ಪ್ರಮುಖವಾದ ಇಲಾಖೆಗಳಿಗೆ ಈ ಕಟ್ ಅನ್ನು ತಾವು ಅನ್ವಯಿಸಿದ್ದೀರಿ ಪ್ರಮುಖ ಖಾತೆಗಳಾದ ಪಿಡಬ್ಲ್ಯೂಡಿ, ಇರಿಗೇಶನ್ ಮತ್ತು ಜಿಲ್ಲಾ ಪಂಚಾಯತ್‌ಗಳೇನಿವೆ, ನನ್ನ ಅಂದಾಜಿನ ಪ್ರಕಾರ ಇವುಗಳಿಗೆ ಸಂಬಂಧಿಸಿದಂತೆ 1,800ನಿಂದ 2,000 ಕೋಟಿ ರೂಪಾಯಿಗಳವರೆಗೆ ಬಿಲ್ ಬಾಕಿ ಇದೆ ಈ ಕುರಿತಂತೆ ನೀವು ಉತ್ತರಿಸುವ ಸಂದರ್ಭದಲ್ಲಾದರೂ ಸರಿಯಾದ ಅಂಕಿ-ಅಂಶಗಳನ್ನು ನೀಡಬಹುದೆಂದು ತಿಳಿದುಕೊಂಡಿದ್ದೇನೆ ಈ ರೀತಿ ಬಿಲ್‌ಗಳು ಬಾಕಿ ಇರುವುದರಿಂದ ಯಾವುದೇ ಗುತ್ತಿಗೆದಾರರು ನಿಮ್ಮ ಇಲಾಖೆಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಮುಂದೆ ಬರುತ್ತಿಲ್ಲ ಬಂದರೆ ಮುಳುಗಿ ಹೋಗುತ್ತೇವೆಂದು ನಿಮ್ಮ ಹತ್ತಿರ ಯಾರೂ ಬಾರದಿರುವಂತಹ ಒಂದು ವಿಚಿತ್ರ ಸನ್ನಿವೇಶದಲ್ಲಿ ತಾವಿದ್ದೀರಿ ಬೆಳೆ ವಿಮೆಗೆ ನೀವು ಹೆಚ್ಚು ಹಣ ಕೊಟ್ಟಿದ್ದರೆ, ಅದಕ್ಕಾಗಿ ಮಂಜೂರಾತಿ ಕೇಳುತ್ತಿದ್ದಾರೆ ರೈತರಿಗೆ ಯಾವುದಾದರೂ ವಿಶೇಷವಾದ ಅನುಕೂಲ ಮಾಡಿಕೊಟ್ಟಿದ್ದರೆ, ಅದಕ್ಕಿಂತಲೂ ಹೆಚ್ಚು ಮೊತ್ತ ಖರ್ಚಾಗಿದೆ, ಅನುಮೋದನೆ ಕೊಡಿ ಎಂದು ಕೇಳುತ್ತೀರೆಂದುಕೊಂಡರೆ, ಈ ತರಹ ನಾನು ನಿರೀಕ್ಷಿಸಿರಲಿಲ್ಲ, ಆದರೆ, ಆ ತರಹ ಯಾವುದೂ ಇಲ್ಲ ನಾನು ಇವೊತ್ತು ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ಬೆಳಿಗ್ಗೆ ಸದನದಲ್ಲಿ ಪ್ರಸ್ತಾಪವಾಯಿತು ಹಣಕಾಸು ಸಚಿವರಾದ ಸಿದ್ಧರಾಮಯ್ಯನವರು ಒಬ್ಬ ರೈತನ ಮಗನಾಗಿ ಯಾವುದೋ ಪುಣ್ಯಫಲದಿಂದ ಈ ಒಂದು ಒಳ್ಳೆಯ ಅವಕಾಶ ಸಿಕ್ಕಿ, ನೀವು ಆ ಕುರ್ಚಿಯಲ್ಲಿ ಕುಳಿತಂಥ ಕಾಲದಲ್ಲಿ ನೀವೇನೋ ಬಹಳ ಗಂಭೀರವಾಗಿ ರೈತರ ಸಮಸ್ಯೆ ಬಗ್ಗೆ ಮಾತನಾಡುತ್ತೀರೆಂದರೆ, ನೀವು ಮಾತನಾಡಿದ ಧಾಟಿ ನೋಡಿದಾಗ ನಮಗೇನೂ ಅನಿಸಲಿಲ್ಲ ನಿಮಗೆ ನಾವೇನು ಕೇಳಿದೆವು? ಏತಕ್ಕೋಸ್ಕರ ವಾಕ್‌ಔಟ್ ಮಾಡಿದೆವು? ಬಜೆಟ್ ಅನುಮೋದನೆ ಮಡಿಕೊಟ್ಟಿದ್ದೇವೆ ಕಳೆದ ಮೂರು ವರ್ಷಗಳಿಂದ ಸತತವಾಗಿ ರಾಜ್ಯದಲ್ಲಿ ಬರಗಾಲ ಇದೆಯೆಂದು ನೀವೇ ಒಪ್ಪಿಕೊಳ್ಳುತ್ತಿದ್ದೀರಿ ನಾವು ರೈತರ ಪರವಾಗಿದ್ದೇವೆ, ಹಿಂದಿನ ಸರ್ಕಾರ ರೈತರಿಗೆ ಅನ್ಯಾಯ ಮಾಡಿತು, ನಮಗೆ ಅವಕಾಶ ಕಲ್ಪಿಸಿಕೊಡಿ ಎಂದು ಕೇಳಿದಿರಿ ಯಾವುದೇ ಅನಿವಾರ್ಯ ಕಾರಣಕ್ಕಾಗಿ ನೀವು ಕಾಂಗ್ರೆಸ್ ಜೊತೆ ಹೊಂದಾಣಿಕೆ ಮಾಡಿಕೊಂಡು ಆಡಳಿತ ನಡೆಸಬೇಕಾಯಿತು ಅದರ ಬಗ್ಗೆ ನಾವೇನೂ ಚಿಂತನೆ ಮಾಡುವುದಿಲ್ಲ ಆದರೆ, ಆ ಕಳಕಳಿ ಇದ್ದಂಥ ನೀವು, ರೈತನಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಬೆಳೆ ವಿಮೆಯನ್ನು ಪಾವತಿಸಬೇಕೆಂದು ನಾವು ಕೇಳಿದ್ದೇವು, ಅಷ್ಟೆ.

ಹಿಂದೆ ಇದ್ದ ಸಚಿವರು ಇದರ ಬಗ್ಗೆ ಹೇಳಿದ ಧಾಟಿ, ಮಾತನಾಡಿದ ರೀತಿ ನೋಡಿದರೆ 'ಹಾಗೆಲ್ಲಾ ಟೈಮ್ ಹೇಳುವುದಕ್ಕಾಗುವುದಿಲ್ಲ, ಹಾಗೆಲ್ಲಾ ಸಮಯ ನಿಗದಿಪಡಿಸುವುದಕ್ಕಾಗುವುದಿಲ್ಲ' ಎಂದರು ನಾವು ಬಜೆಟ್ ಅನುಮೋದನೆ ಮಾಡಿಕೊಟ್ಟಿದ್ದೇವೆ ರೈತನಿಗೆ ಮೇ–ಜೂನ್ ತಿಂಗಳಿನಲ್ಲಿ ಹಣ ಪಾವತಿಯಾಗಬೇಕಿತ್ತು ಅಲ್ಲಿರುವ ಕೊರತೆಯನ್ನು ಸರಿಪಡಿಸುವುದಕ್ಕೆ ಹಣ ಪಾವತಿಸಬೇಕೆಂದು ಕೇಳಿದರೆ 'ನನಗೆ ಅದು ಅನಿವಾರ್ಯವಾಯಿತು' ಎಂದರು ಈ ಸದನದಲ್ಲಿರುವ ಎಲ್ಲಾ ಮಾನ್ಯ ಸದಸ್ಯರು ಈ ಕಡೆ ಮತ್ತು ಆ ಕಡೆ ಕುಳಿತಿರುವ ಎಲ್ಲರೂ ಆಡಳಿತ ಪಕ್ಷದಲ್ಲಿ ನಾವೇ ಅಲ್ಲಿ ಕುಳಿತಾಗ ಕೆಲವು ವಿಷಯಗಳನ್ನು ಮಾತನಾಡುವುದಕ್ಕಾಗುವುದಿಲ್ಲ, ಮುಜುಗರವುಂಟಾಗುತ್ತದೆ, ಸಮಸ್ಯೆಯಾಗುತ್ತದೆಂಬುದು ನನಗರ್ಥವಾಗುತ್ತದೆ. ಆದರೆ, ಈ ಅಧಿವೇಶನ ಮುಗಿದ ಬಳಿಕ ನಾವುಗಳು ನಮ್ಮ–ನಮ್ಮ ಕ್ಷೇತ್ರಗಳಿಗೆ ತೆರಳಿದಾಗ 'ಬೆಳೆ ವಿಮೆ ಹಣವನ್ನು ತೆಗೆದುಕೊಂಡು ಹೋಗಿ, ನಿಮಗೆ ಅದನ್ನು ತಲುಪಿಸುತ್ತೇವೆ' ಎಂದು ಹೇಳುವುದಕ್ಕೂ ಆಗದ ಉಸಿರು ಕಟ್ಟುವಂತಹ ಪರಿಸ್ಥಿತಿಯಲ್ಲಿದ್ದೇವೆ ಇದು ಎಷ್ಟರಮಟ್ಟಿಗೆ ಈ ಸರ್ಕಾರಕ್ಕೆ ಶೋಭೆ ತರುತ್ತದೆ? ನಿಮ್ಮ ಆದ್ಯತೆ ಯಾವುದು ಎಂದು ಕೇಳುತ್ತಿದ್ದೇನೆ. ಇವತ್ತು ಇಂತಹ ಭೀಕರ ಬರಗಾಲ ಇರುವಂತಹ ಸಂದರ್ಭದಲ್ಲಿ, ಮೂರು ವರ್ಷಗಳ ಕಾಲ ಜನರು suffer ಆಗಿರುವಂತಹ ಸಂದರ್ಭದಲ್ಲಿ, ತಾವು ರೈತರ ಸಂಪೂರ್ಣ ಎಲ್ಲಾ ರೀತಿಯ ಸಾಲದ ಮೇಲೆ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ನೀವು ಹೇಳಿಲ್ಲವೇ? ನೀವು ಇಬ್ಬರೂ ಒಮ್ಮತದಿಂದ ಮಾಡಿಕೊಂಡಿರುವ common minimum programme ನಲ್ಲಿ ತಾವು ಆ ಮಾತನ್ನು ಹೇಳಿಲ್ಲವೇ? ಇವತ್ತು ಡೆಲ್ಲಿಯಲ್ಲಿ ಬಹಳ ಸ್ಪಷ್ಟವಾಗಿ ಅವರು ಹೇಳಿದ್ದಾರೆ "ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಮಾತ್ರ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ರೈತರು ಈ ಮೊದಲು ತೆಗೆದುಕೊಂಡಿರುವ ಸಾಲದ ಮೇಲಿನ ಬಡ್ಡಿ ಹೊರೆಯನ್ನು ರಾಜ್ಯ ಸರ್ಕಾರವೇ ವಹಿಸಿಕೊಳ್ಳಬೇಕಾಗುತ್ತದೆ ಎಂದು ಪವಾರ್‌ರವರು ಹೇಳಿದರು " ಅವರು ಏನೋ ಕೇಂದ್ರದಿಂದ ನಿಮಗೆ concession ಕೊಡುತ್ತಾರೆಂದೇನೂ ನೀವು ಭಾವಿಸಬೇಡಿ ಇವತ್ತು ನೀವೇನು ಬಹಳ ತರಾತುರಿಯಿಂದ, with good intention ತಾವೇನು ಯೋಜನೆಯನ್ನು ಮಾಡಿದ್ದೀರೋ, "ಕೃಷಿ ಸಾಲಕ್ಕೆ ಹಾಲಿ ಶೇಕಡ 121/2 ರಷ್ಟು ಇದ್ದುದ್ದನ್ನು, 61/2 ಯಷ್ಟು ಬಡ್ಡಿಯನ್ನು ಭರಿಸಿದರೆ .." ನನ್ನ ಪ್ರಕಾರ ನೀವು ಅದನ್ನು 61/2% ಮಾಡಿದರೆ 900 ಕೋಟಿ ರೂಪಾಯಿಗಳಿಗೆ ಮಾತ್ರ ನೀವು ಬಡ್ಡಿ adjust ಮಾಡಬಹುದು, ವ್ಯತ್ಯಾಸದ ಹಣವನ್ನು, ನೀವು provide ಮಾಡಿರುವುದು 60 ಕೋಟಿ ರೂಪಾಯಿಗಳು ಮಾತ್ರ ನೀವು 100 ಕೋಟಿ ರೂಪಾಯಿಗಳನ್ನು ಕೊಟ್ಟರೆ, 1500 ಕೋಟಿ ರೂಪಾಯಿಗಳ ಸಾಲಕ್ಕೆ ನೀವು ಬಡ್ಡಿಯನ್ನು adjust ಮಾಡಬಹುದು ಆದರೆ ಹಾಲಿ ಇರುವಂತಾದ್ದೇ 1500 ಕೋಟಿ ರೂಪಾಯಿಗಳು ಇದು ಅವರ ಬಗ್ಗೆ ಆದರೆ, ರಾಷ್ಟ್ರೀಕೃತ ಬ್ಯಾಂಕ್ ಮತ್ತು ಇತರ ಬ್ಯಾಂಕ್‌ಗಳಿಂದ ಅದೇ ಬರಗಾಲಕ್ಕೆ ತುತ್ತಾದಂತಹ ರೈತರು ತಾನೇ ಸಾಲ ತೆಗೆದುಕೊಂಡಿರುವುದು ಅಕ್ಕಪಕ್ಕದ ಹೊಲದಲ್ಲಿ ಒಬ್ಬ ರೈತ co-operative loan ತೆಗೆದುಕೊಂಡಿದ್ದಾನೆ, ಅವನಿಗೆ ನೀವು concession ಕೊಡುತ್ತೀರಿ ಇನ್ನೊಬ್ಬ ರೈತ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ತೆಗೆದುಕೊಂಡು, ಅದೇ ಬರಗಾಲಕ್ಕೆ ಸಿಕ್ಕಿ, ಅವನು ತಲೆ ಮೇಲೆ ಕೈ ಹೊತ್ತುಕೊಂಡು ಕುಳಿತುಕೊಂಡಿದ್ದರೆ, ಅವನಿಗೆ ಈ

concession ಸಿಗುತ್ತಿಲ್ಲ ಇದು ಯಾವ ಧರ್ಮ? ಈ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾದಂತಹ ಎಲ್ಲಾ ರೈತರಿಗೆ ನೀವು ಕೊಡುವಂತಹ ಈ ಬಡ್ಡಿ concession ಸಿಗಬೇಕು ಅದನ್ನು ತುಂಬಿ ಕೊಡುವುದಕ್ಕೆ ನೀವು ಸಿದ್ಧರಾಗಬೇಕು ಆಗ ಮಾತ್ರ ಇದನ್ನು ನೀವು ಘೋಷಣೆ ಮಾಡಬೇಕು ಅದಕ್ಕೆ ಬೇಕಾದಂತಹ ಹಣವನ್ನೂ ಸಹ ತಾವು ಇಡುವಂತಹ ಪ್ರಯತ್ನ ನೀವು ಮಾಡಲಿಲ್ಲ ಅದರ ಬಗ್ಗೆ ಇದರಲ್ಲಿ ಸ್ಪಷ್ಟ ಇಲ್ಲ ಆಹಾರ ಪಡಿತರ ವಿತರಣೆ ಬಗ್ಗೆ ಹೇಳುವುದಾದರೆ, ಸ್ವಾಮಿ ಗೊತ್ತಾಗುತ್ತದೆ, ನನಗೆ ಗೊತ್ತಿಲ್ಲ, ಸಿದ್ಧರಾಮಯ್ಯನವರು ಈ ಬಜೆಟ್ ಅನ್ನು ನೋಡಿದ ಮೇಲೆ, ಯಡಿಯೂರಪ್ಪನವರಿಗೆ ಹೇಳುತ್ತಾರೆ, ಏನು ಯಡಿಯೂರಪ್ಪನವರೇ, ನೀವು ಹೀಗೆ ಮಾತನಾಡುತ್ತೀರಿ ಎಂದು ನಿಮಗೆ ಬಹಳ ಸ್ಪಷ್ಟವಾಗಿ ಗೊತ್ತು ಹೇಗಾದರೂ ಮಾಡಿ ಮುಂದೆ ಇನ್ನೊಂದು ಬಜೆಟ್ ಮಂಡನೆ ಮಾಡುವುದಕ್ಕೆ ಮುಂಚೆಯೇ ಒಂದು ಚುನಾವಣೆ ಮಾಡಿ ಮುಗಿಸಬೇಕು ಎಂದು ನೀವು ಈ ಬಜೆಟ್ ಅನ್ನು ಇಟ್ಟಿದ್ದೀರೇ ಹೊರತು ಬೇರೆ ಯಾವ ಉದ್ದೇಶವೂ ಇಲ್ಲ ಇಲ್ಲದಿದ್ದರೆ ನೀವು ಅಲ್ಲಿ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗುತ್ತದೆ, ಆಕಸ್ಮಾತ್ ಯಾವುದಾದರೂ ಕಾರಣಕ್ಕೆ ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ, ನೀವು ಅಲ್ಲೇ ಮುಂದುವರೆಯಬೇಕು, ಇನ್ನೊಂದು ಬಜೆಟ್ ಮಂಡನೆ ಮಾಡಬೇಕೆಂದು ನೀವು ಹೇಳಬಹುದು, ಯಡಿಯೂರಪ್ಪನವರೇ, ಐದೂ ವರ್ಷ ನಾನೇ ಮಂಡನೆ ಮಾಡುತ್ತೇನೆಂದು ನಾನು ಸಂತೋಷ ಪಡುತ್ತೇನೆ ಆದರೆ ನಾನು ನಿಮಗೆ ಹೇಳುತ್ತೇನೆ, surplus budget ಎಂದು ಬೆನ್ನು ಚಪ್ಪರಿಸಿಕೊಂಡು ಪ್ರಚಾರವನ್ನೇನು ನೀವು ತೆಗೆದುಕೊಂಡಿದ್ದೀರೋ, ನಾಳೆ ನೀವು ಬಜೆಟ್ ಮಂಡನೆ ಮಾಡುವಂತಹ ಸಂದರ್ಭದಲ್ಲಿ ಯಾವ ಇಕ್ಕಟ್ಟಿಗೆ ನೀವು ಸಿಕ್ಕುತ್ತೀರಿ, ಯಾವ ರೀತಿಯಾಗಿ ಅಂಕಿ ಅಂಶಗಳನ್ನು ಜೋಡಣೆ ಮಾಡಿಕೊಂಡು ಈ ಒಂದು ಬಜೆಟ್ ಅನ್ನು ಇಟ್ಟಿದ್ದೀರಿ ಅನ್ನುವಂತಾದ್ದು ಬಹಳ ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ ಯಾವುದಕ್ಕೂ ಅಗತ್ಯ ಇರುವಂತಹ ಹಣವನ್ನು ನೀವು ಪ್ರೊವೈಡ್ ಮಾಡಿಕೊಳ್ಳಲೇ ಇಲ್ಲ, ಅಲೋಕೇಟ್ ಮಾಡಲೇ ಇಲ್ಲ ಇಲ್ಲಿ ಆಹಾರ ಪಡಿತರ ವಿತರಣೆ ಆಗಸ್ಟ್ 2004ರಿಂದ 3 ರೂ ನಂತೆ ಪ್ರತಿ ತಿಂಗಳು 20 ಕೆ ಜಿ ಅಕ್ಕಿಯನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ ಈ 74 ಲಕ್ಷ ಹಳದಿ ಪಡಿತರ ಚೀಟಿದಾರರಿಗೆ ಪ್ರತಿ ಮಾಹೆ ನಿಮಗೆ 84 ಕೋಟಿ ರೂಪಾಯಿಗಳು ಬೇಕಾಗುತ್ತದೆ ಸ್ವಾಮಿ ಇನ್ನು 7 ತಿಂಗಳಿಗೆ 575 ಕೋಟಿ ರೂಪಾಯಿಗಳು ಬೇಕು ಆದರೆ ನೀವು ಬಜೆಟ್‌ನಲ್ಲಿ ಇದಕ್ಕಾಗಿ provide ಮಾಡಿರುವುದು ಕೇವಲ 300 ಕೋಟಿ ರೂಪಾಯಿಗಳು ಮಾತ್ರ ನೀವು ಹೇಗೆ adjust ಮಾಡಿಕೊಂಡು, ಸರಿ ಮಾಡಿಕೊಂಡು ಹೋಗುತ್ತೀರಿ ಎನ್ನುವುದು ನನಗೇನೂ ಅರ್ಥವಾಗಿಲ್ಲ ಇನ್ನು ಬೆಳೆ ವಿಮೆ ಬಗ್ಗೆ ಹೇಳುವುದಾದರೆ, ನನಗೆ ಅರ್ಥವಾಗದಿರುವುದು ಏನೆಂದರೆ, ನಾನು ಈಗ ತಾನೇ ಪ್ರಸ್ತಾಪ ಮಾಡಿದೆ ಈಗಾಗಲೇ ಸಂಬಂಧಪಟ್ಟ ಇಲಾಖೆಯವರು ನಿಮಗೆ ತಿಳುವಳಿಕೆ ಕೊಟ್ಟು, ಕೇಂದ್ರ ಸರ್ಕಾರದ ದುಡ್ಡಿದೆ, ನಿಮ್ಮ ಹಣವನ್ನು ಪಾವತಿ ಮಾಡಿ ಎಂದು ನಿಮಗೊಂಡು ಲೆಟರ್ ಬರೆದಿದ್ದಾರೆ ಹಾಗಿದ್ದರೆ ಏಕೆ ಡಿಲೇ ಮಾಡುತ್ತಿದ್ದೀರಿ? ಬೆಳೆ ವಿಮೆಗೆ ಕೊಡುವುದಕ್ಕೆ ನೀವು ಪ್ರಾವಿಷನ್ ಮಾಡಿಕೊಂಡ ಮೇಲೂ ಸಹ, ತಕ್ಷಣ ರೈತರಿಗೆ ಆಗಸ್ಟ್ 15 ರೊಳಗೆ ಬೆಳೆ ವಿಮೆ ಹಣವನ್ನು ಕೊಡಿಸಿ ಎಂದೆ ಏನು ಮಾಡಬಹುದು ನೀವು? ಯಡಿಯೂರಪ್ಪನವರೇ, ನಾವು ಖುಷಿ ಬಂದ ಹಾಗೆ ಕೊಡುತ್ತೇವೆ

ಅಂದರೆ ಇದು ರೈತರ ಪರವಾದಂತಹ ಸರ್ಕಾರ ಎಂದು ಕರೆಯಬೇಕಾ? ಎಲ್ಲಾ ಬೆಳೆಗಳಿಗೂ ಬೆಳೆ ವಿಮೆ ಆಗಬೇಕೆಂದು ಇಲ್ಲಿ ಎಷ್ಟೊಂದು ಚರ್ಚೆಯಾಯಿತು ಇವತ್ತು ಈರುಳ್ಳಿ ಮತ್ತು ಈ ತರಹ ಬೇರೆ ಬೇರೆ ಕೆಲವು ಬೆಳೆಗಳಿಗೆ ಬೆಳೆ ವಿಮೆ ಪ್ರೀಮಿಯಂ ಅನ್ನು ನೀವು ಹಾಕಿರುವಂಥಾದ್ದನ್ನು ನೋಡಿದರೆ, ಯಾವ ರೈತ ಸಹ ಇವತ್ತು ಉದ್ಧಾರವಾಗುವುದಿಲ್ಲ, ಅವನು ಬೆಳೆ ವಿಮೆ ಮಾಡಿಸುವುದಕ್ಕೆ ಸಾಧ್ಯವಿಲ್ಲ ಆ ರೀತಿ ಇವತ್ತು ಕಂತು ಜಾಸ್ತಿ ಮಾಡಲಾಗಿದೆ ಅದರ ಬಗ್ಗೆ ನೀವೆಲ್ಲಾ ಪರಿಶೀಲನೆ ಮಾಡುತ್ತೀರಿ ಮತ್ತು ಯೋಚನೆ ಮಾಡುತ್ತೀರಿ ಎಂದು ನಾವು ತಿಳಿದುಕೊಂಡಿದ್ದೆವು. ಶಾಲಾ ಮಕ್ಕಳಿಗೆ, ಈಗಾಗಲೇ ಎರಡು ತಿಂಗಳು ಆಯಿತು, ಬೇರೆ ಏನೂ ಬೇಡ, ಕೊನೆಯ ಪಕ್ಷ ಬುಕ್ಸ್ ಕೊಟ್ಟಿಲ್ಲ ಹಣಕಾಸಿನ ಸಚಿವರಾದ ಶ್ರೀ ಸಿದ್ಧರಾಮಯ್ಯನವರು ಹೋಗಿ ಅಲ್ಲಿ ಬುಕ್ ಪ್ರಿಂಟ್ ಮಾಡಬೇಕೆಂದು ನಾನು ಹೇಳುವುದಿಲ್ಲ ಒಂದು ಸರ್ಕಾರ ಹೋಗುತ್ತದೆ, ಚುನಾವಣೆ ನಡೆಯುತ್ತದೆ, ಇನ್ನೊಂದು ಸರ್ಕಾರ ಬರುತ್ತದೆ ಅಧಿಕಾರಿಗಳಿಗೆ ಪುಸ್ತಕ ಪ್ರಿಂಟ್ ಮಾಡಬೇಕೆನ್ನುವಂತಹ ವಿವೇಚನೆಯೂ ಇರಲಿಲ್ಲ ಅದು ಅಷ್ಟೊಂದು ದಿವಾಳಿಯಾಗಿತ್ತು ಎಂದು ನಾವು ಅರ್ಥ ಮಾಡಿಕೊಳ್ಳಬೇಕೇ? Small scale industries ಬಗ್ಗೆ ಸನ್ಮಾನ್ಯ ಸಿಂಧ್ಯಾರವರು ಮಾತನಾಡುತ್ತಾ, ಯಡಿಯೂರಪ್ಪನವರೇ, ನಾವು ಬಹಳ ವಿಶೇಷವಾಗಿ ಈ ಸಾರಿ ಚಿಂತನೆ ಮಾಡುತ್ತಿದ್ದೇವೆ ಎಂದು ಹೇಳಿದರು ಅದರ ಬಗ್ಗೆ ಏನಾದರೂ ಇನ್ನೊಂದು ಅಥವಾ ಒಂದೂವರೆ ತಿಂಗಳಿನಲ್ಲಿ ಪೂರ್ಣ, ಆ ಒಂದು ಪ್ರಮಾಣದಲ್ಲಿ ಎಷ್ಟನ್ನು ಕೊಡಬೇಕೆಂದು ಹೇಳಿದ್ದೀರಿ ಅಷ್ಟನ್ನಾದರೂ ಅವರಿಗೆ ತಲುಪಿಸುವುದಕ್ಕೆ ಏನಾದರೂ ಹಣ ಬಿಡುಗಡೆ ಮಾಡುತ್ತೀರಾ?

**ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು)** ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಸದನದಲ್ಲಿ ಸನ್ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಏಕೆಂದರೆ, ಈ ಸಣ್ಣ ಕೈಗಾರಿಕೆಗಳಿಗೆ ಅನೇಕ ಕಾರಣಗಳಿಂದಾಗಿ ಅದಕ್ಕೆ ಬೇಕಾಗಿರತಕ್ಕಂಥ ಪ್ರೋತ್ಸಾಹವನ್ನು ಕೊಡಲಿಕ್ಕಾಗಿರಲಿಲ್ಲ ಮಾನ್ಯ ಎಸ್ ಎಂ ಕೃಷ್ಣರವರು ಮುಖ್ಯ ಮಂತ್ರಿಗಳಾಗಿ ಆಯವ್ಯಯವನ್ನು ಮಂಡಿಸಿದಂತಹ ಸಂದರ್ಭದಲ್ಲಿ 80 ಕೋಟಿ ರೂಪಾಯಿಗಳನ್ನು KSFC ಯಿಂದ ರೈಸ್ ಮಾಡಿ ಈ ಸಣ್ಣ ಕೈಗಾರಿಕೆಗಳಿಗೆ ಕೊಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದರು ನಮ್ಮ ಹಣಕಾಸಿನ ಮಂತ್ರಿಗಳು ಆ 80 ಕೋಟಿ ರೂಪಾಯಿಗಳ ಜೊತೆಗೆ ಇನ್ನೂ 65 ಕೋಟಿ ರೂಪಾಯಿಗಳನ್ನು ಸೇರಿಸಿ, ಒಟ್ಟು 145 ಕೋಟಿ ರೂಪಾಯಿಗಳನ್ನು KSFC ಯಿಂದ ರೈಸ್ ಮಾಡಿ, ಇವರಿಗೆಲ್ಲಾ ಕೊಡಲಿಕ್ಕೆ ಮಾಡಿದ್ದಾರೆ ಇನ್ನು 2–3 ತಿಂಗಳಿನಲ್ಲಿ ಬಿಡುಗಡೆ ಆಗುತ್ತದೆ ಈಗಾಗಲೇ 85 ಕೋಟಿ ರೂಪಾಯಿಗಳು ಇದೆ ಮೂರು ತಿಂಗಳಿನಿಂದ ಅದನ್ನು ಕಲೆಕ್ಟ್ ಮಾಡಿ KSFC ನಲ್ಲಿ ಇಟ್ಟುಕೊಂಡಿದ್ದಾರೆ ಇದನ್ನು ನಾನ್ಯಾಕೆ ಬಿಡುಗಡೆ ಮಾಡಿಲ್ಲ ಎಂದರೆ, ಈ ಸಣ್ಣ ಕೈಗಾರಿಕೆಗಳನ್ನೂ ಸಹಿತ, ಇದರಲ್ಲಿ ಯಾವುದೇ ಕಾರಣದಿಂದ, ಬಿ ಜೆ ಪಿ ಯ ಸದಸ್ಯರಾದ ಮಾನ್ಯ ಅಶೋಕ್‌ರವರು ಮಾತನಾಡುವಾಗ ಹೇಳಿದರು, ಈಗಾಗಲೇ 10–15% ಮುರಿದುಕೊಳ್ಳಲು ಶುರು ಮಾಡಿದ್ದಾರೆಂದು ಇನ್ನೂ ದುಡ್ಡೇ ಬಿಡುಗಡೆ ಆಗಿಲ್ಲ KSFCಯಲ್ಲೇ ದುಡ್ಡು ಇದೆ ಆಗಲೇ ಜನ ಹೀಗೆ ಮಾತನಾಡಿಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದೀರಿ ಜನ ಮಾತನಾಡುತ್ತಾರೋ, ಇವರು ಮಾತನಾಡುತ್ತಾರೋ, ಅದು ದೇವರಿಗೇ ಗೊತ್ತು

ರಿಲೀಸ್ ಮಾಡತಕ್ಕಂಥ ದುಡ್ಡು KSFC ಯಿಂದ ಏನು ಸಾಲ ತೆಗೆದುಕೊಂಡಿದ್ದಾರೆ, ಅದಕ್ಕೆ ನೇರವಾಗಿ ಹೋಗಿ ಬಿಟ್ಟು ಸೇರಿಸಿಕೊಳ್ಳುತ್ತದೆ ಬ್ಯಾಂಕ್‌ನಿಂದ ಏನು ಸಾಲ ತೆಗೆದುಕೊಂಡಿದ್ದಾರೋ ಆ ಸಾಲಕ್ಕೆ ಅಲ್ಲಿಗೆ ಹೋಗಿ ಬಿಟ್ಟು ಸೇರಿಕೊಳ್ಳುತ್ತದೆ ಇದರಲ್ಲಿ ಕಮಿಷನ್ ಪ್ರಶ್ನೆ ಎಲ್ಲಿ ಬರುತ್ತದೆ? ಎರಡನೆಯದಾಗಿ, ಇಂಥಿಂಥ ಸೆಕ್ಟಾರ್‌ಗೇ ಕೊಡಬೇಕು, ಸೀನಿಯಾರಿಟಿ ಮೇಲೆ ಕೊಡಬೇಕು, 1999ನಿಂದ ಏನೇನು ಬಾಕಿ ಇದೆಯೋ, ಫಸ್ಟ್ ಅವರಿಗೆ ಕೊಡಬೇಕು ಎನ್ನತಕ್ಕಂಥ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಅದರಲ್ಲಿ SC/ST, Woman entrepreneurs ಇವರಿಗೆಲ್ಲಾ preference ಕೊಡತಕ್ಕಂಥ ಒಂದು guidelines ಅನ್ನು ನಾವು transparent ಆಗಿ ಮಾಡಿದ್ದೇವೆ ಯಾರು ಬೇಕಾದರೂ ಅದನ್ನು ಸರಿಯಿಲ್ಲ ಎಂದು ಹೇಳಿದರೆ, I am prepared to set right ಉಳಿದಿರತಕ್ಕಂಥ ಹಣ ಯಾವಾಗ ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ, ನಾನು ಹಣಕಾಸಿನ ಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ, ಅವರು ಸಣ್ಣ ಕೈಗಾರಿಕೆಗಳನ್ನು ಏನಾದರೂ ಮಾಡಿ ರಾಜ್ಯದಲ್ಲಿ ಉಳಿಸಲೇಬೇಕು ಎನ್ನುವಂತಹ ದೃಢ ನಿರ್ಧಾರವನ್ನು ತೆಗೆದುಕೊಂಡಿರುವುದರಿಂದಾಗಿ, ಈ ವರ್ಷದಲ್ಲಿ ಉಳಿದಿರತಕ್ಕಂಥ ಹಣದಲ್ಲಿ ಇನ್ನೂ ಸ್ವಲ್ಪ ಭಾಗ, other than this Rs 140 crores, ತರಲಿಕ್ಕೆ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ You must appreciate ವಿರೋಧ ಪಕ್ಷದ ನಾಯಕರು ಸ್ವಲ್ಪ ಮಟ್ಟಿಗಾದರೂ ಇದರ ಬಗ್ಗೆ appreciate ಮಾಡಿದರೆ ನಮಗೆ ಇನ್ನೊಂದಿಷ್ಟು ಕೆಲಸ ಮಾಡಲಿಕ್ಕೆ ಉತ್ಸಾಹ ಬರುತ್ತದೆ ಈಗ ಹಣಕಾಸಿನ ಮಂತ್ರಿಗಳಿಗೆ ತಾವೊಂದು ಸಲಹೆ ಕೊಟ್ಟಿದ್ದೀರಿ ಟೈಲ್ ಇಂಡಸ್ಟ್ರೀಸ್ ಸತ್ತು ಹೋಗಿ ಬಿಡುತ್ತದೆ, 4% ನಿಂದ 1% ಗೆ ತೆರಿಗೆ ಇಳಿಸಬೇಕು ಎಂದು ತಾವೇ ಸಲಹೆ ಮಾಡಿದ್ದೀರಿ ಅದನ್ನು ಅವರು ಮಾಡಿದ್ದಾರೆ ಕೆಲಸ ಮಾಡುವಂತಹವರಿಗೆ ಸ್ವಲ್ಪ ಬೆನ್ನು ತಟ್ಟಿದರೆ ಇನ್ನೊಂದಿಷ್ಟು ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ ಆದರೆ ನೀವು ತಟ್ಟುವುದೇ ಇಲ್ಲ ಸ್ವಾಮಿ ಬರೇ ಕಾಲೆಳೆಯುವುದನ್ನೇ ನೋಡುತ್ತೀರಿ ನೀವು ಸ್ವಲ್ಪ ತಟ್ಟಿ ಸ್ವಾಮಿ

**ಶ್ರೀ ಬಿ ಎಸ್ ಯಡಿಯೂರಪ್ಪ** ಸರ್ಕಾರ ಒಳ್ಳೆಯ ಕೆಲಸ ಮಾಡಿದರೆ ಬೆನ್ನು ತಟ್ಟುತ್ತೇವೆ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಎಲ್ಲದಕ್ಕೂ ವಿರೋಧ ಮಾಡಬೇಕು ಎಂದು ನಾವಿಲ್ಲಿ ಕುಳಿತಿಲ್ಲ ಆದರೆ ನಾನು ನಿಮ್ಮನ್ನು ಕೇಳುತ್ತೇನೆ ಇಲ್ಲಿ ತಾವು ಕುಳಿತಿದ್ದೀರಿ ಅದೇ ಸರ್ಕಾರ ಎಷ್ಟು ಬಾರಿ ಈ ಒಂದು small scale industries ಗೆ ಸಬ್ಸಿಡಿ ರಿಲೀಸ್ ಮಾಡುತ್ತೇವೆಂದು ಭರವಸೆ ಕೊಟ್ಟು ಅದು ಮುಂದೆ ಹೋಯಿತು ನಾವು ನಿಮಗೆ ಆಗ್ರಹ ಮಾಡುತ್ತಿರುವುದೇನೆಂದರೆ, ನೀವೇನು ಮಾಡುತ್ತೇವೆ ಎಂದು ಹೇಳಿದ್ದೀರೋ, ಅದಕ್ಕೊಂದು ಟೈಮ್ ಬಾಂಡ್ ಪ್ರೋಗ್ರಾಮ್ ಹಾಕಿ ನೋಡಿ ಯಡಿಯೂರಪ್ಪನವರೇ, ಆಗಸ್ಟ್ ಕೊನೆಯೊಳಗೆ ಇದನ್ನು ಕೊಡುತ್ತೇವೆ, ಇದನ್ನು ಪೂರ್ತಿ ಮಾಡುತ್ತೇವೆ ಎಂದು ಹೇಳಿದರೆ, ಇನ್ನೊಮ್ಮೆ ಬಂದಾಗ, ನೀವು ಹೇಳಿದಂತೆ ನಡೆದುಕೊಂಡಿದ್ದೀರಿ ಎಂದು ಹೊಗಳುತ್ತೇವೆ ರಿಲೀಸ್ ಮಾಡಿರುವುದು ಆ ಜನರಿಗೆ ತಲುಪಬೇಕಲ್ಲವೇ? ಆಗಸ್ಟ್ 15ರೊಳಗೆ ಬೆಳೆ ವಿಮೆ ಹಣವನ್ನು ಬರಗಾಲಕ್ಕೆ ತುತ್ತಾದಂತಹ ರೈತರಿಗೆ ಕೊಡದಿದ್ದರೆ, ಆ ರೈತರ ಪರವಾಗಿ ನಾವು ಧರಣಿ ಮಾಡುತ್ತೇವೆ ಆ ರೈತರ ಪರವಾಗಿ ವಿಧಾನ ಸೌಧದ ಹೆಬ್ಬಾಗಿಲಿನಲ್ಲಿ ಕುಳಿತು ನಾವು ಜೈಲಿಗೆ ಹೋಗಲಿಕ್ಕೂ ತಯಾರಾಗಿದ್ದೇವೆ ಧರಣಿ ಎಂಬ

ನಾಟಕ-ಗೀಟಕ ಇಲ್ಲ ಈ ಭಾಗದಲ್ಲಿ ಇರುವವರು ಅದನ್ನು ಮಾಡುತ್ತೇವೆ ನಾವು ಯಾವ ಜನರನ್ನೂ ಸಹ ಅದಕ್ಕಾಗಿ ಕರೆದುಕೊಂಡು ಬರುವುದಿಲ್ಲ ಹೊರಗಡೆ ಇದ್ದು ನಾವು ಕೆಲಸ ಮಾಡಬೇಕು ಎಂದು ಜನರು ನಮ್ಮನ್ನು ಶಾಸಕರಾಗಿ ಆಯ್ಕೆ ಮಾಡಿ ಕಳುಹಿಸಿದ್ದಾರೆ ಅದಕ್ಕೋಸ್ಕರ ದಯಮಾಡಿ ಇದನ್ನು ಸ್ವಲ್ಪ ಸೀರಿಯಸ್ ಆಗಿ ತೆಗೆದುಕೊಂಡು, ಆ ಬೆಳೆ ವಿಮೆಯನ್ನು ಅವರಿಗೆ ತಲುಪಿಸುವಂತಹ ಒಂದು ಕೆಲಸವನ್ನು ತಾವು ಮಾಡಬೇಕು ನೀವೇ ಕುಳಿತುಕೊಂಡು ಯೋಚನೆ ಮಾಡಿ ಈಗ ಬೆಳೆ ವಿಮೆ ಬಗ್ಗೆ ಸರಳಗೊಳಿಸುವುದು ಹೇಗೆ? ಯಾವದೋ ಕಾಲದ್ದು ಹೋಬಳಿ ಮಟ್ಟದ ಬೆಳೆ ಕಟಾವು ಫಲಿತಾಂಶದ ಮೇಲೆ, ಹಿಂದಿನ ಐದು ವರ್ಷಗಳ ಇಳುವರಿಯ ಮೇಲೆ ಈಗ ಬೆಳೆ ವಿಮೆ ಕೊಡುತ್ತಿದ್ದಾರೆ ನಮ್ಮ ಮಾನ್ಯ ಉದಾಸಿಯವರು ಇದರ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದರು ಅವರು ಅದರ ಬಗ್ಗೆ ಸಾಕಷ್ಟು ಸ್ಟಡಿ ಮಾಡಿ ಇಲ್ಲಿ ಹೇಳಿದರು ನಾನು ನೀವು ಉತ್ತರ ಕೊಡುವ ಕಾಲದಲ್ಲಿ, atleast ಯಡಿಯೂರಪ್ಪ, ವಿರೋಧ ಪಕ್ಷದ ನಾಯಕ, ಸರಿಯೋ, ತಪ್ಪೋ, ಆ ಮನುಷ್ಯ ತನ್ನ ಕ್ಷೇತ್ರದ ಬಗ್ಗೆ ಒಂದು ಉದಾಹರಣೆಯನ್ನು ಕೊಟ್ಟಿದ್ದಾನೆಂದು ಹೇಳಿ ನೀವು ಶಿಕಾರಿಪುರ ತಾಲ್ಲೂಕು ಉಡುಗಣಿ ಹೋಬಳಿ ಸ್ಯಾಂಪಲ್ ತರಿಸುತ್ತೀರಿ ಎಂದು ನಾನು ಅಂದುಕೊಂಡಿದ್ದೆ ಅದರಲ್ಲಿ 12 ಸ್ಯಾಂಪಲ್ ಕಟ್ಟಿಂಗ್ ಎಕ್ಸ್‌ಪರಿಮೆಂಟ್ ಮಾಡಿ ಅಂದರೆ 9 ಬೋರ್‌ವೆಲ್ ಇರುವ ಕಡೆ ಮಾಡಿದ್ದಾರೆ ಪಕ್ಕದ ಹೋಬಳಿಗೆ ಬೆಳೆ ವಿಮೆ ಸಿಕ್ಕಿದೆ, ಈ ಕಡೆಗೆ ಸಿಕ್ಕಿಲ್ಲ ಅಧಿಕಾರಿಗಳ ಜೊತೆಗೆ ಸಮಾಲೋಚನೆ ಮಾಡಿ, ಆಯಿತು, ಸರಿಪಡಿಸುತ್ತೇವೆ ಎಂದವರು ಇದುವರೆಗೂ ವಾಪಸ್ ಬರಲಿಲ್ಲ ನಾನು ನಿಮಗೆ ಇಷ್ಟೇ ವಿನಂತಿ ಮಾಡುತ್ತೇನೆ ..

**ಶ್ರೀ ಕೆ ಶ್ರೀನಿವಾಸಗೌಡ** ವಿಮೆ ಹಣ ಕಟ್ಟಿದಂಥ ರೈತರಿಗೆ ಬೋರ್‌ವೆಲ್ ಹಾಕಿರುವಂಥ ಜಾಗದಲ್ಲೂ ವಿಮೆ ಕಟ್ಟಿದರೆ ಮಾಡಬೇಕಾಗುತ್ತದೆ ಅದನ್ನು ಮಾಡೇ ಮಾಡುತ್ತೇವೆಂದರೆ ಅವರಿಗೆ ಈಲ್ಡ್‌ನಲ್ಲಿ ಕಡಿಮೆಯಾದರೆ ವಿಮೆಯನ್ನು ಕೊಡಬೇಕಾಗುತ್ತದೆ ಅದನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ ಅವರದ್ದು ಮಾಡಬೇಕು, ಬರಕ್ಕೆ ತುತ್ತಾದಂಥ ರೈತರದ್ದೂ ಮಾಡಬೇಕು

**ಶ್ರೀ ಬಿ ಎಸ್ ಯಡಿಯೂರಪ್ಪ** ನಿಮ್ಮ ತಾಲ್ಲೂಕ್ಕಿನಲ್ಲಿ ಉದಾಹಣೆಗೆ ಯಾವುದೋ ಒಂದು ಹೋಬಳಿ ಇದೆ ಬರಗಾಲಕ್ಕೆ ತುತ್ತಾಗಿದೆ, ಅಲ್ಲೇ ನೂರಾರು ಬೋರ್‌ವೆಲ್‌ಗಳು ಇವೆ ಸ್ಯಾಂಪಲ್‌ಗೆ ಬೆಳೆ ಕಟ್ಟಿಂಗ್ ಎಕ್ಸ್‌ಪೆರಿಮೆಂಟ್‌ನ್ನು ನೀವು ಮಾಡುತ್ತೀರಿ ಈ ಹೋಬಳಿಯಲ್ಲಿ 12 ಸ್ಯಾಂಪಲ್‌ನ್ನು ತೆಗೆದುಕೊಂಡಾಗ ಒಂದು ಬೋರ್‌ವೆಲ್ ಅಲ್ಲ ಒಂಬತ್ತು ಬೋರ್‌ವೆಲ್ ಇರತಕ್ಕ ಪ್ರದೇಶ, ಮೂರು ಬೇರೆ ಪ್ರದೇಶದಲ್ಲಿ ಇಳುವರಿ ಜಾಸ್ತಿ ಎಂದು ಇಡೀ ಹೋಬಳಿಯ ರೈತರು ಬೀದಿಪಾಲಾಗಿದ್ದಾರೆ

**ಶ್ರೀ ಕೆ ಶ್ರೀನಿವಾಸಗೌಡ** ಬೋರ್‌ವೆಲ್ ಇರುವವರೂ ವಿಮೆ ಬೇಕು ಎಂದರೆ ವಿಮೆ ಕಂತು ಹಣ ಕಟ್ಟಬೇಕಾಗುತ್ತದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಬೋರ್‌ವೆಲ್ ಇರತಕ್ಕವನು ಏಕೆ ವಿಮೆ ಕಟ್ಟಿ ತಲೆ ಬೋಳಿಸಿಕೊಳ್ಳಲು ಹೋಗುತ್ತಾನೆ? ನಾನು ಹೇಳುತ್ತಿರುವುದನ್ನೇ ನೀವು ಅರ್ಥಮಾಡಿಕೊಳ್ಳುತ್ತಿಲ್ಲ

**ಶ್ರೀ ಸಿ ಎಂ ಉದಾಸಿ** ಕ್ರಾಪ್ ಕಟ್ಟಿಂಗ್ ಎಕ್ಸ್‌ಪರಿಮೆಂಟ್ ಮಾಡುವಾಗ ರ್‍ಯಾಂಡಂ ಸರ್ವೆ ನಂಬರ್‌ಗಳನ್ನು ಗುರುತಿಸುತ್ತೀರಿ ಹಾಗೆ ಗುರುತಿಸುವಾಗ ಮಳೆ ಆಶ್ರಯಕ್ಕೆ ಮತ್ತು ನೀರಾವರಿಗೆ ಬೇರೆಬೇರೆ ರೀತಿಯಾಗಿ ಗುರ್ತಿಸುತ್ತೀರಿ ನೀರಾವರಿಗೆ ಎಂದು ಗುರುತಿಸಿರತಕ್ಕ ಸಂದರ್ಭದಲ್ಲಿ ಕೆರೆ ಕೆಳಗೆ ಅಥವಾ ಕಾಲುವೆಗಳ ಕೆಳಗೆ ಬಂದಿರುವ ಜಮೀನುಗಳಲ್ಲಿ ಅದು ಬಂದಿದ್ದರೆ ಪರವಾಗಿಲ್ಲ ಆದರೆ assured irrigation ಎಂದರೆ ಬೋರ್‌ವೆಲ್ ಇರತಕ್ಕದ್ದೇ ಹೋಗಿಬಿಟ್ಟರೆ ಹನ್ನೆರಡರಲ್ಲಿ ಬಂದಿರುವಂಥ ಸ್ಯಾಂಪಲ್ ಸರ್ವೆ ಎಕ್ಸಸ್ ಬಂದುಬಿಡುತ್ತದೆ ಕೆರೆ ಕೆಳಗಿರುವ ಒಂದು ಸರ್ವೆ ನಂಬರ್‌ನಲ್ಲಿ ಮಾತ್ರ ಬೋರ್‌ವೆಲ್ ಇರುತ್ತದೆ ಆ ಕೆರೆಗಳ ಎಲ್ಲಾ ಸರ್ವೆ ನಂಬರ್‌ನಲ್ಲಿ ಬೆಳೆ ಬಂದಿರುವುದಿಲ್ಲ ಆ ಒಂದು ನಂಬರ್‌ಗೆ ರ್‍ಯಾಂಡಂನಲ್ಲಿ ಇದ್ದಿದ್ದು ಬಂದು ಬಿಟ್ಟರೆ ಈಲ್ಡ್ ಹೆಚ್ಚಿಗೆ ಆಗುತ್ತದೆ ಈ ತಪ್ಪನ್ನು ಸರಿಪಡಿಸಬೇಕಾದಂಥ ಸಂದರ್ಭದಲ್ಲಿ ಯಾವಾಗ ಇಂಥ ಕೊಳವೆ ಬಾವಿಗಳು ಬಂದಾಗ ಅದರ ಪಕ್ಕದ ಸರ್ವೆ ನಂಬರ್‌ನ್ನು ತೆಗೆದುಕೊಳ್ಳಬೇಕು ಎಂಬ ವಿಚಾರವಿದೆ ಹಾಗಿದ್ದರೂ ಇಲಾಖಾಧಿಕಾರಿಗಳ ಅಲಕ್ಷ್ಯದಿಂದ ಇಂಥ ಸಂಭವ ಆಗಿರಬೇಕು ಆದ್ದರಿಂದ ಅದನ್ನು ಮತ್ತೊಂದು ಸಲ ಪರಿಶೀಲಿಸಬೇಕು ನನಗಿಂತ ಹೆಚ್ಚಾಗಿ ಮಾನ್ಯ ದೇಶ್‌ಪಾಂಡೆಯವರಿಗೆ ಇದರಲ್ಲಿ ಅನುಭವ ಇದೆ ಬೇಕಾದರೆ ಅವರನ್ನು ಕೇಳಿದರೂ ಹೇಳುತ್ತಾರೆ

**ಶ್ರೀ ಎಸ್ ಎಸ್ ಪಾಟೀಲ್** ಮಾನ್ಯ ಕೃಷಿ ಸಚಿವರು ದಯವಿಟ್ಟು ಈ ವಿಮೆಯ ಬಗ್ಗೆ ಕುಳಿತುಕೊಂಡು ಅಭ್ಯಾಸ ಮಾಡಿ ಈಗ ರೊಕ್ಕ ತುಂಬಿದರೂ ಅದು ರೈತರಿಗೆ ಹೋಗುವುದಿಲ್ಲ ಅದು ಎಲ್ಲಾ ಬಡ್ಡಿಗೆ ಹೋಗುತ್ತದೆ ಹದಿನೈದರ ಒಳಗೆ ತಾವು ರೊಕ್ಕವನ್ನು ತುಂಬಿದರೂ ಸಹ ಅದು ಬಡ್ಡಿಗೆ ಹೋಗುತ್ತದೆ ಅಸಲು ಹಾಗೆಯೇ ಉಳಿಯುತ್ತದೆ ಇದು ತಮಗೂ ಗೊತ್ತಿದೆ ಆ ವಿಮೆ ಪದ್ಧತಿಯ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಸರಿಮಾಡದಿದ್ದರೆ ಅದರಿಂದ ರೈತರಿಗೆ ಯಾವುದೇ ಉಪಯೋಗವಾಗುವುದಿಲ್ಲ ತಾವು threshold yield ಎಂದು ಹೇಳುತ್ತೀರಿ, ಬರಗಾಲ ಇದ್ದ ಪ್ರದೇಶದಲ್ಲಿ ಹೊಟ್ಟೆಗೇ ಸಿಗುವುದಿಲ್ಲ ವರ್ಷ ವರ್ಷ threshold yield ಕಡಿಮೆಯಾಗುತ್ತಾ ಹೋಗುತ್ತದೆ 90 ಕೆ.ಜಿ ಯಿಂದ ಅದು ಮುಂದಿನ ವರ್ಷ 80 ಕೆ ಜಿ ಯಾಗುತ್ತದೆ ನಂತರ 70 ಕೆ ಜಿ ಯಾಗುತ್ತದೆ ಅಂದರೆ ಒಂದು ಎಕರೆ ಹೊಲಕ್ಕೆ ಶೇಂಗಾ ಬೀಜವನ್ನು ಹಾಕಿ ಉತ್ಪನ್ನ ಬಾರದಿದ್ದರೂ ನಮಗೆ ವಿಮೆ ಸಿಗುವುದಿಲ್ಲ ಇದು ವ್ಯವಸ್ಥೆ ಇರುವುದು ಆ threshold yield ನ್ನು ತೆಗೆದು ನಿಮ್ಮ Agriculture University, Agriculture Department ಪ್ರಕಾರ ಒಂದು ಎಕರೆಗೆ ಎಷ್ಟು ಶೇಂಗಾ ಬರುತ್ತದೆ, ಜೋಳ ಎಷ್ಟು ಬರುತ್ತದೆ, ಅದರಲ್ಲಿ ಎಷ್ಟು ಕಡಿಮೆಯಾಗುತ್ತದೆ ಅಷ್ಟು ಕೊಡುವ ವ್ಯವಸ್ಥೆಯಾದರೆ ಅದು ಉಪಯೋಗವಾಗುತ್ತದೆ Threshold Yield ತೆಗೆದುಕೊಂಡರೆ ಬರದ ಪ್ರದೇಶದಲ್ಲಿ ಅದರಿಂದ ಏನೂ ಉಪಯೋಗವಾಗುವುದಿಲ್ಲ

**ಶ್ರೀ ಹೆಚ್ ಎಸ್ ಮಹದೇವ್ ಪ್ರಸಾದ್** Threshold ನಲ್ಲೂ ಹೋಬಳಿ ಮಟ್ಟಕ್ಕೆ ಅಸೆಸ್ ಮಾಡುತ್ತಾರೆ, ಅದನ್ನು ಪಂಚಾಯಿತಿ ವ್ಯಾಪ್ತಿಗೆ ಮಾಡಿದರೆ ಸ್ವಲ್ಪ ಅನುಕೂಲವಾಗುತ್ತದೆ

**ಶ್ರೀ ಸಿದ್ಧರಾಮಯ್ಯ** ಇದು ಪದೇ ಪದೇ ಚರ್ಚೆಯಾಗುತ್ತಿದೆ, ಬೆಳಿಗ್ಗೆಯೂ ಚರ್ಚೆಯಾಗಿದೆ ಈಗಲೂ ಚರ್ಚೆಯಾಗಿದೆ ರೈತರಿಗೆ ಇದರಿಂದ ಹೆಚ್ಚು ಅನುಕೂಲವಾಗುತ್ತಿಲ್ಲ ಈಗ ಇರತಕ್ಕ ಬೆಳೆ

ವಿಮೆ ಪದ್ಧತಿಯಲ್ಲಿ ಬೆಳೆ ನಷ್ಟವಾದಂಥ ರೈತರಿಗೆ ಸಹಾಯವಾಗುವುದಿಲ್ಲ ಮಾನ್ಯ ಉದಾಸಿಯವರಿಗೆ, ಮಾನ್ಯ ಎಸ್ ಎಸ್ ಪಾಟೀಲರಿಗೆ ಬಹಳ ಅನುಭವವಿದೆ ಮಾನ್ಯ ದೇಶ್‌ಪಾಂಡೆಯವರಿಗೂ ಇದೆ, ಇವರೆಲ್ಲರ ಅನುಭವವನ್ನು ಉಪಯೋಗಿಸಿಕೊಂಡು ಇರತಕ್ಕ ದೋಷಗಳನ್ನು ಸರಿಪಡಿಸಲು ಸರ್ಕಾರ ಸಿದ್ಧವಿದೆಯೆಂದು ನಾನು ಉತ್ತರವನ್ನು ಕೊಟ್ಟಿದ್ದೇನೆ ಮುಂದೆ ಸಹ ಇವರ ಅಭಿಪ್ರಾಯಗಳನ್ನು ತೆಗೆದುಕೊಂಡು ಮಾಡುತ್ತೇವೆ

**ಶ್ರೀ ಸಿ.ಎಂ ಉದಾಸಿ** ಮುಂದೆ ಇದನ್ನು ಸರಿಪಡಿಸುವಿರಂತೆ, ಆದರೆ ಈಗ ಆಗಿರುವಂಥ ನನ್ನ ಎರಡು ಹೋಬಳಿ ಮತ್ತು ಶಿಕಾರಿಪುರದ ಎರಡು ಹೋಬಳಿ ಇಂಥ ನಾಲ್ಕಾರು ಹೋಬಳಿಗಳಲ್ಲಿ ಅನ್ಯಾಯವಾಗಿರಬಹುದು ಅದನ್ನು ಸಹ ಸರಿಪಡಿಸುತ್ತೇವೆ ಎಂಬ ಭರವಸೆಯನ್ನು ತಾವು ಕೊಟ್ಟರೆ ಚೆನ್ನಾಗಿರುತ್ತದೆ

**ಶ್ರೀ ಜಿ ಟಿ ದೇವೇಗೌಡ** ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲೂ ಒಂದು ಇಲ್ಲವೇ ಎರಡು ಹೋಬಳಿಗಳಲ್ಲಿ ಈ ರೀತಿಯಾಗಿದೆ ಆದ್ದರಿಂದ ಇದನ್ನು ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಅನ್ವಯಿಸಬೇಕಾಗುತ್ತದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಈ ಅಕ್ಷರ ದಾಸೋಹ ಯೋಜನೆಗೆ 262 ಕೋಟಿ ರೂಪಾಯಿಗಳನ್ನು ತಾವು ತೆಗೆದು ಇಟ್ಟಿದ್ದೀರಿ ಹೋದ ವರ್ಷ ಇದಕ್ಕೆ 200 ಕೋಟಿ ರೂ.ಗಳನ್ನು ಇಟ್ಟಿದ್ದೀರಿ ಈಗ ತಾವು ಇದನ್ನು ಐದನೇ ತರಗತಿಯಿಂದ ಎಂಟನೇ ತರಗತಿಯವರೆಗೆ ವಿಸ್ತರಣೆ ಮಾಡುತ್ತಿದ್ದೀರಿ ಅಂದರೆ ಮಕ್ಕಳ ಸಂಖ್ಯೆ 25 ಲಕ್ಷ ಮಕ್ಕಳು ಹೊಸದಾಗಿ ಸೇರಿದರೆ ಬರುವ ಎಂಟು ತಿಂಗಳಿಗೆ ಕನಿಷ್ಟ 300 ಕೋಟಿ ರೂ ಗಳು ನಿಮಗೆ ಬೇಕಾಗುತ್ತದೆ ಆದರೆ ನೀವು 262 ಕೋಟಿ ರೂಗಳನ್ನು ಪ್ರಾವಿಷನ್ ಮಾಡಿದ್ದೀರಿ ಗಂಗಾಕಲ್ಯಾಣ ಯೋಜನೆಗೆ 13 ಕೋಟಿ ರೂ.ಗಳನ್ನು ಇಟ್ಟಿದ್ದೀರಿ ಇವತ್ತು ಗಂಗಾಕಲ್ಯಾಣ ಯೋಜನೆಗೆ ನೀವು ಕೊಟ್ಟಿರುವ ಹಣ ಐದುಸಾವಿರ ಕುಟುಂಬಗಳಿಗಾದರೂ ಅನುಕೂಲವಾಗ ಬಾರದೇ? ಅಂದರೆ ತಾವು 13 ಕೋಟಿ ರೂ.ಗಳನ್ನು ಮಾತ್ರ ಒದಗಿಸಿದ್ದೀರಿ ಇಡೀ 224 ಕ್ಷೇತ್ರಗಳಿಗೆ ತಾವು ಇಟ್ಟಿರುವುದು ಕೇವಲ 13 ಕೋಟಿ ರೂ.ಗಳು ಮಾತ್ರ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠಕ್ಕೆ 50 ಕೋಟಿ ರೂ.ಗಳನ್ನು ತೆಗೆದಿಡಬೇಕೆಂದು 20 ಕೋಟಿ ರೂ ಗಳನ್ನು ಇಟ್ಟಿದ್ದೀರಿ ಆದರೆ ನನಗೆ ಗೊತ್ತಿದೆ, ನಿಮಗೆ ಹೈಕೋರ್ಟ್ ಪೀಠ ಮಾಡುವುದಕ್ಕಾಗುವುದಿಲ್ಲ ಯಾವುದು ಸಾಧ್ಯವಿಲ್ಲವೋ ಅದಕ್ಕೆ ತಾವು ತೆಗೆದಿಡುತ್ತೀರಿ, ಆದರೆ ನಿಜವಾಗಿ ತಾವು ತೆಗೆದಿಡಬೇಕಾಗಿರುಂಥದ್ದು ಸಿ ಇ ಟಿ , ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ, ಆ ಮುರುಗೋಡು ಸಮಿತಿಯದ್ದು ಮತ್ತು 2002ರ ಫೀ ಸ್ಟ್ರಕ್ಚರ್ ವ್ಯತ್ಯಾಸಕೋಸ್ಕರ 60 ಕೋಟಿರೂಗಳನ್ನು ಪ್ರೋವೈಡ್ ಮಾಡಬೇಕಾಗಿತ್ತು ಇದರ ಅಗತ್ಯವಿದೆ, ಇದನ್ನು ಮಾಡಬೇಕೆಂದು ತಮಗೆ ಗೊತ್ತಿತ್ತು ಆದರೆ ಅದನ್ನು ಮಾಡಲಿಲ್ಲ ಯಾವುದಕ್ಕೆ ಆದ್ಯತೆಯ ಮೂಲಕ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಳ್ಳಬೇಕಾಗಿತ್ತೋ ಅದನ್ನು ಮಾಡದೆ ತಾವು ಹೇಗೆ ಬೇಕೋ ಆ ರೀತಿ ಬಜೆಟ್‌ನ್ನು ಮಂಡನೆ ಮಾಡಿದ್ದೀರಿ, ಅದರಿಂದ ಯಾವುದೇ ರೀತಿಯ ಅನುಕೂಲವಾಗಲಿಲ್ಲ ನೇಕಾರರಿಗೆ ತಾವು ಎಷ್ಟು ಭರವಸೆಯನ್ನು ಕೊಟ್ಟಿರಿ 150 ಕೋಟಿ ರೂಪಾಯಿಯ ವಿಶೇಷ ಪ್ಯಾಕೇಜನ್ನು ಪ್ರಕಟಣೆ ಮಾಡಿ ಈಗ ಕೇವಲ 20 ಕೋಟಿ ರೂ.ಗನ್ನು ಅದಕ್ಕೆ ತೆಗೆದಿಟ್ಟಿದ್ದೀರಿ, ಆ ಕಡೆ ಈ ಕಡೆ ಎಲ್ಲಾ ಒಕ್ಕೊರಲಿನಿಂದ ಕೇಳಿದ್ದು ಏನು?

ಕೊನೆಯ ಪಕ್ಷ ವಿದ್ಯುತ್‌ನ ಮಗ್ಗಗಳಿಗೆ, ಕೈಮಗ್ಗಗಳಿಗೆ ವಿದ್ಯುತ್‌ನಲ್ಲಿ ವಿನಾಯಿತಿ ಕೊಡಿ, ಪಕ್ಕದ ಮಹಾರಾಷ್ಟ್ರದಲ್ಲಿ ಒಂದು ರೂಪಾಯಿ ಇದೆ, ಆಂಧ್ರದಲ್ಲಿ 87 ಪೈಸೆ ಇದೆ, ಗುಜರಾತ್‌ನಲ್ಲಿ 1 ರೂ 30 ಪೈಸೆ ಇದೆ, ಕರ್ನಾಟಕದಲ್ಲಿ 4 ರೂ 75 ಪೈಸೆ ಇದೆ, ಕೊನೆಯ ಪಕ್ಷ ಗುಜರಾತ್‌ಗೆ ಸಮಾನವಾಗಿಯಾದರೂ ಮಾಡಿ ಎಂದು ನಾವು ಕೇಳಿದೆವು ಅದಕ್ಕೆ ತಾವು ಯಾವುದೇ ರೀತಿ ಸ್ಪಂದಿಸಲಿಲ್ಲ ಯಾವುದೇ ಅನುಕೂಲಗಳನ್ನು ತಾವು ಮಾಡಿಕೊಡುವಂಥ ಪ್ರಯತ್ನವನ್ನು ಮಾಡಲಿಲ್ಲ ಇಲ್ಲಿರುವಂಥ ಶಾಸಕರು ಅವರ ಕ್ಷೇತ್ರಕ್ಕೆ ಹೋದಾಗ ಸಣ್ಣ ಪುಟ್ಟ ಕೆಲಸವನ್ನು ಹೇಳಿದರೆ ಆಯಿತು ಇದನ್ನು ಮಾಡಿಕೊಡುತ್ತೇವೆ ..., ಎಂ ಪಿ ಯವರು ಎರಡು ಕೋಟಿ ರೂ ಗಳನ್ನು ಹಿಡಿದುಕೊಂಡು ಬಂದು ಅಲ್ಲಿ ಇಲ್ಲಿ ಬೇಕಾದ್ದನ್ನು ಕೊಡುತ್ತಾರೆ, ಆದ್ದರಿಂದ ಒಕ್ಕೊರಲಿನಿಂದ 50 ಲಕ್ಷ ರೂಪಾಯಿಗಳನ್ನು ಒಬ್ಬೊಬ್ಬರು ಶಾಸಕರಿಗೆ ಅವರ ಕ್ಷೇತ್ರದ ಅಭಿವೃದ್ಧಿ ನಿಧಿಯೆಂದು ಕೊಡಿ ಎಂದು ಕೇಳಿದೆವು. ಅದರ ಬಗ್ಗೆ ತಾವೇನೂ ಯೋಚನೆ ಮಾಡಲಿಲ್ಲ ಅಂದರೆ ಈ ಬಜೆಟ್‌ನಲ್ಲಿ ನಾವು ರೈತ ಸಮೂದಾಯಕ್ಕೆ ದೊಡ್ಡ ಉಪಕಾರ ಮಾಡಿದ್ದೇವೆಂದು ಹೇಳಿರುವಂಥದ್ದು, ಆ ರೈತನಿಗೆ ಕೋ–ಆಪರೇಟೀವ್ ಲೋನನ್ನು ತೆಗೆದುಕೊಂಡಥವನಿಗೆ 6 ಪರ್‌ಸೆಂಟ್ ಬಡ್ಡಿಯಲ್ಲಿ ಮುಂದೆ ಬರುವ ದಿವಸಗಳಲ್ಲಿ ಸಾಲವನ್ನು ಕೊಡುತ್ತೇವೆ ಎಂಬುದನ್ನು ಬಿಟ್ಟರೆ ಈಗ ಸಾಲ ಮಾಡಿ ಹಣ್ಣಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ನಾವು ಬೆಳಿಗ್ಗೆ ಇದರ ಬಗ್ಗೆ ಲೆಕ್ಕ ಹಾಕಿದಾಗ 875 ಜನ ಆ ರೀತಿಯಾಗಿದ್ದಾರೆ, ಮತ್ತೆ ಅದು ಮರುಕಳಿಸಬಾರದು ಎನ್ನುವುದಕೋಸ್ಕರ ರೈತರಿಗೆ ವಿಶೇಷಬವಾದ ಪ್ಯಾಕೇಜನ್ನು, ಇಡೀ ರಾಜ್ಯದಲ್ಲಿ ರೈತರ ಪರವಾಗಿ ನೀವು ಮಾತನಾಡಿದ್ದೇನು? ಆದರೆ ಆದುದ್ದೇನು? ಇದೆಲ್ಲವನ್ನೂ ನೋಡಿದಾಗ ಬಹುಶಃ ನಾವೇನು ರಾಜ್ಯದ ಜನ ಏನೋ ಬದಲಾವಣೆಯಾಯಿತು, ಮಾನ್ಯ ದೇವೇಗೌಡರು ರೈತರ ಬಗ್ಗೆ ಕಳಕಳಿ ಇದ್ದಂಥವರು ಅಂಥವರ ಉಸ್ತುವಾರಿಯಲ್ಲಿ ಸರ್ಕಾರ ರಚನೆಯಾಗಿದೆ, ರೈತರ ಸಮೂದಾಯಕ್ಕೆ ಅನುಕೂಲವಾಗುತ್ತದೆ ಎಂದು ಕನಸನ್ನೇನು ಕಂಡಿದ್ದರು ಆ ಕನಸೆಲ್ಲಾ ಭಗ್ನವಾಗಿದೆ ಯಾವುದೇ ರೈತರಿಗೆ ಕಿಂಚಿತ್ತು ಅನುಕೂಲ ಮಾಡಿಕೊಡುವ ಪ್ರಯತ್ನ ಈ ಬಜೆಟ್‌ನಲ್ಲಿ ಆಗಲಿಲ್ಲವೆಂದು ನೋವಿನಿಂದ ಹೇಳುತ್ತೇನೆ ಇನ್ನೂ ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ ನಾನು ಬಜೆಟ್‌ನಲ್ಲಿ ಮಾತನಾಡತಕ್ಕ ಕಾಲದಲ್ಲಿ ಯಾವುದೇ ವಿಷಯಕ್ಕೂ ಉತ್ತರ ಕೊಡುವ ಪರಿಸ್ಥಿತಿಯಲ್ಲು ಇರಲಿಲ್ಲ, ನಿಮ್ಮದೇ ಆದಂಥ ಇನ್ನೊಂದು ಬಜೆಟ್‌ನ ಭಾಷಣವನ್ನು ಮಾಡಿ ಒಂದೇ ರೀತಿ ತಾವು ತಮ್ಮದೇ ಆದಂಥ ರೀತಿಯಲ್ಲಿ ಉತ್ತರ ಕೊಡಲು ಪ್ರಯತ್ನ ಮಾಡಿದಿರಿ, ಅದು ಎಲ್ಲಾ ಕಾಲದಲ್ಲೂ ನಡೆಯುವಂಥದ್ದು

**ಶ್ರೀ ಎಸ್ ಎಸ್ ಪಾಟೀಲ್** ಮಾನ್ಯ ಯಡಿಯೂರಪ್ಪನವರು ಬಹಳ ಹಿರಿಯ ಸದಸ್ಯರು ಬಹಳ ಅನುಭವ ಇದ್ದವರು ಅವರನ್ನು ಪ್ರಾಮಾಣಿಕವಾಗಿ ಕೇಳುತ್ತೇನೆ, ಮಾನ್ಯ ಯಡಿಯೂರಪ್ಪನವರೇ ಇಲ್ಲಿ ಬಂದು ಮುಖ್ಯಮಂತ್ರಿಯಾಗಿ ಕುಳಿತರೆ ಬಜೆಟ್‌ನಲ್ಲಿ ಇದಕ್ಕಿಂತ ಹೆಚ್ಚ ಏನಾದರೂ ಮಾಡಲು ಸಾಧ್ಯವಿದೆಯೇ? ದಯವಿಟ್ಟು impartial ಆಗಿ ಚರ್ಚೆ ಮಾಡೋಣ ತಾವು ಅಲ್ಲಿ ಮಾತನಾಡುವುದನ್ನು ಮಾತನಾಡಲೇ ಬೇಕಾಗುತ್ತದೆ ನಾನೂ ಅಲ್ಲಿ ಕುಳಿತು ಬೇಕಾದಂತೆ ಮಾತನಾಡಿದ್ದೇನೆ ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಈ ಎಂಟು ತಿಂಗಳಿನಲ್ಲಿ ಇವತ್ತು ಅವರು

ಮಾಡಿದ್ದಕ್ಕಿಂತ ಹೆಚ್ಚಿನದನ್ನು ಏನಾದರೂ ಮಾಡಿದರೆ ಇಲ್ಲಿ ಕಡಿಮೆ ಮಾಡುವುದು ಅಲ್ಲಿಗೆ ಹಾಕುವುದು ಇಷ್ಟು ತಾನೇ ನಡೆಯುತ್ತಿದೆಯೇ ಹೊರತು, ಅದನ್ನು ಅವರು ಮುಂದಿನ ವರ್ಷ ಮಾಡಬೇಕಾಗುತ್ತದೆ ಇವತ್ತು ನಾವು ರೈತರ ಬಡ್ಡಿ ಸಂಪೂರ್ಣವಾಗಿ ಮನ್ನಾ ಮಾಡಬೇಕು ಎಂದು ಹೇಳಿದ್ದೇವೆ ನಾವಂತೂ ಬೆನ್ನು ಹತ್ತಿದ್ದೇವೆ, ಅದನ್ನು ಬಿಡುವುದಿಲ್ಲ, ಆದರೆ ಇವತ್ತಿನ ಸ್ಥಿತಿಯಲ್ಲಿ ಇವತ್ತಿನ ಹಣಕಾಸಿನ ಸ್ಥಿತಿಯಲ್ಲಿ ಇನ್ನು ಎಂಟು ತಿಂಗಳಿನಲ್ಲಿ ಈಗ ಅವರು ಮಾಡಿದ್ದಕ್ಕಿಂತ ಹೆಚ್ಚಿನದು ಏನಾದರೂ ಮಾಡಲು ಸಾಧ್ಯವಿದೆಯೇ ಎಂಬ ಬಗ್ಗೆ ಸಲಹೆ ಮಾಡಿ ನೋಡೋಣ

**ಶ್ರೀ ಅರಗ ಜ್ಞಾನೇಂದ್ರ** ಮಾನ್ಯ ಪಾಟೀಲರು ಐದು ವರ್ಷ ಈಚೆಗೆ ಕುಳಿತಿದ್ದಾರೆ ನಾನು ಅವರ ಪ್ರತಿ ಬಜೆಟ್ ಭಾಷಣವನ್ನೂ ಕೇಳಿದ್ದೇನೆ ಒಂದು ದಿನ ಅವರು ಮುಖ್ಯ ಮಂತ್ರಿಗಳಿಗೆ ಶಿಫಾರಸ್ಸು ಮಾಡಲಿಲ್ಲ ಆಚೆಗೆ ಹೋಗಿದ್ದೇ ಹೋಗಿದ್ದು ಏನು ಪವಾಡ ಅದು? ಅವರು ಇಲ್ಲಿದ್ದಾಗ ಸುಳ್ಳು ಹೇಳುತ್ತಿದ್ದರೋ ಅಥವಾ ಅಲ್ಲಿದ್ದಾಗ ಸುಳ್ಳು ಹೇಳುತ್ತಿದ್ದಾರೋ ಗೊತ್ತಾಗುತ್ತಿಲ್ಲ

**ಶ್ರೀ ಸಿದ್ಧರಾಮಯ್ಯ** ಅವರು ಅಲ್ಲಿ ಇದ್ದಾಗ ಕೂಡ ಸತ್ಯ ಹೇಳುತ್ತಿದ್ದರು ಇಲ್ಲಿರುವಾಗ ಸತ್ಯ ಹೇಳುತ್ತಿದ್ದಾರೆ

**ಶ್ರೀ ಬಿ.ಎಸ್ ಯಡಿಯೂರಪ್ಪ** ಆನ್‌ಲೈನ್ ಲಾಟರಿ ಬಗ್ಗೆ ನಾವು ಪ್ರಸ್ತಾಪ ಮಾಡಿದೆವು ಈಗಾಗಲೇ ನಿಮಗೆ ಹೈಕೋರ್ಟಿನಿಂದ ನೋಟಿಸ್ ಬಂದಿದೆ ಇವತ್ತು ನಾನು ನಿಮಗೆ ಹೇಳುತ್ತೇನೆ, ಇದು ಕೇವಲ ಆನ್‌ಲೈನ್ ಲಾಟರಿ ರದ್ದು ಮಾಡಿದ್ದೇವೆಂದು ಹೇಳಿ ನಾವು ನಮ್ಮ ಕಾನ್‌ಸ್ಟಿಟ್ಯೂಯೆನ್ಸಿಗೆ ಹೋಗುವುದರೊಳಗಾಗಿ ಹೈಕೋರ್ಟಿನಿಂದ ಅದಕ್ಕೆ ತಡೆ ಆಜ್ಞೆ ಬಂದು, ನಮಗೆ ಬರುವಂತಹ ಆದಾಯವೂ ಇಲ್ಲದಂತಾಗಿ, ರಾಜ್ಯದ ಜನತೆ ಮುಂದೆ ನಾವು ಆನ್ ಲೈನ್ ಲಾಟರಿ ರದ್ದು ಮಾಡಿದ್ದೇವೆ, ಅದು ಕೋರ್ಟಿನಲ್ಲಿದೆ ಎಂದು ಹೇಳುವಂತಹ ತಂತ್ರಗಾರಿಕೆ ಮಾಡಿದ್ದೀರಿ ಆನ್‌ಲೈನ್ ಲಾಟರಿ ಮತ್ತು ಇತರೆ ಲಾಟರಿಗಳನ್ನು ರದ್ದು ಮಾಡುವುದಕ್ಕೆ ಬೇಕಾದಂತಹ ತಿದ್ದುಪಡಿಯನ್ನು ತಂದು, ಕಾನೂನಿನ ಚೌಕಟ್ಟಿನಲ್ಲಿ ಏನು ಮಾಡಬೇಕೆನ್ನುವ ಪ್ರಯತ್ನ ಮಾಡಬೇಕಾಗಿತ್ತು, ಅದನ್ನು ಮಾಡದೆ ಇನ್‌ಡೈರೆಕ್ಟಾಗಿ ಆನ್‌ಲೈನ್ ಲಾಟರಿ ಮಾಲೀಕನಿಗೆ ಕೋರ್ಟಿಗೆ ಹೋಗಿ ರಕ್ಷಣೆ ಪಡೆದುಕೊಳ್ಳುವುದಕ್ಕೆ ಏನು ಮಾಡಬೇಕಾಗಿತ್ತೋ ಅದನ್ನು ಮಾಡಿದ್ದೀರಿ ಅದಕ್ಕಾಗಿ ಈ ಆರ್ಡರ್ ವಾಪಸ್ ತೆಗೆದುಕೊಂಡು, ಇದನ್ನು ನಿಮ್ಮ ಲೀಗಲ್ ಎಕ್ಸ್‌ಪರ್ಟ್ಸ್ ಜೊತೆ ಮಾತನಾಡಿ ಆ ತಿದ್ದುಪಡಿ ತೆಗೆದುಕೊಂಡು ಬನ್ನಿ, ನಾವು 24 ಗಂಟೆಯಲ್ಲಿ ಅದನ್ನು ಪಾಸ್ ಮಾಡಿ ಕೊಡುತ್ತೇವೆ ಎಂದು ಹೇಳಿದ್ದೆ, ಅದನ್ನು ನೀವು ಬಹಳ ಹಗುರವಾಗಿ ತೆಗೆದುಕೊಂಡಿರಿ ಬಹುಶಃ ಎರಡು–ಮೂರು ದಿನಗಳಲ್ಲಿ ಅದರ ಬಗ್ಗೆ ಕೂಡ ಸ್ಪಷ್ಟವಾದ ಚಿತರ ಬರುವುದಿದೆ ಪಾಟೀಲರು ಹೇಲುತ್ತಿದ್ದರ, ಏನು ತಪ್ಪಿದೆ ಯಡಿಯೂರಪ್ಪನವರೇ ಎಂದು ಆನ್‌ಲೈನ್ ಲಾಟರಿ ಒಂದರಲ್ಲಿ ನಡೆದಂತಹ ಹಗಲು ದರೋಡೆ ಸರಿ ಮಾಡಿದ್ದರೆ, ಈ ರಾಜ್ಯದ ರೈತರ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಿ, ನೀವು ನೆಮ್ಮದಿಯಿಂದ ಸಾಲ ತೆಗೆದುಕೊಳ್ಳಿ ಆರು ಪರ್ಸೆಂಟ್ ಬಡ್ಡಿಗೆ ಸಾಲ ಕೊಡುತ್ತೇವೆಂದು ನಮಗೆ ಕೊಟ್ಟಿದ್ದರೆ ಮಾಡಿ ತೋರಿಸುತ್ತಿದ್ದೆವು ಎಕ್ಸೈಸ್‌ನಲ್ಲಿ ಎಷ್ಟು ಕೋಟಿ ರೂ.ಗಳು ಬರಬೇಕು? ಎಕ್ಸೈಸ್ ಏಕೆ ನೀವು ಹರಾಜು ಹಾಕಲಿಲ್ಲ? ಎರಡು ತಿಂಗಳು ಏಕೆ ಮುಂದೂಡುತ್ತಿದ್ದಿರಿ? ನೀವು ಹೇಳಿದ್ದು ಏನು ಮಾಡುತ್ತಿರುವುದು

ಏನು? ಸರ್ಕಾರದ ಬೊಕ್ಕಸಕ್ಕೆ ಬರುವ ಹಣ ಇಲ್ಲಿಯೇ ಇದ್ದರೂ, ಬಳ್ಳಾರಿ ಸುತ್ತಮುತ್ತ ಏನು ಕಬ್ಬಿಣದ ಅದಿರು ಕಳ್ಳ ಸಾಗಾಣಿಕೆ ಆಗುತ್ತಿದೆ, ಸುಮಾರು 150 ರಿಂದ 200 ಕೋಟಿ ರೂಪಾಯಿ ನಮಗೆ ಬರುವಂತಹ ರಾಯಲ್ಟಿ ತಪ್ಪಿ ಹೋಗುತ್ತಿದೆ ಎನ್ನುವುದರ ದಾಖಲೆಯನ್ನು ಅಂಕಿ ಅಂಶಗಳನ್ನು ನಾವು ಇಲ್ಲಿ ಒದಗಿಸುತ್ತೇವೆ ಮುಂದೆ ಬರುವ ವರ್ಷಗಳಲ್ಲಿ ನೀವು ಮಾಡಬಹುದು ನೀವು ಆ ಕಡೆ ಗಮನ ಕೊಡುವುದಿಲ್ಲವೆಂದು ನಾನು ಹೇಳುವುದಿಲ್ಲ ಸೋರಿ ಹೋಗುವುದನ್ನು ಸರಿ ಮಾಡಿದರೆ, ನಮ್ಮ ರಾಜ್ಯದ ಗೇಟುಗಳನ್ನು ಗಟ್ಟಿ ಮಾಡಿ ನಾವು ಏನು ತೆರಿಗೆಯನ್ನು ಗೊತ್ತು ಮಾಡಿದ್ದೇವೆ, ಅದನ್ನು ವಸೂಲು ಮಾಡುವುದರಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದರೆ, ಕನಿಷ್ಟ ಒಂದು ಸಾವಿರ ಕೋಟಿ ರೂಪಾಯಿ ಹೆಚ್ಚು ಆದಾಯವನ್ನು ನಮ್ಮ ಬೊಕ್ಕಸಕ್ಕೆ ತುಂಬುತ್ತೇವೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬಗ್ಗೆ ನಮ್ಮ ಕಡೆಯಿಂದ ಯಾವುದೇ ಪ್ರಯತ್ನವಾಗಲಿಲ್ಲ ಸೋರಿ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿರಿ ಆನ್‌ಲೈನ್ ಲಾಟರಿ ಜೊತೆ, ಎಕ್ಸೈಸ್ ಮಾಲೀಕರ ಜೊತೆ, ಬೇರೆ ವ್ಯವಹಾರಗಳ ಜೊತೆ ಉದಾರ ನೀತಿ ಹೊಂದಿದ್ದರಿಂದ ಇದರ ಪರಿಣಾಮವಾಗಿ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ ಎಂದು ಬಹುಶಃ ತಾವೇ ಗಾಬರಿಯಾಗುವ ರೀತಿಯಲ್ಲಿ ಹೇಳಿದ್ದೀರಿ 2003-04ರಲ್ಲಿ ವಿವಿಧ ಬಾಬುಗಳಿಗೆ ನಿಗದಿಪಡಿಸಿದ್ದ ರಾಜಸ್ವ ಕೊರತೆ 1318 44 ಕೋಟಿ ರೂ ಇತ್ತು ಆದರೆ ಈ ವರ್ಷದ ಪ್ರಾರಂಭದ ಶಿಲ್ಕು ಪರಿಶೀಲಿಸಿದರೆ ಕೇವಲ 400 79 ಕೋಟಿ ರೂ ಕೊರತೆ ತೋರಿಸುತ್ತದೆ ಈ ಮಾತನ್ನು ನೀವು ಹೇಳಿದ್ದೀರಿ ನನ್ನ ಪ್ರಕಾರ ಈ ಎರಡೂ ಅಂಶಗಳನ್ನು ನೋಡಿದರೆ, ಹಿಂದಿನ ಸಾಲಿನ 2003-04ರ ಬಜೆಟ್ ವಿವಿಧ ಬಾಬುಗಳಿಗ ನಿಗಧಿಪಡಿಸಿದ್ದ ಸುಮಾರು 918 ಕೋಟಿ ರೂ ವಿನಿಯೋಗವಾಗಿಲ್ಲ ಈ ಎಲ್ಲಾ ಅಂಕಿ ಅಂಶಗಳನ್ನು ನಾನು ಹೇಳುತ್ತಿಲ್ಲ, ನೀವು ಹೇಳಿದ್ದು ಎಲ್ಲ ಸತ್ಯ ಸಂಗತಿಗಳನ್ನು ಬಜೆಟ್‌ನಲ್ಲಿ ಹೇಳಿ ಅಂಕಿ ಅಂಶಗಳನ್ನೂ ಕೂಡ ಹೇಳಿದ್ದೀರಿ ನಾನು ಎಂದೂ ಅದರ ಬಗ್ಗೆ ಡಿಸ್ಪೂಟ್ ಮಾಡಿಲಿಲ್ಲ ಆ ಬಗ್ಗೆ ಮಾತನಾಡಬೇಕಾದರೆ ನಾನು ಹೇಳಿದ್ದೇನೆ ಈ ರೀತಿ ಪರಿಸ್ಥಿತಿ ಇರುವಂತಹ ಈ ಸಂದರ್ಭದಲ್ಲಿ ನೀವು ಜನರಿಗೆ ಕೊಟ್ಟಂತಹ ಯಾವುದೇ ಭರವಸೆಯನ್ನು ಈಡೇರಿಸಲಿಲ್ಲ ಕಾಂಗ್ರೆಸ್‌ನವರೂ ಮತ್ತು ಜೆಡಿಎಸ್‌ನವರೂ ಒಟ್ಟಿಗೆ ಅಧಿಕಾರ ನಡೆಸುವಂತಹ ಕಾಲದಲ್ಲಿ ಈ ರಾಜ್ಯದ ನಿರುದ್ಯೋಗಿ ಯುವಕರ ಬಗ್ಗೆ ನೀವು ಕಳಕಳಿ ವ್ಯಕ್ತಪಡಿಸಿ 500 ರೂ ಭತ್ಯೆ ಕೊಡುತ್ತೇವೆಂದು ಭರವಸೆ ಕೊಟ್ಟು ಟಾಮ್ ಟಾಮ್ ಹೊಡೆದುಕೊಂಡು ಬಂದು ಆ ಯುವಕರಿಂದ ಓಟು ತೆಗೆದುಕೊಂಡು ನೀವು ಅಧಿಕಾರಕ್ಕೆ ಬಂದಿರಿ ಹಾಗಾದರೆ ಏತಕ್ಕೋಸ್ಕರ ನೀವು ಅದನ್ನು ಹೇಳಿದಿರಿ? ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳಿದಿರೋ ಅಥವಾ ಬೇಡವೆಂದು ಹೇಳಿದಿರೋ ನೇಕಾರನ ಸಾಲದ ಮೇಲೆ ಸಂಪೂರ್ಣವಾದ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ನೇಕಾರನ ಓಟು ತೆಗೆದುಕೊಂಡಿರಿ ಅದನ್ನು ಮಾಡುವುದಕ್ಕೆ ನೀವು ಮಾಡಿದಂತಹ ಪ್ರಯತ್ನವೇನು? ಗುಡಿ ಹಾಗೂ ಸಣ್ಣ ಕೈಗಾರಿಕೆಗಳನ್ನೂ ಸ್ಥಾಪಿಸಲು ಮುಂದೆ ಬರುವಂತಹ ಗ್ರಾಮೀಣ ಯುವಕರಿಗೆ ಮಂಜೂರಾತಿಯಾದ ಯೋಜನೆಯ ಮೊತ್ತದ 25ರಷ್ಟು ಮೊತ್ತವನ್ನು ಸರ್ಕಾರವೇ ಭರಿಸುವುದಕ್ಕಾಗಿ ಉದ್ಯೋಗ ನಿಧಿ ಸ್ಥಾಪನೆ ಎಲ್ಲಿ ಹೋಯಿತು? ಸ್ತ್ರೀ ಶಕ್ತಿ ಯೋಜನೆಗೆ ಅನುದಾನ ಹೆಚ್ಚು ಮಾಡುತ್ತೇವೆಂದು ಹೇಳಿದಿರಿ ಏಕೆ ಮಾಡಲಿಲ್ಲ? ನೀವು 10ನೇ ತರಗತಿಯವರೆಗೆ ಉಚಿತವಾಗಿ

ಮಧ್ಯಾಹ್ನದ ಬಿಸಿ ಊಟ ಕೊಡುತ್ತೇವೆಂದು ಹೇಳಿದಿರಿ,ಯಡಿಯೂರಪ್ಪನವರೇ, ಈಗ ಆ ಕಾರ್ಯಕ್ರಮ ಐದು ವರ್ಷದ್ದು ಎಂದು ಹೇಳಿದಿರಿ ಅದನ್ನು ಪೂರ್ತಿ ಮಾಡಲಿಲ್ಲ ಅರಣ್ಯ ಒತ್ತುವರಿಯನ್ನು ಸಕ್ರಮ ಮಾಡುತ್ತೇವೆಂದು ಭರವಸೆ ಕೊಟ್ಟಿರಿ, ನಿನ್ನೆ ದಿವಸ ಆ ಮನೆಯಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಉತ್ತರ ಕೊಡುವಾಗ ಇಲ್ಲ ಅದನ್ನು ಖಾಯಂ ಮಾಡುವುದಕಾಗುವುದಿಲ್ಲವೆಂದು ಹೇಳಿದ್ದು ಪತ್ರಿಕೆಗಳಲ್ಲಿ ಬಂದಿದೆ ಚುನಾವಣಾ ಪ್ರಣಾಳಿಕೆಯಲ್ಲಿ ಅದನ್ನು ಖಾಯಂ ಮಾಡುತ್ತೇವೆಂದು ಭರವಸೆ ಕೊಡುತ್ತೀರಿ, ಗ್ರಾಮೀಣ ಪ್ರದೇಶದ ಕಸುಬುದಾರರಾದ ಬಡಗಿ, ಕಮ್ಮಾರ, ಚಮ್ಮಾರ, ಮೇದಾರ, ಕುಂಬಾರ, ನೇಕಾರ, ಗಾಣಿಗ ಮೊದಲಾದ ವೃತ್ತಿಪರ ಕುಟುಂಬಗಳಿಗೆ ಅವರ ಅಭ್ಯುದಯಕ್ಕೆ ಬೇಕಾದ ಉಪಕರಣಗಳನ್ನು ಮುಕ್ತಟೆಯಾಗಿ ಕೊಡುವುದು ನಿಮ್ಮ ಕಾರ್ಯಕ್ರಮದಲ್ಲಿ ಏನಿದೆ? ಹಳದಿ ಕಾರ್ಡಿನವರಿಗೆ ಉಚಿತವಾದ ಸೀರೆ ಕೊಡುತ್ತೇವೆಂದು ಹೇಳಿದಿರಿ, ಎಲ್ಲಿದೆ ಸೀರೆ? ಚುನಾವಣಾ ಸಮಯದಲ್ಲಿ ಮನ ಬಂದಂತೆ ಈ ರೀತಿ ಭರವಸೆಗಳನ್ನು ಕೊಟ್ಟು ಜನರಿಗೆ ವಂಚನೆ ಮಾಡುವಂತಹ ಕೆಲಸವನ್ನು ಮಾಡಿದ್ದೀರಿ ಬಹುಶಃ ಈ ರೀತಿ ತಾವು ಬಹಳ ಕಾಲ ಸುಳ್ಳು ಹೇಳಿ ಸತ್ಯಕ್ಕೆ ದೂರವಾದ ಸಂಗತಿಗಳನ್ನು ಹೇಳಿ ಆಡಳಿತ ನಡೆಸುವುದಕ್ಕೆ ಸಾಧ್ಯವಿಲ್ಲ ಈಗಲಾದರೂ ನಿಮ್ಮ ಅಂಕಿ ಅಂಶಗಳನ್ನು ಸರಿಪಡಿಸಿಕೊಂಡು ನೀವು ಏನು ಭರವಸೆ ಕೊಟ್ಟಿದ್ದೀರಿ ಆ ಭರವಸೆಗಳನ್ನು ಈಡೇರಿಸಬೇಕು, ವಿಶೇಷವಾಗಿ ನೀವೇನು ಪ್ಯಾಕೇಜ್‌ಗಳನ್ನು ಘೋಷಣೆ ಮಾಡಿದ್ದೀರಿ, ನಾನು ಅದನ್ನು ಈಗಾಗಲೇ ಹೇಳಿದ್ದೇನೆ ಮತ್ತೆ ಅದನ್ನು ರಿಪೀಟ್ ಮಾಡುವುದಿಲ್ಲ ಒಂದೂ ಕೂಡ ಕಾರ್ಯರೂಪಕ್ಕೆ ಬರಲಿಲ್ಲ ಬಾಗಲಕೋಟೆ ನವನಗರ ನಿರ್ಮಾಣದ ಬಗ್ಗೆ ಇರಬಹುದು, ಕೊಡಗು ಅಭಿವೃದ್ಧಿ ಬಗ್ಗೆ ಇರಬಹುದು, ರೈತರ ಪ್ಯಾಕೇಜ್ ಇರಬಹುದು, ಯಾವುದೂ ಸಹ ಕಾರ್ಯರೂಪಕ್ಕೆ ಬರಲಿಲ್ಲ ಬಳ್ಳಾರಿಯಲ್ಲಿ ಶ್ರೀಮತಿ ಸೋನಿಯಾಗಾಂಧಿಯವರು ಚುನಾವಣೆಗೆ ನಿಂತಾಗ ಘೋಷಣೆ ಮಾಡಿದ್ದು ಅದು ಇವತ್ತಿಗೂ ಸಹ ಕಾಗದದ ಮೇಲೆಯೇ ಇದೆ 25 ಪರ್ಸೆಂಟ್ ಪ್ರಗತಿಯಾಗಲಿಲ್ಲ ಈ ರೀತಿ ಹಿಂದಿನ ಸರ್ಕಾರಗಳು ಅನೇಕ ಘೋಷಣೆಗಳನ್ನು ಮಾಡಿದ್ದವು. ಆದರೆ ಇವತ್ತು ನೀವೇನು ಭರವಸೆ ಕೊಟ್ಟು ಬಂದಿರಿ ಅದನ್ನು ಕಾರ್ಯರೂಪಕ್ಕೆ ತರದೆ ಇರುವಂತಹ ಬಜೆಟ್ಟನ್ನು ಮಂಡನೆ ಮಾಡಿದ್ದೀರಿ ಈಗಲಾದರೂ ನಾನು ನಿಮಗೆ ಒತ್ತಾಯ ಮಾಡುವುದು ಇಷ್ಟೆ, ದಯಮಾಡಿ ಆಗಸ್ಟ್ 15ರ ಒಳಗಾಗಿ ರೈತರಿಗೆ ಬೆಳೆ ವಿಮೆ ಕೊಡುವಂತಹ ವ್ಯವಸ್ಥೆಯಾಗಬೇಕು ಆರು ಪರ್ಸೆಂಟ್ ಬಡ್ಡಿಗೆ ಅಗತ್ಯವಾಗಿರುವಂತಹ ಹಣವನ್ನು ನೀವು ಕೊಡಬೇಕಾದರೆ, ನಿಮಗೆ ಬಹಳ ಸ್ಪಷ್ಟವಾಗಿ ಗೊತ್ತು ರೈತ ಸಾಲ ಕಟ್ಟಿದ ಮೇಲೆ ತಾನೇ ನೀವು ಆರು ಪರ್ಸೆಂಟ್ ಬಡ್ಡಿ ಕೊಡುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಸಾಲ ಕಟ್ಟುವುದಕ್ಕೆ ಅವಧಿ ವಿಸ್ತರಣೆ ಮಾಡಿ ಅವನಿಗೆ ಸಂಪೂರ್ಣ ಬಡ್ಡಿ ಮನ್ನಾ ಮಾಡುತ್ತೇವೆಂದು ನೀವು ಘೋಷಣೆ ಮಾಡದೆ ಇದ್ದರೆ ನೀವು ಆರು ಪರ್ಸೆಂಟ್ ಅಲ್ಲ, ಮೂರು ಪರ್ಸೆಂಟ್‌ಗೆ ಸಾಲ ಕೊಡುತ್ತೇವೆಂದರೂ ಯಾರೂ ಮುಂದೆ ಬರುವುದಿಲ್ಲ ಇದರಿಂದ ಯಾವ ರೈತರಿಗೆ ಉಪಯೋಗವಾಗುತ್ತದೆ? ಇದನ್ನು ತಾವು ಸರಿಯಾದ ರೀತಿಯಲ್ಲಿ ಪುನರ್ ಪರಿಶೀಲನೆ ಮಾಡಿ ರೈತರ ನೆರವಿಗೆ ತಾವು ಬರಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ

**ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)** ಸನ್ಮಾನ್ಯ ಅಧ್ಯಕ್ಷರೆ, ನಾನು ಎರಡೇ ಎರಡು ಡಿಮ್ಯಾಂಡ್‌ಗಳ ಬಗ್ಗೆ ಹೇಳುತ್ತೇನೆ ಒಂದು ಡಿಮ್ಯಾಂಡ್ ನಂ 3ರಲ್ಲಿ ಸನ್ಮಾನ್ಯ ಅರ್ಥ ಸಚಿವರು ಏನು ಕೇಳಿದ್ದಾರೆ, rentals and administrative expensesಗೆ ಸಪ್ಲಿಮೆಂಟರಿಯ ್ಲಿ

ಕೇಳುವ ಸ್ಥಿತಿಗೆ ತಾವು ಹೋಗಬಾರದು ಇದು ಯಾವುದೂ ಹೊಸದಾಗಿ ಬಂದಿಲ್ಲ ಇದು ನಿಮ್ಮದೇ ಇಲಾಖೆ ಕೆಳಗಡೆ ನಡೆಯುತ್ತಿರುವುದು ಒಂದು ಕಡೆ ನೀವು ನಾವು ಎಕ್ಸ್‌ಪೆಂಡಿಚರ್ ಕಡಿಮೆ ಮಾಡುತ್ತೇವೆಂದು ಹೇಳುತ್ತೀರಿ, ಇನ್ನೊಂದು ಕಡೆ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ರೆಂಟಲ್ ಕೊಡುವುದಕ್ಕೆ ಮತ್ತೊಂದಕ್ಕೆಲ್ಲಾ ನೀವು ಡಿಮಾಂಡ್ ಕೇಳುತ್ತೀರಿ ಎಂದರೆ, ನಿಮ್ಮ ನೀತಿ ನಿಜವೇ ಎಂದು ನಾವು ಪ್ರಶ್ನೆ ಮಾಡಿಕೊಳ್ಳಬೇಕಾಗುತ್ತದೆ ಎರಡನೆಯದು, ಡಿಮಾಂಡ್ ನಂಬರ್ 17ರಲ್ಲಿ inadequate budget provision a sum of Rs 500 00 lakhs has been released through Contigency Fund, which is required to be recouped ಅದರಲ್ಲಿ ಎಜ್ಯುಕೇಷನ್‌ಗೆ ಏತಕ್ಕೆ ಮಾಡಿದಿರಿ ಎಂದು ಹೇಳುವುದಿಲ್ಲ ಅದರ ಎಕ್ಸ್‌ಪೆಂಡಿಚರ್‌ಗೆ 500 ಲಕ್ಷ ರೂ.ಗಳು ಎಂದು ತಾವು ಹೇಳುತ್ತಿದ್ದೀರಿ ಎಜ್ಯುಕೇಷನ್‌ನಂಥ ದೊಡ್ಡ ಡಿಪಾರ್ಟ್‌ಮೆಂಟ್‌ಗೆ ಎಷ್ಟು ಇಟ್ಟಿದ್ದೀರಿ? 4,41,193,48 ಲಕ್ಷ ರೂ ಗಳನ್ನು ಇಟ್ಟಿರುವ ಕಡೆ, 500 ಲಕ್ಷ ರೂ ಗಳನ್ನು ನೀವು ಏಕೆ ಅದರ್ ಎಕ್ಸ್‌ಪೆಂಡಿಚರ್‌ನಲ್ಲಿ ಕೇಳಿದ್ದೀರಿ? ಇದು ಒಂದು ಸರ್ಕಾರ ಅಲ್ಲವೇ? we have every right to know, what is that other expenditure required to be sanctioned in the supplementary estimates ಈ ಡೀಟೇಲ್ಸ್ ತಾವು ಸ್ವಲ್ಪ ನೋಡಿ ಉಳಿದದ್ದನ್ನು ನಾವು ಅನುಮೋದನೆ ಮಾಡುತ್ತೇವೆ ಅಧ್ಯಕ್ಷರೆ, ಅವರು ಅಪ್ರೂವ್ ಮಾಡಿಕೊಳ್ಳಬಹುದು

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕ ಅಭಿವೃದ್ಧಿ ಆಯುಕ್ತರ ಕಛೇರಿ ಮತ್ತು ನೌಕರರ ಸಂಘದ ವೆಚ್ಚಕ್ಕಾಗಿ 35 ಲಕ್ಷ ರೂಪಾಯಿಗಳು ಎಂದು ಏನಿದೆ ಅದನ್ನು ತಾವು ಸೇರಿಸಿರಲಿಲ್ಲ, ಇದರಲ್ಲಿ ತಾವು ಹೇಳಿದ್ದೀರಿ ಅಭಿಯಾನ ಸಂಖ್ಯೆ 26ರಲ್ಲಿ ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಮತ್ತು ಬೆಳವಣಿಗೆ ಬಗ್ಗೆ ತಾವು ತಮ್ಮ ಆಯವ್ಯಯದಲ್ಲಿ ಹೇಳಿದ್ದೀರಿ ಕಾರ್ಯಾಲಯಗಳಿಗೆ ಮತ್ತು ಸಂಬಳ ಕೊಡುವುದಕ್ಕೆ ಹಣ ಅದರಲ್ಲಿ ಒದಗಿಸಿಲ್ಲ ಎನ್ನುವ ಪ್ರಶ್ನೆ ಬಂದಾಗ ನನಗನ್ನಿಸುತ್ತದೆ, ಇದು ಎಷ್ಟರ ಮಟ್ಟಿಗೆ ಉತ್ತರ ಕರ್ನಾಟಕದ ಸಮಗ್ರ ಬೆಳವಣಿಗೆ ಬಗ್ಗೆ ತಾವು ಕಾಲಮಿತಿಯನ್ನು ಹಾಕಿಕೊಂಡು ಆ ಬೆಳವಣಿಗೆಗಾಗಿ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಮಾಡಿದ್ದೀರಿ ಡಾ ನಂಜುಂಡಪ್ಪ ವರದಿಯ ಆಧಾರದ ಮೇಲೆ ತಮ್ಮ ಆಯವ್ಯಯದಲ್ಲಿ ವರ್ಷಕ್ಕೆ ನಾವು ಇಷ್ಟು ಖರ್ಚು ಮಾಡುತ್ತೇವೆಂದು ಎಲ್ಲಿಯೂ ನೀವು ಹೇಳಿಲ್ಲ ನಿಮ್ಮ ಆಯವ್ಯಯವನ್ನು ನಾನು ಹೊಗಳಿದ್ದೇನೆ ಅದು ತಕ್ಷಣ ಸರಿಯಿಲ್ಲವೆಂದು ಹೇಳುವುದಕ್ಕೆ ನಾನು ತಯಾರಿಲ್ಲ ವಸ್ತು ಸ್ಥಿತಿಯನ್ನು ನಾನು ಮಾತನಾಡುವಾಗ ಉತ್ತರ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಡಾ ನಂಜುಂಡಪ್ಪ ವರದಿ ಬಗ್ಗೆ ಪ್ರತಿ ವರ್ಷ ನಾವು ಏನು ಮಾಡುತ್ತೇವೆ, ಎನ್ನುವ ಒಂದು ಚಿತ್ರ ಇರಬೇಕು ಆ ವರದಿ ಎಂದರೆ ಬರೀ ಉತ್ತರ ಕರ್ನಾಟಕವಲ್ಲ ಚಾಮರಾಜನಗರ ಬರುತ್ತದೆ, ಗುಂಡ್ಲುಪೇಟೆ ಬರುತ್ತದೆ ಮೈಸೂರು ಜಿಲ್ಲೆಯೂ ಬರುತ್ತದೆ ಹಿಂದುಳಿದಿರತಕ್ಕಂತಹ ಎಲ್ಲಾ ಪ್ರದೇಶಗಳು ಬರುತ್ತವೆ ಅದರ ಸಮಗ್ರ ಅಭಿವೃದ್ಧಿ ಬಗ್ಗೆ ನಾವು ಕಾಲಮಿತಿಯನ್ನು ಹಾಕಿಕೊಂಡು ಇದಕ್ಕಾಗಿ ಇಷ್ಟು ಹಣವನ್ನು ನಾವು ಖರ್ಚು ಮಾಡುತ್ತಿದ್ದೇವೆಂದು ಹೇಳಿದರೆ ಆ ವರದಿಯನ್ನು ಕೊಟ್ಟಿದ್ದಕ್ಕೂ ಒಂದು ಬೆಲೆ ಬರುತ್ತದೆ ಆ ವರದಿಯುನ್ನು ಆತುರದಿಂದ ನಾವು ಪ್ರೀತಿವಿಶ್ವಾಸಪೂರ್ವಕವಾಗಿ ತಯಾರಿಸಿ ಕೊಟ್ಟಿರುವಾಗ ಆ ವರದಿಯನ್ನೇ ನೀವು ಮೂಲೆಗುಂಪು ಮಾಡಿದರೆ ಅದಕ್ಕೆ ಯಾವ ಬೆಲೆಯೂ ಸಿಗುವುಲ್ಲ ಈ ರೀತಿಯಾದರೆ ಇನ್ನು ಮುಂದೆ ಯಾರೇ

ವರದಿಗಳನ್ನು ಕೊಟ್ಟರೂ ಅದಕ್ಕೆ ಬೆಲೆ ಇರುವುದಿಲ್ಲ ವರದಿ ತಯಾರಿಸಲು ಸಮಗ್ರವಾಗಿ ಅಧ್ಯಯನ ಮಾಡಿ ಉತ್ತರ ಕರ್ನಾಟಕ, ಹೈದ್ರಾಬಾದ್-ಕರ್ನಾಟಕ, ಹಿಂದುಳಿದ ಜಿಲ್ಲೆಗಳು, ಹಿಂದುಳಿದ ತಾಲ್ಲೂಕುಗಳ ಬಗ್ಗೆ ಸಮಗ್ರವಾದ ವರದಿಯನ್ನು ಕೊಟ್ಟಿರುವಾಗ ಇವುಗಳ ಅಭಿವೃದ್ಧಿ ಬಗ್ಗೆ ಕಾಲಮಿತಿಯನ್ನು ನೀವು ಹಾಕಿಕೊಳ್ಳಬೇಕು ನೀವು ಬೇಕಾದರೆ ಇದಕ್ಕಾಗಿ ಪಂಚವಾರ್ಷಿಕ ಯೋಜನೆ ಅಥವಾ ದಶವಾರ್ಷಿಕ ಯೋಜನೆ, ಇವುಗಳಲ್ಲಿ ಯಾವುದಾದರೊಂದು ಯೋಜನೆ ಹಾಕಿ ಈ ವರ್ಷ ಇಷ್ಟು ಹಣ ಇಡುತ್ತೇವೆ, ಎನ್ನುವ ರೀತಿಯಲ್ಲಿ ತಾವು ಯೋಜನೆಯನ್ನು ಬಜೆಟ್‌ನಲ್ಲಿ ತೋರಿಸಿದ್ದರೆ, ಜನರಿಗೆ ಎಲ್ಲೋ ಒಂದು ಕಡೆ ಸಂತೋಷವಾಗಿ ಸರ್ಕಾರ ಪರವಾಗಿಲ್ಲ ಈ ವರ್ಷ ನಮ್ಮ ಭಾಗದ ಅಭಿವೃದ್ಧಿಗೆ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ, ಸರ್ಕಾರಕ್ಕೆ ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಕಾಳಜಿ ಇದೆ ಎನ್ನುವ ಭಾವನೆ ಬರುತ್ತಿತ್ತು ಆದರೆ ಆ ಬಗ್ಗೆ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದಂತೆ ಇದರಲ್ಲಿ ಬಂದಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ ಇನ್ನು ಹೊಸ ಜಿಲ್ಲೆಗಳ ಬಗ್ಗೆ ನಿಮ್ಮ ಆಯವ್ಯಯದಲ್ಲಿ ಹೇಳಿಯೇ ಇಲ್ಲ ನೀವು ಆವೊತ್ತು ಒಜೆಟ್ ಮೇಲೆ ಉತ್ತರ ಕೊಡುವಾಗ ಶಾಸಕರ ನಿಧಿಗೆ 50 ಲಕ್ಷ ರೂ ಗಳನ್ನು ಸರ್ಕಾರ ಕೊಡಲೇಬೇಕೆಂದು ಹೇಳುತ್ತಾ ಸದನದ ಬಾವಿಯಲ್ಲಿ ಮೂರುವರೆ ಗಂಟೆಗೆ ಹೋಗಿ ಧರಣಿ ಕುಳಿತುಬಿಟ್ಟೆ ಎಲ್ಲ ಶಾಸಕರಿಗೂ ಕೊಡಬೇಕೆಂದು ಎಲ್ಲ ಶಾಸಕರ ಪರವಾಗಿ ನಾನು ಈ ಧರಣಿಯನ್ನು ಮಾಡಲು ಸದನದ ಬಾವಿಯಲ್ಲಿ ಕುಳಿತುಕೊಂಡಿದ್ದೆ ಆದರೆ ನಾನು ಮೊದಲು ಏನು ಭಾಷಣ ಮಾಡಿದ್ದೆ ಅದಕ್ಕೆ ನೀವು ಉತ್ತರವನ್ನೇ ಕೊಡಲಿಲ್ಲ ಸದನದ ಬಾವಿಯಲ್ಲಿ ಕುಳಿತುಕೊಂಡು ನಾನು ನಿಮಗೆ ಉತ್ತರ ಕೊಡಬೇಕು ಎಂದು ಕೇಳುವುದಕ್ಕೂ ನಿಯಮದ ಪ್ರಕಾರ ಬರುವುದಿಲ್ಲ ಆದರೆ ನಾನು ಬಹುಶಃ ಕೇಳಿದ ಎಲ್ಲಾ ಪ್ರಶ್ನೆಗೂ ಉತ್ತರ ಕೊಡಲೇ ಇಲ್ಲ ಅದು ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಇರಬಹುದು ಮತ್ತೊಂದಕ್ಕೆ ಇರಬಹುದು, ಒಂದಕ್ಕೂ ತಾವು ಉತ್ತರ ಕೊಡಲಿಲ್ಲ ಚಾಮರಾಜನಗರ ಸೇರಿದಂತೆ ಒಟ್ಟು ಏಳು ಜಿಲ್ಲೆಗಳು ಹೊಸ ಜಿಲ್ಲೆಗಳಾಗಿವೆ. ಈ ಹೊಸ ಜಿಲ್ಲೆಗಳು ಇನ್ನೂ ತಾಲ್ಲೂಕು ಪರಿಸ್ಥಿತಿಯನ್ನೇ ಕಾಣುತ್ತಿವೆ. ಹೊಸ ಜಿಲ್ಲೆಗಳಾಗಿ ಏಳು ವರ್ಷಗಳಾಯಿತು ಈ ಏಳು ಹೊಸ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ಚೈತನ್ಯಪೂರ್ಣವಾದಂಥ ಒಂದು ಯೋಜನೆಯನ್ನು ತಾವು ತಯಾರು ಮಾಡಬೇಕಾಗಿತ್ತು ನಿಮ್ಮ ಕಾಲದಲ್ಲಿ ಇದು ಆಗಬೇಕು ಏಳು ಹೊಸ ಜಿಲ್ಲೆಗಳನ್ನು ಮಾಡಿದ್ದ ಮಾನ್ಯ ಜೆ ಹೆಚ್ ಪಟೇಲರನ್ನು ನಾವು ಇಂದು ನೆನಸಿಕೊಳ್ಳಬೇಕಾಗಿದೆ ನಾವು ಮತ್ತು ನೀವುಗಳೆಲ್ಲರೂ ಒಟ್ಟಿಗೆ ಸೇರಿ ಶ್ರೀಮಾನ್ ಜೆ ಹೆಚ್ ಪಟೇಲರ ಕಾಲದಲ್ಲಿ ಇದನ್ನು ಮಾಡಿದ್ದು ಇತಿಹಾಸದಲ್ಲಿ ಉಳಿಯುತ್ತದೆ ಹೀಗಿರುವಾಗ ಆ ಏಳು ಜಿಲ್ಲೆಗಳ ಸಮಗ್ರ ಅಭಿವೃದ್ಧಿಗೆ ಇಷ್ಟು ಕೆಲಸವನ್ನು ಈ ವರ್ಷ ಮಾಡುತ್ತೇವೆ ಎಂದು ನೀವು ಯೋಜನೆ ಮಾಡದೇ ಕೇವಲ ಅವುಗಳನ್ನು ಇನ್ನು ತಾಲ್ಲೂಕು ಮಟ್ಟದಲ್ಲಿಯೇ ಕಾಣುವುದಾದರೆ ಈ ಹೊಸ ಜಿಲ್ಲೆಗಳ ರಚನೆಯನ್ನಾದರೂ ಏತಕ್ಕಾಗಿ ಮಾಡಬೇಕಾಗಿತ್ತು? ಈ ರೀತಿಯೇ ಕಾಣುವಂತಿದ್ದರೆ ಖಂಡಿತ ಹೊಸ ಜಿಲ್ಲೆಗಳ ರಚನೆಯನ್ನೇ ಮಾಡುವುದು ಬೇಕಾಗಿರಲಿಲ್ಲ ಹೊಸ ಜಿಲ್ಲೆಗಳ ನಿರ್ಮಾಣ ಮಾಡಿದ ಮೇಲೆ ಬೇರೆ ಜಿಲ್ಲೆಗಳಿಗೆ ಇವುಗಳನ್ನು ಹೋಲಿಸಿ ನೋಡಿದರೆ ಇವುಗಳ ಇನ್ನೂ ತಾಲ್ಲೂಕು ಮಟ್ಟವಲ್ಲ, ಇನ್ನೂ ಹೋಬಳಿ ಮಟ್ಟದಲ್ಲಿಯೇ ಕಾಣುತ್ತಿವೆ. ಎಲ್ಲೋ ಒಂದೆರಡು ಜಿಲ್ಲೆಗಳು ನನಗನ್ನಿಸಿದ ಮಟ್ಟಿಗೆ ಚೆನ್ನಾಗಿ ಕಾಣುತ್ತಿವೆ ಇನ್ನು ಮಿಕ್ಕವುಗಳಲ್ಲಿ ಕೊಪ್ಪಳ ಬಹಳ ಹಿಂದುಳಿದಿರತಕ್ಕಂಥದ್ದು ಆಗಿದೆ ಹಾಗೆಯೇ ಚಾಮರಾಜನಗರ ಕೂಡ ಹಿಂದುಳಿದಿದೆ, ಜೊತೆಗೆ ಇದು ಗಡಿ ಪ್ರದೇಶವೂ ಕೂಡ

ಆಗಿದೆ ಈ ಪ್ರದೇಶದ ಅಭಿವೃದ್ಧಿಗೆ ನಿಮ್ಮ ಪ್ರಾಮಾಣಿಕವಾದ ಚಿಂತನೆ, ಇದಕ್ಕಾಗಿ ಯೋಜನೆ ಆಗಬೇಕಾಗಿತ್ತು ಆದರೆ ಅದು ನಿಮ್ಮಿಂದ ಆಗಲಿಲ್ಲ ಜನರು ಏನು ಹೇಳುತ್ತಾರೆಂದರ, ಏನಪ್ಪಾ ಹೊಸ ಜಿಲ್ಲೆಗಳೇನೋ ಆಯಿತು, ಆದರೆ ಉತ್ತಮವಾದ ಒಳ್ಳೆಯ ಒಂದು ಆಸ್ಪತ್ರೆ ಬರಲಿಲ್ಲ, ಜಿಲ್ಲಾ ಕಛೇರಿಗಳು ಬರಲಿಲ್ಲ, ಎನ್ನುತ್ತಾರೆ ಈ ಚಾಮರಾಜನಗರಕ್ಕೆ ಬರತಕ್ಕಂಥ ಎಲ್ಲ ಅಧಿಕಾರಿಗಳ ಮನೆ ಇರುವುದು ಮೈಸೂರಿನಲ್ಲಿ ಉಪ ಮುಖ್ಯಮಂತ್ರಿಗಳು ಇದನ್ನು ಗಮನಿಸಬೇಕು ಚಾಮರಾಜನಗರಕ್ಕೆ ಬರುವ ಎಲ್ಲಾ ಅಧಿಕಾರಿಗಳು ಮೈಸೂರಿನಿಂದ ಬೆಳಿಗ್ಗೆ 11 ಗಂಟೆಗೆ ರೈಲಿನಲ್ಲಿ ಬರುತ್ತಾರೆ ಮತ್ತೆ ಸಂಜೆ 6 ಗಂಟೆಗೆ ಹೊರಟುಹೋಗುತ್ತಾರೆ ಇದನ್ನೇ ಜಿಲ್ಲೆ ಎಂದು ಹೇಳಿದರೆ ಯಾವುದೇ ರೀತಿಯ ಶಕ್ತಿ ಆ ಜಿಲ್ಲೆಗೆ ಬರುವುದಿಲ್ಲ ಇನ್ನು ಕಾನೂನು ಸುವ್ಯವಸ್ಥೆಯನ್ನು ಸಮಗ್ರವಾಗಿ ಕಾಪಾಡಿ ಜಾರಿಗೊಳಿಸಬೇಕಾದವರು ಪೊಲೀಸ್ ಇಲಾಖೆಯವರು ಆಯವ್ಯದ ಮೇಲೆ ಮಾತನಾಡುವಾಗ ಆ ಇಲಾಖೆ ಬಗ್ಗೆ ಮಾತನಾಡಲಿಲ್ಲವಾದ ಕಾರಣ ಈಗ ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಕಾನೂನನ್ನು ಸಮಗ್ರವಾಗಿ ಜಾರಿಗೊಳಿಸುವ ಪೊಲೀಸ್ ಇಲಾಖೆಯ ಆಧುನೀಕರಣಕ್ಕೆ ಯಾವುದೇ ವ್ಯವಸ್ಥೆ ಆಗಿಲ್ಲ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ ಸುಮಾರು ಹತ್ತು ವರ್ಷಗಳ ಹಿಂದೆ ಧರ್ಮವೀರ ವರದಿ ಬಂತು ಈ ಉತ್ತಮವಾದ ಧರ್ಮವೀರ ವರದಿಯಲ್ಲಿ ಪೊಲೀಸ್ ಇಲಾಖೆ ಹೇಗಿರಬೇಕು, ಪೊಲೀಸ್ ಕಾನ್ಸ್‌ಟೇಬಲ್ ಹೇಗಿರಬೇಕು, ದಫೇದಾರ್ ಹೇಗಿರಬೇಕು, ಪೊಲೀಸ್ ಸ್ಟೇಶನ್ ಹೇಗಿರಬೇಕು ಹೀಗೆ ಪ್ರತಿಯೊಂದರ ಬಗ್ಗೆಯೂ ಸಮಗ್ರವಾಗಿ ಚಿಂತನೆಯನ್ನು ಮಾಡಲಾಗಿದೆ ಯಾರೂ ಪೊಲೀಸ್‌ನವರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ ನಿಜ, ಪೊಲೀಸಿನವರು ಅನೇಕ ಕಡೆ ಮಾಡಿರತಕ್ಕಂಥ ಅವಿವೇಕಗಳೂ ಕೂಡ ಇದೆ ಅದು ಒಂದು ಕಡೆ ಇರಲಿ ಆದರೆ ಮತ್ತೊಂದು ಕಡೆ ಅವರ ಬಗ್ಗೆ ನಾವು ಮಾತನಾಡಬೇಕಲ್ಲವೆ? ಪೊಲೀಸ್‌ನವರ ಪರಿಸ್ಥಿತಿ ಹೇಗಿದೆ ಎನ್ನುವ ಬಗ್ಗೆ ಮಾತನಾಡಬೇಕಲ್ಲವೆ? ಮೀಸಲು ಪಡೆ ಎಂದು ಇದೆ ಇದೊಂದು ನರಕ ಪೂರ್ವ ಜನ್ಮದಲ್ಲಿ ಯಾರಾದರೂ ಪಾಪ ಮಾಡಿದ್ದರೆ ಈ ಮೀಸಲು ಪಡೆಗೆ ಸೇರಬೇಕು ಮೀಸಲು ಪಡೆ ಎಂದರೆ ಪೊಲೀಸ್‌ನವರು ವ್ಯಾನ್‌ನಲ್ಲಿಯೇ ಕುಳಿತಿರಬೇಕು ದಿನದ 24 ಗಂಟೆಗಳಲ್ಲಿ 16 ಗಂಟೆಗಳ ಕಾಲ ವ್ಯಾನ್‌ನಲ್ಲಿ ಕುಳಿತಿರಬೇಕು ಉದಾಹರಣೆಗೆ ಹೇಳಬೇಕೆಂದರೆ ವಿಧಾನಸೌಧದ ಸುತ್ತಮುತ್ತ ಮೀಸಲು ಪಡೆ ವ್ಯಾನ್ ನಿಂತಿರುತ್ತದೆ ಈ ವ್ಯಾನ್‌ನಲ್ಲಿ 16 ಗಂಟೆಗಳ ಕಾಲ ಅವರು ಇರಬೇಕು ಇವರ ಕೆಳಗಡೆ ಇಳಿಯುವಂತಿಲ್ಲ, ಕಾಫಿ ಕುಡಿಯುವಂತಿಲ್ಲ, ತಿಂಡಿ ತಿನ್ನುವಂತಿಲ್ಲ, ಇವರ ಹೆಡ್ ಆದವರು ಹುಕುಂ ಜಾರಿ ಮಾಡಿದ ತಕ್ಷನ ಲಾಠಿ ತೆಗೆದುಕೊಂಡು ಬೀದಿಗೆ ಇಳಿದು ಲಾಠಿ ಛಾರ್ಜ್ ಮಾಡುವುದು ಇದೊಂದನ್ನು ಬಿಟ್ಟರೆ ಅವರಿಗೆ ಬೇರೆ ಏನೂ ಇಲ್ಲ ಇಷ್ಟು ತಲೆಕೆಡಿಸಿಕೊಂಡು 16 ಗಂಟೆಗಳ ಕಾಲ ಕುಳಿತಿರತಕ್ಕಂಥವರಿಗೆ ಸರ್ಕಾರದವರಾದ ನೀವು ಲಾಠಿ ಛಾರ್ಜ್ ಮಾಡಿ ಎಂದರೆ ಯಾರಿಗೆ ಬೇಕಾದರೂ ಅವರು ಹೊಡೆಯುತ್ತಾರೆ ಮಂತ್ರಿಗಳಿಗೆ ಬೇಕಾದರೂ ಹೊಡೆಯುತ್ತಾರೆ, ಸಿಕ್ಕಿದವರಿಗೆ ಹೊಡೆಯುತ್ತಾರೆ, ಏಕೆಂದರೆ ಅವರೂ ಕೂಡ ಬೆಳಿಗ್ಗೆಯಿಂದ ಕುಳಿತು ಕುಳಿತು ಬೇಸತ್ತು ಹೋಗಿರುತ್ತಾರೆ, ಅವರಿಗೆ ತಲೆ ಕೆಟ್ಟು ಹೋಗಿರುತ್ತದೆ ಆದುದರಿಂದ ನಾನು ತಮಗೆ ಏನು ಹೇಳುತ್ತೇನೆಂದರೆ ಅವರುಗಳು ಒಂದು ಕಡೆ ಪೂರ್ವಜನ್ಮದಲ್ಲಿ ಪಾಪ ಮಾಡಿ ಆ ಮೀಸಲು ಪಡೆಗೆ ಬಂದಿರಬೇಕು, ಇನ್ನೊಂದು ವಿಚಾರ ಹೇಳಬೇಕೆಂದರೆ ಸಿ.ಓ ಡಿ ಎಂದು ಇದೆ ಈ ಸಿ ಓ ಡಿ ಯವರು ಬಿಳಿ ಬಟ್ಟೆ

ಹಾಕಿಕೊಂಡಿರುತ್ತಾರೆ ಇನ್ನು ಕಂಟ್ರೋಲ್ ರೂಂ ಎಂದು ಇದೆ ಇಲ್ಲಿ ಕೆಲಸ ಮಾಡುವ ಪೊಲೀಸ್‌ನವರು ಯಾವಾಗಲೂ ಬೆಳಿಗ್ಗೆಯಿಂದ ಸಂಜೆಯವರೆಗೆ ಕಿವಿಯ ಹತ್ತಿರ ಫೋನ್ ಇಟ್ಟುಕೊಂಡು, ಇಟ್ಟುಕೊಂಡು ಕೇಳಿ, ಕೇಳಿ, ಕಿವಿಗೆ ತೊಂದರೆ ಬಂದುಬಿಟ್ಟಿರುತ್ತದೆ ಏಕೆಂದರೆ ಅವರು ಕಿವಿಯಲ್ಲಿ ಪ್ರತಿ ದಿನ ಕೇಳಿ, ಕೇಳಿ, ಕೇಳಿ, ಸಾಕಾಗಿಹೋಗುತ್ತದೆ ಆದುದರಿಂದ ಅವರ ಕಿವಿಯ ಸಂರಕ್ಷಣೆಗಾಗಿ ನೀವು 'ಕಿವಿ ಭತ್ಯೆ'ಯನ್ನು ಇಟ್ಟಿಲ್ಲ ನನ್ನ ಪ್ರಕಾರ ಅವರಿಗೆ 35 ವರ್ಷವಾಗುತ್ತಲೇ ಅವರ ಕಿವಿಯ ಶಕ್ತಿ ಹೊರಟುಹೋಗಿರುತ್ತದೆ ಏಕೆಂದರೆ ಈ ಕಂಟ್ರೋಲ್ ರೂಂನಲ್ಲಿ ಕೆಲಸ ಮಾಡುವವರು ಯಾವಾಗಲೂ ಫೋನ್ ಅನ್ನು ಕಿವಿಯ ಹತ್ತಿರ ಇಟ್ಟುಕೊಂಡು ಬಂದ ಕರೆಗಳಿಗೆ ಉತ್ತರ ಹೇಳುತ್ತಲೇ ಇರಬೇಕು ಇನ್ನು ಸಂಚಾರಿ ಪೊಲೀಸ್‌ನವರು ಏನು ಇದ್ದಾರೆ ಇವರಿಗೆ 40 ವರ್ಷವಾಗುತ್ತಲೇ ಸೊಂಟ ಬಿದ್ದುಹೋಗಿರುತ್ತದೆ ಇವರಿಗೆ 'ಸೊಂಟ ಭತ್ಯೆ'ಯನ್ನು ನೀವು ಇಟ್ಟಿದ್ದೀರಾ? ಇಲ್ಲ ನೀವು ಇಟ್ಟಿಲ್ಲ 40 ವರ್ಷಕ್ಕೆ ಇಂಥ ಪೊಲೀಸ್‌ನವರ ಕಥೆ ಮುಗಿದಂತೆ ಇವರು ಬಿಳಿ ಬಟ್ಟೆ ಹಾಕಿಕೊಂಡಿರುತ್ತಾರೆ ಸಿಂಧ್ಯಾರವರೆ, ಇಂಥವರ ಬಗ್ಗೆ ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕು ಮಾನ್ಯ ಸಿಂಧ್ಯಾರವರೆ, ನಿಮಗೂ ಅಂಗರಕ್ಷಕರಿರುತ್ತಾರೆ, ಮನೆ ಮುಂದೆ ಪೊಲೀಸ್ ಇರುತ್ತಾರೆ ನೀವು ಅವರ ಕಷ್ಟಗಳನ್ನು ಕೇಳಿ ಪ್ರತಿನಿತ್ಯ 24 ಗಂಟೆಗಳ ಕಾಲ ಸಂಚಾರಿ ಪೊಲೀಸರು ನಿಂತೇ ಇರಬೇಕು ಒಂದು ಗಂಟೆಕಾಲ ನಿಂತುಕೊಳ್ಳುವುದಕ್ಕೂ ನಮಗೆ ಆಗುವುದಿಲ್ಲ ಸದನದಲ್ಲಿ ನಿಂತು ಎರಡು ಗಂಟೆ ನಾವು ಭಾಷಣ ಮಾಡಿದರೆ ಸುಸ್ತಾಗಿ ಕೆಳಗೆ ಬೀಳುತ್ತೇವೆ ಆದರೆ ಅವರು ಪ್ರತಿ ದಿನ ಬೆಳಿಗ್ಗೆ ಬಂದರೆ ಸಂಜೆಯವರೆಗೂ ನಿಂತೇ ಕೆಲಸ ಮಾಡಬೇಕಾಗುತ್ತದೆ ಆದುದರಿಂದ ನನಗನ್ನಿಸಿದಂತೆ ಅವರಿಗೆ ನೀವು ವಿಶೇಷವಾಗಿ 'ಸೊಂಟ ಭತ್ಯೆ' ಕೊಡಬೇಕು ಏಕೆಂದರೆ ಅವರು ಪ್ರತಿದಿನ ನಿಂತು ನಿಂತು 40 ವರ್ಷ ಆಗುವುದರೊಳಗಾಗಿ ಸೊಂಟ ಬಿದ್ದುಹೋಗಿ ಸಂಪೂರ್ಣವಾಗಿ ಮನುಷ್ಯನಾಗಿರುವುದಿಲ್ಲ

**ಶ್ರೀ ಪಿ ಜಿ ಆರ್ ಸಿಂಧ್ಯಾ (ಕೈಗಾರಿಕಾ ಸಚಿವರು)** ಈ ಪೊಲೀಸ್ ಇಲಾಖೆಯಲ್ಲಿ ಯಾರು ದೊಡ್ಡದಾಗಿ ಮೀಸೆ ಬಿಟ್ಟಿರುತ್ತಾರೆ ಅಂಥವರಿಗೆ ಭತ್ಯೆ ಕೊಡುತ್ತಾರೆ ಇದು ನಿಮಗೆ ಗೊತ್ತೇ ವಾಟಾಳ್‌ರವರೆ?

**ಶ್ರೀ ವಾಟಾಳ್ ನಾಗರಾಜ್** ನನಗೆ ಗೊತ್ತಿದೆ ಅಂಥವರು ಇಬ್ಬರೇ ರಾಜ್ಯದಲ್ಲಿ ಇದ್ದವರು ಅವರಲ್ಲಿ ಒಬ್ಬರು ತಿಮ್ಮಯ್ಯ ಎನ್ನುವವರು ಇದ್ದರು ಜಿ ಪಿ ಓ ಸರ್ಕಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಅಪಘಾತದಲ್ಲಿ ಪಾಪ ಆತ ಸತ್ತುಹೋದ ಇನ್ನು ನೀವು ಪೊಲೀಸ್ ನವರಿಗೆ ಬಟ್ಟೆ ವಾಷಿಂಗ್‌ಗಾಗಿ 100 ರೂಪಾಯಿಗಳನ್ನು ವರ್ಷಕ್ಕೆ ಒಮ್ಮೆ ಕೊಡುತ್ತೀರಿ ಈ ಬಟ್ಟೆಗಳನ್ನು ಒಗೆಯುವುದಕ್ಕಾಗಿ ಸೋಪು, ಅದಕ್ಕೆ ಬೇಕಾದ ಗಂಜಿ, ಇಸ್ತ್ರಿ ಮಾಡಿಸಬೇಕು ಇಷ್ಟೇ ಹಣ ಇವುಗಳಿಗೆಲ್ಲಾ ಸಾಕಾಗುತ್ತದೆಯೇ ವರ್ಷಕ್ಕೆ? ನನಗರ್ಥವಾಗಲಿಲ್ಲ ನಾವೆಲ್ಲರೂ ಸ್ವಲ್ಪ ವೈಜ್ಞಾನಿಕವಾಗಿ ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ ಮತ್ತು ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಬೇಕಾಗುತ್ತದೆ ಇನ್ನು ಒಂದು ಏನೆಂದರೆ ಪೊಲೀಸ್‌ನವರು ಮೇಲಾಧಿಕಾರಿಗಳ ಮನೆಯಲ್ಲಿ ಮನೆ ಕಾಯುವ ಕೆಲಸದ ಜೊತೆಗೆ ಅವರ ಮನೆಯಲ್ಲಿ ಪಾತ್ರೆ ತಿಕ್ಕುವ ಕೆಲಸ, ಸೀರೆ ಒಗೆಯುವ ಕೆಲಸ, ಬಟ್ಟೆಗಳನ್ನು ವಾಶ್ ಮಾಡಬೇಕು, ಬನಿಯನ್ ತೊಳೆಯಬೇಕು ಪೊಲೀಸ್ ಕಾನ್‌ಸ್ಟೇಬಲ್ ಎಂದರೆ ಹಿರಿಯ ಪೊಲೀಸ್ ಅಧಿಕಾರಿಗಳ ಮನೆಯಲ್ಲಿ ಮನೆ ಕಾಯುವ ಕೆಲಸ ಮಾಡುವುದೊಂದೇ ಅಲ್ಲ, ಇತರ ಕೆಲಸಗಳನ್ನು

ಮಾಡಬೇಕಾಗಿದೆ. ಇಂಥ ಪೋಲೀಸ್‌ರಿಗೆ ಎಷ್ಟು ಅಗೌರವ ಇದರಿಂದಾಗಿ ಆಗುತ್ತಿದೆ ಎನ್ನುವ ಮಾತನ್ನು ತಮಗೆ ಹೇಳುತ್ತಿದ್ದೇನೆ ಈ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಬೇಕಾಗಿದೆ ಈಗಾಗಲೇ ನಾನು ಹೇಳಿದಂತೆ ಸಂಚಾರಿ ಪೋಲೀಸ್ ಬಗ್ಗೆ, ಮೀಸಲು ಪಡೆ ಪೋಲೀಸ್ ಬಗ್ಗೆ, ಕಂಟ್ರೋಲ್ ರೂಂನಲ್ಲಿ ಕೆಲಸ ಮಾಡುವ ಪೋಲೀಸ್ ಬಗ್ಗೆ ಮತ್ತು ಸಿವಿಲ್ ಪೋಲೀಸ್ ಬಗ್ಗೆ ಚಿಂತನೆ ಮಾಡಬೇಕು ಏಕೆಂದರೆ ಇತರ ನೌಕರರಂತೆ ಅವರು ಬೇಡಿಕೆ ಇಟ್ಟುಕೊಂಡು ಮೆರವಣಿಗೆ ಮಾಡುವುದಕ್ಕೆ ಬರುವುದಿಲ್ಲ, ಧರಣಿ ಮಾಡುವಂತಿಲ್ಲ, ನಿಮ್ಮನ್ನು ಈ ಬಗ್ಗೆ ಕೇಳುವಂತೆಯೂ ಇಲ್ಲ ಇದಲ್ಲದೆ ಅವರಿಗೆ ಪಾಳಿ ಅವಧಿಯಂತೆ ಎಂಟು ಗಂಟೆಗಳ ಕಾಲ ಕೆಲಸವೆಂದು ಇಲ್ಲ, 24 ಗಂಟೆಗಳ ಕಾಲ ಅವರಿಗೆ ಕೆಲಸವಿರುತ್ತದೆ ಅವರು ಯಾರಿಗೆ ಬೇಕಾದರೂ ಹೊಡೆಯಬಹುದು ಅವರು ಹೊಡೆಯುವುದಕ್ಕೆ ಹೋದಾಗ ಆ ಪೋಲೀಸ್‌ನವರಿಗೇ ಎಷ್ಟೋ ಬಾರಿ ಹೊಡೆತಗಳು ಬಿದ್ದಿರುವುದೂ ಇದೆ ಆದ್ದರಿಂದ ಇಂಥ ಪೋಲೀಸ್‌ರವರ ರಕ್ಷಣೆ ಬಗ್ಗೆಯೂ ನೋಡಬೇಕಾಗುತ್ತದೆ ಇನ್ನು ಕೆಲವು ಪೋಲೀಸ್ ಸ್ಟೇಷನ್‌ಗಳಂತೂ ಆಧುನೀಕರಣವಾಗಬೇಕಾದ ಅವಶ್ಯಕತೆ ಇದೆ ಇಲ್ಲಿ 30 ವರ್ಷಗಳ ಹಿಂದಿನ ಸೈಕಲ್‌ಗಳು, ಹಳೇ ರಿಪೇರಿ ಟ್ಯೂಬ್‌ಗಳು, ಹಳೇ ಕಳ್ಳಬಟ್ಟಿಗಳು ಹೀಗೆ ಅನೇಕ ಹಳೆಯ ಪದಾರ್ಥಗಳು ತುಂಬಿಹೋಗಿವೆ ಆದುದರಿಂದ ಪೋಲೀಸ್ ಸ್ಟೇಷನ್ ವ್ಯವಸ್ಥೆಯಲ್ಲೂ ಆಧುನೀಕರಣವಾಗಬೇಕಾದ ಅಗತ್ಯತೆ ಇದೆ ಹೊಸ ಶಸ್ತ್ರಾಸ್ತ್ರಗಳನ್ನು ತಾವು ಕೊಡಬೇಕು ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕೇಳುತ್ತೇನೆ ಈ ಬಗ್ಗೆ ನಾವೆಲ್ಲರೂ ಚರ್ಚೆ ಮಾಡಬೇಕು ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಸಭೆ ಕರೆದು ಸಭೆಗೆ ವಿರೋಧ ಪಕ್ಷದ ನಾಯಕರೂ ಸೇರಿದಂತೆ ಎಲ್ಲರನ್ನೂ ಕರೆದು ಚರ್ಚೆ ಮಾಡಿ ಏಕೆಂದರೆ ನಮ್ಮ ಸಮಾಜದಲ್ಲಿ ಪೋಲೀಸ್‌ನವರು ಕಡೆಗಣಿಸಲ್ಪಟ್ಟಿರುವ ಕಡೆಯ ದರ್ಜೆಯ ವ್ಯಕ್ತಿಗಳು ಎನ್ನುವಂತೆಯೇ ಇದೆ ಆದರೆ ಪೋಲೀಸ್‌ನವರು ನಮಗೆಲ್ಲರಿಗೂ ಬೇಕು ಆದುದರಿಂದ ಎಲ್ಲಾ ದೃಷ್ಟಿಯಿಂದ ನಾವು ಅವರ ಬಗ್ಗೆ ಪ್ರಾಮಾಣಿಕವಾದ ಚಿಂತನೆಯನ್ನು ಮಾಡಬೇಕಾಗಿದೆ ಅದಕ್ಕೇ ತಾವು ಕೇಳಿ ಪೋಲೀಸ್‌ನವರು ಭತ್ಯೆ ಎಷ್ಟು ತೆಗೆದುಕೊಳ್ಳುತ್ತಿದ್ದಾರೆ, ಅವರಿಗೆ ಸೋಪ್ ಎಷ್ಟು ಕೊಡುತ್ತಾರೆ, ಅವರಿಗೆ ಎಣ್ಣೆ ಎಷ್ಟು ಕೊಡುತ್ತಿದ್ದಾರೆ, ಹೀಗೆ ಪ್ರತಿಯೊಂದನ್ನು ನೀವು ತಿಳಿದುಕೊಳ್ಳಬೇಕು ಆಮೇಲೆ ವಾಹನದಲ್ಲಿಯೇ ಕುಳಿತಿರತಕ್ಕಂಥ ಪೋಲೀಸ್ ಬಗ್ಗೆಯೂ ನೀವು ತಿಳಿದುಕೊಳ್ಳಬೇಕೆಮದು ನಾಣು ತಮ್ಮಲ್ಲಿ ಪ್ರಾಮಾಣಿಕವಾಗಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಬೆಳಿಗ್ಗೆ ನಾನು ಮಾತನಾಡುವಾಗ ಈ...

**ಶ್ರೀ ಎಸ್ ರಾಜೇಂದ್ರನ್ (ಕೆ.ಜಿ.ಎಫ್)** ಮಾನ್ಯ ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಮಾತನಾಡುತ್ತಿರುವುದಕ್ಕೆ ಬೆಂಬಲವಾಗಿ ನಾನು ಹೇಳಬಯಸುವುದೇನೆಂದರೆ ಕೆ ಎಸ್ ಆರ್ ಪಿ ಪೋಲೀಸ್‌ರವರಿಗೆ you should give some inter change ಸಿಟಿ ಪೋಲೀಸ್‌ನವರನ್ನೂ ಸ್ವಲ್ಪ ಇಂಟರ್‌ಛೇಂಜ್ ಮಾಡಬೇಕು ಈ ಇಬ್ಬರನ್ನೂ ಸೇರಿಸಿ ಛೇಂಜ್ ಮಾಡಿದರೆ ಬಹಳ ಅನುಕೂಲವಾಗುತ್ತದೆ ಇಲ್ಲದಿದ್ದರೆ ಈ ಪೋಲೀಸ್‌ನವರು ವ್ಯಾನ್‌ನಲ್ಲಿ ಕುಳಿತುಕೊಂಡು ಜಾಲಿಯಾಗಿ ಕಾರ್ಡ್ಸ್ ಆಡುತ್ತಿರುತ್ತಾರೆ It is good Let them just inter change

**ಶ್ರೀ ವಾಟಾಳ್ ನಾಗರಾಜ್** ಇನ್ನು ಪರಭಾಷಾ ಚಿತ್ರಗಳ ಬಗ್ಗೆ ಹೇಳುವುದಾದರೆ, ಹೊರಗಡೆ ಚಿತ್ರಗಳು ತಯಾರಾದ ತಕ್ಷಣ ಅವು ಮೊದಲು ಬೆಂಗಳೂರಿನಲ್ಲಿ ಬಿಡುಗಡೆಯಾಗುತ್ತವೆ ಅದಕ್ಕೆ ಅವಕಾಶ ಕೊಡಬಾರದು ಅದಕ್ಕೆ ಅವಕಾಶ ಕೊಟ್ಟ ತಕ್ಷಣ ಕನ್ನಡ ಚಿತ್ರಗಳು ಬೀಳುತ್ತವೆ ಇದು

ಬಹಳ ಪ್ರಾಮುಖ್ಯವಾದುದು ಆದುದರಿಂದ ತಮಗೆ ನಾನು ಹೇಳುತ್ತೇನೆ, ಬೇರೆ ರಾಜ್ಯಗಳಲ್ಲಿ ಎಲ್ಲೂ ಕೂಡ ಕನ್ನಡ ಚಿತ್ರಗಳು ಇಲ್ಲ ಗಡಿ ಪ್ರದೇಶದಲ್ಲೂ ಕೂಡ ಕನ್ನಡ ಚಿತ್ರವನ್ನು ಹಾಕುತ್ತಿಲ್ಲ ನೀವು ಆ ಸರ್ಕಾರಗಳಿಗೆ ಹೇಳಿ ನೀವು ಕಡ್ಡಾಯವಾಗಿ ಕನಿಷ್ಟ ಮೂರು ತಿಂಗಳುಗಳ ಕಾಲ ಕನ್ನಡ ಚಿತ್ರಗಳನ್ನು ತಮಿಳುನಾಡಿನಲ್ಲಿ, ಆಂಧ್ರದಲ್ಲಿ ಕೇರಳದಲ್ಲಿ ಹಾಗೂ ಬೇರೆ ರಾಜ್ಯಗಳಲ್ಲಿ ನೀವು ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡಿದರೆ ನಮ್ಮ ರಾಜ್ಯದಲ್ಲಿ ಬೇರೆ ಭಾಷೆಗಳ ಚಿತ್ರಗಳು ಇರಲಿ ನೀವು ಮಾಡುವುದಿಲ್ಲವೆಂದರೆ ನಮ್ಮ ರಾಜ್ಯದಲ್ಲೂ ಕೂಡ ನಿಮ್ಮ ಚಿತ್ರಗಳು ಬೇಡ ಎಂದರೆ ತಪ್ಪೇನಿಲ್ಲವಲ್ಲಾ ಈಗ ನೀವು ಈ ಮಾತನ್ನು ಆ ಸರ್ಕಾರಗಳಿಗೆ ಹೇಳಿ ಅವರು ಕಾನೂನು ಮಾಡಲಿ ಮತ್ತು ಇಲ್ಲಿ ಪ್ರತಿ ಚಿತ್ರಮಂದಿರಗಳಲ್ಲಿ ಕಡ್ಡಾಯವಾಗಿ ವರ್ಷಕ್ಕೆ ಒಂಭತ್ತು ತಿಂಗಳ ಕಾಲ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲಾ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರ ನಡೆಯಲೇಬೇಕು ಎಂದು ಇದನ್ನು ತಾವು ಹೇಳಿ ಇವತ್ತು ಏನಾಗಿದೆ ಎಂದರೆ 9ನೇ ತಾರೀಖಿಗೆ ಇಡೀ ಕನ್ನಡ ಚಿತ್ರೋದ್ಯಮ ನಿಲ್ಲುವ ವ್ಯವಸ್ಥೆ ಇದೆ ಕನ್ನಡ ಚಿತ್ರೋದ್ಯಮ ಪರಭಾಷಾ ಚಿತ್ರಗಳಿಂದ ಅವಸಾನಕ್ಕೆ ಬರುತ್ತಿದೆ ಇದನ್ನು ನಾನು ಅತ್ಯಂತ ಕಳಕಳಿಯಿಂದ ತಮಗೆ ಹೇಳುತ್ತಿದ್ದೇನೆ ಈ ಬಗ್ಗೆ ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ತಾವು ಮಾಡಬೇಕು ಎಂದು ಹೇಳುತ್ತಾ, ಮಾನ್ಯ ಅಧ್ಯಕ್ಷರೆ, ನಾನು ಒಂದು ವರದಿ ಕೊಟ್ಟೆ ಆ ವರದಿ ಕೊಟ್ಟು ಸುಮಾರು ನಾಲ್ಕೂವರೆ ವರ್ಷವಾಯಿತು ಮಧ್ಯಂತರ ವರದಿ ಅಷ್ಟೇ ಸಾಕು ಎಂದು ಸರ್ಕಾರ ಹೇಳಿತು ಅದನ್ನು ಕೊಟ್ಟೆ. ಆ ವರದಿಯಲ್ಲಿ ಕನಿಷ್ಟ ಈ ಗಡಿನಾಡು ಪ್ರದೇಶಗಳೇನಿವೆ, ಆ ಗಡಿನಾಡು ಪ್ರದೇಶಗಳ ಅಭಿವೃದ್ಧಿಗೆ ವರ್ಷಕ್ಕೆ 500 ಕೋಟಿ ರೂಪಾಯಿ ಕೊಡಬೇಕೆಂದು ನಾವು ಹೇಳಿದ್ದೇವೆ. ತಾವು ಎಷ್ಟಾದರೂ ಕೊಡಿ, ಈ ಗಡಿನಾಡಿನ ಸಮಗ್ರ ಬೆಳವಣಿಗೆಗೆ ಮತ್ತೊಂದು ವಿಚಾರ ಕೊನೆಯದಾಗಿ ಹೊರನಾಡು ಕನ್ನಡಿಗರಿಗೆ, ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಎಲ್ಲರೂ ಹೇಳಿದ್ದಾರೆ, ಈ ಪಠ್ಯಪುಸ್ತಕಗಳನ್ನು ತೆಗೆದುಕೊಂಡು ನೀವೇ ಒಂದು ಸಾರಿ ಹೊರನಾಡಿಗೆ ಹೋಗುತ್ತೇವೆಂದು ಎಲ್ಲರಿಗೂ ಹೇಳಿದರೆ ನಾವೆಲ್ಲಾ ಕೂಡ ಬರುತ್ತೇವೆ, ಎಲ್ಲರೂ ಒಟ್ಟಿಗೆ ಹೋಗೋಣ ಹೋಗಿ ಅಲ್ಲಿ ಶಾಲೆಗಳಿಗೆ ಪಠ್ಯ ಪುಸ್ತಕಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಿದರೆ ನನಗೆ ಅನ್ನಿಸುತ್ತದೆ, ಅವರಿಗೆ ಎಲ್ಲೋ ಒಂದು ಉಸಿರು ಸಿಕ್ಕಿದ ಹಾಗೆ ಅವರಿಗೆ ಯಾವ ಆಸ್ತಿಯನ್ನು ಕೊಡುವುದು ಬೇಡ, ಏನೂ ಕೊಡುವುದು ಬೇಡ ಆದುದರಿಂದ ಈ ಕನ್ನಡ ಪಠ್ಯಪುಸ್ತಕಗಳನ್ನು ತಾವು ಒದಗಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿ ನನ್ನ ಮಾತು ಮುಗಿಸುತ್ತೇನೆ

**ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ)** ಮಾನ್ಯ ಅಧ್ಯಕ್ಷರೆ, ನೀರಾವರಿ ಹಣ ಬಿಡುಗಡೆ ಮಾಡಿರುವ ಬಗ್ಗೆ ಹೇಳಿದ್ದಾರೆ ಸಣ್ಣ ನೀರಾವರಿ ಬಗ್ಗೆ ಹೇಳುವುದಾದರೆ ಇಲ್ಲಿ ಒಟ್ಟಿಗೆ ಜಲಸಂಪನ್ಮೂಲ ಎಂದು ಹೇಳಿದ್ದಾರೆ ಸಣ್ಣ ನೀರಾವರಿಗೆ ಹಣ ಖರ್ಚು ಮಾಡುವುದರ ಬಗ್ಗೆ ಇದರಲ್ಲಿ ಏನೂ ಹೇಳಿಲ್ಲ ಸರ್ಕಾರದ ದೃಷ್ಟಿಯಲ್ಲಿ ಸಣ್ಣ ನೀರಾವರಿ ಏನಾದರೂ ಇದೆಯೋ ಅಥವಾ ಹೇಗೆ? ಅದನ್ನು ಬೇರೆ ಎಲ್ಲೂ ಸೇರಿಸಿಲ್ಲ ಏಕೆಂದರೆ, ಸಣ್ಣ ನೀರಾವರಿಯಲ್ಲಿ ಇವತ್ತು ಹೆಚ್ಚು ವ್ಯವಸಾಯ ಇರತಕ್ಕಂಥಾದ್ದು ಒಟ್ಟು ನಮ್ಮ ಕೃಷಿ ಭೂಮಿಯಲ್ಲಿ ಈಗ ಮೇಜರ್ ಇರಿಗೇಷನ್‌ಗೆ ಒಳಪಟ್ಟಿರತಕ್ಕಂಥಾದ್ದು 28 ಪರ್ಸೆಂಟ್ ಹಾಗೂ ಸಣ್ಣ ನೀರಾವರಿಗೆ 72 ಪರ್ಸೆಂಟ್ ಮೈನರ್ ಇರಿಗೇಷನ್‌ಗೆ

ಹಣ ಒದಗಿಸಿರುವುದು ಎಷ್ಟು, ಹಾಗೂ ಮೇಜರ್ ಇರಿಗೇಷನ್‌ಗೆ ಎಷ್ಟು ಎಂದು ಒಂದು ಸಲ ಗಮನಕ್ಕೆ ತೆಗೆದುಕೊಳ್ಳುವ ಸ್ಥಿತಿಯಲ್ಲಿ ಯಾವ ಸರ್ಕಾರವೂ ಇಲ್ಲ ಏಕೆ ಅದನ್ನು ಮಾಡಿಲ್ಲವೆಂದನ್ನು ಸ್ವಲ್ಪ ಹೇಳಬೇಕು ಪ್ರತ್ಯೇಕವಾಗಿ ಬಯಲು ಸೀಮೆ ಪ್ರದೇಶದಲ್ಲಿ ಹೆಚ್ಚು ಕೃಷಿ ಭೂಮಿ ಇರತಕ್ಕಂಥಾದ್ದು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಕೋಲಾರ ಜಿಲ್ಲೆ ಒಂದು, ತುಮಕೂರು ಒಂದು ಭಾಗ, ಚಿತ್ರದುರ್ಗ ಇವೆಲ್ಲವೂ ಸತತವಾಗಿ ಬರಗಾಲಕ್ಕೆ ತುತ್ತಾಗುತ್ತವೆ ಅದಕ್ಕೆ ಶಾಶ್ವತವಾದಂತಹ ನೀರಾವರಿ ಯೋಜನೆಯನ್ನು ಒದಗಿಸತಕ್ಕಂಥ ಕೆಲಸವನ್ನು ಮಾಡಿಲ್ಲ ಇನ್ನು ಸಣ್ಣ ನೀರಾವರಿ ಎಂದರೆ ಕೆರೆಗಳು, ನಮ್ಮ ಕರ್ನಾಟಕ ರಾಜ್ಯದಲ್ಲಿ ಅತೀ ಹೆಚ್ಚು ಕೆರೆಗಳು ಇರುವುದು ಕೋಲಾರ ಜಿಲ್ಲೆಯಲ್ಲಿ ಅವೆಲ್ಲಾ ಸುಮಾರು ಹಾಳಾಗಿ ಹೋಗಿವೆ ಅದಕ್ಕೆ ಹಣ ತೆಗೆದಿಡುವಂತಹ ವ್ಯವಸ್ಥೆಯನ್ನು ಹಿಂದಿನಿಂದಲೂ ಕೂಡ ಯಾವ ಸರ್ಕಾರವು ಮಾಡಿಲ್ಲ ಹಾಗೂ ಈ ಸರ್ಕಾರ ಕೂಡ ಅದೇ ರೀತಿ ಮಾಡಿದೆ. ಆದುದರಿಂದ ಅದರ ಬಗ್ಗೆ ದಯವಿಟ್ಟು ಮಾನ್ಯ ಹಣಕಾಸುಮಂತ್ರಿಗಳು ಹೇಳಬೇಕು ಮತ್ತು ಶಿಕ್ಷಣಕ್ಕೆ ತೆಗೆದಿಟ್ಟಿರುವಂತಹ ಹಣ 500 ಲಕ್ಷ ರೂಪಾಯಿಗಳು ಎಂದು ಹೇಳಿದ್ದಾರೆ ಅದರಲ್ಲಿ ಮುಖ್ಯವಾಗಿ ಮಾನ್ಯ ಸದಸ್ಯರೊಬ್ಬರು ಬೆಳಿಗ್ಗೆ ಒಂದು ಪ್ರಶ್ನೆಯನ್ನು ಕೇಳಿದರು ಅದೇನೆಂದರೆ, ಫಸ್ಟ್ ಗ್ರೇಡ್ ಕಾಲೇಜುಗಳಿಗೆ ಬಿಲ್ಡಿಂಗ್ ಇಲ್ಲ ಮತ್ತು ಅಲ್ಲಿ ಟೀಚರ್ಸ್ ಕಡಿಮೆ ಇದ್ದಾರೆ ಮತ್ತು ಲ್ಯಾಬೋರೇಟರಿ ವ್ಯವಸ್ಥೆ ಇಲ್ಲ ಇವತ್ತು ಜೂನಿಯರ್ ಕಾಲೇಜುಗಳಲ್ಲಿ ಸೈನ್ಸ್‌ಗೆ ಬಹಳ ಪ್ರಾಮಿನೆನ್ಸ್ ಇದೆ ತಾವು ವಿಜ್ಞಾನಕ್ಕೆ ಬಹಳ ಪ್ರಾಮಿನೆನ್ಸ್ ಕೊಡುತ್ತಿರುವಂತಹ ಸಂದರ್ಭದಲ್ಲಿ ಟೆಕ್ನಿಕಲ್ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಹೋಗಬೇಕಾದರೆ ಅದಕ್ಕೆ ಮೂಲಭೂತವಾಗಿ ಪ್ರೀಯೂನಿವರ್ಸಿಟಿ ಲೆವಲ್‌ನಲ್ಲಿ ಬೇಕಾದಂತಹ ಲ್ಯಾಬೊರೇಟರೀಸ್ ಅದಕ್ಕೆ ಬಿಲ್ಡಿಂಗ್, ಅದಕ್ಕೆ ಎಕ್ವಿಪ್‌ಮೆಂಟ್ ಮತ್ತು ಸೈನ್ಸ್ ಸೆಕ್ಷನ್ ಹೆಚ್ಚು ಮಾಡುವುದರ ಬಗ್ಗೆ ಇದರಲ್ಲಿ ಹೇಳಬೇಕಾಗುತ್ತದೆ, ಅದೇನು ಇಲ್ಲ ಇನ್ನು ಕಂದಾಯ ಇಲಾಖೆಯಲ್ಲಿ ಹಿಂದೆ ಎಲ್ಲಾ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ಎಂದು ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಒಂದು ಯೋಜನೆ ಇತ್ತು ಅದು ಸ್ವಲ್ಪಮಟ್ಟಿಗೆ ಜಾರಿ ಆಯಿತು ಈಗಾಗಲೇ ನಾಲ್ಕೈದು ವರ್ಷದಿಂದ ಅದರ ಸುದ್ದಿನೇ ಇಲ್ಲ ಕೆಳಹಂತದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಬೇಕು, ಆಡಳಿತವನ್ನು ಬಲಿಷ್ಠಗೊಳಿಸಬೇಕು ಎನ್ನುವ ದೃಷ್ಟಿಯಲ್ಲಿ ಒಂದು ಕಡೆ ಭಾಷಣ ಮಾಡುತ್ತಿರುತ್ತೀರಿ ಆದರೆ ಕೆಳಗಿನ ಹಂತದಲ್ಲಿ ಆಡಳಿತಕ್ಕೆ ಬೇಕಾಗಿರತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುವುದಕ್ಕೆ ಬೇಕಾಗಿರುವಂತಹ ವ್ಯವಸ್ಥೆ ಇಲ್ಲ ಡೆಪ್ಯೂಟಿ ತಹಸೀಲ್ದಾರ್ ಕಚೇರಿಗಳನ್ನು ಓಪನ್ ಮಾಡಬೇಕಂದು ಹೇಳಿದಿರಿ ಹಲವಾರು ಕಡೆ ಅದರ ಕಛೇರಿಗಳು ಇಲ್ಲ ಸ್ಟ್ಯಾಫ್ ಇಲ್ಲ, ಸರಿಯಾದಂತಹ ವ್ಯವಸ್ಥೆ ಇಲ್ಲ ರೆವಿನ್ಯೂ ಇನ್ಸ್‌ಪೆಕ್ಟರ್ ಜಾಗದಲ್ಲಿ ಇರುವುದಿಲ್ಲ, ಏಕೆಂದರೆ ಅವರು ಕ್ವಾರ್ಟರ್ಸ್ ಇಲ್ಲವೆಂದು ಹೇಳುತ್ತಾರೆ ಸಾಮಾನ್ಯ ಮನುಷ್ಯ ಒಬ್ಬ ಪಹಣಿ, ಖಾತೆ ಇನ್ನೇನಾದರೂ ಬದಲಾವಣೆ ಬೇಕು ಎಂದರೆ ತಾಲ್ಲೂಕು ಹೆಡ್‌ಕ್ವಾಟರ್‌ಗೆ ಹುಡುಕಿಕೊಂಡು ಹೋಗಬೇಕಾಗುತ್ತದೆ ಆ ತಹರದ ವ್ಯವಸ್ಥೆಗೆ ಏನೂ ಹಣ ತೆಗೆದಿಟ್ಟಿಲ್ಲ ಇನ್ನು ಮಿನಿ ವಿಧಾನಸೌಧಗಳ ಬಗ್ಗೆ ಏನು ಧೋರಣೆ ನಿಮ್ಮದು ಎಂದು ಹೇಳಬೇಕಾಗುತ್ತದೆ ಏಕೆಂದರೆ ಅವುಗಳು ಇನ್ನು ಕೆಲವು ತಾಲ್ಲೂಕುಗಳಲ್ಲಿ ಆಗಬೇಕಾಗಿದೆ ಮತ್ತೆ ಕೆಲವು ಅದರಲ್ಲಿ ಅರ್ಧ ನಿಂತುಹೋಗಿರುವುದು ಇದೆ ಅವೆಲ್ಲಾ ಕೂಡ ಪೂರ್ತಿ ಮಾಡುವುದಕ್ಕೆ

ಕೂಡ ಹಣ ಬಿಡುಗಡೆ ಮಾಡಬೇಕು ಮತ್ತು ಹೊಸದಾಗಿ ಎಲ್ಲೆಲ್ಲಿ ಆಗಿಲ್ಲ, ಆಗಬೇಕಾಗಿದೆ ಅಂತಹ ಕಡೆ ಕೂಡ ಅವುಗಳನ್ನು ನಿರ್ಮಾಣ ಮಾಡತಕ್ಕಂಥ ವ್ಯವಸ್ಥೆ ಆಗಬೇಕಾಗುತ್ತದೆ ಇನ್ನು ಫುಡ್ ಅಂಡ್ ಸಿವಿಲ್ ಸಪ್ಲೈಸ್ ವಿಚಾರ ತೆಗೆದುಕೊಂಡರೆ ಅಕ್ಕಿಯನ್ನು ಮೂರು ರೂಪಾಯಿಗೆ ಒಂದು ಕೆಜಿ ಕೊಡುತ್ತೇವೆಂದು ಹೇಳಿದಿರಿ ಅದು ತುಂಬಾ ಸ್ವಾಗತಾರ್ಹವಾದಂತಹ ವಿಚಾರ ಅದಕ್ಕೆ ಕಾರ್ಡುಗಳನ್ನು ಎರಡು ತಿಂಗಳಲ್ಲಿ ಹಂಚುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಪ್ರಾರಂಭದಲ್ಲಿ ಹೇಳಿದ್ದರು ಅವರು ಆಶ್ವಾಸನೆ ಕೊಟ್ಟಿದ್ದು, ಅದು ಬಿಪಿಎಲ್ ಮತ್ತು ಎಲ್ಲಾ ಹಂತದ ಕಾರ್ಡುಗಳು ಇದುವರೆಗೂ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಆ ಮಾತು ಹೇಳಿ ಈಗಾಗಲೇ ಒಂದು ತಿಂಗಳಾಗುತ್ತಾ ಬಂತು ಕಾರ್ಡುಗಳ ಬಗ್ಗೆ ಬಹಳಷ್ಟು ಸಮಸ್ಯೆಗಳಾಗಿ ದೊಡ್ಡ ರಂಪ ರಾದ್ಧಾಂತಗಳು ಆಗುತ್ತಿವೆ ಆ ಕಾರ್ಡುಗಳನ್ನು ಪ್ರಿಂಟ್ ಮಾಡಿಲ್ಲ ಎಂದು ಹೇಳುತ್ತಾರೆ ಆ ಕಾರ್ಡುಗಳನ್ನು ಪ್ರಿಂಟ್ ಮಾಡುವುದಕ್ಕೆ ಬೇಕಾಗುವಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಈ ಮೂರು ಮುಖ್ಯವಾದ ಅಂಶಗಳನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಬಪಡುತ್ತೇನೆ ಮುಖ್ಯವಾಗಿ ಸಣ್ಣ ನೀರಾವರಿ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಪ್ರತ್ಯೇಕವಾಗಿ ಬಯಲುಸೀಮೆ ಪ್ರದೇಶಕ್ಕೆ ಹೆಚ್ಚು ಹಣ ಒದಗಿಸುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳಿ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

**ಶ್ರೀ ಎಸ್ ರಾಜೇಂದ್ರನ್ (ಕೆ ಜಿ.ಎಫ್)** ಮಾನ್ಯ ಅಧ್ಯಕ್ಷರೆ, ಡಿಮ್ಯಾಂಡ್ ನಂಬರ್ 5ರಲ್ಲಿ ಕಾವೇರಿ ಬಗ್ಗೆ ಸುಮಾರು 200 ಲಕ್ಷ ರೂ ಕಾಂಪನ್‌ಸೇಷನ್ ಕೊಟ್ಟಿದ್ದೀರಿ ನಿಜವಾಗಿಯೂ ಬಹಳ ಸಂತೋಷ ಆದರೆ ಅದನ್ನು 500 ಲಕ್ಷ ರೂ ಆಗಿರಬೇಕಾಗಿತ್ತು ನೀವು 200 ಲಕ್ಷ ರೂಪಾಯಿ ಕೊಟ್ಟಿದ್ದೀರಿ, ಆದರೆ ಅದು 1000 ಇದ್ದರೂ ಕೂಡ, ಪಾಪ ಅಷ್ಟು ಜನ ಕಾಂಪನ್ಸೇಷನ್‌ಗಾಗಿ ಕಾಯುತ್ತಿದ್ದಾರೆ We are proud that you have given this ಅದನ್ನು ಯಾರೂ ಅಪ್ರೀಷಿಯೇಟ್ ಮಾಡಿಲ್ಲವೆಂದು ಹೇಳಿದರು, ನಾನು ಅಪ್ರೀಷಿಯೇಟ್ ಮಾಡುತ್ತಿದ್ದೇನೆ ಇನ್ನು ಡಿಮ್ಯಾಂಡ್ ನಂಬರ್ 23, inadequate budget provision towards salary, stipend, etc grant-in-aid, I T ಇಂಡಸ್ಟ್ರಿಯಲ್ ಟ್ರೈನಿಂಗ್‌ಗೆ 646 ಲಕ್ಷ ರೂ ಇದು ಬ್ಲೈಂಡ್ ಆಗಿದೆ ಇದರಲ್ಲಿ ಏನೂ ಕೊಟ್ಟಿಲ್ಲ ಯಾರ್‍ಯಾರಿಗೆ ಎಷ್ಟೆಷ್ಟು ಖರ್ಚಾಗಿದೆ? ಏನೇನು? ಪೂರ್ತಿ ಬ್ಲೈಂಡ್ ಆದುದರಿಂದ ನಾನು ಇದಕ್ಕೆ ಬ್ಲೈಂಡ್ ಆಗಿ ಸಪೋರ್ಟ್ ಮಾಡಬೇಕೆಂದು ಇದ್ದೇನೆ ಏಕೆಂದರೆ ಇದು ಬ್ಲೈಂಡ್ ಇದೆ ತಾವು ನೋಡಿ 646 ಲಕ್ಷ ರೂಪಾಯಿಯ ವಿಚಾರದಲ್ಲಿ ಏನೂ ಇಲ್ಲಾ ಐ ಟಿ.ಐ.ನಲ್ಲಿ ಇಂಡಸ್ಟ್ರಿಯಲ್ ಟ್ರೈನಿಂಗ್ ಎಂದರೆ ಅವರಿಗೆ ಸೋಪ್ ಕೊಡಬೇಕು, ವೆಲ್ಡರ್ಸ್‌ಗೆ ಕೂಲಿಂಗ್ ಗ್ಲಾಸ್ ಕೊಡಬೇಕು, ಕೈಗೆ ಗ್ಲೌಸ್ ಕೊಡಬೇಕು ಯಾರಿಗೂ ಕೊಡುವುದೇ ಇಲ್ಲ ಅದು ಎಲ್ಲಿಗೆ ಹೋಗುತ್ತದೋ ಗೊತ್ತಾಗುವುದಿಲ್ಲ ಆದರೆ 646 ಲಕ್ಷ ರೂ ಬ್ಲೈಂಡ್ ಆಗಿದೆ, ಬ್ಲೈಂಡ್ ಆಗಿ ಹೋಗಲಿ ಎಂದು ಹೇಳಿಕೊಂಡು you have to give more interest, ಎಂದು ಕೇಳಿಕೊಳ್ಳುತ್ತೇನೆ ಏಕೆಂದರೆ ನಾನು ಕೆಲವು ಐ ಟಿ ಐ ಇಂಡಸ್ಟ್ರಿಗಳಲ್ಲಿ ಪರ್ಸನಲ್ ಆಗಿ ನೋಡಿದ್ದೇನೆ ವೆಲ್ಡಿಂಗ್ ಮಾಡುವವರಿಗೆ ಪಾಪ ಕೂಲಿಂಗ್ ಗ್ಲಾಸ್ ಇಲ್ಲ, ಏನಿಲ್ಲ, These are all health hazzards ಅವರು ಏನೂ ಕೊಡುವುದಿಲ್ಲ, ಸೋಪ್ ಕೇಳಿದರೆ ಇಲ್ಲವೆಂದು ಹೇಳುತ್ತಾರೆ ಗ್ರಾಂಟ್

ಕೇಳಿದರೆ ಅದನ್ನು ಕೊಡಬೇಕೆಂದು ಇಲ್ಲವೆಂದು ಹೇಳುತ್ತಾರೆ ಸ್ಕಾಲರ್‌ಶಿಫ್ ಕೇಳಿದರೆ ಇಲ್ಲವೆಂದು ಹೇಳುತ್ತಾರೆ But you are spending around Rs 646 lakhs for giving ITI training But, please be a good watchdog to find out that trainees will get all facilities

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೇ, ಈಗ ಅಭಿಯಾಚನೆಯ ಕ್ರಮಾಂಕ 2ರಲ್ಲಿ ಮೀನುಗಾರಿಕೆ ಬಂದರಿಗೆ 100 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ ಇವೆಲ್ಲಾ ಸ್ಯಾಂಕ್ಷನ್ಡ್ ಟೆಂಡರ್ ಕರೆದಂತಹ ವರ್ಕ್, ಅದಕ್ಕೆ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿಕೊಳ್ಳದೇ ಇದು ಪೂರಕ ಅಂದಾಜಿನಲ್ಲಿ ಬರುವಂತಹ ಪರಿಸ್ಥಿತಿಯಾಗಿದೆ ಎಷ್ಟು ಸ್ಯಾಂಕ್ಷನ್ಡ್ ವರ್ಕ್ ಇದೆ, ಅವೆಲ್ಲಕ್ಕೂ ಮುಂದೆ ಪುನಃ ಅದೇ ಆಗುತ್ತದೆ ನೀವು ಮುಂದೆ ಮುಂದಿನ ಪೂರಕ ಬಜೆಟ್‌ನಲ್ಲಿ ತರಲು ಬಂದರು ಇಲಾಖೆಗೆ ಏನೂ ಹಣ ಇಟ್ಟಿಲ್ಲ ಮುಂದೆ ಸ್ಯಾಂಕ್ಷನ್ಡ್‌ವರ್ಕ್ ಎಷ್ಟೋ ಇದೆ, ಮುಂದಿನ ಪೂರಕ ಬಜೆಟ್‌ನಲ್ಲಿ ಬರುವಂತಹ ಪರಿಸ್ಥಿತಿಯಾಗುತ್ತದೆ. ಅದನ್ನು ತೆಗೆದು ಯಾವ್ಯಾವುದು, ಸ್ಯಾಂಕ್ಷನ್ಡ್ ವರ್ಕ್ ಇದೆ, ಟೆಂಡರ್ ಕರೆದು ಆಗಿದೆ ಅವೆಲ್ಲವನ್ನೂ ಬಜೆಟ್‌ನಲ್ಲೆ ಪ್ರೊವೈಡ್ ಮಾಡಿದರೆ, ಈ ಪೂರಕ ಬಜೆಟ್‌ನಲ್ಲಿ ಬರುವಂತಹ ಪರಿಸ್ಥಿತಿ ಇರುವುದಿಲ್ಲ ಇನ್ನು ಸ್ವಲ್ಪ ಔಟ್ ಆಫ್‌ದಿ ವೇ ಆಗಬಹುದು ಇಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳೇ, ಎಂ ಪಿ ಗಳಿಗೆ ಕೊಡುವಂತಹ ಫೆಸಿಲಿಟೀಸ್ ಬಗ್ಗೆ ಹಿಂದೆ ಕೂಡ ಈ ಸದನದಲ್ಲಿ ಚರ್ಚೆಯಾಗಿತ್ತು ಈಗ ಅದು ಕೋರ್ಟ್‌ನಲ್ಲೂ ಇದೆ ಅವರಿಗೆ ವರ್ಷಕ್ಕೆ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ ಅವರಿಗೆ ಕಾರನ್ನು ಕೊಡುತ್ತೀರಿ, ಪೆಟ್ರೋಲ್ ಕೊಡುತ್ತೀರಿ, ಸ್ಟಾಫ್ ಕೊಡುತ್ತೀರಿ ಇಲ್ಲಿ ಇರುವಂತಹ ಶಾಸಕರಿಗೆ State Contingency Fund ನಲ್ಲಿ ಕೊಡದೆ ಎಂ ಪಿ.ಗಳಿಗೆ ಕೊಡುತ್ತೀರಿ, Where there is no provision ಅವರಿಗೆ Central Contingency Fund ನಿಂದ ಕೊಡಬೇಕಾಗಿರುವಂಥಾದ್ದು ನೀವು ಏಕೆ ಇಲ್ಲಿಂದ ಕೊಡುತ್ತೀರಿ? ಅದನ್ನು ನೀವು ಏಕೆ ವಾಪಸ್ಸು ತೆಗೆದುಕೊಳ್ಳಬಾರದು? ಇದರಿಂದ ನಿಮಗ ವರ್ಷಕ್ಕೆ 5 ಕೋಟಿ ರೂಪಾಯಿಗಳು ಉಳಿಯುತ್ತವೆ ನಮಗೆ ಮನೆಯನ್ನು ಕಟ್ಟುವುದಕ್ಕೆ ದುಡ್ಡಿಲ್ಲ ಇವರಿಗೆ ಕೊಡುತ್ತೀರಿ ಆದುದರಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) ಮಾನ್ಯ ಅಧ್ಯಕ್ಷರೇ, ಮಾನ್ಯ ಸಿದ್ಧರಾಮಯ್ಯನವರು ಆಯವ್ಯಯವನ್ನು ಮಂಡನೆ ಮಾಡಿದಂತಹ ಸಂದರ್ಭದಲ್ಲಿ ಹೇಳಿದ್ದರು ನಾವು ಈ ಕೊರತೆ ಬಜೆಟ್‌ನಿಂದ ಉಳಿತಾಯ ಬಜೆಟ್‌ಗೆ ಬಂದಿದ್ದೇವೆಂದು ಹೇಳಿದ್ದರು ಇವತ್ತು ನೀವು ಮಂಡಿಸಿರುವ ಸಪ್ಲಿಮೆಂಟರಿ ಬಜೆಟ್ ನೋಡಿದಾಗ 78 ಕೋಟಿ 36 ಲಕ್ಷ ರೂಪಾಯಿಗಳು ಇತ್ತು ನೀವು ಉಳಿತಾಯ ಮಾಡುವಂಥಾದ್ದು 78 ಕೋಟಿ 83 ಲಕ್ಷ ರೂಪಾಯಿಗಳು ಅಂದರೆ ಈ ಸಪ್ಲಿಮೆಂಟರಿ ಬಜೆಟ್ ಅನ್ನು ನಾವು ಪಾಸ್ ಮಾಡಿಕೊಟ್ಟರೆ, ಉಳಿತಾಯವೆಂಬ ಬಜೆಟ್ ಬಗ್ಗೆ ಮಾನ್ಯ ಯಡಿಯೂರಪ್ಪನವರು ಮೊನ್ನೆ ಪ್ರಸ್ತಾಪ ಮಾಡಿದಂತೆ, ಕಂಟೆಂಜೆನ್ಸಿ ಫಂಡ್ ರಿಲೀಜ್ ಮಾಡಿದರೆ, ನಿಮ್ಮ ಉಳಿತಾಯ ಬಜೆಟ್ ಹೋಗಿಬಿಡುತ್ತದೆ, ಅದು ಕೊರತೆಯ ಬಜೆಟ್ಟೇ ಆಗುತ್ತದೆ ಅದರ ಬಗ್ಗೆ ಜಾದೂ, ಮಂತ್ರ ಎನ್ನುತ್ತಾರಲ್ಲಾ ಆ ರೀತಿಯಾಗುತ್ತಿದೆ ಅಷ್ಟೆ ಇನ್ನು ಅಭಿಯಾಚನೆಯ ಸಂಖ್ಯೆ 26ರ [illegible]

ಆಯುಕ್ತರು, ಉತ್ತರ ಕರ್ನಾಟಕ, ಬೆಳಗಾಂ, ಇವರಿಗೆ 35 ಲಕ್ಷ ಯೋಜನೇತರ ಅಡಿಯಲ್ಲಿ ಸಾದಿಲ್ವಾರು ರೆನಿಧಿಯಿಂದ ಬಿಡುಗಡೆ ಮಾಡಲಾಗಿದೆಯೆಂದು ತೋರಿಸಿದ್ದಿರಿ, ಇದರ ಬಗ್ಗೆ ನಾನು ಕೇಳುವುದೇನೆಂದರೆ, ಅಭಿವೃದ್ಧಿ ಆಯುಕ್ತರು ಉತ್ತರ ಕರ್ನಾಟಕ, ಇವರನ್ನು ಯಾವುದಕ್ಕೋಸ್ಕರ ಮಾಡಿದ್ದೀರೆಂಬುದು ನನಗೆ ಅರ್ಥವಾಗುತ್ತಿಲ್ಲ ಇವರಿಗೆ ಏನು ಕೆಲಸ? ಶ್ರೀ ಚಿರಂಜೀವಿ ಸಿಂಗ್‌ರವರನ್ನು ಬೆಳಗಾಂನಲ್ಲಿ ಕೂಡಿಸಿದ್ದೀರಿ ಅವರಿಗೆ ಏನೂ ಅಧಿಕಾರವಿಲ್ಲ, ಸಿಬ್ಬಂದಿ ವರ್ಗ ಇಲ್ಲ ಅವರಿಗೆ ಕೇವಲ ಕಚೇರಿಯನ್ನು ಕೊಟ್ಟು ಕೂರಿಸಿದರೆ ಅವರಿಗೆ ಏನು ಅಧಿಕಾರವಿದೆ? ಅವರು ಏನು ಕೆಲಸ ಮಾಡುತ್ತಾರೆ? ಡಾ॥ ನಂಜುಂಡಪ್ಪನವರ ವರದಿಯ ಪ್ರಕಾರ, 500 ಕೋಟಿ ರೂಪಾಯಿಗಳನ್ನು, ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ಆ ಶ್ರೀ ಚಿರಂಜೀವಿ ಸಿಂಗರವರಿಗೆ ಏನಾದರೂ ಸ್ವಲ್ಪ ಕೆಲಸವಿರುತ್ತಿತ್ತು ಅವರಿಗೆ ಈಗ ಏನೂ ಕೆಲಸವಿಲ್ಲ, ನನಗೆ ಇದರ ಬಗ್ಗೆ ಏನು ಅನ್ನಿಸುತ್ತದೆಂದರೆ ಇದನ್ನು ರದ್ದು ಮಾಡಿ ಬಿಡಿ ಇದರಿಂದ ಏನೂ ಪ್ರಯೋಜನವಿಲ್ಲ, ಈ 35 ಲಕ್ಷ ರೂ ಗಳನ್ನು ಈ ಬಜೆಟ್‌ನಲ್ಲಿ ತೆಗೆದುಕೊಂಡು ಏನು ಮಾಡುತ್ತಿರಾ? ಅವರಿಗೆ ಹಣವಿಲ್ಲ, ಅಧಿಕಾರವಿಲ್ಲ, ಅವರು ಎಲ್ಲಿಗೂ ಪ್ರವಾಸ ಮಾಡುವ ಹಾಗೆ ಇಲ್ಲ ಈಗ 35 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುವುದು ಎಲ್ಲಾ ವ್ಯರ್ಥ ಅದಕ್ಕೆ ನಾನು ಹೇಳುವಂಥಾದ್ದು ಮಾನ್ಯ ಚಿರಂಜೀವಿ ಸಿಂಗ್‌ರವರನ್ನು ಆಯುಕ್ತರನ್ನಾಗಿ ಮಾಡಿದ್ದೀರಿ ಅವರಿಗೆ ಏನಾದರೂ ಮಾಡಲು ಹಣವನ್ನು ಕೊಡಿ ಮತ್ತು ಪವರ್ ಕೊಡಿ ಅದು ಬಿಟ್ಟರೆ, ಏನೂ ಪ್ರಯೋಜನವಿಲ್ಲವೆಂದು ನಾನು ಹೇಳಬಯಸುತ್ತೇನೆ ಇಲ್ಲಿ ಬೆಳಿಗ್ಗೆ ಮಾನ್ಯ ಎಂ ಪಿ ಪ್ರಕಾಶ್‌ರವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ವೇತನ ಕಡಿತ ಶೇಕಡಾ 15ರಷ್ಟು ಎಂದು ಹೇಳಿದರು ಆ ಬಗ್ಗೆ ಮಾನ್ಯ ಎಸ್ ಎಸ್ ಪಾಟೀಲ್‌ರವರು ಇಲ್ಲಿ ಬೆಳಿಗ್ಗೆ ಮಾತನಾಡಿದರು ತಾವು ಕರ್ನಾಟಕ ಮಧ್ಯಮಾವಧಿ ಆರ್ಥಿಕ ಯೋಜನೆ 2004–05 ರಿಂದ 2007–08 ಅನ್ನು ಇವತ್ತು ಸದನಕ್ಕೆ ಪ್ರೆಸೆಂಟ್ ಮಾಡಿದ್ದೀರಿ ಇವತ್ತು ಬೆಳಿಗ್ಗೆ ಮಾನ್ಯ ಎಸ್ ಎಸ್ ಪಾಟೀಲರು ಸದನದಲ್ಲಿ ಮಾತನಾಡುತ್ತಾ, ಕಾಲೇಜುಗಳಲ್ಲಿ ರಿಟೈರ್‌ಮೆಂಟ್, ಡೆತ್‌ಗಳಾಗಿ ಆ ಪೋಸ್ಟ್‌ಗಳು ಹಾಗೆಯೇ ಉಳಿಯುತ್ತವೆ ಅದಕ್ಕೆ ಮತ್ತೆ ಹೊಸದಾಗಿ ಗ್ರಾಂಟ್ ಇಲ್ಲ ಅದನ್ನು ಪೂರ್ತಿಯಾಗಿ ರದ್ದು ಮಾಡಿದ ಹಾಗೆ ಆಗುತ್ತದೆ ಆದುದರಿಂದ ಅದನ್ನು ಪುನರ್ ಪರಿಶೀಲನೆ ಮಾಡಿ ಎಂದು ಮಾನ್ಯ ಎಂ ಪಿ ಪ್ರಕಾಶ್‌ರವರಿಗೆ ತಿಳಿಸಿದಾಗ ಅವರು ಇದು ಪಾಲಿಸಿ ಡಿಸಿಷನ್, ನಾವು ವಿಚಾರವನ್ನು ಮಾಡುತ್ತೇವೆಂದು ಇವತ್ತು ಬೆಳಿಗ್ಗೆ ಸದನದಲ್ಲಿ ಹೇಳಿದ್ದರು ಆ ಬಗ್ಗೆ ಈಗಾಗಲೇ ತಾವು ನಿರ್ಣಯ ಕೈಗೊಂಡಿದ್ದೀರಿ, "ತಾವು" ಅನುದಾನ ಪದ್ಧತಿಯಲ್ಲಿ ಸುಧಾರಣೆ ಎಂದು ಹೇಳಿದ್ದೀರಿ, ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ, ಸರ್ಕಾರದ ಮಿತವ್ಯಯಗಳು ಅನ್ವಯವಾಗುತ್ತದೆ ಈ ಹಿನ್ನೆಲೆಯಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳು, ಸರ್ಕಾರದ ಮೇಲೆ ಪರಿಣಾಮ ಬೀರುವಂತಹ, ತಮ್ಮ ಆಡಳಿತ ವೆಚ್ಚದಲ್ಲಿ ಕಠಿಣ ಮಿತವ್ಯಯವನ್ನು ಪಾಲಿಸಬೇಕು ಎಲ್ಲಾ ಖಾಲಿ ಹುದ್ದೆಗಳನ್ನು ಅನುದಾನ ರಹಿತ ಹುದ್ದೆಗಳೆಂದು ತತ್‌ಕ್ಷಣದಿಂದಲೇ ಪರಿಗಣಿಸಲಾಗುವುದು" ಇಲ್ಲಿ ಹೆಚ್ಚು ಕಡಿಮೆ ಸರ್ಕಾರ ನಿರ್ಣಯವನ್ನು ಕೈಗೊಂಡಂತೆ ಆಗಿದೆ ಇವತ್ತು ಬೆಳಿಗ್ಗೆ ಮಾತನಾಡಿದ್ದು ಒಂದು, ಈಗ ಈ ಪ್ರೆಸೆಂಟೇಷನ್ ಪ್ರಕಾರ ನಿರ್ಣಯವನ್ನು ಕೈಗೊಂಡಿದ್ದೀರಿ ಇವತ್ತು ಶೇಕಡಾ 50ರಷ್ಟು ವೇತನ ಕಡಿತ,

ಮತ್ತೆ ಈ ಖಾಲಿಯಾದ ಪೋಸ್ಟ್‌ಗಳನ್ನು ತುಂಬುವ ಹಾಗೆ ಇಲ್ಲ ಇದು ಯಾವ ರೀತಿಯಾಗಿ ಆ ಭಾಗದವರಿಗೆ ಅನ್ಯಾಯವಾಗುತ್ತಿದೆಯೆಂಬುದನ್ನು ಮತ್ತೆ ಸ್ಪಷ್ಟೀಕರಣ ಮಾಡಿದ್ದೀರಿ ಶ್ರೀ ಚಿರಂಜೀವಿ ಸಿಂಗ್‌ರವರ ನೇಮಕ, ಇವೆಲ್ಲವನ್ನೂ ನೋಡಿದರೆ, ಉತ್ತರ ಕರ್ನಾಟಕದ ಬಗ್ಗೆ ಯಾವುದೇ ರೀತಿಯಾದಂತಹ ಕಾಳಜಿ ಇಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ ಇದರ ಬಗ್ಗೆ ಪೂರಕವಾಗಿ ಏನಾದರೂ ಕೆಲಸವನ್ನು ಮಾಡಿದ್ದರೆ, ಮಾನ್ಯ ಸಿದ್ಧರಾಮಯ್ಯನವರು ಆ ಭಾಗದವರಿಗೆ ಕೆಲಸವನ್ನು ಮಾಡಿದ್ದಾರೆಂದು ಹೇಳಬಹುದಾಗಿತ್ತು ಅದು ಏನೂ ಆಗಿಲ್ಲವೆಂಬುದನ್ನು ಹೇಳಿ, ಇವತ್ತಿನ ಪೂರಕ ಬಜೆಟ್‌ನಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿಗಳ ಬಗ್ಗೆ ಹಿಂದೆ ಬಹಳಷ್ಟು ಸಾರಿ ಚರ್ಚೆಯಾಗಿದೆ ಈ ಬಜೆಟ್‌ನಲ್ಲಿ ಏನೂ ಹಣವನ್ನು ಕೊಡಲಿಲ್ಲ, ಮುಂದೆ ಸೆಪ್ಲಿಮೆಂಟರಿ ಬಜೆಟ್‌ನಲ್ಲಿ ಏನಾದರು ಸ್ವಲ್ಪ ಹಣವನ್ನು ಒದಗಿಸುತ್ತಾರೆಂದು ನಾವು ಅಂದುಕೊಂಡಿದ್ದೆವು ಈಗ ಎಂ ಎಲ್ ಎ ಫಂಡ್ ಅನ್ನು ಕೊಡಲಿಲ್ಲ, ಮತ್ತೆ ಮಾನ್ಯ ಜಯಪ್ರಕಾಶ್ ಹೆಗಡೆಯವರು ಹೇಳಿದ ಹಾಗೆ ಎಂ ಪಿ.ಗಳಿಗೆ ನೀವು ಖರ್ಚು ಮಾಡುವುದಕ್ಕೆ ತಯಾರಾಗಿದ್ದೀರಿ ಆದರೆ ಇವತ್ತು ಶಾಸಕರು ಮತಕ್ಷೇತ್ರಗಳಲ್ಲಿ ಮುಖವನ್ನು ತೋರಿಸುವುದಕ್ಕೆ ಆಗುವುದಿಲ್ಲ ಅವರು 50 ಲಕ್ಷ ರೂಪಾಯಿಗಳನ್ನು "ಅಭಿವೃದ್ಧಿ ನಿಧಿ"ಯನ್ನು ಕೊಡಿ ಎಂದು ಕೇಳಿದರೆ ಅದಕ್ಕೆ ಇಲ್ಲ ಆದರೆ ಎಂ ಪಿ ಗಳಿಗೆ ಕೊಡುತ್ತಿದ್ದೀರಿ ಇವತ್ತಿನ ದಿವಸ "ಬಯಲು ಸೀಮೆ ಅಭಿವೃದ್ಧಿ ಮಂಡಳಿ" ಮತ್ತು "ಮಲೆನಾಡು ಅಭಿವೃದ್ಧಿ ಮಂಡಳಿಗಳಿಗೆ ಕೊನೇ ಪಕ್ಷ 20 ಲಕ್ಷ ರೂಪಾಯಿಗಳು ಒಂದೊಂದು ಕ್ಷೇತ್ರಗಳಿಗೆ ಬರುವಂತೆ ಅನುದಾನವನ್ನು ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು ತಾವು ಅದನ್ನಾದರೂ ಕನ್ಸಿಡರೇಷನ್ ಮಾಡಬಹುದಾಗಿತ್ತು ಅದೂ ಇಲ್ಲ ಈ ಕಡೆ ಅಭಿವೃದ್ಧಿ ಫಂಡ್ ಇಲ್ಲ ಇವತ್ತು ಶಾಸಕರ ಪರಿಸ್ಥಿತಿ ಏನಾಗಿಯೆಂದರೆ ಅತಂತ್ರವಾಗಿದೆ ಇಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಪವರ್ ಡೀಸೆಂಟ್ರ್‌ಲೈಜೇಷನ್ ಮಾಡಿ ಕೊಟ್ಟಿದ್ದೇವೆ ಅದಕ್ಕೆ ಏನೂ ತಕರಾರು ಮಾಡುವ ಹಾಗೆ ಇಲ್ಲ ಇವತ್ತು ಕಾನ್ಸ್‌ಸಿಟ್ಯೂಶನಲ್ ಅಮೆಂಡ್‌ಮೆಂಟ್ ಆಗಿದೆ ಅವರಿಗೆ ಫವರ್ ಡೀಸೆಂಟ್ರಲೈಜೇಷನ್ ಮಾಡಿಕೊಟ್ಟಿದ್ದೇವೆ ಎಲ್ಲಾ ಅನುದಾನವೂ ಅವರಿಗೆ ಹೋಗುತ್ತದೆ ಅವರೇ ಕೆಲಸ ಮಾಡಬೇಕು, ಈ ಕಡೆ ಕಾರ್ಪೋರೇಷನ್‌ನಿಂದ ಕೆಲಸ ಆಗಬೇಕು ಹೀಗಾಗಿ ಶಾಸಕರು ಇಲ್ಲಿಗೆ ಬಂದು, ಕೇವಲ ಶಾಸನಗಳನ್ನು ಮಾಡುವಂಥಾದ್ದು ಮತ್ತೆ ಮಾತನಾಡುವುದನ್ನು ಬಿಟ್ಟರೆ, ಇನ್ನು ಯಾವುದೇ ಅಧಿಕಾರವಿಲ್ಲದಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ ಈ ನಿಮ್ಮ ಸೆಪ್ಲಿಮೆಂಟರಿ ಬಜೆಟ್‌ನಲ್ಲಿ ಏನಾದರೂ ಮಾಡಬಹುದಾಗಿತ್ತು, ಅದನ್ನು ತಾವು ಮಾಡಿಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ

**ಶ್ರೀ ಅರಗ, ಜ್ಞಾನೇಂದ್ರ (ತೀರ್ಥಹಳ್ಳಿ)** ಮಾನ್ಯ ಅಧ್ಯಕ್ಷರೇ, ನನ್ನದೊಂದು ಅಭಿಪ್ರಾಯವೇನೆಂದರೆ, ಸಂಬಳವನ್ನೂ ಕೂಡ ಸಾದಿಲ್ವಾರ್ ನಿಧಿಯಿಂದ ಏಕೆ ತೆಗೆದುಕೊಡುತ್ತಿದ್ದೀರೆಂಬುದು ನನಗೆ ಗೊತ್ತಾಗುತ್ತಿಲ್ಲ ಇಲ್ಲಿ ಇಷ್ಟು ಜನರು ನೌಕರರು ಇದ್ದಾರೆ, ಇಷ್ಟು ಸಂಬಳವನ್ನು ಕೊಡುಬೇಕಾಗುತ್ತದೆಂದು ಗೊತ್ತಾಗಿರುತ್ತದೆ ಅದನ್ನು ಇದರಲ್ಲಿ ಹೊಸದಾಗಿ ಸೇರಿಸಬೇಕಾದದ್ದು ಏನೂ ಇಲ್ಲ ಈ ಲೆಕ್ಕಾಚಾರಗಳು, ಅಕೌಂಟ್ಸ್, ಇದೆಲ್ಲವನ್ನೂ ಹೇಗೆ ಮಾಡುತ್ತಾರೆಂಬುದು ನಮಗೆ ಅರ್ಥವಾಗುವುದಿಲ್ಲ ಇದಕ್ಕೆ ಸರಿಯಾದಂಗ ಅಧಿಕಾರಿಗ [illegible]

ಎಂದು ಅನ್ನಿಸುತ್ತದೆ ಬಹುಶಃ ನಿಮ್ಮ ಕ್ಷೇತ್ರದಲ್ಲಿ ಈ ರೀತಿ ಇರಬಹುದು ಅಥವಾ ನಮ್ಮ ಕ್ಷೇತ್ರದಲ್ಲಿ ಇಲ್ಲ ಹೈಸ್ಕೂಲ್ ಟೀಚರ್ಸ್‌ಗೆ 9–10 ತಿಂಗಳುಗಳಿಂದ ಸಂಬಳವಾಗಿಲ್ಲ ಅವರು ಹೆಂಡತಿ, ಮಕ್ಕಳನ್ನು ಸಾಕುವುದು, ಬೇಡವೇ? ಅದು ಆಯವ್ಯಯದಲ್ಲಿ ಏಕೆ ಬರಲಿಲ್ಲ? ಅದನ್ನು ಏಕೆ ಕೊಡುವುದಕ್ಕೆ ಆಗುವುದಿಲ್ಲ? ನಾನು ಇಲ್ಲಿಗೆ ಬರುವಾಗ ಹೇಳುತ್ತಾರೆ, ನಮ್ಮ ಜಿಲ್ಲೆಯಲ್ಲಿ ಯಾವುದೋ ಸ್ಕೀಮ್‌ನಲ್ಲಿರುವವರು 40 ಜನರಿಗೆ ಸಂಬಳವಾಗಿಲ್ಲ, ಅವರು ಎಂದು ಹೇಳುತ್ತಾರೆ ಅನುದಾನಿತ ಶಾಲೆಗಳಲ್ಲೂ ಅಷ್ಟೇ, ಸರ್ಕಾರಿ ಶಾಲೆಗಳಲ್ಲು ಅಷ್ಟೇ ನಿಮ್ಮ ಹತ್ತಿರ ಅಭಿವೃದ್ಧಿಗೆ ದುಡ್ಡಿಲ್ಲ ಬೇರೆ ರಸ್ತೆಗಳನ್ನು ಮಾಡುವುದಕ್ಕೆ, ಹೊಂಡಗಳನ್ನು ಮುಚ್ಚುವುದಕ್ಕೆ ದುಡ್ಡಿಲ್ಲ, ಕುಡಿಯುವ ನೀರಿಗೆ ಇಲ್ಲ, ಶಾಲೆ ಬಿಲ್ಡಿಂಗ್‌ಗಳಿಗೆ ಇಲ್ಲ ಸರ್ಕಾರಿ ನೌಕರರಿಗೆ ಸಾದಿಲ್ವಾರ್ ನಿಧಿಯಿಂದ ಸಂಬಳವನ್ನು ಏಕೆ ಕೊಡುತ್ತಿದ್ದೀರಿ? ಇದನ್ನು ಈ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿಕೊಳ್ಳುವುದಕ್ಕೆ ಏನು ತೊಂದರೆಯಾಗಿದೆ ಎಂಬುದನ್ನು ತಾವು ದಯಮಾಡಿ ತಿಳಿಸಬೇಕಾಗುತ್ತದೆ ಇನ್ನು ಸರ್ವ ಶಿಕ್ಷಣ ಅಭಿಯಾನ ಇದು ಕೇಂದ್ರ ಸರ್ಕಾರದ, ಯೋಜನೆ ನಡೆಯುತ್ತಿದೆ ಇದರಲ್ಲಿ ಕೇಂದ್ರ ಸರ್ಕಾರದ್ದು ಶೇಕಡಾ 75ರಷ್ಟು, ಶೇಕಡಾ 25ರಷ್ಟು ರಾಜ್ಯ ಸರ್ಕಾರದ್ದು ಹಣವಿರುತ್ತದೆ. ಅದು ಇಷ್ಟೇ ಹಣವನ್ನು ಕೊಡುವುದಕ್ಕಾಗುವುದೆಂದು, 10 ವರ್ಷಗಳಿಗೆ ಆಗುವಷ್ಟು ಯೋಜನೆಯನ್ನು ತಯಾರು ಮಾಡಿಕೊಂಡು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅಗ್ರಿಮೆಂಟ್ ಮಾಡಿಕೊಂಡು, ಎಲ್ಲವೂ ಆಗಿ ಹೋಗಿದೆ ಇದರಲ್ಲಿ ಶೇಕಡಾ 75ರಷ್ಟು ಕೇಂದ್ರ ಸರ್ಕಾರ ಹಣವನ್ನು ಏನು ಬಿಡುಗಡೆ ಮಾಡಬೇಕಾಗಿತ್ತೋ, ಅದನ್ನು ಬಿಡುಗಡೆ ಮಾಡಿದ್ದಾರೆ ಆದರೆ ರಾಜ್ಯ ಸರ್ಕಾರದಿಂದ ಕೊಡಬೇಕಾದಂತಹ ಹಣ ಇನ್ನೂ ಬಿಡುಗಡೆ ಮಾಡಿಲ್ಲ ಇದು ಒಂದು ವರ್ಷವಾಗಿ ಆಗಸ್ಟ್ ತಿಂಗಳು ಆದರೂ ಕೂಡ, ಇನ್ನು ಒಂದು ಪೈಸೆಯೂ ಬಿಡುಗಡೆ ಆಗಿಲ್ಲ, ಶೇಕಡಾ 25ರಷ್ಟು ಹಣ ಬಿಡುಗಡೆಯಾಗಲಿಲ್ಲವೆಂದರೆ, ನಾವು ಆಯವ್ಯಯವನ್ನು ಏಕೆ ಮಾಡಬೇಕು? ಅದರಲ್ಲಿ ಏಕೆ ಪ್ರೊವೈಡ್ ಮಾಡಿ ಕೊಳ್ಳುವುದಕ್ಕೆ ಆಗಲಿಲ್ಲ? ಅದು ಅರ್ಧಂಬರ್ಧವಾಗಿದೆ, ಶೌಚಾಲಯಗಳು ಅರ್ಧ ಆಗಿದೆ, ಸರ್ವ ಶಿಕ್ಷಣ ಅಭಿಯಾನದಲ್ಲಿ ಬಂದಿರುವಂತಹ ಶಾಲಾ ಕಟ್ಟಡಗಳು ಅರ್ಧಂಬರ್ಧವಾಗಿವೆ ಅವೆಲ್ಲಾ ಯಾರ ಸ್ಮಾರಕಗಳು ಎಂದು ಹಾಗೆ ನಿಲ್ಲಿಸುವುದು? ಅದಕ್ಕೆ ಶೇಕಡಾ 25ರಷ್ಟು ಹಣವನ್ನು ಬಿಡುಗಡೆ ಮಾಡಿದ್ದರೆ, ಅಥವಾ ಸಾದಿಲ್ವಾರ್ ನಿಧಿಯಿಂದಲೇ ಖರ್ಚು ಹಾಕ ಬಹುದಾಗಿತ್ತಲ್ಲಾ, ಅದನ್ನೂ ಕೂಡ ಬಿಡುಗಡೆ ಮಾಡಲಿಲ್ಲ ಈ ಸಾದಿಲ್ವಾರು ನಿಧಿಗೆ ಕೈ ಹಾಕುವಂಥ ಕೆಲಸಕ್ಕೆ ಇವರು ಏಕೆ ಹೋಗುತ್ತಿದ್ದಾರೆ ಎಂಬುದು ಗೊತ್ತಾಗಲಿಲ್ಲ ಸಿಎಜಿ ರಿಪೋರ್ಟನ್ನು ಮಾನ್ಯ ಹಣಕಾಸಿನ ಸಚಿವರಾಗಲೀ ಅಥವಾ ವಿವಿಧ ಇಲಾಖೆಗಳ ಸಚಿವರಾಗಲೀ ಅಥವಾ ಮೇಲಿರುವಂಥ ಅಧಿಕಾರಿಗಳಾಗಲೀ ಸ್ವಲ್ಪ ವೀಕ್ಷಣೆ ಮಾಡುವಂಥ ಸಂಪ್ರದಾಯವೇ ನಮ್ಮಲ್ಲಿ ಇಲ್ಲ ಎಂದು ಕಾಣುತ್ತದೆ ಏಕೆಂದರೆ, 2002–03ನೇ ಇಸವಿಯ ಲಾಟರಿ ಬಾಬಿನಲ್ಲಿ ಹೇಳುತ್ತಾರೆ, "ಮಾರಾಟ ಪ್ರತಿನಿಧಿ ವಸೂಲು ಮಾಡಿದ 256 13 ಕೋಟಿ ರೂಪಾಯಿಗಳ ಒಟ್ಟು ಮಾರಾಟದ ಉತ್ಪತ್ತಿಯನ್ನು ದೈನಿಕ ಆಧಾರದ ಮೇಲೆ ಸರ್ಕಾರಕ್ಕೆ ಜಮಾ ಮಾಡುವುದು ಅವಶ್ಯಕವಾಗಿದ್ದು ಅದರ ವಿರುದ್ಧವಾಗಿ ವಾಸ್ತವವಾಗಿ ಜಮಾ ಮಾಡಿದ ಮೊತ್ತವು ಕೇವಲ 52.87 ಕೋಟಿ ರೂಪಾಯಿಗಳಾಗಿತ್ತು 203 86 ಕೋಟಿ ರೂಪಾಯಿಗಳ ಕೊರತೆಯ

ಮೇಲೆ ಮಾರಾಟ ಪ್ರತಿನಿಧಿಯು 253 80 ಕೋಟಿ ರೂಪಾಯಿಗಳ ಬಡ್ಡಿ ಪಾವತಿಸಲು ಬಾಧ್ಯನಾಗಿದ್ದು, ಅದನ್ನೂ ಸಹ ತಗಾದೆ ಮಾಡಿರಲಿಲ್ಲ" ಎಂದು ಹೇಳಿದ್ದಾರೆ ದುಡ್ಡಿಲ್ಲ ಎಂದ ಕೂಡಲೇ ಸಾದಿಲ್ವಾರು ನಿಧಿಗೆ ಕೈ ಹಾಕುವ ಬದಲು, ಯಾವ ಹಣ ನಮಗೆ ಬರುವುದಿದೆ ಅದನ್ನು ವಸೂಲು ಮಾಡಬೇಕು ಇದು ಯಾರು ತಿಂದು ಹೋಗುವುದಿದೆ ಸ್ವಾಮಿ? ಈ ಲಾಟರಿ ಆಡುವವನು ಮನೆ ಮಾರಾಟ ಮಾಡಿಕೊಂಡು, ಹರಾಜ್ ಎದ್ದು ಹೋಗಿ ಲಾಟರಿಯಾಡಿ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಅವನು ಪುಕ್ಕಸಟ್ಟೆಯೇನೂ ಆಡಿರುವುದಿಲ್ಲ, ಲಾಟರಿಯನ್ನು ಅವನು ಉದ್ರಿಯೇನೂ ಆಡಿರುವುದಿಲ್ಲ ನಾಳೆ ಕೊಡುತ್ತೇನೆ, ಇನ್ನೊಂದು ದಿನ ಕೊಡುತ್ತೇನೆ ಎಂದು ಹೇಳಿ ಆಡಿರುವುದಿಲ್ಲ ಅಂಥಾದ್ದನ್ನು ವಸೂಲು ಮಾಡಲು ಆಗುವುದಿಲ್ಲ ಜಾಸ್ತಿ ಹಣ ಖರ್ಚಾಗಿರತಕ್ಕಂಥಾದ್ದನ್ನು ಸಾದಿಲ್ವಾರು ನಿಧಿಯಿಂದ ತೆಗೆದು ಖರ್ಚು ಮಾಡುತ್ತೇವೆ, ಅದನ್ನು ಮತ್ತೆ ತುಂಬಲಿಕ್ಕೆ ಹೋಗುತ್ತೇವೆ ಇದು ಬೇರಬೇರೆ ಬಜೆಟ್ ಮೇಲೆ, ಬೇರಬೇರೆ ಕಾರ್ಯಕ್ರಮಗಳ ಮೇಲೆ ದೊಡ್ಡ ಪರಿಣಾಮವನ್ನು ಬೀರುತ್ತದೆ ಸರ್ಕಾರ ಈ ರೀತಿ ಮಡುತ್ತಾ ಹೋದರೆ ಇದರ ಅರ್ಥವೇನು ಎಂಬುದು ಗೊತ್ತಾಗುತ್ತಿಲ್ಲ ಮಾನ್ಯ ಸಿದ್ಧರಾಮಯ್ಯನವರೇ, ಆಗಲೇ ತಾವು ಇರಲಿಲ್ಲ, ಎದ್ದುಹೋಗಿದ್ದಿರಿ, ನನ್ನ ವಿನಂತಿ ಇದೆ, ನಮ್ಮ ಹೈಸ್ಕೂಲು ಅಧ್ಯಾಪಕರಿಗೆ ಕಳೆದ 9-10 ತಿಂಗಳಿಂದ ಸಂಬಳ ಕೊಟ್ಟಿಲ್ಲ ಇದನ್ನು ಏಕೆ ಕೊಡಲು ಆಗುತ್ತಿಲ್ಲ? ಅಭಿವೃದ್ಧಿ ಕೆಲಸಗಳಿಗೆ ದುಡ್ಡಿಲ್ಲ ಬಿಡಿ, ಆದರೆ ಸಂಬಳ ಸಾರಿಗೆಗಳಿಗಾದರೂ ಏನಾದರೂ ಮಾಡಬೇಕು ಇಲ್ಲವೆಂದರೆ, ಸಾದಿಲ್ವಾರು ನಿಧಿಯಿಂದಲಾದರೂ ತೆಗೆದು ಅವರಿಗೆ ಸಂಬಳ ಕೊಡಬೇಕು ದಯವಿಟ್ಟು ಇದನ್ನು ಮಾಡಬೇಕು

**ಶ್ರೀ ಸಿದ್ಧರಾಮಯ್ಯ** ಕೊಡೋಣ ಬಿಡಿ ಚೆನ್ನಾಗಿ ಹೇಳಿದಿರಿ

**ಶ್ರೀ ಅರಗ ಜ್ಞಾನೇಂದ್ರ** ನಾನು ಏನೇ ಚೆನ್ನಾಗಿ ಹೇಳಿದರೂ ಕೂಡ ರಿಸಲ್ಟ್ ಏನೂ ಇಲ್ಲ ಚೆನ್ನಾಗಿ ಹೇಳಿದ್ದೀರಿ ಎಂದು ಹೇಳುತ್ತಿದ್ದೀರಿ ಆದರಿಂದ ನಿಮ್ಮ ಮನಸ್ಸಿಗೆ ಬಹಳ ಆನಂದವಾಗಿ 50 ಲಕ್ಷ ರೂ.ಗಳನ್ನು ಶಾಸಕರ ನಿಧಿಯೆಂದು ಘೋಷಣೆ ಮಾಡಿಬಿಡಿ ಈಗ ನನ್ನ ಕ್ಷೇತ್ರದಲ್ಲಿ ನೆರೆ ಬಂದಿದೆ ಮಧ್ಯಾಹ್ನ ನಾನು ಊಟಕ್ಕೆ ಹೋದಾಗ ನನಗೆ ಫೋನ್ ಮಾಡಿ ಹೇಳುತ್ತಾರೆ, ಎರಡು ಸೇತುವೆಗಳು ಇದ್ದಕ್ಕಿದ್ದ ಹಾಗೆ ಕುಸಿದು ಹೋಗಿವೆ, ಎರಡು ರೋಡುಗಳು ಕಟ್ ಆಗಿವೆ ಇದನ್ನು ಯಾವ ನಿಧಿಯಿಂದ ಮಾಡಿಸಬೇಕು ಎನ್ನುವುದು ಗೊತ್ತಿಲ್ಲ ನಮ್ಮ ಹತ್ತಿರ ದುಡ್ಡಿಲ್ಲ ಎಂದು ಜಿಲ್ಲಾ ಪರಿಷತ್ತಿನವರೂ ಕೈ ಎತ್ತಿದ್ದಾರೆ ಸ್ಥಳೀಯ ಪಿ ಡಬ್ಲ್ಯೂಡಿ ಯವರೂ ದುಡ್ಡಿಲ್ಲ ಎಂದು ಹೇಳುತ್ತಾರೆ ಮಾನ್ಯ ಸಿದ್ಧರಾಮಯ್ಯನವರೇ, ಸರ್ಕಾರದ ಮರ್ಯಾದೆ ಹರಾಜಾಗುತ್ತಿದೆ ಏಕೆಂದರೆ, ನಮ್ಮ ಪಿಡಬ್ಲ್ಯೂಡಿ ಯಲ್ಲಿ, ಜಿಲ್ಲಾ ಪರಿಷತ್ತಿನಲ್ಲಿ ಫೋನ್ ಡಿಸ್-ಕನೆಕ್ಟ್ ಆಗಿ ಆರು ತಿಂಗಳಾಯಿತು ನಾನು ಅಲ್ಲಿಂದ ಒಂದು ಫೋನ್ ಮಾಡಿ ಮಾತಾಡಿಲ್ಲ ಅಧ್ಯಕ್ಷರೇ, ನಿಮ್ಮ ಕ್ಷೇತ್ರದಲ್ಲಿ ಪೋನ್ ಸೌಲಭ್ಯ ಇದೆಯೋ, ಇಲ್ಲವೋ ಗೊತ್ತಿಲ್ಲ ತಾಲ್ಲೂಕು ಮಟ್ಟದ ಸರ್ಕಾರಿ ಕಛೇರಿಗಳಲ್ಲಿ ಫೋನ್‌ಗಳು ಡಿಸ್-ಕನೆಕ್ಟ್ ಆಗಿವೆ

**ಶ್ರೀ ಜಗದೀಶ್ ಶೆಟ್ಟರ್** ಎಲ್ಲಾ ಕಡೆಯೂ ಪರಿಸ್ಥಿತಿ ಹಾಗೆಯೇ ಇದೆ ತಹಶೀಲ್ದಾರ್ ಕಛೇರಿಗೆ ಇಲ್ಲ, ಪಿಡಬ್ಲ್ಯೂಡಿ ಕಛೇರಿಗೆ ಇಲ್ಲ, ಎಲ್ಲಾ ಕಡೆ ಫೋನ್ ಡಿಸ್-ಕನೆಕ್ಟ್ ಆಗಿವೆ ಏಕೆಂದರೆ ಫೋನ್ ಬಿಲ್‌ಗಳ ಪೇಮೆಂಟನ್ನೇ ಮಾಡಿಲ್ಲ

**ಶ್ರೀ ಅರಗ ಜ್ಞಾನೇಂದ್ರ** ಫೋನ್ ಬಿಲ್ ಕೊಡಲೂ ನಿಮ್ಮ ಹತ್ತಿರ ದುಡ್ಡಿಲ್ಲವೆಂದರೆ, ಅದು ಯಾವ ತರಹದ ಆಯವ್ಯಯ, ಅದು ಎಂಥ ಬಜೆಟ್, ಅದು ಎಂಥ ಪೂರಕ ಬಜೆಟ್ ಎಂಬುದು ನನಗೆ ಅರ್ಥವಾಗುತ್ತಿಲ್ಲ -

**ಶ್ರೀ ಬಸವರಾಜ ರಾಯರೆಡ್ಡಿ** ಈಗ ಮೊಬೈಲ್ ಬಂದಿರುವುದರಿಂದ ಲ್ಯಾಂಡ್ ಫೋನ್ ಬೇಕಿಲ್ಲ

**ಶ್ರೀ ಗೋವಿಂದ ಎಂ ಕಾರಜೋಳ (ಮುಧೋಳ್)** ಮಾನ್ಯ ಅಧ್ಯಕ್ಷರೇ, ಹಣ ಕಡಿಮೆ ಬಿತ್ತು ಎಂದು 27 ಇಲಾಖೆಗಳ ಕಾಂಟಿಂಜೆನ್ಸಿ ಫಂಡ್ ಏನಿತ್ತು, ಅದರಿಂದ ಹಣ ತೆಗೆದು ಯೂಸ್ ಮಾಡಿಕೊಂಡಿದ್ದೀರಿ ಆದ್ದರಿಂದ, ಈಗ ಕಾಂಟಿಂಜೆನ್ಸಿ ಫಂಡ್‌ಗೆ ಮರಳಿ ಜಮಾ ಮಾಡಿ ಈಗ ಒಪ್ಪಿಗೆ ಪಡೆಯುತ್ತಿದ್ದೀರಿ ಪಿ ಡಬ್ಲ್ಯು ಡಿ ಎಂದ ಕೂಡಲೇ, ನಾನು ಹೇಳುತ್ತಿದ್ದೇನೆ, ಇದರ ಜೊತೆಯಲ್ಲಿ ಅದನ್ನೂ ವಾಪಸ್ಸು ಕೊಡಬೇಕಲ್ಲವೇ? 27 ಇಲಾಖೆಗಳ ಜೊತೆಗೆ 28ನೇ ಇಲಾಖೆಯಾಗಿ ಇದು ಸೇರಬೇಕು 11ನೇ ಹಣಕಾಸಿನಡಿಯಲ್ಲಿ ಕೇಂದ್ರ ಸರ್ಕಾರದಿಂದ, ಈ ರಾಜ್ಯದಲ್ಲಿರತಕ್ಕಂಥ ರಸ್ತೆಗಳ ಮೇಂಟೆನೆನ್ಸ್‌ಗೆ 287 69 ಕೋಟಿ ರೂ ಹಣ ಬಂದಿತ್ತು, ಅದನ್ನೂ ಕೂಡ ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಬೇರೆಯದ್ದಕ್ಕೆ ವರ್ಗಾವಣೆ ಮಾಡಿಕೊಂಡಿದ್ದಾರೆ ಆದ್ದರಿಂದ, ರಸ್ತೆಗಳ ಸುಧಾರಣೆಗಾಗಿ ಇರುವ ಈ 287 ಕೋಟಿ ರೂಪಾಯಿಗಳನ್ನೂ ಈ ಪೂರಕ ಅಂದಾಜಿನಲ್ಲಿ ಸೇರಿಸಿ ಅನುಮತಿ ಪಡೆಯಬೇಕು ಎಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಏಕೆಂದರೆ, ಸ್ಯಾಲರಿ ಕೊಡಲಿಕ್ಕೆ ಅಥವಾ ಮತ್ತೊಂದು ಎಕ್ಸ್‌ಪೆಂಡಿಚರ್ ಮಾಡಲಿಕ್ಕೆ ಬಂದಂಥ ಹಣವಲ್ಲ ಅದು ಈ ರಾಜ್ಯದಲ್ಲಿರತಕ್ಕಂಥ ರಸ್ತೆಗಳ ಉಸ್ತುವಾರಿ ಮಾಡಲು ಬಂದಂಥ ಹಣ ಅದು ಅದನ್ನೂ ಈ ಪೂರಕ ಅಂದಾಜಿನಲ್ಲಿ ಸೇರಿಸಿ ಒಪ್ಪಿಗೆ ಪಡೆಯಬೇಕು ಎಂದು ಮಾನ್ಯ ಹಣಕಾಸು ಸಚಿವರಲ್ಲಿ ನಾನು ವಿನಂತಿ ಮಾಡುತ್ತೇನೆ.

**ಶ್ರೀ ಎನ್ ಯೋಗೀಶ್ ಭಟ್ (ಮಂಗಳೂರು)** ಮಾನ್ಯ ಅಧ್ಯಕ್ಷರೇ, ಅಭಿಯಾಚನ ಸಂಖ್ಯೆ (2) ರಲ್ಲಿ, ತಾವು ವಿಶೇಷವಾಗಿ ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯಲ್ಲಿ ಕಿರು ಮೀನುಗಾರಿಕಾ ಬಂದರಿಗೆ ಸಂಬಂಧಪಟ್ಟಂತೆ ತಾವು ಏನು ಕೊಟ್ಟಿದ್ದೀರೋ, ಅದು ಸ್ವಾಗತಾರ್ಹ ಮಂಗಳೂರನ್ನು ಸರ್ವತು ಬಂದರನ್ನಾಗಿ ಮಾಡಬೇಕು ಎನ್ನುವ ಬೇಡಿಕೆ ಇದೆ, ಮತ್ತು ಒಂದು ಸಾವಿರ ಟ್ರಾಲರ್ ಬೋಟುಗಳು ನಿಲ್ಲಲೂ ಸಹಾ ಜಾಗ ಇಲ್ಲದಂಥ ದುಸ್ಥಿತಿ ಇದೆ ಈ ನಿಟ್ಟಿನಲ್ಲಿ ತಾವು ಇದಕ್ಕೆ ಏನಾದರೊಂದು ಸಹಾಯ ಮಾಡುತ್ತೀರಿ ಎನ್ನುವ ನಿರೀಕ್ಷೆಯಲ್ಲಿದ್ದೆ. ಎರಡನೆಯದಾಗಿ, ವಿಶೇಷವಾಗಿ ಕಡಲ ಕೊರೆತಕ್ಕೆ ಸಂಬಂಧಪಟ್ಟಂತೆ, 9 65 ಕೋಟಿ ರೂಪಾಯಿಗಳಲ್ಲಿ 9 ಕೋಟಿ ರೂ ಗಳನ್ನು ವಿತ್‌ಡ್ರಾ ಮಾಡಿದ್ದೀರಿ ಇದನ್ನು ತಾವು ದಯವಿಟ್ಟು ಫೈಲ್ ತರಿಸಿ ನೋಡಿ ದಯವಿಟ್ಟು ರಿಲೀಸ್ ಮಾಡಬೇಕು ಕಳೆದ ಮೂರು ವರ್ಷಗಳಲ್ಲಿ ಮೀನುಗಾರಿಕಾ ಬಂದರಿನಲ್ಲಿ ಅಭಿವೃದ್ಧಿಗಾಗಿ ಕಾದಿರಿಸಿದಂಥ ಜಾಗವೆಲ್ಲವನ್ನೂ ಖಾಸಗಿಯವರಿಗೆ ಮಾರಾಟ ಮಾಡಿದ್ದಾರೆ ಇದರ ಬಗ್ಗೆ ತನಿಖೆ ನಡೆಸಿದ್ದಲ್ಲಿ ನಿಮಗೆ ಸಾಕಷ್ಟು ಮಾಹಿತಿಗಳು ಸಿಗುತ್ತವೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಒಂದು ಕೆಲಸ ಮಾಡೋಣ ಅದನ್ನೂ ಈಗ ಚರ್ಚೆ ಮಾಡುತ್ತಿರುವ ಭೂ ಹಗರಣದಲ್ಲಿ ಸೇರಿಸಿಬಿಡೋಣ

**ಶ್ರೀ ಎನ್ ಯೋಗೀಶ್ ಭಟ್** ಇನ್ನು ಅಭಿಯಾಚನೆ ಸಂಖ್ಯೆ (8)ರಲ್ಲಿ ಮಂಗಳೂರು-ಬೆಂಗಳೂರನ್ನು ಜೋಡಣೆ ಮಾಡುವ ಒಂದು ಯೋಜನೆ ಇದೆ ಅದಕ್ಕೆ 60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ಬಗ್ಗೆ ಮೂಲ ಬಜೆಟ್‌ನಲ್ಲಿ ಏನನ್ನೂ ಹಾಕಿಲ್ಲ, ಪೂರಕ ಬಜೆಟ್‌ನಲ್ಲಾದರೂ ಅದನ್ನು ಮಂಡಿಸುತ್ತೀರಿ ಎನ್ನುವ ಆಶೆಯಿಂದ ನೋಡುತ್ತಿದ್ದೆ ಅದರಲ್ಲಿ ಕೂಡ ರಿಲೀಸ್ ಆಗಿಲ್ಲ ಆದ್ದರಿಂದ, ಇದರ ಬಗ್ಗೆ ವ್ಯವಸ್ಥೆ ಮಾಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ಕರಾವಳಿ ಪ್ರದೇಶದಲ್ಲಿ ಎ ಡಿ.ಬಿಗೆ ಸಂಬಂಧಪಟ್ಟ ಪ್ರಾಜೆಕ್ಟ್‌ಗಳಲ್ಲಿ ಕೆ ಯು.ಐ.ಡಿ.ಎಫ್.ಸಿಗೆ ಸಂಬಂಧಪಟ್ಟ ಹಾಗೆ ಇರುವುದರಿಂದ ಉಲ್ಲೇಖ ಮಾಡುತ್ತಿದ್ದೇನೆ. ಕುಡಿಯುವ ನೀರಿನ ಜೋಡಣೆಗೆ ಸಪ್ಲೈ ಆದಂಥ ವಾಲ್ವ್‌ಗಳು ಕಳಪೆ ದರ್ಜೆಯದ್ದು ಎನ್ನುವ ಒಂದು ಆರೋಪವಿದೆ ಇದರ ಬಗ್ಗೆ ತನಿಖೆ ನಡೆಸಬೇಕು ಎಂದ ಹೇಳುತ್ತೇನೆ ಏಕೆಂದರೆ, ಇವುಗಳು ಹೆಚ್ಚು ಬಾಳಿಕೆ ಬರಲಾರವು ಎನ್ನುವ ಆರೋಪವಿರುವುದರಿಂದ ಇದರ ಬಗ್ಗೆ ಸಹ ತಾವು ತನಿಖೆ ನಡೆಸಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಇನ್ನು ಅಭಿಯಾಚನೆ ಸಂಖ್ಯೆ (14)ರಲ್ಲಿ, ನೋಂದಣಿ ಮತ್ತು ಮುದ್ರಣ ಇಲಾಖೆಗೆ ಸಮಬಂಧಪಟ್ಟಂತೆ, ತಾವು ಅಲ್ಲಿಗೆ ಕಂಪ್ಯೂಟರನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದಿರಿ ಅದರ ಜೊತೆಯಲ್ಲಿ ಫ್ರಾಂಕಿಂಗ್ ಮೆಷಿನ್‌ಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕು ಕೋರ್ಟ್ ಫೀ ಸ್ಟ್ಯಾಂಪುಗಳ ಕೊರತೆ ಮತ್ತು ಛಾಪಾ ಕಾಗದಗಳ ಕೊರತೆ ಇರುವುದರ ಹಿನ್ನೆಲೆಯಲ್ಲಿ ಫ್ರಾಂಕಿಂಗ್ ಮೆಷಿನ್‌ಗಳನ್ನು ಒದಗಿಸಬೇಕು ಎನ್ನುವಂಥ ವಿಶೇಷ ವಿನಂತಿಯನ್ನು ನಾನು ಮಾಡುತ್ತಿದ್ದೇನೆ ಕೊನೆಯದಾಗಿ, ಅಭಿಯಾಚನೆ ಸಂಖ್ಯೆ 23ರಲ್ಲಿ ತಾವು ಐ ಟಿ.ಗಳಿಗೆ ಕೊಟ್ಟಿರುವ 646 ಲಕ್ಷ ರೂ.ಗಳು ಸ್ವಾಗತಾರ್ಹ ಆದರೆ ಮಂಗಳೂರಿನಲ್ಲಿರುವ ಕರ್ನಾಟಕ ಪಾಲಿಟೆಕ್ನಿಕ್ ಒಂದು ಅಟಾನಮಸ್ ಬಾಡಿಯಾಗಿದೆ ಕಳೆದ 10 ತಿಂಗಳಿಂದ ಅದಕ್ಕೆ ಗ್ರ್ಯಾಂಟುಗಳೇ ಸಿಕ್ಕಿಲ್ಲ ಸಂಬಳ ಕೊಡಲಿಕ್ಕೂ ಕಷ್ಟವಾಗುವಂಥ ಸ್ಥಿತಿ ಬಂದಿದೆ ಇಂಥ ಕಡೆಗಳಿಗೂ ಕೂಡ ತಾವು ಗಮನ ಹರಿಸಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ ಕರ್ನಾಟಕ ಪಾಲಿಟೆಕ್ನಿಕ್‌ಗೆ ಗ್ರ್ಯಾಂಟನ್ನು ರಿಲೀಸ್ ಮಾಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ ಕರ್ನಾಟಕ ಕಾರ್ಮಿಕ ಮತ್ತು ಕಲ್ಯಾಣ ಮಂಡಳಿ ಏನಿದೆ, ಅದು ಒಳ್ಳೆಯ ಕೆಲಸ ಮಾಡುತ್ತಿದೆ ಅದು ಈಗ ಮುಚ್ಚುವ ಹಂತದಲ್ಲಿದೆ ಮತ್ತು ಅಲ್ಲಿರುವ ನೌಕರರ ಸ್ಥಿತಿ ಅತಂತ್ರದಲ್ಲಿದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕೋಟಿ 9 ಲಕ್ಷ ರೂಪಾಯಿಗಳ ನಿಧಿಯನ್ನು ಸ್ವಸಹಾಯ ಗುಂಪುಗಳ ಮೂಲಕ ಸಂಗ್ರಹ ಮಾಡಿ, ಸ್ವಸಹಾಯ ಗುಂಪುಗಳೊಡನೆ ಕೆಲಸ ಮಾಡುತ್ತಿರುವಂಥ 700ಕ್ಕೂ ಹೆಚ್ಚು ಮುಂದುವರಿಕೆ ಶಿಕ್ಷಣ ಕೇಂದ್ರಗಳು ಹಾಗೂ 71 ನೋಡಲ್ ಹೊಂದಿರುವಂಥ ಶಿಕ್ಷಣ ಕೇಂದ್ರಗಳನ್ನು ಮಾಡಿದಂಥ ಪ್ರೇರಕ ಪ್ರೇರಕಿಯರಿಗೆ ಕಳೆದ 18 ತಿಂಗಳುಗಳಿಂದ ಸಂಬಳ ಸಿಕ್ಕಿಲ್ಲ ಅವರಿಗೆ ಗೌರವಧನ ಕೊಡುವಂಥಾದ್ದು 600 ರೂಪಾಯಿಗಳು ಕಳೆದ 18 ತಿಂಗಳಿಂದ ಅದು ಬಿಡುಗಡೆಯಾಗಿಲ್ಲ ಈ ನಿಟ್ಟಿನಲ್ಲಿ ಕೂಡ ಮಾನವೀಯ ನೆಲೆಯಲ್ಲಿ ತಾವು ಸ್ಪಂದಿಸಬೇಕು ಎನ್ನುವ ವಿನಂತಿಯನ್ನು ಕೂಡ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ

**ಶ್ರೀ ಸಿದ್ಧರಾಮಯ್ಯ (ಉಪಮುಖ್ಯ ಮಂತ್ರಿಗಳು ಮತ್ತು ಹಣಕಾಸಿನ ಸಚಿವರು)** ಮಾನ್ಯ ಸಭಾಧ್ಯಕ್ಷರೇ, ಪೂರಕ ಅಂದಾಜುಗಳ ಮೇಲೆ ಎಲ್ಲಾ ಮುಖಂಡರುಗಳು ಮಾತನಾಡಿದ್ದಾರೆ

ಆದರ ಅದಕ್ಕೆ ಪೂರಕವಾಗಿ ಮಾತನಾಡಿರುವವರು ಬಹಳ ಕಡಿಮೆ ಮಾನ್ಯ ಮಾಧುಸ್ವಾಮಿಯವರೊಬ್ಬರು ಪೂರಕವಾಗಿ ಮಾತನಾಡಿದ್ದಾರೆ, ಶ್ರೀಮಾನ್ ಜಯಪ್ರಕಾಶ್ ಹಗಡೆಯವರೂ ಮಾತನಾಡಿದ್ದಾರೆ ಸಾಮಾನ್ಯವಾಗಿ ಎಲ್ಲಾ ಸದಸ್ಯರು ಮಾತನಾಡಿದಂಥಾದ್ದು, ಬಜೆಟ್ ಮೇಲೆ ಮುಂದುವರೆದ ಚರ್ಚೆಯ ರೀತಿಯಲ್ಲಿ ಆಗಿದೆ ಈ ಪೂರಕ ಅಂದಾಜುಗಳನ್ನು ಮಂಡಿಸಿರುವುದು 73 36 ಕೋಟಿ ರೂಪಾಯಿಗಳಿಗೆ ಕಳೆದ ಫೆಬ್ರವರಿಯಲ್ಲಿ ಬಜೆಟ್ ಮಂಡಿಸಿದಂದೀಚೆಗೆ ಕೆಲವು ಖರ್ಚುಗಳು ಏನು ಆಗಿವೆ, ಅದನ್ನು ಸಾದಿಲ್ವಾರು ನಿಧಿಯಿಂದ ಕೊಡತಕ್ಕಂಥಾದ್ದು ಸರ್ವೇಸಾಮಾನ್ಯವಾಗಿ ನಡೆದುಕೊಂಡು ಬಂದಿರತಕ್ಕಂಥದ್ದು ಯಾವುದು ಬಜೆಟ್‌ನಲ್ಲಿ ಇರುವುದಿಲ್ಲ ಅಥವಾ ಬಜೆಟ್‌ನಲ್ಲಿ ಇಟ್ಟಿರುವುದಕ್ಕಿಂತ ಹೆಚ್ಚು ಖರ್ಚಾಗಿರುತ್ತದೆ, ಇಂಥ ವಿಶೇಷ ಸನ್ನಿವೇಶಗಳಲ್ಲಿ, ಅನಿವಾರ್ಯ ಸಂದರ್ಭಗಳಲ್ಲಿ ಸರ್ಕಾರ ಇದನ್ನು ಮಾಡುತ್ತದೆ Part of the administration ಇದು ಸರ್ಕಾರ ನಡೆಯುವಾಗ ಇವೆಲ್ಲಾ ಆಗತಕ್ಕಂಥಾದ್ದು ಸರ್ವೇಸಾಮಾನ್ಯವಾಗಿ ಇಂಥ ಖರ್ಚುಗಳು ಬರುತ್ತವೆ ಇಂಥ ಖರ್ಚುಗಳು ಬರುತ್ತವೆ ಎನ್ನುವ ಕಾರಣಕ್ಕೋಸ್ಕರವಾಗಿಯೇ ರಾಜ್ಯಾಂಗದಲ್ಲಿ ಅದಕ್ಕೊಂದು provision ಅನ್ನು ಕೂಡ ಮಾಡಿರುವುದು ಆರ್ಟಿಕಲ್ 205 ಕ್ಲಾಸ್ 1ರಲ್ಲಿ ಈ ತರಹದವುಗಳು ಬರುತ್ತವೆ, ಯಾರೂ ಕೂಡ ಪರಿಪಕ್ವವಾಗಿ ಬಜೆಟ್‌ನಲ್ಲಿ ಎಲ್ಲಾ ಮುಂದಾಲೋಚನೆಯನ್ನು ಇಟ್ಟುಕೊಂಡು ಏನು ಇಷ್ಟೇ ಖರ್ಚು ಬರುತ್ತದೆ, ಎಂದು ಇಟ್ಟುಕೊಂಡು ಮಾಡುವುದಕ್ಕಾಗುವುದಿಲ್ಲ ಅವುಗಳು ಬರುತ್ತವೆ ಎಂದೇ ಈ ತರಹದ ಪ್ರಾವಿಷನ್ನನ್ನು constitutionನಲ್ಲಿ ಮಾಡಿರುವುದು ಇವು ಸಾರ್ವೇಸಾಮಾನ್ಯವಾಗಿ ಬರತಕ್ಕ ಖರ್ಚುಗಳು ಹೀಗಾಗಿ ನಾವು ಬಹಳ ಹಣವನ್ನು ಏನು ಸಾದಿಲ್ವಾರು ನಿಧಿಯಿಂದ ತೆಗೆದುಕೊಂಡಿಲ್ಲ ಬರೀ 73 ಕೋಟಿ ರೂ ಗಳಲ್ಲಿ 45 ಕೋಟಿ ರೂಪಾಯಿಗಳು ಮಾತ್ರ ಕ್ಯಾಷ್, ಇನ್ನು ಉಳಿದದ್ದು ಅಡ್ಜಸ್ಟ್‌ಮೆಂಟ್ ಆಗಿರತಕ್ಕಂಥದ್ದು ಮತ್ತೆ ಕೇಂದ್ರ ಸರ್ಕಾರದವರು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮುಗಳಿಗೆ ಒಂದು ಸಾರಿ ಮಾರ್ಚ್ ಕೊನೆಯಲ್ಲಿ ಬಂದುಬಿಟ್ಟಿರುತ್ತದೆ ಆ ಟೈಮ್‌ನಲ್ಲಿ ಬಜೆಟ್‌ನಲ್ಲಿರುವುದಕ್ಕಿಂತ ಹೆಚ್ಚಾಗಿ ಒಂದೋಂದು ಸಾರಿ ದುಡ್ಡನ್ನು ಕೊಟ್ಟಿರುತ್ತಾರೆ ಅದಕ್ಕೆ ರಾಜ್ಯ ಸರ್ಕಾರದವರು ಮ್ಯಾಚಿಂಗ್ ಗ್ರಾಂಟ್‌ನ್ನು ಕೊಡಬೇಕಾಗುತ್ತದೆ ಅದನ್ನು ಬಜೆಟ್‌ನಲ್ಲಿ ಇಟ್ಟುಕೊಂಡಿರುವುದಿಲ್ಲ ಅದಕ್ಕೆ ಬಜೆಟ್‌ನಲ್ಲಿ ಇಟ್ಟುಕೊಂಡಿರುವುದಕ್ಕಿಂತ ಹೆಚ್ಚಾಗಿ ಕೊಡಬೇಕಾಗಿ ಬಂದಾಗ ಅನಿವಾರ್ಯವಾಗಿ ಇವೆಲ್ಲಾ ಮಾಡಬೇಕಾಗುತ್ತದೆ ಇವುಗಳು ಅನಿವಾರ್ಯವಾಗಿ ಖರ್ಚಾಗತಕ್ಕದ್ದು ಮಾನ್ಯ ಯಡಿಯೂರಪ್ಪನವರು ಈ ಸರ್ಕಾರ ರೈತರ ಪರವಾಗಿ ಇಲ್ಲ ರೈತರಿಗೇನೂ ಸಹಾಯವನ್ನು ಮಾಡಲಿಲ್ಲ, ಆಮೇಲೆ ಅವರು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರತಕ್ಕದ್ದನ್ನು ಏನೂ ಮಾಡಿಲ್ಲ, ಈ ರೀತಿಯಾಗಿ ಅವರು ಪೂರಕ ಅಂದಾಜುಗಳ ಮೇಲೆ ಮಾತನಾಡುವಾಗ ಇವೆಲ್ಲಾ ಹೇಳಿದ್ದಾರೆ ಬಹುಶಃ ಈಗ ಅವರು ಎತ್ತಿರತಕ್ಕ ಎಲ್ಲಾ ವಿಚಾರಗಳ ಬಗ್ಗೆ ನಾನು ನನ್ನ ಈ ಸಾಮಾನ್ಯ ಬಜೆಟ್ಟನ್ನು ಸಾಮಾನ್ಯ ಚರ್ಚೆಗೆ ಕೊಡತಕ್ಕ ಉತ್ತರದಲ್ಲಿ ಸುದೀರ್ಘವಾಗಿ ಹೇಳಿದ್ದೇನೆ ಹೇಗೆ ಈ ಬಜೆಟ್ ರೈತರಿಗೆ ಅನುಕೂಲವಾಗುತ್ತದೆ, ಹೀಗೆ ಕೃಷಿಗೆ ಇಲ್ಲಿ ಆದ್ಯತ ಇದೆ? ಹೇಗೆ ಇದು ಬಡವರ ಪರವಾಗಿದೆ ಅನ್ನತಕ್ಕದ್ದನ್ನು ಎಲ್ಲವನ್ನೂ ಕೂಡ ಅಂಕಿಅಂಶಗಳನ್ನು ಇಟ್ಟು ಈ ಸದನದ ಮುಂದೆ ಬಹಳ ವಿಷದವಾಗಿ ಮಾನ್ಯ ವಾಟಾಳ್‌ರವರ

ಭಾಷೆಯನ್ನು ಉಪಯೋಗಿಸುವುದಾದರೆ ಸಮಗ್ರವಾಗಿ ಎಲ್ಲವನ್ನೂ ಕೂಡ ಹೇಳಿದ್ದೇನೆ ಈಗ ಮತ್ತೊಮ್ಮೆ ಮಾನ್ಯ ಮಾಧುಸ್ವಾಮಿಯವರು ಎರಡು ವಿಚಾರಗಳನ್ನು ಹೇಳಿದ್ದಾರೆ ಒಂದು, ಯಾವುದಕ್ಕೆ ಬಾಡಿಗೆ ಕೊಟ್ಟಿದ್ದೀರಿ ಎಂದು ಯಾವುದಕ್ಕೆ ಎಂದರೆ ನಮ್ಮ ಆರ್ಥಿಕ ಇಲಾಖೆಯಲ್ಲಿ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಕೆಲವು ಹೊಸ ಬಿಲ್ಡಿಂಗ್‌ಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದಾರೆ ವ್ಯಾಟ್ ಇಂಟ್ರಡ್ಯೂಸ್ ಮಾಡುವುದಕ್ಕೆ ಮತ್ತು ಕಂಪ್ಯೂಟರೈಜೇಷನ್ ಇವೆಲ್ಲಾ ಮಾಡುವುದಕ್ಕೆ ಬೇಕಾಗುತ್ತದೆಂದು ತೆಗೆದುಕೊಂಡಿದ್ದಾರೆ ಈಗ ಹೊಸ ಬಿಲ್ಡಿಂಗ್‌ಗಳನ್ನು ತೆಗೆದುಕೊಂಡಿದ್ದಾರೆ ಅದಕ್ಕೋಸ್ಕರವಾಗಿ ಬಾಡಿಗೆ ಕಡಿಮೆ ಬಿದ್ದಿತ್ತು, ಅದನ್ನು ಕೊಡುವಾಗ ಒಂದು ಕೋಟಿ ಚಿಲ್ಲರೆಯಷ್ಟನ್ನು ಹಣವನ್ನು ಸಾದಿಲ್ವಾರು ನಿಧಿಯಿಂದ ಕೊಟ್ಟಿದ್ದೇವೆ ಅದನ್ನು ಸಾದಿಲ್ವಾರು ನಿಧಿಗೆ ವಾಪಸ್ ಕೊಡಬೇಕಾಗಿದೆ ಅದು ಒಂದು ಎರಡನೆಯದು ಎಜುಕೇಷನ್‌ದ್ದು ಇದೆಯಲ್ಲಾ ಅದು ಐದು ಕೋಟಿ ರೂಪಾಯಿ ಅದು ಟೆಕ್ಸ್ಟ್‌ಬುಕ್ ಪ್ರಿಂಟ್ ಮಾಡಿದವರಿಗೆ ನಾವು ಪುಕ್ಕಟೆಯಾಗಿ ಟೆಕ್ಸ್ಟ್‌ಬುಕ್‌ಗಳನ್ನು ಕೊಡುತ್ತೇವಲ್ಲಾ, ಅದಕ್ಕ ಅಡಿಷನಾಲಿಟಿ ಅದನ್ನು ಪಬ್ಲಿಷರ್ಸ್‌ಗೆ ಕೊಡಬೇಕಾಗಿತ್ತು ಆ ಅಡಿಷನಾಲಿಟಿಯನ್ನು ತುಂಬುವ ಕೆಲಸ ಮಾಡಿದ್ದೇವೆ ಇವೆರಡೂ ಒಹಳ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ ಈ ಮೀನುಗಾರರದ್ದು ಇದೆಯಲ್ಲಾ, ಅದು ಕೊನೆಯಲ್ಲಿ ಬಂತು ಹಾಗಾಗಿ ನಾವು ಸರ್ಕಾರದಿಂದ ಮತ್ತೆ ನಮ್ಮ ಮ್ಯಾಚಿಂಗ್ ಗ್ರಾಂಟ್‌ನ್ನು ಕೊಡಬೇಕಾಗಿತ್ತು ಅದೂ ಕೂಡ ಇಲ್ಲಿ ಕೂಡತಕ್ಕಂಥದ್ದು ಆಗಿದೆ ಇನ್ನು ಉಳಿದದ್ದು ಎಲ್ಲಾ ಸಾಮಾನ್ಯ, ಉತ್ತರ ಕರ್ನಾಟಕದ ಕಡೆಗೆ 35 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ, ಅದು ಸಂಬಳ ಮತ್ತೆ ಕಚೇರಿಗೆ ಬೇಕಾದ ಖರ್ಚು, ಆ ಮಧ್ಯ ಕೊಟ್ಟಿರುವುದು ಈಗ ಬಜೆಟ್‌ನಲ್ಲಿ ಬೇರ ಎಲ್ಲಾ ಉತ್ತರ ಕರ್ನಾಟಕಕ್ಕೆ ಏನು ಮಾಡಬೇಕೆನ್ನುವುದನ್ನೆಲ್ಲಾ ಹೇಳಿದ್ದೇನೆ

**ಶ್ರೀ ಗೋವಿಂದಪ್ಪ ಎಂ ಕಾರಜೋಳ** ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ವಿಷಯ ಬಂದಾಗ ಸಂಬಳಕ್ಕಾದರೂ ಬಜೆಟ್‌ನಲ್ಲಿ ಹಣ ಇಡಬೇಕಲ್ಲವೇ? ಅದನ್ನೂ ಕೂಡ ಕಂಟಿನ್‌ಜನ್ಸಿ ಫಂಡ್‌ನಿಂದ ಕೊಡುವಂಥ ಪ್ರಸಂಗ ಏಕೆ ಬರುತ್ತದೆ?

**ಶ್ರೀ ಸಿದ್ಧರಾಮಯ್ಯ** ಮಾನ್ಯ ಅಧ್ಯಕ್ಷರೇ, ಆ 35 ಲಕ್ಷ ರೂಪಾಯಿಗಳನ್ನು ಅಲ್ಲಿ ಕಚೇರಿ ಖರ್ಚು ಮತ್ತು ಸಂಬಳಕ್ಕೆ ಕೊಟ್ಟಿರಲಿಲ್ಲ ಆ ಬಜೆಟ್‌ನಲ್ಲಿ ಹಿಂದೆ ಇಟ್ಟುಕೊಂಡಿರಲಿಲ್ಲ ಅದು ಅಡಿಷನಲ್ ಆಗಿ ಖರ್ಚಾಗಿತ್ತು ಅದನ್ನು ಸಾದಿಲ್ವಾರು ನಿಧಿಯಿಂದ ಕೊಟ್ಟಿದ್ದೆವು ಈಗ ಅದನ್ನು ತುಂಬುವ ಕೆಲಸವಾಗಿದೆ ಈ ಬಜೆಟ್‌ನದಲ್ಲ ಅದು ಇವೆಲ್ಲಾ ಹೇಗೆ ಎಂದರೆ ಫೆಬ್ರವರಿಯಲ್ಲಿ ಬಜೆಟ್‌ನ್ನು ಮಂಡಿಸಿದ ಬಜೆಟ್‌ನ್ನು ಮಂಡಿಸಿದ ಮೇಲೆ ಅಲ್ಲಿಂದ ಇಲ್ಲಿಯವರೆಗೆ ಆಗಿರುವುದು ಈಗೇನು ನೀವು ಒಪ್ಪಿಗೆಯನ್ನು ಕೊಟ್ಟಿದ್ದೀರಲ್ಲಾ ಈ ಬಜೆಟ್ ಆಗಸ್ಟ್ 1ನೇ ತಾರೀಖಿನಿಂದ ಜಾರಿಗ ಬರುತ್ತದೆ ಈ ಬಜೆಟ್ ಬಗ್ಗೆ ಇಲ್ಲೇನು ನೀವು ಖರ್ಚು ಮಾಡುವುದಕ್ಕೆ ಸರ್ಕಾರಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದೀರಿ, ಸರ್ಕಾರಕ್ಕೆ ಅಧಿಕಾರವನ್ನು ಕೊಟ್ಟಿದ್ದೀರಿ, ಅವೆಲ್ಲವೂ ಆಗಸ್ಟ್ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ ಅದಕ್ಕೆ ಹಿಂದೆ ಆಗಿರುವಂಥವುಗಳು ಇವು. ಫೆಬ್ರವರಿ ತಿಂಗಳಲ್ಲಿ ಬಜೆಟ್‌ನ್ನು ಮಂಡಿಸಿದರು ಆ ಬಜೆಟ್‌ನ್ನು ಮಂಡಿಸಿದಮೇಲೆ ಅಲ್ಲಿಂದೀಚೆಗೆ ಆಗಿರುತ್ತವಲ್ಲಾ, ಬಜೆಟ್‌ನಲ್ಲಿ ಇಲ್ಲದೇ ಇರತಕ್ಕ ಖರ್ಚು, ಹೊಸ ಖರ್ಚುಗಳಾಗಿರತಕ್ಕಂಥದ್ದು ಈ ಖರ್ಚುಗಳಿಗೆ ನಿಮ್ಮ ಅನುಮತಿಯನ್ನು ಕೋರುತ್ತಿರುವಂಥದ್ದು ಮಾನ್ಯ ಕಾರ್‌ಜೋಳ್‌ರವರೇ, ಅದರಿಂದ 35 ಲಕ್ಷ ರೂಪಾಯಿಗಳನ್ನು ನೀವ್ಯಾಕೆ ಕೊಟ್ಟಿರಿ ಅನ್ನುವುದಲ್ಲ

**ಶ್ರೀ ಗೋವಿಂದ ಎಂ ಕಾರಜೋಳ** ಮಾನ್ಯ ಅಧ್ಯಕ್ಷರೇ, ಈಗ ಕೆಲವೊಂದು ಇಲಾಖೆಗಳ ಬಗ್ಗೆ ತೋರಿಸಿದಿರಿ 2003–04ರದ್ದು ಕಡಿಮೆ ಬಿದ್ದಿದ್ದನ್ನು ಇಲ್ಲಿ ತಾವು ಉಪಯೋಗ ಮಾಡಿಕೊಂಡಿದ್ದೀರಿ ನಾವು ಬೇಡ ಎಂದು ಹೇಳುವುದಿಲ್ಲ ಏಕೆಂದರೆ ಇದು ನಡೆದು ಬಂದಿರತಕ್ಕ ಪದ್ಧತಿ ನಾನು ಹೇಳುವುದೇನೆಂದರೆ ಕಂಟಿನ್‌ಜೆನ್ಸಿಯಿಂದ ತೆಗೆದುಕೊಂಡು ಮಾಡುವ ಪ್ರಸಂಗ ಏಕೆ ಬಂತು? ಏಪ್ರಿಲ್ 1 ರಿಂದ ಬರಲಿ

**ಶ್ರೀ ಸಿದ್ಧರಾಮಯ್ಯ** ಮಾನ್ಯ ಅಧ್ಯಕ್ಷರೇ, ಇದು ಮುಂದೆ ಬರುತ್ತದೆ

**ಶ್ರೀ ಗೋವಿಂದ ಎಂ ಕಾರಜೋಳ** ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತೀರಿ ಎನ್ನುವುದಕ್ಕೆ ಇದೂ ಒಂದು ಉದಾಹರಣೆ ಎಂದು ಹೇಳಿದೆವು ನಾವು.

**ಶ್ರೀ ಸಿದ್ಧರಾಮಯ್ಯ** ಮಾನ್ಯ ಅಧ್ಯಕ್ಷರೇ, ಇದು ಬಜೆಟ್‌ನಲ್ಲಿ ಇಲ್ಲದೇ ಇರತಕ್ಕದ್ದು ಬಜೆಟ್‌ನಲ್ಲಿ ಕೊಟ್ಟಿರತಕ್ಕ ಹಣ ಸಾಲದೇ ಹೋದರೆ ಅಥವಾ ಹೊಸದಾಗಿ ಮಾಡಬೇಕಾದ ಖರ್ಚು ಬಂದರೆ ಅದಕ್ಕೆ ಇದು ಪೂರಕ ಅಂದಾಜುಗಳನ್ನು ಮಾಡಿ ಒಪ್ಪಿಗೆಯನ್ನು ಪಡೆದುಕೊಳ್ಳುವುದು ನಾವು ಈಗ ಕಂಟಿನ್‌ಜೆನ್ಸಿ ಫಂಡ್‌ನಿಂದ ಕೊಟ್ಟಮೇಲೆ ನಿಮ್ಮ ಒಪ್ಪಿಗೆ ಆಗಬೇಕಲ್ಲಾ ಶಾಸಕರ ಒಪ್ಪಿಗೆ ಆಗಬೇಕಲ್ಲಾ ಆ ಒಪ್ಪಿಗೆಗೋಸ್ಕರ ಇದನ್ನು ಮಾಡುವುದು ಸಾಮಾನ್ಯವಾಗಿ ಇದರ ಬಗ್ಗೆ ದೊಡ್ಡ ಚರ್ಚೆಯೇನೂ ಆಗುವುದಿಲ್ಲ ಮತ್ತೆ ಸಪ್ಲಿಮೆಂಟರಿಯಲ್ಲಿ ಕ್ಯಾಷ್‌ಫ್ಲೋ ಇರತಕ್ಕದ್ದು 45 ಕೋಟಿ ರೂ.ಗಳು ಮಾತ್ರ ಏನೋ ಬಹಳ inproportionate ಆಗಿ ಬಜೆಟ್ ಮೂವತ್ತುವರೆ ಸಾವಿರ ಕೋಟಿ ರೂ ಇದೆ, ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಎರಡು ಸಾವಿರ ಕೋಟಿ ರೂ ಬಂದುಬಿಟ್ಟಿದೆ, ಮೂರು ಸಾವಿರ ಕೋಟಿ ರೂ ಬಂದುಬಿಟ್ಟಿದೆ ಎಂದರೆ ನಿಮಗೆ ಬಜೆಟ್ ಮಾಡುವುದೇ ಗೊತ್ತಿಲ್ಲವೆಂದು ಹೇಳಬಹುದು ಯಾವ ಖರ್ಚುಗಳು ಬರುತ್ತವೆ ಎಂದು ಗೊತ್ತಿರುವುದಿಲ್ಲವೇ? ಏನು ಬರಬಹುದು ಎಂದು ಗೊತ್ತಿಲ್ಲವೆಂದರೆ, I can understand, But this is a very small amount ಈ ಸ್ಮಾಲ್ ಅಮೌಂಟ್ ಸರ್ವೇಸಾಮಾನ್ಯವಾಗಿ ಇಂಥವು ಆಗುತ್ತವೆ ಇದಕ್ಕೇನೂ ಬಹಳ ದೊಡ್ಡ ಚರ್ಚೆಯ ಅಗತ್ಯ ಇರಲಿಲ್ಲ ಆದರೂ ನೀವು ಮಾಡಿದ್ದೀರಿ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳೋಣ ಏನು ಹೇಳಿದ್ದಾರೆ, ನೀವು ಅಕ್ಕಿಗೆ 300 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಅದು ಸಾಲುವುದಿಲ್ಲ, ಬಡ್ಡಿಗೆ 60 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಅದು ಸಾಲುವುದಿಲ್ಲ ಆಮೇಲೆ ಬಿಸಿಯೂಟಕ್ಕೆ 262 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಅದು ಸಾಲುವುದಿಲ್ಲ, ಇವರು ಯಾವ ತರಹ ಲೆಕ್ಕಗಳನ್ನು ಹಾಕಿಕೊಂಡಿದ್ದಾರೋ ಗೊತ್ತಿಲ್ಲ, ನಾವು ಒಂದು ಲೆಕ್ಕ ಹಾಕಿದ್ದೇವೆ ನಾವು ಎಲ್ಲಾ ಇಲಾಖೆಯವರನ್ನು ಕರೆದು ಎಷ್ಟು ಆಗಬಹುದು, ಎಂಟು ತಿಂಗಳ ಅವಧಿಗೆ ಎಷ್ಟಾಗಬಹುದು ಎಂದು ಲೆಕ್ಕಹಾಕಿ ಮಾಡಿರುವುದು ಮತ್ತೆ ಯಾವಾಗಲೂ ಕೂಡ ಬಜೆಟ್ ಎಸ್ಟಿಮೇಟ್ಸ್ ಎಂದು ಕರೆಯುವುದು ಅಂದಾಜುಗಳು ಎಂದು ಕರೆಯುವುದು ಇಷ್ಟೇ ಕರಾರುವಾಕ್ ಆಗಿ ಎಂದು ಹೇಳುವುದಿಲ್ಲ These are budget estimates-, ಅಂದಾಜುಗಳು ಇಲ್ಲದಿದ್ದರೆ ಬರೀ ಬಜೆಟ್ ಎಂದು

ಹೇಳಿಬಿಡಬಹುದಾಗಿತ್ತು ಅದಕ್ಕಾಗಿಯೇ ಬಜೆಟ್ ಎಸ್ಟಿಮೇಟ್ಸ್ ಎಂದು ಕರೆಯುವುದು ಆ ಕಾರಣದಿಂದ ಆಯವ್ಯಯ ಅಂದಾಜುಗಳು ಎಂದು ಹೇಳುವುದು ನಾವು ಇನ್ನು ಹೆಚ್ಚು ಬಡ್ಡಿಗೆ ಅಂದರೆ ಆರು ಪರ್‌ಸೆಂಟ್‌ಗೆ ಕೊಡಬೇಕಾದರೆ ಇನ್ನು ಎಷ್ಟು ಜನ ಸಾಲ ತೆಗೆದುಕೊಂಡಿದ್ದಾರೆ, ಕೊಡೋಣ 60 ಕೋಟಿರೂಗಿಂತ ಹೆಚ್ಚಾದರೆ ಕೊಡೋಣ ಇನ್ನೊಂದು ಸಪ್ಲಿಮೆಂಟರಿಯನ್ನು ಮಾಡುವಾಗ ಮಾಡೋಣ ಅಂಥ ಸನ್ನಿವೇಶಗಳು ನಿರ್ಮಾಣವಾದರೆ ಮಾಡೋಣ ನನ್ನ ಪ್ರಕಾರ ಆ ರೀತಿಯಾಗುವುದಿಲ್ಲ ಒಂದು ವೇಳೆ ನಿರ್ಮಾಣವಾದರೆ ಕೊಡತಕ್ಕ ಕೆಲಸವನ್ನು ಮಾಡೋಣ ಮತ್ತೆ ಮೂರು ರೂಪಾಯಿಗೆ ಅಕ್ಕಿ ಕೊಡುವ ಕಾರ್ಯಕ್ರಮವನ್ನು ಕೂಡ ಮಾಡುತ್ತೇವೆ ಮತ್ತೆ ನೀವು ಎಸ್ ಎಸ್ ಎಲ್ ಸಿವರೆಗೆ ಒಪ್ಪಿಕೊಂಡಿದ್ದಿರಿ, ಕೊಟ್ಟಿಲ್ಲವೆಂದು ಹೇಳಿದರು 500 ರೂ ಭತ್ಯೆ ಕೊಡುತ್ತೇವೆಂದು ಹೇಳಿದ್ದಿರಿ, ಕೊಟ್ಟಿಲ್ಲ ಇದಕ್ಕೆಲ್ಲಾ ಉತ್ತರವನ್ನು ಈಗಾಗಲೇ ಕೊಟ್ಟಿದ್ದೇನೆ ನಾವು ಬಿಸಿಯೂಟದ ಕಾರ್ಯಕ್ರಮವನ್ನು ಎಸ್ ಎಸ್ ಎಲ್ ಸಿ ವರೆಗೆ ವಿಸ್ತರಣೆ ಮಾಡುತ್ತೇವೆ ಎಂದು ಹೇಳಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಒಪ್ಪಿಕೊಂಡಿದ್ದೆವು. ಈ ವರ್ಷಕ್ಕ ಇನ್ನು ಎಂಟು ತಿಂಗಳಲ್ಲಿ 2004–05ನೇ ಇಸವಿಗೆ ನಾವು ಏಳನೇ ತರಗತಿಯವರೆಗೆ ವಿಸ್ತರಣೆ ಮಾಡುತ್ತೇವೆ ಮತ್ತೆ ಗ್ರಾಂಟ್ ಇನ್ ಏಡ್ ಸಂಸ್ಥೆಗಳು ಯಾವುವು ಇವೆ ಸರ್ಕಾರ ಅನುದಾನ ಕೊಡುವ ವಿದ್ಯಾ ಸಂಸ್ಥೆಗಳನ್ನು ಯಾವುದನ್ನು ನಡೆಸುತ್ತಿದ್ದಾರೆ, ಅಲ್ಲೇನು ಮಕ್ಕಳುಗಳು ಓದುತ್ತಿದ್ದಾರೆ, ಆ ಮಕ್ಕಳಿಗೂ ಕೂಡ ಕೊಡುತ್ತೇವೆಂದು ಹೇಳಿದ್ದೇವೆ 25 ಲಕ್ಷಕ್ಕೂ ಹೆಚ್ಚು ಮಕ್ಕಳು ಈ ಸಾರಿ ಹೆಚ್ಚುವರಿಯಾಗಿ ಸೇರುತ್ತಾರೆ, ಅಷ್ಟೇ ಅಲ್ಲ, ಒಂದು ರೂಪಾಯಿಯನ್ನು ಮೇಲ್ ಖರ್ಚಿಗೋಸ್ಕರ ಕೊಡುತ್ತಿದ್ದರು, ಅದನ್ನು ಒಂದು ರೂಪಾಯಿ ಮೂವತ್ತೊಂದು ಪೈಸೆ ಎಂದು ಹೆಚ್ಚು ಮಾಡಿದ್ದೇವೆ. ಏಕೆಂದರೆ ಅಷ್ಟು ಸಾಲುವುದಿಲ್ಲವೆಂದು ಇತ್ತು ಎಲ್ಲಾ ಕಡೆ ಒಂದು ರೂಪಾಯಿ ಕೊಟ್ಟರೆ ಸಾಲುವುದಿಲ್ಲ ಎನ್ನುವ ದೂರುಗಳೂ ಇದ್ದವು ಈಗ ಸಮರ್ಪಕವಾಗಿ ಮಕ್ಕಳಿಗೆ ಊಟ ಸಿಗಬೇಕು ಮೇಲ್ ಖರ್ಚು ಇದೆಯಲ್ಲಾ, ಆ ಖರ್ಚನ್ನು ಕೂಡ ಹೆಚ್ಚು ಮಾಡಿದ್ದೇವೆ, 1 ರೂಪಾಯಿನಿಂದ 1 ರೂ 30 ಪೈಸೆಗೆ ಹೆಚ್ಚು ಮಾಡಿದ್ದೇವೆ 262 ಕೋಟಿ ರೂ ಈ ಮುಂದಿನ 8 ತಿಂಗಳ ಅವಧಿವರೆಗೆ ಸಾಕಾಗುತ್ತದೆಂದು ಅಂದಾಜು ಮಾಡಿ, ಆ ಹಣವನ್ನು ಬಜೆಟ್‌ನಲ್ಲಿಟ್ಟಿದ್ದೇವೆ ಇದು ಪೂರಕ ಅಂದಾಜುಗಳಿಗೆ ಸಂಬಂಧಿಸಿದ್ದಲ್ಲ ಆಮೇಲೆ, ಆ 500 ರೂ.ಗಳನ್ನು ಕೊಡುತ್ತೇವೆಂದು ಹೇಳಿದ್ದಿರಿ, ಅದರಿಂದ ಹಿಂದಕ್ಕೆ ಸರಿದಿದ್ದೀರಿ ಎಂದರು ನಾವು ಈ ಸಾರಿ ಬದಲಾದ ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ಹೇಳಿದ್ದೇವೆ ಶ್ರಮ ಶಕ್ತಿ ಎಂದು ಹೇಳಿ ಹಿಂದುಳಿದ ಜಾತಿಗೆ ಸಂಬಂಧಪಟ್ಟವರಿಗೆ ಹೇಳಿದ್ದೇವೆ. ಹಳ್ಳಿಗಾಡಿನಲ್ಲಿರುವ ನಿರುದ್ಯೋಗಿ ಯುವಕರು, ಹೆಣ್ಣು ಮಕ್ಕಳು, ಪಟ್ಟಣದಲ್ಲಿರುವವರೆಲ್ಲರಿಗೂ ತರಬೇತಿ ಕೊಟ್ಟು, ಆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು, ವ್ಯಾಪಕವಾಗಿ ಮಾಡಬೇಕೆಂದು ನಮ್ಮ ಆಯವ್ಯಯದಲ್ಲಿ ನಾವು ಹೇಳಿದ್ದೇವೆ 500 ರೂ ಬಗ್ಗೆ ಇದೊಂದು ಸಮ್ಮಿಶ್ರ ಸರ್ಕಾರವಾಗಿರುವುದರಿಂದ ಸಾಮಾನ್ಯ ಕನಿಷ್ಠ ಕಾರ್ಯಕ್ರಮ, ಎರಡೂ ಪಕ್ಷಗಳಿಗೂ ಒಪ್ಪಿತವಾಗಿರುವ ಕಾರ್ಯಕ್ರಮವನ್ನು ರೂಪಿಸಿದ್ದೇವೆ ಅದಕ್ಕನುಗುಣವಾಗಿ ಮಾಡುತ್ತೇವೆ ಒಪ್ಪಿತವಾಗಿರುವ ಕಾರ್ಯಕ್ರಮಗಳು 5 ವರ್ಷಗಳವರೆಗೆ ಇರುವ ಕಾರ್ಯಕ್ರಮಗಳು ನಾನು ಜನರಲ್ ಆಗಿ ಹೇಳುತ್ತಿದ್ದೇನೆ, ಯಾವುದೇ ಬೇರೆ ಉದ್ದೇಶವಿಟ್ಟುಕೊಂಡು ಹೇಳುತ್ತಿಲ್ಲ,

ಸಾಮಾನ್ಯವಾಗಿ ಹೊಸ ಸರ್ಕಾರಗಳೇನು ಮಾಡುತ್ತವೆ ಅಂದರೆ, 1–2 ವರ್ಷ ರಿಸೋರ್ಸಸ್ ಮೊಬೊಲೈಜೇಷನ್ ಮಾಡುವುದು, ಆಮೇಲೆ ಕಾರ್ಯಕ್ರಮಗಳನ್ನು ಮಾಡುವುದು, ಸಾಮಾಣ್ಯವಾಗಿ ನಡೆದುಕೊಂಡು ಬಂದಿರುವುದು ದೇಶದ ಅನೇಕ ಹೊಸ ಸರ್ಕಾರಗಳು ಬಂದಾಗ ಮಾಡುವ ಪದ್ಧತಿಗಳು ನಾವು ಈ ಸಾರಿ ಆ ತರಹ ಮಾಡಿಲ್ಲ ನಾವು ಮೊದಲನೇ ವರ್ಷವೇ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಹೇಳಿರುವ ಬಹುತೇಕ ಕಾರ್ಯಕ್ರಮಗಳನ್ನು ಆದ್ಯತಯ ಮೇಲೆ ಇದರಲ್ಲಿ ಸೇರಿಸಿದ್ದೇವೆ ನಮಗೆ ಸಂಪನ್ಮೂಲಗಳ ತೊಂದರೆ ಇದ್ದರೂ, ಕೂಡ, ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಿಕೊಂಡು ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಜೊತೆಗೆ, ನಾನ್–ಡವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡಲು ಪ್ರಯತ್ನಿಸಿದ್ದೇವೆ 2003–04ರಲ್ಲಿ ನಾನ್–ಡೆವಲಪ್‌ಮೆಂಟಲ್ ಎಕ್ಸ್‌ಪೆಂಡಿಚರ್ 18 ಪರ್ಸೆಂಟ್ ಇದ್ದರೆ, ಈ ಸಾರಿ ಅದನ್ನು 10 ಪರ್ಸೆಂಟ್‌ಗೆ ಇಳಿಸಲು ಪ್ರಯತ್ನ ಮಾಡಿದ್ದೇವೆ That is where you have to appreciate ನಾನು ಇದ್ದಕ್ಕಿದ್ದ ಹಾಗೆ ಜಾದೂ ಮಾಡಿದ್ದೇನೆಂದು ಹೇಳುತ್ತಿಲ್ಲ ನಾನು ಬಜೆಟ್ ಮಂಡಿಸಿರುವುದು ಜುಲೈ ತಿಂಗಳಲ್ಲಿ 8 ತಿಂಗಳಲ್ಲಿ ಇದ್ದಕ್ಕಿದ್ದ ಹಾಗೆ, ತೆರಿಗೆಗಳೆಲ್ಲಾ ಯದ್ವಾತದ್ವಾ ಬೆಳೆಯುತ್ತವೆ, ಡಬಲ್ ಆಗುತ್ತವೆಂದು ನಾನು ಹೇಳುವುದಕ್ಕೆ ಹೋಗುತ್ತಿಲ್ಲ ಆದರೆ, ಇರುವುದರಲ್ಲಿ ನಾನ್–ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಕಡಿಮೆ ಮಾಡುವುದು, ಸೋರಿಕೆ ತಪ್ಪಿಸುವುದು, ಹೊಸ ಸಾರಾಯಿ ನೀತಿಗಳೇನಿವೆ, ಅಲ್ಲಿ ನಮ್ಮ ರಾಜ್ಯಕ್ಕೆ ಬರುವ ಆದಾಯವನ್ನು ಹೆಚ್ಚು ಮಾಡುವುದು, ಡೆಟ್ ಸ್ವಾಪಿಂಗ್‌ನಿಂದ ರೀ–ಸ್ಟ್ರಕ್ಚರಿಂಗ್ ಆಫ್ ದಿ ಲೋನ್ಸ್ ಮಾಡುವಾಗ, 14,15,16 ಪರ್ಸೆಂಟ್ ಬಡ್ಡಿಗೆ ಸಾಲ ತಂದಿರುವುದೂ ಇದೆ ಆ ರೇಟ್‌ನಲ್ಲಿ ನಾವು ಅಸಲು ಮತ್ತು ಬಡ್ಡಿ ಕಟ್ಟುತ್ತಿದ್ದೇವೆ ಇವತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗುತ್ತದೆ ಆ ಸಾಲ ತಂದು ಬಡ್ಡಿ ಕೊಡುವುದನ್ನು ಕಡಿಮೆ ಮಾಡುವ ಪ್ರಯುತ್ನ ಮಾಡಿದ್ದೇವೆ ಬಡ್ಡಿಯ ಬರ್ಡನ್ ಕಡಿಮೆ ಮಾಡಿಕೊಂಡು, ಅದರಲ್ಲಿ ಉಳಿತಾಯ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ ಆರ್ಥಿಕವಾಗಿ ಒಂದು ಶಿಸ್ತನ್ನು ತಂದು, ಆರ್ಥಿಕ ನಿರ್ವಹಣೆಯನ್ನು ಎಷ್ಟರಮಟ್ಟಿಗೆ ಕಠಿಣ ಕ್ರಮಗಳ ಮೂಲಕ ಸರಿಪಡಿಸಲು ಸಾಧ್ಯವಾಗುತ್ತದೆ, ಅವೆಲ್ಲವನ್ನೂ ಈ ಬಜೆಟ್‌ನಲ್ಲಿ ಯೋಚಿಸಿದ್ದೇವೆ ಎನ್ನುವ ಮಾತನ್ನು ಹೇಳಬಯಸುತ್ತೇನೆ ಹಾಗಾದರೆ, 72 ಕೋಟಿ ರೂ ಗಳ ಸರ್‌ಪ್ಲಸ್ ಬಜೆಟ್ ಆಗುತ್ತದೆಂದು ನಾನು ಬೆನ್ನು ತಟ್ಟುತ್ತಾ ಕುಳಿತಿಲ್ಲ ನಮ್ಮ ರೆವಿನ್ಯೂ ಎಕ್ಸ್‌ಪೆಂಡಿಚರ್ ಅನ್ನು ರೆವಿನ್ಯೂ ರೆಸೀಟ್ಸ್‌ನಿಂದಲೇ ಮೀಟ್ ಮಾಡುವುದಿದೆಯಲ್ಲಾ, ಆ ಉದ್ದೇಶ ಇದೆಯಲ್ಲಾ, ಆ ಉದ್ದೇಶವನ್ನು ಈಡೇರಿಸಲು ಈಗ ಒಂದು ಪ್ರಯತ್ನ ಮಾಡಿದ್ದೇನೆ ಸಾದಿಲ್ವಾರು ಬಗ್ಗೆ ನಾನು ಆಗಲೇ ಹೇಳಿದೆ ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದಾಗ, 71 ಕೋಟಿ ರೂ ಗಳನ್ನು ಇದಕ್ಕೆ ಕೊಡುತ್ತಿದ್ದೀರಿ ನೀವೇನೂ ಸರ್‌ಪ್ಲಸ್ ಮಾಡಿಲ್ಲವೆಂದು ಹೇಳಿದರು ನಿಜ ನಾನು ಅದನ್ನು ಇಲ್ಲವೆಂದು ಹೇಳಲೇ ಇಲ್ಲ 71 ಕೋಟಿ ರೂ.ಗಳ ಸಾದಿಲ್ವಾರು ನಿಧಿಗೆ ಅದು ಹೋಗುವುದು ನಿಜ ಆದರೆ, ಒಂದು ಕೋಟಿ ರೂ ಚಿಲ್ಲರೆ ಸರ್‌ಪ್ಲಸ್ ಆಗಿರುವುದು ನಮ್ಮ ರೆವಿನ್ಯೂ ಎಕ್ಸ್‌ಪೆಂಡಿಚರ್, ರೆವಿನ್ಯೂ ರೆಸೀಟ್ಸ್ ಇವರೆಡನ್ನೂ ಮಾಡಿದಾಗ 1 ಕೋಟಿ ರೂ ಚಿಲ್ಲರೆ ಬರುವುದು ಇದೊಂದು ಹೊಸ ಹೆಜ್ಜೆ ಆರ್ಥಿಕ ಶಿಸ್ತನ್ನು ತರಲಿಕ್ಕೋಸ್ಕರ ಸ್ಥಿರತೆಯನ್ನು ತರಲಿಕ್ಕೋಸ್ಕರ ಸಸ್ಟೇನ್ಡ್ ಗ್ರೋಥ್ ಮುಂದೆ ಆಗಬೇಕೆನ್ನುವ

ಕಾರಣಕ್ಕೆ ಇದನ್ನು ಮಾಡುವುದು ಮಾನ್ಯ ಯಡಿಯೂರಪ್ಪನವರು, 241 ಕೋಟಿ ರೂ ಇಟ್ಟಿದ್ದೀರಿ, ಆಗಸ್ಟ್ 15ರೊಳಗೆ ಬಿಡುಗಡೆ ಮಾಡದೇ ಹೋದರೆ, ನಾವು ಧರಣಿ ಮಾಡುತ್ತೇವೆ ಜೈಲಿಗೆ ಹೋಗುತ್ತೇವೆಂದರು ದಯವಿಟ್ಟು, ನೀವು ಜೈಲಿಗೆ ಹೋಗುವುದಕ್ಕೆ ಹೋಗಬೇಡಿ ನಾವು ರೈತರಿಗೆ ಸಹಾಯ ಮಾಡಬೇಕೆನ್ನುವ ಕಾರಣಕ್ಕೋಸ್ಕರ ರೈತರು 3 ವರ್ಷಗಳು ಬರಗಾಲ ಬಂದು, ಬೆಳೆ ನಷ್ಟವಾಯಿತು, ಮಳೆ ಬರಲಿಲ್ಲವೆನ್ನುವ ಕಾರಣಕ್ಕೋಸ್ಕರ ಈ 240 ಕೋಟಿ ರೂ ಗಳನ್ನು ಬೆಳೆ ವಿಮೆ ಕೊಡಲು ಬಜೆಟ್‌ನಲ್ಲಿ ಇಟ್ಟಿದ್ದೇವೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ, ನಮ್ಮ ಭರವಸೆ ಮತ್ತು ಅನುಷ್ಠಾನ ಇದರಲ್ಲಿ ಬಹಳ ಅಂತರ ಮಾಡಲಿಕ್ಕೆ ಹೋಗುವುದಿಲ್ಲ ಆ ಪ್ರಯತ್ನವನ್ನು ಮಾಡುತ್ತೇನೆ ಈ ವರ್ಷ ನಾವೇನು 8 ತಿಂಗಳಲ್ಲಿ ಬಜೆಟ್‌ನಲ್ಲೇನು ಅಲೋಕೇಷನ್ ಮಾಡಿಕೊಂಡಿದ್ದೇವೆ, ಬಹುತೇಕವಾಗಿ ಆ ಕಾರ್ಯಕ್ರಮಗಳಿಗೆ, ಆ ಸೇವೆಗಳಿಗೆ ನಾವು ಖರ್ಚು ಮಾಡುತ್ತೇವೆನ್ನುವ ಮಾತನ್ನು ಹೇಳುತ್ತೇನೆ ನಾವು ಹಿಂದೆ ಮಾಡಿದ್ದೇವೆ, ಈಗಲೂ ಮಾಡತಕ್ಕಂಥದ್ದು ಮಾಡುತ್ತೇವೆ ನಾವು ಹಿಂದೆ ಮಾಡಿದ್ದೇವೆ, ಈಗಲೂ ಮಾಡತಕ್ಕಂಥದ್ದು ಮಾಡುತ್ತೇವೆ 40 ಪರ್ಸೆಂಟ್ ಕಟ್ ಆಯಿತು, ಹಿಂದೆ ಪ್ಲಾನ್ ಕಟ್ ಆಗಿದ ಎಂದು ಹೇಳಿದರು ಅದರ ಬಗ್ಗೆ ಹಿಂದಿನದರ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ ನಾವು ಮುಂದಿನ ವರ್ಷಕ್ಕೆ ಏನು ಇಡುತ್ತೇವೆ, ಬಹುಶ ನೀವು ಇವತ್ತು ಏನು ಪ್ರಸ್ತಾಪಿಸಿದ್ದೀರಿ ಆ ಮಾತುಗಳನ್ನು ಮತ್ತೆ ಪ್ರಸ್ತಾಪ ಮಾಡುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ ಆ ತರಹದ ರೀತಿಯಲ್ಲಿ ನಾವು ಆರ್ಥಿಕ ನಿರ್ವಹಣೆಯನ್ನು ಮಾಡುತ್ತೇವೆನ್ನುವ ಆತ್ಮವಿಶ್ವಾಸ ಇದೆ ಆ ದಿಕ್ಕಿನಲ್ಲಿ ಮಾಡುತ್ತೇವೆ ಎನ್ನುವ ಮಾತುಗಳನ್ನು ಹೇಳುತ್ತಿದ್ದೇನೆ ಆದುದರಿಂದ, ಇದಕ್ಕೆ ಬಹಳ ದೀರ್ಘವಾದ ಚರ್ಚೆ ಅಗತ್ಯವಿಲ್ಲವೆಂದು ನಾನು ಭಾವಿಸುತ್ತೇನೆ ಏಕೆಂದರೆ, ಇದು ಸರ್ವೇಸಾಮಾನ್ಯವಾಗಿ ಪ್ರತಿವರ್ಷ ಮೊದಲನೇ, ಎರಡನೇ ಮೂರನೇ ಕಂತು ಎಂದು ಹೀಗೆ ಬರುತ್ತದೆ ಒಂದು ಆರ್ಥಿಕ ವರ್ಷದಲ್ಲಿ ಪೂರಕ ಅಂದಾಜುಗಳು ಬರುತ್ತವೆ ಮಾನ್ಯ ವಾಟಾಳ್ ನಾಗರಾಜ್‌ರವರು, ಪೋಲೀಸರ ಬಗ್ಗೆ ಬಹಳ ಮಾತನಾಡಿದರು ಕಾನ್‌ಸ್ಟೇಬಲ್‌ಗಳ ಬಗ್ಗೆ ಮತ್ತು ಅವರಿಗ ಸೊಂಟದ ಭತ್ಯೆ ಕೊಡುವ ಬಗ್ಗೆ ಹಾಗು ಪೋಲೀಸ್ ಇಲಾಖೆಯಲ್ಲಿ ಸಮಗ್ರ ಬದಲಾವಣೆಯಾಗಬೇಕೆಂದು ಹೇಳಿದ್ದಾರೆ ಕಾನ್‌ಸ್ಟೇಬಲ್‌ಗಳ ಬಗ್ಗೆ ಬಹಳ ಕಳಕಳ ವ್ಯಕ್ತಪಡಿಸಿದ್ದಾರೆ ಅವರ ಸೊಂಟದ ಬಗ್ಗೆ, ಪ್ಯಾಂಟ್ ಬಗ್ಗೆ, ಬೂಟು ಬಗ್ಗೆ, ಟೋಪಿ ಬಗ್ಗೆ, ಮೀಸೆ ಇದೆಲ್ಲದರ ಬಗ್ಗೆ ಬಹಳ ಕಳಕಳಿ ವ್ಯಕ್ತಪಡಿಸಿದ್ದಾರೆ ನಿಜ ಪೋಲೀಸ್ ಇಲಾಖೆಯಲ್ಲಿ ಕೆಳಹಂತದಲ್ಲಿರುವವರೇ ಹೆಚ್ಚು ಕೆಲಸ ಮಾಡುವವರು, ಮೇಲಕ್ಕೆ ಹೋಗುತ್ತಾ ಕಲಸಗಳು ಕಡಿಮೆ ಈ ಸಿಸ್ಟಂ ಬಂದಿದೆ ಈಗ ಅಲ್ಲಿ ವ್ಯಾನ್‌ನಲ್ಲಿ ಸಿಆರ್‌ಪಿಎಫ್ ಪೋಲೀಸರು ಬೆಳಿಗ್ಗೆಯಿಂದ ಸಂಜೆಯವರೆಗೆ ಕುಳಿತಿರುತ್ತಾರೆ ಅಂದರೆ ಡ್ಯೂಟಿಯೇ ಹಾಗೆ ಮಾನ್ಯ ರಾಜೇಂದ್ರನ್‌ರವರು, ಸಿವಿಲ್ ಪೋಲೀಸರನ್ನು ಅಲ್ಲಿಗೆ ಹಾಕಿ, ಇವರನ್ನು ಇಲ್ಲಿಗೆ ಹಾಕಿ ಎಂದು ಹೇಳಿದರು ಅವರಿಗೆ, ಇವರಿಗೆ ಬೇರೆ ಬೇರೆ ರೀತಿಯ ಟ್ರೈನಿಂಗ್ ಇದೆ

**ಶ್ರೀ ವಾಟಾಳ್ ನಾಗರಾಜ್** ಇಬ್ಬರಿಗೂ ಒಂದೇ ಟ್ರೈನಿಂಗ್ ಇದೆ ಇವರೇ, ಅವರಿಗೆ ಬೇರೆ, ಇವರಿಗೆ ಬೇರೆ ಎಂದು ಮಾಡಿರುತ್ತಾರೆ ನನಗೆ ಗೊತ್ತು, ಟ್ರೈನಿಂಗ್ ಒಂದೇ

**ಶ್ರೀ ಸಿದ್ಧರಾಮಯ್ಯ** ನೀವು ಅನೇಕ ಸಾರಿ ಚಳವಳಿ ಮಾಡಿ ಪೋಲೀಸ್ ಸ್ಟೇಷನ್‌ಗೆ ಹೋಗಿರಬಹುದೇ ಹೊರತು, ನೀವು ಟ್ರೈನಿಂಗ್‌ಗೆ ಏಕೆ ಹೋಗಿದ್ದೀರಿ? ಟ್ರೈನಿಂಗ್‌ಗೆ ಹೋಗಿರುವುದು ನನಗೆ ಗೊತ್ತಿಲ್ಲ ಯಾವಾಗಲಾದರೂ ಹೋಗಿದ್ದೀರಾ?

**ಶ್ರೀ ಅರಗ ಜ್ಞಾನೇಂದ್ರ** ಅದರಲ್ಲಿ ಸ್ವಲ್ಪ ವ್ಯತ್ಯಾಸ ಉಂಟು ವಿಚಾರಣೆ ಮಾಡದೆ ಸಿಆರ್‌ಪಿಎಫ್‌ನವರು ಹೊಡಿಯುತ್ತಾರೆ, ಇವರು ಸ್ವಲ್ಪ ವಿಚಾರಣೆ ಮಾಡಿ ಹೊಡಿಯುತ್ತಾರೆ

**ಶ್ರೀ ಸಿದ್ಧರಾಮಯ್ಯ** ವಾಟಾಳ್ ನಾಗರಾಜ್‌ರವರಿಗೆ ಚೆನ್ನಾಗಿ ಗೊತ್ತಿರುತ್ತದೆ

**ಶ್ರೀ ವಾಟಾಳ್ ನಾಗರಾಜ್** ಇಬ್ಬರಿಗೂ ತರಬೇತಿ ಒಂದೇ ಅದರಲ್ಲಿ ಏನೂ ಅನುಮಾನವಿಲ್ಲ.

**ಶ್ರೀ ಸಿದ್ಧರಾಮಯ್ಯ** ನನಗೆ ಗೊತ್ತಿರುವ ಹಾಗೆ, ಅವರಿಗೆ ಬೇರೆ ಇವರಿಗೆ ಬೇರೆ ತರಬೇತಿ ಇದೆ ಸಿವಿಲ್ ಪೋಲೀಸ್‌ನವರಿಗೆ ಬಿಎಸ್‌ಎಫ್ ನವರಿಗೆ, ರಿಸರ್ವ್ ಪೋಲೀಸ್‌ನವರಿಗೆ ಮತ್ತು ಸೆಂಟ್ರಲ್ ರಿಸರ್ವ್ ಫೋರ್ಸ್‌ನವರಿಗೆ ಬೇರೆ ಬೇರೆ ರೀತಿಯ ತರಬೇತಿ ಇದ ಇಲ್ಲದಿದ್ದರೆ, ಅವರನ್ನು ಇಲ್ಲಿ, ಇವರನ್ನು ಅಲ್ಲಿ ತೆಗೆದುಕೊಂಡು ಮಾಡಬಹುದಿತ್ತು ಹೋಂ ಗಾರ್ಡ್ಸ್‌ನವರನ್ನು, ಅವರನ್ನೂ, ಇವರನ್ನೂ ಒಂದೇ ಮಾಡುವುದಕ್ಕಾಗುತ್ತದೆಯೇ? ತರಬೇತಿ ಬೇರೆ ಬೇರೆ ಇದೆ

**ಶ್ರೀ ವಾಟಾಳ್ ನಾಗರಾಜ್** ತರಬೇತಿ ಸರಿ ಎಂದು ಹೇಳುತ್ತೇನೆ ತರಬೇತಿ ಕೊಡುವ ವ್ಯವಸ್ಥೆ ಬಗ್ಗೆ ಹೇಳಿ

**ಶ್ರೀ ಸಿದ್ಧರಾಮಯ್ಯ** ತರಬೇತಿ ವ್ಯವಸ್ಥೆ ಸಮಗ್ರವಾಗಿ ಏನು ಚರ್ಚೆ ಮಾಡಬೇಕು ಎಂದು ಹೇಳಿದಿರಿ, ಅದನ್ನು ನಾವು ಕೂಡ ಸಮಗ್ರವಾಗಿ ಪರಿಶೀಲನೆ ಮಾಡಿ ಅದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಮಾನ್ಯ ಸಿಂಧ್ಯಾರವರು ಇದ್ದಾಗ ನಾನು, ಹಿಂದೆ ಹಣಕಾಸಿನ ಮಂತ್ರಿಯಾಗಿರುವಾಗ, ಪೋಲೀಸ್ ಜೀಪುಗಳು ಇವೆಯಲ್ಲಾ ಆಗ ಮಾನ್ಯ ರೋಷನ್ ಬೇಗ್ ರವರು ಹೋಂ ಮಿನಿಸ್ಟರ್ ಇದ್ದರು ಆಗ ನಾನು ಹೊಸ ಜೀಪುಗಳನ್ನು ತರಿಸಲಿಕ್ಕೆ ಮೊದಲಬಾರಿಗೆ ದುಡ್ಡು ಕೊಟ್ಟೆವು. ಎಲ್ಲಾ ಹೊಸ ಜೀಪುಗಳು, ಏಕೆ ಗೊತ್ತಾ? ದರೋಡೆಗಳು ನಡೆಯುತ್ತಿತ್ತು, ಈ ಜೀಪುಗಳು ಹೋಗುವಷ್ಟರಲ್ಲಿ ಅವರು ಓಡಿ ಹೋಗಿ ಬಿಡುತ್ತಿದ್ದರು ಈ ಜೀಪುಗಳು ಹೋಗುವಷ್ಟರಲ್ಲಿ ಆ ದರೋಡೆಕಾರರು ಕಾಲಿನಲ್ಲೇ ಓಡಿ ಹೋಗುತ್ತಿದ್ದರು

**ಶ್ರೀ ವಾಟಾಳ್ ನಾಗರಾಜ್** ನಿಜ, ಅದೊಂದೇ ಅಲ್ಲ ಈಗ ..

**ಶ್ರೀ ಸಿದ್ಧರಾಮಯ್ಯ** ಒಂದು ಸಾರಿ ಪೋಲೀಸ್ ಡಿಪಾರ್ಟ್‌ಮೆಂಟ್‌ನವರಿಂದ ಒಂದು ಪ್ರಪೋಸಲ್ ಬಂದಿತು ಆಗ 500 ಜೀಪು ಒಂದೇ ಸಾರಿ ರೀಪ್ಲೇಸ್‌ಮೆಂಟ್ ಮಾಡಿ ಕೊಟ್ಟುಬಿಟ್ಟೆ 500 ಜೀಪುಗಳನ್ನು ಒಂದೇ ಸಾರಿ ರೀಪ್ಲೇಸ್ ಮಾಡಿ ಹೊಸ ಜೀಪುಗಳನ್ನು ಕೊಡಿಸುವಂಥ ವ್ಯವಸ್ಥೆ ಮಾಡಿದೆವು ಈಗ ನಿಮ್ಮ ಸಲಹೆ ಇದೆಯಲ್ಲಾ ನಿಮ್ಮ ಸಲಹೆಯನ್ನು ಸರ್ಕಾರ ಗಂಭೀರವಾಗಿ ಪರಿಶೀಲನೆ ಮಾಡುತ್ತದೆ ಎಂದು ನಿಮಗೆ ತಿಳಿಸಿ, ಹೊಸ ಜಿಲ್ಲೆಗಳ ಬಗ್ಗೆ ಈಗ 74 ಕೋಟಿ ರೂ ಬಿಲ್ಡಿಂಗ್‌ಗಳಿಗೆ ಇದೆ, ಕಟ್ಟಿಸುತ್ತಲೇ ಇದ್ದೇವೆ, ಹಂತ ಹಂತವಾಗಿ ಕಟ್ಟಿಕೊಂಡು ಹೋಗುತ್ತೇವೆ, ಒಂದೇ ಸಾರಿ ಕಟ್ಟುವುದಕ್ಕಾಗುವುದಿಲ್ಲ ಬಡವರಿಗೆ ಅಕ್ಕಿ ಕೊಡಬೇಕು, ಬಿಲ್ಡಿಂಗ್ ಕಟ್ಟಬೇಕು, ಮಕ್ಕಳಿಗೆ ಪೌಷ್ಟಿಕವಾದಂಥ ಆಹಾರ ಕೊಡಬೇಕು, ಲಿಟ್ರೆಸಿ ಪರ್ಸೆಂಟೇಜ್ ಹೆಚ್ಚು ಮಾಡಬೇಕು, ಡ್ರಾಪ್‌ಔಟ್ಸ್ ಕಡಿಮೆ ಮಾಡಬೇಕು, ರೈತರಿಗೆ ಸಹಾಯ ಮಾಡಬೇಕು, ವಿಮೆ ದುಡ್ಡು ಕೊಡಬೇಕು, ಕೃಷಿಗೆ ಹೆಚ್ಚು

ಒತ್ತು ಕೊಡಬೇಕು, ಅವೆಲ್ಲವನ್ನೂ ಮಾಡುತ್ತಾ ಮಾಡುತ್ತಾ ಇದನ್ನು ಮಾಡಬೇಕು ಎಲ್ಲಾ ಜನಗಳಿಗೇ ಬಿಲ್ಡಿಂಗ್ ಕಟ್ಟುವುದು ಜನಗಳಿಗೇ ಆದರೆ ಪ್ರೈಯಾರಿಟಿ ಬಹಳ ಮುಖ್ಯ ಆದ್ಯತೆ ಯಾವುದು? ಯಾವಾಗಲೂ ಸರ್ಕಾರ ಒಂದು ಆದ್ಯತೆಯನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಬಿಲ್ಡಿಂಗ್ ಕಟ್ಟಿಸುವುದು ಮೊದಲು ಆದ್ಯತೇನಾ? ಅಥವಾ ಬಡವರಿಗೆ 3 ರೂಪಾಯಿಗೆ ಅಕ್ಕಿ ಕೊಡುವುದು ಆದ್ಯತೇನಾ, ಈ ಪ್ರೈಯಾರಿಟಿನಲ್ಲಿ

**ಶ್ರೀ ವಾಟಾಳ್ ನಾಗರಾಜ್** ನೀವು ಪಕ್ಕದಲ್ಲಿ ಏಕೆ ವಿಕಾಸ ಸೌಧವನ್ನು 110 ಕೋಟಿ ರೂಪಾಯಿಗಳಲ್ಲಿ ದೊಡ್ಡ ಬಿಲ್ಡಿಂಗ್ ಕಟ್ಟಲಿಕ್ಕೆ ಹೋದಿರಿ?

**ಶ್ರೀ ಸಿದ್ಧರಾಮಯ್ಯ** ಅದನ್ನೆಲ್ಲಾ ನನ್ನ ಕೇಳಿದರೆ ಹೇಳಲಿಕ್ಕೆ ಆ-ಗುತ್ತಾದಾ? ಇರಲಿ ನೀವು ಕುಳಿತುಕೊಳ್ಳಿ, ಅದರ ಬಗ್ಗೆ ಬೇರೆ ಚರ್ಚೆ ಮಾಡೋಣ

**ಶ್ರೀ ಹೆಚ್ ಆಂಜನೇಯ** ಶಾಸಕರ ನಿಧಿ ಬಗ್ಗೆ ಹೇಳಿ.. ನಮ್ಮ ಬಯಲು ಸೀಮೆ ಅಭಿವೃದ್ಧಿಗೆ ..

**ಶ್ರೀ ಸಿದ್ಧರಾಮಯ್ಯ** ನಾನು ಈಗ ಹಿಂದೆಯೂ ಹೇಳಿದ್ದೇನೆ, ಈಗಲೂ ಹೇಳುತ್ತೇನೆ, ಇದು ಎಂಟು ತಿಂಗಳ ಬಜೆಟ್ ಎಂಟು ತಿಂಗಳವರೆಗೆ ಇರತಕ್ಕಂಥದ್ದು ಮುಂದಿನ ವರ್ಷ ಬಜೆಟ್ ಮಂಡಿಸುವಾಗ ಈ ನಿಮ್ಮ ಎಲ್ಲಾ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಶಾಸಕರ ಅಭಿಪ್ರಾಯಗಳಿಗೆ ಗೌರವ ಕೊಡುವ ಕೆಲಸವನ್ನು ಮಾಡುತ್ತೇನೆ, ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕು

## ಪ್ರಸ್ತಾವದ ಅಂಗೀಕಾರ

**ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, "ದಿನಾಂಕ 31-3-2005ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಸಂಖ್ಯೆ 1,2,3,5,7 8,11,13,14,17,18,21,23,25,26 ಹಾಗೂ 27 ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಬರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಪೂರಕ ಅಂದಾಜುಗಳ (ಮೊದಲನೆಯ ಕಂತು) ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೊಡುತ್ತೇನೆ "

**ಅಧ್ಯಕ್ಷರು** ನಾನು ಈಗ 2004-05ನೇ ಸಾಲಿನ ಪೂರಕ ಅಂದಾಜುಗಳ (ಮೊದಲಕಂತು) ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ

ಪ್ರಸ್ತಾವ ಏನೆಂದರೆ, ದಿನಾಂಕ 31-3-2005ರಂದು ಕೊನೆಯಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಸಂಖ್ಯೆ 1,2,3,5,7,8,11,13,14,17,18,21,23,25,26, ಹಾಗೂ 27 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗು ಬಂಡವಾಳ ಖಾತೆಯಲ್ಲಿ ಮಂಜೂರ್ಮಾಡಿದ ಮೊಬಲಗು ಸೇರಿದಂತೆ ಪೂರಕ ಅಂದಾಜುಗಳು (ಮೊದಲನೆಯಕಂತು) ಪಟ್ಟಿಯಲ್ಲಿ ಸಮೂದಿಸಿದೆ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡುವುದು "

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಪೂರಕ ಅಂದಾಜುಗಳನ್ನು (ಮೊದಲನೆಯ ಕಂತು) ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಪೂರಕ ಅಂದಾಜುಗಲನ್ನು (ಮೊದಲನೆಯ ಕಂತು) ಈ ಕೆಳಗೆ ನಮೂದಿಸಲಾಗಿದೆ

## ಪೂರಕ ಅಂದಾಜುಗಳು 2004-2005 (ಮೊದಲನೆಯ ಕಂತು)

ವಿನಿಯೋಗ ಅಧಿನಿಯಮವು ನೀಡಿದ ಅಧಿಕಾರದ ಮೇರೆಗೆ ಪ್ರಸಕ್ತ ವರ್ಷಕ್ಕಾಗಿ ಒಂದು ವಿಶಿಷ್ಟ ಸೇವೆಗೆ ವೆಚ್ಚ ಮಾಡತಕ್ಕ ಮೊಬಲಗು ಆ ವರ್ಷದ ಉದ್ದೇಶಕ್ಕಾಗಿ ಸಾಕಾಗದಿದ್ದರೆ ಅಥವಾ ಆ ವರ್ಷದ ವಾರ್ಷಿಕ ನಿರೂಪಣೆಯಲ್ಲಿ ಹೇಳಿರದ ಹೊಸಸೇವೆಗಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪೂರಕ ಅಥವಾ ಹೆಚ್ಚಿನ ವೆಚ್ಚದ ಅವಶ್ಯಕತೆಯುಂಟಾಗಿದ್ದರೆ ಅಂದಾಜು ಮಾಡಿದ ವೆಚ್ಚದ ಮೊಬಲಗನ್ನು ತೋರಿಸುವ ಮತ್ತೊಂದು ವಿವರಣೆಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲು ಸಂವಿಧಾನದ 205(1)ನೆಯ ಅನುಚ್ಛೇದವು ಅವಕಾಶ ಕಲ್ಪಿಸಿದೆ

2 ಸಂವಿಧಾನ ಸದರಿ ಉಪಬಂಧಕ್ಕನುಸಾರವಾಗಿ 7336.58 ಲಕ್ಷ ರೂಪಾಯಿಯ ಒಟ್ಟು ಮೊತ್ತದಷ್ಟು ಪೂರಕ ಅಂದಾಜುಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲಾಗಿದೆ ಈ ಅಂದಾಜುಗಳು ವಿಧಾನಮಂಡಲದ ಮುಂದೆ 2004ರ ಫೆಬ್ರವರಿ ತಿಂಗಳಲ್ಲಿ ಮಂಡಿಸಲಾದ 2004-2005ನೆಯ ಸಾಲಿನ ಆಯವ್ಯಯ ಅಂದಾಜುಗಳ ತರುವಾಯ ಸಾದಿಸ್ವಾರು ನಿಧಿಯಿಂದ ಮಂಜೂರಾದ ಮುಂಗಡಗಳಿಗೆ ಸಂಬಂಧಿಸಿವೆ.

3 ಸಾದಿಸ್ವಾರು ನಿಧಿಯಿಂದ ಮಂಜೂರಾದ ಮತ್ತು ಅದನ್ನು ಭರಿಸಲು ಪೂರಕ ಅಂದಾಜುಗಳಲ್ಲಿ ಸೇರಿಸಲಾದ ಮುಂಗಡವನ್ನು ತೋರಿಸುವ ವಿವರಣೆಯನ್ನು ಅನುಬಂಧದಲ್ಲಿ ತೋರಿಸಲಾಗಿದೆ

4 ಪೂರಕ ಅಂದಾಜುಗಳಲ್ಲಿ ಒದಗಿಸಿರುವ ರೂ 7336 58 ಲಕ್ಷಗಳಲ್ಲಿ ರೂ 2432 07 ಲಕ್ಷಗಳು ಕೇಂದ್ರ ಸಹಾಯಕ್ಕೆ ಸಂಬಂಧಿಸಿದೆ, ರೂ 397 58 ಲಕ್ಷಗಳು ಜಮೆಗಳಿಗೆ ಸಂಬಂಧಿಸಿದೆ ರಾಜಸ್ವದಿಂದ ನಿವ್ವಳ ಮೊತ್ತ 4506 93 ಲಕ್ಷ ರೂಪಾಯಿ ಮಾತ್ರವಾಗಿದೆ

## 2004-2005ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೆ ಕಂತು)

| ಅಭಿಯಾಚನೆ ಕ್ರಮಾಂಕ | ಸೇವೆಗಳು ಮತ್ತು ಉದ್ದೇಶಗಳು | | ಮೊಬಲಗು (ಲಕ್ಷ ಗಳಲ್ಲಿ) ಪ್ರಭೃತ ಪುರಸ್ಕೃತ | ಒಟ್ಟು |
|---|---|---|---|---|
| 01. | ಕೃಷಿ ಮತ್ತು ತೋಟಗಾರಿಕೆ | ರಾಜಸ್ವ | 25.00 | 25.00 |
| 02. | ಪಶುಸಂಗೋಪನೆ ಮತ್ತು ಮೀನುಗಾರಿಕೆ | ಬಂಡವಾಳ | 100.00 | 100.00 |
| 03. | ಆರ್ಥಿಕ | ರಾಜಸ್ವ | 524 79 | 524 79 |
| 04. | ಒಳಾಡಳಿತ ಮತ್ತು ಸಾರಿಗೆ | ರಾಜಸ್ವ | 200.00 | 200.00 |
| 05. | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ | ರಾಜಸ್ವ | 2091 10 | 2091.10 |

| 1 | 2 | 3 | 4 | 5 |
|---|---|---|---|---|
| 08. | ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ | ರಾಜಸ್ವ | 150.00 | 150.00 |
| 11. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ರಾಜಸ್ವ | 1691.72 | 1691 72 |
| 13 | ಆಹಾರ ಮತ್ತು ನಾಗರೀಕ ಸರಬರಾಜು | ರಾಜಸ್ವ | 500.00 | 500.00 |
| 14. | ಕಂದಾಯ | ರಾಜಸ್ವ | 249.83 | 249.83 |
| 17 | ಶಿಕ್ಷಣ | ರಾಜಸ್ವ | 500.00 | 500.00 |
| 18 | ವಾಣಿಜ್ಯ ಮತ್ತು ಕೈಗಾರಿಕಾ | ರಾಜಸ್ವ | 240.00 | 240.00 |
| 21 | ಜಲ ಸಂಪನ್ಮೂಲ | ಬಂಡವಾಳ | 247.58 | 247.58 |
| 23 | ಕಾರ್ಮಿಕ | ರಾಜಸ್ವ | 646.00 | 646.00 |
| 25 | ಕನ್ನಡ ಮತ್ತು ಸಂಸ್ಕೃತಿ | ರಾಜಸ್ವ | 85.00 | 85.00 |
| 26 | ಯೋಜನೆ ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ | ರಾಜಸ್ವ | 35.00 | 35.00 |
| 27 | ಕಾನೂನು | ರಾಜಸ್ವ | 50.00 | 50.00 |
| | ಒಟ್ಟು | ರಾಜಸ್ವ | 6989.00 | 6989.00 |
| | | ಬಂಡವಾಳ | 347.58 | 347.58 |
| | ಒಟ್ಟು | | 7336 58 | 7336 58 |

## 8 ಶಾಸನ ರಚನೆ

### ಅ) ವಿಧೇಯಕದ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ

### ಕರ್ನಾಟಕ ಧನ ವಿನಿಯೋಗ (ಸಂಖ್ಯೆ-2) ವಿಧೇಯಕ 2004

### ಮಂಡನೆಗೆ ಅನುಮತಿ ಕೋರಿಕೆ

**ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ-2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ "

**ಅಧ್ಯಕ್ಷರು** ಪ್ರಸ್ತಾವ ಏನೆಂದರೆ,

"2004ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು (ಮಂಡಿಸಲು ಸಭೆಯು ಅನುಮತಿ ನೀಡುವುದು "

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು**

**ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ "

**ಅಧ್ಯಕ್ಷರು** *ವಿಧೇಯಕವನ್ನು ಮಂಡಿಸಲಾಗಿದೆ *

**ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ"

**ಪ್ರಸ್ತಾವವನ್ನು ಮಂಡಿಸಲಾಯಿತು**

**ಅಧ್ಯಕ್ಷರು** ಪ್ರಸ್ತಾವ ಏನೆಂದರೆ,

"2004ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 3 ರವರೆಗೆ ಎರಡೂ ಸೇರಿದಂತೆ**

**ಅಧ್ಯಕ್ಷರು** ಪ್ರಸ್ತಾವ ಏನೆಂದರೆ ಖಂಡ 2 ರಿಂದ 3 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 3 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)**

**ಖಂಡ 1 ಇತ್ಯಾದಿ**

**ಅಧ್ಯಕ್ಷರು** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, "2004ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ"

ಅಧ್ಯಕ್ಷರು ಪ್ರಸ್ತಾವ ಏನೆಂದರೆ,

"2004ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**9 ನಿಯಮ 69ರ ಮೇರೆಗೆ (ಮುಂದುವರಿದ ಚರ್ಚೆ)**

ಬೆಂಗಳೂರಿನಲ್ಲಿ ವಿವಿಧ ಯೋಜನೆಗಳಿಗೆ ಭೂಸ್ವಾಧೀನ ಮಾಡಿರುವಲ್ಲಿ ಹಾಗು ಬಿಡಿಎಯಿಂದ ಹಂಚಿಕೆಯಾಗಿರುವ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ನಡೆದಿರುವ ಹಗರಣಗಳ ಬಗ್ಗೆ

**ಅಧ್ಯಕ್ಷರು** ಈಗ ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ ನಿನ್ನೆ ದಿವಸ ಡಾ ಅನ್ನದಾನಿಯವರು ಮಾತನಾಡಬೇಕೆಂದು ಸೂಚಿಸಿದ್ದೆ ಆದ್ದರಿಂದ ಈಗ ಡಾ ಅನ್ನದಾನಿಯವರು ಮಾತನಾಡಿ

---

* **ಅನುಬಂಧ II**

**ಡಾ ಕೆ ಅನ್ನದಾನಿ (ಮಳವಳ್ಳಿ)** ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರತಕ್ಕಂಥ ಅವ್ಯವಹಾರಗಳ ಬಗ್ಗೆ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲಿಕ್ಕೆ ಬಯಸುತ್ತೇನೆ ಬಿ ಡಿ ಎ ಯವರು ವಿಶ್ವೇಶ್ವರಯ್ಯ ಬಡಾವಣೆಯನ್ನು ಅಭಿವೃದ್ಧಿ ಮಾಡತಕ್ಕಂಥ ಸಂದರ್ಭದಲ್ಲಿ ಅಲ್ಲಿನ ಕಾಮಗಾರಿಗಳಿಗೆ ಟೆಂಡರ್ ಕರೆಯತಕ್ಕಂಥದ್ದರಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬರತಕ್ಕಂಥದ್ದನ್ನು ಅಲ್ಲಿನ ಅಧಿಕಾರಿಗಳು ನಷ್ಟ ಮಾಡಿದ್ದಾರೆ ದಿನಾಂಕ 4-11-2002ರಂದು ವಿಶ್ವೇಶ್ವರಯ್ಯ ಬಡಾವಣೆಯ ಸಿವಿಲ್ ಕಾಮಗಾರಿಯಲ್ಲಿ ನಡೆದಿರತಕ್ಕಂಥ ಅವ್ಯವಹಾರದ ಬಗ್ಗೆ ಇಲ್ಲಿ ನಾನು ಚರ್ಚಿಸಲಿಕ್ಕೆ ಇಷ್ಟಪಡುತ್ತೇನೆ ಇಲ್ಲಿನ 16 ಪ್ಯಾಕೇಜ್‌ನಲ್ಲಿ ಒಟ್ಟು 3, 544 50 ಲಕ್ಷ ರೂಪಾಯಿಗಳ ಟೆಂಡರ್ ಕರೆಯಲಾಗಿದ್ದು, ಪ್ರತಿ ಪ್ಯಾಕೇಜ್‌ನ ಟೆಂಡರ್‌ಗಿಟ್ಟ ಮೊತ್ತ 215 ಲಕ್ಷ ರೂಪಾಯಿಗಳಿಂದ 230 ಲಕ್ಷ ರೂಪಾಯಿಗಳವರಗೆ ಇರುತ್ತದೆ ಈ ಕೆಲಸಗಳಿಗೆ ಹಿಂದಿನ ಮೂರು ವರ್ಷಗಳಲ್ಲಿ 100 ಲಕ್ಷ ರೂಪಾಯಿಗಳ ಲೇಔಟ್ ನಿರ್ಮಾಣದ ಒಂದೇ ಕಾಮಗಾರಿಯನ್ನು ಪೂರೈಸಿರಬೇಕೆಂದು ಷರತ್ತು ವಿಧಿಸಲಾಗಿದೆ ಆದರೆ, ಕಳೆದ ಎರಡು-ಮೂರು ವರ್ಷಗಳಲ್ಲಿ ಇಂತಿಷ್ಟು ಕೆಲಸಗಳನ್ನು ಪೂರೈಸಬೇಕೆಂದು ನಿಯಮಗಳನ್ನು ವಿಧಿಸಿರುವುದಿಲ್ಲ ಯಂತ್ರೋಪಕರಣಗಳನ್ನು ಎರವಲು ಪಡೆಯಲು ಅವಕಾಶವನ್ನು ಕಲ್ಪಿಸಲಾಗಿದೆ ಇದು ಮೇಲೆ ವಿವರಿಸಿರುವ ಮೊದಲನೇ ಟೆಂಡರ್ ಪ್ರಕ್ರಿಯೆಗೆ ಹತ್ತಿರವಾಗಿದು, ಈ ಟೆಂಡರ್‌ಗೆ ಮೊದಲು ಕರೆಯಲಾಗಿದ್ದ ಟೆಂಡರ್‌ನಲ್ಲಿನ ವಿಜೇಯಿ ಗುತ್ತಿಗೆದಾರರುಗಳು ಈ ಟೆಂಡರ್ ಕೆಲಸವೂ ಕೂಡ ದೊರಕಬೇಕೆಂದು ಸ್ವ ಇಚ್ಛಾಶಕ್ತಿ, ಸ್ವೇಚ್ಛಾಚಾರ ಹಾಗು ಅಧಿಕಾರ ದುರುಪಯೋಗದಲ್ಲಿ ತೊಡಗಿದ್ದು, ಈ ಕೆಲಸಗಳನ್ನು ಸುಮಾರು 37 ಕೋಟಿ ರೂಪಾಯಿಗಳಿಗೆ ಬಿ ಡಿ ಎ ಯ ಮಾಮೂಲಿ ಗುತ್ತಿಗೆದಾರರಿಗೆ ದೊರಕುವಂತೆ ಮಾಡಿ ಅನ್ಯಾಯವನ್ನು ಎಸಗಿರುತ್ತಾರೆ ಮಾನ್ಯರೆ, ಈ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಸುಮಾರು 861 56 ಲಕ್ಷ ರೂಪಾಯಿಗಳಷ್ಟು ನಷ್ಟವನ್ನು ಈ ಬಿ ಡಿ ಎ ಅನುಭವಿಸಿರುತ್ತದೆ ಇದಕ್ಕೆ ಮುಖ್ಯವಾದ ಕಾರಣ ಏನೆಂದರೆ, ಅಲ್ಲಿರತಕ್ಕಂಥ ಅಧಿಕಾರಿಗಳ ಮಟ್ಟದಲ್ಲಿ ಆಗಿರತಕ್ಕಂಥ ಅವ್ಯವಹಾರ ಇದರಲ್ಲಿ ಕೆಲವು ಇಂಥವರಿಗೆ ಮಾತ್ರ ಗುತ್ತಿಗೆಯನ್ನು ಕೊಡತಕ್ಕಂಥದ್ದು ಎಂಬ ನಿಯಮವನ್ನು ಅಳವಡಿಸಿಕೊಂಡು, ಬಿ ಪ್ರಭುಲಿಂಗಸ್ವಾಮಿ, ಜಿ ಎನ್ ಕೃಷ್ಣ ಅಂಡ್ ಕಂಪನಿ ಮತ್ತು ನರಸಿಂಹಮೂರ್ತಿ, ವಿ ಕೆ ಗೋಪಾಲ್, ಆರ್ ಮಹೇಶ್ವರ ನಾಯ್ಡು ಮತ್ತು ಮಹೇಶ್, ಪ್ರಶಾಂತ್ ಬಿಲ್ಡರ್ಸ್ ಪರಿಚಿತ ಕನ್‌ಸ್ಟ್ರಕ್ಷನ್, ಎಸ್ ಮಹೇಶ್, ಲಕ್ಷಣನ್ ಬಿ ಜಿ. ಚೆನ್ನಪ್ಪ, ಸಾಯಿ ಕನ್‌ಸ್ಟ್ರಕ್ಷನ್ ಎಂ ಮಹೇಶ್ವರಪ್ಪ ಸುಮಾರು ಬಹಳಷ್ಟು ಬಡಾವಣೆಗಳನ್ನು ಅಭಿವೃದ್ಧಿಪಡಿಸಿರತಕ್ಕಂಥ ಸಂದರ್ಭದಲ್ಲಿ ಇಂತಿಷ್ಟೇ ಜನ ಇಡೀ ಕಾಮಗಾರಿಗಳನ್ನು ಮಾಡಿರತಕ್ಕಂಥದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಇವತ್ತಿನದಿವಸ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಎಷೊಂದು ಭ್ರಷ್ಟಾಚಾರವಾಗಿದೆ ಎಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಎಷ್ಟು ಇಲಾಖೆಗಳಿವೆ, ಈ ಎಲ್ಲಾ ಇಲಾಖೆಗಳಿಗಿಂತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಹೆಚ್ಚಿನ ಭ್ರಷ್ಟತೆ ಇರತಕ್ಕಂಥದ್ದನ್ನು ನಾವು ಕಾಣುತ್ತೇವೆ ಹಿಂದಿನ ಸರ್ಕಾರದಲ್ಲಿ ಬಿ ಡಿ ಎ ಆಯುಕ್ತರಾಗಿದ್ದಂಥ ಮಾನ್ಯ ಜೈಕರ್ ಜೆರೋಮ್ ಮತ್ತು ಕಾರ್ಯದರ್ಶಿಯಾಗಿದ್ದಂಥ ಶ್ರೀ ನಾರಾಯಣರವರು ತಾವು ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಕನಿಷ್ಟ 2000 ಬದಲಿ ನಿವೇಶನಗಳನ್ನು

ನೀಡಿರುತ್ತಾರೆ ಈ ಬದಲಿ ನಿವೇಶನಗಳನ್ನು ನೀಡಿರತಕ್ಕಂಥ ಸಂದರ್ಭದಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ ಈ ಪೈಕಿ ದಿನಾಂಕ 1-4-2000 ರಿಂದ 31-03-2001ರ ಅವಧಿಯೊಳಗೆ ಲಗತ್ತಿಸಿರುವ ಪಟ್ಟಿಯಲ್ಲಿ ತೋರಿಸಿರುವಂತೆ 750 ನಿವೇಶನಗಳನ್ನು ಬದಲಿಯಾಗಿ ಹಂಚಿಕೆ ಮಾಡಿರುತ್ತಾರೆ ಈ ಹಂಚಿಕೆದಾರರ ಪೈಕಿ ಬಹುತೇಕ ಮಂದಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೊಸದಾಗಿ ನಿರ್ಮಿಸಿರುವ ಅಂಜನಾಪುರ ಲೇಔಟ್, ಬನಶಂಕರಿ 6ನೇ ಹಂತದಲ್ಲಿ ಹೊಸದಾಗಿ ನಿವೇಶನ ಪಡೆದ ನಿವೇಶನದಾರರಾಗಿದ್ದು, ಸದರಿಯವರಿಗೆ 8 ರಿಂದ 10 ಪಟ್ಟು ಹೆಚ್ಚು ಬೆಲೆ ಬಾಳುವ ನಿವೇಶನಗಳನ್ನು ಬದಲಿ ನಿವೇಶನಗಳ ರೂಪದಲ್ಲಿ ಹಂಚಿಕೆ ಮಾಡಲಾಗಿದ್ದು, ಇದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 1984 ನಿಯಮವನ್ನು ಉಲ್ಲಂಘನೆ ಮಾಡಿರತಕ್ಕಂಥದ್ದು ಎಂದು ಸ್ಪಷ್ಟವಾಗಿ ಕಾಣುತ್ತದೆ ಬದಲಿ ನಿವೇಶನದ ನೆಪದಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವನ್ನು ಹಿಂದಿನ ಆಯುಕ್ತರು ಮಾಡಿರುತ್ತಾರೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಇದರ ಜೊತೆಗೆ ನಂದಿನಿ ಬಡಾವಣೆಯಲ್ಲಿ ಕೆಂಗಲ್ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರುಗಳಿಗೆ ಬದಲಿ ನಿವೇಶನವನ್ನು ನೀಡಬೇಕಾಗಿದೆ ಎಂಬ ಕುಂಟು ನೆಪವನ್ನು ಮುಂದಿಟ್ಟುಕೊಂಡು ಈ ಸಂಘದ ಸುಮಾರು 21 ಮಂದಿ ಸದಸ್ಯರುಗಳಿಗೆ ಹೆಚ್ ಎಸ್ ಆರ್ ಬಡಾವಣೆಯಲ್ಲಿ ಅಂದರೆ, ಹೆಚ್ಚು ಬೆಲೆಬಾಳತಕ್ಕಂಥ ಹೆಚ್ ಎಸ್ ಆರ್ ಬಡಾವಣೆಯಲ್ಲಿ ವಿವಿಧ ಅಳತೆಯ ಬದಲಿ ನಿವೇಶನಗಳನ್ನು ನೀಡಿರತಕ್ಕಂಥದ್ದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ ಇಲ್ಲಿ ಕಾನೂನು ಬಾಹಿರಬಾಗಿ ಈ ಪ್ರಾಧಿಕಾರದ ಕಾರ್ಯದರ್ಶಿಯವರ ಅಳಿಯಂದಿರು ಆದ ಶ್ರೀ ಹೇಮಂತ್ ಕುಮಾರ್ ಎಂಬುವವರಿಗೆ ಹೆಚ್ ಎಸ್ ಆರ್ ಲೇಔಟ್‌ನಲ್ಲಿ ಹೆಚ್ಚು ಬೆಲೆಬಾಳುವಂಥ ಒಂದು ನಿವೇಶನವನ್ನು ಬದಲಿ ನಿವೇಶನವಾಗಿ ನೀಡಿದ್ದಾರೆ ಮತ್ತೆ ಹಿಂದಿನ ಆಯುಕ್ತರು ಏನು ಮಾಡಿದ್ದಾರೆಂದರೆ, ಮೂಲೆ ನಿವೇಶನಗಳನ್ನೂ ಸಹ ಬದಲಿ ನಿವೇಶನಗಳನ್ನಾಗಿ ಹಂಚಿಕೆ ಮಾಡುವ ಪ್ರಕರಣದಲ್ಲಿಯೂ ಕೂಡ ಅವ್ಯವಹಾರವನ್ನು ಮಾಡಿದ್ದಾರೆ ಮತ್ತೆ ಇದರ ಜೊತೆಗೆ ಹಿಂದಿನ ಭೂ ಮಾಲೀಕರಿಗೆ ಪುನರ್ ಸ್ವಾಧೀನ ನೀಡಿರುವ ಪ್ರಕರಣಗಳೂ ಸಹ ಇದ್ದು, ಜಯನಗರ 9ನೇ ಬ್ಲಾಕ್‌ನಲ್ಲಿ ಡ್ರೈವಿಂಗ್ ಥಿಯೇಟರ್ ಎದುರಿನ ಬನ್ನೇರುಘಟ್ಟ ರಸ್ತೆ ಸಮೀಪದ ನಿವೇಶನಗಳು ಮತ್ತು ಹೆಚ್ ಎಸ್ ಆರ್ ಲೇಔಟ್‌ನ ಸರ್ವೆ ನಂ 56ರಲ್ಲಿರತಕ್ಕಂಥ ನಿವೇಶನಗಳನ್ನು ಹಂಚಿಕೆ ಮಾಡಿರತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಉದಾಹರಣೆಯಾಗಿ ಹೇಳುತ್ತಿದ್ದೇನೆ

**(ಮಾನ್ಯ ಡಿ ಆರ್ ಪಾಟೀಲ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)**

ಮತ್ತೆ ಇದೆಲ್ಲದರ ಜೊತೆಗೆ ಮತ್ತೊಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಆರ್ ಎಂ ವಿ ಲೇಔಟ್ 2ನೇ ಹಂತದಲ್ಲಿ ಅಂದರೆ ಎಂ ಎಸ್ ರಾಮಯ್ಯ ಆಸ್ಪತ್ರೆ ಎದುರಿನಲ್ಲಿ ಸುಮಾರು 100X80ಅಡಿ ಅಳತೆಯ 12 ನಿವೇಶನಗಳನ್ನು ಡಾಲರ್ಸ್ ಸ್ಕೀಂನಲ್ಲಿ ವಿವಿಧ ದೇಶಗಳಲ್ಲಿ ಇರತಕ್ಕಂಥ ಭಾರತೀಯ ಸಂಜಾತರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಇವರಿಂದ ಪೂರ್ತಿ ಹಣವನ್ನು ಸಂದಾಯ ಮಾಡಿಸಿಕೊಂಡು ಹಂಚಿಕೆ ಮಾಡಿರುತ್ತಾರೆ ಈ ಪ್ರದೇಶವನ್ನು *** ಈ ಎಲ್ಲಾ ನಿವೇಶನಗಳನ್ನು ಬೇರೆಯವರಿಗೆ ಮಾರಿರತಕ್ಕಂಥದ್ದನ್ನು ಸಹ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ.

ಇವತ್ತಿನದಿವಸ ಜವಾಬ್ದಾರಿ ಹೊಂದಿರತಕ್ಕಂಥ *** ಈ ರೀತಿಯಾದ ಅವ್ಯವಹಾರವನ್ನು ಮಾಡಿದಂಥ ಸಂದರ್ಭದಲ್ಲಿ ಬಿ ಡಿ ಎ,ಯಲ್ಲಿರತಕ್ಕಂಥ ಅಧಿಕಾರಿಗಳು ಇನ್ನು ಯಾವ ಮಟ್ಟದಲ್ಲಿ ಭ್ರಷ್ಟಾಚಾರ ಮಾಡುತ್ತಾರೆ ಎನ್ನತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ

**ಶ್ರೀ ಎಂ ರಾಮಲಿಂಗಾರೆಡ್ಡಿ** ಮಾನ್ಯ ಛೇರ್ಮನ್‌ರವರೆ, *** ಅವರು ಈ ಸದನದ ಅವರು ಈ ಸದನದ ಸದಸ್ಯರು ಅವರ ಮೇಲೆ ಏನಾದರೂ ಆರೋಪ ಮಾಡಬೇಕಾದರೆ ಮೊದಲು ನೋಟಿಸ್ ಕೊಟ್ಟು ಪ್ರಸ್ತಾಪ ಮಾಡಬೇಕು ಮತ್ತೆ ಅವರು ಇದ್ದಂಥ ಸಂದರ್ಭದಲ್ಲಿ ಇವರು ಮಾತನಾಡಬೇಕು ಈ ರೀತಿ ಮಾತನಾಡುವುದರಲ್ಲಿ ಏನರ್ಥವಿದೆ? ಸದನವೆಂದರೆ ಬಾಯಿಗೆ ಬಂದಂತೆ ಮಾತನಾಡಬಹುದೆ?

**ಶ್ರೀ ಕೆ ಶ್ರೀನಿವಾಸಗೌಡ** ಒಬ್ಬ ಶಾಸಕರ ಮೇಲೆ ಆಪಾದನೆ ಮಾಡುವುದಾದರೆ ಮೊದಲು ನೋಟಿಸ್ ಕೊಟ್ಟು ಮಾತನಾಡಬೇಕಾಗುತ್ತದೆ ನೋಟಿಸ್ ಕೊಡದೆ ಈ ರೀತಿಯಾಗಿ ಮಾತನಾಡುವುದಕ್ಕೆ ಬರುವುದಿಲ್ಲ

**ಶ್ರೀ ರಾಮಲಿಂಗಾರೆಡ್ಡಿ** ಮಾತನಾಡುವುದಕ್ಕೆ ಬರುತ್ತದೆಂದು ಬಾಯಿಗೆ ಬಂದಂತೆ ಮಾತನಾಡಬಹುದೆ?

**ಶ್ರೀ ಎ ಕೃಷ್ಣಪ್ಪ** ಈ ಸದನದಲ್ಲಿ ನಡವಳಿಕೆಗಳನ್ನು ಯಾವರೀತಿಯಾದರೂ ಮಾಡಬಹುದೆ?

**ಛೇರ್ಮನ್** ನೀವು ನೋಟಿಸ್ ಕೊಟ್ಟು ಅನಂತರ ಮಾತನಾಡಿ

**ಶ್ರೀ ರಾಮಲಿಂಗಾರೆಡ್ಡಿ** ಅದರ ಬಗ್ಗೆ ಅವರು ರೆಫರೆನ್ಸ್ ಮಾಡಬಾರದು

**ಮಾನ್ಯ ಸದಸ್ಯರು** ಹಾಗಲ ಕಾಯಿಗೆ ಬೇವಿನ ಕಾಯಿ ಸಾಕ್ಷಿ ಏನೂ ಬೇಕಾಗಿಲ್ಲ ಎಲ್ಲಾ ವಿಷಯ ನಮಗೆ ಗೊತ್ತಿದೆ

**ಶ್ರೀ ರಾಮಲಿಂಗಾರೆಡ್ಡಿ** ನೀವೊಬ್ಬ ಸೀನಿಯರ್ ಸದಸ್ಯರಾಗಿ ಈ ರೀತಿ ಹೇಳುತ್ತಿರುವುದು ಸರಿಯೇ?

**ಮಾನ್ಯ ಸದಸ್ಯರು** ಆ ರೀತಿಯಾಗಿ ಅವರು ಮಾತನಾಡಬಾರದೆಂದು ಅವರಿಗೂ ಹೇಳುತ್ತಿದ್ದೇವೆ ಮತ್ತು ಮಾನ್ಯ ಛೇರ್ಮನ್‌ರವರ ಗಮನಕ್ಕೂ ತರುತ್ತಿದ್ದೇವೆ

**ಶ್ರೀ ರಾಮಲಿಂಗಾರೆಡ್ಡಿ** ನಿಯಮಾವಳಿ ಪ್ರಕಾರ ನಡೆಯಬೇಕಲ್ಲವೆ? ಮಾನ್ಯ ಸದಸ್ಯರು ಇದ್ದಂಥ ಸಂದರ್ಭದಲ್ಲಿ ಬೇಕಾದರೆ ಪ್ರಸ್ತಾಪ ಮಾಡಲಿ

**ಡಾ॥ ಕೆ ಅನ್ನದಾನಿ** ಮಾನ್ಯ ಛೇರ್ಮನ್‌ರವರೆ, ನನಗೆ ಗೊತ್ತಿಲ್ಲದೆ ಯಾರದ್ದಾದರೂ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡಿದ್ದರೆ ಅದನ್ನು ವಾಪಸ್ಸು ಪಡೆಯುವುದಕ್ಕೆ ನಾನು ಇಷ್ಟಪಡುತ್ತೇನೆ ಆದರೆ, ಈ ವಿಚಾರವನ್ನು ಮುಂದುವರಿಸುತ್ತೇನೆ

**ಶ್ರೀ ಎ ಕೃಷ್ಣಪ್ಪ** ಮಾನ್ಯ ಛೇರ್ಮನ್‌ರವರೆ, ಅವರು ಹೇಳಿರತಕ್ಕಂಥ ಹೆಸರನ್ನು ಕಡತದಿಂದ ತೆಗೆಸಿ

**ಶ್ರೀ ಎಂ ರಾಮಲಿಂಗಾರೆಡ್ಡಿ** ಬಾಯಿಗೆ ಬಂದಂತೆ ಮಾತನಾಡಲು ಬಿಟ್ಟರೆ ಹೇಗೆ? ಅವರು ನೋಟಿಸ್ ಕೊಟ್ಟು ಮಾತನಾಡಲಿ

***ಮಾನ್ಯ ಛೇರ್ಮನ್ ಅವರ ಆದೇಶದ ಮೇರೆಗೆ, ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ

**ಛೇರ್ಮನ್** ನೋಟಿಸ್ ಕೊಟ್ಟು ಮಾತನಾಡಿ

**ಶ್ರೀ ಎ ಕೃಷ್ಣಪ್ಪ** ಅವರ ಹೆಸರನ್ನು ಕಡತದಿಂದ ತೆಗೆಸಬೇಕು

**ಛೇರ್ಮನ್** ಅದನ್ನು ಕಡತದಿಂದ ತೆಗೆಯಿರಿ

**ಗೊಂದಲ**

**ಡಾ|| ಕೆ ಅನ್ನದಾನಿ** ಮಾನ್ಯ ಛೇರ್ಮನ್‌ರವರೆ, ನನಗೆ ಗೊತ್ತಿಲ್ಲದೆ ಇರತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದರೆ ಆ ವಿಚಾರವನ್ನು ವಾಪಸ್ಸು ತೆಗೆದುಕೊಂಡು ಮುಂದಿನ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ

**ಶ್ರೀ ಎ ಕೃಷ್ಣಪ್ಪ** ಮಾನ್ಯ ಛೇರ್ಮನ್‌ರವರೆ, ಅವರ ಹೆಸರನ್ನು ಕಡತದಿಂದ ತೆಗೆಯುವುದಕ್ಕೆ ತಾವು ಆದೇಶ ಮಾಡಬೇಕು

**ಛೇರ್ಮನ್** ಕಡತದಿಂದ ತೆಗೆಯುವುದಕ್ಕೆ ಈಗಾಗಲೇ ಹೇಳಿದ್ದೇನೆ

**ಡಾ|| ಕೆ ಅನ್ನದಾನಿ** ಮಾನ್ಯ ಛೇರ್ಮನ್‌ರವರೆ, ಮಾನ್ಯ ಗೋಪಿನಾಥ್‌ರವರ ಹೆಸರನ್ನು ಪ್ರಸ್ತಾಪ ಮಾಡುತ್ತಾ ಹೇಳುವುದೇನೆಂದರೆ, 7 ನಿವೇಶನಗಳನ್ನು ಏರೋಡ್ರಾಮ್‌ನ ಅಧಿಕಾರಿಗಳಿಗೆ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಿರುತ್ತಾರೆ ಹಂಚಿಕೆ ಮಾಡಿರತಕ್ಕಂಥ ಸಂದರ್ಭದಲ್ಲಿ ಒಂದು ನಿವೇಶನವನ್ನು ಅವರ ಶ್ರೀಮತಿಯವರಿಗೆ ಮತ್ತು ಇನ್ನು ಆರು ನಿವೇಶನಗಳನ್ನು ಅವರ ಹೆಸರಿಗೆ ಹೊಂದಿರುತ್ತಾರೆ ಈ 7 ನಿವೇಶನಗಳಲ್ಲಿ ಅಂದರೆ, ನಂ 2463, ಎಚ್ ಎ ಎಲ್ 2ನೇ ಹಂತ–ಇಲ್ಲಿರತಕ್ಕಂಥ ನಿವೇಶನದಲ್ಲಿ ಭವ್ಯವಾದ ಬಂಗಲೆಯನ್ನು ಕಟ್ಟಿರುತ್ತಾರೆ ಈ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಮತ್ತೆ ಪ್ಯಾಲೇಸ್ ಗುಟ್ಟಹಳ್ಳಿಯಲ್ಲಿರತಕ್ಕಂಥ ಸೈಟ್ ನಂಬರ್ 14ರಲ್ಲಿಯೂ ಕೂಡ ಭವ್ಯವಾದ ಒಂದು ಬಂಗಲೆಯನ್ನು ಇವರು ನಿರ್ಮಾಣ ಮಾಡಿರುತ್ತಾರೆ ಹಾಗೆಯೇ ಇದರ ಜೊತೆಗೆ ಮಾನ್ಯ ಗೋಪಿನಾಥ್‌ರವರು ರಾಮ ಮೂರ್ತಿ ನಗರದಲ್ಲಿ ಸೈಟ್ ನಂ 430/20ರ ನಿವೇಶನದಲ್ಲಿ ಒಂದು ಭವ್ಯವಾದ ಒಂದು ಬಂಗಲೆಯನ್ನು ಇವರು ನಿರ್ಮಾಣ ಮಾಡಿರುತ್ತಾರೆ ಮತ್ತೆ ಇದೇ ರಾಮಮೂರ್ತಿನಗರದಲ್ಲಿ ಶ್ರೀಮತಿ ಗೋಪಿನಾಥ್‌ರವರ ಹೆಸರಿನಲ್ಲಿ 431/21ರ ನಿವೇಶನದಲ್ಲಿಯೂ ಕೂಡ ಒಂದು ಭವ್ಯವಾದ ಬಂಗಲೆಯನ್ನು ಕಟ್ಟಿರುತ್ತಾರೆ ಮಾನ್ಯ ಛೇರ್ಮನ್‌ರೆ, ನಿನ್ನೆ ದಿವಸ ಸಭೆ ನಡೆಯುವಂಥ ಸಂದರ್ಭದಲ್ಲಿ ಈ ಸದನದಲ್ಲಿ ಒಬ್ಬ ಗೌರವಾನ್ವಿತ ಸದಸ್ಯರು ಮಾತನಾಡುತ್ತಾ, ಬೆಂಗಳೂರಿನ ಬಿಡಿಎಯ ಹಿಂದಿನ ಆಯುಕ್ತರು, ಅವರ ಹೆಸರನ್ನು ನಾನು ಹೇಳುವುದಕ್ಕೆ ಇಚ್ಛಪಡುವುದಿಲ್ಲ, ಅವರು ಈ ಬೆಂಗಳೂರಿಗೆ ಒಂದು ಇಮೇಜ್‌ನ್ನು ಕ್ರಿಯೇಟ್ ಮಾಡಿದ್ದಾರೆನ್ನುವ ಒಂದು ಮಾತನ್ನು ಹೇಳಿದರು ಈ ಇಮೇಜ್‌ನ್ನು ಕ್ರಿಯೇಟ್ ಮಾಡುವಂಥ ಸಂದರ್ಭದಲ್ಲಿ ಈ ಗೋಪಿನಾಥ್ ಎನ್ನುವಂಥ ವ್ಯಕ್ತಿಯ ಬಗ್ಗೆ ಅವರ ಗಮನಕ್ಕೆ ಬರಲಿಲ್ಲವೆ ಎನ್ನುವಂಥ ವಿಚಾರವನ್ನು ನಾನು ನಿಮ್ಮ ಮುಂದೆ ಇಡುತ್ತಿದ್ದೇನೆ ಅದರ ಜೊತೆಗೆ ಇನ್ನೊಬ್ಬ, ನರಸಿಂಹಮೂರ್ತಿ ಎಂಬ ವ್ಯಕ್ತಿಯ ಮೇಲೆ ಒಂದು ರೀತಿಯ ಹಲ್ಲೆ ನಡೆಯಿತು ಹಿಂದಿನ ಆಯುಕ್ತರು ಅವನ ಮೇಲೆ ಮಾನಸಿಕವಾದ ಹಲ್ಲೆಯನ್ನು ಮಾಡಿದರು ಬೇನಾಮಿ ಹೆಸರಿನಿಂದ ಬಿಡಿಎಯಲ್ಲಿ ನಿವೇಶನಗಳನ್ನು ಹೊಂದಿ ಹಲವಾರು ಕಟ್ಟಡಗಳನ್ನು ಹೊಂದಿದ್ದಾರೆಂದು

ಹೇಳಿ ಅದನ್ನು ಮಾನ್ಯ ಆಯುಕ್ತರು ಕಂಡುಹಿಡಿದು ಎಲ್ಲಾ ಕಟ್ಟಡಗಳನ್ನು ಬುಲ್‌ಡೋಜರ್ ತೆಗೆದುಕೊಂಡು ಹೋಗಿ ಆ ಕಟ್ಟಡಗಳನ್ನು ನೆಲಸಮ ಮಾಡಿರತಕ್ಕಂಥ ವಿಚಾರ ಗೊತ್ತಿರತಕ್ಕಂಥದ್ದು ಆ ನರಸಿಂಹಮೂರ್ತಿ ಒಬ್ಬರೇ ಹಲವಾರು ಕಟ್ಟಡಗಳನ್ನು ಮತ್ತು ನಿವೇಶನಗಳನ್ನು ಹೊಂದಿದ್ದಾರೆಯೇ ಅಥವಾ ಹಲವಾರು ಮಂದಿ ಇದೇ ರೀತಿ ಅವ್ಯವಹಾರ ಮಾಡಿದ್ದಾರೆಯೇ ಎನ್ನುವಂಥದ್ದು ಇವರ ಗಮನಕ್ಕೆ ಬರಲಿಲ್ಲವೇ ಎನ್ನತಕ್ಕಂಥದ್ದನ್ನು ಪ್ರಸ್ತಾಪ ಮಾಡಲಿಕ್ಕೆ ನಾನು ಇಚ್ಛಪಡುತ್ತೇನೆ ಇವತ್ತು ನಾಲ್ಕು ಕಟ್ಟಡಗಳನ್ನು ಮತ್ತು 7 ನಿವೇಶನಗಳನ್ನು ಹೊಂದಿ ಭ್ರಷ್ಟಾಚಾರವನ್ನು ಎಸಗಿರತಕ್ಕಂಥದ್ದು ಮತ್ತು ಇದಕ್ಕೆ ಕುಮ್ಮಕ್ಕು ಕೊಟ್ಟಿರತಕ್ಕಂಥ ಅಧಿಕಾರಿಗಳ ಬಗ್ಗೆ ಇವತ್ತು ಇವರು ಕ್ರಮವನ್ನು ಜರುಗಿಸಬೇಕಾಗುತ್ತದೆ ಸುಮಾರು 750 ಬದಲಿ ನಿವೇಶನಗಳನ್ನು ಹಿಂದಿನ ಆಯುಕ್ತರು ಕೊಟ್ಟಿರುತ್ತಾರೆ ಆ ಬದಲಿ ನಿವೇಶನಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ಅಂಜನಾಪುರದಲ್ಲಿ ನಿಗದಿಪಡಿಸಿರತಕ್ಕಂಥ ಬೆಲೆಯನ್ನೇ ಬನಶಂಕರಿ 6ನೇ ಹಂತದಲ್ಲಿ ಕೊಟ್ಟಿರುವ ನಿವೇಶನಕ್ಕೂ ನಿಗದಿ ಮಾಡಿರುತ್ತಾರೆ ಹೆಚ್ಚಿನ ಮೌಲ್ಯದ ನಿವೇಶನಗಳುಳ್ಳ ಬಡಾವಣೆಗಳನ್ನು ಇದಕ್ಕೆ ಹೋಲಿಕೆ ಮಾಡಿ ಆಯುಕ್ತರು ಬದಲಿ ನಿವೇಶನಗಳನ್ನು ಕೊಟ್ಟಿರುತ್ತಾರೆ ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರವಾಗಿರುವುದನ್ನು ನಾನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಪಡುತ್ತೇನೆ ಅದರ ಜೊತೆಗೆ ಆ ಬಡಾವಣೆಗಳಿಗೆ ವಿದ್ಯುತ್ ಒದಗಿಸತಕ್ಕಂಥ ಸಂದರ್ಭದಲ್ಲಿ ಸುಮಾರು 3 ಜನರಿಗೆ ವಿದ್ಯುತ್ ಗುತ್ತಿಗೆ ಕೊಟ್ಟಿರತಕ್ಕಂಥದ್ದನ್ನು ಇವತ್ತು ನಿಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ ಅರವಿಂದ ಎಲೆಕ್ಟ್ರಿಕಲ್ಸ್ ಕುಮಾರ್ ಎಲೆಕ್ಟ್ರಿಕಲ್ಸ್, ವಿಷ್ಣು ಎಲೆಕ್ಟ್ರಿಕಲ್ಸ್, ವೇಣು ಎಲೆಕ್ಟ್ರಕಲ್ಸ್ ಇಷ್ಟೇ ಜನ ಇಡೀ ಬೆಂಗಳೂರಿನಲ್ಲಿ ಬಿಡಿಎ ಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸತಕ್ಕಂಥ ಎಲ್ಲಾ ಬಡಾವಣೆಗಳಿಗೆ ಇವರೇ 4 ಜನ ಗುತ್ತಿಗೆದಾರರು ಬಿಡಿಎ ಅಭಿವೃದ್ಧಿಪಡಿಸತಕ್ಕಂಥ ಎಲ್ಲಾ ಬಡಾವಣೆಗಳಿಗೆ ಇವರೇ ವಿದ್ಯುತ್ ಗುತ್ತಿಗೆದಾರರು ಅಂದಮೇಲೆ ಈ ನಾಲ್ಕು ಜನರು ಈ ಪ್ರಜಾಪ್ರಭುತ್ವ ದೇಶದಲ್ಲಿ ಬದುಕತಕ್ಕಂಥ ಜನ, ಬಾಳತಕ್ಕಂಥ ಜನ, ಈ ನಾಲ್ಕು ಜನರೇ ಇವತ್ತು ಕೆಲಸವನ್ನು ಮಾಡತಕ್ಕಂಥವರು ವಿದ್ಯುತ್ ಗುತ್ತಿಗೆಯ ಕಂಟ್ರಾಕ್ಟ್‌ನ್ನು ಪಡೆದುಕೊಂಡಿರುವಂಥವರು ಕೆಲವು ನಿಯಮಗಳನ್ನು ಅಳವಡಿಸಿಕೊಂಡು ಇನ್ನು ಯಾವ ಗುತ್ತಿಗೆದಾರರೂ ಕೂಡ ಬಿಡಿಎ ಒಳಗಡೆ ಸುಳಿಯಲೇಬಾರದು ಅದೇ ರೀತಿ ಮೂರು ಜನ ಅಧಿಕಾರಿಗಳ ಜೊತೆಯಲ್ಲಿ ಅವರು ಶಾಮೀಲಾಗಿ ಮೂರೆ ಜನ ಗುತ್ತಿಗೆದಾರರು ಇವತ್ತು ಇಡೀ ಬಿಡಿಎ ನಲ್ಲಿ ಗುತ್ತಿಗೆಯನ್ನು ಪಡೆದುಕೊಂಡು ಇವತ್ತು ಕೆಲಸವನ್ನು ಮಾಡುತ್ತಿದ್ದಾರೆ. ಇದು ದಯಮಾಡಿ ಆಗಬಾರದು, ಇವತ್ತು ವಿದ್ಯುತ್ ಗುತ್ತಿಗೆ ಲೈಸ್‌ನ್ಸ್‌ನ್ನು ಯಾರ್ಯಾರು ತೆಗೆದುಕೊಂಡಿದ್ದಾರೆ ಅವರೆಲ್ಲರಿಗೂ ಕೂಡ ಗುತ್ತಿಗೆಯನ್ನು ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಲ್ಲಿ ನಾನು ಇವತ್ತು ಒತ್ತಾಯವನ್ನು ಮಾಡುತ್ತೇನೆ ನಿನ್ನೆ ದಿವಸ ನಮ್ಮ ಗೌರವಾನ್ವಿತ ಸದಸ್ಯರಾದಂಥ ಮಾನ್ಯ ಮಾಧುಸ್ವಾಮಿಯವರು ಇದರ ಬಗ್ಗೆ ಮಾತನಾಡಿದ್ದಾರೆ. ಭೂಸ್ವಾಧೀನದಿಂದ ಜಮೀನನ್ನು ವಶಪಡಿಸಿಕೊಂಡಿರತಕ್ಕಂಥ ಕೆಐಎಡಿಬಿ ಮೂಲಕ ಖಾಸಗಿಯವರಿಗೆ ಕೊಡತಕ್ಕಂಥದ್ದು, ಬೆಂಗಳೂರು, ಕೋರಮಂಗಲ ಬಡಾವಣೆಯ ನಂತರ ಬರತಕ್ಕಂಥ ಜಕ್ಕಸಂದ್ರ, ಅಲ್ಲಿ ಕೂಡ ನೂರಾರು ಕೋಟಿ ರೂ ಗಳ ಅವ್ಯವಹಾರವಾಗಿದೆ. ಇದರ ಜೊತೆಗೆ ಬೆಂಗಳೂರಿನ ಬಿಡಿಎ ಬಡಾವಣೆಗಳಲ್ಲಿ ಆಗಿರತಕ್ಕಂಥ ಸಾವಿರಾರು ಕೋಟಿ ರೂಗಳ

ಅವ್ಯವಹಾರವನ್ನು ತನಿಖೆ ಮಾಡುವುದಕ್ಕೆ ಒಳಪಡಿಸಿದರೆ, ಆಗಿರುವ ಈ ಅವ್ಯವಹಾರವನ್ನು ಮತ್ತೆ ಸರ್ಕಾರಕ್ಕೆ ಏನಾದರೂ ಮಾಡಿ ಮುತ್ತಿಗೆ ಹಾಕುವಂಥ ಕಾರ್ಯವನ್ನು ಮಾಡಿದರೆ ನಮ್ಮ ಸರ್ಕಾರಕ್ಕೆ ಆದಾಯ ಬಂದರೆ, ಏನಾದರೊಂದು ಒಳ್ಳೆಯ ಅಭಿವೃದ್ಧಿ ಕಾರ್ಯಗಳು ಆಗಬಹುದು ಎನ್ನುವ ಮಾತನ್ನು ಹೇಳುತ್ತಾ, ಇವತ್ತು ಬಿಡಿಎಯಲ್ಲಿ ಏನು ಇಷ್ಟೊಂದು ಅವ್ಯವಹಾರವಾಗಲಿಕ್ಕೆ ಅಧಿಕಾರವರ್ಗ ಮತ್ತು ಅದಕ್ಕೆ ಶಾಮೀಲಾಗಿರತಕ್ಕಂಥ ಎಲ್ಲಾ ಅಧಿಕಾರಿಗಳನ್ನು ವರ್ಗಾವಣೆ ಮಾಡತಕ್ಕಂಥ ಕೆಲಸವಾಗಬೇಕು ಬಿಡಿಎ ಒಂದು ಅಟಾನಮಸ್ ಬಾಡಿ, ಆದರೂ ಕೂಡ ಕೆಲವೊಂದು ಅಧಿಕಾರಿಗಳನ್ನು ವರ್ಗಾವಣೆ ಮಾಡಲಿಕ್ಕೆ ಕೆಲವು ಕ್ರಮಗಳನ್ನು ತಾವು ತೆಗೆದುಕೊಳ್ಳಬೇಕಾಗುತ್ತದೆ ಇಲ್ಲದಿದ್ದರೆ ಅವರು ಅದೇ ಜಾಗದಲ್ಲಿ 30–35 ವರ್ಷಗಳಿಂದ ಇದ್ದು, ಅಲ್ಲಿಯ ಎಲ್ಲಾ ಸಮಸ್ಯೆಗಳು, ಅಲ್ಲಿ ಹಣವನ್ನು ಹೊಡೆಯತಕ್ಕಂಥದ್ದು, ನಿವೇಶನಗಳನ್ನು ಸಂಚಿಕೆ ಮಾಡತಕ್ಕಂಥದ್ದು, ನಿವೇಶನಗಳನ್ನು ನಾವು ಯಾರ್‍ಯಾರಿಗೆ ಕೊಡಬೇಕು ಎಲ್ಲೆಲ್ಲಿ ಬದಲಿ ನಿವೇಶನಗಳನ್ನು ಕೊಡಬೇಕು ಎನ್ನುವುದರ ಬಗ್ಗೆ ಅವರು ಚೆನ್ನಾಗಿ ಕರಗತ ಮಾಡಿಕೊಂಡಿದ್ದಾರೆ ಆದ್ದರಿಂದ ಆ ಅಧಿಕಾರಿಗಳನ್ನು ಬದಲಾವಣೆ ಮಾಡಿದಾಗ ಮಾತ್ರ ಈ ಬಿಡಿಎ ಗೆ ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ ಇಲ್ಲದಿದ್ದರೆ ಯಾವುದೇ ಕಾರಣಕ್ಕೂ ಕೂಡ ಬಿಡಿಎಯಲ್ಲಿ ಸುಧಾರಣೆ ತರಲಿಕ್ಕೆ ಸಾಧ್ಯವಾಗುವದಿಲ್ಲವೆನ್ನತಕ್ಕಂಥ ಮಾತನ್ನು ಹೇಳಬೇಕಾಗುತ್ತದೆ ಇವತ್ತು ಸುಮಾರು 20–30 ಸಾವಿರ ಮಧ್ಯಮವರ್ಗದವರು ಮತ್ತು ಬಡವರು ಮನೆಗಳು ಇಲ್ಲದೆ ಬದುಕತಕ್ಕಂಥ ಜನರನ್ನು ಇವತ್ತು ಬೆಂಗಳೂರಿನಲ್ಲಿ ನಾವು ನೋಡುತ್ತಿದ್ದೇವೆ ಇಷ್ಟೊಂದು ಅವ್ಯವಹಾರವಾದರೂ ನಿಜವಾಗಿಯೂ ಕೂಡ ಯಾವುದೇ ಪ್ರಜಾಪ್ರಭುತ್ವದಲ್ಲಿ ಎಲ್ಲರದ್ದೂ ಹಕ್ಕು ಇದೆ ಎಂದು ಹೇಳತಕ್ಕಂಥ ಸಂದರ್ಭದಲ್ಲಿ ಕೆಲವರಂತೂ ಇವತ್ತು ಬೆಂಗಳೂರಿನಲ್ಲಿ ನಮಗೆ ಮನೆ ಸಿಗುತ್ತದೋ ಇಲ್ಲವೋ ಎನ್ನುವಂಥ ಆತಂಕದಲ್ಲಿ ಬದುಕುತ್ತಿದ್ದಾರೆ ಈ ಅವ್ಯವಹಾರಗಳನ್ನು ತಪ್ಪಿಸಿದರೆ ನಾವು ಎಲ್ಲರ ಆಸೆ ಆಕಾಂಕ್ಷೆಗಳನ್ನು ಪೂರೈಸಬಹುದೆಂದು ಹೇಳಿ, ಇವತ್ತು ಬಿಡಿಎ ಒಂದು ಭ್ರಷ್ಟದ ಕೂಪವಾಗಿ ಹೊರಹೊಮ್ಮಿದೆ. ಈ ಭ್ರಷ್ಟದ ಕೂಪವನ್ನು ನೀವು ಹೊರಗಡೆ ತರಬೇಕೆಂದರೆ ಅಲ್ಲಿಯ ಅಧಿಕಾರಿಶಾಹಿಗಳನ್ನು ನೀವು ಸಂಪೂರ್ಣವಾಗಿ ಬದಲಾವಣೆ ಮಾಡುವುದರ ಮುಖಾಂತರ ಮಾಡಬಹುದು ಇಲ್ಲದಿದ್ದರೆ ಯಾವುದೇ ಕಾರಣಕ್ಕೂ ಸಾಧ್ಯವಾಗುವುದಿಲ್ಲವೆನ್ನುವ ಮಾತನ್ನು ಹೇಳಿ, ನಿನ್ನೆ ದಿವಸ ನಮ್ಮ ಮಾನ್ಯ ಸದಸ್ಯರಾದ ಶ್ರೀ ಪುಟ್ಟೇಗೌಡರು ಪ್ರಸ್ತಾಪ ಮಾಡುತ್ತಾ ಹೇಳಿದರು ಯಾರಿಗೆ ಬಿಡಿಎ ರುಚಿ ಗೊತ್ತಿರುವುದಿಲ್ಲ ಅಂಥವರಿಗೆ ನೇಮಕ ಮಾಡತಕ್ಕಂಥದ್ದು ಸೂಕ್ತ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ ಅದನ್ನು ದಯಮಾಡಿ ಈ ಕೂಡಲೇ ಸರ್ಕಾರ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿ, ಇವತ್ತು ಬಿಡಿಎ ಬಗ್ಗೆ ಹೇಳುತ್ತಾ ಹೋದರೆ, ಇನ್ನು ಎರಡು ದಿವಸಗಳ ಸಮಯವಾದರೂ ಸಾಕಾಗುವುದಿಲ್ಲ ಆದ್ದರಿಂದ ಬಹಳಷ್ಟು ವಿಚಾರಗಳನ್ನು ಇವತ್ತು ನಾನು ಇಲ್ಲಿ ತಂದಿದ್ದೇನೆ, ಇನ್ನೂ ಬಹಳಷ್ಟು ಇರುವ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋದರೆ ಎರಡು ದಿವಸ ಬೇಕಾಗುತ್ತದೆ ಅದರ ಜೊತೆಗೆ ಅವ್ಯವಹಾರವಾಗಿರುವುದರ ಬಗ್ಗೆ ನಮ್ಮ ಹತ್ತಿರ ಇನ್ನೂ ಬಹಳಷ್ಟು ಕಾಗದಪತ್ರಗಳು ಇವೆ ಮುಂದೆ ಅದರ ಬಗ್ಗೆ ಚರ್ಚೆ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿ ಬಿಡಿಎಯಲ್ಲಿ ಮತ್ತು ಕಾಮಗಾರಿಯಲ್ಲಿ ಆಗಿರತಕ್ಕಂಥ ಅವ್ಯವಹಾರ, ಇವತ್ತು ಏನು

ಬಡಾವಣೆಗಳನ್ನು ನಿರ್ಮಾಣ ಮಾಡಿದ್ದಾರೆ ಅಲ್ಲಿ ಇನ್‌ಫ್ರಾಸ್ಟಕ್ಚರ್‌ನ್ನು ಅಳವಡಿಸಲಿಲ್ಲ ರಸ್ತೆ, ನೀರು ಮತ್ತು ಒಳಚರಂಡಿ ವ್ಯವಸ್ಥೆ ಇಲ್ಲ ವಿದ್ಯುತ್ ವ್ಯವಸ್ಥೆಯನ್ನು ಸರಿಯಾಗಿ ಮತ್ತು ಸಮರ್ಪಕವಾಗಿ ಮಾಡಲಿಲ್ಲ ಅದರ ನಂತರದಲ್ಲಿ ನಿವೇಶನಗಳನ್ನು ಮಾಡಿ ಅದಕ್ಕೂ ಕೂಡ ಹಣವನ್ನು ಭರಿಸುವಂಥದ್ದನ್ನು ಮಾಡಿ ಆ ಜನಗಳಿಗೆ ನೋವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಇವೆ ಆದ್ದರಿಂದ ದಯಮಾಡಿ ಒಂದು ಬಡಾವಣೆಯನ್ನು ನಿರ್ಮಾಣ ಮಾಡತಕ್ಕಂಥ ಸಂದರ್ಭದಲ್ಲಿ ಎಲ್ಲಾ ರೀತಿಯ ಅನುಕೂಲಗಳನ್ನು ಅವರಿಗೆ ಕಲ್ಪಿಸಿ ಅನಂತರದಲ್ಲಿ ಬಡಾವಣೆಗಳನ್ನು ಮಾಡಿ ನಿವೇಶನಗಳನ್ನು ಹಂಚಬೇಕು ಎನ್ನುವ ಮಾತನ್ನು ಹೇಳುತ್ತೇನೆ ಇವತ್ತು ಏನು ಹೊಸ ಬಡಾವಣೆಗಳು ಆಗಿವೆ ಅಲ್ಲಿ ಇನ್ನೂ ಬಹಳಷ್ಟು ಬಡಾವಣೆಗಳಿಗೆ ಒಳಚರಂಡಿ ವ್ಯವಸ್ಥೆಯಾಗಿಲ್ಲ, ವಿದ್ಯುತ್ ವ್ಯವಸ್ಥೆಯಾಗಿಲ್ಲ, ಈ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡುವುದರ ಮುಖಾಂತರ ಈ ಜನರ ನೋವು ಮತ್ತು ಸಮಸ್ಯೆಗಳನ್ನು ನಿವಾರಿಸಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ತಾವು ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** ಮಾನ್ಯ ಛೇರ್ಮನ್‌ರವರೆ, It is a NICE project ನೈಸ್ ಪ್ರಾಜೆಕ್ಟ್ ಎಂದರೆ ಒಳ್ಳೆಯ ಪ್ರಾಜೆಕ್ಟ್ ಎಂದು ಆಗುತ್ತದೆ ಆದರ ಹೆಸರು ನೈಸ್ ಅಷ್ಟೆ ಆದರೆ ಇದರಲ್ಲಿ ಆಗಿರುವುದೆಲ್ಲವೂ ಅನ್ಯಾಯವೇ Nothing nice has taken place here ಅದಕ್ಕೆ ಒಂದು ಮಾತಿದೆ politics is a gentle art of getting votes from the poor, campaign from the rich, promising to protect each from the other "ಇದು ಏನಾಗಿದೆ ಎಂದರೆ, ಇದನ್ನು ಸ್ವಲ್ಪ ಬದಲಾವಣೆಯನ್ನು ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಬಡವರ, ರೈತರ ಜಮೀನನ್ನು ತೆಗೆದುಕೊಳ್ಳುವುದು, ಶ್ರೀಮಂತರಿಗೆ ಕೊಡುವುದು, ಪಾರ್ಟಿ ಫಂಡ್‌ನ ಹೆಸರಿನಲ್ಲಿ ಹಣವನ್ನು ಕಲೆಕ್ಟ್ ಮಾಡುವುದು, ಯಾರು ಏನು ಮಾಡಬೇಕು ಯಾರು ಕಲೆಕ್ಟ್ ಮಾಡಬೇಕು, ಎಷ್ಟು ಕಲೆಕ್ಟ್ ಮಾಡಬೇಕು, ಇದರಲ್ಲಿ ಒಂದಕ್ಕೂ ತಲೆಯಿಲ್ಲ ಮತ್ತು ಬುಡವಿಲ್ಲ ಆ ಪರಿಸ್ಥಿತಿ ನಾವು ಬಂದಿದ್ದೇವೆ ಇದು ಕೆಲವರೇ ಮಾಡಿದ ತಪ್ಪಿಗೆ ಎಲ್ಲರ ಮುಖಕ್ಕೆ ಮಸಿ ಬಳಿಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಮಾನ್ಯ ಸದಸ್ಯರಾದ ಶ್ರೀ ಮಾಧುಸ್ವಾಮಿಯವರು ಮತ್ತು ನಾವು ಬೆಳಿಗ್ಗೆ ಮಾತನಾಡಿದೆವು ಆರ್ಟಿಕಲ್–48(ಎ) ಬಗ್ಗೆ ನಾವುಗಳು ಚರ್ಚೆ ಮಾಡಿದೆವು. ಆರ್ಟಿಕಲ್–48(ಎ) ಏನು ಹೇಳುತ್ತದೆ State shall endeavour to protect and improve the environment and safeguard the forest and wild life of a country" Environment ಎಂದರೆ ಇವೆಲ್ಲವೂ ಬಂತು ಪಾರ್ಕ್‌ಗಳನ್ನು ರಕ್ಷಣೆ ಮಾಡುವಂತಹದ್ದು ರಿಸರ್‌ವಾಯರನ್ನು ರಕ್ಷಣೆ ಮಾಡುವಂತಹದ್ದು, ಇವೆಲ್ಲವೂ We have given a go bye to all these things ಇವೆಲ್ಲವೂ ಬಿಟ್ಟು ಸರ್ಕಾರವನ್ನು ನಡೆಸುವವರು ಬೇಲಿಯೇ ಹೊಲವನ್ನು ಮೇಯಿದಂತೆ ಈ ಪರಿಸ್ಥಿತಿಯೂ ನಿರ್ಮಾಣವಾಗಿದೆ ಇದರ ಬಗ್ಗೆ ನಿನ್ನೆ ಮತ್ತು ಮೊನ್ನೆಯಿಂದ ಚರ್ಚೆ ಮಾಡುವಾಗ ಈಗ ಒಂದು ಹೊಸ ವಿಷಯ ನನ್ನ ಗಮನಕ್ಕೆ ಬಂತು ಇದರ ಬಗ್ಗೆ ಸದನದ

ಮತ್ತು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಪಡುತ್ತೇನೆ ಮಹದೇವಪುರ ಸಿಎಂಸಿಯ ಒಂದು ಏರಿಯಾದಲ್ಲಿ ಹೆಚ್ ಎ ಎಲ್ ಏರ್‌ಕ್ರಾಫ್ಟ್ ಸೊಸೈಟಿಯನ್ನು ಮಾಡಿದ್ದಾರೆ ಅವರು ಸಿ ಎ ಸೈಟನ್ನು ಮಾಡಿ ಬಿಡಿಎಗೆ ಬಿಟ್ಟುಕೊಟ್ಟಿದ್ದಾರೆ ಆ ಸಿ ಎ ಸೈಟ್‌ನಲ್ಲಿ ಇವತ್ತಿನ ದಿವಸ ಅಲ್ಲಿ 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಚೌಟರಿಯನ್ನು ಕಟ್ಟುತ್ತಿದ್ದಾರೆ ಇದನ್ನು ತಕ್ಷಣ ನಿಲ್ಲಿಸಿ ತನಿಖೆಯನ್ನು ಮಾಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕು ಇಲ್ಲಿ ಒಂದು ಕಡೆ ಚರ್ಚೆಯಾಗುತ್ತಿದೆ

**ಮಾನ್ಯ ಸದಸ್ಯರು** ಹೆಗ್ಡೆಯವರೆ, ಎಕ್ಸ್‌ಕ್ಲ್ಯೂಸ್‌ಮಿ ಲೋಕೇಶನ್ ಬಗ್ಗೆಯಾದರೂ ಹೇಳಿ

**ಶ್ರೀ ಕೆ ಜಯಪ್ರಕಾಶ ಹೆಗ್ಡೆ** ಮಹದೇವಪುರ ಹೆಚ್ ಎ ಎಲ್ ಏರ್‌ಕ್ರಾಫ್ಟ್ ಸೊಸೈಟಿ ಅವರು ಲೇಔಟ್ ಮಾಡಿರುವುದರಲ್ಲಿ ಒಂದು ಸಿ ಎ ಸೈಟ್ ಇಲ್ಲಿ ಚರ್ಚೆಯನ್ನು ಮಾಡಿದರೆ ಏನೂ ಆಗುವುದಿಲ್ಲವೆಂದು ಅವರ ತಲೆಗೆ ಬಂದುಬಿಟ್ಟಿದೆ ಇಲ್ಲಿ ಏನು ಮಾಡುತ್ತಿದ್ದಾರೆ? ಅವರು ಏನು ಮಾಡಿದರೂ ಕೂಡ ಅದರಿಂದ ನಮಗೇನೂ ಆಗುವುದಿಲ್ಲವೆಂದು ಅವರು 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟುತ್ತಿದಾರೆ ಮೊನ್ನೆ ದಿನ ಮಾನ್ಯ ಸದಸ್ಯರಾದ ಶ್ರೀ ಮಾಧುಸ್ವಾಮಿಯವರು ಬಿಎಂಐಸಿಯ ಬಗ್ಗೆ ಮಾತನಾಡಿದರು I endorse his argument ಅದನ್ನು ಬಿಟ್ಟು ನಾನು ಸ್ವಲ್ಪ ಮುಂದಕ್ಕೆ ಹೋಗುತ್ತೇನೆ ಅವರು ಮಾತನಾಡಿದ್ದನ್ನು endorse ಮಾಡುತ್ತಾ ಈಗ ಸರ್ಕಾರ ಬೆಂಗಳೂರು ಮತ್ತು ಮೈಸೂರು ರಸ್ತೆಯನ್ನು ಫೋರ್‌ಲೈನ್ ರೋಡ್ ಮಾಡುತ್ತಿದೆ ಇದಕ್ಕಾಗಿ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ ಎಂದು ಕಾಣುತ್ತದೆ ಹಾಗಾದರೆ ಪುನಃ ಈ ಪ್ರಾಜೆಕ್ಟ್ ಏತಕ್ಕಾಗಿ ಬೇಕು? ಒಂದು ವೇಳೆ 200 ಕೋಟಿ ರೂಗಳನ್ನು ಖರ್ಚು ಮಾಡಿ ಇದ್ದ ರಸ್ತೆಯನ್ನು ಫೋರ್‌ಲೈನ್ ರೋಡ್‌ನ್ನು ಮಾಡುವುದಾದರೆ, ಪುನಃ ಇದೊಂದು ರಿಯಲ್ ಎಸ್ಟೇಟ್‌ಗೆ ಒಂದು ಕಾರಿಡಾರ್‌ನ ಅಗತ್ಯ ಉಂಟೇ? ರೈಲ್ವೆಯೂ ಡಬಲ್ ಟ್ರಾಕ್ ಆಗುತ್ತಿದೆ, ಇದು ಫೋರ್ ಲೈನ್ ಆಗುತ್ತಿದೆ, ಅದರ ಮಧ್ಯದಲ್ಲಿ ಇದು ಏಕೆ ಬೇಕು? ಇದು ರಿಯಲ್ ಎಸ್ಟೇಟ್‌ನ ದಂಧೆ ಎಂದು ಬಿಟ್ಟರೆ ರಸ್ತೆಯನ್ನು ಮಾಡುವುದಂತೆ ಅಲ್ಲವೇ ಅಲ್ಲ? ಏನು ಬೆಂಗಳೂರು–ಮೈಸೂರು ಕಾರಿಡಾರ್ ಎಂದು ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ, ಅದೆಲ್ಲಾ ಇದೆ? ಆಮೇಲೆ ವಿಶೇಷ ವೇನೆಂದರೆ, ಜಾಗವನ್ನು ಸರ್ಕಾರ ರೈತರಿಂದ ತೆಗೆದುಕೊಂಡು ಬಿಎಂಐಸಿಯವರು ನೈಸ್ ರವರಿಗೆ ಕೊಡುವುದು ಅವರು ಅದನ್ನು ಪ್ಲೆಡ್ಜ್ ಮಾಡಿ ದುಡ್ಡನ್ನು ತೆಗೆದುಕೊಂಡು ಸರ್ಕಾರಕ್ಕೆ ಕಟ್ಟುವುದು ಇಲ್ಲಿದ್ದವರಿಗೆ ಇದು ನಮಗೆ ಮಾಡುವುದಕ್ಕೆ ಆಗುತ್ತಿರಲಿಲ್ಲವೇ? ಕರ್ನಾಟಕದಲ್ಲಿ ಇದ್ದವರಿಗೆ ಮಾಡುವುದಕ್ಕೆ ಆಗುತ್ತಿರಲಿಲ್ಲವೇ? ಕಲ್ಯಾಣಿ ಗ್ರೂಪ್‌ನ ನೈಸ್ ಗ್ರೂಪ್‌ನವರೇ ಬರಬೇಕಾಗಿತ್ತಾ? ಇದು ವಿಚಿತ್ರವಾದರೂ ನಿಜವಾಗಿದೆ ಏನು ಹೊಸ ಪ್ರಾಜೆಕ್ಟನ್ನು ಮಾಡುತ್ತಿದ್ದಾರೆ ಅದನ್ನು ಇಲ್ಲಿ ಯಾರಿಗೂ ಮಾಡುವುದಕ್ಕೆ ಆಗುವುದಿಲ್ಲವೇ? ಹಿಂದೆ 12ನೇ ಫೆಬ್ರವರಿಯಲ್ಲಿ ತಾವು ಇದ್ದರಿ ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮಾನ್ಯ ಸುರೇಶ್‌ಕುಮಾರ್‌ರವರು ಇದರ ಬಗ್ಗೆ ಒಂದು ಬೆಂಗಳೂರು ಇನ್‌ಫರ್ಮೇಶನ್ ಟೆಕ್ನಾಲಜಿ ಕಾರಿಡಾರ್ ಅಥಾರಿಟಿ ಎಂಬ ಬಿಲ್ಲನ್ನು ತಂದರು ಈ ಕಾರಿಡಾರ್ ಮಾಡುವುದಕ್ಕೆ ಇಲ್ಲಿ 136ಸ್ಕ್ವೇರ್

ಕಿಲೋಮೀಟರ್ಸ್ ಲ್ಯಾಂಡನ್ನು ಅಕ್ವೈರ್ ಮಾಡಬೇಕಾಗಿತ್ತು ಅದರ ಬಗ್ಗೆ ನಾನು ಮತ್ತು ಮಾನ್ಯ ಸುರೇಶ್ ಕುಮಾರ್‌ರವರು ಎತ್ತಿಕೊಂಡಾಗ ಎಲ್ಲಾ ಸದನದ ಸದಸ್ಯರು ಇದರ ಬಗ್ಗೆ ಬೆಂಬಲವನ್ನು ಕೊಟ್ಟು ಈ ಬಿಲ್ ಪಾಸಾಗದೇ ಇದ್ದಹಾಗೆ ನಾವು ನೋಡಿ ಕೊಂಡೆವು ಪ್ರಾಯಶಃ ಅದೂ ಇದೇ ರೀತಿಯಲ್ಲಿ ಇನ್ನೊಂದು ಹಗರಣವಾಗುತ್ತಿತ್ತು ಎಂಬುದು ನನ್ನ ಅನಿಸಿಕೆಯಾಗಿದೆ

**ಶ್ರೀ ಬಸವರಾಜ್ ರಾಯರೆಡ್ಡಿ** ಆ ಎಂಒಯು ಸೈನ್ ಆಗುವ ಸಂದರ್ಭದಲ್ಲಿ ತಾವು ಮಂತ್ರಿಗಳಾಗಿದ್ದಿರಿ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಹೌದು, ನಾನು ಮಂತ್ರಿಯಾಗಿದ್ದೆ

**ಶ್ರೀ ಬಸವರಾಜರಾಯರೆಡ್ಡಿ** ತಾವು ಇದನ್ನು ವಿರೋಧ ಮಾಡಬಹುದಾಗಿತ್ತು

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಎಂಒಯುನಲ್ಲಿ ಏನೆಲ್ಲಾ ಅಂಶಗಳು ಇತ್ತೋ, ಅದು ಯಾವುದೂ ಈವತ್ತು ಇರುವುದಿಲ್ಲ ಆಗ ಸೈನ್ ಮಾಡಿದಾಗ ಇದ್ದಂಥ ಕಂಪನಿಗಳೂ ಸಹ ಈಗ ಇಲ್ಲ ಅದರ ಬಗ್ಗೆ ಸ್ಪಷ್ಟವಾಗಿ ಹೇಳುತ್ತೇನೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಅದರ ಬಗ್ಗೆ ಮಾತನಾಡುವಾಗ ಹೇಳೋಣ ಆಯಿತು

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಎಂಒಯು ಸೈನ್ ಮಾಡಿರುವಂತಹ ಸಂದರ್ಭದಲ್ಲಿ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಆಯಿತು, ನಾನೇ ತಪ್ಪನ್ನು ಮಾಡಿದ್ದೇನೆ ತಾವು ಇದನ್ನು ಸರಿ ಮಾಡಿ I will admit I have committed a mistake ಒಪ್ಪುತ್ತೀರಾ?

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ನೋ ನೋ, ಅಲ್ಲಾ ಅಲ್ಲಾ,

**Sri K Jayaprakash Hedge** Including I have comitted a mistake because of the project ನನ್ನನ್ನು ಸೇರಿಸಿಕೊಂಡು ತನಿಖೆಯನ್ನು ಮಾಡಿ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಅಲ್ಲ, that is right ಆದರೆ ಮೂಲಭೂತವಾದ ಪ್ರಶ್ನೆ ಇಲ್ಲಿರುವಂತಹದ್ದು ನಾನು ನಿನ್ನೆ ಮಾತನಾಡುವಾಗ ಹೇಳಿದೆ, ಎಂಒಯುನಲ್ಲಿ ಏನೆಲ್ಲಾ ಅಗ್ರಿಮೆಂಟಾಗಿತ್ತು, ಅವೆಲ್ಲವನ್ನೂ ಸಂಪೂರ್ಣವಾಗಿ ತಿರಸ್ಕಾರ ಮಾಡಿ ಅದನ್ನು ಕೈಬಿಟ್ಟಿದ್ದಾರೆ ಇನ್ನು ಎರಡನೆಯದಾಗಿ ಎಂಒಯುನಲ್ಲಿ ಸೈನ್ ಮಾಡಿರತಕ್ಕಂತಹ ಓರಿಜಿನಲ್ ಕಂಪನಿ ಇಲ್ಲಿ ಇಲ್ಲವೇ ಇಲ್ಲ ಇಲ್ಲಿ ಡೂಪ್ಲಿಕೇಟ್ ಕಂಪನಿ ಇನ್ನೊಂದು ಕಂಪನಿ ಬಂದಿರುವುದು ಓರಿಜಿನಲ್ ಅಗ್ರಿಮೆಂಟ್ ಆಗಿರುವುದು ಅಮೇರಿಕಾದವರ ಜೊತೆ ನೈಸ್ ಕಂಪನಿಯೂ ಒಂದು ಅಷ್ಟೆ. ಅದು ಕಲ್ಯಾಣಿ ಗ್ರೂಪ್‌ನವರದ್ದು ಆಗಿದೆ. ಆದರೆ ಆ ಕಂಪನಿಗಳು ಹೋಗಿ ಹೊಸ ಕಂಪನಿಗಳು ಹುಟ್ಟಿಕೊಂಡಿರುವುದು ರಿಯಲ್ ಎಸ್ಟೇಟ್ ದಂಧೆ ಮಾಡುವುದಕ್ಕಾಗಿ ಆಗಿದೆ ಎಂಒಯುನಲ್ಲಿರುವುದನ್ನು ಕರೆಕ್ಟ್ ಆಗಿ ಇಂಪ್ಲಿಮೆಂಟ್ ಮಾಡಿದ್ದಾರೆ ಏನೂ ಪ್ರಾಬ್ಲಮ್ ಆಗುತ್ತಿರಲಿಲ್ಲ It is very clear, ಒಂದೇ ಒಂದು ನಯಾ ಪೈಸೆಯನ್ನು ಸರ್ಕಾರ ಖರ್ಚು ಮಾಡುವುದಕ್ಕೆ ತಯಾರಿಲ್ಲ ಒಂದೇ ಒಂದು ಎಕರೆ ಸರ್ಕಾರಿ ಭೂಮಿಯನ್ನು ಕೊಡುವುದಕ್ಕೆ ಸರ್ಕಾರ ತಯಾರಿಲ್ಲ ನೀವು ಏನಾದರೂ ಭೂಮಿ ಬೇಕಾದರೆ ಸ್ವಂತ ಹಣವನ್ನು ಕೊಟ್ಟು ತೆಗೆದುಕೊಳ್ಳಬೇಕೆಂದು ಹೇಳಿ ಎಂಒಯುನಲ್ಲಿದೆ ಅವೆಲ್ಲವನ್ನೂ ಕೈಬಿಟ್ಟು ಸರ್ಕಾರವೇ ಭೂಮಿಯನ್ನು ತೆಗೆದು ಕೊಂಡು ಅವರಿಗೆ ಕೊಟ್ಟುಬಿಟ್ಟು ಅವರು ಮಾರ್ಟ್‌ಗೇಜ್

ಮಾಡಿ ಇವರಿಗೆ ಹಣವನ್ನು ಕೊಡುವುದು! ಎಂಒಯುನಲ್ಲಿರುವುದು ಕರೆಕ್ಟಾಗಿದೆ ಅದನ್ನು ನೀವು ಇಂಪ್ಲಿಮೆಂಟ್ ಮಾಡಲಿಲ್ಲ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ತಾವು ಡಿಫೆನ್ಸ್ ಕೌನ್ಸಿಲ್ ಆಗುತ್ತೀರೆಂದು ಕಾಣುತ್ತದೆ Argue your case ತೊಂದರೆಯಿಲ್ಲ ಈಗ ಯಾರಾದರೂ ಒಬ್ಬರು ಒಂದು ತಪ್ಪು ಆಗಿದೆ ಎಂದಾದಾಗ ಅದನ್ನು ಸರಿಪಡಿಸಿಕೊಳ್ಳಬೇಕು ಎಂಬ ಬಗ್ಗೆ ಆಲೋಚನೆಯೂ ಬಂದಾಗ ಅದನ್ನು ಸರಿ ಮಾಡಬಾರದು ಎಂದೇನೂ ಇಲ್ಲ ಮಾಡಿದ ತಪ್ಪನ್ನು ಮುಂದುವರಿಸಿಕೊಂಡು ಹೋಗಬೇಕೆಂದು, ನಾನು ಮಾಡಿದ್ದೇ ಸರಿ ಎಂಬ ಭಾವನೆ ಇರಬಾರದು ತಪ್ಪಾಗಿದ್ದರೆ ತಪ್ಪು, ಅದನ್ನು ತಿದ್ದಿಕೊಳ್ಳೋಣ, ಈ ಲ್ಯಾಂಡನ್ನು ರೈತರ ಹಾಗೂ ದಲಿತರ ಲ್ಯಾಂಡ್‌ನ್ನು ಕೆಲವು ಕಡೆಗಳಲ್ಲಿ ಡೀವಿಯೇಟ್ ಮಾಡಿ ಕೆಲವರು ಜಾಗವನ್ನು ಬಿಟ್ಟು ಹೋಗುವುದಕ್ಕೆ ಪ್ರಯತ್ನ ಮಾಡಿದ್ದೀರಿ ಏತಕ್ಕಾಗಿ ಅಂತಹವರ ಜಾಗವನ್ನು ಸ್ಪೆಷಲ್ ಇಂಟರೆಸ್ಟ್ ತೆಗೆದುಕೊಂಡು ಆ ಜಾಗವನ್ನು ಡೀವಿಯೇಟ್ ಮಾಡಿ ತೆಗೆದುಕೊಂಡು ಹೋಗಲಿಕ್ಕೆ ಪ್ರಯತ್ನವನ್ನು ಮಾಡಿದ್ದೀರಿ? ಇದು ನಮಗೆ ಗೊತ್ತಾಗಬೇಕಾಗುತ್ತದೆ ಇಲ್ಲಿ ಶ್ರೀಮಂತರಿಗೆ ಹಾಗೂ ಬಡವರಿಗೆ ಒಂದು ಕಾನೂನು ಆದರೆ, ನಾನು ಒಪ್ಪುತ್ತೇನೆ, ನೀವು ಏನೇನು ಮಾಡುತ್ತಿದ್ದೀರಿ, ಅದೆಲ್ಲವೂ ಸರಿ ಎಂದು ಆದರೆ ರೈತರ ಹಾಗೂ ದಲಿತರ ಭೂಮಿಯನ್ನು ತೆಗೆದುಕೊಂಡು ಈ ಒಂದು ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುವುದು ಏನಿದೆ ಇದು ಸರಿಯೇ? ಹಿಂದಿನ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಇದೇ ಸದನದಲ್ಲಿ ಒಂದು ಮಾತನ್ನು ಹೇಳಿರುವುದನ್ನು ನನಗೆ ನೆನಪಿನಲ್ಲಿದೆ ಯಾವುದೇ ಒಂದು ಉದ್ದಿಮೆ ಬಂದಾಗ, ಲ್ಯಾಂಡ್ ಆಡಿಟ್ ಮಾಡಿಸುತ್ತೇನೆ, ಅವರಿಗೆ ಎಷ್ಟು ಭೂಮಿ ಬೇಕಾಗುತ್ತದೆ, ಅಷ್ಟು ಭೂಮಿಯನ್ನು ಮಾತ್ರ ಕೊಡುತ್ತೇವೆ Not only that, He went further and said, ನಾವು ಭೂಮಿಯನ್ನು ಅಕ್ವೈರ್ ಮಾಡಿಕೊಡುವುದಿಲ್ಲ Government will facilitate ಅವರಿಗೆ ಮಾರ್ಕೆಟ್ ಪ್ರೈಸ್‌ನಲ್ಲಿ ಖರೀದಿಯನ್ನು ಮಾಡುವ ಬಗ್ಗೆ ಸಹಕಾರ ಉಂಟು ಅವರು ಅಸಿಸ್ಟ್ ಮಾಡುವುದಷ್ಟೆ. ಇದು ಏನೂ ಇಲ್ಲ, ಇದು ಸರ್ಕಾರ ಅಕ್ವೈರ್ ಮಾಡುವುದು, ಯಾವ ರೇಟ್‌ನಲ್ಲಿ ಸರ್ಕಾರ ಕೊಡುತ್ತದೆಯೋ ಅದೇ ರೇಟ್‌ನಲ್ಲಿ ಅವರಿಗೆ ಕೊಡುವುದು ಇದನ್ನು ಶ್ರೀಮಂತರಿಗೆ ಬಿಸಿನೆಸ್‌ಗೆ ಕೊಡುವುದು, ಅಲ್ಲಿ ಏನಾಗಿದೆ, ಎಷ್ಟು ಜಾಸ್ತಿಯಾಗಿದೆ, ಅವರು ಪುನಃ ಅದನ್ನು ಬೇರೆಯವರಿಗೆ ಮಾರಾಟ ಮಾಡುವುದು ಅವರು ಬ್ಯಾಂಕಿನಲ್ಲಿ ಪ್ಲೆಡ್ಜ್ ಮಾಡಿ ಹಣವನ್ನು ತೆಗೆದು ಸರ್ಕಾರಕ್ಕೆ ಕಟ್ಟುವುದು ಇದೇ ರೀತಿಯ ಫೆಸಿಲಿಟೇಟ್ ಮಾಡುವುದಾದರೆ I will have no objection ಅದನ್ನು ಸರ್ಕಾರ ನೋಡಿಕೊಳ್ಳುತ್ತದೆ ಡೀನೋಟಿಫಿಕೇಷನ್ ಬಗ್ಗೆ ಹೇಳುವುದಾದರೆ, ಏತಕ್ಕಾಗಿ ಅಕ್ವೈರ್ ಮಾಡಿದ್ದಾರೆ, ಏಕೆ ಅಷ್ಟನ್ನು ಡೀನೋಟಿಫೈ ಮಾಡಿದ್ದಾರೆ, ಇದು ಯಾವುದಕ್ಕೂ ಕೂಡ ರೀಸನ್ ಕೊಡಲಿಕ್ಕೆ ಅವಶ್ಯಕತೆ ಇಲ್ಲದೇ ಇದ್ದರೆ ಏನು ಈಗ ಆಗುತ್ತಿದೆ, ನಾನು ಒಪ್ಪುತ್ತೇನೆ ಮಾನ್ಯ ಮಾಧುಸ್ವಾಮಿಯವರು ಕೆಲವೊಂದು ವಿಷಯಗಳನ್ನು ಸಭೆಯ ಗಮನಕ್ಕೆ ತಂದರು ಅವರು ಒಂದು ಮಾತನ್ನು ಹೇಳಿದರು, ಸುಮಾರು 1300 ಎಕರೆ ಭೂಮಿಯನ್ನು ಡೀನೋಟಿಫೈ ಮಾಡಿರುವ ಬಗ್ಗೆ ಹೇಳಿದಾಗ ಮಾನ್ಯ ದೇಶಪಾಂಡೆಯವರು ಎದ್ದು ಹೇಳಿದರು, ಕೇವಲ 32 30 ಎಕರೆ ಅಂದರೆ ಅದನ್ನು ಎಂಟೈರ್ ಇದರಲ್ಲಿ ಬಿಎಂಐಸಿದ್ದು ಮಾತ್ರವಲ್ಲ,

**ಶ್ರೀ ಆರ್ ವಿ ದೇಶಪಾಂಡೆ** ಮಾನ್ಯ ಸದಸ್ಯರಾದ ಶ್ರೀ ಮಾಧುಸ್ವಾಮಿಯವರು 1300 ಎಕರೆ ಲ್ಯಾಂಡ್ ಬಗ್ಗೆ ಹೇಳಿದರು ಅವರು ಬಿಎಂಐಸಿಯ ಬಗ್ಗೆ ಮಾತನಾಡುತ್ತಿದ್ದರು ರೆಕಾರ್ಡ್ಸ್ ತೆಗೆದರೆ ಗೊತ್ತಾಗುತ್ತದೆ. ಬಿ ಎಂ.ಐ ಸಿ ಪ್ರಾಜೆಕ್ಟ್‌ನಲ್ಲಿ ಡೀನೋಟಿಫೈ ಮಾಡಿದ್ದೀರಿ ಎಂದು ಹೇಳಿದರು ನಾನು ಅವರಿಗೆ ಏನು ಹೇಳಿದೆ ಎಂದರೆ ನೋಡಿ ಮಾಧುಸ್ವಾಮಿಯವರೇ, ನಾನು ಐವತ್ತು ಎಕರೆ ಮಾಡಿದ್ದೇನೆ ಎಂದು ಹೇಳಬಹುದು, ನೀವು ಒಂದೂವರೆ ಸಾವಿರ ಎಕರೆ ಮಾಡಿದ್ದೀರಿ ಎಂದು ಹೇಳಬಹುದು ಡೀನೋಟಿಫಿಕೇಶನ್‌ಗೆ ನೋಟಿಫಿಕೇಶನ್ಸ್ ಇರುತ್ತವೆ ಬೇಕಾದರೆ ಮಾನ್ಯ ಸ್ಪೀಕರ್ ಅವರು ಫೈಲ್ಸ್ ಎಲ್ಲಾ ತಂದು ತಮಗೆ ತೋರಿಸಲಿ ಆಗ ನಿಮಗೆಲ್ಲಾ ಏನಿದೆ ಎಂದು ಗೊತ್ತಾಗುತ್ತದೆ ಆದ್ದರಿಂದ ಬಿ ಎಂ ಐ ಸಿ ಪ್ರಾಜೆಕ್ಟ್‌ನಲ್ಲಿ 33 ಎಕರೆ 6 ಗುಂಟೆ land has been de-notified and I stand by that Government, while giving reply will enlighten what is the corect position

**ಶ್ರೀ ಜೆ ಸಿ ಮಾಧುಸ್ವಾಮಿ** ಮಾನ್ಯ ಅಧ್ಯಕ್ಷರೇ, ನಾನು ಬಿಎಂಐಸಿ, ಏಟ್ರಿಯಾ ಹೋಟೇಲ್ ಎಲ್ಲಾ ಸೇರಿಸಿ ಮಾತನಾಡುವಾಗ ನಾನು ವಿಂಗಡಣೆಯನ್ನು ಮಾಡಿದೆ ಡೀನೋಟಿಫಿಕೇಶನ್‌ನ್ನು ಸಾರಾಸಗಟಾಗಿ ಮಾಡಿರುವುದು ಒಂದು, ಅದು ಆರು ಸಾವಿರ ಎಕರೆಯನ್ನು ಆವತ್ತಿನ ಸನ್ಮಾನ್ಯ ಕೈಗಾರಿಕಾ ಸಚಿವರು ಇಂಡಿವಿಜ್ಯುಯಲ್ ಕೇಸ್‌ಗಳಲ್ಲಿ ಕೂಡ ಸಾವಿರ ಚಿಲ್ಲರ ಎಕರೆಯಷ್ಟನ್ನು ಡೀನೋಟಿಫೈ ಮಾಡಿದ್ದರು I too, stand my words ನೀವು ಈ ಬೆಂಗಳೂರು ಭೂಮಿಯನ್ನು ಡೀನೋಟಿಫೈ ಮಾಡುವಾಗ ಸಾವಿರ ಚಿಲ್ಲರೆಯಷ್ಟನ್ನು ತಾವು ಡೀನೋಟಿಫೈ ಮಾಡಿದ್ದೀರಿ ಎಂದು ನಾನು ಹೇಳಿದೆ ನಾನು ಮೂವತ್ತು ಎಕರೆ ಬಿಟ್ಟು ಮಾಡಿಲ್ಲ, ಮಾಡಿದ್ದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ ಎಂದು ಅವರು ಹೇಳಿದಾಗ, ಈಗ ನೀವು ಎನ್‌ಕ್ವೈರಿಗೆ ಬಂದುಬಿಡಿ ರಾಜೀನಾಮೆ ಕೇಳುವುದಕ್ಕೆ ನಾನು ಸ್ನೇಹಿತನಾಗಿ ತಯಾರಾಗಿಲ್ಲ ಎಂದು ಹೇಳಿದ್ದೇನೆ ಈಗಲೂ ಅದನ್ನೇ ನಾನು ಹೇಳುತ್ತೇನೆ ಈಗ ಅವರು ಟ್ವಿಸ್ಟ್ ಮಾಡುವುದು ಬೇಡ ಅವರು ನಿನ್ನೆ ಹಾಗೆ ಹೇಳಲಿಲ್ಲ ನಾನು ಬಿ ಎಂ ಐ ಸಿ.ಗೆ ಮೂವತ್ತು ಎಕರೆಯನ್ನು. Let record come out ನಿನ್ನೆ ಅವರು ಹಾಗೆ ಹೇಳಲಿಲ್ಲ ಬಿ ಎಂ ಐ ಸಿ ಗೆ 33 ಎಕರೆ ಮಾಡಿದ್ದೇನೆ ಎಂದು ಅವರು ಹೇಳಲಿಲ್ಲ The entire process of de-notification was questioned in this Assembly ನಾವು ಮಾತನಾಡುವಾಗ ನೀವು ಬೆಂಗಳೂರಿನಲ್ಲಿ ಇಷ್ಟು ಎಕರೆ ಲ್ಯಾಂಡ್‌ನ್ನು ಡೀನೋಟಿಫೈ ಮಾಡಿದ್ದೀರಿ ಎಂದು ಹೇಳಿದಾಗ ಬರೇ ಮೂವತ್ತು ಎಂದು ಹೇಳಿ let him not go back He is a good friend

**ಶ್ರೀ ಆರ್ ವಿ ದೇಶಪಾಂಡೆ** ಅವರು ಮಾತನಾಡಿದ್ದು ರೆಕಾರ್ಡಿನಲ್ಲಿದೆ, ನಾನು ಮಾತನಾಡಿದ್ದು ಕೂಡ ರೆಕಾರ್ಡ್‌ನಲ್ಲಿದೆ ಮಾನ್ಯ ಸ್ಪೀಕರ್ ಅವರು ಅದನ್ನು ತೆಗೆದುನೋಡಿದ ಮೇಲೆ ಮಾತನಾಡುಹುದಲ್ಲಾ?

**ಶ್ರೀ ಜೆ ಸಿ ಶ್ರೀರಾಮರೆಡ್ಡಿ** ರೆಕಾರ್ಡ್ ತೆಗೆಸಿದರೆ ಗೊತ್ತಾಗುತ್ತದೆ

**Sri J C MadhuSwamy** As a Industries Minister you have de-notified lands ಕೈಗಾರಿಕಾ ಮಂತ್ರಿಗಳಾಗಿ ಡೀನೋಟಿಫೈ ಮಾಡಿದ್ದಿರಿ ಎಂದು ನಾನು ಚಾರ್ಜ್ ಮಾಡಿದ್ದೇನೆ. ಡೀನೋಟಿಫೈ ಮಾಡಬೇಕಾದರೆ ನಿಮ್ಮ ಹತ್ತಿರ ಕಡತ ಇಲ್ಲದೆಯೇ ಮಾಡಿದ್ದೀರಿ,

ಅಥವಾ ಅದಕ್ಕೆ ಪೂರಕವಾದ ಸಪೋರ್ಟ್ ಇಲ್ಲದೆ ಅಫಿಶಿಯಲ್ಸ್‌ನಿಂದ ರೆಕಮಂಡೇಶನ್ ಇಲ್ಲದೆ ಮಾಡಿದ್ದೀರಿ ಎಂದು ನಾನು ಹೇಳಿರುವುದು ಸತ್ಯ ನಾನು ಸಾವಿರ ಚಿಲ್ಲರೆ ಎಕರೆ ಎಂದಾಗ ಅವರು 30 ಎಕರೆಗಿಂತ ಜಾಸ್ತಿ ಡೀನೋಟಿಫೈ ಮಾಡಿಲ್ಲ ಎಂದು ಹೇಳಿದರು Not pertaining to BMIC The entire land which was de-notified, I was questioning here, Not pertaining to BMIC

ಗೊಂದಲ

ಶ್ರೀ ಕೆ ಶ್ರೀನಿವಾಸಗೌಡ ಮಾಧುಸ್ವಾಮಿಯವರೇ, ಸ್ವಲ್ಪ ದಯವಿಟ್ಟು ಯೀಲ್ಡ್ ಆಗಿ ನಿನ್ನೆ ನೀವು ಮಾತನಾಡುವಾಗ ಬಿ ಎಂ.ಐ ಸಿ ಯಲ್ಲಿ ನಿರ್ದಿಷ್ಟವಾಗಿ 1230 ಎಕರೆ ಎಂದು.. ..

ಗೊಂದಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾವು ಮಾತನಾಡಿರುವುದೆಲ್ಲಾ ನಿಜ

ಶ್ರೀ ಕೆ ಶ್ರೀನಿವಾಸಗೌಡ ಆಮೇಲೆ ನೀವು ಹೇಳಿ ಎಲ್ಲಾ ರೆಕಾರ್ಡ್ ಆಗಿರುತ್ತದೆ 1330 ಎಕರೆಯಲ್ಲಿ ನಾನು ಬಿಟ್ಟಿರುವುದು 33 ಎಕರೆ ಎಂದು ಅವರು ಹೇಳಿದ್ದು ರೆಕಾರ್ಡ್‌ನಲ್ಲಿ ಇದೆ, ಅದನ್ನು ತೆಗೆಸಿ

ಗೊಂದಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ರೆಕಾರ್ಡ್ ತೆಗೆಸಿ ಅದರಲ್ಲಿ ಎಲ್ಲಾ ಇರುತ್ತದೆ.

ಗೊಂದಲ

ಮಾನ್ಯ ಸದಸ್ಯರು ಶ್ರೀನಿವಾಸಗೌಡರೇ, ಯಾರದ್ದೋ ಪಾಪದ ಪಿಂಡವನ್ನು ನೀವು ಯಾಕೆ ಹೊರುತ್ತೀರಿ? ಆ ಪಾಪದ ಪಿಂಡ ಬೇರೆಯವರದ್ದು

ಗೊಂದಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಬಿ ಎಂ ಐ.ಸಿ ಎಂದು ಪರ್ಟಿಕ್ಯುಲರ್ ಆಗಿ ಹೇಳಿಲ್ಲ

ಶ್ರೀ ಕೆ. ಶ್ರೀನಿವಾಸಗೌಡ ರೆಕಾರ್ಡ್ ತೆಗೆಸಿ ನೋಡಿ.

ಗೊಂದಲ

ಶ್ರೀ ಜೆ ಸಿ ಮಾಧುಸ್ವಾಮಿ ಡೀನೋಟಿಫಿಕೇಶನ್ ಒಂದು ಪ್ರತ್ಯೇಕವಾದ ಇಷ್ಯೂ ಆದರೆ ಡೀನೋಟಿಫಿಕೇಶನ್‌ನಲ್ಲಿ ಫೇವರಿಟಿಸಂ ಮಾಡಿದ್ದೀರಿ ಎಂದು ನಾವು ಹೇಳುತ್ತಿರುವುದು He has favoured in de-notification ಎಂದು ಹೇಳಿದ್ದೇನೆ ರೆಕಾರ್ಡ್ ತರಿಸಿ ನೋಡಿ.

ಚೇರ್ಮನ್ (ಶ್ರೀ ಡಿ ಆರ್ ಪಾಟೀಲ್) ಒಬ್ಬೊಬ್ಬರೇ ಮಾತನಾಡಿ ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ ಮಾಧುಸ್ವಾಮಿಯವರೇ, ನೀವು ರೈತರ ಪರವಾಗಿ ಮಾತನಾಡಿದ್ದೀರಿ ತಾನೆ?

ಶ್ರೀ ಜೆ.ಸಿ ಮಾಧುಸ್ವಾಮಿ ಅವರು ನಿನ್ನೆ ಸಭೆಯಲ್ಲಿ ಇರಲಿಲ್ಲ Let him not take all these burden on him

ಶ್ರೀ ಆರ್ ಅಶೋಕ್ ಅವರು ನಿನ್ನೆ ಇರಲಿಲ್ಲ

ಶ್ರೀ ಬಸವರಾಜ ರಾಯರೆಡ್ಡಿ ನೀವು ರೈತರ ಪರವಾಗಿ ಮಾತನಾಡಿದ್ದೀರಿ ತಾನೆ?

ಶ್ರೀ ಜೆ ಸಿ ಮಾಧುಸ್ವಾಮಿ ನಾನು ಯಾರ ಪರವಾಗಿ ಬೇಕಾದರೂ ಮಾತನಾಡುತ್ತೇನೆ ಅದು ನನ್ನ ಇಷ್ಟ ನಾನು ಯಾರ ಪರವಾಗಿಯೂ ಮಾತನಾಡುತ್ತೇನೆ, ವರ್ತಕರ ಪರವಾಗಿ ಮಾತನಾಡುತ್ತೇನೆ, ಅಲ್ಲಿ ಮನೆ ಕಟ್ಟಿಕೊಂಡಿದ್ದವರ ಪರವಾಗಿಯೂ ಮಾತನಾಡಿದ್ದೇನೆ, ಕೈಗಾರಿಕೋದ್ಯಮಿಗಳ ಪರವಾಗಿಯೂ ಮಾತನಾಡಿದ್ದೇನೆ I am not subject to his conditions

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೇ, ರೆಕಾರ್ಡ್‌ನ್ನು ತರಿಸಿ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ನಾನು ಏನು ಹೇಳುತ್ತಿದ್ದೇನೆ ಎಂದರೆ ರೆಕಾರ್ಡ್‌ನ್ನು ತರಿಸಿ, ತನಿಖೆಗೆ ಆದೇಶ ಮಾಡುತ್ತೇವೆ ಎಂದು ಹೇಳಿದರೆ ನಾನು ಮಾತನಾಡುವುದಿಲ್ಲ, ನಾನು ಕುಳಿತುಬಿಡುತ್ತೇನೆ ಅವರು ಈಗ ತನಿಖೆ ಮಾಡುತ್ತೇವೆ ಎಂದು ಒಂದು ಮಾತನ್ನು ಹೇಳಲಿ ನಾನು ಇನ್ನು ಮುಂದೆ ಮಾತನಾಡುವುದಿಲ್ಲ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು ಹೆಗ್ಡೆಯವರೇ, ಯಾವ ತನಿಖೆ? ನ್ಯಾಯಾಂಗ ತನಿಖೆನಾ? ಸಿ ಬಿ ಐ ತನಿಖೆನಾ?

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಸಿ ಬಿ ಐ ತನಿಖೆಯೇ ಆಗಲಿ ಅದಕ್ಕೆ ಒಪ್ಪಿಗೆಯನ್ನು ಕೊಟ್ಟರೆ ನಾನು ಮಾತನಾಡುವುದಿಲ್ಲ, ಇಲ್ಲಿಗೇ ನನ್ನ ಮಾತನ್ನು ನಿಲ್ಲಿಸುತ್ತೇನೆ ಒಂದುವೇಳೆ ಇನ್ನೂ ಅವರಿಗೆ ಕನ್ವಿನ್ಸ್ ಆಗದೇ ಇದ್ದರೆ ನಾನು ಸ್ವಲ್ಪ ಮಾತನಾಡುತ್ತೇನೆ, ಅಷ್ಟೆ ಈಗ ಅಕ್ವೈರ್ ಮಾಡಿದ ಜಾಗ ಎಷ್ಟು? I will not confine myself to just BMICP ಯಾರೂ ಕನ್‌ಫೈನ್ ಆಗಿಲ್ಲ ನಾವು ಹೇಳುವಂಥಾದ್ದು ಇಡೀ ಹಗರಣದ ಬಗ್ಗೆ ನೋಟೀಸ್‌ನಲ್ಲೂ ಹಾಗೆಯೇ ಇದೆ ಬೆಂಗಳೂರಿನ ಒಳಗೆ ಮತ್ತು ಹೊರಗೆ ಹಲವು ಭೂಹಗರಣದ ಬಗ್ಗೆ ಎಂದು ಕೊಟ್ಟಿರುವಂಥಾದ್ದು ಅದಕ್ಕೋಸ್ಕರ ಅಕ್ವೈರ್ ಏಕೆ ಮಾಡುವುದು? ಡಿನೋಟಿಫೈ ಮಾಡುವುದು ಎಂದರೆ ಏನು? ನಿನ್ನೆ ಒಂದು ಚರ್ಚೆಗೆ ಬಂತು ಲಾ ಡಿಪಾರ್ಟಮೆಂಟ್‌ಗೆ ರೆಫರ್ ಮಾಡಿದ್ದರ ಬಗ್ಗೆ ಯಾವ ಭೂಮಿಯನ್ನು ಡೀನೋಟಿಫೈ ಮಾಡಿ, ರೀಕನ್ವೆ ಮಾಡುತ್ತಾರೆ ಎಂದರೆ ಅದರ ನೇಚರ್, ಸ್ಟೇಟಸ್ ಏನಾಗುತ್ತದೆ ಎಂದು ಮಾನ್ಯ ಅಧ್ಯಕ್ಷರೇ, ನನಗೆ ಎಲ್ಲೋ ಒಂದು ಕಡೆ ಅನುಮಾನ ಬರುತ್ತಿದೆ ಒಂದುವೇಳೆ ರೀಕನ್ವೆ ಮಾಡಿದಾಗ ಅದೇ ರೀತಿ ಸ್ಟೇಟಸ್ ಉಳಿಯುವುದಾದರೆ ಅದು ಇನ್ನೊಂದು ವ್ಯವಹಾರ ಆಗುತ್ತದೆ ಎಂದು ಪುನಃ ಅಗ್ರಿಕಲ್ಚರ್ ಲ್ಯಾಂಡ್ ಆಗುವುದಾದರೆ ಅದು ರೈತರಿಗೆ ಹೋಗಲಿ ಇಲ್ಲದಿದ್ದರೆ ಪುನಃ ಅದೊಂದು ವ್ಯವಹಾರ ಆಗುತ್ತದೆ ಎಂಬುದು ನನ್ನ ಅಭಿಪ್ರಾಯ ಅದಕ್ಕೋಸ್ಕರ ಸುಮಾರು ಜನ ಅಧಿಕಾರಿಗಳು ವರ್ಗಾವಣೆಯಾದರು ಕೆಲವು ಅಧಿಕಾರಿಗಳನ್ನು ಇಟ್ಟುಕೊಂಡು, ಇನ್ನು ಕೆಲವು ಅಧಿಕಾರಿಗಳನ್ನು ವರ್ಗಾವಣೆ ಮಾಡಿದರು ನಿನ್ನೆ ಕೆಲವರ ಹೆಸರುಗಳನ್ನು ಮಾಧುಸ್ವಾಮಿಯವರು ಮತ್ತು ರೆಡ್ಡಿಯವರು ಹೇಳಿದರು

ಶ್ರೀ ಜೆ ಸಿ ಮಾಧುಸ್ವಾಮಿ ಕೆ ಐ ಎ ಡಿ ಬಿ ಯಲ್ಲಿ ಯಾರಾದರೂ ಎರಡು ವರ್ಷಕ್ಕಿಂತ ಜಾಸ್ತಿ ಕೆಲಸ ಮಾಡಿದ್ದಾರೆಯೆ? ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಹೋದವರು was anybody allowed to function more than two years? I will read out the list ಬೇಕಾದರೆ ನಾನು ಲಿಸ್ಟನ್ನು ಓದುತ್ತೇನೆ ಅದು ಏಕೆ ಎಂದು ಹೇಳಬೇಕಾಗುತ್ತದೆ

ಶ್ರೀ ಜೆ ಪಿ ಶ್ರೀರಾಮರೆಡ್ಡಿ ಕೆಲಸ ಮಾಡುವುದಕ್ಕೆ ಹೋದವರನ್ನು ಬಿಡುವುದಿಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಅಂದಿನ ಪಿ ಡಬ್ಲ್ಯೂಡಿ ಸೆಕ್ರೆಟರಿಯವರ ಪತ್ರ ನಿನ್ನೆ ಕೆಲವು ಭಾಗವನ್ನು ನೀವು ರೆಫರ್ ಮಾಡಿದಿರಿ ನಾನು ಇಷ್ಟನ್ನು ಕೇಳುತ್ತೇನೆ It is also to be understood that the PWD has already verified every detail of the project Components and has granted approval for the first phase of the project including road alignment, interchanges and the township ಈಗ ಇಂಟರ್‌ಚೇಂಜಸ್‌ಗೆ ಎಷ್ಟು ಲ್ಯಾಂಡ್ ಬೇಕು? ರಸ್ತೆಗೆ ಎಷ್ಟು ಭೂಮಿ ಬೇಕು? ಮೊದಲು ಲ್ಯಾಂಡ್ ಆಡಿಟಿಂಗ್ ಆಗಲಿ 60 ಪರ್ಸೆಂಟ್ ರೋಡ್‌ಗೆ, 40 ಸರ್ಪೆಂಟ್ ಟೌನ್‌ಶಿಪ್‌ಗೆ ಎಂದು ಹೇಳುತ್ತಾರೆ ಕೋರ್ಟಿನಲ್ಲಿ ಅದನ್ನು ಹೇಳಿದ್ದಾರೆ ಆದರೆ 40 ಪರ್ಸೆಂಟ್ ಟೌನ್‌ಶಿಪ್‌ಗೆ original ನಲ್ಲಿ ಓರಿಜಿನಲ್ ಏನಿತ್ತು ಈಗ ಎಲ್ಲಿಗೆ ಶೀಫ್ಟ್ ಆಗಿದೆ ಮತ್ತು ಇಂಟರ್ ಚೇಂಜಸ್‌ಗೆ ಎಷ್ಟು ಬೇಕು ಮತ್ತು ರೋಡ್‌ಗೆ ಎಷ್ಟು ಬೇಕು? ಇಂಟರ್ ಚೇಂಜ್‌ಸನಲ್ಲಿ ಹೆಚ್ಚು ಬೇಕಾಗುವುದಿಲ್ಲ ಅಲ್ಲಿ ಸೈಡ್‌ಗೆ ಸ್ವಲ್ಪ ತೆಗೆದುಕೊಂಡು ಪ್ಲಾನ್ ಮಾಡಲಿ ಇದನ್ನು ಸ್ವಲ್ಪ ಆಲೋಚನೆ ಮಾಡಿದಾಗ ಗೊತ್ತಾಗುತ್ತದೆ ಆಮೇಲೆ ಹೇಳುತ್ತಾರೆ, such de-notifications will become a very serious precedent for many more de-notifications which will sabotage the very project itself ಎಂದು ಹೇಳುತ್ತಾರೆ ಅಂದಿನ ಸೆಕ್ರೆಟರಿಯವರು ಹೇಳಿದ್ದನ್ನು ಸರ್ಕಾರ ಗಣನೆಗೇ ತೆಗೆದುಕೊಳ್ಳಲಿಲ್ಲ In the above circumstances, it is an immediate necessity that the C&I department issues another notification withdrawing this notification ಎಂದು ಹೇಳುತ್ತಾರೆ ನಿನ್ನೆ ಮಾನ್ಯ ದೇಶಪಾಂಡೆಯವರು ಒಂದು ಮಾತನ್ನು ಕೇಳಿದ್ದರು– Place the documents ಎಂದು ಅದಕ್ಕೆ ನೀವು ಹೇಳಿದಿರಿ, ಅದು ನನ್ನ ಜವಾಬ್ದಾರಿ ಅಲ್ಲ ಎಂದು ಇಡೀ ಡಾಕ್ಯುಮೆಂಟ್ಸ್‌ನ್ನು ಕೊಟ್ಟಿದ್ದಾರಲ್ಲಾ? ಹಿಂದಿನ ಮಾಜಿ ಪ್ರಧಾನಿಗಳು ಇದನ್ನು ಗವರ್ನರ್‌ಗೆ ಕೊಟ್ಟಿದ್ದಾರೆ ಸರ್ಕಾರಕ್ಕೆ ಕೊಟ್ಟಿದ್ದಾರೆ ಇವತ್ತೆಲ್ಲಾ ಅದನ್ನೇ ರೆಫರ್ ಮಾಡಿ ಮಾತನಾಡುತ್ತಿರುವಂಥಾದ್ದು ಆದ್ದರಿಂದ ಅದಕ್ಕಿಂತ ಹೆಚ್ಚಿನ ಡಾಕ್ಯುಮೆಂಟ್ಸ್‌ನ್ನು ನಾವು ಸಬ್‌ಮಿಟ್ ಮಾಡಬೇಕಾಗಿಲ್ಲ Everything is here

**Sri J C Madhu Swamy** We will place the documents before the enquiring authority ಎಂದು ನಾನು ಹೇಳಿದ್ದೇನೆ We are prepared

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಈಗ ಸದ್ಯಕ್ಕೆ ಇಷ್ಟು ಸಾಕು ಎನ್‌ಕ್ವೈರಿ ಇನಿಶಿಯೇಟ್ ಮಾಡಲಿಕ್ಕೆ This is sufficient These materials are sufficient to initiate the enquiry ಆಮೇಲೆ ಎನ್‌ಕ್ವೈರಿ ಪ್ರಾರಂಭ ಆದಾಗ ನಮ್ಮ ಹತ್ತಿರ ಏನಿದೆ ಅದನ್ನು ನಾವು ಇಡುತ್ತೇವೆ ಸರ್ಕಾರದ ಮುಂದೆ ಏನು ಇದೆ ಅದನ್ನು ಸರ್ಕಾರ ಇಡಬೇಕಾಗುತ್ತದೆ ಯಾರೂ ಹೈಡ್ ಮಾಡಲಿಕ್ಕೆ ಆಗುವುದಿಲ್ಲ ಆಮೇಲೆ ಸಿ ಎಂ ಅವರೇ ನೋಟ್‌ನ್ನು ಹಾಕಿದ್ದಾರೆ ಈ ಅಲೈನ್‌ಮೆಂಟ್‌ಗೆ ಮಾತ್ರ ಜಮೀನು ಸ್ವಾಧೀನ ಪಡೆಸಿಕೊಳ್ಳಿ, ಮಿಕ್ಕ ಜಮೀನನ್ನು ಸ್ವಾಧೀನಪಡಿಸುವ ಅಗತ್ಯ ಇಲ್ಲ ಎಂದು ಹೇಳಿದ್ದಾರೆ ಹಾಗಾದರೆ ಜಾಸ್ತಿ ಏಕೆ ಮಾಡಿದರು? ಇದು ಮಾನ್ಯ

ಮುಖ್ಯಮಂತ್ರಿಯವರು ಹೇಳಿದ್ದು ಅವರೇ ಓವರ್‌ಲುಕ್ ಮಾಡಿ ಹೆಚ್ಚು ಮಾಡಿಸಿದ್ದಾರೋ ಅಥವಾ ಬೇರೆ ಯಾರಾದರೂ ಮಾಡಿಸಿದ್ದಾರೆಯೋ ಎಂಬುದರ ಬಗ್ಗೆಯೂ ತನಿಖೆ ಆಗಬೇಕಾಗುತ್ತದೆ ಕೇವಲ ಆದೇಶವನ್ನು ಮಾಡಿದರೆ ಸಾಕಾಗುವುದಿಲ್ಲ ಮತ್ತು ಇನ್ನೊಂದು ಪತ್ರದ ಒಂದು ಪೋರ್ಷನ್ ಅನ್ನು ಓದಿಬಿಟ್ಟರೆ ಸಾಕಾಗುತ್ತದೆ ಎಂದು ಕಾಣುತ್ತದೆ ಇದು ಅಂದಿನ ಸಚಿವರು ಬರೆದಂಥಾದ್ದು There ıs a request dated 26 6 2003 from Smt Pushpa Jaın not to notıfy Survey No 7/1 (a) of Pıllanganahallı vıllage measurıng two acres and 32 guntas The petıtıoner has enclosed ın order that earlıer thıs land was not ıncluded ın the notıficatıon by the specıal land acquısıtıon officer, KIADB and she has also produced the order bearıng so and so, ಎಂದು ಡೇಟ್ ಎಲ್ಲಾ ಹೇಳುತ್ತಾರೆ Exclusıon of the survey No so and so The petıtıoner has stated that the land ıs converted to resıdentıal use has been approved by the Panchayat ಹಾಗಾದರೆ, ಬೇರೆಯವರ ಲ್ಯಾಂಡೆಲ್ಲಾ ಕನ್‌ವರ್ಷನ್ ಆಗಿ, ಅವರು ಮನೆ ಕಟ್ಟಿಕೊಂಡಿದ್ದನ್ನು ಅಕ್ವೈರ್ ಮಾಡಿ, ಒಡೆಯುತ್ತಾ ಇಲ್ಲವೇ? ಈ ತಾರತಮ್ಯ ಏಕೆ ಎಂದು ನಾನು ಕೇಳುತ್ತೇನೆ ಒಂದು ಕಡೆಯಲ್ಲಿ ಕೆಲವರ ಲ್ಯಾಂಡನ್ನು ಅಕ್ವೈರ್ ಮಾಡುತ್ತೀರಿ, ಇನ್ನೊಂದು ಕಡೆಯಲ್ಲಿ ಮನೆ ಕಟ್ಟಿದ್ದಾರೆ, ಕನ್‌ವರ್ಟ್ ಆಗಿದೆ, ಅದನ್ನು ಬಿಡಿ ಎಂದು ಹೇಳುತ್ತೀರಿ ಈ ಭೇದ ಏಕೆ? ಎಲ್ಲರಿಗೂ ಒಂದೇ ಕಾನೂನು ಬರುವುದಿಲ್ಲವೇ? ಅದಕ್ಕೆ, ಅವರು ಏನು ಹೇಳುತ್ತಾರೆಂದರೆ,Hence I hereby order for the deletıon of Survey No 7/ 1(a), Pıllanganahally vıllage measurıng two acres 32 guntas from the final notıficatıon ಎಂದು ಆಮೇಲೆ "ಫ್ರಂಟ್ " ಲೈನ್" ಗೆ ಇಂಟರ್‌ವ್ಯೂನಲ್ಲಿ ಹೇಳುತ್ತಾರೆ The latest contraversy to hıt the project ಇವರೇನು ಹೇಳುತ್ತಾರೆ, ಮಾನ್ಯ ದೇವೇಗೌಡರ ಹೆಸರೆಲ್ಲಾ ಬರುತ್ತದೆ, ಶ್ರೀಮಾನ್ ಬಿ ಎಸ್ ಪಾಟೀಲರ ಹೆಸರು ಬರುತ್ತದೆ ಅದರಲ್ಲಿ The government has denıed the allegatıon as baseless and reckless,, Mınıster for Large and Medıum scale ındustrıes Srı R V Deshpande saıd the Krıshna government had ıncluded a default clause as for whıch the government could change the promoter and transfer all the assets free of cost ıf sufficıent progress was not made ın the project ಹಾಗಾದರೆ,ಈಗ ಮಾಡಬೇಕಲ್ಲವೇ? ಅವರ ಟೈಮ್ ಫ್ರೇಮ್‌ನಲ್ಲಿ ಇದಾವುದನ್ನೂ ಮಾಡಿಲ್ಲ ಆದ್ದರಿಂದ, ಅವರ ಎಂಟೈರ್ ಇನ್‌ವೆಸ್ಟ್‌ಮೆಂಟ್ ಏನಿದೆ, ಅವರ ಪ್ರಾಜೆಕ್ಟ್ ಇದೆ ಎಲ್ಲವನ್ನೂ ಮಾನ್ಯ ಸಿಂಧ್ಯರವರು wıll have to take over ಲ್ಯಾಂಡ್, ಇನ್‌ವೆಸ್ಟ್‌ಮೆಂಟ್ ಏನೇನಿದೆ, ಅವರು ಟೈಮ್ ಫ್ರೇಮ್‌ನಲ್ಲಿ ಮಾಡದೇ ಇದ್ದುದರಿಂದ, ಗವರ್ನಮೆಂಟ್ ಆ ಕ್ಲಾಜ್ ಹಾಕಿರುವುದರಿಂದ, ನೀವು ಟೇಕ್ ಓವರ್ ಮಾಡಬಹುದು ಎಂದು ಅವರು ಹೇಳಿದ್ದಾರೆ ನಿನ್ನೆ ಇದರ ಬಗ್ಗೆ ರಾಜಭವನ ಚಲೋ ಮಾಡಿದ್ದು, ಅದರಲ್ಲಿ ನೋಂದಣಿ ಮುದ್ರಾಂಕ ಶುಲ್ಕ ಮನ್ನಾ ಇದೆಲ್ಲವನ್ನೂ ಮಾನ್ಯ ರಾಜ್ಯಪಾಲರಿಗೆ ಕೊಟ್ಟಾಗಿದೆ

ಎಲ್ಲವನ್ನೂ ಹೇಳಿ ಆಗಿದೆ ಅದನ್ನು ನಾನು ಪುನಃ ರಿಪೀಟ್ ಮಾಡಲು ಹೋಗುವುದಿಲ್ಲ ಆದರೆ, ನಿನ್ನೆ ಪಬ್ಲಿಕ್ ಲಿಟಿಗೇಷನ್ ಇಂಟ್ರೆಸ್ಟ್ ಬಗ್ಗೆ ತಾವು ಹೇಳಿದಿರಿ ಕೆಲವರು ಬೇಕೆಂದು ಅವರೇ ಹಾಕುತ್ತಾರೆ ರಾಂಗ್ ಇನ್‌ಫಾರ್ಮೇಷನ್ ಫೀಡ್ ಮಾಡಿ, ಅವರಿಗೆ ಬೇಕಾದ ಆದೇಶವನ್ನು ತೆಗೆದುಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ In the name of Public Interest Litigation, ಏನು ಆದೇಶ ಬರುತ್ತದೆ, ಯಾರು ಹಾಕಿಸಿರುತ್ತಾರೆ ಅವರಿಗೆ ಫೇವರಬಲ್ ಆಗುವಹಾಗೆ ಮಾಡುತ್ತಾರೆ ಏಕೆಂದರೆ, ಕೋರ್ಟ್ ಮುಂದೆ ಸರಿಯಾದ ಮಾಹಿತಿಯನ್ನು ಕೊಡುವುದಿಲ್ಲ ಇದು ಒಂದು ದುರಂತ ಇದನ್ನು ಸ್ವಲ್ಪ ಗಣನೆಗೆ ತೆಗೆದುಕೊಳ್ಳಬೇಕು ನಿನ್ನೆ ಮಾನ್ಯ ಅಶೋಕ್‌ರವರು ಹಿಂದಿನ ಚೀಫ್ ಸೆಕ್ರಟರಿಯವರ ಬಗ್ಗೆ ಇನ್ನೊಂದು ಮಾತನ್ನು ಹೇಳಿದರು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಫ್ರಂಟ್ ಪೇಜ್‌ನಲ್ಲಿ ಆರ್ಟಿಕಲ್ ಬಂದಿತ್ತು. A company floated by former Chief Secretary B S Patil's Kith and Kin is also said to take over 8 5 acres of BDA land at Agara, adjacent to H S R Layout It is already given ಮತ್ತೆ ಇನ್ನೊಂದು ಕಡೆಯಲ್ಲಿ 110 ಎಕರೆ ಅದನ್ನು ಹೇಳಿದ್ದು ಬೇಲಿಯೇ ಎದ್ದು ಹೊಲವನ್ನು ಮೇಯ್ದಂತೆ ಆಗಿದೆ ಎಂದು ಯಾರು ಸರ್ಕಾರದ ರಕ್ಷಣೆಯನ್ನು ಮಾಡಬೇಕಾಗಿತ್ತೋ, ಅವರ ಸ್ವಾರ್ಥಕೋಸ್ಕರ, ಬಡವರ ಜಮೀನನ್ನು ತೆಗೆದುಕೊಂಡರು ಸರ್ಕಾರಕ್ಕೂ ಇದರಿಂದ ನಷ್ಟ ಆಯಿತು ಕೇವಲ ಬಡವರಿಗೆ ಮಾತ್ರ ಅಲ್ಲ ಯಾವ ಆದಾಯ ಸರ್ಕಾರಕ್ಕೆ ಬರಬೇಕಾಗಿತ್ತು ಆ ಅದೂ ಬರಲಿಲ್ಲ ಇವರ ಸ್ವಂತಕ್ಕೇ ಆಯಿತು ಇದೆಲ್ಲಾ ಇದರ ಬಗ್ಗೆ ಸಮಗ್ರವಾದ ತನಿಖೆ ಆಗಲೇಬೇಕಾಗುತ್ತದೆ ಆಮೇಲೆ ಈ KIADB ಬಗ್ಗೆ ಹೇಳುವುದಾದರೆ ಈ ಬೆಂಗಳೂರು ಜಿಲ್ಲೆ ವ್ಯಾಪ್ತಿಯಲ್ಲಿ export promotion industrial park ಗಾಗಿ KIDB Act Section 31 13 and 28(1)ರ ಪ್ರಕಾರ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಕಳೆದ 5 ವರ್ಷಗಳಿಂದ ಪ್ರಕಟಣೆಯನ್ನು ಮಾಡಿದೆ? ಸ್ವಾಧೀನದಿಂದ ಹೊರತುಪಡಿಸಿ, ಬಿಟ್ಟುಕೊಟ್ಟ ಜಮೀನುಗಳೆಷ್ಟು? ಸರ್ವೆ ಸಂಖ್ಯೆ ಮತ್ತು ವಿಸ್ತೀರ್ಣಗಳ ವಿವರಗಳನ್ನು ಕೊಡಿ ಎಂದು ಮೊನ್ನೆ ನಾನು ಮಾನ್ಯ ಸಿಂಧ್ಯರವರಿಗೆ ಪ್ರಶ್ನೆಯನ್ನು ಕೇಳಿದಾಗ, ಕೆಲವೊಂದು ಉತ್ತರವನ್ನು ಕೊಟ್ಟು ಇದಕ್ಕೆ ಇನ್ನೂ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದರು ಇನ್ನೂ ಉತ್ತರ ಕೊಟ್ಟಿಲ್ಲ ಅದರೊಟ್ಟಿಗೆ, ಈ ರೀತಿ ಬಿಟ್ಟುಕೊಟ್ಟ ಜಮೀನುಗಳ ಸ್ವಾಧೀನಕ್ಕಾಗಿ ಸೆಕ್ಷನ್ 28 (1)ರ ಪ್ರಕಾರ ಅಕ್ವೈರ್ ಮಾಡುವಾಗ ಪ್ರಕಟಣೆಯಲ್ಲಿ ಯಾರ ಹೆಸರು ತೋರಿಸಲಾಗಿತ್ತು, ಅದನ್ನು ಡೀನೋಟಿಫೈ, ರೀ ಕನ್ವೆ ಮಾಡುತ್ತಾರೆ ನಾನು ಒರಿಜಿನಲ್ ಓನರ್‌ಗೆ ವಾಪಸ್ ಕೊಟ್ಟರೆ, ಅದನ್ನು ರೀಕನ್ವೆ ಎಂದು ಹೇಳುತ್ತೇನೆ ಯಾರೋ Power of attorney holder ಗೆ ವಾಪಸ್ ಕೊಟ್ಟರೆ ಅದು ರೀಕನ್ವೆ ಆಗುವುದಿಲ್ಲ ಅಂಥಾದ್ದು ಎಷ್ಟಿದೆ ಎಂಬುದು ಬೇಕು

**ಶ್ರೀ ಆರ್ ಅಶೋಕ್** ನೀವು ಮಾನ್ಯ ಸಿಂಧ್ಯರವನ್ನು ಕೇಳಿದಿರಿ ಯಾವ ಯಾವ ಕಂಪನಿಯವರ ಆಸ್ತಿ ಇದೆ, ಅದನ್ನು ಮುಟ್ಟುಗೋಲು ಹಾಕಿಕೊಂಡು ಬಿಡಿ ಎಂದು ಇದು ಆಗುತ್ತದೆಯೇ ಎಂದು ಮಾಜಿ ಮಂತ್ರಿಗಳನ್ನು ಕೇಳಿ "ಜೂನ್ 29, 2002 ಕೃಷ್ಣರವರ ಸರ್ಕಾರದ ಬೆಂಗಳೂರು-ಮೈಸೂರು ಕಾರಿಡಾರ್ ಯೋಜನೆ ಸಂಯೋಜಿತರಾದ ಬಸವರಾಜ್ ಎಂಬ ಅಧಿಕಾರಿ ನೈಸ್ ಕಂಪನಿಗೆ ಪತ್ರ ಬರೆದು ಯೋಜನೆಯ ದಾಖಲಾತಿ ಜಮೀನು ಮತ್ತಿತರ ಯೋಜನಾ

ಸವಲತ್ತುಗಳನ್ನು ನೈಸ್ ಕಂಪನಿ ಸಾಲ ಎತ್ತಲು ಹಣಕಾಸು ಸಂಸ್ಥೆಗಳಿಗೆ ಆಡವಿಡಲು, ಒತ್ತೆ ಇಡಲು ಚಾರ್ಜ್ಸ್ ಸೃಷ್ಟಿಸಲು ಸರ್ಕಾರದ ಅಭ್ಯಂತರ ಇಲ್ಲ ಹಾಗೆ ಒಂದುವೇಳೆ ಯೋಜನೆ ಅರ್ಧದಲ್ಲೇ ನಿಂತಲ್ಲಿ ಆಗ ಸಾಲ ನೀಡಿದ ಸಂಸ್ಥೆಗಳಿಗೆ ಸರ್ಕಾರವೇ ನೇರವಾಗಿ ಸಾಲ ತೀರಿಸಬೇಕು " ಅಂದರೆ, ಸಾಲವನ್ನು ನಾವೇ ತೀರಿಸುತ್ತೇವೆಂದು ಒಪ್ಪಿಕೊಂಡಿದ್ದಾರೆ ಅರ್ಧಕ್ಕೆ ನಿಂತು ಹೋದರೆ, ಆ ಕಂಪನಿಗಳನ್ನು ನೀವೇನೂ ಮಾಡುವುದಕ್ಕಾಗುವುದಿಲ್ಲ ಅವರು, ನಮ್ಮ ಸರ್ಕಾರದ ಜಮೀನು ಇದೆಯಲ್ಲಾ, ಇದನ್ನು ಅಡವಿಟ್ಟು ತೆಗೆದುಕೊಂಡಿರುವುದು ಸರ್ಕಾರದ ಜಮೀನು ಏನು ಅಕ್ವೈರ್ ಮಾಡಿದ್ದಾರೆ, ಅದಕ್ಕೆ ಹತ್ತು ರೂಪಾಯಿಯಂತೆ ಇವರು ಕೊಟ್ಟುಬಿಟ್ಟಿದ್ದಾರೆ ಅದರ ಮೇಲೆ 150 ಕೋಟಿ ರೂಪಾಯಿಗಳ ಸಾಲ ತೆಗೆದುಕೊಂಡಿದ್ದಾರೆ ಅದರಲ್ಲಿ 30 ಕೋಟಿ ರೂಪಾಯಿಳು ಮಾತ್ರ ವಾಪಸ್ ಕಟ್ಟಿದ್ದಾರೆ ಇನ್ನು 120 ಕೋಟಿ ರೂ ಗಳು ಅವರ ಹತ್ತಿರವೇ ಇದೆ ಮುಟ್ಟುಗೋಲು ಹಾಕಿಕೂಳ್ಳುವುದಕ್ಕೆ ಅವರ ಹತ್ತಿರ ಏನೂ ಉಳಿದಿಲ್ಲ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಏಕೆಂದರೆ, ಅದು 20 ಕೋಟಿ ರೂ.ಗಳು ಇನ್ನು ಉಳಿದಂಥ 130 ಕೋಟಿ ರೂ ಗಳು ಎಲ್ಲಿದೆ ಎಂದು ಯಾರಿಗೂ ಗೊತ್ತಿಲ್ಲ ಯಾರ ಹ ್ತಿರ ಇದೆ, ಯಾರು ತೆಗೆದುಕೊಂಡರು, ಅದು ಎಲ್ಲಿಗೆ ಹೋಯಿತು ಎಂಬುದು ಗೊತ್ತಿಲ್ಲ ಕಟ್ಟಿರುವುದು 20 ಕೋಟಿ ರೂ.ಗಳು, ಅದು 30 ಖೋಟಿ ರೂ ಗಳು ಅಲ್ಲ ಐ ಸಿ ಐ ಸಿ ಐ ಬ್ಯಾಂಕ್‌ನಲ್ಲಿ ಒಂದೇ ದಿವಸ 150 ಕೋಟಿ ರೂ ಗಳನ್ನು ಡ್ರಾ ಮಾಡಿದ್ದಾರೆ ಅದರಲ್ಲಿ 20 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ, ಇನ್ನುಳಿದ 130 ಕೋಟಿ ರೂ ಗಳು ಎಲ್ಲಿದೆ ಎಂಬುದು ಯಾರಿಗೂ ಗೊತ್ತಿಲ್ಲ ಯಾರು ಲೆಕ್ಕ ಹೇಳಬೇಕೆಂದೂ ಗೊತ್ತಿಲ್ಲ ಅದರ ಜೊತೆಗೆ, ಆ ಸಾಲವನ್ನು ಅವರೇನಾದರೂ ತೀರಿಸದೇ ಹೋದರೆ, ಏಕೆಂದರೆ ಸರ್ಕಾರದ ಲ್ಯಾಂಡನ್ನು ಮಾರ್ಟ್‌ಗೇಜ್ ಮಾಡಿರುವ ಕಾರಣಕ್ಕೋಸ್ಕರ, ಅವರು 150 ಕೋಟಿ ರೂ.ಗಳನ್ನು ತೀರಿಸಲಿಲ್ಲವೆಂದರೆ, ಸರ್ಕಾರದವರೇ ತೀರಿಸುತ್ತೇವೆಂದು ಒಪ್ಪಿಕೊಂಡಿದ್ದಾರೆ

**ಶ್ರೀ ಕೆ ಜಯಪ್ರಕಾಶ ಹೆಗ್ಡೆ** ಇನ್ನೊಂದು ಪ್ರಶ್ನೆ, ಕಳೆದ 5 ವರ್ಷಗಳಲ್ಲಿ ಬಿ ಡಿ ಎ ಅಥವಾ ಯಾವುದೇ ಸರ್ಕಾರಿ ಸಂಸ್ಥೆಗಳು ಏನಿವೆ ಭೂಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗಳ ಪರವಾಗಿ ಮತ್ತೊಮ್ಮೆ ಭೂ ಸ್ವಾಧೀನಪಡಿಸಿಕೊಳ್ಳುವ ಕೆ ಐ ಎ ಡಿ.ಬಿ ನಡೆಸುವ ಭೂ ಸ್ವಾಧೀನ ಪ್ರಕರಣ ಎಷ್ಟು ಎಂದು ಒಂದು ಸಾರಿ ಬಿಟ್ಟು ಪುನಃ ಅವುಗಳ ವಿವರಗಳನ್ನು ಕೊಡಿ ಎಂದು ಕೇಳಿದ್ದೆ ಇವೆಲ್ಲಾ ಇದ್ದರೆ, ಇನ್ನೂ ಹೆಚ್ಚು ಚರ್ಚೆಗೆ ಅವಕಾಶವಾಗುತ್ತದೆ ಈಗಲ್ಲದಿದ್ದರೆ, ಅದನ್ನು ತನಿಖೆ ಸಂದರ್ಭದಲ್ಲಾದರೂ ಕೊಡಲಿ, ಸಾಕಾಗುತ್ತದೆ ನಮಗೆ ಈಗ ನನ್ನ ಪ್ರಶ್ನೆ, ಸರ್ಕಾರ ಇದಕ್ಕೆ ಏನೇನು ಉತ್ತರವನ್ನು ಹೇಳುತ್ತದೆ, ಒಂದು ಮಾತ್ರ ಅಲ್ಲ ಅಕ್ವಿಸಿಷನ್ ಮಾಡಿದ ಉದ್ದೇಶ ಏನು? ಡೀ–ನೋಟಿಫೈ ಮಾಡಿದ ಉದ್ದೇಶ ಏನು? ಇವೆರಡನ್ನೂ ಕೂಡ ಹೇಳಬೇಕಾಗುತ್ತದೆ ಹಿಂದಿನ ಚೀಫ್ ಸೆಕ್ರಟರಿಯವರ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದೆ ಇನ್ನು ಯಾವ ಯಾವ ಅಧಿಕಾರಿಗಳು ಇದ್ದಾರೋ ಗೊತ್ತಿಲ್ಲ ನಮ್ಮ ಸ್ನೇಹಿತರಾದ ಡಾಕ್ಟರ್ ಅನ್ನದಾನಿಯವರು ಮಾತನಾಡುವಾಗ ಕೆಲವು ಮಂದಿ ಶಾಸಕರ ಹೆಸರನ್ನು ಹೇಳಿದರು ನನಗೆ ಬಹಳ ಆಶ್ಚರ್ಯವಾಯಿತು ಶಾಸಕರ ಹೆಸರನ್ನು ಹೇಳಿದ್ದಕ್ಕೆ ಅನೇಕ ಮಂದಿ ಸ್ನೇಹಿತರು ವಿರೋಧ ವ್ಯಕ್ತಪಡಿಸಿದರು ಹಿಂದೆ, ಈ

ಸದನದಲ್ಲಿ ರೋಷನ್ ಬೇಗ್‌ರವರು ಇರಲಿಲ್ಲ ಅವರ ಹೆಸರನ್ನು ಹೇಳಿ ಬಹಳಷ್ಟು ಚರ್ಚೆಯಾಯಿತು ನೀವು ಯಾರೂ ಅವರ ರಕ್ಷಣೆ ಬರಲಿಲ್ಲ ಎಂದು ಆ ಮಾತನ್ನು ನಾನು ಕೇಳಿದ್ದೆ ಅದಕ್ಕಾಗಿ, ನಾನು ಪುನಃ ಕೇಳುತ್ತಿದ್ದೇನೆ. ಬೇರೆ ಯವರ ಹೆಸರು ಹೇಳಿದಾಗ ನೀವು ಇಷ್ಟೆಲ್ಲಾ ಗಲಾಟೆಯನ್ನು ಮಾಡುತ್ತೀರಿ, ರೋಷನ್ ಬೇಗ್‌ವರನ್ನು ನೀವು ಬಿಟ್ಟುಕೊಟ್ಟಿದ್ದೀರಾ ಎಂಬ ಮಾತನ್ನು ಕೇಳಿದ್ದೆ ಯಾರ ಹೆಸರನ್ನು ಹೇಳಿದರೂ ಅದನ್ನು ಹೇಳಬಾರದು, ನೋಟಿಸ್ ಕೊಡಿ ಎಂದು ಕೇಳುತ್ತೀರಿ ಆದರೆ, ಅವರೊಬ್ಬರನ್ನು ಏಕೆ ಬಿಟ್ಟುಕೊಟ್ಟಿದ್ದೀರಿ ಎಂದು ನಾನು ಕೇಳುತ್ತೇನೆ ಇದು ಕೇವಲ ಸರ್ಕಾರ ಮತ್ತೆ ಲೆಜಿಸ್ಲೇಚರ್ ಅಂಡ್ ಎಕ್ಸಿಕ್ಯುಟಿವ್, ಇದರ ವಿಷಯಗಳನ್ನು ನಾವು ಚರ್ಚೆ ಮಾಡುತ್ತಿದ್ದೇವೆ ಇಲ್ಲಿ ಪತ್ರಕರ್ತ ಸ್ನೇಹಿತರು ಒಂದನ್ನು ಕೊಟ್ಟರು Austerity, they cannot be tied down ಎಂದು ಇನ್ನೊಂದು ಇಲ್ಲಿ ಲೆಜಿಸ್ಲೇಚರ್‌ನಿಂದ ಏನಾಗಿದೆ, ಬೇರೆ ಬೇರೆ ಖರೀದಿಯಲ್ಲಿ ಏನಾಗಿದೆ ಎಂದು ಇದನ್ನು ಏಕೆ ಚರ್ಚೆ ಮಾಡುತ್ತಿದ್ದೇನೆಂದರೆ, ವಿಧಾನ ಸೌಧದೊಳಗೆ ಇದೆಲ್ಲಾ ನಡೆಯುತ್ತಾ ಇದ್ದರೆ, ಬೇರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ನಿಮಗೆಲ್ಲಿದೆ? ನಿಮಗೆ ನೈತಿಕ ಹಕ್ಕೆಲ್ಲಿದೆ ಎಂದು ಕೇಳುತ್ತೇನೆ. ನಿಮಗೆ ನೈತಿಕ ಹಕ್ಕು ಇಲ್ಲದೇ ಇದ್ದರೆ, ನಾವು ಯಾರ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ ಎಲ್ಲಾ ವ್ಯವಸ್ಥೆಯಲ್ಲಿ ಇದೇ ರೀತಿಯಾದಾಗ ಮುಂದೆ ಏನು ಎನ್ನುವುದನ್ನು ಚರ್ಚೆ ಮಾಡುವಂಥ ಪರಿಸ್ಥಿತಿ ಬರುತ್ತದೆ ನಾಗರಾಜ್‌ರವರೇ, ತಾವು ಹಿರಿಯರಿದ್ದೀರಿ ಈ ಅರ್ಕಾವತಿ ಲೇಔಟ್ ಬಗ್ಗೆ ಚರ್ಚೆಯಾಯಿತು ಅದನ್ನು ಶೆಲ್ವ್ ಮಾಡಬಾರದು ಅದನ್ನು ಅಕ್ವೈರ್ ಮಾಡಿದಂಥ ರೀತಿಯೂ ಸರಿ ಇಲ್ಲ ಒಂದು ಲೇಔಟ್ ಸಂಪೂರ್ಣ 50 ಎಕರೆ ಎಂದು ಮಾಡುವುದನ್ನು ಬಿಟ್ಟು ಅಲ್ಲಲ್ಲಿ ಒಂದೊಂದು ಪೀಸ್ ಮಾಡಿ ಬಹುಶಃ ಡೆವಲಪ್ ಮಾಡಲು ಖರ್ಚು ಜಾಸ್ತಿ ತೋರಿಸಲು ಮಾಡಿದ್ದಾರೆಂಬುದು ನನ್ನ ಅಭಿಪ್ರಾಯ ಇಂತಹ ಒಂದು ವ್ಯವಸ್ಥೆಯಲ್ಲಿ ಬಿಡಿಎ ಸೈಟನ್ನು ಹಂಚಿಕೆ ಮಾಡುವುದರ ಬಗ್ಗೆ, ಈಗ ಮಾನ್ಯ ಶಾಸಕರೊಬ್ಬರ ಹೆಸರು ಹೇಳಿದರು ಆ ಬಗ್ಗೆ ನಾನು ಒಂದು ಪತ್ರವನ್ನು ಬರೆದಿದ್ದೇನೆ ಅಂದಿನ ಬಿಡಿಎ ಆಯುಕ್ತರಿಗೆ, ಲೋಕಸಭಾ ಸದಸ್ಯರಿಗೆ ಮತ್ತು ಶಾಸಕರಿಗೆ ಎಲ್ಲರಿಗೂ ಸೇರಿ ಒಟ್ಟು ಎಷ್ಟು ಸೈಟನ್ನು ಕೊಟ್ಟಿದ್ದೀರಿ? ಒಂದಕ್ಕಿಂತ ಹೆಚ್ಚು ಬಾರಿ ಎಷ್ಟು ಜನ ಸೈಟನ್ನು ಪಡೆದಿದ್ದಾರೆ? ಸೈಟನ್ನು ಒಂದೇ ಸಲ ಪಡೆಯಲಿಕ್ಕೆ ಇರತಕ್ಕಂಥಾದ್ದು, ಅದರ ಬಗ್ಗೆ ಎನ್‌ಕ್ವೈರಿ ಆಗಬೇಕು ಒಂದಕ್ಕಿಂತ ಹೆಚ್ಚು ಸಲ ಯಾರು ಸೈಟನ್ನು ಪಡೆದಿದ್ದಾರೆ? ಸೈಟನ್ನು ಪಡೆದು ಒಂದು ತಿಂಗಳು, ಎರಡು ತಿಂಗಳೊಳಗಾಗಿ ಯಾರ ಮಾರಾಟವನ್ನು ಮಾಡಿದ್ದಾರೆ? ಚೀಫ್ ಮಿನಿಸ್ಟರ್ ದಿಸ್‌ಕ್ರಿಷನರಿ ಫವರ್‌ನಲ್ಲಿ ಸೈಟ್ ತೆಗೆದುಕೊಳ್ಳುವುದು, ಅಲ್ಲಿ ರಿಜಿಸ್ಟ್ರೇಶನ್ ಮಾಡಿಕೊಳ್ಳುವುದು ತಕ್ಷಣ ಅದನ್ನು ಮಾರಾಟ ಮಾಡಿಕೊಳ್ಳುವುದು ಇಲ್ಲಿ 7 ಲಕ್ಷಕ್ಕೆ ಸೈಟ್ ಸಿಗುತ್ತದೆ 14 ಲಕ್ಷಕ್ಕೆ ಸೈಟ್ ಮಾರುತ್ತಾರೆ ಹಾಗಾದರೆ ಇದಕ್ಕೆ ಏನನ್ನುತ್ತೀರಿ? ಇಲ್ಲಿ ಶುರುವಾಗುವುದು ಈದಂಥ ಇಲ್ಲಿ ನಾವು ಬೇರೆ ಏನನ್ನೋ ತನಿಖೆ ಮಾಡಲಿಕ್ಕೆ ಮೊದಲು ನಮ್ಮದು ತನಿಖೆಯಾಗಲಿ

**ಶ್ರೀ ಎಸ್ ಎಸ್ ಪಾಟೀಲ್** ಮಾನ್ಯ ಅಧ್ಯಕ್ಷರೇ, ಇವತ್ತಿನದಿವಸ ಇದನ್ನು ನಾವು ಮುಗಿಸುವುದೋ ಹೇಗೆ? ಏಕೆಂದರೆ ನಾವು ಬೇರೆ ಕಡೆ ಹೋಗಬೇಕು ನಾಳೆಗೆ ಮುಂದೂವರಿಸಿ ಏಕೆಂದರೆ ಇವತ್ತು ಅನೇಕ ಗಮನ ಸೆಳೆಯುವ ಸೂಚನೆಗಳನ್ನು ಹಾಕಿಕೊಂಡು ಕುಳಿತಿದ್ದಾರೆ ಅವು

ಯಾವುವೂ ಚರ್ಚೆಗೆ ಬರುತ್ತಿಲ್ಲ ಎಲ್ಲಾ ಚರ್ಚೆಯಾಗಬೇಕು ಎಲ್ಲರೂ ಹೇಳುವುದು ಅದೇ ಮಾತು ಉತ್ತರ ಶುರು ಮಾಡಲಿ ಅದರ ಪ್ರಶ್ನೆ ಕೇಳಲಿ ಸರ್ಕಾರ ಉತ್ತರ ಕೊಡಲಿ ಅಮೇಲೆ ಅವರು ಪ್ರಶ್ನೆ ಕೇಳಲಿ ಅದೇ ಮಾತು ಅದೇ ಕಥೆ ನಡೆದಿದೆ ನಾನು ನೋಡುತ್ತಿದ್ದೇನೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಮಾನ್ಯ ಮಾಧುಸ್ವಾಮಿಯವರು ಮತ್ತು ಇತರೇ ಮಾನ್ಯ ಸದಸ್ಯರು ಮಾತನಾಡಿದ್ದಾರೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ ಅಗತ್ಯವಾದ ಕೆಲವು ವಿಷಯಗಳನ್ನು ಮಾತ್ರ ನಾನು ಟಚ್ ಮಾಡಿ ಬಿಟ್ಟುಬಿಡುತ್ತೇನೆ ಮಾನ್ಯ ಅಧ್ಯಕ್ಷರೇ, ಈಗ ಈ ಹೌಸಿಂಗ್ ಸೊಸೈಟಿಗಳು ಅದೂ ಬೆಂಗಳೂರಿನಲ್ಲಿ ಇದೊಂದು ಮಾಫಿಯ ಇಲ್ಲಿಂದ ಗಲ್ಫ್‌ಗೆ ಹೋಗುವುದು ಅಲ್ಲಿ ಪಾಪ ಮುಗ್ಧರಿಗೆ ನಿಮಗೆ ಸೈಟ್ ಕೊಡುತ್ತೇವೆಂದು ದುಡ್ಡು ತೆಗೆದುಕೊಂಡು ಬಂದು, ಅಗ್ರಿಮೆಂಟ್ ಮಾತ್ರ ಮಾಡುವುದು 10–20 ವರ್ಷಗಳಾದರೂ ಸೈಟ್ ಕೊಟ್ಟಿಲ್ಲ, ಅವರು ಅಲ್ಲಿಂದ ಇಲ್ಲಿಗೆ ಓಡಾಡುತ್ತಾರೆ ಅವರು ಕೋರ್ಟಿಗೆ ಹೋದರೂ ಆಗುವುದಿಲ್ಲ ಅವರು ಜನರಲ್ ಬಾಡಿಗೆ ಹೋಗಿ ಮಾತನಾಡಲು ಆಗುವುದಿಲ್ಲ, ಆ ತರಹದ ಪರಿಸ್ಥಿತಿಯನ್ನು ತಂದು ಇಟ್ಟುಬಿಟ್ಟಿದ್ದಾರೆ ಎಲ್ಲಾ ಹೌಸಿಂಗ್ ಸೊಸೈಟಿಯ ವ್ಯವಸ್ಥೆ ಇದೇ ಆಗಿದೆ ಅದರ ಬಗ್ಗೆ ಒಂದು ಸಮಗ್ರ ತನಿಖೆಯಾಗಬೇಕಾಗುತ್ತದೆ ಏಕೆಂದರೆ ಎಷ್ಟು ಜನಕ್ಕೆ ಮೋಸ ಮಾಡಿದ್ದಾರೆ ಅದರ ಬಗ್ಗೆ ತನಿಖೆಯಾಗಬೇಕು ಸ್ವಲ್ಪ ಪಾಪದವರು ಯಾವಯಾವ ಹೌಸಿಂಗ್ ಸೊಸೈಟಿಗೆ ದುಡ್ಡನ್ನು ಕೊಟ್ಟಿದ್ದಾರೆ ಅವರಿಗೆ ಸೊಸೈಟಿಯಿಂದ ಸೈಟನ್ನು ಕೊಡಿಸುವ ವ್ಯವಸ್ಥೆಯಾಗಬೇಕು, ಇಲ್ಲದಿದ್ದರೆ ಅವರಿಗೆ ಹಣವನ್ನು ಬಡ್ಡಿ ಸಮೇತ ವಾಪಸ್ಸು ಕೊಡಿಸುವ ವ್ಯವಸ್ಥೆ ಆಗಬೇಕು ಅದಕ್ಕೆ ಇವತ್ತು ಏನಾಗಿದೆ ರಿಯಾಲ್ಟರ್ (Realtor) ಅಂದರೆ ಒಂದು ಡಿಗ್ರಿ ತರಹ ಅಥವಾ ಒಂದು ಹುದ್ದೆ ಸಿಕ್ಕಿದ ಹಾಗೆ ಆಗಿದೆ ಅದು ಒಂದು ದೊಡ್ಡ ವ್ಯವಹಾರ ರಿಯಾಲ್ಟರ್ ಎಂದು ಹಾಕಿಕೊಂಡರೆ ಅದು ಒಂದು ಪದವಿ ಸಿಕ್ಕಿದ ಹಾಗೆ ಅಥವಾ ಒಂದು ಹುದ್ದೆ ಸಿಕ್ಕಿದ ಹಾಗೆ, ಅ ಪರಿಸ್ಥಿತಿಗೆ ನಾವು ಬಂದು ಮುಟ್ಟಿದ್ದೇವೆ ಅವರಿಗೆ ಗೌರವ ಜಾಸ್ತಿ ಅದು ರಿಯಲ್ ಅಲ್ಲ ಕ್ರೂಯಲ್ ಎಸ್ಟೇಟ್ ಮತ್ತೆ ಮೊನ್ನೆ ಉತ್ತರವನ್ನು ಕೊಟ್ಟಾಗ ಈ ಎಕ್ಸ್‌ಪೋರ್ಟ್ ಪ್ರಮೋಷನ್ ಇದರಲ್ಲಿ, ಇಂಡಸ್ಟ್ರೀಯಲ್ ಏರಿಯಾದಲ್ಲಿ ಈ ಇಂಡಸ್ಟ್ರೀಯಲ್ ಪರ್‌ಪಸ್‌ಗೆ ಅಲ್ಲದೇ ಕೊಟ್ಟಂತಹ ಜಾಗದ ಬಗ್ಗೆ ಸಹ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ ಅದು ಸರ್ಕಾರದ ಹತ್ತಿರ ಇದೆ ನನಗೂ ಸಹ ಒಂದು ಪಟ್ಟಿ ಕೊಟ್ಟಿದ್ದಾರೆ ಅದು ಸರ್ಕಾರದ ಹತ್ತಿರ ಇದೆ ನನಗೂ ಸಹ ಒಂದು ಪಟ್ಟಿ ಕೊಟ್ಟಿದ್ದಾರೆ ಅದನ್ನು ಹೇಗೆ ಕೊಟ್ಟರು? ಇ ಪಿ ಐ ಪಿ ಯಲ್ಲಿ ಯಾವುದಕ್ಕೆ ಕೊಡಬೇಕು ಎಂದು ಇದೆ ಅದಕ್ಕೆ ಹೊರತಾಗಿ ಕೊಟ್ಟಿದ್ದರ ಬಗ್ಗೆ ತನಿಖೆಯಾಗಬೇಕು ಏಕೆ ಕೊಟ್ಟರು? ಯಾರಿಗೆ ಕೊಟ್ಟರು? ಇದರ ಬಗ್ಗೆ ತನಿಖೆಯನ್ನು ಮಾಡಲಿ ಒಟ್ಟು ಅಲ್ಲಿಯೂ ಸಹ ಎಷ್ಟು ಜಾಗವನ್ನು ಅಕ್ವೈರ್ ಮಾಡಿದ್ದಾರೆ? ಎಷ್ಟು ಡೀ–ನೋಟಿಫೈ ಮಾಡಿದ್ದಾರೆ? ರೀ ಕನ್‌ವೇ ಹೆಸರಿನಲ್ಲಿ ಒರಿಜನಲ್ ಓನರ್‌ಗೆ ಅಲ್ಲದೆ ಬೇರೆಯವರಿಗೆ ಎಷ್ಟು ವಾಪಸ್ಸು ಕೊಟ್ಟಿದ್ದಾರೆ ಇಷ್ಟನ್ನು ತನಿಖೆ ಮಾಡಲಿಕ್ಕೆ ಪ್ರಾಯಶಃ ಸರ್ಕಾರದ ಯಾವುದೇ ಒಂದು ಏಜನ್ಸಿಗೆ ಕೊಟ್ಟರೆ ಸಾಕಾಗುವುದಿಲ್ಲ ಇದರಲ್ಲಿ ಕೇವಲ ಸರ್ಕಾರದಲ್ಲಿದ್ದವರು ಎಗ್ಜಿಕ್ಯೂಟೀವ್ ಮಾತ್ರವಲ್ಲ, ಕೆಲವು extra constitutional Authorities ಸಹ ಸೇರಿಕೊಂಡಿದ್ದಾರೆ ನಾನು ಒಂದು ದಿವಸ ಭಿಕ್ಷಾಟನೆ ಬಿಲ್‌ಗೆ ತಿದ್ದುಪಡಿ ತಂದಾಗ ಹೇಳಿದ್ದೆ

ಅದಕ್ಕೆ ಸರ್ಕಾರದಿಂದ ಉತ್ತರ ಸಹ ಬಂತು ಅವತ್ತು ಸಹ ನಾನು ಈ ಸದನದಲ್ಲಿ ವಿರೋಧಪಕ್ಷದಲ್ಲಿದ್ದೆ. ಭಿಕ್ಷುಕರನ್ನು ಹಿಡಿದುಕೊಂಡು ಹೋಗುವುದರ ಬಗ್ಗೆ ಮಾತನಾಡಿದರು ನಾನು ಕೇಳಿದೆ ಹೌದು ರಸ್ತೆಯಲ್ಲಿರುವವ ಭಿಕ್ಷುಕರನ್ನು ಹಿಡಿದುಕೊಂಡು ಹೋಗುವುದಕ್ಕೆ ಕಾನೂನು ಮಾಡುತ್ತೀರಿ, ವೈಟ್‌ಕಾಲರ್ ಬೆಗ್ಗರ್ಸ್‌ನ್ನು ಏನು ಮಾಡುತ್ತೀರಿ ಎಂದು ಕೇಳಿದ್ದೆ ಇವರೂ ಸಹ ಒಂದು ರೀತಿಯ ವೈಟ್‌ಕಾಲರ್ ಬೆಗ್ಗರ್ಸ್ ಎಂದು ನಾನು ಹೇಳುತ್ತೇನೆ. ಅವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆ ಅದೂ ಸಹ ಇಲ್ಲಿ ತೀರ್ಮಾನವಾಗಬೇಕು ಎಂದು ಹೇಳುತ್ತಾ, ತಾವೇನು ಅವಕಾಶವನ್ನು ಕೊಟ್ಟಿದ್ದೀರಿ ಅದನ್ನು ಸ್ವಲ್ಪ ಉಪಯೋಗ ಮಾಡಿ ಕೊಂಡು ಮನಃ ನನ್ನ ಒತ್ತು ಇದರ ಬಗ್ಗೆ ತನಿಖೆಯಾಗಬೇಕು ಸಿ ಬಿ ಐ ತನಿಖೆಯಾಗಬೇಕು ಕೇವಲ ಭೂ ಹಗರಣವಲ್ಲ ಬೇರೆ ಎಲ್ಲಾ ರೀತಿಯ ಹಗರಣಗಳು ನಿಲ್ಲಬೇಕು ಎನ್ನುವುದು ನನ್ನ ಅನಿಸಿಕೆ ಅದಕೋಸ್ಕರ ತಾವು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)** ಮಾನ್ಯ ಅಧ್ಯಕ್ಷರೇ, ಭೂ ಹಗರಣದ ಬಗ್ಗೆ ಈ ಸದನದಲ್ಲಿ ಪರಿಣಾಮಕಾರಿಯಾದಂತಹ ಚರ್ಚೆ ನಡೆದಿದೆ ಈ ಭೂ ಹಗರಣದ ಎನ್ನುವುದು ಇವತ್ತು ನಡೆದಿದ್ದು ಏನೂ ಅಲ್ಲ ಸುಮಾರು 25 ವರ್ಷಗಳಿಂದ ನಡೆದುಕೊಂಡು ಬಂದಿದೆ ಬೆಂಗಳೂರು ನಗರ ಹಾಳಾಗಿರುವುದು 1900ರಿಂದಲೂ ನಿರಂತರವಾಗಿ ನಡೆದಿದೆ ಆದರೆ ಈ ಬೆಂಗಳೂರು ನಗರವನ್ನು ಸ್ಥಾಪನೆ ಮಾಡಿದಂತಹ ಮಹಾಪ್ರಭು ಕೆಂಪೇಗೌಡರು ಬಹಳ ಸದುದ್ದೇಶದಿಂದ ಬೆಂಗಳೂರು ನಗರವನ್ನು ಸ್ಥಾಪನೆ ಮಾಡಿದರು 4 ಕಡೆ 4 ಗೋಪುರಗಳು ಆ ಗೋಪುರಗಳನ್ನು ಧಾಟಿ ಹೋಗಬೇಡಿ ಎಂದೇ ಅವರು ಗೋಪುರಗಳನ್ನು ಇಟ್ಟಿದ್ದರು ಬೆಂಗಳೂರು ನಗರದ ಬೆಳವಣಿಗೆಗೆ ಹೀಗೆ ಎಂದರೆ, ಬೆಂಗಳೂರು ನಗರದಲ್ಲಿ ಸುಮಾರು 50 ಮಠಗಳು ಇದ್ದವು ಅದು 600–700 ಎಕರೆ ಪ್ರದೇಶ ಬೆಂಗಳೂರಿನ ಕೆಂಪೇಗೌಡ ವೃತ್ತ ಏನಿದೆ ಅದೆಲ್ಲವೂ ಮಠದ ಆಸ್ತಿ, ಅಕ್ಕಿಪೇಟೆ ಏನಿದೆ ಅದೆಲ್ಲಾ ಮಠದ ಆಸ್ತಿ . ಬಳೇಪೇಟೆ, ಚಿಕ್ಕಪೇಟೆ ಅದೆಲ್ಲಾ ಮಠದ ಆಸ್ತಿ, ಕಲಾಸಿಪಾಳ್ಯ ಮಠದ ಆಸ್ತಿ, ಬಿನ್ನಿಮಿಲ್ ಏರಿಯಾ ಮಠದ ಆಸ್ತಿ, ಇವತ್ತು ಬೆಂಗಳೂರು ನಗರದಲ್ಲಿ ಸ್ವಲ್ಪ ಹೆಚ್ಚು ಕಡಿಮೆ 50 ಮಠಗಳ ಆಸ್ತಿ ಎಲ್ಲಾ ಬೇರೆಯವರ ಪಾಲಾಗಿದೆ ಒಂದು ಇಂಚು ಜಾಗ ಕೂಡ ಮಠಗಳಿಗೆ ಉಳಿದಿಲ್ಲ ಅವತ್ತಿನಿಂದ ಅದನ್ನು ಯಾರ್‍ಯಾರು ಕದಿಯಬೇಕೋ ಕದ್ದು ಒಂದು ತರಹ ಲೂಟಿ ನಡೆದಿದೆ. ಕಲಾಸಿಪಾಳ್ಯದ ಹತ್ತಿರ ಇನ್ನೂ ಒಂದು ಮಠ ಇದೆ ತಾವು ನೋಡಿರಬಹುದು ಕೋಳದ ಮಠ ಬೇರೆ ಅದು ಆ ಕಡೆ ಮೂಲೆ ಅದು ಜೋಡಿ ರಸ್ತೆಯಲ್ಲಿರುವುದು ಅದು ಭಕ್ತಾದಿಗಳು ಕೊಟ್ಟಿರತಕ್ಕ ಆಸ್ತಿ ಅದನ್ನು ಯಾರ್‍ಯಾರು ಲೂಟಿ ಮಾಡಬೇಕು ನಿರಂತರವಾಗಿ ಲೂಟಿ ಮಾಡಿಕೊಂಡು ಬಂದಿದ್ದಾರೆ ಬೆಂಗಳೂರು ನಗರದ ಬೆಳವಣಿಗೆಗೆ ಬಹಳ ಜನ ತ್ಯಾಗ ಮಾಡಿದ್ದಾರೆ ದಿವಾನ್ ಮಾಧವರಾವ್ ಎಷ್ಟು ಕೆಲಸ ಮಾಡಿದ್ದಾರೆ ನೋಡಿ ಬೆಂಗಳೂರನ್ನು ಯಾವ ಯಾವ ರೀತಿ ಬೆಳವಣಿಗೆ ಮಾಡಬೇಕೆಂದು ಹೇಳಿ ಮಿರ್ಜಾ ಇಸ್ಮಾಯಿಲ್ ಅವರು ಬೆಳಿಗ್ಗೆ ಎದ್ದು ಕುದುರ ಮೇಲೆ ಬರುತ್ತಿದ್ದರು ಸರ್ ಎಂ ವಿಶ್ವೇಶ್ವರಯ್ಯನವರು, ಸರ್ ಪುಟ್ಟಣ್ಣ ಶೆಟ್ಟರು ಬಹಳ ದಿವಸ ಅವರು ದಿವಾನರಾಗಿರಲಿಲ್ಲ ಸ್ವಲ್ಪ ಹೆಚ್ಚು ಕಡಿಮೆ ಒಂದು ತಿಂಗಳು ಇದ್ದರು ಎಂದು ಕಾಣುತ್ತದೆ ಆ ಒಂದು

ತಿಂಗಳಲ್ಲಿ ಅವರ ಸ್ಮಾರಕವಾಗಿ ಸರ್ ಪುಟ್ಟಣ್ಣಶೆಟ್ಟರ ಭವನ ನಿರ್ಮಾಣವಾಯಿತು ಇದೆಲ್ಲವೂ ಬೆಂಗಳೂರಿನ ಸಮಗ್ರ ಬೆಳವಣಿಗೆ ಬಗ್ಗೆ ಮಾಡಿದಂತಹ ಮಹಾ ಕಾರ್ಯಗಳು ಬೆಂಗಳೂರು ಮಹಾನಗರಪಾಲಿಕೆ ಇವತ್ತು, ಅವತ್ತು ಬೆಂಗಳೂರು ನಗರಸಭೆ, ಅದಕ್ಕಿಂತ ಹಿಂದೆ ಬೆಂಗಳೂರು ಪುರಸಭೆ, ಆಗ ಶ್ರೀ ಕೆಂಗಲ್ ಹನುಮಂತಯ್ಯನವರು ಅಧ್ಯಕ್ಷರಾಗಿದ್ದರು ಆ ಕಾಲದಲ್ಲಿ, ಆ ಇತಿಹಾಸದಲ್ಲಿ, ಬೆಂಗಳೂರಿನ ಬೆಳವಣಿಗೆಗೆ ನಾನಾ ರೀತಿಯಲ್ಲಿ ಕೆಲಸ ನಡೆದಿದೆ ಯಾವಾಗ ಈ ಭೂಗಳ್ಳರು, ಖದೀಮರು, ದರೋಡೆಕೋರರು ಇವರು ಬಂದರು ಶುರುವಾಯಿತು ಇತ್ತೀಚೆಗೆ 30 ವರ್ಷಗಳಿಂದಿಚೆಗೆ ಬೆಂಗಳೂರು ನಗರದಲ್ಲಿ ನಡೆದಿರತಕ್ಕಂಥ ಭೂಹಗರಣದಲ್ಲಿ ಅನಾಮಧೇಯರು, ಅಯೋಗ್ಯರು ಕೋಟ್ಯಾಧಿಪತಿಗಳಾಗಿದ್ದಾರೆ, ಕೋಟ್ಯಾಧೀಶರು ಅವರೇನೂ ಸಾಮಾನ್ಯರಾಗಿದ್ದಾರೆಂದು ಅಲ್ಲ ಇದರ ಬಗ್ಗೆ ಜಿ ವಿ ಕೆ ರಾವ್ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ ಅವರು ಬಹಳ ಸುಂದರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ಆ ವರದಿಯಲ್ಲಿ ಎಷ್ಟೆಷ್ಟು ಜನ ಭೂಗಳ್ಳರು ಇದ್ದಾರೆಂಬುದನ್ನು ಹೇಳಿದ್ದಾರೆ ಬೆಂಗಳೂರು ನಗರದ ಬಡಾವಣೆಗಳಲ್ಲಿ ಅರ್ಧ ಬಡಾವಣೆಗಳು ಖಾಸಗಿ ಭೂಗಳ್ಳರಿಂದ ನಿರ್ಮಾಣವಾಗಿರತಕ್ಕಂಥಾದ್ದು ಕಾರ್ಮಿಕರ ಹೆಸರಿನಲ್ಲಿ, ಜನಸಾಮಾನ್ಯರ ಹೆಸರಿನಲ್ಲಿ, ಕಲಾವಿದರ ಹೆಸರಿನಲ್ಲಿ, ಈ ತರಹ ನಿರಂತರವಾಗಿ ನಡೆದಿರತಕ್ಕಂಥಾದ್ದು ಇವರೆಲ್ಲರೂ ಕೂಡ ಒಂದಲ್ಲ ಒಂದು ಪಾರ್ಟಿಯ ಏಜೆಂಟರು ಆಗಿದ್ದಾರೆ ಕೆಲವರು ಚುನಾವಣೆಯಲ್ಲೂ ಸ್ಪರ್ಧೆ ಮಾಡಿದ್ದಾರೆ ಅದಕ್ಕೇನೂ ಲೆಕ್ಕವಿಲ್ಲ ಅವರೆಲ್ಲಾ ಆ ಕಾಲದಲ್ಲಿ ಲೂಟಿ ಮಾಡಿರುವವರು, ಇವತ್ತು ಅವರು ಬಹಳ ಪ್ರತಿಷ್ಠಿತ ವ್ಯಕ್ತಿಗಳು, ಅವರಿಗೆ ಸಮಾಜದಲ್ಲಿ ಪ್ರಥಮ ಸ್ಥಾನ, ಗೌರವಸ್ಥಾನ. ಇದೆಲ್ಲವನ್ನು ನೋಡಿದಾಗ ನನಗನ್ನಿಸುತ್ತದೆ, ಬೆಂಗಳೂರು ನಗರವನ್ನು ಉಳಿಸುವ ಜವಾಬ್ದಾರಿ, ಒಂದು ಬೆಂಗಳೂರು ಮಹಾನಗರಪಾಲಿಕೆಯದ್ದು ಮತ್ತು ಬಿಡಿಎದ್ದು ಬಿಡಿಎ ಬರುವುದಕ್ಕಿಂತ ಮುಂಚೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಎಂದಿತ್ತು, ಆಗ ಬಿ ವಿ ಲಂಕಪ್ಪನವರು ಬಹುಶಃ ಮೊದಲನೆಯ ಅಧ್ಯಕ್ಷರು ಕೋಲಾರದ ಟಿ ಚನ್ನಯ್ಯನವರು ಸಹ ಅದರ ಅಧ್ಯಕ್ಷರಾಗಿದ್ದರು ಅವತ್ತು ಬೆಂಗಳೂರಿನಲ್ಲಿದ್ದ ಜನಸಂಖ್ಯೆ 5 ಲಕ್ಷವು ಇರಲಿಲ್ಲ, ಇವತ್ತು 65 ಲಕ್ಷಕ್ಕೆ ಏರಿದೆ ಬೆಂಗಳೂರು ನಗ್ನವಾಗಿದೆ, ಬೆಂಗಳೂರು ಲೂಟಿಯಾಗಿದೆ, ಮೊದಲನೆಯದಾಗಿ ಹೊರಗಡೆ ರಾಜ್ಯದವರು ಇವತ್ತು ಬಂದು ಬೆಂಗಳೂರನ್ನು ಕಬಳಿಸುತ್ತಿದ್ದಾರೆ ಮೊದಲನೆಯದಾಗಿ ಬೆಂಗಳೂರಿನ ಸುತ್ತಲು ಬಂದಿರುವ ಕಟ್ಟಡಗಳು ಕನ್ನಡಿಗರದಲ್ಲ, ಕರ್ನಾಟಕದವರದ್ದಲ್ಲ, ಬೆಂಗಳೂರಿನವರದ್ದಲ್ಲ, ಎಲ್ಲಾ ಗುಜರಾತಿಗಳು, ಮಾರ್ವಾಡಿಗಳು, ಸಿಂಧಿಗಳು ಬಂದು ಹಣವನ್ನು ಹಾಕಿ ಬೆಂಗಳೂರಿನ ಸಂಪತ್ತನ್ನು ಲೂಟಿ ಮಾಡಿದ್ದಾರೆ ಈ ಲೂಟಿಯಲ್ಲಿ ರಾಜಕಾರಣಿಗಳು ಭಾಗಿಯಾಗಿದ್ದಾರೆ, ಸರ್ಕಾರಗಳು ಭಾಗಿಯಾಗಿವೆ, ಅಧಿಕಾರಿಗಳು ಭಾಗಿಯಾಗಿದ್ದಾರೆ ಎಲ್ಲರೂ ಕೋಟಿ ಕೋಟಿ ರೂ ಗಳನ್ನು ಲೂಟಿ ಮಾಡಿದ್ದಾರೆ ಈ ದೃಷ್ಟಿಯಿಂದ, ಬಂದಂತಹ ಎಲ್ಲಾ ಸರ್ಕಾರಗಳು, ಬೆಂಗಳೂರನ್ನು ಉಳಿಸುವ ಪ್ರಯತ್ನ ಮಾಡಲಿಲ್ಲ ಬೆಂಗಳೂರಿನಲ್ಲಿ ವಿಧಾನಸೌಧವಿದೆ, ಮಂತ್ರಿಗಳ ಮನೆಗಳಿವೆ, ಮುಖ್ಯ ಮಂತ್ರಿಗಳ ಮನೆ ಇದೆ, ಅಧಿಕಾರಿಗಳ ಮನೆಗಳಿವೆ, ಇವರು ಯಾರು ಈ ಬೆಂಗಳೂರನ್ನು ಉಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ ನಾನು ಆಗಲೇ ಮಾಧವರಾಯರು, ನರಸಿಂಹರಾಯರು, ವಿಶ್ವೇಶ್ವರಯ್ಯನವರು ಮತ್ತು

ಸರ್ ಮಿರ್ಜಿ ಇಸ್ಮಾಯಿಲ್ ಇವರೆಲ್ಲ ಹೆಸರುಗಳನ್ನು ಹೇಳಿದೆ ಅವರ ಆದರ್ಶಗಳೇ ಬೇರೆ ಇತ್ತೀಚೆಗೆ ಬಂದವರು ಬೆಂಗಳೂರನ್ನು ಲೂಟಿ ಮಾಡಲು ಬಂದವರು ಇವತ್ತು ಬೆಂಗಳೂರು ಮಹಾನಗರಪಾಲಿಕೆಯ ಮೇಯರ್‌ರವರು ಬೆಂಗಳೂರು ಮಹಾನಗರಪಾಲಿಕೆಯ ಕಟ್ಟಡಗಳನ್ನು ಮಾರುವುದಕ್ಕೆ ಹೊರಟ್ಟಿದ್ದಾರೆ ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಮಹಾತ್ಮಾಗಾಂಧಿ ರಸ್ತೆಯಲ್ಲಿರುವ ಬಹುಮಹಡಿ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಕಟ್ಟಿದರು ಎಂದರೆ, ಬೆಂಗಳೂರು ಮಹಾನಗರಪಾಲಿಕ ಕಟ್ಟಿದ ಒಂದು ದೊಡ್ಡ ಕಟ್ಟಡಕ್ಕೆ ಎತ್ತರವಾಗಿ ಯಾರೂ ಕಟ್ಟಡವನ್ನು ಕಟ್ಟಬಾರದು, ನಮ್ಮ ಕಟ್ಟಡ ಬೆಂಗಳೂರಿನಲ್ಲಿ ಎದೆಮೆಟ್ಟಿ ನಿಲ್ಲಬೇಕೆನ್ನುವ ಉದ್ದೇಶದಿಂದ ಕಟ್ಟಲಾಯಿತು ಇವತ್ತು ಅದರ ಬೆಲೆ 120 ಕೋಟಿ ರೂ.ಗಳಲ್ಲಿ ಹೆಚ್ಚಾಗುತ್ತದೆ, ಇವರು ಹೇಳುವುದೇನೆಂದರೆ, ಬಾಡಿಗೆ ಸರಿಯಾಗಿ ಬರುತ್ತಿಲ್ಲ ಅವರ್ಯಾರು ಬಾಡಿಗೆಯನ್ನು ಸರಿಯಾಗಿ ಕೊಡುತ್ತಿಲ್ಲ, ಬೀಡ ಅಂಗಡಿಯವರು ಕೊಡುತ್ತಿಲ್ಲ, ಹೋಟಲ್‌ನವರು ಕೊಡುತ್ತಿಲ್ಲ, ಛಾಪಾಕಾಗದವರು ಕೊಡುತ್ತಿಲ್ಲ, ಜವಳಿ ಅಂಗಡಿಯವರು ಕೊಡುತ್ತಿಲ್ಲ, ಮಾರಾಟ ಮಾಡೋಣ ಎಂದು ಹೇಳುತ್ತಿದ್ದಾರೆ ಇದು ಎಲ್ಲಾದರೂ ಉಂಟೆ, ಸಾಧ್ಯವೇ, ಈ ಬಾಯಿಯಲ್ಲಿ ಅದನ್ನು ಹೇಳಿದರಲ್ಲಾ, ಮೊದಲು ಆ ಮೇಯರ್‌ರವರನ್ನು ಅಧಿಕಾರದಿಂದಿಳಿಸಿ, ಅವರು ಹೇಳಿದ್ದು, ಇಡೀ ಬೆಂಗಳೂರು ಮಹಾನಗರಕ್ಕೆ ಮಾಡಿದ ಅಪಮಾನವಾಗುತ್ತದೆ ಅದು ನಮ್ಮ ಪ್ರಮುಖವಾದ ಆಸ್ತಿ ಆಸ್ತಿ ಕಳೆದುಕೊಳ್ಳುವುದಕ್ಕೆ ನಾವ್ಯಾರು ತಯಾರಾಗಿರಬಾರದು, ನಾನು ಈ ಬಗ್ಗೆ ಸರ್ಕಾರಕ್ಕೆ ಬಹಳ ನೇರವಾಗಿ ಹೇಳುತ್ತಿದ್ದೇನೆ ಇದರ ಜೊತೆಗೆ ಜಯನಗರದಲ್ಲಿರುವ ಸಂಕೀರ್ಣ, ಚಿತ್ರಮಂದಿರ, ಅದೊಂದು ಕನ್ನಡ ಚಿತ್ರಗಳಿಗಾಗಿ ಒಂದು ಚಿತ್ರಮಂದಿರವಾಗಿದ್ದು, ಅದರ ಹೆಸರು ಪುಟ್ಟಣ್ಣ ಕಣಗಾಲ್ ಚಿತ್ರಮಂದಿರ, ಅದನ್ನೂ ಕೂಡ ಮಾರಾಟಕ್ಕಿಡುತ್ತೇವೆಂದು ಹೇಳುತ್ತಿದ್ದಾರೆ ಈ ರೀತಿಯಾಗಿ ಬೆಂಗಳೂರು ನಗರದ ಆಸ್ತಿಯನ್ನು ಮಾರುವುದಕ್ಕೆ ಮುಂದಾದರೆ ನಾವು ಎಲ್ಲಿಗೆ ತಮಪಬಹುದು? ಎಲ್ಲಿಗೆ ಹೋಗುತ್ತೇವೆ? ಆದಾದ ನಂತರ ಇಲ್ಲಿರುವ ವಿಧಾನಸೌಧಕ್ಕೂ ಬರುತ್ತದೆ ಇದನ್ನು ಯಾರಿಗಾದರೂ ಮಾರೋಣ ಎಷ್ಟಕ್ಕೆ ಹೋಗಬಹುದೆಂದು ಏಕೆಂದರೆ ಪಕ್ಕದಲ್ಲೇ ಹೊಸದಾಗಿ ಕಟ್ಟುತ್ತಿದ್ದೇವೆ, ಯಾರಾದರೂ ಕಂಪನಿಯವರು ಅಬಕಾರಿ ಗುತ್ತಿಗೆದಾರರು ಬರುವುದಾದರೆ, ರಿಯಲ್ ಎಸ್ಟೇಟ್‌ನವರು ಬರುವುದಾದರೆ ಕೊಟ್ಟು ಬಿಡಬಹುದು, ಪಕ್ಕದಲ್ಲಿ ಹೊಸದಾಗಿ ವಿಕಾಸಸೌಧವೆಂದು ಕಟ್ಟುತ್ತಿದ್ದೇವೆ, ಇದು ವರ್ಕ್‌ಔಟ್ ಆಗುತ್ತದೆ ಇದಕ್ಕೆ ನಾವು ಬಾಡಿಗೆ ಕೊಡುತ್ತಿದ್ದೇವೆಯೆ? ಫ್ರೀಯಾಗಿ ಬಂದು ಇಲ್ಲಿ ಕುಳಿತುಕೊಳ್ಳುತ್ತೇವೆ, ಮುಖ್ಯಮಂತ್ರಿಗಳ ಕಾರ್ಯಾಲಯಕ್ಕೆ ಬಾಡಿಗೆ ಕೊಡುವುದಿಲ್ಲ, ಮಂತ್ರಿಗಳ ಕಾರ್ಯಾಲಯಕ್ಕೆ ಬಾಡಿಗೆ ಕೊಡುವುದಿಲ್ಲ, ಅಧಿಕಾರಿಗಳು ತಮ್ಮ ಕೊಠಡಿಗೆ ಬಾಡಿಗೆ ಕೊಡುವುದಿಲ್ಲ ಇದರಿಂದೇನೂ ನಮಗೆ ಲಾಭವಿಲ್ಲ, ನಷ್ಟವೇ ಜಾಸ್ತಿ ಮಾರುವುದೇ ಒಳ್ಳೆಯದಪ್ಪ ಎಂದು ಈ ಯೋಚನೆ ಯಾರದ್ದಾದರೂ ತಲೆಯಲ್ಲಿ ಬಂದರೆ, ನಿಜವಾಗಿಯೂ ನಮಗೆ ಹುಚ್ಚಾಸ್ಪತ್ರೆಯೇ ಬೇಡ ಅದು ಬರಲೂ ಬಹುದು ಬೆಂಗಳೂರು ಆಸ್ತಿಗೆ ಕೆಂಪೇಗೌಡರು ನಾಲ್ಕು ಗೋಪುರ ಕಟ್ಟಿಸಿದರು, ಶಿವಗಂಗೆ ಬೆಟ್ಟದಲ್ಲಿ ಅವರ ಶಾಸನವಿದೆ, ಈ ಬೆಟ್ಟಕ್ಕೇನಾದರೂ ಅಪಾಯವಾದರೆ, ಯಾರೂ ಇದನ್ನು ನೋಡಿಕೊಳ್ಳದೆ ಶಿಥಿಲವಾದರೆ, ಇಲ್ಲಿ ಭಂಡಾರವಿದೆ ಇದನ್ನು ತೆಗೆದುಕೊಂಡು ಖರ್ಚು ಮಾಡಿ ಎಂದು ಆ ಕಾಲದಲ್ಲಿ ಮಾಡಿದರು ಆದರೆ ಈಗ ಭಂಡಾರವನ್ನೇ

ಲೂಟಿ ಮಾಡೋಣವೆಂದು ಹೊರಟಿದ್ದಾರೆ ಅನೇಕ ನಮ್ಮ ಸದಸ್ಯ ಸ್ನೇಹಿತರಿದ್ದಾರೆ, ಕೆಂಪೇಗೌಡ ರಸ್ತೆಯಲ್ಲಿ ಇದ್ದಂತಹ ಒಂದು ಹಳೆಯ ಆಸ್ಪತ್ರೆಯನ್ನು ಮಾರ್ವಾಡಿಗೆ ಕೊಟ್ಟಿದ್ದಾರೆ, ಅವರು ಅದನ್ನು ಒಡೆದು ಈಗ ಸ್ವಲ್ಪ ಹೆಚ್ಚುಕಡಿಮೆ ಹತ್ತು ಅಂತಸ್ತಿನ ಮಹಡಿಯನ್ನು ಕಟ್ಟುತ್ತಿದ್ದಾನೆ ಅದನ್ನು ಏಕೆ ಕೊಟ್ಟರು, ಅದಕ್ಕೆ ಷರತ್ತು ಹಾಕಿದವರು ಯಾರು? ಇದೆಲ್ಲಾ ಹೊರಗಡೆಗೆ ಬರಬೇಕು ಯಾರೋ ಒಬ್ಬ ಖಾಸಗಿಯವರಿಗೆ ನಮ್ಮ ಸರ್ಕಾರದ ಜಮೀನುಗಳನ್ನೆಲ್ಲಾ, ಸರ್ಕಾರಿ ಕಟ್ಟಡಗಳನ್ನೆಲ್ಲಾ ನಾವು ಮಾರುವುದಾದರೆ ಪರಿಸ್ಥಿತಿ ಏನು? ನಾವು ಎಲ್ಲಿಗೆ ತಲುಪುತ್ತಿದ್ದೇವೆ?

**(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)**

ಇದೊಂದು ಕಡೆ ಬೆಂಗಳೂರು ಮಹಾನಗರಪಾಲಿಕೆಯ ಆಸ್ತಿಯನ್ನು ಕೆಲವರು ಭೋಗ್ಯದ ಆಧಾರದ ಮೇಲೆ ಲೀಸ್ ಆಧಾರದ ಮೇಲೆ ತೆಗೆದುಕೊಂಡಿದ್ದಾರೆ, ಸಾವಿರಾರು ಕೋಟಿ ರೂಪಾಯಿಗಳ ಆಸ್ತಿ ಇದೆ 99 ವರ್ಷ ಭೋಗ್ಯ, 300 ವರ್ಷ ಭೋಗ್ಯ, ಹೀಗಿರುವಾಗ ಮತ್ತು ವಾಪಸ್ ಆಸ್ತಿಯನ್ನು ಹಿಂದಕ್ಕೆ ಪಡೆಯಲು ಸಾಧ್ಯವೇ? ಸಾಧ್ಯವಿಲ್ಲ ಅಲ್ಲಿ ಯಾವ ಉದ್ದೇಶಕ್ಕಾಗಿ ಬೆಂಗಳೂರು ಮಹಾನಗರಪಾಲಿಕೆಯಿಂದ ಆಸ್ತಿಯನ್ನು ಪಡೆದಿದ್ದೇವೆ, ಆ ಉದ್ದೇಶಕ್ಕೆ ಅದು ಉಪಯೋಗವಾಗುತ್ತಿಲ್ಲ ಅಲ್ಲಾಗುತ್ತಿರುವ ಉದ್ದೇಶವೇನೆಂದರೆ, ಅವರ ಸ್ವಂತಕ್ಕೆ, ಪೆಟ್ರೋಲ್ ಬಂಕ್ ಮಾಡಿಕೊಂಡಿದ್ದಾರೆ, ಅಂಗಡಿಗಳನ್ನು ಮಾಡಿದ್ದಾರೆ, ಸಂಕೀರ್ಣ ಮಾಡಿದ್ದಾರೆ, ನಮ್ಮ ಕೈಯಲ್ಲಿ ಅವರನ್ನು ಬಿಡಿಸಲಾಗುತ್ತಿಲ್ಲ ಇದರ ಜೊತೆಗೆ ಮುಜರಾಯಿ ಆಸ್ತಿಯನ್ನೆಲ್ಲಾ ಖಾಸಗಿಯವರು ಹೊಡೆದಿದ್ದಾರೆ ಸರ್ಕಾರದ ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಯನ್ನು ಈ ರೀತಿಯಾಗಿ ಲೂಟಿ ಮಾಡುತ್ತಿದ್ದರೆ ನಮ್ಮಲ್ಲಿ ಕಡತ ಇಲ್ಲ, ನಮ್ಮಲ್ಲಿ ಲೆಕ್ಕವಿಲ್ಲ ನಮ್ಮಲ್ಲಿ ಯಾವುದೂ ಇಲ್ಲ ಇದೊಂದು ಹಗಲುದರೋಡೆ ನಿತ್ಯವಾಗಿ ನಡೆಯುತ್ತಿದೆ ಇತ್ತೀಚೆಗೆ ನೂತನ ವಿದ್ಯುತ್ ಕಾರ್ಖಾನೆ, ಕೃಷ್ಣಪ್ಪನವರೇ, ಆ ಕಾರ್ಖಾನೆಯ ಇತಿಹಾಸ ನಿಮಗೂ ಗೊತ್ತು, ಐಟಿಐ ಎಷ್ಟು ಚೆನ್ನಾಗಿ ನಡೆಯಿತು, ಎಷ್ಟು ವೈಭವವಾಗಿ ನಡೆಯಿತು ಒಂದು ಕಾಲದಲ್ಲಿ ಐಟಿಐ ಎಂದರೆ ಅದಕ್ಕೊಂದು ಒಳ್ಳೆಯ ಶಕ್ತಿ, ಗೌರವ ಇತ್ತು ಆ ನೂತನ ವಿದ್ಯುತ್ ಕಾರ್ಖಾನೆಯಲ್ಲಿ ನೂರಕ್ಕೆ ನೂರು ಕನ್ನಡಿಗರಿದ್ದರು, ಕಾರ್ಖಾನೆಯನ್ನು ಮುಚ್ಚಿ ಕಾರ್ಮಿಕರನ್ನು ಸಮಾಧಿ ಮಾಡಿದರು ಕಾರ್ಮಿಕರ ಸಮಾಧಿಯ ಮೇಲೆ ಆಸ್ತಿಯ ಮಾರಾಟ, ಅದು ಎಷ್ಟಕ್ಕೆ ಎಂದರೆ ಇನ್ನೂರ ನಲವತ್ತಾರು ರೂಪಾಯಿಗಳಿಗೆ ಒಂದು ಚದರಡಿ, ಎಲ್ಲಾದರೂ ಸಾಧ್ಯವೇ? ಆದರೆ ಇವತ್ತು ಆ ಕಾರ್ಖಾನೆಯ ಕಾರ್ಮಿಕರು ಆ ಸ್ವತ್ತನ್ನು ನಮಗೆ ಕೊಡಿ, ಚದರಡಿಗೆ ಐನೂರು ರೂಪಾಯಿಗಳನ್ನು ಕೊಡುತ್ತೇವೆಂದು ಕೇಳಿದರೂ ಕೂಡಲಿಲ್ಲ ಆದರೆ ಹಿಂದಿನ ಮುಖ್ಯಮಂತ್ರಿಗಳ ಹಿತಕ್ಕಾಗಿ, ಅವರಿಗೆ ಬಹಳ ಬೇಕಾದವರಿಗೆ ಅದನ್ನು ನೇರವಾಗಿ ಕೊಡತಕ್ಕಂಥ ವ್ಯವಸ್ಥೆ ನಡೆಯಿತು ನನಗೆ ಅರ್ಥವಾಗಲಿಲ್ಲ, ನಾನು ಹಿಂದಿನ ಮುಖ್ಯಮಂತ್ರಿಗಳ ಬಗ್ಗೆ ಹೇಳುವುದಾದರೆ, ಅವರು ಈ ಸದನದ ಅಧ್ಯಕ್ಷರಾಗಿದ್ದರು, ಅವರ ಬಗ್ಗೆ ಅಪಾರವಾದ ಗೌರವ, ವಿಶ್ವಾಸವಿದೆ, ಆಗ ಪ್ರಜಾ ಸೋಷಿಯಲಿಸ್ಟ್ ಪಾರ್ಟಿ ಇತ್ತು ಇಲ್ಲೇ ಕುಳಿತು ಶರಾವತಿಯ ಕರ್ಮಕಾಂಡ ಎಂದು ಹೆಸರನ್ನು ಇಟ್ಟವರೇ ಸನ್ಮಾನ್ಯ ಎಸ್ ಎಂ ಕೃಷ್ಣರವರು ಆ ಕರ್ಮಕಾಂಡಗಳು ಇವರ ಕಣ್ಣಿಗೆ ಕಾಣುತ್ತಿಲ್ಲವೇ? ನಾಲ್ಕೂವರೆ ವರ್ಷಗಳ

ಕಾಲ ಅಧಿಕಾರದಿಂದ ಇಳಿಯುವ ವರೇಗೂ ನಿತ್ಯ ಕರ್ಮಕಾಂಡ ಈ ನಿತ್ಯ ಕರ್ಮಕಾಂಡದ ಮುಖ್ಯಮಂತ್ರಿಗಳಿಗೆ ನಂಬರ್ ಒನ್ ಮುಖ್ಯಮಂತ್ರಿ ಎಂದು ಕರೆದವರು ಯಾರು? ಇಂಡಿಯಾ ಟುಡೇ ಪತ್ರಿಕೆ, ನಮಗೆ ಅಶ್ಚರ್ಯ, ಆದರೆ ಅವರ ಬಗ್ಗೆ ನನಗೆ ಗೌರವ ಇದೆ ಯಾಕೆ ಪರಿಸ್ಥಿತಿಯೇನು? ನಂಬರ್ ಒನ್! ಒಂದು ಕಡೆ ಡಾ॥ ರಾಜ್ ಕುಮಾರ್ ಅಪಹರಣ, ನಾಗಪ್ಪನ ಹತ್ಯೆ, ಈ ಭೂಹಗರಣ, ನಂಬರ್ ಒನ್! ರೈತರ ಆತ್ಮಹತ್ಯೆ, ನಂಬರ್ ಒನ್! ಇದು ನನಗನ್ನಿಸುತ್ತದೆ ಇಂಡಿಯಾ ಟುಡೇ, ಪತ್ರಿಕೆ, ಮಾಧ್ಯಮಗಳು ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸಿದವು. ಪ್ರತಿದಿನ ಮೂರು ಪುಟದಲ್ಲೂ, ಮೊದಲನೇ ಪುಟ ಕೃಷ್ಣ ಎರಡನೇ ಪುಟ ಕೃಷ್ಣ ಮೂರನೇ ಪುಟ ಕೃಷ್ಣ ನಾವು ಕಷ್ಟಪಟ್ಟು ಹಗಲುರಾತ್ರಿ ಬಿದ್ದು ಎದ್ದು ಜೈಲಿಗೆ ಹೋದರೆ ಎಲ್ಲೋ ಒಂದು ಲೈನ್ ಬಂದುಬಿಡುವುದು ಆ ಲೈನ್ ಹೇಗೆ? ಮೇಲೆ ಗಂಧದ ಮರ ಕಳವು, ಅಡಿಯಲ್ಲಿ ವಾಟಾಳ್ ಬಂಧನ, ಬಿಡುಗಡೆ

**ಶ್ರೀ ಕೆ ಶ್ರೀನಿವಾಸಗೌಡ** ವೀರಪ್ಪನ್‌ಗೂ ಗಂಧಕ್ಕೂ ನಂಟಿದೆಯಲ್ಲಾ, ನೀವು ಹೇಳಿದಿರಲ್ಲಾ ಮೇಲೆ ಗಂಧದ ಕಳ್ಳತನದ್ದು, ಕೆಳಗೆ ನನ್ನ ಹೆಸರು ಬರೆಯುತ್ತಾರೆ ಎಂದು ನಿಮ್ಮ ಚಾಮರಾಜನಗರದ ನಂಟಿದೆಯಲ್ಲಾ, ಅದಕ್ಕೋಸ್ಕರ ನಿಮ್ಮ ಹೆಸರು ಬರೆಯುತ್ತಾರೆ

**ಶ್ರೀ ವಾಟಾಳ್ ನಾಗರಾಜ್** ಸುಮ್ಮನೆ ಕೇಳಿ ಸ್ವಾಮಿ, ಯಾಕೆ ಮಾತನಾಡುತ್ತೀರಿ? ಏನೋ ಮಾತನಾಡುತ್ತೀರಿ, ಎಲ್ಲಿಗೋ ಹೋಗುತ್ತೀರಿ ನೀವು ವೀರಪ್ಪನದ್ದು ಬಂದಾಗ ನೀವು ಬನ್ನಿ, ನಾನು ಬಂದಿರುವುದು ಕೃಷ್ಣಪ್ಪನವರದ್ದು ನೀವು ಸುಮ್ಮನೆ ನೇರವಾಗಿ ಎಲ್ಲೆಲ್ಲಿಗೋ ಹೋಗುತ್ತೀರಲ್ಲಾ ಕೃಷ್ಣಪ್ಪನ ವಿಚಾರ ಬಂದಾಗ ಕೃಷ್ಣಪ್ಪನ ಕಡೆಗೆ ಬನ್ನಿ, ಕೃಷ್ಣಪ್ಪ ಅಂದರೆ ಈಗ ನೀವಿದ್ದೀರಲ್ಲಾ ಕಾಂಗ್ರೆಸ್ ಪಕ್ಷದಲ್ಲಿ, ಆ ಪಕ್ಷದ ಮಾಜಿ ಮುಖ್ಯಮಂತ್ರಿಗಳ ಬಗ್ಗೆ ಮಾತನಾಡುತ್ತಿರುವುದು ಅರ್ಥವಾಯಿತಲ್ಲಾ ನಿಮಗೆ ಆದ್ದರಿಂದ ನಾನು ಏನು ಹೇಳುತ್ತೇನೆ ಅಧ್ಯಕ್ಷರೇ, ಅಂದರೆ ವೈಯಕ್ತಿಕವಾಗಿ ಅವರ ಬಗ್ಗೆ ನನಗೆ ಗೌರವ ಇದೆ 35 ವರ್ಷಗಳ ಕಾಲದ ನನ್ನ ಅವರ ಬಾಂಧವ್ಯ. ಅವರು ರಾಜ್ಯಸಭೆಗೆ ನಿಲ್ಲುವಾಗ ನನ್ನ ಸಂಪೂರ್ಣವಾದ ಬೆಂಬಲ ಕೊಟ್ಟೆ ನೀವು ನಿಲ್ಲಬೇಕು, ನೀವೇ ರಾಜ್ಯ ಸಭೆಗೆ ಹೋಗಲು ಸರಿಯಾದವರು ಎಂದು ಯಾವಾಗ ಮುಖ್ಯಮಂತ್ರಿ ಪದವಿ ಬಂತು, ಕೆಟ್ಟರು, ಕೆಟ್ಟರು, ಕೆಟ್ಟು ಕುಲಗೆಟ್ಟು ಈ ರಾಜ್ಯವನ್ನು ಕುಲಗೆಡಿಸಿ ದಿಕ್ಕು ತಪ್ಪಿಸಿಬಿಟ್ಟರು ನಾನು ಯಾಕೆ ಈ ಮಾತು ಹೇಳುತ್ತೇನೆ ಅಂದರೆ ಇದು ಒಳ್ಳೆಯ ಸೂಚನೆಯಲ್ಲ ಇವತ್ತು ಇದೆಲ್ಲಾ ಯಾತಕ್ಕೆ ? ಅವರು ಒಬ್ಬ ಆದರ್ಶ ಕೆಲಸಗಾರ ಆಗಬಹುದಿತ್ತು ನಾನು ಯಾಕೆ ಈ ಮಾತು ಹೇಳುತ್ತೇನೆ ಅಂದರೆ, ನಾನು ಮಾಧ್ಯಮದವರನ್ನು ಯಾವುದೇ ವಿಚಾರದಲ್ಲಿ ಅತ್ಯಂತ ಗೌರವದಿಂದ ಈ ಸದನದಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ ನಾನು ದಿನಾ ನೋಡಿದ್ದು, ಯಾವ ಪತ್ರಿಕೆ ತೆಗೆದರೂ ಅವರೇ ಮತ್ತು ಈ ವಿದ್ಯುನ್ಮಾನ ಮೀಡಿಯಾ ಏನಿದೆ ಯಾವತ್ತು ನೋಡಿದರೂ ಬರೀ ಅವರದೇ ಎಲ್ಲಿ ಎಲ್ಲಿ? ನಾಲ್ಕೂವರೆ ವರ್ಷ ಇವರ ಭ್ರಷ್ಟಾಚಾರವನ್ನು ಮುಚ್ಚತಕ್ಕಂತಹ ಪ್ರಚಾರ ಸಮರವಾಗಿ ಹೋಯಿತು ಕೆಲವು ಪತ್ರಿಕೆಗಳ ಮಾಲೀಕರು ಅವರ ಸಂದರ್ಶನಕ್ಕೆ ಹೋದರು ಮಾಲೀಕರು ಸಂದರ್ಶನಕ್ಕೆ ಹೋದ ಮೇಲೆ ಈ ನಮ್ಮ ಪತ್ರಕರ್ತರು ಏನೂ ಮಾಡುವಹಾಗಿಲ್ಲ ಮಾಲೀಕರೇ ಹೊರಟುಹೋದರಲ್ಲಾ ಈ ವರದಿಗಾರರೇನು ಮಾಡುವುದಕ್ಕಾಗುತ್ತದೆ? ಕಷ್ಟ, ಆದ್ದರಿಂದ ನಾಲ್ಕೂವರೆ ವರ್ಷಗಳ ಕಾಲ ಅವರಿಗೇ

ಅಸಹ್ಯವಾಗಿರಬಹುದು ಅಷ್ಟರಮಟ್ಟಿಗೆ ಪ್ರಚಾರ ದೊರಕಿತು ನಾನು ಯಾಕೆ ಈ ಮಾತು ಹೇಳುತ್ತೇನೆ ಅಂದರೆ ನಾವೆಲ್ಲಾ ಎಲ್ಲಿಗೆ ಹೋಗುತ್ತಿದ್ದೇವೆ? ಸಾರ್, ಈಗ ಬೆಂಗಳೂರು–ಮೈಸೂರು ಕಾರಿಡಾರ್–ನಮಗೆ ಬೇಕಾಗಿರಲಿಲ್ಲ ಆಯಿತು 1995ರಲ್ಲಿ ಅದರ ವ್ಯವಸ್ಥೆ ಅದರ ಬಗ್ಗೆ ಸಂಪೂರ್ಣ ಸಿಬಿಐ ತನಿಖೆ ಆಗಬೇಕು ಎಂದು ಮಾಜಿ ಪ್ರಧಾನಿಗಳಾದ ಶ್ರೀಮಾನ್ ದೇವೇಗೌಡರೂ ಹೇಳುತ್ತಿದ್ದಾರೆ ಈ ಕಡ ನಾವೂ ಹೇಳುತ್ತಿದ್ದೇವೆ ಈ ರತ್ನಗಿರಿ ರಹಸ್ಯವೇನು? ಇದೆಲ್ಲೋ ಒಂದು ಕಡೆ ಈ ರತ್ನಗಿರಿ ರಹಸ್ಯದಲ್ಲಿ ಮಾಜಿ ಪ್ರಧಾನಿ ದೇವೇಗೌಡರು ಒಂದು ಕಡೆ, ಇಲ್ಲಿ ನಾವೂ ಹೇಳುತ್ತಿದ್ದೇವೆ ಅವರ ಜೊತೆಗೆ ಮಾಜಿ ಪ್ರಧಾನಿ ಶ್ರೀ ದೇವೇಗೌಡರ ಪಕ್ಷದವರು ಪಾಲುದಾರರು ಪಾಲುದಾರರ ಪಕ್ಷದವರು ಸರ್ಕಾರದ ಮೇಲೆ ಸಿಬಿಐ ತನಿಖೆ ಮಾಡಿ ಎಂದು ಕೇಳಿದರು ಅಂದರೆ ಏನಾದರೂ ಈ ಸರ್ಕಾರ ಉರುಳಿಸುವಂತಹ ಪಿತೂರಿ ಎಲ್ಲಾದರೂ ನಡೆದಿದೆಯೇ? ನಾನು ತೀರ ಅದರ ಬಗ್ಗೆ ಮುಂದಕ್ಕೆ ಹೋಗುವುದಿಲ್ಲ ಏನು ನಡೆದಿದೆ ಎಂಬುದನ್ನು ಜಾಸ್ತಿ ನಾನು ಹೇಳುವುದಕ್ಕೆ ಹೋಗುವುದಿಲ್ಲ ಆದರೆ ಒಂದು ಅಧ್ಯಕ್ಷರೇ, ನೈಸ್ ಕಂಪನಿ ನಮಗೆ ಬೆಂಗಳೂರು–ಮೈಸೂರು ಕಾರಿಡಾರ್ ರಸ್ತೆ ಮಾಡುವುದಕ್ಕೆ ತಯಾರಾಗಿತ್ತೇ? 1995 ನಿಮಗೆ ಷರತ್ತು ವಿಧಿಸಿದ್ದು, 1995ರಿಂದ 2004 ರವರೆಗೂ ನೀವು ಒಂದು ಅಂಗುಲ ರಸ್ತೆ ಮಾಡಲಿಲ್ಲ ರಸ್ತೆಯಾಗುತ್ತಿರುವುದೇ ಲೋಕೋಪಯೋಗಿ ಇಲಾಖೆಯದ್ದು ಈಗಿನ ಮುಖ್ಯಮಂತ್ರಿಗಳು ಲೋಕೋಪಯೋಗಿ ಸಚಿವರಾಗಿದ್ದಾಗ ಅದಕ್ಕೆ ಶಂಕುಸ್ಥಾಪನ ಮಾಡಿ ಮಾಡಿದಂತಹ ರಸ್ತೆ ಚೆನ್ನಾಗಿದೆ ಚೆನ್ನಾಗಿ ಆಗುತ್ತಾ ಇದೆ ನಾಲ್ಕು ಲೈನ್ ರಸ್ತೆ ಚೆನ್ನಾಗಿ ಬರುತ್ತಾ ಇದೆ ನಮಗೇನೂ ಕಾರಿಡಾರ್ ಬೇಕಾಗಿರಲಿಲ್ಲ ನೈಸ್ ಕಂಪೆನಿಯ ಕಾರಿಡಾರ್ ರಸ್ತೆ ನಮಗೆ ಬೇಕಾಗಿರಲಿಲ್ಲ ಅದೇನು ಇಲ್ಲಿಂದ ನಾವೇನು 45 ನಿಮಿಷಕ್ಕೇ ಬೆಂಗಳೂರಿಗೆ ಹೋಗಬೇಕು ಎಂದು ಆತುರವಾಗಿರಲಿಲ್ಲ ಹೋಗೋಣ 2 ಗಂಟೆಗೆ, ಯಾಕೆ ಬೇಕಾಗಿತ್ತು? ನಮಗೆ ಈಗಲೂ ಬೇಕಾಗಿಲ್ಲ ಮಧ್ಯೆ ಮಧ್ಯೆ ಪಟ್ಟಣಗಳು, ಮಧ್ಯ ಅವರಿಗೆ ಚನ್ನಪಟ್ಟಣ ಬೇಕಾಗಿಲ್ಲ, ಮದ್ದೂರು ಬೇಕಾಗಿಲ್ಲ, ಶ್ರೀರಂಗಪಟ್ಟಣ ಬೇಕಾಗಿಲ್ಲ, ಅವರಿಗೆ ಬೇಕಾಗಿರುವುದು ಬೆಂಗಳೂರು.

**ಶ್ರೀ ಧರ್ಮಸಿಂಗ್** ಯಾಕೆಂದರೆ ನೀವು 1 ಗಂಟೆ 15 ನಿಮಿಷದಲ್ಲಿ ಹೋಗುತ್ತೀರಿ ನಿಮ್ಮ ಸಲುವಾಗೇ ಮಾಡಿದ್ದು, ಮೈಸೂರಿಗೆ ಹೋಗುತ್ತೀರಲ್ಲಾ ಅದಕ್ಕೆ ಮಾಡಿದ್ದು ಇದು ಕರ್ವ್ ಇದೆ, ಅಲ್ಲಿ 1 ಗಂಟೆ 15 ನಿಮಿಷಕ್ಕೆ ಹೋಗುವಂತಹ ರಸ್ತೆ ಆಗಬೇಕು ಇದನ್ನು ಕರ್ನಾಟಕ ರಾಜ್ಯದಲ್ಲಿ ಪ್ರಾರಂಭ ಮಾಡಿದ್ದು ಅದು ಶ್ರೀ ನಾಗರಾಜರಿಗೋಸ್ಕರ ನೀವು ಯಾವಾಗಲೂ ಮೈಸೂರಿಗೆ ಹೋಗುತ್ತೀರಿ ಈಗ ಬಾಂಬೆಯಿಂದ ಪೂನಾ ಎಕ್ಸ್‌ಪ್ರೆಸ್ ಹೈವೆ ಇದೆ, ಅದಕ್ಕೆ ಅವರು 3600 ಕೋಟಿ ರೂ.ಗಳನ್ನೆ ಖರ್ಚು ಮಾಡಿದ್ದಾರೆ ಇವತ್ತು ಬೆಂಗಳೂರು ಕರ್ನಾಟಕದ ರಾಜಧಾನಿ, ಮೈಸೂರು ಐತಿಹಾಸಿಕ ಸ್ಥಳ, ಈ ಕಾರಿಡಾರ್ ಪ್ರಾಜೆಕ್ಟ್ ಪ್ರಾರಂಭವಾಗಿದ್ದು ದಿವಂಗತ ಜೆ ಎಚ್ ಪಟೇಲರ ಕಾಲದಲ್ಲಿ

**ಶ್ರೀ ವಾಟಾಳ್ ನಾಗರಾಜ್** ಸಂತೋಷ, ನಾನೇನು ಅದನ್ನು ವಿರೋಧ ಮಾಡುವುದಕ್ಕೆ ಹೋಗಲಿಲ್ಲ ಲೋಕೋಪಯೋಗಿದ್ದು ನಿಮ್ಮ ರಸ್ತೇನೇ ಚೆನ್ನಾಗಿದೆ. ಅದಕ್ಕೆ ನಿಮಗೆ ನಾವು ಅಭಿನಂದನೆ ಸಲ್ಲಿಸುತ್ತೇವೆ ಅದರ ಬಗ್ಗೆ ನಮ್ಮದೇನೂ ತಕರಾರಿಲ್ಲ ಈಗ ಬಂದಿರುವ ತಕರಾರು ಏನೆಂದರೆ ನೈಸ್

ಕಂಪೆನಿಗೆ ಬೆಂಗಳೂರಿನಲ್ಲಿ, ಈ ಯೋಜನೆಗೆಂದು ಎಷ್ಟು ಎಕರೆ ಭೂಮಿಯನ್ನು ಕೆಐಎಡಿಬಿ ಯಿಂದ ಸ್ವಾಧೀನಪಡಿಸಿಕೊಳ್ಳುವುದು, ಕೈಬಿಡುವುದು ಸ್ವಾಧೀನ, ಕೈಬಿಡು, ಇದೇನು ನನಗೆ ಅರ್ಥವಾಗಲಿಲ್ಲ ಯಾರಿಂದ? ರೈತರಿಂದ ರೈತರ ಪರಿಸ್ಥಿತಿ ಏನಾಯಿತು? ನೀವು ಸ್ವಾಧೀನಪಡಿಸಿಕೊಂಡು ಮತ್ತೆ ಅದನ್ನು ಕೈಬಿಟ್ಟು ಈ ಮಧ್ಯೆ ಬಂದಂತಹ ಹಣವನ್ನು ನೀವು ರೈತರಿಗೇನಾದರೂ ಹಂಚಿದ್ದರೆ ಅದರ ಬಗ್ಗೆ ನಾವೇನೂ ತಕರಾರು ಮಾಡುತ್ತಿರಲಿಲ್ಲ ನಿಮಗೆ ಜಮೀನು ಕೊಟ್ಟಂತಹ ರೈತ ಸತ್ತ, ಅವನ ಕೈ ಮುರಿದುಹೋಯಿತು ಯಾವತ್ತು ನೀವು ಜಮೀನು ತೆಗೆದುಕೊಂಡಿರಿ ಅದನ್ನು ನಿಮಗೆ ಇಚ್ಛೆ ಬಂದಂತೆ ನೀವು ಮಾಡಬಹುದಾ? ಯಾರಿಗೆ ಬೇಕಾದರೂ, ಸ್ವಾಧೀನಪಡಿಸಿಕೊಳ್ಳುವುದು, ಅಧಿಸೂಚನೆ ಹೊರಡಿಸುವುದು? ಡಿನೋಟಿಫೈ ಮಾಡುವುದು ಇದೇ ದಂಧೆ. ನೋಟಿಫಿಕೇಶನ್ ಡಿನೋಟಿಫಿಕೇಶನ್ 'ಏನಿದೆ ಇದೇ ಭಾರೀ ದೊಡ್ಡ ದಂಧೆ ಅಲ್ಲೇ ಇರುವಂಥದ್ದು ಆ ಡೀನೋಟಿಫಿಕೇಶನ್ ಇದೆಯಲ್ಲಾ ಇದು ಭಾರಿ ದಂಧೆ. ಈ ದಿನೋಟಿಫೈ ಮಾಡುವಾಗ ಕೆಐಎಡಿಬಿಯಿಂದ ವಶಪಡಿಸಿಕೊಂಡ ಜಮೀನು ಭೋಗ್ಯದ ಆಧಾರದ ಮೇಲೆ ಕೊಡುವುದು ಎಷ್ಟೇ ಆಸ್ತಿ ಇರಲಿ, ಇವರು ಹೇಳಿದವರಿಗೆ ಜಮೀನು ಕೊಡಬೇಕು ಸಂಪೂರ್ಣವಾದ ಇದರ ಒಂದು ದೊಡ್ಡ ಜಾಲವೇ ಸೃಷ್ಟಿಯಾಗಿದೆ ಇದು ಕಡಿಮೆಯೇನಲ್ಲ ಇದರ ಜೊತೆಗೆ ಅಧ್ಯಕ್ಷರೆ ಅರ್ಕಾವತಿ ಬಡಾವಣೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾನು ತರುತ್ತಾ ಇದ್ದೇನೆ

**ಅಧ್ಯಕ್ಷರು** ನಾಗರಾಜ್‌ರವರೇ, ಮಾನ್ಯ ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡಬೇಕು ಎಂದು ಬಯಸಿದರೆ ನಾಳೆ ಬಹಳ ಜನ ಬೇರೆಬೇರೆ ವಿಷಯಗಳನ್ನು ಎತ್ತಬೇಕು, ಕೊನೆ ದಿನ ನಾಳೆ ಆ ಕಾರಣದಿಂದ ಬೆಳಿಗ್ಗೆ 9 ಗಂಟೆಗೇ ಸದನವನ್ನು ಕರೆಯಬೇಕಾಗುತ್ತದೆ

**ಶ್ರೀ ಧರ್ಮಸಿಂಗ್** ಇಲ್ಲಿ ಬಹಳಷ್ಟು ಇಲಾಖೆಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಇದಕ್ಕೆ ಲೋಕೋಪಯೋಗಿ ಇಲಾಖೆಯ ಸಚಿವರೂ ಕೂಡ ಉತ್ತರ ಕೊಡಬೇಕಾಗುತ್ತದೆ ಕಂದಾಯ ಸಚಿವರೂ ಉತ್ತರ ಕೊಡಬೇಕಾಗುತ್ತದೆ ಕೈಗಾರಿಕಾ ಸಚಿವರೂ ಉತ್ತರ ಕೊಡಬೇಕಾಗುತ್ತದೆ ಮಧ್ಯದಲ್ಲಿ ನಾನೂ ಕೂಡ ಅವರೇನು ಕೇಳಿದ್ದಾರೆ ಅದರ ಬಗ್ಗೆ ಉತ್ತರ ಕೊಡಬೇಕಾಗುತ್ತದೆ ಮೊಟ್ಟಮೊದಲನೆಯದಾಗಿ ಶ್ರೀ ಮಾಧುಸ್ವಾಮಿಯವರು ಕರ್ನಾಟಕ ರಾಜ್ಯದಲ್ಲಿ ಮೊದಲಿಂದಲೂ ನಡೆದುಬಂದಂಥ ಯಾವ ಯಾವ ಬಾಬತ್ತಿನಲ್ಲಿ ಎಷ್ಟೆಷ್ಟು ಆಗಿದೆ ಎನ್ನುತಕ್ಕಂಥ ರೀತಿಯಲ್ಲಿ ಮಾತನಾಡಿದ್ದಾರೆ ಈಗ ನಮ್ಮ ಶ್ರೀ ವಾಟಾಳ್ ನಾಗರಾಜ್‌ರವರು ಅರ್ಕಾವತಿ ಬಡಾವಣೆ ಬಗ್ಗೆ ಚರ್ಚೆ ಪ್ರಾರಂಭ ಮಾಡುತ್ತಿದ್ದಾರೆ ಈಗ ಸಮಯ ಸಾಯಂಕಾಲ ಆರೂವರೆ ಗಂಟೆಯಾಗಿದೆ ಎಲ್ಲಾ ಕಡೆಯಿಂದ ಉತ್ತರ ಕೊಡಬೇಕಾದರೆ ಸುಮಾರು ಒಂದರಿಂದ ಒಂದೂವರೆ ತಾಸು ಬೇಕಾಗುತ್ತದೆ. ಅದಕ್ಕೆ ನಾನು ಹೇಳುವುದೇನೆಂದರೆ ಇವತ್ತು ಚರ್ಚೆ ಮುಗಿಸಿರಿ ನಾಳೆ ಮುಂಜಾನೆ ಸರ್ಕಾರದಿಂದ ನೇರವಾಗಿ ಉತ್ತರವನ್ನು ಪ್ರಾರಂಭ ಮಾಡೋಣ ಅದು ಆದನಂತರ ನಾಳೆ ಅಧಿವೇಶನದ ಕೊನೆಯ ದಿವಸವಾಗಿದ್ದು ನಾಳೆ ಸಾಯಂಕಾಲದವರೆಗೆ ಬೇರೆ ವಿಚಾರಗಳನ್ನೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ ಎನ್ನತಕ್ಕಂಥದ್ದು ನನ್ನ ಅಭಿಪ್ರಾಯವಾಗಿದೆ

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ವಿನಂತಿ ಮಾಡುವುದೇನೆಂದರೆ, ತಾವು ಈಗ ಉತ್ತರ ಕೊಡಿ ಅಥವಾ ನಾಳೆ ಬೆಳಿಗ್ಗೆ ಕೊಡಿ, ಅದು ಆಗುತ್ತಿದ್ದ ಹಾಗೆಯೇ ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳು ಸಮಯಕ್ಕೆ ಸರಿಯಾಗಿ ಮುಗಿಯಬೇಕು, ಎಷ್ಟು ಯೋಜನೆಗಳ ವರ್ಕ್ ಮುಗಿದಿಲ್ಲ ..

**ಅಧ್ಯಕ್ಷರು** ಈಗ ಶ್ರೀ ಯಡಿಯೂರಪ್ಪನವರೆ, .....

**ಶ್ರೀ ಬಿ ಎಸ್ ಯಡಿಯೂರಪ್ಪ** ಸರ್ ನಾನು ಪೂರ್ತಿ ಮಾತನಾಡುವುದಕ್ಕಾದರೂ ಬಿಡಿ ಇಲ್ಲದಿದ್ದರೆ ನೀವು ಏನು ಹೇಳುತ್ತೀರೋ ಹೇಳಿ ನಾನು ಕುಳಿತುಕೊಳ್ಳುತ್ತೇನೆ. ಬಹಳ important ಇರುವ ವಿಷಯವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ ಅದನ್ನು ಪೂರ್ತಿ ಹೇಳುವುದಕ್ಕೆ ಬಿಡದಿದ್ದರೆ ಹೇಗೆ?

**ಅಧ್ಯಕ್ಷರು** ನಾನೂ ಅದನ್ನೇ ಹೇಳುತ್ತಿದ್ದೇನಲ್ಲಾ

**ಶ್ರೀ ಬಿ ಎಸ್ ಯಡಿಯೂರಪ್ಪ** ದಯಮಾಡಿ ಪೂರ್ತಿ ಹೇಳುವುದಕ್ಕೆ ಬಿಡಿ ಸರ್

**ಅಧ್ಯಕ್ಷರು** ಆಯಿತು ಹೇಳಿ

**ಶ್ರೀ ಬಿ ಎಸ್ ಯಡಿಯೂರಪ್ಪ** ಸರ್ಕಾರ ಹಾಗೂ ಅಧ್ಯಕ್ಷರು ಈ ಮನೆಯಲ್ಲಿ ಕುಳಿತು ಯಾವಾಗ ಉತ್ತರ ಕೊಡುತ್ತೀರೋ ಖುಷಿ ಬಂದಾಗ ಕೊಡಿ ನಮ್ಮದೇನೂ ಅಭ್ಯಂತರವಿಲ್ಲ ನಾವು ಇಲ್ಲಿ ಕುಳಿತುಕೊಂಡು ಕೇಳುವುದಕ್ಕೆ ರೆಡಿ ಇದ್ದೇವೆ ಆದರೆ ಅತ್ಯಂತ ಪ್ರಮುಖವಾದಂಥ ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳು ಅರ್ಧಂಬರ್ಧವಾಗಿ ಪೂರ್ಣವಾಗದೆ 2000 ಇಸವಿಯಲ್ಲಿ ಈ ಕೆಲಸಗಳು ಮುಗಿಯಬೇಕಾಗಿತ್ತು ಬಿ ಸ್ಕೀಮ್ ನೀರನ್ನು ಉಪಯೋಗಿಸಿಕೊಳ್ಳುವುದು ಹೇಗೆ? ನಿಮ್ಮ ಮುಂದಿನ ಯೋಜನೆಗಳು ಏನು? ಈ ಯೋಜನೆಗಳು ಮುಗಿಯುವುದಕ್ಕೆ ನಿಮ್ಮಲ್ಲಿ ಹಣ ಎಲ್ಲಿದೆ? ಯಾವಾಗ ಈ ಯೋಜನೆಗಳನ್ನು ಮುಗಿಸುತ್ತೀರಿ? ಇದನ್ನು ಬೇಗ ಮುಗಿಸದಿದ್ದರೆ ರೈತರ ಗತಿ ಏನು ಎನ್ನುವುದರ ಬಗ್ಗೆಯೂ ಸಮಗ್ರವಾದ ಚರ್ಚೆಯಾಗಬೇಕಾಗುತ್ತದೆ ಅದಕ್ಕೆ ನಾನು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡುತ್ತಿರುವುದೇನೆಂದರೆ, ಸರ್ಕಾರದಿಂದ ಇವತ್ತಿನ ಚರ್ಚೆಗೆ reply ಆದಮೇಲೆ ಇದಕ್ಕೆ ಆದ್ಯತೆಯನ್ನಾದರೂ ಕೊಡಿ ಸ್ವಾಮಿ ಎಂದು ಹೇಳುತ್ತಿದ್ದೇನಷ್ಟೆ. ಬೇರೇನೂ ಇಲ್ಲ

**ಅಧ್ಯಕ್ಷರು** ಶ್ರೀ ವಾಟಾಳ್‌ರವರೇ, ದಯಮಾಡಿ ಬೇಗ ಮುಗಿಸಿ ಏಕೆಂದರೆ ಇನ್ನೂ ಒಬ್ಬಿಬ್ಬರು ಮಾತುನಾಡುವವರು ಇದ್ದಾರೆ

**ಮಾನ್ಯ ಸದಸ್ಯರು** ಮಾನ್ಯ ಅಧ್ಯಕ್ಷರೆ, ನಾವೂ ಸಹ ಮಾತನಾಡುವುದಕ್ಕೆ ಬಹಳ ಹೊತ್ತಿನಿಂದ ಕಾಯುತ್ತಿದ್ದೇವೆ ನಮಗೂ ಅವಕಾಶ ಕೊಡಿ ಪದೇ ಪದೇ ಕೇಳುತ್ತಲೇ ಇರುತ್ತೇವೆ, ನೀವು ಬರೀ ಆ ಕಡೆಯಲ್ಲಿದ್ದವರಿಗೇ ಅವಕಾಶ ಕೊಟ್ಟರೆ ನಮ್ಮ ಗತಿ ಏನಾಗಬೇಕು?

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಅಧ್ಯಕ್ಷರೆ, ಈಗ ಅರ್ಕಾವತಿ ಬಡಾವಣೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ ಸುಮಾರು 20000 ನಿವೇಶನಗಳನ್ನು ಕೊಡಬೇಕೆನ್ನುವ ಉದ್ದೇಶದಿಂದ ಅರ್ಕಾವತಿ ಬಡಾವಣೆಯ ನಿರ್ಮಾಣಕ್ಕಾಗಿ ಸುಮಾರು ಮೂರುವರೆ ಸಾವಿರ ಎಕರೆ ಪ್ರದೇಶವನ್ನು ವಶಪಡಿಸಿಕೊಂಡಿದ್ದಾರೆ ಇದಕ್ಕೆ ಸಾರ್ವಜನಿಕರಿಂದ ಸುಮಾರು 600 ಕೋಟಿ ರೂಪಾಯಿಗಳು ಠೇವಣಿ ರೂಪದಲ್ಲಿ ಬಂದಿದೆ ಇದಕ್ಕಾಗಿ 3500 ಸಾವಿರ ಎಕರೆ ಜಮೀನನ್ನು ವಶಪಡಿಸಿಕೊಂದ್ದಾರೆ ವಶಪಡಿಸಿಕೊಂಡಂಥ ಜಾಗವನ್ನು ಹಿಂದಕ್ಕೆ ಪಡೆದು ಬೇಕುಬೇಕಾದವರಿಗೆಲ್ಲಾ ಕೊಟ್ಟಿದ್ದಾರೆ ಸ್ವಲ್ಪ ಹೆಚ್ಚುಕಡಿಮೆ 500 ಎಕರೆಗಿಂತಲೂ ಹೆಚ್ಚು ತಮಗೆ ಬೇಕುಬೇಕಾದವರಿಗೆ ಕೊಟ್ಟಿದ್ದಾರೆ ಆದರೆ ರೂ 600 ಕೋಟಿ ರೂ ಠೇವಣಿ ಇಟ್ಟಿರತಕ್ಕಂಥವರ ಪರಿಸ್ಥಿತಿ ಏನು? ಬೆಂಗಳೂರಿನ ಜನ ನಿವೇಶನಕ್ಕಾಗಿ ಏನು ಅರ್ಜಿಯನ್ನು ಸಲ್ಲಿಸಿದ್ದಾರೆ, ಈ ನಿವೇಶನಕ್ಕಾಗಿ ಅರ್ಜಿಯನ್ನು ಸಲ್ಲಿಸಿರತಕ್ಕಂಥ ಜನರ ಪರಿಸ್ಥಿತಿ ಏನು? ಅರ್ಕಾವತಿ ಬಡಾವಣೆ ಬಗ್ಗೆ ಸರ್ಕಾರದ ನಿಲುವು ಏನು? ಇದರ ಬಗ್ಗೆ

ಸರ್ಕಾರ ಸ್ಪಷ್ಟನೇ ನೀಡಬೇಕು ಈಗ ಒಂದು ತಡೆಯಾಜ್ಞೆ ಕೊಟ್ಟಿದ್ದಾರೆ ಈ ತಡೆಯಾಜ್ಞೆಯನ್ನು ಯಾವಾಗ ತೆರವು ಮಾಡುತ್ತೀರಿ? ಅರ್ಕಾವತಿ ಬಡಾವಣೆಯನ್ನು ಮುಂದುವರಿಸಬೇಕು ಎನ್ನುವಂಥದ್ದರ ಬಗ್ಗೆ ಪ್ರಾಮಾಣಿಕವಾದಂಥ ತೀರ್ಮಾನವನ್ನು ಸರ್ಕಾರ ಕೈಗೊಳ್ಳಬೇಕಾಗಿದೆ ಕಳೆದ ನಾಲ್ಕೂವರೆ ವರ್ಷದಲ್ಲಿ ನಡೆದಿರತಕ್ಕಂಥ ಘೋರ ಅಪರಾಧ ಏನಾಗಿದೆ, ಅನ್ಯಾಯ ಏನು ನಡೆದಿದೆ, ಈ ನೈಸ್ ಕಂಪನಿಯವರು ಸೇರಿದಂತೆ ಎಷ್ಟೆಷ್ಟು ಜನರಿಗೆ ಐ ಟಿ.ಪಾರ್ಕ್‌ಗೆ ಕೊಟ್ಟಿರತಕ್ಕಂಥ ಸಾವಿರಾರು ಕೋಟಿ ರೂಪಾಯಿಗಳ ಹಗರಣದ ಬಗ್ಗೆ ಸಮಗ್ರವಾದಂಥ ನ್ಯಾಯಾಂಗ ತನಿಖೆ ಆಗಬೇಕು

**ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)** ಮಾನ್ಯ ಅಧ್ಯಕ್ಷರೇ, ಅರ್ಕಾವತಿ ಲೇಔಟ್ ಬಗ್ಗೆ ಬೆಂಗಳೂರು ನಗರದಲ್ಲಿರತಕ್ಕಂಥ ನಾಗರೀಕರಿಗೆ ಒಂದು ಅನುಮಾನ ಬಂದುಬಿಟ್ಟಿದೆ ಬಿ ಡಿ ಎ ದಿಂದ ಡೆವಲಪ್ ಆಗತಕ್ಕಂಥ ಅರ್ಕಾವತಿ ಲೇಔಟ್ ನಿಂತುಹೋಗಿದೆ ಎಂದು ಈಗ ಶ್ರೀ ವಾಟಾಳ್ ನಾಗಾರಾಜ್‌ರವರು ಪ್ರಸ್ತಾಪ ಮಾಡಿದ್ದಾರೆ ಬಿ ಡಿ ಎ ದಿಂದ 20000 ಸೈಟುಗಳನ್ನು ಹಂಚಬೇಕೆನ್ನತಕ್ಕಂಥ ಒಂದು ದೊಡ್ಡ ಕಾರ್ಯಕ್ರಮವಿದೆ. ಅದಕ್ಕೆ ಈಗಾಗಲೇ ಎರಡು ಲಕ್ಷ applicants ಅರ್ಜಿ ಹಾಕಿದ್ದಾರೆ ನನಗೆ ತಿಳಿದ ಪ್ರಕಾರ ಅವರಿಂದ 900 ಕೋಟಿ ರೂಪಾಯಿಗಳಷ್ಟು ಡಿಪಾಸಿಟ್ ಬಂದಿದೆ ಬಿಡಿಎ ಕಮಿಷನರ್‌ರವರಾದ ವಿದ್ಯಾಶಂಕರ್‌ರವರು ಇಲ್ಲಿ ಇದ್ದಾರೆ, ಅದು 600 ಕೋಟಿ ರೂ ಅಲ್ಲ 900 ಕೋಟಿ ರೂ ಎಂದು ಅವರು ಹೇಳುತ್ತಿದ್ದಾರೆ ಸೈಟ್ ಕೊಡತಕ್ಕಂಥ ಕೆಲಸ ನಡೆಯುತ್ತಿದೆ Layout formation ನಡೆದಿದೆ, development ಆಗುತ್ತಿದೆ ನಾವು ಎಲ್ಲೂ ಕೂಡ stay ಕೊಡಲಿಕ್ಕೆ ಹೋಗಿಲ್ಲ 65 ಕೋಟಿ ರೂಪಾಯಿಯ ಟೆಂಡರ್ ಏನು ಕಾಲ್‌ಫಾರ್ ಮಾಡಿದ್ದಾರೆ, ಅದರಲ್ಲಿ ಕೆಲವು ನ್ಯೂನತೆಗಳು ಇದ್ದವು, ಅರ್ಕಾವತಿ ಬಡಾವಣೆ develop ಮಾಡುವ ನಿಟ್ಟಿನಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡಿಲ್ಲ ಕೆಲಸ ನಡೆಯುತ್ತಿದೆ, ಸೈಟ್ ಹಂಚತಕ್ಕಂಥದ್ದು ಏನಿದೆ ಅದನ್ನು ಕೊಟ್ಟಿರುವ ಟೈಮ್‌ನಲ್ಲಿ ಮುಗಿಸುತ್ತೇವೆ ಅಲ್ಲಿ ಟೆಂಡರ್ ಕಾಲ್‌ಫರ್ ಏನು ಮಾಡಿದ್ದರು ಅದರಲ್ಲಿ ನ್ಯೂನತೆ ಇದ್ದುದ್ದಕ್ಕೆ stay ಕೊಟ್ಟಿದ್ದೇವೆ ಅರ್ಕಾವತಿ developmentಗೆ stayಕೊಟ್ಟಿಲ್ಲ

**ಶ್ರೀ ವಾಟಾಳ್ ನಾಗರಾಜ್** ಸಂತೋಷ. ಬಹಳ ಜನ ಅರ್ಕಾವತಿ ಬಡಾವಣೆಯಲ್ಲಿ ನಿವೇಶನಕ್ಕೋಸ್ಕರ ಅರ್ಜಿ ಹಾಕಿಕೊಂಡಂಥವರಿಗೆ ಎಲ್ಲೋ ಒಂದು ಕಡೆ ನಾವು ಹಣ ಕಟ್ಟಿದ್ದೇವೆ ಆದರೆ ನಮಗೆ ಸೈಟ್ ಸಿಗುವುದಿಲ್ಲ ಎನ್ನುವ ಭಾವನೆ ಬರತಕ್ಕಂಥದ್ದು ಬೇಡ

**ಶ್ರೀ ಆರ್ ಅಶೋಕ್** ಅರ್ಕಾವತಿ ಬಡಾವಣೆಯಲ್ಲಿ ಮಧ್ಯೆ ಮಧ್ಯೆ almost all lands ಎಲ್ಲಾ delete ಆಗಿಬಿಟ್ಟಿದೆ ಅಲ್ಲಿ ಒಂದು ಲೇಔಟ್‌ನಲ್ಲಿ ಏನಾಗಿದೆಯೆಂದರೆ

**ಶ್ರೀ ಧರ್ಮಸಿಂಗ್** ಶ್ರೀ ಅಶೋಕ್‌ರವರೆ, ಅರ್ಕಾವತಿ ಲೇಔಟ್‌ನಲ್ಲಿ I have taken the views of all the legislators of the city ಯಾವುಯಾವುದನ್ನೋ ಬಿಟ್ಟುಬಿಟ್ಟು ಯಾವುಯಾವುದೋ ರೀತಿ ಮಾಡಿದ್ದೀರಿ ಎನ್ನತಕ್ಕಂಥ ರೀತಿಯಲ್ಲಿ ಹೇಳಿದಿರಿ ನಿಮ್ಮ impression ಏನು ಎಂದರೆ, ಏನೋ ಒಂದು ಕೆಲಸ ನಡೆಯುತ್ತಿದೆ, ಸರ್ಕಾರ ಮಧ್ಯೆ ಪ್ರವೇಶಿಸಿ ನಿಲ್ಲಿಸಿದೆ ಎನ್ನತಕ್ಕಂಥ ರೀತಿಯಲ್ಲಿ ಅಲ್ಲ ನನಗೆ ತಿಳಿದ ಮಟ್ಟಿಗೆ ನಾವು ಅಧಿಕಾರಕ್ಕೆ ಬಂದ ಮೂರು ತಿಂಗಳಲ್ಲಿ ಯಾವುದೇ ಜಮೀನನ್ನು ಬಿಡತಕ್ಕಂಥ ಕೆಲಸವನ್ನು ನಾವು ಮಾಡಿಲ್ಲ ಏನಾದರೂ ಕೂಡ ಆದರೆ, ಅದರ ಬಗ್ಗೆಯೂ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ ಅರ್ಕಾವತಿ ಲೇಔಟ್‌ನಲ್ಲಿ development, formation, site ಕೊಡತಕ್ಕಂಥ ಕೆಲಸ ನಿಲ್ಲುವುದಿಲ್ಲ ಮಾಡಿಕೊಡುತ್ತೇವೆ

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು** ಮಾನ್ಯ ಅಧ್ಯಕ್ಷರೆ, ಎರಡೂ ಇಲಾಖೆಯವರು acquire ಮಾಡಿಕೊಂಡಿದ್ದಾರೆ ಒಂದು ಕಡೆ KIADB ಯವರು ನೋಟೀಸ್ ಕೊಟ್ಟಿದ್ದಾರೆ, ಇನ್ನೊಂದು ಕಡೆ B D A ಯವರು ನೋಟೀಸ್ ಕೊಟ್ಟಿದ್ದಾರೆ ನಿಜವಾಗಿಯೂ ಅದನ್ನು KIADB ಯವರು acquire ಮಾಡಿದ್ದಾರಾ ಅಥವಾ B D A ನವರು acquire ಮಾಡಿದ್ದಾರಾ, ಇಲ್ಲಿ ಎರಡೂ ಕಡೆಯವರು acquire ಮಾಡಿದ್ದಾರೆ

**ಶ್ರೀ ಎಸ್ ರಾಜೇಂದ್ರನ್** ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರ ನೋಟೀಸ್‌ಗೆ ತೆಗೆದುಕೊಂಡು ಬರುವುದೇನೆಂದರೆ,

**ಅಧ್ಯಕ್ಷರು** ಶ್ರೀ ರಾಜೇಂದ್ರನ್‌ರವರೆ, ಈಗ clarification ಕೇಳುವುದಕ್ಕೆ ಸಮಯವಿಲ್ಲ, ಅವರು ನಾಳೆ ಉತ್ತರ ಕೊಡುತ್ತಾರೆ, ಅವರು ಉತ್ತರ ಕೊಟ್ಟಾಗ ನೀವು clarification ಕೇಳಿ ಈಗ ಬಹಳ ಜನ ಮಾತನಾಡುವವರು ಇದ್ದಾರೆ

**ಶ್ರೀ ಎಸ್ ರಾಜೇಂದ್ರನ್** ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿರುವುದೇನೆಂದರೆ, ಅರ್ಕಾವತಿ ಲೇಔಟ್‌ನಲ್ಲಿ ಕೆಲವರು ಮನೆಗಳನ್ನು ಕಟ್ಟಿದ್ದಾರೆ ಅವರಿಗೆಲ್ಲಾ ಏನು ನೋಟೀಸ್ ಇಶ್ಯೂ ಮಾಡಿದ್ದಾರೆ ಅದನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದ್ದೆವು ಅಲ್ಲಿ ಮನೆ ಕಟ್ಟಿರುವವರು ಎಲ್ಲಿಗೆ ಹೋಗಬೇಕು? ಆದ್ದರಿಂದ ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಬಡಾವಣೆ ಮಾಡಿದರೆ ಒಳ್ಳೆಯದು

**ಶ್ರೀ ಎ ಕೃಷ್ಣಪ್ಪ (ವರ್ತೂರು)** ಮಾನ್ಯ ಅಧ್ಯಕ್ಷರೆ, ಅರ್ಕಾವತಿ ಬಡಾವಣೆ ನನ್ನ ಮತಕ್ಷೇತ್ರದಲ್ಲಿ ಬರುತ್ತದೆ ಅದಕ್ಕೋಸ್ಕರ ಕೆಲವು ವಿಚಾರಗಳನ್ನು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಈ ಮನೆಯ ಗಮನಕ್ಕೆ ತರಬೇಕಾದದ್ದು ಉಚಿತ ಎಂದು ನಾನು ಭಾವಿಸಿ ಎದ್ದುನಿಂತಿದ್ದೇನೆ ತಾವು ಅಪ್ಪಣೆ ಕೊಟ್ಟರೆ ಎರಡು ಮಾತು ಹೇಳಬೇಕಾಗುತ್ತದೆ ಅರ್ಕಾವತಿ ಬಡಾವಣೆಯ ಬಗ್ಗೆ ನಮ್ಮ ಅಶೋಕ್‌ರವರು ಅಥವಾ ಕೆಲವು ಸದಸ್ಯರು ಹೇಳುತ್ತಿದ್ದರು ಕೆಲವು ವಿಚಾರಗಳಲ್ಲಿ ನಾವು ಈಗಾಗಲೆ ಸರ್ಕಾರದ ಮುಂದೆ ಮನವಿಗಳನ್ನು ಸಲ್ಲಿಸಿದ್ದೇವೆ ಆ ಮನವಿ ಏನೆಂದರೆ, ಸನ್ಮಾನ್ಯ ದೇವರಾಜ್ ಅರಸುರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಈ ತಿಗಳ ಜನಾಂಗ, ಧೋಬಿಗಳು, ಹರಿಜನರು, ಸಣ್ಣಸಣ್ಣ ಜಮೀನು ಹಿಡುವಳಿಯನ್ನು ಇಟ್ಟುಕೊಂಡಂಥ ರೈತರ ವಿಚಾರದಲ್ಲಿ ಅದು ಯಾವುದೇ ಯೋಜನೆ ಆಗಿರಲಿ, ಯಾವುದೇ ಕಾರಣಕ್ಕೂ ಸರ್ಕಾರ acquire ಮಾಡುವಂಥ ಪ್ರಯತ್ನಕ್ಕೆ ಈ ರಾಜ್ಯದಲ್ಲಿ ಕೈಹಾಕಬಾರದು ಎನ್ನುವ ಪ್ರಕಟಣೆಯನ್ನು ಪ್ರಥಮವಾಗಿ ಮಾಡಿದರು ಅದಕ್ಕಾಗಿ ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇವೆ ಅರ್ಕಾವತಿ ಬಡಾವಣೆಯಲ್ಲಿ ಕೂಡ ಸಣ್ಣ ಹಿಡುವಳಿದಾರರು, ಹರಿಜನರು ದೀನದಲಿತರು ಯಾರಿದ್ದಾರೆ ಅಥವಾ ರೈತರ ಪೈಕಿ ಸಣ್ಣ ಹಿಡುವಳಿದಾರರು ಯಾರಿದ್ದಾರೆ, ಅವರ ಜಮೀನುಗಳನ್ನು ಕಿತ್ತುಕೊಂಡ ಇನ್ನೊಬ್ಬರಿಗೆ ಸೈಟ್ ಮಾಡಿ ಕೊಡುವುದಕ್ಕೆ ಈ ರಾಜ್ಯ ಮತ್ತು ಈ ಬೆಂಗಳೂರಿನ ಹೊರವಲಯದಲ್ಲಿ ನೂರಾರು ವರ್ಷಗಳ ಜೀವನವನ್ನು ಆ ರೈತರು ಏನು ನಡೆಸಿದ್ದಾರೆ ಅವರ ಜಮೀನುಗಳನ್ನು ಕಿತ್ತುಕೊಳ್ಳಬೇಡಿ ಎಂದು ಆ ರೈತರ ಪರವಾಗಿ ನಾನು ಒತ್ತಾಯ ಮಾಡುತ್ತಿದ್ದೇನೆ De-notification ಎನ್ನುವುದನ್ನು ನೀವು ಸರ್ವವ್ಯಾಪ್ತಿಗಾಗಿ ಬಳಸುವಂಥದ್ದು ಅಗತ್ಯವಿಲ್ಲವೆಂದು ನಾನು ಭಾವಿಸಿದ್ದೇನೆ

ಇಂಧ ಪ್ರಕರಣಗಳು ಬಂದಾಗ ಸರ್ಕಾರ ಮಾನವೀಯತೆಯನ್ನು ಪರಿಗಣನೆಗೆ ತೆಗೆದುಕೊಂಡು ಅಂಥವರ ಜಮೀನುಗಳನ್ನು ಬಿಡಬೇಕು ಎನ್ನುವ ಒಂದು ಒತ್ತಾಯವನ್ನು ಇವತ್ತೂ ಕೂಡ ಈ ಮನೆಯಲ್ಲಿ ನಾನು ಮಾಡುತ್ತಿದ್ದೇನೆ

ಹಾಗೆಯೇ ಹಲವಾರು ವರ್ಷಗಳಿಂದ 20X30, 30X40 ಅಳತೆಯ ನಿವೇಶನಗಳಲ್ಲಿ ಶೀಟ್ ಹಾಕಿಕೊಂಡಿದ್ದಾರೆ, ಹೆಂಚು ಹಾಕಿಕೊಂಡಿದ್ದಾರೆ, ಆರ್‌ಸಿಸಿ ಹಾಕಿಕೊಂಡಿದ್ದಾರೆ, ಅವರು ಕಟ್ಟಿರುವ ಮನೆಗಳನ್ನು ಡಿಮಾಲಿಶ್ ಮಾಡುವ ಪ್ರವೃತ್ತಿ ಹಿಂದೆ ಏನಿತ್ತು , ಅದೂ ಕೂಡ ಸರ್ಕಾರದ ಕಡೆಯಿಂದ ಯಾವುದೇ ಕಾರಣಕ್ಕೆ ಆಗಬಾರದು ಯಾತಕ್ಕೆಂದರೆ ಒಬ್ಬ ಮನುಷ್ಯ 4 ಚದರ ಮನೆ ಕಟ್ಟಬೇಕಾದರೆ ಅವನ ಹೆಸರಿನಲ್ಲಿದ್ದ ಪಿಎಫ್, ಗ್ರಾಚ್ಯೂಯಿಟಿ, ಒಡವೆಗಳನ್ನು ತೆಗೆದುಕೊಂಡು ಹೋಗಿ ಮಾರವಾಡಿ ಅಂಗಡಿಗಳಲ್ಲಿಟ್ಟು 3–4 ಚದರ ಮನೆ ಕಟ್ಟಿಕೊಂಡು ಇವತ್ತು ಏನೋ ನೆಮ್ಮದಿಯಾಗಿ ವಾಸ ಮಾಡುತ್ತಿದ್ದಾನೆ ಅಂದರೆ ಇನ್ನೊಬ್ಬನಿಗೆ ಬಹು ಅಂತಸ್ತಿನ ಕಟ್ಟಡ ಕಟ್ಟಲಿಕ್ಕೆ ಸೈಟ್ ಕೊಡುವುದಕ್ಕೆ ಇವನ ಮನೆ ಕೆಡವುವ ಕೆಲಸ ಸರ್ಕಾರದಿಂದ ಆಗಬಾರದು ಎಂದು ಮನವಿಯನ್ನು ಈಗಾಗಲೇ ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೇವೆ ಈ ಎರಡು ವಿಚಾರಗಳಲ್ಲಿ ಡಿನೋಟಿಫಿಕೇಶನ್ ಅಂದರೆ ಎಲ್ಲದಕ್ಕೂ ನಾವು ಅಪ್ಲೈ ಮಾಡುವುದು ಬೇಕಾಗಿಲ್ಲ ಇಂತಹ ಪ್ರಕರಣಗಳಲ್ಲಿ ಡಿನೋಟಿಫಿಕೇಶನ್ ಬೇಕೇ ಬೇಕು De-notification is a must in the interest of those poor people-neglected citizens ಎಂದು ಹೇಳಿ ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ

**ಶ್ರೀ ವಾಟಾಳ್ ನಾಗರಾಜ್** ನೋಟಿಫೈ ಮಾಡಿದ ಮೇಲೆ ಡಿನೋಟಿಫೈ ಮಾಡಿದರೆ ಅಲ್ಲಿ ವ್ಯಾಪಾರ ಆಗಿದೆ ಎಂದು ಅರ್ಥ ವ್ಯಾಪಾರ ಎಲ್ಲಿ ಬರುತ್ತದೆ ಗೊತ್ತೇನು? ನೀವು ಸ್ವಾಧೀನ ಪಡಿಸಿಕೊಳ್ಳಲೇಬಾರದು

**ಶ್ರೀ ಬಸವರಾಜ ರಾಯರೆಡ್ಡಿ** ಜಾತಿ ಆಧಾರದ ಮೇಲೆ ಭೂಸ್ವಾಧೀನತೆ ಮಾಡಿರುವುದಿಲ್ಲ ಇಲ್ಲಿ ನಡೆಯುತ್ತಿರುವುದು ಜಾತಿ ಆಧಾರದ ಭೂಸ್ವಾಧೀನತೆ ... .........

**ಶ್ರೀ ವಾಟಾಳ್ ನಾಗರಾಜ್** ಇರಲಿ, ಪ್ಲೀಸ್, ಆಮೇಲೆ ಮಾತನಾಡೋಣ ಸ್ವಾಮಿ, ಈ ಡೀನೋಡಿಫಿಕೇಶನ್ ಅನ್ನುವುದೇ ಒಂದು ದೊಡ್ಡ ದಂಧೆ ಅಲ್ಲೇ ಇರತಕ್ಕಂಥದ್ದು ಜೀವ ಅಲ್ಲೇ ಮೋಸ, ಅಲ್ಲೇ ದರೋಡೆ ಡಿನೋಟಿಫೈ ಅರ್ಥ ಏನೆಂದರೆ ಹಗಲು ದರೋಡೆ, ಮೋಸ, ಲೂಟಿ, ಅಲ್ಲೇ ಇರತಕ್ಕಂಥಾದ್ದು ನಾನು ಏನು ಹೇಳುತ್ತೇನೆ ಅಂದರೆ ಮೊಟ್ಟಮೊದಲೇ ನೀವು ಯಾವ ರೈತರ ಜಮೀನನ್ನು ವಶಪಡಿಸಿಕೊಳ್ಳಬೇಕಾದರೆ, ಅಲ್ಲಿ ಬಡ ರೈತರಿದ್ದಾರೆ, ಜನಸಾಮಾನ್ಯರಿದ್ದಾರೆ, ಇದರ ಬಗ್ಗೆ ನೀವು ಚಿಂತನೆ ಮಾಡಬೇಕು ಮಾನ್ಯ ಅಧ್ಯಕ್ಷರೇ, ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬರುತ್ತದೆ ಎಂದು ಗೊತ್ತಾಯಿತು ಈಗಾಗಲೇ ಸುತ್ತ ಸಾವಿರಾರು ಎಕರೆ ಜಮೀನನ್ನು,ಬಡವರ ಜಮೀನನ್ನು ಕಡಿಮೆ ಬೆಲೆಗೆ ಪಡೆದು, ಇವತ್ತು ಆ ಜಮೀನು ಕೋಟಿ ಕೋಟಿ ರೂ ಬೆಲೆಯಾಗುತ್ತದೆ ಬಡವರನ್ನೆಲ್ಲಾ ಮನೆಗೆ ಕಳಿಸಿದ್ದಾರೆ ಇವತ್ತು ನನಗೇನೆಂದರೆ ಒಂದು ಸಮಗ್ರ ತನಿಖೆ ಆಗಬೇಕು ಯಾರ್‍ಯಾರ ಹತ್ತಿರ ಎಷ್ಟೆಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡರು ಎಷ್ಟು ಡಿನೋಟಿಫೈ ಆಗಿದೆ, ಈ ಜಮೀನಿಗೆ ರೈತರಿಗೆ ಕೊಟ್ಟಿರುವ ಹಣವೆಷ್ಟು? ಆಮೇಲೆ ಇವರು ಬೇರೆಯವರಿಗೆ ಮಾರಿರುವುದು ಎಷ್ಟು? ಎಲ್ಲವನ್ನೂ ಸಮಗ್ರವಾಗಿ ಸಂಪೂರ್ಣವಾಗಿ ಪರೀಲನೆ ಮಾಡುವಂತಹ ತನಿಖೆ ಆಗಬೇಕಾದ್ದು ಕರ್ತವ್ಯ ಸ್ವಾಮಿ ಬಹಳ ಪ್ರಾಮುಖ್ಯವಾಗಿ ಐಟಿ ಪಾರ್ಕ್,

ಇದು ಐಟಿ ಪಾರ್ಕ್ ಮಾಡುವುದಕ್ಕೆ ಅಲ್ಲ, ಐಟಿ ಪಾರ್ಕ್ ಮಾಡುವವರಿಗೆ ಕೊಡೋಣ, ನೋಡೋಣ ಐಟಿ ಪಾರ್ಕ್ ಮಾಡುತ್ತಾರಾ ಎಂದು ಯಾರೂ ಐಟಿ ಪಾರ್ಕ್‌ಗೆ ಹೋಗಿಲ್ಲ ಎಲ್ಲರೂ ನಿವೇಶನಗಳನ್ನು ಮಾಡಿ ಹಂಚತಕ್ಕಂಥಾದ್ದು ಇವತ್ತು ಒಂದೊಂದು ಎಕರೆಗೆ ಒಂದು ಕೋಟಿ ರೂ.ಗಳಂತೆ ಕೆಲವರಿಗೆ ಕೊಟ್ಟಿದ್ದಾರೆ ವಿಕಾಸ್ ಟೆಲಿಕಾಂನವರಿಗೆ 100 ಎಕರೆ ಜಮೀನನ್ನು ಕೊಟ್ಟಿದ್ದಾರೆ ಅವರು ಐಟಿ ಪಾರ್ಕ್ ಮಾಡುತ್ತೇವೆ ಎಂದು ಸರ್ಕಾರದಿಂದ ತೆಗೆದುಕೊಂಡು ಬಿಟ್ಟರು ಕೊಟ್ಟವರು ಯಾರು ಮುಖ್ಯಮಂತ್ರಿ ಕೃಷ್ಣರ ಸರ್ಕಾರ, ಕೃಷ್ಣಾರವರೇ ಅದೆಷ್ಟು ಅದರ ಬೆಲೆ? ನೂರು ಕೋಟಿ ರೂ.ಗಳು ಕಡಿಮೆಯೇನಲ್ಲ ಅದನ್ನು ಇವತ್ತು ತನಿಖೆ ಮಾಡಿಸಿ, ಅಲ್ಲೇನಾದರೂ ಐಟಿ ಪಾರ್ಕ್ ಇದೆಯಾ? ಇಲ್ಲ, ನಿವೇಶನ ಮಾಡಿ ಹಂಚುವುದಕ್ಕೆ ತಯಾರಾಗಿದ್ದಾರೆ 50X70 ಅಳತೆಯ ನಿವೇಶನಕ್ಕೆ 50 ಲಕ್ಷರೂ, 60 ಲಕ್ಷ ರೂ ಗಳು ಆ ತರಹ ಮಾಡಿ ಹಂಚುವುದು ಆಮೇಲೆ ಗ್ಲೋಬಲ್ ಟೆಲಿಕಾಂಗೆ 135 ಎಕರೆ ಅದಕ್ಕೆ 135 ಕೋಟಿ ರೂ ಗಳು ಕಡಿಮೆಯೇನಲ್ಲ ಅಲ್ಲಿ ಐಟಿ ಪಾರ್ಕ್ ಏನಿಲ್ಲ ಆಮೇಲೆ ಪ್ರೆಸ್ಟೀಜ್ ಕಂಪನಿಗೆ ನೂರು ಎಕರೆ ಅದು ಒಂದು ಎಕರೆಗೆ ಒಂದು ಕೋಟಿ ರೂ.ಗಳು ಮಾನ್ಯತಾ ಇದಕ್ಕೆ 300 ಎಕರೆ ಅದು ಒಂದು ಎಕರೆಗೆ ಒಂದು ಕೋಟಿ ರೂ.ಗಳು ಕಡಿಮೆಯೇನಲ್ಲ ಇದೇನಿದು? ಇವರ್‍ಯಾರೂ ಐಟಿ ಪಾರ್ಕ್‌ನವರಲ್ಲ ಇವರೆಲ್ಲ ಭೂಗಳ್ಳರು ಇವರೆಲ್ಲ ಭೂಮಿಯನ್ನು ಪಡೆದು ಹಂಚತಕ್ಕಂಥವರು ಇದಕ್ಕೆ ಮಾನ್ಯ ಕೃಷ್ಣರ ಬೆಂಬಲ ಇತ್ತು ಎಂದು ಹೇಳಿದರೆ, ಒಂದು ಹಂತದಲ್ಲಿ ಯಾವ ರಾಜ್ಯವನ್ನು ಆದರ್ಶವಾಗಿ ತೆಗೆದುಕೊಂಡು ಹೋಗುತ್ತಾರೆ ಎಂದು ನಮ್ಮ ಚಿಂತನೆ ಇತ್ತು, ಕಲ್ಪನೆ ಇತ್ತು ಅಂದರೆ, ಬಹಳ ಹಿರಿಯ ಮುತ್ಸದ್ಧಿ, ಸಮಾಜವಾದಿ ಚಿಂತನೆ ಇದ್ದಂಥವರು, ಸಮಾಜವಾದದ ಹಿನ್ನೆಲೆ ಇರುವವರ ಜೊತೆಯಲ್ಲಿ, ಎಂತೆಂಥವರ ಜೊತೆಯಲ್ಲಿ ಬೆಳೆದುಬಂದಂತಹವರು, ಇಂಥವರು ನಮ್ಮ ರಾಜ್ಯಕ್ಕೆ ದಕ್ಷ ಆಡಳಿತವನ್ನು ಕೊಡುತ್ತಾರೆ ಅಂದರೆ ನನಗೆ ಅರ್ಥವಾಗಲಿಲ್ಲ! ನನಗೆ ಮಹಾಭಾರತ ಜ್ಞಾಪಕಕ್ಕೆ ಬರುತ್ತದೆ "ಮಹಾಭಾರತದ ಕೃಷ್ಣನದು ದುಷ್ಟರನ್ನು ಶಿಕ್ಷಿಸುವುದಕ್ಕೆ ದಶಾವತಾರ ಮದ್ದೂರಿನ ಕೃಷ್ಣ ಈ ಭ್ರಷ್ಟರನ್ನು ರಕ್ಷಿಸುವುದಕ್ಕೆ ನಾನಾವತಾರ" ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ

**ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ)** ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸದಸ್ಯರಾದ ಶ್ರೀ ಮಾಧುಸ್ವಾಮಿಯವರು, ಶ್ರೀ ವಾಟಾಳ್ ನಾಗರಾಜ್ ಅವರು ಶ್ರೀ ಜಯಪ್ರಕಾಶ್ ಹೆಗ್ಡೆಯವರು ಮತ್ತು ಇನ್ನಿತರ ಸದಸ್ಯ ಮಿತ್ರರು ಬೆಂಗಳೂರು ನಗರದ ಸುತ್ತಮುತ್ತಲೂ ನಡೆದಿರುವಂತಹ ಭೂಹಗರಣಗಳ ಬಗ್ಗೆ ನಿನ್ನೆಯಿಂದ ಸುದೀರ್ಘವಾದ ಚರ್ಚೆಯನ್ನು ಮಾಡಿದ್ದಾರೆ ಸದನದಲ್ಲಿ ಇಂತಹ ಚರ್ಚೆಗಳು ಆಗಬೇಕು ನಿಜವಾಗಿ ಭೂಹಗರಣ ನಡೆದಿದ್ದರೆ ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದ್ದರೆ ಅಥವಾ ರೈತರಿಗೆ ಬೇರೆಬೇರೆ ವರ್ಗದ ಜನರಿಗೆ ಅನಾನುಕೂಲತೆ ಆಗಿದ್ದರೆ ಅದರ ಬಗ್ಗೆ ಒಂದು ಆರೋಗ್ಯಕರವಾದ ಚರ್ಚೆಯಾಗಿ ಸರ್ಕಾರ ಅದರ ಬಗ್ಗೆ ಸುದೀರ್ಘವಾದ ಉತ್ತರ ಕೊಡಬೇಕಾಗುತ್ತದೆ ಅದರಲ್ಲಿ ತಪ್ಪು ಎಂದು ಗೊತ್ತಾಗಿದ್ದರೆ ಅದರ ಬಗ್ಗೆ ಒಂದು ಸುದೀರ್ಘ ತನಿಖೆ ಕೂಡ ಆಗಬೇಕಾಗುತ್ತದೆ ಈ ಹಿನ್ನೆಲೆಯಲ್ಲಿ ಕೇವಲ ಅವರು ಬೆಂಗಳೂರಿನಲ್ಲಿ ಬಿಡಿಎ ಹಾಗೂ ಬೇರೆಬೇರೆ ಸಂಸ್ಥೆಗಳಲ್ಲಿ ನಡೆದ ವಿಚಾರಗಳ ಬಗ್ಗೆ ಕೂಡ ಮಾತನಾಡಿದ್ದಾರೆ ಅದರಲ್ಲಿ ನಾನು ಮುಖ್ಯವಾಗಿ Bangalore-Mysore Infrastructure ಬೆಂಗಳೂರು–ಮೈಸೂರುಗಳ ಮಧ್ಯೆ ಉತ್ತಮವಾದ ಎಕ್ಸ್‌ಪ್ರೆಸ್ ಹೈವೇ ಮಾಡಿ ಮೂಲಭೂತ ಸೌಕರ್ಯಗಳನ್ನು ಕೊಡಬೇಕು ಎಂಬ

ಉದ್ದೇಶದಿಂದ 1995ರಲ್ಲಿ ಕಲ್ಯಾಣಿಯವರು ಸೇರಿಕೊಂಡು ಒಂದು ಸದುದ್ದೇಶದಿಂದ ಇವತ್ತು ಬೆಂಗಳೂರು ನಗರ ಏಷ್ಯಾ ಖಂಡದಲ್ಲಿಯೇ ಅತ್ಯಂತ ಅಭಿವೃದ್ಧಿಯ ಬೆಳವಣಿಗೆಯ ದೃಷ್ಟಿಯಿಂದ ಬಹಳಷ್ಟು ಜನಸಂದಣಿ ಆಗುತ್ತಾ ಇದೆ, ಆ ಹಿನ್ನೆಲೆಯಲ್ಲಿ ಇದಕ್ಕೆ ಮೂಲಭೂತ ಸೌಕರ್ಯಗಳನ್ನು ಕೊಡಬೇಕಾಗಿದೆ ಮೂಲಭೂತ ಸೌಕರ್ಯವನ್ನೊದಗಿಸುವುದು ಕೇವಲ ಸರ್ಕಾರದಿಂದ ಮಾತ್ರ ಅಸಾಧ್ಯವಾಗುತ್ತದೆ ಆ ಹಿನ್ನೆಲೆಯಲ್ಲಿ ಖಾಸಗಿ ಪಾಲುದಾರರು ಭಾಗವಹಿಸಿ ಈ ಮೂಲಭೂತ ಸೌಕರ್ಯಗಳನ್ನು ಕೊಡುವ ಸಲುವಾಗಿ ಕೆಲವು ಉದ್ದಿಮೆದಾರರು ಮುಂದೆ ಬಂದರು ಅದರಲ್ಲಿ ಕಲ್ಯಾಣಿ ಗ್ರೂಪ್ ಕೂಡ ಆಸಕ್ತಿವಹಿಸಿ Bangalore-Mysore Corridor/Project ಅನ್ನು ತೆಗೆದುಕೊಂಡರು ಇದು ಕೇವಲ ಬೆಂಗಳೂರು ಮೈಸೂರಿಗೆ ಎಕ್ಸ್‌ಪ್ರೆಸ್ ಹೈವೇ ಮಾಡುವುದಷ್ಟೇ ಅಲ್ಲ, ಉಪನಗರಗಳನ್ನು ಸೃಷ್ಟಿ ಮಾಡಿ ಬೆಂಗಳೂರು ಮಹಾನಗರದಲ್ಲಿ ಏನು ಜನಸಂದಣಿಯಾಗಿದೆ ಅದರಿಂದ ಇವತ್ತು ಬಹಳಷ್ಟು ಟ್ರಾಫಿಕ್ ಆಗಿದೆ, ಸಂಚಾರಕ್ಕೆ ಬಹಳಷ್ಟು ವ್ಯತ್ಯಯ ಆಗುತ್ತಾ ಇದೆ, ಮತ್ತು ಪೊಲ್ಯೂಶನ್ ಸಾಕಷ್ಟು ಆಗಿದೆ

**Sri J C MadhuSwamy** Whether he is participating in the debate or he is replying the House ಈಗ ಅವರೇನು ಮಾಡುತ್ತಿದ್ದಾರೆ ಎಂದು ಮೊದಲು ಹೇಳಬೇಕು ರೂಲ್ ಕೆಳಗೆ ಸೈನ್ ಮಾಡಿ ನಿಲುವಳಿ ಸೂಚನೆ ತಂದು, ಈ ಸಭೆ ಕೆಲವು ನಿಯಮಗಳ ಮೇಲೆ ನಡೆದಿದೆ ಉತ್ತರವನ್ನು ಸರ್ಕಾರ ಕೊಡಬೇಕು, ಅಥವಾ ಯಾರದ್ದಾದರೂ ಹೆಸರು ಹೇಳಿದ್ದರೆ ಅವರು ನಿಂತು ಅವರ ಬಗ್ಗೆ ಒಂದು ಹೇಳಿಕೆ ಕೊಡಬಹುದು ಅಧ್ಯಕ್ಷರೇ ಅವರು ಸೈನ್ ಹಾಕಿದ್ದರೆ ದಯಮಾಡಿ ನಮಗೆ ಅದರ ಕಾಪಿ ಕಳುಹಿಸಿಕೊಡಬೇಕು ನಾನು ಒತ್ತಾಯಿಸುತ್ತೇನೆ. ಸಾರ್, ತಮ್ಮನ್ನು ಕೇಳುತ್ತಿದ್ದೇನೆ, ಅವರು ಸೈನ್ ಹಾಕಿರುವ ಕಾಪಿ ನಮ್ಮ ಮುಂದೆ ಬರಬೇಕು I demand ಅವರು ಸಹಿ ಹಾಕಿ ಕೊಟ್ಟಿರುವ ಪತ್ರದ ಪ್ರತಿ ಮೊದಲು ನಮ್ಮ ಮುಂದೆ ಬರಬೇಕು It is our right ಇದು ಶಾಸನಸಭೆ ಚರ್ಚೆಯಲ್ಲಿ ನಾವೂ ಭಾಗವಹಿಸುತ್ತೇವೆಂದು ಪತ್ರಕ್ಕೆ ಸಹಿ ಮಾಡಿ ಕೊಟ್ಟಿದ್ದರೆ ದಯಮಾಡಿ ಅದರ ಪ್ರತಿಯನ್ನು ನಮಗೂ ಕಳುಹಿಸಿಕೊಡಬೇಕಾಗುತ್ತದೆ

**ಶ್ರೀ ಬಸವರಾಜ ರಾಯರೆಡ್ಡಿ** ನಾನು ಸಹಿ ಹಾಕಿ ಕೊಟ್ಟಿದ್ದೇನೆ ಜೊತೆಗೆ ಶ್ರೀ ಆರ್ ವಿ ದೇಶಪಾಂಡೆಯವರು ಶ್ರೀ ಎಸ್.ಎಸ್ ಪಾಟೀಲ್ ಅವರು ಮತ್ತು ಇನ್ನಿತರರೂ ಸಹ ಈ ಕುರಿತಾದ ಚರ್ಚೆಯಲ್ಲಿ ಭಾಗವಹಿಸುತ್ತೇವೆಂದು ಪತ್ರ ಕಳುಹಿಸಿಕೊಟ್ಟಿದ್ದೇವೆ

**Sri J.C MadhuSwamy** Let me know ಯಾವಾಗ ಕೊಟ್ಟರು? ತಮಗೆ ಗೊತ್ತಿರುವಂತೆ adjournment motion ತಂದು .. ....

**ಅಧ್ಯಕ್ಷರು** ನಿಯಮ 69ಕ್ಕೆ ಪರಿವರ್ತಿಸಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡ ನಂತರ ಕೆಲವು ಸದಸ್ಯರುಗಳಾದ ಶ್ರೀಯುತರುಗಳಾದ ಆರ್.ವಿ ದೇಶಪಾಂಡೆ, ಬಸವರಾಜ ರಾಯರೆಡ್ಡಿ ಡಿ ಕೆ ಶಿವಕುಮಾರ್, ಕೆ ಆರ್ ರಮೇಶ್‌ಕುಮಾರ್, ಎಚ್ ಪಾಟೀಲ್, ಗುರುಪಾದಪ್ಪ ನಾಗಮಾರಪಲ್ಲಿ, ಎಸ್ ಎಸ್ ಪಾಟೀಲ್, ವಿ ಸೋಮಣ್ಣನವರು 'ಈ ಕುರಿತಾದ ಚರ್ಚೆಯಲ್ಲಿ ನಾವೂ ಭಾಗವಹಿಸುತ್ತೇವೆ, ನಮಗೆ ಅವಕಾಶ ಕಲ್ಪಿಸಿಕೊಡಬೇಕು' ಎಂದು ಕೇಳಿದ್ದಾರೆ

**ಶ್ರೀ ಜೆ.ಸಿ ಮಾಧುಸ್ವಾಮಿ** ಅಧ್ಯಕ್ಷರೆ, ಹಾಗಾದರೆ ಈ ಚರ್ಚೆಯನ್ನು ಎಷ್ಟು ದಿವಸ ನಡೆಸುತ್ತೀರಿ? Adjournment Motion ತರುವುದು ಈ ಕಡೆ ಕುಳಿತಿರುವ ಸದಸ್ಯರುಗಳ ಹಕ್ಕು

Adjournment Motion ಮೇಲೆ ಎಲ್ಲರಿಗೂ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟು, ಏನು ಬೇಕಾದರೂ ಚರ್ಚೆ ಮಾಡಬಹುದೆಂದರೆ, ಇಂತಹುದನ್ನೆಲ್ಲಾ ನಾವೇಕೆ ತರಬೇಕು? ಯಾರೋ ನಿಂತುಕೊಂಡು ಸರ್ಕಾರವನ್ನು defend ಮಾಡಲು ಶುರು ಮಾಡಿದರೆ, ಸರ್ಕಾರದ ಪರವಾಗಿ ಹೇಳಿಕೆ ಕೊಡಲು ಶುರು ಮಾಡಿದರೆ, ನಾವಾದರೂ ಏಕೆ ಮಾತನಾಡಬೇಕು?

**ಅಧ್ಯಕ್ಷರು** ನಿಯಮ 69ರಡಿಯಲ್ಲಿ ಮಾತನಾಡುವುದಕ್ಕೆ ಅವಕಾಶವಿದೆ ಕೇವಲ signatories ಮಾತ್ರ ಮಾತನಾಡಬೇಕೆಂಬುದಿಲ್ಲ ಆ ಕಾರಣದಿಂದ ಅವರಿಗೆ ಮಾತನಾಡಲು ನಾನು ಅವಕಾಶ ಒದಗಿಸಿಕೊಟ್ಟಿದ್ದೇನೆ

**ಶ್ರೀ ಜೆ.ಸಿ ಮಾಧುಸ್ವಾಮಿ** ಇಲ್ಲಿ ಮಾತನಾಡುವುದಾದರೆ ಅವರ ಅಭಿಪ್ರಾಯವನ್ನು ಮಾತ್ರ ಹೇಳಬೇಕು ನಾವು ಆಡಿರುವ ಮಾತುಗಳ ಮೇಲೆ ವ್ಯಾಖ್ಯಾನಗಳಾಗಬಾರದು

**ಶ್ರೀ ಬಸವರಾಜ ರಾಯರೆಡ್ಡಿ** ನಾನು ಸದಸ್ಯನಾಗಿ ಇಲ್ಲಿ ನನ್ನ ಅಭಿಪ್ರಾಯಗಳನ್ನು ಹೇಳುತ್ತಿದ್ದೇನೆ

**ಗೊಂದಲ**

**ಶ್ರೀ ಜೆ ಸಿ ಮಾಧುಸ್ವಾಮಿ** ಈ ರೀತಿ ನಾನು ನೋಡಿರಲಿಲ್ಲ ಹೀಗೆಲ್ಲಾ ನೀವು ನಿಯಮವನ್ನು ಬದಲಾಯಿಸಿಕೊಂಡು ಹೋಗಬಾರದು

**ಶ್ರೀ ಕೆ.ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೆ, ಈಗ ನಿಮ್ಮ ಆದೇಶದ ಪ್ರಕಾರ ಅವರೂ ಕೂಡ signatories ಆಗಿದ್ದಾರೆ. ಅವರ ಅಭಿಪ್ರಾಯಗಳನ್ನು ಇವರ ಪ್ರಕಾರ ಹೀಗೆಯೇ ಹೇಳುವುದಕ್ಕಾಗುತ್ತದೆಯೇ? ಅವರ ಅಭಿಪ್ರಾಯ ಅವರು ಹೇಳುತ್ತಾರೆ, ಹೇಳಿದ್ದಾರೆ ಅದು ಬಿಟ್ಟು ಇವರು ಹೇಳಿದಂತೆಲ್ಲಾ ಅವರು ಮಾತನಾಡುವುದಕ್ಕಾಗುವುದಿಲ್ಲ ಅವರ ಅಭಿಪ್ರಾಯ ಏನಿರುತ್ತದೋ, ಅವರೇ ಹೇಳುತ್ತಾರೆ ಅವರು (ವಿರೋಧ ಪಕ್ಷ) ತಮ್ಮ ಅಭಿಪ್ರಾಯಗಳನ್ನು ಹೇಳುವಾಗ ನಾವು ಸುಮ್ಮನಿರಲಿಲ್ಲವೇ? ಅದೇ ರೀತಿ ಇವರು ಹೇಳುವಾಗಲೂ ಅವರು ಸುಮ್ಮನಿರಬೇಕಾಗುತ್ತದೆ

**ಗೊಂದಲ**

**ಅಧ್ಯಕ್ಷರು** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

**ಶ್ರೀ ಜೆ.ಸಿ ಮಾಧುಸ್ವಾಮಿ** ನಾಳೆಯಿಂದ ಹೀಗೆಯೇ ಆಗಲಿ! ಯಾರು ಬೇಕಾದರೂ ಮಾತನಾಡಬಹುದೆಂದರೆ ಹೇಗೆ?

**ಗೊಂದಲ**

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಇವರೇ ಉತ್ತರಿಸುವುದಾದರೆ ಸರ್ಕಾರದಿಂದ ನಾಳೆ ಉತ್ತರ ಹೇಗೆ ಸಿಗುತ್ತದೆ?

**ಗೊಂದಲ**

**ಅಧ್ಯಕ್ಷರು** ಮಾಧುಸ್ವಾಮಿಯವರೆ, ನನಗೆ ಅರ್ಥವಾಗುತ್ತಿಲ್ಲ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಏಕೆ ಅರ್ಥವಾಗುವುದಿಲ್ಲ?

**ಅಧ್ಯಕ್ಷರು** ಬೇರೆ ಸದಸ್ಯರಿಗೂ ಮಾತನಾಡಲು ಅವಕಾಶವಿದೆ. ಅವರೂ ಸಹ ಮಾತನಾಡಲು ಅನುಮತಿ ಕೊಟ್ಟಿದ್ದೇನೆ. ದಯಮಾಡಿ ಕೇಳಿ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಈ ಸದನವನ್ನು ಆ ರೀತಿಯೆಲ್ಲಾ ನಡೆಸುವುದಕ್ಕಾಗುವುದಿಲ್ಲ

**ಗೊಂದಲ**

**ಶ್ರೀ ಜೆ.ಸಿ ಮಾಧುಸ್ವಾಮಿ** ಎಲ್ಲವನ್ನೂ ಇವರೇ ಆಡಿ ಮುಗಿಸಿದರೆ, ನಾಳೆ ಸರ್ಕಾರ ಏನು reply ಕೊಡುತ್ತದೆ?

**ಗೊಂದಲ**

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ನಿಯಮ 69ರಡಿಯಲ್ಲಿ ಚರ್ಚೆಯಾಗುತ್ತಿರುವುದು, ಇದನ್ನು ಏಕೆ ತಂದಿದ್ದೇವೆಂಬುದರ ಬಗ್ಗೆ ಮಾತನಾಡಬೇಕು. ಸುಮ್ಮನೆ ಎಲ್ಲರೂ ಎದ್ದು ನಿಂತು ಮಾತನಾಡಬಾರದು

**ಶ್ರೀ ಜೆ ಸಿ ಮಾಧುಸ್ವಾಮಿ** ಏನು ಅನ್ಯಾಯವಾಗಿದೆ, ಆ ಕುರಿತಂತೆ ನಿಯಮ 69ರಡಿ ಪ್ರಸ್ತಾಪಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ನಾವು ತಮಗೆ ಕಳುಹಿಸಿಕೊಟ್ಟಿದ್ದೇವೆ ಅದರ ಪರವಾಗಿ ಮಾತನಾಡುವವರಿದ್ದರೆ ನಮ್ಮದೇನೂ ತಕರಾರಿಲ್ಲ ಆದರೆ, defend ಮಾಡಬೇಕೆಂದರೆ, how can you say? ಸರ್ಕಾರ ಏಕಿರುವುದು?

**ಗೊಂದಲ**

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಅದು ಸಾಧ್ಯವಿಲ್ಲ

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಅಧ್ಯಕ್ಷರೆ, ನಿಯಮ 69ರಡಿ ಚರ್ಚಿಸಲು ತಾವೇನು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ, ತಮಗೆ ಕಳುಹಿಸಿಕೊಟ್ಟಿರುವ ಪತ್ರಕ್ಕೆ ಯಾರ್‍ಯಾರು ಸಹಿ ಹಾಕಿದ್ದಾರೋ ಅವರೇ ಮಾತನಾಡಬೇಕು ಬೇರೆಯವರು ಮಾತನಾಡಲು ಸಾಧ್ಯವಿಲ್ಲ

**ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಕೈಗಾರಿಕೆ ಸಚಿವರು)** ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ ಎಸ್ ಯಡಿಯೂರಪ್ಪ ಸದಸ್ಯರಾಗಿರುವ ಶ್ರೀ ಜೆ.ಸಿ ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್, ಶ್ರೀ ಜಿ.ವಿ ಶ್ರೀರಾಮರೆಡ್ಡಿ, ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಇವರೆಲ್ಲರೂ ಮಾತನಾಡುವ ಮೂಲಕ ಸಾಕಷ್ಟು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ ಮೊದಲು ಇದನ್ನು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪಿಸಬೇಕೆಂದು ಉದ್ದೇಶಿಸಿದ್ದರೂ, ತಾವು ನಿಲುವಳಿ ಸೂಚನೆಗೆ ಅವಕಾಶ ಕಲ್ಪಿಸಿಕೊಡದೆ ನಿಯಮ 69ರಡಿ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ ಈ ಸದನದಲ್ಲಿ ನಾನು ವಾಟಾಳ್ ನಾಗರಾಜ್ ಅವರಿಗಿಂಥ ಹಿರಿಯನಲ್ಲ, ಅವರಿಗಿಂತಲೂ ಕಿರಿಯ ನಿಯಮ 69ರಡಿ ಬೇಕಾದಷ್ಟು ವಿಚಾರಗಳನ್ನು ನಾವು ಇಲ್ಲಿ ಚರ್ಚಿಸಿದ್ದೇವೆ ಒಮ್ಮೆ ಈ ಸದನದಲ್ಲಿ ಹಿಂದೆ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ಅತ್ತ ಕಡೆ ವಿರೋಧ ಪಕ್ಷದಲ್ಲಿ ಶ್ರೀ ವೀರೇಂದ್ರ ಪಾಟೀಲರು ಸಭಾನಾಯಕರಾಗಿ ಕುಳಿತಿದ್ದರು ಆ ಸಂದರ್ಭದಲ್ಲಿ ಟೆಲಿಫೋನ್ ಹಗರಣದ ವಿಚಾರವಾಗಿ ಚರ್ಚೆಯಾಗಿತ್ತು ನಾನು ತಮಗೆ ಒಂದು ಉದಾಹರಣೆ ಹೇಳುತ್ತಿದ್ದೇನಷ್ಟೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದಲ್ಲಿರುವವರಿಗೆ ನಿಯಮ 69ರಡಿ ಮಾತನಾಡಲು ಅವಕಾಶ ಕಲ್ಪಿಸಿಕೊಡುವ ಹಕ್ಕು ತಮಗೆ(ಅಧ್ಯಕ್ಷರಿಗೆ) ಇದೆ ತಾವು ಮಾತನಾಡುವ ಸಂದರ್ಭದಲ್ಲಿ ವಿಶೇಷವಾಗಿ 'ಈ ಹಿಂದೆ ಇದ್ದಂಥ ಕೈಗಾರಿಕಾ ಸಚಿವರು' ಎಂದು ಪ್ರಸ್ತಾಪಿಸಿದ್ದೀರಿ ಅವರು ಈ ಸದನಕ್ಕೆ ಜನರಿಂದ ಗೆದ್ದು ಬಂದಿರುವವರು, ಕ್ಷೇತ್ರದಲ್ಲಿ ಮತದಾರರಿದ್ದಾರೆ, ಇಡೀ ರಾಜ್ಯದಲ್ಲಿ ಅವರದೇ ಆದ ನಾಯಕತ್ವವಿದೆ. ಆದುದರಿಂದ, ಅವರು ಏನು ಹೇಳಬೇಕೆಂದಿದ್ದಾರೋ ಅದನ್ನು ಕೇಳಬೇಕಾಗುತ್ತದೆ. ಮಾನ್ಯ ಗೌರವಾನ್ವಿತ ಸದಸ್ಯರು ಬರೆದಿರುವ ಪತ್ರವೇನಿದೆ, ತಾವು ತೀರ್ಮಾನ ತೆಗೆದುಕೊಂಡು ಅವರಿಗೆ ಮಾತನಾಡಲು

ಅವಕಾಶ ಕಲ್ಪಿಸಿಕೊಟ್ಟಿರುವುದು ಸರಿಯಾಗಿದೆ ಆದರೆ, ಸರ್ಕಾರ ಉತ್ತರ ಕೊಡುತ್ತದೆ ತಾವು ಆ ಕುರಿತಂತೆ ಏನೂ ಯೋಚನೆ ಮಾಡುವುದಕ್ಕೆ ಹೋಗಬೇಡಿ ಲೋಕೋಪಯೋಗಿ ಇಲಾಖೆ ಕಂದಾಯ, ಕೈಗಾರಿಕೆ, ಮುಖ್ಯಮಂತ್ರಿಯವರ ಖಾತೆ ಮತ್ತು ನಮ್ಮ ನಮ್ಮ ಇಲಾಖೆಗಳಿಗೆ ಸಂಬಂಧಿಸಿದಂತೆ ತಾವು ಅನೇಕ ವಿಷಯಗಳನ್ನು ಪ್ರಸ್ತಾಪಿಸಿರುವುದರಿಂದ ಅವೆಲ್ಲಕ್ಕೂ ಉತ್ತರ ಕೊಡಬೇಕಾಗುತ್ತದೆ. ಇದರಲ್ಲಿ ಮುಚ್ಚಿಡುವುದೇನೂ ಸಹ ಇಲ್ಲ ಖಂಡಿತವಾಗಿಯೂ ಹೇಳುತ್ತೇನೆ ಸರ್ಕಾರ ನಾಳೆ ಉತ್ತರಿಸುತ್ತದೆ ಆದರೆ, ಅವರು ಹೀಗೆಯೇ ಮಾತನಾಡಬೇಕು ಅಥವಾ ನೀವು ಹೀಗೆಯೇ ಮಾತನಾಡಬೇಕೆಂದು ಹೇಳುವುದಕ್ಕಾಗುವುದಿಲ್ಲ ನಿಮಗೆ ಹಕ್ಕು ಇದೆ ಈ ಸದನಕ್ಕೆ ಬರಲು ಜನರು ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟಿದ್ದಾರೆ ಅದೇ ರೀತಿ ಅವರ ಅಭಿಪ್ರಾಯಗಳೇನಿವೆ, ಅವರು ಮಾತನಾಡುವುದಕ್ಕೆ ಅಡ್ಡಿಪಡಿಸುವುದು ಸಂಸದೀಯ ಚಟುವಟಿಕೆಗಳ ದೃಷ್ಟಿಯಿಂದ ಅಷ್ಟೊಂದು ಸರಿಯಲ್ಲವೆನ್ನುವುದು ನನ್ನ ಅಭಿಪ್ರಾಯ

**ಶ್ರೀ ಜೆ ಸಿ ಮಾಧುಸ್ವಾಮಿ** ನಾನು ಈ ಸಭೆಯಲ್ಲಿದ್ದ ಅವೊತ್ತು ನಾನು ಮಿಲ್ಕ್ ಫೆಡರೇಶನ್‌ನ ಚೇರ್ಮನ್ ಆಗಿದ್ದಾಗ ನನ್ನ ಮೇಲೂ ಚಾರ್ಜ್ ಬಂತು I did't speak ಮಾನ್ಯ ರೇವಣ್ಣನವರು ಒಂದು ಸಲ ಮಿಲ್ಕ್ ಫೆಡರೇಶನ್‌ನ ಚೇರ್ಮನ್ ಆಗಿ, ಮಂತ್ರಿಗಳಾಗಿದ್ದರು ಸದನದಲ್ಲಿ ಮಿಲ್ಕ್ ಫೆಡರೇಶನ್ ವಿಷಯ ಬಂದಾಗ ನಾವು ಮಾತನಾಡಲು ಅವೊತ್ತು allow ಮಾಡಲಿಲ್ಲ ಉತ್ತರ ಕೊಡಬೇಕಾಗಿರುವ ಕೆಲಸ ಸರ್ಕಾರದ್ದು ನಾವೇ ಸ್ಟೇಟ್‌ಮೆಂಟ್ ಮಾಡಬೇಕು, ನನ್ನ ಹೆಸರನ್ನು ಇಲ್ಲಿ ತಂದಿದ್ದಾರೆಂದರೆ, ಸ್ಟೇಟ್‌ಮೆಂಟ್ ಮಾಡುವುದಕ್ಕೆ ನಮ್ಮದೇನೂ ತಕರಾರಿಲ್ಲ ನಾವು ಏನು ವಿಷಯ ಮಂಡಿಸಿದ್ದೇವೆ, ಆ ವಿಷಯದ ಪರವಾಗಿ ಬೆಳಕು ಚೆಲ್ಲಲು ಎಲ್ಲಾ ಸದಸ್ಯರಿಗೂ ಹಕ್ಕಿದೆ, ಇಲ್ಲವೆಂದು ಹೇಳುವುದಿಲ್ಲ 'ಈ ವಿಷಯದ ಪರವಾಗಿ ಇನ್ನೂ ಒಂದಿಷ್ಟು ಮಾಹಿತಿಗಳಿವೆ, ನಾವು ಕೊಡುತ್ತೇವೆ, ಬೆಳಕು ಚೆಲ್ಲುತ್ತೇವೆ' we will not object to it ಎಂದರೆ ರೂಲ್ 69ರಡಿ ಚರ್ಚಿಸಬಹುದು ನಾವು ಮಾಡುವ ಯಾವುದೇ ಆರೋಪವನ್ನು defend ಮಾಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ ಮಾತ್ರ, ಅದು ಸದಸ್ಯರ ಜವಾಬ್ದಾರಿ ಅಲ್ಲ ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ ನಾವು ಏನು ಮಾತನಾಡಿದ್ದೇವೆ, ನಮ್ಮ ವಿಷಯಕ್ಕೆ ಪೂರಕವಾಗಿ ಮಾತನಾಡುವವರಿಗೆ ತಾವು ಯಾರಿಗೆ ಬೇಕಾದರೂ ಅವಕಾಶ ಕಲ್ಪಿಸಿಕೊಡಿ ಇನ್ನು ಎರಡನೆಯದಾಗಿ, ಅವರೆಲ್ಲರೂ ಇನ್ನೊಂದು ರೆಸಲ್ಯೂಶನ್ ಅನ್ನು ಮೂವ್ ಮಾಡುವಾಗ, ಇನ್ನೊಂದು ವಿಷಯವನ್ನು ಮೂವ್ ಮಾಡುವಾಗ ನಾನು ತಮ್ಮನ್ನು ಕೇಳಿದೆ ನಮ್ಮದ್ದು ಇನ್ನೂ reply ಆಗಿಲ್ಲ, ಅವರನ್ನೇಕೆ ಕರೆಯುತ್ತಿದ್ದೀರಿ? ಎಂದಾಗ, 'ಅವರು ಕಳುಹಿಸಿರುವ ಮತ್ತು ನೀವು ಕಳುಹಿಸಿರುವ ವಿಷಯ ಎರಡೂ ಒಂದೇ ಆಗಿರುವುದರಿಂದ ಮಾತನಾಡಲು ನಾನು ಅವರನ್ನು ಕರೆದಿದ್ದೇನೆ' ಎಂದಿರಿ ಎರಡೂ ವಿಷಯಗಳನ್ನು ಏಕೆ ಒಟ್ಟಿಗೆ ಸೇರಿಸುತ್ತಿದ್ದೀರಿ? ಎಂದು ನಿನ್ನೆ ದಿವಸ ನಾನು ತಮ್ಮನ್ನು ಕೇಳಿದೆ ತಾವು ಸ್ಪಷ್ಟವಾಗಿ ಹೇಳಿಕೆ ಕೊಡಬೇಕು ಅಥವಾ ರೂಲಿಂಗ್ ಕೊಡಬೇಕು ಈ ವಿಷಯದ ಮೇಲೆ ಚರ್ಚೆಯ ಮೂಲಕ ಹೆಚ್ಚಿನ ಬೆಳಕು ಚೆಲ್ಲಲು ನಾವು ಯಾರಿಗೂ ಅಡ್ಡಿಪಡಿಸುವುದಿಲ್ಲ ಅದಕ್ಕೆ ಬದಲಾಗಿ, defend ಮಾಡುವ ಕೆಲಸ, ನಮ್ಮ ಪ್ರಶ್ನೆಗಳಿಗೆ ಉತ್ತರಿಸುವ ಕೆಲಸ, ನಮ್ಮ ಆರೋಪಗಳಿಗೆ ಉತ್ತರಿಸುವ ಕೆಲಸ ಸರ್ಕಾರದ್ದು ಬಿಟ್ಟರೆ ಮಾನ್ಯ ಸದಸ್ಯರಿಗೆ ಯಾರಿಗೂ ಆ ಹಕ್ಕನ್ನು ಈ ಸದನ ಕೊಟ್ಟಿಲ್ಲ

**ಶ್ರೀ ಕೆ ಶ್ರೀನಿವಾಸಗೌಡ** ಸರ್ಕಾರ ನಾಳೆ ಉತ್ತರ ಕೊಡುತ್ತದೆ ಈಗ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಾರೆ ಉತ್ತರವನ್ನು ನಾಳೆ ಕೊಡುತ್ತೇನೆಂದು ಮುಖ್ಯಮಂತ್ರಿಗಳು ಹೇಳಿರುವುದಕ್ಕೆ ನೀವೆಲ್ಲಾ ಒಪ್ಪಿಕೊಂಡಿದ್ದೀರಿ

**ಶ್ರೀ ಜೆ.ಸಿ ಮಾಧುಸ್ವಾಮಿ** ಮಾನ್ಯ ಅಧ್ಯಕ್ಷರೆ, ನಾವು ತೀರಾ ಕೆಟ್ಟ ಸಂಪ್ರದಾಯಕ್ಕೆ ಹೋಗುತ್ತಿದ್ದೇವೆ

**ಶ್ರೀ ಬಸವರಾಜ ರಾಯರೆಡ್ಡಿ** ನಾನು ಉತ್ತರ ಕೊಡುತ್ತಿಲ್ಲ ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನಷ್ಟೆ.

**ಅಧ್ಯಕ್ಷರು** ಮಾಧುಸ್ವಾಮಿಯವರೆ, ಕೈಗಾರಿಕಾ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ನಿಯಮ 69ರಡಿಯಲ್ಲಿ ಚರ್ಚಿಸಲು ಸೂಚನಾ ಪತ್ರಕ್ಕೆ ಯಾರು ಸಹಿ ಹಾಕಿಲ್ಲವೋ ಅವರೂ ಸಹ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಿದೆ ಮಾತನಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಅವರು ಕೇಳಿದ್ದರಿಂದ ಮಾತನಾಡಲು ಅವರಿಗೆ ನಾನು ಅವಕಾಶ ಕಲ್ಪಿಸಿದ್ದೇನೆ ಅವರು ಮಾತನಾಡುತ್ತಾರೆ ದಯಮಾಡಿ ತಾವು ಸಹಕರಿಸಬೇಕು

**ಶ್ರೀ ಜೆ ಸಿ ಮಾಧುಸ್ವಾಮಿ** ಈ ಸಭೆಗೆ ನಾವು ಚರ್ಚಾಸ್ಪರ್ಧೆಗೆ ಬಂದಿಲ್ಲ ಸರ್ಕಾರಕ್ಕೆ ಆರೋಪ ಮಾಡುತ್ತಿದ್ದಾಗ ಸರ್ಕಾರದ ಪರವಾಗಿ ಸಚಿವ ಸಂಪುಟದಲ್ಲಿರುವವರು ಯಾರದರೂ defenceಗೆ ಬರಲಿ It is their right

ಗೊಂದಲ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಟ್ಟ ನಂತರವೂ ಅವರು ಮಾತನಾಡುತ್ತಾರೆಂದರೆ ಏನರ್ಥ? ಸಭೆ ನಡೆಸುವ ರೀತಿಯಲ್ಲಿ ತಾವು ರೂಲಿಂಗ್ ಕೊಟ್ಟಿದ್ದೀರಿ ಅವರಿಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿರುವುದಾಗಿ ತಾವು ತಿಳಿಸಿದ್ದೀರಿ ನೀವು (ವಿರೋಧ ಪಕ್ಷ) ಈಗ ಸುಮ್ಮನಿರಬೇಕು ಇಲ್ಲದಿದ್ದರೆ, ಅಧ್ಯಕ್ಷರಾದ ನಿಮ್ಮನ್ನು ಪ್ರಶ್ನಿಸಿದಂತಾಗುತ್ತದೆ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ನಿಯಮ 69ರಡಿ ಕಳುಹಿಸಿಕೊಟ್ಟಿರುವ ವಿಷಯದ ಪರವಾಗಿ ಮಾತನಾಡುವವರಿದ್ದರೆ ಮಾತ್ರ ಮಾತನಾಡಬೇಕಾಗುತ್ತದೆ

**ಶ್ರೀ ಜೆ ಸಿ ಮಾಧುಸ್ವಾಮಿ** ಅಧ್ಯಕ್ಷರೆ, ಒಂದು ವಿಷಯವನ್ನು ನಾವು ಪ್ರಸ್ತಾಪಿಸಿದರೆ ಅದರ ಪರವಾಗಿ ಮಾತನಾಡುವವರಿಗೆ ಮಾತ್ರ ತಾವು ಅವಕಾಶ ಕಲ್ಪಿಸಿಕೊಡಬೇಕು

**ಅಧ್ಯಕ್ಷರು** ಮಾಧುಸ್ವಾಮಿಯವರೆ, ನಾನು ಅವರನ್ನು ಮಾತನಾಡಲು ಕರೆದಿದ್ದೇನೆ ನೀವು ದಯಮಾಡಿ ಕುಳಿತುಕೊಳ್ಳಿ ಅವರು ಏನಾದರೂ ಬೇರೆ ವಿಚಾರವನ್ನು ಪ್ರಸ್ತಾಪಿಸಿದರೆ ನೀವು point of order raise ಮಾಡಬಹುದು ಈಗಾಗಲೇ ಏಳು ಗಂಟೆಯಾಯಿತು ಕಲಾಪವನ್ನು ಹೀಗೆಯೇ ಮುಂದುವರೆಸುವುದರಲ್ಲಿ ಅರ್ಥವಿಲ್ಲ

**ಶ್ರೀ ಜೆ.ಸಿ ಮಾಧುಸ್ವಾಮಿ** ತಮಗೆ ನಿವೇದಿಸಿಕೊಳ್ಳುತ್ತಿದ್ದೇವೆ ನಾವು ಇಲ್ಲಿ ಏನು ವಿಷಯ ಪ್ರಸ್ತಾಪಿಸಿದ್ದೇವೆ ...

**ಅಧ್ಯಕ್ಷರು** ನಿವೇದನೆ ಮಾಡಿದ್ದಾಯಿತು ಈಗ ಮಾತನಾಡಲು ಅವರಿಗೆ ಅವಕಾಶ ಕಲ್ಪಿಸಿಕೊಡಿ.

**ಶ್ರೀ ಜೆ.ಸಿ ಮಾಧುಸ್ವಾಮಿ** ಇದು ತಮ್ಮ ಜವಾಬ್ದಾರಿ ಇಂತಹ ಸಭೆ ನಡೆಯಬೇಕಾಗಿಲ್ಲ

**ಅಧ್ಯಕ್ಷರು** ಈಗ ನಾನು ಒಂದು ಮಾತನ್ನು ಹೇಳಬಯಸುತ್ತೇನೆ ನಾನು ಬಹಳ ಗಮನಿಸುತ್ತಿದ್ದೇನೆ. ಅಂದರೆ, ಕೆಲವರು ಹೇಳಿದ ರೀತಿಯಲ್ಲಿಯೇ chair ನಡೆಯಬೇಕೆಂಬ ರೀತಿಯಲ್ಲಿ ಮಾತನಾಡುವುದು ಸರಿಯಲ್ಲ

**ಶ್ರೀ ಜೆ ಸಿ ಮಾಧುಸ್ವಾಮಿ** ನಿಯಮಗಳ ರೀತ್ಯಾ ಸದನ ನಡೆಯಬೇಕು

**ಅಧ್ಯಕ್ಷರು** ನಿಯಮಗಳಲ್ಲೇನಿದೆ? ನೀವೇನು ಹೇಳುತ್ತಿದ್ದೀರಿ? ಹಾಗಾದರೆ, ನೀವು ಹೇಳಿದ ರೀತಿಯಲ್ಲೇ ಸದನ ನಡೆಯಬೇಕೆ? 'ಮಾಧುಸ್ವಾಮಿಯವರ ನಿಯಮಾವಳಿಯಲ್ಲಿಯೇ ಸದನ ನಡೆಸಬೇಕು' ಎಂದು ತಾವು ಬರೆದುಕೊಡಿ ನಾನು ಆ ರೀತಿಯಲ್ಲಿಯೇ ನಡೆದುಕೊಳ್ಳುತ್ತೇನೆ.

**ಗೊಂದಲ**

**ಶ್ರೀ ಜೆ ಸಿ ಮಾಧುಸ್ವಾಮಿ** ಏನು ನಿಯಮಾವಳಿ ಇದೆ? ಒಬ್ಬ ಸದಸ್ಯ Defend ಮಾಡಬೇಕೆಂದೇನಾದರೂ ಇದೆಯೇ? ಇದ್ದರೆ ತೆಗೆಸಿ ನೋಡಿ ನೀವು ನಿಯಮ ತೆಗೆಸಿ ನೋಡಿ

**ಗೊಂದಲ**

**Mr Speaker** No, No, this is too much ಕುಳಿತುಕೊಳ್ಳಿ

**ಗೊಂದಲ**

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ನಿಯಮ 69ರ ಅಡಿಯಲ್ಲಿ ಆ ರೀತಿ ಮಾತನಾಡಲಿಕ್ಕೆ ಬರುವುದಿಲ್ಲ

**Mr Speaker** Are you questioning the chair? What you are talking? ಈಗೇನಾಗಿದೆ? ನಿಯಮಾವಳಿಯಲ್ಲಿ ಅವಕಾಶ ಇದೆ, ಅದರಂತೆ ಅವರನ್ನು ನಾನು ಕರೆದಿದ್ದೇನೆ ಎಂದು ನಾನು ಹೇಳಿದರೂ ಕೂಡ, ನೀವು ಹೀಗೆ ಹಾಗೆ ಎಂದು ನನ್ನನ್ನು question ಮಾಡುತ್ತಿದ್ದೀರಲ್ಲಾ?

**ಗೊಂದಲ**

**ಶ್ರೀ ವಾಟಾಳ್ ನಾಗರಾಜ್** ಅಧ್ಯಕ್ಷರಿಗೆ ನಾವು ಗೌರವ ಕೊಡುತ್ತೇವೆ ನಮಗೆ ನಿಮ್ಮ ಮೇಲೆ ಗೌರವ ಇದೆ

**ಗೊಂದಲ**

**ಅಧ್ಯಕ್ಷರು** ಈಗ ನಾನು ಒಂದು ಮಾತನ್ನು ಹೇಳುತ್ತೇನೆ ನೀವು ಬರೆದು ಕೊಟ್ಟು ಬಿಡಿ, ನಾನು ಅದರ ಪ್ರಕಾರವೇ ನಡೆದುಕೊಳ್ಳುತ್ತೇನೆ ನಿಯಮ 69ರ ಅಡಿಯಲ್ಲಿ ನಾನು ಬೇರೆಯವರಿಗೆ ಮಾತನಾಡಲು ಅನುಮತಿ ಕೊಡಲಿಕ್ಕೆ ಅವಕಾಶ ಇದೆ, ಅವರು ಅನುಮತಿ ಕೇಳಿದ್ದರು, ನಾನು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ ಎಂದು ಹೇಳಿದರೂ ಕೂಡ ನೀವು ಹಾಗೆ-ಹೀಗೆ, ಹೀಗೆ-ಹಾಗೆ ಎಂದರೆ ಹೇಗೆ? ಏನಿದೆ? I cannot understand

**ಗೊಂದಲ**

**ಅಧ್ಯಕ್ಷರು** ಇಲ್ಲಿ ಏನಾಗಿದೆ ಎಂದರೆ, ಈ ಸಭೆಯಲ್ಲಿ ನಾನು ಗಮನಿಸುತ್ತಿದ್ದೇನೆ ಕೆಲವು ಸದಸ್ಯರುಗಳು ಅವರು ಹೇಳಿದ ಹಾಗೆಯೇ ನಾವು ನಡೆದುಕೊಳ್ಳಬೇಕು, ಅವರು ಹೇಳಿದ ಹಾಗೆ ಸಭೆ ನಡೆಯಬೇಕು ಎಂದು ಭಾವಿಸಿದ್ದಾರೆ ಇದು ಸರಿಯಲ್ಲ That is too much

**ಗೊಂದಲ**

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ನಿಯಮ 69ರ ಅಡಿಯಲ್ಲಿ ಅವರು ಆ ರೀತಿ ಮಾತನಾಡತಕ್ಕದ್ದು ಸರಿಯಲ್ಲ ..

**ಗೊಂದಲ**

**ಅಧ್ಯಕ್ಷರು** ಅವರು ಏನು ಮಾತನಾಡುತ್ತಾರೊ ಕೇಳೋಣ, ಅವರಿಗೆ ಮಾತನಾಡಲು ಅವಕಾಶ ಕೊಡಿ ಎಂದರೆ ನೀವು ಅದಕ್ಕೆ ಅವಕಾಶ ಕೊಡದೇ ಗಲಾಟೆ ಮಾಡುತ್ತಿದ್ದೀರಲ್ಲಾ? ಇದನ್ನು ನಾನು ಒಪ್ಪುವುದಿಲ್ಲ..

ಗೊಂದಲ

**ಶ್ರೀ ಜೆ.ಸಿ ಮಾಧುಸ್ವಾಮಿ** ಮಾನ್ಯ ಅಧ್ಯಕ್ಷರೇ, ದಯಮಾಡಿ ಕ್ಷಮಿಸಬೇಕು.. ..

**ಅಧ್ಯಕ್ಷರು** ಮಾಧುಸ್ವಾಮಿಯವರೇ, ತಾವು ದಯಮಾಡಿ ಒಂದನ್ನು ಇಲ್ಲಿ ಅರ್ಥ ಮಾಡಿಕೊಳ್ಳಬೇಕು ಈ ಸಭೆಯಲ್ಲಿ ಬಹಳ ಘನತೆಯಿಂದ ಚರ್ಚೆ ಮಾಡಬೇಕಾಗುತ್ತದೆ ನಿಯಮಾವಳಿ ಪ್ರಕಾರ ನಾನು ಅವಕಾಶ ಕೊಟ್ಟಿದ್ದೇನೆ ಎಂದರೂ ಸಹ ನೀವು ಈ ರೀತಿ ಪ್ರತಿಯೊಂದಕ್ಕೂ ಅಡ್ಡಿ ಮಾಡಿದರೆ ಏನು ಮಾಡುವುದು? ನಾನು ಹೇಗೆ ಸಭೆ ನಡೆಸುವುದು?

**ಶ್ರೀ ವಾಟಾಳ್ ನಾಗರಾಜ್** ...... ಈ ಸಭೆ ನಿಯಮ ಬಿಟ್ಟು ಹೋಗುವುದಕ್ಕೆ ಆಗುವುದಿಲ್ಲ.

**ಶ್ರೀ ಜೆ ಸಿ ಮಾಧುಸ್ವಾಮಿ** ತಾವು ದಯವಿಟ್ಟು ನಿಯಮದ ಪ್ರಕಾರ ಸಭೆ ನಡೆಸಿ

**ಅಧ್ಯಕ್ಷರು** ನಿಯಮದ ಪ್ರಕಾರವೇ ನಾನು ಸಭೆ ನಡೆಸುತ್ತಿದ್ದೇನೆ

ಗೊಂದಲ

**ಶ್ರೀ ಜೆ.ಸಿ ಮಾಧುಸ್ವಾಮಿ** ನಿಯಮಾವಳಿ ಪ್ರಕಾರ ಯಾರೂ ಕೂಡ ಆ ರೀತಿ ರಿಪ್ಲೈ ಮಾಡಲಿಕ್ಕಾಗುವುದಿಲ್ಲ

ಗೊಂದಲ

**ಶ್ರೀ ವಾಟಾಳ್ ನಾಗರಾಜ್** ಅವರು ಆ ರೀತಿ ನಿಯಮ 69ರ ಅಡಿಯಲ್ಲಿ ರಿಪ್ಲೈ ಮಾಡುವುದಕ್ಕಾಗುವುದಿಲ್ಲ

ಗೊಂದಲ

**ಅಧ್ಯಕ್ಷರು** ಈಗ ನೋಡಿ I have allowed him

**ಶ್ರೀ ಜೆ.ಸಿ ಮಾಧುಸ್ವಾಮಿ** ದಯವಿಟ್ಟು ಕ್ಷಮಿಸಬೇಕು, ಅವರು ಆ ರೀತಿ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ತಾವು ಬಿಡಬಾರದು............

**ಅಧ್ಯಕ್ಷರು** ಸಭೆ ಒಂದು ಆರ್ಡರ್‌ನಲ್ಲಿ ಇಲ್ಲದಿದ್ದರೆ ಆಗ ನೀವು ಅದನ್ನು ಪ್ರಶ್ನಿಸಬಹುದೇ ಹೊರತು, ಈಗ ನೀವು ನನ್ನನ್ನು question ಮಾಡಲಿಕ್ಕೆ ಸಾಧ್ಯವಿಲ್ಲ

ಗೊಂದಲ

**ಶ್ರೀ ವಾಟಾಳ್ ನಾಗರಾಜ್** ಇದು ಸತ್ ಸಂಪ್ರದಾಯ ಆಗುವುದಿಲ್ಲ

ಗೊಂದಲ

**ಶ್ರೀ ಜೆ.ಸಿ ಮಾಧುಸ್ವಾಮಿ** .........ಸಭೆಗೆ ಕೆಟ್ಟ ಸಂಪ್ರದಾಯ ಹಾಕುವುದು ಬೇಡ ಸ್ವಾಮಿ

**ಶ್ರೀ ವಾಟಾಳ್ ನಾಗರಾಜ್** ದಯಮಾಡಿ, ಖಂಡಿತಾ ಇದು ಬೇಡ

ಗೊಂದಲ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** .....ಇಲ್ಲಿ ಹೊಸ precedent ಮಾಡುವುದು ಬೇಡ

**ಅಧ್ಯಕ್ಷರು** ಈ ರೀತಿ ಆದರೆ, ಕೆಲವರು ಮರ್ಜಿ ಮೇಲೆ ಈ ಸಭೆ ನಡೆಯತಕ್ಕದ್ದು ಎನ್ನುವಂತಾದ್ದು ಆದರೆ, ಈ ಸಭೆಯನ್ನು ನಡೆಸಲಿಕ್ಕೆ ಆಗುವುದಿಲ್ಲ ಈಗ ಸದನವನ್ನು ನಾಳೆ ಬೆಳಿಗ್ಗೆ 9 ಗಂಟೆಯವರೆಗೆ ಮುಂದೂಡುತ್ತಿದ್ದೇನೆ

(ಸದನವು ರಾತ್ರಿ 7 02 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 5ನೇ ಆಗಸ್ಟ್ 2004ರಂದು ಬೆಳಿಗ್ಗೆ 9 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

## ಅನುಬಂಧ-I

### ದಿನಾಂಕ 28-7-2004ರ ಚುಕ್ಕೆಗುರುತಿಲ್ಲದ ಪ್ರಶ್ನೋತ್ತರಗಳು

451(615) ಶ್ರೀ ಅಂಗಾರ ಎಸ್. (ಸುಳ್ಯ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸುಳ್ಯ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಪುತ್ತೂರು ತಾಲ್ಲೂಕಿನ ಕ್ಯೂಲ ಕೆ.ಸಿ ಫಾರ್ಮನ್ನು ಕೃಷಿ ವಿಶ್ವವಿದ್ಯಾಲಯವನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ ಎಷ್ಟು ಸಮಯದಲ್ಲಿ ಮಾಡಲಾಗುವುದು?

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

452(616) ಶ್ರೀ ಅಂಗಾರ ಎಸ್ (ಸುಳ್ಯ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಡಾ॥ ಶಿವರಾಮ ಕಾರಂತ ಪ್ರಥಮದರ್ಜೆ ಕಾಲೇಜು, ಬೆಳ್ಳಾರೆ ಸುಳ್ಯ ಇಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಕೊಠಡಿಗಳು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಹಾಗೂ ಕೊಠಡಿಗಳನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ

ಆ) 2004-05ನೇ ಸಾಲಿನಲ್ಲಿ ಒದಗಿಸಲಾಗಿರುವ ಮೊತ್ತದಲ್ಲಿ ಈ ಕಾಲೇಜಿಗೆ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುತ್ತಿದೆ

454(621) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪಶುಪಾಲನೆ, ಮೀನುಗಾರಿಕೆ ವಿಶ್ವವಿದ್ಯಾನಿಲಯ ಸ್ಥಾಪನೆಯ ಪ್ರಸ್ತಾವ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ, ಯಾವಾಗ ಮತ್ತು ವಿಶ್ವವಿದ್ಯಾನಿಲಯಗಳು ಎಲ್ಲಿ ಆರಂಭಿಸಲಾಗುವುದು ಹಾಗೂ ವಿಳಂಬವಾಗಲು ಕಾರಣವೇನು?

ಇ) ಇದಕ್ಕೆ ಬೇಕಾದ ಸ್ಥಳಕ್ಕಾಗಿ ಎಷ್ಟು ಎಕರೆ ಜಾಗ ಗುರುತಿಸಲಾಗಿದೆ?

ಈ) ಸಂಪನ್ಮೂಲ ಕ್ರೋಢಿಕರಣ ಹಾಗೂ ನಿಗದಿಪಡಿಸಿರುವ ಮೊತ್ತವೆಷ್ಟು?

ಉ) ಇದನ್ನು ಖರ್ಚು ಮಾಡಲಾಗಿದೆಯೇ ಅಥವಾ [illegible]

ಊ) ಇಲ್ಲಿದಿದ್ದಲ್ಲಿ, ಹಿಂತಿರುಗಿ ಪಡೆಯಲಾಗಿದೆಯೇ (ವಿವರ ನೀಡುವುದು)

ಋ) ಕುಲಪತಿಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆಯು ವಿಳಂಬವಾಗಲು ಕಾರಣಗಳೇನು?

ೠ) ಇದರಡಿಯಲ್ಲಿ ಸಂಶೋಧನಾ ಕೇಂದ್ರ ಹಾಗೂ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಈ ವಿಶ್ವವಿದ್ಯಾನಿಲಯಗಳಿಗೆ ಯಾವ ಹೆಸರನ್ನಿಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಸರ್ಕಾರದ ಆದೇಶ ಸಂಖ್ಯೆ ಪಸಂಮೀ 150 ವಳಸೇ 2004 ದಿನಾಂಕ 28-02-2004ರ ಅನ್ವಯ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧಿನಿಯಮ 2004ನ್ನು ದಿನಾಂಕ 28-02-2004ರಂದು ಹೊರಡಿಸುವ ಮೂಲಕ ಪಶುವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದಿದೆ

ಆ) ಬೀದರ್‌ನಲ್ಲಿ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗುವುದು, ಕುಲಪತಿಗಳ ನೇಮಕಾತಿ ಪ್ರಕ್ರಿಯೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಕುಲಪತಿಗಳ ನೇಮಕಾತಿ ನಂತರ ಈ ವಿಶ್ವವಿದ್ಯಾನಿಲಯವು ಕಾರ್ಯಾರಂಭ ಮಾಡುವುದು, ಚುನಾವಣೆ ನೀತಿ ಸಂಹಿತೆ ಜಾರಿ ಇದ್ದ ಕಾರಣ ಕುಲಪತಿಗಳ ನೇಮಕಾತಿಗೆ ತಡವಾಗಿದೆ

ಇ) 157 27 ಎಕರೆ ಜಮೀನನ್ನು ನಿಗಧಿಪಡಿಸಿದೆ

ಈ) ರೂ 2 00 ಕೋಟಿ ಯೋಜನೆಯಡಿಯಲ್ಲಿ ನಿಗದಿಪಡಿಸಿದೆ

ಉ) ಇನ್ನೂ ಖರ್ಚು ಮಾಡಿರುವುದಿಲ್ಲ

ಊ) ವಿಶ್ವವಿದ್ಯಾನಿಲಯ ಕಾರ್ಯಾರಂಭವಾದ ನಂತರ ಹಣ ಖರ್ಚು ಮಾಡಲಾಗುವುದು

ಋ) ಚುನಾವಣೆಯ ನೀತಿ ಸಂಹಿತೆ ಜಾರಿಗೆ ಬಂದ ಕಾರಣ ವಿಳಂಬವಾಗಿದ್ದು ಕುಲಪತಿಗಳ ನೇಮಕ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ

ೠ) ಕಾಲೇಜುಗಳ ಸಂಖ್ಯೆ 4
ಸಂಶೋಧನಾ ಕೇಂದ್ರಗಳ ಸಂಖ್ಯೆ-17
ಕರ್ನಾಟಕ ಪಶುವೈದ್ಯಕೀಯ ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಎಂದು ಕರೆಯಲಾಗುವುದು

455(845) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಪಶುಸಂಗೋಪನಾ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು? (ಸಿಬ್ಬಂದಿವಾರು, ಜಿಲ್ಲಾವಾರು, ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಹುದ್ದೆಗಳು ಎಷ್ಟು ಸಮಯದಿಂದ ಖಾಲಿ ಇದೆ ಹಾಗೂ ಇದನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಧಮಸಿಂಗ್ (ಮುಖ್ಯಮಂತ್ರಿಗಳು)

ಅ) ಒಟ್ಟು 4618 ಹುದ್ದೆಗಳು ಖಾಲಿ ಇರುತ್ತವೆ ಸಿಬ್ಬಂದಿವಾರು, ಜಿಲ್ಲಾವಾರು ವಿವರ ಅನುಬಂಧ-1ರಲ್ಲಿ ನೀಡಿದೆ ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ವಿವರ ಅನುಬಂಧ-2ರಲ್ಲಿ ನೀಡಿದೆ

ಆ) (ಅ) 'ಎ' ವೃಂದದ ಅಧಿಕಾರಿ ಹುದ್ದೆಗಳು ಸುಮಾರು ಒಂದು ವರ್ಷದಿಂದ,

(ಆ) ಪಶುವೈದ್ಯಾಧಿಕಾರಿಗಳ ಹುದ್ದೆಗಳು ಐದು ವರ್ಷಗಳಿಂದ ಹಾಗೂ (ಇ) ಇತರೆ ಹುದ್ದೆಗಳು ಸುಮಾರು ಒಂದು ವರ್ಷದಿಂದ ಖಾಲಿ ಇರುತ್ತದೆ ಸಾಮಾನ್ಯ ನೇಮಕಾತಿಗೆ ಸರ್ಕಾರದ ನಿರ್ಬಂಧವಿದ್ದು ರಾಜ್ಯದ್ಯಂತ, ಸದ್ಯದಲ್ಲೆ ವಿಶೇಷ ನೇಮಾಕಾತಿ ನಿಯುಮಗಳಡಿ 250 ಪಶುವೈದ್ಯಾಧಿಕಾರಿಗಳ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ, ಉಳಿದ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ನಿಯಮಾನುಸಾರ ಪರಿಗಣಿಸಲಾಗುವುದು

**ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳ ಜಿಲ್ಲಾವಾರು ವೃಂದವಾರು ವಿವರ**

**ಅನುಬಂಧ-1**

| ಕ್ರ ಸಂ | ಜಿಲ್ಲೆಯ ಹೆಸರು | ಪಶುವೈದ್ಯಕೀಯ ಮೇಲ್ವಿಚಾರಕರು | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | ಪಶುವೈದ್ಯಕೀಯ ಮೇಲ್ವಿಚಾರಕರು | ಪಶುವೈದ್ಯಕೀಯ ಸಹಾಯಕರು | ವಾಹನ ಚಾಲಕರು | ಡಿ ದರ್ಜೆ | ಇತರೆ ವೃಂದ |
|---|---|---|---|---|---|---|---|---|
| 1 | ಬೆಂಗಳೂರು ನಗರ | 4 | 3 | 32 | 13 | 09 | 114 | 24 |
| 2 | ಬೆಂಗಳೂರು ಗ್ರಾ | 10 | 14 | 43 | 37 | 03 | 18 | 0 |
| 3 | ತುಮಕೂರು | 5 | 24 | 27 | 30 | 02 | 80 | 0 |
| 4 | ಚಿತ್ರದುರ್ಗ | 3 | 8 | 26 | 21 | 0 | 14 | 5 |
| 5 | ದಾವಣಗೆರೆ | 6 | 0 | 31 | 68 | 0 | 67 | 0 |
| 6 | ಕೋಲಾರ | 15 | 25 | 68 | 35 | 2 | 63 | 1 |
| 7 | ಶಿವಮೊಗ್ಗ | 9 | 14 | 28 | 42 | 0 | 45 | 1 |
| 8 | ಮೈಸೂರು | 4 | 22 | 2 | 29 | 7 | 40 | 1 |
| 9 | ಚಾಮರಾಜನಗರ | 4 | 11 | 14 | 8 | 6 | 12 | 0 |
| 10 | ದಕ್ಷಿಣ ಕನ್ನಡ | 2 | 26 | 26 | 47 | 3 | 61 | 1 |
| 11 | ಉಡುಪಿ | 2 | 18 | 14 | 28 | 3 | 78 | 0 |
| 12 | ಹಾಸನ | 6 | 18 | 34 | 35 | 1 | 21 | 0 |
| 13 | ಚಿಕ್ಕಮಗಳೂರು | 12 | 9 | 18 | 16 | 1 | 99 | 7 |
| 14 | ಮಂಡ್ಯ | 7 | 27 | 16 | 45 | 4 | 46 | 3 |
| 15 | ಕೊಡಗು | 5 | 5 | 41 | 13 | 3 | 52 | 2 |
| 16 | ಬೆಳಗಾವಿ | 2 | 0 | 17 | 33 | 6 | 63 | 6 |
| 17 | ಬಿಜಾಪುರ | 1 | 1 | 1 | 29 | 1 | 32 | 1 |
| 18 | ಬಾಗಲಕೋಟೆ | 2 | 4 | 0 | 11 | 3 | 43 | 0 |
| 19 | ಧಾರವಾಡ | 2 | 1 | 11 | 9 | 2 | 10 | 2 |
| 20 | ಗದಗ | 2 | 4 | 8 | 25 | 1 | 16 | 0 |
| 21 | ಹಾವೇರಿ | 3 | 14 | 13 | 30 | 1 | 37 | 0 |
| 22 | ಉತ್ತರ ಕನ್ನಡ | 4 | 18 | 19 | 27 | 6 | 89 | 1 |
| 23 | ಗುಲ್ಬರ್ಗಾ | 7 | 0 | 0 | 26 | 4 | 99 | 1 |

| | | | | | | | | |
|---|---|---|---|---|---|---|---|---|
| 24 | ಬಳ್ಳಾರಿ | 4 | 0 | 13 | 23 | 5 | 44 | 3 |
| 25 | ಬೀದರ್ | 5 | 0 | 2 | 4 | 2 | 51 | 1 |
| 26 | ರಾಯಚೂರು | 0 | 0 | 3 | 30 | 3 | 45 | 1 |
| 27 | ಕೊಪ್ಪಳ | 4 | 2 | 2 | 33 | 2 | 30 | 1 |
| 28 | *ಮಾದರಿ ಸಮೀಕ್ಷೆ ಯೋಜನೆ | | | | 11* | | | |
| | ಒಟ್ಟು | 130 | 268 | 509 | 738 | 80 | 1369 | 62 |
| | | | | | 311* | | | |
| | *ಗುತ್ತಿಗೆ ಆಧಾರ | | | | 1069 | | | |

## ಅನುಬಂಧ-1

### ದಿನಾಂಕ 30-6-2004 ರಂತೆ ಪಶುಪಾಲನಾ ಇಲಾಖೆಯಲ್ಲಿ ಇರುವ ಖಾಲಿ ಹುದ್ದೆಗಳ ವಿವರ

| ಕ್ರಮ ಸಂ | ಪದನಾಮ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಹುದ್ದೆಗಳು |
|---|---|---|---|---|
| 1 | ನಿರ್ದೇಶಕರು | 1 | 1 | 0 |
| 2 | ಅಪರ ನಿರ್ದೇಶಕರು | 2 | 1 | 1 |
| 3 | ಜಂಟಿ ನಿರ್ದೇಶಕರು | 4 | 4 | 0 |
| 4 | ಜಂಟಿ ನಿರ್ದೇಶಕರು (ಅಂಕಿಅಂಶ) | 1 | 1 | 0 |
| 5 | ಉಪ ನಿರ್ದೇಶಕರು | 53 | 50 | 3 |
| 6 | ಆರ್ಥಿಕ ಸಹಾಯಕರು | 1 | 1 | 0 |
| 7 | ಕೇಂದ್ರ ಕಛೇರಿ ಸಹಾಯಕರು | 2 | 0 | 2 |
| 8 | ಆಡಳಿತ ಸಹಾಯಕರು | 11 | 9 | 2 |
| 9 | ಸಹಾಯಕ ನಿರ್ದೇಶಕರು | 469 | 418 | 51 |
| 10 | ಸಹಾಯಕ ನಿರ್ದೇಶಕರು (ಅಂಕಿಅಂಶ) | 4 | 2 | 2 |
| 11 | ಪಶುವೈದ್ಯಾಧಿಕಾರಿ | 1875 | 853 | 1022* |
| 12 | ಪಶುವೈದ್ಯಕೀಯ ಮೇಲ್ವಿಚಾರಕರು | 266 | 136 | 130 |
| 13 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 2101 | 1833 | 268 |
| 14 | ಪಶುವೈದ್ಯಕೀಯ ಪರೀಕ್ಷಕರು | 1656 | 1147 | 509 |
| 15 | ಪಶುವೈದ್ಯಕೀಯ ಸಹಾಯಕರು | 2442 | 1373 | 1069* |
| 16 | ಅಧೀಕ್ಷಕರು | 69 | 69 | 0 |
| 17 | ಪ್ರಥಮ ದರ್ಜೆ ಸಹಾಯಕರು | 179 | 178 | 1 |
| 18 | ದ್ವಿತೀಯ ದರ್ಜೆ ಸಹಾಯಕರು | 217 | 192 | 25 |
| 19 | ಶೀಘ್ರಲಿಪಿಗಾರರು | 11 | 8 | 3 |

| | | | | |
|---|---|---|---|---|
| 20 | ಹಿರಿಯ ಬೆರಳಚ್ಚುಗಾರರು | 11 | 8 | 3 |
| 21 | ಬೆರಳಚ್ಚುಗಾರರು | 91 | 75 | 16 |
| 22 | ವಾಹನ ಚಾಲಕರು | 297 | 217 | 80 |
| 23 | ಡಿ ದರ್ಜೆ ನೌಕರರು | 6484 | 5115 | 1369 |
| | ಇತರೆ ವೃಂದ | 94 | 32 | 62 |
| | ಒಟ್ಟು | 16341 | 11723 | 4618 |

* 192 ಪಶುವೈದ್ಯಾಧಿಕಾರಿಗಳು ಹಾಗೂ 311 ಪಶುವೈದ್ಯ ಸಹಾಯಕರು ಗುತ್ತಿಗೆ ಆದಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ

## ಅನುಬಂಧ-2

### ಶಿವಮೊಗ್ಗ ಜಿಲ್ಲೆಯ ತಾಲ್ಲೂಕುವಾರು ಸಿಬ್ಬಂದಿವಾರು ಖಾಲಿ ಹುದ್ದೆಗಳ ವಿವರ

ಪ್ರಶ್ನೆ ಸಂಖ್ಯೆ 845

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಭದ್ರಾವತಿ | ಹೊಸನಗರ | ಸಾಗರ | ತೀರ್ಥಹಳ್ಳಿ | ಸೊರಬ | ಶಿಕಾರಿಪುರ | ಶಿವಮೊಗ್ಗ | ಒಟ್ಟು |
|---|---|---|---|---|---|---|---|---|---|
| 1 | ಪಶುವೈದ್ಯಾಧಿಕಾರಿಗಳು | 6 | 2 | 2 | 8 | 4 | 1 | – | 23 |
| 2 | ಪಶುವೈದ್ಯಕೀಯ ಮೇಲ್ವಿಚಾರಕರು | – | – | 2 | 1 | 2 | 1 | 1 | 7 |
| 3 | ಹಿರಿಯ ಪಶು ಪರೀಕ್ಷಕರು | – | 2 | – | – | 10 | 1 | 2 | 15 |
| 4 | ಪಶುವೈದ್ಯಕೀಯ ಪರೀಕ್ಷಕರು | 2 | 2 | 5 | 9 | 2 | 4 | 4 | 28 |
| 5 | ಪಶುವೈದ್ಯಕೀಯ ಸಹಾಯಕರು | 1 | 7 | 8 | 9 | 9 | 8 | – | 42 |
| 6 | ಡಿ ದರ್ಜೆ ನೌಕರರು | 8 | 13 | 4 | 13 | 11 | 10 | 1 | 90 |
| | ಒಟ್ಟು | 17 | 26 | 21 | 40 | 38 | 25 | 8 | 175 |

| ಕ್ರ | ಜಿಲ್ಲೆಯ ಹೆಸರು | ನಿರ್ದೇಶಕರು | ಅಪರ | ಜಂಟಿ | ಜಂಟಿ | ಉಪ | ಸಹಾಯಾಕ | ಕೇಂದ್ರಕಛೇರಿಆರ್ಥಿಕ | ಸಹಾಯಕ | ಆಡಳಿತ | ಪಶುವೈದ್ಯಾಧಿ | |
|---|---|---|---|---|---|---|---|---|---|---|---|---|
| ಸಂ | | | ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ಸಹಾಯಕರು | ಸಹಾಯಕರು | ನಿರ್ದೇಶಕರು | ಸಹಾಯಕರು | ಕಾರಿಗಳು |
| 1 | ಬೆಂಗಳೂರುನಗರ | – | 1 | – | 0 | 2 | 2 | 2 | – | 0 | – | 2 |
| 2 | ಬೆಂಗಳೂರು ಗ್ರಾ | – | – | – | – | 0 | – | – | – | 0 | – | 18 |
| 3 | ತುಮಕೂರು | – | – | – | – | 0 | – | – | – | 1 | 1 | 38 |
| 4 | ಚಿತ್ರದುರ್ಗ | – | – | – | – | 1 | – | – | – | 2 | – | 26 |
| 5 | ದಾವಣಗೆರೆ | – | – | – | – | 0 | – | – | – | 0 | – | 24 |
| 6 | ಕೋಲಾರ | – | – | – | – | – | – | – | – | 1 | – | 43 |
| 7 | ಶಿವಮೊಗ್ಗ | – | – | – | – | – | – | – | – | 0 | – | 22 |
| 8 | ಮೈಸೂರು | – | – | – | – | – | – | – | – | 0 | – | 32 |
| 9 | ಚಾಮರಾಜನಗರ | – | – | – | – | – | – | – | – | 0 | – | 13 |
| 10 | ದಕ್ಷಿಣಕನ್ನಡ | – | – | – | – | – | – | – | – | 1 | – | 13 |
| 11 | ಉಡುಪಿ | – | – | – | – | – | – | – | – | 0 | – | 13 |
| 12 | ಹಾಸನ | – | – | – | – | – | – | – | – | 0 | – | 37 |
| 13 | ಚಿಕ್ಕಮಗಳೂರು | – | – | – | – | – | – | – | – | 0 | – | 33 |
| 14 | ಮಂಡ್ಯ | – | – | – | – | – | – | – | – | 0 | – | 30 |
| 15 | ಕೊಡಗು | – | – | – | – | – | – | – | – | 0 | – | 16 |
| 16 | ಬೆಳಗಾವಿ | – | – | – | – | – | – | – | – | 3 | 1 | 59 |
| 17 | ಬಿಜಾಪುರ | – | – | – | – | – | – | – | – | 3 | – | 26 |
| 18 | ಬಾಗಲಕೋಟೆ | – | – | – | – | – | – | – | – | 5 | – | 26 |
| 19 | ಧಾರವಾಡ | – | – | – | – | – | – | – | – | 3 | – | 21 |
| 20 | ಗದಗ | – | – | – | – | – | – | – | – | 2 | – | 31 |

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
|---|---|---|---|---|---|---|---|---|---|---|---|---|
| 21 | ಹಾವೇರಿ | – | – | – | – | – | – | – | – | 3 | – | 42 |
| 22 | ಉತ್ತರ ಕನ್ನಡ | – | – | – | – | – | – | – | – | 2 | – | 53 |
| 23 | ಗುಲ್ಬರ್ಗಾ | – | – | – | – | – | – | – | – | 7 | – | 84 |
| 24 | ಬಳ್ಳಾರಿ | – | – | – | – | – | – | – | – | 2 | – | 38 |
| 25 | ಬೀದರ್ | – | – | – | – | – | – | – | – | 7 | – | 26 |
| 26 | ರಾಯಚೂರು | – | – | – | – | – | – | – | – | 3 | 1 | 37 |
| 27 | ಕೊಪ್ಪಳ | – | – | – | – | – | – | – | – | 6 | – | 27 |
| | ಒಟ್ಟು | – | 1 | – | 0 | 3 | 2 | 2 | – | 51 | 3 | 830 |

** 192 ಪಶುವೈದ್ಯಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ

ಖಾಲಿ ಹುದ್ದೆಗಳ ವಿವರ

| ಕ್ರ ಸಂ | ಜಿಲ್ಲೆಯ ಹೆಸರು | ಅಧೀಕ್ಷಕರು | ಪ್ರಥಮ ದರ್ಜೆ ಸಹಾಯಕರು | ದ್ವಿತೀಯ ದರ್ಜೆ ಸಹಾಯಕರು | ಶೀಘ್ರಲಿಪಿಗಾರರು | ಹಿರಿಯ ಬೆರಳಚ್ಚುಗಾರರು | ಬೆರಳಚ್ಚುಗಾರರು |
|---|---|---|---|---|---|---|---|
| 1 | ಬೆಂಗಳೂರು ನಗರ | – | – | 10 | 3 | 3 | – |
| 2 | ಬೆಂಗಳೂರು ಗ್ರಾ | – | – | 2 | – | – | – |
| 3 | ತುಮಕೂರು | – | – | 1 | – | – | 1 |
| 4 | ಚಿತ್ರದುರ್ಗ | – | – | – | – | – | 1 |
| 5 | ದಾವಣಗೆರೆ | – | – | – | – | – | – |
| 6 | ಕೋಲಾರ | – | – | 4 | – | – | 1 |
| 7 | ಶಿವಮೊಗ್ಗ | – | – | – | – | – | – |
| 8 | ಮೈಸೂರು | – | – | – | – | – | – |
| 9 | ಚಾಮರಾಜನಗರ | – | – | – | – | – | – |
| 10 | ದಕ್ಷಿಣ ಕನ್ನಡ | – | – | 1 | – | – | 1 |
| 11 | ಉಡುಪಿ | – | – | – | – | – | – |
| 12 | ಹಾಸನ | – | – | 2 | – | – | 2 |
| 13 | ಚಿಕ್ಕಮಗಳೂರು | – | – | 3 | – | – | – |
| 14 | ಮಂಡ್ಯ | – | – | 1 | – | – | 1 |
| 15 | ಕೊಡಗು | – | – | – | – | – | 2 |
| 16 | ಬೆಳಗಾವಿ | – | – | – | – | – | – |
| 17 | ಬಿಜಾಪುರ | – | – | – | – | – | – |
| 18 | ಬಾಗಲಕೋಟೆ | – | – | – | – | – | – |
| 19 | ಧಾರವಾಡ | – | 1 | – | – | – | – |
| 20 | ಗದಗ | – | – | 1 | – | – | 1 |
| 21 | ಹಾವೇರಿ | – | – | – | – | – | 2 |
| 22 | ಉತ್ತರ ಕನ್ನಡ | – | – | – | – | – | – |
| 23 | ಗುಲ್ಬರ್ಗಾ | – | – | – | – | – | – |
| 24 | ಬಳ್ಳಾರಿ | – | – | – | – | – | 1 |
| 25 | ಬೀದರ್ | – | – | – | – | – | 2 |
| 26 | ರಾಯಚೂರು | – | – | 1 | – | – | – |
| 27 | ಕೊಪ್ಪಳ | – | – | – | – | – | 1 |
| | ಒಟ್ಟು | – | 1 | 25 | 3 | 3 | 16 |

456(848) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶಿವಮೊಗ್ಗ ಎ ಪಿ ಎಂ ಸಿ ವ್ಯಾಪ್ತಿಗೆ ಯಾವ ಯಾವ ತಾಲ್ಲೂಕುಗಳು ಸೇರುತ್ತವೆ

ಆ) ಈ ಎ ಪಿ ಎಂ ಸಿ ವ್ಯಾಪ್ತಿಯಲ್ಲಿ ಸೆಸ್ ಮೂಲಕ ಸಂಗ್ರಹವಾಗಿರುವ ಹಣ ಎಷ್ಟು?

ಇ) ಈ ಸಾಲಿನಲ್ಲಿ ಚುನಾಯಿತ ಆಡಳಿತ ಮಂಡಳಿ ರದ್ದಾದ ಮೇಲೆ ಇದುವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ (ಕಾಮಗಾರಿವಾರು ವಿವರ ನೀಡುವುದು)

ಈ) ಈ ಸಾಲಿನಲ್ಲಿ ರಸ್ತೆ ಕಾಮಗಾರಿಗೆ ನಿಗದಿಪಡಿಸಿದ ಹಣ ಎಷ್ಟು ಹಾಗೂ ಇದರಲ್ಲಿ ಯಾವುದಾದರೂ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಉತ್ತರ

ಆ) ಶಿವಮೊಗ್ಗ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳು

| ಕ್ರ ಸಂ | ವರ್ಷ | ವಸೂಲಾದ ಮಾರುಕಟ್ಟೆ ಶುಲ್ಕ ರೂ ಪೈ |
|---|---|---|
| 1 | 2001–02 | 4,32,19,968–00 |
| 2 | 2002–03 | 3,89,80,678–00 |
| 3 | 2003–04 | 4,24,32,864–00 |
| 4 | ಏಪ್ರಿಲ್–04 ರಿಂದ ಜೂನ್–04 ರವರೆಗೆ | 1,33,17,427–00 |

ಇ) ರೂ 2,57,11,969/–

ತಃಖ್ತೆಯನ್ನು ಅನುಬಂಧ–1 ರಲ್ಲಿ ಲಗತ್ತಿಸಿ ಸಲ್ಲಿಸಿದೆ

ಈ) 2004–05ನೇ ಸಾಲಿನಲ್ಲಿ ವಾರ್ಷಿಕ ಕ್ರಿಯಾ ಯೋಜನೆಯಡಿ ಮುಖ್ಯ ಮಾರುಕಟ್ಟೆ ಪ್ರಾಂಗಣದ ರಸ್ತೆ ನಿರ್ಮಾಣಕ್ಕೆ ರೂ 15 00 ಲಕ್ಷಗಳು ಮಂಜೂರು ಮಾಡಲಾಗಿದೆ ಅಂದಾಜು ಪಟ್ಟಿ ತಯಾರಿಸುವ ಪ್ರಕ್ರಿಯೆ ಚಾರಿಯಲ್ಲದೆ

## ಅನುಬಂಧ–1

## ಚುನಾಯಿತ ಆಡಳಿತ ಮಂಡಳಿ ರದ್ದಾದ ಮೇಲೆ ಇದುವರೆವಿಗೂ ಸಮಿತಿವತಿಯಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ವಿವರಗಳು (ದಿನಾಂಕ 03-12-2003 ರಿಂದ 21-07-2004 ರವರೆಗೆ)

| ಕ್ರ ಸಂ | ಅಭಿವೃದ್ಧಿ ಕಾಮಗಾರಿಗಳ ವಿವರ | ಮೊಬಲಗು |
|---|---|---|
| 1 | ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಲಗತ್ತಾಗಿರುವ 5 ಎಕರೆ ಜಾಗದಲ್ಲಿ (ರೈತ ಬಜಾರ್‌ನಲ್ಲಿ) ಶೌಚಾಲಯ ನಿರ್ಮಾಣ ಕಾಮಗಾರಿ | 1 04 492–00 |
| 2 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಿ ದರ್ಜೆ ನೌಕರರ ವಸತಿಗೃಹ ನಿರ್ಮಾಣ ಕಾಮಗಾರಿ | 6 73 424–00 |
| 3. | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ | 23 32,295 00 |
| 4 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹೆಚ್ಚುವರಿ ಮೋರಿಗಳ ನಿರ್ಮಾಣ ಕಾಮಗಾರಿ | 89 26[illegible]–00 |
| 5. | ಮುಖ್ಯ ಮಾರುಕಟ್ಟೆ [illegible] 10 ಅಡಿ [illegible] | |

| | | |
|---|---|---|
| 6 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಿ ದರ್ಜೆ ನೌಕರರ ವಸತಿಗೃಹಗಳಿಗೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ | 87 786–00 |
| 7 | ಮುಖ್ಯ ಮಾರುಕಟ್ಟೆ ಪ್ರಾಂಗಣದ ಆಡಳಿತ ಕಛೇರಿ ಆವರಣದಲ್ಲಿ ಸೈಕಲ್ ಸ್ಟ್ಯಾಂಡ್ ಹಾಗೂ ಮಿನಿ ಬಸ್ ಶೆಲ್ಟರ್ ನಿರ್ಮಾಣ ಕಾಮಗಾರಿ | 3,85,506–00 |
| 8 | ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಲಗತ್ತಾಗಿರುವ 5 ಎಕರೆ ಜಾಗದಲ್ಲಿ ನೆಲಮಟ್ಟ ಹಾಗೂ ಜಂಗಲ್ ಕ್ಲಿಯರೆನ್ಸ್ ಮಾಡುವ ಕಾಮಗಾರಿ | 1 04 017–00 |
| 9 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 14 ಸಂಖ್ಯೆ ಭತ್ತದ ಗೋದಾಮು ಹತ್ತಿರ ಕ್ಯಾಂಟೀನ್ ಕಟ್ಟಡ ನಿರ್ಮಾಣ ಕಾಮಗಾರಿಯ 1ನೇ ಬಿಲ್ಲು | 1 99,501–00 |
| 10 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಎಲ್ಲಾ ಆಂತರಿಕ ರಸ್ತೆಗಳಿಗೆ ಮರು ಡಾಂಬರೀಕರಣ ಕಾಮಗಾರಿಯ 2ನೇ ಚಾಲ್ತಿ ಬಿಲ್ಲು | 75,28,523–00 |
| 11 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 5 ಎಕರೆ ಜಾಗದಲ್ಲಿ ಕಮಾನು ನಾಮ ಫಲಕ ನಿರ್ಮಾಣ ಕಾಮಗಾರಿ | 94 096–00 |
| 12 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಮಾಲರ ವಸತಿಗೃಹಗಳಿಗೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿ | 1 04,535–00 |
| 13. | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮಾರಾಟ ಭವನದ ಕಿಟಕಿಗಳಿಗೆ ಮೆಶ್ ಅಳವಡಿಸುವ ಕಾಮಗಾರಿ | 1 00 056–00 |
| 14 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹೊಸ ಜಮೀನಿನ ಉತ್ತರ ಭಾಗದ ರಿಂಗ್ ರಸ್ತೆಗೆ ಡಾಂಬರೀಕರಣ ಕಾಮಗಾರಿ | 3 48 709–00 |
| 15 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಮಾಲರ ವಸತಿಗೃಹ ನಿವೇಶನದಲ್ಲಿ ಮೋರಿ ನಿರ್ಮಾಣದ 2ನೇ ಅಂತಿಮ ಬಿಲ್ಲು | 2 11 048–00 |
| 16 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಟಾಯ್ಲೆಟ್ ಕೊಠಡಿಗಳ ಕಿಟಕಿ ಬಾಗಿಲು ದುರಸ್ತಿ ಮಾಡುವ ಕಾಮಗಾರಿ (ಅಂತಿಮ ಬಿಲ್ಲು) | 1,83 678–00 |
| 17 | ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಮಾಲರ ವಸತಿಗೃಹ ನಿವೇಶನದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಯ 1ನೇ ಭಾಗಶ ಬಿಲ್ಲು | 89 396–00 |
| | **ಒಟ್ಟು** | **1 26 40 954–00** |
| | ಉಪ ಮಾರುಕಟ್ಟೆ ತೀರ್ಥಹಳ್ಳಿ | |
| 1 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ನೆಲವನ್ನು ಮಟ್ಟ ಮಾಡುವ ಕಾಮಗಾರಿಯ ಅಂತಿಮ ಬಿಲ್ಲು | 2 86,391–00 |
| 2 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 2ನೇ ಕ್ರಾಸ್ 3ನೇ ಕ್ರಾಸ್ ಉಳಿದ ರಸ್ತೆಗಳ ಕಾಮಗಾರಿಯ ಅಂತಿಮ ಬಿಲ್ಲು | 1,85,265–00 |
| 3. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಆರ್ ಸಿ.ಸಿ ಕೊಳವೆ ಬಾವಿ ನಿರ್ಮಾಣ ಕಾಮಗಾರಿ | 19 781–00 |
| 4 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ನಿರ್ಮಿಸಿರುವ 5 ಸಂಖ್ಯೆ ಗೋದಾಮುಗಳ ಮುಂಭಾಗದಲ್ಲಿ ಡೆಕ್‌ಸ್ಲ್ಯಾಬ್ ನಿರ್ಮಾಣ ಕಾಮಗಾರಿ | 4 22 619–00 |

| | | |
|---|---|---|
| 5. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ಉಪ ಮಾರುಕಟ್ಟೆ ಹಳೇ ಪ್ರಾಂಗಣದಲ್ಲಿ ಭದ್ರತಾ ಕೊಠಡಿ-ಕಂ-ವಿಶ್ರಾಂತಿ ಗೃಹ ನಿರ್ಮಾಣದ 2ನೇ ಅಂತಿಮ ಬಿಲ್ಲು | 94 484-00 |
| 6. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 5 ಸಂಖ್ಯೆ ಗೋದಾಮುಗಳನ್ನು ನಿರ್ಮಿಸುವ ಕಾಮಗಾರಿಯ ಅಂತಿಮ ಬಿಲ್ಲು | 10,38,775-00 |
| 7 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ರಸ್ತೆಗಳ ನಿರ್ಮಾಣ ಕಾಮಗಾರಿಯ 2ನೇ ಭಾಗಶಃ ಬಿಲ್ಲು | 8 73 129-00 |
| | **ಒಟ್ಟು** | **29 20 444-00** |
| | **ಕೋಣಂದೂರು ಉಪ ಮಾರುಕಟ್ಟೆ** | |
| 1 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಕೋಣಂದೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ನೀರು ಸರಬರಾಜು ಕಲ್ಪಿಸುವ 1ನೇ ಹಾಗೂ ಭಾಗಶ. ಬಿಲ್ಲು | 86 704-00 |
| 2 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಕೋಣಂದೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಶೌಚಾಲಯ ನಿರ್ಮಾಣ ಕಾಮಗಾರಿ | 45 216-00 |
| | **ಒಟ್ಟು** | **1 31 920-00** |
| | ಆಯನೂರು ಉಪ ಮಾರುಕಟ್ಟೆ | |
| 1 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಆಯನೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 6 ಸಂಖ್ಯೆ ಡೆಕ್‌ಸ್ಲ್ಯಾಬ್ ನಿರ್ಮಾಣ ಕಾಮಗಾರಿಯ 2ನೇ ಅಂತಿಮ ಬಿಲ್ಲು | 5,098-00 |
| 2 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಆಯನೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕಮಾನು ನಾಮ ಫಲಕ ನಿರ್ಮಾಣ ಕಾಮಗಾರಿ | 1 43 491-00 |
| | **ಒಟ್ಟು** | **1 48 589-00** |
| | **ಹೊಳಲೂರು ಉಪ ಮಾರುಕಟ್ಟೆ** | |
| 1 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಹೊಳಲೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿಯ 3ನೇ ಅಂತಿಮ ಬಿಲ್ಲು | 48 907-00 |
| 2 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಹೊಳಲೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಆವರಣ ಗೋಡೆ ನಿರ್ಮಾಣ ಕಾಮಗಾರಿ | 7 13 678-00 |
| 3. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಹೊಳಲೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಆಂತರಿಕ ರಸ್ತೆಗಳಿಗೆ ಜಲ್ಲಿ ಬಿಚಾವಣೆ ಹಾಗೂ ಬಾಕ್ಸ್ ಡ್ರೈನ್ ನಿರ್ಮಾಣ | 5 69,665-00 |
| 4 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಹೊಳಲೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 2 ಸಂಖ್ಯೆ ಹರಾಜುಕಟ್ಟೆ ನಿರ್ಮಾಣ ಕಾಮಗಾರಿಯ 2ನೇ ಅಂತಿಮ ಬಿಲ್ಲು | 6 97 443-00 |
| | **ಒಟ್ಟು** | **20 29 693-00** |

**ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಶಿವಮೊಗ್ಗ ಹಾಗೂ ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ನಿರ್ಮಾಣ ಮಾಡಲಾದ ಗ್ರಾಮೀಣ ಗೋದಾಮು ಕಾಮಗಾರಿಗಳ ವಿವರ**

**ಶಿವಮೊಗ್ಗ ತಾಲ್ಲೂಕು –**

| | | |
|---|---|---|
| 1 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಕಾಚಿನಕಟ್ಟೆ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿಯ 2ನೇ ಅಂತಿಮ ಬಿಲ್ಲು | 1,31,583- 00 |
| 2 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿ | 3 44 173-00 |

| | | |
|---|---|---|
| 3. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಹಸೂಡಿ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿ | 3,39,149–00 |
| 4 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಮಡಿಕೆಚೀಲೂರು ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿ | 3,41,208–00 |
| 5. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಮಲೆಶಂಕರ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿ 1ನೇ ಭಾಗಶಃ ಬಿಲ್ಲು | 1 99 738–00 |
| 6 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಸೂಳೇಬೈಲು ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾ 1ನೇ ಭಾಗಶ ಬಿಲ್ಲು | 2,21,324–00 |
| 7 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ತ್ಯಾಜವಳ್ಳಿ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿ 2ನೇ ಅಂತಿಮ ಬಿಲ್ಲು | 1 12 168–00 |
| 8 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ತಮ್ಮಡೀಹಳ್ಳಿ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿಯ 1ನೇ +ಭಾಗಶಃ ಬಿಲ್ಲು | 2 21 006–00 |
| 9 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಹಾರ್ನಳ್ಳಿ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿಯ 2ನೇ ಅಂತಿಮ ಬಿಲ್ಲು | 1 16 938–00 |
| 10 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಹೊಳಲೂರು ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿಯ 1ನೇ ಭಾಗಶ ಬಿಲ್ಲು | 4,25 648–00 |
| | **ಒಟ್ಟು** | **24 52 935–00** |
| | **ತೀರ್ಥಹಳ್ಳಿ ತಾಲ್ಲೂಕು –** | |
| 1 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಅರಳಸುರಳಿ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿ | 3,13 451–00 |
| 2 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ತೀರ್ಥಹಳ್ಳಿ ತಾಲ್ಲೂಕು ಸಾಲೇಕೊಪ್ಪ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿಯ 2ನೇ ಹಾಗೂ ಅಂತಿಮ ಬಿಲ್ಲು | 1,33 403–00 |
| 3. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಹೆರಂಬಾಪುರ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿಯ 2ನೇ ಅಂತಿಮ ಬಿಲ್ಲು | 1,23,265–00 |
| 4 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಹಾರೋಗುಳಿಗೆ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿ | 3 73,294–00 |
| 5. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಕವಲೇದುರ್ಗ ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿಯ 1ನೇ ಭಾಗಶ ಬಿಲ್ಲು | 1 81 164–00 |
| 6 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಕೆಂದಾಳಬೈಲು ಗ್ರಾಮದಲ್ಲಿ ಗ್ರಾಮೀಣ ಗೋದಾಮು ನಿರ್ಮಾಣ ಕಾಮಗಾರಿಯ 2ನೇ ಅಂತಿಮ ಬಿಲ್ಲು | 1 95 722–00 |
| | **ಒಟ್ಟು** | **13 20 299 00** |

**ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ 60(ಬಿ) ಯೋಜನೆಯಡಿಯಲ್ಲಿ ನಿರ್ಮಿಸಲಾದ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿಗಳ ವಿವರ**

ಶಿವಮೊಗ್ಗ ತಾಲ್ಲೂಕು –

| | | |
|---|---|---|
| 1 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ತ್ಯಾಜವಳ್ಳಿ ಗ್ರಾಮದಿಂದ ಅಂಬಳಿಕಟ್ಟೆ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 98 970–00 |

| | | |
|---|---|---|
| 2 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಭೂತಪ್ಪನಗುಡಿಯಿಂದ ಜಮೀನಿಗೆ ಹೋಗುವ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 50,308–00 |
| 3. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಬಿ.ಹೆಚ್ ರಸ್ತೆಯಿಂದ ಹುಬ್ಬನಹಳ್ಳಿ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 74 776–00 |
| 4 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಭದ್ರಾಪುರದಿಂದ ಕೂಡ್ಲಿ ಕ್ರಾಸ್‌ವರೆಗಿನ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 74 226–00 |
| 5. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಕೂಡ್ಲಿಯಿಂದ ಭುತಪ್ಪನ ಗುಡಿ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 49 231–00 |
| 6 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಬಿ ಹೆಚ್ ರಸ್ತೆಯಿಂದ ಆಯನೂರು ಫಾರೆಸ್ಟ್ ಆಫೀಸ್ ಪಕ್ಕದ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 73 774–00 |
| 7 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಬಿ ಹೆಚ್ ರಸ್ತೆಯಿಂದ ವೀರಭದ್ರಸ್ವಾಮಿ ದೇವಸ್ಥಾನದ ಮುಖಾಂತರ ಜಮೀನುಗಳಿಗೆ ಸೇರುವ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 32 125–00 |
| 8 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಆಯನೂರು ಕೋಟೆ ಸೇವಾಲಾಲ್ ದೇವಸ್ಥಾನದ ಮುಖಾಂತರ ಜಮೀನುಗಳಿಗೆ ಹೋಗುವ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 72 121–00 |
| 9 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ದೊಡ್ಡತಾಂಡದಿಂದ ಮಹೇಶ್‌ರವರ ಜಮೀನುಗಳಿಗೆ ಹೋಗುವ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 99 792--00 |
| 10 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಬಿ.ಹೆಚ್ ರಸ್ತೆಯಿಂದ ಗುಡ್ಡದ ಅರಕೆರೆಗೆ ಹೋಗುವ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ | 98 789–00 |
| 11 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಗುಡ್ಡದಅರಕೆರೆ ರಸ್ತೆಯಿಂದ ಜಮೀನುಗಳಿಗೆ ಹೋಗುವ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 95,000–00 |
| 12 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಗುಡ್ಡದಅರಕೆರೆ ರಸ್ತೆಯಿಂದ ಬಿ ಹೆಚ್ ರಸ್ತೆ ಕಡೆ ಹೋಗುವ (ಜಮೀನುಗಳಿಗೆ ಹೋಗುವ) ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 94 874–00 |
| 13 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಕೊನಗವಳ್ಳಿ ಪಾಲಕೇಶ್ವರ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 98 604–00 |
| 14 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಹಾರ್ನಳ್ಳಿ ಗ್ರಾಮದಲ್ಲಿ ಕೆಸುವಿನಕಟ್ಟೆ ಸ್ಮಶಾನದ ಗ್ರಾಮೀಣ ಸಂಪರ್ಕ ರಸ್ತ ಅಭಿವೃದ್ಧಿ ಕಾಮಗಾರಿ | 98,530–00 |
| | **ಒಟ್ಟು** | **11 11 120–00** |
| | **ತೀರ್ಥಹಳ್ಳಿ ತಾಲ್ಲೂಕು –** | |
| 1 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಗಣಪತಿ ಶೇಡ್ಗಾರ್ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 99 156–00 |
| 2 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಹುಲಿಗುದ್ದು ಹೊನ್ನಾನಿ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 48,300–00 |

| | | |
|---|---|---|
| 3. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಬೆಟ್ಟಬಸವಾನಿ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 99 000–00 |
| 4 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಹುರುಳಿ ಅಗಸರಕೇರಿ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 94 951–00 |
| 5. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಬಸವಾನಿ ಬಂಡಿಗಡಿ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 49,312–00 |
| 6 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ನಡಬೂರಿನಿಂದ ಹಡ್ಲುಕೊಪ್ಪ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 98 449–00 |
| 7 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಪುರಂದರಪುರ ಕಿರಣ ಕೆರೆಯಿಂದ ಗಡಿಕಲ್ಲು ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 67 690–00 |
| 8 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಮಳಲೀಮಕ್ಕಿ ಯೋಗಿಮಳಲಿ ರಸ್ತೆಯಿಂದ ಯೋಗ್ಯ ಊರಿನವರೆಗೆ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 94,300–00 |
| 9 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಚಿಕ್ಕಳೂರಿನಿಂದ ಕಾರ್ಬೈಲು ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 98 736–00 |
| 10 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ನೇರಲಮನೆ ಟಿಎನ್ ರಸ್ತೆಯಿಂದ ನೇರಲಮನೆ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 74,355–00 |
| 11 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ತೀರ್ಥಹಳ್ಳಿ ತಾಲ್ಲೂಕು ಆರಗಕಟ್ಟೆಗದ್ದೆ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 99 429–00 |
| 12 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ನ್ಯಾಯಾದಹಳ್ಳಿ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 74 495–00 |
| 13 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಕಸಗಾರು ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 49,358–00 |
| 14 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಆಡುಗೋಡು ಮುಖ್ಯ ರಸ್ತೆಯಿಂದ ದವಣೆಬೈಲು ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 96 490–00 |
| 15 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಮಳಲೀಮರ–ಕಡದಹಕ್ಲು ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 99 944–00 |
| 16 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಹಾರೋಗುಳಿಗೆ–ಹುಲಿಗುದ್ದು ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 74,026–00 |
| 17 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿಂದ ತಾಲ್ಲೂಕು ತುಳುವಮೇಳಿಗೆ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 74 976–00 |
| 18 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಕುಚಲುಬೈಲು ಬಡಿಗೆ ಗ್ರಾಮೀಣ ಸಂಪರ್ಕ ರಸ್ತೆ ಅಭಿವೃದ್ಧಿ ಕಾಮಗಾರಿ | 73 284–00 |
| | ಒಟ್ಟು | **14 66 251–00** |

ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ನಿರ್ಮಿಸಲಾದ ಗ್ರಾಮೀಣ ಒಕ್ಕಲುಕಣಗಳ ವಿವರ –

ಶಿವಮೊಗ್ಗ ತಾಲ್ಲೂಕು –

| | | |
|---|---|---|
| 1 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಮಂಡೇನಕೊಪ್ಪ ಗ್ರಾಮದಲ್ಲಿ ಎ ಮಾದರಿ ಒಕ್ಕಲುಕಣ ನಿರ್ಮಾಣ ಕಾಮಗಾರಿ | 77,837–00 |
| 2 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಲಕ್ಕಿನಕೊಪ್ಪ ಗ್ರಾಮದಲ್ಲಿ ಎ ಮಾದರಿ ಒಕ್ಕಲುಕಣ ನಿರ್ಮಾಣ ಕಾಮಗಾರಿ | 77 941–00 |
| 3. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ತಾಲ್ಲೂಕು ಮದಾರಿಕೊಪ್ಪ ಗ್ರಾಮದಲ್ಲಿ 'ಬಿ ಮಾದರಿ ಒಕ್ಕಲುಕಣ ನಿರ್ಮಾಣ ಕಾಮಗಾರಿ | 92 942–00 |
| | **ಒಟ್ಟು** | **2 48 720–00** |

ತೀರ್ಥಹಳ್ಳಿ ತಾಲ್ಲೂಕು –

| | | |
|---|---|---|
| 1 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಸುಳಗೋಡು ಗ್ರಾಮದಲ್ಲಿ ಬಿ ಮಾದರಿ ಒಕ್ಕಲುಕಣ ನಿರ್ಮಾಣ ಕಾಮಗಾರಿ | 94 068–00 |
| 2 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಮಿನಗುಂದ ಗ್ರಾಮದಲ್ಲಿ 'ಬಿ ಮಾದರಿ ಒಕ್ಕಲುಕಣ ನಿರ್ಮಾಣ ಕಾಮಗಾರಿ | 94 068–00 |
| 3. | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಗುಡ್ಡೇಕೊಪ್ಪ ಗ್ರಾಮದಲ್ಲಿ ಬಿ ಮಾದರಿ ಒಕ್ಕಲುಕಣ ನಿರ್ಮಾಣ ಕಾಮಗಾರಿ | 93 117–00 |
| 4 | ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ತೀರ್ಥಹಳ್ಳಿ ತಾಲ್ಲೂಕು ಕೋಮನೆ ಗ್ರಾಮದಲ್ಲಿ ಬಿ ಮಾದರಿ ಒಕ್ಕಲುಕಣ ನಿರ್ಮಾಣ ಕಾಮಗಾರಿ | 93,348–00 |
| | **ಒಟ್ಟು** | **3 74 601–00** |

ಶಿವಮೊಗ್ಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ ಶಿವಮೊಗ್ಗ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿನ ಗ್ರಾಮೀಣ ಸಂತೆ ಮೈದಾನದ ಅಭಿವೃದ್ಧಿ ಕಾಮಗಾರಿಯ ವಿವರ

ತೀರ್ಥಹಳ್ಳಿ ತಾಲ್ಲೂಕು –(ಬೆಜ್ಜವಳ್ಳಿ ಸಂತೆ ಮೈದಾನ)

| | | |
|---|---|---|
| 1 | ತೀರ್ಥಹಳ್ಳಿ ತಾಲ್ಲೂಕು ಬೆಜ್ಜವಳ್ಳಿ ಸಂತೆ ಮೈದಾನದಲ್ಲಿ ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಯ 2ನೇ ಅಂತಿಮ ಬಿಲ್ಲು | 88 647–00 |
| 2 | ತೀರ್ಥಹಳ್ಳಿ ತಾಲ್ಲೂಕು ಬೆಜ್ಜವಳ್ಳಿ ಸಂತೆ ಮೈದಾನದಲ್ಲಿ ಶೌಚಾಲಯ ನಿರ್ಮಾಣ ಕಾಮಗಾರಿಯ 3ನೇ ಅಂತಿಮ ಬಿಲ್ಲು | 41,947–00 |
| 3. | ತೀರ್ಥಹಳ್ಳಿ ತಾಲ್ಲೂಕು ಬೆಜ್ಜವಳ್ಳಿ ಸಂತೆ ಮೈದಾನದಲ್ಲಿ ಹರಾಜುಕಟ್ಟೆ ನಿರ್ಮಾಣ ಕಾಮಗಾರಿಯ 2ನೇ ಅಂತಿಮ ಬಿಲ್ಲು | 10 954–00 |
| | **ಒಟ್ಟು** | **1 41 548–00** |

ಶಿವಮೊಗ್ಗ ತಾಲ್ಲೂಕು – (ಶೆಟ್ಟಿಹಳ್ಳಿ ಸಂತೆ ಮೈದಾನ)

| | | |
|---|---|---|
| 1 | ಶಿವಮೊಗ್ಗ ತಾಲ್ಲೂಕು ಶೆಟ್ಟಿಹಳ್ಳಿ ಸಂತೆ ಮೈದಾನ 2 ಸಂಖ್ಯೆ ಹರಾಜುಕಟ್ಟೆ ನಿರ್ಮಾಣ ಕಾಮಗಾರಿ 2ನೇ ಅಂತಿಮ ಬಿಲ್ಲು | 7,24,895–00 |
| | **ಒಟ್ಟು** | **7 24 895–00** |

| ಕ್ರ ಸಂ | ವಿವರ | ಮೊಬಲಗು |
|---|---|---|
| 1 | ಮುಖ್ಯ ಮಾರುಕಟ್ಟೆ ಪ್ರಾಂಗಣ ಶಿವಮೊಗ್ಗ. | 1 26 40954–00 |
| 2 | ತೀರ್ಥಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣ | 29 20 444–00 |
| 3. | ಕೋಣಂದೂರು ಉಪ ಮಾರುಕಟ್ಟೆ ಪ್ರಾಂಗಣ | 1,31 920–00 |
| 4 | ಆಯನೂರು ಉಪ ಮಾರುಕಟ್ಟೆ ಪ್ರಾಂಗಣ | 1 48,589–00 |
| 5. | ಹೊಳಲೂರು ಉಪ ಮಾರುಕಟ್ಟೆ ಪ್ರಾಂಗಣ | 20 29 693–00 |
| 6 | ಗ್ರಾಮೀಣ ಗೋದಾಮು ಶಿವಮೊಗ್ಗ ತಾಲ್ಲೂಕು | 24,52 935–00 |
| 7 | ಗ್ರಾಮೀಣ ಗೋದಾಮು ತೀರ್ಥಹಳ್ಳಿ ತಾಲ್ಲೂಕು | 13 20 299–00 |
| 8 | ಗ್ರಾಮೀಣ ಸಂಪರ್ಕ ರಸ್ತೆ, ಶಿವಮೊಗ್ಗ ತಾಲ್ಲೂಕು | 11 11 120–00 |
| 9 | ಗ್ರಾಮೀಣ ಸಂಪರ್ಕ ರಸ್ತೆ, ತೀರ್ಥಹಳ್ಳಿ ತಾಲ್ಲೂಕು | 14 66 251–00 |
| 10 | ಗ್ರಾಮೀಣ ಒಕ್ಕಲು ಕಣ ಶಿವಮೊಗ್ಗ ತಾಲ್ಲೂಕು | 2 48 720–00 |
| 11 | ಗ್ರಾಮೀಣ ಒಕ್ಕಲು ಕಣ ತೀರ್ಥಹಳ್ಳಿ ತಾಲ್ಲೂಕು | 3 74 601–00 |
| 12 | ಗ್ರಾಮೀಣ ಸಂತೆ ಮೈದಾನ ಬೆಜ್ಜವಳ್ಳಿ ತೀರ್ಥಹಳ್ಳಿ ತಾಲ್ಲೂಕು | 1 41,548–00 |
| 13. | ಗ್ರಾಮೀಣ ಸಂತೆ ಮೈದಾನ ಶೆಟ್ಟಿಹಳ್ಳಿ, ಶಿವಮೊಗ್ಗ ತಾಲ್ಲೂಕು | 7,24 895–00 |
| | ಒಟ್ಟು | 2,57 11 969–00 |

457(816) ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಡಿಕೇರಿಯಲ್ಲಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನಲ್ಲಿ ಉಪನ್ಯಾಸಕರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ಯಾವ ಯಾವ ವಿಷಯದ ಉಪನ್ಯಾಸಕರುಗಳ ಹುದ್ದೆಗಳು ಖಾಲಿ ಇವೆ ಹಾಗೂ ಯಾವಾಗಿನಿಂದ ಖಾಲಿ ಇವೆ.

ಇ) ಸದರಿ ಹುದ್ದೆಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ

ಈ) ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಖಾಲಿ ಇರುವ ವಿಷಯಗಳ ಉಪನ್ಯಾಸಕರುಗಳ ಹುದ್ದೆಗಳ ಭರ್ತಿಗೆ ಯಾವ ವ್ಯವಸ್ಥೆ ಕಲ್ಪಿಸಲಾಗಿದೆ?

ಶ್ರೀ ಡಿ ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ) ಮಡಿಕೇರಿಯಲ್ಲಿರುವ ಫೀಲ್ಡ್ ಮಾರ್ಷಲ್ ಕೆ ಎಂ ಕಾರ್ಯಪ್ಪ ಕಾಲೇಜು ಮಂಗಳೂರು ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿದೆ ಇಲ್ಲಿ ಉಪನ್ಯಾಸಕರ ಕೊರತೆ ಇರುವುದು ವರದಿಯಾಗಿದೆ

ಆ) ಈ ಕಾಲೇಜಿನಲ್ಲಿ ವಿಷಯವಾರು ಉಪನ್ಯಾಸಕರ ಹುದ್ದೆಗಳು ಮಂಜೂರಾಗಿಲ್ಲ ಒಟ್ಟು ಮಂಜೂರಾಗಿರುವ 44 ಉಪನ್ಯಾಸಕರ ಹುದ್ದೆಗಳಲ್ಲಿ 9 ಹುದ್ದೆಗಳು 1998ರಿಂದ ಖಾಲಿ ಇವೆ

1) ಕಂಪ್ಯೂಟರ್ ವಿಜ್ಞಾನ – 2
2) ಅರ್ಥಶಾಸ್ತ್ರ – 1
3) ಗಣಿತ – 1
4) ಮೈಕ್ರೋ ಬಯಾಲಜಿ – 2

| | | |
|---|---|---|
| 5) ಬಯೋ ಕೆಮಿಸ್ಟ್ರಿ | – | 3 |
| ಒಟ್ಟು | – | 9 |

ಇ) ಮಂಗಳೂರು ವಿಶ್ವವಿದ್ಯಾಲಯದಿಂದ ಈ ಕುರಿತಂತೆ ಪ್ರತ್ಯೇಕ ಪ್ರಸ್ತಾವನೆ ಬಂದಿಲ್ಲ

ಈ) ಸಾಮಾನ್ಯ ನೇಮಕಾತಿಗೆ ಸರ್ಕಾರದ ನಿರ್ಬಂಧವಿರುವುದರಿಂದ ಖಾಲಿ ಇರುವ ಹುದ್ದೆಗಳ ಬದಲಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಬದಲಿ ವ್ಯವಸ್ಥೆಯನ್ನು ಮಂಗಳೂರು ವಿಶ್ವವಿದ್ಯಾಲಯ ಮಾಡಿದೆ

458(838) ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ತಾಂತ್ರಿಕ ಮಹಾವಿದ್ಯಾಲಯಗಳ ತಾಂತ್ರಿಕ ಶಿಕ್ಷಣ ಗುಣಮಟ್ಟ ಸುಧಾರಣೆ ಕಾರ್ಯಕ್ರಮಕ್ಕಾಗಿ (TEQIP) ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಎಷ್ಟು ವಿಶ್ವಬ್ಯಾಂಕಿನ ನೆರವು ಬಿಡುಗಡೆಯಾಗಿದೆ

ಆ) ಈ ಕಾರ್ಯಕ್ರಮದಡಿಯಲ್ಲಿ ಐದು ಕಾಲೇಜುಗಳನ್ನು ಮುಂದುವರೆದ ಕಾಲೇಜುಗಳನ್ನು ಗುರುತಿಸಿದ್ದರೂ ಹಣ ಬಿಡುಗಡೆ ನಿರ್ಧಾರ ತೆಗೆದುಕೊಳ್ಳದಿರಲು ಕಾರಣವೇನು

ಇ) ಈ ಕಾರ್ಯಕ್ರಮವನ್ನು ಬೇರ ರಾಜ್ಯಗಳು ಅನುಷ್ಠಾನಗೊಳಿಸಿದ್ದು ಈ ರಾಜ್ಯದಲ್ಲಿಯೂ ಸಹ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗುವುದೆ,

ಈ) ಕೇರಳ ರಾಜ್ಯದಲ್ಲಿ ಅನುದಾನಿತ ತಾಂತ್ರಿಕ ಕಾಲೇಜುಗಳಿಗೆ ವಿಶ್ವಬ್ಯಾಂಕ್ ನೆರವನ್ನು ಅನುದಾನವೆಂದು ಪರಿಗಣಿಸಿದಂತೆ ಈ ರಾಜ್ಯದಲ್ಲಿಯೂ ಎಕೆ ಪರಿಗಣಿಸಬಾರದು?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ವಿಶ್ವಬ್ಯಾಂಕ್ ನೆರವಿನ ತಾಂತ್ರಿಕ ಶಿಕ್ಷಣ ಗುಣಮಟ್ಟ ಸುಧಾರಣೆ (TEQIP) ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು ಕಾಲೇಜುಗಳ ಆಯ್ಕೆಯಾಗಿದೆ ಆದರೆ ಇದುವರೆವಿಗೆ ಯಾವುದೇ ಹಣಕಾಸಿನ ಸೌಲಭ್ಯ ಬಿಡುಗಡೆಯಾಗಿರುವುದಿಲ್ಲ

ಆ) ಈ ಕಾರ್ಯಕ್ರಮದಡಿಯಲ್ಲಿ ರಾಜ್ಯದ 4 ಲೀಡ್ ಸಂಸ್ಥೆಗಳಿಗೂ ಮತ್ತು 11 ನೆಟ್ ವರ್ಕ್ ಸಂಸ್ಥೆಗಳನ್ನು ಗುರುತಿಸಿದ್ದರೂ ಕೇಂದ್ರಮಟ್ಟದಲ್ಲಿನ ಮೌಲ್ಯಮಾಪನ ಸಮಿತಿ ಮತ್ತು ಕೇಂದ್ರ ಆಯ್ಕೆ ಸಮಿತಿಯ ಅಂತಿಮ ನಿರ್ಧಾರ ಬಂದಿಲ್ಲದಿರುವ ಕಾರಣ ಇದುವರೆವಿಗೂ ಯಾವುದೇ ಹಣಕಾಸಿನ ಬಿಡುಗಡೆಯಾಗಿರುವುದಿಲ್ಲ

ಇ) ಕಾಲಮಿತಿಯೊಳಗೆ ಪೂರ್ಣಗೊಳಿಸುವ ಬಗ್ಗೆ ಯೋಜನೆ ಪ್ರಾರಂಭವಾದ ನಂತರ ನಿರ್ಧರಿಸಬೇಕಾಗುವುದು

ಈ) ವಿಶ್ವಬ್ಯಾಂಕ್ ನೆರವನ್ನು ಅನುದಾನವೆಂದು ಕೇರಳ ರಾಜ್ಯದಲ್ಲಿ ಪರಿಗಣಿಸಿರುವ ಬಗ್ಗೆ ಅಧಿಕೃತವಾದ ಮಾಹಿತಿ ಇರುವುದಿಲ್ಲ

459(738) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಈಗ ಯಾವ ಸ್ಥಳಗಳಲ್ಲಿ ಮದರ್ ಡೈರಿಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಇವುಗಳ ಸಾಮರ್ಥ್ಯವೆಷ್ಟು

ಈ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಇಂತಹ ಡೈರಿಗಳನ್ನು ಸ್ಥಾಪಿಸಲಾಗುವುದು

ಉ) ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಹಣಕಾಸಿನ ನೆರವಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ,

ಊ) ಹಾಗಿದ್ದಲ್ಲಿ, ಎಷ್ಟು ಮೊತ್ತದ ಹಣಕಾಸಿನ ನೆರವನ್ನು ಕೇಳಲಾಗಿದೆ ಹಾಗೂ ಇದಕ್ಕೆ ಕೇಂದ್ರದ ಪ್ರತಿಕ್ರಿಯೆ ಏನು

ಋ) ಬೀದರ್‌ನಲ್ಲಿ ಈಗಿರುವ ಸಣ್ಣ ಡೈರಿಯನ್ನು ಪೂರ್ಣ ಪ್ರಮಾಣದಲ್ಲಿ ಮೇಲ್ದರ್ಜೆಗೆ ಏರಿಸುವ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಮದರ್ ಡೈರಿ, ಬೆಂಗಳೂರು, ದಿನವಹಿ 6 ಲಕ್ಷ ಲೀಟರ್‌ಗಳು

ಆ) ಹೌದು, ಬೆಂಗಳೂರಿನಲ್ಲಿ ಮಾತ್ರ ಮೆಗಾ ಡೈರಿ ಕಾರ್ಯನಿರ್ವಹಿಸುತ್ತಿದೆ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಇಲ್ಲ

ಊ) ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

ಋ) ಈ ರೀತಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ

462(744) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಎಷ್ಟು ಹೆಕ್ಟೇರ್ ಪ್ರದೇಶವನ್ನು ಜಲಾನಯನ ಪ್ರದೇಶಗಳೆಂದು ಗುರುತಿಸಲಾಗಿರುವುದು (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಹಾಕಿಕೊಂಡಿರುವ ಕಾರ್ಯ ಕ್ರಮಗಳೇನು?

ಇ) ಜಿಲ್ಲೆಯ ಯಾವ ಯಾವ ಜಲಾನಯನ ಪ್ರದೇಶಗಳನ್ನು ವಿಶ್ವಬ್ಯಾಂಕ್ ನೆರವಿನ ಸುಜಲಾ ಜಲಾನಯನ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಸೇರಿಸಲಾಗಿದೆ

ಈ) ಜಿಲ್ಲೆಯ ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕಳೆದ 3 ವರ್ಷಗಳಿಂದ ಪ್ರತಿ ವರ್ಷ ಖರ್ಚು ಮಾಡಿರುವ ಹಣದ ಮೊತ್ತವೆಷ್ಟು? (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಉ) ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಬೀದರ್ ಜಿಲ್ಲೆಗೆ ಜಲಾನಯನ ಪ್ರದೇಶ ಅಭಿವೃದ್ಧಿಗಾಗಿ ಎಷ್ಟು ಹಣ ಖರ್ಚು ಮಾಡಲಾಗುವುದು?

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿಗೆ ಲಭ್ಯವಿರುವ 334184 ಹೆಕ್ಟೇರ್ ಪ್ರದೇಶದ ಪೈಕಿ 217345 ಹೆಕ್ಟೇರ್ ಪ್ರದೇಶವನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದ್ದು ಉಳಿದ 116839 ಹೆಕ್ಟೇರ್ ಪ್ರದೇಶವನ್ನು ಅಭಿವೃದ್ಧಿಪಡಿಸಬೇಕಾಗಿದೆ ಇದರ ತಾಲ್ಲೂಕುವಾರು ವಿವರಗಳನ್ನು ಕೆಳಗೆ ನೀಡಲಾಗಿದೆ

(ಹೆ ಗಳಲ್ಲಿ)

| ಕ್ರ ಸಂ | ತಾಲ್ಲೂಕು | ಒಟ್ಟು ಭೌಗೋಳಿಕ ವಿಸ್ತೀರ್ಣ | ಜಲಾನಯನ ಅಭಿವೃದ್ಧಿಗೆ ಲಭ್ಯವಿರುವ ಪ್ರದೇಶ | ಪ್ರಾರಂಭದಿಂದ ವಿವಿಧ ಯೋಜನೆಗಳಲ್ಲಿ ಅಭಿವೃದ್ಧಿಪಡಿಸಿದ ಪ್ರದೇಶ (31 03 04ರ ವರೆಗೆ) | ಜಲಾನಯನ ಅಭಿವೃದ್ಧಿಗೆ ಬಾಕಿ ಇರುವ ಪ್ರದೇಶ |
|---|---|---|---|---|---|
| 1 | ಔರಾದ | 121622 | 91373 | 65707 | 25666 |
| 2 | ಬಸವಕಲ್ಯಾಣ | 119438 | 83880 | 38730 | 45150 |
| 3 | ಭಾಲ್ಕಿ | 109259 | 49978 | 36616 | 13362 |
| 4 | ಬೀದರ್ | 92203 | 57010 | 37540 | 19470 |
| 5 | ಹುಮ್ನಾಬಾದ್ | 99243 | 51943 | 38752 | 13191 |
| | ಒಟ್ಟು | 541765 | 334184 | 217345 | 116839 |

ಆ) ಈ ಪ್ರದೇಶವನ್ನು ರಾಜ್ಯವಲಯ ಯೋಜನೆಯಾದ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ, ಹಾಗೂ ಜಿಲ್ಲಾ ವಲಯ ಯೋಜನೆಗಳಾದ ಹರಿಯಾಲಿ, ಸಂಪೂರ್ಣ ಗ್ರಾಮೀಣ ರೋಜ್ ಗಾರ್ ಯೋಜನೆ, ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ ಮತ್ತು ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆಯಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ

ಇ) ವಿಶ್ವಬ್ಯಾಂಕ್ ನೆರವಿನ ಸುಜಲಾ ಜಲಾನಯನ ಯೋಜನೆಯು ಬೀದರ್ ಜಿಲ್ಲೆಯಲ್ಲಿ ಜಾರಿಯಲ್ಲಿರುವುದು

ಈ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿಗಾಗಿ ವೆಚ್ಚ ಮಾಡಲಾಗಿರುವ ಅನುದಾನದ ತಾಲ್ಲೂಕುವಾರು ವಿವರಗಳನ್ನು ಕೆಳಗೆ ನೀಡಲಾಗಿದೆ

ಲಕ್ಷಗಳಲ್ಲಿ

| | 01–02 | 02–03 | 03–04 |
|---|---|---|---|
| ಔರಾದ್ | 48 76 | 214 90 | 37 821 |
| ಬಸವಕಲ್ಯಾಣ | 51 24 | 56 52 | 48 162 |
| ಭಾಲ್ಕಿ | 51 25 | 58 07 | 39 751 |
| ಬೀದರ್ | 21 88 | 52 27 | 47 842 |
| ಹುಮ್ನಾಬಾದ್ | 73 77 | 37 52 | 29 414 |
| ಒಟ್ಟು | 246 87 | 419 28 | 202 990 |

ಉ) ಬೀದರ್ ಜಿಲ್ಲೆಯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2004–05ನೇ ಸಾಲಿನಲ್ಲಿ 204 770 ಲಕ್ಷ ರೂ ಗಳನ್ನು ಖರ್ಚು ಮಾಡಲು ಉದ್ದೇಶಿಸಲಾಗಿದೆ

466(548) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಹಣಕಾಸು ನಿರ್ವಹಣೆಯಲ್ಲಿ ಅವ್ಯವಹಾರ ಕಂಡುಬಂದಿದೆಯೇ

ಆ) ಅವ್ಯವಹಾರ ಯಾವ ಸ್ವರೂಪದಲ್ಲಿ ನಡೆದಿದೆ ಹಾಗೂ ಅವ್ಯವಹಾರದ ಮೊತ್ತವೆಷ್ಟು?

ಇ) ಈ ಅಕ್ರಮ ಅಸಮರ್ಪಕ ಹಣಕಾಸು ನಿರ್ವಹಣೆಯನ್ನು ಬೆಳಕಿಗೆ ತಂದವರು ಯಾರು?

ಈ) ಸದರಿ ಅವ್ಯವಹಾರ ಆರೋಪವನ್ನು ಧಾರವಾಡ ಕೃಷಿ ವಿ ವಿ ಯು ಒಪ್ಪಿಕೊಂಡಿದೆಯೇ?

ಉ) ಒಪ್ಪಿಕೊಂಡಿದ್ದಲ್ಲಿ ಇದಕ್ಕೆ ಕಾರಣರ್ಯ್ಯಾರು ಇಂತಹವರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ (ವಿವರ ನೀಡುವುದು)?

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಶ್ರೀ ಬಿ ಎಸ್ ಅಂಚಟಗೇರಿ, ಕಾರ್ಪೋರೇಟರ್ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಇವರು ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿಕೈಗೊಳ್ಳಲಾದ ಕಾಮಗಾರಿಗಳಲ್ಲಿ ಅವ್ಯವಹಾರಗಳು ನಡೆದಿದೆ ಎಂದು ಸರ್ಕಾರಕ್ಕೆ ಘನವೆತ್ತ ರಾಜ್ಯಪಾಲರಿಗೆ ಹಾಗೂ ಲೋಕಾಯುಕ್ತದವರಿಗೆ ಆರೋಪ ಮಾಡಿದ್ದರು ಪ್ರತಿಯಾಗಿ ಕೃಷಿ ವಿಶ್ವವಿದ್ಯಾಲಯದವರು, ಮಾಡಿರುವ ಆರೋಪಗಳನ್ನು ತಳ್ಳಿ ಹಾಕುತ್ತಾ, ಸೂಕ್ತವಾದ ಉತ್ತರಗಳನ್ನು ಸಂಬಂಧಪಟ್ಟ ಕಾಗದ ಪತ್ರಗಳು, ದಾಖಲೆಗಳನ್ನು ನೀಡಲಾಗಿದ್ದು ಇವು ಲೋಕಾಯುಕ್ತ ಕಛೇರಿಯ ಪರಿಶೀಲನೆಯಲ್ಲಿವೆ

ಆ) ಆ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

ಇ) ಶ್ರೀ ಬಿ ಎಸ್ ಅಂಚಟಗೇರಿ, ಕಾರ್ಪೋರೇಟರ್ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಇವರು ಆರೋಪ ಮಾಡಿದ್ದಾರೆ

ಈ) ಒಪ್ಪಿಕೊಂಡಿರುವುದಿಲ್ಲ

ಉ) ದೂರು ಲೋಕಾಯುಕ್ತರ ಪರಿಶೀಲನೆಯಲ್ಲಿದೆ ಲೋಕಾಯುಕ್ತರ ವರದಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು

461(742) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಸತತವಾಗಿ ಬರಗಾಲವಿರುವುದರಿಂದ ಈ ಸಮಯದಲ್ಲಿ ಜಾನುವಾರುಗಳಿಗೆ ಹಾಗೂ ಕೋಳಿಗಳಿಗೆ ತಗಲುತ್ತಿರುವ ಕಾಯಿಲೆಗಳನ್ನು ನಿಭಾಯಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಆ) ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಮೇಲ್ಕಂಡ ಅವಧಿಯಲ್ಲಿ ಇದಕ್ಕಾಗಿ ವೆಚ್ಚ ಮಾಡಿದ ಹಣವೆಷ್ಟು ಹಾಗೂ ವಿವಿಧ ಜಿಲ್ಲೆಗಳಲ್ಲಿ ಕಾಯಿಲೆಯ ಎಷ್ಟು ಪ್ರಕರಣಗಳು ಪತ್ತೆಯಾಗಿದೆ,

ಇ) ಈ ಕಾಯಿಲೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಇಲ್ಲದೆ ಹತೋಟಿಯಲ್ಲಿಡಲು ಸರ್ಕಾರ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಗೋಶಾಲೆಗಳ ಪ್ರಾರಂಭ

ಮೇವು ನಿಧಿಗಳ ಸ್ಥಾಪನೆ

ರೈತರಿಗೆ ಮೇವು ಸಾಗಾಣಿಕೆ ರಿಯಾಯತಿ

ಔಷಧಿಗಳ ಖರೀದಿ

ಪಂಜಾಬ್ ರಾಜ್ಯದಿಂದ ಮೇವು ಅಮದು
ಮೇವು ಬೀಜಗಳ ಕಿರುಪೊಟ್ಟಣ ಪೂರೈಕೆ
ವಿವಿಧ ರೋಗಗಳ ವಿರುದ್ಧ ಮುಂಜಾಗ್ರತೆ ಲಸಿಕೆ ಕಾರ್ಯಕ್ರಮ

ಆ) ಜಿಲ್ಲಾವಾರು ಖರ್ಚಿನ ವಿವರ ಅನುಬಂಧದಲ್ಲಿ ನೀಡಿದೆ

ಮೇಲ್ಕಂಡ ಕ್ರಮಗಳಿಂದಾಗಿ ಬರಗಾಲಕ್ಕೆ ಸಂಬಂಧಿಸಿದ ಕಾಯಿಲೆಗಳು ರಾಜ್ಯದಲ್ಲಿ ವರದಿಯಾಗಿರುವುದಿಲ್ಲ

ಇ) ಉದ್ಭವಿಸುವುದಿಲ್ಲ

## ANNEXURE-2

## Expenditure incurred to combat Drought

(Rs in lakhs)

| Sl No | District | Transport ton of Fodder | Fodder seed packet programme | Veterinary Medicines | Fodder Banks& Goshalas | Purchase of fodder | Total expenditure |
|---|---|---|---|---|---|---|---|
| 1 | Bangalore(U) | 0 226 | 24 450 | 4 70 | | - | 29 376 |
| 2 | Bangalore(R) | 12 60 | 30 745 | 21 40 | - | | 64 745 |
| 3 | Chitradurga | 7 79 | 19 92 | 11 60 | 42 350 | 118 750 | 200 410 |
| 4 | Davanagere | 1 80 | 15 65 | 12 50 | 1 990 | 34 590 | 66 530 |
| 5 | Kolar | 3 30 | 45 11 | 14 77 | 21 520 | - | 84 700 |
| 6 | Shimoga | - | 8 10 | 15 77 | - | - | 23 870 |
| 7 | Tumkur | 4 50 | 18 00 | 19 94 | 25 110 | 17 080 | 84 630 |
| 8 | Mysore | - | 16 00 | 13 70 | | 2 640 | 32 340 |
| 9 | Mandya | | 9 00 | 12 00 | - | - | 21 000 |
| 10 | Chickamagalur | - | 4 975 | 8 80 | 1 160 | - | 14 936 |
| 11 | D Kannada | -- | - | - | - | - | 0 000 |
| 12 | Udupi | - | - | - | - | | 0 000 |
| 13 | Hassan | 1 18 | 11 905 | 16 68 | - | - | 29 765 |
| 14 | Kodagu | - | 1 00 | - | - | - | 1 000 |
| 15 | C' nagar | 1 404 | 14 99 | 7 50 | 2 940 | 2 250 | 29 084 |
| 16 | Belgaum | - | 9 00 | 50 00 | 40 490 | 29 666 | 129 156 |
| 17 | Bijapur | - | 6 50 | 9 40 | 0 008 | 10 000 | 25 908 |
| 18 | Dharwad | - | 7 00 | 6 30 | 0 174 | - | 13 474 |
| 19 | Gadag | 25 00 | 4 90 | 9 30 | 117 850 | 101 000 | 258 050 |
| 20 | Haveri | 3 20 | 1 00 | 10 00 | 63 680 | 0 778 | 80 658 |

| | | | | | | |
|---|---|---|---|---|---|---|
| 21 Uttara Karnataka | - | - | 5 70 | | | 5 700 |
| 22 Bellary | 21 29 | 2 574 | 14 31 | 2 270 | 11 678 | 52 522 |
| 23 Bidar | - | 4 25 | 6 75 | - | - | 11 000 |
| 24 Gulbarga | - | 7 28 | 22 87 | - | | 30 350 |
| 25 Raichur | 6 13 | 9 00 | 10 53 | 3 650 | 9 780 | 39 090 |
| 26 Koppal | 14 00 | 2 50 | 15 60 | 64 750 | 34 950 | 150 800 |
| 27 Bagalkote | 0 42 | 2 50 | 11 70 | 9 000 | 9 640 | 52 260 |
| Total Plus | 102 840 | 316 95 | 331 82 | 396 942 | 382 802 | 1531 354 |

Note 1 Expenditure for strengthening state livestock fatris Rs 130 152 lakhs

2 Expenditure for purchase of fodder from Punjab Rs 55 56 lakhs

Grand Total of Expenditure 1717 066 lakhs

463(746) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್‌ನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪಶುಸಂಗೋಪನೆ ವಿಶ್ವವಿದ್ಯಾನಿಲಯಕ್ಕೆ ಯಾವಾಗ ಮಂಜೂರಾತಿಯನ್ನು ಪಡೆದುಕೊಳ್ಳಲಾಗಿತ್ತು?

ಆ) ಈ ದಿಸೆಯಲ್ಲಿ ಇಲ್ಲಿಯವರೆವಿಗೆ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ

ಇ) ಯಾವ ಯಾವ ಜಿಲ್ಲೆಗಳು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತವೆ

ಈ) ಇದಕ್ಕಾಗಿ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ

ಉ) ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಅನುಕೂಲವಾಗುವಂತೆ ಸರ್ಕಾರದಿಂದ ಇಲ್ಲಿಯವರೆವಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ

ಊ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ

ಋ) ಈ ವಿಶ್ವವಿದ್ಯಾನಿಲಯದ ಸ್ಥಾಪನೆಯ ಪೂರ್ವದಲ್ಲಿ ಇದರ ಉಸ್ತುವಾರಿಗಾಗಿ ಉನ್ನತ ಅಧಿಕಾರಿಯನ್ನು ನೇಮಿಸಲಾಗಿದೆಯೇ

ೠ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಅವರು ಮಾಡಿರುವ ಕಾರ್ಯಗಳೇನು ಹಾಗೂ ಈ ವಿಶ್ವವಿದ್ಯಾನಿಲಯವನ್ನು ಪೂರ್ಣಪ್ರಮಾಣದಲ್ಲಿ ಕಾರ್ಯಾರಂಭಗೊಳಿಸಲು ಅಗತ್ಯವಿರುವ ಸಮಯ ಎಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ದಿನಾಂಕ 28-02-2004ರಂದು ಸರ್ಕಾರದ ಆದೇಶ ಸಂಖ್ಯೆ ಪಸಂಮೀ 150 ಪಅಸೇ 2004ರ ಪ್ರಕಟಣೆ ಮೂಲಕ ಕರ್ನಾಟಕ ಪಶು ಮತ್ತು ಮೀನುಗಾರಿಕೆ ವಿಶ್ವವಿದ್ಯಾನಿಲಯ ಸ್ಥಾಪನೆಗೊಂಡಿದೆ

ಆ) 157 27 ಎಕರೆ ವಿಸ್ತೀರ್ಣ ಭೂಮಿಯನ್ನು ವಿಶ್ವವಿದ್ಯಾನಿಲಯಕ್ಕೆ ಗುರುತಿಸಲಾಗಿದೆ ಕುಲಪತಿಗಳ ನೇಮಕಾತಿ ಪ್ರಕ್ರಿಯೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಕುಲಪತಿಗಳ ನೇಮಕಾತಿಯಾದ ಕೂಡಲೇ ವಿಶ್ವವಿದ್ಯಾನಿಲಯ ಪ್ರಾರಂಭಗೊಳ್ಳಲಿದೆ

ಇ) ಕರ್ನಾಟಕ ಎಲ್ಲಾ ಜಿಲ್ಲೆಗಳೂ ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತವೆ

ಈ) 157 27 ಎಕರೆಗಳು

ಉ) ಸಾಂಕೇತಿಕವಾಗಿ ಸಹಾಯಧನವನ್ನು ಕಾಯ್ದಿರಿಸಲಾಗಿದ್ದು ಅದು ಬಿಡುಗಡೆಗೊಂಡಿರುವುದಿಲ್ಲ

ಊ) ರೂ 2 00 ಕೋಟಿ ಯೋಜನೆಯಡಿಯಲ್ಲಿ

ಋ) ಡಾ॥ ಎಸ್ ಸುಬ್ರಮಣ್ಯ,, ಇವರನ್ನು ವಿಶೇಷ ಕರ್ತವ್ಯಾಧಿಕಾರಿಯನ್ನಾಗಿ ನೇಮಿಸಲಾಗಿದೆ

ೠ) ಕರ್ನಾಟಕ ಪಶು ವೈದ್ಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪನೆಯ ಬಗ್ಗೆ ಅಂತಿಮ ವರದಿಯನ್ನು ನೀಡಿರುವರು ಕರ್ನಾಟಕ ಪಶು ವೈದ್ಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಅಧಿನಿಯಮವು ದಿನಾಂಕ 28–02–2004ರಿಂದ ಜಾರಿಗೆ ಬಂದಿರುತ್ತದೆ

ಕುಲಪತಿಯ ನೇಮಕಾತಿಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಕುಲಪತಿಗಳ ನೇಮಕಾತಿ ನಂತರ ವಿಶ್ವವಿದ್ಯಾನಿಲಯವು ಪೂರ್ಣ ಪ್ರಮಾಣದ ಕಾರ್ಯನಿರ್ವಹಿಸುವುದು

464(449) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹುಬ್ಬಳ್ಳಿ ಬಸವೇಶ್ವರ ಮಾರುಕಟ್ಟೆಯ (ಎಪಿಎಂಸಿ) ವರ್ತಕರು ಆರ್ಥಿಕ ತೊಂದರೆ ಅನುಭವಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಎ ಪಿ ಎಂ ಸಿ ಅಮರಗೋಳ ಹುಬ್ಬಳ್ಳಿಯಲ್ಲಿನ ವರ್ತಕರಿಗೆ ಯಾವ ಯಾವ ತರಹದ ಆರ್ಥಿಕ ನೆರವು ನೀಡಲು ಸರ್ಕಾರ ಯೋಜಿಸಿದೆ

ಇ) ವರ್ತಕರ ತೊಂದರೆ ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮವೇನು

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ

467(554) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸಿ ಇ ಟಿ ಸೀಟು ಹಂಚಿಕೆ ಮತ್ತು ಫೀ ನಿಗದಿ ಬಗ್ಗೆ ಸರ್ಕಾರ ಮತ್ತು ಆಡಳಿತ ಮಂಡಳಿಗಳ ನಡುವೆ ಯಾವುದೇ ಒಂದು ನಿರ್ದಿಷ್ಟ ನೀತಿ ನಿರೂಪಣೆ ಆಗದೆ ಇರುವುದರಿಂದ ರಾಜ್ಯದ ವಿದ್ಯಾರ್ಥಿಗಳು ಮತ್ತು ಪಾಲಕರ ಗೊಂದಲದಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ಬಂದಿದ್ದಲ್ಲಿ ಈ ಗೊಂದಲ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು

ಇ) ಸಿ ಇ ಟಿ ಬಗ್ಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳ ರೀತಿಯಲ್ಲಿ ಅನುಷ್ಠಾನ ಮಾಡುವಲ್ಲಿ ಸರ್ಕಾರಕ್ಕೆ ಇರುವ ತೊಂದರೆಗಳೇನು

ಈ) ಇದ್ದಲ್ಲಿ, ಸುಪ್ರೀಂ ಕೋರ್ಟ್‌ನಲ್ಲಿ ತೀರ್ಪಿನ ಕುರಿತು ಪುನಃ ಪರಿಶೀಲನಾ ಅರ್ಜಿ ಸಲ್ಲಿಸಲಾಗಿದೆಯೆ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ

ಆ) ಅಧಿಕಾರಿಗಳ ಸಮಿತಿಯು ಆಡಳಿತ ಮಂಡಳಿಗಳ ಪದಾಧಿಕಾರಿಗಳೊಂದಿಗೆ ಚರ್ಚಿಸಿದೆ ಸಚಿವ ಸಂಪುಟ ಉಪ ಸಮಿತಿಯೂ ಸಹ ಹಲವು ಬಾರಿ ಸಭೆ ಸೇರಿ ಸಮಸ್ಯೆ ನಿವಾರಣೆಗೆ ಮಾರ್ಗೋಪಾಯಗಳನ್ನು ಕಂಡು ಹಿಡಿಯಲು ಪ್ರಯತ್ನಿಸಿದೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿಗಳ ಪ್ರತಿನಿಧಿಗಳೊಂದಿಗೆ ಮೂರು ಬಾರಿ ಸಭೆ ನಡೆಸಲಾಗಿದೆ. ಸಮಸ್ಯೆಯ ನಿವಾರಣೆಗೋಸ್ಕರ 2004–05ನೇ ಸಾಲಿಗೆ ಪ್ರವೇಶಾತಿ ಬಗ್ಗೆ ಶಾಸನ ತರಲಾಗುತ್ತಿದೆ

ಇ) ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ಎಲ್ಲ ವಿದ್ಯಾರ್ಥಿಗಳೂ ಒಂದೇ ರೀತಿಯ ಶುಲ್ಕ ನೀಡಿ ಪ್ರವೇಶಾತಿ ಪಡೆಯಬೇಕಾಗಿರುತ್ತದೆ ಇದರಿಂದ ಸರ್ಕಾರಿ ಕೋಟಾಕ್ಕೂ ಶುಲ್ಕ ಹೆಚ್ಚಾಗಿರುತ್ತದೆ ಹೀಗೆ ಶುಲ್ಕ ಭರಿಸಲು ಶಕ್ತಿಯಿಲ್ಲದ ವಿದ್ಯಾರ್ಥಿಗಳು ಸೀಟು ಪಡೆದು ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗುವುದಿಲ್ಲ ಇಂತಹ ಸಮಸ್ಯೆಗಳಿವೆ

ಈ) 2003–2004ನೇ ಶೈಕ್ಷಣಿಕ ವರ್ಷದಲ್ಲಿ ಅನುಸರಿಸಲಾದ ಸೀಟು ಹಂಚಿಕೆ ಮತ್ತು ಶುಲ್ಕ ರಚನೆಯನ್ನು ಅನುಸರಿಸಲು ಅನುಮತಿ ಕೋರಿ ರಾಜ್ಯ ಸರ್ಕಾರವು ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿ ಐ ಎ ಸಲ್ಲಿಸಿದೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ ನ15–07–2004ರ ತನ್ನ ಆದೇಶದಲ್ಲಿ ಕೋಟಾವು 50.50 ಇರತಕ್ಕದೆಂದು ನಿಗದಿಪಡಿಸಿದೆ ಈಗ ಶುಲ್ಕ ನಿಗದಿ ಸಮಿತಿಯ ಪ್ರವೇಶಾತಿಗೆ ನಿಗದಿಪಡಿಸಿರುವ ಶುಲ್ಕವೇ ಕಡಿಮೆಯೆಂದು ಹಲವಾರು ಆಡಳಿತ ಮಂಡಳಿಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಷನ್‌ಗಳನ್ನು ದಾಖಲ್ಮಾಡಿದ್ದು ಅವು ಬಾಕಿ ಇರುತ್ತದೆ

469(194) ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

a) The Courses being run at R C Commerce College, Bangalore,

b) Number of students studying in this college,

c) The amount spent on purchase of books and providing other infrastructural facilities in this college during 2003-04,

d) Whether any construction work has been taken up during 2002-03 and 2003-04,

e) If yes, the details of the progress of work be furnished?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಬಿ ಕಾಂ., ಬಿ ಬಿ ಎಂ , ಎಂ ಕಾಂ., ಎಂ ಬಿ ಎ ,

ಆ) 1366

ಇ) 2003–04ನೇ ಸಾಲಿಗೆ ಬಿಡುಗಡೆಯಾದ ಅನುದಾನದಲ್ಲಿ ರೂ 40,000/–ಗಳನ್ನು ಪುಸ್ತಕ ಖರೀದಿಗೆ ವೆಚ್ಚ ಮಾಡಲಾಗಿರುತ್ತದೆ ಹಾಗೂ 2003–04ನೇ ಸಾಲಿಗೆ ಮೂಲ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಯಾವುದೇ ವೆಚ್ಚವನ್ನು ಭರಿಸಿರುವುದಿಲ್ಲ

ಈ) ಹೌದು

ಉ) ಕಾಮಗಾರಿಯ ಪ್ರಗತಿಯ ಬಗ್ಗೆ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ

## ಅನುಬಂಧ-3

### ಬೆಂಗಳೂರು ಪ್ಯಾಲೇಸ್ ರಸ್ತೆಯಲ್ಲಿರುವ ಸರ್ಕಾರಿ ಆರ್ ಸಿ ಕಾಲೇಜಿನಲ್ಲಿ 2002-03 ಹಾಗೂ 2003-04 ರಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರ

| ಕ್ರ ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ | ಇಲ್ಲಿಯವರೆಗೆ ವೆಚ್ಚ | ಷರಾ |
|---|---|---|---|---|
| 1 | ಬೆಂಗಳೂರು ಪ್ಯಾಲೇಸ್ ರಸ್ತೆಯಲ್ಲಿರುವ ಆರ್ ಸಿ ಕಾಲೇಜಿನ ವಿವಿಧ ಕೊರಡಿಗಳ ತುರ್ತು ಅಭಿವೃದ್ಧಿ ಕಾಮಗಾರಿ | 70000 00 | 80087 00 | ಕಾಮಗಾರಿ ಪೂರ್ಣಗೊಂಡಿದೆ |
| 2 | ಆರ್ ಸಿ ಕಾಲೇಜು ಹಿಂಬಾಗದಲ್ಲಿ ಹೊಸದಾಗಿ ಕಲ್ಲು ಕಟ್ಟಡದ ರಿಟೆನಿಂಗ್ ವಾಲ್ ಮತ್ತು ಇತರೆ ಅಭಿವೃದ್ಧಿ ಕಾಮಗಾರಿ | 191000 00 | 186600 00 | ಕಾಮಗಾರಿ ಪೂರ್ಣಗೊಂಡಿದೆ |
| 3 | ಆರ್ ಸಿ ಕಾಲೇಜು ಕಟ್ಟಡ ಹಾಗೂ ಆವರಣದಲ್ಲಿ ಅಭಿವೃದ್ಧಿ ಕಾಮಗಾರಿ | 200000.00 | 198200 00 | ಕಾಮಗಾರಿ ಪೂರ್ಣಗೊಂಡಿದೆ |
| 4 | ಆರ್ ಸಿ ಕಾಲೇಜು ಆವರಣದಲ್ಲಿ ಮಳೆ ನೀರು ಹರಿದು ಹೋಗಲು ಹಲಸಿನ ಮರದ ಹತ್ತಿರ ಕಲ್ಲು ಕಟ್ಟಡ ಚರಂಡಿ ನಿರ್ಮಾಣ ಕಾಮಗಾರಿ | 200000.00 | 197700 00 | ಕಾಮಗಾರಿ ಪೂರ್ಣಗೊಂಡಿದೆ |
| 5 | ಆರ್ ಸಿ ಕಾಲೇಜು ಮುಂಭಾಗದಲ್ಲಿ ಫ್ಲಾಗ್ ಪೋಸ್ಟ್ ಹತ್ತಿರ ಕಾಂಪೌಂಡುಗೋಡೆ ನಿರ್ಮಾಣ | 200000 00 | 198648 00 | ಕಾಮಗಾರಿ ಪೂರ್ಣಗೊಂಡಿದೆ |
| 6 | ಆರ್ ಸಿ ಕಾಲೇಜು ಕಟ್ಟಡದಲ್ಲಿ ಸೈಕಲ್ ಸ್ಟ್ಯಾಂಡ್ ಫ್ಲೋರಿಂಗ್ ಕಾಂಕ್ರೀಟು ಹಾಕುವ ಕಾಮಗಾರಿ | 195000.00 | 199850 00 | ಕಾಮಗಾರಿ ಪೂರ್ಣಗೊಂಡಿದೆ |
| 7 | ಆರ್ ಸಿ ಕಾಲೇಜು ಆವರಣದಲ್ಲಿ ರಿ ಚಿಪ್ ಕಾರ್ಪೆಟಿಂಗ್ ಕಾಮಗಾರಿ | 200000 00 | 186000 00 | ಕಾಮಗಾರಿ ಪೂರ್ಣಗೊಂಡಿದೆ |
| | ವಿದ್ಯುತ್ ಕಾಮಗಾರಿಗಳು | | | |
| 8 | ಆರ್ ಸಿ ಕಾಲೇಜು ಕೊಳವೆ ದೀಪಗಳಿಗೆ, ಪಂಕಗಳಿಗೆ ಮತ್ತು ಗಾಳಿ ಹೊರದೂಡುವ ಪಂಕಗಳಿಗೆ ಹೆಚ್ಚುವರಿ ವಿದ್ಯುತ್ ಬಿಂದುಗಳು ಹಾಗೂ ಇತರೇ ವಿದ್ಯುತ್ ಅಭಿವೃದ್ಧಿ ಕಾಮಗಾರಿಗಳು | 83500.00 | 90997 00 | ಕಾಮಗಾರಿ ಪೂರ್ಣಗೊಂಡಿದೆ |
| 9 | ಆರ್ ಸಿ ಕಾಲೇಜು ಪ್ರಾಂಶುಪಾಲರ ಕೊರಡಿಗೆ, ಸಭಾಂಗಣ ಹಾಗೂ ಕ್ರೀಡಾ ವಿಭಾಗ, ಗ್ರಂಥಾಲಯ ಹಾಗೂ ಸಿಬ್ಬಂದಿವರ್ಗದ ರೂಂಗಳಿಗೆ ಪಂಕಗಳನ್ನು ಅಳವಡಿಸುವ ಕಾಮಗಾರಿ | 77000 00 | 84072.00 | ಕಾಮಗಾರಿ ಪೂರ್ಣಗೊಂಡಿದೆ |
| 10 | ಆರ್ ಸಿ ಕಾಲೇಜಿನ ಗಣಕ ಕೇಂದ್ರಕ್ಕೆ ವಿದ್ಯುತ್ ಬಿಂದುಗಳನ್ನು ಅಳವಡಿಸುವ ಕಾಮಗಾರಿ | 14000 00 | 13990 90 | ಕಾಮಗಾರಿ ಪೂರ್ಣಗೊಂಡಿದೆ |
| | ಒಟ್ಟು | 1430500.00 | 1436144 00 | |
| | 2003--04 | | | |
| 1 | ಆರ್ ಸಿ ಕಾಲೇಜಿನಲ್ಲಿ ಮಹಿಳಾ ಶೌಚಾಲಯ ನಿರ್ಮಾಣ | 125000 00 | | ಕಾಮಗಾರಿ ಪ್ರಾರಂಭಿಸಬೇಕಾಗಿದೆ |
| 2 | ಆರ್ ಸಿ ಕಾಲೇಜು ಎಡಭಾಗದಲ್ಲಿರುವ ಹಾಲಿ ಚರಂಡಿಯನ್ನು ನೆಲಮಾಳಿಗೆ ನೆಲಹಾಸಿನ ಮಟ್ಟಕ್ಕಿಂತ ಕೆಳಗಡೆ ಇಳಿಸಿ ಹಾಗೂ ಹಾಲಿ ಇರುವ ಮಳೇ ನೀರಿನ ಚರಂಡಿಗೆ ಜೋಡಿಸುವುದು | 200000 00 | | ಕಾಮಗಾರಿ ಪೂರ್ಣಗೊಂಡಿದೆ |

| | | | | |
|---|---|---|---|---|
| 3 | ಆರ್ ಸಿ ಕಾಲೇಜು ನೆಲಮಾಳಿಗೆ ಶಾಲಾ ಕೊಠಡಿಗಳಿಗೆ ನೀರು ಸೋರುವುದನ್ನು ತಡೆಗಟ್ಟುವುದು ನೀರು ಸೋರುವ ಕಾಲುವೆ ಹಾಗೂ ಕಾಂಕ್ರೀಟಿನ ನೆಲಹಾಸು ಮತ್ತು ನೀರುಸರಬರಾಜು ಮತ್ತು ನೈರ್ಮಲೀಕರಣ ದುರಸ್ತಿ | 200000 00 | 139700 00 | ಕಾಮಗಾರಿ ಪೂರ್ಣಗೊಂಡಿದೆ |
| 4 | ಆರ್ ಸಿ ಕಾಲೇಜು ಮುಂಭಾಗದಲ್ಲಿ ವಾಹನಗಳ ನಿಲ್ದಾಣಕ್ಕೆ ಕಾಬೂಲುಕಲ್ಲು ಬಿಲ್ಲೆಗಳನ್ನು ಅಳವಡಿಸುವ ಕಾಮಗಾರಿ | 200000 00 | | ಕಾಮಗಾರಿ ಪ್ರಗತಿಯಲ್ಲಿದೆ |
| 5 | ಆರ್ ಸಿ ಕಾಲೇಜು ಬಾಗಿಲು ಮತ್ತು ಕಿಟಕಿಗಳ ರಿಪೇರಿ ಹಾಗೂ ಸೇರ್ಪಡೆ ಮತ್ತು ಸಭಾಂಗಣದ ನೆಲಹಾಸಿಗೆ ಸಿರಾಮಿಕ್ ಬಿಲ್ಲೆಗಳನ್ನು ಅಳವಡಿಸುವ ಕಾಮಗಾರಿ | 200000 00 | | ಕಾಮಗಾರಿ ಪ್ರಾರಂಭಿಸಬೇಕಾಗಿದೆ |
| 6 | ಆರ್ ಸಿ ಕಾಲೇಜು ಪ್ರಾಂಶುಪಾಲರ ಮತ್ತು ಶಾಲಾ ಸಿಬ್ಬಂದಿ ಕೊಠಡಿಗಳಿಗೆ ಅಲ್ಯೂಮೀನಿಯಂ ಪಾರ್ಟಿಷನ್ ಒದಗಿಸುವ ಕಾಮಗಾರಿ | 200000 00 | | ಕಾಮಗಾರಿ ಪ್ರಾಂಭಿಸಬೇಕಾಗಿದೆ |
| 7 | ಆರ್ ಸಿ ಕಾಲೇಜು ಶೌಚಾಲಯ ಹಿಂಭಾಗದಲ್ಲಿ ಕಲ್ಲು ಕಟ್ಟಡದ ತಡೆಗೋಡೆ ಹಾಗೂ ಚೈನ್ ಲಿಂಕ್ ಬೇಲಿ ಹಾಗೂ ಕಾಂಕ್ರೀಟು ನೆಲಹಾಸು ಒದಗಿಸುವ ಕಾಮಗಾರಿ | 200000.00 | | ಕಾಮಗಾರಿ ಪೂರ್ಣಗೊಂಡಿದೆ |
| 8 | ಆರ್ ಸಿ ಕಾಲೇಜು ಗೋಡೆಗಳ ಮೇಲ್ಮೈಯನ್ನು ಆಮ್ಲದಿಂದ ಸ್ವಚ್ಛಗೊಳಿಸುವ ಮತ್ತು ನೀರು ಸರಬರಾಜು ನೈರ್ಮಲೀಕರಣ ಹಾಗೂ ಹಾಳಾಗಿರುವ ಧಜ್ಜಾ ದುರಸ್ತಿ ಕಾಮಗಾರಿ | 200000.00 | | ಕಾಮಗಾರಿ ಟೆಂಡರ್ ಹಂತದಲ್ಲಿದೆ |
| | ವಿದ್ಯುತ್ ಕಾಮಗಾರಿಗಳು | | | |
| 9 | ಸರ್ಕಾರಿ ಆರ್ ಸಿ ಕಾಲೇಜಿಗೆ ವಿದ್ಯುತ್ ಪೂರೈಕೆ ಹಾಗೂ ಇತರೆ ವಿದ್ಯುತ್ ಅಭಿವೃದ್ಧಿ ಕಾಮಗಾರಿ | 50000.00 | 49970 00 | ಕಾಮಗಾರಿ ಪೂರ್ಣಗೊಂಡಿದೆ |
| 10 | ಆರ್ ಸಿ ಕಾಲೇಜಿನ ನೆಲಮಹಡಿಯಲ್ಲಿರುವ ಎಂ ಬಿ ಎ ಕೊಠಡಿಗಳಿಗೆ ಕೊಳವೆ ದೀಪಗಳು ಹಾಗೂ ಫಂಕಗಳನ್ನು ಅಳವಡಿಸುವ ಕಾಮಗಾರಿ | 45000 00 | 44998 00 | ಕಾಮಗಾರಿ ಪೂರ್ಣಗೊಂಡಿದೆ |
| 11 | ಆರ್ ಸಿ ಕಾಲೇಜಿನಲ್ಲಿ ವಿದ್ಯುತ್ ಅಭಿವೃದ್ಧಿ ಕಾಮಗಾರಿಗಳು | 50000.00 | 49866 00 | ಕಾಮಗಾರಿ ಪೂರ್ಣಗೊಂಡಿದೆ |
| 12 | ಆರ್ ಸಿ ಕಾಲೇಜಿನಲ್ಲಿ ನೆಲ ಮಹಡಿ ಮತ್ತು ಮೊದಲನೇ ಮಹಡಿಯಲ್ಲಿ ವಿದ್ಯುತ್ ತಂತಿಗಳ ಮರು ಜೋಡಣೆ ಕಾಮಗಾರಿ | 34500.00 | 34488.00 | ಕಾಮಗಾರಿ ಪೂರ್ಣಗೊಂಡಿದೆ |
| | | | | ಕಾಮಗಾರಿ ಪೂರ್ಣಗೊಂಡಿದೆ |
| | ಒಟ್ಟು | 1704500 00 | 319022 00 | |

470(197) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರಿನ ಮಹಾರಾಣಿ ಕಲಾ ಕಾಲೇಜಿನಲ್ಲಿ 2001-02, 2002-03 ಮತ್ತು 2003-04ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳಾವುವು?

ಆ) ಮೇಲ್ಕಂಡ ಅವಧಿಯಲ್ಲಿ ಖರ್ಚಾದ ಮೊತ್ತವೆಷ್ಟು?

ಇ) ಕಳಪೆ ಕಾಮಗಾರಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದರೆ ಯಾವ ಕ್ರಮ ತೆಗೆದುಕೊಳ್ಳಲು ಪ್ರಸ್ತಾಪಿಸಲಾಗಿದೆ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ)

| ವರ್ಷ | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ (ರೂ ಲಕ್ಷಗಳಲ್ಲಿ) |
|---|---|---|
| 2001-02 | 06 | 8 35 |
| 2002-03 | 07 | 8.98 |
| 2003-04 | 23 | 29 19 |

ಆ)

| ವರ್ಷ | ವೆಚ್ಚ (ರೂ ಲಕ್ಷಗಳಲ್ಲಿ) |
|---|---|
| 2001-02 | 1 23 |
| 2002-03 | 8 39 |
| 2003-04 | 4 22 |

ಇ) ಇಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ

471(199) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ವ್ಯಾಸಂಗ ಮಾಡುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ

ಆ) ಪ್ರತಿ ಕೋರ್ಸಿಗೂ ಸೇರಿಸಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ

ಇ) 2004-05ನೇ ಶೈಕ್ಷಣಿಕ ವರ್ಷದಲ್ಲಿ ಹೊಸ ಕೋರ್ಸುಗಳನ್ನು ಪ್ರಾರಂಭಿಸುವ ಉದ್ದೇಶವಿದೆಯೇ?

ಈ) ಗ್ರಂಥಾಲಯ ಮತ್ತು ಪ್ರಾಯೋಗಿಕ ಉಪಕರಣಗಳನ್ನು ಪಡೆಯಲು 2003-04ನೇ ವರ್ಷದಲ್ಲಿ ಆಗಿರುವ ವೆಚ್ಚದ ವಿವರ

ಉ) 2004-05ನೇ ಸಾಲಿಗೆ ಮಂಜೂರು ಮಾಡಬಹುದಾದ ಅನುದಾನ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಒಟ್ಟು 1198

ಆ) ಪ್ರಥಮ ಬಿ ಎಸ್ಸಿ 498

| | | |
|---|---|---|
| 1) | PCM | 72 |
| 2) | PMCs | 45 |
| 3) | PME | 60 |

| | | |
|---|---|---|
| 4) | CBZ | 72 |
| 5) | CZM1 | 45 |
| 6) | CBM1 | 45 |
| 7) | BZP | 72 |
| 8) | BIGs | 60 |
| 9) | BISBt | 20 |
| 10) | CBBt | 60 |
| 11) | CZBt | 60 |
| 12) | EBSt | 20 |

ಇ) ಇಲ್ಲ

ಈ) 2003-04ನೇ ಸಾಲಿಗಾಗಿ ಗ್ರಂಥಾಲಯ ಪುಸ್ತಕಗಳ ಖರೀದಿಗಾಗಿ ರೂ 1,10,000/-ಗಳನ್ನು ಪ್ರಯೋಗಾಲಯ ಉಪಕರಣಗಳ ಖರೀದಿಗಾಗಿ ರೂ 2,25,000/-ಗಳ ವೆಚ್ಚ ಭರಿಸಲಾಗಿರುತ್ತದೆ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು 2003-04ನೇ ಸಾಲಿನಲ್ಲಿ ಯಾವುದೇ ವೆಚ್ಚಗಳನ್ನು ಭರಿಸಲಾಗಿರುವುದಿಲ್ಲ

ಉ) 2004-05ನೇ ಸಾಲಿಗೆ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ

472(450) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರತಿದಿನ ಸರಾಸರಿ ಉತ್ಪಾದನೆಯಾಗುವ ಹಾಲಿನ ಪ್ರಮಾಣವೆಷ್ಟು,

ಆ) ರಾಜ್ಯದಲ್ಲಿ ಹಾಲಿಗಾಗಿ ಇರತಕ್ಕ ಬೇಡಿಕೆ ಎಷ್ಟು

ಇ) ರಾಜ್ಯಕ್ಕೆ ಪ್ರತಿದಿನ ಬೇರೆ ರಾಜ್ಯಗಳಿಂದ ಬರತಕ್ಕ ಹಾಲಿನ ಪ್ರಮಾಣವೆಷ್ಟು

ಈ) ಹೆಚ್ಚುವರಿ ಹಾಲನ್ನು ಯಾವ ರೀತಿ ಸದುಪಯೋಗಪಡಿಸಿಕೊಳ್ಳಲಾಗುತ್ತಿದೆ

ಉ) ರಾಜ್ಯದಲ್ಲಿ ಹೆಚ್ಚು ಹಾಲಿನಪುಡಿ ಉತ್ಪಾದನೆ ಘಟಕಗಳನ್ನು ಪ್ರಾರಂಭಿಸಲಾಗುವುದೇ,

ಊ) ರಾಜ್ಯಕ್ಕೆ ಹೊರರಾಜ್ಯಗಳಿಂದ ಬರತಕ್ಕ ಹಾಲಿನ ಗುಣಮಟ್ಟವನ್ನು ಖಾತ್ರಿಪಡಿಸಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು

ಋ) ಕೆ ಎಂ ಎಫ್ ವತಿಯಿಂದ ಹಾಲಿನ ಪದಾರ್ಥಗಳನ್ನು ತಯಾರಿಸಲಾಗುತ್ತಿದೆಯೆ, (ಅದರ ವಿವರ ನೀಡುವುದು),

ಎ) ಎಲ್ಲಾ ಸರ್ಕಾರಿ ಹಾಸ್ಟೆಲ್‌ಗಳು, ಆಸ್ಪತ್ರೆಗಳು ಕಡ್ಡಾಯವಾಗಿ ಕೆ ಎಂ ಎಫ್ ನಿಂದಲೇ ಹಾಲನ್ನು ಪಡೆದುಕೊಳ್ಳಬೇಕೆಂದು ಸರ್ಕಾರ ಆಜ್ಞೆ ಹೊರಡಿಸಿದೆಯೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ಜಿಲ್ಲಾ ಹಾಲು ಒಕ್ಕೂಟಗಳ ಮುಖಾಂತರ ಜುಲೈ ಮೊದಲ ವಾರದಲ್ಲಿ ದಿನವಹಿ ಸರಾಸರಿ 27 75 ಲಕ್ಷ ಲೀಟರ್‌ಗಳಷ್ಟು ಹಾಲು ಉತ್ಪಾದನೆಯಾಗಿದೆ

ಆ) ಜುಲೈ ಮೊದಲ ವಾರದಲ್ಲಿ ಒಕ್ಕೂಟಗಳ ಮುಖಾಂತರ ದಿನವಹಿ ಸರಾಸರಿ 15 56 ಲಕ್ಷ ಲೀಟರ್ ಹಾಲು ಮಾರಾಟವಾಗಿರುತ್ತದೆ

ಇ) ಜೂನ್ ಮಾಹೆಯಲ್ಲಿ ದಿನವಹಿ ಸರಾಸರಿ 2 81 ಲಕ್ಷ ಲೀಟರ್ ಹಾಲು ಹೊರ ರಾಜ್ಯದಿಂದ ಕರ್ನಾಟಕ ರಾಜ್ಯಕ್ಕೆ ಬಂದಿರುತ್ತದೆ

ಈ) ದಿನವಹಿ 12 19 ಲಕ್ಷ ಲೀಟರ್ ಅಧಿಕ ಹಾಲು ಶೇಖರಣೆಯಾಗುತ್ತಿದ್ದು, ಅದರ ವಿಲೇವಾರಿ ಈ ಕೆಳಕಂಡಂತೆ ಮಾಡಲಾಗುತ್ತದೆ

(ಲಕ್ಷ ಲೀಟರ್‌ಗಳಲ್ಲಿ)

| | | |
|---|---|---|
| 1 | ಸ್ಥಳೀಯ ಹಾಲು ಉತ್ಪನ್ನಗಳ ಮಾರಾಟಕ್ಕೆ (ಮೊಸರು, ಗುಡ್ ಲೈಫ್, ಮತ್ತಿತರ ತಾಜಾ ಉತ್ಪನ್ನಗಳು) | 1 50 |
| 2 | ಸಗಟು ರೂಪದಲ್ಲಿ ನೆರೆ ರಾಜ್ಯಗಳಿಗೆ ಹಾಲು ಮಾರಾಟ | 1 74 |
| ಅ) | ದೆಹಲಿ ಮದರ್ ಡ್ಯೆರಿ, ದೆಹಲಿ | |
| ಆ) | ಆಂಧ್ರಪ್ರದೇಶ ಹಾಲು ಮಹಾಮಂಡಳಿ, | 0 90 |
| ಇ) | ಗೋವಾ ಹಾಲು ಒಕ್ಕೂಟ | 0 25 |
| ಈ) | ಬೆಣ್ಣೆ ಹಾಲು ಹಾಲಿನಪುಡಿ ಪರಿವರ್ತನೆಗಾಗಿ | 7 80 |
| | ಒಟ್ಟು | 12 19 |

ಉ) ರಾಜ್ಯದಲ್ಲಿ ಹೊಸದಾಗಿ ಹಾಲಿನ ಪುಡಿ ಘಟಕ, ಪ್ರಾರಂಭಿಸಲು ರಾ ್ರೀಯ ಹೈನು ಅಭಿವೃದ್ಧಿ ಮಂಡಳಿಗೆ ಪತ್ರ ಬರೆಯಲಾಗಿದ್ದು, ಶೀಘ್ರದಲ್ಲಿ ಹಾಲಿನಪುಡಿ ಘಟಕ ಸ್ಥಾಪಿಸಲು ಯೋಚಿಸಲಾಗಿದೆ

ಊ) ರಾಜ್ಯಕ್ಕೆ ಹೊರೆ ರಾಜ್ಯದಿಂದ ಬರುವ ಹಾಲುಗಳ ಗುಣಮಟ್ಟವನ್ನು ಸಂಬಂಧಪಟ್ಟ ಪುರಸಭೆ, ನಗರಸಭೆ ಹಾಗೂ ಮಹಾನಗರಸಭೆಗಳ ಸಿಬ್ಬಂದಿಯು ಪರಿಶೀಲಸಿ, ಗುಣಮಟ್ಟವಲ್ಲದ ಹಾಲೆಂದು ದೃಢಪಟ್ಟಲ್ಲಿ ಅದನ್ನು ನಾಶಗೊಳಿಸಲಾಗುತ್ತದೆ ಹಾಗೂ ತಪ್ಪಿತಸ್ಥರ ವಿರುದ್ಧ ಆಹಾರ ಕಲಬೆರಕೆ ನಿಯಂತ್ರಣ ಕಾಯ್ದೆಯಡಿ ಮೊಕದ್ದಮೆ ಹೂಡಲಾಗುವುದು

ಋ) ಕರ್ನಾಟಕ ಹಾಲು ಮಹಾಮಂಡಳಿ, ಜಿಲ್ಲಾ ಹಾಲು ಒಕ್ಕೂಟಗಳ ವತಿಯಿಂದ ಈ ಕೆಳಕಂಡ ಪದಾರ್ಥಗಳನ್ನು ತಯಾರಿಸಲಾಗುತ್ತದೆ

| | | | |
|---|---|---|---|
| 1 | ತುಪ್ಪ | 10 | ಬರ್ಫಿ |
| 2. | ಬೆಣ್ಣೆ | 11 | ಧಾರವಾಡ ಪೇಡಾ |
| 3 | ಕೆನೆರಹಿತ ಹಾಲಿನ ಪುಡಿ | 12 | ಕುಂದಾ |
| 4 | ಮೊಸರು | 13 | ರಸಗುಲ್ಲಾ |
| 5 | ಪೇಡಾ | 14 | ಬಾದಾಮ್ ಪುಡಿ |
| 6 | ಐಸ್ ಕ್ರೀಮ್ | 15 | ಜಾಮೂನ್ |
| 7 | ಸುವಾಸಿತ ಹಾಲು | 16 | ಗುಡ್ ಲೈಫ್ |
| 8 | ಮೈಸೂರುಪಾಕ್ | 17 | ಸ್ಲಿಮ್ |
| 9 | ಮಜ್ಜಿಗೆ | | |

ಎ) ಇಲ್ಲ

473(451) ಶ್ರೀ ಕಟ್ಟಾಸುಬ್ರಮಣ್ಯನಾಯ್ಡು (ಶಿವಾಜಿನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2004-05ನೇ ಸಾಲಿನಲ್ಲಿ ವೈದ್ಯಕೀಯ, ದಂತ ಹಾಗೂ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕಾಗಿ ಸಿ ಇ ಟಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,

ಆ) ಸಿ ಇ ಟಿ ಕೌನ್ಸಿಲಿಂಗ್ ಪ್ರಾರಂಭಿಸಲಾಗಿದೆಯೇ,

ಇ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು

ಈ) ಸಿ ಇ ಟಿ ಮೂಲಕ ವೃತ್ತಿ ಶಿಕ್ಷಣ ಪ್ರವೇಶಕ್ಕೆ ಲಭ್ಯವಿರತಕ್ಕ ಸೀಟುಗಳೆಷ್ಟು

ಉ) ಕಾಮೆಡ್-ಕೆ ಹಾಗೂ ಸರ್ಕಾರದ ನಡುವೆ ಸೀಟುಗಳ ಹೊಂದಾಣಿಕೆಗೆ ಸಂಬಂಧಪಟ್ಟಂತೆ ಇರತಕ್ಕ ಬಿಕ್ಕಟ್ಟನ್ನು ನಿವಾರಿಸಲು ಇಲ್ಲಿಯವರೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) 2004-05ನೇ ಸಾಲಿನಲ್ಲಿ ವೈದ್ಯಕೀಯ, ದಂತ ಹಾಗೂ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕಾಗಿ ಸಿ ಇ ಟಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ 92,912

ಆ) ಪ್ರಾರಂಭಿಸಲಾಗಿತ್ತು ಆದರೆ, ದಿನಾಂಕ 15 07 2004ರಂದು ಸರ್ವೋಚ್ಚ ನ್ಯಾಯಾಲಯವು ಸೀಟು ಹಂಚಿಕೆ ಅನುಪಾತದಲ್ಲಿ ನೀಡಿರುವ ಮಧ್ಯಂತರ ತೀರ್ಪಿನಿಂದ ಉಂಟಾದ ಗೊಂದಲದಿಂದ ಸದ್ಯಕ್ಕೆ ಕೌನ್ಸಿಲಿಂಗ್ ನಿಲ್ಲಿಸಲಾಗಿದೆ

ಇ) ಉದ್ಭವಿಸುವುದಿಲ್ಲ

ಈ) ಈ ವಿಷಯದ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿದೆ

ಉ) ಅಧಿಕಾರಿಗಳ ಸಮಿತಿಯು ಆಡಳಿತ ಮಂಡಳಿಗಳ ಪದಾಧಿಕಾರಿಗಳೊಂದಿಗೆ ಚರ್ಚಿಸಿದೆ ಸಚಿವ ಸಂಪುಟ ಉಪ ಸಮಿತಿಯೂ ಸಹ ಹಲವು ಬಾರಿ ಸಭೆ ಸೇರಿ ಸಮಸ್ಯೆ ನಿವಾರಣೆ ಮಾರ್ಗೋಪಾಯಗಳನ್ನು ಕಂಡು ಹಿಡಿಯಲು ಪ್ರಯತ್ನಿಸಿದೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಡಳಿತ ಮಂಡಳಿಗಳ ಪ್ರತಿನಿಧಿಗಳೊಂದಿಗೆ ಮೂರು ಬಾರಿ ಸಭೆ ನಡೆಸಲಾಗಿದೆ ಸಮಸ್ಯೆಯ ನಿವಾರಣೆಗೋಸ್ಕರ 2004-05ನೇ ಸಾಲಿಗೆ ಪ್ರವೇಶಾತಿ ಬಗ್ಗೆ ಶಾಸನ ತರಲಾಗುತ್ತಿದೆ

475(825) ಶ್ರೀ ಕೃಷ್ಣಪ್ಪ ಎಂ ಟಿ (ತುರುವೇಕೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುರುವೇಕೆರೆಯಲ್ಲಿ ಇರುವ ವಕ್ಫ್ ಆಸ್ತಿಗಳು ಯಾವವು?

ಆ) ಈ ವಕ್ಫ್ ಆಸ್ತಿಗಳನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮಗಳೇನು?

ಇ) ಕಳೆದ 3 ವರ್ಷಗಳಿಂದ ಈ ಬಾಬ್ತಿಗಾಗಿ ಎಷ್ಟು ಹಣವನ್ನು ವ್ಯಯ ಮಾಡಲಾಗಿದೆ?

ಶ್ರೀ ಎಂ ಪಿ ಪ್ರಕಾಶ್ ( ಮಾನ್ಯ ಕಂದಾಯ ಸಚಿವರು)

ಅ) ತುರುವೇಕೆರೆ ಹಾಗೂ ತುರುವೇಕೆರೆ ಗ್ರಾಮ ಪ್ರದೇಶಗಳಲ್ಲಿ ಮಸೀದಿಗಳು ದರ್ಗಾ, ಈದ್ಗಾ ಖಬ್ರಸ್ಥಾನ ಇತರೆ ಒಟ್ಟು 37 ವಕ್ಫ್ ಆಸ್ತಿಗಳಿವೆ

(ಅನುಬಂಧ-1)

ಆ) ಸದರಿ ಆಸ್ತಿಯಿಂದ ಬರುವ ಆದಾಯದಿಂದ ಸದರಿ ಆಸ್ತಿಗಳನ್ನು ಸುರಕ್ಷತೆ ಹಾಗೂ ಅಭಿವೃದ್ಧಿಪಡಿಸಲು ಅಲ್ಲದೆ ಅಗತ್ಯವಿರುವ ಆಸ್ತಿಗಳ ದುರಸ್ತಿ, ಸುರಕ್ಷತೆ ಹಾಗೂ ನಿರ್ವಹಣೆಗಾಗಿ ಸರ್ಕಾರದಿಂದ ಅನುದಾನ ಸಹ ನೀಡಲಾಗುತ್ತಿದೆ

ಇ) ತುರುವೇಕೆರೆ ಹಾಗೂ ಅದರ ಗ್ರಾಮಾಂತರ ಪ್ರದೇಶಗಳಲ್ಲಿ ವಕ್ಫ್ ಆಸ್ತಿಗಳ ನಿರ್ಮಾಣ, ದುರಸ್ತಿ, ಸುರಕ್ಷತೆಗಾಗಿ ಕಳೆದ 3 ವರ್ಷಗಳಿಂದ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ

| ವರ್ಷ | ಹಣ ಪಡೆದ ವಕ್ಫ್ | ಮೊತ್ತ |
|---|---|---|
| 2001–02 | 06 | ರೂ 2,10,000 |
| 2002–03 | 06 | ರೂ 1,45,000 |
| 2002–04 | 02 | ರೂ 50,000 |
| ಒಟ್ಟು | 14 | ರೂ 4,05,000 |

ANNEXURE-I

Statement showing the details of Wakf Institutions of Turuvekere Taluk, Tumkur Dist

I Mosques

1 Jamia Masjid,Banasandra, Turuvekere Tq
2 Jamia Masjid, Mayasandra "
3 Jumma Masjid, Thandga, "
4 Jumma Masjid, Dasihalli "
5 Jumma Masjid, Beechanahally "
6 Jumma Masjid, Nagalapura "
7 Jumma Masjid, Devamaualamajalli "
8 Jumma Masjid, Chandur "
9 Jumma Masjid, Doddamma Village "
10 Noorani Masjid, Sampigehosahalli, Turuvekere Tq
11 Macca Masjid, Turuvekere "
12 Jumma Masjid, Dabbeghata "
13 Madeena Masjid, Janatha Colony, Turuvekere
14 Mosque (Sunni), Rahamansab Palya, T kere Tq
15 Sunnehri Masjid, Akkalsandra, Turuvekere Tq
16 Jamia Masjid, Muslim Colony, Talakere
17 Bilal Masjid, Marthamannahalli, Turuvekere Tq
18 Dargaj & Mohalla Masjid, Hattihalli, Turuvekere Tq
19 Jamia Masjid, Kalkere, Turuvekere Tq

II DARGHs

1 Noorulla Shah, Dargah, Turuvekere
111-29
2 Hayath Sab Dargah, Nagalapura Turuvekere Tq

3 Ashurkhana Sunni, Turuvekere
4 Ashurkhana Sunni Mayasandra, Turuvekere Tq
5 Ashurkhana Sunni, aga Devanayakanahalli, Turuvekere Tq
6 Ashurkhana Sunni, Chandur

III IDGAHS

1 Idgah, (Sunni), Bannasandra, Turuvekere Tq
2 Idgah, (Sunni), Turuvekere Tq
3 Idgah, (Sunni), Mayasandra, Turuvekere Tq
4 Idgah, & Khabrasthan, Thandga,
5 Idgah, (Sunni), Dasihalli,
6 Idgah, (Sunni), Beechanahally,
7 Idgah, (Sunni), Devanayakanahalli,
8 Idgah, (Sunni), Doddamaligere

IV KHABRASTHANS

1 Khabrasthan, Mayasandra,
2 Khabrasthan, Dasihalli
3 Khabrasthan, Nagalapura,
4 Khabrasthan, Talakere

Total 37 Wakf Institutions

476(748) ಶ್ರೀ ಕ್ಯಾತ್‌ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪಶುಸಂಪತ್ತು ಕ್ಷೀಣಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಕಳೆದ 3 ವರ್ಷಗಳಿಂದ ಯಾವ ಪ್ರಮಾಣದಲ್ಲಿ ಪಶುಸಂಪತ್ತು ಕ್ಷೀಣಿಸುತ್ತಿವೆ (ವರ್ಷವಾರು ಹಾಗೂ ವರ್ಗವಾರು ಮಾಹಿತಿಒದಗಿಸುವುದು)

ಇ) ಹಾಗಿದ್ದಲ್ಲಿ, ರಾಜ್ಯದಲ್ಲಿರುವ ಪಶುಸಂಪತ್ತಿನ ಸಂಖ್ಯೆ ಎಷ್ಟು (ವರ್ಗವಾರು ಮಾಹಿತಿನೀಡುವುದು)

ಈ) ಪಶುಗಣತಿಯನ್ನು ಎಷ್ಟು ವರ್ಷಗಳಿಗೊಮ್ಮೆ ಮಾಡಲಾಗುತ್ತದೆ,

ಉ) ರಾಜ್ಯದಲ್ಲಿ ಪಶು ಸಂಪತ್ತನ್ನು ಹೆಚ್ಚು ಮಾಡುವ ಬಗ್ಗೆ ಸರ್ಕಾರ ಹಾಕಿ ಕೊಂಡಿರುವ ಕಾರ್ಯಕ್ರಮಗಳೇನು

ಊ) ಕಳೆದ 3 ವರ್ಷಗಳಲ್ಲಿ ರಾಜ್ಯದ ಯಾವ ಯಾವ ಭಾಗದಲ್ಲಿ ಜಾನುವಾರುಗಳು ರೋಗಕ್ಕೆ ಗುರಿಯಾಗಿದ್ದವು

ಋ) ಯಾವ ಯಾವ ರೋಗದಿಂದ ಎಷ್ಟು ಜಾನುವಾರುಗಳು ಸತ್ತಿವೆ (ವರ್ಗವಾರು ಮಾಹಿತಿ ನೀಡುವುದು),

ಎ) ರೋಗ ತಡೆಗಟ್ಟುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) ವರ್ಷಾವಾರು ಮಾಹಿತಿ ಲಭ್ಯವಿರುವುದಿಲ್ಲ ಆದರೆ 1997ರಲ್ಲಿ ಹಾಗೂ 2003ರಲ್ಲಿ ನಡೆಸಲಾದ ಗಣತಿಯ ವರ್ಗಾವಾರು ಮಾಹಿತಿ ಈ ಕೆಳಕಂಡಂತಿದೆ

(ಲಕ್ಷಗಳಲ್ಲಿ)

| ಕ್ರ ಸಂ | ವರ್ಗಗಳ | 1997ರ ಜಾನುವಾರು ಗಣತಿಯಂತೆ | 2003ರ ಜಾನುವಾರು ಗಣತಿಯಂತೆ | ಶೇಕಡವಾರು ವ್ಯತ್ಯಾಸ |
|---|---|---|---|---|
| 1 | 2 | 3 | 4 | 5 |
| 1 | ದನಗಳು | 108 31 | 95 39 | –11 93 |
| 2 | ಎಮ್ಮೆಗಳು | 43 67 | 39 99 | –8.92 |
| 3 | ಕುರಿಗಳು | 80 03 | 72 56 | –9 34 |
| 4 | ಮೇಕೆಗಳು | 48 75 | 44 84 | –8 02 |
| 5 | ಹಂದಿಗಳು | 4 05 | 3 12 | –22 95 |
| 6 | ನಾಯಿಗಳು | 21 39 | 26 85 | +25 25 |
| 7 | ಇತರೆ | 0 68 | 0 45 | –33 82 |
| | ಒಟ್ಟು | 306 88 | 283 12 | –7 74 |

ಇ) 2003ರ ಜಾನುವಾರು ಗಣತಿಯ ಪ್ರಕಾರ 283 12 ಲಕ್ಷ ಜಾನುವಾರುಗಳಿವೆ (ವರ್ಗಾವಾರು ವಿವರ ಮೇಲ್ಕಂಡಂತಿದೆ) (ಕಾಲಂ ನಂ 4)

ಈ) ಪಶುಗಣತಿಯನ್ನು 5 ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ

ಉ) 1 ಆರೋಗ್ಯ ರಕ್ಷಣೆ

2. ಮುಂಜಾಗ್ರತೆ ಲಸಿಕೆ ಕಾರ್ಯಕ್ರಮ

3 ತಳಿ ಅಭಿವೃದ್ಧಿ ಸೇವೆ

4 ಜಾನುವಾರು ರೋಗ ತಪಾಸಣೆ ಪ್ರಯೋಗಾಲಯ ಸ್ಥಾಪನೆ

5 ಜಾನುವಾರು ಆರೋಗ್ಯ ಮತ್ತು ಬರಡು ರಾಸು ಚಿಕಿತ್ಸಾ ಶಿಬಿರಗಳು

6 ಮೇವು ಅಭಿವೃದ್ಧಿ

7 ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ ಸ್ಥಾಪನೆ

8 ವಿಸ್ತರಣಾ ಚಟುವಟಿಕೆಗಳು ಸಾಮಾಜಿಕ ಆರ್ಥಿಕ ಕಾರ್ಯದಡಿಯಲ್ಲಿ ಜಾನುವಾರುಗಳ ವಿತರಣೆ

ಊ) ರಾಜ್ಯದ ಎಲ್ಲಾ ಭಾಗಗಳಲ್ಲಿ ರೋಗಗಳು ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತದೆ

ಋ) ರೋಗಗಳಿಂದ ಸತ್ತ ಸಂಖ್ಯೆ

| ಕಾಯಿಲೆಯ ಹೆಸರು | 2001-02 | 2002-03 | 2003-04 |
|---|---|---|---|
| ಕರಳುಬೇನೆ | 304 | 223 | 101 |
| ಕಾಲುಬಾಯಿ ಜ್ವರ | 593 | 236 | 40 |
| ನರಡಿ | 173 | 174 | 131 |
| ಕುರಿ ಮತ್ತು ಆಡು ಸಿಡುಬು | 339 | 420 | 144 |
| ಪಿ ಪಿ ಆರ್ | – | 777 | 308 |
| ನೀಲಿನಾಲಿಗೆ | 355 | 37 | 33 |
| ಹುಚ್ಚುರೋಗ | 37 | 43 | 14 |

ಎ) 1 ರೋಗಗಳ ಬಗ್ಗೆ ಕಣ್ಣಾವಲು ಯೋಜನೆ ಮೂಲಕ ಒಂದು ತಿಂಗಳು ಮುಂಚೆ ಸಂಭವನೀಯ ರೋಗಗಳ ಬಗ್ಗೆ ಮಾಹಿತಿ ನೀಡುವಿಕೆ

2 ಮುಂಜಾಗ್ರತೆಯಾಗಿ ರೋಗ ನಿರೋಧಕ ಚುಚ್ಚುಮದ್ದು ನೀಡುವುದು

3 ವಿಸ್ತರಣಾ ಚಟುವಟಿಕೆ ಮೂಲಕ ರೈತರಲ್ಲಿ ಜಾಗೃತಿ ಮೂಡಿಸುವುದು

477(750) ಶ್ರೀ ಕ್ಯಾತ್‌ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕು ದೊಡ್ಡೇರಿ ಹೋಬಳಿಯ ವ್ಯಾಪ್ತಿಯಲ್ಲಿ ಹೂವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೂವನ್ನು ಮಾರುಕಟ್ಟೆಗೆ ರವಾನಿಸುವ ಮೊದಲು ಶೇಖರಣೆ ಮಾಡುವುದಕ್ಕಾಗಿ ಶಿಥಲಗಾರವನ್ನು ನಿರ್ಮಿಸುವ ಬಗ್ಗೆ ಸರ್ಕಾರ ಯೋಚಿಸುವುದೇ

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು7

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಬಂದಿದೆ

ಆ) ಹೌದು ಹೂವು ಸೇರಿದಂತೆ ತೋಟಗಾರಿಕೆ ಉತ್ಪನ್ನಗಳ ಶೇಖರಣೆಗೆ ಶೈತ್ಯಾಗಾರಗಳನ್ನು ನಿರ್ಮಿಸಲು ಸಹಕಾರ ಸಂಘಗಳು/ಖಾಸಗಿಯವರಿಗೆ ನೆರವು ನೀಡಲಾಗುವುದು ಆದರೆ ಸರ್ಕಾರದ ವತಿಯಿಂದ ಶೈತ್ಯಾಗಾರಗಳನ್ನು ನಿರ್ಮಿಸುವ ಯೋಜನೆ ಇರುವುದಿಲ್ಲ

ಇ) ಸಹಕಾರ ಸಂಘಗಳು/ಖಾಸಗಿಯವರು ಶೈತ್ಯಾಗಾರ ನಿರ್ಮಿಸಲು ಮುಂದೆ ಬಂದಲ್ಲಿ ಭಾರತ ಸರ್ಕಾರದಸ ರಾಷ್ಟ್ರೀಯ ತೋಟಗಾರಿಕೆ ಮಂಡಳಿ/ಎನ್ ಸಿ ಡಿ ಸಿ ಸಂಸ್ಥೆಗಳು ಒದಗಿಸುವ ಹಣಕಾಸಿನ ಸಾಲ ಸೌಲಭ್ಯಗಳನ್ನು ಪಡೆಯಲು ಶಿಫಾರಸ್ಸು ಮಾಡಲಾಗುವುದು ತೋಟಗಾರಿಕೆ ಶೈತ್ಯಾಗಾರಗಳು ಬಳಸುವ ಪ್ರತಿ ಯೂನಿಟ್ ವಿದ್ಯುಚ್ಛಕ್ತಿಗೆ ರೂ 1 ರಂತೆ ಸಹಾಯಧನ ಒದಗಿಸಲಾಗುವುದು

479(754) ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಕೃಷಿ ಉತ್ಪಾದನಾ ಮಾರುಕಟ್ಟೆ ಸಮಿತಿಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ತುಮಕೂರು ತಾಲ್ಲೂಕು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ವಿಭಾಗಿಸಿ ಕೊರಟಗೆರೆ ತಾಲ್ಲೂಕಿಗೆ ವಿಸ್ತರಿಸುವುದಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು

ಇ) ಕೊರಟಗೆರೆ ತಾಲ್ಲೂಕಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ಯಾವಾಗ ಮಾಡಲಾಗುತ್ತದೆ?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ),ಆ),ಇ) ಸದ್ಯಕ್ಕೆ ಇಲ್ಲಿ ಸ್ವತಂತ್ರ ಮಾರುಕಟ್ಟೆಯನ್ನು ಸ್ಥಾಪಿಸುವಷ್ಟು ವಹಿವಾಟು ಅಭಿವೃದ್ಧಿಗೊಂಡಿರುವುದಿಲ್ಲ ವಹಿವಾಟು ಅಭಿವೃದ್ಧಿಗೊಂಡಾಗ ಈ ಬಗ್ಗೆ ಪರಿಶೀಲಿಸಲಾಗುವುದು

480(442) ಶ್ರೀ ಲಕ್ಷ್ಮಣ್ ಸಂಗಪ್ಪ ಸಾವದಿ (ಅಥಣಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲಾ ಅಥಣಿ ತಾಲ್ಲೂಕು ಬರಗಾಲ ಪೀಡಿತ ಪ್ರದೇಶವಾಗಿರುವುದರಿಂದ ಇಲ್ಲಿಯವರೆಗೆ ರೈತರ ಬಗ್ಗೆ ಸರಕಾರ ಯಾವ ಕಾಳಜಿ ವಹಿಸಲಾಗಿದೆ?

ಆ) ರೈತರು ತೆಗೆದುಕೊಂಡ ಬ್ಯಾಂಕಿನ ಬೆಳೆ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಜರುಗಿಸಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡಿರುವುದಿಲ್ಲ ಆದರೆ 2002ನೇ ಖಾರೀಫ್(ಮುಂಗಾರು) ಮತ್ತು 2002ನೇ ರಬಿ(ಹಿಂಗಾರು) ಅವಧಿಯಲ್ಲಿ ವಿತರಿಸಲಾದ ಎಲ್ಲಾ ಅಲ್ಪಾವಧಿ ಬೆಳೆ ಸಾಲಗಳ ಮೇಲಿನ ಬಡ್ಡಿ ಕ್ರಮವಾಗಿ ರೂ 127 00 ಕೋಟಿ ಮತ್ತು ರೂ 40 30 ಕೋಟಿಗಳನ್ನು ಮನ್ನಾ ಮಾಡಲು ಸರ್ಕಾರ ಆದೇಶಿಸಿದೆ ]

ದಿನಾಂಕ 31–03–2003ಕ್ಕೆ ತೋಟಗಾರಿಕೆ ಬೆಳೆಗಳಿಗೆ (ರಬ್ಬರ್, ವೆನಿಲಾ, ಹಣಬೆ ಮತ್ತು ತಾಳೆ ಹೊರತುಪಡಿಸಿ) ಬಾಕಿಇರುವ ದೀರ್ಘಾವಧಿ ಚಾಲ್ತಿ ಸಾಲಿನ ಅಸಲನ್ನು ರೈತರು ಪಿಕಾರ್ಡ್ ಬ್ಯಾಂಕುಗಳಿಗೆ ಮರುಪಾವತಿಸಿದಲ್ಲಿ ಹೊರ ಬಾಕಿ ಇರುವ (Outstanding) ಸಾಲಗಳ ಮೇಲಿನ ಚಾಲ್ತಿ ಬಡ್ಡಿಯನ್ನು ಮನ್ನಾ ಮಾಡಲು ಮತ್ತು ತತ್ಸಂಬಂಧವಾದ ಮೊಬಲಗು 20 00 ಕೋಟಿ ರೂ ಗಳನ್ನು ಪಿಕಾರ್ಡ್ ಬ್ಯಾಂಕುಗಳಿಗೆ ಭರ್ತಿ ಮಾಡಿಕೂಡಲು ಮಂಜೂರಾತಿ ನೀಡಲಾಗಿದೆ ದಿನಾಂಕ 31–3–2003ಕ್ಕೆ ಬಾಕಿಯಿರುವ ದೀರ್ಘಾವಧಿ ಚಾಲ್ತಿ ಸಾಲಿನ ಅಸಲನ್ನು ರೈತರು ಶೇ 9ರ ಬಡ್ಡಿ ಸಹಿತ ಪಿಕಾರ್ಡ್ ಬ್ಯಾಂಕ್‌ಗಳಿಗೆ ಮರುಪಾವತಿಸಿದಲ್ಲಿ ಶೇ 9ಕ್ಕಿಂತ ಹೆಚ್ಚಿನ ಬಡ್ಡಿಯನ್ನು ಮನ್ನಾ ಮಾಡಲು ಮತ್ತು ತತ್ಸಂಬಂಧವಾದ ಮೊಬಲಗು 33 00 ಕೋಟಿ ರೂ ಗಳನ್ನು ಪಿಕಾರ್ಡ್ ಬ್ಯಾಂಕುಗಳಿಗೆ ಭರ್ತಿ ಮಾಡಿಕೊಡಲು ಮಂಜೂರಾತಿ ನೀಡಲಾಗಿದೆ ಇದಲ್ಲದೆ ವಿಫಲಭಾವಿ ಪರಿಹಾರ ಯೋಜನೆಯಡಿ ಸರ್ಕಾರವು ರೂ 22 00 ಕೋಟಿಗಳನ್ನು ಸಹ ಮಂಜೂರು ಮಾಡಿದೆ ಮೇಲ್ಕಂಡ ಯೋಜನೆಗಳ ಸೌಲಭ್ಯಗಳು ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಸಾಲ ಪಡೆದಿರುವ ರೈತರಿಗೂ ಸಹ ಅನ್ವಯವಾಗಿರುತ್ತದೆ

ಆ) ಸದ್ಯಕ್ಕೆ ಅಂತಹ ಪ್ರಸ್ತಾವವು ಸರ್ಕಾರದ ಮುಂದೆ ಇರುವುದಿಲ್ಲ

481(735) ಶ್ರೀ ಮಲ್ಲಿಕಾರ್ಜುನ ಸಿದ್ಧರಾಮಪ್ಪ ಖೂಬ (ಬಸವ ಕಲ್ಯಾಣ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯಲ್ಲಿರುವ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಈ ಕಾಲೇಜುಗಳು ಯಾವ ಯಾವ ಸ್ಥಳದಲ್ಲಿವೆ ಹಾಗೂ ಈ ಕಾಲೇಜುಗಳಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು,

ಆ) ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕಾಲೇಜುಗಳು ಇಲ್ಲದೇ ಇರುವುದು ನಿಜವೇ

ಇ) ಜಿಲ್ಲೆಯಲ್ಲಿ ಹೊಸದಾಗಿ ಪದವಿ ಕಾಲೇಜುಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ,

ಈ) ಇದ್ದಲ್ಲಿ ಯಾವ ಯಾವ ಸ್ಥಳಗಳಲ್ಲಿ ಹೊಸ ಪದವಿ ಕಾಲೇಜುಗಳನ್ನು ಸ್ಥಾಪಿಸಲಾಗುವುದು?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) 11

| | | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1) ಸರ್ಕಾರಿ ಕಾಲೇಜ್, ಬೀದರ್ | – | 262 |
| **ಖಾಸಗಿ ಅನುದಾನಿತ ಕಾಲೇಜುಗಳು** | | |
| 2) ಬಿ ವಿ ಭೂಮರೆಡ್ಡಿ ಕಾಲೇಜ್, ಬೀದರ್ | – | 607 |
| 3) ಎಸ್ ಎಸ್ ಬಾಬಾ ಬಸವೇಶ್ವರ ಕಾಲೇಜು, ಬಸವಕಲ್ಯಾಣ | – | 617 |
| 4) ಚನ್ನಬಸವೇಶ್ವರ ಕಾಲೇಜು, ಭಾಲ್ಕಿ | – | 594 |
| 5) ಕರ್ನಾಟಕ ಕಾಲೇಜು, ಬೀದರ್ | – | 1854 |
| 6) ಅಕ್ಕಮಹಾದೇವಿ ಮಹಿಳಾ ಕಾಲೇಜು, ಬೀದರ್ | – | 445 |
| 7) ಅಮರೇಶ್ವರ ಕಾಲೇಜ್, ಔರಾದ್ | – | 376 |
| 8) ಶ್ರೀ ಬಸವತೀರ್ಥ ಚನ್ನಬಸವೇಶ್ವರ ಸ್ವಾಮೀಜಿ/ ಶ್ರೀವೀರಭದ್ರ ಕಾಲೇಜು ಹುಮ್ನಾಬಾದ್ | – | 745 |
| 9) ಮೇಥಡಿಸ್ಟ್ ಕಾಲೇಜು, ಬೀದರ್ | – | 128 |
| 10) ಶ್ರೀ ಸಿದ್ಧಾರಾಮೇಶ್ವರ ಕಾಲೇಜು, ಕಮಲಾನಗರ | – | 207 |
| 11) ಡಾ॥ ಅಂಬೇಡ್ಕರ್ ಕಾಲೇಜು, ಹುಮ್ನಾಬಾದ್ | – | 248 |

ಆ) ನಿಜವಲ್ಲಾ

ಇ) ಪ್ರಸ್ತುತ ಪದವಿ ಕಾಲೇಜುಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ

ಈ) ಉದ್ಭವಿಸುವುದಿಲ್ಲ

482(737) ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬ (ಬಸವಕಲ್ಯಾಣ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರ ?

ಅ) ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳು ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ

ಆ) ಜಿಲ್ಲೆಯಲ್ಲಿ ತಾಂತ್ರಿಕ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಹಾಗಿದ್ದಲ್ಲಿ, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಜಿಲ್ಲೆಯಲ್ಲಿ ಹೊಸದಾಗಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇದೆಯೇ

ಈ) ಹಾಗಿದ್ದಲ್ಲಿ, ಜಿಲ್ಲೆಯಲ್ಲಿ ಹೊಸದಾಗಿ ಸರ್ಕಾರಿ ಇಲ್ಲವೇ ಖಾಸಗಿ ಪಾಲಿಟೆಕ್ನಿಕ್‌ಗಳನ್ನು

ಪ್ರಾರಂಭಿಸಲು ಮಂಜೂರಾತಿಯನ್ನು ನೀಡಲಾಗುವುದೇ ಹಾಗೂ ಯಾವ ಯಾವ ಸ್ಥಳಗಳಲ್ಲಿ ಹೊಸ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲಾಗುವುದು?

ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) 1 ಸರ್ಕಾರಿ ಪಾಲಿಟೆಕ್ನಿಕ್, ಬೀದರ್ (ಸರ್ಕಾರಿ)

2 ಜೆ ಎಸ್ ಪಾಟಿಟೆಕ್ನಿಕ್, ತಾಣಾಕುಶನೂರು (ಅನುದಾನಿತ)

3 ನಿಟ್ಟೂರು ಎಜುಕೇಷನ್ ಸೊಸೈಟಿ ಪಾಲಿಟೆಕ್ನಿಕ್ ನಿಟ್ಟೂರು (ಖಾಸಗಿ)

4 ಹರಳಯ್ಯ ಪಾಲಿಟೆಕ್ನಿಕ್, ಬಾಲ್ಕಿ (ಖಾಸಗಿ)

ಆ) ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ತಾಂತ್ರಿಕ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ ಇಲ್ಲದಿರುವುದು ಕಂಡು ಬಂದಿದೆ ಆದಾಗ್ಯೂ ಸರ್ಕಾರಿ ಮತ್ತು ಅನುದಾನಿತ ಪಾಲಿ ಟೆಕ್ನಿಕ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿರುವುದು ಕಂಡು ಬಂದಿದೆ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

483(753) ಶ್ರೀ ನರಸಿಂಹನಾಯಕ್ (ರಾಜೂಗೌಡ) (ಸುರಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸುರಪುರ ತಾಲ್ಲೂಕಿನ ಕೋಡಕಲ್ ಹೋಬಳಿಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ಬಡ ಜನ ವಿದ್ಯಾವಂತ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅಲ್ಲಿ ಪದವಿ ಕಾಲೇಜನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ

ಆ) ಹಾಗಿದ್ದಲ್ಲಿ, ಸರ್ಕಾರ ಪದವಿ ಕಾಲೇಜು ಪ್ರಾರಂಭಿಸುವ ಬಗ್ಗೆ ಯಾವ ಕ್ರಮ ಕೈಗೊಂಡಿದೆ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ

ಆ) ಪ್ರಸ್ತುತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಯ, ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ

484(756) ಶ್ರೀ ನರಸಿಂಹ ನಾಯಕ್ (ರಾಜೂಗೌಡ) (ಸುರಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸುರುಪುರ ಹಾಗೂ ಷಹಪುರ ತಾಲ್ಲೂಕುಗಳಲ್ಲಿ ಪ್ರತಿನಿತ್ಯ 84000 ಲೀಟರ್ ಹಾಲು ಉತ್ಪಾದಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ಹಾಗಿದ್ದಲ್ಲಿ, ಕಾರ್ಯನಿರ್ವಹಿಸುತ್ತಿರುವ ಕೆಲವು ಕೇಂದ್ರಗಳನ್ನು ಮುಚ್ಚಿಸಲು ಕಾರಣವೇನು.

ಇ) ಷಹಪುರ ಮತ್ತು ಸುರಪುರ ಹಾಲು ಉತ್ಪಾದನಾ ಕೇಂದ್ರಗಳ್ಲಲಿ ಸರ್ಕಾರದ ಬೆಲೆ ಪ್ರತಿ ಲೀಟರಿಗೆ ರೂ 9 20 ಇದ್ದು ರೈತರು 4 00 ರೂ ಗಳಿಗೆ ಮಾರಾಟ ಮಾಡಿ ಸಾಕಷ್ಟು ಸಂಕಷ್ಟದಲ್ಲಿರುವುದರಿಂದ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸುರಪುರ ಹಾಗೂ ಷಹಪುರ ತಾಲ್ಲೂಕುಗಳಲ್ಲಿ 56,000 ಲೀಟರ್ ಹಾಲು ಪ್ರತಿದಿನ ಉತ್ಪಾದನೆ ಇರುತ್ತದೆ

ಆ) ದಿನಂಪ್ರತಿ ಕೇವಲ 1000 ಲೀಟರ್ ಹಾಲು ಮಾತ್ರ ಶೇಖರಣೆಯಾಗುತ್ತಿದ್ದರಿಂದ ಎಲ್ಲಾ 32 ಸಂಘಗಳು ಆರ್ಥಿಕವಾಗಿ ದುರ್ಬಲಗೊಂಡು ಸ್ಥಗಿತವಾಗಿರುತ್ತವೆ

ಇ) ಗುಲ್ಬರ್ಗಾ ಒಕ್ಕೂಟವು ರೈತರಿಂದ ಶೇಖರಿಸುವ ಪ್ರತಿ ಲೀಟರ್‌ಗೆ ರೂ 8 40 ಪೈಸೆ ರೈತರು ಒಂದು ಲೀಟರ್ ಹಾಲಿಗೆ ರೂ 4 00ರ ದರದಲ್ಲಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

486(855) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುರಿಗಳಿಗೆ ಮತ್ತು ಜಾನುವಾರುಗಳಿಗೆ ತಗಲುವ ರೋಗಗಳನ್ನು ತಡೆಗಟ್ಟಲು ಇಲಾಖೆಯಿಂದ ತೆಗೆದುಕೊಂಡಿರುವ ಕ್ರಮಗಳೇನು

ಆ) ಅದರಲ್ಲೂ ಮುಖ್ಯವಾಗಿ ಕುಣಿಗಲ್ ತಾಲ್ಲೂಕಿಗೆ ಎಷ್ಟು ಜಾನುವಾರುಗಳು ಮತ್ತು ಕುರಿಗಳು ರೋಗದಿಂದ ಸತ್ತಿರುವ ಬಗ್ಗೆ ವರದಿಯಾಗಿದೆ (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

ಇ) ಇದಕ್ಕೆ ನೀಡಲಾಗಿರುವ ಮತ್ತು ನೀಡಲಿರುವ ಪರಿಹಾರವೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) 1 ರೋಗಗಳ ವಿರುದ್ಧ ಮುಂಜಾಗ್ರತಾ ಲಸಿಕೆ ಕಾರ್ಯಕ್ರಮ

2 ವಿಸ್ತರಣಾ ಚಟುವಟಿಕೆ

3 ಜಾನುವಾರು ಆರೋಗ್ಯ ಮತ್ತು ಬರಡು ರಾಸುಗಳ ಶಿಬಿರಗಳ ಏರ್ಪಾಡು

ಆ) ಪ್ರಸ್ತುತ ವರ್ಷದಲ್ಲಿ ಮೂರು ದನಗಳು ಸತ್ತಿರುತ್ತವೆ ತಾಲ್ಲೂಕುವಾರು ವಿವರ ಅನುಬಂಧದಲ್ಲಿ ನೀಡಿದೆ

ಇ) ಇಲಾಖೆಯಲ್ಲಿ ಪರಿಹಾರ ನೀಡಲು ಅವಕಾಶ ಕಲ್ಪಿಸಿರುವುದಿಲ್ಲ

488(857) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುಣಿಗಲ್ ತಾಲ್ಲೂಕಿನ ಬ್ಯಾರಿತ ಕುರಿಗಳು ರೋಗಪೀಡಿತವಾಗಿ ಸಾವನ್ನಪ್ಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಈ ರೋಗವನ್ನು ತಡೆಗಟ್ಟಲು ಕೈಗೊಂಡಿರುವ ಮುಂಜಾಗ್ರತೆ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಇಲ್ಲ

ಕುಣಿಗಲ್ ತಾಲ್ಲೂಕಿನಲ್ಲಿ 2004–05ನೇ ಸಾಲಿನಲ್ಲಿ ಯಾವುದೇ ಕುರಿಗಳು ಮರಣ ಹೊಂದಿರುವುದಿಲ್ಲ

ಆ) ಮುಂಜಾಗ್ರತೆ ಕ್ರಮವಾಗಿ ಕುರಿಗಳಿಗೆ 15127 ಚುಚ್ಚುಮದ್ದನ್ನು ವಿವಿಧ ಕಾಯಿಲೆಗಳ ವಿರುದ್ಧ ಹಾಕಲಾಗಿದೆ

| | |
|---|---|
| ಗಂಟಲು ಬೇನೆ | 1661 |
| ಪಿ ಪಿ ಆರ್ | 10806 |
| ಕರುಳುಬೇನೆ | 2560 |
| ಕರುಸಿಡುಬು | 100 |
| ಒಟ್ಟು | 15127 |

489(858) ಶ್ರೀ ಹೆಚ್ ನಿಂಗಪ್ಪ (ಕುಣಿಗಲ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುಣಿಗಲ್ ಕ್ಷೇತ್ರದ ಹೆಬ್ಬೂರಿನಲ್ಲಿ ಪ್ರಾರಂಭವಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟೆ, ಪೀಠೋಪಕರಣ, ಬೋಧಕ, ಬೋಧಕೇತರ ಸಿಬ್ಬಂದಿ ಇಲ್ಲದೆ ಇರುವುದರಿಂದ ಸರ್ಕಾರ ಇವುಗಳನ್ನು ಪೂರೈಸಲು ಕ್ರ ಕೈಗೊಳ್ಳುವುದೇ,

ಆ) ಹಾಗಿದ್ದಲ್ಲಿ ಎಷ್ಟು ಸಮಯದೊಳಗಾಗಿ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಕಾಲೇಜು ಸುಲಲಿತವಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲಾಗುತ್ತಿದೆ

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಹೌದು

ಆ) ಆದಷ್ಟೂ ಜಾಗ್ರತೆ

490(563) ಶ್ರೀ ಪಾಟೀಲ್ ಸಿ ಸಿ(ನರಗುಂದ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳಿಂದ ಮಂಜೂರಾದ ರೈತರ ಸಾಲಗಳಿಗೆ ಬಡ್ಡಿ ಸಹಯಧನವನ್ನು ಒದಗಿಸಲು ಸರ್ಕಾರ ತೀರ್ಮಾನಿಸಿದೆಯೆ?

ಆ) ಶೇ ಎಷ್ಟು ಸಹಾಯಧನ ಒದಗಿಸಲಾಗುವುದು?

ಇ) ಇದು ಎಂದಿನಿಂದ ಜಾರಿಗೆ ಬರಲಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸಹಕಾರ ಬ್ಯಾಂಕ್‌ಗಳು ಮತ್ತು ಸಹಕಾರ ಸಂಸ್ಥೆಗಳು ರೈತರಿಗೆ ಶೇ 6ರ ಬಡ್ಡಿ ದರದಲ್ಲಿ ಸಾಲ ನೀಡಲು ಅನುಕೂಲವಾಗುವಂತೆ ಸರ್ಕಾರವು ಸಹಾಯಧನ ಒದಗಿಸಲು ತೀರ್ಮಾನಿಸಿದೆ.

ಆ) ಈ ಉದ್ದೇಶಕ್ಕಾಗಿ 2004-05ರ ಆಯವ್ಯಯದಲ್ಲಿ 60 ಕೋಟಿ ರೂ ಗಳನ್ನು ಒದಗಿಸಲಾಗಿದೆ

ಇ) ಆಯವ್ಯಯಕ್ಕೆ ವಿಧಾನಮಂಡಲದ ಅನುಮೋದನೆ ದೊರೆತ ನಂತರ ಇದು ಜಾರಿಗೆ ಬರುತ್ತದೆ

492(260) ಶ್ರೀ ಡಿ ಆರ್ ಪಾಟೀಲ್ (ಗದಗ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸರ್ಕಾರ ಎ ಪಿ ಎಂ ಸಿ ಗಳಿಗೆ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು

ಆ) ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ಮುಚ್ಚಳಿಕೆ ಬರೆದುಕೊಟ್ಟಿದೆಯೇ

ಇ) ಕೊಟ್ಟಿದ್ದಲ್ಲಿ ಆ ಮುಚ್ಚಳಿಕೆಯ ವಿವರಗಳೇನು

ಈ) ನ್ಯಾಯಾಲಯಕ್ಕೆ ಮುಚ್ಚಳಿಕೆಯಲ್ಲಿ ನೀಡಿರುವ ವಚನದಂತೆ ನಡೆದುಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಪ್ರಸ್ತುತ ಡಿಸೆಂಬರ್ 2004ರವರೆಗೆ ಮುಂದೂಡಲು ತೀರ್ಮಾನಿಸಲಾಗಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ.

494(840) ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಖ್ಯಾತ ಗಾಯಕಿ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರ ಹೆಸರಿನಲ್ಲಿ ಧಾರವಾಡ ವಿಶ್ವವಿದ್ಯಾಲಯ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದೆಯೇ,

ಆ) ಧಾರವಾಡದಲ್ಲಿ ವಿಜ್ಞಾನ ನಗರಿ ಸ್ಥಾಪನೆ ಆಗಿದೆಯೆ,

ಇ) ಸಹಕಾರ ಚಳುವಳಿಯ ಅಧ್ಯಯನಕ್ಕಾಗಿ ದಿವಂಗತ ಕೆ ಎಚ್ ಪಾಟೀಲರ ಹೆಸರಿನಲ್ಲಿ ಪೀಠ ಸ್ಥಾಪಿಸಲಾಗಿದೆಯೆ,

ಈ) ಈ ಮೂರು ಭರವಸೆಗಳು ಈಡೇರಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು,

ಉ) ಈ ಘೋಷಣೆಗಳನ್ನು ಈ ಸರಕಾರ ಅನುಷ್ಠಾನಗೊಳಿಸುವುದೇ,

ಊ) ಹಾಗಿದ್ದಲ್ಲಿ, ಅದಕ್ಕೆ ಒಂದು ಕಾಲಮಿತಿ ಹಾಕಿಕೊಳ್ಳಲಾಗುವುದೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ

ಆ) ಇದು ಸರ್ಕಾರದ ಪರಿಶೀಲನೆಯಲ್ಲಿದೆ

ಇ) ಹೌದು ಸ್ಥಾಪಿಸಲಾಗಿದೆ.

ಈ) 1) ಶ್ರೀಮತಿ ಗಂಗೂಬಾಯಿ ಹಾನಗಲ್‌ರವರ ಹೆಸರಿನಲ್ಲಿ ಧಾರವಾಡ ವಿಶ್ವವಿದ್ಯಾಲಯ ಸ್ಥಾಪನೆಗೆ ಕುರಿತಂತೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ

2) ದಿವಂಗತ ಕೆ ಹೆಚ್ ಪಾಟೀಲರ ಹೆಸರಿನಲ್ಲಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ಸಹಕಾರ ಚಳುವಳಿಯ ಅಧ್ಯಯನಕ್ಕಾಗಿ ಈಗಾಗಲೇ ಪೀಠವನ್ನು ಸ್ಥಾಪಿಸಲಾಗಿದೆ

3) ಧಾರವಾಡದಲ್ಲಿ ವಿಜ್ಞಾನ ನಗರವನ್ನು ಸ್ಥಾಪಿಸಲು ಸರ್ಕಾರವು 2002–2003ರಲ್ಲಿ ರೂ 20 ಲಕ್ಷ ಗಳ ಅನುದಾನವನ್ನು ಬಿಡುಗಡೆ ಮಾಡಿದೆ ವಿಜ್ಞಾನನಗರ ಸ್ಥಾಪನೆಗೆ ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿರುವ 50 ಎಕರೆ ಜಮೀನನ್ನು ಹಸ್ತಾಂತರಗೊಳಿಸುವ ಪ್ರಕ್ರಿಯೆಯು ಚಾಲನೆಯಲ್ಲಿದೆ

(ಈ) ನಲ್ಲಿ ಉತ್ತರಿಸಿದ ಮೇರೆಗೆ ಇದು ಉದ್ಭವಿಸುವುದಿಲ್ಲ

496(849) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಪಶು ಆಸ್ಪತ್ರೆ ಪಶು ಚಿಕಿತ್ಸಾಲಯ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಹಾಗೂ ಕೃತಕ ಗರ್ಭಧಾರಣಾ ಉಪ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರು ಹಾಗೂ ಇತರೆ ಹುದ್ದೆಗಳು ಯಾವುವು (ವಿವರ ನೀಡುವುದು)

ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು

ಇ) ಕಟ್ಟಡಗಳು ಇಲ್ಲದಿರುವ ಆಸ್ಪತ್ರೆ ಚಿಕಿತ್ಸಾಲಯ ಹಾಗೂ ಚಿಕಿತ್ಸಾ ಕೇಂದ್ರಗಳಿಗೆ ಕಟ್ಟಡಗಳನ್ನು ಕಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು

ಈ) ಮುಂಡರಗಿ ಕ್ಷೇತ್ರದಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು ಹಾಗೂ ಸದರಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

| | | |
|---|---|---|
| ಅ) | ಸಹಾಯಕ ನಿರ್ದೇಶಕರು | 45 |
| | ಪಶು ವೈದ್ಯಾಧಿಕಾರಿಗಳು | 922 |
| | ಪಶುವೈದ್ಯಕೀಯ ಮೇಲ್ವಿಚಾರಕರು | 81 |
| | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 256 |
| | ಪಶುವೈದ್ಯಕೀಯ ಪರೀಕ್ಷಕರು | 417 |
| | ಪಶುವೈದ್ಯಕೀಯ ಸಹಾಯಕರು | 1058 |
| | ಡಿ ದರ್ಜೆ ನೌಕರರು | 1219 |
| | ಒಟ್ಟು | 3998 |

ಆ) ಸಾಮಾನ್ಯ ನೇಮಕಾರಿಗೆ ಸರ್ಕಾರದ ನಿರ್ಭಂದವಿರುತ್ತದೆ ಆದಾಗ್ಯೂ ಇತರ ಖಾಲಿ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ತುಂಬಲಾಗುವುದು 250 ಪಶುವೈದ್ಯರನ್ನು ರಾಜ್ಯಾದ್ಯಂತ ನೇಮಿಸಿ ಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಡಿ ದರ್ಜೆ ಖಾಲಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ತುಂಬಲಾಗುವುದು

ಇ) ನಬಾರ್ಡ್ ಮೂಲಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಧಿಯಿಂದ ಪಶುವೈದ್ಯಕೀಯ ಸಂಸ್ಥೆಗಳಿಗೆ ಕಟ್ಟಡಗಳನ್ನು ನಿರ್ಮಾಣ ಮಾಡಲು ಪರಿಶೀಲಿಸಲಾಗುತ್ತಿದೆ

ಈ) ಮುಂಡರಗಿ ಕ್ಷೇತ್ರದಲ್ಲಿ 19 ವಿವಿಧ ವೃಂದದ ಹುದ್ದೆಗಳು ಖಾಲಿ ಇವೆ ರಾಜ್ಯಾದ್ಯಂತ 250 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಸದ್ಯದಲ್ಲಿ ಭರ್ತಿ ಮಾಡಲಾಗುತ್ತಿದೆ ಖಾಲಿ ಇರುವ 5 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಪರಿಗಣಿಸಲಾಗುವುದು ಖಾಲಿ ಇರುವ 4 ಪಶು ಪರೀಕ್ಷಕರ ಹುದ್ದೆಗಳನ್ನು ನಿಯಾಮನುಸಾರ ಬಡ್ತಿ ಮೂಲಕ ಭರ್ತಿ ಮಾಡಲು ಪರಿಶೀಲಿಸಲಾಗುವುದು ಹೊಸ ನೇಮಕಾತಿ ಮಾಡಲು ಸರ್ಕಾರದ ನಿರ್ಭಂಧವಿರುತ್ತದೆ

497(850) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗದಗ ಜಿಲ್ಲೆ ಮುಂಡರಗಿ ಕ್ಷೇತ್ರದಲ್ಲಿ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಲಾಗಿದೆಯೇ? (ವಿವರ ನೀಡುವುದು)

ಆ) ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡಲಾಗುವುದೇ?

ಇ) ಮುಂಡರಗಿ ಪಶು ಆಸ್ಪತ್ರೆಯ ಕಟ್ಟಡ ಅರ್ಧಕ್ಕೆ ನಿಂತಿದ್ದು ಅದನ್ನುಪೂರ್ಣ ಗೊಳಿಸಲಾಗುವುದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಇಲ್ಲ

ಇ) ಸದರಿ ಕಟ್ಟಡವು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು, ಅದನ್ನು ತೀವ್ರವಾಗಿ ಪೂರ್ಣವಾಗೊಳಿಸಲು ಗದಗ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸರ್ಕಾರದಿಂದ ಒತ್ತಾಯಿಸಲಾಗಿದೆ

498(206) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಎಷ್ಟು ಪಾಲಿಟೆಕ್ನಿಕ್‌ಗಳಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ ಕಾರ್ಯನಿರ್ವಹಿಸುತ್ತಿದೆ ಅವುಗಳಲ್ಲಿ ಎಷ್ಟು ಜನ ಸಹಾಯಕ ಉಪನ್ಯಾಸಕರು ಇದ್ದಾರೆ,

ಆ) 1986ರಲ್ಲಿ ಇಂಜಿನಿಯರಿಂಗ್ ವಿಭಾಗಗಳ ಸಹಾಯಕ ಉಪನ್ಯಾಸಕರುಗಳನ್ನು ಉಪನ್ಯಾಸಕರ ಹುದ್ದೆಗೆ ಉನ್ನತೀಕರಿಸಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದ ಸಹಾಯಕ ಉಪನ್ಯಾಸಕರುಗಳನ್ನು ಉನ್ನತೀಕರಣದಿಂದ ಕೈಬಿಟ್ಟಿರುವುದು ನಿಜವೇ

ಇ) ಹಾಗಿದ್ದಲ್ಲಿ, ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದವರನ್ನು ಕೈಬಿಡಲು ಕಾರಣಗಳೇನು,

ಈ) ಪಾಲಿಟೆಕ್ನಿಕ್‌ಗಳಲ್ಲಿರುವ ಎಲ್ಲಾ ವಿಭಾಗಗಳಿಗೂ ಏಕರೂಪದ ಉನ್ನತೀಕರಣದ ಸೌಲಭ್ಯಗಳನ್ನು ಒದಗಿಸಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದ ಸಹಾಯಕ ಉಪನ್ಯಾಸಕರುಗಳಿಗೆ ನ್ಯಾಯ ದೂರಕಿಸಿ ಕೊಡಲು ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುವುದೇ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 16 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗ ಚಾಲ್ತಿಯಲ್ಲಿರುತ್ತದೆ ಸದರಿ ವಿಭಾಗಕ್ಕೆ ಒಟ್ಟು ಮಂಜೂರಾಗಿರುವ 61 ಸಹಾಯಕ ಉಪನ್ಯಾಸಕರ ಹುದ್ದೆಗಳ ಪೈಕಿ 59 ಜನ ಸಹಾಯಕ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ

ಆ) ಹೌದು

ಇ) ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ

ಈ) ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ

499(454) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನ ಬೆಳ್ತಂಗಡಿಯಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಮಂಜೂರಾದ ಬೋಧಕ ಬೋಧಕೇತರ ಹುದ್ದೆಗಳೆಷ್ಟು

ಆ) ಅವುಗಳ ಪೈಕಿ ಖಾಲಿ ಹುದ್ದೆಗಳೆಷ್ಟು ಹಾಗೂ ಖಾಲಿ ಹುದ್ದೆಗಳನ್ನು ಇದುವರೆಗೂ ತುಂಬದಿರಲು ಕಾರಣಗಳೇನು,

ಇ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಡಿ ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ) ಬೋಧಕ 10 ಹುದ್ದೆಗಳು

ಬೋಧಕೇತರ 06 ಹುದ್ದೆಗಳು ಮಂಜೂರಾಗಿರುತ್ತವೆ

ಆ) ಬೋಧಕರ ಹುದ್ದ ಖಾಲಿ ಇರುವುದಿಲ್ಲ ಆದರೆ, ಗ್ರಂಥಪಾಲಕರ ಹಾಗೂ ದೈಹಿಕ ಶಿಕ್ಷಕರ ಹುದ್ದೆ ಖಾಲಿ ಇದೆ ಬೋಧಕೇತರರ ಪೈಕಿ,

| | | |
|---|---|---|
| ಗ್ರಂಥಾಲಯ ಸಹಾಯಕರ ಹುದ್ದೆ | – | 01 |
| ಪರಿಚಾರಕರ ಹುದ್ದೆ | – | 01 |

ಖಾಲಿ ಇರುತ್ತವೆ

ಇ) ವರ್ಗಾವಣೆ ಸಂದರ್ಭದಲ್ಲಿ ಅಥವಾ ಅನ್ಯಕಾರ್ಯ ನಿಮಿತ್ತದ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು

500(624) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾಲಯ ಮತ್ತು ಪಶು ವೈದ್ಯಕೀಯ ಆಸ್ಪತ್ರೆಗಳೆಷ್ಟು

ಆ) ಇರುವ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ (ವಿವರಗಳನ್ನು ನೀಡುವುದು)

ಇ) ಗ್ರಾಮಾಂತರ ಪ್ರದೇಶಗಳಿಂದ ಕೂಡಿದ ಬೆಳ್ತಂಗಡಿ ತಾಲ್ಲೂಕಿಗೆ ಸಂಚಾರಿ ಪಶು ಚಿಕಿತ್ಸಾಲಯಗಳು ಅತ್ಯವಶ್ಯಕ ಎಂಬುದನ್ನು ಸರ್ಕಾರ ಮನಗಂಡಿದಿಯೇ

ಈ) ಮನಗಂಡಿದ್ದಲ್ಲಿ ಯಾವಾಗ ಎಷ್ಟು ಸಂಖ್ಯೆಯಲ್ಲಿ ಸಂಚಾರಿ ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗುವುದು

ಉ) ಪಶು ಚಿಕಿತ್ಸಾಲಯಗಳಿಗೆ ಅಗತ್ಯವಾಗಿರುವ ಔಷಧಿಗಳ ಪೂರೈಕೆಯಲ್ಲಿ ಕೊರತೆಯಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ

ಊ) ಬಂದಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಪಶು ಚಿಕಿತ್ಸಾಲಯ – 2

ಪಶು ವೈದ್ಯಕೀಯ ಆಸ್ಪತ್ರೆ – 2

ಆ) ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೇಗೇರಿಸುವ ಕಾರ್ಯಕ್ರಮವಿರುವುದಿಲ್ಲ

ಇ) ಸಂಚಾರಿ ಪಶು ಚಿಕಿತ್ಸಾಲಯವನ್ನು ಈಗಾಗಲೇ ಪ್ರಾರಂಭಿಸಲಾಗಿದೆ

ಈ0 ಉದ್ಭವಿಸುವುದಿಲ್ಲ

ಉ) ಬಂದಿದೆ

ಊ) ಲಭ್ಯವಿರುವ ವಂಟನದಲ್ಲಿ ಔಷಧಿಗಳನ್ನು ಖರೀದಿಸಿ ಜಾನುವಾರು ಸಂಖ್ಯೆ ಆಧಾರದ ಮೇಲೆ ವಿತರಿಸಲಾಗುತ್ತಿದೆ

501(626) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಳ್ತಂಗಡಿಯಲ್ಲಿನ ಪ್ರಥಮ ದರ್ಜೆ ಕಾಲೇಜಿನ ವ್ಯಾಪ್ತಿಯಲ್ಲಿರುವ ಜಮೀನಿನ ವಿಸ್ತೀರ್ಣ ಎಷ್ಟು,

ಆ) ಅದರಲ್ಲಿ ಕಾಲೇಜು ಕಟ್ಟಡ ಮತ್ತಿತರ ಸೌಕರ್ಯಕ್ಕಾಗಿ ಬಳಸಿಕೊಂಡ ಜಾಗದ ವಿಸ್ತೀರ್ಣ ಎಷ್ಟು,

ಇ) ಕಾಲೇಜು ಕಟ್ಟಡಕ್ಕೆ ಆವರಣಗೋಡೆಯ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೆ, ಹೌದಾದಲ್ಲಿ ಆ ಕುರಿತಾದ ಸರ್ಕಾರದ ಕ್ರಮಗಳೇನು,

ಈ) ಬೆಳ್ತಂಗಡಿಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೊರತೆಯಿರುವ ಬೋಧಕ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು ಹಾಗೂ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು,

ಉ) ಪ್ರಸ್ತುತ ಕಾಲೇಜು ಕಟ್ಟಡದ ಅಪೂರ್ಣಗೊಂಡ ಕೆಲಸಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಡಿ ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ) ಒಟ್ಟು 9 97 ಎಕರೆ

ಆ) ಇದರಲ್ಲಿ ಒಟ್ಟು 943 ಚದರ್ ಮೀಟರಿನಷ್ಟು ಕಾಲೇಜು ಕಟ್ಟಡವಿರುತ್ತದೆ ಹಾಗೂ 90X20 ಮೀಟರ್ ಅಳತೆಯಲ್ಲಿ ಆಟದ ಮೈದಾನವಿರುತ್ತದೆ

ಇ) ಹೌದು ಆದರೆ, ಕಾಲೇಜು ಶಿಕ್ಷಣ ಇಲಾಖೆಯ ಕಟ್ಟಡಗಳಿಗಾಗಿ ಪ್ರಸ್ತುತ ದೊರೆಯುತ್ತಿರುವ ಅನುದಾನ ಕಡಿಮೆ ಇರುವುದರಿಂದ ಕಾಂಪೌಂಡ್ ನಿರ್ಮಾಣ ಸಾಧ್ಯವಾಗಿಲ್ಲ ಇದಲ್ಲದೆ ಮೊದಲನೆಯ ಆದ್ಯತೆಯಾಗಿ ವಿದ್ಯಾರ್ಥಿಗಳ ಬೋಧನಾ ಕೊಠಡಿಗಳ ನಿರ್ಮಾಣಕ್ಕಾಗಿ ಗಮನಹರಿಸಲಾಗುತ್ತಿದೆ ಮುಂದೆ ಹೆಚ್ಚುವರಿ ಅನುದಾನ ದೊರೆತಲ್ಲಿ ಕಾಂಪೌಂಡ್ ನಿರ್ಮಿಸುವ ಸಂಬಂಧ ಕ್ರಮ ಜರುಗಿಸಲಾಗುವುದು

ಈ) ಈ ಕಾಲೇಜಿನಲ್ಲಿ ಬೋಧಕ ಸಿಬ್ಬಂದಿ ವರ್ಗದ ಕೊರತೆ ಇರುವುದಿಲ್ಲ ಹೀಗಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಪ್ರಸ್ತಕ ಸಾಲಿನಲ್ಲಿ ಹೆಚ್ಚುವರಿಯಾಗಿ ಅನುದಾನ ದೊರೆತಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು

503(558) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರದಲ್ಲಿ ಹೊಸ ಪಶು ವೈದ್ಯಶಾಲೆಗಳನ್ನು ಸ್ಥಾಪಿಸುವ ಸಲುವಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆಯೇ?

ಆ) ಹೊಸ ಪಶು ವೈದ್ಯಕೀಯ ಆಸ್ಪತ್ರೆಗಳನ್ನು ಯಾವಾಗ ಪ್ರಾರಂಭ ಮಾಡಲಾಗುವುದು

ಇ) ಅನೇಕ ಗ್ರಾಮಗಳಲ್ಲಿ ಪಶು ವೈದ್ಯಕೀಯ ಸೌಲಭ್ಯ ಸಿಗದೆ ಇರುವುದರಿಂದ ಬಡ ರೈತರು ತೊಂದರೆ ಪಡುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ಯಾವುದೇ ಹೊಸ ಪಶುವೈದ್ಯಕೀಯ ಸಂಸ್ಥೆಯನ್ನು ಪ್ರಾರಂಭಿಸುವ ಕಾರ್ಯಕ್ರಮ ಸದ್ಯ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ಪಶುವೈದ್ಯಕೀಯ ಸೇವೆಯನ್ನು ಹಾಲಿ ಇರುವ ಪಶುವೈದ್ಯಕೀಯ ಸಂಸ್ಥೆಗಳಿಂದ ಒದಗಿಸಲಾಗುತ್ತಿದೆ

504(715) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯಲ್ಲಿ ಅಕ್ಕಪಕ್ಕದ ರಾಜ್ಯಗಳಿಂದ (ಆಂಧ್ರ ಮಹಾರಾಷ್ಟ್ರ) ಬಂದ ನಕಲಿ ಹಾಲಿನ ಪ್ಯಾಕೇಟ್‌ಗಳನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ಬಂದಿದ್ದಲ್ಲಿ, ಅಂತಹವರುಗಳ ಮೇಲೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ

ಇ) ನಕಲಿ ಹಾಲಿನ ಮಾರಾಟದಿಂದ ಜಿಲ್ಲೆಯ ಸಾರ್ವಜನಿಕರಿಗೆ ಹಾನಿಯಾಗುತ್ತಿರುವ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

505(249) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯ ಸರ್ಕಾರವು ಗೋಹತ್ಯೆ ಮಾಡಲು ಅನುಮತಿ ನೀಡಿದೆಯೇ

ಆ) ನೀಡಿದ್ದಲ್ಲಿ ರಾಜ್ಯದಲ್ಲಿ ಎಷ್ಟು ಪರವಾನಗಿಗಳನ್ನು ನೀಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು)

ಇ) ಚಿಕ್ಕಮಗಳೂರಿನಲ್ಲಿ ಪರವಾನಗಿ ಪಡೆದ ಕಸಾಯಿ ಖಾನೆಗಳು ಎಷ್ಟು,

ಈ) ಗೋಹತ್ಯೆ ನಿಷೇಧಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ

ಉ) ನಿಷೇಧವನ್ನು ಯಾವಾಗ ಜಾರಿಗೊಳಿಸಲಾಗುತ್ತದೆ (ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಮೇಲಿನ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪರವಾನಗಿ ಪಡೆದ ದನಗಳ ಕಸಾಯಿ ಖಾನೆ ಇರುವುದಿಲ್ಲ ಆದರೆ ಪರವಾನಗಿ ಪಡೆದ ಕುರಿ/ಮೇಕೆ ಕಸಾಯಿ ಖಾನೆಗಳ ಸಂಖ್ಯೆ ಒಟ್ಟು 11

ಈ) ಹೌದು

ಉ) ಕರ್ನಾಟಕ ಗೋವಧೆ ಪ್ರತಿಬಂಧಕ ಮತ್ತು ಜಾನುವಾರು ಪರಿರಕ್ಷಣೆ ಅಧಿನಿಯಮ 1964 ಈಗಾಗಲೇ ಜಾರಿಯಲ್ಲಿರುತ್ತದೆ

506(534) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ರೈತರ ಸಾಲ ಹಾಗೂ ಅವರ ಬಡ್ಡಿಯನ್ನು ಮನ್ನಾ ಮಾಡಲು ಸರ್ಕಾರ ಆದೇಶಿಸಿದೆಯೇ

ಆ) ಈ ಆದೇಶ ಯಾವಾಗಿನಿಂದ ಜಾರಿಗೆ ಬಂದಿದೆ

ಇ) ಯಾವ ರೀತಿಯ ಸಾಲಗಳನ್ನು ಎಷ್ಟು ಮೊತ್ತದವರೆಗೆ ಸಾಲ ಹಾಗೂ ಬಡ್ಡಿಯನ್ನು ಮನ್ನಾ ಮಾಡಲಾಗಿದೆ (ಜಿಲ್ಲಾವಾರು ವಿವರ ತಿಳಿಸುವುದು)

ಈ) ಈ ಸಾಲ ಮನ್ನಾ ಯೋಜನೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಯಾವ ಬೆಳೆಯ ರೈತರುಗಳನ್ನು ಇದಕ್ಕಾಗಿ ಪರಿಗಣಿಸಲಾಗಿದೆ

ಉ) ಕಾಫಿ ಅಡಿಕೆ ಬೆಳೆಯುವ ರೈತರಿಗೆ ಸಹ ಈ ಪ್ರಯೋಜನವನ್ನು ನೀಡಲಾಗಿದೆಯೇ

ಊ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಋ) ಕಳೆದ ಸರ್ಕಾರವು ಸಾಲ ಬಡ್ಡಿ ಮನ್ನಾಕ್ಕಾಗಿ ತೀರ್ಮಾನಿಸಿದ್ದು, ಆ ನಂತರ ತನ್ನ ನಿರ್ಧಾರವನ್ನು ಬದಲಾಯಿಸಿದ್ದು ನಿಜವೇ

ಎ) ನೂತನ ಸರ್ಕಾರವು ಇದರ ಬಗ್ಗೆ ಪರಿಶೀಲಿಸುವುದೇ (ವಿವರ ತಿಳಿಸುವುದು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡಿರುವುದಿಲ್ಲ ಆದರೆ 2002ನೇ ಖಾರೀಫ್ (ಮುಂಗಾರು) ಮತ್ತು 2002ನೇ ರಬಿ(ಹಿಂಗಾರು) ಅವಧಿಯಲ್ಲಿ ವಿತರಿಸಲಾದ ಎಲ್ಲಾ ಅಲ್ಪಾವಧಿ ಬೆಳೆ ಸಾಲಗಳ ಮೇಲಿನ ಬಡ್ಡಿ ಕ್ರಮವಾಗಿ ರೂ 127 00 ಕೋಟಿ ಮತ್ತು ರೂ 40 30 ಕೋಟಿಗಳನ್ನು ಮನ್ನಾ ಮಾಡಲು ಸರ್ಕಾರ ಆದೇಶಿಸಿದೆ

ದಿನಾಂಕ 31–03–2003ಕ್ಕೆ ತೋಟಗಾರಿಕೆ ಬೆಳೆಗಳಿಗೆ (ರಬ್ಬರ್, ವೆನಿಲ್ಲಾ, ಹಣಬೆ ಮತ್ತು ತಾಳೆ ಹೊರತುಪಡಿಸಿ) ಬಾಕಿಯಿರುವ ಧೀರ್ಘಾವಧಿ ಚಾಲ್ತಿ ಸಾಲಿನ ಅಸಲನ್ನು ರೈತರು ಪಿಕಾರ್ಡ್ ಬ್ಯಾಂಕುಗಳಿಗೆ ಮರುಪಾವತಿಸಿದಲ್ಲಿ ಹೊರ ಬಾಕಿ (Outstanding) ಸಾಲಗಳ ಮೇಲಿನ ಚಾಲ್ತಿ ಬಡ್ಡಿಯನ್ನು ಮನ್ನಾ ಮಾಡಲು ಮತ್ತು ತತ್ಸಂಬಂಧವಾದ ಮೊಬಲಗು 20 00 ಕೋಟಿ ರೂ ಗಳನ್ನು ಪಿಕಾರ್ಡ್ ಬ್ಯಾಂಕುಗಳಿಗೆ ಭರ್ತಿ ಮಾಡಿಕೊಡಲು ಮಂಜೂರಾತಿ ನೀಡಲಾಗಿದೆ ದಿನಾಂಕ 31–3–2003ಕ್ಕೆ ಬಾಕಿಯಿರುವ ದೀರ್ಘಾವಧಿ ಚಾಲ್ತಿ ಸಾಲಿನ ಅಸಲನ್ನು ರೈತರು ಶೇ 9ರ ಬಡ್ಡಿ ಸಹಿತ ಪಿಕಾರ್ಡ್ ಬ್ಯಾಂಕುಗಳಿಗೆ ಮರುಪಾವತಿಸಿದಲ್ಲಿ ಶೇ 9ಕ್ಕಿಂತ ಹೆಚ್ಚಿನ ಬಡ್ಡಿಯನ್ನು ಮನ್ನಾ ಮಾಡಲು ಮತ್ತು ತತ್ಸಂಬಂಧವಾದ ಮೊಬಲಗು 33 00 ಕೋಟಿ ರೂ.,ಗಳನ್ನು ಪಿಕಾರ್ಡ್ ಬ್ಯಾಂಕುಗಳಿಗೆ ಭರ್ತಿ ಮಾಡಿಕೊಡಲು ಮಂಜೂರಾತಿ ನೀಡಲಾಗಿದೆ

ಆ) 2002ನೇ ಸಾಲಿನ ಅಲ್ಪಾವಧಿ ಖಾರಿಫ್ ಅವಧಿಗೆ ಸಂಬಂಧಿಸಿದಂತೆ ದಿನಾಂಕ 31–10–2002 ರಂದು ಮತ್ತು 2002ನೇ ಅಲ್ಪಾವಧಿ ರಬಿ ಅವಧಿಗೆ ಸಂಬಂಧಿಸಿದಂತೆ ದಿನಾಂಕ 15–9–2003ರಂದು ಸರ್ಕಾರ ಆದೇಶ ಹೊರಡಿಸಿದೆ ದೀರ್ಘಾವಧಿ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರವು ದಿನಾಂಕ 15–9–2003ರಂದು ಆದೇಶ ಹೊರಡಿಸಿದೆ

ಇ) ಸಾಲ ಮನ್ನಾ ಮಾಡಿರುವುದಿಲ್ಲ ಬಡ್ಡಿ ಮನ್ನಾ ರಿಯಾಯಿತಿ ವಿವರಗಳನ್ನು 'ಅ' ಮತ್ತು 'ಆ'ನಲ್ಲಿ ಒದಗಿಸಲಾಗಿದೆ

ಈ) ಸಾಲ ಮನ್ನಾ ಮಾಡಿರುವುದಿಲ್ಲ ಸಾಲ ಮನ್ನಾ ಮಾಡದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಸಹಕಾರ ಸಂಘಗಳಿಂದ ಸಾಲ ಪಡೆದ ಎಲ್ಲಾ ರೈತರಿಗೆ ಮೇಲಿನ ಬಡ್ಡಿ ಮನ್ನಾ ರಿಯಾಯಿತಿ ಈ ಪ್ರಯೋಜನವನ್ನು ನೀಡಲಾಗಿದೆ

ಊ) ಅನ್ವಯಸುವುದಿಲ್ಲ

ಋ) ಇಲ್ಲ

ಎ) ಉದ್ಭವಿಸುವುದಿಲ್ಲ

507(613) ಶ್ರೀ ರಾಜೇಂದ್ರ ವರ್ಮಾ (ಹುಲ್‌ಸೂರ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಹುಲಸೂರು ಮೀಸಲು ಕ್ಷೇತ್ರದಲ್ಲಿ ಯಾವುದೇ ಕಾಲೇಜುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು

ಇ) ಗಡಿಭಾಗದಲ್ಲಿರುವ ಹುಲಸೂರು ಕ್ಷೇತ್ರದಲ್ಲಿ ಇರುವ ಕನ್ನಡ ಮಾಧ್ಯಮದ ಕಾಲೇಜುಗಳೆಷ್ಟು

ಈ) ಪ್ರೌಢಶಾಲೆ/ಕಾಲೇಜುಗಳನ್ನು ಯಾವ ಆಧಾರದ ಮೇಲೆ ನೀಡಲಾಗಿರುತ್ತದೆ (ಮಾಹಿತಿ ಒದಗಿಸುವುದು)

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ

ಆ) ಪ್ರಸ್ತುತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಯ ಪ್ರಸ್ತಾವನೆಯ ಸರ್ಕಾರದ ಮುಂದೆ ಇರುವುದಿಲ್ಲ

ಇ) ಇಲ್ಲ

ಈ) ಸರ್ಕಾರಿ ಪ್ರೌಢಶಾಲೆ ಮತ್ತು ಕಾಲೇಜುಗಳನ್ನು ಅವಶ್ಯಕತೆಯ ಆಧಾರದ ಮೇಲೆ ನೀಡಲಾಗುತ್ತದೆ

508(716) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಕೇಂದ್ರ ಬಿಂದುವಾಗಿರುವ ಹುಲಸೂರು ಕ್ಷೇತ್ರದ ರೈತರು ತಾವು ಬೆಳೆಯುತ್ತಿರುವ ಬೆಳೆಗಳನ್ನು ಅಕ್ಕಪಕ್ಕದ ರಾಜ್ಯಗಳಲ್ಲಿ ಮಾರಾಟ ಮಾಡುತ್ತಿರುವುದರಿಂದ ರಾಜ್ಯಕ್ಕೆ ಬಹಳಷ್ಟು ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಹುಲಸೂರು ಮೀಸಲು ಕ್ಷೇತ್ರದಲ್ಲಿ ಕೃಷಿ ಮಾರುಕಟ್ಟೆಯನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ),ಆ) ಹುಲಸೂರು ಉಪ ಮಾರುಕಟ್ಟೆಯನ್ನು ದಿನಾಂಕ 29–01–1977 ರಲ್ಲಿ ಘೋಷಿಸಿ ಸ್ಥಾಪನೆ ಮಾಡಲಾಗಿದೆ ಕೃಷಿ ಉತ್ಪನ್ನಗಳು ಪಕ್ಕದ ರಾಜ್ಯದಲ್ಲಿ ಮಾರಾಟವಾಗುತ್ತಿವೆಯೇ ಎಂಬ ಬಗ್ಗೆ ಸತತವಾಗಿ ಗಮನಿಸಲಾಗುತ್ತಿದೆ

510(818) ಶ್ರೀ ರೇಣುಕಾಚಾರ್ಯ ಎಂ ಪಿ (ಹೊನ್ನಾಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನಗಳಿಗೆ ಉತ್ತರಿಸುವರೆ ?

ಅ) ಹೊನ್ನಾಳಿ ತಾಲ್ಲೂಕಿನಲ್ಲಿ ಜಾನುವಾರುಗಳಿಗೆ ಮೇವು ಸಂಗ್ರಹಿಸಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ಸಂಗ್ರಹಿಸಿಟ್ಟಿರುವ ಮೇವಿನ ಪ್ರಮಾಣ ಎಷ್ಟು

ಇ) ಮಳೆಗಾಲ ಪ್ರಾರಂಭವಾಗಿರುವುದರಿಂದ ಸಂಗ್ರಹಿಸಿಟ್ಟಿರುವ ಮೇವು ಕೊಳೆತು ಹೋಗದಂತೆ ರಕ್ಷಿಸಲು ಸರಕಾರ ಕೈಗೊಂಡಿರುವ ಕ್ರಮಗಳೇನು

ಈ) ಈ ಮೇವನ್ನು ರೈತರಿಗೆ ಸರಿಯಾಗಿ ವಿತರಣೆ ಮಾಡಲು ಸರಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) ಒಟ್ಟು 830 ಟನ್ನುಗಳು (ಬತ್ತದ ಹುಲ್ಲು 502 ಮೆ ಟನ್ ಜೋಳದ ಕಡ್ಡಿ 328 ಮೆ ಟನ್)

ಇ) ಶೇಖರಿಸಿರುವ ಮೇವನ್ನು ತೆಂಗಿನ ಗರಿಗಳಿಂದ ಮತ್ತು ಪ್ಲಾಸ್ಟಿಕ್ ಶೀಟ್‌ಗಳನ್ನು ಹೊದಿಸಿ ರಕ್ಷಿಸಲಾಗಿದೆ

ಈ) 1 ಈ ಹಂಗಾಮಿ ಮುಂಗಾರು ಮಳೆಯ ಪ್ರಮಾಣವನ್ನು ಪರಿಗಣಿಸಿ ಆಗಸ್ಟ್ 2004ರ ನಂತರ ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುವುದು

511(820) ಶ್ರೀ ರೇಣುಕಾಚಾರ್ಯ ಎಂ ಪಿ (ಹೊನ್ನಾಳಿ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹೊನ್ನಾಳಿ ತಾಲ್ಲೂಕಿನಲ್ಲಿ ರೈತ ಸಂಜೀವಿನಿ ವಿಮಾ ಯೋಜನೆಯಡಿ ಎಷ್ಟು ಜನ ರೈತರಿಗೆ ಈವರೆಗೂ ಹಣ ಬಿಡುಗಡೆ ಮಾಡಲಾಗಿದೆ (ಗ್ರಾಮವಾರು ಫಲಾನುಭವಿ ರೈತರ ಮಾಹಿತಿ ನೀಡುವುದು)

ಆ) ಹಣ ಬಿಡುಗಡೆ ಕೋರಿ ಸಲ್ಲಿಸಲ್ಪಟ್ಟ ಹಾಗೂ ಇನ್ನೂ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು?

ಇ) ಇವರಿಗೆ ಹಣ ಬಿಡುಗಡೆ ಯಾವಾಗ ಮಾಡಲಾಗುವುದು?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಹೊನ್ನಾಳಿ ತಾಲ್ಲೂಕಿನಲ್ಲಿ ರೈತ ಸಂಜೀವಿನಿ ವಿಮಾ ಯೋಜನೆಯಡಿಯಲ್ಲಿ 9 ಜನ ರೈತರಿಗೆ ಒಟ್ಟು ರೂ 2,06,000–00 ಗಳನ್ನು ಬಿಡುಗಡೆ ಮಾಡಲಾಗಿದೆ (ಪಟ್ಟಿ ಲಗತ್ತಿಸಿದೆ)

ಆ) ಹಣ ಬಿಡುಗಡೆ ಕೋರಿ 2001–2002 ರಿಂದ ಈವರೆಗೂ 19 ಅರ್ಜಿಗಳು ಬಂದಿವೆ 3 ಅರ್ಜಿಗಳು ಮಾತ್ರ ಬಾಕಿ ಉಳಿದಿದ್ದು ಇವುಗಳಿಗೆ ಹೊನ್ನಾಳಿ ಮಾರುಕಟ್ಟೆ ಸಮಿತಿಯಿಂದ ಮಾಹಿತಿಯನ್ನು ಕೇಳಲಾಗಿದೆ

ಇ) ಇವರಿಗೆ ಹೊನ್ನಾಳಿ ಮಾರುಕಟ್ಟೆ ಸಮಿತಿಯಿಂದ ಕೋರಿದ ಮಾಹಿತಿ ಬಂದ ಕೂಡಲೇ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

512(202) ಶ್ರೀ ಶಕುಂತಲಾ ಟಿ ಶೆಟ್ಟಿ (ಪುತ್ತೂರು) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಶಿಕ್ಷಣ ನೀಡುತ್ತಿರುವ ಬಿ ಎಡ್ , ಬಿ ಪಿ ಎಡ್ , ಟಿಸಿಹೆಚ್ ಕಾಲೇಜುಗಳ ಸಂಖ್ಯೆ ಎಷ್ಟು, ಅವುಗಳಲ್ಲಿ ಎಷ್ಟು ಜನ ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ಲಭ್ಯವಿದೆ

ಆ) ಅವುಗಳಲ್ಲಿ ಖಾಸಗೀ ಅನುದಾನಿತ ಹಾಗೂ ಸರ್ಕಾರಿ ಕಾಲೇಜುಗಳೆಷ್ಟು,

ಇ) ಕಳೆದ ಎರಡು ವರ್ಷಗಳಲ್ಲಿ ಎಷ್ಟು ಇಂತಹ ಶಿಕ್ಷಣ ಸಂಸ್ಥೆಗಳಿಗೆ ಅನುಮತಿ ನೀಡಲಾಗಿದೆ

ಈ) ಈ ಕಾಲೇಜುಗಳು ವಿದ್ಯಾರ್ಥಿಗಳ ಬೇಡಿಕೆಯ ಅನುಗುಣವಾಗಿದೆಯೇ, ಅಥವಾ ಸಂಖ್ಯೆಯಲ್ಲಿ ಹೆಚ್ಚಾಗಿವೆಯೇ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಅನುಬಂಧ–1ರಲ್ಲಿ ನೀಡಲಾಗಿದೆ

ಆ) ಅನುಬಂಧ–2ರಲ್ಲಿ ನೀಡಲಾಗಿದೆ

ಇ) ಕಳೆದ ಎರಡು ವರ್ಷಗಳಲ್ಲಿ ಎನ್‌ಸಿಟಿಇ–ಎಸ್‌ಆರ್‌ಸಿ ಅಂತಹ ಯಾವುದೇ ಸಂಸ್ಥೆಗಳಿಗೆ ಮಾನ್ಯತೆ ನೀಡಿಲ್ಲ

ಈ) ಉದ್ಭವಿಸುವುದಿಲ್ಲ

**ಅನುಬಂಧ–1**

| ಕಾಲೇಜು | ಕಾಲೇಜುಗಳ ಸಂಖ್ಯೆ | ವಿದ್ಯಾರ್ಥಿ ಪ್ರಮಾಣ |
|---|---|---|
| ಬಿ ಎಡ್ | 68 | 6,800 |
| **ಬಿ.ಪಿ.ಎಡ್** | 12 | 510 |
| **ಡಿ.ಎಡ್ (ಟಿ.ಸಿ.ಹೆಚ್)** | 131 | 7,800 |

ಅನುಬಂಧ-2

| ಕಾಲೇಜು | ಸರ್ಕಾರಿ | ಅನುದಾನಿತ | ಖಾಸಗಿ |
|---|---|---|---|
| ಬಿ ಎಡ್ | 6 | 22 | 40 |
| ಬಿ.ಪಿ ಎಡ್ | 3 | – | 9 |
| | (ವಿಶ್ವವಿದ್ಯಾಲಯ) | | |
| ಡಿ ಎಡ್ (ಟಿ.ಸಿ ಹೆಚ್) | 37 | 40 | 54 |

513(204) ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬಿಳಿ ಗೋಟು ಅಡಿಕೆಯ ಬೆಲೆಯು ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಿಳಿಗೋಟು ಅಡಿಕೆಗೆ ಬೆಂಬಲ ಬೆಲೆಯನ್ನು ಘೋಷಿಸಿ ಖರೀದಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆ?

ಇ) ಇದ್ದಲ್ಲಿ ಯಾವ ದರದಲ್ಲಿ ಬೆಂಬಲ ಬೆಲೆ ನೀಡಲಾಗುವುದು? ದರ ನಿರ್ಣಯಕ್ಕೆ ಆಧಾರ ಯಾವುದು?

ಈ) ಅಡಿಕೆಯನ್ನು ಎಂದಿನಂತೆ ಎಲ್ಲಿಯವರೆಗೆ ಖರೀದಿಸಲಾಗುವುದು? ಈ ಬಗ್ಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಬಂದಿದೆ

ಆ) ಈ ಸಂಬಂಧವಾಗಿ ದಿನಾಂಕ 28 06 2004 ರಂದು ಮಾನ್ಯ ಕೃಷಿ ಸಚಿವರು ಅಧ್ಯಕ್ಷತೆಯಲ್ಲಿ ಅಡಿಕೆ ಬೆಳೆಗಾರರ ಮತ್ತು ಅಡಿಕೆ ವ್ಯಾಪಾರದಲ್ಲಿ ತೊಡಗಿರುವ ಸಹಕಾರಿ ಸಂಸ್ಥೆಗಳೊಂದಿಗೆ ಸಭೆ ಜರುಗಿದ್ದು, ಈ ಕುರಿತು ಪರಿಶೀಲಿಸಲಾಗುತ್ತಿದೆ

ಇ) 2002–03ರ ವರ್ಷದಲ್ಲಿ ಭಾರತ ಸರ್ಕಾರವು ಚಾಲಿ ಅಡಿಕೆಗೆ ಪ್ರತಿ ಕ್ವಿಂಟಾಲ್‌ಗೆ ರೂ 6,000–00ಗಳ ಕನಿಷ್ಟ ಬೆಂಬಲ ಬೆಲೆಯನ್ನು ನಿಗಧಿಪಡಿಸಿತ್ತು

ಅಡಿಕೆ ಸಾಗುವಳಿ ವೆಚ್ಚವನ್ನು ಪರಿಗಣಿಸಿ ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ ಶಿಫಾರಸ್ಸಿನ ಅನ್ವಯ ಭಾರತ ಸರ್ಕಾರವು ಅಡಿಕೆಗೆ ಬೆಂಬಲ ಬೆಲೆಯನ್ನು ನಿರ್ದರಿಸುತ್ತದೆ

ಈ) ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿದ್ದು, ಖರೀದಿಯ ದಿನಾಂಕವನ್ನು ನಿಗಧಿಪಡಿಸಿರುವುದಿಲ್ಲ

514(488) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿನ ವಿಶ್ವವಿದ್ಯಾಲಯಗಳು ಯಾವವು, ಹಾಗೂ ಅವುಗಳನ್ನು ಯಾವಾಗ ಪ್ರಾರಂಭಿಸಲಾಯಿತು,

ಆ) ಈ ವಿಶ್ವವಿದ್ಯಾಲಯಗಳಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರು ಎಷ್ಟು

ಇ) ಅವರುಗಳು ಎಷ್ಟೆಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ,

ಈ) ಅವರುಗಳನ್ನು ಖಾಯಂ ಮಾಡುವ ಬಗ್ಗೆ ವಿಶ್ವವಿದ್ಯಾಲಯಗಳು ಯಾವ ಕ್ರಮ ಜರುಗಿಸಿವೆ

ಉ) ಅವರುಗಳನ್ನು ಖಾಯಂ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) 1) ಮೈಸೂರು ವಿಶ್ವವಿದ್ಯಾಲಯ – 1916
2) ಕರ್ನಾಟಕ ವಿಶ್ವವಿದ್ಯಾಲಯ – 1949
3) ಬೆಂಗಳೂರು ವಿಶ್ವವಿದ್ಯಾಲಯ – 1964
4) ಗುಲ್ಬರ್ಗಾ ವಿಶ್ವವಿದ್ಯಾಲಯ – 1980
5) ಮಂಗಳೂರು ವಿಶ್ವವಿದ್ಯಾಲಯ – 1980
6) ಕುವೆಂಪು ವಿಶ್ವವಿದ್ಯಾಲಯ – 1987
7) ಕನ್ನಡ ವಿಶ್ವವಿದ್ಯಾಲಯ – 1991
8) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ– 1996
9) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ – 1998
10) ಬಿಜಾಪುರ ಮಹಿಳಾ ವಿಶ್ವವಿದ್ಯಾಲಯ – 2003
11) ತುಮಕೂರು ವಿಶ್ವವಿದ್ಯಾಲಯ – 2004

ಆ) ಅಧ್ಯಾಪಕರು–122
ಅಧ್ಯಾಪಕೇತರರು–1020

ಇ) ಕೆಲವರು ಸುಮಾರು 3 ತಿಂಗಳುಗಳಿಂದ ಮತ್ತೆ ಕೆಲವರು 3 ವರ್ಷದಿಂದ 17 ವರ್ಷಗಳ ವರೆಗೆ ವಿವಿಧ ಅವಧಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ

ಈ),ಉ) ಖಾಯಂ ಮಾಡುವ ಬಗ್ಗೆ ನಿಯಮಗಳಲ್ಲಿ ಅವಕಾಶವಿರುವುದಿಲ್ಲ

515(493) ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಯಾವ ಯಾವ ವಿಶ್ವವಿದ್ಯಾಲಯಕ್ಕೆ ಎಷ್ಟೆಷ್ಟು ಬ್ಲಾಕ್ ಗ್ರಾಂಟ್ ನೀಡಲಾಗುತ್ತಿದೆ

ಆ) ದೂರ ಶಿಕ್ಷಣ ಒದಗಿಸುತ್ತಿರುವ ರಾಜ್ಯದ ಏಕೈಕ ವಿಶ್ವವಿದ್ಯಾಲಯವಾದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ಬ್ಲಾಕ್ ಗ್ರಾಂಟ್ ನೀಡುವ ಬಗ್ಗೆ ಸರ್ಕಾರದ ನಿಲುವೇನು

ಇ) ಈ ವಿಶ್ವವಿದ್ಯಾಲಯಕ್ಕೆ ಎಷ್ಟು ಬ್ಲಾಕ್ ಗ್ರಾಂಟ್ ನೀಡಬೇಕೆಂಬ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ

ಈ) ಈ ಬಗ್ಗೆ ಸಕಾರಾತ್ಮಕ ನಿಲುವು ತೆಗೆದುಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಯನ್ನು ತಿಳಿಸುವುದು?

ಶ್ರೀ ಡಿ ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ) 2004–05ನೇ ಆರ್ಥಿಕ ಸಾಲಿನಲ್ಲಿ ಒದಗಿಸಿರುವ ಬ್ಲಾಕ್ ಅನುದಾನ (ಲಕ್ಷ ರೂ ಗಳಲ್ಲಿ)
1) ಮೈಸೂರು ವಿಶ್ವವಿದ್ಯಾಲಯ – 3372 15
2) ಕರ್ನಾಟಕ ವಿಶ್ವವಿದ್ಯಾಲಯ – 3379 19
3) ಬೆಂಗಳೂರು ವಿಶ್ವವಿದ್ಯಾಲಯ – 2856 00

| | | |
|---|---|---|
| 4) ಗುಲ್ಬರ್ಗಾ ವಿಶ್ವವಿದ್ಯಾಲಯ | – | 1259 04 |
| 5) ಮಂಗಳೂರು ವಿಶ್ವವಿದ್ಯಾಲಯ | – | 1026 64 |
| 6) ಕನ್ನಡ ವಿಶ್ವವಿದ್ಯಾಲಯ | – | 348 80 |
| 7) ಕುವೆಂಪು ವಿಶ್ವವಿದ್ಯಾಲಯ | – | 1234 25 |

ಆ) ಮುಕ್ತ ವಿಶ್ವವಿದ್ಯಾಲಯ ಮೂಲತಃ Self financing ಮತ್ತು ಆರ್ಥಿಕವಾಗಿ ಸ್ವಾವಲಂಭಿ ವಿಶ್ವವಿದ್ಯಾಲಯವಾಗಬೇಕೆಂಬ ಉದ್ದೇಶದಿಂದ ಸ್ಥಾಪಿಸಲಾಗಿದೆ, ಆದಗ್ಯೂ ಯೋಜನಾ ಬಾಬ್ತಿನಲ್ಲಿ ಒದಗಿಸಲಾಗುತ್ತಿರುವ ಒಟ್ಟಾರೆ, ಅನುದಾನದಲ್ಲಿಯೇ ಸಿಬ್ಬಂದಿ ವೇತನಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ ಬ್ಲಾಕ್ ಅನುದಾನ ನೀಡಿಕೆ ಬಗ್ಗೆ ಸ್ವೀಕೃತವಾದ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಇ) ರೂ 3,43,08,504–00

ಈ) ಮುಕ್ತ ವಿಶ್ವವಿದ್ಯಾಲಯವು Self financing ಮತ್ತು ಆರ್ಥಿಕವಾಗಿ ಸ್ವಾವಲಂಭನೆ ವಿಶ್ವವಿದ್ಯಾಲಯವಾಗಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಸ್ಥಾಪಿಸಲಾಗಿದೆ

516(503) ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಯಾವ ಯಾವ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಅಂಚೆ ಮೂಲಕ ಶಿಕ್ಷಣ ನೀಡಲಾಗುತ್ತಿದೆ, ಹಾಗೂ ಯಾವ ವರ್ಷಗಳಿಂದ

ಆ) ಈ ಉದ್ದೇಶದಿಂದ ತೆರೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವಿದ್ದರೂ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಅಂಚೆ ಮೂಲಕ ಶಿಕ್ಷಣ ನೀಡಲು ಅನುಮತಿ ನೀಡಲು ಕಾರಣವೇನು.

ಇ) ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಅಂಚೆ ಮೂಲಕ ಶಿಕ್ಷಣ ನೀಡುವುದರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಸ್ತಿತ್ವಕ್ಕೆ ಧಕ್ಕೆ ಬಂದಂತಾಗಲಿಲ್ಲವೇ

ಈ) ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಅಂಚೆ ಮೂಲಕ ಶಿಕ್ಷಣ ನೀಡುವುದಕ್ಕೆ ನೀಡಿರುವ ಅನುಮತಿ ಹಿಂತಿಗೆದುಕೊಳ್ಳುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಡಿ ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ) ಬೆಂಗಳೂರು ವಿಶ್ವವಿದ್ಯಾಲಯ – 1976ರಿಂದ

ಆ) 2000 ಕೆ ಎಸ್ ಯು ಅಧಿನಿಯಮದಲ್ಲಿ ಸಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿಯೂ ಸಹ ಅಂಚೆ ಮತ್ತು ತೆರಪಿನ ಶಿಕ್ಷಣ ಮತ್ತು ದೂರ ಶಿಕ್ಷಣ ಸಂವೇದಿ ಮೂಲಕ ಶಿಕ್ಷಣ ಒದಗಿಸಲು ಅವಕಾಶ ಕಲ್ಪಿಸಲಾಗಿದೆ

ಇ) ಇಲ್ಲ

ಈ) ಇಲ್ಲ

517(504) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರಿನ ಕುವೆಂಪು ನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಲೇಜು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಟ್ಟಡದಲ್ಲಿ ನಡೆಯುತ್ತಿದ್ದು, ಸದರಿ ಕಟ್ಟಡವನ್ನು ಕಾಲೇಜಿಗೆ ಪಡೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ

ಆ) ಸದರಿ ಪ್ರಕ್ರಿಯೆ ಯಾವ ಹಂತದಲ್ಲಿದೆ

ಇ) ಸದರಿ ಕಾಲೇಜು ಕಟ್ಟಡವನ್ನು ಇಲಾಖೆಯು ಸ್ವಾಧೀನಕ್ಕೆ ಯಾವಾಗ ತೆಗೆದುಕೊಳ್ಳಲಾಗುವುದು?

ಶ್ರೀ ಡಿ ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ),ಆ) ಕಟ್ಟಡದ ಒಟ್ಟು ಮೌಲ್ಯ ರೂ 70,34,465–00 ಪೈಕಿ ಸದರಿ ಕಟ್ಟಡವನ್ನು ಕಾಲೇಜಿಗೆ ಪಡೆಯಲು ಮೊದಲಿಗೆ ರೂ 19 89 ಲಕ್ಷಗಳನ್ನು ಭಾಗಶಃ ಪಾವತಿಸಲಾಗಿದೆ

ಇ) ಒಟ್ಟು ಮೌಲ್ಯದಲ್ಲಿ ಈಗಾಗಲೇ ಪಾವತಿಸಿರುವ ರೂ 19 89 ಲಕ್ಷಗಳನ್ನು ಹೊರತುಪಡಿಸಿ ಬಾಕಿ ಹಣವನ್ನು ಪಾವತಿಸಲು ಅನುದಾನ ದೊರಕಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ ಅನುದಾನ ದೊರಕಿಸಿಕೊಂಡ ಕೂಡಲೇ ಇಲಾಖೆಯ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗುವುದು

518(505) ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ವಿಶ್ವವಿದ್ಯಾನಿಲಯದ ನೌಕರ ವಸತಿ ಗೃಹಗಳನ್ನು ಹೊಂದಿರುವ ಮಾನಸ ಗಂಗೋತ್ರಿ ರಸ್ತೆಗಳ ಡಾಂಬರೀಕರಣಕ್ಕೆ ತಗಲುವ ವೆಚ್ಚವೆಷ್ಟು (ವಿವರ ನೀಡುವುದು)

ಆ) ಈ ವೆಚ್ಚವನ್ನು ಸರ್ಕಾರದಿಂದ ಭರಿಸಿ ರಸ್ತೆಗಳ ಡಾಂಬರೀಕರಣ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ರೂ 10 00 ಲಕ್ಷ

ಆ) ಮೈಸೂರು ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡಿರುವ ಅಭಿವೃದ್ಧಿ ಅನುದಾನದಿಂದ ಡಾಂಬರೀಕರಣಗೊಳಿಸಬೇಕಾಗುತ್ತದೆ

519(445) ಶ್ರೀ ಶಿವಾನಂದ ನಾಯಕ್ (ಭಟ್ಕಳ) ಮಾನ್ಯ ಧರ್ಮಸಿಂಗ್ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೃಷಿ ಮೇಲಿನ ಬಡ್ಡಿ ಮನ್ನಾ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಆ) ಕೃಷಿ ಸಾಲಕ್ಕಾಗಿ ಸ್ಟಾಂಪ್ ಡ್ಯೂಟಿ ಪ್ರಾರಂಭಿಸಿರುವುದನ್ನು ಸರ್ಕಾರ ಹಿಂತೆಗೆದುಕೊಳ್ಳುವುದೇ?

3) ರೈತರಿಗೆ ಬೆಳೆ ವಿಮೆ ಯೋಜನೆಯನ್ನು ಮುಂದುವರಿಸಲಾಗುವುದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸದ್ಯಕ್ಕೆ ಕೃಷಿ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ವಿಚಾರವು ಸರ್ಕಾರದ ಮುಂದೆ ಇರುವುದಿಲ್ಲ

ಆ) ಕೃಷಿ ಸಾಲಕ್ಕಾಗಿ ಮಾಡಲಾಗುವ ಅಡಮಾನ ಪತ್ರಕ್ಕೆ ಶೇಕಡಾ 0 5ರಷ್ಟು ಮುದ್ರಾಂಕ ಶುಲ್ಕ ವಿಧಿಸಲಾಗುತ್ತಿದೆ ಸದರಿ ಶುಲ್ಕವನ್ನು ಹಿಂತೆಗೆದುಕೊಳ್ಳುವ ಪ್ರಸ್ತಾವವು ಸರ್ಕಾರದ ಪರಿಶೀಲನಯಲ್ಲಿ ಇರುತ್ತದೆ ಇನ್ನೂ ಅಂತಿಮ ತೀರ್ಮಾನ ಕೈಗೊಂಡಿರುವುದಿಲ್ಲ

ಇ) ಹೌದು

521(334) ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗೌರಿಬಿದನೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಮಸೀದಿಗಳಿಲ್ಲದೇ ಮುಸ್ಲಿಂ ಭಾಂದವರು ಪ್ರಾರ್ಥನೆ ಸಲ್ಲಿಸಲು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ ಪರಿಹಾರಕ್ಕೆ ಯಾವ ಕ್ರಮ ಕೈಗೊಂಡಿದೆ?

ಇ) ಸರ್ಕಾರ ಮಸೀದಿ ನಿರ್ಮಿಸಲು ಸಹಾಯ ಸಹಕಾರ ನೀಡುವುದೇ?

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ನಿರ್ದಿಷ್ಟ ವಕ್ಫ್ ಸಂಸ್ಥೆಯಿಂದ ಇಂತಹ ಪ್ರಸ್ತಾವನೆ ಬಂದಲ್ಲಿ ಹಣದ ಲಭ್ಯತೆ ಆಧರಿಸಿ ಸಹಾಯ ಮಾಡಲಾಗುವುದು

522(559) ಶ್ರೀ ಡಾ|| ಸುಧಾಕರ್ ಎಂ ಸಿ (ಚಿಂತಾಮಣಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಂತಾಮಣಿ ನಗರದ ಬಾಲಕರ ಸರ್ಕಾರಿ ಕಾಲೇಜಿನಲ್ಲಿ ಎಷ್ಟು ವಿಷಯಗಳನ್ನು ಬೋಧಿಸುತ್ತಿದ್ದಾರೆ ಎಂಬುದನ್ನು ತಿಳಿಸುವುದು

ಆ) ಎಲ್ಲಾ ವಿಷಯಗಳ ಕಾರ್ಯಭಾರವನ್ನು ನಿರ್ವಹಿಸಲು ಎಷ್ಟು ಉಪನ್ಯಾಸಕರು ಬೇಕಾಗುತ್ತದೆ ಎಂಬುದನ್ನು ತಿಳಿಸುವುದು

ಇ) ಈ ಎಲ್ಲಾ ವಿಷಯಗಳನ್ನು ಬೋಧಿಸಲು ಅವಧಿಗೆ ತಕ್ಕಂತೆ ಕಾರ್ಯಭಾರವನ್ನು ನಿರ್ವಹಿಸಲು ಅಗತ್ಯವಿರುವ ಉಪನ್ಯಾಸಕರು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಈ ಕುರಿತಾಗಿ ಸರ್ಕಾರ ತುರ್ತಾಗಿ ಯಾವ ಕ್ರಮಕೈಗೊಳ್ಳುತ್ತದೆ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) 15 ವಿಷಯಗಳನ್ನು ಬೋಧಿಸಲಾಗುತ್ತಿದೆ

ಆ) 28 ಉಪನ್ಯಾಸಕರು ಬೇಕಾಗುತ್ತದೆ

ಇ) 2003–04ನೇ ಸಾಲಿನ ಕಾರ್ಯಭಾರಕ್ಕನುಗುಣವಾಗಿ ಇಂಗ್ಲೀಷ್, ರಾಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ ಹಾಗೂ ಗಣಕ ವಿಜ್ಞಾನ ವಿಷಯ ಹೊರತುಪಡಿಸಿ ಉಳಿದೆಲ್ಲ ವಿಷಯಗಳಲ್ಲಿ ಉಪನ್ಯಾಸಕರ ಕೊರತೆ ಇಲ್ಲ

ಈ) 2004–05ನೇ ಸಾಲಿನ ಕಾರ್ಯಭಾರವನ್ನು ಪಡೆದು, ಪರಿಶೀಲಿಸಿ ಅಗತ್ಯತೆ ಇರುವ ಉಪನ್ಯಾಸಕರನ್ನು ಭರ್ತಿ ಮಾಡಲು ಪರಿಶೀಲಿಸಲಾಗುವುದು

523(619) ಶ್ರೀ ವೆಂಕಮುನಿಯಪ್ಪ ಬಿ ಪಿ (ಬೇತಮಂಗಲ) ಮಾನ್ಯ ಧರ್ಮಸಿಂಗ್ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕುರಿ ಸಾಕಾಣಿಕೆ ಮಾಡುವವರಿಗೆ ಶೆಡ್‌ಗಳನ್ನು ನಿರ್ಮಿಸಲು ಸಬ್ಸಿಡಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು

ಇ) ಕುರಿ ಸಾಕಾಣಿಕೆ ಮಾಡುವವರಿಗೆ ಸಹಾಯಧನವನ್ನು ಎಂದಿನಿಂದ ಹಾಗೂ ಎಷ್ಟು ಪ್ರಮಾಣದಲ್ಲಿ ನೀಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸಹಾಯಧನ ನೀಡುವ ಕಾರ್ಯಕ್ರಮ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

525(815) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಕಾರಣಕರ್ತರಾದ ಕರ್ನಾಟಕ ಏಕೀಕರಣ ಧುರೀಣರಾದ ದಿವಂಗತ ಎಸ್ ಆರ್ ಕಂಠಿಯವರ ಹೆಸರನ್ನು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ನಾಮಕರಣ ಮಾಡಲು ಸರ್ಕಾರವು ಯೋಚಿಸಿದೆಯೇ,

ಆ) ಬೆಂಗಳೂರು ವಿಶ್ವವಿದ್ಯಾನಿಲಯದ ಸಮಗ್ರ ಬೆಳವಣಿಗೆಗೆ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ

ಆ) ಭವಿಷ್ಯದ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿಗಾಗಿ ಬೆಂಗಳೂರು ವಿಶ್ವವಿದ್ಯಾಲಯ ಈ ಕೆಳಕಂಡ ಪ್ರಮುಖವಾದ ಯೋಜನೆಗಳನ್ನು ಹಮ್ಮಿಕೊಂಡಿದೆ –

1) ಹೊಸ ಶೈಕ್ಷಣಿಕ ಕೋರ್ಸುಗಳನ್ನು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಉದ್ದೇಶ ಪೂರಿತ ಚಟುವಟಿಕೆಗಳನ್ನು ಜೈವಿಕವಿಜ್ಞಾನ, ಸೂಕ್ಷ್ಮ ವಿಜ್ಞಾನವನ್ನು ಹಾಗೂ ಮಾಹಿತಿ ತಂತ್ರಜ್ಞಾನ ಇವುಗಳಲ್ಲಿ ಉನ್ನತ ವ್ಯಾಸಂಗವನ್ನು ಮುಂದುವರಿಸಲು ಆ ವಿಭಾಗಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸುವುದು

2) ಜೈವಿಕ ವಿಜ್ಞಾನ ಹಾಗೂ ಭೌತಶಾಸ್ತ್ರ ಇವುಗಳಲ್ಲಿ ರಾಷ್ಟ್ರೀಯ ಮಟ್ಟದ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸುವುದು

3) ಇಂಟಿಗ್ರೇಟೆಡ್ ಬಿಎಸ್ಸಿ, ನಾಲ್ಕು ವರ್ಷದ ಬಿಎಸ್ಸಿ, ಹಾನರ್ಸ್ ಹಾಗೂ ಎಂ ಎಸ್ಸಿ, ಹೊಸ ಕೋರ್ಸುಗಳನ್ನು ಸೆಂಟ್ರಲ್ ಕಾಲೇಜಿನಲ್ಲಿ ಪುನರ್ ಪ್ರಾರಂಭಿಸುವುದು

4) ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ವಿವಿದೋದ್ದೇಶ ವನಗಳನ್ನು ಶೈಕ್ಷಣಿಕ ಸಂಶೋಧನೆ ಹಾಗೂ ಉನ್ನತ ಅಧ್ಯಯನಕ್ಕೆ ಬೇಕಾಗುವ ವಿವಿಧ ಜಾತಿ ಸಸ್ಯಗಳು ಹಾಗೂ ವೈದ್ಯಕೀಯ ಗಿಡಗಳನ್ನು ಸಂರಕ್ಷಿಸುವ ಕಾರ್ಯವಿಧಾನಗಳ ಕೇಂದ್ರ ಸ್ಥಾಪನೆ ಮಾಡುವುದು

5) ವಿದೇಶಗಳ ಶೈಕ್ಷಣಿಕ ಹಾಗೂ ಸಂಶೋಧನ (ಆರ್ ಅಂಡ್ ಡಿ) ವಿಭಾಗಗಳೊಂದಿಗೆ ಎಂಒಯು (ಒಡಂಬಡಿಕೆ) ಮಾಡಿಕೊಳ್ಳುವುದು

526(807) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಮಾವಿನ ಹಣ್ಣಿನ, ಸಗಟು ಮಾರಾಟವನ್ನು ಯಾವ ಸ್ಥಳದಲ್ಲಿ ನಡೆಸಲಾಗುತ್ತಿದೆ

ಆ) ಸದರಿ ಸ್ಥಳದಲ್ಲಿ ನಡೆಸಲು ಸಗಟು ಮಾರಾಟಗಾರರು ನ್ಯಾಯಾಲಯದ ಮೊರೆ ಹೋಗಿರುವುದರ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ

ಇ) ಪ್ರಸ್ತುತ ನಿರ್ಧಾರದಿಂದ ಸಗಟು ಮಾರಾಟಗಾರರು ವ್ಯಾಪಾರದ ವಹಿವಾಟಿಗಾಗಿ ನೆರೆ ರಾಜ್ಯಕ್ಕೆ ವಲಸೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಪ್ರಸ್ತುತ ಮಾವಿನ ಹಣ್ಣಿನ ಸಗಟು ಮಾರಾಟ ಹಣ್ಣು ಮತ್ತು ತರಕಾರಿ (ವಿಶೇಷ) ಕೃ ಉ ಮಾ ಸ, ಬೆಂಗಳೂರು ಇದರ ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆಯಲ್ಲಿ ನಡೆಯುತ್ತಿದೆ

ಆ),ಇ) ಹೌದು ಈ ವಿಷಯವನ್ನು ಎಚ್ಚರಿಕೆಯಿಂದ ಪರಿಶೀಲಿಸಲಾಗುತ್ತಿದೆ

ಈ) ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಎಲ್ಲಾ ಹಣ್ಣಿನ ವಹಿವಾಟಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಅಭಿವೃದ್ಧಿಪಡಿಸಿದೆ

ಮುಂದಿನ ಹಂಗಾಮಿನಲ್ಲಿ ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆಗಳಿಗೆ ಮಾವಿನ ಹಣ್ಣಿನ ಸಗಟು ವ್ಯಾಪಾರವನ್ನು ನಡೆಸಲು ಎಲ್ಲಾ ಪೂರಕ ಕ್ರಮಗಳನ್ನು ಜರುಗಿಸಲಾಗುವುದು

527(809) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಾಮರಾಜನಗರದ ಬೆಲ್ಲದ ಮಾರುಕಟ್ಟೆಯಲ್ಲಿ ರೈತರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಬೆಲ್ಲದ ವಿತರಣೆಯಾಗಲು ಕೈಗೊಂಡಿರುವ ಕ್ರಮಗಳೇನು

ಆ) ಮಾರುಕಟ್ಟೆಯಲ್ಲಿ ಬೆಲ್ಲದ ಬೆಲೆ ಕುಸಿದಾಗ ಅದನ್ನು ಸುರಕ್ಷಿತವಾಗಿಟ್ಟು ಉತ್ತಮ ಬೆಲೆ ಸಿಗುವವರೆಗೆ ಕೆಡದ ಹಾಗೆ ಮಾರುಕಟ್ಟೆಯಲ್ಲಿ ಶೇಖರಿಸಲು ಸರ್ಕಾರವು ಯಾವುದಾದರೂ ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆಯೆ (ವಿವರಗಳನ್ನು ನೀಡುವುದು)?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಬೆಲ್ಲದ ಮಾರಾಟ ಮಾಡುವ ರೈತರಿಗೆ ತೊಂದರೆಯಾಗದಂತೆ ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ

1) ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಗೋದಾಮು/ಸಣ್ಣ ಮಳಿಗೆಗಳು ಹಾಗೂ ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಬೆಲ್ಲದ ಮಾರಾಟಕ್ಕಾಗಿ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ

2) ಕರಾರುವಾಕ್ಕದ ತೂಕವನ್ನು ನೀಡಲು ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಅಳವಡಿಸಲಾಗುತ್ತಿದೆ

3) ರೈತರ ತಮ್ಮ ಹುಟ್ಟುವಳಿಗಳನ್ನು ಮಾರಾಟಕ್ಕೆ ತಂದ ಸಂದರ್ಭದಲ್ಲಿ ಬೆಲೆಯಲ್ಲಿ ಏರುಪೇರು ಉಂಟಾದಲ್ಲಿ ರೈತರ ಹುಟ್ಟುವಳಿಯನ್ನು ಅಡವಿಟ್ಟು, ಬೆಲ್ಲದ ಮೌಲ್ಯದ ಶೇ 60ರಷ್ಟು ಅಥವಾ ರೂ 10000-00 ಯಾವುದೋ ಹೆಚ್ಚೋ ಅದನ್ನು ರೈತರಿಗೆ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ

4) ಚಾಮರಾಜನಗರದ ಬೆಲ್ಲ ಉತ್ತಮ ಗುಣಮಟ್ಟದ್ದಾಗಿರುವ ಹಿನ್ನಲೆಯಲ್ಲಿ ಹಾಗೂ ಸದರಿ ಬೆಲ್ಲದಲ್ಲಿ ಹೈಡ್ರೋಸನ್ ಪ್ರಮಾಣ ಕಡಿಮೆ ಇರುವ ಹಿನ್ನಲೆಯಲ್ಲಿ ಅದನ್ನು "ಬ್ರಾಂಡ್" ಮಾಡಿ ಇತರ ಮಾರುಕಟ್ಟೆಗಳಿಗೆ ಬಿಡುಗಡೆ ಮಾಡಲು ಸೂಕ್ತವಾದ ಪ್ಯಾಕೆಜಿಂಗ್ ಹಾಗೂ ಇತರ ಕ್ರಮಗಳ ಬಗ್ಗೆ ಸಿ ಎಫ್ ಟಿ ಆರ್ ಐ ನ ಜೊತೆ ಸಂಪರ್ಕ ಬೆಳೆಸಿದ್ದು, ಉತ್ಪಾದಿತ ಬೆಲ್ಲವನ್ನು ಇತರೆ ಮಾರುಕಟ್ಟೆಗಳಿಗೆ ಅಥವಾ ಕನ್ಸೂಮರ್ ಪಾಯಿಂಟ್ಸ್‌ಗಳಿಗೆ ತಲುಪಿಸಲು ಅನುಕೂಲವಾಗುವಂತೆ ರೈತ ಬೆಳೆಗಾರರ ಸಂಘಟನೆಗಳನ್ನು ರೂಪಿಸಲು ಸಹ ಮಾರುಕಟ್ಟೆ ಸಮಿತಿ [illegible]

5) ರೈತರಿಂದ ಯಾವುದೇ ರೀತಿಯ ದಲ್ಲಾಲಿ ಪಡೆಯದೆ ಇರುವಂತೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಅದೇ ದಿನ ರೈತರಿಗೆ ಹಣ ಪಾವತಿ ಮಾಡಲು ಕ್ರಮ ಕೈಗೊಂಡಿದೆ.

ಆ) ಪ್ರಾಂಗಣದಲ್ಲಿ 2 ಎಕರೆ ಜಮೀನಿನಲ್ಲಿ ಶೀಥಲ ಗೃಹಕ್ಕಾಗಿ ಮೀಸಲಿದ್ದು, ಈ ಬಗ್ಗೆ ಅಧ್ಯಯನಕ್ಕೆ ಕೃಷಿ ವಿಶ್ವ ವಿದ್ಯಾಲಯವನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ಇವರನ್ನು ಕೋರಲಾಗಿದೆ

528(713) ಶ್ರೀ ಯಡಿಯೂರಪ್ಪ ಬಿ ಎಸ್ (ಶಿಕಾರಿಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಮಂಡಳಿ ಹಾಗೂ ಸಿಂಡಿಕೇಟ್‌ಗಳ ಸದಸ್ಯರು ಯಾರು (ವಿಶ್ವವಿದ್ಯಾಲಯವಾರು ಮಾಹಿತಿ ನೀಡುವುದು)

ಆ) ಈ ಸದಸ್ಯರನ್ನು ಯಾವಾಗ ನೇಮಕ ಮಾಡಲಾಯಿತು ಹಾಗೂ ಇವರ ಅವಧಿ ಎಷ್ಟು ವರ್ಷಗಳು

ಇ) ಹಾಲಿ ಇರುವ ಶೈಕ್ಷಣಿಕ ಮಂಡಳಿ ಹಾಗೂ ಸಿಂಡಿಕೇಟ್ ಸದಸ್ಯರ ಮರು ನಾಮಕರಣ ಮಾಡಲು ಸರಕಾರ ನಿರ್ಧರಿಸಿದೆಯೆ ಹಾಗಿದ್ದಲ್ಲಿ, ಕಾರಣಗಳೇನು

ಈ) ಕಾಯಿದೆ ಪ್ರಕಾರ ಎಷ್ಟು ವರ್ಷಗಳಿಗೊಮ್ಮೆ ಮಂಡಳಿ ರಚನೆಯಾಗಬೇಕು?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ),ಆ) ವಿವರವನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ

ಇ) ಸದ್ಯಕ್ಕೆ ಇಂತಹ ಪ್ರಸ್ತಾವನೆ ಇರುವುದಿಲ್ಲ

ಈ) 3 ವರ್ಷಗಳಿಗೊಮ್ಮೆ ಸದರಿ ಮಂಡಳಿಗಳು ರಚನೆಯಾಗುವವು

## ಅನುಬಂಧ-1

| ಕ್ರಮ ಸಂಖ್ಯೆ | ವಿಶ್ವವಿದ್ಯಾಲಯದ ಹೆಸರು | ಶೈಕ್ಷಣಿಕ ಮಂಡಳಿ ಸದಸ್ಯರ ಹೆಸರು | ನೇಮಕ ಗೊಂಡ ದಿನಾಂಕ | ಅವಧಿ (ವರ್ಷಗಳಲ್ಲಿ) | ಸಿಂಡಿಕೇಟ್ ಸದಸ್ಯರ ಹೆಸರು | ನೇಮಕ ಗೊಂಡ ದಿನಾಂಕ | ಅವಧಿ (ವರ್ಷಗಳಲ್ಲಿ) |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಬೆಂಗಳೂರು ವಿಶ್ವವಿದ್ಯಾಲಯ | **ಶ್ರೀಯುತರುಗಳಾದ**<br>1)ಗೋವಿಂದಸ್ವಾಮಿ<br>2)ಚಂದ್ರಶೇಖರಗೌಡ,<br>3)ಡಾ॥ ಬಾಲಮಣಿ<br>4)ಮೊದಮದ್‌ಮೊಹಿದ್ದೀನ್<br>5)ಜಿ ಈರಯ್ಯ<br>6)ವಾಸುದೇವಮೂರ್ತಿ | 06-11-2001 | 3 ವರ್ಷ | **ಶ್ರೀಯುತರುಗಳಾದ**<br>1)ಎಂ ಎಸ್ ಬಸವರಾಜು<br>2)ಕೆ ಎ ಜಗದೀಶ್<br>3)ಡಾ॥ ಸ್ವರ್ಣಲತಾ<br>4)ಅಲಾಯ್ಸ ಫರ್ನಾಂಡಿಸ್<br>5)ಪ್ರೋ ಟಿ ಶಿವಣ್ಣ<br>6)ಡಾ॥ ಕೆ ಶ್ರೀನಿವಾಸನ್ | 06-11-2001 | 3 ವರ್ಷ |
| 2 | ಗುಲಬರ್ಗಾ ವಿಶ್ವವಿದ್ಯಾಲಯ | 1)ಆರ್ ಎಸ್ ದರ್ಗಿ<br>2)ಡಾ॥ ಸಾಂಬಶಿವರಾವ್<br>3)ಡಾ॥ ಶೈಲಜಾ ಉಡಚಣ<br>4)ಡಾ॥ ಬಿ ಟಿ ಸೈಮನ್<br>5)ಅನಂತರಾವ್ ಪಾಟೀಲ<br>6)ಸುಭಾಷ್ ವಿ ರಾಠೋಡ್ | 2 11 2001 | 3 ವರ್ಷ | 1)ಎಸ್ ಎಂ ಹಾಗರಗಿ<br>2)ಕೆ ತಿಮ್ಮಯ್ಯ<br>3)ಇಂದಿರಾ ಬಾವಿಕಟ್ಟಿ<br>4)ಕೆ ವಿಶ್ವನಾಥ್<br>5)ಡಾ॥ ಬಿಂದು ಮಾಧವ ಬಿ ಮರದ್ | 02-11-2001 | 3ವರ್ಷ |
| 3 | ಮಂಗಳೂರು ವಿಶ್ವವಿದ್ಯಾಲಯ | 1)ಕಾಳಪ್ಪ<br>2)ಶಶೀಧರ್ ಕೊಟ್ಯಾನ್ | 13-09-2001 | 3 ವರ್ಷ | 1)ಕೆ ರಾಮ<br>2)ಸುಮಲತಾ ಎನ್ ಸುವರ್ಣ | 13-09-2004 | 3 ವರ್ಷ |

| | | | | | | | |
|---|---|---|---|---|---|---|---|
| | | 3)ಪ್ರೊ ಪಿ ಡಿ ದೇವಮ್ಮ | | | 3)ಶ್ಯಾಮಲ ಬಂಢಾರಿ | | |
| | | 4)ಪ್ರೊ ಹಿಲ್ಡಾಮಿರಾಂಡ | | | 4)ಅಬ್ದುಲ್ ಹಮೀದ್ | | |
| | | 5)ಬಿ ಟಿ ಪ್ರದೀಪ್ | | | 5)ದಿನೇಶ್‌ಕುಮಾರ್ ಆಳ್ವ | | |
| | | 6)ಎಸ್ ಜೆ ಕದಂಬ | | | 6)ಪ್ರೊ ಎಂ ಎಂ ಗಣಪತಿ | | |
| 4 | ಕುವೆಂಪು ವಿಶ್ವವಿದ್ಯಾಲಯ | 1)ಚೂಡಾನಾಯ್ಕ್ | 18-12-2001 | 3 ವರ್ಷ | 1)ಕೆ ಬಿ ಪಾಲಯ್ಯ | 18-12-2001 | 3 ವರ್ಷ |
| | | 2)ಜಿ ಎಂ ಬಸವರಾಜ್ | | | 2)ಪ್ರೊ ಎಸ್ ಬಿ ರಂಗನಾಥ್ | | |
| | | 3)ಎಂ ಹೆಚ್ ನಿರ್ಮಲ | | | 3)ಎಂ ಬೋಜಮ್ಮ | | |
| | | 4)ನಯಾಜ್ ಅಹಮದ್ ಖಾನ್ | | | 4)ರೇವರಂಡ್ ಫಾದರ್ ಜ್ಯೋ ಮೇರಿ | | |
| | | 5)ಆರ್ ಆರ್ ಕುಲಕರ್ಣಿ | | | 5)ಪ್ರೊ ಬಿ.ಎಂ ಸರ್ವಜ್ಞಮೂರ್ತಿ | | |
| | | 6)ಸವ್ಯಸಾಚಿ | | | 6)ಡಾ॥ ಯು ಆರ್ ಅನಿಲ್ ಕುಮಾರ್ | | |
| 5 | ಕರ್ನಾಟಕ ವಿಶ್ವವಿದ್ಯಾಲಯ | 1)V B Kuttimani | 24-10-2001 | 3 ವರ್ಷ | 1)R K Toravi | 11-12-2000 | 3 ವರ್ಷ |
| | | 2)C M Hulgur | | | 2)Vasant Ladwa | | |
| | | 3)Dr S L Shantha Kumari | | | 3)Usha Murthy | | |
| | | 4)Rafi B Badadari | | | 4)Prof Abdul Karrim | | |
| | | 5)Dr S R Patil | | | 5)B S Bikkannavar | | |

| | | | | | | |
|---|---|---|---|---|---|---|
| 6 ಮೈಸೂರು ವಿಶ್ವವಿದ್ಯಾಲಯ | 1)ಸಿದ್ಧರಾಜು<br>2)ಎಂ ಪಿ ಸಂಪತ್<br>3)ಪ್ರೋ ಉಷಾ ಕೃಷ್ಣಮೂರ್ತಿ<br>4)ಸಿಸ್ಟರ್ ಎಂ ಜಿನೀವಿ<br>5)ಕೃಷ್ಣೇಗೌಡ<br>6)ಸತೀಶ್ ರೈ | 18-12-2001 | 3 ವರ್ಷ | 1) ಅಂಜನ್ ಮೂರ್ತಿ<br>2)ವೆಂಕಟೇಶ್ ಹೆಚ್ ಎ<br>3)ಪ್ರೋ ಪಾರ್ವತಮ್ಮ<br>4)ಪ್ರೋ ಬೈ ರಫೀಕ್ ಅಹಮದ್<br>5)ಎಂ ಆರ್ ಕುಮಾರ ಸ್ವಾಮಿ<br>6)ಡಾ॥ ಜಿ ಶಿವರುದ್ರಪ್ಪ | 18-12-2001 | 3 ವರ್ಷ |

529(714) ಶ್ರೀ ಯಡಿಯೂರಪ್ಪ ಬಿ ಎಸ್ (ಶಿಕಾರಿಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಡಿಕೆ ಬೆಳೆಯುವ ಪ್ರದೇಶಗಳು ಯಾವುವು ಹಾಗೂ ಎಷ್ಟು ಎಕರೆ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದೆ

ಆ) ರಾಜ್ಯದಲ್ಲಿ ಬೆಳೆಯುವ ಒಟ್ಟು ಅಡಿಕೆ ಪ್ರಮಾಣ ಎಷ್ಟು?

ಇ) ಅಡಿಕೆ ಧಾರಣೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಧಾರಣೆ ಕುಸಿಯಲು ಕಾರಣವೇನು?

ಉ) ಅಡಿಕೆಗೆ ಬೆಂಬಲ ಬೆಲೆ ನಿರ್ಧರಿಸಲು ಕಾರ್ಯಪಡೆ ರಚಿಸಲಾಗಿದೆಯೆ? ಕಾರ್ಯಪಡೆಯ ಸದಸ್ಯರು ಯಾರು?

ಊ) ಕಾರ್ಯಪಡೆ ಈವರೆಗೆ ಎಷ್ಟು ಬಾರಿ ಸಭೆ ಸೇರಿದೆ

ಋ) ಬೆಳೆಗಾರರು ಒಂದು ಕೆ ಜಿ ಅಡಿಕೆಗ ನೀಡಬೇಕೆಂದು ಆಗ್ರಹಿಸುತ್ತಿರುವ ಹಣ ಎಷ್ಟು?

ಎ) ಸರಕಾರ ಇವರ ಆಗ್ರಹವನ್ನು ಪುರಸ್ಕರಿಸಿದೆಯೇ?

ಶ್ರೀ ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ಮಲೆನಾಡು, ಕರಾವಳಿ, ಮತ್ತು ಮೈದಾನ ಪ್ರದೇಶದ ಜಿಲ್ಲೆಗಳಲ್ಲಿ ಒಟ್ಟು 1 32 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ

ಆ) ಒಟ್ಟು ಉತ್ಪಾದನೆ 1 70 ಲಕ್ಷ ಟನ್‌ಗಳು

ಇ) ಬಂದಿರುತ್ತದೆ

ಈ) ಅಡಿಕೆ ಬೆಳೆ ವಿಸ್ತರಣೆ, ಉತ್ಪಾದನೆಯಲ್ಲಿ ಹೆಚ್ಚಳ, ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಗುಟ್ಕಾ ನಿಷೇಧಿಸಿ ಬಳಕೆ ಕಡಿಮೆ ಆಗಿರುವುದು ಮತ್ತು ಕಳಪೆ ಗುಣಮಟ್ಟದ ಅಡಿಕೆ ಹೊರ ದೇಶಗಳಿಂದ ಆಮದಾಗುತ್ತಿರುವುದರಿಂದ ಅಡಿಕೆ ಧಾರಣೆ ಕುಸಿಯಲು ಕಾರಣವಾಗಿದೆ ಎಂದು ತಿಳಿದು ಬಂದಿದೆ

ಉ) ಅಡಿಕೆಗೆ ಬೆಂಬಲ ಬೆಲೆ ಸೇರಿದಂತೆ ಅಡಿಕೆ ಬೆಳೆಗಾರರ ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿ ಮಾಡಲು ಕಾರ್ಯಪಡೆ ರಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

ಈ ಕಾರ್ಯಪಡೆಯಲ್ಲಿ ತೋಟಗಾರಿಕೆ ಇಲಾಖೆ, ಸಹಕಾರ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆ, ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು, ಕ್ಯಾಂಪ್ಕೋ, ಕೆಪೆಕ್ ಸಂಸ್ಥೆ, ವಿಮಾ ಕಂಪನಿಯ ಪ್ರತಿನಿಧಿಗಳು ಮತ್ತು ಪ್ರಾಂತೀಯ ಅಡಿಕೆ ಬೆಳೆಗಾರರು ಸದಸ್ಯರಾಗಿರಲು ಪ್ರಸ್ತಾಪಿಸಲಾಗಿದೆ

ಊ) ಕಾರ್ಯಪಡೆ ರಚನೆಯ ಹಂತದಲ್ಲಿ ಇರುವುದರಿಂದ ಸಭೆಗಳು ನಡೆದಿರುವುದಿಲ್ಲ

ಋ) ಪ್ರತಿ ಕೆ ಜಿ ಚಾಲಿ ಅಡಿಕೆಗೆ ರೂ 80–00 ಮತ್ತು ಪ್ರತಿ ಕೆ ಜಿ ಕೆಂಪು ಅಡಿಕೆಗೆ ರೂ 100–00 ರಂತೆ ನೀಡಬೇಕೆಂದು ಅಡಿಕೆ ಬೆಳೆಗಾರರು ಕೋರಿರುತ್ತಾರೆ

ಎ) ಸರ್ಕಾರವು 2002ರಲ್ಲಿ ಪ್ರತಿ ಕೆ ಜಿ ಚಾಲಿ ಅಡಿಕೆಗೆ ರೂ 60–00 ಮತ್ತು ಪ್ರತಿ ಕೆ ಜಿ ಕೆಂಪು ಅಡಿಕೆಗೆ ಈಗ ರೂ 85–00ರಂತೆ ಬೆಂಬಲ ಬೆಲೆ ನಿಗಧಿಪಡಿಸಿದೆ

# ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2004
## [2004ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 23]

2004-2005 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ

2004-2005 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ವೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ,

ಇದು ಭಾರತ ಗಣರಾಜ್ಯದ ಐವತ್ತೈದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾ[illegible], ಎಂದರೆ:-

1. **ಸಂಕ್ಷಿಪ್ತ ಹೆಸರು.-** ಈ ಅಧಿನಿಯಮವನ್ನು ಕರ್ನಾಟಕ [illegible]ನವಿನಿಯೋ[illegible] ಅಧಿನಿಯಮ, 2004 ಎಂದು ಕರೆಯತಕ್ಕದ್ದು

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2004-2005ನೇ ಹಣಕಾಸು ವರ್ಷಕ್ಕಾಗಿ 73,36,58,000.00 ರೂಪಾಯಿಗಳ ನೀಡಿಕೆ.-** ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 2004-2005ನೇ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿ ಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಎಪ್ಪತ್ತಮೂರು ಕೋಟಿ ಮೂವತ್ತಾರು ಲಕ್ಷದ ಐವತ್ತೆಂಟು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು

3 **ಧನವಿನಿಯೋಗ –** ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು

## ಅನುಸೂಚಿ

### (2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ರೂ ಲಕ್ಷಗಳಲ್ಲಿ)

| ಬೇಡಿಕೆ ಸಂಖ್ಯೆ | ಸೇವೆಗಳು ಮತ್ತು ಉದ್ದೇಶಗಳು | | ಮೀರದ ಮೊಬಲಗು<br>ವಿಧಾನಸಭೆಯಿಂದ ಪುರಸ್ಕೃತವಾದುದನ್ನು | ಸಂಚಿತ ನಿಧಿಯಿಂದ ಪ್ರಭೃತವಾದುದನ್ನು | ಒಟ್ಟು |
|---|---|---|---|---|---|
| 01 | ಕೃಷಿ ಮತ್ತು ತೋಟಗಾರಿಕೆ | ರಾಜಸ್ವ | 25 00 | - | 25 00 |
| 02 | ಪಶುಸಂಗೋಪನೆ ಮತ್ತು ಮೀನುಗಾರಿಕೆ | ಬಂಡವಾಳ | 100 00 | - | 100 00 |
| 03 | ಆರ್ಥಿಕ | ರಾಜಸ್ವ | 524 79 | - | 524 79 |
| 05 | ಒಳಾಡಳಿತ ಮತ್ತು ಸಾರಿಗೆ | ರಾಜಸ್ವ | 200 00 | - | 200 00 |
| 07 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | ರಾಜಸ್ವ | 2091 10 | - | 2091 10 |
| 08 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | ರಾಜಸ್ವ | 150 00 | - | 150 00 |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | ರಾಜಸ್ವ | 1691 72 | - | 1691 72 |
| 13 | ಆಹಾರ ಮತ್ತು ನಾಗರಿಕ ಸರಬರಾಜು | ರಾಜಸ್ವ | 500 00 | - | 500 00 |
| 14 | ಕಂದಾಯ | ರಾಜಸ್ವ | 249 83 | - | 249 83 |
| 17 | ಶಿಕ್ಷಣ | ರಾಜಸ್ವ | 500 00 | - | 500 00 |
| 18 | ವಾಣಿಜ್ಯ ಮತ್ತು ಕೈಗಾರಿಕೆ | ರಾಜಸ್ವ | 240 56 | - | 240 56 |
| 21 | ಜಲಸಂಪನ್ಮೂಲ | ಬಂಡವಾಳ | 247 58 | - | 247 58 |
| 23 | ಕಾರ್ಮಿಕ | ರಾಜಸ್ವ | 646 00 | - | 646 00 |
| 25 | ಕನ್ನಡ ಮತ್ತು ಸಂಸ್ಕೃತಿ | ರಾಜಸ್ವ | 85 00 | - | 85 00 |
| 26 | ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ | ರಾಜಸ್ವ | 35 00 | - | 35 00 |
| 27 | ಕಾನೂನು | ರಾಜಸ್ವ | 50 00 | - | 50 00 |
| | ಒಟ್ಟು | ರಾಜಸ್ವ | **6989 00** | - | **6989 00** |
| | | ಬಂಡವಾಳ | **347 58** | | **347 58** |
| | ಒಟ್ಟು ಜುಮ್ಲಾ | | **7336 58** | - | **7336 58** |

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2004-2005 ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205 ನೇ (1)(ಎ) ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

**ಸಿದ್ದರಾಮಯ್ಯ**
ಉಪ ಮುಖ್ಯಮಂತ್ರಿ ಹಾಗೂ
ಹಣಕಾಸು ಸಚಿವರು

**ಟಿ. ರಾಜಣ್ಣ**
ಕಾರ್ಯದರ್ಶಿ

## ಕರ್ನಾಟಕ ವಿಧಾನಸಭೆ
## ಗುರುವಾರ 5ನೇ ಆಗಸ್ಟ್ 2004 ರಂದು
## ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ
## ಸಭಾಂಗಣದಲ್ಲಿ ಬೆಳಿಗ್ಗೆ 9 30 ಗಂಟೆಗೆ ಸಮಾವೇಶಗೊಂಡಿತು
## ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು
## 1) ಸಂತಾಪ ಸೂಚನೆ

**ಅಧ್ಯಕ್ಷರು** ಇಫ್ಕೋ ಮತ್ತು ಕ್ರಿಬ್ಕೋ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಶ್ರೀ ಪಾಲ್ ಪೋತನ್ ಅವರು ನಿಧನರಾದದ್ದನ್ನು ವಿಷಾದದಿಂದ ಸದನಕ್ಕೆ ತಿಳಿಸಬಯಸುತ್ತೇನೆ

ಇಫ್ಕೋ ಮತ್ತು ಕ್ರಿಬ್ಕೋ ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀ ಪಾಲ್ ಪೋತನ್ ಅವರು 1961ನೇ ಜನವರಿ 3 ರಂದು ಕೇರಳ ರಾಜ್ಯದ ನಡುಮಂಗಾಡ್ ಗ್ರಾಮದಲ್ಲಿ ಜನಿಸಿದರು 1935ರಲ್ಲಿ ಭೌತ ಮತ್ತು ರಾಸಾಯನಿಕ ಶಾಸ್ತ್ರದಲ್ಲಿ ಪದವಿ ಪಡೆದು 1940ನೇ ಸಾಲಿನಲ್ಲಿ ಸಿವಿಲ್ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿದ ಶ್ರೀಯುತರು ಕರ್ನಾಟಕದಲ್ಲಿ ಜೋಗಜಲಪಾತದಿಂದ ವಿದ್ಯುತ್ ಉತ್ಪಾದನೆ ಮಾಡುವಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿರುವುದು ಸ್ಮರಣೀಯವಾದುದು ರಾಷ್ಟ್ರದ ಅತ್ಯುನ್ನತ ಗೊಬ್ಬರ ಸಂಸ್ಥೆಯಾದ ಇಫ್ಕೋ ಮತ್ತು ಕ್ರಿಬ್ಕೋ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದ್ದುದಲ್ಲದೆ, ಎಫ್ ಎ ಒ , ಯು ಎನ್ ಐ ಡಿ ಒ ಮತ್ತು ವಿಶ್ವಬ್ಯಾಂಕ್‌ಗೆ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು 1977ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ಸಹ ಪಡೆದಿರುತ್ತಾರೆ

ಶ್ರೀಯುತರು ದಿನಾಂಕ 3ನೇ ಆಗಸ್ಟ್ 2004ರಂದು ನಿಧನ ಹೊಂದಿದರು

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೇ, ಪಾಲ್ ಪೋತನ್ ಅವರು ಒಬ್ಬ ಟೆಕ್ನೋಕ್ರಾಟ್ ಅವರು ಸಹಕಾರಿ ರಂಗದಲ್ಲಿ ಇಫ್ಕೋ ಮತ್ತು ಕ್ರಿಬ್ಕೋ ಸಂಸ್ಥೆಗಳನ್ನು ಹುಟ್ಟುಹಾಕಿ ಇಡೀ ಪ್ರಪಂಚದಲ್ಲೇ ಸಹಕಾರಿ ಸಂಸ್ಥೆಗಳನ್ನು ಯಾವ ರೀತಿ ನಡೆಸಬೇಕೆನ್ನುವುದನ್ನು ತೋರಿಸಿಕೊಟ್ಟಿದ್ದಾರೆ ನನಗಂತೂ ಅನಿಸುತ್ತದೆ, ಪಾಲ್ ಪೋತನ್ ಅವರು ಮತ್ತು ಕುರಿಯನ್ ಅವರು ಇವರಿಬ್ಬರೂ ಕೂಡ ಅದೇ ರಾಜ್ಯದವರಾಗಿ ಪಾಲ್ ಪೋತನ್‌ರವರಿಂದ ಪ್ರೇರಿತವಾಗಿ ಕುರಿಯನ್ ಅವರೂ ಕೂಡ ಬಹಳ ಒಳ್ಳೆಯ ಕೆಲಸವನ್ನು ಹಾಲು ಸಂಸ್ಕರಣೆಯಲ್ಲಿ ಮಾಡುತ್ತಿದ್ದಾರೆ ಮಾನ್ಯ ಪಿ ವಿ ನರಸಿಂಹರಾವ್‌ರವರಿದ್ದಾಗ ಪಾಲ್ ಪೋತನ್‌ರವರು ರಿಟೈರ್ಡ್ ಆದ ಮೇಲೂ ಕೂಡ ಇಫ್ಕೋ ಸಂಸ್ಥೆಗೆ ಅವರನ್ನು ನಾಮ ನಿರ್ದೇಶಕ ಮಾಡಿದ್ದರು ಅವರ ಜೊತೆಯಲ್ಲಿ ಮೂರು ವರ್ಷಗಳ ಕಾಲ ಕೆಲಸ ಮಾಡುವಂಥ ಅವಕಾಶ ನನಗೂ ಲಭಿಸಿತ್ತು ಅವರಿಗೆ ನಮ್ಮ ರಾಜ್ಯದ ಮೇಲೆ ಇದ್ದ ಕಳಕಳಿ ಅವತ್ತೂ ಕೂಡ ಕರೆಂಟ್‌ನ ಬಗ್ಗೆ ಇನ್ನು ಎಷ್ಟು ಪ್ರಾಜೆಕ್ಟ್‌ಗಳನ್ನು ಮಾಡಿದ್ದೀರಿ, ಇದೆಲ್ಲಾ

ಕೇಳುತ್ತಿದ್ದರು ಅವರು ಕನ್ನಡದಲ್ಲಿ ಬಹಳ ಸ್ವಚ್ಛವಾಗಿ ಮಾತನಾಡುತ್ತಿದ್ದರು ಇಂಥ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿರುವವರಲ್ಲಿ ಈಗ ಇತ್ತೀಚಿನ ದಿನಗಳಲ್ಲಿ ಸಹಕಾರಿ ರಂಗದಲ್ಲಿ ಎಲ್ಲಾ ಬೊಟ್ಟು ಮಾಡಿ ತೋರಿಸುವಂಥದ್ದು ಇದ್ದರೂ ಕೂಡ ಇವರು ಕಟ್ಟಿದಂಥ ಆ ಸಹಕಾರ ಸಂಘಗಳು ಇವತ್ತು ಮೂವತ್ತಮೂರು ವರ್ಷಗಳಿಂದಲೂ ಲಾಭದಲ್ಲೇ ನಡೆಯುತ್ತಿವೆ ಮೂವತ್ತಮೂರು ವರ್ಷಗಳಿಂದಲೂ ಕೂಡ ಡಿವಿಡೆಂಡನ್ನು ಕೊಡುತ್ತಾರೆ ಈ ಸಾರಿ ಕೂಡ ಹಿಂದೆ ನಾನು ಅದರ ಅಧ್ಯಕ್ಷನಾಗಿದ್ದೆ ಅವರು ಹಾಕಿದ ಆ ತಳಪಾಯ ನಿಜವಾಗಲೂ ಕೂಡ ಸ್ಮರಣೀಯ ಏನಾಗುತ್ತದೆ ಎಂದರೆ ಕೆಲವು ಅಧಿಕಾರಿ ವರ್ಗದವರು ಎಲ್ಲರೂ ಎಂದು ನಾನು ಹೇಳುವುದಿಲ್ಲ ಕೆಲವರು ಅವರು ಸ್ವತಃ ಸ್ವರ್ಗದಿಂದಲೇ ಬಂದ ಹಾಗೆ ಅಧಿಕಾರ ಸಿಕ್ಕಿದಾಗ ಯೋಚನೆಯನ್ನು ಮಾಡುತ್ತಾರೆ ಅವರ ತಾಯಿಯ ಊಂಬ್‌ನಿಂದ ಬಂದಿರುವುದನ್ನು ಮರೆತೇಬಿಟ್ಟಿರುತ್ತಾರೆ ಅಂಥ ಪರಿಸ್ಥಿತಿಯಲ್ಲಿ ಇವರು ಒಬ್ಬ ಟೆಕ್ನೋಕ್ರಾಫ್ಟ್ ಆಗಿ ಇವತ್ತು ಇಡೀ ದೇಶ, ಇಡೀ ಪ್ರಪಂಚದ ಗಮನವನ್ನು ಸೆಳೆದಂಥವರು ಇವರು ಮೊನ್ನೆ ತೀರಿಕೊಂಡಿದ್ದರಿಂದ ನಿಜವಾಗಲೂ ಕೂಡ ಇದೊಂದು ದೊಡ್ಡ ಅಘಾತ, ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು 77ನೇ ಇಸವಿಯಲ್ಲಿ, ಏನು ಸರ್ಕಾರ ಕೊಟ್ಟಿದೆ ಇಂಥವರನ್ನು ನಾವು ಕಳೆದುಕೊಂಡಿದ್ದೇವೆ ಇವರು ಸಹಕಾರಿ ವ್ಯವಸ್ಥೆಯಲ್ಲಿ ಬಹಳಷ್ಟು ಚಿಂತನೆಯನ್ನು ಇಟ್ಟುಕೊಂಡಂಥವರು ಶ್ರೀಮತಿ ಇಂದಿರಾಗಾಂಧಿಯವರು ಅವರ ಜಮೀನನ್ನು ಕಾರ್‌ಡೇಟ್‌ಗೆ ಕೊಟ್ಟಿದ್ದರು ಆ ಜಮೀನನ್ನು ನಾನು ಹೋದಾಗೆಲ್ಲ, ನಾನು ಅಧ್ಯಕ್ಷನಾದ ಮೇಲೆ ಕೇರಳಕ್ಕೆ ಹೋಗಿ ಅವರನ್ನು ನೋಡಲು ಹೋಗಿದ್ದೆ ಆ ಜಮೀನನ್ನು ಏನೇನು ಮಾಡಿದ್ದೀರಿ, ಅದನ್ನು ಯಾವ ರೀತಿ ರೈತರಿಗೆ ಉಪಯೋಗವಾಗುವ ಹಾಗೆ ಮಾಡಿದ್ದಾರೆ ಎನ್ನುವುದನ್ನೆಲ್ಲಾ ನೋಡಿಕೊಂಡು ಬರುವ ಆ ಕಾಳಜಿ ಇಳಿವಯಸ್ಸಿನಲ್ಲೂ ಕೂಡ ಅವರಿಗೆ ಇತ್ತು ಆ ರೀತಿ ಕಾಳಜಿ ಇದ್ದ ಮಾನ್ಯ ಪಾಲ್ ಪೋತನ್ ಅವರು ತೀರಿಕೊಂಡಿರುವುದರಿಂದ ನಿಜವಾಗಲೂ ಕೂಡ ರಾಷ್ಟ್ರಕ್ಕೆ ಒಂದು ತುಂಬಲಾರದ ನಷ್ಟವುಂಟಾಗಿದೆಯೆಂದು ಹೇಳುತ್ತಾ ಇವತ್ತೂ ಕೂಡ ಆ ಸಂಸ್ಥೆಗಳು ನಡೆಯಬೇಕಾದರೆ ಈಗಿರುವಂಥ ಮ್ಯಾನೇಜಿಂಗ್ ಡೈರೆಕ್ಟರ್ ಕೂಡ ಅಷ್ಟೇ ಚೆನ್ನಾಗಿ ನಡೆಸುತ್ತಾರೆ ಹಾಗಾಗಿ ಆ ತಳಪಾಯವನ್ನು ಒಂದು ಸಾರಿ ಸರಿಯಾಗಿ ಹಾಕಿದರೆ ಇಡೀ ದೇಶಕ್ಕೆ ತೋರಿಸುವ ಮಾರ್ಗದರ್ಶನವನ್ನು ಕೊಟ್ಟ ಪಾಲ್ ಪೋತನ್ ಅವರೂ ಕೂಡ ಸ್ಮರಣೀಯ ಎಂದು ಹೇಳುತ್ತಾ ಮಾನ್ಯ ಅಧ್ಯಕ್ಷರು ಏನು ಸಂತಾಪ ಸೂಚನೆಯನ್ನು ಸೂಚಿಸಿದ್ದಾರೆ, ಅದಕ್ಕೆ ನಾನು ನನ್ನ ಸಹಮತವನ್ನು ಕೊಡುತ್ತ ನನ್ನ ಮಾತನ್ನು ಮುಗಿಸುತ್ತೇನೆ

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂಥ ಈ ಸಂತಾಪ ಸೂಚನೆ ಇಷ್ಟೊ ಮತ್ತು [illegible]

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದಂಥ ಶ್ರೀ ಪಾಲ್ ಪೋತನ್ ಅವರು ನಿಧನರಾಗಿದ್ದಾರೆ, ಮತ್ತೆ ಕರ್ನಾಟಕ ಜೋಗಜಲಪಾತದ ವಿದ್ಯುತ್ ಉತ್ಪಾದನೆ ಮಾಡಲು ಅವರು ಇಂಜಿನಿಯರಾಗಿ ಸೇವೆಯನ್ನು ಸಲ್ಲಿಸಿದ್ದರು ಪದ್ಮಶ್ರೀ ಪ್ರಶಸ್ತಿಯನ್ನು ಕೂಡ ಪಡೆದಿದ್ದರು ಅವರ ಆತ್ಮಕ್ಕೆ ಶಾಂತಿ ಕೋರುವಂಥದ್ದು, ಅವರ ಕುಟುಂಬಕ್ಕೆ ಒಂದು ದೊಡ್ಡ ಸೇವೆ ಮಾಡಿದಂಥ ವ್ಯಕ್ತಿಗೆ ಈ ದು ಖವನ್ನು ತಡೆಯುವಂಥ ಶಕ್ತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಮತ್ತೆ ಇನ್ನೊಂದು ತಾವು ಅಪಾರ್ಥ ಮಾಡಿಕೊಳ್ಳದಿದ್ದರೆ ದಯಮಾಡಿ ಸಂತಾಪ ಸೂಚನೆಯನ್ನು ತರುವುದಕ್ಕೆ ಮುಂಚೆ ತಾವು ಹತ್ತು ಬಾರಿ ಯೋಚನೆಯನ್ನು ಮಾಡಬೇಕಾಗುತ್ತದೆ ಒಂದು ಬಾರಿ ನೀವೇನಾದರೂ ಈ ಪದ್ಧತಿಯನ್ನು ತಂದುಬಿಟ್ಟರೆ ನನಗನ್ನಿಸುತ್ತದೆ, ಬಹಳ ಇಕ್ಕಟ್ಟಿಗೆ ನೀವು ಸಿಕ್ಕಿಕೊಳ್ಳುತ್ತೀರಿ, ನಮ್ಮ ರಾಜ್ಯದ ಅನೇಕ ಗೌರವಾನ್ವಿತ ದೊಡ್ಡ ದೊಡ್ಡ ಹಿರಿಯ ಸಾಹಿತಿಗಳು, ದೊಡ್ಡ ದೊಡ್ಡ ಹಿರಿಯ ವ್ಯಕ್ತಿಗಳು ನಿಧನರಾದಾಗ ಸಂತಾಪ ಸೂಚನೆಯನ್ನು ಮಾಡುವುದಕ್ಕೆ ತಮ್ಮ ಕೊಠಡಿಯಲ್ಲಿ ಹತ್ತು ಸಾರಿ ಚರ್ಚೆಯನ್ನು ಮಾಡಿ ಕೊನೆಗೆ ಒಟ್ಟಾಗಿ ಸೇರಿ ತರುತ್ತೇವೆ ನೀವೇನಾದರೂ ಈ ಪದ್ಧತಿಯನ್ನು ಹಾಕಿಕೊಂಡು ಬಿಟ್ಟರೆ ನಾಳೆ ಯಾವ ಅಪಾದನೆಗೆ ಈ ಮನೆ ಗುರಿಯಾಗಬೇಕಾಗುತ್ತದೆ ಎಂದರೆ ಏನಪ್ಪ ಇವತ್ತು ಯಾರೋ ಒಬ್ಬರು ಸೇವೆ ಸಲ್ಲಿಸಿದಂಥ ಇಂಜಿನಿಯರ್‌ಗೆ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದಿದ್ದರು ಎಂದು ಸಂತಾಪ ಸೂಚನೆಯನ್ನು ತಂದಿರಿ, ಆದರೆ ಉಳಿದ ಅತಿರಥ ಮಹಾರಥ ಗಣ್ಯವ್ಯಕ್ತಿಗಳು ದೈವಾಧೀನರಾದಾಗ ಕರ್ನಾಟಕದಲ್ಲಿ ಇದರ ಪ್ರಸ್ತಾಪವೇ ಆಗಲಿಲ್ಲ ಎನ್ನುವಂಥದ್ದು ಇದೊಂದು ಕೆಟ್ಟ ಸಂಪ್ರದಾಯವಾಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ ನಾನು ನಿಮ್ಮನ್ನು ಪ್ರಶ್ನೆ ಮಾಡುತ್ತಿಲ್ಲ ತಾವು ಏನು ಹೇಳುತ್ತೀರಿ, ಅದಕ್ಕೆ ಗೌರವವನ್ನು ಕೊಡುತ್ತೇವೆ ಆದರೆ ಕೊಠಡಿಯಲ್ಲೇ ಬಂದು ನಾನು ಹೇಳಬಹುದಾಗಿತ್ತು ಆದರೆ ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ ದಯಮಾಡಿ ಇನ್ನು ಮುಂದೆ ಇದರ ಬಗ್ಗೆ ಬಹಳ ಎಚ್ಚರಿಕೆಯಿಂದ ಸಮಾಲೋಚನೆ ಮಾಡಿ ಇದನ್ನು ತರಬೇಕೇ ಹೊರತು ಇಲ್ಲದಿದ್ದರೆ ಮುಂದೆ ನೀವೇ ಇಕ್ಕಟ್ಟಿಗೆ ಸಿಲುಕಿಕೊಳ್ಳುತ್ತೀರಿ ಈ ಮನೆ ಇಕ್ಕಟ್ಟಿಗೆ ಸಿಲುಕಿಕೊಳ್ಳಬೇಕಾಗುತ್ತದೆ ಇಷ್ಟು ಮಾತ್ರ ನಾನು ಈ ಸಂತಾಪ ಸೂಚನೆಗೆ ಬೆಂಬಲ ಕೊಡುವುದು, ಅವರು ಬಹಳ ಹಿರಿಯರಿದ್ದಾರೆ, ಅದರ ಬಗ್ಗೆ ಎರಡು ಮಾತಿಲ್ಲ ಆದರೆ ದಯಮಾಡಿ ತಾವು ಮುಂದೆ ಈ ರೀತಿ ತರುವುದಕ್ಕೆ ಮುಂಚೆ ಹತ್ತು ಸಾರಿ ಯೋಚನೆ ಮಾಡಿ ಸಂತಾಪ ಸೂಚನಾ ನಿರ್ಣಯಗಳನ್ನು ತರಬೇಕೆಂದು ಈ ಸ್ಥಾನದಲ್ಲಿ ನಿಂತು ನನ್ನ ಜವಾಬ್ದಾರಿ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತೇನೆ ಸರ್ಕಾರ ಅದನ್ನು ಒಪ್ಪಿಕೊಳ್ಳುತ್ತದೆ ಎಂದು ತಿಳಿದುಕೊಂಡಿದ್ದೇನೆ I am sorry sir ಇನ್ನು ಮುಂದೆ ಈ ರೀತಿಯದು ಆಗಬಾರದು

**ಅಧ್ಯಕ್ಷರು** ಎಲ್ಲರೂ ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ

(ಸದನದ ಎಲ್ಲಾ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

**ಅಧ್ಯಕ್ಷರು** ಮಾನ್ಯ ಯಡಿಯೂರಪ್ಪನವರು ಏನು ಹೇಳಿದರು, ಅದರ ಬಗ್ಗೆ ಈ ಪಾಲ್ ಪೋತನ್ ಅವರು ನಿಧನರಾಗಿರುವುದನ್ನು ನನ್ನ ಗಮನಕ್ಕೆ ಮಾನ್ಯ ಕೃಷಿ ಸಚಿವರು ತಂದರು ಇಂಧ ಸಂಪ್ರದಾಯ ಹಿಂದೆ ಆಗಿದೆಯೇ ಎಂದು ನನ್ನ ಕಾರ್ಯದರ್ಶಿಯ ಗಮನಕ್ಕೆ ತಂದಾಗ ಆಗಿದೆ ಎಂದು ಹೇಳಿದ ಮೇಲೆ ಆ ರೀತಿ ಆಗಿದ್ದರೆ ಇದನ್ನು ಹಾಕಿಕೊಳ್ಳಿ ಎಂದು ನಾನು ಹೇಳಿದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಸರ್ಕಾರವನ್ನು ಕೇಳಿ

**ಅಧ್ಯಕ್ಷರು** ಯಾವ ರೀತಿ ಏನು ಎಂದು ಸ್ಪಷ್ಟವಾಗಿ ಚರ್ಚೆ ಮಾಡಿ ಮುಂದೆ ಮಾಡೋಣ

**ಶ್ರೀ ಬಿ ಎಸ್ ಯಡಿಯೂರಪ್ಪ** ಚರ್ಚೆ ಬೇಡಿ ಗಮನಿಸೋಣ

**ಅಧ್ಯಕ್ಷರು** ಈಗ ಪ್ರಶ್ನೋತ್ತರ

## 2 ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

### ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಪ್ರಕರಣಗಳ ಬಗ್ಗೆ

106(682) ಶ್ರೀ ರಾಜೇಂದ್ರ ವರ್ಮ (ಹುಲಸೂರ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಲಸೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಯಾವ ಯಾವ ರಸ್ತೆ ಕಾಮಗಾರಿಗಳನ್ನು ಸರ್ಕಾರ ಕೈಗೊಂಡಿರುವುದು,

ಅ) ಈಗಾಗಲೇ ಕೈಗೊಂಡಿರುವ ಅಪೂರ್ಣಗೊಂಡಿರುವ ರಸ್ತೆ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ಹಾಗೂ ಅವುಗಳ ಅಂದಾಜು ವೆಚ್ಚವೆಷ್ಟು, (ವಿವರ ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹುಲಸೂರು ಮತಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ

ಆ) ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಹಾಲಿ ಪ್ರಗತಿಯಲ್ಲಿರುವ ಮದಗಟ್ಟಿ ಕ್ರಾಸ್‌ನಿಂದ ಗೋರ್ಟ ಮುಚಲಮ್ ಮಾರ್ಗ ಬಸವಕಲ್ಯಾಣ ರಸ್ತೆ ಅಭಿವೃದ್ಧಿ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ (ಅಂದಾಜು ರೂ 100 ಲಕ್ಷ ಮತ್ತು ವೆಚ್ಚ ರೂ 50 00 ಲಕ್ಷಗಳು)

## ಅನುಬಂಧ

| ಕ್ರ ಸಂ | ರಸ್ತೆಯ ಹೆಸರು | ಉದ್ದ ಕಿಮೀ | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) |
|---|---|---|---|
| 1 | ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಭಾಲ್ಕಿ ಶಾಹಾಜಾನಿ ಔರದ ರಸ್ತೆಯ ಗೌಡರತೋಳಿ ಕ್ರಾಸ್‌ದಿಂದ ಹುಲಸೂರ ವರೆಗಿನ ಜಿಲ್ಲಾ ಮುಖ್ಯ ರಸ್ತೆ ಕಿಮೀ 16 70 ರಿಂದ 22.50 ರವರೆಗೆ ಸುಧಾರಣೆ ಕಾಮಗಾರಿ | 5 80 | 65 00 |
| 2 | ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಮದಕಟ್ಟಿ ಕ್ರಾಸ್‌ನಿಂದ ಗೊರ್ಟ ಮುಚಲಮ್ ಮಾರ್ಗ ಬಸವಕಲ್ಯಾಣ ರಸ್ತೆ ಅಭಿವೃದ್ಧಿ | 8.00 | 100.00 |
| 3 | ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಹುಮನಾಬಾದ್–ಬಾಲ್ಕಿ ರಸ್ತೆ ಅಭಿವೃದ್ಧಿ (ದಡಗಿ ಕ್ರಾಸ್, ಜಲಸಿಂಗಿ, ದುಬಲಗುಂಡಿ, ಕಟಕ್, ಚಿಂಚೋಳಿ ಕ್ರಾಸ್, ಎಂಕೂರ್, ಖೆಲಗಿ ಕ್ರಾಸ್ ಮಾರ್ಗ) | 13.80 | 150.00 |
| 4 | ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಕಟ್ಟಿತುಂಗಾವ್ ಕ್ರಾಸ್‌ನಿಂದ ಹಂದಿಕೆರ ರಸ್ತೆ ಅಭಿವೃದ್ಧಿ (ಚಲಕಪುರ, ಜಿಟ್ಟಿ ಕಟಕ್, ಚಿಂಚೋಳಿ, ಸುಲ್ತಾನ್ ಬಡವಾಡಿ ಮಾರ್ಗ) | 21 00 | 250 00 |
| | **ಒಟ್ಟು** | **48 60** | **565 00** |
| 5 | ನಬಾರ್ಡ್ ಆರ್ ಐ ಡಿ ಎಫ್ IX ರಡಿ ಧನ್ನೂರ (ಕೆ) ಘಾಟ ಬೋರಾಳ ರಸ್ತೆ ಅಭಿವೃದ್ಧಿ | 10.00 | 95.00 |
| 6 | ದುಬಲಗುಂಡಿ ಕಿವಾಡಿ ಕ್ರಾಸ್ ರಸ್ತೆ ಅಭಿವೃದ್ಧಿ | 4.00 | 20.00 |
| 7 | ಚಿಲಕಾಪುರ–ಹಳ್ಳಿಖೇಡ್ ರಸ್ತೆ ಅಭಿವೃದ್ಧಿ | 3.00 | 20.00 |
| 8 | ಮುರಂಬಿ–ಆರ್ ಗೌಡಗಾಂ ರಸ್ತೆ ಅಭಿವೃದ್ಧಿ | 2.00 | 17.00 |
| 9 | ಕುಮಾರ ಚಿಂಚೋಳಿ–ಹಂದಿಕೇರಾ ರಸ್ತೆ ಅಭಿವೃದ್ಧಿ | 3.00 | 33.50 |
| | ಒಟ್ಟು | 22.00 | 185.50 |

ಶ್ರೀ ರಾಜೇಂದ್ರ ವರ್ಮಾ ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿರತಕ್ಕದ್ದು ನಾಲ್ಕು ವರ್ಷಗಳ ಹಿಂದೆ ಮಂಜೂರಾಗಿರತಕ್ಕ ರಸ್ತೆಗಳ ಬಗ್ಗೆ ಉತ್ತರ ಕೊಟ್ಟಿದ್ದಾರೆ ಅವು ಇನ್ನೂ ಯಾವುದೂ ಅದರಲ್ಲಿ ಪ್ರಾರಂಭವಾಗಿಲ್ಲ

ಎರಡನೆಯದಾಗಿ ನನ್ನ ಕ್ಷೇತ್ರದಲ್ಲಿ ಒಟ್ಟು 80 ಕಿಲೋ ಮೀಟರ್ ರೋಡ್ ಆಗಬೇಕಾಗಿದೆ ಈ ರಸ್ತೆಗಳ ಮೇಲೆ ಅನೇಕ ಮಹಿಳೆಯರು, ಡೆಲಿವರಿ ಕೇಸಿಗಾಗಿ ಭಾಲ್ಕಿ, ಬಸವಕಲ್ಯಾಣ–ಹುಮ್ನಾಬಾದ್, ಗ್ರಾಮದಿಂದ ಬಸ್‌ನಲ್ಲಿ ಹೋಗಬೇಕಾಗಿದೆ ತಗ್ಗು ಮತ್ತು ಗುಂಡಿ ಇರತಕ್ಕ ಜಾಗಗಳಲ್ಲೂ ಬಸ್ ಜಂಪ್ ಆಗಿ ಹೋಗುವಂತಹ ಸಮಯದಲ್ಲಿ ಎಷ್ಟೋ ಹೆರಿಗೆಗೆ ಹೋಗತಕ್ಕ ಮಹಿಳೆಯರಿಗೆ ಬಿಪಿ ಹೈಯೆಸ್ಟ್ ಆಗಿ ಸತ್ತಿರುವಂತಹ ಉದಾಹರಣೆಗಳು ಇದ್ದಾವೆ ಜೊತೆಗೆ ನನ್ನ ಕ್ಷೇತ್ರದಲ್ಲಿ ಮಾನ್ಯ ಸಚಿವರು ಯಾವಾಗಲಾದರೂ ಪ್ರವಾಸ ಮಾಡಿದಂತಹ ಸಂದರ್ಭದೊಳಗೆ ಅನೇಕ ಸಾರಿ ಮಂತ್ರಿಗಳು ಸೊಂಟ ನೋವಿನಿಂದ ಪ್ರವಾಸಗಳನ್ನು ರದ್ದು ಮಾಡಿಕೊಂಡು ವಾಪಸ್ ಬಂದಂತಹ ಉದಾಹರಣೆ ಇದ್ದಾವೆ ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳಿಗೆ ಒತ್ತಾಯ ಮಾಡುವುದು ಏನೆಂದರೆ ಇವು ಅಂತರ ರಾಜ್ಯದ ರಸ್ತೆ ಆಗಿವೆ ಮಾವಿನಾಡಿ ಕ್ರಾಸ್‌ನಿಂದ ಹೊರವಟ್ಟಿ ಗ್ರಾಮದವರೆಗೆ ಅಂತರ ರಾಜ್ಯ ರಸ್ತೆ ಹೊರವಟ್ಟಿ ಅಂದರೆ ನಮ್ಮ ಮಾನ್ಯ ಖರ್ಗೆ ಸಾಹೇಬರು ಹುಟ್ಟಿದಂತಹ ಊರು ಆ ಗ್ರಾಮಕ್ಕೆ ಇಲ್ಲಿಯವರೆಗೆ ರೋಡ್ ಆಗಿಲ್ಲ ಜೊತೆಯಲ್ಲಿ ಮುಣಕ್ ನಗರದಿಂದ ಖೋಡವಾಡಿವರೆಗೆ, ಹಳ್ಳಿಕೇಡ್ (ಬಿ) ಗ್ರಾಮದಿಂದ ಧೂಳುಗುಂಡಿ ಕ್ರಾಸ್‌ವರೆಗೆ, ಕೇಸಿಪ್ ಜೋಳದ ಕ್ರಾಸ್‌ನಿಂದ ಒಳಹಂಣಿ ಗ್ರಾಮದವರೆಗ, ಮಹಾರಾಷ್ಟ್ರದ ಗಡಿ ಭಾಗಕ್ಕೆ, ಒಟ್ಟು 80 ಕಿಲೋ ಮೀಟರ ರಸ್ತೆ ಆಗುವುದು ಬಾಕಿ ಉಳಿದಿದೆ ದಯವಿಟ್ಟು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಆ ಹುಲಸೂರು ಕ್ಷೇತ್ರ ಅತೀ ಹಿಂದುಳಿದಿರತಕ್ಕಂಥ ಪ್ರದೇಶ ಗಡಿ ಭಾಗದಲ್ಲಿ ಇರತಕ್ಕದ್ದು ಈ ಸರ್ಕಾರ ಬಂದು ಮೂರು ತಿಂಗಳಾಯಿತು ಇನ್ನು ಯಾವುದೇ ರಸ್ತೆ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಮಾನ್ಯ ಮಂತ್ರಿಗಳಿಗೆ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ ದಯವಿಟ್ಟು 80 ಕಿಲೋ ಮೀಟರ್ ರಸ್ತೆ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕು ಮತ್ತು ಹಣ ಮಂಜೂರು ಮಾಡಬೇಕೆಂದು ಕೇಳುತ್ತಿದ್ದೇನೆ

**ಶ್ರೀ ಹೆಚ್ ಡಿ ರೇವಣ್ಣ (ಇಂಧನ ಮತ್ತು ಲೋಕೋಪಯೋಗಿ ಸಚಿವರು)** ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರಲ್ಲಿ ಯಾವ ರಸ್ತೆ ಅತಿ ಅವಶ್ಯಕತೆ ಇದೆ ಎನ್ನುವುದರ ಬಗ್ಗೆ ನಾನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಪಡುತ್ತೇನೆ ಅದರ ಜೊತೆಗೆ ಈಗಾಗಲೇ ರಾಜ್ಯದಲ್ಲಿ ಬರುವಂತಹ ಕೆಲವು ಎಂಡಿಆರ್ ರಸ್ತೆಗಳು ಇರಬಹುದು ಅಥವಾ ರಾಜ್ಯ ಹೆದ್ದಾರಿ ರಸ್ತೆ ಇರಬಹುದು ಈಗಾಗಲೇ ಗುಂಡಿ ಮುಚ್ಚುವಂತಹ ಕ್ರಮವನ್ನು ತೆಗೆದುಕೊಂಡಿದ್ದೇವೆ ಅದಕ್ಕೆ ಹಣವನ್ನೂ ಬಿಡುಗಡೆ ಮಾಡಿದ್ದೇವೆ

## ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸಂಚರಿಸುವ ಬಸ್ಸುಗಳ ನಿಲುಗಡೆ

109 (476) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ಬಸ್ ನಿಲ್ದಾಣಕ್ಕೆ ಬಾರದೇ ಹೋಗುತ್ತಿರುವುದರಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು,

ಆ) ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸಂಚರಿಸುವ ಎಲ್ಲಾ ಕೆ ಎಸ್ ಆರ್ ಟಿ ಸಿ ಬಸ್ಸುಗಳನ್ನು ಬ್ರಹ್ಮಾವರದಲ್ಲಿ ನಿಲುಗಡೆಗೊಳಿಸುವಂತೆ ಆದೇಶ ಮಾಡಲಾಗುವುದೇ,

ಇ) ಉಡುಪಿ ಮತ್ತು ಕುಂದಾಪುರದ ನಡುವೆ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ನಿಲ್ದಾಣಗಳಿಗೆ ಬಂದು ಪ್ರಯಾಣಿಕರನ್ನು ಹತ್ತಿಸಿಕೊಂಡು / ಇಳಿಸಿ ಸಂಚಾರ ನಿಯಂತ್ರಕರ ಸಹಿಯನ್ನು ಪಡೆದುಕೊಂಡು ಆಚರಣೆಗೊಳ್ಳುವಂತೆ ಅವಶ್ಯ ಕ್ರಮವನ್ನು ತೆಗೆದುಕೊಳ್ಳಲಾಗಿದೆ

ಆ) ದೂರ ಮಾರ್ಗದ ಆಚರಣೆಯನ್ನು ಹೊರತುಪಡಿಸಿ, ಹತ್ತಿರ ಮಾರ್ಗಗಳಲ್ಲಿ ಸಂಚರಿಸುವ ಬಸ್ಸುಗಳಿಗೆ ನಿಲುಗಡೆ ಕಲ್ಪಿಸಲಾಗಿದೆ.

ಇ) ಅವಶ್ಯಕತೆಯನ್ನು ಅನುಸರಿಸಿ ಕ್ರಮ ವಹಿಸಲಾಗುವುದು

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಮಾನ್ಯ ಅಧ್ಯಕ್ಷರೆ, ಈಗ ಸರ್ಕಾರಿ ಬಸ್ಸುಗಳು ಎಲ್ಲಾ ಬಸ್ ಸ್ಟ್ಯಾಂಡ್‌ಗಳಿಗೆ ಹೋಗುತ್ತಿವೆ ಎಂದು ಹೇಳಿದಿರಿ ಈಗ ಬ್ರಹ್ಮಾವರ ಬಸ್ ಸ್ಟ್ಯಾಂಡಿಗೆ ಬಸ್ ಬರುತ್ತಿಲ್ಲ ಅದಕ್ಕೇ ಪ್ರಶ್ನೆಯನ್ನು ಕೇಳಿರುವುದು ತಾವು ಅವಶ್ಯಕತೆ ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ ಕೊನೆಯ ಪಕ್ಷ ನೈಟ್ ಬಸ್‌ಗಳು, ಸಾಲಿಗ್ರಾಮದಿಂದ, ಕುಂದಾಪುರದಿಂದ ಹೋಗುವಂತಹ ಬಸ್‌ಗಳಾದರೂ ಬ್ರಹ್ಮಾವರ ಬಸ್ ಸ್ಟ್ಯಾಂಡಿನಲ್ಲಿ ನಿಂತು ಹೋಗುವಂತಹ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಏಕೆಂದರೆ ಅದು ಈಗ ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಆಗಿದೆ ಅದರೊಟ್ಟಿಗೆ ಇನ್ನೊಂದು ಪ್ರಶ್ನೆ, ಸ್ವಲ್ಪ ಈ ಪ್ರಶ್ನೆಗೆ ಹೊರತಾಗಿ ಕೇಳುತ್ತಿದ್ದೇನೆ ಈಗ ಮೆಜಸ್ಟೀರಿಯಲ್ ಆರ್ಡರ್ ಇದೆ ಪ್ರೈವೇಟ್ ಬಸಸ್‌ಗೆ ಟೈಮಿಂಗ್ಸ್ ಜಾಸ್ತಿ ಕೊಡಬಾರದು ಎನ್ನುವಂತಹದು ಇದೆ ಪುನ ಅದನ್ನು ತೆಗೆದು ಹೆಚ್ಚು ಬಸ್‌ಗಳಿಗೆ ಅವಕಾಶ ಕೊಡುತ್ತಾರೆಂದು ಹೇಳಿ ಅದನ್ನು ಮಾಡಬಾರದು ಏಕೆಂದರೆ ಈಗಾಗಲೇ ಒತ್ತಡ ಜಾಸ್ತಿ ಆಗಿದೆ ಈ ಮೆಜಿಸ್ಟೀರಿಯಲ್ ಆರ್ಡರ್ ವಿತ್‌ಡ್ರಾ ಮಾಡಿದರೆ ಮತ್ತೆ ಬಸ್‌ಗಳ ಕಾಂಪಿಟಿಷನ್ ಜಾಸ್ತಿ ಆಗಿ ಅಪಘಾತಗಳು ಜಾಸ್ತಿ ಆಗುತ್ತದೆ ಅದಕ್ಕೋಸ್ಕರ ಮಾನ್ಯ ಸಚಿವರು ದಯವಿಟ್ಟು ಜಿಲ್ಲಾಧಿಕಾರಿಯವರಿಗೆ ಅಥವಾ ಆರ್‌ಟಿಓ ಅವರ್ಯಾರಿಗಾದರೂ ಹೇಳಿ ಇದನ್ನು ಸದ್ಯಕ್ಕೆ ತಡೆ ಹಿಡಿಯಲು ತಾವು ಆದೇಶ ಮಾಡಬೇಕು ಎಂದು ಹೇಳುತ್ತೇನೆ

**ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)** ಮಾನ್ಯ ಅಧ್ಯಕ್ಷರೆ, ಇದರಲ್ಲಿ ತಮಗೆ ಗೊತ್ತಿದ್ದ ಹಾಗೆ ದೂರ ಪ್ರಯಾಣ ಮಾಡತಕ್ಕಂಥ ಬಸಸ್ ನೇರವಾಗಿ ಹೋಗುತ್ತವೆ ಆದರೆ ಸಮೀಪದಲ್ಲಿರತಕ್ಕ ಉಡುಪಿ ಆಗಲಿ, ಕುಂದಾಪುರ ಆಗಲಿ, ಈ ಬಸಸನ್ನು ಹೆಚ್ಚು ಕಡಿಮೆ ಯಾವ ಪ್ಯಾಸೆಂಜರ್ ಟೈಪ್, ಅಲ್ಲಿಂದ ಹೋಗತಕ್ಕದ್ದು ಆಗುತ್ತದೆ ಆದರೆ ತಾವು ಪ್ರತಿ ಒಂದು ಬಸ್ ಅದೇ ಮಾರ್ಗದಲ್ಲಿ ಹೋಗಬೇಕು ಎಂದರೆ ಆವಾಗ ಏನಾಗುತ್ತದೆ ನ್ಯಾಚುರಲಿ ಲಾಂಗ್ ಡಿಸ್ಟೆನ್ಸ್‌ಗೆ ಹೋಗುವವರು ಆಬ್ಜೆಕ್ಟ್ ಮಾಡುತ್ತಾರೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಬರೇ ನೈಟ್ ಬಸಸ್‌ಗೆ ಮಾಡಬಹುದು

**ಶ್ರೀ ಮಲ್ಲಿಕಾರ್ಜುನ ಖರ್ಗೆ** ನೈಟ್ ಬಸಸ್ ಸಹ ಬೊಂಬಾಯಿಗೆ ಹೋಗತಕ್ಕಂಥವು, ಅದವಾ ಬೇರೆ ಕಡೆ ಹೋಗತಕ್ಕಂಥವು ಇರುತ್ತವೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಸಾಲಿಗ್ರಾಮದಿಂದ ಹೋಗತಕ್ಕದ್ದನ್ನು ಬ್ರಹ್ಮಾವರ ಬಸ್ ಸ್ಟ್ಯಾಂಡಿಗೆ ಹೋಗುವ ವ್ಯವಸ್ಥೆ ಮಾಡಬಹುದು

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಸಂಬಂಧಪಟ್ಟಂತಹ ಅಧಿಕಾರಿಗೆ ಈ ಬಗ್ಗೆ ಖಂಡಿತ ಹೇಳುತ್ತೇನೆ.

## ನೀರಾವರಿ ಹಾಗೂ ಲೋಕೋಪಯೋಗಿ ಇಲಾಖೆಗಳ ವಿಲೀನ

110 (747) ಶ್ರೀ ರೇವು ನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರದ ಆದೇಸ ಸಂಖ್ಯೆ ಜಸಂಇ 33 ಸೇಸಕಿ 2001, ಬೆಂಗಳೂರು, ದಿನಾಂಕ 14-11-2003ರಲ್ಲಿ (ಕರ್ನಾಟಕ ರಾಜ್ಯ ಪತ್ರ ದಿನಾಂಕ 01-01-2004 ಭಾಗ-3) ಪ್ರಕಟಿಸಿರುವಂತೆ ನೀರಾವರಿ ಇಲಾಖೆಯನ್ನು ಎರಡು ಇಲಾಖೆಗಳನ್ನಾಗಿ ಹೊಸದಾಗಿ ಸೃಜಿಸಲಾಗಿರುವುದು ನಿಜವೇ,

ಆ) ಬೇರ್ಪಟ್ಟಿರುವ ಈ ಎರಡೂ ಇಲಾಖೆಗಳನ್ನು ಪುನಃ ಒಂದುಗೂಡಿಸಿ ವಿಲೀನಗೊಳಿಸಲು ಸರ್ಕಾರ ಚಿಂತನೆ ನಡೆಸಿದೆಯೇ,

ಇ) ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ನೀರಾವರಿ ಇಲಾಖೆಯನ್ನು ಎರಡು ಇಲಾಖೆಗಳನ್ನಾಗಿ ಹೊಸದಾಗಿ ಸೃಜಿಸಿರುವುದಿಲ್ಲ ಆದರೆ ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 18 ಪಿಸಿಒ 86, ಬೆಂಗಳೂರು ದಿನಾಂಕ 20-10-86ರಲ್ಲಿ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳನ್ನು ಎರಡು ಪ್ರತ್ಯೇಕ ಇಲಾಖೆಗಳೆಂದು ಬೇರ್ಪಡಿಸಲಾಗಿದೆ ಇದರನ್ವಯ ಸರ್ಕಾರದ ಆದೇಶ ಸಂಖ್ಯೆ ಜಸಂಇ 33 ಸೇಸಕಿ 2001, ಬೆಂಗಳೂರು, ದಿನಾಂಕ 14-11-2003ರಲ್ಲಿ ನೀರಾವರಿ ಇಲಾಖೆಗೆ ಖಾಯಂ ಆಗಿ ವರ್ಗಾಯಿಸಿ, ನೇಮಕಗೊಂಡ ಸಹಾಯಕ ಇಂಜಿನಿಯರ್‌ಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ

ಆ) ಸರ್ಕಾರದ ಮುಂದೆ ಇಂಥ ಪ್ರಸ್ತಾವನೆ ಇಲ್ಲ

ಇ) ಉದ್ಭವಿಸುವುದಿಲ್ಲ

**ಶ್ರೀ ರೇವುನಾಯಕ್ ಬೆಳಮಗಿ** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ ನಾನು ಕೇಳಿದ್ದು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಜಸಂಇ-33-ಸೇಸಕಿ-2001, ಬೆಂಗಳೂರು ದಿನಾಂಕ 14-11-2003ರಲ್ಲಿ (ಕರ್ನಾಟಕ ರಾಜ್ಯ ಪತ್ರ ದಿನಾಂಕ 1-01-2004, ಭಾಗ-3) ಪ್ರಕಟಿಸಿದಂತೆ ನೀರಾವರಿ ಇಲಾಖೆಯನ್ನು ಎರಡು ಇಲಾಖೆಗಳನ್ನಾಗಿ ಹೊಸದಾಗಿ ಸೃಜಿಸಲಾಗಿರುವುದು ನಿಜವೇ ಎಂದು ಪ್ರಶ್ನೆ ಕೇಳಿದ್ದೆ ಅವರು ಉತ್ತರ ಕೊಟ್ಟಿದ್ದಾರೆ ನೀರಾವರಿ ಇಲಾಖೆಯಿನ್ನು ಎರಡು ಇಲಾಖೆಗಳನ್ನಾಗಿ ಹೊಸದಾಗಿ ಸೃಜಿಸಿರುವುದಿಲ್ಲ

ಆದರೆ ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 18 ಪಿಸಿಓ 86, ಬೆಂಗಳೂರು ದಿನಾಂಕ 20-10-86ರಲ್ಲಿ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳನ್ನು ಎರಡು ಪ್ರತ್ಯೇಕ ಇಲಾಖೆಗಳೆಂದು ಬೇರ್ಪಡಿಸಲಾಗಿದೆ ಇದರನ್ವಯ ಸರ್ಕಾರದ ಆದೇಶ ಸಂಖ್ಯೆ ಜಸಂಇ 33 ಸೇಸಕಿ 2001, ಬೆಂಗಳೂರು ದಿನಾಂಕ 14-11-2003ರಲ್ಲಿ ನೀರಾವರಿ ಇಲಾಖೆಗೆ ಖಾಯಂ ಆಗಿ ವರ್ಗಾಯಿಸಿ ನೇಮಕಗೊಂಡ ಸಹಾಯ ಇಂಜಿನಿಯರುಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಅವರು ಹೇಳಿದ್ದಾರೆ ನಾನು ಮತ್ತೆ ಬೇರ್ಪಟ್ಟಿರುವ ಈ ಎರಡೂ ಇಲಾಖೆಗಳನ್ನು ಪುನಃ ಒಂದುಗೂಡಿಸಿ ವಿಲೀನಗೊಳಿಸಲು ಸರ್ಕಾರದ ಚಿಂತನೆ ನಡೆಸಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ ಮಾನ್ಯ ಸಚಿವರು ಸರ್ಕಾರದ ಮುಂದೆ ಇಂಥ ಪ್ರಸ್ತಾವನೆ ಇಲ್ಲ ಎಂದು ಹೇಳಿದ್ದಾರೆ, ನಾನು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಎಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ

**ಅಧ್ಯಕ್ಷರು** ಮಾನ್ಯ ರೇವು ನಾಯಕ್ ಅವರೇ, ನೀವು ಏನು ಕೇಳಬೇಕು ಅದನ್ನು ಕೇಳಿ ನಿಮ್ಮ ಉದ್ದೇಶ ಏನು ಇದೆ? ನಿಮ್ಮ ಪ್ರಶ್ನೆ ಏನು ಇದೆ, ಅದನ್ನು ಕೇಳಿ

**ಶ್ರೀ ರೇವು ನಾಯಕ್ ಬೆಳಮಗಿ** ಸಾರ್ ನನ್ನದು ಇಷ್ಟೆ ಪ್ರಶ್ನೆ ಇದು ಸಣ್ಣ ನೀರಾವರಿ ದೊಡ್ಡ ನೀರಾವರಿ ಎಂದು ಬಿರುದು ಅಂಟಿಸಿ ಏನು ಡಿಪಾರ್ಟ್‌ಮೆಂಟನ್ನು ಎರಡು ಮೂರು ಮಾಡುತ್ತಾರೆ ಅದಕ್ಕೆ ಎಲ್ಲಾ ಕಾರ್ಯದರ್ಶಿಗಳು ಒಂದೇ ಇರಬೇಕು ಒಂದೇ ಡಿಪಾರ್ಟ್‌ಮೆಂಟ್ ಇದ್ದರೆ ಸರ್ಕಾರಕ್ಕೆ ಉಳಿತಾಯ ಆಗುತ್ತದೆ ಮತ್ತು ಸಉಲಭವಾಗಿ ಕೆಲಸ ಆಗುತ್ತದೆ ಎಂಬುದು ನನ್ನ ಪ್ರಶ್ನೆ ಇದು ಬೇರೆ ಬೇರೆ ವಿಂಗಡಣೆ ಆಗಿದೆ ಚೀಫ್ ಇಂಜಿನಿಯರ್ ಆಗಲಿ, ಕಾರ್ಯದರ್ಶಿಯಾಗಲೀ, ಪಿಡಬ್ಲ್ಯೂಡಿ ಆಗಲಿ ಸಣ್ಣ ನೀರಾವರಿ, ದೊಡ್ಡ ನೀರಾವರಿ ಎಂದು ಮಾಡಿದ್ದಾರೆ ನನ್ನ ಉದ್ದೇಶ ಇಷ್ಟೆ. ಎಲ್ಲಾ ಒಂದೇ ಇದ್ದರೆ ಸರ್ಕಾರಕ್ಕೆ ಉಳಿತಾಯನೂ ಆಗುತ್ತದೆ ಕೆಲಸನೂ ಸುಲಭ ಆಗುತ್ತದೆ ಎಂಬುದು ನನ್ನ ಪ್ರಶ್ನೆ ಅಧ್ಯಕ್ಷರೆ

**ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು)** ಮಾನ್ಯ ಅಧ್ಯಕ್ಷರೆ, ಅವರು ಕೇಳಿದಂತಹ ಪ್ರಶ್ನೆ ಪ್ರಮುಖವಾಗಿ ನೀರಾವರಿ ಇಲಾಖೆಯಲ್ಲೀ ಎರಡು ಇಲಾಖೆ ಇದೆ ಅಂದರೆ ಅವರ ಉದ್ದೇಶ ಏನು ಅಂದರೆ ಸಣ್ಣ ನೀರಾವರಿ ಇಲಾಖೆ ಮತ್ತು ದೊಡ್ಡ ನೀರಾವರಿ ಇಲಾಖೆ ಎನ್ನತಕ್ಕಂಥ ಎರಡು ಭಾಗಗಳು ಇವೆ ಎನ್ನತಕ್ಕದ್ದು ಒಂದು ಎರಡನೆಯದು ಈ ಪಿಡಬ್ಲ್ಯೂಡಿ ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟ್ ಎರಡೂ ಕೂಡಿ ಇವತ್ತೂ ಇದೆಯೇನೋ ಹೇಗೆ ಎನ್ನತಕ್ಕದ್ದನ್ನು ಅವರು ಕೇಳಿದ್ದಾರೆ. ಅದಕ್ಕೆ ನಾವು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇವೆ. ಏಕೆಂದರೆ ಈ ಪಿಡಬ್ಲ್ಯೂಡಿ ಮತ್ತು ಇರಿಗೇಷನ್ ಡಿಪಾರ್ಟ್‌ಮೆಂಟ್ ಇವೆರಡನ್ನೂ ಬೇರ್ಪಡಿಸಿದ್ದೇವೆ 1986ರಲ್ಲಿಯೇ ಬೇರ್ಪಟ್ಟಿದೆ ಮತ್ತು ಅದೇ ರೀತಿಯಾಗಿ ಅಲ್ಲಿರತಕ್ಕ ಇಂಜಿನಿಯರ್ಸ್ ಬೇರೆ ರೀತಿಯಿಂದ ಆ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ಪಿಡಬ್ಲ್ಯೂಡಿಯಲ್ಲಿರತಕ್ಕವರು ಪಿಡಬ್ಲ್ಯೂಡಿಯಿಂದಲೇ ಮಾಡುತ್ತಾರೆ ಅದಕ್ಕೆ ಇದಕ್ಕೆ ಯಾವುದೇ ಸಂಬಂಧ

ಇಲ್ಲ ಆದರೆ ಸೀನಯಾರಿಟಿ ಪಟ್ಟಿಯನ್ನು ಇನ್ನೂ ಕೂಡ ವಿಶೇಷವಾಗಿ ಪಿಡಬ್ಲ್ಯೂಡಿ ಇಲಾಖೆಯಲ್ಲೇ ಮಾಡುತ್ತಿದ್ದಾರೆ ಅದಕ್ಕಾಗಿ ಈ ಇಲಾಖೆಯಲ್ಲಿ ಕೂಡ ಪುನ ನೀರಾವರಿ ಇಲಾಖೆಯಲ್ಲೇ ಎರಡು ಇಲಾಖೆ ಆಗತಕ್ಕದ್ದು ಆಗಿಲ್ಲ ಒಂದೇ ಒಂದು ಏನು ಎಂದರೆ ಸಣ್ಣ ನೀರಾವರಿ ಕೆಲಸಕ್ಕೆ ಇಂಜಿನಿಯರಸ್‌ಗಳು ಏಕೆ ಇದ್ದಾರೆಂದರೆ, ಸಣ್ಣ ಪುಟ್ಟ ಕೆರೆಗಳ ದುರಸ್ತಿಯನ್ನು ದೊಡ್ಡ ದೊಡ್ಡ ಯೋಜನೆಯಲ್ಲಿರತಕ್ಕಂಥ ಇಂಜಿನಿಯರ್ಸ್‌ಗಳು ಮಾಡುವುದಕ್ಕೆ ಆಗುವುದಿಲ್ಲ ಅದಕ್ಕಾಗಿ ಈ ಸಣ್ಣ ನೀರಾವರಿ ಯೋಜನೆಗೆ ಪ್ರತ್ಯೇಕವಾಗಿ, ಕೆರೆಗಳ ದುರಸ್ತಿಗಾಗಿ ಆಗಲೀ ಹೊಸ ಕೆರೆ ನಿರ್ಮಾಣಕ್ಕಾಗಲೀ ಅಥವಾ ರೀಕನ್ಸ್ಟ್ರಕ್ಷನ್‌ಗೇ ಆಗಲೀ ಸಹಾಯ ಆಗಬೇಕು ಎನ್ನತಕ್ಕ ದೃಷ್ಟಿಯಿಂದ ಅದನ್ನು ಸಣ್ಣ ನೀರಾವರಿ ಇಲಾಖೆ ಎಂದು ಇದೆ ನೀರಾವರಿ ಇಲಾಖೆಯಲ್ಲೇ ಇವತ್ತೂ ಇದೆ ಅದಕ್ಕೋಸ್ಕರ ಎರಡೂ ಉದ್ಭವಿಸುವುದಿಲ್ಲ ಎಂದು ತಿಳಿಸಿರುವುದು

**ಶ್ರೀ ಎಸ್ ಎಸ್ ಪಾಟೀಲ್** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸಣ್ಣ ನೀರಾವರಿ ಇಲಾಖೆ ಎಂದು ಹೇಳಿ ಮಾಡಿದ್ದೀರಿ ಆ ಇಲಾಖೆಯಲ್ಲಿ ಪಗಾರ ಕೊಡುವಷ್ಟೂ ರೊಕ್ಕ ಇಟ್ಟಿಲ್ಲ ಪಗಾರಕ್ಕೂ ಇಲ್ಲ ಸುಮ್ಮನೇ ಅವರು ಇಲಾಖೆಯಲ್ಲಿ ಒಂದೊಂದು ಇಂಜಿನಿಯರಿಂಗ್ ಆಫೀಸ್ ಮಾಡಿದ್ದಾರೆ ಅವರು ತಿಂಗಳಾ ಪಗಾರ ತೆಗೆದುಕೊಳ್ಳುವುದು, ಅಡ್ಡಾಡುವುದು ಇಷ್ಟು ಕೆಲಸ ಇದೆ. ಅದರಲ್ಲಿ ಯಾವ ದುಡ್ಡನ್ನೂ ಕೊಟ್ಟಿಲ್ಲ ಅದಕ್ಕೆ ದಯವಿಟ್ಟು ಎರಡೂ ಇಲಾಖೆಗಳನ್ನು ಕೂಡಿಸುವುದು ನನ್ನ ಪ್ರಕಾರ ಒಳ್ಳೆಯದು ದಯವಿಟ್ಟು ಎರಡೂ ಇಲಾಖೆಗಳನ್ನು ಕೂಡಿಸಿ, ಇದು ಒಂದು ಇಲ್ಲದೇ ಇದ್ದರೆ ಅದಕ್ಕೆ ಸಾವಿರಾರು ಕೋಟಿಯೋ, ಐನೂರು ಕೋಟಿಯೋ ಪ್ರತಿ ವರ್ಷ ಬಜೆಟ್‌ನಲ್ಲಿ ಕೊಡಿ ಇಲ್ಲದಿದ್ದರೆ ಆ ಇಲಾಖೆಗೆ ಯಾವ ಅರ್ಥನೂ ಇರುವುದಿಲ್ಲ ಇಷ್ಟೊಂದು ಪಗಾರ ಕೊಟ್ಟು ಏಕೆ ಇಟ್ಟುಕೊಂಡು ಕುಳಿತಿದ್ದೀರಿ? ಯಾವ ಒಂದು ಕೆರೆ ಒಡೆದರೆ ದುರಸ್ತಿಗೆ ಹಣ ಇಲ್ಲ ಸಣ್ಣ ನೀರಾವರಿ ಇಲಾಖೆಯಲ್ಲಿ ಇವತ್ತು ಕೆರೆಗಳು ತುಂಬಿವೆ ಕಾಲುವೆ ರಿಪೇರಿ ಮಾಡಲು ಅವರಲ್ಲಿ ರೊಕ್ಕ ಇಲ್ಲ ನೀರು ಈಗ ಹಾಯುತ್ತಿಲ್ಲ ಆಮೇಲೆ ಲಿಫ್ಟ್ ಇರಿಗೇಷನ್ ವಿಚಾರ ಕೋಟಿಗಟ್ಟಲೇ ಹಣ ಖರ್ಚು ಮಾಡಿ ಚಾಲೂ ಮಾಡಿದ್ದೇವೆ ಅದರದ ಒಂದು ಕಾಲುವೆ ಮಾಡುವುದಕ್ಕೆ ಅವರಲ್ಲಿ ಹೆಚ್ಚು ದುಡ್ಡು ಇಲ್ಲ ಹೇಗೆ ಮಾಡುವುದು? ಅದು ಏಕೆ ಇಲಾಖೆ ಇರಬೇಕು? ಆ ಕಾರಣದಿಂದ ತಮಗೂ ಕೂಡ ಅನುಭವ ಇದೆ ಎರಡೂ ಇಲಾಖೆಗಳನ್ನು ದಯವಿಟ್ಟು ಕೂಡಿಸಿ ಹಿಂದೆ ಬಹಳ ಮಂತ್ರಿ ಮಾಡುವುದಕ್ಕೆ ಮಾಡಿದ್ದು, ಅದೆಲ್ಲಾ ಉದ್ಯೋಗ, ಇವತ್ತು ಹೇಗಿದ್ದರೂ 34 ಜನ ಮಂತ್ರಿಗಳು ಆ ಕಾರಣದಿಂದ ಒಂದೇ ಇಲಾಖೆ ಇರಬೇಕು ಒಬ್ಬರೇ ಮಂತ್ರಿಗಳು ಇರಬೇಕು ದಯವಿಟ್ಟು ಅಲ್ಲಿ ಇಲ್ಲಿ ರೊಕ್ಕ ಹಾಕಿ ಕೆಲಸನಾದರೂ ಮಾಡುವುದಕ್ಕೆ ಬರುತ್ತದೆ ಆ ಕಾರಣದಿಂದ ಎರಡೂ ಇಲಾಖೆಗಳನ್ನು ಕೂಡಿಸುವುದು ಒಳ್ಳೆಯದು ಎನ್ನುವುದೂ ಕೂಡ ನನ್ನ ಅಭಿಪ್ರಾಯ ದಯವಿಟ್ಟು ಅದಕ್ಕೆ ತಾವು ಉತ್ತರ ಕೊಡಬೇಕು

**ಶ್ರೀ ಗೋವಿಂದ ಮುಕಟಪ್ಪ ಕಾರಜೋಳ (ಮುಧೋಳ)** ಮಾನ್ಯ ಅಧ್ಯಕ್ಷರೆ, ಪ್ರಸಕ್ತ ಹಣಕಾಸು ವರ್ಷದಲ್ಲಿ ಮೈನರ್ ಇರಿಗೇಶನ್‌ಗೆ ಕೇವಲ ಹತ್ತು ಕೋಟಿ

ರೂಪಾಯಿಗಳನ್ನು ಸರ್ಕಾರ ಮೀಸಲಿಟ್ಟಿದೆ ಇದಕ್ಕೆ ಪ್ರತ್ಯೇಕವಾಗಿ ಒಬ್ಬ ಕಾರ್ಯದರ್ಶಿ, ಉತ್ತರ ಮತ್ತು ದಕ್ಷಿಣ ವಲಯದ ಕಛೇರಿಗಳಿಗೆಂದು ಇಬ್ಬರು ಮುಖ್ಯ ಇಂಜಿನಿಯರ್‌ಗಳನ್ನು ನೇಮಿಸಿ contingency ಮತ್ತು salary expenditureಗೆ ಹಣವನ್ನು ಒದಗಿಸಬೇಕಲ್ಲಾ ಮೀಸಲಿಟ್ಟಿರುವ ಹತ್ತು ಕೋಟಿ ರೂಪಾಯಿಗಳಲ್ಲಿ, ಆರು ಕೋಟಿ ರೂಪಾಯಿಗಳನ್ನು ಉತ್ತರ ವಲಯದ ಕಛೇರಿಗೆ ನೀಡಿದ್ದರೆ, ಉಳಿದ ನಾಲ್ಕು ಕೋಟಿ ರೂಪಾಯಿಗಳನ್ನು ದಕ್ಷಿಣ ವಲಯದ ಕಛೇರಿಗೆ ನೀಡಿದ್ದಾರೆ ಇಷ್ಟು ಹಣದಿಂದ ಇಲಾಖೆಯಲ್ಲಿ ಏನು ಕೆಲಸ ಮಾಡಲು ಸಾಧ್ಯವಾಗುತ್ತದೆ? ಸಾವಿರಾರು ಸಂಖ್ಯೆಯಲ್ಲಿ ಸಿಬ್ಬಂದಿ ವರ್ಗ, ವಾಹನಗಳ ಮತ್ತು ಕಛೇರಿ ನಿರ್ವಹಣೆಗೆ ಒದಗಿಸಿರುವ ಹತ್ತು ಕೋಟಿ ರೂಪಾಯಿಗಳನ್ನಿಟ್ಟುಕೊಂಡು ಏನು ಕೆಲಸ ಮಾಡುವುದಕ್ಕಾಗುತ್ತದೆ? ಇವೊತ್ತು ಹಣಕಾಸು ಸಚಿವರು ಸದನದಲಿಲ್ಲ ಇದಕ್ಕೆ ಕನಿಷ್ಠ ಪಕ್ಷ ಐವತ್ತು ಕೋಟಿ ರೂಪಾಯಿಗಳನ್ನಾದರೂ ಒದಗಿಸಬೇಕು ನೀರಾವರಿಗೆ ನೀವು ಹಣ ಒದಗಿಸದೆ ಹೋದರೆ ಇನ್ಯಾವುದಕ್ಕೆ ಒದಗಿಸಿಕೊಡುತ್ತೀರಿ? ಅದಕ್ಕೋಸ್ಕರ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಹೇಗೆ 72 ಕೋಟಿ ರೂಪಾಯಿಗಳ surplus budget ಅನ್ನು declare ಮಾಡಿರುವುದರಿಂದ ಮೈನರ್ ಇರಿಗೇಶನ್‌ಗೆ ಐವತ್ತು ಕೋಟಿ ರೂಪಾಯಿಗಳನ್ನಾದರೂ ಒದಗಿಸಿಕೊಡಬೇಕೆಂದು ಒತ್ತಾಯಿಸುತ್ತಿದ್ದೇನೆ

**ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನ ಬಾಗೇವಾಡಿ)** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಮೇಜರ್ ಮತ್ತು ಮೈನರ್ ಇರಿಗೇಶನ್‌ನಲ್ಲಿ ಒಂದು parameter ಇರಬೇಕು ಮೇಜರ್ ಇರಿಗೇಶನ್‌ಗೆ ಒಂದು ವರ್ಷದಲ್ಲಿ ಆಯವ್ಯಯದಲ್ಲಿ ಮೂರುವರೆ ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡುತ್ತಾರೆ ಕೆಲವೊಂದು ಭಾಗದಲ್ಲಿ ಮಾತ್ರ ಅದರ ಉಪಯೋಗವಾಗುತ್ತದೆ 22 ಪರ್ಸೆಂಟ್ ಅಲ್ಲ ಅಲ್ಲಿ 50 ಪರ್ಸೆಂಟ್ ಇರಿಗೇಶನ್ ಆಗುತ್ತದೆ ಮೈನರ್ ಇರಿಗೇಶನ್ ಇರುವ ತಾಲ್ಲೂಕುಗಳಿಗೆ ಅದರಲ್ಲೂ ಬಯಲುಸೀಮೆಗೆ ದುಡ್ಡು ಕೊಡುವುದಿಲ್ಲ ಇದಕ್ಕೆ ಏನಾದರೊಂದು on par comparison ಆದರೂ ಇರಬೇಕಲ್ಲಾ ನಮ್ಮ ಭಾಗದ ಒಂದು ತಾಲ್ಲೂಕಿನಲ್ಲಿ ನೀರಾವರಿಯಾದರೆ, ಇನ್ನೊಂದು ತಾಲ್ಲೂಕಿನಲ್ಲಿ ಬಯಲುಸೀಮೆ ಇದ್ದರೂ ಅಲ್ಲಿ ನೀರಾವರಿ ಯೋಜನೆ ಬರುವುದಿಲ್ಲ! ಮೈನರ್ ಇರಿಗೇಶನ್‌ಗೆ ದುಡ್ಡು ಅಲೊಕೇಶನ್ ಆಗುವುದಿಲ್ಲ ಈ ಸಮಸ್ಯೆಗೆ ಏನಾದರೊಂದು ಪರಿಹಾರ ಕಂಡುಹಿಡಿಯಬೇಕು ನನಗನ್ನಿಸುತ್ತದೆ ಇಡೀ ಸದನ ಒಗ್ಗಟ್ಟಾಗಿ ಸಮಸ್ಯೆಗೆ ಪರಿಹಾರ ಹುಡುಕುವುದು ವಾಸಿ ಎಂದು ನಾನು ಭಾವಿಸುತ್ತೇನೆ ದಯಮಾಡಿ ಮಾನ್ಯ ಸಚಿವರು ಇದರ ಬಗ್ಗೆ ತಿಳಿಸಬೇಕು

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ಮಾನ್ಯ ಅಧ್ಯಕ್ಷರೆ, ನಮಗೆ ಅನುಭವವಿದೆ ಈ ರಾಜ್ಯದಲ್ಲಿ ಒಣ ಬೇಸಾಯ, ಸಣ್ಣ ನೀರಾವರಿ, ಕೆರೆ-ಕಟ್ಟೆಗಳನ್ನು ಆಶ್ರಯ ಮಾಡಿಕೊಂಡಿರುವಂಥದ್ದು ಶೇಕಡ 65 ರಿಂದ 70ರಷ್ಟು ಭಾಗ ಜಮೀನುಗಳದ್ದು ಅದಕ್ಕೆ ಈ ಪ್ರಮಾಣದಲ್ಲಿ ಹಣ ಒದಗಿಸಿದರೆ ರೈತ

ಉದ್ಧಾರವಾಗುತ್ತಾನೆಯೇ? ಈಗ ಕೃಷ್ಣಾ ಹಾಗೂ ಕಾವೇರಿ ನೀರಾವರಿ ಯೋಜನೆಗಳು ಮುಗಿದು ಒಂದು ಹಂತಕ್ಕೆ ಬರುತ್ತಿದೆ ಪ್ರಾರಂಭದಿಂದ ನೀವು ಕನಿಷ್ಠ ನೂರು ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡುವ ಮೂಲಕ ಕೆರೆಗಳಲ್ಲಿ ಹೂಳೆತ್ತಿಸಿ, ಸಣ್ಣ ನೀರಾವರಿಗೆ ಆದ್ಯತೆ ಕೊಟ್ಟು, ನೀರು ವ್ಯರ್ದವಾಗದಂತೆ ರೈತರಿಗೆ ಆದ್ಯತೆ ಕೊಡದಿದ್ದರೆ ಒಣ ಬೇಸಾಯದಲ್ಲಿರುವ ಅವರು ಹೇಗೆ ಒದುಕುತ್ತಾರೆ? ನಿಮಗೆ ಒಂದು ಉದಾಹರಣೆ ಕೊಡುವುದಾದರೆ, ಬಹಳ ಶ್ರಮಪಟ್ಟು ಹಿಂದಿನ ಮುಖ್ಯಮಂತ್ರಿಗಳನ್ನು ಕೇಳಿಕೊಂಡಾಗ ಅವರು oblige ಮಾಡಿದ ನಂತರ ಅಂಜನಾಪುರದಲ್ಲಿ ಒಂದು ಜಲಾಶಯ ಕಟ್ಟಿದೆವು ಸಣ್ಣ ನೀರಾವರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ ಖರ್ಚು ಮಾಡಿದೆವು ಇವೊತ್ತು ಜಲಾಶಯದಲ್ಲಿ ನೀರು ತುಂಬಿ ಅರ್ಧ ಟಿಎಂಸಿಯಷ್ಟು ನೀರು ಹೊಳೆಗೆ ಹರಿದು ಹೋಗುತ್ತಿದೆ ಅದಕ್ಕೊಂದು ಗೇಟ್ ಅಳವಡಿಸಬೇಕೆಂಬುದು ತಮಗೆ ಗೊತ್ತಿದೆ ಅದಕ್ಕೋಸ್ಕರ 65-70 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಕೆಲಸ ಪ್ರಾರಂಭ ಮಾಡಬೇಕೆಂದು ನಾನು ಅವೊತ್ತಿನ ದಿವಸವೇ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದೆ ಹಣಕಾಸು ಸಚಿವರಿಗೆ ಮತ್ತು ಇಲಾಖೆಯವರಿಗೆ ಅದು ಗೊತ್ತಿದೆಯೋ? ಇಲ್ಲವೋ? ಈ ಕುರಿತ ಆಸಕ್ತಿ ಇದೆಯೊ? ಇಲ್ಲವೋ? ಗೊತ್ತಿಲ್ಲ ಸಣ್ಣ ನೀರಾವರಿಗೆ ಹಣ ಕೊಡದಿದ್ದರೆ ಈ ಭಾಗದಲ್ಲಿರುವ 10-20 ಶಾಸಕರುಗಳಾದ ನಾವು ಏನೂ ಮಾಡುವುದಕ್ಕಾಗುವುದಿಲ್ಲ ನಿಮ್ಮಂತಹ ಪ್ರಭಾವಿ ಸಚಿವರು, ಇದಕ್ಕೆ ಐವತ್ತು ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ತೆಗೆದುಕೊಳ್ಳುವುದಕ್ಕೆ ಆಗದೇ ಹೋದರೆ 'ಈ ಇಲಾಖೆಯಲ್ಲಿ ನಾನೇಕೆ ನೋಡಿಕೊಳ್ಳಬೇಕು ಎಂದು ಹೇಳಿ ಬಿಸಾಕಬೇಕಾಗುತ್ತದೆ ಇಲ್ಲದಿದ್ದರೆ, ಈ ಇಲಾಖೆ ನೋಡಿಕೊಂಡ ನಂತರ ದುಡ್ಡು ಕೊಡುವಂತಹ ವ್ಯವಸ್ಥೆ ಮಾಡಿಸುವಂತಹ ಶಕ್ತಿ ನಿಮಗಿದೆ ಆದರೆ, ಹಣಕಾಸು ಸಚಿವರು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ಈ ವರ್ಷ ಕನಿಷ್ಠವೆಂದರೂ ಐವತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕಾದರೂ ಬಜೆಟ್‌ನಲ್ಲಿ ಮೀಸಲಿಡಬೇಕೆಂದು ಒತ್ತಾಯ ಮಾಡುತ್ತೇನೆ

**ಶ್ರೀ ಎಸ್ ಎಸ್ ಪಾಟೀಲ್** ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯಾದ್ಯಂತ ಮೇಜರ್ ಇರಿಗೇಶನ್‌ಗೆ ಎಷ್ಟು ದುಡ್ಡು ಖರ್ಚು ಮಾಡುತ್ತಿದ್ದೇವೋ, ಅದನ್ನು ಒಂದೇ ವರ್ಷದಲ್ಲಿ ಖರ್ಚು ಮಾಡಿದರೆ ಎರಡು ಪಟ್ಟು ನೀರಾವರಿಯಾಗುತ್ತದೆ ನೀರಾವರಿಯಾಗುವುದರಿಂದ ಭೂ ಜಲ ಹೆಚ್ಚಾಗುತ್ತದೆ ಆ ಕಾರಣದಿಂದ ಇವೊತ್ತು ಮೈನರ್ ಇರಿಗೇಶನ್‌ಗೆ ನಾವು ಹೆಚ್ಚು ಒತ್ತು ಕೊಡಬೇಕಾಗುತ್ತದೆ ದುರ್ದೈವದಿಂದ ದೊಡ್ಡ ಅಣೆಕಟ್ಟು ನಿರ್ಮಿಸುವುದಕ್ಕಾಗಿ ಎಲ್ಲಾ ಹಣವೂ ಅಲ್ಲಿಗೇ ಹೋಗುತ್ತದೆ ಆ ಕಾರಣದಿಂದ ಈ ವರ್ಷ ಕನಿಷ್ಠ ಐದು ನೂರು ಕೋಟಿ ರೂಪಾಯಿಗಳನ್ನಾದರೂ ಬಜೆಟ್‌ನಲ್ಲಿ ಒದಗಿಸಿಕೊಡಬೇಕು ಅಲ್ಲಿ ಕಡಿಮೆ ಮಾಡಿ, ಇಲ್ಲಿ ಒದಗಿಸಿಕೊಡಿ ಕೇವಲ 50-70 ಕೋಟಿ ರೂಪಾಯಿಗಳನ್ನಿಟ್ಟರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ

**ಶ್ರೀ ಬಿ ಎಸ್ ಯಡಿಯೂರಪ್ಪ** ಐವತ್ತು ಕೋಟಿ ರೂಪಾಯಿಯಿಂದಲೇ ಶುರು ಮಾಡಲಿ ನಾವು ಸ್ಪೆಷಲ್ ಆಗಿ ಸನ್ಮಾನ್ಯ ಮಾಡಿಸುತ್ತೇವೆ

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಮಾನ್ಯ ಪಾಟೀಲ್ ಅವರ ಕಡೆ 8–10 ಯೋಜನೆಗಳಿದ್ದು, ಇದ್ದುದ್ದೆಲ್ಲವನ್ನೂ ಅವರೇ ತೆಗೆದುಕೊಂಡಿದ್ದಾರೆ

**ಶ್ರೀ ಆರ್ ಧ್ರುವನಾರಾಯಣ್** ಮಾನ್ಯ ಅಧ್ಯಕ್ಷರೆ ನೀರಾವರಿ ಇಲಾಖೆಗೆ ಸಂಬಂಧಿಸಿದಂತೆ, ಕಾವೇರಿ ಜಲಭಾಗ್ಯ ನಿಗಮಕ್ಕೆ ಕಳೆದ ಸಲ 2,000 ಕೋಟಿ ರೂಪಾಯಿಗಳನ್ನು ಸರ್ಕಾರ ನೀಡಿತ್ತು. ಆದರೆ, ಈ ಸಲ 200 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ ಇದರಲ್ಲಿ 100 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್‌ಗಳಿವೆ ಇನ್ನು 30 ಕೋಟಿ ರೂಪಾಯಿಗಳು ಸಂಬಳಕ್ಕೆ ಹೋಗುತ್ತದೆ ಇನ್ನುಳಿದ 70 ಕೋಟಿ ರೂ ಮಾತ್ರ ಆ ಭಾಗದ ಎಂಟು ಜಿಲ್ಲೆಗಳಲ್ಲಿ ನೀರಾವರಿ ಕಾಮಗಾರಿ ಕೈಗೊಳ್ಳಲು ಕಾವೇರಿ ನೀರಾವರಿ ನಿಗಮಕ್ಕೆ ಸಾಕಾಗುವುದಿಲ್ಲ ಕಳೆದ ಸಲ ನೀಡಲಾಗಿದ್ದ ಎರಡು ಸಾವಿರ ಕೋಟಿ ರೂಪಾಯಿಗಳಲ್ಲಿ ಮಂಡ್ಯ ಜಿಲ್ಲೆಗೆ ಬಹುತೇಕ ಅಂದರೆ, 1,200 ಕೋಟಿ ರೂಪಾಯಿಗಳನ್ನು ವಿನಿಯೋಗಿಸಿದ್ದಾರೆ ಉಳಿದ ಏಳು ಜಿಲ್ಲೆಗಳಲ್ಲಿ ಸರಿಯಾಗಿ ಕೆಲಸ ಮಾಡಿಲ್ಲ ಆ ದೃಷ್ಟಿಯಿಂದ ಈ ಸಲ ಕಾವೇರಿ ನೀರಾವರಿ ನಿಗಮಕ್ಕೆ ಸರ್ಕಾರ ಹೆಚ್ಚು ಹಣ ಒದಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ

**ಶ್ರೀ ಪ್ರಕಾಶ್ ಖಂಡ್ರೆ** ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಮಾಂಜ್ರಾ ನದಿಗೆ ಬ್ಯಾರೇಜ್ ಕಟ್ಟುತ್ತೇವೆಂದು ಕಳೆದ ನಾಲ್ಕು ವರ್ಷಗಳಿಂದಲೂ ಹೇಳುತ್ತಾ ಬಂದಿದ್ದಾರೆ ಬ್ಯಾರೇಜ್ ಕಟ್ಟುವ ಸಲುವಾಗಿ ಈ ವರ್ಷವಾದರೂ ಹಣ ಒದಗಿಸಿಕೊಡಬೇಕು ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ)** ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರವಾದ ದೇವದುರ್ಗಕ್ಕೆ ಸಂಬಂಧಿಸಿದ ಒಂದು ವಿಷಯವನ್ನು ಸನ್ಮಾನ್ಯ ಸಚಿವರ ಗಮನಕ್ಕೆ ತಮ್ಮ ಮೂಲಕ ತರಬಯಸುತ್ತೇನೆ ಏನೆಂದರೆ, ನಮ್ಮ ಮತಕ್ಷೇತ್ರದಲ್ಲಿ ಶೇಕಡ 60 ರಿಂದ 70ರಷ್ಟು ನೀರಾವರಿಯಾಗುತ್ತಿದ್ದು ನಮ್ಮ ತಾಲ್ಲೂಕಿನಲ್ಲಿರುವ ಮದ್ರಿಕಿ ಕಚೇರಿ ಗುಲ್ಬರ್ಗಾ ಡಿವಿಜನ್‌ನಲ್ಲಿರುವುದರಿಂದ ಸುಮಾರು 60–70 ಕಿಲೋಮೀಟರ್‌ಗಳಷ್ಟು ದೂರ ಹೋಗಿ ಅವರಿಂದ ನಾವು ಕೆಲಸ ತೆಗೆದುಕೊಳ್ಳಬೇಕಾಗಿರುತ್ತದೆ ಮದ್ರಿಕಿ ಡಿವಿಜನ್‌ನಿಂದ ದೇವದುರ್ಗಕ್ಕೆ ಬಂದು ಕೆಲಸ ಮಾಡಬೇಕೆಂದು ಸರ್ಕಾರಿ ಆದೇಶವಾಗಿದ್ದರೂ ಕೂಡ ಅಧಿಕಾರಿಗಳು ಇನ್ನೂ ಮದ್ರಿಕಿಯಲ್ಲಿಯೇ ಉಳಿದುಕೊಂಡಿರುವುದರಿಂದ ಖಾಲಿ ಟೇಬಲ್, ಕುರ್ಚಿ ಮಾತ್ರ ದೇವದುರ್ಗ ತಾಲ್ಲೂಕಿನಲ್ಲಿದೆ ಉಳಿದ ಪ್ರಾಧಿಕಾರಗಳು, ಅದರ ಅಧಿಕಾರಿಗಳೆಲ್ಲರೂ ಗುಲ್ಬರ್ಗಾ ಡಿವಿಜನ್‌ನ ಮದ್ರಿಕಿಯಲ್ಲಿಯೇ ವಾಸವಾಗಿರುವುದರಿಂದ, ದೇವದುರ್ಗದಲ್ಲಿ ನಾಲಾ ಕಾಮಗಾರಿ ಪ್ರಾರಂಭಗೊಂಡಿದ್ದರೂ ಸಮರ್ಪಕವಾಗಿ ನಡೆಯುತ್ತಿಲ್ಲ ಆ ಕಾರಣಕ್ಕೋಸ್ಕರ ಗುಲ್ಬರ್ಗಾ ಡಿವಿಜನ್‌ನ ಮದ್ರಿಕಿಯಲ್ಲಿನ ಅಧಿಕಾರಿಗಳನ್ನು ಕೂಡಲೇ ದೇವದುರ್ಗ ತಾಲ್ಲೂಕಿಗೆ ವರ್ಗಾಯಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ

**ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ)** ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿಗೆ ರೊಕ್ಕ ಇಲ್ಲವೆಂದು ಏನು ಹೇಳುತ್ತಿದ್ದಾರೆ, ಈಗ ಪ್ರಾಜೆಕ್ಟ್‌ಗೆ ಸಂಬಂಧಿಸಿದಂತೆ ಆ್ಯಕ್ಷನ್ ಪ್ಲಾನ್ ತಯಾರಾಗುತ್ತದೆ, ಟೋಕನ್ ಗ್ರಾಂಟ್ ಇಡುತ್ತಾರೆ ಎಷ್ಟು ಪ್ರಯತ್ನಿಸಿದರೂ ಅಗತ್ಯವಾದಷ್ಟು ಹಣವಿಲ್ಲವೆಂದು ಹೇಳುತ್ತಾರೆ ಈ ದಿಸೆಯಲ್ಲಿ ನನ್ನ ಒಂದು ಸಲಹೆಯೆಂದರೆ, ದೊಡ್ಡ ಮತ್ತು ಸಣ್ಣ ನೀರಾವರಿ, ಎರಡನ್ನೂ ಒಂದೇ ಇಲಾಖೆಗೆ ವಹಿಸಿದರೆ ಆಗ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಸಿಗುತ್ತದೆನ್ನುವುದು ನನ್ನ ಆಶಯವಾಗಿದೆ ನಮ್ಮಲ್ಲಿ ಓಕಳಿ ಕೆರೆ ಸ್ಯಾಂಕ್ಷನ್ ಆಗಿ ಒಂದು ವರ್ಷವಾಗಿದೆ ಈಗ ಸದರಿ ಕೆರೆಯಲ್ಲಿ ನೀರು ನಿಲ್ಲಿಸಿರುವುದರಿಂದ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ, ಕೃಷಿ ಕಾರ್ಯಗಳಿಗೆ ರೈತರಿಗೂ ಅನುಕೂಲವಾಗುತ್ತದೆ ದೊಡ್ಡ ನೀರಾವರಿ ಯೋಜನೆಗಳನ್ನು ಏನು ಕೈಗೆತ್ತಿಕೊಂಡು ಮಾಡುತ್ತಿದ್ದೇವೆ, ಇದು ವರ್ಷಾನುಗಟ್ಟಳೆ ಹತ್ತಾರು ವರ್ಷ ಸಮಯ ತೆಗೆದುಕೊಂಡರೂ ಬೇಗ ಮುಗಿಯುವಂತಿಲ್ಲ ಆದುದರಿಂದ, ಸಣ್ಣ ನೀರಾವರಿಗೆ ಒತ್ತು ಕೊಟ್ಟು ಹೆಚ್ಚು ಹಣ ಒದಗಿಸಿಕೊಡುವ ಮೂಲಕ ನೀರು ನಿಲ್ಲಿಸಿದರೆ ರೈತರಿಗೆ ಅನುಕೂಲವಾಗುತ್ತದೆ, ಇನ್ನೊಂದೆಡೆ ಕುಡಿಯುವ ನೀರಿನ ಸಮಸ್ಯೆಯನ್ನೂ ಬಗೆಹರಿಸಿದಂತಾಗುತ್ತದೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ, ನನ್ನ ಕ್ಷೇತ್ರದಲ್ಲಿ ಬಹಳಷ್ಟು ಸಣ್ಣಸಣ್ಣ ಕೆರೆಗಳಿಗೆ ಸಂಬಂಧಿಸಿದಂತೆ feasible reports ಇದೆ ನೀರು ನಿಲ್ಲುವಂತಹ, ಕೆರೆಗಳಾಗುವಂತಹ ಬಹಳಷ್ಟು ವ್ಯವಸ್ಥೆ ನನ್ನ ಮತಕ್ಷೇತ್ರದಲ್ಲಿದೆ ಆ ಬಗ್ಗೆ ಪರಿಶೀಲನೆಯಾಗಿದ್ದು, ಮಾನ್ಯ ಖರ್ಗೆ ಸಾಹೇಬರೂ ಕೂಡ ಸಹಕರಿಸಿದ್ದಾರೆ ಅದರ ಬಗ್ಗೆ ಎರಡು ಮಾತಿಲ್ಲ ಆದರೆ, ಉದ್ದೇಶವಿಷ್ಟೆ ಸಣ್ಣ ನೀರಾವರಿಗೆ ರೊಕ್ಕವಿಲ್ಲವೆಂದು ಏನು ಹೇಳುತ್ತಿದ್ದೀರಿ, ದೊಡ್ಡ ಮತ್ತು ಸಣ್ಣ ನೀರಾವರಿಗಳೆರಡನ್ನೂ ಕೂಡಿಸಿ ಒಂದೇ ಮಾಡುವ ಮೂಲಕ ಹೆಚ್ಚಿನ ಆದ್ಯತೆ ನೀಡಿದರೆ ಸರಿಯಾಗುತ್ತದೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ

**ಶ್ರೀ ಸಿಂಧೂರ್ ರಾಜಶೇಖರ್** ಮಾನ್ಯ ಅಧ್ಯಕ್ಷರೆ, ಸವಣೂರಿನಲ್ಲಿ ಮೋತಿತಾವಾಗೆ ಬರುವ ನಾಲೆಯೊಂದು ಒಡೆದು ಎರಡು ತಿಂಗಳಾಗಿದ್ದರೂ, ನಾಲಾ ದುರಸ್ತಿಗೆ 50,000 ಅಥವಾ ಒಂದು ಲಕ್ಷ ರೂಪಾಯಿಗಳನ್ನು ಒದಗಿಸಿಕೊಡಬೇಕೆಂದು ಕೇಳುತ್ತಿದ್ದೇನೆ ಸುಮಾರು 192 ಎಕರೆ ವ್ಯಾಪ್ತಿಯುಳ್ಳ ಒಂದು ದೊಡ್ಡ ಕೆರೆಯ ನೀರಿನ ನಾಲೆ ಬಗ್ಗೆ ಮಾನ್ಯ ಮಂತ್ರಿಗಳಿಗೆ ಗೊತ್ತಿದೆ ಆ ಕೆರೆಯ ನಾಲೆ ರಿಪೇರಿಗೆ 50 ರಿಂದ 1 ಲಕ್ಷ ರೂಪಾಯಿ ಖರ್ಚಾಗುತ್ತದೆ ಸದರಿ ದುರಸ್ತಿ ಕಾರ್ಯವನ್ನು ಮಾಡಿಸಿಕೊಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ

**ಶ್ರೀ ಎ ಪಾಪರೆಡ್ಡಿ (ರಾಯಚೂರು)** ಮಾನ್ಯ ಅಧ್ಯಕ್ಷರೆ, ರಾಯಚೂರು ಮತಕ್ಷೇತ್ರದಲ್ಲಿ ಎರಡು ಏತ ನೀರಾವರಿ ಯೋಜನೆಗಳಿದ್ದು, ಮೈನರ್ ಇರಿಗೇಶನ್‌ನಲ್ಲಿ ಅಳವಡಿಸಿರುವ ಎಲ್ಲಾ ಪಂಪುಗಳು ಕೆಟ್ಟು ಹೋಗಿವೆ ಅವುಗಳನ್ನು ದುರಸ್ತಿಪಡಿಸುವುದಕ್ಕೆ ರೊಕ್ಕ ಕೇಳುತ್ತಿದ್ದೇವೆ 1978ರಲ್ಲಿ

ಪ್ರಾರಂಭವಾದ ಈ ಎರಡು ಏತ ನೀರಾವರಿ ಯೋಜನೆಗಳ ಪಂಪುಗಳು ಕೆಟ್ಟು ಹೋಗಿರುವುದರಿಂದ ಕಾಲುವೆಯಲ್ಲಿ ನೀರು ಹರಿಯುತ್ತಿಲ್ಲ ನಾಲ್ಕು ಪಂಪುಗಳಲ್ಲಿ ಮೂರು ಪಂಪುಗಳು ದುರಸ್ತಿಗೊಳಗಾಗಿದ್ದು, ಒಂದು ಪಂಪು ಮಾತ್ರ ಕಾರ್ಯ ನಿರ್ವಹಿಸುತ್ತಿದೆ ಈಗ ಅದನ್ನೂ ಬಂದ್ ಮಾಡಿದ್ದಾರೆ ದುರಸ್ತಿಪಡಿಸಲು ಹಣವಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ, ಅಧಿಕಾರಿಗಳೂ ಅಲ್ಲಿರುವುದಿಲ್ಲ ಸಣ್ಣ ನೀರಾವರಿ ಯೋಜನೆಗಳ ಕಾರ್ಯ ನಿರ್ವಹಣೆಗೆ 50 ಕೋಟಿ ರೂಪಾಯಿಗಳಷ್ಟಾದರೂ ಮೀಸಲಿಟ್ಟರೆ ಮೈನರ್ ಇರಿಗೇಶನ್‌ನ ಕಾರ್ಯ ಸರಿಯಾಗಿ ಭಾರೀ ಮತ್ತು ಸಣ್ಣ ನೀರಾವರಿ ಇಲಾಖೆ ಎರಡನ್ನೂ ಒಂದುಗೂಡಿಸಬೇಕೆಂದು ಪ್ರಾರ್ಥನೆ ನಮ್ಮ ಕ್ಷೇತ್ರದಲ್ಲಿ ಮಳೆ ಇಲ್ಲ ನೀರಾವರಿಗೆ ಇರುವುದು ಎರಡು ಪಂಪುಗಳು ಮಾತ್ರ. ಕೆಟ್ಟು ಹೋಗಿರುವ ಅವುಗಳನ್ನಾದರೂ ಆದಷ್ಟು ಬೇಗ ದುರಸ್ತಿಪಡಿಸಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ

**ಶ್ರೀಮತಿ ಜೆ ಸುನೀತ ವೀರಪ್ಪಗೌಡ (ಬನ್ನೂರು)** ಮಾನ್ಯ ಅಧ್ಯಕ್ಷರೆ, ಬನ್ನೂರು ಮತಕ್ಷೇತ್ರದಲ್ಲಿ 1990ರಲ್ಲಿ ನಂಜಾಪುರ ಏತ ನೀರಾವರಿಯ ಕಾಮಗಾರಿ ಕೈಗೊಳ್ಳಲು 31 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದರೂ ಇದುವರೆವಿಗೂ 13 ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದ್ದು, ಮುಂದಿನ ಕಾಮಗಾರಿ ಕೈಗೊಳ್ಳಲು ಸರ್ಕಾರದಲ್ಲಿ ದುಡ್ಡಿಲ್ಲದಿರುವುದರಿಂದ ಕಾರ್ಯ ಸ್ಥಗಿತಗೊಂಡಿದೆ ದಯಮಾಡಿ ಸದರಿ ಏತ ನೀರಾವರಿ ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸಿದರೆ ಸುಮಾರು 10,000 ಎಕರೆ ಪ್ರದೇಶಕ್ಕೆ ನೀರಾವರಿಯಾಗುತ್ತದೆ. ದಯಮಾಡಿ ಬೇಗ ಮುಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ

**ಶ್ರೀ ಮಲ್ಲಿಕಾರ್ಜುನ ಖರ್ಗೆ (ನೀರಾವರಿ ಮತ್ತು ಸಾರಿಗೆ ಸಚಿವರು)** ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಮತ್ತು ವಿಶೇಷವಾಗಿ ಕಮಲಾಪುರ ಶಾಸಕರೂ ಕೂಡ ಈ ಸಣ್ಣ ನೀರಾವರಿಗೆ ಹೆಚ್ಚಿನ ಹಣ ಕೊಡಬೇಕು ಮತ್ತು ದೊಡ್ಡ ನೀರಾವರಿ ಮತ್ತು ಸಣ್ಣ ನೀರಾವರಿ ಎಂದು ಬೇರೆ ಬೇರೆ ವಿಂಗಡಣೆ ಮಾಡದೆ ಎರಡೂ ಸೇರಿಸಿ ಒಂದೇ ಮಾಡಿ, ಹೆಚ್ಚಿನ ಹಣವನ್ನೂ ಕೂಡ ಈ ಸಣ್ಣ ನೀರಾವರಿಗೆ ಒದಗಿಸಿಕೊಡಬೇಕೆಂದು ಕೇಳುತ್ತಿದ್ದಾರೆ ಅದೇ ರೀತಿಯಾಗಿ ಮಾನ್ಯ ಎಲ್ಲಾ ಸದಸ್ಯರದ್ದೂ ಕೂಡ ಒಂದು ಅನಿಸಿಕೆ ಏನೆಂದರೆ, ಈ ಸಣ್ಣ ನೀರಾವರಿಗೆ ಹೆಚ್ಚಿನ ಒತ್ತು ಕೊಡಬೇಕು ಎನ್ನುವುದೇ ಆಗಿದೆ ನಿಜವಾಗಿಯೂ ಇದು ಸಂತೋಷದ ಸಂಗತಿ ಏಕೆಂದರೆ, ನಮ್ಮ ಇಲಾಖೆಗೆ ಪ್ರೋತ್ಸಾಹ ಸಿಗತಕ್ಕಂಥ ಮಾತನಾಡಿದ್ದಾರೆ ಇದೇ ಮಾತನ್ನು ಸ್ವಲ್ಪ ಬಜೆಟ್ ಪ್ರಿಪೇರ್ ಆಗುವುದಕ್ಕಿಂತ ಮುಂಚೆ, ಸ್ವಲ್ಪ ಈ ಒತ್ತಡ ತಂದಿದ್ದರೆ, ನನಗೂ ಅನುಕೂಲವಾಗುತ್ತಿತ್ತು, ನಿಮಗೂ ಅನುಕೂಲವಾಗುತ್ತಿತ್ತು ನನ್ನ ಗಮನಕ್ಕಿಂತ ಇದನ್ನು ಫೈನಾನ್ಸ್ ಮಿನಿಸ್ಟರ್ ಗಮನಕ್ಕೆ ತರಬೇಕಾಗಿತ್ತು ಇವೆಲ್ಲಾ ಕೆಲಸಗಳು, ಅಭಿವೃದ್ಧಿ ಕೆಲಸಗಳು ಒಟ್ಟಾರೆ ಇದ್ದಾಗ ಮಾತ್ರ ಮಾಡಲಿಕ್ಕೆ ಸಾಧ್ಯವಾಗುತ್ತದೆ ಕೇವಲ ಒಬ್ಬರ ಒತ್ತಡ, ಇಬ್ಬರ ಒತ್ತಡದಿಂದ ಇದು ಆಗುವುದಿಲ್ಲ ಬಜೆಟ್‌ನಲ್ಲಿ ಇವತ್ತು ನಾವು ನೋಡಿದರೆ, ಮೇಜರ್ ಇರಿಗೇಷನ್‌ಗೆ ಕೂಡ ಅಷ್ಟೊಂದು ಹಣ ಇಲ್ಲ ಆದರೂ ಕೂಡ ನಾನು ನೀವು ಬಾರೋಯಿಂಗ್ ಲಿಮಿಟ್ ಅನ್ನು ಅಟ್‌ಲೀಸ್ಟ್ ಈ ಕೃಷ್ಣ ಜಲ ಭಾಗ್ಯ ನಿಗಮ,

ಕಾವೇರಿ ನೀರಾವರಿ ನಿಗಮಕ್ಕೆ ಹೆಚ್ಚಿಗೆ ಮಾಡಿ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕೇಳಿಕೊಂಡಿದ್ದೇನೆ ಆಮೇಲೆ ಏನು ಸಣ್ಣ ನೀರಾವರಿ ನಿಗಮ ಮಾಡಬೇಕು ಅನ್ನತಕ್ಕಂಥದ್ದು ಇದೆ, ಅದರಿಂದಲೇ ಸುಮಾರು 150 ಕೋಟಿ ರೂಪಾಯಿಗಳ ಬಾಂಡ್ ರೈಸ್ ಮಾಡಿ ನಾವು ಹಣದ ಪ್ರಾವಿಷನ್ ಮಾಡಿಕೊಳ್ಳಬೇಕು ಅನ್ನತಕ್ಕಂಥದ್ದು ಇದೆ ಅದಕ್ಕೂ ಕೂಡ ಸ್ವಲ್ಪ ಟೈಮ್ ಹಿಡಿಯುತ್ತದೆ ಅದಕ್ಕೆ ನಾವು ಇಲ್ಲಿ 150 ಕೋಟಿ ರೂಪಾಯಿಗಳ ಬಜೆಟರಿ ಸಪೋರ್ಟ್ ಕೊಟ್ಟು, ಅಮೇಲೆ ಬಾಂಡ್ ಮೂಲಕ ಹಣವನ್ನು ರೈಸ್ ಮಾಡಿದಂತಹ ಹಣವನ್ನು ಬೇಕಾದರೆ ನಾವು ಇಲ್ಲಿ re-adjust ಮಾಡಿಕೊಳ್ಳಬಹುದು, ಆದ್ದರಿಂದ ಇದಕ್ಕೆ ಆದ್ಯತೆ ಕೊಡಬೇಕು ಎಂದು ನಾನು ಕೇಳಿದ್ದೇನೆ ಮೇಜರ್ ಇರಿಗೇಷನ್‌ನಲ್ಲಿ ಕೃಷ್ಣ ಜಲ ಭಾಗ್ಯ ನಿಗಮದ ಕೆಲಸಗಳನ್ನು 2005 ಡಿಸೆಂಬರ್‌ನೊಳಗೆ ಮುಗಿಸಬೇಕಾದರೆ ಸುಮಾರು ನಮಗೆ 2500 ಕೋಟಿ ರೂಪಾಯಿಗಳು ಬೇಕಾಗುತ್ತದೆ ಕರ್ನಾಟಕ ನೀರಾವರಿ ನಿಗಮದಲ್ಲಿ ಈಗ already ಕೈಗೆತ್ತಿಕೊಂಡಂತಹ ಕೆಲಸಗಳನ್ನು ಮುಗಿಸಬೇಕಾದರೆ, ಅದಕ್ಕೆ ಸುಮಾರು 2800 ಕೋಟಿ ರೂಪಾಯಿಗಳು ಬೇಕಾಗುತ್ತದೆ ಪ್ರತಿಯೊಬ್ಬರೂ ಈ ನಿಗಮದಲ್ಲಿ ದುಡ್ಡಿದೆ ಎಂದು ಈಗಾಗಲೇ ಹಲವಾರು ಹೊಸ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕೆಂದು ಪ್ರಸ್ತಾವನೆಗಳನ್ನು ನಿಗಮಕ್ಕೆ ಕಳುಹಿಸಿದ್ದಾರೆ ಅಲ್ಲಿ ಇವರಿಗೂ ಇಲ್ಲ, ಅವರಿಗೂ ಇಲ್ಲ, ಹೊಸ ಕೆಲಸಗಳಿಗಾಗಿ ಇವತ್ತು ಸುಮಾರು 3000 ಕೋಟಿ ರೂಪಾಯಿಗಳು ಬೇಕಾಗುತ್ತದೆ ಅಂದರೆ 5800 ಕೋಟಿ ರೂಪಾಯಿಗಳು ಬರೇ ಕರ್ನಾಟಕ ನೀರಾವರಿ ನಿಗಮಕ್ಕೇ ಬೇಕಾಗುತ್ತದೆ ಕೃಷ್ಣ ಜಲ ಭಾಗ್ಯ ನಿಗಮಕ್ಕೆ 2500 ಕೋಟಿ ರೂಪಾಯಿಗಳು ಬೇಕಾಗುತ್ತದೆ ಕಾವೇರಿ ನೀರಾವರಿ ನಿಗಮಕ್ಕೆ ಹೋದ ಸಲ 850 ಕೋಟಿ ರೂಪಾಯಿಗಳನ್ನು ಹೆಚ್ಚು ಕಡಿಮೆ ಕೊಡತಕ್ಕಂಥ ವ್ಯವಸ್ಥೆ ಆಗಿತ್ತು ಅದು ಸಂಪೂರ್ಣವಾಗಿ ಆಗಲಿಲ್ಲ ಈ ಸಲವೂ ಕೂಡ ಅಲ್ಲೂ ಹಣದ ಕೊರತೆಯಾಗಿದೆ ಕನಿಷ್ಟ 500 ಕೋಟಿ ರೂಪಾಯಿಗಳನ್ನಾದರೂ ಕೊಡಿ ಎಂಬುದು ಅಲ್ಲಿನ ಬೇಡಿಕೆಯಾಗಿದೆ ಹೀಗೆ ಮೇಜರ್ ಇರಿಗೇಷನ್‌ನಲ್ಲೂ ಸಹ ನಮ್ಮ ಹೆಚ್ಚಿನ ಹಣ ಇವತ್ತು ದೊರಕುತ್ತಿಲ್ಲ ಅದಕ್ಕಾಗಿ ನಾನು ಅವರಿಗೆ ಬಜೆಟ್‌ನಲ್ಲಿ ಅದಕ್ಕೆ ಹೆಚ್ಚಿನ ಅವಕಾಶ ಇಲ್ಲದಿದ್ದರೂ ಕೂಡ ನಾವು ಬಾಂಡ್ ಅನ್ನು ಇಶ್ಯೂ ಮಾಡಿ ಸಾಲವನ್ನು ತೆಗೆದುಕೊಂಡು, ಈ ಏನು constructive work ಇವೆಯೋ, ಇಂತಹ productive work ಗೆ ನಾವು ಹೆಚ್ಚಿನ ಆದ್ಯತೆ ಕೊಡಬೇಕು ಎಂದು ಪತ್ರವನ್ನೂ ಕೂಡ ನಾನು ಬರೆದಿದ್ದೇನೆ, ಅವರಿಗೂ ಕೂಡ ಕೇಳಿಕೊಂಡಿದ್ದೇನೆ ಬಹುಶಃ ಅವರು ಗಮನಿಸುತ್ತಾರೆಂದು ನನಗೂ ಕೂಡ ಆಸೆ ಇದೆ ಆದರೆ ಸಣ್ಣ ನೀರಾವರಿಗೆ ಏನಾಗಿದೆ ಎಂದರೆ, ತಾವು ಕೇಳಿದಂತೆ ಹೆಚ್ಚಿನ ಹಣವನ್ನು ನಾನು ಕೂಡ ಬಜೆಟ್‌ನಲ್ಲಿ ಇಡುವುದಕ್ಕೆ ಹೇಳಿದ್ದೆ But, ಸಣ್ಣ ನೀರಾವರಿ ನಿಗಮ ಮಾಡಬೇಕು ಅನ್ನತಕ್ಕಂಥ ಉದ್ದೇಶದಿಂದ ಅಲ್ಲಿ ತೋರಿಸಿದ್ದಾರೆ ಅದಕ್ಕಾಗಿ ಅದು ತಕಣ ಆಗದಿದ್ದರೆ ಕೂಡ - -

ಸಾಧ್ಯವಾದಷ್ಟು ಮಟ್ಟಿಗೆ ಬಜೆಟ್‌ನಿಂದ ತೆಗೆದುಕೊಂಡು ಮುಂದೆ ಅದನ್ನು ಬಾಂಡ್‌ನಿಂದ ರೈಸ್ ಮಾಡಿ ಹಚ್ಚಿಗೆ ಕೆಲಸ ಮಾಡತಕ್ಕದ್ದನ್ನು ನಾವು ಮಾಡೋಣ ಆದರೆ ಈಗ ಇರತಕ್ಕಂದದ್ದು, ನಬಾರ್ಡ್ ಯೋಜನೆ ಕೆಳಗೆ 35 ಕೋಟಿ ರೂಪಾಯಿಗಳನ್ನು ನಾವು ಈ ವರ್ಷ ಇಟ್ಟುಕೊಂಡಿದ್ದೇವೆ ಬೇರೆ ಕೆಲಸಕ್ಕಾಗಿ 10 ಕೋಟಿ ರೂಪಾಯಿಗಳನ್ನು ಇಡಲಾಗಿದೆ ತಾವು ಹೇಳಿದಂತೆ 6 ಕೋಟಿ ರೂಪಾಯಿಗಳು ಆ ಕಡೆ, 4 ಕೋಟಿ ರೂಪಾಯಿಗಳು ಈ ಕಡೆಗೆ ಇಟ್ಟುಕೊಂಡಿದ್ದೇವೆ ಅಲ್ಲಿ 45 ಕೋಟಿ ರೂಪಾಯಿಗಳು ಇತ್ತು ಅಲ್ಲಿಗೆ 10 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿ 35 ಕೋಟಿ ರೂಪಾಯಿಗಳನ್ನು ಅಲ್ಲಿಟ್ಟು, 10 ಕೋಟಿ ರೂಪಾಯಿಗಳನ್ನು ಮಾತ್ರ ಇದಕ್ಕೆ ಇಟ್ಟಿದ್ದೇವೆ 11th finance commission ಅಡಿಯಲ್ಲಿ ಬರತಕ್ಕಂಥ ಕೆಲಸಕ್ಕೆ 30 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಜಲ ಸಂವರ್ಧನ ಯೋಜನೆ ನಮ್ಮ ಮಾನ್ಯ ಶ್ರೀನಿವಾಸಗೌಡರಿಗೆ ಹೆಚ್ಚಿನ ಲಾಭ ಆಗತಕ್ಕಂಥದ್ದು ಮತ್ತು ನಮ್ಮ ಹಾವೇರಿ ಶಾಸಕರ ಜಿಲ್ಲೆಗೆ ಹೆಚ್ಚಿನ ಲಾಭ ಆಗತಕ್ಕಂಥದ್ದು ಆಗಿದೆ ತುಮಕೂರು, ಹಾವೇರಿ ಮತ್ತು ಕೋಲಾರ ಇವು ಮೂರು ಜಿಲ್ಲೆಗಳು ಹೆಚ್ಚಿನ ರೀತಿಯಲ್ಲಿ ಇದರ ಲಾಭವನ್ನು ಪಡೆದುಕೊಳ್ಳುತ್ತವೆ ಅದಕ್ಕೆ 97 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಹೀಗೆ ಸುಮಾರು JSY ನಲ್ಲಿ 97 ಕೋಟಿ ರೂಪಾಯಿಗಳು, 11th finance ನಲ್ಲಿ 30 ಕೋಟಿ ರೂಪಾಯಿಗಳು, ಬೇರೆ ಕೆಲಸಕ್ಕೆ 10 ಕೋಟಿ ರೂಪಾಯಿಗಳು, ನಬಾರ್ಡ್‌ಗೆ 35 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಆದರೆ ನಮ್ಮೆಲ್ಲಾ ಶಾಸಕ ಮಿತ್ರರು ಕೇಳತಕ್ಕಂಥದ್ದು, ಬಜೆಟ್ ಪ್ರಾವಿಷನ್ other works 10 ಕೋಟಿ ರೂಪಾಯಿಗಳು ಎಂದೇನಿದೆ, ಇದರಲ್ಲಿ ಹೊಸ ಕೆಲಸಗಳು, ರಿಪೇರಿ, re-construction, ಕೆನಾಲ್ ರಿಪೇರಿ, ಕೋಡಿ ಒಡೆದಂತಹದ್ದರ ದುರಸ್ತಿಗೆ ಹಣ ಕೇಳುತ್ತಿದ್ದಾರೆ ಅದರಲ್ಲಿ ನಮಗೆ ಹಣದ ಕೊರತೆ ಇದೆ ಅದನ್ನು ನಾವು ರೈಸ್ ಮಾಡಿಕೊಂಡೇ, ಈ ಕೆಲಸ ಮಾಡೋಣ ಎಂದು ಇವತ್ತು ನಾನು ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಕಳುಹಿಸಿದ್ದೇನೆ ಅದರ ಮಂಜೂರಾತಿಗೆ ನಾನು ಪ್ರಯತ್ನ ಮಾಡುತ್ತಿದ್ದೇನೆ ಬಹುಶಃ ತಮ್ಮೆಲ್ಲರ ಸಹಕಾರದಿಂದ ಅದರಲ್ಲಿ ಸ್ವಲ್ಪವಾದರೂ ಬರಬಹುದು ಎಂಬ ನಂಬಿಕೆ ಇದೆ ತಮ್ಮ ಮುಂದೆ ನನ್ನ ಬೇಡಿಕೆ ಏನೆಂದರೆ, ಬೇಡಿಕೆ ಎನ್ನುವುದಕ್ಕಿಂತಲೂ ನನ್ನ ಸಲಹೆ ಏನೆಂದರೆ, ಈ 'ಕೂಲಿಗಾಗಿ ಕಾಳು' ಯೋಜನೆ ನಮ್ಮಲ್ಲೇನು ಬಂದಿದೆ, ದಯವಿಟ್ಟು ಅದರ ಉಪಯೋಗವನ್ನು ನಿಮ್ಮ ಜಿಲ್ಲೆಗಳಲ್ಲಿ, ನಿಮ್ಮ ನಿಮ್ಮ ತಾಲ್ಲೂಕುಗಳಲ್ಲಿ ತಾವು ಮಾಡಿಕೊಳ್ಳಬೇಕು ಅದರ ಸದುಪಯೋಗಪಡಿಸಿಕೊಳ್ಳತಕ್ಕ ಕೆಲಸವನ್ನು ಮಾಡಬೇಕು ಉದಾಹರಣೆಗೆ ಹೇಳುವುದಾದರೆ, 10 ಲಕ್ಷ ರೂಪಾಯಿಗಳ ಬಜೆಟರಿ ಪ್ರಾವಿಷನ್ ಇದ್ದರೆ, ಇನ್ನೊಂದು 20 ಲಕ್ಷ ರೂಪಾಯಿಗಳ food grains ಅದಕ್ಕೆ ಸೇರಿಸಿ, ಒಟ್ಟು 30 ಲಕ್ಷ ರೂಪಾಯಿಗಳ ಕೆಲಸವನ್ನು ನೀವು ಮಾಡಬಹುದು ಅದರ mis-use ಆಗದಂತೆ ನೋಡಿಕೊಳ್ಳತಕ್ಕಂಥ ಕರ್ತವ್ಯವೂ ಕೂಡ ನಮ್ಮದಾಗಿದೆ ಏಕೆಂದರೆ, ನೆಗಡಿ

ಬಂದ ತಕ್ಷಣವೇ ಮೂಗು ಕೊಯ್ದುಕೊಳ್ಳುವುದಕ್ಕಾಗುವುದಿಲ್ಲ ಅದಕ್ಕೇನಾದರೂ ಒಂದು ಔಷಧ ಕಂಡು ಹಿಡಿಯಬೇಕಲ್ಲಾ ಸ್ಕೀಮ್‌ಗಳೇ ಇಲ್ಲವೆಂದರೆ ಕಷ್ಟವಾಗುತ್ತದೆ ಈಗಾಗಲೇ ನಮಗೆ ಎರಡನೇ ಕಂತಿನಲ್ಲಿ ನಮಗೆ ಬರತಕ್ಕಂಥ food grains ಹೋಯಿತು 79 ಕೋಟಿ ರೂಪಾಯಿಗಳು ನಾವು ಮಾರ್ಚ್ ಒಳಗೊಳಗಾಗಿ ಡ್ರಾ ಮಾಡದೆ ಇದ್ದ ಕಾರಣ ಅದೂ ಹೋಯಿತು ಹೀಗಾಗಿ ಸುಮಾರು 200–250 ಕೋಟಿ ರೂಪಾಯಿಗಳವರೆಗೆ ಹೆಚ್ಚು ಕಡಿಮೆ ನಮಗೆ ಸಿಗತಕ್ಕಂಥ ಸಹಾಯವನ್ನು ಕಳೆದುಕೊಂಡಿದ್ದೇವೆ ಈ ಇಂಜಿನಿಯರ್‌ಗಳು ಒಂದು ಕಡೆ ಹೆದರಿಕೊಂಡು ಅವರು ಮಾಡಲಿಲ್ಲ ಇನ್ನೊಂದು ಕಡೆ, ನಮಗೇನನ್ನುತ್ತಾರೋ ಎಂದು ಶಾಸಕರುಗಳೂ ಕೂಡ ಹೆದರಿಕೊಂಡು, ನೋಡೋಣ ಇದು ಎಷ್ಟು ದಿವಸ ಹೀಗೇ ನಡೆಯುತ್ತದೆ ಎಂದು ಕೊಂಡು, ಅವರೂ ಕೂಡ ಪ್ರಪೋಸಲ್ ಕೊಟ್ಟು, ಇವತ್ತು ಕೆಲಸವನ್ನು ಮಾಡಿಸಲಿಕ್ಕೆ ಹೋಗಲಿಲ್ಲ ಎಲ್ಲಾ ಜಿಲ್ಲಾಧಿಕಾರಿಗಳೂ ಕೂಡ ಇವತ್ತು ತಣ್ಣಗಾಗಿ ಅವರೂ ಕೂಡ ಕುಳಿತಿದ್ದಾರೆ ಅನೇಕ ಕಡೆ ನಾವು ಕೆರೆ ದುರಸ್ತಿ ಮತ್ತು ಕಾಲುವೆ ದುರಸ್ತಿ ಕೆಲಸವನ್ನು ಹಿಂದೆ ಅನೇಕ ನಮ್ಮ ಶಾಸಕರ ಮತಕ್ಷೇತ್ರದಲ್ಲಿ ಮಾಡಿದ್ದೇವೆ ನಮ್ಮ ರೇವುನಾಯಕ್‌ರವರೂ ಸಾಕಷ್ಟು ಮಾಡಿಸಿದ್ದಾರೆ ಆದರೆ ಏಕೋ ಅವರು ಹೇಳುತ್ತಲೇ ಇಲ್ಲ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಹಣದ ಪ್ರಾವಿಷನ್ ಎಲ್ಲೆಲ್ಲಿದೆ, ಉದಾಹರಣೆಗಾಗಿ other work ನಲ್ಲಿ ಸ್ವಲ್ಪ ಹಣ ಇದ್ದರೆ, 1/3 ಪ್ರಾವಿಷನ್ ಅದರಲ್ಲಿ ಮಾಡಿಕೊಳ್ಳಬಹುದು ಒಮ್ಮೆ ಕೆಲಸ ಪ್ರಾರಂಭವಾದರೆ, ಅದಕ್ಕೆ ಇದನ್ನು ಸೇರಿಸಿ complete ಮಾಡಿಕೊಳ್ಳಬಹುದು ನಾವು ಯಾವ ರೀತಿಯಾಗಿ ಅದರ ಉಪಯೋಗ ಪಡೆದುಕೊಳ್ಳುತ್ತೇವೋ ಅದರ ಮೇಲೆ ಅದು ಹೋಗುತ್ತದೆ ಈಗ SJRY food grains ಬಂದಿದೆ, ಯಾರೂ ಅದನ್ನು ಮುಟ್ಟಲಿಕ್ಕೆ ತಯಾರಿಲ್ಲ ಸುಮಾರು 2 ಲಕ್ಷ ಮೆಟ್ರಿಕ್ ಟನ್ SJRY ನಲ್ಲಿ ಬಂದಂತಹದ್ದು ಇನ್ನೂ ಲಿಫ್ಟೇ ಆಗಿಲ್ಲ ನಾನು ಈ ಬಗ್ಗೆ ನಿನ್ನೆ ಬಂದಿದ್ದಂತಹ food secretary ಯವರನ್ನು ಕೇಳಿದೆ ಇದೇಕೆ ಹೀಗೆ ಎಂದರೆ ಎಲ್ಲಿ ಸಾರ್ ಕಿರಿಕಿರಿ, ಇದನ್ನು ಎತ್ತಿ ಏನು ಮಾಡೋಣ ಎನ್ನುತ್ತಾರೆ ಈಗ ಆ ಗ್ರಾಮ ಪಂಚಾಯಿತಿಗಳು suffer ಆಗುತ್ತವೆ ಆದ್ದರಿಂದ ಇದಕ್ಕೆ ಏನಾದರೂ ಒಂದು ಪರಿಹಾರವನ್ನು ನಾವು ಕಂಡು ಹಿಡಿಯಬೇಕು

**ಶ್ರೀ ಜಗದೀಶ್ ಶೆಟ್ಟರ್** ಈ ರೀತಿ ಅವರು ಕೆಲಸ ಮಾಡುವುದಿಲ್ಲ, ಅಕ್ಕಿ ಬಂದಿದೆ, ಎಲ್ಲಾ ಬಂದಿದೆ, ಬೇರೆ ಬೇರೆ ಯೋಜನೆಗಳನ್ನು ಆ ಇಂಜಿನಿಯರ್ಸ್ ಹೆದರಿ ಮಾಡುತ್ತಿಲ್ಲ ಎಂದು ಹೇಳುವಂತಾದ್ದು, ಆದರೆ, ಸರ್ಕಾರ ಏನು ಮಾಡುತ್ತಿದೆ? ಸರ್ಕಾರ ಇದಕ್ಕೆ ಪರಿಹಾರವನ್ನು ಕೊಡಬೇಕಲ್ಲಾ ಇದರ ಗೈಡ್‌ಲೈನ್ಸ್ ಚೇಂಜ್ ಮಾಡುವಂತಾದ್ದು ಅಥವಾ ಇತರೆ ಏನಾದರೂ ಒಂದು ಪರಿಹಾರವನ್ನು ಸರ್ಕಾರ ಕಂಡು ಹಿಡಿಯಬೇಕಲ್ಲವೇ?

**ಶ್ರೀ ಮಲ್ಲಿಕಾರ್ಜುನ ಖರ್ಗೆ** ನಾನು ಇದನ್ನು ಸಲಹೆ ಮಾಡುತ್ತಿದ್ದೇನೆ ಎಂದು ಹೇಳಿದ್ದೇನೆಯೇ ಹೊರತಾಗಿ, ಸರ್ಕಾರ ಏನು ಮಾಡುತ್ತದೆ, ಅವರು ಏನು ಮಾಡುತ್ತಾರೆ ಎಂದಲ್ಲ

ಎಲ್ಲರೂ ಕೂಡಿ ಮನಸ್ಸು ಮಾಡಿದರೆ ಇದರ ಸದುಪಯೋಗ ಮಾಡಿಕೊಂಡು ಕೆರೆಗಳ ದುರಸ್ತಿ ಮಾಡಿಸಬಹುದು ಎಂಬ ಕಾರಣಕ್ಕಾಗಿ ನಾನು ಅದನ್ನು ಹೇಳಿದೆ

**ಶ್ರೀ ಆರಗ ಜ್ಞಾನೇಂದ್ರ** ನಮ್ಮ ಕರ್ತವ್ಯ ಏನು ಎಂದು ಹೇಳಿ ನಾವು ಯಾವ ರೀತಿ ನಿಮಗೆ ಸಹಾಯ ಮಾಡಬಹುದು ಎಂಬುದನ್ನು ಹೇಳಿ ಅದನ್ನು ಮಾಡಲಿಕ್ಕೆ ನಾವು ತಯಾರಿದ್ದೇವೆ

**ಶ್ರೀ ಜಗದೀಶ್ ಶೆಟ್ಟರ್** ಸರ್ಕಾರ ಏನಾದರೂ ಇದಕ್ಕೆ ಪರಿಹಾರ ಹುಡುಕಬೇಕಲ್ಲಾ ನಿಯಮಾವಳಿಗಳನ್ನು ಏನಾದರೂ ಬದಲಾವಣೆ ಮಾಡಬೇಕಾಗಿದ್ದರೆ ಬದಲಾವಣೆ ಮಾಡಿ ಇದಾಗುವುದಿಲ್ಲ ಎನ್ನುವುದಾದರೆ ಇದ್ದಂತಹ ವ್ಯವಸ್ಥೆಯಲ್ಲೇ ನೀವು ಕೆಲಸ ಮಾಡಬೇಕಾಗುತ್ತದೆ

**ಶ್ರೀ ಆರಗ ಜ್ಞಾನೇಂದ್ರ** 200–300 ಕೋಟಿ ರೂಪಾಯಿಗಳು ಲಾಸ್ ಆಗುತ್ತದೆ ಎಂದರೆ ಏನರ್ಥ?

**ಶ್ರೀ ಜಗದೀಶ್ ಶೆಟ್ಟರ್** · ಅದು ಆಗುವುದಿಲ್ಲವೆಂದರೆ ಇರುವಂಥ ವ್ಯವಸ್ಥೆಯಲ್ಲಾದರೂ ನೀವು ಕೆಲಸ ಮಾಡಿಸಬೇಕಲ್ಲಾ

**ಶ್ರೀ ಬಿ ಎಸ್ ಯಡಿಯೂರಪ್ಪ** ತಾವು ಹೇಳಿದಂತೆ ಯಾರೇ ಆಗಲಿ, ನಿಮ್ಮ ಜಾಗದಲ್ಲಿ (ಸರ್ಕಾರದಲ್ಲಿ) ಕುಳಿತಿರುವಂಥ ಸಂದರ್ಭದಲ್ಲಿ ಹಣಕಾಸಿನ ಸಮಸ್ಯೆಗಳಿರುವ ಈ ಸಮಯದಲ್ಲಿ 'ಕೂಲಿಗಾಗಿ ಕಾಳು' ಯೋಜನೆಯಡಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಎದುರಿಸಲು ಉಚಿತವಾಗಿ ಬಂದಿರುವ ಹಣ, ಅಕ್ಕಿ ಸದ್ವಿನಿಯೋಗವಾಗಬೇಕು ಈ ದೃಷ್ಟಿಯಿಂದ ಶಾಸಕರಿಗೆ ಜವಾಬ್ದಾರಿ ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ ಇಲ್ಲಿ ಉದ್ಭವಿಸಿರುವ ಪ್ರಶ್ನೆಯೇನೆಂದರೆ, ಕೆಲವು ಕಡೆಗಳಲ್ಲಿ ನಮ್ಮ ಅಧಿಕಾರಿಗಳು ಮೆಷಿನರಿಗಳನ್ನು ತೆಗೆದುಕೊಂಡು ಕೆಲಸ ಮಾಡಲು ಪ್ರಾರಂಭಿಸಿರುವುದಕ್ಕೆ ನಾವು ವಿರೋಧಿಸಿದ್ದೇವೆ ಏಕೆ ವಿರೋಧ ಮಾಡಿದ್ದೇವೆಂದರೆ, ಒಂದು–ಒಂದೂವರೆ ತಿಂಗಳ ಕಾಲ ಕೂಲಿ ಕಾರ್ಮಿಕರಿಗೆ ಸಿಗುವಂತಹ ಕೆಲಸವನ್ನು ಕೇವಲ ಐದಾರು ದಿವಸಗಳಲ್ಲಿ ರಾತ್ರಿಯೆಲ್ಲಾ ಮೆಷಿನರಿಗಳಲ್ಲಿ ಕೆಲಸ ಮಾಡಿಸಿದವು ಎಂದೇಳಿ 2 ಲಕ್ಷ ರೂಪಾಯಿಗಳು ಮಂಜೂರಾದರೆ, 50 ಸಾವಿರ ರೂಪಾಯಿಗಳನ್ನು ಸಹ ಖರ್ಚು ಮಾಡದೆ ತಿಂದಂಥ ಸಾವಿರಾರು ಉದಾಹರಣೆಗಳಿವೆ. ಅದಕ್ಕೆ ನಾವು ನಿಮಗೆ ಸಲಹೆ ಕೊಡುವುದೇನೆಂದರೆ, ಶಾಸಕರು ಸಮಿತಿ ಏನಿದೆ, ಅಧಿಕಾರಿಗಳೇನಿದ್ದಾರೆ, ನೀವು ದಯಮಾಡಿ ಪರಿಶೀಲನೆ ಮಾಡಬೇಕು ಈಗ ಯಾವುದೋ ಒಂದು ಹಳ್ಳಿಗೆ ಕಾಮಗಾರಿಗೆ ಒಂದು ಲಕ್ಷ ರೂಪಾಯಿ ಮಂಜೂರಾತಿಯಾಗಿದೆ ಅಲ್ಲಿ ಕೆಲಸ ಪ್ರಾರಂಭವಾಗಿ ಒಂದು ವಾರವಾದರೂ ವಾರದ ಕೊನೆಯಲ್ಲಿ ಕೂಲಿ ಕಾರ್ಮಿಕರಿಗೆ ನಿಮ್ಮ ಅಧಿಕಾರಿಗಳಾದವರು ಅಕ್ಕಿ ಹಾಗೂ ಹಣವನ್ನು ಪಾವತಿಸಬೇಕಲ್ಲ ಕನಿಷ್ಠ ಪಕ್ಷ ನೀವು ವಾರಕ್ಕೊಮ್ಮೆಯಾದರೂ ನೋಡಿಕೊಂಡು ಬನ್ನಿ. ಅಧಿಕಾರಿಗಳೊಂದಿಗೆ ಪರ್ಸನಲ್ ಆಗಿ ಮಾತನಾಡಿ, ಹಣ ಹಾಗೂ ಕಾಂಪೋನೆಂಟ್ ಅನ್ನು ಬಿಡುಗಡೆ ಮಾಡದಿರುವ ಪರಿಣಾಮ ಮತ್ತು ವಾರಕ್ಕೊಮ್ಮೆ ಅಕ್ಕಿ ಹಾಗೂ ದುಡ್ಡನ್ನು ಕೊಡದಿರುವ ಪರಿಣಾಮ ತಿಂಗಳಾನುಗಟ್ಟಳೆ ಇದನ್ನು ಕೊಡದೇ ನೂರಾರೂ ಚೀಲಗಳ ಅಕ್ಕಿಯನ್ನು ಪಂಚಾಯಿತಿಗೆ ಕಳುಹಿಸುವುದು, ಅದನ್ನು ಬೇಕಾದವರು ಹಂಚಿಕೊಳ್ಳುವುದು, ಕೊನೆಗೆ ಕೂಲಿ ಮಾಡಿರುವವರಿಗೆ ನಾಮ ಹಾಕುವುದು! ಇದೆಲ್ಲಾ ನಡೆದಿದೆ! ಅದಕ್ಕೋಸ್ಕರ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ನೀವು ಅಕ್ಕಿ ಜೊತೆಗೆ ಏನು ದುಡ್ಡು ಕೊಡಬೇಕಾಗಿದೆ, ಅದರ ಡಿಸ್‌ಪೋಸಲ್‌ಗೆ ವ್ಯವಸ್ಥೆ ಮಾಡಿ,

ಅಲ್ಲಿರುವಂತಹ ಶಾಸಕರುಗಳನ್ನು, ಅಧಿಕಾರಿಗಳನ್ನು ನೀವು ನಂಬುತ್ತೀರೋ ಇಲ್ಲವೋ, ಕೆಲವು ಕಡೆ ಇಡೀ ಗ್ರಾಮಸ್ಥರು ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಒಂದು ಇಲಾಖೆಯವರು ಕೆಲಸ ಮಾಡಿ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, ಅವರು ಐದು ಲಕ್ಷ ರೂಪಾಯಿಗಳಷ್ಟು ಕೆಲಸ ಮಾಡಿರುವ ಉದಾಹರಣೆಗಳಿವೆ ಇಡೀ ಊರೂರೇ ಕೆಲಸ ಮಾಡಿದೆ ಆದರೆ, ಅದನ್ನು ಉಪಯೋಗಿಸಿಕೊಳ್ಳಲು ನಮ್ಮ ಅಧಿಕಾರಿಗಳು ಅಲ್ಲಿ ಹೋಗಿ ನಿಂತುಕೊಳ್ಳಲು ಸಿದ್ದರಿಲ್ಲ ಏಕೆಂದರೆ, ಅವರಿಗೆ ಅದರಿಂದ ಲಾಭವಿಲ್ಲ ಅಧಿಕಾರಿಗಳಿಗೆ ಕಿವಿ ಹಿಂಡಿ, ಬಿಗಿ ಮಾಡುವ ಮುಖಾಂತರ ಅಲ್ಲಿನ ಗ್ರಾಮಸ್ಥರುಗಳನ್ನು ಇನ್‌ವಾಲ್ವ್ ಮಾಡಿಕೊಂಡರೆ ಈ ಕಾರ್ಯಕ್ರಮ ಖಂಡಿತವಾಗಿಯೂ ಯಶಸ್ವಿಯಾಗುತ್ತದೆ ಇದಕ್ಕೆ ನಾವು ಎಲ್ಲಾ ರೀತಿಯ ಸಹಕಾರಗಳನ್ನು ನೀಡಲು ಸಿದ್ದರಿದ್ದೇವೆ

**ಶ್ರೀ ಜಗದೀಶ್ ಶೆಟ್ಟರ್** ಜಲ ಸಂರಕ್ಷಣಾ ಯೋಜನೆಯಲ್ಲಿ ಈಗಾಗಲೇ ಕೆಲಸ ಮಾಡಿ ಆರು ತಿಂಗಳಾಯಿತು ರೈತರು ಬದು ಹಾಕಿಕೊಂಡಿದ್ದಾರೆ ಅವರುಗಳಿಗೆ ಹತ್ತತ್ತು ಕ್ವಿಂಟಾಲ್‌ನಷ್ಟು ಅಕ್ಕಿ ಕೊಡಬೇಕು, ಇನ್ನೂ ಕೊಟ್ಟಿಲ್ಲ ಹಾಗಾದರೆ, ಬಂದಂಥ ಆ ಅಕ್ಕಿ ಎಲ್ಲಿ ಹೋಯಿತು? ರೈತರು ಅಕ್ಕಿ ಕೇಳುತ್ತಿದ್ದಾರೆ ತಮ್ಮ ಹೊಲಗಳಲ್ಲೆಲ್ಲಾ ಬದು ಹಾಕಿಕೊಂಡಿದ್ದಾರೆ

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಅದನ್ನು ನೀವು ನಿಮ್ಮ-ನಿಮ್ಮ ಜಿಲ್ಲೆಗಳಲ್ಲಿ ಅಲಾಟ್‌ಮೆಂಟ್ ಆಗುವಾಗ ಮಾಡಿಕೊಳ್ಳಬೇಕು

**ಶ್ರೀ ಜಗದೀಶ್ ಶೆಟ್ಟರ್** ಮಾಡಿದ್ದೇವೆ, ಆದರೆ, ಅಧಿಕಾರಿಗಳು ರಿಲೀಸ್ ಮಾಡುತ್ತಿಲ್ಲ

**ಶ್ರೀ ಮಲ್ಲಿಕಾರ್ಜುನ ಖರ್ಗೆ** ನಿಮ್ಮ-ನಿಮ್ಮ ಜಿಲ್ಲೆಗಳಿಗೆ ನೀವು ಅಲಾಟ್‌ಮೆಂಟ್ ಮಾಡುವಾಗ ನಿಮ್ಮ ತಾಲ್ಲೂಕುಗಳಲ್ಲಿ ನೀವೇ ಅಧ್ಯಕ್ಷರಾಗಿರುತ್ತೀರಿ ಆಗ ಬಂದಂಥ ಅಕ್ಕಿಯನ್ನು ಯಾವ್ಯಾವ ಕೆಲಸಗಳಿಗೆ ಅಲಾಟ್ ಮಾಡಬೇಕೆಂದು ಸಮಿತಿಗೆ ನೀವು ಸಲಹೆ ನೀಡಿದರೆ, ಅದರಂತೆ ನಿಮ್ಮ ಸಮಿತಿಯವರು ಮುಂದಿನ ಕ್ರಮ ಕೈಗೊಳ್ಳುತ್ತಾರೆ

**ಶ್ರೀ ಜಗದೀಶ್ ಶೆಟ್ಟರ್** ಆದರೂ ಅಧಿಕಾರಿಗಳು ರಿಲೀಸ್ ಮಾಡುತ್ತಿಲ್ಲ ರೈತರು ಕೆಲಸ ಮಾಡಿದ್ದಾರೆ ಎಲ್ಲಾ ರೀತಿಯ force ಅನ್ನು use ಮಾಡಿದ್ದೇವೆ. ಬೇಕಿದ್ದರೆ, ನಿಮಗೆ ಒಂದೆರಡು ಹಳ್ಳಿಗಳ ಉದಾಹರಣೆ ನೀಡುತ್ತೇನೆ ಸುಮಾರು 400-500 ಜನರು ಬದು ಹಾಕಿಕೊಂಡಿದ್ದಾರೆ ಅವರಿಗೆ ಅಕ್ಕಿ ಇನ್ನೂ ರಿಲೀಸ್ ಆಗಿಲ್ಲ

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಮಾನ್ಯ ಅಧ್ಯಕ್ಷರೆ, ನಾನು ನೋಡಿರುವಂತೆ ಬೇರೆ ಬೇರೆ ಕಡೆಗಳಲ್ಲಿ ಬಂದಿರುವ ಹಣಕ್ಕಿಂತಲೂ ರಸ್ತೆ ಕಾಮಗಾರಿ ಕೆಲಸಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡಿದ್ದಾರೆ ಎಲ್ಲಿ ನೂರು ಜನರು ಬರಬೇಕಿತ್ತೋ ಅಂತಹ ಕಡೆಗಳಲ್ಲಿ 300, 400, 500 ಜನರು ಬಂದಿರುವುದು ನಿಮಗೆ ಗೊತ್ತಿದೆ ವಿಶೇಷವಾಗಿ, ಧಾರವಾಡ ಗ್ರಾಮಾಂತರ ಭಾಗ, ರೋಣ, ನರಗುಂದ, ಈ ಎಲ್ಲಾ ಕಡೆಗಳಲ್ಲೂ ಸ್ವಲ್ಪ ಹೆಚ್ಚಿನ ರೀತಿಯಲ್ಲಿ ಬಂದಿದ್ದಾರೆ ಅದು ಒತ್ತಟ್ಟಿಗಿರಲಿ

**ಶ್ರೀ ವಾಟಾಳ್ ನಾಗರಾಜ್** ಈಗ ಇದರಲ್ಲಿ ಗೊಂದಲವಿದೆ ಕೂಲಿಗಾಗಿ ಕಾಳು ಯೋಜನೆಯಡಿ ಮೆಷಿನ್ ಉಪಯೋಗಿಸಬೇಕೇ? ಬಿಡಬೇಕೇ? ಕೂಲಿಗಾರರೇ ಮಾಡಬೇಕೇ? ಇವೆಲ್ಲದರ ಬಗ್ಗೆ ಕುಳಿತುಕೊಂಡು ಚರ್ಚೆ ಮಾಡಿ, ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು ಇಲ್ಲದಿದ್ದರೆ, ಇದರಿಂದ ಏನಾಗಿದೆಯೆಂದರೆ, ಇಡೀ ರಾಜ್ಯದಲ್ಲಿ ಎಲ್ಲೋ ಒಂದು ಕಡೆ ಕೆಲಸ

ನಿಂತು ಹೋಗಿದೆ ಇದು ಒಂದು ಕಡೆಯಾದರೆ ಮತ್ತೊಂದೆಡೆ, ವಶಪಡಿಸಿಕೊಂಡಿರುವ ಅಕ್ಕಿ ಎಲ್ಲವೂ ಕೊಳೆಯುತ್ತಿದೆ ಇನ್ನೊಂದೆಡೆ ಅಧಿಕಾರಿಗಳಾದವರು ತಾವು ಕೆಲಸ ಮಾಡುವುದಿಲ್ಲವೆಂದು ನಿರ್ಧರಿಸಿರುವುದರಿಂದ ಒಂದು ರೀತಿಯಲ್ಲಿ ಭಯ-ಭೀತಿ ನಿರ್ಮಾಣವಾಗಿದೆ ಆದುದರಿಂದ, ನಾನು ಹೇಳುವುದೇನೆಂದರೆ, ಈ ಸದನ ಇವೊತ್ತು ಕೊನೆಯ ದಿವಸವಾಗಿರುವುದರಿಂದ, ಕುಳಿತುಕೊಂಡು ಯಾವುದಾದರೊಂದು ತೀರ್ಮಾನಕ್ಕೆ ಬಂದರೆ ಮುಂದೆ ಏನು ಮಾಡಬೇಕೆಂಬ ಬಗ್ಗೆ ಎಲ್ಲರನ್ನೂ ಕರೆದು ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದಲ್ಲವೇ?

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಒಳ್ಳೆಯ ಸಲಹೆ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಮಾನ್ಯ ಅಧ್ಯಕ್ಷರೆ, ನಾನು ಹಿಂದೆ ಮಾತನಾಡುವಾಗ ಇದರ ಬಗ್ಗೆ ಹೇಳಿದ್ದೆ ಈ ರೀತಿ ಆಗುವುದಕ್ಕೆ ಮೂಲ ಕಾರಣವೇನೆಂದರೆ, ವಾರಕ್ಕೊಮ್ಮೆಯಾದರೂ ಅಕ್ಕಿಯನ್ನು ವಿತರಿಸುವ ವ್ಯವಸ್ಥೆ ಏಕೆ ಮಾಡುತ್ತಿಲ್ಲವೆಂದರೆ, ಕೆಲಸನ್ನು ಅಪ್ರೂವ್ ಮಾಡುತ್ತೀರಲ್ಲಾ ಅಪ್ರೂವ್ ಮಾಡಿದ ತಕ್ಷಣ ಅಲ್ಲಿ ಅಕ್ಕಿ ಸ್ಟಾಕ್ ಬರುವುದಿಲ್ಲ ಅಲ್ಲಿ ಅಕ್ಕಿ ಬಾರದಿರುವ ಕಾರಣಕ್ಕೋಸ್ಕರ ಅವರು ಕೆಲಸ ಮಾಡಿ, ಒಂದು ತಿಂಗಳಾದ ನಂತರ ಅಕ್ಕಿ ಬಂದರೆ ಕೆಲಸ ಮಾಡಿಸಿರತಕ್ಕವನು ಅನಿವಾರ್ಯವಾಗಿ ಆ ಕೆಲಸ ಮಾಡಬೇಕಾಗುತ್ತದೆ ಇದನ್ನು ತಪ್ಪಿಸಬೇಕೆಂದಾದರೆ, ನೀವು ಯಾವ್ಯಾವ ಕೆಲಸಗಳನ್ನು ಅಪ್ರೂವ್ ಮಾಡುತ್ತೀರೋ, ಆ ಕೆಲಸಗಳಿಗೆ ತಕ್ಕಷ್ಟು ಅಕ್ಕಿಯನ್ನು ಅಡ್ವಾನ್ಸ್ ಆಗಿ ಅಲ್ಲಿಗೆ ಕಳುಹಿಸಿಕೊಡಬೇಕು ಮತ್ತು ಅಧಿಕಾರಿಗಳಿಗೆ 'ವಾರಕ್ಕೊಂದು ಸಲ ಆ ಸ್ಪಾಟ್‌ಗೆ ಹೋಗಿ ಅದನ್ನು ಡೆಲಿವರ್ ಮಾಡಬೇಕು' ಎಂದು ಹೇಳಬೇಕು ಡೆಲಿವರಿ ಮಾಡಿದಾಗ ಮಾತ್ರ ಏನಾದರೂ ಪ್ರಯೋಜನವಾಗುತ್ತದೆ ಪಕ್ಕದ ಆಂಧ್ರಪ್ರದೇಶದಲ್ಲಿ ಒಂದು ವ್ಯವಸ್ಥೆ ಮಾಡಿದರು ನೀವು ಅದನ್ನಾದರೂ ನೋಡಬೇಕು

**ಶ್ರೀ ವಾಟಾಳ್ ನಾಗರಾಜ್** ತಾವು ಎಲ್ಲರನ್ನೂ ಕರೆದು ಒಂದು ಮೀಟಿಂಗ್ ಮಾಡಿ

**ಅಧ್ಯಕ್ಷರು** ಇದರ ಬಗ್ಗೆ ನಿಯಮ 69ರಡಿ ಚರ್ಚೆ ಇದೆ ಆಗ ತಾವೂ ಇದ್ದರೆ ಒಳ್ಳೆಯದು

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಮಾನ್ಯ ವಿರೋಧ ಪಕ್ಷದ ನಾಯಕರು, ಜಗದೀಶ್ ಶೆಟ್ಟರ್, ವಾಟಾಳ್ ನಾಗರಾಜ್ ಮತ್ತು ಶ್ರೀರಾಮರೆಡ್ಡಿಯವರು ಹಲವಾರು ಸಲಹೆಗಳನ್ನು ನೀಡಿದ್ದಾರೆ, ಕಂದಾಯ ಇಲಾಖೆಯ ಸಚಿವರಾದ ಮಾನ್ಯ ಎಂ ಪಿ ಪ್ರಕಾಶ್‌ರವರು ಈ ಸಬ್ ಕಮಿಟಿಯ ಚೇರ್ಮನ್ ಆಗಿದ್ದಾರೆ ಆ ಸಮಿತಿಗೆ ಅಧಿಕಾರಿಗಳನ್ನು ಹಾಗೂ ನಮ್ಮ ಕೆಲವು ಪಬ್ಲಿಕ್ ರೆಪ್ರಸೆಂಟೇಟಿವ್ಸ್ ಶಾಸಕರನ್ನು ಕರೆಸುವ ಮೂಲಕ ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದು ಬಹಳ ಸೂಕ್ತ ಏಕೆಂದರೆ, ಇದು ಅಭಿವೃದ್ಧಿ ಕೆಲಸ ಮತ್ತು ಇತ್ತೀಚೆಗೆ ನಮಗೆ ಹಣ ಬೇರೆಯುದರಲ್ಲಿ ಸಿಗಲಿಲ್ಲವೆಂದರೆ, ಈ ಫಾರ್ವರ್ನಲ್ಲಿ ಸಿಕ್ಕಂಥ ಹಣ ಸದುಪಯೋಗಪಡಿಸಿಕೊಳ್ಳಬೇಕೆಂದು ಒಂದೇ ಉದ್ದೇಶವಿದೆ ಇದರ ಬಗ್ಗೆ ನಾನು ಅವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅವರು ಬೇಗನೆ ಒಂದು ತೀರ್ಮಾನ

**ಶ್ರೀ ವಾಟಾಳ್ ನಾಗರಾಜ್** ಇವ್ರೋತ್ತೇ ವಿರೋಧ ಪಕ್ಷದ ಎಲ್ಲಾ ನಾಯಕರುಗಳನ್ನು ಕರೆದು ಮಾತುಕತೆಯಾಡಿದರೆ ಸಮಸ್ಯೆ ಬಗೆ ಹರಿಯುತ್ತದೆಂಬುದು ನನ್ನ ಅಭಿಪ್ರಾಯ

**ಶ್ರೀ ಮಲ್ಲಿಕಾರ್ಜುನ ಖರ್ಗೆ** ನಾನು ಅವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅವರು ಸಬ್ ಕಮಿಟಿಯ ಚೇರ್ಮನ್ ಆಗಿದ್ದು, ಆ ಕುರಿತು ನಿರ್ಣಯ ತೆಗೆದುಕೊಳ್ಳುವ ಅಧಿಕಾರ ಕೂಡ ಅವರಿಗಿರುತ್ತದೆ ಅನಂತರ, ಈ ರೀತಿಯಾಗಿ ಮೈನರ್ ಇರಿಗೇಶನ್‌ಗೆ ಕೆಲವು ಅಲಾಟ್‌ಮೆಂಟ್ ಇದೆ ಆದರೆ, ಬಜೆಟರಿ ಪ್ರಾವಿಜನ್‌ಗೆ ಹೆಚ್ಚಿನ ಹಣವಿಲ್ಲ, ಮೇಂಟನೆನ್ಸ್‌ಗೆ ಹೆಚ್ಚಿನ ಹಣವಿಲ್ಲ ಅದರ ಬಗ್ಗೆ ನಾನು ಈಗಾಗಲೇ ಮಾನ್ಯ ಅರ್ಥ ಸಚಿವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ ಮತ್ತು ಆ ಇಲಾಖೆಯ ಸಂಬಂಧಪಟ್ಟವರೊಂದಿಗೂ ಸತತವಾಗಿ ಸಂಪರ್ಕದಲ್ಲಿದ್ದೇನೆ ಆದಷ್ಟು ಹೆಚ್ಚಿನ ರೀತಿಯಲ್ಲಿ ಇದಕ್ಕೆ ಹಣ ಸಿಗಬಹುದೆಂದು ನಾನು ತಿಳಿದಿದ್ದೇನೆ. ಅದಕ್ಕೋಸ್ಕರ ಇದರಲ್ಲಿ ಬಜೆಟ್ ಕೊರತೆ ಇರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಕೊಡಗು ಜಿಲ್ಲೆಯಲ್ಲಿ ಹೆಚ್ಚುವರಿ ಬಸ್ಸುಗಳನ್ನು ಬಿಡುವುದು**

111 (842) ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿರುವ ಸಾರಿಗೆ ಸಂಸ್ಥೆಯ ಬಸ್ ಡಿಪೋಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು),

ಆ) ಈ ಎಲ್ಲಾ ಡಿಪೋಗಳಲ್ಲಿ ಕ್ರಮಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು ಹಾಗೂ ಎರಡು ವರ್ಷಗಳಿಂದ ಈ ಘಟಕಗಳಿಗೆ ಒದಗಿಸಿರುವ ಹೊಸ ಬಸ್ಸುಗಳ ಸಂಖ್ಯೆ ಎಷ್ಟು;

ಇ) ಮಡಿಕೇರಿ ಕ್ಷೇತ್ರ ವ್ಯಾಪ್ತಿಯಲ್ಲಿ ಕ್ರಮಿಸುತ್ತಿರುವ ಬಸ್ಸುಗಳು ಹಾಗೂ ಮಾರ್ಗಗಳು ಎಷ್ಟು ಹೊಸ ಬಸ್ ಮಾರ್ಗಗಳನ್ನು ಕಲ್ಪಿಸಲು ಸಾರಿಗೆ ಸಂಸ್ಥೆ ಯಾವ ಕ್ರಮ ಕೈಗೊಂಡಿದೆ

ಈ) ಗ್ರಾಮೀಣ ಸಾರಿಗೆ ವ್ಯವಸ್ಥೆಯ ಸುಧಾರಣೆಗಾಗಿ ಯಾವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ, ಹಾಗೂ ಅದಕ್ಕಾಗಿ ಈ ಮಾರ್ಗಗಳಿಗೆ ಬೇಕಾಗುವ ಬಸ್ಸುಗಳೆಷ್ಟು,

ಉ) ಈ ಬಸ್ಸುಗಳನ್ನು ಯಾವಾಗ ಒದಗಿಸಲಾಗುತ್ತದೆ ಹಾಗೂ ಯಾವಾಗಿನಿಂದ ಕ್ರಮಿಸಲು ಬಿಡಲಾಗುವುದು (ವಿವರ ಒದಗಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಒಂದು ಈ ಘಟಕವು ಮಡಿಕೇರಿಯಲ್ಲಿದೆ (ಮಡಿಕೇರಿ ತಾಲ್ಲೂಕು)

ಆ) 90 ಬಸ್ಸುಗಳು ಎರಡು ವರ್ಷಗಳಲ್ಲಿ 35 ಹೊಸ ಬಸ್ಸುಗಳನ್ನು ಒದಗಿಸಲಾಗಿದೆ

ಇ) 73 ಬಸ್ಸುಗಳನ್ನು ಆಚರಿಸುತ್ತಿದ್ದು, ಇವುಗಳು 51 ಮಾರ್ಗಗಳಲ್ಲಿ ಕಾರ್ಯಾಚರಣೆಗೊಳ್ಳುತ್ತಿವೆ 5 (ಐದು) ಹೊಸ ಅನುಸೂಚಿಗಳನ್ನು ಕಳೆದ 6 ತಿಂಗಳಲ್ಲಿ ಪ್ರಾರಂಭಿಸಲಾಗಿದೆ.

ಈ) ಮಡಿಕೇರಿ ಘಟಕದ ವತಿಯಿಂದ 6(ಆರು) ಬಸ್ಸುಗಳನ್ನು ಮಡಿಕೇರಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಆಚರಣೆಗೊಳಿಸಲಾಗುತ್ತಿದೆ

8(ಎಂಟು) ಬಸ್ಸುಗಳು ಬೇಕು

ಉ) ಪ್ರಶ್ನೆ (ಈ) ಯಲ್ಲಿನ ಮಾರ್ಗಗಳು ರಾಷ್ಟ್ರೀಕೃತವಲ್ಲದ ವಲಯದಲ್ಲಿ ಬರುತ್ತಿದ್ದು, ಪ್ರಯಾಣಿಕರ ಒತ್ತಡ ಮತ್ತು ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕ್ರಮ ವಹಿಸಲಾಗುವುದು

**ಶ್ರೀ ಕೆ ಜಿ ಬೋಪಯ್ಯ** ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ ನಾನು ಗ್ರಾಮೀಣ ಸಾರಿಗೆ ಬಗ್ಗೆ ವಿವರ ಕೇಳಿದ್ದೆ ಅವರು ಕೊಟ್ಟಿರುವ ಉತ್ತರದಲ್ಲಿ, 'ಮಡಿಕೇರಿ ಕ್ಷೇತ್ರದಲ್ಲಿ ಆರು ಬಸ್ಸುಗಳು ಓಡುತ್ತಿದೆ, ಇನ್ನೂ ಎಂಟು ಬಸ್ಸುಗಳು ಬೇಕಾಗಿದೆ' ಎಂದು ತಿಳಿಸಿದ್ದಾರೆ ಆದರೆ, ವಾಸ್ತವವಾಗಿ ಇರುವುದು ನಾಲ್ಕೇ ಗ್ರಾಮೀಣ ಸಾರಿಗೆ ಬಸ್ಸುಗಳು ಆ ನಾಲ್ಕು ಬಸ್ಸುಗಳಲ್ಲಿ ಒಂದು ಬಸ್ಸನ್ನು ದಕ್ಷಿಣ ಕನ್ನಡ ಜಿಲ್ಲೆಯ ಗಡಿಭಾಗದಲ್ಲಿ ಚೊಂಬುದಬ್ಬಡ್ಕ ಎಂಬ ಒಂದು ಗ್ರಾಮವಿದ್ದು, ಚುನಾವಣೆ ಘೋಷಣೆಯಾದ ಬಳಿಕ ಅಲ್ಲಿಗೆ ಬಸ್ಸುಗಳನ್ನು ಓಡಿಸಲು ಪ್ರಾರಂಭಿಸಿದರು ಅದಕ್ಕಾಗಿ ದೊಡ್ಡ ಸಮಾರಂಭ ಏರ್ಪಡಿಸಿದರು ಆದರೆ, ಒಂದೇ ತಿಂಗಳಿನಲ್ಲಿ ಆ ಬಸ್ಸನ್ನು ನಿಲ್ಲಿಸಿದ್ದಾರೆ! ಇತ್ತೀಚೆಗೆ ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮಡಿಕೇರಿ, ಸಿದ್ದಾಪುರ, ಮತ್ತು ಪಿರಿಯಾಪಟ್ಟಣಕ್ಕೆ ಕ್ರಮಿಸಲು ಸಿದ್ದಾಪುರದಿಂದ ಗ್ರಾಮಾಂತರ ಪ್ರದೇಶದೊಳಗೆ ಹೋಗಿ ಒಂದು ಸಮಾರಂಭ ಉದ್ಘಾಟನೆ ಮಾಡಿದರು ಏನು ಇವೊತ್ತು ನಾಲ್ಕು ಬಸ್ಸುಗಳನ್ನು ಸ್ಟೇಟ್ ಹೈವೇಯಲ್ಲಿ ಓಡಿಸುವ ಒಂದು ಪ್ರವೃತ್ತಿ ಕಾಣುತ್ತಿದೆ, ಮತ್ತೆ ತಾವು ಹೇಳಿದಂತೆ, 8–9 ಬಸ್ಸುಗಳ ಪೈಕಿ ಮಡಿಕೇರಿ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಿಗೆ ಸುಮಾರು ಹದಿನೈದು ಬಸ್ಸುಗಳು ಬೇಕೆಂಬ ಪ್ರಸ್ತಾವನೆಯನ್ನೂ ಕೂಡ ಅಲ್ಲಿಯ ಡಿಪೋ ಮುಖಾಂತರ ಕಳುಹಿಸಿಕೊಡಲಾಗಿದೆ ಇಲ್ಲಿಗೆ ಬರುತ್ತಿದ್ದ ಬಸ್ಸುಗಳನ್ನು ನಿಲ್ಲಿಸಿರುವ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ? ಅದನ್ನು ಓಡಿಸುವುದಕ್ಕೆ ಯಾವಾಗ ಕ್ರಮ ಕೈಗೊಳ್ಳುತ್ತೀರಿ? ಉಳಿದ ಹದಿನೈದು ರೂಟುಗಳನ್ನು ಗುರ್ತಿಸಿದ್ದು, ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎಂಬ ವಿವರಣೆ ಬೇಕು

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಸನ್ಮಾನ್ಯ ಅಧ್ಯಕ್ಷರೆ, ಕೂರ್ಗ್ ಜಿಲ್ಲೆ ಇದು non-monopoly district ನಮಗೆ ಇಲ್ಲಿ monopoly ಇಲ್ಲ ಅಥವಾ ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಎಲ್ಲಾ ರೂಟುಗಳಿಗೂ ತೆಗೆದುಕೊಂಡು ಹೋಗತಕ್ಕಂಥ ಅಧಿಕಾರ ಇಲ್ಲ ಅದಕ್ಕಾಗಿ ಇದು non-monopoly district ಆಗಿರುವ ಕಾರಣ ಸುಮಾರು 250 ಪ್ರೈವೇಟ್ ಬಸ್ಸುಗಳು ಓಡುತ್ತಿವೆ ನಮ್ಮ ಕೆಲವು ಜನರ ಬೇಡಿಕೆ ಮೇಲೆ ಅಥವಾ ಜನಪ್ರತಿನಿಧಿಗಳಾದ ತಾವು ಹೇಳಿದ ಮೇಲೆ ಸುಮಾರು 90 ಬಸ್ಸುಗಳು ಆ ಡಿಪೋನಲ್ಲಿವೆ ಅದರಲ್ಲಿ ಸುಮಾರು 35 ಮಾರ್ಗಗಳಲ್ಲಿ ಓಡುತ್ತಿವೆ ಹೆಚ್ಚು–ಕಡಿಮೆ ಸುಮಾರು 51 ರೂಟುಗಳನ್ನು ಇವೊತ್ತು ಕೆಎಸ್‌ಆರ್‌ಟಿಸಿಯವರು ತೆಗೆದುಕೊಂಡಿದ್ದಾರೆ

ಚುನಾವಣೆಯಲ್ಲಿ ಕೆಲವು ಬಸ್ ಹಾಕಿ ನಂತರ ನಿಲ್ಲಿಸಿದರು ಎಂದು ಹೇಳುತ್ತಾರೆ [illegible] ಬಸ್, ಯಾವ [illegible] ಕೊಟ್ಟರೆ

ಖಂಡಿತವಾಗಿ ಎಲ್ಲಿ ಫೀಸಿಬಲ್ ಇದೆ ಅಲ್ಲಿ ಪುನ ಓಡಿಸತಕ್ಕಂತಹ ವ್ಯವಸ್ಥೆಯನ್ನು ಖಂಡಿತವಾಗಿ ಮಾಡುತ್ತೇವೆ ಮತ್ತು ಎಂಟು ಬಸ್ಸುಗಳನ್ನು ಹೊಸದಾಗಿ ಕೇಳಿದ್ದಾರೆ, ಹಣದ ಲಭ್ಯತೆ ಮೇಲೆ ಹೊಸ ಬಸ್‌ಗಳನ್ನು ನಾವು ಕೊಟ್ಟುಕೊಂಡು ಹೋಗುತ್ತೇವೆ ಈಗಾಗಲೇ ನಾವು 90ರಲ್ಲಿ 35 ಬಸ್‌ಗಳನ್ನು ರಿಪ್ಲೇಸ್ ಮಾಡಿ ಹೊಸ ಬಸ್‌ಗಳನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡಿದ್ದೇವೆ ಈಗ ಪುನಃ ನಿಮಗೆ ಬೇಕಾಗಿರುವ ಮಡಿಕೇರಿ ಘಟಕಕ್ಕೆ ಸುಮಾರು ಎಂಟು ಬಸ್ಸುಗಳು ಬೇಕೆಂದು ಹೇಳಿದ್ದೀರಿ, ಅದನ್ನು ನಾನು ಹಣಕಾಸಿನ ವ್ಯವಸ್ಥೆ ನೋಡಿಕೊಂಡು ಹಂತ ಹಂತವಾಗಿ ಕೊಡುತ್ತೇನೆ

**ಶ್ರೀ ಕೆ ಜಿ ಬೋಪಯ್ಯ** ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನನ್ನ ಇಡೀ ಕ್ಷೇತ್ರದಲ್ಲಿ ಎರಡೇ ಕಾಲೇಜುಗಳಿವೆ ಇದು ಬಿಟ್ಟರೆ ಬೇರೆ ಯಾವುದೇ ಸರ್ಕಾರಿ ಕಾಲೇಜು ಅಥವಾ ಖಾಸಗಿ ಕಾಲೇಜುಗಳಿಲ್ಲ ಎಲ್ಲಾ ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶಗಳಿಂದ ಬರಬೇಕಾಗಿದೆ. ಇವತ್ತು ಎಂಟು ಬಸ್ ಏನು ಕೇಳಿದ್ದಾರೆ, ನನಗೆ ಮಾಹಿತಿ ಇದ್ದ ಪ್ರಕಾರ ಸುಮಾರು 15 ಬಸ್‌ಗಳು ಬೇಕಾಗಿವೆ. ರಸ್ತೆಗಳು ಬಸ್ಸುಗಳು ಓಡಾಡುವಂತಹ ರಸ್ತೆಗಳಿವೆ ಇದರಲ್ಲಿ ಇರುವಂತಹ ನಾಲ್ಕು ಬಸ್ಸುಗಳನ್ನು ನಿಲ್ಲಿಸಿ ಮುಖ್ಯ ರಸ್ತೆಯಲ್ಲಿ ಓಡಿಸುವಂತಹ ಪ್ರವೃತ್ತಿಯಾಗಬೇಕು ಉದಾಹರಣೆಗೆ ಮಡಿಕೇರಿಯಿಂದ ಕುಶಾಲನಗರಕ್ಕೆ ಒಂದು ಗ್ರಾಮೀಣ ಸಾರಿಗೆ ಬಸ್ ಹಾಕಿದ್ದರು ಆದರೆ ಅದನ್ನು ಹಾಕಿದ್ದು ಮಡಿಕೇರಿ, ಸಿದ್ದಾಪುರ, ಘಟ್ಟದಹಳ್ಳ ಎಂದು ಒಳಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ಕುಶಾಲನಗರಕ್ಕೆ ಹೋಗಬೇಕೆಂದು ಆದರೆ ಇವತ್ತು ಅದನ್ನು ನೇರವಾಗಿ ಸ್ಟೇಟ್ ಹೈವೇಯಲ್ಲಿ ಓಡಿಸುವಂತಹ ಪ್ರವೃತ್ತಿಯಾಗಿದೆ ಚೊಂಬು ಅಂತಹ ಗ್ರಾಮಕ್ಕೆ ಒಂದು ತಿಂಗಳು ಓಡಿಸಿ ನಿಲ್ಲಿಸಿದರು ಇದನ್ನು ತಕ್ಷಣ ಸರಿ ಮಾಡಬೇಕು ಅದರ ಜೊತೆಗೆ ಇವತ್ತು ಜಿಲ್ಲೆಯಲ್ಲಿ ಒಂದು ಡಿಪೋ ಮಾತ್ರ ಇದೆ. ಕನಿಷ್ಠ ಇನ್ನೊಂದು ಡಿಪೋ ಆದರೂ ತೆರೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಮನಾಪಲಿ ರೂಟ್ ಇಲ್ಲ, ನಾನ್ ಮನಾಪಲಿ ಇರುವ ಕಾರಣ ಪ್ರೈವೇಟ್ ಬಸ್‌ಗಳು ಹೆಚ್ಚಿಗೆ ಹೋಗುತ್ತವೆ ಕಾಲೇಜುಗಳಿಗೆ ಹೋಗುವ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದೂ ಕೂಡ ಹೇಳಿದ್ದೀರಿ ಅದು ಅನುಕೂಲವಾಗುವುದು ಯಾವಾಗ ಎಂದರೆ, ಬೇರೆ ರೂಟ್‌ಗಳು ನಮಗೆ ಲಾಭದಾಯಕ ಇದ್ದಾಗ ಈ ರೂಟ್‌ಗಳನ್ನು ಕೂಡ ನಾವು ಒಂದೊಂದು ಸೇರಿಸಬಹುದು ಲಾಭದ್ದೆಲ್ಲಾ ಪ್ರೈವೇಟ್‌ನವರಿಗೆ, ಲುಕ್ಸಾನು ಮಾತ್ರ ನನಗೆ ಎಂದರೆ, ಆಗ ಬಹಳ ಕಷ್ಟವಾಗುತ್ತದೆ ಇದನ್ನು ನೋಡಿಕೊಂಡು ತಾವು ಹೇಳಿದ ಹಾಗೆ ರೀಎಕ್ಸಾಮಿನ್ ಮಾಡಿ ನಾವು ಎಷ್ಟು ಕೊಡಬಹುದು, ಅದರ ಬಗ್ಗೆ ಚಿಂತನೆ ಮಾಡುತ್ತೇನೆ

**ಭಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕಗಳಿಗೆ ಮೀಟರ್ ಆಳವಡಿಸುತ್ತಿರುವುದು**

112(835) ಶ್ರೀ ರೇಣುಕಾಚಾರ್ಯ ಎಂ ಪಿ (ಹೊನ್ನಾಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಡವರ ಭಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕಗಳಿಗೆ ಮೀಟರ್‌ಗಳನ್ನು ಅಳವಡಿಸುತ್ತಿರುವುದು ನಿಜವೇ,

ಆ) ಈಗಾಗಲೇ ಎಷ್ಟು ಸಂಪರ್ಕಗಳಿಗೆ ಮೀಟರ್‌ಗಳನ್ನು ಆಳವಡಿಸಲಾಗಿದೆ ಹಾಗೂ ಆ ಪೈಕಿ ಹೊನ್ನಾಳಿ ತಾಲ್ಲೂಕಿಗೆ ಸಂಬಂಧಪಟ್ಟಂತೆ ಎಷ್ಟು ಮೀಟರ್ ಅಳವಡಿಸಲಾಗಿದೆ (ಗ್ರಾಮವಾರು ಮಾಹಿತಿ ನೀಡುವುದು),

ಇ) ಮೀಟರ್ ಅಳವಡಿಸಲು ಸಂಗ್ರಹಿಸುತ್ತಿರುವ ಹಣ ಎಷ್ಟು,

ಈ) ಸರ್ಕಾರ ಭಾಗ್ಯಜ್ಯೋತಿ ಸಂಪರ್ಕಗಳಿಗೆ ಮೀಟರ್‌ಗಳನ್ನು ಅಳವಡಿಸುವುದನ್ನು ತಕ್ಷಣ ಕೈಬಿಡಲು ಸರ್ಕಾರದ ನಿಲುವೇನು,

ಶ್ರೀ ಮಲ್ಲಿಕಾರ್ಜುನ ಖರ್ಗೆ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ದಿನಾಂಕ 31–3–2004ರವರೆಗೆ ರಾಜ್ಯದಲ್ಲಿ ಒಟ್ಟು 6,94,466 ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳಿಗೆ ಮೀಟರ್‌ಗಳನ್ನು ಅಳವಡಿಸಲಾಗಿದೆ ಈ ಪೈಕಿ ಹೊನ್ನಾಳಿ ತಾಲ್ಲೂಕಿನಲ್ಲಿ ದಿನಾಂಕ 30–6–2004 ರವರೆಗೆ ಒಟ್ಟು 6,650 ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳಿಗೆ ಮೀಟರ್‌ಗಳನ್ನು ಅಳವಡಿಸಲಾಗಿದೆ ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ವಿದ್ಯುತ್ ಸಂಪರ್ಕಗಳಿಗೆ ಮೀಟರ್ ಅಳವಡಿಸಲು ಗ್ರಾಹಕರಿಂದ ಹಣವನ್ನು ಸಂಗ್ರಹಿಸುತ್ತಿಲ್ಲ

ಇ) ಎನರ್ಜಿ ಆಡಿಟಿಂಗ್‌ನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ಉತ್ತರದಾಯಿತ್ವವನ್ನು ನಿಗದಿಪಡಿಸಲು ಯೂನಿವರ್ಸಲ್ ಮೀಟರಿಂಗ್ ಕಾರ್ಯಕ್ರಮವು ಅವಶ್ಯಕವಾಗಿದೆ ಸರ್ಕಾರದ ಯೂನಿವರ್ಸಲ್ ಮೀಟರಿಂಗ್ ಕಾರ್ಯ ನೀತಿಯಂತೆ ಇದುವರೆವಿಗೆ ಮಾಪಕಗಳನ್ನು ಅಳವಡಿಸದೇ ಇರುವ ಭಾಗ್ಯ ಜ್ಯೋತಿ / ಕುಟೀರ ಜ್ಯೋತಿ, ನೀರಾವರಿ ಪಂಪು ಸೆಟ್ಟುಗಳು ಮತ್ತು ಬೀದಿ ದೀಪ ಸ್ಥಾವರಗಳಿಗೆ ಮೀಟರ್‌ಗಳನ್ನು ಅಳವಡಿಸಬೇಕಾಗಿರುತ್ತದೆ ಈ ಹಿನ್ನಲೆಯಲ್ಲಿ ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಸಂಪರ್ಕಗಳಿಗೆ ಮೀಟರ್‌ಗಳನ್ನು ಅಳವಡಿಸುವ ಕಾರ್ಯವನ್ನು ಕೈಬಿಡಲಾಗುವುದಿಲ್ಲ

## ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ರೇಣುಕಾಚಾರ್ಯ ಎಂ.ಪಿ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 835ಕ್ಕೆ ಅನುಬಂಧ

### ಹೊನ್ನಾಳಿ ತಾಲ್ಲೂಕಿನ ಗ್ರಾಮಗಳಲ್ಲಿನ ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ವಿದ್ಯುತ್ ಸ್ಥಾವರಗಳ ಮತ್ತು ಅವುಗಳಿಗೆ ಅಳವಡಿಸಲಾದ ಮೀಟರ್‌ಗಳ ಸಂಖ್ಯೆಗಳ ಗ್ರಾಮವಾರು ವಿವರಗಳು

| ಕ್ರಮ ಮತ್ತು ಸಂಖ್ಯೆ | ಗ್ರಾಮಗಳು | ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಹೊಂದಿರುವ ಸ್ಥಾವರಗಳ ಸಂಖ್ಯೆ | ಭಾಗ್ಯ ಜ್ಯೋತಿ ಕುಟೀರ ಜ್ಯೋತಿ ವಿದ್ಯುತ್‌ಸ್ಥಾವರಗಳಿಗೆ ಅಳವಡಿಸಲಾದ ಮೀಟರ್‌ಗಳ ಸಂಖ್ಯೆ |
|---|---|---|---|
| 1 | ಅರಬಗಟ್ಟೆ | 211 | – |
| 2 | ಸುಂಕದಕಟ್ಟೆ | 163 | – |
| 3 | ಅರಕೆರೆ | 166 | – |
| 4 | ನರಸಗೊಂಡನಹಳ್ಳಿ | 141 | – |
| 5 | ಬನ್ನಿಕೋಡು | 134 | 104 |
| 6 | ಯೆರೆಚಿಕ್ಕನಹಳ್ಳಿ | 117 | 117 |
| 7 | ಬಸವನಹಳ್ಳಿ | 177 | – |
| 8 | ಬೀರಗೊಂಡನಹಳ್ಳಿ | 134 | 114 |
| 9 | ಹಿರೇಬಸು | 89 | 89 |
| 10 | ಸದಾಶಿವಪುರ | 63 | 63 |
| 11 | ಉಜ್ಜಿನಿಪುರ | 49 | 49 |
| 12 | ಬೇಲಿಮಲ್ಲೂರು | 115 | [illegible] |
| 13 | ಕೋಟೆಮಲ್ಲೂರು | 158 | [illegible] |
| 14 | ಬೆನಕನಹಳ್ಳಿ | 116 | 116 |
| 15 | ಚಿ ದಾ ತಾಂಡಾ | 102 | 102 |
| 16 | ಕಡದಕಟ್ಟೆ | 83 | 53 |
| 17 | ಕೋಟೆಹಳ್ಳಿ ವೆಂಕಟೇಶನಗರ | 69 | 69 |
| 18 | ಮರಿಗೊಂಡನಹಳ್ಳಿ | 80 | – |
| 19 | ಗೋವಿನಕೋವಿ | 108 | 10[illegible] |

| 1 | 2 | 3 | 4 |
|---|---|---|---|
| 20 | ಕುರುವ ತಾಂಡಾ | 55 | – |
| 21 | ಕುರುವ | 62 | – |
| 22 | ಬಲಮುರಿ ಹೊಸಕಟ್ಟೆ | 104 | 104 |
| 23 | ಗೋಪಗೊಂಡನಹಳ್ಳಿ | 189 | 189 |
| 24 | ಎಸ್ ಮಲ್ಲಾಪುರ | 76 | 76 |
| 25 | ಹನುಮಸಾಗರ | 178 | 178 |
| 26 | ಹೊಳೆಹರಳಹಳ್ಳಿ | 83 | 83 |
| 27 | ಕೊಸಾಯಕಹಳ್ಳಿ ಬಲ್ಲೇಶ್ವರ | 88 | 58 |
| 28 | ದಿಡಗೂರು | 84 | – |
| 29 | ಹರಳಹಳ್ಳಿ–ಫಾರ್ಮ್ ಹೌಸ್ | 111 | 111 |
| 30 | ಚಿಕ್ಕರೆಹಳ್ಳಿ | 83 | 83 |
| 31 | ದೊಡ್ಡೇರಹಳ್ಳಿ | 106 | 106 |
| 32 | ಹತ್ತೂರು | 67 | 47 |
| 33 | ಮಾರಿಕೊಪ್ಪ | 85 | 85 |
| 34 | ಚಿಕ್ಕಗೋಣಿಕೆರೆ ಹೊನ್ನೂರು ವಡ್ಡರಹಳ್ಳಿ | | 112 |
| – | | | |
| 35 | ಹರಗನಹಳ್ಳಿ–ಕೊಣಂತಲೆ | 139 | – |
| 36 | ಹಿರೇಗೋಣಿಕೆರೆ | 145 | – |
| 37 | ಅಪ್ಪುರಾವ್ ಕ್ಯಾಂಪ್ | 58 | 58 |
| 38 | ಬಾಗೇವಾಡಿ | 55 | 55 |
| 39 | ಹುರುಳಹಳ್ಳಿ | 63 | 63 |
| 40 | ರಾಗಿ ಹೊಸಳ್ಳಿ | 91 | 91 |
| 41 | ಗಂಟ್ಯಾಪುರ | 83 | – |
| 42 | ಕಮ್ಮರಗಟ್ಟಿ ತಾಂಡಾ | 60 | – |
| 43 | ಕಮ್ಮರಗಟ್ಟಿ ಬಸವಾಪುರ | 70 | – |
| 44 | ಹನುಮನಹಳ್ಳಿ | 45 | 45 |
| 45 | ಕುಲಗಟ್ಟಿ | 129 | – |
| 46 | ಕುಲಂಬಿ | 78 | 78 |
| 47 | ಕುಂಬಲೂರು | 65 | 65 |

| 1 | 2 | 3 | 4 |
|---|---|---|---|
| 48 | ನೆಲಹೊನ್ನೆ | 83 | 83 |
| 49 | ಕುಂದೂರು | 165 | 165 |
| 50 | ಬೈರವನಹಳ್ಳಿ | 63 | 63 |
| 51 | ಚನ್ನೇನಹಳ್ಳಿ | 68 | 46 |
| 52 | ಕ್ಯಾಸಿನಕೆರೆ | 106 | 56 |
| 53 | ಹನಗವಾಡಿ | 99 | – |
| 54 | ಲಿಂಗಾಪುರ | 120 | – |
| 55 | ಚಿನ್ನಮುಂಬರಪುರ | 62 | – |
| 56 | ದೇವರ ಹೊನ್ನಾಳಿ | 67 | – |
| 57 | ಗೊಲ್ಲರಹಟ್ಟಿ | 74 | – |
| 58 | ಹೊಸ ದೇವರ ಹೊನ್ನಾಳಿ | 41 | – |
| 59 | ಮಸಾಡಿ | 60 | – |
| 60 | ತಕ್ಕನಹಳ್ಳಿ | 69 | – |
| 61 | ಕೆಂಗನಹಳ್ಳಿ | 48 | – |
| 62 | ಮುಕ್ತೇನಹಳ್ಳಿ | 72 | 72 |
| 63 | ತಿಮ್ಮೇನಹಳ್ಳಿ | 39 | 39 |
| 64 | ಬುಲ್ಲಾಪುರ | 42 | – |
| 65 | ಹೊಟ್ಯಾಪುರ | 49 | – |
| 66 | ರಾಂಪುರ | 87 | 87 |
| 67 | ಟನೂರು | 64 | 64 |
| 68 | ಮಲ್ಲಿಕಟ್ಟೆ ತಾಂಡಾ | 32 | – |
| 69 | ಸಾಸವೆಹಳ್ಳಿ | 110 | 60 |
| 70 | ಸೊರಟೂರು | 117 | – |
| 71 | ತುಗ್ಗಲಹಳ್ಳಿ | 68 | – |
| 72 | ಮಲಾಲಿ | 89 | – |
| 73 | ಗೋಪಗೊಂಡನಹಳ್ಳಿ ಟಿ | 88 | – |
| 74 | ತಗ್ಗಿನಹಳ್ಳಿ | 24 | – |
| 75 | ಬೇವಿನಹಳ್ಳಿ | 60 | – |
| 76 | ನೇರಲಗುಂಡಿ | 62 | – |
| 77 | ಸಿಂಗಟಕೆರೆ | 101 | |

| 1 | 2 | 3 | 4 |
|---|---|---|---|
| 78 | ತರಗನಹಟ್ಟಿ | 109 | – |
| 79 | ತಿಮ್ಮಲಾಪುರ | 90 | 90 |
| 80 | ಚಿಕ್ಕಳ್ಳಿವನ | 92 | 92 |
| 81 | ಎರೆಹಳ್ಳಿ | 64 | 64 |
| 82 | ಹೆಚ್ ಕಡದಕಟ್ಟೆ | 57 | – |
| 83 | ಬಿದರಗಡ್ಡೆ | 80 | – |
| 84 | ದೇವನಾಯಕನಹಳ್ಳಿ | 63 | – |
| 85 | ಹಿರೇಮಠ ಎ ಪಿ ಎಂ ಸಿ | 23 | 23 |
| 86 | ಮಾದಾಪುರ | 68 | – |
| 87 | ಹೈಸ್ಕೂಲ್ ಟಿ ಸಿ | 3 | 3 |
| 88 | ಪ್ರವಾಸಿ ಮಂದಿರ | 2 | 2 |
| 89 | ಬೆಳಗುತ್ತಿ | 96 | 96 |
| 90 | ದಾನೆಹಳ್ಳಿ | 92 | 92 |
| 91 | ಗುಡ್ಡೇಹಳ್ಳಿ | 158 | – |
| 92 | ಹೊಸಕೊಪ್ಪ | 56 | 56 |
| 93 | ಕಂಚಿಗರನಹಳ್ಳಿ | 37 | 37 |
| 94 | ಕೋಡಿಕೊಪ್ಪ | 37 | 30 |
| 95 | ಕುದುರೆಕೊಂಡ | 49 | 49 |
| 96 | ಮದನಬಾವಿ | 73 | – |
| 97 | ಮಲ್ಲಿಗೇನಹಳ್ಳಿ | 70 | 70 |
| 98 | ಮಲ್ಲಿಗೇನಹಳ್ಳಿ | 84 | – |
| 99 | ನ್ಯಾಮತಿ | 178 | – |
| 100 | ರಾಮೇಶ್ವರ | 90 | – |
| 101 | ಸುರಹೊನ್ನೆ | 170 | 170 |
| 102 | ಸುರಹೊನ್ನೆ | 49 | 49 |
| 103 | ಯರಗನಹಳ್ಳಿ | 81 | – |
| 104 | ಅರೇಹಳ್ಳಿ | 96 | 96 |
| 105 | ಅರುಂಡಿ | 87 | 87 |
| 106 | ಬಿ ಜೋಗಟ್ಟೆ | 92 | 92 |
| 107 | ದೊಡ್ಡೆತ್ತಿನಹಳ್ಳಿ | 80 | 80 |

| 1 | 2 | 3 | 4 |
|---|---|---|---|
| 108 | ಗಟಿಕಟಗಟ್ಟೆ ಗ್ರಾಮ | 94 | 94 |
| 109 | ಗಂಗನಕೋಟೆ | 112 | 112 |
| 110 | ಜೀನಹಳ್ಳಿ | 109 | 109 |
| 111 | ಕಂಕನಹಳ್ಳಿ | 98 | 98 |
| 112 | ಕಟ್ಟಿಗೆ | 102 | 102 |
| 113 | ಕೆಂಚೆಕೊಪ್ಪ | 210 | 210 |
| 114 | ಕೊಡಚಗೊಂಡನಹಳ್ಳಿ | 112 | 112 |
| 115 | ಕೂಗೋನಹಳ್ಳಿ | 98 | 98 |
| 116 | ಕುಂಕೋವಿ | 112 | 112 |
| 117 | ಮಾದೇನಹಳ್ಳಿ | 103 | 103 |
| 118 | ಬಿದರಹಳ್ಳಿ | 62 | 62 |
| 119 | ಚಿನ್ನಿಕಟ್ಟೆ | 86 | 86 |
| 120 | ಗಂಜಿನಹಳ್ಳಿ | 63 | 63 |
| 121 | ಹಳೇಜೋಗ | 61 | 61 |
| 122 | ಹೊಸಜೋಗ | 64 | 64 |
| 123 | ಕೋಡಿಹಳ್ಳಿ | 72 | 72 |
| 124 | ಕ್ಯಾತನಕೊಪ್ಪ | 65 | 65 |
| 125 | ಲಕ್ಕಿನಕೊಪ್ಪ | 83 | 83 |
| 126 | ಮಾಚಗೊಂಡನಹಳ್ಳಿ | 78 | 76 |
| 127 | ಮಾದಾಪುರ | 42 | 42 |
| 128 | ಮೂಸೇನಹಳ್ಳಿ | 9 | 9 |
| 129 | ಪಲವನಹಳ್ಳಿ | 13 | 13 |
| 130 | ಸಲಬಾಲು | 43 | 43 |
| 131 | ಸಿದ್ದಾಪುರ | 13 | 13 |
| 132 | ಸೋಗಿಲು | 12 | 12 |
| 133 | ಸುರಗೊಂಡನಕೊಪ್ಪ | 41 | 41 |
| 134 | ಸೌಲಂಗ | 52 | 52 |
| 135 | ವಡಯರತೂರು | 49 | 49 |
| | **ಒಟ್ಟು** | **11570** | **6630** |

**ಶ್ರೀ ಎಂ ಪಿ ರೇಣುಕಾಚಾರ್ಯ** ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಲ್ಲಿ ಕೇಳುವುದು ಈಗಾಗಲೇ ಎಷ್ಟು ಸಂಪರ್ಕಗಳಿಗೆ ಮೀಟರ್‌ಗಳನ್ನು ಅಳವಡಿಸಲಾಗಿದೆ ಮತ್ತು ಆ ಪೈಕಿ ಹೊನ್ನಾಳಿ ತಾಲ್ಲೂಕಿಗೆ ಸಂಬಂಧಪಟ್ಟಂತೆ ಎಷ್ಟು ಮೀಟರ್‌ಗಳನ್ನು ಅಳವಡಿಸಲಾಗಿದೆ? ಹಿಂದೆ ಸನ್ಮಾನ್ಯ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಯಾವ ಬಡವರು ಕತ್ತಲಿನಲ್ಲಿದ್ದರು ಅಂತಹವರಿಗೆ ಭಾಗ್ಯಜ್ಯೋತಿ ಯೋಜನೆ ಕೊಟ್ಟರು ಇವತ್ತು ಸರ್ಕಾರ ಈ ಭಾಗ್ಯ ಜ್ಯೋತಿಯಿಂದ ಹಣ ವಸೂಲು ಮಾಡುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗುತ್ತದೆ ಈಗಾಗಲೇ ಭಾಗ್ಯಜ್ಯೋತಿ ಯೋಜನೆಯಡಿ ಬರುವಂತಹ ಗ್ರಾಹಕರಿಂದ ಹಣ ವಸೂಲಿ ಮಾಡುವುದಕ್ಕಾಗಿ ಮೀಟರ್ ಅಳವಡಿಸಿ ಎಲ್ಲಾ ಕಡೆ ಹಣ ವಸೂಲಿ ಮಾಡುತ್ತಿದ್ದಾರೆ ಒಬ್ಬ ಫಲಾನುಭವಿಗೆ ಸುಮಾರು ಮೂರರಿಂದ ನಾಲ್ಕು ಸಾವಿರ ಹಣ ವಸೂಲಿ ಮಾಡುತ್ತಿದ್ದಾರೆ ಹಣ ಕೊಡದಿದ್ದರೆ ಕರೆಂಟ್ ಡಿಸ್‌ಕನೆಕ್ಟ್ ಮಾಡಿ ಅವರ ಮೇಲೆ ಕೇಸ್ ಹಾಕುತ್ತಿದ್ದಾರೆ ಸರ್ಕಾರ ದಯವಿಟ್ಟು ಇದರ ಬಗ್ಗೆ ಉತ್ತರ ಕೊಡಬೇಕು

**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)** ಮಾನ್ಯ ಅಧ್ಯಕ್ಷರೆ, ಮೂರರಿಂದ ನಾಲ್ಕು ಸಾವಿರ ಹಣ ರೂ ವಸೂಲಿ ಮಾಡುತ್ತಿರುವಂತಹ ಪ್ರಕರಣಗಳು ಯಾವುದಾದರೂ ಇದ್ದರೆ, ನನಗೆ ಕೊಟ್ಟರೆ ನಾನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಪ್ರಕಾಶ್ ಖಂಡ್ರೆ** ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರ ಏನು ಕೊಟ್ಟಿದ್ದಾರೆ, ನಾವು ಭಾಗ್ಯ ಜ್ಯೋತಿ ಹಣ ತೆಗೆದುಕೊಳ್ಳುತ್ತಿಲ್ಲವೆಂದು ಉತ್ತರ ಕೊಟ್ಟಿದ್ದಾರೆ ಅದರ ಹಣ ತೆಗೆದುಕೊಳ್ಳುತ್ತಿದ್ದಾರೋ ಇಲ್ಲವೋ ಅದನ್ನು ಹೇಳಬೇಕು ಭಾಗ್ಯಜ್ಯೋತಿ ಬಿಲ್ ಹಣ ತೆಗೆದು ಕೊಳ್ಳುತ್ತಿಲ್ಲವೆಂದು ಉತ್ತರದಲ್ಲಿ ಕೊಟ್ಟಿದ್ದೀರಿ

**ಶ್ರೀ ಹೆಚ್ ಡಿ ರೇವಣ್ಣ** ಮಾನ್ಯ ಅಧ್ಯಕ್ಷರೆ, ಭಾಗ್ಯ ಜ್ಯೋತಿಗೆ ಮೀಟರ್ ಹಾಕಬೇಕೆಂದು ವಿದ್ಯುತ್ ಕಾಯಿದೆ 2003 ಸೆಕ್ಷನ್ 53(3)ರ ಪ್ರಕಾರ ಮೀಟರ್ ಹಾಕಲೇಬೇಕಾಗುತ್ತದೆ. ಮೀಟರ್ ಹಾಕದೆ ಯಾವುದೇ ವಿದ್ಯುತ್ ಕನೆಕ್ಷನ್ ಕೊಡುವುದಕ್ಕಾಗುವುದಿಲ್ಲ, ಅದನ್ನು ಮಾಡುತ್ತಿದ್ದೇವೆ. ಆದರೆ ದುಡ್ಡು ವಸೂಲಾತಿ ಮಾಡುವುದರ ಬಗ್ಗೆ ಸರ್ಕಾರ ಎರಡು ಸಾರಿ ಈಗಾಗಲೇ ದುಡ್ಡು ವಸೂಲಾತಿ ಮಾಡಬಾರದು ಎಂದು ತೀರ್ಮಾನ ಮಾಡಿದೆ. ಅದರಂತೆ ನೋಡಿಕೊಂಡು ಮಾಡುತ್ತೇವೆ ಏಕೆಂದರೆ, ಕೆಲವು ಕಡೆ ಭಾಗ್ಯ ಜ್ಯೋತಿ ಯೋಜನೆಯಲ್ಲಿ ವಿದ್ಯುತ್ ತೆಗೆದುಕೊಂಡವರು ವಿವಿಧ ಪ್ರಕಾರದ ಲೈಟುಗಳನ್ನು ಹಾಕಿಕೊಂಡಿದ್ದಾರೆ ಎರಡು ಲೈಟ್ ಒಂದು ಲೈಟ್ ಇದ್ದರೆ ಏನಾದರೂ ಮಾಡಬಹುದು ಕೆಲವು ಕಡೆ ಫ್ರಿಡ್ಜ್ ಇಟ್ಟುಕೊಂಡಿದ್ದಾರೆ, ಟಿ ವಿ ಇಟ್ಟುಕೊಂಡಿದ್ದಾರೆ, ಆ ತರಹ ಮಾಡಿರುವವರಿಗೆ ಮಾತ್ರ ನಾವು ಮೀಟರ್ ಹಾಕಿ ವಸೂಲಾತಿ ಮಾಡುತ್ತಿದ್ದೇವೆ ಅಂತಹ ಪ್ರಕರಣಗಳು ಸುಮಾರು 5,96,994 ಪ್ರಕರಣಗಳಿವೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ

ಶ್ರೀ ಪ್ರಕಾಶ್ ಖಂಡ್ರೆ ನಾಲ್ಕು ದಿವಸಗಳ ಕೆಳಗಡೆ ಈಟಿವಿಯಲ್ಲಿ ಕೂಡ ತೋರಿಸಿದ್ದಾರೆ ನಮ್ಮಲ್ಲಿ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ ಈ ತರಹ ಹಣ ತೆಗೆದುಕೊಳ್ಳಬಾರದು ಉತ್ತರದಲ್ಲಿ ನಾವು ತೆಗೆದುಕೊಳ್ಳುತ್ತಿಲ್ಲವೆಂದು ಉತ್ತರ ಕೊಟ್ಟಿದ್ದಾರೆ

ಶ್ರೀ ಹೆಚ್ ಡಿ ರೇವಣ್ಣ 5,96,000 ಕನೆಕ್ಷನ್‌ಗಳನ್ನು ನಾವು ಮಾಡಿದ್ದೇವೆ

ಶ್ರೀ ಸಿ ಟಿ ರವಿ ಟಿ ವಿ ತೆಗೆದುಕೊಂಡವರಿಗೆ ಭಾಗ್ಯ ಜ್ಯೋತಿ ಯೋಜನೆ ಬರುವುದಿಲ್ಲ

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಅಧ್ಯಕ್ಷರೆ, ಭಾಗ್ಯ ಜ್ಯೋತಿ ಯೋಜನೆ ಎನ್ನುವುದು ದೇವರಾಜ ಅರಸ್‌ರವರು ಇದ್ದಾಗ ಪ್ರಾರಂಭ ಮಾಡಿದರು ಯಾರು ಬೆಳಿಗ್ಗೆಯಿಂದ ರಾತ್ರಿವರೆಗೆ ಕೂಲಿ ಮಾಡಿ ರಾತ್ರಿ ವಾಪಸ್ ಬರುತ್ತಾರೆ, ಅವರು ಏನಾದರೂ ಆ ಕಾಳುಗಳು ತಂದಿರುವುದನ್ನು ಬೇಯಿಸಿಕೊಳ್ಳುವುದಕ್ಕೆ, ಅವರ ಮನೆಯಲ್ಲಿ ಹುಡುಗರು ಇದ್ದರೆ ಅವರು ಓದಿಕೊಳ್ಳುವುದಕ್ಕೆ ಎಂದು ಒಂದೇ ಒಂದು ಲೈಟು ಹಾಕಿಕೊಳ್ಳುವುದಕ್ಕೆ ಪ್ರಾವಿಷನ್ ಇದೆ. ಒಂದು ಪ್ಲಗ್, ಒಂದು ಲೈಟ್ ಇರಬೇಕು ಮಂತ್ರಿಗಳು ಉತ್ತರ ಕೊಡುವಾಗ ಫ್ರಿಡ್ಜ್ ಇಟ್ಟುಕೊಂಡಿದ್ದಾರ, ಟಿ ವಿ ಇಟ್ಟುಕೊಂಡಿದ್ದಾರೆ ಎಂದು ಹೇಳಿದರು ಅಂತಹವರು ಯಾರು ದುರುಪಯೋಗ ಮಾಡಿಕೊಂಡಿದ್ದಾರೆ, ಅವರ ಮೇಲೆ ಕ್ರಿಮಿನಲ್ ಪ್ರಾಸಿಕ್ಯೂಷನ್ ಮಾಡಿ ನಮ್ಮ ಆಕ್ಷೇಪಣೆ ಏನೂ ಇಲ್ಲ ಭಾಗ್ಯ ಜ್ಯೋತಿ ಸ್ಕೀಮ್‌ಗೆ ನೀವು ಸರ್ಕಾರದಲ್ಲಿ ಏನು ಗೈಡ್‌ಲೈನ್ಸ್ ಹಾಕಿಕೊಂಡಿದ್ದೀರಿ, ಆ ಗೈಡ್‌ಲೈನ್ಸ್ ಒಳಪಟ್ಟಿರತಕ್ಕಂತಹವರಿಗೆ ನೀವು ಬರೆ ಎಳೆಯುವುದಕ್ಕೆ ಹೋಗಬೇಡಿ ಯಾರು ಅದನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ, ಅವರ ಮೇಲೆ ನೀವು ಕ್ರಮ ಜರುಗಿಸಿ ನಮ್ಮ ಆಕ್ಷೇಪಣೆ ಇಲ್ಲ ಆ ವರ್ಗದ ಜನರಿಗೆ ಕಾಯಿದೆ ಪ್ರಕಾರ ನೀವು ಮೀಟರ್ ಅಳವಡಿಸಬೇಕೆಂದು ನಾವು ವರ್ಲ್ಡ್ ಬ್ಯಾಂಕಿಗೆ ಸಲಹೆ ಕೊಟ್ಟಿದ್ದೇವೆ. ಮೀಟರ್ ಅಳವಡಿಸಿಕೊಂಡಿದ್ದೇವೆ ಅವರಿಂದ ಹಣ ವಸೂಲು ಮಾಡತಕ್ಕಂಥದ್ದು ಕೂಡ ಸರಿ ಇಲ್ಲ ಹಿಂದೊಮ್ಮೆ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಗ, ಅವರಿಗೆ ನೋಟೀಸ್ ಬಂದಿತ್ತು ಎಂದು ನಾವೇ ಗಲಾಟೆ ಮಾಡಿ ಅದನ್ನೆಲ್ಲಾ ಹಿಂದಕ್ಕೆ ತೆಗೆಸಿದ್ದೆವು ಕೆಲವು ವರ್ಗಗಳ ಬಗ್ಗೆ ನಮಗೆ ಅನುಕಂಪ ಇರಬೇಕಾಗುತ್ತದೆ ಕೆಲವರ ಬಗ್ಗೆ ಕಾಠಿಣ್ಯ ಇರಬೇಕಾಗುತ್ತದೆ. ಯಾರ ಬಗ್ಗೆ ಅನುಕಂಪ ಇರಬೇಕು ಅವರ ಬಗ್ಗೆ ಕಾಠಿಣ್ಯ ತೋರಿಸುವುದು, ಯಾರ ಬಗ್ಗೆ ಕಠಿಣವಾಗಿರಬೇಕು ಅವರ ಬಗ್ಗೆ ಅನುಕಂಪ ತೋರಿಸುವುದು ಮಾಡುವುದರಿಂದ ಸರ್ಕಾರದ ಉದ್ದೇಶ ಸಫಲವಾಗುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ಹೀಗೆ ಮಾಡುವುದರಿಂದ ಭಾಗ್ಯ ಜ್ಯೋತಿ ಆರಂಭ ಮಾಡಿದ ಉದ್ದೇಶಕ್ಕೆ ಭಂಗವಾಗುತ್ತದೆ ನೀವು ದುಡ್ಡು ವಸೂಲು ಮಾಡುವುದಾಗಲಿ, ಏನೇ ಆಗಲಿ, ಬಹಳ ಕಡುಬಡವರು, ಇವರು ಇದನ್ನು ದೇವರಾಜ ಅರಸ್‌ರವರು ಮಾಡಿರುವುದು ನೀವು ಭಾಗ್ಯ ಜ್ಯೋತಿ ಹೆಸರಿನಲ್ಲಿ ದುಡ್ಡು ವಸೂಲು ಮಾಡುವುದಾದರೆ ಅದರ ಹೆಸರು ಬದಲಾವಣೆ ಮಾಡಿ ಭಾಗ್ಯ ಜ್ಯೋತಿ ಅಲ್ಲ, ಕರ್ಮ ಜ್ಯೋತಿ ಎಂದು ಮಾಡಿ

**ಶ್ರೀ ಬಸವರಾಜರಾಯರೆಡ್ಡಿ** ಅಧ್ಯಕ್ಷರೆ, ಭಾಗ್ಯ ಜ್ಯೋತಿ ದುರುಪಯೋಗವಾಗುತ್ತಿದೆ ಕೆಲವು ಜನ ಟಿವಿ ಇಟ್ಟುಕೊಂಡಿದ್ದಾರೆ, ಕೆಲವು ಜನ ಫ್ರಿಡ್ಜ್ ಇಟ್ಟುಕೊಂಡಿದ್ದಾರೆ

**ಶ್ರೀ ಹೆಚ್ ಡಿ ಬಸವರಾಜ್** ಬಡವರು ದುರುಪಯೋಗ ಮಾಡಿಕೊಳ್ಳುತ್ತಾರೆಂದರೆ, ಇದಕ್ಕಿಂತ ದೊಡ್ಡ ಸುಳ್ಳು ಬೇರೆ ಯಾವುದೂ ಇಲ್ಲ

**ಅಧ್ಯಕ್ಷರು** ಎಲ್ಲರೂ ಎದ್ದು ನಿಂತು ಮಾತನಾಡಿದರೆ ಹೇಗೆ? ಏನಾದರೂ ಅರ್ಥ ಇದೆಯಾ ಇದಕ್ಕೆ? ದಯಮಾಡಿ ಕೂತುಕೊಳ್ಳಿ, ಮಾನ್ಯ ಸಚಿವರು ಸ್ಪಷ್ಟವಾಗಿ ನಿಮ್ಮ ನಿಲುವು ಏನೆಂದು ಹೇಳಿ ನಾವು ಈಗ ಆರನೇ ಪ್ರಶ್ನೆಯಲ್ಲಿದ್ದೇವೆ

**ಶ್ರೀ ವಾಟಾಳ್ ನಾಗರಾಜ್** ಹಣ ಹಾಕಿದರೆ ಹೆಸರು ಬದಲಾವಣೆ ಮಾಡಿ ಕರ್ಮ ಜ್ಯೋತಿ ಎಂದು ಇಡಿ

**ಶ್ರೀ ಬಿ ಎಸ್ ಯಡಿಯೂರಪ್ಪ** ಬಹಳ ಸ್ಪಷ್ಟವಾಗಿ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ ಭಾಗ್ಯ ಜ್ಯೋತಿ ಯೋಜನೆಯಲ್ಲಿ ನಾವು ಹಣ ವಸೂಲು ಮಾಡುವುದಿಲ್ಲವೆಂದು ನೀವು ಹೇಳಿದ್ದೀರಿ ನಮಗೆ ಇಲ್ಲಿ ಎರಡು ಸಮಸ್ಯೆಗಳಿವೆ.

**ಶ್ರೀ ಹೆಚ್ ಡಿ ರೇವಣ್ಣ** ಭಾಗ್ಯ ಜ್ಯೋತಿಯಲ್ಲಿ ನಾವು ಹಣ ವಸೂಲಾತಿ ಮಾಡುತ್ತಿಲ್ಲ ಮೀಟರ್‌ಗೆ ಕೂಡ ಹಣ ವಸೂಲಾತಿ ಮಾಡುತ್ತಿಲ್ಲ ಕಾನೂನು ರೀತಿ ನಾವು ಕಾಯ್ದೆ ಪ್ರಕಾರ ಮೀಟರ್ ಹಾಕಿರುವುದರಿಂದ ಅದಕ್ಕೆ ಎಷ್ಟು ಯೂನಿಟ್ ಫಿಕ್ಸ್ ಮಾಡಬೇಕೆಂದು ಎರಡು ಲೈಟು ಮಾತ್ರ ಇರಬೇಕೆಂಬುದು ಪರಿಶೀಲನೆಯಲ್ಲಿದೆ, ನಾವು ಮಾಡುತ್ತೇವೆ.

**ಶ್ರೀ ವಾಟಾಳ್ ನಾಗರಾಜ್** ನಾನು ತಮ್ಮಲ್ಲಿ ದಯವಿಟ್ಟು ವಿನಂತಿ ಮಾಡುತ್ತೇನೆ ಭಾಗ್ಯಜ್ಯೋತಿ ಎಂದು ನೀವು ಆ ಜನಗಳಿಗೆ ವಿದ್ಯುತ್ ಕೊಡುವುದಾದರೆ ಅವರಿಂದ ಹಣವನ್ನು ದಯವಿಟ್ಟು ವಸೂಲಿ ಮಾಡಬೇಡಿ

**ಶ್ರೀ ಹೆಚ್ ಆಂಜನೇಯ** ಹಣ ಕಟ್ಟಲಿಲ್ಲವೆಂದು ಭಾಗ್ಯ ಜ್ಯೋತಿ ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ಕಟ್ ಮಾಡಿದ್ದಾರೆ.

**ಶ್ರೀ ಹೆಚ್ ಡಿ ರೇವಣ್ಣ** ವಸೂಲಾತಿ ಮಾಡೋಲ್ಲ ಅದರಲ್ಲಿ ಎರಡು

**ಶ್ರೀ ಕೆ ಆರ್ ರಮೇಶ್‌ಕುಮಾರ್** ಮಾನ್ಯ ಯಡಿಯೂರಪ್ಪನವರೆ, ಭಾಗ್ಯ ಜ್ಯೋತಿ ಯೋಜನೆಗೆ ಫಲಾನುಭವಿಗಳನ್ನು ಗುರುತಿಸುವವರು ನಾವೇ ಆಗಿದ್ದೇವೆ. ಯಾರು ಸ್ಥಳೀಯವಾಗಿ ಜನಪ್ರತಿನಿಧಿಗಳಾಗಿ ಇರುತ್ತಾರೋ ಅವರೇ ಇಂಥಿಂಥ ಗ್ರಾಮದಲ್ಲಿ ಇಂಥವರುಗಳಿಗೆ ಭಾಗ್ಯ ಜ್ಯೋತಿ ಯೋಜನೆಯ ಸೌಲಭ್ಯವನ್ನು ಕೊಡಿ ಎಂದು ಫಲಾನುಭವಿಗಳನ್ನು ಗುರುತಿಸುವವರೆ ನಾವು ಕೆಲವರು ನೀವು ಹೇಳ್ತಾ ಇದ್ದಿರಿ, ಕೆಲವರು ಫ್ರಿಡ್ಜ್ ಇಟ್ಟುಕೊಂಡಿದ್ದಾರೆ, ಡಿಶ್ ಇಟ್ಟುಕೊಂಡಿದ್ದಾರೆ ಎಂದು ಅಂಥವರನ್ನು ಗುರುತಿಸದಿದ್ದರೆ ನಾವೇ ತಪ್ಪು ಮಾಡಿದಂತಾಗುತ್ತದೆ ನಮ್ಮ ಮೇಲೆಯೇ ಕ್ರಿಮಿನಲ್ ಪ್ರಾಸಿಕ್ಯೂಶನ್ ಮಾಡಬೇಕಾಗುತ್ತದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಎಲ್ಲೆಲ್ಲಿ ದುರುಪಯೋಗವಾಗಿದೆ

**ಶ್ರೀ ಬಸವರಾಜರಾಯರೆಡ್ಡಿ** ಸನ್ಮಾನ್ಯ ಅಧ್ಯಕ್ಷರೇ,

**ಶ್ರೀ ವಾಟಾಳ್ ನಾಗರಾಜ್** ರಾಯರೆಡ್ಡಿಯವರೇ, ಸರ್ಕಾರದ ವಕ್ತಾರರೇ ನೀವು?

**ಗೊಂದಲ**

**ಅಧ್ಯಕ್ಷರು** ಎಲ್ಲರೂ ದಯಮಾಡಿ ಕುಳಿತುಕೊಳ್ಳಿ ಈ ಪ್ರಶ್ನೆಯನ್ನು ಇಲ್ಲಿಗೆ ಮುಕ್ತಾಯ ಮಾಡುತ್ತಿದ್ದೇನೆ ಈಗ ಮುಂದಿನ ಪ್ರಶ್ನೆಗೆ ಹೋಗುತ್ತಿದ್ದೇನೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು ಈಗ ಎಲ್ಲರೂ ಈ ರೀತಿ ಒಟ್ಟಿಗೆ ನಿಂತುಕೊಂಡು ಮಾತನಾಡಿ ಗೊಂದಲ ಮಾಡಿ ಸಮಯವನ್ನು ವ್ಯರ್ಥ ಮಾಡಿದರೆ ಪ್ರಯೋಜನಾವಾದರೂ ಏನು? ಈಗ ಇನ್ನೂ ಆರನೇ ಪ್ರಶ್ನೆಯಲ್ಲಿ ಇದ್ದೇವೆ ಈಗಾಗಲೇ ಒಂದು ಗಂಟೆ ಹತ್ತು ನಿಮಿಷದ ಸಮಯ ಕಳೆದಿದೆ ಏನು ಪ್ರಯೋಜನ?

**ಶ್ರೀ ಬಸವರಾಜ ರಾಯರೆಡ್ಡಿ** ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡಬೇಕು ಏಕೆಂದರೆ ವಾಟಾಳ್ ನಾಗರಾಜ್‌ರವರು ಮಾತನಾಡುವಾಗ ನನಗೆ ನೀವೇನು ಸರ್ಕಾರಿ ವಕ್ತಾರರೇ ಎಂದು ಕೇಳಿದರು ನಾನು ಸರ್ಕಾರಿ ವಕ್ತಾರನಲ್ಲ ನಾನು ಈ ಸದನದಲ್ಲಿ ನಿಮ್ಮ ಹಾಗೆ ಒಬ್ಬ ಸದಸ್ಯ ನಾನು ಏನು ಹೇಳಿದ್ದೇನೆಂದರೆ ಭಾಗ್ಯ ಜ್ಯೋತಿ ಯೋಜನೆಯ ಫಲಾನುಭವಿಗಳು ರಾತ್ರಿ ಹೊತ್ತಿನಲ್ಲಿ ವಿದ್ಯುತ್‌ನ್ನು ಬಳಸುವುದಕ್ಕೆ ಅಡ್ಡಿ ಇಲ್ಲ ಆದರೆ ಅದನ್ನು ಬಿಟ್ಟು ಟಿ ವಿ , ಫ್ರಿಡ್ಜ್‌ಗಳಿಗೆಲ್ಲಾ ವಿದ್ಯುತ್‌ನ್ನು ಬಳಸಿಕೊಳ್ಳಲಾಗುತ್ತಿದೆ ಇದು ತಪ್ಪು

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಬಡವರು ಟಿ ವಿ ನೋಡಬಾರದೆ ಹಾಗಾದರೆ ಟಿ ವಿ ನೋಡುತ್ತಿರುವವರಲ್ಲಿ ಬಡವರೂ ಇರುತ್ತಾರೆ

**ಗೊಂದಲ**

**ಅಧ್ಯಕ್ಷರು** ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು ಈ ರೀತಿ ಆದರೆ ಏನೂ ಪ್ರಯೋಜನವಾಗುವುದಿಲ್ಲ

**ಗೊಂದಲ**

**ಶ್ರೀ ಆರಗ ಜ್ಞಾನೇಂದ್ರ** ಈಗ ದೊಡ್ಡ ಇಂಡಸ್ಟ್ರೀಸ್‌ನವರು, ಫ್ಯಾಕ್ಟರಿಗಳವರು ಹಣ ಕಟ್ಟದೇ ಇದ್ದಾರೆ ಅದನ್ನು ಇವರು ನೋಡುವುದಿಲ್ಲ ಆದರೆ ಭಾಗ್ಯ ಜ್ಯೋತಿ ಯೋಜನೆ ಅಡಿಯಲ್ಲಿ ಬಡವನ ಮನೆಗೆ ಕೊಟ್ಟ ವಿದ್ಯುತ್ ಸಂಪರ್ಕವನ್ನು ಇವರು ಕಿತ್ತು ಹಾಕುತ್ತಾರೆ. ಇಂಥ ಮೆಂಟಾಲಿಟಿ ಇರುವವರೇ

**ಅಧ್ಯಕ್ಷರು** ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು ಮಾನ್ಯ ನಾಗರಾಜ್‌ರವರೇ, ಮೊದಲು ದಯಮಾಡಿ ನೀವು ಕುಳಿತುಕೊಳ್ಳಿ

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಅಧ್ಯಕ್ಷರೆ, ಟಿ ವಿ ಸಂಪತ್ತಲ್ಲ ಮಾನ್ಯ ರಾಯರೆಡ್ಡಿಯವರು ಹೇಳಿದ್ದು ಸರಿಯಲ್ಲ ಇದು ಅತ್ಯಂತ ಅಪಾಯಕಾರಿ ತೀರ್ಮಾನ ಇದು ಒಳ್ಳೆಯದಲ್ಲ

**ಶ್ರೀ ಬಸವರಾಜ ರಾಯರೆಡ್ಡಿ** ಟಿ ವಿ , ಫ್ರಿಡ್ಜ್, ಲೈಟ್‌ಗಳಿಗೆಲ್ಲಾ ವಿದ್ಯುತ್ ಬಳಕೆ ಮಾಡಲು ಸರ್ಕಾರ ಹೇಳಿದರೆ ನಾನು ಅದನ್ನು ಸ್ವಾಗತ ಮಾಡುತ್ತೇನೆ

ಗೊಂದಲ

**ಅಧ್ಯಕ್ಷರು** ಮಾನ್ಯ ಯಡಿಯೂರಪ್ಪನವರೆ, ದಯಮಾಡಿ ಕುಳಿತುಕೊಳ್ಳಿ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

**ಶ್ರೀ ವಾಟಾಳ್ ನಾಗರಾಜ್** ಟಿ ವಿ ಎಲ್ಲರೂ ನೋಡತಕ್ಕಂಥದ್ದೇ ಆಗಿದೆ ಬರೇ ಶ್ರೀಮತಂರೂ ನೋಡತಕ್ಕದ್ದು ಎಂದೇನೂ ಇಲ್ಲ

**ಅಧ್ಯಕ್ಷರು** ಮೊದಲು ನೀವು ದಯಮಾಡಿ ಕುಳಿತುಕೊಳ್ಳಿ ಈಗ ಒಂದು ಪ್ರಶ್ನೆ ಈಗಾಗಲೇ ಹಿಂದಿನ ಪ್ರಶ್ನೆಗೆ ಅರ್ಧ ಗಂಟೆ ಅವಕಾಶ ಮಾಡಿಕೊಟ್ಟಿದ್ದೇನೆ ಈಗ ಈ ಪ್ರಶ್ನೆ ಕೇಳುತ್ತಿದ್ದಾರೆ ಇದಕ್ಕೆ ಯಾರಾದರೂ ಒಬ್ಬೊಬ್ಬರು ನಿಂತುಕೊಂಡು ಸಲಹೆ ಕೊಟ್ಟು ಬೇಗ ಮುಗಿಸುವುದಾದರೆ ಅವಕಾಶ ಕೊಡಬಹುದು ಅದನ್ನು ಬಿಟ್ಟು ಇಡೀ ಸಭೆ ಹೀಗೆ ನಿಂತುಕೊಂಡರೆ ಏನಾಗುತ್ತದೆ? ಇದರಿಂದ ಏನಾದರೂ ತೀರ್ಮಾನವಾಗುತ್ತದೆಯೇ? ಏನಾದರೂ ಒಂದು ಸಮಗ್ರವಾದ ಚಿತ್ರ ಸಿಗುತ್ತದೆಯೆ? ಆದ್ದರಿಂದ ಈ ರೀತಿ ಮಾಡುವುದು ಚೆನ್ನಾಗಿರುವುದಿಲ್ಲ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಮಾನ್ಯ ಅಧ್ಯಕ್ಷರೆ, ತಾವು ಕೊಟ್ಟಿರುವ ಸಲಹೆ ಸರಿ

**ಶ್ರೀ ವಾಟಾಳ್ ನಾಗರಾಜ್** ಟಿ ವಿ ಶ್ರೀಮಂತರ ಸ್ವತ್ತಲ್ಲ ಟಿ ವಿ ಯನ್ನು ಮಧ್ಯಮ ವರ್ಗದವರು, ಬಡವರು, ಗುಡಿಸಿನಲ್ಲಿರತಕ್ಕಂಥವರು, ಬೀದಿಯಲ್ಲಿರತಕ್ಕಂಥವರು ಹೀಗೆ ಎಲ್ಲರೂ ಟಿ ವಿ ಯನ್ನು ಉಪಯೋಗಿಸಬಹುದು ಇದು ಶ್ರೀಮಂತರಿಗೆ ಮಾತ್ರ ಸಂಬಂಧಪಟ್ಟಿದ್ದಲ್ಲ

**ಅಧ್ಯಕ್ಷರು** ಈಗ ಒಂದು ಪ್ರಶ್ನೆ ಮೇಲೆ ಮೂರು ಉಪ ಪ್ರಶ್ನೆ ಕೇಳಬಹುದು ಇಡೀ ಸಭೆಯೇ ಹೀಗೆ ನಿಂತುಕೊಂಡರೆ ಏನು ಮಾಡುವುದು? ನನಗರ್ಥವಾಗುವುದಿಲ್ಲ

ಗೊಂದಲ

**ಶ್ರೀ ಬಸವರಾಜ ರಾಯರೆಡ್ಡಿ** ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಏನೆಂದರೆ ಭಾಗ್ಯ ಜ್ಯೋತಿ ಯೋಜನೆಯಲ್ಲಿ ಟಿ ವಿ, ಫ್ರಿಡ್ಜ್ ಹೀಗೆ ಎಲ್ಲದರ ಬಳಕೆಗೂ ವಿದ್ಯುತ್‌ನ್ನು ಉಪಯೋಗಿಸಿಕೊಳ್ಳಲು ಪರವಾನಗಿ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ

ಗೊಂದಲ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಮಾನ್ಯ ರಾಯರೆಡ್ಡಿಯವರೆ, ಭಾಗ್ಯ ಜ್ಯೋತಿ ಯೋಜನೆಯಲ್ಲಿ ಟಿ ವಿ ಕನೆಕ್ಷನ್ ಕೊಡುವುದಿಲ್ಲ ಒಂದೇ ಒಂದು ದೀಪದ ವ್ಯವಸ್ಥೆಗೆ

**ಅಧ್ಯಕ್ಷರು** ಈಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಏನೋ ಹೇಳುತ್ತಾರೆ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ ಮಾನ್ಯ ರಾಯರೆಡ್ಡಿಯವರೆ, ದಯಮಾಡಿ ಕುಳಿತುಕೊಳ್ಳಿ

**ಶ್ರೀ ಹೆಚ್ ಆಂಜನೇಯ** ಈ ಮಾನ್ಯ ರಾಯರೆಡ್ಡಿಯವರು ಬಡವರ ವಿರೋಧಿ ಅಂತ ಕಾಣುತ್ತದೆ ಪರಿಶಿಷ್ಟರು, ಬಡವರು ಪಾಪ ಟಿ ವಿ ನೋಡುತ್ತಾರೆ ಎಂದರೆ ಅದನ್ನೂ ಬೇಡ ಅಂತೀರಲ್ರಿ, ಕೋಟ್ಯಾಂತ ರೂಪಾಯಿಯ ವಿದ್ಯುತ್‌ನ್ನು ಕದಿಯುವವರ ಬಗ್ಗೆ ನೀವು ಮಾತನಾಡುವುದಿಲ್ಲ ಜನ ಸಾಮಾನ್ಯರ ಬಗ್ಗೆ ಈ ರೀತಿ ಮಾತನಾಡುತ್ತಿದ್ದಾರೆ

ಗೊಂದಲ

ಶ್ರೀ ಪಿ ಜಿ ಆರ್ ಸಿಂಧ್ಯಾ ಅವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ ಬಿಡಿ ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ಮಾನ್ಯ ಯಡಿಯೂರಪ್ಪನವರೆ, ನೀವು ಹೇಳಿ ಸಾರ್

ಶ್ರೀ ಹೆಚ್ ಆಂಜನೇಯ ರಾಯರೆಡ್ಡಿಯವರೆ, ಬಡವರ ವಿರೋಧಿ ನೀವು ಜನಪ್ರತಿನಿಧಿಯೇ ಅಲ್ಲ ನೀವು

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಅಧ್ಯಕ್ಷರೆ,

ಶ್ರೀ ಕೆ ಎಸ್ ಈಶ್ವರಪ್ಪ ಮಾನ್ಯ ಅಧ್ಯಕ್ಷರೆ, ಈ ರಾಯರೆಡ್ಡಿಯವರದ್ದು ತುಂಬಾ ಜಾಸ್ತಿಯಾಯಿತು ಏನು ಇವರು ಉತ್ತರ ಕೊಡುವುದೆ? ಸರ್ಕಾರಾನೇ ಇವರೆ? ರಾಯರೆಡ್ಡಿಯವರೇ, ನೀವೇ ಇದಕ್ಕೆ ಜವಾಬ್ದಾರರೆ? ನಿಮಗೆ ಉಸ್ತುವಾರಿ ಕೊಟ್ಟಿದ್ದಾರೆಯೇ?

ಗೊಂದಲ

ಶ್ರೀ ಬಿ ಎಸ್ ಯಡಿಯೂರಪ್ಪ ಶ್ರೀರಾಮರೆಡ್ಡಿಯವರೇ, ಅಧ್ಯಕ್ಷರು ನನ್ನ ಹೆಸರನ್ನು ಮಾತನಾಡಲು ಕರೆದಿದ್ದಾರೆ ಒಂದ್ನಿಮಿಷ

ಶ್ರೀ ಬಸವರಾಜ ರಾಯರೆಡ್ಡಿ ಭಾಗ್ಯ ಜ್ಯೋತಿ ಯೋಜನೆಯಲ್ಲಿ ಯಾರು ಯಾರು ಫಲಾನುಭವಿಗಳಿದ್ದಾರೆ ಅವರುಗಳಿಗೆಲ್ಲಾ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ಅವರ್ಯಾರು ಉತ್ತರ ಕೊಡುವುದಕ್ಕೆ? ಹಾಗಾದರೆ ಅವರೇ ಉತ್ತರ ಕೊಡುತ್ತಾರೆಯೆ? ಅಧ್ಯಕ್ಷರೆ, ಸ್ವಲ್ಪ ಹೇಳಿ ಅವರಿಗೆ

ಶ್ರೀ ಬಿ ಎಸ್ ಯಡಿಯೂರಪ್ಪ ವ್ಯವಸ್ಥೆಯನ್ನು ಹಾಳು ಮಾಡುವುದಕ್ಕೆ ಹೊರಟ ಹಾಗೆ ಇದೆ. ಏನು ಮಾಡೋದಕ್ಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ ಭಾಗ್ಯ ಜ್ಯೋತಿ ಯೋಜನೆಯಲ್ಲಿ ಎಲ್ಲದಕ್ಕೂ ಕರೆಂಟ್ ಬಳಸಿಕೊಳ್ಳಲು ಸರ್ಕಾರಿ ಆದೇಶವನ್ನು ಹೊರಡಿಸಿ ಎಂದು ಮಾನ್ಯ ಮಂತ್ರಿಗಳಲ್ಲಿ ನಿಮ್ಮ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನೀವು ಮನವಿ ಮಾಡಿದ್ದು ಹಾಗಲ್ಲ

ಶ್ರೀ ವಾಟಾಳ್ ನಾಗರಾಜ್ ನಮ್ಮ ಪರವಾಗಿ ನಿಮ್ಮ ವಕಾಲತ್ತೇನೂ ಬೇಕಾಗಿಲ್ಲ ನಾವೇ ಮನವಿಯನ್ನು ಮಾಡಿಕೊಳ್ಳುತ್ತೇವೆ

ಶ್ರೀ ಬಸವರಾಜ ರಾಯರೆಡ್ಡಿ ನಿಮ್ಮ ಪರವಾಗಿ ವಕಾಲತ್ತೇನೂ ವಹಿಸುತ್ತಿಲ್ಲ. ಬಡವರ ಪರವಾಗಿ ನಾನು ಮನವಿ ಮಾಡುತ್ತಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ಬೇಕಾಗಿಲ್ಲ ನಿಮ್ಮ ವಕಾಲತ್ತು

ಶ್ರೀ ಬಸವರಾಜ ರಾಯರೆಡ್ಡಿ ನಿಮ್ಮ ಹಾಗೆ ನಾನೂ ಒಬ್ಬ ಸದಸ್ಯ

ಗೊಂದಲ

ಶ್ರೀ ವಾಟಾಳ್ ನಾಗರಾಜ್ ನಿಮ್ಮ ಪರವಾಗಿ ನೀವೇ ವಕಾಲತ್ತು ಮಾಡಿಕೊಳ್ಳಿ ನಮ್ಮ ಪರವಾಗಿ ಬೇಕಾಗಿಲ್ಲ

ಶ್ರೀ ಬಸವರಾಜ ರಾಯರೆಡ್ಡಿ ಸರ್ಕಾರಿ ಆದೇಶ ಹೊರಡಿಸಿದರೆ ಬಡವರಿಗೆ ಅನುಕೂಲ ಆಗುತ್ತದಲ್ಲವೇ? ಆಗ ಯಾರೂ ಕನೆಕ್ಷನ್ ಕಟ್ ಮಾಡುವುದಕ್ಕೆ ಬರುವುದಿಲ್ಲ

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ಸ್ವಾಮಿ, ನನಗೆ ಮಾತನಾಡಲು ಅಧ್ಯಕ್ಷರು ಹೆಸರು ಕರೆದಿದ್ದಾರೆ ಒಂದೇ ಒಂದು ಕ್ಲಾರಿಫಿಕೇಶನ್ ಇದೆ ಕೇಳಿ ಬಿಡುತ್ತೇನೆ ಈ ಸದನದಲ್ಲಿ ಒಂದು ವಿನಂತಿಯನ್ನು ಸಚಿವರಲ್ಲಿ ನಾನು ಮಾಡುತ್ತೇನೆ ಭಾಗ್ಯ ಜ್ಯೋತಿ ಯೋಜನೆಯಲ್ಲಿ ನೂರಕ್ಕೆ ಸುಮಾರು ಐವತ್ತರಿಂದ ಅರವತ್ತು ಭಾಗ ವಿದ್ಯುತ್ ಡಿಸ್‌ಕನೆಕ್ಟ್ ಆಗುತ್ತಿರುವುದು ಅನೇಕ ತಿಂಗಳುಗಳಿಂದ ವಿದ್ಯುತ್ ಬಿಲ್ ಪಾವತಿ ಮಾಡಿಲ್ಲ ಎನ್ನುವ ಕಾರಣದಿಂದ ಆದ ಕಾರಣ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಂಡು ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ಕೇಳುವುದೇನೆಂದರೆ ಭಾಗ್ಯ ಜ್ಯೋತಿ ಯೋಜನೆಯಲ್ಲಿ ವಿದ್ಯುತ್ ಬಿಲ್‌ನ ಹಣವನ್ನು ಸಂಗ್ರಹ ಮಾಡುವುದಿಲ್ಲ ಎನ್ನಬೇಕು ಇದು ಮೊದಲನೆಯದು ಎರಡನೆಯದಾಗಿ ಈಗಾಗಲೇ ಎಲ್ಲೆಲ್ಲಿ ಡಿಸ್‌ಕನೆಕ್ಟ್ ಮಾಡಿದ್ದಾರೋ ಆ ಮನೆಗಳಿಗೆಲ್ಲಾ ಮತ್ತೆ ಕನೆಕ್ಷನ್ ಕೊಡಿಸುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತಾರೆಯೇ? ಇಷ್ಟೆ ನಾನು ಕೇಳುವುದು ಬೇರೆ ಏನನ್ನೂ ಕೇಳುವುದಿಲ್ಲ ಆದ್ದರಿಂದ ದಯವಿಟ್ಟು ಇದರ ಬಗ್ಗೆ ಹೇಳಬೇಕು

**ಶ್ರೀ ಹೆಚ್ ಡಿ ರೇವಣ್ಣ** ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದೆ ಭಾಗ್ಯ ಜ್ಯೋತಿ ಯೋಜನೆ ಬಗ್ಗೆ ಯಾವ ರೀತಿ ಇರಬೇಕು ಎಂಬ ಬಗ್ಗೆ ಗೈಡ್‌ಲೈನ್ಸ್ ಹೊರಡಿಸಿ ಅದನ್ನು ಮನ್ನಾ ಮಾಡಬೇಕು ಎನ್ನುವುದರ ಬಗ್ಗೆ ಈಗಾಗಲೇ ಸರ್ಕಾರ ಮೊನ್ನೆ

**ಶ್ರೀ ಪಿ ಜಿ ಆರ್ ಸಿಂಧ್ಯಾ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)** ಮಾನ್ಯ ಮಂತ್ರಿಗಳೆ, ಒಂದು ನಿಮಿಷ

**ಶ್ರೀ ಹೆಚ್ ಡಿ ರೇವಣ್ಣ** ಹೇಳಿ

**ಶ್ರೀ ಪಿ ಜಿ ಆರ್ ಸಿಂಧ್ಯಾ** ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು, ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು ಹಾಗೂ ಗೌರವಾನ್ವಿತ ಇನ್ನಿತರ ಸದಸ್ಯರುಗಳು ಏನು ಹೇಳಿದ್ದಾರೆ ಅವರ ಭಾವನೆಗಳನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಭಾಗ್ಯ ಜ್ಯೋತಿ ಯೋಜನೆಯಲ್ಲಿ ಮೀಟರ್ ಅಳವಡಿಸಿರುವುದರಿಂದಾಗಿ ಬಡವರಿಗೆ ಸ್ವಲ್ಪ ಅನ್ಯಾಯವಾಗಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲೂ ಕೂಡ ಸ್ಪಷ್ಟವಾಗಿ ಈ ವಿಚಾರದ ಬಗ್ಗೆ ಹೇಳುತ್ತಾ ಸ್ಪಷ್ಟವಾಗಿ ಭಾಗ್ಯಜ್ಯೋತಿ ಮೀಟರ್‌ನ್ನು ಕಿತ್ತು ಹಾಕುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿರತಕ್ಕಂಥದ್ದು ನಿಜ ಮತ್ತೆ 5,000, 4,000 ರೂಪಾಯಿಗಳ ನೋಟಿಸ್‌ಗಳನ್ನು ಕೊಟ್ಟು ದುಡ್ಡನ್ನು ಕಟ್ಟಬೇಕು ಎಂದು ಹೇಳಿ ನೋಟಿಸ್‌ಗಳನ್ನು ಕೊಟ್ಟಿರತಕ್ಕಂಥದ್ದು ನಿಜ ಆ ಹಣ ಕಟ್ಟದೇ ಇರುವುದರಿಂದಾಗಿ ಅವರಿಗೆ ಲೈಟ್ ಇಲ್ಲದೇ ಇರತಕ್ಕಂಥದ್ದೂ ನಿಜ ಮಾನ್ಯ ಗೌರವಾನ್ವಿತ ಸದಸ್ಯರಾದ ಮಾನ್ಯ ರಮೇಶ್ ಕುಮಾರ್‌ರವರು ಏನು ಹೇಳಿದ್ದಾರೋ ಅದು ನಿಜ ಅರಸುರವರ ಕಾಲದಲ್ಲಿ

ಇದು ತೀರಾ ಬಡವರಿಗೋಸ್ಕರ ಪ್ರಾರಂಭವಾದಂಥ ಕಾರ್ಯಕ್ರಮ ಈ ಕಾರ್ಯಕ್ರಮದಲ್ಲಿ ಬಂಗಾರಪ್ಪನವರ ಕಾಲದಲ್ಲಿ ಒಂದೊಂದು ಕ್ಷೇತ್ರಕ್ಕೂ ಒಂದು ಸಾವಿರ ಕನೆಕ್ಷನ್ ಕೊಡಿಸಬೇಕೆಂದು ಹೇಳಿ ಹಿಂದೆ ಇದ್ದ ನೂರು, ನೂರೈವತ್ತು ಕನೆಕ್ಷನ್‌ಗಳನ್ನು ಹೆಚ್ಚು ಮಾಡಿ ಒಂದು ಸಾವಿರ ಫಲಾನುಭವಿಗಳ ಕನೆಕ್ಷನ್ ಮಾಡಿರುವುದು ನಿಜ ಈ ಸದನದ ಗೌರವಾನ್ವಿತ ಸದಸ್ಯರುಗಳ ಭಾವನೆಗಳನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ ಈ ಯೋಜನೆಯಲ್ಲಿ ಒಂದೋ ಎರಡೋ ಪಾಯಿಂಟ್ಸ್‌ಗಳನ್ನು ಬಲ್ಬ್‌ಗಳಿಗೋ, ಅಥವಾ ಟಿ ವಿ ಗೇ ಇರಬಹುದೋ ಮತ್ತೊಂದಕ್ಕೆ ಇರಬಹುದು, ಒಟ್ಟಿನಲ್ಲಿ ಎರಡು ಪಾಯಿಂಟ್ಸ್ ಕೊಡಬೇಕು, ಕೊಟ್ಟ ಮೇಲೆ ಎಷ್ಟು ಯುನಿಟ್ಸ್‌ಗಳನ್ನು ಕೊಡಬೇಕು, ಯಾವ ಕಾಸ್ಟ್‌ನಲ್ಲಿ ಕೊಡಬೇಕು ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿದೆ ಸಧ್ಯದಲ್ಲಿಯೇ ಇದರ ಬಗ್ಗೆ ಸರ್ಕಾರ ತೀರ್ಮಾನಕ್ಕೆ ಬರುತ್ತದೆ ಬಡವರಿಗೆ ಅನ್ಯಾಯವಾಗದೆ ಇರುವಂಥ ರೀತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಮಾನ್ಯ ಅಧ್ಯಕ್ಷರ ಮೂಲಕ ಸದಸ್ಯರುಗಳಿಗೆ ಕೊಡುತ್ತೇನೆ

**ಶ್ರೀ ವಾಟಾಳ್ ನಾಗರಾಜ್** ಅವರಿಂದ ಯಾವುದೇ ರೀತಿಯಲ್ಲೂ ಹಣ ವಸೂಲಿ ಮಾಡುವುದಿಲ್ಲವೆಂದು ಹೇಳಬೇಕು ದುಡ್ಡು ಕಟ್ಟದೇ ಇರುವವರಿಗೆ ಕನೆಕ್ಷನ್ ಕೊಡಿಸುತ್ತೀರಾ ಎಂಬ ಬಗ್ಗೆ ಹೇಳಬೇಕು

**ಶ್ರೀ ಪಿ ಜಿ ಆರ್ ಸಿಂಧ್ಯಾ** ಕನೆಕ್ಷನ್ ಕೊಡುತ್ತೇವೆ

**ಗೊಂದಲ**

**ಅಧ್ಯಕ್ಷರು** ಈಗ ಮುಂದಿನ ಪ್ರಶ್ನೆಗೆ ಹೋಗಿದ್ದೇನೆ ಈಗ ಈ ಪ್ರಶ್ನೆಯನ್ನು ಮುಕ್ತಾಯ ಮಾಡಿದ್ದೇನೆ ಮಾನ್ಯ ಲಾಲಾಜಿ ಮೆಂಡ್‌ರವರೆ,

**ಶ್ರೀ ಬಿ ಎಸ್ ಯಡಿಯೂರಪ್ಪ** ಡಿಸ್‌ಕನೆಕ್ಟ್ ಮಾಡಿರುವ ಕಡೆ ಕನೆಕ್ಷನ್ ಕೊಡಿಸುತ್ತಾರೆಯೇ ಎಂಬ ಬಗ್ಗೆ ಹೇಳಬೇಕು

**ಶ್ರೀ ಪಿ ಜಿ ಆರ್ ಸಿಂಧ್ಯಾ** ಮಾನ್ಯ ಅಧ್ಯಕ್ಷರೆ, ಇಲ್ಲಿ ಎರಡು ವಿಚಾರ ಇದೆ ಒಂದು ಈಗಾಗಲೇ ನಾಲ್ಕು ಸಾವಿರ, ಐದು ಸಾವಿರ ರೂಪಾಯಿಗಳ ಬಿಲ್

**ಅಧ್ಯಕ್ಷರು** ಈಗ ಇಲ್ಲಿ ಇನ್ನೊಂದು ಪ್ರಶ್ನೆ ಏನೆಂದರೆ, ಈಗಾಗಲೇ ನಾನು ಮುಂದಿನ ಪ್ರಶ್ನೆಗೆ ಹೋಗಿ ಸದಸ್ಯರ ಹೆಸರನ್ನು ಕರೆದಿದ್ದೇನೆ ಇದೇ ತರಹ ಮತ್ತೆ ಮತ್ತೆ ನಿಂತು ಅವರು ಕೇಳತಕ್ಕಂಥದ್ದು, ನೀವು ಹೇಳತಕ್ಕಂಥದ್ದು ನಡೆಯುತ್ತಲೇ ಇದ್ದರೆ ಈ ಸಭೆಯನ್ನು ನಡೆಸುವುದು ಕಷ್ಟ

**ಉಡುಪಿ ಜಿಲ್ಲೆ ನಂದಿಕೂರು ಸರ್ವೀಸ್ ಸ್ಟೇಷನ್**

114 (490) ಶ್ರೀ ಲಾಲ್‌ಜಿ ಆರ್ ಮೆಂಡನ್ (ಕಾಪು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ನಂದಿಕೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಿದ್ಯುತ್ ಸರ್ವೀಸ್ ಸ್ಟೇಷನ್ ಪ್ರಾರಂಭಿಸುವ ಯೋಜನೆ ಈಗ ಯಾವ ಹಂತದಲ್ಲಿದೆ,

ಆ) ಈ ಸರ್ವೀಸ್ ಸ್ಟೇಷನ್‌ನಿಂದ ವಿದ್ಯುತ್ ಬಳಕೆದಾರರಿಗೆ ಯಾವಾಗಿನಿಂದ ನಿರಂತರ ವಿದ್ಯುತ್ ಸಂಪರ್ಕ ನೀಡಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಉಡುಪಿ ಜಿಲ್ಲೆಯ ನಂದಿಕೂರಿನಲ್ಲಿ ಒಂದು 110/11 ಕೆ ವಿ ವಿದ್ಯುತ್ ಸಬ್-ಸ್ಟೇಷನನ್ನು ಸ್ಥಾಪಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮಿತಿಯು ಅಕ್ಟೋಬರ್ 1999ರಲ್ಲಿ ಅನುಮೋದನೆಯನ್ನು ನೀಡಿರುತ್ತದೆ ಈ ಮುಂಚೆ ಕೊಜೆಂಟ್ರಿಕ್ಸ್ ಸಂಸ್ಥೆಯ ವತಿಯಿಂದ ನಂದಿಕೂರಿನಲ್ಲಿ ಒಂದು ಕಲ್ಲಿದ್ದಲು ಆಧಾರಿತ ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು ಸ್ಥಾಪನೆ ಮಾಡಲು ಉದ್ದೇಶಿಸಲಾಗಿತ್ತು ಆ ಸಮಯದಲ್ಲಿ ಸದರಿ ಸಂಸ್ಥೆಗೆ ಮುಖ್ಯವಾಗಿ ನಿರ್ಮಾಣ ಕಾರ್ಯಗಳಿಗೆ ಹಾಗೂ ಕಾಲೋನಿಯ ಬಳಕೆಗಾಗಿ ಬೇಕಾಗುವ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲು ಮತ್ತು ಸುತ್ತ-ಮುತ್ತಲ ಪ್ರದೇಶಗಳಿಗೆ ವಿದ್ಯುತ್ ವಿತರಿಸಲು ಈ ವಿದ್ಯುತ್ ಸಬ್-ಸ್ಟೇಷನ್ನಿನ ನಿರ್ಮಾಣವನ್ನು ಕೈಗೊಳ್ಳಲು ಉದ್ದೇಶಿಸಲಾಗಿತ್ತು ಆದರೆ ಕೊಜೆಂಟ್ರಿಕ್ಸ್ ಸಂಸ್ಥೆಯಿಂದ ಸ್ಥಾಪಿತಗೊಳ್ಳಬೇಕಾಗಿದ್ದ ಮೇಲ್ಕಂಡ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಯೋಜನೆಯನ್ನು ಈಗ ಕೈ ಬಿಟ್ಟಿರುವುದರಿಂದ ಪ್ರಸ್ತುತ ನಂದಿಕೂರಿನಲ್ಲಿ ವಿದ್ಯುತ್ ಸಬ್-ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ತಡೆಹಿಡಿಯಲಾಗಿದೆ

ಆ) ಕ ವಿ ಪ್ರ ನಿ ನಿ ಯ ತಾಂತ್ರಿಕ ಸಲಹಾ ಸಮಿತಿಯ ಅಭಿಪ್ರಾಯವನ್ನು ಈ ವಿಷಯದಲ್ಲಿ ಪಡೆಯಲಾಗುತ್ತಿದೆ ಸದರಿ ಸಲಹಾ ಸಮಿತಿಯು ನೀಡುವ ಅಭಿಪ್ರಾಯವನ್ನು ಅನುಸರಿಸಿ ಮುಂದಿನ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ ತಾಂತ್ರಿಕ ಸಲಹಾ ಸಮಿತಿಯು ನಂದಿಕೂರಿನಲ್ಲಿ 110/11 ಕೆ ವಿ ವಿದ್ಯುತ್ ಸಬ್-ಸ್ಟೇಷನ್ನಿನ ನಿರ್ಮಾಣ ಮಾಡುವಂತೆ ಅಭಿಪ್ರಾಯಪಟ್ಟಲ್ಲಿ, ಇದಕ್ಕೆ ಸಂಬಂಧಿಸಿದಂತೆ ಪುನರ್ ವಿಮರ್ಶಿತ ಯೋಜನಾ ವರದಿಯನ್ನು ಸಿದ್ಧಪಡಿಸಿ ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯವನ್ನು ಪಡೆಯಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ

**ಶ್ರೀ ಲಾಲ್‌ಜಿ ಆರ್ ಮೆಂಡನ್** ಮಾನ್ಯ ಅಧ್ಯಕ್ಷರೆ, ಉಡುಪಿ ಜಿಲ್ಲೆಯ ನಂದಿಕೂರಿನಲ್ಲಿ ಈಗಾಗಲೇ 110 ಕೆ ವಿ ಯ ವಿದ್ಯುತ್ ಸಬ್ ಸ್ಟೇಷನ್‌ನನ್ನು ನಿರ್ಮಿಸುವ ಬಗ್ಗೆ ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಈಗಾಗಲೇ ನಮ್ಮ ಕಾಪು ಕ್ಷೇತ್ರದ ಶಿರ್ವಾದಲ್ಲಿ ಒಂದು ಸಬ್ ಸ್ಟೇಷನ್ ಇದೆ. ಅಲ್ಲಿನ ಜನಸಂಖ್ಯೆಯ ಆಧಾರದ ಮೇಲೆ ಮತ್ತು ಗ್ರಾಹಕರ ಬೇಡಿಕೆಯ ಪ್ರಕಾರ, ಸುಮಾರು ಐವತ್ತು ಸಾವಿರ ಗ್ರಾಹಕರು ಈಗಾಗಲೇ ಇದ್ದಾರೆ, ಇವರು ವೇಟಿಂಗ್ ಲಿಸ್ಟ್‌ನಲ್ಲಿ ಇದ್ದಾರೆ, ಅರ್ಜಿಗಳನ್ನು ಹಾಕಿದ್ದಾರೆ, ಮತ್ತೆ ಲೋವೋಲ್ಟೇಜ್ ಸಮಸ್ಯೆ ಇದೆ ಆ ದೃಷ್ಟಿಯಿಂದ ಆದಷ್ಟು

ಶೀಘ್ರವಾಗಿ ನಂದಿಕೂರುನಲ್ಲಿ ಸಬ್ ಸ್ಟೇಷನ್ ಅನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ ಇದರ ಬಗ್ಗೆ ಮಾನ್ಯ ಸಚಿವರು ಉಡುಪಿ ಜಿಲ್ಲಗೆ ಬಂದಾಗ ಪ್ರಸ್ತಾಪ ಮಾಡಿದ್ದೇನೆ ಮಾನ್ಯ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಅವರು ಅಧಿಕೃತವಾಗಿ ಭರವಸೆಯನ್ನು ಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ

**ಶ್ರೀ ಹೆಚ್ ಡಿ ರೇವಣ್ಣ** ಮಾನ್ಯ ಅಧ್ಯಕ್ಷರೆ, ಇದನ್ನು ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ

**ಬಂಟ್ವಾಳ ತಾಲ್ಲೂಕಿನಲ್ಲಿ ನೇತ್ರಾವತಿ ನದಿಗೆ ಪಿರಿಪೇಡ್ ಡ್ಯಾಂ ನಿರ್ಮಾಣ**

115(186) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಮತ್ತು ಕುಡಿಯುವ ನೀರಿನ ಸೌಕರ್ಯಕ್ಕಾಗಿ ಮತ್ತು ಅಂತರ್ಜಲ ಅಭಿವೃದ್ಧಿಗಾಗಿ ಯೋಜನೆಗಳನ್ನೇನಾದರೂ ಸರ್ಕಾರ ರೂಪಿಸಿದೆಯೇ, (ವಿವರಗಳನ್ನು ನೀಡುವುದು)

ಆ) ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ನೇತ್ರಾವತಿ ನದಿಗೆ ಪಿರಿಪೇಡ್ ಡ್ಯಾಂ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ, (ವಿವರಗಳನ್ನು ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಈ ಕೆಳಕಂಡ ಯೋಜನೆಗಳ ಅಡಿಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ

1. ನಬಾರ್ಡ್‌ನ ಆರ್ ಐ ಡಿ ಎಫ್ ಸಹಾಯ ಯೋಜನೆ
2 ರೈತ ಕಾಯಕ ಕೆರೆ ಯೋಜನೆ
3 11ನೇ ಹಣಕಾಸು ಧನಸಹಾಯ ಯೋಜನೆ
4 ಇತರ ಯೋಜನೆಗಳಡಿಯಲ್ಲಿ ಕೈಗೊಂಡ ಕಾಮಗಾರಿಗಳು
5 ಪ್ರವಾಹ ನಿಯಂತ್ರಣ ಅಡಿ ಕೈಗೊಂಡ ಕಾಮಗಾರಿಗಳು

ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ

## ಅನುಬಂಧ

| ಕ್ರಮ ಸಂಖ್ಯೆ | ತಾಲ್ಲೂಕು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ) | ಅಚ್ಚುಕಟ್ಟು ಹೆಕ್ಟೇರುಗಳಲ್ಲಿ | ಇಲ್ಲಿಯವರೆಗೆ ಮಾಡಲಾದ ವೆಚ್ಚ (ರೂ ಲಕ್ಷಗಳಲ್ಲಿ) | ಷರಾ |
|---|---|---|---|---|---|---|
| **ನಬಾರ್ಡ್ ಆರ್ ಐ ಡಿ ಎಫ್ ಯೋಜನೆಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳು** | | | | | | |
| 1 | ಬೆಳ್ತಂಗಡಿ | ತೆಂಕ ಕಾರಂದೂರು ಗ್ರಾಮದಲ್ಲಿ ಅಡ್ಡಲಾಗಿ ಕಿಂಡಿ ಅಣೆಕಟ್ಟು | 37.00 | 42.89 | 13.37 | ಹಲಗೆಗಳನ್ನು ಅಳವಡಿಸುವುದನ್ನು ಹೊರತುಪಡಿಸಿ ಉಳಿದಂತೆ ಕಾಮಗಾರಿ ಪೂರ್ಣಗೊಂಡಿದೆ |
| 2 | ಮಂಗಳೂರು | ಶಿಬರೂರು ಗ್ರಾಮದ ದೇಲಂತ ಬೆಟ್ಟು ಬಳಿ ಬ್ಯಾರೇಜ್ ನಿರ್ಮಾಣ | 130.00 | 90.00 | – | ಕಾಮಗಾರಿ ಪ್ರಾರಂಭಿಸಬೇಕಾಗಿದೆ |
| 3 | ಮಂಗಳೂರು | ಕಟೀಲು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಬಳಿ ಜಳಕದ ಕಟ್ಟೆ ಬಳಿ ಕಿಂಡಿ ಅಣೆಕಟ್ಟು ನಿರ್ಮಾಣ | 30.00 | 51.00 | – | ಟೆಂಡರು ಅನುಮೋದನೆಗೆ ಸಲ್ಲಿಸಿದೆ |
| 4 | ಮಂಗಳೂರು | ಗುರುಪುರ ನದಿಗೆ ಅಡ್ಡಲಾಗಿ ಆದ್ಯಪಾಡಿ ಎಂಬಲ್ಲಿ ಉಪ್ಪು ನೀರು ತಡೆ ಅಣೆಕಟ್ಟು ನಿರ್ಮಾಣ | 400.00 | 560.00 | – | ಟೆಂಡರು ಸ್ವೀಕರಿಸಲಾಗಿದೆ |
| 5 | ಮಂಗಳೂರು | ಪಚ್ಚನೊಗರು ಗ್ರಾಮದ ಹನ್ನೆರಡು ಕವಲು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ | 45.00 | 132.00 | 49.92 | ಕಾಮಗಾರಿ ಪೂರ್ಣಗೊಂಡಿದೆ |

| 1 | 2 | 3 | 4 | 5 | 6 | 7 |
|---|---|---|---|---|---|---|
| **ನಬಾರ್ಡ್ ಎ ಐ ಸಿ ಎಫ್ ಯೋಜನೆಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳು** | | | | | | |
| 6 | ಬಂಟ್ವಾಳ | ಅಜ್ಜಿಬೆಟ್ಟು ಗ್ರಾಮದ ಹನ್ನೆರಡು ಕವಲು ಎಂಬಲ್ಲಿ ಫಲ್ಗುಣಿ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು | 85.00 | 220.00 | | |
| 7 | ಬೆಳ್ತಂಗಡಿ | ಗಿಳಿಕಾಪು ಎಂಬಲ್ಲಿ ಫಲ್ಗುಣಿ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು | 50.00 | 77.00 | | |
| 8 | ಬೆಳ್ತಂಗಡಿ | ಶಿಶಿಲಾ ಎಂಬಲ್ಲಿ ಅಣೆಕಟ್ಟು ನಿರ್ಮಾಣ | 60.00 | 91.00 | | |
| 9 | ಬಂಟ್ವಾಳ | ಕವಲಮುದ್ರು ಗ್ರಾಮದ ಬಳಿ ಪಂಜಾಡೆ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ | 30.00 | 105.00 | | |
| 10 | ಸುಳ್ಯ | ಯಣಕಲ್ಲು ಗ್ರಾಮದ ಬುಚ್ಚನಾಯಕನ ದೇವಸ್ಥಾನದ ಹತ್ತಿರ ಕಲ್ಯಾಣ ಹೊಳೆಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಾಣ | 27.50 | 44.00 | | |
| 11. | ಸುಳ್ಯ | ದೇವಚಲ ಗ್ರಾಮದ ಬಳಿ ಗೌಲಗುಂಡಿ ಹೊಳೆಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಾಣ | 15.00 | 44.00 | | |
| **ರೈತ ಕಾಯಕ ಕೆರೆ ಯೋಜನೆ** | | | | | | |
| 12 | ಬೆಳ್ತಂಗಡಿ | ಗುರುಪಾಯನ ಕೆರೆ | 7.00 | 40.00 | 4.98 | ಕಾಮಗಾರಿ ಪೂರ್ಣಗೊಂಡಿದೆ |
| 13 | ಪುತ್ತೂರು | ಮುಡ್ನೂರು ಗ್ರಾಮದ ನಿಧಿ ಮುಂಡಕೆರೆ | 2.60 | 15.50 | 1.12 | " |

| 1 | 2 | 3 | 4 | 5 | 6 | 7 |
|---|---|---|---|---|---|---|
| 14 | ಮಂಗಳೂರು | ಮರಮೂರು ಸಿದ್ಧವಿನಾಯಕ ಕೆರೆ | 8 30 | 56 00 | 3 62 | ಕಾಮಗಾರಿ ಪೂರ್ಣಗೊಂಡಿದೆ |
| 15. | ಮಂಗಳೂರು | ಗುರುಪುರ ತೆಂಕಪದವು ಕುರುಡೇಲು | 5.00 | 30.00 | 4.00 | ” |
| 16. | ಮಂಗಳೂರು | ಕಡಲ ಕೆರೆ | 5.80 | 40.75 | 4.40 | ” |
| 17. | ಮಂಗಳೂರು | ಭುಜಂಗರ ಕೆರೆ | 6.25 | 35.00 | 5.23 | ” |
| | | **11ನೇ ಹಣಕಾಸು ಆಯೋಗದ ಏತ ನೀರಾವರಿ ಯೋಜನೆಗಳ ಪುನರುಜ್ಜೀವನ ಕಾಮಗಾರಿ** | | | | |
| 18. | ಬಂಟ್ವಾಳ | ಸಜೀಪಮನ್ನೂರು | 39.75 | 226.10 | 17.32 | ಸಿವಿಲ್ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ ವಿದ್ಯುತ್ ಕಾಮಗಾರಿ ಪ್ರಗತಿಯಲ್ಲಿದೆ |
| 19 | ಪುತ್ತೂರು | ಏಣಿತ್ತಡ್ಕ | | 41.00 | | ಎಲೆಕ್ಟ್ರಿಕಲ್ ಕಾಮಗಾರಿ ಪ್ರಾರಂಭಿಸಬೇಕು |
| 20. | ಪುತ್ತೂರು | ಪರಪ್ಪು | | 51.00 | 3.54 | ಕಾಮಗಾರಿ ಪೂರ್ಣಗೊಂಡಿದೆ |
| 21 | ಸೂಳ್ಯ | ದೊಡ್ಡೇಗಿ ಮೇಲೆ ಪ್ರವಾಹ ಮತ್ತು ಕಳೆಪ್ರವಾಹ | 6.75 | 42.00 | 8.10 | ” |

| 1 | 2 | 3 | 4 | 5 | 6 | 7 |
|---|---|---|---|---|---|---|
| 22 | ಮಂಗಳೂರು | ವಿಳಿಂಜೆ | 29 90 | 80 90 | 23 26 | ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ ವಿದ್ಯುತ್ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ |
| 23 | ಪುತ್ತೂರು | ಇಡ್ಯಾಡಿ | 5.00 | 49.00 | 4.60 | " |
| 24 | ಮಂಗಳೂರು | ಕರಿಯತ್ತಲಗುಂಡಿ | 35.50 | 100.00 | 15.12 | " |
| 25 | ಬೆಳ್ತಂಗಡಿ | ನೆರಿಯಾ | 6.00 | 14.00 | 5.34 | ಕಾಮಗಾರಿ ಪೂರ್ಣ ಗೊಂಡಿದೆ |
| 26 | ಬಂಟ್ವಾಳ | ಸಜೀಪಮನ್ನೂರು ಏತ ನೀರಾವರಿ ಯೋಜನೆ (2ನೇ ಹಂತ) | 25.00 | 226.16 | 10.37 | ಪಂಪ್ ಮತ್ತು ಮೋಟಾರ್ ಸರಬರಾಜು ಮಾಡಲಾಗಿದೆ |
| **ಪ್ರಗತಿಯಲ್ಲಿರುವ ಮುಂದುವರೆದ ಕಾಮಗಾರಿಗಳು** | | | | | | |
| 27 | ಮಂಗಳೂರು | ಏಳತೂರು ಗ್ರಾಮದ ತಾತಯ್ಯ ಕೋಡಿನ ಅಭಿವೃದ್ಧಿ ಕಾಮಗಾರಿ | 2.00 | – | – | ದಾರಿ ವಿವಾದದಿಂದ ಪ್ರಗತಿ ಕುಂಠಿತ ಗೊಂಡಿದೆ |
| 28 | ಮಂಗಳೂರು | ಪಚ್ಚಿಮೊಗರು ಗ್ರಾಮದಲ್ಲಿ ಗುರುಪುರ ತೋಡು ಅಭಿವೃದ್ಧಿ ಕಾಮಗಾರಿ | 5.00 | – | – | ಕಾಮಗಾರಿಯ ಪ್ರಗತಿಯಲ್ಲಿದ್ದು, ಶೇ 95 ರಷ್ಟು ಪೂರ್ಣ ಗೊಂಡಿದೆ |

| 1 | 2 | 3 | 4 | 5 | 6 | 7 |
|---|---|---|---|---|---|---|
| 29 | ಮಂಗಳೂರು | ಕೂಳೂರು ಎಂಬಲ್ಲಿ ಗುರುಪುರ ಅಣೆಕಟ್ಟು ಬಲದಂಡೆಯ ರಕ್ಷಣಾ ಕಾಮಗಾರಿ 800–950 | 4 00 | – | 0 68 | ಪ್ರಗತಿಯಲ್ಲಿದೆ |
| 30. | ಮಂಗಳೂರು | ಜಪ್ಪಿನ್ಮೊಗರು ಗ್ರಾಮದಲ್ಲಿ ನೇತ್ರಾವತಿ ಕವಲು ನದಿಗೆ ಪ್ರವಾಹ ನಿಯಂತ್ರಣ ಕಾಮಗಾರಿ | 5.00 | – | – | ಪ್ರಗತಿಯಲ್ಲಿದೆ |
| ಪ್ರವಾಹ ನಿಯಂತ್ರಣ ಕಾಮಗಾರಿಗಳು | | | | | | |
| 31. | ಬಂಟ್ವಾಳ | ಬಡ್ಡಕಟ್ಟೆ ಹತ್ತಿರ ಪ್ರವಾಹ ನಿಯಂತ್ರಣ ಕಾಮಗಾರಿ | 19.00 | 130.20 | – | ಕಾಮಗಾರಿ ಮುಕ್ತಾಯ ಗೊಂಡಿದೆ |
| 32. | ಬಂಟ್ವಾಳ | ಗೋಳ್ತ ಮಜಲು ಗ್ರಾಮದ ರೆಹಮಾನಿಯ ಜುಮ್ಮ ಮಸೀದಿ ಬಳಿ ಪ್ರವಾಹ ನಿಯಂತ್ರಣ ಕಾಮಗಾರಿ | 15.00 | 205.00 | – | ಕಾಮಗಾರಿ ಪ್ರಾರಂಭಿಸಲಾಗಿದೆ |
| 33. | ಬಂಟ್ವಾಳ | ನರಿಕೊಂಬು ಗ್ರಾಮದ ಪಾಣಿ ಮಂಗಳೂರು ಬಳಿ ಪ್ರವಾಹ ನಿಯಂತ್ರಣ ಕಾಮಗಾರಿ | 15.00 | 94.20 | – | ಕಾಮಗಾರಿ ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿದೆ |
| 35. | ಮಂಗಳೂರು | ಪಾವಂಜೆ ಬಳಿ ನಂದಿನಿ ನದಿಯ ಬಡಗೆ ಈಶ್ವರ ದೇವಸ್ಥಾನದ ಬಳಿ ಪ್ರವಾಹ ನಿಯಂತ್ರಣ ಕಾಮಗಾರಿ | 19.50 | 250.00 | – | ಕಾಮಗಾರಿ ಪ್ರಗತಿಯಲ್ಲಿದೆ |
| 36. | ಪುತ್ತೂರು | ಸೈಂಟ್ ಸ್ಟೀಫನ್ ಚರ್ಚ್ ಬಳಿ ಪ್ರವಾಹ ನಿಯಂತ್ರಣ ಕಾಮಗಾರಿ | 10.00 | 115.10 | – | ಕಾಮಗಾರಿ ಮುಕ್ತಾಯಗೊಂಡಿದೆ |

| 1 | 2 | 3 | 4 | 5 | 6 | 7 |
|---|---|---|---|---|---|---|
| **ಕಿಂಡಿ ಅಣೆಕಟ್ಟು ಕಾಮಗಾರಿಗಳು** | | | | | | |
| 37 | ಬೆಳ್ತಂಗಡಿ | ತೆಂಕ ಕಾರಂದೂರು ಗ್ರಾಮದಲ್ಲಿ ಫಲ್ಗುಣಿ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಾಣ | 37.00 | 42.89 | 17.37 | ಕಾಮಗಾರಿ ಮುಕ್ತಾಯ ಹಂತದಲ್ಲಿದೆ |
| 38. | ಮಂಗಳೂರು | ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಬಳಿ ನಂದಿನಿ ನದಿಗೆ ಕಿಂಡಿ ಅಣೆಕಟ್ಟು ನಿರ್ಮಾಣ | 36.00 | 51.00 | – | ಟೆಂಡರ್ ಅನುಮೋದನೆಗೆ ಸಲ್ಲಿಸಿದೆ |
| 39 | ಮಂಗಳೂರು | ಗುರುಪುರ ನದಿಗೆ ಅಡ್ಡಲಾಗಿ ಆದ್ಯಪಾಡಿ ಎಂಬಲ್ಲಿ ಉಪ್ಪು ನೀರು ತಡ ಅಣೆಕಟ್ಟು ನಿರ್ಮಾಣ | 400.00 | 660.00 | – | ಟೆಂಡರ್ ಸ್ವೀಕರಿಸಿದೆ |
| 40. | ಮಂಗಳೂರು | ಪುಚ್ಚ ಮೊಗರು ಗ್ರಾಮದ ಹನ್ನೆರಡು ಕವಲು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ | 45.00 | 132.00 | 40.92 | ಕಾಮಗಾರಿ ಪೂರ್ಣಗೊಂಡಿದೆ |

**ಶ್ರೀ ಕೆ ಪದ್ಮನಾಭ ಕೊಟ್ಟಾರಿ** ಮಾನ್ಯ ಅಧ್ಯಕ್ಷರೆ ನಮಗೆ ಉತ್ತರದ ಪ್ರತಿ ಬರಲಿಲ್ಲ ನಾನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಮತ್ತು ಕುಡಿಯುವ ನೀರಿಗೆ ಮತ್ತು ಅಂತರ್ಜಲ ಅಭಿವೃದ್ಧಿ ಮಾಡುವ ದೃಷ್ಟಿಯಲ್ಲಿ ಸರ್ಕಾರ ಏನಾದರೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯೇ? ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ ಇವತ್ತು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕು, ನನ್ನ ಮತಕ್ಷೇತ್ರ ವಿಟ್ಲ ಆಗಿದೆ ತಾಲ್ಲೂಕಿನ ಮಧ್ಯೆ ನೇತ್ರಾವತಿ ನದಿಯೂ ಹರಿಯುತ್ತಿದೆ ಮಂಗಳೂರು ನಗರಕ್ಕೆ ಮತ್ತು ಪಣಂಬೂರು ಹಾರ್ಬರ್‌ಗೆ, ನಮ್ಮ ಕ್ಷೇತ್ರದ "ತುಂಬ್ಲಿ" ಎಂಬಲ್ಲಿ ವೆಂಟೆಡ್ ಡ್ಯಾಮ್ ನಿರ್ಮಿಸಿ, ಕುಡಿಯುವುದಕ್ಕೆ ನೀರನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಈ ಡ್ಯಾಂ ಮಾಡಿದ ನಂತರ ಅಂತರ್ಜಲ ಅಭಿವೃದ್ಧಿಯಾಗಿದೆ ಆದರೂ ಕೂಡ ಬಂಟ್ವಾಳ ತಾಲ್ಲೂಕನ್ನು 7-8 ವರ್ಷಗಳ ಹಿಂದಿನಿಂದಲೇ "ಕಪ್ಪು ಪ್ರದೇಶ" ವೆಂದು ಘೋಷಿಸಲಾಗಿದೆ ನಾವು ಇವತ್ತು ಕೇಳುವಂಥಾದ್ದು ತುಂಬೆಯಲ್ಲಿ ವೆಂಟೇಡ್ ಡ್ಯಾಮ್ ಕಟ್ಟುತ್ತಿದ್ದಾರೆ, ಅದೇ ರೀತಿಯಲ್ಲಿ 5-6 ಕಿಲೋಮೀಟರ್ ದೂರದಲ್ಲಿ, ಒಂದು ಕಿಂಡಿ ಅಣೆಕಟ್ಟು, ವೆಂಟೇಡ್ ಡ್ಯಾಂ ನಿರ್ಮಾಣ ಮಾಡಿದರೆ, ಅದರಿಂದ ಅಂತರ್ಜಲ ಅಭಿವೃದ್ಧಿಯಾಗುತ್ತದೆ, ಮತ್ತೆ ಕೃಷಿಗೆ ಅನುಕೂಲವಾಗುತ್ತದೆ ಮತ್ತು ಕುಡಿಯುವ ನೀರಿನ ಸರಬರಾಜು ಯೋಜನೆಗೂ ಕೂಡ ಇದರಿಂದ ಅನುಕೂಲವಾಗುತ್ತದೆ ಈ ರೀತಿಯಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂಬ ಪ್ರಶ್ನೆಯನ್ನು, ಜಲಸಂಪನ್ಮೂಲ ಸಚಿವರಲ್ಲಿ ಕೇಳುತ್ತೇನೆ

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ನಾವು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇವೆ ನಬಾರ್ಡ್ ಯೋಜನೆಯಡಿಯಲ್ಲಿ ಆರ್ ಐ ಡಿ ಐ ಸಹಾಯದಿಂದ ಕೆಲವು ಯೋಜನೆಗಳನ್ನು ತೆಗೆದುಕೊಂಡಿದ್ದೇವೆ ಅದೇ ರೀತಿಯಲ್ಲಿ "ರೈತ ಕಾಯಕ ಕೆರೆ ಯೋಜನೆ"ಯಲ್ಲಿ ಕೆಲವನ್ನು ತೆಗೆದುಕೊಂಡಿದ್ದೇವೆ 11ನೇ ಹಣಕಾಸು ಧನಸಹಾಯ ಯೋಜನೆಯಡಿಯಲ್ಲಿ ಕೆಲವು ತೆಗೆದುಕೊಂಡಿದ್ದೇವೆ ಮತ್ತೆ ಇತರ ಯೋಜನೆಗಳಡಿಯಲ್ಲಿ ಕಾಮಗಾರಿಗಳು ತೆಗೆದುಕೊಂಡಿದ್ದೇವೆ ಇದು ಅಲ್ಲದೇ ಪ್ರವಾಹ ನಿಯಂತ್ರಣ ಅಡಿಯಲ್ಲಿ ಕೂಡ ಕೆಲವು ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ ಅದರ ಪಟ್ಟಿ ಈ ರೀತಿಯಾಗಿದೆ, ನಬಾರ್ಡ್‌ನ ಆರ್ ಐ ಡಿ ಎಫ್ ಸಹಾಯ ಯೋಜನೆಯಲ್ಲಿ 11 ಕಾಮಗಾರಿಗಳಿಗೆ ಒಟ್ಟು ಅಂದಾಜು ಮೊತ್ತ 9 ಕೋಟಿ 9 ಲಕ್ಷ ರೂಪಾಯಿಗಳು, ಅಚ್ಚುಕಟ್ಟು ಪ್ರದೇಶ 1,456, ಇದುವರೆಗೂ 63 ಲಕ್ಷ ರೂಪಾಯಿಗಳು ಖರ್ಚು ಆಗಿದೆ ಅದೇ ರೀತಿಯಾಗಿ "ರೈತ ಕಾಯಕ ಕೆರೆ ಯೋಜನೆ" ಯಡಿಯಲ್ಲಿ, 6 ಕಾಮಗಾರಿಗಳು, ಇದಕ್ಕೆ ಸುಮಾರು 34 ಲಕ್ಷ 95 ಸಾವಿರ ರೂಪಾಯಿಗಳು ಖರ್ಚಾಗಿದೆ, 217

ಹೆಕ್ಟಾರ್‌ಗಳಿಗೆ ನೀರಾವರಿ ಸಹಾಯ ಮಾಡುವಂಥಾದ್ದು ಆಗಿದೆ ಸುಮಾರು 23 ಲಕ್ಷ ರೂಪಾಯಿಗಳು ಖರ್ಚಾಗಿದೆ 11ನೇ ಹಣಕಾಸಿನ ಯೋಜನೆಯಡಿಯಲ್ಲಿ 9 ಕಾಮಗಾರಿಗಳು ಆರಂಭವಾಗಿದೆ, ಸುಮಾರು 1 ಕೋಟಿ 38 ಲಕ್ಷ ರೂಪಾಯಿಗಳು ಖರ್ಚಾಗಿದೆ, ಮತ್ತೆ 830 ಅಚ್ಚುಕಟ್ಟು ಏರಿಯಾವನ್ನು ನಾವು ತೋರಿಸಿದ್ದೇವೆ ಇದಕ್ಕೆ 87 ಲಕ್ಷ 65 ಸಾವಿರ ರೂಪಾಯಿಗಳು ಖರ್ಚಾಗಿದೆ ಇತರೇ ಯೋಜನೆಯ ಅಡಿಯಲ್ಲಿ 3 ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ, ಇದಕ್ಕೆ ಸುಮಾರು 10 ಲಕ್ಷ ರೂಪಾಯಿಗಳ ಅಂದಾಜು ಇದೆ, ಅದಕ್ಕೆ ಇನ್ನೂ ಕಂತು ಆಗಿಲ್ಲ ಪ್ರಗತಿಯಲ್ಲಿ ಮುಂದುವರೆದ ಕಾಮಗಾರಿಯಲ್ಲಿ ಒಂದು ತೆಗೆದುಕೊಂಡಿದ್ದೇವೆ, ಅದಕ್ಕೆ 5 ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿದ್ದೇವೆ ಆರ್ ಐ ಡಿ ಎಫ್ ಪ್ರವಾಹ ನಿಯಂತ್ರಣ ಕಾಮಗಾರಿಗಳ ಪೈಕಿ 5ನ್ನು ತೆಗೆದುಕೊಂಡಿದ್ದು, ಅದಕ್ಕೆ 78 ಲಕ್ಷ 50 ಸಾವಿರ ರೂಪಾಯಿಗಳ ಎಸ್ಟಿಮೇಟ್ ಇದೆ ಅದಕ್ಕೆ ಖರ್ಚು ಆಗಿಲ್ಲ, ಹಣವನ್ನು ಬಿಡುಗಡೆ ಮಾಡಿಲ್ಲ ಆರ್ ಐ ಡಿ ಎಫ್ ಇಂಡಿ ಅಣೆಕಟ್ಟು ಕಾಮಗಾರಿ 4, ವೆಂಟೆಡ್ ಅಣೆಕಟ್ಟುಗಳು 4, ಅದರಲ್ಲಿ 5 ಕೋಟಿ 12 ಲಕ್ಷ ರೂಪಾಯಿಗಳ ಅಂದಾಜು ಇದೆ ಈಗ ಸಧ್ಯಕ್ಕೆ 58 ಲಕ್ಷ ರೂಪಾಯಿಗಳು ಖರ್ಚಾಗಿದೆ ಈಗ ನಾವು ಹಂತ ಹಂತವಾಗಿ ಎಲ್ಲೆಲ್ಲಿ ತೆಗೆದುಕೊಳ್ಳಬೇಕಾಗಿತ್ತೋ, ಆ ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ ಈಗ ತಮ್ಮ ಪ್ರಮುಖವಾದಂತಹ ಬೇಡಿಕೆ ಏನಿದೆ, ಅದು ಬಂಟ್ವಾಳ ತಾಲ್ಲೂಕಿನಲ್ಲಿ ನೇತ್ರಾವತಿ ನದಿಗೆ ಪಿರಿಪೇಡ್ ಡ್ಯಾಂ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೀರಿ, ಸಧ್ಯಕ್ಕೆ ಆ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ, ಮುಂದೆ ನಾವು ಅದರ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮವನ್ನು ಜರುಗಿಸುತ್ತೇವೆ

**ಶ್ರೀ ಕೆ ಪದ್ಮನಾಭ ಕೊಟ್ಟಾರಿ** ಮಾನ್ಯ ಅಧ್ಯಕ್ಷರೆ, ನಾವು ಕೇಳುವುದಕ್ಕೆ ಕಾರಣವಿಷ್ಟೆ ನಮ್ಮ ತಾಲ್ಲೂಕಿನ ಮಧ್ಯೆ ನೇತ್ರಾವತಿ ನದಿಯ, ಹರಿಯುತ್ತಾ ಇದ್ದರೂ ಕೂಡ, ಮತ್ತೆ ನಮ್ಮ ಜಿಲ್ಲೆಯಲ್ಲಿ ವರ್ಷದಲ್ಲಿ 4–5 ತಿಂಗಳು ಮಳೆ ಬರುತ್ತಿದ್ದರೂ ಕೂಡ ನಮ್ಮ ತಾಲ್ಲೂಕನ್ನೂ "ಕಪ್ಪು ಪ್ರದೇಶ" ಎಂದು 8 ವರ್ಷಗಳ ಹಿಂದೆಯೇ ಘೋಷಿಸಲಾಗಿದೆ ಇಲ್ಲಿ ಜಲ ಮಟ್ಟ ಕುಸಿತವಾಗಿದೆಯೆಂಬುದು ಕಾರಣವಾಗಿದೆ ಇವತ್ತು ಒಬ್ಬ ರೈತ ಕೃಷಿಗಾಗಿ ಒಂದು ಬೋರ್‌ವೆಲ್ ಅಥವಾ ಕೆರೆಯ ನಿರ್ಮಾಣವನ್ನು ಮಾಡಿಕೊಳ್ಳಬೇಕೆಂದರೆ, ಅವನಿಗೆ ಬ್ಯಾಂಕ್‌ನಲ್ಲಿ ಸಾಲ ಸಿಗುವುದಿಲ್ಲ ಅವನು ಸ್ವಂತ ಹಣದಿಂದ ಮಾಡಿದರೂ ಕೂಡ, ಒಂದು ಪಂಪ್ ಸೆಟ್ ಅನ್ನು ತೆಗೆದುಕೊಳ್ಳಬೇಕೆಂದರೂ ಕೂಡ ಬ್ಯಾಂಕ್‌ನಿಂದ ಸಾಲವನ್ನು ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ ಆದಕಾರಣ, ಈ ರೀತಿಯಾಗಿ ತಾಲ್ಲೂಕಿನ ಮಧ್ಯೆ ನದಿ ಹರಿಯುತ್ತಿದ್ದು, ನಮ್ಮ ಜಿಲ್ಲೆಯಲ್ಲಿ ಯಾವುದೇ ರೀತಿಯ ನೀರಾವರಿ ಸೌಲಭ್ಯಗಳು

ಇಲ್ಲ ಆದುದರಿಂದ ಈ ನೇತ್ರಾವತಿ ನದಿಗೆ ಮತ್ತೊಂದು ವೆಂಟೆಡ್ ಡ್ಯಾಂ ಅನ್ನು ನಿರ್ಮಾಣ ಮಾಡಿದರೆ, ಕುಡಿಯುವ ನೀರಿಗೆ ಮತ್ತು ಕೃಷಿಕರಿಗೆ ಅನುಕೂಲವಾಗುತ್ತದೆ ಅಂತರ್ಜಲ ಅಭಿವೃದ್ಧಿಯಾಗುತ್ತದೆ ಸನ್ಮಾನ್ಯ ಜಲಸಂಪನ್ಮೂಲ ಸಚಿವರು ಆ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಮಾನ್ಯ ಅಧ್ಯಕ್ಷರೆ, ನಾನು ಈ ವಿಷಯವಾಗಿ ಆಗಲೇ ಹೇಳಿದ್ದೇನೆ ಕೆಲವು ಕೆಲಸಗಳನ್ನು ನಾವು ತೆಗೆದುಕೊಂಡಿದ್ದೇವೆ ಇನ್ನು ಉಳಿದಿರುವುದರ ಬಗ್ಗೆ ನಾವು ಪರಿಶೀಲಿಸಬೇಕಾಗುತ್ತದೆ ಏಕೆಂದರೆ, ಹಣದ ಅಭಾವ ಇದೆ ಮತ್ತು ಎರಡನೆಯದಾಗಿ ಕೆಲವು ವಾಟರ್ ಶೆಡ್ ಪ್ರೋಗ್ರಾಂನಲ್ಲಿ ಕೆಲವು ಕಾಮಗಾರಿಗಳನ್ನು ಸಣ್ಣಪುಟ್ಟದ್ದನ್ನು ಅಗ್ರಿಕಲ್ಚರ್ ಇಲಾಖೆಯವರು ತೆಗೆದುಕೊಳ್ಳುತ್ತಾರೆ ಇಲ್ಲಿ ಡ್ಯಾಂ ಕೆಲಸವಾದ ಕಾರಣ, ಇದನ್ನು ನಾನು ಪರಿಶೀಲಿಸಿ, ಹಣವನ್ನು ನೋಡಿಕೊಂಡು ಕೆಲಸ ತೆಗೆದುಕೊಳ್ಳುತ್ತೇನೆ

**ಅಧ್ಯಕ್ಷರು** ಮುಂದಿನ ಪ್ರಶ್ನೆ ಮಾನ್ಯ ಜಿ ಬಸವಣ್ಣೆಪ್ಪನವರು

**ಶ್ರೀ ಕೆ ವಸಂತಬಂಗೇರ** ಮಾನ್ಯ ಅಧ್ಯಕ್ಷರೇ, ನೇತ್ರಾವತಿ ನದಿ ನೀರಿನ ಬಗ್ಗೆ ಒಂದು ಪ್ರಶ್ನೆ ಉಂಟು, ಪ್ರಮುಖವಾದದ್ದು

**ಅಧ್ಯಕ್ಷರು** ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಬಸವಣ್ಣೆಪ್ಪನವರು ನಿಮ್ಮ ಪ್ರಶ್ನೆ ಕೇಳಿ ನೀವು ಪದೇ ಪದೇ ನಿಂತುಕೊಂಡು ಮಾತನಾಡಿದರೆ ನಾನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಲ್ಲವೂ ಪ್ರಮುಖವಾದ್ದು, ಈ ತರಹ ಆದರೆ ಸಹಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ

**ರಾಜ್ಯದಲ್ಲಿ ಭಾರೀ ನೀರಾವರಿ ಯೋಜನೆಗಳು ಕುರಿತು**

116 (465) ಶ್ರೀ ಬಸವಣ್ಣೆಪ್ಪ ಜಿ (ಹೊಳೆಹೊನ್ನೂರು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೀರಾವರಿ ಇಲಾಖೆಯ ವತಿಯಿಂದ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳು ಯಾವುವು? (ಹೆಸರು ಮತ್ತು ಇತರೆ ವಿವರಗಳೊಂದಿಗೆ ತಿಳಿಸುವುದು),

ಆ) ದಾವಣಗೆರೆ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಒಟ್ಟಾರೆ ಮಂಜೂರಾಗಿರುವ ಏತ ನೀರಾವರಿ ಯೋಜನೆಗಳು ಯಾವುವು (ಹೆಸರು ಮತ್ತು ವಿವರಗಳನ್ನು ತಿಳಿಸುವುದು),

ಇ) ಉಬ್ರಾಣಿ ಮತ್ತು ಅಮೃತಾಪುರ ಏತ ನೀರಾವರಿ ಯೋಜನೆಗಳ ಸದ್ಯದ ಪರಿಸ್ಥಿತಿ ಏನು? ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ರಾಜ್ಯದ ಜಲ ಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು) ವ್ಯಾಪ್ತಿಯಲ್ಲಿರುವ ಒಟ್ಟು ಏತ ನೀರಾವರಿ ಯೋಜನೆಗಳ ಸಂಖ್ಯೆ

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಮಂಜೂರಾತಿ ನೀಡಲಾಗಿರುವ ಏತ ನೀರಾವರಿ ಯೋಜನೆಗಳು–

1) ದಾವಣಗೆರೆ ಜಿಲ್ಲೆಯಲ್ಲಿ ಉಬ್ರಾಣಿ ಮತ್ತು ಅಮೃತಾಪುರ

2) ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಭದ್ರಾ ಮೇಲ್ದಂಡೆ ಯೋಜನೆ, ಗುಡ್ಡದ ಮಲ್ಲೇದೇವರ ಕೆರೆ

ಇ) ಉಬ್ರಾಣಿ ಮತ್ತು ಅಮೃತಾಪುರ ಸಂಯುಕ್ತ ವಿವಿದ್ದೋದ್ದೇಶ ಏತ ನೀರಾವರಿ ಯೋಜನೆಗಳು ಭದ್ರಾ ಮೇಲ್ದಂಡೆ ಯೋಜನೆಯ ಭಾಗವಾಗಿರುತ್ತದೆ. ಈ ಸಂಯುಕ್ತ ಯೋಜನೆಯ ರೂ 96 41 ಕೋಟಿಗಳ ಅಂದಾಜು ತಯಾರಿಸಿದ್ದು, ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮದ ಮೂಲಕ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ ಪ್ರಸ್ತುತ ನಿಗಮದ ತಾಂತ್ರಿಕ ಉಪ ಸಮಿತಿಯು ಯೋಜನಾ ವರದಿಯನ್ನು ಅಂಗೀಕರಿಸಿದೆ ವಿವರವಾದ ಅಂದಾಜು ವರದಿ ತಯಾರಿಸುವ ಕಾರ್ಯ ಪ್ರಗತಿಯಲ್ಲಿದೆ

## ಅನುಬಂಧ–1

### ಕರ್ನಾಟಕ ರಾಜ್ಯದಲ್ಲಿನ ಒಟ್ಟು ಏತ ನೀರಾವರಿ ಯೋಜನೆಗಳು (ಭಾರಿ ಮತ್ತು ಮಧ್ಯಮ ನೀರಾವರಿ) ಜಿಲ್ಲಾವಾರು

| ಕ್ರಮ ಸಂಖ್ಯೆ | ಹೆಸರು | ಜಿಲ್ಲೆ | ನೀರಿನ ಮೂಲ |
|---|---|---|---|
| 1 | ಇಗ್ಗಲೂರು ಬ್ಯಾರೇಜ್ ಅಡಿ–ಸಿ ಬಿಂದು | ಬೆಂಗಳೂರು (ಗ್ರಾಮಾಂತರ) | ಶಿಂಷಾನದಿ |
| 2 | ಇಗ್ಗಲೂರು ಬ್ಯಾರೇಜ್ ಅಡಿ–ಸಿ ಬಿಂದು | ಬೆಂಗಳೂರು (ಗ್ರಾಮಾಂತರ) | ಅರ್ಕಾವತಿ ಜಲಾಶಯ |
| 3 | ಗಂಜಾಂ ಏ ನೀ ಯೋ | ಮಂಡ್ಯ | ಕಾವೇರಿ |
| 4 | ಕ್ಯಾತಘಟ್ಟ ಏ ನೀ ಯೋ | ಮಂಡ್ಯ | ಹೆಬ್ಬಳ್ಳ |
| 5 | ಮಾದಹಳ್ಳಿ ಏ ನೀ ಯೋ (1ನೇ ಹಂತ) | ಮಂಡ್ಯ | ಕೆರೆ |
| 6 | ಎ ಬಿಂದು (ಇಗ್ಗಲೂರು ಬ್ಯಾರೇಜ್ ಅಡಿ) | ಮಂಡ್ಯ | ಶಿಂಷಾನದಿ |
| 7 | ಡಿ ಬಿಂದು (ಇಗ್ಗಲೂರು ಬ್ಯಾರೇಜ್ ಅಡಿ) | ಮಂಡ್ಯ | ಶಿಂಷಾನದಿ |
| 8 | ಮಲ್ಲಿಗೆರೆ ಏ ನೀ ಯೋ | ಮಂಡ್ಯ | ಶಿಂಷಾನದಿ |
| 9 | ಅಲೂರು ದೊಡ್ಡಿ ಏ ನೀ ಯೋ | ಮಂಡ್ಯ | ಶಿಂಷಾನದಿ |
| 10 | ಸೋಮನಹಳ್ಳಿ ಏ ನೀ ಯೋ | ಮಂಡ್ಯ | ಶಿಂಷಾನದಿ |
| 11 | ಹುಲಿಕೆರೆ ಏ ನೀ ಯೋ | ಮಂಡ್ಯ | ವಿ ಸಿ ನಾಲೆ |
| 12 | ತಡೆಮಾಲಂಗಿ ಏ ನೀ ಯೋ | | ಚಾಮರಾಜನಗರ |

| 1 | 2 | 3 | 4 |
|---|---|---|---|
| 13 | ಕಲ್ಲೂರು ಮುಳ್ಳೂರು ಏ ನೀ ಯೋ | ಮೈಸೂರು | ಕಾವೇರಿ |
| 14 | ರಾಮಪುರ ಏ ನೀ ಯೋ | ಮೈಸೂರು | ಕಬಿನಿ |
| 15 | ಬೆಳೆಲೆ ಏ ನೀ ಯೋ | ಮೈಸೂರು | ಕಬಿನಿ |
| 16 | ಗೊದ್ದನಪುರ ಏ ನೀ ಯೋ | ಮೈಸೂರು | ಕಬಿನಿ |
| 17 | ಬಸವನಪುರ ಏ ನೀ ಯೋ | ಮೈಸೂರು | ರಾಮಪುರ ನಾಲೆ |
| 18 | ಚಂದಹಳ್ಳಿ ಏ ನೀ ಯೋ | ಮೈಸೂರು | ಕಾವೇರಿ |
| 19 | ಬಾಗಲಿ ಏ ನೀ ಯೋ | ಚಾಮರಾಜನಗರ | ಕಾವೇರಿ |
| 20 | ಸತ್ಯಗಾಲ ಏ ನೀ ಯೋ | ಚಾಮರಾಜನಗರ | ಕಾವೇರಿ |
| 21 | ಸರಗೂರು ಏ ನೀ ಯೋ | ಚಾಮರಾಜನಗರ | ಕಾವೇರಿ |
| 22 | ಹರಳೆ ಏ ನೀ ಯೋ | ಚಾಮರಾಜನಗರ | ಕಾವೇರಿ |
| 23 | ಸೋಮವಾರಪೇಟೆ ಏ ನೀ ಯೋ | ಕೊಡಗು | ಹಾರಂಗಿ |
| 24 | ಕುರ್ಣೆ ಏ ನೀ ಯೋ (ಮೊದಲನೆ ಹಂತ) | ಬೆಳಗಾವಿ | ಚಿಕ್ಕೋಡಿ ಶಾಖಾ ಕಾಲುವೆ |
| 25 | ಕುರ್ಣೆ ಏ ನೀ ಯೋ (ಎರಡು ಮತ್ತು ಮೂರನೇ ಸಂಯುಕ್ತ ಹಂತ) | ಬೆಳಗಾವಿ | ಕುರ್ಣೆ ಏ ನೀ ಯೋ (ಮೊದಲನೆ ಹಂತ–1) |
| 26 | ಕೊಚರಿ ಏ ನೀ ಯೋ | ಬೆಳಗಾವಿ | ಚಿಕ್ಕೋಡಿ ಶಾಖಾ ಕಾಲುವೆ |
| 27 | ಕೊಣ್ಣೂರು ಏ ನೀ ಯೋ | ಬೆಳಗಾವಿ | ಘಟಪ್ರಭಾ ನದಿ |
| 28 | ಕುಲ್ಲೋಳಿ ಏ ನೀ ಯೋ | ಬಾಗಲಕೋಟೆ | ಕೃಷ್ಣ ನದಿ |
| 29 | ಶಿರಗುಪ್ಪಿ ಏ ನೀ ಯೋ | ಬಾಗಲಕೋಟೆ | ಕೃಷ್ಣ ನದಿ |
| 30 | ಕುಂಚನೂರು ಏ ನೀ ಯೋ | ಬಾಗಲಕೋಟೆ | ಕೃಷ್ಣ ನದಿ |
| 31 | ಸೊನ್ನ ಏ ನೀ ಯೋ | ಬಾಗಲಕೋಟೆ | ಕೃಷ್ಣ ನದಿ |
| 32 | ಕೊರ್ತಿ ಏ ನೀ ಯೋ | ಬಾಗಲಕೋಟೆ | ಕೃಷ್ಣ ನದಿ |
| 33 | ರೊಳ್ಳಿ ಏ ನೀ ಯೋ | ಬಾಗಲಕೋಟೆ | ಕೃಷ್ಣ ನದಿ |
| 34 | ಬಾದರದಿನ್ನಿ ಏ ನೀ ಯೋ | ಬಾಗಲಕೋಟೆ | ಘಟಪ್ರಭಾ ನದಿ |
| 35 | ಅನಗವಾಡಿ ಏ ನೀ ಯೋ | ಬಾಗಲಕೋಟೆ | ಘಟಪ್ರಭಾ ನದಿ |
| 36 | ಬಾವಲಟ್ಟಿ ಏ ನೀ ಯೋ | ಬಾಗಲಕೋಟೆ | ಘಟಪ್ರಭಾ ನದಿ |
| 37 | ಹೆಬ್ಬಳ್ಳಿ ಏ ನೀ ಯೋ | ಬಾಗಲಕೋಟೆ | ಮಲಪ್ರಭಾ ನದಿ |

| 1 | 2 | 3 | 4 |
|---|---|---|---|
| 38 | ಜಕನೂರ ಏ ನೀ ಯೋ | ಬಾಗಲಕೋಟೆ | ಮಲಪ್ರಭಾ ನದಿ |
| 39 | ಜೋಳಚಗುಡ್ಡ ಏ ನೀ ಯೋ | ಬಾಗಲಕೋಟೆ | ಮಲಪ್ರಭಾ ನದಿ |
| 40 | ಮಲ್ಲೂರು–ಮಾಟೊಳ್ಳಿ ಏ ನೀ ಯೋ | ಬೆಳಗಾವಿ | ಮಲಪ್ರಭಾ ಜಲಾಶಯ |
| 41 | ಸಿಂಗಾರಕೊಪ್ಪ ಏ ನೀ ಯೋ | ಬೆಳಗಾವಿ | ಮಲಪ್ರಭಾ ಜಲಾಶಯ |
| 42 | ಎಣಗಿ–ಹಿಟ್ಟಣಗಿ ಏ ನೀ ಯೋ | ಬೆಳಗಾವಿ | ಮಲಪ್ರಭಾ ಜಲಾಶಯ |
| 43 | ಹೆಡ್ರಗ್ಯುಲೇಟರ್ ಏ ನೀ ಯೋ | ಬೆಳಗಾವಿ | ಮಲಪ್ರಭಾ ಜಲಾಶಯ |
| 44 | ಕೆಂಗಾನೂರು ಏ ನೀ ಯೋ | ಬೆಳಗಾವಿ | ಮಲಪ್ರಭಾ ಜಲಾಶಯ |
| 45 | ಬೂದಿಹಾಳ ಏ ನೀ ಯೋ | ಬೆಳಗಾವಿ | ಮಲಪ್ರಭಾ ಜಲಾಶಯ |
| 46 | ಜಾಲಿಕ್ಕೊಪ್ಪ ಏ ನೀ ಯೋ | ಬೆಳಗಾವಿ | ಮಲಪ್ರಭಾ ಜಲಾಶಯ |
| 47 | ಹೊಸೂರು–ವಕ್ಕುಂದ ಏ ನೀ ಯೋ | ಬೆಳಗಾವಿ | ಮಲಪ್ರಭಾ ಜಲಾಶಯ |
| 48 | ಬದ್ಲಿ–ಕಾತ್ರಾಳ ಏ ನೀ ಯೋ | ಮೈಸೂರು | ಮಲಪ್ರಭಾ ಜಲಾಶಯ |
| 49 | ಯರಗಟ್ಟಿ ಏ ನೀ ಯೋ | ಬೆಳಗಾವಿ | ಮಲಪ್ರಭಾ ಎಡದಂಡೆ ಕಾಲುವೆಯಿಂದ |
| 50 | ಸುನ್ನಾಳ ಏ ನೀ ಯೋ | ಬೆಳಗಾವಿ | ಮಲಪ್ರಭಾ ನದಿ |
| 51 | ಹಲಗಟ್ಟಿ ಏ ನೀ ಯೋ | ಬೆಳಗಾವಿ | ಮಲಪ್ರಭಾ ನದಿ |
| 52 | ಬಲದಂಡೆ ಏ ನೀ ಯೋ (ಅರ್ಕಾವತಿ ಜಲಾಶಯ) | ಬೆಂಗಳೂರು (ಗ್ರಾಮಾಂತರ) | ಶಿಂಷಾನದಿ |
| 53 | ಎಡದಂಡೆ ಏ ನೀ ಯೋ (ಅರ್ಕಾವತಿ ಜಲಾಶಯ) | ಬೆಂಗಳೂರು (ಗ್ರಾಮಾಂತರ) | ಶಿಂಷಾನದಿ |

| 1 | 2 | 3 | 4 |
|---|---|---|---|
| 54 | ಏ ನೀ ಯೋ ಇಗ್ಗಲೂರು ಬ್ಯಾರೇಜ್ ಅಡಿ–ಗರಕ ಏ ನೀ ಯೋ ಹಳ್ಳಿ | ಬೆಂಗಳೂರು (ಗ್ರಾಮಾಂತರ) | ಅರ್ಕಾವತಿ ಜಲಾಶಯ |
| 55 | ಬೂದಗುಪ್ಪ ಏ ನೀ ಯೋ | ಮಂಡ್ಯ | ಶಿಂಷಾನದಿ |
| 56 | ಕೆ ಕೋಡಿಹಳ್ಳಿ ಏ ನೀ ಯೋ | ಮಂಡ್ಯ | ಶಿಂಷಾನದಿ |
| 57 | ಚಿಕ್ಕರಸಿನಕೆರೆ ಏ ನೀ ಯೋ | ಮಂಡ್ಯ | ಸೂಳೆಕೆರೆ ಹೆಬ್ಬಳ್ಳ |
| 58 | ಕನಲಿ ಏ ನೀ ಯೋ | ಮಂಡ್ಯ | ಕನಲಿ ಕೆರೆ |
| 59 | ಹುಚ್ಚಲಶ್ವರ ಏ ನೀ ಯೋ | ಮಂಡ್ಯ | ಕನಲಿ ಕೆರೆ |
| 60 | ಅಣ್ಣೂರು ಏ ನೀ ಯೋ | ಮಂಡ್ಯ | ಈಚಲ ಹಳ್ಳ |
| 61 | ಮಾರೇಹಳ್ಳಿ ಏ ನೀ ಯೋ | ಮಂಡ್ಯ | ಮಾರೇಹಳ್ಳಿ ಕೆರೆ |
| 62 | ಕಬ್ಬಾರೆ ಏ ನೀ ಯೋ | ಮಂಡ್ಯ | ಶಿಂಷಾನದಿ |
| 63 | ಹೆಮ್ಮಿನಹಳ್ಳ ಏ ನೀ ಯೋ | ಮಂಡ್ಯ | ಶಿಂಷಾನದಿ |
| 64 | ಬಾಣೋಜಿ ಪಂತ ಏ ನೀ ಯೋ | ಮಂಡ್ಯ | ಶಿಂಷಾನದಿ |
| 65 | ಎತ್ತಗದಹಳ್ಳಿ ಏ ನೀ ಯೋ | ಮಂಡ್ಯ | ಹೆಬ್ಬಳ್ಳ ಹಳ್ಳ |
| 66 | ಕಾಗೇಹಳ್ಳ ಏ ನೀ ಯೋ | ಮಂಡ್ಯ | ಹೆಬ್ಬಳ್ಳ ಹಳ್ಳ |
| 67 | ಕೆ ಪಿ ದೊಡ್ಡಿ ಏ ನೀ ಯೋ | ಮಂಡ್ಯ | ಈಚಲಹಳ್ಳ |
| 68 | ಕೆ ಶೆಟ್ಟಹಳ್ಳಿ ಏ ನೀ ಯೋ | ಮಂಡ್ಯ | ಕೆರೆ |
| 69 | ಕಾಗೆಪುರ ಏ ನೀ ಯೋ | ಮಂಡ್ಯ | ಹಳ್ಳ |
| 70 | ಅಂಚೆದೊಡ್ಡಿ ಏ ನೀ ಯೋ | ಮಂಡ್ಯ | ಕೆರೆ |
| 71 | ಚಿಕ್ಕಳಲೆ ಏ ನೀ ಯೋ | ಮಂಡ್ಯ | ಶಿಂಷಾನದಿ |
| 72 | ಹಳೇಹಳ್ಳಿ ಏ ನೀ ಯೋ | ಮಂಡ್ಯ | ಶಿಂಷಾನದಿ |
| 73 | ಯಡವನಹಳ್ಳಿ ಏ ನೀ ಯೋ | ಮಂಡ್ಯ | ಶಿಂಷಾನದಿ |
| 74 | ಮುಡ್ಯ ಏ ನೀ ಯೋ | ಮಂಡ್ಯ | ಶಿಂಷಾನದಿ |
| 75 | ಕಿಂರಗೂರು ಏ ನೀ ಯೋ | ಮಂಡ್ಯ | ಶಿಂಷಾನದಿ |
| 76 | ಚಿಕ್ಕೋನಹಳ್ಳಿ ಏ ನೀ ಯೋ | ಮಂಡ್ಯ | ಕೆರೆ |
| 77 | ಬಿದರಕೋಟೆ ಏ ನೀ ಯೋ | ಮಂಡ್ಯ | ಕೆರೆ |
| 78 | ಡಣಾಯಕನಪುರ ಏ ನೀ ಯೋ | ಮಂಡ್ಯ | ಹೆಬ್ಬಳ |
| 79 | ಕೀಲಾರ ಏ ನೀ ಯೋ | ಮಂಡ್ಯ | ಹೆಬ್ಬಳ |
| 80 | ಕೋಣನಹಳ್ಳಿ ಏ ನೀ ಯೋ | ಮಂಡ್ಯ | ಕೆರೆ |
| 81 | ಮರಿಲಿಂಗನ ದೊಡ್ಡಿ ಏ ನೀ ಯೋ | ಮಂಡ್ಯ | ಕೆರೆ |
| 82 | ಗಂಟೆ ಗೌಡನಹಳ್ಳಿ ಏ ನೀ ಯೋ | ಮಂಡ್ಯ | ಗುಡೇನಹಳ್ಳಿ ಕಣಿವೆ |

| 1 | 2 | 3 | 4 |
|---|---|---|---|
| 83 | ತಗ್ಗಹಳ್ಳಿ ಏ ನೀ ಯೋ | ಮಂಡ್ಯ | ಕೆರೆ |
| 84 | ಹಿರೇಹಳ್ಳಿ ಏ ನೀ ಯೋ | ಮಂಡ್ಯ | ಕೆರೆ |
| 85 | ನಿಟ್ಟೂರು ಏ ನೀ ಯೋ | ಮಂಡ್ಯ | ಶಿಂಷಾನದಿ |
| 86 | ಬಿ ಬಿಂದು (ಇಗ್ಗಲೂರು ಬ್ಯಾರೇಜ್ ಅಡಿ) | ಮಂಡ್ಯ | ಶಿಂಷಾನದಿ |
| 87 | ಹುಲಿಕೆರೆ ಏ ನೀ ಯೋ | ಮಂಡ್ಯ | ಶಿಂಷಾನದಿ |
| 88 | ತಾರಕ ಏ ನೀ ಯೋ | ಮೈಸೂರು | ಕಬಿನಿ ಜಲಾಶಯ |
| 89 | ನುಗು ಏ ನೀ ಯೋ | ಮೈಸೂರು | ಕಬಿನಿ |
| 90 | ಬನ್ನಹಳ್ಳಿ ಹುಂಡಿ ಏ ನೀ ಯೋ | ಮೈಸೂರು | ಕಬಿನಿ |
| 91 | ಪಿರಿಯಾಪಟ್ಟಣ ಏ ನೀ ಯೋ | ಮೈಸೂರು | ಕಬಿನಿ |
| 92 | ನಂಜಾಪುರ ಏ ನೀ ಯೋ | ಮೈಸೂರು | ಹಾರಂಗಿ ನದಿ |
| 93 | ಹಿರೇಕೆರೆ ಹೊಂಗನೂರು ಏ ನೀ ಯೋ | ಮೈಸೂರು | ಕಾವೇರಿ |
| 94 | ರುಸ್ತುಂಪುರ ಏ ನೀ ಯೋ | ಚಾಮರಾಜನಗರ | ಕಬಿನಿ ಬಲದಂಡೆ ನಾಲೆ |
| 95 | ಚಡ್ಡಿನಾಗನೂರು ಏ ನೀ ಯೋ | ಬೆಳಗಾವಿ | ಘಟಪ್ರಭಾ ನದಿ |
| 96 | ಕೊಟಬಾಗಿ ಏ ನೀ.ಯೋ | ಬೆಳಗಾವಿ | ಘಟಪ್ರಭಾ ನದಿ |
| 97 | ದೇವಲಾಕಪೂರ ಏ ನೀ ಯೋ | ಬೆಳಗಾವಿ | ಧೂಪದಾಳ ವೀಯರ್‌ನ ಹಿನ್ನೀರು |
| 98 | ಅಲಮಟ್ಟಿ ಬ ಕಾ ಏ ನೀ ಯೋ | ಬೆಳಗಾವಿ | ಮಲಪ್ರಭಾ ಜಲಾಶಯ |
| 99 | ಮುಳವಾಡ ಏ ನೀ ಯೋ | ಬಾಗಲಕೋಟೆ | ಕೃಷ್ಣಾನದಿ |
| 100 | ಮುಳವಾಡ ಏ ನೀ ಯೋ | ಬಾಗಲಕೋಟೆ | ಕೃಷ್ಣಾನದಿ |
| 101 | ಗಂಜಿಗೆರೆ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |
| 102 | ಕ್ಯಾತನಹಳ್ಳಿ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |
| 103 | ರಾಮೇನಹಳ್ಳಿ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |
| 104 | ಮೇರ್ವೆ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |
| 105 | ಹೊಸಪಟ್ಟಣ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |
| 106 | ಮುದಿಗೆರೆ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |
| 107 | ಕಟ್ಟೇಪುರ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |
| 108 | ಜನಾರ್ಧನಹಳ್ಳಿ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |

| 1 | 2 | 3 | 4 |
|---|---|---|---|
| 109 | ಮಣಿಗನಹಳ್ಳಿ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |
| 110 | ಕೆಂದಿಣ್ಣೆ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |
| 111 | ಅಂಜನೇಯಪುರ ಏ ನೀ ಯೋ | ಹಾಸನ | ಹೇಮಾವತಿ ಜಲಾಶಯ |
| 112 | ಅಡಕೆ ಬೊಮ್ಮನಹಳ್ಳಿ ಏ ನೀ ಯೋ | ಹಾಸನ | ಹೇಮಾವತಿ ನಾಲೆ |
| 113 | ಅಲ್ಲಾ ಪಟ್ಟಣ ಏ ನೀ ಯೋ | ಹಾಸನ | ಹೇಮಾವತಿ ನಾಲೆ |
| 114 | ಹಳ್ಳಿಮೈಸೂರು ಏ ನೀ ಯೋ | ಹಾಸನ | ಹೇಮಾವತಿ ನಾಲೆ |
| 115 | ಬಾಗೂರು ನವಿಲೆ (ಆಗಮ) ಏ ನೀ ಯೋ | ಹಾಸನ | ಹೇಮಾವತಿ ನಾಲೆ |
| 116 | ಒಂಟಿಗುಡ್ಡ ಏ ನೀ ಯೋ | ಹಾಸನ | ಹೇಮಾವತಿ ನಾಲೆ |
| 117 | ರಂಗೇನಹಳ್ಳಿ ಏ ನೀ ಯೋ | ಹಾಸನ | ಹೇಮಾವತಿ ನಾಲೆ |
| 118 | ಕಾಚೇನಹಳ್ಳಿ ಏ ನೀ ಯೋ | ಹಾಸನ | ಹೇಮಾವತಿ ನದಿ |
| 119 | ಕಾಮಸಮುದ್ರ ಏ ನೀ ಯೋ | ಹಾಸನ | ಹೇಮಾವತಿ ನದಿ |
| 120 | ಹುಚ್ಚನಕೊಪ್ಪಲು ಏ ನೀ ಯೋ | ಹಾಸನ | ಹೇಮಾವತಿ ನದಿ |
| 121 | ಉಳೇನೂರು ಏ ನೀ ಯೋ | ಕೊಪ್ಪಳ | ತುಂಗಭದ್ರಾ |
| 122 | ಕುಂಟೋಜಿ ಏ ನೀ ಯೋ | ಕೊಪ್ಪಳ | ತುಂಗಭದ್ರಾ |
| 123 | ಮುಸ್ಟೂರು ಬ್ಲಾಕ್-1 ಏ ನೀ ಯೋ | ಕೊಪ್ಪಳ | ತುಂಗಭದ್ರಾ |
| 124 | ಮುಸ್ಟೂರು ಬ್ಲಾಕ್-2 ಏ ನೀ ಯೋ | ಕೊಪ್ಪಳ | ತುಂಗಭದ್ರಾ |
| 125 | ಮುಸ್ಟೂರು ಕ್ಯಾಂಪ್ ಏ ನೀ ಯೋ | ಕೊಪ್ಪಳ | ತುಂಗಭದ್ರಾ |
| 126 | ಮುಸ್ಟೂರು ಗ್ರಾಮ ಏ ನೀ ಯೋ | ಕೊಪ್ಪಳ | ತುಂಗಭದ್ರಾ |
| 127 | ರಾರಾವಿ ಏ ನೀ ಯೋ | ಬಳ್ಳಾರಿ | ಹಗರಿ |
| 128 | ಕರೂರು ಏ ನೀ ಯೋ | ಬಳ್ಳಾರಿ | ಹಗರಿ |
| 129 | ಟಿ ಎನ್ ಕಡ್ಲೂರು ಏ ನೀ ಯೋ | ಬಳ್ಳಾರಿ | ಹಗರಿ |
| 130 | ಕೋಲೂರು ಏ ನೀ ಯೋ | ಬಳ್ಳಾರಿ | ಚೊಡ್ಡಹಳ್ಳ |
| 131 | ಸಿಂಗಟಾಲೂರು ಏ ನೀ ಯೋ | ಗದಗ್ | ತುಂಗಭದ್ರಾ |
| 132 | ಇಟಗಿ ಸಾಸಲವಾಡ ಏ ನೀ ಯೋ | ಗದಗ್ | ತುಂಗಭದ್ರಾ |
| 133 | ಸನ್ಯಾಸ ಕೊಪ್ಪ ಏ ನೀ ಯೋ | ಶಿವಮೊಗ್ಗ | ಕುಮುದ್ವತಿ |
| 134 | ತುಂಗ ಏ ನೀ ಯೋ | ಶಿವಮೊಗ್ಗ | ತುಂಗಭದ್ರಾ |
| 135 | ಬಸಾಪುರ ಏ ನೀ ಯೋ | ಹಾವೇರಿ | ವರದಾ |
| 136 | ತಿಮ್ಮಾಪುರ ಏ ನೀ ಯೋ | ಹಾವೇರಿ | ತುಂಗಭದ್ರಾ |
| 137 | ಕಡುವಿನ ಬೈಲು ಏ ನೀ ಯೋ | ಚಿಕ್ಕಮಗಳೂರು | ಭದ್ರಾ |
| 138 | ಆಲಮಟ್ಟಿ ಎ ಕಾ ಏ ನೀ ಯೋ | ಬಿಜಾಪುರ | ಕೃಷ್ಣಾ ನದಿ |

| 1 | 2 | 3 | 4 |
|---|---|---|---|
| 139 | ಮುಳವಾಡ ಏ ನೀ ಯೋ | ಬಿಜಾಪುರ | ಕೃಷ್ಣಾ ನದಿ |
| 140 | ರಾಂಪುರ ಏ ನೀ ಯೋ | ರಾಯಚೂರು | ನಾರಾಯಣಪುರ ಜಲಾಶಯ |
| 141. | ಇಂಡಿ ಏ ನೀ ಯೋ | ಗುಲ್ಬರ್ಗಾ | ಕೃಷ್ಣಾ ನದಿ |
| 142 | ಭೀಮ ಏ ನೀ ಯೋ | ಗುಲ್ಬರ್ಗಾ | ಭೀಮಾ ನದಿ |

ಶ್ರೀ ಜಿ ಬಸವಣ್ಣೆಪ್ಪ ಮಾನ್ಯ ಅಧ್ಯಕ್ಷರೆ, ಈ ಯೋಜನೆಯ ವ್ಯಾಪ್ತಿ ಮೂರು ಕ್ಷೇತ್ರಗಳಿಗೆ ಬರುತ್ತದೆ ಚನ್ನಗಿರಿ, ಹೊಳೆಹೊನ್ನೂರು ಮತ್ತು ತರೀಕೆರೆ ಈ ಪ್ರದೇಶ 30 ಚದರ ಕಿಲೋ ಮೀಟರ್ ಪ್ರದೇಶದಿಂದ ಕೂಡಿದ್ದು, ಹಿಂದೆ ಈ ಪ್ರದೇಶ ಸಮೃದ್ಧಿಯ ಪ್ರದೇಶವಾಗಿತ್ತು ಅಲ್ಲಿ ಅಡಿಕೆ, ತೆಂಗು, ಶೇಂಗಾ, ಹತ್ತಿ, ಜೋಳವನ್ನು ಯಥೇಚ್ಛವಾಗಿ ಬೆಳೆಯುತ್ತಿದ್ದರು ಕಳೆದ 10–15 ವರ್ಷಗಳಿಂದ ಮಳೆ ಇಲ್ಲದೇ ಭೀಕರ ಬರಗಾಲಕ್ಕೆ ಜನರು ತುತ್ತಾಗಿದ್ದಾರೆ ಅಲ್ಲಿ ಅಡಿಕೆ ಗಿಡ, ತೆಂಗು ಗಿಡ ಇವೆಲ್ಲಾ ಒಣಗಿಹೋಗಿವೆ ಮತ್ತೆ ಕುಡಿಯುವ ನೀರಿನ ಪರಿಸ್ಥಿತಿಯೂ ಬಹಳ ಗಂಭೀರವಾಗಿದೆ This area is declared as rain shadow area ಈ ಪ್ರದೇಶದ ವ್ಯಾಪ್ತಿಗೆ 115 ಹಳ್ಳಿಗಳು ಬರುತ್ತದೆ, 146 ಕೆರೆಗಳು ಬರುತ್ತವೆ 7,945 ಕೊಳವೆ ಬಾವಿಗಳು ಇವೆಲ್ಲಾ ಬತ್ತಿ ಹೋಗಿ, ದೊಡ್ಡ ಅನಾಹುತವಾಗಿದೆ ಅದಕ್ಕೋಸ್ಕರ ಈಗ ಸಂಯುಕ್ತ ಯೋಜನೆ ಅದು ಉಬ್ರಾಣಿ ಮತ್ತು ಅಮೃತಾಪುರ ಈ ಎರಡೂ ಹೋಬಳಿಗಳ ಏತ ನೀರಾವರಿ ಯೋಜನೆಗೆ ಈಗಾಗಲೇ ಸರ್ಕಾರ ಅನುಮೋದನೆ ನೀಡಿದೆ ಇದು ವಿವಿಧ ಉದ್ದೇಶಗಳಿಂದ ಕೂಡಿರತಕ್ಕ ಯೋಜನೆ ಕುಡಿಯುವ ನೀರು, ನೀರಾವರಿ ಮತ್ತು ಅಂತರ್‌ಜಲ ಇಂಥ ಮಹತ್ತರ ಉದ್ದೇಶಗಳಿಂದ ಕೂಡಿದ ಯೋಜನೆಯಾಗಿದೆ ಕಳೆದ ಐದಾರು ವರ್ಷಗಳಿಂದ 50–60 ಹಳ್ಳಿಗಳಿಗೆ ಕುಡಿಯುವ ನೀರನ್ನು ಟ್ಯಾಕ್ಟರ್ ಮುಖಾಂತರ ಒದಗಿಸುತ್ತಿದ್ದಾರೆ ಈ ಯೋಜನೆಯಿಂದ ಆ ಪ್ರದೇಶ ಸಂವೃದ್ಧಿಯಾಗುತ್ತದೆ ಇದಕ್ಕೆ ಈಗಾಗಲೇ ಆಡಳಿತಾತ್ಮಕ ಅನುಮೋದನೆಯನ್ನು ತಾವು ಕೊಟ್ಟಿದ್ದೀರಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ನೀರಾವರಿ ನಿಗಮಕ್ಕೂ ವಹಿಸಿದ್ದೀರಿ ಆದರೆ ಹಣ ಬಿಡುಗಡೆ ಮಾಡದೆ ಕೆಲಸ ಸ್ಥಗಿತವಾಗಿದೆ ಆದಷ್ಟು ಬೇಗ ಹಣ ಬಿಡುಗಡೆ ಮಾಡಿ ಕೆಲಸ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರೆ, ಈಗ ಏತ ನೀರಾವರಿ ಯೋಜನೆಗಳು

**ಅಧ್ಯಕ್ಷರು** ದಯಮಾಡಿ ಕುಳಿತುಕೊಳ್ಳಬೇಕು ಈಗ ಬಸವಣ್ಣೆಪ್ಪನವರು ಪ್ರಶ್ನೆ ಕೇಳಿದ್ದಾರೆ ನಿಮಗೇಕೆ-ಅದರ ಉಸಾಬರಿ? ದಯಮಾಡಿ ಕುಳಿತುಕೊಳ್ಳಿ ನೀವು ಪೂರಕ ಪ್ರಶ್ನೆ ಕೇಳುವ ಅಗತ್ಯವಿಲ್ಲ

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀ ಬಸವಣ್ಣೆಪ್ಪನವರು ಏನು ಪ್ರಶ್ನೆ ಕೇಳಿದ್ದಾರೆ ಈ ಉಬ್ರಾಣಿ ಮತ್ತು ಅಮೃತಾಪುರ ಇದು ಒಂದು ದಾವಣಗೆರೆ ಜಿಲ್ಲೆಯಲ್ಲಿರತಕ್ಕಂಥ ಪ್ರಾಜೆಕ್ಟ್ ಇನ್ನೊಂದು ಚಿಕ್ಕಮಗಳೂರು ತರೀಕೆರೆ ತಾಲ್ಲೂಕಿನಲ್ಲಿರತಕ್ಕಂಥ ಪ್ರಾಜೆಕ್ಟ್ ಆಗಿದೆ ಇವೆರಡೂ ಪ್ರಾಜೆಕ್ಟ್‌ನಿಂದ ಸುಮಾರು 66 ಕೆರೆಗಳು ಅಮೃತಾಪುರ ಮತ್ತು 80 ಕೆರೆಗಳು ಉಬ್ರಾಣಿಯಲ್ಲಿ ಹೀಗೆ ಇವೆರಡೂ ಸೇರಿದರೆ ಹೆಚ್ಚು ಕಡಿಮೆ 146 ಕೆರೆಗಳಿಗೆ ನೀರು ತುಂಬತಕ್ಕಂಥ ವ್ಯವಸ್ಥೆ ಇದೆ ಎರಡನೆಯದು, ಸುಮಾರು 11,818 ಎಕರೆಗೆ ಹೆಚ್ಚಿನ ನೀರಾವರಿ ಯೋಜನೆಯನ್ನು ಹಾಕತಕ್ಕಂಥದ್ದು ಇನ್ನೊಂದು ಒಟ್ಟಾರೆ ಹೆಚ್ಚು ಕಡಿಮೆ 86 ಹಳ್ಳಿಗಳು ಉಬ್ರಾಣಿ ಘಟಕದಲ್ಲಿ ಮತ್ತು ಅಮೃತಾಪುರ ಘಟಕದಲ್ಲಿ ಸುಮಾರು 29 ಹಳ್ಳಿಗಳಿಗೆ ಅನುಕೂಲವಾಗತಕ್ಕಂತ ಈ ಪ್ರಾಜೆಕ್ಟ್ ಆಗಿರುತ್ತದೆ ಆದರೆ ಇದರ ಕಾಸ್ಟ್ ರೂ 96 ಕೋಟಿ ಇದೆ ಇದಕ್ಕೆ ಈಗಾಗಲೇ ಮಂಜೂರಾತಿ ಇದೆ ಆದರೆ ಇದರ ಸರ್ವೆ ಸಂಪೂರ್ಣವಾಗಿ ಆಗಿಲ್ಲ ಲೈನ್ ಎಸ್ಟಿಮೇಟ್ ಮೇಲೆಯೇ ಇದರ foundation stone ಹಾಕಿದ್ದು ಅದಕ್ಕಾಗಿ ಮೊದಲು ಇದನ್ನು ಸಂಪೂರ್ಣವಾಗಿ ಸರ್ವೆ ಮಾಡಿಸಿ ಇದಕ್ಕೆ ಸ್ವಲ್ಪ ಹಣವನ್ನು ಸಧ್ಯಕ್ಕೆ ನಾವು ಬಿಡುಗಡೆ ಮಾಡುತ್ತೇವೆ ಆದರೆ 96 ಕೋಟಿ ರೂ ಹಣಕ್ಕೆ ನಾವು ಬೇರೆ ವ್ಯವಸ್ಥೆ ಮಾಡದೇ ಇದ್ದರೆ ಈ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಕಾರಣವೇನೆಂದರೆ, ಈಗಾಗಲೇ Krishna Basin Scheme-A ಕೆಳಗೆ ಇರತಕ್ಕಂಥ ಯೋಜನೆಗಳನ್ನು ಪೂರ್ತಿ ಮಾಡುವುದಕ್ಕೆ committed works ಗೆ ಎಷ್ಟು ಹಣ ಬೇಕೆನ್ನುವುದನ್ನು ನಾವು ಹೇಳಿದ್ದೇವೆ ಆದರೆ ಇದು ಹೊಸದಾಗಿ ಪ್ರಾರಂಭವಾದಂಥದ್ದು ಇದಕ್ಕೂ ಕೂಡ 96 ಕೋಟಿ ರೂ ಬೇಕಾಗುತ್ತದೆ ಅದಕ್ಕಾಗಿ ಹಣದ ವ್ಯವಸ್ಥೆ ಮಾಡಿದ ಮೇಲೆ ಇದರ ಕೆಲಸ ಸಂಪೂರ್ಣವಾಗುತ್ತದೆ ಆದರೆ ಸಧ್ಯಕ್ಕೆ ಡೀಟೈಲ್ ಎಸ್ಟಿಮೇಟ್ ಮಾಡುವುದಕ್ಕೆ ಸರ್ವೆ ಮಾಡುವುದಕ್ಕೆ ಉಳಿದ ಎಲ್ಲಾ ಕೆಲಸ ಮಾಡುವುದಕ್ಕೆ ಸುಮಾರು 20–25 ಲಕ್ಷ ರೂಪಾಯಿಗಳನ್ನು ಸಧ್ಯಕ್ಕೆ ನಾವು ಬಿಡುಗಡೆ ಮಾಡುತ್ತೇವೆ, ಉಳಿದ ಹಣವನ್ನು ಹೇಗೆ ಸಂಗ್ರಹಿಸಬೇಕು,

mobilize ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಒಂದು ಮೀಟಿಂಗ್ ಮಾಡಿ ಆ ಮೇಲೆ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುತ್ತದೆ

ಶ್ರೀ ಜಿ ಬಸವಣ್ಣೆಪ್ಪ ಮಾನ್ಯ ಅಧ್ಯಕ್ಷರೆ, detail survey ಆಗಿದೆ, estimate ಆಗಿದೆ, ಲೈನ್ ಎಸ್ಟಿಮೇಟ್ ಆಗಬೇಕಾಗಿದೆ that is also completed ಆದಷ್ಟು ಬೇಗ ಸ್ವಲ್ಪ 1/3rd amount release ಮಾಡಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಅಧ್ಯಕ್ಷರೆ, ನೀರಾವರಿ ನಿಗಮದಲ್ಲಿ committed works, ongoing work ಗೆ ಸುಮಾರು 2600 ಕೋಟಿ ರೂ ಬೇಕೆಂದು ನಾನು ಹೇಳಿದೆ ಇದು ಹೊಸ ಯೋಜನೆಯಾಗಿದೆ ಅದಕ್ಕಾಗಿ ನಾನು ತೆಗೆದುಕೊಳ್ಳುವುದಿಲ್ಲ ಎಂದು ಹೇಳುವುದಿಲ್ಲ ಹಣದ ತೊಂದರೆ ಇದ್ದ ಕಾರಣ ಸಧ್ಯಕ್ಕೆ ಯಾವ ರೀತಿಯಾಗಿ ಇದನ್ನು ಅದರಲ್ಲಿ ಸೇರಿಸಿಕೊಳ್ಳಬಹುದು, ಅಥವಾ ಇದಕ್ಕೆ budgetary provision ಮಾಡಿಸಬೇಕೋ ಎನ್ನತಕ್ಕಂಥದ್ದನ್ನು ನಾವು examine ಮಾಡಿ ಪರಿಶೀಲಿಸಿ ಇದನ್ನು ತೆಗೆದುಕೊಳ್ಳುತ್ತೇನೆ

## ಮೈಸೂರು ನಗರದಲ್ಲಿ ವಿದ್ಯುತ್ ಬೇಡಿಕೆ ಪೂರೈಕೆಗೆ ಕ್ರಮ

118(482) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರ ದಿನೇ ದಿನೇ ಬೆಳೆಯುತ್ತಿರುವುದಕ್ಕೆ ತಕ್ಕಂತೆ ಅದರ ವಿದ್ಯುತ್ ಬೇಡಿಕೆ ಪ್ರಮಾಣ ಎಷ್ಟು,

ಆ) ಈ ವಿದ್ಯುತ್ ಬೇಡಿಕೆಯನ್ನು ಎಲ್ಲೆಲ್ಲಿಂದ ಹಾಗೂ ಎಷ್ಟೆಷ್ಟು ಪ್ರಮಾಣದಲ್ಲಿ ಪೂರೈಸಲಾಗುತ್ತಿದೆ,

ಇ) ವಿದ್ಯುತ್ ಬೇಡಿಕೆಯನ್ನು ಪೂರ್ಣ ಪ್ರಮಾಣದಲ್ಲಿ ಪೂರೈಸಲು ಯೋಚಿಸಿರುವ ಭವಿಷ್ಯದ ಯೋಜನೆಗಳಾವುದು (ಯೋಜನಾ ವೆಚ್ಚದ ವಿವರಗಳೊಂದಿಗೆ ಒದಗಿಸುವುದು),

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಳೆದ ವರ್ಷವಾದ 2003-04ರಲ್ಲಿ ಮೈಸೂರು ನಗರದ ಧಿನವಹಿ ಅನಿರ್ಬಂಧಿತ ವಿದ್ಯುತ್ ಬೇಡಿಕೆ ಸರಾಸರಿ 15 ದಶಲಕ್ಷ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿತ್ತು ಪ್ರಸಕ್ತ ವರ್ಷವಾದ 2004-05ರಲ್ಲಿ ಸರಾಸರಿ ದಿನವಹಿ ಅನಿರ್ಬಂಧಿತ ವಿದ್ಯುತ್ ಬೇಡಿಕೆಯ ಪ್ರಮಾಣ ಸುಮಾರು 155 ದಶಲಕ್ಷ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿದೆ

ಆ) ಮೈಸೂರು ನಗರಕ್ಕೆ ವಿದ್ಯುತ್ ಸರಬರಾಜು ಮಾಡಲಾಗುತ್ತಿರುವ ವಿದ್ಯುತ್ ಉಪ ಕೇಂದ್ರಗಳ ಹೆಸರುಗಳು ಮತ್ತು ಅವುಗಳು ಪೂರೈಕೆ ಮಾಡುತ್ತಿರುವ ವಿದ್ಯುತ್ ಪ್ರಮಾಣ-ಇವುಗಳ ವಿವರಗಳನ್ನು ಕೆಳಕಂಡ ಕೋಷ್ಟಕದಲ್ಲಿ ಒದಗಿಸಿದೆ

| ಕ್ರಮ ಸಂಖ್ಯೆ | ವಿದ್ಯುತ್ ಉಪ ಕೇಂದ್ರದ ಹೆಸರು | ಸಾಮರ್ಥ್ಯ (ಎಂ ವಿ ಎ ಗಳಲ್ಲಿ) | ವಿದ್ಯುತ್ ರೋಡ್ ಮೆಗಾ ವ್ಯಾಟ್ ಗಳಲ್ಲಿ | ಏಪ್ರಿಲ್ 2004ರ ತಿಂಗಳಲ್ಲಿ ಪೂರೈಕೆ ಮಾಡಲಾದ ದಿನವಹಿ ಸರಾಸರಿ ವಿದ್ಯುತ್ತಿನ ಪ್ರಮಾಣ (ದಶಲಕ್ಷ ಯೂನಿಟ್‌ಗಳಲ್ಲಿ) |
|---|---|---|---|---|
| 1 | ಬೋಗಾದಿ | 12 5 | 4 4 | 0 074 |
| 2 | ದಟ್ಟಗಳ್ಳಿ | 12 5 | 1 7 | 0 020 |
| 3 | ದೇವನೂರು (ಮೈಸೂರು) | 25 0 | 6 0 | 0 094 |
| 4 | ಡಿ ಕೆ ಮೈದಾನ | 25 0 | 10 2 | 0 150 |
| 5 | ಎಫ್ ಟಿ ಎಸ್ | 40 0 | 30 0 | 0 304 |
| 6 | ಹೆಬ್ಬಾಳು | 12 5 | 5 26 | 0 090 |
| 7 | ಕೆ ಹೆಚ್ ಬಿ ಕಾಲೋನಿ | 12 5 | 3 57 | 0 054 |
| 8 | ಮೇಟಗಳ್ಳಿ | 25 0 | 9 6 | 0 150 |
| 9 | ರಾಮಕೃಷ್ಣನಗರ | 25 0 | 8 7 | 0 130 |
| 10 | ಮೈಸೂರು ದಕ್ಷಿಣ | 25 0 | 13 8 | 0 210 |
| 11 | ವಿಜಯನಗರ | 12,5,6,3 | 6 36 | 0 110 |
| 12 | ಹೂಟಗಳ್ಳಿ | 20 0 | 7 3 | 0 090 |
| | ಒಟ್ಟು | | | 1 476 |

ಇ) ಮೈಸೂರು ನಗರದ ವಿದ್ಯುತ್ ಬೇಡಿಕೆಯನ್ನು ಪೂರ್ಣ ಪ್ರಮಾಣದಲ್ಲಿ ಪೂರೈಸಲಾಗುತ್ತಿದೆ ಆದರೆ ಮುಂದಿನ ದಿನಗಳಲ್ಲಿ ಹೆಚ್ಚಾಗುವ ಬೇಡಿಕೆಯನ್ನು ಪೂರೈಸಲು ಯೋಚಿಸಿರುವ ಭವಿಷ್ಯದ ಯೋಜನೆಗಳು ಮತ್ತು ಅವುಗಳ ಯೋಜನಾ ವೆಚ್ಚದ ವಿವರಗಳನ್ನು ಕೆಳಕಂಡ ಕೋಷ್ಟಕದಲ್ಲಿ ಒದಗಿಸಿದೆ

## ಭವಿಷ್ಯದ ಯೋಜನೆಯ ವಿವರಗಳು ಮತ್ತು ಯೋಜನಾ ವೆಚ್ಚ

| ಕ್ರಮ ಸಂಖ್ಯೆ | ಯೋಜನೆಯ ವಿವರ | ಯೋಜನೆಗೆ ತಗಲುವ ವೆಚ್ಚ (ರೂ ಲಕ್ಷಗಳಲ್ಲಿ) | ಯೋಜನೆಯ ಪ್ರಸ್ತುತ ವಸ್ತು ಸ್ಥಿತಿ |
|---|---|---|---|
| 1 | ಬಸ್ತಿಪುರ ಬಸ್ತಿಪುರದಲ್ಲಿ 400 ಕೆ ವಿ ವಿದ್ಯುತ್ ಸಬ್ ಸ್ಟೇಷನ್ನಿನ ನಿರ್ಮಾಣ | 13,500 00 (ವಿದ್ಯುತ್ ಪ್ರಸರಣಾ ಮಾರ್ಗದ ಅಂದಾಜು ವೆಚ್ಚವೂ ಸೇರಿದಂತೆ) | ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಪಿ ಜಿ ಸಿ ಐ ಎಲ್ ಸಂಸ್ಥೆಯು ನಿರ್ಮಾಣ ಕಾರ್ಯಗಳನ್ನು ಕೈಗೊಂಡಿರುತ್ತದೆ ನಿರ್ಮಾಣ ಕಾರ್ಯಗಳು 2005ರ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ |
| 2 | ವಾಜಮಂಗಲ ವಾಜ ಮಂಗಲದಲ್ಲಿ 220 ಕೆ ವಿ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ | 1 802 00 | ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳು ‹ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು ಡಳಿತಾತ್ಮಕ ಮಂಜೂರಾತಿ ನೀಡ ಬೇಕಾಗಿರುತ್ತದೆ |
| 3 | ಮೇಪಲಾಪುರ ಮೇಪಲಾಪುರದಲ್ಲಿ 66/ 11 ಕೆ ವಿ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ | 224 00 | ಸದರಿ ಕಾವ ಗಾರಿಯ ನಿರ್ವಹಣೆಗೆ ಆರ್ಥಿಕ ಹೊಂದಾಣಿಕೆಯನ್ನು ಮಾಡಿಕೊಳ್ಳಲಾಗಿದ್ದು ಟರ್ನ್‌ಕೀ ಆಧಾರದಲ್ಲಿ ಈ ಕಾಮಗಾರಿಯನ್ನು ನಿರ್ವಹಿಸಲು ನಿರ್ಧರಿಸಲಾಗಿದೆ ಪ್ರಸಕ್ತ ವರ್ಷದ (2004–05) ಅಂತ್ಯದ ವೇಳೆಗೆ ನಿರ್ಮಾಣ ಕಾರ್ಯಗಳನ್ನು ಪ್ರಾರಂಭಿಸುವ ಗುರಿಯನ್ನು ಹೊಂದಲಾಗಿದೆ ಮುಂಬರುವ (2005–06) ವರ್ಷದ ಡಿಸೆಂಬರ್ 2005ರ ಅಂತ್ಯದ ವೇಳೆಗೆ ಪೂರ್ಣ ಗೊಳಿಸುವ ಗುರಿಯನ್ನು ಹಮ್ಮಿಕೊಳ್ಳಲಾಗಿದೆ |
| 4 | ಇಲವಾಲ ಇಲವಾಲದಲ್ಲಿ 66 / 11 ಕೆವಿ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣ | 350 00 | ಭೂಮಿಯನ್ನು ಸ್ವಾದೀನ ಪಡಿಸಿ ಕೊಳ್ಳಲಾಗಿದ್ದು ಕ ವಿ ಪ್ರ ನಿ ನಿ ವು ತಾಂತ್ರಿಕ ಸಲಹಾ ಸಮಿತಿಯ ಸಲಹೆಯನ್ನು ಪಡೆಯಲು |

| 1 | 2 | 3 | 4 |
|---|---|---|---|
| 5 | ಜೈಪುರ ಜೈಪುರದಲ್ಲಿ 66/11 ಕೆ ವಿ ವಿದ್ಯುತ್ ಸಬ್-ಸ್ಟೇಷನ್ನಿನ ನಿರ್ಮಾಣ | 3350 | ಸೂಕ್ತ ಭೂಮಿಯನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ ಸೂಕ್ತ ಭೂಮಿಯನ್ನು ಗುರುತಿಸಿದ ನಂತರ ಅದನ್ನು ಸ್ವಾಧೀನ ಪಡಿಸಿಕೊಳ್ಳಲು ಮುಂದಿನ ಕ್ರಮಗಳನ್ನು ಜರುಗಿಸಲಾಗುವುದು ಅಲ್ಲದೇ ಈ ವಿಷಯದಲ್ಲಿಯೂ ಸಹ ಕ ವಿ ಪ್ರ ನಿ ನಿ ಯ ತಾಂತ್ರಿಕ ಸಲಹಾ ಸಮಿತಿಯ ಸಲಹೆಯನ್ನು ಪಡೆಯಬೇಕಾಗಿರುತ್ತದೆ |

ಅಲ್ಲದೇ, ಹಾಸನ 220 ಕೆ ವಿ ವಿದ್ಯುತ್ ಸಬ್-ಸ್ಟೇಷನ್ನಿನ ಹೊರೆಯನ್ನು ಶಿವಮೊಗ್ಗ-ಮೈಸೂರು 220 ಕೆ ವಿ ವಿದ್ಯುತ್ ಪ್ರಸರಣ ಮಾರ್ಗದಿಂದ ಶಿವಮೊಗ್ಗ-ಬೆಂಗಳೂರು 220 ಕೆ ವಿ ವಿದ್ಯುತ್ ಪ್ರಸರಣ ಮಾರ್ಗದ ಮೇಲೆ ದಿನಾಂಕ 7-5-2004 ರಂದು ವರ್ಗಾಯಿಸಲಾಗಿದೆ ಈ ಕ್ರಮದಿಂದಾಗಿ ಶಿವಮೊಗ್ಗ-ಮೈಸೂರು 220 ಕೆ ವಿ ವಿದ್ಯುತ್ ಪ್ರಸರಣಾ ಮಾರ್ಗ ಮೇಲಿನ ಹೊರೆ ಕಡಿಮೆಗೊಂಡಿದ್ದು ಮೈಸೂರು ನಗರದಲ್ಲಿ ವಿದ್ಯುತ್ ಸರಬರಾಜಿನ ವೋಲ್ಟೇಜ್ ಗುಣಮಟ್ಟದಲ್ಲಿ ಸುಧಾರಣೆ ಕಂಡು ಬಂದಿರುತ್ತದೆ

ಕಳೆದ ವರ್ಷವಾದ 2003-04ರಲ್ಲಿ ಸುಮಾರು 5975 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಕೊರತೆಯನ್ನು ರಾಜ್ಯವು ಅನುಭವಿಸಿರುತ್ತದೆ ಗರಿಷ್ಠ ಬೇಡಿಕೆಯಲ್ಲಿ ಸುಮಾರು 1091 ಮೆಗಾ ವ್ಯಾಟ್‌ನಷ್ಟು ಕೊರತೆಯನ್ನು ಅನುಭವಿಸಿರುತ್ತದೆ ಪ್ರಸಕ್ತ ವರ್ಷದಲ್ಲಿಯೂ (2004-05) ಸಹ ರಾಜ್ಯವು ಸುಮಾರು 5215 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ಕೊರತೆಯನ್ನು ಹಾಗೂ 1140 ಮೆಗಾ ವಾಟ್‌ನಷ್ಟು ಗರಿಷ್ಠ ಬೇಡಿಕೆಯಲ್ಲಿ ಕೊರತೆಯನ್ನು ಅನುಭವಿಸಲಿದೆ

ವಿದ್ಯುತ್ ಬೇಡಿಕೆಯ ಹೆಚ್ಚಳಕ್ಕೆ ತಕ್ಕಂತೆ ವಿದ್ಯುತ್ ಉತ್ಪಾದನೆಯನ್ನು ಸರಿದೂಗಿಸಲು ವಿದ್ಯುತ್ ಉತ್ಪಾದನಾ ರಂಗದಲ್ಲೂ ಸಹಾ ಸುಮಾರು 5200 ಮೆಗಾ ವ್ಯಾಟ್‌ಗಳಷ್ಟು ಉತ್ಪಾದನಾ ಸಾಮರ್ಥ್ಯದ ಹೆಚ್ಚಳವಾಗಬೇಕಾಗಿರುತ್ತದೆ ಕೇವಲ ವಿದ್ಯುತ್ ಬೇಡಿಕೆಯನ್ನು ಸಂಪೂರ್ಣ ರೀತಿಯಲ್ಲಿ ನೀಗುವುದಲ್ಲದೇ ಸಾಕಷ್ಟು ಸ್ಪಿನ್ನಿಂಗ್ ಸಾಮರ್ಥ್ಯವನ್ನು ಕಾಯ್ದಿರಿಸಿಕೊಂಡು ವಿಶ್ವಸನೀಯ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜನ್ನು ವ್ಯವಸ್ಥೆಗೊಳಿಸಲು ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಹಲವಾರು ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ 11ನೆಯ ಪಂಚವಾರ್ಷಿಕ ಯೋಜನೆಯ (2011-12) ಅಂತ್ಯದ ವೇಳೆಗೆ ನಿರೀಕ್ಷಿಸಲಾಗಿರುವ ಒಟ್ಟು ಹೆಚ್ಚುವರಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 3689 ಮೆಗಾ ವ್ಯಾಟ್‌ಗಳು

ನಿರೀಕ್ಷಿತ ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳು

ರಾಜ್ಯ ವಲಯದಲ್ಲಿ

ಆಲಮಟ್ಟಿ ಅಣೆಕಟ್ಟು ಜಲ ವಿದ್ಯುತ್ ಯೋಜನೆ (290 ಮೆಗಾ ವ್ಯಾಟ್‌ಗಳು)

ರಾಯಚೂರು 8ನೇ ಘಟಕ (210 ಮೆಗಾ ವ್ಯಾಟ್‌ಗಳು)

ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಯೋಜನೆ (500 ಮೆಗಾ ವ್ಯಾಟ್‌ಗಳು)

ಬಿಡದಿ ಸಂಯುಕ್ತ ಆವರ್ತ ಅನಿಲ ಆಧಾರಿತ ವಿದ್ಯುತ್ ಯೋಜನೆ (1400 ಮೆಗಾ ವ್ಯಾಟ್‌ಗಳು)

ವರಾಹಿ ವಿಸ್ತರಣೆ 3 ಮತ್ತು 4ನೆಯ ಘಟಕಗಳು (230 ಮೆಗಾ ವ್ಯಾಟ್‌ಗಳು)

ಇಲ್ಲದೇ, ಕೇಂದ್ರ ವಲಯದಲ್ಲಿ ನೈವೇಲಿ ಕೈಗಾ ವಿಸ್ತರಣೆ, ತಾಲ್ಚೇರ್, ರಾಮಗುಂಡಂ ವಿಸ್ತರಣೆ ಮತ್ತು ಕೂಡಾನ್‌ಕುಲಂ ಇವುಗಳಿಂದಲೂ ವಿದ್ಯುತ್ತನ್ನು ಹೆಚ್ಚುವರಿಯಾಗಿ ನಿರೀಕ್ಷಿಸಲಾಗಿದೆ ಕೂಡಾನ್‌ಕುಲಂ ಮತ್ತು ಕೈಗಾ (2ನೇ ಘಟಕ) ಇವು 2007–08ರ ವರ್ಷದಲ್ಲಿ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸುವ ನಿರೀಕ್ಷೆ ಇದ್ದು ಇವುಗಳಿಂದ ಸುಮಾರು 560 ಮೆಗಾ ವ್ಯಾಟ್ ವಿದ್ಯುತ್ ರಾಜ್ಯದ ಪಾಲಿನ ರೂಪದಲ್ಲಿ ಹೆಚ್ಚುವರಿಯಾಗಿ ಲಭ್ಯವಾಗುವ ನಿರೀಕ್ಷೆ ಇದೆ ಅಲ್ಲದೇ ಖಾಸಗೀ ವಿದ್ಯುತ್ ಉತ್ಪಾದಕರಿಂದ ಸುಮಾರು 1700 ಮೆಗಾ ವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ನಿರೀಕ್ಷಿಸಲಾಗಿದ್ದು ಇದು ಇನ್ನೂ ಖಾತರೀಗೊಳ್ಳಬೇಕಾಗಿದೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಉತ್ತರ ಕೊಟ್ಟಿರುವಂಥದ್ದು ಹಾಸ್ಯಾಸ್ಪದವಾಗಿದೆ. ಇದರಲ್ಲಿ ಏನೂ ತಿರುಳು ಇಲ್ಲ ನಿರ್ಧರಿಸಲಾಗುತ್ತದೆ, ಉದ್ಭವಿಸುವುದಿಲ್ಲ, ಹಾಗೆ ಹೀಗೆ ಎಂದು ಯಾವುದಕ್ಕೂ ನಿಖರವಾದ ಉತ್ತರವನ್ನು ಕೊಡಲಿಲ್ಲ ಆ ಮೆಸ್ಕಾಂನವರಿಗೆ ಬುದ್ಧಿ ಇದೆಯೋ ಇಲ್ಲವೋ ಗೊತ್ತಿಲ್ಲ ಈಗ ಹೊಸಬರು ಮಂತ್ರಿಗಳು ಬಂದಿದ್ದು ಅವರನ್ನು ಟೀಕೆ ಮಾಡುವುದು ಅಷ್ಟು ಸರಿಯಿಲ್ಲ ಅಧಿಕಾರಿಗಳನ್ನು ಟೀಕೆ ಮಾಡುತ್ತಿದ್ದೇನೆ ಇದರಲ್ಲಿ ಸರಿಯಾದ ಉತ್ತರವೇ ಇಲ್ಲ ಇಲ್ಲಿ 'ಹೋದ ಪುಟ್ಟ ಬಂದ ಪುಟ್ಟ' ಅಷ್ಟೇ ಉತ್ತರ ಇಲ್ಲಿ ನೋಡಿ, ನಿರೀಕ್ಷಿಸಿದೆ, ನಿರ್ವಹಿಸಲು ನಿರ್ಧರಿಸಿದೆ, ಹಮ್ಮಿಕೊಳ್ಳಲಾಗಿದೆ, ಜರುಗಿಸಲಾಗುತ್ತಿದೆ, ಪಡೆಯಬೇಕಾಗಿರುತ್ತದೆ ಎಂದು ಹೇಳಿದ್ದಾರೆ ನಾನು ಕೇಳಿರುವುದು ಏನೆಂದರೆ ಮೈಸೂರು ನಗರದಲ್ಲಿ ವೋಲ್ಟೇಜ್ ಸಮಸ್ಯೆ ಇದೆ ಅಲ್ಲಿ ಎಲ್ಲಾ ಬಡಾವಣೆಗಳಲ್ಲೂ ಸಮಸ್ಯೆ ಇದೆ, ಸಮಸ್ಯೆಯನ್ನು ಬಗೆಹರಿಸುವ ದಿಕ್ಕಿನಲ್ಲಿ ನೀವು ಏನೂ ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದರೆ ಇದೆ ಇದೆ ಇದೆ ಎಂದು ಹೇಳಿದ್ದಾರೆ ಹೌದಪ್ಪನ ಚಾವಡಿಯಲ್ಲಿ ಹೌದಪ್ಪ, ಇಲ್ಲಪ್ಪನ ಚಾವಡಿಯಲ್ಲಿ ಇಲ್ಲಪ್ಪ ಉತ್ತರ ಇಷ್ಟೆ ಇದು

ಬಿಟ್ಟು ಬೇರೆ ಏನೂ ಇಲ್ಲ ನಾನು ಕೇಳಿದ ಪ್ರಶ್ನೆಗೆ ತೃಪ್ತಿಕರವಾದ ಉತ್ತರವೇ ಇಲ್ಲ

**ಶ್ರೀ ಹೆಚ್ ಡಿ ರೇವಣ್ಣ** ಮಾನ್ಯ ಅಧ್ಯಕ್ಷರೆ, ಮೈಸೂರು ನಗರಕ್ಕೆ ವೋಲ್ಟೇಜ್ ಇಲ್ಲ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ ವೋಲ್ಟೇಜ್ ಇದೆ ಮತ್ತೆ ವೋಲ್ಟೇಜ್ ಇಂಪ್ರೂವ್ ಮಾಡುವುದಕ್ಕೆ ಕೆಲವು ಹೊಸ ಸ್ಟೇಷನ್‌ಗಳನ್ನು ನಾವು ಮಾಡುತ್ತಿದ್ದೇವೆ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಕೇಂದ್ರ ಸರ್ಕಾರದ ಒಂದು 400 ಕೆ ವಿ ವಿದ್ಯುತ್ ಸ್ವೀಕರಣೆ ಕೇಂದ್ರವನ್ನು ಮಾಡುತ್ತಿದ್ದೇವೆ ಅದಲ್ಲದೆ ಈಗಾಗಲೇ ಬೋಗಾದಿ, ಹೆಬ್ಬಾಳು, ದಟ್ಟದಳ್ಳಿ, ದೇವನಳ್ಳಿ ಇವೆಲ್ಲವನ್ನೂ ಮಾಡಿದ್ದೇವೆ ಮತ್ತೆ ಇನ್ನೂ ವೋಲ್ಟೇಜ್ improve ಮಾಡುವ ವ್ಯವಸ್ಥೆಯನ್ನು ಮಾಡಿಸುತ್ತೇವೆ ಅದರಲ್ಲಿ ಅನುಮಾನ ಪಡಬೇಕಾದದ್ದೇನೂ ಇಲ್ಲ

**ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ** ಮಾನ್ಯ ಅಧ್ಯಕ್ಷರೆ, ಕೆಲವು ಚೆನ್ನಾಗಿ ಬೆಳೆದಿರತಕ್ಕಂಥ ಬಡಾವಣೆಗಳಲ್ಲೂ ವೋಲ್ಟೇಜ್ ಪ್ರಾಬ್ಲಮ್ ಇದೆ ಮೆಸ್ಕಾಂನವರಿಗೆ ಬುದ್ಧಿ ಇಲ್ಲ ಅವರಿಗೆ ಬುದ್ಧಿವಾದ ಹೇಳಿ ಎಲ್ಲೆಲ್ಲಿ ಇಲ್ಲ ಅಲ್ಲಿ ಅದನ್ನು ಸರಿಪಡಿಸಿ

**ಶ್ರೀ ಹೆಚ್ ಡಿ ರೇವಣ್ಣ** ಮಾನ್ಯ ಸಭಾಧ್ಯಕ್ಷರೆ, ಎಲ್ಲಿ ತೊಂದರೆ ಇದೆ ಎನ್ನುವಂಥ ವಿವರವನ್ನು ಮಾನ್ಯ ಸದಸ್ಯರು ಕೊಟ್ಟರೆ ಅದನ್ನು ಪರಿಶೀಲನೆ ಮಾಡಿ ಮಾಡಿಸಿಕೊಡುತ್ತೇವೆ.

**ತುಂಗಭದ್ರಾ ಎಡದಂಡೆ ಕಾಲುವೆ ದುರಸ್ತಿ**

119(584) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಭದ್ರಾ ಎಡದಂಡೆ ಕಾಲುವೆ ದುರಸ್ಥಿ ಕೆಲಸ ಯಾವ ಹಂತದಲ್ಲಿದೆ,

ಆ) ಇದಕ್ಕಾಗಿ ಹಣ ಬಿಡುಗಡೆಯಾಗಿದೆಯೇ,

ಇ) ಹಾಗಿದ್ದಲ್ಲಿ ಈಗಾಗಲೇ ಟೆಂಡರ್ ಕರೆಯಲಾಗಿತ್ತೆ, ವಿಳಂಬವಾಗಲು ಕಾರಣವೇನು,

ಈ) ಈ ಭಾಗದ ಎಷ್ಟು ಕಾಲುವೆಗಳ ದುರಸ್ಥಿ ಕಾಮಗಾರಿಗಾಗಿ ಯೋಜನೆ ರೂಪಿಸಲಾಗಿದೆ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ 2004ರ ಕ್ಲೋಜರ್‌ನಲ್ಲಿ ಹಮ್ಮಿಕೊಳ್ಳಲಾದ ದುರಸ್ತಿ ಕಾಮಗಾರಿಗಳನ್ನು ಪೂರೈಸಿ ಕಾಲುವೆಗಳಲ್ಲಿ ಮುಂಗಾರು ಬೆಳೆಗೆ ನೀರು ಬಿಡಲಾಗಿದ.

ಆ) ಹಣ ಬಿಡುಗಡೆಯಾಗಿರುವುದಿಲ್ಲ

ಇ) ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ಮೇ 2004ರಲ್ಲಿ ಟೆಂಡರುಗಳನ್ನು ಕರೆಯಲಾಯಿತು ಆದರೆ ಕೆಲವು ವಿಭಾಗಗಳಲ್ಲಿ ಕರೆದ ಟೆಂಡರುಗಳಿಗೆ ಗುತ್ತಿಗೆದಾರರಿಂದ ಕೆಲವು ಕಾಮಗಾರಿಗಳಿಗೆ ಪ್ರತಿಕ್ರಿಯೆ ಬರದಿದ್ದ ಕಾರಣ ಅಂತಹ ಕಾಮಗಾರಿಗಳನ್ನು ತುಂಡು

ಗುತ್ತಿಗೆ ಪದ್ಧತಿಯಂತೆ ಪಿಡಬ್ಲ್ಯೂಡಿ ಕೋಡ್ ನಿಯಮಾನುಸಾರ ಮತ್ತು ಅಲ್ಪಾವಧಿ ಟೆಂಡರ್ ಮೂಲಕ ಕೈಗೊಳ್ಳಲಾಗಿದ್ದು ಈ ದಿಸೆಯಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ

ಈ) ತುಂಗಾಭದ್ರಾ ಎಡದಂಡೆ ಕಾಲುವೆಯಲ್ಲಿ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ವಿಭಾಗಾವಾರು ವಿವರಗಳು ಇಂತಿವೆ

| ಕ್ರ.ಸಂ | ವಿಭಾಗದ ಹೆಸರು | ಕಾಲುವೆ ಹೆಸರು | ದುರಸ್ತಿ ಕಾಮಗಾರಿಯ ಮೊತ್ತ (ಲಕ್ಷ ರೂ ಗಳು) |
|---|---|---|---|
| 1 | ನಂ 1 ತುಂಗಭದ್ರಾ ಜಲಾಶಯ ವಿಭಾಗ, ಮುನಿರಾಬಾದ್ | ತುಂಗಭದ್ರಾ ಎಡದಂಡೆ ಮೇಲ್ಮಟ್ಟದ ಕಾಲುವೆ | 15 42 |
| 2 | ನಂ 2 ಕಾಲುವೆ ವಿಭಾಗ, ವಡ್ಡರಹಟ್ಟಿ | ತುಂಗಭದ್ರಾ ಎಡದಂಡೆ ಕಾಲುವೆ | 612 34 |
| 3 | ನಂ 3 ಕಾಲುವೆ ವಿಭಾಗ ಸಿಂಧನೂರು | ತುಂಗಬದ್ರಾ ಎಡದಂಡೆ ಕಾಲುವೆ | 109 15 |
| 4 | ನಂ 4 ಕಾಲುವೆ ವಿಬಾಗ, ಸಿರುವಾರ | ತುಂಗಭದ್ರಾ ಎಡದಂಡೆ ಕಾಲುವೆ | 157 09 |
| 5 | ನಂ 5 ಕಾಲುವೆ ವಿಭಾಗ ಯರಮರಸ್ | ತುಂಗಭದ್ರಾ ಎಡದಂಡೆ ಕಾಲುವೆ | 35 70 |
| | | ಒಟ್ಟು | **929 70** |

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ಎಡದಂಡೆ ಕಾಲುವೆ ಬಗ್ಗೆ ಈ ಪ್ರಶ್ನೆಯನ್ನು ಕೇಳಿದ್ದೇನೆ ಈ ತುಂಗಭದ್ರಾ ಎಡದಂಡೆ ಕಾಲುವೆಯ ಒಂದು ಇತಿಹಾಸವಿದೆ ಎಂದು ನನಗನ್ನಿಸುತ್ತದೆ ಆ ಪೂರ್ತಿ ಕಾಲುವೆಯನ್ನು ಕಟ್ಟಿಸಲಿಕ್ಕೆ 17 ಕೋಟಿ ರೂಪಾಯಿ ಖರ್ಚಾಯಿತು ಆದರೆ ಆ ಕಾಲುವೆ ಇಲ್ಲಿಯವರೆಗೆ 167 ಸಲ ಒಡೆದುಹೋಗಿದೆ ಆ ದುರಸ್ತಿ ಸಲುವಾಗಿ 257 ಕೋಟಿ ರೂ ಖರ್ಚು ಮಾಡಲಾಗಿದೆ ಅಂದರೆ ಈ ರೀತಿ 167 ಬಾರಿ ಕಾಲುವೆ ಏನು ಒಡೆದು ಹೋಗಿದೆ ಇದಕ್ಕೆ ಕಾರಣ ಏನು ಎನ್ನುವಂಥದ್ದನ್ನು ದಯವಿಟ್ಟು ತಾವು ಹೇಳಬೇಕಾಗುತ್ತದೆ ಈ ಕಾಲುವೆಯಿಂದ 6 ಲಕ್ಷ ಎಕರೆಗೆ ನೀರು ಕೊಡಬೇಕೆಂದು ಮಾಡಿರುವಂಥದ್ದಾಗಿದೆ ರಾಯಚೂರು ಮತ್ತು ಕೊಪ್ಪಳ ಈ ಎರಡೂ ಜಿಲ್ಲೆಗಳ ರೈತರಿಗೆ ಈ ಕಾಲುವೆ ಜೀವನಾಡಿಯಾಗಿದೆ ಆದರೆ ಈ 6 ಲಕ್ಷ ಎಕರೆಗೆ ಇವತ್ತಿನವರೆಗೂ ನಿಮ್ಮಿಂದ ನೀರು ಕೊಡುವುದಕ್ಕೆ ಆಗುತ್ತಿಲ್ಲ ಈ ಕಾಲುವೆಯಲ್ಲಿ 4100 ಕ್ಯೂಸೆಕ್ಸ್ ನೀರನ್ನು ಪೂರ್ತಿಯಾಗಿ ಬಿಟ್ಟರೆ ಅದು ಒಡೆದು ಹೋಗುತ್ತದೆ ಇಲ್ಲಿಯವರೆಗೆ 1200 ಕ್ಯೂಸೆಕ್ಸ್ ನೀರಿಗಿಂತ ಹೆಚ್ಚಿಗೆ ಬಿಡಲಿಕ್ಕೆ

ಆಗಲೇ ಇಲ್ಲ ಹಾಗಾದರೆ 4300 ಕ್ಯೂಸೆಕ್ಸ್ ನೀರನ್ನು ಯಾವಾಗ ಬಿಡಲಿಕ್ಕೆ ಸಾಧ್ಯವಾಗುತ್ತದೆ ಸದರಿ ಕಾಲುವೆ ಈ ರೀತಿ ಒಡೆಯಲಿಕ್ಕೆ ಕಾರಣ ಏನು ಎನ್ನುವಂಥದ್ದನ್ನು ದಯವಿಟ್ಟು ಹೇಳಬೇಕೆಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ ಇಲ್ಲಿ 9 ಕೋಟಿ ರೂಪಾಯಿಗಳ ರಿಪೇಟಿ ಕೆಲಸವನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ ಈ ರಿಪೇರಿ ಕೆಲಸವನ್ನು ಯಾವಾಗ ಸ್ಟಾರ್ಟ್ ಮಾಡುತ್ತೀರೆಂದು ಕೇಳಿದರೆ, ಮಳೆಗಾಲ ಪ್ರಾರಂಭವಾದ ಮೇಲೆ ರಿಪೇರಿ ಕೆಲಸ ಪ್ರಾರಂಭ ಮಾಡುವಂಥದ್ದು, ಈ ರಿಪೇರಿಗಾಗಿ 257 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದೀರಿ, ಯಾವಾಗಲೂ ಮಳೆಗಾಲ ಅಥವಾ ನೀರು ಬಿಡಲಿಕ್ಕೆ ಇನ್ನೊಂದು ಹದಿನೈದು ದಿವಸ ಇದ್ದಾಗ ಈ ರಿಪೇರಿ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ಹೀಗಾಗಿ ಅಲ್ಲಿಯ ಗುತ್ತಿಗೆದಾರರಿಗೆ, ಅಲ್ಲಿರುವಂಥ ಕೆಲವೊಂದು ಹಿತಾಸಕ್ತಿಗಳಿಗೆ ಇದರಿಂದ ಲೂಟಿ ಮಾಡುವುದಕ್ಕೆ ಅನುಕೂಲವಾಗಿದೆಯೇ ಹೊರತು ಈ ಕಾಲುವೆ ದುರಸ್ತಿಯಿಂದ ಬೇರೇ ಏನೂ ಆಗಲಿಲ್ಲ ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳುತ್ತಿದ್ದೇನೆ

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ ಹಾಗೆ ನಿಜ, ಪ್ರಾರಂಭದಲ್ಲಿ ಆ ಕಾಲುವೆಯ constructionಗೆ ಇಷ್ಟು ಹಣ ಹೋಗಿದೆ, ಆದರೆ ಅದರ ದುರಸ್ತಿಗೆ ಹೆಚ್ಚು ಕಡಿಮೆ ಅದರ 100 ಪಟ್ಟು ಆದ ಹಾಗೆ ಆಗಿದೆ. 18 ಕೋಟಿ ರೂ ಎಂದರೆ ದುರಸ್ತಿಗೆ 250 ಕೋಟಿ ರೂ ಆದಾಗ ಅಂದರೆ ಅದರ 20–30 ಪಟ್ಟು ಜಾಸ್ತಿ ಆಗಿದೆ ಸಹಜವಾಗಿ ಒಂದು ಕಾಲದಲ್ಲಿ ಕಡಿಮೆ ಹಣದಲ್ಲಿ ತಯಾರಾಗಿರುತ್ತದೆ. ಈ ವಿಧಾನಸೌಧವನ್ನು ಕಟ್ಟುವುದಕ್ಕೆ ಆ ಕಾಲದಲ್ಲಿ 4 ಕೋಟಿಯಾದರೆ ಈಗ ಸುಣ್ಣಬಣ್ಣ ಹಚ್ಚಕ್ಕಾಗಿಯೇ 4 ಕೋಟಿ ರೂಪಾಯಿ ಬೇಕು ಅದಕ್ಕೆ ಸಹಜವಾಗಿ ಟೈಂಪಾಸ್ ಆದ ಹಾಗೆ ಕಾಸ್ಟ್ ಇನ್‌ಕ್ರೀಸ್ ಆಗುತ್ತದೆ ಅದನ್ನು ನೋಡಿಕೊಂಡು ಮಾಡಬೇಕಾಗುತ್ತದೆ ಆದರೆ ಒಂದು ಮಾತು ನಿಜ ಏಕೆಂದರೆ, ಈ ಕಾಲುವೆ ಪದೇ ಪದೇ ಒಡೆಯುತ್ತಿದೆ ಒಂದು 10 ಕಿಲೋ ಮೀಟರ್‌ನಲ್ಲಿ ಒಂದು ಸಲ ಒಡೆದರೆ ಮತ್ತೆ 30, 40 ಕಿಲೋ ಮೀಟರ್‌ನಲ್ಲಿ ಒಂದು ಸಲ ಹೀಗೆ ಅನೇಕ ಸಾರಿ ಇದು ಒಡೆದು ಒಡೆದು ಹೋಗಿರುವಂಥ ಉದಾಹರಣೆಗಳು ಇವೆ ನಾನು ಸ್ವತ ಈ ಹಿಂದೆ 4–5 ಸಲ ಭೇಟಿ ಕೊಟ್ಟಿದ್ದೇನೆ ಇದಕ್ಕೆ ಸಂಪೂರ್ಣವಾಗಿ ಮಾಡ್ರನೈಸೇಷನ್ ಮಾಡದೇ ಹೋದರೆ ನಮ್ಮ ಆರ್‌ಸಿಸಿ ಸಿಸಿ ಹಾಕಿ ಕಟ್ಟಿ ಎಲ್ಲೆಲ್ಲಿ ಇಂಥ ಒಂದು ಬ್ಲಾಕ್ ಕಾಟನ್ ಸಾಯಿಲ್ ಇರುವಂಥ ಕಡೆ ಕಾಲುವೆಗಳು ಏನಿವೆ, ಇವುಗಳನ್ನು ಸರಿಯಾಗಿ ರಿಪೇರಿ ಮಾಡದೇ ಹೋದರೆ ಇದು ಪದೇ ಪದೇ ಇದೇ ರೀತಿ ಆಗುತ್ತದೆ ಅದಕ್ಕೆ ಇದರ ಬಗ್ಗೆ ನಾನು ಸಂಪೂರ್ಣವಾಗಿ ಒಂದು ಮೀಟಿಂಗ್ ಮಾಡಿ, ಇದರಲ್ಲಿ ಎಲ್ಲೆಲ್ಲಿ ತೊಂದರೆಯಿದೆ, ಯಾವ ಕಾರಣಕ್ಕಾಗಿ ಇದು ಪದೇ ಪದೇ

ಒಡೆಯುತ್ತಿದೆ ಮತ್ತು ಅದನ್ನು ಒಡೆಯದೇ ಇರುವ ರೀತಿಯಲ್ಲಿ ಈಗಾಗಲೇ ಕಮಿಟಿಯನ್ನು ಮಾಡಿ ಒಂದು ರಿಪೋರ್ಟ್ ಕೊಟ್ಟಿದ್ದಾರೆ ಕೆ ಸಿ ರೆಡ್ಡಿಯವರ ವರದಿ ಬಂದಿದೆ ಆದರೆ ಅದಕ್ಕೆ ಹಣ ಒದಗಿಸತಕ್ಕಂಥದ್ದು ಬಹಳ ಮುಖ್ಯ ಇದೆ ಈ ಮಾಡ್ರನೈಸೇಷನ್ ಸ್ಕೀಂನಲ್ಲಿ, ಕೆನಾಲ್ ಮಾಡ್ರನೈಸೇಷನ್ ಸ್ಕೀಂ, ಅದಕ್ಕೆ ಹಣವನ್ನು ಹೇಗೆ ಸಂಗ್ರಹಿಸಬೇಕು ಎನ್ನುವಂಥದ್ದಕ್ಕೂ ಕೂಡ ನಾನು ಇದರ ಬಗ್ಗೆ ಒಂದು ಸಭೆಯನ್ನು ಕರೆಸಿ ಮೀಟಿಂಗ್ ಮಾಡಿ ಸೂಕ್ತವಾದಂಥ ಕ್ರಮವನ್ನು ಜರುಗಿಸತಕ್ಕಂಥದ್ದು ಮಾಡುತ್ತೇನೆ ಎರಡನೆಯದು, ಈ 9 ಕೋಟಿ 29 ಲಕ್ಷ ರೂಪಾಯಿ ಕೆಲಸವನ್ನು ಈ ಕಾಲುವೆ ದುರಸ್ಥಿ ಕೆಲಸಕ್ಕೆ ನಾವು ಖರ್ಚು ಮಾಡಿದ್ದೇವೆ ತಮ್ಮ ಪ್ರಶ್ನೆಯಲ್ಲಿ ತಾವು ಹೇಳಿದಿರಿ ಕೆಲವು ಗುತ್ತಿಗೆದಾರರಿಗೆ ಅಧಿಕಾರಿಗಳು ಬ್ಲಾಕ್ ಮೇಲ್ ಮಾಡುತ್ತಿದ್ದಾರೆ, ಎನ್ನತಕ್ಕಂಥ ಪ್ರಶ್ನೆ ಇಲ್ಲಿ ಬಂದಿದೆ, ಗುತ್ತಿಗೆದಾರರಿಗೆ ಇಲಾಖಾ ಸಿಬ್ಬಂದಿ ಶೋಷಣೆಯಿಂದ ನಿಧಾನವಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅದನ್ನು ಅಂತಹ ಯಾವುದಾದರೂ ಅಧಿಕಾರಿಗಳು ಸ್ಪೆಸಿಫಿಕ್ ಆಗಿ ಗುತ್ತಿಗೆದಾರರಿಗೆ ತೊಂದರೆ ಕೊಟ್ಟರೆ, ಅಥವಾ ಗುಣಮಟ್ಟದ ಕೆಲಸವನ್ನು ಮಾಡಿದ ಮೇಲೆ ತೊಂದರೆ ಕೊಟ್ಟರೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಕೆಲವು ಸಾರಿ ಏನಾಗುತ್ತದೆ ಎಂದರೆ, ಗುಣಮಟ್ಟದ ಕೆಲಸ ಇಲ್ಲದೆ ನಾವು ಹೇಳಿದ ಹಾಗೆ ಬಿಲ್ ಮಾಡಿಕೊಡಿ ಎಂದು ಹೇಳತಕ್ಕ ಗುತ್ತಿಗೆದಾರರು ಇರುತ್ತಾರೆ ಅದಕ್ಕೆ ಇದನ್ನು ಸ್ಪೆಸಿಫಿಕ್ ಆಗಿ ತಾವು ಏನಾದರೂ ಇಂಥ ಇಂಜಿನಿಯರ್ ಒಳ್ಳೆಯ ಕೆಲಸ ಮಾಡಿದರೂ ಅವನು ತೊಂದರೆ ಕೊಟ್ಟಿದ್ದಾನೆ ಎಂದರೆ ನಾನು ಅವರ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳುತ್ತೇನೆ ಇದರ ಬಗ್ಗೆ ಚೀಫ್ ಇಂಜಿನಿಯರ್ ಅಥವಾ ಪ್ರಧಾನ ಕಾರ್ಯದರ್ಶಿಗಳಿಗೆ ಕಳುಹಿಸಿ ಏನ್‌ಕ್ವೈರಿ ಮಾಡಿಸುತ್ತೇನೆ

**ಶ್ರೀ ಜಗದೀಶ್ ಶೆಟ್ಟರ್** ಮಾನ್ಯ ಅಧ್ಯಕ್ಷರೆ, ಬಚಾವತ್ ತೀರ್ಪಿನ ಪ್ರಕಾರ ಈ ಡ್ಯಾಂನಿಂದ 155 ಟಿಎಂಸಿ ನೀರನ್ನು ನಾವು ಮತ್ತು ಆಂಧ್ರದವರು ತೆಗೆದುಕೊಳ್ಳಬೇಕು 101 ಟಿಎಂಸಿ ನೀರು ಕರ್ನಾಟಕ, 53 ಟಿಎಂಸಿ ನೀರು ಆಂಧ್ರ ಪ್ರದೇಶಕ್ಕೆ ಹೋಗುವಂಥದ್ದು ಈವತ್ತಿನವರೆಗೆ ಈ ಕಾಲುವೆಯಾದ ಮೇಲೆ 101 ಟಿಎಂಸಿ ನೀರು ಉಪಯೋಗ ಮಾಡಲಿಕ್ಕೆ ಆಗಿಲ್ಲ ದಯವಿಟ್ಟು ತಾವು ಸದನದ ಗಮನಕ್ಕೆ ತರಬೇಕಾಗುತ್ತದೆ ಹೀಗಾಗಿ ಇಲ್ಲಿ ಆಂಧ್ರ ಪ್ರದೇಶದ ಹುನ್ನಾರವೂ ಇದೆ ಒಡೆಯುವಂಥದ್ದು, ನೀರು ನದಿಯಲ್ಲಿ ಹರಿಯುವಂಥದ್ದು ಇದರಲ್ಲಿ ಆಂಧ್ರ ಪ್ರದೇಶದ ಹುನ್ನಾರ ಇದೆ ಎಂದು ಅಲ್ಲಿನ ರೈತರು ಮಾತನಾಡುತ್ತಿದ್ದಾರೆ ಹೀಗಾಗಿ ಸರ್ಕಾರ ಗಮನ ಹರಿಸಿದೆಯೋ ಹೇಗೆ ಎಂಬುದನ್ನು ತಾವು ಹೇಳಬೇಕಾಗುತ್ತದೆ ನಂತರ ಇದು ಕೇವಲ ಪದೇ ಪದೇ ಒಡೆದು ಹೋಗುವಂಥದ್ದು, ತಾವು ಹೇಳಿದಿರಿ ಅದು ಯಾವ ರೀತಿ ಒಡೆಯುತ್ತಿದೆ ಎನ್ನುವುದರ ಬಗ್ಗೆ ಇನ್ನೂ ವಿಚಾರ ಮಾಡುತ್ತೇನೆಂದು ಹೇಳಿದಿರಿ ಇವತ್ತು 1970 ಇಸ್ವಿಯಲ್ಲಿ ಆಗಿರುವಂಥದ್ದು 167 ಬಾರಿ ಒಡೆದಿದೆ ಎಂದು ಹೇಳಿದಾಗಲೂ ಸಹಿತ ಇನ್ನು

ಅದರ ಬಗ್ಗೆ ಕಾರಣ ಏನೂ ಎಂಬುದು ಗುರುತಾಗಿಲ್ಲವೆಂದರೆ, ಕಳಪೆ ಕಾಮಗಾರಿಯೇ? ಮತ್ತೇನು? ರಿಪೇರಿಯಾಗಿಲ್ಲವೆ? ಇದನ್ನು ಸರ್ಕಾರ ಸ್ಪಷ್ಟೀಕರಣ ಮಾಡಲಿಲ್ಲ ಹೀಗಾಗಿ ಇಲ್ಲಿ ಏನಾಗಿದೆ ಎಂದರೆ, ಇವತ್ತು ನೀರು ಆಧುನೀಕರಣದ ಬಗ್ಗೆ ವಿಚಾರ ಮಾಡಿದ್ದಿರೋ ಹೇಗೆ? ಇದು ಕೇವಲ ಒಡೆದಾಗ 9 ಕೋಟಿ ರೂಪಾಯಿ ಬಿಡುವುದು, ಮತ್ತೊಂದು 20 ಕೋಟಿ ರೂ ಬಿಡುವುದು, ಅದರ ಬದಲಿ ಅದಕ್ಕೆ ಖಾಯಂ ಆಗಿ ಆಧುನೀಕರಣದ ಸಲುವಾಗಿ ಯಾವ ರೀತಿ ಮೈಸೂರು ಭಾಗದಲ್ಲಿ ಅಭಿವೃದ್ಧಿ ಸಲುವಾಗಿ ಆಯಿತೋ ಆ ರೀತಿ ಏನಾದರೂ ಆಧುನೀಕರಣದ ಬಗ್ಗೆ ನೀವು ಖಾಯಂ ಆದಂಥ ಪ್ರಪೋಸಲ್ಸ್, ಏನಾದರೂ ಮಾಡಿದ್ದೀರಾ? ಈಗಾಗಲೇ ಮಾನ್ಯ ಖರ್ಗೆಯವರು, 601 ಕೋಟಿ ರೂಪಾಯಿಯ ಪ್ರಪೋಸಲ್ಸ್ ಸರ್ಕಾರಕ್ಕೆ ಬಂದಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆ ಎಂದು ಹೇಳಿದರು ಅದರ ಬಗ್ಗೆ ತಾವು ಸ್ಪಷ್ಟನೆ ಮಾಡಬೇಕಾಗುತ್ತದೆ ಸರ್ಕಾರ ಈ ಒಂದು ಖಾಯಂ ಆಗಿ ಪರಿಹಾರದ ಸಲುವಾಗಿ, ಪದೇ ಪದೇ ಒಡೆದು ಹೋಗುವುದನ್ನು ನಿಲ್ಲಿಸುವುದನ್ನು ಇದಕ್ಕೆ ಏನಾದರೂ ತಾವು ದಾರಿ ಹುಡುಕುತ್ತಿರೋ ಹೇಗೆ ಇದರ ಬಗ್ಗೆ ತಾವು ಸ್ಪಷ್ಟೀಕರಣ ಮಾಡಬೇಕಾಗಿದೆ

**ಅಧ್ಯಕ್ಷರು** ದಯಮಾಡಿ ಇಲ್ಲಿ ಕೇಳಿ ಇನ್ನು 13 ಪ್ರಶ್ನೆಗಳು ಇವೆ, ಎಷ್ಟು ಉಪ ಪ್ರಶ್ನೆಗಳನ್ನು ಕೇಳುವುದು

**ಶ್ರೀ ಹಂಪನಗೌಡ ಬಾದರ್ಲಿ** ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಿಂದೆ ಇದ್ದಂಥ ಸರ್ಕಾರ ಈ ಎಲ್ಲಾ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮದಲ್ಲಿ ಸೇರಿಸಿದೆ ಅದಕ್ಕೆ ಮಂಜೂರಾತಿ ಕೊಟ್ಟು ಹಣ ಬಿಡುಗಡೆ ಮಾಡಿಸಿ ಕೆಲಸಗಳನ್ನು ಮಾಡಿಸಿರಿ ಎರಡನೆಯದಾಗಿ ತುಂಗಭದ್ರ ನಿಗಮ ಸ್ಥಾಪನೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ? ಇದನ್ನು ಮಾಡಿದರೆ ಈ ಎಲ್ಲಾ ಕೆಲಸಗಳನ್ನು ಅದರಲ್ಲಿ ಸೇರಿಸಿ ಹಣ ಮಂಜೂರು ಮಾಡಿಸುವುದಕ್ಕೆ ಅನುಕೂಲವಾಗುತ್ತದೆ, ಅದರ ಬಗ್ಗೆ ದಯಮಾಡಿ ಉತ್ತರ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ

**ಶ್ರೀ ಎ ಪಾಪರೆಡ್ಡಿ** ಮಾನ್ಯ ಅಧ್ಯಕ್ಷರೆ, ಇದು ರಾಯಚೂರು ಜಿಲ್ಲೆಗೆ ಸಂಬಂಧಪಟ್ಟಂಥ ವಿಚಾರ ಇದು ಬಹಳ ಮಹತ್ವವಾದಂಥ ಯೋಜನೆ, ಈ ಯೋಜನೆಗೆ ಹತ್ತು ವರ್ಷಗಳಿಂದ ಏನು ಆ ಕಾಲುವೆ ಸಂಪೂರ್ಣವಾಗಿ ರಿಪೇರಿ ಮಾಡುತ್ತೇವೆಂದು ಜನತಾದಳ ಸರ್ಕಾರ, ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಹೇಳಿತು, ಇವತ್ತು ಸಮ್ಮಿಶ್ರ ಸರ್ಕಾರ ಬಂದಿದೆ ಆದರೆ ಯಾವುದೇ ಒಂದು ಸಂಪೂರ್ಣವಾಗಿ ರಿಪೇರಿ ಸಲುವಾಗಿ, ಇವತ್ತು ಏನೂ ತೆಗೆದುಕೊಂಡಿಲ್ಲ ಸರ್ಕಾರ ಬರೀ 9 ಕೋಟಿ ರೂಪಾಯಿಗಳ ಬಿಡುಗಡೆ ಮಾಡಿದೆ ಇದು ಕೇವಲ ಕಣ್ಣೊರೆಸುವ ತಂತ್ರ, ಅಲ್ಲಿ ರೈತರು ಹತ್ತು ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ, ಕಾಲುವೆ ರಿಪೇರಿ ಆಗಲಿ, ಕಾಲುವೇ ರಿಪೇರಿಯಾಗಲಿ ಎಂದು, ನಾವು ಕೆಳ ಭಾಗದಲ್ಲಿ ಇದ್ದಂಥ ಜನ ರಾಯಚೂರಿನ ತಾಲ್ಲೂಕಿನ ಜನ, ಇವತ್ತು ನೀರೇ ಬಂದಿಲ್ಲ

ಜುಲೈ 2ನೇ ತಾರೀಖಿಗೆ ನೀರು ಬಿಟ್ಟರು, ಇವತ್ತು ಆಗಸ್ಟ್ 5ನೇ ತಾರೀಖು ಆದರೂ ರಾಯಚೂರು ನಗರಕ್ಕೆ ನೀರು ಬಂದಿಲ್ಲ, ಇಷ್ಟರಲ್ಲಿ ಕಾಲುವೆ ಎರಡು ಸಾರಿ ಒಡೆದು ಹೋಯಿತು ಇಷ್ಟೊಂದು ಕಾರಣಗಳು ಇದಾಗ್ಯೂ, 150 ಸಲ ಒಡೆದು ಹೋಗಿತ್ತು ಎಂದು ಮಂತ್ರಿಗಳು ಹೇಳುತ್ತಿದ್ದಾರೆ ಇದರ ಬಗ್ಗೆ ವಿಚಾರ ಮಾಡುತ್ತೇನೆಂದು ಸಹ ಹೇಳುತ್ತಿದ್ದಾರೆ ಸಂಪೂರ್ಣವಾದ ರಿಪೇರಿ ಏಕೆ ಆಗಲಿಲ್ಲ? ಸರ್ಕಾರ ನೂರು ಕೋಟಿ ರೂಪಾಯಿ ಕೊಡುತ್ತೇವೆ ಎಂದರು, 200 ಕೋಟಿ ರೂಪಾಯಿ ಕೊಡುತ್ತೇವೆಂದರು, ಇದುವರೆವಿಗೂ ಆಗಲಿಲ್ಲ, ಹಣ ಕೊಡುವ ಯೋಚನೆ ಸರ್ಕಾರದ ಮುಂದೆ ಇದೆಯೇ ಎಂದು ಕೇಳುತ್ತಿದ್ದೇನೆ

**ಅಧ್ಯಕ್ಷರು** ಪ್ರಶ್ನೆ ಕೇಳಿ ಎಂದರೆ ಕಥೆ ಹೇಳುತ್ತೀರಲ್ರಿ?

**ಶ್ರೀ ಮಲ್ಲಿಕಾರ್ಜುನ ಖರ್ಗೆ** ಮಾನ್ಯ ಜಗದೀಶ್ ಶೆಟ್ಟರ್‌ವರು ಹೇಳಿದರು ಅದು ಯಾವ ಕಾರಣಕ್ಕಾಗಿ ಒಡೆಯುತ್ತಿದೆ ಎಂದು ನಾನು ಈಗಾಗಲೇ ಹೇಳಿದೆ ಇದು ಹಿಂದೆ ಕೂಡ ಆ ಕೆನಾಲ್ ಅನ್ನು ಮಾಡ್ರನೈಸ್‌ಷನ್ ಮಾಡುವುದಕ್ಕೋಸ್ಕರ ಒಂದು ತಜ್ಞರ ಸಮಿತಿಯನ್ನು ಮಾಡಿ ಅದಕ್ಕೆ ಎಷ್ಟು ಹಣವನ್ನು ಒದಗಿಸಬೇಕು ಎನ್ನತಕ್ಕಂಥದ್ದೂ ಕೂಡ ಹೇಳಿದ್ದಾರೆ ಸುಮಾರು 680 ಕೋಟಿನೋ 690 ಕೋಟಿನೋ ಇಡಬೇಕೆಂದು ಅದಕ್ಕೆ ಅದನ್ನು, ನಾವು ನೀರಾವರಿ ನಿಗಮದಿಂದ ಎಷ್ಟು ಕೊಡಬಹುದು ಮತ್ತು ಪ್ರತಿ ವರ್ಷ ಅದಕ್ಕೆ ಎಷ್ಟು ಖರ್ಚು ಮಾಡಬಹುದು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ ಏಕೆಂದರೆ 690 ಕೋಟಿ ರೂ ಒಂದು ವರ್ಷದಲ್ಲಿ ಖರ್ಚು ಮಾಡಲಿಕ್ಕೆ ಆಗುವುದಿಲ್ಲ ಹಂತ ಹಂತವಾಗಿ ನಾವು ಖರ್ಚು ಮಾಡಬೇಕಾಗುತ್ತದೆ ಈಗ ಎಲ್ಲಿ ತಕ್ಷಣ ಹಣ ಬೇಕಾಗಿರುತ್ತೋ ಅಂಥ ಕಡೆ ಕಮಿಟೆಡ್ ವರ್ಕ್‌ಗೆ ಹಣ ಇರಲಿಲ್ಲ, ಮೊನ್ನೆ ನಾನು ಮೀಟಿಂಗ್ ಮಾಡಿ, ಸುಮಾರು ಒಂದು 9 ಕೋಟಿಯಲ್ಲಿ 5 ಕೋಟಿ ರೂ ಬಿಡುಗಡೆ ಮಾಡಲಿಕ್ಕೆ ಹೇಳಿದ್ದೇನೆ, 5 ಕೋಟಿ ರೂ ಬಿಡುಗಡೆ ಆಗುತ್ತದೆ ಇನ್ನು 4 ಕೋಟಿ ರೂಪಾಯಿಗಳನ್ನೂ ಸಹ 3–4 ದಿವಸದಲ್ಲಿ ಬಿಡುಗಡೆ ಮಾಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ ಉಳಿದ ಸುಮಾರು 680 ಕೋಟಿ ರೂಪಾಯಿ ಏನು ಒಂದು ಯೋಜನೆ ಇದೆ, ಆ ಯೋಜನೆಯನ್ನು ಹಂತ ಹಂತವಾಗಿ ನಾವು ತೆಗೆದುಕೊಳ್ಳತಕ್ಕಂಥದ್ದು ಮತ್ತು ಈ ಮಾಡ್ರನೈಸೇಷನ್ ಸ್ಕೀಂನಲ್ಲಿ ಅದನ್ನು ಪೂರ್ತಿ ಮಾಡತಕ್ಕಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ

## ಸೋಲಾಪುರದಿಂದ ಚಿತ್ರದುರ್ಗದವರೆಗಿನ ರಾ ಹೆ 13ನೇ ಹೆದ್ದಾರಿಯನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವುದು

120(780) ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸೋಲಾಪುರದಿಂದ ಚಿತ್ರದುರ್ಗದವರೆಗಿನ ರಾ ಹೆ –13ನೇ ಹೆದ್ದಾರಿಯನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ,

ಆ) ಸದರಿ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆಯೆ,

ಇ) ಹಾಗಿದ್ದಲ್ಲಿ ಇದು ಯಾವಾಗ ಕಾರ್ಯಗತಗೊಳ್ಳುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಸೋಲಾಪುರದಿಂದ ಚಿತ್ರದುರ್ಗದವರೆಗಿನ ರಾ ಹೆ 13ನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ ಕೇಂದ್ರ ಸರ್ಕಾರವೇ ಸ್ವತಃ ಪರಿಶೀಲಿಸುತ್ತಿದೆ.

ಇ) ಪ್ರಸ್ತುತ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿ 13ರ ಭಾಗವಾದ ಬಿಜಾಪುರ-ಹೊಸಪೇಟೆವರೆಗೆ ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯನ್ನು ಬಿಓಟಿ (BOT) ಆಧಾರದ ಮೇಲೆ ಕೈಗೊಳ್ಳಲು ಪರಿಶೀಲಿಸುತ್ತಿದ್ದು ಇದಕ್ಕಾಗಿ ಸಾಧ್ಯಾಸಾಧ್ಯತೆಯ ಪರಿಶೀಲನೆಯನ್ನು ಕೈಗೊಳ್ಳುವ ಬಗ್ಗೆ ಯೋಜಿಸುತ್ತಿದೆ

**ಶ್ರೀ ಶಿವಾನಂದ ಎಸ್ ಪಾಟೀಲ್** ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ನಾನು ಮಾನ್ಯ ಶಂಕರಲಿಂಗೇಗೌಡರು ಹೇಳಿದ್ದನ್ನು ನಾನು ಪುನಃ ಪ್ರಸ್ತಾಪ ಮಾಡಬೇಕೆಂದು ನನಗೆ ಅನಿಸುವುದಿಲ್ಲ ಸನ್ಮಾನ್ಯ ಸಚಿವರು ಉತ್ತರ ನೋಡಬೇಕು, ನನ್ನ ಮೊದಲನೇ ಪ್ರಶ್ನೆ ಏನಿದೆ ಎಂದರೆ, ನಾನು (ಅ) ಪ್ರಶ್ನೆ ಕೇಳಿದ್ದಕ್ಕೆ ಇವರು ಇದು ರಾಜ್ಯ ಸರ್ಕಾರದ ಮುಂದೆ ಇಲ್ಲ ಕೇಂದ್ರ ಸರ್ಕಾರದ ಮುಂದೆ ಇದೆ ಎಂದು ಉತ್ತರ ಕೊಟ್ಟಿದ್ದಾರೆ ನಾನು ಸಚಿವರಲ್ಲಿ ಕೇಳುತ್ತೇನೆ, ತಮ್ಮಲ್ಲಿ ಒಬ್ಬರು ರಾಜ್ಯ ಸರ್ಕಾರದ ಒಬ್ಬ ಚೀಫ್ ಇಂಜಿನಿಯರ್ ಇರುತ್ತಾರೆ, ಅವರ ಮುಂದೆ ಈ ಪ್ರಸ್ತಾವ ಇದೆಯೋ ಅಥವಾ ಇಲ್ಲ ಎನ್ನುವ ಕನಿಷ್ಠ ಸೌಜನ್ಯಕ್ಕಾದರೂ ಅವರು ಉತ್ತರ ಕೊಡಬೇಕಾಗಿತ್ತು ತಾವು ಅದನ್ನು ನೋಡಿಕೊಳ್ಳಬೇಕು, ನಾನು ಅದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತಿದ್ದೇನೆ ಎರಡನೆಯದಾಗಿ (ಆ) ಪ್ರಶ್ನೆ ಕೇಳಿದ್ದಕ್ಕೆ ತಾವು ರಾಜ್ಯ ಸರ್ಕಾರ ಇಲ್ಲ ಕೇಂದ್ರ ಸರ್ಕಾರ ಸ್ವತ ಪರಿಶೀಲಿಸುತ್ತಿದೆ ಎಂದು ಹೇಳಿದ್ದೀರಿ ಹಾಗಾದರೆ ರಾಜ್ಯ ಸರ್ಕಾರ ಏಕೆ ಇರಬೇಕು? ನಾನು ಏಕೆ ಈ ಮಾತು ಹೇಳುತ್ತಿದ್ದೇನೆಂದರೆ, ಇದು ಕೇವಲ ನನಗೆ ಸೀಮಿತವಾಗಿರತಕ್ಕಂಥ ಪ್ರಶ್ನೆಯಲ್ಲ ಇದು ಇಡೀ ಉತ್ತರ ಕರ್ನಾಟಕದಿಂದ- ಬೆಂಗಳೂರಿಗೆ ಬರಬೇಕಾಗಿರತಕ್ಕಂಥ ಬಹಳ ಪ್ರಾಮುಖ್ಯವಾದಂಥ ರಸ್ತೆ ಇದು ಇದು ಚತುಷ್ಪಥ ರಸ್ತೆ ಆಗಬೇಕು ಎನ್ನತಕ್ಕಂಥ ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದೆ ಕಳೆದ ಹತ್ತು ವರ್ಷಗಳಿಂದ ಇದೆ ಮೊನ್ನೆ ಸನ್ಮಾನ್ಯ ಸಚಿವರು ದೆಹಲಿಗೆ ಹೋದಾಗ, ಅಲ್ಲಿಗೆ ಹೋಗಿ ಬಂದ ಮೇಲೆ ತಾವು ಒಂದು ಪತ್ರಿಕಾ ಹೇಳಿಕೆ ನೀಡಿದಿರಿ ಅದು ಏನೆಂದರೆ, ನೆಲಮಂಗಲ-ಹಾಸನ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಮಾಡುತ್ತೇನೆ, ಹಾಗೂ ಮತ್ತೊಂದು ಕಡೆ, ಕೋಲಾರ-ಮುಳಬಾಗಿಲು ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಮಾಡುತ್ತೇವೆಂದು ಹೇಳಿದಿರಿ ನಾನು ಕೇಳುತ್ತಿದ್ದೇನೆ,

ಮೈಸೂರು-ಬೆಂಗಳೂರು ನಡುವೆ ರಸ್ತೆ ಕೂಡ ಇವತ್ತು ಚತುಷ್ಪಥ ರಸ್ತೆಯಾಗುತ್ತಿದೆ ಅದರೆ ಇಡೀ ಉತ್ತರ ಕರ್ನಾಟಕದಿಂದ ಬರುವ ಈ ಒಂದು ರಸ್ತೆ ಕೇಂದ್ರ ಸರ್ಕಾರ ಕೈಗೆತ್ತಿಕೊಂಡಿದೆ ಆದ್ಯತೆಯನ್ನು ಏನಾದರೂ ತಾವು ತಿರುಚಿದಿರಾ ಎಂದು ತಮ್ಮಲ್ಲಿ ನಾನು ಕೇಳಲಿಕ್ಕೆ ಇಚ್ಛಿಸುತ್ತೇನೆ

**ಶ್ರೀ ಹೆಚ್ ಡಿ ರೇವಣ್ಣ** ಮಾನ್ಯ ಸದಸ್ಯರು ಸೊಲ್ಲಾಪುರದಿಂದ ಚಿತ್ರದುರ್ಗದವರೆಗಿನ ರಾಷ್ಟ್ರೀಯ ಹೆದ್ದಾರಿ 13ರ ರಸ್ತೆಯನ್ನು ಪರಿವರ್ತಿಸುವುದು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ ಎಂದು ಕೇಳಿದ್ದರು ರಾಷ್ಟ್ರೀಯ ಹೆದ್ದಾರಿ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಅದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ ಅದು ಕೇಂದ್ರ ಸರ್ಕಾರದಲ್ಲಿ ಆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ನಾನು ಉತ್ತರಿಸಿದ್ದೆ ಎರಡನೆಯದಾಗಿ, ಅವರು ಯಾವುದನ್ನೇ ತೆಗೆದುಕೊಳ್ಳಬೇಕಾದರೆ ಸುಮಾರು 20 ಸಾವಿರ ವಾಹನಗಳು ಹೋಗಬೇಕಾದ ಪರಿಸ್ಥಿತಿ ಇದೆ ಫೀಸಿಬಿಲಿಟಿ ಇದೆ ಅದನ್ನು ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರದ ಮುಂದೆ ಪರಿಶೀಲನೆಯಲ್ಲಿದೆ ಎಂದು ನಾನು ಈಗಾಗಲೇ ತಿಳಿದುಕೊಂಡಿದ್ದೇನೆ ರಾಜ್ಯ ಸರ್ಕಾರದಿಂದ ಯಾವುದೇ ಪ್ರಸ್ತಾವನೆ ಕಳುಹಿಸುವ ಅವಶ್ಯಕತೆ ಇರುವುದಿಲ್ಲ ಕೇಂದ್ರ ಸರ್ಕಾರದವರೇ ನೇರವಾಗಿ ಯಾವ್ಯಾವ ರಸ್ತೆಗಳು ಫೀಸಿಬಿಲಿಟಿ ಇವೆ ಎನ್ನುವುದನ್ನು ಸ್ಟಡಿ ಮಾಡಿ ಅದರ ಆಧಾರದ ಮೇಲೆ ತೆಗೆದುಕೊಳ್ಳುತ್ತಾರೆಂದು ಹೊರತು ಅವರು ರಾಜ್ಯ ಸರ್ಕಾರವನ್ನು ಕೇಳುವುದಿಲ್ಲ ಅದಲ್ಲದೆ, ಹಾಸನ-ನೆಲಮಂಗಲ ಮತ್ತು ಕೋಲಾರ-ಮುಳಬಾಗಿಲುಗೆ ನಾವು ಮನವಿ ಮಾಡಿದ್ದೇವೆಯೇ ಹೊರತು ಮಾಡುತ್ತೇವೆಂದು ಹೇಳಿಲ್ಲ ಕೇಂದ್ರ ಸರ್ಕಾರದ ಭೂ ಸಾರಿಗೆ ಸಚಿವರಿಗೆ ಮನವಿ ಮಾಡಿದ್ದೇನೆಂದು ಹೇಳಿದ್ದೆ ಇದನ್ನು ಸಹ ಆದ್ಯತೆ ಮೇಲೆ ತೆಗೆದುಕೊಳ್ಳಿ ಎಂದು ಮನವಿ ಮಾಡುತ್ತೇನೆ ಇಷ್ಟನ್ನು ಸದಸ್ಯರಿಗೆ ತಿಳಿಸುತ್ತೇನೆ

**ಶ್ರೀ ಶಿವಾನಂದ ಎಸ್ ಪಾಟೀಲ್** ಮಾನ್ಯ ಅಧ್ಯಕ್ಷರೇ, ನ್ಯಾಷನಲ್ ಹೈ-ವೇ ಬರುವುದು ಕೇಂದ್ರ ಸರ್ಕಾರಕ್ಕೇ ಹೊರತು, ರಾಜ್ಯ ಸರ್ಕಾರಕ್ಕೆ ಬರುವುದಿಲ್ಲ ಎಂಬುದು ಗೊತ್ತಿದೆ ಟ್ರಾಫಿಕ್ ಇಂಟೆನ್ಸಿಟಿ ಬಗ್ಗೆ ಅವರು ಒಂದು ಮಾತು ಹೇಳಬೇಕಾಗಿತ್ತು ಟ್ರಾಫಿಕ್ ಇಂಟೆನ್ಸಿಟಿ ಎಷ್ಟಿದೆ? ನಾನು ನ್ಯಾಷನಲ್ ಹೈ-ವೇ ಯವರು ಸರ್ವೆ ಮಾಡಿರುವ ಟ್ರಾಫಿಕ್ ಇಂಟೆನ್ಸಿಟಿ ರಿಪೋರ್ಟ್ ನನ್ನ ಹತ್ತಿರವಿದೆ ನಿಮಗೆ ಹೇಳಬೇಕಾದರೆ, ಒಂದು ದಿವಸದಲ್ಲಿ 42 ಸಾವಿರ ವೆಹಿಕಲ್ಸ್ ಅಡ್ಡಾಡುತ್ತಿವೆ 20 ಸಾವಿರ ವೆಹಿಕಲ್ಸ್ ಅಡ್ಡಾಡುವ ರಸ್ತೆಗೆ ಆದ್ಯತೆ ಸಿಗುತ್ತದೆ 42 ಸಾವಿರ ವೆಹಿಕಲ್ಸ್ ಅಡ್ಡಾಡುವ ರಸ್ತೆಗೆ ಆದ್ಯತೆ ಸಿಗುವುದಿಲ್ಲ ಇದು ಯಾರಿಂದ ಆಯಿತು? ಎರಡನೆಯದಾಗಿ, ಒಂದು ವರ್ಷದಲ್ಲಿ ಎಷ್ಟು ಆಕ್ಸಿಡೆಂಟ್ ಆಗಿವೆ ಎನ್ನುವ

ರಿಪೋರ್ಟ್ ಅನ್ನು ನಾನು ನ್ಯಾಷನಲ್ ಹೈ-ವೇ ಆಥಾರಿಟಿಯಿಂದ ತರಿಸಿದ್ದೇನೆ ನಿಮಗೆ ಹೇಳಬೇಕಾದರೆ 1 ವರ್ಷದಲ್ಲಿ 65 ಆಕ್ಸಿಡೆಂಟ್ ಆಗಿವೆ, 50 ಜನರು ಸತ್ತಿದ್ದಾರೆ ಅದು ಅವರ ರಿಪೋರ್ಟ್ ಪೊಲೀಸ್ ರಿಪೋರ್ಟ್ ಪ್ರಕಾರ 105 ಆಕ್ಸಿಡೆಂಟ್ ಆಗಿವೆ ನಾನು ಸಚಿವರಲ್ಲಿ ಕೇಳುತ್ತಿದ್ದೇನೆ, ತಾವು ಬೇರೆ ರಸ್ತೆ ಚತುಷ್ಪಥ ರಸ್ತೆ ಮಾಡುವುದು ತಮ್ಮ ಅಧಿಕಾರ ನಾನು ಅದನ್ನು ಬೇಡವೆನ್ನುವುದಿಲ್ಲ ಆದರೆ, ಮೊದಲನೆ ಆದ್ಯತೆ ಮೇಲೆ ಇರುವ ರಸ್ತೆಯನ್ನು ತಾವು ಏನಾದರೂ ತಿರುಚಿ, ಏನು ಕೋಲಾರದದವರು ಸುದೈವದಿಂದ ಇವತ್ತು ಸೆಂಟ್ರಲ್ ಮಿನಿಸ್ಟರ್ ಸ್ಟೇಟ್ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಇದ್ದಾರೆ, ಅವರು ಮಾಡಿಕೊಂಡೇ ಮಾಡಿಕೊಳ್ಳುತ್ತಾರೆ ತಾವು ಹಾಸನದವರಿರುವುದರಿಂದ, ಹಾಸನಕ್ಕೆ ಮಾಡಿಕೊಳ್ಳುತ್ತೀರಿ ಉತ್ತರ ಕರ್ನಾಟಕದಿಂದ ಬೆಂಗಳೂರಿಗೆ ಬರುವುದಕ್ಕೆ ಇರುವುದೊಂದೇ ರಸ್ತೆ ದಯವಿಟ್ಟು ನಿಮ್ಮಲ್ಲಿ ವಿನಂತಿಸುತ್ತೇನೆ, ಇದನ್ನೇ ಮೊದಲನೆ ಆದ್ಯತೆ ಮೇಲೆ ತೆಗೆದುಕೊಳ್ಳುವ ಅಧಿಕಾರ ಅವರಿಗಿದೆ ಮತ್ತು ಆ ಸರ್ವೆ ರಿಪೋರ್ಟ್ ಕೂಡ ಇದೆ ಕಳೆದ 10 ವರ್ಷಗಳಿಂದ ಇದು ಆದ್ಯತ ಮೇಲಿದೆ ತಾವೇನಾದರೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿದರೆ ಇದು ಹಿಂದೆ ಬೀಳುತ್ತದೆ, ಬೇರೆಯವರದ್ದು ಮುಂದೆ ಬರುತ್ತದೆ ದಯವಿಟ್ಟು ಆ ರೀತಿ ತಾವು ಮಾಡಬಾರದು ಇದನ್ನೇ ಮೊದಲನೆ ಆದ್ಯತೆ ಮೇಲೆ ಕೂಡ ಮಾಡಿಸುತ್ತೇನೆನ್ನುವ ಭರವಸೆಯನ್ನು ಕೊಡಬೇಕು ಇದು ಕೇವಲ ನನ್ನ ಸಲುವಾಗಿ ಅಲ್ಲ ಇಡೀ ಸೊಲ್ಲಾಪುರದಿಂದ ಹೊಸಪೇಟೆವರೆಗೆ ಬರುವ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ಸಂಬಂಧಪಟ್ಟ ರಸ್ತೆ ದಯವಿಟ್ಟು ಇದರ ಬಗ್ಗೆ ತಾವು ಸ್ಪಷ್ಟವಾಗಿ ಉತ್ತರಿಸಬೇಕೆಂದು ನಾನು ಕೇಳುತ್ತೇನೆ

**ಶ್ರೀ ಜಗದೀಶ್ ಶೆಟ್ಟರ್** ಅವರೇನು ಹೇಳಿದರು ಅದು ಮಹತ್ವದ ರಸ್ತೆ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ಕನೆಕ್ಟ್ ಮಾಡುವಂತಹ ರಸ್ತೆ ಅದು ಸೊಲ್ಲಾಪುರದಿಂದ ಮಹಾರಾಷ್ಟ್ರದವರೆಗಿನ ಇರುವ ರಸ್ತೆಗೆ ಕನೆಕ್ಟ್ ಮಾಡುವ ರಸ್ತೆಯದು ಹೀಗಾಗಿ, ಇವತ್ತು ನೀವು ಬೇರೆ ಬೇರೆ ರಸ್ತೆಗಳ ಬಗ್ಗೆ ಪ್ರಸ್ತಾವನ ಕೊಟ್ಟಿದ್ದೀರಿ, ಅದರ ಪ್ರಕಾರ ಇದಕ್ಕೆ ಹೆಚ್ಚು ಒತ್ತಡ ಕೊಡುವುದಾಗಬೇಕು ಇಟ್ ಡಿಪೆಂಡ್ಸ್ ಅಪಾನ್ ಯುವರ್ ಇನ್‌ಫ್ಲೂಯೆನ್ಸ್ ಸೆಂಟ್ರಲ್ ಗೌರ್ನಮೆಂಟ್ ಮೇಲೆ ಇನ್‌ಫ್ಲೂಯೆನ್ಸ್ ಮಾಡಬೇಕು ಗೈಡ್‌ಲೈನ್ಸ್ ಪ್ರಕಾರವೂ 40 ಸಾವಿರ ವೆಹಿಕಲ್ಸ್ ಪ್ರತಿದಿವಸ ಹೋಗುತ್ತಿವೆ ನಿಮ್ಮ ಒತ್ತಡದ ಮೇಲೆ ಇದು ಡಿಪೆಂಡ್ ಇದೆ

**ಶ್ರೀ ಶಿವಾನಂದ ಎಸ್ ಪಾಟೀಲ್** ಟ್ರಾಫಿಕ್ ಇಂಟೆನ್ಸಿಟಿ ರಿಪೋರ್ಟ್ ಅನ್ನು ನಾನು ನ್ಯಾಷನಲ್ ಹೈ-ವೇ ಅಥಾರಿಟಿಯಿಂದ ತರಿಸಿದ್ದೇನೆ ಅಲ್ಲಿ ಮೈನ್ಸ್ ಇದೆ ಹೊಸಪೇಟೆ ಒಂದೇ ಊರಿನಿಂದ 10 ಸಾವಿರ ವೆಹಿಕಲ್ಸ್ ಅಡ್ಡಾಡುತ್ತಿವೆ ಇಳಕಲ್ ಮೈನ್ಸ್ ಬರುತ್ತದೆ, ಉಕ್ಕಲೂರು ಮೈನ್ಸ್ ಬರುತ್ತದೆ ಎಷ್ಟೋ ಜನರು

ನಾವು ಬಿಜಾಪುರದಿಂದ ಬೆಂಗಳೂರಿಗೆ ಬರಬೇಕಾದರೆ ಬ್ರಾಡ್‌ಗೇಜ್ ಫೆಸಿಲಿಟಿ ಇಲ್ಲ ಅಟ್‌ಲೀಸ್ಟ್ 4 ಲೈನ್ ಹೈವೇ ಇದ್ದರೆ, ಅಟ್‌ಲಿಸ್ಟ್ ಜೀವವನ್ನಾದರೂ ಗಟ್ಟಿಯಾಗಿಟ್ಟುಕೊಂಡು ನಾವು ಬರಬಹುದು ಇದಕ್ಕೆ ಮೊದಲು ಆದ್ಯತೆ ಕೊಟ್ಟಿಲ್ಲವೆಂದು ಹೇಳಿದ್ದೀರಿ ಕೋಲಾರ-ಹಾಸನ ಬಗ್ಗೆ ಮೊದಲನೆ ಆದ್ಯತೆ ಸಿಗಬಹುದೆಂದೆ ನಿಮ್ಮ ಪತ್ರಿಕಾ ಹೇಳಿಕೆ ಇದೆ ಹಾಸನ ಮತ್ತು ಬೆಂಗಳೂರು ಬಗ್ಗೆ, ಕೋಲಾರ ಮತ್ತು ಬೆಂಗಳೂರು ಬಗ್ಗೆ ನಿಮ್ಮದೇ ಪತ್ರಿಕಾ ಹೇಳಿಕೆ ಇದೆ ನೀವೇ ಹೋಗಿ ಬಂದ ಮೇಲೆ ಕೊಟ್ಟಿರುವ ಹೇಳಿಕೆ

**ಶ್ರೀ ಹೆಚ್ ಡಿ ರೇವಣ್ಣ** ಮಾನ್ಯ ಅಧ್ಯಕ್ಷರೆ, ಇದನ್ನು ಆಯ್ಕೆ ಮಾಡುವ ಅಧಿಕಾರ ನನಗಿಲ್ಲ ನಾನೊಬ್ಬ ಹಾಸನ ಜಿಲ್ಲಾ ಪ್ರತಿನಿಧಿಯಾಗಿ ಕೇಂದ್ರ ಸರ್ಕಾರದ ಮುಂದೆ ಮನವಿ ಮಾಡಿದ್ದೇನೆಯೇ ಹೊರತು ಅದನ್ನು ಪರಿಶೀಲನೆ ಮಾಡಿ ಅವರು ತೆಗೆದುಕೊಳ್ಳುತ್ತಾರೆ ಇದನ್ನು ಮಾಡಬೇಕೆಂದು ಒತ್ತಾಯಿಸುತ್ತೇನೆ ಏಕೆಂದರೆ, ಮಾನ್ಯ ಸದಸ್ಯರು 40 ಸಾವಿರ ವೆಹಿಕಲ್ಸ್ ಅಡ್ಡಾಡುತ್ತಿವೆ ಎಂದು ಹೇಳಿದ್ದಾರೆ ಅದರ ಬಗ್ಗೆ ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇನೆ ಬೇಕಾದರೆ ಮಾನ್ಯ ಶಿವಾನಂದರವರನ್ನು ಕರೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಮೇಲೆ ಯಾವ ತರಹ ಒತ್ತಾಯ ತರಬೇಕೋ ಅವರ ಜೊತೆಗೆ ಹೋಗಿ ಒತ್ತಾಯ ತರುತ್ತೇನೆಂದು ಹೇಳುತ್ತೇನೆ

## ಗುಲ್ಬರ್ಗಾ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ

121(865) ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) ಮಾನ್ಯ ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು; ಹಾಗೂ ಇವುಗಳಲ್ಲಿ ದೊಡ್ಡ ಹಾಗೂ ಸಣ್ಣ ಕೈಗಾರಿಕೆಗಳೆಷ್ಟು;

ಆ) ಸಣ್ಣ ಕೈಗಾರಿಕಾ ಘಟಕಗಳಿಗೆ ಸರ್ಕಾರದಿಂದ ನೀಡುತ್ತಿರುವ ಸಹಾಯಧನ (ಸಬ್ಸಿಡಿಯನ್ನು) ನೀಡಲಾಗಿದೆಯೇ,

ಇ) ಹಾಗಿದ್ದಲ್ಲಿ, ಎಷ್ಟನ್ನು ನೀಡಲಾಗಿದೆ;

ಈ) ಇನ್ನು ಎಷ್ಟು ಬಾಕಿ ಇದೆ, ಹಾಗೂ ಯಾವಾಗ ನೀಡಲಾಗುವುದು (ವಿವರ ಒದಗಿಸುವುದು)

ಶ್ರೀ ಪಿ ಜಿ ಆರ್ ಸಿಂಧ್ಯಾ (ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದಿನಾಂಕ 31-3-04ರಂತೆ ಗುಲ್ಬರ್ಗಾ ಜಿಲ್ಲೆಯಲ್ಲಿ 11622 ಕೈಗಾರಿಕೆಗಳಿಗೆ, ಇವುಗಳಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು 18 ಇದ್ದು ಸಣ್ಣ ಮತ್ತು ಅತಿ
111-42 ಸಣ್ಣ ಕೈಗಾರಿಕೆಗಳು 11604 ಇರುತ್ತದೆ

ಆ) ಜನವರಿ 1999ರವರೆಗಿನ ಘಟಕಗಳಿಗೆ ಮಂಜೂರಾದ ರಾಜ್ಯ ಸಹಾಯಧನವನ್ನು ಅಕ್ಟೋಬರ್ 1999ರವರೆಗಿನ ಘಟಕಗಳಿಗೆ ಸ್ವಂತ ಬಂಡವಾಳ ಹೂಡಿದ ಕೈಗಾರಿಕೆಗಳನ್ನು ಹೊರತುಪಡಿಸಿ ಶೇ 50 ರಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ ಮತ್ತು ಫೆಬ್ರವರಿ 2000ರವರೆಗಿನ ವಿಶೇಷ ವರ್ಗದ ಘಟಕಗಳಿಗೆ ಸ್ವಂತ ಬಂಡವಾಳ ಹೂಡಿದ ಕೈಗಾರಿಕೆಗಳನ್ನು ಹೊರತುಪಡಿಸಿ ಶೇ 50ರಷ್ಟು ಸಹಾಯಧನ ಬಿಡುಗಡೆ ಮಾಡಲಾಗಿದೆ

ಇ) ದಿನಾಂಕ 1-1-99 ರಿಂದ ಮಂಜೂರಾಗಿರುವ ಮೊತ್ತದಲ್ಲಿ ಶೇ 50ರಂತೆ 79 ಘಟಕಗಳಿಗೆ 106 01 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

ಈ) ದಿನಾಂಕ 31-3-04 ರಂತೆ 557 ಘಟಕಗಳಿಗೆ ರೂ 1358 87 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಬಾಂಡ್‌ಗಳ ಮುಖಾಂತರ ಈಗಾಗಲೇ ರೂ 81 00 ಕೋಟಿಗಳನ್ನು ಸಂಗ್ರಹಿಸಲಾಗಿದೆ ಸಂಬಂಧಪಟ್ಟ ಘಟಕಗಳಿಗೆ ಬಿಡುಗಡೆಗೊಳಿಸಲು ಪಾರದರ್ಶಕವಾದ ನಿಯಮಾವಳಿಗಳನ್ನು ರೂಪಿಸಲಾಗುತ್ತಿದ್ದು, ಅತಿ ಶೀಘ್ರದಲ್ಲಿ ಕ್ರೋಢೀಕರಿಸಿ ಮೊತ್ತವನ್ನು ಬಿಡುಗಡೆ ಮಾಡಲಾಗುವುದು ಇದರಲ್ಲಿ ಗುಲ್ಬರ್ಗಾ ಜಿಲ್ಲೆಯ ಘಟಕಗಳಿಗೂ ಕೂಡ ಬಿಡುಗಡೆ ಮಾಡಲಾಗುವುದು

**ಅಧ್ಯಕ್ಷರು** ಮಾನ್ಯ ಸದಸ್ಯರು ಉಪ ಪ್ರಶ್ನೆ ಮಾತ್ರ ಕೇಳಿ

**ಶ್ರೀ ರೇವುನಾಯಕ್ ಬೆಳಮಗಿ** ಮಾನ್ಯ ಅಧ್ಯಕ್ಷರೆ, ನಾನು ಮೊದಲು ಮಾನ್ಯ ಕಾಶ್ಯಪ್ಪನವರು ಮಂತ್ರಿಗಳಾಗಿದ್ದಾಗ ಇದೇ ಪ್ರಶ್ನೆ ಕೇಳಿದ್ದೆ ಅದಕ್ಕೆ ಅವರು ಶೀಘ್ರದಲ್ಲಿ ಹಣ ಬಿಡುಗಡೆ ಮಾಡುತ್ತೇವೆಂದು ಉತ್ತರ ಹೇಳಿದ್ದರು ಆದರೆ, ಇಲ್ಲಿ ಸಹಾಯಧನ ಹಣ ಬಿಡುಗಡೆ ಆಗಿಲ್ಲ ತಾವು ಹಿರಿಯರು ಮತ್ತು ಗುಲ್ಬರ್ಗಾ, ಬೀದರ್ ಜಿಲ್ಲೆಗಳ ಬಗ್ಗೆ ಬಹಳ ಆಸಕ್ತಿ ವಹಿಸಿದ್ದವರಿದ್ದೀರಿ ತಮಗೆ ನಾನು ವಿನಂತಿಸುತ್ತೇನೆ, ನಿರ್ದಿಷ್ಟವಾಗಿ ಇಷ್ಟು ದಿನಗಳಲ್ಲಿ ಬಿಡುಗಡೆ ಮಾಡುತ್ತೇನೆಂದು ತಾವು ಉತ್ತರಿಸುತ್ತೀರೆಂದು ನಾನು ನಿರೀಕ್ಷಿಸುತ್ತಿದ್ದೇನೆ

**ಶ್ರೀ ಪಿ ಜಿ ಆರ್ ಸಿಂಧ್ಯ** ಈಗಾಗಲೇ ಅನೇಕ ಬಾರಿ ಈ ಸದನದಲ್ಲಿ ಭರವಸೆ ಕೊಟ್ಟಿದ್ದೇನೆ 85 ಕೋಟಿ ರೂಪಾಯಿಗಳ ಜೊತೆಗೆ ಇನ್ನೂ 64 ಕೋಟಿ ರೂಪಾಯಿಗಳನ್ನು ನಾವು ಕೆಎಸ್‌ಎಫ್‌ಸಿಯಿಂದ ಸಂಗ್ರಹಿಸುತ್ತಿದ್ದೇವೆ ಗುಲ್ಬರ್ಗಾ ಜಿಲ್ಲೆಗೆ ಸುಮಾರು 13 ಕೋಟಿ ರೂಪಾಯಿಗಳ ಸಬ್ಸಿಡಿ ಹಣ ಬಿಡುಗಡೆ ಮಾಡುವುದು ಬಾಕಿ ಇದೆ ಅಧಿವೇಶನದ ನಂತರ ಗೈಡ್‌ಲೈನ್ಸ್ ಫಿಕ್ಸ್ ಮಾಡುತ್ತೇವೆ

ಗೈಡ್ ಲೈನ್ಸನ್ನು ಫಿಕ್ಸ್ ಮಾಡಿದ ನಂತರ, ಟ್ರಾನ್ಸ್‌ಪರೆಂಟಾಗಿ ಎಲ್ಲಾ ಜಿಲ್ಲೆಗಳಲ್ಲೂ ಇದನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ ಬಹುಶಃ, ಇನ್ನು 2-3 ತಿಂಗಳೊಳಗೆ ಎಲ್ಲರಿಗೂ ಹಣ ಸಿಗುತ್ತದೆ

ಶ್ರೀ ರೇವುನಾಯಕ್ ಬೆಳಮಗಿ ಮೂರು ತಿಂಗಳು ಎಂದರೆ ಬಹಳ ಲೇಟಾಗುತ್ತದೆ

ಶ್ರೀ ಪಿ ಜಿ ಆರ್ ಸಿಂಧ್ಯ 85 ಕೋಟಿ ರೂಪಾಯಿಗಳನ್ನು ಈ ತಿಂಗಳಲ್ಲೇ ಅಂದರೆ ಆಗಸ್ಟ್‌ನಲ್ಲೇ ಬಿಡುಗಡೆ ಮಾಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡಿದ್ದೇನೆ ಉಳಿದಿರತಕ್ಕಂಥ 60 ಕೋಟಿ ರೂಪಾಯಿಗಳನ್ನು ನಾವು ರೈಸ್ ಮಾಡಬೇಕಾಗುತ್ತದೆ ಅಂದರೆ ಅದನ್ನು ಸಾಲ ತೆಗೆದುಕೊಳ್ಳಬೇಕಾಗುತ್ತದೆ ಇದಕ್ಕೆ ಒಂದೆರಡು ತಿಂಗಳು ಬೇಕಾಗಬಹುದು ಇದೇ ಗೈಡ್‌ಲೈನ್ಸ್ ಆದಾರದ ಮೇಲೆ ಆ 85 ಕೋಟಿ ರೂಪಾಯಿಗಳ ಜೊತೆಗೆ ಆ 60 ಕೋಟಿ ರೂಪಾಯಿಗಳನ್ನೂ ಬಿಡುಗಡೆ ಮಾಡುತ್ತೇವೆ ಆಗಸ್ಟ್ ತಿಂಗಳ ಅಂತ್ಯದೊಳಗೆ ಇದನ್ನು ಬಿಡುಗಡೆ ಮಾಡಲು ನಾನು ಪ್ರಯತ್ನ ಮಾಡುತ್ತೇನೆ

## ವಿದ್ಯುತ್ ಚಾಲಿಕ ಕೈಮಗ್ಗಗಳಿಗೆ ವಿದ್ಯುತ್ ಸರಬರಾಜು

122(880) ಶ್ರೀ ಸಿದ್ದು ಸವದಿ (ಜಮಖಂಡಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿದ್ಯುತ್ ಚಾಲಿತ ಮಗ್ಗಗಳಿಗೆ ಮಹಾರಾಷ್ಟ್ರ ಆಂಧ್ರ ಗುಜರಾತ್ ಹಾಗೂ ಇತರೆ ಬೇರೆ ಬೇರೆ ರಾಜ್ಯಗಳಲ್ಲಿ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಯಾಗುತ್ತಿರುವುದರಿಂದ ನಮ್ಮ ರಾಜ್ಯದ ನೇಕಾರರಿಗೂ ಸಹ ಈ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು,

ಆ) ರೈತರಿಗೆ ನೀಡಿರುವಂತೆ ನೇಕಾರರಿಗೂ ಶೇಕಡ 4ರ ಬಡ್ಡಿಯಂತೆ 10 ಲಕ್ಷ ರೂ ವರೆಗೆ ಸಾಲ ಸೌಲಭ್ಯ ಕೊಡುವ ಬಗ್ಗೆ ಸರ್ಕಾರ ತಕ್ಕ ಕ್ರಮಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ವಿದ್ಯುತ್ ಮಗ್ಗ ನೇಕಾರರಿಗೆ ನೆರೆ ರಾಜ್ಯಗಳಲ್ಲಿ ನೀಡಿರುವ ವಿದ್ಯುತ್ ರಿಯಾಯಿತಿಗಳನ್ನು ಪರಿಶೀಲಿಸಿದ ನಂತರ ರಾಜ್ಯ ಸರ್ಕಾರವು ಆದೇಶ ಸಂಖ್ಯೆ ವಾಕೈ 110 ಜಕೈಇ 2003, ದಿನಾಂಕ 26-2-2004ರಲ್ಲಿ ನೇಕಾರರಿಗೆ ವಿಶೇಷ ಪ್ಯಾಕೇಜ್ ಘೋಷಿಸಿದೆ ಇದರಡಿ 5 ಹೆಚ್‌ಪಿ ಜೋಡಣೆ ಹೊಂದಿರುವ ವಿದ್ಯುತ್ ಮಗ್ಗದ ಘಟಕಗಳು (ಗರಿಷ್ಠ 4 ಮಗ್ಗಗಳಿಗೆ ಮಿತಿಗೊಳಿಸಿದಂತೆ) ಪ್ರತಿ ತಿಂಗಳು ಪ್ರತೀ ಮಗ್ಗಕ್ಕೆ ಶೇ 50 ರಷ್ಟು ವಿದ್ಯುತ್‌ಶಕ್ತಿ ವೆಚ್ಚ ಅಥವಾ ರೂ 200/- ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟರ ಮೊತ್ತದ ಸಹಾಯಧನ ನೀಡಲಾಗುವುದು ಅದಲ್ಲದೇ 2004-05ನೇ ಸಾಲಿನ ಆಯವ್ಯಯ ಭಾಷಣದಲ್ಲಿ ವಿದ್ಯುತ್‌ಮಗ್ಗಗಳಿಗೆ ವಿದ್ಯುತ್ ಸಹಾಯಧನ ನೀಡುವುದನ್ನು ಪುನ ರುಚ್ಛರಿಸಲಾಗಿದೆ

ಆ) ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ

ಶ್ರೀ ಸಿದ್ದು ಸವದಿ ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಅನೇಕ ಸಮೂಹಗಳಿಗೆ ಸರ್ಕಾರದಿಂದ ಸಹಾಯ ಸೌಲಭ್ಯಗಳು ದೊರಕುತ್ತಿವೆ ಆದರೆ ಈ ಒಂದು ನೇಕಾರರ ದೊಡ್ಡ ಸಮೂಹ, ತುಳಿತಕ್ಕೆ ಒಳಗಾದಂಥ ಸಮೂಹ, ನಿರ್ಲಕ್ಷ್ಯಕ್ಕೆ ಒಳಗಾದಂಥ [illegible]

ಪದ್ಧತಿಯೇನಾದರೂ ಸರ್ಕಾರಕ್ಕೆ ಗೊತ್ತಿದೆಯೇ ಎಂದು ನಾನು ಸರ್ಕಾರವನ್ನು ಕೇಳಲು ಬಯಸುತ್ತೇನೆ ಒಬ್ಬ ನೇಕಾರನ ಮನೆಯಲ್ಲಿ ಒಬ್ಬ ಹೆಣ್ಣುಮಗಳು ದೊಡ್ಡವಳಾದರೆ, ಆಕೆಯನ್ನು ಲಗ್ನ ಮಾಡಿ ಕೊಡುವಂಥ ಸ್ಥಿತಿಯಲ್ಲೂ ನೇಕಾರರಿಲ್ಲ ಅಂಥ ಒಂದು ದಯನೀಯ ಸ್ಥಿತಿ ಇದೆ ಆತನ ಮನೆಗೆ ಯಾರಾದರೂ ನೆಂಟರು ಬಂದರೆ ಅವರಿಗೆ ಹಾಸಿಗೆ ಹಾಸಿ ಕೊಡಲು ಸಹ ಅವರ ಮನೆಯಲ್ಲಿ, ಸಾಧ್ಯತೆ ಇಲ್ಲ ಅಂಥ ಒಂದು ಭಯಾನಕ ಸ್ಥಿತಿಯಲ್ಲಿ, ದಯನೀಯ ಸ್ಥಿತಿಯಲ್ಲಿ ನೇಕಾರ ಬದುಕುತ್ತಿದ್ದಾನೆ ಅವರ ಸಲುವಾಗಿ ನಾವು ಸರ್ಕಾರವನ್ನು ಅವರಿಗೆ ಏನಾದರೂ ಸಹಾಯವನ್ನು ಕೊಡಿ ಎಂದು ಕೇಳಿದ್ದೇವೆ ವಿದ್ಯುತ್ ಚಾಲಿತ ಮಗ್ಗಗಳನ್ನು ಹೊಂದಿರುವಂಥ ನೇಕಾರರಿಗೆ ನೆರೆ ರಾಜ್ಯಗಳಲ್ಲಿ ಕೊಡುವಂತೆ ಸಬ್ಸಿಡಿ ದರದಲ್ಲಿ ವಿದ್ಯುತ್ ಕೊಡಬೇಕೆಂದು ಆ ನೇಕಾರರು ಕೇಳಿದ್ದಾರೆ ಅದರ ಜೊತೆಯಲ್ಲಿ, ಈ ರಾಜ್ಯದ ರೈತರಿಗೆ ನೀವು ಯಾವ ರೀತಿ ಆರು ಪರ್ಸೆಂಟ್ ಬಡ್ಡಿಯಂತೆ ಸಾಲದ ಸೌಲಭ್ಯವನ್ನು ಕೊಡುತ್ತೀರಿ, ಅದೇ ರೀತಿ ನೇಕಾರರಿಗೂ ಸಹ ಆರು ಪರ್ಸೆಂಟ್‌ನಂತೆ 10 ಲಕ್ಷದವರೆಗೂ ಸಾಲ ಕೊಟ್ಟು, ಅವನು ತನ್ನ ಉದ್ಯೋಗವನ್ನು ಮಾಡಲು ಅವಕಾಶ ಮಾಡಿಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಅಧ್ಯಕ್ಷ ಪೀಠದ ಕೆಳಗಡೆ ರೈತ ಮತ್ತು ನೇಕಾರ ಇವರಿಬ್ಬರ ಚಿತ್ರವನ್ನು ಈಕ್ವಲ್ ಆಗಿ ಮೂಡಿಸಿದ್ದೀರಿ ಆದರೆ ನೇಕಾರ ಸಮೂಹವನ್ನು ನೀವು ಏಕೆ ಮರೆತಿದ್ದೀರಿ ಎಂದು ನಾನು ಕೇಳಲು ಬಯಸುತ್ತೇನೆ ಈ ಬಗ್ಗೆ ನಾವು ಅನೇಕ ಸಲ ಕೇಳಿದಾಗಲೂ, ನೋಡೋಣ, ಪರಿಶೀಲನೆ ಮಾಡೋಣ ಎನ್ನುವ ಉತ್ತರ ಸರ್ಕಾರದ ಕಡೆಯಿಂದ ಬರುತ್ತಿದೆ ನೇಕಾರರಾದ ನಮ್ಮ ಜನ ನಮ್ಮ ಮೇಲೆ ಬಹಳ ಭರವಸೆಯಿಟ್ಟು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ ಇದಕ್ಕೆ ಏನಾದರೂ ಪರಿಹಾರ ಸಿಗಬಹುದೇ ಎಂದು ವಿನಯ ಪೂರ್ವಕವಾಗಿ ತಮ್ಮನ್ನು ನಾನು ಕೇಳಬಯಸುತ್ತೇನೆ ಈ ಬಗ್ಗೆ ನಾನು ಅನೇಕ ಸಲ ಹಣಕಾಸಿನ ಮಂತ್ರಿಗಳನ್ನೂ ಸಹ ಕೇಳಿದ್ದೇನೆ, ಕೇವಲ ನಾಲ್ಕು ಮಗ್ಗಗಳವರೆಗೆ ಮಾತ್ರ ನಾವು ಸಬ್ಸಿಡಿ ಕೊಡಲು ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ ಅದು ಹಿಂದಿನ ಸರ್ಕಾರ ಮಾಡಿದಂಥ ಪ್ಯಾಕೇಜಿನಲ್ಲಿದೆ ಈಗ ಆ ಪ್ಯಾಕೇಜಿನಲ್ಲೇ ಸಾಕಷ್ಟು ಹಣವನ್ನು ಬಿಟ್ಟುಬಿಟ್ಟಿದ್ದಾರೆ ಕೇವಲ ನಾಲ್ಕು ಮಗ್ಗಗಳಿರುವವರಿಗೆ ರಿಯಾಯಿತಿ ಕೊಟ್ಟರೆ ಆಗುವುದಿಲ್ಲ ನೇಕಾರರ ಸ್ಥಿತಿ ಹೇಗಿದೆ ಎನ್ನುವ ಬಗ್ಗೆ ಒಂದು ಸರ್ವೆ ಮಾಡಿಸಿ ಏಕೆಂದರೆ, ಅಂಥ ಒಂದು ದಯನೀಯ ಸ್ಥಿತಿಯಲ್ಲಿ ನೇಕಾರರು ಇದ್ದಾರೆ ಯಾವುದೇ ರೀತಿಯಲ್ಲಿ ಸಮಾಜದಲ್ಲಿ ತಲೆ ಎತ್ತಿ ಬದುಕುವಂಥ ಸ್ಥಿತಿಯಲ್ಲಿ ನೇಕಾರರು ಇಲ್ಲ ಇಂಥ ಪರಿಸ್ಥಿತಿ ಇರುವಾಗ, ಸರ್ಕಾರದಿಂದ ಅನೇಕ ಸಮೂಹಗಳಿಗೆ ಕೊಡುತ್ತಿರುವ ಸೌಲಭ್ಯಗಳನ್ನು ನೇಕಾರರಿಗೆ ಏಕೆ ಕೊಡುತ್ತಿಲ್ಲ? ನೇಕಾರರೂ ಸಹ ಈ ರಾಜ್ಯದ ಪ್ರಜೆಗಳು ಹೌದೋ, ಅಲ್ಲವೋ ಎಂದು ಕೇಳುತ್ತೇನೆ

**ಅಧ್ಯಕ್ಷರು** ಮಾನ್ಯ ಸವದಿಯವರೇ, ಸಂಕ್ಷಿಪ್ತವಾಗಿ ಕೇಳಿ

**ಶ್ರೀ ಸಿದ್ದು ಸವದಿ** ಮಾನ್ಯ ಅಧ್ಯಕ್ಷರೆ, ಇದು ಬಹಳ ಮುಖ್ಯವಾದ ಪ್ರಶ್ನೆ ಈ ರಾಜ್ಯದಲ್ಲಿ ನೇಕಾರ ಸಮೂಹವನ್ನೇ ಮರೆತಿದ್ದಾರೆ ಆದ್ದರಿಂದ, ನಾನು ಕೇಳುವುದು ಇಷ್ಟೆ, ತಮ್ಮ ಪ್ರಣಾಳಿಕೆಯಲ್ಲಿ ಹೇಳಿರುವಂತೆ, ಮಿತಿರಹಿತವಾಗಿ, ಅವನು ಎಷ್ಟೇ ಮಗ್ಗಗಳನ್ನು ಹಾಕಿಕೊಂಡಿರಲಿ, ನೆರೆ ರಾಜ್ಯಗಳಲ್ಲಿರುವ ಹಾಗೆ ಅವರಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ತನ್ನು ಪೂರೈಕೆ ಮಾಡಬೇಕು ರೈತರ ಹಾಗೆ ಅವರೂ ಆರು ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಪಡೆಯಲು ಅವಕಾಶ ಮಾಡಿಕೊಡಬೇಕು ಇದು ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಬೇಡಿಕೆಯಾದರೆ, ಕೈಮಗ್ಗಗಳ ನೇಕಾರರ ಸ್ಥಿತಿಯೂ ಸಹ ಇದಕ್ಕಿಂತ ದಯನೀಯವಾದುದಾಗಿದೆ ಈ ಬಗ್ಗೆ ಮೊನ್ನೆಯೇ ಸನ್ಮಾನ್ಯ ಸಚಿವರು ಹೇಳಿದ್ದಾರೆ ಈಗಾಗಲೇ 'ವಿದ್ಯಾ ವಿಕಾಸ ಯೋಜನೆ' ಯನ್ನು ಬಿಡುಗಡೆ ಮಾಡಿದ್ದಾರೆ ಅದಕ್ಕಾಗಿ ನಾನು ಧನ್ಯವಾದ ಹೇಳಲು ಬಯಸುತ್ತೇನೆ ಆದರೆ ಮಾನ್ಯ ಸಚಿವರು ಹೇಳಿದ ಪ್ರಕಾರ, ಕಾಲು ಭಾಗದ ಹಣವನ್ನು ಅಡ್ವಾನ್ಸಾಗಿ ಕೊಡುತ್ತೇವೆ ಎಂದು ಹೇಳಿದ್ದರು ಅದನ್ನು ಇದುವರೆಗೂ ಕೊಟ್ಟಿಲ್ಲ ಈ ಕಾರಣದಿಂದ ಕೇವಲ 50 ಪರ್ಸೆಂಟ್ ಮಗ್ಗಗಳು ಚಾಲೂ ಆಗಿದ್ದು, ಇನ್ನೂ 50 ಪರ್ಸೆಂಟ್ ಮಗ್ಗಗಳು ಬಂದ್ ಆಗಿದ್ದು, ಅವು ಪ್ರಾರಂಭವಾಗುವ ಹಂತದಲ್ಲಿಲ್ಲ ನೀವು ಕಾಲು ಭಾಗದ ಹಣವನ್ನು ಅಡ್ವಾನ್ಸ್ ಆಗಿ ಕೊಟ್ಟರೆ ಮಾತ್ರ, ಆ ಮಗ್ಗಗಳು ಚಾಲೂ ಆಗುವಂದ ಸ್ಥಿತಿಯಲ್ಲಿವೆ ಅದರ ಬಗ್ಗೆಯೂ ಸಹ ನಾನು ಇವತ್ತು ಈ ಸಭೆಯ ಮೂಲಕ ಒತ್ತಾಯ ಮಾಡುತ್ತೇನೆ, ತಕ್ಷಣವೇ ಕಾಲು ಭಾಗದ ಹಣವನ್ನು ಕೆ ಪಿ ಸಿ ಗೆ ಅಡ್ವಾನ್ಸಾಗಿ ಕೊಡಬೇಕು

**ಅಧ್ಯಕ್ಷರು** ಇಲ್ಲಿ ಚರ್ಚೆಗೆ ಕಾಲವಿಲ್ಲ ನೀವು ನೇರವಾಗಿ ಪ್ರಶ್ನೆ ಕೇಳಿ

**ಶ್ರೀ ಸಿದ್ದು ಸವದಿ** ಈ ರಾಜ್ಯದಲ್ಲಿ ನೇಕಾರರ ಸಮೂಹವನ್ನು ಮರೆತಿದ್ದಾರೆ ಅವರು ಬಹಳಷ್ಟು ಸಲ ಹೋರಾಟ ಮಾಡಿದ್ದಾರೆ, ಉಪವಾಸ ಕುಳಿತಿದ್ದಾರೆ ಆದರೂ ಸಹ ಬಜೆಟ್‌ನಲ್ಲಿ ಅವರಿಗೆ ಕಿಂಚಿತ್ತೂ ಅವಕಾಶ ಮಾಡಿಕೊಟ್ಟಿಲ್ಲ ಕೇವಲ 20 ಕೋಟಿ ರೂಪಾಯಿಗಳ ಪ್ಯಾಕೇಜನ್ನು ಮಾಡಿದ್ದಾರೆ ಆ ಪ್ಯಾಕೇಜನ್ನು ಕೈಮಗ್ಗ ನೇಕಾರರಿಗಾಗಿ ಇಟ್ಟರೋ, ಪವರ್‌ಲೂಂ ನೇಕಾರರಿಗೆ ಇಟ್ಟರೋ ಅಥವಾ ಕೆ ಪಿ ಸಿ ಗೆ ಇಟ್ಟರೋ, ಯಾವುದನ್ನೂ ತಿಳಿಯಪಡಿಸಿಲ್ಲ ಮೂರು ಸಮೂಹದವರು ಬಂದು ಅವರನ್ನು ಕೇಳಿದಾಗ, ನಿಮಗೆ 20 ಕೋಟಿ ಇಟ್ಟಿದ್ದೇವೆ ಎಂದು ಎಲ್ಲರಿಗೂ ಹೇಳುತ್ತಾರೆ ರಾಜ್ಯದಲ್ಲಿರುವಂಥ ಎಲ್ಲಾ ಪವರ್‌ಲೂಂ ನೇಕಾರರಿಗೆ ಸಬ್ಸಿಡಿ ಕೊಟ್ಟರೆ, ಅದೇ 14 ಕೋಟಿ ರೂಪಾಯಿಗಳಾಗುತ್ತದೆ ಹೀಗಿರುವಾಗ ನೀವು ಕೇವಲ 20 ಕೋಟಿ ರೂ ಇಟ್ಟರೆ ಹೇಗೆ? ಅದರಲ್ಲಿ ಅವರಿಗೆಷ್ಟು ಇಟ್ಟಿದ್ದೀರಿ, ಇವರಿಗೆಷ್ಟು ಇಟ್ಟಿದ್ದೀರಿ ಎನ್ನುವುದನ್ನಾದರೂ ಬಿಡಿಸಿ ಹೇಳಿ ಇಷ್ಟು ಹಣದಲ್ಲಿ ಕೇವಲ ಪವರ್‌ಲೂಮ್ ನೇಕಾರರಿಗೆ ಸಬ್ಸಿಡಿ ಕೊಡಲು ಸಾಧ್ಯವಾಗುತ್ತದೆ ಅದರ ಸಲುವಾಗಿ, ಅದನ್ನು ಬಿಡಿಸಿ ಹೇಳುವ ಮಾತನ್ನು ನೇಕಾರರಿಗೆ ದಯವಿಟ್ಟು ಹೇಳಿ

ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಕೇವಲ ಆಶ್ವಾಸನೆಯನ್ನು ಕೊಡಬೇಡಿ ನಾವು ಹೊಸ ಸದಸ್ಯರಾಗಿದ್ದೇವೆ ನಾನು ಇಷ್ಟು ಹೇಳಿದರೂ ನೀವು ಮನಸ್ಸಿಡಲಿಲ್ಲ ಎಂದರೆ ನಮಗೆ ಕಷ್ಟವಾಗುತ್ತದೆ ನೇಕಾರರನ್ನು ಬದುಕಿಸಿ, ನೇಕಾರರ ಬಗ್ಗೆ ಲಕ್ಷವಿರಲಿ ಎಂದು ಕೊನೆಯದಾಗಿ ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ ಒಂದು ವೇಳೆ ಅವರ ಬಗ್ಗೆ ಲಕ್ಷ್ಯವಿಡಲು ಸಾಧ್ಯವಾಗದಿದ್ದಲ್ಲಿ ಅವರಿಗೆ ಸರ್ಕಾರದ ವತಿಯಿಂದ ಒಂದು ತೊಟ್ಟು ವಿಷ ಕೊಟ್ಟುಬಿಡಿ ಅವರು ಅದನ್ನು ಕುಡಿದು ಸತ್ತು ಹೋಗಲಿ ಎಂದು ಹೇಳುತ್ತೇನೆ ಸರ್ಕಾರ ಈಗ ನೇಕಾರರನ್ನು ಮರೆತಿದೆ ನೇಕಾರರ ಬಗ್ಗೆ ನಿಮಗೆ ಕಿಂಚಿತ್ತೂ ಕಾಳಜಿಯಿಲ್ಲ ನಾಲ್ಕು ಮಗ್ಗಗಳಿರುವವರಿಗೆ ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿದ್ದೀರಿ ಅದನ್ನು ಹಿಂದಿನ ಸರ್ಕಾರವೂ ಕೊಟ್ಟಿದೆ ಅವರಿಗೆ ನಾವು ಕೇಳಿದಂಥ ಎಲ್ಲ ಸೌಲಭ್ಯಗಳನ್ನು ಕೊಡಬೇಕೆಂದು ನಾನು ಸರ್ಕಾರದಿಂದ ಸ್ಪಷ್ಟವಾಗಿ ಉತ್ತರವನ್ನು ಬಯುಸುತ್ತೇನೆ

**ಅಧ್ಯಕ್ಷರು** ಪ್ರಶ್ನೆ ಕೇಳಿ ಎಂದರೆ, ಈ ರೀತಿ ಮಾತನಾಡಲು ಪ್ರಾರಂಭಿಸಿದರೆ ಹೇಗೆ ಪ್ರಶ್ನೋತ್ತರ ಕಾಲದಲ್ಲಿ ಈ ತರಹ ಆದರೆ ಹೇಗೆ?

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ಎಂ ಕಾರಜೋಳರವರು ಉಪ ಪ್ರಶ್ನೆ ಕೇಳಲು ಎದ್ದುನಿಂತರು)

**ಅಧ್ಯಕ್ಷರು** ಮಾನ್ಯ ಕಾರಜೋಳರವರೆ, ಈಗ ಏನಾಗಿದೆ ಎಂದರೆ 10 ಜನರು ಉಪಪ್ರಶ್ನೆಗಳನ್ನು ಕೇಳುವಷ್ಟು ಸಮಯದಲ್ಲಿ ಅವರೇ ಕೇಳಿಬಿಟ್ಟಿದ್ದಾರೆ ಅದರ ಸಂಬಂಧವಾಗಿ ಮಂತ್ರಿಗಳು ಈಗ ಉತ್ತರ ಹೇಳುತ್ತಾರೆ ದಯಮಾಡಿ ನನ್ನ ಮಾತನ್ನು ಕೇಳಿ, ಈಗ ನಮ್ಮ ಮುಂದೆ ಇನ್ನೂ 11 ಪ್ರಶ್ನೆಗಳಿವೆ ಎಲ್ಲರೂ ಸಹ ಈ ರೀತಿ ಸಮಯ ತೆಗೆದುಕೊಂಡರೆ ಯಾವಾಗ ಮುಗಿಯುತ್ತದೆ ಈಗಾಗಲೇ ಹನ್ನೊಂದೂವರೆ ಗಂಟೆಯಾಗಿದೆ

**ಶ್ರೀ ಗೋವಿಂದ ಎಂ ಕಾರಜೋಳ** ಎರಡು ನಿಮಿಷದಲ್ಲಿ ಮುಗಿಸಿ ಬಿಡುತ್ತೇನೆ, ನೇರವಾಗಿ ಪ್ರಶ್ನೆಯನ್ನೇ ಕೇಳುತ್ತೇನೆ ಸರ್ಕಾರ ನಾಲ್ಕು ಮಗ್ಗಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ತನ್ನು ಪೂರೈಸುತ್ತೇವೆ ಎಂದು ಹೇಳಿದ್ದಾರೆ ಪ್ರತಿ ತಿಂಗಳು ಎರಡು ನೂರು ರೂಪಾಯಿಗಳಿಗೆ ಮಿಕ್ಕದಂತೆ ಕನ್ಸೆಷನ್ ಕೊಡುತ್ತೇವೆ ಎಂದು ಹೇಳಿದ್ದಾರೆ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ಅದನ್ನು ದಯವಿಟ್ಟು 10 ಮಗ್ಗಗಳಿಗೆ ವಿಸ್ತರಣೆ ಮಾಡಿ ಹೆಚ್ಚು ಹೊರೆಯಾಗದಂತೆ, ಪ್ರತಿ ತಿಂಗಳೂ 500 ರೂಪಾಯಿಗಳ ರಿಯಾಯಿತಿ ಕೊಡಬೇಕು ಎಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ ಏಕೆಂದರೆ, ಇದೇನು ಬಹಳ ದೊಡ್ಡ ವಿಷಯವಲ್ಲ 200 ರೂಪಾಯಿಗಳಂತೆ ನಾಲ್ಕು ಮಗ್ಗಗಳಿಗೆ ರಿಯಾಯಿತಿ ಕೊಡುತ್ತೇನೆ ಎಂದು ಹೇಳಿದ್ದಾರೆ ನಾಲ್ಕು ಮಗ್ಗಗಳನ್ನಿಟ್ಟುಕೊಂಡು ಯಾವ ನೇಕಾರರೂ ಬದುಕಲು ಆಗುವುದಿಲ್ಲ ಕನಿಷ್ಟ 10 ಮಗ್ಗಗಳಿದ್ದರೆ ಮಾತ್ರ ಬದುಕಲು ಸಾಧ್ಯವಾಗುತ್ತದೆ ಆದ್ದರಿಂದ, ಇವತ್ತು ನಾನು ನೇರವಾಗಿ ಸರ್ಕಾರವನ್ನು ವಿನಂತಿ ಮಾಡುತ್ತೇನೆ, 10 ಮಗ್ಗಗಳಿಗೆ ಸಬ್ಸಿಡಿಯನ್ನು ವಿಸ್ತರಣೆ ಮಾಡುವಂಥ ಕೆಲಸ ಮಾಡಬೇಕು

**ಶ್ರೀ ಪಿ ಜಿ ಆರ್ ಸಿಂಧ್ಯ** ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರಾಗಿರತಕ್ಕಂಥ ಸಿದ್ದು ಸವದಿಯವರು, ನೇಕಾರರ ಸಮಸ್ಯೆಗಳನ್ನು ಬಹಳ ಸವಿಸ್ತಾರವಾಗಿ ಈ ಸಭೆಯ ಮತ್ತು ರಾಜ್ಯ ಸರ್ಕಾರದ ಗಮನಕ್ಕೆ ತಂದಿದ್ದಾರೆ ಅವರಿಗೆ ನಾನು ಕೊಡತಕ್ಕಂಥ ಉತ್ತರದ ಬಗ್ಗೆ ಅವರಿಗೆ ಅಷ್ಟೊಂದು ಆಸಕ್ತಿ ಇದ್ದ ಹಾಗೆ ಕಾಣುವುದಿಲ್ಲ (ಮಾನ್ಯ ಸಿದ್ದು ಸವದಿಯವರು ಬೇರೆ ಶಾಸಕರುಗಳೊಂದಿಗೆ ಮಾತನಾಡುತ್ತಿದ್ದರು) ನೇಕಾರರಿಗೆ ಸಂಬಂಧಪಟ್ಟಂತೆ ನಮ್ಮ ವಿರೋಧ ಪಕ್ಷದ ಉಪನಾಯಕರು ಪ್ರಶ್ನೆಯನ್ನು ಕೇಳಿದ್ದಾರೆ ತಾವು ಹೇಳಿರುವ ಸಲಹೆಯನ್ನು ನಾವು ಪರಿಶೀಲನೆ ಮಾಡುತ್ತೇವೆ ಈಗ ಸಬ್ಸಿಡಿ ಕೊಡಲು ಗೈಡ್‌ಲೈನ್ಸ್ ಇರುವುದು, 200 ರೂಪಾಯಿಗಳಂತೆ, ನಾಲ್ಕು ಮಗ್ಗಗಳಿಗೆ ಎಂದರೆ 800 ರೂಪಾಯಿಗಳಾಗುತ್ತದೆ, ಈ 800 ರೂಪಾಯಿಗಳು ಅಥವಾ ಶೇಕಡಾ 50ರಷ್ಟು ವಿದ್ಯುತ್ ರಿಯಾಯಿತಿ, ಇದರಲ್ಲಿ ಯಾವುದು ಕಡಿಮೆ ಇದೆ ಅದನ್ನು ರಿಯಾಯಿತಿಯಾಗಿ ಮಾಡಬೇಕೆಂದು ಇದೆ ಈ ಗೈಡ್‌ಲೈನ್ಸನ್ನು ಇಷ್ಯೂ ಮಾಡಿ, ಇದನ್ನು ಒಂದನೇ ಸೆಪ್ಟೆಂಬರ್‌ನಿಂದ ಎಫೆಕ್ಟ್‌ಗೆ ಕೊಡುತ್ತೇವೆ ತಾವು ಕೊಟ್ಟಿರುವ ಸಲಹೆಯನ್ನೂ ಪರಿಶೀಲನೆ ಮಾಡುವ ಭರವಸೆಯನ್ನು ನಾನು ಕೊಡುತ್ತೇನೆ

## ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಪಟ್ಟಣ ಪಂಚಾಯಿತಿಗೆ ಬಿಡುಗಡೆಯಾದ ಹಣ

123(868) ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಪಟ್ಟಣ ಪಂಚಾಯತಿಗೆ ಕಳೆದ 3 ವರ್ಷಗಳಿಂದ ವಿವಿಧ ಕಾಮಗಾರಿಗಳಿಗೆ ಮಂಜೂರಾದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು (ವಿವರಗಳನ್ನು ನೀಡುವುದು)

ಆ) ಸದರಿ ಪಟ್ಟಣ ಪಂಚಾಯತಿಯು ಅನೇಕ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವುದು ನಿಜವೇ,

ಇ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ತೆಗೆದುಕೊಂಡ ಕ್ರಮಗಳು ಏನು,

ಈ) ಸದರಿ ಪಟ್ಟಣ ಪಂಚಾಯತಿಯಲ್ಲಿ ಸಿಬ್ಬಂದಿ ಮತ್ತು ಪೌರ ಕಾರ್ಮಿಕ ಕೊರತೆ ಇರುವುದು ನಿಜವೇ,

ಉ) ಹಾಗಿದ್ದಲ್ಲಿ ಕೊರತೆ ನಿವಾರಿಸಲು ತೆಗೆದುಕೊಂಡ ಕ್ರಮಗಳು ಏನು,

ಊ) ಸದರಿ ಪಟ್ಟಣ ಪಂಚಾಯತಿಯು ಕುಡಿಯುವ ನೀರಿಗೆ ಹಾಕಿರುವ ಫಿಲ್ಟರ್‌ಗಳು ಕಳಪೆ ಮಟ್ಟದ್ದಾಗಿರುವುದು ನಿಜವೇ,

ಋ) ಹಾಗಿದ್ದಲ್ಲಿ ಇವುಗಳನ್ನು ಪೂರೈಸಿದ ಅಧಿಕಾರಿಗಳ ಮೇಲೆ ತೆಗೆದುಕೊಂಡ ಕ್ರಮಗಳು ಏನು,

ಋೂ) ಸದರಿ ಪಟ್ಟಣ ಪಂಚಾಯತಿಯಲ್ಲಿ ಸಮಾನದುಡಿಮೆಗೆ ಸಮಾನ ವೇತನಕ್ಕಾಗಿ ಹಣ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಎ) ಹಾಗಿದ್ದಲ್ಲಿ, ಇದರ ಬಗ್ಗೆ ತೆಗೆದುಕೊಂಡ ಕ್ರಮಗಳು ಏನು?

ಶ್ರೀ ಎಸ್ ಆರ್ ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನದ ಮಾಹಿತಿ ಈ ಕೆಳಕಂಡಂತಿದೆ

| ವರ್ಷ | ಬಿಡುಗಡೆಯಾದ ಅನುದಾದ | ಖರ್ಚಾದ ಅನುದಾನ |
|---|---|---|
| 2001–02 | 1 50 ಲಕ್ಷ | 1 50 ಲಕ್ಷ |
| 2002–03 | 25400–00 | 25400–00 |
| 2003–04 | 11 12 ಲಕ್ಷ | – |

ಆ) ಸದರಿ ಪಟ್ಟಣ ಪಂಚಾಯತಿವತಿಯಿಂದ ಮೂಲಭೂತ ಸೌಕರ್ಯಗಳಾದ ರಸ್ತೆ, ಬೀದಿ ದೀಪ ಹಾಗೂ ಸಮರ್ಪಕ ನೀರು ಸರಬರಾಜು ಮುಂತಾದವುಗಳನ್ನು ಒದಗಿಸಲಾಗಿದೆ

ಇ) ಉದ್ಭವಿಸುವುದಿಲ್ಲ

ಈ) ಕೊರತೆ ಇರುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಇಲ್ಲ

ಋ) ಉದ್ಭವಿಸುವುದಿಲ್ಲ

ಋೂ) ಇಲ್ಲ

ಎ) ಉದ್ಭವಿಸುವುದಿಲ್ಲ

**ಶ್ರೀ ಆಲ್ಕೋಡ್ ಹನುಮಂತಪ್ಪ** ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಪಟ್ಟಣ ಪಂಚಾಯಿತಿಗೆ ಕಳೆದ ಮೂರು ವರ್ಷಗಳಿಂದ ವಿವಿಧ ಕಾಮಗಾರಿಗಳಿಗೆ ಮಂಜೂರಾದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು, ವಿವರ ನೀಡಿ ಎಂದು ನಾನು ಅವರನ್ನು ಕೇಳಿದ್ದೆ ಅವರು ನನಗೆ ಮೂರು ವರ್ಷಗಳ ವಿವರಗಳನ್ನು ಕೊಟ್ಟಿದ್ದಾರೆ 2001–02ರಲ್ಲಿ 1 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು, ಅಷ್ಟೂ ಖರ್ಚಾಗಿದೆ ಎಂದು ತಿಳಿಸಿದ್ದಾರೆ 2002–03ನೇ ಸಾಲಿನಲ್ಲಿ 25,400 ರೂಪಾಯಿ ಅನುದಾನ ಬಿಡುಗಡೆಯಾಗಿದ್ದು, ಮತ್ತೆ 25,400 ರೂಪಾಯಿ ಖರ್ಚಾಗಿದೆ ಎಂದು ಕೂಡ ಹೇಳಿದ್ದೀರಿ ಮತ್ತೆ 2003–2004ನೇ ಸಾಲಿನಲ್ಲಿ 11 12 ಲಕ್ಷ ಅನುದಾನ ಬಿಡುಗಡೆಯಾಗಿದೆ ಎಂದು ತಾವು ನೀಡಿರತಕ್ಕಂಥ ಉತ್ತರದಲ್ಲಿ ತಿಳಿಸಿದ್ದೀರಿ ಆದರೆ, ಯಾವ್ಯಾವ ಕಾಮಗಾರಿಗಳಿಗೆ ಎಷ್ಟು ಹಣ ಖರ್ಚು

ಮಾಡಲಾಗಿದೆ ಎನ್ನತಕ್ಕಂಥ ವಿವರವಾದ ಮಾಹಿತಿಗಳನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತೆ ಸದರಿ ಪಟ್ಟಣ ಪಂಚಾಯತಿಯು ಅನೇಕ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವುದು ನಿಜವೇ ಎಂದು ಕೇಳಿರುವುದಕ್ಕೆ, ರಸ್ತೆ, ಬೀದಿ ದೀಪ ಹಾಗೂ ಸಮರ್ಪಕ ನೀರು ಸರಬರಾಜು ಒದಗಿಸಲಾಗಿದೆ ಎಂದು ಉತ್ತರ ನೀಡಿರುತ್ತೀರಿ ಆದರೆ, ಯಾವ್ಯಾವ ರಸ್ತೆಗಳಿಗೆ ಬೀದಿ ದೀಪದ ವ್ಯವಸ್ಥೆಯನ್ನು ಹಾಕಲಾಗಿದೆ ಎಂಬುದನ್ನು ಮತ್ತು ಯಾವ್ಯಾವ ರಸ್ತೆಗಳನ್ನು ರಿಪೇರಿ ಮಾಡಲಾಗಿದೆ ಎಂಬುದನ್ನು ಹಾಗೂ ಯಾವ ರಸ್ತೆಗೆ ಡಾಂಬರೀಕರಣ ಮಾಡಲಾಗಿದೆ ಎಂದು ಹಾಗೂ ಹೊಸದಾಗಿ ನಿರ್ಮಾಣ ಮಾಡಿರತಕ್ಕಂಥ ರಸ್ತೆಗಳ ವಿವರವಾದಂಥ ಮಾಹಿತಿಗಳನ್ನು ಒದಗಿಸಿ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತೆ ಉಪ ಪ್ರಶ್ನೆ ಕೇಳುವುದಕ್ಕೆ ನನಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ

**ಶ್ರೀ ಎಸ್ ಆರ್ ಮೋರೆ** ಮಾನ್ಯ ಅಧ್ಯಕ್ಷರೆ, ದೇವದುರ್ಗ ತಾಲ್ಲೂಕಿನ ಪಟ್ಟಣ ಪಂಚಾಯತಿಗೆ ಕಳೆದ ಮೂರು ವರ್ಷಗಳಿಂದ ಸರ್ಕಾರದ ಕಡೆಯಿಂದ 15 ಲಕ್ಷ ರೂಪಾಯಿಗಳನ್ನು ಒದಗಿಸಿಕೊಡಲಾಗಿದೆ ಯಾವ್ಯಾವ ರಸ್ತೆಗೆ ಎಷ್ಟೆಷ್ಟು ಖರ್ಚು ಮಾಡಲಾಗಿದೆ ಎನ್ನತಕ್ಕಂಥ ವಿವರಗಳನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ ಏಕೆಂದರೆ, ಪ್ರತಿಯೊಂದು ಓಣಿಯಲ್ಲಿರತಕ್ಕಂಥ ಬೀದಿ ದೀಪಗಳ ಬಗ್ಗೆ ಮತ್ತು ಕಂಬದ ಬಗ್ಗೆ ಮಾಹಿತಿ ಕೇಳಿದ್ದಾರೆ ಮತ್ತೆ ಈ ವರ್ಷ 11 12 ಲಕ್ಷ ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದೇವೆ ಅದರೆ, ಸದರಿ ಮುನಿಸಿಪಾಲಿಟಿಯವರು ಈ ಹಣವನ್ನು ಇನ್ನೂ ಖರ್ಚು ಮಾಡಿಲ್ಲ ಈ ಹಣ ಹಾಗೆ ಉಳಿದುಕೊಂಡಿದೆ ಬರುವ ವರ್ಷದೊಳಗೆ ಸದರಿ ಹಣವನ್ನು ಖರ್ಚು ಮಾಡಿಕೊಳ್ಳಬೇಕೆಂದು ಪತ್ರ ಕೂಡ ಬರೆದು ಕಳುಹಿಸಿಕೊಟ್ಟಿದ್ದೇವೆ ಮತ್ತೆ ಸಂಬಳಕ್ಕಾಗಿ ಪ್ರತಿ ತಿಂಗಳು 3 10 ಲಕ್ಷ ರೂಪಾಯಿಗಳನ್ನು ತಪ್ಪದೇ ಕಳುಹಿಸಿಕೊಡುತ್ತಿದ್ದೇವೆ ಆದ್ದರಿಂದ ವೇತನಕ್ಕಾಗಿ ಯಾವುದೇ ರೀತಿಯ ತೊಂದರೆಯಾಗಿಲ್ಲ ಮತ್ತೆ ನೀರು ಸರಬರಾಜು ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ ನೀರು ಸರಬರಾಜು ಬಗ್ಗೆ ಹೇಳುವುದಾದರೆ, ಬೇರೆ ಊರುಗಳಿಗೆ ಹೋಲಿಸಿಕೊಂಡರೆ ದೇವ ದುರ್ಗದಲ್ಲಿರತಕ್ಕಂಥ ನೀರು ಸರಬರಾಜು ವ್ಯವಸ್ಥೆ ತುಂಬಾ ಚೆನ್ನಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತೆ ಇಲ್ಲಿ ನೀರಿನ ಫಿಲ್ಟರ್ ಕೆಲಸ ಕೂಡ ಬಹಳ ಚೆನ್ನಾಗಿದೆ ಇವತ್ತಿನ ದಿವಸ ಹುಬ್ಬಳ್ಳಿ-ಧಾರವಾಡ ಪಟ್ಟಣಗಳಿಗೆ 15 ದಿವಸಗಳಿಗೊಂದು ದಿವಸ ನೀರನ್ನು ಸರಬರಾಜು ಮಾಡಲಾಗುತ್ತಿದೆ ಆದರೆ, ದೇವದುರ್ಗ ಪಟ್ಟಣಗಳಿಗೆ ಪ್ರತಿ ದಿವಸ ನೀರು ಸರಬರಾಜು ಮಾಡತಕ್ಕಂಥ ಸೌಕರ್ಯವಿದೆ ಮತ್ತೆ ಯು ಜಿ ಡಿ ಬಗ್ಗೆ ಹೇಳುವುದಾದರೆ, ಮುನಿಸಿಪಾಲಿಟಿಯವರು ಮೂರನೇ ಒಂದು ಭಾಗದ ಹಣವನ್ನು ಕೊಡುವುದಕ್ಕೆ ಮುಂದೆ ಬಂದರೆ ಸರ್ಕಾರದ ಕಡೆಯಿಂದಲೂ ಕೂಡ ಅದಕ್ಕೆ ಗ್ರಾಂಟ್ ಕೊಟ್ಟು ಯು ಜಿ ಡಿ ಸೌಕರ್ಯವನ್ನೂ ಕೂಡ ಮಾಡಿಕೊಡುತ್ತೇವೆ ಎಂದು

ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ

**ಶ್ರೀ ಆಲ್ಕೋಡ್ ಹನುಮಂತಪ್ಪ** ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಕೇಳಿರತಕ್ಕಂಥ ಪ್ರಶ್ನೆಗೆ ಸಂಬಂಧಪಟ್ಟಂತೆ ವಿವರವಾದಂಥ ಮಾಹಿತಿಗಳನ್ನು ಕಳುಹಿಸಿ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ ಈ ವಿಷಯವನ್ನು ನಾನು ಏತಕ್ಕಾಗಿ ಕೇಳುತ್ತಿದ್ದೇನೆಂದರೆ, ಸರ್ಕಾರ ದೇವದುರ್ಗ ಪಟ್ಟಣ ಪಂಚಾಯತಿಗೆ ಹಣ ಕೊಟ್ಟಿರತಕ್ಕಂಥದ್ದಕ್ಕೆ ನಾನು ಸ್ವಾಗತ ಮಾಡುತ್ತೇನೆ ಆದರೆ, ಸರ್ಕಾರದ ಕಡೆಯಿಂದ ಕೊಟ್ಟಿರತಕ್ಕಂಥ ದುಡ್ಡಿನಿಂದ ಸ್ವಲ್ಪ ಕೂಡ ಕೆಲಸವಾಗಿಲ್ಲ ಇವತ್ತಿನ ದಿವಸ ದೇವದುರ್ಗ ಪಟ್ಟಣ ಒಟ್ಟಾರೆಯಾಗಿ ಒಂದು ರೀತಿಯಲ್ಲಿ ಸ್ಲಮ್ ಆಗಿ ಪರಿವರ್ತನೆ ಹೊಂದಿದೆ ಈ ಒಂದು ಹಣದಿಂದ ಅಲ್ಲಿ ಯಾವುದೇ ರೀತಿಯ ಕಾಮಗಾರಿ ನಡೆದಿಲ್ಲ ಅಲ್ಲಿಗೆ ಇಷ್ಟು ಹಣ ಕೊಡಲಾಗಿದೆ ಎಂಬುದನ್ನು ಇಲ್ಲಿ ತೋರಿಸಲಾಗಿದೆ ಮತ್ತು ಇಷ್ಟು ದುಡ್ಡನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದಾರೆ ಆದರೆ, ಅಲ್ಲಿ ಯಾವುದೇ ರೀತಿಯ ಕೆಲಸವಾಗಿಲ್ಲ ಆದ್ದರಿಂದ ಉನ್ನತ ಮಟ್ಟದ ಅಧಿಕಾರಿಗಳ ಕಡೆಯಿಂದ ಇದರ ಬಗ್ಗೆ ತನಿಖೆ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ ತಾವು ಕಳುಹಿಸಿಕೊಡತಕ್ಕಂಥ ಉತ್ತರವನ್ನು ನಾನು ಪಡೆದುಕೊಳ್ಳುತ್ತೇನೆ ಆದರೆ, ಅಲ್ಲಿ ಯಾವುದೇ ರೀತಿಯ ಕೆಲಸ ಆಗಿಲ್ಲ ಎಂದು ನಾನು ಬಹಳ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದೇನೆ ಸರ್ಕಾರದ ಕಡೆಯಿಂದ ಕೊಟ್ಟಿರತಕ್ಕಂಥ ಪೂರ್ಣ ಹಣದಿಂದ ಯಾವುದೇ ರೀತಿಯ ಕಾಮಗಾರಿಯಾಗಿಲ್ಲ ಆದ್ದರಿಂದ ಇದರ ಬಗ್ಗೆ ತನಿಖೆ ಆಗಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ ಮತ್ತೆ ವೇತನದ ಬಗ್ಗೆ ನಾನು ಕೇಳಿರತಕ್ಕಂಥ ಪ್ರಶ್ನೆ ಏನೆಂದರೆ, ಸದರಿ ಪಟ್ಟಣ ಪಂಚಾಯತಿಯಲ್ಲಿ ಸಮಾನ ದುಡಿಮೆಗೆ ಸಮಾನ ವೇತನಕ್ಕಾಗಿ ಹಣ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದಂಥ ಪ್ರಶ್ನೆಗೆ ಸರ್ಕಾರದ ಗಮನಕ್ಕೆ ಇದು ಬಂದಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ ಈ ಸದನಕ್ಕೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ತಾವು ಕೊಟ್ಟಿರತಕ್ಕಂಥ ಪತ್ರ ನನ್ನ ಮುಂದೆ ಬಂದಿದೆ ಸರ್ಕಾರದ ಕಡೆಯಿಂದ ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸುತ್ತೇನೆಂದು ಮಾನ್ಯ ಸಚಿವರು ಈಗ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಈ ಮಾತನ್ನು ಹೇಳಿದರು ಯಾವ್ಯಾವ ದಿನಾಂಕದಂದು ವೇತನ ಬಿಡುಗಡೆಗಾಗಿ ಪತ್ರ ಕೊಟ್ಟಿರತಕ್ಕಂಥ ವಿವರವನ್ನು ತಮಗೆ ಕಳುಹಿಸಿಕೊಡುತ್ತೇನೆ ಮತ್ತೆ ಈಗ ಒಂದು ವಿಚಾರ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ದಿನಾಂಕ 8-7-2002ರಂದು ವೇತನಕ್ಕೋಸ್ಕರ ಜಿಲ್ಲಾಧಿಕಾರಿಗಳು ಪತ್ರ ಬರೆಯುತ್ತಾರೆ ಮತ್ತೆ ದಿನಾಂಕ 24-01-2003ರಂದು ಇದೇ ವೇತನಕ್ಕೋಸ್ಕರ ಜಿಲ್ಲಾಧಿಕಾರಿಗಳು ಮತ್ತೊಂದು ಪತ್ರವನ್ನು ಬರೆದಿರುತ್ತಾರೆ ಮತ್ತೆ 23-01-2003ಕ್ಕೆ ಮತ್ತೆ ವೇನತಕ್ಕಾಗಿ ಹಣ ಬಿಡುಗಡೆ ಮಾಡಿ ಎಂದು ಪತ್ರ ಬರೆದಿದ್ದಾರೆ ಮತ್ತೆ 10-01-2003ರಲ್ಲಿ ಮತ್ತು ದಿನಾಂಕ 31-01-2003ರಲ್ಲಿ ಕೂಡ ಪತ್ರ ಬರೆದಿದ್ದಾರೆ

**ಅಧ್ಯಕ್ಷರು** ಉಪ ಪ್ರಶ್ನೆ ಕೇಳಿ ಎಂದು ನಾನು ನಿಮಗೆ ಅವಕಾಶ ಕೊಟ್ಟಿದ್ದೇನೆ ಆದರೆ, ವಿವರವನ್ನು ಓದುತ್ತಾ ನಿಂತುಕೊಂಡರೆ ಹೇಗೆ?

**ಶ್ರೀ ಆಲ್ಕೋಡ್ ಹನುಮಂತಪ್ಪ** ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ತಪ್ಪು ಮಾಹಿತಿ ಕೊಡತಕ್ಕಂಥದ್ದು ಸದನದ ಹಕ್ಕುಚ್ಯುತಿಯಾಗುತ್ತದೆ ಇಲ್ಲಿ ನಾವೆಲ್ಲಾ ಜವಾಬ್ದಾರಿ ಸ್ಥಾನದಲ್ಲಿದ್ದೇವೆ ಆದ್ದರಿಂದ, ಅಧಿಕಾರಿಗಳು ತಪ್ಪು ಮಾಹಿತಿ ಕೊಡತಕ್ಕಂಥದ್ದನ್ನು ನಾವು ಒಪ್ಪುವುದಕ್ಕೆ ಆಗುವುದಿಲ್ಲವೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಈ ವಿಷಯುವನ್ನು ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಸರ್ಕಾರದ ಮುಂದೆ ಮತ್ತು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರ ಕೊಡುತ್ತಾರೆ ಆದರೆ, 31–03–2003ರಲ್ಲಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ ಇದೇ ರೀತಿಯಾಗಿ ಸುಮಾರು 10 ಪತ್ರಗಳನ್ನು ವೇತನ ಬಿಡುಗಡೆ ಮಾಡಬೇಕೆಂದು ಜಿಲ್ಲಾಧಿಕಾರಿಗಳು ಪತ್ರವನ್ನು ಬರೆದಾಗ್ಯೂ ಕೂಡ, ಇದು ಸರ್ಕಾರದ ಮುಂದಿಲ್ಲವೆಂದು ಮತ್ತು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳತಕ್ಕಂಥದ್ದು ಸರಿಯೆ? ಈ ರೀತಿಯಾಗಿ ಸದಸ್ಯರಿಗೆ ತಪ್ಪು ಮಾಹಿತಿ ಅಧಿಕಾರಿಗಳು ಕೊಡತಕ್ಕಂಥದ್ದು ಸರಿಯಲ್ಲ ತಮ್ಮ ಮೂಲಕ ಈ ಸಂದರ್ಭದಲ್ಲಿ ಒತ್ತಾಯ ಮಾಡುವುದೇನೆಂದರೆ, ಈ ರೀತಿಯಾಗಿ ತಪ್ಪು ಮಾಹಿತಿ ಕೊಡತಕ್ಕಂಥದ್ದು ಸರಿಯಲ್ಲ ಮತ್ತು ತಕ್ಷಣವೇ ತಪ್ಪು ಮಾಹಿತಿ ಕೊಟ್ಟಂಥ ಸಂಬಂಧಪಟ್ಟಂಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ ಮಾನ್ಯ ಸಚಿವರು ಕುಡಿಯುವ ನೀರಿನ ಬಗ್ಗೆ ಹೇಳಿದ್ದಾರೆ ಇದಕ್ಕೆ ಸಂಬಂಧಪಟ್ಟಂತೆ ತಮ್ಮ ಗಮನಕ್ಕೆ ತರುವುದೇನೆಂದರೆ,

**ಅಧ್ಯಕ್ಷರು** ಮಾನ್ಯ ಆಲ್ಕೋಡ್ ಹನುಮಂತಪ್ಪನವರೆ, ತಾವು ಹಿರಿಯ ಸದಸ್ಯರು ಮತ್ತು ಮೇಲ್ಮನೆಯಲ್ಲಿ 6 ವರ್ಷಗಳ ಕಾಲ ಕೆಲಸ ಮಾಡಿ ಬಂದಿದ್ದೀರಿ ಈ ರೀತಿ ನಿಂತುಕೊಂಡು 10 ನಿಮಿಷದಿಂದ ಪ್ರಶ್ನೆ ಕೇಳುತ್ತಾ ಹೋದರೆ ಹೇಗೆ?

**ಶ್ರೀ ಆಲ್ಕೋಡ್ ಹನುಮಂತಪ್ಪ** ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿರತಕ್ಕಂಥದರ ಬಗ್ಗೆ ನಾನು ದಿನಾಂಕ ಸಮೇತ ವಿವರಣೆಯನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ ಜಿಲ್ಲಾಧಿಕಾರಿಗಳು ಕೊಟ್ಟಿರತಕ್ಕಂಥ ಪತ್ರಗಳನ್ನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ ಅಂದರೆ, ಸರ್ಕಾರದ ಮುಂದಿಲ್ಲ ಮತ್ತು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ ಆದರೆ ಅವರು ಸರ್ಕಾರಕ್ಕೆ ಪತ್ರ ಕಳುಹಿಸಿಕೊಟ್ಟಿರತಕ್ಕಂಥದ್ದನ್ನು ತಮ್ಮ ಮೂಲಕ ಮನ್ಯ ಸಚಿವರಿಗೆ ಕಳುಹಿಸಿ ಕೊಡುತ್ತೇನೆ ಈ ಒಂದು ಕಾರಣಕ್ಕಾಗಿ ಇಲ್ಲಿ ತಪ್ಪು ಮಾಹಿತಿ ಕೊಡತಕ್ಕಂಥದ್ದು ಸರಿಯಲ್ಲವೆಂದು ಹೇಳುವ ಮೂಲಕ ಮತ್ತು ಇಲ್ಲಿ ಬಹಳ ದೊಡ್ಡದಾಗಿ ಆಗಿರತಕ್ಕಂಥ ಭ್ರಷ್ಟಾಚಾರದ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳಿಂದ ತನಿಖೆ ಆಗಲಿ ಎಂಬ ಒತ್ತಾಯ ಮಾಡುತ್ತೇನೆ ಮಾನ್ಯ ಸಚಿವರು ಇದಕ್ಕೆ ಮುಂದಾಗಿ ಇದರ ಬಗ್ಗೆ ತನಿಖೆ ನಡೆಸಬೇಕೆಂದು ಮತ್ತು ಆ ಪಟ್ಟಣದಲ್ಲಿ ವಾಸ

ಮಾಡತಕ್ಕಂಥ ಜನರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಮತ್ತೊಮ್ಮೆ ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ

**ಶ್ರೀ ಗೋವಿಂದ ಎಂ ಕಾರ್‌ಜೋಳ್** ಮಾನ್ಯ ಅಧ್ಯಕ್ಷರೆ, ದೇವದುರ್ಗ ಪಟ್ಟಣ ಪಂಚಾಯತಿಗೆ 2002–2003ನೇ ಸಾಲಿನಲ್ಲಿ 25,400 ಲಕ್ಷ ರೂ ಅಂದರೆ 254 ಕೋಟಿ ರೂಪಾಯಿ ಅನುದಾನ ಕೊಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದಾರೆ ಇದು ಸರಿಯೇ ಅಥವಾ ಸತ್ಯವೇ ಎಂದು ಸರ್ಕಾರ ದಯವಿಟ್ಟು ಉತ್ತರ ಕೊಡಬೇಕು

**ಶ್ರೀ ಎಸ್ ಆರ್ ಮೋರೆ** ಅದು 25, 400 ರೂಪಾಯಿ ಅದು ಲಕ್ಷ ರೂಪಾಯಿಗಳಲ್ಲ

**ಶ್ರೀ ಗೋವಿಂದ ಎಂ ಕಾರ್‌ಜೋಳ್** ನೀವು ಕೊಟ್ಟಿರತಕ್ಕಂಥ ಉತ್ತರದಲ್ಲಿ ಅನುದಾನ ಬಿಡುಗಡೆ ಲಕ್ಷ ರೂಪಾಯಿಗಳಲ್ಲಿ ಎಂದು ಬರೆದಿದ್ದೀರಿ ತಾವು ಇದನ್ನು ಓದಬೇಕು

**ಶ್ರೀ ಎಸ್ ಆರ್ ಮೋರೆ** ಅದು ಟೈಪಿಂಗ್ ಮಿಸ್ಟೇಕ್ ಇರಬಹುದು ಅದು ಲಕ್ಷ ರೂಪಾಯಿ ಅಲ್ಲ, ಅದು 25,400 ರೂಪಾಯಿಗಳಷ್ಟೆ

**ಶ್ರೀ ಗೋವಿಂದ ಎಂ ಕಾರ್‌ಜೋಳ್** ಇಲ್ಲ ನೀವು ಕೊಟ್ಟಿರತಕ್ಕಂದ ಮಾಹಿತಿ ಪ್ರಕಾರ ಇದು ಆ ರೀತಿಯಾಗುವುದಿಲ್ಲ ನೀವು ಕೊಟ್ಟಿರತಕ್ಕಂಥ ಮಾಹಿತಿಯನ್ನು ತಾವೇ ಬೇಕಾದರೆ ಓದಿ ಏಕೆಂದರೆ, ನನಗೆ ಓದುವುದಕ್ಕೆ ಬರುತ್ತದೆಂಯೋ ಅಥವಾ ಇಲ್ಲವೋ ನೋಡೋಣ ಇಷ್ಟೊಂದು ಬೇಜವಾಬ್ದಾರಿಯಾಗಿ ಉತ್ತರ ಕೊಟ್ಟರೆ ಹೇಗೆ? 254 ಕೋಟಿ ರೂಪಾಯಿಗಳನ್ನು 2002–2003ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ ಇದನ್ನು ಅಧಿಕಾರಿಗಳು ಮತ್ತು ಸಚಿವರು ಕೂಡ ನೋಡುವುದಿಲ್ಲ ಈ ರೀತಿಯಾಗಿ ಮಾನ್ಯ ಸದಸ್ಯರಿಗೆ ಉತ್ತರ ಕೊಟ್ಟಿದ್ದಾರೆ

**ಶ್ರೀ ಎಸ್ ಆರ್ ಮೋರೆ** ಅದು 25,400 ಲಕ್ಷ ರೂಪಾಯಿಗಳಲ್ಲ ಅದು 25,400–00 ರೂಪಾಯಿ ಎಂದು ಉತ್ತರ ಕೊಡಲಾಗಿದೆ 400 ಆದ ಮೇಲೆ ಒಂದು ಡ್ಯಾಷ್ ಹಾಕಲಾಗಿದೆ, ಅದನ್ನು ತಾವು ನೋಡಬೇಕು

**ಶ್ರೀ ಗೋವಿಂದ ಎಂ ಕಾರ್‌ಜೋಳ್** ಅನುದಾನ ಬಿಡುಗಡೆ ಲಕ್ಷ ರೂಪಾಯಿಗಳಲ್ಲಿ ಎಂದು ಹೇಳಿದ್ದೀರಿ

**ಶ್ರೀ ಎಸ್ ಆರ್ ಮೋರೆ** ಅಷ್ಟೊಂದು ಹಣವನ್ನು ಎಲ್ಲಿಂದ ತರುವುದಕ್ಕೆ ಆಗುತ್ತದೆ?

**ಅಧ್ಯಕ್ಷರು** ಮಾನ್ಯ ಸಚಿವರೆ, ಇದೇನು ಟೈಪಿಂಗ್ ಮಿಸ್ಟೇಕ್ ಆಗಿದೆಯೆ? ನಿಮ್ಮ ಅಧಿಕಾರಿಗಳಿಗೆ ಇದರ ಬಗ್ಗೆ ಸೂಚನೆ ಕೊಡಿ ಬೇಜವಾಬ್ದಾರಿಯಿಂದ ಏನೋ ಒಂದು ಟೈಪ್ ಮಾಡಿ ನಿಮ್ಮ ಕೈಗೆ ಕೊಟ್ಟರೆ ಹೇಗೆ?

**ಶ್ರೀ ಗೋವಿಂದ ಎಂ ಕಾರ್‌ಜೋಳ್** ನನಗೆ ಕೊಟ್ಟಿರತಕ್ಕಂಥ ಉತ್ತರ ಬೇರೆ ಇರಬಹುದೆ? ಏಕೆಂದರೆ ನಿಮಗೆ ಕೊಟ್ಟಿರತಕ್ಕಂಥ ಉತ್ತರ ಪ್ರತಿ ಬೇರೆ

ಇರಬೇಕೆ? ನನ್ನ ಹತ್ತಿರ ಇರತಕ್ಕಂಥ ಉತ್ತರ ಪ್ರತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ ತಾವು ದಯವಿಟ್ಟು ಓದಬೇಕು

**ಶ್ರೀ ಎಸ್ ಆರ್ ಮೋರೆ** ನನ್ನ ಹತ್ತಿರ ಇರತಕ್ಕಂಥ ಉತ್ತರ ಪ್ರತಿಯಲ್ಲಿ 24,500 ರೂಪಾಯಿ ಎಂದು ಇದೆ

**ಶ್ರೀ ಗೋವಿಂದ ಎಂ ಕಾರ್‌ಜೋಳ್** ಉತ್ತರ ಪ್ರತಿಯ ಮೇಲ್ಭಾಗದಲ್ಲಿ ಲಕ್ಷ ರೂಪಾಯಿ ಎಂದು ಬರೆದು ಕೆಳಗಡೆ 25400 ರೂ ಎಂದು ಸೂಚಿಸಲಾಗಿದೆ

**ಶ್ರೀ ಎಸ್ ಆರ್ ಮೋರೆ** ಆ ರೀತಿ ಏನಾದರೂ ಆಗಿದ್ದರೆ ಅದನ್ನು 25,400 ರೂಪಾಯಿ ಎಂದು ತಿದ್ದಿಕೊಳ್ಳಿ 11ನೇ ಹಣಕಾಸಿನ ಆಯೋಗದ ಪ್ರಕಾರ ಪ್ರತಿ ತಿಂಗಳು ಅವರಿಗೆ 3 10 ಲಕ್ಷ ರೂಪಾಯಿಗಳನ್ನು ವೇತನಕ್ಕಾಗಿ ಕಳುಹಿಸಿಕೊಡಲಾಗುತ್ತಿದೆ ಅಲ್ಲಿ ವೇತನಕ್ಕಾಗಿ ಮತ್ತು ಸಮವೇತನಕ್ಕಾಗಿ ಯಾವುದೇ ರೀತಿಯ ತೊಂದರೆಯಿಲ್ಲ ಆದರೆ, ಅಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಇದರ ಬಗ್ಗೆ ತನಿಖೆ ಮಾಡಿಸುವುದಕ್ಕೆ ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಡುತ್ತೇನೆ ಮತ್ತೆ ಅವರ ಇನ್ನು ಅನೇಕ ಬೇಡಿಕೆಗಳನ್ನು ಪರಿಶೀಲಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ

**10ನೇ ಹಣಕಾಸು ಯೋಜನೆ ಅಡಿಯಲ್ಲಿ ಮುಳಗುಂದ ಪಟ್ಟಣ ಪಂಚಾಯತಿಗೆ ಮಳಿಗೆ ನಿರ್ಮಿಸಿರುವುದು**

124(806) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಪೌರಾಡಳಿತ ಹಾಗೂ ಕೆ ಯು ಐ ಡಿ ಎಫ್ ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 10ನೇ ಹಣಕಾಸು ಯೋಜನೆಯಡಿಯಲ್ಲಿ ಸರ್ಕಾರ ಗದಗ ತಾಲ್ಲೂಕು ಮುಳಗುಂದ ಪಟ್ಟಣ ಪಂಚಾಯತಿಗೆ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲು ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ ನೀಡಿದ್ದ ಹಣದಲ್ಲಿ ಬಾಕಿ ಹಣ (ರೂ 2 11 ಲಕ್ಷಗಳನ್ನು) ಬಡ್ಡಿ ಸಹಿತ ಮುಳಗುಂದ ಪಟ್ಟಣ ಪಂಚಾಯತಿಗೆ ಸೂಚಿಸಿದ್ದು ಸದರಿ ಹಣ ಜಮಾ ಮಾಡಲಾಗಿದೆಯೇ,

ಆ) ಜಮಾ ಆಗದಿದ್ದರೆ ಯಾವಾಗ ಜಮಾ ಮಾಡಲಾಗುವುದು, ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್ ಆರ್ ಮೋರೆ (ಪೌರಾಡಳಿತ ಹಾಗೂ ಕೆ ಯು ಐ ಡಿ ಎಫ್ ಸಿ ಸಚಿವರು)

ಅ) ಇಲ್ಲ

ಆ) ಈಗಾಗಲೇ ರಾಜ್ಯ ನಿರ್ಮಾಣ ನಿಗಮವು ರದ್ದಾಗಿರುವುದರಿಂದ ಬಾಕಿ ಹಣವನ್ನು ವಸೂಲಿ ಮಾಡಲಾಗಿರುವುದಿಲ್ಲ ಈ ಬಗ್ಗೆ ಬಂಡವಾಳ ಹಿಂತೆಗೆಯುವಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸುಧಾರಣೆ ಇಲಾಖೆಯೊಂದಿಗೆ ಸಂಪರ್ಕಿಸಿ ಬಾಕಿ ಹಣವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು ತಪ್ಪಿತಸ್ಥ ಅಧಿಕಾರಿಯ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು

**ಶ್ರೀ ಎಸ್ ಎಸ್ ಪಾಟೀಲ್** ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆ, 10ನೇ ಹಣಕಾಸು ಯೋಜನೆಯಡಿಯಲ್ಲಿ ಸರ್ಕಾರ ಗದಗ ತಾಲ್ಲೂಕು ಮುಳಗುಂದ ಪಟ್ಟಣ ಪಂಚಾಯಿತಿಗೆ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲು ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ ನೀಡಿದ್ದ ಹಣದಲ್ಲಿ ಬಾಕಿ ಹಣ 2 11 ಲಕ್ಷ ರೂಪಾಯಿಗಳನ್ನು ಬಡ್ಡಿ ಸಹಿತ ಮುಳಗುಂದ ಪಟ್ಟಣ ಪಂಚಾಯತಿಗೆ ಸೂಚಿಸಿದ್ದು ಸದರಿ ಹಣ ಜಮಾ ಮಾಡಲಾಗಿದೆಯೇ ಎಂಬ ಪ್ರಶ್ನೆಗೆ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ ಜಮಾ ಆಗದಿದ್ದರೆ ಯಾವಾಗ ಜಮಾ ಮಾಡಲಾಗುವುದು, ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗುವುದು ಎಂದು ಕೇಳಿದ್ದಕ್ಕೆ ಈಗಾಗಲೇ ರಾಜ್ಯ ನಿರ್ಮಾಣ ನಿಗಮವು ರದ್ದಾಗಿರುವುದರಿಂದ ಬಾಕಿ ಹಣವನ್ನು ವಸೂಲಿ ಮಾಡಲಾಗಿರುವುದಿಲ್ಲ, ಈ ಬಗ್ಗೆ ಬಂಡವಾಳ ಹಿಂತೆಗೆಯುವಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸುಧಾರಣೆ ಇಲಾಖೆಯೊಂದಿಗೆ ಸಂಪರ್ಕಿಸಿ ಬಾಕಿ ಹಣವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು ತಪ್ಪಿತಸ್ಥ ಅಧಿಕಾರಿಯ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು ಎಂದು ಉತ್ತರದಲ್ಲಿ ಹೇಳಿದ್ದಾರೆ ಇದೇ ಪ್ರಶ್ನೆಯನ್ನು 2003ನೇ ಸಾಲಿನಲ್ಲಿ ಕೇಳಿದ್ದೇನೆ, ಅದು 2001ರಲ್ಲಿ ತುಂಬಿದ್ದು, ಟೌನ್ ಪಂಚಾಯಿತಿಗೆ ಬರುವ ಹಣ ಸ್ವಲ್ಪ ಬರುತ್ತದೆ ಆ 10 ಲಕ್ಷ ರೂಪಾಯಿಗಳನ್ನು ತುಂಬಿದರೆ, 2003ರಲ್ಲಿ ಕೂಡ ಇದೇ ಒಂದು ಪ್ರಶ್ನೆಯನ್ನು ಕೇಳಿದಾಗ, ಗದಗ ಪಂಚಾಯಿತಿ ತಾಲ್ಲೂಕಿನ ಮುಳಗುಂದ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 10ನೇ ಹಣಕಾಸು ಯೋಜನೆಯಡಿಯಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲು ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ ವಹಿಸಿದ್ದು ನಿಜವೆ? ಹೌದು ಎಂದು ಉತ್ತರ ಕೊಟ್ಟಿದ್ದಾರೆ, ಸದರಿ ಮಳಿಗೆಗಳನ್ನು ನಿರ್ಮಿಸಲು ಪಟ್ಟಣ ಪಂಚಾಯಿತಿಗೆ ಕೊಟ್ಟಿರುವ ಹಣವೆಷ್ಟು? ಸದರಿ ಕೆಲಸಕ್ಕೆ ಎಷ್ಟು ಹಣ ಖರ್ಚಾಗಿದೆ ಉಳಿದ ಹಣವೆಷ್ಟು? ಸದರಿ ಹಣ ಪಟ್ಟಣ ಪಂಚಾಯಿತಿಗೆ ಮರಳಿ ತುಂಬಿದೆಯೆ? ತುಂಬದಿದ್ದರೆ ಕಾರಣವೇನು? ಪಾವತಿಸಿದ ಹಣ 875 ಲಕ್ಷ ರೂಪಾಯಿಗಳು, ಖರ್ಚಾದ ಹಣ 660 ಲಕ್ಷ ರೂಪಾಯಿಗಳು, 211 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ ಅದರ ಸಲುವಾಗಿ ನರಗುಂದ ಪುರಸಭೆಯಿಂದ 3 4 ಲಕ್ಷ ರೂಪಾಯಿಗಳ ಬಾಕಿ ಬರಬೇಕಾಗಿದೆ, ಅದನ್ನು ಇದನ್ನು ಹೊಂದಾಣಿಕೆ ಮಾಡಿ ಅದನ್ನು ತುಂಬಲಿಕ್ಕೆ ಹೇಳುತ್ತೇವೆ ಎಂದು ಹೇಳಿ, ಕೊನೆಗೆ ಬಾಕಿ ಹಣ ಬಡ್ಡಿ ಸಮೇತ ಒಂದು ತಿಂಗಳಲ್ಲಿ ಮುಳಗುಂದ ಪಟ್ಟಣ ಪಂಚಾಯಿತಿಗೆ ಮರು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ತಪ್ಪಿದರೆ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿರುತ್ತಾರೆ ಒಂದು ತಿಂಗಳಲ್ಲಿ ತುಂಬುತ್ತೇವೆಂದು 2003ನೇ ಸಾಲಿನಲ್ಲಿ ಹೇಳಿದ್ದಾರೆ ಇವತ್ತು ಹೇಳುತ್ತಾರೆ, ಅದು ರದ್ದಾಗಿದೆ ಮುಂದೆ ಬಂದರೆ ಬಂತು, ಇಲ್ಲದಿದ್ದರೆ ಇಲ್ಲವೆನ್ನುವ ಲೆಕ್ಕದಲ್ಲಿ ಇದು ಇದೆ ಇದರ ಬಗ್ಗೆ ಮಾನ್ಯ ಸಚಿವರವನ್ನು ನಾನು ನೇರವಾಗಿ ಕೇಳುತ್ತೇನೆ, ಇರುವುದರಲ್ಲಿ ಸ್ವಲ್ಪ ಹಣ ಬಂದಿರುತ್ತದೆ, ಬಡ್ಡಿ ಸಮೇತ ಯಾವಾಗ ತುಂಬುತ್ತೀರಿ

ನಿರ್ದಿಷ್ಟವಾಗಿ ಹೇಳಿ ನೀವು ಯಾರಿಂದಾದರೂ ತುಂಬಿಸಿ, ನೀವು ನರಗುಂದ ಪಟ್ಟಣ ಪಂಚಾಯಿತಿಯಿಂದ ಬರಬೇಕಾಗಿದೆ ಎಂದು ಹೇಳಿರುತ್ತೀರಿ, ಬರಬೇಕಾದ 3 4 ಲಕ್ಷ ರೂಪಾಯಿಗಳು ವಸೂಲಾಯಿತೋ ಹೇಗೆ? ವಸೂಲಾಗದಿದ್ದರೆ ಅವರಿಗೆ ಬರುವ ಹಣದಲ್ಲಿ ಅಲ್ಲಿ ಮುರಿದು ಅವರಿಗೆ ಕೊಡುವಾಗ ಇಲ್ಲಿ ತುಂಬಿ ಬಿಡಬಹುದು ಅವರಿಗೆ ಬರುವುದು ಇಟ್ಟುಕೊಂಡು, ಇಲ್ಲಿ ಕೊಡುವುದು ಇಟ್ಟುಕೊಂಡು, ಆ ಹಣ ವಸೂಲಾಗಿದ್ದರೆ ತಕ್ಷಣ ಅದನ್ನು ತುಂಬಬೇಕಾಗಿತ್ತು ಅಲ್ಲಿ ವಸೂಲಾಯಿತೋ ಹೇಗೆ? ವಸೂಲಾಗದಿದ್ದರೆ ತಕ್ಷಣ ಇದನ್ನು ಯಾವಾಗ ತುಂಬುತ್ತೀರಿ? ನೀವು ನಿರ್ದಿಷ್ಟವಾದ ಅವಧಿಯನ್ನು ಹೇಳಬೇಕು ತುಂಬದಿದ್ದರೆ ಏನು ಕ್ರಮ ಕೈಗೊಳ್ಳುತ್ತೀರಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿರುತ್ತೀರಿ, ಯಾವ ಅಧಿಕಾರಿಗಳು? ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದನ್ನೂ ಕೂಡ ಹೇಳಬೇಕು

**ಶ್ರೀ ಎಸ್ ಆರ್ ಮೋರೆ** ಮಾನ್ಯ ಅಧ್ಯಕ್ಷರೆ, ಈ ಮುಳಗುಂದ ಟೌನ್ ಪಂಚಾಯಿತಿಗೆ 10ನೇ ಫೈನಾನ್ಸ್ ಕಮಿಷನ್ ಪ್ರಕಾರ ಸುಮಾರು 9 65 ಲಕ್ಷ ರೂಪಾಯಿಗಳನ್ನು ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಂಪನಿಗೆ ಅಲ್ಲಿ ಮಳಿಗೆಗಳನ್ನು ಕಟ್ಟಿಸಲಿಕ್ಕೆ ಕಂಟ್ರಾಕ್ಟನ್ನು ಕೊಡಲಾಗಿತ್ತು ಮುಳಗುಂದ ಟೌನ್ ಪಂಚಾಯಿತಿಯವರು ಕೊಟ್ಟಿದ್ದು ಮುಂದೆ ಅದರ ಕನ್‌ಸ್ಟ್ರಕ್ಷನ್ ಮುಗಿಸಿದರು ಆ ಕನ್‌ಸ್ಟ್ರಕ್ಷನ್‌ಗೆ ಕಾಸ್ಟ್ ಎಷ್ಟಾಯಿತೆಂದರೆ ಆ ಮಳಿಗೆಗೆ ಖರ್ಚಾಗಿರುವುದು 7 54 ಲಕ್ಷ ರೂಪಾಯಿಗಳು ಆದರೆ ಇವರು ಮುನಿಸಿಪಾಲಿಟಿಯ ಅಧಿಕಾರಿಗಳು ಅಲ್ಲಿ 9 65 ಲಕ್ಷ ರೂಪಾಯಿಗಳು ಹೆಚ್ಚಿಗೆ ಅಂದರೆ, ಸುಮಾರು 2 11 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಈಗಾಗಲೇ ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಂಪನಿ ದಿವಾಳಿ ಅಂಚಿನಲ್ಲಿದೆ ಅಂದರೆ, ಅದು ವಸೂಲಾತಿಯಾಗುವುದು ಬಹಳ ಕಷ್ಟವಾಗಿದೆ ಈಗಾಗಲೇ ನಾನು ಡಿಪಾರ್ಟ್‌ಮೆಂಟ್ ಆಫ್ ಡಿಸ್ ಇನ್‌ವೆಸ್ಟ್‌ಮೆಂಟ್ ಅವರಿಗೆ ರಿಕವರಿ ಮಾಡಲಿಕ್ಕೆ ಸರ್ಕಾರದಿಂದ ಪತ್ರವನ್ನು ಕಳುಹಿಸಿರುತ್ತೇವೆ ಇದಕ್ಕೆ ಚೀಫ್ ಆಫೀಸರ್ ತಪ್ಪು ಮಾಡಿದ್ದಾರೆ, ಹಿಂದೆ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿತ್ತು, ಇಷ್ಟು ಏಕೆ ತಡವಾಯಿತು ಎನ್ನುವುದರ ಬಗ್ಗೆ ನಾನು ವಿಚಾರ ಮಾಡುತ್ತೇನೆ ಆದಷ್ಟು ಕೂಡಲೇ ಕ್ರಮವನ್ನು ತೆಗೆದುಕೊಂಡು ಡಿಸ್ ಇನ್‌ವೆಸ್ಟ್ ಮೆಂಟ್ ಡಿಪಾರ್ಟ್‌ಮೆಂಟ್‌ನಿಂದ ನಮಗೆ ಎಷ್ಟು ಹಣ ಬರುತ್ತದೆ ಆ ಕನ್‌ಸ್ಟ್ರಕ್ಷನ್ ಕಂಪನಿಯಿಂದ, ಅದರ ಬಗ್ಗೆ ಸರ್ಕಾರದಿಂದ ಪ್ರತಿಯೊಂದು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ ನಾನು ಭರವಸೆ ಕೊಡುತ್ತೇನೆ

**ಶ್ರೀ ಎಸ್ ಎಸ್ ಪಾಟೀಲ್** ಮಾನ್ಯ ಅಧ್ಯಕ್ಷರೆ, ತಾವು ಆ ಕನ್‌ಸ್ಟ್ರಕ್ಷನ್ ಕಾರ್ಪೊರೇಶನ್ ಮುಚ್ಚಿದ್ದೇವೆಂದು ಹೇಳಿದಿರಿ, ಮತ್ತೆ ನಮ್ಮ ಸಿಂಗಟಾಲೂರು ಕೆಲಸವನ್ನು ಬಹುತೇಕ ಅದಕ್ಕೆ ಕೊಟ್ಟಂತೆ ಕಾಣುತ್ತದೆ ಒಂದು ಕಡೆ ಮುಚ್ಚಿದ್ದೇವೆಂದು ಹೇಳುತ್ತಾರೆ, ಮತ್ತೆ ಅದಕ್ಕೆ ಕೆಲಸವನ್ನು ಕೊಟ್ಟಿರುತ್ತೀರಿ ಅಂದರೆ ಅದು ಮುಚ್ಚಿಲ್ಲವೆಂದು ಅರ್ಥ ಆ ಕಾರಣದಿಂದ ನಾನು ನಿಮಗೆ ಹೇಳುವುದು, ಮುಳಗುಂದ ಪಟ್ಟಣ ಪಂಚಾಯಿತಿಯಿಂದ 3 ಲಕ್ಷ ರೂಪಾಯಿಗಳ ಬಾಕಿ ಬರಬೇಕೆಂದು ಹೇಳಿದ್ದೀರಲ್ಲಾ ನರಗುಂದ ಪುರಸಭೆಯಿಂದ ಆ ಹಣ ಬಂತೋ ಹೇಗೆ ಹೇಳಿ

**ಶ್ರೀ ಸಿ ಸಿ ಪಾಟೀಲ್** ಮಾನ್ಯ ಎಸ್ ಎಸ್ ಪಾಟೀಲ್‌ರೆ ಏಕೆ ನೀವು ನಮ್ಮ ಪಟ್ಟಣ ಪಂಚಾಯಿತಿಯಿಂದ ಹಣವನ್ನು ವಸೂಲು ಮಾಡುತ್ತೀರಿ? ಆಗ ಮಾನ್ಯ ಪಾಟೀಲ್‌ರು ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಉತ್ತರ ಸರಿಯಾಗಿ ಬಂದಿತ್ತು ಆಡಳಿತ ಪಕ್ಷಕ್ಕೆ ಹೋಗಿರುವುದರಿಂದ ಉತ್ತರ ತಪ್ಪು ಬರುತ್ತಿದೆ ಸರ್

**ಶ್ರೀ ಎಸ್ ಎಸ್ ಪಾಟೀಲ್** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿರುವುದರಿಂದ ಆ ಪಟ್ಟಣ ಪಂಚಾಯಿತಿಯಿಂದ ಹಣ ಬರುವುದು ಇದೆ, ಅಲ್ಲಿಂದ ತೆಗೆದುಕೊಂಡು ಬಂದು ನಿಮಗೆ ತುಂಬುತ್ತೇವೆಂದು ಹೇಳಿದ್ದರು ಅದನ್ನೂ ವಸೂಲಿ ಮಾಡಿಕೊಂಡು ಇಲ್ಲಿ ತುಂಬದಿದ್ದರೆ?

**ಶ್ರೀ ಎಸ್ ಆರ್ ಮೋರೆ** ಮಾನ್ಯ ಅಧ್ಯಕ್ಷರೆ, 2 11 ಲಕ್ಷ ರೂಪಾಯಿಗಳ ಬಾಕಿ ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿ ಮೇಲೆ ಉಳಿದಿದೆ ಇದನ್ನು ವಸೂಲಿ ಮಾಡಲಿಕ್ಕೆ ನಾವು ಈಗಾಗಲೇ ಕ್ರಮವನ್ನು ಕೈಗೊಂಡಿರುತ್ತೇವೆ

**ಶ್ರೀ ಎಸ್ ಎಸ್ ಪಾಟೀಲ್** ನೀವು ವಸೂಲಿ ಮಾಡಿ ಅವರಿಂದಾದರೂ ತುಂಬಿ ಅಥವಾ ಯಾರಿಂದಾದರೂ ತುಂಬಿ ಒಟ್ಟಿನಲ್ಲಿ ರೊಕ್ಕವನ್ನು ತುಂಬಿ ನಾವೇನೂ ಅವರಿಂದಲೇ ವಸೂಲಿ ಮಾಡಿ ಎಂದು ಹೇಳುವುದಿಲ್ಲ

**ಶ್ರೀ ಎಸ್ ಆರ್ ಮೋರೆ** ಮಾನ್ಯ ಅಧ್ಯಕ್ಷರೆ, ಅದು ಸರ್ಕಾರಿ ಕಂಪನಿಯಾದರೂ ಕೂಡ ಇವತ್ತು ಅದು ದಿವಾಳಿ ಅಂಚಿನಲ್ಲಿದೆ

**ಶ್ರೀ ಎಸ್ ಎಸ್ ಪಾಟೀಲ್** ಅದರ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ ಇಲ್ಲದಿದ್ದರೆ ಆ ಪಟ್ಟಣ ಪಂಚಾಯಿತಿ ಏನು ಮಾಡಬೇಕು?

**ಶ್ರೀ ಎಸ್ ಆರ್ ಮೋರೆ** ಅಲ್ಲಿರುವ ಮುಳಗುಂದ ಮುನಿಸಿಪಾಲಿಟಿಯ ಚೀಫ್ ಆಫೀಸರ್ ತಪ್ಪು ಮಾಡಿದ್ದಾರೆ

**ಶ್ರೀ ಎಸ್ ಎಸ್ ಪಾಟೀಲ್** ಅವರ ತಪ್ಪು ಇಲ್ಲ, ಸರ್ಕಾರದವರು ಮೊದಲೇ ತುಂಬಿಸಿ ಕೊಂಡಿದ್ದಾರೆ ಇದರ ಪರಿಸ್ಥಿತಿ ಹಿಂದಿನಿಂದ ಹೇಳಿ ಬಿಡುತ್ತೇನೆ, ಅಲ್ಲಿ ಎಲ್ಲಾ ರೊಕ್ಕವನ್ನು ಕಟ್ಟಿಸಿಬಿಡುತ್ತೇನೆ

**ಶ್ರೀ ಎಸ್ ಆರ್ ಮೋರೆ** ಎಸ್ಟಿಮೇಟ್ ಮಾಡಿದ್ದಷ್ಟನ್ನು ಮಾತ್ರ ತುಂಬಬೇಕಾಗಿತ್ತು ಅಲ್ಲವೇ?

**ಶ್ರೀ ಎಸ್ ಎಸ್ ಪಾಟೀಲ್** ಎಸ್ಟಿಮೇಟ್ ಹೆಚ್ಚು ಮಾಡಿ ಅಲ್ಲಿ ಕೆಲಸವನ್ನು ಮಾಡಿಲ್ಲ ಕೆಲಸವನ್ನು ಅರ್ಧ ಮಾಡಿದ್ದಾರೆ ಪೂರ್ಣವಾದ ಕೆಲಸವನ್ನು ಅವರು ಮಾಡಿರುವುದಿಲ್ಲ

**ಶ್ರೀ ಎಸ್ ಆರ್ ಮೋರೆ** ಮಾನ್ಯ ಅಧ್ಯಕ್ಷರೆ, ನಾವು ಚೀಫ್ ಆಫೀಸರ್ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆ

**ಅಧ್ಯಕ್ಷರು** ಮಾನ್ಯ ಎಸ್ ಎಸ್ ಪಾಟೀಲರು, ಪ್ರಶ್ನೆಯನ್ನು ಎತ್ತಿದ್ದಾರೆ, ಅದಕ್ಕೆ ಏನಾದರೂ ಉತ್ತರವಿದ್ದರೆ ಹೇಳಿ ಇಲ್ಲದಿದ್ದರೆ ಇದರ ಬಗ್ಗೆ ಸಮಗ್ರವಾದ ಒಂದು ಉತ್ತರವನ್ನು ತರಿಸಿಕೊಂಡು ಅವರಿಗೆ ಕೊಡಿ

**ಶ್ರೀ ಎಸ್ ಆರ್ ಮೋರೆ** ಮಾನ್ಯ ಅಧ್ಯಕ್ಷರೆ, ನರಗುಂದ ಬಗ್ಗೆ ಅವರಿಗೆ ಸಮಗ್ರವಾದ ಉತ್ತರ ಬೇಕಾದರೆ, ಎಷ್ಟು ಹಣ ಇನ್ನು ವಸೂಲಿಯಾಗಬೇಕು ಎನ್ನುವುದರ ಬಗ್ಗೆ ಉತ್ತರವನ್ನು ನಾನು ವಿವರವಾಗಿ ಕೊಡುತ್ತೇನೆ

**ಶ್ರೀ ಎಸ್ ಎಸ್ ಪಾಟೀಲ್** ನೀವು ಯಾವ ದುಡ್ಡನ್ನು ತುಂಬುತ್ತೀರಿ ಹೇಳಿಬಿಡಿ

**ಶ್ರೀ ಎಸ್ ಆರ್ ಮೋರೆ** ಮಾನ್ಯ ಅಧ್ಯಕ್ಷರೆ, ನಾವು ಆ ಕಂಪನಿಯಿಂದ ವಸೂಲಿ ಮಾಡಬೇಕು, ನಮ್ಮ ಸರ್ಕಾರದಿಂದ ಹೇಗೆ ದುಡ್ಡನ್ನು ತುಂಬುವುದಕ್ಕೆ ಬರುತ್ತದೆ? ಆ ಕಂಪನಿಯಿಂದ ವಸೂಲಿ ಮಾಡತಕ್ಕದ್ದು, ಅದರ ಜವಾಬ್ದಾರಿ ಅಲ್ಲಿಂಯ ಚೀಫ್ ಆಫೀಸರ್‌ದ್ದು ಮತ್ತು ಆ ಮುಳಗುಂದ ಮುನಿಸಿಪಾಲಿಟಿಯದ್ದಾಗಿರುತ್ತದೆ ಈಗಾಗಲೇ ಅವರಿಗೆ ಸರ್ಕಾರ ಆದೇಶವನ್ನು ಕಳುಹಿಸಿದೆ ಕೂಡಲೇ ಅದರ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತೇವೆ

**ಮೈಸೂರು ಕಾಗದ ಕಾರ್ಖಾನೆಯ ನೌಕರರ ವೇತನ ಬಿಡುಗಡೆ**

126(592) ಶ್ರೀ ಬಿ ಎಸ್ ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿರುವ ಸರ್ಕಾರಿ ಸ್ವಾಮ್ಯದ ಮೈಸೂರು ಕಾಗದ ಕಾರ್ಖಾನೆಯ ನೌಕರರ ವೇತನ ಒಪ್ಪಂದವಾಗಿ ಒಂದು ವರ್ಷ ಕಳೆದರೂ ಜಾರಿಯಾಗದಿರಲು ಕಾರಣವೇನು,

ಆ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು,

ಇ) ಎಂ ಪಿ ಎಂ ನ ಅರಣ್ಯ ಇಲಾಖೆಯ ನೌಕರರನ್ನು ಖಾಯಂಗೊಳಿಸಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ (ವಿವರ ನೀಡುವುದು)?

ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಎಂ ಪಿ ಎಂ ನಿಗಮವು ಆರ್ಥಿಕ ವರ್ಷ 2002ರಿಂದಲೂ ನಿರಂತರವಾಗಿ ನಷ್ಟವನ್ನು ಅನುಭವಿಸುತ್ತಿದ್ದು, ಕಂಪನಿಯ ಸಂಗ್ರಹಿತ ನಷ್ಟಗಳು ಸುಮಾರು ರೂ 65-00 ಕೋಟಿಗಳಷ್ಟಿದೆ ಕಂಪನಿಯ ಹಿತರಕ್ಷಣೆಗಾಗಿ ಮುಂದಾದ ಸರ್ಕಾರವು ರೂ 35 00 ಕೋಟಿಗಳವರೆಗಿನ ವಿವಿಧ ರೂಪದ ರಿಯಾಯಿತಿಗಳನ್ನು ನೀಡುತ್ತಾ ಬಂದಿರುವ ಮೂಲಕ 2004ರ ಮಾರ್ಚ್ ಅಂತ್ಯದವರೆಗೆ ಕಂಪನಿಯನ್ನು ಬಿ ಐ ಎಫ್ ಆರ್ ನ ವ್ಯಾಪ್ತಿಗೆ ಒಳಪಡಿಸಲಾಗುವುದರಿಂದ ಪಾರು ಮಾಡಿರುತ್ತದೆ ನ್ಯೂಸ್ ಪ್ರಿಂಟಿಂಗ್ ಮಾರುಕಟ್ಟೆ ಸುಧಾರಿಸದ ಹೊರತು ವೇತನ ಪರಿಷ್ಕರಣೆಯನ್ನು ಜಾರಿಗೆ ತರುವುದು ತುಂಬಾ ಕಷ್ಟವಾಗುತ್ತದೆ ಹಾಗಾಗಿ ಕಂಪನಿ ಹಾಗೂ ಸಂಬಂಧಪಟ್ಟ ಕಾರ್ಮಿಕ ಸಂಘಗಳ ನಡುವಿನ ಪ್ರಸ್ತಾವಿತ ವೇತನ ಪರಿಷ್ಕರಣೆಯನ್ನು ಪುನರ್ ಪರಿಶೀಲನೆಗೆ ಒಳಪಡಿಸುವುದು ಅನಿವಾರ್ಯವಾಗಿದೆ ಆದ್ದರಿಂದ ಈ ವಿಷಯವನ್ನು ಕೂಲಂಕುಷವಾಗಿ ಪುನರ್ ಪರಿಶೀಲಿಸಲಾಗುತ್ತಿದೆ

ಆ) ಈ ನಿಟ್ಟಿನಲ್ಲಿ ಸರ್ಕಾರವು ಕಂಪನಿಯ ಕಾರ್ಯಾಚರಣೆಯನ್ನು ಶಕ್ತಿಯುತವಾಗಿ ನಿರ್ವಹಿಸಲು ಪರಿಶೀಲಿಸುತ್ತಿದೆ

ಇ) 1998ರಲ್ಲಿ ಅರಣ್ಯ ಕ್ಷೇತ್ರ ಕಾರ್ಮಿಕರನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಗಳು
11-44 ತಮ್ಮ ಒಂದು ಸಾಲಿನ ಬೇಡಿಕೆಯನ್ನು ಮಂಡಿಸಿ, ತಮ್ಮ ಸೇವೆಯನ್ನು ಸಕ್ರಮಗೊಳಿಸುವಂತೆ ಒತ್ತಾಯ ಮಾಡಿದ್ದವು ಆಗ ಕಂಪನಿಯು ಹಣಕಾಸಿನ

ಮುಗ್ಗಟ್ಟಿನ ಸ್ಥಿತಿಯನ್ನು ಅನುಭವಿಸುತ್ತಿದ್ದರಿಂದ, ಅವರ ಬೇಡಿಕೆಯನ್ನು ಪರಿಗಣಿಸಲಾಗಲಿಲ್ಲ ಆದ್ದರಿಂದ ಕಾರ್ಮಿಕ ಸಂಘಗಳು, ಅವರ ಸೇವೆಗಳನ್ನು ಸಕ್ರಮಗೊಳಿಸುವ ಬೇಡಿಕೆ ಮಂಡಿಸಿ ಕಾರ್ಮಿಕ ಇಲಾಖೆಯಲ್ಲಿ ಔದ್ಯಮಿಕ ವಿವಾದವನ್ನು ಹೂಡಿದವು ಸರಕಾರವು ತನ್ನ ದಿನಾಂಕ 17-10-2002ರ ಪತ್ರ ಸಂ ಎಲ್‌ಡಿ/1092/ಐಡಿಎ/2002ರ ಮುಖೇನ ಈ ವಿವಾದವನ್ನು ಮೈಸೂರಿನ ಕೈಗಾರಿಕಾ ಟ್ರಿಬ್ಯುನಲ್‌ಗೆ ಒಪ್ಪಿಸಿದೆ ಅರಣ್ಯ ಕ್ಷೇತ್ರ ಕಾರ್ಮಿಕರ ಸೇವೆಯನ್ನು ಸಕ್ರಮಗೊಳಿಸುವ ವಿಷಯವು ಈಗ ನ್ಯಾಯಾಲಯದಲ್ಲಿ ಇತ್ಯರ್ಥವಾಗಬೇಕಿದೆ ಆದುದರಿಂದ ಈ ವಿಷಯ ನ್ಯಾಯಾಲಯದ ಅಧೀನವಾಗಿರುತ್ತದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಗೊತ್ತಿದೆ ಎಂಪಿಎಂ ಒಂದು ಪ್ರತಿಷ್ಠಿತ ಸಂಸ್ಥೆ, ತಾವು ಹೇಳಿದಿರಿ 65 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು, ತಮಗೆ ಏನಾದರೂ ಬಿಡುವು ಮಾಡಿಕೊಳ್ಳುವುದಕ್ಕೆ ಸಾಧ್ಯವಾದರೆ, ಬಂದು ನಮ್ಮ ಎಂಪಿಎಂನಲ್ಲಿ ಕುಳಿತುಕೊಂಡರೆ ಎಲ್ಲಾ ಗೊತ್ತಾಗುತ್ತದೆ ಅಲ್ಲಿ ಕೆಲವೊಂದು ತಿಮಿಂಗಿಲಗಳು ಇವೆ ಇದಕ್ಕೆಲ್ಲಾ ನೌಕರರು ಕಾರಣವಲ್ಲ ಆ ತಿಮಿಂಗಿಲಗಳನ್ನು ಬಿಗಿ ಮಾಡಿದರೆ ಈ ಇಂಡಸ್ಟ್ರಿಯನ್ನು ಲಾಭದಾಯಕವಾಗಿ ಮಾಡಬಹುದು ಈಗಾಗಲೇ ನೀವು 30 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ 35 ಕೋಟಿ ರೂಪಾಯಿಗಳನ್ನು ಕೊಡುವುದರಿಂದ ಅದೇನೂ ಉದ್ಧಾರವಾಗುವುದಿಲ್ಲ ಲಾಸ್ ಆಗಿರುವುದರ ಕಡೆ ಸರಿ ಮಾಡುವುದಕ್ಕೆ ತಾವು ಗಮನವನ್ನು ಕೊಡುತ್ತೀರಿ ಎನ್ನುವ ವಿಶ್ವಾಸ ನನಗಿದೆ, ನಿಮ್ಮ ಕಾಲದಲ್ಲಿ ಅದನ್ನು ಲಾಭದಾಯಕವಾಗಿ ಮಾಡಬೇಕು ನಿಮಗೆ ನಮ್ಮಿಂದ ಏನು ಸಹಕಾರ ಬೇಕು ಅದನ್ನು ಕೊಡುತ್ತೇವೆ ಅಲ್ಲಿರುವ ನೌಕರರ ಜೊತೆಯಲ್ಲಿ 200 ಇಸವಿಯಲ್ಲಿ ಒಂದು ಒಪ್ಪಂದವಾಗಿದೆ ಅದನ್ನು ಕೊಡಬೇಕಾದದ್ದು ನಮ್ಮ ಧರ್ಮ, ಹೆಚ್ಚು ಕೆಲಸವನ್ನು ನಾವು ಅವರಿಂದ ತೆಗೆದುಕೊಳ್ಳೋಣ ಇದನ್ನು ಕೊಡುವುದರಿಂದ ನಿಮಗೆ ಎಷ್ಟು ಮೈಮೇಲೆ ಬರುತ್ತದೆ, ನೀವು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿದ್ದೀರಿ, ಅಲ್ಲಿರುವ ನೌಕರರು ಸಂತೃಪ್ತಿಯಿಂದ ಕೆಲಸ ಮಾಡಿದರೆ ಅದು ಲಾಭದಾಯಕವಾಗಿ ನಡೆಯುತ್ತದೆ ಆ ದೃಷ್ಟಿಯಿಂದ ತಾವು ಏನಾದರೂ ಯೋಚನೆಯನ್ನು ಮಾಡಬಹುದಾ? ಇವು ಎರಡಕ್ಕೂ ತಾವು ಸ್ಪಷ್ಟವಾದ ಉತ್ತರವನ್ನು ಕೊಟ್ಟರೆ, ಇನ್ನೊಂದು ಉಪ ಪ್ರಶ್ನೆ ಇದೆ, ನಾನು ಅದನ್ನು ಆಮೇಲೆ ಕೇಳುತ್ತೇನೆ

**ಶ್ರೀ ಪಿ ಜಿ ಆರ್ ಸಿಂಧ್ಯಾ** ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂಥ ವಿಚಾರದಲ್ಲಿ ತಿಮಿಂಗಿಲಗಳನ್ನು ಹಿಡಿಯತಕ್ಕಂಥದ್ದರಲ್ಲಿ ತಮ್ಮ ಸಹಕಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ, ಅವರು ಕೊಡತಕ್ಕಂಥ ಸಲಹೆಗಳನ್ನು, ನಮ್ಮ ಎಂಪಿಎಂನ ಆಡಳಿತ ಮಂಡಳಿಯವರು ಅದನ್ನು ತೆಗೆದುಕೊಂಡು ಕಾರ್ಯಗತಗೊಳಿಸಲಿಕ್ಕೆ ಕ್ರಮ ತೆಗೆದುಕೊಳ್ಳುವುದರಲ್ಲಿ ನಾನು

ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ ನೌಕರರ ಬಗ್ಗೆ ನಿಮಗೆ ಗೊತ್ತಿರುವಂತೆ ಅಗ್ರಿಮೆಂಟ್ ಎಕ್ಸ್‌ಪೈರ್ ಆಗಿರುವುದು ದಿನಾಂಕ 28-2-02ಕ್ಕೆ ಇದು 2002 ರಿಂದ 2004ರವರೆಗೆ ಅಂದರೆ ಸುಮಾರು ಎರಡೂವರೆ ವರ್ಷವಾಗಿದೆ ಅಡ್ವಾನ್ಸ್ ಆಗ್ರಿಮೆಂಟ್ ಆಗಿದೆ ಎಂದು ಸ್ವಲ್ಪ ಹಣವನ್ನು ಕೊಟ್ಟಿದ್ದಾರೆ ಎಂಒಯೂ ಸಹಿ ಮಾಡಿದ್ದಾರೆಯೇ ಹೊರತು ನಮ್ಮಲ್ಲಿ ಸೆಟ್ಲ್‌ಮೆಂಟ್‌ಗೆ ಸಹಿ ಆಗಿಲ್ಲ, ಅಂದರೆ ಅದಕ್ಕೆ ಸರ್ಕಾರ ಇನ್ನು ಮಂಜೂರಾತಿಯನ್ನು ಕೊಟ್ಟಿಲ್ಲ ಅಲ್ಲಿರುವಂಥ ಎಂಡಿಯವರು ಅಲ್ಲಿರುವಂಥ ಅಡ್ವಾನ್ಸ್ ಕೊಟ್ಟು ಇದನ್ನು ಮಾಡಿದ್ದಾರೆ, ಎಷ್ಟು ಬರ್ಡನ್ ಆಗುತ್ತದೆಂದು ತಾವು ಪ್ರಶ್ನೆಯನ್ನು ಕೇಳಿದ್ದೀರಿ ಎಂಪಿಎಂ ಅನ್ಯುಯಲ್ ವೇಜ್ ಬಿಲ್ ಸುಮಾರು 65 ಕೋಟಿ ರೂಪಾಯಿಗಳು ಬರುತ್ತದೆ ಪ್ರತಿ ವರ್ಷ ಕಾರ್ಮಿಕರಿಗೆ ಸಂಬಳ, ಅಧಿಕಾರಿಗಳಿಗೆ, ದಿನಗೂಲಿ ನೌಕರರಿಗೆ ಸೇರಿ 65 ಕೋಟಿ ರೂಪಾಯಿಗಳು ಬರುತ್ತದೆ ಅವರು ಹೇಳಿರುವ ಪ್ರಕಾರವಾಗಿ ಈ ಎಂಒಯು ಏನಾಗಿದೆ, ಮೊಮರಾಂಡಮ್ ಆಫ್ ಅಂಡರ್ ಸ್ಟಾಂಡಿಂಗ್ ಪ್ರಕಾರ ಒಂದು ವರ್ಷಕ್ಕೆ 11 ಕೋಟಿ ರೂಪಾಯಿಗಳು ನಮ್ಮ ಎಂಪಿಎಂ ಮೇಲೆ ಬರ್ಡನ್ ಅಡಿಷನಲ್ಲಾಗಿ ಆಗುತ್ತದೆ ಒಂದು ಇಂಡಸ್ಟ್ರೀ ಫೇರ್ ಆಗಿ ನಡೆಯಬೇಕಾದರೆ ಸಾಮಾನ್ಯವಾಗಿ ಅವರ ವಹಿವಾಟಿನ 20 ಪರ್ಸೆಂಟ್ ಖರ್ಚುಗಳು ಒಂದು ಪರ್ಸೆಂಟ್ ಇರಬೇಕು ಅಂದರೆ 8-10 ಪರ್ಸೆಂಟ್ ಇಂಡಸ್ಟ್ರಿ ಸ್ಟಾಂಡರ್ಡ್ ಅಂದರೆ ಅವರ ವೇಜ್ ಬಿಲ್, ಈ ತರಹದ 11 ಕೋಟಿ ರೂ ಕೊಟ್ಟರೆ 27 ಪರ್ಸೆಂಟಾಗುತ್ತದೆ ಈ 27 ಪರ್ಸೆಂಟ್ ಕೊಟ್ಟರೆ ಹೇಗಾಗುತ್ತದೆ? ಮಾನ್ಯ ಸದಸ್ಯರಾದ ಸಂಗಮೇಶ್ವರ್ ರವರು ಬರಲಿಲ್ಲ, ಅವರು ಮತ್ತು ಕಾರ್ಮಿಕ ಮುಖಂಡರು ಎಲ್ಲರೂ ಬಂದು ನನ್ನ ಹತ್ತಿರ ಮಾತನಾಡಿದ್ದಾರೆ ಇದರ ಬಗ್ಗೆ ತಾವೂ ಕೂಡ ನನ್ನ ಜೊತೆ ಮಾತನಾಡಿದ್ದೀರಿ ಇದರ ಬಗ್ಗೆ ಮಾನ್ಯ ಸದಸ್ಯರಾದ ಸಂಗಮೇಶ್ವರ್‌ರವರು ಅನೇಕ ಸಾರಿ ಒತ್ತಾಯವನ್ನು ಮಾಡಿದ್ದಾರೆ, ಶ್ರೀಮಾನ್ ಬಸವಣ್ಣನವರ ಜೊತೆಯಲ್ಲಿಯೂ ಕೂಡ ನಾನು ಚರ್ಚೆ ಮಾಡಿದ್ದೇನೆ, ಇದರ ಬಗ್ಗೆ ನಾನು ಎಂಪಿಎಂ ಬಗ್ಗೆ ಯೋಚನೆ ಮಾಡಿರುವುದು we have to take a decision ನನ್ನದು ಏನಿದೆ ಎಂದರೆ, ಒಂದು ನಿಮಿಷದಲ್ಲಿ ನಾನು ಮಾತನಾಡಿ ಮುಗಿಸುತ್ತೇನೆ ಶಿವಮೊಗ್ಗ ಜಿಲ್ಲೆಗೆ ಎಂಪಿಎಂ ಕಾಗದದ ಕಾರ್ಖಾನೆಗಿಂತ ಹೆಚ್ಚಾಗಿ ಕಾಗದ ತಯಾರು ಮಾಡತಕ್ಕಂಥದ್ದು ಅಲ್ಲಿರತಕ್ಕಂತಹ ನೌಕರರು ಮತ್ತು ಅವರ ಸಮಸ್ಯೆ ಅದರಲ್ಲಿ ಎರಡೂವರೆ ಸಾವಿರ ನೌಕರರು ಖಾಯಂ, 400 ಜನ ಆಫೀಸರ್ಸ್ ಫಾರೆಸ್ಟ್‌ನ ವಾಚರ್ಸ್, ಒಂದು ಒಂದೂವರೆ ಸಾವಿರ ಎಂಪ್ಲಾಯೀಸ್ ಭವಿಷ್ಯ ಬಹಳ ಮುಖ್ಯವಾದುದು, ಇದು ಒಂದು ಭಾಗ ಅಲ್ಲಿ ಎಂಪಿಎಂನಲ್ಲಿ ಇರತಕ್ಕಂತಹ ಸಕ್ಕರೆ ಕಾರ್ಖಾನೆ ಏನಿದೆ, ಅದು ಸುಮಾರು 100 ಕೋಟಿ ರೂಪಾಯಿಗಳ ಕಬ್ಬನ್ನು ಅರಯುತ್ತಿದೆ, ಎಂಟೈರ್ ಶಿವಮೊಗ್ಗದ ಎಕಾನಮಿ ಡಿಪೆಂಡ್ ಆಗಿರುವುದು

ಈ ಒಂದು ಸಕ್ಕರೆ ಕಾರ್ಖಾನೆಯ ಮೇಲೆ ಈಗ ನಿಮ್ಮ ಜಿಲ್ಲೆಯಲ್ಲಿ ಬೇರೆ ಯಾವ ಷುಗರ್ಸ್ ಫ್ಯಾಕ್ಟರಿ ಇಲ್ಲ ಹತ್ತಿರದಲ್ಲಿ ಯಾವುದೂ ಸಹಿತ ಇಲ್ಲ, ಇದೊಂದು ಇರುವುದು ಇದನ್ನು ಏನಾದರೂ ಮಾಡಿ ಬದುಕಿಸಬೇಕು ಎಂಬ ಇಚ್ಛೆಯನ್ನು ನಾನು ಇಟ್ಟುಕೊಂಡಿದ್ದೇನೆ ಇದನ್ನು ಮುಚ್ಚಿಸಬೇಕೆಂಬ ಉದ್ದೇಶ ಖಂಡಿತವಾಗಿಯೂ ಸರ್ಕಾರಕ್ಕೆ ಇಲ್ಲ ಇದನ್ನು ಬದುಕಿಸಬೇಕಾದರೆ ಎರಡು ಕ್ರಮಗಳಿವೆ, ಮೊದಲನೆಯದು ಸುಮಾರು 400 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ ಇದು 15–20 ವರ್ಷ ನಡೆಯುವ ಹಾಗೆ ಮಾಡುವುದು ಒಂದು ಭಾಗ, ಸಾಲವನ್ನು ತೆಗೆದುಕೊಂಡು ಬರಬೇಕಾಗುತ್ತದೆ, ಸರ್ಕಾರ ಗ್ಯಾರಂಟಿಯನ್ನು ಕೊಡಬೇಕಾಗುತ್ತದೆ, 300 ರಿಂದ 350 ಕೋಟಿ ರೂಪಾಯಿಗಳು ಇದಕ್ಕಾಗಿ ಖರ್ಚು ಮಾಡಬೇಕಾಗುತ್ತದೆ ಇದು ಒಂದು ಭಾಗವಾಗುತ್ತದೆ ಇನ್ನು ಎರಡನೆಯದು ಪ್ರೈವೈಟೈಸೇಷನ್ ಮಾಡತಕ್ಕದ್ದು, ಇದು ಎರಡನೆಯ ಭಾಗವಾಗಿದೆ ಇದರ ಬಗ್ಗೆ ಸರ್ಕಾರ ಒಂದು ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ ಕಳೆದ ಎರಡೂವರೆ ವರ್ಷಗಳಿಂದ ತೆಗೆದುಕೊಳ್ಳದೇ ಇರತಕ್ಕ ಒಂದು ನಿರ್ಧಾರ ಇದು

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ ಶಿವಮೊಗ್ಗ ಜಿಲ್ಲೆಯಲ್ಲಿದ್ದಂತಹ ಆ ಒಂದು ಷುಗರ್ ಫ್ಯಾಕ್ಟರಿಗೆ ಬೀಗ ಹಾಕಿರುವುದು ತಮಗೆ ಗೊತ್ತಿದೆ ಇವತ್ತಿನ ದಿವಸ ಲಕ್ಷಾಂತರ ಟನ್ ಕಬ್ಬು ಅರೆಯುವುದಕ್ಕೆ ವ್ಯವಸ್ಥೆ ಇಲ್ಲ ಭತ್ತ ಇವತ್ತು ಲಾಭದಾಯಕವಲ್ಲದಿದ್ದರೂ ಕೂಡ ಅದನ್ನೇ ಅವಲಂಭಿಸಿರುವಂತಹ ಪರಿಸ್ಥಿತಿ ಬಂದಿದೆ ಇದನ್ನು ಹೇಗಾದರೂ ಮಾಡಿ ಸರ್ಕಾರ ಇನ್ನೊಂದು ಕಾರ್ಖಾನೆಯನ್ನು ತೆಗೆದರೆ ಅದು ಉದ್ಧಾರವಾಗುವುದಿಲ್ಲ ಎಂಪಿಎಂನಲ್ಲಿರುವಂತಹ ಷುಗರ್ ಫ್ಯಾಕ್ಟರಿಯನ್ನು ಇಂಪ್ರೂವ್ ಮಾಡಿದರೆ, ಅಲ್ಲಿ ಪವರ್ ಜನರೇಷನ್ ಇರುವುದರಿಂದ ಎಲ್ಲಾ ಲುಕ್ಸಾನ್‌ನ್ನು ಭರಿಸಬಹುದೆಂದು ನನಗೆ ಅನ್ನಿಸುತ್ತದೆ ಇದರ ಕಡೆ ದಯಮಾಡಿ ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕು ತಾವು ಬಂದರೆ ಅನೇಕ ವಿಷಯಗಳನ್ನು ಅಲ್ಲಿರುವ ಸಮಸ್ಯೆಗಳನ್ನು ಬಗೆ ಹರಿಸಬಹುದು ಬಹಳ ಮುಖ್ಯವಾದುದು ಏನೆಂದರೆ, ಅಲ್ಲಿ ನೌಕರರ ಜೊತೆ ಕುಳಿತುಕೊಂಡು ಚರ್ಚೆ ಮಾಡಿ ಏನು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬಹುದೋ ಅದನ್ನು ಮಾಡಬಹುದು ಅಲ್ಲಿ 519 ಜನ ಅರಣ್ಯ ಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಕಾರ್ಮಿಕರಿದ್ದಾರೆ ನಿಮಗೆ ಗೊತ್ತಿರುವ ಹಾಗೆ ಅಲ್ಲಿ ಅರಣ್ಯ ನೆಡುತೋಪುಗಳನ್ನು ಮಾಡುವಂತಹ ಸಂದರ್ಭದಲ್ಲಿ 33,496 ಹೆಕ್ಟೇರ್ ಈ ಕಾಡನ್ನು ಹಗಲು ರಾತ್ರಿ ಅದನ್ನು ಕಾದು ಸುಧಾರಿಸುವಂತಹ ನೌಕರರಾಗಿದ್ದಾರೆ ಅಲ್ಲಿ 484 ಜನ ಕಾವಲುಗಾರರು ಇದ್ದಾರೆ, ಪದವೀಧರ ಸಹಾಯಕರು 26 ಜನ, ರೋಜರ್ ಆಪರೇಟರ್ 590 ಜನರು ಇದ್ದಾರೆ ಅವರು ಇದುವರೆವಿಗೂ ಹಂಗಾಮಿಯಾಗಿ ಹಗಲುರಾತ್ರಿ ಕೆಲಸ ಮಾಡುತ್ತಿದ್ದಾರೆ ಅದು ಏನಾಗಿದೆ ಗೊತ್ತಿಲ್ಲ, ಅವರಿಗೆ ವೇತನವನ್ನು ಕೊಡುತ್ತಿಲ್ಲ, ಅವರನ್ನು ಖಾಯಂ ಮಾಡುತ್ತಿಲ್ಲ ದಯಮಾಡಿ ಇದರ ಬಗ್ಗೆ ಮಾನವೀಯತೆ ದೃಷ್ಟಿಯಿಂದ ಪರಿಶೀಲಿಸಬೇಕು ಅವರು 18–20 ವರ್ಷದಿಂದ ಕೆಲಸ ಮಾಡುತ್ತಿದ್ದಾರೆ, ಅವರು

ರಿಟೈರ್ಡ್ ಆಗುವ ಸ್ಟೇಜ್‌ಗೆ ಬರುತ್ತಿದ್ದಾರೆ, ಅವರು ಸರ್ವನಾಶವಾಗುತ್ತಿದ್ದಾರೆ ದಯಮಾಡಿ ಅವರನ್ನು ಪರಮ್‌ನೆಂಟ್ ಮಾಡಿ, ಅವರಿಗೆ ಸಂಬಳ ಸಿಗುವ ಹಾಗೆ ಮಾಡಿದರೆ ಅವರಿಂದ ನಿಮಗೇನೂ ಲಾಸ್ ಆಗಿಲ್ಲ ಅವರುಗಳು ಹಗಲುರಾತ್ರಿ ಕಾಡನ್ನು ಕಾಯುತ್ತಿದ್ದಾರೆ, ದಿನದ 24 ಗಂಟೆಯೂ ಕೂಡ ಕೆಲಸವನ್ನು ಮಾಡುತ್ತಿದ್ದಾರ ಅವರು ಆಸಕ್ತಿಯಿಂದ ಕಾಡನ್ನು ಉಳಿಸಿಕೊಂಡು ಬಂದಿದ್ದಾರೆ ಅದರ ಬಗ್ಗೆ ಏನಾದರೂ ಒಂದು ಕ್ರಮವನ್ನು ತೆಗೆದುಕೊಳ್ಳುತ್ತೀರಾ?

**ಶ್ರೀ ಆರಗ ಜ್ಞಾನೇಂದ್ರ** ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಹಾಗೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಐನೂರು ಚಿಲ್ಲರೆ ಜನರಲ್ಲೂ ನನ್ನ 200 ಜನ ಇದ್ದಾರೆ ಕ್ಷೇತ್ರದ ನಿಮ್ಮ ಎಂಪಿಎಂಗೆ ಬೇಕಾಗಿರುವಂತಹ ಕಚ್ಚಾ ವಸ್ತುವನ್ನು ಬೆಳೆದುಕೊಡುವಂತಹ ಜನರಾಗಿದ್ದಾರೆ ಎಂಪಿಎಂ ಇವತ್ತು ನಡೆಯುತ್ತಿದೆ ಎಂದರೆ ಇವರಿಂದಾಗಿ ಹಗಲು ರಾತ್ರಿ ಕಾಡುಗಳಲ್ಲಿ ವಾಚರ್ ಆಗಿ ಬಹಳ ನಿಕೃಷ್ಟವಾದಂತಹ ಕೂಲಿಯ ಮೇಲೆ ಕಳೆದ 1980ಕ್ಕಿಂತ ಹಿಂದಿನಿಂದ ಕೆಲಸ ಮಾಡುತ್ತಿದ್ದಾರೆ ಇವರ ಬಗ್ಗೆ ಸುಪ್ರಿಂ ಕೋರ್ಟು ತೀರ್ಪು ಕೊಟ್ಟಿದೆ, 1984ರ ಹಿಂದೆ ಇದ್ದಂತಹ ಎಲ್ಲರನ್ನೂ ಖಾಯಂ ಮಾಡಿ ಎಂದು ಹೇಳಿದ್ದಾರೆ ಆದರೆ ಎಂಪಿಎಂನಲ್ಲಿ ಫಾರೆಸ್ಟ್ ಆಕ್ಟ್ ಪ್ರಕಾರ ಕೆಲಸ ಮಾಡತಕ್ಕಂತಹವರು ಇವರು ಇವರನ್ನೇ ಖಾಯಂ ಮಾಡಲಿಲ್ಲ, ನಾನು ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ತಮ್ಮ ಕಾಲದಲ್ಲಿಯಾದರೂ ಕೂಡ ಅವರಿಗೆ ಒಂದು ಸೇವಾ ಭದ್ರತೆಯನ್ನಾದರೂ ಒದಗಿಸಿಕೊಡಬೇಕು ಈ ರೀತಿಯಾಗಿ ಅವರನ್ನು ವಾಚರ್‌ಗಳನ್ನು ಎಷ್ಟು ದಿವಸಗಳ ಕಾಲ ದುಡಿಸಿಕೊಳ್ಳುತ್ತೀರಿ? ಈ ಫ್ಯಾಕ್ಟರಿ ಲಾಸ್‌ಗೆ ಇವರ್‍ಯಾರೂ ಕಾರಣರಲ್ಲ, ಇವರು ಕಾರ್ಖಾನೆಯ ಲಾಭಕ್ಕೋಸ್ಕರ ದುಡಿಯುತ್ತಿದ್ದಾರೆ ಇವರು ದುಡಿದು ಕಚ್ಚಾವಸ್ತುಗಳನ್ನು ಕೊಟ್ಟರೂ ಕೂಡ ಯಾರೋ ಲಾಸ್ ಮಾಡುವವರನ್ನು ಸಾವಿರಾರು ರೂಪಾಯಿಗಳ ಸಂಬಳವನ್ನು ಕೊಡುತ್ತೀರಿ, ತಿಮಿಂಗಿಲಗಳು ಇದ್ದಾರಲ್ಲಾ ಅವರಿಗೆ ಬಂಗಲೆ ಮತ್ತು ಕಾರುಗಳನ್ನು ಕೊಡುತ್ತೀರಿ, ಅವರನ್ನು ವಿದೇಶಿ ಪ್ರವಾಸಕ್ಕೆ ಕಳುಹಿಸುತ್ತೀರಿ, ಇವರು ಕಾಡಿನಲ್ಲಿ ಅಲೆಯುತ್ತಿರುವವರನ್ನು ಅನಾಥರನ್ನಾಗಿ ಮಾಡುತ್ತೀರೆಂದರೆ ಖಂಡಿತವಾಗಿಯೂ ಈ ಪಾಪಕ್ಕೆ ನೀವೂ ಕೂಡ ಹೊಣೆಗಾರರಾಗಬೇಕಾಗುತ್ತದೆ, ಈ ಕೆಲಸ ನಿಮ್ಮ ಕಡೆಯಿಂದ ಆಗಬಾರದು ಎಂಬುದು ನನ್ನ ವಿನಂತಿ ಒಂದೂವರೆ ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಬರುವುದಿಲ್ಲ

**ಶ್ರೀ ಪಿ ಜಿ ಆರ್ ಸಿಂಧ್ಯಾ** ಮಾನ್ಯ ಜ್ಞಾನೇಂದ್ರರವರು, ಯಾರ ಮೇಲೆ ಉದ್ದೇಶವನ್ನು ಇಟ್ಟುಕೊಂಡು ವಿದೇಶಕ್ಕೆ ಕಳುಹಿಸುತ್ತಿದ್ದಾರೆ, ಬಂಗಲೆ ಕೊಟ್ಟಿದ್ದಾರೆ, ಎಂದು ಹೇಳುತ್ತಿದ್ದಾರೆ, ಅವರು ನನ್ನ ಗಮನಕ್ಕೆ ತಂದರೆ ಅವರುಗಳೇನಾದರೂ ಅಕ್ರಮವಾಗಿ ವಿದೇಶಕ್ಕೆ ಹೋಗಿದ್ದರೆ, ಅಕ್ರಮವಾಗಿ ಅವರು ದೊಡ್ಡ ಬಂಗಲೆಯಲ್ಲಿರುವುದು ದೊಡ್ಡ ಅಪರಾಧವಾಗಿದ್ದರೆ ಅದರ ಮೇಲೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ

**ಶ್ರೀ ಆರಗ ಜ್ಞಾನೇಂದ್ರ** ಇದೇ ಹೌಸ್‌ನಲ್ಲಿ ನಾವು ರೈಸ್ ಮಾಡಿದ್ದೆವು ಎಲ್ಲಾ ಡಾಕ್ಯುಮೆಂಟ್ಸ್‌ನ್ನು ಕೊಟ್ಟಿದ್ದೆವು, ಅವರ ಮೇಲೆ ಏನೂ ಆಗಲಿಲ್ಲ ಕೋಟಿ ಗಟ್ಟಲೆ ರೂಪಾಯಿ ಲಾಸ್ ಆಗಿದೆ ಇವತ್ತುಕೂಡ ತಾವು ತನಿಖೆಯನ್ನು ಮಾಡುವುದಾಗಿದ್ದರೆ ಹೇಳಿ

**ಶ್ರೀ ಪಿ ಜಿ ಆರ್ ಸಿಂಧ್ಯಾ** ಮಾನ್ಯ ಜ್ಞಾನೇಂದ್ರರವರು ಅವರು ಬಹಳ ದೊಡ್ಡ ಜವಾಬ್ದಾರಿಯಿಂದ ಆ ಒಂದು ಜಿಲ್ಲೆಯ ಪ್ರತಿಷ್ಠಿತವಾದ ಸಂಸ್ಥೆಯ ಬಗ್ಗೆ ಮಾತನಾಡಿದ್ದಾರೆ ನಾನು ಅವರು ಹೇಳಿರತಕ್ಕಂತಹದ್ದನ್ನು ಅಲ್ಲಗಳೆಯುತ್ತಿಲ್ಲ ಅದರಲ್ಲಿ ಸತ್ಯವಿದೆಯೋ ಅಸತ್ಯವಿದೆಯೋ ನನಗಂತೂ ಗೊತ್ತಿಲ್ಲ ತಾವು ಇದನ್ನು ನನ್ನ ಗಮನಕ್ಕೆ ತಂದಿದ್ದೀರಿ ನಾನು ಇದನ್ನು ಖಂಡಿತವಾಗಿಯೂ ಸಹಿತ ಎನ್‌ಜಿಇಎಫ್ ತರಹ ಮಾಡಬಾರದು ಎಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇನೆ ಮಾನ್ಯ ಯಡಿಯೂರಪ್ಪನವರು ಮತ್ತು ಆರಗ ಜ್ಞಾನೇಂದ್ರರವರು ಬಹಳ ವಿಶೇಷವಾಗಿ 36 ಸಾವಿರ ಎಕರೆ ನಮ್ಮ ಅರಣ್ಯ ಪ್ರದೇಶ ಏನಿದ, ಅಲ್ಲಿರುವಂತಹ ಕಾವಲುಗಾರರ ಬಗ್ಗೆ ವಾಚರ್ಸ್ ಬಗ್ಗೆ ಮಾನವೀಯ ಆಧಾರದ ಮೇಲೆ ಅವರಿಗೆ ಬಹಳ ಕಡಿಮೆ ಸಂಬಳವನ್ನು ಕೊಡುತ್ತಿರುವುದು, ಅವರು ಬಹಳ ಕಷ್ಟಪಟ್ಟು, ಕೆಲಸ ಮಾಡುತ್ತಿದ್ದಾರೆ ಅವರಿಗೆ ಸಹಾಯ ಮಾಡಬೇಕೆಂದು ಹೇಳಿದ್ದಾರೆ ನಾನು ಒಂದಂತೂ ಭರವಸೆಯನ್ನು ಕೊಡುತ್ತೇನೆ, ಅಲ್ಲಿರುವಂತಹ ಕಾರ್ಮಿಕರು ಮತ್ತು ಈ ಅರಣ್ಯ ಪ್ರದೇಶದಲ್ಲಿ ಕೆಲಸ ಮಾಡುವವರಿಗೆ ವ್ಯತ್ಯಾಸವಿದೆ, ಕಾರ್ಮಿಕರನ್ನು ಎಂಪಿಎಂನವರು ರೆಕ್ರೂಟ್ ಮಾಡಿಕೊಂಡಿದ್ದಾರೆ, ಇವರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ತೆಗೆದುಕೊಂಡಿದ್ದಾರೆ ನಾನು ಎಲ್ಲಾ ರೆಕಾರ್ಡ್ಸ್‌ನ್ನು ಎರಡು ಸಾರಿ ಎಂಪಿಎಂನಿಂದ ತರಿಸಿಕೊಂಡು ನೋಡಿದ್ದೇನೆ

**ಶ್ರೀ ಆರಗ ಜ್ಞಾನೇಂದ್ರ** ಸಾರ್ ರೆಕಾರ್ಡ್ ಸ್ಟ್ರೇಟ್ ಆಗಲಿ, ಈ ಫಾರೆಸ್ಟ್ ವಾಚರ್ಸ್ ನಿಮ್ಮ ಎಂಪಿಎಂನ ಅರಣ್ಯ ವಿಭಾಗದ ನೌಕರರಾಗಿದ್ದಾರೆ ಅವರು ಕಾಂಟ್ರ್ಯಾಕ್ಟ್ಸ್ ಅಲ್ಲ ಕಾಂಟ್ರ್ಯಾಕ್ಟ್ ಲೇಬರ್ಸ್ ಅಲ್ಲ ತಾವು ದಯವಿಟ್ಟು ಸ್ವಲ್ಪ ನೋಡಿ ಅವರು ತಮಗೇನಾದರೂ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ನೋಡಿ ಬೇರೆ ಕಾಂಟ್ರಾಕ್ಟರ್‌ಗಳಿಂದ ತೆಗೆದುಕೊಂಡವರಲ್ಲ ಫ್ಯಾಕ್ಟರಿಯ ಒಳಗಡೆ ಕೆಲವರು ಕಾಂಟ್ರ್ಯಾಕ್ಟ್ ಲೇಬರ್ಸ್‌ಗಳು ಇದ್ದಾರೆ ಅವರ ಬಗ್ಗೆ ನಾನು ಪ್ರಸ್ತಾಪವನ್ನು ಮಾಡುತ್ತಿಲ್ಲ ವಿಶೇಷವಾಗಿ ಅವರು ಕಚ್ಚಾವಸ್ತುವನ್ನು ಬೆಳೆದುಕೊಡುವಂತಹ ಅರಣ್ಯ ವಿಭಾಗದಲ್ಲಿ ಕೆಲಸ ಮಾಡುವಂತಹ ಡ್ರೈವರ್‌ಗಳು ಮತ್ತು ವಾಚರ್‌ಗಳು ಇದ್ದಾರೆ ಹಾಗಾಗಿ ಇವರು ಕಾಂಟ್ರ್ಯಾಕ್ಟ್ ಲೇಬರ್‌ಗಳಲ್ಲ

**ಶ್ರೀ ಪಿ ಜಿ ಆರ್ ಸಿಂಧ್ಯಾ** ನನಗೆ ಗೊತ್ತಿರುವ ಹಾಗೆ, ಅವರನ್ನು ಡೈರೆಕ್ಟಾಗಿ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ತೆಗೆದುಕೊಂಡಿರುವುದು ಎಂದು ಅಲ್ಲಿಯ ಅಧಿಕಾರಿಗಳು ಹೇಳುತ್ತಾರೆ ಏನೇ ಇರಲಿ ಇದರ ಬಗ್ಗೆ ನಮಗೂ ಮತ್ತು ನಿಮಗೂ ಜಿಜ್ಞಾಸೆ ಅನಾವಶ್ಯಕ ನಮಗೆ ಸಮಸ್ಯೆ ಬಗೆ ಹರಿಯಬೇಕು ಎಂಪಿಎಂ ಕಾರ್ಖಾನೆಯನ್ನು ಬದುಕಿಸಬೇಕು ನಾನು ಸಧ್ಯದಲ್ಲಿಯೇ ಶಿವಮೊಗ್ಗ ಜಿಲ್ಲೆಯ ಮುಖಂಡರ

ಒಂದು ಸಭೆಯನ್ನು ಕರೆಯುವವನಿದ್ದೇನೆ ಇದರ ಬಗ್ಗೆ ಕಾಗೋಡು ತಿಮ್ಮಪ್ಪನವರ ಜೊತೆಯಲ್ಲಿ ಮಾತನಾಡಿದ್ದೇನೆ ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ಈಶ್ವರಪ್ಪನವರು ಇದ್ದಾರೆ ಬಸವಣ್ಣಪ್ಪನವರು ಇದ್ದಾರೆ ಇದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲಾ ಶಾಸಕರ ಒಂದು ಸಭೆಯನ್ನು ಅಧಿವೇಶನದ ನಂತರ ಆಗಸ್ಟ್ 15ರೊಳಗಡೆ ಕರೆಸುತ್ತೇನೆ ಸಭೆಯನ್ನು ಕರೆದು ಡೆಫನೆಟ್‌ಲಿ ಮಾನ್ಯ ಯಡಿಯೂರಪ್ಪನವರು ಹೇಳಿರುವ ಬಗ್ಗೆ I am really happy ನೀವು ಅಲ್ಲಿ ಡಿಫ್ರೆನ್ಸಿಯೇಟ್ ಮಾಡಿದ್ದೀರಿ which is right ತಾವು ಹೇಳಿರತಕ್ಕಂತಹ ಜನರು ಯಾರಿದ್ದಾರೆ, ಅವರಿಗೆ ಮಾನವೀಯ ಆಧಾರದ ಮೇಲೆ ಅವರಿಗೆ ಸ್ವಲ್ಪ ಹೆಚ್ಚಿಗೆ ಅನುಕೂಲತೆಗಳನ್ನು ಮಾಡಿಕೊಡಬೇಕಾಗುತ್ತದೆ In principle, I agree ಎಷ್ಟು ಏನು ಎನ್ನುವುದರ ಬಗ್ಗೆ ನಾನು ಅಧಿವೇಶನ ಮುಗಿದ ಮೇಲೆ ನಿಮ್ಮನ್ನು ಕನ್ಸಲ್ಟ್ ಮಾಡಿ ಇನ್ನೊಂದು 25–30 ದಿವಸದೊಳಗಾಗಿ we will find-out a permanent solution to this problem

**ಅಧ್ಯಕ್ಷರು** ಈಗ ಮುಂದೆ ಹೋಗೋಣ

**ಶ್ರೀ ಜಿ ಬಸವಣ್ಣಪ್ಪ** ಮಾನ್ಯ ಅಧ್ಯಕ್ಷರೆ, ಎಂಪಿಎಂ ಎಂಪ್ಲಾಯೀಸ್‌ದ್ದು revision of Pay Scales ಬಗ್ಗೆ ನಾವು ಎಲ್ಲರೂ ತಮ್ಮ ಗಮನವನ್ನು ಸೆಳೆದಿದ್ದೇವೆ ಅದನ್ನು ಆದಷ್ಟು ಬೇಗ ಕನ್ಸಿಡರ್ ಮಾಡಬೇಕು ಎರಡನೆಯದಾಗಿ ಷುಗರ್ ಕೇನ್ ಗ್ರೋಯರ್ಸ್‌ಗೆ 40 ಕೋಟಿ ರೂಪಾಯಿ ಕೊಡಬೇಕಾದ ಬಾಕಿ ಇದೆ ಇದರಲ್ಲಿ ಸ್ವಲ್ಪ ಹಣವನ್ನು ಕೊಟ್ಟಿದ್ದಾರೆ ಇನ್ನು ಹಣವನ್ನು ಕೊಡಬೇಕಾಗಿದೆ 2003–04ರಲ್ಲಿ ಆ ಹಣವನ್ನು ಆದಷ್ಟು ಬೇಗ ಕೊಡಬೇಕು

**ಶ್ರೀ ಪಿ ಜಿ ಆರ್ ಸಿಂಧ್ಯಾ** ನನಗೆ ಗೊತ್ತಿರುವ ಹಾಗೆ ಷುಗರ್‌ಕೇನ್ ಡ್ಯೂ ಎಲ್ಲಾ ಕ್ಲಿಯರ್ ಆಗಿದೆ ಫಾರ್ಮರ್ಸ್‌ಗೆ ಬರಬೇಕಾಗಿರುವಂತಹ ಷುಗರ್ ಕೇನ್ ಡ್ಯೂ ಏನಿದೆ, ಅದು 8–10 ಕೋಟಿ ರೂಪಾಯಿಗಳು ಇತ್ತು, ನಾನು ಮಂತ್ರಿಯಾದ ತಕ್ಷಣ ಅವರನ್ನು ಕರೆದು ಕೇಳಿದೆ, ಅವರು ಬಾಕಿ ಇರುವಂತಹ ಹಣವನ್ನು ರಿಲೀಸ್ ಮಾಡಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ನನಗೆ ಕೊಟ್ಟಿದ್ದಾರೆ ಆ ರೀತಿ ಏನಾದರೂ ಬಾಕಿ ಇದ್ದರೆ ಅದನ್ನು ಕೊಡಿಸುವ ಬಗ್ಗೆ ವ್ಯವಸ್ಥೆಯನ್ನು ನಾನು ಮಾಡುತ್ತೇನೆ ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಎಲ್ಲಾ ಡ್ಯೂಸ್‌ಗಳು ಕ್ಲಿಯರ್ ಆಗಿದೆ as for as farmers are concerned ನಾನು ಯಾವ ಪಾಯಿಂಟ್‌ನಿಂದ ಎಂಪಿಎಂನ್ನು ನೋಡುತ್ತಿದ್ದೇನೆ ಅಂದರೆ ಅದನ್ನು ಇನ್‌ಫ್ಯಾಕ್ಟ್ ಕ್ಯಾಬಿನೆಟ್ ಸಬ್‌ಕಮಿಟಿ ಮುಂದೆ ಇರತಕ್ಕಂತಹದ್ದು ಅದನ್ನು ಪ್ರೈವೇಟೈಸೇ ಮಾಡುವಂತಹ ಹಂತದಲ್ಲಿತ್ತು I am telling you the fact ನಾನು ಇರುವುದನ್ನು ಹೇಳಬೇಕಲ್ಲಾ? ಆದರೆ ಅದನ್ನು ಸ್ಟಾಪ್ ಮಾಡಿದರು

**ಶ್ರೀ ಎ ಕೃಷ್ಣಪ್ಪ** ಯಾವ ಫ್ಯಾಕ್ಟರಿದು?

**ಶ್ರೀ ಪಿ ಜಿ ಆರ್ ಸಿಂಧ್ಯಾ** ಎಂಪಿಎಂ ಮೈಸೂರು ಪೇಪರ್ ಮಿಲ್ಸ್‌ದ್ದು ನೀವು ಏನಾದರೂ ಹೇಳುವುದು ಇದೆಯಾ? ವೇಜ್ ಸೆಟ್ಲಮೆಂಟ್‌ದ್ದು ಏನಿದೆ

ಮಾನ್ಯ ಬಸವಣ್ಣಪ್ಪನವರೇ, ಇದರ ಬಗ್ಗೆ ಸ್ವಲ್ಪ ಚರ್ಚೆ ಮಾಡಬೇಕಾಗುತ್ತದೆ ನಾವು 28 ಪರ್ಸೆಂಟ್ ವೇಜ್ ಕೊಟ್ಟು ಬಿಟ್ಟು ಹೇಗೆ ಫ್ಯಾಕ್ಟರಿಯನ್ನು ನಡೆಸುವುದು? ಇದರ ಬಗ್ಗೆ ತಾವು ದಯವಿಟ್ಟು ಯೋಚನೆ ಮಾಡಿ ತಾವು ಹಿರಿಯರಾಗಿದ್ದೀರಿ, ತಾವು ಅನೇಕ ಬಾರಿ ಈ ಕಡೆ ಕುಳಿತಿದ್ದೀರಿ, ಮುಂದೆ ಕುಳಿತುಕೊಳ್ಳುವವರಾಗಿದ್ದೀರಿ, ಅದ್ದರಿಂದ ಇದರ ಬಗ್ಗೆ ತಾವು ಯೋಚನೆಯನ್ನು ಮಾಡಿ 28 ಪರ್ಸೆಂಟ್ ಬರ್ಡನ್ ಆಗಬೇಕೆಂದು ಹೇಳಿದರೆ ಮ್ಯಾನೇಜ್‌ಮೆಂಟ್ ಮೇಲೆ, ಯಾವ ಮ್ಯಾನೇಜ್‌ಮೆಂಟ್ ತಾನೇ ನಡೆಸಬೇಕಾಗುತ್ತದೆ? ಒಂದರ ಬಗ್ಗೆ ನಾವು ತಿಳಿದುಕೊಳ್ಳಬೇಕಾಗಿದೆ, ಬೆಂಗಳೂರಿನಲ್ಲಿ ಎನ್‌ಜಿಇಎಫ್, ಮೈಸೂರು ಲ್ಯಾಂಪ್ಸ್, ಮುಚ್ಚಿಹೋಯಿತು ಸೋಪ್ ಫ್ಯಾಕ್ಟರಿ ಮುಚ್ಚುವ ಹಂತದಲ್ಲಿದೆ ಇದೇ ರೀತಿಯಾಗಿ ಮಾಡಿಕೊಂಡು ಎಲ್ಲವನ್ನೂ ಈ ರೀತಿಯಾಗಿ ಮುಚ್ಚಿದರೆ ಇದನ್ನು ಬೆಳೆಸುವುದು ಹೇಗೆ This also we have to look ಅವರು ಹೇಳಿರತಕ್ಕಂತಹ ಒಂದು ಪಾಯಿಂಟನ್ನು ನಾನು ಒಪ್ಪುತ್ತೇನೆ ಏನಪ್ಪಾ ಎರಡೂವರೆ ಸಾವಿರ ರೂಪಾಯಿಗಳ ಸಂಬಳ ಕೊಟ್ಟು ಹಗಲುರಾತ್ರಿ ಕೆಲಸವನ್ನು ಮಾಡಿಸಿಕೊಳ್ಳುತ್ತೀದ್ದೀರಿ, ವಾಚರ್ಸ್ ಹತ್ತಿರ ಎಂದರು ಅದರ ಬಗ್ಗೆ ಏನಾದರೂ ಮಾಡಿ ತಕ್ಷಣ ಎಂದು ಹೇಳಿದ್ದಾರೆ ಅದರ ಬಗ್ಗೆ ನಾನು ತತಕ್ಷಣ ಮಾಡುತ್ತೇನೆ But that doesn't mean

ಈಗ 2002 ಫೆಬ್ರವರಿ 28ನೇ ತಾರೀಖಿಗೆ ಮುಗಿದಿರತಕ್ಕಂಥ ಅಗ್ರಿಮೆಂಟ್ ಮತ್ತು ಆವತ್ತಿನ ಮ್ಯಾನೇಜ್‌ಮೆಂಟ್ ಮತ್ತು ವರ್ಕರ್ಸ್ ಆಗ್ರಿಮೆಂಟ್ ಮತ್ತು ಅಂಡರ್‌ಸ್ಟ್ಯಾಂಡಿಂಗ್‌ಗೆ ಏನು ಬಂದಿದ್ದಾರೆ, ಅದನ್ನು ಇಂಪ್ಲಿಮೆಂಟ್ ಮಾಡಬಾರದು ಎಂದು ನಾನು ಹೇಳುತ್ತಿಲ್ಲ I am not saying that it should not be implemented But, there is a limit for me and for the management also You will appreciate ನಾನು ಸಭೆಯನ್ನು ಕರೆಸುತ್ತೇನೆ ಆದಾದ ನಂತರ We will find out a solution

### ತುಮಕೂರು ಜಿಲ್ಲೆಯಲ್ಲಿ ಕೈಗಾರಿಕಾ ವಸಾಹತುಗಳು

230(800) ಶ್ರೀ ಕ್ಯಾತ್‌ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಕೈಗಾರಿಕೆಗಳು ಹಿಂದುಳಿದಿರುವುದು ನಿಜವಲ್ಲವೆ,

ಆ) ತುಮಕೂರು ಜಿಲ್ಲೆಯಲ್ಲಿ ಮಾಡಲಾಗಿರುವ ಕೈಗಾರಿಕಾ ವಸಾಹತುಗಳ ಸಂಖ್ಯೆ ಎಷ್ಟು ಹಾಗೂ ಎಲ್ಲೆಲ್ಲಿ ಮಾಡಲಾಗಿದೆ, (ತಾಲ್ಲೂಕುವಾರು ವಿವರ ನೀಡುವುದು),

ಇ) ಪ್ರತಿ ವಸಾಹತುಗಳಲ್ಲಿ ನಿರ್ಮಿಸಲಾಗಿರುವ ಕೈಗಾರಿಕಾ ಶೆಡ್ಡುಗಳ ಸಂಖ್ಯೆ ಎಷ್ಟು ಹಾಗೂ ಇನ್ನು ಎಷ್ಟು ಖಾಲಿ ಇದೆ,

ಈ) ವಿದ್ಯುಚ್ಛಕ್ತಿ ಕೊರತೆ ಮತ್ತು ಗುಣಮಟ್ಟದ ವಿದ್ಯುಚ್ಛಕ್ತಿ ದೊರೆಯದೆ ಕೈಗಾರಿಕೆಗಳು ಸಂಕಷ್ಟದಲ್ಲಿರುವುದರಿಂದ ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಮಾಡುವ ಸಂಬಂಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಪಿ ಜಿ ಆರ್ ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) 2001-06ರ ಕೈಗಾರಿಕಾ ನೀತಿಯಂತೆ ತುಮಕೂರು ಜಿಲ್ಲೆಯ 10 ತಾಲ್ಲೂಕುಗಳ ಪೈಕಿ 7 ತಾಲ್ಲೂಕುಗಳನ್ನು ಬಿ ವಲಯದಲ್ಲಿ (ಅಭಿವೃದ್ಧಿ ಹೊಂದುತ್ತಿರುವ ಪ್ರದೇಶ) ಹಾಗೂ 3 ತಾಲ್ಲೂಕುಗಳಾದ ಪಾವಗಡ, ಗುಬ್ಬಿ, ಶಿರಾ ತಾಲ್ಲೂಕುಗಳನ್ನು ಸಿ ವಲಯದಲ್ಲೂ (ಹಿಂದುಳಿದ ಪ್ರದೇಶ) ವರ್ಗೀಕರಿಸಲಾಗಿದೆ. ಬಿ ವಲಯದಲ್ಲಿ ಸ್ಥಾಪಿಸಲ್ಪಡುವ ಅತೀ ಸಣ್ಣ ಕೈಗಾರಿಕೆಗಳಿಗೆ ಸ್ಥಿರಾಸ್ತಿ (5 ಲಕ್ಷ ಗರಿಷ್ಠ ಮಿತಿ) ಮೌಲ್ಯದ ಶೇ 10 ರಷ್ಟು ಸಹಾಯಧನವನ್ನು ಹಾಗೂ ಸಿ ವಲಯದಲ್ಲಿ ಸ್ಥಾಪಿಸಲ್ಪಡುವ ಅತೀ ಸಣ್ಣ ಕೈಗಾರಿಕೆಗಳಿಗೆ ಸ್ಥಿರಾಸ್ತಿ ಮೌಲ್ಯದ ಮೇಲೆ ಶೇ 20ರಷ್ಟು ಸಹಾಯಧನವನ್ನು ನೀಡಲಾಗುತ್ತದೆ (10 ಲಕ್ಷ ಗರಿಷ್ಠ ಮಿತಿ)

ಆ) ತುಮಕೂರು ಜಿಲ್ಲೆಯಲ್ಲಿ ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ವಸಾಹತುಗಳು 7 ಇವುಗಳೆಂದರೆ ತುಮಕೂರು ತಾಲ್ಲೂಕಿನ ತುಮಕೂರು, ಅಂತರಸನಹಳ್ಳಿ ಹಾಗೂ ಹಿರೇಹಳ್ಳಿ, ಶಿರಾ ತಾಲ್ಲೂಕಿನ ಶಿರಾ, ಮಧುಗಿರಿ ತಾಲ್ಲೂಕಿನ ಮಧುಗಿರಿ, ತಿಪಟೂರು ತಾಲ್ಲೂಕಿನ ತಿಪಟೂರು ಮತ್ತು ಕುಣಿಗಲ್ ತಾಲ್ಲೂಕಿನ ಕುಣಿಗಲ್

ಇ)

| ಹೆಸರು | ನಿರ್ಮಿಸಿರುವ ಮಳಿಗೆಗಳ ಸಂಖ್ಯೆ | ಖಾಲಿ ಇರುವ ಮಳಿಗೆಗಳ ಸಂಖ್ಯೆ |
|---|---|---|
| ತುಮಕೂರು | 32 | – |
| ಅಂತರಸನಹಳ್ಳಿ | 27 | 01 |
| ಹಿರೇಹಳ್ಳಿ | 20 | – |
| ಶಿರಾ | 15 | – |
| ಮಧುಗಿರಿ | 14 | 05 |
| ತಿಪಟೂರು | 20 | 02 |
| ಕುಣಿಗಲ್ | 16 | 04 |
| **ಒಟ್ಟು** | **144** | **12** |

ಈ) ಕೆ ಐ ಎ ಡಿ ಬಿ ಮತ್ತು ಕೆ ಎಸ್ ಎಸ್ ಐ ಡಿ ಸಿ ಅಧೀನದಲ್ಲಿ ಬರುವ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಗುಣಮಟ್ಟ ಹಾಗೂ ಮೂಲಭೂತ ಸೌಕರ್ಯ ಹೆಚ್ಚಿಸುವ ದಿಸೆಯಲ್ಲಿ ಅಂತಹವರಿಗೆ ಪ್ರತ್ಯೇಕವಾಗಿ ಕೈಗಾರಿಕಾ ಫೀಡರ್‌ನ್ನು ಅಳವಡಿಸಿ ಅಧಿಕ ಟ್ರಾನ್ಸ್‌ಫಾರ್ಮರ್ ಕೇಂದ್ರಗಳನ್ನು ಸ್ಥಾಪಿಸಿ ಇದರಿಂದ ವಿದ್ಯುತ್ ಸರಬರಾಜಿನಲ್ಲಿ ಉನ್ನತ ಗುಣಮಟ್ಟ ಮತ್ತು ಪರಿಮಾಣವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ

ಹೆಚ್ಚಿನ ಸಂಖ್ಯೆಯಲ್ಲಿ ಕೈಗಾರಿಕೆಗಳು ಇರುವ ಪ್ರದೇಶದಲ್ಲಿ ಗ್ರಿಡ್‌ಗಳನ್ನು ಬಲಪಡಿಸಲು ಹಾಗೂ ಉಪಕೇಂದ್ರಗಳ ಸಾಮರ್ಥ್ಯವನ್ನು ಹೆಚ್ಚಿಸಲು ಕೆ ಪಿ ಟಿ ಸಿ ಎಲ್ ಮತ್ತು ಎಸ್ಕಾಂಗಳನ್ನು ಪ್ರತ್ಯೇಕವಾಗಿ ಕೋರಲಾಗಿದೆ

**ಶ್ರೀ ಕೆಎನ್ ರಾಜಣ್ಣ** ಸನ್ಮಾನ್ಯ ಸಭಾಧ್ಯಕ್ಷರೆ, ಉತ್ತರ ಬಂದಿದೆ ಬಹಳ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ ಆದರೆ ನನ್ನ ಪ್ರಶ್ನೆಯೇ ಬೇರೆ ಮತ್ತು ಅವರು ಉತ್ತರ ಕೊಟ್ಟಿರುವುದೇ ಬೇರೆ ನಾವೇನೋ ಮಾನ್ಯ ಸಿಂಧ್ಯರವರು ಅಂತ ಹೇಳಿದರೆ ಬಹಳ ಬುದ್ಧಿಶಕ್ತಿ, ಚಾತುರ್ಯ ಉಳ್ಳವರು, ಹೆಚ್ಚು ಅಧ್ಯಯನ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದವು ಆದರೆ ಈ ಉತ್ತರವನ್ನು ನೋಡಿದರೆ ನಾವು ತಿಳಿದುಕೊಂಡಿರುವುದು ತಪ್ಪೆಂದು ಅನ್ನಿಸುತ್ತಿದೆ ನನ್ನ ಮೊದಲನೇ ಪ್ರಶ್ನೆ ಏನೆಂದರೆ ತುಮಕೂರು ಜಿಲ್ಲೆಯಲ್ಲಿ ಕೈಗಾರಿಕೆಗಳು ಹಿಂದುಳಿದಿರುವುದು ನಿಜವಲ್ಲವೆ? ಎಂದು ಅಂದರೆ ಏನು? ಇರತಕ್ಕಂಥ ಕೈಗಾರಿಕೆಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎನ್ನತಕ್ಕದ್ದು ನನ್ನ ಪ್ರಶ್ನೆ ನೀವು ಉತ್ತರದಲ್ಲಿ ಕೊಟ್ಟಿರುವುದು ಏನೆಂದರೆ ಹತ್ತು ತಾಲ್ಲೂಕುಗಳಲ್ಲಿ 7 ತಾಲ್ಲೂಕುಗಳನ್ನು 'ಬಿ' ಅಂತ ಇಟ್ಟಿದ್ದೇವೆ, ಮೂರು ತಾಲ್ಲೂಕುಗಳನ್ನು 'ಸಿ' ಅಂತ ಇಟ್ಟಿದ್ದೇವೆ ಮತ್ತು ಇವು ಹಿಂದುಳಿದ ತಾಲ್ಲೂಕುಗಳೆಂದು ಪರಿಗಣಿಸಿದ್ದೇವೆ ಎಂದು ನೀವು ಉತ್ತರವನ್ನು ಕೊಡುತ್ತೀರಿ ಇದು ಉತ್ತರ ನನ್ನ ಪ್ರಶ್ನೆಗೆ ಸರಿಯಾಗಿದೆಯೇ ಎನ್ನತಕ್ಕದ್ದನ್ನು ತಾವು ಸ್ವಲ್ಪ ನನಗೆ ಹೇಳಬೇಕು ಎರಡನೆಯದಾಗಿ, ಈ ಕೈಗಾರಿಕಾ ವಸಾಹತುಗಳ ಬಗ್ಗೆ ತಾವು ಏನು ಉತ್ತರ ಕೊಟ್ಟಿದ್ದೀರಿ? ಅದರಲ್ಲಿ ಏನು ಈ ಶೆಡ್‌ಗಳ ಸಂಖ್ಯೆ ಬಗ್ಗೆ ಮೂರನೇ ಭಾಗದಲ್ಲಿ ಕೊಟ್ಟಿದ್ದೀರಿ ಯಾವ ಉದ್ದೇಶಕ್ಕಾಗಿ ಈ ವಸಾಹತು ಶೆಡ್ಡುಗಳನ್ನು ತೆಗೆದುಕೊಳ್ಳುತ್ತಾರೋ ಅವರು ಅವುಗಳನ್ನು ಆ ಉದ್ದೇಶಕ್ಕಾಗಿ ಉಪಯೋಗ ಮಾಡದೆ ಬೇರೆ ವಾಣಿಜ್ಯ ಚಟುವಟಿಕೆಗಳಿಗೆ, ಹೊಟೇಲು ಮಾಡಲಿಕ್ಕೆ, ಅಂಗಡಿ ಮಾಡಿಕೊಳ್ಳುವುದಕ್ಕೆಂದು ಹೀಗೆ ಬೇರೆ ಬೇರೆ ಉದ್ದೇಶಗಳಿಗೆ ಉಪಯೋಗ ಮಾಡುತ್ತಿರುವಂಥಾದ್ದು ತಮ್ಮ ಗಮನಕ್ಕೆ ಬಂದಿದೆಯಾ? ಬಂದಿದ್ದರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಆ ತರಹದವರು ಎಷ್ಟು ಜನ ಇದ್ದಾರೆ ಎಂಬುದರ ಬಗ್ಗೆ ತಾವು ಸ್ವಲ್ಪ ಮಾಹಿತಿಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

**ಶ್ರೀ ಪಿ ಜಿ ಆರ್ ಸಿಂಧ್ಯಾ** ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜಣ್ಣನವರು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರ ಕೊಟ್ಟಿರುವುದರ ಬಗ್ಗೆ ಅವರ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ ನಾನು ಇಷ್ಟು ಹೇಳುತ್ತೇನೆ 'ತುಮಕೂರು ಜಿಲ್ಲೆಯಲ್ಲಿ ಕೈಗಾರಿಕೆಗಳು ಹಿಂದುಳಿದಿರುವುದು ನಿಜವಲ್ಲವೇ'? ಎನ್ನುವುದಕ್ಕೆ ನನ್ನ ಉತ್ತರ 'ನಿಜ' ಅದನ್ನು ನಾನು ತಿದ್ದಿಕೊಳ್ಳುತ್ತೇನೆ ಇದು ಮೊದಲನೆಯದು ಎರಡನೆಯದು, 'ತುಮಕೂರು ಜಿಲ್ಲೆಯಲ್ಲಿ ವಸಾಹತುಗಳಲ್ಲಿ ಕೈಗಾರಿಕಾಶೆಡ್ಡುಗಳು ಎಷ್ಟು ಇವೆ'ಎಂದು ಕೇಳಿದ್ದು ಅದಕ್ಕೆ ನಾನು 144 ಮಳಿಗೆಗಳಲ್ಲಿ 12 ಮಳಿಗೆಗಳು ಖಾಲಿ ಉಳಿದಿರತಕ್ಕಂಥಾದ್ದು

ಎಂದು ಹೇಳಿದ್ದೇನೆ ಅವುಗಳನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಂಡಿದ್ದಾರೆ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದೀರಿ ಅದು ಇಲಾಖೆಯ ಗಮನಕ್ಕೆ ಬಂದಿರಬಹುದು ನನ್ನ ಗಮನಕ್ಕೆ ಬಂದಿಲ್ಲ ತಾವು ವಿವರಗಳನ್ನು ಕೊಟ್ಟರೆ ಕಾನೂನು ಪ್ರಕಾರ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ ಈ ಭರವಸೆಯನ್ನು ನಾನು ಕೊಡುತ್ತೇನೆ

**ಶ್ರೀ ಕೆಎನ್ ರಾಜಣ್ಣ** ಈ ವಿದ್ಯುತ್ ಕೊರತೆಯಿಂದ ಮತ್ತು ಬೇರೆಬೇರೆ ಕಾರಣಗಳಿಂದ ಕೈಗಾರಿಕೆಗಳು ಸಂಕಷ್ಟಕ್ಕೆ ಬರತಕ್ಕಂಥಾದ್ದು ಎಂದು ಹೇಳಿ ತಾವು ಏನೇನೋ ತಿಳಿಸಿದ್ದೀರಿ ಕೈಗಾರಿಕೆಗಳು ಸಂಕಷ್ಟಕ್ಕೆ ಬರಲಿಕ್ಕೆ 'ವಿದ್ಯುಚ್ಛಕ್ತಿ ಕೊರತೆ ಒಂದೇ ಆಗಲಿಕ್ಕೆ ಸಾಧ್ಯವಿಲ್ಲ ಸನ್ಮಾನ್ಯ ಸಚಿವರೇ, ಕೆಲವೊಂದು ಮಾಹಿತಿಯನ್ನು ತಮ್ಮ ಜತೆಯಲ್ಲಿ ಹಂಚಿಕೊಳ್ಳುವುದಕ್ಕೆ ನಾನು ಬಯಸುತ್ತೇನೆ ಈ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದಂಥ ಕಾಲದಲ್ಲಿ ನೀವು ಮೂರು–ನಾಲ್ಕು–ಐದು ವರ್ಷಗಳಿಗೇನೋ ಅವರಿಗೆಲ್ಲ ಟ್ಯಾಕ್ಸ್ ಎಕ್ಸಮ್ಷನ್ ಕೊಟ್ಟು ಬಿಡುತ್ತೀರಿ ಅವರು ನಾಲ್ಕೈದು ವರ್ಷ ಆಗುವಷ್ಟು ಹೊತ್ತಿಗೆ ಆ ಯಂತ್ರಗಳೆಲ್ಲಾ ಹಳೆಯದಾಗಿ ಮೆಂಟೇನೆನ್ಸ್ ಕಾಸ್ಟ್ ಜಾಸ್ತಿ ಬರುತ್ತದೆ ಅಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ ಕೂಡ ಸಂಬಳ ಜಾಸ್ತಿಯಾಗುತ್ತದೆ ಈಗ ನೀವು ಇವರಿಗೆ ಟ್ಯಾಕ್ಸ್ ಇಂಪೋಸ್ ಮಾಡಿದಾಗ ಅದೇ ರೀತಿಯ ವೃತ್ತಿಯನ್ನು ಮಾಡತಕ್ಕಂಥ ಬೇರೆಯವರು ಕೈಗಾರಿಕೆಗಳನ್ನು ಪ್ರಾರಂಭ ಮಾಡಿದಾಗ ಈ ಎಲ್ಲಾ ಸೌಲಭ್ಯಗಳು ಇರುತ್ತವೆ ಆದರೆ ಇವರ ಕಮಾಡಿಟಿ ಮತ್ತು ಅವನ ಕಮಾಡಿಟಿ ರೇಟ್‌ವೈಸ್ ಏನೂ ಕಾಂಪೀಟ್ ಮಾಡುವುದಕ್ಕೆ ಆಗುವುದಿಲ್ಲ ಈಗೇನು ನಾಲ್ಕೈದು ವರ್ಷ ಅವರಿಗೆ ಕೊಟ್ಟಂಥ ಸೌಲಭ್ಯವನ್ನು ವಾಪಸ್ಸು ತೆಗೆದುಕೊಂಡಿರುತ್ತೀರಿ ಅವರು ಹೊಸದಾಗಿ ಪ್ರಾರಂಭ ಮಾಡುವವರ ಜತೆಯಲ್ಲಿ ಕಾಂಪೀಟ್ ಮಾಡುವುದಕ್ಕೆ ಆಗದೆ ಅದು ಸಿಕ್ ಆಗುವುದಕ್ಕೆ ಆದೂ ಕೂಡ ಒಂದು ಪ್ರಮುಖ ಕಾರಣವಾಗುತ್ತದೆ ಇದನ್ನೂ ಕೂಡ ತಾವು ಗಮನದಲ್ಲಿಟ್ಟುಕೊಂಡು ಯಾವ ರೀತಿ ಈ ತೊಂದರೆಯನ್ನು ಹೋಗಲಾಡಿಸುವುದಕ್ಕೆ ಕ್ರಮವನ್ನು ತಾವು ತೆಗೆದುಕೊಳ್ಳುತ್ತೀರಿ ಎನ್ನತಕ್ಕದ್ದನ್ನು ತಿಳಿಸಬೇಕು

**ಶ್ರೀ ಪಿ ಜಿ ಆರ್ ಸಿಂಧ್ಯಾ** ಇದು ಏನಿದೆ ಎಂದರೆ ಮುಖ್ಯವಾಗಿ ಮ್ಯಾನ್ಯುಫ್ಯಾಕ್ಚರಿಂಗ್ ಸೆಕ್ಟರ್ಸ್ ಮತ್ತು ಸ್ಮಾಲ್‌ಸ್ಕೇಲ್ ಸೆಕ್ಟರ್ಸ್‌ನಲ್ಲಿ ಒಂದೊಂದು ಇಂಡಸ್ಟ್ರಿಗೂ ಸಹಿತ ಅವರದೆ ಆದ ಸಮಸ್ಯೆಗಳು ಇವೆ ಒಂದು ಆಯಿಲ್ ಇಂಡಸ್ಟ್ರಿಗೆ ಒಂದು ಪ್ರಾಬ್ಲಮ್ ಇದೆ, ರೈಸ್ ಮಿಲ್‌ಗಳಿಗೆ ಒಂದು ಪ್ರಾಬ್ಲಮ್ ಇದೆ, ಗ್ರನೈಟ್ ಇಂಡಸ್ಟ್ರಿಗೆ ಮತ್ತೊಂದು ಪ್ರಾಬ್ಲಮ್ ಇದೆ ಹೀಗೆ ಒಂದೊಂದು ಸೆಕ್ಟರ್‌ನಲ್ಲಿ ಒಂದೊಂದು ಸಮಸ್ಯೆ ಇದೆ ನಾನು ಅದಕ್ಕೋಸ್ಕರ ಒಂದು ವಿಚಾರವನ್ನು ಮಾಡುತ್ತಿದ್ದೇನೆ ಒಂದು ಅಡ್ವೈಸರಿ ಬೋರ್ಡ್‌ನ್ನು ಕಾನ್‌ಸ್ಟಿಟ್ಯೂಟ್ ಮಾಡುತ್ತಿದ್ದೇನೆ ನನ್ನ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಪರ್ಮನೆಂಟ್ ಆಗಿ ಒಂದು ಅಡ್ವೈಸರಿ ಬೋರ್ಡ್‌ನ್ನು

ಕಾನ್‌ಸ್ಟಿಟ್ಯೂಟ್ ಮಾಡುತ್ತಿದ್ದೇನೆ ಪರ್ಟಿಕ್ಯುಲರ್ ಆಗಿ ಮ್ಯಾನ್ಯುಫ್ಯಾಕ್ಚರಿಂಗ್ ಸೈಡ್ ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟ ಹಾಗೆ ಇದನ್ನು ಪುನಶ್ಚೇತನಗೊಳಿಸುವುದಕ್ಕೆ ಏನು ಮಾಡಬೇಕು ಎಂದು ಹೇಳಿ ಇದನ್ನು ಮಾಡುತ್ತಿದ್ದೇನೆ ಒಂದು, ಟೆಕ್ನಾಲಜಿ ಅಪ್‌ಗ್ರೇಡೇಶನ್ ಮಾಡಬೇಕಾಗುತ್ತದೆ ಇನ್ನೊಂದು ಅದಕ್ಕೆ ಬೇಕಾಗಿರತಕ್ಕಂಥ ಮಾರ್ಕೆಟಿಂಗ್‌ನ್ನು ಮಾಡಬೇಕಾಗುತ್ತದೆ ಈ ಸರ್ಕಾರ ಬಂದ ಮೇಲೆ ಈಗ ನಾಲ್ಕು ನೂರು ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತೇವೆ ಎಂದು ಹೇಳಿದ್ದೇವೆ ಪಾಪ, ಸಿದ್ಧರಾಮಯ್ಯನವರು ನಮ್ಮ ಬಗ್ಗೆ, ಈ ಇಲಾಖೆಯ ಬಗ್ಗೆ ಕಾಳಜಿ ವಹಿಸಿ ಈಗಾಗಲೇ ಅದಕ್ಕೆ ವ್ಯವಸ್ಥೆಯನ್ನು ಮಾಡಿದ್ದಾರೆ ಅದರಿಂದ ಮಾತ್ರವೇ ಎಲ್ಲಾ ಪುನಶ್ಚೇತನವಾಗುತ್ತದೆ ಎನ್ನತಕ್ಕಂಥ ಭರವಸೆ ನನಗೂ ಸಹಿತ ಇಲ್ಲ ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ ವಿಶೇಷವಾಗಿ ಒಂದು ಕಾಲದಲ್ಲಿ ತುಮಕೂರು ಎಂದರೆ ಬೆಂಗಳೂರಿಗೆ ಅದೊಂದು ಮ್ಯಾಗ್ನೇಟ್ ಟೌನ್ ಆಗಿ ಬೆಳೆಯುತ್ತಿದ್ದದ್ದು ಈಗ ಅದು ಸ್ಥಗಿತವಾಗಿದೆ ಎನ್ನತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿದೆ ಯಾವ ರೀತಿಯಲ್ಲಿ ಅದನ್ನು ಸರಿಪಡಿಸಬೇಕು ಎನ್ನುವ ಅವರ ಸಲಹೆಗಳನ್ನೂ ಸಹಿತ ನಾನು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ

## ಉಡುಪಿ ನಗರದ ಕೇಂದ್ರ ಪ್ರದೇಶದಲ್ಲಿ ತ್ಯಾಜ್ಯವಸ್ತುಗಳ ವಿತರಣೆ

131(887) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಪೌರಾಡಳಿತ ಹಾಗೂ ಕೆ ಯು ಐ ಡಿ ಎಫ್ ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ನಗರದ ಕೇಂದ್ರ ಪ್ರದೇಶದಲ್ಲಿರುವ ಬೀಡಿನಗುಡ್ಡೆಯ ತ್ಯಾಜ್ಯ ಕಸ ಕಡ್ಡಿ ಕೊಳಚೆ ಸಮಸ್ಯೆ ಹಾಗೂ ಮಣಿಪಾಲ ನಗರದಲ್ಲಿ ಎಂಡ್ ಪಾಯಿಂಟ್ ಕೊಳಚೆ ಹಾಗೂ ಕಲ್ಮಶ ನೀರಿನ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹೌದಾದಲ್ಲಿ, ಇದರಿಂದಾಗಿ ಸಾರ್ವಜನಿಕರ ಆರೋಗ್ಯಕ್ಕೆ ತೀವ್ರವಾಗಿ ಆಗಲಿರುವ ಈ ಸಮಸ್ಯೆ ಪರಿಹಾರದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳಲು ಬಯಸಿದೆ;

ಇ) ಉಡುಪಿ ನಗರವು ಜಿಲ್ಲಾ ಕೇಂದ್ರವಾಗಿ ಬೆಳೆಯುತ್ತಿರುವುದರಿಂದ ನಗರದ ಹೊರಗೆ ನಿರ್ಜನವಾದ ಪ್ರದೇಶದ ಅರಣ್ಯ ಭೂಮಿಯಲ್ಲಿ ಇದನ್ನು ವಿಲೇವಾರಿ ಮಾಡಲು ಸರ್ಕಾರ ಯೋಚಿಸಿದೆಯೇ,

ಈ) ರಾಷ್ಟ್ರ ಖ್ಯಾತಿಯ ಶೈಕ್ಷಣಿಕ ಕೇಂದ್ರ, ಆರೋಗ್ಯ ಕೇಂದ್ರ, ಆರ್ಥಿಕ ಕೇಂದ್ರವಾಗಿರುವ ಮಣಿಪಾಲದ ತ್ಯಾಜ್ಯ ಕೊಳಚೆ ನೀರು ಸಮಸ್ಯೆ ಪರಿಹಾರದ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಎಸ್ ಆರ್ ಮೋರೆ (ಪೌರಾಡಳಿತ ಹಾಗೂ ಕೆ ಯು ಐ ಡಿ ಎಫ್ ಸಿ ಸಚಿವರು)

ಅ) ಹೌದು

ಆ) ಕರ್ನಾಟಕ ನಗರಾಭಿವೃದ್ಧಿ ಕರಾವಳಿ ಪರಿಸರ ನಿರ್ವಹಣ ಯೋಜನೆಯಡಿಯಲ್ಲಿ (KUDCEMP) ವೈಜ್ಞಾನಿಕ ರೀತಿಯಲ್ಲಿ ಘನ ತ್ಯಾಜ್ಯ

ವಸ್ತುಗಳ ವಿಲೇವಾರಿಗಾಗಿ ಉಪ್ಪೂರ ಗ್ರಾಮದ ಕೊಳಲಗಿರಿ, ಸರ್ವೆ ಸಂಖ್ಯೆ 221–ಎ ಮತ್ತು 293–1ಎ ಪ್ರದೇಶದಲ್ಲಿ ಸರ್ಕಾರಿ ಜಮೀನನ್ನು ಆಯ್ಕೆ ಮಾಡಲಾಗಿದೆ ಮಣಿಪಾಲ ಕೆಎಂಸಿ ಸಂಸ್ಥೆಯ ಘನತ್ಯಾಜ್ಯ ವಸ್ತುಗಳನ್ನು ಮಣಿಪಾಲದ ಎಂಡ್ ಪಾಯಿಂಟ್‌ಗೆ ಸುರಿಯುವುದನ್ನು ತಕ್ಷಣ ಸ್ಥಗಿತಗೊಳಿಸಲು ಸೂಚಿಸಲಾಗಿದೆ ಹಾಗೂ ಅದರ ಜೀವ ವೈದ್ಯಕೀಯ ತ್ಯಾಜ್ಯವನ್ನು ಇನ್ಸಿನರೇಶನ್ ಮಾಡಲು ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ

ಇ) ಹೌದು

ಈ) ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ನಿರ್ವಹಣ ಯೋಜನೆಯ ಒಳಚರಂಡಿ ಯೋಜನೆಯಡಿಯ 2ನೇ ಹಂತದಲ್ಲಿ ಮಣಿಪಾಲ ಪ್ರದೇಶವನ್ನು ಸೇರಿಸಿ ಭೂಗತ ಡ್ರೈನೇಜ್ ವ್ಯವಸ್ಥೆ ಕಲ್ಪಿಸಲು ಪ್ರಸ್ತಾಪಿಸಲಾಗುವುದು

**ಶ್ರೀ ಕೆ ರಘುಪತಿ ಭಟ್** ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಇಲ್ಲಿ ಒದಗಿಸಿದ್ದಾರೆ ಎರಡನೇ ಪ್ರಶ್ನೆಯಲ್ಲಿ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ಉಪ್ಪೂರ ಗ್ರಾಮದ ಕೊಳಲಗಿರಿ ಜಾಗವನ್ನು ಗುರುತಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ ಮಾನ್ಯ ಅಧ್ಯಕ್ಷರೆ, ನನ್ನ ವಿನಂತಿ ಏನೆಂದರೆ, ಈಗಾಗಲೇ ಉಪ್ಪೂರ ಗ್ರಾಮದ ಕೊಳಲಗಿರಿಯನ್ನು ನಿಗದಿಪಡಿಸಿದ್ದರಿಂದ ಅಲ್ಲಿನ ಗ್ರಾಮಸ್ಥರು ಮತ್ತು ಅಲ್ಲಿಯ ಜನಪ್ರತಿನಿದಿಗಳು, ನಮ್ಮ ಶಾಸಕರಾದ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಸೇರಿಕೊಂಡು ಎಲ್ಲರೂ ವಿರೋಧ ಮಾಡುತ್ತಿದ್ದಾರೆ ಏಕೆಂದರೆ ಅದು ವೈಜ್ಞಾನಿಕವಾದ ರೀತಿಯಲ್ಲಿ ಇಲ್ಲವೆನ್ನುವ ದೃಷ್ಟಿಯಿಂದ ಆದ್ದರಿಂದ ನಾನು ಮೂರನೇ ಪ್ರಶ್ನೆಯನ್ನು ಕೇಳಿದ್ದೆ ಉಡುಪಿ ನಗರ ಜಿಲ್ಲಾ ಕೇಂದ್ರ ಆಗಿರುವುದರಿಂದ ಯಾವುದಾದರೂ ಅರಣ್ಯ ಪ್ರದೇಶದಲ್ಲಿ ಇದನ್ನು ವಿಲೇವಾರಿ ಮಾಡಬೇಕೆಂದು ನಾನು ಕೇಳಿದ್ದೆ ಅದಕ್ಕೆ 'ಹೌದು' ಎಂದು ಉತ್ತರವನ್ನು ಕೊಟ್ಟಿದ್ದಾರೆ ಆದರೆ ಜಾಗವನ್ನು ಗುರುತಿಸಿಲ್ಲ ನಾನು ಮಾನ್ಯ ಪೌರಾಡಳಿತ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಇವತ್ತು ನಮ್ಮ ಉಡುಪಿ ನಗರಸಭೆಯಲ್ಲಿ ಬಹಳ ದೊಡ್ಡ ಸಮಸ್ಯೆಯಾಗಿದೆ ಬೀಡಿನಗುಡ್ಡೆಯಲ್ಲಿ ತ್ಯಾಜ್ಯವಸ್ತುಗಳನ್ನು ವಿಲೇವಾರಿ ಮಾಡುವಂತಹ ವ್ಯವಸ್ಥೆ ಇದೆ ಅದು ನಗರದ ಹೃದಯಭಾಗದಲ್ಲಿದೆ ಮುಂಚೆ ನಮ್ಮ ಉಡುಪಿ ನಗರಸಭೆ ಕೇವಲ 12 ವಾರ್ಡುಗಳಿಗೆ ಮಾತ್ರ ಸೀಮಿತವಾಗಿದ್ದುದಾಗಿತ್ತು ಅದು ಆಗಿದ್ದು ಕೇವಲ ಒಂಬತ್ತು ಕಿಲೋಮೀಟರ್ ವ್ಯಾಪ್ತಿ ಇರುವಂತಹ ಸಮಯದಲ್ಲಿ ಈಗ ಅದು 69 ಕಿಲೋಮೀಟರ್‌ಗೆ ಬೆಳೆದ ದೊಡ್ಡದಾದಂಥ ಪ್ರದೇಶವಾಗಿದೆ 35 ವಾರ್ಡುಗಳಿಗೆ ಸೇರ್ಪಡೆಗೊಂಡಂಥ ದೊಡ್ಡ ನಗರಸಭೆಯಾಗಿದೆ ಆದ್ದರಿಂದ ನಗರ ಪ್ರದೇಶದಲ್ಲಿ ಇದನ್ನು ಬದಲಾವಣೆ ಮಾಡಲೇಬೇಕಾಗಿದೆ ಇವತ್ತು ಐದು ಎಕರೆ ಜಾಗವನ್ನು ಬೀಡಿನಗುಡ್ಡೆಯಲ್ಲಿ ನೋಟಿಫಿಕೇಶನ್ ಆಗುತ್ತದೆ ಎಂದು

ಹೇಳಿದರೂ ಅಲ್ಲಿ ವೈಜ್ಞಾನಿಕವಾಗಿ ಅದನ್ನು ನಡೆಸಲಿಕ್ಕೆ ಸಾಧ್ಯವಿಲ್ಲ ಅದು ಇಡೀ ನಗರದ ಹೃದಯ ಭಾಗದಲ್ಲಿ ಇರುವುದರಿಂದ ಅದನ್ನು ಬದಲಾವಣೆ ಮಾಡಲೇಬೇಕಾಗಿದೆ ಇವತ್ತು ನಮ್ಮ ಕುಡ್ಸೆಂಪ್‌ನ ವತಿಯಿಂದ ತಾವು ಒಂದು ಒಳ್ಳೆಯ ಯೋಜನೆಯನ್ನು ತಂದಿದ್ದರಲ್ಲಿ ಈ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಒಂದನ್ನು ಬಿಟ್ಟು ಮತ್ತೆಲ್ಲವೂ ನಮ್ಮ ಉಡುಪಿ ನಗರದಲ್ಲಿ ಬಹಳ ವೇಗವಾಗಿ ನಡೆಯುತ್ತಿದೆ ಬೇರೆ ಎಲ್ಲ ಹತ್ತು ಕರಾವಳಿ ನಗರಗಳಲ್ಲಿ ಇದ್ದುದ್ದರಲ್ಲಿ ಉಡುಪಿಯಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಆಗುತ್ತಿದೆ ಈ ಘನತ್ಯಾಜ್ಯ ವಿಲೇವಾರಿ ಉಳಿದು ಹೋಗಿರುವಂಥಾದ್ದು ಕೇವಲ ಜಾಗ ನಿಗದಿ ಆಗಿದ್ದಂಥಾದ್ದರಲ್ಲಿ ಆದ್ದರಿಂದ ನನ್ನ ವಿನಂತಿ ಏನೆಂದರೆ ನಾನು ಮೂರನೇ ಪ್ರಶ್ನೆಯಲ್ಲಿ ಹೇಳಿದ ಪ್ರಕಾರ ಅರಣ್ಯ ಪ್ರದೇಶದಲ್ಲಿ ಇದನ್ನು ಮಾಡಬಹುದು ಉಡುಪಿ ನಗರದಿಂದ 5 ರಿಂದ 8 ಕಿಲೋಮೀಟರ್ ಒಳಗೆ ಅರಣ್ಯ ಪ್ರದೇಶಗಳಿವೆ ಇವತ್ತು ಪರಿಸರ ಮತ್ತು ಅರಣ್ಯ ಒಂದೇ ಇಲಾಖೆಗೆ ಬರುವುದರಿಂದ ಅರಣ್ಯ ಇಲಾಖೆಯವರು ಒಂದು ಹತ್ತು ಎಕರೆ ಜಾಗವನ್ನು ಇನ್ನು ಒಂದು ತಿಂಗಳೊಳಗೆ ಅದಕ್ಕೆ ನಿಗದಿಪಡಿಸಿದರೆ ಒಳ್ಳೆಯದು ಅದೇನು ಸರ್ಕಾರಕ್ಕೆ ಕಷ್ಟದ ಕೆಲಸ ಅಲ್ಲ ಇದ್ದುದ್ದರಲ್ಲಿ ಹತ್ತು ಎಕರೆಯನ್ನು ನೋಟಿಫೀಕೇಶನ್ ಮಾಡಿ ಕೊಟ್ಟರೆ ನಮಗೆ ಪೂರ್ತಿಯಾಗಿ ಈ ಕೆಲಸ ಮಾಡಬಹುದು ಆದ್ದರಿಂದ ಅರಣ್ಯ ಇಲಾಖೆಯವರ ಹತ್ತಿರ ಮಾನ್ಯ ಪೌರಾಡಳಿತ ಸಚಿವರು ವಿನಂತಿ ಮಾಡಿಕೊಂಡು ಅನುಕೂಲ ವಾಗುತ್ತದೆ ಏಕೆಂದರೆ ಕೊಳಲಗಿರಿಯಲ್ಲಿ ನಿಗದಿಪಡಿಸಿದ್ದೇವೆ ಎಂದು ಉತ್ತರದಲ್ಲಿ ಕೊಟ್ಟಿದ್ದೀರಿ ಅದು ಇವತ್ತು ವಸ್ತುಶ ಅದನ್ನು ಜಾರಿಗೊಳಿಸಲಿಕ್ಕೆ ಆಗುವುದಿಲ್ಲ ಅದಕ್ಕೆ ಜನರಿಂದ ಬಹಳ ವಿರೋಧ ಇರುವುದರಿಂದ ಅದು ಸಾಧ್ಯವಾಗುವಂತಿಲ್ಲ ಆದ್ದರಿಂದ ಉಡುಪಿ ನಗರದಿಂದ 5 ರಿಂದ 8 ಕಿಲೋಮೀಟರ್ ಒಳಗೆ ಒಂದು ಅರಣ್ಯ ಪ್ರದೇಶದಲ್ಲಿ ಜಾಗವನ್ನು ಕೊಡಿಸುವಂತಹ ವ್ಯವಸ್ಥೆಯನ್ನು ತಾವು ಮಾಡಬಹುದು ಎಂದು ನಾನು ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಮಾನ್ಯ ಅಧ್ಯಕ್ಷರೆ, ನಾನೂ ಒಂದು ಕೇಳುತ್ತೇನೆ ಅವರು ಎರಡನೇ ಉತ್ತರದಲ್ಲಿ ಕರ್ನಾಟಕ ನಗರಾಭಿವೃದ್ಧಿ ಕರಾವಳಿ ಪರಿಸರ ನಿರ್ವಹಣಾ ಯೋಜನೆಯಡಿಯಲ್ಲಿ ಉಪ್ಪೂರು ಗ್ರಾಮದ ಕೊಳಲಗಿರಿ ಸರ್ವೆ ನಂ 221ಎ ಮತ್ತು 293–1ಎ ಪ್ರದೇಶದಲ್ಲಿ ಸರ್ಕಾರ ಆಯ್ಕೆ ಮಾಡಿದೆ ಎಂದು ಹೇಳುತ್ತಾರೆ ಎರಡನೇ ಪ್ರಶ್ನೆಗೆ ಕಾಂಟ್ರ್ಯಾಡಿಕ್ಟ್ ಮಾಡಿ ಮೂರನೇ ಪ್ರಶ್ನೆಗೆ ಉತ್ತರದಲ್ಲಿ ಹೇಳಿದ್ದೀರಿ ಈ ಉಪ್ಪೂರ ಗ್ರಾಮ ಎನ್ನುವುದು ನನ್ನ ಕ್ಷೇತ್ರದಲ್ಲಿ ಬರುತ್ತದೆ ಈಗಾಗಲೇ ಅಲ್ಲಿ ಬಹಳ ಪ್ರತಿಭಟನೆಯಾಗಿದೆ ಏಕೆಂದರೆ ಅದರ ಹತ್ತಿರ ಕುಡಿಯುವ ನೀರಿನ ಬೋರ್‌ವೆಲ್ ಇದೆ ಹೌಸಿಂಗ್ ಕಾಲೋನಿ ಇದೆ, ಆಸ್ಪತ್ರೆ ಇದೆ, ದೇವಸ್ಥಾನ,

ಚರ್ಚ್ ಇದೆ, ಇವೆಲ್ಲದರ ಹತ್ತಿರದಲ್ಲಿ ಹೇಗೆ ಆ ಜಾಗವನ್ನು ಆಯ್ಕೆ ಮಾಡಿದಿರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ

ಈಗಾಗಲೇ ಬಹಳಷ್ಟು ಪ್ರತಿಭಟನೆಗಳಾಗಿವೆ ತಾವು ಅದನ್ನು ಕೈಬಿಡುತ್ತೇವೆಂಬ ಆಶ್ವಾಸನೆ ಕೊಟ್ಟರೆ ಸಾಕು ಮಾನ್ಯ ರಘುಪತಿ ಭಟ್‌ರವರು ಹೇಳಿದ ಹಾಗೆ ಅರಣ್ಯ ಪ್ರದೇಶದಲ್ಲಿ ಮಧ್ಯದಲ್ಲಿ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವ ಸ್ಥಳವನ್ನು ಹುಡುಕಬೇಕೆಂದು ಅಧ್ಯಕ್ಷರ ಮುಖೇನ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ

**ಶ್ರೀ ಎಸ್ ಆರ್ ಮೋರೆ** ಮಾನ್ಯ ಅಧ್ಯಕ್ಷರೆ, ಮಾನ್ಯ ರಘುಪತಿ ಭಟ್‌ರವರು ಕೇಳಿದ ಪ್ರಶ್ನೆ ಎಂದರೆ, ಉಡುಪಿ ಮುನಿಸಿಪಾಲಿಟಿಯಲ್ಲಿರತಕ್ಕ ತ್ಯಾಜ್ಯ ವಸ್ತುವನ್ನು ಹಾಕತಕ್ಕ ಸ್ಥಳ ಸಧ್ಯ ಬೀಡಿನ ಗುಡ್ಡೆ ಊರಿನ ನಡುವೆ ಇದೆ ಆ ತ್ಯಾಜ್ಯ ವಸ್ತು ಒಗೆಯುವ ಸ್ಥಳ ಊರಿನ ಮಧ್ಯೆ ಇರುವುದರಿಂದ, ಬೇರೆ ಸ್ಥಳವನ್ನು ತಾವೇನಾದರೂ ಮಾಡಿದ್ದೀರಾ ಎಂದು ಕೇಳಿದ್ದಾರೆ ಆ ಪ್ರಕಾರ ನಾವು ಉಪ್ಪೂರ ಗ್ರಾಮವನ್ನು ನಾವು ಗುರುತಿಸಿದ್ದೇವೆ ನಾವು ಎಂದರೆ, ನಮ್ಮ ಉಡುಪಿ ಮುನಿಸಿಪಾಲಿಟಿಯವರು ಆದರೆ, ಅಲ್ಲಿ ಪ್ರತಿಭಟನೆ ಇದ್ದುದ್ದು ನಿಜ ಗ್ರಾಮಸ್ಥರು ಪ್ರತಿಭಟನೆ ಮಾಡಿದ್ದಾರೆ ಅದರ ಜೊತೆಗೆ ಸ್ಕೂಲು, ಹಾಸ್ಪಿಟಲ್ ಕೂಡ ಸುತ್ತಮುತ್ತಲೂ ಇರುವುದರಿಂದ ಈಗಾಗಲೇ ಡೆಪ್ಯೂಟಿ ಕಮೀಷನರ್ ಗ್ರಾಮಸಭೆಯನ್ನೂ ಮಾಡಿದ್ದಾರೆ ಆದರೂ ಕೂಡ ಪ್ರತಿಭಟನೆ ಬಂದಿದೆ ಆದ್ದರಿಂದ ನಾವು ಒಂದು ಯೋಜನೆಯನ್ನು ಮಾಡುತ್ತೇವೆ ಫಾರೆಸ್ಟ್ ಲ್ಯಾಂಡ್ ಅನ್ನು ಗುರುತು ಮಾಡಿದ್ದೇವೆ 12 50 ಇದನ್ನು ಈಗಾಗಲೇ ಸಿ ಎಂ ಸಿ ಯವರು ಫಾರೆಸ್ಟ್ ಡಿಪಾರ್ಟ್ ಮೆಂಟಿಗೆ ವಿನಂತಿ ಮಾಡಿಕೊಂಡಿದ್ದಾರೆ ಈಗಾಗಲೇ ಅದು ಬೆಂಗಳೂರಿಗೆ ಬಂದಿದೆ ನಾನು ಚೀಫ್ ಕನ್ಸರ್‌ವೇಟಿಟ್ ಆಫ್ ಫಾರೆಸ್ಟ್ ನವರ ಹತ್ತಿರ ಮಾತನಾಡಿ, ಆ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆ ಉಪ್ಪೂರು ಗ್ರಾಮವನ್ನು ಕೈಬಿಡುವುದು ಒಳ್ಳೆಯದೆಂದು ಈ ಸಭೆಯಲ್ಲಿ ಹೇಳುತ್ತೇನೆ

**ಶ್ರೀ ಕೆ ರಘುಪತಿ ಭಟ್** ಮಾನ್ಯ ಅಧ್ಯಕ್ಷರೆ, ಅರಣ್ಯದ ಪ್ರದೇಶದಲ್ಲಿ ಒಂದು ಪಕ್ಷ ಸಾಧ್ಯವಿಲ್ಲವೆಂದಾದರೆ, ಅರಣ್ಯ ಪ್ರದೇಶಕ್ಕೆ ತಾಗಿದ್ದಂಥ ಯಾವುದಾದರೂ ಖಾಸಗಿಯವರ ಜಾಗ ಐದು ಹೆಕ್ಟೇರ್ ಇದ್ದುದಾದರೆ, ಅದನ್ನು ತೆಗೆದುಕೊಳ್ಳಬಹುದು, ಈಗಾಗಲೇ 128 ಕೋಟಿ ರೂ ಕುಡ್ಸೆಂಪ್‌ನ ಯೋಜನೆ ಪ್ರಕಾರ 5 ಕೋಟಿ 29 ಲಕ್ಷ ರೂ ಯನ್ನು ಈ ಘನ ತ್ಯಾಜ್ಯ ವಸ್ತು ವಿಲೇವಾರಿಗೆ ಇಟ್ಟಿದ್ದಾರೆ ಇದರಲ್ಲಿ ಖಾಸಗಿಯವರ ಜಾಗವಿದ್ದು, ಅವರು ಕೊಡಲಿಕ್ಕೆ ಇಚ್ಛೆಪಟ್ಟರೆ, ಅದನ್ನು ಅಕ್ವೈರ್ ಮಾಡುವುದು ಅಥವಾ ಖರೀದಿ ಮಾಡುವಂಥ ಅವಕಾಶಗಳಿದೆಯೇ ಎಂದು ನಾನು ಕೇಳುತ್ತೇನೆ

**ಶ್ರೀ ಎಸ್ ಆರ್ ಮೋರೆ** ನಮ್ಮ ಸದಸ್ಯರು ಏನಾದರೂ ಅಂತಹ ಸಲಹೆ ಕೊಟ್ಟರೆ ಮತ್ತು ಯಾವುದಾದರೂ ಜಾಗ ತೋರಿಸಿದರೆ, ಅದನ್ನು ನಾನು ಕುಡ್ಲೆಂಪ್‌ನವರಿಗೆ ಮತ್ತು ಮುನಿಸಿ ಪಾಲಿಟಿಯವರಿಗೆ ಹೇಳುತ್ತೇನೆ ಅದನ್ನು ಬೇಕಾದರೆ, ನಾವು ಅವರಿಗೆ ಪರಿಹಾರ ಕೊಟ್ಟು ತೆಗೆದುಕೊಳ್ಳಬಹುದು ಮತ್ತೆ ಸದ್ಯದ ಪರಿಸ್ಥಿತಿಗೆ ಬೀಡಿನಗುಡ್ಡೆಯಲ್ಲಿರತಕ್ಕ ತ್ಯಾಜ್ಯ ವಸ್ತುವನ್ನು ಮಲ್ಪೆ ಸಮುದ್ರ ದಂಡೆಯ ಮೇಲೆ ಕಳುಹಿಸುತ್ತಿದ್ದೇವೆ ಅದಕ್ಕೆ ಸುಮಾರು 10 ಲಕ್ಷ ರೂಪಾಯಿ ಖರ್ಚಾಗುತ್ತಿದೆ

**ಕೆ ಜಿ ಎಫ್ ಗೆ ಕೆ ಯು ಐ ಡಿ ಎಫ್ ಸಿ ನಿಧಿಯಿಂದ ಹಣ**

134(879) ಶ್ರೀ ಎಸ್ ರಾಜೇಂದ್ರನ್ (ಕೆ ಜಿ ಎಫ್) ಮಾನ್ಯ ಪೌರಾಡಳಿತ ಹಾಗೂ ಕೆ ಯು ಐ ಡಿ ಎಫ್ ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ ಯು ಐ ಡಿ ಎಫ್ ಸಿ ನಿಧಿಯಿಂದ ಕೋಲಾರ ಜಿಲ್ಲೆಯನ್ನು ಅದರಲ್ಲೂ ಮುಖ್ಯವಾಗಿ ಕೆ ಜಿ ಎಫ್ ಪಟ್ಟಣವನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಆ) ಹಾಗಿದ್ದಲ್ಲಿ, ಕೈಗೊಂಡ ಯೋಜನೆಗಳ ವಿವರಗಳನ್ನು ಒದಗಿಸುವುದು,

ಇ) ಏ ಡಿ ಬಿ ಮೂಲಕ ಪಡೆದಿರುವ ಹಣ?

ಶ್ರೀ ಎಸ್ ಆರ್ ಮೋರೆ (ಪೌರಾಡಳಿತ ಹಾಗೂ ಕೆ ಯು ಐ ಡಿ ಎಫ್ ಸಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

**ಶ್ರೀ ಎಸ್ ರಾಜೇಂದ್ರನ್** ಮಾನ್ಯ ಅಧ್ಯಕ್ಷರೆ, ನಾನು ಸಿಂಪಲ್ ಪ್ರಶ್ನೆ ಕೇಳಿದ್ದೇನೆ Whether there is any proposal before the Government to develop Kolar district, Particularly the KGF under the KUIDFC funds? ಸರ್ಕಾರದ ಉತ್ತರ ಏನೆಂದರೆ, "ಇಲ್ಲ" ಅದರ ಜೊತೆಗೆ, "B" If so, the details of the projects undertaken? Does not arise C The amount raised through the ADB Bank? Does not arise ಈ ರೀತಿಯ ಉತ್ತರ ಸರ್ಕಾರದಿಂದ ಬಂದರೆ, What for this Department should have in this State? ಇದಕ್ಕೆ ಉತ್ತರ ಕೊಡಿ

**ಶ್ರೀ ಎಸ್ ಆರ್ ಮೋರೆ** ಮಾನ್ಯ ಅಧ್ಯಕ್ಷರೆ, ಕೆ ಜಿ ಎಫ್ ಗೆ ನಾವು ಗವರ್ನಮೆಂಟ್ ಆಫ್ ಇಂಡಿಯಾದ ಐ ಡಿ ಎಸ್ ಎಂ ಟಿ ಪ್ರಕಾರ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ ಸುಮಾರು 550 ಲಕ್ಷ ರೂಪಾಯಿ ಅದರಲ್ಲಿ ಏನಿದೆಯೆಂದರೆ, ಒಂದು ಕಲ್ಯಾಣ ಮಂಟಪ, ಒಂದು ಸ್ಟೇಡಿಯಂ, ಒಂದು ಮಳಿಗೆ ಮತ್ತು ರಸ್ತೆ ಅಭಿವೃದ್ಧಿ ಮಾಡುವುದು ಈಗಾಗಲೇ ನಾವು ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ ಆದರೆ, ಅವರು ಡೀಟೈಲ್ಸ್ ಕೇಳಿದ್ದಾರೆ ಕೆ ಜಿ ಎಫ್ ನವರು ಡೀಟೈಲ್ಸ್ ಕಳುಹಿಸಿಕೊಟ್ಟರೆ, ಕೆಲಸ ಆರಂಭ ಮಾಡುತ್ತೇವೆ

**ಶ್ರೀ ಎಸ್ ರಾಜೇಂದ್ರನ್** ಎಲ್ಲಿಗೆ ಕಳುಹಿಸಿದಿರಿ, ಏಕೆ ಕಳುಹಿಸಿದಿರಿ, ಯಾವಾಗ ಕಳುಹಿಸಿದಿರಿ, ನಾನು ಕೇಳಿರುವುದೇನು? ಕೆ ಯು ಐ ಡಿ ಎಫ್ ಸಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಫಂಡ್ ಬಗ್ಗೆ ಕೇಳಿದ್ದೇನೆ ಯಾವಾಗ ಕಳುಹಿಸಿದ್ದೀರಿ?

**ಶ್ರೀ ಎಸ್ ಆರ್ ಮೋರೆ** ಕೆ ಯು ಐ ಡಿ ಎಫ್ ಸಿ ಪ್ಯಾರಾಮೀಟರ್ ಪ್ರಕಾರ ನಿಮ್ಮ ಕೆ.ಜಿ ಎಫ್ ಅಲ್ಲಿ ಬರುವುದೇ ಇಲ್ಲ ಇಲ್ಲಿ ಪ್ರಾಜೆಕ್ಟ್ ಮಾಡಬೇಕಾದರೆ ಒಂದು ಪ್ಯಾರಾ ಮೀಟರ್ ಇದೆ ಎ ಡಿ ಬಿ ದಾಗಲೀ, ವರ್ಲ್ಡ್ ಬ್ಯಾಂಕಿನದಾಗಲೀ

**ಶ್ರೀ ಎಸ್ ರಾಜೇಂದ್ರನ್** ಅದು ಏಕೆ ಬರುವುದಿಲ್ಲ? what for the Department, when that is not entitled to my KGF, ಆ ಕಮಿಟಿಯೇ ಬೇಡ ಡಿಸಾಲ್ವ್ ಮಾಡಿ ಆ ಡಿಪಾರ್ಟ್‌ಮೆಂಟೇ ಬೇಡ ಕ್ಲೋಸ್ ಮಾಡಿ When the department is not useful to my city, what for that? ನೀವೇ ಹೇಳುತ್ತೀರಿ ಅದು ಏಕೆ ಬರುವುದಿಲ್ಲ? ಅದು ಬಂದರೆ untouchable ಆಗುತ್ತದೆಯೇ?

**ಶ್ರೀ ಎಸ್ ಆರ್ ಮೋರೆ** ನಿಮ್ಮ ಕೆ ಜಿ ಎಫ್ ಸಣ್ಣ ಪಟ್ಟಣ ಇರುವುದರಿಂದ ನಿಮಗೆ ಸಂಪನ್ಮೂಲ ಕಡಿಮೆ ಇರುತ್ತದೆ ಒಂದು ಪ್ಯಾರಾ ಮೀಟರ್ ಹಾಕಿಕೊಂಡಿದ್ದೇವೆ, ಆ ಪ್ರಕಾರ ನೀವು ಎಲಿಜಿಬಿಲಿಟಿ ಇಲ್ಲ ಇವರು ಕೆ ಯು ಐ ಡಿ ಎಫ್ ಸಿ ಫಂಡ್ ಕೇಳಬೇಕಾದರೆ, ಅಲ್ಲಿ ಸಂಪನ್ಮೂಲ ಜಾಸ್ತಿ ಇರಬೇಕಾಗುತ್ತದೆ ಕೋಟಿಗಟ್ಟಲೆ ಇರಬೇಕಾಗುತ್ತದೆ ಆದರೆ, ಕೋಟಿಗಟ್ಟಲೆ ಹಣ ಅಲ್ಲಿ ಖರ್ಚು ಮಾಡಬಹುದು ಆದರೆ, ಎ ಡಿ ಬಿ ಪ್ರಾಜೆಕ್ಟ್‌ನಲ್ಲೂ ತಮ್ಮದು ಎಲಿಜಬಿಲಿಟಿ ಇಲ್ಲ ಮತ್ತೆ ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್‌ನಲ್ಲೂ ಎಲಿಜಬಿಲಿಟಿ ಇಲ್ಲ ಆದರೂ, ನಾವು ಕೈಬಿಟ್ಟಿಲ್ಲ ನಾನು ಕೇಂದ್ರ ಸರ್ಕಾರದ ಐ ಡಿ ಎಸ್ ಎಂ ಟಿ ಯೋಜನೆಯಲ್ಲಿ ತೆಗೆದುಕೊಂಡು, ನಾವು ಮಾಡುತ್ತಾ ಇದ್ದೇವೆ ಸುಮಾರು 550 ಲಕ್ಷ ರೂ ಎಸ್ಟಿಮೇಟನ್ನು ಈಗಾಗಲೇ ರೆಡಿ ಮಾಡಿದ್ದೇವೆ ಅದರ ಪ್ರಕಾರ ಕಲ್ಯಾಣ ಮಂಟಪ, ಸ್ಟೇಡಿಯಂ ಮತ್ತು ನಿಮ್ಮ ರೋಡುಗಳನ್ನು ಮಾಡಿಕೊಡುತ್ತೇವೆ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಹಾಗಾದರೆ, ಸಂಪನ್ಮೂಲ ಕೊರತೆ ಇರತಕ್ಕಂಥ ಮತ್ತು ಸಂಪನ್ಮೂಲಗಳಿಲ್ಲದೇ ಇರತಕ್ಕಂಥ ಹಿಂದುಳಿದಂಥ ಪಟ್ಟಣಗಳು ಮತ್ತು ನಗರಗಳಿದ್ದರೆ ಅಲ್ಲಿ ನೀವೇನೂ ಅಭಿವೃದ್ಧಿ ಮಾಡುವುದಿಲ್ಲವೆಂದು ಹೇಳಿದರೆ, ಅಲ್ಲಿ ಹಿಂದುಳಿದವರು ಹಾಗೆಯೇ ಇರಬೇಕೇ?

**ಶ್ರೀ ಎಸ್ ಆರ್ ಮೋರೆ** ಕರ್ನಾಟಕ ರಿಫಾರ್ಮ್ಸ್ ಪ್ರಾಜೆಕ್ಟ್ಸ್ ಇದೆ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಕೆ ಜಿ ಎಫ್ ಗೆ ಯಾವುದು ಅನ್ವಯವಾಗುತ್ತದೆ ಎಂಬುದನ್ನಾದರೂ ನೀವು ಹೇಳಿ

**ಶ್ರೀ ಎಸ್ ಆರ್ ಮೋರೆ** ಐ ಡಿ ಎಫ್ ಸಿ ಯೋಜನೆಯಲ್ಲಿ ಈಗಾಗಲೇ ಕೆಲಸ ನಡೆಯುತ್ತಿದೆ

111-46 **Sri S Rajendran .** It is a very small project, why don't you take a big project ... KGF ...

**Sri S R. More** KGF city is not come under Asian Development Bank You don't have so much resources

**ಅಧ್ಯಕ್ಷರು** ಮಾನ್ಯ ರಾಜೇಂದ್ರನ್‌ರವರೆ, ಸಚಿವರು ಉತ್ತರ ಕೊಟ್ಟಿದ್ದಾರೆ ನೀವು ಕೇಳಿದ್ದಕ್ಕೆಲ್ಲಾ ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಅವರು ಸ್ಪಷ್ಟವಾಗಿ ಹೇಳಿದ್ದಾರೆ ಕೆಲವು ಪ್ರಾಜೆಕ್ಟ್ಸ್ ಏನಿವೆ, ಅದರಲ್ಲಿ ಬರುವುದಿಲ್ಲ ನಿಮ್ಮ ಕೆ ಜಿ ಎಫ್ ಯಾವ ಯೋಜನೆಯಲ್ಲಿ ಬರುತ್ತದೋ ಅದಕ್ಕೆ 550 ಲಕ್ಷ ರೂ ಕೊಡುತ್ತೇವೆಂದು ಹೇಳಿದ್ದಾರೆ ಇನ್ನೇನು ಬಯಸುತ್ತೀರಿ ಅವರಿಂದ

**Sri S Rajendran** I request my Hon'ble Minister to take up right now a big project There is no infrastructure in KGF What maximum you can do for my city you come forward and assure on this floor of the House

**ಶ್ರೀ ಎಸ್ ಆರ್ ಮೋರೆ** ಪರಿಶೀಲನೆ ಮಾಡುತ್ತೇನೆ

Sri S Rajendran You please assure this House Something should be done to develop my city

**ಶ್ರೀ ಎಸ್ ಆರ್ ಮೋರೆ** ಐ ಡಿ ಎಸ್ ಎಂ ಟಿ ಪ್ರಕಾರ ನಾವು ಈಗಾಗಲೇ ಕೆಲಸವನ್ನು ಆರಂಬ ಮಾಡಿದ್ದೇವೆ ನಿಮ್ಮ ಮುನಿಸಿಪಾಲಿಟಿಯವರಿಗೆ, ಡೆಲ್ಲಿಯವರು ಕ್ಲಾರಿಫಿಕೇಷನ್ ಕೇಳಿದ್ದಾರೆ, ಈ ವಾರ ಕ್ಲಾರಿಫಿಕೇಷನ್ ಕ್ಲಿಯರ್ ಮಾಡಿದರೆ, ಮುಂದಿನ ವಾರವೇ ಶುರು ಮಾಡುತ್ತೇವೆ

**Sri S Rajendran** If decision is not taken in the right time, you supersede the Municipality For the past 4 1/2 years no development had taken place at all

**ಶ್ರೀ ಎಸ್ ಆರ್ ಮೋರೆ** ಆ ಮುನಿಸಿಪಾಲಿಟಿಗೆ ಸಂಬಂಧಿಸಿದ ಅಧಿಕಾರಿಯನ್ನು ಇವತ್ತೇ ಕಳುಹಿಸುತ್ತೇನೆ.

## ಗೌರಿಬಿದನೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳಿಗೆ ನಿರ್ಮಿತವಾದ ಷೆಡ್ಡುಗಳನ್ನು ಕೈಗಾರಿಕೇತರ ಉದ್ದೇಶಗಳಿಗೆ ಬಳಕೆ

135(883) ಶ್ರೀ ಶಿವಶಂಕರರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳನ್ನು ತೆರೆಯಲು ವಿಶ್ವ ಯೋಜನೆಯಡಿಯಲ್ಲಿ 4 ಕಡೆಗಳಲ್ಲಿ ಶೆಡ್‌ಗಳನ್ನು ನಿರ್ಮಿಸಿ ಸಂಬಂಧಪಟ್ಟವರಿಗೆ ಈ ಹಿಂದೆ ನೀಡಲಾಗಿದೆ ಶೆಡ್‌ಗಳು ಸೂಚಿತ ಉದ್ದೇಶಕ್ಕೆ ಉಪಯೋಗಿಸದೇ ಅಕ್ರಮ ಕೆಲಸಗಳಿಗೆ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಷೆಡ್‌ಗಳನ್ನು ಅನ್ಯ ಉದ್ದೇಶಗಳಿಗೆ (ಕೈಗಾರಿಕೇತರ) ಬಳಸಲು ಕಾನೂನಿನಲ್ಲಿ ಅವಕಾಶವಿದೆಯೆ,

ಇ) ಇಲ್ಲದಿದ್ದಲ್ಲಿ ಇಂತಹ ಷೆಡ್‌ಗಳನ್ನು ಮುಟ್ಟುಗೋಲು ಹಾಕಲು ಕಾನೂನಿನಲ್ಲಿ ಅವಕಾಶವಿಲ್ಲವೇ,

ಈ) ಇದ್ದಲ್ಲಿ ಕ್ರಮ ತೆಗೆದುಕೊಳ್ಳದ ಅಧಿಕಾರಿಗಳ ಮೇಲೆ ಸರ್ಕಾರ ಸೂಕ್ತ ಕ್ರಮ ಜರುಗಿಸುವುದು?

ಶ್ರೀ ಪಿ ಜಿ ಆರ್ ಸಿಂಧ್ಯಾ (ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಅಭಿವೃದ್ಧಿ ಸಚಿವರು)

ಅ) ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ವಿಶ್ವ ಯೋಜನೆಯಡಿಯಲ್ಲಿ 6 ಶೆಡ್‌ಗಳನ್ನು ನಿರ್ಮಿಸಲಾಗಿದ್ದು, ಶೆಡ್‌ಗಳನ್ನು ಸಂಘ / ಸಂಸ್ಥೆಗಳಿಗೆ / ಘಟಕಗಳಿಗೆ ಹಂಚಿಕೆ ಮಾಡಲಾಗಿದೆ ಶೆಡ್‌ಗಳನ್ನು ಸೂಚಿತ ಉದ್ದೇಶಕ್ಕೆ ಉಪಯೋಗಿಸದೇ ಅಕ್ರಮ ಕೆಲಸಗಳಿಗೆ ಬಳಸುತ್ತಿರುವ ಬಗ್ಗೆ ಯಾವುದೇ ಪ್ರಕರಣ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ

ಆ) ಅನ್ಯ ಉದ್ದೇಶಗಳಿಗೆ ಶೆಡ್‌ಗಳನ್ನು ಬಳಸಲು ಯೋಜನೆಯಡಿಯಲ್ಲಿ ಅವಕಾಶವಿರುವುದಿಲ್ಲ

ಇ) ಉದ್ದೇಶಿತ ಚಟುವಟಿಕೆಗಾಗಿ ಶೆಡ್‌ನ್ನು ಹಂಚಿಕೆ ಪಡೆದವರು ವಿನಿಯೋಗಿಸಿಕೊಳ್ಳದೇ ಅನ್ಯ ಉದ್ದೇಶಕ್ಕಾಗಿ ಬಳಸಿಕೊಂಡಲ್ಲಿ ಹಂಚಿಕೆಯನ್ನು ಉದ್ದುಪಡಿಸಲು ಅವಕಾಶವಿರುತ್ತದೆ

ಈ) ಅನ್ಯ ಉದ್ದೇಶಕ್ಕಾಗಿ ಶೆಡ್‌ಗಳನ್ನು ಬಳಸುತ್ತಿರುವ ಬಗ್ಗೆ ದೂರುಗಳು ಇಲಾಖೆಗೆ ಬಂದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ವಿಶ್ವ ಶೆಡ್‌ಗಳ ಹಕ್ಕುದಾರರಾದ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಅವರ ಗಮನಕ್ಕೆ ತರಲಾಗುವುದು

**ಶ್ರೀ ಎನ್ ಹೆಚ್ ಶಿವಶಂಕರರೆಡ್ಡಿ** ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ಆರು ವಿಶ್ವ ಶೆಡ್‌ಗಳು ಇವೆ ಅದರಲ್ಲಿ 3–4 ಷೆಡ್‌ಗಳಲ್ಲಿ ಯಾವುದೇ ಕೈಗಾರಿಕಾ ಚಟುವಟಿಕೆ ನಡೆಯುತ್ತಾ ಇಲ್ಲ ಕಳೆದ 3–4 ವರ್ಷಗಳಿಂದ ಬೇರೆ ಚಟುವಟಿಕೆಗಳಿಗೆ ಈ ಷೆಡ್‌ಗಳನ್ನು ಉಪಯೋಗಿಸುತ್ತಿದ್ದಾರೆ ನಾನು ಗಮನಿಸಿ, ಸಂಬಂಧಿಸಿದ ಇಲಾಖೆಯವರಿಗೆ ಸೂಚನೆ ಕೊಟ್ಟರೂ, ಅಲ್ಲಿ ಯಾವುದೇ ಕೈಗಾರಿಕಾ ಚಟುವಟಿಕೆಗಳು ನಡೆಯುತ್ತಾ ಇಲ್ಲ ಆದ್ದರಿಂದ, ಅವುಗಳನ್ನು ಬೇರೆಯವರಿಗೆ ಕೊಡತಕ್ಕ ವ್ಯವಸ್ಥೆ ಮಾಡಬೇಕು ಹಾಗೆಯೇ, ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೆರಡು ಪ್ರಶ್ನೆಗಳನ್ನು ಕೇಳಿದ್ದೆ ಒಂದು ಲಿಖಿತ ರೂಪದ ಪ್ರಶ್ನೆಗಳ ಪಟ್ಟಿಯಲ್ಲಿ ಬಂದಿದೆ ನಮ್ಮ ಪಟ್ಟಣದ ಪಕ್ಕದಲ್ಲಿರತಕ್ಕ ಹಿರೇಬಿದನೂರು ಹತ್ತಿರ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಇದೆ ಅಲ್ಲಿ ಸುಮಾರು 10–15 ನಿವೇಶನಗಳನ್ನು ಕೈಗಾರಿಕೆಗಳನ್ನು ತೆಗೆಯುವುದಕ್ಕೆ ಹಂಚಿದ್ದಾರೆ ರಿಜಿಸ್ಟ್ರೇಷನ್ ಮಾಡಿಕೊಟ್ಟಿದ್ದಾರೆ ಸುಮಾರು 4–5 ವರ್ಷಗಳಾದರೂ ಕೂಡ ಅಲ್ಲಿ ಯಾವುದೇ ಇಂಡಸ್ಟ್ರೀಸ್ ಬಂದಿಲ್ಲ ಹಾಗಾಗಿ, ಅದನ್ನು ಮುನ ಇಲಾಖೆಗೆ ತೆಗೆದುಕೊಂಡು, ಬೇರೆ ಯಾರು ಇಂಡಸ್ಟ್ರೀಸ್ ಮಾಡುವುದಕ್ಕೆ ತಯಾರು ಇದ್ದಾರೆ, ಅವರಿಗೆ ಕೊಡತಕ್ಕ ಕೆಲಸವನ್ನು ಮಾಡುತ್ತಾರೆಯೇ ಎಂದು ನಾನು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

**ಶ್ರೀ ಪಿ ಜಿ ಆರ್ ಸಿಂಧ್ಯಾ** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಸಲಹೆಗಳನ್ನು ನಾನು ಗಮನದಲ್ಲಿಟ್ಟುಕೊಂಡು ಅವರನ್ನು ಕರೆಸಿ ಕುಳಿತು ಮಾತನಾಡಿ ಅಧಿವೇಶನದ ನಂತರ ಆ ಸಮಸ್ಯೆಯನ್ನು ಬಗೆ ಹರಿಸಿಕೊಡುತ್ತೇನೆ

**ಅಧ್ಯಕ್ಷರು** ಪ್ರಶ್ನೋತ್ತರ ಮುಗಿಯಿತು ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ**
**ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಮಧ್ಯಮ ಮತ್ತು ಸಣ್ಣ ಕೈಗಾರಿಕೆ ಸಚಿವರು)** ಮಾನ್ಯ ಅಧ್ಯಕ್ಷರೆ ದಿನಾಂಕ 29–7–2004ರ ಪಟ್ಟಿ 8ರಲ್ಲಿನ ಲಿಖಿತ ಮೂಲಕ ಉತ್ತರಿಸುವ 126 ಪ್ರಶ್ನೆಗಳ ಪೈಕಿ 116 ಉತ್ತರಗಳನ್ನು ಹಾಗೂ ದಿನಾಂಕ 30–7–2004ರ 9ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 40 ಪ್ರಶ್ನೆಗಳ ಪೈಕಿ 34 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

**ಅಧ್ಯಕ್ಷರು** ಮಂಡಿಸಲಾಯಿತು

**3 ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಹಾಗೂ ಮೂಲ ಭೂತ ಸೌಕರ್ಯ ಅಭಿವೃದ್ಧಿ ಸಚಿವರು)** ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ

**I 1984ರ ಕರ್ನಾಟಕ ಲೋಕಾಯುಕ್ತರ ಅಧಿನಿಯಮ ಪರಿಚ್ಛೇದ 12(7)ರ ಅನ್ವಯ**

1 ಶ್ರೀ ಪಿ ಕೆ ಗಾರ್ಗ, ಐ ಪಿ ಎಸ್ (ಕೆ ಎನ್ 89) ಇವರ ವಿರುದ್ಧ ಇಲಾಖಾ ವಿಚಾರಣೆಯ ಉಪ ಲೋಕಾಯುಕ್ತರವರ ವಿಶೇಷ ವರದಿ

**1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ನೇ ಮತ್ತು 300 (5)ನೇ ಪ್ರಕರಣದ ಮೇರೆಗೆ**

1 ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಬೆಂಗಳೂರು 1999–2000ನೇ ಸಾಲಿನ ವಾರ್ಷಿಕ ಲೆಕ್ಕ ತನಿಖಾ ವರದಿ

2 ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2002–03ನೇ ಸಾಲಿನ ವಾರ್ಷಿಕ ವರದಿ

3 ಧಾರವಾಡ ಜಿಲ್ಲಾ ಪಂಚಾಯತ್‌ನ 2000–01ನೇ ಸಾಲಿನ ಲೆಕ್ಕಪತ್ರಗಳು ಮತ್ತು ಲೆಕ್ಕಪತ್ರಗಳ ಮೇಲಿನ ಪ್ರತ್ಯೇಕ ಲೆಕ್ಕ ಪರಿಶೋಧನಾ ವರದಿ

**1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ**

1 ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ, ಹಾವೇರಿಯ 2002–03ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

2 ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2002–03ನೇ ಸಾಲಿನ ಲೆಕ್ಕಪರಿಶೋಧನಾ ವರದಿ

3 ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರ, ಗದಗದ 2002-03ನೇ ಸಾಲಿನ ಲೆಕ್ಕಪರಿಶೋಧನಾ ವರದಿ

4 ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ನವನಗರ, ಹುಬ್ಬಳ್ಳಿಯ 2002-03ನೇ ಸಾಲಿನ ಲೆಕ್ಕಪರಿಶೋಧನಾ ವರದಿ

5 ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿಯ 2002-03ನೇ ಸಾಲಿನ ಲೆಕ್ಕಪರಿಶೋಧನಾ ವರದಿ

6 ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು 2002-03ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

7 ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆಯ 2003-04ನೇ ಸಾಲಿನ ವಾರ್ಷಿಕ ವರದಿ

8 ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು 2002-03ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಅವರ ಪರವಾಗಿ

**II 1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಅಧಿನಿಯಮ 25ರನ್ವಯ**

1 ಅಚ್ಚುಕಟ್ಟು ಅಭಿವೃದ್ಧಿ ಪ್ರಾದಿಕಾರ ಕಾವೇರಿ ಜಲಾನಯನ ಯೋಜನೆಗಳು ಮೈಸೂರಿನ 2003-04ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನ

ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) ಅವರು

**III 1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ**

1 ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತದ 2002-03ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ

ಶ್ರೀ ಪಿ ಜಿ ಆರ್ ಸಿಂಧ್ಯಾ (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೆ (ಲೋಕೋಪಯೋಗಿ ಮತ್ತು ಇಂಧನ ಸಚಿವರು) ಪರವಾಗಿ

**IV 1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ**

1 ಗುಲ್ಬರ್ಗಾ ವಿದ್ಯುತ್ ಸರಬರಾಜು ನಿಗಮ ನಿಯಮಿತದ 2002-03ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು ಮಂಡಿಸುತ್ತೇನೆ

ಅಧ್ಯಕ್ಷರು ಮಂಡಿಸಲಾಯಿತು

## 4 ಅರ್ಜಿಗಳನ್ನು ಒಪ್ಪಿಸುವುದು

**ಶ್ರೀ ಪ್ರಭಾಕರ ಬಂಗೇರ** ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದೆ ಇರುವಂತಹ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಶಿಬಾಡಿ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ರಸ್ತೆಗೆ ಡಾಂಬರೀಕರಣದ ಬಗ್ಗೆ ಸದನಕ್ಕೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ

**ಅಧ್ಯಕ್ಷರು :** ಒಪ್ಪಿಸಲಾಗಿದೆ

## 5 ಅಧ್ಯಕ್ಷರ ಅಪ್ಪಣೆ ಮೇರೆಗೆ

## (1) ಶ್ರೀ ತಿಮ್ಮಪ್ಪನಾಯಕನ ಕೊಲೆ ಬಗ್ಗೆ ಹಾಗೂ ಇತರೆ ವಿಷಯಗಳ ಬಗ್ಗೆ ಸರ್ಕಾರದಿಂದ ಉತ್ತರ ಪಡೆದಿರುವ ಬಗ್ಗೆ

ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ ನಾವು ಈ ಹಿಂದೆ ಈ ಸದನದಲ್ಲಿ ಶ್ರೀ ತಿಮ್ಮಪ್ಪ ನಾಯಕನ ಕೊಲೆ ಬಗ್ಗೆ ಪ್ರಸ್ತಾಪ ಮಾಡಿದ್ದೆವು ಕಳೆದ 4 ದಿವಸಗಳಿಂದ ಆ ಕ್ಷೇತ್ರದ ಶಾಸಕರು ಭಿಕ್ಷೆ ಬೇಡುವ ರೀತಿಯಲ್ಲಿ ಕೇಳುವಂತೆ ಆಗಿದೆ ಮಾನ್ಯ ಅಧ್ಯಕ್ಷರೆ ಸಾಮಾನ್ಯವಾಗಿ ನಡೆದುಕೊಂಡು ಬಂದಿರುವ ಪದ್ಧತಿ ಪ್ರಕಾರ ಈ ತರಹ ಪ್ರಮುಖವಾದ ವಿಷಯಗಳು ಇದ್ದರೆ ತಕ್ಷಣ ಅದಕ್ಕೆ ಉತ್ತರ ಕೊಡಿಸುವಂತಹ ವ್ಯವಸ್ಥೆಯಾಗುತ್ತಿತ್ತು ಏಕೆ ಅದು ಆಗುತ್ತಿಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ ಯಾವುದು ಪೆಂಡಿಂಗ್ ಇದೆ ಶೂನ್ಯವೇಳೆಯಲ್ಲಿ ಉತ್ತರ ಕೊಡುವುದು ಅದನ್ನು ಸರ್ಕಾರ ಕೊಡಬೇಕಲ್ಲಾ ಇವತ್ತು ಕೊನೆಯ ದಿವಸ ದಯಮಾಡಿ ಶ್ರೀ ತಿಮ್ಮಪ್ಪನಾಯಕನ ಕೊಲೆ ಬಗ್ಗೆ ಒಂದು ಹೇಳಿಕೆಯನ್ನು ಸರ್ಕಾರದ ಕಡೆಯಿಂದ ಕೊಡಿಸಿ

**ಅಧ್ಯಕ್ಷರು** ದಯಮಾಡಿ ಎಲ್ಲರೂ ಹೀಗೆ ಎದ್ದು ನಿಂತುಕೊಂಡರೆ ಹೇಗೆ? ಶ್ರೀ ತಿಮ್ಮಪ್ಪ ನಾಯಕನ ಕೊಲೆ ಮತ್ತು ಇತರೇ ಬೇರೆ ಬೇರೆ ವಿಷಯಗಳ ಸಂಬಂಧದಲ್ಲಿ ಸರ್ಕಾರ ಉತ್ತರ ಕೊಡುತ್ತದೆಂದು ನಾನು ಸಭೆಗೆ ತಿಳಿಸಲಾಗಿತ್ತು ಇಂದು ಕೊನೆಯ ದಿನ ಎಲ್ಲಾ ಸದಸ್ಯರು ಉತ್ತರ ಬಯಸುತ್ತಿದ್ದಾರೆ ದಯಮಾಡಿ ಈ ಸಭೆ ಮುಗಿಯುವುದರೊಳಗೆ ಮಾನ್ಯ ಸದಸ್ಯರಿಗೆ ಉತ್ತರ ಕೊಡಿಸುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಮಾನ್ಯ ಅಧ್ಯಕ್ಷರೆ ನನ್ನ ಕ್ಷೇತ್ರದಲ್ಲಿ ಜಯ ಸಾವಿನ ಪ್ರಕರಣದ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ ಕಳೆದ ಸೋಮವಾರವೇ ಉತ್ತರ ಕೊಡಬೇಕಾಗಿತ್ತು

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಮುಖ್ಯಮಂತ್ರಿಗಳೆ ಇಲ್ಲಿ ಕೆಲವು ಪ್ರಮುಖವಾದ ವಿಷಯಗಳ ಪ್ರಸ್ತಾಪವಾಗುತ್ತದೆ ತಕ್ಷಣ ಶೂನ್ಯವೇಳೆಯಲ್ಲಿ ಅದಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಅಧ್ಯಕ್ಷರು ಉತ್ತರ ಕೊಡಿಸುತ್ತೇವೆಂದು ಹೇಳುತ್ತಾರೆ ಅಧಿಕಾರಿಗಳಾಗಲೀ ಮಂತ್ರಿಗಳಾಗಲೀ ಇದರ ಬಗ್ಗೆ ಏಕೆ ಸೀರಿಯಸ್ ಆಗಿ ತೆಗೆದುಕೊಳ್ಳುತ್ತಿಲ್ಲ ಎಂಬುದು ಗೊತ್ತಾಗುತ್ತಿಲ್ಲ ಏನೋ ಒಂದು ಜಾತ್ರೆ ನಡೆದುಕೊಂಡು ಹೋಗುವ ಹಾಗೆ ನಡೆದುಕೊಂಡು ಹೋಗುತ್ತಿದೆ ಸಾಮಾನ್ಯವಾಗಿ ಇಷ್ಟು ವರ್ಷ ತಮಗೂ ಅನುಭವ ಇದೆ ತಾವು ನೋಡಿದ್ದೀರಿ ತಕ್ಷಣ ಉತ್ತರ ಕೊಡುವುದಕ್ಕೆ ಆಗದಿದ್ದರೂ ಆಮೇಲೆ ಆದರೂ ಉತ್ತರ ಕೊಡುವುದು ಸ್ವಾಭಾವಿಕವಾಗಿತ್ತು ಯಾರೂ ಫಾಲೋ ಆಫ್ ಮಾಡುತ್ತಿಲ್ಲ ಹೇಳುವವರು ಕೇಳುವವರು ಇಲ್ಲ ಅಧ್ಯಕ್ಷರು ಅಪ್ಪಣೆ ಮಾಡಿದ ಮೇಲೂ ಸಹ ನಿನ್ನೆಯೂ ಪ್ರಸ್ತಾಪ ಮಾಡಿದರು, ಮೊನ್ನೆಯೂ ಪ್ರಸ್ತಾಪ ಮಾಡಿದರು, ಅವರು ಉತರ ಕೊಡಿಸುತ್ತೇನೆಂದು ಹೇಳಿದರು ...ದ

ಸ್ಪಂದಿಸಬೇಕಲ್ಲಾ ಈ ಪದ್ಧತಿಗಳು ಮುಂದುವರೆದರೆ ಶಾಸಕರು ಅವರ ಕ್ಷೇತ್ರಕ್ಕೆ ಹೋಗಿ ಏನು ಉತ್ತರ ಕೊಡಬೇಕು ಜನರಿಗೆ ಇದು ಆ ಕಡೆ ಈ ಕಡೆ ಇರುವ ಎಲ್ಲಾ ಶಾಸಕರಿಗೂ ಸಂಬಂಧಪಟ್ಟ ವಿಷಯ ಆಮೇಲೆ ಸ್ಟಾರ್ಡ್ ಹಾಗೂ ಅನ್ ಸ್ಟಾರ್ಡ್ ಇವುಗಳಿಗೆ ಉತ್ತರ ಬರಬೇಕಲ್ಲಾ ಅದಕ್ಕೂ ಉತ್ತರ ಬರುತ್ತಿಲ್ಲ

**ಶ್ರೀ ಪಿ ಜಿ ಆರ್ ಸಿಂಧ್ಯಾ** ಮಾನ್ಯ ಅಧ್ಯಕ್ಷರೆ ಸ್ಟಾರ್ಡ್ ಇರಬಹುದು, ಅನ್ ಸ್ಟಾರ್ಡ್ ಇರಬಹುದು ಕೆಲವು ಇಡೀ ರಾಜ್ಯದ ವ್ಯಾಪ್ತಿಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿರುತ್ತಾರೆ ಅದರಲ್ಲಿ 3–4 ವರ್ಷದ ಮಾಹಿತಿಯನ್ನು ಕೇಳಿರತಕ್ಕಂಥಾದ್ದರ ಬಗ್ಗೆ ತಮ್ಮ ಅನುಮತಿಯನ್ನು ಕೋರಿ ಪತ್ರವನ್ನು ಮಂತ್ರಿಗಳು ನಾವು ಕೊಟ್ಟಿದ್ದೇವೆ ತಾವೂ ಸಹ ಅನುಮತಿ ಕೊಟ್ಟಿದ್ದೀರಿ ನಾವು ಅದನ್ನು ನಮ್ಮ ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಉತ್ತರಗಳು ಬರುತ್ತವೆ ಬಂದ ತಕ್ಷಣ ಗೌರವಾನ್ವಿತ ಸದಸ್ಯರಿಗೆ ಕಳುಹಿಸಿಕೊಡುತ್ತೇವೆ ಆದರೆ ಮಾನ್ಯ ಯಡಿಯೂರಪ್ಪನವರು ಒಂದು ವಿಚಾರವನ್ನು ಏನು ಎತ್ತಿದ್ದಾರೆ ಶೂನ್ಯ ವೇಳೆಯಲ್ಲಿ ಎತ್ತಿರತಕ್ಕಂಥ ಪ್ರಶ್ನೆಗಳಿಗೆ ಸರ್ಕಾರದಿಂದ ಸಮಂಜಸವಾದ ಉತ್ತರ ಬಂದಿಲ್ಲ ಎನ್ನುವುದು ನಾನೂ ಸಹ ಒಪ್ಪುತ್ತೇನೆ ಶೂನ್ಯ ವೇಳೆಯಲ್ಲಿ ಎತ್ತತಕ್ಕಂಥ ಪ್ರಶ್ನೆಗಳಿಗೆ ನಾವು ಉತ್ತರಗಳನ್ನು ಕೊಡಬೇಕಾಗುತ್ತದೆ ಒಂದು ನಿರ್ದಿಷ್ಟವಾದ ಭರವಸೆಯನ್ನು ನಾನು ತಮಗೆ ಕೊಡುತ್ತೇನೆ ತಾವು ಏನು ವಿಷಯಗಳನ್ನು ಎತ್ತಿದ್ದೀರಿ ಅದರ ಬಗ್ಗೆ ಸರ್ಕಾರ ಉತ್ತರ ಕೊಡುತ್ತದೆ ಈಗ ಮಾನ್ಯ ಜಯಪ್ರಕಾಶ್ ಹೆಗಡೆಯವರು ಒಂದು ಕೊಲೆ ಬಗ್ಗೆ ಹೇಳಿದರು ತಾವು ಒಂದು ಕೊಲೆ ಬಗ್ಗೆ ಹೇಳಿದ್ದೀರಿ ಅದರ ಬಗ್ಗೆ ಮಾನ್ಯ ಶಿವಾನಂದ ನಾಯಕ್‌ರವರೂ ಸಹ ಹೇಳಿದ್ದಾರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದರ ಬಗ್ಗೆ ಆಯಾಯ ಸಂಬಂಧಪಟ್ಟ ಅಧಿಕಾರಿಗಳೂ ಸಹ ಭಾಗವಹಿಸುತ್ತಿದ್ದಾರೆ ನಾವು ಕ್ರಮ ತೆಗೆದುಕೊಂಡಿದ್ದೇವೆ ತಮಗೆ ಉತ್ತರವನ್ನು ಕೊಡದೇ ಇರಬಹುದು ನಮ್ಮ ಕಡೆಯಿಂದ ಅದು ಪ್ರಮಾದ ಆಗಿದೆ ಉತ್ತರಗಳನ್ನು ಇವತ್ತು ಕೊಡಿಸೋಣ

**ಅಧ್ಯಕ್ಷರು** ಎಲ್ಲರೂ ಹೀಗೆ ನಿಂತುಕೊಂಡರೆ ಹೇಗೆ? ದಯಮಾಡಿ ಕುಳಿತುಕೊಳ್ಳಿ ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಮಾಡುತ್ತಾರೆ ದಯಮಾಡಿ ಕುಳಿತುಕೊಳ್ಳಿ

## (2) ತಿಮ್ಮಪ್ಪನಾಯಕನ ಕೊಲೆ ಬಗ್ಗೆ ಮುಖ್ಯಮಂತ್ರಿಗಳಿಂದ ಉತ್ತರ

**ಶ್ರೀ ಎನ್ ಧರ್ಮಸಿಂಗ್ (ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದ ಮೇಲೆ ಮಾನ್ಯ ಮಂತ್ರಿಗಳಾದ ಸಿಂಧ್ಯಾರವರು ಉತ್ತರ ಕೊಟ್ಟಿದ್ದಾರೆ ಉತ್ತರ ಸಿಗುತ್ತಿಲ್ಲ ಎನ್ನತಕ್ಕಂಥ ರೀತಿಯಲ್ಲಿ ಶೂನ್ಯವೇಳೆಯಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ ಆ ಬಗ್ಗೆ ನಮ್ಮ ಇಲಾಖೆಯ ಕಾರ್ಯದರ್ಶಿಗಳು ಅದನ್ನು ನೋಟ್ ಮಾಡಿಕೊಳ್ಳುತ್ತಾರೆ ನಾನು ಬೇರೆ ಬೇರೆ ವಿಚಾರಗಳಲ್ಲಿ ಸ್ವಲ್ಪ ತೊಡಗಿಸಿಕೊಂಡಿದ್ದೆ, ಆದರೆ ನಾನು ಅಧಿಕಾರಿಗಳ ಜೊತೆಯಲ್ಲಿ ಮಾತನಾಡತಕ್ಕಂಥ ಕಾಲದಲ್ಲಿ ಈ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀನಿವಾಸಗೌಡರು ಉತ್ತರ ಕೊಡಬೇಕೆಂದು ಹೇಳಿದ್ದೆ ಈಗಾಗಲೇ

ಸರ್ಕಾರದ ಕಡೆಯಿಂದ ಉತ್ತರ ರೆಡಿಯಾಗಿದೆ ಮತ್ತೆ ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟ ಹಾಗೆ ನಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು, ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗ್ಡೆಯವರು ಹೇಳಿದ್ದಾರೆ ಎಲ್ಲೆಲ್ಲಿ ಈ ರೀತಿ ಆಗಿದೆ ಆ ಬಗ್ಗೆ ಸರ್ಕಾರದ ಕಡೆಯಿಂದ ಉತ್ತರ ಕೊಡುತ್ತಿದ್ದೇವೆ ಇವತ್ತು ವಿಧಾನ ಸಭಾ ಸದಸ್ಯರಾದ ಶಿವಾನಂದ ನಾಯಕ್‌ರವರು ವಿಧಾನ ಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ ದಿನಾಂಕ 3–5–2004 ರಂದು 1–30 ಗಂಟೆಯಲ್ಲಿ ಶ್ರೀ ದೇವದಾಸ್ ಪ್ರೇಮಾನಂದ್ ಇವರು ಭಟ್ಕಳ್ ನಗರ ಠಾಣೆಗೆ ಹಾಜರಾಗಿ ದೂರು ನೀಡಿದ್ದು ಅದರ ಸಾರಾಂಶ ಏನೆಂದರೆ ನಾನು ಆಸ್ಪತ್ರೆಯಿಂದ ಮಾರುತಿ ವ್ಯಾನ್‌ನಲ್ಲಿ ಮನೆಗೆ ಹಿಂದಿರುಗುವಾಗ ಕಾಳಿಕಾ ಮಂದಿರದ ಹತ್ತಿರ ರಸ್ತೆ ಮೇಲೆ ಶ್ರೀ ತಿಮ್ಮಪ್ಪ ಹೊನ್ನಪ್ಪ ನಾಯಕ್ ಎನ್ನುವವರು ಬಿದ್ದಿರುವುದನ್ನು ನೋಡಿ ಅವರ ಸಂಬಂಧಿಕರಿಗೆ ತಿಳಿಸಿ ತಿಮ್ಮಪ್ಪ ನಾಯಕ್‌ನನ್ನು ಭಟ್ಕಳ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಿಸಿದ್ದರು ಆದರೆ ಇಲ್ಲಿ ಅವರು ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ ತಿಮ್ಮಪ್ಪನಾಯಕ್‌ರವರು ದಿನಾಂಕ 2–5–2004 ರಂದು ರಾತ್ರಿ 11–10 ಗಂಟೆಯಲ್ಲಿ ಮೃತಪಟ್ಟ ಬಗ್ಗೆ ಭಟ್ಕಳ್ ಠಾಣೆಯಲ್ಲಿ ಮೊಕದ್ದಮೆ 87 64 ಕಲಂ 302 ಐ ಪಿ ಸಿ ಮತ್ತು 325 (3)ನೇ ಆಕ್ಟ್ ಪ್ರಕಾರ ಪ್ರಕರಣ ದಾಖಲಿಸಿದ್ದು ಕೈಗೊಂಡ ತನಿಖೆ ವಿವರ ಈ ಕೆಳಗಿನಂತಿದೆ ಮರಣೋತ್ತರ ಪರೀಕ್ಷೆ ಕುರಿತು ವಿಜ್ಞಾನ ಪ್ರಯೋಗಾಲಯ ಕೊಟ್ಟ ವರದಿಯಂತೆ ಗನ್ ಶಾಟ್ ನೇರವಾಗಿ ಹೃದಯಕ್ಕೆ ಬಡಿದು ಮೃತಪಟ್ಟಿದ್ದು ಸದರಿ ಗಾಯುಗಳು ಶವ ಪರೀಕ್ಷೆಗಿಂತ ಮೊದಲೇ ಆಗಿದ್ದು ಹೊಸ ಗಾಯಗಳಾಗಿರುತ್ತವೆಂದು ಅಭಿಪ್ರಾಯ ನೀಡಿರುತ್ತಾರೆ ಮೃತನ ದೇಹದಲ್ಲಿ ಒಟ್ಟು 9 ಗಾಯಗಳು ಮತ್ತು ಅರೆಬೆಂದ 2 ಗಾಯಗಳು ಇರುತ್ತವೆ ಮೃತನ ದೇಹದಿಂದ ದೊರೆತಂತಹ ಗುಂಡುಗಳು ಮರಣೋತ್ತರ ಪರೀಕ್ಷೆ ವೇಳೆ ಸಂಗ್ರಹಿಸಲಾಗಿರುತ್ತವೆ ಅವುಗಳು ಎಫ್ ಎಸ್ ಎಲ್ ಬೆಂಗಳೂರಿಗೆ ಫ್ಯಾಲೆಟಿನ್ ಪರೀಕ್ಷೆಗೆ ಕಳುಹಿಸಿಕೊಡಲಾಗಿದೆ ಡೈರೆಕ್ಟರ್ ಎಫ್ ಎಸ್ ಐ ಇವರು ತಮ್ಮ ವರದಿ ದಿನಾಂಕ 21–5–04 ರಂದು 12 ಬೋರ್ ಕಾಟ್‌ಲೇಜ್‌ನಿಂದ 9 ರಿಂದ 15 ಫೀಟ್ ಅಂತರದಿಂದ ಮಸಲು ಗುಂಡು ಹಾರಿಸಲಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ ಈ ತನಿಖೆಯನ್ನು ಪ್ರಾರಂಭಿಸಿದಾಗ ಪೊಲೀಸರು ಯಾವುದೇ ಸುಳಿವು ಅಥವಾ ಮಾಹಿತಿ ಲಭ್ಯವಿರುವುದಿಲ್ಲ ಮತ್ತೆ ಕೃತ್ಯ ನಡೆದ ಸ್ಥಳದಲ್ಲಿ ಯಾವುದೇ ತರಹದ ಸುಳಿವು ಸಹ ಆರೋಪಿಗಳು ಬಿಟ್ಟು ಹೋಗಿರುವುಧಿಲ್ಲ ಆದಾಗ್ಯೂ ಸಹ ಕೆಲವು ಅತೃಪ್ತ ಸಮಾಜಘಾತಕ ಶಕ್ತಿಗಳ ಶಾಮೀಲು ಇರುವುದರಿಂದ ಸವಿಸ್ತಾರವಾದ ತನಿಖೆ ಕೈಗೊಳ್ಳಲಾಗಿದೆ ಈ ವ್ಯಕ್ತಿಗಳು ಬೆಂಗಳೂರಿನಲ್ಲಿ ಪ್ಯಾಲೀಗ್ರಾಫಿಕ್ ಟೆಸ್ಟ್ ಮತ್ತು ಬೇರೆ ಟೆಸ್ಟ್‌ಗಳಿಗೆ ಒಳಪಡಿಸಲಾಗಿದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಗನ್ ಲೈಸೆನ್ಸ್ ಹೊಂದಿರುವ ಎಲ್ಲಾ ವ್ಯಕ್ತಿಗಳನ್ನು ಪರಿಶೀಲನೆಗೆ ಒಳಪಡಿಸಲಾಗಿದೆ ಅವರ ಲೈಸೆನ್ಸ್ ಹಾಗೂ ಇನ್ನಿತರೆ ದಾಖಲೆಗಳನ್ನೂ ಸಹ ಪರಿಶೀಲಿಸಲಾಗುತ್ತಿದೆ

ಈ ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ತನಿಖೆಯನ್ನು ಮಾಡುತ್ತಿದ್ದಾರೆ ಮಾನ್ಯ ಅಧ್ಯಕ್ಷರೆ, ಈಗ ಹೇಳತಕ್ಕಂಥಾದ್ದು ಏನೆಂದರೆ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ ಇದು ಸರ್ಕಾರಕ್ಕೆ ಬಂದಂತಹ ವರದಿ ಯಾವಾಗಲೂ ಸಹ ನಮ್ಮ ಪೊಲೀಸ್ ಅಧಿಕಾರಿಗಳು ಕೊಟ್ಟಂತಹ ವರದಿಯನ್ನು ನಾನು ಹೇಳಿದ್ದೇನೆ ಆದರೂ ಕೂಡ ಸಮಕ್ಷಮವಾಗಿ ನಾನು ಡಿ ಜಿ ಪಿ ಯವರು ಮತ್ತು ಅಲ್ಲಿರತಕ್ಕಂಥ ಎಸ್ ಪಿ ಯವರನ್ನು ಖುದ್ದಾಗಿ ಇಲ್ಲಿಗೆ ಕರೆಸುತ್ತೇನೆ ಯಾವ ತರಹವಾಗಿ ಮತ್ತೆ ಅದಕ್ಕೆ ಪ್ರೋಗ್ರೇಸ್ ಮಾಡುತ್ತಿದ್ದೇವೆ ಮತ್ತು ತಪ್ಪಿತಸ್ಥರನ್ನು ಬಂದಿಸತಕ್ಕಂಥ ರೀತಿಯಲ್ಲಿ ಏನು ಆಗಿದೆ ಅಂತ ಹೇಳಿ ವಿಚಾರಣೆ ಮಾಡಿಸುತ್ತೇನೆ ಎನ್ನತಕ್ಕಂಥ ಮಾತನ್ನೂ ಸಹ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ

**ಶ್ರೀ ಬಿ ಎಸ್ ಯಡಿಯೂರಪ್ಪ** ನೀವು ಗೃಹ ಸಚಿವರು ಹಾಗೂ ಮುಖ್ಯಮಂತ್ರಿಗಳಾಗಿರುವ ಈ ಸಂದರ್ಭದಲ್ಲಿ ಭಟ್ಕಳದಲ್ಲಿ ಯಾವ ರೀತಿ ಪ್ರಕ್ಷುಬ್ಧ ಪರಿಸ್ಥಿತಿ ಇದೆ, ಶಾಸಕರಾಗಿದ್ದ ಚಿತ್ತರಂಜನ್‌ರವರನ್ನು ಕಳೆದುಕೊಂಡಂತಹ ಜನ ನಾವು, ಇವತ್ತು ತಿಮ್ಮಪ್ಪ ನಾಯಕರ ಕೊಲೆಯಾದ ಘಟನೆ ನಡೆದಾಗ ಅವತ್ತು ಸಂಜೆ ನಾನು ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿದ್ದ ಸಹಜವಾಗಿ ಸುತ್ತಮುತ್ತಲಿನ ಜನ, ಯಾರು ಇದಕ್ಕೆ ಅಪರಾಧಿಗಳು, ಯಾರ ಕೈವಾಡವಿದೆ ಎನ್ನುವುದನ್ನು ಸಂಬಂಧಿಸಿದ ಪೊಲೀಸ್ ಅಧಿಕಾರಿಗಳೊಡನೆ ನಿಂತಲ್ಲಿ ಕುಳಿತಲ್ಲಿ ಮಾತನಾಡುತ್ತಿದ್ದರು, ಅವತ್ತಿದ್ದ ಅಧಿಕಾರಿಗಳು ಪ್ರಾಮಾಣಿಕವಾಗಿ ತನಿಖೆ ಮಾಡುತ್ತಾರೆ ಎನ್ನುವ ವಿಶ್ವಾಸದಿಂದ ನಾವು ವಾಪಸ್ ಬಂದಿದ್ದೇವೆ ಇಷ್ಟು ದಿವಸಗಳಾಗಿ ಸುಳಿವು ಸಿಕ್ಕರೂ ಕೂಡ, ಆ ರೀತಿ ಯಾರು ಮಾಡಿದ್ದಾರೆಂದು ಗೊತ್ತಿದ್ದರೂ ಕೂಡ ಏಕೋ ಏನೋ ಮೀನಮೇಷ ಮಾಡುತ್ತಿದ್ದಾರೆ ಅಲ್ಲಿ ಶಾಂತಿಸುವ್ಯವಸ್ಥೆ ಕಾಪಾಡಬೇಕೆಂದಿದ್ದರೆ ಇಂತಹ ಘಟನೆಗಳು ರಿಪೀಟ್ ಆಗಬಾರದೆಂದಿದ್ದಾರೆ, ಅಲ್ಲಿಯ ಸೌಹಾರ್ದ ವಾತಾವರಣದ ದೃಷ್ಟಿಯಿಂದ ದಯಮಾಡಿ, ಇದನ್ನು ಗಂಭೀರವಾಗಿ ತೆಗೆದುಕೊಂಡು ಈ ಕೊಲೆಗೆ ಯಾರು ಅಪರಾಧಿ ಕಾರಣಕರ್ತನಾಗಿದ್ದಾನೆ, ಎಂಟು ಹತ್ತು ಅಡಿ ದೂರದಲ್ಲಿ ಗುಂಡು ಹಾರಿಸಿ ಕೊಂದಿದ್ದಾನೆ, ಅವನಿಗೆ ಹಾಗೂ ಅವನ ಬೆಂಬಲಿಗರಿಗೆ ಶಿಕ್ಷೆಯಾಗಬೇಕು, ಈ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಅಲ್ಲಿ ಏನನ್ನೂ ನಿಯಂತ್ರಣ ಮಾಡಲಿಕ್ಕೆ ಆಗದೆ ಕೈಮೀರಿ ಹೋಗುವಂತಹ ಪರಿಸ್ಥಿತಿ ಬರಬಹುದು ಶಿವಾನಂದ ನಾಯಕ್‌ರವರು ಅಲ್ಲಿನ ಶಾಸಕರು, ಹಗಲು ರಾತ್ರಿ ಅಲ್ಲಿ ಸಫರ್ ಮಾಡುತ್ತಿರುವವರು, ಅವರೂ ಕೂಡ ಎರಡು ಮಾತುಗಳನ್ನು ಹೇಳುತ್ತಾರೆ, ಗಮನಿಸಬೇಕು, ಅವರು ಆ ಪ್ರದೇಶದಲ್ಲಿ ಜೀವಭಯ ತೊರೆದು ಕೆಲಸ ಮಾಡುತ್ತಿರುವಂತಹ ವ್ಯಕ್ತಿ

**ಶ್ರೀ ಶಿವಾನಂದ ನಾಯಕರ್ (ಭಟ್ಕಳ್)** ಮಾನ್ಯ ಅಧ್ಯಕ್ಷರೆ, ಇಲ್ಲಿಯವರೆಗೆ, ಯಾವ್ವೊಬ್ಬ ಆರೋಪಿಯನ್ನು ಪತ್ತೆ ಹಚ್ಚಲಿಲ್ಲ, ಯಾರಿಗೂ ಶಿಕ್ಷೆಯಾಗಿಲ್ಲ, 20ನೇ ಕೊಲೆ ನಡೆದು ಎರಡೂವರೆ ತಿಂಗಳಾಯಿತು ಇಲ್ಲಿಯವರೆಗೆ ಕೊಲೆಗಡುಕರನ್ನು ಪತ್ತೆ

ಹಚ್ಚಲಿಲ್ಲವೆಂದರೆ, ಸರ್ಕಾರ ಯೋಚನೆ ಮಾಡಬೇಕು ಮತ್ತು ಭಟ್ಕಳದ ಜನರಿಗೆ ರಕ್ಷಣೆ ಕೊಡಬೇಕಾಗಿದೆ, ಇವತ್ತು ಭಟ್ಕಳದಲ್ಲಿರುವ ಜನರಿಗೆ ನಾವು ಯಾವ ರೀತಿ ಬದುಕಬೇಕು ನಮ್ಮನ್ನು ರಕ್ಷಣೆ ಮಾಡುತ್ತಾರೆನ್ನುವ ಪ್ರಶ್ನೆ ಮೂಡುತ್ತಿದೆ 1993ರಲ್ಲಿ 18 ಜನರ ಕೊಲೆಯಾಯಿತು, ಅದಾದ ಮೇಲೆ ಈ ಮನೆಯ ಸದಸ್ಯರಾದ ಡಾ ಚಿತ್ತರಂಜನ್ ರವರ 19ನೇ ಕೊಲೆಯಾಯಿತು, 20ನೇ ಕೊಲೆ ತಿಮ್ಮಪ್ಪನಾಯಕರದು ತಮ್ಮ ಇಲಾಖೆಯವರು ತನಿಖೆ ಮಾಡುತ್ತಾರೆ, ಎರಡುವರೆ ತಿಂಗಳಾದರೂ ತನಿಖೆಯ ಹಂತದಲ್ಲಿಯೇ ಇದೆ ಎಂದರೆ ಇದನ್ನು ಹಿಂದೆ ಆಗಿರುವ ಪ್ರಕರಣದ ರೀತಿಯಲ್ಲಿ ತನಿಖೆ ಮಾಡುತ್ತಿರೋ ಹೇಗೆ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು ಭಟ್ಕಳದಲ್ಲಿ ಈ ರೀತಿಯ ಕೊಲೆಯಾಗಿ ಸಮಸ್ಯೆ ಉದ್ಭವಿಸುತ್ತದೆಂದು 1993ರಲ್ಲಿ ಆಗಿರುವ ಕೋಮುಗಲಭೆಯ ಹಿನ್ನೆಲೆಯಲ್ಲಿ ಜಗನ್ನಾಥ ಶೆಟ್ಟಿಯವರ ಆಯೋಗವನ್ನು ರಚನೆ ಮಾಡಿದ್ದರು ಆ ಆಯೋಗ ಸರ್ಕಾರ ವರದಿಯನ್ನು ಕೊಟ್ಟು 6–7 ವರ್ಷಗಳಾಯಿತು ಆದಾದ ಮೇಲೆ ಡಾ ಚಿತ್ತರಂಜನ್‌ರವರ ಹತ್ಯೆಯಾದ ಮೇಲೆ ರಾಮಚಂದ್ರ ಆಯೋಗವನ್ನು ರಚನೆ ಮಾಡಿದ್ದರು, ಆ ವರದಿಯನ್ನು ಸರ್ಕಾರಕ್ಕೆ ಕೊಟ್ಟು ಕೂಡ 6–7 ವರ್ಷಗಳಾಯಿತು ಈ ಎರಡು ವರದಿಯನ್ನು ಮುಚ್ಚಿಟ್ಟಿದ್ದೀರಿ, ಆ ವರದಿಯಲ್ಲಿ ಸತ್ಯಾಂಶ ಅಡಗಿದೆ, ಭಟ್ಕಳದಲ್ಲಿ ಈ ರೀತಿಯಾಗಿ ಘಟನೆ ಮಾಡುವ ಕೊಲೆ ಮಾಡುವಂತಹ ಒಂದು ತಂಡವಿದೆ, ಆ ವರದಿಯನ್ನು ಇವತ್ತು ಬಹಿರಂಗಗೊಳಿಸಿದರೆ ಅವರನ್ನು ಇವತ್ತು ಪತ್ತೆಹಚ್ಚುವುದಕ್ಕೆ ಸಾಧ್ಯವಿದೆ ಆ ವರದಿಯನ್ನು ಏಕೆ ತಾವು ಏಕೆ ಮುಚ್ಚಿಬಿಟ್ಟಿದ್ದೀರಿ? ಹಿಂದಿನ ಜನತಾದಳ ಸರ್ಕಾರವಿರಬಹುದು, ನಂತರ ಬಂದ ಕಾಂಗ್ರೆಸ್ ಸರ್ಕಾರವಿರಬಹುದು, ಈಗ ಸಮಿಶ್ರ ಸರ್ಕಾರವಿರಬಹುದು ಆ ವರದಿಯನ್ನು ಏಕೆ ಮುಚ್ಚಿಟ್ಟಿದ್ದೀರಿ? ಸಾರ್ವಜನಿಕ ಹಣವೆಚ್ಚ ಮಾಡಿ, ಕೋಟ್ಯಾಂತರ ರೂಪಾಯಿಗಳ ವ್ಯಯ ಮಾಡಿ ಆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರೆ ಆ ವರದಿಯನ್ನು ಮುಚ್ಚಿಟ್ಟಿದ್ದೀರಿ ಏಕೆ? ವರದಿಯಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದಾರೆ, ಇವತ್ತು ಕೆಲವು ಪತ್ರಿಕೆಗಳಲ್ಲಿ ಅದರಲ್ಲಿ ಯಾರ್ಯಾರ ಕೈವಾಡವಿದೆ, ಯಾರ್ಯಾರು ಈ ಕೃತ್ಯವನ್ನು ಮಾಡುತ್ತಿದ್ದಾರೆ ಎಂದು ವರದಿಯಲ್ಲಿ ಹೇಳಿರುವುದು ಬಂದಿದೆ ಇವತ್ತು ವಿಚಾರ ಮಾಡಬೇಕಾಗಿದೆ, ಇವತ್ತು ಸಾರ್ವಜನಿಕರಿಗೆ ಅನ್ಯಾಯವಾದಾಗ, ಕೊಲೆಯಾದಾಗ, ಸರ್ಕಾರ ನೇಮಕ ಮಾಡಿದ ಆಯೋಗ ನೀಡಿದ ವರದಿಯನ್ನು ಮುಚ್ಚಿಟ್ಟುಕೊಂಡು ಅಂತಹವರಿಗೆ ರಕ್ಷಣೆ ಕೊಡುವ ಕೆಲಸವನ್ನು ಏಕೆ ಮಾಡುತ್ತಿದ್ದೀರಿ? ತಾವು ವಿಚಾರ ಮಾಡುತ್ತೇವೆ, ತನಿಖೆ ಮಾಡುತ್ತೇವೆ, ಕರೆದು ಹೇಳುತ್ತೇವೆಂದು, ತಾವು ಹಿಂದೆಯು ಇದೇ ರೀತಿ ಉತ್ತರ ಕೊಟ್ಟಿದ್ದಾರೆ, ಹಿಂದೆ 22 ಜನರ ಕೊಲೆಯಾಯಿತು ತಾವು ಏನು ಮಾಡಿದಿರಿ ನನಗೆ ಸ್ಪಷ್ಟವಾದ ಉತ್ತರಬೇಕು

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** ಭಟ್ಕಳದಲ್ಲಿ ಈ ರೀತಿಯ ಘಟನೆಗಳು ಪದೇ ಪದೇ ನಡೆಯುತ್ತಿದೆ ತಪ್ಪಿತಸ್ಥರನ್ನು ಹಿಡಿದುಕೊಡುವಂತಹ ರೀತಿಯಲ್ಲಿ ತಾವು ಕೇಳಿದ್ದೀರಿ ಆ ಕೆಲಸವನ್ನು ಬಹಳ ತ್ವರಿತವಾಗಿ ಮಾಡಿಕೊಡುತ್ತೇವೆ

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಅಧ್ಯಕ್ಷರೆ, ಹೊಸಕೋಟೆಯಲ್ಲಿ ನಾರಾಯಣಗೌಡ ಎಂಬುವವರ ಕೊಲೆಯಾಗಿದೆ ಆ ಬಗ್ಗೆ ಮುಖ್ಯಮಂತ್ರಿಗಳ ಉತ್ತರ ಕೊಡಿಸುತ್ತೇನೆಂದು ಹೇಳಿದಿರಿ

**ಗೊಂದಲ**

**ಅಧ್ಯಕ್ಷರು** ದಯಮಾಡಿ ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು, ಪ್ರತಿ ದಿನ ಈ ತರಹ ಆದರೆ ಹೇಗೆ? ಹೀಗಾದರೆ ಸಂಜೆ 5 ಗಂಟೆಯವರೆಗೆ ನಡೆಸಿಕೊಂಡು ಹೋಗಬಹುದು, ನಾನು ಈ ಸಭೆಯನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರೆ, ನಾವು ಈ ಕಡೆ ಇರುವ ವಿರೋಧ ಪಕ್ಷದವರು ನಿಮಗೆ ಒಂದು ಸಲಹೆ ಕೊಡುತ್ತೇವೆ, ನಾವು ಈ ಕಡೆ ಇರುವ ವಿರೋಧ ಪಕ್ಷದವರು ಹೊರಗಡೆ ಇರುತ್ತೇವೆ, ಆಡಳಿತಪಕ್ಷದವರಿಗೆ ಅವರ ಮುಖ್ಯಮಂತ್ರಿಯವರನ್ನು ಕಂಡು ಉತ್ತರ ತೆಗೆದುಕೊಳ್ಳಲಾಗುತ್ತಿಲ್ಲ, ಸದನದಲ್ಲಿ ಉತ್ತರ ಬೇಕು, ಅವರು ಉತ್ತರ ಕೊಟ್ಟ ಮೇಲೆ ನಾವು ಬರುತ್ತೇವೆ ಅವರು ಉತ್ತರ ಡಿಮ್ಯಾಂಡ್ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ,

**ಗೊಂದಲ**

(ಈ ಸಂದರ್ಭದಲ್ಲಿ ಸದಸ್ಯರಾದ ಶಿವರಾಜ್ ಸಜ್ಜನರ್ ಮಾತನಾಡಲು ಅವಕಾಶ ಕೊಡಬೇಕೆಂದು ಒತ್ತಾಯಿಸಿ ಸದನದ ಬಾವಿಗೆ ಬಂದು ನಿಂತರು, ನಂತರ ತಮ್ಮ ಸ್ಥಾನಕ್ಕೆ ತೆರಳಿದರು)

**ಅಧ್ಯಕ್ಷರು** ಚೀಫ್ ವಿಪ್‌ರವರೆ ನಿಮ್ಮ ಸದಸ್ಯರನ್ನು ಸರಿಯಾದ ರೀತಿಯಲ್ಲಿ ನಿಯಂತ್ರಣದಲ್ಲಿಡಿ, ಇಷ್ಟ ಬಂದಂತೆ ಇಲ್ಲಿ ಕೂಗಾಡುವುದಕ್ಕಾಗುವುದಿಲ್ಲ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಈಗ ನಿಯಮ 69ರ ಅಡಿಯಲ್ಲಿ ಭೂ ಹಗರಣದ ಬಗ್ಗೆ ಸದಸ್ಯರುಗಳು ಮಾತನಾಡಬೇಕು, ನಂತರ ಮುಖ್ಯಮಂತ್ರಿಗಳಿಂದ ಹಾಗೂ ಸಂಬಂಧಪಟ್ಟವರಿಂದ ಉತ್ತರ ಆದಾದ ಮೇಲೆ ಕೂಲಿಗಾಗಿ ಕಾಳು ಬಗ್ಗೆ ಮಾನ್ಯ ರಾಮಸ್ವಾಮಿ ಹಾಗೂ ಇತರೆ ಸ್ನೇಹಿತರು ಮಾತನಾಡಲು ಬಹಳ ದಿವಸಗಳಿಂದ ಕಾಯುತ್ತಿದ್ದಾರೆ, ಅದು ಪಟ್ಟಿಯಲ್ಲಿದೆ, ಆದಾದ ಮೇಲೆ ಮಾನ್ಯ ಯಡಿಯೂರಪ್ಪ ಮತ್ತು ಅವರ ಸ್ನೇಹಿತರು ಕೃಷ್ಣಾ ಕೊಳ್ಳದ ಭಾಗದ ನೀರಿನ ವಿಚಾರದಲ್ಲಿ ನಿಯಮ 69ರಲ್ಲಿ ಚರ್ಚೆ ಮಾಡಬೇಕೆಂದಿದ್ದಾರೆ, ಇಡೀ ನಮ್ಮ ರಾಜ್ಯಕ್ಕೆ ಸಂಬಂಧಿಸಿದ ಬಹಳ ಗಂಭೀರವಾದ ವಿಚಾರಗಳಿದ್ದಾವೆ ಅದಕ್ಕೋಸ್ಕರ ಎಲ್ಲಾ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಶೂನ್ಯವೇಳೆಯಲ್ಲಿ ಕೆಲವು ಸದಸ್ಯರು ನಮ್ಮ ಪ್ರಶ್ನೆ ಕೇಳಬೇಕು ಎಂದು ಕೇಳುತ್ತಿದ್ದಾರೆ, ಅದಕ್ಕೆ ಈ ದಿವಸ ಅದನ್ನು ತೆಗೆದುಕೊಳ್ಳದೆ ನೇರವಾಗಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಹೋದರೆ ತಾವೆಲ್ಲಾ ಈ ಗಂಭೀರವಾದ ವಿಚಾರಗಳನ್ನು ಚರ್ಚೆ ಮಾಡಿ ಮುಗಿಸುವುದಕ್ಕೆ ಸಾಧ್ಯವಾಗುತ್ತದೆ ನೇರವಾಗಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ಎಲ್ಲಾ ಸದಸ್ಯರಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ ಈಗ ನಿಯಮ 69 ಅಡಿಯಲ್ಲಿ ಚರ್ಚೆ

ಗೊಂದಲ

**ಮಾನ್ಯ ಸದಸ್ಯರೊಬ್ಬರು** ನಾವು ಬಹಳ ಗಂಭೀರವಾದ ನಮ್ಮ ಕ್ಷೇತ್ರದ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇವೆ, ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳುತ್ತಲೆ ಇದ್ದೇವೆ

**ಅಧ್ಯಕ್ಷರು** ಅನೇಕ ಸದಸ್ಯರು ಅನೇಕ ವಿಚಾರಗಳ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕೆಂದು ಬರೆದು ಕಳುಹಿಸಿದ್ದಿರಿ, ನನ್ನ ಕೊರಡಿಯಲ್ಲಿ ಬಂದು ಕಂಡಿದ್ದೀರಿ, ಆದರೆ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು ನೇರವಾಗಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡೋಣ

**ಶ್ರೀ ಬಿ ಸಿ ಪಾಟೀಲ್** ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಹಿರೇಕೆರೂರು ತಾಲ್ಲೂಕಿನಲ್ಲಿ ನಡೆದಂತಹ ಘಟನೆಯ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆದಿದ್ದು, ತಾವು ಸರ್ಕಾರದಿಂದ ವರದಿಯನ್ನು ತರಿಸಿಕೊಂಡು ಕ್ರಮ ಜರುಗಿಸುತ್ತೇವೆಂದು ಹೇಳಿದ್ದೀರಿ, ದಯಮಾಡಿ ಏನು ಕ್ರಮ ಜರುಗಿಸಿದ್ದೀರೆಂಬುದನ್ನು ತಿಳಿಸಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ

**ಅಧ್ಯಕ್ಷರು** ನಾನು ಎಲ್ಲಾ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಬಹಳ ಸದಸ್ಯರು ತಮ್ಮ ತಮ್ಮ ಬಹಳ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸಎಳೆಯಬೇಕೆಂದಿದ್ದೀರಿ, ಆದರೆ ಕಾಲಾವಕಾಶವಿಲ್ಲದಿರುವುದರಿಂದ, ದಯಮಾಡಿ ಎಲ್ಲರೂ ಸಹಕರಿಸಬೇಕು ಶೂನ್ಯವೇಳೆಯಲ್ಲಿ ವಿಚಾರಗಳನ್ನು ತೆಗೆದುಕೊಳ್ಳುವುದು ನಮ್ಮದು, ನೀವು ಇಷ್ಟಬಂದಂತಹ ರೀತಿಯಲ್ಲಿ ವರ್ತನೆ ಮಾಡುವುದಕ್ಕಾಗುವುದಿಲ್ಲ

ಗೊಂದಲ

**ಶ್ರೀ ಧರ್ಮಸಿಂಗ್** ಅವರು ಪ್ರಸ್ತಾಪ ಮಾಡಲಿ ಬಿಡಿ, ನಾಲ್ಕೈದು ಸದಸ್ಯರಿದ್ದಾರೆ, ಇವತ್ತು ಕೊನೆಯ ದಿನವಾಗಿದೆ, ಅವಕಾಶ ಕೊಡಿ ಹೇಳುತ್ತಾರೆ

**ಮಾನ್ಯ ಸದಸ್ಯರು** ಇವತ್ತು ಚರ್ಚೆಗೆ ಅವಕಾಶ ಕೊಟ್ಟು ಮಿಕ್ಕ ವಿಷಯಗಳ ಬಗ್ಗೆ ನಾಳೆ ಮಾತನಾಡಲು ನಾಳೆಗೆ ಸದನವನ್ನು ಮುಂದೂಡಿ

**ಅಧ್ಯಕ್ಷರು** ಈಗ ಕೆಲವೊಂದು ಗಂಭೀರವಾದ ವಿಚಾರಗಳಿದ್ದಾವೆ, ಅವನ್ನು ಬಿಡೋಣವೆಂದರೆ ನನ್ನದೇನೂ ಅಭ್ಯಂತರವಿಲ್ಲ 5 ಗಂಟೆಯವರೆಗೆ ಸದನ ನಡೆಸುತ್ತೇನೆ, ಯಾವುದು ರೀಚ್ ಆಗುತ್ತದೆ ರೀಚ್ ಆಗಲಿ, ಹೋದದ್ದು ಹೋಗಲಿ ನಮಗೇನಿಲ್ಲ, ಇಲ್ಲಿ ಸಭಾನಾಯಕರು, ವಿರೋಧ ಪಕ್ಷದ ನಾಯಕರಿದ್ದಾರೆ ನೀವೆಲ್ಲಾ ನಿಮ್ಮ ಸದಸ್ಯರುಗಳಿಗೆ ಹೇಳಬೇಕು ಇದನ್ನು ತೆಗೆದುಕೊಳ್ಳೋಣವೆಂದರೆ ತೆಗೆದುಕೊಳ್ಳೋಣ, ಚರ್ಚೆ ನಡೆಯಲಿ, ಎಲ್ಲರನ್ನೂ ಕೇಳಬೇಕೆಂದರೆ ಬಹುಶ ಇದರಲ್ಲಿ 5 ಗಂಟೆಯಾಗುತ್ತದೆ ಯಾವ ಚರ್ಚೆಯೂ ನಡೆಯುವುದಿಲ್ಲ ನಾನೇನು ಮಾಡುವುದಕ್ಕಾಗುವುದಿಲ್ಲ ಶೂನ್ಯವೇಳೆಯಲ್ಲಿ ಅವರೊಬ್ಬರು ಕೇಳುತ್ತಾರೆಂದರೆ ಅವರಿಗೇನು ಕಿರೀಟ ಇದೆಯಾ? ಎಲ್ಲರೂ ಕೇಳುತ್ತಾರೆ ಅದಕ್ಕೆ ನಾನೇನು

ಮಾಡುವುದು? ಏನಾದರೂ ಅರ್ಥವಿದೆಯಾ, ಜಾಸ್ತಿ ಮಾಡುವುದಕ್ಕೆ ನನಗೆ ಅಧಿಕಾರವಿಲ್ಲ, ಬಿಎಸಿಯಲ್ಲಿ ತೀರ್ಮಾಣವಾಗಿದೆ, ಅಲ್ಲಿ ತೀರ್ಮಾನವಾದ ರೀತಿಯಲ್ಲಿ ನಾನು ಕಾರ್ಯಕ್ರಮವನ್ನು ನಡೆಸಬೇಕು, ಎಲ್ಲರೂ ತಮ್ಮ ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳಲು ಸಾಧ್ಯವಾದರೆ ಹೇಗೆ?

**ಶ್ರೀ ಬಿ ಸಿ ಪಾಟೀಲ್** ನಿನ್ನೆಯ ದಿವಸ ಪ್ರಸ್ತಾಪ ಮಾಡಿದ್ದೇವೆ, ಉತ್ತರ ಕೊಡುತ್ತೇವೆಂದು ಹೇಳಿದ್ದರು, ದಯಮಾಡಿ ಸರ್ಕಾರ ಏನು ಕ್ರಮ ಜರುಗಿಸಿದೆ ಎನ್ನುವುದನ್ನು ತಿಳಿಸಬೇಕು

**ಗೊಂದಲ**

ಅಧ್ಯಕ್ಷರು ಮಾನ್ಯ ಯಡಿಯೂರಪ್ಪನವರೆ, ಈಗ 12-45 ಗಂಟೆ ನಾನು ಎರಡು ಗಂಟೆಯವರೆಗೂ ಶೂನ್ಯವೇಳೆ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇನೆ ನೀವೆಲ್ಲಾ ಒಪ್ಪಿಕೊಂಡರೆ ಅದಾದಮೇಲೆ ಮೂರು ಗಂಟೆಯಿಂದ ಆರು ಗಂಟೆ, ಆರೂವರೆ ಗಂಟೆಯವರೆಗೆ ಈ ಮೂರು ಪ್ರಸ್ತಾವಗಳೇನು ಇದ್ದಾವೆ, ಅವುಗಳನ್ನು ಮುಗಿಸುವುದಕ್ಕೆ ಪ್ರಯತ್ನವನ್ನು ಮಾಡೋಣ ಇವೆಲ್ಲಾ ಬಹಳ ಗಂಭೀರವಾದವುಗಳೇ ಮಾನ್ಯ ಸದಸ್ಯರುಗಳು ಈಗ ಎಲ್ಲಾ ವೆಲ್‌ಗೆ ಬರುತ್ತಿದ್ದಾರಲ್ಲಾ ಈಗ ಏನೆಂದರೆ ಸಭೆ ನನಗೆ ನಿರ್ದೇಶನವನ್ನು ನೀಡಬೇಕು ಬಹಳ ಜನರು ತಾವು ಹೇಳಿದ್ದನ್ನೇ ಹೇಳುತ್ತಿದ್ದೀರಿ ನಾನು 15 ಜನರಿಗೆ ಒಂದು ಗಂಟೆಗಳ ಕಾಲ ಶೂನ್ಯ ವೇಳೆಯಲ್ಲಿ ಪ್ರಮುಖವಾದ ವಿಚಾರಕ್ಕೆ ಅವಕಾಶವನ್ನು ಮಾಡಿಕೊಡುತ್ತೇನೆ ಈಗ ನಾನು 15 ಜನರಿಗೆ ಅವಕಾಶ ಕೊಡಬಹುದು ಆಮೇಲೆ ಏನು ನಿಯಮ 69ರ ಕೆಳಗೆ ಬಹಳ ಮುಖ್ಯವಾಗಿರುವ ಗಂಭೀರವಾದ ಸಮಸ್ಯಗಳು ಇದ್ದಾವೆ, ಅದರ ಮೇಲೆ ಚರ್ಚೆಯನ್ನು ಮಾಡೋಣ ಇದಕ್ಕೆಲ್ಲಾ ತಮ್ಮಗಳ ಒಪ್ಪಿಗೆ ಇದೆ ಎಂದು ನಾನು ತಿಳಿದುಕೊಳ್ಳುತ್ತೇನೆ ಈಗ ಮಾನ್ಯ ಬಿ ಆರ್ ಪಾಟೀಲರು ಅವರದು ಬಹಳ ಗಂಭೀರವಾದ ವಿಚಾರ ಇದೆ

**ಶ್ರೀ ಬಿ ಸಿ ಪಾಟೀಲ್** ಮಾನ್ಯ ಅಧ್ಯಕ್ಷರೆ, ಸಮಸ್ಯೆಗಳನ್ನು ಕೇಳುತ್ತೀರಿ, ನಾವು ಉತ್ತರ ಕೇಳಿದರೆ ಉತ್ತರವನ್ನು ಕೊಡುತ್ತಿಲ್ಲ ಬರೀ ಸಮಸ್ಯೆಗಳನ್ನು ಕೇಳಿಕೊಂಡು ಹೋದರೆ ಏನಾಗುತ್ತದೆ? ನಾವು ಕೇಳಿದ ಪ್ರಶ್ನೆಗೆ ಇದುವರೆಗೂ ಉತ್ತರವೇ ಬರಲಿಲ್ಲ

**ಅಧ್ಯಕ್ಷರು** ಉತ್ತರವನ್ನು ಕೊಡುತ್ತಾರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ, ಕೊಡುತ್ತಾರೆ ದಯಮಾಡಿ ಸಹಕರಿಸಿ

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, ನಿನ್ನೆ ಉಪ ಮುಖ್ಯಮಂತ್ರಿಗಳು ಈಗಾಗಲೇ ತಮ್ಮ ಅಪ್ಪಣೆಯನ್ನು ಪಡೆದು ಉತ್ತರವನ್ನು ಹೇಳಿದ್ದಾರೆ ಎಲ್ಲಿ ತೊಂದರೆಯಾಗಿದೆ, ಅದು ಸರ್ಕಾರದ ಗಮನಕ್ಕೆ ಬಂದಿದೆ ಮಾನ್ಯ ಬಿ ಸಿ ಪಾಟೀಲರ ಅನಿಸಿಕೆ ಏನು ಇದೆ, ಅದರ ಬಗ್ಗೆ ನಾವು ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ

### (3) ಬೆಂಗಳೂರು ನಗರದ ತಿಲಕ್ ನಗರ ಬಡಾವಣೆಯಲ್ಲಿ ಸಾಗರ್ ಅಪೋಲೊ ಆಸ್ಪತ್ರೆ ಮತ್ತು ಗಾಂಧಿನಗರದಲ್ಲಿರುವ ಲೋಟಸ್ ಲ್ಯಾಬೋರೇಟರಿಗಳನ್ನು ಹಣದ ಆಮಿಷ ತೋರಿಸಿ ವಂಚಿಸುತ್ತಿರುವ ಬಗ್ಗೆ

**ಶ್ರೀ ಬಿ ಆರ್ ಪಾಟೀಲ್ (ಆಳಂದ್)** ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ತಿಲಕ್‌ನಗರ ಈ ಒಂದು ಬಡಾವಣೆಯಲ್ಲಿ ಸಾಗರ್ ಅಪೋಲೊ ಆಸ್ಪತ್ರೆ ಮತ್ತು ಗಾಂಧಿನಗರದಲ್ಲಿ ಲೋಟಸ್ ಲ್ಯಾಬೊರೇಟರಿ ಇವೆರಡೂ ಬಹು ರಾಷ್ಟ್ರೀಯ ಕಂಪನಿಗಳ ಸಂಸ್ಥೆಗಳು ಇವರು ಪತ್ರಿಕೆಗಳಲ್ಲಿ ಜಾಹಿರಾತನ್ನು ಕೊಟ್ಟು 18 ರಿಂದ 45 ವರ್ಷದ ಯುವಕರಿಗೆ ನಿಮಗೆ ದುಡ್ಡನ್ನು ಕೊಡುತ್ತೇವೆ, ನೀವು ನಮ್ಮ ಕಡೆ ಚಿಕಿತ್ಸೆಗೆ ಬರಬೇಕೆಂದು ಹೇಳಿ ಅವರ ಮೇಲೆ ಒಂದು ವಿಷಪೂರಿತವಾದ ಒಂದು ಪ್ರಯೋಗವನ್ನು ಮಾಡುತ್ತಿದ್ದಾರೆ ಆ ಯುವಕರನ್ನು ಅವರು ಪಶುಗಳ ತರಹ ವರ್ತನೆ ಮಾಡುತ್ತಿದ್ದಾರೆ ಹಾಗಾಗಿ ಇವತ್ತು ಸರ್ಕಾರದ ಯಾವುದೇ ಮನ್ನಣೆ ಇಲ್ಲದೆ ಸರ್ಕಾರಕ್ಕೆ ಯಾವುದೂ ಗೊತ್ತಿಲ್ಲದೆ, ಸರ್ಕಾದ ಮಾನ್ಯತೆ ಇಲ್ಲದೆ ಈ ಒಂದು ಬಹು ರಾಷ್ಟ್ರೀಯ ಕಂಪನಿಗಳು ನಮ್ಮ ಬಡದೇಶದ ಮೇಲೆ ಇಲ್ಲಿನ ನಿರುದ್ಯೋಗಿ ಯುವಕರಿಗೆ ಆಸೆಯನ್ನು ತೋರಿಸಿ ಅವರಿಗೆ ನಾಲ್ಕು-ಐದು ಸಾವಿರ ರೂಪಾಯಿಗಳನ್ನು ಕೊಟ್ಟು ಅವರನ್ನು ಪ್ರಯೋಗದ ಪಶುಗಳನ್ನಾಗಿ ಮಾಡುತ್ತಿದ್ದಾರೆ ಇದು ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ಇಲ್ಲಿಯವರೆಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ ಹೀಗಾಗಿ ಪ್ರಜಾವಾಣಿ ಪತ್ರಿಕೆಯಲ್ಲಿ ಬಹಳ ಒಂದು ದೊಡ್ಡ ಲೇಖನ ಬಂದಿದೆ ಹಾಗಾಗಿ ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ತಕ್ಷಣ ಯುವಕರನ್ನು ಪ್ರಯೋಗಪಶುಗಳನ್ನಾಗಿ ಮಾಡುತ್ತಿರುವ ಬಹು ರಾಷ್ಟ್ರೀಯ ಕಂಪನಿಗಳ ಈ ವರ್ತನೆಯನ್ನು ನಿಲ್ಲಿಸಬೇಕು ಮತ್ತು ಈ ಯುವಕರ ಶೋಷಣೆಯನ್ನು ನಿಲ್ಲಿಸಬೇಕೆಂದು ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ ಇದು ಬಹಳ ಗಂಭೀರವಾದ ವಿಷಯ ಇಲ್ಲದಿದ್ದರೆ ಬಹು ರಾಷ್ಟ್ರೀಯ ಕಂಪನಿಗಳು ನಮ್ಮ ದೇಶದಲ್ಲಿರುವ ಬಡತನವನ್ನು ದುರುಪಯೋಗಪಡಿಸಿಕೊಂಡು ನಮ್ಮ ಯುವಕರನ್ನು ಹಾಳು ಮಾಡುತ್ತಾರೆ, ಮತ್ತು ಅವರ ಆರೋಗ್ಯವನ್ನೂ ಕೂಡ ಹಾಳು ಮಾಡುತ್ತಾರೆ ಅದರ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ವಿಚಾರ ಮಾಡಬೇಕೆನ್ನುವ ಮಾತನ್ನು ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ಅವರ ಹೇಳಿದ್ದರ ಬಗ್ಗೆ ಕ್ರಮವನ್ನು ಜರುಗಿಸುತ್ತೇವೆ

### (4) ಪಾಲಿಟೆಕ್ನಿಕ್‌ಗಳಲ್ಲಿ ಸೇರಿದ ವಿದ್ಯಾರ್ಥಿಗಳ ಸಮಸ್ಯೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** ಮಾನ್ಯ ಅಧ್ಯಕ್ಷರೆ, ಮೊದಲು ಲಿಸ್ಟ್‌ನಲ್ಲಿ ನನ್ನದೇ ಇದೆ ವಿದ್ಯಾರ್ಥಿಗಳ ಸಮಸ್ಯೆ ಇದೆ ಹತ್ತು ಪಾಲಿಟೆಕ್ನಿಕ್‌ಗಳಲ್ಲಿ ಸೇರಿದ ವಿದ್ಯಾರ್ಥಿಗಳ ಸಮಸ್ಯೆ ಈಗ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳದಿದ್ದರೆ ಅವರು ಸರ್ಕಾರಿ ಕೋಟಾದಲ್ಲಿ ಪಾಲಿಟೆಕ್ನಿಕ್‌ನಲ್ಲಿ ಗ್ರಾಂಟನ್ನು ಕೊಟ್ಟು ಕಾಲೇಜುಗಳಿಗೆ

ಅಡ್ಮಿಟ್ ಮಾಡಿಕೊಂಡಿದ್ದಾರೆ ಈಗ ಗ್ರಾಂಟನ್ನು ವಿತ್‌ಡ್ರಾ ಮಾಡಿದ್ದಾರೆ ಅದನ್ನು ಸರ್ಕಾರದವರು ಯಾರಾದರೂ ಕೇಳುವವರು ಇದ್ದರೆ ನಾನು ಹೇಳುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ಅದನ್ನು ನಾವು ಹಿಂದೆ ಹೇಳಿದ್ದೇವೆ ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ಸರ್ಕಾರದ ಪರವಾಗಿ ಹೇಳಿದ್ದೇವೆ ಹಿಂದಿನ ಸರ್ಕಾರದಲ್ಲಿ ಅದನ್ನು ಮಾಡಬೇಕು ಎನ್ನುವಂಥ ಪ್ರಸ್ತಾವನೆ ಬಂದಿತ್ತು ಹೊಸ ಸರ್ಕಾರ, ಸಮ್ಮಿಶ್ರ ಸರ್ಕಾರ ಬಂದ ಮೇಲೆ ಅದನ್ನು ಕೊಡುವುದಕ್ಕಾಗುವುದಿಲ್ಲವೆನ್ನುವ ತೀರ್ಮಾನಕ್ಕೆ ಬಂದಿದ್ದೇವೆ ಮತ್ತೆ ಅದನ್ನೇ ಕೇಳತಕ್ಕ ಅಗತ್ಯ ಇಲ್ಲ ಮಾನ್ಯ ಅಧ್ಯಕ್ಷರೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಮಾನ್ಯ ಅಧ್ಯಕ್ಷರೆ, ಮತ್ತೆ ನಾನು ಏಕೆ ಕೇಳುತ್ತಿದ್ದೇನೆಂದರೆ ನಿಮ್ಮ ಸರ್ಕಾರಿ ಕೋಟಾದಲ್ಲಿ ವಿದ್ಯಾರ್ಥಿಗಳನ್ನು ಆ ಕಾಲೇಜಿಗೆ ಅಡ್ಮಿಟ್ ಮಾಡಿದ್ದೀರಿ ಈಗ ಅವರು ವಿದ್ಯಾರ್ಥಿಗಳನ್ನು ಅಲ್ಲಿಂದ ಹೊರಗಡೆ ಹಾಕಿದರೆ ಹೇಗೆ? ಏಕೆಂದರೆ ಅವರನ್ನು ಮೆರಿಟ್‌ನಲ್ಲಿ ತೆಗೆದುಕೊಂಡಿರುವುದು ಆ ವಿದ್ಯಾರ್ಥಿಗಳ ಪರಿಸ್ಥಿತಿಯೇನಾಗುತ್ತದೆ, ನೀವು ಅದನ್ನು ಅರ್ಥ ಮಾಡಿಕೊಳ್ಳಬೇಕು ಕಾಲೇಜಿಗೆ ಗ್ರಾಂಟನ್ನು ಕೊಟ್ಟಿದ್ದು ತಪ್ಪು ಸರಿ ಬಗ್ಗೆ ನಾನು ಚರ್ಚೆಯನ್ನು ಮಾಡುತ್ತಿಲ್ಲ ನೀವು ಗ್ರಾಂಟನ್ನು ಕೊಟ್ಟು ವಿದ್ಯಾರ್ಥಿಗಳನ್ನು ಅಲ್ಲಿಗೆ ಕಳುಹಿಸಿದ್ದೀರಿ ಕೌನ್ಸೆಲಿಂಗ್‌ನಲ್ಲಿ, ಆ ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗುತ್ತದೆ?

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೆ, ಪೂರ್ತಿ ಮಾಹಿತಿಯನ್ನು ತರಿಸಿ ಅದನ್ನು ನೋಡುತ್ತೇವೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ನೀವು ಮಾಹಿತಿ ತರಿಸುವುದೇನಿಲ್ಲ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೆ, ನಾಳೆ ಆ ಮಾಹಿತಿಯನ್ನು ತರಿಸಿ ಅದರ ಮೇಲೆ ನಾವು ಕ್ರಮವನ್ನು ಜರುಗಿಸುತ್ತೇವೆ

**ಅಧ್ಯಕ್ಷರು** ಮಾನ್ಯ ಹೆಗ್ಡೆಯವರೆ, ತಾವು ಅವರ ಗಮನಕ್ಕೆ ತಂದಿದ್ದೀರಿ, ಅವರು ಕ್ರಮ ತೆಗೆದುಕೊಳ್ಳುತ್ತಾರೆ ಬಿಡಿ

## 5 ಕರ್ನಾಟಕದಲ್ಲಿ ಶಿವಾಜಿ ಜಯಂತಿ ದಿನದಂದು ಸಾರ್ವತ್ರಿಕ ರಜೆಯನ್ನು ಘೋಷಿಸುವ ಬಗ್ಗೆ

**ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ)** ಮಾನ್ಯ ಅಧ್ಯಕ್ಷರೆ, ಮಹಾರಾಷ್ಟ್ರದಲ್ಲಿ ಜಗಜ್ಯೋತಿ ಬಸವೇಶ್ವರ ದಿನವನ್ನು ಜನರಲ್ ಹಾಲಿಡೇ ಎಂದು ಮಾಡಿದ್ದಾರೆ ಆದರೆ ಕರ್ನಾಟಕದಲ್ಲಿ ಛತ್ರಪತಿ ಶಿವಾಜಿ ಮಹಾರಾಜ್ ಏನು ಇದ್ದರು, ಅವರು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟವರು 1630ನೇ ಇಸವಿ ಫೆಬ್ರವರಿ 19ರಲ್ಲಿ ಅವರು ಶಿವನೇರಿಯಲ್ಲಿ ಜನ್ಮತಾಳಿದವರು ಅವರು ಎಲ್ಲಾ ಧರ್ಮಗಳ ಜೊತೆಗೆ ಹೋದ ಜನಕ ರಾಜ ಎಂದು ನಮ್ಮ ಭಾರತ ದೇಶದಲ್ಲಿಯೇ ಹೆಸರುವಾಸಿ ಮಾಡಿದ ನಮ್ಮ ಛತ್ರಪತಿ ಶಿವಾಜಿಯವರು ನಮ್ಮ ಕರ್ನಾಟಕದಲ್ಲೂ ಮಹಾರಾಜ್ ಛತ್ರಪತಿ ಶಿವಾಜಿಯವರ ಜಯಂತಿಯನ್ನು ಕರ್ನಾಟಕದಲ್ಲೂ ಮಾಡಿ ಅಂದು ಜನರಲ್

ಹಾಲಿಡೇ ಎಂದು ಡಿಕ್ಲೇರ್ ಮಾಡಬೇಕು ಮತ್ತು ಈ ಜಯಂತಿಯನ್ನು ಸರ್ಕಾರದ ವತಿಯಿಂದ ಅದು ಆಚರಣೆಯಾಗಬೇಕು ಎಂದು ನಾನು ತಮ್ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ಅದನ್ನು ಪರಿಶೀಲಿಸುತ್ತೇವೆ

**6 ಬೆಣ್ಣೆ ತೊರೆ ಯೋಜನೆ ಕುರಿತು**

**ಶ್ರೀ ವಿಶ್ವನಾಥ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ)** ಮಾನ್ಯ ಅಧ್ಯಕ್ಷರೆ, ತಾವು ಶೂನ್ಯ ವೇಳೆಯಲ್ಲಿ ನನಗೆ ಬೆಣ್ಣೆತೊರೆ ಯೋಜನೆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ನಾನು ತಮಗೆ ಧನ್ಯವಾದಗಳನ್ನು ಹೇಳುತ್ತೇನೆ ಗುಲ್ಬರ್ಗ ಜಿಲ್ಲೆ ಅದು ಮುಖ್ಯಮಂತ್ರಿಯವರ ಜಿಲ್ಲೆ ಅಲ್ಲಿ ಎರಡು ಪ್ರಮುಖವಾದ ನೀರಾವರಿ ಯೋಜನೆಗಳಿದ್ದಾವೆ ಒಂದು, ಬೆಣ್ಣೆತೊರಾ, ಎರಡನೆಯದು ಅಮರ್ಜಾ ಎಂದು ಎರಡು ಯೋಜನೆಗಳಿವೆ ಬೆಣ್ಣೆತೊರಾ ಯೋಜನೆ 1972ರಲ್ಲಿ ಪ್ರಾರಂಭವಾಗಿದೆ 32 ವರ್ಷಗಳ ಪ್ರಾರಂಭದಲ್ಲಿ ಏಳು ಕೋಟಿ ರೂಪಾಯಿಗಳಲ್ಲಿ ಪ್ರಾರಂಭವಾದುದು ಈ ಯೋಜನೆ ಇವತ್ತು 230 ಕೋಟಿ ರೂಪಾಯಿ ಖರ್ಚಾದರೂ ಒಂದು ಹನಿ ನೀರು ಕೂಡ ಇವತ್ತು ರೈತರ ಜಮೀನಿಗೆ ಮುಟ್ಟಿಲ್ಲ ಎನ್ನುವ ಮಾತನ್ನು ನಾನು ಸದನಕ್ಕೆ ತಿಳಿಸಬೇಕಾಗುತ್ತದೆ ಈಗಾಗಲೇ ನಾವು ಮೊದಲೇ ರೈತರಿಗೆ ನೀರನ್ನು ಕೊಡಬೇಕಾಗಿತ್ತು ಇಲ್ಲಿ ನಾವು 230 ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ ಆ 230 ಕೋಟಿ ರೂಪಾಯಿಗಳಲ್ಲಿ ಸುಮಾರು 100 ಕೋಟಿ ರೂಪಾಯಿಗಳು ಸೋರಿ ಹೋಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ ಮೊನ್ನೆ ನಾನು ಆ ಯೋಜನೆಗೆ ಭೇಟಿಯನ್ನು ಕೊಟ್ಟಾಗ ಅಲ್ಲೇನು ಅವ್ಯವಹಾರಗಳು ನಡೆದಿದೆ, ಎಷ್ಟು ದುಡ್ಡು ಹಾಳಾಗಿದೆ, ಪೋಲಾಗಿದೆ ಎಂದು ನಾನು ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ ಈ ಯೋಜನೆಗಾಗಿ ಅನಾವಶ್ಯಕವಾಗಿ ಹಾಗೂ ಅಗತ್ಯಕ್ಕಿಂತ ಹೆಚ್ಚಿನ ಸಾಮಗ್ರಿಗಳನ್ನು ಖರೀದಿಸಲಾಗಿದ್ದು ಎಲ್ಲವೂ ಉಗ್ರಾಣದಲ್ಲಿ ಹಾಗೂ ಕಛೇರಿಯ ಆವರಣದಲ್ಲಿ ಕೊಳೆಯುತ್ತಿವೆ ಖರೀದಿಸಲಾದ ಬಹಳಷ್ಟು ಸಾಮಗ್ರಿಗಳು ನಿರುಪಯೋಗಿ ಮತ್ತು ಅನವಶ್ಯಕವಾಗಿ ಬೆಲೆಯಲ್ಲಿ ಕೂಡ ಅತೀ ಹೆಚ್ಚಿನ ದರದಲ್ಲಿ ಖರೀದಿಸಲಾಗಿದೆ ಎಂದು ಮೇಲುನೋಟಕ್ಕೆ ತಿಳಿದುಬರುತ್ತದೆ ಹಾಗೂ ಸಾಮಗ್ರಿಗಳನ್ನು ಕೆಲವೇ ವ್ಯಕ್ತಿಗಳು ಒಬ್ಬೊಬ್ಬರ ಹೆಸರಿನಲ್ಲಿ ನಾಲ್ಕಾರು ಫರ್ಮ್‌ಗಳ ಹೆಸರುಗಳನ್ನು ಇಟ್ಟುಕೊಂಡು ಕೆಎಸ್‌ಟಿ ಮತ್ತು ಸಿಎಸ್‌ಟಿ ನಂಬರ್‌ಗಳಿಲ್ಲದೇ ಇರುವ ಫರ್ಮ್‌ಗಳ ಹೆಸರಿನಲ್ಲಿ ಸರಬರಾಜು ಮಾಡಿದ್ದಾರೆ ಈಗಾಗಲೇ ಕೆಎಸ್‌ಟಿ ಮತ್ತು ಸಿಎಸ್‌ಟಿ ಇಲ್ಲದ ಈ ಬೋಗಸ್ ಫರ್ಮ್‌ಗಳ ಹೆಸರುಗಳನ್ನು ಇಟ್ಟುಕೊಂಡು ಏನು ಸರಬರಾಜು ಮಾಡಿದ್ದಾರೆ, ಅದನ್ನು ವಿಚಾರಣೆ ಮಾಡಬೇಕು ಮತ್ತು ಅವರೇನು ಕಳಪೆಮಟ್ಟದ ಸಾಮಾನುಗಳನ್ನು ಸರಬರಾಜು ಮಾಡಿದ್ದಾರೆ, ಅವರ ಮೇಲೆ ಕ್ರಿಮಿನಲ್

ಮೊಕದ್ದಮೆಗಳನ್ನು ಹಾಕಿ ಆ ಹಣವನ್ನು ಅವರಿಂದ ವಸೂಲು ಮಾಡುವುದಕ್ಕೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ

**ಅಧ್ಯಕ್ಷರು** ಆಯಿತು ಈ ರೀತಿ ಮಾಡಿದರೆ ಹೇಗೆ? ಶೂನ್ಯ ವೇಳೆಯಲ್ಲಿ ಅವಕಾಶವನ್ನು ಕೊಡಬೇಕು ಎಂದು ಹೇಳುತ್ತೀರಿ, ಅದರ ಮೇಲೆ ಭಾಷಣವನ್ನು ಮಾಡುತ್ತೀರಿ ಹೀಗಾದರೆ ಹೇಗೆ? ಎರಡು ನಿಮಿಷದಲ್ಲಿ ನೀವು ಗಮನವನ್ನು ಸೆಳೆಯಬೇಕು

**ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್** ಮಾನ್ಯ ಅಧ್ಯಕ್ಷರೆ, ಆಯಿತು, ಇಲ್ಲಿ ನೂರು ಕೋಟಿ ರೂಪಾಯಿಗಳಷ್ಟು ಸೋರಿ ಹೋಗಿದೆ ಎರಡು ನಿಮಿಷದಲ್ಲಿಯೇ ಮುಗಿಸಿಬಿಡುತ್ತೇನೆ ಮೇ 2004ರಲ್ಲಿ 65 ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಿದೆ ನೀರಾವರಿ ನಿಗಮ 65 ಕೋಟಿ ರೂಪಾಯಿ ನಲ್ಲಿ 28 ಲಕ್ಷ ರೂಪಾಯಿಗಳನ್ನು ಎಡದಂಡೆ ಕಾಲುವೆಗೆ ಹೂಳೆತ್ತುವ ಮತ್ತು ಗಿಡಗಂಟಿಗಳನ್ನು ಕಡಿಯುವ ಕಾಮಗಾರಿ ಹೆಸರಿನಲ್ಲಿ ಪೂರ್ತಿ ನೂರಕ್ಕೆ ನೂರರಷ್ಟು ಹಣವನ್ನು ತಿಂದುಹಾಕಿದ್ದಾರೆ ಎಂಬುದನ್ನು ನಾನು ಖುದ್ದಾಗಿ ನಿಗಮದ ಎಂಡಿ ಯವರ ಜೊತೆಯಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಆ ರೀತಿ ನೋಡಿ ಬಂದು 15 ದಿವಸಗಳಾದರೂ ಇಲ್ಲಿಯವರೆಗೆ ಯಾವುದೇ ಕ್ರಮ ಜರುಗಿಸದಿರುವುದು ದುರಾದೃಷ್ಟಕರವೆಂದು ಹೇಳಲು ಇಷ್ಟಪಡುತ್ತೇನೆ ಅಲ್ಲಿ ಎಲ್ಲಾ ಇಂಜಿನಿಯರ್‌ಗಳ ಇನ್‌ಚಾರ್ಜ್ ವ್ಯವಸ್ಥೆ ಇದೆಯೋ ಈ ವ್ಯವಸ್ಥೆಯಲ್ಲಿ 28 ಲಕ್ಷ ರೂಪಾಯಿಗಳನ್ನು ನೇರವಾಗಿ ಲೂಟಿ ಮಾಡಿದ್ದಾರೆ ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು

**ಅಧ್ಯಕ್ಷರು** ಮಾನ್ಯ ಸದಸ್ಯರು ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಆ ಯೋಜನೆಯಲ್ಲಿ ನೂರಾರು ಕೋಟಿ ರೂಪಾಯಿಗಳ ದುರುಪಯೋಗವಾಗಿದೆಯೆಂದು ಹೇಳುತ್ತಿದ್ದಾರೆ ಆದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ಸ್ವಲ್ಪ ಸರಿಯಾಗಿ ನೋಡಿ ಹೇಳಿ ಸಚಿವರು ಹೇಳುತ್ತಾರೆ ತಾವು ಕುಳಿತುಕೊಳ್ಳಿ

**ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್** ಇಲ್ಲಿಯುವರೆಗೆ ಬೆಣ್ಣೆತೊರೆ ಯೋಜನೆಯಲ್ಲಿ ನೂರಾರು ಕೋಟಿ ರೂಪಾಯಿಗಳು ಲೂಟಿಯಾದರೂ ಯಾವುದೇ ಕ್ರಮ ತೆಗದುಕೊಳ್ಳದಿರುವುದು ದುರಾದೃಷ್ಟಕರ ಎಂಬ ಮಾತನ್ನು ಹೇಳಲು ಇಚ್ಛೆಪಡುತ್ತೇನೆ ಅದು ಮುಖ್ಯಮಂತ್ರಿಯುವರ ಜಿಲ್ಲೆಯೂ ಆಗಿದೆ ಮುಖ್ಯಮಂತ್ರಿಯವರು, ಹಾಗೂ ಹಿರಿಯ ಸಚಿವರೆಲ್ಲ ಇರುವಾಗ ಅಂಥ ಜಿಲ್ಲೆಯಲ್ಲಿ ಇವತ್ತೇನು 32 ವರ್ಷಗಳಿಂದ ಏನು ಯೋಜನೆಗಳು ಪ್ರಾರಂಭವಾಗಿದೆ ಇವತ್ತಿನವರೆಗೆ 230 ಕೋಟಿ ಖರ್ಚು ಮಾಡಿದರೂ ರೈತರಿಗೆ ಒಂದು ತೊಟ್ಟು ನೀರನ್ನು ಕೊಡಲು ಆಗಿಲ್ಲವೆಂದರೆ ಇದು ಬಹಳ ಚಿಂತಾಜನಕವಾದ ವಿಚಾರವಾಗಿದೆ ಇರತಕ್ಕ ಹಣವನ್ನು ಪೂರ್ಣವಾಗಿ ತಿಂದುಹಾಕಿದ್ದಾರೆ ಎಂಬ ಮಾತನ್ನು ಇವತ್ತು ಹೇಳಬೇಕಾಗಿದೆ, ಎಡದಂಡೆ ಕಾಲುವೆಯಲ್ಲಿ 9 ರಿಂದ 10ನೇ ಕಿಲೋಮೀಟರ್ ನಲ್ಲಿರುವ ಎಂಬ್ಯಾಕ್‌ಮೆಂಟ್ ಒಡೆದು ಪೂರ್ತಿ ನೀರು ಹಳ್ಳಕ್ಕೆ ಹೋಗುತ್ತಿದೆ

**ಅಧ್ಯಕ್ಷರು** ಮಾನ್ಯ ಪಾಟೀಲರೆ, ಇದು ಗಂಭೀರವಾದಂಥ ವಿಚಾರ
111-48 ಗುಲ್ಬರ್ಗಾ ಜಿಲ್ಲೆಯವರೇ ಮುಖ್ಯಮಂತ್ರಿಯವರು ಅವರೊಂದಿಗೆ ಕುಳಿತು

ಮಾತನಾಡಿ, ಅವರು ಇದರ ಬಗ್ಗೆ ಏನು ಯೋಗ್ಯ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ ಶೂನ್ಯ ವೇಳೆಯಲ್ಲಿ ಈ ರೀತಿ ಪ್ರಸ್ತಾಪ ಮಾಡಿದರೆ ಹೇಗೆ? ಸಂಬಂಧಪಟ್ಟ ದಾಖಲೆಗಳು ಇದ್ದರೆ ಕೊಡಿ

**ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್** ಸಮಯದ ಅಭಾವವಿದೆ ತಮ್ಮ ಮೂಲಕ ಸರ್ಕಾರಕ್ಕೆ ಸ್ಪೆಸಿಫಿಕ್ ಆಗಿ ಅಲಿಗೇಷನ್ ಮಾಡುತ್ತಿದ್ದೇನೆ, ಯಾವ್ಯಾವ ಸ್ಥಳದಲ್ಲಿ ಎಷ್ಟು ಸೋರಿದೆ, ಏನೇನಾಗಿದೆ ಎಂಬ ಮಾತನ್ನು ಈ ಪತ್ರದಲ್ಲಿ ತಮಗೇ ಬರೆದಿದ್ದೇನೆ ತಮ್ಮ ಮೂಲಕ ಸರ್ಕಾರಕ್ಕೆ ಕಳುಹಿಸಬೇಕು ಕೇವಲ ಹತ್ತು ದಿವಸಗಳಲ್ಲಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ಎಂಬುದನ್ನು ನನಗೆ ತಿಳಿಸಬೇಕಾಗುತ್ತದೆ, ಇದು 32 ವರ್ಷಗಳವರೆಗೆ ನಡೆದುಕೊಂಡು ಬಂದಿರುವ ಅವ್ಯವಹಾರವಾಗಿದೆ ಜನರಿಗೆ ಹತ್ತು ವರ್ಷಗಳ ಹಿಂದೆಯೇ ನೀರನ್ನು ಕೊಡಬೇಕಾಗಿತ್ತು 32 ವರ್ಷವಾದರೂ 7 ಕೋಟಿ ರೂಪಾಯಿಗಳಲ್ಲಿ ಆಗಬೇಕಾದಂಥ ಯೋಜನೆಯೇನಿತ್ತು 230 ಕೋಟಿ ಖರ್ಚಾದರೂ ಆ ಯೋಜನೆ ಮುಗಿಸಲು ಸಾಧ್ಯವಾಗಿಲ್ಲ ಮತ್ತೆ 65 ಕೋಟಿ ರೂಪಾಯಿಗಳನ್ನು ಅಧಿಕಾರಿಗಳು ಸರ್ಕಾರಕ್ಕೆ ಕೇಳಿದ್ದಾರೆ ನೂರು ಕೋಟಿ ರೂ ಕೊಟ್ಟರೂ ಈ ಯೋಜನೆ ಮುಗಿಸುಂಥ ಪರಿಸ್ಥಿತಿಯಲ್ಲಿ ಇಲ್ಲ ಅಂಥ ಅವ್ಯವಸ್ಥೆ ಮಿತಿಮೀರಿದ ಭ್ರಷ್ಟಾಚಾರ ಆ ನೀರಾವರಿ ಯೋಜನೆಯಲ್ಲಿ ನಡೆದಿದೆ

ಅಧ್ಯಕ್ಷರು ಆಯಿತು ಪಾಟೀಲರೇ ಇದೇನು ಚರ್ಚೆಯಲ್ಲಿ ಭಾಗವಹಿಸುತ್ತಿದ್ದೀರಾ? ಶೂನ್ಯ ವೇಳೆಯಲ್ಲಿ ಅವಕಾಶ ಕೊಡಿ ಎಂದು ಹೇಳುತ್ತೀರಿ, ಕೊಟ್ಟರೆ ಈ ರೀತಿ ಮಾಡುತ್ತೀರಿ, ದಯಮಾಡಿ ಮುಗಿಸಿ

**ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್** ಆ ನೀರಾವರಿ ಯೋಜನೆಗೆ ಕ್ಯಾನ್ಸರ್ ಆಗಿದೆ ಅದಕ್ಕೆ ಆಪರೇಷನ್ ಮಾಡುವ ಅಗತ್ಯವಿದೆ

**ಅಧ್ಯಕ್ಷರು** ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಕಳುಹಿಸಿ

**ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್** ಅದಕ್ಕೆ ಸಂಬಂಧಪಟ್ಟ ಅರ್ಜಿಯನ್ನು ನಾನೇನು ಸ್ಪೆಸಿಫಿಕ್ ಚಾರ್ಜಸ್ ಮಾಡಿದ್ದೇನೆ ಅದನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ

**ಅಧ್ಯಕ್ಷರು** ಸರ್ಕಾರದ ಪರವಾಗಿ ಯಾರಾದರೂ ಉತ್ತರ ಕೊಡಿ

**ಶ್ರೀ ಆರ್ ಅಶೋಕ್** ಮಾನ್ಯ ಸದಸ್ಯರು ಮುಖ್ಯಮಂತ್ರಿಯವರ ಜಿಲ್ಲೆಯಲ್ಲಿ ಅವ್ಯವಹಾರವಾಗಿದೆಯೆಂದು ಆರೋಪ ಮಾಡುತ್ತಿದ್ದಾರೆ

**ಶ್ರೀ ಜೆ ಸಿ ಮಾಧುಸ್ವಾಮಿ** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರನ್ನು ಬೇರೆಯವರು ಎಳೆದು ಮಾತನಾಡುವುದು ಬೇಡ ಎಂದು ಕೂರಿಸುತ್ತಿದ್ದಾರೆ ಹೀಗಾದರೆ ಇದು ಪ್ರಿವಿಲೇಜ್ ಆಗುತ್ತದೆ ಈ ಸದನದಲ್ಲಿ ಏನಾಗುತ್ತಿದೆ?

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಮಾನ್ಯ ಅಧ್ಯಕ್ಷರೆ, ಒಬ್ಬರು ಸದಸ್ಯರನ್ನು ಕೂರಿಸತಕ್ಕದ್ದರ ಬಗ್ಗೆ ನೀವು ಹೇಳಿ, ಅದರೆ ಬೇರೆ ಸದಸ್ಯರು ಅವರನ್ನು ಎಳೆದು ಕೂರಿಸುತ್ತಿದ್ದಾರಲ್ಲಾ?

**ಗೊಂದಲ**

**ಅಧ್ಯಕ್ಷರು** ಯಾರಾದರೂ ಒಬ್ಬರು ನಿಂತುಕೊಂಡು ಮಾತನಾಡಿದರೆ ನನಗೆ ಸರಿಯಾಗಿ ಕೇಳಿಸುತ್ತದೆ ಎಲ್ಲರೂ ಒಟ್ಟಿಗೆ ಎದ್ದು ನಿಂತು ಮಾತನಾಡಿದರೆ ನನಗೆ ಕೇಳುತ್ತದೆಯೆ?

**ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್** ಆ ಯೋಜನೆಯಲ್ಲಿ ನೂರಾರು ಕೋಟಿ ರೂಪಾಯಿಗಳ ಲೂಟಿಯಾಗಿದೆ ಇದನ್ನು ಸರಿಪಡಿಸಬೇಕು ಇನ್ನೂ ನೂರು ಕೋಟಿ ರೂ ಕೊಟ್ಟರೂ ಅದು ಪೂರ್ಣವಾಗಿ ಆಗುವ ಸ್ಥಿತಿಯಲ್ಲಿ ಇಲ್ಲ

**ಗೊಂದಲ**

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಅಧ್ಯಕ್ಷರೆ, ಒಬ್ಬರು ಸದಸ್ಯರು ಹಕ್ಕನ್ನು ಕಿತ್ತುಕೊಳ್ಳಲು ಇಲ್ಲಿ ಯಾರಿಗೂ ಅಧಿಕಾರ ಇಲ್ಲ ಅದು ಅಧ್ಯಕ್ಷರೊಬ್ಬರಿಗೆ ಇರುವುದು ಆದರೆ ಬೇರೆ ಸದಸ್ಯರು ಇನ್ನೊಬ್ಬ ಸದಸ್ಯರ ಹಕ್ಕನ್ನು ಕಿತ್ತುಕೊಳ್ಳಲು ಆಗುವುದಿಲ್ಲ ಅವರು ಎಷ್ಟು ಬೇಕಾದರೂ ಮಾತನಾಡ ಬಹುದು ಬೇಕಾದರೆ ತಾವು ಅವರನ್ನು ಕೂರಿಸಬಹುದು ಆದರೆ ಬೇರೆ ಸದಸ್ಯರು ಅವರನ್ನು ಕೂರಿಸಲು ಪ್ರಯತ್ನ ಮಾಡುವುದು ಸರಿಯಲ್ಲ

**ಅಧ್ಯಕ್ಷರು** ಮಾನ್ಯ ವಿಶ್ವನಾಥ್ ಪಾಟೀಲ್ ಹೆಬ್ಬಾಳ್‌ರವರು ಬಹಳ ಗಂಭೀರವಾದ ಆರೋಪವನ್ನು ಮಾಡಿದ್ದಾರೆ ಅವರು ಸಂಬಂಧಪಟ್ಟ ನಿಗಮದ ಅಧ್ಯಕ್ಷ ಹತ್ತಿರ ಹೋಗಿ ಅವರ ಕ್ಷೇತ್ರದಲ್ಲಿ ಹೋಗಿ ಸ್ಥಳ ಪರಿಶೀಲನೆ ಮಾಡಿದ್ದೇವೆ, ಅಲ್ಲಿ ನೂರಾರು ಕೋಟಿ ರೂಪಾಯಿ ಭ್ರಷ್ಟಾಚಾರ ನಡೆದಿದೆ, ಅದನ್ನು ಅವರ ಗಮನಕ್ಕೆ ತಂದಿದ್ದೇನೆ, ಆದರೂ ಏನು ಕ್ರಮ ತೆಗೆದುಕೊಂಡಿಲ್ಲವೆಂದು ಗಂಭೀರವಾದ ಆರೋಪವನ್ನು ಶೂನ್ಯವೇಳೆಯಲ್ಲಿ ಹೇಳಿದ್ದಾರೆ, ಅದಕ್ಕೆ ಗಂಭೀರವಾಗಿ ಮುಖ್ಯಮಂತ್ರಿಗಳು ಇಲ್ಲದಿದ್ದರೆ ಉಪ ಮುಖ್ಯಮಂತ್ರಿಯವರು ಉತ್ತರವನ್ನು ಕೊಡಬೇಕು ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳಬೇಕು

**ಶ್ರೀ ಬಿ ಎಸ್ ಯಡಿಯೂರಪ್ಪ** ಮಾನ್ಯ ಅಧ್ಯಕ್ಷರೆ, ನಮ್ಮ ಕಡೆಯಾಗಲಿ, ಆ ಕಡೆಯಾಗಲಿ ಯಾರಾದರೂ ಸದಸ್ಯರು ಮಾತನಾಡತಕ್ಕ ಕಾಲದಲ್ಲಿ ಅಲ್ಲಿ ಮುಖ್ಯ ಸಚೇತಕರಾಗಲೀ ನಮ್ಮ ಮುಖ್ಯ ಸಚೇತಕರಾಗಲೀ ಹೋಗಿ ಬೇಡ ನಿಲ್ಲಿಸಿ, ಇಲ್ಲದಿದ್ದರೆ ಈ ರೀತಿ ಮಾತನಾಡಿ ಎಂದು ಹೇಳುವಂಥದ್ದು ಸಹಜವಾದುದು ಆದರೆ ಅವರು ಮಂತ್ರಿಯೆಂದು ಗೊತ್ತಿಲ್ಲ ಅವರು ಓಡಿ ಹೋಗುತ್ತಾರೆ, ರಾಯರೆಡ್ಡಿಯವರು ಸಂಸತ್ತಿನಲ್ಲಿ ಇದ್ದವರು, ಅನುಭವ ಇರತಕ್ಕವರು ಅವರು ಸದಸ್ಯರು ಮಾತನಾಡುವ ಕಾಲದಲ್ಲಿ ಹೋಗಿ ಕಾಗದವನ್ನು ಕಿತ್ತುಕೊಳ್ಳಲು ಹೋಗುವುದು, ತಡೆಯಲು ಹೋಗುವುದು ಈ ಸದನದಲ್ಲಿ ಎಂದಾದರೂ ನಡೆದಿದೆಯೆ? ಮುಖ್ಯ ಸಚೇತಕರು ಬೇಕಾದರೆ ಹೋಗಿ ಇಲ್ಲ ಇದು ಬೇಡ, ನಾವು ರೂಲಿಂಗ್ ಪಾರ್ಟಿ ಇದನ್ನು ಪ್ರಚಾರ ಮಾಡುವುದು ಬೇಡ ಎಂದು ಹೇಳಬಾರದೆಂದು ನಾನು ಹೇಳುವುದಿಲ್ಲ ಆದರೆ ಅವರು ಮಾತನಾಡುವಾಗ ಈ ಕಡೆಯಿಂದ ಮಂತ್ರಿಯವರು ಹೋಗಿ ಅಡ್ಡ ನಿಂತುಕೊಳ್ಳುವುದು, ಆ ಕಡೆ ರಾಯರೆಡ್ಡಿಯವರು ಹೋಗಿ ಅಡ್ಡ ನಿಂತುಕೊಳ್ಳುವುದು ಇದೆಲ್ಲಾ ನಾಳೆ ದಿವಸ ಪತ್ರಿಕೆಯಲ್ಲಿ ಬರುವುದಲ್ಲವೆ? ಟಿ ವಿ ಮಾಧ್ಯಮದಲ್ಲಿ ಬರುವುದಿಲ್ಲವೆ? ಇದಕ್ಕೆ ದಯವಿಟ್ಟು ತಾವು ಅವಕಾಶ ಕೊಡಬೇಡಿ

**ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, ಯಾವುದೇ ಸದಸ್ಯರಿಗೆ ಮಾತನಾಡಲು ಅವರಿಗೆ ಪೂರ್ಣವಾದ ಸ್ವಾತಂತ್ರ್ಯವಿದೆ, ಹಕ್ಕು ಇದೆ, ಅದರ ಬಗ್ಗೆ ಎರಡು ಮಾತಿಲ್ಲ ಮಾನ್ಯ ವಿಶ್ವನಾಥ್‌ರವರು ಶೂನ್ಯ ವೇಳೆಯಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಶೂನ್ಯ ವೇಳೆಯಲ್ಲಿ ಇರತಕ್ಕಂಥ ಇತಿಮಿತಿಗಳು ಅದರ ವ್ಯಾಪ್ತಿಗಳನ್ನೂ ಕೂಡ ಅವರು ತಿಳಿದುಕೊಂಡು ಮಾತನಾಡಬೇಕಾಗುತ್ತದೆ ಯಾರಾದರೂ ಸದಸ್ಯರು ಶೂನ್ಯ ವೇಳೆಯಲ್ಲಿ ಮಾತನಾಡಬೇಕಾದಾಗ ಮೊದಲು ಸರ್ಕಾರದ ಗಮನ ಸೆಳೆಯುವುದು, ಸರ್ಕಾರ ಉತ್ತರ ಇದ್ದರೆ ತಕ್ಷಣ ಹೇಳಬೇಕಾಗುತ್ತದೆ, ಉತ್ತರ ಇಲ್ಲದಿದ್ದರೆ ತರಿಸಿಕೊಡಬೇಕಾಗುತ್ತದೆ ನಮ್ಮ ಕಡೆಯಿಂದ ಯಾವುದೇ ಮಾನ್ಯ ಸದಸ್ಯರು ಹೋಗಿ ಅವರನ್ನು ಎಳೆಯಲು ಹೋಗಿಲ್ಲ

**ಶ್ರೀ ಜೆ ಸಿ ಮಾಧುಸ್ವಾಮಿ** ಎಳೆದರು ಎಳೆದುಕೂರಿಸಿದರು

**ಗೊಂದಲ**

**ಅಧ್ಯಕ್ಷರು** ಸಮಯ ಹಾಳಾಗುತ್ತದೆ ದಯಮಾಡಿ ಕುಳಿತುಕೊಳ್ಳಿ ಸಮಯವನ್ನು ಹಾಗೆಲ್ಲಾ ವ್ಯರ್ಥ ಮಾಡುವುದಕ್ಕಾಗುವುದಿಲ್ಲ ಮಾನ್ಯ ನಾಗರಾಜ್‌ರವರೇ, ಎಲ್ಲರಿಗೂ ಅವಕಾಶ ಕೊಡಬೇಕು

**ಶ್ರೀ ಸಿದ್ಧರಾಮಯ್ಯ** ಅವರಿಗೆ ಇದು ಶೂನ್ಯ ವೇಳೆ, ಆದ್ದರಿಂದ ಸೀಮಿತವಾಗಿ ಮಾತನಾಡಿ ಎಂದು ಹೇಳಲು ಅವರು ಹೋಗಿದ್ದಾರೆ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ಅದನ್ನು ಮುಖ್ಯ ಸಚೇತಕರಿದ್ದಾರೆ, ಅವರು ಹೋಗಿ ಹೇಳಲಿ

**ಗೊಂದಲ**

**ಶ್ರೀ ಜೆ ಸಿ ಮಾಧುಸ್ವಾಮಿ** ಸರ್ಕಾರಕ್ಕೆ ಒಬ್ಬರು ಸಚೇತಕರಿದ್ದಾರೆ, ಅವರು ಹೋಗಿ ಹೇಳಲಿ

**ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್** ಅವರು ನನ್ನನ್ನು ಕೂರಿಸಲು ಪ್ರಯತ್ನ ಮಾಡಲಿಲ್ಲ

**ಶ್ರೀ ಸಿದ್ಧರಾಮಯ್ಯ** ಮಾನ್ಯ ವಿಶ್ವನಾಥ್‌ರವರು ಮೂರನೆಯ ಸಾರಿ ಗೆದ್ದು ಬಂದಿದ್ದಾರೆ ಅವರೇನೂ ಹೊಸಬರಲ್ಲ ಅವರ ಹಕ್ಕುಗಳು ಅವರಿಗೆ ಗೊತ್ತಿದೆ, ಅವರ ಬಾಧ್ಯತೆಗಳು ಗೊತ್ತಿದೆ, ಅವರಿಗೆ ಡಿಫೆಂಡ್ ಮಾಡಿಕೊಳ್ಳುವ ಶಕ್ತಿಯೂ ಇದೆ. ಅವರ ಹಕ್ಕನ್ನು ಯಾರೂ ಹರಣ ಮಾಡಲು ಆಗುವುದಿಲ್ಲ ಕಿತ್ತುಕೊಳ್ಳಲೂ ಆಗುವುದಿಲ್ಲ ಅದಕ್ಕೆ ಅವರು ಬಿಡುವುದೂ ಇಲ್ಲ. ಅವರಿಗೆ ಆ ಶಕ್ತಿ ಇದೆ ಅದರ ಬಗ್ಗೆ ದೊಡ್ಡ ಚರ್ಚೆ ಮಾಡಬೇಕಾದ ಅಗತ್ಯವಿಲ್ಲವೆಂದು ಭಾವಿಸುತ್ತೇನೆ ಅವರು ಬೆಣ್ಣೆತೊರೆ ಯೋಜನೆಯಲ್ಲಿ ಹಣದ ದುರುಪಯೋಗವಾಗಿದೆ, ಕೋಟ್ಯಾಂತರ ರೂಪಾಯಿ ದುರುಪಯೋಗವಾಗಿದೆ ಎಂದು ಒಂದು ಗಂಭೀರವಾದ ವಿಚಾರವನ್ನು ಹೇಳಿದ್ದಾರೆ ಸರ್ಕಾರ ಇದರ ಬಗ್ಗೆ ಅತ್ಯಂತ ಗಂಭೀರವಾಗಿ ವಿಚಾರಣೆ ಮಾಡಿಸಿ ಆ ರೀತಿ ಹಣ ದುರುಪಯೋಗವಾಗಿದ್ದರೆ ಯಾರು ದುರುಪಯೋಗ ಮಾಡಿದ್ದಾರೆ, ಇದಕ್ಕೆ ಯಾರು ಕಾರಣಕರ್ತರಾಗಿದ್ದಾರೆ ಅವರ ಮೇಲೆ ನಿರ್ದಿಷ್ಟವಾದಂಥ ಯಾವುದೇ ಮುಲಾಜು ಇಲ್ಲದೆ ಕಾನೂನಿನ ಚೌಕಟ್ಟಿನೊಳಗೆ ಎಷ್ಟರಮಟ್ಟಿಗೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಅದನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ

## 7 ತುಂಗಾ ಮೇಲ್ದಂಡೆ ಯೋಜನೆಯಿಂದ ಬ್ಯಾಡಗಿ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಬಗ್ಗೆ

**ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ (ಬ್ಯಾಡಗಿ)** ಮಾನ್ಯ ಅಧ್ಯಕ್ಷರೆ, ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಸುಮಾರು 329 ಕಿಲೋಮೀಟರ್ ಉದ್ದದ ಕಾಲುವೆಯನ್ನು ತೋಡಿ ಅದರಿಂದ ಸುಮಾರು 80,494 ಹೆಕ್ಟೇರ್ ಜಮೀನಿಗೆ ನೀರನ್ನು ಕೊಡುವಂಥ ವ್ಯವಸ್ಥೆಯ ಕಾರ್ಯಕ್ರಮ ಈಗಾಗಲೇ ಪ್ರಾರಂಭವಾಗಿದೆ, ಈ ನಿಟ್ಟಿನಲ್ಲಿ ಶಿವಮೊಗ್ಗ ತಾಲ್ಲೂಕಿನ 1806 ಹೆಕ್ಟೇರ್ ಜಮೀನಿಗೆ, ಹೊನ್ನಾಳಿ ತಾಲ್ಲೂಕಿನ 5084 ಹೆಕ್ಟೇರ್, ಹರಿಹರ ತಾಲ್ಲೂಕಿನ 210 ಹೆಕ್ಟೇರ್‌ಗೆ, ಹಿರೇಕೆರೂರು ತಾಲ್ಲೂಕಿನ 9394 ಹೆಕ್ಟೇರ್, ರಾಣಿಬೆನ್ನೂರು ತಾಲ್ಲೂಕಿನ 36276 ಹೆಕ್ಟೇರ್‌ಗೆ, ಹಾವೇರಿ ತಾಲ್ಲೂಕಿನ 25,737 ಹೆಕ್ಟೇರ್‌ಗೆ, ಹಾನಗಲ್ ತಾಲ್ಲೂಕಿನ 1387 ಹೆಕ್ಟೇರ್‌ಗೆ ಈ ರೀತಿ ನೀರನ್ನು ಕೊಡಬೇಕು ಎನ್ನತಕ್ಕ ವ್ಯವಸ್ಥೆಯನ್ನು ಯೋಜನೆಯಲ್ಲಿ ಅಳವಡಿಸಲಾಗಿದೆ

ಇದರ ಮಧ್ಯದಲ್ಲಿರುವ ಬ್ಯಾಡಗಿ ತಾಲ್ಲೂಕನ್ನು ಹೊರತುಪಡಿಸಿ ಉಳಿದೆಲ್ಲಾ ತಾಲ್ಲೂಕುಗಳಿಗೆ ತುಂಗಾ ಬಲದಂಡೆ ಯೋಜನೆಯಡಿ ನೀರಿನ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ ಬ್ಯಾಡಗಿ ತಾಲ್ಲೂಕು ಎತ್ತರ ಪ್ರದೇಶದಲ್ಲಿದೆಯೆಂದು ನೆಪವೊಡ್ಡಿ ಮೀಸಲು ಕ್ಷೇತ್ರವಾದ ಬ್ಯಾಡಗಿಗೆ ಸರ್ಕಾರ ಇವೊತ್ತು ಅನ್ಯಾಯವೆಸಗುತ್ತಿದೆ ಈ ಅನ್ಯಾಯದತ್ತ ಸರ್ಕಾರ ಗಮನಹರಿಸಬೇಕು ಬ್ಯಾಡಗಿ ತಾಲ್ಲೂಕು ಮೆಣಸಿನಕಾಯಿಯ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು, ಸರ್ಕಾರಕ್ಕೆ ಪ್ರತಿ ವರ್ಷವೂ ಕೋಟ್ಯಾಂತರ ರೂಪಾಯಿಗಳಷ್ಟು ಲಾಭ ಬರುತ್ತಿದೆ ಈ ರೀತಿ ಲಾಭ ತರುತ್ತಿರುವಂತಹ ಬ್ಯಾಡಗಿ ಕ್ಷೇತ್ರದತ್ತ ಗಮನಹರಿಸದೆ ನೀರಾವರಿ ಯೋಜನೆಯಲ್ಲಿ ಇದನ್ನು ಕೈಬಿಟ್ಟಿರುವುದು ಬಹಳ ಅನ್ಯಾಯ ವಾದಂತಾಗಿದೆ ಕ್ಷೇತ್ರದ ಮಧ್ಯಭಾಗದಲ್ಲಿಯೇ ಮುಖ್ಯ ಕಾಲುವೆ ಹರಿದುಹೋಗುತ್ತಿದ್ದರೂ ಸಹ ಬ್ಯಾಡಗಿ ಕ್ಷೇತ್ರವನ್ನು ಕಡೆಗಣಿಸಿ ಅಲ್ಲಿರುವ ಲಕ್ಷಾಂತರ ರೈತರಿಗೆ ಇವೊತ್ತಿನ ದಿವಸ ತೊಂದರೆಯುಂಟು ಮಾಡಿದಂತಾಗಿದೆ, ಮೋಸವೆಸಗಿದಂತಾಗಿದೆ ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ ಯೋಜನೆಯಡಿ ಪಂಪ್‌ನ ಮೂಲಕ ನೀರಿನ ಸೌಲಭ್ಯವನ್ನು ಬ್ಯಾಡಗಿ ಕ್ಷೇತ್ರದ ಕೊನೆಯವರೆಗೂ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಬ್ಯಾಡಗಿ ಕ್ಷೇತ್ರಕ್ಕೆ ನೀರಿನ ಸೌಲಭ್ಯ ಒದಗಿಸಿಕೊಡುವಲ್ಲಿ ಹಿಂದಿನ ಸರ್ಕಾರ ಬಹಳ ಅನ್ಯಾಯವೆಸಗಿದೆ ಕ್ಷೇತ್ರದ ಜನರ ನೀರಿನ ಬವಣೆಯನ್ನು ಆದಷ್ಟು ಬೇಗ ನೀಗಿಸಬೇಕು ಈ ಕ್ಷೇತ್ರಕ್ಕೆ ನೀರಿನ ಸೌಲಭ್ಯವನ್ನು ಒದಗಿಸಿಕೊಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕೆಂದು ತಮ್ಮ ಮೂಲಕ ಈ ಸಂದರ್ಭದಲ್ಲಿ ಅವರನ್ನು ಒತ್ತಾಯಿಸುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕಾ ಸಚಿವರು)** ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯವನ್ನು ನಾವು ಪರಿಶೀಲಿಸುತ್ತೇವೆ

**8 ಗುಲ್ಬರ್ಗಾ ಜಿಲ್ಲೆಯಲ್ಲಿನ ಕಾಗನಾ ನದಿಗೆ ಬ್ಯಾರೇಜ್ ನಿರ್ಮಾಣ**

**†ಶ್ರೀ ಸುನೀಲ್ ವಲ್ಲಾಪುರೆ (ಶಹಾಬಾದ್)** ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಶಹಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಹಿಂದಿನ ಸರ್ಕಾರ ಸಣ್ಣ ನೀರಾವರಿ ಇಲಾಖೆಯಿಂದ ಆ ಸಮಯದಲ್ಲಿ ಅಂದಿನ ನೀರಾವರಿ ಸಚಿವರು ಹಾಗೂ ಇಂದಿನ ನೀರಾವರಿ ಸಚಿವರಾದ ಆದರಣೀಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಬ್ಯಾರೇಜ್‌ವೊಂದನ್ನು ಸ್ಯಾಂಕ್ಷನ್ ಮಾಡಿಕೊಟ್ಟಿದ್ದರು ಅದಕ್ಕಾಗಿ ಆ ಸಮಯದಲ್ಲಿ ನಾನು ತುಂಬಾ ಸಂತೋಷಪಟ್ಟಿದ್ದೆ ಹಿಂದುಳಿದ ಗುಲ್ಬರ್ಗಾ ಜಿಲ್ಲೆಯಲ್ಲಿರುವ ಕಾಗನಾ ನದಿಗೆ ಅಡ್ಡಲಾಗಿ ಮೀಸಲು ಕ್ಷೇತ್ರದಲ್ಲೊಂದು ಬ್ಯಾರೇಜ್ ನಿರ್ಮಾಣವಾಗುತ್ತಿರುವುದಕ್ಕಾಗಿ ಅಲ್ಲಿನ ರೈತಾಪಿ ಜನರು ಬಹಳ ಸಂತೋಷಪಟ್ಟಿದ್ದರು ಇವೊತ್ತಿನ ದಿವಸ ಸದರಿ ಬ್ಯಾರೇಜ್ ಅನ್ನು ಎಸಿಸಿ ಸಿಮೆಂಟ್ ಕಂಪನಿಯವರಿಗೆ ವಹಿಸಿಕೊಡಲಾಗಿದೆ, ಸದರಿ ಕಂಪನಿಯವರು ಪೂರ್ತಿ ಹಣ ಭರಿಸಿ ಬ್ಯಾರೇಜ್ ನಿರ್ಮಿಸುತ್ತಿರುವುದಕ್ಕೂ ಕೂಡ ಸಂತೋಷಪಟ್ಟಿದ್ದೆವು ಆದರೆ, ಇವೊತ್ತು ಎಸಿಸಿ ಕಂಪನಿಯವರು ಏನು ಮಾಡುತ್ತಿದ್ದಾರೆಂದರೆ, ಕೆಐಎಡಿಬಿ ಮುಖಾಂತರ Command Area ಇರುವ ರೈತಾಪಿ ಜನರ ಜಮೀನನ್ನು ಕೆಐಎಡಿಬಿಯವರು acquire ಮಾಡುತ್ತಿದ್ದಾರೆ ನಮ್ಮ ಜಿಲ್ಲೆಯಲ್ಲಿ ಇದೊಂದು ದೊಡ್ಡ ಪ್ರಮಾಣದಲ್ಲಿ ಹಗರಣವಾಗುತ್ತಿದೆ ನನ್ನ ಕ್ಷೇತ್ರದಲ್ಲಿ ಬಹಳ ಅನ್ಯಾಯಗಳಾಗುತ್ತಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ನಮ್ಮ ಜಿಲ್ಲೆಯ ಸಮಸ್ಯೆಯನ್ನು ಕೇಳಬೇಕು ಎಸಿಸಿ ಸಿಮೆಂಟ್ ಕಂಪನಿಯವರು ಕೆಐಎಡಿಬಿ ಮೂಲಕ ರೈತರ ಜಮೀನನ್ನು acquire ಮಾಡಿಕೊಳ್ಳುತ್ತಿದ್ದಾರೆ ಅಲ್ಲಿ ಕೈಗಾರಿಕೆ ಸ್ಥಾಪಿಸಲು ನಮ್ಮದು ಯಾವುದೇ ಅಭ್ಯಂತರವಿಲ್ಲ ಅಲ್ಲಿ ಕೈಗಾರಿಕೆ ಸ್ಥಾಪಿಸಲು ಯಾವುದೇ ಬೇಡಿಕೆಗಳು ಬಂದಿಲ್ಲ ಇವೊತ್ತು ಕೆಐಎಡಿಬಿಯವರು ಎಸಿಸಿ ಸಿಮೆಂಟ್ ಕಂಪನಿಯ ಏಜೆಂಟರಾಗಿ ವರ್ತಿಸುತ್ತಿದ್ದಾರೆ Command Areaದಲ್ಲಿರುವ ರೈತಾಪಿ ಜನರ ಜಮೀನೆಲ್ಲವನ್ನೂ ಕೆಐಎಡಿಬಿಯವರು acquire ಮಾಡಿಕೊಂಡು ಎಸಿಸಿ ಸಿಮೆಂಟ್ ಕಂಪನಿಯರಿಗೆ ಕೊಡುವುದಕ್ಕೆ ಹುನ್ನಾರ ನಡೆದಿದೆ ಇವೊತ್ತು ನಮ್ಮ ಜಿಲ್ಲೆಯಲ್ಲಿ ಕೈಗಾರಿಕೆಗಳು ಬೆಳೆಯಲು ಸಾಕಷ್ಟು ರೀತಿಯಲ್ಲಿ ನಾವೆಲ್ಲರೂ ಸಹಕರಿಸುತ್ತೇವೆ 1956ರಲ್ಲಿ ಎಸಿಸಿ ಸಿಮೆಂಟ್ ಕಂಪನಿಯ ಮದರ್ ಯುನಿಟ್‌ನವರು ಶಹಾಬಾದ್‌ನಲ್ಲಿ ಆ ಕಾರ್ಖಾನೆಯನ್ನು ಪ್ರಾರಂಭಿಸಿದರು ಇವೊತ್ತು ಹೆಚ್‌ಎಂಟಿ ಕಾರ್ಖಾನೆಯವರು ಸರ್ಕಾರಕ್ಕೆ 126 ಕೋಟಿ 63 ಲಕ್ಷ ರೂಪಾಯಿಗಳಷ್ಟು ಹಣವನ್ನು ಬಾಕಿ ಕೊಡುವುದೇನಿದೆ, ಅದರತ್ತ ಸರ್ಕಾರ ಗಮನಹರಿಸುತ್ತಿಲ್ಲ ಎಸಿಸಿ ಸಿಮೆಂಟ್ ಕಂಪನಿಯವರು ನಮ್ಮ ಜಿಲ್ಲೆಯ ಖನಿಜ ಸಂಪತ್ತನ್ನು ಲೂಟಿ ಮಾಡುತ್ತಿದ್ದಾರೆ ಇವೊತ್ತು ಕೆಐಎಡಿಬಿಯವರು acquire ಮಾಡಿರುವ ಜಮೀನನ್ನು ಬಿಟ್ಟು ಶಹಾಬಾದ್‌ನಲ್ಲಿ ಎಸಿಸಿ ಸಿಮೆಂಟ್ ಕಂಪನಿಯನ್ನು ಪುನರ್ ಆರಂಭಿಸುವುದಕ್ಕೆ ನಾವೆಲ್ಲರೂ ಸಹಕರಿಸುತ್ತೇವೆ

ಆದ್ದರಿಂದ ಶಹಾಬಾದ್‌ನಲ್ಲಿರುವ ಎಸಿಸಿ ಕಂಪನಿ Lime stone quarry ಸಾಕಷ್ಟು ಇದ್ದುದರಿಂದ WADI ನಗರ ಸುತ್ತಮುತ್ತ ಇರುವ KAIDB acquire ಮಾಡುತ್ತಿರುವ ಜಮೀನು ಕೈಬಿಡಬೇಕು ಹಾಗೂ ಶಹಾಬದ್ ಸುತ್ತಲು ಇರುವ ಎಸಿಸಿ ಜಮೀನು ತೆಗೆದುಕೊಂಡು ಶಹಾಬಾದ್ ಹೆಚ್ ಎಂ ಟಿ ಕಾರ್ಖಾನೆ ಪುನರಾಂಭಿಸಲು ಸರಕಾರ ಮಧ್ಯಸ್ಥಿಕೆ ವಹಿಸಿ ಶಾಹಾಬಾದ ಕಾರ್ಖಾನೆ ಎಸಿಸಿರವರಿಂದ ಪ್ರಾರಂಭಿಸಬೇಕು ಎಂದು ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕಾ ಸಚಿವರು)** ಮಾನ್ಯ ಅಧ್ಯಕ್ಷರೇ, ಪರಿಶೀಲಿಸುತ್ತೇವೆ

**ಶ್ರೀ ಅರಗ ಜ್ಞಾನೇಂದ್ರ** ವಿಷಯ ಪ್ರಸ್ತಾಪಿಸುವ ಬಗ್ಗೆ ನೋಟೀಸ್ ಕೊಟ್ಟು 3–4 ದಿವಸಗಳಾಗಿರುತ್ತದ ಅದು ಸರ್ಕಾರಕ್ಕೂ ತಲುಪಿರುತ್ತದೆ ಯಾರಾದರೊಬ್ಬರು ಮಂತ್ರಿಗಳಿಗೆ ಅದೊಂದು ಉತ್ತರವನ್ನು ತರಿಸುವುದಕ್ಕಾಗುವುದಿಲ್ಲವೇ?

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಸದಸ್ಯರು ಶೂನ್ಯ ವೇಳೆಗಿಂತ ಮೊದಲೇ ಕೇಳಿದ್ದರೆ ಅದಕ್ಕೆ ಉತ್ತರ ಸಿದ್ಧವಿರುತ್ತದೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಅದು ಇವೊತ್ತು ಕೇಳಿದ್ದಲ್ಲ 10–15 ದಿವಸಗಳ ಹಿಂದೆಯೇ ಕೇಳಿದ್ದು

## 9 Sub Construction of bridges and roads in Belgaum and Khanapur Taluks-reg

**Sri Manohar Kalappa Kinekar (Uchagaon)** Sir for the last 5-6 days in Belgaum and Khanapur Talukas due to heavy rains all rivers and naalas are overflowing fully Near Ashoka on Tuesday, while going back to school, one high school girl while crossing the Kumbar naala fallen into the naala as there was no bridge across the naala On the same day in the same naala one Maruthi car along with two people fell into the naala Till yesterday, the police have found two bodies, They are searching for one body and still they have not got it There are no proper bridges and roads there This is the position of Khanapur evenafter 57 years of independence

I am requesting the Government to have bridges and roads in Khanapur taluka so that people can travel safely Even buses are not running for want of bridges and proper roads Compensation should be paid to the families of the two persons who have died on humanitarian grounds The persons who died are aged about 30-35 years and they are the main earning members in the family Kindly look into the matter and pay compensation to their families I also request the Government to have good bridges and roads in both Belgaum and Khanapur taluks

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕಾ ಸಚಿವರು)** ಮಳೆಯಿಂದ ಕೆಟ್ಟು ಹೋಗಿರುವ ರಸ್ತೆಗಳನ್ನು ಸರಿಪಡಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ

**10 ವಿಷಯ ಮರಗಳ ಕಳ್ಳ ಸಾಗಾಣಿಕೆ ಸಂದರ್ಭದಲ್ಲಿ ವಶಪಡಿಸಿಕೊಳ್ಳಲಾದ ವಾಹನಗಳನ್ನು ಸೀಜ್ ಮಾಡುವ ಕುರಿತು**

**ಶ್ರೀ ಡಿ ಎನ್ ಜೀವರಾಜ್ (ಶೃಂಗೇರಿ)** ಮಾನ್ಯ ಅಧ್ಯಕ್ಷರೆ, ಗಂಧದ ಮರಗಳ ಕಳ್ಳ ಸಾಗಾಣಿಕೆಯಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ಎಲ್ಲಾ ರೀತಿಯ ಮರಗಳ ಕಳ್ಳ ಸಾಗಾಣಿಕೆ ಕೂಡ ನಮ್ಮ ಮಲೆನಾಡು ಕ್ಷೇತ್ರದಲ್ಲಿ ನಡೆಯುತ್ತಿದೆ ಗಂಧದ ಮರಗಳ ಕಳ್ಳ ಸಾಗಾಣಿಕೆ ಜೊತೆಗೆ ವಶಪಡಿಸಿಕೊಂಡಿರುವ ವಾಹನಗಳನ್ನು ಮೂರು ತಿಂಗಳೊಳಗೆ ಆದೇಶ ಹೊರಡಿಸುವ ಮೂಲಕ ಅವುಗಳನ್ನು ಹರಾಜು ಹಾಕುವ ವ್ಯವಸ್ಥೆ ಮಾಡಿದ್ದರೆ ಅನುಕೂಲವಾಗುತ್ತಿತ್ತು ಈಗ ಏನಾಗಿದೆಯೆಂದರೆ, ಈ ರೀತಿ ವಶಪಡಿಸಿಕೊಂಡಿರುವ ವಾಹನಗಳನ್ನು ಅಧಿಕಾರಿಗಳು ಉಪಯೋಗಿಸಿಕೊಳ್ಳಲು ಆರಂಭಿಸಿದ್ದಾರೆ ಇಷ್ಟೇ ಅಲ್ಲದೆ, ವಾಹನಗಳ ಎಲ್ಲಾ ಬಿಡಿ ಭಾಗಗಳನ್ನೂ ಕದ್ದು ಮಾರಾಟ ಮಾಡುತ್ತಿದ್ದಾರೆ ವಶಪಡಿಸಿಕೊಂಡ ವಾಹನಗಳನ್ನು ಮೂರು ತಿಂಗಳೊಳಗಾಗಿ ಸಂಬಂಧಪಟ್ಟವರು ವಾಪಸ್ಸು ತೆಗೆದುಕೊಂಡು ಹೋಗದಿದ್ದರೆ ವಾಹನಗಳನ್ನು ಸೀಜ್ ಮಾಡಿಸುವ ವ್ಯವಸ್ಥೆ ಮಾಡಿಸಬೇಕು ಜೊತೆಗೆ ಅಂತಹ ವಾಹನಗಳನ್ನು ಅಧಿಕಾರಿಗಳು ಉಪಯೋಗಿಸದಿರುವ ರೀತಿಯಲ್ಲಿ ಆದೇಶಿಸ ಬೇಕೆಂದು ತಮ್ಮ ಮೂಲಕ ಸಂಬಂಧಪಟ್ಟ ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತಿದ್ದೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕಾ ಸಚಿವರು)** ಆಯಿತು, ಸರ್ಕಾರ ನೋಡುತ್ತದೆ

**11 ವಿಷಯ ನಕಲಿ ಶಿಕ್ಷಕರುಗಳನ್ನು ಪತ್ತೆಹಚ್ಚಿ ಕ್ರಮ ಕೈಗೊಳ್ಳುವ ಕುರಿತು**

**ಶ್ರೀ ಸಿ ಟಿ ರವಿ (ಚಿಕ್ಕಮಗಳೂರು)** ಮಾನ್ಯ ಅಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ನಕಲಿ ಶಿಕ್ಷಕರ ಹಾವಳಿ ವ್ಯಾಪಕವಾಗಿದೆ ಮತ್ತು ಸಾವಿರಾರು ಸಂಖ್ಯೆಯಲ್ಲಿ ಶಿಕ್ಷಣ ಇಲಾಖೆಯಲ್ಲಿ ನಕಲಿ ಶಿಕ್ಷಕರು ನಕಲಿ ಅಂಕಪಟ್ಟಿಗಳನ್ನು ಕೊಟ್ಟು ಸೇರಿದ್ದಾರೆ ಎನ್ನುವುದು ಪತ್ರಿಕಾ ವರದಿಯಲ್ಲಿ ಓದಿ ದಿಗ್ಭ್ರಮೆಯಾಯಿತು ಈ ರೀತಿ ನಕಲಿ ಅಂಕಪಟ್ಟಿಗಳನ್ನು ನೀಡಿ ಸೇರಿರುವ ಎಷ್ಟು ನಕಲಿ ಶಿಕ್ಷಕರುಗಳನ್ನು ಪತ್ತೆಹಚ್ಚಲಾಗಿದೆ? ಸರ್ಕಾರ ಈ ಬಗ್ಗೆ ಯಾವ ರೀತಿಯ ಕ್ರಮ ಕೈಗೊಂಡಿದೆ? ಇದು ಕೇವಲ ಕೆಳಹಂತದ ಅಧಿಕಾರಿಗಳಿಂದ ಆಗಿರುವ ಕೃತ್ಯವಲ್ಲ ಬಹಳ ದೊಡ್ಡ ಮಟ್ಟದಲ್ಲೇ ನಕಲಿ ಶಿಕ್ಷಕರುಗಳು ಸೇರ್ಪಡೆಯಾಗಿರುವ ಸಾಧ್ಯತೆಯಿದೆ ಇದರ ಬಗ್ಗೆ ತನಿಖೆ ನಡೆಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದನ್ನು ತಿಳಿಸಬೇಕು

**ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)** ಮಾನ್ಯ ಸದಸ್ಯರು ನನ್ನ ಕೊಠಡಿಗೆ ಬಂದು ಆ ಬಗ್ಗೆ ಚರ್ಚೆ ಮಾಡಿದರೆ ಏನಾದರೂ ಪರಿಹಾರ ಕಂಡು ಹಿಡಿಯಬಹುದು

## 12 ವಿಷಯ ಪ್ರಾಥಮಿಕ ಹಾಗೂ ಪ್ರೌಢ ಶಾಲಾ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅವಧಿ ಮುಗಿದಿದ್ದು ವಿಧಾನಸಭಾ ಸದಸ್ಯರಿಗೆ ನೋಂದಾಯಿತ ಪೋಷಕರ ಪಟ್ಟಿಯಿಂದ 9 ಜನ ಪೋಷಕರನ್ನು ಆಯ್ಕೆ ಮಾಡುವ ಅಧಿಕಾರ ನೀಡಿರುವ ಬಗ್ಗೆ

**ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ)** ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಹಾಗೂ ಪ್ರೌಢ ಶಾಲಾ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅವಧಿ ಮುಗಿದಿದ್ದು ಸರ್ಕಾರದ ಆದೇಶ 16-8-2001ರ ಪ್ರಕಾರ ವಿಧಾನಸಭಾ ಸದಸ್ಯರಿಗೆ ನೊಂದಾಯಿತ ಪೋಷಕರ ಪಟ್ಟಿಯಿಂದ 9 ಜನ ಪೋಷಕರನ್ನು ಆಯ್ಕೆ ಮಾಡುವಂತಹ ಅಧಿಕಾರವನ್ನು ಸರ್ಕಾರ ಸುತ್ತೋಲೆ ಪ್ರಕಾರ ಕೊಟ್ಟಿದೆ ಆದರೆ ಧಾರವಾಡ ಜಿಲ್ಲೆಯ ನಿರ್ದೇಶಕರು ಸರ್ಕಾರಕ್ಕೆ ಒಂದು ಸ್ಪಷ್ಟೀಕರಣವನ್ನು ಕೇಳಿ ಮೇಲುಸ್ತುವಾರಿ ಸಮಿತಿಯನ್ನು ಮಾಡಬೇಕೋ ಬೇಡವೋ ಎನ್ನುವ ಬಗ್ಗೆ ಸ್ಪಷ್ಟೀಕರಣವನ್ನು ಕೇಳಿದ್ದಾರೆ ಆ ಸ್ಪಷ್ಟೀಕರಣದ ನಕಲನ್ನು ಆ ವಿಭಾಗಕ್ಕೆ ಬರುವಂತಹ 8 ಜಿಲ್ಲೆಯ ಉಪ ನಿರ್ದೇಶಕರಿಗೆ ಕಳುಹಿಸಿ ಕೊಟ್ಟಿದ್ದಾರೆ ಆದರೆ ಉಪ ನಿರ್ದೇಶಕರು ಏನು ಮಾಡಿದ್ದಾರೆ ಎಂದರೆ ಸನ್ಮಾನ್ಯ ನಿರ್ದೇಶಕರು ಕೊಟ್ಟಂತಹ ಸ್ಪಷ್ಟೀಕರಣವನ್ನು ಎಲ್ಲಾ ಶಿಕ್ಷಣಾಧಿಕಾರಿಗಳಿಗೆ ಕಳುಹಿಸುವ ಮುಖಾಂತರ ಈ ಸ್ಪಷ್ಟೀಕರಣ ಬರುವ ತನಕ ಈ ಮೇಲೆ ಸೂಚಿಸಿದ ಶಾಲಾ ಉಸ್ತುವಾರಿ ಸಮಿತಿಯನ್ನು ತಡೆ ಹಿಡಿಯಬೇಕೆಂದು ಹೇಳಿ ಉಪ ನಿರ್ದೇಶಕರು ಎಲ್ಲಾ ಶಿಕ್ಷಣಾಧಿಕಾರಿಗಳಿಗೆ ನಿರ್ದೇಶನವನ್ನು ಕೊಟ್ಟಿದ್ದಾರೆ ಅದಕ್ಕೆ ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ ತಾವು ಮಾಡಿದಂತಹ ಸುತ್ತೋಲೆಗೆ ಈ ಉಪ ನಿರ್ದೇಶಕರು ತಡೆ ಹಿಡಿಯುವಂತಹ ಅಧಿಕಾರ ಇದೆಯೋ ಹೇಗೆ ಮತ್ತು 2ನೇ 3ನೇ ತಾರೀಖು ನಡೆದಂತಹ ಜಿಲ್ಲಾ ಪರಿಷತ್ತಿನ ಒಂದು ಸಮಾವೇಶದಲ್ಲಿಯೂ ಕೂಡ ಈ ಶಾಲಾ ಉಸ್ತುವಾರಿ ಸಮಿತಿಯನ್ನು ಸರ್ಕಾರದ ಸ್ಪಷ್ಟೀಕರಣ ಬರುವವರೆಗೆ ತಡೆ ಹಿಡಿಯಬೇಕು ಮತ್ತು ಹಿಂದೆ ಇದ್ದಂತಹ ಸಮಿತಿಗಳನ್ನೇ ಮುಂದುವರಿಸಬೇಕೆಂದು ಈಗಾಗಲೇ ಜಿಲ್ಲಾ ಪಂಚಾಯತ್‌ನಲ್ಲಿ ರರಾವನ್ನು ಕೂಡ ಮಾಡಿದ್ದಾರೆ ಅದಕ್ಕೆ ನಾನು ಸರ್ಕಾರಕ್ಕೆ ಸ್ಪಷ್ಟೀಕರಣ ಕೇಳುತ್ತಿದ್ದೇನೆ ಈ ಶಾಲಾ ಉಸ್ತುವಾರಿ ಸಮಿತಿಯುನ್ನು ಮುಂದುವರಿಸಬೇಕೋ ಬೇಡವೋ ಎನ್ನುವುದರ ಬಗ್ಗೆ ಸ್ಪಷ್ಟವಾದಂತಹ ಒಂದು ಆದೇಶವನ್ನು ಕೊಡಬೇಕು ಇಲ್ಲದೇ ಹೋದರೆ ಆಗಸ್ಟ್ 15ನೇ ತಾರೀಖಿನ ದಿವಸ ಧ್ವಜಾರೋಹಣ ಮಾಡುವಂತಹ ಸಂದರ್ಭದಲ್ಲಿ ಗೊಂದಲಮಯವಾದಂತಹ ಒಂದು ವಾತಾವರಣ ಸೃಷ್ಟಿ ಆಗುವುದರಿಂದ ಸರ್ಕಾರ ಬೇಗನೇ ಸ್ಪಷ್ಟವಾದಂತಹ ಒಂದು ನಿರ್ದೇಶನವನ್ನು ಶಾಲಾ ಉಸ್ತುವಾರಿ ಸಮಿತಿಯನ್ನು ಮಾಡುವಂತಹ ಸಂದರ್ಭಕ್ಕೆ ಕೊಡಬೇಕೆಂದು ಹೇಳಿ ನಾನು ಸರ್ಕಾರಕ್ಕೆ ಕೇಳಬಯಸುತ್ತಿದ್ದೇನೆ

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ಮಾನ್ಯ
111-49 ಮುಖ್ಯಮಂತ್ರಿಗಳೆ, ಒಂದೇ ನಿಮಿಷ ಹೇಳುತ್ತೇನೆ ಬಹಳ ಮುಖ್ಯವಾದಂತಹದು

ಈ ಭಾಗದ ಎಲ್ಲರಿಗೂ ಸಂಬಂಧಪಟ್ಟಿದ್ದು, ಎಸ್‌ಡಿಎಂಸಿಗಳದ್ದು ಏನು ಸಮಿತಿಗಳು ಇತ್ತು, ಮೂರು ವರ್ಷದವರೆಗೆ ಹಿಂದಿನ ಒಂದು ಸರ್ಕಾರ ಇತ್ತು, ಮುಂದುವರಿಯಿತು ಈಗ ಎಸ್‌ಡಿಎಂಸಿ ಕಮಿಟಿಗಳು ಬೇಕು ತಾನೇ? ನೀವು ತಕ್ಷಣ ಒಂದು ಸುತ್ತೋಲೆ ಹೊರಡಿಸಿ, ಮತ್ತೆ ರಚನೆ ಮಾಡಲು ಅವಕಾಶ ಆಗುತ್ತದೆ ಅಷ್ಟೆ ಅದು ನಮ್ಮ ಇಡೀ 224 ಕ್ಷೇತ್ರಕ್ಕೂ ಸಂಬಂಧಪಟ್ಟಿದ್ದು ದಯಮಾಡಿ ಆದೇಶ, ಡೈರೆಕ್ಷನ್ಸ್ ಕೊಡಿಸಿ

**ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)** ಈಗ ಸಾರ್ವಜನಿಕ ಶಿಕ್ಷಣ ಆಯುಕ್ತರನ್ನು ಕರೆಸಿ ಅದರ ಬಗ್ಗೆ ಚರ್ಚೆ ಮಾಡಿ ಸೂಕ್ತ ಆದೇಶವನ್ನು ಹೊರಡಿಸುವುದಕ್ಕೆ ನಾನು ಹೇಳುತ್ತೇನೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಚರ್ಚೆ ಮಾಡುವುದು ಏನು ಇದೆ ಸಾರ್? ಈಗ ಇರುವುದನ್ನು ಮುಂದುವರಿಸಿ

**ಶ್ರೀ ಶಿವರಾಜ್ ಸಜ್ಜನರ್** ಇರುವ ಆದೇಶವನ್ನು ಮುಂದುವರಿಸಬೇಕು

**ಶ್ರೀ ಡಿ ಮಂಜುನಾಥ್** ಆಯಿತು ಮಾಡೋಣ

**ಅಧ್ಯಕ್ಷರು** ದಯಮಾಡಿ ಕುಳಿತುಕೊಳ್ಳಿ, ಸ್ಪಷ್ಟೀಕರಣ ಕೇಳುವುದಕ್ಕೆ ಅವಕಾಶ ಇಲ್ಲ ಮಾನ್ಯ ಪ್ರಭಾಕರ ಬಂಗೇರ ಅವರು ಹೇಳಿ

**ಶ್ರೀ ಸಿ ಎಂ ಉದಾಸಿ (ಹಾವೇರಿ)** ಮಾನ್ಯ ಅಧ್ಯಕ್ಷರೆ, ಇದು ಏನಾಗಿದೆ ಅಂದರೆ ಉತ್ತರ ಕರ್ನಾಟಕದೊಳಗೆ ಆ ಭಾಗದಲ್ಲಿರುವಂತಹ ಒಬ್ಬ ಡೈರೆಕ್ಟರ್ ಕಡೆಯಿಂದ ಬಂದಿರುವಂತಹ ಒಂದು ಆದೇಶದ ಪರಿಣಾಮವಾಗಿ ಇವತ್ತು ಇದನ್ನು ತಡೆ ಹಿಡಿದಿದ್ದಾರೆ ಇಡೀ ರಾಜ್ಯದಾದ್ಯಂತ ಉತ್ತರ ಕರ್ನಾಟಕದಲ್ಲಿರುವಂತಹ ಸುಮಾರು 13–14 ಜಿಲ್ಲೆಗಳಲ್ಲಿ ಆಗಿರುವಂತಹ ಸಮಸ್ಯೆ ಇದು ಗ್ರಾಮೀಣ ಭಾಗದಲ್ಲಿ ಇವತ್ತು ವಿಧಾನಸಭಾ ಸದಸ್ಯರಿಗೆ ನಾಮಕರಣ ಮಾಡುವಂತಹ ಅವಕಾಶ ಇದೆ ಅಧಿಕಾರವನ್ನು ತಾವು ಕೊಟ್ಟಿದ್ದೀರಿ ಅಧಿಕಾರವನ್ನು ಕೊಟ್ಟು ಮೂರು ವರ್ಷ ಶೈಕ್ಷಣಿಕ ವರ್ಷ ಮುಗಿದಿರಬೇಕಾದಾಗ ಮುಖ್ಯಮಂತ್ರಿಗಳಿಗೆ ಮತ್ತೆ ಸ್ಪಷ್ಟೀಕರಣ ಕೇಳುವಂತಹ ಅವಶ್ಯಕತೆ ಇರಲಿಲ್ಲ ಅಲ್ಲಿ ಏನಾಗಿದೆ ಗ್ರಾಮೀಣ ಭಾಗದಲ್ಲಿ, ಇವತ್ತು ಧ್ವಜಾರೋಹಣದಂತಹ ಸಂದರ್ಭದಲ್ಲಿ ಅನಾವಶ್ಯಕವಾಗಿ ಕಿರಿಕಿರಿ ಉಂಟಾಗುವಂತಹ ಸಂದರ್ಭ ಇದೆ ಆ ಕಾರಣ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಈಗ ಫೈಲ್ ಬಂದಿದೆ ಮಾನ್ಯ ಮುಖ್ಯಮಂತ್ರಿಗಳು ಆ ಫೈಲನ್ನು ತಡೆ ಹಿಡಿಯುವುದರ ಬದಲಾಗಿ ಇದನ್ನು ಇವತ್ತಿನಿಂದ ಮೊದಲು ಇದ್ದಂತಹ ಆದೇಶವನ್ನು ಜಾರಿಗೊಳಿಸಬೇಕು ಹಿಂದಿನ ಸಮಿತಿಗಳನ್ನು ರದ್ದುಪಡಿಸುವಂತಹ ಅಧಿಕಾರ ತಾವು ಕೊಟ್ಟಿರಬೇಕಾದಾಗ ಅದನ್ನು ಜಾರಿಗೊಳಿಸುವಂತೆ ಮಾನ್ಯ ಮುಖ್ಯಮಂತ್ರಿಗಳು ಸಲಹೆಯನ್ನು ಕೊಡಬೇಕು ಹಾಗೂ ಸೂಚನೆಯನ್ನು ಇವತ್ತೇ ಕೊಡಬೇಕು ಎನ್ನುವುದನ್ನು ನಾನು ಕೇಳುತ್ತಿದ್ದೇನೆ

**ಶ್ರೀ ಎನ್ ಧರ್ಮಸಿಂಗ್ (ಮುಖ್ಯಮಂತ್ರಿಗಳು)** ಫೈಲ್ ಇದ್ದರೆ ನೋಡಿ, ಪ್ರತಿ ಶಾಸಕರ ಅಭಿಪ್ರಾಯದಂತೆ ಮಾಡಿಕೊಡುತ್ತೇನೆ

**ಶ್ರೀ ಸಿ ಎಂ ಉದಾಸಿ** ಸಾರ್ ಈಗ ಇರುವ ಆದೇಶವನ್ನು ಜಾರಿಗೊಳಿಸಬೇಕಾಗಿದೆ ಈಗ ಇರುವ ಅಧಿಕಾರದಲ್ಲಿ ನೀವೇನು ಮಾಡಿದ್ದೀರಿ? ವಿಧಾನಸಭಾ ಸದಸ್ಯರು 9 ಜನ ಪಾಲಕರನ್ನು ಆಯ್ಕೆ ಮಾಡಬೇಕು ಎನ್ನುವುದನ್ನು ತಾವು ಕೊಟ್ಟಿದ್ದೀರಿ ಈಗ ಕೊಟ್ಟಿರುವಂತಹ ಆದೇಶವನ್ನು ಜಾರಿಗೊಳಿಸಬೇಕು ಮತ್ತೆ ಹಿಂದೆ ಹೋಗುವಂತಹ ಪ್ರಸಂಗ ಇಲ್ಲ ಈಗಾಗಲೇ ಮೂರು ವರ್ಷ ಶೈಕ್ಷಣಿಕ ವರ್ಷಗಳು ಮುಗಿದಿದ್ದಾವೆ ಈ ಫೈಲ್ ತಮ್ಮ ಹತ್ತಿರ ಬಂದಾಗಿದೆ ಅದಕ್ಕಾಗಿ ಶಿಕ್ಷಣ ಸೆಕ್ರೆಟರಿಗೆ ಬಂದಿದೆ ಅದನ್ನು ಮುಂದುವರಿಸಬೇಕು

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** ಅದನ್ನು ಮುಂದುವರಿಸುವಂತಹ ಕೆಲಸ ಮಾಡುತ್ತೇನೆ

**13 ವಿಷಯ ಕೇಂದ್ರ ಸರ್ಕಾರದ ಯೋಜನೆಯಂತೆ ಕರ್ನಾಟಕ ರಾಜ್ಯದಲ್ಲೂ ಜಾರಿ ಇರುವ ಮುಂದುವರಿದ ಶಿಕ್ಷಣ ಯೋಜನೆ ಅಡಿಯಲ್ಲಿ ಪ್ರೇರಕ, ಉಪ ಪ್ರೇರಕರಿಗೆ ಗೌರವ ಧನ ಮಂಜೂರು ಮಾಡದಿರುವ ಬಗ್ಗೆ**

**ಶ್ರೀ ಕೆ ಪ್ರಭಾಕರ ಬಂಗೇರ (ಬೆಳ್ತಂಗಡಿ)** ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಯೋಜನೆಯಂತೆ ನಮ್ಮ ಕರ್ನಾಟಕ ರಾಜ್ಯದಲ್ಲೂ ಕೂಡ ಮುಂದುವರಿದ ಶಿಕ್ಷಣ ಯೋಜನೆ ಜಾರಿಯಲ್ಲಿದೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯಲ್ಲಿ ಕೂಡ ಇದು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆ ಆದರೆ ಮುಖ್ಯವಾದ ವಿಚಾರ ಏನೆಂದರೆ ಪ್ರೇರಕ ಮತ್ತು ಉಪ ಪ್ರೇರಕರಿಗೆ ಒಂದು ವರ್ಷದಿಂದ ಗೌರವ ಸಂಭಾವನೆಯನ್ನು ಮಾಡದೇ ಇದ್ದು ಅವರು ತುಂಬಾ ಸಂಕಷ್ಟದಲ್ಲಿದ್ದಾರೆ ಹಾಗಾಗಿ ಇದನ್ನು ಆದಷ್ಟು ಶೀಘ್ರದಲ್ಲಿ ಅವರಿಗೆ ಗೌರವ ಧನವನ್ನು ಕೊಡುವಂತಹ ಒಂದು ಪ್ರಯತ್ನಗಳನ್ನು ಮಾಡಬೇಕು ಇಲ್ಲದಿದ್ದರೆ ಆ ಯೋಜನೆ ಇಲ್ಲ ಎಂದು ಹೇಳಿದರೂ ಸಾಕು ಪಾಪ ಎಷ್ಟೋ ಜನ ಆ ಪ್ರೇರಕ, ಉಪ ಪ್ರೇರಕರು 1750 ಗೌರವ ಧನ ಪಡೆದುಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತಾರೆ ಹಾಗಾಗಿ ಸರ್ಕಾರವನ್ನು ನಾನು ಈ ಮೂಲಕವಾಗಿ ಒತ್ತಾಯ ಮಾಡುತ್ತಿದ್ದೇನೆ ಆದಷ್ಟು ಶೀಘ್ರದಲ್ಲಿ ಅವರಿಗೆ ಗೌರವ ಧನವನ್ನು ನೀಡಬೇಕೆಂದು ಹೇಳಿ ಸಂಬಂಧಪಟ್ಟ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ

**ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)** ಮಾನ್ಯ ಅಧ್ಯಕ್ಷರೆ, ಈಗ ಪ್ರೇರಕರಿಗೆ, ಉಪ ಪ್ರೇರಕರಿಗೆ ಗೌರವ ಧನ ನೀಡಿಲ್ಲ ಎಂದು ತಾವು ಹೇಳುತ್ತಿದ್ದೀರಿ ಗೌರವ ಧನವನ್ನು ನೀಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು

ಮಾನ್ಯ ಸದಸ್ಯರು ಸಾರ್, 12 ತಿಂಗಳಾಗಿದೆ

## 14 ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯು ಒದಗಿಸಿರುವ ಸೌಲಭ್ಯಗಳ ಬಗ್ಗೆ

**ಶ್ರೀಮತಿ ಟಿ ಭಾಗೀರಥಿ (ಕೊಟ್ಟೂರು)** ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ಪ್ರಶ್ನೆ ಸಂಖ್ಯೆ 862 ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮೂಲ ಭೂತ ಸೌಲಭ್ಯ ಅಭಿವೃದ್ಧಿ ಇಲಾಖೆಯು ಬಹಳಷ್ಟು ಯೋಜನೆ ಸೌಲಭ್ಯಗಳನ್ನು ಒದಗಿಸಿದೆ ಅವುಗಳು ಈ ರೀತಿ ಇವೆ ಗುಲ್ಬರ್ಗಾ ವಿಮಾನ ನಿಲ್ದಾಣ ಅಭಿವೃದ್ಧಿ ಹಂಪಿ ಹತ್ತಿರ ವಿಮಾನ ನಿಲ್ದಾಣ ಅಭಿವೃದ್ಧಿ ಕೊಟ್ಟೂರು ಹರಿಹರ ಹೊಸ ರೈಲ್ವೆ ಹಿಂದಿನ ಎರಡು ವರ್ಷಗಳಲ್ಲಿ ಈ ಯೋಜನೆ ಅತ್ಯಂತ ಶೀಘ್ರವಾಗಿ, ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿತ್ತು ಅನೇಕ ಕಷ್ಟಗಳ ನಡುವೆ ಇವತ್ತು ಭೂ ಸ್ವಾಧೀನ ಮಾಡಿಕೊಳ್ಳಬೇಕಾಗಿತ್ತು ಅಂತಹ ಸಂದರ್ಭದಲ್ಲಿ ಅನೇಕ ರೈತರು ಅಡೆತಡೆಗಳನ್ನು ಮಾಡಿದ್ದಾಗ್ಯೂ ಕೂಡ ನಾನು ಆ ರೈತರನ್ನೆಲ್ಲಾ ಕೂಡಿಸಿಕೊಂಡು, ಇಲ್ಲ ದಯವಿಟ್ಟು ಇದಕ್ಕೆ ಯಾರೂ ಅಡ್ಡಿ ಮಾಡಬೇಡಿ ಅತಿ ಶೀಘ್ರವಾಗಿ ಕೆಲಸವನ್ನು ಮಾಡೋಣ ಎನ್ನತಕ್ಕ ವಿಚಾರವನ್ನು ಹೇಳಿದ್ದರಿಂದ ಇವತ್ತಿನವರೆಗೆ ಯಾವುದೇ ರೀತಿ ಅಡೆ ತಡೆ ಇಲ್ಲದೇ ಕಾರ್ಯಕ್ರಮ ಸಾಗುತ್ತಿದೆ ಆದರೆ ಈ ವರ್ಷ ಕೊಟ್ಟೂರು-ಹರಿಹರ ಹೊಸ ರೈಲ್ವೆಗೆ ಕೇವಲ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿರತಕ್ಕದ್ದು ಅದರಲ್ಲಿ ಕೇವಲ ನನ್ನ ರೈಲ್ವೆ ಯೋಜನೆಗೆ 30 ಲಕ್ಷ ರೂಪಾಯಿಗಳು ಮಾತ್ರ ಸಿಗುತ್ತಿದೆ 121 ಕೋಟಿ ರೂಪಾಯಿ ಪ್ರಾಜೆಕ್ಟ್ ಕಾರ್ಯಕ್ರಮ ಯಾವಾಗ ಮುಗಿಯಬೇಕು ಎನ್ನತಕ್ಕದ್ದು ನನಗೆ ಈಗ ಚಿಂತನೆ ಆಗಿದೆ ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉಪ ಮಂತ್ರಿಗಳೂ ಹಣಕಾಸು ಸಚಿವರು ಇಲ್ಲೇ ಇದ್ದಾರೆ ಈ ರೈಲ್ವೆ ಯೋಜನೆಗೆ ಹೆಚ್ಚು ಹಣವನ್ನು ಕೊಟ್ಟು ಅತೀ ಶೀಘ್ರದಲ್ಲಿ ಕಾರ್ಯಕ್ರಮವನ್ನು ಮುಗಿಸಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸನ್ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ

**ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, ಆ ರೈಲ್ವೆ ಯೋಜನೆ ಇದೆಯಲ್ಲಾ, ಅದನ್ನು ಪರಿಶೀಲನೆ ಮಾಡಿ ಸರ್ಕಾರದಿಂದ ಎಷ್ಟು ಹಣ ಕೊಡಬೇಕು ಅದನ್ನು ನೋಡಿ ಆ ಹಣ ಒದಗಿಸತಕ್ಕಂಥ ಪ್ರಯತ್ನ ಮಾಡುತ್ತೇವೆ

**ಶ್ರೀ ಸಿ ಸಿ ಪಾಟೀಲ್** ಸನ್ಮಾನ್ಯ ಅಧ್ಯಕ್ಷರೆ, ಸಿ ಸಿ ಪಾಟೀಲ್ ಮತ್ತು ಬಿ ಸಿ ಪಾಟೀಲ್ ಎಂಬ ಹೆಸರು ಸ್ವಲ್ಪ ಕನ್‌ಫ್ಯೂಸ್ ಆಗಿದೆ.

## 15 ವಿಷಯ ನರಗುಂದ ವಿಧಾನಸಭಾ ಕ್ಷೇತ್ರದ ರೋಣ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಕಾಡು ದನಗಳ ಹಾವಳಿ

**ಶ್ರೀ ಸಿ ಸಿ ಪಾಟೀಲ್ (ನರಗುಂದ)** ಮಾನ್ಯ ಅಧ್ಯಕ್ಷರೆ, ನರಗುಂದ ವಿಧಾನಸಭಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ರೋಣ ಹಳ್ಳಿಗಳಲ್ಲಿ ಅಸುಟಿ ಕರ್ಮಡಿ,

ಮಲ್ಲಾಪುರ ಯಾವಗಲ್, ಕೆಲವೊಂದು ಹಳ್ಳಿಗಳಲ್ಲಿ ಕಾಡು ದನಗಳ ಹಾವಳಿ ವಿಪರೀತ ಆಗಿದೆ ಸುಮಾರು ಮೂರು ವರ್ಷದ ಬರಗಾಲದ ನಂತರ ಈ ವರ್ಷ ಅಲ್ಪಸ್ವಲ್ಪ ಮಳೆ ಆಗಿ ರೈತ ಸಮುದಾಯ ಬೆಳೆದಂತಹ ಬೆಳೆಯನ್ನು ಆ ಕಾಡು ದನಗಳು ತಿಂದು ಹಾಳು ಮಾಡುತ್ತಿವೆ ಸುಮಾರು 100 ರಿಂದ 150 ದನಗಳು ಇರತಕ್ಕಂಥ ಹಿಂಡಿನಲ್ಲಿ ಅವುಗಳನ್ನು ಹಿಡಿಯುವುದಕ್ಕೆ ಹೋದರೆ ಅವು ಪ್ರತಿಯಾಗಿ ದಾಳಿಯನ್ನು ಮಾಡುವುದಕ್ಕೆ ಬರುತ್ತಿವೆ ಜನ ಭೀತಿಯಿಂದ ಹಲವಾರು ಸಮಯಗಳಲ್ಲಿ ಗಿಡವನ್ನು ಹತ್ತಿ ಸಾಯಂಕಾಲದವರೆಗೆ ಗಿಡದ ಮೇಲೆ ಕುಳಿತು ತಿರುಗಿ ತಮ್ಮ ಮನೆಗೆ ಬಂದಿದ್ದಾರೆ ಈ ವಿಷಯವಾಗಿ ಅಸುಟಿ ಗ್ರಾಮ ಪಂಚಾಯತಿ ಮತ್ತು ಕರ್ಮಡಿ ಗ್ರಾಮ ಪಂಚಾಯತಿಯ ಜನ ಹಾಗೂ ಸದಸ್ಯರು ಮತ್ತು ಛೇರ್ಮನ್‌ರವರು ಸಂಬಂಧಿಸಿದ ಅಧಿಕಾರಿಗಳ ಹತ್ತಿರ ಹೋದರೆ, ತಹಶೀಲ್ದಾರ್ ಸಾಹೇಬರ ಹತ್ತಿರ ಹೋದರೆ ಅವರು ಎಕ್ಸಿಕ್ಯೂಟಿವ್ ಆಫೀಸರ್ ಹತ್ತಿರ ಹೋಗಿ ಎನ್ನುತ್ತಾರೆ ಎಕ್ಸಿಕ್ಯೂಟಿವ್ ಆಫೀಸರ್ ಹತ್ತಿರ ಹೋದರೆ ಜಿಲ್ಲಾಧಿಕಾರಿಗಳ ಹತ್ತಿರ ಹೋಗು ಎನ್ನುತ್ತಾರೆ ಜಿಲ್ಲಾಧಿಕಾರಿಗಳ ಹತ್ತಿರ ಹೋದರೆ ಫಾರೆಸ್ಟ್ ಇಲಾಖೆಗೆ ಹೋಗಿ ಎನ್ನುತ್ತಾರೆ ನಾವು ಫಾರೆಸ್ಟ್ ಇಲಾಖೆಗೆ ಹೋಗಿ ಕೇಳಿದಾಗ, ಈ ಕಾಡು ದನಗಳು ವೈಲ್ಡ್ ಅನಿಮಲ್ಸ್‌ನಲ್ಲಿ ಬರುವುದಿಲ್ಲ ಅವುಗಳನ್ನು ಹಿಡಿಯುವುದಕ್ಕೆ ನಮಗೆ ಏನೂ ಆಗುವುದಿಲ್ಲ ಎನ್ನುವಂತಹ ಅಸಹಾಯಕತೆ ಮಾತನ್ನು ತೋಡಿಕೊಳ್ಳುತ್ತಾರೆ

ಈಗಾಗಲೇ ಸಾವಿರಾರು ಎಕರೆಗಳನ್ನು ಆ ದನಗಳು ಹಾಳು ಮಾಡಿವೆ ಈಗ ಮುಂಗಾರು ಮುಗಿದು ಹಿಂಗಾರು ಬಿತ್ತನೆಯ ಸಮಯ ಪ್ರಾರಂಭವಾಗುತ್ತಿದೆ ಈಗಾಗಲೇ 1000–1500 ಎಕರೆಗಳನ್ನು ಹಾಳು ಮಾಡಿದಂತಹ ದನಗಳನ್ನು ಹಿಡಿಯಲು ಸರ್ಕಾರದ ವ್ಯವಸ್ಥೆಯಲ್ಲಿ ಏನಾದರೂ ಕ್ರಮಗಳಿವೆಯೇ? ಅವುಗಳನ್ನು ಹಿಡಿಯಲಿಕ್ಕೆ ಸರ್ಕಾರದ ಯಾವುದಾದರೂ ಒಂದು ಇಲಾಖೆಯಿಂದ ಸಾಧ್ಯ ಇದೆಯೆ ಎಂಬುದನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಅವರ ಗಮನವನ್ನು ಸೆಳೆದು ಆ ಭಾಗದ ರೈತರಿಗೆ ನೆರವಾಗಲಿಕ್ಕೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತಿದ್ದೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ಇದು ನಿಜವಾಗಿಯೂ ಕೂಡ ಬಹಳ ಗಹನವಾದಂತಹ ವಿಷಯ ಅಲ್ಲಿ ಕಾಡು ಪ್ರಾಣಿಗಳು ರೈತರು ಬೆಳೆದಂತಹ ಬೆಳೆಗಳ ಮೇಲೆ ಹೋಗಿ ಬಿದ್ದು ಹಾಳು ಮಾಡುತ್ತಿವೆ ನಾನು ಬಹಳ ಹಿಂದೆ ನೋಡಿದ್ದೇನೆ ಸಂಗಮದ ಹತ್ತಿರ ಮೇಕೆದಾಟ ಬಳಿ ಸುಮಾರು 35 ವರ್ಷಗಳ ಹಿಂದೆ ನಾನು ಅಲ್ಲಿಗೆ ಹೋಗಿದ್ದೆ ಅಲ್ಲಿ ತೆಂಗಿನ ಗಿಡಗಳನ್ನು ಹಾಕಿದ್ದರು ಆನೆಗಳು ಬರುತ್ತವೆಂದು ಅಲ್ಲಿ ಒಂದು ಮೈಕ್ ಹಾಕಿ ಶಬ್ದ ಮಾಡುವಂತಹ ವ್ಯವಸ್ಥೆ ಮಾಡಿದ್ದರು ಈ ತರಹ ಸರ್ಕಾರದಿಂದ ಪ್ರಾಣಿಗಳನ್ನು ಹಿಡಿಯುವುದಕ್ಕೆ ಆಗುವುದಿಲ್ಲ ಆ ತರಹ ಏನಾದರೂ ಒಂದು ವ್ಯವಸ್ಥೆಯಾ

ಮಾಡಬೇಕು ಆದರೂ ಕೂಡ ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ ಅದನ್ನು ಯಾವ ತರಹ ಕಂಟ್ರೋಲ್ ಮಾಡಬೇಕೋ, ಆ ರೀತಿ ಕಂಟ್ರೋಲ್ ಮಾಡುವಂತಹ ಕೆಲಸಕ್ಕೆ ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆಂದು ತಮ್ಮ ಮೂಲಕ ಅವರಿಗೆ ಹೇಳಲಿಕ್ಕೆ ಬಯಸುತ್ತೇನೆ

**ಶ್ರೀ ಸಿ ಸಿ ಪಾಟೀಲ್** ಮಾನ್ಯ ಅಧ್ಯಕ್ಷರೆ, ಅರಣ್ಯ ಇಲಾಖೆಯ ಮೂಲಕ ಅವುಗಳನ್ನು ಹಿಡಿದು ಅಡವಿಗೆ ವರ್ಗಾಯಿಸಲಿಕ್ಕೆ ಸಾಧ್ಯವಾಗುತ್ತದೆಯೇ? ಈ ದಿಸೆಯಲ್ಲಿ ಮಾನ್ಯ ಕೃಷಿ ಸಚಿವರು ಅಥವಾ ಸರ್ಕಾರದವರು ತೀವ್ರವಾಗಿ ಗಮನವನ್ನು ಹರಿಸಬೇಕು

**ಅಧ್ಯಕ್ಷರು** ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೂ ಮತ್ತೆ ನಿಮ್ಮದೇನ್ರಿ? ದಯವಿಟ್ಟು ಕುಳಿತುಕೊಳ್ಳಿ

**ಶ್ರೀ ಸಿ ಸಿ ಪಾಟೀಲ್** ಮಾನ್ಯ ಅಧ್ಯಕ್ಷರೆ, ಅಲ್ಲಿ ಸಾವಿರಾರು ಎಕರೆಗಳು ಹಾಳಾಗಿದೆ ಮೂರು ವರ್ಷದ ಬರಗಾಲದ ನಂತರ ಸ್ವಲ್ಪ ಬೀಜ ಬಿತ್ತಿದ್ದೇವೆ ಅದು ಹಾಳಾಗಿದೆ ಆದುದರಿಂದ ನಾನು ಸರ್ಕಾರದ ಗಮನವನ್ನು ಸೆಳೆಯಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆ ಅದಕ್ಕೆ ಉತ್ತರ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ

**ಅಧ್ಯಕ್ಷರು** ಅದಕ್ಕೆ ಸರ್ಕಾರದವರು ಈಗಾಗಲೇ ಉತ್ತರ ಹೇಳಿದ್ದಾರೆ ತಾವು ದಯವಿಟ್ಟು ಕುಳಿತುಕೊಳ್ಳಿ ಈಗ ಅಂಗಾರರವರು ತಮ್ಮ ವಿಷಯ ಪ್ರಸ್ತಾಪಿಸಬೇಕು

### 16 ವಿಷಯ ಸುಳ್ಯ ಕ್ಷೇತ್ರದಲ್ಲಿ ಚಲಾವಣೆ ಆಗುತ್ತಿರುವ ಖೋಟಾ ನೋಟು ಪ್ರಕರಣದ ಬಗ್ಗೆ

**ಶ್ರೀ ಎಸ್ ಅಂಗಾರ (ಸುಳ್ಯ)** ಮಾನ್ಯ ಅಧ್ಯಕ್ಷರೆ, ನನ್ನ ಸುಳ್ಯ ಕ್ಷೇತ್ರದಲ್ಲಿ 1998 ಮೇ ತಿಂಗಳಿನಲ್ಲಿ ಸುಳ್ಯ ತಾಲ್ಲೂಕಿನ ಬೆಳ್ಳಾರಿಯ ಅಯ್ಯನ ಕಟ್ಟೆಯಲ್ಲಿ ಮೊಯಿನುದ್ದೀನ್ ಕುಂಜ್ಞಯವರ ಮನೆಯಲ್ಲಿ ಜೆರಾಕ್ಸ್ ಮೆಶಿನ್ ಸಿಕ್ಕಿ ಖೋಟಾ ನೋಟು ಪ್ರಕರಣವೊಂದು ಪತ್ತೆಯಾಯಿತು ಆ ಒಂದು ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಕೇರಳದ ಕಲ್ಲಿಕೋಟೆಯಲ್ಲಿ ಪ್ರಿಂಟಿಂಗ್ ಮೆಶಿನ್ ಕೂಡ ಪತ್ತೆ ಹಚ್ಚಿದ್ದಾರೆ ಸಂಬಂಧಪಟ್ಟಂತಹ ಪೊಲೀಸ್ ಅಧಿಕಾರಿಗಳು ಆ ಪ್ರಿಂಟಿಂಗ್ ಮೆಶಿನ್ ಅನ್ನು seize ಮಾಡುವಂತಹ ಕೆಲಸವನ್ನು ಮಾಡಿದ್ದಾರೆ ಆದರೆ ಅದರ ನಂತರ ತಾಲ್ಲೂಕಿನ ಬೇರೆ ಬೇರೆ ಕಡೆಗಳಿಂದ, ಕೇರಳದಿಂದ ಬರುವಂತಹ ಅನೇಕ ಜನರು ಬಂದು, ಬೇರೆ ಬೇರೆ ಕಾಲೋನಿಗಳಿಗೆ ಹೋಗಿ ದುಡ್ಡನ್ನು ಬಡ್ಡಿಗೆ ಕೊಡುವಂತಹ ಕೆಲಸ ನಡೆಯುತ್ತಿದೆ ಈ ರೀತಿಯಲ್ಲಿ ಕಳೆದ 4–5 ವರ್ಷಗಳಿಂದ ನಡೆಯುತ್ತಿದೆ ಮೊನ್ನೆ ಅಂದರೆ 23 7ಕ್ಕೆ ಗುತ್ತಿಗಾರ್‌ನಲ್ಲಿ ಕೂಡ ಈ ರೀತಿಯ ಒಂದು ಖೋಟಾ ನೋಟು ಪ್ರಕರಣ ಬೆಳಕಿಗೆ ಬಂದಿದೆ ಸಂಬಂಧಪಟ್ಟಂತಹ ಸುಮಾರು 7-8

ವ್ಯಕ್ತಿಗಳನ್ನು ಇಲಾಖಾಧಿಕಾರಿಗಳು ಪತ್ತೆ ಹಚ್ಚುವಂತಹ ಕೆಲಸವನ್ನು ಮಾಡಿದ್ದಾರೆ ಅದರ ಬಗ್ಗೆ ಆಕ್ಷನ್ ಕೂಡ ತೆಗೆದುಕೊಂಡಿದ್ದಾರೆ ಆದರೆ ಇಲ್ಲಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ, ಅಲ್ಲಿ ಪ್ರತಿಯೊಬ್ಬ ಜನರೂ ಕೂಡ ತುಂಬಾ ಭಯಭೀತರಾಗಿದ್ದಾರೆ ಯಾವುದೇ ವ್ಯಕ್ತಿ ಕೂಲಿ ಕೆಲಸವನ್ನು ಮಾಡಿ ಸಂಬಳವನ್ನು ಪಡೆದುಕೊಳ್ಳುವಂತಹ ಸಮಯದಲ್ಲಿ, ಯಾವ ನೋಟು ಸಾಚಾ ಎಂದು ಕೂಲಿ ಕಾರ್ಮಿಕನಿಗೆ ಕೂಡ ಗೊತ್ತಾಗುವುದಿಲ್ಲ ಅಂತಹ ಒಂದು ಪರಿಸ್ಥಿತಿ ಅಲ್ಲಿದೆ ಸರ್ಕಾರ ಈ ಒಂದು ಖೋಟಾ ನೋಟಿಗೆ ಸಂಬಂಧಪಟ್ಟ ಹಾಗೆ ಅದನ್ನು ಪತ್ತೆ ಹಚ್ಚುವಲ್ಲಿ ಹಾಗೂ ತಡೆ ಹಿಡಿಯುವಲ್ಲಿ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎನ್ನುವಂತಹ ಸ್ಪಷ್ಟವಾದಂತಹ ಉತ್ತರವನ್ನು ಸರ್ಕಾರ ಕೊಡಬೇಕೆಂದು ನಾನು ಈ ಸದನದಲ್ಲಿ ಕೇಳಬಯಸುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ** ಮಾನ್ಯ ಅಧ್ಯಕ್ಷರೇ,

**ಶ್ರೀ ಬಿ ಎಸ್ ಯಡಿಯೂರಪ್ಪ** ಹಣಕಾಸಿನ ಸಚಿವರು ಇಲ್ಲೇ ಇದ್ದಾರೆ

**ಶ್ರೀ ಕೆ ಶ್ರೀನಿವಾಸಗೌಡ** ಅವರ ಪರವಾಗಿ ನಾನೇ ರಿಪ್ಲೈ ಕೊಡುತ್ತಿದ್ದೇನೆ ರಿಪ್ಲೈ ರೆಡಿ ಇದೆ

**ಶ್ರೀ ಬಿ ಎಸ್ ಯಡಿಯೂರಪ್ಪ** ಹಣಕಾಸಿನ ಬಗ್ಗೆ ಅರ್ಥ ಸಚಿವರೇ ಉತ್ತರ ಕೊಡುತ್ತಾರೆಂದು ಅಂದುಕೊಂಡಿದ್ದೆ ಆದರೆ ಉತ್ತರ ರೆಡಿ ಇದೆ ಎಂದು ಹೇಳುತ್ತಿದ್ದೀರಿ ಆದ್ದರಿಂದ ತಾವೇ ಉತ್ತರ ಕೊಡಿ ಪರವಾಗಿಲ್ಲ

**ಶ್ರೀ ಕೆ ಶ್ರೀನಿವಾಸಗೌಡ** ಅದನ್ನು ಅವರು ನೋಡಿಲ್ಲ, ನಾನು ನೋಡುತ್ತಿದ್ದೇನೆ ಉತ್ತರ ಯಾರು ಹೇಳಿದರೂ ಕೂಡ ಅದು ಸರ್ಕಾರದ ಉತ್ತರವೇ ಆಗಿರುತ್ತದೆ

**ಶ್ರೀ ಎಸ್ ರಾಜೇಂದ್ರನ್** ಖೊಟಾ ನೋಟು ಅಂದರೆ ಅದು finance minister ಗೆ ಸಂಬಂಧಪಟ್ಟಿದ್ದು ಅಲ್ಲವೇ?

**ಶ್ರೀ ಕೆ ಶ್ರೀನಿವಾಸಗೌಡ** ಅವರು ಖೋಟಾ ನೋಟಿನವರಲ್ಲ ಅವರು ನಿಜವಾದ ನೋಟುಗಳನ್ನು ಪ್ರಿಂಟ್ ಮಾಡುವಂತಹ ಇಲಾಖೆ ಜವಾಬ್ದಾರಿ ಹೊತ್ತಿರುವ ಉಪ ಮುಖ್ಯಮಂತ್ರಿಗಳು

**ಶ್ರೀ ಎಸ್ ರಾಜೇಂದ್ರನ್** ಇದರ ಬಗ್ಗೆ experience ಇರುವಂತಹವರು ಇದಕ್ಕೆ ಉತ್ತರ ಕೊಡಬೇಕು

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಉಪ ಮುಖ್ಯಮಂತ್ರಿಗಳ ಪರವಾಗಿ ನಾನೇ ಉತ್ತರ ಕೊಡುತ್ತಿದ್ದೇನೆ ಮಾನ್ಯ ಅಧ್ಯಕ್ಷರೆ, ಸುಳ್ಯ ಕ್ಷೇತ್ರದಲ್ಲಿ ಈಗಾಗಲೇ ಐದು ಕೇಸುಗಳು ಸಿಕ್ಕಿವೆ ಅದರಲ್ಲಿ ದಿನಾಂಕ 26–5–1998ರಲ್ಲಿ ಸುಮಾರು 100 ರೂಪಾಯಿ ಮೌಲ್ಯದ 11 ಲಕ್ಷ 85 ಸಾವಿರ 800 ರೂಪಾಯಿಗಳನ್ನು ವಶಪಡಿಸಿಕೊಳ್ಳಲಾಗಿದೆ ಅದರಲ್ಲಿ 13 ಜನರನ್ನು ದಸ್ತಗಿರಿ ಮಾಡಲಾಗಿದೆ

ಅವರ ಹೆಸರುಗಳನ್ನು ಬೇಕಾದರೆ ಓದುತ್ತೇನೆ ಎರಡನೆಯದಾಗಿ, ಒಂದು ಸಾರಿ ಗ್ರಾಮ ಪಂಚಾಯಿಯ ಕಾರ್ಯದರ್ಶಿಯವರು ಹಣವನ್ನು ಕಟ್ಟುವಾಗ ಅದರಲ್ಲಿ 500 ರೂಪಾಯಿ ಒಂದು ನೋಟು ಸಿಕ್ಕಿದೆ ಅದು ಯಾರದ್ದು ಎಂದು ಟ್ರೇಸ್ ಆಗದೆ, ಅದು (ಸಿ) ರಿಪೋರ್ಟ್ ಆಗಿದೆ ಮೂರನೆಯದಾಗಿ, ದಿನಾಂಕ 16-10-2000ರಲ್ಲಿ ಸುಳ್ಯ ಪೇಟೆಯಲ್ಲಿರುವ ಪ್ರಭು ಅಂಡ್ ಕೋ ಪೆಟ್ರೋಲ್ ಪಂಪ್‌ನಲ್ಲಿ ಜಗನ್ನಾಥ ಯಾನೆ ಅರುಣ್ ಮತ್ತು ಅನಿಲ್‌ಕುಮಾರ್ ಎಂಬುವವರು ಪೆಟ್ರೋಲ್ ಪಂಪ್‌ನಲ್ಲಿ ಪೆಟ್ರೋಲ್ ಹಾಕಿಸಿ, 50 ಮುಖ ಬೆಲೆಯ 4 ಖೋಟಾ ನೋಟುಗಳನ್ನು ನೀಡಿ, ಚಲಾವಣೆಗೆ ಯತ್ನಿಸಿದ್ದನ್ನು ಫಿರ್ಯಾದಿ ಎಂ ಆರ್ ಬಾಲಕೃಷ್ಣ ಮ್ಯಾನೇಜರ್ ಇವರು ಪತ್ತೆ ಮಾಡಿ, ದೂರು ಸಲ್ಲಿಸಿದ್ದಾರೆ ಇದರಲ್ಲಿ ಆರೋಪಿಗಳನ್ನು ದಸ್ತಗಿರಿ ಮಾಡಿ 50 ರೂಪಾಯಿ ಮುಖ ಬೆಳೆಯ ಒಟ್ಟು 1600 ಮೌಲ್ಯದ ಖೋಟಾ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ ಹಾಗೂ ನ್ಯಾಯಾಲಯದಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದು ಮಂಗಳೂರು ಸೆಷನ್ಸ್ ನ್ಯಾಯಾಲಯದಲ್ಲಿ ಇದರ ಕೇಸ್ ನಡೆಯುತ್ತಿದೆ ನಾಲ್ಕನೆಯದಾಗಿ, ದಿನಾಂಕ 23-7-2004ರಂದು ಗುತ್ತಿಗಾರು ರಬ್ಬರ್ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣೆ ಸಂಘ, ನಿಯಮಿತ, ಗುತ್ತಿಗಾರು, ಸುಳ್ಯ ತಾಲ್ಲೂಕು ಇದರ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯಾದ ಪುರುಷೋತ್ತಮ ಗೌಡ ಇವರು ಸುಬ್ರಮಣ್ಯ ಠಾಣೆಗೆ ದೂರನ್ನು ಸಲ್ಲಿಸಿದ್ದಾರೆ ಇದರಲ್ಲಿ ಸದರಿ ರಬ್ಬರ್ ಸೊಸೈಟಿಯ ಸಾಲದ ಮರುಪಾವತಿ ಮಾಡುವಾಗ 47,500 ಮೌಲ್ಯದ ಖೋಟಾ ನೋಟುಗಳು ಇದೆ ಎಂದು ತಿಳಿಸಿದ್ದಾರೆ ಅದೇ ದಿನ ಗುತ್ತಿಗಾರು ಗ್ರಾಮದ ಸತ್ಯಶಂಕರ ಎಂಬುವವರು ಸುಬ್ರಮಣ್ಯ ಠಾಣೆಗೆ ನೀಡಿದ ದೂರಿನಲ್ಲಿ ತಿಮ್ಮಪ್ಪಯ್ಯ ಇವರ ಮಗ ಪ್ರಶಾಂತ್ ಇವರು ತನಗೆ ಸಾಲದ ಬಾಬ್ತು ನೀಡಿದ ಹಣದಲ್ಲಿ 20,000 ಮೌಲ್ಯದ ಖೋಟಾ ನೋಟುಗಳು ಪತ್ತೆಯಾಗಿರುವುದಾಗಿ ತಿಳಿಸಿದ್ದರ ಮೇರೆಗೆ, ಸುಬ್ರಮಣ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ತನಿಖೆ ವೇಳೆ ಎರಡು ಪ್ರಕರಣಗಳಲ್ಲಿ ಒಟ್ಟು 12 ಜನರನ್ನು ಬಂಧಿಸಲಾಗಿದೆ ಅದರಲ್ಲಿ ಸಾವಿರ ಮತ್ತು ಐನೂರು ಮುಖ ಬೆಲೆಯ ಒಟ್ಟು 77,000 ಮೌಲ್ಯದ ಖೋಟಾ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ ಇದರಿಂದ ಖೋಟಾ ನೋಟುಗಳ ಚಲಾವಣೆಗೆ ಉಪಯೋಗಿಸುತ್ತಿದ್ದ ಮೂರು ಕಾರುಗಳನ್ನು, ಆರು ಮೊಬೈಲ್ ಫೋನ್‌ಗಳು ಇತ್ಯಾದಿ ಸುಮಾರು 16 ಲಕ್ಷ ಬೆಲೆಯ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಆರೋಪಿತರ ಈ ಜಾಲವು ಸುಮಾರು 9 ಲಕ್ಷ 50 ಸಾವಿರ ಮೌಲ್ಯದ ಸಾವಿರ ರೂಪಾಯಿ ಮುಖಬೆಲೆಯ, ಐನೂರ ಮುಖಬೆಲೆಯ ಖೋಟಾ ನೋಟುಗಳನ್ನು ಚಲಾವಣೆ ಮಾಡಿರುವುದು ತನಿಖೆಯಿಂದ ತಿಳಿದು ಬಂದಿದೆ ಸುಮಾರು 12 ಜನರವನ್ನು ಬಂಧಿಸಿ, ಕ್ರಮವನ್ನು ಜರುಗಿಸಲಾಗುತ್ತಿದೆ ಎರಡೂ ಪ್ರಕರಣಗಳಲ್ಲೂ ಕೂಡ ಬಂಧಿತ ಆರೋಪಿಗಳನ್ನು ದಿನಾಂಕ 4-8-

2004ರವರೆಗೂ ಅಂದರೆ ನಿನ್ನೆಯವರೆಗೂ ಸಹ ನ್ಯಾಯಾಂಗ ಬಂಧನದಲ್ಲಿಡಲು ಆದೇಶವಾಗಿತ್ತು ನಿನ್ನೆ ಏನಾಯಿತು ಎಂದು ಇದುವರೆಗೂ ನಮಗೆ ವರದಿ ಬಂದಿಲ್ಲ ಹೀಗೆ ಒಟ್ಟಾರೆಯಾಗಿ ಐದು ಕೇಸ್‌ಗಳು ಇಲ್ಲಿ ದಾಖಲಾಗಿವೆ ಸುಳ್ಯ ಕ್ಷೇತ್ರದಲ್ಲಿ ಬಹಳಷ್ಟು ಖೋಟಾ ನೋಟು ಪ್ರಕರಣಗಳು ಬೆಳಕಿಗೆ ಬರುತ್ತಿರುವುದರಿಂದ ಮಾನ್ಯ ಸದಸ್ಯರು ಇದನ್ನು ಪ್ರಸ್ತಾಪಿಸಿದ್ದಾರೆ ಸಿ ಓ ಡಿ ಯಲ್ಲಿ ಕೌಂಟರ್‌ಫೀಟ್ ಕರೆನ್ಸಿ ಮತ್ತು ಆರ್ ಎಂ squad ಎಂಬುದೊಂದು ಇರುತ್ತದೆ ಅವರೂ ಕೂಡ ಇದನ್ನು parallel ಆಗಿ ತನಿಖೆ ಮಾಡುವಂತಹ ಅವಕಾಶ ಇದೆ ನಮ್ಮ ಪೊಲೀಸರೇ ಈಗ ಈ ಐದೂ ಕೇಸುಗಳನ್ನು ಡೀಲ್ ಮಾಡುತ್ತಿದ್ದಾರೆ ಇದಕ್ಕೆ ಏನು ಬೇಕಾದರೂ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ನೀವು ಬೇಕಾದರೆ ಇದನ್ನು ಸಿ ಓ ಡಿ ಗೆ ವಹಿಸಿ ಎಂದು ಹೇಳಿದರೂ ಕೂಡ ಸರ್ಕಾರ ಅದಕ್ಕೆ ಇಲ್ಲ ಎನ್ನುವುದಿಲ್ಲ ಇದನ್ನು ಸಿ ಓ ಡಿ ಗೆ ವಹಿಸಲು ಸರ್ಕಾರ ಸಿದ್ಧವಾಗಿದೆ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ

**17 ವಿಷಯ ಹೊಸ ನಗರ ತಾಲ್ಲೂಕಿನ ಸರ್ಕಾರಿ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ತೆರೆಯುವ ಬಗ್ಗೆ**

**ಶ್ರೀ ಹೆಚ್ ಹಾಲಪ್ಪ (ಹೊಸನಗರ)** ಮಾನ್ಯ ಅಧ್ಯಕ್ಷರೆ, ಹೊಸ ನಗರ ತಾಲ್ಲೂಕಿನಲ್ಲಿ 5 ಕಾಲೇಜುಗಳಿವೆ ಅದರಲ್ಲಿ ಒಂದು ಕಾಲೇಜಿನಲ್ಲಿ ಮಾತ್ರ ಪಿ ಯು ಸಿ ಯಲ್ಲಿ ಸೈನ್ಸ್ ಸೆಕ್ಷನ್ ಇತ್ತು ಈಗ ಅದನ್ನೂ ಮುಚ್ಚಿದ್ದಾರೆ ಮುಚ್ಚುವುದಕ್ಕೆ ಲೆಕ್ಚರರ್ ಇಲ್ಲ ಎಂಬ ಕಾರಣ ಹೇಳುತ್ತಾರೆ ಆದರೆ ಈ ವರ್ಷ ಎಸ್ ಎಸ್ ಎಲ್ ಸಿ ಯಲ್ಲಿ 896 ಜನ ವಿದ್ಯಾರ್ಥಿಗಳು ಪಾಸಾಗಿದ್ದಾರೆ ಅದರಲ್ಲಿ 319 ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆ ಅವರು ಸೈನ್ಸ್ ತೆಗೆದುಕೊಂಡು ಓದಬೇಕೆಂದರೆ, ದೂರದ ಸಾಗರಕ್ಕೆ ಹೋಗಬೇಕು, ಶಿವಮೊಗ್ಗಕ್ಕೆ ಹೋಗಬೇಕು ಇಲ್ಲವೇ ಉಡುಪಿಗೆ ಹೋಗಬೇಕಾಗಿದೆ ಖಂಡಿತ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಇಲ್ಲಿ ಸೈನ್ಸ್ ಸೆಕ್ಷನ್ ಓಪನ್ ಮಾಡಿ ಎಂದು ನಾನು ಎಲ್ಲಾ ಕಡೆ ಓಡಾಡಿದಾಗ, ಅದಕ್ಕೆ ಲೆಕ್ಚರರ್ ಇಲ್ಲವೆಂದು ಹೇಳಿದರು ಲೆಕ್ಚರರ್ ಅನ್ನು ನೀವು ತುಂಬಿಕೊಳ್ಳಿ ಎಂದರೆ, ಸರ್ಕಾರದ ಜಾರಿಯಲ್ಲಿರುವ ಮಿತವ್ಯಯ ಆದೇಶದ ಅಡಚಣೆಯಿಂದಾಗಿ ಆ ಸೈನ್ಸ್ ಸೆಕ್ಷನ್ ಓಪನ್ ಮಾಡುವುದಕ್ಕಾಗುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ ಈ ಮಿತವ್ಯಯ ಎಂಬುದು ಶಾಲಾ ಕಾಲೇಜುಗಳಿಗೂ ಅನ್ವಯವಾಗುತ್ತದೆಯೇ? ಇದು ಎಜ್ಯುಕೇಷನ್ ಡಿಪಾರ್ಟ್‌ಮೆಂಟಿಗೂ ಕೂಡ ಅನ್ವಯವಾಗುತ್ತದೆಯೇ? ಅಲ್ಲಿ ಶೇಕಡ 85ರಷ್ಟು ಮಾರ್ಕ್ಸ್ ತೆಗೆದವರು ಸುಮಾರು 25 ಜನ ಇದ್ದಾರೆ ಆ 25 ಜನ ವಿದ್ಯಾರ್ಥಿಗಳು ಎಲ್ಲಿ ಓದುವುದಕ್ಕೆ ಹೋಗಬೇಕು? ಅವರು ಸೈನ್ಸ್ ತೆಗೆದುಕೊಳ್ಳಬೇಕು ಎಂದರೆ, ಅವರು ಎಲ್ಲಿ ಓದಬೇಕು ಎಂಬ ಬಗ್ಗೆ ದಯವಿಟ್ಟು

ಸರ್ಕಾರ ಉತ್ತರ ಹೇಳಬೇಕು ಮತ್ತು ಇದಕ್ಕೆ ಕ್ರಮ ತೆಗೆದುಕೊಳ್ಳಬೇಕು ಇವತ್ತಿನ ಐ ಟಿ ಯುಗದಲ್ಲಿ, ಎಲ್ಲಾ ಮಕ್ಕಳೂ ನಾನೇನೋ ಇಂಜಿನಿಯರ್ ಆಗಬೇಕು, ಡಾಕ್ಟರ್ ಆಗಬೇಕು ಎಂದು ಬಯಸುತ್ತಾರೆ ಇಂಜಿನಿಯರ್ ಮತ್ತು ಡಾಕ್ಟರ್ ಕಥೆ ಈಗ ಮುಗಿಯುತ್ತಿದೆ, ಬಡವರೆಲ್ಲಾ ಅದನ್ನು ಈಗ ಓದುವುದಕ್ಕಾಗುವುದಿಲ್ಲ ಆದರೂ ಬೇರೆ ಏನಾದರೂ ಐ ಟಿ ಕಂಪ್ಯೂಟರ್ ಗಿಂಪ್ಯೂಟರ್ ಓದೋಣ ಎಂದರೆ ಅದಕ್ಕೂ ಈಗ ಬಹಳ ತೊಂದರೆಯಾಗುತ್ತಿದೆ 319 ಜನ ಫರ್ಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಾರೆ ಇಡೀ ತಾಲ್ಲೂಕಿನಲ್ಲಿ ಪಿಯುಸಿ ಸೈನ್ಸ್ ಇಲ್ಲ ದಯವಿಟ್ಟು ಅಲ್ಲಿ ಒಂದು ಪಿಯುಸಿಯಲ್ಲಿ ಸೈನ್ಸ್ ಸೆಕ್ಷನ್ ಓಪನ್ ಮಾಡಿಕೊಡಬೇಕು ಪಕ್ಕದ ತಾಲ್ಲೂಕಿನಲ್ಲಿ ಸೇರಿಕೊಂಡರೂ ಕೂಡ ಅಲ್ಲಿ ಹಾಸ್ಟಲ್‌ಗೆ ಪ್ರದೇಶ ಕೊಡುವುದಿಲ್ಲ ಸಾಗರ್ ತಾಲ್ಲೂಕಿನವರಿಗೆ ಇಲ್ಲವೆಂದು ಹೇಳುತ್ತಾರೆ, ಹೊಸನಗರದವರಿಗೆ ಇಲ್ಲವೆಂದು ಹೇಳುತ್ತಾರೆ, ಶಿವಮೊಗ್ಗದವರಿಗೆ ಕೇಳಿದರೆ ಇಲ್ಲವೆಂದು ಹೇಳುತ್ತಾರೆ ತೀರ್ಥಹಳ್ಳಿಯಲ್ಲಿ ಕೇಳಿದರೆ ನಿಮ್ಮ ತಾಲ್ಲೂಕಿನವರಿಗೆ ಹಾಸ್ಟೆಲ್‌ನಲ್ಲಿ ಸೀಟ್ ಇಲ್ಲ, ನಿಮ್ಮ ತಾಲ್ಲೂಕಿನವರಿಗೆ ಎಲ್ಲಿಂದ ತರಲಿ ಎಂದು ಹೇಳುತ್ತಾರೆ ವಿದ್ಯಾರ್ಥಿಗಳಿಗೆ ಎಷ್ಟು ತೊಂದರೆಯಾಗಿದೆ ಎಂದು ಹೇಳುತ್ತಿದ್ದೇನೆ ಬೇರೆ ತಾಲ್ಲೂಕುಗಳಿಗೆ ಹೋಗಿ ಸೈನ್ಸ್ ವಿಷಯ ತೆಗೆದುಕೊಂಡು ಓದಲಿಕ್ಕೆ ಹೋದರೂ ಸಹ ಯಾವುದೇ ಫೆಸಿಲಿಟಿ ಅಲ್ಲಿ ಸಿಗುವುದಿಲ್ಲ ಅದ್ದರಿಂದ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಏನು ಕ್ರಮ ತೆಗೆದುಕೊಳ್ಳುತ್ತೀರಿ, ಏನು ಸಹಾಯ ಮಾಡುತ್ತೀರಿ? ಎಂದು ಹೇಳಬೇಕು

**ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)** ಹೊಸನಗರ ತಾಲ್ಲೂಕಿನ ಒಂದು ಭಾಗವನ್ನು ನಾನೂ ಕೂಡ ಪ್ರತಿನಿಧಿಸುತ್ತಿದ್ದೇನೆ ಇಡೀ ತಾಲ್ಲೂಕಿನಲ್ಲಿ ಪಿಯುಸಿಗೆ ಸೈನ್ಸ್ ಸೆಕ್ಷನ್ ಇಲ್ಲ ಮಿತವ್ಯಯ ಎನ್ನುವ ನೆಪದಲ್ಲಿ ಬಡವರ ಮಕ್ಕಳು ಇವತ್ತು ಸೈನ್ಸ್ ಪಿಯುಸಿಯನ್ನೂ ಓದಲಿಕ್ಕೆ ದುರ್ಗತಿ ಯಾಗುವುದಾದರೆ ಇದಕ್ಕೆ ಅರ್ಥವಿಲ್ಲ ಅಲ್ಲಿರತಕ್ಕಂತಹ ಜೂನಿಯರ್ ಕಾಲೇಜುಗಳಿಗೆ ಪಿಯುಸಿಯಲ್ಲಿ ಸೈನ್ಸ್ ಸೆಕ್ಷನ್ ಓಪನ್ ಮಾಡುವ ಹಾಗೆ ದಯಮಾಡಿ ಆದೇಶ ಕೊಡಬೇಕು

**ಶ್ರೀ ಹೆಚ್ ಹಾಲಪ್ಪ** ಉಪನ್ಯಾಸರು ಇಲ್ಲವೆಂದು ಹಾಲಿ ನಡೆಯುತ್ತಿದ್ದ ಪಿಯುಸಿ ಕಾಲೇಜ್ ಮುಚ್ಚಿದ್ದೀರಿ

**ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)** ಇದನ್ನು ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ಡೈರೆಕ್ಟರ್ ಅವರನ್ನು ಕರೆಸಿ ಆದೇಶ ಕೊಡಿಸುತ್ತೇನೆ.

**18 ವಿಷಯ ಸಂಕಷ್ಟಕ್ಕೊಳಗಾದ ದಲಿತ ಕುಟುಂಬಕ್ಕೆ ಪರಿಹಾರ ಒದಗಿಸುವ ಕುರಿತು**

**ಶ್ರೀ ಎಂ ವೈ ಪಾಟೀಲ್ (ಅಫಜಲ್‌ಪುರ)** ಮಾನ್ಯ ಅಧ್ಯಕ್ಷರೆ, ಕೆ ಗ್ರಾಮದಿಂದ ಚಿಕ್ಕಮಗಳೂರಿಗೆ ಕೆಲಸಕ್ಕಾಗಿ ನಮ್ಮ ಒಂದು ದಲಿತ ಕುಟುಂಬ ಹೋಗಿತ್ತು ಅವರ ಹೆಸರು ಶೋಭೆ ಮತ್ತು ಕಲಾವತಿ ಎನ್ನುವವರು ಸಿಡಿಲು ಬಡಿದು ಕಾಲು ಕಳೆದುಕೊಂಡಿದ್ದಾರೆ ಅವರಿಗೆ ಸರ್ಕಾರದಿಂದ ಯಾವುದೇ ಧನಸಹಾಯವಾಗಲಿ,

ಪರಿಹಾರವಾಗಲಿ ಸಿಗಲಿಲ್ಲ ಮತ್ತು ಚಿಕಿತ್ಸೆ ಕೂಡ ಆಗಿಲ್ಲ ಅವರನ್ನು ಬಿಜಾಪುರ ಬಿಎಲ್‌ಡಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ ಅವರು ಸಾವು-ನೋವಿನಲ್ಲಿ ಜೀವನ ಕಳೆಯುತ್ತಿದ್ದಾರೆ ಅವರಿಗೆ ಸರ್ಕಾರದ ಪರಿಹಾರ ಸಿಗಬೇಕೆನ್ನುವುದು ನನ್ನ ಇಚ್ಛೆ ಇವರು ದಲಿತ ಕುಟುಂಬದವರಾಗಿದ್ದು ಅವರಿಗೆ ಯಾವುದೇ ಆಸರೆ ಇಲ್ಲ ಆಶ್ರಯ ಸಮಿತಿ ಕಡೆಯಿಂದ ಅವರಿಗೆ ಮನೆ ಕೂಡ ಸಿಗಬೇಕೆಂಬುದು ನನ್ನ ಇಚ್ಛೆಯಾಗಿದೆ ಸರ್ಕಾರ ಅದಕ್ಕೆ ಸ್ಪಂದಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ

## 19 ವಿಷಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಟೆಕ್ವಿಪ್ ಪ್ರೋಗ್ರಾಂನ್ನು ಜಾರಿಗೊಳಿಸುವ ಬಗ್ಗೆ

**ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ)** ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ, ಈ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಟೆಕ್ವಿಪ್ ಎನ್ನುವಂತಹ ಒಂದು ಪ್ರೋಗ್ರಾಮನ್ನು ದೇಶದ ತುಂಬೆಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಜಾರಿಗೊಳಿಸುತ್ತಿದ್ದಾರೆ ಈಗಾಗಲೇ ಆ ಸೌಲಭ್ಯವನ್ನು ಅನೇಕ ರಾಜ್ಯಗಳ ಇಂಜಿನಿಯರಿಂಗ್ ಕಾಲೇಜುಗಳು ಪಡೆದುಕೊಂಡಿವೆ ಆದರೆ, ಟೆಕ್ವಿಪ್ ಎಂದರೆ, ಟೆಕ್ನಿಕಲ್ ಎಜ್ಯುಕೇಷನ್ ಕ್ವಾಲಿಟಿ ಇಂಪ್ರೂವ್‌ಮೆಂಟ್ ಪ್ರೋಗ್ರಾಂ ಎಂದು ಆದರೆ ಅದು ನಮ್ಮ ರಾಜ್ಯದಲ್ಲಿ ಇನ್ನೂ ಕೂಡ ಜಾರಿಗೆ ಬರುತ್ತಿಲ್ಲ ಈಗಾಗಲೇ ಅನೇಕ ರಾಜ್ಯಗಳು ಈ ಸೌಲಭ್ಯವನ್ನು ಪಡೆದುಕೊಂಡಿರುವಾಗ ನಮ್ಮ ರಾಜ್ಯ ಏಕೆ ಇದರಿಂದ ವಂಚಿತವಾಗಬೇಕು? ನಮ್ಮಲ್ಲಿರುವಂತಹ ಇಂಜಿನಿಯರಿಂಗ್ ಕಾಲೇಜುಗಳಿಗೂ ಕೂಡ ಆ ಸೌಲಭ್ಯ ಸಿಗಬೇಕು ಈಗಾಗಲೇ ನ್ಯಾಷನಲ್ ಪ್ರಾಜೆಕ್ಟ್ ಇಂಪ್ಲಿಮೆಂಟೇಷನ್ ಯೂನಿಟ್ (ಎನ್‌ಪಿಐಯು) ಎನ್ನುವಂತಹ ಸಂಸ್ಥೆ ಮುಖಾಂತರ ನಾಲ್ಕು ಲೀಡ್ ಕಾಲೇಜುಗಳು ಮತ್ತು 11 ನೆಟ್‌ವರ್ಕ್ ಕಾಲೇಜುಗಳಿಂದು ಸೆಲೆಕ್ಷನ್ ಆಗಿವೆ ಸರ್ಕಾರ ಅದಕ್ಕೆ ಒಪ್ಪಿಗೆ ಕೊಟ್ಟರೆ, ಅದಕ್ಕೆ ಬಜೆಟನ್ನು ಪ್ರೊವೈಡ್ ಮಾಡಿದರೆ, ನಮ್ಮ ರಾಜ್ಯದಲ್ಲಿ ಕೂಡ ಆ ಯೋಜನೆಯನ್ನು ಜಾರಿಗೊಳಿಸಬಹುದು ಈಗಾಗಲೇ ಒಂದೂವರೆ ವರ್ಷ ತಡವಾಗಿದೆ 2003ಕ್ಕೆ ಪ್ರಾರಂಭವಾಗುವ ಯೋಜನೆ, 2007ಕ್ಕೆ ಮುಕ್ತಾಯವಾಗಬೇಕು ಈಗಾಗಲೇ ಒಂದೂವರೆ ವರ್ಷ ತಡವಾಗಿದೆ ಇನ್ನು ಉಳಿದಿರುವಂತಹ ಮೂರುವರೆ ವರ್ಷದಲ್ಲಿ ಇದನ್ನು ಜಾರಿಗೊಳಿಸುವುದು ಯಾವಾಗ? ಶಿಕ್ಷಣ ಮಂತ್ರಿಗಳು ಇದರ ಬಗ್ಗೆ ಬೇಗನೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ನಿಮ್ಮ ಮೂಲಕ ಒತ್ತಾಯ ಮಾಡುತ್ತೇನೆ

**ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)** ಮಾನ್ಯ ಅಧ್ಯಕ್ಷರೆ, ವರ್ಲ್ಡ್‌ಬ್ಯಾಂಕ್ ಏಡ್ ಅನ್ನು ಹಿಂದೆ ನಾವೆಲ್ಲಾ ಉಪಯೋಗಿಸಿಕೊಂಡಿದ್ದೇವೆ

ಆದರೂ ಸಹ ಈ ಸಾರಿ ನಾವು ಈಗಾಗಲೇ ಆದೇಶ ಕೊಟ್ಟಿದ್ದೇವೆ ಮೊನ್ನೆ ತಾನೇ ಅಧಿಕಾರಿಗಳನ್ನು ಕರೆಸಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿ ನಾವು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ

**20 ವಿಷಯ ಕಾವೇರಿ ನೀರಾವರಿ ನಿಗಮಕ್ಕೆ ಹೆಚ್ಚಿನ ಧನ ಸಹಾಯವನ್ನು ಒದಗಿಸುವುದರ ಬಗ್ಗೆ**

**ಶ್ರೀ ಎಂ ಟಿ ಕೃಷ್ಣಪ್ಪ (ತುರುವೇಕೆರೆ)** ಮಾನ್ಯ ಅಧ್ಯಕ್ಷರೆ, ಸಮಯದ ಅಭಾವವಿರುವುದರಿಂದ ಕ್ಷಮೆ ಯಾಚಿಸಿ ಒಂದೆರಡು ಮಾತುಗಳನ್ನು ಹೇಳುತ್ತೇನೆ ಕಾವೇರಿ ನಿಗಮದ ಬಗ್ಗೆ ಹೇಳಬೇಕಾದರೆ, ಈಗಾಗಲೇ ಕಾವೇರಿ ನಿಗಮ, ಕೃಷ್ಣ ನಿಗಮ, ಕರ್ನಾಟಕ ನೀರಾವರಿ ನಿಗಮ ಎಂದು ಅನೇಕ ನಿಗಮಗಳಿವೆ ನಾಲ್ಕೂವರೆ ವರ್ಷಗಳಲ್ಲಿ ಕೃಷ್ಣ ನಿಗಮಕ್ಕೆ ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಬಹಳ ಸಂತೋಷ ಕರ್ನಾಟಕ ನೀರಾವರಿ ನಿಗಮಕ್ಕೂ ಕೂಡ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಅದೂ ಸಹ ಬಹಳ ಸಂತೋಷ ಆದರೆ ದುರಂತವೆಂದರೆ, ನಮ್ಮ ಕಾವೇರಿ ನಿಗಮಕ್ಕೆ ಇಲ್ಲಿಯವರೆಗೆ ಕೇವಲ 450 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಇದು ಬಹಳ ಅನ್ಯಾಯ ನಾವು ಯಾವ ಪಾಪ ಮಾಡಿದ್ದೇವೆಂದು ನನಗನ್ನಿಸುತ್ತದೆ ಆ ನಿಗಮಕ್ಕೆ 3000 ಕೋಟಿ ರೂ ಮತ್ತು ಒಂದು ಸಾವಿರ ಕೋಟಿ ರೂ ಗಳನ್ನು ಕೊಟ್ಟಿರುವಾಗ ಈ ಕಾವೇರಿ ನಿಗಮಕ್ಕೆ ಕೇವಲ 450 ಕೋಟಿ ರೂ ಗಳನ್ನು ಕೊಟ್ಟಿರುವುದು ಬಹಳ ಕಷ್ಟದ ಸಂಗತಿ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಕಾವೇರಿ ನಿಗಮದಲ್ಲಿ ಸುಮಾರು 100 ಕೋಟಿ ರೂಪಾಯಿ ಇರಿಗೇಷನ್ ಬಿಲ್ ಪೆಂಡಿಂಗ್ ಇದೆ ಸಂಬಳ 60 ಕೋಟಿ ರೂಪಾಯಿ ಇದೆ, 310 ಕೋಟಿ ರೂಪಾಯಿ as on today pending ಇದೆ 1050 ಕೋಟಿ ರೂಪಾಯಿ ಟೆಂಡರ್ ಕರೆದಿದ್ದಾರೆ ಆದರೂ ಸಹ ನಮ್ಮ ಭಾಗದಲ್ಲಿ ಯಾರೂ ಟೆಂಡರ್ ಹಾಕುವುದಕ್ಕೆ ಬರುವುದಿಲ್ಲ ಕಾರಣ ಬಿಲ್ ಪಾಸಾಗುವುದಿಲ್ಲ ಮೂರು-ನಾಲ್ಕು ವರ್ಷಗಳಿಂದ ಬಿಲ್ ಪೆಂಡಿಂಗ್ ಇದೆ 1050 ಕೋಟಿ ರೂಪಾಯಿ ಇವತ್ತು ಟೆಂಡರ್ ಕರೆದು ಪೆಂಡಿಂಗ್ ಇದೆ ನನ್ನ ಕ್ಷೇತ್ರಕ್ಕೆ ನಾನು ಬರುವುದಾದರೆ, ಒಂದು ಅಕ್ವಿಡಕ್ಟ್ ಆದರೆ ಸುಮಾರು 22,000 ಎಕರೆ ಇರಿಗೇಷನ್ ಆಗುತ್ತದೆ ಆದರೆ ಎಂ ಡಿ ಯವರು ಒಂದು ಪತ್ರ ಬರೆದಿದ್ದಾರೆ, ಆ ಪತ್ರದಲ್ಲಿ ಎಲ್ಲಾ ಕೆಲಸಗಳನ್ನೂ ಕೂಡಲೇ ಸ್ಥಗಿತ ಮಾಡಿ ಎಂದು ಹೇಳಿದ್ದಾರೆ ಇದು ಬಹಳ ಕಷ್ಟ ನಾನು ಹೇಳುವುದು ಇಷ್ಟೇ ನಾವು ಯಾವು ಪಾಪ ಮಾಡಿದ್ದೇವೆ, ಕಾವೇರಿ ನಿಗಮದ ವ್ಯಾಪ್ತಿಗೆ ಬರತಕ್ಕಂತಹ ಶಾಸಕರು, ರೈತರು ಯಾವ ಪಾಪ ಮಾಡಿದ್ದೇವೆ ಎಂದು ಹೇಳುವುದು ನನಗೆ ಬಹಳ ದುಃಖಕರವಾದ ಸಂಗತಿ ಮುಖ್ಯಮಂತ್ರಿಗಳಾಗಲಿ, ಯಾರೇ ಆಗಲಿ, ಅವರು ಕೇವಲ ಒಂದು ಭಾಗಕ್ಕೆ ಸೀಮಿತವಾಗಬಾರದು ಎನ್ನುವುದು ನನ್ನ ಅನಿಸಿಕೆ ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುವುದು, ಈ ಕಾವೇರಿ ನಿಗಮಕ್ಕೆ ಕೊಟ್ಟಿರುವಂತಹ

ಹಣ 200 ಕೋಟಿ ರೂಪಾಯಿ ಸಂಬಳಕ್ಕೂ ಸಹ ಸಾಕಾಗುವುದಿಲ್ಲ ನಮ್ಮ ಉಪ ಮುಖ್ಯಮಂತ್ರಿಗಳೇ ಅರ್ಥ ಸಚಿವರಾಗಿರುವುದರಿಂದ ನಾನು ಅವರಲ್ಲಿ ತಮ್ಮ ಮೂಲಕ ವಿನಂತಿಸುತ್ತೇನೆ ತಾವು ಹಣವನ್ನು ಬಜೆಟ್‌ನಲ್ಲಿ ಪ್ರೊವೈಡ್ ಮಾಡದೆ ಇದ್ದರೂ ದುಃಖ ಇಲ್ಲ, ಕೊನೆಪಕ್ಷ ಸರ್ಕಾರ ಆ ನಿಗಮ ಸಾಲ ತೀರಿಸಿಕೊಳ್ಳುವುದಕ್ಕೆ ಸರ್ಕಾರ ಗ್ಯಾರಂಟಿ ಕೊಟ್ಟರೆ, ಈ ವರ್ಷಕ್ಕೆ 500 ಕೋಟಿ ರೂಪಾಯಿಯಾದರೂ ಕೊಟ್ಟರೆ ನಮ್ಮ ಭಾಗಕ್ಕೆ ಬಂದಿರುವಂತಹ ದುರಂತ ಸ್ವಲ್ಪ ತಪ್ಪುತ್ತದೆ ಸುಮಾರು 1116 ಕೋಟಿ ರೂ ಗಳನ್ನು ಕೇಳಿದ್ದಾರೆ, ಅವೆಲ್ಲವನ್ನೂ ಕೊಟ್ಟರೆ ಬಹಳ ಸಂತೋಷ ಕೊನೇ ಪಕ್ಷ 500 ಕೋಟಿ ರೂಪಾಯಿಯಾದರೂ ಸಾಲ ತೆಗೆದುಕೊಳ್ಳುವುದಕ್ಕೆ ಸನ್ಮಾನ್ಯ ಅರ್ಥ ಸಚಿವರು ಅವಕಾಶ ಮಾಡಿಕೊಟ್ಟರೆ, ನಮ್ಮ ಭಾಗಕ್ಕೆ ಸ್ವಲ್ಪ ಕೆಲಸವಾಗುತ್ತದೆ ಎಂದು ನಾನು ವಿನಂತಿಸಿಕೊಳ್ಳುತ್ತೇನೆ ಇವತ್ತು ಒಂದು ಸಂತೋಷ ಎಂದರೆ, ಹೇಮಾವತಿ ಕೆರೆ ತುಂಬಿ ನೀರು ಬಿಡಲಾಗುತ್ತಿದೆ ಒಟ್ಟಿನಲ್ಲಿ ಈ ಬಾಬಿಗೆ ಹೆಚ್ಚು ಹಣ ಕೊಡಬೇಕೆಂದು ನಾನು ಮಾನ್ಯ ಅರ್ಥ ಸಚಿವರಲ್ಲಿ ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ

**ಶ್ರೀ ಎಸ್ ಶಿವಣ್ಣ (ತುಮಕೂರು)** ಕಾವೇರಿ ನೀರಾವರಿ ನಿಗಮದ ಹಣ 450 ಕೋಟಿ ರೂಪಾಯಿ ಬಾಕಿ ಇದೆ, ಈಗ ಬಿಡುಗಡೆ ಮಾಡಿರುವುದು ಬರೀ 200 ಕೋಟಿ ರೂಗಳು ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ

**ಅಧ್ಯಕ್ಷರು** ಶಿವಣ್ಣರವರೇ, ಆ ಏರಿಯಾದಲ್ಲಿ ಬರತಕ್ಕಂತಹ ಎಂಟು ಜಿಲ್ಲೆಗಳ ಎಲ್ಲಾ ಶಾಸಕರು ಗಮನ ಸೆಳೆಯಬೇಕಾ? ಅವರು ಗಮನ ಸೆಳೆದಿದ್ದಾರೆ, ಉತ್ತರ ಕೊಡುತ್ತಾರೆ ದಯಮಾಡಿ ಕುಳಿತುಕೊಳ್ಳಿ

**ಶ್ರೀ ಹೆಚ್ ನಿಂಗಪ್ಪ (ಕುಣಿಗಲ್)** ಮಾನ್ಯ ಅಧ್ಯಕ್ಷರೆ, ಹಣದ ಅಭಾವವಿರುವುದರಿಂದ ಯಾವ ಕೆಲಸವನ್ನೂ ಮುಂದುವರೆಸಬೇಡಿ ಎಂದು ಕಾವೇರಿ ನೀರಾವರಿ ನಿಗಮದ ಮ್ಯಾನೇಜಿಂಗ್ ಡೈರೆಕ್ಟರ್ ಆದೇಶ ಕೊಟ್ಟಿದ್ದಾರೆ ಎಲ್ಲಾ ಕೆಲಸಗಳು ಸ್ಥಗಿತಗೊಂಡಿವೆ ಅದಕ್ಕೋಸ್ಕರ ಈ ಕಡೆ ಗಮನ ಹರಿಸಿ ಹೆಚ್ಚು ಹಣವನ್ನು ಬಿಡುಗಡೆ ಮಾಡಿದರೆ ಆ ಕೆಲಸವನ್ನು ಮುಂದುವರೆಸುವುದಕ್ಕೆ ಅನುಕೂಲವಾಗುತ್ತದೆ

**ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಾವರಿ ನಿಗಮ ಮತ್ತು ಕರ್ನಾಟಕ ನೀರಾವರಿ ನಿಗಮಕ್ಕೆ ಹೆಚ್ಚು ಹಣ ಎತ್ತುವಳಿ ಮಾಡುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದಾರೆ ಇದರ ಬಗ್ಗೆ ಪರಿಶೀಲನೆ ಮಾಡಿ, ಅಗತ್ಯವಾಗಿ ಎಷ್ಟು ಕೊಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಆ ಸೀಲಿಂಗ್ ಎಲ್ಲಾ ನೋಡಿಕೊಂಡು ಎಷ್ಟು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆ, ಅಷ್ಟು ಮಾಡಿಕೊಡುತ್ತೇವೆ

**21 ವಿಷಯ ಕೃಷ್ಣ ನದಿಯ ಹಿನ್ನೀರಿನ ಬಳಕೆಗೆ ಪರವಾನಗಿ ನೀಡುವ ಕುರಿತು**

**ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ)** ಮಾನ್ಯ ಅಧ್ಯಕ್ಷರೆ, ಕೃಷ್ಣ ನದಿ ಹಿನ್ನೀರಿನಿಂದ ರೈತರ ಹೊಲಗಳಿಗೆ ನೀರು ಉಪಯೋಗಿಸಿಕೊಳ್ಳಲು ಈ ಮೊದಲು ಚೀಫ್ ಇಂಜಿನಿಯರ್ (ಆಲಮಟ್ಟಿ) ಅವರು ಪರವಾನಗಿ ಕೊಡುತ್ತಿದ್ದರು ಆದರೆ ಕಳೆದ ಎರಡು ವರ್ಷಗಳಿಂದ ಸರ್ಕಾರ ಅದನ್ನು ರದ್ದುಪಡಿಸಿ ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಬೆಂಗಳೂರು ಇವರಿಂದ ಪಡೆಯಬೇಕೆಂದು ನಿಗದಿಪಡಿಸಿದೆ

ಆದಕಾರಣ ಪ್ರತಿಯೊಬ್ಬ ರೈತರೂ ಈ ಪರವಾನಗಿಯನ್ನು ಪಡೆಯಲು ಬೆಂಗಳೂರಿಗೆ ಬರಲು ಸಾಧ್ಯವಿಲ್ಲ ಆದಕಾರಣ ರೈತರಿಗೆ ಆಗುವ ತೊಂದರೆಯನ್ನು ನಿವಾರಣೆ ಮಾಡಲು ತಾವು ದಯವಿಟ್ಟು ಈ ಮೊದಲೇ ಏನು ವ್ಯವಸ್ಥೆ ಇತ್ತೋ ಅದೇ ರೀತಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ ಏಕೆಂದರೆ ಸುಮಾರು ವರ್ಷಗಳಿಂದ ಪರವಾನಗಿ ಪಡೆಯಲು ಕೊಟ್ಟಂಥ ಅರ್ಜಿಗಳು ಪೆಂಡಿಂಗ್ ಇರುವುದರಿಂದ ರೈತರಿಗೆ ತೊಂದರೆಯಾಗಿದೆ ಆದಕಾರಣ ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂಥ ವಿಷಯದ ಬಗ್ಗೆ ಸರ್ಕಾರ ಗಮನ ಹರಿಸುತ್ತದೆ

**ಶ್ರೀ ಗೋವಿಂದ ಎಂ ಕಾರಜೋಳ್** ಮಾನ್ಯ ಅಧ್ಯಕ್ಷರೆ, ವಾಟರ್ ವಿಚಾರದಲ್ಲೂ ಪರ್ಮಿಶನ್ ತೆಗೆದುಕೊಳ್ಳಲು ಬೆಂಗಳೂರಿಗೆ ಹಾಲಿ ವ್ಯವಸ್ಥೆಯಲ್ಲಿ ಬರಬೇಕಾಗಿದೆ ಅದಕ್ಕೆ ನಾನು ಏನು ಹೇಳುತ್ತೇನೆಂದರೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಲಿವಲ್‌ನಲ್ಲಿಯೇ ವಾಟರ್ ಪರ್ಮಿಶನ್ ಕೊಡುವಂತೆ ಆಗಬೇಕು ಅದನ್ನು ಬಿಟ್ಟು ಇದಕ್ಕಾಗಿ ವಿಧಾನ ಸೌಧಕ್ಕೆ ಏಕೆ ಬರುವಂತಾಗಬೇಕು?

**ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)** ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡೋಣ

**22 ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಹಾಗೂ ಬಿರುಗಾಳಿಯಿಂದ ಮನೆಗಳು ಹಾಗೂ ವಿದ್ಯುತ್ ಕಂಬಗಳು ಬಿದ್ದು ಸಾರ್ವಜನಿಕರಿಗೆ ತೊಂದರೆಯಾಗಿರುವುದರ ಬಗ್ಗೆ**

**ಶ್ರೀ ಕೆ ರಘುಪತಿ ಭಟ್ (ಉಡುಪಿ)** ಮಾನ್ಯ ಅಧ್ಯಕ್ಷರೆ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರ್‍ನಾಲ್ಕು ದಿವಸಗಳಿಂದ ವ್ಯಾಪಕವಾಗಿ ಮಳೆ ಹಾಗೂ ಬಿರುಗಾಳಿ ಬಂದು ಬಹಳಷ್ಟು ಮನೆಗಳು, ವಿದ್ಯುತ್ ಕಂಬಗಳು ಹಾನಿಗೊಳಗಾಗಿವೆ ಮರಗಳು ಬಿದ್ದು ಸಾರ್ವಜನಿಕರಿಗೆ ತೊಂದರೆಯಾಗಿದೆ ನನ್ನ ಉಡುಪಿ ಕ್ಷೇತ್ರದಲ್ಲಿ ಎರಡು ಶಾಲೆಗಳ ಮೇಲೆ ಮರ ಬಿದ್ದು ಆ ಎರಡು ಶಾಲೆಗಳಿಗೂ ಬಹಳ ಹಾನಿಯಾಗಿದ್ದು ಶಾಲೆಯನ್ನು ನಡೆಸುವುದಕ್ಕೇ ಆಗದ ಪರಿಸ್ಥಿತಿ ನಿರ್ಮಾಣವಾಗಿದೆ ನಮ್ಮ ಜಿಲ್ಲೆಗೆ ಬರ ಪರಿಹಾರ ನಿಧಿಯಿಂದ ಯಾವುದೇ ಪರಿಹಾರ ಸಿಗುವುದಿಲ್ಲ ಆದುದರಿಂದ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಕನಿಷ್ಠ ಮೂರು ಕೋಟಿ ರೂಪಾಯಿಗಳನ್ನಾದರೂ ಸರ್ಕಾರ ತುರ್ತಾಗಿ

ಬಿಡುಗಡೆ ಮಾಡಬೇಕೆಂದು ವಿನಂತಿಸುತ್ತೇನೆ ಇತ್ತೀಚೆಗೆ ಬೀಳುತ್ತಿರುವ ಮಳೆಗಳಲ್ಲಿಯೇ ಇದು ದೊಡ್ಡ ಪ್ರಮಾಣದ ಮಳೆಯಾಗಿದ್ದು ಇದರಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಸಮಸ್ಯೆಯೂ ಆಗಿದೆ ಒಂದು ಕಡೆ ಕಡಲ ಕೊರತೆ ಕೂಡ ಜಾಸ್ತಿ ಉಂಟಾಗಿದೆಯಾದ್ದರಿಂದ ಕಡಲ ಕಿನಾರೆಯಲ್ಲಿರುವಂಥ ಜನರಿಗೆ ಇದರಿಂದ ಹೆಚ್ಚು ತೊಂದರೆಯಾಗುತ್ತಿದೆ ಮಳೆ ಮತ್ತು ಗಾಳಿಯಿಂದಲೂ ಮರಗಳು ಬೀಳುತ್ತಿವೆಯಲ್ಲದೆ, ಮನೆಗಳೂ ಬೀಳುತ್ತಿವೆ ಇವೆಲ್ಲವನ್ನೂ ಗಮನಿಸಿ ಆದಷ್ಟು ಶೀಘ್ರವಾಗಿ ನಮ್ಮ ಜಿಲ್ಲೆಗೆ ಪ್ರಕೃತಿ ವಿಕೋಪ ನಿಧಿಯಿಂದ ಮೂರು ಕೋಟಿ ರೂಪಾಯಿಗಳನ್ನು ಸರ್ಕಾರ ಬಿಡುಗಡೆ ಮಾಡಬೇಕೆಂದು ಮತ್ತೊಮ್ಮೆ ವಿನಂತಿಸುತ್ತೇನೆ ಏಕೆಂದರೆ, ಬಹಳ ಕಳವಳಿಕಾರಿಯಾದ ರೀತಿಯಲ್ಲಿ ಮಳೆ ಬೀಳುತ್ತಿದೆ, ಗಾಳಿ ಬೀಸುತ್ತಿದೆ ಆದ್ದರಿಂದ, ಸರ್ಕಾರ ಈ ದಿಸೆಯಲ್ಲಿ ತಕ್ಷಣ ಪ್ರತಿಕ್ರಿಯಿಸಬೇಕೆಂದು ವಿನಂತಿಸುತ್ತೇವೆ

**ಶ್ರೀ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವುದು ನಿಜ ಕಳೆದ ಎರಡೂಮೂರು ದಿವಸಗಳಿಂದ ಮಂಗಳೂರು ಹಾಗೂ ನಾರ್ತ್ ಕೆನರಾ ಭಾಗಗಳಲ್ಲಿ ಹೆಚ್ಚಿಗೆ ಮಳೆಯಾಗುತ್ತಿದೆ ಅದಕ್ಕೆ ಯಾವುದರಿಂದ ಹಣ ಒದಗಿಸಬಹುದು ಎಂಬುದನ್ನು ನೋಡುತ್ತೇವೆ ಏಕೆಂದರೆ ನಮ್ಮ ಜನರು ಕಷ್ಟಕ್ಕೆ ಸಿಲುಕಿದಾಗ ತಕ್ಷಣ ಕ್ರಮ ತೆಗೆದುಕೊಳ್ಳುವುದು ಸರ್ಕಾರದ ಜವಾಬ್ದಾರಿಯೂ ಆಗಿರುತ್ತದೆ ಅದಕ್ಕೆ ಯಾವ ತರಹದಲ್ಲಿ ಕೆಲಸ ಆಗಬೇಕು ಮತ್ತು ಯಾವ ತರಹ ಹಣ ಒದಗಿಸಬೇಕೆಂದು ಸರ್ಕಾರ ತೀರ್ಮಾನಿಸಿದೆ ಅದರ ಪ್ರಕಾರ ಕೊಡಿಸುತ್ತೇವೆ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಸೆಂಟ್ರಲ್ ರಿಲೀಫ್ ಫಂಡ್‌ನಿಂದ ಸ್ವಲ್ಪ ಜಾಸ್ತಿ ಹಣ ಕೊಡಿಸಿದರೆ ಒಳ್ಳೆಯದು

### 23 ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿ ಡಿ ಎಫ್ ಓ ಅವರು ಗಂಧದ ಮರಗಳನ್ನು ಸಾಗುಸುತ್ತಿರುವ ಬಗ್ಗೆ ಹಾಗೂ ಜಿಲ್ಲೆಯಲ್ಲಿ ಕುಡಿಯುವ ನೀರಿಗಾಗಿ ಚಳುವಳಿ ಮಾಡುತ್ತಿರುವುದರ ಬಗ್ಗೆ

**ಶ್ರೀ ಎಸ್ ಎಲ್ ಧರ್ಮೇಗೌಡ (ಬೀರೂರು)** ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿ ಒಬ್ಬ ಡಿ ಎಫ್ ಓ ಅವರು ಗಂಧದ ಕಾರ್‌ನ್ನು ಹಿಡಿದು ಆ ಕಾರಿಗೆ ಬೇರೆ ಜೀಪಿನ ನೇಮ್ ಪ್ಲೇಟ್‌ನ್ನು ಹಾಕಿಕೊಂಡು ಓಡಿಸುತ್ತಿದ್ದಂಥ ಸಂದರ್ಭದಲ್ಲಿ ಆರ್ ಟಿ ಓ ಆಫೀಸ್‌ನ ಬ್ರೇಕ್ ಇನ್ಸ್‌ಪೆಕ್ಟರ್‌ರವರು ಆ ಕಾರ್‌ನ್ನು ಹಿಡಿದರು ಕೋರ್ಟ್‌ಗೆ ಹೋಗುತ್ತೇವೆ ಎಂದು ಹೇಳಿದರು ಕೋರ್ಟ್‌ಗೆ ಹೋಗುತ್ತೇವೆ ಎಂದು ಹೇಳಿಕೊಂಡು ಕೋರ್ಟ್ ಮುಂದೆ ಕಾರ್‌ನ್ನು ಬಿಟ್ಟು ಓಡಿ ಹೋದರು ಅವರು ಹಾಗೆ ಓಡಿ ಹೋಗಲು ಉದ್ದೇಶವಾದರೂ ಏನಿತ್ತು ಎಂಬ ಬಗ್ಗೆ ಹೇಳಬೇಕು ಇವೊತ್ತು ಒಬ್ಬ ಜಿಲ್ಲಾ ಮಟ್ಟದ ಡಿ ಎಫ್ ಓ ಆಗಿರತಕ್ಕಂಥ ಒಬ್ಬ ಉನ್ನತ ಅಧಿಕಾರಿ ಈ ರೀತಿ ತಪ್ಪುಗಳನ್ನು ಮಾಡಿದಾಗ ಸರ್ಕಾರ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ

ಚಿಕ್ಕವರಿಗೊಂದು ರೀತಿ ದೊಡ್ಡವರಿಗೊಂದು ರೀತಿ ಭೇದಭಾವವನ್ನು ಮಾಡಿದಂತಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಚಿಕ್ಕಮಗಳೂರು ಜಿಲ್ಲೆಯ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಭಗತಿಕಟ್ಟೆಗೆ ನಿನ್ನೆ ಯಾರೋ ದುಷ್ಕರ್ಮಿಗಳು ಹೋಗಿ ಜಿ ಸಿ ಬಿ ಇಟ್ಯಾಚಿ ತೆಗೆದುಕೊಂಡು ಹೋಗಿ ಅಲ್ಲಿ ಕೆರೆಯನ್ನು ಒಡೆದು ಬ್ರೇಕ್ ಮಾಡಿ ಅಲ್ಲಿಂದ ನೀರನ್ನು ಬೇರೆ ಕಡೆಗೆ ಹೋಗುವಂತೆ ಮಾಡಿ ತೆಗೆದುಕೊಂಡು ಹೋಗಿದ್ದಾರೆ ಅಲ್ಲಿಂದ ನೀರು ನನ್ನ ಕ್ಷೇತ್ರದಲ್ಲಿ ಬರತಕ್ಕಂಥ ನಂದಿ ಮತ್ತು ಸುಣ್ಣದಹಳ್ಳಿ ಮತ್ತು ದೋರನಾಳು ಕೆರೆಗಳಿಗೆ ಕುಡಿಯುವ ನೀರಿಗೆ ಬರತಕ್ಕಂಥ ನೀರಾದ್ದರಿಂದ ಬಹುಶ ಇವರು ಈ ರೀತಿ ಮಾಡಿದ್ದರಿಂದ ಆರೆಂಟು ಲಕ್ಷ ರೂಪಾಯಿಗಳ ನಷ್ಟವಾಗಿರಬಹುದು ಈಗ ಆ ಊರಿನಲ್ಲಿ ಈಗ ಚಳುವಳಿಯನ್ನು ಮಾಡುತ್ತಿದ್ದಾರೆ ಸಂಬಂಧಪಟ್ಟ ಅಧಿಕಾರಿಗಳು ಹೋದರು ಎಂದು ನನಗೆ ದೂರವಾಣಿ ಮುಖಾಂತರ ಮಾತನಾಡಿದ್ದಾರೆ ಆದುದರಿಂದ ದಯಮಾಡಿ ಅತೀ ಜರೂರಾಗಿ ಸರ್ಕಾರ ಗಮನ ಕೊಟ್ಟು ಕೆಲಸವನ್ನು ಮಾಡದೇ ಹೋದರೆ ರೈತ ರೈತರಲ್ಲಿ ಜಗಳ ಉಂಟಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ ಇದರ ಜೊತೆಯಲ್ಲಿ ನನ್ನ ಬೀರೂರು ಕ್ಷೇತ್ರದಲ್ಲಿ ಬರತಕ್ಕಂಥ ಆರು ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲವಾಗಿದೆ ಜಿಲ್ಲಾಧಿಕಾರಿಗಳನ್ನು ಈ ಬಗ್ಗೆ ಕೇಳಿದರೆ ಹಣವಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದಾರೆ ಈ ಮಾತನ್ನು ಪ್ರಭಾರ ಜಿಲ್ಲಾಧಿಕಾರಿಗಳು ಹೇಳಿದ್ದಾರೆ ಈ ಬಗ್ಗೆ ನಿನ್ನೆಯೂ ಹೇಳಿದ್ದೇವೆ ಮೊದಲು ಅಲ್ಲಿಗೆ ಜಿಲ್ಲಾಧಿಕಾರಿಗಳನ್ನು ಸರ್ಕಾರ ನೇಮಕ ಮಾಡಬೇಕು ನಿನ್ನೆ ಮಳೆ ಬಂದು ಕೆಲವು ಲೈಟ್ ಕಂಬಗಳೆಲ್ಲಾ ಬಿದ್ದು ಹೋಗಿವೆ ಏನೂ ಕೆಲಸವನ್ನು ಮಾಡುವುದಕ್ಕೆ ಆಗುತ್ತಿಲ್ಲ ಶಾಸಕರಾದ ನಾವುಗಳು ಆ ರಸ್ತೆಯಲ್ಲಿ ಓಡಾಡುವುದಕ್ಕೆ ಆಗುತ್ತಿಲ್ಲ ಆದಕಾರಣ ಮೊದಲು ಅತೀ ಜರೂರಾಗಿ ಅಲ್ಲಿಗೆ ಜಿಲ್ಲಾಧಿಕಾರಿಯನ್ನು ಹಾಕಬೇಕು ಮತ್ತು ಬೀರೂರು ಪಟ್ಟಣವೂ ಸೇರಿದಂತೆ ಆರು ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ನನಗೆ ಮಾತುಗಳನ್ನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ನಮಸ್ಕಾರಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ಬಹಳ ಗಹನವಾದ ವಿಷಯ ಡಿ ಎಫ್ ಓ ರವರೇ ಗಂಧದ ಕಳ್ಳತನ ಮಾಡುತ್ತಿರುವಂಥ ಕಾರಿನ ನೇಮ್ ಪ್ಲೇಟ್‌ನ್ನು ಚೇಂಜ್ ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿರುವುದನ್ನು ನೋಡಿದರೆ ನಿಜವಾಗಿಯೂ ನಮಗೆ ದಿಗ್ಭ್ರಮೆಯಾಗುತ್ತದೆ ಒಬ್ಬ ಜಿಲ್ಲಾ ಅಧಿಕಾರಿಯಾಗಿ ಈ ತರಹ ಆಗಿದ್ದರೆ, ಅವರೆಷ್ಟೇ ದೊಡ್ಡವರಾಗಿರಲಿ ಅವರ ಮೇಲೆ ಸರ್ಕಾರ ಕ್ರಮ ಜರುಗಿಸುತ್ತದೆ ಎನ್ನುವಂಥ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುತ್ತೇನೆ ಇನ್ನು ಎರಡನೆಯದಾಗಿ ಕುಡಿಯುವ ನೀರಿಗಾಗಿ ಎಷ್ಟೇ ಹಣ ಬೇಕಾದರೂ ಸರ್ಕಾರ

ಕೊಡುವುದಕ್ಕೆ ಸಿದ್ಧವಾಗಿದೆ ಆ ವಿಚಾರದಲ್ಲಿ ಮಾನ್ಯ ಸದಸ್ಯರು ಯಾವುದೇ ಅಳುಕು ಇಟ್ಟುಕೊಳ್ಳಬೇಕಾಗಿಲ್ಲ ಕುಡಿಯುವ ನೀರಿಗೆ ಹಣವನ್ನು ಒದಗಿಸುವಂಥ ಜವಾಬ್ದಾರಿ ಸರ್ಕಾರದ ಮೇಲಿದೆ ಅದಕ್ಕೆ ಹಣವನ್ನು ಒದಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ

**ಶ್ರೀ ಹೆಚ್ ಡಿ ಬಸವರಾಜು** ಇದು ಎಲ್ಲಾ ಜಿಲ್ಲೆಗಳಿಗೂ ಅನ್ವಯವಾಗಬೇಕು

## 24 ಮಂಡ್ಯ ತಾಲ್ಲೂಕಿನ ಬಿಳಿದೇಗಿಲು ಗ್ರಾಮದಲ್ಲಿ ತಮ್ಮೇಗೌಡ ಉರುಫ್ ಪುಟ್ಟಸ್ವಾಮಿ ಎಂಬುವರು ಸಾಲದ ಬಾಧೆ ತಡೆಯಲಾರದೆ ಆತ್ಮಹತ್ಯೆ ಮಾಡಿಕೊಂಡಿರುವುದರ ಬಗ್ಗೆ

**ಶ್ರೀ ಎನ್ ಚೆಲುವರಾಯಸ್ವಾಮಿ (ನಾಗಮಂಗಲ)** ಮಾನ್ಯ ಅಧ್ಯಕ್ಷರೆ, ನಿನ್ನೆ ನಮ್ಮ ಜಿಲ್ಲೆಯಲ್ಲಿ ಒಂದು ಘಟನೆ ನಡೆದಿದೆ ಅದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ ಮಂಡ್ಯ ತಾಲ್ಲೂಕಿನ ಬಿಳಿದೇಗಿಲು ಗ್ರಾಮದಲ್ಲಿ ತಮ್ಮೇಗೌಡ ಉರುಫ್ ಪುಟ್ಟಸ್ವಾಮಿ ಎಂಬ 60 ವರ್ಷದ ವ್ಯಕ್ತಿ ಸಾಲದ ಬಾಧೆಯನ್ನು ತಡೆಯಲಾರದೇ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ ನಾವು ಇನ್ನೂ ಕೂಡ ಆತ್ಮಹತ್ಯೆಯನ್ನು ತಡೆಯುವುದಕ್ಕೆ ಅವರಿಗೆ ಸರ್ಕಾರ ಏನು ಸಹಾಯಧನವನ್ನು ಕೊಡುತ್ತಿದೆಯೋ ಅದರ ಜೊತೆಗೆ ಆತ್ಮಹತ್ಯೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಜೊತೆ ನಾವೆಲ್ಲರೂ ಸೇರಿ ಚರ್ಚೆ ಮಾಡಿ ಆತ್ಮಹತ್ಯೆ ತಡೆಗಟ್ಟಲು ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಸರ್ಕಾರಕ್ಕೆ ನಾನು ವಿನಂತಿ ಮಾಡುತ್ತೇನೆ ಏಕೆಂದರೆ ಸತ್ತವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಕೊಡುವುದು ದೊಡ್ಡದಲ್ಲ ಒಬ್ಬರ ಪ್ರಾಣವನ್ನು ಉಳಿಸುವುದಕ್ಕೆ ನಾವು ಏನಾದರೊಂದು ಯೋಜನೆಯನ್ನು ಅಥವಾ ಜನರಿಗೆ ತಿಳುವಳಿಕೆ ಕೊಡುವುದರ ಮೂಲಕವೋ ಅಥವಾ ಇವೊತ್ತು ಸಾಲ ಮಾಡಿರತಕ್ಕಂಥವರಿಗೆ ಅವರಿಗೆ ಏನಾದರೂ ಸ್ವಲ್ಪ ಯಾವುದಾದರೂ ಒಂದು ರೀತಿಯಲ್ಲಿ ಸಹಕಾರವನ್ನು ಕೊಟ್ಟು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಪ್ಪಿಸಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ ಇದರ ಜೊತೆಗೆ ನಿನ್ನೆಯ ದಿನ ತಮ್ಮೇಗೌಡ ಉರುಫ್ ಪುಟ್ಟಸ್ವಾಮಿ ಏನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಆತನ ಕುಟುಂಬಕ್ಕೆ ತಕ್ಷಣ ಪರಿಹಾರ ಕೊಡುವುದಕ್ಕೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ನಾವು ಉಪ ಸಮಿತಿಯನ್ನು ಮಾಡಿದ್ದೇವೆ ಅದರ ವರದಿ ಬಂದ ಮೇಲೆ ಹಣವನ್ನು ಕೊಡುತ್ತೇವೆ ಇನ್ನು ಆತ್ಮಹತ್ಯೆ ತಡೆಗಟ್ಟಲು ಏನಾದರೂ ಮಾಡಬೇಕು ಎನ್ನುವ ನಿಟ್ಟಿನಲ್ಲಿ ಚೆಲುವರಾಯಸ್ವಾಮಿಯವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ಆತ್ಮಹತ್ಯೆಗಳು ಮರುಕಳಿಸದಂತೆ ಮಾಡಲು ಏನಾದರೂ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿರುವ ಅವರ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತದೆ ಪಕ್ಕಾ ಆ

ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳಬಯಸುತ್ತೇನೆ

**25 ಕೆ ಹೆಚ್ ಎಸ್ ಡಿ ಪಿ ಕಡೆಯಿಂದ ವೆನ್‌ಲಾಕ್ ಆಸ್ಪತ್ರೆಯಲ್ಲಿ ಸುಮಾರು 5 ಕೋಟಿ ರೂ ಗಳ ಕಾಮಗಾರಿ ನಡೆದಿದ್ದರೂ ಸೌಕರ್ಯ ಇಲ್ಲದಿರುವುದರ ಬಗ್ಗೆ**

**ಶ್ರೀ ಎನ್ ಯೋಗೀಶ್‌ಭಟ್ (ಮಂಗಳೂರು)** ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ಸಂಗತಿಯೆಂದರೆ ಕೆ ಹೆಚ್ ಎಸ್ ಡಿ ಪಿ ವತಿಯಿಂದ ವೆನ್‌ಲಾಕ್ ಆಸ್ಪತ್ರೆಯಲ್ಲಿ ಸುಮಾರು 5 ಕೋಟಿ ರೂಪಾಯಿಗಳ ಕಾಮಗಾರಿ ನಡೆದಿದೆ ಅಲ್ಲಿ ಈ ಹಿಂದೆ ಎಲ್ಲಾ ವಾರ್ಡ್‌ಗಳಲ್ಲಿ ಕುಡಿಯುವ ನೀರು ಬರುತ್ತಿತ್ತು ಈಗ ವಾರ್ಡ್‌ಗಳಲ್ಲಿ ಕುಡಿಯುವ ನೀರು ಬರುತ್ತಿಲ್ಲ ಇನ್ನು ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳಿಂದ ಬಂದಿರುವಂಥ ಉತ್ತರದಲ್ಲಿ ಎಲ್ಲವೂ ಸಂಪೂರ್ಣವಾಗಿದೆ ಮತ್ತು ತೃಪ್ತಿಕರವಾಗಿದೆ ಎಂದು ಹೇಳಿದ್ದಾರೆ ಅನೇಕ ಮಾಹಿತಿಗಳಿವೆ ಅಲ್ಲಿರುವಂಥ ಆಪರೇಶನ್ ಥಿಯೇಟರ್‌ಗಳಲ್ಲಿ ಡಾಕ್ಟರ್‌ಗಳು ಎಲ್ಲಾದರೂ ಗೋಡೆಯನ್ನು ಮುಟ್ಟಿದರೆ ಶಾಕ್ ಹೊಡೆಯುತ್ತಿದೆ ಮೊನ್ನೆತನಕ ಶಾಕ್ ಹೊಡೆಯುತ್ತಿತ್ತು ಈಗ ದುರಸ್ತಿಯಾಗಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ ಇನ್ನು ಎರಡನೆಯದಾಗಿ ಆಪರೇಶನ್ ಥಿಯೇಟರ್‌ನಲ್ಲಿರುವ ಸ್ವಿಚ್‌ಗಳಲ್ಲಿ ಒಂದನ್ನು ಆನ್ ಮಾಡಿದರೆ ಕರೆಂಟ್ ಬರುತ್ತದೆ, ಎರಡನೆಯ ಸ್ವಿಚ್‌ನ್ನು ಆನ್ ಮಾಡಿದರೆ ಟ್ರಿಪ್ ಆಗಿ ಬಿಡುತ್ತದೆ ಇಂಥ ದುಸ್ಥಿತಿ ಅಲ್ಲಿದೆ ಇನ್ನು ಮೂರನೆಯದಾಗಿ, ಅಲ್ಲಿ ಶವಾಗಾರ ಇದೆ ಆ ಶವಾಗಾರದಲ್ಲಿ ಹೆಣವನ್ನು ನೋಡುವುದಕ್ಕೆ ಹೋದವರು ಅಲ್ಲಿ ನೇತಾಡುತ್ತಿರುವಂಥ ಲೈನ್ ವೈರ್‌ನ್ನು ಏನಾದರೂ ಗೊತ್ತಿಲ್ಲದೇ ಮುಟ್ಟಿಬಿಟ್ಟರೆ ಅವರೇ ಹೆಣವಾಗುವಂಥ ದುಸ್ಥಿತಿ ಅಲ್ಲಿದೆ ಒಂದು ಪ್ಲಾಸ್ಟಿಕ್ ಕವರ್ ಹಾಕಿ ತರಬೇಕೆನ್ನುವ ಕನಿಷ್ಟವಾದಂಥ ಕಾಮನ್‌ಸೆನ್ಸ್‌ನಿಂದ ಕೆಲಸ ಮಾಡಿಲ್ಲ ಇನ್ನು ಅಲ್ಲಿ ಹಿಂದೆ ಸರಿ ಇದ್ದಂಥ ಒಳಚರಂಡಿ ವ್ಯವಸ್ಥೆ ಈಗ ಎಲ್ಲವೂ ಬ್ಲಾಕ್ ಆಗಿ ಮಣ್ಣು ತುಂಬಿಕೊಂಡಿದೆ ಲಿಫ್ಟ್ ಕೂಡ ಅರ್ಧದಲ್ಲಿಯೇ ನಿಂತಿದೆ ಆದಕಾರಣ ಇಂಥ ಅನೇಕ ಸಮಸ್ಯೆಗಳನ್ನು ಸರ್ಕಾರದ ಮುಂದೆ ಇಡುವುದಕ್ಕೆ ಬಯಸುತ್ತೇನೆ ಅಲ್ಲಿಯ ಡಿ ಹೆಚ್ ಓ ವಿವರವಾಗಿ 19 ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದಿದದ್ದಾರೆ ಆದರೆ ದುರಾದೃಷ್ಟವಶಾತ್ ಬೆಂಗಳೂರಿನಲ್ಲಿರುವಂಥ ಅಧಿಕಾರಿಗಳು ಅವರಿಗೆ ಏನು ಹೇಳುತ್ತಿದ್ದಾರೆಂದರೆ, ನೀವೂ ಕೂಡ ಸರ್ಕಾರಿ ಅಧಿಕಾರಿಗಳೇ ಆಗಿದ್ದೀರಿ, ಆದಕಾರಣ ಎಲ್ಲವೂ ಸರಿಯಾಗಿದೆ, ತೃಪ್ತಿಕರವಾಗಿದೆ ಎಂದು ಹೇಳುವಂಥ ಉತ್ತರ ಕೊಡಿ ಎಂದು ಒಂದು ರೀತಿಯಲ್ಲಿ ಅವರಿಗೆ ಒತ್ತಾಯ ಮಾಡುತ್ತಿದ್ದಾರೆ ಆಗಿರುವಂಥಾದ್ದರ ಬಗ್ಗೆ ತಾವು ವಸ್ತುನಿಷ್ಠವಾಗಿ ಅಧ್ಯಯನವನ್ನು ನಡೆಸಬೇಕು ಮತ್ತು ಆಗಿರುವಂಥ ದೋಷಗಳ ಬಗ್ಗೆ ತನಿಖೆ ನಡೆಸಬೇಕು ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಕೊಟ್ಟಿರುವಂಥ, ನಿಯಮ 351ರಲ್ಲಿ ಕೊಟ್ಟಿರುವಂಥ ಉತ್ತರದಲ್ಲಿ ತಪ್ಪು ಉತ್ತರವನ್ನು ಕೊಟ್ಟಿದ್ದಾರೆ ಎಲ್ಲಾ ಸಂಪೂರ್ಣ ತೃಪ್ತಿಕರವಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ **ಲಿಫ್ಟ್ ಅರ್ಧದಲ್ಲಿದೆ, ಕೆಲಸವಾಗಿಲ್ಲ ಇದರ ಬಗ್ಗೆ ಸಮಗ್ರವಾದ ತನಿಖೆ ನಡೆಸಬೇಕು**

ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ ಆಗಿರುವಂಥ ಕಾಮಗಾರಿಗಳಲ್ಲಿ ಇರುವಂಥ ದೋಷಗಳನ್ನೂ ಕೂಡ ಸರಿಪಡಿಸಬೇಕು ಎನ್ನುವ ವಿನಂತಿಯನ್ನು ಕೂಡ ಈ ಸಂದರ್ಭದಲ್ಲಿ ನಾನು ಮಾಡಲಿಚ್ಛಿಸುತ್ತೇನೆ ಕೊನೆಯದಾಗಿ, ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳಲ್ಲಿ ಊಟದ ವ್ಯವಸ್ಥೆ ಇಲ್ಲ ಎನ್ನುವುದನ್ನು ಕಳೆದ ಎರಡು ದಿವಸಗಳ ಹಿಂದೆ ಪ್ರಸ್ತಾಪ ಮಾಡಿದ್ದು, ಇವತ್ತಿಗೂ ಆ ಸಮಸ್ಯೆ ಪರಿಹಾರವಾಗಿಲ್ಲ, ಇವತ್ತಿಗೂ ಅದು ಕಂಟಿನ್ಯೂ ಆಗುತ್ತಿದೆ ಈ ಬಗ್ಗೆ ಸರ್ಕಾರ ಆದೇಶ ಕೊಟ್ಟಿದೆ ಎಂದು ಹೇಳುತ್ತಿದ್ದಾರೆ, ಆದರೆ ಇನ್ನೂ ಪ್ರಾರಂಭವಾಗಿಲ್ಲ ಹೀಗಾದರೆ, ಸರ್ಕಾರೀ ಆದೇಶಕ್ಕೆ ಏನು ಬೆಲೆ ಎನ್ನುವುದನ್ನೂ ಸಹ ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ ತಕ್ಷಣ ಅದನ್ನು ಸರಿಪಡಿಸಬೇಕು ಎಂದು ವಿನಂತಿ ಮಾಡುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೇ, ಮಾನ್ಯ ಯೋಗೀಶ್ ಭಟ್‌ರವರು ಹೇಳಿದ ಹಾಗೆ ದಕ್ಷಿಣ ಕನ್ನಡದ ಆಸ್ಪತ್ರೆಗಳಲ್ಲಿ ಕೆಲಸ ಇನ್ನೂ ಮುಗಿದಿಲ್ಲ ಆದರೆ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ ಯಾರಾದರೂ ಅಧಿಕಾರಿ ಆ ರೀತಿ ತಪ್ಪು ಮಾಹಿತಿ ಕೊಟ್ಟಿದ್ದರೆ, ಅವರ ಮೇಲೆ ಕ್ರಮವನ್ನು ಜರುಗಿಸುತ್ತೇವೆ ಆದರೆ ಉಳಿಕೆ ಕೆಲಸಗಳನ್ನು ಮಾಡಿಸುವಂಥ ಕೆಲಸ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ

**ಶ್ರೀ ಎನ್ ಯೋಗೀಶ್ ಭಟ್** ಮಧ್ಯಾಹ್ನದ ಊಟದ ವ್ಯವಸ್ಥೆ ಸರ್ಕಾರೀ ಆಸ್ಪತ್ರೆಗಳಲ್ಲಿ, ಪಿಹೆಚ್‌ಸಿ ಗಳಲ್ಲಿ ಇದೆ ಎಂದು ಹೇಳಿದ್ದಾರೆ ಆದರ ಬಗ್ಗೆ ಆದೇಶ ಕೊಟ್ಟರೂ ಕೂಡ ಇದುವರೆಗೂ ಅದು ಸರಿಯಾಗಿ ಜಾರಿಯಾಗಿಲ್ಲ

**ಶ್ರೀ ಕೆ ಶ್ರೀನಿವಾಸಗೌಡ** ಸರ್ಕಾರಿ ಆಸ್ಪತ್ರೆಗಳಲ್ಲಿ ಊಟವನ್ನಂತೂ ಕೊಡುತ್ತಿದ್ದೇವೆ ಇವರು ಹೇಳುವ ರೀತಿ ಏನಾದರೂ ಆಗಿದ್ದರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಸೂಚನೆ ಕೊಡುತ್ತೇವೆ.

## 26 ವಿಷಯ ಕಮಲಾಪುರ ಕ್ಷೇತ್ರದಲ್ಲಿನ ಗ್ರಾಮಗಳಿಗೆ ರಸ್ತೆ ಸೌಕರ್ಯ ಮತ್ತು ಅವುಗಳ ನಿರ್ವಹಣೆ ಮಾಡುವ ಬಗ್ಗೆ

**ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ)** ಸನ್ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆಯಲ್ಲಿ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು ನನ್ನ ಕ್ಷೇತ್ರವಾದ ಕಮಲಾಪುರ ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು, ಇಡೀ ಗುಲ್ಬರ್ಗಾ ಜಿಲ್ಲೆಯಲ್ಲೇ ಅತ್ಯಂತ ಹಿಂದುಳಿದ ಕ್ಷೇತ್ರ ನಾನು ಈ ಅಧಿವೇಶನ ಮುಗಿಸಿ ಕ್ಷೇತ್ರಕ್ಕೆ ಹೋಗಬೇಕಾದರೆ ಭಯಭೀತನಾಗಿ ಹೋಗಬೇಕಾಗಿದೆ ಇದು ಗುಲ್ಬರ್ಗಾ ಜಿಲ್ಲೆಯ ಎಲ್ಲಾ ಶಾಸಕರಿಗೂ ಅನ್ವಯವಾಗಬಹುದು ಅಲ್ಲಿ ಎಲ್ಲಾ ರೋಡುಗಳೂ ಹದಗೆಟ್ಟಿವೆ ಯಾವ ರೋಡುಗಳಲ್ಲೂ ಸಹ ವಾಹನಗಳು ಓಡಾಡಲು ಬಹಳ ತೊಂದರೆಯಿದೆ ಚುನಾವಣಾ ಸಂದರ್ಭದಲ್ಲಿ ನಾನು ಕಮಲಾಪುರ, ಜೀವಣಗಿ, ಗೋಗಿ, ಬೇಲೂರುಗಳಿಗೆ ಹೋಗಿಲ್ಲ ಏಕೆಂದರೆ, ಯಾರು ಮತ ಕೇಳಲು ಬರುತ್ತಾರೋ ಅವರನ್ನು ಆಗರೇ ಖಾಲಿ ಜಗತ್ತ

ಶಾಸಕರನ್ನು ಕೂಡಿ ಹಾಕುತ್ತೇವೆ ಎಂದು ಹೆದರಿಸಿದ್ದರು ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ, ಕಮಲಾಪುರ, ಜೀವಣಗಿ, ಗೋಗಿ ರೋಡು, ಮಾರಗುತ್ತಿ ಕ್ರಾಸ್, ಸೊಂತ, ಚಂಟಾ ರೋಡು, ಅಲ್ಲಿಂದ ಆಳಂದ, ಮಟಕಿ, ನೀರಗುಡಿ ರೋಡು, ಹರ್ಜೂರಿ ಬಾರ್ಡರ್‌ನಿಂದ ಹೊದ್ಲೂರು, ನರಗುಂದ ರೋಡು, ಅಲ್ಲಿಂದ ಬಂಗರಗಾ ಕ್ರಾಸ್‌ನಿಂದ ಪೋತನಿಪುರದ ರೋಡು, ಇಂಥ ಹಲವಾರು ರೋಡುಗಳನ್ನು ಕಡೆಗಣಿಸಿದ್ದು, ಎಲ್ಲಾ ರೋಡುಗಳೂ ಹದಗೆಟ್ಟಿವೆ ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವ ಕ್ಷೇತ್ರದಲ್ಲಿ ಯಾವ ಹಳ್ಳಿಗೆ ಹೋಗಬೇಕೆಂದರೂ, ನಾವು ಸಧ್ಯ ಅಲ್ಲಿಗೆ ಹೋಗುವ ಪರಿಸ್ಥಿತಿಯಲ್ಲಿಲ್ಲ ನಾನೊಬ್ಬನೇ ಅಲ್ಲ, ಗುಲ್ಬರ್ಗಾ ಜಿಲ್ಲೆಯ ಎಲ್ಲಾ ಶಾಸಕರಿಗೂ ಇದು ಅನ್ವಯವಾಗಬಹುದು ರಸ್ತೆಗಳು ಬಹಳ ಹದಗೆಟ್ಟಿವೆ, ವಾಹನಗಳು ಓಡಾಡುವ ಸ್ಥಿತಿಯಲ್ಲಿಲ್ಲ ಅದಕ್ಕಾಗಿ ಸರ್ಕಾರ ಕೂಡಲೇ ಈ ರೋಡುಗಳನ್ನು ಸರಿಪಡಿಸುವ ಕ್ರಮ ಕೈಗೊಳ್ಳಬೇಕು, ನಮ್ಮಂಥ ಮುಗ್ಧ ಶಾಸಕರು ಹಳ್ಳಿಗಳಿಗೆ ಹೋಗಲು ಅವಕಾಶ ಮಾಡಿಕೊಡಬೇಕು ಎಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೇ, ಹಳ್ಳಿ ರಸ್ತೆಗಳ ಕೆಲಸಗಳನ್ನು ಜಿಲ್ಲಾ ಪಂಚಾಯತ್, ಎಸ್ ಜೆ ಆರ್ ವೈ, ಫುಡ್ ಫಾರ್ ವರ್ಕ್, ಅವುಗಳ ಮೂಲಕ ಕೆಲಸ ಮಾಡುತ್ತಿದ್ದೇವೆ ಅವು ಯಾವುದೇ ಸ್ಟೇಟ್ ರಸ್ತೆಗಳಾಗಲೀ ಅಥವಾ ನ್ಯಾಷನಲ್ ಹೈವೇಗಳಾಗಲೀ ಸರ್ಕಾರ ಅದಕ್ಕೆ ಗಮನ ಕೊಡುತ್ತದೆ ಆದರೆ ಇದು ಜಿಲ್ಲಾ ಪಂಚಾಯಿತಿ ರಸ್ತೆಗಳಾಗಿರುವುದರಿಂದ, ಹಳ್ಳಿ ಗಾಡಿನ ರಸ್ತೆಗಳಾಗಿರುವುದರಿಂದ, ಎಸ್‌ಜೆಆರ್‌ವೈನಲ್ಲಿ ನೀವೂ ಸದಸ್ಯರಾಗಿರುವುದರಿಂದ, ಎಸ್‌ಜೆಆರ್‌ವೈನಲ್ಲಿ ಏನು ಹಣ ಕೊಡುತ್ತಾರೆ, ಆ ಹಣವನ್ನು ಈ ರಸ್ತೆಗಳಿಗೆ ಹಾಕಿ ರಸ್ತೆಗಳನ್ನು ಮಾಡಿಸಬಹುದು ಆ ಹಣ ಸಾಲದಿದ್ದರೆ, ಏನಾದರೂ ಅಗತ್ಯವಿದ್ದರೆ, ಸರ್ಕಾರ ಅದನ್ನು ಪರಿಶೀಲಿಸುತ್ತದೆ ಎಂದು ನಾನು ಅವರಿಗೆ ಹೇಳಲು ಬಯಸುತ್ತೇನೆ

### 27 ವಿಷಯ ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಿಂದ ಸಂಗ್ರಹಿಸಿದ ಶುಲ್ಕವನ್ನು ರೇಷ್ಮೆ ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರದ ಮೂಲಕ ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗಿಸುವ ಬಗ್ಗೆ

**ಶ್ರೀ ಆರ್ ಧ್ರುವನಾರಾಯಣ (ಸಂತೇಮರಹಳ್ಳಿ)** ಮಾನ್ಯ ಅಧ್ಯಕ್ಷರೇ, ಇವತ್ತು ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಬೆಳೆಗಾರರು, ರೀಲರ್‌ಗಳು, ಮೊಟ್ಟೆ ಉತ್ಪಾದಕರು, ನೇಕಾರರು ಇವರೆಲ್ಲರೂ ಬಹಳ ಸಂಕಷ್ಟದಲ್ಲಿದ್ದಾರೆ ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಕಲೆಕ್ಟ್ ಮಾಡುವ ಶುಲ್ಕದಿಂದ ಬರುವ ಹಣ ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ಸರಿಯಾದ ರೀತಿಯಲ್ಲಿ ವಿನಿಯೋಗವಾಗುತ್ತಿಲ್ಲ 1979ರಿಂದ ಇದುವರೆಗೆ, ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಿಂದ 246 ಕೋಟಿ ರೂಪಾಯಿಗಳ ಶುಲ್ಕ ಸಂಗ್ರಹಣೆಯಾಗಿದೆ ಈ ರೀತಿ

ಸಂಗ್ರಹಣೆಯಾದಂಥ ಹಣವನ್ನು, ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರ ಇಟ್ಟುಕೊಂಡು ತನ್ಮೂಲಕ ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ಆ ಹಣವನ್ನು ವಿನಿಯೋಗ ಮಾಡಬೇಕು ಅದರಲ್ಲಿ, ಮೊದಲನೆಯದಾಗಿ, ರೇಷ್ಮೆ ಗೂಡಿನ ಮಾರುಕಟ್ಟೆ ಅಥವಾ ರೇಷ್ಮೆ ವಿನಿಮಯ ಕೇಂದ್ರಗಳ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆಯನ್ನು ಮಾಡಬೇಕು ಎರಡನೆಯದು, ರೇಷ್ಮೆ ಗೂಡಿನ ಮಾರುಕಟ್ಟೆ ಅಥವಾ ರೇಷ್ಮೆ ವಿನಿಮಯ ಕೇಂದ್ರಗಳಿಗೆ ಸೂಕ್ತ ಕಟ್ಟಡಗಳನ್ನು ಕಲ್ಪಿಸುವುದು ಮತ್ತು ರೇಷ್ಮೆ ಗೂಡಿಗೆ ಕನಿಷ್ಟ ಬೆಲೆ ನಿಗದಿ ಮಾಡುವುದು, ಈ ನಾಲ್ಕು ಕಾರ್ಯಕ್ರಮಗಳಿಗೆ ರೇಷ್ಮೆ ಕಾಯ್ದೆಯನ್ವಯ ಈ ಹಣವನ್ನು ವಿನಿಯೋಗ ಮಾಡಬೇಕು ಇವತ್ತು, ಈ ಒಂದು ಕಾಯಿದೆಯನ್ನು ಉಲ್ಲಂಘಿಸಿ, ಈ ಹಣವನ್ನು ಸರ್ಕಾರ ನೇರ ಖಜಾನೆಗೆ ಹಾಕಿಕೊಂಡು, ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ವಿನಿಯೋಗವಾಗಲು ಹಣವನ್ನು ಬಿಡುಗಡೆ ಮಾಡುತ್ತಿಲ್ಲ ಮಾನ್ಯ ಹಣಕಾಸಿನ ಮಂತ್ರಿಗಳು ಇಲ್ಲೇ ಇದ್ದಾರೆ, ನಾನು ಅವರ ಮೊರೆ ಹೋಗುತ್ತೇನೆ, ರೇಷ್ಮೆ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಿಂದ ಸಂಗ್ರಹವಾಗುವ ಹಣವನ್ನು ಸರ್ಕಾರ ನೇರವಾಗಿ ಖಜಾನೆಗೆ ತೆಗೆದುಕೊಳ್ಳದೇ, ಬೆಲೆ ಸ್ಥಿರೀಕರಣ ನಿಧಿ ಪ್ರಾಧಿಕಾರ ಏನಿದೆ (ಪಿ ಎಸ್ ಎಫ್ ಎ) (Price Stabilisation Fund Authority) ಇದರ ಮೂಲಕ ರೇಷ್ಮೆ ಅಭಿವೃದ್ಧಿಗಳಿಗೆ ಈ ಹಣವನ್ನು ವಿನಿಯೋಗ ಮಾಡಬೇಕು ಎಂದು ಸರ್ಕಾರದ ಮೊರೆ ಹೋಗುತ್ತೇನೆ ಮಾನ್ಯ ಹಣಕಾಸಿನ ಸಚಿವರು ಈ ಹಣವನ್ನು ನೇರವಾಗಿ ಖಜಾನೆಗೆ ಹಾಕಿಕೊಳ್ಳದೇ, ರೇಷ್ಮೆ ಅಭಿವೃದ್ಧಿ ಕೆಲಸಗಳಿಗೆ ಹಾಕಿಕೊಳ್ಳಬೇಕು ಎಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದು ಬಹಳ ನಿಜ ವರ್ಷಕ್ಕೆ 15 ಕೋಟಿ ರೂಪಾಯಿಗಳಷ್ಟು ಬೆಲೆ ಸ್ಥಿರೀಕರಣ ಫಂಡನ್ನು ಗೂಡು ಮಾರುಕಟ್ಟೆಗಳಿಂದ ಕಲೆಕ್ಟ್ ಮಾಡುತ್ತಾರೆ ಅದನ್ನು ಅವರು ಹೇಳಿದಂತೆ ನಾಲ್ಕು ವಿಷಯಗಳಿಗೆ ಉಪಯೋಗಿಸಬೇಕು ಎನ್ನುವುದಿದ್ದರೂ ಕೂಡ, ಇತ್ತೀಚಿನ ದಿನಗಳಲ್ಲಿ ಅದಕ್ಕೆ ಗಮನ ಕೊಟ್ಟಿಲ್ಲ ಹಿಂದೆ, ರೇಷ್ಮೆ ಗೂಡಿನ ಬೆಲೆ ಕಡಿಮೆಯಾದಾಗ 10 ರೂಪಾಯಿಗಳ ಸಪೋರ್ಟ್ ಪ್ರೈಸನ್ನು ಅದರಿಂದ ಕೊಟ್ಟರು ಉಳಿದಂಥ ಹಣ ಹಣಕಾಸಿನ ಖಾತೆಗೆ ಬಂದಿರುವುದಿಂದ, ಇದು ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಸಮಸ್ಯೆಯೂ ಆಗಿರುವುದರಿಂದ ಹಾಗೂ ಇದು ಬಹಳ ಮುಖ್ಯವಾಗಿರುವುದರಿಂದ ಮೊನ್ನೆ ನಾನೇ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕ ಮಾಡಿ, ಅವರ ಜೊತೆ ಒಂದು ಮೀಟಿಂಗ್ ಮಾಡಿದಾಗ ಅವರು ಒಪ್ಪಿಕೊಂಡಿದ್ದಾರೆ ಈ ವರ್ಷದಿಂದ ಬೆಲೆ ಸ್ಥಿರೀಕರಣ ಫಂಡನ್ನು ಆಯಾ ಜಿಲ್ಲೆಗಳಿಗೆ ಕೊಡತಕ್ಕದ್ದು ಎಂದು ಆಗಿದೆ ರೀಲರ್ಸ್‌ಗೆ ತೊಂದರೆ ಇರಬಹುದು ಅಥವಾ ಬಿಲ್ಡಿಂಗಿನ ತೊಂದರೆ ಇರಬಹುದು ಅಥವಾ ರೈತ ಬೆಳೆದಂಥ ರೇಷ್ಮೆ ಗೂಡಿನ ಬೆಲೆ ಕಡಿಮೆಯಾದರೆ, ಇಂಥವುಗಳಿಗೆ ಆ ಹಣವನ್ನು ಕೊಡುವಂಥಾದ್ದನ್ನು ಮಾಡುತ್ತೇವೆ ಎನ್ನುವ ಮಾತನ್ನು ಈಗಾಗಲೇ ಸಂಬಂಧಪಟ್ಟ ಹಣಕಾಸಿನ ಇಲಾಖೆಯವರು ಹೇಳಿದ್ದಾರೆ ಆದ್ದರಿಂದ,

ಈ ವರ್ಷದಿಂದ ಆ ಹಣ ನಮಗೇ ಬರುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಅವರಿಗೆ ಹೇಳಲು ಇಚ್ಛಿಪಡುತ್ತೇನೆ

**28 ವಿಷಯ ಮಾಲೇಕಲ್ ತಿರುಪತಿಯಲ್ಲಿ ರಥೆಯಾತ್ರೆಯ ಸಂದರ್ಭದಲ್ಲಿ ಗೋಪುರ ಕುಸಿದು ಸತ್ತವರಿಗೆ ಮತ್ತು ಗಾಯಗೊಂಡವರಿಗೆ ಪರಿಹಾರ ನೀಡುವ ಬಗ್ಗೆ**

**ಶ್ರೀ ಹೆಚ್ ಡಿ ಬಸವರಾಜು (ವಿರಾಜಪೇಟೆ)** ಮಾನ್ಯ ಅಧ್ಯಕ್ಷರೇ, ಹಾಸನ ಜಿಇಲ್ಲೆಯ ಆರಸೀಕೆರೆ ತಾಲ್ಲೂಕಿನಲ್ಲಿ ದಿನಾಂಕ 29–6–2004ರಂದು ಮಾಲೀಕಲ್ ತಿರುಪತಿಯಲ್ಲಿ ಬಹಳ ವೈಭವವಾದಂಥ ರಥಯಾತ್ರೆ ನಡೆಯುತ್ತಿತ್ತು ಆ ಯಾತ್ರೆಯ ಸಮಯದಲ್ಲಿ ಸುಮಾರು ಒಂದೂವರೆ ಸಾವಿರ ಮೆಟ್ಟಿಲುಗಳ ಮೇಲಿರುವ ಹಳೆದ ಗೋಪುರ ಕುಸಿದು ಬಿದ್ದು ಹೋಗಿದ್ದು, ಈ ಘಟನೆಯಲ್ಲಿ 41 ಜನರಿಗೆ ಏಟು ಬಿದ್ದಿದ್ದು, ಮೂರು ಜನ ಸತ್ತು ಹೋಗಿರತಕ್ಕಂಥಾದ್ದು ಆಗಿದೆ ಸತ್ತಿರುವ ಈ ಮೂವರಲ್ಲಿ ಒಬ್ಬರು ಕಡೂರು ತಾಲ್ಲೂಕಿನವರು, ಒಬ್ಬರು ತಿಪಟೂರು ತಾಲ್ಲೂಕಿನವರು, ಇನ್ನೊಬ್ಬರು ಅರಸೀಕೆರೆಯವರು ಇದುವರೆಗೂ ಈ ಘಟನೆಗೆ ಸಂಬಂಧಿಸಿದಂತೆ ಪರಿಹಾರವನ್ನು ಕೊಟ್ಟಿಲ್ಲ ಇದನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೂ ತಂದಿದ್ದೇವೆ ಗಾಯಗೊಂಡಿರುವವರಲ್ಲಿ ಸುಮಾರು 12 ಜನರಿಗೆ ಕೈ ಕಾಲುಗಳು ಮುರಿದಿವೆ ಗಾಯಗೊಂಡಿರುವ ಬಾಕಿಯವರಿಗೆ ಸ್ವಲ್ಪ ಏಟು ಬಿದ್ದಿರತಕ್ಕಂಥಾದ್ದು ಆಗಿದೆ ಸತ್ತಿರುವ ಈ ಮೂರು ಜನರ ಕುಟುಂಬಗಳಿಗೆ ಮತ್ತು ಗಾಯಗೊಂಡಿರುವವರಿಗೆ ಇವತ್ತಿನವರೆಗೆ ಏಕೆ ಪರಿಹಾರ ಕೊಟ್ಟಿಲ್ಲ ಎನ್ನುವುದನ್ನು ನಾನು ಕೇಳುತ್ತಿದ್ದೇನೆ

**ಶ್ರೀ ಬಿ ನಂಜಾಮರಿ (ತಿಪಟೂರು)** ಸನ್ಮಾನ್ಯ ಅಧ್ಯಕ್ಷರೇ, ತಿಪಟೂರಿನಲ್ಲಿ ಅರಸೀಕೆರೆ–ಸಿರ್ಸಿ ಜಾತ್ರೆಯಲ್ಲಿ, ಜಾತ್ರೆಗೆ ಹೋದಂಥ ಜನ ಒಂದು ಮಂಟಪದಡಿಯಲ್ಲಿದ್ದಾಗ ಮಳೆ ಬಿದ್ದು, ಮಂಟಪ ಕುಸಿದು, ನನ್ನ ಕ್ಷೇತ್ರದಲ್ಲೂ ಸಹ ಜನ ಸತ್ತುಹೋಗಿದ್ದಾರೆ, ಸುಮಾರು 3–4 ಜನರಿಗೆ ಕೈಕಾಲು ಮುರಿದಿವೆ ಅದಕ್ಕೆ ಇದುವರೆಗೂ ಪರಿಹಾರವನ್ನು ಕೊಟ್ಟಿಲ್ಲ ಎಂದು ನಮ್ಮ ಕ್ಷೇತ್ರದ ಜನ ಕೇಳುತ್ತಿದ್ದಾರೆ, ದಯವಿಟ್ಟು ಅದಕ್ಕೆ ಪರಿಹಾರ ಕೊಡಿಸಬೇಕು ಎಂದು ತಮ್ಮನ್ನು ನಾನು ಕೇಳಿಕೊಳ್ಳುತ್ತಿದ್ದೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೇ, ಅದರ ಪೂರ್ತಿ ಡೀಟೈಲ್ಸ್ ಕೊಟ್ಟರೆ ಅದರ ಮೇಲೆ ಕ್ರಮವನ್ನು ಜರುಗಿಸುತ್ತೇವೆ

**29 ವಿಷಯ ಪಶು ಸಂಗೋಪನಾ ಇಲಾಖೆಯವರು ಔಷಧಿ ಖರೀದಿ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ**

**ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)** ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಪಶುಸಂಗೋಪನಾ ಇಲಾಖೆಯವರು ಔಷಧಿ ಖರೀದಿ ಮಾಡಿರುವ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ ಅವರಿಗೆ ಔಷಧಿ ಖರೀದಿ ಮಾಡುವುದಕ್ಕೆ ಹಣವೇ ಇಲ್ಲ ಇರುವ ಸ್ವಲ್ಪ ದುಡ್ಡನ್ನೂ ಸಹ ಹೊಡೆದು ತಿಂದಿದ್ದಾರೆ ಅದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ ಯಾರಾದರೂ ಮಂತ್ರಿಗಳು ಇದ್ದರೆ

ದಯವಿಟ್ಟು ಗಮನಿಸಬೇಕು ಅದನ್ನು ಸರಿಪಡಿಸಬೇಕೆಂಬುದು ನನ್ನ ವಿನಂತಿಯಾಗಿದೆ ಸ್ವಾಮಿ 10 ಕೋಟಿ ರೂ ಗಳನ್ನು ಕೊಟ್ಟರೆ, ಇವರು ಬರ ಕಾಮಗಾರಿಗಳಿಗೆ 5 ಕೋಟಿ ರೂ ಗಳು ಬಂದಿದೆ, ಬರಕಾಮಗಾರಿ ಮೇಲೆ 5 ಕೋಟಿ ರೂ ಗಳು ಬಂದಿದ್ದನ್ನು ಟೆಂಡರ್ ಕರೆಯುವುದು ಹೀಗೆ ಯಾವುದನ್ನೂ ಕೂಡ ಯೋಚನೆ ಮಾಡದೆ, ಸರ್ಕಾರಿ ಔಷಧಿ ಕಂಪನಿಗೆ ಸರ್ಕಾರಿ ಪಶುಸಂಗೋಪನೆ ಇಲಾಖೆ ಔಷಧಿ ಕೊಂಡುಕೊಳ್ಳುವುದಕ್ಕೆ 40 ಪರ್ಸೆಂಟ್ ಕಮಿಷನ್ ಕೊಟ್ಟಿದೆ ಒಬ್ಬ ಕಮಿಷನ್ ಏಜೆಂಟ್‌ನ್ನು ನೇಮಕ ಮಾಡಿಕೊಂಡು ಇವರಿಬ್ಬರೂ ಸೇರಿಕೊಂಡು ಹೊಡೆದು ತಿಂದಿದ್ದಾರೆ ಕರ್ನಾಟಕ ರಾಜ್ಯ ಸರ್ಕಾರದ್ದೇ ಒಂದು ಔಷಧಿ ಕಂಪನಿಗೆ, ಕರ್ನಾಟಕ ರಾಜ್ಯದ ಪಶುಸಂಗೋಪನೆ ಇಲಾಖೆ 40 ಪರ್ಸೆಂಟ್ ಕಮಿಷನ್ ಅನ್ನು ಏಕೆ ಕೊಡಬೇಕು? 60 ಪರ್ಸೆಂಟ್ ಇವರಿಗೆ ಹಂಚಿಕೆ ಇದು ಯಾವ ಮಟ್ಟಕ್ಕೆ ಹೋಗಿ ತಲುಪುತ್ತದೆ ನೋಡಿ

**ಅಧ್ಯಕ್ಷರು** ನೀವು ಹಿರಿಯ ಸದಸ್ಯರು ಈ ತರಹ ಸಮಯ ತೆಗೆದುಕೊಂಡರೆ ಹೇಗೆ?

**ಶ್ರೀ ಅರಗ ಜ್ಞಾನೇಂದ್ರ** ಇಂಥದ್ದನ್ನೂ ಕೂಡ ನಾವು ಪ್ರಸ್ತಾಪ ಮಾಡದೇ ಇದ್ದರೆ ಹೇಗೆ?

**ಅಧ್ಯಕ್ಷರು** ಸೂಕ್ಷ್ಮವಾಗಿ ಹೇಳಿಬಿಡಿ

**Sri Araga Jnanendra** Star Drugs & Vital Health Care Company ಇವೆರಡೂ ಕಂಪನಿಗಳು blacklist ಗೆ ಸೇರಿವೆ ಪರ್‌ಚೇಸ್ ಕಮಿಟಿಯಲ್ಲಿ ಇದ್ದಂದ ಒಬ್ಬ ನಮ್ಮ ರಾಜ್ಯದ ದತ್ತಿ ಡ್ರಗ್ ಕಂಟ್ರೋಲರ್ ಕುಷ್ಟಗಿ ಎನ್ನುವಂಥವರು "ಎರಡೂ ಕೂಡ blacklist ಗೆ ಸೇರಿದ ಕಂಪನಿಗಳೂ, ಅಲ್ಲಿಂದ ಔಷಧಿಗಳನ್ನು ಖರೀದಿ ಮಾಡಬಾರದೆಂದು" ಡಿಸ್ಸೆಂಟ್ ನೋಟ್ ಬರೆದಿದ್ದಾರೆ ಆದರೆ Animal Husbandry Departmentನ ನಿರ್ದೇಶಕರು ಅದ್ಯಾವುದನ್ನೂ ಕೂಡ ನೋಡದೆ, ಗಮನಿಸದೆ violate ಮಾಡಿಕೊಂಡು blacklist ಗೆ ಸೇರಿದ ಕಂಪನಿಗಳಿಂದ ಈ ಔಷಧಿಯನ್ನು ಖರೀದಿ ಮಾಡಿದ್ದಾರೆ ಪಶುಸಂಗೋಪನಾ ಇಲಾಖೆಯಲ್ಲಿ ಒಂದು ವರ್ಷಕ್ಕೆ ಎರಡೂವರೆ ಲಕ್ಷಕ್ಕಿಂತ ಹೆಚ್ಚಿಗೆ ಬೇವಿನ ಎಣ್ಣೆ ಹೊಂಗೆ ಎಣ್ಣೆಯನ್ನು ಖರೀದಿ ಮಾಡಿರುವುದು ಇತಿಹಾಸದಲ್ಲಿಯೇ ಇರಲಿಲ್ಲ ಇವರು ಬರಕಾಮಗಾರಿ ಹಣದಲ್ಲಿ 70 ಲಕ್ಷ ರೂ ಗಳ ಹೊಂಗೆ ಎಣ್ಣೆ ಮತ್ತು ಬೇವಿನ ಎಣ್ಣೆಯನ್ನು ಖರೀದಿ ಮಾಡಿದ್ದಾರೆ ನಮ್ಮ ಇಡೀ ರಾಜ್ಯಕ್ಕೆ ಅಷ್ಟು ಎಣ್ಣೆಯ ಅಗತ್ಯವಿಲ್ಲ ಏಕೆಂದರೆ ಜಾನುವಾರಿಗೆ ಪೆಟ್ಟಾದರೆ ಬ್ಯಾಂಡೇಜ್ ಮಾಡುವುದಕ್ಕೆ ಅದನ್ನು ಒಂದು ಚೂರು ಉಪಯೋಗಿಸುತ್ತಾರೆ ಅದೂ ಕೂಡ sub-standard ಆಗಿರುವಂಥ ಎಣ್ಣೆಯನ್ನು 70 ಲಕ್ಷ ರೂಗಳಿಗೆ ಖರೀದಿ ಮಾಡಿದ್ದಾರೆ ಈ ಬೇವಿನ ಎಣ್ಣೆ ಹೊಂಗೆ ಎಣ್ಣೆ ಕಂಪನಿಗಳು ನಮ್ಮ ಜಿಲ್ಲಾ ಮಟ್ಟದ ಡೆಪ್ಯುಟಿ ಡೈರೆಕ್ಟರುಗಳು ಟೆಂಡರ್ ಕರೆದಾಗ ಈಗ ಏನು ಖರೀದಿ ಮಾಡಿದ್ದಾರೆ ಇದಕ್ಕಿಂತ 50 ಪರ್ಸೆಂಟ್ ಕಡಿಮೆ ಬೆಲೆಗೆ ಕೊಡುತ್ತೇವೆಂದು ಟೆಂಡರ್ ಹಾಕಿಕೊಂಡಿದ್ದಾರೆ ಆದರೂ ಕೂಡ ಗಮನಿಸದೆಯೇ ಈ ನಿರ್ದೇಶಕರು ಇಷ್ಟೊಂದು ಜಾಸ್ತಿ ಬೆಲೆಗೆ ಕೊಂಡುಕೊಂಡಿದ್ದಾರೆ

**ಅಧ್ಯಕ್ಷರು** ಶ್ರೀ ಜ್ಞಾನೇಂದ್ರರವರೆ, ಇವೆಲ್ಲಾ ಬಹಳ important ವಿಷಯಗಳನ್ನು ಈಗ ಪ್ರಸ್ತಾಪ ಮಾಡುತ್ತಿದ್ದೀರಿ ಇವೆಲ್ಲವನ್ನು ನೀವು ಬಜೆಟ್ ಮೇಲೆ ಮಾತನಾಡಿದಾಗ ಮಾತನಾಡಬಹುದಿತ್ತು ಬಹಳ serious allegation ಮಾಡುತ್ತಿದ್ದೀರಿ, ಈಗ ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದರೆ ಹೇಗೆ?

**ಶ್ರೀ ಅರಗ ಜ್ಞಾನೇಂದ್ರ** ನಾನು ಏನು ಮಾಡಲಿ ಸರ್ ನಾನು ಬಜೆಟ್ ಮೇಲೆ ಮಾತನಾಡುವ ಸಂದರ್ಭದಲ್ಲಿ ಈ ದಾಖಲೆಯೇ ನನಗೆ ಸಿಕ್ಕಿರಲಿಲ್ಲ ಮೊನ್ನೆ ನನಗೆ ಸಿಕ್ಕಿ ತಮಗೆ ನೋಟಿಸ್ ಕೊಟ್ಟು 3 ದಿವಸವಾಯಿತು ಎಲ್ಲಾ ಸರಿಯಾಗಿದೆಯೆಂದು ಇವರು ನನಗೆ ಉತ್ತರ ಕೊಡುತ್ತಾರೆ ದಯವಿಟ್ಟು ನೋಡಿ

**ಅಧ್ಯಕ್ಷರು** ಸಂಬಂಧಪಟ್ಟ ದಾಖಲಾತಿಗಳನ್ನು ಸಂಬಂಧಪಟ್ಟ ಸಚಿವರಿಗೆ ಕೊಡಿ ಬಹಳ serious allegations ಮಾಡುತ್ತಿದ್ದೀರಿ

**ಶ್ರೀ ಆರಗ ಜ್ಞಾನೇಂದ್ರ** ಈ ಬರಕಾಮಗಾರಿಕೆ ಔಷಧಿ ಯಾವುದು ಕೊಂಡುಕೊಳ್ಳಬೇಕು ಸರ್ Mineral Mixture ಕೊಂಡುಕೊಳ್ಳಬೇಕು antibiotics ಕೊಂಡುಕೊಳ್ಳಬೇಕು ಇಂಥದ್ದನ್ನು ಕೊಂಡುಕೊಳ್ಳುವುದು ಬಿಟ್ಟು ಇವರಿಗೆ ಯಾವುದರಲ್ಲಿ ಜಾಸ್ತಿ ಕಮಿಷನ್ ಬರುತ್ತದೋ ಅದನ್ನು ಕೊಂಡುಕೊಂಡಿದ್ದಾರೆ ಅವೆಲ್ಲವೂ ಹಾಗೆಯೇ ಅಲ್ಲಿ ಬಿದ್ದಿವೆ ಇದರಲ್ಲಿ equipments ಕೂಡ ಅಷ್ಟೆ NDDB ಯವರು ನಾವು ಇದಕ್ಕಿಂತ ಕಡಿಮೆ ಬೆಲೆಗೆ ತಂದು ಕೊಡುತ್ತೇವೆಂದು ಹೇಳಿದರು ಅವರ ಹತ್ತಿರ ತೆಗೆದುಕೊಳ್ಳದೆಯೇ ಬೇರೆ ಯಾವಯಾವುದೋ ಕಂಪನಿಯಿಂದ ಪರ್ಚೇಸ್ ಮಾಡಿದ್ದಾರೆ ಬಹಳ serious ಆಗಿ ಇದನ್ನು ತೆಗೆದುಕೊಳ್ಳಬೇಕು ಏಕೆಂದರೆ ಈ ಇಲಾಖೆಗೆ ಹಣವೇ ಇಲ್ಲ ರೈತರಿಗೆ ಕೊಡುವಂಥ ಔಷಧಿಗಳನ್ನೂ ಕೂಡ ಸರಿಯಾಗಿ ಕೊಡದೆ ಇವರ್‍ಯಾರೋ ಬೆಂಗಳೂರು ಮಟ್ಟದ ನಿರ್ದೇಶಕರು ಮತ್ತು ಬೇರೆ ಬೇರೆ ಅಧಿಕಾರಿಗಳು ಹಂಚಿಕೊಳ್ಳುತ್ತಾರೆ ಎಂದರೆ ದಯಮಾಡಿ ಸರ್ಕಾರ ಇದರ ಬಗ್ಗೆ ಗಮನ ಕೊಡಬೇಕು, ತೀಕ್ಷ್ಣವಾದಂಥ enquiry ಮಾಡಿ ಅವರ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಬಹಳ ವಿಷಯ ಇದ್ದರೂ ಕೂಡ ಸಮಯ ಇಲ್ಲ ಎಂದು ತಾವು ಹೇಳುತ್ತಿದ್ದೀರಿ ಆದ್ದರಿಂದ ನಾನು ಇದರ ಬಗ್ಗೆ ಹೆಚ್ಚಿಗೆ ವಿಳಂಬ ಮಾಡಲಿಕ್ಕೆ ಹೋಗದೇ ಇಲ್ಲಿಗೆ ಮುಗಿಸುತ್ತೇನೆ

**ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು)** ಮಾನ್ಯ ಅಧ್ಯಕ್ಷರೆ, ಅಲ್ಲಿ ಮೇಲ್ನೋಟಕ್ಕೆ ಅವ್ಯವಹಾರ ನಡೆದಿದೆ ಎನ್ನುವುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆಯೆಂದು ಮೊದಲನೆಯದಾಗಿ ಹೇಳುತ್ತಾ, ಇದರಲ್ಲಿ ಯೋಜನೆಗೆ 3 ಲಕ್ಷ ರೂ ಗಳನ್ನು ಮತ್ತು ಯೋಜನೇತರಕ್ಕೆ 6 ಲಕ್ಷ ರೂ ಗಳನ್ನು ಮೊದಲು ಇಡಲಾಗಿತ್ತು ಮೊದಲು ಪರಿಷ್ಕೃತದಲ್ಲಿ ಯೋಜನೆಗೆ 80 ಲಕ್ಷ ರೂ ಗಳನ್ನು ಯೋಜನೇತರದಲ್ಲಿ 300 ಲಕ್ಷ ರೂ ಗಳನ್ನು ಇಡಲಾಗಿದೆ ಆಸ್ಪತ್ರೆ ಪರಿಕರಗಳನ್ನು ಕೊಂಡುಕೊಳ್ಳಲಿಕ್ಕೆ 35 54 ಲಕ್ಷ ರೂಗಳನ್ನು ಇಟ್ಟಿದ್ದೆವು ಅಲ್ಲಿ ಒಟ್ಟು 4 ಕೋಟಿ 7 ಲಕ್ಷದ 17 ಸಾವಿರದ 43 ರೂಪಾಯಿಗಳ ಔಷಧಿ ಮತ್ತು ರಾಸಾಯನಿಕಗಳನ್ನು

ಕೊಂಡುಕೊಳ್ಳಬೇಕಾಗಿತ್ತು ಇವರು ಏನು ಮಾಡಿದರೆಂದರೆ M/s Karnataka Antibiotics & Pharamaceuticals ಮತ್ತು M/s Indian Immunological ಇವರಿಂದ ಖರೀದಿಸಲು ರಾಜ್ಯ ಪಶುಸಂಗೋಪನಾ ಇಲಾಖೆಯಿಂದ ಇವರು ಪರ್ಮಿಷನ್ ತೆಗೆದುಕೊಂಡು 4-a ಇದರಲ್ಲಿ ಈ ಪ್ರಕ್ರಿಯೆಗೆ ವಿನಾಯಿತಿಯನ್ನೂ ಕೂಡ ಅವರು ತೆಗೆದುಕೊಂಡಿದ್ದಾರೆ ಅಂದರೆ Transparency actಗೆ ಒಂದು ವಿನಾಯಿತಿಯನ್ನು ತೆಗೆದುಕೊಂಡರು ಅದರ ಜೊತೆಗೆ Finance Departmentನವರು ಸರ್ಕಾರಿ ಔಷಧ ಉಗ್ರಾಣಕರಾರು ಒಪ್ಪಿಗೆ ಪಡೆದು ಸಂಸ್ಥೆಗಳಿಂದ ಅವಶ್ಯಕತೆಗನುಗುಣವಾಗಿ, ಎಷ್ಟು ಅಗತ್ಯ ಇತ್ತೋ ಅಷ್ಟನ್ನು ಕೊಳ್ಳಬೇಕಾಗಿತ್ತು ಮಾನ್ಯ ಅರಗ ಜ್ಞಾನೇಂದ್ರರವರು ಹೇಳುತ್ತಿರುವುದು ಬಹಳ ಸರಿ ಇದೆ ಆದ್ದರಿಂದ ಅನಗತ್ಯವಾಗಿರುವುದನ್ನೂ ಸಹ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಮತ್ತೆ ಇವರು ಅದನ್ನು ಕೊಂಡುಕೊಳ್ಳುವುದಕ್ಕೆ Finance Department ನಿಂದ concurrence ತೆಗೆದುಕೊಳ್ಳಬೇಕಾಗಿತ್ತು ಅದನ್ನು ತೆಗೆದುಕೊಳ್ಳದೆಯೇ 6 ಕೋಟಿ 74 ಲಕ್ಷ ರೂಪಾಯಿಗಳ ಔಷಧಿಯನ್ನು ಕೊಂಡುಕೊಂಡಿದ್ದಾರೆ ಇದರಲ್ಲಿ ಕೊಂಡುಕೊಳ್ಳಬೇಕಾಗಿರುವುದು 4 ಕೋಟಿ 7 ಲಕ್ಷದ 17 ಸಾವಿರದ 43 ರೂ ಗಳಿಗೆ ಕೊಳ್ಳಬೇಕಾಗಿರುವುದನ್ನು ಸಂಬಂಧಪಟ್ಟ ಅಧಿಕಾರಿ 6 ಕೋಟಿ 74 ಲಕ್ಷ ರೂ ಗಳಿಗೆ ತೆಗೆದುಕೊಂಡಿದ್ದಾರೆ ಆ ಅಧಿಕಾರಿಯ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸುತ್ತೇವೆ, ಈ ತರಹ ಆಗುವುದಕ್ಕೆ ಸರ್ಕಾರದಿಂದ ನಾವು ಬಿಡುವುದಿಲ್ಲ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ

**30 ವಿಷಯ ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ಬೊಮ್ಮನಹಳ್ಳಿ ನಗರ ಸಭಾ ವ್ಯಾಪ್ತಿಯಲ್ಲಿ ಬರುವ ಕೋಡಿ ಚಿಕ್ಕನಹಳ್ಳಿ ಗ್ರಾಮದ ಪ್ರೌಢ ಶಾಲೆಗೆ ಕಾದಿರಿಸಿದ ಗೋಮಾಳವನ್ನು ಖಾಸಗಿಯವರಿಗೆ ನೀಡಿರುವುದು**

**ಡಾ ಕೆ ಅನ್ನದಾನಿ (ಮಳವಳ್ಳಿ)** ಮಾನ್ಯ ಅಧ್ಯಕ್ಷರೆ, ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ಬೊಮ್ಮನಹಳ್ಳಿ ನಗರಸಭಾ ವ್ಯಾಪ್ತಿಗೆ ಬರತಕ್ಕಂಥ ಕೋಡಿಚಿಕ್ಕನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರೌಢ ಶಾಲೆಗೆ ಕಾದಿರಿಸಿದಂಥ ಸರ್ಕಾರಿ ಗೋಮಾಳವನ್ನು ಖಾಸಗಿಯವರಿಗೆ ಬರೆದು ಕೊಟ್ಟಿರುವಂಥ ವಿಚಾರವಾಗಿ ಮಾತನಾಡುತ್ತಿದ್ದೇನೆ ಈ ಗ್ರಾಮದ ಸುತ್ತಮುತ್ತ ಸುಮಾರು 500 ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ವಾಸಿಸತಕ್ಕಂಥ ಈ ಪ್ರದೇಶದಲ್ಲಿ ಯಾವುದೇ ಸರ್ಕಾರಿ ಪ್ರೌಢಶಾಲೆಗಳು ಇರುವುದಿಲ್ಲ ಹಾಗಾಗಿ ಇಲ್ಲಿ ಪ್ರೌಢಶಾಲೆಗಾಗಿ ಮತ್ತು ಮಕ್ಕಳ ಆಟದ ಮೈದಾನಕ್ಕಾಗಿ ಈ ಸರ್ಕಾರಿ ಗೋಮಾಳವನ್ನು ಬಳಸಿಕೊಳ್ಳುತ್ತೇವೆಂದು ನಗರ ಸಭೆಯವರು ಅದಕ್ಕೆ ಕಾಂಪೌಂಡನ್ನು ಕೂಡ ಹಾಕಿ ಬಿಟ್ಟಿದ್ದಂಥ ಸಂದರ್ಭದಲ್ಲಿ ಖಾಸಗಿಯವರಿಗೆ ಇದನ್ನು "ಜಿಲ್ಲಾಧಿಕಾರಿಗಳು, ಸಂಖ್ಯೆ ಎಎಲ್‌ಡಿ ಎಸ್‌ಸಿಆರ್ 110/03–04, ದಿನಾಂಕ 21–06–2004ರಂದು ಖಾಸಗಿಯವರಿಗೆ ಮಂಜೂರು ಮಾಡಿರುತ್ತಾರೆ" ಇದಕ್ಕೆ ಆ

ಕ್ಷೇತ್ರದ ಶಾಸಕರಾದಂಥ ಸನ್ಮಾನ್ಯ ಆಶೋಕ್‌ರವರು 09-7-2003ರಲ್ಲಿ ಈ ಜಮೀನನ್ನು ಸರ್ಕಾರಿ ಪ್ರೌಢ ಶಾಲೆಗೆ ಕಾದಿರಿಸಬೇಕೆಂದು ಒಂದು ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಬರೆದಿದ್ದಾರೆ ಅದಾದನಂತರಲ್ಲಿ ಮೊನ್ನೆ ಜಿಲ್ಲಾಧಿಕಾರಿಗಳು ಅದಕ್ಕೂ ಕೂಡ ಕಿವಿಗೊಡದೆ ಅದನ್ನು ಖಾಸಸಗಿಯವರಿಗೆ ಬರೆದು ಕೊಡಲಿಕ್ಕೆ ಪ್ರಯತ್ನವನ್ನು ಮಾಡಿದಂಥ ಸಂದರ್ಭದಲ್ಲಿ ಮತ್ತೆ ಶ್ರೀ ಆಶೋಕ್‌ರವರು ಪತ್ರವೊಂದನ್ನು ಬರೆದು ಇದನ್ನು ಖಾಸಗಿಯವರಿಗೆ ಬರೆದು ಕೊಡುತ್ತಿರತಕ್ಕಂಥ ಸಂದರ್ಭ ನನಗೆ ಗೊತ್ತಾಗಿದೆ, ಹಾಗಾಗಿ ದಯಮಾಡಿ ಈ ವ್ಯಾಪ್ತಿಯಲ್ಲಿ ಸರ್ಕಾರಿ ಪ್ರೌಢಶಾಲೆ ಇಲ್ಲದಿರುವುದರಿಂದ ಬಡ ಮಕ್ಕಳಿಗೆ ತೊಂದರೆಯಾಗುತ್ತದೆ, ಆ ಊರಿನಿಂದ ಜಯನಗರದ ಕಡೆಗೆ ಬರತಕ್ಕಂಥ ವ್ಯವಸ್ಥೆ ಇರುತ್ತದೆ, ಅಲ್ಲಿ ಯಾವುದೇ ಬಸ್ಸಿನ ಸರಿಯಾದ ವ್ಯವಸ್ಥೆ ಇಲ್ಲದಿರುವುದರಿಂದ ಅಲ್ಲಿ ನಮಗೆ ಹೈಸ್ಕೂಲ್ ಬೇಕೆಂದು ಕೇಳಿರುತ್ತಾರೆ ಹಾಗೆಯೇ ಸ್ಥಳೀಯ ನಗರಸಭೆಯ ಸದಸ್ಯರಾದ ಶ್ರೀ ನಾರಾಯಣ್‌ರಾಜುರವರು ಜಿಲ್ಲಾಧಿಕಾರಿಗಳಿಗೆ ಒಂದು ಪತ್ರವನ್ನು ಬರೆದು ತಿಳಿಸಿದ್ದಾರೆ ಮತ್ತು ಎ ಸಿ ಯವರಿಗೂ ಕೂಡ ಪತ್ರವನ್ನು ಬರೆದಿರುತ್ತಾರೆ ಮತ್ತೆ ತಹಶೀಲ್ದಾರರವರಿಗೂ ಪತ್ರವನ್ನು ಬರೆದಿರುತ್ತಾರೆ, ಹಾಗೆಯೇ ಅವರು ಅಂದಿನ ನಗರಾಭಿವೃದ್ಧಿ ಸಚಿವರಿಗೂ ಕೂಡ ವತ್ರವನ್ನು ಬರೆದು ಇದನ್ನು ಸರ್ಕಾರಿ ಪ್ರೌಢ ಶಾಲೆಗೆ ಮೀಸಲಾಗಿರಿಸಬೇಕೆಂದು ಕೇಳಿದಂದ ಸಂದರ್ಭದಲ್ಲಿ ಇದನ್ನೆಲ್ಲಾ ಗಾಳಿಗೆ ತೂರಿ ಮಾನ್ಯ ಜಿಲ್ಲಾಧಿಕಾರಿಗಳು ಈ ಜಾಗವನ್ನು ಖಾಸಗಿಯವರಿಗೆ ಪರಭಾರೆ ಮಾಡಿಕೊಟ್ಟಿದ್ದಾರೆ ದಯಮಾಡಿ ಇದಾಗಬಾರದು ಕೂಡಲೇ ಈ ಜಮೀನನ್ನು ವಾಪಸ್ಸು ಪಡೆದು ಇಲ್ಲಿ ಏನು ಸುತ್ತಮುತ್ತಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಜನ ವಾಸ ಮಾಡತಕ್ಕಂಥ ಜಾಗದಲ್ಲಿ ಸರ್ಕಾರಿ ಪ್ರೌಢ ಶಾಲೆ ಇಲ್ಲ, ಆ ಜಾಗದಲ್ಲಿ ಸರ್ಕಾರಿ ಪ್ರೌಢ ಶಾಲೆಯನ್ನು ತೆರೆಯಲಿಕ್ಕೆ ಮತ್ತು ಆಟದ ಮೈದಾನ ನಿರ್ಮಿಸಿಕೊಡಲಿಕ್ಕೆ ಸರ್ವೆ ನಂ 9 ಮತ್ತು 10, 10ರ ವಿಸ್ತೀರ್ಣ ಒಂದು ಎಕರೆ 235 ಗುಂಟೆ ಜಮೀನನ್ನು ಸರ್ಕಾರ ಮತ್ತೆ ವಶಪಡಿಸಿಕೊಂಡು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** ಈ ವಿಚಾರವನ್ನು ಅವರು ಈಗ ಪ್ರಸ್ತಾಪಿಸಿದ್ದಾರೆ ಮಾನ್ಯ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ಮತ್ತು ನಮ್ಮ ಕಾರ್ಯದರ್ಶಿಗಳಿಗೆ ಜೊತೆ ಮಾತನಾಡುತ್ತೇನೆ ತಾವು ಎತ್ತಿರುವ ಎಲ್ಲಾ ಅಂಶಗಳಿಗನು ಗುಣವಾಗಿ, ನಾನು ಕಾನೂನುಬದ್ಧವಾಗಿ ಕ್ರಮ ಕೈಗೊಳ್ಳುತ್ತೇನೆ

**ಶ್ರೀ ಆರ್ ಆಶೋಕ್** ಅವರು ನನ್ನ ಹೆಸರು ಹೇಳಿದ್ದಾರೆ ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು

**ಅಧ್ಯಕ್ಷರು** ನಿಮ್ಮ ಹೆಸರು ರೆಫರ್ ಮಾಡಿದ್ದಾರೆಯೇ?

**ಶ್ರೀ ಆರ್ ಅಶೋಕ್** ಮಾಡಿದ್ದಾರೆ ನಾನು ಅವರ ವಿರುದ್ಧ ಮಾತನಾಡುವುದಿಲ್ಲ ಒಳ್ಳೆಯ ವಿಷಯಕ್ಕೆ ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ನನ್ನ ಅಬ್ಜೆಕ್ಷನ್ ಇಲ್ಲ ನಾನು ಹಿಂದೆ ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ ಸರ್ಕಾರಿ ಶಾಲೆಗಳಿಗೆ ಜಾಗ ಬೇಕಾಗಿದ್ದರೂ ಸಹ ಪ್ರೈವೇಟ್ ಶಾಲೆಗಳಿಗೆ ಏಕೆ ಕೊಡುತ್ತಾರೆನ್ನುವುದು ಬಹಳ ಯಕ್ಷ ಪ್ರಶ್ನೆ ಈಗ ನನ್ನ ಶಾಸಕ ಮಿತ್ರರು ಏನು ಹೇಳಿದ್ದಾರೆ, ಅದಕ್ಕೆ ನನ್ನ ಅನುಮೋದನೆ ಇದೆ ಅಲ್ಲಿ ನಗರಸಭೆ ಇರಬಹುದು, ಅಲ್ಲಿ ಇಬ್ಬರು ಶಾಸಕರು ಬರುತ್ತೇವೆ, ನಾವೆಲ್ಲಾ ಹೇಳಿದ್ದರೂ ಪ್ರೈವೇಟ್ ಶಾಲೆಗೆ ಸರ್ಕಾರಿ ಜಮೀನನ್ನು ಕೊಡುತ್ತಾರೆ ಈ ರೀತಿಯಾಗಬಾರದೆನ್ನುವುದೇ ನನ್ನ ಮನವಿ

## 31 ಮೇಲ್ಮನೆಯಲ್ಲಿ ತುಮಕೂರು ಜಿಲ್ಲಾ ಪರಿಷತ್ತಿನಲ್ಲಿ ನಡೆದ ಘಟನೆ ಬಗ್ಗೆ ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿ ಹಕ್ಕುಚ್ಯುತಿ ಸಮಿತಿಯ ಪರಿಶೀಲನೆಗೆ ಕಳುಹಿಸುವುದರ ಬಗ್ಗೆ

**ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)** ನಿನ್ನೆ ಮೇಲ್ಮನೆಯಲ್ಲಿ ತುಮಕೂರು ಜಿಲ್ಲಾ ಪರಿಷತ್‌ನಲ್ಲಿ ನಡೆದ ಘಟನೆ ಮೇಲೆ ಅಲ್ಲಿಯ ಸದಸ್ಯರು ಒಬ್ಬರು ಎತ್ತಿದ ವಿಷಯದ ಮೇಲೆ ಹಕ್ಕುಚ್ಯುತಿ ಸಮಿತಿಯ ಮುಂದೆ ವಿಷಯ ಪ್ರಸ್ತಾಪವಾಗಿದೆ ಆ ಜಿಲ್ಲಾ ಪರಿಷತ್ ಸಭೆಯಲ್ಲಿ ಈ ಮನೆಯ ಸದಸ್ಯರಾದ ನಾವುಗಳು ಬಹಳ ಜನ ಇದ್ದೆವು ಮತ್ತೆ, ಈ ಮನೆಯ ಸದಸ್ಯರು ಇದ್ದುದ್ದು ಗೊತ್ತಿದ್ದರೂ ಕೂಡ ವಿಷಯವನ್ನು ಮರೆ ಮಾಚಿ, ನನಗೆ ಆ ಜಿಲ್ಲಾ ಪರಿಷತ್ ಸಭೆಯಲ್ಲಿ ಆಗಿದೆ ಎಂಬ ನೋವನ್ನು ಒಂದನ್ನೇ ಆಧಾರವಾಗಿಟ್ಟುಕೊಂಡು ಏನು ಹಕ್ಕುಚ್ಯುತಿಗೆ ರೆಫರ್ ಮಾಡಿದ್ದಾರೆ, ಮತ್ತೆ, ಆ ಆಧಾರದ ಮೇಲೆ ತುಮಕೂರು ಜಿಲ್ಲಾ ಪಂಚಾಯತ್ ಅನ್ನು ಸೂಪರ್‌ಸೀಡ್ ಮಾಡಲು ನಾವು ಯೋಚಿಸುತ್ತೇವೆಂದು ಅಲ್ಲಿನ ಸಭಾ ನಾಯಕರು, ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ ಇದರಿಂದ ನಮಗೆ ಈ ಮನೆಯಲ್ಲಿ ಕೆಲಸ ಮಾಡುತ್ತಿರುವ ಸದಸ್ಯರಿಗೆ ನಿಜವಾಗಿ ಹಕ್ಕುಚ್ಯುತಿಯಾಗಿದೆ ನಾವು ಆ ಕಾಗದದಲ್ಲಿ ಬರೆದಿದ್ದೇವೆ ಹಕ್ಕುಚ್ಯುತಿ ನಿರ್ಣಯ ಮಂಡನೆ ಮಾಡುವುದಕ್ಕಾಗದೇ ಇರುವುದರಿಂದ, ಅದಕ್ಕೆ ಸಮಯ ಇಲ್ಲದಿರುವುದರಿಂದ, ಶೂನ್ಯವೇಳೆಯಲ್ಲಿ ಈ ವಿಷಯವನ್ನು ನಾವು ಪ್ರಸ್ತಾಪಿಸುತ್ತಿದ್ದೇವೆಂದು ಹೇಳಿದ್ದೇವೆ ಕನಿಷ್ಠ ಸೌಜನ್ಯ, ನಮಗೊಂದು ಸೂಚನೆ ಕೊಟ್ಟು, ಅಲ್ಲೇನು ನಡೆಯಿತೆಂದು ಕೇಳಿ, ಇಂಥ ವಿಷಯಗಳನ್ನು ಮೇಲ್ಮನೆಯವರು ಹಕ್ಕುಚ್ಯುತಿಗೆ ರೆಫರ್ ಮಾಡಬೇಕಾದುದು ಸೌಜನ್ಯ ಆ ಕೆಲಸ ಮಾಡಿಲ್ಲ ಇವತ್ತು ತಕ್ಷಣ ಏನು ಈ ವಿಷಯಕ್ಕೆ ಹಕ್ಕುಚ್ಯುತಿ ನಿರ್ಣಯಕ್ಕೆ ಕೇಳಿದ್ದಾರೆ, ಹಕ್ಕುಚ್ಯುತಿ ಸಮಿತಿ ಮುಂದೆ ರೆಫರ್ ಮಾಡಿದ್ದಾರೆ, ಅದನ್ನು ತಡೆಹಿಡಿಯಬೇಕು ವಿನಾಕಾರಣ ಒಬ್ಬೊಬ್ಬ ಸದಸ್ಯರು ಹೇಳುವ ಹೇಳಿಕೆಯನ್ನು ಆಧಾರವಾಗಿಟ್ಟುಕೊಂಡು, ಜಿಲ್ಲಾ ಪರಿಷತ್ ಅಂಥ ಸ್ವಾಯತ್ತ ಸಂಸ್ಥೆಗಳನ್ನು, ಸಂವಿಧಾನಾತ್ಮಕವಾಗಿ ರಚನೆಯಾಗಿರುವ ಸಂಸ್ಥೆಗಳನ್ನು ಸೂಪರ್ ಸೀಡ್ ಮಾಡುತ್ತೇವೆ [illegible]

ನಾನು ತಮ್ಮ ಮೂಲಕ ಸಂಬಂಧಪಟ್ಟವರನ್ನು ಕೇಳಿಕೊಳ್ಳುತ್ತೇನೆ

**ಶ್ರೀ ಕೆ ಎನ್ ರಾಜಣ್ಣ (ಬೆಳ್ಳಾವಿ)** ಮಾನ್ಯ ಅಧ್ಯಕ್ಷರೆ, ವಿಶೇಷವಾಗಿ, ಈ ಮನೆಯ ಇನ್ನೋರ್ವ ನನ್ನ ಸನ್ಮಿತ್ರರಾದ ಶ್ರೀನಿವಾಸ್‌ರವರು ಮತ್ತೆ, ನನ್ನ ಮೇಲೆ, ಮೇಲ್ಮನೆಯ ಸದಸ್ಯರೊಬ್ಬರು ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸಿ, ಹಕ್ಕುಚ್ಯುತಿ ಸಮಿತಿಗೆ ಪರಿಶೀಲನೆಗೆ ಕಳುಹಿಸಿ ಕೊಟ್ಟಿರುವುದು, ಈ ಹಿನ್ನೆಲೆಯಲ್ಲಿ ನಾನು ನಿನ್ನೆ ಒಂದು ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ ಆ ಸೂಚನೆಯನ್ವಯ ಮೇಲ್ಮನೆ ಸದಸ್ಯರೂ, ಕೂಡ ನಾನು ಈ ಒಂದು ಸದನದ ಸದಸ್ಯನಾಗಿ, ಜಿಲ್ಲಾ ಪಂಚಾಯತ್ ಸಮಿತಿ ಸದಸ್ಯನಾಗಿ, ಕಾರ್ಯನಿರ್ವಹಿಸುವ ಸಂದರ್ಭದಲ್ಲಿ, ನನಗೆ ಕರ್ತವ್ಯವನ್ನು ನಿರ್ವಹಣೆ ಮಾಡಲಿಕ್ಕೆ ಚ್ಯುತಿಯನ್ನು ತಂದಿದ್ದಾರೆ ಆ ಹಿನ್ನೆಲೆಯಲ್ಲಿ ಏನು ನನ್ನ ಒಂದು ಹಕ್ಕುಚ್ಯುತಿ ಆಗಿರುವುದನ್ನು ತಮ್ಮ ಗಮನಕ್ಕೆ ನಾನು ವಿವರವಾಗಿ ಹೇಳಲು ನನಗೆ ಅವಕಾಶ ಕೊಡಬೇಕು ಈ ಒಂದು ಹಕ್ಕುಚ್ಯುತಿಯ ಸೂಚನೆಯನ್ನು ತಾವು ಹಕ್ಕುಚ್ಯುತಿ ಸಮಿತಿಗೆ ಪರಿಶೀಲನೆಗೆ ಕಳುಹಿಸಿಕೊಡಬೇಕೆಂದು ಹೇಳಿ, ನಾನು ತಮ್ಮಲ್ಲಿ ವಿನಯವಾಗಿ ಪ್ರಾರ್ಥಿಸುತ್ತೇನೆ ಸನ್ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ, ಈ ಒಂದು ಘನತೆವೆತ್ತ ಸದನದ ಸದಸ್ಯನಾಗಿ ಸಾರ್ವಜನಿಕ ಜೀವನದಲ್ಲಿ ಕೆಲಸವನ್ನು ಮಾಡುವ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಗಳಿಂದ, ಹೆಚ್ಚು ಪ್ರಚಾರ ಪಡೆಯುವ ಉದ್ದೇಶದಿಂದ, ಈ ರೀತಿಯ ಹಕ್ಕುಚ್ಯುತಿ ನಿರ್ಣಯವನ್ನು ಮೇಲ್ಮನೆಯಲ್ಲಿ ಮಂಡಿಸಿರುವುದು

**ಅಧ್ಯಕ್ಷರು** ಈ ವಿಚಾರದಲ್ಲಿ ಮೇಲ್ಮನೆಯಲ್ಲಿ ಹಕ್ಕುಚ್ಯುತಿಯಾಗಿದೆ ಎನ್ನುವ ನಿರ್ಣಯವನ್ನು ಪಾಸ್ ಮಾಡಿದ್ದಾರೆ ಅದನ್ನು ನನ್ನ ಗಮನಕ್ಕೆ ತಂದಿದ್ದೀರಿ ನಾನು ಮೇಲ್ಮನೆಯ ಸಭಾಪತಿಗಳ ಜೊತೆ ಚರ್ಚೆ ಮಾಡಿ, ಈ ವಿಚಾರದಲ್ಲಿ ಸೂಕ್ತವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** ನಿಜವಾಗಿಯೂ ಅಲ್ಲಿ ಪ್ರಸ್ತಾಪಿಸಲ್ಪಡಬೇಕಾದ ಅಗತ್ಯವಿದ್ದಿಲ್ಲ ಈ ಹಕ್ಕುಚ್ಯುತಿಯ ಪ್ರಶ್ನೆ ಅದು ಹೊರಗಡೆ ಆಗಿರುವುದು ಈ ಸದನದಲ್ಲಾಗಲಿ, ಆ ಸದನದಲ್ಲಿ ಆಗಿರುವ ಘಟನೆಯಲ್ಲ ಆ ಸದಸ್ಯನಾಗಿ ನಿರ್ವಹಿಸುವ ಕರ್ತವ್ಯವೂ ಅದು ಆಗಿರಲಿಲ್ಲ ಅದರ ಜೊತೆಗೆ, ತಾವು ಆಗಲೇ ಪರಾಮರ್ಶೆ ನೋಡಿದ್ದೀರಿ, ತಮ್ಮ ಹೇಳಿಕೆ ಕೂಡ ಇದೆ,

"Neither House of Parliament can claim or exercise any authority over a member of the other House Consequently, neither House can take upon itself to punish any breach of privilege or contempt offered to it by a member or officer of the Other House"

ಈ ತರಹದಲ್ಲಿ ಶಕ್ದರ್ ಅಂಡ್ ಕೌಲ್‌ನಲ್ಲಿ ಪ್ರಸ್ತಾಪವಾಗಿರುವುದಿದೆ ತಾವು ಕೂಡ ಬಹಳ ಮುಖ್ಯವಾದ ವಿಚಾರವನ್ನು ಇದರಲ್ಲಿ ಕಾಣಿಸಿದ್ದೀರಿ ಇಂಥ ಒಂದು ಸಂದರ್ಭದಲ್ಲಿ, ರಾಜ್ಯಸಭೆಯಲ್ಲಿ ಆಗಿರುವ ನಡಾವಳಿಗಳ ಬಗ್ಗೆ,

ಲೋಕಸಭಾದ ವಿಚಾರ ಬಂದಾಗ, ಲೋಕಸಭೆಯ ಸ್ಪೀಕರ್‌ರವರುಈ ಪತ್ರವನ್ನು ಕೂಡ ಬರೆದಿದ್ದಾರೆ

"On 30th March, 1970, during the course of a debate in Rajya Sabha, a member of the House made certain allegations against a member of Lok Sabha After some discussion in the House, the Speaker addressed a letter to the Chairman, Rajya Sabha, inviting his attention to the matter and observing, inter alia, as follows

'You will agree that it is not desirable for members of one House to make allegations or cast reflections on the floor of the House on the members of the other House '

In his reply, the Chairman, Rajya Sabha, expressing his agreement with the Speaker, and stated that the Deputy Chairman, Rajya Sabha had already expressed his dis-approval of the member's speech ಇದು ಮುಂದೆ ಇರುವುದರಿಂದ, ಈ ವಿಚಾರಗಳಲ್ಲಿ ತಾವು ಈಗಾಗಲೇ ಹೇಳಿದಂತೆ, ಸದನಕ್ಕೆ ತಾವು ತಿಳಿಸಿದಂತೆ, ಒಂದು ಪತ್ರವನ್ನು ಮೇಲ್ಮನೆಯ ಸಭಾಪತಿಗಳಿಗೆ ಬರೆದು, ಇಲ್ಲಿರುವ ಗೌರವಾನ್ವಿತ ನಮ್ಮ ಸದಸ್ಯರ ಬಗ್ಗೆ ಅಲ್ಲಿ ಆಗುವುದು, ಈ ಹಕ್ಕುಚ್ಯುತಿ ಆಗುವುದು ಅಲ್ಲ, ಮತ್ತು ಪ್ರಿವಿಲೆಜ್ ಕಮಿಟಿಗೆ ಬರತಕ್ಕಂಥದ್ದು ಅಲ್ಲವೆನ್ನುವ ರೀತಿಯಲ್ಲಿ ತಾವೊಂದು ಪತ್ರವನ್ನು ಬರೆದು ಕಳುಹಿಸಿ, ಪ್ರಾಯಶಃ ಅದನ್ನು ನಿಮ್ಮ ಮಟ್ಟದಲ್ಲೇ ಬಗೆಹರಿಸಿ, ಅದನ್ನು ಇಲ್ಲಿಗೇ ಬಿಡತಕ್ಕಂಥದ್ದು ಸೂಕ್ತವೆಂದು ನಾನು ಭಾವಿಸಿದ್ದೇನೆ

**ಅಧ್ಯಕ್ಷರು** ಮಾನ್ಯ ಸಭಾಪತಿಯವರ ಜೊತೆ ಮಾತನಾಡಿ ನಾನು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ ಈಗ ಸದನವನ್ನು ಮಧ್ಯಾಹ್ನ 3 15 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 17 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 27 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

## 6 ಪ್ರಕಟಣೆ

**ಅಧ್ಯಕ್ಷರು** ಈಗೊಂದು ಪ್ರಕಟಣೆ

"ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶ ಒಂದು ಬಂದಿರುತ್ತದೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ ದಿನಾಂಕ 4ನೇ ಆಗಸ್ಟ್ 2004ರಂದು ಕರ್ನಾಟಕ ಧನ ವಿನಿಯೋಗ ಸಂಖ್ಯೆ 2 ವಿಧೇಯಕ 2004ನ್ನು ಯಾವುದೇ ತಿದ್ದುಪಡಿ ಇಲ್ಲದೆ ವಿಧಾನ ಪರಿಷತ್‌ನಲ್ಲಿ ಅಂಗೀಕೃತವಾಗಿದೆ ಎಂದು ತಿಳಿಸಿರುತ್ತಾರೆ"

7 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು
(1) ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಬಗ್ಗೆ

**ಅಧ್ಯಕ್ಷರು** ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ರಮೇಶ್‌ಕುಮಾರ್‌ರವರು ಹಾಗೂ ಮಾನ್ಯ ಶ್ರೀರಾಮರೆಡ್ಡಿಯವರು ಕರ್ನಾಟಕ ರಾಜ್ಯ ಕ್ರಿಕೇಟ್ ಅಸೋಸಿಯೇಷನ್ ಬಗ್ಗೆ ಮಾತನಾಡಬೇಕೆಂದು ನನ್ನನ್ನು ಕೇಳಿಕೊಂಡಿದ್ದರು ಆದ್ದರಿಂದ ಮೊದಲು ಮಾನ್ಯ ವಾಟಾಳ್‌ನಾಗರಾಜ್ ರವರು ಮಾತನಾಡಲಿ ಮಾನ್ಯ ವಾಟಾಳ್‌ನಾಗರಾಜ್‌ರವರೆ, ದಯಮಾಡಿ 2 ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಬೇಕು

**ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ)** ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಕ್ರಿಕೆಟ್ ಅಸೋಸಿಯೇಷನ್ ಬಹಳ ಪುರಾತನವಾದದು ನಮ್ಮ ಕ್ರಿಕೆಟ್ ಅಸೋಸಿಯೇಷನ್‌ಗೆ ಒಂದು ದೊಡ್ಡ ಇತಿಹಾಸವೇ ಇದೆ ಮತ್ತೆ ಬಹಳ ದೊಡ್ಡ ದೊಡ್ಡವರೆಲ್ಲಾ ನಮ್ಮ ಕ್ರಿಕೆಟ್ ಅಸೋಸಿಯೇಷನ್ ಅನ್ನು ಬೆಳೆಸಿದ್ದಾರೆ ಇದರಲ್ಲಿ ಮಾನ್ಯ ಚಿನ್ನಸ್ವಾಮಿಯವರು ಅತ್ಯಂತ ಎತ್ತರವಾದ ವ್ಯಕ್ತಿ ಎಂದು ಹೇಳಬಹುದು ಈಗ ಚಿನ್ನಸ್ವಾಮಿ ಕ್ರೀಡಾಂಗಣ ಇರತಕ್ಕಂಥ ಸ್ಥಳವನ್ನು ಮಾನ್ಯ ಎಸ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಕ್ರೀಡೆಗೆ ಎಂದು ಈ ಜಾಗವನ್ನು ಕೊಡಿಸಿದ್ದರು ಈ ಒಂದು ಜಾಗವನ್ನು ಪಡೆದುಕೊಳ್ಳುವುದಕ್ಕೆ ಮಾನ್ಯ ಚಿನ್ನಸ್ವಾಮಿಯುವರು ಮತ್ತು ಮಾನ್ಯ ಸಿ ನಾಗರಾಜುರವರು ಕಾರಣಕರ್ತರಾಗಿದ್ದಾರೆ ಅವರು ಇದನ್ನು ಬಹಳ ಎತ್ತರಕ್ಕೆ ಬೆಳೆಸಿದಂಥ ವ್ಯಕ್ತಿಗಳು ಆದರೆ, ಇವತ್ತಿನ ದಿವಸ ಇದು ಸಂಪೂರ್ಣವಾಗಿ ಗುಜರಾತಿಗಳ ಕೈ ಸೇರಿದೆ ಕರ್ನಾಟಕ ರಾಜ್ಯದ ಕೈಯಲ್ಲಿ ಇಲ್ಲವೇ ಇಲ್ಲ ತಮಗೆ ಬೇಕಾಗಿರುವಂಥವರನ್ನು ಮತ್ತು ತಮಗೆ ಇಚ್ಚೆಬಂದವರಿಗೆ ಹಾಗೂ ಹೊರಗಡೆಯವರನ್ನು ಇದಕ್ಕೆ ಸದಸ್ಯರನ್ನಾಗಿ ಮಾಡಿಕೊಂಡಿದ್ದಾರೆ ಮತ್ತೆ ಇಲ್ಲಿ ಭ್ರಷ್ಟಾಚಾರದ ಪರಮಾವಧಿ ನಡೆಯುತ್ತಿದೆ ಮತ್ತೆ ಇನ್ನೂ ಅನೇಕ ವಿಚಾರಗಳ ಬಗ್ಗೆ ತೀವ್ರವಾಗಿ ಸರ್ಕಾರದ ಗಮನಕ್ಕೆ ತರಬೇಕಾಗಿದೆ ಇವತ್ತಿನ ದಿವಸ ಈ ಒಂದು ಸಂಸ್ಥೆ ಇಷ್ಟೊಂದು ದೊಡ್ಡ ರೀತಿಯಲ್ಲಿ ಬೆಳೆಯುವುದಕ್ಕೆ ಮಾನ್ಯ ಚಿನ್ನಸ್ವಾಮಿ ಮತ್ತು ಮಾನ್ಯ ಸಿ ನಾಗರಾಜ್‌ರವರೇ ಮೂಲ ಕಾರಣಕರ್ತರಾಗಿದ್ದಾರೆ ಇವತ್ತಿನ ದಿವಸ ಮಾನ್ಯ ಚಿನ್ನಸ್ವಾಮಿಯವರು ಇಲ್ಲ ಆದರೆ, ಇವರ ಹೆಸರಿನಲ್ಲಿ ಕ್ರೀಡಾಂಗಣ ಇದೆ ಮಾನ್ಯ ಚಿನ್ನಸ್ವಾಮಿಯವರು ಮಾನ್ಯ ನಿಜಲಿಂಗಪ್ಪನವರ ಹತ್ತಿರ ಹೋಗಿ ಸದರಿ ಕ್ರೀಡಾಂಗಣಕ್ಕೆ ನಿಮ್ಮ ಹೆಸರನ್ನು ಇಡುತ್ತೇವೆಂದು ಕೇಳಿದ್ದಕ್ಕೆ, ಮಾನ್ಯ ನಿಜಲಿಂಗಪ್ಪನವರು ಆ ಸಂದರ್ಭದಲ್ಲಿ ಏನು ಹೇಳಿದರೆಂದರೆ, ಈ ಕ್ರೀಡಾಂಗಣಕ್ಕೆ ನನ್ನ ಹೆಸರು ಬೇಡ ನಿಮ್ಮ ಹೆಸರೇ ಅದಕ್ಕೆ ಇರಲಿ ಏಕೆಂದರೆ, ಇದಕ್ಕಾಗಿ ನೀವು ಸಾಕಷ್ಟು ಕೆಲಸ ಮಾಡಿದ್ದೀರಿ ಆದ್ದರಿಂದ ನಿಮ್ಮ ಹೆಸರೇ ಈ ಕ್ರೀಡಾಂಗಣಕ್ಕೆ ಇರಬೇಕೆಂದು ಮಾನ್ಯ ನಿಜಲಿಂಗಪ್ಪನವರು ಹೇಳಿದರು ಆದ್ದರಿಂದ, ಈ ಕ್ರೀಡಾಂಗಣಕ್ಕೆ ಚಿನ್ನಸ್ವಾಮಿ ಕ್ರೀಡಾಂಗಣ ಎಂದೇ

ಹೆಸರನ್ನು ಇಡಲಾಗಿದೆ ಸುಮಾರು ಅನೇಕ ಟೆಸ್ಟ್ ಮ್ಯಾಚ್‌ಗಳನ್ನು ಆಡಿಸುವುದರಲ್ಲಿ ಕರ್ನಾಟಕದ ಕೀರ್ತಿಯನ್ನು ತಂದವರಲ್ಲಿ ಶ್ರೀ ಸಿ ನಾಗರಾಜ್ ಮತ್ತು ಶ್ರೀ ಚಿನ್ನಸ್ವಾಮಿ ಅವರು ಇದರ ಬಗ್ಗೆ ಎರಡು ಅಭಿಪ್ರಾಯವಿಲ್ಲ ಇಂತಹ ಸಂದರ್ಭದಲ್ಲಿ ಸುಮಾರು 40 ವರ್ಷಗಳ ಕಾಲ ಅಲ್ಲಿ ನಿರಂತರವಾಗಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದಂಥ ಶ್ರೀ ಸಿ ನಾಗರಾಜ್‌ರವರನ್ನು ಅವರ ಜೀವನಪರ್ಯಂತ ಸದಸ್ಯತ್ವವನ್ನು ರದ್ದು ಮಾಡಿ ಹೊರಗೆ ಹಾಕಿದ್ದಾರೆ ಬಹುಶ ಕರ್ನಾಟಕ ರಾಜ್ಯದಲ್ಲಿ ಈ ಒಂದು ಕ್ರೀಡಾಂಗಣ ಗುಜರಾತಿಗಳ ಕೈಗೆ ಸೇರಿದ ಮೇಲೆ ಕನ್ನಡಿಗರಿಗೆ ಆದಂಥ ಈ ವ್ಯವಸ್ಥೆ ಬಹುಶ ಅದರ ಬಗ್ಗೆ ತಮ್ಮಗೆಲ್ಲಾ ಗೊತ್ತಿದೆ ಇದರ ಬಗ್ಗೆ ತಮಗೂ ಗೊತ್ತಿದೆ, ತಮ್ಮ ಹತ್ತಿರದ ತಾಲ್ಲೂಕು, ಮಾನ್ಯ ದೇಶಪಾಂಡೆಯವರಿಗೆ ಗೊತ್ತಿದೆ, ಮಾನ್ಯ ನಿಜಲಿಂಗಪ್ಪನವರಿಂದ ಹಿಡಿದು ಈ ಸದನದ ಈಗಿನ ಮುಖ್ಯ ಮಂತ್ರಿಗಳವರೆಗೆ ಅವರು ಎಲ್ಲರಿಗೂ ಪರಿಚಿತರಾಗಿದ್ದರು ಅವರು ಒಳ್ಳೆಯ ಕೆಲಸ ಮಾಡಿರತಕ್ಕಂಥವರು, ಎಲ್ಲರಿಗೂ ಬೇಕಾಗಿರತಕ್ಕಂದವರು ಕ್ರೀಡಾಂಗಣವನ್ನು ಕಟ್ಟುವುದರಲ್ಲಿ ಕರ್ನಾಟಕಕ್ಕೆ ಕ್ರಿಕೇಟ್ ಅಸೋಸಿಯೇಶನ್‌ಗೆ ಕೀರ್ತಿ ಬರುವುದಕ್ಕೆ, ಅನೇಕ ಜನ ಟೆಸ್ಟ್ ಪ್ಲೇಯರ್‌ಗಳನ್ನು ತಯಾರು ಮಾಡಿರತಕ್ಕಂಥವರು ಶ್ರೀ ನಾಗರಾಜ್‌ರವರು ಇದೆಲ್ಲದರ ಜೊತೆಗೆ ಅವರ ಬಗ್ಗೆ ಅಪಾರವಾದ ಗೌರವ ಇದೆ ಅವರ ಮೇಲೆ ಇಲ್ಲದೆ ಇರುವಂಥ ಆರೋಪಗಳನ್ನೆಲ್ಲಾ ಹೊರಿಸಿ ಈಗ ಇರತಕ್ಕಂಥ ವ್ಯವಸ್ಥೆ ಅವರನ್ನು ಹೊರಗೆ ಹಾಕತಕ್ಕಂಥ ಒಂದು ಹುನ್ನಾರ ನಡೆಸಿ ಅವರನ್ನು ಇವತ್ತು ಹೊರಗೆ ಹಾಕಿದ್ದಾರೆ ಅವರು ಚುನಾವಣೆಗೆ ನಿಲ್ಲುವಂತಿಲ್ಲ, ಸದಸ್ಯತ್ವವಿಲ್ಲ, ಅವರು 40 ವರ್ಷಗಳ ಕಾಲ ಹಗಲು-ರಾತ್ರಿ ದುಡಿದು ಕರ್ನಾಟಕಕ್ಕೆ ಕೀರ್ತಿಯನ್ನು ತಂದಂಥ ಒಬ್ಬ ಶ್ರೀ ಸಿ ನಾಗರಾಜ್‌ರವರನ್ನು ಭ್ರಷ್ಟ ವ್ಯವಸ್ಥೆ ಹೊರಗೆ ಹಾಕಿದೆ ನಾನು ಇದರ ಬಗ್ಗೆ ತಮಗೆ ಹೇಳುತ್ತಿದ್ದೇನೆ, ಜಾಗವನ್ನು ಸರ್ಕಾರ ಕೊಟ್ಟಿರುವಂಥದ್ದು, ಆ ಜಾಗದ ಒಟ್ಟು ಮೌಲ್ಯ ಇವತ್ತು 100 ಕೋಟಿ ರೂ ಗಳಾಗುತ್ತದೆ ಬೆಂಗಳೂರು ಮಹಾನಗರಸಭೆ ಅದಕ್ಕೆ ಹಣಕೊಟ್ಟು ಇದಕ್ಕೆ ಎಲ್ಲಾ ಅನುಕೂಲ ಮಾಡಿಕೊಟ್ಟಿರುವಂತ ವ್ಯಕ್ತಿಯನ್ನು, ಹಗಲು-ರಾತ್ರಿ ಬೆವರು ಸುರಿಸಿ ದುಡಿದಂಥ ವ್ಯಕ್ತಿಯನ್ನು, ಕರ್ನಾಟಕಕ್ಕೆ ಕೆಲಸ ಮಾಡಿದಂಥ ವ್ಯಕ್ತಿಯನ್ನು ಜೀವನಪರ್ಯಂತ ಅವರು ಮೆಂಬರ್ಸ್ ಆಗಕೂಡದು ಎಂದು ಹೊರಗೆ ಹಾಕಿದ್ದಾರೆ ಇದರ ಬಗ್ಗೆ ಸರ್ಕಾರ ಪ್ರಾಮಾಣಿಕವಾಗಿ ಅದಕ್ಕೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಬೇಕು, ಸಮಗ್ರವಾಗಿ ತನಿಖೆಯಾಗಬೇಕು, ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು, ಶ್ರೀರಾಮರೆಡ್ಡಿಯವರು, ರಮೇಶ್ ಕುಮಾರ್ ಅವರು ಎಲ್ಲರೂ ಕೂಡಿಕೊಂಡು ಒಂದು ವಿಷಯವನ್ನು ಕಳುಹಿಸಿಕೊಟ್ಟಿದ್ದೇವೆ, ದಯಮಾಡಿ ಈ ಬಗ್ಗೆ ತಾವು ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಡಬೇಕೆಂದು ನಾವು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ಕರ್ನಾಟಕ **ಕ್ರಿಕೇಟ್ ಅಸೋಸಿಯೇಶನ್ ಎಂದು ಏನಿದೆ, ಆ ಸ್ಟೇಡಿಯಂ ಎನ್ನುವುದು ಏನಿದೆ,**

ಇಡೀ ಜಗತ್ತಿನಲ್ಲಿ ಕರ್ನಾಟಕದ ಕ್ರಿಕೆಟ್ ಆಟಗಾರರಿಗೆ ಕ್ರಿಕೇಟ್‌ನಲ್ಲಿ ಒಂದು ಪ್ರತ್ಯೇಕವಾದ ಸ್ಥಾನವಿದೆ ಭಾರತವನ್ನು ಪ್ರತಿನಿಧಿಸತಕ್ಕಂಥ ಕ್ರಿಕೆಟ್ ಟೀಮಿನಲ್ಲಿ ಕರ್ನಾಟಕ ಯಾವಾಗಲೂ ಸಿಂಹಪಾಲು ಪಡೆದಿದೆ ಜಗದ್ವಿಖ್ಯಾತ ಆಟಗಾರರನ್ನು ಕೊಟ್ಟಂಥ ಕೀರ್ತಿ ಕರ್ನಾಟಕ ರಾಜ್ಯಕ್ಕಿದೆ ಅಂತಹವರನ್ನೆಲ್ಲಾ ಬೆಳೆಸಬೇಕಾದರೆ ಆ ಕ್ರಿಕೆಟ್ ಅಸೋಸಿಯೇಶನ್ ಕಾರಣ, ಯುವ ಪ್ರತಿಭೆಗಳಾದ ಶ್ರೀ ಚಂದ್ರಶೇಖರ್, ಪ್ರಸನ್ನ, ಕೀರ್ಮಾನಿ, ಜಿ ಆರ್ ವಿಶ್ವನಾಥ್ ಇವರೆಲ್ಲಾ ಏನೇನು ಇದ್ದಾರೋ ಅವರೆಲ್ಲಾ ಜಗತ್ತಿನಲ್ಲಿಯೇ ಪ್ರತಿಭಾವಂತ ಆಟಗಾರರೆಂದು ಹೆಸರನ್ನು ಗುರ್ತಿಸಿ ಕೊಂಡಿರುವಂಥ ಆಟಗಾರರು ಇವತ್ತು ಕ್ರೀಡಾರಂಗದಲ್ಲಿ ನಮ್ಮ ದೇಶಕ್ಕೆ ಕೀರ್ತಿ ಬಂದಿರತಕ್ಕಂಥದ್ದು ಅವರಿಂದಲೇ ಅಂತಹವರನ್ನು ಬೆಳಸಲಿಕ್ಕೆ ಬೇಕಾದಂದ ವಾತಾವರಣವನ್ನು ನಿರ್ಮಾಣ ಮಾಡಿದ್ದು ಆ ಕ್ರಿಕೆಟ್ ಅಸೋಸಿಯೇಶನ್, ಅದರಲ್ಲಿ ಕೆಲವೊಂದು ಲೋಪದೋಷಗಳು ಇರಬಹುದು ನಾವೆಲ್ಲಾ ಮನುಷ್ಯರು ಇರುವ ಕಡೆ ಲೋಪದೋಷಗಳು ಇರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ ಆದರೆ ಇಡೀ ಜಗತ್ತಿನಲ್ಲಿಯೇ ಕರ್ನಾಟಕಕ್ಕೆ ಕೀರ್ತಿಯನ್ನು ತಂದುಕೊಟ್ಟಂಥ ಒಂದು ಸಂಘಟನೆಯ ಮೂಲಕ ಸಂಸ್ಥೆಯನ್ನು ನಿರ್ಮಾಣ ಮಾಡಿದಂಥ ಜನಕ್ಕೆ ಕಿಂಚಿತ್ತು ಗೌರವ ಇಲ್ಲದಿದ್ದರೆ ಹೇಗೆ? ಕಾನೂನಿನಲ್ಲಿ ಏನಾದರೂ ಇರಬಹುದು ಎಲ್ಲಾದರೂ ಉಂಟಾ? ಜೀವನಪರ್ಯಂತ ನೀವು ಚುನಾವಣೆಗೆ ನಿಲ್ಲಬಾರದು, ಸದಸ್ಯರಾಗ ಬಾರದೆಂದು ಹೇಳತಕ್ಕಂಥದ್ದು, ರಿಜಿಸ್ಟರ್ಡ್ ಆದ ಯಾವುದೋ ಒಂದು ಸಂಸ್ಥೆ ಇರುತ್ತದೆ ಯಾವುದೇ ಆಕ್ಟ್‌ನಲ್ಲಿ ತೆಗೆದುಕೊಂಡರೂ ಕೂಡ ಪ್ರಜಾಪ್ರಭುತ್ವದ ಒಂದು ವ್ಯವಸ್ಥೆಯಲ್ಲಿ ಜೀವನಪರ್ಯಂತ ಚುನಾವಣೆಗೆ ನಿಲ್ಲಬಾರದು, ಸದಸ್ಯರಾಗಬಾರದೆಂದು ಹೇಳಿ ಫ್ಯಾಸಿಸ್ಟ್ ಕಂಟ್ರಿಯಲ್ಲಿ ಕೂಡ ಡಿಕ್ಲೇರ್ ಮಾಡುವುದಕ್ಕೆ ಸಾಧ್ಯವಿಲ್ಲ ಪಾಕಿಸ್ಥಾನ ಅಥವಾ ಫ್ಯಾಸಿಸ್ಟ್ ಕಂಟ್ರಿಯಲ್ಲಿ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ ಅಂತಹ ಒಂದು ತೀರ್ಮಾನ, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅದರಲ್ಲೂ ಸಜ್ಜನಿಕೆಗೆ ಹೆಸರುವಾಸಿಯಾದಂಥ ಈ ಕರ್ನಾಟಕ ರಾಜ್ಯದಲ್ಲಿ ಅಂತಹದ್ದು ನಡೆಯುತ್ತದೆಂದರೆ ಬಹುಶ ಅದು ನಾವೆಲ್ಲರೂ ಕೂಡ ತಲೆತಗ್ಗಿಸಬೇಕಾದಂಥ ವಿಚಾರವಾಗಿದೆ ಅವ್ಯವಹಾರ ನಡೆದಿರಬಹುದು, ತಪ್ಪು ಆಗಿರಬಹುದು, ಅದರ ಬಗ್ಗೆ ತನಿಖೆಯಾಗಲಿ, ಯಾರು ತಪ್ಪು ಮಾಡಿರುತ್ತಾರೆ ಅವರಿಗೆ ಶಿಕ್ಷೆಯನ್ನು ಮಾಡಲಿ ಅದರಲ್ಲಿ ತಪ್ಪೇನಿಲ್ಲ ಏಕೆಂದರೆ ಸಾರ್ವಜನಿಕರ ಹಣವನ್ನು ರಕ್ಷಣೆ ಮಾಡಬೇಕಾದದ್ದು ನಮ್ಮೆಲ್ಲರ ಜವಾಬ್ದಾರಿ ಇದೆ ಅವರೆಲ್ಲರೂ ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದಾರೆ ಇವತ್ತು ನಾವು ಏಕೆ ಮಾನ್ಯ ಕೆಂಗಲ್ ಹನುಮಂತಯ್ಯನವರನ್ನು ನೆನೆಪಿಸಿಕೊಳ್ಳುವುದು, ಶ್ರೀ ನಿಜಲಿಂಗಪ್ಪನವರನ್ನು ನಾವು ಏಕೆ ನೆನೆಸಿಕೊಳ್ಳುವುದು? ಈ ವಿಧಾನಸೌಧದ ಪ್ರಶ್ನೆ ಬಂದಾಗ ಮೈನಸ್ ಹನುಮಂತಯ್ಯನವರನ್ನು ನಾವು ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ ಅವರು ಮುಖ್ಯ ಮಂತ್ರಿಯಾಗಿ ಇಲ್ಲಿಗೆ ಬರಲಿಲ್ಲ ಅದು ಬೇರೆ ವಿಚಾರ, ಪ್ರಜಾಪ್ರಭುತ್ವದಲ್ಲಿ ಅದು ಆಗಲಿಲ್ಲ ಏಕೆಂದು ಹೇಳಿದರೆ, ಅಂತಹ ಕೆಲವು ಸಂಸ್ಥೆಗಳನ್ನು ಕಟ್ಟತಕ್ಕಂಥ ಸಂದರ್ಭದಲ್ಲಿ ಕೆಲವರು

ಮಾಡಿರತಕ್ಕಂಥ ಅಪಾರವಾದ ತ್ಯಾಗ, ಆ ಶ್ರಮಕ್ಕೆ ಕಿಂಚಿತ್ತು ಬೆಲೆ ಇಲ್ಲವೆಂದು ಹೇಳಿದರೆ ಏಕೆ ಆ ಅಸೋಸಿಯೇಷನ್ ಇರಬೇಕು? ಸರ್ಕಾರಕ್ಕೆ ಅದರ ಮೇಲೆ ಏನೂ ಹಿಡಿತ ಇಲ್ಲದಂತೆ ಮಾಡಿಕೊಂಡಿರುವುದು ಮೊದಲನೆಯ ತಪ್ಪು ಅಂತಹ ಸಂಸ್ಥೆಗೆ 150 ರಿಂದ 200 ಕೋಟಿ ರೂ ಗಳ ಜಾಗವನ್ನು ಸರ್ಕಾರ ಕೊಟ್ಟಿದೆ 200 ಕೋಟಿ ರೂ ಗಳ ಪ್ರಾಪರ್ಟಿಯನ್ನು ಕೊಟ್ಟಿರತಕ್ಕಂಥ ಸರ್ಕಾರಕ್ಕೆ ಅದರ ಮೇಲೆ ಯಾವುದೇ ಒಂದು ಅಂಕುಶ ಕೂಡ ಇಲ್ಲವೆಂದರೆ ಹೇಗೆ? ಅದನ್ನು ಸರ್ಕಾರ ಇಟ್ಟುಕೊಂಡಿರದೇ ಇರುವುದು ತಪ್ಪು ನನ್ನ ದೃಷ್ಟಿಯಲ್ಲಿ, ಅದು ಎಲ್ಲೋ ಒಂದು ಕಡೆ ತಪ್ಪಾಗಿದೆ ಎಂದು ನಾನು ಅಂದುಕೊಳ್ಳುತ್ತೇನೆ ಅದಕ್ಕೋಸ್ಕರ ಯಾರಿಗೋ ಇಷ್ಟ ಬಂದಂತೆ ಅವರೇ ದೊರೆಗಳು, ಅವರೇ ರಾಜರು, ಆ ಸಂಸ್ಥೆಯಲ್ಲಿ ಅವರಿಗೆ ಇಷ್ಟಬಂದಂತೆ ಮಾಡಿಕೊಂಡು ಹೋಗುವ ಒಂದು ಪರಿಸ್ಥಿತಿಯಾಗಿದೆ ಆದ್ದರಿಂದ ಇದನ್ನು ದಯವಿಟ್ಟು ಸರ್ಕಾರದವರು ಗಂಭೀರವಾಗಿ ಪರಿಗಣಿಸಿ ತಕ್ಷಣ ಆ ಶ್ರೀ ಸಿ ನಾಗರಾಜ್‌ರವರಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸತಕ್ಕಂಥ ಕ್ರಮವನ್ನು ಕೈಗೊಳ್ಳಬೇಕು, ಆ ರೀತಿಯ ಒಂದು ದಿಟ್ಟ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ

**ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ)** ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಸಾಕಷ್ಟು ಕೂಲಂಕಷವಾಗಿ ಪ್ರಸ್ತಾಪ ಮಾಡಿರುತ್ತಾರೆ ಅಲ್ಲಿ ಚುನಾವಣೆಗಳು ನಡೆಯುತ್ತವೆ, ಒಂದು ಚುನಾವಣೆಯಲ್ಲಿ ಒಂದು ಗುಂಪು ಗೆಲ್ಲುತ್ತದೆ, ಶ್ರೀ ನಾಗರಾಜ್‌ರವರ ಗುಂಪು ಸೋಲುತ್ತದೆ ಅದು ಅವರ ಸ್ವಂತ ವಿಷಯ, ಓಟನ್ನು ಹಾಕಿ ಬೇಕಾದವರನ್ನು ಗೆಲ್ಲಿಸುತ್ತಾರೆ, ಹೊಸ ಗುಂಪಿನವರು ಅಧಿಕಾರಕ್ಕೆ ಬಂದ ಮೇಲೆ ಈಗ ಹಾಲಿ ಅಧಿಕಾರದಲ್ಲಿರತಕ್ಕಂಥವರು, ಹಿಂದೆ ಅಧಿಕಾರದಲ್ಲಿರುವಂಥವರು ಕೆಲವು ತಪ್ಪುಗಳನ್ನು ಮಾಡಿದ್ದಾರೆ, ಅದಕ್ಕೆ ಒಂದು ಕಮಿಟಿ ಮಾಡಿ ವಿಚಾರ ಮಾಡುವುದು ಅದು ಅವರ ಸ್ವಾತಂತ್ರ್ಯ, ಅದಕ್ಕೆ ನಾವು ಆಕ್ಷೇಪಣೆ ಮಾಡುವುದಿಲ್ಲ ಆದರೆ ಒಂದು ಸ್ಪೆಷಲ್ ಪ್ರಾವಿಜನ್ ಮಾಡಿ ಜನರಲ್ ಬಾಡಿಯಲ್ಲಿ ಒಂದು ತೀರ್ಮಾನವನ್ನು ಮಾಡಿ ಶ್ರೀ ಸಿ ನಾಗರಾಜ್‌ರವರು ಅವರ ಜೀವನಪರ್ಯಂತ ಪುನ ಕೆಎಸ್‌ಸಿಎಗೆ ಸದಸ್ಯರಾಗಬಾರದೆಂದು ಮಾಡಿದ್ದಾರೆ ಇದು ಯಾವ ಸನ್ನಿವೇಶದಲ್ಲಿ? ಇನ್ನು ಚುನಾವಣೆ ಸ್ವಲ್ಪ ದಿವಸ ಇರುವ ಸನ್ನಿವೇಶದಲ್ಲಿ, ಹಿಂದಿನ ಚುನಾವಣೆಯಲ್ಲಿ ಅವರನ್ನು ಸೋಲಿಸಿ ಇವರು ಅಧಿಕಾರಕ್ಕೆ ಬಂದು ಅವರು ತಪ್ಪು ಮಾಡಿದ್ದಾರೆಂದು ಹೇಳಿ ಅವರ ತಪ್ಪುಗಳನ್ನು ವಿಚಾರಣೆ ಮಾಡಬೇಕೆಂದು ಹೇಳಿ, ಪ್ರಯತ್ನವನ್ನು ಮಾಡತಕ್ಕಂಥವರು ಮತ್ತೊಂದು ಚುನಾವಣೆ ಬರುವುದರೊಳಗೆ ಅವರು ಚುನಾವಣೆಗೇ ನಿಲ್ಲಬಾರದು ಎನ್ನುವ ಒಂದು ಸ್ಥಿತಿಗೆ ತೆಗೆದುಕೊಂಡು ಬಂದು ಈ ತರಹದ ಒಂದು ತೀರ್ಮಾಣವನ್ನು ಮಾಡುತ್ತಾರೆ ಗೆಳೆಯರಾದ ಶ್ರೀರಾಮರೆಡ್ಡಿಯವರು ಹೇಳಿದಂತೆ ಬಹುಶ ಉಗಾಂಡದಲ್ಲಿಯೂ ಕೂಡ ಈದ

ಅಮಿನ್ ಈ ರೀತಿ ಮಾಡಿರಲಿಲ್ಲ ನಾವು ಇವರಿಗೆ ಸರ್ಕಾರದಿಂದ ಸ್ಪೋರ್ಟ್ಸ್‌ಗೆ ಪ್ರೋತ್ಸಾಹ ಕೊಡಬೇಕು ಎನ್ನುವ ಕಾರಣದಿಂದ ಎಲ್ಲಾ ರೀತಿಯ ಪ್ರೋತ್ಸಾಹವನ್ನು ಕೊಟ್ಟಿರುತ್ತೇವೆ ನಾನು ತಮ್ಮ ಪೀಠದಲ್ಲಿ ಕುಳಿತಾಗ ಮಾನ್ಯ ದೇವೇಗೌಡರು ಅಧ್ಯಕ್ಷರಾಗಿದ್ದಾಗ, ಶ್ರೀ ಸಿಂಧ್ಯಾರವರು ಹೋಮ್ ಮಿನಿಸ್ಟರ್ ಆಗಿದ್ದಾಗ, ಇಂಡಿಯಾ ಪಾಕಿಸ್ಥಾನ ಒನ್ ಡೇ ಮ್ಯಾಚ್ ನಡೆಯುವಾಗ ರಕ್ಷಣೆ ಕೊಡುವುದಕ್ಕೆ ಮಾನ್ಯ ಸಿಂಧ್ಯಾರವರು ಪಟ್ಟ ಶ್ರಮ, ಆ ಫ್ಲಡ್‌ಲೈಟ್‌ಗೆ ಆಗಿಂದಾಗ್ಗೆ 10 ಕೋಟಿ ರೂ ಗಳನ್ನು ಕೊಡಲು ಮಾನ್ಯ ಸಿದ್ಧರಾಮಯ್ಯನವರನ್ನು ಒಪ್ಪಿಸಿ ಅವರಿಗೆ ನಾವು ಸಾಲವನ್ನು ಮಂಜೂರು ಮಾಡಿದೆವು ಪಕ್ಕದಲ್ಲಿರುವ ಜಾಗವನ್ನು ನಾವು ಅವರಿಗೆ ಮಂಜೂರು ಮಾಡಿಕೊಟ್ಟಿರುತ್ತೇವೆ ಪೊಲೀಸ್ ಇಲಾಖೆಯವರ ತಕರಾರು ಇತ್ತು ಆದರೆ ಮಾನ್ಯ ಸಿಂಧ್ಯಾರವರ ಹತ್ತಿರ ನಾವು ಮನವನ್ನು ಒಲಿಸಿ ಆ ಜಾಗವನ್ನು ಇವರಿಗೆ ಕೊಡಿಸಿರುತ್ತೇವೆ ಇದಕ್ಕೆಲ್ಲಾ ಕಾರಣ ಪಾಪ ಶ್ರೀ ನಾಗರಾಜ್‌ರವರು, ನಾಗರಾಜ್‌ರವರು, ಚೆನ್ನಸ್ವಾಮಿಯವರು ತಮ್ಮ ಜೀವನಪರ್ಯಂತ ಅವರ ಜೀವನವನ್ನು ತ್ಯಾಗ ಮಾಡಿದವರು ಇವತ್ತು ಅವರ ಉಸಿರು ಇರುವವರೆಗೆ ಇದರ ಸದಸ್ಯರಾಗಿರಬಾರದು ಎಂದರೆ ಇದನ್ನು ನಾವು ನೋಡಿಕೊಂಡು ಕುಳಿತಿರಬೇಕೇ? ಅವರ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವ ಉದ್ದೇಶ ನಮಗೆ ಇಲ್ಲ ಇವತ್ತು ಅದು ಎಲ್ಲಿಗೆ ಬಂದು ತಲುಪಿದೆ ಎಂದರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಇದನ್ನು ನೆನೆಪಿಸಿಕೊಳ್ಳಬೇಕು ನಾವು ಅಧಿಕಾರದಲ್ಲಿ ಇದ್ದರೇನು, ಇಲ್ಲದಿದ್ದರೇನು, ನಾವೆಲ್ಲಾ ಕೂಡಿಕೊಂಡು ಅವರಿಗೆ ಒಂದು ಗೌರವದ ಮಾತು ಹೇಳೋಣವೆಂದು ಹೋದೆವು ಬುದ್ಧಿವಾದ ಹೇಳುವುದಕ್ಕೆ ಹೋದಾಗ ಅವರು ನಮ್ಮನ್ನು ಎಷ್ಟು ಲಘುವಾಗಿ ಕಂಡರು ಎಂದರೆ ಅದು ಏನೋ ಅವರ ಸ್ವಂತ ಜಾಗವಿದ್ದ ಹಾಗೆ ನಡೆದುಕೊಂಡರು ಶ್ರೀ ಬ್ರಿಜೇಶ್ ಪಟೇಲ್‌ರವರು ಅವರು ಈಗ ಇಲ್ಲಿ ಇಲ್ಲದೇ ಇರುವುದರಿಂದ ಅವರನ್ನು ಅವರು ಸಮರ್ಥಿಸಿಕೊಳ್ಳಲು ಆಗದಿರುವುದರಿಂದ ನಾನು ಅವರ ಬಗ್ಗೆ ಯಾವುದೇ ಆಪಾದನೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ ಆದರೆ ಸರ್ಕಾರದ ಶ್ರಮ, ಸರ್ಕಾರದ ಫಲ, ಸರ್ಕಾರದ ಪ್ರೋತ್ಸಾಹ, ಸರ್ಕಾರದ ಒಂದು ನೆರಳಿನಲ್ಲಿ ಇರತಕ್ಕಂಥ ಒಂದು ಸಂಸ್ಥೆ ಇಷ್ಟೊಂದು ಅನ್ ಡೆಮೊಕ್ರೆಟಿಕ್ ಆಗಿ ನಡೆದುಕೊಂಡರೆ ನಾವು ಅಸಹಾಯಕರಾಗಿ ನೋಡಿಕೊಂಡು ಇರಬೇಕೇ? ಅಸಹಾಯಕರಾಗಿ ಇರಬೇಕೇ? ನಾನು ಸರಳವಾಗಿ ಕೇಳತಕ್ಕಂಥದ್ದು ಇಷ್ಟೆ ಇವರೇನೂ ಹರಿಶ್ಚಂದ್ರರಲ್ಲ, ಇವರ ಕಾಲದಲ್ಲಿಯೂ ಕೂಡ ನಮಗೆ ಅನೇಕ ಕಂಪ್ಲೇಟ್ಸ್ ಬರುತ್ತಾ ಇವೆ ಅಲ್ಲಿಯ ಆಗು ಹೋಗುಗಳು ಅಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರಗಳ ಬಗ್ಗೆ ದೂರುಗಳಿವೆ ನ್ಯಾಯ ಸಿಗುವುದಕ್ಕೆ ಸತ್ಯ ಹೊರಬೀಳುವುದಕ್ಕೆ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದಕ್ಕೆ ಅಲ್ಲಿ ಸರ್ಕಾರ ಈ ಕೂಡಲೇ ಒಬ್ಬ ಆಡ್ಮಿನಿಸ್ಟ್ರೇಟರ್‌ನ್ನು ಅಪಾಯಿಂಟ್ ಮಾಡಬೇಕು ಟೇಕ್ ಓವರ್ ಮಾಡಬೇಕು, ಕೆ ಎಸ್ ಸಿ ಎ ಅಲ್ಲಿ ಆಗಿರತಕ್ಕಂತಹ ಎಲ್ಲಾ ಅನ್ಯಾಯಗಳ ಬಗ್ಗೆ ಸಮಗ್ರವಾಗಿ ತನಿಖೆ ಏರ್ಪಾಡಾಗಬೇಕು

ಶ್ರೀಮಾನ್ ನಾಗರಾಜ್‌ರವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಅವರಿಗೆ ಇನ್ನು ಆಯಸ್ಸು ಬರುವುದಿಲ್ಲ ಅವರು ಕಡೆಯ ದಿನಗಳ ನಿರೀಕ್ಷೆಯಲ್ಲಿದ್ದಾರೆ, ನಾವೆಲ್ಲರೂ ಜೀವಂತ ಇದ್ದಾಗ ಅವರ ಶ್ರಮದ ಫಲವನ್ನು ಇಡೀ ರಾಜ್ಯ ಉಂಡಾಗ ರಾಷ್ಟ್ರದ ಅಂತರರಾಷ್ಟ್ರೀಯ ಕೀರ್ತಿ ತಂದಂತಹ ಮಕ್ಕಳನ್ನು ಅವರ ಸಂಸ್ಥೆಯಲ್ಲಿ ತಯಾರು ಮಾಡಿ ಅದಕ್ಕೆ ಅವರು ಕಾರಣ ಭೂತರಾಗಿರತಕ್ಕವರು ಕೊರಗಿನಲ್ಲಿ ಸಾಯಬೇಕಾ? ಈ ಕೂಡಲೇ ಅವರ ಸದಸ್ಯತ್ವವನ್ನು ಪುನರ್ ಸ್ಥಾಪನೆ ಮಾಡತಕ್ಕ ದಿಕ್ಕಿನಲ್ಲಿ ಸರ್ಕಾರ ತಾನು ಏನು ಪ್ರಯತ್ನವನ್ನು ಮಾಡಿತು? ಶ್ರೀಮಾನ್ ಸಿಂಧ್ಯಾರವರು ಇಲ್ಲಿ ಇದ್ದಾರೆ, ಮಾನ್ಯ ಪ್ರಕಾಶ್‌ರವರು ಇದ್ದಾರೆ, ಅವರೆಲ್ಲರಿಗೂ ಈ ವಿಚಾರದ ಬಗ್ಗೆ ಗೊತ್ತಿದೆ ಹೀಗೆ ಮಾಡಿ ಎಂದು ನಾನು ಸೂಚನೆ ಮಾಡುವುದಕ್ಕೆ ಹೋಗುವುದಿಲ್ಲ ನಾವು ಸಮಯವನ್ನು ಕಳೆದುಕೊಳ್ಳದೆ ಇವತ್ತು ಅಧಿವೇಶನ ಕಡೆಯ ದಿವಸವಾದ್ದರಿಂದ ವಿಶೇಷವಾಗಿ ತಮ್ಮ ಬಳಿ ಬಂದು ಅರಿಕೆ ಮಾಡಿಕೊಂಡೆವು, ಮಾನ್ಯ ಮುಖ್ಯಮಂತ್ರಿಗಳಲ್ಲೂ ಕೇಳಿಕೊಂಡೆವು ಶ್ರೀಮಾನ್ ಸಿ ನಾಗರಾಜುರವರಿಗೆ ನಾವು ತಕ್ಷಣ ಕೊಡಬೇಕಾದಂತಹ ಗೌರವವೆಂದರೆ, ಅವರು ತಾನು ಕಡೆಯ ಪಕ್ಷ ಕೆಎಸ್‌ಸಿಎ ಸದಸ್ಯತ್ವ ಇದೆ ಎಂದು ಹೇಳಿ ಉಸಿರು ಬಿಡತಕ್ಕಂತಹ ನೆಮ್ಮದಿಯಾದರೂ ಇರಲಿ ಆ ಪಾಪವನ್ನು ನಾವ್ಯಾಕೆ ಕಟ್ಟಿಕೊಳ್ಳಬೇಕು? ಇಷ್ಟೆಲ್ಲಾ ಅವರು ತ್ಯಾಗ ಮಾಡಿದ್ದಾರೆ, ಇದಕ್ಕಿಂತ ಹೆಚ್ಚು ನಾನು ಏನು ಹೇಳುವುದಕ್ಕೆ ಸಾಧ್ಯವಿಲ್ಲ ಅಡ್ಮಿನಿಸ್ಟ್ರೇಟರ್ ಅಪಾಯಿಂಟ್ ಮಾಡಬೇಕು, ಈ ಕಮಿಟಿಯನ್ನು ಸೂಪರ್ ಸೀಡ್ ಮಾಡಬೇಕು ನಾಗರಾಜ್‌ರವರ ಸದಸ್ಯತ್ವವನ್ನು ಪುನ ವಾಪಸ್ಸು ಕೊಡಿಸಬೇಕೆಂದು ಹೇಳಿ ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ

**ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)** ಮಾನ್ಯ ಅಧ್ಯಕ್ಷರೆ, ಇಲ್ಲಿ ಹಿಂದೆ ಎರಡು ಬಾರಿ ಇದೇ ಕೆಎಸ್‌ಸಿಎಯ ಬಗ್ಗೆ ಚರ್ಚೆಯಾಗಿತ್ತು, ಒಂದು ಸಲ ನಾಗರಾಜುರವರು ಮತ್ತು ತಿಮ್ಮಪ್ಪಯ್ಯನವರ ಮೇಲೆ ತನಿಖೆಯಾಗಬೇಕೆಂದು ಹೇಳಿ ಚರ್ಚೆಗೆ ಬಂದಾಗ ನಾವು ಮಾತನಾಡಿದ್ದೆವು ತಿಮ್ಮಪ್ಪಯ್ಯ ಹಾಗೂ ನಾಗರಾಜುರವರ ಸೇವೆಯನ್ನು ಸ್ಮರಣೆ ಮಾಡದೆ ಹೋದರೆ ಬಹುಶ ಈ ರಾಜ್ಯದ ಕ್ರಿಕೆಟ್‌ಗೆ ಇತಿಹಾಸವೇ ಇಲ್ಲದಂತಾಗುತ್ತದೆ ಅವತ್ತೂ ಕೂಡ ಅವತ್ತಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪಮೊಯಿಲಿಯವರು ಸಾರಾಸಗಟಾಗಿ ಇದನ್ನು ಇಲ್ಲಿ ಡ್ರಾಪ್ ಮಾಡಿದ್ದರು ನಾವು ಇಂತಹವರ ಮೇಲೆ ತನಿಖೆ ಮಾಡುವುದು ತಪ್ಪು ಎಂದು ಹೇಳಿದ್ದರು ಅವತ್ತಿನಿಂದಲೂ ಅವರ ಮೇಲೆ ದೊಡ್ಡದಾದ ಒಂದು ಹುನ್ನಾರ ನಡೆದುಕೊಂಡು ಬಂದಿದೆ, ಹೇಗಾದರೂ ಮಾಡಿ ಇವರನ್ನು ಆಚೆ ಹಾಕಲೇಬೇಕೆಂದು, ಇವರನ್ನು ಈ ವ್ಯವಸ್ಥೆಯಿಂದ ಆಚೆ ಹಾಕದೇ ಹೋದರೆ, ಬೇರೆ ಒಂದು ವ್ಯವಹಾರವನ್ನು ಮಾಡಿಕೊಂಡಿದ್ದವರಿಗೆ ವಾಣಿಜ್ಯೋದ್ಯಮಿಗಳ ಕೈಗೆ ಈ ವ್ಯವಸ್ಥೆ ಬರುವುದಿಲ್ಲ ಎಂದು ಇದರ ಬಗ್ಗೆ ತಮಗೆ ಗೊತ್ತಿರಬೇಕು

ಅಧ್ಯಕ್ಷರೆ, ಶ್ರೀಮಾನ್ ನಾಗರಾಜುರವರು ಕಾರ್ಯದರ್ಶಿಯಾಗಿದ್ದಾಗ, ಭಾರತ ಮಟ್ಟದ ಕ್ರಿಕೇಟ್ ಮಂಡಳಿಯಲ್ಲಿದ್ದಾಗ ಕರ್ನಾಟಕದಿಂದ ನಾಲ್ಕು ಜನ ಆಟವಾಡುತ್ತಿದ್ದರು, ಈಗ ನಾವು ಎಷ್ಟು ಜನಕ್ಕೆ ಇಳಿದಿದ್ದೇವೆ ಎಂಬ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ ಒಬ್ಬ ಮನುಷ್ಯ ಸಣ್ಣಪುಟ್ಟ ತಪ್ಪುಗಳನ್ನು ಮಾಡಿರಬಹುದು ಇಡೀ ಸಂಸ್ಥೆಯನ್ನು ಸ್ಥಾಪನೆ ಮಾಡಲಿಕ್ಕೆ ಇಡೀ ಜೀವನವನ್ನೇ ತೆಯ್ದು ಕೊನೆಗಾಲದಲ್ಲಿ ಗೌರವವಾಗಿ ನೀವು ಕೊನೆ ಪಕ್ಷ ಮೆಂಬರ್ ಆಗದೇ ಇದ್ದರೂ ಪರವಾಗಿಲ್ಲ ನೀವು ಬಂದು ಈ ಸಭೆಯಲ್ಲಿ ಕುಳಿತುಕೊಂಡು ಸಲಹೆಯನ್ನು ಕೊಡಿ, ಸಹಕಾರವನ್ನು ಕೊಡಿ ಎಂದು ಕೇಳಬೇಕಾದಷ್ಟು ಗೌರವವನ್ನು ಇಟ್ಟುಕೊಂಡಿರತಕ್ಕಂಥ ವ್ಯಕ್ತಿಯನ್ನು ಅಜೀವಪರ್ಯಂತ ನೀವು ಸದಸ್ಯರಾಗುವುದಕ್ಕೆ ಅನರ್ಹರು ಎಂದು ಆಚೆಗೆ ಹಾಕಿರುವುದು, ನಿಜವಾಗಿಯೂ ಅಮಾನುಷವಾದವರ್ತನೆ, ಅವರನ್ನು ಗೌರವಯುತವಾಗಿ ಕರೆದು ಅವರಿಗೆ ಅಲ್ಲಿ ಅಜೀವಪರ್ಯಂತ ಕಾರ್ಯಕಾರಿ ಮಂಡಳಿಯಲ್ಲಿ ಸದಸ್ಯತ್ವವನ್ನು ಕೊಡಬೇಕು ಜೊತೆಗೆ ಮಾನ್ಯ ತಿಮ್ಮಪ್ಪಯ್ಯನವರನ್ನೂ ಇದರೊಳಗಡೆ ಸೇರಿಸಿಕೊಳ್ಳಬೇಕು ಮಾನ್ಯ ನಾಗರಾಜುರವರು ಒಬ್ಬರೇ ಕ್ರಿಕೆಟ್ ಅಸೋಸಿಯೇಷನ್ ಕಟ್ಟಿದ್ದಾರೆಂದರೆ ತಪ್ಪಾಗುತ್ತದೆ, ಅವರಿಬ್ಬರೂ ಹೀಗೆ, ಚಿನ್ನಸ್ವಾಮಿಯವರು ಆದ ಮೇಲೆ ಇವರಿಬ್ಬರೂ ಕ್ರಿಕೆಟ್‌ಗೆ ಮಾಡಿರುವಂತಹ ಸೇವೆಯನ್ನು ನಾವು ಮರೆಯುವ ಹಾಗಿಲ್ಲ ನಾನು ಒಂದೇ ಒಂದು ಮಾತನ್ನು ಆಡಳಿತ ಮಂಡಳಿಯವರ ಬಗ್ಗೆ ಹೇಳುತ್ತೇನೆ ತಾವು ಶ್ರೀ ರಮೇಶ್ ಕುಮಾರ್‌ರವರು ಸ್ಪೀಕರ್ ಆಗಿದ್ದೀರಿ, ಸಿಂಧ್ಯಾರವರು ಮಂತ್ರಿಗಳಾಗಿದ್ದರು, ಎಂಎಲ್‌ಎಗಳು ಪಾಸು ತೆಗೆದುಕೊಳ್ಳುವುದಕ್ಕೆ ಕ್ಯೂನಲ್ಲಿ ಬನ್ನಿ ಎಂದು ಹೇಳುವಂತಹ ಈ ಮನುಷ್ಯ ಇವತ್ತು ಏನೋ ಆ ಸಂಸ್ಥೆಯ ಅಧಿಪತಿಯಾಗಿ ಕುಳಿತಿದ್ದಾರೆ ಸನ್ಮಾನ್ಯ ಬ್ರಿಜೇಶ್ ಪಟೇಲ್‌ರವರು ಶಾಸಕರಿಗೆ ಕೊಡಬೇಕಾದ ವಿಐಪಿ ಪಾಸ್ ಕ್ಯೂನಲ್ಲಿ ನಿಂತುಕೊಳ್ಳಬೇಕೆಂದು ಹೇಳಿ ನಿರೀಕ್ಷೆ ಮಾಡಿದಂತಹ ಮನುಷ್ಯ ಅವತ್ತು ನಾನು ಇಲ್ಲಿ ನಿಂತುಕೊಂಡು ಕೇಳಿದೆ, ಆಗ ಮಾನ್ಯ ಸಿಂಧ್ಯಾರವರು ಮಾನ್ಯ ಬೈರೇಗೌಡರು ಸಭೆಯಲ್ಲಿದ್ದರು, ಈ ಸ್ಥಿತಿಗೆ ಬಂತಾ? ಅವರು ನಮ್ಮನ್ನು ಆಹ್ವಾನಿತರೆಂದು ಕರೆದು ಕ್ಯೂನಲ್ಲಿ ನಿಲ್ಲಿಸಿಕೊಂಡು ಒಳಗೆ ಹೋಗುವಂತಹ ಪರಿಸ್ಥಿತಿ ಬಂತೇ ಎಂದು ಹೇಳಿ ನಮ್ಮ ಲೆಜಿಸ್ಲೇಚರ್ ಸೆಕ್ರೆಟರಿಯವರ ಹತ್ತಿರ ಬಂದು ಕುಳಿತುಕೊಂಡು ಪಾಸ್ ಇಷ್ಯೂ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು ಮೂರು ಕಾಸಿನ ಕವಡೆ ಕಿಮ್ಮತ್ತು ಆತನಿಗೆ ಆಡಳಿತದ ಮೇಲೆ, ಶಾಸಕಾಂಗದ ಮೇಲೆ, ಈ ವ್ಯವಸ್ಥೆಯ ಮೇಲೆ ಇಲ್ಲ ಎಂಎಲ್‌ಎಗಳಾದರೇನು, ಮಂತ್ರಿಗಳಾದರೇನು? ಅವತ್ತು ಯಾರಿಗೋ ಏನೋ ಬಹಳ ಅನಿವಾರ್ಯವಾಗಿದೆ ಒಂದು ಎಕ್ಸ್‌ಟ್ರಾ ಪಾಸು ಕೊಡಿ ಎಂದು ನಾನು ಕೇಳಿಕೊಂಡೆ ನಮ್ಮ ಮಂತ್ರಿಗಳಿಗೆ ಯಾರಿಗೂ ಕೊಡಿಸುವುದಕ್ಕಾಗಲಿಲ್ಲ ಅಂತಹ ಸ್ಥಿತಿ ಅಂತಹ ಮನೋಭಾವವುಳ್ಳವರು ಇಂತಹ

ಸಂಸ್ಥೆಯಲ್ಲಿದ್ದರೆ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ ಆ ಸ್ಟೇಡಿಯಂನ್ನು ನಾವು ಜ್ಞಾಪಿಸಿಕೊಳ್ಳಬೇಕಾದರೆ ಚಿನ್ನಸ್ವಾಮಿಯವರು ಆದ ಮೇಲೆ ನಾಗರಾಜು ಮತ್ತು ತಿಮ್ಮಪ್ಪಯ್ಯನವರು ಇಬ್ಬರಿಂದಲೇ ಅದು ಆಗಿದೆ ಇವತ್ತಿನ ದಿವಸ ಯಾರು ಬೇಕಾದರುಬರಬಹುದು ಒಂದು ಸಂಸ್ಥೆ ಬೆಳೆದು ನಿಂತುಕೊಂಡಿರುವಾಗ ಯಾರು ಬೇಕಾದರೂ ಬಂದು ಯಜಮಾನಿಕೆಯನ್ನು ಮಾಡಬಹುದು ಆದರೆ ಅದನ್ನು ಬೆಳೆಸಬೇಕಾದರೆ ಪಟ್ಟಂತಹ ಶ್ರಮ ಮತ್ತು ಬೆಳೆಸಬೇಕಾದಾಗ ಪಟ್ಟ ಕಠಿಣವಾದಂತಹ ಸ್ಥಿತಿ ಅದನ್ನು ಸ್ಮರಿಸಿಕೊಂಡು ತಕ್ಷಣ ಆ ಆಡಳಿತ ಮಂಡಳಿಯನ್ನು ಸೂಪರ್‌ಸೀಡ್ ಮಾಡಬೇಕು ಇದರ ಬಗ್ಗೆ ನನಗೆ ಗೊತ್ತು, ನಮ್ಮ ಶಾಸನಗಳಲ್ಲಿ ದಿಢೀರನೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ ಹೇಗಾದರೂ ಮಾಡಿ ಇದನ್ನು ಹತೋಟಿಗೆ ತೆಗೆದುಕೊಂಡು ಅಲ್ಲಿ ಸ್ವಚ್ಛವಾದಂತಹ ಚುನಾವಣೆಯನ್ನು ಮಾಡಿಸಬೇಕು, ಇವರ ಮೇಲೆ ಅನರ್ಹತೆಯನ್ನು ನಿಗಧಿ ಮಾಡಿದ್ದೀರಿ, ಅದನ್ನು ತೆಗೆದು ಹಾಕಿ ಅವರನ್ನು ಹೇಗಾದರೂ ಮಾಡಿ ಸಲಹೆಗಾರರನ್ನಾಗಿಯಾದರೂ ಮಾಡಿ ಆ ಆಡಳಿತ ಮಂಡಳಿಯಲ್ಲಿ ಇಡಬೇಕೆಂದು ಹೇಳಿ ನಾನೂ ಕೂಡ ಒತ್ತಾಯವನ್ನು ಮಾಡುತ್ತೇನೆ ಮಾನ್ಯ ನಾಗರಾಜುರವರು ಮತ್ತು ಮಾನ್ಯ ತಿಮ್ಮಪ್ಪಯ್ಯನವರನ್ನು ಈ ಸಭೆ ಸ್ಮರಿಸುವುದು ಒಳ್ಳೆಯದು ಯಾರೋ ಸತ್ತು ಹೋದ ಮೇಲೆ ನಾವು ಅವರ ಬಗ್ಗೆ ಇಲ್ಲಿ ಕುಳಿತುಕೊಂಡು ಮೋರ್ನ್ ಮಾಡುವುದರಿಂದ ಗೌರವ ಬರುವುದಿಲ್ಲ ಅವರು ಬದುಕಿದ್ದಾಗಲೇ ಸಾಯಿಸುವಂತಹ ಸ್ಥಿತಿಗೆ ತಂದವರನ್ನು ಹೇಗಾದರೂ ಮಾಡಿ ಶಿಕ್ಷೆಗೆ ಒಳಪಡಿಸಬೇಕು ಇದರ ಬಗ್ಗೆ ಒಂದು ತನಿಖೆಯನ್ನು ಮಾಡಬೇಕು ಅಲ್ಲಿಯವರೆಗೆ ಈ ವ್ಯವಸ್ಥೆಯನ್ನು ಸೂಪರ್‌ಸೀಡ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ

**ಶ್ರೀ ಪಿ ಜಿ ಆರ್ ಸಿಂಧ್ಯಾ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು)** ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್‌ನ ಇವತ್ತಿನ ಆಡಳಿತ ಮಂಡಳಿಯ ಬಗ್ಗೆ ಗೌರವಾನ್ವಿತ ಸದಸ್ಯರಾಗಿರತಕ್ಕಂತಹ ಹಾಗೂ ಹಿರಿಯರಾದಂತಹ ಮಾನ್ಯ ವಾಟಾಳ್ ನಾಗರಾಜ್‌ರವರು ಮಾನ್ಯ ರಮೇಶ್‌ಕುಮಾರ್ ಅವರು ಶ್ರೀ ಜೆ ಸಿ ಮಾಧುಸ್ವಾಮಿಯವರು ಶ್ರೀ ಶ್ರೀರಾಮರೆಡ್ಡಿಯವರು ಹೇಳಿರತಕ್ಕಂತಹ ವಿಚಾರಗಳಲ್ಲಿ ಸತ್ಯವಿದೆ ನಾನೂ ಸಹಿತ ಕಳೆದ 7–8 ವರ್ಷಗಳಿಂದ ಇಲ್ಲಿಯ ಆಡಳಿತವನ್ನು ಹತ್ತಿರದಿಂದ ನೋಡುವುದಕ್ಕೆ ಪ್ರಯತ್ನ ಮಾಡಿದ್ದೇನೆ ಇಲ್ಲಿ ಬಹಳ ಪ್ರಮುಖವಾಗಿ ಸರ್ಕಾರ ಇವತ್ತು ಆ ಸ್ಟೇಡಿಯಂ ಈ ಮಟ್ಟಕ್ಕೆ ಬರಬೇಕಾದರೆ ನಿಜಲಿಂಗಪ್ಪನವರ ಕಾಲದಿಂದಲೂ ಸಹಿತ ಮಾನ್ಯ ನಾಗರಾಜುರವರು ಹೇಳಿದ ಹಾಗೆ ಶ್ರೀ ರಾಮಕೃಷ್ಣ ಹೆಗಡೆಯವರನ್ನೂ ಸಹ ನಾವು ನೆನಪಿಸಿಕೊಳ್ಳಬೇಕಾಗುತ್ತದೆ ಅಲ್ಲಿ ಮುಂದುಗಡೆ ಷೆಲ್ಟರ್ಸ್ ಇಲ್ಲದೆ ಇರುವಂತಹ ಸಂದರ್ಭದಲ್ಲಿ 1983ರಲ್ಲಿ ಬಂದು ಇವರೆಲ್ಲರೂ ಸಹಿತ ಇದೊಂದು ಪ್ರತಿಷ್ಠಿತ ಕ್ರೀಡೆಯಾಗಿರುವುದರಿಂದ

ಬೆಂಗಳೂರು ನಗರಕ್ಕೆ ಬಹಳ ದೊಡ್ಡ ಶಕ್ತಿ ಬರುತ್ತದೆ ಎಂದು ಎಲ್ಲಾ ದೃಷ್ಟಿಯಿಂದಲೂ ಇದನ್ನು ನಾವು ಮಾಡಿಸಿದ್ದೆವು ಆದರೆ ಬರಬರುತ್ತಾ ಆಡಳಿತದಲ್ಲಿ ಗುಂಪುಗಾರಿಕೆಗಳು ಬಂದು ಮತ್ತು ಅದಕ್ಕಾಗಿ ಯಾರು ದುಡಿದಿದ್ದಾರೆ ಅವರನ್ನು ಕಾರ್ನರ್ ಮಾಡತಕ್ಕಂತಹ ಪ್ರಯತ್ನ ನಡೆದಿರತಕ್ಕಂತಹದ್ದು ನನ್ನ ಗಮನಕ್ಕೆ ಬಂದಿದೆ ಅದರಲ್ಲೂ ವಿಶೇಷವಾಗಿ ತಿಮ್ಮಪ್ಪಯ್ಯನವರಾಗಲಿ, ನಾಗರಾಜುರವರಾಗಲಿ ಅವರ ಬಗ್ಗೆ ಈ ರೀತಿಯಾಗಿ ವಕ್ರ ದೃಷ್ಟಿಯನ್ನಿಟ್ಟುಕೊಂಡು ಮಾಡತಕ್ಕಂತಹದ್ದು ಸರಿಯಲ್ಲ ಎನ್ನತಕ್ಕಂತಹದ್ದು ನನ್ನ ಅಭಿಪ್ರಾಯವಾಗಿದೆ ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರು ಇದರ ಬಗ್ಗೆ ತನಿಖೆಯಾಗಬೇಕೆಂದು ಹೇಳಿದ್ದಾರೆ ಈಗ ಇರತಕ್ಕಂತಹ ಕಮಿಟಿಯನ್ನು ಸೂಪರ್‌ಸೀಡ್ ಮಾಡಬೇಕೆಂದು ಒಬ್ಬ ಅಡ್ಮಿನಿಸ್ಟ್ರೇಟರ್‌ನ್ನು ಅಪಾಯಿಂಟ್ ಮಾಡಬೇಕೆನ್ನುವಂತಹ ವಿಚಾರವನ್ನೂ ಕೂಡ ಹೇಳಿದ್ದಾರೆ ಅದರ ಜೊತೆಗೆ ನಾಗರಾಜುರವರಿಗೆ ಏನು ಗೌರವವಿತ್ತು ಅದಕ್ಕೆ ತಕ್ಕಂತೆ ಒಬ್ಬ ಸಲಹೆಗಾರರಾಗಿ ಅಥವಾ ಆಡಳಿತ ಮಂಡಳಿಯಲ್ಲಿ ಒಂದು ಸ್ಥಾನ ಸಿಗುವ ಹಾಗೆ ಮಾಡಬೇಕು ಎನ್ನುವಂತಹ ಮಾತನ್ನು ಹೇಳಿದ್ದೀರಿ ಹಾಗೂ ಸಲಹೆಯನ್ನು ಕೂಡ ಸರ್ಕಾರಕ್ಕೆ ಕೊಟ್ಟಿದ್ದೀರಿ ನಾನು ಇದರ ಬಗ್ಗೆ ಮಂತ್ರಿಮಂಡಲದಲ್ಲಿ ನಾಳೆ ಮತ್ತು ನಾಡಿದ್ದು ಸೇರಿದಾಗ ಚರ್ಚೆ ಮಾಡುತ್ತೇನೆ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಮಾನ್ಯ ಸದಸ್ಯರಾದ ಶ್ರೀ ರಮೇಶ್‌ಕುಮಾರ್‌ರವರು ತಾವೆಲ್ಲರೂ ಸೇರಿಕೊಂಡು ತಂದಿದ್ದೀರಿ ಇಷ್ಟಂತು ನಿಜ, ಅದನ್ನು ನಾವುಗಳು ಸರಿಪಡಿಸಿ ಕೊಳ್ಳಬೇಕಾಗುತ್ತದೆ ಮಾನ್ಯ ನಾಗರಾಜುರವರಿಗೆ ಅನ್ಯಾಯವಾಗಿರುವುದರ ಬಗ್ಗೆಯೂ ಸರಿಪಡಿಸಬೇಕಾಗುತ್ತದೆ ಅದರಿಂದ ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕರೆಸಿ ಸಧ್ಯದಲ್ಲಿ ಯಾರು ಆಡಳಿತವನ್ನು ನಡೆಸುತ್ತಿದ್ದಾರೆ ಅವರನ್ನು ಕರೆಸಿ ಅವರಿಗೆ ಅವಶ್ಯಕವಾದ ರೀತಿಯಲ್ಲಿ ಬುದ್ಧಿವಾದವನ್ನು ಹೇಳಿ ಅದನ್ನು ಸರಿಪಡಿಸಿಕೊಂಡು ಹೋಗುವಂತಹ ವಿಚಾರವನ್ನು ಅವರ ಮುಂದೆ ನಾವು ಇಡುತ್ತೇವೆ ಅದನ್ನು ಸರಿಪಡಿಸಿಕೊಂಡು ಹೋಗುತ್ತಾರೆಂಬ ಬಗ್ಗೆ ನನಗೆ ವಿಶ್ವಾಸವಿದೆ ಏಕೆಂದರೆ ಅವರು ಸರ್ಕಾರದ ವಿರುದ್ಧ ಇರುವುದಕ್ಕೆ ಸಾಧ್ಯವಿಲ್ಲ ಇವರುಗಳು ಸರ್ಕಾರದ ಆಶ್ರಯದಲ್ಲಿ ಸರ್ಕಾರದ ಯಂತ್ರದ ಕೃಪೆಯಲ್ಲಿಯೇ ಅವರುಗಳ ಚಟುವಟಿಕೆಗಳು ನಡೆಯಬೇಕಾಗುತ್ತದೆ ಇದು ಕಂದಾಯ ಇಲಾಖೆಗೆ ಬರತಕ್ಕಂತಹ ವಿಚಾರವಾಗಿದೆ, ಏಕೆಂದರೆ ರಿಜಿಸ್ಟ್ರಾರ್ ಆಫ್ ಸೊಸೈಟಿ ಆ್ಯಕ್ಟ್‌ನೊಳಗಡೆ ಇದು ಆಗಿರುತ್ತದೆ ಇವೆಲ್ಲಾ ಬ್ರಹ್ಮಾಸ್ತ್ರಗಳು "ಗುಬ್ಬಿ ಮೇಲೆ ಏತಕ್ಕಾಗಿ ಬ್ರಹ್ಮಾಸ್ತ್ರ" ಎಂದು ಬರುತ್ತದೆ ಇವರು ಇರುತ್ತಾರೆ ಮತ್ತು ಹೋಗುತ್ತಾರೆ, ಇವರುಗಳ್ಯಾರೂ ಸರ್ಕಾರಕ್ಕಿಂತ ದೊಡ್ಡವರಲ್ಲ ನಾನೂ ಕೂಡ ಹೋಂ ಮಿನಿಸ್ಟರ್ ಆಗಿದ್ದಾಗ ಸ್ಪೋರ್ಟ್ಸ್ ಮಿನಿಸ್ಟರ್ ಆಗಿದ್ದಾಗ 1983ನೇ ಇಸವಿಯಿಂದಲೂ ಇವರ ಅಟ್ಟಿಟ್ಯೂಡ್‌ನ್ನು ಗಮನಿಸಿದ್ದೇನೆ ಹಿಂದೆ ಸರ್ಕಾರ ಎಂದರೆ, ಮುಖ್ಯಮಂತ್ರಿಗಳು, ಮಂತ್ರಿಗಳೆಂದರೆ, ಶಾಸಕರೆಂದರೆ, ನಮ್ಮ

ಅಧಿಕಾರಿಗಳೆಂದರೆ ಏನು ಒಂದು ಗೌರವವಿತ್ತು ಆ ಗೌರವ ಇವತ್ತಿನ ದಿವಸ ಕಡಿಮೆಯಾಗಿದೆ ಅದರ ಜೊತೆಗೆ ಅಲ್ಲಿ ಅನೇಕ ರೀತಿಯ ಸಾಯಂಕಾಲದ ಚಟುವಟಿಕೆಗಳು ಸಹ ನಡೆಯುವುದನ್ನು ನಾನು ಗಮನಿಸಿದ್ದೇನೆ ಆದರೆ ಕೆಲವು ವಿಚಾರಗಳನ್ನು ನಾವು ಹೇಳುವುದಕ್ಕಾಗುವುದಿಲ್ಲ ಅದಕ್ಕೆ ಒಂದು ಬಣ್ಣವನ್ನು ಕಟ್ಟುತ್ತಾರೆ, ಪ್ರಿಜ್ಯುಡೀಸ್ ಇದೆ ಎಂಬುದು ಬರುತ್ತದೆ ಈ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಇದ್ದರೆ ಚೆನ್ನಾಗಿರುತ್ತಿತ್ತು ಈಗ ಬಂದರೂ ಎಂದು ಕಾಣುತ್ತದೆ ನಾವೆಲ್ಲರೂ ಸೇರಿ ಶಾಸನ ಸಭೆ ಮತ್ತು ಸರ್ಕಾರ ಅವರ ಮೇಲೆ ಎಲ್ಲೋ ಒಂದು ಕಡೆ ನಿಯಂತ್ರಣವಿದೆ ಎಂಬುದು ಗೊತ್ತಾಗ ಬೇಕಾಗುತ್ತದೆ ನಾವು ಎಲ್ಲಾ ರೀತಿಯಿಂದಲೂ ಈ ರೀತಿಯಾಗಿ ಮಾಡಿಕೊಂಡು ಹೋದರೆ ಇವರು ಏನೋ ಸರ್ಕಾರದಲ್ಲಿ ಇರತಕ್ಕಂತಹವರು ಎಂದು ಅದರ ಬಗ್ಗೆ ನಾವು ಕೆಲವರು ಕಾರಣರಾಗಿದ್ದೇವೆ ಇದರ ಬಗ್ಗೆ ನಾನು ಸ್ವಂತವಾಗಿ ಹೇಳಬೇಕಾದರೆ ನಾವು ಕೆಲವರು ಕಾರಣ ಕರ್ತರಾಗಿದ್ದೇವೆ ಅವರ ಜೊತೆಯಲ್ಲಿ ಪಕ್ಕದಲ್ಲಿ ನಿಂತುಕೊಂಡರೆ ಫೋಟೋ ಬರುತ್ತದೆ, ಯಾವುದೋ ಟ್ರೋಫಿ ತೆಗೆದುಕೊಂಡು ಹೋಗಿ ನಮ್ಮನ್ನು ಚೀಫ್‌ಗೆಸ್ಟ್ ಆಗಿ ಕರೆದುಕೊಂಡು ಬರುತ್ತಾರೆಂದು ಹೇಳಿ ಅವರಿಗೆ ಅನಾವಶ್ಯಕವಾದಂತಹ ಪ್ರೋತ್ಸಾಹವನ್ನು ಕೊಟ್ಟಿರತಕ್ಕಂತಹದ್ದು ನಿಜ ಈ ನನ್ನ ಮಾತುಗಳು ಅವರ ಕಿವಿಯನ್ನು ತಲುಮತ್ತದೆ ಅದರಲ್ಲಿ ಸಂಶಯವೇನೂ ಇಲ್ಲ

ಇದು ಸರ್ಕಾರದ ಧೋರಣೆ ಎನ್ನತಕ್ಕಂಥಾದ್ದನ್ನು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕರೆಸಿ ಮಾತನಾಡಿ ಇದನ್ನು ಸರಿ ಮಾಡುತ್ತಾರೆ ಈ ಬುದ್ಧಿವಾದ ಕೇಳದೇ ಹೋದರೆ ಆಮೇಲೆ ತಾವು ಹೇಳಿರತಕ್ಕಂಥ ಎಲ್ಲಾ ಅಸ್ತ್ರಗಳನ್ನು ಸಹಿತ ಉಪಯೋಗಿಸೋಣ

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ನಾವು ಮತ್ತು ಮಾನ್ಯ ರಮೇಶ್ ಕುಮಾರ್ ಎಲ್ಲಾ ಹೋಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿ ತಿಳಿಸಿದ್ದೇವೆ ಈಗ ಇಲ್ಲಿ ನಾವೆಲ್ಲರೂ ಹೇಳಿದ್ದೇವೆ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳೇ, ತಾವು ಆ ಕ್ರಿಕೆಟ್ ಅಸೋಸಿಯೇಶನ್‌ನವರನ್ನು ಹದ್ದು ಬಸ್ತಿನಲ್ಲಿ ಇಡತಕ್ಕಂಥ ವ್ಯವಸ್ಥೆಯಾಗಬೇಕು ಅವರು ಯಾರು? ಇದು ಒಂದು ತರಹ ಮಿಲಿಟರಿ ಪ್ರಭುತ್ವ, ಸರ್ವಾಧಿಕಾರ ಪ್ರಭುತ್ವ ಬಹುಶ ಅವರಿಗೆ ಮಂತ್ರಿಗಳು ಬೇಕಾಗಿಲ್ಲ, ಸರ್ಕಾರ ಬೇಕಾಗಿಲ್ಲ, ಶಾಸಕರು ಬೇಕಾಗಿಲ್ಲ, ಈ ರಾಜ್ಯದ ಅಧಿಕಾರಿಗಳು ಬೇಕಾಗಿಲ್ಲ ಅವರದ್ದೇ ಆದ ಬೇರೆ ಧೋರಣೆ ಇದೆ ಆ ಕ್ಷೇತ್ರಕ್ಕೆ ಯಾರು ದುಡಿದಿದ್ದಾರೆ, ಅಂತಹ ಶ್ರೀ ನಾಗರಾಜ್ ಅವರನ್ನು ಹೊರಹಾಕಿ, ಅವರ ಮೆಂಬರ್‌ಶಿಫ್ ಕಿತ್ತು ಹಾಕಿ ಇಷ್ಟೆಲ್ಲಾ ಆಗಿದೆ ನಾವು ತಮಗೆ ತಿಳಿಸಿದ್ದೇವೆ ದಯವಿಟ್ಟು ತಾವು ಇದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ಒಂದು ನಿಮಿಷ. ಈಗಾಗಲೇ ಶ್ರೀ ನಾಗರಾಜ್ ಅವರ ಬಗ್ಗೆ ಹಿರಿಯ ಸದಸ್ಯರುಗಳು ಮಾತನಾಡಿದ್ದಾರೆ

ಮತ್ತು ಸಚಿವರೂ ಕೂಡ ಉತ್ತರ ಕೊಟ್ಟಿದ್ದಾರೆ ಈ ಕ್ರಿಕೆಟ್ ಆಸೋಸಿಯೇಶನ್‌ನಲ್ಲಿ ಯಾರು ಒಬ್ಬ ಪ್ರಾಮಾಣಿಕವಾಗಿ, ಅಲ್ಲಿ ಚೇರ್ಮನ್‌ರಾಗಿ, ಬಹಳ ವರ್ಷ ದುಡಿದು ಅದರ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೋ ಅವರನ್ನು ಜೀವನದುದ್ದಕ್ಕೂ ನಾವು ಮೆಂಬರ್ ಮಾಡುವುದಿಲ್ಲ ಎನ್ನುವಂಥಾದ್ದು ಒಂದು ತರಹ ಸೇಡು ತೀರಿಸಿಕೊಳ್ಳುವಂತಹ ಕ್ರಮ ಏಕೆಂದರೆ ಯಾರ್‍ಯಾರೋ ದುಡಿದಂಥವರಿಗೆ ಯಾವ್ಯಾವುದೋ ಕಾರಣಕ್ಕೆ ಬೇರೆ ಅಧ್ಯಕ್ಷರು ಬಂದು

**ಶ್ರೀ ಕೆ ಆರ್ ರಮೇಶ್‌ಕುಮಾರ್** ಮೆಂಬರ್ ಮಾಡುವುದಿಲ್ಲ ಎಂದು ಅಲ್ಲ ಅಲ್ಲಿ ಮೆಂಬರ್ ಇದ್ದವರನ್ನು ಕುರಿತು ಅವರ ಮೆಂಬರ್‌ಶಿಫ್‌ನ್ನು ರದ್ದು ಮಾಡಿ, ಅದು ಎಲ್ಲಿಯವರೆಗೆ ವಿಸ್ತರಣೆ ಮಾಡಿದ್ದಾರೆ ಎಂದರೆ ಅವರು ಜೀವಂತವಾಗಿರುವವರೆಗೆ ಎಂದು

**ಶ್ರೀ ಬಿ ಎಸ್ ಯಡಿಯೂರಪ್ಪ** ಈ ಮನೆಯಲ್ಲಿ ಇರುವಂಥ ಅನೇಕ ಜನರಿಗೆ ಮಾನ್ಯ ನಾಗರಾಜು ಅವರ ಪರಿಚಯ ಇದೆ ಅವರು ಯಾವ ರೀತಿ ಸೇವೆ ಮಾಡಿದರು, ಯಾವ ರೀತಿ ಅದರ ಅಭಿವೃದ್ಧಿಗೋಸ್ಕರ ಕೆಲಸ ಮಾಡಿದರು ಎಂದು ಎಲ್ಲರಿಗೂ ಗೊತ್ತು ಅಂತಹವರಿಗೆ ಇರುವ ಮೆಂಬರ್‌ಶಿಫ್‌ನ್ನು ತೆಗೆದು ಅವರು ಜೀವಿಸಿರುವವರೆಗೆ, ಆಜೀವ ಪರ್ಯಂತ ಮೆಂಬರ್ ಆಗಕೂಡದು ಎನ್ನುವುದಕ್ಕೆ ಬಹುಶ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವರಿಗೆ ಲಜ್ಜೆಯಾಗಬೇಕು ಮತ್ತು ಇದು ಆ ಸಂಸ್ಥೆಗೆ ಗೌರವ ತರುವಂಥಾದ್ದು ಅಲ್ಲ ಆದ್ದರಿಂದ ಈ ತರಹ ಮತ್ತೆ ಅವರನ್ನು ಕೂಡಿಸಬೇಕು, ಅವರಿಗೆ ಅವಕಾಶವನ್ನು ಕೊಡಬೇಕು ಎನ್ನುವುದಕ್ಕಿಂತ ಈ ರೀತಿ ನಿರ್ಧಾರ ತೆಗೆದುಕೊಳ್ಳುವ ಪ್ರವೃತ್ತಿ ಇದೆಯಲ್ಲಾ, ಅದನ್ನು ಹತ್ತಿಕ್ಕತಕ್ಕಂಥ ಕೆಲಸವನ್ನು ನಾವು ಮಾಡಬೇಕಾಗುತ್ತದೆ ಆದ್ದರಿಂದ ಅವರಿಗೆ ಶಾಸಕರ ಬಗ್ಗೆ ಗೌರವ ಇಲ್ಲ, ಎಂ ಪಿ ಗಳ ಬಗ್ಗೆ ಗೌರವ ಇಲ್ಲ, ಬೇರೆ ಬೇರೆ ದೇಶದವರು ಬಂದು ಕ್ರಿಕೆಟ್ ಮ್ಯಾಚ್ ಆಡುತ್ತಿದ್ದರೆ ಅಲ್ಲಿ ನಾವು ಹೋದರೆ ನಮ್ಮನ್ನು ಅವರು ನೋಡುವ ದೃಷ್ಟಿಕೋನ – ಇದು ಬಹಳಷ್ಟಿದೆ ಅದರ ಬಗ್ಗೆ ಈಗ ಚರ್ಚೆ ಬೇಡ ಆದರೆ ಯಾರು ಈ ನಿರ್ಧಾರ ತೆಗೆದುಕೊಂಡಿದ್ದಾರೆ, ಆ ನಿರ್ಧಾರ ತೆಗೆದುಕೊಂಡವರ ಮೇಲೇನೇ ಸರಿಯಾದಂಥ ಕ್ರಮ ತೆಗೆದುಕೊಳ್ಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾದ ಗಮನವನ್ನು ಕೊಡಬೇಕು ಎನ್ನುವ ಒತ್ತಾಯವನ್ನು ನಾನೂ ಸಹ ಮಾಡುತ್ತೇನೆ

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ವಾಟಾಳ್ ನಾಗರಾಜ್, ಮಾನ್ಯ ರಮೇಶ್‌ಕುಮಾರ್ ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ನನ್ನನ್ನು ಸಮಕ್ಷಮವಾಗಿ ಭೇಟಿಯಾಗಿ ಬೆಂಗಳೂರಿನ ಕ್ರಿಕೆಟ್ ಸ್ಟೇಡಿಯಮ್‌ನಲ್ಲಿ ಆಗಿರತಕ್ಕಂಥ ಅನಾಹುತದ ಬಗ್ಗೆ ನನ್ನ ಗಮನಕ್ಕೆ ತಂದಿದ್ದಾರೆ ಶ್ರೀ ನಾಗರಾಜ್ ಅವರು ನನಗೂ ಕೂಡ ಪರಿಚಿತರು ಇವತ್ತು ಬೆಂಗಳೂರಿನಲ್ಲಿ ಇಷ್ಟೊಂದು ಉತ್ತಮವಾದಂಥ ಸ್ಟೇಡಿಯಂ ಬರಲಿಕ್ಕೆ ಅವರು

ಕಾರಣಕರ್ತರು. ಸಾಕಷ್ಟು ಶ್ರಮವಹಿಸಿ ಅವರು ಕೆಲಸ ಮಾಡಿದ್ದಾರೆ. ಇವತ್ತು ರಾಜಕಾರಣ ಇಲ್ಲಿ ನಮ್ಮಲ್ಲೇ ನಡೆಯುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು. ಅಲ್ಲಿ ಕ್ರಿಕೆಟ್‌ನಲ್ಲೂ ಕೂಡ ಇದು ನಡೆಯುತ್ತಿದೆ. ಇದು ಬಹಳ ಅನ್‌ಫಾರ್ಚುನೇಟ್ – ಇದು ಆಗಲೇಬಾರದು. ಯಾರು ದುಡಿದಿದ್ದಾರೆ, ಶ್ರಮಪಟ್ಟಿದ್ದಾರೆ ಅವರನ್ನು ಮೆಂಬರ್‌ಶಿಪ್‌ನಿಂದ ಕೂಡ ಕಿತ್ತು ಹಾಕತಕ್ಕಂಥ ರೀತಿಯಲ್ಲಿ ಅವಮಾನ ಮಾಡಿದ್ದು ಯಾರಿಂದಲೂ ಸಹಿಸುವುದಕ್ಕೆ ಆಗುವುದಿಲ್ಲ. ಅಲ್ಲಿ ಅಧ್ಯಕ್ಷರು ಮತ್ತು ಬೇರೆ ಜನರೂ ಕೂಡ ಇದ್ದಾರೆ. ಈ ಸದನದಲ್ಲಿ ಅವರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಾನು ಸಿದ್ಧನಿಲ್ಲ. ಮಾನ್ಯ ನಾಗರಾಜ್ ಅವರಿಗೆ ಏನು ಅವಮಾನವಾಗಿದೆ, ಈಗಾಗಲೇ ನಮ್ಮ ಸಿಂಧ್ಯಾರವರು ಹೇಳಿದ್ದಾರೆ. ಅವರಿಗೆ ಕೂಡ ಕ್ರಿಕೆಟ್ ಬಗ್ಗೆ ಸ್ವಲ್ಪ ಆಭಿರುಚಿ ಇದೆ. ಆದರೆ ಕ್ರಿಕೆಟ್ ನೋಡತಕ್ಕಂಥ ಹುಚ್ಚು ನನಗೆ ಬಹಳ ಇದೆ. ನಾನು ಮುಖ್ಯಮಂತ್ರಿಗಳಾಗಿದ್ದ ಕೃಷ್ಣ ಅವರಿಗೆ 'ಸರ್, ಮ್ಯಾಚ್ ಇದೆ. ನಾನು ಇರುವುದಿಲ್ಲ, ಹೋಗುತ್ತೇನೆ' ಎಂದು ಹೇಳಿ ಹೋಗುತ್ತಿದ್ದೆ. ಅದಕ್ಕೆ ಈ ರೀತಿಯಾಗಿ ಅವರನ್ನು ಸಮಕ್ಷಮ ಕರೆಸುತ್ತೇನೆ. ಮತ್ತು ಈ ರೀತಿಯಾಗಿರುವುದನ್ನು ಸರಿಪಡಿಸುತ್ತೇನೆ. ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ. ಮಾನ್ಯ ನಾಗರಾಜ್ ಅವರು ಬಹಳ ಕ್ರಿಕೆಟ್ ಪ್ರೇಮಿಗಳು ಮತ್ತು ಅವರೇನು ಕ್ರಿಕೆಟ್ ಆಡಿದ್ದಾರೆಯೇ ಎಂಬುದು ನನಗೆ ಗೊತ್ತಿಲ್ಲ. ಆದರೂ ಕೂಡ ಹೆಚ್ಚಿನ ಆಸಕ್ತಿ ವಹಿಸಿ ಇದರಲ್ಲಿ ಬಂದಿದ್ದಾರೆ. ಮಾನ್ಯ ರಮೇಶ್‌ಕುಮಾರ್ ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಈಗಾಗಲೇ ಹೇಳಿದ್ದಾರೆ. ನಾನು ಅವರನ್ನು ಕರೆಸುತ್ತೇನೆ ಮತ್ತು ಸಮಕ್ಷಮವಾಗಿ, ನೇರವಾಗಿ ಈ ಸಮಸ್ಯೆಯನ್ನು ಬಗೆಹರಿಸತಕ್ಕಂಥ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

## 2. ಮಾದಿಗ ಜನಾಂಗದವರಿಗೆ ಒಳ ಮೀಸಲಾತಿ ಹಂಚಿಕೆಯಲ್ಲಿ ವ್ಯತ್ಯಾಸ ಆಗಿರುವುದರ ಬಗ್ಗೆ

**ಶ್ರೀ ಹೆಚ್. ಆಂಜನೇಯ (ಭರಮಸಾಗರ)** : ಸನ್ಮಾನ್ಯ ಅಧ್ಯಕ್ಷರೇ, ಕಳೆದ ಶ್ರೀಮಾನ್ ಎಸ್.ಎಂ. ಕೃಷ್ಣ ಅವರ ನೇತೃತ್ವದ ಸರ್ಕಾರ ಇದ್ದಾಗ, ಈ ಒಳ ಮೀಸಲಾತಿಯಲ್ಲಿ ಬಹಳ ವರ್ಷಗಳ ಕಾಲ ಇದರ ಹಂಚಿಕೆಯಲ್ಲಿ ಬಹಳ ವ್ಯತ್ಯಾಸ ಆಗಿ ಬಿಟ್ಟು ಒಂದು ವರ್ಗದ ಜನರು, ಈ ಶೆಡ್ಯೂಲ್ಡ್ ಕಾಸ್ಟ್‌ನಲ್ಲಿ ಬರತಕ್ಕಂಥ ಮಾದಿಗರು ನಮಗೆ ಅನ್ಯಾಯವಾಗುತ್ತಿದೆ, ನಮ್ಮ ಜನಸಂಖ್ಯೆಗೆ ತಕ್ಕಂತೆ ನಮಗೆ ಮೀಸಲಾತಿಯ ಪಾಲು ದೊರೆಯುತ್ತಿಲ್ಲ, ನಮಗೆ ಸಿಗಬೇಕಾದಂಥ ಯಾವುದೇ ಸವಲತ್ತುಗಳು ಸಿಗುತ್ತಿಲ್ಲ ಎಂದು ಹೇಳಿ ಕಳೆದ ಐದು ವರ್ಷಗಳಿಂದ ಬೀದಿಗಿಳಿದು ಚಳುವಳಿಯನ್ನು ಮಾಡುತ್ತಿದ್ದರು. ಇವರ ಚಳುವಳಿಯನ್ನು ಮನಗಂಡು ಸರ್ಕಾರ ಅವರ ಜತೆ ಮಾತನಾಡಿ ಮತ್ತು ಎಲ್ಲಾ ಪರಿಶಿಷ್ಟ ಜಾತಿಗಳ ನಾಯಕರುಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಮಾನ್ಯ ಎಸ್.ಎಂ. ಕೃಷ್ಣ ಅವರು ಜನವರಿ ತಿಂಗಳಲ್ಲಿ ಒಂದು ಆಯೋಗವನ್ನು ರಚನೆ ಮಾಡಿದರು. ಶ್ರೀಮಾನ್

ಎನ್.ವೈ. ಹನುಮಂತಪ್ಪ, ನ್ಯಾಯಮೂರ್ತಿಗಳು, ಅವರ ಏಕಸದಸ್ಯತ್ವದ ಆಯೋಗವನ್ನು ರಚನೆ ಮಾಡಿದರು. ಮಾನ್ಯ ಹನುಮಂತಯ್ಯನವರು ಆಯೋಗದ ಅಧ್ಯಕ್ಷರಾಗಿ ನೇಮಕವಾಗತಕ್ಕಂಥ ಸಂದರ್ಭದಲ್ಲಿ ಅವರಿಗೆ ಹೇಳಿದ್ದರು, ಏನೆಂದರೆ ಆರು ತಿಂಗಳ ಒಳಗೆ ಈ ವರದಿಯನ್ನು ಕೊಡಬೇಕು. ಸಪ್ಟೆಂಬರ್ ತಿಂಗಳಲ್ಲಿ ಚುನಾವಣೆ ಇರುವುದರಿಂದ ನಾವು ಚುನಾವಣೆ ಒಳಗಾಗಿಯೇ ಇದನ್ನು ಜಾರಿಗೆ ತರಬೇಕು ಎನ್ನತಕ್ಕಂಥ ಷರತ್ತನ್ನು ಹಾಕಿ ಅವರನ್ನು ಕರೆದು ಮಾತನಾಡಿ ಈ ಜವಾಬ್ದಾರಿಯನ್ನು ಅವರಿಗೆ ಕೊಟ್ಟಿದ್ದರು. ಆದರೆ ಮಧ್ಯಂತರ ಚುನಾವಣೆ ನಡೆದಿದ್ದರಿಂದ ಅವರು ರಾಜೀನಾಮೆ ಕೊಟ್ಟು ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿ ಹೋದರು. ಈಗ ಇದರ ಕಾರ್ಯ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಜನರು ಕೂಡ ಮತ್ತೆ ನೀವು ತಕ್ಷಣ ಮಾಡಬೇಕು, ಸರ್ಕಾರ ಅಸ್ತಿತ್ವಕ್ಕೆ ಬಂದು ಈಗಾಗಲೇ ಮೂರು-ನಾಲ್ಕು ತಿಂಗಳು ಕಳೆದಿದೆ. ಈ ಬಗ್ಗೆ ಯಾವುದೇ ರೀತಿಯ ಅನುಕಂಪದ ಮಾತುಗಳನ್ನು ಕೂಡ ಆಡುತ್ತಿಲ್ಲ. ಇದನ್ನು ಮಾಡುವುದರಲ್ಲಿ ಪುನ: ವಿಳಂಬ ಮಾಡುತ್ತಿದ್ದೀರಿ ಎಂದು ಹೇಳಿ ಅವರು ಮತ್ತೆ ಚಳುವಳಿಯನ್ನು ಆರಂಭ ಮಾಡಿದ್ದಾರೆ. ಆದ್ದರಿಂದ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ತಾವೇ ಅದರ ನೇತೃತ್ವವನ್ನು ವಹಿಸಿ, ಅವರು ಮತ್ತು ಹಿಂದಿನ ಸಚಿವರಾಗಿದ್ದಂಥ ಪರಮೇಶ್ವರ್ ಅವರು ಮತ್ತು ಮಾನ್ಯ ಈಗಿನ ಮುಖ್ಯ ಮಂತ್ರಿಗಳಾದ ಧರ್ಮಸಿಂಗ್ ಅವರು ಮಾನ್ಯ ಹನುಮಂತಪ್ಪ ಅವರ ಮನವೊಲಿಸಿ, ಅವರನ್ನು ಅದರ ಏಕಸದಸ್ಯತ್ವ ಸದಸ್ಯರನ್ನಾಗಿ ಮಾಡಿದ್ದರು. ಈಗ ಕೂಡಲೇ ಅದಕ್ಕೆ ಒಬ್ಬ ಸಮರ್ಥ ಅಧ್ಯಕ್ಷರನ್ನು ನೇಮಕ ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ಪರಿಶಿಷ್ಟ ಜನರ ಒಂದು ಸಮೀಕ್ಷೆಯನ್ನೂ ಕೂಡ ಮಾಡಬೇಕಾಗುತ್ತದೆ. ಆಂಧ್ರಪ್ರದೇಶದಲ್ಲಿ ಈಗಾಗಲೇ ಅಂತಹ ಒಂದು ಒಳ ಮೀಸಲಾತಿ ಪದ್ಧತಿಯನ್ನು ತರಲಾಗಿದೆ. ಅಂತೆಯೇ ಹರಿಯಾಣದಲ್ಲಿ ಇದನ್ನು ತಂದಿದ್ದಾರೆ ಮತ್ತು ಪಂಜಾಬ್‌ನಲ್ಲಿ ತಂದಿದ್ದಾರೆ. ಅದರ ಮಾದರಿಯಲ್ಲಿ ಇಲ್ಲಿಯೂ ಕೂಡ ಅನುಷ್ಠಾನಕ್ಕೆ ತರುವುದರ ಮೂಲಕ ಒಂದು ಸಾಮಾಜಿಕ ನ್ಯಾಯವನ್ನು ಈ ಪರಿಶಿಷ್ಟರಿಗೆ ಒದಗಿಸಿಕೊಡುವಲ್ಲಿ ಸರ್ಕಾರ ಮುಂದಾಗಬೇಕೆಂದು ಹೇಳಿ ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಈ ದೃಷ್ಟಿಯಲ್ಲಿ ತಾವು ಈಗಾಗಲೇ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬುತ್ತಿದ್ದೀರಿ. ಅದರಲ್ಲಿ ಕೂಡ ನಮ್ಮವರಿಗೆ ಹುದ್ದೆಗಳು ಸಿಕ್ಕಿಲ್ಲ. ಅಲ್ಲಿ ಕೂಡ ಸಾಕಷ್ಟು ಅನ್ಯಾಯವಾಗಿದೆ. ಇಲ್ಲಿ ಇರತಕ್ಕಂಥ ಶಾಸಕರೆಲ್ಲರಿಗೂ ಕೂಡ ಆ ಒಂದು ಜನಾಂಗದ ಸ್ಥಿತಿಗತಿಯ ಬಗ್ಗೆ ಗೊತ್ತಿದೆ. ಅಲ್ಲಿ ಪರಿಶಿಷ್ಟರಲ್ಲಿ ಯಾವುದೇ ರೀತಿಯ ಗುಂಪುಗಾರಿಕೆ ಇಲ್ಲ. ಇದು ಆಗಬೇಕು ಎಂದು ಈ ಒಂದು ವಿಷಯದಲ್ಲಿ ಎಲ್ಲರೂ ಕೂಡ ಬೆಂಬಲವಾಗಿ ಇರುವುದರಿಂದ ಸರ್ಕಾರ ವಿಳಂಬ ಮಾಡುತ್ತಾ ಇರುವುದು ಸರಿಯಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಆ ಒಂದು ಆಯೋಗವನ್ನು ನೇಮಕ ಮಾಡಿ, ಅದಕ್ಕೆ ಒಂದು ಕಾಲ ಮಿತಿಯನ್ನು

ನಿಗದಿಪಡಿಸಿ ಪರಿಶಿಷ್ಟ ಜನಾಂಗದ ಒಂದು ಸಮೀಕ್ಷೆಯನ್ನು ಮಾಡಬೇಕು. ಹಿಂದುಳಿದ ವರ್ಗಕ್ಕೆ ಸೇರಿದ ಜನರನ್ನು ಸಮೀಕ್ಷೆ ಮಾಡಲಿಕ್ಕೆ ಎರಡು ಕೋಟಿ ರೂಪಾಯಿಗಳನ್ನು ಈ ಸಾರಿ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿದ್ದಾರೆ. ಅದೇ ರೀತಿಯಾಗಿ ಪರಿಶಿಷ್ಟ ಜಾತಿ-ಜನರ ಜನಸಂಖ್ಯೆಯನ್ನು ಸಮೀಕ್ಷೆ ಮಾಡುವುದಕ್ಕೆ ಯಾವುದೇ ರೀತಿಯಲ್ಲಿ ಬಜೆಟ್‌ನಲ್ಲಿ ಹಣವನ್ನು ಒದಗಿಸಿಲ್ಲ. ಆ ಸಂದರ್ಭದಲ್ಲಿ ನಾನು ಮಾನ್ಯ ಹಣಕಾಸು ಮಂತ್ರಿಗಳಾದ ಶ್ರೀಮಾನ್ ಸಿದ್ಧರಾಮಯ್ಯನವರ ಗಮನವನ್ನು ಕೂಡ ಸೆಳೆದೆ. ಸದನ ಇವತ್ತು ಕೊನೆಯಾಗುತ್ತಿದೆ. ಈ ಜನರು ಈಗಾಗಲೇ ಒಂದು ನೋಟೀಸ್‌ನ್ನೂ ಕೂಡ ಕೊಟ್ಟು ಬಿಟ್ಟಿದ್ದಾರೆ. ನಮಗೆ ನ್ಯಾಯ ಸಿಕ್ಕಿಲ್ಲ, ಮತ್ತೆ 20ನೇ ತಾರೀಖಿಗೆ ಪಂಜಿನ ಮೆರವಣಿಗೆ ಮಾಡುತ್ತೇವೆ ಎಂದು ಹೇಳಿ ಮಾದಿಗ-ದಂಡೋರ ಜನಾಂಗಕ್ಕೆ ಸೇರಿದವರು ಈಗಾಗಲೇ ಸರ್ಕಾರಕ್ಕೆ ಒಂದು ನೋಟಿಸ್‌ನ್ನು ಕೊಟ್ಟು ನಾವು ಪಂಜಿನ ಮೆರವಣಿಗೆಯನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಈ ಪಂಜಿನ ಮೆರವಣಿಗೆ ಬೀದಿ ಚಳುವಳಿ, ಈ ಹೋರಾಟ ಇದ್ಯಾವುದೂ ಕೂಡ ಅಗತ್ಯ ಇಲ್ಲ. ಹಿಂದಿನ ಸರ್ಕಾರ ಮಾಡುತ್ತೇವೆಂದು ಹೇಳಿ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇದರ ಜತೆಗೆ ನಮ್ಮ ಮಾನ್ಯ ರಾಷ್ಟ್ರ ನಾಯಕರಾದಂಥ ಶ್ರೀಮಾನ್ ದೇವೇಗೌಡರೂ ಕೂಡ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಅದನ್ನು ಪ್ರಸ್ತಾಪ ಮಾಡಿದ್ದಾರೆ. ಕಾಂಗ್ರೆಸ್‌ನವರು ಕೂಡ ಅವರ ಪರವಾಗಿ ಇದ್ದಾರೆ ಮತ್ತು ಬಿ.ಜೆ.ಪಿ. ಯವರೂ ಕೂಡ ಅವರ ಪರವಾಗಿ ಚುನಾವಣಾ ಸಂದರ್ಭದಲ್ಲಿ ನಾವು ಮಾಡುತ್ತೇವೆ ಎಂದು ಹೇಳಿದ್ದಾರೆ.

**ಶ್ರೀ ಎಸ್. ಶಿವಣ್ಣ** : ಹಿಂದೆ ನಾವು ಪ್ರಸ್ತಾಪ ಮಾಡಿದ್ದಕ್ಕೇ ಆಯೋಗ ಆಗಿರುವುದು. ಅದು ಆಗುವುದಕ್ಕೆ ನಾವೇ ಕಾರಣ.

**ಶ್ರೀ ಹೆಚ್. ಆಂಜನೇಯ** : ಈ ಸದನದ ಎಲ್ಲಾ ಸದಸ್ಯರಿಗೂ ಕೂಡ ಅವರ ಬಗ್ಗೆ ಅನುಕಂಪ ಇರುವುದರಿಂದ ಆ ವರ್ಗ ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ದಯಮಾಡಿ, ಮತ್ತೆ ಬೀದಿ ಚಳುವಳಿ ಆಗುವುದು ಬೇಡ ತಾವು ಮಾನ್ಯ ಮುಖ್ಯ ಮಂತ್ರಿಗಳು ಎಲ್ಲೆಲ್ಲಿ ಬರುತ್ತೀರೋ ಅಲ್ಲಿ ಪ್ರತಿಭಟನೆ ಮಾಡತಕ್ಕಂಥಾದ್ದು ಇದೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಬೇಡಿ. ತಾವೇ ಅದನ್ನು ಮಾಡಿರತಕ್ಕಂಥಾದ್ದು. ತಕ್ಷಣ ನಿಮ್ಮ ನೇತೃತ್ವದಲ್ಲಿ ಆ ಜನಾಂಗಕ್ಕೆ ಉಪಕಾರವಾಗಬೇಕೆಂದು ನಿಮ್ಮಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ಕೃತಜ್ಞತೆಗಳು.

**ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್)** : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಆಂಜನೇಯರವರು ಬಹಳಷ್ಟು ಗಂಭೀರವಾದ ವಿಚಾರವನ್ನು ಸದನದ ಮುಂದೆ ಮಂಡನೆ ಮಾಡಿದ್ದಾರೆ. ಅವರಿಗೆ ಮತ್ತು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆ ಸಲ್ಲಿಸುತ್ತಾ, ಈ ಒಂದು ಒಳ ಮೀಸಲಾತಿ ವಿಚಾರ ಈ ರಾಷ್ಟ್ರಕ್ಕೆ ಹೊಸದೇನಲ್ಲ. ಇಡೀ ರಾಷ್ಟ್ರದಲ್ಲಿ ಈಗಾಗಲೇ 7-8 ರಾಜ್ಯಗಳಲ್ಲಿ ಒಳ ಮೀಸಲಾತಿಗೆ

ಒಳಪಡಿಸಿ, ಆಯೋಗಗಳನ್ನು ರಚನೆ ಮಾಡಿದ್ದಾರೆ. ಉತ್ತರ ಪ್ರದೇಶ ಸರ್ಕಾರ ಕೇವಲ ಮೂರನೇ ತಿಂಗಳಲ್ಲಿ ಆಯೋಗ ರಚನೆ ಮಾಡಿ, ಆದೇಶ ಮಾಡಿ ಒಳ ಮೀಸಲಾತಿ ಕೊಟ್ಟಿದ್ದಾರೆ. ಮತ್ತೆ ಆಂಧ್ರ ಪ್ರದೇಶದಲ್ಲಿ ಬಹಳಷ್ಟು ಮಾದಿಗ ದಂಡೋರದ ವತಿಯಿಂದ ರಾಷ್ಟ್ರವ್ಯಾಪಿ ಚಳುವಳಿ ಆಯಿತು. ಇಡೀ ರಾಷ್ಟ್ರದ ಮೀಸಲಾತಿ ವಿಚಾರದ ಬಗ್ಗೆ ಮನಗಂಡಂಥ, ಆ ರಾಜ್ಯದ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಚಂದ್ರಬಾಬು ನಾಯ್ಡುರವರು ಒಳ ಮೀಸಲಾತಿಗೆ ಒಳಪಡಿಸಿ, ಒಳಮೀಸಲಾತಿ ಕೊಟ್ಟಿದ್ದಾರೆ. ನನಗೆ ಅರ್ಥವಾಗುತ್ತಾ ಇಲ್ಲ, ಕರ್ನಾಟಕ ರಾಜ್ಯದಲ್ಲಿ 8 ವರ್ಷಗಳಿಂದ ಸತತವಾಗಿ ಆ ಜನಾಂಗ, ಇಡೀ ರಾಷ್ಟ್ರದ ಎಲ್ಲಾ ರಾಜಕೀಯ ಪಕ್ಷಗಳ ಗಮನವನ್ನು ಸೆಳೆದಿದ್ದಾರೆ, ಎಲ್ಲಾ ಮುಖ್ಯಮಂತ್ರಿಗಳನ್ನೂ ಭೇಟಿ ಮಾಡಿದ್ದಾರೆ. ಬಹುಶ: ನನಗೆ ಗೊತ್ತಿರುವ ಮಟ್ಟಿಗೆ ಈ ಸದನದ 88 ಶಾಸಕ ಸದಸ್ಯರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಮನವಿ ಮಾಡಿ ಒಳ ಮೀಸಲಾತಿಯನ್ನು ಕಲ್ಪಿಸಿಕೊಡಬೇಕೆಂದು ಕೇಳಿದ್ದಾರೆ. ಈ ವಿಚಾರವನ್ನು ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಮನಗಂಡು ಆಯೋಗವನ್ನು ರಚನೆ ಮಾಡಿದರು. ನನಗೆ ಅರ್ಥವಾಗುತ್ತಾ ಇಲ್ಲ, ಈ ಆಯೋಗ ರಚನೆಯಾದ ಮೇಲೆ ಅವರಿಗೆ ಕಛೇರಿ ಕೊಡುವುದಕ್ಕೆ ಐದು ತಿಂಗಳು ತೆಗೆದುಕೊಂಡಿದ್ದಾರೆ. ಸಿಬ್ಬಂದಿ ವರ್ಗದವರನ್ನು ಕೊಡುವುದಕ್ಕೆ, ಆದಾದ ಮೇಲೆ ಎಂಟು ತಿಂಗಳು ತೆಗೆದುಕೊಂಡಿದ್ದಾರೆ. ಇಡಿ ರಾಜ್ಯದಲ್ಲಿ ಆ ಜನಾಂಗದ ಸದಸ್ಯರು, ಎಲ್ಲಾ ಶಾಸಕರ ಮನೆ ಮುಂದೆ ಧರಣಿ ಮಾಡಿದ್ದಾರೆ. ಮನವಿ ಮಾಡಿದ್ದಾರೆ, ಗಮನ ಸೆಳೆದಿದ್ದಾರೆ. ನಮಗೆ ಒಳ ಮೀಸಲಾತಿ ಅವಶ್ಯಕತೆ ಇದೆಯೆಂದು ಏಕೆ ಕೇಳುತ್ತಿದ್ದೇವೆಂದರೆ, ಬಹುಶ: ಹಿಂದಿನ ಈ ಸದನದಲ್ಲಿ ಅಂದರೆ 25 ವರ್ಷಗಳ ಹಿಂದೆ ಆ ಜನಾಂಗದವರು 28 ಜನ ಶಾಸಕರು ಇದ್ದರು. ಇವತ್ತು ಕೇವಲ ಒಂಭತ್ತು ಮಂದಿ ಶಾಸಕರು ಇದ್ದೇವೆ. ಜನಾಂಗದವನ್ನು ಪರಿಗಣಿಸಿ, ಜನಾಂಗದ ಆಧಾರದ ಮೇಲೆ ಮತ್ತು ಅನೇಕರು ಕೇವಲ ಮಾದಿಗ ದಂಡೋರ ಮತ್ತು ಇನ್ನೊಬ್ಬ ಜನಾಂಗದವರು ಎನ್ನುವುದಕ್ಕಿಂತ, ಎಸ್.ಸಿ. ಎಸ್.ಟಿ. ಗಳಲ್ಲಿ ಅನೇಕರು ಅಲ್ಪಸಂಖ್ಯಾತ ಜನಾಂಗದವರಿದ್ದಾರೆ. ಇವತ್ತು ಇನ್ನೂ ಅವರು ಶಾಸಕರೇ ಆಗಲಿಲ್ಲ. ಈ ಸದನದ ಒಳಗಡೆ ಬರಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸಾಮಾಜಿಕ ನ್ಯಾಯದ ಬಗ್ಗೆ ಒಲವು ಇದೆ. ಇಡೀ ರಾಷ್ಟ್ರಕ್ಕೆ ಸಾಮಾಜಿಕ ನ್ಯಾಯವನ್ನು ಒದಗಿಸಿ ಕೊಡಬೇಕೆಂದು ವಿಶ್ವಾಸ, ಬದ್ಧತೆ ಈ ಸರ್ಕಾರಕ್ಕೆ ಇದೆಯೆಂದು ನಾನು ಅಂದುಕೊಳ್ಳುತ್ತೇನೆ. ಆದ್ದರಿಂದ, ಇವತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಆ ವಿಚಾರದಲ್ಲಿ ಸ್ಪಂದನೆ ಮಾಡುವುದಕ್ಕೆ ಎದ್ದುನಿಂತಿದ್ದಾರೆ. ನಾನಾದರೂ ಪ್ರಾರ್ಥನೆ ಮಾಡುತ್ತೇನೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಈ ಆರು ತಿಂಗಳ ಕಾಲಾವಧಿಯಲ್ಲಿ ಒಳ ಮೀಸಲಾತಿ ಒದಗಿಸಿಕೊಡುವುದಕ್ಕೆಂದು, ಈಗಾಗಲೇ ಎಲ್ಲಾ ವರದಿಯನ್ನು ತರಿಸಿಕೊಂಡಿದ್ದಾರೆ. ಎಲ್ಲಾ ವರದಿಗಳನ್ನು ತರಿಸಿಕೊಂಡು ಆದೇಶಕ್ಕಾಗಿ ಕಾಯುತ್ತಿದ್ದಾರೆ. ಆದಷ್ಟು ಬೇಗ ಈ ಒಳ ಮೀಸಲಾತಿಯನ್ನು ಕಲ್ಪಿಸಿಕೊಡಬೇಕೆಂದು

ಮುಖ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ ಸದನದ ಮುಖಾಂತರ ಪ್ರಾರ್ಥನೆ ಮಾಡಿಕೊಂಡು ಈ ಬಗ್ಗೆ ಸ್ಪಂದನೆ ಮಾಡುತ್ತಾರೆಂದು ಹೇಳಿ, ನನಗೆ ಅವಕಾಶ ಮಾಡಿಕೊಟ್ಟ ತಮಗೆ ಮನವಿ ಮಾಡುತ್ತೇನೆ. ಬಹುಶ: ಇವತ್ತು ಯಾವ ಮಟ್ಟಕ್ಕೆ ಹೋಗಿದೆಯೆಂದರೆ, ಇಡೀ ರಾಜ್ಯದಲ್ಲಿ ಈ ಜನಾಂಗ ಯಾವುದೇ ಚಳುವಳಿಗೆ ಸಿದ್ಧ ಎಂದು ಶಾಸಕರ ಮೇಲೆ ಒತ್ತಾಯ ಮಾಡುತ್ತಿದ್ದಾರೆ. ನಾವು ಆ ಜನಾಂಗದ ಮಧ್ಯೆ, ಆ ವರ್ಗದ ಮಧ್ಯೆ, ಆ ಸಮಾಜದ ಮಧ್ಯೆ ಸ್ಪಂದಿಸಬೇಕಾಗಿದೆ. ಆ ನಿಟ್ಟಿನಲ್ಲಿ ಈ ಸದನದ ಮುಖಾಂತರ ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇಡೀ ರಾಷ್ಟ್ರದ ವಿಚಾರ ಇದೆ. ಇದಕ್ಕೆ ಸ್ಪಂದನೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತಾ, ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆಲ್ಕೋಡ್ ಹನುಮಂತಪ್ಪ (ದೇವದುರ್ಗ)** : ಮಾನ್ಯ ಸಭಾಧ್ಯಕ್ಷರೇ, ಈ ವಿಷಯವಾಗಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಕಳೆದ ವರ್ಷದಲ್ಲಿ ನಾವು ಮೇಲ್ಮನೆ ಸದಸ್ಯರಾಗಿದ್ದ ಸಂದರ್ಭದಲ್ಲಿ, ನಾವೂ ಕೂಡ ನಮ್ಮ ಪಕ್ಷದ ವತಿಯಿಂದ ಒತ್ತಾಯ ಮಾಡಿದ್ದೇವೆ. ಏನೆಂದರೆ, ಒಳ ಮೀಸಲಾತಿ ಆಗಬೇಕು, ಎಲ್ಲಾ ವರ್ಗದ ಜನಾಂಗಕ್ಕೆ ಈ ರಿಸರ್ವೇಷನ್ ತಲುಪಬೇಕು. ಕೆಲವು ಜಾತಿಯವರಿಗೆ ರಿಸರ್ವೇಷನ್ ಸಿಗದಿರುವುದು ಉಂಟು. ಎಲ್ಲಾ ವರ್ಗದವರಿಗೆ ಎಷ್ಟೆಷ್ಟು ಅವಕಾಶಗಳು ಸಿಗಬೇಕಾಗಿತ್ತೋ ಅಷ್ಟು ಅವಕಾಶಗಳು ಸಿಕ್ಕಿಲ್ಲ. ಅವರಿಗೂ ಕೂಡ ಅವಕಾಶಗಳು ಸಿಗಬೇಕೆಂಬುದನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗದಲ್ಲಿ 101ಕ್ಕೂ ಹೆಚ್ಚು ಜಾತಿಗಳು ಈ ಪಟ್ಟಿಯಲ್ಲಿ ಸೇರಿವೆ. ಕೆಲವಷ್ಟು ಜನಾಂಗಕ್ಕೆ ಮಾತ್ರ ರಿಸರ್ವೇಷನ್ ಸಿಕ್ಕಿದೆ. ಈ ಲಿಸ್ಟ್‌ನಲ್ಲಿರತಕ್ಕ ಇನ್ನೂ ಅನೇಕ ಜನಾಂಗಕ್ಕೆ ರಿಸರ್ವೇಷನ್ ಸಿಕ್ಕಿಲ್ಲ. ನಮ್ಮ ಪಕ್ಷದ ವತಿಯಿಂದ ಅನೇಕ ಸದಸ್ಯರು ಮೇಲ್ಮನೆಯಲ್ಲಿ ಮಾತನಾಡಿದ್ದೇವೆ. ಈ ವಿಷಯದಲ್ಲಿ ಸರ್ಕಾರದ ಮನ ಒಲಿಸುವುದಕ್ಕೆ ಸಾಕಷ್ಟು ಹೋರಾಟವನ್ನೂ ಮೇಲ್ಮನೆಯಲ್ಲಿ ಮಾಡಿದ್ದೇವೆ. ಆ ಪರಿಣಾಮವಾಗಿ ಮತ್ತೆ ನಮ್ಮ ಸಹಾಯಕ್ಕಾಗಿ ಸನ್ಮಾನ್ಯ ಯಡಿಯೂರಪ್ಪನವರೂ ಕೂಡ ಆ ಸದನದಲ್ಲಿ ಇದ್ದರು. ಅವತ್ತು ನಾವೇನು ಮಾತನಾಡುತ್ತಿದ್ದೆವು, ಆಗ ಮಾನ್ಯ ಯಡಿಯೂರಪ್ಪನಂಥವರೂ ಕೂಡ ನಮಗೆ ಸಪೋರ್ಟ್ ಮಾಡಿ ಇದು ಆಗಬೇಕೆಂಬುದನ್ನೂ ಹೇಳಿದ್ದರು. ಅವತ್ತಿನ ಸಂದರ್ಭದಲ್ಲಿ ಅನೇಕ ಪಕ್ಷದ ಮುಖಂಡರು ಕೂಡ ಈ ಮೀಸಲಾತಿಯ ವರ್ಗೀಕರಣ ಆಗಬೇಕು ಮತ್ತು ಎಲ್ಲಾ ವರ್ಗದ ಜನಾಂಗಕ್ಕೆ ಇದು ಸಿಗಬೇಕು ಎಂಬುದಾಗಿ ಹೇಳಿದ್ದಾರೆ. ಏಕೆಂದರೆ, ಈಗಾಗಲೇ ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ ಒಳ ಮೀಸಲಾತಿ ಎಂಬುದು ಆಗಿದೆ. ಇಲ್ಲಿಯೂ ಕೂಡ ಆಗಲಿ ಎಂಬ ಅಭಿಪ್ರಾಯವನ್ನು ಸದನದಲ್ಲಿರತಕ್ಕ ಎಲ್ಲಾ ಸದಸ್ಯರೂ ಸರ್ವಾನುಮತದಿಂದ ಒಪ್ಪಿ, ಮನವಿಯನ್ನೂ ಮಾಡಿದ್ದೇವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಾವು ಮುಖ್ಯಮಂತ್ರಿಗಳನ್ನು ಭೇಟಿಯಾಗಿ,

ಮನವಿಗಳನ್ನು ಕೊಟ್ಟು, ಅನೇಕ ಸಂದರ್ಭಗಳಲ್ಲಿ ಮಾತನಾಡಿದ್ದೂ ಉಂಟು. ಅಮೇಲೆ, ಸನ್ಮಾನ್ಯ ದೇವೇಗೌಡರೂ ಕೂಡ ಒಳ ಮೀಸಲಾತಿ ಆಗಬೇಕೆಂದು ಸ್ಪಷ್ಟವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇದು ಅವರ ಇಚ್ಛೆ ಕೂಡ ಆಗಿದೆ. ಆ ಕಾರಣಕ್ಕಾಗಿ, ನಾನೂ ಕೂಡ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಈಗ ಏಕ ಸದಸ್ಯ ಆಯೋಗ ಆಗಿದೆ. ಆದಂಥ ಸಂದರ್ಭದಲ್ಲಿ ಅದರ ನಾಯಕತ್ವ ವಹಿಸಿ ಅಧ್ಯಕ್ಷರಾದಂಥ ಸನ್ಮಾನ್ಯ ಎನ್.ವೈ. ಹನುಮಂತಪ್ಪನವರು ಎಂ.ಪಿ. ಆದ ಮೇಲೆ ಆ ಸ್ಥಳ ಖಾಲಿ ಆಗಿದೆ. ಆ ಕಾರಣಕ್ಕಾಗಿ ಅದನ್ನು ಬೇಗನೆ ತುಂಬಬೇಕು.

**ಶ್ರೀ ಎಸ್.ಎಸ್. ಪಾಟೀಲ್** : ನಾವೂ ಕೂಡ ರಿಪೋರ್ಟ್ ಕೊಟ್ಟಿದ್ದೇವಲ್ಲಾ.

**ಶ್ರೀ ಆಲ್ಕೋಡ್ ಹನುಮಂತಪ್ಪ**: ಎಸ್.ಎಸ್. ಪಾಟೀಲರೂ, ನಾವು ಎಸ್.ಸಿ.ಎಸ್.ಟಿ. ಸಮಿತಿ ಸದಸ್ಯರಾಗಿದ್ದ ಸಂದರ್ಭದಲ್ಲಿ ಈ ವಿಚಾರಗಳನ್ನು ಚರ್ಚಿಸಿ, ಸಮಿತಿ ವತಿಯಿಂದ ಇದು ಆಗಬೇಕೆಂದು ವರದಿಯನ್ನೂ ಕೊಟ್ಟಿರುತ್ತೇವೆ. ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಸಮಿತಿ ಮುಖಾಂತರ ಕೊಟ್ಟಿದ್ದಾರೆ. ಆ ಕಾರಣಕ್ಕಾಗಿ, ತಮ್ಮ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುವುದೇನೆಂದರೆ, ಖಾಲಿಯಾಗಿರತಕ್ಕ ಏಕ ಸದಸ್ಯ ಆಯೋಗದ ಚೇರ್ಮನ್‌ರನ್ನು, ಯಾರಾದರೂ ನಿವೃತ್ತ ನ್ಯಾಯಮೂರ್ತಿಗಳಾಗಿರಬಹುದು ಅಥವಾ ಉತ್ತಮವಾದಂಥ ಮತ್ತು ಅನುಭವ ಇರತಕ್ಕಂಥ ವ್ಯಕ್ತಿಯನ್ನು ತಕ್ಷಣವೇ ನೇಮಕ ಮಾಡಬೇಕು. ಈ ಕಾರ್ಯವನ್ನು ಮುಂದುವರಿಸಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಿಕೊಂಡು, ಮಾತನಾಡುವ ಅವಕಾಶ ಕಲ್ಪಿಸಿಕೊಟ್ಟಿರತಕ್ಕಂಥ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಸನ್ಮಾನ್ಯ ಅಧ್ಯಕ್ಷರೇ, ಏನೋ ಇಲ್ಲಿ ಚರ್ಚೆ ಮಾಡಿ, ಅವರ ಬಗ್ಗೆ ಅನುಕಂಪದ ಮಾತುಗಳನ್ನು ಹೇಳಿ, ತೃಪ್ತಿಪಟ್ಟುಕೊಳ್ಳುವಂಥ ವಿಷಯ ಇದಲ್ಲ. ಬಾಗಲಕೋಟೆಯಲ್ಲಿ ರಾಜ್ಯಮಟ್ಟದ ಸಮಾವೇಶವಾದಾಗ ನಾನೇ ಹೋಗಿ ಆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ್ದೆ. ಈ ಮನೆಯಲ್ಲಿ, ಆ ಮನೆಯಲ್ಲಿ ಸಾಕಷ್ಟು ಬಾರಿ ಈ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಚರ್ಚೆಯಾಗಿದೆ. ಎಸ್.ಸಿ.ಎಸ್.ಟಿ. ಸುಮಾರು 1 ಕೋಟಿ 8 ಲಕ್ಷ ಅಂದಾಜು ಜನಸಂಖ್ಯೆ ಇದ್ದರೆ, ಈ ಮಾದಿಗ ಜನಾಂಗವೇ ಈ ರಾಜ್ಯದಲ್ಲಿ 67 ಲಕ್ಷ ಜನ ಇದ್ದಾರೆ. ಇಲ್ಲಿ ಮಾದಿಗರು ಸಮಗಾರರು, ಮಾಚಿಗಾರರು, ಡೋರ ಈ ರೀತಿ ಈ ಮಾದಿಗರಲ್ಲಿ ಬೇರೆ ಬೇರೆ, ನಮ್ಮ ಪಂಗಡದಲ್ಲಿ ಯಾವ ರೀತಿ ಇವೆ ಆ ರೀತಿಯಲ್ಲಿ ಒಳಪಂಗಡಗಳು ಇವೆ. ಇವರಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ ಯಾರಾದರೂ ಮುಂದೆ ಬಂದಿರುವ ಸಂಖ್ಯೆ ಎಷ್ಟೆಂದರೆ ಬೆರಳೆಣಿಸಿದಷ್ಟು. ಒಂದು ದು:ಖ ತರುವ ಸಂಗತಿ ಎಂದರೆ, ಸ್ವಾತಂತ್ರ್ಯ ಬಂದು 57 ವರ್ಷಗಳು ಆಗುತ್ತಾ ಬಂದರೂ ಸಹ, ಈ ಮೀಸಲಾತಿ ವ್ಯವಸ್ಥೆ ಏಕೆ ಬಂತು? ಪರಿಶಿಷ್ಟ ವರ್ಗದ ಜನರಿಗೆ ಏಕೆ ಮೀಸಲಾತಿ ಮಾಡಿದೆವು? ಬಹಳ ವರ್ಷಗಳಿಂದ ಒಂದು ರೀತಿ

ತುಳಿತಕ್ಕೆ ಒಳಗಾದಂಥ ಜನ, ಬಹುಸಂಖ್ಯಾತ ಮುಂದುವರಿದ ಜನರಿಂದ, ಅವರಿಗೆ ಕಿರುಕುಳ ಆಯಿತು. ಅವರು ಮುಂದೆ ಬರುವುದಕ್ಕೆ ಬಿಡಲಿಲ್ಲ. ಈ ಆಧಾರದ ಮೇಲೆ ಅವರಿಗೆ ಸವಲತ್ತುಗಳು ಸಿಗಬೇಕೆಂದು, ಈ ಮೀಸಲಾತಿ ತಂದು ಮೇಲೂ ಸಹ ಇವತ್ತು ಯಾರೋ ಹಿಡಿಯಷ್ಟು ಜನಕ್ಕೆ ಮಾತ್ರ ಈ ಸವಲತ್ತು ಸಿಕ್ಕಿತೇ ಹೊರತು ನಿಜವಾಗಿಯೂ ಸಹ ಈ ಜನಾಂಗಕ್ಕೆ ಏನು ನ್ಯಾಯ ಸಿಗಬೇಕಾಗಿತ್ತೋ, ಅದು ಸಿಗಲಿಲ್ಲವೆಂದು ಆಕ್ರೋಶ, ಇವತ್ತು ಆ ಸಮಾಜದಲ್ಲಿರುವಂಥಾದ್ದು ಸ್ವಾಭಾವಿಕವಾದ ಸಂಗತಿ. ಉತ್ತರ ಪ್ರದೇಶದಲ್ಲಿ ನಾವು ಅಧಿಕಾರಕ್ಕೆ ಬಂದಕಾಲದಲ್ಲಿ, ಹಿಮಾಚಲ ಪ್ರದೇಶದಲ್ಲಿ ನಾವು ಅಧಿಕಾರಕ್ಕೆ ಬಂದ ಕಾಲದಲ್ಲಿ, ನಮ್ಮ ಮುಖ್ಯಮಂತ್ರಿಗಳು ಇದ್ದಾಗ, ಹೆಮ್ಮೆಯಿಂದ ಈ ಮಾತನ್ನು ಹೇಳುತ್ತೇನೆ. ಈ ಮಾದಿಗರಿಗೆ ಒಳ ಮೀಸಲಾತಿಯನ್ನು ನಾವು ಕೊಟ್ಟಿದ್ದೇವೆ.

ಅದೇ ರೀತಿ ಹರ್ಯಾಣದಲ್ಲಿ ಆಂಧ್ರದಲ್ಲಿ, ಪಂಜಾಬ್‌ನಲ್ಲಿ, ಹೀಗೆ ಅನೇಕ ಈ ದೇಶದ ಬೇರೆ ಬೇರೆ ಪ್ರಮುಖ ರಾಜ್ಯಗಳಲ್ಲಿ ಈಗಾಗಲೇ ಈ ಒಳ ಮೀಸಲಾತಿ ಇದೆ. ಆದ್ದರಿಂದ ಇವತ್ತೇನು ಇಷ್ಟು ದೊಡ್ಡ ಪ್ರಮಾಣದಲ್ಲಿ ಕೂಗು ಎದ್ದಿದೆ, ಚುನಾವಣೆ ಬಂದಾಗ ನಾನು ಅವರಿಗೆ ಹೇಳಿದೆ, ಬಾಗಲಕೋಟೆ ಸಮಾವೇಶವಾದಾಗ ನೀವು ಚುನಾವಣೆ ಸಮಯದಲ್ಲಿ ಕೂಗಿದರೆ ಯಾರೋ ನಿಮ್ಮ ಬಗ್ಗೆ ಅನುಕಂಪದ ಮಾತನಾಡಿ ಬಿಟ್ಟು ನಿಮ್ಮ ಓಟನ್ನು ತೆಗೆದುಕೊಂಡು, ಕುರ್ಚಿ ಸಿಕ್ಕ ಮೇಲೆ ಇನ್ನೊಂದು ಐದು ವರ್ಷವಾದ ಮೇಲೆ ಅಪ್ಪಾ ನಿಮ್ಮ ನೆನಪು ಬರುವಂತಹದು, ಈ ಚುನಾವಣೆಗಳೆಲ್ಲಾ ಮುಗಿದ ಮೇಲೆ ಇದೊಂದು ತುದಿ ಮುಟ್ಟಿಸುವಂತಹ ಪ್ರಯತ್ನ ಮಾಡಿ. ನಿಜವಾಗಿಯೂ ನಿಮಗೆ ಸಾಮಾಜಿಕ ನ್ಯಾಯ ಸಿಗಬೇಕು, ಒಳ ಮೀಸಲಾತಿ ಸಿಗಬೇಕು. ನಮ್ಮ ಈ ಮಾದಿಗ ಸಮಾಜದ ಬಂಧುಗಳು, ಎಲ್ಲರಂತೆ ಬದುಕಿ ಬಾಳಬೇಕು ಎಂದು ನಿಮ್ಮ ಕಳಕಳಿ ಇದ್ದರೆ, ಅದು ನಾಲ್ಕು ದಿನಕ್ಕೆ ಆ ಹೋರಾಟ ಮುಗಿಯಬಾರದು. ನಾನೇಕೆ ಎದ್ದು ನಿಂತುಕೊಂಡೆ ಎಂದರೆ ಇವತ್ತು ನಮ್ಮ ಮಾನ್ಯ ಆಂಜನೇಯ ಅವರು ಮಾನ್ಯ ಆಲ್ಕೋಡ್ ಹನುಮಂತಪ್ಪನವರು ಹಾಗೂ ಮಾನ್ಯ ನಾರಾಯಣಸ್ವಾಮಿಯವರು ಮಾತನಾಡಿದರು. ಹಾಗಾದರೆ ಇತರೆಯವರ ಜವಾಬ್ದಾರಿ ಇಲ್ಲವೇನು? ಈ ಸಮಾಜಕ್ಕೆ ಇಂತಹ ಅನ್ಯಾಯವಾಗಿದೆ ಎಂದಾಗ ಪ್ರತಿಪಕ್ಷದಲ್ಲಿ ಕುಳಿತಿರುವಂತಹ ನಾನು ಈ ಸಂದರ್ಭದಲ್ಲಿ ಮಾತನಾಡದೇ ಇದ್ದರೆ ಕರ್ತವ್ಯ ಲೋಪವಾಗುತ್ತದೆ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ತತ್‌ಕ್ಷಣ ನಾನು, ನೀವು ಘೋಷಣೆ ಮಾಡಬೇಕು ಎಂದು ಹೇಳುವುದಿಲ್ಲ. ಚುನಾವಣೆ ಮುನ್ನ ನೀವು ಯಾವುದೋ ಒಂದು ಸಮಿತಿ ಮಾಡುತ್ತೇನೆಂದು ಹೇಳಿದಿರಿ, ಮಾಡಿದಿರಿ. ಆದದ್ದೇನು ಚುನಾವಣೆಯಲ್ಲಿ ಓಟು ತೆಗೆದುಕೊಳ್ಳುವುದಕ್ಕೆ ಆಯಿತು ಅಷ್ಟೇ. ಯಾವತ್ತೂ ರಾಜಕೀಯ ಕ್ಷೇತ್ರದಲ್ಲಿ ಆಗುತ್ತಿರುವ ಅನ್ಯಾಯವೆಂದರೆ, ಚುನಾವಣೆ ಬಂದಾಗ ಈ ರೀತಿ ಸಮಿತಿಗಳನ್ನು ಮಾಡಿ, ಅವರ ಮೂಗಿಗೆ ತುಪ್ಪ ಹಚ್ಚಿ ಅಲ್ಲಿಗೆ ಮರೆತು ಹೋಗುತ್ತದೆ. ಮತ್ತೆ ಇನ್ನೊಂದು ಚುನಾವಣೆ ಬಂದಾಗಲೇ ನೀವು ಎದ್ದಾಗಲೇ ನೆನಪು ಮಾಡುವಂತಹದ್ದು. ಅದಕ್ಕೆ ನಾನು ನಿಮಗೆ ಹೇಳುತ್ತೇನೆ.

ಈ ಹೋರಾಟದಲ್ಲಿ ನಾವು ನಿಮ್ಮ ಜೊತೆಗೆ ಇದ್ದೇವೆ. ಕೇವಲ ಮಾದಿಗ ಸಮಾಜಕ್ಕೆ ಸೀಮಿತವಾದಂತಹ ಹೋರಾಟವಲ್ಲ. ಒಂದು ಪಕ್ಷ, ಅದು ವಿರೋಧ ಪಕ್ಷ ಇರಬಹುದು, ಆಡಳಿತ ಪಕ್ಷ ಇರಬಹುದು. ಈ ರೀತಿ ನ್ಯಾಯವಾಗಿ ಅವರ ಮನಸ್ಸಿಗೆ ನೋವು ಬಂದು ಆ ರೀತಿ ಸವಲತ್ತುಗಳು ಸಿಕ್ಕಿಲ್ಲ ಎನ್ನುವಂತಹದು ಅಂಕಿ ಅಂಶಗಳ ಆಧಾರದ ಮೇಲೆ ಮನವರಿಕೆ ಆದಮೇಲೆ ಅದನ್ನು ಕಾರ್ಯರೂಪಕ್ಕೆ ತರಬೇಕಾದಂತಹದು ನಮ್ಮ ಆದ್ಯ ಕರ್ತವ್ಯ. ವರದಿಗಳನ್ನು ತರಿಸಿಕೊಳ್ಳಿ, ದಿಢೀರ್ ಎಂದು ಇಲ್ಲಿ ಘೋಷಣೆ ಮಾಡಿ ಎಂದು ನಾನೇನೂ ಹೇಳುವುದಿಲ್ಲ. ಆದರೆ ಇವತ್ತು ಈ ಸಮಾಜಕ್ಕೆ ಅನ್ಯಾಯ ಆಗಿರುವುದರಿಂದ ಈ ಮೀಸಲಾತಿಯಿಂದ ಈ ಒಂದು ಗುಂಪಿಗೆ ಏನು ಅನುಕೂಲತೆಗಳು ಸಿಗಬೇಕಾಗಿತ್ತೋ, ಆ ಅನುಕೂಲತೆಗಳು ಸಿಕ್ಕಿಲ್ಲ. ಎಲ್ಲಾ ರೀತಿಯಿಂದಲೂ ಅವರು ಹಿಂದುಳಿದಿರುವಂತಹ ಈ ಸಂದರ್ಭದಲ್ಲಿ ಈ ಒಳ ಮೀಸಲಾತಿಯನ್ನು ದಯಮಾಡಿ ಈ ಮಾದಿಗ ಸಮಾಜಕ್ಕೆ ಕೊಡಬೇಕು. ಬಹುಶ: ಆ ಕಡೆ ಈ ಕಡೆ ಕುಳಿತಿರುವಂತಹ ಯಾವುದೇ ರಾಜಕಾರಣಿ ಆಗಲಿ, ಈಗ ಚುನಾವಣೆಯು ಹಿಂದೆ ಮುಂದೆ ಎಂದರೆ ರಾಜಕೀಯ ಲಾಭಕ್ಕೆ ಮಾತನಾಡುತ್ತಾರೆ ಎಂದಾಗುತ್ತದೆ. ಚುನಾವಣೆ ನನ್ನ ಪ್ರಕಾರ ಇನ್ನೂ ನಾಲ್ಕೂವರೆ ವರ್ಷ, ನಾಲ್ಕೂಮುಕ್ಕಾಲು ವರ್ಷ ನಾವು ನೆಮ್ಮದಿಯಿಂದ ಇರಬಹುದು ಎಂದು ತಿಳಿದುಕೊಂಡಿದ್ದೇನೆ. ಈ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಕಾಲದಲ್ಲಿ ಆ ಎದೆಗಾರಿಕೆಯನ್ನು ತೋರಿಸಿ. ರಾಜಕೀಯ ಇಚ್ಛಾ ಶಕ್ತಿಯನ್ನು ವ್ಯಕ್ತಪಡಿಸಿ, ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಬಗ್ಗೆ ಕೇವಲ ಅನುಕಂಪದಿಂದ ಮಾತನಾಡದೇ ಇದನ್ನು ನಾನು ಕಾರ್ಯರೂಪಕ್ಕೆ ತರುತ್ತೇನೆ ಯಡಿಯೂರಪ್ಪನವರೇ, ಆ ಸಮಾಜಕ್ಕೆ ಇಷ್ಟು ವರ್ಷದಿಂದ ಅನ್ಯಾಯ ಆಗಿದೆ, ನನಗೆ ಮನವರಿಕೆ ಆಗಿದೆ. ಇಷ್ಟು ವರ್ಷದ ರಾಜಕೀಯದ ಅನುಭವ ಇರುವಂತಹ ನಿಮಗೆ ಯಾವುದೇ ಅಂಕಿ ಅಂಶದ ಅಗತ್ಯ ಇಲ್ಲ. ನಿಮಗೆ ಎಲ್ಲಾ ವಿವರಗಳೂ ಗೊತ್ತಿದೆ. ಆದ್ದರಿಂದ ಈ ನಿರ್ಧಾರಕ್ಕೆ ಈ ಸರ್ಕಾರ ಬಂದು ಅವರಿಗೆ ಅನುಕೂಲ ಮಾಡಿಕೊಡಬೇಕು. ಒಳ ಮೀಸಲಾತಿಯನ್ನು ತರಬೇಕು ಎನ್ನುವಂತಹ ಒತ್ತಾಯವನ್ನು ಮಾಡುತ್ತಾ, ನಾನು ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಸ್ಪಷ್ಟವಾದಂತಹ ಉತ್ತರವನ್ನು ಕೊಡಬೇಕೆಂಬ ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :** ಮಾನ್ಯ ಅಧ್ಯಕ್ಷರೆ, ಗೆಳೆಯರಾದಂತಹ ಮಾನ್ಯ ಆಂಜನೇಯ ಅವರು ಮತ್ತು ಬೇರೆ ಮಿತ್ರರೂ ಕೂಡ ಮಾತನಾಡಿದ್ದಾರೆ ಮತ್ತು ವಿಶೇಷವಾಗಿ ಮಾನ್ಯ ಯಡಿಯೂರಪ್ಪನವರೂ ಕೂಡ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ಒಳ ಮೀಸಲಾತಿ ಸೌಲಭ್ಯ ಸಿಗಬೇಕು ಎನ್ನತಕ್ಕದ್ದರ ಬಗ್ಗೆ ಆಂಧ್ರ ಪ್ರದೇಶದಲ್ಲಿ ಸಾಕಷ್ಟು ಹೋರಾಟ ಆಗಿದೆ. ಇಲ್ಲಿಯೂ ಕೂಡ ಬಹಳ ಸಮಾಲೋಚನೆಗಳು ಆಗಿವೆ. ಆಗಿನ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಆಗಿದೆ. ನಾನೂ ಕೂಡ ಸಮಾಲೋಚನೆಯಲ್ಲಿ ಭಾಗಿ ಆಗಿದ್ದೆ. ಹೋದ ವರ್ಷ

ಇಲ್ಲಿ ಒಂದು ದೊಡ್ಡ ಸಮಾವೇಶ ಆಯಿತು. ಆಗಿನ ಮುಖ್ಯಮಂತ್ರಿಗಳು ಹೋಗಿ ಮಾತನಾಡಿ ಎಂದು ನನ್ನನ್ನೇ ಕಳುಹಿಸಿಕೊಟ್ಟರು. ಆ ಸಮಾವೇಶದಲ್ಲಿ ಆ ಸಮಾಜಕ್ಕೆ ಸಂಬಂಧಪಟ್ಟಂತಹ ಸ್ವಾಮಿಗಳೂ ಕೂಡ ಇದ್ದರು. ನಾನು ಅವರಿಗೆ ಹೇಳಿದ್ದೆ, ಎರಡು ಮೂರು ದಿವಸ ಅವಕಾಶ ಕೊಡಿ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ. ಈ ಒಂದು ಮಾದಿಗರ ಮನಸ್ಸಿನಲ್ಲಿ ಏನು ಒಳ ಮೀಸಲಾತಿ ಇದೆ, ಇದರ ಬಗ್ಗೆ ಪರಿಶೀಲಿಸುವ ನಾವು ಕಮಿಷನ್ ನೇಮಕ ಮಾಡಬೇಕು. ಆ ಕಮಿಷನ್ ಮುಖಾಂತರ ಸರ್ಕಾರಕ್ಕೆ ಒಂದು ವರದಿ ಬಂದರೆ ಅದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿದು, ಆವಾಗ ಶ್ರೀ ಎ. ಕೃಷ್ಣಪ್ಪನವರು ಸಮಾಜ ಕಲ್ಯಾಣ ಮಂತ್ರಿಯಾಗಿದ್ದರು. ಅವರು ಹಾಗೂ ನಾನು ಮಾನ್ಯ ಎನ್.ವೈ. ಹನುಮಂತಪ್ಪನವರನ್ನು ಕರೆಸಿದಾಗ ಅವರು ಇಲ್ಲ ಬೇಡ ಎಂದರು. ಇಲ್ಲ ನೀವು ಒಬ್ಬರೇ ಸೂಕ್ತವಾದಂತಹ ವ್ಯಕ್ತಿ, ನಿಮಗೆ ಸ್ವಲ್ಪ ಸೋಷಿಯಲ್ ಪ್ರಾಬ್ಲಮ್ಸ್ ಗೊತ್ತಿದೆ ಎಂದು ಹೇಳಿ ಅವರ ಮನ ಒಲಿಸಿ, ಅವರ ನೇತೃತ್ವದಲ್ಲಿ ಕಮಿಷನ್ ಆಯಿತು. ಈಗ ಅವರು ಚುನಾವಣೆಗೆ ನಿಂತು ಲೋಕಸಭೆಗೆ ಆರಿಸಿ ಬಂದಿದ್ದಾರೆ. ಅವರೂ ಕೂಡ ನನಗೆ ಎಷ್ಟೋ ಸಲ ಫೋನ್ ಮಾಡಿ ನನ್ನ ಜಾಗದಲ್ಲಿ ಒಬ್ಬರನ್ನು ನೇಮಿಸಬೇಕು ಎಂದು ಹೇಳಿದ್ದಾರೆ. ಮತ್ತು ಈಗಾಗಲೇ ಶ್ರೀ ಆಂಜನೇಯ ಅವರು ಹೇಳಿದ ಹಾಗೆ ಈ ಬಗ್ಗೆ ಸಾಕಷ್ಟು ಹೋರಾಟ ನಡೆದಿದೆ. ಮೊನ್ನೆ ಕೂಡ ಎಲ್ಲಾ ಶಾಸಕರ ಒಂದು ದೊಡ್ಡ ಪ್ರತಿಭಟನಾ ನಿಯೋಗ ಬಂದು ನನ್ನನ್ನು ಭೇಟಿ ಅದರು. ಅವರಿಗೆ ನಾನು ಹೇಳಿದ್ದೇನೆ, ಬಹಳ ತೀವ್ರಗತಿಯಿಂದ ಸರ್ಕಾರ ಅದರ ಬಗ್ಗೆ ಗಮನ ಕೊಡುತ್ತದೆ. ಒಬ್ಬ ರಿಟೈರ್ಡ್ ಹೈಕೋರ್ಟ್ ಜಡ್ಜ್ ಅವರ ನೇತೃತ್ವದಲ್ಲಿ ಸಮಿತಿ ನೇಮಕ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನೂ ಕೂಡ ಹೇಳಿದ್ದೇನೆ. ಈಗಾಗಲೇ ಮಾನ್ಯ ಮಂಜುನಾಥ್ ಅವರ ಜೊತೆಯಲ್ಲಿ ಮಾತನಾಡಿದಾಗ ಅವರೂ ಕೂಡ ಕಮೀಷನ್‌ಗೆ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡತಕ್ಕದ್ದು ಒಳ್ಳೆಯದು ಎಂದು ಹೇಳಿದರು. ಈಗ ನಾವು ಎರಡು ಮೂರು ದಿವಸದೊಳಗೆ ಮತ್ತೆ ತಮ್ಮನ್ನು ವಿಚಾರ ಮಾಡುತ್ತೇವೆ. ಮಾನ್ಯ ಮಂಜುನಾಥ್ ಅವರು ನಾವು ಎಲ್ಲಾ ಕೂಡಿ ಸಂಪುಟದಲ್ಲಿ ಕೂಡ ಚರ್ಚೆ ಮಾಡಿ ಬಹಳ ತೀವ್ರವಾಗಿ ಆ ಕಮಿಷನ್‌ನ ಮುಖ್ಯಸ್ಥರನ್ನು ನೇಮಕ ಮಾಡತಕ್ಕ ಭರವಸೆಯನ್ನು ಕೊಡುತ್ತಿದ್ದೇನೆ. ಮತ್ತೆ ಬ್ಯಾಕ್‌ಲಾಗ್ ಬಗ್ಗೆ ಕೇಳಿದರು. ಈ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರಿಗೆ ಇವತ್ತು ಸುಪ್ರಿಂ ಕೋರ್ಟಿನ ಆದೇಶದ ಪ್ರಕಾರ 1984ರಲ್ಲಿ ಏನು ಬೇರೆ ಜನರಿಗೆ ಹೆಚ್ಚಿನ ಹುದ್ದೆಗೆ ಅವಕಾಶ ಕೊಟ್ಟು, ಇಂಜಿನಿಯರಿಂಗ್, ಬೇರೆ ಕಡೆಗೆ, ಯಾರು ಇವತ್ತು 40 ವರ್ಷವಾದರೂ ಕೂಡ ಅವರಿಗೆ ಇವತ್ತು ಹುದ್ದೆ ಭರ್ತಿ ಆಗತಕ್ಕಂಥ ಅವಕಾಶ ಇಲ್ಲ. ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುತ್ತಿದ್ದೇನೆ. ಪ್ರಪ್ರಥಮವಾಗಿ ಕರ್ನಾಟಕದಲ್ಲಿ

ಸ್ಲ್ಯಾಬ್ ಏನು ಇದೆ, 18 ಇಯರ್ಸ್ 27 ಇಯರ್ಸ್, ಟು 27 ಟು 34 ಇಯರ್ಸ್, 34 ರಿಂದ 40 ವರ್ಷ. ಈ ಮೂರು ಸ್ಲ್ಯಾಬ್ ಮಾಡಿದ ಉದ್ದೇಶ ಯಾರು ಏಜ್ ಬ್ಬಾರ್ ಆಗುತ್ತಿದ್ದಾರೆ. ಉದ್ಯೋಗದಲ್ಲಿ ಅವರೆಲ್ಲರಿಗೂ ಮೊದಲು ಆದ್ಯತೆ ಕೊಡತಕ್ಕಂಥದ್ದು ಎಂದು ಮಾಡಿ 1347 ಜನರಿಗೆ ಉದ್ಯೋಗ ಕೊಟ್ಟಿದ್ದೇವೆ. ಇನ್ನು ಕೇವಲ 67 ಜನರಿಗೆ ಇವತ್ತು ಕೊಡಬೇಕಾಗಿದೆ. We have to create the vacancies. ಅದನ್ನೂ ಕೂಡ ನಾಳೆ ನಾವು ಸಂಪುಟದ ಸಭೆಯಲ್ಲಿ ಮಾತನಾಡುತ್ತಿದ್ದೇವೆ. ಅವರೇನು ಹೇಳುತ್ತಾರೆ ಎಂದರೆ, ನಮಗೆ ಪರ್ಮನೆಂಟಾಗಿ ಮಾಡಬೇಕು ಎಂದು ಪರ್ಮನೆಂಟ್ ಆಗಿ ಮಾಡತಕ್ಕದ್ದು ವಿಷಯ ಬೇರೆ. ಇವತ್ತು ಈ ರಾಜ್ಯದಲ್ಲಿ ಏನು ಬ್ಯಾಕ್‌ಲಾಗ್‌ದಲ್ಲಿ 1347 ಮಂದಿ ಹರಿಜನ-ಗಿರಿಜನರಿಗೆ ಅವಕಾಶ ಸಿಕ್ಕಿದೆ, 67 ಮಂದಿಗೆ ಸಿಕ್ಕಿಲ್ಲ. ಅದರ ಬಗ್ಗೆ ಕೂಡ ಸರ್ಕಾರ ವಿಚಾರ ಮಾಡಿ ತೀರ್ಮಾನ ಮಾಡುತ್ತದೆ.

**ಶ್ರೀ ವಾಟಾಳ್ ನಾಗರಾಜ್** (ಚಾಮರಾಜನಗರ) : ಸುಮಾರು ಎರಡು ವರ್ಷಗಳಿಂದ ವಿಧಾನಸೌಧದ ಹಿಂಭಾಗದಲ್ಲಿ ಮಾನ್ಯ ಜಗಜೀವನರಾಂ ಅವರ ಪ್ರತಿಮೆ ಬಂದು, ಆ ಪ್ರತಿಮೆ ಸುತ್ತ ಬಟ್ಟೆ ಸುತ್ತಿಟ್ಟಿದ್ದೀರಿ. ಯಾವ ಕಾರಣಕ್ಕೆ ಅದನ್ನು ಇಟ್ಟಿದ್ದೀರಿ? ಯಾವಾಗ ಅದನ್ನು ಆರಂಭ ಮಾಡುತ್ತೀರಿ? ವಿಧಾನಸೌಧದ ಹಿಂಭಾಗದಲ್ಲಿ ಈ ಕಡೆಯಿಂದ ಹೋಗುವಾಗ ಎಡಗಡೆ ಭಾಗ. ಹಿರಿಯ ನಾಯಕರು, ಹಸಿರು ಕ್ರಾಂತಿಯ ದೊಡ್ಡ ಹೋರಾಟಗಾರರು. ಅವರ ಬಗ್ಗೆ ಒಂದು ಪ್ರತಿಮೆ ಮಾಡುತ್ತೇವೆಂದು ಹೇಳಿ ತೀರ್ಮಾನ ಆಯಿತು. ತೀರ್ಮಾನವಾದ ಮೇಲೆ ಆ ಪ್ರತಿಮೆ ಬಂದು, ಆ ಪ್ರತಿಮೆಯ ಸುತ್ತ ಬಟ್ಟೆ ಸುತ್ತಿಟ್ಟಿದ್ದೀರಿ. ತಮ್ಮನ್ನು ಕೇಳುತ್ತಿದ್ದೇನೆ. ದಯಮಾಡಿ ಎಷ್ಟು ಬೇಗ, ಯಾವಾಗ ಆ ಪ್ರತಿಮೆಯನ್ನು ಉದ್ಘಾಟನೆ ಮಾಡುತ್ತೀರಿ ಅದು ಬಹಳ ಮುಖ್ಯವಾಗಿ ಆಗಬೇಕಾಗಿದೆ. ಪ್ರತಿಮೆಗೋಸ್ಕರ ಹೋರಾಟ ನಡೆದು ಪ್ರತಿಮೆ ಬರಬೇಕು ಎಂದು ಹೇಳಿ ಎಲ್ಲಾ ತೀರ್ಮಾನ ಆಗಿರುವಾಗ ಆ ಪ್ರತಿಮೆ ಕೂಡಲೇ ಉದ್ಘಾಟನೆ ಆಗದೆ ಹಾಗೆಯೇ ಕುಳಿತಿದೆ. ಅದರ ಬಗ್ಗೆ ತಾವು ದಯವಿಟ್ಟು ಪರಿಶೀಲನೆ ಮಾಡಿ. ಯಾವಾಗ ಮಾಡುತ್ತೀರಿ ಅಲ್ಲಿ ಏನು ಪ್ರತಿಮೆ ಬಂದಿದೆ, ಆ ಪ್ರತಿಮೆ ಸರಿ ಇಲ್ಲ ಎನ್ನತಕ್ಕದ್ದು ಒಂದು ವಾದ ಇದೆ. ಅದಕ್ಕೆ ಬೇರೆ ಕಡೆಗೆ ಪ್ರತಿಮೆ ಮಾಡಿಸಲು ತಾವು ಕೊಟ್ಟಿದ್ದೀರಾ? ಹೊಸ ಪ್ರತಿಮೆ ಬರುತ್ತದೆಯೇ? ಆ ಪ್ರತಿಮೆ ಯಾವಾಗ ಬರುತ್ತದೆ? ಅದರ ಬಗ್ಗೆ ತಾವು ಸ್ವಲ್ಪ ಪ್ರಾಮಾಣಿಕವಾಗಿ ಹೇಳಬೇಕು. ನೀವೇ ಅದನ್ನು ಬೇಗ ಉದ್ಘಾಟನೆ ಮಾಡಬೇಕು. ಅದನ್ನು ತಾವು ತಿಳಿಸಬೇಕು.

**ಶ್ರೀ ಧರ್ಮಸಿಂಗ್** : ಈಗ ಅದು ಯಾವ ಕಾರಣಕ್ಕೂ ನಿಂತಿದೆ ಎನ್ನತಕ್ಕದ್ದನ್ನು ನಾನು ವಿಚಾರಣೆ ಮಾಡುತ್ತೇನೆ. ಪ್ರತಿಮೆ ಮಾಡತಕ್ಕ ರೀತಿಯಲ್ಲಿ ಯಾರು ಸರಿಯಾದ ರೀತಿಯಲ್ಲಿ ಪ್ರತಿಮೆ ಮಾಡುತ್ತಾರೆ ಅವರಿಗೆ ನಾವು ಪ್ರತಿಮೆ ಮಾಡಲು

ಕೊಡಬೇಕಾಗಿತ್ತು. ದೇವರಾಜ್ ಅರಸ್ ಅವರ ಪ್ರತಿಮೆ ಕೂಡ ಸರಿಯಾಗಿರಲಿಲ್ಲ, ಅದನ್ನು ಮಾಡತಕ್ಕ ಕಾಲದಲ್ಲಿ ನಾವು ಲಿನ್ ಮತ್ತು ಚಿರಂಜೀವಿ ಸಿಂಗ್ ಅವರಿಗೆ ವಹಿಸಿಕೊಟ್ಟಿದ್ದೆವು. ಅವರು ಅವರಿಗೆ ಬಹಳ ಆಪ್ತರಾಗಿದ್ದರು. ಅವರಿಗೆ ಕಳುಹಿಸಿ ಕೊಟ್ಟು 3–4 ಸಲ ಶ್ರೀಮತಿ ಚಂದ್ರಪ್ರಭಾ ಅರಸ್ ಮತ್ತು ಶ್ರೀಮತಿ ಭಾರತಿ ಅವರು ಎಲ್ಲಾ ಮಕ್ಕಳನ್ನೂ ಕೂಡ ಕಳುಹಿಸಿ ಕೊಟ್ಟೆವು. ಆದರೂ ಸರಿ ಆಗಲಿಲ್ಲ. ಅದೇ ರೀತಿಯಾಗಿ ಡಾ: ಅಂಬೇಡ್ಕರ್ ಅವರ ಪ್ರತಿಮೆ ನಾವು ಮಾಡಿದ್ದೇವೆ. ದಿವಂಗತ ಗುಂಡೂ ರಾವ್ ಅವರ ಕಾಲದಲ್ಲಿ ನಾನು ಮತ್ತು ಮಾನ್ಯ ಖರ್ಗೆಯವರು ನಾಲ್ಕು ಸಲ ಬಾಂಬೆಗೆ ಹೋಗಿದ್ದೆವು. ಅಲ್ಲಿ ವಾಗ್ ಎಂಬ ವ್ಯಕ್ತಿ ಇದ್ದಾರೆ. ವಾಗ್ ಅವರು ಏನು ಅಂಬೇಡ್ಕರ್ ಅವರ ಪ್ರತಿಮೆ ಎದುರುಗಡೆ ಇರತಕ್ಕದ್ದನ್ನು ಮಾಡಿದ್ದಾರೆ ಆ ಮಾದರಿಯಲ್ಲೇ ಮಾಡಬೇಕೆಂದು ಕೂಡ ಆ ಕಾಲದಲ್ಲೇ ವಿಚಾರ ಮಾಡಿದ್ದು ಉಂಟು. ನಾವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಖುದ್ದಾಗಿ ಹೋಗಿ ಸ್ಟುಡಿಯೋದಲ್ಲಿ ಅಂಬೇಡ್ಕರ್ ಪ್ರತಿಮೆ ಯಾವ ರೀತಿಯಾಗಿ ಇದೆ ಹೈದರಾಬಾದಿನ ಟ್ಯಾಂಕ್ ಬಂಡ್‌ನಲ್ಲಿದೆ ಮತ್ತೆ ಪಾರ್ಲಿಮೆಂಟ್ ಹೌಸ್‌ನಲ್ಲಿದೆ, ಅದೇ ತರಹ ಬರಬೇಕು. ಪ್ರತಿಮೆಯನ್ನು ನೋಡಿದ ಮೇಲೆ ನಿಜವಾಗಿ ಅದೇ ರೀತಿ ಮಾಡಿದ್ದಾರೆ ಎನ್ನತಕ್ಕ ಮಾತೂ ಕೂಡ ಬರಬೇಕಾಗಿದೆ. ಇವತ್ತು ಶ್ರೀ ಜಗಜೀವನ ರಾಂ ಅವರೂ ಕೂಡ ಅಷ್ಟೇ ಒಂದು ರಾಷ್ಟ್ರದ ನಾಯಕರಾಗಿ, ಪ್ರತಿಭಾವಂತರಾಗಿ, ಒಳ್ಳೆಯ ಸಂಸದೀಯ ಪಟುಗಳಾಗಿದ್ದವರು. ಅವರ ಬಗ್ಗೆ ಕೂಡ ಒಂದು ಪ್ರತಿಮೆ ಆಗಬೇಕೆಂದು ನಾವು ನಿರ್ಧಾರ ತೆಗೆದುಕೊಂಡಿದ್ದೆವು. ಆ ಪ್ರತಿಮೆ ಸರಿಯಾಗಿ ಇಲ್ಲ ಎಂದು ನಿಲ್ಲಿಸಿದ್ದಾರೋ ಅಥವಾ ಏನಾಗಿದೆ ಎಂಬುದನ್ನು ಒಂದು ಸಾರಿ ಇನ್ಸ್‌ಪೆಕ್ಷನ್ ಮಾಡಿ ನೋಡಿ ನಿಮ್ಮನ್ನು ಸೆಷನ್ ಆದಮೇಲೆ ಕರೆದುಕೊಂಡು ಹೋಗೋಣ. We will inspect the statue. ಸರಿಯಾಗಿ ಆಗಲಾರದೆ ಹೋದರೆ ಮತ್ತೆ ಅದನ್ನು ಸರಿಯಾದ ರೀತಿಯಲ್ಲಿ ಮಾಡಿಸಿ ಅನಾವರಣ ಮಾಡೋಣ.

**ಅಧ್ಯಕ್ಷರು** : ಈಗ ಸ್ಪಷ್ಟೀಕರಣ ಕೇಳಲು ಸಮಯ ಇಲ್ಲ.

**ಶ್ರೀ ಹೆಚ್. ಆಂಜನೇಯ** : ಸಾರ್ ಒಂದು ನಿಮಿಷ ಸಾರ್.

**ಅಧ್ಯಕ್ಷರು** : ದಯಮಾಡಿ, ಈ ತರಹ ಆದರೆ ಹೇಗೆ?

**ಶ್ರೀ ಹೆಚ್. ಆಂಜನೇಯ** : ತಾವು ಈಗ ಆಯೋಗವನ್ನು ರಚನೆ ಮಾಡುತ್ತೇವೆಂದು ಹೇಳಿದ್ದೀರಿ. ಅದರ ಜೊತೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಮತ್ತೆ ತುಂಬುತ್ತೇವೆಂದು ಹೇಳುತ್ತೀರಿ. ದಯಮಾಡಿ ಆ ಆಯೋಗದ ವರದಿ ಬರುವವರೆಗೆ, ಬೈಫರ್ಕೇಟ್ ಆಗುವವರೆಗೆ, ವಿಂಗಡಣೆ ಆಗುವವರೆಗೆ ತಾವು ದಯಮಾಡಿ, ಈಗೇನು ಬ್ಯಾಕ್‌ಲಾಗ್ ಹುದ್ದೆಗಳು ಇವೆ, ಅದನ್ನು ತುಂಬಬಾರದು ಎಂದು ಹೇಳಿ ನಾನು ಪ್ರಾರ್ಥನೆ ಮಾಡುತ್ತೇನೆ. ಅದನ್ನು ತುಂಬತಕ್ಕ ಸಂದರ್ಭದಲ್ಲಿ ಅಸ್ಪೃಶ್ಯರನ್ನಿಟ್ಟು ತುಂಬುತ್ತಿದ್ದಾರೆ. ಒಂದು ಸಾರಿ ಒಂದು ಅರ್ಜಿಯನ್ನು ಕರೆದು ಬಿಟ್ಟು ಒಬ್ಬನನ್ನ

ಸೆಲೆಕ್ಟ್ ಮಾಡಬೇಕಾಗಿತ್ತು. ಒಬ್ಬ ಬೆಂಗಳೂರು ಯೂನಿವರ್ಸಿಟಿಯಲ್ಲಿ ಸೆಲೆಕ್ಟ್ ಆದರೆ ಅಲ್ಲೂ ಹೋಗಿಲ್ಲ. ಧಾರವಾಡ ಯೂನಿವರ್ಸಿಟಿಯಲ್ಲಿ ಸೆಲೆಕ್ಟ್ ಆಗಿದ್ದರೆ ಅಲ್ಲೂ ಹೋಗಿಲ್ಲ. ಅಮೇಲೆ ಕುವೆಂಪು ಯೂನಿವರ್ಸಿಟಿಯಲ್ಲಿ ಸೆಲೆಕ್ಟ್ ಆಗಿದ್ದರೆ ಅಲ್ಲೂ ಹೋಗಿಲ್ಲ. ಆತ ಬೇರೆ ಬೇರೆ ಹುದ್ದೆಗಳನ್ನು ಕಾಯುತ್ತಿದ್ದಾನೆ. ಒಬ್ಬ ಅಭ್ಯರ್ಥಿ ಬೇರೆ ಬೇರೆ ಹುದ್ದೆಗಳಿಗಾಗಿ ಕಾಯುತ್ತಿದ್ದಾನೆ. ಸುಮಾರು 20–30 ಹುದ್ದೆಗಳಿಗೆ ಒಬ್ಬನೇ ಆಯ್ಕೆ ಆಗಿದ್ದಾನೆ. ಈ ಆಯ್ಕೆ ವಿಧಾನ ಸರಿ ಇಲ್ಲ. ಮೇಲಾಗಿ ನಮಗೆ ಅಲ್ಲೇ ಅನ್ಯಾಯ ಆಗಿದೆ ಎಂದು ಇಲ್ಲಿ ನಾವು ಕೂಗು ಎತ್ತುತ್ತಿರುವುದು. ಆದ್ದರಿಂದ ದಯಮಾಡಿ ಅದು ವರದಿ ಬರುವವರೆಗೂ, ತೀರ್ಮಾನ ಆಗುವವರೆಗೂ ಕೂಡ ದಯಮಾಡಿ ತಾವು ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಬಾರದು ಎಂದು ಹೇಳಿ ನಾನು ಈ ಸಂದರ್ಭದಲ್ಲಿ ನನ್ನ ಒತ್ತಾಯ ಮತ್ತು ಪ್ರಾರ್ಥನೆ.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :** ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಹೆಚ್.ಡಿ. ಬಸವರಾಜ್ :** ಕಾವೇರಿ ವಿಚಾರದ ಬಗ್ಗೆ ಮಾತನಾಡಬೇಕಾಗಿದೆ.

**ಶ್ರೀ ಎಂ.ಪಿ. ವೆಂಕಟೇಶ್ :** ಮಾನ್ಯ ಅಧ್ಯಕ್ಷರೆ, ನಾವು 15 ದಿವಸಗಳಿಂದ ನಿಯಮ 69ರ ಮೇರೆಗೆ ಚರ್ಚೆ ಮಾಡಬೇಕೆಂದು ಕಾಯುತ್ತಿದ್ದೇವೆ.

**ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :** ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ

**ಗೊಂದಲ**

**ಶ್ರೀ ಎಂ.ಪಿ. ವೆಂಕಟೇಶ್ :** 15 ದಿವಸ ಆಯಿತು. 15 ದಿವಸದಿಂದ ಅವಕಾಶಕ್ಕೆ ಕಾಯುತ್ತಲೇ ಇದ್ದೇವೆ.

**ಅಧ್ಯಕ್ಷರು :** ಈಗ ವಿಷಯ ಎತ್ತಿಕೊಳ್ಳುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಂ.ಪಿ. ವೆಂಕಟೇಶ್ :** ನಾವು ಪ್ರತಿ ದಿನ ಸಂಜೆಯುತನಕ ಕುಳಿತುಕೊಳ್ಳುವುದು, ಹೋಗುವುದು ಆಗಿದೆ. ಹೀಗಾಗಿ 15 ದಿವಸಗಳಿಂದ ಕಾಯುತ್ತಿದ್ದೇವೆ. ನಿಯಮ 69ರ ವಿಷಯ ಇದೆ.

**ಅಧ್ಯಕ್ಷರು :** ಆಯಿತು, ದಯಮಾಡಿ. ಅವರದ್ದು ಕೊಡಗಿನ ವಿಚಾರ ಹೇಳುತ್ತಾರೆ. ಆದಾದ ಮೇಲೆ ನಿಮ್ಮದೇ ಸಬ್ಜೆಕ್ಟ್

**3. ಕೊಡಗಿನಲ್ಲಿ ಮಳೆ ಹಾನಿಯಿಂದ ಆಸ್ತಿ ಪಾಸ್ತಿ ಕಳೆದುಕೊಂಡವರಿಗೆ ಪರಿಹಾರ ನೀಡುವ ಬಗ್ಗೆ**

**ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :** ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ಮಾನ್ಯ ಕಂದಾಯ ಮಂತ್ರಿಗಳಲ್ಲಿ ನನ್ನ ಒಂದು ಪ್ರಾರ್ಥನೆ ಏನು ಅಂದರೆ ಕಳೆದ ಒಂದು ವಾರದಿಂದ ಕೊಡಗಿನಲ್ಲಿ ಕಾವೇರಿಯ ಆರ್ಭಟ ಜಾಸ್ತಿಯಾಗಿದೆ. ಕರ್ನಾಟಕದ ಜನತೆ ತುಂಬಾ ಸಂತೋಷಪಡುತ್ತಿದ್ದಾರೆ. ಆದರೆ ಕೊಡಗಿನ ಜನತೆ ಕಂಗಾಲಾಗಿದ್ದೇವೆ. ಇದರ ಬಗ್ಗೆ ಕಂದಾಯ ಮಂತ್ರಿಗಳು ಗಮನ ಹರಿಸಬೇಕು. ತಮ್ಮಲ್ಲಿ ವಿನಂತಿ ನಾನು ಏನು

ಮಾಡಿಕೊಳ್ಳುತ್ತಿದ್ದೇನೆಂದರೆ ಇವತ್ತು ಕೊಡಗಿನಲ್ಲಿ ಮಳೆ ಹಾನಿಯಿಂದ ಸುಮಾರು 7 ಕೋಟಿ ರೂಗೂ ಹೆಚ್ಚಿನ ಜಿಲ್ಲಾ ಪಂಚಾಯಿತಿಯ ರಸ್ತೆಗಳು ಹಾನಿ ಆಗಿದೆ. ಸುಮಾರು 3 ಕೋಟಿ ರೂಗೂ ಹೆಚ್ಚಿನ ಹಾನಿ ರೈತರು ಏನು ನಾಟಿ ಹಾಕಿದ್ದರು ಆ ಗದ್ದೆಗಳಲ್ಲಿ ಆಗಿದೆ. ಅದರ ಜೊತೆಗೆ ಸುಮಾರು ಎರಡು ಕೋಟಿ ರೂ.ಗೂ ಅಧಿಕವಾದಂತಹ ಬಡವರು ವಾಸಿಸುವಂತಹ ಮನೆಗಳು ಇವತ್ತು ಕುಸಿದು ಬಿದ್ದಿದೆ. ಈ ಒಂದು ವಿಚಾರದಲ್ಲಿ ಸರ್ಕಾರ ತತ್‌ಕ್ಷಣದ ಕ್ರಮವಾಗಿ, ಇವತ್ತು ಜಿಲ್ಲಾ ಪಂಚಾಯತ್ ರಸ್ತೆಗಳ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ಲೋಕೋಪಯೋಗಿ ಇಲಾಖೆಯ ರಸ್ತೆಗಳ ಬಗ್ಗೆ ನಾನು ಇಲ್ಲಿ ಉಲ್ಲೇಖ ಮಾಡುತ್ತಿಲ್ಲ. ಸುಮಾರು 12 ಕೋಟಿ ರೂ.ಗೂ ಹೆಚ್ಚಿನ ಮೊತ್ತದ ಹಾನಿ ಇವತ್ತು ಕೊಡಗಿನಲ್ಲಿ ಆಗಿದೆ. ಕೊಡಗಿನಲ್ಲಿ ಇವತ್ತು ಕಾವೇರಿ ತುಂಬಿ ಹರಿಯುತ್ತಿದ್ದಾಳೆ. ಹಾಗೆ ತುಂಬಿ ಹರಿಯುತ್ತಿರುವಂತಹ ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ಆಗಿರುವಂತಹ ಈ ಒಂದು ಮಳೆ ಹಾನಿಯಿಂದ ಬಹಳಷ್ಟು ಜನ ತುಂಬಾ ತೊಂದರೆಗೆ ಒಳಗಾಗಿದ್ದಾರೆ. ಅವರ ಒಂದು ಪರಿಹಾರಕ್ಕೆ ಸರ್ಕಾರ ಸೂಕ್ತವಾದ ರೀತಿಯಲ್ಲಿ ಸ್ಪಂದಿಸಬೇಕು. ಇವತ್ತು ಏನು 12 ಕೋಟಿ ರೂ.ಗೂ ಹೆಚ್ಚಿನ ಅಂದಾಜು ಮೊತ್ತವನ್ನು ಜಿಲ್ಲಾಧಿಕಾರಿಯವರು ಈ ಒಂದು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೋ? ಅದನ್ನು ತತ್‌ಕ್ಷಣ ಬಿಡುಗಡೆ ಮಾಡಬೇಕು. ಮತ್ತು ಒಬ್ಬ ಅಧಿಕಾರಿಯನ್ನು ವಿಶೇಷವಾಗಿ ಕೊಡಗು ಜಿಲ್ಲೆಗೆ ತಾವು ಕಳುಹಿಸಿಕೊಡಬೇಕು. ಮಳೆಯಿಂದ ಆಗಿರುವಂತಹ ಹಾನಿಯನ್ನು ಪರಿಶೀಲನೆ ಮಾಡಬೇಕು. ಮತ್ತು ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ತತ್‌ಕ್ಷಣ ಕ್ರಮಕ್ಕೆ ತಾವು ಮುಂದಾಗಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ. ಹಾಗೆನೇ ಕಳೆದ ಬಾರಿ, ಕಳೆದ ಒಂದು ವಿಧಾನಸಭೆಯಲ್ಲಿ ಈ ಒಂದು ಮಳೆಯಿಂದ ಆಗಿರುವಂತಹ ಗಿರಿಜನರ ಸಲುವಾಗಿ, ಅವರು ವಾಸಿಸುತ್ತಿರುವಂತಹ ಅರಣ್ಯ ಪ್ರದೇಶದಲ್ಲಿರುವಂತಹ ಮನೆಗಳು ತೀರಾ ದುಸ್ಥಿತಿಯಲ್ಲಿವೆ. ಬಹಳ ಕಂಗೆಟ್ಟಿದ್ದಾರೆ. ಅವರ ಸಲುವಾಗಿ ಅವರಿಗೋಸ್ಕರ ಆ ಮನೆಗಳನ್ನು ತಾತ್ಕಾಲಿಕ....

**ಅಧ್ಯಕ್ಷರು** : ಬೇಗ ಮುಗಿಸಬೇಕು, ಬಹಳ ಜನ ಇದ್ದಾರೆ.

**ಶ್ರೀ ಹೆಚ್.ಡಿ. ಬಸವರಾಜ್** : ಮಳೆ ಹಾನಿ ವಿಚಾರ ಸಾರ್. ಮಳೆ ಹಾನಿಯಿಂದ ಗಿರಿಜನರು ವಾಸಿಸುತ್ತಿರುವಂತಹ ಗುಡಿಸಲುಗಳಲ್ಲಿ ಅವರು ವಾಸ ಮಾಡಲಿಕ್ಕೆ ಆಗದೇನೇ ತುಂಬಾ ಚಳಿಯಿಂದ, ಆ ಮಳೆ ನೀರಿನಿಂದ ತುಂಬಾ ಕಷ್ಟಪಡುತ್ತಿದ್ದಾರೆ. ಅವರ ಸಲುವಾಗಿ ಆ ಒಂದು ತಾತ್ಕಾಲಿಕವಾಗಿ ಆ ಗುಡಿಸಲುಗಳಿಗೆ ಪ್ಲಾಸ್ಟಿಕ್ ಹೊದಿಕೆಗಳನ್ನು ಕೊಡಲಿ ಎಂದು ಹೇಳಿದೆ. ಹಾಗೆಯೇ ಆ ಚಳಿಯಿಂದ ರಕ್ಷಿಸಿಕೊಳ್ಳುವುದಕ್ಕೆ ಆ ಅರಣ್ಯ ಪ್ರದೇಶದಲ್ಲಿರುವಂತಹವರಿಗೆ ಹೊದಿಕೆ ಕೊಡಲು ಹೇಳಿದ್ದೆ. ಸರ್ಕಾರ ಒಪ್ಪಿಕೊಂಡಿತ್ತು. ಮಾನ್ಯ ಮುಖ್ಯಮಂತ್ರಿಗಳು ಒಂದು ಆದೇಶವನ್ನು ಕೊಟ್ಟಿದ್ದಾರೆ. ಇಂತಹವರಿಗೆ, ಈ ರೀತಿ ಅರಣ್ಯ ಪ್ರದೇಶದಲ್ಲಿ ವಾಸ ಮಾಡುವಂತಹ ಗಿರಿಜನರಿಗೆ ತಾತ್ಕಾಲಿಕವಾಗಿ ಪ್ಲಾಸ್ಟಿಕ್ ಹೊದಿಕೆಗಳನ್ನು ಕೊಡುವುದು ಮತ್ತು ಅವರಿಗೆ ಬೆಚ್ಚಗಿನ ಹೊದಿಕೆಗಳನ್ನು ಕೊಡುವುದು. ನಾವು ಯಾವುದು ರಗ್‌ಗಳು ಎಂದು ಹೇಳುತ್ತೇವೋ ಅದನ್ನು ಒದಗಿಸಲಿಕ್ಕೆ

ಮಾನ್ಯ ಮುಖ್ಯಮಂತ್ರಿಗಳು ಆದೇಶ ಮಾಡಿ ಸುಮಾರು ಎರಡು ತಿಂಗಳು ಕಳೆದಿದೆ. ಇದುವರೆವಿಗೂ ಸರ್ಕಾರದ ವತಿಯಿಂದ ಅಧಿಕಾರಿಗಳು ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಏಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಸರ್ಕಾರದಲ್ಲಿ ಇಲ್ಲಿ ಪ್ರಸ್ತಾವನೆ ಆಗುತ್ತದೆ, ಸರ್ಕಾರ ಒಪ್ಪಿಕೊಳ್ಳುತ್ತದೆ. ಆದರೆ ಅಲ್ಲಿ ಕಾರ್ಯಗತವಾಗುವುದಿಲ್ಲ. ಆ ದೃಷ್ಟಿಯಿಂದ ಇವತ್ತು ಮಳೆ ಹಾನಿಯಿಂದ ಆಗಿರುವಂತಹ ಪರಿಹಾರವನ್ನು ಕೊಡಬೇಕು ಎಂದರೆ ಯಾರಾದರೂ ಒಬ್ಬ ಅಧಿಕಾರಿಯನ್ನು ವಿಶೇಷವಾಗಿ ತಾವು ನೇಮಕ ಮಾಡಿ. ಈ ಸದನದಲ್ಲಿ ತಾವೇನು ತೀರ್ಮಾನ ಮಾಡಿ ಅವರಿಗೆ ಪರಿಹಾರವನ್ನು ಒದಗಿಸಬೇಕು ಎಂದು ಇದ್ದೀರೋ ಅದನ್ನು ಅನುಷ್ಠಾನ ಮಾಡಬೇಕೆಂದು ತಮ್ಮಲ್ಲಿ ಕೋರಿಕೊಳ್ಳುತ್ತಿದ್ದೇನೆ.

**ಗೊಂದಲ**

**ಶ್ರೀ ಡಿ.ಎನ್. ಜೀವರಾಜ್** : ಚಿಕ್ಕಮಗಳೂರು ಜಿಲ್ಲೆಯಲ್ಲೂ ಅದೇ ಸಮಸ್ಯೆ ಇದೆ.

**ಅಧ್ಯಕ್ಷರು** : ದಯಮಾಡಿ, ಈಗೇನು ಆಗಿದೆ ಅಂದರೆ ಎಲ್ಲಾ ಸದಸ್ಯರೂ ಮಾತನಾಡಬೇಕು ಎಂದರೆ ಹೇಗೆ? ಈಗೇನಾಗಿದೆ, ಅತಿವೃಷ್ಟಿ ಬಗ್ಗೆ ಬಹಳಷ್ಟು ಹಾನಿ ಆಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ, ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿ ಆಗಿದೆ. ಅದರ ಬಗ್ಗೆ ಸಮಗ್ರವಾಗಿ ಹೇಳುತ್ತಾರೆ. ದಯಮಾಡಿ ಕುಳಿತುಕೊಳ್ಳಿ. ಈಗ ಸುಮಾರು ಇಲ್ಲ. ಬೇರೆ ಬೇರೆ ಸಮಯ ಇದೆ ವಿಚಾರ ಮಾಡಲು.

**ಗೊಂದಲ**

**ಅಧ್ಯಕ್ಷರು** : ಈಗ ಸಮಗ್ರವಾಗಿ ಮಾನ್ಯ ಸಚಿವರು ಉತ್ತರ ಹೇಳುತ್ತಾರೆ. ದಯಮಾಡಿ ಸಹಕರಿಸಬೇಕು. ಇನ್ನೂ ಅನೇಕ ವಿಷಯಗಳು ಇವೆ. ಇವತ್ತು ಕೊನೆಯ ದಿನ. ಎಲ್ಲವನ್ನೂ ಮುಗಿಸಬೇಕು. ದಯಮಾಡಿ ಸಹಕರಿಸಿ. ಸಮಗ್ರವಾಗಿ ಉತ್ತರ ಹೇಳುತ್ತಾರೆ. ಮಲೆನಾಡಿನ ಎಲ್ಲಾ ಜಿಲ್ಲೆಗಳ ಬಗ್ಗೆ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು, ಎಲ್ಲದರ ಬಗ್ಗೆ ಸಮಗ್ರವಾಗಿ ಉತ್ತರ ಕೊಡುತ್ತಾರೆ. ದಯಮಾಡಿ ಸಹಕರಿಸಬೇಕು. ಎಲ್ಲರೂ ಕುಳಿತುಕೊಳ್ಳಿ.

**ಗೊಂದಲ**

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)** : ಶೂನ್ಯ ವೇಳೆಯಲ್ಲಿ ಯಾರು ಪ್ರಶ್ನೆ ಎತ್ತಿರುತ್ತಾರೆ, ಅವರಿಗೆ ಉತ್ತರ ಕೊಡಬೇಕಾಗುತ್ತದೆ. ಅದು ಎಲ್ಲರಿಗೂ ಅನ್ವಯ ಆಗುತ್ತದೆ. ನೀವು ಎಲ್ಲರಿಗೂ 20–25 ಜನಕ್ಕೆ ಶೂನ್ಯ ವೇಳೆಯಲ್ಲಿ ಹೇಗೆ ಅವಕಾಶ ಕೊಡುವುದಕ್ಕೆ ಆಗುತ್ತದೆ?

**ಶ್ರೀ ಆರಗ ಜ್ಞಾನೇಂದ್ರ** : ನಮ್ಮಲ್ಲೂ ತೀರಾ ಅನಾಹುತ ಆಗಿದೆ. ಎರಡೆರಡು ಬ್ರಿಡ್ಜ್‌ಗಳು ಕುಸಿದು ಹೋಗಿದೆ. ರೋಡ್‌ಗೆ ಎಫೆಕ್ಟ್ ಆಗಿದೆ.

**ಅಧ್ಯಕ್ಷರು** : ದಯಮಾಡಿ, ಎಲ್ಲರ ಬಗ್ಗೆಯೂ ಹೇಳುತ್ತಾರೆ. ದಯಮಾಡಿ ಕುಳಿತುಕೊಳ್ಳಿ

**ಶ್ರೀ ಎಂ.ಪಿ. ಪ್ರಕಾಶ್** : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಎಲ್ಲಾ ಸದಸ್ಯರೂ ಈ ವಿಚಾರದಲ್ಲಿ ಆತಂಕಕ್ಕೆ ಒಳಗಾಗಿದ್ದಾರೆ. ವ್ಯಾಪಕವಾಗಿ ಮಳೆ ಬಂದಿರತಕ್ಕ ಕಾರಣಕ್ಕಾಗಿ

ಮಲೆನಾಡಿನ ಭಾಗದಲ್ಲಿ, ಪಶ್ಚಿಮ ಘಟ್ಟದ ಭಾಗದಲ್ಲಿ ಮತ್ತು ಮೈಸೂರು ಮೊದಲಾದ ಜಿಲ್ಲೆಗಳಲ್ಲಿ ವ್ಯಾಪಕವಾದಂಥ ಮಳೆ ಆಗಿದೆ. ಪಶ್ಚಿಮ ಘಟ್ಟಗಳು ಎಂದರೆ ಎಲ್ಲಾ ಕಡೆಯೂ ಆಗುತ್ತದೆ. ದಯಮಾಡಿ ಇಲ್ಲಿ ಉತ್ತರ ಹೇಳಬಾರದು ಎಂದಲ್ಲ. ಶೂನ್ಯ ವೇಳೆಯಲ್ಲಿ ಸದಸ್ಯರು ಪ್ರಶ್ನೆ ಎತ್ತಿದ್ದಾರೆ, ಅವರಿಗೆ ಸಂಬಂಧಪಟ್ಟ ಹಾಗೆ ಉತ್ತರ ಕೊಡುವುದರ ಜೊತೆಗೆ ಇಡೀ ರಾಜ್ಯದ ವಿಚಾರದಲ್ಲಿಯೂ ಕೂಡ ಉತ್ತರವನ್ನು ಕೊಡುತ್ತೇವೆ. ಎಲ್ಲರಿಗೂ ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ವಿಚಾರ ಇರುತ್ತದೆ. ಆದರೆ ತಾವು ಜಾಗೃತರಾಗಿ ಶೂನ್ಯ ವೇಳೆಯಲ್ಲಿ ಅಧ್ಯಕ್ಷರಿಗೆ ಒಂದು ಪತ್ರ ಕೊಡಬಹುದಾಗಿತ್ತು. ಆದರೆ ಮಾನ್ಯ ಬಸವರಾಜ್ ಅವರು ಕೊಟ್ಟಿದ್ದಾರೆ. ಅವರಿಗೆ ಉತ್ತರ ಕೊಡುವಾಗ ಇಡೀ ರಾಜ್ಯಕ್ಕೆ ಸಂಬಂಧಪಡುವಂತೆ ನಾವು ಉತ್ತರ ಕೊಡುತ್ತೇವೆ. ಈ ವ್ಯಾಪಕವಾದ ಮಳೆ ಮತ್ತು ಇದರ ಜೊತೆಗೆ ಕೊಡಗು ಮೊದಲಾದಂತಹ ಜಿಲ್ಲೆಯಲ್ಲಿ ಆಗಿರುವಂತಹ ಹಾನಿಯ ವಿಚಾರ. ಮಾನ್ಯ ಜೀವಿಜಯ ಅವರೂ ಪ್ರಸ್ತಾಪ ಮಾಡಿದ್ದಾರೆ ಮತ್ತು ಕೊಡಗು ಜಿಲ್ಲೆಯ ಎಲ್ಲಾ ಶಾಸಕರೂ ಕೂಡ ಬಂದು ಇಲ್ಲಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ದೊಡ್ಡ ಮಳೆ ಬರುವುದರ ಜೊತೆಗೆ ಚಂಡಮಾರುತ ಬೀಸಿದೆ. ಅನೇಕ ಕಡೆ ಮರ ಗಿಡಗಳೆಲ್ಲಾ ಬಿದ್ದು ಹೋಗಿದೆ. ವಿದ್ಯುಚ್ಛಕ್ತಿ ಕಂಬಗಳೂ ಸಹಿತ ಕಳಚಿ ಬಿದ್ದಿರುವ ಕಾರಣಕ್ಕಾಗಿಯೇ ಕತ್ತಲಲ್ಲಿ ಮುಳುಗಿರುವಂತಹ ಜಿಲ್ಲೆಗಳು, ತಾಲ್ಲೂಕುಗಳು, ನಗರಗಳು, ಪಟ್ಟಣಗಳು ಎಲ್ಲಾ ಕೂಡ ಇವೆ. ಈ ಎಲ್ಲಾ ಸಂದರ್ಭಗಳಲ್ಲಿ ನಾವು ಎಲ್ಲಾ ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿದ್ದೇವೆ. ಅವರಲ್ಲಿ ಪಿಡಿ ಅಕೌಂಟ್‌ನಲ್ಲಿ ಎರಡು ಕೋಟಿ, ರೂ ಮೂರು ಕೋಟಿ ರೂ 50 ಲಕ್ಷ ರೂ.ಗಳು ಈ ತರಹದಲ್ಲಿ ಬೇರೆ ರೀತಿಯ ವರದಿಯನ್ನು ಕೊಟ್ಟಿದ್ದಾರೆ. ಅದನ್ನು ಯುದ್ಧೋಪಾದಿಯಲ್ಲಿ ನಿಮ್ಮ ಹತ್ತಿರ ಪಿಡಿ ಅಕೌಂಟ್‌ನಲ್ಲಿರತಕ್ಕ ಹಣವನ್ನು ನೀವು ತತ್‌ಕ್ಷಣದಲ್ಲಿ ಈ ರೀತಿಯಾದಂತಹ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳಿ. ಹೆಚ್ಚು ಹಾನಿಯಾಗಿರತಕ್ಕಂಥ ವಿಷಯದಲ್ಲಿ ಪಟ್ಟಿಯನ್ನು ತಯಾರು ಮಾಡಿ ಜಿಲ್ಲಾಧಿಕಾರಿಗಳು ಪ್ರತಿ ತಾಲ್ಲೂಕಿನಲ್ಲಿ, ಪ್ರತಿ ಗ್ರಾಮದಲ್ಲಿ ಆಗಿರತಕ್ಕಂಥ ಅನಾಹುತಗಳನ್ನು ಪಟ್ಟಿ ಮಾಡುತ್ತಾರೆ. ಮನೆಗಳು ಬಿದ್ದಂತಹದು ಆಗಿರಬಹುದು. ಅತವಾ ಕಾಲುವೆ ಒಡೆದು ಆದರಿಂದ ನಷ್ಟ ಆಗಿರತಕ್ಕಂಥದ್ದು ಇರಬಹುದು. ಈಗ ಉದಾಹರಣೆಗೆ ನಮ್ಮ ಹೊಸಪೇಟೆ ತಾಲ್ಲೂಕಿನಲ್ಲಿ ಹೆಚ್‌ಎಲ್‌ಸಿ ಕಾಲುವೆ ಒಡೆದು ಅದು ಬಸವ ಕಾಲುವೆಗೂ ಬಂದು ಸುಮಾರು 500/600 ಎಕರೆ ಜಮೀನುಗಳು ಕೊಚ್ಚಿ ಹೋಗಿರುವಂತಹದು, ಬೆಳೆ ನಾಶ ಆಗಿದೆ. ಈ ವಿಚಾರ ಆಗಿರಬಹುದು. ಅಥವಾ ಬೇರೆ ಕಡೆಗಳಲ್ಲಿ ವಿದ್ಯುಚ್ಛಕ್ತಿ ಕಂಬಗಳೆಲ್ಲಾ ಬಿದ್ದು ಹೋಗಿರತಕ್ಕಂಥದ್ದು ಆಗಿ ಜನಜೀವನ ಎಲ್ಲಾ ಅಸ್ತವ್ಯಸ್ತ ಆಗಿದೆ. ಅದಕ್ಕಿಂತಲೂ ಹೆಚ್ಚು ಮುಖ್ಯವಾಗಿರತಕ್ಕದ್ದು ರಸ್ತೆಗಳು ಸಂಪೂರ್ಣವಾಗಿ ಹಾಳಾಗಿವೆ ಎನ್ನುವಂತಹ ವಿಚಾರದಲ್ಲಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯೇ ಅವರು ನಿರ್ಧಾರ ತೆಗೆದುಕೊಂಡಿದ್ದಾರೆ. ರಸ್ತೆಗಳ ರಿಪೇರಿಗೆ ತತ್‌ಕ್ಷಣದಲ್ಲಿ ಲೋಕೋಪಯೋಗಿ ಇಲಾಖೆಗೆ 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಜಿಲ್ಲಾ ಪಂಚಾಯತಿಗಳಿಗೆ ತಮ್ಮದೇ ಆದಂತಹ ಸೆಕ್ಟರಲ್

ಅಲೊಕೇಶನ್ಸ್ ಎಂದು ಇರುತ್ತದೆ. ಅಲ್ಲಿ ಅವರಿಗೆ ಏನು ಆದೇಶವನ್ನು ಕೊಟ್ಟಿದ್ದೇವೆ ಎಂದರೆ ಬರಗಾಲ ಪರಿಹಾರ ಕಾಮಗಾರಿಗಳಲ್ಲಿ ಕೈಗೊಳ್ಳತಕ್ಕಂಥ ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್ ಯಾವುದು ಇದೆ, ಗ್ರಾಮಾಂತರ ಪ್ರದೇಶದ ರಸ್ತೆಗಳು ಯಾವುವು ಇವೆ ಮತ್ತು ಈ ತರಹದಲ್ಲಿ ಸ್ಟೇಟ್ ಹೈವೇಗಳು ಏನು ಇವೆ, ಅಲ್ಲಿಂದ ಬರತಕ್ಕಂಥ ದುಡ್ಡು ಏನು ಇದೆ, ಅದನ್ನೂ ಕೂಡ ನೀವು ರಿಸೋರ್ಸಸ್‌ನ ಅನ್ನು ಸಂಗ್ರಹ ಮಾಡಿಕೊಳ್ಳಬೇಕು. ಈಗ 30 ಕೋಟಿ ರೂಪಾಯಿಗಳು ರಾಜ್ಯದಲ್ಲಿರತಕ್ಕಂಥ ಕರಾವಳಿ ಪ್ರದೇಶದಲ್ಲಿ, ಹೆಚ್ಚು ಮಳೆ ಬೀಳತಕ್ಕಂಥ ಕೊಡಗು, ಮೊದಲಾದಂತಹ ಪ್ರದೇಶಗಳಿಗೆ ಹೆಚ್ಚು ಹಾನಿ ಆಗಿರತಕ್ಕಂಥ ತಾಲ್ಲೂಕುಗಳಿಗೆ, ಜಿಲ್ಲೆಗಳಿಗೆ ಆ ಹಣ ಹೆಚ್ಚಾಗಿ ಕೊಡುತ್ತೇವೆ.

ಮಳೆಯಿಂದ ಅನಾಹುತ ಕಡಿಮೆಯಾಗಿರುವ ಪ್ರದೇಶಗಳಿಗೆ ಅಲ್ಲಿರುವ ಪಿ.ಡಿ. ಅಕೌಂಟ್ ನಲ್ಲಿರುವ ಮೊತ್ತವನ್ನು ಬಳಸಬೇಕೆಂದು ಹೇಳಿದ್ದೇವೆ. ಕಳೆದ ಮೂರು ವರ್ಷಗಳಿಂದ ಬರಗಾಲುವೆಂದು ತತ್ತರಿಸುತ್ತಿದ್ದೆವು. ಅನಾವೃಷ್ಟಿಯೆಂದು ಈ ತೊಂದರೆಗೆ ಗುರಿಯಾಗುತ್ತಿದ್ದೆವು. ಆದರೆ, ಈ ವರ್ಷ ಅತಿವೃಷ್ಟಿಯಾಗಿರುವುದರಿಂದ ಅದರಿಂದಲೂ ಕೂಡ ತೊಂದರೆಯಾಗಿದೆ. ನಾವು ನಿಸರ್ಗದೊಂದಿಗೆ ಬದುಕಲು ಕಲಿಯಬೇಕು. ಪ್ರಕೃತಿ ಮೀರಿ ನಿಲ್ಲುವ ವ್ಯಕ್ತಿತ್ವ ಯಾವುದೇ ನಾಗರೀಕ ಪ್ರಪಂಚಕ್ಕೆ ಇರುವುದಿಲ್ಲ. ಒಮ್ಮೆ ಅತಿವೃಷ್ಟಿ ತಂದರೆ, ಮತ್ತೊಮ್ಮೆ ಅನಾವೃಷ್ಟಿ ತರುತ್ತದೆ. ಅನಾವೃಷ್ಟಿ ಬಂದಾಗ ತೊಂದರೆ ಅನುಭವಿಸುತ್ತೇವೆ. ಅದೇ ರೀತಿ ಅತಿವೃಷ್ಟಿ ಬಂದಾಗಲೂ ತೊಂದರೆ ಅನುಭವಿಸುತ್ತೇವೆ. ಸರ್ಕಾರ ಮಾಡುವ ಸಹಾಯಗಳೆಲ್ಲವೂ ಕೂಡ 'ಬಕಾಸುರನ ಹೊಟ್ಟೆಗೆ ಮಜ್ಜಿಗೆ ಕಾಸು" ಅನ್ನುವ ರೀತಿಯಲ್ಲಿ ಆಗಬಹುದು. ತತ್‌ಕ್ಷಣದಲ್ಲಿಯೇ ಎಲ್ಲವೂ ದೊಡ್ಡ ಪ್ರಮಾಣದಲ್ಲಿ ಆಗುತ್ತದೆಂದಲ್ಲ. ತತ್‌ಕ್ಷಣದಲ್ಲಿ ಆಗಬೇಕಿರುವ ದುರಸ್ತಿ ಕೆಲಸಗಳು ಹಾಗೂ ಅನುಕೂಲಗಳನ್ನು ವಿವಿಧ ಮೂಲಗಳಲ್ಲಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಲು ಆದೇಶ ಹೋಗಿದೆ. ಜಿಲ್ಲಾಧಿಕಾರಿಗಳಿಂದ ಕೂಡ ವರದಿ ತರಿಸಿಕೊಳ್ಳುತ್ತೇವೆ. ಈ ಅಧಿವೇಶನ ಮುಗಿದ ತಕ್ಷಣ ತೀರಾ ತೊಂದರೆಗೊಳಗಾಗಿರುವ ಪ್ರದೇಶಗಳಿಗೆ ರಾಜ್ಯಮಟ್ಟದ ಅಧಿಕಾರಿಗಳನ್ನು ಕಳುಹಿಸಿಕೊಡುತ್ತೇವೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿಗೆ ಕಂದಾಯ ಮಂತ್ರಿಯಾಗಿ ನಾನೂ ಸಹ ಬರಗಾಲ ಪರಿಹಾರಕ್ಕೆ ಹಣ ಒದಗಿಸಿಕೊಟ್ಟು, ಅಲ್ಲಿಗೆ ಭೇಟಿ ಕೊಡಬೇಕೆಂದಿದ್ದೇನೆ. ಮತ್ತು ಆಯಾ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಕೂಡ ಅಲ್ಲಿಗೆ ಬರುತ್ತಾರೆ. ತಾವು ಮತ್ತೆ ಕೇಳಬಹುದು ಹಾಗಾದರೆ, ಉಸ್ತುವಾರಿ ಮಂತ್ರಿಗಳು ಎಲ್ಲಿದ್ದಾರೆ? ಉಸ್ತುವಾರಿ ಮಂತ್ರಿಗಳಾಗಲು ಇನ್ನು ಸ್ವಲ್ಪ ದಿವಸಗಳಲ್ಲಿಯೇ ಮಂತ್ರಿಮಂಡಲ ವಿಸ್ತರಿಸಲಾಗುವುದೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದುದರಿಂದ, ಪ್ರಕೃತಿ ವಿಕೋಪದಿಂದ, ಚಂಡಮಾರುತದಿಂದ, ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಏನೇನು ತೊಂದರೆಗಳಾಗಿವೆ, ಅದಕ್ಕೆ ಪರಿಹಾರ ಒದಗಿಸಿಕೊಡಲು ಸಂಪನ್ಮೂಲಗಳ

ಕೊರತೆ ಇದೆಯೆಂದು ತೋರಿಸಿಕೊಡದೆ, ಅದನ್ನೊಂದು ಅಡ್ಡಿಯಾಗಿ ಇಟ್ಟುಕೊಳ್ಳದೆ ಸಾಧ್ಯವಿರುವ ಎಲ್ಲಾ ಕೆಲಸ–ಕಾರ್ಯಗಳನ್ನೂ ರಾಜ್ಯದ ಉದ್ದಗಲಕ್ಕೂ ನಾವು ಮಾಡುತ್ತೇವೆಂದು ತಮ್ಮ ಮೂಲಕ ನಾವು ಅರಿಕೆ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಡಿ. ಬಸವರಾಜು** : ಗಿರಿಜನರಿಗೆ ಅನುಕೂಲ ಕಲ್ಪಿಸುವ ಬಗ್ಗೆ ತೀರ್ಮಾನವಾಗಿದೆ, ನನ್ನ ಹತ್ತಿರ ಸರ್ಕಾರಿ ಆದೇಶದ ಪ್ರತಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ, ತಮಗೆ ಅದನ್ನು ನಾನು ಕಳುಹಿಸಿಕೊಡುತ್ತೇನೆ. ತಮ್ಮಲ್ಲಿ ಒಂದು ವಿನಂತಿ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಆದೇಶ ಕೊಟ್ಟಿದ್ದಾರೆ. ಇವರಿಗೆ ಗಿರಿಜನ ನಿರ್ದೇಶನಾಲಯ ವತಿಯಿಂದ ಹಾಸಿಗೆ ಮತ್ತು ರಗ್‌ಗಳನ್ನು ಒದಗಿಸುವುದಕ್ಕೆ ಆದೇಶಿಸಿದ್ದಾರೆ. - ಆದೇಶವನ್ನು ಅನುಷ್ಠಾನಗೊಳಿಸಬೇಕೆಂದು ನಾನು ಕೇಳುತ್ತಿದ್ದೇನೆ.

**ಅಧ್ಯಕ್ಷರು** : ಅನುಷ್ಠಾನಗೊಳಿಸುತ್ತೇವೆಂದು ಹೇಳಿದ್ದಾರಲ್ಲಾ.

**ಶ್ರೀ ಎಂ.ಪಿ. ಪ್ರಕಾಶ್** : ಇವೊತ್ತು ಬಹಳ ವಿಚಾರಗಳಿದ್ದು, ಇವೊತ್ತಿನ ವಿತ್ತೀಯ ಕಾರ್ಯಕಲಾಪಗಳನ್ನು ನಡೆಸಬೇಕೆನ್ನುತ್ತೀರೋ? ಬೇಡವೆನ್ನುತ್ತೀರೋ? ಇವೊತ್ತು ನಿಮ್ಮ ಇತರ ಸ್ನೇಹಿತರು ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪಿಸಿರುವುದರಿಂದ ಚರ್ಚೆಯಾಗಬೇಕಾಗಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷ ನಾಯಕರು)** : ಅವರು ಏನು ಕೇಳಿದರು? ಮಾನ್ಯ ಅಧ್ಯಕ್ಷರೆ, ಇದೊಂದು ತರಹ ಏನಾಗಿದೆಯೆಂದರೆ, ನಾವೇನೂ ಕೇಳಬಾರದ್ದನ್ನು ಕೇಳುವ ಮೂಲಕ ಸರ್ಕಾರಕ್ಕೆ ಭಾರ ತರುವಂತಹ ಕೆಲಸ ಮಾಡುತ್ತಿಲ್ಲ. ಅಲ್ಲಿರುವ ಪರಿಶಿಷ್ಟ ಪಂಗಡದವರಿಗೆ ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಮಳೆಗಾಲ ಇರುವುದರಿಂದ ಅವರಿಗೆ ಹೊದ್ದುಕೊಳ್ಳಲು ಹಾಸಿಗೆ ಮತ್ತು ರಗ್‌ಗಳನ್ನು ಕಲ್ಪಿಸಿಕೊಟ್ಟು ಅನುಕೂಲ ಮಾಡಿಕೊಡುವುದಾಗಿ ಭರವಸೆ ನೀಡಿದ್ದಾರೆ. ಹೇಗೂ ಹಣ ಬಿಡುಗಡೆ ಮಾಡುತ್ತಿರುವುದರಿಂದ ಇದಕ್ಕೆ ಆದ್ಯತೆ ಕೊಟ್ಟು ಮಾಡಿಕೊಡಲು ತಾವು ಒಂದು ನಿರ್ದೇಶನ ನೀಡಬೇಕೆಂದು ಅವರು ವಿನಂತಿಸುತ್ತಿದ್ದಾರೆ.

**ಶ್ರೀ ಎಂ.ಪಿ. ಪ್ರಕಾಶ್** : ಮಾನ್ಯ ವಿರೋಧ ಪಕ್ಷ ನಾಯಕರು ದಯಮಾಡಿ ಕ್ಷಮಿಸಬೇಕು. ಸದನದಲ್ಲಿರುವ ತಾವುಗಳೆಲ್ಲರೂ ಒಪ್ಪಿ ಹೇಳಿ. ಈ ಸದನದ ಕಲಾಪಗಳನ್ನು ಅವರವರಿಗೆ ಖುಷಿ ಬಂದ ರೀತಿಯಲ್ಲೇ ಪ್ರಶ್ನೆ ಕೇಳಿಕೊಂಡು ನಿಯಮಾವಳಿಯನ್ನು ತೆಗೆದಿಡಿ ಎಂದು ಹೇಳಿಬಿಡಿ. ನಾವು ಅದಕ್ಕೆ ಒಪ್ಪಿಕೊಳ್ಳುತ್ತೇವೆ. ಶೂನ್ಯ ವೇಳೆಯಲ್ಲಿ ಒಂದು ಪ್ರಶ್ನೆ ಕೇಳುತ್ತಾರೆ. ಸರ್ಕಾರ ಅದಕ್ಕೊಂದು ಉತ್ತರ ಕೊಡುತ್ತದೆ. ಗಿರಿಜನರಿಗೆ ಏನು ಮಾಡುತ್ತೀರಿ ಎಂದು ಕೇಳುತ್ತಾರೆ. ಅಲ್ಲಿರುವ ಇತರ ಸದಸ್ಯರೂ ಕೇಳಬೇಕೆನ್ನುತ್ತಾರೆ. ಅವರನ್ನೆಲ್ಲಾ ನಾವು ಸುಮ್ಮನಿರಿಸಿದ್ದೇವೆ. ಕಲಾಪವನ್ನು ನಾವು ಹೇಗೆ ನಡೆಸಬೇಕು? ತಾವೇ ಹೇಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ನೀವು ಹಿರಿಯ ಸಚಿವರು. ಪರಿಶಿಷ್ಟ ಪಂಗಡದ ಜನರಿಗೆ ತೊಂದರೆಯಾಗಿದೆ, ದುಡ್ಡು ಬಿಡುಗಡೆ ಮಾಡಿ ಎಂದರೆ ಡಿ.ಸಿ. ಯವರಿಗೆ ಈಗಾಗಲೇ ಆಜ್ಞೆ ಇದೆ, ಡೈರೆಕ್ಷನ್ ಕೊಡುತ್ತೇವೆಂದು ಹೇಳುವುದಕ್ಕೆ ಯಾವ ರೂಲ್ ಬೇಕು?

**ಶ್ರೀ ಎಂ.ಪಿ. ಪ್ರಕಾಶ್ :** ನಾವು ಹೇಗೆ ಮಾಡಬೇಕು? ತಾವೇ ಹೇಳಿ. ಇವೊತ್ತು ಅನೇಕ ವಿಚಾರಗಳಿವೆ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಸರ್, ನೀವೇಕೆ ಹೀಗೆ ಮಾಡುತ್ತಿದ್ದೀರಿ? ಇದು ಆಗುವುದಿಲ್ಲ.

**ಗೊಂದಲ**

**ಅಧ್ಯಕ್ಷರು :** ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಮಾನ್ಯ ಅಧ್ಯಕ್ಷರೆ, I am sorry ಇಷ್ಟೊಂದು ಹಗುರವಾಗಿ ಮಾತನಾಡುವುದಕ್ಕಾಗುವುದಿಲ್ಲ. ನೀವು ಮಾತನಾಡುವಾಗ ನಿಮಗೆ ಹೇಗೆ ನಾವು ಗೌರವ ಕೊಡುತ್ತೇವೋ, ಅದೇ ರೀತಿ ನಾವು ಮಾತನಾಡುವಾಗಲೂ ಅದೇ ರೀತಿ ಗೌರವ ಕೊಡುವುದಕ್ಕೆ ಅವರಿಗೆ ಹೇಳಿ.

**ಗೊಂದಲ**

**ಅಧ್ಯಕ್ಷರು :** ಮಾನ್ಯ ಸಭಾ ನಾಯಕರು ಹಾಗೂ ವಿರೋಧ ಪಕ್ಷದ ನಾಯಕರು ಎದ್ದು ನಿಂತಾಗ ಎಲ್ಲರೂ ಕುಳಿತುಕೊಳ್ಳಬೇಕು. ಆ ಪ್ರಿಲಿಮಿನರಿಯನ್ನು ಇನ್ನೂ ನೀವು ಕಲಿಯಲಿಲ್ಲ.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :** ಮಾನ್ಯ ಅಧ್ಯಕ್ಷರೆ, ಮಳೆಯಿಂದ ಹಾನಿ ಉಂಟಾಗಿರುವ ಜನರಿಗೆ ಪರಿಹಾರ ಒದಗಿಸಿಕೊಡಬೇಕೆಂದು ಪ್ರಸ್ತಾಪಿಸಿರುವುದಕ್ಕೆ ಮಾನ್ಯ ಕಂದಾಯ ಮಂತ್ರಿಗಳು ವಿವರವಾಗಿ ಉತ್ತರಿಸಿದ್ದಾರೆ. ವಿರಾಜಪೇಟೆಯಲ್ಲಿ ಹಾಗೂ ಬೇರೆ ಕಡೆಗಳಲ್ಲಿರುವ ಗಿರಿಜನರಿಗೆ ಅನುಕೂಲವಾಗುವಂತೆ ಹೆಚ್ಚಿನ ಹಣ ಒದಗಿಸಿಕೊಡಬೇಕೆಂದು ಮಾನ್ಯ ಶಾಸಕರು ಏನು ಕೇಳಿದ್ದಾರೆ, ಅದರಂತೆ ಮಾಡಿಕೊಡೋಣ. ಇದರ ಬಗ್ಗೆ ಕಂದಾಯ ಸಚಿವರು ಮಾತನಾಡಿ, ಇವೊತ್ತಿನ ಶೂನ್ಯ ವೇಳೆಯಲ್ಲಿ ಏನು ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಉತ್ತರಿಸಿದ ನಂತರ ಮತ್ತೊಂದು ಉಪ ಪ್ರಶ್ನೆ ಕೇಳಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಏಕೋ ಕೋಪ ಮಾಡಿಕೊಂಡಿದ್ದಾರೆ. ಈ ಸದನದಲ್ಲಿ ಇನ್ನೂ 2–3 ಗಂಟೆಗಳ ಕಾಲ ನಾವು ಕುಳಿತುಕೊಳ್ಳಬೇಕಾಗಿದೆ. ಏಕೆ ಈ ಕೋಪ? ನಾವೂ–ನೀವೂ ಸೇರಿಕೊಂಡು ಇಷ್ಟು ದಿವಸಗಳ ಕಾಲ ಕಲಾಪ ನಡೆಸಿದ್ದೇವೆ. ಅವರು ಹೇಳುತ್ತಾರೆ, ಅದಕ್ಕೆ ತಮ್ಮಲ್ಲಿ ತಾಳ್ಮೆ ಇರಲಿ. ಮಾನ್ಯ ಸದಸ್ಯರಾದ ಬಸವರಾಜು ಅವರು ಗಿರಿಜನರಿಗೆ ಸಂಬಂಧಿಸಿದಂತೆ ಏನು ಕೇಳಿದ್ದಾರೆ, ಅವರಿಗೆ ಅನುಕೂಲವಾಗುಂತೆ ಹಣ ಒದಗಿಸುವುದಕ್ಕೆ ಭರವಸೆ ಕೊಡುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ನೀವೇನೂ ಕೊಡಬೇಡಿ. ನನ್ನ ವಿನಂತಿ ಇಷ್ಟೆ. ನೀವು ಸರ್ಕಾರದ ಇತಿಮಿತಿಗಳನ್ನು ನೋಡಿಕೊಂಡು ನಿಮಗೆ ಹೇಗೆ ಸರಿ

ಕಾಣುತ್ತದೋ ಮಾಡಿ. ಕೇಳುವುದಕ್ಕೆ ನಾವಿದ್ದೇವೆ, ಮಾಡುವವರು ನೀವು. ಅಲ್ಲಿ (ಆಡಳಿತ ಪಕ್ಷ) ಕುಳಿತಾಗ ಕಷ್ಟವೇನೆಂಬುದು ನನಗೆ ಅರ್ಥವಾಗುತ್ತದೆ. ನಾನು ನಿಮ್ಮಲ್ಲಿ ವಿನಂತಿಸಿಕೊಳ್ಳುವುದಿಷ್ಟೆ. ಆ ಭಾಗದ ಸದಸ್ಯರಾಗಲಿ, ನಮ್ಮ ಕಡೆಯ ಸದಸ್ಯರಾಗಲಿ, ಅಧ್ಯಕ್ಷರ ಅನುಮತಿ ಪಡೆದು ಎದ್ದು ನಿಂತಾಗ ನಾನೇನು ಹೇಳಿದೆ ಮಾನ್ಯ ಸದಸ್ಯರಾದ ಹೆಚ್.ಡಿ. ಬಸವರಾಜುರವರು ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿ ಬಂದಿರುವವರು, ಪ್ರಕಾಶ್‌ರವರು ಅನುಭವವಿರುವವರು, ಆ ಇಲಾಖೆಯಲ್ಲಿದ್ದರು ಅತಿವೃಷ್ಟಿಯಿಂದ ಮಳೆ ಜಾಸ್ತಿಯಾಗಿ ಜನರು ಸಾಯುತ್ತಿದ್ದಾರೆ. ಇದರ ಬಗ್ಗೆ ಈಗಾಗಲೇ ಸರ್ಕಾರಿ ಆಜ್ಞೆ ಇದೆ. ಹೇಗೂ ಹಣ ಬಿಡುಗಡೆ ಮಾಡುತ್ತಿದ್ದೀರಿ. ಅವರಿಗೆ ಹಾಸಿಗೆ ಹಾಗೂ ಹೊದಿಕೆಗೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳಲು ನಿಂತಾಗ, ಅದಕ್ಕೂ ಅಡ್ಡಿಪಡಿಸುತ್ತಾರೆ. ಮಾನ್ಯ ಪ್ರಕಾಶ್‌ರವರು ಅದಕ್ಕೆ ರೂಲ್ಸ್ ಹೇಳುತ್ತಾರೆ, ಕಾನೂನು ಹೇಳುತ್ತಾರೆ ಎನ್ನುವುದಾದರೆ ಈ ಅಧಿವೇಶನ ಮುಗಿದು ಮತ್ತೊಂದು ಅಧಿವೇಶನ ಪ್ರಾರಂಭವಾಗುವ ತನಕ ನಾಳೆಯಿಂದ ನಿಮ್ಮ ಕೊಠಡಿಗೆ ನಾವು ಬಂದು ವಿನಂತಿಸಿಕೊಳ್ಳಬೇಕು. ಉದಾಹರಣೆಗೆ, ನಿಮ್ಮ ಹತ್ತಿರ ಅರ್ಜಿಗಳನ್ನು ತೆಗೆದುಕೊಂಡು ಬಂದು ನಮ್ಮ ಶಾಸಕರೆಲ್ಲರೂ ನಿಂತುಕೊಳ್ಳುತ್ತಾರೆ. ಏಕೆ ಬರುತ್ತಾರೆ? ಯಾರೋ ಮೇಷ್ಟ್ರುಗೆ ಸಂಬಂಧಿಸಿದಂತೆ ಸಣ್ಣಪುಟ್ಟ ಶಾಸಕರೆಲ್ಲರೂ ನಿಂತುಕೊಳ್ಳುತ್ತಾರೆ. ಏಕೆ ಬರುತ್ತಾರೆ. ಯಾರೋ ಮೇಷ್ಟ್ರುಗೆ ಸಂಬಂಧಿಸಿದಂತೆ ಸಣ್ಣಪುಟ್ಟ ಟ್ರಾನ್ಸ್‌ಫರ್ ಇರುತ್ತದೆ. ಈ ಕಡೆ ನೋಡಿದವರಿಗೆ ಈ ತರಹ ಮಂತ್ರಿಮಂಡಲ ವಿಸ್ತರಣೆಯಾಗದೆ, ಅನೇಕ ಕೆಲಸ-ಕಾರ್ಯಗಳು ಆಗದಿರುವ ಈ ಸಮಯದಲ್ಲಿ ನಾಳೆಯಿಂದ ನಮ್ಮ-ನಮ್ಮ ಮತ ಕ್ಷೇತ್ರಗಳಿಗೆ ನಾವು ಹೋಗುತ್ತೇವೆ, ಆ ಭಾಗದವೂ ಹೋಗುತ್ತಾರೆ. ಅದೇ ರೀತಿ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರದಿಂದ ಆರಿಸಿ ಬಂದಿರುವವರೂ ಹೋಗುತ್ತಾರೆ. ಕ್ಷೇತ್ರದ ಜನರಿಗೆ ಏನು ಉತ್ತರ ಕೊಡಬೇಕು? 'ಸರ್ಕಾರ ಒಪ್ಪಿಕೊಂಡಿದೆ, ನಿಮಗೆ ಹೊದಿಕೆ, ಹಾಸಿಗೆ ಮತ್ತು ಆಹಾರದ ವ್ಯವಸ್ಥೆ ಕಲ್ಪಿಸಿಕೊಡುತ್ತದೆ' ಎಂದಾದರೂ ಹೇಳಬೇಕಲ್ಲಾ. ಇದನ್ನು ಕೇಳಿದ್ದಕ್ಕೆ ರೂಲ್ಸ್ ಮತ್ತೊಂದು ಎಂದರೆ, ಏನು ಮಾಡಬೇಕು? ಪ್ರತಿಯೊಂದೂ ಸಂದರ್ಭದಲ್ಲಿ ಆ ರೀತಿ ಮಾತನಾಡಿದರೆ ಹೇಗೆ?

**ಶ್ರೀ ಎಂ.ಪಿ. ಪ್ರಕಾಶ್** : ಈ ದಿವಸ ಶೂನ್ಯ ವೇಳೆಯಲ್ಲಿ 31 ಪ್ರಶ್ನೆಗಳಿಗೆ ತಾವು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಅದಕ್ಕಾಗಿ ನೀವು ಅವರನ್ನು ಅಭಿನಂದಿಸಬೇಕು.

**ಶ್ರೀ ಎಂ.ಪಿ. ಪ್ರಕಾಶ್** : ನೀವು ನಮ್ಮನ್ನು ಅಭಿನಂದಿಸಬೇಕು. ಅದು ಬಿಟ್ಟು ರೂಲ್ಸ್ ಹೇಳುತ್ತಾರೆಂದರೆ ನಾವೇನು ಮಾಡುವುದು? ರೂಲ್ಸ್ ಹೇಳುವುದಕ್ಕೆಂದೇ ನನ್ನನ್ನು Parliamentary Affairs Minister ಆಗಿ ಮಾಡಿರುವುದು. ಇಲ್ಲದಿದ್ದರೆ, ಆ ಪ್ರಶ್ನೆಯೇ ಇರುತ್ತಿರಲಿಲ್ಲ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ವಿರೋಧ ಪಕ್ಷದ ನಾಯಕನಾಗಿರುವ ನನಗೆ ರೂಲ್ಸ್ ಏನೂ ಗೊತ್ತಿಲ್ಲವೇ? ಅದನ್ನು ನಾನು ಇವೊತ್ತೂ ಓದ್ದಬೇಕೆ? ಅವರು ಅದರಲ್ಲಿ ಸ್ವಲ್ಪ expert ಇರಬಹುದು.

ಅಧ್ಯಕ್ಷರು : ಏಕೆ ಕೋಪ ಮಾಡಿಕೊಳ್ಳುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ಸಂದರ್ಭದಲ್ಲೂ ಈ ರೀತಿ ಪುಸ್ತಕ ತೆಗೆದುಕೊಂಡು ನೀವು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ, ನಾವು ಮಾತನಾಡಿದ್ದೇವೆ.

ಅಧ್ಯಕ್ಷರು : ಅಯಿತು.

**Sri M.P. Prakash :** In the Lok Sabha, Zero Hour proceedings are allowed as a matter of convention, not sanctioned by any rule of the House. Members raise various matters of urgent public importance sometimes leading to unruly scenes in the House. Recently, regulated by the Speaker by allowing seven members each day to raise a very urgent matter with the proper notice with each member talking not more than one minute. This has resulted in the matters being raised in a more dignified and orderly manner on the floor of the House.

ಅಧ್ಯಕ್ಷರು : ತಾವು ಇಷ್ಟು ಉದಾರಿಗಳಿದ್ದೀರಿ, 31 ವಿಚಾರಗಳನ್ನು ಪ್ರಸ್ತಾಪಿಸಲು ತಾವು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಮಾನ್ಯ ಸದಸ್ಯರಾದ ಬಸವರಾಜು ಅವರಿಗೆ ವಿನಂತಿಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ, ತಾವು ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪಿಸಬೇಡಿ. ಅವರು ಅನೇಕ ವಿಚಾರಗಳಲ್ಲಿ ಬಂದು ನಮಗೆ ಈ ತರಹದ ಕೆಲಸವಾಗಬೇಕು, ಮಾಡಿಕೊಡಬೇಕೆಂದು ಹೇಳುತ್ತಾರೆ. ಎಲ್ಲವನ್ನೂ ಸದನದಲ್ಲಿಯೇ ಬಗೆಹರಿಸಿಕೊಳ್ಳಬೇಕಾಗಿಲ್ಲ. ನೀವು ಆದಿವಾಸಿಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿ, ಇವರುಗಳಿಗೆ ಅನುಕೂಲ ಕಲ್ಪಿಸಲು ಹೆಚ್ಚು ಹಣ ಕೊಡಬೇಕೆಂದು ಪ್ರಸ್ತಾಪಿಸಬಹುದು. ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರ ಮೂಲಕವಾಗಿಯಾದರೂ ಪತ್ರ ಕಳುಹಿಸಿಕೊಡಬಹುದು ಅಥವಾ ಅವರ ಮೂಲಕ ಫೋನ್ ಮಾಡಿ ಹೇಳಿಸಬಹುದು. ಈ ತರಹ ಅನೇಕ ದಾರಿಗಳಿವೆ.

ಶ್ರೀ ವಾಟಾಳ್ ನಾಗರಾಜ್ : ಸದನದಲ್ಲಿ ಕೇಳಿದರೆ ಹಣ ಕೊಡುವುದಿಲ್ಲ ಇನ್ನು ಬೇರೆ ದಾರಿಯಲ್ಲಿ ಕೇಳಿದರೆ ಕೊಡುತ್ತೀರಾ?

ಅಧ್ಯಕ್ಷರು : ಬಹಳ ದಿವಸಗಳಿಂದ ಮಾನ್ಯ ಸದಸ್ಯರಾದ ಶ್ರೀ ಎ.ಟಿ. ರಾಮಸ್ವಾಮಿಯವರು 'ಕೂಲಿಗಾಗಿ ಕಾಳು ಯೋಜನೆ' ಕುರಿತು ಪ್ರಸ್ತಾಪಿಸಬೇಕೆಂದಿದ್ದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಈಗ ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳುತ್ತೇನೆ. ನಂತರ ಒಂದಾದ ಮೇಲೊಂದರಂತೆ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ.

## 8. ನಿಯಮ 69ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ

### ವಿಷಯ: 'ಕೂಲಿಗಾಗಿ ಕಾಳು' ಯೋಜನೆಗೆ ಮೀಸಲಿಟ್ಟ ಅಕ್ಕಿ ಹಾಳಾಗುತ್ತಿರುವುದು ಹಾಗೂ ಸದರಿ ಯೋಜನೆ ಸ್ಥಗಿತಗೊಂಡಿರುವ ಕುರಿತು

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಸನ್ಮಾನ್ಯ ಅಧ್ಯಕ್ಷರೆ, 'ಕೂಲಿಗಾಗಿ ಕಾಳು' ಯೋಜನೆಯಡಿ ಬಂದಿರುವ ಅಕ್ಕಿ ಹಾಳಾಗುತ್ತಿದೆ ಮತ್ತು ಸದರಿ ಕಾರ್ಯಕ್ರಮ

ಸಂಪೂರ್ಣ ಸ್ಥಗಿತಗೊಂಡಿರುವುದರಿಂದ ಈ ಕುರಿತು ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೋರಿದ್ದೆ. ಸದನದ ಅಂತಿಮ ದಿನದಂದು ನನಗೆ ಈ ಕುರಿತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಎಲ್ಲರ ಪರವಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇದೊಂದು ಅತ್ಯಂತ ಮಹತ್ವದ ಹಾಗೂ ಪ್ರಮುಖವಾದ ವಿಚಾರವಾಗಿದೆ. ಈಗಾಗಲೇ ಈ ಕುರಿತಂತೆ ಗಮನ ಸೆಳೆಯುವ ಸೂಚನೆ ಮೂಲಕ ಚರ್ಚಿಸಿದೆವು. ಇದಕ್ಕೆ ಮಾನ್ಯ ಕಂದಾಯ ಸಚಿವರು ಅವೊತ್ತು ಉತ್ತರಿಸಿ 'ಅಕ್ಕಿ ಹಾಳಾಗಿಲ್ಲ. ಈ ಯೋಜನೆಯಡಿ ಕೆಲಸವೂ ಕೂಡ ನಿಂತಿಲ್ಲ. ನಡೆಯುತ್ತಿದೆ' ಎಂದು ಹೇಳಿದರು ಇಡೀ ಸದನದ ಎಲ್ಲಾ ಸದಸ್ಯರಿಗೂ ಕೂಡ ಗೊತ್ತಿರುವಂತೆ, ಈಗಾಗಲೇ ವಿವಿಧ ಇಲಾಖೆಗಳಲ್ಲಿ ದಾಸ್ತಾನಿರುವ ಅಕ್ಕಿ ಹಾಳಾಗುತ್ತಿದೆಯೆಂದು ಆ ಇಲಾಖೆಯವರೇ ಸರ್ಕಾರಕ್ಕೆ ಪತ್ರಗಳನ್ನು ಬರೆದು ತಿಳಿಸಿದ್ದಾರೆ.

ಮಾನ್ಯ ಸಚಿವರಿಗೆ ಆ ದಾಖಲೆ ಬೇಕು ಎಂದರೆ ನಾನು ಕಳುಹಿಸಿಕೊಡುತ್ತೇನೆ, ಎರಡನೆಯದಾಗಿ, ಕೆಲಸ ನಿಂತಿಲ್ಲವೆಂಬ ವಿಷಯವನ್ನೂ ಅವರು ಹೇಳಿದ್ದರು. ಕೆಲಸ ಸಂಪೂರ್ಣವಾಗಿ ನಿಂತಿದೆ, ಈಗಾಗಲೇ ಕರ್ನಾಟಕ ರಾಜ್ಯದ ಇಂಜಿನಿಯರಿಂಗ್ ಅಸೋಸಿಯೇಷನ್ ನವರು ಕೂಲಿಗಾಗಿ ಕಾಳು ಯೋಜನೆಯ ಕೆಲಸವನ್ನು ಈ ಒಂದು ಮಾರ್ಗಸೂಚಿಯ ಅನ್ವಯ ಮಾಡುವುದಿಲ್ಲವೆಂದು ಸರ್ಕಾರಕ್ಕೆ ಕೂಡ ಬರೆದು ತಿಳಿಸಿದ್ದಾರೆ. ಎಲ್ಲೂ ಇಡೀ ರಾಜ್ಯದಲ್ಲಿ ಯಾವುದೇ ತಾಲ್ಲೂಕಿನಲ್ಲೂ ಕೂಡ ಆ ಕಾಮಗಾರಿಗಳನ್ನು ಅವರು ಮಾಡುತ್ತಿಲ್ಲ, ಕೆಲಸ ನಡೆಯುತ್ತಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತಿದ್ದೇನೆ. ಅಕ್ಕಿ ಹಾಳಾಗಲು ಮತ್ತು ಕೆಲಸ ನಿಲ್ಲಲು ಕಾರಣವೇನು ಎನ್ನುವುದನ್ನು ನಾವು ವಿಚಾರ ಮಾಡಿದರೆ ಯೋಜನೆಯ ವಾಸ್ತವಿಕತೆ ಈ ಸದನಕ್ಕೆ ಮತ್ತು ಸರ್ಕಾರಕ್ಕೆ ಅದರ ಅರಿವಿಲ್ಲವೆಂದು ಭಾವಿಸಿಕೊಂಡು ನಾನು ಈ ಸಂದರ್ಭದಲ್ಲಿ ಪ್ರಸ್ತಾವನೆಯನ್ನು ಮಾಡುತ್ತಿಲ್ಲ. ನಿಯಮಗಳು ಏನೇನಿತ್ತು ಅದು ಯಾವ ರೀತಿಯಾಗಿ ಅನುಷ್ಠಾನವಾಗಿದೆ, ಯಾವ ಹಂತದಲ್ಲಿ ಕಾರ್ಯಸೂಚಿಯ ಉಲ್ಲಂಘನೆಯಾಗಿದೆ ಎಂಬುದು ಸರ್ಕಾರಕ್ಕೂ ಗೊತ್ತಿದೆ, ಸದನಕ್ಕೂ ಗೊತ್ತಿದೆ, ತಮಗೂ ಗೊತ್ತಿದೆ, ಆದರೆ ಆ ನಿಯಮಗಳು ಏನಿದ್ದವು ಎಂಬುದನ್ನು ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ಜ್ಞಾಪಕಕ್ಕೆ ತರತಕ್ಕದ್ದು ಸೂಕ್ತವೆಂದು ಭಾವಿಸಿ ಕೆಲವು ಕಾರ್ಯಸೂಚಿಯನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರದಿಂದ ಜಾರಿಗೆ ಆಗುತ್ತಿರತಕ್ಕ ಮಾರ್ಗ ಸೂಚಿಯಂತೆ ಯಾವುದೇ ಕಟ್ಟಡ, ಯಾವುದೇ ಡಾಂಬರ್ ರಸ್ತೆ, ಜಲ್ಲಿಯ ರಸ್ತೆ, ಯಾವುದೇ ಸೇತುವೆ ಇತ್ಯಾದಿ ಬಹುಪಾಲು ಸಾಮಗ್ರಿಗಳನ್ನು ಒಳಗೊಂಡ ಕಾಮಗಾರಿಗಳನ್ನು ಕೈಗೊಳ್ಳದೆ, ಕೆರೆಕಟ್ಟೆಗಳಲ್ಲಿ ಹೂಳೆತ್ತುವುದು, ಗೋಕಟ್ಟೆ ನಿರ್ಮಾಣ, ಭೂಸಾರ ಸಂರಕ್ಷಣೆ, ನೀರು ಸಂರಕ್ಷಣೆ ಇತ್ಯಾದಿ ಕೂಲಿಕಾರ್ಮಿಕ ಆಧಾರಿತ ಮಣ್ಣು ಕೆಲಸಗಳನ್ನು ಒಳಗೊಂಡ ಕಾಮಗಾರಿಗಳನ್ನು ಮಾತ್ರ

ಯೋಜನೆಯಲ್ಲಿ ಮಂಜೂರಾತಿ ಮಾಡಬೇಕು, ಇಂಥದ್ದನ್ನು ಅನುಷ್ಠಾನ ಮಾಡಬೇಕೆಂದು ಮಾರ್ಗಸೂಚಿ ಹೇಳುತ್ತದೆ. ಈ ಕಾಮಗಾರಿಗಳಿಗೆ ನೋಂದಾಯಿತ ಸ್ಥಳೀಯ ಕಾರ್ಮಿಕರನ್ನೇ ಬಳಸಿಕೊಂಡು ಆ ಕೆಲಸ ಕಾರ್ಯಗಳನ್ನು ಮಾಡಿಸಬೇಕೆಂದು ಇದೆ. ಈ ಯೋಜನೆ ಸರಿಯಾಗಿ ಜಾರಿಯಾಗಿದೆಯೋ ಇಲ್ಲವೋ ಎಂದು ತಾಲ್ಲೂಕು ಮಟ್ಟದಲ್ಲಿ ಶಾಸಕರ ನೇತೃತ್ವದ ಸಮಿತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದ ಸಮಿತಿ, ಆಯಾಯ ಜಿಲ್ಲೆಗೆ ನೇಮಿಸಲಾಗಿದ್ದಂಥ ಸರ್ಕಾರದ ಮಟ್ಟದ ನೋಡಲ್ ಆಫೀಸರ್‌ರವರ ನೇರ ಉಸ್ತುವಾರಿಯಲ್ಲಿ ಈ ಕೆಲಸ ನಡೆಯಬೇಕಾಗಿತ್ತು. ಕೆಲವು ಸರ್ಕಾರಿ ಆದೇಶಗಳನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತಿದ್ದೇನೆ. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಮಿತಿಗಳು ರಚನೆಯಾಗಿದೆ. ರಚನೆಯಾಗಿ ಅಲ್ಲಿ ಕಾರ್ಯಾಚರಣೆಗಳು ಸರಿಯಾಗಿ ನಡೆಯುತ್ತಿದೆಯೇ ಎಂಬುದನ್ನು ಸಮಿತಿಯು ಖುದ್ದಾಗಿ ಪರಿಶೀಲಿಸುವುದು, ಆ ಕೆಲಸಗಳು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ ಎಂದು review and monitoring of the relief measures taken up by the implementing authority, ಆ ಉಸ್ತುವಾರಿಯನ್ನು ಮಾಡಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳುತ್ತದೆ. ಮತ್ತೊಂದು ಕಡೆ ಈ ಮಾರ್ಗಸೂಚಿಯಲ್ಲಿ "The Deputy Commissioner is the team leader for implementing the employment work. Officers of all the departments shall extend the fullest co-operation to the Deputy Commissioner and they shall follow his instructions scrupulously" ಎಂದು ಹೇಳಿ ಮತ್ತೊಂದು ಕಡೆ ಸರ್ಕಾರಿ ಆದೇಶದಲ್ಲಿ ತಿಳಿಸುತ್ತಾರೆ. ಈ ಒಂದು ಕೆಲಸದಲ್ಲಿ ಯಾವುದೇ ಕಛೇರಿ ಕಟ್ಟಡ ನಿರ್ಮಾಣ ಮಾಡತಕ್ಕ ಕೆಲಸಗಳನ್ನು ಆಹಾರ ಧಾನ್ಯಗಳನ್ನು ಉಪಯೋಗ ಮಾಡಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಮಾಡಲೇಬಾರದು ಎನ್ನತಕ್ಕದ್ದು ಮಾರ್ಗಸೂಚಿಯಲ್ಲಿ ಇದೆ. ಇದರ ಜೊತೆಗೆ ಒಟ್ಟು ಹಂಚಿಕೆಯಾದ ಆಹಾರ ಧಾನ್ಯಗಳಲ್ಲಿ ಶೇಕಡ 5ಕ್ಕಿಂತ ಹೆಚ್ಚಾಗಿ ಆಹಾರ ಧಾನ್ಯಗಳನ್ನು ರಸ್ತೆ ಕಾಮಗಾರಿಗಾಗಿ ಮತ್ತು ಕಟ್ಟಡದ ಕಾಮಗಾರಿಗಾಗಿ ಬಳಸದಂತೆ ನೋಡಿಕೊಳ್ಳುವಂತೆ ಮತ್ತು ಬರಪರಿಹಾರ ಕಾಮಗಾರಿಗಳನ್ನು ಹಮ್ಮಿಕೊಳ್ಳುವ ಸಂದರ್ಭದಲ್ಲಿ ಆದ್ಯತೆಯ ಕಾಮಗಾರಿಗಳನ್ನು ಆಯ್ಕೆ ಮಾಡಿಕೊಂಡು ಕೆಲಸ ಕಾರ್ಯವನ್ನು ನಿರ್ವಹಿಸಲು ಕೂಡ ಮಾರ್ಗಸೂಚಿಯಲ್ಲಿ ನಿರ್ದೇಶನವನ್ನು ಕೊಟ್ಟಿದ್ದಾರೆ. ಅದಕ್ಕಿಂತ ಮುಖ್ಯವಾಗಿ ಮತ್ತೊಂದು ವಿಚಾರವೆಂದರೆ, ಈಗೇನು ಉದ್ಯೋಗ ಸಜ್ಜನ ಕಾಮಗಾರಿಗಳಲ್ಲಿ ಆಹಾರ ಧಾನ್ಯಗಳನ್ನೇನು ಬಿಡುಗಡೆ ಮಾಡುತ್ತಾರೆ ಆ ಆಹಾರ ಧಾನ್ಯಗಳು ದುರ್ಬಳಕೆಯಾಗುವ ಅವಕಾಶವಿರುತ್ತದೆ, ಇಂಥವುಗಳಿಗೆ ಆಸ್ಪದವಾಗದಂತೆ ಪ್ರತಿ

ಸೋಮವಾರ ಆಯಾಯ ಜಿಲ್ಲೆಗಳ ದಿನ ಪತ್ರಿಕೆಗಳಲ್ಲಿ ಸಾಮಾನ್ಯ ಜನರ ಮಾಹಿತಿಗೋಸ್ಕರವಾಗಿ ಈ ಕೆಳಕಂಡ ಅಂಶಗಳನ್ನು ಕುರಿತು ಪ್ರಕಟಣೆಗಳನ್ನು ಹೊರಡಿಸಲು ಎಲ್ಲಾ ಜಿಲ್ಲಾಧಿಕಾರಿಯವರಿಗೂ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ. ಅವರು ತಾಲ್ಲೂಕಿನ ಹೆಸರನ್ನು ಪ್ರಕಟಣೆ ಮಾಡಬೇಕು, ಉದ್ಯೋಗ ಸೃಜನ ಯೋಜನೆಯಡಿ ಕಾಮಗಾರಿಗಳನ್ನೇನು ಕೈಗೊಳ್ಳುತ್ತಾರೆ ಆ ಹಳ್ಳಿಗಳ ಹೆಸರು ಮತ್ತು ಕಾಮಗಾರಿಗಳ ವಿವರಗಳನ್ನು ಪ್ರಕಟ ಮಾಡಬೇಕು. ಆಹಾರ ಧಾನ್ಯಗಳ ಬಿಡುಗಡೆ, ಅದಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಿದರು ಎಂಬುದನ್ನು ಅವರು ಪ್ರಕಟಿಸಬೇಕು ಎಂದು ಸರ್ಕಾರದ ಮಾರ್ಗಸೂಚಿಯಲ್ಲಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತಿದ್ದೇನೆ. ಮತ್ತೊಂದು ಕಡೆ ಮಾರ್ಗ ಸೂಚಿಯಲ್ಲಿ ಹೇಳುತ್ತಾರೆ, "It is once again informed that road works and buildings works are the last priority under the drought relief programme and if it is felt necessary to take up such works, in rare instances, a clarification in this regard is to be sought by the Deputy Commissioner of the district from the State level calamity relief review and monitoring committee". ಮತ್ತೊಂದು ಕಡೆ "The final decision of secretary in charge of the district shall be final and binding", ಎನ್ನತಕ್ಕ ಮಾತು ಮಾರ್ಗಸೂಚಿಯಲ್ಲಿ ಸ್ಪಷ್ಟವಾಗಿ ನಮೂದಾಗಿದೆ. ಇಷ್ಟೆಲ್ಲಾ ಮಾರ್ಗಸೂಚಿಯಲ್ಲಿ ಸ್ಪಷ್ಟವಾದ ಆದೇಶವಿದ್ದರೂ ಕಾಮಗಾರಿಗಳನ್ನು ಮಂಜೂರಾತಿ ಮಾಡುವಾಗ ತಲ್ಲೂಕು ಸಮಿತಿಗಳಾಗಲಿ, ಜಿಲ್ಲಾ ಸಮಿತಿಗಳಾಗಲಿ ಹೇಗೆ ಕಟ್ಟಡಗಳನ್ನು, ಸೇತುವೆಗಳನ್ನು, ಡಾಂಬರ್ ರಸ್ತೆಗಳನ್ನು, ಜೆಲ್ಲಿ ರಸ್ತೆಗಳನ್ನು ಮಾರ್ಗಸೂಚಿಗೆ ವಿರುದ್ಧವಾಗಿ ಮಂಜೂರಾತಿಯನ್ನು ಮಾಡಿದರು? ಇದು ನನ್ನ ಮುಖ್ಯವಾದ ಪ್ರಶ್ನೆ. ಕಟ್ಟಡಗಳನ್ನು ಕೈಗೊಳ್ಳಲೇಬಾರದು ಎಂದು ಸ್ಪಷ್ಟವಾದ ಮಾರ್ಗಸೂಚಿ ಇದ್ದಾಗಲೂ ಈ ಮಾರ್ಗಸೂಚಿಯನ್ನು ವೈಲೇಟ್ ಮಾಡಿದವರು ಯಾರು? ವೈಲೇಟ್ ಮಾಡಿ ಈ ಕಾಮಗಾರಿಗಳ ಆದೇಶವನ್ನು ಕೊಟ್ಟು ಏಕೆ ಬೇರೆಯವರ ಕೈಯಲ್ಲಿ ತಪ್ಪನ್ನು ಮಾಡಿಸಿದರು ಅಂದರೆ ಅನುಷ್ಠಾನ ಅಧಿಕಾರಿಗಳ ಕೈಯಲ್ಲಿ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತಿದ್ದೇನೆ. ಮಂಜೂರಾತಿ ಮಾಡಿದ ಕಾಮಗಾರಿಗಳೇನಿತ್ತು ಅದು ಮಾರ್ಗಸೂಚಿಯಂತೆ ಅನುಷ್ಠಾನ ಮಾಡಲು ಸಾಧ್ಯವೋ ಎನ್ನತಕ್ಕದ್ದನ್ನು ಸರ್ಕಾರ ಮತ್ತು ಸಮಿತಿಗಳು ಗಮನಿಸಲಿಲ್ಲವೇ ಎಂಬುದನ್ನು ಕೂಡ ತಮ್ಮ ಗಮನಕ್ಕೆ ಈ ಸಂದರ್ಭಧಲ್ಲಿ ತರಲಿಚ್ಛಿಸುತ್ತಿದ್ದೇನೆ. ಅದಕ್ಕಿಂತ ಮುಖ್ಯವಾಗಿ ಮತ್ತೊಂದು ವಿಷಯ, 46 ರೂ. 25 ಪೈಸೆಯನ್ನು ಪ್ರತಿ ದಿವಸಕ್ಕೆ ಒಬ್ಬ ಆಳಿಗೆ, ಕೂಲಿಕಾರರಿಗೆ ಕೊಡಬೇಕಾಗುತ್ತದೆ. ಸರ್ಕಾರವೇ Minimum Labour Wages Act ಪ್ರಕಾರ

ಕೆಲವು ಕೆಲವು ಕೆಲಸಗಳಿಗೆ 65, 70, 75, 80 ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಸರ್ಕಾರವೇ minimum wages ಅನ್ನು ನಿಗದಿ ಮಾಡಿ ಅವರೇ 46 ರೂಪಾಯಿಗಳನ್ನು ಕೊಟ್ಟರೆ ಹೇಗೆ ಬೇರೆಯವರ ಮೇಲೆ ಇದನ್ನು enforce ಮಾಡಲು ಸಾಧ್ಯವಾಗುತ್ತದೆ? ಸರ್ಕಾರವೇ ಅದನ್ನು ಉಲ್ಲಂಘನೆ ಮಾಡಲು ಅವಕಾಶವಿದೆಯೇ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. 3 ರೂಪಾಯಿಗಳಿಗೆ ಸರ್ಕಾರ ಅಕ್ಕಿಯನ್ನು ಕೊಡುತ್ತೇವೆಂದು ತೀರ್ಮಾನವನ್ನು ಕೈಗೊಂಡಿದೆ. 6 ರೂಪಾಯಿಗೆ ಅಕ್ಕಿಯನ್ನು ಕೊಡುತ್ತೇವೆಂದರೆ ಯಾರೂ ಕೂಡ ಅಕ್ಕಿಯನ್ನು ತೆಗೆದುಕೊಳ್ಳಲು ಸಾಧ್ಯವೇ ಇಲ್ಲ. ಆ ದಿಕ್ಕಿನಲ್ಲಿ ಈ ಮಾರ್ಗಸೂಚಿಯೇನಿದೆ ಅದನ್ನು ಪರಿಷ್ಕರಣೆ ಮಾಡತಕ್ಕದ್ದು ಅತ್ಯವಶ್ಯಕ. ಆ ದಿಕ್ಕಿನಲ್ಲಿ ಸರ್ಕಾರ ಗಮನಹರಿಸಬೇಕು ಎಂಬು ಮಾತನ್ನು ಹೇಳುತ್ತೇನೆ. ಯಾರನ್ನೋ ರಕ್ಷಣೆ ಮಾಡಬೇಕು ಎಂಬ ಉದ್ದೇಶ ನನ್ನದು ಮತ್ತು ನನ್ನ ಸ್ನೇಹಿತರದ್ದು ಅಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಬರ ಪರಿಹಾರ ಕಾಮಗಾರಿಗಳಲ್ಲಿ ಬಹುತೇಕ ಕಡೆ ಅವ್ಯವಹಾರವಾಗಿದೆ, ಬಡವರ ಹಣ ಲೂಟಿಯಾಗಿದೆ, ಎಲ್ಲೆಲ್ಲಿ ಲೂಟಿಯಾಗಿದೆ ಅದನ್ನು ಪತ್ತೆ ಹಚ್ಚಿ ಸಂಬಂಧಪಟ್ಟವರನ್ನು ನೇಣುಗಂಬಕ್ಕೆ ಏರಿಸಿ, ನಾನು ಆವತ್ತು ಕೂಡ ಮಾತನಾಡುತ್ತ there are white collared criminals ಎಂದು ಹೇಳಿದೆ. ಅದರಲ್ಲಿ ಎರಡು ಮಾತಿಲ್ಲ. ಅದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು, ಆದರೆ, ಮುಖ್ಯಕಾರ್ಯದರ್ಶಿಗಳಿರಬಹುದು, ಅಥವಾ ಅಭಿವೃದ್ಧಿ ಆಯುಕ್ತರಿರಬಹುದು, ರಾಜ್ಯ ಮಟ್ಟದಲ್ಲೂ ಅವರು ಸರಿಯಾಗಿ ಮತ್ತು ಸಮರ್ಪಕವಾಗಿ ಅನುಷ್ಠಾನವಾಗಿದೆಯೋ ಇಲ್ಲವೋ ಎಂದು ಉಸ್ತುವಾರಿ ಮಾಡುತ್ತಿದ್ದರು, ಜಿಲ್ಲಾ ಮಟ್ಟಕ್ಕೆ ಒಬ್ಬರು ನೋಡಲ್ ಕಾರ್ಯದರ್ಶಿಯವರನ್ನು ಹಾಕಿದ್ದರು, ಅವರು ಪ್ರತಿ ಜಿಲ್ಲೆಗೆ ಭೇಟಿ ಕೊಟ್ಟು ಸರಿಯಾಗಿ ಸಮರ್ಪಕವಾಗಿ ಅನುಷ್ಠಾನ ಅಗುತ್ತಿದೆಯೋ ಇಲ್ಲವೋ ಎಂದು ಉಸ್ತುವಾರಿ ಮಾಡುತ್ತಿದ್ದರು. ಜಿಲ್ಲಾಧಿಕಾರಿಯವರಿಗೆ ಜವಾಬ್ದಾರಿಕೆ ಇತ್ತು. ಜಿಲ್ಲಾ ಸಮಿತಿಗೆ ಜವಾಬ್ದಾರಿಕೆ ಇತ್ತು. ತಾಲ್ಲೂಕು ಸಮಿತಿಗೆ ಜವಾಬ್ದಾರಿಕೆ ಇತ್ತು. ತಾಲ್ಲೂಕಿನ ಉಸ್ತುವಾರಿಯನ್ನು ನೋಡಿಕೊಳ್ಳಲು ಅಸಿಸ್ಟೆಂಟ್ ಕಮಿಷನರ್‌ರವರನ್ನು ನೇಮಿಸಿದ್ದರು. ಇವರೆಲ್ಲರೂ ಈ ಬರಪರಿಹಾರ ಕಾಮಗಾರಿಗಳು ಸರಿಯಾಗಿ ಮತ್ತು ಸಮರ್ಪಕವಾಗಿ ನಡೆದಿದೆಯೆಂದು ಹೇಳಿದ್ದಾರೆ. ಅಂದರೆ ಅವರ ಆದೇಶಕ್ಕೆ ಅನುಗುಣವಾಗಿಯೇ ಆ ಕೆಲಸಗಳು ನಡೆದಿವೆ. ಅವರು ಸೂಚಿಸಿದ ರೀತಿಯಲ್ಲೆ ಆ ಕೆಲಸ ಕಾರ್ಯಗಳಾಗಿವೆ. ಎಲ್ಲೋ ತಪ್ಪಾಗಿದೆ ಅನ್ನತಕ್ಕಂಥ ಭಾವನೆ ಸರ್ಕಾರಕ್ಕೆ ಇದ್ದರೆ, ಮೊದಲು Chief Secretary ಮೇಲೆ ಕ್ರಮ ತೆಗೆದುಕೊಳ್ಳಲಿ, ಸರ್ಕಾರಕ್ಕೆ ತಾಕತ್ತು ಇದ್ದರೆ. ಅಭಿವೃದ್ಧಿ ಆಯುಕ್ತರ ಮೇಲೆ ಕ್ರಮ ತೆಗೆದುಕೊಳ್ಳಲಿ. ಇಲ್ಲಿಂದ ಹೋಗುತ್ತಿದ್ದರಲ್ಲಾ nodal officers ಆಗಿ 3 ವರ್ಷ, ಜಿಲ್ಲೆಗಳಿಗೆ ಉಸ್ತುವಾರಿ ಮಾಡಲಿಕ್ಕೆ, ಆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಮೇಲೆ ಕ್ರಮ ತೆಗೆದುಕೊಳ್ಳಿ. ಒಬ್ಬ ಜಿಲ್ಲಾಧಿಕಾರಿ ಇಡೀ ಜಿಲ್ಲೆಯ ಬರ ಪರಿಹಾರ

ಕಾಮಗಾರಿಗಳು ಸಮರ್ಪಕವಾಗಿ ನಡೆದಿದೆ ಎಂದು ವರದಿ ಕೊಡುತ್ತಿದ್ದರಲ್ಲಾ, ಪ್ರತಿ ಹಂತದ ಅಕ್ಕಿಯನ್ನು ಎತ್ತುವಳಿ ಮಾಡಬೇಕಾಗಿದ್ದರೆ, ಎಲ್ಲಾ ಸಂಪೂರ್ಣವಾಗಿ ಸದ್ಬಳಕೆಯಾಗಿದೆ, ಆ ಬಳಕೆಯ ಪ್ರಮಾಣ ಪತ್ರವನ್ನು ಕೊಟ್ಟ ಮೇಲೆ ಮುಂದಿನ ಹಂತದ ಅಕ್ಕಿಯ ಎತ್ತುವಳಿ ಆಗಿದೆ, ಅವರ ಮೇಲೂ ಕೂಡ ಕ್ರಮ ತೆಗೆದುಕೊಳ್ಳಿ, ಇವರೆಲ್ಲಾ ಹೇಳಿ, ಇವರು ಹೇಳಿದ ರೀತಿ ಅವರು ಕೆಲಸ ಮಾಡಿದರು, ಇವತ್ತು ಯಾರನ್ನೂ ನೀವು ಬಲಿಪಶು ಮಾಡಬೇಡಿ. ಅವರನ್ನು ಬಲಿಪಶು ಮಾಡಬೇಡಿ. ರಾಯರೆಡ್ಡಿಯವರೇ, ನಾನು ಅವತ್ತು ಅದನ್ನೇ ಹೇಳಿದೆ. ನಮಗೆಲ್ಲಾ ಗೊತ್ತಿದ್ದ ರೀತಿಯಲ್ಲೇ, ಇವರಿಗೆಲ್ಲಾ ಗೊತ್ತಿದ್ದ ರೀತಿಯಲ್ಲೇ ರಾಯರೆಡ್ಡಿಯವರೇ, ನೀವು ಅವತ್ತು ಶಾಸಕರುಗಳಿಗೆ ಗೊತ್ತಿರಲಿಲ್ಲವೇ ಎಂದು ಕೇಳಿದ್ದಿರಿ. ಶಾಸಕರುಗಳು ಕೂಡ ಆ ಸಮಿತಿಯ ಅಧ್ಯಕ್ಷರುಗಳು ಆಗಿದ್ದರು. ಅವರೂ ಕೂಡ ಮಾನಿಟರ್ ಮಾಡಬೇಕು, ತಾಲ್ಲೂಕಿನ ಸಮಿತಿ ಅದನ್ನು ಮಾನಿಟರ್ ಮಾಡಬೇಕು, ರಿವ್ಯೂ ಮಾಡಬೇಕು ಎಂದು ಇದೆ. ಸರಿಯಾಗಿ ಈ ಒಂದು ಕಾರ್ಯ ಸಮರ್ಪಕವಾಗಿ ಅನುಷ್ಠಾನ ಆಗಿದೆಯೋ ಆಗಿಲ್ಲವೋ ಎನ್ನುವುದನ್ನು ನೋಡಬೇಕು ಎನ್ನತಕ್ಕಂಥದ್ದು ಇದೆ. ಹಾಗಾದರೆ, ಯಾವುದೇ ಶಾಸಕರು ಅವತ್ತಿದ್ದವರು ಅದನ್ನು ನೋಡಿಲ್ಲವೋ? ನೋಡಲೇ ಇಲ್ಲವೇ ನೀವು? ಹಾಗಾದರೆ ನಿಮಗೆ ನೈತಿಕ ಜವಾಬ್ದಾರಿಕೆ ಇಲ್ಲವೇ? ನಾನು ಆಗ ಶಾಸಕ ಆಗಿದ್ದರೆ ನಾನು ಸಂಪೂರ್ಣವಾಗಿ ಅದರ ನೈತಿಕ ಜವಾಬ್ದಾರಿಯನ್ನು ಹೊರುತ್ತಿದ್ದೆ. ನನ್ನ ಮೇಲೆ ಕ್ರಮ ತೆಗೆದುಕೊಳ್ಳಿ ಎಂಬ ಮಾತನ್ನು ಹೇಳುತ್ತಿದ್ದೆ. ಇಲ್ಲಿ ಯಾರೋ ಒಬ್ಬರನ್ನು ಬಲಿಪಶು ಮಾಡಬಾರದು. ಸತ್ಯ ಸಂಗತಿ ಹೊರ ಬರಬೇಕೆಂದಿದ್ದರೆ ಎಲ್ಲಾ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ, ಸರ್ಕಾರಕ್ಕೆ ಆ ಬದ್ಧತೆ ಇದ್ದರೆ ಮೊದಲು ಹೈಯರ್ ಆಫೀಸರ್ಸ್ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಏತಕ್ಕಾಗಿ ಕೆಲವು ಪಾಪದ ಅನುಷ್ಠಾನ ಅಧಿಕಾರಿಗಳನ್ನು ನೀವೀಗ ಬಲಿಪಶು ಮಾಡುತ್ತಿದ್ದೀರಿ? ನಿಮಗೆ ಗೊತ್ತಿದೇ ಮಾಡುತ್ತಿದ್ದೀರಿ. ಮೆಶಿನರಿ ಮೂಲಕ ಕೆಲಸ ಮಾಡಿಸಿದ್ದೀರಿ. ಇಲ್ಲವೆಂದು ಯಾರೂ ಹೇಳುತ್ತಿಲ್ಲ. ಅದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿದೆ. ಮೆಶಿನರಿಯಲ್ಲಿ ಕೆಲಸ ಮಾಡಿಸಿದ ಮೇಲೆ, ಎರಡು ಭಾಗ ಅಕ್ಕಿಯನ್ನು ಮೆಶಿನರಿಗೆ ಕೊಟ್ಟರೆ, ಮೆಶಿನರಿ ಎರಡು ಭಾಗ ಅಕ್ಕಿಯನ್ನು ತಿಂದಿತೇ? ಎರಡು ಭಾಗ ಅಕ್ಕಿ, ಒಂದು ಭಾಗ ಹಣ, ಕಟ್ಟಡಕ್ಕೆ ಮಂಜೂರಾತಿ ಮಾಡಿಕೊಟ್ಟಿರಿ. ಸಿಮೆಂಟ್ ತರಲಿಕ್ಕೆ ಎರಡು ಭಾಗ ಅಕ್ಕಿ ಕೊಡಲಿಕ್ಕಾಗುತ್ತದೆಯೇ? ಒಂದು ಭಾಗ ದುಡ್ಡು ಕೊಡಲಿಕ್ಕಾಗುತ್ತದೆಯೇ? ಕಬ್ಬಿಣ ತರಬೇಕೆಂದರೆ, ಎರಡು ಭಾಗ ಅಕ್ಕಿ ಕೊಟ್ಟು, ಒಂದು ಭಾಗ ದುಡ್ಡು ಕೊಟ್ಟು ತರಿಸಿ ಹಾಕಲಿಕ್ಕಾಗುತ್ತದೆಯೇ? ಹೀಗಾಗಿ ಎಲ್ಲಾ ಲೋಪದೋಷಗಳಿಗೆ ಮೇಲಿನಿಂದ ಕೆಳಗಡೆ ಇರತಕ್ಕಂಥ ಎಲ್ಲಾ ಅಧಿಕಾರಿಗಳೂ ಕೂಡ ಕಾರಣ. ಅವತ್ತಿನ ಸಮಿತಿಯ ಅಧ್ಯಕ್ಷರುಗಳೂ ಕೂಡ ಸಂಪೂರ್ಣ ಜವಾಬ್ದಾರರು. ಅದಕ್ಕಾಗಿ ಯಾರೇ ಒಬ್ಬರನ್ನೂ ಇಲ್ಲಿ scapegoat ಮಾಡುವುದು

ಬೇಡಿ, ಎಲ್ಲೆಲ್ಲಿ ಕೆಲಸವಾಗಿಲ್ಲವೋ ಅದನ್ನು ಹೋಗಿ ಬೇಕಾದರೆ ಗಂಭೀರವಾಗಿ ನೋಡಿ. 2 ಲಕ್ಷದ ಒಂದು ಕೆಲಸಕ್ಕೆ ಮಂಜೂರಾತಿ ಮಾಡಿದ್ದರೆ, ಆ 2 ಲಕ್ಷ ರೂ. ನ ಕೆಲಸ ಆಗದಿದ್ದರೆ, ಅಂತಹವರನ್ನು ದಯಮಾಡಿ ನೇಣುಗಂಬಕ್ಕೆ ಏರಿಸಿ, ಆ ವ್ಯವಸ್ಥೆಯನ್ನು ಜಾರಿಗೆ ತನ್ನಿ. ಸುಮ್ಮನೆ ಯಾರ ಕೈಲೋ ತಪ್ಪು ಮಾಡಿಸಿ, ಇವತ್ತು ನಾವು ನೋಡುತ್ತಾ ಕುಳಿತುಕೊಳ್ಳುವುದು ಬೇಡ. ಅವರಿಗೂ ಕೂಡ ತೊಂದರೆಯಾಗತಕ್ಕಂಥದ್ದು ಬೇಡಿ. ನಾನು ಹೇಳುತ್ತಿದ್ದೇನೆ, there are serious procedural lapses. ಇದು ನಿಮಗೆಲ್ಲಾ ಗೊತ್ತಿದ್ದೇ ಆಗಿದೆ, ಈ ಸದನಕ್ಕೆ ಗೊತ್ತಿದ್ದೇ ಆಗಿದೆ. ನಿಮಗ್ಯಾರಿಗೂ ಗೊತ್ತಿಲ್ಲವೇ? ಹೇಳಿ. ಗೊತ್ತಿದ್ದೇ ಈ ತಪ್ಪನ್ನು ಮಾಡಿದ್ದಾರೆ. ಏತಕ್ಕಾಗಿ ಎಂದರೆ ಒಂದು ಶಾಶ್ವತ ಕಾಮಗಾರಿಗಳು ಆಗಲಿ ಎನ್ನತಕ್ಕಂಥ ದೃಷ್ಟಿಯಿಂದ ಇವತ್ತು ಆ ಕಾರ್ಯಗಳನ್ನು ಮಾಡಿಸಿ, ಯಾರನ್ನೋ ಬಲಿಪಶು ಮಾಡತಕ್ಕಂಥದ್ದು ಸೂಕ್ತವಲ್ಲ. ಆ ದಿಕ್ಕಿನಲ್ಲಿ ಸರ್ಕಾರ ಗಂಭೀರವಾಗಿ ಗಮನ ಹರಿಸಬೇಕು. ಈಗೇನು ಯೋಜನೆ ಸಂಪೂರ್ಣವಾಗಿ ಸ್ಥಗಿತಗೊಂಡಿದೆಯೋ, ಅದನ್ನು ಪುನರಾರಂಭ ಮಾಡಲಿಕ್ಕೆ ಮಾನ್ಯ ಕಂದಾಯ ಮಂತ್ರಿಗಳು ಸೂಚಿಸಬೇಕು. ನಾವು ನಾಳೆ ಹೇಳುತ್ತೇವೆ, ನಾಡಿದ್ದು ಹೇಳುತ್ತೇವೆ ಎಂದು ಹೇಳಬಾರದು. ಈಗಾಗಲೇ ವಿಳಂಬವಾಗಿ ಹೋಗಿದೆ. ನಾನು ಅವತ್ತೇ ಅಕ್ಕಿ ಮುಗ್ಗಿ ಮಣ್ಣಾಗಿ ಹೋಗುತ್ತಿದೆ ಎಂದು ಹೇಳಿದೆ. ಇನ್ನು ಅನ್ನ ಮಣ್ಣಾಗಲಿಕ್ಕೆ ದಯವಿಟ್ಟು ಬಿಡಬೇಡಿ. ರೆಡಿ ಇಲ್ಲ ಎಂದರೆ ಈ ಮಾರ್ಗಸೂಚಿ ಸರಿಯಿಲ್ಲ. It is not practicable ಎಂದು ಹೇಳಿ. ಅದರ ಪ್ರಕಾರ ಮಾಡಲಿಕ್ಕೆ ಆಗಿಲ್ಲ, ಇದು ಎಲ್ಲರಿಗೂ ಕೂಡ ಗೊತ್ತಿದೆ. ಅದಕ್ಕೆ ನಾನು ಹೇಳಿದ್ದು, ಕ್ರಮ ತೆಗೆದುಕೊಳ್ಳುವುದಿದ್ದರೆ ವಿಧಾನ ಸೌಧದಿಂದಲೇ, ಮೇಲಿನಿಂದಲೇ ಶುರು ಮಾಡಿ. ಆ ಒಂದು ರಾಜಕೀಯ ಬದ್ಧತೆ ಸರ್ಕಾರಕ್ಕೆ ಇದೆಯೇ ಎಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಆ ದಿಕ್ಕಿನಲ್ಲಿ ತಾವು ಕ್ರಮ ಕೈಗೊಳ್ಳಬೇಕು ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಕೆಲಸ ಪುನರಾರಂಭ ಆಗಬೇಕು ಇಲ್ಲವೇ ನಿಮ್ಮ ಸರ್ಕಾರಕ್ಕೆ ನಿಜವಾಗಿಯೂ ಬದ್ಧತೆ ಇದ್ದರೆ ಮೇಲಿನಿಂದ ತನಿಖೆ ಮಾಡಿಸಲಿಕ್ಕೆ, ಹೈಯರ್-ಅಪ್ಸ್ ಯಾರಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಕ್ರಮ ಕೈಗೊಳ್ಳಿ. ನೀವು ಮೊದಲು ಅವರ ಮೇಲೆ ತನಿಖೆಗೆ ಆದೇಶ ಮಾಡಿ. ತಾವು ಮಾಡಬೇಕು, ಆ ದಿಕ್ಕಿನಲ್ಲಿ ಗಮನ ಹರಿಸಬೇಕು. ಈ 'ಕೂಲಿಗಾಗಿ ಕಾಳು' ಯೋಜನೆ ಏನಿದೆ, ಇದರಡಿ ನಮ್ಮ ರಾಜ್ಯದಲ್ಲಿ 167 ಕೋಟಿ ರೂಪಾಯಿಗಳಷ್ಟು ಅಕ್ಕಿ ದಾಸ್ತಾನು ಇದೆ. ಈಗ ಕೆಲವು ಕಡೆ ಕಟ್ಟೆ ಒಡೆದು ಹೋಗಿದೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ**: 'ನಿಮ್ಮ ಸರ್ಕಾರ' 'ನಿಮ್ಮ ಸರ್ಕಾರ' ಎಂದು ಏಕೆ ಹೇಳುತ್ತೀರಿ? 'ನಮ್ಮ ಸರ್ಕಾರ' 'ನಮ್ಮ ಸರ್ಕಾರ' ಎಂದು ಹೇಳಿ.

**ಮಾನ್ಯ ಸದಸ್ಯರು** : ಅವರು ತಾವು ವಿರೋಧ ಪಕ್ಷದಲ್ಲಿದ್ದೇವೆ ಎಂದು ತಿಳಿದುಕೊಂಡು ಮಾತನಾಡಿದ್ದಾರೆ ಬಿಡ್ರಿ.

**ಶ್ರೀ ಎ.ಟಿ. ರಾಮಸ್ವಾಮಿ** : ಆಯ್ತಿತು, 'ನಮ್ಮ ಸರ್ಕಾರ' ಎಂದೇ ಹೇಳುತ್ತೇನೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಅಧ್ಯಕ್ಷರು 'ನಿಮ್ಮ ಸರ್ಕಾರ' ಅಂದರೆ ಮಾತ್ರ ಮಾತನಾಡಲಿಕ್ಕೆ ಅವಕಾಶ ಕೊಡುತ್ತಾರೆ. 'ನಮ್ಮ ಸರ್ಕಾರ' ಅಂದರೆ ಅವರು ಅವಕಾಶ ಕೊಡುವುದಿಲ್ಲ

**ಶ್ರೀ ಎ.ಟಿ. ರಾಮಸ್ವಾಮಿ** : ಇನ್ನೂ ನಮ್ಮ ಅನೇಕ ಸ್ನೇಹಿತರುಗಳು ಮಾತನಾಡುವವರಿದ್ದಾರೆ. ಅವರೂ ಕೂಡ ಸಲಹೆಗಳನ್ನು ಕೊಡುತ್ತಾರೆ. ನಾನು ಹೇಳುವುದಿಷ್ಟೇ, ನೀವು ಎನ್‌ಕ್ವೈರಿ ಮಾಡಿಸುವುದಿದ್ದರೆ, ತನಿಖೆ ಮಾಡಿಸುವುದಿದ್ದರೆ, ಎಲ್ಲರ ಮೇಲೂ ಅಂದರೆ, ಮೇಲಿನಿಂದ ಕೆಳಗಿನವರೆಗೂ ಎಲ್ಲರ ಮೇಲೆ ತನಿಖೆ ನಡೆಸಲಿ.

**ಮಾನ್ಯ ಸದಸ್ಯರು** : ಕಾರ್ಯಕ್ರಮ ಅನುಷ್ಠಾನ ಮಾಡಲಿಕ್ಕೆ ಯಾರೂ ರೆಡಿ ಇಲ್ಲ. ಆದ್ದರಿಂದ ಕಾರ್ಯಕ್ರಮ ಅನುಷ್ಠಾನ ಮಾಡುವ ರೀತಿಯಲ್ಲಿ ಮಾಡಿ ಎಂದು ಹೇಳಿ.

**ಶ್ರೀ ಎ.ಟಿ. ರಾಮಸ್ವಾಮಿ** : ತನಿಖೆ ಮಾಡಿಸುವುದಿದ್ದರೆ ಮೇಲಿನಿಂದ ಎಲ್ಲರ ಮೇಲೂ ತನಿಖೆ ಮಾಡಿಸಿ. ಇಲ್ಲದಿದ್ದರೆ, ಬರೀ ಅನುಷ್ಠಾನ ಅಧಿಕಾರಿಗಳ ಮೇಲೆಯೇ ತನಿಖೆ ಮಾಡಿಸಿ, ಕಣ್ಣೊರೆಸತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಬಾರದು ಅನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಈ ಯೋಜನೆಯನ್ನು ಮತ್ತೆ ಚಾಲೂ ಮಾಡಲಿಕ್ಕೆ, ಪುನರಾರಂಭ ಮಾಡಲಿಕ್ಕೆ ಸರ್ಕಾರ ದಯಮಾಡಿ ಈ ಸದನದಲ್ಲೇ ಘೋಷಣೆ ಮಾಡಬೇಕೆಂದು ಅತ್ಯಂತ ಕಳಕಳಿಯಿಂದ ವಿನಮ್ರವಾಗಿ ನಾನು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು** : ಬೇಗನೇ 5–10 ನಿಮಿಷಗಳಲ್ಲಿ ಮುಗಿಸಿ.

**ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ)** : ಮಾನ್ಯ ಅಧ್ಯಕ್ಷರೇ, ಬರ ಪರಿಹಾರ ಕಾಮಗಾರಿಗಳಲ್ಲಿ ಏನು ಸಮಸ್ಯೆ ಆಗಿದೆ ಎಂದರೆ, ಹಿಂದಿನ ಸರ್ಕಾರದಲ್ಲಿ ಮಂತ್ರಿಗಳ ಒತ್ತಾಯದ ಮೇರೆಗೆ, ಮುಖ್ಯಮಂತ್ರಿಗಳ ಒತ್ತಾಯದ ಮೇರೆಗೆ ಕಾನೂನು ಬಾಹಿರವಾಗಿ, ಡಾಂಬರು ಕೆಲಸ, ಕಲ್‌ವರ್ಟ್ ಕೆಲಸ, ಎಲ್ಲಾ ಕೆಲಸಗಳನ್ನೂ ಅಪ್ರೂವ್ ಮಾಡಿದರು. ಕಾನೂನಿನಲ್ಲಿ ಇಲ್ಲದಿದ್ದರೂ ಸಹ ಸುಮಾರು ಲಕ್ಷಾಂತರ ರೂಪಾಯಿಗಳ, minimum ಅಲ್ಲದೆ 2 ಲಕ್ಷ ರೂ. 3 ಲಕ್ಷ, ರೂ. 10 ಲಕ್ಷ ರೂಗಳ ತನಕ ಡಾಂಬರು ಇತ್ಯಾದಿ ಕೆಲಸಗಳನ್ನೆಲ್ಲಾ ಹಿಂದಿನ ಸರ್ಕಾರದಲ್ಲಿ ಜಿಲ್ಲಾಧಿಕಾರಿಗಳ ಮೇಲೆ ಒತ್ತಡ ಹೇರಿ ಅನುಮೋದನೆ ಕೊಡಿಸಿದರು. ಅನುಮೋದನೆ ಕೊಡಿಸಿದ ಮೇಲೆ, ಆ ಕೆಲಸಗಳನ್ನೆಲ್ಲಾ ಮಾಡುವಂತಹ ಸಂದರ್ಭದಲ್ಲಿ ಅವರು ಸರಿಯಾಗಿ ಕೆಲಸ ನಿರ್ವಹಿಸದೆ ಇದ್ದರು. ಇದಾದ ನಂತರ, ವಿರೋಧ ಪಕ್ಷದ ಒತ್ತಾಯದ ಮೇರೆಗೆ ಹಿಂದಿನ ಸರ್ಕಾರ ಸಿ.ಓ.ಡಿ. ತನಿಖೆಗೆ ಒಪ್ಪಿಸಿತು. ಸಿ.ಓ.ಡಿ. ತನಿಖೆಯಲ್ಲಿ ಇರುವಂತಹ ಪೊಲೀಸ್ ಅಧಿಕಾರಿಗಳು ಯಾರು? ಅವರು ಎಲ್ಲೆಲ್ಲಿಗೆ ವರ್ಗಾವಣೆ ಪಡೆದಿದ್ದರೋ, ಅಲ್ಲಿಗೆ ಸಿ.ಓ.ಡಿ. ಹಾಕಿದಾಗ, ಅವರು ಹೋಗಿ ತನಿಖೆಯನ್ನು ಮಾಡಿ, ಸರ್ಕಾರ ಇಂತಹ ಕೆಲಸ ಮಾಡಿದೆ, ಇದನ್ನು ನಾವು ಬಹಿರಂಗ ಮಾಡಿದ್ದೇವೆ, ಇಲ್ಲಿ ಕಾನೂನು ಬಾಹಿರವಾದ ಕೆಲಸ ಆಗಿದೆ ಎಂದು ಹೇಳಿದರು.

ಅವರ ವರದಿ ಆಧಾರದ ಮೇಲೆ ತಪ್ಪು ಮಾಡಿದವರನ್ನು ಅರೆಸ್ಟ್ ಮಾಡಿ ಇವತ್ತು ಜೈಲಿಗೆ ಹಾಕುವಂತಹ ಕೆಲಸ ಆಗಿದೆ. ಈಗ ಮೂರು ತಿಂಗಳಿನಿಂದೀಚೆಗೆ, ಹೊಸದಾಗಿ ಬಂದಂತಹ ಶಾಸಕರುಗಳು ಪ್ರಸ್ತಾವನೆ ಕೊಟ್ಟಂತಹ ಕೆಲಸಗಳು ಯಾವುವೂ ಜಾರಿಯಾಗುತ್ತಿಲ್ಲ. ಬರ ಪರಿಹಾರ ಕೆಲಸದಲ್ಲಿ ರಸ್ತೆ ಕೆಟ್ಟು ಹೋಗಿದ್ದು, ಗುಂಡಿಯಾಗಿರು ವಂತಹ ರಸ್ತೆಗಳು, ಸ್ಮಶಾನಕ್ಕೆ ಹೋಗುವ ರಸ್ತೆಗಳು ಶಿಥಿಲವಾದ ರಸ್ತೆಗಳ ರಿಪೇರಿಗೆಂದು ಇವತ್ತು ನಾವು ಪ್ರಸ್ತಾವನೆ ಸಲ್ಲಿಸಿದ್ದೇವೆ. ಈಗ ಮೂರು ತಿಂಗಳಿನಿಂದ ಸಿ.ಓ.ಡಿ. ಪೊಲೀಸಿನವರು ತನಿಖೆ ಮಾಡಿ, ಅವರ ಮೇಲೆ ಕೇಸ್ ಹಾಕಿ, ಜೈಲಿಗೆ ಕಳುಹಿಸಿರುವುದರಿಂದ, ಈ ಇಂಜಿನಿಯರುಗಳೆಲ್ಲಾ ನಮಗೆ ತೊಂದರೆ ಕೊಡುತ್ತಿದ್ದಾರೆಂದು ಅಕ್ಕಿಯನ್ನೇ ತೆಗೆದಯುತ್ತಿಲ್ಲ. ಈ ಪರಿಸ್ಥಿತಿಯಿಂದಾಗಿ ಕಳೆದ ಮೂರು ತಿಂಗಳಿನಿಂದ ಬಹಳ ತೊಂದರೆಯಾಗಿದೆ. ಎಲ್ಲಾ ಶಾಸಕರಿಗೂ ಗೊತ್ತಾಗಿದೆ. ಸರ್ಕಾರ ನಿಗದಿಪಡಿಸಿರುವ 45 ರೂ.ಗಳ ಕೂಲಿಗೆ ಯಾರೂ ಬರುವುದಿಲ್ಲ. ಅವರಿಗೆ 60 ರೂ.ಯಿಂದ 80 ರೂ. ಕೊಡಬೇಕು. ಆ ಕೂಲಿ ಕಾರ್ಮಿಕನಿಗೆ ಅಕ್ಕಿ ಕೊಟ್ಟರೆ ಅವನೂ ಕೂಡ ಅದನ್ನು ಮಾರಿಕೊಳ್ಳುತ್ತಾನೆ. ಇಲ್ಲವೆಂದರೆ ಇಂಜಿನಿಯರ್ ಯಾರಿಗಾದರೂ ಅಕ್ಕಿಯನ್ನು ಮಾರಿಬಿಟ್ಟು ದುಡ್ಡು ಪಡೆದು ಅದನ್ನು ಕೊಟ್ಟು ಕೆಲಸ ಮಾಡಿಸಬೇಕು. ಒಂದು ಕಡೆ ಹಿಂದೆ ಕಾನೂನು ಬಾಹಿರವಾದಂತಹ ಕೆಲಸಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಈ ಸಮಸ್ಯೆಯಿಂದಾಗಿ ಸಿ.ಓ.ಡಿ. ತನಿಖಾ ತಂಡದವರು, ಏನು ಇವತ್ತು ವೇಜಸ್ ಕೊಡುತ್ತಿದ್ದಾರೋ, ಇದು ಸರಿಯಾಗಿಲ್ಲ ಎಂದು ಇವತ್ತು ಅವರನ್ನು ಹಿಂಸೆ ಕೊಟ್ಟು ಜೈಲಿಗೆ ಕಳುಹಿಸುವಂತಹ ಕಾರ್ಯಕ್ರಮಗಳು ಆಗಿದೆ. ಈಗ ಹೊಸ ಶಾಸಕರಾದ ನಾವುಗಳು ಬಂದ ಮೇಲೆ ಬಹಳ ಜವಾಬ್ದಾರಿಯಿಂದ ನಾವೇ ಸರ್ಟಿಫೈ ಮಾಡುತ್ತೇವೆ ಎಂದು ಪ್ರಸ್ತಾವನೆಗಳನ್ನು ಕೊಟ್ಟಿದ್ದೇವೆ. ಆದರೆ ಈ ಪ್ರಸ್ತಾವನೆಗಳ ಪ್ರಕಾರ ಕೆಲಸ ಮಾಡಲು ಇಂಜಿನಿಯರ್‌ಗಳಿಗೆ ಅವಕಾಶವಾಗುತ್ತಿಲ್ಲ. ಹಿಂದಿನ ಸರ್ಕಾರದವರು ಸಂಪೂರ್ಣವಾಗಿ ಎಲ್ಲವನ್ನೂ ಸಹ ಸಿ.ಓ.ಡಿ. ತನಿಖೆ ಮಾಡಬೇಕೆಂದು ಹೇಳಿರುವುದರಿಂದ ತುಂಬಾ ತಪ್ಪಾಗಿದೆ. ಎಲ್ಲೆಲ್ಲಿ ದುರುಪಯೋಗವಾಗಿದೆ, ಯಾವ್ಯಾವ ತಾಲ್ಲೂಕುಗಳಲ್ಲಿ ದುರುಪಯೋಗವಾಗಿದೆ ಅಲ್ಲಿ ಸಿ.ಓ.ಡಿ. ತನಿಖೆ ಮಾಡಬಹುದು. ಹೊಸದಾಗಿ ಬಂದಿರುವಂತಹ ಶಾಸಕರುಗಳು ಏನಾದರೂ ಪ್ರಸ್ತಾವನೆ ಸಲ್ಲಿಸಿ ಸಿ.ಓ.ಡಿ. ತನಿಖೆ ಮಾಡಿ ಎಂದರೆ, ಅಂತಹ ಕಡೆ ಸಿ.ಓ.ಡಿ. ತನಿಖೆ ಮಾಡಬಹುದು. ಸಾರಾಸಗಟಾಗಿ ಈ ರಾಜ್ಯದ 224 ಕ್ಷೇತ್ರಗಳಲ್ಲಿ ಸಿ.ಓ.ಡಿ. ತನಿಖೆಯಾಗುತ್ತಿರುವುದರಿಂದ ಇಂಜಿನಿಯರ್‌ಗಳು ಕೆಲಸ ಮಾಡುವುದಕ್ಕಾಗುತ್ತಿಲ್ಲ. ಅವರನ್ನು non-bailable arrest ಮಾಡುತ್ತಿದ್ದಾರೆ. ಇದರಿಂದ ಕೆಲಸ ಕಾರ್ಯಗಳು ಕುಂಠಿತವಾಗಿ ಅಕ್ಕಿ ಹಾಳಾಗಿ ಹೋಗಿದೆ. ಈಗ ಆಂಧ್ರಪ್ರದೇಶದಲ್ಲಿ ಅಕ್ಕಿ ಏನು ಹರಾಜಿಗೆ ಹಾಕಿ, ಮಾರಾಟ ಮಾಡುವಂತಹ ಕೆಲಸ ಮಾಡುತ್ತಿದೆಯೋ ಆ ರೀತಿಯಲ್ಲಿ ಮಾಡಬೇಕು. ಮಾನ್ಯ ಕಂದಾಯ ಸಚಿವರು ಕಳೆದ ವಾರ ಉತ್ತರ ಕೊಡುವಾಗ ಕೆಲಸ ನಿಂತಿಲ್ಲ. ಅಕ್ಕಿ ಕೊಳೆತಿಲ್ಲ

ಎನ್ನುವಂತಹ ಮಾತನ್ನು ಹೇಳಿದರು. ಅಧಿಕಾರಿಗಳು ಅವರಿಗೆ ಆ ತರಹದ ವರದಿ ಕೊಟ್ಟಿದ್ದಾರೆ, ಇದು ಬಹಳ ತಪ್ಪು. ಈಗಾಗಲೇ ಮಂಜೂರಾತಿ ಮಾಡಿದ್ದನ್ನು ಇಂಜಿನಿಯರುಗಳು ವಾಪಸ್ಸು ನಮಗೆ ಬರೆದು ಕೊಟ್ಟಿಲ್ಲ. ಈ ಕೆಲಸ ನಾವು ಮಾಡುವುದಿಲ್ಲ, ನೀವು ವಾಪಸ್ಸು ತೆಗೆದುಕೊಳ್ಳಿ ಎಂದೇನೂ ಅವರು ರೈಟಿಂಗ್‌ನಲ್ಲಿ ಕೊಟ್ಟಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳು ಇಂಜಿನಿಯರ್‌ಗಳು ಪತ್ರ ಬರೆದಿಲ್ಲವೆಂದು ತಮಗೆ ಹೇಳಿದ್ದಾರೆ. ಗೋಡೌನ್ ಹತ್ತಿರಕ್ಕೆ ಹೋಗಿ ಇವತ್ತು ಪೊಲೀಸರು ಅರೆಸ್ಟ್ ಮಾಡುತ್ತಿದ್ದಾರೆ. ಆದ್ದರಿಂದ ಇಂಜಿನಿಯರ್‌ಗಳು ಗೋಡೌನ್ ಹತ್ತಿರಕ್ಕೆ ಹೋಗುತ್ತಿಲ್ಲ. ಆದ್ದರಿಂದ ಅಕ್ಕಿ ಕೊಳೆತು ಹೋಗುತ್ತಿದೆ. ಅಕ್ಕಿ ಕೊಳೆಯುತ್ತಿದೆ ಎಂದು ಯಾವ ಇಂಜಿನಿಯರ್‌ಗಳೂ ಕೂಡ ರಿಪೋರ್ಟ್ ಕೊಟ್ಟಿಲ್ಲ. ಜಿಲ್ಲಾಧಿಕಾರಿಗಳು ಆಗಲಿ ಅಥವಾ ಚೀಫ್ ಸೆಕ್ರೆಟರಿಗಳಾಗಲಿ ಸಹಾ ಅಲ್ಲಿಗೆ ಹೋಗಿ ಏನಾಗಿದೆ ಎಂಬುದನ್ನು ನೋಡಿಲ್ಲ. ಗೋಡೌನ್‌ಗಳು ಲಾಕ್ ಆಗಿ ಮೂರು ತಿಂಗಳಾಗಿದೆ. ಆದ್ದರಿಂದ ಅಕ್ಕಿ ಎಲ್ಲಾ ಕೊಳೆಯುತ್ತಿದೆ. ಮಾನ್ಯ ಕಂದಾಯ ಸಚಿವರು ಈ ಸಿ.ಓ.ಡಿ. ತನಿಖೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಈ ಇಂಜಿನಿಯರ್‌ಗಳಿಗೆ ತೊಂದರೆ ಕೊಡುವಂತಹ ಕಾರ್ಯಕ್ರಮಗಳು ಆಗಬಾರದು. ಎಲ್ಲೆಲ್ಲಿ ದುರುಪಯೋಗವಾಗಿದೆಯೋ, ಅಲ್ಲಿ ಮಾತ್ರ ತನಿಖೆಯಾಗಬೇಕು. ಹೊಸದಾಗಿ ಕೆಲಸಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೋರುತ್ತೇನೆ. ದಯವಿಟ್ಟು ಮಾನ್ಯ ಕಂದಾಯ ಮಂತ್ರಿಗಳು ಇದರ ಬಗ್ಗೆ ಇವತ್ತೇ ತೀರ್ಮಾನ ಮಾಡಬೇಕು. ಇವತ್ತು ಅಧಿವೇಶನ ಮುಗಿದ ಮೇಲೆ ಮತ್ತೆ ನಾವು ಅಧಿವೇಶನ ಸೇರುವುದು ಡಿಸೆಂಬರ್ ತಿಂಗಳಲ್ಲಿ. ಅಲ್ಲಿಯವರೆಗೆ ಬಿಟ್ಟರೆ ಅಕ್ಕಿ ಕೆಟ್ಟು ಹೋಗಿ ರೈತರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ, ದಯವಿಟ್ಟು ಇವತ್ತೇ ತೀರ್ಮಾನ ಮಾಡಿ ಈ ಕೆಲಸಗಳು ಆರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಜಿ.ಟಿ. ದೇವೇಗೌಡ (ಹುಣಸೂರು) :** ಮಾನ್ಯ ಅಧ್ಯಕ್ಷರೆ, ಈ ವಿಚಾರ ಬಹಳ ಗಂಭೀರವಾದುದು ಹಾಗೂ ಬಹಳ ಪ್ರಮುಖವಾದುದು. ಚುನಾವಣೆ ಮುಗಿದು ಮೂರು ತಿಂಗಳುಗಳು ಕಳೆದಿವೆ. ನಮಗೆಲ್ಲರಿಗೂ ವಿಧಾನಸಭಾ ಅಧಿವೇಶನ ಮುಗಿಯುವ ಹಂತದಲ್ಲಿ, ಕೊನೆಯಲ್ಲಿ ಯಾದರೂ ಇಂತಹ ಒಂದು ಅವಕಾಶ ಮಾಡಿಕೊಟ್ಟಿರಿ, ನಾವು ಕೂಗಿ ಕಾಡಿ ಬೇಡಿ ಈ ಅವಕಾಶವನ್ನು ಪಡೆದುಕೊಂಡಿದ್ದೇವೆ. ಆದ್ದರಿಂದ ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಾವು ಶಾಸಕರಾಗಿ ಗೆದ್ದು ಬಂದಮೇಲೆ ಈ ಶಾಸಕರ ನಿಧಿ ಇಲ್ಲ, 30–54 ಇಲ್ಲ. ಬರ ಪರಿಹಾರದಲ್ಲಿ ಅಷ್ಟು ಅಕ್ಕಿ ಇದೆ, ಅದನ್ನು ಉಪಯೋಗಿಸಿಕೊಂಡು ಒಂದಷ್ಟು ಕೆಲಸ ಕಾರ್ಯ ಮಾಡಲಿಕ್ಕೆ 20–6–04 ರಿಂದ ಕೆಲಸಗಳನ್ನು ನಿಲ್ಲಿಸಿದ್ದಾರೆ ಜೂನ್ ತಿಂಗಳ 20ನೇ ತಾರೀಖಿನಿಂದ ಇಂಜಿನಿಯರ್‌ಗಳು ಕೆಲಸಗಳನ್ನು ನಿಲ್ಲಿಸಿದ್ದಾರೆ ಈ ರಾಜ್ಯದ ಇಂಜಿನಿಯರ್‌ಗಳು, ಜಲಾನಯನ ಪ್ರದೇಶದಲ್ಲಿ ಕೆಲಸ

ಮಾಡತಕ್ಕಂತಹವರು, ಜಿಲ್ಲಾ ಪಂಚಾಯತಿ ತಾಲ್ಲೂಕು ಪಂಚಾಯಿತಿಯಲ್ಲಿ ಕೆಲಸ ಮಾಡತಕ್ಕಂತಹವರು, ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡತಕ್ಕಂತಹವರು, ಸುಮಾರು 2,39,620 ಮೆಟ್ರಿಕ್ ಟನ್ ಅಕ್ಕಿ ಏನು ಬಂದಿದೆ, ಈ 2,39,620 ಮೆಟ್ರಿಕ್ ಟನ್ ಅಕ್ಕಿಯಲ್ಲಿ ಒಂದು ಕೇಜಿಯನ್ನೂ ಕೂಡ ಉಪಯೋಗಿಸಿಲ್ಲ. ಒಂದು ಕೇಜಿ ಅಕ್ಕಿ ಕೊಡುವಷ್ಟು ಕೆಲಸ ಮಾಡಿಲ್ಲ. ಕೆಲಸ ಮಾಡಲಿಕ್ಕೆ ಇಲ್ಲಿ ಇದ್ದುದ್ದು ಇದೊಂದೇ ದಾರಿ. ಅದೂ ಮಾಡಲಿಲ್ಲವೆಂದರೆ, ಜೂನ್ 20ನೇ ತಾರೀಖಿನಿಂದ ನಮ್ಮ ಕ್ಷೇತ್ರದಲ್ಲಿ ಎಲ್ಲಾ ಕೆಲಸಗಳು ನಿಂತು ಹೋಗಿವೆ ಈ ರಾಜ್ಯದಲ್ಲಿರತಕ್ಕಂತಹ 90,000 ಕಿ.ಮೀ. ಲೋಕೋಪಯೋಗಿ ರಸ್ತೆಗಳಿವೆ. ಈ ರಸ್ತೆಗಳಿಗೆ 30 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಅವರಿಗೆ ಧನ್ಯವಾದಗಳು. ಉಳಿದಿರತಕ್ಕಂತಹ 90,000 ಕಿ.ಮೀ. ರಸ್ತೆ ಗುಂಡಿ ಬಿದ್ದು ಹೋಗಿವೆ. ಅದನ್ನು ಮುಚ್ಚಲಿಕ್ಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲ. ಇದಕ್ಕೆ ಯಾರು ಹೊಣೆಗಾರರು? ಈವತ್ತು ಏನು ಮಾಡಬೇಕೆಂದು ಎಲ್ಲರೂ ಚಿಂತನೆ ಮಾಡತಕ್ಕಂತಹ ವಿಚಾರ ಇದು. ಅಲ್ಲಿ ಕಾಲುವೆ ಒಡೆದು ಹೋಗಿದೆ, ನಾಳೆ ನಾವೆಲ್ಲಾ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗಿ ಹಳ್ಳಿಗಳಿಗೆ ಹೋಗುತ್ತೇವೆ. ಅಲ್ಲಿ ಕೆಲಸ ಮಾಡುವ ಇಂಜಿನಿಯರ್‌ಗಳನ್ನು ಕೇಳಿದರೆ ನಾವು ಕೆಲಸ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಏಕೆ ಮಾಡುವುದಿಲ್ಲವೆಂದರೆ, ನಮ್ಮನ್ನು ಹಿಡಿದು ಜೈಲಿಗೆ ಹಾಕಿದ್ದಾರೆ, ನಾವು ಕೆಲಸ ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ರಾಮಸ್ವಾಮಿಯವರು ಹೇಳಿದರು, ಜೈಲಿಗಲ್ಲ, ನೇಣುಗಂಬಕ್ಕೇರಿಸಿ ನಾವು ಬೆಂಬಲ ಕೊಡುತ್ತೇವೆ ಎಂದು ಯಾರನ್ನು ಜೈಲಿಗೆ ಹಾಕಬೇಕು, ಯಾರನ್ನು ನೇಣುಗಂಬಕ್ಕೇರಿಸಬೇಕೆಂಬ ವಿಚಾರವನ್ನೂ ಕೂಡ ಹೇಳಿದ್ದಾರೆ. ಶಾಸಕರು ಅಧ್ಯಕ್ಷರು, ತಹಶೀಲ್ದಾರ್‌ರವರು ಸೆಕ್ರೆಟರಿ, ವಿಭಾಗ ಮಟ್ಟದಲ್ಲಿ ಉಪ ವಿಭಾಗಾಧಿಕಾರಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ, ರಾಜ್ಯ ಮಟ್ಟದಲ್ಲಿ ಅಭಿವೃದ್ಧಿ ಆಯುಕ್ತರು. ಇವರೆಲ್ಲರೂ ಕೂಡ, ಯುಟಿಲೈಸೇಷನ್ ಆಗಿದೆ, ಸಮರ್ಪಕವಾಗಿ ಕೆಲಸ ನಡೆಯುತ್ತಿದೆ ಎಂದು ಹೇಳಿದ ಮೇಲೆ ನಿಮಗೆ 14 ಲಕ್ಷ 4936 ಮೆಟ್ರಿಕ್ ಟನ್ ಅಕ್ಕಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದಿರುವುದು. ನೀವೆಲ್ಲರೂ ಕೂಡ ಯಾವ ಉದ್ದೇಶದಿಂದ ಇದನ್ನು ಮಾಡಿದಿರಿ? ಬರಗಾಲ ಬಂದಿದೆ, ಬಡವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ನೀವು ಎಲ್ಲಾ ಒಳ್ಳೆಯದನ್ನೇ ಮಾಡಿದಿರಿ. ಈ ನಿಯಮ-ಬದಲಾವಣೆಯಾಗದೇ ಇದ್ದರೂ ಕೂಡ ತುರ್ತಾಗಿ ಬರಪರಿಹಾರ ಕಾಮಗಾರಿ ಕೈಗೊಳ್ಳಬೇಕು, ರಾಜ್ಯದ ಅಭಿವೃದ್ಧಿಯಾಗಬೇಕು, ಬಡವರಿಗೆ ಕೂಲಿ ಕೊಡಬೇಕೆಂಬ ಒಳ್ಳೆಯ ದೃಷ್ಟಿಯಿಂದ ಈ ಕೆಲಸವನ್ನು ಮಾಡಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಅಂತಹ ಒಳ್ಳೆಯ ದೃಷ್ಟಿ ಇಟ್ಟುಕೊಂಡು ಮಾಡತಕ್ಕಂತಹ ಆ ಸಂದರ್ಭದಲ್ಲಿ ಕೂಡ ಯಾರು ಅನ್ಯಾಯ ಮಾಡಿದ್ದಾರೆ, ಎಲ್ಲಿ ಅಭಿವೃದ್ಧಿ ಕೆಲಸವಾಗಿಲ್ಲ ಅಂತಹವರಿಗೆ ಶಿಕ್ಷೆಯಾಗಲಿ. ಆದರೆ, ಈ ಹಣವನ್ನು ಬಳಸಿ ಕ್ರೀಡಾಂಗಣವನ್ನು ಕಟ್ಟಿಸಿರತಕ್ಕಂತಹವರಿಗೆ,

ಅಂಗನವಾಡಿ ಕಟ್ಟಡವನ್ನು ಕಟ್ಟಿಸಿರತಕ್ಕಂತಹವರಿಗೆ, ಶಾಲಾ ಕಟ್ಟಡವನ್ನು ಕಟ್ಟಿಸಿರತಕ್ಕಂತಹವರಿಗೆ, ಶಾಲಾ ಕಟ್ಟಡ ಕಟ್ಟಿಸಿರತಕ್ಕಂತಹವರಿಗೆ ಮತ್ತು ಟಾರ್ ರಸ್ತೆಗಳನ್ನು ಮಾಡಿದವರಿಗೆ ನೀವು ಜೈಲಿಗೆ ಹಾಕುವುದೇ? ನಿಷ್ಠಾವಂತ ಅಧಿಕಾರಿಯಾಗಿ ಕೆಲಸ ಮಾಡಿದವರಿಗೆ ನೀವು ಈ ರೀತಿ ಮಾಡುವುದಾದರೆ, ಈ ಕೆಲಸಗಳಲ್ಲಿ ಯಾರು ಪಾಲ್ಗೊಳ್ಳುತ್ತಾರೆ? ಅದಕ್ಕೋಸ್ಕರ ಅವರು 20ನೇ ತಾರೀಖಿನಿಂದ ಎಲ್ಲಾ ಇಂಜಿನಿಯರ್‌ಗಳು ಕೆಲಸವನ್ನು ಸ್ಥಗಿತಗೊಳಿಸಿದ್ದಾರೆ. 5,000/6,000 ಇಂಜಿನಿಯರ್‌ಗಳಿದ್ದಾರೆ. ಇವತ್ತು ಒಬ್ಬರೇ ಒಬ್ಬರು ಐಎಎಸ್ ಅಧಿಕಾರಿ ಕಾರಣೀಕರ್ತರು ಎಂದು ಹೇಳಲಿಲ್ಲ. ಒಬ್ಬ ಶಾಸಕರು ಇದಕ್ಕೆ ಜವಾಬ್ದಾರರು ಎಂದು ಹೇಳಲಿಲ್ಲ. ತಪ್ಪು ಮಾಡಿದವರು ಶಾಸಕರು ಇರಲಿ, ಅಧಿಕಾರಿಗಳಿರಲಿ, ಯಾರೇ ಇರಲಿ, ನಿರ್ದಾಕ್ಷಿಣ್ಯವಾಗಿ ಅವರನ್ನೂ ಜೈಲಿಗೆ ಹಾಕಬೇಕು. ಆಗ ಅದು ನ್ಯಾಯವಾಗುತ್ತದೆ. ಅದು ಬಿಟ್ಟು ಯಾರೋ ಅಲ್ಲಿರತಕ್ಕಂತಹ ಜೆಇ, ಎಇ ಕೆಲಸ ಮಾಡಿದವರಿಗೆ, 46.25 ರೂಪಾಯಿ ಕೂಲಿ, ಐದು ಕೆಜಿ ಅಕ್ಕಿ, 15 ರೂಪಾಯಿ ನಗದು, ಕೊಡುತ್ತಾರೆ. ಐದು ಕೆಜಿ ಅಕ್ಕಿ, 15 ರೂಪಾಯಿ ನಗದು ಹಣಕ್ಕೆ ಈ ರಾಜ್ಯದ ಯಾವುದೇ ಮೂಲೆಯಲ್ಲಿ ಕೂಡ ಒಬ್ಬ ಕೂಲಿಗಾಗಿ ಬರುವುದಿಲ್ಲ. ಅವನು ಲೆಕ್ಕ ಕೊಡಬೇಕಾದರೆ ಏನು ಮಾಡುತ್ತಾನೆಂದರೆ, ಇಬ್ಬರ ಹೆಸರುಗಳನ್ನು ಬರೆಯುತ್ತಾನೆ. ಒಬ್ಬರಿಗೆ ಕೂಲಿ ಕೊಡುತ್ತಾನೆ. ಇಬ್ಬರ ಹೆಸರು ಬರೆದು ಒಬ್ಬರಿಗೆ ಕೂಲಿ ಕೊಟ್ಟು ಜವಾಬ್ದಾರಿಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಈ ರಾಜ್ಯದಲ್ಲಿ ಆಗಿರುವ ಕೆಲಸಗಳೆಲ್ಲವೂ ಜೆಸಿಬಿ ಯಂತ್ರಗಳಿಂದ ಆಗಿರುವುದು. ಮ್ಯಾನ್ಯುಯಲ್ ಲೇಬರ್‌ನಿಂದ ಎಲ್ಲೂ ಕೂಡ ಕೆಲಸಗಳು ಆಗಿಲ್ಲ. ಸಂಪೂರ್ಣವಾಗಿ ಯಂತ್ರಗಳನ್ನು ಬಳಸಿದ್ದಾರೆ. ಈ ರಾಜ್ಯದಲ್ಲಿ ಮೂರು ಲಕ್ಷ ಕಾಮಗಾರಿಗಳಿವೆ. ಮೂರು ಲಕ್ಷ ಕಾಮಗಾರಿಗಳಲ್ಲಿ ಎಲ್ಲಿಯೂ ಕೂಡ ಚುನಾಯಿತ ಪ್ರತಿನಿಧಿಗಳಾದ ಶಾಸಕರಿಗೆ ಅದು ಗೊತ್ತಿಲ್ಲವೇ ಅವರೇ ಅದಕ್ಕೆ ಅಧ್ಯಕ್ಷರು. ಅಲ್ಲಿರತಕ್ಕಂತಹ ತಹಶೀಲ್ದಾರ್, ಅಲ್ಲಿರತಕ್ಕಂತಹ ಜಿಲ್ಲಾಧಿಕಾರಿ, ಅಭಿವೃದ್ಧಿ ಆಯುಕ್ತರು, ರಾಜ್ಯದಿಂದ ಜಿಲ್ಲೆಗೆ ಒಬ್ಬರು ಸೀನಿಯರ್ ಐಎಎಸ್ ಅಧಿಕಾರಿಗಳು, ಇವರಿಗೆ ಯಾರಿಗೂ ಗೊತ್ತಿಲ್ಲವೇ? ಇದರಿಂದ ಏನು ಅನ್ಯಾಯವಾಗಿದೆ, ಮೂರು ತಿಂಗಳುಗಳಿಂದ ಯಾವುದೇ ಕಾಮಗಾರಿಗಳು ನಡೆಯುತ್ತಿಲ್ಲ.

ಏನು ಈ 2,39,620 ಮೆಟ್ರಿಕ್ ಟನ್ ಅಕ್ಕಿಯನ್ನು ಯಾವ ಐಎಎಸ್ ಅಧಿಕಾರಿಗಳು ಇವರ ಮೇಲೆ ಛಾರ್ಜ್ ಮಾಡಬೇಕೆಂದು ಸಿಓಡಿಗೆ ವಹಿಸಿದ್ದರು, 20ನೇ ತಾರೀಖಿನಿಂದ ಯಾವ ಕೆಲಸ ಸ್ಥಗಿತಗೊಂಡಿದೆ, ಅವತ್ತಿನಿಂದ ಈಚೆಗೆ ಸಭೆ ಕರೆಯಬೇಕಾಗಿತ್ತು, ಆ ಇಂಜಿನಿಯರ್‌ಗಳನ್ನು ಕರೆದು ಕೇಳಬೇಕಾಗಿತ್ತು. ಯಾವ ರೀತಿ ಮಾಡಬೇಕು, ಪರಿಹಾರ ಏನು, ಮಾರ್ಗೋಪಾಯಗಳನ್ನು ಕಂಡು ಹಿಡಿಯತಕ್ಕಂತಹ ಕೆಲಸ ಮಾಡಬೇಕಾಗಿತ್ತು. ಅದನ್ನು ಮಾತ್ರ ನೀವು ಮಾಡಲಿಲ್ಲ. ಸಿಓಡಿಗೆ ವಹಿಸುವ ಕೆಲಸವನ್ನು ಮಾತ್ರ ನೀವು ರಾಜ್ಯದಲ್ಲಿ ಕುಳಿತು ಮಾಡಿದಿರಿ.

ಆದರೆ ಇದರಿಂದ ಇವತ್ತು ಏನು ಅನ್ಯಾಯವಾಗಿದೆ ಎಂದು ತಿಳಿಯಲಿಲ್ಲ. 2,39,620 ಮೆಟ್ರಿಕ್ ಟನ್ ಅಕ್ಕಿಯನ್ನು ಬಳಸಿಕೊಂಡಿದ್ದರೆ, ಮತ್ತೆ ಇನ್ನಷ್ಟು ಅಕ್ಕಿ ಕೇಂದ್ರದಿಂದ ಬರುತ್ತಿತ್ತು. ಅದನ್ನು ಬಳಕೆ ಮಾಡಿಕೊಂಡಿದ್ದರೆ ಅಭಿವೃದ್ಧಿ ಕೆಲಸಗಳಾಗುತ್ತಿದ್ದವು. ಆದರೆ ಇವತ್ತು ಈ ರಾಜ್ಯಕ್ಕೆ ಅನ್ಯಾಯವಾಗಿದೆ, ಮತ್ತೆ ಕೇಂದ್ರದಿಂದ ಅಕ್ಕಿ ಪಡೆಯಲಿಕ್ಕಾಗಲಿಲ್ಲ. ಇರತಕ್ಕಂತಹ ಅಕ್ಕಿಯನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದಕ್ಕಾಗಲಿಲ್ಲ. ಬಡವರಿಗೆ ಕೂಲಿಯೂ ಇಲ್ಲ, ಅಭಿವೃದ್ಧಿ ಕೆಲಸವೂ ಇಲ್ಲದ ಹಾಗಾಗಿದೆ. ನಮ್ಮ ನೆರೆ ರಾಜ್ಯವಾದ ಆಂಧ್ರಪ್ರದೇಶದಲ್ಲಿ 38 ಲಕ್ಷದಿಂದ 48 ಲಕ್ಷ ಟನ್ ಅಕ್ಕಿ ಸದ್ಬಳಕೆಯಾಗಿದೆ. ಅಲ್ಲಿ ಯಾವ ಕೂಗೂ ಇಲ್ಲ. 40 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಕೇಂದ್ರದಿಂದ ತರಿಸಿಕೊಂಡು ಆಂಧ್ರದವರು ಅಭಿವೃದ್ಧಿ ಕೆಲಸ ಮಾಡಿದ್ದಾರೆಂದರೆ, ನಮ್ಮಿಂದ ನಮ್ಮ ರಾಜ್ಯದಲ್ಲಿ ಈ ಕೆಲಸ ಏಕೆ ಆಗಲಿಲ್ಲ? ಇದಕ್ಕೆ ಯಾರು ಕಾರಣ ಕರ್ತರು ಎನ್ನತಕ್ಕಂಥದ್ದನ್ನು ಕಂಡುಹಿಡಿಯಬೇಕಾಗಿದೆ. ಬಡವರಿಗೆ ಅನ್ಯಾಯವಾಗಿದೆ, ಅಭಿವೃದ್ಧಿ ಕೆಲಸ ಕುಂಠಿತವಾಗಿದೆ, ಇದು ಎಲ್ಲಾ ಶಾಸಕರಿಗೂ ಅನ್ವಯವಾಗುತ್ತದೆ. ನಾಳೆ ಬೆಳಿಗ್ಗೆ ಊರಿಗೆ ಹೋದರೆ ಶಾಸಕರಿಗೆ ಯಾವ ಹಣ ಇದೆ? ಅಂಗನವಾಡಿ ಕಟ್ಟಡ ಕಟ್ಟಿಸುವುದಕ್ಕಾಗುವುದಿಲ್ಲ, ಗುಂಡಿ ಮುಚ್ಚಿಸುವುದಕ್ಕಾಗುವುದಿಲ್ಲ, 9,000 ಕಿ.ಮೀ. ಲೋಕೋಪಯೋಗಿ ರಸ್ತೆ ಬಿಟ್ಟರೆ, ಉಳಿದಿರತಕ್ಕಂತಹ 90,000 ಕಿ.ಮೀ. ರಸ್ತೆಯನ್ನು ರಿಪೇರಿ ಮಾಡುವವರಾರು? ನಮ್ಮ ಕಾರುಗಳೂ ಹೋಗುವುದಿಲ್ಲ, ಬಸ್ಸುಗಳು ಓಡಾಡುವುದಿಲ್ಲ. ಮಕ್ಕಳು ಶಾಲೆಗಳಿಗೆ ಹೋಗುವುದಕ್ಕೆ ಬಸ್ಸುಗಳು ಇಲ್ಲ, ಕೆಎಸ್ಸಾರ್ಟಿಸಿಯವರಿಗೆ ಕೇಳಿದರೆ ಸ್ವಾಮಿ, ರಸ್ತೆ ರೆಡಿ ಮಾಡಿಸಿ, ನಮ್ಮ ಬಸ್ಸು ಬಿಡುತ್ತೇವೆಂದು ಹೇಳುತ್ತಾರೆ. ಇದನ್ನು ತುರ್ತಾಗಿ ಕೈಗೊಳ್ಳಬಾರದಿತ್ತೆ? ಕಾನೂನು ಯಾರಿಗೆ ಅನ್ವಯವಾಗುತ್ತದೆ? ಶಾಸಕರು ಒಬ್ಬರು ಒಂದು ಮನವಿ ತೆಗೆದುಕೊಂಡು ಗಂಡ ಹೆಂಡತಿ ಒಂದೇ ಕಡೆ ಕೆಲಸ ಮಾಡುವ ಹಾಗೆ ಮಾಡುವುದಕ್ಕೆ ಅಲ್ಲೊಂದಿಲ್ಲಿಗೆ ಓಡಾಡಬೇಕಾಗಿದೆ. ಬೀದರ್‌ನಲ್ಲಿ ಹೆಂಡತಿ ಇದ್ದಾಳೆ, ಬೆಂಗಳೂರಿನಲ್ಲಿ ಗಂಡ ಇದ್ದಾನೆ ವರ್ಗಾವಣೆ ಮಾಡಿ ಎಂದು ಸರ್ಕಾರ ಹೇಳಿದ್ದರೂ ಶಾಸಕರು ಅರ್ಜಿ ತೆಗೆದುಕೊಂಡು ಮುಖ್ಯ ಮಂತ್ರಿಗಳ ಬಳಿ ಸುತ್ತಬೇಕು. ಒಬ್ಬ ಗಂಡ ಹೆಂಡತಿ ಬೇರೆ ಬೇರೆ ಕಡೆ ಕೆಲಸ ಮಾಡುತ್ತಿದ್ದರೆ ಶಾಸಕರು ನೂರು ಸಾರಿ ಅರ್ಜಿ ಹಿಡಿದು ಓಡಾಡಬೇಕು. ಅದಕ್ಕೆ ಅಧಿಕಾರಿಗಳು ಜವಾಬ್ದಾರಿ ಅಲ್ಲವೇ? ಅಂಥ ಅಧಿಕಾರಿಗಳನ್ನು ಜೈಲಿಗೆ ಹಾಕಬಾರದೇ? ಯಾವ ಕಾನೂನಿನ ರೀತಿ ಗಂಡ ಹೆಂಡತಿ ಒಂದೇ ಕಡೆ ಕೆಲಸ ಮಾಡುವ ಹಾಗೆ ವರ್ಗಾವಣೆ ಮಾಡಿಕೊಡದೇ ಹೋದರೆ ನಿಮ್ಮ ಐಎಎಸ್ ಅಧಿಕಾರಿಗಳನ್ನು ಜೈಲಿಗೆ ಹಾಕುವುದು ಬೇಡವೇ? ಇದಕ್ಕೆ ಯಾರು ಕಾರಣಕರ್ತರು? ಇದಕ್ಕೆ ಅವರು ಸೂತ್ರ ಹೇಳಬೇಕಾಗುತ್ತದೆ. ಇಲ್ಲಿ ಕುಳಿತು ಅವರು ಹೇಳಿದ ಹಾಗೆ ಮಾಡುವುದಕ್ಕಲ್ಲ ನಾವು ಇರುವುದು, ಐಎಎಸ್ ಅಧಿಕಾರಿಗಳು ಅವರ ಕೆಲಸವನ್ನು ಅವರು

ನಿರ್ಧಾಕ್ಷಿಣ್ಯವಾಗಿ ಮಾಡಬೇಕಾಗುತ್ತದೆ. ಇದು ಅವರ ಜವಾಬ್ದಾರಿ ಕೂಡ. ಮೊದಲು ಯಾರಿಗೆ ಅನ್ಯಾಯವಾಗಿದೆ ಎಂಬುದನ್ನು ನೋಡಿ ನ್ಯಾಯಯುತವಾದ ಅಧಿಕಾರಿಗಳಿಗೆ ನ್ಯಾಯ ಸಿಗಬೇಕು. ಅನ್ಯಾಯ ಮಾಡಿದಂತಹವರನ್ನು ಜೈಲಿಗೆ ಹಾಕಬೇಕು. ಅವರು ಯಾರೇ ಇರಲಿ, ಅವರನ್ನು ಜೈಲಿಗೆ ಕಳುಹಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಅದಕ್ಕೆ ಎಲ್ಲರೂ ಕೂಡ ಕಾರಣಕರ್ತರಾಗಬೇಕು. ನಾವು ನಾಳೆ ಹಳ್ಳಿಗಳಿಗೆ ಏನು ಹೋಗುತ್ತಿದ್ದೇವೆ. ಹಳ್ಳಿಗಳಲ್ಲಿ ನಾಲೆಗಳು ಒಡೆದು ಹೋಗಿವೆ, ರಸ್ತೆಗಳೆಲ್ಲ ಗುಂಡಿ ಬಿದ್ದು ಹೋಗಿವೆ, ನಮ್ಮ ಕಂದಾಯ ಸಚಿವರಿಗೆ ಇವತ್ತು 100 ಕೋಟಿ ರೂಪಾಯಿ ಕೊಟ್ಟರು ಕೂಡ ಸಾಲದು. ಎಲ್ಲಾ ಕಡೆ ಫ್ಲಡ್, ಡ್ಯಾಮೇಜ್, ಎಲ್ಲಾ ಕಡೆ ಬರ ಪರಿಹಾರ ಕೊಡುವುದಕ್ಕೆ ಎಲ್ಲದೆ ಹಣ, ನೀವು ಇವತ್ತು ತೀರ್ಮಾನ ಕೈಗೊಳ್ಳಬೇಕು. ಇದು ಕೊನೆ ದಿನ. ಇದು ನಾವು ನಮ್ಮ ಸ್ವಂತಕ್ಕೇನೂ ಕೂಗಾಡುತ್ತಿಲ್ಲ, ಮಾನ್ಯ ಯಡಿಯೂರಪ್ಪನವರು ತಪ್ಪು ತಿಳಿದುಕೊಂಡರು. ನಾವು ನಿಮಗೆ ಮಾತನಾಡಬೇಡಿ ಎಂದು ಯಾವತ್ತೂ ಅಡ್ಡಿಪಡಿಸುವುದಿಲ್ಲ. ವಿರೋಧ ಪಕ್ಷದ ನಾಯಕರಿಗೆ ನಾವೂ ಕೂಡ ನಿಮಗೆ ಗೌರವ ವ್ಯಕ್ತಪಡಿಸುತ್ತೇವೆ, ನಿಮಗೆ ಬೆಂಬಲ ಕೊಡುತ್ತೇವೆ. ಅದರ ಬಗ್ಗೆ ಅನುಮಾನ ಇಲ್ಲ. ನಮಗೆ ಏನು ಕಳಕಳಿ ಎಂದರೆ, ಇವತ್ತು ವಿಧಾನಸಭೆ ಮುಗಿಯುತ್ತಿದೆ, ನಾಳೆ ಕ್ಷೇತ್ರಗಳಿಗೆ ಹೋಗುತ್ತೇವೆ.

ಜನರು ನಮ್ಮನ್ನು ಕೇಳುತ್ತಾರೆ. ನಾವು ಏನು ಮಾಡಬೇಕು ಎನ್ನತಕ್ಕಂಥದ್ದು ಪ್ರಶ್ನೆ. ವಿರೋಧ ಪಕ್ಷದ ನಾಯಕರು, ಮುಖ್ಯಮಂತ್ರಿಗಳು, ಕಂದಾಯ ಸಚಿವರು ಮತ್ತು ಹಣಕಾಸಿನ ಸಚಿವರುಗಳು ಕುಳಿತು ನಾಳೆ ಕ್ಷೇತ್ರದ ಒಳಗಡೆ ನಾವುಗಳು ಹೋಗುವುದರೊಳಗೆ ಈ ಬಗ್ಗೆ ತೀರ್ಮಾನವನ್ನು ಕೈಗೊಂಡು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಮತ್ತು ಜೈಲಿನಲ್ಲಿ ಯಾರಾದರೂ ನ್ಯಾಯವಾದವರು ಏನಾದರೂ ಇದ್ದರೆ ಅವರನ್ನು ಬಿಡುಗಡೆಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) :** ಮಾನ್ಯ ಅಧ್ಯಕ್ಷರೆ, ಇದು ಹಾಸನ ಜಿಲ್ಲೆಯಿಂದಲೇ ಶುರುವಾದ ಈ ಹಗರಣ ಬಹುಶ: ಈ ರಾಜ್ಯದ ಗಮನವನ್ನು ಸೆಳೆದಿರುವಂಥ ವಿಚಾರವಾಗಿದೆ. ಏಕೆಂದರೆ ಹಾಸನ ಜಿಲ್ಲೆಯಲ್ಲಿ ಮಾತ್ರ 19 ಜನ ಅಧಿಕಾರಿಗಳು ಇವೊತ್ತು ಜೈಲಿನಲ್ಲಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈ ಹಗರಣ ನಡೆದಿರುವುದು ಅವರ ಕಣ್ಣಿಗೆ ಬಿದ್ದಾಗ ತದನಂತರ ಸದನದಲ್ಲಿ ಸ್ಫೋಟಗೊಂಡು ಧಿಡೀರನೆ 19 ಜನ ಅಧಿಕಾರಿಗಳನ್ನು ಜೈಲಿಗೆ ಕಳುಹಿಸಿರುವುದು ನಡೆದಿದೆ. ಇಡೀ ರಾಜ್ಯದಲ್ಲಿ ಇಂದು ಅಕ್ಕಿಯನ್ನು ಕಂಡರೆ ಹಾವು ನೋಡಿದ ಹಾಗೆ ನೋಡುತ್ತಿದ್ದಾರೆ. ಯಾರಾದರೂ ನಿಮ್ಮ ಅಧಿಕಾರಿಗಳಿಗೆ, ಇಂಜಿನಿಯರ್‌ಗಳಿಗೆ ವಾಟರ್ ಶೆಡ್ ಏರಿಯಾದಲ್ಲಿ ನಾವೇ ಅಕ್ಕಿಯನ್ನು ಮುಟ್ಟಯ್ಯಾ ಎಂದರೆ ಸಾಕು,

ಸಾರ್, ಸಾರ್ ನಿಮ್ಮ ದಮ್ಮಯ್ಯ ಅದನ್ನು ಮುಟ್ಟುವುದಿಲ್ಲ ಸಾರ್, ಅದು ನಾಗರಹಾವು ಎನ್ನುತ್ತಾರೆ. ಇದಕ್ಕೆ ಏನು ಕಾರಣ ಎಂಬ ಬಗ್ಗೆ ಸ್ವಲ್ಪ ಸವಿಸ್ತಾರವಾಗಿ ಚರ್ಚೆಯನ್ನು ಮಾಡಬೇಕಾಗಿದೆ. ಈ ರಾಜ್ಯದ ಹಿತವನ್ನು ಕಾಪಾಡಲು ಸಾಧ್ಯವಾಗಬೇಕಾದರೆ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳು ಬಹಳ ಗಂಭೀರವಾಗಿ ಮೂರು ಕೂಡ ಅನ್ಯೋನ್ಯವಾಗಿ ಚಿಂತನೆ ಮಾಡಬೇಕಾಗುತ್ತದೆ. ಆದರೆ ಬಹುಶಃ ಈ ಅಕ್ಕಿ ಹಗರಣವಾದ ಮೇಲೆ ಈ ಕಾರ್ಯಾಂಗ ಮತ್ತು ಶಾಸಕಾಂಗಕ್ಕೆ ಒಂದಕ್ಕೊಂದಕ್ಕೆ ಹೊಂದಾಣಿಕೆಯೇ ಇಡೀ ರಾಜ್ಯದಲ್ಲಿ ಇಲ್ಲದಂತಾಗಿದೆ ಎನ್ನುವ ಮಾತನ್ನು ಈ ಸಭೆಯ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಮಾನ್ಯ ವಿರೋಧ ಪಕ್ಷದ ಮುಖಂಡರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಡೀ ರಾಜ್ಯದ ನೌಕರರಿಗೆ ಶಾಸಕರ ಮೇಲೆ, ಮುಖ್ಯಮಂತ್ರಿಗಳ ಮೇಲೆ, ಮಂತ್ರಿಗಳ ಮೇಲೆ ವಿರೋಧ ಪಕ್ಷದ ಮುಖಂಡರ ಮೇಲೆ, ರಾಜಕಾರಣಿಗಳ ಮೇಲೆ ನಂಬಿಕೆಯೇ ಹೊರಟು ಹೋಗಿದೆ. ಅಪನಂಬಿಕೆ ಬಂದುಬಿಟ್ಟಿದೆ. ಅವರು ಯಾವ ನಂಬಿಕೆ ಮೇಲೆ ಮುಂದೆ ಕೆಲಸ ಮಾಡುವುದು? ಏಕೆಂದರೆ ನೌಕರ ಯಾವುದೇ ಒಂದು ಸರ್ಕಾರ ಬಂದಾಗ ಆ ಸರ್ಕಾರದ ಇಚ್ಛೆಯನ್ನು ಅರಿತು ಆ ಪ್ರಕಾರ ಕೆಲಸ ಮಾಡುತ್ತಾನೆ. ಶಾಸಕರ ಇಚ್ಛೆಯನ್ನರಿತು ಅಲ್ಲಿಯ ನೌಕರ ಕೆಲಸ ಮಾಡುತ್ತಾನೆ. ಮಂತ್ರಿಯ ಇಚ್ಛೆಯನ್ನರಿತು ಅದಕ್ಕೆ ತಾಳವನ್ನು ಅಧಿಕಾರಿಗಳು ಹಾಕುತ್ತಾರೆ. ಹತ್ತು ಪರ್ಸೆಂಟ್ ಇರಬಹುದು, ಸರ್ಕಾರವನ್ನೇ ನಮ್ಮ ಕೈಯಲ್ಲಿಟ್ಟುಕೊಂಡಿದ್ದೇವೆ ಎನ್ನುವ ಅಧಿಕಾರಿಗಳನ್ನೂ ನಾವು ನೋಡಿದ್ದೇವೆ. ಈ ಮಂತ್ರಿಯನ್ನು ಹೇಗೆ ಬೇಕಾದರೂ ನಾನು ಬಳಸುತ್ತೇನೆ ಕಣಯ್ಯಾ ಎಂದು ಹೇಳುವಂಥ ಅಧಿಕಾರಿಗಳನ್ನು ನಾನು ಬಹುಶಃ 15, 20 ವರ್ಷಗಳಿಂದ ನೋಡಿದ್ದೇನೆ. ಯಾವ ಮಂತ್ರಿ ಬಂದರೂ ನಾವು ಸೊಪ್ಪು ಹಾಕುವುದಿಲ್ಲ, ನನಗೆ ಹೇಗೆ ಈ ಮಂತ್ರಿಯ ಇಚ್ಛೆಯನ್ನು ಯಾವ ತರಹದಲ್ಲಿ ಮಾಡಿ ಮಂತ್ರಿಯನ್ನು ಓಲೈಸಿಕೊಳ್ಳಬೇಕು ಎಂದು ಚಿಂತನೆ ಮಾಡುವ ಅಧಿಕಾರಿಗಳು ಹತ್ತು ಪರ್ಸೆಂಟ್ ಇರಬಹುದು, ಇದ್ದಾರೆ. ಬಹಳ ದುಂಡಾವೃತ್ತಿಯಲ್ಲಿ ನಡೆಯತಕ್ಕಂಥವರು. ಅಂಥವರು ಬಹಳ ಬಲಿಷ್ಠರಾಗಿದ್ದಾರೆ ಬಿಡಿ, ಯಾವ ಸರ್ಕಾರಕ್ಕೂ ಅವರು ಸಿಗುವುದಿಲ್ಲ. ಅವರೆಲ್ಲ ನಾನೇ ಮಂತ್ರಿಯನ್ನು ಮಾಡಿದೆ ಎಂದು ಹೇಳುತ್ತಾರೆ, ಸರ್ಕಾರವನ್ನು ನಾನೇ ತಂದೆ ಎನ್ನುವಂಥವರು ಹತ್ತು ಪರ್ಸೆಂಟ್ ಮಂದಿ ಇದ್ದಾರೆ. ಅವರಿಗೆ ನಾನು ಇದನ್ನೆಲ್ಲಾ ಅನ್ವಯಿಸುವುದಿಲ್ಲ. ಇನ್ನು ಇಂಜಿನಿಯರ್‌ಗಳು ಎಂದರೆ, ಮುಗದಂರವರು ವಿಶ್ವೇಶ್ವರಯ್ಯನವರು, ಬಾಳೆಕುಂದ್ರಿಯವರಂಥ ಒಳ್ಳೆಯ ಇಂಜಿನಿಯರ್‌ಗಳು ಇರಲಿಲ್ಲವೇ? ಆದರೆ ಇವೊತ್ತು ಎಲ್ಲಾ ವರ್ಗಗಳಲ್ಲಿಯೂ ಒಳ್ಳೆಯವರು, ಕೆಟ್ಟವರು ಇದ್ದಾರೆ. ಶಾಸಕರು ಎಂದಾಕ್ಷಣ ಅವರೆಲ್ಲರೂ ಒಳ್ಳೆಯವರು ಎಂದು ಸೀಲ್ ಹೊಡೆಯುವುದಕ್ಕೆ ಈ ದೇಶದ ಜನರು ರೆಡಿ ಇದ್ದಾರೆಯೇ? ನಮ್ಮಲ್ಲೂ ಕಳ್ಳರು ಮತ್ತು ಒಳ್ಳೆಯವರು ಇದ್ದಾರೆ. ದುಡ್ಡು ಇಡುವುದಕ್ಕೆ ಜಾಗವಿಲ್ಲದಂಥ ರಾಜಕಾರಣಿಗಳು ಇದ್ದಾರೆ, ಬಸ್‌ನಲ್ಲಿ ಹೋಗುವುದೇ

ಸರಿ ಕಣಯ್ಯಾ, ಕಾರ್‌ನಲ್ಲಿ ಹೋದರೆ 1000 ರೂಪಾಯಿ ಖರ್ಚಾಗುತ್ತದೆ ಎಂದು ಚಿಂತೆಪಟ್ಟು ವ್ಯಥೆಪಡತಕ್ಕಂಥ ಶಾಸಕರನ್ನೂ ನಾನು ನೋಡಿದ್ದೇನೆ. ಅಧಿಕಾರಿಗಳಲ್ಲೂ ಕೂಡ ದುಡ್ಡು ಇಡುವುದಕ್ಕೆ, ನಿವೇಶನವನ್ನು ತೆಗೆದುಕೊಳ್ಳುವುದಕ್ಕೆ ಮಕ್ಕಳು, ಮೊಮ್ಮಕ್ಕಳು ಇಲ್ಲದೇ ಬೇರೆ ಯಾರನ್ನೋ ಹುಡುಕಿ ಅಣ್ಣನ ಮಗ, ತಮ್ಮನ ಮಗನ ಹೆಸರಿನಲ್ಲಿ ದುಡ್ಡು ಇಡುವಂಥ ಅಧಿಕಾರಿಗಳು ಇದ್ದಾರೆ. ಹಾಗೆಯೇ ಮರ್ಯಾದಸ್ತ ಅಧಿಕಾರಿಗಳೂ ಇದ್ದಾರೆ. ಅಂಥ ಮರ್ಯಾದಸ್ತ ಅಧಿಕಾರಿಗಳಲ್ಲಿ ಕೆಲವರು ತಮ್ಮ ಮಕ್ಕಳ ಮದುವೆಯನ್ನೂ ಮಾಡಲಿಕ್ಕಾಗದೇ ಹೆಂಡತಿ ಮಕ್ಕಳ ಕೈಯಿಂದ ಬೈಸಿಕೊಂಡು ರಿಟೈರ್ ಆಗಿರುವ ಇಂಜಿನಿಯರ್‌ಗಳು ಇಲ್ಲವೆ? ಎಷ್ಟೋ ಜನ ಮನೆ ಕಟ್ಟುವುದಕ್ಕೆ ಯೋಗ್ಯತೆ ಇಲ್ಲದೇ ರಿಟೈರ್ ಆಗಿ ಕಡೆಗೆ ಸಾಯುವಾಗಲೂ ಬೈಸಿಕೊಂಡಿರುವಂಥ ಅಧಿಕಾರಿಗಳು ಈ ರಾಜ್ಯದಲ್ಲಿ ಇಲ್ಲವೇ? ಇನ್ನು ನಮ್ಮ ಶಾಸಕರಲ್ಲಿ ಎಷ್ಟೋ ಜನರಿಗೆ ಊಟ ಮಾಡುವುದಕ್ಕೂ, ನಿದ್ದೆ, ಮನೆ ಇಲ್ಲದೆ ಇರುವವರು ಇದ್ದಾರೆ. ಬಹಳ ಧೀಮಂತ ನಾಯಕನಾಗಿದ್ದು ರಾಜ್ಯದ ಬಡವರಿಗಾಗಿ ಹೋರಾಟ ಮಾಡಿ, ರಾಜ್ಯದ ಹಿತಕ್ಕಾಗಿ ಹೋರಾಟ ಮಾಡಿದ್ದರೂ ಕೂಡ ಅಂಥವರ ಊಟಕ್ಕೂ ಬೇರೆಯವರು ಅಕ್ಕಿ ಕೊಟ್ಟಂಥ ಉದಾಹರಣೆಗಳನ್ನು ಹೊಂದಿರುವ ಶಾಸಕರುಗಳನ್ನು, ರಾಜಕಾರಣಿಗಳನ್ನು ನೋಡಿದ್ದೇವೆ. ನಾವು ಎಲ್ಲವನ್ನು ಮಿಕ್ಸ್ ಮಾಡಬಾರದು. ರಾಜಕಾರಣಿಗಳು, ಆದವರು ಅಧಿಕಾರಿಗಳು ಎಂದ ತಕ್ಷಣ ಮುಖ ಸಿಂಡರಿಸುವುದು, ಏನಾದರೂ ತಪ್ಪಾಗಿದ್ದರೆ ಇದಕ್ಕೆ ಎಲ್ಲಾ ಅಧಿಕಾರಿಯೇ ಕಾರಣ ಎನ್ನುತ್ತೇವೆ. ಇದು ಆಗಬಾರದು. ಇನ್ನು ಕೆಲವು ಅಧಿಕಾರಿಗಳಿಗೆ ಸಿದ್ಧರಾಮಯ್ಯನಂಥವರೋ, ಧರ್ಮಸಿಂಗ್ ರಂಥವರೋ, ಯಡಿಯೂರಪ್ಪನವರಂಥವರೋ ಎಬ್ಬಿಸಿದರೆ ಮಾತ್ರ ಅವರ ಕಣ್ಣಿಗೆ ಇವರು ಕಾಣುವುದು. ನಮ್ಮಂಥ ಸಣ್ಣಪುಟ್ಟ ಶಾಸಕರು ಹೋದರೆ ನೋಡುವುದೇ ಕಷ್ಟ. ರಾಜಕಾರಣಿಗಳು ಶಾಸಕರು ಐದು ವರ್ಷ ಇರುತ್ತಾರೆ, ಹೋಗುತ್ತಾರೆ, ನಾವು 58 ವರ್ಷದವರೆಗೂ ಅಧಿಕಾರದಲ್ಲಿ ಇದ್ದೇ ಇರುತ್ತೇವೆ ಎನ್ನುವ ಅಹಂಕಾರದ ಅಧಿಕಾರಿಗಳೂ ಇದ್ದಾರೆ. ಇದನ್ನೆಲ್ಲಾ ಸ್ವಲ್ಪ ಸಮನ್ವಯ ಮಾಡಿ ನೋಡಬೇಕು. ಇವೊತ್ತು 19 ಜನ ಅಧಿಕಾರಿಗಳನ್ನು ಜೈಲಿನಲ್ಲಿ ಇಡಲಾಗಿದೆ. ನಮ್ಮ ಮಗ ಯಾರಾದರೊಬ್ಬ ನಿಜವಾಗಿಯೂ ಅಪರಾಧಿಯಾಗಿ ಪಾಪದವನಾಗಿ ಜೈಲಿನಲ್ಲಿದ್ದರೆ ನಾವೇನಾದರೂ ಇಲ್ಲಿ ಸಮಾಧಾನವಾಗಿ ಕೂಡುತ್ತಿದ್ದೆವೇ? ರಾತ್ರಿ ನಮ್ಮ ಹೆಂಡತಿ ಮಕ್ಕಳು ಸಮಾಧಾನವಾಗಿ ನಿದ್ದೆ ಮಾಡುತ್ತಿದ್ದರೆ? ಅದನ್ನು ನೀವು ಯೋಚನೆ ಮಾಡಬೇಕು. ಈಗಾಗಲೇ ಮಾನ್ಯ ಎ.ಟಿ. ರಾಮಸ್ವಾಮಿ ಯವರು ಮಾತನಾಡುತ್ತಾ ಬಿಡಿಸಿ ಬಿಡಿಸಿ ಹೇಳಿದರು. ಇದಕ್ಕೆ ಯಾರು ಹೊಣೆಗಾರರು, ಯಾರು ಜವಾಬ್ದಾರರು? ನಾವೆಲ್ಲಾ ಜವಾಬ್ದಾರರು ಇದ್ದೇವೆ. ಯಾವಾಗಲೂ ಈ ದೋಷ ಆಗುವುದು ಹೇಗೆಂದರೆ ಹಿಂದಿನ ಸರ್ಕಾರ ಇತ್ತಲ್ಲಾ ಆ ಸರ್ಕಾರದಲ್ಲಿ ಈ ಅಕ್ಕಿ ಹಗರಣ ಶುರುವಾದಾಗ ಹಳ್ಳಿಯಲ್ಲಿ ಈ ಜನ ಏನು ಮಾತನಾಡುತ್ತಿದ್ದರೂ ಗೊತ್ತೇ? ನನಗೆ ತಿಳಿದ ಮಟ್ಟಿಗೆ ಹೇಳುತ್ತೇನೆ, ಅಂಕಿ ಸಂಖ್ಯೆ ಗೊತ್ತಿಲ್ಲ. ಹಿಂದೆಯೇ

ಕೆರೆಯ ಗುಂಡಿಯನ್ನು ರೈತರು ತೆಗೆದಿದ್ದರಲ್ಲಾ ಆ ಹಳೆಯ ಗುಂಡಿಗಳಿಗೆಲ್ಲಾ ಇಂಜಿನಿಯರ್‌ಗಳು ಬಿಲ್ ಕೊಡುತ್ತಿದ್ದಾರೆ. ಈ ಶಾಸಕರು ಹಳ್ಳಿಯ ಗುಂಡಿಗಳಿಗೆಲ್ಲಾ ಅವರ ಹಿಂದೆ ಮುಂದೆ ಇರುವವರಿಗೆ ಬಿಲ್ ಕೊಡಿಸುತ್ತಿದ್ದಾರೆ. ಈ ಹಳೆ ಕೆರೆಗೆ ರೈತರು ಬೋರ್ ಹೊಡೆದುಕೊಂಡಿರುವ ಗುಂಡಿಗಳಿಗೆಲ್ಲಾ ಬಿಲ್ ಕೊಡುತ್ತಾರೆ. ರಾತ್ರೋರಾತ್ರಿ ಜೆ.ಸಿ.ಬಿ. ತಂದು ಎಲ್ಲೋ ಒಂದು ಕಡೆ ಒಂದು ಗುಂಡಿ ತೋಡಿದರೆ ದುಡ್ಡು ಕೊಡುತ್ತಾರೆ. ಇಂಥ ದೂರು ಇಡೀ ರಾಜ್ಯದಲ್ಲಿತ್ತು. ಒಂದು ಊರಿನಲ್ಲಿ ಮಾತ್ರ ಇರಲಿಲ್ಲ. ಅದರ ಫಲವಾಗಿಯೇ ಇಂದು 110 ಜನ ಹೊಸ ಶಾಸಕರು ಗೆದ್ದು ಬಂದಿದ್ದು ಮತ್ತು 29 ಜನ ಮಂತ್ರಿಗಳು ಸೋತಿದ್ದು. ಅಧರ ಹಿಂದಿನ ಸರ್ಕಾರದಲ್ಲಿ ಪುಟ್ಟೇಗೌಡರೇ ನೀವು ಇದ್ರಲ್ಲಾ, ನೀವು ಹೇಗೆ ಸೋತಿದ್ದು ಎಂದು ನನಗೆ ನೀವು ಕೇಳಬಹುದು. ನಮ್ಮ ಜಗಳ ಅಸಹ್ಯವಾಗಿದ್ದ ಕಾರಣ ಈ ರಾಜ್ಯದಲ್ಲಿ ಜನರು ಅಂದು ನಮ್ಮನ್ನು ಸೋಲಿಸಿದರು. ನಮಗೆ ಈಗಾಗಲೇ ರಾಜ್ಯದ ಜನರು ಮಾರ್ಕ್ಸ್ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ, ರಾಜ್ಯದ ಜನರು ದಡ್ಡರು ಎಂದು ತಿಳಿದುಕೊಳ್ಳಬೇಡಿ, ನಾವು ಬರೇ ಎಂ.ಎ. ಮಾಡಿದ್ದರೆ ಈ ರಾಜ್ಯದ ಜನ ಎಂ.ಎ., ಪಿ.ಹೆಚ್.ಡಿ. ಮಾಡಿದ್ದಾರೆ. ಈಗಾಗಲೇ ರಾಜ್ಯದ ಜನರು ಮಾರ್ಕ್ಸ್ ಲಿಸ್ಟ್‌ನ್ನು ರೆಡಿಮಾಡಿಕೊಂಡು ಧರ್ಮಸಿಂಗ್‌ರವರಿಗೆ ಎಷ್ಟು ಮಾರ್ಕ್ಸ್ ಕೊಡಬಹುದು, ಯಡಿಯೂರಪ್ಪನವರಿಗೆ ಎಷ್ಟು ಕೊಡಬೇಕು, ಶಾಸಕರಿಗೆ ಎಷ್ಟು ಕೊಡಬೇಕು ಹಾಗೂ ಯಾವ ಯಾವ ಮಂತ್ರಿಗಳಿಗೆ ಎಷ್ಟೆಷ್ಟು ಕೊಡಬೇಕು ಎಂದು ಮಾರ್ಕ್ಸ್‌ನ್ನು ಜನರು ಹಾಕುತ್ತಿದ್ದಾರೆ. ನಾವು ಇವೊತ್ತಿನಿಂದಲೇ ಆ ಮಾರ್ಕ್ಸ್‌ನ್ನು ಹಾಕಿಸಿಕೊಂಡು ಫೇಲ್ ಆಗುವುದಕ್ಕೆ, ಎಲ್ಲರೂ ಕೂಡ, ಆ ಕಡೆ ಈ ಕಡೆಯವರೆಲ್ಲರೂ ಕೂಡ ಸನ್ನದ್ಧರಾಗಿರಬೇಕು. ಯಾವುದೇ ಒಂದು ಸರ್ಕಾರ ವಿವೇಚನೆ ಇಲ್ಲದೆ ಕೆಲಸ ಮಾಡಿದ್ದೇ ಆದರೆ ಇಂಥ ಅನಾಹುತಗಳು ಆಗುತ್ತದೆ. ಅದಕ್ಕೆ ಅಕ್ಕಿ ಹಗರಣವನ್ನೇ ತೆಗೆದುಕೊಂಡರೆ, ಕೇವಲ ಪಾಪದ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ಜೈಲಿನಲ್ಲಿಟ್ಟರೆ ಮುಗಿಯಿತೆ? ನಮ್ಮ ಶ್ರೀ ಎ.ಟಿ. ರಾಮಸ್ವಾಮಿ ಯವರು ಈ ಬಗ್ಗೆ ಬಿಡಿಸಿ ಬಿಡಿಸಿ ಹೇಳಿದರು. ಎಲ್ಲಿಗೆ ಹೋಗಿದ್ದರು ಡೆಪ್ಯುಟಿ ಕಮಿಶನರ್? ಸ್ವಾಮಿ, ರೆವಿನ್ಯೂ ಮಿನಿಸ್ಟರ್ ಏನು ಮಾಡುತ್ತಿದ್ದರು? ಅಂದಿನ ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದರು? ಈ ರಾಜ್ಯದ ಮಂತ್ರಿಗಳು ಹಾಗೂ ಶಾಸಕರು ಎಲ್ಲರೂ ಏನು ಮಾಡುತ್ತಿದ್ದರು? ವಿರೋಧ ಪಕ್ಷ ಏನೂ ಕೆಲಸ ಮಾಡುತ್ತಿರಲಿಲ್ಲವೇ? ನಾನು ಹೇಳುತ್ತೇನೆ, ಯಾರೋ ಒಬ್ಬ ನೀರಾವರಿ ಸಚಿವರು, ಅವರು ಎಲ್ಲಾ ಕೆಲಸ ಕಾರ್ಯಗಳನ್ನು ಬಿಟ್ಟು ಒಂದು ಕಾರಿನಲ್ಲಿ, ಒಂದು ಕೆನಾಲ್‌ನಲ್ಲಿ ಮೂರು ಕಿ.ಮೀ. ಸಾಗಿದರೆ ಕನಿಷ್ಟ ಒಂದು ಹತ್ತು ಕೋಟಿ ರೂ. ದುಡ್ಡು ಉಳಿಯುತ್ತದೆ. ನೀರಾವರಿ ಸಚಿವರಾದವರಿಗೆ ಆ ಕಾಳಜಿ ಇರಬೇಕು, ಆ ಕಮಿಟ್‌ಮೆಂಟ್ ಇರಬೇಕು. ಜಿಲ್ಲಾ ಪಂಚಾಯತ್‌ಗಳಿಗೆ ಸಂಬಂಧಪಟ್ಟಂತೆ ಮಂತ್ರಿ ಆದವನು ಇಡೀ ರಾಜ್ಯದಾದ್ಯಂತ ಇರುವ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಸಂಬಂಧಪಟ್ಟಂತೆ

ರಿವ್ಯೂ ಮಾಡಿದರೆ ಸಾಕು, ಅವನಿಗೆ ಏನೂ ಗೊತ್ತಿರುವುದು ಬೇಡ, ಕೇವಲ ಲೆಕ್ಕ ಪುಸ್ತಕದ ಹಾಳೆಯನ್ನು ಮುಗುಚಿ ಹಾಕಿದರೆ ಸಾಕು ಅಲ್ಲೊಂದು ಹತ್ತು ಕೋಟಿ ರೂಪಾಯಿ ದುಡ್ಡು ಉಳಿಯುತ್ತದೆ. ಈ ಮಂತ್ರಿ ಎಚ್ಚರವಾಗಿದ್ದಾರೆ ಅಂದರೆ ಇಡೀ ರಾಜ್ಯದ ಕಾರ್ಯಾಂಗ, ಎಲ್ಲಾ ನೌಕರರೂ ಕೂಡ ಎಚ್ಚರವಾಗಿರುತ್ತಾರೆ. ಎಷ್ಟೇ ಭ್ರಷ್ಟ ಇದ್ದರೂ ಒಬ್ಬ ಅಧಿಕಾರಿಯು ಎಚ್ಚರದಿಂದ ಇರುವ ಶಾಸಕನ ಮುಂದೆ ಯಾವ ಭ್ರಷ್ಟತೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಶಾಸಕರು ಎಚ್ಚರದಿಂದ ಇದ್ದರೆ ಯಾವ ಅಧಿಕಾರಿ ಕೂಡ ಭ್ರಷ್ಟತೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಯಾವುದೇ ಅಧಿಕಾರಿ ಹೊಸದಾಗಿ ಬಂದ ಶಾಸಕ ಹೇಗೆ ಎಂಬುದನ್ನು ನೋಡುತ್ತಾನೆ. ಈ ಶಾಸಕ ಏನಾದರೂ ವಿಸ್ಕಿಗೆ ಈಲ್ಡ್ ಆಗುತ್ತಾನೆಯೇ, ಅಥವಾ ಇನ್ನಾವ ತರಹದಲ್ಲಿ ಈಲ್ಡ್ ಆಗುತ್ತಾನೆ ಎಂದು ನೋಡುತ್ತಾ ಒಂದು ವೇಳೆ ದುಡ್ಡುಗಿಡ್ಡು ವಿಚಾರದಲ್ಲಿ ಅವರೇನಾದರೂ ತೊಂದರೆಯಲ್ಲಿದ್ದರೆ ಶಾಸಕರಿಗೆ ಹೇಳುತ್ತಾನೆ, 'ಸಾರ್ ನೀವು ತೊಂದರೆಯಲ್ಲಿದ್ದೀರಿ, ರಾಜಕೀಯ ಹೀಗೆ, ಎಲ್ಲರೂ ದುಡ್ಡು ಮಾಡಿಕೊಳ್ಳುತ್ತಿದ್ದಾರೆ, ಹಾಗೆಯೇ ನೀವು ಮಾಡಿಕೊಳ್ಳಿ' ಎಂದು ಹೇಳಿದಾಗ ಆ ಶಾಸಕ ಈಲ್ಡ್ ಆಗುತ್ತಾನೆಯೇ ಎಂಬುದನ್ನು ಅಧಿಕಾರಿ ನೋಡುತ್ತಾನೆ. ಇದ್ಯಾವುದೂ ನಡೆಯುವುದಿಲ್ಲವೆಂದರೆ ಆ ಅಧಿಕಾರಿ ಶಾಸಕರಾದ ನಮಗೆ ಹೊಂದಿಕೊಳ್ಳುತ್ತಾನೆ. ಒಂದು ವೇಳೆ ಶಾಸಕರಾದ ನಾವೇ ಒಂದು ಹತ್ತು ಲಕ್ಷ ರೂ.ಗಳಿಗೆ ಕೈಯಾಡ್ಡಿದ್ದರೆ ಅವನೂ ಕೂಡ ಸಹಜವಾಗಿ ಐದು ಲಕ್ಷ ರೂಪಾಯಿಗಳನ್ನು ಮಾಡಿಕೊಳ್ಳಲೇಬೇಕಲ್ಲವೇ? ಅದನ್ನು ತಪ್ಪು ಎಂದು ಏಕೆ ನಾವು ಹೇಳಬೇಕು. ಅದೇ ರೀತಿಯಲ್ಲಿಯೇ ಈ ಅಕ್ಕಿ ಹಗರಣ ಇಡೀ ರಾಜ್ಯದಲ್ಲಿ ನಡೆದಿರುವುದು. ನಾನು ಕೇಳುತ್ತೇನೆ, ರೆವಿನ್ಯೂ ಮಂತ್ರಿಗಳು ಎಲ್ಲಿಗೆ ಹೋಗಿದ್ದರು? ರಾಜ್ಯದ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಅರಿವಿರಲಿಲ್ಲವೆ? ಆ ಕಮಿಟಿಯಲ್ಲಿ ಅಧ್ಯಕ್ಷರಾಗಿದ್ದ ಶಾಸಕರುಗಳಿಗೆ ಇದರ ಅರಿವಿರಲಿಲ್ಲವೆ? ಅವೊತ್ತೇನಾದರೂ ಮಂಗಳೂರಿನಲ್ಲಿ ಅಕ್ಕಿ ಸಿಕ್ಕದೇ ಇದ್ದಿದ್ದರೆ ಇದರ ಬಗ್ಗೆ ಯಾರೂ ಇಲ್ಲಿ ಕೇಳುತ್ತಲೇ ಇರಲಿಲ್ಲವಲ್ಲಾ ಸ್ವಾಮಿ, ಇದರ ಬಗ್ಗೆ ಸದನದಲ್ಲಿ ಚರ್ಚೆಯೇ ಆಗುತ್ತಿರಲಿಲ್ಲವಲ್ಲಾ. ಈ ವಿಷಯ ಚರ್ಚೆಗೆ ಬರುತ್ತಲೇ ಇರಲಿಲ್ಲ. ಆದುದರಿಂದ ಈ ಹಗರಣದ ಬಗ್ಗೆ ನಮ್ಮ ಮನಮುಟ್ಟಿ ಪರೀಕ್ಷೆ ಮಾಡಿಕೊಳ್ಳಬೇಕು. ಇವೊತ್ತು ಯಾವುದೇ ಒಬ್ಬ ಅಧಿಕಾರಿ ನೂರಕ್ಕೆ ನೂರರಷ್ಟು ಸರಿಯಾಗಿಯೇ ಕೆಲಸ ಮಾಡುತ್ತಾನೆಂದು ಹೇಳುವುದಕ್ಕಾಗುವುದಿಲ್ಲ. ತಪ್ಪನ್ನು ಹುಡುಕಿಯೇ ಹುಡುಕುತ್ತೇವೆ ಎಂದರೆ ಯಾವುದಾದರೊಂದು ತಪ್ಪನ್ನು ಹುಡುಕಿ ಸಸ್ಪೆಂಡ್ ಮಾಡಬಹುದು. ಇನ್ನು ಮಾಡಬಾರದ್ದನ್ನು ಮಾಡಿದ್ದರೆ ಅಂಥವನನ್ನು ಸೇವ್ ಮಾಡಬೇಕು ಎಂದು ಮನಸ್ಸು ಮಾಡಿದರೆ ಎಲ್ಲಿಯಾದರೂ ಅವನ ಬಗ್ಗೆ ಒಳ್ಳೆಯ ಮಾತುಗಳನ್ನು ಹೇಳಿ ಒಳ್ಳೆಯತನ ಎಂದು ಹೇಳಿ ಅದಕ್ಕೆ ಮಾರ್ಕ್ಸ್ ಹಾಕಿ, ಯಾವುದಾದರೂ ಮಂತ್ರಿಗಳ ಹತ್ತಿರವೇ ಹೋಗಿ ನೋಡಿ ಸಾರ್ ಈ ಅಧಿಕಾರಿ ಹರಿಶ್ಚಂದ್ರ ಸಾರ್, ಆದ್ದರಿಂದ ನಿಮ್ಮ

ಲೆಟರ್‌ನಲ್ಲಿ ಆ ರೀತಿ ಬರೆಯಿರಿ ಸಾರ್ ಎಂದು ಹೇಳಿ ಬರೆಸಿ ನಂತರ ರಿವೋಕ್ ಮಾಡಿ ಆತನಿಗೇ ಪ್ರಮೋಶನ್ ಕೊಡಿಸಬಹುದು. ಈಗ ಸಿ.ಓ.ಡಿ. ಯವರು ತನಿಖೆ ಮಾಡಿದ ಮೇಲೆ ಮೆಶನರಿಯನ್ನು ಉಪಯೋಗ ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇದನ್ನೇ ಸಿ.ಓ.ಡಿ. ಯವರು ಪ್ರಧಾನವಾಗಿ ನೋಡಿರುವುದು ಎಂದು ನಾನು ತಿಳಿದುಕೊಂಡಿದ್ದೇನೆ. ಈ 'ಕೂಲಿಗಾಗಿ ಕಾಳು' ಯೋಜನೆಯಲ್ಲಿ ಎಷ್ಟೋ ಜನ ಮಂತ್ರಿಗಳು, ಶಾಸಕರು ಫೋಟೋ ತೆಗೆಸಿಕೊಂಡಿದ್ದಾರೆ, ಜನರೆಲ್ಲರೂ ನೋಡಲಿ ಎಂದೇ ಫೋಟೋ ತೆಗೆಸಿಕೊಂಡಿದ್ದಾರೆ. ಇವರಿಗೆ ಮೆಶನರಿ ಉಪಯೋಗ ಮಾಡಿಕೊಳ್ಳಬಾರದು ಎಂಬುದು ಗೊತ್ತಿರಲಿಲ್ಲವೇ? ಒಂದು ಹತ್ತು ಹದಿನೈದು ವರ್ಷಗಳಿಂದೀಚೆಗೆ ಏನಾಗಿದೆಯೆಂದರೆ ನಮ್ಮ ಕೆನಾಲ್ ಆಗಿದೆ, ಇವೊತ್ತು ಯಾವುದೇ ಹಳ್ಳಿಗೆ ರಸ್ತೆ, ಕೆರೆಗಳನ್ನು ಹಾಕಿಸಿದರೆ ಅದು ಮೆಶನರಿಯಿಂದ. ಕೂಲಿಗಾಗಿ ಜನ ಬರುವ ಕಾಲವಿಲ್ಲ. ಆಮೇಲೆ 'ಕೂಲಿಗಾಗಿ ಕಾಳು' ಎಂದರೆ ಹಿಂದೆ 1967-68ರಲ್ಲಿ ಬರ ಬಂದಿತ್ತು. ಅ ಬರ ಬೇರೆ. ಆ ಕಾಲದಲ್ಲಿ ಹೊಟ್ಟೆಗೆ ತಿನ್ನಲು ಜೋಳ ಸಿಗುತ್ತಿರಲಿಲ್ಲ, ಅಕ್ಕಿ ಸಿಗುತ್ತಿರಲಿಲ್ಲ, ರಾಗಿ ಸಿಗುತ್ತಿರಲಿಲ್ಲ. ಆದರೆ ಈಗ ಜನರು ಹಳ್ಳಿಗಳಲ್ಲಿ ರೇಶನ್‌ಗಾಗಿ ತಡಕಾಡುತ್ತಿಲ್ಲ. ತಡಕಾಡುತ್ತಿರುವುದು ಏಕೆಂದರೆ ಅವರು ಮನೆಮಠ ಮುಳುಗಿ ಹೋಗುವಂಥ ರೀತಿಯಲ್ಲಿ ಸಾಲ ಮಾಡಿದ್ದಾರೆ, ಅದಕ್ಕಾಗಿ ದುಡ್ಡಿಗಾಗಿ ತಡಕಾಡುತ್ತಿದ್ದಾರೆ. ನೀವು ಅಕ್ಕಿ ಕೊಡುತ್ತೇನೆಂದರೆ ನಮಗೆ ದುಡ್ಡು ಕೊಡಿ ಸ್ವಾಮಿ ಎಂದು ಕೇಳುತ್ತಾರೆ, ಹಾಗಾಗಿ ಈ ತರಹ ಎಲ್ಲಾ ನ್ಯೂನತೆಗಳು ಇವೆ. ಎರಡೂ ಕಡೆ ತಪ್ಪುಗಳು ಏನಾಗಿವೆ ಮತ್ತು ಈ ಕಾರ್ಯಕ್ರಮಗಳೆಲ್ಲಾ ದೋಷಪೂರಿತವಾಗಿದೆ, ಏಕೆಂದರೆ 5 ಕೆ.ಜಿ. ಅಕ್ಕಿ ಕೊಡುತ್ತೇವೆಂದರೆ, ಒಂದು ಮನೆಯಿಂದ 4 ಜನ ಕೂಲಿಗೆ ಬಂದರೆ 20 ಕೆ.ಜಿ. ಅಕ್ಕಿ ತೆಗೆದುಕೊಂಡು ಹೋಗಿ ಎಲ್ಲಿ ಇಟ್ಟುಕೊಳ್ಳುತ್ತಾನೆ? ಅವನಿಗೆ ಹಟ್ಟಿ ಇಲ್ಲವಲ್ಲಾ ಬಡವ ಎಲ್ಲಿ ಇಟ್ಟುಕೊಳ್ಳುತ್ತಾನೆ ಸ್ವಾಮಿ? ಸಂಜೆ ಐದು ಗಂಟೆಯ ತನಕ ಕೆಲಸ ಮಾಡಿ ರಾತ್ರಿ ಖಾರ ಅರೆದು ಹಿಟ್ಟು ಮಾಡಿಕೊಂಡು ತಿನ್ನಬೇಕಲ್ಲಾ, ಅದಕ್ಕೆ ಈ ಅಕ್ಕಿಯನ್ನು ತೆಗೆದುಕೊಂಡು ಹೋಗಿ ಮಾರದೆ ಇನ್ನು ಏನು ಮಾಡುತ್ತಾರೆ? ಆ ಕೂಲಿಗಾರ ಮೇಸ್ತ್ರಿಗೆ ಹೇಳುತ್ತಾನೆ, ಅವನು ಕಂಟ್ರಾಕ್ಟರ್‌ಗೆ ಹೇಳುತ್ತಾನೆ, ಕಂಟ್ರಾಕ್ಟರ್ ನನಗೆ ದುಡ್ಡು ಕೊಡಯ್ಯ ಎಂದು ಇಂಜಿನಿಯರ್‌ಗೆ, ಕೇಳುತ್ತಾನೆ. ಇನ್ನು ನೀವು ಅಕ್ಕಿ ಕೊಡುವುದು ಯಾವಾಗವೆಂದರೆ ಕೆಲಸ ಮಾಡಿದ ಎರಡು ತಿಂಗಳ ನಂತರ ಕೊಡುತ್ತೀರಿ. ಅಲ್ಲಿಯವರೆಗೆ ಕೂಲಿ ಮಾಡುವವನು ಉಪವಾಸ ಇರುತ್ತಾನೆಯೇ? ಕೂಲಿಗಾಗಿ ಅಕ್ಕಿ ಕಾಳು ಎಂದು ಕೊಡುತ್ತೀರಲ್ಲಾ ನೀವು, ಕೆಲಸ ಮಾಡಿದ ಕೂಡಲೇ ಕಾಳು ಅಥವಾ ಹಣ ಕೊಡಲಿದ್ದರೆ ಕಂಟ್ರಾಕ್ಟರ್‌ರ ಮನೆ ಹತ್ತಿರ ಹೋಗಿ ಕೂಲಿಯವನು ಅವನಿಗೆ ಕಪಾಳಮೋಕ್ಷ ಮಾಡಿಬಿಡುತ್ತಾನೆ. ಈ ತರಹ ಸದರಿ ಯೋಜನೆಯಲ್ಲಿ ಹಲವಾರು ದೋಷಗಳು ಇವೆ. ನಾನು ಇವತ್ತು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಅವರದ್ದು ತಪ್ಪು ಆಗಿಲ್ಲ ಎಂದು ನಾನು ಹೇಳುವುದಿಲ್ಲ, ರಾಜ್ಯದ ಇಡೀ ಜನ ಆಯಾಯ ಹಳ್ಳಿಗಳಲ್ಲೆಲ್ಲ ಅವತ್ತು ಮಾತನಾಡುತ್ತಿದ್ದರು, ನಾವು ಸಹ ಆಗಲೇ

ಶಾಸಕರು ಆಗಿಬಿಟ್ಟೆವು ಎಂದು ಖುಷಿ ಪಡುತ್ತಿದ್ದೆವು. ನಮ್ಮನ್ನು ಕರೆದು ಜನರೆಲ್ಲಾ ಹೇಳುತ್ತಿದ್ದರು ಲೇ, ಹಳೇ ಗುಂಡಿಗೆಲ್ಲಾ ದುಡ್ಡು ಕೊಡ್ತಾವರೆ ಕಣೋ ಪುಟ್ಟೇಗೌಡ, ಮುಂದಕ್ಕೆ ನಿಮಗೇ ಓಟು ಹಾಕುವುದು ಸುಮ್ನಿರಿ ಎಂದು ಹೇಳುತ್ತಿದ್ದರು. ನನಗೆಂತಲ್ಲ, ಎಲ್ಲಾ ಪಕ್ಷದವರಿಗೂ ಹೇಳುತ್ತಿದ್ದರು. ಪಾಪ ಆ ಪುಣ್ಯಾತ್ಮರು ಅಕ್ಕಿಯನ್ನು ಬಳಕೆ ಮಾಡಿಕೊಂಡು ಹಳ್ಳಿಗಳಲ್ಲೆಲ್ಲಾ ಪ್ರಚಾರ ಆಗುವ ಹೊತ್ತಿಗೆ ಈ ಶಿಕ್ಷೆ ಆಯಿತು. ಅವತ್ತು ಜನತಾದಳದಲ್ಲಿ ನಮ್ಮ ಜಗಳಗಳನ್ನು ನೋಡಿ ಅಸಹ್ಯಪಟ್ಟು ಶ್ರೀ ಕೃಷ್ಣರವರ ಸರ್ಕಾರವನ್ನು ತಂದರು. ಹೀಗೆ ಜನ ಬಹಳ ಎಚ್ಚರಿಕೆಯಿಂದ ಇದ್ದಾರೆ. ಇವತ್ತು ಏನು ಅಧಿಕಾರಿಗಳು 19 ಜನ ಇದ್ದಾರೆ, ನನ್ನ ಕ್ಷೇತ್ರದಲ್ಲಿ ಕೋಲಾರದ ಕಡೆಯವರಾದ ಕೃಷ್ಣಪ್ಪ ಎನ್ನುವ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಇದ್ದರು. ನಾನು ಆ ವ್ಯಕ್ತಿಯನ್ನು ಅಲ್ಲಿಗೆ ಹಾಕಿಸಿದವನು ಅಲ್ಲ. ನನ್ನ ರಾಜಕೀಯ ಎದುರಾಳಿಗಳು ಅವರನ್ನು ನಮ್ಮ ಊರಿಗೆ ಹಾಕಿಸಿದರು. ನಿಜವಾಗಿಯೂ ನನ್ನ ಮನಸ್ಸಿನೊಳಗಡೆ ವಿರೋಧಿ ಹಾಕಿಸಿದ್ದಾನೆ ಎನ್ನುವ ಆಕ್ರೋಶ ಇದ್ದರೂ ಮನಸ್ಸಿನೊಳಗಡೆ ಇವನಲ್ಲೋ ಸ್ವಲ್ಪ ಗಂಭೀರವಾದ ಅಧಿಕಾರಿ ಎನ್ನತಕ್ಕಂಥ ಭಾವನೆ ಇತ್ತು. ಕೆಟ್ಟವರೂ ಇದ್ದಾರೆ. ನೀವು ಅವರನ್ನು ಪರೀಕ್ಷೆ ಮಾಡಿ. ಇದರ ಜೊತೆಗೆ ಪಾಪ ಅವರು ಎರಡು ತಿಂಗಳಿಂದ ಜೈಲಿನಲ್ಲಿದ್ದಾರೆ. ಅವರ ಅಪ್ಪ ಅಮ್ಮ ಹೆಂಡತಿ ಮಕ್ಕಳು ಗೋಳೋ ಎಂದು ಅಳುತ್ತಾರೆ. ಇದಕ್ಕೆ ಸಹಕಾರ ಮಾಡಿದ ಮಂತ್ರಿಗಳು ಶಾಸಕರನ್ನೆಲ್ಲಾ ಎರಡೆರಡು ದಿವಸ ಜೈಲಿನಲ್ಲಿ ಇಡಿ ಆಗ ಅದರ ಅನುಭವ ಗೊತ್ತಾಗುತ್ತದೆ. ಆದ್ದರಿಂದ ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಂದ ಹಿಡಿದು ಈ ರಾಜ್ಯದ ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರೆಲ್ಲಾ ಕೂಡ ಇದರ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಬೇಕು, ಕಾರ್ಯಾಂಗ ನಮ್ಮ ಶಾಸಕಾಂಗದ ಮೇಲೆ ನಂಬಿಕೆ ಇಡದೇ ಇದ್ದರೆ ಅವರು ಮುಂದೆ ಯಾವುದೇ ಕೆಲಸವನ್ನು ಮುಟ್ಟಲಿಕ್ಕೆ ಬರುವುದಿಲ್ಲ. ಆಗ ಏನಾಗುತ್ತದೆ ಎಂದರೆ ಎಲ್ಲಾ ಕೆಲಸ ಕಾರ್ಯಗಳಿಗೆ ಬಂದ ದುಡ್ಡು ಕೂಡ ಸರ್ಕಾರಕ್ಕೆ ವಾಪಸ್ಸು ಹೋಗುತ್ತದೆ. ಅದಕ್ಕೆ ಆಸ್ಪದ ಆಗಬಾರದು. ಇದು ಎಲ್ಲಿ ತಪ್ಪಾಗಿದೆ, ಇದಕ್ಕೆ ಯಾರೇ ಕಾರಣೀಭೂತರಾಗಿದ್ದರೂ ಕೂಡ ಅವರ ಮೇಲೆ ಕ್ರಮ ಜರುಗಿಸಬೇಕು. ನಾವು ಅಕ್ಕಿಯನ್ನೆಲ್ಲಾ ಸರಿಯಾಗಿ ಖರ್ಚು ಮಾಡಿದ್ದೇವೆಂದು ಕೇಂದ್ರ ಸರ್ಕಾರಕ್ಕೆ ಇವರು ಸರ್ಟಿಫಿಕೇಟ್ ಕೊಟ್ಟಿದ್ದಾರಲ್ಲವೇ? ಹಾಗಾದರೆ ಆವತ್ತು ಇವರು ಈ ಬಗ್ಗೆ ನೋಡಲಿಲ್ಲವೇ? ಒಂದು ನಮೂನೆಯ ಅಧಿಕಾರಿಗಳು, ಇನ್ನೊಂದು ಕಡೆ ರಾಜಕಾರಣಿಗಳು, ಇನ್ನೊಂದು ಕಡೆ evergreen ಎನ್ನುವಂಥ ಅಧಿಕಾರಿಗಳು ಇದ್ದಾರೆ. ನಮ್ಮನ್ನು ಯಾರೂ ಮುಟ್ಟುವುದಕ್ಕಾಗುವುದಿಲ್ಲ. ಒಂದು ರೀತಿ ನಾವು ಪರ್ಮನೆಂಟ್ ಆಗಿ 58 ವರ್ಷ ಇರುತ್ತೇವೆ ಎನ್ನುವಂಥ ಅಧಿಕಾರಿಗಳಿದ್ದಾರೆ. ಶ್ರೀ ಧರ್ಮಸಿಂಗ್‌ರವರ ಅಧಿಕಾರ ಕೂಡ 3 ವರ್ಷ, 4 ವರ್ಷ, 5 ವರ್ಷ ನಡೆಯಬಹುದು, ಮಂತ್ರಿಗಳ ಅಧಿಕಾರ ಐದು ವರ್ಷ ನಡೆಯಬಹುದು. ಆದರೆ ನಮ್ಮದು 58 ವರ್ಷದವರೆಗೆ ನಡೆಯುತ್ತದೆ ಎಂದು ಹೇಳುವಂಥವರಿದ್ದಾರೆ. ಅಂಥವರಲ್ಲಿ ಕೆಲವರದ್ದು ದೋಷ ಇದೆ. ನಾನು ಎಲ್ಲರನ್ನೂ ಸೇರಿಸಿ ಹೇಳುವುದಿಲ್ಲ. ಅಂಥವರಲ್ಲಿ ಬಹಳ ಎತ್ತರದ ಅಧಿಕಾರಿಗಳು ಇದ್ದರು. ಒಬ್ಬರು ಈಶ್ವರಪ್ಪ ಎನ್ನುವಂಥ ಹೆಲ್ತ್ ಸೆಕ್ರಟರಿ ಇದ್ದರು. ನನಗೆ ಸ್ವಲ್ಪ ಆರೋಗ್ಯ ಸರಿಯಿಲ್ಲದೆ

3–4 ಗಂಟೆಯ ಹೊತ್ತಿಗೆ ಸ್ವೆಟರ್ ಹಾಕಿಕೊಂಡು ಹೋಗಿದ್ದೆ. ಏ! ಕಳುಹಿಸಯ್ಯ ಆಚೆಕಡೆಗೆ ಎಂದು ಈಶ್ವರಪ್ಪ ಹೇಳಿದರು. ಸರ್, ನಾನು ಶಾಸಕ ಆಗುತ್ತಿದ್ದೇನೆ ಧ್ವನಿ ಸ್ವಲ್ಪ ಕೃಶವಾಗಿದೆ ಎಂದು ಹೇಳಿದಾಗ ಕಳುಹಿಸಯ್ಯ ಆಚೆಕಡೆಗೆ ಎಂದು ಹೇಳಿದರು. ನಿಜವಾಗಿ ಆತ ಒಳ್ಳೆಯ ಅಧಿಕಾರಿ. ತರುವಾಯ, ನಾನು ಸೆಕ್ರೆಟರಿಗೆ ಮತ್ತು ಮುಖ್ಯಮಂತ್ರಿಗಳಿಗೆ ನಾನು ಒಬ್ಬ ಜನಪ್ರತಿನಿಧಿ ಎಂದು ಹೇಳಿ ಲೆಟರ್ ಕೊಟ್ಟೆ. ಪಾಪ, ಆತ ಕೂರಿಸಿ ಅವರು ತನ್ನ ಕಾಳಜಿಯನ್ನು ಹೇಳಿದರು, ಯಾವ ತರಹ ಬಡತನದಿಂದ ಬಂದಿದ್ದೇವೆ, ನಮ್ಮ ತಂದೆತಾಯಿಗಳು ಯಾವ ಸ್ಥಿತಿಯಲ್ಲಿ ಇಲ್ಲಿಗೆ ಕರೆದುಕೊಂಡು ಬಂದಿದ್ದಾರೆ ಎನ್ನುವುದನ್ನು ಹೇಳಿದರು. ಅಂಥ ಒಳ್ಳೆಯ ಅಧಿಕಾರಿಗಳು ಸಹ ನಮ್ಮಲ್ಲಿ ಇದ್ದಾರೆ. ಒಟ್ಟಾರೆಯಾಗಿ ಎಲ್ಲಾ ರಾಜಕಾರಣಿಗಳು ಕೆಟ್ಟವರು, ಎಲ್ಲಾ ಅಧಿಕಾರಿಗಳು ಕೆಟ್ಟವರು, ಎಲ್ಲಾ ಇಂಜಿನಿಯರುಗಳು ಕೆಟ್ಟವರು ಎನ್ನುವಂಥ ಮಾತು ಬೇಡ. ಎಲ್ಲಾ ವರ್ಗದಲ್ಲಿ ಅಯೋಗ್ಯರು ಇದ್ದಾರೆ. ಎಲ್ಲಾ ವರ್ಗದಲ್ಲಿ ಒಳ್ಳೆಯವರು ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ, ಎಲ್ಲಿ ದೋಷ ಇದೆ ಎನ್ನುವುದನ್ನು ಹುಡುಕಿ, ಅಲ್ಲಿ ನೀವು ಬಲಿಹಾಕಿ. ನಿಜವಾಗಿ ನಿರಪರಾಧಿಗಳು ಈ ಸನ್ನಿವೇಶದಲ್ಲಿ ಸಿಕ್ಕಿದ್ದರೆ ಅವರ ಕಡೆಗೆ ಕೂಡ ಗಮನಹರಿಸಬೇಕು, ರಾಜ್ಯದ ಕೆಲಸ ಏನು ಇವತ್ತು ಸ್ಥಗಿತವಾಗಿದೆ, ಕಾರ್ಯಾಂಗದ ಎಲ್ಲಾ ನೌಕರರು ಇವತ್ತು ನಮ್ಮ ಮೇಲೆ ನಂಬಿಕೆಯನ್ನು ಕಳೆದುಕೊಂಡು, ಮಾಡುವಾಗ ಮಾಡಿಸಿಬಿಡುತ್ತಾರೆ ಮಂತ್ರಿಗಳು ಶಾಸಕರು ಆಮೇಲೆ ನಮ್ಮ ರಕ್ಷಣೆಗೆ ಬರುವುದಿಲ್ಲ ಎನ್ನತಕ್ಕಂಥ ಅಪನಂಬಿಕೆ ಅವರಲ್ಲಿದೆ. ಅದನ್ನು ಹೋಗಲಾಡಿಸಿ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುವುದಕ್ಕೆ ಮತ್ತೆ ಈ ಅಕ್ಕಿಯನ್ನು ಕೊಡುವುದೇ ಅಥವಾ ಅದಕ್ಕೆ ಬೇರೆ system ಅನ್ನು ತಂದು ಬದಲಾವಣೆ ಮಾಡುವುದೋ ಅದಕ್ಕೂ ಕೂಡ ನೀವು ಉನ್ನತ ಮಟ್ಟದಲ್ಲಿ ಮುಖಂಡರಾದಂಥ ವಿರೋಧ ಪಕ್ಷದವರು, ಆಡಳಿತರೂಢ ಪಕ್ಷದ ತಾವು ಮುಖ್ಯಮಂತ್ರಿಗಳು ಎಲ್ಲರೂ ಸೇರಿ ಇವತ್ತು ಒಂದು ತೀರ್ಮಾನಕ್ಕೆ ಬರಬೇಕೆನ್ನುವಂಥ ಮಾತನ್ನು ಹೇಳಿ ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು** : ಈಗ ಬಹಳಷ್ಟು ಜನ ಸದಸ್ಯರು ಇದೇ ವಿಷಯದ ಮೇಲೆ ಮಾತನಾಡಬೇಕೆಂದು ಬಯಸುತ್ತಿದ್ದೀರಿ. ಈಗ ಐದೂವರೆ ಗಂಟೆಯಾಯಿತು. ಈಗ ಮಾನ್ಯ ಸಚಿವರು ಉತ್ತರ ಕೊಡಬೇಕು. ಅದಲ್ಲದೆ ಇನ್ನೊಂದು ವಿಷಯ ನಿಯಮ 69ರ ಕೆಳಗಡೆ ಇದೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಅಧ್ಯಕ್ಷರೆ, ಅದಕ್ಕಾಗಿಯೇ ಸದನವನ್ನು ಒಂದು ದಿವಸಕ್ಕೆ ಮುಂದೂಡಿ ಎಂದು ನಾವು ಹೇಳುತ್ತಿರುವುದು.

**ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ)** : ಮಾನ್ಯ ಅಧ್ಯಕ್ಷರೆ, ಕಡೆಯ ದಿವಸ ಈ ಸದನದಲ್ಲಿ ಐದೂವರೆ ಗಂಟೆಯಲ್ಲಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದವನ್ನು ಸಲ್ಲಿಸುತ್ತಿದ್ದೇನೆ. ಈ ವಿಚಾರದಲ್ಲಿ ಶ್ರೀ ಎ.ಟಿ. ರಾಮಸ್ವಾಮಿಯವರು, ಶ್ರೀ ದೇವೇ ಗೌಡರು, ಶ್ರೀ ವೆಂಕಟೇಶ್‌ರವರು

ಮತ್ತು ಶ್ರೀ ಪುಟ್ಟೇಗೌಡರು ಈಗಾಗಲೇ ಬೆಳಕನ್ನು ಚೆಲ್ಲಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಹೊಸದಾಗಿ ಗೆದ್ದಂಥ ಶಾಸಕರಿಗೆ ಈ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಎಲ್ಲಾ ಪಕ್ಷದ ಶಾಸಕರಿಗೆ ಸರ್ಕಾರದ ವತಿಯಿಂದ ರೂ. 1 ಕೋಟಿಯ ಕಾಮಗಾರಿಯನ್ನು ಕೊಡಬೇಕಾಗಿತ್ತು. ಆದರೆ ಇಲ್ಲಿ ಗದ್ದಲ ಆಗಿ ಇಲ್ಲಿ ಎಲ್ಲಾ ನಮ್ಮ ನಮ್ಮಲ್ಲಿ ಕಿತ್ತಾಡಿಕೊಂಡು ಆ ಒಂದು ಕೋಟಿಯ ಕಾಮಗಾರಿ ಸ್ಥಗಿತವಾಗಿದೆ. ಈಗಾಗಲೇ ಆ ವಿಚಾರವಾಗಿ ಯಾವ ರೀತಿ ತೊಂದರೆಯಾಗಿದೆ ಎಂದು ಮಾನ್ಯ ಪುಟ್ಟೇಗೌಡರು ಬೆಳಕನ್ನು ಚೆಲ್ಲಿದ್ದಾರೆ. ಇದರಿಂದ ಕೇವಲ ಶಾಸಕರಿಗೆ ಮಾತ್ರ ತೊಂದರೆಯಾಗಿಲ್ಲ. ಕೆಳಹಂತದ ಜಿಲ್ಲಾ ಪಂಚಾಯತಿ ಇರಬಹುದು, ತಾಲ್ಲೂಕು ಪಂಚಾಯತಿ ಇರಬಹುದು ಅಥವಾ ಗ್ರಾಮ ಪಂಚಾಯತಿಯವರು ಇರಬಹುದು, ಅವರು ಕೆಲಸ ಮಾಡಿಸಿದರೆ ಅವರಿಗೂ ಕೂಡ ಅಕ್ಕಿ ಕೊಡುವಂಥ ಕಾರ್ಯಕ್ರಮಗಳು ಇವೆ. ಈ ರೀತಿಯ ಕೆಲಸದಿಂದ ಅವರಿಗೂ ಕೂಡ ತೊಂದರೆಯಾಗಿದೆ. ನಾನು ಈ ಸದನದಲ್ಲಿ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಪಕ್ಕದ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ಗೋವಾದಲ್ಲಿ ಬಹುಶ: ಈ ಟಾರ್ ರಸ್ತೆ ಮಾಡುವಂಥದ್ದು ಇರಬಹುದು, ಅಥವಾ ಸಿಮೆಂಟ್ ರಸ್ತೆಗಳನ್ನು ಮಾಡುವಂಥದ್ದು ಇರಬಹುದು, ಇವೆಲ್ಲವನ್ನೂ ಮಾಡಿಕೊಂಡು ಹೋಗಿದ್ದಾರೆ, ಆದರೆ ಅಲ್ಲಿ ಯಾವ ಸಿ.ಒ.ಡಿ. ತನಿಖೆಯೂ ಆಗಲಿಲ್ಲ. ಅಂದರೆ ಅವರು ರಾಜ್ಯದ ಅಭಿವೃದ್ಧಿಯಾಗಲಿ ಎಂದು ಪರಸ್ಪರ ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಸೇರಿ ಒಳ್ಳೆಯ ಕೆಲಸಗಳು ಆಗಬೇಕೆಂದು ಮಾತನಾಡಿಕೊಂಡು ಮಾಡಿದ್ದಾರೆ. ಆದರೆ ನಾವು ಇಲ್ಲಿ ಯಾವುದೋ ಒಂದು ವಿಚಾರವನ್ನು ತೆಗೆದುಕೊಂಡು ಯಾರೋ ಒಬ್ಬರ ಮೇಲೆ ಗೂಬೆ ಕೂರಿಸುವುದಕ್ಕೋಸ್ಕರ ನಮ್ಮ ರಾಜಕೀಯ ತೀಟೆ ತೀರಿಸುವುದಕ್ಕೋಸ್ಕರ ಈ ವಿಷಯವನ್ನು ಬಯಲಿಗೆ ತೆಗೆದುಕೊಂಡು ಬಂದು ಈ ರೀತಿ ಮಾಡುವ ಬದಲು ಬಹುಶ: ನಾವೆಲ್ಲಾ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದವರು ಸೇರಿಕೊಂಡು ಮಾಡಿದರೆ ಬಹುಶ: ಒಂದು ಕೋಟಿ ರೂ.ಯಷ್ಟು ಕಾಮಗಾರಿಗಳು ಪ್ರತಿಯೊಂದು ತಾಲ್ಲೂಕಿನಲ್ಲೂ ಆಗುವಂಥದ್ದನ್ನು ನೋಡುತ್ತಿದ್ದೆವು. ಆದರೆ ಇವತ್ತು ಎಲ್ಲಾ ಸ್ಥಗಿತಗೊಂಡಿದೆ. ಸನ್ಮಾನ್ಯ ಮಂತ್ರಿಗಳು ಯಾವ ಕೆಲಸವೂ ಸ್ಥಗಿತಗೊಂಡಿಲ್ಲ ಎಲ್ಲಾ ಕೆಲಸ ಆಗುತ್ತಿದೆ ಯಾವ ಅಕ್ಕಿ ಉಳಿದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಿನ್ನೆ ವಿಧಾನಪರಿಷತ್ತಿನಲ್ಲಿ ನಮ್ಮ ನಾಯಕರಾದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ 3ನೇ ಹಂತದಲ್ಲಿ ಕೇಂದ್ರ ಸರ್ಕಾರದಿಂದ ಬರಬೇಕಾದ ಅಕ್ಕಿ ಬಿಡುಗಡೆಯಾಗಿಲ್ಲ ಎಂದು ಹೇಳಿರುವುದನ್ನು ನಾನು ಟಿ.ವಿ.ಯಲ್ಲಿ ನಿನ್ನೆಯ ದಿವಸ ನೋಡಿದೆ. ಇದರಿಂದ ನಿಜವಾಗಿ ನಮಗೆಲ್ಲರಿಗೂ ನೋವು ಆಗಿದೆ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ, ಈಗ ಅಧಿಕಾರಿಗಳ ಬಗ್ಗೆ ಎಲ್ಲಾ ಅಧಿಕಾರಿಗಳು ಕೆಟ್ಟವರಲ್ಲ

ಎಂದು ಚರ್ಚೆಯ ಸಂದರ್ಭದಲ್ಲಿ ಎಲ್ಲರೂ ಹೇಳಿದರು. ಆದರೆ ಅಧಿಕಾರಿಗಳು ನಮ್ಮ ಮಾತನ್ನು ಕೇಳಲಿಲ್ಲವೆಂದರೆ ನಾವು ಅಧಿಕಾರಿಗಳನ್ನು ವರ್ಗಾವಣೆ ಮಾಡಿಸುತ್ತೇವೆ. ಕೂಲಿಗಾಗಿ ಕಾಳು ಯೋಜನೆ ಸಮಿತಿಯಲ್ಲಿ ಶಾಸಕರೂ ಕೂಡ ಅಧ್ಯಕ್ಷರಾಗಿದ್ದಾರೆ. ಅವರ ಮೇಲೆ ಸಿ.ಓ.ಡಿ.ತನಿಖೆ ಮಾಡಿಸಿ. ಅವರು ಹೇಳಿದಂಥ ಕೆಲಸಕಾರ್ಯಗಳನ್ನು ಇಂಜಿನಿಯರುಗಳು ಮಾಡಿದ್ದಾರೆ. ಕೆಲಸವನ್ನು ಮಾಡಿಲ್ಲವೆಂದರೆ ಇಂಜಿನಿಯರುಗಳನ್ನು ಬೇರೆ ಕಡೆಗೆ ವರ್ಗಾವಣೆ ಮಾಡುತ್ತೇವೆ. ಯಾರು ಶಾಸಕರ ಮಾತನ್ನು ಕೇಳುತ್ತಾರೋ ಆ ಇಂಜಿನಿಯರು-ಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತೇವೆ. ಆದ್ದರಿಂದ ತನಿಖೆ ಮಾಡಲೇಬೇಕೆಂದರೆ ಇವತ್ತು ಶಾಸಕರನ್ನೂ ಸಹ ಜೈಲಿಗೆ ಕಳುಹಿಸುವಂಥ ಕೆಲಸ ಮಾಡಿ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರಲ್ಲಿ ಕೇಳಿಕೊಳ್ಳುವುದೇನೆಂದರೆ, ಸಿ.ಓ.ಡಿ. ತನಿಖೆಯನ್ನು ವಾಪಸ್ಸು ತೆಗೆದುಕೊಳ್ಳಿ, ಮುಂದೆ ಆಗತಕ್ಕಂಥ ಅನಾಹುತವನ್ನು ತಪ್ಪಿಸಿ, ಯಾರೋ ನಿರಪರಾಧಿ ಇಂಜಿನಿಯರುಗಳಿಗೆ ಆಗುವಂಥ ಶಿಕ್ಷೆಯನ್ನು ತಪ್ಪಿಸಬೇಕು. ದಯಮಾಡಿ ಈ ಕೆಲಸವನ್ನು ಪ್ರಾರಂಭ ಮಾಡಬೇಕು. ಇವತ್ತು ಅಧಿವೇಶನದ ಕಡೆಯ ದಿವಸವಾಗಿದೆ. ನಾವು ಕಳೆದ ಹದಿನೈದು ದಿವಸಗಳಿಂದ ಈ ಕೂಲಿಗಾಗಿ ಕಾಳು ಯೋಜನೆಯ ಮೇಲೆ ಗಮನ ಸೆಳೆಯುವ ಸೂಚನೆಗೆ ನೋಟೀಸ್ ಕೊಟ್ಟುಕೊಂಡು ಬಂದಿದ್ದೇವೆ. ಇಂದು ಕಡೆಯ ದಿವಸವಾಗಿದ್ದು ಈಗ ನಮಗೆ ಅವಕಾಶವನ್ನು ಕೊಟ್ಟಿದ್ದೀರಿ. ನಮ್ಮ ಉದ್ದೇಶ ಅಧಿಕಾರಿಗಳಿಗೆ ತೊಂದರೆ ಆಗಲಿ ಎಂದಲ್ಲ. ಅಲ್ಲಿ ಕೆಲಸಗಳು ಪ್ರಾರಂಭವಾಗಬೇಕು. ಸಿ.ಓ.ಡಿ; ಮತ್ತಿತರ ತನಿಖೆಗಳನ್ನೆಲ್ಲಾ ಸರ್ಕಾರ ವಾಪಸ್ಸು ತೆಗೆದುಕೊಳ್ಳಬೇಕು. ಜೈಲಿನಲ್ಲಿರತಕ್ಕಂತ ಅಧಿಕಾರಿಗಳನ್ನೆಲ್ಲಾ ಬಿಡುಗಡೆ ಮಾಡಬೇಕೆಂದು ಒತ್ತಾಯವನ್ನು ಮಾಡಿ ಪರಸ್ಪರ ಹೊಂದಾಣಿಕೆಯಿಂದ ಕೆಲಸವನ್ನು ಮಾಡಿದರೆ ಮಾತ್ರ ಈ ರಾಜ್ಯಕ್ಕೆ ಕೂಲಿಗಾಗಿ ಕಾಳು ಯೋಜನೆ ಯಡಿಯಲ್ಲಿ ಬರತಕ್ಕಂಥ ದವಸಧಾನ್ಯಗಳು ಬರುತ್ತವೆ. ಇಲ್ಲದಿದ್ದರೆ ಬಹುಶ: ಇದೇ ರೀತಿ ನಾವು ಕಿತ್ತಾಡಿಕೊಂಡು ಹೋದರೆ, ಮಾತನಾಡಿದಂಥವರೆಲ್ಲಾ ಹೇಳಿದರು, ನಮಗೆ ಶಾಸಕರ ನಿಧಿ ಅಥವಾ ಬೇರೆ ಏನೂ ಇಲ್ಲ. ಆದ್ದರಿಂದ ದಯಮಾಡಿ ಸಿ.ಓ.ಡಿ. ತನಿಖೆಯನ್ನು ವಾಪಸ್ಸು ತೆಗೆದುಕೊಂಡು ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಸರ್ಕಾರ ತಕ್ಷಣ ಮುಂದಾಗಬೇಕು. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಇದಕ್ಕೆ ಸಹಕಾರವನ್ನು ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಏಕೆಂದರೆ ಅವರ ಕ್ಷೇತ್ರದಲ್ಲಿ ಕೂಡ ಈ ಕೆಲಸ ಆಗಬೇಕಾಗಿದೆ ಮತ್ತು ನಮ್ಮ ಬಿ.ಜೆ.ಪಿ. ಮಿತ್ರರ ಕ್ಷೇತ್ರದಲ್ಲಿ ಕೂಡ ಈ ಕೆಲಸಗಳು ಆಗಬೇಕಾಗಿರುವುದರಿಂದ ದಯಮಾಡಿ ತನಿಖೆಯನ್ನು ವಾಪಸ್ಸು ತೆಗೆದುಕೊಂಡು ಕೆಲಸವನ್ನು ತಕ್ಷಣ ಪ್ರಾರಂಭ ಮಾಡಲಿಕ್ಕೆ ಸರ್ಕಾರ ಆದೇಶವನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿಕೊಂಡು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

**ಶ್ರೀ ಜಿ. ಚಂದ್ರಣ್ಣ (ದೇವನಹಳ್ಳಿ)** : ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಹಳಷ್ಟು ಜನ ನನ್ನ ಸ್ನೇಹಿತರು ಈ ವಿಚಾರದಲ್ಲಿ ಮಾತನಾಡಿದ್ದಾರೆ. ಆದಕಾರಣ ನಾನು ಒಂದೈದು ನಿಮಿದಲ್ಲಿ ಮುಗಿಸಿಬಿಡುತ್ತೇನೆ, ಜಾಸ್ತಿ ಮಾತನಾಡಲು ಹೋಗುವುದಿಲ್ಲ. ಈಗಾಗಲೇ ಈ ವಿಷಯವಾಗಿ ಮಾನ್ಯ ರಾಮಸ್ವಾಮಿಯವರು, ವೆಂಕಟೇಶ್‌ರವರು, ದೇವೇಗೌಡರು ಮತ್ತು ಬಾಲಕೃಷ್ಣರವರು ಮಾತನಾಡಿದ್ದಾರೆ. ನಾನು ಪದೇ ಪದೇ ಅದನ್ನೇ ಹೇಳಲು ಹೋಗುವುದಿಲ್ಲ. ಅವರು ಬಹಳಷ್ಟು ವಿಚಾರಗಳ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಈ ಅಕ್ಕಿ ಹಗರಣದ ವಿಚಾರದಲ್ಲಿ ಇಲ್ಲಿರತಕ್ಕಂಥ ಎಲ್ಲರಿಗೂ ಒಂದು ದುಗುಡ ಇದೆ. ಆದರೆ ಅದನ್ನು ಯಾರೂ ಸಹ ಹೇಳಿಕೊಳ್ಳಲು ಹೋಗುವುದಿಲ್ಲ ಅಷ್ಟೇ. ಇವತ್ತು ಆಡಳಿತ ಪಕ್ಷಕ್ಕೆ ಬಂದಿರಬಹುದು ಅಥವಾ ವಿರೋಧ ಪಕ್ಷದಲ್ಲಿರಬಹುದು. ನಮ್ಮಲ್ಲಿದ್ದಂಥ ಬಹಳಷ್ಟು ಜನ ಗೆದ್ದು ಅಲ್ಲಿದ್ದಾರೆ. ಯಾವುದೋ ಒಂದು ಕಾರಣದಿಂದ ಇದಕ್ಕೆ ಸಿ.ಓ.ಡಿ ತನಿಖೆಯಾಗಬೇಕು ಎಂದು ಒತ್ತಾಯವನ್ನು ತಂದು ಸರ್ಕಾರದಲ್ಲಿರತಕ್ಕಂಥವರನ್ನು ಪೇಚಿಗೆ ಸಿಲುಕಿಸಿದ್ದಾರೆ. ನಿಜವಾಗಿಯೂ, ಇವತ್ತು ಅವರೂ ಸಹ ಮನಪೂರ್ವಕವಾಗಿ ಆತ್ಮಾವಲೋಕನವನ್ನು ಮಾಡಿಕೊಳ್ಳಬೇಕಾಗಿದೆ. ಇದಕ್ಕೆ ಇಂಜಿನಿಯರುಗಳೊಬ್ಬರೇ ಕಾರಣಕರ್ತರಲ್ಲ ಎಂದು ಮಾತನಾಡಿದಂಥ ಅನೇಕರು ಬೆಳಕನ್ನು ಚೆಲ್ಲಿದ್ದಾರೆ. ಸಂಬಂಧಪಟ್ಟಂಥ ಎಲ್ಲಾ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಹೇಳಲು ಬರದಿದ್ದರೂ ಸಹ, ಯಾರು ಇದರಲ್ಲಿ ಶಾಮೀಲಾಗಿದ್ದಾರೆ, ಯಾರು ತಪ್ಪಿತಸ್ಥರಾಗಿದ್ದಾರೆ ಅವರಿಗೆ ಸರಿಯಾದಂಥ ಶಿಕ್ಷೆಯಾಗಬೇಕು ಎನ್ನುವ ವಿಚಾರದಲ್ಲಿ ನಾವ್ಯಾರೂ ತಕರಾರನ್ನು ತೆಗೆಯುವುದಿಲ್ಲ. ಇದಕ್ಕೆ ನಾವು ಒಂದು ಪರಿಹಾರವನ್ನು ಹುಡುಕಿ, ಇದನ್ನು ಸರಿಪಡಿಸದಿದ್ದರೆ, ಇಲ್ಲಿಯವರೆಗೂ ಆಗಿರುವಂಥಾದ್ದನ್ನೇ ಮುಂದುವರಿಸುತ್ತಾ ಹೋದರೆ 285 ಕೋಟಿ ರೂಪಾಯಿಗಳಿಗೂ ಹೆಚ್ಚು ಬೆಲೆಬಾಳುವಂಥ ಅಕ್ಕಿ ಏನಾಗಬಹುದು? ಇವತ್ತು ಅನೇಕ ಕೆಲಸಗಳು ಸರಾಗವಾಗಿ ನಡೆಯಬೇಕು. ಹೊಸ ಶಾಸಕರಿರಿಬಹುದು, ಹಳಬರಿರಬಹುದು, ಎಲ್ಲರಿಗೂ ಸಹ ಈ ಕೆಲಸಕಾರ್ಯಗಳು ಅತ್ಯವಶ್ಯಕವಾಗಿದೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಏಕೆಂದರೆ, ನಾವು ನಮ್ಮ ಕ್ಷೇತ್ರಗಳಿಗೆ ಹೋದ ತಕ್ಷಣ ನಮ್ಮನ್ನು ಕೇಳುತ್ತಾರೆ, ಏನು ಕೆಲಸ ಮಾಡಿದಿರಿ, ಸರ್ಕಾರ ಬಂದು ಈಗಾಗಲೇ ಮೂರು ತಿಂಗಳಾಯಿತು, ನೀವು ಏನು ಮಾಡುತ್ತಿದ್ದೀರಿ, ನೀವು ಒತ್ತಡ ತರುವುದಿಲ್ಲ, ಈ ಎಲ್ಲಾ ವಿಚಾರಗಳನ್ನೂ ಕೇಳುತ್ತಾರೆ. ಇವತ್ತು ಬಹಳಷ್ಟು ಮಳೆ ಬೀಳುತ್ತಿದೆ, ರಸ್ತೆಗಳಲ್ಲಿ ಹಳ್ಳಕೊಳ್ಳಗಳು ಜಾಸ್ತಿಯಾಗಿವೆ, ರಸ್ತೆಗಳು ಬಹಳಷ್ಟು ಅಧ್ವಾನವಾಗಿವೆ, ರಸ್ತೆಗಳಲ್ಲಿ ಯಾವುದೇ ಗಾಡಿಗಳು ಓಡಾಡಲು ಆಗುತ್ತಿಲ್ಲ, ರಸ್ತೆಗಳಲ್ಲಿ ಹಳ್ಳಗಳಾಗಿ ಅನೇಕ ಆಕ್ಸಿಡೆಂಟುಗಳಾಗುತ್ತಿರುವುದನ್ನು ನಾವು ಗಮನಿಸುತ್ತಿದ್ದೇವೆ. ಈ ರೀತಿ ಅನೇಕ

ಅನಾಹುತಗಳಾಗುತ್ತಿದ್ದರೂ, ಏನೂ ಆಗುತ್ತಿಲ್ಲವೇನೋ ಎನ್ನುವ ಮನೋಭಾವವಿದ್ದು, ಇದು ಸರ್ಕಾರ ಮತ್ತು ಆ ಕಡೆ ಇರತಕ್ಕಂಥ ಎಲ್ಲರಿಗೂ ಗೊತ್ತಾಗಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭಧಲ್ಲಿ ಹೇಳಲು ಬಯಸುತ್ತೇನೆ. ಇದರ ಬಗ್ಗೆ ಇವತ್ತು ಸಿ.ಓ.ಡಿ ತನಿಖೆಗೆ ಒತ್ತಾಯ ಮಾಡಿದ್ದಾರೆ. ಒತ್ತಾಯ ಮಾಡಬಾರದು ಎಂದು ನಾವು ಹೇಳುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಯಾರು ತಪ್ಪು ಮಾಡಿದ್ದಾರೆ, ಇದರ ಹಿಂದೆ ಯಾರಿದ್ದಾರೆ, ಅವರಿಗೆ ಶಿಕ್ಷೆಯಾಗಲಿ. ಇದ್ಯಾವುದನ್ನೂ ಅವರು ಒತ್ತಾಯ ಮಾಡಬಾರದು ಎಂದು ನಾವು ಹೇಳಲು ಹೋಗುವುದಿಲ್ಲ. ಇದಕ್ಕೆ ಒಂದು ಪರಿಹಾರವನ್ನು ಹುಡುಕಿಕೊಳ್ಳಬೇಕು. ಇದಕ್ಕೆ ಸರ್ಕಾರ, ವಿರೋಧ ಪಕ್ಷದವರನ್ನೂ ಸೇರಿಸಿ ಒಂದು ಕಮಿಟಿ ಮಾಡಿ, ಎಲ್ಲಿ ತಪ್ಪಾಗಿದೆ, ಯಾರು ಇದರಲ್ಲಿ ಭಾಗಿಗಳಾಗಿದ್ದಾರೆ, ಇದನ್ನು ಹೇಗೆ ಸರಿಪಡಿಸಬಹುದು ಎನ್ನುವುದು ಹೊರಗೆ ಬರಲಿ. ಆ ರೀತಿ ಮಾಡುವುದನ್ನು ಬಿಟ್ಟು, ಇವತ್ತು 29 ಜನ ಇಂಜಿನಿಯರುಗಳನ್ನು ಜೈಲಿನಲ್ಲಿ ಕೂಡಿಸಿದ್ದೇವೆ ಎಂದರೆ, ಇದು ನಾವೆಲ್ಲರೂ ತಲೆತಗ್ಗಿಸಬೇಕಾದಂಥ ವಿಚಾರ. ಇದರಿಂದ ಇವತ್ತು ಅವಮಾನ ಆಗಿರತಕ್ಕಂಥಾದ್ದು ಯಾರಿಗೆ ಎಂಬುದನ್ನು ಯೋಚನೆ ಮಾಡಿ. ಈ ರೀತಿ ಆಂಧ್ರ ಪ್ರದೇಶದಲ್ಲಿ ಮಾಡಿಲ್ಲ, ಕೇರಳದಲ್ಲಿ ಮಾಡಿಲ್ಲ ಅಥವಾ ಇನ್ಯಾವುದೇ ಬೇರೆ ರಾಜ್ಯಗಳಲ್ಲಿ ಮಾಡಿಲ್ಲ, ಇದನ್ನು ಕರ್ನಾಟಕದಲ್ಲಿ ಮಾಡುತ್ತಾರೆ ಎಂದರೆ ಇಲ್ಲಿ ಯಾರಿಗೂ ಜವಾಬ್ದಾರಿಯಿಲ್ಲವೇ? ಇವತ್ತು ಇದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ನಾವೆಲ್ಲರೂ ಸೇರಿ ಸರಿಯಾದಂಥ ದಿಕ್ಕಿನಲ್ಲಿ ಒಂದು ಸರಿಯಾದಂಥ ನಿರ್ಧಾರಕ್ಕೆ ಬರಬೇಕಾಗುತ್ತದೆ. ಈ ವಿಚಾರವನ್ನು ನಾವು ಹಗುರವಾಗಿ ತೆಗೆದುಕೊಳ್ಳದೆ, ಕನಿಷ್ಟವೆಂದರೆ, ಅವರನ್ನು ಬಿಡಿಸುವಂಥ ಕೆಲಸವಾಗಬೇಕು. ಆದರೆ ತಪ್ಪಿತಸ್ಥರನ್ನು ಬಿಡಿಸಿ ಎಂದು ನಾನು ಹೇಳಲು ಹೋಗುವುದಿಲ್ಲ. ಯಾರು ತಪ್ಪು ಮಾಡುತ್ತಾರೆ, ಅವರು ಎಷ್ಟೇ ದೊಡ್ಡವರಿರಲಿ, ಅವರಿಗೆ ಶಿಕ್ಷೆಯಾಗಬೇಕು. ಅವರು ಶಾಸಕರಾಗಲಿ, ಮಂತ್ರಿಗಳಾಗಿರಲಿ, ಯಾರೇ ಆಗಿದ್ದರೂ ಅವರನ್ನೂ ಸಹ ಇದರಲ್ಲಿ ಒಳಪಡಿಸಬೇಕು ಎಂದು ಈಗಾಗಲೇ ಮಾತನಾಡಿರತಕ್ಕಂಥವರು ಹೇಳಿರುವುದಕ್ಕೂ ನಾನು ಸಹಮತಿಯನ್ನು ವ್ಯಕ್ತಪಡಿಸುತ್ತೇನೆ. ಏಕೆಂದರೆ, ತಪ್ಪು ಮಾಡಿಸುವಂಥವರು ನಾವೇ, ಇದನ್ನು ಮಾಡಿ, ಅದನ್ನು ಮಾಡಿ, ರೂಲ್ಸ್ ಬಿಟ್ಟು ಮಾಡಿ ಎಂದು ಹೇಳುವವರು ನಾವೇ. ರೂಲ್ಸ್ ಬಿಟ್ಟು ಮಾಡಿಯಾದ ಮೇಲೆ, ಇವತ್ತು ಅವರನ್ನು ಅದರಲ್ಲಿ ಸಿಕ್ಕಿಸಿದ ಮೇಲೆ, ಅವರನ್ನು ಬಿಡಿಸದೇ, ಇವತ್ತು ನಾವು ಆರಾಮವಾಗಿದ್ದೇವೆ ಎಂದರೆ ಇದು ಎಷ್ಟು ಸರಿ ಎನ್ನುವುದನ್ನು ನಾವೆಲ್ಲಾ ಯೋಚಿಸಬೇಕಾಗಿದೆ. ಇವತ್ತು ಆಗಬೇಕಾಗಿರುವ ಬರಪರಿಹಾರ ಕಾರ್ಯ ಇನ್ನು ಸಾಕಷ್ಟಿವೆ. ಮಳೆ ಬಿದ್ದು

ಎಲ್ಲಾ ಕೆರೆಕುಂಟೆಗಳು ತುಂಬಿಹೋಗಿವೆ ಎಂದು ಯಾರೂ ಹೇಳಲಿಕ್ಕಾಗುವುದಿಲ್ಲ. ಬಯಲುಸೀಮೆಯಿಂದ 82 ಜನ ಶಾಸಕರು ಇಲ್ಲಿಗೆ ಬರುತ್ತಿದ್ದೇವೆ. ಬಯಲುಸೀಮೆಯಲ್ಲಿ ಎಲ್ಲೂ ಸಹ ನೀರು ಸಿಕ್ಕುತ್ತಿಲ್ಲ. ಯಾವ ಬೋರ್‌ವೆಲ್‌ಗಳಲ್ಲಿ ನೀರು ಅಧಿಕವಾಗಿ ಸಿಗುತ್ತಿದೆ ಎನ್ನುವುದನ್ನು ಬಯಲುಸೀಮೆಯಿಂದ ಬಂದಿರತಕ್ಕಂಥ ಅನೇಕ ಶಾಸಕರು ಹೇಳಲಿ. ಇವತ್ತು ನಮ್ಮ ರಾಜ್ಯದಲ್ಲಿ ಒಂದು ಕಡೆ ಬರ ಇದೆ, ಇನ್ನೊಂದು ಕಡೆ ಮಳೆ ಬೀಳುತ್ತಿದೆ. ಒಂದು ಕಡೆ ಅತಿವೃಷ್ಟಿ, ಮತ್ತೊಂದು ಕಡೆ ಅನಾವೃಷ್ಟಿ, ಇವೆರಡೂ ಆಗುತ್ತಿರುವಂಥ ಸಂದರ್ಭದಲ್ಲಿ ಬರಪರಿಹಾರ ಕಾಮಗಾರಿ ವಿಚಾರಗಳಿಗೆ ಹೆಚ್ಚು ಗಮನವನ್ನು ಕೊಡಬೇಕು. ಈ ಬಗ್ಗೆ ತಾವು ಸರ್ಕಾರಕ್ಕೆ ಸೂಚನೆಯನ್ನು ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇವತ್ತು ಇಲ್ಲಿ ಮುಖ್ಯಮಂತ್ರಿಗಳೂ ಇದ್ದಾರೆ, ಉಪ ಮುಖ್ಯಮಂತ್ರಿಗಳೂ ಇದ್ದಾರೆ, ಕಂದಾಯ ಸಚಿವರೂ ಇದ್ದಾರೆ, ಇದರಿಂದ ನನಗೆ ಬಹಳ ಸಂತೋಷವಾಯಿತು, ಅವರು ಇಂಥ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡು ಇದನ್ನು ಬೇಗನೆ ಸರಿಪಡಿಸುತ್ತಾರೆ ಎಂದು ಭಾವಿಸಿದ್ದೇನೆ. ಇದಕ್ಕೆ ಪೂರಕವಾಗಿ, ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರೂ ಇದಕ್ಕೆ ಸಹ ಕರಿಸಬೇಕು. ಉಳಿದಂಥ 5–6ಜನ ಫ್ಲೋರ್ ಲೀಡರ್ಸ್ ಸಹ ಇದಕ್ಕೆ ಸಹಕರಿಸಿ, ಈ ಒಂದು ವ್ಯವಸ್ಥೆಯನ್ನು ಪೂರ್ಣಗೊಳಿಸಿ, ಆಗಿರತಕ್ಕಂಥ ಅನಾಹುತಗಳನ್ನು ತಪ್ಪಿಸುತ್ತಾರೆ ಎಂದು ಈ ಮೂಲಕ ಸರ್ಕಾರಕ್ಕೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ, ನಮಸ್ಕಾರ.

**ಶ್ರೀ ಎಂ. ಮಹಾದೇವ್ (ಕೆ.ಆರ್. ನಗರ) :** ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಬಹಳಷ್ಟು ಜನ ಮಾತನಾಡಿದ್ದಾರೆ. ನಾನು ಒಂದು ಗಂಭೀರವಾದಂಥ ವಿಚಾರವನ್ನು ಈ ಸದನದ ಮುಂದೆ ಇಡುವುದಕ್ಕೆ ಬಯಸುತ್ತಿದ್ದೇನೆ. ಕೂಲಿಗಾಗಿ ಕಾಳು ವಿಚಾರದಲ್ಲಿ ಮಾನ್ಯ ಎ.ಟಿ. ರಾಮ ಸ್ವಾಮಿಯವರು, ಜಿ.ಟಿ. ದೇವೇಗೌಡರು, ಬಾಲಕೃಷ್ಣರವರು ಮತ್ತು ಚಂದ್ರಣ್ಣನವರು ಮಾತನಾಡಿದ್ದಾರೆ. ಮಾತನಾಡಿದಂಥ ಎಲ್ಲರೂ ಕೂಡ ಇದು ಇಂಜಿನಿಯರುಗಳ ತಪ್ಪಲ್ಲ ಎಂದು ಹೇಳಿದ್ದಾರೆ. ಕೆಲವರು ಇಂಜಿನಿಯರುಗಳ ತಪ್ಪು ಎಂದು ಹೇಳಿದ್ದಾರೆ, ಕೆಲವರು ಡಿ.ಸಿ. ಯವರ ತಪ್ಪು ಎಂದು ಹೇಳಿದ್ದಾರೆ, ಎಂ.ಎಲ್.ಎ. ತಪ್ಪು ಎಂದು ಕೆಲವರು ಹೇಳಿದ್ದಾರೆ. ಮಂಗಳೂರಿನ ಬಂದರಿನಲ್ಲಿ ಅಕ್ಕಿ ಸಿಕ್ಕಿ ಹಾಕಿಕೊಳ್ಳದಿದ್ದರೆ; ಈ ಎಪಿಸೋಡ್ ಎಲ್ಲೂ ಸಹ ಬೆಳಕಿಗೆ ಬರುತ್ತಿರಲಿಲ್ಲ. ಇದು ಬೆಳಕಿಗೆ ಬಂದ ನಂತರ ವಿರೋಧ ಪಕ್ಷಗಳವರು, ಸದನದಲ್ಲಿ ಗಲಾಟೆ ಮಾಡಿ ವಾಕೌಟ್ ಮಾಡಿದ್ದಾರೆ. ಒಂದು ವಿಚಾರವೆಂದರೆ, ಕೆಲವರು ಇದರಲ್ಲಿ ಇಂಜಿನಿಯರುಗಳು ತಪ್ಪಿತಸ್ಥರು ಎಂದು ಹೇಳುತ್ತಿದ್ದಾರೆ, ಕೆಲವರು ಡಿ.ಸಿ. ತಪ್ಪಿತಸ್ಥರು ಎಂದು ಹೇಳುತ್ತಿದ್ದಾರೆ. ಆದರೆ ಇವತ್ತು ಈ ಬರಪರಿಹಾರ ಕಾಮಗಾರಿ ವಿಚಾರದಲ್ಲಿ

ಯಾರೂ ಕೂಡ ಇಂಜಿನಿಯರುಗಳ ಪರವಾಗಿ ಮಾತನಾಡುವುದಕ್ಕೆ ಸಿದ್ಧರಿಲ್ಲ. ಏಕೆಂದರೆ, ಅವರು ತಪ್ಪಿತಸ್ಥರು, ಅವರು ಜೈಲಿಗೆ ಹೋಗಿದ್ದಾರೆ. ಮಾನ್ಯ ಎ.ಟಿ. ರಾಮಸ್ವಾಮಿಯವರು ಮಾತನಾಡುವಾಗ, ನಾವು ಇಂಜಿನಿಯರುಗಳ ರಕ್ಷಣೆ ಮಾಡುವ ಬದಲು, ಕಾಲು ಹಾಳಾಗುತ್ತಿದೆ ಎಂದು ವರ್ಡಿಂಗ್ಸ್ ಮಾಡಿದ್ದಾರೆ. ಪ್ರಾಯಶ: ರಾಜಕಾರಣದಲ್ಲಿ ಕೆಲವು ಮುಜಗರದ ಸಂದರ್ಭಗಳು ಬರಬಹುದು. ಆದರೆ ಸತ್ಯವನ್ನು ಸತ್ಯ ಎಂದು ಮಾತನಾಡಲು ಯಾರೂ ಕೂಡ ಹಿಂಜರಿಯಬಾರದು. ಬರಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕೇಂದ್ರ ಸರ್ಕಾರದಿಂದ ಏನು ಸೂಚನೆ ಬಂದಿದೆ, ಡೈರೆಕ್ಟೀವ್ಸ್ ಏನಿದೆ ಎಂದರೆ, ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾದರೆ ಅದರಲ್ಲಿ 33 ಪರ್ಸೆಂಟ್ ಕ್ಯಾಷ್ ಕಾಂಪೊನೆಂಟ್, 66 ಪರ್ಸೆಂಟ್ ಫುಡ್ ಕಾಂಪೊನೆಂಟ್ ಎಂದು ಹೇಳಿದ್ದಾರೆ. ಅದರಲ್ಲಿ ಉಳಿದ ಡೈರೆಕ್ಷನ್ಸ್ ಏನಿವೆ ಎಂದರೆ, ಡಿ.ಸಿ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡಬೇಕು, ತಾಲ್ಲೂಕಿನ ಶಾಸಕರು ಆ ಕಮಿಟಿಯ oversee ಮಾಡಬಲು ಚೇರ್‌ಮೆನ್ ಆಗಬೇಕು, ಇದನ್ನೆಲ್ಲಾ oversee ಮಾಡುವುದಕ್ಕೆ ರಾಜ್ಯಮಟ್ಟದಲ್ಲಿ ಡಿವಿಷನಲ್ ಕಮೀಷನ್ನಿನ ಕೇಡರ್‌ನವರೊಬ್ಬರು ಡಿಸ್ಟ್ರಿಕ್ಟ್ ನೋಡಲ್ ಆಫೀಸರ್ ಆಗಬೇಕು. ನಾನು ಏಕೆ ಇಲ್ಲಿ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಹಿಂದೆಮುಂದೆ ಮಾತನಾಡಬಾರದು, ತಪ್ಪು ಎಲ್ಲಾಗಿದೆ ಅದನ್ನು ಈ ಸದನದಲ್ಲಿ ನೇರವಾಗಿ ಹೇಳಬೇಕಾಗುತ್ತದೆ. ನೋಡಲ್ ಆಫೀಸರ್ಸ್‌ಗೆ ಮೊದಲಿಗೆ ಬಂದಂಥ ವರ್ಕ್ಸ್‌ಗೆ ಜಿಲ್ಲಾಧಿಕಾರಿಗಳು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡುತ್ತಾರೆ. ಅಡ್ಮಿನಿಸ್ಟೇಟಿವ್ ಅಪ್ರೂವಲ್ ಕೊಡುವಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಇವುಗಳ್ಯಾವುವೂ ಕೂಡ ಮಡ್ ರಿಲೇಟೆಡ್ ವರ್ಕ್ಸ್ ಅಲ್ಲ, ಇವು ಡಾಂಬರೀಕರಣ, ಕಾಂಕ್ರೀಟ್ ವಿಚಾರಗಳಾಗಿವೆ, ಹಾಗಾಗಿ ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು should have informed the Nodal Officer of that particular district. ಈಗ ತಪ್ಪು ಯಾರ ಮೇಲೆ ಹೊರಿಸುವುದು? I sqarely and fairly blame the responsibility on the then Chief Secretary, the then Development Commissioner and the Revenue Commissioner. ಏಕೆಂದರೆ, ಇದು ಔಟ್‌ಡೇಟೆಡ್, ಕೇಂದ್ರ ಸರ್ಕಾರದಿಂದ ಬರತಕ್ಕಂಥ ಮಾರ್ಗಸೂಚಿಯಲ್ಲಿ ನಾವು ಕೆಲಸ ಮಾಡಲು ಆಗುವುದಿಲ್ಲ ಎಂದು ಡಿಸ್ಟ್ರಿಕ್ಟ್ ನೋಡಲ್ ಆಫೀಸರ್ ಹೇಳಿದಾಗ, ಈ ಐ.ಎ.ಎಸ್ ಅಧಿಕಾರಿಗಳು ಎಲ್ಲದಕ್ಕೂ ಕಾನೂನು ಹೇಳುತ್ತಾರೆ, ಅಂಥವರು ಈ ವಿಚಾರದಲ್ಲಿ ಅಂದಿನ ರೆವಿನ್ಯೂ ಮಿನಿಸ್ಟರ್‌ಗೆ ಹೇಳಬಹುದಿತ್ತು, ನಾವು ಈ ಆದೇಶದ ಮೇಲೆ ಕೆಲಸ ಮಾಡಲು ಆಗುತ್ತಿಲ್ಲ, ಜಿಲ್ಲಾಧಿಕಾರಿಗಳು ಏನು ಡೆವಲಪ್‌ಮೆಂಟ್ ವರ್ಕ್ಸ್‌ಗಳಿಗೆ, ಅವೆಲ್ಲವೂ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡುತ್ತಿದ್ದಾರೆ, ಅವೆಲ್ಲವೂ ಅರ್ತ್ ರಿಲೇಟೆಡ್ ಅಥವಾ ಟ್ಯಾಂಕ್

ಡೀಪನಿಂಗ್, ಟ್ಯಾಂಕ್ ಕ್ರಿಯೇಷನ್ ವರ್ಕ್ಸ್ ಅಲ್ಲ, ಎಲ್ಲವೂ ಕೂಡ ಆಸ್ಫಾಲ್ಟ್, ಡಾಂಬರೀಕರಣದ ಕೆಲಸಗಳು ಆಗಿವೆ. ಇವುಗಳನ್ನು ನಾವು ಅಕ್ಕಿಯ ಕಾಂಪೋನೆಂಟ್ ಇಟ್ಟುಕೊಂಡು ಮಾಡುವುದಕ್ಕಾಗುವುದಿಲ್ಲ, ಎಂದು ಹೇಳಬಹುದಿತ್ತು. ನಗೆಪಾಟಲು ಏನೆಂದರೆ, ಯಾರಾದರೂ ಒಂದು ಲಕ್ಷ ರೂಪಾಯಿಗಳ ಅಂಗನವಾಡಿಯ ಕಟ್ಟಡದ ಕೆಲಸ ಮಾಡಿದರೆ, ಆ ಒಂದು ಲಕ್ಷ ರೂಪಾಯಿಗಳ ಅಂಗನವಾಡಿಯ ಕಟ್ಟಡದ ಕೆಲಸ ಮಾಡಿದರೆ, ಆ ಒಂದು ಲಕ್ಷ ರೂಪಾಯಿಗೆ 80 ಸಾವಿರ ರೂಪಾಯಿಗೆ ನಾವು ಅಕ್ಕಿ ಕೊಡುತ್ತೇವೆ, 20 ಸಾವಿರ ರೂಪಾಯಿ ದುಡ್ಡು ಕೊಡುತ್ತೇವೆ. ಯಾವ ದೇಶದಲ್ಲಿ ಅಕ್ಕಿ ತೆಗೆದುಕೊಂಡು ಕೆಲಸ ಮಾಡುತ್ತಾರೆ ಎಂದು ಹೇಳಿ? ಇದನ್ನು ಆಗಿನ ಅಧಿಕಾರಿಗಳು ಧೈರ್ಯವಾಗಿ ಹೇಳಬೇಕಾಗಿತ್ತು. ಬರಪರಿಹಾರ ವಿಚಾರದಲ್ಲಿ ಕಾಮಗಾರಿ ನಡೆದಿರುವುದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ, ಆಂಧ್ರದಲ್ಲೂ ನಡೆದಿದೆ. ಆದರೆ ಆಂಧ್ರದಲ್ಲಿ ಅಧಿಕಾರಿಗಳು ಏನು ಮಾಡಿದರು? ಅಧಿಕಾರಿಗಳು They should advise. ಅಂದಿನ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಏನು ಮಾಡಿದರು ಎಂದರೆ, He has taken administrative approval from the then Prime Minister for auctioning rice. ಅಲ್ಲ ಅವರು ಆರು ಕೋಟಿ ರೂಪಾಯಿಗಳ ಅಕ್ಕಿಯನ್ನು 11 ಕೋಟಿ ರೂಪಾಯಿಗಳಿಗೆ ಆಕ್ಷನ್ ಮಾಡಿದ್ದಾರೆ. ಅವರು ಅದನ್ನು ಬರಪರಿಹಾರ ಕಾಮಗಾರಿಗಳಿಗೆ ಉಪಯೋಗಿಸಿಕೊಂಡಿದ್ದಾರೆ. ಆ ಕಡೆ ಕುಳಿತಿರುವಂಥ ನಮ್ಮ ಅಧಿಕಾರಿಗಳು They should have given the guidance. ಈ ಮಾರ್ಗಸೂಚಿಯಲ್ಲಿ ನಾವು ಕೆಲಸ ಮಾಡಲು ಆಗುತ್ತಿಲ್ಲ, ಆಂಧ್ರಪ್ರದೇಶದಲ್ಲಿ ಈ ದಿಕ್ಕಿನಲ್ಲಿ ಕೆಲಸ ಮಾಡುತ್ತಿದ್ದಾರೆ, ನಾವೂ ಕೂಡ ಅದೇ ದಿಕ್ಕಿನಲ್ಲಿ ಕೆಲಸ ಮಾಡಬೇಕು ಎಂದು ಅವರು ಹೇಳಬೇಕಾಗಿತ್ತು. ಪ್ರಾಯಶ: ವಿರೋಧ ಪಕ್ಷದವರು ಇಲ್ಲದಿದ್ದರೆ ಈ ವಿಚಾರ ಹೊರಗಡೆ ಬರುತ್ತಿರಲಿಲ್ಲ. ಆದರೆ ಸೂಕ್ಷ್ಮವಾದ ವಿಚಾರವೆಂದರೆ, ನಮ್ಮ ವಿರೋಧ ಪಕ್ಷದವರು ಎಲ್ಲಾ ವಿಚಾರಕ್ಕೂ ವಿರೋಧ ಮಾಡುತ್ತಾರೆ. ಕಳೆದ ಸದನದಲ್ಲೂ ಕೂಡ ಇದೇ ವಿರೋಧ ಪಕ್ಷದವರಿದ್ದರು. ಬಿ.ಜೆ.ಪಿ. ಯವರು ಈ ವಿಚಾರವಾಗಿ ಸದನದಲ್ಲಿ ಶೂನ್ಯವೇಳೆಯಲ್ಲಿ ದೊಡ್ಡ ಗದ್ದಲ ಮಾಡಿ ಎರಡು ಸಲ ಸದನದ ಕಲಾಪಗಳನ್ನು ಹಾಳು ಮಾಡಿದ್ದಾರೆ, ಕಲಾಪಗಳನ್ನು ನಿಲ್ಲಿಸಿದ್ದಾರೆ. ಆದರೆ ಅವರು ಯಾವ ಒಂದು ವಿಷಯವನ್ನು ಮರೆಯಬಾರದೆಂದರೆ, ಕಳೆದ ಸದನದಲ್ಲೂ ಕೂಡ ಈಗಿರುವಂಥ 17 ಜನ ಸದಸ್ಯರು ಬಿ.ಜೆ.ಪಿ. ಯವರು ಇದ್ದರು. ಬರಪರಿಹಾರ ಕಾಮಗಾರಿ ಸಮಿತಿಗಳಿಗೆ ಅವರು ಆಗ ಅಧ್ಯಕ್ಷರಾಗಿರಲಿಲ್ಲವೇ? ಅವರ ತಾಲ್ಲೂಕುಗಳಲ್ಲಿ ಯಾವ ರೀತಿ ಕೆಲಸ ಮಾಡಿದ್ದಾರೆ? ಅವರ ತಾಲ್ಲೂಕುಗಳಲ್ಲಿ ಮಾಡಿರತಕ್ಕಂಥ ಕೆಲಸಗಳನ್ನೂ ಇದೇ ದಿಕ್ಕಿನಲ್ಲಿ ಮಾಡಿದ್ದಾರೆ. ಆ ಸಮಯದಲ್ಲಿ, ಈ ವಿಚಾರದಲ್ಲಿ ಅಧಿಕಾರಿಗಳದ್ದು

ಒಂದು ಕಡೆ ಲೋಪವಾದರೆ, ರೆಸ್ಪಾನ್ಸಿಬಲ್ ಅಪೋಸಿಷನ್ ಆಗಿ ನೀವು ಯಾವ ರೀತಿ ಕೆಲಸ ಮಾಡಬೇಕಾಗಿತ್ತು? you should have told, you should have then informed the House. ಈ ರೀತಿ ಆಗುತ್ತಿಲ್ಲ, ತಪ್ಪಾಗುತ್ತಿದೆ ಎಂದು ಹೇಳಬೇಕಾಗಿತ್ತು. ಆವತ್ತು ನಿಮಗೆ ಮಾರಲ್ ರೆಸ್ಪಾನ್ಸಿಬಿಲಿಟಿ ಇರಲಿಲ್ಲವೇ?

ಆವತ್ತು ನೀವು ಸರ್ಕಾರಕ್ಕೆ ಹೇಳಬೇಕಾಗಿತ್ತು. ಆದರೆ ನೀವೂ ಕೂಡ ಅಧ್ಯಕ್ಷರಾದಿರಿ, ನಿಮ್ಮ ತಾಲ್ಲೂಕುಗಳಲ್ಲೂ ಬರಪರಿಹಾರ ಕೆಲಸ ಮಾಡಿಸಿಕೊಂಡಿರಿ. ಆದರೆ ಇವತ್ತು ಅಕ್ಕಿ ಸಿಕ್ಕಿಹಾಕಿಸಿಕೊಂಡ ಮೇಲೆ, ಟಿ.ವಿ.ಯಲ್ಲಿ ಬಂದ ಮೇಲೆ ನೀವು ಮಡಿವಂತಿಕೆಯ ಆ್ಯಕ್ಟ್ ಮಾಡುತ್ತಿದ್ದೀರಿ. ಇದು ತಪ್ಪಲ್ಲವೇ? you also should have realised that we are also part of it. ಅಂತ People in glass house should not throw stones. ಇದರಲ್ಲಿ ಆಡ್ಮಿನಿಸ್ಟ್ರೇಟಿವ್ ಲ್ಯಾಕ್ಯೂನಾ ಆಗಿದೆ. ಎಲ್ಲೂ ಕೂಡ ಕೇಂದ್ರ ಸರ್ಕಾರದ ಈ Food for work programme ಜಾರಿಯಲ್ಲಿ. 1968–69ರಲ್ಲಿ ಬರಗಾಲದ ಸಂದರ್ಭದಲ್ಲಿ ಮಾಡಿದಂಥ ನಿಯಮಗಳಿವು. ಆ ಎನ್.ಎಂ.ಆರ್ ಎನ್ನುವುದು ಬಹಳ ರಿಡೆಂಡೆಂಟ್. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ನಮ್ಮ ಅಧಿಕಾರಿಗಳೂ ಕೂಡ ಹಲವಾರು ಸಂದರ್ಭಗಳಲ್ಲಿ, ಹಲವಾರು ವರ್ಷಗಳ ಹಳೆಯ ರಿಡೆಂಡೆಂಟ್ ಕಾನೂನುಗಳಿದ್ದಾಗ, ಅದನ್ನು ಇಂಪ್ಲಿಮೆಂಟ್ ಮಾಡುವ ಸಂದರ್ಭದಲ್ಲಿ, ಇದು ರಿಡೆಂಡೆಂಟ್ ಆಗಿದೆ, ಈ ಕಾಲದಲ್ಲಿ ನಾವು ಏನೇ ಕಾರ್ಯಕ್ರಮ ಮಾಡಬೇಕಾದರೂ ಕೆಲವು ನಿಯಮಗಳನ್ನು ಚೇಂಜ್ ಮಾಡಿಕೊಂಡು ಅನುಷ್ಠಾನಕ್ಕೆ ತರಬೇಕು ಎಂದು ಹೇಳಬೇಕಾಗಿತ್ತು. ಆದರೆ ಇವತ್ತು ಇಂಜಿನಿಯರುಗಳನ್ನು ನೀವು ಕಳ್ಳರನ್ನಾಗಿ ಮಾಡಿಹಾಕಿದ್ದೀರಿ. ಇಂಜಿನಿಯರುಗಳು ಏನು ಮಾಡುತ್ತಾರೆ? ಅವರು ಎಂಎಲ್‌ಎ ಗಳು ಹೇಳಿದ ಕೆಲಸವನ್ನು ಮಾಡಿದ್ದಾರೆ. ಕ್ಲಿಯರ್ ಕಟ್ ಗೈಡ್‌ಲೈನ್ಸ್ ಏನಿವೆ, ಸರ್ಕಾರದಲ್ಲಿ ಏನೇ ಬರ ಪರಿಹಾರ ಕೆಲಸ ಮಾಡಬೇಕಾದರೂ it should be done by the Government. and not by any other agency ಎಂದು ಇದೆ. ಆವತ್ತು ಏಜೆನ್ಸಿ ಫಿಕ್ಸ್ ಮಾಡಿಸಿದವರು ಯಾರು? ಅದನ್ನು ಮಾಡಿದಂಥವರು ನಮ್ಮಂಥ ಶಾಸಕರುಗಳು. ಆದರೆ ಇವತ್ತು ಇಂಜಿನಿಯರುಗಳು ಜೈಲಿನಲ್ಲಿದ್ದರೆ, ಶಾಸಕರುಗಳ್ಯಾರೂ ಇಂಜಿನಿಯರುಗಳ ಬಗ್ಗೆ ಮಾತನಾಡಲು ಸಿದ್ಧರಿಲ್ಲ. ಯಾರೂ ಹೈಯ್ಯರ್ ಆಫ್ಸ್‌ಗೆ ಬಗ್ಗೆ ಮಾತನಾಡಲು ಆಗುವುದಿಲ್ಲ. ನಾನು ಏಕೆ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ, ಈ ವಿಚಾರದಲ್ಲಿ ನಾವೆಲ್ಲರೂ ಕೂಡ ಭಾಗಿಗಳು. ಯಾವುದೇ ಒಂದು ಕಾನೂನನ್ನು ಅನುಷ್ಠಾನಕ್ಕೆ ತರಬೇಕಾದರೆ ಅದು ಪ್ರೆಸೆಂಟ್ಲಿ ಪ್ರಾಕ್ಟಿಕಲ್ ಆಗಿದೆಯೇ, ಇಲ್ಲವೇ ಅಥವಾ ಅದರಲ್ಲಿ ಚೇಂಜಸ್ ಆಗಬೇಕು ಎನ್ನುವ ಬಗ್ಗೆ ಅಡ್ವೈಸ್ ಮಾಡತಕ್ಕಂಥ ಅಧಿಕಾರಿಗಳು ಅವತ್ತು ವಿಫಲರಾಗಿದ್ದಾರೆ. ಅದೇ ರೀತಿ,

ಈಗ ವಿರೋಧ ಪಕ್ಷದಲ್ಲಿರುವಂಥ ಶಾಸಕರಲ್ಲಿ 17 ಜನ ಆ ಸದನದಲ್ಲಿಯೂ ಶಾಸಕರಾಗಿದ್ದರು, ಅವರೂ ಅದಕ್ಕೆ ಅಧ್ಯಕ್ಷರಾಗಿದ್ದರು, ಅವರ ಕ್ಷೇತ್ರಗಳಲ್ಲಿಯೂ ಕೂಡ ಇದೇ ತರಹದ ಅಸ್ಫಾಲ್ಟ್, ಡಾಂಬರೀಕರಣ, ಕಾಂಕ್ರೀಟ್ ವರ್ಕ್ಸ್ ಎಲ್ಲಾ ಕೆಲಸಗಳನ್ನೂ ಮಾಡಿಸಿಕೊಂಡಿದ್ದಾರೆ. ಹಾಗಾಗಿ ಈ ವಿಚಾರದಲ್ಲಿ ಅವರೂ ಸಹ ಮಡಿವಂತಿಕೆಯಿಲ್ಲದೇ, ಹಳೆಯ ರಿಡೆಂಡೆಂಟ್ ಲಾಗಳಿಂದ ಎಲ್ಲೋ ಒಂದು ಕಡೆ ತಪ್ಪಾಗಿದೆ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ನಮಗೆ ನಾಚಿಕೆಯಾಗತಕ್ಕಂಥ ಸಂಗತಿಯೇನೇಂದರೆ, ನಾನು ಶಾಸಕನಾಗಿ ಮೂರು ತಿಂಗಳುಗಳಾದರೂ ಕೆ.ಆರ್. ನಗರ ತಾಲ್ಲೂಕಿನಲ್ಲಿ ಇನ್ನೂ ಒಂದು ಪೈಸೆಯ ಕೆಲಸವನ್ನೂ ಮಾಡಲು ಸಾಧ್ಯವಾಗಿಲ್ಲ. ಮಾನ್ಯ ಜಿ.ಟಿ. ದೇವೇಗೌಡರು ಹೇಳಿದ ಹಾಗೆ ನಮಗೆ ಎಂ.ಎಲ್‌ಎ. ಫಂಡ್ ಇಲ್ಲ. ನಮಗೆ 30–54 ಹೆಡ್‌ನಲ್ಲೂ ಹಣ ಇಲ್ಲ. ನಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಮಾಡಬೇಕೆನ್ನುವ ಉದ್ದೇಶದಿಂದ ಬಹಳ ಆಸೆಯಿಂದ, ಆಸಕ್ತಿಯಿಂದ ನಮ್ಮನ್ನು ಶಾಸಕರನ್ನಾಗಿ ಆರಿಸಿ ಕಳುಹಿಸಿದ್ದಾರೆ. ಆದರೆ ನಮಗೆ ತುಂಬಾ ನಿರಾಶೆಯಾಗುತ್ತಿದೆ. ಏಕೆಂದರೆ, nobody is willing to take a decision. ಈ ವಿಚಾರದಲ್ಲಿ ಇವತ್ತು we should all be one. ನಾವೆಲ್ಲರೂ ಒಂದಾಗಬೇಕು. ಈ ವಿಚಾರದಲ್ಲಿ ಆಂಧ್ರ ಪ್ರದೇಶದವರು ಮಾಡಿದ ದಿಕ್ಕಿನಲ್ಲೇ ನಾವೂ ಕೆಲಸ ಮಾಡಬೇಕಾಗಿತ್ತು. ಏನು ಮಾಡುವುದು ಎಂದು ಸಜೆಷನ್ ಕೇಳುತ್ತಿದ್ದರು. ಏನು ಮಾಡಬೇಕೆಂದರೆ, ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗ ಹೋಗಿ, ಆಂಧ್ರ ಪ್ರದೇಶದವರು ಮಾಡಿದಹಾಗೆ whatever remaining rice is there that should be auctioned and you should get the permission from the Prime Minister and further developments should start immediately. ಎನ್ನುವ ನನ್ನ ಮನವಿಯನ್ನು ಮಾನ್ಯ ಸಭಾಧ್ಯಕ್ಷರ ಮೂಲಕ ತಿಳಿಸಲು ಇಷ್ಟಪಡುತ್ತೇನೆ. ನಮಸ್ಕಾರ.

**ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ) :** ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾತನಾಡಿದಂಥ ನನ್ನ ಸ್ನೇಹಿತರುಗಳಾದ ಹಿರಿಯ ಶಾಸಕರುಗಳು ಈ ವಿಚಾರದಲ್ಲಿ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಹಾಗಾಗಿ, ನಾನು ಮಾತನಾಡುತ್ತಿರಲಿಲ್ಲ. ಆದರೆ ಒಂದು ಉದ್ದೇಶದಿಂದ ನಾನು ಮಾತನಾಡಬೇಕೆಂದು ನಿಂತಿದ್ದೇನೆ. ಕಳೆದ ಬಾರಿ ನಾನು ಈ ಸದನದಲ್ಲಿ ಶಾಸಕನಾಗಿದ್ದೆ. ಆಗ ವಿರೋಧ ಪಕ್ಷದಲ್ಲಿ ಕುಳಿತಿದ್ದೆ, ಈಗ ಈ ಕಡೆ ಕುಳಿತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು ಇರುವುದರಿಂದ ಹೇಳುತ್ತಿದ್ದೇನೆ. ನಾವೆಲ್ಲರೂ ಈ ಸದನದ ಒಳಗಡೆ ಬಂದಾಗ, ಈ ರಾಜ್ಯದ ಅಭಿವೃದ್ಧಿ ಮತ್ತು ರಾಜ್ಯದ ಜನತೆಯ ವಿಚಾರ ಬಂದಾಗ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡ ಬೇಕಾಗುತ್ತದೆ.

ನಮ್ಮ ಪಕ್ಷ ಮತ್ತು ವೈಯಕ್ತಿಕವಾದಂಥ ಹಿತಾಸಕ್ತಿಯನ್ನು ಬಿಟ್ಟು, ರಾಜ್ಯದ ಹಿತಾಸಕ್ತಿಯನ್ನು ಪ್ರಮುಖವಾಗಿ ತೆಗೆದುಕೊಳ್ಳುವುದನ್ನು ನಾವು ಮರೆತಿದ್ದೇವೆ ಎಂದು ನನಗನ್ನಿಸುತ್ತದೆ. ಆದ್ದರಿಂದ, ದಯಮಾಡಿ ನಾವೆಲ್ಲರೂ ಒಟ್ಟಾಗಿ ಈ ವಿಚಾರದಲ್ಲಿ ಕೆಲಸ ಮಾಡಬೇಕು. ಆಂಧ್ರ ಪ್ರದೇಶದವರು ಕೇಂದ್ರದ ನೆರವನ್ನು ಪಡೆದು ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಈ ಬಗ್ಗೆ ಪತ್ರಿಕೆಗಳಲ್ಲೂ ಮತ್ತು ನಾವು ಸಾಕಷ್ಟು ಸಂದರ್ಭಗಳಲ್ಲಿ ಪ್ರವಾಸ ಮಾಡಿದಾಗ ವಾಸ್ತವಿಕತೆಯನ್ನು ನೋಡಿದ್ದೇವೆ. ಕಳೆದ ಬಾರಿ 40 ಜನ ಬಿಜೆಪಿಯ ಸದಸ್ಯರು ಇಲ್ಲಿದ್ದರು. ನಾವು ಸಂಯುಕ್ತ ಜನತಾದಳದಲ್ಲಿದ್ದೆವು. ನಾವು ಅವತ್ತು ಕಾಮಗಾರಿಗಳನ್ನು ಕೇಂದ್ರದ ಮಾರ್ಗಸೂಚಿಯ ಅಡಿಯಲ್ಲಿ ಮಾಡಬೇಕಾದಂಥ ಸಂದರ್ಭದಲ್ಲಿ ಆ ರೀತಿ ಆಗಿದೆ. ದುರಾದೃಷ್ಟದಿಂದ ಕಳೆದ ನಾಲ್ಕು ವರ್ಷಗಳಿಂದ ರಾಜ್ಯದಲ್ಲಿ ಬರಗಾಲವಿತ್ತು. ಯಾವುದೋ ಒಂದು ಸಂದರ್ಭದಲ್ಲಿ ಬರಗಾಲವಿದ್ದು, 4–5 ತಿಂಗಳುಗಳು ಮಾತ್ರ ಬರಪರಿಹಾರ ಕಾರ್ಯಕ್ರಮದ ಈ ಯೋಜನೆಯನ್ನು ಮಾಡಿದ್ದರೆ ಬಹುಶ: ಇಷ್ಟೊಂದು ಅಕ್ಕಿ ಬರುತ್ತಿರಲಿಲ್ಲ. ಬರತಕ್ಕಂಥ ಅಕ್ಕಿಯನ್ನು ಜನಗಳೇ ಉಪಯೋಗಿಸುತ್ತಿದ್ದರೇನೋ? ಆದರೆ ಸತತವಾಗಿ ನಾಲ್ಕು ವರ್ಷಗಳು ಈ ಯೋಜನೆಯಲ್ಲಿ ಕೆಲಸ ಮಾಡಿದ್ದರಿಂದ, ಈಗಾಗಲೇ ಮಾತನಾಡಿದಂಥ ಮಾನ್ಯ ಸ್ನೇಹಿತರು ಹೇಳಿದ ಹಾಗೆ, ಕೆಲಸ ಮಾಡಿದಂಥವರು ಎಲ್ಲಾ ಅಕ್ಕಿಯನ್ನು ತೆಗೆದುಕೊಳ್ಳಲು ಸಿದ್ಧರಿರಲಿಲ್ಲ. ಮಂತ್ರಿಗಳು, ಶಾಸಕರೆಲ್ಲರೂ ಖಾಸಗಿಯಾಗಿ ಮೀಟಿಂಗ್ ಮಾಡಿದಾಗ ನಾನೂ ಅದರಲ್ಲಿ ಭಾಗವಹಿಸಿದ್ದೆ. ಒಳ್ಳೆಯ ಕೆಲಸಗಳಾಗಲೀ, ಬಿಲ್ಡಿಂಗ್ ಆಗಲೀ, ರಸ್ತೆಗಳಿಗೆ ಟಾರ್ ಆಗಲಿ, ರಸ್ತೆಗಳಾಗಲಿ, ಸೇತುವೆಗಳಾಗಲಿ, ಈ ಮಾರ್ಗಸೂಚಿಯನ್ನು ಫಾಲೋ ಮಾಡಿ ಎಂದು ಅಧಿಕಾರಿಗಳಿಗೆ ಹೇಳಬೇಡಿ, ಆಂಧ್ರದಲ್ಲಿ ಅಷ್ಟೊಂದು ಅಕ್ಕಿಯನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ, ತಮಿಳುನಾಡಿನಲ್ಲಿ ಮಾಡುತ್ತಿದ್ದಾರೆ, ನಾವ್ಯಾಕೆ ಇದನ್ನು ಹಾಳು ಮಾಡಬೇಕು, ನಮ್ಮನಮ್ಮ ಕ್ಷೇತ್ರಗಳಿಗೆ ಎರಡು ಕೋಟಿ ರೂ. ದುಡ್ಡು ಬಂದರೆ ಸಾಕು, ಎಂಎಲ್ಎ ಗ್ರ್ಯಾಂಟನ್ನೂ ಸೇರಿಸಿ ಕೊಡಿ ಎಂದು ಎಲ್ಲರೂ ಮಾತನಾಡಿದರು, ಬಿಜೆಪಿ ಯವರೂ ಮಾತನಾಡಿದರು, ಕಾಂಗ್ರೆಸ್‌ನವರೂ ಮಾತನಾಡಿದರು, ನಾವೂ ಮಾತನಾಡಿದೆವು. ಮಾರ್ಗಸೂಚಿಗಳನ್ನೆಲ್ಲಾ ಒಂದು ಕಡೆ ಇಟ್ಟುಬಿಡಿ, ನಾವಿದ್ದೇವೆ; ನೀವು ಕೆಲಸ ಮಾಡಿ ಎಂದು ಅಧಿಕಾರಿಗಳಿಗೆ ಆದೇಶವನ್ನೂ ಕೊಟ್ಟರು. ಅಭಿವೃದ್ಧಿ ಕೆಲಸ ಆಗಿದೆ. ಎಲ್ಲಿ ಆಗಿಲ್ಲ, ಅಂಥ ಕಡೆ ಕ್ರಮ ತೆಗದುಕೊಂಡರೆ, ಇದು; ನ್ಯಾಯ, ಧರ್ಮ ಮತ್ತು ಇದಕ್ಕೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ. ನಾವು ಅಲ್ಲಿ ಕುಳಿತಿದ್ದೇವೆ, ಇಲ್ಲಿ ಕುಳಿತಿದ್ದೇವೆ ಎಂದು ಹೇಳಿಕೊಂಡು, ನಾಳೆ ನಾವೂ ಅಲ್ಲಿಗೆ ಹೋದ ತಕ್ಷಣ ನಾವು ನಮ್ಮ ಬಣ್ಣವನ್ನೇ ಚೇಂಜ್ ಮಾಡಿಬಿಟ್ಟರೆ, ಅಥವಾ ನಮಗೆ ಅಧಿಕಾರ ಸಿಕ್ಕಿದ ತಕ್ಷಣ ಆದೇಶ ಮಾಡಿ, ಅಧಿಕಾರಿಗಳನ್ನು ಜೈಲಿಗೆ ಹಾಕಿ

ಎಂದರೆ ಇದು ನ್ಯಾಯವೇ? ನಮ್ಮನ್ನು ಯಾರಾದರೂ ಕ್ಷಮಿಸುತ್ತಾರೆಯೇ? ಯಾರೇ ಒಬ್ಬ ಅಧಿಕಾರಿ, ಸಬ್-ಇನ್ಸ್‌ಪೆಕ್ಟರ್ ಆದಾಗ ಯೋಚನೆ ಮಾಡುವಂತೆಯೇ ಸರ್ಕಲ್ ಇನ್ಸ್‌ಪೆಕ್ಟರ್ ಆದಾಗಲೂ ಯೋಚನೆ ಮಾಡಬೇಕು. ನಾನು ಸಬ್-ಇನ್ಸ್‌ಪೆಕ್ಟರ್ ಚೇರ್‌ನಿಂದಲೇ ಇಲ್ಲಿಗೆ ಬಂದಿದ್ದೇನೆ ಎಂದು ತಿಳಿಯಬೇಕು. ಆದರೆ ಇವತ್ತು ಅದನ್ನು ಮರೆತುಬಿಡುತ್ತಾರೆ. ನಾವು ಹಿಂದೆ ಏನು ಮಾಡುತ್ತಿದ್ದೆವು, ಇವತ್ತು ಏನಾಗಿದ್ದೇವೆ, ಹಿಂದೆ ನಾವು ಏನು ತಪ್ಪು ಮಾಡುತ್ತಿದ್ದೆವು ಎನ್ನುವುದನ್ನು ತಿಳಿದುಕೊಂಡು, ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿದರೆ ಯಾರಾದರೂ ಮೆಚ್ಚುಗೆ ವ್ಯಕ್ತಪಡಿಸಬಹುದು. ಇವತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕೆಲಸ ನಡೆಯುತ್ತಿದೆ. ದಯಮಾಡಿ ಎಲ್ಲರೂ ಒಟ್ಟಿಗೆ ಕೆಲಸ ಮಾಡೋಣ. ನಾವು 225 ಜನ ಶಾಸಕರಿದ್ದೇವೆ. ಇವತ್ತು ಪ್ರತಿಯೊಂದು ರೂಪಾಯಿಯನ್ನೂ ಒಳ್ಳೆಯದಕ್ಕೆ ಉಪಯೋಗಿಸುವುದು ಮತ್ತು ಒಂದು ರೂಪಾಯಿ ವೇಸ್ಟ್ ಆಗುವುದನ್ನೂ ತಪ್ಪಿಸುವುದು ನಮ್ಮೆಲ್ಲರ ಜವಬ್ದಾರಿ. ಇವತ್ತು ಗ್ರಾಮ ಪಂಚಾಯಿತಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಲ್ಲಿ ವಿವಿಧ ಶೀರ್ಷಿಕೆಗಳಲ್ಲಿ ವಿವಿಧ ಯೋಜನೆಗಳಿಗೆ ವರ್ಷದಲ್ಲಿ ಬಿಡುಗಡೆಯಾಗತಕ್ಕಂಥ ಹಣ ಎಷ್ಟು ಎಂಬುದನ್ನು ನೋಡಿ. ಈ ರಾಜ್ಯದಲ್ಲಿ ಮೂರು ಡಿವಿಷನ್‌ಗಳಿವೆ. ಶಾಸಕರು, ಅಫಿಷಿಯಲ್ ಗಳಿಬ್ಬರನ್ನೂ ಸೇರಿಸಿ ಒಂದೊಂದು ಡಿವಿಷನ್ನಿಗೆ ಒಂದೊಂದು ಕಮಿಟಿ ಮಾಡಿ. ಎಷ್ಟು ಹಣ ನಿಜವಾಗಿ ಉಪಯೋಗವಾಗುತ್ತಿದೆ, ಎಷ್ಟು ಹಣ ನಿಜವಾಗಿ ತಲುಪಿದೆ, ಎಷ್ಟು ಇಂಪ್ಲಿಮೆಂಟ್ ಆಗಿದೆ ಎನ್ನುವ ಬಗ್ಗೆ ದಯಮಾಡಿ ವರದಿಯನ್ನು ಮುಂದಿನ ಅಧಿವೇಶನದೊಳಗೆ ತರಿಸಿ. ಆಗ ನಾವು ಈ ರಾಜ್ಯದ ಅಭಿವೃದ್ಧಿಯ ಬಗ್ಗೆ ನಿಜವಾದ ಕಾಳಜಿಯನ್ನು ಹೊಂದಿದ್ದೇವೆ ಎಂದು ಹೇಳಬಹುದು. ಇವತ್ತು ನೂರಕ್ಕೆ 80 ಭಾಗದಷ್ಟು ಎಲ್ಲಿಗೆ ಹೋಗುತ್ತಿದೆ ಎನ್ನುವುದು, ಅಭಿವೃದ್ಧಿ ಕೆಲಸ ಆಗದೇ ಇರತಕ್ಕಂಥಾದ್ದನ್ನು ನಾವು ಕಣ್ಣುಮುಂದೆ ನೋಡಿದರೂ ಸಹ ನಾವೆಲ್ಲರೂ ಕಣ್ಣುಮುಚ್ಚಿಕೊಂಡು ಕುಳಿತಿದ್ದೇವೆ. ಈ ವ್ಯವಸ್ಥೆಯನ್ನೂ ಬದಲಾವಣೆ ಮಾಡದಿದ್ದರೆ ಹಾಗೂ ಈ ಸದನದಲ್ಲಿ ನಾವೆಲ್ಲರೂ ನಮ್ಮ ಪಕ್ಷ, ನಮ್ಮ ವೈಯಕ್ತಿಕವಾದ ಹಿತಾಸಕ್ತಿಯನ್ನು ಬಿಟ್ಟು, ಈ ರಾಜ್ಯದ ಹಿತಾಸಕ್ತಿಯನ್ನು ಮುಂದಿಟ್ಟುಕೊಂಡು ಕೆಲಸ ಮಾಡದಿದ್ದರೆ, ಈ ರಾಜ್ಯದಲ್ಲಿ ನಾವ್ಯಾರೂ ಒಳ್ಳೆಯ ದಿನವನ್ನು ನೋಡಲಿಕ್ಕೆ ಸಹ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಇವತ್ತು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಕಳೆದ ಬಾರಿ ಎಲ್ಲರೂ ಒಟ್ಟಾಗಿ ನಮಗೆ ಬೇರೆ ರೀತಿಯ ಅವಕಾಶಗಳಿಲ್ಲದೇ ಇರುವುದರಿಂದ, ಸ್ಕೇರ್‌ಸಿಟಿ ಯೋಜನೆಯಡಿಯಲ್ಲಿ ಯಾವ ಕೆಲಸಗಳನ್ನು ತುರ್ತಾಗಿ ಮಾಡಲು ಸಾಧ್ಯವೋ ಅವುಗಳೆಲ್ಲವನ್ನೂ ಮಾಡಬೇಕು ಎನ್ನುವ ತೀರ್ಮಾನವನ್ನು ಮಾಡಿ, ಆವತ್ತಿದ್ದಂಥ ಎಲ್ಲಾ ಶಾಸಕರೂ ಅಧಿಕಾರಿಗಳ ಮನ ಒಲಿಸಿ, ಅಧಿಕಾರಿಗಳು ಮಾರ್ಗಸೂಚಿಯನ್ನು ಬಿಟ್ಟು ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಎಂದರೂ ಸಹ, ಅವರಿಗೆ ವಿಶ್ವಾಸ ಹೇಳಿ, ಮಾರ್ಗಸೂಚಿಯನ್ನು ಬಿಟ್ಟು ಕೆಲಸ ಮಾಡಿ,

ನಾವೆಲ್ಲರೂ ಇದ್ದೇವೆ, ನೀವು ಕೆಲಸ ಮಾಡಿ ಎಂದು ಹೇಳಿರತಕ್ಕಂಥಾದ್ದನ್ನು ನಾನು ನೆನೆಸಿಕೊಳ್ಳಬೇಕಾಗುತ್ತದೆ.

ದಯಮಾಡಿ ಇವತ್ತು ಆದೇ ಕೆಲಸವನ್ನು ಮಾಡುತ್ತೇವೆ. ಏಕೆಂದರೆ ಇವತ್ತು 3054 ಹೆಡ್‌ನಲ್ಲಿ ಹಣ ಇಲ್ಲ. ಜಿಲ್ಲಾ ಪಂಚಾಯತ್‌ನಲ್ಲಿ ಹಣ ಇಲ್ಲ. ಅಥವಾ ಇನ್ನಾವುದೇ ಸಣ್ಣ ಸೇತುವೆ ಕಟ್ ಆದರೆ ಇವತ್ತು ನಾವು ರಿಪೇರಿ ಮಾಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಆದರೆ ಇಂಥ ಏನಾದರೊಂದು ಕೇಂದ್ರ ಸರ್ಕಾರದಿಂದ ಬರತಕ್ಕಂಥ ಅಕ್ಕಿ ಇರಬಹುದು ಅಥವಾ ನಮ್ಮ ಒಂದು ಸಹಾಯ ಧನ ಇರಬಹುದು, ಸೇರಿಸಿಕೊಂಡು ಕೆಲಸ ಮಾಡಲಿಕ್ಕೆ ಅನುಕೂಲವಾಗುವಂಥ ಸಂದರ್ಭವನ್ನು ಉಪಯೋಗಿಸಿಕೊಂಡು ನಾವು ಮಾಡಬೇಕಾಗುತ್ತದೆ. ನಾವು ಒಟ್ಟಾರೆ ಎಲ್ಲಿ ವಾಸ್ತವವಾಗಿ ಕೆಲಸ ಆಗಿಲ್ಲ, ಅದನ್ನು ನೀವು ಹುಡುಕಿ ಕ್ರಮ ತೆಗೆದುಕೊಂಡರೆ ಸರಿಹೋಗುತ್ತದೆ ಈ ರಾಜ್ಯಕ್ಕೆ ಒಂದು ಒಳ್ಳೆಯದಾಗುತ್ತದೆ. ಅದು ಬಿಟ್ಟು ಮಾರ್ಗಸೂಚಿಯಂತೆ ನಡೆದುಕೊಂಡಿಲ್ಲ. ಇವರು ಮಿಷನ್‌ನಲ್ಲಿ ಕೆಲಸ ಮಾಡಿದ್ದಾರೆ, ಮಣ್ಣು ಕೆಲಸ ಮಾಡಬೇಕಾಗಿತ್ತು, ಟಾರ್ ಹಾಕಿದ್ದಾರೆ, ಇದನ್ನು ಹುಡುಕಿದರೆ ನಮ್ಮನ್ನು ಜನ ಯಾರೂ ಕ್ಷಮಿಸುವುದಿಲ್ಲ. ಏಕೆಂದರೆ, ನಾವೇ ಮಾಡಿಸಿದಂಥ ಅಪರಾಧಕ್ಕೆ, ನಮಗೆ ಯಾರೋ ಇವತ್ತು ಶಾಸಕರನ್ನು ಜೈಲಿಗೆ ಹಾಕಿ ಎಂದರೆ ಶಾಸಕರು ಯಾರೂ ಎಂಬಿ ಬುಕ್‌ಗೆ ಸಹಿ ಹಾಕಿರುವುದಿಲ್ಲ, ಬಿಲ್ ಬುಕ್‌ಗೆ ಸಹಿ ಹಾಕಿರುವುದಿಲ್ಲ ಹೇಳುತ್ತಾರೆ, ನಾವು ವರ್ಕ್‌ನ್ನು ಆಯ್ಕೆ ಮಾಡಿದ್ದೇವೆ, ಅಧಿಕಾರಿಗಳು ಮಾರ್ಗಸೂಚಿ ಮಾಡಬೇಕಾಗಿತ್ತು, ನಾವು ಏನು ಮಾಡೋಣ ಎಂದು ಹೇಳುತ್ತಾರೆ. ಹಾಗೆಂದು ನಾವು ಮಾತಿನಲ್ಲಿ ಅಥವಾ ನಾವು ಜನಪ್ರತಿನಿಧಿಗಳು ನಮಗೆ ಅಧಿಕಾರ ಇದೆ ಹೇಗೆ ಬೇಕೋ ಹಾಗೆ ನಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಒಟ್ಟಾರೆಯಾಗಿ ಅದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳು ಕಳೆದ ಮೂರು ತಿಂಗಳಿನಿಂದ ಜೈಲಿನಲ್ಲಿ ಇದ್ದಾರೆ. ದಯಮಾಡಿ ಇವತ್ತು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಅಧ್ಯಕ್ಷರು, ನಮ್ಮ ವಿರೋಧ ಪಕ್ಷದ ನಾಯಕರನ್ನು ಕೂರಿಸಿ ಮಾತನಾಡಿ, ಸಿಓಡಿಯವರು, ಅವರದ್ದೇನು ಆಗಿದೆ ಎಂದರೆ, ಅವರೂ ಕೂಡ ಇಲ್ಲಿಯೇ ಬಹುತೇಕವಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅಲ್ಲಲ್ಲಿ ಅವರೇ ತಪ್ಪು ಮಾಡಿರುತ್ತಾರೆ, ಲಂಚವನ್ನು ಹೊಡೆಯುತ್ತಾರೆ, ಏನು ಲಂಚ ಹೊಡೆಯದೇ ಇರತಕ್ಕಂಥವರು ಯಾರೂ ಇಲ್ಲವೆಂದು ನಾವು ಹೇಳುವುದಕ್ಕಾಗುವುದಿಲ್ಲ. ಒಳ್ಳೆಯವರು ಇರುತ್ತಾರೆ, ಕೆಟ್ಟವರು ಇರುತ್ತಾರೆ. ಅದೇ ಸಿಓಡಿಗೆ ಹೋಗಿಬಿಟ್ಟರೆ ಅವರು ಹುಲಿ, ಸಿಂಹಗಳಾಗಿ ಬಿಡುತ್ತಾರೆ. ಇನ್ನೇನು ಕೆಳಗಡೆಯಿರುವ ಅಧಿಕಾರಿಗಳ ಜುಟ್ಟು ಜನಿವಾರ ಎಲ್ಲಾ ಹಿಡಿದು ಹಾಕುವುದು, ನಾವು ಅಲ್ಲಿಂದಲೇ ಬಂದಿದ್ದೇವೆ ಸ್ವಾಮಿ, ಎರಡು ವರ್ಷ ಅಲ್ಲಿರುತ್ತಾರೆ, ಎರಡು ವರ್ಷ ಇಲ್ಲಿ ಇರುತ್ತಾರೆ, ಸಿಓಡಿಯಲ್ಲಿರತಕ್ಕಂಥ ಅಧಿಕಾರಿಗಳು ಎಲ್ಲರೂ ಎಕ್ಸಿಕ್ಯೂಷನ್‌ನಲ್ಲಿ ಕೆಲಸವನ್ನೇ ಮಾಡಿಲ್ಲವೆ? ಅವರನ್ನೂ ಸಹ ಇಂಥ ತನಿಖೆಗೆ

ಒಳಪಡಿಸಿದಾಗ, ಇಂಥ ಕಾರ್ಯವ್ಯಾಪ್ತಿಗೆ ಕಳುಹಿಸಿದಾಗ, ಮನುಷ್ಯನ ರೀತಿ ಬಿಹೇವ್ ಮಾಡಲಿಕ್ಕೆ ಸರ್ಕಾರದ ಮಂತ್ರಿಗಳು ಹಾಗೂ ಸರ್ಕಾರ ಅವರಿಗೆ ಹೇಳಬೇಕಾಗುತ್ತದೆ. ಒಬ್ಬ ಮನುಷ್ಯನಿಗೆ ಏನಾದರೂ ತಪ್ಪು ಮಾಡಿದಂಥವನಿಗೆ ಒಂದಲ್ಲ ನಾಲ್ಕು ಸಾರಿ ನೋಡಿ ನಿಜವಾದಂಥ ತಪ್ಪು ಮಾಡಿದ್ದರೆ ಅವನಿಗೆ ಆ ತಪ್ಪಿಗೆ ಏನು ಶಿಕ್ಷೆ ಕೊಡಬೇಕು ಅದನ್ನು ಕೊಡುವುದರಲ್ಲಿ ತಪ್ಪೇನಿಲ್ಲ, ಯಾರಿಗೆ ಶಿಕ್ಷೆ ಕೊಡಬೇಕೋ ಕೊಡಿ. ಆದರೆ ಅನಾವಶ್ಯಕವಾಗಿ ಇಡೀ ರಾಜ್ಯದ ಅಭಿವೃದ್ಧಿಗೆ ಕುಂದುತರತಕ್ಕಂಥ ಕೆಲಸವಾಗಿದೆ, ಈ ವಿಚಾರದಲ್ಲಿ ತಾವು ದಯಮಾಡಿ ಈ ಮಾರ್ಗಸೂಚಿಯನ್ನೂ ಬದಲಾವಣೆ ಮಾಡಬೇಕಾಗುತ್ತದೆ, ಇದು ಅನಿವಾರ್ಯ. ಈ ಸಂದರ್ಭಧಲ್ಲಿ ಯಾರೂ ಸಹಿತ ಕೆಲಸ ಮಾಡಲಿಕ್ಕೆ ಮುಂದೆ ಬರುವುದಿಲ್ಲ. ಮತ್ತೆ ಏನು ಸಿಓಡಿ ತನಿಖೆಯಾಗುತ್ತಿದೆ ಅದನ್ನು ತಕ್ಷಣ ನಿಲ್ಲಿಸಬೇಕು. ಮತ್ತೆ ಆರೆಸ್ಟ್ ಮಾಡಿರುವ ಅಧಿಕಾರಿಗಳನ್ನು ಬಿಡುಗಡೆ ಮಾಡಿ, ಅವರಿಗೆ ಮುಂದೆ ಈ ರೀತಿ ತೊಂದರೆ ಕೊಡತಕ್ಕಂಥದ್ದನ್ನು ನಿಲ್ಲಿಸಿ, ಎಲ್ಲಿ ಪ್ರಾಕ್ಟಿಕಲ್ ಆಗಿ ಕೆಲಸ ಆಗಿಲ್ಲ ಅಂಥ ಕಡೆ ನಿರ್ದಿಷ್ಟವಾದಂಥ ಒಂದು ಕೆಲಸವನ್ನು ಗುರುತಿಸಿ ಕ್ರಮ ತೆಗೆದುಕೊಳ್ಳುವುದರಲ್ಲಿ ಸರ್ಕಾರ ಯಾವುದೇ ತರಹದ ಹಿಂದೇಟು ಹಾಕುವುದು ಬೇಡ. ಅದು ಬರೀ ಸ್ಕೇರ್‌ಸಿಟಿ ಯೋಜನೆಯಡಿಯಲ್ಲಿ ಮಾತ್ರ ಆಗದೆ ಎನ್ನುವುದಲ್ಲ, ಎಲ್ಲಾ ಇಲಾಖೆಗಳಲ್ಲಿ ಎಲ್ಲಾ ವಿವಿಧ ಯೋಜನೆಗಳಲ್ಲಿ ಆಗಿದೆ. ಕಳೆದ ಬಾರಿ ಇದೇ ಸದನದಲ್ಲಿ 224 ಕೋಟಿ ರೂ.ಗಳನ್ನು 7 ಸಿಎಂಸಿಯಲ್ಲಿ ಯಾವುದೇ ಲೆಕ್ಕಚಾರ ಇಲ್ಲದೆ ಲೂಟಿ ಹೊಡೆದಿದ್ದಾರೆಂದು ಚರ್ಚೆಯಾಯಿತು. ಅದು ಲೋಕಾಯುಕ್ತಕ್ಕೂ ಹೋಗಿದೆ. ದಯಮಾಡಿ ಇವತ್ತು ಏನಾಗಿದೆ ಎನ್ನುವುದನ್ನು ತೆಗಿಸಿ ನೋಡಿ. 7 ಸಿಎಂಸಿಯಲ್ಲಿ ಯಾವುದೇ ತರಹದ ಕೆಲಸ ಆಗದೇ 224 ಕೋಟಿ ರೂ.ಗಳನ್ನು ಹಣ ಲೂಟಿಯಾಗಿದೆ ಎಂದು ಸುದೀರ್ಘವಾಗಿ ಚರ್ಚೆಯಾಯಿತು. ಲೋಕಾಯುಕ್ತಕ್ಕೆ ಕಳುಹಿಸಿದರು, ಸಸ್ಪೆಂಡ್ ಮಾಡಿದರು. ಎರಡು ದಿವಸಕ್ಕೆ ರಿವೋಕ್ ಆದರು. ನಂತರ ಅವರೆಲ್ಲಾ ಒಳ್ಳೆಯ ಜಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಮತ್ತೆ ಸುಭಿಕ್ಷವಾಗಿದ್ದಾರೆ. ಆದ್ದರಿಂದ ದಯಮಾಡಿ ಇದೊಂದರಲ್ಲಿ ಅಲ್ಲ, ಇವತ್ತು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್‌ಗಳಲ್ಲಿ ಆಗಿರತಕ್ಕದ್ದನ್ನು ಹೇಳಿದೆವು. ಅಲ್ಲಿ ಬಿಡುಗಡೆಯಾಗಿರತಕ್ಕಂಥ ಹಣದಲ್ಲಿ ಒಂದು ರೂಪಾಯಿಯ ಕೆಲಸವೂ ಆಗಿಲ್ಲ, ನಿಮಗೆ ಕೆಲಸ ನೋಡಲಿಕ್ಕೆ ಎಲ್ಲಿಯೂ ಸಿಗುವುದಿಲ್ಲ. ಇಷ್ಟೆಲ್ಲಾ ಈ ರಾಜ್ಯದಲ್ಲಿ ನಡೆಯುತ್ತಿರಬೇಕಾದರೆ ಇವತ್ತು ಯಾವುದೋ ಒಂದು ಸ್ಕೇರ್‌ಸಿಟಿ ಯೋಜನೆಯಲ್ಲಿ ನಮಗೆ ಇಷ್ಟೊಂದು ಶಾಸಕರು, ಮಂತ್ರಿಗಳು ಎಲ್ಲರೂ ಕುಳಿತು ಒಟ್ಟಾರೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ನಮ್ಮ ಈ ಅವಕಾಶವನ್ನು ಎಷ್ಟು ಉಪಯೋಗಿಸಿಕೊಂಡು, ನಮ್ಮ ರಾಜ್ಯದ ಅಭಿವೃದ್ಧಿ ಕೆಲಸವನ್ನು ಮಾಡಬೇಕು ಎಂದು ಯೋಚಿಸಿ ಮಾಡಿದ್ದಕ್ಕೆ ಇಷ್ಟೊಂದು ಸುದೀರ್ಘವಾದಂಥ ತನಿಖೆಯನ್ನು

ಮಾಡಿಸಿ, ನಾವು ಅನಾವಶ್ಯಕವಾಗಿ ಅಧಿಕಾರಿಗಳಿಗೆ ತೊಂದರೆ ಕೊಡತಕ್ಕಂಥದ್ದು ಬೇಡ. ದಯಮಾಡಿ ತಾವು ಬಹಳ ಸೂಕ್ಷ್ಮವಾಗಿ ಈ ವಿಚಾರವನ್ನು ಬಗೆಹರಿಸಿ ಇನ್ನು ಮುಂದೆ ಈ ರಾಜ್ಯದ ಅಭಿವೃದ್ಧಿ ಕೆಲಸವನ್ನು ಆಗುವ ರೀತಿಯಲ್ಲಿ ಮತ್ತು ಅವಕಾಶ ಇದ್ದರೆ ಈ ಅಕ್ಕಿ ಮತ್ತು ಬೇರೆ ಹಣವನ್ನು ಸೇರಿಸಿ ಎಲ್ಲಾ ಶಾಸಕರಿಗೂ ಸಹ ಒಂದು ಕ್ಷೇತ್ರಾಭಿವೃದ್ಧಿ ಅನುದಾನವನ್ನು ಕೊಡಲಿಕ್ಕೆ ಆಗದೇ ಇರುವುದರಿಂದ, ಆ ಒಂದು ಯೋಜನೆಯಲ್ಲಾದರೂ ಕೆಲಸ ಮಾಡಲಿಕ್ಕೆ ಅನುವು ಮಾಡಿಕೊಡಿ. ತಕ್ಷಣ ಇದನ್ನು ಏನು ಈವತ್ತು ಕೊನೆಯ ದಿವಸ ಮಾತನಾಡಿದ್ದಾರೆ ಶಾಸಕರು ಅನ್ನುವುದನ್ನು ಬಿಟ್ಟು ಇದರ ಬಗ್ಗೆ ಗಂಭೀರತೆಯಿಂದ ಸೀರಿಯಸ್ಸಾಗಿ ತಾವು ಎಲ್ಲರೂ ಯೋಚನೆ ಮಾಡಿ ಒಂದು ನಿರ್ಧಾರನವನು ತೆಗೆದುಕೊಳ್ಳುತ್ತೀರಿ ಎಂದು ಬಾವಿಸಿ ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಡಿ.

**ಅಧ್ಯಕ್ಷರು** : ಈಗಾಗಲೇ ಬಹಳಷ್ಟು ಚರ್ಚೆಯಾಗಿದೆ, ಇನ್ನೇನು ಪದೇ ಪದೇ ಹೇಳುವುದಿದೆ? 5 ನಿಮಿಷದಲ್ಲಿ ಮಾತನಾಡಿ, ಬಹಳ ಲೇಟಾಗಿದೆ, ಈಗಾಗಲೇ 6 ಗಂಟೆ ಆಗಿದೆ. ನಿಯಮ 69ರಡಿಯಲ್ಲಿ ಇನ್ನೊಂದು ವಿಷಯ ಇದೆ. ಹೇಳಿದ್ದನ್ನೇ ಹೇಳುತ್ತಿದ್ದೀರಿ, ಹೊಸದಾಗಿ ಇನ್ನೇನು ಹೇಳುತ್ತಿದ್ದೀರಿ? ಮಾನ್ಯ ಸಚಿವರೇ, ಉತ್ತರ ಹೇಳಿ ಸ್ವಾಮಿ.

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :** ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣಮೂರ್ತಿಯವರ ಅಭಿಪ್ರಾಯ ಏನೆಂಬುದು ನನಗೆ ಗೊತ್ತಿದೆ. ಇದು ಒಟ್ಟಿನಲ್ಲಿ ಎಲ್ಲಾ ಚರ್ಚೆಗಳಲ್ಲಿ ಮೇಲ್ನೋಟಕ್ಕೆ ಎಂದು ಅಲ್ಲ ನಿಜವಾಗಿ ಕಂಡು ಬರುವುದು ಏನೆಂದರೆ, ನಮ್ಮ ಕನ್ನಡದ ಗಾದೆ ಮಾತಿನಂತೆ "ಅಕ್ಕಿಯ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ" ಎನ್ನುವಂತಾಗಿದೆ ಅಕ್ಕಿಯನ್ನು ಅಡಿಗೆ ಮಾಡಿ ನೆಂಟರಿಗೆ ನೀಡಲಿಕ್ಕೆ ನಾವು ತಯಾರಿಲ್ಲ. ಏಕೆಂದರೆ, ಅಕ್ಕಿಯ ಮೇಲೆ ಆಸೆ ಇದೆ. ಆದರೆ ನೆಂಟರ ಮೇಲೆ ಪ್ರೀತಿ ಇರುವುದರಿಂದ, ಅವರಿಗೆ ಊಟಕ್ಕೆ ಬಡಿಸಬೇಕು ಎನ್ನುವ ಸಂಕಟ. ಇಲ್ಲಿ ಇರತಕ್ಕಂಥದ್ದು, ನಮ್ಮ ಕೇಂದ್ರ ಸರ್ಕಾರದ ಈ ಬರಪರಿಹಾರಕ್ಕೆ ಸಂಬಂಧಪಟ್ಟಿರತಕ್ಕಂಥ ನಿಯಮಾವಳಿಗಳು ಒಂದು ತರಹ ಇದೆ. ಆ ನಿಯಮಾವಳಿಗಳನ್ನು ನಾವು ಅನುಸರಿಸಲೇ ಬೇಕಾಗಿರತಕ್ಕ ಅನಿವಾರ್ಯತೆ ಇರುವುದರಿಂದ ದೊಡ್ಡ ಪ್ರಮಾಣದಲ್ಲಿ 14.48 ಲಕ್ಷ ಮೆಟ್ರಿಕ್ ಟನ್‌ನಷ್ಟು ಆಹಾರಧಾನ್ಯ ಈ ಕರ್ನಾಟಕಕ್ಕೆ ಬಂದಿದೆ. ಈಗ ಸುಮಾರು 1.71 ಲಕ್ಷ ಮೆಟ್ರಿಕ್ ಟನ್‌ನಷ್ಟು ಆಹಾರಧಾನ್ಯ ಎತ್ತುವಳಿ ಮಾಡಿ ಖರ್ಚು ಮಾಡಬೇಕಾದುದು ಇದೆ. ಈ ಸನ್ನಿವೇಶದಲ್ಲಿ ಅದು ದುರುಪಯೋಗವಾಗಿದೆ, ಬೇರೆ ಬೇರೆ ರೀತಿಯಲ್ಲಿ ಹಣ ಹೋಗಿದೆ ಎನ್ನುವ ಮಾತುಗಳು ಇವೆ, ಅದರಲ್ಲಿ ಸತ್ಯಾಂಶಗಳು ಬಹಳ ಮಟ್ಟಿಗೆ ಇವೆ. ಆದರೆ ಕೇಂದ್ರ ಸರ್ಕಾರದ ಮಾರ್ಗಸೂಚಿ ಬಹಳ ಸ್ಪಷ್ಟವಾಗಿ ಇರತಕ್ಕಂಥದ್ದು ಇದೆ. ಆ ಮಾರ್ಗಸೂಚಿಯ ಪ್ರಕಾರ, ಮಾನ್ಯ ಅಧ್ಯಕ್ಷರೆ, "ಸದರಿ

ಯೋಜನೆಯಡಿಯಲ್ಲಿ ಉದ್ಯೋಗ ಸೃಜನೆ ಕಾಮಗಾರಿಗಳನ್ನು ಹಮ್ಮಿಕೊಳ್ಳುವಾಗ ಜೆಸಿಬಿ ಯಂತ್ರವನ್ನು ಬಳಸಲು ಅವಕಾಶವಿರುವುದಿಲ್ಲ". ಆದರೆ ಇಲ್ಲೆಲ್ಲಾ ಮಾನ್ಯ ರಾಮಸ್ವಾಮಿ ಯವರಿಂದ ಹಿಡಿದು ಅನೇಕ ಮಾನ್ಯ ಸದಸ್ಯರುಗಳು, ಎದ್ದು ಮಾತನಾಡುವಂಥ ಸಂದರ್ಭದಲ್ಲಿ ಜೆಸಿಬಿ ಯಂತ್ರಗಳನ್ನು ಬಳಸಿರುವಂಥದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಮೂಲಭೂತವಾಗಿ, ಮಾನ್ಯ ರಾಮಸ್ವಾಮಿಯವರು ಎತ್ತಿರತಕ್ಕ ಪ್ರಶ್ನೆ ಏನೆಂದರೆ, ಈ ರೀತಿಯಾದಂಥ ಕಾಮಗಾರಿಗಳನ್ನು ನೀವು ಮಾಡುವಾಗ, ಎಲ್ಲಿ ಬೇರೆ ಬೇರೆ ಪದಾರ್ಥಗಳು ನಮಗೆ ಹೆಚ್ಚು ಪ್ರಮಾಣದಲ್ಲಿ ಬರತಕ್ಕಂಥ ಕಾಮಗಾರಿ ಇದೆ ಅದಕ್ಕೆ ಆಯಾಯಾ ಇಲಾಖೆಯವರು ನಗದು ಹಣದ ಒಂದು ವ್ಯವಸ್ಥೆಯನ್ನೂ ಅಲ್ಲಿ ಮಾಡಿರಬೇಕು. ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ಏನು ಹೇಳಿದೆ ಎಂದರೆ, "ಉದ್ಯೋಗ ಸೃಜನೆಯಡಿಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಸಾಮಗ್ರಿ ವೆಚ್ಚವನ್ನು ಆಯಾಯಾ ಇಲಾಖೆಯ ಕಾಮಗಾರಿಗಳಿಗೆ ಒದಗಿಸಿರುವ ಅನುದಾನದಿಂದ ಬಳಸಬೇಕಾಗುತ್ತದೆ, ಇದನ್ನು ಸಿಆರ್‌ಎಫ್ ಎನ್‌ಸಿಸಿಎಫ್, ನಿಧಿಯಿಂದ ಬಳಸಲು ಅವಕಾಶವಿರುವುದಿಲ್ಲ," ಆದರೆ ಆಗಿರತಕ್ಕಂಥದ್ದು ಏನು? ನಮ್ಮಲ್ಲಿ ಹಣಕಾಸಿನ ವ್ಯವಸ್ಥೆ ಇಲ್ಲದೇ ಇದ್ದಂಥ ಸಂದರ್ಭದಲ್ಲಿ, ಅಯಾಯಾ ಇಲಾಖೆಗೆ ಸಂಬಂಧ ಇಲ್ಲದೇ ಇರತಕ್ಕಂಥದ್ದರಲ್ಲಿ, ಈಗ ದೊಡ್ಡ ದೊಡ್ಡ ಕ್ರೀಡಾಂಗಣಗಳನ್ನು ಕಟ್ಟಿದ್ದೇವೆ. ಅಲ್ಲಿ ದುರುಪಯೋಗವಾಗಿದೆ ಎನ್ನುವ ಪ್ರಶ್ನೆ ಇದು ಎರಡನೆಯದು. ದುರುಪಯೋಗ ಆಗಿದೆಯೋ ಇಲ್ಲವೋ, ಆ ಮಾತು ಬೇರೆ. ಅದನ್ನು ಸಿಓಡಿ ತನಿಖೆ ಮಾಡುತ್ತದೆ, ಅದು ಬೇರೆ. ಆದರೆ ಕ್ರೀಡಾಂಗಣಕ್ಕಾಗಿ ಯುವಜನ ಇಲಾಖೆಗೆ ನಾವು ಕೊಟ್ಟಿರತಕ್ಕಂಥ ಹಣ ಎಷ್ಟು ಅಥವಾ ಅಂಗನವಾಡಿ ಕಟ್ಟಡಗಳಿಗಾಗಿ ನಾವು ಕೊಟ್ಟಿರತಕ್ಕಂಥ ಹಣ ಎಷ್ಟು ಅಥವಾ ರಸ್ತೆಗಳ ಕಾಮಗಾರಿಗಳನ್ನು ಗ್ರಾಮೀಣ ಪ್ರದೇಶದಲ್ಲಿ ಡಾಂಬರೀಕರಣ ಮಾಡಲಿಕ್ಕೆ ಕೊಟ್ಟಿರತಕ್ಕಂಥ ಜಿಲ್ಲಾ ಪಂಚಾಯ್ತಿಯ ಹಣ ಎಷ್ಟು? ಇವೆಲ್ಲವೂ ಕೂಡ ಎಲ್ಲಾ ಶಾಸಕರಿಗೂ ಹಾಗೂ ಮಂತ್ರಿಗಳಿಗೆ ಗೊತ್ತಿರತಕ್ಕಂಥ ವಿಷಯ. ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಮಂತ್ರಿಗಳ ನೇತೃತ್ವದಲ್ಲಿ, ರಾಜ್ಯ ಮಟ್ಟದಲ್ಲಿ ಕಂದಾಯ ಮಂತ್ರಿಗಳು, ಹಿಂದಿನ ಕಾಲದಲ್ಲಿ ಅಂದರೆ ಹಿಂದಿನ ಸರ್ಕಾರದಲ್ಲಿ ನೀರಾವರಿ ಮಂತ್ರಿಗಳು, ಅವರ ಅಧ್ಯಕ್ಷತೆಯಲ್ಲಿ, ತಾಲ್ಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿರತಕ್ಕಂಥ ಒಂದು ಸಮಿತಿ ಕಾಮಗಾರಿಗಳನ್ನು ಸೂಚನೆ ಮಾಡಿದೆ, ಕಾಮಗಾರಿಗಳನ್ನು ಸೂಚನೆ ಮಾಡಿದಂಥ ಸಂದರ್ಭದಲ್ಲಿ, ಪದಾರ್ಥಗಳು ಹೆಚ್ಚಿನ ಪ್ರಮಾಣದಲ್ಲಿ ಬಳಸಬೇಕಾದಂಥ ರೀತಿ ಗೊತ್ತಿದ್ದಾಗ, ನೀವು ಅದಕ್ಕೆ ಅನುಮೋದನೆಯನ್ನು ಹೇಗೆ ಕೊಟ್ಟಿರಿ? ಆಯಾಯಾ ಇಲಾಖೆಯವರು ಏಕೆ ಹಣವನ್ನು ಒದಗಿಸಲಿಲ್ಲ? ಒದಗಿಸದೇ ಇದ್ದಾಗ ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಜಲ ಸಂರಕ್ಷಣೆಗೆ ಸಂಬಂಧಪಟ್ಟಿರತಕ್ಕಂಥದ್ದು, ಕೃಷಿ ಹೊಂಡಗಳನ್ನು ಮಾಡುವಂಥದ್ದು, ಸಮತಳ ಪಾತಳಿ ಒಡ್ಡುಗಳನ್ನು ನಿರ್ಮಾಣ ಮಾಡುವಂಥದ್ದು.

(ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಒಟ್ಟಿನಲ್ಲಿ ಉದ್ಯೋಗ ಸೃಜನಿಗೆ ಸಂಬಂಧವಿರತಕ್ಕಂಥ ಕಾಮಗಾರಿಗಳು ಆಗಬೇಕೇ ವಿನ: ಬೇರೆ ರೀತಿಯಲ್ಲಿ ಖರ್ಚು ಮಾಡಬಾರದು ಎಂಬ ವಿಚಾರಗಳು ಇಲ್ಲಿ ಪ್ರಸ್ತಾಪಿಸಲ್ಪಟ್ಟಿರುವುದರಿಂದ ಈಗ ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆಯನ್ನು ಹಿಂದೆ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದೆವು. ಆಂಧ್ರ ಪ್ರದೇಶದಲ್ಲಿ ಆ ರೀತಿ ಮಾಡಿದ್ದಾರೆಂದು ಕೆಲಸ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ, ಆಂಧ್ರ ಪ್ರದೇಶದಲ್ಲಿ ಯಾರೂ ಕೂಡ ಈ ವಿಚಾರವನ್ನು ಎತ್ತಿ ಟೀಕೆ ಟಿಪ್ಪಣಿಗಳನ್ನು ಮಾಡಲಿಲ್ಲ. ನಮ್ಮಲ್ಲಿರತಕ್ಕಂಥ ವಾಸ್ತವ ಸಂಗತಿಗಳು ಮತ್ತು ಕಾನೂನುಗಳು ಬೇರೆ ಬೇರೆಯಾಗಿವೆ. ಇದಕ್ಕೆ ಯಾರಾದರೊಬ್ಬರು ತಪ್ಪಿತಸ್ಥರೆಂದು ಕಂಡು ಬಂದಾಗ ನಮ್ಮದೇ ಆದಂಥ ಒಂದು ಸ್ವರತೀಯ ಸಂತೋಷ. ಇದನ್ನು vicarious pleasure ಎಂದು ಹೇಳುತ್ತೇವೆ. ಅಂದರೆ, ನಮಗೆ ಆಗದೇ ಇರತಕ್ಕಂಥವರಿಗೆ ತೊಂದರೆ ಆಗುತ್ತದೆ ಎಂದು ತಿಳಿದಾಗ ನಾವೇ ತಪ್ಪು ಮಾಡಿದ್ದರೂ ಕೂಡ ಬೇರೆಯವರು ತಪ್ಪು ಮಾಡಿದ್ದಾರೆಂದು ಗೊತ್ತಾದ ತಕ್ಷಣವೇ ಅವರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಿ ಎಂದು ಒಬ್ಬರಿಗೊಬ್ಬರು ಕೆಸರನ್ನು ಎರಚಾಡುವಂಥ ರೀತಿಯಲ್ಲಿ ಈ ಒಂದು ಪ್ರಕರಣ ಒಂದೇ ಆಗಿದ್ದರೂ ಕೂಡ ಭೂತ್ ಕನ್ನಡಿಯಲ್ಲಿ ದೊಡ್ಡದಾಗಿ ಮಾಡಿ ಈ ಎಲ್ಲಾ ಪ್ರಕರಣಗಳು ಈ ಒಂದು ಕಾರಣಕ್ಕಾಗಿ ಆಗಿದೆ. ಈ ಒಂದು ಕಾರಣಕ್ಕಾಗಿಯೇ ವಾಸ್ತವಿಕವಾದ ಕೆಲವು ಅಂಶಗಳನ್ನು ಇಡೀ ಸದನ ತನ್ಮೂಲಕವಾಗಿ ಅಧಿಕಾರಿಗಳಾಗಿರುವಂಥವರೂ ಕೂಡ ವಾಸ್ತವಾಂಶಗಳಿಗೆ ಮತ್ತು ನಮ್ಮ ನಡುವೆ ಇರತಕ್ಕಂಥ,..... ಇವತ್ತಿನ ದಿವಸ ಇಲ್ಲಿರತಕ್ಕಂಥ ಎಲ್ಲಾ ಶಾಸಕರ ಅಭಿಪ್ರಾಯವೇನೆಂದರೆ, ಇದರಲ್ಲಿ ನಿರಪರಾಧಿಯಾಗಿರುವಂಥವರು ಇರಬಹುದು ಮತ್ತು ಅಪರಾಧಿಯಾಗಿರುವಂಥವರು ಹಾಗೂ ಹೊರಗಡೆ ಇದ್ದಂಥವರು ಇದರಲ್ಲಿರಬಹುದೆಂದು ಎಲ್ಲರ ಅಭಿಪ್ರಾಯವಾಗಿದೆ. ಇದರ ಬಗ್ಗೆ ಸಿ.ಓ.ಡಿ. ಎನ್‌ಕ್ವೈರಿ ಮಾಡಲೇಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರು ಆಜ್ಞೆ ಮಾಡಿರತಕ್ಕಂಥದ್ದಕ್ಕೆ ನಾವೆಲ್ಲರೂ ಕೂಡ ಮೆಚ್ಚುಗೆಯನ್ನು ವ್ಯಕ್ತಪಡಿಸ ಬೇಕಾಗುತ್ತದೆ. ಸುಮಾರು 17 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬೆಲೆಬಾಳತಕ್ಕಂಥ ಅಕ್ಕಿಯನ್ನು ಈಗಾಗಲೇ ಆಫ್ರಿಕ ದೇಶಕ್ಕೆ ಹಡಗಿನ ಮೂಲಕ ಕಳುಹಿಸಿಕೊಟ್ಟಿದ್ದಾರೆ. ಇದು ಬಹಳ ಸದುದ್ದೇಶದಿಂದ ಪ್ರಾರಂಭವಾಗಿರತಕ್ಕಂಥ ಒಂದು ಕಾರ್ಯಕ್ರಮವಾಗಿದೆ. ಅದೇನೆಂದರೆ, ಸ್ವಿಜ್ಜರ್‌ಲ್ಯಾಂಡ್ ದೇಶದ ಒಂದು ಸಂಸ್ಥೆ ಕಷ್ಟದಲ್ಲಿರತಕ್ಕಂಥ ಅಣ್ಣ-ತಮ್ಮಂದಿರಿಗೆ ದಾನ ಮಾಡಬೇಕೆಂದು ಮತ್ತು ಅವರಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಸತತವಾಗಿ ಬರಗಾಲದಿಂದ ತತ್ತರಿಸುತ್ತಿದ್ದ ಆಫ್ರಿಕಾ ದೇಶಕ್ಕೆ ಉಚಿತವಾಗಿ ಅಕ್ಕಿಯನ್ನು ವಿತರಣೆ ಮಾಡತಕ್ಕಂಥ ಒಂದು ಕಾರ್ಯಕ್ರಮಕ್ಕೆ ಸ್ವಿಜ್ಜರ್‌ಲ್ಯಾಂಡ್‌ನ ಕಂಪನಿ ದೆಹಲಿಯಲ್ಲಿರತಕ್ಕಂಥ ಒಂದು ಕಂಪನಿಗೆ ಆದೇಶವನ್ನು ಕೊಟ್ಟರು. ಮತ್ತೆ ಇದಕ್ಕೆ ಆಗತಕ್ಕಂಥ ಹಣವನ್ನು ಭರಿಸುತ್ತೇವೆಂದೂ ಕೂಡ ಹೇಳಿದ್ದರು. ದೆಹಲಿಯಲ್ಲಿರತಕ್ಕಂಥ

ಶಾರ್ಪ್ ಮೆಂಥಾಲ್ ಅಂಡ್ ಕಂಪನಿ ರಫ್ತು ಮಾಡತಕ್ಕಂಥ ಒಂದು ದೊಡ್ಡ ಕಂಪನಿಯಾಗಿದೆ. ಈ ಒಂದು ಕಂಪನಿ ಬೇರೆ ಬೇರೆ ಸಂಸ್ಥೆಯವರಿಗೆ ಏನು ಹೇಳಿದರೆಂದರೆ, ಅಕ್ಕಿಯನ್ನು ಬೇರೆ ಬೇರೆ ಕಡೆಯಿಂದ ವಸೂಲು ಮಾಡಿ ತೆಗೆದುಕೊಂಡು ಬನ್ನಿ ಎಂದು ಸೂಚಿಸಿದ್ದರು. ಇದರಲ್ಲಿ ಪಿ.ಡಿ.ಎಸ್. ನಿಂದ ಬಂದಿರತಕ್ಕಂಥ ಧಾನ್ಯವೂ ಕೂಡ ಇರಬಹುದು. ಅಥವಾ ಕಾರ್ಮಿಕನೇ ಮಾರಾಟ ಮಾಡಿರತಕ್ಕಂಥ ಧಾನ್ಯವಿರಬಹುದು. ಮತ್ತೆ ಕೂಲಿಗಾಗಿ ಕಾಳು ಯೋಜನೆಯಿಂದ ಬಂದಿರತಕ್ಕಂಥ ಅಕ್ಕಿ ಕೂಡ ಇರಬಹುದು, ಅಥವಾ ಮುಕ್ತ ಮಾರುಕಟ್ಟೆಯಲ್ಲಿ ಅದರ ಸಬ್ ಏಜೆಂಟ್ ಆಗಿ ಕೆಲಸ ಮಾಡತಕ್ಕವನು ಖರೀದಿ ಮಾಡಿರತಕ್ಕಂಥ ಅಕ್ಕಿ ಕೂಡ ಇರಬಹುದು. ಈ ಎಲ್ಲಾ ವಿಚಾರಗಳಿಗೆ ಸಂಬಂಧಪಟ್ಟಂತೆ ಅಲ್ಲಿರತಕ್ಕಂಥ ಮಳಿಗೆಯಲ್ಲಿ ಎಫ್.ಸಿ.ಐ. ಮೊಹರು ಇರತಕ್ಕಂಥ ಚೀಲಗಳಿಂದ ಬೇರೆ ಚೀಲಗಳಿಗೆ ಪರಿವರ್ತನೆ ಮಾಡತಕ್ಕಂಥ ಪ್ರಯತ್ನ ನಡೆದಿದೆ ಮತ್ತು ಎರಡನೇ ಹಡಗಿನ ತುಂಬಾ ಇರತಕ್ಕಂಥ ಈ ಆಹಾರ ಧಾನ್ಯವನ್ನು ಮತ್ತೆ ಆಫ್ರಿಕ ದೇಶಕ್ಕೆ ಕಳುಹಿಸುವಂಥ ಒಂದು ಹುನ್ನಾರ ನಡೆದಿದೆ ಎನ್ನತಕ್ಕಂಥ ವಿಚಾರ ಗೊತ್ತಾದ ತಕ್ಷಣವೇ ಅಲ್ಲಿರತಕ್ಕಂಥ ಮಂಗಳೂರಿನ ಜಿಲ್ಲಾಧಿಕಾರಿಯವರು ಬಹಳ ಒಳ್ಳೆಯ ಕೆಲಸವನ್ನು ಮಾಡಿ ಇದನ್ನು ಎಲ್ಲಾ ಇಲಾಖೆಯ ಮತ್ತು ಪೊಲೀಸ್ ಇಲಾಖೆಯ ನೆರವಿನಿಂದ ದಾಸ್ತಾನು ಮಳಿಗೆಗೆ ಮುತ್ತಿಗೆ ಹಾಕಿ ಅಲ್ಲಿರತಕ್ಕಂಥ ಆಹಾರಾಧಾನ್ಯಗಳನ್ನು ತೆಗೆದುಕೊಂಡಿರತಕ್ಕಂಥದ್ದು ತಮಗೆ ಗೊತ್ತಿದೆ. ಈ ಆಹಾರ ಧಾನ್ಯಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡ ತಕ್ಷಣವೇ ಈ ವಿಚಾರ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಇದು ಪತ್ರಿಕೆಗಳಲ್ಲಿ ಪ್ರಕಟವಾದ ಸಂದರ್ಭ ಬಂದ ತಕ್ಷಣವೇ ಇದರಲ್ಲಿ ಯಾರ್‍ಯಾರು ಇರಬಹುದೆಂದು ನಮ್ಮಂಥ ರಾಜಕಾರಣಿಗಳು ಊಹೆ ಮಾಡಿದೆವು ಅಥವಾ ಬೇರೆ ಬೇರೆಯವರು ಊಹೆ ಮಾಡಿದರು. ಆಯಾಯ ಊಹೆಗಳ ಪ್ರಕಾರವಾಗಿ, ಇಂಥಿಂಥ ರಾಜಕಾರಣಿಗಳು ಈ ಒಂದು ಕಷ್ಟದಲ್ಲಿ ಸಿಕ್ಕಿಕೊಳ್ಳಬಹುದೇನೋ ಎಂಬ ರೀತಿಯಲ್ಲಿ ನಾವು ಯೋಚನೆಯನ್ನು ಮಾಡಿ ಇದನ್ನು ಒಂದು ರೀತಿ ವ್ಯಾಪಕವಾದ ಕೆಲಸವನ್ನು ಮಾಡಿದ ತಕ್ಷಣವೇ ಇದು ವಾಸ್ತವವಾದ ಸಂಗತಿಗಳಿಗೆ ವಿರೋಧವಾದಂಥ ರೀತಿಯಲ್ಲಿ ಆಯಿತು. ಇವತ್ತಿನ ದಿವಸ ಅನೇಕ ಜನ ಶಾಸಕರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದು, ಮತ್ತು ಮಾನ್ಯ ರಾಮಸ್ವಾಮಿಯವರು ಪ್ರಸ್ತಾಪ ಮಾಡಿರುವ ವಿಚಾರಗಳ ತಾರ್ಕಿತ ಅಂತ್ಯಕ್ಕೆ ನಾವು ತೆಗೆದುಕೊಂಡು ಹೋದರೆ, ಅವತ್ತಿನ ದಿವಸ ಶಾಸಕರೇ ಬರ ನಿರ್ವಹಣಾ ಸಮಿತಿಯ ಅಧ್ಯಕ್ಷರಾಗಿದ್ದರು. ಅಲ್ಲಿ ಯಾವ ರೀತಿಯಾದ ಕೆಲಸ ನಿರ್ವಹಣೆಯಾಗಿದೆ ಎಂಬುದನ್ನು ಅವರು ಕಂಡಿದ್ದಾರೆ. ಮತ್ತೆ ಇಲ್ಲಿ ಕಂಡಿರತಕ್ಕಂಥದ್ದರಲ್ಲಿ ಅವರೇ ರೂಪಿಸಿ ಸೂಚಿಸಿರತಕ್ಕಂಥದ್ದರ ಬಗ್ಗೆ, ಐ.ಎ.ಎಸ್. ಅಧಿಕಾರಿಯೊಬ್ಬರಿಗೆ ನೀವೇಕೆ ಕಣ್ಣುಮುಚ್ಚಿಕೊಂಡು ಒಪ್ಪಿದರು ಎಂದು ಕೇಳುವಾಗ, ಶಾಸಕರಾಗಿರತಕ್ಕಂಥ ನಾವೂ ಕೂಡ ಕಣ್ಣು ಮುಚ್ಚಿ ಕುಳಿತುಕೊಂಡು ಈ ಕೆಲಸವನ್ನು ಮಾಡಿಸಿದ್ದೇವೆ ಎನ್ನತಕ್ಕಂಥ

ವಿಚಾರವನ್ನು ಕೂಡ ಇಲ್ಲಿ ಬಹಳ ಸೂಕ್ಷ್ಮವಾಗಿ ಪ್ರಸ್ತಾಪಿಸಲ್ಪಟ್ಟಿದೆ. ನಮ್ಮ ಮುಂದಿರತಕ್ಕಂಥ ಆಯ್ಕೆ ಏನೆಂದರೆ, ಇದನ್ನು ನಾವು ವಾಸ್ತವಾಂಶಗಳಿಗೆ ಒಳಗಾಗಿ ಇದು ಸರಿಯಾದ ರೀತಿಯಲ್ಲಿ ಆಗಬೇಕಾದರೆ ನಿಯಮದ ಪ್ರಕಾರ ಮಾನವ ತಾಸುಗಳಿಗೆ ಕೆಲಸ ಕೊಡತಕ್ಕಂಥ ರೀತಿಯಲ್ಲಿ ನಾವು ಕರಾರುವಾಕ್ಕಾಗಿ ಆ ನಿಯಮಾವಳಿಗಳ ಪ್ರಕಾರ ಹೋಗಬೇಕು. ಆದರೆ, ಈ ನಿಯಮಾವಳಿಗಳ ಪ್ರಕಾರ ಹೋಗಬೇಕಾದರೆ ನಮ್ಮಲ್ಲಿ ಇದಕ್ಕೆ ಸಂಪನ್ಮೂಲಗಳಿಲ್ಲ. ಹಿಂದೆ ಇದ್ದಂಥ ಕೆಲವು ಶಾಸಕರು ದೊಡ್ಡದೊಡ್ಡ ಕ್ರೀಡಾಂಗಣಗಳನ್ನು ಕಟ್ಟಿದ್ದಾರೆ. ಅಂದರೆ, ಸುಮಾರು 70 ಲಕ್ಷ ರೂ.ಗಳ ಮತ್ತು 17 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕ್ರೀಡಾಂಗಣವನ್ನು ಕಟ್ಟಿರತಕ್ಕಂಥ ಹಿನ್ನಲೆಯಿರುವಾಗ ಮತ್ತು ಅರ್ಧಂಬರ್ಧ ಆಗಿರತಕ್ಕಂಥ ಕೆಲಸಗಳನ್ನು ಈಗ ಹೊಸದಾಗಿ ಬಂದಿರತಕ್ಕಂಥ ಶಾಸಕರು ಅವುಗಳನ್ನು ಮುಕ್ತಾಯ ಮಾಡದಿದ್ದರೆ ಈ ಎಲ್ಲಾ ಸೂಕ್ಷ್ಮತೆಗಳು ಅಲ್ಲಿನ ಮತದಾರರಿಗೆ ಗೊತ್ತಾಗುವುದಿಲ್ಲ. ಹಿಂದೆ ಇದ್ದಂಥ ಶಾಸಕರು ಇದನ್ನು ಮಾಡಿದರು, ಆದರೆ ಇದು ಅರ್ಧಕ್ಕೆ ನಿಂತು ಹೋಯಿತು. ಆದರೆ, ಅರ್ಧಕ್ಕೆ ನಿಂತು ಹೋಗಿರತಕ್ಕಂಥ ಕೆಲಸವನ್ನು ಮುಗಿಸುವುದಕ್ಕೆ ಇವರಿಗೆ ಸಾಧ್ಯವಾಗಲಿಲ್ಲ ಎನ್ನತಕ್ಕಂಥ ಅಪವಾದ ಬರುತ್ತದೆ. ಈಗ ಇದರ ಪರಿಣಾಮ ಇದರ ಆಯಾಮಗಳು ಯಾರ ಮೇಲೆ ಬೀಳುತ್ತದೆ ಎಂದು ಗೊತ್ತಾದ ಮೇಲೆ ಇವತ್ತಿನದಿವಸ ಈ ವಿಚಾರಗಳು ಸದನದಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಆದ್ದರಿಂದ ನಮ್ಮ ರಾಜ್ಯಕ್ಕೆ ಅನುಕೂಲವಾಗುವಂಥ ರೀತಿಯಲ್ಲಿ ನಾವು ಸ್ವತ್ತುಗಳನ್ನು ನಿರ್ಮಾಣ (ಅಸೆಟ್ಸ್ ಕ್ರಿಯೇಷನ್ಸ್) ಮಾಡಬೇಕು ಎನ್ನತಕ್ಕಂಥದ್ದು ನಮ್ಮ ಭಾವನೆಯಾಗಿದ್ದರೆ, ಸಂಪನ್ಮೂಲಗಳ ಕೊರತೆಯ ಸಂದರ್ಭಗಳಲ್ಲಿ ಬೇರೆ ಬೇರೆ ರಾಜ್ಯಗಳು ಮತ್ತು ಇದರಲ್ಲಿ ದುರುಪಯೋಗಪಡಿಸಿಕೊಂಡಿರತಕ್ಕಂಥ ಎಲ್ಲರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿರತಕ್ಕಂಥದ್ದು ನಿಜ. ಆದರೆ, ವಾಸ್ತವ ಸಂಗತಿಗಳಿಗೆ ನಾವು ಅನುಸರಿಸಿಕೊಂಡು ಹೋಗಬೇಕೆಂಬ, ಪ್ರಾಗ್ಮೆಟಿಕ್ ಅಪ್ರೋಚ್ ಎಂದು ನಾವೇನು ಕರೆಯುತ್ತೇವೆಯೋ, ಆ ರೀತಿಯಲ್ಲಿ ನಾವು ಯೋಚನೆ ಮಾಡಿದಾಗ ಪ್ರಾಯಶ: ಈ ಕೂಲಿಗಾಗಿ ಕಾಳು ಯೋಜನೆಯನ್ನು ಅತ್ಯಂತ ಅರ್ಥಪೂರ್ಣವಾಗಿರತಕ್ಕಂಥ ಕಾರ್ಯ ಕ್ರಮವಾಗಿ ಈ ರಾಜ್ಯದಲ್ಲಿ ನಾವು ರೂಪಿಸಬಹುದು. ಇದರ ಹಿನ್ನಲೆಯಲ್ಲಿ ಚರ್ಚೆಯಾದ ಮೇಲೆ, ಒಂದು ಸಂಗತಿಯನ್ನು ನಾನು ಈ ಕೂಡಲೇ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಇದು ಅಪ್ರಸ್ತುತ. ಏಕೆಂದರೆ, ಇದು ನಾಳೆದಿವಸ ಸಚಿವ ಸಂಪುಟದ ಸಭೆಯ ಮುಂದೆ ಹೋಗಬೇಕು. ಸಚಿವ ಸಂಪುಟದ ಉಪಸಮಿತಿ ಸಭೆ ಸೇರಿ ಇದರ ಕೆಲವು ನಿರ್ಣಯಗಳ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿದ ಮೇಲೆ ಇದರ ಬಗ್ಗೆ ನಾಲ್ಕಾರು ಸಲಹೆಗಳು ಬಂದಿವೆ. ಅಕ್ಕಿಯ ವಿತರಣೆಯನ್ನು ಗ್ರಾಮಮಟ್ಟದಲ್ಲಿ ಮಾಡಬೇಕೆಂದಾಗ ಅಲ್ಲಿರುವಂಥ ಇಂಜಿನಿಯರ್ ಸಂಘದವರು ಈಗ ಗಾಬರಿಯಾಗಿದ್ದಾರೆ ಮಾನ್ಯ ಪುಟ್ಟೇಗೌಡರು ಹೇಳಿದ ಪ್ರಕಾರ ಅದರಲ್ಲಿ

ಒಳ್ಳೆಯವರು ಮತ್ತು ಕೆಟ್ಟವರೂ ಕೂಡ ಇರುತ್ತಾರೆ. ನಾನು ಹಳ್ಳಿಯವನು ಎಂದು ಹೇಳಿದ್ದರೂ ಕೂಡ ನಿಜವಾದಂಥ ವಿವೇಕ ಇಟ್ಟುಕೊಂಡಿರತಕ್ಕಂಥ ಶಾಸಕರಲ್ಲಿ ಅವರೂ ಕೂಡ ಒಬ್ಬರು. ಅವರು ಎಂ.ಎ. ಪದವೀಧರರಾಗಿದ್ದಾರೆ. ನಾನು ಗ್ರಾಮೀಣ ಪ್ರದೇಶವನ್ನು ಎಂದು ಅವರು ಹೇಳಿದರೂ ಕೂಡ ಎಂ.ಎ. ಓದಿರತಕ್ಕಂಥವರು ಗ್ರಾಮೀಣ ಪ್ರದೇಶದಲ್ಲಿ ಬದುಕಬಾರದು ಎಂದು ಏನಿಲ್ಲ. ಆದರೆ, ಅವರು ತಮ್ಮನ್ನು ತಾವು ತೋರಿಸಿಕೊಳ್ಳುವಾಗ unassuming personality ರೀತಿಯಲ್ಲಿ ಅಂದರೆ, ನಾನು ಒಬ್ಬ ಹಳ್ಳಿಯ ರೈತ ಎನ್ನುವಂಥ ರೀತಿಯಲ್ಲಿ ಮಾತನಾಡಿದರು. ಆದರೆ, ಈಗ ಇರತಕ್ಕಂಥ ವಾಸ್ತವವಾದಂಥ ಸಂಗತಿಗಳನ್ನು ಅವರು ಪ್ರಸ್ತಾಪ ಮಾಡಿದರು. ಈ ಹಿನ್ನಲೆಯಲ್ಲಿ ಅಕ್ಕಿಯನ್ನು ವಿತರಣೆ ಮಾಡಬೇಕೆಂದರೆ, ನಮಗೆ ಆ ಜವಾಬ್ದಾರಿಯನ್ನು ಕೊಡಬೇಡಿ. ಮತ್ತೆ ನಾವು ಅದಕ್ಕೆ ನೀಲಿ ನಕಾಶೆಯನ್ನು ತಯಾರು ಮಾಡುತ್ತೇವೆ. ಮತ್ತು ಇದಕ್ಕೆ ಆಗತಕ್ಕಂಥ ಅಂದಾಜು ವೆಚ್ಚವನ್ನು ತಯಾರು ಮಾಡುತ್ತೇವೆ ಹಾಗೂ ಕೆಲಸದ ಉಸ್ತುವಾರಿಯನ್ನು ಮಾಡುತ್ತೇವೆ. ಮತ್ತೆ ಎಂ.ಬಿ.ಯನ್ನು ಮೇಂಟೇನ್ ಮಾಡುತ್ತೇವೆ. ಹಾಗೆಯೇ ವಿತರಣೆ ಮಾಡುವುದಕ್ಕೋಸ್ಕರ ಯಾರ್‍ಯಾರು ಕೆಲಸಕ್ಕೆ ಬಂದಿರುತ್ತಾರೆ ಅವರಿಗೆ ಟೋಕನ್ ಕೊಡುತ್ತೇವೆ. ಆದ್ದರಿಂದ, ಇದನ್ನು ಯಾರ ಮೂಲಕವಾದರೂ ವಿತರಣೆ ಮಾಡಿ ಎನ್ನತಕ್ಕಂಥ ಮನವಿಯನ್ನು ಇಂಜಿನಿಯರ್ ಸಂಘದವರು ಶಾಸಕರಿಗೆ ಮತ್ತು ನಮಗೆ ಹಾಗೂ ಬೇರೆ ಬೇರೆಯವರಿಗೆ ಕೊಟ್ಟಿದ್ದಾರೆ. ಈ ಒಂದು ಹಿನ್ನಲೆಯಲ್ಲಿ ನಾವು ಏನು ಯೋಚನೆ ಮಾಡಿದ್ದೇವೆಂದರೆ, ಉಳಿದಿರತಕ್ಕಂಥ 1.70 ಲಕ್ಷ ಟನ್‌ಗಳಷ್ಟು ಧಾನ್ಯಗಳನ್ನು ಗ್ರಾಮ ಪಂಚಾಯಿತಿಯವರು ಎತ್ತುವಳಿ ಮಾಡಬೇಕೆಂದು ಇದೆ. ಇಂಜಿನಿಯರ್ಸ್ ಮತ್ತು ಯಾವ್ಯಾವ ಏಜೆಂಟ್ಸ್ ಇದನ್ನು ಮಾಡುವುದಿಲ್ಲ ಮತ್ತು ಮಾಡುವುದಕ್ಕೆ ನಿರಾಕರಿಸುತ್ತಾರೆಯೋ ಅಂಥವರಿಗೆ ಈ ಗ್ರಾಮ ಪಂಚಾಯತಿಯಲ್ಲಿ ಎತ್ತುವಳಿ ಮಾಡಿ ಇವರು ಕೊಟ್ಟಿರತಕ್ಕಂಥ ಎನ್.ಎಂ.ಆರ್. ಏನಿರುತ್ತದೆಯೋ ಅಂದರೆ, ಈ ಕೆಲಸವಾಗಿರುವಂಥದ್ದಕ್ಕೆ 200 ಜನ ಕೆಲಸ ಮಾಡಿದ್ದಾರೆ ಎನ್ನುವಂಥ ಎನ್.ಎಂ.ಆರ್. ಅನ್ನು ಯಾವ ಗ್ರಾಮಪಂಚಾಯತಿಗೆ ಕೊಡುತ್ತಾರೆಯೋ ಆ ಗ್ರಾಮ ಪಂಚಾಯತಿಯವರು ಅಕ್ಕಿಯನ್ನು ವಿತರಣೆ ಮಾಡಬೇಕಾಗುತ್ತದೆ. ಇಲ್ಲಿ ಗ್ರಾಮ ಪಂಚಾಯಿತಿಯನ್ನು ಏತಕ್ಕಾಗಿ ಪರಿಗಣಿಸಿದ್ದೇವೆಂದರೆ, ಗ್ರಾಮ ಪಂಚಾಯತಿಗೆ ಎಷ್ಟು ಚೀಲ ಅಕ್ಕಿ ಬಂತು ಮತ್ತು ಎಷ್ಟು ಚೀಲ ಅಕ್ಕಿ ಹೋಯಿತೆಂಬುದು ಗೊತ್ತಾಗುತ್ತದೆ. ಮತ್ತೆ ಇದರ ಜೊತೆಗೆ ಗ್ರಾಮ ಪಂಚಾಯಿತಿಯ ನೋಟಿಸ್ ಬೋರ್ಡ್‌ನಲ್ಲಿ ಯಾವ್ಯಾವ ಕೆಲಸಗಳು ಈಗ ಆಗುತ್ತಿವೆ ಮತ್ತು ಯಾವ ಕೆಲಸಗಳಿಗೆ ಮಂಜೂರಾತಿ ಆಗಿದೆ ಎಂಬುದು ಮತ್ತು ಅಲ್ಲಿ ಅಕ್ಕಿ ಎಷ್ಟು ದಾಸ್ತಾನು ಆಗಿದೆ ಎಂಬುದು ಮತ್ತು ಅದಕ್ಕೆ ಹಣಕಾಸು ಕೊಡತಕ್ಕಂಥದ್ದು ಎಷ್ಟೆಂಬುದು ಎನ್ನತಕ್ಕಂಥ ವಿವರಗಳನ್ನು ಅಲ್ಲಿ ನಮೂದಿಸಿರಬೇಕು. ಇದಕ್ಕೂ ಕೂಡ ತಾವು ಪ್ರಶ್ನೆ ಕೇಳಬಹುದು. ಏನೆಂದರೆ, ಅಲ್ಲಿಗೆ ಹೋಗಿ

ಇದನ್ನು ಯಾರು ನೋಡುತ್ತಾರೆ, ಬಡವರು ತಮ್ಮ ಕೆಲಸಗಳಿಗೆ ಹೋಗಿರುತ್ತಾರೆ. ಗ್ರಾಮಪಂಚಾಯಿತಿಗೆ ಹೋಗಿ ಬೋರ್ಡ್ ಮೇಲೆ ಇರತಕ್ಕಂಥದ್ದನ್ನು ಯಾರು ಓದಿಕೊಂಡು ಬರುತ್ತಾರೆ ಎಂಬ ಅನುಮಾನಗಳು, ಸಿನಿಸಿಜಂಗಳು ಎಲ್ಲಾ ಕಾಲಗಳಲ್ಲಿಯೂ ಕೂಡ ಇದ್ದೇ ಇರುತ್ತವೆ. ಆದರೆ, ಬಹಿರಂಗವಾಗಿ ಬಹಿರಂಗವಾಗಿ ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳನ್ನು ಮಾಡುತ್ತೇವೆಯೋ, ಅಷ್ಟರಮಟ್ಟಿಗೆ ಅದು ಪಾರದರ್ಶಕವಾಗಿರುತ್ತದೆ. ಎಷ್ಟರಮಟ್ಟಿಗೆ ಅದು ಪಾರದರ್ಶಕವಾಗಿರುತ್ತದೆಯೋ, ಅಷ್ಟರಮಟ್ಟಿಗೆ ಅದು ಉಪಯುಕ್ತವಾಗಿರುತ್ತದೆ. ಆದ್ದರಿಂದಲೇ ನಮ್ಮಲ್ಲಿರತಕ್ಕಂಥ ಒಂದು ಗಾದೆ ಮಾತಿನ ಪ್ರಕಾರ ಅಂದರೆ, 10 ಜನರು ಅಲ್ಲಿದ್ದರೆ ಹಾವು ಸಾಯುವುದಿಲ್ಲ ಎಂಬ ಮಾತನ್ನು ಹೇಳುತ್ತಾರೆ. ಅಂದರೆ, 10 ಜನರಲ್ಲಿ ಯಾರಾದರೊಬ್ಬರು ಏನು ಹೇಳುತ್ತಾರೆಂದರೆ, ಅದು ಏನು ಮಾಡುತ್ತದೆ, ಮತ್ತೆ ಅದು ಯಾರಿಗೂ ಕಡಿದಿಲ್ಲ ಮತ್ತು ನಮ್ಮನ್ನು ಏನೂ ಮಾಡಿಲ್ಲ. ಆದ್ದರಿಂದ ಅದನ್ನು ಏಕೆ ಹೊಡೆಯುವುದಕ್ಕೆ ಹೋಗುತ್ತೀರಿ, ಅದರ ಪಾಡಿಗೆ ಅದನ್ನು ಬಿಟ್ಟು ಬಿಡಿ ಎಂದು ಹೇಳುತ್ತಾರೆ. 10 ಮಂದಿಗೆ ಗೊತ್ತಾದರೆ ತಪ್ಪು ಮಾಡುವುದಕ್ಕೂ ಕೂಡ ಕಷ್ಟವಾಗುತ್ತದೆ. ಮತ್ತೆ 10 ಮಂದಿಯಲ್ಲಿ ವಿವೇಕ ಇರತಕ್ಕಂಥ ಜನರೂ ಕೂಡ ಇರುತ್ತಾರೆ. ಆದ್ದರಿಂದ ಇದನ್ನು ಗ್ರಾಮಪಂಚಾಯಿತಿ ಮಟ್ಟದಲ್ಲಿ ಮಾಡಬೇಕೆಂದು ಹೇಳಿದಾಗ ಕೂಡ ನಮ್ಮಲ್ಲಿಯೇ ಚರ್ಚೆ ನಡೆಯುವಂಥ ಸಂದರ್ಭದಲ್ಲಿ, ಇದು ಗ್ರಾಮ ಪಂಚಾಯತಿ ಮಟ್ಟದಲ್ಲಿ ಇದ್ದರೂ ಕೂಡ ಅದು ಮಿಸ್‌ಯೂಸ್ ಆಗತಕ್ಕಂಥ ಸಂಭವವಿರುತ್ತದೆ ಎನ್ನತಕ್ಕಂಥ ಅನುಮಾನಗಳು ಬಂದವು. ಏಕೆಂದರೆ, ನಾವು ವಿಕೇಂದ್ರೀಕರಣಕ್ಕೆ ಸಂಪೂರ್ಣವಾಗಿ ಬದ್ಧರಾಗಿಲ್ಲ, ಯಾರನ್ನೂ ನಂಬಲಾರದಂಥ ಢೋಲಾಯಮಾನ ಸ್ಥಿತಿಯಲ್ಲಿದ್ದೇವೆ. ಈ ಸಂದರ್ಭ ಬಂದಾಗ, ಈ ಒಂದು ಪದ್ಧತಿಯನ್ನು ಮೊದಲು ನಾಲ್ಕು ಜಿಲ್ಲೆಗಳಲ್ಲಿ ಅಂದರೆ, ಗದಗ್, ಕೊಪ್ಪಳ, ಬಳ್ಳಾರಿ ಮತ್ತು ರಾಯಚೂರಿನಲ್ಲಿ ಪ್ರಾಯೋಗಿಕವಾಗಿ ಮಾಡೋಣವೆಂದು ಮೊದಲು ಗ್ರಾಮ ಪಂಚಾಯತಿಯವರು ಇದನ್ನು ಎತ್ತುವಳಿ ಮಾಡಿದಂಥ ಆಹಾರ ಧಾನ್ಯವನ್ನು ಅಲ್ಲಿಟ್ಟುಕೊಂಡು, ಅಲ್ಲಿ ಕೆಲಸವನ್ನು ಪಿ.ಡಬ್ಲ್ಯೂ.ಡಿ. ಅಥವಾ ಬೇರೆ ಯಾವುದೇ ಏಜೆನ್ಸಿ ಮಾಡಿದ್ದರೂ ಕೂಡ ಎಷ್ಟು ಜನ ಕೆಲಸ ಮಾಡಿದ್ದಾರೆ ಎಂದು ತಿಳಿಸಿದಾಗ ನಿಯಮಾವಳಿ ಪ್ರಕಾರ ಆಹಾರಧಾನ್ಯವನ್ನು ಕೊಡತಕ್ಕಂಥ ಜವಾಬ್ದಾರಿಯನ್ನು ಅವರು ಇಟ್ಟುಕೊಂಡಾಗ ಡ್ಯೂಯಲ್ ಕಂಟ್ರೋಲ್ ಎನ್ನತಕ್ಕಂಥ ರೀತಿಯಲ್ಲಿ ಆಗಬೇಕು.

ಯಾರು ಅದನ್ನು ಅನುಷ್ಠಾನಗೊಳಿಸುತ್ತಾನೆ, ಅವನ ಹತ್ತಿರ ಆ ದಾಸ್ತಾನು ಇದ್ದಾಗ ಅದು ದುರುಪಯೋಗವಾಗಿದೆ ಎನ್ನತಕ್ಕಂಥ ಸಹಜವಾದಂಥ ನಂಬಿಕೆ ಬರುತ್ತದೆ. ಅದನ್ನು ನೀವು ಇನ್‌ಫರೆನ್ಸ್ ಎಂದು ಕರೆಯಿರಿ, ಆದರೆ ಇಲ್ಲಿ ಇದ್ದಂಥದ್ದು ಇನ್ನೊಬ್ಬನು ಅದನ್ನು ವಿತರಣೆ ಮಾಡುತ್ತಿರುವುದರಿಂದ ಇಲ್ಲಿ ಕೊಟ್ಟಿರತಕ್ಕಂಥದ್ದು ಮುಖ್ಯವಾಗಿರುತ್ತದೆ. ಆ ಕೆಲಸಗಳು ಆಗುತ್ತವೆ. ಅದಕ್ಕೆ ಒಂದು ವಿಚಾರವನ್ನೂ ಕೂಡ ಮಾನ್ಯ ಶಾಸಕರುಗಳೆಲ್ಲರೂ ತಮ್ಮ ಅಭಿಪ್ರಾಯವನ್ನು

ವ್ಯಕ್ತ ಮಾಡಿದ್ದಾರೆ. ಒಂದೊಂದು ಬಾರಿ 10, 20, 50, 100ರಷ್ಟು ಕಾಮಗಾರಿಗಳನ್ನು ಕೈಗೊಂಡಾಗ ಒಬ್ಬ ಇಂಜಿನಿಯರ್ ಎಲ್ಲಾ ಕಡೆಗೂ ಹೋಗಿ ಎಷ್ಟು ಜನರು ಕೆಲಸ ಮಾಡುತ್ತಾರೆಂದು ಹೇಳಿ, ಕೂಲಿಗಾರರನ್ನು ಎಣಿಸುವಂಥ ಕೆಲಸವನ್ನು ಎಲ್ಲಿ ಮಾಡುತ್ತಾರೆ. ನಮ್ಮ ಶಾಸಕರುಗಳ head counting ಬೇಡವೆಂದು ಸುಪ್ರೀಂ ಕೋರ್ಟಿನಲ್ಲಿ ಆಗಿದೆ. ರಾಜ್ಯಪಾಲರು ನಿರ್ಣಯ ಮಾಡಬೇಕಾದರೆ, head counting we do not allow ಎಂದು ಹೇಳುತ್ತಾರೆ. ಸುಪ್ರೀಂ ಕೋರ್ಟ್ ಹೇಳಿದೆ, ಅದು ಸದನದಲ್ಲಿಯೇ ನಿರ್ಣಯ ಆಗಿ ಬಿಡಲಿ ಎಂದು. ಯಾವುದಾದರೂ ಸರ್ಕಾರ ಬೀಳಬೇಕಾಗಿದ್ದರೆ, ಆತನಿಗೆ ಬಹುಮತ ಇದೆ ಎಂದು ಸಾಬೀತು ಮಾಡಬೇಕಾದರೆ, ರಾಜ್ಯಪಾಲರ ಮುಂದೆ ಅವರೆಲ್ಲರನ್ನೂ ಕರೆದುಕೊಂಡು ಹೋಗಿ ನಿಲ್ಲಿಸಬೇಕಾದುದಲ್ಲ. ರಾಜ್ಯಪಾಲರು ಅವರ ತಲೆಯನ್ನು ಎಣಿಸಬೇಕಾದದ್ದು ಇಲ್ಲ. ಸದನದಲ್ಲಿ ಆಗಲಿ ಎನ್ನುವ ಮಾತನ್ನು ನಾವು ಇಲ್ಲಿ ಹೇಳಿದಾಗ ಇಲ್ಲಿಯೂ ಕೂಡ ಒಬ್ಬ ಇಂಜಿನಿಯರ್ ಹೋಗಿ ಎಷ್ಟು ಜನರು ಕೆಲಸ ಮಾಡುತ್ತಾರೆಂದು ಹೇಳಿ ನೋಡಿಕೊಂಡು ಬರುವಂಥ ಒಂದು ಅವಾಸ್ತವವಾದಂಥ ಬಯಕೆ, ಆ ಕಾರಣಕ್ಕಾಗಿಯೇ ಈ ಒಂದು ಯೋಚನೆಯನ್ನು ಮಾಡಿದ ಮೇಲೆ.....

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಛೇರ್ಮನ್‌ರೆ, ನೀವು ಹೇಳುತ್ತಿರುವುದೆಲ್ಲವನ್ನೂ ನಾನು ಒಪ್ಪುತ್ತೇನೆ. ಬಹುತೇಕ ಸಮಸ್ಯೆ ಎಲ್ಲಿ ಪ್ರಾರಂಭವಾಯಿತೆಂದರೆ, ಮಾನವ ತಾಸುಗಳು ಕವರ್ ಮಾಡಲಿಲ್ಲವೆಂದು ಅಲ್ಲ, ಯಾವ ಅಕ್ಕಿ ಇದಕ್ಕಾಗಿ ಬಂತು, ಅಕ್ಕಿಯೂ ಅಲ್ಲಿಗೆ ಬರಲಿಲ್ಲ, ಹಣದ ಪೋರ್ಷನ್ ಏನಾಯಿತು ಎನ್ನುವುದು ಗೊತ್ತಾಗಲಿಲ್ಲ. ಟಾಸ್ಕ್‌ಫೋರ್ಸ್ ಕಮಿಟಿಯಲ್ಲಿ ಶಾಸಕರು ಇರುತ್ತಿದ್ದರು. ಸಿಬ್ಬಂದಿ ಎಲ್ಲಾ ಸಾಮಾನ್ಯವಾಗಿ ಅವರಿಗೆ ಬೇಕಾದವರೇ ಇರುತ್ತಿದ್ದರು. ಇಲ್ಲಾ ನೆಂಟರೋ ಅಥವಾ ಭಂಟರೋ ಇಬ್ಬರಲ್ಲಿ ಒಬ್ಬರು ಇರುತ್ತಿದ್ದರು. ನಾವು ಎನ್‌ಕ್ವಾಯರಿ ಮಾಡಿದಾಗ ನಾವೆಲ್ಲಾ ಆವತ್ತು ಕಂಪ್ಲೇನೆಂಟ್ಸ್, ಆವತ್ತು ನಾವು ಶಾಸಕರೆಲ್ಲಾ ನಾವೆಲ್ಲಾ ಅಂದು ವಿರೋಧ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೆವು. ನಾವು ವಿಜಿಲೆಂಟಾಗಿದ್ದು we have brought it to the notice of concerned people. ನಮ್ಮ ಸಮಸ್ಯೆ ಎಲ್ಲಿ ಬರುತ್ತದೆಂದರೆ, ಇಂಜಿನಿಯರಾಗಿ ಕೆಲಸ ಮಾಡತಕ್ಕಂಥವರಿಗೆ ರಾಜಕೀಯವಾಗಿ ನನಗೆ ಪ್ರೊಟೆಕ್ಷನ್ ಇದೆ ಎನ್ನುವ ಆರೋಗೆನ್ಸ್ ಬಂದಾಗ ನಿಯಮಾವಳಿಗಳನ್ನೆಲ್ಲಾ ಅವನು ಗಾಳಿಗೆ ತೂರುವುದು, ಅವನು ನಮ್ಮನ್ನೆಲ್ಲಾ ಗಾಳಿಗೆ ತೂರಿಬಿಡುತ್ತಾನೆ. ಅವನು ಕೆಲಸವನ್ನು ಮಾಡುವ ವೇಳೆಗೆ 60–80 ಪರ್ಸೆಂಟ್ ಕೆಲಸವಾಗದೆ ಉಳಿದಿದ್ದು, misuse ಆಗುತ್ತದೆ. It is pardonable. They have drawn the whole amount, the rice has not come to the spot, the money is not spent, no asset is created. The whole thing has been swallowed. ನಮ್ಮ ಕಂಪ್ಲೇಂಟ್ ಆಕ್ಯಾಟಗಿರಿ ಮೇಲೆ, ಪಾರ್ಷಿಯಲ್ಲಾಗಿ ಆಗಿರತಕ್ಕಂಥದ್ದು, it is alright. ಜೇನು ತೆಗೆಯತಕ್ಕಂಥವನು ಒಂದು ಚೂರು ನೆಕ್ಕಿಕೊಳ್ಳುತ್ತಾನೆ, ಅವನು ಮನುಷ್ಯ, ಸಿಹಿ ಅಂದಮೇಲೆ ಯಾರಾದರೂ ನೆಕ್ಕುತ್ತಾರೆ, ಅದು ಅಪರಾಧವೇನಲ್ಲ. ಈ ಕೆಟಗರಿ ಬಗ್ಗೆ ನಾವು ಹೇಳತಕ್ಕಂಥದ್ದು, ಗೈಡ್‌ಲೈನ್ಸ್

ಇದೆ ನಿಜ, ನಾವು ಈ ಗೈಡ್‌ಲೈನ್ಸ್ ಪ್ರಕಾರ ಹೋದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ನಾವೆಲ್ಲರೂ ಕೂಡ ಪ್ರಾಕ್ಟಿಕಲ್ ಆಗಿ ಕೆಲಸ ಮಾಡತಕ್ಕಂಥವರು. ಆ ಗೈಡ್‌ಲೈನ್ಸ್‌ನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು, ಇಂಜನಿಯರ್ಸ್‌ನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಸಾರ್ವಜನಿಕವಾಗಿ ನಮಗೆ ನೈತಿಕವಾದ ಒಂದು ಜವಾಬ್ದಾರಿ ಇರಬೇಕು. ನಾವು ಈ ಆಸ್ತಿ ಕ್ರಿಯೇಟ್ ಮಾಡಲು ಹೊರಟಿದ್ದೇವೆ, ಈ ಕೆಲಸ ಆಗಬೇಕು. ಸ್ವಲ್ಪ ಅಡ್ಜಸ್ಟ್‌ಮೆಂಟ್ ಮಾಡಿಕೊಂಡು ಮಾಡಿ ಎಂದು ಹೇಳುತ್ತೇವೆ. ಆದರೆ ಇವರು ಎಂಥ ಗಿರಾಕಿಗಳು ಅಂದರೆ ಏನನ್ನೂ ಮಾಡಲಿಲ್ಲ, ಅದಕ್ಕೆ ತಾವು ದಯಮಾಡಿ ಅಂಥವರ ವಿಚಾರದಲ್ಲಿ ನಾವು ಹೇಗೆ ಹೊರಡಬೇಕು ಎನ್ನುವುದರ ಬಗ್ಗೆ ಆಲೋಚನೆಯನ್ನು ಮಾಡಿ. They con't be spared. ಈಗ ಕೆಲಸ ನಿಂತುಹೋಗಿದೆ ಎನ್ನತಕ್ಕಂಥ ಕಾರಣವನ್ನು ಮುಂದಿಟ್ಟುಕೊಂಡು ನಿಜವಾದ ಕಾರಣ ಅದು. ಕೆಲಸ ನಿಲ್ಲಬಾರದು, ನಮ್ಮೆಲ್ಲಾ ಸ್ನೇಹಿತರು ಏನು ಹೇಳಿದ್ದಾರೆ, ಅವರ ಅಭಿಪ್ರಾಯದ ಜೊತೆಗೆ ನಾನೂ ಧ್ವನಿಗೂಡಿಸುತ್ತೇನೆ. ಆದರೆ ಕೆಲಸ ಮುಂದುವರೆಯಬೇಕು ಎನ್ನತಕ್ಕಂಥ ಒಂದು ಕಾರಣವನ್ನು ನಾವು ಅಡ್ಡ ಇಟ್ಟುಕೊಂಡು ಯಾರು ಸಂಪೂರ್ಣವಾಗಿ ಲೂಟಿ ಮಾಡಿರುತ್ತಾರೆ, ಅವರು ಇದರಿಂದ ತಪ್ಪಿಸಿಕೊಳ್ಳುವಂಥದ್ದು ಆಗಬಾರದು. ಅವರಿಗೆ ಶಿಕ್ಷೆಯಾಗಲಿಕ್ಕೆ ಬೇಕು.

**ಛೇರ್ಮನ್** : ಮಾನ್ಯ ಸಚಿವರೆ, ಅಲ್ಲಿ ಎರಡು ಕೆಟಗರಿ ಇದೆ, ಒಂದು ಕೆಲಸವಾಗಿ ಅಕ್ಕಿ ಮತ್ತು ದುಡ್ಡನ್ನು ಡ್ರಾ ಮಾಡಿದ್ದಾರೆ. ಒಂದು ಕೆಲಸವಾಗದೆ ಇರತಕ್ಕದ್ದು ಇದೆ. ಅಲ್ಲಿ ಎರಡು ರೀತಿಯಾಗಿದೆ. ಅದರ ಬಗ್ಗೆ ತನಿಖೆಯಾಗಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಮಾನ್ಯ ಛೇರ್ಮನರೆ, ನಾನು ಉದ್ದೇಶಪೂರ್ವಕವಾಗಿ ಮಾತನಾಡದೆ, ನಮ್ಮ ಆಡಳಿತ ಪಕ್ಷದ ಶಾಸಕರು ಮಾತ ನಾಡುತ್ತಿರುವುದನ್ನು ಗಮನಿಸುತ್ತಿದ್ದೆ, ಮಾನ್ಯ ಎಂ.ಪಿ. ಪ್ರಕಾಶ್‌ರವರು; ಸಂಸದೀಯ ಹಿರಿಯ ಸಚಿವರು. ಅವರು ಈ ಕಡೆ ಕುಳಿತಿದ್ದರು, ನಾನು ದೇವರ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ. ಮೂರು ವರ್ಷಗಳಿಂದ ಕೂಲಿಗಾಗಿ ಕಾಳು ಯೋಜನೆಯು ಬಂದಾಗಿನಿಂದ ಜನತಾ ಆದಾಲತ್ ಎಂದು ಹೇಳಿ, ನಮ್ಮದೇ ಅದಂಥ ಒಂದು ಕಾರ್ಯಕ್ರಮವನ್ನು ಮಾಡಿಕೊಂಡು ಎಲ್ಲಿ ಕೂಲಿಗಾಗಿ ಕಾಳು ಯೋಜನೆಯ ಕೆಲಸ ನಡೆಯುತ್ತಿದೆಯೋ ಆ ಸ್ಥಳಕ್ಕೆ ಹೋಗಿ 2-3 ಲಕ್ಷ ರೂ.ಗಳನ್ನು ಮಂಜೂರು ಮಾಡಿ 200 ರಿಂದ 400 ಜನರ ಕೆಲಸವನ್ನು ಮಾಡಿ ಎಷ್ಟು ಮಂಜೂರಾಯಿತು ಏನಿಲ್ಲ ಎನ್ನುವುದನ್ನು ಯಾವುದನ್ನೂ ತಿಳಿಸದೆ ಹಗಲು ದರೋಡೆ ನಡೆದಿದೆ. ಅಂದಿನ ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಇದನ್ನು ಉಸ್ತುವಾರಿ ಮಾಡುತ್ತಿರುವಂಥ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೇಯವರಿಗೆ ನಾನು ಹತ್ತು ಪತ್ರಗಳನ್ನು ಬರೆದಿರುತ್ತೇನೆ. ಒಂದು ದಿವಸ ಧಾರವಾಡ ಜಿಲ್ಲೆಯ ಗ್ರಾಮಾಂತರದಲ್ಲಿಯ ಒಂದು ಹಳ್ಳಿಗೆ ಹೋದಾಗ, ಅದಕ್ಕೆ 3 ಲಕ್ಷ ರೂ.ಗಳು

ಮಂಜೂರಾಗಿದೆ. ಮಾನ್ಯ ರಮೇಶ್‌ಕುಮಾರ್‌ರವರೇ, ಆ ಇಡೀ ಊರ ಜನರು ಹೇಳಿದರು, ಎರಡು–ಮೂರು ಜನ ಮೆಷನರಿ ತೆಗೆದುಕೊಂಡು ಬಂದು ಕೆಲಸವನ್ನು ಮಾಡಿ ಹೋದರು. ಅವರು ಪತ್ತೆಯೇ ಇಲ್ಲ, ಈಗ ನಮಗೆ ಗೊತ್ತಾಗುತ್ತಿದೆ, 3 ಲಕ್ಷ ರೂ.ಗಳನ್ನು ಡ್ರಾ ಮಾಡಿ ತಿಂದುಬಿಟ್ಟಿದ್ದಾರೆ ಎಂದು. ದೇವರ ಮೇಲೆ ಪ್ರಮಾಣ ಮಾಡಿ ಹೇಳುತ್ತಿದ್ದೇನೆ. ನಾನು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರ ಮನೆಗೆ ಮೊಬೈಲ್‌ನಲ್ಲಿ ಘೋನ್ ಮಾಡಿದೆ, ಅವರು ಊಟವನ್ನು ಮಾಡುತ್ತಿದ್ದರು, ನಂತರ ಅವರು ಘೋನ್ ತೆಗೆದುಕೊಂಡರು. ನೋಡಿ ಸ್ವಾಮಿ, ನಾನು ಈ ರೀತಿಯಾಗಿ ಓಡಾಟ ಮಾಡುತ್ತಿದ್ದೇನೆ, ನಿಮಗೆ ಒಂದಿಷ್ಟು ಸಾಕ್ಷಿಬೇಕು ಅಲ್ಲವೆ? ನಿಮ್ಮ ಹತ್ತಿರ ಹೆಲಿಕ್ಯಾಪ್ಟರ್ ಇದೆ, ನೇರವಾಗಿ ನೀವು ಈ ಗ್ರಾಮಕ್ಕೆ ಬನ್ನಿ, ನಾವು ಸಾಯಂಕಾಲ 6 ಗಂಟೆಯಾದರೂ ಇರುತ್ತೇವೆ, ಇಡೀ ಊರಿನ ಸಾವಿರಾರು ಜನ ಇದ್ದಾರೆ, ನೀವು ಬಂದು ಇದನ್ನು ನೋಡಿ, ಅಧಿಕಾರಿಗಳನ್ನು ಕರೆಸಿ, ಸಂಬಂಧಪಟ್ಟಂಥ ಪ್ರಮುಖರನ್ನು ಕರೆಸಿ, ಇದರಲ್ಲಿ ಯಾರ ಕೈವಾಡವಿದೆ, ಅವರಿಗೆ ಫನಿಷ್ ಮಾಡಿ ಎಂದು ಪತ್ರವನ್ನು ಬರೆದಾಯಿತು, ಹೇಳಿಯೂ ಕೂಡ ಆಯಿತು, ಅವರು ಆಗಿನ ಹಾವೇರಿ ಜಿಲ್ಲೆಯ ಉಸ್ತುವಾರಿ ಸಚಿವರಿಗೆ ಹೇಳಿದರು, ಅವರು, ಉಸ್ತುವಾರಿಯನ್ನು ಮಾಡಿದರು, ನಾನು ಹಾವೇರಿ ಜಿಲ್ಲೆಯಲ್ಲಿ ಎಲ್ಲೆಲ್ಲಿ ನೋಡಿದೆ, ಅಲ್ಲೆಲ್ಲಾ ಮತ್ತೆ ಬರಗಾಲ ಕಾಮಗಾರಿ ಶುರುವಾಯಿತು. ನಾನು ಇಲ್ಲಿ ಏನು ಹೇಳುತ್ತಿದ್ದೇನೆಂದರೆ, ಇದರಲ್ಲಿ ಸರ್ಕಾರಿ ನೌಕರರ ಪಾಲು ಬಹಳ ಕಡಿಮೆ, ಲೂಟಿ ಮಾಡಿದಂಥವರು ರಾಜಕಾರಣಿಗಳು. ಇದೇ ದಂಧೆ ಮಾಡುತ್ತಿರುವಂಥ ಪ್ರಮುಖರು, ನಾನು ಆ ಪಕ್ಷ ಈ ಪಕ್ಷ ಎಂದು ಹೇಳುತ್ತಿಲ್ಲ. ಕೂಲಿಗಾಗಿ ಕಾಳು ಯೋಜನೆಯಲ್ಲಿ ಇದೇ ಒಂದು ದಂಧೆ ನಡೆದಿದೆ.

**ಗೊಂದಲ**

ಇದು ಬಹಳ ಕುಮ್ಮಕ್ಕು ಸರ್. ಟೂ ಮಚ್.

**ಛೇರ್ಮನ್ :** ದಯವಿಟ್ಟು ಕುಳಿತುಕೊಳ್ಳಿ, ನೀವು ಅದನ್ನು ಆಗಲೇ ಹೇಳಿರುತ್ತೀರಿ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಇದೊಂದು ಕರಾಳ ದಿನ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವತ್ತಿನಿಂದ ಇವತ್ತಿನವರೆಗೆ ನಾನು ಹೇಳುತ್ತಲೇ ಇದ್ದೇನೆ. ನೀವು ಶಾಸಕರಾಗಿದ್ದಾಗ, ನಾನು ವಿಧಾನ ಪರಿಷತ್ತಿನಲ್ಲಿ ಸದಸ್ಯನಾಗಿದ್ದೆ. ದಾಖಲೆಯನ್ನು ತೆಗೆದು ನೋಡಿ, ಹತ್ತಾರು ಬಾರಿ ಚರ್ಚೆ ಮಾಡಿ ಕೇಂದ್ರ ಸರ್ಕಾರದ ಈ ನಿಯಮಾವಳಿಗಳಲ್ಲಿ ನಾವು ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ತಿದ್ದುಪಡಿಯಾಗಬೇಕು, ಏನಾದರೊಂದು ತೀರ್ಮಾನವನ್ನು ಮಾಡಿ, ಯಾರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು ಬೇಡ, ಪುಕ್ಕಟೆಯಾಗಿ ಬಂದಿರುವ ಅಕ್ಕಿ ಆ ಬಡವರಿಗೆ ತಲುಪಬೇಕೆಂದು ನಾವು ಬಡೆದುಕೊಂಡೆವು, ಇವತ್ತು ಒಂದು ಕೆಲಸವನ್ನು ಮಾಡಿ, ನಾನು ಕೈಜೋಡಿಸಿ ಹೊಸದಾಗಿ ಬಂದಿರುವ ನಮ್ಮ ಶಾಸಕರಿಗೆ

ಹೇಳುತ್ತೇನೆ. ಏಕೆ ಇಲ್ಲಿ ಅವ್ಯವಸ್ಥೆಯಾಗಿದೆ, 100ಕ್ಕೆ 90 ಭಾಗ ಅಕ್ಕಿ ಬಂತು, 60 ಪರ್ಸೆಂಟ್ ಅಕ್ಕಿಗೆ ಪೇಮೆಂಟ್ ಕೊಡಬೇಕಾಗಿತ್ತು, 40 ಪರ್ಸೆಂಟ್ ಹಣ ನಿಮ್ಮಲ್ಲಿ ಇರಲಿಲ್ಲ, ಹಣ ಬಿಡುಗಡೆ ಮಾಡಲಿಲ್ಲ. ಎರಡು–ಮೂರು ತಿಂಗಳಾದರೂ ಹಣ ಬಿಡುಗಡೆ ಮಾಡಲಿಲ್ಲ. ಜಿಲ್ಲಾಧಿಕಾರಿಗಳು ಬೊಬ್ಬೆ ಹೊಡೆದರು, ದಾಖಲೆಗಳು ಇವೆ, ಇದರ ಪರಿಣಾಮದಿಂದ ಈ ಪರಿಸ್ಥಿತಿಯಾಯಿತು. ಇನ್ನು ಕೆಲವೊಂದು ವಿಷಯಗಳ ಬಗ್ಗೆ ಚರ್ಚೆ ಇದೆ, ಇವತ್ತಿನ ದಿವಸ 75 ರೂ.ಗಳ ಕೂಲಿ ಇರುವಾಗ 40–45 ರೂ.ಗಳಿಗೆ ಯಾರು ಕೂಲಿಗೆ ಬರುತ್ತಾರೆ? ಎಲ್ಲಿಯವರೆಗೆ ನಾವು ಕಾಂಪ್ರಮೈಸ್ ಮಾಡಿದೆವೆಂದರೆ, ಯಾರೋ ಒಬ್ಬ ಅಧಿಕಾರಿಗಳು ತಿಂದು ಹೋಗುವುದು ಅಲ್ಲ, ನೀವು ಕರೆಯ ಅಭಿವೃದ್ಧಿ ಕೆಲಸವನ್ನು ಮಾಡಿ, ಇಡೀ ಊರು ಒಗ್ಗಟ್ಟಾಗಿ ಕೆಲಸವನ್ನು ಮಾಡಿ, ಅದು ನಿಮ್ಮ ಊರಿನ ಆಸ್ತಿಯಾಯಿತು, ಅಕ್ಕಿ ಬರುತ್ತದೆ, ನೀವೆಲ್ಲರೂ ಕೂಡಿಕೊಂಡು ಆ ಬಂದಿರುವ ಅಕ್ಕಿಯನ್ನು ಹಂಚಿಕೊಳ್ಳಿ, ಒಬ್ಬೊಬ್ಬರಿಗೆ 70 ರಿಂದ 100 ರೂ.ಗಳ ಕೂಲಿ ಬರಲಿ ಎಂದು ನಾವೇ ಹಂಚಿದ್ದೇವೆ. ಹ್ಯಾಂಡ್‌ಬಿಲ್ ಪ್ರಿಂಟ್ ಮಾಡಿ ಇಷ್ಟು ಕೆಲಸ ಮಂಜೂರಾಗಿದೆ. ನೀವು ಕೆಲಸನ್ನು ಮಾಡಿ ಎಂದು ಹೇಳಿ ಕೆಲಸ ಮಾಡಿಸಿದಂಥ ಉದಾಹರಣೆಗಳು ಇವೆ, ನಾನು ಎಲ್ಲಾ ಶಾಸಕರ ಬಗ್ಗೆ ಆರೋಪ ಮಾಡುತ್ತಿಲ್ಲ. ಎಲ್ಲಾ ಅಧಿಕಾರಿಗಳು ಕೆಟ್ಟವರು ಎಂದು ನಾನು ಹೇಳುತ್ತಿಲ್ಲ. ನಾನು ಇವತ್ತು ಹೇಳುತ್ತೇನೆ. ಒಬ್ಬ ಜವಾಬ್ದಾರಿ ಇರುವಂಥ ಮಾನ್ಯ ರೇವಣ್ಣವರ ಹಾಸನ ಜಿಲ್ಲೆಯಲ್ಲಿ ವ್ಯಾಗನ್‌ನಿಂದ ಬಂದಂಥ ಅಕ್ಕಿ ನೇರವಾಗಿ ಮಂಗಳೂರಿಗೆ ಹೋಯಿತು. ಅಲ್ಲಿಂದ ಪೋರ್ಟ್‌ಗೆ ಹೋಗಿ ಹೊರದೇಶಕ್ಕೆ ಹೋಯಿತು ಎಂದು ಆರೋಪವನ್ನು ಯಡಿಯೂರಪ್ಪ ಮಾಡುತ್ತಾ ಇಲ್ಲ, ಇದಕ್ಕೆ ಅಧಿಕಾರಿಗಳು ಜವಾಬ್ದಾರರೇ? ಯಾರು ಈ ತರಹ ವ್ಯಾಗನ್‌ನಲ್ಲಿ ಬಂದದ್ದನ್ನು ನೇರವಾಗಿ ಡೆಲ್ಲಿಯಲ್ಲಿ F.C.I. ಗೋಡೌನ್‌ಗಳಲ್ಲಿ ಸಂಬಂಧವಿಟ್ಟುಕೊಂಡವರು, ಲಾರಿಯಲ್ಲಿ ಲೋಡ್‌ಗಟ್ಟಲೆ ತೆಗೆದುಕೊಂಡು ಹೋದರು, ಅವರನ್ನು ಕೈಬಿಟ್ಟರು. ಯಾರೋ ಕೆಲವು ನಿರಪರಾಧಿ ಅಧಿಕಾರಿಗಳನ್ನು ಇವತ್ತು ಬಂಧನ ಮಾಡಿ ತಮಾಷೆ ಮಾಡುವ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ನಾನು ಈ ಮನೆಯಲ್ಲಿ ಕುಳಿತುಕೊಂಡು ಏನು ಹೇಳಿದೆ, ಏತಕ್ಕೆ ನೀವು ಸದನದ ಸಮಿತಿ ಮಾಡಿ ಅಂದರೆ ಬೇಡ ಅಂದಿರಿ, ಮಾಡಿದ್ದರೆ ಆ ಸದನ ಸಮಿತಿಯ ಛೇರ್ಮನ್ ನಾನು ಆಗುತ್ತಿದ್ದೇನೆ? ಆವತ್ತು ನಿಮ್ಮವರೇ ಛೇರ್ಮನ್‌ರು ಆಗುತ್ತಿದ್ದರು. ಇಲ್ಲಿ ಏನು ಇದೆ ನೋಡೋಣ, ಈ ಕೊರತೆಗಳನ್ನು, ಕಾನೂನಿನಲ್ಲಿ ಏನು ಮಾರ್ಪಾಡು ಆಗಬೇಕು, ಇದರ ಬಗ್ಗೆ ಡೆಲ್ಲಿಗೆ ನಿಯೋಗ ಹೋಗಿ ಅವರನ್ನು ಒಪ್ಪಿಸೋಣ, ಇದನ್ನು ಕೊನೇ ಮಾಡೋಣ, ಮುಂದಾದರೂ ಇಂತಹ ಬಂದಂಥ ಸೌಲಭ್ಯಗಳು ಬಡವರಿಗೆ ತಲುಪಬೇಕು ಎಂದು ಬೊಬ್ಬೆ ಹೊಡೆದೆ, ನಾವು ಎರಡು ಮನೆಯಲ್ಲಿ ಧರಣಿ ಕುಳಿತುಕೊಂಡೆವು, ಇದು ಈಗಲ್ಲ, ಕಳೆದ ಮೂರು ವರ್ಷಗಳಿಂದ ನಡೆದಿರುವ ಕರ್ಮಕ್ಕೆ, ಅದಕ್ಕಾಗಿ ನಾನು ಈ ನಮ್ಮ ಶಾಸಕ ಮಿತ್ರರಿಗೆ ಹೇಳುವಂಥದ್ದು,

ನನಗೆ ಗೊತ್ತಿದೆ, ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ. ಈಗ ಬಂದಿರುವ ಹಣದಲ್ಲಿ ಸ್ವಲ್ಪ ಕೆಲಸವನ್ನು ಮಾಡಬೇಕೆನ್ನುವ ಕಳಕಳಿ ನನಗೆ ಅರ್ಥವಾಗುತ್ತದೆ. ಅದನ್ನು ಮಾಡುವುದಕ್ಕೆ ಇವರಿಗೆ ಸರ್ಕಾರಕ್ಕೆ ಏನಾಗಿತ್ತು? ಕಳೆದ ಎರಡು ತಿಂಗಳಿನಿಂದ, ಸ್ವಾಮಿ ಒಂದು ನಿಮಿಷ, ಈ ಕಾರ್ಯಕಲಾಪಗಳು ನಡೆಯುತ್ತಿದೆ.

**Mr. Chairman :** Let him finish. ಮಾನ್ಯ ಮಂತ್ರಿಗಳು ಈಗ ಏನು ಮಾಡುತ್ತಾರೆನ್ನುವ ಬಗ್ಗೆ ಉತ್ತರವನ್ನು ಹೇಳುತ್ತಾರೆ. ದಯವಿಟ್ಟು ಅವರು ಉತ್ತರವನ್ನು ಮುಗಿಸಲಿ.

**ಗೊಂದಲ**

**ಶ್ರೀ ಬಿ.ಎಸ್. ಯಡಿಯೂರಪ್ಪ :** ಅವರು ನಮ್ಮನ್ನು ಕರೆದು ಕೇಳಬಹುದಾಗಿತ್ತಲ್ಲಾ?

**ಛೇರ್ಮನ್ :** ಅದೆಲ್ಲಾ ಆಯಿತು, ನಾವು ಅದರ ಬಗ್ಗೆ ಚರ್ಚೆಯನ್ನು ಮಾಡಿದ್ದೇವೆ. ಅವರು ಉತ್ತರವನ್ನು ಹೇಳಲಿ ಬಿಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಅವತ್ತಿನಿಂದ ಆಗಿರುವುದನ್ನು ಸರಿಮಾಡದೆ, ಇವತ್ತು ಬೆಂಬಲವನ್ನು ಕೊಟ್ಟು ಯಾರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು? ಹೊಸದಾಗಿ ಬಂದಿರುವ ಶಾಸಕರ ಮನಸ್ಸಿನಲ್ಲಿ, ರಾಜ್ಯದಲ್ಲಿ ಜನರ ಮನಸ್ಸಿನಲ್ಲಿ, ಇನ್ನೇನೂ ಅಭಿವೃದ್ಧಿ ಕಾರ್ಯಗಳು ನಡೆಯಬಾರದು, ಇದಕ್ಕೆ ತಡೆ ಒಡ್ಡಿದ್ದಾರೆ ಎನ್ನುವ ಉದ್ದೇಶ ನಮ್ಮದು ಇದೆಯಾ? ಏಕೆ ನೀವು ಸದನ ಸಮಿತಿಯನ್ನು ತಡೆದಿರಿ? ಯಾರನ್ನು ಮುಚ್ಚಿಹಾಕುವುದಕ್ಕೆ ಹೊರಟಿದ್ದೀರಿ?

**ಛೇರ್ಮನ್ :** ಅದು ಅವತ್ತೇ ಆಯಿತಲ್ಲಾ. ಇವತ್ತು ಏನು ಮಾಡಬೇಕು? ಈ ಪಾಪದ ಕೆಲಸವನ್ನು ಮಾಡಿದವರು ಆವತ್ತು ಅಧಿಕಾರದಲ್ಲಿದ್ದವರು ಕಾರಣ, ನಾವಲ್ಲ, ಮಾನ್ಯ ಸಿದ್ಧರಾಮಯ್ಯನವರೂ ಸೇರಿ ಏನೇನು ಮಾತನಾಡಿದ್ದೀರಿ ಅದರ ಬಗ್ಗೆ ಕಡತವನ್ನು ಬಿಚ್ಚಿದರೆ ಅವತ್ತಿನ ದಿವಸ ನಡೆದಿರುವಂತಹ ಅವ್ಯವಹಾರ.

**ಛೇರ್ಮನ್ :** ಮಾನ್ಯ ಪ್ರಕಾಶ್‌ರವರೆ, ಈಗ ಒಂದು ಕೆಲಸವನ್ನು ಮಾಡೋಣ. ಹಿಂದಿನಿಂದ ಯಾರು ಇದ್ದಾರೆ ಆ ಎಲ್ಲಾ ವ್ಯವಹಾರಗಳು ಹೊರಗೆ ಬರಲಿ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಇದರ ಬಗ್ಗೆ ಸಮಾಲೋಚನೆ ಮಾಡುವ ಬಗ್ಗೆ ಒಂದು ಸಭೆಯನ್ನು ಕರೆದಿದ್ದೀರಾ? ಅದನ್ನು ಕರೆಯುವ ಬಗ್ಗೆ ನಿಮಗೆ ಪುರಸೊತ್ತು ಇಲ್ಲ. ರಾಜ್ಯ ಅಭಿವೃದ್ಧಿಯನ್ನು ಮಾಡುವುದು ಬಿಟ್ಟು, ನಿಮ್ಮ ರಾಜಕಾರಣವನ್ನು ಮಾಡಿಕೊಂಡು ಕುಳಿತಿದ್ದೀರಿ. ಇವತ್ತು ಇಲ್ಲಿ ನಿಂತುಕೊಂಡು ಮಾತನಾಡುತ್ತೀರಿ?

**ಶ್ರೀ ಮಹದೇವ್ :** ಮಾನ್ಯ ಛೇರ್ಮನ್‌ರವರೆ,

**ಛೇರ್ಮನ್ :** ಮಾನ್ಯ ಮಹದೇವುರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ,

**ಶ್ರೀ ಸಿ. ಚೆನ್ನಿಗಪ್ಪ :** ಅಲ್ಲ, ನಮ್ಮ ಪಾರ್ಟಿಯವರು ಅಲ್ಲಿಗೆ ಹೋಗಿ ಕುಳಿತಿದ್ದಿರಲ್ಲಾ?

**ಛೇರ್ಮನ್ :** ಮಾನ್ಯ ಚೆನ್ನಿಗಪ್ಪನವರೆ, ಮಾನ್ಯ ಮಹದೇವುರವೆ, ದಯವಿಟ್ಟು ಕುಳಿತುಕೊಳ್ಳಿ. ಮಂತ್ರಿಗಳು ಉತ್ತರವನ್ನು ಹೇಳಲಿ. Let him finish. ಕುಳಿತುಕೊಳ್ಳಿ ಪ್ಲೀಸ್. ಅದು ಆಗುವುದಿಲ್ಲ. ಮಾನ್ಯ ರಾಮಸ್ವಾಮಿಯವರೇ, ತಾವು ದಯವಿಟ್ಟು ಯೀಲ್ಡ್ ಆಗಬೇಡಿ. ತಾವು ಮುಂದುವರಿಸಿ.

111-62

**ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) :** ಮಾನ್ಯ ಛೇರ್ಮನ್‌ರವರೆ, ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ನಾವ್ಯಾರು ಮಾತನಾಡಿದ್ದೇವೆ, ನಾವೆಲ್ಲರೂ ಹೇಳುತ್ತಿದ್ದೇವೆ, ಅನುಷ್ಠಾನ ಮಾಡಿರುವುದರಲ್ಲಿ ತಪ್ಪಾಗಿಲ್ಲವೆನ್ನುವಂತಹ ಮಾತನ್ನು ನಾವು ಹೇಳಲಿಲ್ಲ. ಅನುಷ್ಠಾನದಲ್ಲಿ ತಪ್ಪಾಗಿದೆ ಪ್ರೊಸೀಜರಲ್ ಲ್ಯಾಪ್ಸ್ ಆಗಿದೆ ಇದಕ್ಕೆ ಅನುಷ್ಠಾನದ ಅಧಿಕಾರಿಗಳು ಮಾತ್ರ ಜವಾಬ್ದಾರರಾ? ತಾಲ್ಲೂಕು ಸಮಿತಿ, ಜಿಲ್ಲಾ ಸಮಿತಿ ನಿಮ್ಮ ರಾಜ್ಯ ಮಟ್ಟದ ಸಮಿತಿಯವರು ಏನು ರಿವ್ಯೂ ಮಾಡುತ್ತಿದ್ದರು, ಇವರೆಲ್ಲರೂ ಜವಾಬ್ದಾರರು ಎನ್ನುವಂತಹ ಮಾತನ್ನೂ ಕೂಡ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಏಕೆಂದರೆ, ಇದರಲ್ಲಿ ಕೂಲಿಕಾರ್ಮಿಕ ಆಧಾರಿತ ಕಾಮಗಾರಿಗಳನ್ನು ಮಾತ್ರ ಮಂಜೂರಾತಿ ಮಾಡಬೇಕಾಗಿತ್ತು. ವಸ್ತುಗಳನ್ನು ಕೊಂಡು ನಿರ್ಮಾಣ ಮಾಡತಕ್ಕಂತಹ ಕಾಮಗಾರಿಗಳನ್ನು ಮಂಜೂರು ಮಾಡಬಾರದಾಗಿತ್ತು, ಅದು 5 ಪರ್ಸೆಂಟ್‌ಗೆ ಹೆಚ್ಚಿಗೆ ಮೀರಬಾರದಾಗಿತ್ತು. ಅದನ್ನು ಮಾಡಿಕೊಟ್ಟರು, ಇದನ್ನು ವಯಾಲೇಟ್ ಮಾಡಿದವರು ಯಾರು? ಅನುಷ್ಠಾನ ಅಧಿಕಾರಿಗಳಾ? ಈ ಸಮಿತಿಗಳು ಮತ್ತು ಮೇಲಧಿಕಾರಿಗಳು ಅಲ್ಲವಾ? ಅದಕ್ಕೇ ಹೇಳಿದ್ದು ಈ ಮೇಲಾಧಿಕಾರಿಗಳು ಯಾರೂ ಮಂಜೂರಾತಿಯನ್ನು ಮಾಡಿ ಕೊಟ್ಟರು, ಇದನ್ನು ಒಪ್ಪಿಗೆ ಕೊಟ್ಟರು ಅವರನ್ನು ನೀವು ಬದ್ಧತೆಯಿದ್ದರೆ ತನಿಖೆಗೆ ಒಳಪಡಿಸಿ, ಸತ್ಯಾಂಶ ಹೊರ ಬೇಕೆನ್ನುವುದು ಇದ್ದರೆ ಇಚ್ಛೆ ಇದ್ದರೆ ಎಂದು ನಾವು ಹೇಳಿದ್ದು. ವಾರಕ್ಕೆ ಒಂದು ದಿವಸ ಕಾಳನ್ನು ವಿತರಣೆ ಮಾಡಬೇಕು ಅನ್ನತಕ್ಕಂಥ ಆದೇಶ ಇದೆ.

**ಛೇರ್ಮನ್ :** ಆಯಿತು ಬಿಡಿ.

**ಶ್ರೀ ಎ.ಟಿ. ರಾಮಸ್ವಾಮಿ :** ಈಗ ವಾರಕ್ಕೆ ಒಂದು ದಿವಸ ಕಾಳನ್ನು ವಿತರಣೆ ಮಾಡಬೇಕೆಂಬ ಬಗ್ಗೆ ಆದೇಶವಿದೆ. ಯಾವ ತಾಲ್ಲೂಕಿನಲ್ಲಿ ಯಾವ ಹಳ್ಳಿಯಲ್ಲಿ ಹೋಗಿ ತಕ್ಕಡಿ ಹಿಡಿದುಕೊಂಡು ವಾರಕ್ಕೆ ಒಂದು ದಿವಸ ಅಕ್ಕಿಯನ್ನು ಹಂಚಿದ್ದಾರೆ. ನೀವೆಲ್ಲರೂ ಒಪ್ಪಿದ ರೀತಿಯಲ್ಲಿಯೇ ಆ ಕಾಮಗಾರಿಗಳು ಆಗಿವೆ ಎನ್ನತಕ್ಕ ಮಾತನ್ನು ನಾನು ಹೇಳಿದ್ದೇನೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತೊಂದರ ಬಗ್ಗೆ ಹೇಳಿದರು. ಸದನ ಸಮಿತಿ ಮಾಡಬೇಕಾಗಿತ್ತು? ಏತಕ್ಕಾಗಿ ನೀವು ಒಪ್ಪಲಿಲ್ಲ ಎಂದು ನಾನು ಸನ್ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಿಮ್ಮ ಮೂಲಕ ವಿನಂತಿಯನ್ನು ಮಾಡುತ್ತಿದ್ದೇನೆ. ಇವತ್ತು ಸದನ ಸಮಿತಿಗಿಂತ ಪಬ್ಲಿಕ್ ಅಕೌಂಟ್ಸ್ ಕಮಿಟಿ ಅದಕ್ಕೆ ನೀವೇ ಅಧ್ಯಕ್ಷರಾಗಿರುತ್ತೀರಿ, ಅಥವಾ ನೀವು ಸೂಚಿಸಿದ ಮತ್ತೊಬ್ಬ ನಿಮ್ಮ ಹಿರಿಯರು ಅದಕ್ಕೆ ಅಧ್ಯಕ್ಷರಾಗಿರುತ್ತಾರೆ. ಅದಕ್ಕೆ ಸ್ಟ್ಯಾಚ್ಯುಟರಿ ಪವರ್ಸ್ ಇದೆ, ಶಾಸನ ರಚಿಸುವಂತಹ ಶಕ್ತಿ ಇದೆ. ಅದನ್ನು ನೀವೇ ಒಪ್ಪಿಕೊಂಡು ಸತ್ಯಾಂಶವನ್ನು ಹೊರತರುವ ಬಗ್ಗೆ ಅದನ್ನು ಹೊರತರುವ ಬಗ್ಗೆ ಇಚ್ಛೆ ಪಡಲಿಲ್ಲ? ನಿಮಗೆ ಸತ್ಯ ಹೊರಬರುವುದು ಇಚ್ಛೆಯಿಲ್ಲ. ಕೆಸರನ್ನೇ ಎರಚಾಡತಕ್ಕಂಥದ್ದು ಒಬ್ಬರ ಮೇಲೆ ಒಬ್ಬರು ರಾಜಕೀಯ ಇದರ ಬಗ್ಗೆ ಹೇಳಬೇಕಾಗುತ್ತದೆ.

**ಛೇರ್ಮನ್** : ಮಾನ್ಯ ರಾಮಸ್ವಾಮಿಯವರೆ, ಮಾನ್ಯ ಪ್ರಕಾಶ್‌ರವರೆ, ದಯವಿಟ್ಟು ನೀವು ಉತ್ತರ ಹೇಳಿ. ಅವರು ಏತಕ್ಕಾಗಿ ಉತ್ತರವನ್ನು ಹೇಳುತ್ತಾರೆ. ದಯವಿಟ್ಟು ಬಾಲಕೃಷ್ಣರವರೇ, ಕುಳಿತುಕೊಳ್ಳಿ.

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)**: ಮಾನ್ಯ ಛೇರ್ಮನ್‌ರವರೆ, ನಾನು ಆ ಕಾರಣಕ್ಕಾಗಿಯೇ ಪ್ರಾರಂಭದಲ್ಲಿ ಯಾವುದರ ಬಗ್ಗೆಯೂ ಮುಚ್ಚುಮರೆಯಿಲ್ಲದೆಯೇ ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಏನಿವೆ ಆದಾದ ನಂತರ ರಾಜ್ಯ ಸರ್ಕಾರ ಕೊಟ್ಟಿರುವಂತಹ ಸೂಚನೆ ಏನಿದೆ ಎಂಬುದನ್ನು ಹೇಳಿದೆ. ನಾನೂ ಕೂಡ ಮಾನ್ಯ ಯಡಿಯೂರಪ್ಪನವರಂತೆ ವಿಧಾನಪರಿಷತ್ತಿನ ಸದಸ್ಯನಾಗಿದ್ದೆ. ವೈಯಕ್ತಿಕವಾಗಿರುವಂತಹ ನನ್ನ ಅನುಭವಗಳನ್ನು ಸಾರ್ವತ್ರಿಕಗೊಳಿಸಬೇಕಾದ ಆಗತ್ಯವಿಲ್ಲ. ನಾನು ವಿಧಾನಪರಿಷತ್ತಿನ ಸದಸ್ಯನಾಗಿ ಬರ ನಿವಾರಣೆಯ ಬಗ್ಗೆ ನಮ್ಮ ಶಾಸಕರ ಅಧ್ಯಕ್ಷತೆಯ ಸಮಿತಿಯ ಸದಸ್ಯನಾಗಿದ್ದೆ. ನಾನು ಎರಡು ಬಾರಿ ಸಭೆಯಲ್ಲಿ ಹೋದಾಗ ನಾನು ಹೇಳಿದಂತಹ ಯಾವುದೇ ಕಾಮಗಾರಿಗಳನ್ನು ಕೈಗೆ ತೆಗೆದು ಕೊಳ್ಳಬಾರದು. ಎಂದು ಹೇಳಿ ಅಲ್ಲಿ ನಿರ್ಧಾರವಾಯಿತು. ಅದು ಬಹುಮತದ ಮೇಲೆ ನಿರ್ಧಾರವಾಯಿತು. ಅಲ್ಲಿ ಇನ್ನೂ ಹೋಗುವಂತಹ ಅರ್ಥವಿಲ್ಲವೆಂದು ಅದನ್ನು ನಾವು ಕೈಬಿಟ್ಟೆವು. ಆದಾದ ಮೇಲೆ ಪೋಲೀಸ್ ಕಂಪ್ಲೈಂಟ್‌ಗಳೂ ಕೂಡ ಆದವು. ಆದಾದ ಮೇಲೆ ಅಕ್ಕಿಯ ದಾಸ್ತಾನುಗಳನ್ನು ಹಿಡಿದೆವು. ಪೋಲೀಸ್‌ನವರು ಎಫ್‌ಐಆರ್‌ನ್ನು ರಿಜಿಸ್ಟರ್ ಮಾಡಿಸಲಿಲ್ಲ. ಇದು ನನ್ನ ವೈಯುಕ್ತಿಕವಾದಂತಹ ಅನುಭವವಾಗಿರುವುದು. ಆದರೆ ವೈಯುಕ್ತಿಕವಾಗಿರುವಂತಹ ಅನುಭವಗಳನ್ನು ಸಾರ್ವತ್ರಿಕಗೊಳಿಸಿ ನಿರ್ವಹಿಸಬೇಕಾದಂತಹ ಸಂದರ್ಭದಲ್ಲಿ ಸತ್ಯವನ್ನು ಮುಚ್ಚಿಡುವಂತಹ ಕೆಲಸವಲ್ಲ. ಅವರು ಯಾವ ಪ್ರಕಾರವಾಗಿ ಹೋರಾಟವನ್ನು ಮಾಡಿದ್ದಾರೆ, ವಿರೋಧಪಕ್ಷದಲ್ಲಿ, ನಾವು ಆ ಪ್ರಕಾರವಾಗಿ ಹೋರಾಟ ಮಾಡಿಯೇ ನಮ್ಮ ಪಕ್ಷದ ವತಿಯಿಂದ ಇವತ್ತು 58 ಜನರು ಗೆದ್ದು ಬಂದಿದ್ದೇವೆ. ಆ ಕಾರಣಕ್ಕಾಗಿಯೇ, ಇಲ್ಲಿ ಪ್ರಶ್ನೆ ಇರುವುದು ನಾವು ಒಬ್ಬರೇ ಹೋರಾಟ ಮಾಡಿದ್ದೇವೆ ಎನ್ನುವುದಕ್ಕಿಂತಲೂ, ನಾವೆಲ್ಲರೂ ಹೋರಾಟ ಮಾಡಿದ್ದೇವೆ. ಅನ್ಯಾಯದ ವಿರುದ್ಧ ಹೋರಾಟ ಮಾಡಿರುವುದರಿಂದ ಎಲ್ಲಾ ಪಕ್ಷಗಳಿಂದ ಗೆದ್ದು ಬಂದಿರುವಂತಹವರು ಮತ್ತು ಸೋತವರೂ ಕೂಡ ಸಾರ್ವತ್ರಿಕವಾಗಿ ಮತ್ತು ಒಂದು ಗೌರವದ ಸ್ಥಾನವನ್ನೂ ಕೂಡ ಸಾರ್ವಜನಿಕ ಜೀವನದಲ್ಲಿಟ್ಟುಕೊಂಡಿದ್ದಾರೆ. ಸೋತವರು ಎಂದಾಕ್ಷಣ ಅವರು ಬಹಳ ಅಸಮರ್ಥರಿದ್ದರು, ಆಯೋಗ್ಯರು ಎನ್ನುವಂತಹ ಪ್ರಶ್ನೆಯಲ್ಲ. ಅಲ್ಲಿ ಗೆಲ್ಲುವ ಮತ್ತು ಸೋಲುವ ಬಗ್ಗೆ ನಿರ್ಣಯವಾಗುವುದು ಅನೇಕ ವಿಚಾರಗಳ ಮೇಲೆ ಅವಲಂಬಿತವಾಗಿರುತ್ತದೆ. ಅನೇಕ ಒಳ್ಳೆಯ ಜನಗಳು ಸೋತಿದ್ದಾರೆ,

ಅನೇಕ ಕೆಟ್ಟ ಜನಗಳು ಗೆದ್ದು ಬಂದಿದ್ದಾರೆ. ಅದೇ ಒಂದು ಮಾಪನ ವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ನಾವು ಮುಖ್ಯವಾಗಿ ಯೋಚನೆ ಮಾಡಬೇಕಾಗಿರುವುದು ನಾವು ನಮ್ಮ ಮಾರ್ಗಸೂಚಿ ಪ್ರಕಾರವಾಗಿ ಹೋದರೆ ಅನೇಕ ಕೆಲಸಗಳು ಆಗುತ್ತವೆ. ಆ ಕಾರಣಕ್ಕಾಗಿಯೇ ನಾವು ಇಲ್ಲಿ ಅನೇಕ ವಿಚಾರಗಳನ್ನು ಕೂಡ ನಾಳೆ ನಮ್ಮ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡುತ್ತೇವೆ. ಈಗ ಆಗಿರುವಂತಹ ಒಂದು ಪರ್ಯಾಯವಾದಂತಹ ವ್ಯವಸ್ಥೆ ಗ್ರಾಮ ಪಂಚಾಯಿತಿಯ ಮೂಲಕವಾಗಿ ಅಕ್ಕಿಯನ್ನು ವಿತರಣೆ ಮಾಡುವುದು, ಅಕ್ಕಿಯನ್ನು ಎತ್ತುವಳಿ ಮಾಡುವುದು, ಕಾಮಗಾರಿಗಳನ್ನು ಆಯಾಯ ಇಲಾಖೆಯವರು ನಿರ್ವಹಿಸುವಂಥದ್ದು. ಇದರಲ್ಲಿ ಲ್ಯಾಂಡ್ ಆರ್ಮಿ ಭೂಸೇನಾ ನಿಗಮವಿದೆ. ಅವರು ಈಗ ಕೆಲಸವನ್ನು ಮಾಡುತ್ತಿದ್ದಾರೆ. ನಾನು ಸಂಪೂರ್ಣವಾಗಿ ಸ್ಥಗಿತಗೊಂಡಿದೆ ಎಂಬ ಮಾತನ್ನು ಉತ್ತರದಲ್ಲಿ ಏತಕ್ಕಾಗಿ ಹೇಳಲಿಲ್ಲವೆಂದರೆ ಕೆಲವು ಕಡೆ ಭೂಸೇನಾ ನಿಗಮಕ್ಕೆ ಕೊಟ್ಟಿರುವಂತಹ ಕೆಲಸವನ್ನು ಅವರು ಇಂಜಿನಿಯರಿಂಗ್ ಸಂಘದಲ್ಲಿ ಸದಸ್ಯರಲ್ಲ, ಆ ಕಾರಣಕ್ಕಾಗಿ ಅವರು ನಿರ್ವಹಿಸುತ್ತಿದ್ದಾರೆ. ಯಾರ್ಯಾರು ಪ್ರತ್ಯೇಕವಾದಂತಹ ಇಲಾಖೆಗಳಲ್ಲಿ ತಮ್ಮದೆ ಆದಂತಹ ಇಂಜಿನಿಯರಿಂಗ್ ವಿಂಗ್‌ಗಳು ಏನಿದೆ, ಅಲ್ಲಿ ಕೆಲವರು ಕೆಲಸವನ್ನು ನಿರ್ವಹಿಸಿದ್ದಾರೆ. ಇದರ ಜೊತೆಗೆ ಜಲಸಂರಕ್ಷಣೆಯ ಕಾರ್ಯಕ್ರಮ ಹೇಗಿದೆ ಎಂದರೆ ಆ ಕೃಷಿಕನಿಗೆ, ಆ ಭೂಮಿಯ ಮಾಲೀಕನಿಗೆ ಅಲ್ಲಿ ಕೃಷಿಯ ಹೊಂಡವನ್ನು ತಯಾರು ಮಾಡತಕ್ಕಂತಹ ಜಲಸಂರಕ್ಷಣೆಯನ್ನು ಮಾಡುವಂತಹ ಕೆಲಸಕ್ಕೆ ಮಳೆ ಕೊಯಿಲು ಮಾಡಿಕೊಳ್ಳುವಂತಹ ಕಾರ್ಯಕ್ರಮಗಳಿಗೆ ಆತನಿಗೆ 12 ಚೀಲ, 10 ಕ್ವಿಂಟಾಲ್ 15 ಕ್ವಿಂಟಾಲ್ ವರೆವಿಗೂ ಆತನಿಗೆ ಅಕ್ಕಿಯನ್ನು ಕೊಡುತ್ತಾರೆ. ಆ ಕೆಲಸಗಳು ನಡೆದಿದೆ. ಆ ಕೆಲಸದಲ್ಲಿಯೂ ದುರುಪಯೋಗವಾಗಿರುವುದು 1 ಅಥವಾ 2 ಕ್ವಿಂಟಾಲ್ ಇರಬಹುದು. ಹಳ್ಳಿಯಿಂದ ಬಂದಿರುವ ನಮಗೆಲ್ಲರಿಗೂ ಇದರ ಬಗ್ಗೆ ಅನುಭವವಿದೆ, ನಾವು ರಾಶಿ ಕಾಯಲಿಕ್ಕೆ ದೊಡ್ಡ ಮಕ್ಕಳನ್ನು ಕಳುಹಿಸುತ್ತೇವೆ. ಅವನಿಗೆ ಬೇರೆಯಾದಂತಹ ಖರ್ಚು ವೆಚ್ಚಗಳಿರುತ್ತವೆ, ಅದನ್ನು ತಂದೆತಾಯಿಗಳು ಕೊಡುವುದಿಲ್ಲ. ಗೊತ್ತಿಲ್ಲದೆ ಒಂದು ಚೀಲ ಅಕ್ಕಿಯನ್ನು ಮಾರಿಕೊಂಡುಬಿಡುತ್ತೇವೆ. ಹತ್ತಿಯನ್ನು ನಮ್ಮ ಕಡೆ ಎಲ್ಲರೂ ತೂಕ ಮಾಡಿಕೊಂಡು ತೆಗೆದುಕೊಂಡು ಬರುತ್ತಿರುತ್ತಾರೆ. ಮನೆಯಲ್ಲಿ ಸೊಸೆಯಂದಿರಿಗೆ ಬಹಳ ಮಟ್ಟಿಗೆ ಅವರಿಗೆ ಸ್ವಾತಂತ್ರ ಇರುವುದಿಲ್ಲ. ಅವರೂ ಕೂಡ ಟೀ ಕಾಫಿ ಏನಾದರೂ ತಿನ್ನಬೇಕೆಂದು ಅನಿಸಿದಾಗ ಹೋಟೆಲ್‌ಗಳಿಗೆ ಕಿರಾಣಿ ಅಂಗಡಿಗಳಿಗೆ ಅಕ್ಕಿಯನ್ನು ಕಳ್ಳತನದಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡುತ್ತೇವೆ. ಅದನ್ನು ನೂರಾರು ಕ್ವಿಂಟಾಲ್ ಅಕ್ಕಿಯನ್ನು, ಮಾರಿಕೊಂಡು ಹೋಗಿ ಆನಂತರ ಅಂಗಡಿಯನ್ನು ಅದನ್ನು ಮಾರುತ್ತಾನೆ. ಇದು ಎಲ್ಲಾ ಕಡೆಗಳಲ್ಲೂ ನಡೆದಿರುವಂತಹ ವಿಚಾರವಾಗಿದೆ.

**ಛೇರ್ಮನ್ :** ಇದು ವಾತವಾಂಶ.

**ಶ್ರೀ ಎಂ.ಪಿ. ಪ್ರಕಾಶ್ :** ಅಲ್ಲಿ ಇಲ್ಲಿ ಆಗಿರುವಂತಹ ಪ್ರಸಂಗಗಳಲ್ಲ. ಈ ವಿಚಾರದಲ್ಲಿ...

**ಶ್ರೀ ಎಸ್.ಎಸ್. ಪಾಟೀಲ್ :** ಸೊಸೆ ಅಕ್ಕಿಯನ್ನು ಮಾರಿಕೊಳ್ಳುತ್ತಾರೆಂದು ಹೇಳಿದ್ದೀರಿ.

**ಶ್ರೀ ಎಂ.ಪಿ. ಪ್ರಕಾಶ್ :** ಸೊಸೆ ಬಹಳ ಪ್ರಬಲವಾಗಿದ್ದರೆ ಅತ್ತೆ ಕಳವು ಮಾಡುತ್ತಾಳೆ. ಅತ್ತೆ ಬಹಳ ಪ್ರಬಲವಾಗಿದ್ದರೆ ಸೊಸೆ ತೆಗೆದುಕೊಂಡು ಹೋಗುತ್ತಾಳೆ. ನಮ್ಮ ಬಯಲುಸೀಮೆ ಪ್ರದೇಶದಲ್ಲಿ ಪ್ರತಿಯೊಂದು ಗ್ರಾಮೀಣ ಪ್ರದೇಶದ ಚಹಾ ಹೋಟೆಲ್‌ಗಳಲ್ಲಿ ಹತ್ತಿಯ ಸೀಸನ್ ಮುಗಿದಾಗ ಅವನ ಹತ್ತಿರ ಕನಿಷ್ಠ 50 ರಿಂದ 100 ಕ್ವಿಂಟಾಲ್ ಹತ್ತಿ ಇರುತ್ತದೆ. ಅವನೇನು ಭಿತ್ತಿರುವುದಿಲ್ಲ, ಬೆಳೆದಿರುವುದಿಲ್ಲ, ಎಲ್ಲಿ ಹೋಗಿ ಖರೀದಿ ಮಾಡಿರುವುದಿಲ್ಲ. ಅವೆಲ್ಲವೂ ಈ ರೀತಿಯಾಗಿ ಬಂದಿರುತ್ತದೆ. ಇದು ಎಲ್ಲರಿಗೂ ಗೊತ್ತಿರುವಂತಹ ವಿಷಯಗಳು. ಇದನ್ನು ಸಂಪೂರ್ಣವಾಗಿ ಬಗೆ ಹರಿಸುತ್ತೇವೆ ಇಲ್ಲಿಯವರೆವಿಗೆ ಆಗಿರುವಂತಹ ನಿರಪರಾಧಿಗಳಾಗಿರುವಂತಹ ಅಧಿಕಾರಿಗಳು ಯಾರಾದರೂ ಬಂಧನದಲ್ಲಿದ್ದು ಕಷ್ಟವನ್ನು ಅನುಭವಿಸಿದ್ದರೆ ಅವರ ಪರವಾಗಿ ನಮಗೆ ಅಸಮಧಾನವಿದೆ. ಅದು ಆಗಬಾರದು ಎಂದು ಇದೆ, ಯಾರು ಈ ಕೆಲಸವನ್ನು ಮಾಡಿಸಿದರು, ಅವರುಗಳ್ಯಾರೂ ಒಳಗಡೆ ಹೋಗಲಿಲ್ಲವಲ್ಲಾ ಎಂಬ ಒಂದು ಅಸಮಧಾನವಿದೆ. ಆದರೆ ಇಲ್ಲಿ ಬಂದಿರುವಂತಹ ಪ್ರಶ್ನೆ ಏನೆಂದರೆ, ಒಬ್ಬ ಕಾನೂನಿನ ಪ್ರಕಾರ ಅವರು ಕೆಲಸವನ್ನು ನಿರ್ವಹಿಸಬೇಕಾಗಿತ್ತು, ಇನ್ನು ಮುಂದೆ ಈ ಸದನದ ಮೂಲಕವಾಗಿ ನಾನು ಎಲ್ಲಾ ಅಧಿಕಾರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾರೇ ಈ ವಿಚಾರದಲ್ಲಿ ಹೇಳಿದರೂ ಕೂಡ ನಿಮ್ಮ ಮಾರ್ಗಸೂಚಿ ಏನು ಬಂದಿರುತ್ತದೆ, ಆ ಮಾರ್ಗಸೂಚಿಯ ಪ್ರಕಾರವಾಗಿ ಕಾಮಗಾರಿಯನ್ನು ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ನೀವು ಬೇರೆ ತರಹದಲ್ಲಿ ವರ್ತಿಸಬೇಡಿ. ಆಗ ಕೆಲಸ ನಿಧಾನವಾಯಿತು. ಆಗಲಿ, ಆ ಕೆಲಸದಲ್ಲಿ ಕಟ್ಟಡದ ಕೆಲಸವಾಗುವುದಿಲ್ಲ ಆಗದೇ ಇರಲಿ. ಏನು ಮಾರ್ಗಸೂಚಿಯನ್ನು ನಾವು ಕೊಟ್ಟಿರುತ್ತೇವೆ, ಆ ಪ್ರಕಾರವಾಗಿ ಕೆಲಸ ಮಾಡುವಂಥದ್ದು ಆಗಬೇಕು. ಇದು ಹೇಗಾಗಿದೆ ಎಂದರೆ, ವಿಷವರ್ತುಲ ಮಾನ್ಯ ಅಧ್ಯಕ್ಷರೆ, ಶಾಸಕರು ಹೇಳಿದಂತಹ ಅಧಿಕಾರಿಗಳನ್ನು ಅಲ್ಲಿಗೆ ಹಾಕಬೇಕು. ಆ ಸಂದರ್ಭ ಇಲ್ಲದೇ ಇದ್ದರೆ ಅವರು ಬೇರೆ ಕಡೆಗೆ ಹೋಗುತ್ತಾರೆ. ನಾನು ಇವತ್ತು ನಮ್ಮ ಶಾಸಕರಿಗೆ ಇನ್ನೊಬ್ಬ ಶಾಸಕರಿಗೆ ಹೇಳುವಂತಹದ್ದು ಅಲ್ಲ, ಇದು ಎಲ್ಲರಿಗೂ ಸಂಬಂಧಪಟ್ಟಿದ್ದಾಗಿರುತ್ತದೆ. ಎಲ್ಲಾ ಪಕ್ಷದವರಿಗೂ ಅನ್ವಯಿಸುತ್ತದೆ, ಇಲ್ಲಿ ನಮ್ಮ ಮುಂದೆ ಬಂದಿರತಕ್ಕಂತಹ ಇಂತಿಂಥ ಅಧಿಕಾರಿಗಳನ್ನೇ ಹಾಕಿಕೊಡಬೇಕು, ಹೇಳಿ ಎಲ್ಲಾ ಪಕ್ಷದವರು ನಮಗೆ ಮನವಿಯನ್ನು ಕೊಟ್ಟಿರುತ್ತಾರೆ. ಅದು ನ್ಯಾಯವಾದದ್ದೂ ಕೂಡ, ಆದರೆ ಇಂತಹ ಸಂದರ್ಭವಿದ್ದಾಗ ಅಧಿಕಾರಿಯ ಮೂಲಾಜಿಗೆ ಒಳಗಾಗುತ್ತಾನೆ, ನಮ್ಮಂತಹ ಮಂತ್ರಿಗಳನ್ನು, ಶಾಸಕರುಗಳನ್ನು ಅಥವಾ ನಮ್ಮಂತಹ ಪ್ರಭಾವಿ ಅಥವಾ ಬೇರೆ

ಪಕ್ಷದ ಹಿರಿಯರನ್ನು ಹಿಡಿದುಕೊಳ್ಳದೆ ಇದ್ದರೆ ನನಗೆ ವರ್ಗಾವಣೆಯಾಗುವುದಿಲ್ಲ ಎಂದೂ ಹೇಳಿ ಆತನು ಭಾವಿಸಿ
ಕೊಂಡಿರುತ್ತಾನೆ.

ಆತ ಆ ಮುಲಾಜಿನಲ್ಲಿ ಬಿದ್ದಾಗ ಇವರು ಹೇಳಿದಂಥ ಮಾರ್ಗಸೂಚಿಗೆ ವಿರುದ್ಧವಾಗಿರತಕ್ಕಂಥ ಕಾಮಗಾರಿಗಳನ್ನು ಅನಿವಾರ್ಯವಾಗಿ ತೆಗೆದುಕೊಳ್ಳುತ್ತಾನೆ. ಇನ್ನು ಮೇಲೆ ಈ ಸದನದ ಮೂಲಕ ರಕ್ಷಣೆಯನ್ನು ಕೊಡುತ್ತೇವೆ. ನಿರಪರಾಧಿಯಾದಂಥ ಯಾವುದೇ ಅಧಿಕಾರಿ ಯಾವುದೇ ಕಷ್ಟವನ್ನು ಆತ ಅನುಭವಿಸಬೇಕಾದಂಥ ಪ್ರಮೇಯ ಇಲ್ಲ, ನಾವೆಲ್ಲರೂ ಒಕ್ಕೊರಲಿನಿಂದ ಒಂದು ನಿರ್ಧಾರಕ್ಕೆ ಬರೋಣ. ಮಾರ್ಗಸೂಚಿಯಲ್ಲಿ ಏನು ಹೇಳುತ್ತಾರೆ, ಅದರ ಪ್ರಕಾರ ಉಳಿದಿರತಕ್ಕಂಥ 1.71 ಲಕ್ಷ ಅಕ್ಕಿ ಏನಿದೆ, ಅದನ್ನು ಖರ್ಚು ಮಾಡತಕ್ಕಂಥಾದ್ದು ಆಗಬೇಕು.

**ಶ್ರೀ ಹಂಪನಗೌಡ ಬಾದರ್ಲಿ :** ಮಹಾರಾಷ್ಟ್ರದಲ್ಲಿ, ಆಂಧ್ರದಲ್ಲಿ ಯಾವ ರೀತಿ ಮಾರ್ಗಸೂಚಿಯನ್ನು ಮಾಡಿದ್ದಾರೆ ಆ ತರಹ ಇಲ್ಲಿಯೂ ಮಾಡಿ.

**ಶ್ರೀ ಎಂ.ಪಿ. ಪ್ರಕಾಶ್ :** ನಾನು ಹೇಳುತ್ತೇನೆ. ಆಂಧ್ರದಲ್ಲಿ, ಮಹಾರಾಷ್ಟ್ರದಲ್ಲಿ...

**ಗೊಂದಲ**

**ಶ್ರೀ ಸಿ.ಟಿ. ರವಿ :** ಕದ್ದವರಿಗೆ ಏನು ಶಿಕ್ಷೆ?

**ಶ್ರೀ ಎಂ.ಪಿ. ಪ್ರಕಾಶ್ :** ಸನ್ಮಾನ್ಯ ಅಧ್ಯಕ್ಷರೇ, ಮಾರ್ಗಸೂಚಿ ಹೇಗಿರುತ್ತದೆ ಆ ಪ್ರಕಾರ ಹೋಗಬೇಕಾಗುತ್ತದೆ. ಇದರಲ್ಲಿ ಆಂಧ್ರದಲ್ಲಿ ಏನಾಯಿತು, ಮಹಾರಾಷ್ಟ್ರದಲ್ಲಿ ಏನಾಯಿತು...

**ಗೊಂದಲ**

**ಶ್ರೀ ಎಸ್.ಎಸ್. ಪಾಟೀಲ್ :** ನಮ್ಮ ಕಡೆ ಏನೂ ಮಾಡಿಲ್ಲ. ಎಲ್ಲಾ ಬರೋಬರಿ ಇದರ ಕೆಲಸ ಆಗಿದೆ. ಅಧಿಕಾರಿಗಳು ಅಡ್ಜಸ್ಟ್ ಮಾಡಲಿಕ್ಕೆ ಹತ್ತಿದ್ದಾರೆ. ಏನೂ ಆಗುವುದಿಲ್ಲ ಎಂದರೆ ಏಕೆ ಆಗುವುದಿಲ್ಲ? ಈಗ ನಮ್ಮಲ್ಲಿ ಎಷ್ಟೊಂದು ಕೆಲಸ ಮಾಡಿದ್ದೇವೆ ಇವರು ಅದೇನು ಉಳಿಸಿಕೊಂಡಿದ್ದಾರೆ, ಅದನ್ನು ಕೆಲವರು ಮಾರಿಕೊಂಡಿದ್ದಾರೆ. ಅಂತಹವರು ಸಿಗುತ್ತಾರೆ, ಅವರು ತಪ್ಪಿಸಿಕೊಳ್ಳಲಿಕ್ಕೆ ಬರುವುದಿಲ್ಲ.

**ಛೇರ್ಮನ್ :** ನೀವು ಮುಂದುವರೆಸಿ.

**ಶ್ರೀ ಎಂ.ಪಿ. ಪ್ರಕಾಶ್ :** ಈಗ ಸನ್ಮಾನ್ಯ ಅಧ್ಯಕ್ಷರೇ, ಆಂಧ್ರದಲ್ಲಿ, ಮಹಾರಾಷ್ಟ್ರದಲ್ಲಿ ಏನಾಗಿದೆ ಎಂದು ಕೇಳಿದರು. ಆಂಧ್ರದಲ್ಲಿ ಮಹಾರಾಷ್ಟ್ರದಲ್ಲಿ ಆ ತರಹದ ದೂರನ್ನು ಯಾರೂ ಕೊಡಲಿಲ್ಲ. ಈ ದೂರನ್ನು ಯಾರೂ ಕೊಟ್ಟಿಲ್ಲವಾದ್ದರಿಂದ ಅದೊಂದು ವಿಷಯ ಆಗದೇ ಇರತಕ್ಕಂಥ ಕಾರಣ ಇರುವುದರಿಂದ ಅದು ಕಣ್ಮುಚ್ಚಿಕೊಂಡು ಹೊರಟುಹೋಗಿದೆ. ಕೇಂದ್ರ ಸರ್ಕಾರ ಇಡೀ ದೇಶಕ್ಕೆ ಅನ್ವಯಿಸುವಂಥ ಮಾರ್ಗಸೂಚಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಈಗ ಇರುವುದರಲ್ಲಿಯೇ ನಾವು ಈ ಬಾರಿಯಿಂದ ಮುಖ್ಯವಾಗಿ ಅವರಿಗೆ

ಉಂಡಬೇಕಾಗಿರತಕ್ಕಂಥ ದಿನಗೂಲಿಯಲ್ಲಿ ಐದು ಕೆ.ಜಿ. ಅಕ್ಕಿ ಬದಲು ಆರು ಕೆ.ಜಿ. ಅಕ್ಕಿಯನ್ನು ಕೊಡತಕ್ಕಂಥ ನಿರ್ಧಾರ ಮಾಡುತ್ತೇವೆ. 15 ರೂಪಾಯಿ ಬದಲು 20 ರೂಪಾಯಿ ಕೊಡಬೇಕು ಅಂತ ನಿರ್ಧಾರ ಮಾಡುತ್ತೇವೆ. ನೀವು ಹೇಳಿದಂತೆ ಆತಂಕಕ್ಕೆ ಒಳಪಡಬೇಕಾದಂಥ ಕಾರಣ ಇಲ್ಲ. ಯಾವ ಇಲಾಖೆಯಲ್ಲಿ ಹಣಕಾಸು ಇರುತ್ತದೆ ಅದನ್ನು ಉಪಯೋಗಿಸಿಕೊಳ್ಳಬಹುದು. ಈಗ ನೀವು ಪ್ರಾಥಮಿಕ ಶಾಲೆಯನ್ನು ಕಟ್ಟಬೇಕು ಅಂತ ಬಯಸಿದ್ದೀರಿ ಅಂತ ತಿಳಿದುಕೊಳ್ಳೋಣ. ಪ್ರಾಥಮಿಕ ಶಾಲೆಯನ್ನು ಕಟ್ಟಲಿಕ್ಕೆ ಇರತಕ್ಕಂಥ ಮೆಟೀರಿಯಲ್ ಕಾಂಪೋನೆಂಟ್‌ಗೆ ಆ ಇಲಾಖೆಯಲ್ಲಿ ಎಲ್ಲಿ ಹಣ ಇರುತ್ತದೆ, ಅಲ್ಲಿ ಈ ಅಕ್ಕಿಯನ್ನು ನೀವು ಉಪಯೋಗಿಸಿಕೊಳ್ಳುವುದಕ್ಕೆ ಬರುತ್ತದೆ. ಆದ್ದರಿಂದ ನೀವು ಆ ಲೇಬರ್ ಕಾಂಪೊನೆಂಟ್‌ಗೆ ಬೇಕಾಗಿರತಕ್ಕಂಥ ಹಣವನ್ನು ಇದರಿಂದ ಉಪಯೋಗಿಸಿಕೊಂಡು ಮಾಡಬಹುದು. ಈಗ ನಿಮ್ಮಲ್ಲಿ ಒಂದು ಕ್ರೀಡಾಂಗಣವನ್ನು ಕಟ್ಟಬೇಕು ಅಂತ ತಿಳಿದುಕೊಳ್ಳಿ. ಕ್ರೀಡಾಂಗಣ ಸುತ್ತ ಇರತಕ್ಕಂಥ ಒಡ್ಡನ್ನು ಹಾಕಬೇಕಾಗಿದ್ದರೆ, ಅಲ್ಲಿ ಮಣ್ಣನ್ನು ತರಬೇಕಾಗಿರುತ್ತದೆ, ಆಯ್ಕೆ ಮಾಡಿಕೊಂಡು ಬರಬೇಕಾಗುತ್ತದೆ. ಅದೆಲ್ಲಾ ಮಾಡಿ ಅದನ್ನು ನಿರ್ಮಾಣ ಮಾಡಬೇಕಾಗುತ್ತದೆ. ಅಲ್ಲಿ ನಿರ್ಮಾಣ ಮಾಡುವಾಗ ಹೆಚ್ಚು ಜನರಿಗೆ ಉದ್ಯೋಗ ಕೊಡಲಿಕ್ಕೆ ಸಾಧ್ಯತೆ ಆಗುತ್ತದೆ. ಆ ಮಣ್ಣಿನ ಸುತ್ತ ಇರತಕ್ಕಂಥ ಗೋಡೆಯನ್ನು ಕಟ್ಟಿ ಅಲ್ಲಿ ಗ್ಯಾಲರಿಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಕಲ್ಲು ಚಪ್ಪಡಿಗಳನ್ನು ಏನು ಖರೀದಿ ಮಾಡುತ್ತೇವೆ, ಅದನ್ನು ಮೆಟೀರಿಯಲ್ ಕಾಂಪೋನೆಂಟ್‌ಗೆ ಯುವಜನ ಇಲಾಖೆಯಿಂದ ಈ ಹಣವನ್ನು ಹೊಂದಿಸಿರಿ. ಅಥವಾ ನಿಮ್ಮ ಸ್ಟಾಂಪ್ ಡ್ಯೂಟಿಯಿಂದ ಅದನ್ನು ಒದಗಿಸಿರಿ ಅಥವಾ ಅಡ್ಮಿನಿಸ್ಟ್ರೇಟಿವ್ ಸೇವಿಂಗ್ಸ್‌ನಲ್ಲಿ ಬಂದಿರತಕ್ಕಂಥಾದ್ದಕ್ಕೆ ಉಪಯೋಗಿಸಿರಿ. ಈ ಅಕ್ಕಿಯನ್ನು ಮಾರಿರತಕ್ಕಂಥ ಗನ್ನಿಬ್ಯಾಗ್ ಅಕೌಂಟ್‌ನಿಂದ ಅದನ್ನು ಉಪಯೋಗಿಸಿರಿ. ಇಂತಹ ಅನೇಕ ಮಾರ್ಗೋಪಾಯಗಳು ಇರುತ್ತವೆ. ಈ ಮಾರ್ಗೋಪಾಯಗಳ ಮೂಲಕವಾಗಿ ಈ ಕೆಲಸವನ್ನು ಮಾಡಲಿಕ್ಕೆ ಆಗುತ್ತದೆ. ಇದೆಲ್ಲಾ ಇಲ್ಲಿ ಚರ್ಚೆ ಮಾಡಬೇಕಾದಂಥ ಅಗತ್ಯ ಇಲ್ಲ. ಇದು ಸೂಕ್ಷ್ಮತೆಗೆ ಸಂಬಂಧಪಟ್ಟಂತೆ ಇರುವುದರಿಂದ ಮುಂದೆ ನಾವು ಇಪ್ಪತ್ತು ರೂಪಾಯಿಗಳನ್ನು ಕೂಲಿಗಾರರಿಗೆ ನಗದಾಗಿ ಕೊಡುತ್ತೇವೆ ಮತ್ತು ಆರು ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆ. ಇದರಿಂದ ನಾವು ಮಾಡಲ್ ಎಂಪ್ಲಾಯರ್ಸ್ ಆಗಿರುತ್ತೇವೆ. ಏಕೆಂದರೆ ನಮ್ಮ ಅರಣ್ಯ ಇಲಾಖೆಯಲ್ಲಿ 57 ರೂ.ಗಿಂತ ಹೆಚ್ಚು ದುಡ್ಡನ್ನು ಕೊಡಬೇಕು ಎನ್ನತಕ್ಕಂಥ ನೀತಿ ಇರುವುದರಿಂದ ನಮ್ಮಲ್ಲಿ ದಿನಗೂಲಿ 46 ರೂಪಾಯಿ 25 ಪೈಸೆ ಕೊಡಲಿಕ್ಕೆ ಆಗುವುದಿಲ್ಲ ಎನ್ನುವ ಕಾರಣಕ್ಕಾಗಿಯೇ 20 ರೂಪಾಯಿ ನಗದು ಮತ್ತು 6 ಕೆ.ಜಿ. ಅಕ್ಕಿ ಇಷ್ಟನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಮಾಡುತ್ತೇವೆ. ನಾಳೆ ಸಚಿವ

ಸಂಪುಟ ಸಭೆಯಲ್ಲಿ ಇದನ್ನು ನಾವು ಚರ್ಚೆ ಮಾಡುತ್ತೇವೆ. ನಾಳೆ ರಾತ್ರಿ ಅಥವಾ ನಾಡಿದ್ದು ಈ ಇಂಜಿನಿಯರ್ಸ್ ಅಸೋಸಿಯೇಶನ್ಸ್‌ನವರು ಯಾರಿದ್ದಾರೆ, ಅಲ್ಲಿ ಇರತಕ್ಕಂಥ ಎಲ್ಲಾ ಪದಾಧಿಕಾರಿಗಳನ್ನು ಕರೆದು ನೀವು ಕೆಲಸವನ್ನು ಪ್ರಾರಂಭ ಮಾಡಿಯೇ ತೀರಬೇಕು. ಈ ತರಹ ನಿಮ್ಮ ಮೇಲೆ ಆಪಾದನೆ ಬರತಕ್ಕಂಥ ಪ್ರಶ್ನೆ ಇಲ್ಲ. ಇದು ನಿಮ್ಮಲ್ಲಿಯ ನೈತಿಕತೆ ಪ್ರಶ್ನೆಯ ವಿಚಾರ ಅಲ್ಲ. ನೈತಿಕತೆಗಿಂತ ಹೆಚ್ಚಾಗಿ ನಿಮ್ಮಲ್ಲಿ ಬಹಳ ಮುಖ್ಯವಾಗಿ ಇರತಕ್ಕಂಥಾದ್ದು ಕಾನೂನಿನ ಪ್ರಕಾರ ಕೆಲಸ ನಡೆದುಕೊಂಡು ಹೋಗಬೇಕು ಅನ್ನುವಂಥಾದ್ದನ್ನು ಹೇಳಿ ಮಾಡಬೇಕಾಗುತ್ತದೆ. ನೋಡಿ, ಮಾನ್ಯ ರಮೇಶ್ ಕುಮಾರ್ ಅವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಇವರಲ್ಲಿ ಎಫ್.ಸಿ.ಐ. ಗೋಡೌನ್‌ನಿಂದ ನೇರವಾಗಿ ಹೋಗಿರತಕ್ಕಂಥದ್ದು ಇದೆ. ಪಿ.ಡಿ.ಎಸ್. ನಿಂದ ಹೊರಗಿರತಕ್ಕಂಥದ್ದು ಇದೆ, ಮುಕ್ತ ಮಾರುಕಟ್ಟೆಯಲ್ಲಿ ಖರೀದಿ ಮಾಡಿ ಹೋಗಿರತಕ್ಕಂಥಾದ್ದು ಕೂಡ ಇದೆ. ಪಿಡಿಎಸ್ ನಿಂದ ಹೊರಗಿರತಕ್ಕಂಥದ್ದು ಇದೆ. ಮುಕ್ತ ಮಾರುಕಟ್ಟೆಯಲ್ಲಿ ಖರೀದಿ ಮಾಡಿ ಹೋಗಿರತಕ್ಕಂಥಾದ್ದು ಕೂಡ ಇದೆ. ಇದನ್ನು ಈಗ ಯಾವ್ಯಾವ ಪ್ರಕರಣಗಳು ಯಾವ್ಯಾವ ರೀತಿಯಲ್ಲಿ ಇವೆ ಎಂದು ನೋಡಲಿಕ್ಕೆ ಸಿ.ಒ.ಡಿ. ಎನ್‌ಕ್ವೈರಿಗೆ ಹಾಕಿರತಕ್ಕಂಥಾದ್ದು. ಈರ ನೋಡಿ, 2 ಲಕ್ಷ 47 ಸಾವಿರ 666 ಮಾನವ ತಾಸುಗಳ ಕೆಲಸ ಮಾಡತಕ್ಕಂಥ ಎಂಪ್ಲಾಯ್‌ಮೆಂಟ್ ಜನರೇಶನ್‌ಗೆ ಮಾಡಿರತಕ್ಕಂಥಾದ್ದರಲ್ಲಿ 73,108 ಸಿ.ಆರ್.ಎಫ್. ವರ್ಕ್ಸ್ ಇವೆ. ಅಂದರೆ ಬರಪರಿಹಾರ ಕೆಲಸದಿಂದ, ಕೆಲಾಮಿಟಿ ರಿಲೀಫ್ ಫಂಡ್‌ನಿಂದ ಮಾಡಿರತಕ್ಕಂಥಾದ್ದು. ಉಳಿದಿರತಕ್ಕಂಥ 1,74,558 ಕೆಲಸಗಳು ಬೇರೆ ಬೇರೆ ಇಲಾಖೆ ವತಿಯಿಂದ ತೆಗೆದುಕೊಂಡಂಥಾದ್ದು ಇದೆ. ಅಂದರೆ 1,74,558 ಕೆಲಸಕಾರ್ಯಗಳು ಆ ಇಲಾಖೆಯಲ್ಲಿ ಇರತಕ್ಕಂಥ ಹಣವನ್ನು ಇದರ ಜತೆಗೆ ಪೂರಕವಾಗಿ ಉಪಯೋಗಿಸಿಕೊಂಡು ಕೆಲಸ ಆಗಿದೆ. ಆದ್ದರಿಂದ ಇದರಲ್ಲಿಯೇ ಅನ್ಯಾಯವಾಗಿದೆಯೇ ಎಂದು ಹೇಳಿ ಅಥವಾ ಯಾವುಧರಲ್ಲಿ ಅನ್ಯಾಯವಾಗಿದೆ ಎನ್ನತಕ್ಕಂಥಾದ್ದನ್ನು ಸಿ.ಓ.ಡಿ. ಯವರು ತನಿಖೆ ಮಾಡುತಾರೆ. ಈಗ ನಮಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಆದೇಶ ಮಾಡಿದಂತೆ ನಾಲ್ಕು ಪ್ರೆಕರಣಗಳಿಗೆ ಸಂಬಂಧಪಟ್ಟಂತೆ ಮಾತ್ರ ಸಿ.ಒ.ಡಿ. ಯವರು ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ 59 ಪ್ರಕರಣಗಳು ಬೇರೆ ಬೇರೆ ಜಿಲ್ಲೆಗಳಲ್ಲಿ, ಬೇರೆ ಬೇರೆ ತಾಲ್ಲೂಕುಗಳಲ್ಲಿ ಪೊಲೀಸಿನವರು ತಮ್ಮದೇ ಆಗಿರತಕ್ಕಂಥ ರೀತಿಯಲ್ಲಿ ಅಲ್ಲಿ ದಾಖಲಾತಿಗಳನ್ನು ಮಾಡಿಕೊಂಡಿದ್ದಾರೆ. ಆ ದಾಖಲಾತಿಗಳ ಮೂಲಕವಾಗಿ ಆ ಪೊಲೀಸಿನವರು ಎನ್‌ಕ್ವೈರಿ ಮಾಡತಕ್ಕಂಥಾದ್ದು ಇದೆ. ಇಲ್ಲಿ ಎನ್‌ಕ್ವೈರಿ ಮಾಡಲಿಕ್ಕೆ ಏನು ವಹಿಸಿ ಕೊಟ್ಟಿದ್ದೇವೆ ಅದರಲ್ಲಿ ಈ ನಾಲ್ಕು ಪ್ರೆಕರಣಗಳಲ್ಲಿ ಅವರು ಕೆಲಸ ಮಾಡುತ್ತಿದ್ದಾರೆ. ಉಳಿದ ಕಡೆಗೆ ಇದು ಏನಾದರೂ ತಪ್ಪಾಗಿರತಕ್ಕಂಥ ಪ್ರಕರಣಗಳು ಇದ್ದರೆ ಅವರು ಮಾಡುತ್ತಾರೆ. ಈಗ ಏನು ಕೆಲಸ ಸ್ಥಗಿತಗೊಂಡಿರತಕ್ಕಂಥಾದ್ದಕ್ಕೆ ಇಂಜಿನಿಯರ್ ಅಸೋಸಿಯೇಶನ್‌ನ ಪದಾಧಿಕಾರಿಗಳನ್ನು ನಾಳೆ ತಪ್ಪಿದರೆ ನಾಡಿದ್ದು ಅವರನ್ನು ಕರೆಸಿ ಅವರ ಜತೆಯಲ್ಲಿ ಮಾತನಾಡಿ ಹೊಸ ಮಾರ್ಗಸೂಚಿಗಳನ್ನು ರೂಪಿಸಲಿಕ್ಕೆ ಸಚಿವ ಸಂಪುಟ ಸಭೆಯಲ್ಲಿ ಉಪಸಮಿತಿಯ ವರದಿಯನ್ನು ಚರ್ಚೆ ಮಾಡಿ ಅದರ ನಿರ್ಧಾರವನ್ನು ತೆಗೆದುಕೊಂಡು ಆ ಪ್ರಕಾರ ಕೆಲಸ ನಿರ್ವಹಿಸಬೇಕು ಅಂತ ಹೇಳಿ ನಾವು ಅವರಿಗೆ ಆದೇಶವನ್ನು ಕೊಡುತ್ತೇವೆ.

ಕೂಲಿಗಾಗಿ ಕಾಳಿನಲ್ಲಿ ದುರುಪಯೋಗ ಮಾಡಿಕೊಂಡಿರತಕ್ಕಂಥ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು. ಅವರಂತೆ ಇರತಕ್ಕಂಥ ರಾಜಕಾರಣಿಗಳು ಯಾರಿಗಾದರೂ ಶಿಕ್ಷೆ ಆಗಲಿಕ್ಕೆ ಸಾಧ್ಯತೆಗಳು ಇದ್ದರೆ ಆಗಬಹುದು. ಏಕೆಂದರೆ ಐ.ಪಿ.ಸಿ. ಸೆಕ್ಷನ್ 21ರ ಕೆಳಗೆ they are also government servants, if they really wanted to. ಆದರೆ ಯಾರಾದರೂ ಲಂಚದ ರೊಕ್ಕಕ್ಕೆ ರಸೀತಿ ಕೊಟ್ಟಿದ್ದಾರೋ ಏನೋ ನಮಗೆ ಗೊತ್ತಿಲ್ಲ. ಅಂತಾದ್ದು ಏನಾದರೂ ರಸೀತಿ ಕೊಟ್ಟಂಥವರು ಇದ್ದರೆ ಅದರ ಮೇಲೆಯೂ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಅದರು ತಮಗೂ ಗೊತ್ತಿರತಕ್ಕಂಥ ವಿಷಯ. ಆದ್ದರಿಂದ Section 21 of the IPC makes every legislator and a minister a government servant.

**ಶ್ರೀ ವಾಟಾಳ್ ನಾಗರಾಜ್** : ಆ ತರಹ ರಸೀತಿಯನ್ನು ನಿಮಗೆ, ಸರ್ಕಾರಕ್ಕೆ ಕೊಟ್ಟಿದ್ದಾರೆಯೇ?

**ಶ್ರೀ ಎಂ.ಪಿ. ಪ್ರಕಾಶ್** : ಅದನ್ನು ನೋಡಬೇಕು. ಏಕೆಂದರೆ ಯಾರಾದರೂ ದಡ್ಡತನದಿಂದ ಕೊಟ್ಟಿದ್ದಕ್ಕಿಂತ ಜಾಣತನದಿಂದ ಕೊಟ್ಟಂಥಾದ್ದೂ ಇರಬಹುದು. ಅದು ನನಗೆ ಗೊತ್ತಿಲ್ಲ. ಆ ಕಾರಣಕ್ಕೆ ಸನ್ಮಾನ್ಯ ಅಧ್ಯಕ್ಷರೇ, ಈ ದುರುಪಯೋಗ ಆಗಿರತಕ್ಕಂಥ ವಿಚಾರದಲ್ಲಿ ಏನೇನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಹೊಸ ಮಾರ್ಗಸೂಚಿಗಳನ್ನು ನಾವು ತಯಾರು ಮಾಡಿದ್ದೇವೆ. ನಾಳೆ ಸಚಿವ ಸಂಪುಟ ಸಭೆಯಲ್ಲಿ ಇದರ ಬಗ್ಗೆ ನಿರ್ಧಾರವಾಗಿ ಮಾರ್ಗಸೂಚಿಗಳನ್ನು ಕಳುಹಿಸಿ ಕೊಡುತ್ತೇವೆ. ಆ ಮಾರ್ಗಸೂಚಿಯ ಪ್ರಕಾರವಾಗಿ ನಮ್ಮ ಯಾವ ಶಾಸಕರೂ ಕೂಡ ಆತಂಕಕ್ಕೆ ಒಳಪಡಬೇಕಾದಂಥ ಕಾರಣ ಇಲ್ಲ ಮತ್ತು ಕೆಲಸ ಆಗುವುದಿಲ್ಲ ಎಂದು ಭಾವಿಸಬೇಕಾದ ಅಗತ್ಯ ಇಲ್ಲ. ನೀವು ಏನಾದರೂ ಒಳ್ಳೆಯ ಕೆಲಸವನ್ನು ಅಲ್ಲಿ ಕೈಗೊಳ್ಳಬೇಕು ಅಂತ ಇದ್ದಾಗ....

**ಶ್ರೀ ಬಿ.ಎ. ಜೀವಿಜಯ** : ನೀವು ಇಪ್ಪತ್ತು ರೂಪಾಯಿ ಸಂಬಳ ಮತ್ತು ಆರು ಕೆ.ಜಿ. ಅಕ್ಕಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಮಿನಿಮಮ್ ವೇಜಸ್‌ನಲ್ಲಿ ಡಿ.ಎ. ಸೇರಿ 75 ರೂಪಾಯಿ ಕೊಡಬೇಕೆಂದು ಇದೆ. ಹಾಗಾದರೆ ನಾವು ಯಾವ ರೀತಿ ಕೆಲಸಗಳನ್ನು ಮಾಡತಕ್ಕಂಥಾದ್ದು?

**ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ)** : ಮಾನ್ಯ ಅಧ್ಯಕ್ಷರೇ, ನಮ್ಮ ಮಲೆನಾಡು ಪ್ರದೇಶದಲ್ಲಿ ನಮ್ಮಲ್ಲಿ ಕಾಳು ಬೇಡ. ಕಾಮಗಾರಿ ಬೇಕು. ಮಲೆನಾಡು ಭಾಗದಲ್ಲಿ ನಾವೂ ಕೂಡ ಅಕ್ಕಿಯನ್ನು ಉಪಯೋಗ ಮಾಡುವುದಿಲ್ಲ. ಆದ್ದರಿಂದ ನಮಗೂ ಒಂದು ನೀತಿಯನ್ನು ಮಾಡಬೇಕಾಗುತ್ತದೆ ಎಂದು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಎಂ.ಪಿ. ಪ್ರಕಾಶ್** : ಈಗ ಮಾನ್ಯ ಶಾಸಕರು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದು ಕೇಂದ್ರ ಸರ್ಕಾರ ಬರಗಾಲದ ನಿರ್ವಹಣೆಗಾಗಿ ಅಕ್ಕಿಯನ್ನು ನಮಗೆ ಕೊಡತಕ್ಕಂಥ ಸಂದರ್ಭದಲ್ಲಿ ಈ ನಿಯಮಾವಳಿಯನ್ನು ಆ ಸರ್ಕಾರ ಮಾಡಿರತಕ್ಕಂಥಾದ್ದು. ಆ ನಿಯಮಾವಳಿಯನ್ನು ನೀವು ಬದಲಾಯಿಸಲಿಕ್ಕೆ ಆವತ್ತು ಪ್ರಯತ್ನ ಮಾಡಿದ್ದರೆ ಸಾಧ್ಯವಾಗುತ್ತಿತ್ತೋ ಏನೋ ಗೊತ್ತಿಲ್ಲ. ಆವತ್ತು ನೀವು ಎಂ.ಎಲ್.ಎ. ಆಗಿರಲಿಕ್ಕಿಲ್ಲ. ಆವತ್ತು ನೀವು ನಮ್ಮ ಪಕ್ಷದ ಮುಖಂಡರ

ಜತೆಗೆ ಮಾತನಾಡಬಹುದಾಗಿತ್ತು. ಈಗ ಆದರೂ ಕೂಡ ನಾವು ಅವರ ಜತೆಗೆ ಮಾತನಾಡುತ್ತೇವೆ. ಕೇಂದ್ರ ಸರ್ಕಾರ ತನ್ನ ಮಾರ್ಗಸೂಚಿಯಲ್ಲಿ, ಮಾನ್ಯ ಜೀವಿಜಯ ಅವರು ಹೇಳಿದಂತೆ ಅಲ್ಲಿ ಬೇರೆ ಬೇರೆ ಸ್ವಾತಂತ್ರ್ಯವನ್ನು ಮಾರ್ಗಸೂಚಿಯಲ್ಲಿ ಅವರು ನಮ್ಮ ಸರ್ಕಾರಕ್ಕೆ ಕೊಡಬೇಕು. ನಿಮ್ಮಲ್ಲಿರತಕ್ಕಂಥಾದ್ದರ ಸ್ವಾತಂತ್ರ್ಯವನ್ನು ಕೊಟ್ಟರೆ ಬಹುಮಟ್ಟಿನ ನಿಮ್ಮ ಆತಂಕಗಳನ್ನು ನಾವು ಬಗೆಹರಿಸಲಿಕ್ಕೆ ಸಾಧ್ಯತೆಯಾಗುತ್ತದೆ. ಈ ಸಂದರ್ಭಧಲ್ಲಿ ನಾನು ಇಲ್ಲಿ ಮಾನ್ಯ ಎಲ್ಲಾ ಶಾಸಕಮಿತ್ರರುಗಳಿಗೆ ಹೇಳುತ್ತೇನೆ. ಇದರಿಂದ ನೀವು ಯಾರೂ ಆತಂಕಕ್ಕೆ ಒಳಪಡಬೇಕಾದದ್ದು ಇಲ್ಲ. ನಾವು ಸರಿಯಾದ ರೀತಿಯಲ್ಲಿ ಮಾರ್ಗಸೂಚಿಗಳನ್ನು ರಚನೆ ಮಾಡುತ್ತೇವೆ. ವಿವಿಧ ಇಲಾಖೆಗಳಲ್ಲಿ ಈ ಹಣವನ್ನು ನಮ್ಮಲ್ಲಿ ಅದಕ್ಕಾಗಿ ತೆಗೆದಿಟ್ಟಿರತಕ್ಕಂಥ ಹಣದ ಜೊತೆಗೆ ಈ ಅಕ್ಕಿಯನ್ನೂ ಕೂಡ ಪೂರಕವಾದಂಥ ರೀತಿಯಲ್ಲಿ ಉಪಯೋಗಿಸಿಕೊಂಡು ನಮ್ಮ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಲಿಕ್ಕೆ ಸಾಧ್ಯತೆಯಾಗುತ್ತದೆ. ಆ ಸಂದರ್ಭಕ್ಕೆ ಇರತಕ್ಕಂಥ ಕಾರಣಕ್ಕಾಗಿಯೇ ಈಗ ಮಾನ್ಯ ರಾಮಸ್ವಾಮಿ ಮತ್ತು ಅನೇಕ ಸದಸ್ಯರುಗಳು ಕೊಟ್ಟಿರತಕ್ಕಂಥ ಸಲಹೆ-ಸೂಚನೆಗಳ ಹಿನ್ನಲೆಯಲ್ಲಿ ಈ ಒಂದು ಮಾರ್ಗಸೂಚಿ ಹೊರಗೆ ಬರುತ್ತದೆ. ಇದು ಬಹಳ ಸೂಕ್ಷ್ಮವಾಗಿರತಕ್ಕಂಥಾದ್ದು, ಇದು ಹೇಗಿದೆ ಎಂದರೆ ಇದೊಂದು Mystic poetry ಅಂತಾರಲ್ಲಾ, ಆ ತರಹದ ಒಂದು ಕವನ ಇದ್ದಂತೆ-ಇಂತಹ ಬದುಕುಗಳು. ಬಿಚ್ಚಿ ಹೇಳಬಾರದು, ಹೇಳದೆ ಇರಬಾರದು. ಆ ತರಹದ ಸೂಕ್ಷ್ಮತೆಗಳನ್ನು ಬೆಳೆಸಿಕೊಂಡರೆ ಪ್ರಾಯಶ: ಎಲ್ಲಾ ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿ ಮಾನ್ಯ ರಾಮಸ್ವಾಮಿ ಮತ್ತು ಅನೇಕ ಶಾಸಕರುಗಳು, ಆ ಕಡೆ ಮತ್ತು ಈ ಕಡೆ ಇರತಕ್ಕಂಥವರು ಕೊಟ್ಟಂತಹ ಸಲಹೆಗಳಿಗೆ ನಾನು ವಂದಿಸಿ ಸರ್ಕಾರ ಸೂಕ್ತವಾದ ಪ್ರತಿಕ್ರಿಯೆ ಮಾಡುತ್ತದೆ ಎಂದು ಭರವಸೆಯನ್ನು ಕೊಡುತ್ತೇನೆ.

**ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :** ಮಾನ್ಯ ಸಭಾಧ್ಯಕ್ಷರೇ, ಈ ಸದನದಲ್ಲಿ ಅಕ್ಕಿ ಪ್ರಕರಣ ಚರ್ಚೆಯಾಗಿದೆ, ಬಹಳ ಪ್ರಚಾರ ಸಿಕ್ಕಿತು. ಕಳೆದ ಸಾರಿ ಕೂಡ ನಾವು ಶಾಸಕರಾಗಿದ್ದೆವು. ವಿರೋಧ ಪಕ್ಷದ ನಾಯಕರು, ರಾಜಕಾರಣಿಗಳೂ ಸೇರಿದ್ದಾರೆ ಎಂದು ಹೇಳಿದರು. ರಾಜಕಾರಣಿಗಳೂ ಸೇರಿದ್ದಾರೆ ಎನ್ನುವ ವಿಚಾರ ಕೂಡ ಇಲ್ಲಿ ಪ್ರಸ್ತಾಪ ಆಯಿತು. ಆದರೆ, ಮಾರ್ಗಸೂಚಿ ಬರೀ ನಮ್ಮ ರಾಜ್ಯಕ್ಕೆ ಹೊರತು ಇತ್ತೇ ಇಲ್ಲವೇ ಮಹಾರಾಷ್ಟ್ರದಲ್ಲಿ ಮತ್ತು ಆಂಧ್ರದಲ್ಲಿ ಏನಾದರೂ ಆ ಮಾರ್ಗಸೂಚಿಯನ್ನು ಅನುಷ್ಠಾನಕ್ಕೆ ತಂದರಾ ಎನ್ನುವುದನ್ನು ಹಿಂದಿನ ಎನ್.ಡಿ.ಎ. ಸರ್ಕಾರ ಮಾರ್ಗಸೂಚಿಯನ್ನು ಆ ರಾಜ್ಯದ ಮೇಲೆ ಏಕೆ ಹೇರಲಿಲ್ಲ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇವತ್ತು ಏನಾಗಿದೆ ಎಂದು ಹೇಳಿದರೆ, ಭ್ರಷ್ಟಾಚಾರದಲ್ಲಿ ರಾಜಕಾರಣಿಗಳು ಒಳಗಾಗಿದ್ದರೆ, ಶಿಕ್ಷೆ ಆಗಲಿ. ಅದಕ್ಕೆ ನಾವು ರೆಡಿ ಇದ್ದೇವೆ. ಏಕೆಂದರೆ, ರಾಜಕಾರಣಿ ಕುಲ ಎಂದು ಹೇಳಿದ ತಕ್ಷಣ

ಪಕ್ಷಾತೀತವಾಗಿ ರಾಜಕಾರಣಿಗಳೆಲ್ಲರೂ ಸೇರುತ್ತಾರೆ. ಅದು ಬಿ.ಜೆ.ಪಿ. ಶಾಸಕರು ಇರಬಹುದು, ದಳದ ಶಾಸಕರು ಇರಬಹುದು, ಕಾಂಗ್ರೆಸ್ ಶಾಸಕರು ಇರಬಹುದು. ಪಕ್ಷೇತರರಿರ ಬಹುದು. ಆದರೆ, ಮಾರ್ಗಸೂಚಿಯನ್ನು ಅನುಸರಣೆಮಾಡಲಿಕ್ಕೆ ಇಲ್ಲವೇ ಮಾರ್ಗಸೂಚಿಯನ್ನು ಆಚರಣೆಗೆ ತರಲಿಕ್ಕೆ ನಮ್ಮಲ್ಲಿ ಏನಾಗಿದೆ ಎಂದು ಹೇಳಿದರೆ ಬಡತನದ ರೇಖೆಯುಲ್ಲಿರುವವರನ್ನು ನಾವು ಸರಿಯಾಗಿ ಗುರುತಿಸಿದ್ದೇವೆಯೇ? ಇವತ್ತೇನು ಅಕ್ಕಿ ಹಗರಣದ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ಅದು ಇವತ್ತಿನದಲ್ಲ. ಎನ್.ಆರ್.ಇ.ಪಿ.ಆರ್.ಎಲ್.ಇ.ಜಿ.ಪಿ. ಇದ್ದಾಗಲೂ ಕೂಡ ಅದು ನಡೆದುಕೊಂಡು ಬಂದಿದೆ. ಆದರೆ, ನಾನು ಒಂದು ಮಾತನ್ನು ಹೇಳುತ್ತೇನೆ, ಜಾಸ್ತಿ ಮಾತನಾಡಲಿಕ್ಕೆ ಹೋಗುವುದಿಲ್ಲ. ಏನು ಕೂಲಿ ಕಾಳು ಇದೆ ಇಲ್ಲವೇ ಸರ್ಕಾರ ಕೊಟ್ಟಂಥ ಹಣ ಇದೆ, ಆ ಜಿಲ್ಲೆಯಲ್ಲಿ ಅಥವಾ ಆ ತಾಲ್ಲೂಕಿನಲ್ಲಿ, ಅಲ್ಲಿ ಕಾಮಗಾರಿ ನಡೆದಿದ್ದರೆ, ಬೆಲೆಗೆ ಸರಿಯಾದ ಕಾಮಗಾರಿ ನಡೆದಿದ್ದರೆ, ಅದನ್ನೂ ಸಿ.ಒ.ಡಿ. ಯವರು ತನಿಖೆ ಮಾಡಬೇಕು. ಆದರೆ, ಎಲ್ಲಿ ತನಿಖೆ ಮಾಡಿ, ಕಾಮಗಾರಿ ನಡೆಯದೇ ಹಣ ದುರುಪಯೋಗವಾಗಿದ್ದರೆ, ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಿ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಏನು ನಮ್ಮ ಮಾನ್ಯ ಯಡಿಯೂರಪ್ಪನವರು ಹೇಳಿದರೋ ಅದನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಹೇಳುತ್ತೇನೆ. ಏಕೆಂದರೆ, ರಾಜಕಾರಣದಲ್ಲಿ ಎಲ್ಲರನ್ನೂ ಭ್ರಷ್ಟಾಚಾರಿಗಳು ಎಂದು ಹೇಳುವುದು ಬೇಡ. ಭ್ರಷ್ಟಾಚಾರ ನಡೆದಿದೆ ಎನ್ನುವುದನ್ನು ಕಳೆದ ಸಾರಿ ವಿರೋಧ ಪಕ್ಷದಲ್ಲಿದ್ದಂಥ ಸಂದರ್ಭದಲ್ಲಿ ನಾವೂ ಮಾಡಿದ್ದೇವೆ, ನೀವೂ ಮಾಡಿದ್ದೀರಿ, ವಿರೋಧ ಪಕ್ಷದವರಾದ ಬಿ.ಜೆ.ಪಿ. ಯವರೂ ಮಾಡಿದ್ದಾರೆ. ಇಲ್ಲವೇ ಬಿ.ಜೆ.ಪಿ. ಯವರ ಕ್ಷೇತ್ರದಲ್ಲಿ ಆ ಕೆಲಸ ನಡೆದಿದೆಯೇ ಎಂಬುದು ಮೊದಲು ತನಿಖೆಯಾಗಲಿ. ಮೊದಲು ಸೀತೆ ಹೇಗೆ ಅಗ್ನಿ ಪರೀಕ್ಷೆಗೆ ಒಳಗಾದಳೋ, ಹಾಗೆ ಅವರೂ ಒಳಗಾಗಬೇಕು. ಅವರು ಆರೋಪದಿಂದ ಮುಕ್ತರಾದ ಮೇಲೆ, ಬೇರೆಯವರನ್ನೂ ಮಾಡಿಸಲಿ. ಆದರೆ, ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ.

**ಛೇರ್ಮನ್** : ಮಾನ್ಯ ಕೃಷ್ಣ ಮೂರ್ತಿಯವರೇ, ಅದನ್ನು ಎಳೆಯುವುದು ಬೇಡ. ಅವರು ಉತ್ತರ ಹೇಳಲಿ ಬಿಡಿ. ಸಂಕ್ಷಿಪ್ತವಾಗಿ ಹೇಳಿ, ಸಾಕು. ಕ್ಲಾರಿಫಿಕೇಷನ್ ಮಾತ್ರ ಕೇಳಬೇಕು. ದಯವಿಟ್ಟು ಭಾಷಣ ಮಾಡಬೇಡಿ, ಟೈಮ್ ಆಯಿತು.

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಅಧ್ಯಕ್ಷರೇ, ಈಗ ಮಾನ್ಯ ಜೀವಿಜಯರವರು ಹೇಳಿದರು. ನಮ್ಮ ಕಾಫಿ ತೋಟಗಳಲ್ಲಿ 75 ರೂಪಾಯಿ, ನೂರು ರೂಪಾಯಿ ಕೊಡುತ್ತಾರೆ. ನಮ್ಮ ಕಡೂರು ಭಾಗದಲ್ಲಿ ಕೂಡ 46 ರೂಪಾಯಿಗಳ ಕೂಲಿಗೆ ಯಾರೂ ಬರುವುದಿಲ್ಲ. ಯಾವುದೇ ಒಬ್ಬ ಬಿ.ಜೆ.ಪಿ. ಶಾಸಕ ಇರಬಹುದು, ದಳದ ಶಾಸಕ ಇರಬಹುದು, ಕಾಂಗ್ರೆಸ್ ಶಾಸಕ ಇರಬಹುದು. ಜನರು ತಮಗೆ ಬೇಕಾದಂಥ ಮೂಲಭೂತ ಸೌಲಭ್ಯಗಳನ್ನು ಕೇಳುತ್ತಾರೆಯೇ ಹೊರತು ನಿಮ

ಮಾರ್ಗಸೂಚಿ, ಮಾರ್ಗದರ್ಶನ ಕೇಳುವುದಿಲ್ಲ. ಅದರಿಂದ ಇಂಜಿನಿಯರುಗಳ ಬಗ್ಗೆ ತನಿಖೆಯನ್ನು ಮಾಡಬೇಕಾದರೆ ಆ ಕಾಮಗಾರಿ ನಡೆದಿದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಈಗ ಹತ್ತು ಲಕ್ಷ ರೂಪಾಯಿಗಳ ಅಂದಾಜು ವೆಚ್ಚ ಆಗಿದೆ, ಅದು ಕೂಲಿ ಕಾಳಿನಿಂದಲೇ ಆಗಿದೆ. ಸ್ಥಿರಾಸ್ತಿಗಳನ್ನೂ ನಾವು ಮಾಡಿದ್ದೇವೆ. ಶಾಲಾ ಕೊಠಡಿ ಕಟ್ಟಿದ್ದೇವೆ, ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದಹಾಗೆ ಕ್ರೀಡಾಂಗಣಗಳನ್ನು ಮಾಡಿದ್ದೇವೆ, ಅದನ್ನು ಮೌಲ್ಯಮಾಪನ ಮಾಡಲಿ. ಆ valuation of money ಅಲ್ಲಿ ವರ್ತ್ ಇತ್ತು ಎಂದರೆ, ಅದನ್ನು ಒಪ್ಪಿಕೊಳ್ಳಲಿ. ಇನ್ನೊಂದು ಏನು ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ್ದಾರೆ, ಗ್ರಾಮ ಪಂಚಾಯಿತ್ತಿಯ ಕಾರ್ಯದರ್ಶಿ ಏನು ಆ ಕೆಲಸವನ್ನು ನಿರ್ವಹಣೆ ಮಾಡಲಿಕ್ಕೆ ಆಗುವುದಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ** : ನೈಸರ್ಗಿಕ ವಿಕೋಪ ನಿಧಿಗೆ ಸಂಬಂಧಪಟ್ಟಂತೆ ಕುಡಿಯುವ ನೀರಿಗೆ ಏನಾದರೂ ಹಣ ಕೊಡುತ್ತಾರೆಯೇ ಅಥವಾ ಹೇಗೆ ಮಾಡುತ್ತಾರೆ ಎಂಬುದನ್ನು ಕೇಳುತ್ತೇನೆ.

**ಛೇರ್ಮನ್** : ಕುಡಿಯುವ ನೀರಿನ ವಿಚಾರ ಈ ಚರ್ಚೆಯಲ್ಲಿ ಬರಲಿಲ್ಲ. ಸಧ್ಯಕ್ಕೆ ಅದು ಈ ಚರ್ಚೆಯಲ್ಲಿ ಇಲ್ಲ, ದಯವಿಟ್ಟು ಕುಳಿತುಕೊಳ್ಳಿ

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಗ್ರಾಮ ಪಂಚಾಯಿತ್ತಿಯಲ್ಲಿ ನೀವು ಕಳುಹಿಸುವ ಸಕ್ಕರೆ ಚೀಲಗಳು ಸರಿಯಾಗಿ ಹೋಗುವುದಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ** : ಮಾನ್ಯ ಕಡೂರು ಕೃಷ್ಣಮೂರ್ತಿಯವರು ಮಾತನಾಡತಕ್ಕ ಸಂದರ್ಭದಲ್ಲಿ ಹೇಳಿದರು, ಏಕೆಂದರೆ, ರೆಕಾರ್ಡ್‌ಗೆ ಹೋಗಿದೆ, ರೆಕಾರ್ಡ್ ಸರಿಯಾಗಿರಬೇಕು. ಬಿ.ಜೆ.ಪಿ. ಶಾಸಕರನ್ನೂ ಕೂಡ ಸಿ.ಬಿ.ಐ.ಗೆ ಒಳಪಡಿಸಿರಿ ಎಂದು. ಇಲ್ಲಿ ಬಿ.ಜೆ.ಪಿ. ಅಥವಾ ಕಾಂಗ್ರೆಸ್ ಎಂದು ಚರ್ಚೆ ನಡೆದಿದೆಯೋ ಅಥವಾ ಏನು ಅಕ್ಕಿ ಹಗರಣದ ಬಗ್ಗೆ ಚರ್ಚೆ ನಡೆದಿದೆಯೋ? ದಯಮಾಡಿ, ತಾವು ಇದನ್ನು ಕ್ಲಿಯರ್ ಮಾಡಬೇಕು, ತಾವು ರೆಕಾರ್ಡ್ ತರಿಸಿ. ರೆಕಾರ್ಡ್ ತರಿಸಿ, ತಾವು ನೋಡಿ.

**ಛೇರ್ಮನ್** : ಆಗುವುದಿಲ್ಲ, ದಯವಿಟ್ಟು ಕುಳಿತುಕೊಳ್ಳಿ. ಅವರು ಮಾತನಾಡುತ್ತಾ ಇದ್ದಾರೆ, ನೀವು ಕುಳಿತುಕೊಳ್ಳಿ

**ಶ್ರೀ ಅರಗ ಜ್ಞಾನೇಂದ್ರ** : ಅಧ್ಯಕ್ಷರೇ, ...

**ಛೇರ್ಮನ್** : ಉಪ ನಾಯಕರು ಮಾನತಾಡುತ್ತಾ ಇದ್ದಾರೆ, ನೀವು ಕುಳಿತುಕೊಳ್ಳಿ. ನಾನು ಕೇಳುತ್ತೇನೆ, ಅವರಿಗೆ ನಾನೇ ಉತ್ತರ ಹೇಳುತ್ತೇನೆ. ನೀವು ಅದನ್ನೇ ಹೇಳಿಕೊಂಡು ಹೋದರೆ, ಇನ್ನು ಐದು ನಿಮಿಷ ಹೋಗುತ್ತದೆ.

**ಶ್ರೀ ಎಸ್.ಎಸ್. ಪಾಟೀಲ್** : ಸದನವನ್ನು ನಾಳೆಗೆ ಮುಂದುವರಿಸಿ ಇಂದು ಬೆಳಿಗ್ಗೆ 9 ಗಂಟೆಗೆ ಬಂದಿದ್ದೇವೆ, ದಯವಿಟ್ಟು 7 ಗಂಟೆಗೆ ಸದನವನ್ನು ಮುಂದೂಡಿ.

**ಛೇರ್ಮನ್** : ಅವರು ಆಗಲಿಂದಲೇ ಹೇಳುತ್ತಾ ಬಂದಿದ್ದಾರೆ. ಅದನ್ನು ಕಡೂರು ಕೃಷ್ಣಮೂರ್ತಿಯವರು ಮಾತ್ರ ಹೇಳಲಿಲ್ಲ. ಆಗಲೇ ಎಲ್ಲರ ಗಮನಕ್ಕೂ ಬಂದಿದೆ. ಇರಲಿ ಎಂದು ಸುಮ್ಮನೆ ಕುಳಿತಿದ್ದೀರಿ.

ಗೊಂದಲ

**ಛೇರ್ಮನ್** : ಅದನ್ನು ನೋಡೋಣ, ನೋಡಿಬಿಟ್ಟು ಸರಿ ಮಾಡುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ** : ರೆಕಾರ್ಡ್ ಸರಿಪಡಿಸಬೇಕು. ಮನಸ್ಸಿಗೆ ಬಂದ ಹಾಗೆ ಮಾತನಾಡುವುದಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ** : ಬಿ.ಜೆ.ಪಿ. ಯವರನ್ನು ಹೊರತುಪಡಿಸಿ ಎಂದು ನಾವು ಹೇಳಿದ್ದೇವೆಯೇ?

**ಶ್ರೀ ಆರಗ ಜ್ಞಾನೇಂದ್ರ** : ಅಕ್ಕಿ ಹಗರಣದ ಬಗ್ಗೆ ಎಲ್ಲರೂ ನಿಯಮ 69ರ ಮೇರೆಗೆ ಮಾತನಾಡಿದ್ದಾರೆ

**ಛೇರ್ಮನ್** : ನಾನು ಅದನ್ನು ನೋಡಿ, ಇರಬೇಕೇ ಬೇಡವೇ ಎಂದು ಆಮೇಲೆ ತೀರ್ಮಾನ ತೆಗೆದುಕೊಳ್ಳುತ್ತೇನೆ. ಈಗ ಬೆಂಗಳೂರಿನಲ್ಲಿ ವಿವಿಧ ಯೋಜನೆಗಳಿಗೆ ಭೂ ಸ್ವಾಧೀನ ಮಾಡಿರುವಲ್ಲಿ ನಡೆದಿರುವ ಹಗರಣಗಳ ಬಗ್ಗೆ ನೀಡಿರುವ ಸೂಚನೆಗೆ ಸರ್ಕಾರದಿಂದ ಉತ್ತರ ಎಂದು ಇದೆ. ಇವತ್ತಿನ ಅಜೆಂಡಾದಲ್ಲಿ ಚರ್ಚೆ ಎಂದು ಇಲ್ಲ,

**ಶ್ರೀ ಬಸವರಾಜ ರಾಯರೆಡ್ಡಿ** : ನಿನ್ನೆ ನಿಯಮಾವಳಿ 69ರ ಪ್ರಕಾರ, we are a party for that.

ಗೊಂದಲ

**ಛೇರ್ಮನ್** : ಈಗ ಮುಂದಿನ ವಿಷಯ ತೆಗೆದುಕೊಂಡಾಗಿದೆ, ದಯವಿಟ್ಟು ನೀವು ಕುಳಿತುಕೊಳ್ಳಿ

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ನಮ್ಮಲ್ಲಿ ಒಂದು ಲಕ್ಷ ಮೆಟ್ರಿಕ್ ಟನ್ ಅಕ್ಕಿ ಇದೆ. ಯಾರೂ ಇಂಜಿನಿಯರ್ಸ್ ಕೆಲಸ ಮಾಡುತ್ತಾ ಇಲ್ಲ. ಗ್ರಾಮ ಪಂಚಾಯ್ತಿಗೆ ಕೊಡುತ್ತೇವೆಂದರೆ, ಅಲ್ಲಿ ಗೋಡೌನ್ ಇಲ್ಲ. ಅಲ್ಲಿನ ಸೆಕ್ರಟರಿ 8ನೇ ಕ್ಲಾಸ್ ಓದಿದ್ದಾನೋ 11ನೇ ಕ್ಲಾಸ್ ಓದಿದ್ದಾನೋ. ಅದರ ಬಗ್ಗೆ ದೀರ್ಘವಾದ ಚರ್ಚೆಯಾಗಲಿ.

**ಛೇರ್ಮನ್** : ಅದಕ್ಕೆ ಮಾನ್ಯ ಪ್ರಕಾಶ್‌ರವರು ಉತ್ತರವನ್ನು ಹೇಳಿದ್ದಾರೆ. ಏನಾದರೂ ಇದ್ದರೆ, ನೀವು ಅವರ ಹತ್ತಿರ ಕುಳಿತು ಇತ್ಯರ್ಥ ಮಾಡಿಕೊಳ್ಳಿ

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಮಾರ್ಗಸೂಚಿ ಅನುಸರಣೆ ಮಾಡಿ ಎಂದು ಹೇಳಿದರೆ ಆಗುವುದಿಲ್ಲ.

**ಛೇರ್ಮನ್** : ಇಲ್ಲಿ ಮಾರ್ಗಸೂಚಿ ಬದಲಾವಣೆ ಮಾಡಲಿಕ್ಕೆ ಆಗುತ್ತದೆಯೇ? ಅದನ್ನು ಇಲ್ಲಿ ಬದಲಾವಣೆ ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ, ಅದರ ಬಗ್ಗೆ ಇನ್ನು ಚರ್ಚೆ ಬೇಡ. ದಯವಿಟ್ಟು ಕುಳಿತುಕೊಳ್ಳಿ,

**ಶ್ರೀ ಕೆ.ಎಂ. ಕೃಷ್ಣಮೂರ್ತಿ** : ಇವರು ಹೋಗಿ ಪ್ರಧಾನ ಮಂತ್ರಿಗಳ ಪರ್ಮಿಷನ್ ತೆಗೆದುಕೊಂಡು, ಮಾಡುವುದಕ್ಕಾದರೂ ಹೇಳಿ.

**ಛೇರ್ಮನ್** : ಅದನ್ನು ಅವರು ಹೇಳಿಧರಲ್ಲಾ. ನೀವು ಕುಳಿತುಕೊಳ್ಳಿ ಈಗ.

## 9) ನಿಯಮ 69ರ ಮೇರೆಗೆ ಚರ್ಚೆ

## ವಿಷಯ : ಬೆಂಗಳೂರು ಸುತ್ತಾಮುತ್ತಲಿನ ಪ್ರದೇಶಗಳಲ್ಲಿ ನಡೆದಿದೆ ಎನ್ನಲಾದ ಭೂಹಗರಣದ ಬಗ್ಗೆ (ಮುಂದುವರಿದ ಚರ್ಚೆ)

**ಶ್ರೀ ಬಸವರಾಜ ರಾಯರೆಡ್ಡಿ** : ನಿಯಮಾವಳಿ 69ರ ಪ್ರಕಾರ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಯಡಿಯೂರಪ್ಪನವರು, ವಾಟಾಳ್ ನಾಗರಾಜರವರು ಮತ್ತು ಇನ್ನಿತರ ಸನ್ಮಾನ್ಯ ಸದಸ್ಯರುಗಳು...

**ಛೇರ್ಮನ್** : ಈಗ ನಾನು ಒಂದು ಮಾತನ್ನು ಹೇಳುತ್ತೇನೆ. ನೀವು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ, ಆದರೆ, ನೀವು ಮಾತನಾಡುವುದು ಉತ್ತರವನ್ನು ಹೇಳುವ ರೀತಿಯಲ್ಲಿ ಇರಬಾರದು.

**ಶ್ರೀ ಬಸವರಾಜ ರಾಯರೆಡ್ಡಿ** : ನಾನು ಉತ್ತರವನ್ನು ಹೇಳುತ್ತಿಲ್ಲ. ನಾನೇಕೆ ಉತ್ತರ ಹೇಳಲಿ? ಉತ್ತರ ಸರ್ಕಾರ ಹೇಳುತ್ತದೆ.

**ಛೇರ್ಮನ್** : ಉತ್ತರ ಸರ್ಕಾರ ಹೇಳಲಿ. ನೀವು ಮಾತನಾಡುವುದಕ್ಕೆ ನನ್ನ ಅಡ್ಡಿ ಇಲ್ಲ. ಮಾತನಾಡಿ.

**ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ)** : ಸನ್ಮಾನ್ಯ ಅಧ್ಯಕ್ಷರೇ, ನಿಯಮಾವಳಿ 69ರ ಪ್ರಕಾರ ಏನು ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಸದಸ್ಯರು ಬೆಂಗಳೂರು ನಗರದಲ್ಲಿ ಮತ್ತು ಬೆಂಗಳೂರು ಸುತ್ತಮುತ್ತ ನಡೆದಿರುವಂತಹ ಭೂಹಗರಣಗಳ ಒಂದು ಅನುಮಾನದ ಬಗ್ಗೆ ಒಂದು ಚರ್ಚೆ ನಿನ್ನೆಯಿಂದ ಬಹಳ ಗಂಭೀರವಾಗಿ ನಡೆಯುತ್ತಾ ಇದೆ. ಈ ಚರ್ಚೆಯಲ್ಲಿ ನಾವು ಕೂಡ ಭಾಗವಹಿಸುತ್ತೇವೆ ಅಂತ ನಾನು ಮಾನ್ಯ ದೇಶಪಾಂಡೆಯವರು, ಮಾನ್ಯ ಎಬಿ ಪಾಟೀಲರು, ಮಾನ್ಯ ಶಿವಕುಮಾರ್ ಮತ್ತು ಮಾನ್ಯ ರಮೇಶ್‌ಕುಮಾರ್ ಮತ್ತು ಇನ್ನಿತರ ಸದಸ್ಯರು ಈ ಕಡೆಯಿಂದ ನಮಗೂ ಅವಕಾಶ ಕೊಡಿ ಅಂತ ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡಿದ್ದೆವು. ಅಧ್ಯಕ್ಷರು ನನಗೆ ಮಾತನಾಡಲಿಕ್ಕೆ ಅನುಮತಿ ಕೊಟ್ಟಿದ್ದೀರಿ. ಅದಕ್ಕೆ ನಾನು ವ್ಯಕ್ತಿಗತವಾಗಿ ತಮಗೆ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ. ನಿನ್ನೆ ನನ್ನ ಅಪೂರ್ಣಗೊಂಡ ನನ್ನ ಮಾತಿನಲ್ಲಿ ಹೇಳುತ್ತಿದ್ದೆ. ಇವತ್ತಿನ ದಿನಮಾನಗಳಲ್ಲಿ ಸರ್ಕಾರದ ಜೊತೆ ಜೊತೆಯಾಗಿ ಖಾಸಗಿ ಸಹಭಾಗಿತ್ವದಲ್ಲಿ ಮೂಲಭೂತ ಸೌಕರ್ಯಗಳನ್ನು ನಾವು ಎಲ್ಲಾ ರಂಗದಲ್ಲಿ ಕೊಡಬೇಕಾದ ಅವಶ್ಯಕತೆ ಇದೆ ಎಂಬ ಮಾತು ಹೇಳುತ್ತಿದ್ದೆ. ಆದರಲ್ಲೂ ವಿಶೇಷವಾಗಿ ನಗರ ಪ್ರದೇಶಗಳೇನಿವೆ ಅತ್ಯಂತ ತೀವ್ರ ಜನಸಂದಣಿ ಇದೆ. ಆ ಭಾಗದಲ್ಲಿ ಇವತ್ತು ರಸ್ತೆ ಮಾಡುವುದಿರಬಹುದು ಉಪನಗರಗಳನ್ನು ನಿರ್ಮಾಣ ಮಾಡುವಂತಹ ವಿಚಾರ ಇರಬಹುದು, ನಮ್ಮ ರಾಜ್ಯಕ್ಕೆ ಬೇಕಾದಂತಹ ವಿದ್ಯುತ್ ಉತ್ಪಾದನೆ ಸಲುವಾಗಿ ಇರಬಹುದು ಹೀಗೆ ಹಲವಾರು ವಲಯಗಳಲ್ಲಿ ಖಾಸಗಿ ರಂಗದ ಭಾಗಿತ್ವದ ಅವಶ್ಯಕತೆ ಬಹಳಷ್ಟು ಇದೆ. ಇದಕ್ಕೆ ಕಾರಣ ಹಣಕಾಸಿನ ತೊಂದರೆ ಮತ್ತು ವಿಶ್ವದಲ್ಲಿ ವಿಚಾರಗಳು ಬದಲಾವಣೆಯಾಗುತ್ತಿವೆ. ಒಂದು ಕಾಲವಿತ್ತು ಎಲ್ಲವನ್ನೂ ರಾಷ್ಟ್ರೀಕರಣ ಮಾಡುವ ಮೂಲಕ ಸರ್ಕಾರವೇ ಮಾಡಬೇಕಾಗಿತ್ತು. ಉದಾಹರಣೆಗೆ ಕರ್ನಾಟಕ ಮಾತ್ರವಲ್ಲ ನಮ್ಮ ದೇಶದ ಸುಮಾರು ನಾಲ್ಕೈದು ದಶಕಗಳ ಹಿಂದಿನದ್ದು ತೆಗೆದುಕೊಂಡರೆ ಒಂದು ಕಡ್ಡಿಪೆಟ್ಟಿಗೆ ಮಾಡಲಿಕ್ಕೂ ಸರ್ಕಾರವೇ

ಒಂದು ಫ್ಯಾಕ್ಟರಿ ತೆರೆಯುವಂತಹ ವಿಚಾರವಿತ್ತು. ಆದರೆ ಇವತ್ತು ಹಾಗಿಲ್ಲ. ಇವತ್ತು ಖಾಸಗೀಕರಣ-ಗ್ಲೋಬಲೈಜೇಶನ್-ಆದ ಮೇಲೆ ಜಗತ್ತಿನಾದ್ಯಂತ ಎಲ್ಲಾ ರಾಷ್ಟ್ರಗಳಲ್ಲೂ ಖಾಸಗಿ ವ್ಯಕ್ತಿಗಳು ಮೂಲಭೂತ ಸೌಕರ್ಯ ಕೊಡಲಿಕ್ಕೆ ಮುಂದೆ ಬಂದಿದ್ದಾರೆ. ಇದಕ್ಕೆ ಕಾರಣ ಇವತ್ತು ಸರ್ಕಾರದಲ್ಲಿ ಹಣವಿಲ್ಲ. ಮತ್ತು ಖಾಸಗೀರಂಗದಲ್ಲಿ ಹಣ ಏನಿದೆ ಅದನ್ನು ವಿನಿಯೋಗ ಮಾಡಿಕೊಂಡು ಮೂಲಭೂತ ಸೌಕರ್ಯ ಕೊಡಬೇಕೆಂಬ ಖಾಸಗೀಕರಣದ ವಿಚಾರಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಬಂದಿವೆ. ಒಂದು ಕಾಲದಲ್ಲಿ ಚೈನಾ ದೇಶ, ಕಮ್ಯುನಿಷ್ಟ್ ಆಡಳಿತದಲ್ಲಿ ಈಗಲೂ ಇದೆ-ಮಾವೊ ಕಮ್ಯುನಿಸ್ಟ್ ಸಿದ್ಧಾಂತದ ಮುಖಾಂತರ ಚೈನಾ ದೇಶದಲ್ಲಿ ಆಡಳಿತ ನಡೆಸಲು ಪ್ರಾರಂಭ ಮಾಡಿದರು. 1980ರ ನಂತರ ಚೈನಾ ದೇಶದಲ್ಲೂ ವಿಚಾರಗಳು ಬದಲಾಗಿದೆ. ಇವತ್ತು ಕಮ್ಯುನಿಸ್ಟ್ ಪಕ್ಷ ಚೈನಾದಲ್ಲಿ ಆಡಳಿತ ಮಾಡುತ್ತಿದೆ. ಇವತ್ತು ಅವರ ವಿಚಾರಗಳಲ್ಲಿ ಬದಲಾವಣೆಯಾಗಿದೆ. ಒಂದು ದಶಕದಲ್ಲಿ ಯಾರು ಬಂಡವಾಳ ಶಾಹಿಗಳನ್ನು ವಿರೋಧ ಮಾಡುತ್ತಿದ್ದರೋ ಇವತ್ತು ಚೈನಾದಂತಹ ಕಮ್ಯುನಿಸ್ಟ್ ರಾಷ್ಟ್ರಗಳಲ್ಲೂ ಇವತ್ತು ಖಾಸಗಿ ಸಹಭಾಗಿತ್ವದಲ್ಲಿ ಬಂಡವಾಳಶಾಹಿಗಳನ್ನು ಸ್ವಾಗತ ಮಾಡುತ್ತಿವೆ. 1980ರಲ್ಲಿ ಆದ ಒಂದು ಆರ್ಥಿಕ ಕ್ರಾಂತಿ ಚೈನಾದಲ್ಲಿ ಅಂದಿನ ಚೈನಾ ಅಧ್ಯಕ್ಷರಾದ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ಕೇಳಿ ಸ್ವಾಮಿ, ಚೈನಾದ ಬಗ್ಗೆ ನಿಮಗೆ ಸರಿಯಾದ ಮಾಹಿತಿ ಇಲ್ಲ. ನೀವು ಒಂದು ಪದ ಉಪಯೋಗ ಮಾಡಿದಿರಿ, ಬಂಡವಾಳಶಾಹಿಗಳನ್ನು ಇವತ್ತು ಚೈನಾದಲ್ಲಿ ಸ್ವಾಗತ ಮಾಡುತ್ತಿದ್ದಾರೆ ಎಂದು, ಬಂಡವಾಳಗಾರರನ್ನು ಬೆಳೆಸುತ್ತಿದ್ದಾರೆ ಎಂದು. ಅದಕ್ಕಷ್ಟೆ ನನ್ನ ಆಕ್ಷೇಪ, ಬೇರೆಯದಕ್ಕೆ ಅಲ್ಲ. ಕೇಳಿ, ಚೈನಾ ದೇಶ ವಿದೇಶಿ ಬಂಡವಾಳವನ್ನು ಅಹ್ವಾನ ಮಾಡುತ್ತಿರುವುದು ನಿಜ, ಅದೇನೂ ಸುಳ್ಳಲ್ಲ. ಆದರೆ ಯಾವ ಷರತ್ತಿನ ಆಧಾರದ ಮೇಲೆ ಅಲ್ಲಿ ಬಂಡವಾಳವನ್ನು ಆಹ್ವಾನ ಮಾಡುತ್ತಿದ್ದಾರೆ ಯಾವ್ಯಾವ ವಲಯದಲ್ಲಿ ಅವರು ಬಂಡವಾಳವನ್ನು ಹಾಕಿಸುತ್ತಿದ್ದಾರೆ ಎಲ್ಲಿಂದ ಹಣ ಬರುತ್ತಾ ಇದೆ ಎಂಬ ಬಗ್ಗೆ ಹೇಳಿ. ಬಂಡವಾಳಶಾಹಿಗಳಿಗೆ ಅವರು ಪ್ರೋತ್ಸಾಹ ಮಾಡುತ್ತಾ ಇಲ್ಲ. ವಿದೇಶಿ ಬಂಡವಾಳವನ್ನು ಆಹ್ವಾನ ಮಾಡುತ್ತಿದ್ದಾರೆಯೋ ಹೊರತು ಅಲ್ಲಿನ ಬಂಡವಾಳಶಾಹಿಗಳನ್ನು ಬೆಳೆಸುತ್ತಾ ಇಲ್ಲ. ಅದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಿ ನೀವು.

**ಶ್ರೀ ಬಸವರಾಜ ರಾಯರೆಡ್ಡಿ :** ಬಹುಶಃ ಸದಸ್ಯರು ತಪ್ಪು ಅರ್ಥ ಮಾಡಿಕೊಂಡಿದ್ದಾರೆ. ನಾನು ಬಂಡವಾಳ ಶಾಹಿಗಳನ್ನು ಬೆಳೆಸುತ್ತಿದ್ದಾರೆ ಎಂದು ಹೇಳಲಿಲ್ಲ. ಯಾರು ಒಂದು ಕಾಲಕ್ಕೆ ಬಂಡವಾಳಶಾಹಿಗಳ ವಿರುದ್ಧವಿದ್ದರೋ ಅವರೂ ಮನಃ ಪರಿವರ್ತನೆ ಮಾಡಿಕೊಂಡರು. ಅಮೆರಿಕಾ ಒಂದು ಕಾಲಕ್ಕೆ ಚೈನಾ ದೃಷ್ಟಿಯಲ್ಲಿ ಬಂಡವಾಳ ಶಾಹಿ ರಾಷ್ಟ್ರವಾಗಿತ್ತು ಕ್ಯಾಪಿಟಲಿಸ್ಟ್ ಕಂಟ್ರಿ ಆಗಿತ್ತು. ಆದರೆ 80ರ ನಂತರ ಪರಿವರ್ತನೆಯಾದ ಚೈನಾ ಇದೆ ನೋಡಿ ಅವರ ಆರ್ಥಿಕ ನೀತಿಯಿಂದ ಇವತ್ತು ಚೈನಾ ದೇಶದಲ್ಲಿ foreign direct investment....

**ಶ್ರೀ ಕೆ.ಆರ್. ರಮೇಶ್‌ಕುಮಾರ್ :** ಅವರು ಹೇಳಿದ್ದನ್ನು ನೀವು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ. The economic order in Chine then and now, it is the communist order. There is no change in economic order in China,

but they have invited it is true even now Americans are capitalist, they have invited the capital investment which are the areas? they have not allowed or permitted the growth of capitalists within China That is what he says.

**Sri. R.V. Deshpande :** I had been to China twice.

ನಾನು ಎರಡು ಬಾರಿ ಚೈನಾಗೆ ಹೋಗಿ ಬಂದಿದ್ದೇನೆ. ಚೈನಾದವರು ಇಲ್ಲಿಗೆ ಬಂದಿದ್ದಾರೆ ನಿಯೋಗ ತೆಗೆದುಕೊಂಡು, ಕರ್ನಾಟಕದಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡುತ್ತೇವೆ ಎಂದು ನಾನೂ ಅಲ್ಲಿಂದ ಇನ್‌ವೆಸ್ಟ್‌ಮೆಂಟ್ ತರಲಿಕ್ಕೆ ಸಾಧ್ಯವೇ ಎಂದು ಹೋದಾಗ ಇವತ್ತು ಚೈನಾದಲ್ಲೂ ಸಹ ಬಹಳ ದೊಡ್ಡ ಕ್ಯಾಪಿಟಲಿಸ್ಟ್ ನಿರ್ಮಾಣವಾಗಿದ್ದಾರೆ. ಅಷ್ಟೇ ಅಲ್ಲ, ಪ್ರತಿಯೊಂದು multinational company of America, today, it is housed in China. The maximum foreign direct investment received by any country in the World is China. You tell me where is the Communism?

**ಛೇರ್ಮನ್ :** ಮಾನ್ಯ ರಾಯರೆಡ್ಡಿಯವರು, ಚರ್ಚೆಯನ್ನು ಡೀವಿಯೇಟ್ ಮಾಡುವುದು ಬೇಡ, ನೀವು ದಯವಿಟ್ಟು ಈಲ್ಡ್ ಆಗಬೇಡಿ. ನೀವು ಈಲ್ಡ್ ಆಗುತ್ತಾ ಹೋದರೆ ಮುಗಿಯುವುದಿಲ್ಲ ಇದು.

**ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕಾ ಸಚಿವರು) :** ಇದು ಬಹಳ ಗಹನವಾದ ವಿಚಾರ, ಒಂದ್ನಿಮಿಷ, ನಮ್ಮ ದೇಶದಲ್ಲಿ ಉದಾರೀಕರಣ ತಂದಿದ್ದು 1991, ಅಲ್ಲಿಗೆ ಕ್ಯಾಪಿಟಲಿಸ್ಟ್ ಕಂಟ್ರಿ ಆದರೂ ಲಿಬರಲೈಜೇಶನ್‌ಗೆ ಒತ್ತು ಕೊಟ್ಟರು, ಅದನ್ನೇ ಮಾನ್ಯ ದೇಶಪಾಂಡೆಯವರು ಹೇಳುತ್ತಿರುವುದು ಇವತ್ತು ಅವರ ಥಿಂಕಿಂಗ್ ಚೇಂಜಾಗಿದೆ. ನಾನು ಎಳೆಂಟು ಸಾರಿ ಚೈನಾ ದೇಶವನ್ನು ನೋಡಿದ್ದೇನೆ. ಅಲ್ಲಿನ ಪರಿಸ್ಥಿತಿಗೂ ಇಲ್ಲಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸ ಇದೆ

**ಛೇರ್ಮನ್ :** ರಾಯರೆಡ್ಡಿಯವರೇ ಮಾತನಾಡುತ್ತೀರೋ.... ಇಲ್ಲಾಂದ್ರೆ ರಿಪ್ಲೈ ಮಾಡುವುದಾದರೆ ಮಾಡಲಿ. ರಾಯರೆಡ್ಡಿಯವರೇ, ನಿಮಗೆ ಹೆಚ್ಚು ಟೈಂ ಕೊಡುವುದಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ :** ಮಾನ್ಯ ದೇಶಪಾಂಡೆಯವರು ಹೇಳಿದ್ದು ಬಹಳ ಸತ್ಯವಾಗಿದೆ. ಇವತ್ತು ಚೈನಾ ದೇಶದಲ್ಲಿ Foreign Direct Investment ಸುಮಾರು 400 ಬಿಲಿಯನ್... ಅಧ್ಯಕ್ಷರೇ, ಇತ್ತೀಚಿನ ದಿನಮಾನಗಳು ಬದಲಾಗಿರುವಾಗ ನಮ್ಮ ಮೂಲಭೂತ ಸೌಕರ್ಯಗಳನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ನಮ್ಮ ವಿಚಾರಗಳ ಬದಲಾವಣೆ ಕೇವಲ ನಮ್ಮ ರಾಷ್ಟ್ರದಲ್ಲೇ ಅಲ್ಲ ಚೈನಾದಂತಹ ಎಡಪಂಥೀಯ ವಿಚಾರ ಹೊಂದಿರುವ ರಾಷ್ಟ್ರವೂ ಕೂಡ ತನ್ನ ವಿಚಾರಗಳನ್ನು ಬದಲಾವಣೆ ಮಾಡಿಕೊಂಡಿವೆ ಎಂಬ ಉದಾಹರಣೆ ಕೊಟ್ಟೆ ಹೊರತು ಚೈನಾ ದೇಶವನ್ನಾಗಲೀ ಕಮ್ಯುನಿಸ್ಟ್ ರಾಷ್ಟ್ರವನ್ನಾಗಲಿ ಟೀಕೆ ಮಾಡಿಲ್ಲ.

ನಾನೇನು ಹೇಳುತ್ತಿದ್ದೆ ಎಂದರೆ ಸನ್ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ಇವತ್ತು ಚೈನಾ ದೇಶ ಇಡೀ ವಿಶ್ವದಲ್ಲಿ ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ 400 ಬಿಲಿಯನ್ ಆಗಿದೆ ಸುಮಾರು 400 ಬಿಲಿಯನ್‌ನಷ್ಟು ನೇರವಾದಂತಹ ವಿದೇಶಿ ಬಂಡವಾಳ ಚೈನಾ ದೇಶಕ್ಕೆ ಬಂದಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದಕ್ಕೇ ನಾನು ಹೇಳುತ್ತಿರುವುದು.

ಛೇರ್ಮನ್ : ನೀವು ಅವರು ಮಾತು ಮುಗಿಸುವುದಕ್ಕೆ ಇವತ್ತು ಬಿಡುವುದಿಲ್ಲ. ಅವರು ಚೈನಾ ಬಗ್ಗೆ ಮಾತನಾಡುತ್ತಿದ್ದರೆ ಮಾತನಾಡಲಿ, ನೀವು ಕುಳಿತುಕೊಳ್ಳಿ.

ಶ್ರೀ ಆರಗ ಜ್ಞಾನೇಂದ್ರ : ಅವರು ಭಾರತಕ್ಕೆ ಬರುವುದು ಯಾವಾಗ?

ಗೊಂದಲ

ಮಾನ್ಯ ಸದಸ್ಯರು : ಭಾರತಕ್ಕೆ ಬನ್ನಿ, ಕಾರಿಡಾರ್ ರಸ್ತೆಗೆ ಬನ್ನಿ

ಗೊಂದಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಏನು ಮಾತನಾಡಬೇಕು ಎಂದು ಗೊತ್ತಿಲ್ಲದೇ ಮಾತನಾಡಿದರೆ ಏನು ಪ್ರಯೋಜನ ಬಂತು? ಗೊತ್ತಿಲ್ಲದೇ ಇರತಕ್ಕಂಥ ವಿಷಯವನ್ನು ಏಕೆ ಪ್ರಸ್ತಾಪ ಮಾಡುವುದು?

ಛೇರ್ಮನ್ : ಮಾನ್ಯ ರಮೇಶ್ ಕುಮಾರ್ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಮಾನ್ಯ ರೆಡ್ಡಿಯವರೇ, ಕುಳಿತುಕೊಳ್ಳಿ. ಮಾನ್ಯ ರೆಡ್ಡಿಯವರೇ ನೀವು ದಯವಿಟ್ಟು ಮಧ್ಯೆ ಮಧ್ಯೆ ಏಳಬೇಡಿ. ರಮೇಶ್ ಕುಮಾರ್ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಸದನದ ಯಾವುದೇ ಒಬ್ಬ ಗೌರವಾನ್ವಿತ ಸದಸ್ಯರು ತಮ್ಮ ಅಪ್ಪಣೆಯನ್ನು ಪಡೆದು ಒಂದು ವಿಷಯದ ಮೇಲೆ ಚರ್ಚೆಯಲ್ಲಿ ಪಾಲ್ಗೊಳ್ಳುವ ವೇಳೆಗೆ ನೀವು ಹೀಗೆಯೇ ಮಾತನಾಡಬೇಕು, ನೀವು ಹೀಗೆಯೇ ಪೀಠಿಕೆ ಹಾಕಬೇಕು ಎಂದು ಹೇಳಿ ನಿರ್ಬಂಧ ಮಾಡಲಿಕ್ಕೆ ತಮ್ಮ ಆದಿಯಾಗಿ ಈ ಸದನದಲ್ಲಿ ಯಾರಿಗೂ ಅವಕಾಶ ಇರುವುದಿಲ್ಲ. ಅವರು ಯಾವ ವಿಚಾರ ಈ ಸದನದಲ್ಲಿ ಚರ್ಚೆ ಆಗಿದೆ, ಬಹಳ ಗುರುತರವಾದಂತಹ ಆಪಾದನೆಗಳೆನ್ನೆಲ್ಲಾ ಕೆಲವರು ಮಾಡಿದ್ದಾರೆ, ಅದರ ವಿರುದ್ಧ ತಮ್ಮನ್ನು ಸಮರ್ಥಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಹಲವು ಉದಾಹರಣೆಗಳನ್ನು ಇಲ್ಲಿ ಹೇಳುತ್ತಿದ್ದಾರೆ. ಇಷ್ಟ ಇದ್ದವರು ಕೇಳಬಹುದು. ಇಲ್ಲದಿದ್ದವರು ಬಿಡಬಹುದು. ಆದರೆ ಅವರನ್ನು ತಡೆಯತಕ್ಕಂಥ ಪ್ರಯತ್ನ ಸಾಧುವಲ್ಲ. I think the Chair must come to his rescue and permit him to have his views.

ಛೇರ್ಮನ್ : ನಾನು ಅವರಿಗೆಯೀಲ್ಡ್ ಆಗಬೇಡಿ ಎಂದು ಹೇಳುತ್ತಿದ್ದೇನೆ. ಅವರು ಕುಳಿತುಕೊಳ್ಳುತ್ತಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಅವರು ಕ್ರಿಯಾಲೋಪ ಎತ್ತಿದ್ದರಿಂದ ನಾನು ಕುಳಿತುಕೊಂಡೆ

ಶ್ರೀ ಜೆ.ಸಿ. ಮಾಧುಸ್ವಾಮಿ : ಸಮರ್ಥನೆ ಮಾಡಿಕೊಳ್ಳುವ ಪದ ತಾವು ಬಳಸಬಾರದು.

ಶ್ರೀ ಬಸವರಾಜ ರಾಯರೆಡ್ಡಿ : ಚೈನಾ ದೇಶದಲ್ಲಿ ಏನು ಇವತ್ತು 400 ಬಿಲಿಯನ್ ಡಾಲರ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ರಮೇಶ್ ಕುಮಾರ್ ಅವರು ಸಮರ್ಥಿಸಿಕೊಳ್ಳುತ್ತಾರೆ ಎನ್ನುವ ಪದ ಬಳಸಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : 200 ಬಿಲಿಯನ್ ಡಾಲರ್.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಇವರು ಸಮರ್ಥನೆ ಮಾಡುತ್ತಿರುವುದೋ? ಚರ್ಚೆಯಲ್ಲಿ ಭಾಗವಹಿಸುತ್ತಿರುವುದೋ?

**ಶ್ರೀ ಬಸವರಾಜ ರಾಯರೆಡ್ಡಿ** : ಅಮೇರಿಕಾದವರೇ ಈ ಎಲ್ಲಾ ಒಂದು ಸ್ಯಾಟಲೈಟ್ ಟೌನ್‌ಗಳಿಗೆ, ರಸ್ತೆ ಮಾಡಲಿಕ್ಕೆ....

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಅಧ್ಯಕ್ಷರೇ, ಅವರು ಮಾತನಾಡಬಾರದು ಎಂದು ನಾವು ಹೇಳಲಿಲ್ಲ. ಅವರು ಮಾತನಾಡಿದಂತಹ ವಿಚಾರದ ಬಗ್ಗೆ ನಮ್ಮದೂ ಅಭಿಪ್ರಾಯ ಹೇಳಲಿಕ್ಕೆ ಬಯಸಿದೆವು. ಅವರು ಮಾತನಾಡಬಾರದು ಎಂದು ನಾವು ಹೇಳಲಿಲ್ಲ. ಆ ರೀತಿ ಮಾನ್ಯ ರಮೇಶ್ ಕುಮಾರ್ ಅವರು ಹೇಳುವುದು ಸರಿಯಲ್ಲ.

**ಛೇರ್ಮನ್** : ನಾನು ಆಗಲೇ ಅವರಿಗೆ ಹೇಳಿ ಆಗಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಧ್ಯದಲ್ಲಿ ಸೂರು ಬಿಟ್ಟ ಹಾಗೆ ಇರಬಾರದು.

**ಛೇರ್ಮನ್** : ನಾನು ಆಗಲೇ ಅವರಿಗೆ ಹೇಳಿದ್ದೇನೆ.

**ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ** : ಅವರು ಮಾತನಾಡಬಾರದು ಎಂದು ನಾವು ಹೇಳಲಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಅವರು ಬಳಸಿದ ಆ ಪದಕ್ಕೆ ನಮ್ಮ ಆಕ್ಷೇಪಣೆ ಇದೆ.

**ಛೇರ್ಮನ್** : ಮಾಧುಸ್ವಾಮಿಯವರೇ, ಈ ಕಡೆ ನೋಡಿ ಮಾತನಾಡಿ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಅವರು ಮಾತನಾಡಬಾರದು ಎಂದು ನಾವು ಹೇಳಿಲ್ಲ.

**ಛೇರ್ಮನ್** : ಈ ಕಡೆ ನೋಡಿ ಮಾತನಾಡಿ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಅವರು ಚೈನಾ ಮಾತು ಹೇಳಿದಾಗ ನಾವು ಹೇಳಬೇಕು ಎಂದು ಹೇಳಿದೆವು.

**ಗೊಂದಲ**

**ಶ್ರೀ ಬಸವರಾಜ ರಾಯರೆಡ್ಡಿ** : ನಾನು ಯೀಲ್ಡ್ ಆಗಿಲ್ಲ ಸಾರ್ ಅವರು ಅಷ್ಟೂ ಜನ ನಿಂತರೆ ನಾನೇನು ಮಾಡಲಿ?

**ಛೇರ್ಮನ್** : ರೆಡ್ಡಿಯವರೇ, ದಯವಿಟ್ಟು

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ರಮೇಶ್‌ಕುಮಾರ್ ರವರು ಹೇಳುವುದು ಸರಿಯಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ** : ನಾನು ಏನು ಹೇಳುತ್ತಿದ್ದೆ ಅಂದರೆ ಎಲ್ಲಾ ರಾಜ್ಯಗಳೂ ಕೂಡ ಇವತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು.

**ಶ್ರೀ ಕೆ.ಆರ್. ರಮೇಶ್ ಕುಮಾರ್** : ಸಮಯ ವ್ಯರ್ಥ ಮಾಡುವುದು ಬೇಡ. ನಾನು ದೊಡ್ಡಸ್ಥಿಕೆ ಮೇಲೆ ಕುಳಿತುಕೊಳ್ಳುವ ಮನುಷ್ಯ ಅಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ** : ಮೂಲ ಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಇವತ್ತು ಶಕ್ತಿ ಇರಬಹುದು. ರೋಡ್ಸ್ ಇರಬಹುದು. ಉಪ ನಗರಗಳು ಇರಬಹುದು.

**ಶ್ರೀ ಕೆ.ಆರ್. ರಮೇಶ್ ಕುಮಾರ್** : ಅವರ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಲಿ.

**ಛೇರ್ಮನ್** : ಶ್ರೀರಾಮರೆಡ್ಡಿಯವರು, ದಯವಿಟ್ಟು ತಾವು ಮಧ್ಯೆ ಮಧ್ಯೆ ಏಳುವುದನ್ನು ಮಾಡಬೇಡಿ.

**ಶ್ರೀ ಬಸವರಾಜ ರಾಯರೆಡ್ಡಿ** : ಖಾಸಗಿ ಬಂಡವಾಳಧಾರರನ್ನು ಆಹ್ವಾನವನ್ನು ಸರ್ಕಾರಗಳು ಬೇರೆ ಬೇರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾಡುತ್ತಿದೆ ಎನ್ನುವುದಕ್ಕೆ ನಾನು ಒಂದು ಉದಾಹರಣೆಯನ್ನು ಚೈನಾ ದೇಶಕ್ಕೆ ಕೊಟ್ಟೆ ಅಷ್ಟೇ. ಆದರೆ ಪ್ರಜಾಪ್ರಭುತ್ವವಾದಿಗಳಾದಂತಹ ನಮ್ಮ ದೇಶದಲ್ಲಿ ಇಲ್ಲಿಯವರೆಗೆ ಕೇವಲ ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ 40 ಬಿಲಿಯನ್‌ಗಿಂತ ಹೆಚ್ಚು ಧಾಟಿಲ್ಲ. ಇದಕ್ಕೆ ಕಾರಣ ನಮ್ಮ ದೇಶದಲ್ಲಿ ಇನ್ನೂ ಸಂಪ್ರದಾಯವಾದಿಗಳು, ಕನ್ಸರ್ವೇಟಿವ್ ಥಿಂಕಿಂಗ್ ಇದೆಯಲ್ಲಾ, ಇದನ್ನು ನಾವು ಬದಲಾವಣೆ ಮಾಡಿಕೊಳ್ಳದೇ ಇದ್ದರೆ ಮುಂದಿನ ದಿನಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕೇವಲ ಸರ್ಕಾರದಿಂದಲೇ ಕೊಡಲಿಕ್ಕೆ ಕಷ್ಟ ಆಗುತ್ತದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಟ್ಟೆ. ಒಂದು ಎಡಪಂಥೀಯ ವಿಚಾರವನ್ನು ಹೊಂದಿದಂತಹ ಚೈನಾದವರೇ ತಮ್ಮ ಮನ ಪರಿವರ್ತನೆ ಮಾಡಿದಂತಹ ಸಂದರ್ಭದಲ್ಲಿ, ವೆಸ್ಟ್ ಬೆಂಗಾಲ್ ವಿಚಾರಕ್ಕೂ ಬರುತ್ತೇನೆ. ನಮ್ಮ ದೇಶದ ವಿಚಾರಕ್ಕೂ ಬರುತ್ತೇನೆ. ನಮ್ಮ ದೇಶದಲ್ಲಿ ಪಶ್ಚಿಮ ಬಂಗಾಳದ ರಾಜ್ಯ ಇದೆ. ಕಟ್ಟುನಿಟ್ಟಾದ ಸುಮಾರು ಕಳೆದ 30–35 ವರ್ಷಗಳಿಂದ ಎಡ ಪಂಥೀಯ ಪಕ್ಷ ಅಲ್ಲಿ ಆಡಳಿತದಲ್ಲಿದೆ. ಏನು ಅಲ್ಲಿ ಫಾರಿನ್ ಡೈರೆಕ್ಟ್ ಇನ್‌ವೆಸ್ಟ್‌ಮೆಂಟಿಗೆ ಆಹ್ವಾನ ಮಾಡಿಲ್ಲವೋ? ಖಾಸಗಿ ರಂಗದಲ್ಲಿ ಅವರು ಆಹ್ವಾನ ಮಾಡಿಲ್ಲವೋ? ತಮಗೆ ಗೊತ್ತಿರಬೇಕು. ವೆಸ್ಟ್‌ಬೆಂಗಾಲ್‌ನಲ್ಲಿ ಉದ್ದಿಮೆಯಾದಂತಹ ಸುಬ್ರತೋ ರಾಯ್ ಅವರು ಅಲ್ಲಿ ಖಾಸಗಿ ರಂಗದಲ್ಲಿ ಉಪ ನಗರಗಳನ್ನು ಕಟ್ಟುತ್ತಿದ್ದಾರೆ. ವೆಸ್ಟ್‌ಬೆಂಗಾಲ್ ಗವರ್ನಮೆಂಟ್ ಅವರಿಗೆ ಪರ್ಮಿಷನ್ ಕೊಟ್ಟಿದೆ ಮತ್ತು ಅದರ ಜೊತೆಗೆ ಇನ್ನೂ ಅನುಕೂಲತೆಗಳನ್ನು ಮಾಡಿ ಕೊಡುತ್ತಿದೆ. ಇದೇನೂ ಹೊಸದಲ್ಲ. ಇವತ್ತು ಜಗತ್ತಿನ ಯಾವುದೇ ರಾಷ್ಟ್ರ ತೆಗೆದುಕೊಳ್ಳಿ. ಇವತ್ತು ನಮ್ಮ ದೇಶದಲ್ಲಿರುವಂತಹ ಯಾವುದೇ ರಾಜ್ಯವನ್ನು ತೆಗೆದುಕೊಳ್ಳಿ. ಅದು ಕಮ್ಯುನಿಸ್ಟ್ ಆಡಳಿತ ಮಾಡುತ್ತಿದೆಯೋ, ಬಿಜೆಪಿ ಆಡಳಿತ ಮಾಡುತ್ತಿದೆಯೋ? ಕಾಂಗ್ರೆಸ್ ಆಡಳಿತ ಮಾಡುತ್ತಿದೆಯೋ? ಎಲ್ಲಾ ರಾಜ್ಯಗಳಲ್ಲಿಯೂ ಕೂಡ ನೀವು ಖಾಸಗಿ ವಲಯದವರನ್ನು ಕರೆಸಿ ಅವರಿಗೆ ಬಂಡವಾಳ ಹೂಡಿ, ಮೂಲಭೂತ ಸೌಕರ್ಯಗಳಿಗೆ ಹಣ ಹೂಡಿ ಎಂದು ಹೇಳಿದರೆ ಅವರು ಯಾರೂ ಚಾರಿಟಿಗೆ ಇಲ್ಲಿ ಬರುವುದಿಲ್ಲ. ಅವರು ಯಾರೂ ಚಾರಿಟಿಗಾಗಿ ಬರುವುದಿಲ್ಲ. Nodoubt, it is a business. ಅದರ ಜೊತೆಗೆ ಜನರಿಗೆ ಕೂಡ ಅನುಕೂಲತೆ ಆಗಬೇಕು. ಆ ಹಿನ್ನೆಲೆಯಲ್ಲಿ ಈ ದಿನಮಾನಗಳು ಬದಲಾದಂತಹ ದಿನಮಾನಗಳಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಏನು ಇವತ್ತು ಹಣದ ಕ್ರೋಢೀಕರಣ ಆಗುತ್ತದೆ ಮತ್ತು ಅವರು ಮೂಲಭೂತ ಸೌಕರ್ಯಗಳನ್ನು ಕೊಡಬೇಕಾಗಿದೆ, ಅವರು ಎಲ್ಲರಿಗೂ ಕೊಡಬೇಕಾಗಿದ್ದರೆ, ನಾವು ಸರ್ಕಾರ ನಡೆಸುತ್ತಿರುವವರು ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡಬೇಕಾಗುತ್ತದೆ

ಎನ್ನುವಂತಹ ಮಾತನ್ನು ನಾನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾನು ನೋಡಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ರಾಷ್ಟ್ರದಲ್ಲಿ ಕೂಡ ಇವತ್ತು ಮಾನ್ಯ ಸದಸ್ಯರಿಗೂ, ತಮಗೂ ಗೊತ್ತಿದೆ. ಮಹಾರಾಷ್ಟ್ರದಲ್ಲಿ ಡಾಬೋಲ್ ಪ್ರಾಜೆಕ್ಟ್ ತೆಗೆದುಕೊಂಡರು. ಮಹಾರಾಷ್ಟ್ರದ ವಿದ್ಯುತ್ ರಂಗದಲ್ಲಿ ತೆಗೆದುಕೊಂಡರು. ಮುಂದೆ ಮಹಾರಾಷ್ಟ್ರ ಸರ್ಕಾರ ಮತ್ತು ಈಗೇನು ಡಾಬೋಲ್ ಪ್ರಾಜೆಕ್ಟ್ ಮಾಡಿದಂತಹ ವಿದೇಶಿ ಎನ್‌ರಾನ್ ಕಂಪನಿಯವರಿಗೆ ಒಪ್ಪಂದದಲ್ಲಿ ಜಗಳ ಆಯಿತು. ಜಗಳವಾಗಿ ಇವತ್ತು ನಿಂತು ಹೋಗಿದ್ದರಿಂದ ವಿದ್ಯುಚ್ಛಕ್ತಿಯ ಉತ್ಪಾದನೆ ಕಡಿಮೆ ಆಗಿ ಇವತ್ತು ಮಹಾರಾಷ್ಟ್ರ ತೊಂದರೆಯಲ್ಲಿದೆ. ಮತ್ತು ಮಹಾರಾಷ್ಟ್ರದಲ್ಲಿ ಕೂಡ ಈ ಡಾಬೋಲ್ ಪ್ರಾಜೆಕ್ಟ್ ಮಾಡಿದಾಗ ಅಲ್ಲಿ ಕಾಂಗ್ರೆಸ್ ಸರ್ಕಾರ ಇರಲಿಲ್ಲ. ಶಿವಸೇನೆ ಮತ್ತು ಬಿಜೆಪಿ ಆಡಳಿತದಲ್ಲಿತ್ತು. ಅವರು ಏಕೆ ಇದಕ್ಕೆ ಪ್ರೋತ್ಸಾಹ ಮಾಡಿದರು? ಅದರ ಜೊತೆಗೆ ಅಧ್ಯಕ್ಷರೇ, ತಮಗೆ ಗೊತ್ತಿದೆ. ಮಹಾರಾಷ್ಟ್ರದ ಪೂನಾದಿಂದ ಬಾಂಬೆಗೆ ಎಂಟು ಲೇನ್‌ಗಳ ರಸ್ತೆ ಆಗಿದೆ. One of the best roads ಮಹಾರಾಷ್ಟ್ರ ಸರ್ಕಾರ ಸಂಪೂರ್ಣವಾಗಿ ಜಮೀನು ಉಚಿತವಾಗಿ ಕೊಟ್ಟಿದೆ. Not even a Rupee has not been collected in Puna to Bombay Highway. ಇವತ್ತು ನಾವೊಂದು ವಿಚಾರಗಳಲ್ಲಿ ಬದಲಾವಣೆ ಆಗಬೇಕು. ಅದಕ್ಕೇ ನಾನು ಹೇಳಿದ್ದು, ಕೇವಲ ನಾವು ಸಂಪ್ರದಾಯ ವಿಚಾರಗಳನ್ನು ಇಟ್ಟುಕೊಂಡರೆ ಅಭಿವೃದ್ಧಿ ಆಗಲಿಕ್ಕೆ ಸಾಧ್ಯ ಇಲ್ಲ. ಕಾಲದ ಬದಲಾವಣೆ ಆಗಿದೆ. ಆ ಹಿನ್ನೆಲೆಯಲ್ಲಿ ಇವತ್ತು ಕರ್ನಾಟಕದಲ್ಲೂ ಕೂಡ ಈ ಮೂಲಭೂತ ಸೌಕರ್ಯಗಳನ್ನು ಕೇವಲ ಸರ್ಕಾರದಿಂದ ಮಾತ್ರ ಮಾಡಲಿಕ್ಕೆ ಸಾಧ್ಯವಿಲ್ಲ. ಹಣಕಾಸಿನ ತೊಂದರೆ ಇದೆ. ನಮಗೆ ಬಹಳವಾದ ಸಾಮಾಜಿಕ ಸಮಸ್ಯೆಗಳು ಇದ್ದಾವೆ. ಮತ್ತು ಅದರ ಜೊತೆಗೆ ಜನಸಂಖ್ಯೆಯ ಸಮಸ್ಯೆ ಬಹಳ ಬೃಹದಾಕಾರವಾದಂತಹ ಸಮಸ್ಯೆ ನಮ್ಮ ದೇಶದ ಮುಂದೆ ಇದೆ. ಇವತ್ತು ನಮ್ಮ ದೇಶದಲ್ಲಿ 103 ಕೋಟಿ ಜನಸಂಖ್ಯೆ ಇದೆ. 100ಕ್ಕೆ 40ಕ್ಕಿಂತ ಹೆಚ್ಚು ಕಡು ಬಡವರು ಇದ್ದಾರೆ. ಅವರಿಗೆ ಎಲ್ಲಾ ತರಹದ ಸಬ್ಸಿಡಿ, ಮೂಲಭೂತ ಸೌಕರ್ಯಗಳನ್ನು ಕೊಡಬೇಕಾಗಿದೆ. ಇದರಿಂದ ಸರ್ಕಾರದ ಹಣ ಸಾಕಷ್ಟು ಹೋಗುತ್ತಿದೆ, ಆದರೆ ಬೇರೆ ವರ್ಗದ ಕೈಗಾರಿಕೆ, ಬೇರೆ ಬೇರೆ ರಂಗದಲ್ಲಿ ಕೂಡ ನಾವು ಮೂಲಭೂತ ಸೌಕರ್ಯಗಳನ್ನು ಮಾಡಬೇಕಾಗಿದ್ದರೆ ಅನಿವಾರ್ಯವಾಗಿ ಖಾಸಗಿ ರಂಗವನ್ನು ಆಹ್ವಾನ ಮಾಡುವಂತಹ ಪ್ರಸಂಗ ಇವತ್ತು ನಮ್ಮ ರಾಷ್ಟ್ರಕ್ಕೆಬಂದಿದೆ ಮತ್ತು ನಮ್ಮ ರಾಜ್ಯಕ್ಕೆ ಕೂಡ ಇವತ್ತು ಬಂದಿದೆ. ಆ ಹಿನ್ನೆಲೆಯಲ್ಲಿ ಇವತ್ತು ಬೆಂಗಳೂರು ನಗರ. ಏನು ಇವತ್ತು ಬೆಂಗಳೂರು ನಗರ ಮತ್ತು ಬೆಂಗಳೂರು ಸುತ್ತ ಮುತ್ತ ಹಲವಾರು ಯೋಜನೆಗಳು ಖಾಸಗಿ ರಂಗದಲ್ಲಿ ನಡೆದಿದೆ. ಈ ಸಂದರ್ಭಧಲ್ಲಿ ನಾನು ತಮ್ಮ ಗಮನಕ್ಕೆ ಒಂದು ವಿಚಾರ ತರಲಿಕ್ಕೆ ಇಷ್ಟಪಡುತ್ತೇನೆ. ಇವತ್ತು ಬೆಂಗಳೂರು ನಗರ ಏಷ್ಯಾ ಖಂಡದಲ್ಲಿ ಅತ್ಯಂತ ಜನಸಾಂದ್ರತೆಯ ನಗರವಾಗುತ್ತಿದೆ. ತಮಗೂ ಗೊತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ, ಕಳೆದ

ದಶಕದಲ್ಲಿ ಸುಮಾರು ಎಂಟು ಪರ್ಸೆಂಟ್ ಗ್ರೋತ್ ರೇಟ್ ಅನ್ನು ಬೆಂಗಳೂರು ಕಂಡಿದೆ. ಇವತ್ತು ಜನಸಂಖ್ಯೆ ವಿಪರೀತ ಆಗುತ್ತಿದೆ. ಮೂಲಭೂತ ಸೌಕರ್ಯಗಳನ್ನು ನಾವು ಬೆಂಗಳೂರು ನಗರಕ್ಕೆ ಕೊಡಬೇಕು. ಇವತ್ತು ಬೆಂಗಳೂರು ಅಂತರಾಷ್ಟ್ರೀಯ ಮಟ್ಟದಲ್ಲಿ ಸುಮಾರು 10–11ನೇ ಸ್ಥಾನದಲ್ಲಿ ಇದೆ. ಬೆಂಗಳೂರು ನಗರಕ್ಕೆ ಬೇಕಾದಂತಹ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅದರಲ್ಲಿ ಕುಡಿಯುವ ನೀರು ಇರಬಹುದು, ರಸ್ತೆ ಇರಬಹುದು, ಉಪ ನಗರ ಇರಬಹುದು, ವಿದ್ಯುಚ್ಛಕ್ತಿ ಇರಬಹುದು. ಈ ಎಲ್ಲಾ ಕೆಲಸಗಳನ್ನು ನಾವು ಸರ್ಕಾರದಿಂದ ಮಾಡಲಿಕ್ಕೆ ಸಾಧ್ಯ ಇಲ್ಲ ಎನ್ನುವಂತಹ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ಹಣಕಾಸಿನ ಮುಗ್ಗಟ್ಟಿನಿಂದ ಮಾಡಲಿಕ್ಕೆ ಸಾಧ್ಯವಿಲ್ಲ. ಹೀಗಾಗಿ ಇವತ್ತು ಬೆಂಗಳೂರು ನಗರ ಐಟಿ ಕ್ಯಾಪಿಟಲ್ ಆಗಿದೆ. ಇವತ್ತು ಬೇರೆ ಬೇರೆ ರಂಗದಲ್ಲಿ ಏನು ಬೆಂಗಳೂರು ಮುಂದೆ ಬಂದಿದೆ? ಬೆಂಗಳೂರಿನಿಂದ ಇವತ್ತು ಉಪ ನಗರ ಆಗಬೇಕಾಗಿದೆ. ಅಧ್ಯಕ್ಷರೇ, ತಮಗೆ ಗೊತ್ತಿದೆ, ಬೆಂಗಳೂರಿನಲ್ಲಿ ಜನಸಾಂದ್ರತೆಯ ಜೊತೆಗೆ ನಮ್ಮಲ್ಲಿ ಮೂಲಭೂತ ಸೌಕರ್ಯಗಳು ಬಹಳ ಕಡಿಮೆ ಇವೆ. ಒಂದು ಕಡೆ ಮೂಲಭೂತ ಸೌಕರ್ಯಗಳು ಕಡಿಮೆ ಇರುವುದರಿಂದ ಉಪ ನಗರಗಳ ಸೃಷ್ಟಿ ಆಗಬೇಕಾಗಿದೆ. ಹೀಗಾಗಿ ಇವತ್ತು ತಮಗೆ ಗೊತ್ತಿರಬೇಕು. ಹಿಂದೂ ಪೇಪರನ್ನು ತಾವು ಓದಿರಬಹುದು. ಇವತ್ತಿನ ಹಿಂದೂ ಪತ್ರಿಕೆಯಲ್ಲಿ Horns: How much is too much ಎನ್ನುವಂತಹ ವಿಚಾರವನ್ನು ನಾನು ಓದಿದ್ದೇನೆ. ಇದು ನೂರಕ್ಕೆ ನೂರು ಸತ್ಯ.

**ಶ್ರೀ ಎಸ್. ರಾಜೇಂದ್ರನ್** : ಒಂದು ನಿಮಿಷ.

**ಶ್ರೀ ಬಸವರಾಜ ರಾಯರೆಡ್ಡಿ** : ನಾನು ಯೀಲ್ಡ್ ಆಗಿಲ್ಲ. ಇವತ್ತು ಏನಾಗಿದೆ?

**ಶ್ರೀ ಎಸ್. ರಾಜೇಂದ್ರನ್** : ಅಧ್ಯಕ್ಷರೆ, ನಾವು ಮಾತನಾಡುವ ಸಂದರ್ಭದಲ್ಲಿ ಪೇಪರ್ ಏನಾದರೂ ತೋರಿಸಿದರೆ, ಪೇಪರ್ ತೋರಿಸಿ ಮಾತನಾಡಬಾರದು ಎನ್ನುತ್ತೀರಿ.

**ಶ್ರೀ ಬಸವರಾಜ ರಾಯರೆಡ್ಡಿ** : ಬೆಂಗಳೂರು ನಗರದಲ್ಲಿ ಒಂದು ಕಡೆ ಸೌಂಡ್ ಪೊಲ್ಯೂಷನ್, ಒಂದು ಕಡೆ ಎನ್‌ವಿರಾನ್‌ಮೆಂಟ್ ಪೊಲ್ಯೂಷನ್.

**ಶ್ರೀ ಎಸ್. ರಾಜೇಂದ್ರನ್** : ಈಗ ಅವರು ಪತ್ರಿಕೆ ತೋರಿಸಿ ಮಾತನಾಡುವ ಅವಶ್ಯಕತೆ ಇಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ** : ಒಂದು ಕಡೆ ಸೌಂಡ್ ಪೊಲ್ಯೂಷನ್ ಮತ್ತು ಬೇರೆ ಬೇರೆ ಇನ್‌ಫ್ರಾಸ್ಟ್ರಕ್ಚರ್‌ಗಳ ಕೊರತೆ ಇರುವುದರಿಂದ ಪ್ರತಿ ನಿತ್ಯ ಬೆಂಗಳೂರಿನಲ್ಲಿ ಬಹಳ ತೊಂದರೆಯನ್ನು ಎಲ್ಲಾ ನಾಗರೀಕರೂ ಅನುಭವಿಸುತ್ತಿದ್ದಾರೆ.

ಹೀಗಾಗಿ ತಾವು ಅರ್ಥ ಮಾಡಿಕೊಳ್ಳಬೇಕು. ಉಪ ನಗರಗಳನ್ನು ಮತ್ತು ಬೇರೆ ಬೇರೆ ರಸ್ತೆಗಳ ಕಾಮಗಾರಿಗಳನ್ನು ಖಾಸಗಿ ರಂಗದಲ್ಲಿ ನಾವು ಅನಿವಾರ್ಯವಾಗಿ ಕೈಗೊಳ್ಳುವಂತಹ ಪ್ರಸಂಗ ಇವತ್ತು ಯಾವುದೇ ಪಕ್ಷದ ಸರ್ಕಾರಕ್ಕೆ ಬಂದಿದೆ. ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ ನಮ್ಮ ರಾಜ್ಯದಲ್ಲಿ ಸುಮಾರು 50 ಲಕ್ಷ ವಾಹನಗಳು ಇವೆ. ಆದರೆ, ಬೆಂಗಳೂರಿನಲ್ಲಿ 20 ಲಕ್ಷಕ್ಕಿಂತ ಹೆಚ್ಚು ವಾಹನಗಳು ನೋಂದಣಿಯಾಗಿವೆ ಮತ್ತು ಪ್ರತಿ ದಿವಸ 800 ಹೊಸ ವಾಹನಗಳು ಬೆಂಗಳೂರಿನ

ರಸ್ತೆಯಲ್ಲಿ ಬರುತ್ತವೆ. ಬೆಂಗಳೂರಿನಲ್ಲಿ ಒಳ್ಳೆಯ ರಸ್ತೆಗಳಿಲ್ಲ. ಬೆಂಗಳೂರಿನಲ್ಲಿ ಸುಮಾರು 10 ಕಿ.ಮೀ. ದೂರ ಕ್ರಮಿಸಬೇಕಾದರೆ ಕನಿಷ್ಟ 1 ಗಂಟೆ ಬೇಕಾಗುತ್ತದೆ. ಇಂತಹ ಪರಿಸ್ಥಿತಿ ಉದ್ಭವವಾಗಿದೆ. ಇದರ ಜೊತೆಗೆ pollution is too much in Bangalore. ಇವತ್ತು sulphur ಪ್ರಮಾಣ ಇರಬಹುದು, pollution watch ನೋಡಿರಬಹುದು; ಸ್ಟಾರ್ ನ್ಯೂಸ್‌ನಲ್ಲಿ ಪ್ರತಿ ದಿವಸ ಬರುತ್ತದೆ. ಬೆಂಗಳೂರಿನಲ್ಲಿ highest sulfur and highest Carbon Monoxide ಇದೆ. ಹೀಗಾಗಿ pollution ಅನ್ನು ನಾವು ತಡೆ ಹಿಡಿಯಬೇಕಾಗಿದ್ದರೆ, ನಾನು ಉಪ ನಗರಗಳನ್ನು ಸೃಷ್ಟಿಸುವ ಮತ್ತು ಬೇರೆ ಕಡೆಗಳಲ್ಲಿ ರಸ್ತೆಗಳನ್ನು ನಿರ್ಮಿಸುವಂತಹ ಅವಶ್ಯಕತೆ ಇದೆ. ಅದರ ಜೊತೆಗೆ horn pollution ಏನಿದೆ, ಬೆಂಗಳೂರಿನಲ್ಲಿ ಇವತ್ತು 92–95ರಷ್ಟು ಡೆಸಿಬಲ್‌ಗೆ ತಲುಪಿದೆ. ಒಬ್ಬ ವ್ಯಕ್ತಿಯ ಕಿವಿ ಸರಿಯಾಗಿರಬೇಕಾದರೆ, 42–45 ಡೆಸಿಬಲ್‌ಕ್ಕಿಂತ ಹೆಚ್ಚಿರಬಾರದು ಎಂದು ಹೇಳಿದ್ದಾರೆ. ಆದರೆ, ಇವತ್ತು 92–95 ಡೆಸಿಬಲ್‌ಗಳವರೆಗೆ ತಲುಪಿದೆ. ಈ ಹಿನ್ನೆಲೆಯಲ್ಲಿ ಹಿಂದಿನ ಸರ್ಕಾರಗಳು ಈ ಉಪ ನಗರಗಳನ್ನು ಮತ್ತು ರಸ್ತೆಗಳನ್ನು ನಿರ್ಮಾಣ ಮಾಡಿ ಬೆಂಗಳೂರಿನ ಜನಸಾಂದ್ರತೆ ಕಡಿಮೆ ಮಾಡಬೇಕು, self-made city ನಿರ್ಮಾಣ ಮಾಡಿ ಜನರು ಬೆಂಗಳೂರಿಗೆ ಬರದಂತೆ ನೋಡಿಕೊಳ್ಳಬೇಕೆಂಬ ಒಂದು ಒಳ್ಳೆಯ ವಿಚಾರವನ್ನು ನಮ್ಮ ಕರ್ನಾಟಕ ಸರ್ಕಾರ ಪ್ರಾರಂಭ ಮಾಡಿತು. ಆ ಹಿನ್ನೆಲೆಯಲ್ಲಿ ಕೆಲವು ಖಾಸಗಿ ಬಂಡವಾಳಗಾರರನ್ನು ಹಿಂದಿನ ಸರ್ಕಾರ ಕೂಡ ಆಹ್ವಾನಿಸಿದೆ. ಆ ಸಂದರ್ಭದಲ್ಲಿ ಕೆಲವು ಮಾನ್ಯ ಸದಸ್ಯರುಗಳು ಮತ್ತು ಕೆಲವರು ಬಹಿರಂಗವಾಗಿ ಕೂಡ ಅನಾವಶ್ಯಕವಾಗಿ ಖಾಸಗಿ ಬಂಡವಾಳಗಾರರಿಗೆ ಸರ್ಕಾರ ಬಹಳಷ್ಟು ಅನುಕೂಲತೆ ಮಾಡಿಕೊಟ್ಟಿದೆ. ತನ್ಮೂಲಕ ಇದರಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆದಿದೆ ಎಂಬ ಅನುಮಾನ ವ್ಯಕ್ತಪಡಿಸುತ್ತಾರೆ. ಅದರ ಬಗ್ಗೆ ನಾನು ಆಕ್ಷೇಪಣೆ ಮಾಡುವುದಿಲ್ಲ. ಆದರೆ, ಅಲ್ಲಿ ಏನು ನಡೆದಿದೆ ಎಂಬುದರ ಸತ್ಯ ಗೊತ್ತಾಗಬೇಕು. ಅನವಶ್ಯಕವಾಗಿ ನಾವು ಬೇರೆ ಯಾರಾದರೊಬ್ಬ ವ್ಯಕ್ತಿಗಳನ್ನು ದೂಷಿಸಿದರೆ ಮುಂದೆ ಯಾರೂ ಕೂಡ ಖಾಸಗಿ ಬಂಡವಾಳ ಹೂಡಿಕೆದಾರರು ಕರ್ನಾಟಕಕ್ಕೆ ಬರುವುದಿಲ್ಲ. ಇದರಿಂದ ನಮಗೆ ತೊಂದರೆಯಾಗುತ್ತದೆ. ಅದಕ್ಕಾಗಿ ಒಂದು ಉದಾಹರಣೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಇದರ ಅರ್ಥ ನಾನು ಯಾವುದೇ ಕಂಪೆನಿಯ ಪರವಾಗಿ ಮಾತನಾಡುತ್ತೇನೆ ಎಂದಾಗಲಿ, ಯಾರ ಪರವಾಗಿಯಾದರೂ advocate ಮಾಡುತ್ತೇನೆಂದಾಗಲಿ ದಯವಿಟ್ಟು ಭಾವಿಸಬೇಡಿ. ಇಲ್ಲಿ ಹೇಗೆ ನಡೆದಿದೆ ಎಂಬುದರ ಉದಾಹರಣೆಯನ್ನು ನಾನು ಕೊಡುತ್ತಿದ್ದೇನೆ. ಖಾಸಗಿ ಬಂಡವಾಳಗಾರರಿಗೆ ನಾವು ಪ್ರೋತ್ಸಾಹ ಕೊಡದಿದ್ದರೆ ಮುಂದಾಗುವ ಪರಿಣಾಮದ ಬಗ್ಗೆ ಒಂದು ವಿಚಾರ ಮಾತ್ರ ಮಾತನಾಡುತ್ತಿದ್ದೇನೆಯೇ ಹೊರತು ನಾನು ಇಲ್ಲಿ ಯಾರ ಪರವಾಗಿಯೂ ಮಾತನಾಡುತ್ತಿಲ್ಲ ಮತ್ತು ನಾನು ಯಾರ ಪರವಾಗಿಯೂ ಇಲ್ಲಿ advocate ಮಾಡುತ್ತಿಲ್ಲ. "ಭೂ ಹಗರಣ ನಡೆದಿದೆ, ಬೇರೆ ಬೇರೆ land grab

ಮಾಡಿದ್ದಾರೆ, ಸರ್ಕಾರ ಬೇಕಾಬಿಟ್ಟಿ ಕೊಟ್ಟಿದೆ" ಎಂದು ಏನೇನು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ, ಅದಕ್ಕೆ ಸರ್ಕಾರದ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳ ಉತ್ತರಿಸುತ್ತಾರೆ. ಆದರೆ, ನನ್ನ ಚಿಂತನೆ ಏನೆಂದರೆ, ನಾವು ಈ ತರಹದ ವಿಚಾರಗಳನ್ನು ಮಾಡಿದರೆ, ಮುಂಬರುವ ದಿನಗಳಲ್ಲಿ ಕಷ್ಟವಾಗುತ್ತದೆ. ಖಾಸಗಿ ಬಂಡವಾಳಗಾರರು ಬರದಿದ್ದರೆ ಕಷ್ಟವಾಗುತ್ತದೆ. ಸರ್ಕಾರದಲ್ಲಿ ಹಣ ಇಲ್ಲ. ಅದಕ್ಕೋಸ್ಕರ ನಾವು ಬದಲಾದ ದಿನಮಾನಗಳಲ್ಲಿ ಖಾಸಗಿ ಬಂಡವಾಳದಾರರಿಗೆ ಪ್ರೋತ್ಸಾಹ ಕೊಡಬೇಕಾಗುತ್ತದೆ. ಈ ಸದನದ ಎಲ್ಲಾ ಪಕ್ಷಗಳ ಸದಸ್ಯರು ಇದಕ್ಕೆ ಬೆಂಬಲ ಕೊಡಬೇಕಾಗುತ್ತದೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. 1995ರಲ್ಲಿ ಬೆಂಗಳೂರು ನಗರದ ಜನಸಾಂದ್ರತೆ ಕಡಿಮೆಯಾಗಬೇಕು, pollution ಕಡಿಮೆಯಾಗಬೇಕು, traffic ಕಡಿಮೆಯಾಗಬೇಕು, self-made city ಆಗಬೇಕೆಂದು ಹಿಂದಿನ ಮಾನ್ಯ ದೇವೇಗೌಡರ ಸರ್ಕಾರ ಇದರ ಬಗ್ಗೆ ಬಹಳ ಗಂಭೀರವಾಗಿ ವಿಚಾರ ಮಾಡಿತು. ಮತ್ತು ಅದರ ಜೊತೆಗೆ ಏನು ಇವತ್ತು ಬೆಂಗಳೂರು–ಮೈಸೂರು ಕಾರಿಡಾರ್ ಪ್ರಾಜೆಕ್ಟ್ ಬಂದಿದೆ, ಇದು ಕೇವಲ ರಸ್ತೆಗಳನ್ನು ನಿರ್ಮಿಸುವುದಷ್ಟೇ ಅಲ್ಲ. ಇದರ ಕೆಲಸವೇನೆಂದರೆ, ನಾನು ಈಗಾಗಲೇ ಹೇಳಿದಂತೆ, ಏನು ಜನಸಾಂದ್ರತೆ ಇದೆ, ಅದನ್ನು ಕಡಿಮೆ ಮಾಡಿ self-made cities.. self-made cities ಇದ್ದವರು ಬೆಂಗಳೂರಿಗೆ ಏಕೆ ಬರುತ್ತಾರೆ? ಆ ಹಿನ್ನೆಲೆಯಲ್ಲಿ self-made town ಮಾಡುವುದರ ಜೊತೆಗೆ ಇವತ್ತು ಏನು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೇ ಇದೆ, ಇದರಿಂದ ಕೇವಲ ಮೈಸೂರಿಗಷ್ಟೇ ಅನುಕೂಲವಾಗುವುದಿಲ್ಲ. ದಕ್ಷಿಣ ಭಾರತದ ತಿರುವನಂತಪುರ, ಕೊಚ್ಚಿನ್ ಮತ್ತು ಕೊಯಮತ್ತೂರಿಗೂ ಹೋಗುವುದಕ್ಕೆ ಅನುಕೂಲವಾಗುತ್ತದೆ. Coimbatore is such as important city. Self-made cities ಆಗುವುದರಿಂದ ದಕ್ಷಿಣದ ಎಲ್ಲಾ ರಾಜ್ಯಗಳಿಗೂ ಅನುಕೂಲವಾಗುತ್ತದೆಂಬ ಮಾತನ್ನು ಹೇಳುತ್ತೇನೆ. ಇದು ಕೇವಲ ಮೈಸೂರಿಗಷ್ಟೇ ಅಲ್ಲದೆ, ಇಡೀ ಕರ್ನಾಟಕ ರಾಜ್ಯಕ್ಕೂ ಅನುಕೂಲವಾಗುತ್ತದೆ. ಇವತ್ತು ಕೇವಲ ನಾವು ನಮ್ಮ ವಿಚಾರವನ್ನು ಇಲ್ಲಿಗಷ್ಟೇ ಸೀಮಿತಗೊಳಿಸುವುದಿಲ್ಲ. ಇಡೀ ದೇಶದ ವಿಚಾರವನ್ನು ನಾವು ಗಮನಿಸಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಇವತ್ತು.

**ಶ್ರೀ ವಾಟಾಳ್ ನಾಗರಾಜ್ :** ನಾವು, ಮಾನ್ಯ ಸಿದ್ಧರಾಮಯ್ಯನವರು ಹೋಗುವುದಕ್ಕೆ ರಸ್ತೆಯೇ ಇಲ್ಲ. ಬಹಳ ಕಷ್ಟದಲ್ಲಿ ನಡೆದುಕೊಂಡು ಹೋಗುತ್ತಿದ್ದೇವೆ.

**ಶ್ರೀ ಬಸವರಾಜ ರಾಯರೆಡ್ಡಿ :** ಆ ರಸ್ತೆಯಿಂದ ನನಗಂತೂ ಅನುಕೂಲವಾಗುವುದಿಲ್ಲ. ಏಕೆಂದರೆ ನಾನು ಮೈಸೂರಿಗೆ 10 ವರ್ಷಕ್ಕೊಮ್ಮೆ ಹೋಗುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ವಾರಕ್ಕೊಂದು ಸಲ ಆ ರಸ್ತೆಯಲ್ಲಿ ಹೋಗಬೇಕಾಗುತ್ತದೆ.

**ಶ್ರೀ ವಾಟಾಳ್ ನಾಗರಾಜ್ :** ನಾನು ಪ್ರತಿ ದಿವಸ ಹೆಲಿಕ್ಯಾಪ್ಟರ್‌ನಲ್ಲಿ ಹೋಗುತ್ತಿದ್ದೇನೆ! ಏಕೆಂದರೆ ನಮಗೆ ರಸ್ತೆ ಇಲ್ಲವಲ್ಲಾ. ನೀವು ಮಾಡುವ ರಸ್ತೆಗೋಸ್ಕರ ನಾವು ಕಾದಿದ್ದೇವೆ. ನೀವು ಕಲ್ಲು, ಸಿಮೆಂಟ್ ಹಾಕುವುದಕ್ಕೋಸ್ಕರ ಕಾದಿದ್ದೇವೆ.

**ಶ್ರೀ ಬಸವರಾಜ ರಾಯರೆಡ್ಡಿ** : 1995ರ ಫೆಬ್ರವರಿ 28ರಂದು ಒಂದು ತಿಳವಳಿಕೆ ಪತ್ರ (MOU)ವನ್ನು ಕರ್ನಾಟಕ ಸರ್ಕಾರ ಮತ್ತು ಕಲ್ಯಾಣಿ ಗ್ರೂಪ್ VHB ಮತ್ತು SAB ಅಮೆರಿಕಾ ಕಂಪೆನಿ, ಈ ಮೂರು consortium ಸೇರಿ "ರಸ್ತೆ, ಉಪ ನಗರ ಮತ್ತು ಉಪ ನಗರಕ್ಕೆ ಬೇಕಾದ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು, ಅಂದರೆ, ಅದರಲ್ಲಿ water supply, electricity, all civic amenities ಈ ಎಲ್ಲಾ ಸೌಕರ್ಯಗಳನ್ನು ನಾವು ಮಾಡಿಕೊಡುತ್ತೇವೆ" ಎನ್ನುವಂತಹ ವಿಚಾರ ತಿಳಿಸಿದ್ದರಿಂದ, ಅವತ್ತಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ದೇವೇಗೌಡರು ಮತ್ತು ಬೋಸ್ಟನ್ನಿನ ಗವರ್ನರ್ ವಿಲಿಯಂರವರು, ಎಲ್ಲರೂ ಸೇರಿ ಒಂದು MOU ಮಾಡಿದ್ದಕ್ಕಾಗಿ ಆಗಿನ ದೇವೇಗೌಡರ ನೇತೃತ್ವದ ಇಡೀ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ. ಅವರು ಮುಂದಾಲೋಚನೆ ಮಾಡಿ ಕೇವಲ ಈ ಪ್ರಾಜೆಕ್ಟ್‌ನಿಂದ ನಮ್ಮ ಮುಂದಿನ ಚುನಾವಣೆಗೆ ಅನುಕೂಲವಾಗುತ್ತದೆಂದು ಹಿಂದಿನ ಸರ್ಕಾರ ಯೋಚನೆ ಮಾಡದೆ ಮುಂದಿನ ಜನಾಂಗದ ಭವಿಷ್ಯತ್ತಿಗಾಗಿ ಅನುಕೂಲವಾಗುತ್ತದೆಂದು ದೇವೇಗೌಡರ ಸರ್ಕಾರ ಒಂದು ಒಳ್ಳೆಯ ಕೆಲಸವನ್ನು ಮಾಡಿತು. ಅದಕ್ಕೋಸ್ಕರ, ನಾನು ಈ ಸಂದರ್ಭದಲ್ಲಿ ಮಾನ್ಯ ದೇವೇಗೌಡರನ್ನು ಮತ್ತು ಅವರ ಸರ್ಕಾರವನ್ನು ಅಭಿನಂದಿಸುತ್ತೇನೆ. ಮುಂದೆ ಅವರು ಪ್ರಧಾನ ಮಂತ್ರಿಗಳಾದ ನಂತರ ಜೆ.ಹೆಚ್. ಪಟೇಲರ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ, ಈ MOU ಅನ್ನು ಮುಂದುವರೆಸಿಕೊಂಡು ಹೋಗುವ ಮೂಲಕ ಆ ಸಂದರ್ಭದಲ್ಲಿ ಮೊದಲನೇ ಹಂತದಲ್ಲಿ ಈ ಅಗ್ರಿಮೆಂಟ್ ಆದಾಗ ಕಲ್ಯಾಣಿ ಗ್ರೂಪ್, VHB, SAB of America ಇವರಿಗೆ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈವೇ ಮಾಡುವುದಕ್ಕೆ ಸುಮಾರು 7,748 ಎಕರೆ ಮತ್ತು ಟೌನ್‌ಷಿಪ್‌ಗೆ 14,710 ಎಕರೆ ಜಮೀನನ್ನು ಕೊಡಬೇಕೆಂಬ ವಿಚಾರದಲ್ಲಿ ಒಂದು ತಿಳವಳಿಕೆ ಪತ್ರ ಸಿದ್ಧವಾಯಿತು. ಮುಂದೆ ಬಂದಂತಹ ಜೆ.ಹೆಚ್. ಪಟೇಲರ ಸರ್ಕಾರ ಆ ಸಂದರ್ಭದಲ್ಲಿ ಈ ಮೂರು ಗ್ರೂಪ್‌ಗಳೇನಿವೆ, "ನಾವು ಈ ಮೂರೂ ಗ್ರೂಪ್‌ಗಳಲ್ಲಿರುವ ನಾವು ಸೇರಿಕೊಂಡು special purpose vehicle ಅನ್ನು ಮಾಡುತ್ತಿದ್ದೇವೆ, ಅದಕ್ಕೋಸ್ಕರ 'Nandi Infrastructure Corridor Enterprises' ಎಂಬ ಕಂಪೆನಿಯನ್ನು ಪ್ರಾರಂಭಿಸುತ್ತಿದ್ದೇವೆ. ಅದಕ್ಕೋಸ್ಕರ, ನೀವು ಒಪ್ಪಿಗೆ ಕೊಡಬೇಕು" ಎಂದು ಮೂರು ಕಂಪನಿಗಳು ಹೇಳಿದಾಗ, ಅಂದಿನ ಪಟೇಲರ ಸರ್ಕಾರ ಒಪ್ಪಿಕೊಂಡಿತು. ಅದಕ್ಕೂ ಹಿಂದೆ ಸನ್ಮಾನ್ಯ ದೇವೇಗೌಡರ ಸರ್ಕಾರ, ಈ 7 ಟೌನ್‌ಷಿಪ್ ಮಾಡಬೇಕೆಂದು MOUಗೆ ಒಪ್ಪಿಗೆ ನೀಡಿತ್ತಲ್ಲಾ, ಈ ವಿಚಾರದಲ್ಲಿ ಅದನ್ನು 5 ಟೌನ್‌ಷಿಪ್‌ಗೆ ಇಳಿಸಿ ಮತ್ತು ರಸ್ತೆ ಏನಿದೆ, ಇದನ್ನು BOOT (Built, Operate, Own and Transfer) ಅಂದರೆ, 30 ವರ್ಷಗಳ ಕಾಲದವರೆಗೆ ಗುತ್ತಿಗೆ ಆಧಾರದ ಮೇಲೆ ಒಪ್ಪಂದ ಮಾಡಿಕೊಳ್ಳಲಾಯಿತು. ಈ

ರಸ್ತೆ ನಿರ್ಮಾಣಕ್ಕೆ ಆಗುವ ವೆಚ್ಚವೇನಿದೆ, ಒಂದು ಪೈಸೆ ಕೂಡ ಸರ್ಕಾರದ್ದಲ್ಲ. ಸರ್ಕಾರ ಒಂದು ಪೈಸೆಯಷ್ಟೂ ಹಣವನ್ನು ಬೊಕ್ಕಸದಿಂದ ಕೊಡುತ್ತಿಲ್ಲ. ಎಲ್ಲಾ ಹಣವನ್ನು ಈ ಖಾಸಗಿ ಕಂಪೆನಿಯವರೇ ಭರಿಸುತ್ತಿದ್ದಾರೆ. ಮುಂದೆ 30 ವರ್ಷಗಳಾದ ಬಳಿಕ ನಿರ್ಮಾಣ ಮಾಡಿದ ರಸ್ತೆಗಳನ್ನು ಸರ್ಕಾರಕ್ಕೆ ಬಿಟ್ಟು ಹೋಗುತ್ತಾರೆ ಮತ್ತು ಏನು 5 ಟೌನ್‌ಷಿಪ್ ಮಾಡುತ್ತಿದ್ದಾರೆ, ಅದರಲ್ಲಿ civic amenitiesಗೆ ಕೊಡುವಂತಹ ಕಟ್ಟಡಗಳಿವೆ, ಆ ಎಲ್ಲಾ ಕಟ್ಟಡಗಳು ಮತ್ತು ಆಸ್ತಿಯನ್ನು ಸರ್ಕಾರಕ್ಕೆ ಕೂಡಲೇ ಬಿಟ್ಟು ಕೊಡುತ್ತಾರೆ. ಇದರಿಂದ ಕಂಪೆನಿಗೆ ಯಾವುದೇ ತರಹದ ಲಾಭವಿಲ್ಲ. ಇದು ಆದ ಮೇಲೆ ಒಂದು ಭೂಮಿಯನ್ನು ತೆಗೆದುಕೊಳ್ಳುವಂತಹ ಕೆಲಸ ಪ್ರಾರಂಭವಾಯಿತು. ಅದರಲ್ಲಿ ಸರ್ಕಾರದ್ದು ಕೇವಲ 5,500 ಎಕರೆ, ಉಳಿದಂತಹ ಸುಮಾರು 15,000 ಎಕರೆ ಜಮೀನು ರೈತರಿಂದ ಖರೀದಿ ಮಾಡಬೇಕು. ರೈತ ಮಾಲೀಕರಿಂದ ಖರೀದಿ ಮಾಡಬೇಕಾಗಿದ್ದರೆ ಇದರಲ್ಲಿ 100ಕ್ಕೆ 80ರಷ್ಟು ಕನ್ಸೆಂಟ್ ಅವಾರ್ಡ್ ಆಗಿದೆ. ಇದರಲ್ಲಿ ಯಾರದ್ದೂ ಕೂಡ ತೊಂದರೆ ಇಲ್ಲ. ರೈತರದ್ದೂ ಕೂಡ ತೊಂದರೆ ಇಲ್ಲ. ತೆಗೆದುಕೊಳ್ಳುವವರದ್ದೂ ಕೂಡ ತೊಂದರೆ ಇಲ್ಲ. ಮುಂದೆ ಬಂದಂಥ ಕೃಷ್ಣ ಸರ್ಕಾರ ಈ ಒಂದು ಯೋಜನೆಯಲ್ಲಿ ಅನುಮಾನ ಬೇಡ, ಇದು ಸಂಪೂರ್ಣವಾಗಿ ಪಾರದರ್ಶಕವಾಗಿರಬೇಕು ಎಂದು ಹೇಳಿ ಕೆಲವು ಕಂಡೀಷನ್ಸ್ ಹಾಕಿತು. ಅದರಲ್ಲಿ ಮುಖ್ಯವಾಗಿ, ಏನು ಈ ಟೌನ್‌ಶಿಪ್ ಅನ್ನು ಮಾಡುತ್ತಿದ್ದೀರಿ, ಆ ಟೌನ್‌ಶಿಪ್ ಮಾಡುವಂಥ ಸಂದರ್ಭದಲ್ಲಿ ನೀವು 1999-2000 ಇಸವಿಯ ಕಮರ್ಷಿಯಲ್ ವ್ಯಾಲ್ಯೂ ಅನ್ನು ಗೈಡ್‌ಲೈನ್ಸ್ ವ್ಯಾಲ್ಯೂ ಅನ್ನು ಕೊಡಬೇಕೆಂದು ಕೃಷ್ಣರವರ ಸರ್ಕಾರ ಹೇಳಿತು. ಅದರ ಜೊತೆಗೆ ಒಂದು ಡಿಫಾಲ್ಟ್ ಕ್ಲಾಸ್ ಹಾಕಿದ್ದಾರೆ. ನೀವು ಏನಾದರೂ ಅರ್ಥದಲ್ಲಿ....

**ಶ್ರೀ ಜೆ.ಸಿ. ಮಾಧುಸ್ವಾಮಿ :** ನಾನು ನಿನ್ನೆನೂ ಕೇಳಿದ್ದೇನೆ. ಈವತ್ತೂ ಕೇಳಿದ್ದೇನೆ. ಡಿಫೆಂಡ್ ಮಾಡುವುದು ಇವರ ಕೆಲಸನಾ? ಅಥವಾ ಸರ್ಕಾರದ ಕೆಲಸಾನಾ? ಅಧ್ಯಕ್ಷರಿಗೆ ಕೇಳುವುದು ನನ್ನ ಕೆಲಸ. I have every right to ask the Chair. He has started defending this. ನಾಳೆ ಸರ್ಕಾರ ಏನು ಉತ್ತರ ಕೊಡಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ. Who is he to say all these things? ಗೌರ್ನಮೆಂಟ್ ಇಲ್ಲವೇ? ಸರ್ಕಾರ ಸತ್ತು ಹೋಗಿದೆಯೇ? I am not allowing him to speak further until the Speaker gives his ruling.

**Mr. Chairman :** Let it not be in the form of reply. ಏಕೆಂದರೆ, ಸರ್ಕಾರದವರು ಹೇಳುತ್ತಾರಲ್ಲಾ?

**ಶ್ರೀ ಜೆ.ಸಿ. ಮಾಧುಸ್ವಾಮಿ :** ಸರ್ಕಾರ ಏನು ಹೇಳಬೇಕು, ಅದನ್ನೆಲ್ಲಾ ಇವರೇ ಹೇಳಿಕೊಂಡು ಹೋದರೆ? ನಾನು ಇವರಿಗೆ ಸಪ್ಲಿಮೆಂಟರೀಸ್ ಕೇಳುವುದಕ್ಕೆ ಆಗುತ್ತದೆಯೇ? ಕ್ಲಾರಿಫಿಕೇಷನ್ ಕೇಳಲು ಆಗುತ್ತದೆಯೇ? ಅವರ ಭಾಷಣ ಆದ ಮೇಲೆ ನಮಗೂ ಭಾಷಣ ಮಾಡಲು ಅವಕಾಶ ಕೊಡಿ. ನಾವು ಅದನ್ನು ಕೌಂಟರ್ ಮಾಡುತ್ತೇವೆ.

**ಛೇರ್ಮನ್ :** ನೀವು ಏನು ಹೇಳುತ್ತೀರಿ, ಅದಕ್ಕೆ ಅವರು ಕ್ಲಾರಿಫಿಕೇಶನ್ ಕೊಡಲಿಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಅದನ್ನೆಲ್ಲಾ ಸರ್ಕಾರ ಹೇಳಲಿ.

**ಶ್ರೀ ಬಸವರಾಜ ರಾಯರೆಡ್ಡಿ :** ಅವರಿಗೆ ಉತ್ತರ ಕೊಡುತ್ತಾ ಇಲ್ಲ. ಅಲ್ಲಿ ಏನು ನಡೆದಿದೆ ಎಂಬುದನ್ನು ಮಾತ್ರ ಹೇಳುತ್ತಿದ್ದೇನೆ.

**ಗೊಂದಲ**

**ಶ್ರೀ ಜೆ.ಸಿ. ಮಾಧುಸ್ವಾಮಿ :** ಅದಕ್ಕೆ ಪೂರಕವಾಗಿ ಏನಾದರೂ ಹೇಳುವುದಾದರೆ ಹೇಳಲಿ. Let him not defent it.

**Sri Basavaraja Raya Reddy :** I have not yielded.

**Sri J.C. Madhuswamy :** Please give a ruling.

**ಛೇರ್ಮನ್ :** ಹಾಗಾದರೆ ಬೇಗ ಮುಗಿಸಿ. ದಯವಿಟ್ಟು ಬೇಗ ಮುಗಿಸಿ.

**ಶ್ರೀ ಜೆ.ಸಿ. ಮಾಧುಸ್ವಾಮಿ :** ನಾವು ಪಾಯಿಂಟ್ ಆಫ್ ಆರ್ಡರ್‌ನಲ್ಲಿ ರೈಸ್ ಮಾಡಬಹುದು, ಅವರು ಈಲ್ಡ್ ಆಗಿ ಎಂದು ನಾನು ಹೇಳುತ್ತಿಲ್ಲ.

**ಛೇರ್ಮನ್ :** ಅವರಿಗೆ ರಿಪ್ಲೈ ಫಾರಂನಲ್ಲಿ ಹೇಳಬಾರದು ಎಂದು ಹೇಳಿಯಾಗಿದೆ.

**ಶ್ರೀ ಬಸವರಾಜ ರಾಯರೆಡ್ಡಿ :** ಆ ದೃಷ್ಟಿಕೋನದಿಂದ ನಾನು ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹೇಳಿದಂತೆ ನಾನು ಸರ್ಕಾರದ ಪರವಾಗಿ ಉತ್ತರ ಕೊಡುವುದಕ್ಕಾಗಲಿ, ಸರ್ಕಾರದ ಪರವಾಗಿ ಡಿಫೆಂಡ್ ಮಾಡಿಕೊಳ್ಳಲು ಇಲ್ಲಿ ನಿಂತಿಲ್ಲವೆಂದು ಸ್ಪಷ್ಟಪಡಿಸುತ್ತೇನೆ. ನನ್ನ ಉದ್ದೇಶವೇನೆಂದರೆ ಸತ್ಯ ಇಲ್ಲೇನು ನಡೆದಿದೆ, ಖಾಸಗಿ ಬಂಡವಾಳಗಾರರ ಅವಶ್ಯಕತೆ ಇಂದಿನ ದಿನ ಮಾನಕ್ಕೆ ಇದೆ. ಯಾವುದೇ ಸರ್ಕಾರಕ್ಕಿರಬಹುದು, ಯಾವುದೇ ರಾಜ್ಯಕ್ಕಿರಬಹುದು, ಬದಲಾದಂಥ ದಿನಮಾನಗಳಲ್ಲಿ ಆ ಪಾತ್ರ ಇದೆ, ನಾವು ಏನಾದರೂ ಖಾಸಗಿ ಕಂಪನಿಗಳು ತರದಿದ್ದರೆ ನಮಗೆ ತೊಂದರೆಯಾಗುತ್ತದೆ, ರಾಜ್ಯಕ್ಕೆ ತೊಂದರೆಯಾಗುತ್ತದೆ, ಅವರೆಲ್ಲರೂ ಹೋಗಿ ಬಿಡುತ್ತಾರೆ, They will not come. ಆ ದೃಷ್ಟಿಕೋನದಿಂದ ಇಲ್ಲಿ ಏನು ನಡೆದಿದೆ ಎಂಬ ಬಗ್ಗೆ ನಾನು ಬಾಹ್ಯ ಜಗತ್ತಿಗೆ ಹೇಳಲು ಇಷ್ಟಪಡುತ್ತೇನೆಯೇ ಹೊರತು ಸರ್ಕಾರದ ಪರವಾಗಿ ಆಗಲಿ ಅಥವಾ ಸರ್ಕಾರದ ಉತ್ತರವನ್ನು ಕೊಡುತ್ತಿಲ್ಲ. ಆ ದೃಷ್ಟಿಕೋನದಿಂದ ಈ ಒಂದು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯಲ್ಲಿ ಯಾವುದೇ ತರದಂಥ ಅವ್ಯವಹಾರಗಳು ನನಗೆ ಗೊತ್ತಿದ್ದ ಮಟ್ಟಿಗೆ ನಡೆದಿಲ್ಲ. ಆ ಹಿನ್ನೆಲೆಯಲ್ಲಿ ತಮಗೆ ಗೊತ್ತಿರಬಹುದು ಈ ವಿಚಾರವನ್ನು.

**ಗೊಂದಲ**

**ಛೇರ್ಮನ್ :** ತಾವು ಮತ್ತೆ ಅಲ್ಲಿಗೇ ಹೋಗುತ್ತಿದ್ದೀರಲ್ಲಾ?

**ಶ್ರೀ ಜೆ.ಸಿ. ಮಾಧುಸ್ವಾಮಿ :** ಇದು ಉತ್ತರವಲ್ಲವಾ? who is he? ನಾವು ಆರೋಪ ಮಾಡಿದ್ದು ಸರ್ಕಾರಕ್ಕೆ, we have accused the government.

**ಗೊಂದಲ**

**ಛೇರ್ಮನ್ :** ನಾನು ಮಾತನಾಡುತ್ತೇನೆ, ತಾವು ಕುಳಿತುಕೊಳ್ಳಿ.

**ಶ್ರೀ ಬಸವರಾಜ ರಾಯರೆಡ್ಡಿ :** ಅವರು ಸರ್ಕಾರದ ಮೇಲೆ ಅಲಿಗೇಷನ್ ಮಾಡಿದ್ದಾರೆ.

**ಗೊಂದಲ**

**ಛೇರ್ಮನ್ :** ಅವರು ಅಲಿಗೇಷನ್ ಮಾಡಿದ್ದಕ್ಕೆ ತಾವು ಸರ್ಕಾರ ಉತ್ತರ ಹೇಳಿ. ಅವರು ಏಕೆ ಹೇಳುವುದು? You have the right.

**ಗೊಂದಲ**

**Sri J.C. Madhuswamy :** Then there will be a law for that. ನಾಳೆ ನಾನೂ ಡಿಫೆಂಡ್ ಮಾಡುತ್ತೇನೆ ಆಗ ನೀವು ಸುಮ್ಮನೆ ಇರುತ್ತೀರಾ? ನಾವು ಮಾಡಿರುವ ಅಕ್ಯುಜಿಷನ್‌ನನ್ನು ಯಾರು ಬೇಕಾದರೂ ಡಿಫೆಂಡ್ ಮಾಡಲಿ ಎಂದು ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಸಚಿವರು ಹೇಳಬೇಕು. If any members can defend, let them defend.

**ಶ್ರೀ ಬಸವರಾಜ ರಾಯರೆಡ್ಡಿ :** ನಾನು ಮತ್ತೆ ಸ್ಪಷ್ಟಪಡಿಸುತ್ತೇನೆ ನಾನು ಸರ್ಕಾರದ ಪರವಾಗಿ ಉತ್ತರವನ್ನು ಕೊಡುತ್ತಿಲ್ಲ. ಇಲ್ಲಿ ನಡೆದಂಥ ವಿಚಾರವನ್ನು ಹೇಳುತ್ತಿದ್ದೇನೆ.

**ಛೇರ್ಮನ್ :** ಅದನ್ನು ಸರ್ಕಾರ ಹೇಳುತ್ತದೆ ಬಿಡಿ.

**ಶ್ರೀ ಬಸವರಾಜ ರಾಯರೆಡ್ಡಿ :** ಇನ್ನೊಂದು ಪ್ರಮುಖವಾದಂಥ ಸಂಗತಿಯನ್ನು ನಾನು ಹೇಳಲೇ ಬೇಕು.

**ಛೇರ್ಮನ್ :** ಹೀಗೆ ಎಲ್ಲರೂ ಮಾತನಾಡಿದರೆ ಹೇಗೆ? ಇದನ್ನು ಮುಗಿಸುವುದು ಬೇಡವೆ? ರಾಯರೆಡ್ಡಿಯವರೆ, ಬೇಗ ಮುಗಿಸಿ. ಮಾನ್ಯ ದೇಶ್‌ಪಾಂಡೆಯವರೇ, ತಾವು ಪ್ರಾರಂಭ ಮಾಡುತ್ತೀರಾ?

**ಗೊಂದಲ**

**ಶ್ರೀ ಬಸವರಾಜರಾಯರೆಡ್ಡಿ :** ನಾನು ಇನ್ನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

**ಶ್ರೀ ಕೆ.ಆರ್. ರಮೇಶ್‌ಕುಮಾರ್ :** ಮಾನ್ಯ ಮಾಧುಸ್ವಾಮಿಯವರು ಕ್ರಿಯಾ ಲೋಪವನ್ನು ಎತ್ತಿದಂತೆ ಅವರು ಮಾಡಿರತಕ್ಕ ಆರೋಪಗಳನ್ನು ಅಲ್ಲಗಳೆಯಲು ಇವರಿಗೆ ಸಾಧ್ಯವಿಲ್ಲ. ಅವರು ಭಾಷಣ ಮಾಡುವ ವೇಳೆಗೆ ಕೆಲವು ದಾಖಲೆಗಳನ್ನು ಹೇಗೆ ಸಂಪಾದನೆ ಮಾಡಿದರು ಅದು ಒಂದು ಕಲೆ; ಕೆಲವು ದಾಖಲೆಗಳನ್ನು ಅವರ ವಶದಲ್ಲಿಟ್ಟುಕೊಂಡು ಆ ದಾಖಲೆಗಳ ಆಧಾರದ ಮೇಲೆ ಕೆಲವು ವಿಷಯಗಳನ್ನು ಇಲ್ಲಿ ಹೇಳಿದ್ದಾರೆ. ಅದೇ ರೀತಿ ನಿಮ್ಮ ಹತ್ತಿರ ಏನಾದರೂ ದಾಖಲೆಗಳು ಇದ್ದರೆ ಆ ದಾಖಲೆಗಳನ್ನು ನೀವೂ ಇಟ್ಟುಕೊಂಡು ನಿಮ್ಮ ವಾದವನ್ನು ಮಂಡಿಸಬಹುದೇ ಹೊರತು ನೀವು ಡೈರೆಕ್ಟ್ ಆಗಿ ಅವರ ಅಲಿಗೇಷನ್‌ನನ್ನು ಡಿನೈ ಅಥವಾ ರೆಫ್ಯೂಟ್ ಮಾಡುವುದಕ್ಕೆ ಹೋಗುವುದರ ಬದಲು ನನ್ನ ಅಭಿಪ್ರಾಯ ಈ ರೀತಿ ಇದೆಯೆಂದು ಹೇಳಿ.

**ಶ್ರೀ ಬಸವರಾಜ ರಾಯರೆಡ್ಡಿ :** ನನ್ನ ಹತ್ತಿರ ದಾಖಲೆ ಇದೆ. ನಾನು ಅವರ ವಿಚಾರಕ್ಕೆ ಉತ್ತರವನ್ನು ಕೊಡುತ್ತಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಾನ್ಯ ರಮೇಶ್‌ಕುಮಾರ್‌ರವರು ಕ್ಷಮಿಸಬೇಕು, ತಾವು ಆ ತರಹ ಇನ್ನೊಂದು ದಿಕ್ಕಿನಿಂದ ಕರೆದುಕೊಂಡು ಹೋಗಲು ಸಾಧ್ಯವಿಲ್ಲ. ಅದು ಸಬ್ಜೆಕ್ಟ್. ನೀವು ಹೀಗೆ ಆ ಬಾಗಿಲಿನಿಂದ ಆಚೆಗೆ ಕಳಿಸಿಕೊಡಬೇಡಿ. ಯಾವ ದಾಖಲೆಯನ್ನು ಇಟ್ಟರೂ ಇಲ್ಲಿ ಕೇಳುವುದಿಲ್ಲ. ಅವರು ಬೇರೆ ನೋಟೀಸ್ ಕೊಟ್ಟು ಬರಲಿ.

**ಶ್ರೀ ಜೆ.ವಿ. ಶ್ರೀರಾಮರೆಡ್ಡಿ** : ಅವರು ದಾಖಲೆಯನ್ನು ಇಡುವುದಾದರೆ ಸಮರ್ಥನೆಯಾಗುತ್ತದೆ. ದಾಖಲೆ ಇಲ್ಲದೆ ಅದು ಹೇಗೆ ಸಮರ್ಥನೆಯಾಗುತ್ತದೆ?

**ಶ್ರೀ ಜೆ.ಸಿ. ಮಾಧುಸ್ವಾಮಿ** : ಕಂಡವರ ಮಕ್ಕಳನ್ನು ಮುಕಸಟ್ಟೆ ಸಿಕ್ಕುತ್ತಾರೆಂದು ತಾವು ಹೀಗೆ ಬಾವಿಗೆ ನೂಕಕ್ಕೆ ಹೋಗುತ್ತೀರಾ?

**ಶ್ರೀ ಬಸವರಾಜ ರಾಯರೆಡ್ಡಿ** : ಭೂಹಗರಣದ ವಿಚಾರ ಸದನದಲ್ಲಿ ಮತ್ತು ಬೇರೆ ಕಡೆ ಪ್ರಸ್ತಾಪವಾಗಿದೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆಯೇ ಹೊರತು ಸರ್ಕಾರದ ಪರವಾಗಿ ನಾನು ಅವರಿಗೆ ಉತ್ತರವನ್ನು ಕೊಡುತ್ತಿಲ್ಲ. ತಮಗೆ ಗೊತ್ತಿದ್ದ ಹಾಗೆ ಕೆಲವು ಜನ ಸರ್ಕಾರದ ವಿರುದ್ಧ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಕೂಡ Writ petition ಕೂಡ ಹೋದರು. Writ petition No. 29221 of 97 ಅದು ಡಿಸ್‌ಮಿಸ್ ಅಯಿತು. ನಂತರ ರಿಟ್ ಅಪೀಲ್ ಹೋದರು. Chief Justice ಜೈನ್‌ರವರು ಮತ್ತು...

**ಛೇರ್ಮನ್** : ಮಾನ್ಯ ರಾಯರೆಡ್ಡಿಯವರೆ, ಇದನ್ನು ಸರ್ಕಾರ ಹೇಳುವುದಿಲ್ಲವೆ?

**ಶ್ರೀ ಬಸವರಾಜ ರಾಯರೆಡ್ಡಿ** : ಸರ್ಕಾರ ಹೇಳುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ.

**ಗೊಂದಲ**

**ಶ್ರೀ ಜೆ.ಸಿ. ಮಾಧುಸ್ವಾಮಿ** : ಇದು ನಿಜವಾಗಿ ಕೆಟ್ಟ ಪ್ರಿಸಿಡೆಂಟ್ ಆಗುತ್ತದೆ.

**ಗೊಂದಲ**

**ಶ್ರೀ ತನ್ವೀರ್ ಸೇಟ್ (ಕಾರ್ಮಿಕ ಸಚಿವರು)** : ಅವರ ಹತ್ತಿರ ಇರುವ ದಾಖಲೆಗಳ ಆಧಾರದ ಮೇಲೆ ಅವರು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಮಾತನಾಡಲು ಸಂಪೂರ್ಣವಾದ ಹಕ್ಕು ಇದೆ. ಅವರ ಹತ್ತಿರ ಇರುವ ದಾಖಲೆಗಳನ್ನು ಸದನಕ್ಕೆ ಒಪ್ಪಿಸುತ್ತಿದ್ದಾರೆ.

**ಗೊಂದಲ**

**ಶ್ರೀ ಜೆ.ಸಿ. ಮಾಧುಸ್ವಾಮಿ** : ಅವರು ಬೇರೆ ನೋಟೀಸ್ ಕೊಟ್ಟು ಬೇರೆ ವಿಷಯವನ್ನು ತೆಗೆದುಕೊಂಡು ಮಾಡಿ ಸ್ವಾಮಿ.

**ಛೇರ್ಮನ್** : ಮಾನ್ಯ ರಾಯರೆಡ್ಡಿಯವರೇ, ಎರಡು ನಿಮಿಷದಲ್ಲಿ ಮುಗಿಸುತ್ತೇನೆಂದು ಹೇಳಿದಿರಿ ಮುಗಿಸಿಬಿಡಿ.

**ಗೊಂದಲ**

**ಶ್ರೀ ಜೆ.ವಿ. ಶ್ರೀರಾಮರೆಡ್ಡಿ** : ನಾವು ಅವರು ಮಾತನಾಡುವುದು ಬೇಡ ಎಂದು ಹೇಳಲಿಲ್ಲ. ಉತ್ತರ ಕೊಡುವುದಾದರೆ ಸರ್ಕಾರದ ದಾಖಲೆಗಳಲ್ಲಿ ಹೇಳಲಿ.

ಶ್ರೀ ಎ. ಕೃಷ್ಣಪ್ಪ : ಸಭಾಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಯಾವುದೇ ಒಂದು ವಿಚಾರದಲ್ಲಿ ಮಾತನಾಡಿದಾಗ ಅವರು ಮಾಹಿತಿಗಳನ್ನಿಟ್ಟುಕೊಂಡು ಮಾತನಾಡುತ್ತಾರೆ. ಆದರೆ, ಇದೇ ಸದನದಲ್ಲಿ ಮತ್ತೊಬ್ಬ ಮಾನ್ಯ ಸದಸ್ಯರು ಮಾಹಿತಿಗಳನ್ನಿಟ್ಟುಕೊಂಡು ಮಾತನಾಡಬಾರದೆಂದು ಅಡ್ಡಿಪಡಿಸಿದರೆ ಅದು ಸಾಧುವಲ್ಲ. We are also equally responsible members. ಹೈಕೋರ್ಟ್‌ನಲ್ಲಿ ರಿಟ್ ಪಿಟಿಶನ್ ಇದೆಯೆಂಬುದು ಸತ್ಯವಾದರೂ ಹೇಳುವುದಕ್ಕೆ ನಮಗೆ ಅಧಿಕಾರವಿದೆ. ಅದನ್ನು ಹೇಗೆ ನೀವು curb ಮಾಡುತ್ತೀರಿ?

ಗೊಂದಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾತನಾಡಬಾರದೆಂಬ ವಿಚಾರವನ್ನು ನಾವು ಹೇಳುತ್ತಿಲ್ಲ. ಮಾತನಾಡಬಾರದೆಂದು ನಾವು ಹೇಳಿದೆವಾ? ಆ ರೀತಿ ಹೇಳಿಲ್ಲ. ಅದನ್ನು ಸಮರ್ಥನೆ ಮಾಡತಕ್ಕಂಥಾದ್ದು ಮಾಡಬಾರದೆಂದು ನಾವು ಹೇಳಿದೆವು.

ಗೊಂದಲ

ಛೇರ್ಮನ್ : ಈಗ ನಾನು ಒಂದು ವಿಷಯ ಹೇಳುತ್ತೇನೆ. Please sit down. ದಯವಿಟ್ಟು ಈಗ ತಾವುಗಳೆಲ್ಲರೂ ಒಂದು ನಿಮಿಷ ಕುಳಿತುಕೊಳ್ಳಬೇಕು. ಈಗ ಮಾನ್ಯ ದೇಶಪಾಂಡೆಯವರು ಹೇಳಿದ್ದು ನನ್ನ ಕಿವಿಗೆ ಬಿತ್ತು. ಬೇರೆ ಯಾರಿದ್ದಾರೆ ಅವರು ಬಂದು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಳ್ಳಲಿಕ್ಕೆ ಹೇಳಿ ಎಂದು. ದೇಶಪಾಂಡೆಯವರೆ, You have made charges against the Chair. ಇಲ್ಲಿ ದಯವಿಟ್ಟು ಬೇರೆ ಯಾರನ್ನಾದರೂ ಕೂರಿಸಿ. I would not like to sit here. No, please sit down.

ಗೊಂದಲ

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ.

ಗೊಂದಲ

ಛೇರ್ಮನ್ : ದಯವಿಟ್ಟು ಪ್ಯಾನೆಲ್‌ನಲ್ಲಿ ಬೇರೆ ಯಾರಿದ್ದಾರೆ, ಅವರನ್ನು ಅಧ್ಯಕ್ಷ ಪೀಠದಲ್ಲಿ ಕೂರಿಸಿರಿ. ನಾನು ಹೇಳುತ್ತೇನೆ. ನಾನು ಒಂದು ನಿಮಿಷವೂ ಈ ಪೀಠದಲ್ಲಿ ಕುಳಿತುಕೊಳ್ಳುವುದಿಲ್ಲ.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ಅಧ್ಯಕ್ಷರೆ, ಏನು ನಡೆಯಿತು ಎಂಬುದನ್ನಾದರೂ ಹೇಳಿಬಿಡಿ.

ಛೇರ್ಮನ್ : ನಾನು ಹೇಳುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಗೊಂದಲ

ಶ್ರೀ ವಾಟಾಳ್ ನಾಗರಾಜ್ : ಇದು ಅಧ್ಯಕ್ಷ ಪೀಠದ ಮೇಲೆ ನಡೆದಂತಹ ಧಾಳಿ.

ಗೊಂದಲ

ಶ್ರೀ ಆರ್.ವಿ. ದೇಶಪಾಂಡೆ : ತಾವು ಆವೇಶದಲ್ಲಿ ಮಾತನಾಡಬೇಡಿ. ನಾನು ಏನು ಮಾತನಾಡಿದೆ ಎಂಬುದನ್ನು ಹೇಳಿ.

ಗೊಂದಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ಅವರು ಏನು ಹೇಳಿದರೆಂಬುದನ್ನು ಹೇಳಿ.

ಛೇರ್ಮನ್ : ಒರಟಾಗಿತ್ತು.

ಶ್ರೀ ಆರ್.ವಿ. ದೇಶಪಾಂಡೆ : ರೆಕಾರ್ಡ್‌ನಲ್ಲಿ ಏನಿದೆ ಎಂಬುದನ್ನು ನೋಡಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಅವರು ಏನು ಹೇಳಿದರು ಎಂಬುದನ್ನು ಹೇಳಿ.

ಛೇರ್ಮನ್ : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಗೊಂದಲ

ಛೇರ್ಮನ್ : ದಯವಿಟ್ಟು ನೀವು ಹೇಳಿದ್ದನ್ನೇ ನಾನು ಹೇಳುತ್ತೇನೆ. ಆಮೇಲೆ ನೀವು ಹೇಳಿ. ನೀವು ಏನು ಹೇಳಿದಿರಿ ಎಂಬುದನ್ನು ನಾನು ಹೇಳುತ್ತೇನೆ; ಆನಂತರ ನೀವು ಮಾತನಾಡಿ. ಈಗ ಕುಳಿತುಕೊಳ್ಳಿ. Please sit down. ಅವರು ಏನು ಹೇಳಿದರೆಂದರೆ, "I am a party to this ಚರ್ಚೆ, ಆದ್ದರಿಂದ, I charge him" ಎಂದು ಹೇಳಿದರು. ಅದಕ್ಕೋಸ್ಕರ, I would not like to sit here.

ಗೊಂದಲ

**Sri R.V. Deshpande :** I never said that. Please try to understand.

ಗೊಂದಲ

ಛೇರ್ಮನ್ : ತಾವು ಹೇಳಿದ್ದು ನನಗೆ ಕೇಳಿಸಿತು.

**Sri R.V. Deshpande :** No, No. If Speaker feels like that, I am sorry, I am saying.

ಗೊಂದಲ

ಛೇರ್ಮನ್ : ಆದ್ದರಿಂದ, ಬೇರೆ ಯಾರಾದರೂ ಈ ಪೀಠದಲ್ಲಿ ಕುಳಿತುಕೊಳ್ಳಲಿ. ಅಲ್ಲಿಯವರೆಗೆ ಚರ್ಚೆ ಬೇಡ.

**Sri R.V. Deshpande :** What I said was....

ಛೇರ್ಮನ್ : ಇಲ್ಲ. ಆಗುವುದಿಲ್ಲ.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ಈ ರೀತಿ ಚೇರ್‌ಗೆ threaten ಮಾಡುವುದು ಸರಿಯಲ್ಲ.

ಗೊಂದಲ

ಛೇರ್ಮನ್ : ಅವರು ತಮ್ಮ ಮಾತನ್ನು ವಿತ್‌ಡ್ರಾ ಮಾಡಬೇಕು. ಆದ್ದರಿಂದ, ನಾನು ಈ ಚೇರ್‌ನಲ್ಲಿ ಕುಳಿತುಕೊಳ್ಳುವುದಿಲ್ಲ. ಅವರು ಆಮೇಲೆ ಮಾತನಾಡಲಿ.

(ಈ ಹಂತದಲ್ಲಿ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಅಧ್ಯಕ್ಷ ಪೀಠದಿಂದ ನಿರ್ಗಮಿಸಿದ ಬಳಿಕ ಮತ್ತೊಬ್ಬ ಮಾನ್ಯ ಸದಸ್ಯರಾದ ಶ್ರೀ ಎ.ಟಿ. ರಾಮಸ್ವಾಮಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಜೆ.ಸಿ. ಮಾಧುಸ್ವಾಮಿ : ಎಲ್ಲವನ್ನೂ ನುಂಗಿ ನೀರು ಕುಡೀಲಿ, ಇಡೀ ರಾಜ್ಯವನ್ನು ಸಾರಾಸಗಟಾಗಿ ನುಂಗಿಬಿಡಿ, ನುಂಗಿರುವುದು ಸಾಲುವುದಿಲ್ಲವಲ್ಲಾ, ಇನ್ನಷ್ಟು ನುಂಗಿ.

ಗೊಂದಲ

ಶ್ರೀ ಬಸವರಾಜ ರಾಯರೆಡ್ಡಿ : ರೆಕಾರ್ಡ್ ತರಿಸಿ ನೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಏನು ರೆಕಾರ್ಡ್ ತರಿಸಿ ನೋಡುವುದು?

ಗೊಂದಲ

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ ಇಲ್ಲ. ಮರ್ಯಾದೆ ಇಲ್ಲ. ರೆಕಾರ್ಡ್ ತರಿಸಬೇಕಂತೆ, ರೆಕಾರ್ಡ್.

ಗೊಂದಲ

**Sri J.C. Madhuswamy :** Who is he to defend?

ಗೊಂದಲ

ಶ್ರೀ ಆರ್. ಅಶೋಕ್ : ವಿಧಾನಸಭೆ ಇತಿಹಾಸದಲ್ಲೇ ಯಾವತ್ತೂ ಈ ರೀತಿ ನಡೆದಿಲ್ಲ. ಅಂತಹ ಅವಮಾನ ಈ ಚೇರ್‌ಗೆ ಆಗಿದೆ.

ಗೊಂದಲ

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾಡಬಾರದ್ದನ್ನೆಲ್ಲಾ ಮಾಡುವುದು. ಈ ರೀತಿ ವರ್ತಿಸುವುದು.

ಗೊಂದಲ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಛೇರ್ಮನ್‌ರವರೆ, ನಮಗೆಲ್ಲರಿಗೂ ಕೂಡ ಒಂದು ಗುರುತರವಾದ ಜವಾಬ್ದಾರಿಗಳು ಮತ್ತು ಎರಡು ಕರ್ತವ್ಯಗಳನ್ನು ನಿರ್ವಹಿಸುವಂತಹ ಸಂದರ್ಭಗಳು ಕೂಡ ಕೆಲವೊಮ್ಮೆ ಬರುತ್ತವೆ. ನಾವು ಶಾಸಕರಾಗಿ ಅನೇಕ ಸಲ ಇಲ್ಲಿ ವಿಚಾರಗಳನ್ನು ಪ್ರಸ್ತಾಪಿಸುತ್ತೇವೆ. ನಾವು ಸ್ಪೀಕರ್ ಪ್ಯಾನೆಲ್‌ನಲ್ಲಿ ಬಂದಂತಹ ಸಂದರ್ಭದಲ್ಲಿ ಆ ಒಂದು ಘನತೆವೆತ್ತ ಸ್ಥಾನದಲ್ಲಿ ಕೂರುತ್ತೇವೆ. ಇಂಗ್ಲೆಂಡ್‌ನಲ್ಲಾದರೆ ಯಾರು ಸ್ಪೀಕರ್ ಆಗಿರುತ್ತಾರೋ, ಅವರ ವಿರುದ್ಧ ಯಾರೂ ಸ್ಪರ್ಧಿಸುವುದಿಲ್ಲ. ಅಲ್ಲೊಂದು ಪದ್ಧತಿ ಇದೆ. ಆ ಪದ್ಧತಿ ಇರುವುದರಿಂದ ನಿಜವಾಗಿಯೂ ಅವರು ಪಕ್ಷಾತೀತರಾಗಿರುತ್ತಾರೆ. ಆದರೆ, ಇಲ್ಲಿ ಅಂತಹ ಸಂಪ್ರದಾಯ ಮತ್ತು ಪದ್ಧತಿಯನ್ನು ಅಳವಡಿಸಿಕೊಳ್ಳಲು ನಮಗೆ ಸಾಧ್ಯವಾಗಿಲ್ಲ. ಸ್ಪೀಕರ್ ಹುದ್ದೆ ಎಂಬುದು ಒಂದು ಘನವೆತ್ತ ಸ್ಥಾನವಾಗಿದ್ದು, ಆದ್ದರಿಂದ, ಅದು ವಿವಾದವಾಗಬಾರದು, ಅದಕ್ಕೆ

ಸ್ಪರ್ಧಿಯಾಗಬಾರದು ಎನ್ನುವಂತಹ ಮೂಲಭೂತವಾದ ಪ್ರಶ್ನೆ ಇಲ್ಲಿಲ್ಲ. ನಮ್ಮಲ್ಲಿ ಬೇರೆ ಬೇರೆ ಕಾರಣಗಳಿವೆ. ನಾವು ಶಾಸಕರಾಗಿ ಇಲ್ಲಿ ಅನೇಕ ವಿಷಯಗಳನ್ನು ಚರ್ಚೆ ಮಾಡುತ್ತೇವೆ. ಆ ಸ್ಥಾನಕ್ಕೆ ಹೋದ ತಕ್ಷಣವೇ ನಾವು ವಿಕ್ರಮಾದಿತ್ಯರಾಗುತ್ತೇವೆ. ಬೇರೆ ಸಂದರ್ಭದಲ್ಲಿ ವಿಕ್ರಮಾದಿತ್ಯ ಹೊರಗಡೆ ಕುಳಿತಾಗ ಒಂದು ತರಹ ನಡೆದುಕೊಳ್ಳುತ್ತಾನೆ, ಆದರೆ ಆ ದಿಣ್ಣೆ ಮೇಲೆ ಕುಳಿತುಕೊಂಡಾಗ ಆತ ಒಬ್ಬ ಕುರುಬರ ಬಾಲಕ, ವಿಕ್ರಮಾದಿತ್ಯನಾಗಿ ನ್ಯಾಯವನ್ನು ಕೊಡುತ್ತಾನೆ. ಆದ್ದರಿಂದ ನಾವು ಇಲ್ಲಿ ಯಾವುದಾದರೂ ವಿಚಾರವನ್ನು ಚರ್ಚೆ ಮಾಡುವಾಗ ಏನೇ ಭಾಗವಹಿಸಿದ್ದರೂ ಕೂಡ, ಆ ಸ್ಥಾನದಲ್ಲಿ ಕುಳಿತಾಗ, ಆ ಸ್ಥಾನದ ಪ್ರಭಾವದಿಂದ ಮತ್ತು ಜವಾಬ್ದಾರಿಯಿಂದ ಅವರು ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಾರೆ. ಆದ್ದರಿಂದ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಅಲ್ಲಿ ಕುಳಿತಿರತಕ್ಕಂಥದ್ದರ ಬಗ್ಗೆ ಯಾರದೂ ಆಕ್ಷೇಪಣೆ ಇಲ್ಲ. ಏಕೆಂದರೆ ಅವರು ಪ್ಯಾನಲ್‌ನಲ್ಲಿ ಇರತಕ್ಕಂಥವರು. ಆ ವಿಚಾರದಲ್ಲಿ ನಾನೇನೂ ಆಕ್ಷೇಪಣೆ ಮಾಡಿಲ್ಲ. ಆದರೆ ಅವರು ಭಾಗವಹಿಸಿದ್ದಾರೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅವರು ಹೇಳಿರತಕ್ಕಂಥದ್ದರ ಹಿನ್ನೆಲೆ ಯಾವುದೇ ಇರಲಿ, ನಾನು ಎಲ್ಲಾ ಮಾನ್ಯ ಸದಸ್ಯರಿಗೆ ಕೇಳಿಕೊಳ್ಳುತ್ತೇನೆ, ಅಂತಹದ್ದೇನಾದರೂ ಕಡತದಲ್ಲಿದ್ದರೆ, ದಯವಿಟ್ಟು ಆ ಕಡತದಲ್ಲಿ ಇರತಕ್ಕಂಥದ್ದನ್ನು ತಾವು ತರಿಸಿ ನೋಡಿ ತೆಗೆಸಿಹಾಕಿ....

**ಶ್ರೀ ಆರ್.ವಿ. ದೇಶಪಾಂಡೆ** : ಕಡತದಲ್ಲಿ ಇದ್ದರೆ ನಾನು ಕ್ಷಮೆ ಕೇಳುತ್ತೇನೆ.

**ಗೊಂದಲ**

**ಶ್ರೀ ಎಂ.ಪಿ. ಪ್ರಕಾಶ್** : ... ಚರ್ಚೆ ಮುಂದುವರೆಯಬೇಕಾಗಿರುವುದರಿಂದ, ಸಂಪ್ರದಾಯಗಳನ್ನು ನಡೆಸಬೇಕಾಗಿರುವುದರಿಂದ, ನಾನು ಅದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಕ್ಷಮೆಯನ್ನೂ ಕೂಡ ಕೇಳುತ್ತೇನೆ ತಾವು ದಯವಿಟ್ಟು ಕಡತವನ್ನು ತರಿಸಿ ನೋಡಿ, ಅಂತಹದ್ದೇನಾದರೂ ಕಡತದಲ್ಲಿದ್ದರೆ, ಅದನ್ನು ತೆಗೆಸಿಹಾಕಿ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರಿಗೆ ಅದರಿಂದ ಮನಸ್ಸಿಗೆ ಏನಾದರೂ ನೋವಾಗಿದ್ದರೆ, ಮಾನ್ಯ ಸದಸ್ಯರುಗಳಿಗೆ ನೋವಾಗಿದ್ದರೆ, ಅದಕ್ಕೆ ನಾನು ವಿಷಾದವನ್ನು ವ್ಯಕ್ತ ಮಾಡುತ್ತೇನೆ. ದಯವಿಟ್ಟು ಇದನ್ನು ಇಲ್ಲಿಗೇ ಬಿಡಬೇಕು. ಮತ್ತೆ ಮುಂದೆ ಇಂತಹ ವಿಚಾರಗಳನ್ನು ಪ್ರಸ್ತಾಪ ಮಾಡಬಾರದೆಂಬುದೇ ನಮ್ಮ ಮಾರ್ಗದರ್ಶನ ಎಂದು ನಾನು ಭಾವಿಸುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ** : ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗುತ್ತೇನೆ. ತಪ್ಪು ಕಲ್ಪನೆಯಿಂದ ಮಾನ್ಯ ಜಯಪ್ರಕಾಶ್ ಹೆಗ್ಡೆಯವರ ಮನಸ್ಸಿಗೆ ನೋವಾಗಿದ್ದರೆ I am sorry but I never said that. See I have got a lot of respect the chair.

**ಶ್ರೀ ಎಸ್. ರಾಜೇಂದ್ರನ್** : ತಾವು ಏನು ಹೇಳಿದಿರಿ ಎಂಬುದನ್ನು ಹೇಳಿ.

**ಗೊಂದಲ**

**Sri R.V. Deshpande** : He was a party.

**Sri S. Rajendran** : That shows what?

ಗೊಂದಲ

ಛೇರ್ಮನ್ · ಮಾನ್ಯ ಶ್ರೀರಾಮರೆಡ್ಡಿಯವರೇ, ಮತ್ತು ಮಾಧುಸ್ವಾಮಿಯವರೇ ದಯವಿಟ್ಟು ಕುಳಿತುಕೊಳ್ಳಿ

ಗೊಂದಲ

**ಶ್ರೀ ಬಸವರಾಜ ರಾಯರೆಡ್ಡಿ** ಸನ್ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಅಪ್ಪಣೆ ಪಡೆದು ನನ್ನ ಮಾತುಗಳನ್ನು ಮುಂದುವರೆಸುತ್ತಿದ್ದೇನೆ

**ಛೇರ್ಮನ್** ರಾಯರೆಡ್ಡಿಯವರೇ, ಒಂದು ನಿಮಿಷ ತಾಳಿ ಈಗ ಅವರು ನಾನು ಆ ರೀತಿ ಹೇಳಿಲ್ಲ ಹೇಳಿದ್ದರೆ ಕ್ಷಮೆ ಕೋರುತ್ತೇನೆಂದು ಹೇಳಿದ್ದಾರೆ ಕಡತ ತರಿಸಿ ನೋಡುತ್ತೇನೆ ಇದ್ದರೆ ಅದನ್ನು ಕಡತದಿಂದ ತೆಗೆದು ಹಾಕುತ್ತೇನೆ ಬಿಡಿ ರಾಯರೆಡ್ಡಿಯವರೇ, ತಾವು ಮಾತನಾಡುವುದನ್ನು ಮುಂದುವರೆಸಿ ಬೇಗ ಮುಗಿಸಿ

ಗೊಂದಲ

**ಶ್ರೀ ವಾಟಾಳ್ ನಾಗರಾಜ್** ಅಧ್ಯಕ್ಷರೇ, ನೀವು ಕಡತ ತರಿಸುವವರೆಗೆ ಕಾಯಬೇಕಾಗಿಲ್ಲ ಅವರು ಪಾರ್ಟಿ ಎಂದು ನಾನು ಹೇಳಿದ್ದೇನೆಂದು ಈಗ ಅವರೇ ಹೇಳಿದರು ಹೀಗಿರುವಾಗ ಕಡತ ತರಿಸುವುದು ಇನ್ನೇನಿದೆ ಇಲ್ಲಿ?

ಗೊಂದಲ

**ಶ್ರೀ ಎಸ್ ರಾಜೇಂದ್ರನ್** ಅವರು ಪಾರ್ಟಿ, I will charge him ಎಂದು ಅವರು ಹೇಳಿದರು What does it mean? You said that word and you have apologized here

ಗೊಂದಲ

**ಶ್ರೀ ಆರ್ ವಿ ದೇಶಪಾಂಡೆ** . ನಾನು ಆ ರೀತಿ ಹೇಳಲಿಲ್ಲ

**ಶ್ರೀ ಜೆ ಸಿ ಮಾಧುಸ್ವಾಮಿ** ಇಲ್ಲಿ individual ಲೆಕ್ಕಕ್ಕೆ ಬರುವುದಿಲ್ಲ ಆ chair ನಲ್ಲಿ ಯಾರು ಕುಳಿತರೂ ಅದು ಚೇರೇ ಪಾರ್ಟಿನೋ, ಪಾರ್ಟಿಸಿಪೇಟ್ ಮಾಡಿದ್ದಾರೋ ಇಲ್ಲವೋ ಎಂಬುದು ಇಲ್ಲಿ ಗಣನೆಗೆ ಬರುವುದಿಲ್ಲ ಅಷ್ಟು ಗೌರವವೂ ಸಹ ಇಲ್ಲವೆಂದ ಮೇಲೆ ಏತಕ್ಕಾಗಿ ಅವರು ಸಭೆಯನ್ನು ನಡೆಸಬೇಕು?

ಗೊಂದಲ

**ಶ್ರೀ ಬಸವರಾಜ ರಾಯರೆಡ್ಡಿ** ಅಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಮಾತನಾಡುತ್ತಾ

**ಶ್ರೀ ಬಿ ಎಸ್ ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** ನಾನು ಕಳೆದ 20–25 ವರ್ಷಗಳಿಂದ ಇಲ್ಲಿ ಕೆಲಸ ಮಾಡುತ್ತಿದ್ದೇನೆ ಹಿರಿಯ ಸದಸ್ಯರು ಆ ಕಡೆಯೂ ಇದ್ದಾರೆ, ಈ ಕಡೆಯೂ ಇದ್ದಾರೆ ಮಾನ್ಯ ದೇಶಪಾಂಡೆಯವರು ಅನುಭವ ಇರುವಂತಹವರು, ಅನೇಕ ಸ್ಥಾನಮಾನಗಳಲ್ಲಿ ಕೆಲಸ ಮಾಡಿದಂತಹವರು ಆದರೆ ಇವತ್ತು ಯಾವುದೇ ರೀತಿ ನೀವು ಹೇಳಿದ್ದರೂ ಸಹ, ಚೇರ್‌ನಲ್ಲಿ

ಕುಳಿತಿರುವಂತಹವರಿಗೆ ಅದರಿಂದ ನೋವಾಗಿದೆ. ನಮಗೇನೂ ಯಾರ ಮೇಲೂ ಗೂಬೆ ಕೂರಿಸಬೇಕಾಗಿಲ್ಲ. ಇಂತಹ ಪ್ರಸಂಗಗಳು ಅನೇಕ ಸಾರಿ ಬರುತ್ತವೆ. ಆದರೆ ಇಲ್ಲಿ ಚೇರ್‌ನಲ್ಲಿ ಕುಳಿತಂಥವರು, ಇಲ್ಲಪ್ಪ, ನನ್ನ ಬಗ್ಗೆ ನಿಮಗೆ ವಿಶ್ವಾಸ ಇಲ್ಲವೆಂದರೆ, ಈ ರೀತಿಯಾದರೆ ನಾನು ಇಲ್ಲಿ ಕುಳಿತುಕೊಳ್ಳುವುದಿಲ್ಲ. ಎಂದು ಹೇಳಿ ಎದ್ದು ಹೋಗಿರುವಂತಾದ್ದು ಇವತ್ತು ಇಲ್ಲಿ ಆಗಿದೆ. ನಾನು ನಿಮಗೆ ಹೇಳುವಂತಾದ್ದು ಏನೆಂದರೆ, ನೀವು ನೇರವಾಗಿ ಎದ್ದು ನನಗೆ ಆ ದೃಷ್ಟಿ ಇರಲಿಲ್ಲ, ತಮಗೆ ನೋವಾಗಿದ್ದರೆ ಕ್ಷಮೆ ಕೇಳುತ್ತೇನೆ ಎಂದು ಕೇಳಿ ಮುಂದುವರೆಸಿಕೊಂಡು ಹೋಗೋಣ. ನಿಮ್ಮನ್ನು ದೊಡ್ಡದು ಮಾಡಿಕೊಂಡು ಹೋಗಬೇಕೆಂಬ ಉದ್ದೇಶ ನಮ್ಮದಲ್ಲ.

**ಶ್ರೀ ಆರ್.ವಿ. ದೇಶಪಾಂಡೆ** : ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಅವರ ಬಗ್ಗೆ ನನಗೆ ಸಾಕಷ್ಟು ಅಭಿಮಾನ ಇದೆ. ಅದು ಪವಿತ್ರ ಸ್ಥಾನ. ನಾನು ಅವರಿಗೆ ಹೇಳಿದೆ, ನಾನು ಆ ರೀತಿ ಹೇಳಿಯೇ ಇಲ್ಲ, ಒಂದು ವೇಳೆ ಆ ರೀತಿಯಾದಂತಹ ತಪ್ಪು ಕಲ್ಪನೆ ಆಗಿದ್ದರೆ I am sorry ಎಂದು I have already said, before you could have asked.

**Mr. Chairman :** That ends the matter.

**ಗೊಂದಲ**

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಸನ್ಮಾನ್ಯ ಅಧ್ಯಕ್ಷರೆ, Let me make my statement. Speaker ರವರು ಆಚೆ ಹೋಗಬೇಕೆಂದು ಹೇಳಿದಾಗ, ಅಧಿಕಾರಿಗಳು ಬಂದು ನನ್ನನ್ನು ಅಧ್ಯಕ್ಷರು ಪೀಠದಲ್ಲಿ ಕುಳಿತುಕೊಳ್ಳಲಿಕ್ಕೆ ಹೇಳಿದ್ದಾರೆ ಎಂದು ಕರೆದಾಗ, for a moment, ನಾನು hesitate ಮಾಡಿದೆ, ಅಲ್ಲಿ ಕುಳಿತುಕೊಳ್ಳಬೇಕೋ, ಬೇಡವೋ ಎಂದು ಆಮೇಲೆ ಅಧ್ಯಕ್ಷರು ಎಲ್ಲೋ ಆಚೆಗೆ ಹೋಗುತ್ತಾರೆಂದು ಹೇಳಿ ನನ್ನನ್ನು ಕರೆದಾಗ ನಾನು ಹೋಗಿ ಅಲ್ಲಿ ಕುಳಿತುಕೊಂಡೆ. ನಿನ್ನೆ ದಿವಸ ಚರ್ಚೆಯಾಗಿದ್ದು, ಮಾನ್ಯ ರಾಯರೆಡ್ಡಿಯವರು ಮಾತನಾಡಲೇಬಾರದೆಂದು. ನಾನು ಅವರಿಗೆ ಅವಕಾಶ ಕೊಟ್ಟೆ. ನಾನು ಅವರು ಮಾತನಾಡಲೇಬಾರದು ಎಂದು ಹೇಳಲೇ ಇಲ್ಲ. discrimination ಮಾಡಲಿಲ್ಲ. ಅಲ್ಲಿ ಕುಳಿತಾಗ ಅದನ್ನು ಮಾಡಬಾರದು, ಅದು ನನಗೆ ಗೊತ್ತಿದೆ. ನಾನು ಆ ಕಟ್ಟಡದಿಂದ ಈ ಕಟ್ಟಡಕ್ಕೆ ಬಂದವನು. ನಾನು ಕೆಂಪು ಕಟ್ಟಡದಲ್ಲಿ ವಕಾಲತ್ತು ಮಾಡಿಕೊಂಡಿದ್ದೆ. ಅಲ್ಲೇನು ನಡೆಯುತ್ತಿದೆ ಎಂಬುದು ಗೊತ್ತಿದೆ. ಆ ಪೀಠದಲ್ಲಿ ಕುಳಿತವರು ಏನು ಮಾಡಬೇಕೆಂಬುದರ ಜ್ಞಾನ ನನಗೆ ಇದೆ. ನಾನು ಅವರು ಮಾತನಾಡುವಾಗ, ಮಧ್ಯೆ 'ನೀವು ಬೇಗ ಮುಗಿಸಿ' ಎಂದು ಹೇಳುತ್ತಿದ್ದುದ್ದನ್ನು ಬಿಟ್ಟರೆ, ಅವರನ್ನು ಕೆಲವು ವಿಷಯದಲ್ಲಿ 'government reply ಮಾಡುವುದನ್ನು ನೀವು ಮಾಡಬೇಡಿ' ಎಂದು ನಿಧಾನವಾಗಿ ಹೇಳಿದ್ದನ್ನು ಬಿಟ್ಟರೆ, ನಾನು ಅವರಿಗೆ, 'ಇಲ್ಲ, ನೀವು ಮಾತನಾಡಬಾರದು, ಕುಳಿತುಕೊಳ್ಳಿ' ಎಂದೇನೂ ಹೇಳಲಿಕ್ಕೆ ಹೋಗಲಿಲ್ಲ. ಆ

ಸಂದರ್ಭದಲ್ಲಿ ಅಧಿಕಾರಿಗಳನ್ನು ಕರೆದು 'He is a party to the discussion, I will charge him' ಎಂದು ಹೇಳುವುದು ನನ್ನ ಕಿವಿಗೆ ಕೇಳಿಸಿತು. He repeated it twice. ಆಗ ನನಗನ್ನಿಸಿತು, ಆ ಮಾತನ್ನು ಕೇಳಿ, ಆ ಕುರ್ಚಿಯಲ್ಲಿ ಕುಳಿತರೆ, ಆ ಪೀಠಕ್ಕೆ ಗೌರವ ಬರುವುದಿಲ್ಲ ಎಂದು ನಾನು ಕುಳಿತುಕೊಳ್ಳುವುದಿಲ್ಲ ಎಂದು ಹೇಳಿದ್ದು. ಆದ್ದರಿಂದ, ಆ ಪ್ಯಾನೆಲ್‌ನಲ್ಲಿ ನನ್ನ ಹೆಸರನ್ನೇನು ಹಾಕಿದ್ದಾರೋ, ದಯವಿಟ್ಟು ಆ ಪ್ಯಾನೆಲ್‌ನಿಂದ ನನ್ನ ಹೆಸರನ್ನು ತೆಗೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ಪಿ. ಪ್ರಕಾಶ್** : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಬಹಳ ನೊಂದ ಮನಸ್ಸಿನಿಂದ ಈ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾವು ಕ್ಷಮೆ ಕೇಳುತ್ತೇವೆ. ಎರಡನೆಯದಾಗಿ, ತಾವು ಒಬ್ಬರ ವಿಚಾರಗಳಿಗೆ ಇದು ಸಂಬಂಧಪಡತಕ್ಕಂಥದ್ದಲ್ಲ. ವಿವೇಚನೆಯನ್ನು ಉಪಯೋಗಿಸಿಕೊಂಡು, ಹಿರಿಯರಾಗಿರತಕ್ಕಂಥವರು, ಅನುಭವ ಇರತಕ್ಕಂಥವರು, ನಿಯಮಾವಳಿಗಳನ್ನು ಬಲ್ಲವರಾಗಿರತಕ್ಕಂಥವರು ಪ್ಯಾನೆಲ್‌ನಲ್ಲಿ ಇರಬೇಕೆಂದು ಹೇಳಿ, ಸ್ಪೀಕರ್‌ರವರು ನಿರ್ಧಾರ ಮಾಡಿ ಈಗಾಗಲೇ ಅದನ್ನು ಅನೌನ್ಸ್ ಮಾಡಿದ್ದಾರೆ. ತಾವು ಇಂತಹ ಸೂಕ್ಷ್ಮತೆಗೆ ಒಳಗಾಗಿ, ತಾವು ಆ ಪ್ಯಾನೆಲ್‌ನಿಂದ ನನ್ನ ಹೆಸರನ್ನು ತೆಗೆಯಿರಿ ಎಂದು ದಯಮಾಡಿ ಕೇಳಬಾರದು. ತಾವು ಅಲ್ಲಿರಬೇಕು. ತಮ್ಮ ಅನುಭವದ ಲಾಭ ಈ ಸದನಕ್ಕೆ ಆಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಛೇರ್ಮನ್** : ಮಾನ್ಯ ರಾಯರೆಡ್ಡಿಯವರೇ, ದಯವಿಟ್ಟು ಬೇಗ ಮುಗಿಸಿ.

**ಶ್ರೀ ಬಸವರಾಜ ರಾಯರೆಡ್ಡಿ** : ಒಂದೆರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಏನು ಇವತ್ತು ಈ ಒಂದು ಖಾಸಗಿ ಸಹಭಾಗಿತ್ವದ ಒಳ್ಳೆಯ ಗೌರವಾನ್ವಿತ ಕೆಲವು ಕಂಪೆನಿಗಳು ನಮ್ಮ ಮೂಲಭೂತ ಸೌಕರ್ಯಗಳಿಗಾಗಿ, ನಮ್ಮ ರಾಜ್ಯಕ್ಕೆ, ನಮ್ಮ ರಾಷ್ಟ್ರಕ್ಕೆ ಅನುಕೂಲತೆಯನ್ನು ಮಾಡಲಿಕ್ಕೆ ಮುಂದು ಬರುವಂತಹ ಸಂದರ್ಭದಲ್ಲಿ, ಕೆಲವೊಂದು ಸಾರಿ ಕೆಲವು ಸಂಪ್ರದಾಯವಾದಿಗಳು, ಯಥಾಸ್ಥಿತಿವಾದಿಗಳು ಹೊರಗಡೆ ಮತ್ತು ಬೇರೆ ಬೇರೆ ಕಡೆಯೂ ಕೂಡ ಆಕ್ಷೇಪಿಸಿದರು. ಅವರು ರಾಜ್ಯದ ಹೈಕೋರ್ಟಿಗೆ ರಿಟ್ ಪಿಟಿಷನ್‌ವೊಂದನ್ನು ಸಲ್ಲಿಸಿದರು. ಅದು WP No. 29221/97. ಈ ಕೇಸಿನಲ್ಲಿ ಕೂಡ ಏನು ನಂದಿ ಇನ್‌ಫ್ರಾಸ್ಟ್ರಕ್ಚರ್‌ನವರು ಇಲ್ಲಿ ರಸ್ತೆ ಕಾಮಗಾರಿ ಮತ್ತು ಉಪ ನಗರಗಳನ್ನೇನು ಕಟ್ಟುತ್ತಾರೋ, ಇದು ಕಾನೂನು ಬಾಹಿರವಾಗಿದೆ, ಇಲ್ಲಿ ಬಹಳ ಅವ್ಯವಹಾರಗಳು ನಡೆದಿದೆ ಎನ್ನುವಂತಹ ಮಾತನ್ನು ಹೇಳಿ ಪಿಟಿಷನ್ ಹಾಕಿದ್ದರು. ಅದರ ಬಗ್ಗೆ ಹೈಕೋರ್ಟ್ ಕೂಲಂಕುಷವಾಗಿ ವಿಚಾರ ಮಾಡಿ 1997ರಲ್ಲಿ ಅದನ್ನು dismiss ಮಾಡಿತು.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಾನ್ಯ ಅಧ್ಯಕ್ಷರೇ, ಇದನ್ನೆಲ್ಲಾ ಹೇಳುವುದಕ್ಕೆ ತಾವು ಅಲೋ ಮಾಡುತ್ತೀರಾ? No. I am strictly on a point of order. Continuous ಆಗಿ ಕೇಳುತ್ತಿದ್ದೇನೆ.

ಗೊಂದಲ

**ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು)** : ಮಾನ್ಯ ಮಾಧುಸ್ವಾಮಿಯವರು ಪ್ರತಿಯೊಂದು ವಿಷಯಕ್ಕೂ ಈ ತರಹ object ಮಾಡಬಾರದು. ಅವರಿಗೆ ತಿಳಿದಿರುವ ವಿಷಯವನ್ನು ಅವರು ಹೇಳುತ್ತಾರೆ. He is not the government. He is an individual man. ಅವರು ಪ್ರತಿಯೊಂದಕ್ಕೂ ಆ ತರಹ object ಮಾಡಿದರೆ ಹೇಗೆ? ಇದು ನ್ಯಾಯವೇ?

ಗೊಂದಲ

**ಶ್ರೀ ಜೆ.ಸಿ. ಮಾಧುಸ್ವಾಮಿ** : ಏನು ಯಾರು ಬೇಕಾದರೂ ಡಿಫೆಂಡ್ ಮಾಡಬಹುದೇ? ತಾವು ಅದಕ್ಕೆಲ್ಲಾ ಬರುತ್ತೀರಲ್ಲಾ, ಇದಕ್ಕೂ ನಮ್ಮ Rescueಗೆ ಬನ್ನಿ. ಯಾವತ್ತಾದರೂ ಈ ಸಂಪ್ರದಾಯ ಹಿಂದೆ ಈ ಸಭೆಯಲ್ಲಿ ನಡೆದಿತ್ತೇ?

ಗೊಂದಲ

**ಶ್ರೀ ಬಸವರಾಜ ರಾಯರೆಡ್ಡಿ** : .....ಇದರಲ್ಲಿ ಬಹಳಷ್ಟು ಅವ್ಯವಹಾರಗಳಾಗಿದೆ, ಇದನ್ನು ಸಿ.ಬಿ.ಐ. ನಿಂದ ಎನ್‌ಕ್ವೈರಿ ಮಾಡಿಸಬೇಕು ಎನ್ನುವಂತಹ ಮಾತನ್ನು ಹೇಳಿದರು. ಆಗ ಮಾನ್ಯ ಮುಖ್ಯ ನ್ಯಾಯಮೂರ್ತಿಗಳು.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಅಧ್ಯಕ್ಷರೇ, ಇವರು ಏನು ಹೇಳುತ್ತಿದ್ದಾರೆ? ... ನಾವೇನು ಇಲ್ಲಿ ಕಡ್ಲೆಪುರಿ ತಿನ್ನುವುದಕ್ಕೆ ಬಂದಿದ್ದೇವೆಯೇ? How can he be allowed to talk like that?

ಗೊಂದಲ

**ಶ್ರೀ ಬಸವರಾಜ ರಾಯರೆಡ್ಡಿ** : ....ಇದನ್ನು ಸಿ.ಬಿ.ಐಗೆ ವಹಿಸಿ ಕೊಡುವ ಅಗತ್ಯವಿಲ್ಲ ಎಂದು ಕೋರ್ಟ್ ಹೇಳಿದೆ. ಇದು ಕೋರ್ಟ್ ಕಾಪಿ...

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಅಧ್ಯಕ್ಷರೇ, ಇವರೇನು ಹೇಳುತ್ತಿದ್ದಾರೆ ಕೇಳಿ. ಸಿ.ಬಿ.ಐ. ಗೆ ವಹಿಸಿಕೊಡುವಂತಹ ಅವಶ್ಯಕತೆ ಇಲ್ಲವೆಂದು ಅವರು ಹೇಳುತ್ತಿದ್ದಾರೆ.....

**Sri J.C. Madhuswamy** : Who is he to tell all that?

ಗೊಂದಲ

**ಛೇರ್ಮನ್** : ನೀವು ರಿಪ್ಲೈ ಏಕೆ ಮಾಡಲಿಕ್ಕೆ ಹೋಗುತ್ತೀರಿ? ಸರ್ಕಾರ ಸಮರ್ಥ ಇದೆ, ಅದು ಆ ಕೆಲಸವನ್ನು ಮಾಡುತ್ತದೆ.

ಗೊಂದಲ

**ಶ್ರೀ ಜೆ.ಸಿ. ಮಾಧುಸ್ವಾಮಿ** : ಇದನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ಇವರು ಯಾರು?

ಗೊಂದಲ

**ಶ್ರೀ ಕೆ. ಶ್ರೀನಿವಾಸಗೌಡ** : ....... ಕೋರ್ಟ್ ತೀರ್ಪನ್ನು ಅವರ ಭಾಷಣದಲ್ಲಿ ಅವರು ಕೋಟ್ ಮಾಡುತ್ತಾರೆ. ಅದನ್ನು ಕೇಳುವುದು, ಬಿಡುವುದು ಅವರಿಗೆ ಸೇರಿದ್ದು..... ನೀವು ಇದನ್ನು ಮಾಡಿದ್ದೀರಿ, ಬಿಟ್ಟಿದ್ದೀರಿ ಎಂದು ನೀವು ಹೇಳಲಿಲ್ಲವೇ? ಹಾಗೆಯೇ ಅವರೂ ಮಾತನಾಡುತ್ತಾರೆ...

ಗೊಂದಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಇದೇನು ತಾವು ಇದನ್ನು ಇದೇ ರೀತಿ ಮುಂದುವರೆಸುತ್ತೀರಾ?

ಛೇರ್ಮನ್ : ಅವರಿಗೆ ಮಾತನಾಡಲಿಕ್ಕೆ ನಾನು ಅವಕಾಶವನ್ನು ಕೊಟ್ಟಿದ್ದೇನೆ. ಅವರು ಬೇಗ ಮುಗಿಸಲಿ. ತಾವು ದಯವಿಟ್ಟು ಕುಳಿತುಕೊಳ್ಳಿ. ಎಲ್ಲರೂ ಈ ರೀತಿ ಮಾತನಾಡಿದರೆ ಯಾವುದೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ ನೋಡಿ.

ಗೊಂದಲ

ಶ್ರೀ ಜೆ.ಸಿ ಮಾಧುಸ್ವಾಮಿ : ... ಯಾರು ಬೇಕಾದರೂ ಎದ್ದು ಡಿಫೆಂಡ್ ಮಾಡುವುದಾದರೆ, ನಾಳೆ ಈ ಸಭೆಗೆ ಮೂರು ಕಾಸಿನ ಕಿಮ್ಮತ್ತು ಕೂಡ ಉಳಿಯುವುದಿಲ್ಲ.

ಗೊಂದಲ

ಶ್ರೀ ಬಸವರಾಜ ರಾಯರೆಡ್ಡಿ : .....ಮತ್ತು ಎಲ್ಲಾ ಅಲಿಗೇಷನ್ ಏನು ಮಾಡಿದ್ದಾರೆ, ಇದೆಲ್ಲಾ ಬೋಗಸ್ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ಇವರೇನು ಹೇಳುತ್ತಿದ್ದಾರೆ ನೋಡಿ.

**Sri J.C. Madhuswamy :** What is this going on here? ಇವರಿಗೆ ಯಾವ ಮಾತಿನಲ್ಲಿ ಹೇಳಬೇಕು?

ಗೊಂದಲ

ಶ್ರೀ ಬಸವರಾಜ ರಾಯರೆಡ್ಡಿ : .... ಇದಕ್ಕೆ ತೃಪ್ತಿಯಾಗದೆ ಆ ಪಾರ್ಟಿ ಸುಪ್ರೀಂಕೋರ್ಟ್‌ಗೆ ಹೋದರು.

ಗೊಂದಲ

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ Parliamentary Affair Minister ರವರೇ, session ಇದೊಂದು ಸಲಕ್ಕೇ ಮುಗಿಯುವುದಿಲ್ಲ. ಕರ್ನಾಟಕದ ಇತಿಹಾಸದಲ್ಲಿ ಇದು ಕೊನೆಯಾಗುವುದಿಲ್ಲ....

ಛೇರ್ಮನ್ : ಒಂದು ಗಂಟೆಯಾಯಿತು ನಿಮ್ಮದು. ದಯವಿಟ್ಟು ಬೇಗ ಮುಗಿಸಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸತ್ತು ಹೋಗುತ್ತದೆ ನಿಮ್ಮ ಡೆಮಾಕ್ರಸಿ. ಅಧ್ಯಕ್ಷರೇ, ಪ್ರಜಾಪ್ರಭುತ್ವ ಈ ಮನೆಯಲ್ಲಿ ಸತ್ತು ಹೋಗುತ್ತದೆ. ಸಂಪ್ರದಾಯಗಳು ಸತ್ತು ಹೋಗುತ್ತವೆ ಇಲ್ಲಿ.

ಛೇರ್ಮನ್ : ಒನ್ ಅವರ್ ಆಯಿತು, ದಯವಿಟ್ಟು ಬೇಗ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ : .... ಖಾಸಗಿ ಬಂಡವಾಳದಾರರು ಈ ತರಹದ ತೊಂದರೆಗಳನ್ನು ಅನುಭವಿಸಿದರೆ, ನಾವು ಅವರಿಗೆ ನೈತಿಕವಾದಂತಹ ಬೆಂಬಲವನ್ನು ಕೊಡದೆ ಇದ್ದರೆ ನಾಳೆ ರಾಜ್ಯಕ್ಕಾಗಲಿ, ರಾಷ್ಟ್ರಕ್ಕಾಗಲಿ ಬಂಡವಾಳ ಹೂಡುವಂತಹ ಜನ ಬರುವುದಿಲ್ಲ.

ಮೂಲಭೂತ ಸೌಕರ್ಯ ಹಾಳಾಗುತ್ತದೆ. ಮೂಲಭೂತ ಸೌಕರ್ಯಗಳು ಹೋಗುತ್ತವೆ, ಆ ಹಿನ್ನೆಲೆಯಲ್ಲಿ ನಾವು ಬದಲಾದಂತಹ ದಿನಮಾನಗಳಲ್ಲಿ, ಏನು ಇವತ್ತು globalization, privatization, ಏನೊಂದು ನಾವು ಒಪ್ಪಿಕೊಂಡಿದ್ದೇವೋ, ಈ ಹಿನ್ನೆಲೆಯಲ್ಲಿ ನಾವು ಒಳ್ಳೆಯ ಖಾಸಗಿ ಬಂಡವಾಳದಾರರಿಗೆ......

ಗೊಂದಲ

ಜಿ.ವಿ. ಶ್ರೀರಾಮರೆಡ್ಡಿ : ಸದನದಲ್ಲಿ ಏನು ಬೇಕಾದರೂ ನಡೆಯಬಹುದಲ್ಲಾ?

ಗೊಂದಲ

ಶ್ರೀ ಜೆ.ಸಿ. **ಮಾಧುಸ್ವಾಮಿ** : ಯಾರ ವಕಾಲತ್ತನ್ನು ಅವರು ಇಲ್ಲಿ ವಹಿಸುತ್ತಿದ್ದಾರೆ? ಗೌರ್ನಮೆಂಟ್ ರಿಪ್ಲೈ ಕೇಳದೆ ನಾವು ಅವರ ರಿಪ್ಲೈ ಕೇಳಿಕೊಂಡು ಹೋಗಬೇಕೇ? It is shame on the part of the government...........

ಗೊಂದಲ

ಛೇರ್ಮನ್ : ಬೇಗ ಮುಗಿಸಿ.

ಶ್ರೀ ಜೆ.ಸಿ. **ಮಾಧುಸ್ವಾಮಿ** : ಇದು ಪ್ರಜಾಪ್ರಭುತ್ವಕ್ಕೇ ನಾಚಿಕೆಗೇಡು.........

ಗೊಂದಲ

ಶ್ರೀ ಆರ್. ಅಶೋಕ್ : ಇಲ್ಲಿ ಬೇಕಾದಷ್ಟು ಜನ ಹಿರಿಯ ಮಂತ್ರಿಗಳಿದ್ದಾರೆ. ಸಿ.ಎಂ. ಇದ್ದಾರೆ......

ಗೊಂದಲ

ಶ್ರೀ ಜೆ.ಸಿ. **ಮಾಧುಸ್ವಾಮಿ** : ಯಾರು ಮಾತನಾಡುತ್ತಿದ್ದಾರೆ? ಏಕೆ ಮಾತನಾಡುತ್ತಿದ್ದಾರೆ? ಇಲ್ಲಿ ಏನು ನಡೆಯುತ್ತಿದೆ?

ಗೊಂದಲ

**Sri J.C. Madhuswamy :** He is related to Mr. B.S. Patil and he is a partner. He is a shareholder. He is defending. He is one of the partners, so he is defending. I challenge.

ಗೊಂದಲ

ಛೇರ್ಮನ್ : ತಾವು ಕುಳಿತುಕೊಳ್ಳಿ, ತಮ್ಮ ಸಮಯ ಮುಗಿಯಿತು. ಮಾನ್ಯ ದೇಶಪಾಂಡೆಯವರೇ, ತಾವು ಮಾತನಾಡಿ.

ಗೊಂದಲ

ಛೇರ್ಮನ್ : ತಮ್ಮ ಅವಧಿ ಅಯಿತು, ತಾವು ದಯವಿಟ್ಟು ಕುಳಿತುಕೊಳ್ಳಿ.

ಗೊಂದಲ

ಛೇರ್ಮನ್ : ಈಗ ಮಾನ್ಯ ಆರ್.ವಿ. ದೇಶಪಾಂಡೆಯವರು. ದಯವಿಟ್ಟು ತಾವೆಲ್ಲಾ ಕುಳಿತುಕೊಳ್ಳಿ. Please sit down.

ಗೊಂದಲ

ಛೇರ್ಮನ್ : ಈಗ ನಾನು ಮಾನ್ಯ ದೇಶಪಾಂಡೆಯವರನ್ನು ಕರೆದಿದ್ದೇನೆ. ಮಾನ್ಯ ದೇಶಪಾಂಡೆಯವರು ಮಾತನಾಡಿ.

ಗೊಂದಲ

**ಶ್ರೀ ಆರ್.ವಿ. ದೇಶಪಾಂಡೆ** : ಈ ರೀತಿ ಮಾಡುವುದರಿಂದ ಈ ಸದನಕ್ಕೆ ಗೌರವ ಬರುವುದಿಲ್ಲ. ಏಕೆ ನಿಯಮಾವಳಿ ಇರಬೇಕು ಈ ಸದನಕ್ಕೆ?

ಗೊಂದಲ

**ಛೇರ್ಮನ್** : ಮಾನ್ಯ ದೇಶಪಾಂಡೆಯವರು ದಯವಿಟ್ಟು ಮಾತನಾಡಿ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಒಬ್ಬ ಫಲಾನುಭವಿ ಆಡುತ್ತಿರುವ ಮಾತಿದು. He is a beneficiary.

ಗೊಂದಲ

**ಛೇರ್ಮನ್** : ರಾಯರೆಡ್ಡಿಯವರೇ, ತಮ್ಮ ಅವಧಿ ಮುಗಿಯಿತು, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ದೇಶಪಾಂಡೆಯವರು ಮಾತನಾಡಿ.

ಗೊಂದಲ

**ಛೇರ್ಮನ್** : ನೀವು ಎಂಡ್ ಮಾಡುತ್ತೇನೆ ಎಂದು ಹೇಳಿ ಈಗಾಗಲೇ ಬಹಳ ಹೊತ್ತಾಯಿತು.

ಗೊಂದಲ

**ಶ್ರೀ ಬಸವರಾಜ ರಾಯರೆಡ್ಡಿ** : ಯಾವುದೇ ಖಾಸಗಿ ಬಂಡವಾಳಗಾರರು reputed companies ಬಂದರೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗುತ್ತದೆ. ಒಳ್ಳೆಯ ಅಧಿಕಾರಿಗಳಿಗೆ ಬೆಂಬಲ ಕೊಟ್ಟರೆ ಒಳ್ಳೆಯದಾಗುತ್ತದೆ ಎಂಬ ಮಾತನ್ನು ಹೇಳಿ, ಇವತ್ತೇನು ಈ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್..

**ಶ್ರೀ ಜೆ.ಸಿ. ಮಾಧುಸ್ವಾಮಿ** : ಇಲ್ಲಿ ನಿಂತುಕೊಂಡು ಋಣ ತೀರಿಸುತ್ತಿದ್ದಾರೆ.

ಗೊಂದಲ

**ಶ್ರೀ ಬಸವರಾಜ ರಾಯರೆಡ್ಡಿ** : ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಇವತ್ತು ದೇವೇಗೌಡರ ಸರ್ಕಾರ ಇರಬಹುದು, ಜೆ.ಹೆಚ್. ಪಟೇಲ್‌ರ ಸರ್ಕಾರ ಇರಬಹುದು, ಕೃಷ್ಣರವರ ಸರ್ಕಾರ ಇರಬಹುದು, ಧರ್ಮಸಿಂಗ್‌ರವರ ಸರ್ಕಾರ ಇರಬಹುದು, ಇದರಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ, ನಡೆಯುವುದಿಲ್ಲ ಎಂಬ ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಗೊಂದಲ

**ಛೇರ್ಮನ್** : ಆಯಿತು, ಈಗ ಮಾನ್ಯ ದೇಶಪಾಂಡೆಯವರು.

ಗೊಂದಲ

**ಛೇರ್ಮನ್** : ನಾನು ಈಗ ಮಾನ್ಯ ದೇಶಪಾಂಡೆಯವರನ್ನು ಕರೆದಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ

**ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ)** : ಮಾನ್ಯ ಅಧ್ಯಕ್ಷರೇ, ಕಳೆದ ಮೂರು ದಿವಸಗಳಿಂದ ಈ ಸದನದಲ್ಲಿ ಬೆಂಗಳೂರು ಮತ್ತು ಸುತ್ತಮುತ್ತಲೂ KIADB ಯಿಂದ Revenue

ತಮಗೆ ಆ ಅಧಿಕಾರ ಇದೆ. ಪ್ರಜಾಪ್ರಭುತ್ವದಲ್ಲಿ ನಾವೂ ಸಹ ಅಲ್ಲಿ ಕುಳಿತು ಸರ್ಕಾರದ ಮೇಲೆ ಸಾಕಷ್ಟು ಧಾಳಿ ಮಾಡಿದ್ದೇವೆ.

ಹಾಗಾಗಿ ನಿಮ್ಮ ಕರ್ತವ್ಯವನ್ನು ತಾವು ಮಾಡುತ್ತಿದ್ದೀರಿ. ಅದರ ಬಗ್ಗೆ ನಮಗೆ ಬೇಜಾರಾಗುವ ಪ್ರಶ್ನೆಯೇ ಇಲ್ಲ. ಇಲ್ಲಿ ಪ್ರಶ್ನೆ ಏನೆಂದರೆ ನಿಜವಾಗಿಯೂ ಹಗರಣಗಳು ಆಗಿದೆಯೇ? ಏಕೆಂದರೆ ಈ ಸದನದಲ್ಲಿರುವ ಎಲ್ಲರೂ ಬರುವ ಐದು ವರ್ಷಗಳಲ್ಲಿ ಕರ್ನಾಟಕದ ಭವಿಷ್ಯದ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. Destiny ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಜನರು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ :** ಕಳೆದ ಐದು ವರ್ಷ ಗ್ಲೋಬಲೈಸೇಶನ್ ಪಿಕ್ಚರ್‌ನ ನೋಡಿ ಕನಸು ಕಂಡ್ರಲ್ಲಾ ಹಾಗೆ.

**ಶ್ರೀ ಆರ್.ವಿ. ದೇಶಪಾಂಡೆ :** ಬರುತ್ತೇನೆ, ಬರುತ್ತೇನೆ, ಆ ಬಗ್ಗೆಯೂ ಹೇಳುತ್ತೇನೆ. You are also party to that. You have worked with me there also.

**Sri J.C. Madhuswamy :** Every member sitting here is a party for that..

**ಆರ್.ವಿ. ದೇಶಪಾಂಡೆ :** ನೋಡಿ. ನೀವುಗಳೆಲ್ಲರೂ ಮಾತನಾಡುವಾಗ ನಾನು ಯಾರಿಗೂ ನಿಮಗೆ ಮಾತನಾಡುವುದಕ್ಕೆ ತೊಂದರೆ ಮಾಡಲಿಲ್ಲ. ನಾನು ಈಗ ಕೂಡ ನಿಮ್ಮ ಬಗ್ಗೆ ಏನೂ ಮಾತನಾಡಿಲ್ಲ. Please co-operate. ನೋಡಿ. ನಾನು ಹೇಳಿದ್ದ it will not convince you ಎಂಬುದು ನನಗೆ ಗೊತ್ತಿದೆ. But, I will do my duty. Truth has to be in the records. ಸತ್ಯ ಏನೆಂದು ರೆಕಾರ್ಡ್ಸ್‌ನಲ್ಲಿ ಬರಬೇಕಾಗುತ್ತದೆ. Ultimately....

**ಶ್ರೀ ಜೆ.ಸಿ. ಮಾಧುಸ್ವಾಮಿ :** ತಾವು ಹಿರಿಯರು. ಒಂದು ನಿಮಿಷ ಈಲ್ಡ್ ಆಗಬೇಕು. ಯಾವತ್ತಾದರೂ ಇಂಥ ಒಂದು ಚರ್ಚೆ ಆದಾಗ ಸದಸ್ಯರು ಎದ್ದು ನಿಂತುಕೊಂಡು ಡಿಫೆಂಡ್ ಮಾಡುವುದು ನಡೆದಿತ್ತೇ Unless he is charged by name. ಮಾನ್ಯ ಸಿಂಧ್ಯಾರವರು ಟೈಂ ಅಂಡ್ ಆಫ಼ನ್ ನಮಗೆ ಎಚ್ಚರಿಸುತ್ತಾ ಬಂದರು, ಹೆಸರು ಹೇಳುತ್ತೀರಿ, ಅವರಿಗೆ ನೋಟಿಸ್ ಕೊಟ್ಟಿಲ್ಲ ಅಂತ. ನಾವೂ ಹೆಸರನ್ನು ತಮಗೆ ಹೇಳಿಲ್ಲ. ಆದುದರಿಂದ ನೀವು ಡೀಟೈಲಾಗಿ ಹೋಗುತ್ತಿದ್ದೀರಿ. ಅದಕ್ಕೆ ಮೊದಲು ತಾವು ಸರ್ಕಾರ ಸತ್ತು ಹೋಗಿದೆ ನಾನೊಬ್ಬನೇ ಬದುಕಿರುವುದು ಎಂದು ಹೇಳಿ ಮಾತನಾಡಿ. ಬೇರೆ ಏನೂ ನಮ್ಮದು ಉದ್ದೇಶವಿಲ್ಲ. This Government is virtually dead. There is no Government to the reply. You have killed the Government as well as the land owners. ಅಷ್ಟು ಹೇಳಿ ತಾವು ಚರ್ಚೆ ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರ ಉತ್ತರ ಕೊಡುತ್ತದೆ. ನಾನು ಇಲ್ಲಿ ಯಾರನ್ನೂ ಡಿಫಂಡ್ ಮಾಡುವುದಕ್ಕೆ ನಿಂತಿಲ್ಲ. ನನ್ನನ್ನೂ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ನಾನು ಇಲ್ಲಿ ನಿಂತಿಲ್ಲ. ಯಾರನ್ನೂ ಡಿಫೆಂಡ್ ಮಾಡುವುದಕ್ಕೆ ಇಲ್ಲಿ ನಿಂತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ ಏನಿದೆ ಉತ್ತರ ಕೊಡುವುದಕ್ಕೆ ಇನ್ನು ಏನು ಉಳಿದಿದೆ ಉತ್ತರ ಕೊಡುವುದಕ್ಕೆ ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ಹೇಳುತ್ತೇನೆ. ನಾನು ಮಾತನಾಡುವಾಗ ಇವರು ಮಾತನಾಡಿದರೆ ಹೇಗೆ?

ಛೇರ್ಮನ್ : ಮಾನ್ಯ ದೇಶಪಾಂಡೆಯವರು ಮಾತನಾಡಲಿ ಬಿಡಿ.

**Sri J.C. Madhuswamy :** You are not supposed to speak.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೈತಿಕವಾದಂಥ ಪ್ರಜ್ಞೆ ಇದ್ದರೆ, ಅವರು ಮಾತನಾಡಬಾರದು.

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಜಕಾರಣದಲ್ಲಿ ಸೀನಿಯರ್ ಆಗಿರುವ ಅವರು ಈ ರೀತಿಯಲ್ಲಿ ಇಲ್ಲಿ ಮಾತನಾಡಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೈತಿಕವಾದ ಪ್ರಜ್ಞೆ ಅವರಿಗಿದ್ದರೆ ಅವರು ಮಾತನಾಡಬಾರದು. ನಮ್ಮ ಹತ್ತಿರ ಅವರು ಹೇಳಿಸಿಕೊಳ್ಳಬಾರದು.

**Sri J.C. Madhuswamy :** You are not called to make a statement here. ಸರ್ಕಾರ ಉತ್ತರ ಕೊಡಬೇಕು. ತಾವಲ್ಲ ಉತ್ತರ ಕೊಡುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲಿ ಏನೂ ಉಳಿದಿಲ್ಲ ಸರ್ಕಾರ ಉತ್ತರ ಕೊಡುವುದಕ್ಕೆ? We have charged the Hon'ble Industries Minister's post.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾಜಿ ಗೌರವಾನ್ವಿತ ಕೈಗಾರಿಕಾ ಮಂತ್ರಿಗಳಿಗೆ ಈ ರೀತಿ ಮಾತನಾಡಲು ಹೇಗೆ ಬಿಟ್ಟಿರಿ ಸಾರ್?

ಶ್ರೀ ಆರ್.ವಿ. ದೇಶಪಾಂಡೆ : ಏನು ಮತನಾಡಿದ್ದೇನೆ? ನಾನು ಇನ್ನೂ ಮಾತನಾಡುವುದಕ್ಕೆ ಶುರು ಮಾಡಿಲ್ಲ.

**Sri J.C. Madhuswamy :** How can you defend before Government takes a decision?

**Sri R.V. Deshpande** : Why are they so desparate? They are desparate because they know that truth will come out.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಾದರೆ ನಾಳೆ ಇಷ್ಟ ಬಂದಹಾಗೆ ಮಾಡಿಕೊಳ್ಳಬಹುದೆ?

ಛೇರ್ಮನ್ : ಮಾಧುಸ್ವಾಮಿಯವರೆ, ಮಾತನಾಡಲು ಅವರ ಹೆಸರನ್ನು ಕರೆಯಲಾಗಿದೆ. ದೇಶಪಾಂಡೆಯವರು ಮಾತನಾಡಲಿ ಬಿಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಮಾತನಾಡಬಾರದು ಎಂದು ನಾವು ಹೇಳುತ್ತಿಲ್ಲ. ಆದರೆ ಏನು ಮಾತನಾಡಬಹುದು ಎಂಬುದನ್ನು ನೀವು ಸ್ವಲ್ಪ ಅವರಿಗೆ ಹೇಳಿ ಸ್ವಾಮಿ. ಅವರು ಮಾತನಾಡುವುದಕ್ಕೆ ನಮ್ಮ ಅಬ್ಜೆಕ್ಷನ್ ಏನೂ ಇಲ್ಲ.

**ಛೇರ್ಮನ್ :** ಅವರು ಇನ್ನೂ ಮಾತೇ ಆಡದಿರುವಾಗ ಅವರು ಹೀಗೆಯೇ ಮಾತನಾಡುತ್ತಾರೆಂದು ನೀವೇಕೆ ಊಹೆ ಮಾಡಿಕೊಳ್ಳುತ್ತೀರಿ?

**ಶ್ರೀ ಜೆ.ಸಿ. ಮಾಧುಸ್ವಾಮಿ :** ಯಾವ ರಿಪ್ಲೈ ಬಗ್ಗೆ ಮಾತನಾಡುತ್ತಿದ್ದಾರೆ ಅವರು?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ನಾವು ಎಲ್ಲಿ ಅವರು ಮಾತನಾಡುವುದಕ್ಕೆ ಅಬ್ಜೆಕ್ಟ್ ಮಾಡುತ್ತಿದ್ದೇವೆ? We are not objecting to his talking. We are only objecting about the rules.

**ಗೊಂದಲ**

**ಶ್ರೀ ಆರ್.ವಿ. ದೇಶಪಾಂಡೆ :** ನಾನು ಮಾತನಾಡುವಾಗ ಮಧ್ಯೆ ಏಕೆ ಗೊಂದಲ ಸೃಷ್ಟಿ ಮಾಡುತ್ತೀರಿ?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಅವರು ಮಾತನಾಡಬಾರದು ಎಂದು ನಾವು ಹೇಳಲೇ ಇಲ್ಲ.

**Sri J.C. Madhuswamy :** He is not warranted to talk.

**ಶ್ರೀ ಆರ್.ವಿ. ದೇಶಪಾಂಡೆ :** ಹಾಗಾದರೆ ನನಗೆ ಮಾತನಾಡಲು ಬಿಡಿ. ನಾನು ಹೇಳುವುದನ್ನು ಸ್ವಲ್ಪ ಕೇಳಿ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಸರ್ಕಾರ ಹೇಳುವ ಹಾಗೆ ಎಲ್ಲವನ್ನೂ ನೀವೇ ಹೇಳುತ್ತಿದ್ದೀರಲ್ಲಾ.

**ಶ್ರೀ ಆರ್.ವಿ. ದೇಶಪಾಂಡೆ :** ನಾನು ಏನು ಹೇಳಿಲ್ಲ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಏಕೆ ಏನೂ ಹೇಳಿಲ್ಲ ಎನ್ನುತ್ತೀರಿ. ರೆಕಾರ್ಡ್ಸ್ ತೆಗೆಸಿ ನೋಡಿ ಏನ್ ಹೇಳಿದ್ದೀರಿ ಎಂದು.

**Sri J.C. Madhuswamy :** We have not charged Mr. Deshpande. We have charged the Hon'ble Government of Karnataka for irregularities.

**Sri G.V. Sriramareddy :** I have not charged Mr. Deshpande.

**ಶ್ರೀ ಆರ್.ವಿ. ದೇಶಪಾಂಡೆ :** ಮಾನ್ಯ ಅಧ್ಯಕ್ಷರೆ, ಈಗ ನೀವೇ ಹೇಳಿ. ನೀವು ನನಗೆ ಮಾತನಾಡಿ ಎಂದರೆ ನಾನು ಮಾತನಾಡುತ್ತೇನೆ. ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ :** ಮಾತನಾಡಕೂಡದು.

**ಛೇರ್ಮನ್ :** ಮಾತನಾಡಕೂಡದು ಎಂದು ಹೇಳುವುದಕ್ಕೆ ಆಗುವುದಿಲ್ಲ. ಪ್ರತಿಯೊಬ್ಬ ಸದಸ್ಯರು ಇಲ್ಲಿ ಮಾತನಾಡುವ ಹಕ್ಕನ್ನು ಹೊಂದಿರುತ್ತಾರೆ.

**ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :** ಈ ವಿಚಾರದಲ್ಲಿ ಮಾತನಾಡುವವರು ನಿಯಮ 69ರಡಿಯಲ್ಲಿ ಏನು ಮಾತನಾಡುತ್ತಿದ್ದಾರೋ ಅದೇ ರೀತಿ ಅದೇ ನಿಯಮದ ಕೆಳಗೆ ಮಾತನಾಡಲು ಮಾನ್ಯ ದೇಶಪಾಂಡೆಯವರು ಸಹಿಯನ್ನು ಹಾಕಿದ್ದಾರೆ. ಅವರೂ ಒಬ್ಬ ಸಿಗ್ನೇಟರಿ. ಆದ್ದರಿಂದ ಮಾನ್ಯ

ದೇಶಪಾಂಡೆಯವರಿಗೂ ಮಾತನಾಡಲು ಅಧಿಕಾರ ಹೊಂದಿರುತ್ತಾರೆ. ಹೀಗಿರುವಾಗ ಅವರೇಕೇ ಮಾತನಾಡಬಾರದು?

**ಗೊಂದಲ**

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಮಾತನಾಡಬಾರದು ಎಂದು ನಾವು ಹೇಳಲಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ :** ಅವರು ಯಾವ ರೀತಿ ಮಾತನಾಡುತ್ತಾರೆ ನೋಡಿ.

**ಛೇರ್ಮನ್ :** ಮಾನ್ಯ ಮಾಧುಸ್ವಾಮಿಯವರೆ, ಮಾನ್ಯ ದೇಶಪಾಂಡೆಯವರೂ ಕೂಡ ಮಾತನಾಡಲು ಈ ನಿಯಮದ ಅಡಿಯಲ್ಲಿ ಹೆಸರನ್ನು ಕೊಟ್ಟಿದ್ದಾರೆ. ಅವರ ಹೆಸರನ್ನು ನಾನು ಕರೆದಿದ್ದೇನೆ. ಅವರು ಮಾತನಾಡಲು ದಯವಿಟ್ಟು ತಾವು ಸಹಕರಿಸಿ ದಯಮಾಡಿ ಕುಳಿತುಕೊಳ್ಳಿ.

**ಗೊಂದಲ**

**ಶ್ರೀ ಪಿ.ಜಿ.ಆರ್. ಸಿಂಧ್ಯಾ :** ಮಾನ್ಯ ಅಧ್ಯಕ್ಷರೇ..

**ಗೊಂದಲ**

**ಛೇರ್ಮನ್ :** ಒಂದ್ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಮಂತ್ರಿಗಳು ಮಾತನಾಡುತ್ತಾರೆ.

**ಗೊಂದಲ**

**ಛೇರ್ಮನ್ :** ನೋಡಿ ಹೀಗೆ ಎಲ್ಲರೂ ಒಟ್ಟಿಗೆ ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಪಾಟೀಲರೇ ದಯಮಾಡಿ ಕುಳಿತುಕೊಳ್ಳಿ.

**ಗೊಂದಲ**

**ಛೇರ್ಮನ್ :** ಅವರುಗಳೆಲ್ಲಾ ಮಾತನಾಡುತ್ತಿರುವುದನ್ನು ಯಾವುದನ್ನೂ ರೆಕಾರ್ಡ್ ಮಾಡಿಕೊಳ್ಳಬೇಡಿ. ಸ್ಟಾಪ್ ಮಾಡಿ. ಸದಸ್ಯರುಗಳೇ, ಈಗ ನೀವು ಮಾತನಾಡುತ್ತಿರುವುದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಮಾನ್ಯ ಸಿಂಧ್ಯಾರವರು ಈಗ ಮಾತನಾಡುತ್ತಾರೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕೆ ಸಚಿವರು) :** ಮಾನ್ಯ ಅಧ್ಯಕ್ಷರೆ, ಈಗ ಇದುವರೆಗೂ ಕೂಡ ಈ ವಿಚಾರದಲ್ಲಿ ಅನೇಕ ವಿಷಯಗಳನ್ನು ಮಾನ್ಯ ಗೌರವಾನ್ವಿತ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಅಲ್ಲಿ ಕುಳಿತಿರುವಾದ ನಡೆದ ಒಂದು ಘಟನೆಯನ್ನು ಬಿಟ್ಟರೆ ಬಾಕಿ ಎಲ್ಲವೂ ಸಹಿತ ಸುಸೂತ್ರವಾಗಿ ನಡೆಯುತ್ತಿದೆ. ಇಲ್ಲಿ ಎಲ್ಲಾ ಚರ್ಚೆಗಳಿಗೆ ಮಾತನಾಡುವುದಕ್ಕೆ ಅವರಿಗೆ ಹಕ್ಕಿದೆ. ಮಾನ್ಯ ಮಾಧುಸ್ವಾಮಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಆವೇಶದಿಂದ ಸರ್ಕಾರ ಸತ್ತು ಹೋಗಿದೆ, ಸರ್ಕಾರ ಸತ್ತು ಹೋಗಿದೆ ಎಂದು ಪದೇ ಪದೇ ಹೇಳಿದ್ದಾರೆ. ದಯಮಾಡಿ ಅದರ ಅವಶ್ಯಕತೆ ಇಲ್ಲ. ಏಕೆಂದರೆ ಸರ್ಕಾರ ಬದುಕಿದೆ. ಇನ್ನು ಈ ವಿಚಾರದಲ್ಲಿ ಸರ್ಕಾರ ಉತ್ತರವನ್ನು ಕೊಡುವುದಕ್ಕೆ ಸಮರ್ಥವಾಗಿದೆ. ಅದರಲ್ಲಿ ನಾವು ಹೆದರಿಕೊಂಡು ಓಡಿ ಹೋಗತಕ್ಕಂಥದ್ದು ಏನೂ ಇಲ್ಲ. ದಯಮಾಡಿ

ನಾನು ಹೇಳುವುದನ್ನು ತಾವೆಲ್ಲರೂ ಕೇಳಬೇಕು. ಮಾಧುಸ್ವಾಮಿಯವರೇ, ಈ ಸದನದಲ್ಲಿ ನೀವು ವಾಟಾಳ್ ನಾಗರಾಜ್, ಯಡಿಯೂರಪ್ಪನವರು, ಉದಾಸಿಯವರು, ಈಶ್ವರಪ್ಪನವರು, ಹಿರಿಯ ಸದಸ್ಯರುಗಳಾಗಿದ್ದಾರೆ. ಈ ಸದನ ಹೇಗೆ ನಡೆಯಬೇಕು ಎಂದು ಸಲಹೆಯನ್ನು ತಾವು ಮಾಡಬೇಕಾಗುತ್ತದೆ. ನಾವೇ ಹಾಕಿಕೊಂಡಿರತಕ್ಕಂಥ ಕಾನೂನುಗಳು ಇವೆಲ್ಲಾ, ಬೇರೆಯವರು ಮಾಡಿರತಕ್ಕಂಥದ್ದಲ್ಲ. ಆದುದರಿಂದ ನಾನು ಏನು ಹೇಳುತ್ತೇನೆಂದರೆ ಈಗ ತಾವು ಮಾತನಾಡುವಾಗ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಅಪ್ರತ್ಯಕ್ಷವಾಗಿ ಕೆಲವು ಸದಸ್ಯರುಗಳ ಬಗ್ಗೆ ಮಾತನಾಡಿರತಕ್ಕಂಥದ್ದು ನಿಜ. ಅವರಿಗೂ ಸಹಿತ ರಾಜ್ಯದಲ್ಲಿ ಅವರದೇ ಆದಂಥ ಒಂದು ವ್ಯಕ್ತಿತ್ವ ಇರುತ್ತದೆ, ಅವರು ಮಾತನಾಡಬೇಕು ಎಂದು ಬಯಸಿದಾಗ ಮತ್ತು ಅಧ್ಯಕ್ಷರೂ ಕೂಡ ಒಪ್ಪಿಗೆಯನ್ನು ಕೊಟ್ಟನಂತರ ಬೇರೆಯವರು ಮಧ್ಯದಲ್ಲಿ ಮಾತನಾಡುವುದು ಸರಿಯಲ್ಲ. ಆದುದರಿಂದ ನಾನು ಒಂದು ಭರವಸೆಯನ್ನು ತಮಗೆ ಕೊಡುತ್ತೇನೆ. ನಾವು ಇಲ್ಲಿ ಓಡಿ ಹೋಗುವುದಕ್ಕೆ ನಿಂತಿಲ್ಲ, ಎಲ್ಲಾ ವಿಚಾರಕ್ಕೂ ಕೂಡ ನಾವು ಉತ್ತರವನ್ನು ಕೊಡುತ್ತೇವೆ. ನಮಗೆ ಏನು ಸತ್ಯ ಎಂದು ಅನ್ನಿಸುತ್ತದೆಯೋ ಅದನ್ನು ನಾವು ನಿಮಗೆ ತಿಳಿಸುತ್ತೇವೆ. ಇದರ ಬಗ್ಗೆ ನಿಮಗೆ ಯಾವ ಸಂಶಯವೂ ಬೇಕಾಗಿಲ್ಲ. ಆದರೆ ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಹೀಗೆಯೇ ಮಾತನಾಡಬೇಕು ಎಂದು ಹೇಳುವುದಕ್ಕೂ ಆಗುವುದಿಲ್ಲ. ಈಗ ತಾವೇ ನಿನ್ನೆ ಹೇಳುತ್ತಿದ್ದಿರಿ, ರಾಯರೆಡ್ಡಿಯವರು ಮಾತನಾಡಬಾರದು ಎಂದು. ರಾಯರೆಡ್ಡಿಯವರು ಇವೊತ್ತು ಮಾಡಿರತಕ್ಕಂಥದ್ದು ನಿಮಗೆ ರುಚಿ ಇಲ್ಲದಿರಬಹುದು. ಇವೊತ್ತು ದೇಶದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆರ್ಥಿಕತೆಯಲ್ಲಿ ಆಗುತ್ತಿರುವ ಬದಲಾವಣೆ ಸಂದರ್ಭದಲ್ಲಿ ಯಾವ ದಾರಿಯಲ್ಲಿ ಹೋಗಬೇಕು ಎನ್ನುವುದರ ಬಗ್ಗೆ ಅವರದೇ ಆದ ಒಂದು ವಿಶ್ಲೇಷಣೆಯನ್ನು ಮಾಡಿದ್ದಾರೆ. ಆದುದರಿಂದ ತಾವು ದಯವಿಟ್ಟು ಮಾನ್ಯ ದೇಶಪಾಂಡೆಯವರು ಮಾತನಾಡುವುದಕ್ಕೆ ಸಹಕರಿಸಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ವಿನಂತಿ ಮಾಡುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ :** ಮಾನ್ಯ ಅಧ್ಯಕ್ಷರೆ, ಯಾರಿಗಾದರೂ ನೋವಾಗಿ ನಾವು ಮಾತನಾಡುವುದು ಪರಿಣಾಮವಾಗಿದ್ದರೆ ತಮ್ಮ ಪರ್ಮಿಶನ್ ತೆಗೆದುಕೊಂಡು ಸ್ಟೇಟ್‌ಮೆಂಟ್ ಕೊಡುವುದು ಸಂಪ್ರದಾಯ. ನಾವು ಸ್ವಲ್ಪ ತಿಳಿದುಕೊಂಡಿದ್ದೇವೆ. If at all Mr. Deshpande.. if his right is infringed, if he is hurt, Let him ask the permission and make a statement. ನಾವು ಬೇಡ ಎನ್ನಲಿಲ್ಲ. ಆದರೆ ಚರ್ಚೆಯಲ್ಲಿ ಸರ್ಕಾರದ ಪರವಾಗಿ ಡಿಫೆಂಡ್ ಮಾಡಬೇಡಿ ಎಂದೆ

**ಗೊಂದಲ**

**ಶ್ರೀ ಜೆ.ಸಿ. ಮಾಧುಸ್ವಾಮಿ :** ಮಾನ್ಯ ಸಿಂಧ್ಯಾರವರು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ನಾವು ಸರ್ಕಾರಕ್ಕೆ ಛಾರ್ಜ್ ಮಾಡಿದ್ದೇವೆ. We have not obstructed the statement. ಅವರು ಬೇಕಾದರೆ ಸ್ಟೇಟ್‌ಮೆಂಟ್ ಮಾಡಲಿ. Let him take your

permission and make a statement ನಿಮಗೆ ಗೊತ್ತು ಕಾನೂನು. ಅವರಿಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಹೇಳಿ. ತಮ್ಮ ವಿವೇಚನೆಗೆ ನಾವು ಬಿಟ್ಟುಬಿಡುತ್ತೇವೆ. ತಮ್ಮ ಪರ್ಮಿಶನ್ ತೆಗೆದುಕೊಂಡು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವರಿಗೆ ಹೇಳಿ ಮಾನ್ಯ ಅಧ್ಯಕ್ಷರೆ.

ಗೊಂದಲ

**ಛೇರ್ಮನ್ :** ಒಂದ್ನಿಮಿಷ. ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುತ್ತಾರೆ. ಕುಳಿತುಕೊಳ್ಳಿ.

**ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) :** ಮಾನ್ಯ ಅಧ್ಯಕ್ಷರೆ, ಇದು ಒಂದು ಬಹಳ ವಿಚಿತ್ರವಾದಂಥ ಸನ್ನಿವೇಶ. ಮಾನ್ಯ ಮಾಧುಸ್ವಾಮಿಯವರು ನಮ್ಮ ನಿಯಮಾವಳಿಗಳನ್ನು ಆಧರಿಸಿ ಎತ್ತಿರತಕ್ಕಂಥ ಆಕ್ಷೇಪ ಸರಿ. ಅವರು ಡಿಫೆಂಡ್ ಮಾಡುವ ಹಾಗಿಲ್ಲ. ಬೇಕಾದರೆ ತಮ್ಮ ಪರ್ಮಿಶನ್ ತೆಗೆದುಕೊಂಡು ಸ್ಟೇಟ್‌ಮೆಂಟ್ ಮಾಡಲಿ ಎಂದಿದ್ದಾರೆ. ಕೌಲ್ ಅಂಡ್ ಶಕ್ದೆರ್, ಮೇಸ್ ಪಾರ್ಲಿಮೆಂಟರಿ ಪ್ರಾಕ್ಟೀಸ್, ನಮ್ಮ ರೂಲ್ಸ್, ಹೀಗೆ ಇವೆಲ್ಲವನ್ನೂ ಕೂಡ, ನಾವು ಪರ್ಟಿಕ್ಯುಲರ್‌ಲಿ ಓದುವುದು ಏಕೆಂದರೆ ಲೈನು, ಪ್ಯಾರಾ, ಪೇಜ್ ನಂಬರ್ ಹೇಳುವುದಕಷ್ಟೆ. ಉಳಿದಂತೆ ಸಾಮಾನ್ಯ ತಿಳುವಳಿಗೆ ನಮ್ಮಲ್ಲಿ ಇದ್ದೇ ಇರುತ್ತದೆ. ಇಲ್ಲಿ ಒಂದು ವಿಶಿಷ್ಟವಾದ ಸನ್ನಿವೇಶ ಏನೆಂದರೆ ದಯಮಾಡಿ ಕೇಳಿ. ನೀವು ಮಾಡಿರತಕ್ಕಂಥ ಬಹುತೇಕ ಆರೋಪಗಳು ಸರ್ಕಾರಕ್ಕೆ ಕೈಗಾರಿಕೆ ಇಲಾಖೆಗೆ ಅಂದರೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಗೆ ಸಂಬಂಧಿಸಿದಂತಿದೆ. ಹಿಂದಿನ ಸರ್ಕಾರದಲ್ಲಿ ಆ ಇಲಾಖೆಯ ಮಂತ್ರಿಗಳಾಗಿ ಅವರು ಜವಾಬ್ದಾರಿಯುತವಾಗಿ ನಿರ್ವಹಣೆಯನ್ನು ಅವರು ಮಾಡಿದ್ದಾರೆ. ಅದೃಷ್ಟವಶಾತ್ ಅವರು ಈ ಸದನದಲ್ಲಿ ಮತ್ತೆ ಸದಸ್ಯರಾಗಿ ಮುಂದುವರೆದಿದ್ದಾರೆ. ಯಾವುದೇ ಒಬ್ಬ ಮನುಷ್ಯ ಸ್ವಲ್ಪ ಸ್ವಾಭಾವಿಕವಾಗಿ ನಾವು ಯೋಚನೆ ಮಾಡಿದಾಗ we should place ourselves in his position. ನೀವು ಮಾಡಿರತಕ್ಕಂಥ ಕೆಲವೊಂದು ಆಪಾದನೆಗಳಿವೆ, ತಾನೇ ಎಲ್ಲಾ ಅಧಿಕಾರವನ್ನು ನಡೆಸಿರುವುದರಿಂದ, ಫೈಲ್ಸ್ ಹ್ಯಾಂಡ್ಲ್ ಮಾಡಿರುವುದರಿಂದ ತನ್ನ ನೆನಪಿನ ದೃಷ್ಟಿಯಿಂದ ತನ್ನ ಗೌರವವನ್ನು ಕಾಪಾಡಿಕೊಳ್ಳುವುದಕ್ಕೆ ಒಂದು ಪ್ರಯತ್ನ ಪಡುತ್ತಾರೆ. It is not defence. He is not entitled to defend the Government. You are right. He is an Hon'ble Member of this House. By virtue of that. It is a new situation. I am not quoting any rule. I am not taking shelter under any rule. If he is in a position to exonerate himself by making one or two clarifications, I don't think we should bind him. ನಾವು ಹಾವಭಾವನಗಳನ್ನೆಲ್ಲಾ ಮಾಡಿ, ಒಂದು ರೀತಿಯಾಗಿ ಅವರನ್ನು ಮಾತನಾಡುವುದನ್ನೇ ತಡೆಯುವಂಥ ಒಂದು ಸನ್ನಿವೇಶ ಸೃಷ್ಟಿ ಮಾಡುವುದು, it is not in good taste and it does'nt bring glory to the House. I fully endorse your views.

**Sri J.C. Madhuswamy :** I appreciate the Hon'ble Member's views. ಸನ್ಮಾನ್ಯ ದೇಶಪಾಂಡೆಯವರು ಮಾತನಾಡುವುದಿಲ್ಲವೆಂದು ಹೇಳುವುದಕ್ಕೆ ನನಗೆ ಯಾವ ಹಕ್ಕೂ ಇಲ್ಲ.

**ಶ್ರೀ ವಿ. ಸೋಮಣ್ಣ :** ಮಾನ್ಯ ಅಧ್ಯಕ್ಷರೆ...

**ಶ್ರೀ ಜೆ.ಸಿ. ಮಾಧುಸ್ವಾಮಿ :** ಪ್ಲೀಸ್. ಹೀಗೆಲ್ಲಾ ಮಾತನಾಡಕೂಡದು. ತಿಳುವಳಿಗೆ ಇದ್ದರೆ ಮಾತನಾಡಬೇಕು, ಇಲ್ಲದಿದ್ದರೆ, ಮಾತನಾಡುವವರಿಗೆ ಬಿಡಬೇಕು.

**ಗೊಂದಲ**

**ಶ್ರೀ ವಿ. ಸೋಮಣ್ಣ :** ನಿಮ್ಮಿಂದ ಕಲಿಯಬೇಕಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ :** ಕಲಿಯಬೇಕ್ರಿ ನೀವು.

**ಗೊಂದಲ**

**ಶ್ರೀ ವಿ. ಸೋಮಣ್ಣ :** ಮಾಧುಸ್ವಾಮಿಯವರೇ, ಇದೆಲ್ಲಾ ಬೇಕಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ :** ನಾನು ಚಾರ್ಜ್ ಮಾಡಿದ್ದು ಗೌರ್ನಮೆಂಟ್ ಅನ್ನು. ಅವರು ಹೇಳುವುದನ್ನು ಕೇಳುವುದಕ್ಕಾ ನಾನು ಇಲ್ಲಿ ಚಾರ್ಜ್ ಮಾಡುವುದು.

**ಗೊಂದಲ**

**ಶ್ರೀ ವಿ. ಸೋಮಣ್ಣ :** ನಾವು ನಿಮ್ಮಿಂದ ಕಲಿಯಬೇಕಾಗಿಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ :** ಕಲೀಬೇಕ್ರಿ, ನಾನೀಗ ಅವರಿಂದ ಕಲಿಯುತ್ತಿಲ್ಲವೇ?

**ಗೊಂದಲ**

**ಛೇರ್ಮನ್ :** ಮಾಧುಸ್ವಾಮಿಯವರೆ, ಈಗ ಆಯಿತು. ನಾನೀಗ ದೇಶಪಾಂಡೆಯವರನ್ನು ಕರೆದಿದ್ದೇನೆ. ಅವರು ಈಗಾಗಲೇ ಸ್ಪಷ್ಟವಾಗಿ, ನಾನು ಏನು ಡಿಫೆಂಡ್ ಮಾಡುವುದಕ್ಕೆ ನಿಂತಿರಲಿಲ್ಲ, ನನ್ನ ಅಭಿಪ್ರಾಯಗಳನ್ನು ಹೇಳಲು ನಿಂತಿದ್ದೇನೆಂದು ಹೇಳಿದ್ದಾರೆ. ಅವರೂ ಕೂಡ ಈ ಸದನದ ಸದಸ್ಯರಾಗಿ ಅವರಿಗೆ ಹಕ್ಕಿದೆ. ಅವರು ಮಾತನಾಡಲಿ.

**ಗೊಂದಲ**

**ಶ್ರೀ ಜೆ.ಸಿ. ಮಾಧುಸ್ವಾಮಿ :** .... ಇದ್ದರೆ ಇದ್ದುಕೊಳ್ಳಲಿ.

**Sri Basavaraj Rayareddy :** He can't be only smart, we can also be smart.

**ಛೇರ್ಮನ್ :** ಈಗ ಮಾನ್ಯ ದೇಶಪಾಂಡೆಯವರು ಈ ಸದನದ ಒಬ್ಬ ಗೌರವಾನ್ವಿತ ಹಿರಿಯ ಸದಸ್ಯರಲ್ಲಿ ಅವರೂ ಕೂಡ ಒಬ್ಬರು. ಈ ಚರ್ಚೆಯಲ್ಲಿ ಭಾಗವಹಿಸಬೇಕು, ನನಗೂ ಅವಕಾಶ ಮಾಡಿಕೊಡಿ ಎಂದು ಹೇಳಿ, ಬರೆದು ಕಳುಹಿಸಿದ್ದಾರೆ. ಈಗಾಗಲೇ ಅವರು, ನಾನೇನೂ ಸರ್ಕಾರವನ್ನು ಡಿಫೆಂಡ್ ಮಾಡಲಿಕ್ಕೆ ನಿಂತಿಲ್ಲ, ನನಗೂ ಕೂಡ ನನ್ನ ಅಭಿಪ್ರಾಯಗಳನ್ನು ಹೇಳಲಿಕ್ಕೆ ಒಂದು ಅವಕಾಶವನ್ನು ಮಾಡಿಕೊಡಿ ಎಂದು ಹೇಳಿ ವಿನಂತಿ ಮಾಡಿಕೊಂಡಿದ್ದಾರೆ. ನಾವು ಅವಕಾಶವನ್ನು ನಿರಾಕರಿಸಲಿಕ್ಕಾಗುವುದಿಲ್ಲ. ದಯವಿಟ್ಟು ತಾವೆಲ್ಲಾ ಸಹಕರಿಸಬೇಕು.

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :** ನಾನು ಅವರಿಗೆ ಅವಕಾಶವನ್ನು ನಿರಾಕರಿಸಿ ಎಂದು ಹೇಳುತ್ತಿಲ್ಲ.

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** : ಇಲ್ಲಿ ಮಾನ್ಯ ಸಿಂಧ್ಯರವರು ಸರ್ಕಾರದ ಪರವಾಗಿ ಮಾತನಾಡುವಾಗ, ನಾವು ಉತ್ತರವನ್ನು ಕೊಡುತ್ತೇವೆ, ಸದನವು ಎಷ್ಟು ಹೊತ್ತು ನಡೆಯುತ್ತದೆ, ತಾವು ಎಲ್ಲಿಯವರೆಗೆ ನಮಗೆ ಅವಕಾಶವನ್ನು ಕಲ್ಪಿಸಿ ಕೊಡುತ್ತೀರಿ, ಅಲ್ಲಿಯವರೆಗೆ ನಾವು ಉತ್ತರ ಕೊಡುತ್ತೇವೆ, ಉತ್ತರ ಕೊಡುವುದಕ್ಕೆ ನಾವು ಹಿಂಜರಿಯುವುದಿಲ್ಲ ಎನ್ನತಕ್ಕ ಮಾತನ್ನು ಸ್ಪಷ್ಟಪಡಿಸಿದರು. ಈ ವಿಚಾರದಲ್ಲಿ ಅನೇಕ ಸದಸ್ಯರು ನಮ್ಮ ನಿಯಮಾವಳಿಗಳನ್ನು ಅಕ್ಷರಶ: ಪಾಲಿಸತಕ್ಕ ಸಂದರ್ಭದಲ್ಲಿ ಬೇರೊಬ್ಬ ಸದಸ್ಯರು ಸರ್ಕಾರದ ಪರವಾಗಿ ತಾವು ಅದನ್ನು ರಕ್ಷಣಾತ್ಮಕವಾಗಿ ಮಾತನಾಡಬಾರದು ಎಂದು ಹೇಳಿದ್ದಾರೆ. ಅದನ್ನು ನಾವು ಒಪ್ಪುತ್ತೇವೆ. ಆದರೆ, ತಾವು ನೇರವಾಗಿ ಅವರ ಹೆಸರನ್ನು ಹೇಳದೇ ಇದ್ದರೂ ಕೂಡ, ಪರೋಕ್ಷವಾಗಿ ಆ ತರಹದ ಒಂದು ಅಭಿಪ್ರಾಯ ಮೂಡುವಂತೆ ಆಯಿತು ಎನ್ನುವ ಕಾರಣಕ್ಕಾಗಿಯೇ ಅವರು ಮಾತನಾಡಲು ಪ್ರಯತ್ನ ಮಾಡಿದರು. ನಂತರ, ಅವರು ಇಲ್ಲ, ನಾನು ಈ ವಿಚಾರದಲ್ಲಿ ಯಾರ ಪರವಾಗಿ ನಿಂತು ಉತ್ತರ ಕೊಡುತ್ತೇನೆಂದಲ್ಲ, ಆದರೆ, ನನಗೆ ಅಧಿಕಾರವನ್ನು ಕೊಟ್ಟಿದ್ದಾರೆ, ನಾನು ಅಪ್ಪಣೆಯನ್ನು ಪಡೆದಿದ್ದೇನೆ, ನನಗೆ ನಿನ್ನೆ ಮಾಡಿದಂಥ ವಿಚಾರದಲ್ಲಿ ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇ ಅಲ್ಲಿ ಕುಳಿತಾಗ ಮಾತನಾಡಲು ಅವಕಾಶ ಕೊಟ್ಟಿದ್ದರಿಂದ ನಾನು ಮಾತನಾಡುತ್ತೇನೆ ಎಂಬುವ ಮಾತನ್ನು ಹೇಳಿದರು. ಇನ್ನೂ ಮುಂದು ಹೋಗಿ ನಾನೇನು ಹೇಳುತ್ತೇನೆಂದರೆ, ನಾವು ಉತ್ತರ ಕೊಡುವುದಕ್ಕೆ ತಯಾರಿರುವುದರಿಂದ ತಾವು ಬಹಳ ಸಾವಧಾನದಿಂದ ನಮ್ಮ ಕಡೆಗೆ ಸಹಕರಿಸಬೇಕು. ಈ ತರಹದ ಒಂದು ವಾತಾವರಣ ಸದನದಲ್ಲಿ ನಿರ್ಣಯವಾದರೆ, ತಮಗೆ ಅಂತರ್ಗತವಾದ ಹಕ್ಕು ಹೇಗಿದೆ ಎಂದರೆ, "A motion or a part thereof may be disallowed by a Speaker if in his opinion it is an abuse of the right of moving a motion or is calculated to be obstruct or prejudically affects the procedure of the House or is in contravention of the rules, The Speaker has the inherent power to rule out a motion at any time before it is voted upon on the ground that it involves an abuse of the forms and procedure of the House".ಆದ್ದರಿಂದ ಇಲ್ಲಿ.

**Sri K.R. Ramesh Kumar :** Sir, for heaven's sake don't take shelter under that. They have poured out all they had in their heart and mind. It goes unrefuted. Please, do not take shelter.

**Sri M.P. Prakash :** Sir, I am not taking any shelter under this procedure What I am trying to impress upon this House is, that if it prejudically affects the procedure and the forms, you have every inherent

right to disallow the motion either partly or wholly. What I am trying to say is that we are not running away from our duty of not replying to the allegations made or otherwise to the discussions that has taken place in this House. We are prepared to answer for it. ಆದರೆ, ಆ ತರಹದ ಒಂದು ಅಭಿಪ್ರಾಯ ಕೂಡ ಇರುವುದರಿಂದ, ನಾನು ಎಲ್ಲರಲ್ಲಿಯೂ ಕೂಡ ಪ್ರಾರ್ಥನೆ ಮಾಡುವುದಿಷ್ಟೆ ಈ ಪ್ರೊಸೀಜರ್ ಇದೆ ಎನ್ನುವ ಕಾರಣಕ್ಕಾಗಿ ಇದರ ಜೊತೆಗೆ, ನಾವು ಕೂಡ ಹಿಡಿದುಕೊಳ್ಳಬೇಕಾದ ಅಗತ್ಯವಿಲ್ಲ. ಆ ರಕ್ಷಣೆಯನ್ನು ತೆಗೆದುಕೊಳ್ಳಬೇಕಾದ ಅಗತ್ಯವೇ ಇಲ್ಲವೆಂದೇ ಮೊದಲು ನಾನು ಪ್ರಭಾವಳಿಯನ್ನು ಮಾಡಿ ಈ ವಿಚಾರವನ್ನು ತಮ್ಮ ಮುಂದಿಟ್ಟೆ ಅದು ಪ್ರಶ್ನೆಯಲ್ಲ. ನಾನು ಮುಂದೆ ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇನ್ನೊಂದು ಸಲ ಬೇಕಾದರೆ ತಾವು ಓದಿ. ಅವರನ್ನೇ ಡಿಸ್-ಅಲೋ ಮಾಡಬೇಕೆಂದು ಹೇಳತಕ್ಕಂಥದ್ದು.

ಶ್ರೀ ಎಂ.ಪಿ. ಪ್ರಕಾಶ್ : ನಾನು ಹೇಳಿದ್ದು, ಈ ಪ್ರೊಸೀಜರ್ ಅನ್ನು ಇಟ್ಟುಕೊಂಡು ನಾವು ಗುರಾಣಿಯಾಗಿ ಉಪಯೋಗಿಸುತ್ತಿಲ್ಲ. ಗುರಾಣಿಯನ್ನಾಗಿ ಯಾವುದನ್ನೂ ಉಪಯೋಗಿಸಿಕೊಳ್ಳ ಬೇಕಾದ ಅಗತ್ಯತೆ ನಮಗಿಲ್ಲ. ಈ ಪ್ರೊಸೀಜರ್ ಕೂಡ ಇದೆ. ಸದನ ಹೀಗೆ ನಡೆಯಬೇಕು ಎನ್ನುವುದಕ್ಕೆ ತಮಗೆ ಅಂತರ್ಗತವಾದ ಹಕ್ಕಿದೆ. ನಾಳೆ ಇದೇ ತರಹದಲ್ಲಿ ಏನಾದರೂ ಹೆಚ್ಚು ವಿಚಾರಗಳಿಗೆ ಭಾವೋದ್ವೇಗಕ್ಕೊಳಗಾಗಿ ಮೂಲಭೂತ ವಿಷಯಗಳನ್ನು ಚರ್ಚೆ ಮಾಡತಕ್ಕಂಥದ್ದನ್ನು ಬಿಟ್ಟು ಬೇರೆ ಹಾದಿಗೆ ಹೋದರೆ, ತಾವು ಇಂಥ ಮೋಷನ್ ಅನ್ನೂ ಕೂಡ ಡಿಸ್-ಆಲೋ ಮಾಡಬಹುದು ಎನ್ನುವ ವಿಚಾರವನ್ನು ಸದನದ ಗಮನಕ್ಕೆ ತಂದೆ ವಿನ: ಅದನ್ನು ಗುರಾಣಿಯಾಗಿ ಉಪಯೋಗಿಸುತ್ತಿಲ್ಲ ಮಾನ್ಯ ರಮೇಶ್ ಕುಮಾರ್‌ರವರೇ ಆದ್ದರಿಂದ, ತಾವು ಇದನ್ನು ಸರಿಯಾದ ದಾರಿಯಲ್ಲಿ ತೆಗೆದುಕೊಂಡು ಹೋಗಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ದೇಶಪಾಂಡೆಯವರ ಬಗ್ಗೆ ನಾವು ನಿನ್ನೆ ಮಾತನಾಡುವಾಗ ಕೆಲವು ಸಾರಿ ಮೆನ್‌ಷನ್ ಮಾಡಿದ್ದೇವೆ. ಅಷ್ಟರಮಟ್ಟಿಗೆ ಅವರು ಕ್ಲಾರಿಫಿಕೇಷನ್, ಡಿಫೆಂಡ್ ಮಾಡಿಕೊಳ್ಳುವುದಕ್ಕೆ we have no objection ಅಷ್ಟರಮಟ್ಟಿಗೆ ಮಾತ್ರ ಅವರ ಬಗ್ಗೆ ನಾವು ನೇರವಾಗಿ ಏನಾದರೂ ಆಪಾದನೆ ಮಾಡಿದ್ದರೆ, ಅದರ ಬಗ್ಗೆ ಹೇಳಲಿ. ಆದರೆ, ಕೌಲ್ ಅಂಡ್ ಶಕ್ದರ್ ಈಜ್ ವೆರಿ ಕ್ಲಿಯರ್. ಮಾನ್ಯ ರಮೇಶ್ ಕುಮಾರ್‌ರವರೇ, ಅದರ ಕೆಳಗೆ ಷೆಲ್ಟರ್ ಇದೆ. ಪ್ರತಿ ಸಲ ಅದರ ಬಗ್ಗೆ ಮಾತನಾಡುವಾಗ, "such of the Members as have previously intimated their intention to the Speaker take part in the discussion and thereafter the Minister concerned gives a brief reply, the Member who has raised the discussion has no right of reply". ಆದುದರಿಂದ, ಅವರು ರಿಪ್ಲೈ ಮಾಡುವುದಕ್ಕೇ ಆಗುವುದಿಲ್ಲ. It is very clear.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇವರು ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಕೊಟ್ಟಿದ್ದಾರೆ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಕೊಟ್ಟ ನೋಟೀಸ್ ಅನ್ನು ಪ್ರಿಲಿಮಿನರಿ ಹಿಯರಿಂಗ್ ಕೇಳುವ ವೇಳೆಗೆ ಅಧ್ಯಕ್ಷಪೀಠ ಇದು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಬೇಡ, ರೂಲ್ 69ರಲ್ಲಿ ತೆಗೆದುಕೊಳ್ಳೋಣವೆಂದು ಹೇಳಿದರು. ರೂಲ್ 69ರಲ್ಲಿ, Chair has the authority to permit anybody or their reply to participate in the discussion. The Hon'ble Member is on his legs to participate in the discussion. The authority vests with the Chair to regulate the proceedings. If the Hon'ble Member were to cross his limits and were to assume the authority on behalf of the Government and makes an attempt erroneously to defend, you can withhold him. There is abundant power that vests with you. Therefore, let not the Hon'ble Members take the authority to themselves to regulate the House. The authority vests with you. I appeal to the Hon'ble Chair to direct the proceedings.

ಶ್ರೀ ಆರ್.ವಿ. ದೇಶಪಾಂಡೆ : ನಾನು ಏನೂ ಮಾತಾಡಿಲ್ಲ. ನಾನು ಅಪೋಜಿಷನ್‌ಗೆ ಅವರಿಗೆ ರೈಟ್ ಇದೆ, ಅಧಿಕಾರವಿದೆ ಎಂದು ನಾನು ಹೇಳುತ್ತಿದ್ದೆ. ಇವತ್ತು ನಾನು 24ನೇ ವರ್ಷ ಈ ಸದನದಲ್ಲಿ ಕೆಲಸ ಮಾಡುತ್ತಿದ್ದೇನೆ. 24ರಲ್ಲಿ ಬಹುತೇಕ ಕಾಲ ನಾನು ಮಂತ್ರಿಯಾಗಿ ಅಥವಾ ವಿರೋಧ ಪಕ್ಷದವನಾಗಿ ಕೆಲಸ ಮಾಡಿದ್ದೇನೆ. 3–4 ವರ್ಷ ಅಷ್ಟೆ ಶಾಸಕನಾಗಿ ಇರಬಹುದು. ಅದು ಸಂತೋಷ. ಡಿಫೆಂಡ್ ಮಾಡುವ ಅಧಿಕಾರ ನನಗೆ ಹೇಗೆ ಇದೆ? ನನಗೂ ದೇವರು ಬುದ್ಧಿ ಕೊಟ್ಟಿದ್ದಾನೆ. ನನಗೂ ಅನುಭವವಿದೆ. ಸರ್ಕಾರದವರು ಡಿಫೆಂಡ್ ಮಾಡಲು ಇಲ್ಲೇ ಕುಳಿತಿದ್ದಾರೆ. ಆದರೆ, ಇದು ನನ್ನ ಸರ್ಕಾರ. ನನ್ನ ಸರ್ಕಾರದ ಮೇಲೆ ಆಪಾದನೆಯಾದಾಗ, ಈ ಸರ್ಕಾರದ ಪರವಾಗಿ ವಾದ ಮಾಡಲಿಕ್ಕೆ, ಆನ್ ದಿ ಬೇಸಿಸ್ ಆಫ್ ರೆಕಾರ್ಡ್ ನನಗೆ ಅಧಿಕಾರವಿದೆ. ಆ ಅಧಿಕಾರವನ್ನು ನಾನು ದುರುಪಯೋಗಪಡಿಸಿಕೊಳ್ಳಲು ಹೋಗುವುದಿಲ್ಲ ಎಂದು ನಾನು ಹೇಳುತ್ತಿದ್ದೇನೆ. You can't take my right. ಇವತ್ತು ನಾವು 21ನೇ ಶತಮಾನದಲ್ಲಿದ್ದೇವೆ. ಇವತ್ತು ಪ್ರೈವೇಟ್ ಸೆಕ್ಟಾರ್, ಇದು ಡೆವಲಪ್‌ಮೆಂಟ್‌ನಲ್ಲಿ ಸರ್ಕಾರದ ಪಾರ್ಟ್‌ನರ್ ಆಗಿದೆ. ಬೆಂಗಳೂರು ಅಭಿವೃದ್ಧಿಯಾದಾಗ ನಂದನ್ ನಿಲೇಕಣಿಯವರ ಅಧ್ಯಕ್ಷತೆಯಲ್ಲಿ ಒಂದು ಟಾಸ್ಕ್ ಫೋರ್ಸ್ ಆಯಿತು. ಟಾಸ್ಕ್ ಅಜೆಂಡಾ ಫೋರ್ಸ್ ಆಯಿತು. ಹಲವಾರು ಸ್ಕೂಲ್ಸ್, ಟಾಯ್‌ಲೆಟ್ಸ್ ಅಭಿವೃದ್ಧಿ ಆಯಿತು. ಏಕೆ ನೀವು ಅಬ್ಜೆಕ್ಟ್ ಮಾಡಲಿಲ್ಲ? ಏಕೆ ಪ್ರೈವೇಟ್ ಸೆಕ್ಟಾರ್‌ಗೆ ಕರೆದುಕೊಂಡು ಬಂದಿರಿ? ಏನು ನಾರಾಯಣಮೂರ್ತಿ, ನಂದನ್ ನಿಲೇಕಣಿಯವರ ಅವಶ್ಯಕತೆ ಏನಿದೆ? ಈ ಪ್ರಕಾರ ಕೆಲಸ ಮಾಡಿ ನೀವು ಇನ್‌ಫೋಸಿಸ್‌ಗೆ ಸಹಾಯ ಮಾಡುತ್ತಿದ್ದೀರೆಂದು ಕೇಳಬಹುದು ನೀವು. ಇವರ ಕಡೆಯಿಂದ ಈ ಪ್ರಕಾರವಾಗಿ ಸಹಾಯ ತೆಗೆದುಕೊಂಡು ಇನ್ ಡೈರೆಕ್ಟ್ಲಿ ಸರ್ಕಾರ ಅವರಿಗೆ ಸಹಾಯ

ಮಾಡುತ್ತಿದ್ದಾರೆಂದು ನಾಳೆ ಅಪವಾದವನ್ನು ಮಾಡಬಹುದಲ್ಲವೇ? ಇಲ್ಲಿ ಪ್ರಶ್ನೆ ಏನಿದೆ ಇದೆ ಎಂದರೆ, ಕೇಂದ್ರ ಸರ್ಕಾರ ಇರಬಹುದು ಅಥವಾ ರಾಜ್ಯ ಸರ್ಕಾರ ಇರಬಹುದು, ಅದಕ್ಕೆ ಸಂಪನ್ಮೂಲಗಳ ಒಂದು ಕೊರತೆಯಾಗಿದೆ. ಮೂಲ ಭೂತ ಸೌಕರ್ಯ ಯಾವುದಕ್ಕಾಗಿ ನಿರ್ಮಾಣವಾಗುವುದಿಲ್ಲ, ಒಂದು ರಾಷ್ಟ್ರದಲ್ಲಿ ಒಂದು ರಾಜ್ಯದಲ್ಲಿ ಅಲ್ಲಿಯ ತನಕ ಒಂದು ರಾಷ್ಟ್ರ ಅಥವಾ ರಾಜ್ಯ ಅಭಿವೃದ್ಧಿಯಾಗುವುದಿಲ್ಲ. Infrastructure is a key for economic and social development. ಹಾಗಾದರೆ ಮಾಡಿ, ಸರ್ಕಾರಕ್ಕೆ ನಾಳೆ ಮಾಡುವುದಕ್ಕೆ ಹೇಳಿ, ಒಬ್ಬರು ಸ್ನೇಹಿತರು ಹೇಳಿದರು. ಸಾಫ್ಟ್‌ವೇರ್ ಪಾರ್ಕ್‌ಗಳು ಬಂದಿದ್ದಾವೆ ಅದು ನಿಜ, ಡೆವಲಪರ್ಸ್‌ಗೆ ಲ್ಯಾಂಡ್ ಕೊಟ್ಟಿದ್ದೇವೆ ನಿಜ, ನಿಮಗೆ ನಾನು ಒಂದು ಮಾತನ್ನು ಹೇಳುತ್ತೇನೆ 1995ನೇ ಇಸ್ವಿಯಲ್ಲಿ ನಾನು ಕೈಗಾರಿಕಾ ಮಂತ್ರಿಯಾಗಿ ಪ್ರವಾಸ ಮಾಡಿದಾಗ ಹೊರದೇಶದಲ್ಲಿ ನಾನು ಹೇಳುತ್ತಿದ್ದೆ, Karnataka is to the South of India. Bangalore is its capital. It is to south of India. 1995ರಲ್ಲಿ, ಬೆಂಗಳೂರು ಯಾರಿಗೆ ಗೊತ್ತಿರಲಿಲ್ಲ. ಆದರೆ ಇಂದು ಆದೇ 10 ವರ್ಷದಲ್ಲಿ Bangalore-Karnataka has became the hottest capital of the World. ಜಗತ್ತಿನಲ್ಲಿ ಬೆಂಗಳೂರು ಒಂದು ಆಕರ್ಷಣೆಯಾಗಿದೆ. ಅಂದರೆ ಆ ಕ್ರೆಡಿಟ್ ಮಾನ್ಯ ದೇವೇಗೌಡರ ಸರ್ಕಾರಕ್ಕೆ ಇಲ್ಲವೆ? ಮಾನ್ಯ ಜೆ.ಹೆಚ್. ಪಟೇಲ್‌ರ ಮತ್ತು ಎಸ್.ಎಂ. ಕೃಷ್ಣರವರ ಸರ್ಕಾರಕ್ಕೆ ಇಲ್ಲವೆ? ಇಲ್ಲವೆಂದು ಹೇಳಿ, ಓಕೆ, ಇಲ್ಲವೆಂದು ಹೋಗೋಣ. ಆ ಸರ್ಕಾರಗಳು, ಆ ಸಮಯದಲ್ಲಿ ಆ ಪ್ರಕಾರವಾಗಿ ಪಾಲಿಸಿಸ್ ತಂದು ಪ್ರಾಮಾಣಿಕವಾದ ಒಂದು ಪ್ರಯತ್ನವನ್ನು ಮಾಡಿದರು. ನನಗೆ ನೆನಪು ಇದೆ 1997ನೆ ಇಸ್ವಿಯಲ್ಲಿ ಮೊದಲನೆಯದಾಗಿ ನಮಗೆ ಐಟಿ ತಂತ್ರಜ್ಞಾನ ಪಾಲಿಸಿ ತರುವ ಅವಕಾಶ ನಮಗೆ ಸಿಕ್ಕಿತು. ಆ ಸಮಯದಲ್ಲಿ ಕರ್ನಾಟಕದ, IT exports were Rs. 800 crore. ಇವತ್ತು 2004ನೇ ಇಸ್ವಿ ಮಾರ್ಚಿನಲ್ಲಿ, it has crossed Rs. 18,000 crores. ಇವತ್ತು ಐಟಿ ಪಾರ್ಕ್ ಬಂದಿದ್ದಾವೆ. ಯಾರು ಕಟ್ಟಿದ್ದಾರೆ ಡೆವಲಪರ್ಸ್ ಕಟ್ಟಿದ್ದಾರೆ ಅದು ನಿಜ, ಹಾಗಾದರೆ ಸರ್ಕಾರದ ಕಡೆ ಕಟ್ಟಲಿಕ್ಕೆ ಹಣವಿಲ್ಲ, ಡೆವಲಪರ್ಸ್ ಕಟ್ಟಬಾರದು, ಹಾಗಾದರೆ ಕಂಪನಿ ಎಲ್ಲಿ ಹೌಸ್ ಆಗಬೇಕು? ಎಲ್ಲಿ ಅವು ನಡೆಯಬೇಕು, ಹೇಳಿ? Please guide us. The learned Members, ದಯಮಾಡಿ ತಾವು ನಮಗೆ ಮಾರ್ಗದರ್ಶನವನ್ನು ಮಾಡಿ, ಇವತ್ತು 5.5 ಮಿಲಿಯನ್ ಸ್ಕ್ವಯರ್ ಫೀಟ್ ಏರಿಯಾ ಬೆಂಗಳೂರಿನ ಸುತ್ತಮುತ್ತಲೂ ಡೆವಲಪ್ ಆಗಿದೆ. ಎರಡೂವರೆ ಲಕ್ಷ ಸಾಫ್ಟ್‌ವೇರ್ ಇಂಜನೀಯರ್‌ಗಳು ಇವತ್ತು ಕರ್ನಾಟಕದಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. 2008ನೇ ಇಸ್ವಿಗೆ ಈ employment potential is going to increase by another 3.5 to 4 lakhs. ಬರುವ 4 ವರ್ಷದಲ್ಲಿ ಕನಿಷ್ಟ 4 ಮಿಲಿಯನ್ ಸ್ಕ್ವಯರ್ ಫೀಟ್ ಏರಿಯಾ ಬರುವ ಹೊಸ ಕಂಪನಿಗಳಿಗೆ ಬೇಕಾಗಿದೆ. ಎಕ್ಸಪೋರ್ಟ್ಸ್ 50,000 ಕೋಟಿ ರೂ. ಎಂದು ಅಂದಾಜು ಮಾಡಲಾಗಿದೆ. ಇದನ್ನು ಸರ್ಕಾರದಿಂದ ಕಟ್ಟುವುದಕ್ಕೆ ರೆಡಿಯಾಗಿದ್ದಾರೆಯೇ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಲಿ, ಫೈನಾನ್ಸ್ ಮಿನಿಸ್ಟರ್ ಹಣ ಇದೆ ಕೊಡುತ್ತೇವೆಂದು

ಹೇಳುವುದಾದರೆ ಹೇಳಲಿ, ಸಂತೋಷ. ಇವತ್ತು ಕಾರ್ಪೋರೇಷನ್, ಮುನಿಸಿಪಾಲಿಟಿಗಳು, ತಮ್ಮ ಕಡೆ ಇರುವ ತಮ್ಮ ಲ್ಯಾಂಡ್‌ಗಳನ್ನು ಜಾಯಿಂಟ್ ಡೆವಲಪ್‌ಮೆಂಟ್‌ಗೆ ಕೊಡುತ್ತಿದೆ, ಏಕೆಂದರೆ ಅವರ ಕಡೆ ಹಣ ಇಲ್ಲ. ಹಾಗಾದರೆ ನಾವು ನಮ್ಮ ವಿಚಾರ ಧಾರೆಯಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಬೇಕಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ನಮ್ಮಿಂದ ಏನೂ ಬೇಡ, ಓಕೆ. Let us discuss 18th century, 19th century. ಮಾತನಾಡೋಣ. Don't disturb. Please. ನಾನು ಮುಗಿಸುತ್ತೇನೆ. You are my good friends ನಮ್ಮ ಕಮ್ಯುನಿಷ್ಟ್ ಫ್ರೆಂಡ್ಸ್ ದೆಹಲಿಯಲ್ಲಿ. ಮುಖ್ಯವಾಗಿ ಇವತ್ತು ಏನಾಗಿದೆ, ಚಿಂತನೀಯವಾಗಿರಬೇಕು, ಮಾನ್ಯ ವಾಟಾಳ್ ನಾಗರಾಜ್‌ರವರೇ, ಸರ್ಕಾರಿ ಭೂಮಿಗಳನ್ನು ಮನಸ್ಸಿಗೆ ಬಂದಂತೆ ಕೊಟ್ಟು ಬಿಟ್ಟರು, I can understand. ಯಾರು ಜಮೀನು ಮಾಲೀಕರಿದ್ದಾರೆ ಅವರಿಗೆ ಮೋಸ ಮಾಡಿ ನೀವು ದೊಡ್ಡ ಜನರಿಗೆ ಸಹಾಯ ಮಾಡಿದ್ದೀರಿ ಎಂದು ಹೇಳಿದರೆ ಆ ಆಪಾದನೆಯಲ್ಲಿ ಹುರುಳು ಇದೆ. ಅದಕ್ಕೆ ಒಂದು ಶಕ್ತಿ ಇದೆ. ನಿಮಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಇವತ್ತು ಇಷ್ಟೆ ಏನು ಸಾಫ್ಟ್‌ವೇರ್ ಪಾರ್ಕ್ಸ್ ಬಂದಿದೆಯಲ್ಲಾ, ಅದು ಗೌರ್ನಮೆಂಟ್ ಲ್ಯಾಂಡ ಅಲ್ಲವಲ್ಲಾ. ಇಲ್ಲಿ ಬಹಳ ಜನ ಸ್ನೇಹಿತರು ನಾನು ಮಿನಿಸ್ಟರ್ ಇದ್ದಾಗ ಬಂದಿದ್ದರು, ಇಲ್ಲಿ ಕೆಲವೊಂದು ಜನ ಇಲ್ಲ. ಇವತ್ತು ಎಂಎಲ್‌ಎಗಳು ಇದ್ದಾರೆ, ಕೆಲವೊಬ್ಬರು ಎಕ್ಸ್ ಎಂಎಲ್‌ಎಗಳು ಆಗಿದ್ದಾರೆ. ನಾನು ಮೊದಲು ಮಾತನಾಡಿ ಮುಗಿಸಿ ಬಿಡುತ್ತೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ನೀವು ಪ್ರಾಮಾಣಿಕವಾಗಿ ಹೇಳಿ, ನೀವು ಡಿಫೆಂಡ್ ಮಾಡುತ್ತಿಲ್ಲವೆಂದು.

**ಶ್ರೀ ಆರ್.ವಿ. ದೇಶಪಾಂಡೆ** : ಏನು ಡಿಫೆಂಡ್ ಮಾಡುತ್ತಿದ್ದೇನೆ ನಾನು? What have I said? I have not said anything. No. I am not defending anybody.

**ಛೇರ್ಮನ್** : Let him honestly tell.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಅವರು ಪ್ರಮಾಣಿಕವಾಗಿ ಹೇಳಲಿ, ಅವರು ಸೀನಿಯರ್ ಮೆಂಬರ್ ಅವರಿಗೆ ನಾವು ಏನು ಪಾಠವನ್ನು ಹೇಳಿಕೊಡಬೇಕಾಗಿಲ್ಲ. Is he not defending? ನಾನು ಒಂದೇ ಒಂದು ಸೆಕೆಂಡ್ ಹೇಳಿ ಬಿಡುತ್ತೇನೆ. Did, at any point of time, anyone of us tell that foreign companies should not come to Bangalore? Did, at any point of time, we tell that infrastructure should not be developed in Bangalore? Did, at any point of time, we oppose multi-nationals investing money in Bangalore? ರೆಕಾರ್ಡ್ಸ್ ತೆಗೆಸಿ ನೋಡಿ. Did, at any point of time, anyone of us oppose foreign companies investing money in Bangalore? Did, at any point of time, we oppose developing the infrastructure? Did, at any point of time, we oppose the MOU of 1995? Did, at any point of time, we told that Bangalore should not be developed? ಅವರು ಹೇಳಿಬಿಡಲಿ, ರೆಕಾರ್ಡ್ಸ್ ತೆಗೆಸಿ ಓದಿಬಿಡಲಿ, We will withdraw the

whole statement and whole Motion itself. I will challenge. Let him take the proceedings. It is a challenge.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ದೇಶಪಾಂಡೆಯವರು ಮಾತನಾಡುವಾಗ ಸ್ಪಷ್ಟೀಕರಣಕ್ಕಾಗಿ ನಿಮ್ಮ ಕಡೆಯಿಂದ ಹೇಳಿದರು. ನೀವು ಹೇಳದೇ ಇರಬಹುದು.

ಗೊಂದಲ

ಶ್ರೀ ಜಿ.ವಿ ಶ್ರೀರಾಮರೆಡ್ಡಿ : ರೆಕಾರ್ಡ್ ತೆಗೆಸಿ ನೋಡಿ,

ಶ್ರೀ ಕೆ. ಶ್ರೀನಿವಾಸಗೌಡ : ರೆಕಾರ್ಡ್ಸ್ ಇದೆ, ನಾನೇಕೆ ಹೇಳಲಿ?

ಗೊಂದಲ

**Sri G.V. Sri Rama Reddy :** It is a challenge. I will request the Chair. You take the records. ಇವರು ಯಾವುದೋ ಕಥೆಯನ್ನು ಹೇಳುತ್ತಿದ್ದಾರೆ, ನಾವು ಡೆವಲಪ್‌ನ್ನು ಮಾಡಬೇಡಿ ಎಂದು ಹೇಳಲಿಲ್ಲ. ಡೆವಲಪ್‌ಮೆಂಟ್ ಹೆಸರಿನಲ್ಲಿ ಭೂಮಿ ಮಾರಿಕೊಂಡಿದ್ದೀರಿ ಎಂದು ಹೇಳಿದ್ದೇವೆಯೇ ಹೊರತು, ಡೆವಲಪ್‌ಮೆಂಟ್ ಮಾಡಬಾರದೆಂದಲ್ಲ.

ಛೇರ್ಮನ್ : ಅದಕ್ಕೆ ಸರ್ಕಾರ ಉತ್ತರವನ್ನು ಕೊಡುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಡೆವಲಪ್‌ಮೆಂಟ್ ಹೆಸರಿನಲ್ಲಿ ಲೂಟಿ ಹೊಡೆದಿದ್ದೀರಿ ಎಂದು ಹೇಳಿದ್ದೇವೆಯೇ ಹೊರತು, ನಾವು ಡೆವಲಪ್‌ಮೆಂಟ್ ಮಾಡಬಾರದೆಂದು ಹೇಳಿಲ್ಲ. ಕಥೆ ಹೇಳುವುದು ಗೊತ್ತಿಲ್ಲವೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ರೈತರನ್ನು ತಿಂದು ಹಾಕಿದಿರಿ. ನೀವು ಬೆಂಗಳೂರು ರೈತರನ್ನು ತಿಂದಿರಿ ಎಂದು ಹೇಳಿರುವುದು, ಬೆಂಗಳೂರನ್ನು ಡೆವಲಪ್ ಮಾಡಬೇಡಿ ಎಂದು ಹೇಳಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಭಾಷಣ ಮಾಡುವುದು ನಮಗೆ ಗೊತ್ತಿಲ್ಲವೇ? ಫಾರಿನ್ ಇನ್‌ವೆಸ್ಟ್‌ಮೆಂಟ್ ಬೇಡ ಎಂದು ನಾವು ಹೇಳಿದ್ದರೆ ರೆಕಾರ್ಡ್ ತೆಗಿಸಿ ನೋಡಿ. ನಾವು ಮೋಷನ್ ವಿತ್ ಡ್ರಾ ಮಾಡಿ ಬಿಡುತ್ತೇವೆ. No you are all accusing as if you are the only champion of the development of Karnataka and we are not the champions. You are only champions.

**Interruptions**

**Sri J.C. Madhuswamy :** Bangalore name was not known to world ಅಂತ ಅಲ್ಲ.

**Sri G.V. Sri Ramareddy :** Only in 1995, Bangalore has known to the World? ಯಾರಿಗೂ ಗೊತ್ತಿಲ್ಲವೇ ಭಾಷಣ ಮಾಡುವುದು? ಏನು ಇವರಿಗೊಬ್ಬರಿಗೆ ಭಾಷಣ ಮಾಡುವುದು ಗೊತ್ತಿದೆ. ತೆಗಿಸಿ ರೆಕಾರ್ಡ್, If you are honest, take the record. Did at any point of time we tell that foreign investors should not come to Bangalore?

**ಶ್ರೀ ಆರ್.ವಿ. ದೇಶಪಾಂಡೆ :** ನಾನು ವಿರೋಧ ಪಡಿಸಿ ಹೇಳಿಲ್ಲ ಅಲ್ಲವೇ?

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಏನು ಮಾತನಾಡುತ್ತಿದ್ದಾರೆ ಇವರು? ಭಾಷಣ ಮಾಡುವುದು ನಮಗೆ ಗೊತ್ತಿಲ್ಲ ಏನ್ರಿ? We know better to speak than you. What are you telling? Don't tell us the stories. Take the records.

**ಶ್ರೀ ಆರ್.ವಿ. ದೇಶಪಾಂಡೆ :** ನನಗೆ ಬಹಳ ಸಂತೋಷ ಅಯಿತು, I am very happy today. ನಾನು ಮುಂದೆ ಮಾತನಾಡಬೇಕೆ ಅಥವಾ ಬೇಡವೇ ಎಂದು ವಿಚಾರ ಮಾಡುತ್ತಿದ್ದೇನೆ, ಏಕೆಂದರೆ, he is talking about multi-national companies; welcoming multi-national companies. There is a change in him. It is a good sign. I am happy about it. ನಾನೇನು ಹೇಳಿಲ್ಲವಲ್ಲಾ?

**Sri G.V. Sri Rama Reddy :** We are more pragmatic than you. We need not learn about the development and pragmatism. Please mind it.

**ಶ್ರೀ ಆರ್.ವಿ. ದೇಶಪಾಂಡೆ :** ಆಯಿತು ಬಿಡಿ ನಾನು ಯಾವಾಗ ಹೇಳಿದ್ದೇನೆ, ನಿಮ್ಮ ಬಗ್ಗೆ ನಾನು ಏನೂ ಮಾತನಾಡಿಲ್ಲ. ನಾನು ಯಾರ ಹೆಸರನ್ನೂ ತೆಗೆದುಕೊಂಡಿಲ್ಲ. ನಾನು ಏನೂ ಮಾತನಾಡಿಲ್ಲ. ನಾನು ಏನು ಮುಂದಾಗುವುದು ಇದೆ ಅದರ ಬಗ್ಗೆ ಒಂದು ವಿಷನ್ ಹೇಳುತ್ತಿದ್ದೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ನಮಗೂ ಇದೆ. ನಿಮಗೆ ಒಬ್ಬರಿಗೆ ಅಲ್ಲ ವಿಷನ್ ಇರುವುದು. ಇಲ್ಲದೇ ಇರತಕ್ಕಂಥ ವಿಚಾರ ನೀವು ಮಾತನಾಡಬೇಡಿ. ನೋಡಿ, ನಾವು ಹೇಳಿರತಕ್ಕದ್ದು ಭೂಮಿಯನ್ನು ಮಾರಾಟ ಮಾಡಬೇಡಿ ಎಂದು ಹೇಳಿರುವುದು ಅಷ್ಟೇ. ಡೆವಲಪ್‌ಮೆಂಟ್ ಮಾಡಬಾರದು ಎಂದು ಹೇಳಿಲ್ಲ, ಅಭಿವೃದ್ಧಿ ಹೆಸರಿನಲ್ಲಿ ಲೂಟಿ ಹೊಡೆದಿದ್ದೀರಿ. ಭೂಮಿ ಮಾರಾಟ ಮಾಡಿಕೊಂಡಿದ್ದಿರಿ, ಎಂದು ಅಷ್ಟೇ ನಾವು ಹೇಳಿರುವುದು. ಅಭಿವೃದ್ಧಿ ಮಾಡಬೇಡಿ ಎಂದು ನಾನು ಹೇಳಿಲ್ಲ.

**ಶ್ರೀ ಕೆ ಶ್ರೀನಿವಾಸ ಗೌಡ :** ಹೇಳಬೇಕಾಗಿರುವುದನ್ನು ಹೇಳಿದಿರಿ ಅವರು ಉತ್ತರ ಹೇಳುವಾಗ ಸದಸ್ಯರು ಈ ರೀತಿ ಮಧ್ಯೆ ಪ್ರವೇಶಿಸಬಾರದು. ಮಾನ್ಯ ಅಧ್ಯಕ್ಷರೆ, ನೀವು ಅವರಿಗೆ ಹೇಳಬೇಕು, ಬೇಕಾದರೆ ಅವರು ಬರೆದುಕೊಳ್ಳಲಿ ನಂತರ ಹೇಳಲಿ.

**Mr. Chairman :** Mr. Rajendran, Please allow him.

**ಶ್ರೀ ಎಸ್. ರಾಜೇಂದ್ರನ್ :** ಅಧ್ಯಕ್ಷರೆ, ಒಂದು ಎಕರೆಯನ್ನು ಇವರು 10 ರೂಪಾಯಿಗಳ ಸೇಲ್ ಮಾಡಿದಿರಿ ಎಂದು ನಾವು ಹೇಳಿದ್ದೆವು. We have no objection for the investors.

**ಶ್ರೀ ಆರ್. ಅಶೋಕ್ :** ದಯವಿಟ್ಟು ಬೆಂಗಳೂರು ಜನತೆಗೆ ಅವಮಾನ ಮಾಡಿದ್ದಾರೆ. 1995ನೇ ಇಸ್ವಿಯಿಂದ ಬೆಂಗಳೂರು ಯಾರಿಗೂ ಗೊತ್ತಿಲ್ಲವೆಂದು ಹೇಳಿದ್ದಾರೆ. ಇವರಿಂದ ಅವರು ಇಡೀ ಬೆಂಗಳೂರು ಜನತೆಗೆ ಅವಮಾನ ಮಾಡಿದ್ದಾರೆ. ಅದನ್ನು ದಯವಿಟ್ಟು ತೆಗಿಸಿ ಬೆಂಗಳೂರು ಜನತೆಗೆ ಅವಮಾನ ಮಾಡಿದ್ದಾರೆ. ಇವರ ಬಂದ ಮೇಲೆನೆ ಗೊತ್ತಾಗಿದ್ದು? ಇವರಾ ಬೆಂಗಳೂರನ್ನು

ದೊಡ್ಡದು ಮಾಡಿದ್ದು? ಪ್ರೈವೇಟ್ ಸಾಫ್ಟ್‌ವೇರ್ ಕಂಪನಿಯವರು ಅವರೇ ಬಂದರು ನಾವು ಏನೂ ಕರೆಯಲಿಲ್ಲ. ಸರ್ಕಾರ ಏನೂ ಸಹಾಯ ಮಾಡಲಿಲ್ಲ ಅದನ್ನು ತೆಗಿಸಿ.

ಗೊಂದಲ

**ಛೇರ್ಮನ್** : ಆಯಿತು ಅದು ಬಿಡಿ ನಾನು ನೋಡುತ್ತೇನೆ.

ಗೊಂದಲ

**ಛೇರ್ಮನ್** : ರಾಯರೆಡ್ಡಿಯವರೆ, ತಾವು ಕುಳಿತುಕೊಳ್ಳಿ ಅವರು ಕಂಟಿನ್ಯೂ ಮಾಡಲಿ. ತಾವು ಕುಳಿತುಕೊಳ್ಳಿ ಅವರು ಮಾತನಾಡಲಿ. ನೋಡಿಸುತ್ತೇನೆ ಬಿಡಿ.

ಗೊಂದಲ

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** : ಅವರು ಮಾತನಾಡಲಿ, ನಾವು ಡೆವಲಪ್‌ಮೆಂಟ್‌ಗೆ ವಿರೋಧ ಇದ್ದೇವೆಂದು ಹೇಳಿದರೆ ನಾವು ಒಪ್ಪುವುದಿಲ್ಲ. We have not said. We are discussing only about the scandal, not the development. We want development.

**Sri G.V. Sri Rama Reddy** : At no point of time we opposed development. We opposed only the scandal that they did.

**ಶ್ರೀ ಬಸವರಾಜ ರಾಯರೆಡ್ಡಿ** : ಭೂಮಿ ಲೂಟಿ ಆಗಿಲ್ಲ, consent award ಮುಖಾಂತರ ರೈತರೇ ಕೊಟ್ಟಿದ್ದಾರೆ.

**Sri G.V. Sriram Reddy** : He is telling as if we are against the development of Karnataka and Bangalore. We have not opposed. d We are also having the same patriotism as him. What he thinks?

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಚರ್ಚೆ ಬಹಳ ಚೆನ್ನಾಗಿ ನಡೆಯುತ್ತಿದೆ! ನಮ್ಮ ಜಗನಾಥರಾವ್ ಜೋಶಿ ಎಂಬುವವರು ಇದ್ದರು. ಆ ಪುಣ್ಯಾತ್ಮರು ಈಗಿಲ್ಲ. ಅವರು ಹೊರದೇಶಕ್ಕೆ ಹೋದಾಗ ಇಲ್ಲಿಯ ಒಬ್ಬ ಒಳ್ಳೆಯ ಡಾಕ್ಟರು ಅಮೇರಿಕಾದಲ್ಲಿ settle ಆಗಿದ್ದರು. ಆ ಡಾಕ್ಟರು 'ನಾನು ಈ ದೇಶದಕ್ಕೆ ಬಂದುಬಿಟ್ಟೆ ಅಲ್ಲಿಯ ಗತಿ ಏನು?' ಎಂದು ಜಗನಾಥರಾಯರನ್ನು ಕೇಳಿದನಂತೆ. ಅದಕ್ಕೆ 'ನಿನ್ನ ಹುಟ್ಟಿಸಿದನಲ್ಲ ನಿಮ್ಮ ಅಪ್ಪ ಇನ್ನೂ ಅಲ್ಲಿಯೇ ಇದ್ದಾನೆ, ನೀನೇನೂ ಚಿಂತೆ ಮಾಡಬೇಡವೆಂದು' ಜಗನಾಥರಾಯರು ಹೇಳಿದರಂತೆ. ಹೀಗೆ ಈ ನಾಡಿನ ಅಭಿವೃದ್ಧಿಗಾಗಿ ನಾಡಿನ ಅನೇಕ ಜನ ಅವರದೇ ಆದಂಥ ಸೇವೆ ಮಾಡಿದ್ದಾರೆ. ನಿಮ್ಮ ಕಾಲದಲ್ಲಿ ನೀವು ಸ್ವಲ್ಪ ಪ್ರಯತ್ನ ಮಾಡಿದ್ದೀರಿ ಎನ್ನುವುದನ್ನು ಹೇಳಬೇಕೇ ಹೊರತು ನನ್ನಿಂದಲೇ ಎಲ್ಲಾ ಆಯಿತು ಎನ್ನುವ ಮಾತು ಬರತಕ್ಕಂಥದ್ದು ಆ ಧಾಟಿ ಸರಿಯಲ್ಲ. ಇದು ಮೊದಲನೆಯದು. ಇನ್ನು ಎರಡನೆಯದು, ಇಲ್ಲಿ ಕುಳಿತಿರುವ ಯಾರೂ ಸಹ ಈ ದೇಶ ಪ್ರಗತಿಯತ್ತ ಹೋಗಬಾರದು, ಐ.ಟಿ. ಇಂಡಸ್ಟ್ರೀಸ್ ಬರಬಾರದು, ಹೊರ ದೇಶದ ಉದ್ಯಮಿಗಳು ಇಲ್ಲಿಗೆ ಬಂದು ಬಂಡವಾಳ ಹೂಡಬಾರದೆಂದು ಯಾರೂ ಸಹ ನಾವು

ಮಾತನಾಡಲಿಲ್ಲ. ಇಲ್ಲಿ ವಿಷಯವೇ ವಿಷಯಾಂತರವಾಗುತ್ತಿದೆ. ನಮ್ಮ ಚರ್ಚೆ ಏನೆಂದರೆ, ಈ ಭೂ ಹಗರಣಗಳು ಇದೊಂದು ದಾಖಲೆಯಾಗಿದೆ. ಯಾರ್ಯಾರೋ ಯಾರ್ಯಾರಿಗೋ ಸಹಾಯ ಮಾಡುವುದಕ್ಕೋಸ್ಕರವಾಗಿ ಇಲ್ಲಿ ಹಗಲು ದರೋಡೆಯಾಗಿದೆ. ನೀವು ಒಂದು ಮಾತನ್ನು ಒಪ್ಪಿಕೊಳ್ಳಬೇಕು. ಅದೇನೆಂದರೆ, ಕಳೆದ ನಾಲ್ಕೂವರೆ ವರ್ಷಗಳಲ್ಲಿ ನಿಮ್ಮ ಆಡಳಿತ ಇದ್ದಂಥ ಸಂದರ್ಭದಲ್ಲಿ ನಿಮ್ಮ ನಾಯಕತ್ವದಲ್ಲಿ, ನಿಮ್ಮ ಹಿಂದಿನ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ನಡೆದಂಥ ಹಗರಣಗಳು ಈ ದೇಶದ ಇತಿಹಾಸದಲ್ಲಿ ಎಲ್ಲೂ ನಡೆದಿರಲಿಲ್ಲ. ಕರ್ನಾಟಕ ರಾಜ್ಯದ ಐದೂವರೆ ಕೋಟಿ ಜನ ತಲೆತಗ್ಗಿಸುವಂಥದ್ದು ನಡೆದಿದೆ. ನೀವು ಬೇಷರತ್ ಕ್ಷಮಾಪಣೆ ಕೇಳಬೇಕು. ಆ ರೀತಿ ಅದನ್ನೂ ಸಹ ನೀವು ಒಪ್ಪಬೇಕಲ್ಲ ಎಂದು ನಾನು ಹೇಳುತ್ತಿದ್ದೇನೆ. ಇವತ್ತಿನ ದಿವಸ ಈ ಕಡೆ ಚರ್ಚೆ ಮಾಡಿದ ವಿಷಯವೇ ಬೇರೆ. ನೀವು ವಿಷಯಾಂತರ ಮಾಡಿದಿರಿ.

**ಶ್ರೀ ಆರಗ ಜ್ಞಾನೇಂದ್ರ** : ಭ್ರಷ್ಟಾಚಾರದಲ್ಲೂ ಕೂಡ ಬೆಂಗಳೂರನ್ನು famous ಮಾಡಿಬಿಟ್ಟಿದ್ದೀರಿ ಎನ್ನುವಂಥದ್ದನ್ನು ಒಪ್ಪಿಕೊಳ್ಳಬೇಕು.

**ಶ್ರೀ ಆರ್.ವಿ. ದೇಶಪಾಂಡೆ** : ಮಾನ್ಯ ಯಡಿಯೂರಪ್ಪನವರೆ, ತಾವು ಕೊನೆಯದಾಗಿ ಒಂದು ಒಳ್ಳೆಯ ಮಾತನ್ನು ಹೇಳಿದಿರಿ. ನಾವು ಅಭಿವೃದ್ಧಿಗೆ ವಿರೋಧವಿಲ್ಲ; ಅಭಿವೃದ್ಧಿಯಾಗಬೇಕು, land acquisitions transparent ಆಗಿ ಆಗಬೇಕು, ಜಮೀನಿನ ಮಾಲೀಕರಿಗೆ ಯೋಗ್ಯವಾದ ದರ ಸಿಗಬೇಕೆಂದು ತಾವು ಹೇಳಿದಿರಿ. ಇಲ್ಲಿ ಯಾರೂ ನಮ್ಮ ಸ್ನೇಹಿತರು ವಿರೋಧ ಮಾಡಿದ್ದಾರೆಂದು ಹೇಳಲಿಲ್ಲವಲ್ಲಾ. ಏನು requirement in future ಇದೆ ಅಷ್ಟನ್ನೇ ನಾನು ಹೇಳಿದ್ದೇನೆ. ಹಾಗಾಗಿ ಈ ಸರ್ಕಾರಕ್ಕೆ ತಾವು guide ಮಾಡಬೇಕಾಗುತ್ತದೆ, ಇನ್ನು ಮುಂದೆ ಕೈಗಾರಿಕಾ ಮಂತ್ರಿಗಳು ಪ್ರಪೋಸಲ್ ಬಂದಾಗ ಜಮೀನು ಕೇಳುತ್ತಾರೆ, ಅವರಿಗೆ ಜಮೀನು ಕೊಡಬೇಕೋ ಬೇಡವೋ; ಜಮೀನು ತೆಗೆದುಕೊಳ್ಳಬೇಕಾದರೆ land acquire ಮಾಡಬೇಕು, ಅದನ್ನು ಮಾಡಬೇಕೋ ಬೇಡವೋ ಇಂಥ guidance ಇರಬೇಕಲ್ಲವೇ, The House should tell ಏನು ಮಾಡಬೇಕೆಂದು? ಇವತ್ತು, for the information of the Members, land, water and powers are the costliest in Karnataka, in the entire country. Water is costliest in the World. We should know all this. Inspite of this, industries ಏಕೆ ಬರುತ್ತವೆ? ಇಲ್ಲಿ culture ಚೆನ್ನಾಗಿದೆ, ಇಲ್ಲಿಯ ಜನ ಒಳ್ಳೆಯವರಿದ್ದಾರೆ, law and order ಚೆನ್ನಾಗಿದೆ, ಇಲ್ಲಿ ಒಳ್ಳೆಯ Governments ಇವೆ, Transparent policies ಇವೆ, ಅಂತ ಕಂಪನಿಗಳು ಬರುತ್ತವೆ, ಹಾಗಾಗಿ ತಾವು ಹೇಳಿದ ಹಾಗೆ ಇವತ್ತು ಡೆವಲಪ್‌ಮೆಂಟ್ ಬೇಕಾಗುತ್ತದೆ, ತಮಗೂ ಡೆವಲಪ್‌ಮೆಂಟ್ ಬೇಕು ನಮಗೂ ಬೇಕು, ಬೇಕಾದರೆ lands ಅನ್ನು acquire ಮಾಡಬೇಕಾಗುತ್ತದೆ, ತಾವು ಹೇಳಿದ ಹಾಗೆ ಅದು transparent ಇರಬೇಕು, ಜಮೀನು ಮಾಲೀಕನಿಗೆ ಯೋಗ್ಯವಾದ ದರ ಸಿಗಬೇಕು, ಅದರ ಯಾವ compromise ಇಲ್ಲ. ಇವತ್ತು ನಮ್ಮ KIADB ಸಂಸ್ಥೆ ನಾನು 8–9 ವರ್ಷ ಈ ಇಲಾಖೆಯ

ಮಂತ್ರಿಯಾಗಿದ್ದೆ. ಒಂದು ಆಪಾದನೆಯೂ ಕೂಡ ನನ್ನ ಮೇಲೆ ಆಗಿಲ್ಲವಲ್ಲಾ. ಇದೇ Airportಗೆ ನಾಲ್ಕೂವರೆ ಸಾವಿರ ಎಕರೆ Private and Government ಲ್ಯಾಂಡ್ ಅನ್ನು acquire ಮಾಡಿದೆವು. ಆಗ ಯಾರೂ ಆಪಾದನೆ ಮಾಡಿಲ್ಲ. Industry ಗೋಸ್ಕರ ಸಾವಿರಾರು ಎಕರೆ ಲ್ಯಾಂಡ್‌ಗಳನ್ನು ಕಳೆದ 9 ವರ್ಷದಲ್ಲಿ acquire ಮಾಡಿದ್ದೇವೆ. ಈ ಮನೆಯಲ್ಲಿ ಆಗ ಯಾರೂ ಆಪಾದನೆ ಮಾಡಲಿಲ್ಲವಲ್ಲಾ. ಏಕೆ ಮಾಡಲಿಲ್ಲ? Volvo ಬಂತು, Telco ಬಂತು, Telecom ಬಂತು, T.V.S. ಬಂತು, ಹೀಗೆ ಎಲ್ಲಾ ಬಂದವಲ್ಲಾ. Toyota ಬಂತು, ನಿನ್ನೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸ್ನೇಹಿತರಾದ ಸಿಂಧ್ಯಾರವರು ಹೋಗಿ Transmission plant inaugurate, ಮಾಡಿ ಬಂದರು. ಸಾವಿರಾರು ಎಕರೆ ಭೂಮಿಯನ್ನು ಕಳೆದ 10 ವರ್ಷದಲ್ಲಿ acquire ಮಾಡಿದ್ದೇವೆ. ಅದರ ಬಗ್ಗೆ ಒಂದು ದಿನವೂ ಯಾರೂ ಸಹ ಇಲ್ಲಿ ಹೇಳಲಿಲ್ಲ. ಏಕೆ ಹೇಳಲಿಲ್ಲ? ಇವತ್ತು ಏಕೆ ಆಗಿದೆ ಎಂದರೆ Please wait.

**Sri G.V. Sri Ramareddy :** For that, atleast you are grateful to them.

**Sri R.V. Deshpande :** I want to Express Corridor also. ನಾನು ಏನೂ ಹೇಳುತ್ತಿಲ್ಲ. ಏಕೆಂದರೆ ಇವತ್ತು ಏನಾಗಿದೆ ಎಂದರೆ, ನನ್ನ ಜಿಲ್ಲೆಯಾದ ಕಾರವಾರದಲ್ಲಿ ಸೀಬರ್ಡ್ ನೌಕಾನೆಲೆಗಾಗಿ ಜಮೀನು ಹೋಯಿತು. ಇಲ್ಲಿ ಆ ಬಗ್ಗೆ ಎಷ್ಟು ಜನ ಗಲಾಟೆ ಮಾಡಿದರು? ರಾಜ್ಯದ ಬೇರೆ ಬೇರೆ ಭಾಗದಲ್ಲಿ ಪ್ರಾಜೆಕ್ಟ್‌ಗಳಿಗಾಗಿ ಜಮೀನು acquire ಆದವು. ಅದರ ಬಗ್ಗೆ ಇಲ್ಲಿ raise ಮಾಡಿರಬಹುದು, ಆದರೆ corruption ಬಗ್ಗೆ ಹೇಳಲಿಲ್ಲ. ಭ್ರಷ್ಟಾಚಾರದ ಬಗ್ಗೆ ಹೇಳಲಿಲ್ಲ. ಆದರೆ ಇಲ್ಲಿ ಬೆಂಗಳೂರಿನದ್ದು ಏನಾಗಿದೆ ಎಂದರೆ Government proactive.....

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :** ಸೀಬರ್ಡ್ ಪ್ರಾಜೆಕ್ಟ್ ಅದು Central Government Project. ಅದರಲ್ಲಿ ಭ್ರಷ್ಟಾಚಾರ ಹೇಗೆ ಆಗುತ್ತದೆ? ಆ ಮೇಲೆ ಇನ್ನೊಂದು ಪ್ರಶ್ನೆಗೆ ಉತ್ತರ ಕೊಡಿ. ಒಟ್ಟು ಎಷ್ಟು MOUಗೆ Sign ಮಾಡಿದ್ದೀರಿ, ಎಷ್ಟು ಪ್ರಾಜೆಕ್ಟ್ ಬಂತು? ಮಾಡಿದ್ದು ಎಷ್ಟು? ವಾಪಸ್ಸು ಎಷ್ಟು ಬಂತು?

**ಛೇರ್ಮನ್ :** ಅವರು ಏಕೆ ಉತ್ತರ ಕೊಡುತ್ತಾರೆ ಬಿಡಿ. ಸರ್ಕಾರ ಉತ್ತರ ಕೊಡುತ್ತದೆ.

**ಶ್ರೀ ಆರ್.ವಿ. ದೇಶಪಾಂಡೆ :** ಮಾನ್ಯ ಜಯಪ್ರಕಾಶ್‌ರವರೆ, ನಾನು ಏನು ಇದ್ದೇನೆ You are not still aware, today I know all the industrial Houses of this country. Please understand. I have got respect for them. They have respect for me. I have respect for them. Unfortunately, you don't recognize that. Forget about it. Forget about it. ನಾನು ಏನು ಹೇಳುತ್ತಿದ್ದೇನೆಂದರೆ, ಇವತ್ತು ಅದರ ಬಗ್ಗೆ ಇಲ್ಲಿ ಚರ್ಚೆ ಆಯಿತು. Express Highwayಗೆ Mandya ಕ್ಕೆ

ಕೊಟ್ಟಿದ್ದರ ಬಗ್ಗೆ ಚರ್ಚೆ ಇಲ್ಲ. Next Srirangapatna ಕ್ಕೆ ಕೊಡಿರಿ ಮೈಸೂರಿಗೆ ಕೊಡಿರಿ, ಎಂದಾಗ ಅದಕ್ಕೆ ಚರ್ಚೆ ಇಲ್ಲ. ಆದರೆ ಬೆಂಗಳೂರಿಗೆ ಕೊಟ್ಟಾಗ ಮಾತ್ರ Problem ಪ್ರಾರಂಭವಾಗುತ್ತದೆ. ಈ Problem ಏಕೆ? ಏಕೆಂದರೆ ಸರ್ಕಾರ ಕ್ರಿಯಾಶೀಲವಾದ ನಂತರ ಇಲ್ಲಿ ಹಲವಾರು ಇಂಡಸ್ಟ್ರಿಗಳು ಬಂದಿವೆ. ಜಮೀನಿನ ಕೊರತೆಯಾಗಿದೆ, land value ಹೆಚ್ಚಾಗಿದೆ. Land value ಹೆಚ್ಚಾಗಿ ಬಹಳಷ್ಟು ಜನ lands ಅನ್ನು ಪಡೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದಾರೆ. Whatever it is. ಸರ್ಕಾರ acquire ಮಾಡಿಕೊಳ್ಳುವುದಕ್ಕೆ ಹೋದರೆ ಆ ಜನ alert ಆಗುತ್ತಾರೆ. They will become very alert and try to scuttle the moves of the Government. ಒಂದು ಎಕರೆಗೆ 10 ರೂ. ನಂತೆ 7–10–99ನಲ್ಲಿ G.O. ಆಯಿತು. ಈ ಬಗ್ಗೆ ನೀವು ಅಲ್ಲಿಂದ ಹೇಳಿದ್ದು. ನಾನು ಇದನ್ನು ಹೇಳಲಿಲ್ಲ. ನಾನು defend ಮಾಡುತ್ತಿಲ್ಲ. ಮಾನ್ಯ ದೇವೇಗೌಡ ಸರ್ಕಾರವಾಗಲಿ, ಶ್ರೀ ಜೆ.ಹೆಚ್. ಪಟೇಲ್‌ರವರ ಸರ್ಕಾರವಾಗಲಿ, ಶ್ರೀ ಕೃಷ್ಣರವರ ಸರ್ಕಾರವಾಗಲಿ ಬಹಳ ಪ್ರಾಮಾಣಿಕವಾಗಿ ನಿಷ್ಠೆಯಿಂದ ಕೆಲಸ ಮಾಡಿದ್ದರಿಂದ ಒಳ್ಳೆಯ ಪ್ರಾಜೆಕ್ಟ್ ರಾಜ್ಯದಲ್ಲಿ ಬರಬೇಕು, ರಾಜ್ಯ ಅಭಿವೃದ್ಧಿಯಾಗಬೇಕೆಂದು ಪ್ರಯತ್ನ ಮಾಡಿದರೇ ವಿನ: ಆ ಮೂರು ಮುಖ್ಯಮಂತ್ರಿಗಳು. ಕರ್ನಾಟಕಕ್ಕೆ ಕಳಂಕ ತರುವಂಥ ಯಾವ ಕೆಲಸವನ್ನೂ ಮಾಡಿಲ್ಲ ಎಂದು ಬಹಳ ವಿನಯದಿಂದ ನಾನು ಹೇಳುತ್ತಿದ್ದೇನೆ. ಇವತ್ತು ಮಾನ್ಯ ಧರ್ಮಸಿಂಗ್‌ರವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಅವರ ಕಾಲದಲ್ಲಿ prosperity ಆಗಬೇಕು. ಕೈಗಾರಿಕೆ ಬರಬೇಕು, ವ್ಯಾಪಾರ ಬೆಳೆಯಬೇಕು, ಒಂದು ರಾಷ್ಟ್ರ ಬೆಳೆಯಬೇಕಾದರೆ ಕೈಗಾರಿಕೆ ವ್ಯಾಪಾರ ಬೆಳೆಯಲೇ ಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ :** ಅದರಲ್ಲಿ ಒಬ್ಬ ಮುಖ್ಯ ಮಂತ್ರಿಯಿಂದ ಲೂಟಿಯಾಗಿದೆ Special Court ಮಾಡಿ enquiry ಮಾಡಿ ಎಂದು ಹೇಳಿದ್ದಾರೆ.

**Sri R.V. Deshpande :** Please Co-operate. ಇವತ್ತು ಜಮೀನಿನ ಬೆಲೆ ಬೆಂಗಳೂರಿನಲ್ಲಿ ಹೆಚ್ಚಾಗಿದೆ. ರಿಂಗ್ ರೋಡ್‌ನ ಪಕ್ಕ ನಮ್ಮ ಸ್ನೇಹಿತರು ಯಾರು properties deal ಮಾಡುತ್ತಾರೆ ಅವರಿಗೆ ಗೊತ್ತಿದ್ದರೆ ಹೇಳಿ. 1996–97ರಲ್ಲಿ ಎಕರೆಗೆ ರೂ. 5ಲಕ್ಷ ಬೆಲೆ ಇರಲಿಲ್ಲ. ಈಗ ರಿಂಗ್ ರೋಡ್ ಆಯಿತು, Software Parkಗಳು ಬಂತು, ಆಗ ಆ ಜಮೀನುಗಳ ಬೆಲೆ ಹೆಚ್ಚಾಯಿತು. ಆ ಜಮೀನುಗಳು ಬೆಲೆಯು ಹೆಚ್ಚಾದಾಗ ಮಧ್ಯವರ್ತಿ ಜನ ಇದ್ದಾರಲ್ಲಾ ಆ agents, they plan all this havoc. ಇಡೀ ವಿಶ್ವದಲ್ಲಿ ಯಾವುದೇ infrastructure project ಬಂದಾಗ ಸರ್ಕಾರದ ಸಹಾಯ ಬೇಕಾಗುತ್ತದೆ. ಸರ್ಕಾರದ ಸಹಾಯದ ವಿನ: ಯಾವ ಪ್ರಾಜೆಕ್ಟ್ ಬರಲಿಕ್ಕೆ ಸಾಧ್ಯವಿಲ್ಲ. ಇವತ್ತು ಪೂನಾ–ಮುಂಬೈ ನಮ್ಮ ಬಿಜೆಪಿ ಶಿವಸೇನಾ ಸರ್ಕಾರ ಇದ್ದಾಗ ಪ್ರಾರಂಭವಾಗಿದ್ದಂಥ ರಸ್ತೆ, ಅವರು ಕೆಟ್ಟ ಕೆಲಸ ಮಾಡಿದ್ದಾರೇನು? ಆ ರಸ್ತೆ ಮೇಲೆ ಹೋಗುತ್ತಿದ್ದರೆ ನೆನೆಸಿಕೊಳ್ಳಬೇಕು. Land free ಕೊಟ್ಟಿದ್ದಾರೆ. National Highway Authorities ಗೆ ರಸ್ತೆ ಮಾಡುವಾಗ land free ಕೊಡುತ್ತಾರೆ. ಇವತ್ತು

ನೊಯಿಡಾ ಬಗ್ಗೆ ನಮ್ಮ ಮಂತ್ರಿಗಳು ಹೇಳುತ್ತಿದ್ದಾರೆ. Airports ಅದು ಸಿಂಗಾಪುರ Airport ಇರಬಹುದು, Paris ನಲ್ಲಿ ಇರಬಹುದು, ಇವರೆಲ್ಲಾ ನಮಗೆ ಲ್ಯಾಂಡ್‌ನ್ನು ಕೇಳಿರಬಹುದು, ಆಂಧ್ರಪ್ರದೇಶದಲ್ಲಿ ಚಂದ್ರಬಾಬು ನಾಯ್ಡುರವರು ಅವರದ್ದು Airport ಇರಬಹುದು, ಏನು Government support ಕೊಟ್ಟಿಲ್ಲವೇ? ಈ ಸೆಷನ್‌ನಲ್ಲಿ Express Highway ಬಗ್ಗೆ ಸಧ್ಯ ನಿರ್ವಹಣೆಯಲ್ಲಿದೆ. Next session ನಲ್ಲಿ Airport ಬಗ್ಗೆ raise ಮಾಡಬಹುದು. ಇವತ್ತು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಆಗಬೇಕೆಂದು ಇದು ಎಷ್ಟು ವರ್ಷದ ಕನಸು, ಗೌರವಾನ್ವಿತ ಶ್ರೀ ದೇವೇಗೌಡರು ಚೀಫ್ ಮಿನಿಸ್ಟರ್ ಆಗಿದ್ದಾಗ in 3rd January 1995, letter of intent was given to Ratan Tata and he said in CII meeting at Calcutta that this was a new year's gift to him. ಆದರೆ ಆ ಏರ್‌ಪೋರ್ಟ್ ಬರುವುದಕ್ಕಾಗಲಿಲ್ಲ. ಆದರೆ ಮುಖ್ಯಮಂತ್ರಿಗಳು, ಸಿಂಧ್ಯಾಜಿರವರು ಎಲ್ಲರೂ ಪ್ರಯತ್ನ ಮಾಡಿ ಅವರುಗಳೆಲ್ಲರ ಸಹಕಾರದಿಂದ ಆ ಒಂದು ಸ್ವಪ್ನ, ಆ ಒಂದು ಕನಸು ನನಸಾಗುತ್ತಿದೆ. ಆ ಏರ್‌ಪೋರ್ಟ್ ಕೇಳುವುದು ಬೆಂಗಳೂರಿಗಲ್ಲ. That International Airport will be a gate way for Southern the entire India. Export industry, export business. ಹೆಚ್ಚಾಗಿ ಬೆಂಗಳೂರು ಏನು ಬೆಳೆಯುತ್ತಿದೆ, ಅದೇ ಪ್ರಕಾರವಾಗಿ ಕೋಲಾರ, ತುಮಕೂರು, ಮಂಡ್ಯ ಎಲ್ಲಾ ಬೆಳೆಯಬೇಕಾದರೆ ಇನ್‌ಫ್ರಾಸ್ಟ್ರಕ್ಚರ್ ಬರಬೇಕು. ಹಾಗಾದರೆ ನಾವು ಏನು ಮಾಡಿದ್ದೇವೆ? ನಾವು ಏರ್‌ಪೋರ್ಟ್‌ಗೆ, ಮಾನ್ಯ ವಾಟಾಳ್ ನಾಗರಾಜುರವರೆ, ಅಂದಾಜು 4000 ಎಕರೆ ಜಮೀನು ಕೊಡುತ್ತಿದ್ದೇವೆ. ನಾನೇ ಮಂತ್ರಿ ಕೆಐಎಡಿಬಿ ಯಿಂದ ರಿಕ್ವೈರ್ಡ್ ಲ್ಯಾಂಡ್ ನಾವೇ ಆಕ್ವೈರ್ ಮಾಡಿರುವುದು. ಅದನ್ನು ಮಾಡಿ ನಾವು KSIIDC ಗೆ ಹ್ಯಾಂಡ್ ಓವರ್ ಮಾಡಿದ್ದೇವೆ. ಆ ಲ್ಯಾಂಡ್ ಏನು? ಅದರ ಅಂದಾಜು ಆ ಲ್ಯಾಂಡ್‌ನ್ನು ಖರೀದಿ ಮಾಡುವುದಕ್ಕೆ ಮತ್ತು ಅಲ್ಲಿ ಕೆಲವು ಫಾರೆಸ್ಟ್ ಲ್ಯಾಂಡ್ ಇತ್ತು, ಅದಕ್ಕಾಗಿ ಅಲ್ಲಿ ಅಫೋಲ್ ಸ್ಟೇಷನ್ ಮಾಡಬೇಕಾಗಿತ್ತು. ಸುಮಾರು ಅಂದಾಜು 175 ಕೋಟಿ ರೂಪಾಯಿಗಳು loan rules ಮಾಡಿ through ಕೆಎಸ್‌ಎಸ್‌ಐಡಿಸಿ, ನಾವು ಈ ಜಮೀನನ್ನು ಖರೀದಿ ಮಾಡಿದ್ದೇವೆ. ಇವತ್ತು ಏರ್‌ಪೋರ್ಟ್‌ಗೆ, ಹೊಸ ಏರ್‌ಪೋರ್ಟ್ ಬರುತ್ತಿದೆಯಲ್ಲಾ ಅದಕ್ಕಾಗಿ ಈ ಲ್ಯಾಂಡ್ first three years-no lease amount. Third year to 8th year 3% lease amount and after that five years. It is 5% ನೀವು ಹೇಳಬಹುದು. ಮಾಧುಸ್ವಾಮಿಯವರು, ಏನು ದೇಶಪಾಂಡೆಯವರೇ 175 ಕೋಟಿ ರೂಪಾಯಿಗಳಲ್ಲಿ 12 ಪರ್ಸೆಂಟ್ ಹಿಡಿದರೂ 20 ಕೋಟಿ ರೂಪಾಯಿಗಳು ಬಡ್ಡಿಯಾಗುತ್ತದೆ. ನೀವು 3 ರಷ್ಟು ಫ್ರೀಯಾಗಿ ಕೊಟ್ಟಿದ್ದೀರಿ, 3 ಪರ್ಸೆಂಟ್ ಕೊಟ್ಟರೆ ನಾಲ್ಕೂವರೆ ಕೋಟಿ ರೂಪಾಯಿಗಳು ಬರುತ್ತದೆ. ನೀವು 15 ಕೋಟಿ ರೂಪಾಯಿಗಳ ಸಹಾಯವನ್ನು ಕೊಟ್ಟಿದ್ದೀರಿ ಎಂದು ಕೇಂದ್ರ ಸರ್ಕಾರ ಮತ್ತು ನಾವು 26 ಪರ್ಸೆಂಟ್ ಇಕ್ವಿಟಿಯನ್ನು ಕೊಡುತ್ತಿದ್ದೇವೆ, ಇದರಿಂದಾಗಿ 85 ಕೋಟಿ ರೂಪಾಯಿಗಳಾಗುತ್ತದೆ. ನಾವು 42.50 ಕೋಟಿ ರೂಪಾಯಿಗಳು

ಅವರು 42 ಕೋಟಿ ರೂಪಾಯಿಗಳು ಹೇಗೆ ಕೊಡುತ್ತೀರಿ? ಇಕ್ವಿಟಿ ನಾವು ಕೊಟ್ಟಿದ್ದೇವೆ, ಇದನ್ನು ಒಪ್ಪಿಕೊಂಡಿರುವುದಕ್ಕೆ ನೀವು ಸಂತೋಷಪಡಬೇಕು. I am telling you the facts.

**Sri R.V. Deshpande :** Don't disturb me. Then, support 350 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. Next three years interest free Rs. 350 crores. ಕೊಡುತ್ತಿದ್ದೇವೆ. ಮಾನ್ಯ ಹಣಕಾಸಿನ ಸಚಿವರು ಈ ವರ್ಷದ ಬಜೆಟ್‌ನಲ್ಲಿ ಅವರಿಗೆ ಕೊಡುವುದಕ್ಕಾಗಿ 75 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಅದಕ್ಕಾಗಿಯೇ 30 ಸಾವಿರ ಕೋಟಿ ರೂಪಾಯಿಗಳು ಸಾಲವಾಗಿರುವುದು, ಸರ್ಕಾರದ ತಲೆಯ ಮೇಲೆ, ಏನು ಮಾತನಾಡುತ್ತಿದ್ದೀರಿ?

**Sri R.V. Deshpande :** We have to take it..

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ಹಿಂದಿನ ಮುಖ್ಯಮಂತ್ರಿಗಳು ಏನು ತಂದಿದ್ದಾರೆ?

**ಅಧ್ಯಕ್ಷರು :** ಮಾನ್ಯ ಶ್ರೀರಾಮರೆಡ್ಡಿಯವರೇ,

**ಶ್ರೀ ಆರ್.ವಿ. ದೇಶಪಾಂಡೆ :** ಹಾಗಾಗಿ, ಈ ಹಣ ಯಾವುದು ವಾಪಸ್ಸು ಬರುವುದು ಎಲ್ಲಾ ಬ್ಯಾಂಕರ್ಸ್‌ದ್ದು ಸಾಲ ಇದೆಯಲ್ಲಾ ಈ ಏರ್‌ಪೋರ್ಟ್ ಕಂಪನಿ ವಾಪಸ್ಸು ಕೊಟ್ಟ ನಂತರ 12–13 ವರ್ಷದಿಂದ ನಿಮಗೆ ಹಣ ಬರುವುದಕ್ಕೆ ಪ್ರಾರಂಭವಾಗುತ್ತದೆ. ಇದು ಅವರ ಅರ್ಥ. ಇದು ಕೆಟ್ಟ ಕೆಲಸವೇ? ಈ ಕೆಲಸ ಮಾಡದೇ ಇದ್ದರೆ ಯಾರೂ ಮುಂದೆ ಬರುವುದಿಲ್ಲ, ಆಂಧ್ರದಲ್ಲಿ ಚಂದ್ರಬಾಬುನಾಯ್ಡು ಇದಕ್ಕಿಂತ ಹೆಚ್ಚು ಹಣವನ್ನು ಕೊಟ್ಟಿದ್ದಾರೆ. ಇವತ್ತು ಯಾವುದು ಒಂದು ಪ್ರಾಜೆಕ್ಟ್‌ನಲ್ಲಿ ಎಲ್ಲಕ್ಕಿಂತ ಇಂಪಾರ್ಟ್‌ಟೆಂಟ್ ಅಂದರೆ Rate of Return ಇದನ್ನು ಯಾರು ನೋಡಿಲ್ಲ. ಮಾನ್ಯ ರಾಮರೆಡ್ಡಿ ಹೇಳಿದ ಹಾಗೆ ಯಾರೂ ಕೂಡ ಚಾರಿಟಿ ಮಾಡುವುದಕ್ಕೆ ಬರುವುದಿಲ್ಲ. ಲಾಭ ಮಾಡುವುದಕ್ಕೆ ಬರುತ್ತಾರೆ. ಅವರಿಗೆ 7 ರಿಂದ 8 ಪರ್ಸೆಂಟ್ ಸಿಗಬೇಕಲ್ಲಾ? ಅದು ಏರ್‌ಪೋರ್ಟ್ ಇರಬಹುದು, ಅದು ಪೋರ್ಟ್ ಇರಬಹುದು ಅದು ಎಕ್ಸ್‌ಪ್ರೆಸ್ ಹೈವೇ ಪ್ರಾಜೆಕ್ಟ್ ಇರಬಹುದು ಗೌರ್ನಮೆಂಟ್ ಸಪೋರ್ಟ್ ಬಹಳ ಕ್ರಿಟಿಕಲ್ ಆಗುತ್ತದೆ. ಗೌರ್ನಮೆಂಟ್ ಸಪೋರ್ಟ್ ಇದು ಬರುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಇವತ್ತು ಕರ್ನಾಟಕದಲ್ಲಿ ಬೆಂಗಳೂರು, ಮೈಸೂರುಗಳಲ್ಲಿ ಐ.ಟಿ. ಪಾರ್ಕ್ ಬಂದಿವೆ; ಲ್ಯಾಂಡ್ ಅಕ್ವೈರ್ ಆಗಿದ್ದಾವೆ; ರೈತರು ಜಗಳ ಇಲ್ಲವಲ್ಲಾ; 90–95 ಪರ್ಸೆಂಟ್ ಕನ್‌ಸೆಂಟ್ ಅವಾರ್ಡ್ ಇದೆ, ಕೆಐಎಡಿಬಿಯಲ್ಲಿ ಕನ್ಸೆಂಟ್ ಪೊಸಿಜಿಷನ್ ಇದೆ. ತಕರಾರು ಇಲ್ಲವೆಂದು ಕನ್ಸೆಂಟ್ ಕೊಟ್ಟಿದ್ದಾರೆ. ಪ್ರೈಸ್ ಫಿಕ್ಸೇಷನ್ ಮಾಡುವವರು ಡೆಪ್ಯುಟಿ ಕಮೀಷನರ್.

**ಶ್ರೀ ಜೆ.ಸಿ. ಮಾಧುಸ್ವಾಮಿ :** ತಾವು ನಮಗೆ ಮಾತು ಕೊಟ್ಟಿದ್ದೀರಿ, ಡಿಫೆಂಡ್ ಮಾಡುವುದಕ್ಕೆ ಬಿಡುವುದಿಲ್ಲ ಎಂದು.

**ಶ್ರೀ ಆರ್.ವಿ. ದೇಶಪಾಂಡೆ :** ಮಿನಿಸ್ಟರ್ ಮಾಡುವುದಿಲ್ಲ, ಚೀಫ್ ಮಿನಿಸ್ಟರ್ ಮತ್ತು ಪ್ರಿನ್ಸಿಪಲ್ ಸೆಕ್ರಟರಿ ಮಾಡುವುದಿಲ್ಲ.

**ಛೇರ್ಮನ್ :** ಮಾನ್ಯ ದೇಶಪಾಂಡೆಯವರೆ, ತಾವು ಪ್ರಾರಂಭ ಮಾಡಿ ಮುಕ್ಕಾಲು ಗಂಟೆಯಾಗಿದೆ. ತಾವು ಬೇಗನೆ ಮುಗಿಸಿ.

**ಶ್ರೀ ಆರಗ ಜ್ಞಾನೇಂದ್ರ :** ಇದರ ಬಗ್ಗೆ ಸರ್ಕಾರದ ಹತ್ತಿರ ಮಾಹಿತಿ ಇಲ್ಲವಾ ಸಾರ್? ಒಬ್ಬ ಸದಸ್ಯರು ಇದನ್ನು ಹೇಳಬೇಕಾ?

**ಛೇರ್ಮನ್ :** ಇದರ ಬಗ್ಗೆ ಸರ್ಕಾರ ಉತ್ತರ ಕೊಡುತ್ತದೆ.

**ಶ್ರೀ ಆರಗ ಜ್ಞಾನೇಂದ್ರ :** ಹಾಗಾದರೆ ಮಂತ್ರಿಗಳ ಹತ್ತಿರ ಮಾಹಿತಿ ಇಲ್ಲವಾ?

**ಶ್ರೀ ಆರ್.ವಿ. ದೇಶಪಾಂಡೆ :** ಬಹಳ ಹೌಸಿಂಗ್ ಲೇಔಟ್‌ಗಳು ಬಂದಿದ್ದಾವೆ. ನಮ್ಮ ಕೆಲವು ಸ್ನೇಹಿತರುಗಳು ಹೌಸಿಂಗ್ ಲೇಔಟ್ ಮಾಡಿದ್ದಾರೆ. ಬಿಡಿಎ ಕಮಿಷನರ್‌ರವರು ಮಾಡಿದ್ದಾರೆ. ಇದರ ಬಗ್ಗೆ ಬೇಕಾ ಇನ್‌ಫರ್ಮೇಷನ್? ಹಾಗಾಗಿ ಒಂದೊಂದು ಟೌನ್‌ಶಿಪ್‌ನಲ್ಲಿ ಒಂದೊಂದು ಲಕ್ಷ ಜನ ಹೌಸ್ ಆಗುತ್ತಾ ಇವೆ Please understand friends. ನಾವು ಯಾರ ಮೇಲೆ ಅಪವಾದವನ್ನು ಮಾಡಲಿಲ್ಲ. ನೀವು ನನ್ನ ಮೇಲೆ ಅಪವಾದ ಮಾಡಿ ಎಂದು ಹೇಳುವುದಿಲ್ಲ. ನಾವು ತಪ್ಪು ಮಾಡಿದ್ದರೆ ಕ್ಷಮೆ ಕೊಡುವುದು ಶಿಕ್ಷೆ ಕೊಡುವುದು ದೇವರು. ಅಂಡರ್‌ಸ್ಟ್ಯಾಂಡ್ ಎಲ್ಲರೂ ಹೆದರಿ ಕೆಲಸವನ್ನು ಮಾಡುತ್ತೇವೆ. ಹಾಗಾಗಿ ತಾವು ಜವಾಬ್ದಾರಿ ಸ್ಥಾನದಲ್ಲಿ ಇದ್ದೀರಿ, ತಾವು ಒಳ್ಳೆಯ ಅನುಭವಿ ಇದ್ದೀರಿ ತಮಗೆ ಬಂದ ಮಾಹಿತಿಯ ಪ್ರಕಾರ ತಾವು ಪ್ರಸ್ತಾಪ ಮಾಡಿದ್ದೀರಿ. ಅದರ ಬಗ್ಗೆ ನನಗೆ ಬೇಜಾರು ಇಲ್ಲ. ಆದರೆ ನಾನು ಏನು ಹೇಳುತ್ತೇನೆ ಎಂದರೆ ತಾವು ಈ ರಾಷ್ಟ್ರದ ಹಾಗೂ ರಾಜ್ಯದ ಪ್ರಗತಿಯಾಗಬೇಕೆಂಬುದು ಹೇಳುವುದರಲ್ಲಿ ನಿಮಗೂ ವಿಶ್ವಾಸವಿದೆ. ಅದರ ಬಗ್ಗೆ ಪ್ರಶ್ನೆಯೇ ಇಲ್ಲ, ಈಗ ಯಾವುದು ಡೆವಲಪ್‌ಮೆಂಟ್ ಆಗಬೇಕೋ ಆದರಿಂದ ಯಾರಿಗೋ ಅಫೆಕ್ಟ್ ಆಗುತ್ತದೆ, without affecting anybody ಯಾವುದೇ ಡೆವಲಪ್‌ಮೆಂಟ್ ಮಾಡುವುದಕ್ಕಾಗುವುದಿಲ್ಲ. ನನ್ನ ಜಿಲ್ಲೆಯಲ್ಲಿ ಸೀಬರ್ಡ್ ಪ್ರಾಜೆಕ್ಟ್ ಬಂತು, ಸಾವಿರಾರು ಎಕರೆಗಳನ್ನು ಅಕ್ವೈರ್ ಮಾಡಿದರು. ಕಾಳಿ ಪ್ರಾಜೆಕ್ಟ್ ಬಂತು ಮತ್ತು ಕೈಗಾ ಬಂತು ಇದರಿಂದ ನಿಮಗೆ ಉಪಯೋಗವಾಯಿತಲ್ಲಾ? ನಿಮಗೆ ವಿದ್ಯುಚ್ಛಕ್ತಿ ಬಂತು, ರಾಷ್ಟ್ರಕ್ಕೆ ಡಿಫೆನ್ಸ್ ಆಯಿತು, ಸಾವಿರಾರು ಕುಟುಂಬಗಳು ಹೋದರಲ್ಲಾ ಎಷ್ಟು ಜನ ನಾವು ಇಲ್ಲಿ ಮಾತನಾಡುತ್ತೇವೆ? ಈ ಬೆಂಗಳೂರು ಲ್ಯಾಂಡ್‌ಗೆ ವ್ಯಾಲ್ಯೂ ಬಂದು ಬಿಟ್ಟಿದೆ, ಹಾಗಾಗಿ ನಾವು ಮಾತನಾಡುತ್ತಿದ್ದೇವೆ. ಇವತ್ತು ಕೆಐಡಿಬಿಯಾಗಲಿ, ಸರ್ಕಾರವಾಗಲಿ, ಪಾರದರ್ಶಕವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದೆ. ಈ ರೀತಿ ಮಾಡುವಾಗ ಸ್ವಲ್ಪ ಎಲ್ಲೋ ಒಂದು ಕಡೆ ತಪ್ಪುಗಳಾಗಿರಬಹುದು, ನಾನೇ ಮಂತ್ರಿಯಾಗಿದ್ದಾಗ ಒಂದು ಫೈಲ್‌ನಲ್ಲಿ ಹೇಳಿದ್ದೆ ಈ ಎಕ್ಸ್‌ಪ್ರೈಸ್ ಕಾರಿಡಾರ್ ಬಗ್ಗೆ ಎಂಟೈರ್ ಲ್ಯಾಂಡ್ ಅಕ್ವಿಜಿಷನ್ has to be gone through again, whether such a land is required, please check-up ಎಂದು ನಾನು ಹೇಳಿದ್ದೇನೆ. ನಾನೇ ಸ್ವತ: ಹೇಕಾರ್ಡ್‌ನಲ್ಲಿ ಹೇಳಿದ್ದೇನೆ. When

they asked government lands in Bangalore, I said "No you cannot get. You will get only in Mandya. You cannot get it in Bangalore" ಎಂದು ನನ್ನ ಪ್ರೊಸಿಡಿಂಗ್ಸ್ ಕೂಡ ಇದೆ. ನಾನು ಇದರ ಬಗ್ಗೆ ಇಷ್ಟು ಹೇಳುತ್ತೇನೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಂತ್ರಿಗಳಿಗೆ ರೆಕಾರ್ಡ್ಸ್ ಸಿಗುವುದಿಲ್ಲವಾ? ಸಾರ್.

**ಶ್ರೀ ಆರ್.ವಿ. ದೇಶಪಾಂಡೆ** : ಇಲ್ಲಾ, ಇರಲಿ, ನಿಮಗೆ ಏತಕ್ಕಾಗಿ ಬೇಜಾರು? Why are you worried?

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಾನ್ಯ ಅಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು.

**ಅಧ್ಯಕ್ಷರು** : ಆಯಿತು, ಅವರು ಬೇಗ ಮುಗಿಸುತ್ತಾರೆ. ತಾವು ದಯಮಾಡಿ ಕುಳಿತುಕೊಳ್ಳಿ.

**Sri J.C. Madhuswamy** : Are these records not available with Government?

**ಛೇರ್ಮನ್** : ಸರ್ಕಾರ ಉತ್ತರವನ್ನು ಕೊಡಬೇಕು, ತಾವು ಬೇಗನೆ ಮುಗಿಸಿ.

**ಶ್ರೀ ಆರ್.ವಿ. ದೇಶಪಾಂಡೆ** : ಮಾನ್ಯ ಮಾಧುಸ್ವಾಮಿಯವರು ಬಂದು ಒಳ್ಳೆಯ ಮಾತನ್ನು ಹೇಳಿದ್ದಾರೆ. This cannot be a real-estate project. I fully support it. I am supporting Madhuswamy now. This cannot be a real-estate project; I support you ನಾನು ಫೈನಲ್‌ನಲ್ಲಿ ಬಂದಿದ್ದೇನೆ. this has to be infrastructural project, I support you. bring industries, trade to the people and prosperity to Karnataka ಹಾಗಾಗಿ ನಾನು ಮಾಧುಸ್ವಾಮಿಯವರಿಗೆ ಸಪೋರ್ಟ್ ಮಾಡಿ ನನ್ನ ಮಾತನ್ನು ಇಲ್ಲಿಗೆ ಮುಗಿಸುತ್ತೇನೆ. ನೀವೇನು ಹೇಳಿದಿರಲ್ಲಾ, ಹೀಗೆ, ಹಾಗೆ, ಆಗಿದೆ ಇದರ ಬಗ್ಗೆ ಎಂದು; ನನಗೆ ಬಹಳ ಆಶ್ಚರ್ಯವಾಗುತ್ತದೆ. 1998ರಲ್ಲಿ ಇದೇ ಪ್ರಾಜೆಕ್ಟ್‌ಗೆ 26 ಸಾವಿರ ಎಕರೆ ಭೂಮಿ ಅಕ್ವೈರ್ ಆಯಿತು. ಆಗ ಏಕೆ ಇದರ ಬಗ್ಗೆ ಯಾರೂ ಮಾತನಾಡಲಿಲ್ಲ? ಕೃಷ್ಣರವರ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಕ್ವೈರ್ ಆಗಿರುವುದು 3 ಸಾವಿರ ಎಕರೆ ಭೂಮಿ. 70 to 90 percent lands have been acquired in previous Governments. Why you charge Krishna Government for that? ನಿಮಗೆ ಬೇಡವೆಂದರೆ ಇದರ ಬಗ್ಗೆ ಇನ್ನೂ ರಿವ್ಯೂ ಮಾಡಿ. ಲ್ಯಾಂಡ್ ಆಡಿಟ್ ಮಾಡಿಸಿ. ಲ್ಯಾಂಡ್ ರಿವ್ಯೂ ಮಾಡಿ Do anything you want. ಅದು ಮಾಡದೇ ವಿನಃ ಅನಾವಶ್ಯಕವಾಗಿ ಕೃಷ್ಣ ಸರ್ಕಾರ ಹೀಗೆ ಮಾಡಿತು, ಅದು ಹಾಗೆ ಮಾಡಿತು ಅಂದರೆ ಹೀಗೆ? ಏನಾಗಿದೆ ಅಧಿಕಾರ ಕಳೆದುಕೊಂಡರೆ ಬಹಳ ಕಷ್ಟ. ಅಧಿಕಾರವಿದ್ದಾಗ ಎಲ್ಲರೂ ಪ್ರೀತಿಯ ವ್ಯಕ್ತಿಯಾಗಿರುತ್ತಾರೆ. ಷುಗರ್ ಮತ್ತು ಜಾಗರಿ ಸುತ್ತ ಇರುತ್ತವಲ್ಲಾ ants. ಅಧಿಕಾರ ಹೋದಾಗ ಕೆಲವು ಸಲ ಹೀಗೆ

ಆಗುತ್ತದೆ. ಆದರೆ ಸತ್ಯ ಏನಿದೆ, ಅದು ರೆಕಾರ್ಡ್ಸ್‌ನಲ್ಲಿದೆ. Truth is in records. ನಿಮಗೆ ಸಮಾಧಾನ ಮಾಡುವುದಕ್ಕೆ ಆಗದಿದ್ದರೂ ಸಹ ನನಗೇನೂ ಮಾಡುವುದ–ಕ್ಕಾಗುವುದಿಲ್ಲ. Facts are facts. ಇಷ್ಟು ಹೇಳಿ ಈ ಲ್ಯಾಂಡ್ ಅಕ್ವಿಜಿಷನ್ಸ್, ಲ್ಯಾಂಡ್ droppings ನಾನು ಮಂತ್ರಿಯಿದ್ದಾಗ ಅಕ್ಚ್ಯುಯಲ್ ಹಲವಾರು ಕಡೆಯಿಂದ ಕೆಲವು ಸಲ ಲ್ಯಾಂಡ್ ಡ್ರಾಪ್ ಮಾಡುವಾಗ ಕೆಲವು ಕನ್ಸಿಡರೇಷನ್ ಇರಲಿಕ್ಕೂ ಸಾಧ್ಯ. ಲ್ಯಾಂಡ್ ಡಿನೋಟಿಫೈ ಮಾಡುವಾಗ ಕೆಲವು ಸಾರಿ ಕನ್ಸಿಡರೇಷನ್ ಇರಲಿಕ್ಕೆ ಸಾಧ್ಯ. ಕೆಲವು ಸಾರಿ ಫ್ರೆಂಡ್‌ಶಿಪ್‌ನಲ್ಲಿ ಮಾಡುವುದಕ್ಕೆ ಸಾಧ್ಯ, ಕೆಲವು ಸಾರಿ genuine ರೀಸನ್ಸ್‌ನಿಂದಲೂ ಮಾಡುವುದಕ್ಕೆ ಸಾಧ್ಯವಿದೆ. ಯಾರೋ ಬರುತ್ತಾರೆ, ಅವರುಗಳಿಗೆ ಕಾಲು ಮತ್ತು ಕೈಗಳು ಇರುವುದಿಲ್ಲ, ಪರಿಚಯದ ಬಗ್ಗೆ ಹೇಳುತ್ತಾರೆ, ಹಾಗಾಗಿ ಹಲವಾರು ಕಾರಣಗಳಿಂದ ಅದು ಮಾಡುವುದಕ್ಕೆ ಸಾಧ್ಯ. ಆದರೆ ಪ್ರತಿಯೊಂದು ಡಿನೋಟಿಫಿಕೇಷನ್ ಬಗ್ಗೆ ಒಂದು ಕಾರಣವಿರುತ್ತದೆ. ಆ ಕಾರಣ ಅದನ್ನು ಹುಡುಕಾಡಲಿಕ್ಕೆ ನಾವು ಪ್ರಯತ್ನ ಮಾಡಬೇಕು. ಈಗ ಯಾರೋ ಹೇಳಿದರು, in Hoody, lands were denotified. ಏಕೆ ಸ್ಟ್ರಕ್ಚರ್ಸ್ ಬಿಲ್ಡಿಂಗ್ಸ್, ಫ್ಯಾಕ್ಟರೀಸ್ ತೆಗೆದುಕೊಂಡು ಮಾಡುತ್ತೀರೋ? ತೆಗೆದುಕೊಂಡು ಮಾಡಿ. ಹಾಗಾಗಿ ಇದರ ಬಗ್ಗೆ ಇಷ್ಟೇ ಹೇಳುತ್ತೇನೆ. ಈಗ ಬಹಳ ಸಮಯವಾಗಿದೆ. ಬಹಳಷ್ಟು ಹೇಳುವಂತಹ ವಿಚಾರಗಳಿದ್ದರೂ ಸಹ ನನ್ನ ಮಾತು ನಾನು ಇಲ್ಲಿಗೆ ಮುಗಿಸುತ್ತೇನೆ. ದಯಮಾಡಿ ನಾನು ನಿಮಗೆ ನೋವುಂಟು ಮಾಡುವುದಕ್ಕೆ ಪ್ರಯತ್ನ ಮಾಡಲಿಲ್ಲ. ನಿಮಗೆ ನಾನು ನೋವು ಮಾಡಿದ್ದರೆ ನನ್ನನ್ನು ಕ್ಷಮಿಸಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** :- 3 ಜನ ಮುಖ್ಯಮಂತ್ರಿಗಳು ಈ ರಾಜ್ಯದ ಅಭಿವೃದ್ಧಿಯನ್ನು ಬಯಸಿ, ಈ ಪ್ರಾಜೆಕ್ಟ್ ಅನ್ನು ಆರಂಭ ಮಾಡಿದ್ದಾರೆಂದು ನೀವು ಹೇಳಿದಿರಿ. ಸಂತೋಷ. ಆ ಒಬ್ಬ ಮುಖ್ಯಮಂತ್ರಿ ಈಗಿರುವ ಮುಖ್ಯಮಂತ್ರಿಯವರಿಗೆ ಒಂದು ಪತ್ರ ಬರೆದಿದ್ದಾರೆ, "ಕೃಷ್ಣ ಸರ್ಕಾರದ ಭೂ ಹಗರಣ ತನಿಖೆಗೆ ವಿಶೇಷ ಕೋರ್ಟ್ ರಚಿಸಿ, ಧರ್ಮಸಿಂಗ್‌ರವರಿಗೆ ಗೌಡರ ಪತ್ರ" ಯಾರು ಎಂ.ಒ.ಯು.ಗೆ ಸಹಿ ಮಾಡಿದ ಮುಖ್ಯಮಂತ್ರಿ ವಿಷನ್ ಇಟ್ಟಿದ್ದರಲ್ಲಾ, ಬೆಂಗಳೂರು, ಕರ್ನಾಟಕ ಡೆವಲಪ್ ಆಗಬೇಕೆಂದು ವಿಷನ್ ಇಟ್ಟಂಥ ಮಹಾನ್ ನಾಯಕ ಎಂದು ನೀವೇ ಮಾತನಾಡುವಾಗ ಹೇಳಿದಿರಲ್ಲಾ, ಅದೇ ಮಾಜಿ ಮುಖ್ಯಮಂತ್ರಿಗಳು, ಮಾಜಿ ಪ್ರಧಾನ ಮಂತ್ರಿಗಳು, ಈಗಿರುವ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಇದು ನಂಬರ್ ಒನ್. ದೇಶಪಾಂಡೆಯವರೆ, ನಿಮ್ಮ ಸ್ನೇಹಿತರು, ಅಲ್ಲಿ ಎಂ.ವಿ. ರಾಜಶೇಖರನ್ ಮಂತ್ರಿಯಾಗಿದ್ದಾರಲ್ಲಾ ಅವರೇನು ಹೇಳಿದ್ದಾರೆ ಗೊತ್ತೇ, ಒತ್ತುವರಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ನ್ಯಾಯ ಮಂಡಳಿ ರಚನೆ ಮಾಡಿ ಎಂದು ಹೇಳಿದ್ದಾರೆ. ಇದಕ್ಕೇನು ಉತ್ತರ ಹೇಳುತ್ತಿರಿ ಸ್ವಾಮಿ? ಆ ಮುಖ್ಯಮಂತ್ರಿಗಳ ವಿಷನ್.........

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ನಿಮಿಷ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಮುಗಿಸಿಲ್ಲ. ಆ ವಿಷನ್ ಇಟ್ಟುಕೊಂಡಿದ್ದರಲ್ಲಾ ಮುಖ್ಯಮಂತ್ರಿಗಳು...... ನಾನು ಮಾತನಾಡುತ್ತಿದ್ದೇನೆ, ಯೀಲ್ಡ್ ಆಗಿಲ್ಲ. ನೀವು ಹೇಳಿದಿರಿ. ದೇವೇಗೌಡರು ವಿಷನ್ ಇಟ್ಟು, ಈ ರಾಜ್ಯ, ಈ ಬೆಂಗಳೂರು, ಕರ್ನಾಟಕ ಅಭಿವೃದ್ಧಿಯಾಗಲಿಕ್ಕೆ ದೊಡ್ಡ ವಿಷನ್ ಇಟ್ಟು ಒಪ್ಪಂದ ಮಾಡಿದ್ದರೆಂದು ಹೇಳಿದಿರಲ್ಲಾ, ಹೌದು, ಅದೇ ವಿಷನ್ ಇದ್ದಂಥ ಮಹಾನ್ ನಾಯಕರೇ ನಿಮ್ಮ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ, "ಕೃಷ್ಣ ಸರ್ಕಾರದ ಭೂ ಹಗರಣ ತನಿಖೆಗೆ ವಿಶೇಷ ಕೋರ್ಟ್ ರಚನೆ ಮಾಡಿ ಎಂದು ಹೇಳಿ" ದೇವೇಗೌಡರು ಪತ್ರ ಬರೆದಿದ್ದಾರೆ. ಇದಕ್ಕೇನು ನೀವು ಹೇಳುತ್ತೀರಿ, ಹೇಳಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ಚುನಾವಣೆಗೆ ಮೊದಲು ಏನು ಹೇಳಿದ್ದಾರೆ? ಯಾರೋಕೆಣಿ ಅನ್ನುವವರು ದೇವೇಗೌಡರ ಮನೆಗೆ ಬ್ರೀಫ್‌ಕೇಸ್ ತೆಗೆದುಕೊಂಡು ಹೋಗಲಿಲ್ಲವೆಂದು ಇದೆಲ್ಲಾ ರೈಜ್ ಆಗುತ್ತದೆಂದು ಹೇಳಿದವರು ಇವತ್ತು. ಅವರನ್ನು ಏಕೆ ಈ ಸಭೆಯಲ್ಲಿ ಹೊಗಳುತ್ತೀರಿ? ಅದೇ ಟಂಗ್ ಅಲ್ಲವೇ ಹೇಳಿದ್ದು. Please, can i bring that paper? ಬಿಡಿ.

ಶ್ರೀ ಬಸವರಾಜ್ ರಾಯರೆಡ್ಡಿ : ಹೈಕೋರ್ಟ್ ಹೇಳಿದೆ ಸಿಬಿಐ ಎನ್‌ಕ್ವೈರಿ ಅವಶ್ಯಕತೆ ಇಲ್ಲ ಎಂದು ಹೇಳಿ. ಎಲ್ಲಾ ಸರಿ ಇದೆ ಎಂದು ಹೈಕೋರ್ಟ್ ಹೇಳಿದೆ. ಸುಪ್ರೀಂ ಕೋರ್ಟ್ ಹೇಳಿದೆ.

(ಸನ್ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ದೇವೇಗೌಡರು ಸಿಬಿಐ ಎನ್‌ಕ್ವೈಯರಿ ಮತ್ತು ಸ್ಪೆಷಲ್ ಕೋರ್ಟ್ ಅನಿವಾರ್ಯ ಎಂದು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಅವರೇ ಹೇಳಿರುವುದು. ನೀವಲ್ಲ ಹೇಳಿರುವುದು. ಸಿಬಿಐ ತನಿಖೆಗೆ ಮೊದಲು ಒತ್ತಾಯ ಮಾಡಿದ್ದು ಸನ್ಮಾನ್ಯ ದೇವೇಗೌಡರು. ನಾವಲ್ಲ. ಸ್ಪೆಷಲ್ ಕೋರ್ಟ್ ಮಾಡಬೇಕೆಂದು ಹೇಳಿದ್ದು, ಅವರು, ನಾವಲ್ಲ.

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೇ, ಯಡಿಯೂರಪ್ಪನವರು ಏನೋ ಹೇಳಬೇಕಂತೆ. ಅವರು ಲೀಡರ್ ಆಫ್ ದಿ ಆಪೋಜಿಷನ್ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕಾ ಸಚಿವರು) : ದೀರ್ಘವಾಗಿ ಎಲ್ಲಾ ಚರ್ಚೆಯಾಗಿದೆ. ನಾವಿಲ್ಲಿ ಯಾರೂ ಮಾತನಾಡದವರು ಉಳಿದಿಲ್ಲ. ಸಂಬಂಧಪಟ್ಟವರು ಉತ್ತರ ಕೊಟ್ಟರೆ ಸಾಕು.

ಅಧ್ಯಕ್ಷರು : ಪರ್ಸನಲ್ ಕೆಲಸ ಇತ್ತು ಹೋಗಿದ್ದೆ. ಎಲ್ಲಾ ಆಗಿದೆ ಎಂದು ಮಾನ್ಯ ಕೈಗಾರಿಕಾ ಸಚಿವರು, ಹೇಳುತ್ತಿದ್ದೀರಿ. ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೋ, ಕೇಳಿ ತಾವು ಉತ್ತರ ಕೊಟ್ಟರೆ, ಆಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ. ಯಡಿಯೂರಪ್ಪನವರಿಗೆ ಬೇಡವೆಂದು ಹೇಳುತ್ತೇನಾ?

**ಅಧ್ಯಕ್ಷರು** : ಆಯಿತು.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ಅಧ್ಯಕ್ಷರೆ...

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಬೆಳಿಗ್ಗೆ 9 ಗಂಟೆಯಿಂದ ಕುಳಿತಿದ್ದೇವೆ. ನಾಳೆ ಬೆಳಿಗ್ಗೆಗೆ ಮುಂದೂಡಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಆಗುವುದಿಲ್ಲ ಸಾರ್, ನಮ್ಮವರೆಲ್ಲಾ ಅಧಿವೇಶನ ಮುಗಿದಿದೆ ಎಂದು ಹೇಳಿ ಅವರವರ ಕೆಲಸಕ್ಕೆಂದು ಮನೆಗೆ ಹೋಗಿದ್ದಾರೆ. ನಾನೊಂದು ನಿಮಿಷ ಮಾತನಾಡುತ್ತೇನೆ. ಈಗ ಬಹಳ ಸ್ಪಷ್ಟವಾಗಿ ಅವತ್ತಿನಿಂದ ಇವತ್ತಿನವರೆಗೆ ನಾವೊಂದು ಮಾತನ್ನು ಕೇಳುತ್ತಿದ್ದೇವೆ. ನಮ್ಮ ಜನತಾದಳದ (ಎಸ್) ಸ್ನೇಹಿತರ ಬಗ್ಗೆ ನಮಗೆ ಗೌರವವಿದೆ. ಮಾನ್ಯ ದೇವೇಗೌಡರ ಬಗ್ಗೆ ನನಗೆ ಗೌರವವಿದೆ. ಯಾವುದೋ ಕಾರಣಕ್ಕೆ ಅವರು ಅಲ್ಲಿರಬಹುದು, ನಾವು ಇಲ್ಲಿರಬಹುದು. ಅವರೇನು ಹೇಳಿದರು, ಬಹಳ ಸ್ಪಷ್ಟವಾಗಿ ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಮ್ಮ ಜೆಡಿ (ಎಸ್) ಸ್ನೇಹಿತರು ಹೇಳಿದ್ದಾರೆ. ನಾವು ಯಾವ ಈ ಭೂ ಹಗರಣದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇವೆ, ಇದರ ಬಗ್ಗೆ ಅವರಿಗೆ ಮನದಟ್ಟಾಗಿ, ಇದರ ಬಗ್ಗೆ ಸ್ಪೆಷಲ್ ಕೋರ್ಟ್ ಮಾಡಿ, ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡಿ, ತನಿಖೆ ಮಾಡಿಸುತ್ತೇವೆಂದು ರಾಜ್ಯದ ಜನರ ಮುಂದೆ ಹೇಳಿದ್ದರು. ನಾವು ನಮ್ಮ ಡ್ಯೂಟಿ ಎಂದು ತಿಳಿದುಕೊಂಡು, ವಿರೋಧ ಪಕ್ಷವಾಗಿ ಇಲ್ಲಿ ಕುಳಿತುಕೊಂಡು ಅದಕ್ಕೆ ಬೇಕಾದಂಥ ಎಲ್ಲಾ ಮಾಹಿತಿಗಳನ್ನು, ವಿವರಗಳನ್ನು ಈ ದೇಶದ, ರಾಜ್ಯದ ಜನತೆಗೆ, ಈ ಸದನದ ಮೂಲಕ ದಾಖಲೆಯಲ್ಲಿ ಉಳಿಯಲು ತಿಳಿಸುವ ಪ್ರಯತ್ನ ಮಾಡಿದ್ದೇವೆ. ಈ ಸಮಯದಲ್ಲಿ ನಮ್ಮ ಕಾಂಗ್ರೆಸ್‌ನ ಸ್ನೇಹಿತರಿಗೆ ಮುಜುಗರವಾಗಬಹುದು. ಆದರೆ, ಯಾವ ಭರವಸೆಯನ್ನು ಈ ನಾಡಿನ ಜನತೆಗೆ ತಾವು ಕೊಟ್ಟಿದ್ದೀರಿ, ಅದರ ಬಗ್ಗೆ ಸತ್ಯಾಸತ್ಯತೆ ಹೊರಬರಲಿ. ಅದಕ್ಕೋಸ್ಕರ, ನಾನು ಚರ್ಚೆ ಮಾಡುತ್ತಿರುವಾಗಲೇ ಹೇಳಿದ್ದು, ಒಂದು ಕ್ಷಣ ತಡ ಮಾಡದೆ ಸ್ಪೆಷಲ್ ಕೋರ್ಟ್ ಮಾಡಿ, ಒಬ್ಬರು ಸಿಟ್ಟಿಂಗ್ ಹೈಕೋರ್ಟ್ ಜಡ್ಜ್ ಅನ್ನು ನೇಮಕ ಮಾಡಿ, ತನಿಖೆಗೆ ಒಳಪಡಿಸಿ ಎಂದು ನಾನು ಹೇಳಿದೆ. ಎರಡನೆಯದು, ಇಡೀ ನಾಡಿನ ಜನರಿಗೆ ಬಹಳ ಸ್ಪಷ್ಟವಾಗಿ ಗೊತ್ತಿರುವುದೇನೆಂದರೆ, ಈ ನಿಮ್ಮ ಇಬ್ಬರೂ ಪಕ್ಷಗಳ ಮುಖಂಡರೇನು ಮಾತಾಡಿಕೊಂಡು, ಜನಾರ್ಧನ ಪೂಜಾರಿಯವರು ಏನು ಹೇಳಿದರು, "ನಿಮ್ಮ ಹಳೆಯದನ್ನು ನಾವು ಪ್ರಸ್ತಾಪ ಮಾಡುವುದಿಲ್ಲ, ನಮ್ಮದೆಲ್ಲವನ್ನೂ ನೀವು ಪ್ರಸ್ತಾಪ ಮಾಡಬೇಡಿ, ಕಾಂಪ್ರಮೈಸ್ ಮಾಡಿಕೊಳ್ಳೋಣ; ನಿಮ್ಮ ಹಳೆಯದನ್ನು ನಾವು ತನಿಖೆ ಮಾಡಿಸುವುದಿಲ್ಲ, ಹೊಸದನ್ನು, ನಮ್ಮದನ್ನು ನೀವು ತನಿಖೆ ಮಾಡಿಸಬೇಡಿ", ಎಂದು ಒಂದು ಹೊಂದಾಣಿಕೆ ಮಾಡಿಕೊಂಡಿದ್ದೀರಿ. ಇದು ಬಹಳ ಸ್ಪಷ್ಟವಾಗಿದೆ. ಆದುದರಿಂದ, ನಾವು ಹೀಗೆ ನಡೆದುಕೊಳ್ಳುವವರು, ಮುಂದೆ ಜನತಾ ನ್ಯಾಯಾಲಯದಲ್ಲಿ ಏನಾಗುತ್ತದೋ ನೋಡೋಣ ಎಂದು ಹೇಳಿ ನೀವು ಆದ್ಯಾವುದಕ್ಕೂ ಅಂಜದೆ, ಇವೆಲ್ಲವನ್ನೂ ಹೇಳಿದ ಮೇಲೆ,

ಧೈರ್ಯವಾಗಿ ನಿಂತುಕೊಂಡು, ಇಲ್ಲ, ಸ್ಪೆಷಲ್ ಕೋರ್ಟ್ ಮಾಡುತ್ತೇವೆ, ನ್ಯಾಯಾಂಗ ತನಿಖೆ ಮಾಡುತ್ತೇವೆ, ಈ ನಾಡಿಗೆ ಸತ್ಯ ಹೊರಗೆ ಬರಲಿ, ಯಾರದ್ದೇ ತಪ್ಪಾಗಿರುವುದು, ಎಂದು ಧೈರ್ಯವಾಗಿ ಒಂದು ಮಾತು ಹೇಳಿದರೆ ಇಲ್ಲಿ ಚರ್ಚೆಯೇ ಅಗತ್ಯವಿಲ್ಲ. ಡಿಫೆಂಡ್ ಮಾಡಿಕೊಳ್ಳಬೇಕು. ಹೊಂದಾಣಿಕೆ ಮಾಡಿಕೊಳ್ಳಬೇಕು. ಖುರ್ಚಿ ಉಳಿಸಿಕೊಳ್ಳಬೇಕು. ನಾಡಿನ ಜನರ ಐದೂ ಕಾಲು ಕೋಟಿ ಜನರ ಭವಿಷ್ಯ ಹಾಳಾಗಿ ಹೋದರೂ ಪರವಾಗಿಲ್ಲ ಎಂದು ಹೇಳಿ ಕುಳಿತಿರುವ ನಿಮಗೆ ಮಾತನಾಡುವ ನೈತಿಕ ಹಕ್ಕು ಎಲ್ಲಿದೆ? ಇವತ್ತು ಹೇಳುವ ಅಂಕಿ-ಅಂಶಗಳು ದಾಖಲೆಗಳೊಂದಿಗೆ ನಾವು ಹೇಳಿದ್ದೇವೆ. ಈಗಲೂ ಹೇಳುತ್ತೇನೆ, ಖುರ್ಚಿ ಮುಖ್ಯವಲ್ಲ ಸಿಂಧ್ಯರವರೇ, ನಾವು ಮಾತನಾಡಿಕೊಳ್ಳುತ್ತಿದ್ದೆವು ನಮ್ಮ ಸಿದ್ಧರಾಮಯ್ಯನವರಿಗೆ ಯಾವ ಸ್ಥಿತಿ ಬಂತಪ್ಪ, ನಮ್ಮ ಪಿ.ಜಿ.ಆರ್. ಸಿಂಧ್ಯ, ಎಂ.ಪಿ. ಪ್ರಕಾಶ್‌ಗೆ ಹೇಗೆ ತಲೆತಗ್ಗಿಸಿ ಕುಳಿತುಕೊಳ್ಳುವಂತ ಪರಿಸ್ಥಿತಿ ಬಂತಲ್ಲಾ ಎಂದು ನಾವು ಮಾತನಾಡುತ್ತಿದ್ದೆವು. ನಿಮಗೇನೂ ಆಗಿಲ್ಲ. ಏಕೆಂದರೆ, ನಿಮಗೆ ನಿಮ್ಮದು ದಪ್ಪದ ಚರ್ಮ. ನೀವು ಎಲ್ಲವನ್ನೂ ಈ ಅಧಿಕಾರದ ಖುರ್ಚಿಗಾಗಿ, ಎಲ್ಲದಕ್ಕೂ ಕಾಂಪ್ರಮೈಸ್ ಮಾಡಿಕೊಳ್ಳಬೇಡಿ, ಇದು ನನಗೆ ಅರ್ಥವಾಗಿದೆ. ಏನು ಉತ್ತರ ಕೊಡುತ್ತೀರೋ, ಕೊಡಿ.

**ಅಧ್ಯಕ್ಷರು** : ನಾಗರಾಜರವರೆ, ಈಗಾಗಲೇ ಎಂಟೂಮುಕ್ಕಾಲು ಗಂಟೆಯಾಗಿದೆ.

**ಶ್ರೀ ವಾಟಾಳ್ ನಾಗರಾಜ್** : ಇಷ್ಟೆಲ್ಲಾ ಚರ್ಚೆ ನಡೆಯುತ್ತಿದ್ದರೂ, ಮಾಜಿ ಮುಖ್ಯ ಮಂತ್ರಿಗಳಾದಂಥ ಶ್ರೀ ಎಸ್.ಎಂ. ಕೃಷ್ಣರವರು ವಿದೇಶಕ್ಕೆ ಹೋಗಿದ್ದಾರಾ ಅಥವಾ ಯಾವ ದೇಶಕ್ಕೆ ಹೋಗಿದ್ದಾರೆ? ಅವರು ಈ ಸದನಕ್ಕೆ ಬರಬೇಕಲ್ಲವೇ? ಅವರು ಸದನದ ಸದಸ್ಯರು. ಸದನಕ್ಕೆ ಬಂದು ಇಷ್ಟೆಲ್ಲಾ ಹಗರಣ ನಡೆಯುತ್ತಿದ್ದರೆ,

**ಅಧ್ಯಕ್ಷರು** : ಅವರ ಪ್ರಸ್ತಾಪ ಈಗ ಏತಕ್ಕೆ? ಅವರು ಈ ಮನೆಯಲಿಲ್ಲ.

**ಶ್ರೀ ವಾಟಾಳ್ ನಾಗರಾಜ್** : ಅವರು ತಮಿಳುನಾಡಿನಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಅವರು ಇಲ್ಲಿಗೆ ಬರಬೇಕು. ಅವರ ಸರ್ಕಾರದ ಬಗ್ಗೆ ಗುರುತರವಾದ ಆಪಾದನೆ ಇದೆ.

**ಅಧ್ಯಕ್ಷರು** : ಅವರು ಈ ಮನೆಯಲ್ಲಿಲ್ಲ, ಅವರ ಬಗ್ಗೆ ಏಕೆ ಹೇಳುತ್ತೀರಿ?

**ಶ್ರೀ ವಾಟಾಳ್ ನಾಗರಾಜ್** : ಅವರನ್ನು ಬಹಿರಂಗ ವಿಚಾರಣೆಗೊಳಪಡಿಸಬೇಕು. ಅವರು ಇಲ್ಲಿಗೆ ಬರಬೇಕು. ಅವರು ಎಲ್ಲಿದ್ದಾರೆ? ತಾವು ಅವರಿಗೆ ಹೇಳಿ. ತಮಗೇನಾದರೂ ಅವರು ತಾವು ಬೇರೆ ಕಡೆಗೆ ಹೋಗುತ್ತೇನೆಂದು ಹೇಳಿದ್ದಾರೆಯೇ?

**ಗೊಂದಲ**

**ಅಧ್ಯಕ್ಷರು** : ಈಗ ಆ ವಿಚಾರ ಬೇಡಿ.

**ಗೊಂದಲ**

**ಆರ್.ವಿ. ದೇಶಪಾಂಡೆ** : ವಾಟಾಳ್ ನಾಗರಾಜ್‌ರವರೆ, ಎಸ್.ಎಂ. ಕೃಷ್ಣರವರು ಈ ಮನೆಯಲ್ಲಿ ಕುಳಿತಿದ್ದರು.

**ಅಧ್ಯಕ್ಷರು** : ಮಂತ್ರಿಗಳು ದಯಮಾಡಿ ಉತ್ತರ ಕೊಡಿ.

**ಶ್ರೀ ಆರ್.ವಿ. ದೇಶಪಾಂಡೆ** : ಅವರು ಎರಡು ತಾಸು ಇಲ್ಲಿ ಕುಳಿತಿದ್ದರು. ಎರಡನೇ ಸಲ ಬರುತ್ತೇನೆಂದರು.

**ಅಧ್ಯಕ್ಷರು** : ದೇಶಪಾಂಡೆಯವರೆ, ದಯಮಾಡಿ ನೀವು ಕುಳಿತುಕೊಳ್ಳಬೇಕು.

**ಶ್ರೀ ಆರ್.ವಿ. ದೇಶಪಾಂಡೆ** : ಅವರಿಲ್ಲಿ ಕುಳಿತರೂ ಸಹ ಏಕೆ ಪ್ರಸ್ತಾಪ ಮಾಡಲಿಲ್ಲ? ನೀವು ಏನು ಮಾಡಿಲ್ಲ.

**ಅಧ್ಯಕ್ಷರು** : ಆಯಿತು. ಆ ಕಡೆ, ಈ ಕಡೆ ಚರ್ಚೆಗಳಾಗಿದೆ. ಮಾನ್ಯ ಸಿಂಧ್ಯರವರೇ,.... ಪಿಡಬ್ಲ್ಯೂಡಿ ಮಂತ್ರಿ ರೇವಣ್ಣನವರು ಉತ್ತರ ಹೇಳುತ್ತಾರೆ, ಹೇಳಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಎಸ್.ಎಂ. ಕೃಷ್ಣರವರು ಈ ರಾಜ್ಯದ ಮಾಜಿ ಮುಖ್ಯಮಂತ್ರಿಗಳು......

**ಅಧ್ಯಕ್ಷರು** : ಪದೇ ಪದೇ ಏಕೆ ಹಪಿಳುತ್ತೀರಿ? ಈಗಾಗಲೇ 2-3 ಗಂಟೆ ಚರ್ಚೆಯಾಗಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಾವಿಲ್ಲಿ ಕುಳಿತಿದ್ದೇವೆ.

**ಅಧ್ಯಕ್ಷರು** : ಅವರು ರಿಪ್ಲೈ ಕೊಡಲಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ರಿಪ್ಲೈ ಕೊಡಲಿ. ನಾನೇನು ವಿನಂತಿ ಮಾಡುತ್ತೇನೆಂದರೆ, ಈ ನಾಡಿನ ಐದೂವರೆ ಕೋಟಿ ಜನರ ಹಿತದೃಷ್ಟಿಯಿಂದ ಈ ನಾಲ್ಕೂವರೆ ವರ್ಷದ ಈ ಕರ್ಮಕಾಂಡಕ್ಕೆ ಯಾರು ಕಾರಣಕರ್ತರು ಇದ್ದಾರೆ, ನಾಗರಾಜ್‌ರವರು ಹೇಳಿದಂತೆ, ಅವರು ಸಿಬಿಐ ತನಿಖೆಗೆ ಒಳಪಡುವಂಥದ್ದು, ನಾಳೆ ಜೈಲು ಕಂಬಿ ಎಣಿಸುವಂಥದ್ದು, ಇದು ಕನ್ನಡ ನಾಡಿನ ಜನರಿಗೆ ಮಾಡಿದ ಅಪಮಾನ. ಅದಕ್ಕೆ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಎಸ್.ಎಂ. ಕೃಷ್ಣರವರಿಗೆ ಒಂದು ಕಿವಿ ಮಾತನ್ನು ಹೇಳುತ್ತಿದ್ದೇನೆ, ಈ ರಾಜ್ಯದ ಜನತೆಗೆ ಕ್ಷಮಾಪಣೆ ಕೇಳಿ, ರಾಜಕೀಯದಿಂದ ನಿವೃತ್ತಿಯಾಗಿ ಎಂದು ಒತ್ತಾಯ ಮಾಡುತ್ತೇನೆ because you people are responsible.. ಈ ನಾಡನ್ನು ಹಾಳು ಮಾಡಿದವರು ನೀವು. ಸರ್ವನಾಶ ಮಾಡಿದ್ದೀರಿ. ಕ್ಷಮಾಪಣೆ ಕೇಳಿ, ರಾಜಕೀಯದಿಂದ ನಿವೃತ್ತಿಯಾಗಿ ಎಂದು ನಾನು ಸಲಹೆ ಕೊಡುತ್ತೇನೆ. ಅವರು ಹೌಸ್‌ಗೆ ಬರಬೇಕಾಗಿತ್ತು, ಏಕೆ ಬಂದಿಲ್ಲ? ಈಗ ಅವರು ಸಿಬಿಐಗೆ ಒಳಪಟ್ಟಿದ್ದಾರೇನು? ಸಿಬಿಐನವರು ಅವರನ್ನು ಕರೆದುಕೊಂಡು ಹೋಗಿದ್ದಾರೇನು ಎಂದು ನಾನು ಕೇಳಲು ಇಚ್ಛೆಪಡುತ್ತೇನೆ.

**ಅಧ್ಯಕ್ಷರು** : ಈಗ ಚರ್ಚೆಯಾಗಿದೆ.

**ಶ್ರೀ ಬಿ.ಎಸ್. ಯಡಿಯೂರಪ್ಪ**: ಹೌಸ್‌ನಲ್ಲಿ ನೀವು ಹೇಳಬೇಕು ಸಾರ್. ಮುಖ್ಯಮಂತ್ರಿಗಳಿಗೆ ಹೇಳಬೇಕು. ಮಾಜಿ ಮುಖ್ಯಮಂತ್ರಿಗಳು ಸಿಬಿಐ ತನಿಖೆಗೆ ಒಳಪಟ್ಟಿದ್ದಾರೆಯೇ?

**ಅಧ್ಯಕ್ಷರು** : ಸರ್ಕಾರವೇನು ಉತ್ತರ ಹೇಳುತ್ತದೆ ಕೇಳಿ ದಯವಿಟ್ಟು.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಅವರು ಹೊರಗಡೆ ಇದ್ದಾರಾ? ಒಳಗಡೆ ಇದ್ದಾರಾ? ದಯವಿಟ್ಟು ಮುಖ್ಯಮಂತ್ರಿಗಳು ಸತ್ಯಸಂಗತಿಯನ್ನು ಬಹಿರಂಗ ಮಾಡಿ. ಅವರು ಎಲ್ಲಿದ್ದಾರೆ? ಹೌಸ್‌ಗೆ ಬಂದು ಫೇಸ್ ಮಾಡುವುದಕ್ಕಾಗಲಿಲ್ಲ. ಈ ಕರ್ಮಕಾಂಡಕ್ಕೆ ನಿಮ್ಮ ಮಾಜಿ ಮುಖ್ಯ ಮಂತ್ರಿಗಳಾದ ಎಸ್.ಎಂ. ಕೃಷ್ಣರಲ್ಲವೇನು? ಮತ್ಯಾರು ಇದಕ್ಕೆ ಜವಾಬ್ದಾರರು? ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡಿದ್ದೀರಿ. ಬೆಂಗಳೂರನ್ನು ಹರಾಜು ಮಾಡಿದ್ದೀರಿ.

**ಅಧ್ಯಕ್ಷರು :** ಆಯಿತು. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) : ಮಾನ್ಯ** ವಿರೋಧ ಪಕ್ಷದ ನಾಯಕರಾದಂಥ ಬಿ.ಎಸ್. ಯಡಿಯೂರಪ್ಪನವರು, ಜೆ.ಸಿ. ಮಾಧು ಸ್ವಾಮಿಯವರು, ಜಗದೀಶ್ ಶೆಟ್ಟರ್‌ರವರು, ಜಿ.ವಿ. ಶ್ರೀರಾಮರೆಡ್ಡಿಯವರು, ವಾಟಾಳ್ ನಾಗರಾಜ್ ರವರು ಹಾಗೂ ಇತರೆ ನಮ್ಮ ಸನ್ಮಾನ್ಯ ಗೌರವಾನ್ವಿತ ವಿಧಾನ ಸಭಾ ಸದಸ್ಯರು ನಿಯಮ 69ರ ಅಡಿಯಲ್ಲಿ ಬಿಎಂಐಸಿ ಯೋಜನೆಯ ಅನುಷ್ಠಾನದ ಬಗ್ಗೆ ಹಲವಾರು ವಿಷಯಗಳ ಬಗ್ಗೆ ಈಗಾಗಲೇ ಸದನಕ್ಕೆ ಬೆಳಕನ್ನು ಚೆಲ್ಲಿದ್ದಾರೆ.

ಇದರ ಬಗ್ಗೆ ಪ್ರಾರಂಭದಿಂದ ಏನು ನಡೆಯಿತು ಎನ್ನುವುದನ್ನು ಒಂದೊಂದೇ ಆಗಿ ಈ ಸಭೆಯ ಗಮನಕ್ಕೆ ನಾನು ತರುತ್ತಿದ್ದೇನೆ. ಮೊದಲು ಈ ಯೋಜನೆಯನ್ನು ಅತಿ ವೇಗದಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರವನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಮತ್ತು ಮೈಸೂರು ನಗರಗಳ ನಡುವೆ ಒಂದು ರಸ್ತೆ ಮಾಡಬೇಕು ಎನ್ನುವ ಉದ್ದೇಶದಿಂದ 1987ರಲ್ಲಿ ಅಂದಿನ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಒಂದು ಪ್ರಸ್ತಾವನೆಯನ್ನು ತಂದರು. ಅದರಲ್ಲಿ 1987ನೇ ಸಾಲಿನ ಯೋಜನಾ ವರದಿಯಂತೆ ಅಂದಾಜು ವೆಚ್ಚ 162 ಕೋಟಿ ರೂಪಾಯಿ ಆಗಿತ್ತು. ಆದಾದ ಮೇಲೆ ಈ ಯೋಜನೆಗೆ ಒಂದು ಟೆಂಡರ್ ಕರೆದರು ಅದರಲ್ಲಿ ಆಸಕ್ತಿ ತೋರಿಸಿದ್ದು ಖೋಡೆ ಇಂಜಿನಿಯರಿಂಗ್ ಕಂಪನಿ. ಖಾಸಗಿ ಜಮೀನು ಸ್ವಾಧೀನದ ವೆಚ್ಚ ಭರಿಸಬೇಕೆಂದು ಅವರೊಂದು ಕಂಡೀಷನ್ ಹಾಕಿದರು. ಆಗ ಆ ಹಂತದಲ್ಲಿ ಈ ಯೋಜನೆಯನ್ನು ಕೈಗೊಳ್ಳಲಿಕ್ಕೆ ಆಗಲಿಲ್ಲ. ನಂತರ 1991ನೇ ಇಸ್ವಿಯಲ್ಲಿ ಭಾರತ ಸರ್ಕಾರದ ಉದಾರೀಕರಣದ ನೀತಿಯ ಅನ್ವಯ ಖಾಸಗಿ ಬಂಡವಾಳದಾರರನ್ನು ಆಕರ್ಷಿಸುವ ದೃಷ್ಟಿಯಿಂದ ದಿನಾಂಕ 20-2-1995 ರಂದು ಅಂದಿನ ಅಮೇರಿಕಾ ಸಂಸ್ಥಾನದ ಮೆಸಾಚುಸೆಟ್ಸ್ ರಾಜ್ಯಪಾಲರು ಬೆಂಗಳೂರಿಗೆ ಭೇಟಿ ನೀಡಿದ ಸಮಯದಲ್ಲಿ ಅವರ ಹಾಗೂ ಅಂದಿನ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ವೈನಾಸ್ ಹ್ಯಾಸಜಸ್ ಬ್ರಸ್ಟರ್ಲಿ ಸಂಸ್ಥೆ ಕಲ್ಯಾಣಿ ಗ್ರೂಪ್ ಕಂಪನಿಗಳು, ಹಾಗೂ ಎಸ್.ಎ.ಬಿ. ಇಂಜಿನಿಯರಿಂಗ್ ಮತ್ತು ನಿರ್ಮಾಣ ಸಂಸ್ಥೆಗಳ ಹಾಗೂ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆ ನಡುವೆ ಒಂದು ಪರಸ್ಪರ ತಿಳುವಳಿಕೆ ಪತ್ರಕ್ಕೆ (ಎಂ.ಓ.ಯು) ಸಹಿ ಮಾಡಲಾಯಿತು. ಹಾಗೆ ಸಹಿ ಹಾಕುವ ಸಂದರ್ಭದಲ್ಲಿ ಇಷ್ಟೇ ಜಮೀನು ಕೊಡಬೇಕು ಎನ್ನುವ ದೃಷ್ಟಿನಲ್ಲಿ ಆವತ್ತು ಏನೂ ಇಲ್ಲ. ಏಕೆಂದರೆ ಸಹಿ ಹಾಕುವಂಥ ಸಂದರ್ಭದಲ್ಲಿ ಇದು ಇಲ್ಲ. ಅದನ್ನೂ ಸಹ ಈ ಸಭೆಯ ಗಮನಕ್ಕೆ ತರುತ್ತೇನೆ. ಇದಾದ ಮೇಲೆ Mouಗೆ ಸಹಿ ಮಾಡಿದ ನಂತರ ಸರ್ಕಾರವು ಅಂದಿನ ಲೋಕೋಪಯೋಗಿ ಸಚಿವರ ಅಧ್ಯಕ್ಷತೆಯಲ್ಲಿ ಇಲಾಖಾ ಪ್ರತಿನಿಧಿಗಳನ್ನೊಳಗೊಂಡು ಒಂದು ಹೈ ಲೆವಲ್ ಕಮಿಟಿ ದಿನಾಂಕ 5-6-95ರಲ್ಲಿ ರಚಿಸಲಾಯಿತು. 20-11-95ರಂದು ಹೊರಡಿಸಲಾದ ಸರ್ಕಾರಿ ಆದೇಶದಲ್ಲಿ ಈ ಯೋಜನೆಯನ್ನು (ಬಿಓಓಟಿ) ಆಧಾರದ ಮೇಲೆ ನಿರ್ಮಿಸಲು

111 ಕಿ.ಮೀ. ಉದ್ದದ ರಸ್ತೆಗೆ 41 ಕಿ.ಮೀ. ಪೆರಿಫೆರಲ್ ರಸ್ತೆ, 9.1 ಕಿ.ಮೀ ಉದ್ದದ ಲಿಂಕ್ ರಸ್ತೆ, 3 ಕಿ.ಮೀ. ಉದ್ದದ ಮೇಲು ರಸ್ತೆ ಹಾಗೂ 5 ಉಪನಗರಗಳು ಸರ್ಕಾರಕ್ಕೆ ಯಾವುದೇ ರೀತಿಯ ಆರ್ಥಿಕ ಹೊರೆ ಇಲ್ಲದೆ ನಿರ್ಮಿಸಲು ಆದೇಶ ಮಾಡಲಾಯಿತು. ಇದಲ್ಲದೆ ಯೋಜನೆಯನ್ನು ಅನುಷ್ಠಾನಗೊಳಿಸಲು ಮತ್ತು ಯೋಜನೆಯ ಚಟುವಟಿಕೆಗಳನ್ನು ಸಮನ್ವಯಗೊಳಿಸಲು ಲೋಕೋಪಯೋಗಿ ಇಲಾಖೆಯನ್ನು ನೋಡೆಲ್ ಏಜೆನ್ಸಿ ಎಂದೂ ಸಹ ನೇಮಿಸಲಾಯಿತು. ಅಲ್ಲದೆ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ಒಂದು ಕೋರ್ ಗ್ರೂಪ್ ಕಮಿಟಿಯನ್ನು ಕೆಎಸ್ಐಡಿಸಿಯ ಛೇರ್ಮನ್ ಅಂಡ್ ಮ್ಯಾನೇಜಿಂಗ್ ಡೈರೆಕ್ಟರ್ ಇವರ ಅಧ್ಯಕ್ಷತೆಯಲ್ಲಿ 22-3-96ರಂದು ನೇಮಿಸಲಾಗಿದೆ. 27-3-97ರಂದು ಈ ಯೋಜನೆ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ನೈಸ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡಿತು. ಕಂಪನಿಯವರು ಸಲ್ಲಿಸಿದ ತಾಂತ್ರಿಕ ಯೋಜನೆಯ ವರದಿಯನ್ನು ವಿವಿಧ ಸಮಿತಿಗಳು, ಟೆಕ್ನಿಕಲ್ ಅಡ್ವೈಸರ್ ಕಮಿಟಿ, ಕೋರ್ ಗ್ರೂಪ್ ಹೈ ಲೆವಲ್ ಕಮಿಟಿ, ಹಾಗೂ ಸಚಿವ ಸಂಪುಟದ ಉಪ ಸಮಿತಿ ಪರಿಶೀಲಿಸಿದ ನಂತರ, ಸಚಿವ ಸಂಪುಟದ ಅನುಮೋದನೆಯೊಂದಿಗೆ ದಿನಾಂಕ 3-4-97 ರಂದು ಸರ್ಕಾರವು ನೈಸ್ ಕಂಪನಿ ಜೊತೆ ಫ್ರೇಮ್‌ವಕ್ ಕರಾರು ಪತ್ರಕ್ಕೆ ಸಹಿ ಮಾಡಲಾಯಿತು. ದಿನಾಂಕ 5-10-99 ರಂದು ಕೆಲವೊಂದು ಕರಾರು ಮಾರ್ಪಾಟಿಗೆ ಲೋಕೋಪಯೋಗಿ ಇಲಾಖೆ ಒಪ್ಪಿಗೆ ಸೂಚಿಸಲಾಯಿತು. ದಿನಾಂಕ 6-10-99 ರಂದು ಸಪ್ಲಿಮೆಂಟರಿ ಕರಾರನ್ನು ಸರ್ಕಾರ ಮತ್ತು ನೈಸ್ ಕಂಪನಿ ಜೊತೆ ಮಾಡಲಾಯಿತು. ದಿನಾಂಕ 7-10-99 ರಂದು ಸರ್ಕಾರಿ ಜಮೀನನ್ನು ಬಿಎಂಐಸಿಪಿಗೆ ಲೀಸ್‌ಗೆ ನೀಡಲು ಆದೇಶ ಮಾಡಲಾಯಿತು. 22-10-99ರಲ್ಲಿ ಫ್ರೇಮ್‌ವರ್ಕ್ ಕರಾರಿನಲ್ಲಿ ಯೋಜನೆಯನ್ನು ವಿವಿಧ ಹಂತಗಳಲ್ಲಿ ತೆಗೆದುಕೊಳ್ಳುವುದಕ್ಕೆ ಮಾರ್ಪಾಡು ಮಾಡುವ ಬಗ್ಗೆ ಪ್ರಸ್ತಾಪಿಸಲಾಯಿತು. 23-11-99ರಲ್ಲಿ ಕೆಐಎಡಿಬಿ ಮತ್ತು ಕಂಪೆನಿಯೊಂದಿಗೆ ಸರ್ಕಾರಿ ಜಮೀನನ್ನು ಹಸ್ತಾಂತರಿಸುವ ಬಗ್ಗೆ ಕರಾರು ಮಾಡಲಾಯಿತು. ಈ ಕರಾರಿನನ್ವಯ ಸದರಿ ಯೋಜನೆಗೆ ಒಟ್ಟಾರೆ 20193 ಎಕರೆ ಜಮೀನು ಖಾಸಗಿ ಮತ್ತು ಸರ್ಕಾರಿ ಜಮೀನು ಬೇಕಾಗುವುದೆಂದು ಅಂದಾಜು ಮಾಡಲಾಗಿದ್ದು, ಅಗತ್ಯವೆನಿಸಿದ ಖಾಸಗಿ ಜಮೀನುಗಳಿಗೆ ಈಗಾಗಲೇ ಕೆಐಎಡಿಬಿ ಸಂಸ್ಥೆಯು ಸುಮಾರು 20935 ಎಕರೆ ಖಾಸಗಿ ಜಮೀನಿಗೆ ಸಂಬಂಧಿಸಿದಂತೆ ಪ್ರಾಥಮಿಕ ಅಧಿಸೂಚನೆಯನ್ನು ಕೆಐಎಡಿ ಕಾಯ್ದೆ ಕಲಂ 28(1)ರ ಅಡಿಯಲ್ಲಿ ದಿನಾಂಕ 30-3-04ರ ವರೆಗೆ ವಿವಿಧ ಹಂತಗಳಲ್ಲಿ ಅಧಿಸೂಚನೆಯನ್ನು ಹೊರಡಿಸಿದೆ. ಅಲ್ಲದೆ, 5688 ಎಕರೆ ಸರ್ಕಾರಿ ಜಮೀನನ್ನು ಈಗಾಗಲೇ ಕಂಪೆನಿ ವಶಕ್ಕೆ ಲೀಸ್ ಆಧಾರದ ಮೇಲೆ ಪ್ರತಿ ಎಕರೆಗೆ ಪ್ರತಿ ವರ್ಷಕ್ಕೆ ರೂ. 10.00 ರಂತೆ ನಿಗದಿಪಡಿಸಿ ಹಸ್ತಾಂತರವಾಗಿದೆ. ಯೋಜನೆಯ ಅನುಷ್ಠಾನವನ್ನು 3 ಹಂತಗಳಲ್ಲಿ ಕಾರ್ಯಗತಗೊಳಿಸಲು ಸದರಿ ಫ್ರೇಮ್‌ವರ್ಕ್ ಕರಾರಿಗೆ ಮೂರು ಬಾರಿ ಮಾರ್ಪಾಡು ಮಾಡಿ ಸಹಿ ಮಾಡಲಾಗಿದೆ. ಪ್ರಾರಂಭದಲ್ಲಿ ಯೋಜನೆಯ ಮೊದಲನೇ ಹಂತದಲ್ಲಿ

ರಾಷ್ಟ್ರೀಯ ಹೆದ್ದಾರಿ 4 ಮತ್ತು 7ಕ್ಕೆ ಸಂಪರ್ಕ ಕಲ್ಪಿಸಲು 41 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆ ಹಾಗೂ ಹೊರ ವರ್ತುಲ ರಸ್ತೆ ಮತ್ತು ನಗರ ಮಧ್ಯೆ ಸಂಪರ್ಕ ಕಲ್ಪಿಸುವ 9.1 ಕಿ.ಮೀ. ಉದ್ದದ ಲಿಂಕ್ ರಸ್ತೆ ನಿರ್ಮಿಸಲು ಅಗತ್ಯವಾದ 2568 ಎಕರೆ ಖಾಸಗಿ ಜಮೀನಿನ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಕೆಐಎಡಿಬಿ ಈಗಾಗಲೇ ಅಂತಿಮ ಅಧಿಸೂಚನೆಯನ್ನು ಕಲಂ 28(4)ರನ್ವಯ ಹೊರಡಿಸಿರುತ್ತದೆ. ಯೋಜನೆಯ ಮೊದಲ ಹಂತದ ಕಾಮಗಾರಿಗಳಾದ 41 ಕಿ.ಮೀ. ಉದ್ದದ ವರ್ತುಲ ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ಮೊದಲನೇ 6.50 ಕಿ.ಮೀ. ಕಾಮಗಾರಿಯನ್ನು ದಿನಾಂಕ 5-2-04 ರಂದು ಪ್ರಾರಂಭಿಸಲಾಗಿದ್ದು, ಇದು ಪ್ರಗತಿಯಲ್ಲಿರುತ್ತದೆ. ಕಂಪೆನಿಯ ಯೋಜನೆಯ ಪ್ರಥಮದ ಹಂತದ ಆರ್ಥಿಕ ಅಂತ್ಯವನ್ನು ದಿನಾಂಕ 29-3-04ರಂದು ತಲುಪಿರುತ್ತೆದೆ.

ಪ್ರಥಮ ಹಂತದ, ಮೊದಲನೆ ಸ್ಟೇಜ್ ಕಾಮಗಾರಿಯನ್ನು ಸಂಸ್ಥೆಯ ಎರಡು ವರ್ಷಗಲಲ್ಲಿ ಪೂರ್ಣಗೊಳಿಸಬೇಕಾಗಿದೆ. ಪ್ರಥಮ ಹಂತದಲ್ಲಿ ಬಾಕಿ ಕಾಮಗಾರಿಗಳಾದ 12 ಕಿ.ಮೀ. ವೇಗದ ಹೆದ್ದಾರಿ (ಬಿಡದಿ ಬಳಿ) ಮತ್ತು ಒಂದನೇ ಉಪ ನಗರ (ಬಿಡದಿ-ಕೆಂಗೇರಿ) ವನ್ನು ನಿರ್ಮಾಣ ಮಾಡಲು ಸರ್ಕಾರಕ್ಕೆ ಅಗತ್ಯವೆನಿಸಿದ 2,317 ಎಕರೆ ಜಮೀನಿಗೆ ಕಂಪೆನಿಯು ಕೆಐಎಡಿಬಿಗೆ ಬೇಡಿಕೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಲೋಕೋಪಯೋಗಿ ಸಚಿವಾಲಯದಲ್ಲಿ ಪರಿಶೀಲನೆಯಲ್ಲಿರುತ್ತದೆ. ಈ ಮಧ್ಯೆ ಈ ಯೋಜನೆಗಾಗಿ ಸರ್ಕಾರದ ಭೂ ಸ್ವಾಧೀನತೆಯನ್ನು ಪ್ರಶ್ನಿಸಿ ಭೂ ಮಾಲೀಕರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದು, ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತವೆ. ಈ ಸದನದ ಸನ್ಮಾನ್ಯ ಸದಸ್ಯರು ಈ ಯೋಜನೆ ಅನುಷ್ಠಾನದ ಬಗ್ಗೆ ಚರ್ಚಿಸಿ, ಹಲವಾರು ವಿಷಯಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಅಲ್ಲದೆ, ಈ ಯೋಜನೆಯ ಅನುಷ್ಠಾನದ ಕಾಲದಲ್ಲಿ ಯೋಜನೆಯ ಸ್ವರೂಪವು ಬದಲಾವಣೆಯಾಗಿದೆ, ಈ ಬಗ್ಗೆ ವಿವರವಾದ ತನಿಖೆ ಅಗತ್ಯ ಎಂಬ ಅಭಿಪ್ರಾಯವನ್ನೂ ಕೂಡ ಅವರು ವ್ಯಕ್ತಪಡಿಸಿರುತ್ತಾರೆ. ಈ ಯೋಜನೆಯ ಅನುಷ್ಠಾನದಲ್ಲಿ ಸರ್ಕಾರದ ಹಲವಾರು ಇಲಾಖೆಗಳು ಭಾಗಿಗಳಾಗಿದ್ದು, ಈ ವಿವಿಧ ಇಲಾಖೆಗಳಿಂದ ಮಾಹಿತಿ, ವರದಿಯನ್ನು ಪಡೆಯಬೇಕಾಗಿದೆ. ಅಲ್ಲದೆ, ಈ ಯೋಜನೆ ಅನುಷ್ಠಾನವನ್ನು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ಇದ್ದು, ಈ ಸಮಿತಿಯೂ ಸಹ ಸದನದ ಹೊರಗೆ ಮತ್ತು ಒಳಗೆ ಎತ್ತಿರುವ ಹಲವಾರು ವಿಷಯಗಳನ್ನು ಪರಿಶೀಲಿಸಿ ನಿರ್ಣಯಿಸಬೇಕಾಗುತ್ತದೆ. ಸರ್ಕಾರ ಈ ಯೋಜನೆಯಲ್ಲಿ ರಸ್ತೆ ನಿರ್ಮಾಣಕ್ಕೆ ರೂಪಿಸಿರುವ ಮೂಲ ಫ್ರೇಮ್‌ವರ್ಕ್ ಆಗ್ರಿಮೆಂಟ್‌ನಲ್ಲಿ ಸೂಚಿಸಿರುವಂತೆ ಅಗತ್ಯವಿರುವ ಜಮೀನನ್ನು ಮಾತ್ರ ಒದಗಿಸಲು ಬದ್ಧರಾಗಿರುತ್ತದೆ. ಮಾನ್ಯ ಸದಸ್ಯರು ಎತ್ತಿರುವ ಹಲವಾರು ವಿಷಯಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ಅಂತಿಮ ತೀರ್ಮಾನ ತೆಗೆದುಕೊಳ್ಳಲು ಸರ್ಕಾರಕ್ಕೆ

ಕಾಲಾವಕಾಶ ಬೇಕಾಗಿರುತ್ತದೆ. ಅದಲ್ಲದೆ ಇವತ್ತಿನ ದಿವಸ ಮಾತನಾಡುವಂಥ ಸಂದರ್ಭದಲ್ಲಿ 1995ರಲ್ಲಿ ಮಾನ್ಯ ದೇವೇಗೌಡರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭಧಲ್ಲಿ ಈ 20,000 ಎಕರೆ ಜಮೀನನ್ನು ಕೊಟ್ಟಿದ್ದರು ಎಂದು ಹೇಳಿದ್ದಾರೆ. ಮಾನ್ಯ ದೇವೇಗೌಡರವರು ಇದ್ದಂಥ ಕಾಲದಲ್ಲಿ ಯಾವುದೇ ಜಮೀನನ್ನು ಕೊಟ್ಟಿಲ್ಲ ಎಂದು ನಾನು ಸದನದ ಮುಖೇನ ತಿಳಿಸಬೇಕಾಗುತ್ತದೆ. ಇದು ನನ್ನದೊಂದೇ ಇಲಾಖೆಗೆ ಬರುವುದಿಲ್ಲ, ಇದು ಇಂಡಸ್ಟ್ರೀ ಇಲಾಖೆಯಿಂದಲೂ ನಡೆದಿದೆ, ಕೆಲವು ನಾಲ್ಕಾರು ಇಲಾಖೆಗಳು ಇದರಲ್ಲಿ ಭಾಗಿಯಾಗಿರುವುದರಿಂದ, ಸನ್ಮಾನ್ಯ ಕೈಗಾರಿಕಾ ಸಚಿವರು ಇದರ ಬಗ್ಗೆ ಹೇಳಿಕೆ ಕೊಡುತ್ತಾರೆ, ನಂತರ ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಕೂಲಂಕುಷವಾಗಿ ಹೇಳುತ್ತಾರೆ, ಏಕೆಂದರೆ, ನಮ್ಮ ಸರ್ಕಾರ ರೈತರ ಪರವಾಗಿ ಬದ್ಧವಾಗಿದ್ದೇವೆಯೇ ಹೊರತು ಈ ಯೋಜನೆಯ ರಸ್ತೆ, ನಿರ್ಮಾಣದ ಮೂಲ ಉದ್ದೇಶ ಏನು ಇದೆ ಫ್ರೇಮ್‌ವರ್ಕ್ಸ್ ಅದಕ್ಕೆ ನಾವು ಬದ್ಧವಾಗಿದ್ದೇವೆ, ಇದರಲ್ಲಿ ಯಾವುದೇ ರೀತಿಯ ಭ್ರಷ್ಟಚಾರಕ್ಕೆ ನಾವು ಎಡೆ ಕೊಡುವುದಿಲ್ಲವೆಂದು ಹೇಳಿ ಈ ಸದನದಲ್ಲಿ ನನ್ನ ಅಭಿಪ್ರಾಯವನ್ನು ಮಂಡಿಸುತ್ತಿದ್ದೇನೆ.

**ಅಧ್ಯಕ್ಷರು** : ಮಾನ್ಯ ಕಂದಾಯ ಸಚಿವರು.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಬ್ಯಾಡ್ ಕೇಸ್‌ನ್ನು ಹೇಗೆ ವಕಾಲತ್ತು ಮಾಡುತ್ತಾರೆ ನೋಡೋಣ.

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** : ತಾವು ಏಕೆ ಹಾಗೆ ಭಾವಿಸಿಕೊಳ್ಳುತ್ತೀರಿ? ನಾವು ಲಾಯರ್ ಅಂದರೆ, ಸತ್ಯದ ಪರವಾಗಿಯೇ ಮಾತನಾಡುತ್ತೇವೆ

**ಶ್ರೀ ವಾಟಾಳ್ ನಾಗರಾಜ್** : ಎಲ್ಲಿದೆ ಸತ್ಯ?

**ಶ್ರೀ ಜೆ.ಸಿ. ಮಾಧುಸ್ವಾಮಿ** : ಕೆಲವೊಂದು ಸಾರಿ ಅ ಎನ್ನುವ ಅಕ್ಷರ ಸೈಲೆಂಟ್ ಆಗುತ್ತೆ, ನಂತರ ಎನ್ನುತ್ತೇವೆ ಅದು ಅನಂತರ ಎಂದು ಇರಬೇಕು, ಸತ್ಯಕ್ಕೆ "ಅ" ನಾವು ಸೇರಿಸಿಕೊಳ್ಳುತ್ತೇವೆ ಅಷ್ಟೇ. ಆ ಸತ್ಯ ಎನ್ನುವುದಕ್ಕೆ "ಅ" ಸೇರಿಸಿಕೊಳ್ಳುತ್ತೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ** : ಮಾನ್ಯ ಪ್ರಕಾಶ್‌ರವರು ಹೇಳಿರುವುದು ಬಾರಿ ಸತ್ಯ. ಆದರೆ ಇದು ಸತ್ಯವಲ್ಲ, ಅದುದರಿಂದ ಸತ್ಯದ ಪರವಾಗಿ ಅವರು ಮಾತನಾಡುವ ಪ್ರಶ್ನೆಯೇ ಇಲ್ಲ.

**ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** : ಮಾನ್ಯ ಅಧ್ಯಕ್ಷರೆ, ತಾವು ಅರ್ಧ ಸತ್ಯದ ಮಾತನ್ನು ಆಡುತ್ತಿದ್ದೀರಿ, ಯಾವಾಗಲೂ ಕೂಡ ಪೂರ್ಣ ಸತ್ಯ ಅದು ಒಮ್ಮೆಗೆ ಒಪ್ಪಿಗೆಯಾಗುವುದಿಲ್ಲ. ಅದು ಜನಪ್ರಿಯವಾಗಬೇಕಾಗಿದ್ದರೆ ಅರ್ಧ ಸತ್ಯಗಳನ್ನು ಹೇಳಿದಾಗ ಅದು ಜನಪ್ರಿಯವಾಗುತ್ತದೆ. ಆದ್ದರಿಂದ ಇಡೀ ಒಂದು ಪರಿಕಲ್ಪನೆಯನ್ನು ಅಭಿವೃದ್ಧಿಯ ಪರವಾಗಿ ಕೆಲಸ ಮಾಡಬೇಕೆಂಬ ವಿಚಾರದಲ್ಲಿ ಎಲ್ಲರಿಗೂ ಒಮ್ಮತವಿದೆ. ಯಾರೂ ಇದನ್ನು ವಿರೋಧ ಮಾಡಬಾರದು ಎನ್ನತಕ್ಕಂತಹದ್ದರ ಬಗ್ಗೆಯೂ ಕೂಡ ಒಮ್ಮತವಿದೆ. ಇನ್ನು ಮೂಲಭೂತವಾಗಿ ತಾವು ಎತ್ತಿರತಕ್ಕಂತಹದ್ದು ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟಿರುವಂತಹ

ವಿಚಾರಗಳ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಮೊದಲನೆಯದು, ಈ BMIC Bangalore-Mysore Corrider Project ವಿಚಾರದಲ್ಲಿ ಕೆಲವು ಅನ್ಯಾಯಗಳಾಗಿದೆ, ಅಧಿಕಾರದ ದುರುಪಯೋಗವಾಗಿದೆ, ರೈತರಿಗೆ ಅನ್ಯಾಯವಾಗಿದೆ ಮೊದಲಾದಂತಹ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇನ್ನು ಎರಡನೆಯದಾಗಿ ಹೇಳುವುದಾದರೆ ನೀವು ಕೆ.ಐ.ಎ.ಡಿ.ಬಿ. ಅಂದರೆ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯ ಮೂಲಕ ನೀವು ಯಾವುದಾದರೂ ಕೂಡ ಡಿನೋಟಿಫೈ ಮಾಡಿರತಕ್ಕ ಪ್ರಕರಣದ ಮೂಲಕವಾಗಿ ಅನೇಕ ತಪ್ಪುಗಳನ್ನು ಎಸಗಿದ್ದೀರಿ ಎಂಬ ಮಾತನ್ನು ಹೇಳಿದ್ದೀರಿ. ಇನ್ನು ಮೂರನೆಯದಾಗಿ ಬಿಡಿಎನಲ್ಲಿ ಆಗಿರತಕ್ಕಂತಹ ಪ್ರಕರಣಗಳಲ್ಲಿ ನೀವು ಡಿನೋಟಿಫೈ ಮಾಡುವುದರ ಮೂಲಕ ಸರ್ಕಾರಕ್ಕೆ ಮತ್ತು ಭೂಮಾಲೀಕರಿಗೆ ಅನ್ಯಾಯ ಮಾಡಿದ್ದೀರಿ ಅದರಲ್ಲಿಯೂ ಕೂಡ ಅನ್ಯಾಯವಾಗಿದೆ, ಕಾನೂನು ಬಾಹಿರವಾಗಿರತಕ್ಕಂತಹ ಚಟುವಟಿಕೆಗಳು ಆಗಿದೆ ಎನ್ನತಕ್ಕಂತಹ ವಿಚಾರಗಳನ್ನು ಮಾನ್ಯ ಎಲ್ಲಾ ಹಿರಿಯ ಸದಸ್ಯರುಗಳು ಇಲ್ಲಿ ಆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾವು ಸ್ವಾಗತ ಮಾಡುತ್ತೇವೆ, ಯಾವಾಗಲೂ ಒಂದು ಸರ್ಕಾರದ ನಿರ್ಣಯ ಅದು ಸಂಪೂರ್ಣವಾಗಿ ಪರಾಮರ್ಶೆಗೆ ಒಳಪಡಬೇಕು ಎನ್ನತಕ್ಕಂಥದ್ದರ ಬಗ್ಗೆಯೇ ಸದನಗಳು ಇರುವುದು. ಆ ವಿಚಾರವೇ ಪ್ರಜಾಪ್ರಭುತ್ವದ ಮೂಲಧರ್ಮವಾಗಿದೆ. ಆ ಕಾರಣಕ್ಕಾಗಿ ನೀವು ಎತ್ತಿರುವಂತಹ ಎಲ್ಲಾ ಪ್ರಶ್ನೆಗಳು ನೀವು ಮಾತನಾಡಿರತಕ್ಕಂತಹ ಎಲ್ಲಾ ವಿಷಯಗಳು ಅವು ಅಲ್ಲಿ ಏನಾದರೂ ಹಾಕಿ ತಳ್ಳಬೇಕಾಗಿರುವಂತಹವು, ನಿರ್ಲಕ್ಷಿಸಬೇಕು ಎಂದು ಹೇಳುವಂತಹ ವಿಚಾರಗಳಲ್ಲ. ಆ ಕಾರಣಕ್ಕಾಗಿಯೇ ನಾವು ಮತ್ತು ಮಾನ್ಯ ದೇವೇಗೌಡರವರು ಇದು ನೋಡಿ ಹೇಗೆ ಕಾರ್ಯ್ಯಾಕಾರಣಿಗಳು ಆಗುತ್ತವೆ, ಕಾರ್ಯಾಕಾರಣವೆಂದರೆ, ಸನ್ಮಾನ್ಯ ದೇವೇಗೌಡರವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಇದು ಅತ್ಯಂತ ಅವಶ್ಯಕತೆ ಆಗಿರತಕ್ಕಂತಹ ಒಂದು ಹೆದ್ದಾರಿಯಾಗಬೇಕು, ವೇಗದಲ್ಲಿ ಹೋಗಿ ಬೆಂಗಳೂರು-ಮೈಸೂರು ಮುಟ್ಟತಕ್ಕಂತಹ ಅದರ ಮೂಲಕವಾಗಿ ಸಮಗ್ರ ಅಭಿವೃದ್ಧಿ ಯಾಗಬೇಕು ಎಂಬ ಪರಿಕಲ್ಪನೆಯ ಮೂಲಕವಾಗಿ Mou ಗೆ ಸಹಿಯನ್ನು ಮಾಡುವುದಾಗಿದೆ. ಮಾನ್ಯ ದೇವೇಗೌಡರವರೇ, ರಾಜ್ಯಪಾಲರವರಿಗೆ ಇಲ್ಲಿ ಅನ್ಯಾಯವಾಗಿದ್ದರೆ ಈ ಒಂದು ಯೋಜನೆಯಲ್ಲಿ ಬೇರೆ ಬೇರೆ ಅಯಾಮಗಳನ್ನು ಮತ್ತು ಸ್ವರೂಪಗಳನ್ನು ತೆಗೆದುಕೊಂಡು ಅದರಲ್ಲಿ ಏನಾದರೂ ತಪ್ಪುಗಳಾಗಿದ್ದರೆ ಅದರ ಬಗ್ಗೆ ನೀವು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ಒತ್ತಾಯವನ್ನು ಮಾಡಿರತಕ್ಕಂತಹದ್ದು. ಇಷ್ಟರ ಮಟ್ಟಿಗೆ ಮಾನ್ಯ ಯಡಿಯೂರಪ್ಪನವರು ನಮ್ಮನ್ನು ಅಭಿನಂದಿಸುತ್ತಾರೆಂದು ನಾನು ಭಾವಿಸುತ್ತೇನೆ. ಉಳಿದಂತಹ ಸದಸ್ಯರುಗಳೂ ಕೂಡ ಈ ವಿಚಾರದಲ್ಲಿ ಅಭಿನಂದನೆಯನ್ನು ಸಲ್ಲಿಸಿದರು. ಆದರೆ ಇಲ್ಲಿ ಬಂದಿರತಕ್ಕಂತಹ ಪ್ರಶ್ನೆ ಏನೆಂದರೆ, ಪ್ರಸ್ತುತ ವಾಗಿರುವುದು ನಮ್ಮ ಕಂದಾಯ ಇಲಾಖೆಗೆ ಸಂಬಂಧಪಟ್ಟಂತಹ ವಿಚಾರದಲ್ಲಿ ಕೆಲವು ವಿಷಯಗಳನ್ನು ಕೆಲವು

ಸತ್ಯಗಳನ್ನು ಇಲ್ಲಿ ಹೇಳಬೇಕಾಗಿರುವುದು ಇದೆ. ಇಲ್ಲಿ ನಾವು 1499 ಎಕರೆಯನ್ನು ಪದೇ ಪದೇ ಮಾನ್ಯ ರಾಜೇಂದ್ರನ್‌ರವರು ಹಾಗೂ ಎಲ್ಲಾ ಮಾನ್ಯ ಸದಸ್ಯರುಗಳು ಹೇಳಿದರು. 10 ರೂಪಾಯಿಗಳಿಗೆ ಒಂದು ಎಕರೆಯಂತೆ ತಾವು ಲೀಸ್‌ನ್ನು ಕೊಟ್ಟಿದ್ದೀರಿ ಎಂದು ಇದು ಯಾರೂ ಪರಭಾರೆಯಾಗಿರುವುದಲ್ಲ. ಭೂಮಿಯನ್ನು ಯಾರೂ ಮಾರಾಟ ಮಾಡಿಲ್ಲ. ಈ ಕಂಪನಿಗೆ ಮಾರಾಟ ಮಾಡದೆಯೇ ಲೀಸ್ ಆಗಿರುವುದು ಒಂದು ಎಕರೆಗೆ 10 ರೂಗೆ ಕೊಟ್ಟಿದ್ದೇವೆ. ಅದು ನಿಜ, ಯಾವುದಾದರೂ ಸಂದರ್ಭದಲ್ಲಿ ನಾವು ಯಾವುದಾದರೊಂದು ಶಿಕ್ಷಣ ಸಂಸ್ಥೆಗಳಿಗೆ ಅಥವಾ ಉಪಯುಕ್ತವಾಗಿರುವಂತಹ ಅನೇಕ ವಿಚಾರಗಳಿಗೆ 1 ರೂ ಮತ್ತು 2 ರೂಳಿಗೆ ಕೊಟ್ಟಿರುವಂತಹ ಉದಾಹರಣೆಗಳು ಇವೆ. ಇಲ್ಲಿ ತಾವುಗಳು ಗಮನಿಸಬೇಕಾಗಿರುವಂತಹ ಅಂಶ ತಾವು ಒಬ್ಬರೇ ಹೋಗಿರಬಹುದು, ಅದು ಬೇರೆ ವಿಚಾರವಾಗಿದೆ. ಅದರೆ ಅವತ್ತಿನ ಸರ್ಕಾರ ನಿರ್ಧಾರನವನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ 1499 ಎಕರೆಯನ್ನು 10 ರೂಗಳಿಗೆ ಲೀಸ್ ಆಗಿ ಕೊಟ್ಟಾಗ ಏನೋ ಅಲ್ಲಿ ಕಟ್ಟಿ, ನಿರ್ವಹಿಸಿ ನಂತರ ಸರ್ಕಾರಕ್ಕೆ ಬಿಟ್ಟು ಕೊಡಬೇಕಾದಂತಹದ್ದು Boot Build Operate and Transfer ಏನಿದೆ, ಆ ತರಹದ ಯೋಜನೆಯ ಕೆಳಗಡೆ ಮತ್ತೆ ಅದೇ ಸರ್ಕಾರಕ್ಕೆ ವಾಪಸ್ಸು ಬರುತ್ತದೆ. ಒಮ್ಮೆ ಏನಾದರೂ ನಾವು ಅವರಿಗೆ ಖರೀದಿಯಾಗಿ ಮಾರಿಕೊಟ್ಟರೆ 10 ರೂಗೆ ಒಂದು ಎಕರೆ ಜಾಗವನ್ನು ಕೊಟ್ಟಿದ್ದೀರಲ್ಲಾ ಎಂಬ ಅಪವಾದ ನಮ್ಮ ಮೇಲೆ ಬರಬಹುದಾಗಿತ್ತು. ಬಹಳ ಕಡಿಮೆ ಬೆಲೆಗೆ ಮಾರುವುದರ ಮೂಲಕವಾಗಿ ನೀವು ಸರ್ಕಾರಕ್ಕೆ ಅನಾವಶ್ಯಕವಾದಂತಹ ನಷ್ಟವನ್ನುಂಟು ಮಾಡಿ ಮತ್ತೊಂದು ಕಂಪನಿಗೋ ಅಥವಾ ವ್ಯಕ್ತಿಗೋ ಅನಾವಶ್ಯಕವಾದಂತಹ ಲಾಭ ಮಾಡುವಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. A wrongful gain and a wrongful loss. ಅದು culpability. ಹಾಗಾದರೆ ಇಲ್ಲಿರತಕ್ಕಂತಹದ್ದು ನಾವು ಕೊಡತಕ್ಕಂತಹದ್ದು ಕೇವಲ 30 ವರ್ಷಗಳ ಒಂದು ಅಗ್ರಿಮೆಂಟ್‌ನ ಪ್ರಕಾರ ಆ ಒಂದು ರಸ್ತೆಯನ್ನು ಮಾಡಿ, ಅದನ್ನು ನಿರ್ವಹಿಸಿ ಅದು ನಿರ್ವಹಣೆಯಾದ ಸಂದರ್ಭದಲ್ಲಿ ಅದನ್ನು ಮತ್ತೆ ವಾಪಸ್ಸು ಕೊಡುವಾಗ ಆ ಭೂಮಿಯನ್ನು ವಾಪಸ್ಸು ಕೊಡಬೇಕೆಂದು ಒಪ್ಪಂದ ಆಗಿರುವಂತಹ ಕಾರಣಕ್ಕಾಗಿ 10 ರೂಪಾಯಿಗಳು ಒಂದು national figure ಎಂದು ತಾವು ಭಾವಿಸಿಕೊಳ್ಳಬಹುದು. ಅದೇನು ಲೀಸ್‌ನ ಮೊತ್ತ ಹೆಚ್ಚಿರಬಹುದು ಏಕೆ ಅದಕ್ಕೆ ಅಂಟಿ ಕೊಂಡಿದ್ದೀರಿ, ಅದರ ಹಿನ್ನೆಲೆಯಲ್ಲಿ ಬೇರೆ ಬೇರೆ ಉದ್ದೇಶಗಳು ಏನಿವೆ ಎಂಬುದನ್ನು ನೀವು ತನಿಖೆಯನ್ನು ಮಾಡುವ ಬಗ್ಗೆ ಎಲ್ಲಾ ತರಹದ ಅಧಿಕಾರ ನಿಮಗೆ ಇದೆ. ಆದರೆ ಇದು ಒಂದು ಪಾರದರ್ಶಕವಾಗಿ 10 ರೂಪಾಯಿಗಳಿಗೆ ಕೊಡತಕ್ಕಂತಹದ್ದು 30 ವರ್ಷಗಳ ನಂತರ ಅದು ಪುನ: ವಾಪಸ್ಸು ಬರಬೇಕು ಎನ್ನುವಂತಹ ಷರತ್ತಿಗೊಳಪಟ್ಟಿರುವ ಕಾರಣದಿಂದ ಇದರಲ್ಲಿ ಯಾವುದೇ ಒಂದು ಅನ್ಯಾಯ ಆಗಿದೆ ಎಂದು ನಾನು ಪರಿಭಾವಿಸುವುದಿಲ್ಲ.

ಆದರೆ ನಿಮ್ಮ ಗ್ರಹಿಕೆಗಳಲ್ಲಿ ನೀವೇನಾದರೂ ಕೂಡ ತಿಳಿದುಕೊಳ್ಳಬಹುದು. ಉಳಿದಿರತಕ್ಕಂತಹ 3500 ಎಕರೆ ಏನು ಇದೆ, ಅದನ್ನು ನಾವು ಬಿಎಂಐಸಿಗೆ ಕೊಡುವುದು ಏನಿದೆ, ಅವರಿಗೆ ನಾವು ಕೊಡುವುದರಲ್ಲಿ ಮೊದಲು ಅವರು ಕೇಳಿರುವುದು ಏಳು ಉಪನಗರಗಳನ್ನು ಕಟ್ಟಬೇಕು ಎಂದು ಅವರ ಉದ್ದೇಶ ಅದರಲ್ಲಿ ಬರೆದಿರತಕ್ಕಂತಹದ್ದು ಮತ್ತು ಸರ್ಕಾರ ತೆಗೆದುಕೊಂಡಿರುವಂತಹ ನಿರ್ಣಯದಲ್ಲಿ ಈ ಒಂದು ಹೆದ್ದಾರಿಯಲ್ಲಿ ಬರತಕ್ಕಂತಹ ಏನು ಹಣವನ್ನು ವಸೂಲಿ ಮಾಡುತ್ತೇವೆ (ಟೋಲ್‌ಗೇಟ್‌ನಲ್ಲಿ) ಅದರ ಮೂಲಕವಾಗಿ ಇಡೀ ವೆಚ್ಚವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಆ ವೆಚ್ಚವನ್ನು ಭರಿಸುವುದಕ್ಕೆ ಮತ್ತೆ ನಾವು ನಿಮಗೆ ವಾಪಸ್ಸು ಕೊಡಬೇಕಾಗಿದ್ದರೆ ಅದಕ್ಕಾಗಿ ನಮಗೆ ಏಳು ಉಪನಗರಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಆ ಮೂಲಕವಾಗಿ ನಾವು ಇದನ್ನು ನಿರ್ವಹಿಸಬಹುದು, ಮತ್ತು ಈ ರಸ್ತೆಯನ್ನು ನಿರ್ಮಾಣ ಮಾಡಬಹುದು ಎನ್ನುವಂತಹ ಉದ್ದೇಶದ ಮೂಲಕ ಬಂದಂಥ ಆ ಯೋಜನೆಯನ್ನು ಪರಾಮರ್ಶಿಸಿ ಏಳು ಉಪನಗರಗಳನ್ನು ಕಟ್ಟಬೇಕಾದಂತಹ ಅಗತ್ಯವಿದೆ, ಐದು ನಗರಗಳನ್ನು ಕಟ್ಟಿದರೆ ಸಾಕು ಎನ್ನುವಂತಹ ನಿರ್ಧಾರಕ್ಕೆ ಬಂದೆವು. ಆ ಐದು ಉಪ ನಗರಗಳನ್ನು ಕಟ್ಟಬೇಕಾದಂಥ ಪರಿಕಲ್ಪನೆಗಳು ಏನಿವೆ, ಇವತ್ತು ನಾವು ಕೆಂಗೇರಿ ಸ್ಯಾಟಿಲೈಟ್ ಎಂದು ಹೇಳುತ್ತೇವೆ, ಸ್ಯಾಟಿಲೈಟ್ ಟೌನ್‌ಶಿಪ್ ಎಂದು ಹೇಳುತ್ತೇವೆ, ಆ ಉಪನಗರಗಳ ಪರಿಕಲ್ಪನೆಯನ್ನು ಮಾಡಿಕೊಂಡಿರುವುದರಲ್ಲಿ ಮೂಲ ಉದ್ದೇಶ ಇಲ್ಲಿ ಜನದಟ್ಟಣೆ ಯಾಗಬಾರದು ತನ್ಮೂಲಕವಾಗಿ ಬೆಂಗಳೂರಿನಲ್ಲಿ ವಾಸಿಸುವಂತಹ ಜನಗಳಿಗೆ ಎಲ್ಲಾ ತರಹದ ಅನಾನುಕೂಲಗಳು ಆಗಬಾರದು ಎನ್ನುವಂತಹ ಕಾರಣಕ್ಕಾಗಿ ಉಪನಗರಗಳ ಪರಿಕಲ್ಪನೆಗಳು ಬಂದಿದೆ. ಅದಕ್ಕಾಗಿ 3500 ಎಕರೆಗಳ ಜಾಗವನ್ನು ಕೊಡತಕ್ಕಂಥದ್ದು, ಅದನ್ನು 1999ರ ನಾವು ಮಾರ್ಗಸೂಚಿ ದರಗಳೆಂದು ಏನು ನಿರ್ಧಾರ ಮಾಡಿದ್ದೇವೆ ಗೈಡೆನ್ಸ್ ವ್ಯಾಲ್ಯೂ ಎಂದು ಹೇಳಿ ಅದರ ಪ್ರಕಾರವಾಗಿ ಕೊಡಬೇಕೆಂದು ನಿರ್ಧಾರವಾಗಿದೆ. ಆದ್ದರಿಂದ ಅವರಿಗೆ ಸಂಪೂರ್ಣವಾಗಿ ಮುಕ್ಕಟೆಯಾಗಿ ಕೊಟ್ಟಿರುವುದಿಲ್ಲ. ಈ ಲೀಸ್ ಕೊಟ್ಟಿರುವುದು 10 ರೂಪಾಯಿಗೆ ನಾವು ಕೊಟ್ಟಿದ್ದೇವೆ ಅದು ವಾಪಸ್ಸು ಪುನ: ಬರಬೇಕು. 3500 ಎಕರೆ ಏನು ಕೊಡುವುದು ಏನಿದೆ, ಅದರಲ್ಲಿ 1999ರಲ್ಲಿರತಕ್ಕಂತಹ ಗೈಡ್‌ಲೈನ್ಸ್ ವ್ಯಾಲ್ಯೂ ಪ್ರತಿ ಸಂದರ್ಭದಲ್ಲಿ ನಾವು ಏನು ಕೊಡುತ್ತೇವೆ, ಆ ಸಂದರ್ಭದಲ್ಲಿ ಏನು ಬೆಲೆ ಇದೆ, ಆ ಬೆಲೆಗೆ ವಾಪಸ್ಸು ನೀವು ಪುನ: ಕಟ್ಟಿಕೊಡಬೇಕು ಎನ್ನತಕ್ಕಂತಹ ಮಾತನ್ನು ಇದರಲ್ಲಿ ಹೇಳಿದ್ದೇವೆ. ಅವರು ಈ ಕಂಪನಿಯನ್ನು ವಿಚಾರವನ್ನು ಸರ್ಕಾರದಲ್ಲಿ ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ 7400 ಎಕರೆ ಬೇಕು ಎಂಬ ಬಗ್ಗೆ ವಿಚಾರವನ್ನು ಪ್ರಸ್ತಾಪ ಮಾಡಿದರು. ಅದನ್ನು ನಾವು ಮುಂದೆ ಕೊಡುತ್ತಾ ಕೊಡುತ್ತಾ ಹೋದಂಥ ಸಂದರ್ಭದಲ್ಲಿ ಸುಮಾರು 1712 ಎಕರೆ ಜಾಗವನ್ನು ಮೊದಲು ಕಡಿಮೆ ಮಾಡಿದ್ದೆವು. ಆದಾದ

ಮೇಲೆ 706 ಎಕರೆಯನ್ನು ಕಡಿಮೆ ಮಾಡಿ ಒಟ್ಟಿನಲ್ಲಿ 2400 ಎಕರೆಗಿಂತಲೂ ಕಡಿಮೆ ಮಾಡಿರುವುದಾಗಿದೆ. ಅದರಲ್ಲಿ 1500 ಎಕರೆಗಳು ಅಂದರೆ ಒಟ್ಟಿಗೆ ಇವತ್ತು 4982.27 ಎಕರೆ ಜಮೀನನ್ನು ಸರ್ಕಾರದ ವತಿಯಿಂದ ಬಿಎಂಐಸಿಗೆ ಕೊಡತಕ್ಕಂಥದ್ದು ಆಗಿದೆ. ಇದರಲ್ಲಿ 1500 ಎಕರೆಗಿಂತಲೂ ಕಡಿಮೆ ಭೂಮಿ ಅವರಿಗೆ ಲಭ್ಯವಾಗಬೇಕು. ಇಂತಹ ಉಪನಗರಗಳನ್ನು ಕಟ್ಟುವುದಕ್ಕಾಗಿ ಎಂದರು ಹೇಳಿ. ಆಗಿಂದಾಗ್ಗೆ ಪದೇಪದೇ ಅನೇಕ ಬಾರಿ ಈ ರಸ್ತೆಗಳು ಎಲ್ಲೆಲ್ಲಿ ಹಾದು ಹೋಗುತ್ತದೆಂಬ ವಿಚಾರದಲ್ಲಿ ಬದಲಾವಣೆಗಳು ಆಗಿವೆ. ಈ ರೀತಿ ಬದಲಾವಣೆಗಳು ಆಗುವುದರ ಮೂಲಕವಾಗಿ ಅನೇಕ ತೊಂದರೆಗಳು ಮತ್ತು ಆತಂಕಗಳು ಉಂಟಾಗಿವೆ. ಅದರಲ್ಲಿ ಯೋಜನೆಯ ರೂಪುರೇಷೆಗಳು ಬದಲಾಗಿರುವುದೂ ಇದೆ. ಈ ಯೋಜನೆಯ ರೂಪುರೇಷೆಯಲ್ಲಿ ತಾವು ಪ್ರಸ್ತಾಪ ಮಾಡಿದಂತಹ ವಿಷಯದಲ್ಲಿ 582.18 ಎಕರೆ ಭೂಮಿ ಮಂಡ್ಯದಲ್ಲಿರುವುದು ಏನಿದೆ, ಆ ಭೂಮಿಯ ಲಭ್ಯತೆ ಇಲ್ಲ, ಈ ಕಾರಣಕ್ಕಾಗಿ ಬೆಂಗಳೂರಿಗೆ, ಇಲ್ಲಿರುವಂತಹ ಭೂಮಿಯನ್ನು ಕೊಡಬೇಕು ಎನ್ನುವಂತಹ ಪ್ರಸ್ತಾಪ ಇಲ್ಲಿ ಇದೆ. ಆದರೆ ಈ ಪ್ರಸ್ತಾಪಕ್ಕೆ ಸರ್ಕಾರ ಮಾನ್ಯತೆಯನ್ನು ಕೊಟ್ಟಿಲ್ಲ. ಆ ಕಡತ ಇನ್ನೂ ಕೂಡ ನನ್ನ ಸುಪರ್ದಿನಲ್ಲೇ ಇದೆ. ಮಾನ್ಯ ಮುಖ್ಯಮಂತ್ರಿಗಳು ನಾವೆಲ್ಲರೂ ಕಲೆತು ಈ ವಿಚಾರದಲ್ಲಿ ಚರ್ಚೆ ಮಾಡುತ್ತೇವೆ. ಆ ಪ್ರಶ್ನೆ 592 ಎಕರೆ ಮಂಡ್ಯದಲ್ಲಿ ಕೊಟ್ಟಿರುವಂತಹ ಭೂಮಿಗೆ ಅಲ್ಲಿ ಲಭ್ಯತೆ ಇಲ್ಲದೆ ಇರುವಂತಹ ಕಾರಣಕ್ಕಾಗಿ, ಮತ್ತೆ ನೀವು ಬೆಂಗಳೂರು ನಗರದಲ್ಲಿ ಕೊಡಬೇಕೆನ್ನುವಂತಹ ವಾದ ಏನಿದೆ, ಇದರ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಒಪ್ಪಿಗೆಯನ್ನು ಕೊಡುವುದಕ್ಕೆ ಸಾಧ್ಯತೆಯಿಲ್ಲ. ಈ ಬಗ್ಗೆಯೂ ಕೂಡ ಚರ್ಚೆಯಾಗಿದೆ. ಅದು ಮಾತಾಗಿದೆ. ಬೆಂಗಳೂರಿನ ಭೂಮಿ, ಮಂಡ್ಯದ ಭೂಮಿಯಲ್ಲಿ ಅಥವಾ ಬಳ್ಳಾರಿ ಭೂಮಿ ಒಂದೇ ಬೆಲೆಯಾಗಿರಲಿಕ್ಕೆ ಸಾಧ್ಯತೆ ಇಲ್ಲ. ಅಲ್ಲಿ ಅಲೈನ್‌ಮೆಂಟ್‌ಗಳನ್ನು ಪದೆಪದೇ ಬದಲಾವಣೆ ಮಾಡತಕ್ಕಂಥಾದ್ದು ಕೂಡ ಸಾಧುವಾದದ್ದು ಅಲ್ಲ. ಅದು ಒಂದು ನಕ್ಷೆಯನ್ನು ಕೊಡಬೇಕಾಗಿರತಕ್ಕಂಥದ್ದು ಇದೆ. ನಿರ್ಧಾರವಾಗಿರತಕ್ಕಂಥ ವಿಚಾರಗಳನ್ನು ಕೊಡಬೇಕಾಗುತ್ತದೆ. ಎಲ್ಲೆಲ್ಲಿ ಹಾದುಹೋಗುತ್ತದೆ ಎನ್ನತಕ್ಕಂಥ ವಿಚಾರದಲ್ಲಿ ಅವರು ಹೇಳಲೇಬೇಕಾಗುತ್ತದೆ. ಆ ಕಾರಣಕ್ಕಾಗಿ ನಮ್ಮ ಮುಂದಿರತಕ್ಕಂಥ ಈ ಒಂದು ಅವರ ಬೇಡಿಕೆಯನ್ನು ಸರ್ಕಾರ ಸಂಪೂರ್ಣವಾದಂಥ ಎಚ್ಚರಿಕೆಯಿಂದ, ರಾಜ್ಯದ ಹಿತದೃಷ್ಟಿಯಿಂದ ಭೂಮಿಯನ್ನು ಉಳಿಸಿಕೊಳ್ಳುವ ಮೂಲಕವಾಗಿ ಹಿಂದೆ ಹಲವು ಬಾರಿ ಇಲ್ಲಿ ಪ್ರಸ್ತಾಪ ಮಾಡುವಾಗಲೂ ಕೂಡ ನಾವು ಹೇಳಿದ್ದೇವೆ. ನಾವು ಏನು ಈ ಭೂಮಿಯನ್ನು, ಪೃಥ್ವಿಯನ್ನು, ಜಾಗವನ್ನು ಪಡೆದಿದ್ದೇವೆ, ಇದು ನಮ್ಮ ಈ ತಲೆಮಾರಿನ ಬಳುವಳಿ ಅಲ್ಲ. ಇದು ಮುಂದಿನ ತಲೆಮಾರಿಗೆ ನಾವು ಸಲ್ಲಿಸಲೇಬೇಕಾಗಿರತಕ್ಕಂಥ ಒಂದು ಋಣ. ನಾವು ಮುಂದಿನ ತಲೆಮಾರಿಗೆ ಒಂದು ಇಂಚು ಭೂಮಿಯನ್ನೂ ಬಿಡಲಾರದಂತೆ ಅದನ್ನು ಏನು ಮಾಡುತ್ತಿದ್ದೇವೆ ಅದರ ಸಂಪೂರ್ಣ

ಜವಾಬ್ದಾರಿಯನ್ನು ನಾವೆಲ್ಲರೂ ಹೊರಬೇಕಾಗುತ್ತದೆ. ಆ ಋಣದ ಪರಿಕಲ್ಪನೆಯನ್ನು ಇಟ್ಟುಕೊಂಡೇ ಈ ಸರ್ಕಾರ ಇವತ್ತಿನ ತಲೆಮಾರಿಗೆ, ನಮ್ಮನ್ನು ಆಯ್ಕೆ ಮಾಡಿದಂಥ ಐದು ವರ್ಷದ ಮತದಾರನಿಗೆ ಮಾತ್ರ ಜವಾಬ್ದಾರಿ ಅಲ್ಲ, ಅದು ಮುಂದಿನ ತಲೆಮಾರಿಗೂ ಕೂಡ ಜವಾಬ್ದಾರರಾಗಿ ಇರಬೇಕಾಗಿರತಕ್ಕಂಥ ಕಾರಣದಿಂದ ಸಮಗ್ರ ದೃಷ್ಟಿಕೋನದಿಂದ ಈ 532 ಎಕರೆಯನ್ನು ಮಂಡ್ಯಕ್ಕೆ ಕೊಡಬೇಕಾಗಿರತಕ್ಕಂಥಾದ್ದರ ಪ್ರಸ್ತಾಪ ನಮ್ಮ ಮುಂದಿದೆ. ಅದನ್ನು ಸಂಪೂರ್ಣವಾದ ಎಚ್ಚರಿಕೆ ಮತ್ತು ಸಂಪೂರ್ಣವಾದಂಥ ಜವಾಬ್ದಾರಿಯಿಂದ ಅದನ್ನು ನಾವು ನಿರ್ವಹಿಸುತ್ತೇವೆ. ತಾವು ಯಾವುದೇ ಆತಂಕ ಪಡಬೇಕಾಗಿರತಕ್ಕಂಥಾದ್ದು ಇಲ್ಲ. ಮಾನ್ಯ ಧರ್ಮಸಿಂಗ್ ಅವರ ನೇತೃತ್ವದಲ್ಲಿ ಇರತಕ್ಕಂಥ ಈ ಸರ್ಕಾರ ಯಾವುದೇ ತಪ್ಪನ್ನು ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಡುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸದನದ ಮುಂದೆ ನಾನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ.

ಹಾಗೆಯೇ ಮಾನ್ಯ ಅಧ್ಯಕ್ಷರೇ, 1042.21 ಎಕರೆ ಈ ಸರ್ಕಾರಿ ಭೂಮಿಯನ್ನು ಬಿ.ಎಂ.ಐ.ಸಿ. ಗೆ ಕೊಡಬೇಕು ಎನ್ನತಕ್ಕಂಥ ವಿಚಾರದ ಪ್ರಸ್ತಾಪ ಕೂಡ ನಮ್ಮ ಮುಂದಿದೆ. ಇದರ ಬಗ್ಗೆ ಕೂಡ ಸರ್ಕಾರ ನಿರ್ಧಾರ ಮಾಡಿಲ್ಲ. ಆ ಕಡತ ಕೂಡ ನಮ್ಮ ಮುಂದಿದೆ. ಕಂದಾಯ ಇಲಾಖೆ ಅದನ್ನು ಸಂಪೂರ್ಣವಾಗಿ ಪರಿಶೀಲಿಸುತ್ತಿದೆ. ಯಾವುದೇ ಕಾರಣಕ್ಕೂ ಕೂಡ ಅನ್ಯಾಯವಾಗದಂಥ ರೀತಿಯಲ್ಲಿ ಅದು ಎಷ್ಟು ಸೀಮಿತವಾದ ಉದ್ದೇಶ ಈ ಯೋಜನೆಗೆ ಇತ್ತೋ ಆ ಉದ್ದೇಶವನ್ನು ನೆರವೇರಿಸಲಿಕ್ಕೆ ಮಾತ್ರ ಈ ಸರ್ಕಾರ ಬದ್ಧವಾಗಿದೆ ಮತ್ತು ಅದಕ್ಕೆ ಇರತಕ್ಕಂಥ ಅಗ್ರಿಮೆಂಟ್ ಮೊದಲಿನಿಂದಲೂ ಏನಿದೆ ಆ ವಿಚಾರದ ಬಗ್ಗೆ ಕ್ರಮ ಕೈಗೊಳ್ಳಬೇಕು ಎನ್ನತಕ್ಕಂಥಾದ್ದರ ಬಗ್ಗೆ ನಾವು ಯೋಚನೆ ಮಾಡಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ತಾವು ಹೇಳಬಹುದು. ನೀವು ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂದು. ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕದ್ದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆದರೆ ಕ್ರಮವನ್ನು ಕೈಗೊಳ್ಳುವಂಥಾದ್ದರಲ್ಲಿ ಅನೇಕ ವಿಷಯಗಳು ನಮ್ಮ ಮುಂದೆ ಬಂದಾಗ ನೀವು ಈಗಿಂದೀಗಲೇ ಅದನ್ನು ಊಹೆ ಮಾಡುವುದಕ್ಕೆ ಏಕೆ ಹೋಗುತ್ತೀರಿ? ತಾವು ತಮ್ಮ ಬೇಡಿಕೆಯನ್ನು ಇಟ್ಟಿದ್ದೀರಿ. ಒಂದು ವಿಶೇಷ ನ್ಯಾಯಾಲಯ ಮಾಡಿ ಅದರ ಮೂಲಕ ತನಿಖೆ ಮಾಡಿಸಿ ಅಥವಾ ಸಿ.ಬಿ.ಐ. ಗೆ ಕೊಟ್ಟು ಅದರ ಮೂಲಕ ತನಿಖೆ ಮಾಡಿಸಿ ಅಥವಾ ಸಿ.ಓ.ಡಿ. ಮೂಲಕ ತನಿಖೆ ಮಾಡಿಸಿ ಆಗಿರತಕ್ಕಂಥ ತಪ್ಪುಗಳನ್ನು ನೀವು ಸರಿಪಡಿಸತಕ್ಕದ್ದನ್ನು ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಿ, ಇಂತಹ ಅನೇಕ ವಿಚಾರಗಳನ್ನು ತಾವು ಸದನದಲ್ಲಿ ಇಟ್ಟಿದ್ದೀರಿ. ಅದಕ್ಕೆ ಸರ್ಕಾರ ತಾವು ಇವತ್ತೇನು ಸದನದಲ್ಲಿ ಪ್ರಸ್ತಾಪ ಮಾಡಿರತಕ್ಕಂಥ ಅನೇಕ ವಿಷಯಗಳು ಇವೆ, ಅದನ್ನು ನಾವು ತಳ್ಳಿಹಾಕುವುದಿಲ್ಲ. ಅನೇಕ ವಿಷಯಗಳ

ಬಗ್ಗೆ ಸಂಪೂರ್ಣವಾದಂಥ ಗೌರವ ಮತ್ತು ಅದಕ್ಕೆ ಇರಬೇಕಾದಂಥ ಮಾನ್ಯತೆಯನ್ನು ಇಟ್ಟುಕೊಂಡು ತಾವು ಮಾಡಿದಂಥ ಸಲಹೆಸೂಚನೆಗಳ ಮೂಲಕ ಇಡೀ ಯೋಜನೆಯನ್ನು ನಾವು ಮತ್ತೆ ಎಲ್ಲಾ ಆಯಾಮಗಳ ಜೊತೆಗೆ ಪರಿಶೀಲಿಸುತ್ತೇವೆ. ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ತಪ್ಪು ಮಾಡಿದಂಥವರಿಗೆ ಶಿಕ್ಷೆ ಕೊಡುತ್ತೇವೆ. ಯಾವುದು ಸರಿಯಾಗಿಲ್ಲ, ಅದನ್ನು ಸರಿಪಡಿಸುತ್ತೇವೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಸದನದಲ್ಲಿ ಹೇಳುತ್ತಾರೆ. ತಾವು ಇದು ತಕ್ಷಣದಲ್ಲೇ ಸರ್ಕಾರ ನಿರ್ಧಾರವನ್ನು ಹೇಳಬೇಕು ಎನ್ನತಕ್ಕದ್ದು ಏನೂ ಇಲ್ಲ. ಸರ್ಕಾರವನ್ನೂ ಕೂಡ ತಾವು ಅನೇಕ ಸಂದರ್ಭಗಳಲ್ಲಿ ನಂಬಲೇಬೇಕಾಗುತ್ತದೆ; ಮತ್ತೆ ನಾವು ನಿಮಗೆ ಜವಾಬ್ದಾರರಾಗಿರುತ್ತೇವೆ. ಕಾರ್ಯಾಂಗ ಶಾಸಕಾಂಗಕ್ಕೆ ಜವಾಬ್ದಾರವಾಗಿರುತ್ತದೆ. ಇಲ್ಲಿ ನಾವು ಏನು ಮಾತನಾಡಿರುತ್ತೇವೆ ಅದಕ್ಕೆ ಆಶ್ಯೂರೆನ್ಸ್ ಕಮಿಟಿ ಅನ್ನತಕ್ಕಂಥಾದ್ದೂ ಕೂಡ ಇರುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಇಲ್ಲಿ ಕೂಡಿಸಿರತಕ್ಕಂಥ ಪ್ರಭುಗಳು ಹೊರಗಡೆ ಇದ್ದಾರೆ. ಇದರ ಬಗ್ಗೆ ಅವರೂ ನಮ್ಮನ್ನು ಪ್ರಶ್ನೆ ಮಾಡುತ್ತಾರೆ. ಈ ಕಾರಣಕ್ಕಾಗಿ ಜವಾಬ್ದಾರಿಯಿಂದ ನಾವು ಹೇಳುತ್ತೇವೆ. ಎಲ್ಲೆಲ್ಲಿ ತಪ್ಪಾಗಿದೆ ಅದನ್ನು ಸರಿಪಡಿಸುವುದು ಒಂದೇ ಅಲ್ಲ, ಕಾನೂನಿಗೆ ಅನುಗುಣವಾದಂಥ ರೀತಿಯಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕೆಗಳ ಮಂತ್ರಿ)** : ಸನ್ಮಾನ್ಯ ಸಭಾಧ್ಯಕ್ಷರೇ, ಇತ್ತೀಚಿನ ವರ್ಷಗಳಲ್ಲಿ ನಿಯಮ 69ರ ಅಡಿಯಲ್ಲಿ ಇಷ್ಟೊಂದು ದೀರ್ಘವಾಗಿ ಚರ್ಚೆ ಮಾಡಿರತಕ್ಕಂಥ ವಿಚಾರ ಇದು ಎಂದು ನನ್ನ ಅನುಭವದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ನಾವು ಎಲ್ಲರೂ ಸಹಿತ, ಮುಖ್ಯಮಂತ್ರಿಗಳು ಸಂಬಂಧಪಟ್ಟಂತೆ ಮಂತ್ರಿಗಳೆಲ್ಲರೂ ನಾವು ಕುಳಿತುಕೊಂಡು ಗೌರವಾನ್ವಿತ ಸದಸ್ಯರುಗಳು ಕೊಟ್ಟಿರತಕ್ಕಂಥ ಎಲ್ಲಾ ವಿಚಾರಗಳನ್ನು ನಾವು ಗಮನಕ್ಕೆ ತೆಗೆದುಕೊಂಡಿದ್ದೇವೆ. ಇದರಲ್ಲಿ ಬಹಳ ಪ್ರಮುಖವಾಗಿ ನಮ್ಮ ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಶ್ರೀಮಾನ್ ಯಡಿಯೂರಪ್ಪನವರು ಏನಾದರೂ ಮಾಡಿ ಜಾತ್ಯಾತೀತ ಜನತಾದಳಕ್ಕೆ ಇಕ್ಕಟ್ಟಿಗೆ ಸಿಕ್ಕಿಸಬೇಕೆಂದು ಹೇಳಿ ಬಹಳ ಪ್ರಾಮಾಣಿಕವಾದ ಪ್ರಯತ್ನವನ್ನು ಅವರ ಎಲ್ಲಾ ರಾಜಕೀಯ ಚತುರತೆಯನ್ನು ಚಾಣಾಕ್ಷತನವನ್ನು ಉಪಯೋಗಿಸಿ ಮಾಡಲಿಕ್ಕೆ ಪ್ರಯತ್ನ ಮಾಡಿದರು. ಆದರೆ ನಾವು ಇದೆಲ್ಲಾ ಯೋಚನೆ ಮಾಡಿಯೇ ಕಾಂಗ್ರೆಸ್‌ನ ಜತೆಯಲ್ಲಿ ಕೈಕ್ಕೈ ಮಿಲಾಯಿಸಿರತಕ್ಕಂಥಾದ್ದು. ಇದೆಲ್ಲಾ ಯೋಚನೆ ಮಾಡಿ ಇಂತಹ ಇಕ್ಕಟ್ಟಿನ ಪರಿಸ್ಥಿತಿಯನ್ನು ನಮಗೆ ನೀವು ತರುವುದಕ್ಕೆ ಎಲ್ಲಾ ಪ್ರಯತ್ನವನ್ನು ಸಹಿತ ಮಾಡುತ್ತೀರಿ; ನೀವು ಬಿ.ಜೆ.ಪಿ. ಮ್ಯಾನಿಫೆಸ್ಟೋವನ್ನು ಓದುವುದಿಲ್ಲ, ನೀವು ಓದುವುದೇ ಜೆ.ಡಿ.ಎಸ್. ಮ್ಯಾನಿಫೆಸ್ಟೋ ಅಂತ ಹೇಳಿ ನಮಗೆಲ್ಲರಿಗೂ ಸಹಿತ ಚೆನ್ನಾಗಿ ಗೊತ್ತಿದೆ.

**ಶ್ರೀ ವಾಟಾಳ್ ನಾಗರಾಜ್** : ಅದಕ್ಕೇ ಭಂಡತನ ಅಂತ ಕರೆಯುವುದು.

**ಶ್ರೀ ಪಿ.ಜಿ.ಆರ್. ಸಿಂಧ್ಯಾ :** ಈಗ ಮಾನ್ಯ ವಾಟಾಳ್ ನಾಗರಾಜ್ ಅವರು ಅದನ್ನು ಭಂಡತನವೆಂದು ಕರೆದರೆ ನನಗೆ ಏನೂ ಬೇಜಾರು ಆಗುವುದಿಲ್ಲ. ಎಕೆಂದರೆ ವಾಟಾಳ್ ನಾಗರಾಜ್ ಅವರು ಒಬ್ಬರೇ ಸದಸ್ಯರು ಇರತಕ್ಕಂಥಾದ್ದು. ಅವರಿಗೆ ನಾನು ಹೇಳಿದ್ದೆ, ನೀವು ಈ ಕಡೆ ಬನ್ನಿ, ಮಂತ್ರಿಗಳು ಆಗುವಿರುವಂತೆ ಎಂದು...

**ಶ್ರೀ ವಾಟಾಳ್ ನಾಗರಾಜ್ :** ನಾನು ತಯಾರಾಗಿದ್ದೇನೆ. ಈಗ ಬರ್ಲಾ? ಅಧ್ಯಕ್ಷರೇ, ಪ್ರತಿಸಲಾನೂ ಹೀಗೇ ಕರೆಯುತ್ತಾರೆ. ಇದು ಎರಡನೇ ಬಾರಿ ಪುನಃ ಕರೆಯುತ್ತಿರುವುದು. ನಾನು ತಯಾರಾಗಿದ್ದೇನೆ ಎಂದರೂ ಏಕೆ ಮಾಡುವುದಿಲ್ಲ? ಇದು ಬರೇ ಮಾತನಾಡುವುದು ಸರಿಯಲ್ಲ. ಈಗಿಂದೀಗಲೇ ನಾನು ಬರುವುದಕ್ಕೆ ಸಿದ್ಧ. ನೀವು ತಯಾರಾಗಿದ್ದೀರಾ?

**ಶ್ರೀ ಎಂ.ಪಿ. ಪ್ರಕಾಶ್ :** ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರಂತಹ ಹಿರಿಯರು ನಮ್ಮ ಪಕ್ಷಕ್ಕೆ ಬಂದರೆ ಅಥವಾ ಸರ್ಕಾರದಲ್ಲಿ ಮಂತ್ರಿಗಳಾದರೆ ಅದಕ್ಕಿಂತ ದೊಡ್ಡ ಘನತೆ ಮತ್ತೊಂದಿಲ್ಲ. ಆದರೆ ಪ್ರಶ್ನೆ ಏನೆಂದರೆ, ಅವರು ಉಳಿದವರಂತೆ ಸ್ವತಂತ್ರವಾಗಿ ಆರಿಸಿ ಬಂದಿಲ್ಲ. ಅವರು ಒಂದು ವಾಟಾಳ್ ಪಕ್ಷ ಅಂತ ಮಾಡಿಕೊಂಡಿದ್ದಾರೆ. ಆ ಪಕ್ಷ ಅಂತ ಇರುವುದರಿಂದ ಅವರು ಈ ಕಡೆ ಬಂದರೂ ಕೂಡ ಎರಡು ವರ್ಷದವರೆಗೆ ಅವರು ಮಂತ್ರಿಯಾಗುವ ಹಾಗಿಲ್ಲ. ಈ ಒಂದು ಕಷ್ಟ ಇದೆ. ನಾವೇನು ಮಾಡುವುದು?

**ನಗು**

**ಶ್ರೀ ವಾಟಾಳ್ ನಾಗರಾಜ್ :** ಸಮ್ಮಿಶ್ರ ಸರ್ಕಾರದಲ್ಲಿ ಆಗಬಹುದು. ಆದ್ದರಿಂದ ಮಾನ್ಯ ಸಿಂಧ್ಯಾರವರು ಏನು ಹೇಳಿದ್ದಾರೆ, ನಿಮಗೆ ಪ್ರಾಮಾಣಿಕತೆ ಇದ್ದರೆ ಈಗಲೇ ಹೇಳಿ. ನಾನು ಬರಲಿಕ್ಕೆ ಸಿದ್ಧ. ಅದರಲ್ಲಿ ನೀವ್ಯಾಕೆ ತಲೆಕೆಡಸಿಕೊಳ್ಳುತ್ತೀರಿ?

**ಶ್ರೀ ಆರಗ ಜ್ಞಾನೇಂದ್ರ :** ಮೊನ್ನೆ ನೀವು ಹೇಳಿದ್ದು ಮುಖ್ಯಮಂತ್ರಿ ಆಗುವುದಾದರೆ ಮಾತ್ರ ಅಂತ...

**ಶ್ರೀ ಪಿ.ಜಿ.ಆರ್. ಸಿಂಧ್ಯಾ :** ಮುಖ್ಯಮಂತ್ರಿಗಳು ಸಚಿವ ಸಂಪುಟವನ್ನು ವಿಸ್ತರಣೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್ ಬರುವುದಾದಲ್ಲಿ ಬಹುಶಃ ನಮ್ಮ ಕಾಂಗ್ರೆಸ್ ಮಿತ್ರರು ಸಹಿತ ಯಾರೂ ವಿರೋಧ ಮಾಡುವುದಿಲ್ಲ ಅಂತ ಅಂದು ಕೊಂಡಿದ್ದೇನೆ. ಎರಡೂ ಪಾರ್ಟಿಗಳಿಂದ ನಿಮಗೆ ಮಂತ್ರಿ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ದಯವಿಟ್ಟು ನೀವು ಈ ಕಡೆ ಬಂದು ಬಿಡಿ.

**ಶ್ರೀ ವಾಟಾಳ್ ನಾಗರಾಜ್ :** ಪ್ರಮಾಣ ವಚನಕ್ಕೆ ನಾಳೆ ಹೋಗೋಣವೇ? ಇದರ ಬಗ್ಗೆ ನಾವು ಹಿಂದೆ ಏಕೆ ಮಾತನ್ನಾಡಬೇಕು?

**ಶ್ರೀ ಪಿ.ಜಿ.ಆರ್. ಸಿಂಧ್ಯಾ :** ಮಾನ್ಯ ಅಧ್ಯಕ್ಷರೇ, ನಮಗೆ ಒಂದು ಸಂತೋಷ ಆಗಿದ್ದು ಏನೆಂದರೆ ಈ ವಿಚಾರ ಎಲ್ಲಾ ಪ್ರಸ್ತಾಪವಾಗಿರುವುದು ಪ್ರಜಾಪ್ರಭುತ್ವದಲ್ಲಿ ಅವಶ್ಯಕತೆ ಕೂಡ ಇದೆ. ಅಂತಹ ಅವಶ್ಯಕತೆ ಇಲ್ಲಿ ಸದನದಲ್ಲಿ ಉಂಟಾಗಿ ಈಗ ನಾವು ಆರು ಗಂಟೆವರೆಗೆ ಕುಳಿತುಕೊಳ್ಳುವುದಕ್ಕೇನೇ ಸಾಧ್ಯವಾಗದೆ ಕೆಲವು ಸಂದರ್ಭದಲ್ಲಿ ಎದ್ದು ಹೋಗಬೇಕು ಎಂದು ಹೇಳುತ್ತೇವೆ. ಆದರೆ ಇದರಲ್ಲಿ ಏನೋ ಅಡಗಿದೆ ಅನ್ನುವುದರಿಂದಾಗಿ

ರಾತ್ರಿ ಒಂಬತ್ತೂಕಾಲು ಗಂಟೆ ಆದರೂ ಸಹಿತ ಇನ್ನೊಂದು ಎರಡು ಗಂಟೆ ಕುಳಿತುಕೊಳ್ಳುವುದಕ್ಕೆ ನಾವು ಎರಡೂ ಕಡೆಯವರು ತಯಾರಾಗಿದ್ದೇವೆ. ಅಂದರೆ ಅದರ ಅರ್ಥ ಏನೆಂದರೆ, ಪ್ರಜಾಪ್ರಭುತ್ವದಲ್ಲಿ ಇಂತಹ ವಿಷಯಗಳಿಗೆ ನಾವು ಎಷ್ಟೊಂದು ಮಹತ್ವವನ್ನು ಕೊಡುತ್ತೇವೆ ಎನ್ನುವುದನ್ನು ಇದು ಸೂಚನೆ ಮಾಡುತ್ತದೆ. ಈಗ ವಿಷಯಕ್ಕೆ ಬರಬೇಕು ಎಂದರೆ, ಮೂರು ಪ್ರಮುಖವಾದ ವಿಚಾರಗಳು ಪ್ರಸ್ತಾಪ ಆಗಿವೆ. ಹಿರಿಯ ಮಂತ್ರಿಗಳಾದ ಮಾನ್ಯ ಪ್ರಕಾಶ್ ಅವರು ತಿಳಿಸಿದರು. ಒಂದು, ಈ ಬೆಂಗಳೂರು ಮೈಸೂರು ಕಾರಿಡಾರ್ ಪ್ರಾಜೆಕ್ಟ್ ಏನಿದೆ, ಅದರಲ್ಲಿ ಡೀನೋಟಿಫೈ ಮಾಡಿರತಕ್ಕಂಥಾದ್ದು, ಅಕ್ವಿಜಿಷನ್ ಮಾಡಿರತಕ್ಕಂಥಾದ್ದು, ಸರ್ಕಾರ ಜಮೀನು ಕೊಟ್ಟಿರತಕ್ಕಂಥಾದ್ದರ ಬಗ್ಗೆ ತಾವು ಬಹಳ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದೀರಿ. ಎರಡನೆಯದಾಗಿ ನಮ್ಮ ಈ ಕಡೆಯ ಕೆಲವು ಸದಸ್ಯರುಗಳು ಬಿ.ಡಿ.ಎ. ದಲ್ಲಿ ಆಗಿರತಕ್ಕಂಥ ಕೆಲವು ನೋಟಿಫೀಕೇಷನ್‌ಗಳ ಬಗ್ಗೆ ಸಹಿತ ಮಾತನಾಡಿದ್ದೀರಿ. ಮತ್ತೆ ಇನ್ನೂ ಕೆಲವು ಸದಸ್ಯರುಗಳು ಕೈಗಾರಿಕೆ ಇಲಾಖೆಯಲ್ಲಿ ಅಕ್ವೈರ್ ಆಗಿರತಕ್ಕಂಥ ಜಮೀನುಗಳ ಬಗ್ಗೆ ಸಹಿತ ತಾವು ಮಾತನಾಡಿದ್ದೀರಿ. ಈಗ ಬಹಳ ಪ್ರಮುಖವಾಗಿ ಇಂಡಸ್ಟ್ರೀಸ್ ಡಿಪಾರ್ಟಮೆಂಟ್‌ನಲ್ಲಿ ಕೆ.ಐ.ಎ.ಡಿ.ಬಿ. ಇದೊಂದು ಭೂಮಿಯನ್ನು ಅಕ್ವೈರ್ ಮಾಡಿ ಕೊಡತಕ್ಕಂಥ ಎಜೆನ್ಸಿ ಅಷ್ಟೇನೇ ಅದು ರಿಕ್ವೈರ್‌ಮೆಂಟ್ ಎಷ್ಟು ಎನ್ನತಕ್ಕದ್ದನ್ನು ಆ ಪೇರೆಂಟ್ ಡಿಪಾರ್ಟ್‌ಮೆಂಟ್ ಅಥವಾ ಮದರ್ ಡಿಪಾರ್ಟ್‌ಮೆಂಟ್ ಅಂತ ಏನು ಕರೆಯುತ್ತೇವೆ, ಈಗ ಉದಾಹರಣೆಗೆ ಬೆಂಗಳೂರು-ಮೈಸೂರು ರಸ್ತೆ ನಿರ್ಮಾಣ ಮಾಡತಕ್ಕಂಥಾದ್ದನ್ನು ಪಿ.ಡಬ್ಲ್ಯೂಡಿ, ಯವರು ಸೂಪರ್‌ವೈಸ್ ಮಾಡುತ್ತಾರೆ. ಅವರು ಕೆ.ಐ.ಎ.ಡಿ.ಬಿ.ಗೆ ಇಷ್ಟು ಎಕರೆ ಜಮೀನು ನಮಗೆ ಬೇಕೆಂದು ಬರೆಯುತ್ತಾರೆ. ಅದರ ಪ್ರಕಾರ ಇದು ಕೊಡತಕ್ಕಂಥಾದ್ದು. ಇದರಲ್ಲಿ ನಾನು ಮಾನ್ಯ ಸದಸ್ಯರ ಮಾಹಿತಿಗೋಸ್ಕರ ಹೇಳುತ್ತಿದ್ದೇನೆ. ರಾಮನಗರ, ಚನ್ನಪಟ್ಟಣ ಮತ್ತು ಮಂಡ್ಯ-ಇಲ್ಲಿ ವಿಶೇಷವಾಗಿ ಡೀನೋಟಿಫೈ ಮಾಡಿರತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರಾಮನಗರ, ಚನ್ನಪಟ್ಟಣ, ಮಂಡ್ಯದಲ್ಲಿ 2,728 ಎಕರೆ ಡೀನೋಟಿಫೈ ಮಾಡಿರತಕ್ಕಂಥಾದ್ದು ನಿಜ. ಏಕೆ ಮಾಡಿದ್ದಾರೆ ಎಂದರೆ, ಈ ಬಿ.ಎಂ.ಐ.ಸಿ. ಕಂಪನಿಯವರು ನಮಗೆ ಈ ಜಮೀನು ಬೇಡ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ತಾವು ಹೇಳಿದ ಹಾಗೆ ಈ ಎಲ್ಲಾ ಕಡತಗಳನ್ನು ತರಿಸಿ, ಈ ಕಡತಗಳಲ್ಲಿ ನಿಮಗೆ ಕೆಲವು ಬಹಳ ರುಚಿಯಾಗಿರತಕ್ಕಂಥಾದ್ದು ಇರಬಹುದು, ಕಹಿ ಆಗಿರತಕ್ಕಂಥಾದ್ದು ಇರಬಹುದು. ಆದರೆ ವಾಸ್ತವಾಂಶಗಳನ್ನು ಆದಷ್ಟು ಮಟ್ಟಿಗೆ ಕಡತಗಳನ್ನು ತೆಗೆದು ಪರಿಶೀಲನೆ ಮಾಡಲಿಕ್ಕೆ ಅತ್ಯಂತ ಪ್ರಾಮಾಣಿಕವಾದ ಪ್ರಯತ್ನವನ್ನು ನಾನು ಮಾಡಿದ್ದೇನೆ. ಇದರಲ್ಲಿ ಆವತ್ತಿನ ಮಾನ್ಯ ಕೈಗಾರಿಕಾ ಸಚಿವರಾಗಿದ್ದಂಥ ಶ್ರೀಮಾನ್ ಆರ್.ವಿ. ದೇಶಪಾಂಡೆಯವರು ಅನೇಕ ಪ್ಯಾರಾಗಳಲ್ಲಿ ಇದನ್ನು ಬರೆದಿರತಕ್ಕಂಥಾದ್ದು ನಿಜ.

ಅವರು ಏನು ಹೇಳಿದ್ದಾರೆಂದರೆ, ಒಂದೆರಡು ಮೂರು ಕಡೆಗಳಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ. ಅವರು ಫೈಲಿನಲ್ಲಿ ಬರೆದಿರತಕ್ಕಂಥಾದ್ದನ್ನೇ ನಾನು ಗಮನಿಸಿದ್ದೇನೆ. ಬೆಂಗಳೂರು-ಮೈಸೂರು ಪ್ರಾಜೆಕ್ಟ್ ಇವರಿಗೆ ಇಷ್ಟ ಬಂದಹಾಗೆ ನಾವು ಜಮೀನನ್ನು ಕೊಡುವುದಕ್ಕಾಗುವುದಿಲ್ಲ ಮತ್ತು ರಿಯಲ್ ಎಸ್ಟೇಟ್ ಏಜೆನ್ಸಿ, ಕೆ.ಎ.ಐ.ಡಿ.ಬಿ. ಅಲ್ಲ, ಅವರ ರಿಕ್ವೈರ್‌ಮೆಂಟಿಗಷ್ಟೇ ಕೊಡುವುದಕ್ಕಾಗ ತಕ್ಕಂಥಾದ್ದು ಎನ್ನುವುದನ್ನು ಎರಡು ಮೂರು ಕಡೆಗಳಲ್ಲಿ ಅವರು ಬರೆದಿದ್ದಾರೆ. ಆದಾದ ನಂತರ, ಈ ಬಿ.ಎಂ.ಐ.ಸಿ. ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಹಾಗೆಯೇ ಮಾನವರ್ತೆಕಾವಲ್, ಅಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ, ಅದಕ್ಕೆ ಸಂಬಂಧಪಟ್ಟ ಹಾಗೆ 18 ಎಕರೆ ಜಮೀನನ್ನು, ಈ ಬಿ.ಎಂ.ಐ.ಸಿ. ಯವರು ನಮಗೆ ಬೇಡವೆಂದು ಹೇಳಿದ್ದಕ್ಕೆ ಅದನ್ನೂ ಕೂಡ ಡಿ-ನೋಟಿಫೈ ಮಾಡಿರತಕ್ಕಂಥಾದ್ದು ನಿಜ. ಉಡುಪಿಯಲ್ಲಿ ಕೆ.ಎ.ಐ.ಡಿ.ಬಿ. ಯವರು ಸುಮಾರು 678 ಎಕರೆಯನ್ನು ಬೈಕಾಡಿ ವಾರಂಬಳ್ಳಿ, ಹಾಲಾಡಿ ಇಲ್ಲಿಗೆ ಹಿಂದೆ ತೆಗೆದುಕೊಂಡಿದ್ದ ಒಂದು ಯೋಜನೆಯನ್ನು ಕೈಬಿಟ್ಟಿದ್ದರಿಂದಾಗಿ, ಇವರು ಅದನ್ನು ಭೂಸ್ವಾಧೀನದಿಂದ ಕೈಬಿಟ್ಟಿರತಕ್ಕಂಥಾದ್ದು ನಿಜ. ಇದಿಷ್ಟು ಬಿಟ್ಟರೆ, ಬಾಕಿ ಎಲ್ಲವೂ ಸಹಿತ ಒಂದೂವರೆ ಎಕರೆ, ಐದು ಎಕರೆ, ಏಳು ಎಕರೆ ಹೀಗೆ ಕೈಬಿಟ್ಟಿದ್ದಾರೆ. ನನ್ನ ಹತ್ತಿರ ಇರತಕ್ಕಂಥ ಮಾಹಿತಿಗಳ ಪ್ರಕಾರವಾಗಿ, ಕೈಗಾರಿಕಾ ಉದ್ದೇಶಕ್ಕೋಸ್ಕರ ಎಂದು ಹೇಳಿ. ನೈಸ್ ಕಂಪನಿ ವಿಚಾರವನ್ನು ಶ್ರೀಮಾನ್ ರೇವಣ್ಣನವರು ಹೇಳಿದರು. ಇದನ್ನು ಎನ್‌ವಿಸೇಜ್ ಮಾಡಿದ್ದು ನಿಜವಾಗಿಯೂ 1987ರಲ್ಲಿ ಆಗ ಖೋಡೇಸ್‌ನವರು ಮುಂದೆ ಬರುತ್ತಾರೆ. ಆಗ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದರು, ಮಾನ್ಯ ದೇವೇಗೌಡರು ಲೋಕೋಪಯೋಗಿ ಸಚಿವರಾಗಿದ್ದರು. ಆ ಸಂದರ್ಭದಲ್ಲಿ ಈ ರೀತಿಯ ಒಂದು ರೋಡ್ ಮಾಡುತ್ತೇವೆಂದು ಖೋಡೇಸ್‌ನವರು ಮುಂದೆ ಬರುತ್ತಾರೆ. ಆದಾದ ಮೇಲೆ, 1987 ರಿಂದ 1995ರ ವರೆಗೂ ಅದಕ್ಕೆಜೀವ ಇರಲಿಲ್ಲ. 1995ರಲ್ಲಿ ಇದು ಪ್ರಾರಂಭವಾಗಿದ್ದು. ಅದರ ಬಗ್ಗೆ ವಿವರಗಳನ್ನು ಮತ್ತು ಯಾವ ಯಾವ ಹಂತದಲ್ಲಿದೆ ಎಂಬುದನ್ನು ಅವರು ಮಾತನಾಡುವಾಗ ತಿಳಿಸಿದ್ದಾರೆ. 1999 ರಿಂದ ಮೇ 2004 ವರೆಗೂ ಸಹಿತ 2001 ಎಕರೆ ಕೆ.ಎ.ಐ.ಡಿ.ಬಿ. ಯವರು ಇದುವರೆಗೂ ಅಕ್ವೈರ್ ಮಾಡಿರತಕ್ಕ ಜಮೀನು. K.I.A.D.B. for industrial purposes ಅಕ್ವೈರ್ ಮಾಡಿರತಕ್ಕಂಥಾದ್ದು 2100 ಎಕರೆ. ಅದೂ ಏನಿದೆ, in most of these cases. ಒಂದು 7-8 ಕೇಸುಗಳನ್ನು ಬಿಟ್ಟರೆ, ಬಾಕಿ ಎಲ್ಲಾ ಕೇಸುಗಳಲ್ಲೂ ಸಹಿತ ಲ್ಯಾಂಡ್ ಓನರ್ಸ್ ಕನ್‌ಸೆಂಟ್ ಕೊಟ್ಟಿದ್ದಾರೆ. ಎಲ್.ಕೆ.ಎ.ಐ.ಡಿ.ಬಿ. ಯವರು ಅಕ್ವೈರ್ ಮಾಡಿದ್ದಾರೆ. ಅಲ್ಲಿ ನೀವು ತೆಗೆದುಕೊಳ್ಳಬಹುದು ಎಂದು ಕನ್‌ಸೆಂಟ್ ಕೊಟ್ಟಿದ್ದಾರೆ ಮತ್ತು ತೆಗೆದುಕೊಳ್ಳಬಹುದೆಂದು ಹೇಳಿದ್ದಾರೆ. ಮತ್ತೆ ತಮಗೆ ಗೊತ್ತಿರುವಹಾಗೆ ಈ ಪ್ರೈವೇಟ್ ಲ್ಯಾಂಡ್ ಓನರ್ಸ್ ಕೊಡುತ್ತೇವೆಂದು ಹೇಳಿದಾಗಲೂ ಸಹಿತ ಅದಕ್ಕೆ

ಒಂದು ಪ್ರೈಸ್ ಫಿಕ್ಸೇಷನ್‌ಗೆ ಎಂದು ಡೆಪ್ಯೂಟಿ ಕಮೀಷನ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ. ಆ ಸಮಿತಿಯವರು ಇಷ್ಟಿಷ್ಟು ಎಂದು ಹೇಳಿ ಮಾಡುತ್ತಾರೆ. ಆದಾದ ಮೇಲೂ ಸಹಿತ ಲ್ಯಾಂಡ್ ಓನರುಗಳು ಸುಪ್ರೀಂ ಕೋರ್ಟಿಗೆ, ಹೈಕೋರ್ಟಿಗೆ ಹೋಗುವುದಕ್ಕೆ ಅವಕಾಶವಿದೆ ಎಂಬುದೂ ಗೊತ್ತಿದೆ. ಈ ಸಂದರ್ಭದಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡಲಿಕ್ಕೆ ಬಯಸುತ್ತೇನೆ. ಈಗ (ಡಿ) ನೋಟಿಫಿಕೇಷನ್ ಹೊಸದೇನೂ ಅಲ್ಲ. ನಾನು ಮಂತ್ರಿಮಂಡಲದ ಸದಸ್ಯನಾಗಿದ್ದು 1983ನೇ ಇಸವಿ ಜನವರಿಯಲ್ಲಿ. ನಮ್ಮ ಮುಖ್ಯಮಂತ್ರಿಗಳು 1970–72ನೇ ಇಸವಿಯಲ್ಲಿ ಮಂತ್ರಿಗಳಾಗಿದ್ದಾರೆ. ಆವತ್ತಿನಿಂದಲೂ ಸಹಿತ ಅರ್ಧ ಎಕರೆ, ಒಂದು ಎಕರೆ, ಎರಡು ಎಕರೆ, ಮೂರು ಎಕರೆ ಈ ತರಹ ಡಿ–ನೋಟಿಫೈ ಮಾಡಲೇಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ನಮ್ಮ ಕೃಷ್ಣಪ್ಪನವರು ಹಿಂದುಳಿದವರ ಬಗ್ಗೆ ಬಹಳ ಅಭಿಮಾನ ಇರತಕ್ಕಂಥವರು ಮತ್ತು ದುಡಿಯತಕ್ಕಂಥ ನಾಯಕರು. ಅವರು ನಿನ್ನೆ ಒಂದು ಸಲಹೆ ಕೊಟ್ಟರು. ನನಗೆ ಜ್ಞಾಪಕ ಇದೆ, 1986–87ರಲ್ಲಿ ಬಿ.ಡಿ.ಎ. ನವರು ಅಕ್ವೈರ್ ಮಾಡಬೇಕೆಂದು ಹೇಳಿದಾಗ ತಿಗಳ ಜನಾಂಗದವರ ಅನೇಕ ತೋಟಗಳು ಬೆಂಗಳೂರು ಸುತ್ತಮುತ್ತ ಇದ್ದವು. ಆಗಿನ್ನೂ ಈ ಸಿ.ಎಂ.ಸಿ., ಟಿ.ಎಂ.ಸಿ. ಗಳೆಲ್ಲಾ ಈ ಪ್ರಮಾಣದಲ್ಲಿ ಬೆಳೆದಿರಲಿಲ್ಲ. ಆ ಸಂದರ್ಭದಲ್ಲಿ ಈ ತಿಗಳ ಜನಾಂಗಕ್ಕೆ ಸೇರಿದ ಎಲ್ಲಾ ತೋಟಗಳನ್ನು ಬಿಡಬೇಕೆಂದು ಡೀನೋಟಿಫಿಕೇಷನ್ ಮಾಡಿರತಕ್ಕಂಥ ಉದಾಹರಣೆ ತಮಗೂ ಸಹಿತ ಗೊತ್ತಿರಬಹುದು. ಅದರಿಂದ, ಟೋಟಲ್ ಆಗಿ ಡಿ–ನೋಟಿಫೈ ಮಾಡಿರತಕ್ಕಂಥಾದ್ದರ ಹಿಂದೆ, ಎಕರೆಗೆ 20 ಲಕ್ಷ, ಎಕರೆಗೆ 30 ಲಕ್ಷ ರೂ. ಕನ್‌ಸೀಡರೇಷನ್ ಇರುತ್ತದೆ ದುಡ್ಡು ತೆಗೆದುಕೊಳ್ಳುತ್ತಾರೆಂದು ಸಾರಾಸಗಟಾಗಿ ಹೇಳತಕ್ಕಂಥಾದ್ದು ಸರಿಯಲ್ಲ ಎನ್ನುವ ದೃಷ್ಟಿಯಿಂದಾಗಿ ನಾನು ಹೇಳುತ್ತೇನೆ. ನಾನು ಮೊನ್ನೆ ಒಂದು ಫೈಲ್ ತರಿಸಿಕೊಂಡಿದ್ದೆ. ಆ ಫೈಲಿನಲ್ಲಿ ಯಾರೋ ಒಬ್ಬನಿಗೆ 24 ಗುಂಟೆ ಜಮೀನು ಕೊಡಬೇಕಾಗಿದೆ ಕೆ.ಎ.ಐ.ಡಿ.ಬಿ. ಯವರು. ಅದಕ್ಕೋಸ್ಕರವಾಗಿ ಒಬ್ಬ ಜಮೀನು ಕಳೆದುಕೊಂಡಿರುವಂಥವನದ್ದು 30 ಗುಂಟೆ ಜಮೀನನ್ನು ಅಕ್ವೈರ್ ಮಾಡಿ ಅವನಿಗೆ ಕೊಡುವುದಕ್ಕೆ ಹೊರಟಿದ್ದಾರೆ. ಅವನು ಬಡವ, ಜಮೀನು ಕಳೆದುಕೊಂಡಿದ್ದಾನೆ. ಇವನು ತೀರಾ ಬಡವ. ಈ ರೀತಿಯ ಕೇಸಸ್‌ಗಳೆಲ್ಲಾ ಬಹಳ ಇವೆ. At the same time, ನಾನು ತಪ್ಪೇ ಆಗಿಲ್ಲ ಎಂದು ಹೇಳುವುದಕ್ಕೆ ಹೋಗುತ್ತ ಇಲ್ಲ. ನಿಮಗೆ ಒಂದೆರಡು ಉದಾಹರಣೆ ಕೊಡುತ್ತೇನೆ. ಹೂಡಿ ವೈಟ್ ಫೀಲ್ಡ್ ಬಗ್ಗೆ ನಮ್ಮ ಗೌರವಾನ್ವಿತ ಸದಸ್ಯರು ಮಾತನಾಡಿದರು. ಇದನ್ನು ನೋಟಿಫೈ ಮಾಡಬೇಕೆಂದು ಪ್ರಕ್ರಿಯೆ ಪ್ರಾರಂಭವಾಗಿರ ತಕ್ಕಂಥಾದ್ದು 1998ರಲ್ಲಿ. ಅದಾದಮೇಲೆ, ಯಾವ ಉದ್ದೇಶಕ್ಕೋಸ್ಕರ ಸಿ ಅಂಡ್ ಐ ಡಿಪಾರ್ಟ್‌ಮೆಂಟಿನವರು ಅದನ್ನು ನೋಟಿಫೈ ಮಾಡಿದರು, 2003ರ ವರೆಗೂ ಸಹಿತ ಆ

ಉದ್ದೇಶಕ್ಕೋಸ್ಕರ ಅದನ್ನು ಅವರು ಕಟ್ಟಲಿಲ್ಲ ಮತ್ತು ಜಾಗ ಮಾಡುವುದಕ್ಕೆ ಅವರು ಹೋಗಲಿಲ್ಲ. 29-1-2004ರಲ್ಲಿ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರು ಅಂದರೆ ಕೆ.ಎ.ಐ.ಡಿ.ಬಿ. ಯವರು ಅಲ್ಲಿಗೆ ಹೋಗಿ ತನಿಖೆಯನ್ನು ಮಾಡುತ್ತಾರೆ. ತನಿಖೆ ಮಾಡಿದಾಗ ಮನೆಗಳು ಬಂದಿರುತ್ತವೆ, ದೊಡ್ಡ ದೊಡ್ಡ ಮನೆಗಳು ಬಂದಿರುತ್ತವೆ, ಫ್ಯಾಕ್ಟರಿಗಳನ್ನು ಕಟ್ಟಿರುತ್ತಾರೆ. ಅದನ್ನು ಅಕ್ವೈರ್ ಮಾಡಿ ಮತ್ತೆ ಇನ್ನೊಂದು ಫ್ಯಾಕ್ಟರಿ ಕಟ್ಟಲಿಕ್ಕೆ ಎಂದು ಕೊಡುವುದರಲ್ಲಿ ಅರ್ಥ ಏನಿದೆ ಎಂದು, ಆ ಉದ್ದೇಶದಿಂದಾಗಿ ಈ ಹೂಡಿ ವೈಟ್ ಫೀಲ್ಡ್‌ನಲ್ಲಿರತಕ್ಕಂಥ ಜಮೀನನ್ನು ಡಿ-ನೋಟಿಫೈ ಮಾಡಬೇಕೆಂದು ಅವತ್ತಿನ ಸರ್ಕಾರ ತೀರ್ಮಾನ ಮಾಡಿರುವುದು ನಿಜ. ಅದೇ ರೀತಿಯಲ್ಲಿ, ತಮಗೆ ಇನ್ನೊಂದು ಉದಾಹರಣೆ ಕೊಡಬೇಕೆಂದರೆ, ಗೋಪಾಲನ್ ಎಂಟರ್‌ಪ್ರೈಸಸ್ ಬಗ್ಗೆಯೂ ಸಹಿತ ಯಾರೋ ಪ್ರಸ್ತಾಪವನ್ನು ಮಾಡಿದರು. ಅದರಲ್ಲೂ ಸಹಿತ, ನಿಮಗೆ ಹೇಳಬೇಕೆಂದರೆ ಒಂದು ಸಾಫ್ಟ್‌ವೇರ್ ಟೆಕ್ನಾಲಜಿಗೆ ಎಂದು ಇದನ್ನು ಅಕ್ವೈರ್ ಮಾಡಿರುತ್ತಾರೆ. ಅದನ್ನು ಯಾವ ಉದ್ದೇಶಕ್ಕೋಸ್ಕರ ಅಕ್ವೈರ್ ಮಾಡಿರುತ್ತಾರೆ, ದುಡ್ಡನ್ನು ಕಟ್ಟಿರುತ್ತಾರೆ, ಈ ರೀತಿ ದುಡ್ಡನ್ನು ಕಟ್ಟಿದ್ದರೂ ಸಹಿತ ಅವರು ಬೇಡ ಎಂದು ಹೇಳುತ್ತಾರೆ. ಆದಾದ ಮೇಲೆ, ಅದನ್ನು ಡ್ರಾಪ್ ಮಾಡಿರತಕ್ಕಂಥಾದ್ದು ಸಹಿತ ನಾನು ಗಮನಿಸಿದ್ದೇನೆ. ಈ ಗ್ಲೋಬಲ್ ಟೆಲಿಕಾಂ ಬಗ್ಗೆ ಬಹಳ ಪ್ರಸ್ತಾಪವಾಯಿತು. ಈ ಒಂದು ಕಂಪನಿ ಇಲ್ಲವೇ ಇಲ್ಲ ಎಂಬುದು ಬಂತು. ಅಲ್ಲೊಂದು ಸ್ಪೆಷಲ್ ಎಕಾನಮಿಕ್ ಜೋನ್ ಮಾಡಬೇಕು. ಮತ್ತೆ ಟೆಲಿಕಾಂ ಸಿಟಿ ಮಾಡಬೇಕು ಎಂಬ ಉದ್ದೇಶದಿಂದ, ಇದನ್ನು ಕೇಂದ್ರ ಸರ್ಕಾರ ಕಳುಹಿಸಿದ್ದರಿಂದಾಗಿ ಸ್ಟೀಲ್ ಯಾರ್ಡ್ ಮಾಡಬೇಕೆಂದು ಬಿ.ಡಿ.ಎ. ನವರು ಆ ಲ್ಯಾಂಡನ್ನು ಅಕ್ವೈರ್ ಮಾಡಿರುತ್ತಾರೆ. ಆ ಸ್ಟೀಲ್ ಯಾರ್ಡ್ ಆಗದೇ 10-15 ವರ್ಷ ಆಗಿರುತ್ತದೆ, ಅಂಥಾದ್ದನ್ನು ನಾನು ಮೇಜರ್ ಆಗಿ 10 ಎಕರೆ, 8 ಎಕರೆ, 20 ಎಕರೆ ಈ ತರಹ ನನಗನ್ನಿಸತಕ್ಕಂಥಾದ್ದು ಡಿ-ನೋಟಿಫೈ ಆಗಿರತಕ್ಕಂಥಾದ್ದು. It comes to 235 acres or about 250 acres. ಈ ರೀತಿ ನನಗೆ ಸಿಕ್ಕಿರತಕ್ಕಂಥಾದ್ದು. ಈ ಚರ್ಚೆ ಪ್ರಾರಂಭವಾದ ಮೇಲೆ ನಾನು ಅಧಿಕಾರಿಗಳೆಲ್ಲರನ್ನೂ ಕರೆಸಿ, ಸಂಗ್ರಹಿಸಿರತಕ್ಕಂಥ ವಿಚಾರಗಳು. ಇದರ ಹಿಂದುಗಡೆ ದುಡ್ಡಿದೆ, ಕನ್ಸಿಡರೇಷನ್‌ಗೋಸ್ಕರವೇ ಮಾಡುತ್ತಾರೆಂದು ಮಾಡತಕ್ಕ ವಾದದಲ್ಲಿ ತಿರುಳಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಗೌರವಾನ್ವಿತ ಸದಸ್ಯರುಗಳು ಕೆಲವು ಆಪಾದನೆಗಳನ್ನು ಮಾಡಿದ್ದಾರೆ, ಅವರಿಗೆ ಆಪಾದನೆ ಮಾಡುವುದಕ್ಕೆ ಹಕ್ಕಿದೆ. ಅದರ ಬಗ್ಗೆ ನಾನು ಕಡತಗಳನ್ನು ತರಿಸಿಕೊಂಡು ನೋಡುತ್ತೇನೆ. ಎರಡು ಮೂರು ಬಹಳ ಮುಖ್ಯವಾದ ಕೇಸಸ್ ತಾವೇನು ಹೇಳಿದ್ದೀರಿ, ಇದು ಡಿ-ನೋಟಿಫೈ ಏಕೆ ಮಾಡಿರತಕ್ಕಂಥಾದ್ದು ಎನ್ನುವುದನ್ನು ನಾನು ನಿಮ್ಮ ಗಮನಕ್ಕೆ ತಂದಿದ್ದೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು)** : ನನಗೆ ಒಂದು ಮಾಹಿತಿ ಕೊಟ್ಟು ಬಿಡಿ. ನಾನೇನೂ ನಿಮ್ಮ ಭಾಷಣ ಓದುವುದಕ್ಕೆ ಹೋಗುವುದಿಲ್ಲ. ನಿಮಗೆ ಕಿರಿಕಿರಿ ಮಾಡುವುದಕ್ಕೆ ನನಗೆ ಇಷ್ಟವೂ ಇಲ್ಲ. ನನಗೆ ಗೊತ್ತಿದೆ, ನೀವು ಮಾತನಾಡುವುದಕ್ಕೂ ಮತ್ತು ಒಳಗೆ ಪರಿಸ್ಥಿತಿ ಏನಿದೆ ಎಂಬುದು ಗೊತ್ತಿದೆ. ಈ ರಾಜ್ಯದ ಜನತೆಗೆ ಅಥವಾ ನಮಗೆ ಇಷ್ಟನ್ನು ಹೇಳಿಬಿಡಿ. ನೀವು ರಾಜ್ಯದ ಉದ್ದಗಲಕ್ಕೂ ಏನೋ ಅನ್ಯಾಯವಾಗಿದೆ ಎಂದು ಹೋರಾಟ ಮಾಡಿದಿರಲ್ಲಾ, ಭೂ ಹಗರಣ ಆಗಿದೆ, ಸ್ಪೆಷಲ್ ಕೋರ್ಟ್ ಮಾಡುತ್ತೇವೆ, ತನಿಖೆ ಮಾಡಿಸುತ್ತೇವೆ ಅದೆಲ್ಲಾ ಯಾವುದು ಎಂದು? ಕೊನೆ ಪಕ್ಷ ನಮಗೆ ಗೊತ್ತಿಲ್ಲದಿದ್ದರೆ, ಈಗಲಾದರೂ ನಮಗೆ ಜ್ಞಾನೋದಯವಾಗಲಿ. ಆ ವಿವರ ಕೊಡಿ. ಆ ಜನ ನಂಬಿ ಓಟು ಕೊಟ್ಟಿದ್ದಾರೆ. ನೀವೇನೋ ತನಿಖೆ ಮಾಡಿಸುತ್ತೀರಿ, ಬಹಳ ಅವ್ಯವಹಾರ ನಡೆದಿದೆ ಎಂದು. ಇಲ್ಲ, ಅದು ಏನೂ ನಡೆದಿಲ್ಲ ಯಡಿಯೂರಪ್ಪನವರೇ, ಓಟಿಗೋಸ್ಕರ ಅದೆಲ್ಲಾ ಹೇಳಿದ್ದೇವೆಂದು ಹೇಳಿ. ವಿವರಗಳು ಇವೆ, ಸಮಯ ಬಂದಾಗ ಕೊಡುತ್ತೇನೆ. ಆಗ ನೀವು ಪ್ರಸ್ತಾಪ ಮಾಡಿ ಎಂದಾದರೂ ಹೇಳಿ.

**ಶ್ರೀ ಕೆ.ಆರ್. ರಮೇಶ್‌ಕುಮಾರ್** : 1978ನೇ ಇಸವಿಯಲ್ಲಿ ಮುಖ್ಯಮಂತ್ರಿಯಾಗಿ ದೇವರಾಜ ಅರಸು ಇಲ್ಲಿ ಕುಳಿತಿದ್ದರು. ದಿವಂಗತ ಜೆ.ಹೆಚ್. ಪಟೇಲರು ಅಲ್ಲಿ ಕುಳಿತಿದ್ದರು. ನಾವು ಕಾಂಗ್ರೆಸ್‌ನಲ್ಲಿ ಇದ್ದೆವು. ಕೇಂದ್ರದಲ್ಲಿ ಜನತಾ ಸರ್ಕಾರ ಇತ್ತು. ನಾನಾ ಆಪಾದನೆಗಳು ಬಂದಾಗ ದೇವರಾಜ ಅರಸು ಗಂಭೀರವಾದ ಉತ್ತರವನ್ನು ಕೊಡುತ್ತಾ ಇದ್ದರು. ಸಿ.ಬಿ.ಐ. ಬಂತು, ಕೇಂದ್ರ ಸರ್ಕಾರ ಬಂತು, ನನ್ನ ಮನೆ ಹುಡುಕಿದಿರಿ, ನನ್ನ ಮಕ್ಕಳ ಮನೆ ಹುಡುಕಿದಿರಿ, ಹುಣಸೂರಿನಲ್ಲಿ ಬಂದು ನನ್ನ ತೋಟವನ್ನೆಲ್ಲಾ ಅಗೆದಿರಿ, ಏನು ಸಿಕ್ಕಿತು ಎಂದು. ಅದೆಲ್ಲಾ ಆದ ಮೇಲೆ ಪಟೇಲರು ಮೆತ್ತಗೆ, ಅವರೆಲ್ಲಾ ದಡ್ಡರು, ಅವರು ಯಾರಿಗೂ ಸಿಕ್ಕಿಲ್ಲ, ಎಲ್ಲಿಟ್ಟಿದ್ದೀರಿ ಸ್ವಲ್ಪ ನನಗಾದರೂ ಹೇಳಿ ಎಂದರು. ಆಗ ಅರಸುರವರು ಬಹಳ ಮಾರ್ಮಿಕವಾಗಿ ಹೇಳಿದರು. ಹೇಳಿದರೆ ಮಾತ್ರ ನಿನಗೇ ಹೇಳುತ್ತೇನಪ್ಪ ಎಂದು ಹೇಳಿದರು. ವಿಧಿ ಹೇಗಾಯಿತು ಎಂದರೆ, ಅರಸುರವರು ಸಾಯುವ ವೇಳೆಗೆ, ಏನಾದರೂ ವಿಶ್ವಾಸದಿಂದ ಹೇಳಬೇಕಾಗಿದ್ದರೆ, ಅವರ ಹತ್ತಿರ ಉಳಿದಿದ್ದು ಪಟೇಲರು ಒಬ್ಬರೇ. ಬಹಳ ಹೊತ್ತಾಗಿತ್ತಲ್ಲಾ, lighter vien ನಲ್ಲಿ ಇರಲಿ ಎಂದು ಪಟೇಲರು ಅರಸುರವರಿಗೆ ಹೇಳಿದ ಮಾತನ್ನು ನೆನಪು ಮಾಡಿದ್ದೇನೆ. ಯಡಿಯೂರಪ್ಪನವರೂ ಸಹ ಸ್ವಲ್ಪ ಹೆಚ್ಚು ಕಡಿಮೆ ಅದೇ ರೀತಿ ಅದು ಯಾವುದು ಹೇಳಿ ಎಂದು ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್ : ಸದನಕ್ಕೆ ಒಂದು ಲವಲವಿಕೆ ಬರಲಿ ಎಂದು ಹೇಳುತ್ತೇನೆ. ಇವರು ಸ್ಪೀಕರ್ ಆಗಿ ಕುಳಿತಿದ್ದರು. ಆಗ ವಿರೋಧ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಯವರು ಮತ್ತು ಎಲ್ಲಾ ಹಿರಿಯರು

ಈ ವಿಚಾರದಲ್ಲಿ ಆಪಾದನೆ ಮಾಡಿ ಸರ್ಕಾರದಲ್ಲಿ ಮುಖ್ಯ ಮಂತ್ರಿಗಳು ಮಾನ್ಯ ಜೆ.ಹೆಚ್. ಪಟೇಲ್ ಅವರು ಇದ್ದರು. ಇಷ್ಟೆಲ್ಲಾ ಹಗರಣ ಆಗಿದೆ, ಭ್ರಷ್ಟಾಚಾರ ಆಗಿದೆ, ಇದೆಲ್ಲಾ ವಿಚಾರ ಮಾಡಿದಾಗ, ಈ ಹಣ ಎಲ್ಲಿ ಇಟ್ಟಿದ್ದೀರಿ ಎಂಬ ಎಲ್ಲಾ ವಿಚಾರ ಬಂತು. ಆದರೆ ಅಲ್ಲೇ ಮುಖ್ಯಮಂತ್ರಿಗಳು ಇದ್ದರು. ಉತ್ತರ ಕೊಟ್ಟು ಇನ್ನು ಹೋಗುತ್ತಿದ್ದರು, ಸ್ಪೀಕರ್ ರವರು ಸುಮ್ಮನೆ ಕೂಡದೇ ಏನು ಸಾರ್ ಇಷ್ಟೆಲ್ಲಾ ಭ್ರಷ್ಟಾಚಾರ ಎಂದು ಹೇಳಿದರು. ಮತ್ತೆ ಎಲ್ಲಿ ಇಟ್ಟಿದ್ದೀರಿ ಎಂದು ಕೇಳಿದರು. ಅದನ್ನು ನಿಮ್ಮ ಕೈಯಲ್ಲೇ ಕೊಟ್ಟೆನಲ್ಲಪ್ಪಾ ಎಂದು ಆಗಿನ ಮುಖ್ಯಮಂತ್ರಿಗಳು ಹೇಳಿದ್ದರು.

**ನಗು**

**ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು)** : ಆದ್ದರಿಂದ ನಾನು ಕಡತಗಳನ್ನು ಪರಿಶೀಲಿಸಿ ಇದೆಲ್ಲಾ ಆದ ಮೇಲೆ ಡೀನೋಟಿಫೈ ಮಾಡಿರತಕ್ಕ ಪ್ರಕರಣದ ಬಗ್ಗೆ ಸಭೆಯ ಮುಂದೆ ಇಟ್ಟಿದ್ದೇನೆ. ನಾನು ಎರಡು ಮೂರು ಉದಾಹರಣೆಗಳನ್ನು ಗೌರವಾನ್ವಿತ ಸದಸ್ಯರು ಎತ್ತಿರುವ ವಿಷಯಗಳ ಬಗ್ಗೆ ವಿವರಣೆಯನ್ನು ಸಹಿತ ಕೊಟ್ಟಿದ್ದೇನೆ. ಈ ಮಧ್ಯದಲ್ಲಿ ಮಾನ್ಯ ಸದಸ್ಯರು ಲೋಪದೋಷಗಳೇನು ಹೇಳಿದ್ದಾರೆ ಅದರ ಬಗ್ಗೆ ಸಹ ನಾನು ಪರಿಶೀಲನೆಯನ್ನು ಮಾಡುತ್ತೇನೆ ಎಂಬ ಭರವಸೆಯನ್ನು ಈ ಸದನಕ್ಕೆ ಕೊಡುತ್ತೇನೆ. ಉದಾಹರಣೆಗೆ ನಮ್ಮಲ್ಲಿ ಸಿಂಗಲ್ ವಿಂಡೋ ಏಜೆನ್ಸಿ ಅಂತ ಮಾಡಿದ್ದಾರೆ. ಅದಕ್ಕೆ ನಮ್ಮ ಪ್ರಿನ್ಸಿಪಲ್ ಸೆಕ್ರೆಟರಿರವರೇ ಛೇರ್ಮನ್ ಆಗಿರುತ್ತಾರೆ. ಎರಡನೆಯದು ಹೈಪವರ್ ಕಮಿಟಿ ಅಂತ ಇರುತ್ತದೆ, ಮುಖ್ಯಮಂತ್ರಿಗಳು ಅದಕ್ಕೆ ಅಧ್ಯಕ್ಷರಾಗಿರುತ್ತಾರೆ. 50 ಕೋಟಿ ರೂ. ಇನ್‌ವೆಸ್ಟ್‌ಮೆಂಟ್‌ಗೆ ಬರುವ ಎಲ್ಲಾ ಪ್ರಾಜೆಕ್ಟ್‌ಗಳೂ ಸಿಂಗಲ್ ವಿಂಡೋ ಏಜೆನ್ಸಿನಲ್ಲಿ ಹಾಗೂ 50 ಕೋಟಿ ರೂ.ಗೆ ಮೇಲ್ಪಟ್ಟಿದ್ದೆಲ್ಲಾ ಚೀಫ್ ಮಿನಿಸ್ಟರು ಅಂತ ಇದೆ. ಈಗ ಯಾರೋ ರೆಪ್ಯುಟೆಡ್ ಕಂಪೆನಿಯವರು ಹೋದ ವಾರ ಬಂದಿದ್ದರು. ನನಗೆ ಅವರು ಯಾರು ಅನ್ನುವುದನ್ನೂ ಸಹಿತ ಗೊತ್ತಿಲ್ಲ ಅಧ್ಯಕ್ಷರೇ. ಕೆಐಡಿಬಿಯಿಂದ ಬೊಮ್ಮಸಂದ್ರದಲ್ಲಿ ಲ್ಯಾಂಡ್ ಬೇಕು ಅಂತ ಕೇಳಿದರು. ನಾನು ಪ್ರಾಮಾಣಿಕವಾಗಿ ಹೇಳುತ್ತಾ ಇದ್ದೇನೆ, ಸಿಪ್ಲಾ ಎಂಬುದು ಒಂದು ಬಹುರಾಷ್ಟ್ರೀಯ ಕಂಪೆನಿ, ನನಗೂ ಗೊತ್ತಿಲ್ಲ. My KIADB has already alloted 30 acres ಅಂತ ವಿಷಯ ನನಗೆ ತಿಳಿಸಿದರೇ ಹೊರತು ನನಗೆ ಗೊತ್ತಿಲ್ಲ. ಹಿಮಾಲಯ ಡ್ರಗ್ಸ್ ಕಂಪೆನಿ, ಅವರು ಮುಂದೆ ಬಂದಿದ್ದಾರೆ ನಾವು ರಾಮನಗರದಲ್ಲಿ ಯೂನಿಟ್ ಹಾಕುತ್ತೇವೆ ನಮಗೆ ನೂರು ಎಕರೆ ಜಮೀನು ಬೇಕು ಅಂತ, ಲ್ಯಾಂಡ್ ಅಕ್ವಿಜಿಶನ್ ನಡೆಯುತ್ತಿದೆ. ಮಾನ್ಯ ಕುಮಾರಸ್ವಾಮಿಯವರು ಅಲ್ಲಿರತಕ್ಕ ರೈತರನ್ನು ಕರೆದು ಮಾತನಾಡಿದ್ದಾರೆ. ಅಲ್ಲಿ ಕೆಲವು ರೈತರಿದ್ದಾರೆ, ಮನೆಗಳನ್ನು ಕಟ್ಟಿಕೊಂಡಿದ್ದಾರೆ, ನಾಲ್ಕೈದು ಎಕರೆ ಜಮೀನನ್ನು ಡಿನೋಟಿಫೈ ಮಾಡಬೇಕು ಅಂತ ಹೇಳುತ್ತಿದ್ದಾರೆ.

I am going to de-notify it. I may have to consider it. Otherwise, I have to re-habilitate them or I may have to de-notify it. ಇದನ್ನು ನಾನು ಮಾಡಬೇಕಾಗುತ್ತದೆ. ಏಕೆಂದರೆ ಎಲ್ಲದಕ್ಕೂ ಸಹಿತ ದುರುದ್ದೇಶವನ್ನೇ ಹೇಳುವುದು ಅಷ್ಟೇನು ನನಗೆ ಸರಿಕಂಡು ಬರಲಿಲ್ಲ ಅಧ್ಯಕ್ಷರೇ.

**ಶ್ರೀ ಎ. ಕೃಷ್ಣಪ್ಪ (ವರ್ತೂರು) :** 15 ದಿವಸಗಳ ಹಿಂದೆ ಎಲ್ಲಿ ಸಣ್ಣಸಣ್ಣ ತೋಟಗಳನ್ನು ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡು ಸುಮಾರು 50–60 ವರ್ಷಗಳಿಂದ ನನ್ನ ಕ್ಷೇತ್ರದಲ್ಲಿ ವಾಸ ಮಾಡುತ್ತಿದ್ದಾರೆ ಅಂಥದ್ದು 18 ಕುಟುಂಬಗಳದ್ದು ತಿಗಳ ಜನಾಂಗದ್ದು ಪಟ್ಟಿ ಮಾಡಿ ನಿಮಗೆ ಮತ್ತು ಮುಖ್ಯಮಂತ್ರಿಗಳಿಗೆ ನಾನೊಂದು ಮೆಮೊರ್ಯಾಂಡಂ ಕೊಟ್ಟಿದ್ದೇನೆ. ಡಿನೋಟಿಪೈ ಮಾಡಿ ಅವರಿಗೆ ಉಳಿಸಿಕೊಡಿ ಅಂತ ಹೇಳಿ.

**ಶ್ರೀ ಪಿ.ಜಿ.ಆರ್. ಸಿಂಧ್ಯಾ :** ಖಂಡಿತವಾಗಿ, ಅಧ್ಯಕ್ಷರೇ ಇಂತಹ ಕೆಲವು ಕೇಸ್‌ಗಳನ್ನು ನಾವು ಮಾಡಬೇಕಾಗುತ್ತದೆ. ಪ್ರತಿಯೊಂದು ಸಂದರ್ಭದಲ್ಲೂ ಸಹ ಸರ್ಕಾರ ಇದೇ ದುರುದ್ದೇಶದಿಂದ ಮಾಡಿದೆ ಎಂದು ಹೇಳುವುದು ಅಷ್ಟೊಂದು ಸೂಕ್ತವಾಗಿ ನನಗೆ ಕಾಣುವುದಿಲ್ಲ. ಆದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಈ ಕಡೆ ಸ್ವಲ್ಪ ಕಿವಿಗೊಡಬೇಕು. ಒಂದು ಭರವಸೆಯನ್ನು ಕೊಡುತ್ತೇನೆ. ನಿಮಗೆ ನಮ್ಮ ಧರ್ಮಸಿಂಗ್‌ರವರ ನಾಯಕತ್ವದ ಈ ಸರ್ಕಾರದಲ್ಲಿ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಇರಬಹುದು, ಮಾನ್ಯ ಸಚಿವರು ಲೋಕೋಪಯೋಗಿ ಹೇಳಿದ್ದಾರೆ, ಈ ಭೂಸ್ವಾಧೀನ, ಭೂ ಕೈ ಬಿಡುವ ವಿಚಾರಗಳೇನಿವೆ ಅದರಲ್ಲಿ we absolutely transparent. Anybody can come and see the file.

**ಶ್ರೀ ವಾಟಾಳ್ ನಾಗರಾಜ್ :** ನಾವು ಎಸ್.ಎಂ. ಕೃಷ್ಣರ ಕಾಲದ್ದರ ಬಗ್ಗೆ ಹೇಳುತ್ತಿದ್ದೇವೆ, ನೀವು ಪಾಪ ಧರಂಸಿಂಗರ ಕಾಲದ್ದು ಯಾಕೆ ಹೇಳುತ್ತೀರಿ? ಅವರ ಬಗ್ಗೆ ನಾವು ಮಾತನಾಡೇ ಇಲ್ಲ. ನೀವು ಅವರನ್ನು ಉಳಿಸಿಕೊಳ್ಳಲಿಕ್ಕೆ ಬೇಕಾದರೆ ಬಹಳ ಪ್ರಯತ್ನಪಡಿ.

**ಶ್ರೀ ಜೆ.ಸಿ. ಮಾಧುಸ್ವಾಮಿ :** ಸಾರ್, ಯಾರದೋ ಏನೋ ನೀವು ಹೊತ್ತಿಕೊಂಡು ಹೋಗುತ್ತಿದ್ದೀರಿ ಅಂತ ನಾವು ಮಾತನಾಡುತ್ತಿರುವುದು.

**ಶ್ರೀ ಪಿ.ಜಿ.ಆರ್. ಸಿಂಧ್ಯಾ :** ಬೆಂಗಳೂರು–ಮೈಸೂರು ಕಾರಿಡಾರ್ ಪ್ರಾಜೆಕ್ಟ್‌ನಲ್ಲಿ ಆ ಕಂಪೆನಿಯವರೇ ನಮಗೆ ಬೇಡ ಅಂತ ಹೇಳಿದ್ದಕ್ಕೆ 2300 ಎಕರೆ ಡಿನೋಟಿಫೈ ಮಾಡಿದ್ದೇವೆ. ಆದರೆ ಫಾರ್ಮರ್ಸ್ ರಿಕ್ವೆಸ್ಟ್ ಮೇಲೆ ಮಾಡಿರುವುದು ಕೇವಲ 33 ಎಕರೆ. This is all what has happened. ಬಾಕಿ ವಿಚಾರಗಳೇನಿವೆ ನಾನೇನೂ ಕಡತಗಳನ್ನು ಮುಚ್ಚಿಟ್ಟುಕೊಂಡು ಮಾಡಬೇಕು ವ್ಯವಹಾರ ಅಂತ ಉದ್ದೇಶ ನಮಗ್ಯಾರಿಗೂ ಇಲ್ಲ. ಯಾರಿಗೆ ಬೇಕಾದರೂ ನಮ್ಮ ಕಛೇರಿಯಿಂದ ಕಡತಗಳನ್ನು ತರಿಸಿ ತೋರಿಸುತ್ತೇವೆ. ತಾವೇ ಬಂದು ನೋಡಬಹುದು. ಯಾವುದೇ ತರಹದ ಲೋಪದೋಷಗಳಾಗಿದ್ದರೆ, ಅದನ್ನು ಸರಿಪಡಿಸಲಿಕ್ಕೆ ಎಲ್ಲಾ ತರಹದ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂಬ ಭರವಸೆ ಕೊಡುತ್ತೇನೆ.

**ಶ್ರೀ ಜಿ.ವಿ. ಶ್ರೀರಾಮರೆಡ್ಡಿ :** ನಿಮ್ಮ ಮೇಲೆ ಅಪಾದನೆಗಳನ್ನು ಮಾಡಲಿಲ್ಲ ನೀವ್ಯಾಕೆ ಟ್ರಾನ್ಸ್‌ಪರೆಂಟ್ ಅಂತ ಹೇಳಿಕೊಳ್ಳುತ್ತಿದ್ದೀರಿ? ನಿಮ್ಮ ಮೇಲೆ ನಾವು ಆಪಾದನೆ ಮಾಡಿದ್ದೇವಾ?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಲೋಕೋಪಯೋಗಿ, ಕಂದಾಯ ಮತ್ತು ಕೈಗಾರಿಕಾ ಮಂತ್ರಿಗಳು ಬಹಳ ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು, ಮಾಧುಸ್ವಾಮಿಯವರು ನಾಗರಾಜ್‌ರವರು ಶ್ರೀರಾಮರೆಡ್ಡಿಯವರು, ಹಾಗೂ ನಮ್ಮ ಜಯಪ್ರಕಾಶ್ ಹೆಗ್ಡೆ ಇವರೆಲ್ಲಾ ಮಾತನಾಡಿದ್ದಾರೆ. ಮೂರು ದಿವಸ ಕಾಲ ಇದರ ಮೇಲೆ ಚರ್ಚೆಯಾಗಿದೆ. ನಿಲುವಳಿ ಸೂಚನೆ ತಂದರು, ನಿಯಮ 69ರ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಚರ್ಚೆಗೆ ಅವಕಾಶ ಕೊಟ್ಟ ದಿವಸವೇ ಪ್ರಾರಂಭ ಮಾಡಿ ಅವತ್ತೇ ಮುಗಿಯಬೇಕಾಗಿತ್ತು. ಆದರೆ ತಾವು ದೊಡ್ಡ ಮನಸ್ಸು ಮಾಡಿ ಇವತ್ತು ಸದನದಲ್ಲಿ ಸಮಗ್ರವಾದ ಚರ್ಚೆಯಾಗಬೇಕು ಅಂತ ಮಾಡಿ ನಾವು ಸಮಾಧಾನವಾಗಿ ಅವರು ಹೇಳುತ್ತಿದ್ದ ಕಾಲದಲ್ಲಿ ಚಕಾರ ಶಬ್ದ ಎತ್ತಲಿಲ್ಲ. ಮಾನ್ಯ ಮಾಧುಸ್ವಾಮಿಯವರು ಈ ವಿಷಯದ ಬಗ್ಗೆ ಸಾಕಷ್ಟು ಅವರದೇ ರೀತಿಯಲ್ಲಿ ಹೇಳಿದರು. ಮತ್ತೆ ವಿರೋಧ ಪಕ್ಷದಲ್ಲಿದ್ದ ಸದಸ್ಯರೂ ಕೂಡ ಸಮ್ಮಿಶ್ರ ಸರ್ಕಾರದ ಉತ್ತರ ಹೇಗಿರುತ್ತದೆಂದು ನಿರೀಕ್ಷಣೆ ಮಾಡಿರಬಹುದು. ಸಮ್ಮಿಶ್ರ ಸರ್ಕಾರ ಎಷ್ಟು ಪರಿಪಕ್ವವಾಗಿದೆ; ಇವತ್ತು ಕರ್ನಾಟಕ ರಾಜ್ಯದಲ್ಲಿ ಯಾವ ರೀತಿಯಾಗಿ ಸರ್ಕಾರ ನಡೆಸಬೇಕು ಅಂತ ಒಗ್ಗಟ್ಟಿನಿಂದ ಒಂದಾಗಿ ಇವತ್ತು ನಾವು ಉತ್ತರ ಕೊಟ್ಟಿದ್ದೇವೆ. ಈಗ ಎರಡು ವಿಷಯಗಳು ನಮ್ಮೆದುರಿಗಿದೆ. ವಿರೋಧ ಪಕ್ಷದ ನಾಯಕರಿಗೆ ಬೇರೆ ತರಹ ಹೇಳಬೇಕಾಗಿದೆ. ಇದು 1995ರಲ್ಲಿ ಪ್ರಾರಂಭವಾಗಿದ್ದು ಎಂಓಯು ಆಗಿದ್ದು ಅದರ ಬಗ್ಗೆ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು–ಮೈಸೂರು ಕಾರಿಡಾರ್ ಪ್ರಾಜೆಕ್ಟ್ ಏನಿದೆ ಪ್ರಪ್ರಥಮವಾಗಿ ಪ್ರಾರಂಭವಾಯಿತು. ನಾನು ನಿನ್ನೆ ಹೇಳಿದೆ. ಬಾಂಬೆ ಪೂನಾ ಎಕ್ಸ್‌ಪ್ರೆಸ್ ಹೈವೆ ಇದೆ. Projected population ಗಮನದಲ್ಲಿಟ್ಟುಕೊಂಡು ಎಲ್ಲಾ ಕಡೆಗೆ ಈ ತರಹದ ಒಂದು ಪ್ರಗತಿಯನ್ನು ನಾವು ಮಾಡಬೇಕಾಗಿದೆ. 1987, 1995, 1997ರಲ್ಲಿ ಪ್ರಾರಂಭವಾಗಿ ನಾನು ಲೋಕೋಪಯೋಗಿ ಇಲಾಖೆ ಮಂತ್ರಿಯಾದ ಮೇಲೆ ಒಂದು ದಿನ ಆಗಿನ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣರಿಗೆ ಹೇಳಿದೆ, ಈ ಪ್ರಾಜೆಕ್ಟ್ ಬಗ್ಗೆ ಸಾಕಷ್ಟು ಎಡರುತೊಡರುಗಳಿದೆ, ನಿವಾರಣೆ ಮಾಡಬೇಕಾಗಿದೆ ಎಂದು ಅವರು ಉನ್ನತ ಮಟ್ಟದ ಅಧಿಕಾರಿಗಳ ಜೊತೆ ನಾಲ್ಕು ಸಭೆ ಮಾಡಿದ್ದಾರೆ. ಇವತ್ತು ಸಿಂಧ್ಯಾ ಅವರು ಹೇಳಿದ್ದಾರೆ, ದೇಶಪಾಂಡೆ ಹೇಳಿದ್ದಾರೆ ಮತ್ತು ರಮೇಶ್‌ಕುಮಾರೂ ಹೇಳಿದ್ದಾರೆ. ಇವತ್ತು ರಾಜ್ಯದ ಬೆಳವಣಿಗೆ ಮೂಲಭೂತ ಸೌಕರ್ಯ ಆಗುವ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾಡಬೇಕಾದರೆ persuasion ಬೇಕು. ಅದರ ಬಗ್ಗೆ ಮೇಲಿಂದ ಮೇಲೆ ಅಧಿಕಾರಿಗಳ ಮಟ್ಟದಲ್ಲಿ ಎಲ್ಲಾ ಕಡೆಗೂ ನಾವು ಆದೇಶಗಳನ್ನು ಕೊಡಬೇಕಾಗುತ್ತದೆ. They made a presentation before the Government. ಅಲ್ಲಿ 58 ಕೋಟಿ ರೂ. ಟ್ಯಾಕ್ಸ್ ವಿನಾಯಿತಿ ಬೇಕು, 20193 ಎಕರೆಗಳಷ್ಟು ಭೂಮಿ ಬೇಕು. ಅಲ್ಲಿ ಗಾರ್ಡನ್ ಲ್ಯಾಂಡ್ ಇದೆ, ವೆಟ್ ಭೂಮಿ ಇದೆ, ಸರ್ಕಾರದ ಜಮೀನಿದೆ ಇತ್ಯಾದಿ. ಯಾವುದಾದರೂ ಪ್ರಾಜೆಕ್ಟ್

ಮೇಲೆ 2000 ಕೋಟಿ ರೂ. ಏತಕ್ಕಾಗಿ ಖರ್ಚು ಮಾಡುತ್ತೇವೆ. Bangalore is the Capital of Karnataka. ಮೈಸೂರು ಕೂಡ ಐತಿಹಾಸಿಕ ಪರಂಪರೆಯ ಸಿಟಿ. ಒಂದು ಗಂಟೆ 15 ನಿಮಿಷದಲ್ಲಿ ವೇಗವಾಗಿ ಹೋಗತಕ್ಕಂತಹ ಪ್ರಾಜೆಕ್ಟ್ ಆಗಬೇಕು, ಈ ಸೌಲಭ್ಯ ಕೊಡಬೇಕೆಂಬ ದೃಷ್ಟಿಯಿಂದ ಇದನ್ನು ಕೈಗೊಂಡಿದ್ದು. ಅಲ್ಲಿ 5000 ಎಕರೆ ಸರ್ಕಾರಿ ಭೂಮಿ ಲೀಸ್ ಮೇಲೆ, ಈಗಾಗಲೇ ಕಂದಾಯ ಮಂತ್ರಿಗಳು ಹೇಳಿದ್ದಾರೆ, 30 ವರ್ಷವಾದ ಮೇಲೆ that will be the property of the Karnataka State ಆ ರೀತಿಯಾಗಿ ಮಾಡತಕ್ಕಂತಹ ಇದಕ್ಕೆ ಪ್ರೋತ್ಸಾಹ ಬೇಕು. ಅದರಲ್ಲಿ ಏನಾಗಿದೆ ಇವತ್ತು 88 ಕೋಟಿ ರೂ. ಖರ್ಚು ಮಾಡಿದ್ದಾರೆ. ಹತ್ತು ಒಂದು ಸಾವಿರ ಎಕರೆ ಜಮೀನು ಸ್ವಾಧೀನಕೊಟ್ಟಿದ್ದೇವೆ. ಇನ್ನು ಟೌನ್‌ಶಿಪ್‌ಗೆ ಕೊಡುವ ಬಗ್ಗೆ, ಎಲ್ಲಿ ಟೌನ್‌ಶಿಪ್? ಇಲ್ಲಿರುವ ಎಲ್ಲಾ ಹೈರೈಸ್ ಕಟ್ಟಡಗಳು ಖಾಲಿ ಬಿದ್ದಿವೆ, ಅಲ್ಲಿ ಯಾರಿಗೆ ಕಟ್ಟುತ್ತೀರಿ? ನಾವು ಅದಕ್ಕೆ ರೆಡ್ಯೂಸ್ ಮಾಡಿ 41 Km. peripheral area, ಅದು Highway No. 7 ರಲ್ಲಿ ಮಾಡಬೇಕಾದ್ದನ್ನೂ ಮಾಡಿದ್ದಾರೆ. ಮುಂದಿನ ತಿಂಗಳಲ್ಲಿ ಆಗಬಹುದು. ಅದಕ್ಕೆ 450 ಕೋಟಿ ರೂ. land acquisition cost ಆಗುತ್ತದೆ. ICICI Bankಗೆ pledge ಮಾಡಿದ್ದಾರೆ, ಡಿಪಾಜಿಟ್ ಮಾಡಿದ್ದಾರೆ ಕೆಲಸ ಆಗುತ್ತಾ ಇದೆ. ಅದರ ಬಗ್ಗೆ ಸರಿಯಾದ ರೀತಿಯಲ್ಲೇ ಆಗಿದೆ. ಮಾನ್ಯ ನಾಗರಾಜ್‌ರವರು ಹೇಳಿದ್ದಾರೆ ತಾವೂ ಹೇಳಿದ್ದೀರಿ. ಏನು, ಆಗಿನ ಮುಖ್ಯಮಂತ್ರಿಗಳ ಏನು vested interest ಇಲ್ಲ, ದೇವೇಗೌಡರು ಬರಲಿಲ್ಲ; ಜೆಎಚ್ ಪಟೇಲರು ಬರಲಿಲ್ಲ, ಈ ಪ್ರಾಜೆಕ್ಟ್‌ನಲ್ಲಿ ತಿಳಿದ ಮಟ್ಟಿಗೆ ನಾನು ಹೇಳಬೇಕಾದರೆ ಎಸ್.ಎಂ. ಕೃಷ್ಣರವರೂ ಕೂಡ ಏನು ಇಲ್ಲ. ನಮ್ಮ ಉದ್ದೇಶ ಒಂದು ಪ್ರಾಜೆಕ್ಟ್ ಬರಲಿ ಅಂತ, ಎರಡು ವಿಷಯಗಳು ಪ್ರಸ್ತಾಪವಾಗತಕ್ಕಂಥದ್ದು ಕಾರಿಡಾರ್ ಪ್ರಾಜೆಕ್ಟ್ ಮೊದಲು ಅದರ ಹೆಸರಿನಲ್ಲಿ ಕೆಐಎಡಿಬಿ ಡಿನೋಟಿಫೈ ಮಾಡಿದೆ; ಮನಸಿಗೆ ಬಂದಂತೆ ಜಮೀನು ಕೊಟ್ಟಿದ್ದೀರಿ, ಈಗ ಕೈಗಾರಿಕಾ ಸಚಿವರು ಹೇಳಿದ್ದಾರೆ 33 ಎಕರೆ ಜಮೀನು ಅಂತ ಇವತ್ತು ಮುಂಜಾನೆ 3 ಗಂಟೆಗಳ ಕಾಲ ನಾವೆಲ್ಲಾ ಕೂಡಿ ಚರ್ಚೆ ಮಾಡಿದ್ದೇವೆ. ಮಾನ್ಯ ಪ್ರಕಾಶ್ ಅವರು ಅಲ್ಲಿದ್ದರು, ಎಲ್ಲೆಲ್ಲಿ ಎಷ್ಟೆಷ್ಟು ಡಿನೋಟಿಫೈ ಮಾಡಲಾಗಿದೆ ಎಂದು ಬೆಂಗಳೂರಿನ ಬಿಡಿಎಯ ಅರ್ಕಾವತಿ ಬಡಾವಣೆ ಬಗ್ಗೆ ನೀವು ಪ್ರಸ್ತಾಪ ಮಾಡಿದ್ದೀರಿ. ಹಾಗೆಯೇ ಬೇರೆ ಬೇರೆ ಹೌಸಿಂಗ್ ಸೊಸೈಟಿಗಳಿವೆ, ಇಲ್ಲಿಯವರೆಗೆ ಬೆಂಗಳೂರು ನಗರದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ನೋಟಿಫೈ ಮಾಡಿದ ಮೇಲೆ ಡಿನೋಟಿಫೈ ಮಾಡಿರುವುದು ಎಷ್ಟಿದೆ ಎಂಬ ಬಗ್ಗೆ ಸಮಗ್ರವಾಗಿ ನಾವು ಚರ್ಚೆ ಮಾಡಿದ್ದೇವೆ. ನೀವು ಹೇಳುವ ಪ್ರತಿ ಮಾತಿಗೆ ನಾವು ಬೆಲೆ ಕೊಟ್ಟಿದ್ದೇವೆ. ಯಾಕೆಂದರೆ ಸದನದಲ್ಲಿ ಆಗುವ ಚರ್ಚೆಗೆ ನಾವು ಅದಕ್ಕೆ ಒಪ್ಪುವುದಿಲ್ಲ, ನೀವು ಹೇಳಿದ ಮಾತು ಸುಳ್ಳು ಅಂತ ರೀತಿಯಲ್ಲಿ ನಾವು ಯಾವುದೂ ಹೇಳುತ್ತಾ ಇಲ್ಲ. ಎಲ್ಲಾ ಗೌರವಾನ್ವಿತ ಸದಸ್ಯರೂ ರಾಜ್ಯದ ಬಗ್ಗೆ, ಸಮಸ್ಯೆಗಳ ಬಗ್ಗೆ, ಬೆಂಗಳೂರು ನಗರದ ಅಭಿವೃದ್ಧಿ ಬಗ್ಗೆ ನೀವೂ ಭಾಗಿಯಾಗಿದ್ದೀರಿ, ನಿಮ್ಮದೂ ಕೂಡ ಕಾಣಿಕೆ ಇದೆ. ಅಶೋಕ್‌ರವರು ಸಹ

ಉತ್ತರಹಳ್ಳಿ ಶಾಸಕರಾಗಿದ್ದಾರೆ. ಇವರು ಮಾನ್ಯ ವಾಟಾಳ್ ನಾಗರಾಜ್ ನಮ್ಮ ರಾಜಾಜಿನಗರ ಶಾಸಕರಾಗಿದ್ದರು. ಈಗ ಚಾಮರಾಜನಗರಕ್ಕೆ ಹೋಗಿದ್ದಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡಿದ್ದೇವೆ; ಇವತ್ತು ತಾವೇನು ಹೇಳುತ್ತಿದ್ದೀರಿ Special Court ಬೇರೆ ಆಗುಬೇಕು ಅಂತ, This Government is fully aware of the things. ಏನೇನಾಗಿದೆ ಎಷ್ಟರಮಟ್ಟಿಗೆ ನಾವು ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ನಾವು ಒಂದು ಕಠಿಣವಾದ ಕ್ರಮ ತೆಗೆದುಕೊಳ್ಳುತ್ತೇವೆ, ನಾವು ಬಂದ ಮೇಲೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ I have given a direction, ಇವತ್ತು ಭೂಸ್ವಾಧೀನತೆ ಮಾಡುವಾಗ ಎಲ್ಲಾ ಕಡೆ ನೀವು ಅವರ ಆಕ್ಷೇಪಗಳನ್ನು ಹಿಯರ್ ಮಾಡಬೇಕು ಅಂತ, ಏನಾಗಿದೆ ನಾಗರಾಜ್‌ರವರೇ, ನಾನು ಹೇಳುತ್ತಾ ಇದ್ದೇನೆ, ಇವತ್ತು ರೆವಿನ್ಯೂ ಕೋಡ್ ಇದೆ, ಅದಕ್ಕೆ ಕಮಿಟಿ ಆಧಾರದ ಮೇಲೆ ಅವರಿಗೆಲ್ಲಾ ಪರಿಹಾರ ಕೊಡುತ್ತಾರೆ. ಅಮೇಲೆ ಒಬ್ಬೊಬ್ಬರಿಗೆ ಎಕರೆಗೆ 10 ಲಕ್ಷ ರೂ ಮುಟ್ಟತಕ್ಕಂಥದ್ದು ಆಗಿದೆ. Already they have spent Rs. 82 crores. ಅದೂ ಇದೆ. ನಾವೇನೂ ಡಿಫೆಂಡ್ ಮಾಡುವುದಲ್ಲ, ಪ್ರಾಜೆಕ್ಟ್ ಇದೆ. ಆ ಪ್ರಾಜೆಕ್ಟ್‌ನವರನ್ನು ನಾನು ಮೂರ್ನಾಲ್ಕು ಸಲ ಕರೆಸಿದ್ದೆ, ಆಶೋಕ್ ಕೇಣಿ ಆತ ಅಮೇರಿಕದಲ್ಲಿ ಸೆಟಲ್ ಆಗಿದ್ದಾನೆ. ನೀನೇ ಹೇಳಪ್ಪ ಪತ್ರಕರ್ತರೆದುರಿಗೆ, ಎಲ್ಲಾ ಕಡೆ ಜರ್ನಲಿಸ್ಟ್ ಇದ್ದಾರೆ, ಏನು ಸಾರ್ ಕಾರಿಡಾರ್ ಕಾರಿಡಾರ್ ಪ್ರಾಜೆಕ್ಟ್ ಎಂದು ಹೇಳುತ್ತೀರಿ. ಎಲ್ಲಿ ಬರ್ತದೆ? ಅವರನ್ನು ಕರೆಸಿ ಪ್ರೆಸ್‌ನವರೆದುರಿಗೆ ಹೇಳಪ್ಪ ನೀನು ಎಂದು ಬರುತ್ತದೆ ಅಂತ. ಇದೂ ಅಯಿತು. We have taken lot of precautions. ಪ್ರಾಜೆಕ್ಟ್ ಬಗ್ಗೇನೇ ನಾವು ಮಾತನಾಡುತ್ತಾ ಹೋದರೆ ಯಾವ ಅಭಿವೃದ್ಧಿಯೂ ಆಗುವುದಿಲ್ಲ. ಯಾರೂ ಮುಂದೆ ಬರುವುದಿಲ್ಲ. ಈಗಾಗಲೇ ಸಿಂಧ್ಯಾ ಅವರು ಹೇಳಿದ ಹಾಗೆ ಮೊನ್ನೆ ನಾವು ದೆಹಲಿಯಲ್ಲಿದ್ದೆವು. ONGC ಅವರು Monday. 20 ಸಾವಿರ ಕೋಟಿ ರೂ. ಇನ್‌ವೆಸ್ಟ್ ಮಾಡಲು ಕರ್ನಾಟಕಕ್ಕೆ ಬರುತ್ತಾ ಇದ್ದಾರೆ. ಅದಕ್ಕೆ ನಾವೆಲ್ಲರೂ ಇವತ್ತು ಸಹಾಯ ಮಾಡಬೇಕಾಗುತ್ತದೆ, ದೊಡ್ಡ ಪ್ರಾಜೆಕ್ಟ್ ಬರಬೇಕಾಗುತ್ತದೆ, ಹಣವನ್ನೂ ಕೂಡ ಬೇರೆ ಕಡೆಯಿಂದ ತಂದು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಬೇಕಾಗುತ್ತದೆ, ಮಾಡುತ್ತೇವೆ. ಆದರೆ ಇವತ್ತಿನ ದಿವಸ ನೀವು ಹೇಳುವುದರಲ್ಲಿ ಹುರುಳಿಲ್ಲ, ಡಿನೋಟಿಫೈ ಮಾಡಿದ್ದೀರಿ ಮೊದಲು ನೋಟಿಫೈ ಯಾಕೆ ಮಾಡಿದಿರಿ? ಡಿನೋಟಿಫೈ ಯಾಕೆ ಮಾಡಿದಿರಿ ಎಂದರೆ ಅದೆಲ್ಲ ಎಲ್ಲಾ ಸಮಗ್ರವಾಗಿ ನಮ್ಮ ಸರ್ಕಾರದ ಗಮನಕ್ಕೆ ಬಂದಿದೆ. ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಎಲ್ಲೆಲ್ಲಿ ನಾವು ಗಮನಹರಿಸಬೇಕಾಗಿದೆ, ಯಾವ್ಯಾವ ಇಲಾಖೆಯಲ್ಲಿ ಆಗಿದೆ ಎಂಬ ಬಗ್ಗೆ ಅಧಿಕಾರಿಗಳ ಜೊತೆಯಲ್ಲಿ ಒಂದು ಚರ್ಚೆಯನ್ನೂ ಮಾಡಿದ್ದೇವೆ. ನಾವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಒಳ್ಳೆಯ ಚರ್ಚೆಯಾಗಿದೆ. ಬಹಳ ದಿವಸಗಳ ನಂತರ ಭೂ ಹಗರಣದ ಬಗ್ಗೆ ಸದನದಲ್ಲಿ ಮೂರು ದಿವಸಗಳ ಕಾಲ ಚರ್ಚೆಯಾಗಿದೆ. ರಾಜ್ಯದ ಮುಖ್ಯಮಂತ್ರಿ

ತಮಗೆ ಆಶ್ವಾಸನೆ ಕೊಡುತ್ತಾ ಇದ್ದೇನೆ. ನನ್ನ ಮೇಲೆ ವಿಶ್ವಾಸವಿಡಿರಿ. ನಾವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ನೀವು ಹೇಳುವ ಮಟ್ಟದಲ್ಲಿ ಆಗಿಲ್ಲ ಶ್ರೀರಾಮರೆಡ್ಡಿಯವರೇ. ಅಷ್ಟು ಹೇಳಿದ್ದೀರಲ್ಲಾ ಭಯಂಕರವಾಗಿ ಆಗಿದೆ ಅಂತ, ಅಷ್ಟು ಆಗಿಲ್ಲ. ಆದರೆ ಇವತ್ತು ಸರ್ಕಾರ ಅದನ್ನು ಗಮನಕ್ಕೆ ತೆಗೆದುಕೊಳ್ಳುತ್ತದೆ. ಒಳ್ಳೆಯ ದೀರ್ಘವಾದ ಚರ್ಚೆಯಾಗಿದೆ. ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

**ಅಧ್ಯಕ್ಷರು** : ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

(ಸದನವು 9 ಗಂಟೆ 45 ನಿಮಿಷಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

## 10) ಅನುಬಂಧ–1

530(632) : ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಬ್ರಹ್ಮಣ್ಯ ಗುಂಡ್ಯ ರಸ್ತೆ ಹಾಗೂ ಮೈಸೂರು ಬಂಟ್ವಾಳ ರಾಜ್ಯ ಹೆದ್ದಾರಿಯಲ್ಲಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸುಬ್ರಹ್ಮಣ್ಯ ಗುಂಡ್ಯ ರಸ್ತೆ ದುರಸ್ತಿ ಮಾಡಿಸಲು ಹಾಗೂ ಮೈಸೂರು ಬಂಟ್ವಾಳ ರಸ್ತೆಯಲ್ಲಿ ಸುಳ್ಯ ನಗರದ ಬಳಿ ಬೈಪಾಸ್ ರಸ್ತೆ ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಹಾಗಿದ್ದಲ್ಲಿ ಎಷ್ಟು ಸಮಯದಲ್ಲಿ ಸರ್ಕಾರ ಈ ಬಗ್ಗೆ ಕ್ರಮಕೈಗೊಳ್ಳಲಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಳೆದ ಎರಡು ತಿಂಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಭಾರೀ ಮಳೆ ಬಿದ್ದಿರುವ ಹಿನ್ನೆಲೆಯಲ್ಲಿ ಹಾಗೂ ಸುರಿಯುತ್ತಿರುವ ಮಳೆಯಿಂದಾಗಿ ಸದರಿ ಎರಡು ರಸ್ತೆಗಳ ಕೆಲವು ಭಾಗಗಳಲ್ಲಿ ಮತ್ತು ಅಲ್ಲಲ್ಲಿ ರಸ್ತೆ ಹಾಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಸುಬ್ರಹ್ಮಣ್ಯ ಗುಂಡ್ಯ (ಗುಂಡ್ಯ ಕುಲ್ಕುಂದ ಜಿಲ್ಲಾ ಮುಖ್ಯ ರಸ್ತೆ) ರಸ್ತೆ ಕಿಮೀ 0.00 ರಿಂದ 4.00 ಕಿಮೀ ನಲ್ಲಿ ಡಾಂಬರೀಕರಣ ಅಭಿವೃದ್ಧಿಗೆ ಈಗಾಗಲೇ ಸರ್ಕಾರದಿಂದ ಸಿಆರ್‌ಎಫ್ ಅಡಿಯಲ್ಲಿ ರೂ. 50.00 ಲಕ್ಷಗಳಿಗೆ ಅನುಮೋದನೆ ನೀಡಿದ್ದು ಕಾಮಗಾರಿಯನ್ನು ನಿಯಮಾನುಸಾರ ಟೆಂಡರ್ ಕರೆದು, ಕೈಗೆತ್ತಿಕೊಳ್ಳಲಾಗುತ್ತಿದೆ. ಹಾಗೂ ಉಳಿದಂತ ಭಾಗಗಳಲ್ಲಿ ರಸ್ತೆಯಲ್ಲಿ ಬಿದ್ದಿರುವಂತ ಗುಂಡಿಗಳನ್ನು ಮುಚ್ಚಲು, ಗುಂಡಿ ಮುಚ್ಚುವ ಕಾರ್ಯಕ್ರಮದಡಿಯಲ್ಲಿ ಈಗಾಗಲೇ ಟೆಂಡರ್ ಕರೆದಿದ್ದು ಸದ್ಯದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಮೈಸೂರು ಬಂಟ್ವಾಳ ರಸ್ತೆಯಲ್ಲಿ ಸುಳ್ಯ ನಗರದ ಬಳಿ ಬೈಪಾಸ್. ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ಅನುದಾನದ ಲಭ್ಯತೆಯನ್ನಾಧರಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

531(634) : ಶ್ರೀ ಅಂಗಾರ ಎಸ್ (ಸೂಳ್ಯ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದರ್ಬೆ ಸುಬ್ರಹ್ಮಣ್ಯ ರಸ್ತೆಯು ಪವಿತ್ರ ಪುಣ್ಯ ಕ್ಷೇತ್ರವಾದ ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಹೋಗುವ ರಸ್ತೆಯಾಗಿದ್ದು, ಈ ರಸ್ತೆಯಲ್ಲಿ ಹೊಂಡ ಗುಂಡಿಗಳು

ಬಿದ್ದಿರುವುದರಿಂದ ವಾಹನಗಳು ಓಡಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಡಾಂಬರೀಕರಣ ಮಾಡಿಸುವ ಬಗ್ಗೆ ಸರ್ಕಾರ ಕ್ರಮಕೈಗೊಳ್ಳಲಿದೆಯೇ, ಹಾಗೂ ಎಷ್ಟು ಸಮಯದಲ್ಲಿ ಕ್ರಮ ಕೈಗೊಳ್ಳಲಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಳೆದ ಎರಡು ತಿಂಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಭಾರೀ ಮಳೆ ಬಿದ್ದಿರುವ ಹಿನ್ನೆಲೆಯಲ್ಲಿ ಹಾಗೂ ಸುರಿಯುತ್ತಿರುವ ಮಳೆಯಿಂದಾಗಿ ಈ ರಸ್ತೆಯಲ್ಲಿ ಕೆಲವು ಭಾಗಗಳಲ್ಲಿ ಹೊಂಡ ಗುಂಡಿಗಳು ಬಿದ್ದಿರುವುದು ಗಮನಕ್ಕೆ ಬಂದಿರುತ್ತದೆ.

ಆ) ಸದರಿ ರಸ್ತೆಯ ಕಿಮೀ 27.00 ರಿಂದ 52.00 ಕಿಮೀನ ಆಯ್ದ ಭಾಗಗಳಲ್ಲಿ ಅಭಿವೃದ್ಧಿ : ಡಾಂಬರೀಕರಣ ಮಾಡುವ ಬಗ್ಗೆ ರೂ. 25.00 ಲಕ್ಷಗಳ ಮೊತ್ತಕ್ಕೆ ಸಿಆರ್‌ಎಫ್ ಅಡಿಯಲ್ಲಿ ಅನುಮೋದನೆ ದೊರೆತಿದ್ದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅನುದಾನದ ಲಭ್ಯತೆಯ ಮೇರೆಗೆ ಉಳಿದ ಭಾಗಗಳಲ್ಲಿ ದುರಸ್ಥಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

532(645) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಗಳನ್ನು ಸೌರಶಕ್ತಿ ಗ್ರಾಮಗಳಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಇದ್ದಲ್ಲಿ ಯೋಜನೆಯ ಬಗ್ಗೆ ಮಾಹಿತಿ ನೀಡುವುದು;

ಇ) ಯೋಜನೆಗೆ ತಗಲುವ ಅಂದಾಜು ವೆಚ್ಚ ಎಷ್ಟು ಹಾಗೂ ಯೋಜನೆಗೆ ತಗಲಿರುವ ವೆಚ್ಚವನ್ನು ಯಾವ ಮೂಲದಿಂದ ಭರಿಸಲಾಗುವುದು;

ಈ) ಪ್ರಾರಂಭದ ಹಂತದಲ್ಲಿ ಯೋಜನೆಯನ್ನು ಎಲ್ಲಿ ಜಾರಿಗೆ ತರಲಾಗುವುದು ಹಾಗೂ ಅದು ಎಂದಿನಿಂದ ಜಾರಿಯಾಗಲಿದೆ

ಉ) ಯೋಜನೆಯು ಹಾಲಿ ಅನುಷ್ಠಾನದಲ್ಲಿರುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದ ಗ್ರಾಮಗಳನ್ನು ಸೌರಶಕ್ತಿ ಉಪಕರಣಗಳಿಂದ ವಿದ್ಯುದ್ದೀಕರಣಗೊಳಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ಯೋಜನೆಯ ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಇ) ಈ ಯೋಜನೆಗೆ 100 ಕೋಟಿ ರೂ. ಗಳ ಅಂದಾಜು ವೆಚ್ಚವಾಗಲಿದ್ದು ಅದರಲ್ಲಿ 30 ವೆಚ್ಚವನ್ನು ಕೇಂದ್ರ ಸರ್ಕಾರದ ಎಂ.ಎನ್.ಇ.ಎಸ್.ನಿಂದ ಅನುದಾನದ ರೂಪದಲ್ಲಿ ಪಡೆದು ಉಳಿದ ಹಣವನ್ನು ರಾಜ್ಯ ಸರ್ಕಾರದಿಂದ ಪಡೆಯುವ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ರಾಜ್ಯದಲ್ಲಿ ಒಟ್ಟು 224 ವಿಧಾನ ಸಭಾ ಕ್ಷೇತ್ರಗಳಿದ್ದು ಅದರಲ್ಲಿ 200 ವಿಧಾನ ಸಭಾ ಕ್ಷೇತ್ರಗಳಲ್ಲಿ ಒಂದು ಕ್ಷೇತ್ರಕ್ಕೆ 4 ಅಥವಾ 5 ರಂತೆ ಹಳ್ಳಿಗಳನ್ನು

ಗುರುತಿಸಿ. ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಸೌರಶಕ್ತಿ ಗ್ರಾಮಗಳನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದ್ದು, ಸರ್ಕಾರದ ಅನುಮತಿ ಪಡೆದ ನಂತರ ಈ ಯೋಜನೆಯನ್ನು ಜಾರಿಗೆ ತರಲಾಗುವುದು.

ಉ) ಮಂಡಳಿ ವತಿಯಿಂದ ಪ್ರಾಯೋಗಿಕ ಆಧಾರದ ಮೇಲೆ 4 ಗ್ರಾಮಗಳನ್ನು ಸೋಲಾರ್ ಗ್ರಾಮಗಳನ್ನಾಗಿ (ರಾಯಚೂರು ಜಿಲ್ಲೆಯ ಕೋಲೂರು ಗ್ರಾಮ ಗುಲ್ಬರ್ಗಾ ಜಿಲ್ಲೆಯ ಬೋಡಬಂಡ ಗ್ರಾಮ, ಚಿಕ್ಕಮಗಳೂರು ಜಿಲ್ಲೆಯ ಹೆಮ್ಮಕ್ಕಿ ಗ್ರಾಮ ಹಾಗೂ ಮಂಡ್ಯ ಜಿಲ್ಲೆಯ ಹೆಚ್. ಕೋಡಿಹಳ್ಳಿ ಪರಿವರ್ತಿಸಲಾಗಿದೆ. ಸರ್ಕಾರದ ಅನುಮೋದನೆಯ ನಂತರ ಉಳಿದ ಗ್ರಾಮಗಳನ್ನು ಸೋಲಾರ್ ಗ್ರಾಮಗಳನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

**ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 656ಕ್ಕೆ ಅನುಬಂಧ**

1. ಯೋಜನೆ : 1000 ಗ್ರಾಮಗಳಿಗೆ 100 ಮನೆಗಳಿರುವ (ಸಾರ್ವಜನಿಕ ಕಟ್ಟಡಗಳನ್ನೊಳಗೊಂಡು) ಒಂದು ಗ್ರಾಮಕ್ಕೆ ಸೌರಶಕ್ತಿ ಮೂಲಕ ಮನೆ ಮತ್ತು ಬೀದಿ ದೀಪಗಳ ವ್ಯವಸ್ಥೆ.

2. ವ್ಯವಸ್ಥೆ : ಅ) ಪ್ರತಿ ಮನೆಗೆ 7 ಮೆಗಾ ವ್ಯಾಟ್ ಸಾಮರ್ಥ್ಯದ ಎರಡಿ ದೀಪಗಳು ಹಾಗೂ ಸಂಬಂಧಿಸಿದ ಪರಿಕರಗಳು ಅಂದರೆ ಚಾರ್ಜ್ ಕಂಟ್ರೋಲರ್, ಬ್ಯಾಟರಿ 30 ಎ.ಎಚ್. 18 ವ್ಯಾಟ್ ಪ್ಯಾನಲ್. ಎರಡು ನಿಯಂತ್ರಿತ ಸ್ವಿಚ್ಚುಗಳು ಮತ್ತು ವೈರಿಂಗ್ ಸಹಿತವಾಗಿ, ಪ್ರತಿ ದಿನ ಸಂಜೆ 6 ರಿಂದ 10 ರವರೆಗೆ ಉರಿಯುವುದು.

ಆ) 11 ಮೆಗಾ ವ್ಯಾಟ್ ಸಾಮರ್ಥ್ಯದ 10 ಬೀದಿ ದೀಪಗಳು ಹಾಗೂ ಅದಕ್ಕೆ ಸಂಬಂಧಿಸಿದ ಪರಿಕರಗಗಳು ಅಂದರೆ ಚಾರ್ಜ್ ಕಂಟ್ರೋಲರ್, ಬ್ಯಾಟರಿ 80 ಎ.ಎಚ್. 74 ವ್ಯಾಟ್ ಪ್ಯಾನಲ್ ಮತ್ತು ವೈರಿಂಗ್ ಸಹಿತವಾಗಿ. ಇವುಗಳು ಸ್ವಯಂ ಚಾಲಿತವಾಗಿ ಸಂಜೆಯಿಂದ ಬೆಳಗಿನ ಜಾವದವರೆಗೆ ಕಾರ್ಯ ನಿರ್ವಹಿಸುತ್ತದೆ.

3. ಸಾಂಪ್ರದಾಯಿಕ ವಿದ್ಯುಚ್ಛಕ್ತಿ ಉಳಿತಾಯ : ಒಟ್ಟಾರೆ ತಿಂಗಳೊಂದಕ್ಕೆ (ವಿತರಣೆ ನಷ್ಟ 33 ಸೇರಿ) ಸುಮಾರು 1700 ಯೂನಿಟ್ ವಿದ್ಯುಚ್ಛಕ್ತಿ ಉಳಿತಾಯವಾಗುತ್ತದೆ. ಇದರಿಂದ ಪ್ರತಿ ಗ್ರಾಮಕ್ಕೆ ತಿಂಗಳೊಂದಕ್ಕೆ ರೂ. 4500 ಉಳಿತಾಯವಾಗಲಿದ್ದು, ಸದರಿ ಉಳಿತಾಯವಾದ ವಿದ್ಯುಚ್ಛಕ್ತಿಯನ್ನು ವಾಣಿಜ್ಯೋದ್ಯಮಕ್ಕೆ ಸರಬರಾಜು ಮಾಡಿದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಪ್ರತಿ ತಿಂಗಳಿಗೆ ರೂ. 9,500/- ಆದಾಯ ಬರುತ್ತದೆ. ಒಟ್ಟಾರೆ ತಿಂಗಳೊಂದಕ್ಕೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಪ್ರತಿ ಗ್ರಾಮದಿಂದ ಸುಮಾರು ರೂ. 5,000/- ಅಧಿಕ ಆದಾಯ ಬರುತ್ತದೆ.

4. ಅಂದಾಜು ವೆಚ್ಚ : ಪ್ರತಿ ಗ್ರಾಮಕ್ಕೆ ರೂ. 10 ಲಕ್ಷಗಳು.

5. ಕೇಂದ್ರ ಸರ್ಕಾರದ ಸಹಾಯ ಧನ : ರೂ. 3,31,000/-

6. ಕರ್ನಾಟಕ ಸರ್ಕಾರದ ಹಣ ಹೂಡಿಕೆ : ರೂ. 6,69,000/-

7. 1000 ಗ್ರಾಮಗಳಿಗೆ ಒಟ್ಟು ಅಂದಾಜು ವೆಚ್ಚ : 1000 ಗ್ರಾಮಗಳಿಗೆ ರೂ. 100 ಕೋಟಿಗಳು ಇದರಲ್ಲಿ ರೂ. 33.1 ಕೋಟಿ ಕೇಂದ್ರ ಸರ್ಕಾರದ ಸಹಾಯ ಧನ 66.9 ಕೋಟಿ ಕರ್ನಾಟಕ ಸರ್ಕಾರದ ಹೂಡಿಕೆ.

8 ಹೂಡಿಕೆಯ ಮರು ಸಂದಾಯ : ಒಂದು ಹಳ್ಳಿಯಿಂದ ತಿಂಗಳೊಂದಕ್ಕೆ ರೂ. 60.000 ಅಧಿಕ ಆದಾಯ ಬರಲಿದ್ದು, 10 ವರ್ಷಗಳಲ್ಲಿ ಸರ್ಕಾರದ ಹೂಡಿಕೆ ಹಣ ವಾಪಸ್ಸು ಬರುತ್ತದೆ.

9. ನಿರ್ವಹಣಾ ಸಂಸ್ಥೆ : ಗ್ರಾಮ ಪಂಚಾಯಿತಿಯಿಂದ ನೇಮಿಸಲ್ಪಟ್ಟ ಒಂದು ಸಮಿತಿ ಅಥವಾ ನಿರುದ್ಯೋಗಿ ಯುವ ಜನರು ನೋಂದಾಯಿಸಿದ ಸಹಕಾರ ಸಂಸ್ಥೆ.

10. ನಿರ್ವಹಣಾ ವೆಚ್ಚ : ಪ್ರತಿ 5-ವರ್ಷಕ್ಕೊಮ್ಮೆ ಬ್ಯಾಟರಿ ಬದಲಾಯಿಸಬೇಕಾಗಿದ್ದು, ಇದಕ್ಕೆ ತಗಲುವ ವೆಚ್ಚ ರೂ. 2,40,000/– ಪ್ರತಿ ಮನೆಯಿಂದ ತಿಂಗಳೊಂದಕ್ಕೆ ರೂ. 40/– ವಸೂಲಿಯಂತೆ ಈ ವೆಚ್ಚವನ್ನು ಭರಿಸಬಹುದಾಗಿದೆ.

11. ಯೋಜನೆಯಿಂದ ಅನುಕೂಲಗಳು : ಸ್ವಾಭಾವಿಕವಾಗಿ ದೊರಕುವ ಸೌರಶಕ್ತಿಯ ಉಪಯೋಗ. ಪರಿಸರ ಸ್ನೇಹಿ, ವಿಕೇಂದ್ರಿಕೃತ ವಿದ್ಯುಚ್ಛಕ್ತಿ ಸರಬರಾಜು, ಪ್ರಸರಣೆಯಲ್ಲಾಗುವ ನಷ್ಟದ ಉಳಿತಾಯ. ಉದ್ಯೋಗಾವಕಾಶಗಳು ಮತ್ತು ಗ್ರಾಮೀಣ ಪ್ರದೇಶದ ಅಭಿವೃದ್ಧಿ.

12 ಯೋಜನೆಯ ಅನುಷ್ಠಾನ : ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯಿಂದ.

13. ಸದರಿ ಯೋಜನೆಗಳನ್ನು ಮುಂದಿನ 2 ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದ ಪ್ರಸಕ್ತ ಜಾರಿಯಲ್ಲಿರುವ ಎಸ್.ಪಿ.ವಿ. ಮನೆ ದೀಪ ವ್ಯವಸ್ಥೆಯ ಯೋಜನೆಯಡಿಯಲ್ಲಿ ಕಾರ್ಯಗತಗೊಳಿಸಬಹುದು.

534(650) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೆರೆಗಳ ಮತ್ತು ಕೆರೆಅಂಗಳವನ್ನು ಅಕ್ರಮವಾಗಿ ಒತ್ತುವರಿ ಮಾಡಿ ಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರ್ಕಾರದ ಗಮನಕ್ಕೆ ಬಂದಿರುವ ಅಕ್ರಮ ಒತ್ತುವರಿ ಪ್ರಕರಣಗಳು ಯಾವುವು; (ವಿವರ ನೀಡುವುದು)

ಇ) ಈ ರೀತಿಯ ಅಕ್ರಮ ಒತ್ತುವರಿ ಪ್ರಕರಣಗಳನ್ನು ತಡೆಯಲು ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳು ಯಾವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಂದಿದೆ.

ಆ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುವ 87 ಕೆರೆಗಳಲ್ಲಿ ಒತ್ತುವರಿ ಪ್ರಕರಣಗಳಿವೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕಂದಾಯ ಇಲಾಖೆ ಹಾಗೂ ಭೂ ದಾಖಲೆಗಳ ಅಧಿಕಾರಿಗಳ ಸಹಾಯದಿಂದ ಎಲ್ಲಾ ಕೆರೆಗಳ ಸರ್ವೆ ಮಾಡಿಸಿ ಹದ್ದುಬಸ್ತು ಕಲ್ಲುಗಳನ್ನು ನೆಡಿಸುವುದರ ಮೂಲಕ ಒತ್ತುವರಿಯಾದ ಜಮೀನನ್ನು ತೆರವುಗೊಳಿಸಲು ಉದ್ದೇಶಿಸಿದೆ.

**ವಿಧಾನ ಸಭಾ ಸದಸ್ಯರಾದ ಶ್ರೀ ಅರಗ ಜ್ಞಾನೇಂದ್ರ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 650ಕ್ಕೆ ಅನುಬಂಧ**

| ಕ್ರ. ಸಂ. | ಜಿಲ್ಲೆ/ತಾಲ್ಲೂಕು | ಕೆರೆಯ ಹೆಸರು | ಒತ್ತುವರಿ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ) | ತೆರವು ಗೊಳಿಸಿದ ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ) | ಕೈಗೊಂಡ ಕ್ರಮ |
|---|---|---|---|---|---|
| | | **ಸಣ್ಣ ನೀರಾವರೀ ದಕ್ಷಿಣ ವಲಯ ಬೆಂಗಳೂರು ಜಿಲ್ಲೆ** | | | |
| 1. | ಬೆಂಗಳೂರು ದಕ್ಷಿಣ | ಬೇಗೂರು ಚಿಕ್ಕೆರೆ | 0.30 | 0.30 | ಒತ್ತುವರಿ ತೆರವು ಗೊಳಿಸಿದ |
| 2. | ಬೆಂಗಳೂರು ದಕ್ಷಿಣ | ಬೆನ್ನಿಗಾನಹಳ್ಳಿ ಕೆರೆ | 0.25 | 0.25 | ಒತ್ತುವರಿ ತೆರವು ಗೊಳಿಸಿದ |
| 3. | ಬೆಂಗಳೂರು ದಕ್ಷಿಣ | ದೊಡ್ಡನಕ್ಕುಂದಿ ಕೆರೆ | 0.20 | 0.20 | ಒತ್ತುವರಿ ತೆರವು ಗೊಳಿಸಿದ |
| 4. | ಬೆಂಗಳೂರು ಉತ್ತರ | ಸಿಂಗಸಂದ್ರ ಕೆರೆ | 0.40 | 0.40 | ಒತ್ತುವರಿ ತೆರವು ಗೊಳಿಸಿದ |
| 5. | ಆನೇಕಲ್ | ಜಿಗಣೆಕೆರೆ | 0.75 | 0.75 | ಒತ್ತುವರಿ ತೆರವು ಗೊಳಿಸಿದ |
| | | **ಕೋಲಾರ ಜಿಲ್ಲೆ** | | | |
| 6. | ಕೋಲಾರ | ಬೈರಂಡಹಳ್ಳಿ ಕೆರೆ | 17.07 | 17.07 | ಒತ್ತುವರಿ ತೆರವು ಗೊಳಿಸಿದ |
| 7. | ಕೋಲಾರ | ಕಾಮಂಡಹಳ್ಳಿ ಕೆರೆ | 3.11 | 3.11 | ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ |
| 8. | ಕೋಲಾರ | ಕೋಲಾರ ಅಮಾನಿಕೆರೆ | 3.41 | – | ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ |
| 9. | ಕೋಲಾರ | ಕೋಡಿ ಕಣ್ಣೂರು ಕೊಡಗಿಕೆರೆ | 2.72 | – | ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ |
| 10. | ಕೋಲಾರ | ಮದವಾಡಿ ದೊಡ್ಡಕೆರೆ | 6.47 | – | ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ |

| 1 | 2 | 3 | 4 | 5 | 6 |
|---|---|---|---|---|---|
| 11. | ಕೋಲಾರ | ಚಿಲ್ಲಪಲ್ಲಿ ಅಮಾನಿಕೆರೆ | 4.79 | – | ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ |
| 12. | ಕೋಲಾರ | ಸೋಮಾಂಬುದಿ ಅಗ್ರಹಾರ ಕೆರೆ | 10.85 | – | ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ |
| 13. | ಮುಳಬಾಗಿಲು | ನಂಗಲಿದೊಡ್ಡಕೆರೆ | 9.00 | 9.00 | ತೆರವುಗೊಳಿಸಿದೆ |
| 14. | ಚಿಕ್ಕಬಳ್ಳಾಪುರ | ಹೊಸಹುಡ್ಯಕೆರೆ | 9.97 | – | ತೆರವುಗೊಳಿಸಲು ಕಂದಾಯ ಇಲಾಖೆಯನ್ನು ಕೋರಲಾಗಿದೆ |
| 15. | ಚಿಕ್ಕಬಳ್ಳಾಪುರ | ಅಮಾನಿಗೋಪಾಲ ಕೃಷ್ಣ ಕೆರೆ | 57.00 | – | |
| 16. | ಚಿಕ್ಕಬಳ್ಳಾಪುರ | ಅಮಾನಿ ಕಂದವಾರ ಕೆರೆ | 26.00 | – | |
| 17. | ಚಿಕ್ಕಬಳ್ಳಾಪುರ | ಮುಷ್ಟೂರು ಕೆರೆ | 9.97 | – | |
| 18. | ಗೌರಿಬಿದನೂರು | ವಾಟದ ಹೊಸ ಹಳ್ಳಿ ಅಮಾನಿ ಕೆರೆ | 24.00 | – | |
| 19. | ಗೌರಿಬಿದನೂರು | ತಿಪ್ಪಗಾನಹಳ್ಳಿ ಕೆರೆ | 4.51 | – | ತೆರವುಗೊಳಿಸಲು ಕಂದಾಯ ಇಲಾಖೆಯನ್ನು ಕೋರಲಾಗಿದೆ |
| 20. | ಗೌರಿಬಿದನೂರು | ಬಿಸಲಹಳ್ಳಿ ಕೆರೆ | 1.72 | | |
| 21. | ಗೌರಿಬಿದನೂರು | ಭೂಮೇನಹಳ್ಳಿ ಕೆರೆ | 1.74 | – | |
| 22. | ಶಿಡ್ಲಘಟ್ಟ | ಅಮಾನಿ ಭದ್ರನಕೆರೆ | 165.90 | – | |
| 23. | ಶಿಡ್ಲಘಟ್ಟ | ಶಿಡ್ಲಘಟ್ಟ ಅಮ್ಮನಕೆರೆ | 79.00 | | |

| 1 | 2 | 3 | 4 | 5 | 6 |
|---|---|---|---|---|---|
| | | **ತುಮಕೂರು ಜಿಲ್ಲೆ** | | | |
| 24. | ತುಮಕೂರು | ತುಮಕೂರು ಅಮಾನಿಕೆರೆ | 5.06 | – | |
| 25. | ಚಿ.ನಾ.ಹಳ್ಳಿ | ಸಿದ್ಧನಕಟ್ಟೆ | 4.80 | – | |
| 26. | ಚಿ.ನಾ.ಹಳ್ಳಿ | ಗೋಪಾಲಪುರ ಕೆರೆ | 0.08 | – | |
| 27. | ಚಿ.ನಾ. ಹಳ್ಳಿ | ಹುಳಿಯಾರು ಅಮಾನಿಕೆರೆ | 0.45 | – | |
| 28. | ಚಿ.ನಾ. ಹಳ್ಳಿ | ಸಿಂಗದಹಳ್ಳಿ ದಳವಾಯಿಕೆರೆ | 4.86 | – | |
| 29. | ತಿಪಟೂರು | ಗುರುಗದಹಳ್ಳಿ ಕೆರೆ | 4.86 | – | |
| 30. | ತಿಪಟೂರು | ತಿಪಟೂರು ಕೆರೆ | 4.33 | – | |
| 31. | ತಿಪಟೂರು | ಬೆಳಗರಹಳ್ಳಿ ಕೆರೆ | 0.81 | – | |
| 32. | ಗುಬ್ಬಿ | ಪ್ರಭುವಿನಹಳ್ಳಿ ಕೆರೆ | 0.10 | – | |
| 33. | ಚಿ.ನಾ. ಹಳ್ಳಿ | ಮಾದಿಹಳ್ಳಿ ಕೆರೆ | 2.41 | – | |
| 34. | ತುಮಕೂರು | ಮರಳೂರು ಅಮಾನಿಕೆರೆ | 0.18 | – | |
| 35. | ಕುಣಿಗಲ್ | ಕುಣಿಗಲ್ ದೊಡ್ಡಕೆರೆ | 0.79 | – | |
| 36. | ತುಮಕೂರು | ಹೆಬ್ಬಾಕ ಅಮಾನಿಕೆರೆ | 5.11 | – | |
| 37 | ತುಮಕೂರು | ದೇವರಾಯನ ಪಟ್ಟಣ ಕೆರೆ | – | – | |
| 38. | ತುಮಕೂರು | ಮೈದಾಳ ಅಮಾನಿಕೆರೆ | – | – | ಹೇಮಾವತಿ ನಾಲಾವಲಯಕ್ಕೆ ಹಸ್ತಾಂತರಿಸಿದೆ |
| 39 | ಕೊರಟಗೆರೆ | ಗಟ್ಲಹಳ್ಳಿ ಕೆರೆ | 11.05 | – | |
| 40 | ಶಿರಾ | ರಾಮಲಿಂಗಾಪುರ ಕೆರೆ | 53.46 | – | |

| 1 | 2 | 3 | 4 | 5 | 6 |
|---|---|---|---|---|---|
| | | **ಶಿವಮೊಗ್ಗ ಜಿಲ್ಲೆ** | | | |
| 41. | ಶಿವಮೊಗ್ಗ | ಹೆಗ್ಗರೆ ಜೊರಡಿ | 16.79 | 16.79 | |
| 42. | ಸಾಗರ | ಬೊಮ್ಮನಾಯ್ಕನ ಕೆರೆ | 1.39 | 1.37 | |
| 43. | ತೀರ್ಥಹಳ್ಳಿ | ಅರಗ ಹಿರೇಕೆರೆ | 0.67 | 0.67 | |
| 44. | ಶಿಕಾರಿಪುರ | ನಿಂಟಿಗೊಂದಿ ದೊಡ್ಡಕೆರೆ | 4.71 | – | |
| 45. | ಶಿಕಾರಿಪುರ | ಹುಚ್ಚರಾಯನಕೆರೆ | 1.24 | – | ಅಳತೆ ಮಾಡಿ ಕಂದಾಯ ಇಲಾಖೆಗೆ ತೆರವುಗೊಳಿಸಲು ಸಲ್ಲಿಸಿದೆ |
| 46. | ಶಿವಮೊಗ್ಗ | ಸೋಮಿನಕೊಪ್ಪ ಬಳಸೋಕೆರೆ | – | – | |
| | | **ಹಾಸನ ಜಿಲ್ಲೆ** | | | |
| 47. | ಹಾಸನ | ಸತ್ಯಮಂಗಲ ಕೆರೆ | 1.54 | – | |
| 48. | ಹಾಸನ | ತೇಜೂರು ಕೆರೆ | 0.71 | – | ತೆರವುಗೊಳಿಸಲು ಕಂದಾಯ ಇಲಾಖೆಯನ್ನು ಕೋರಲಾಗಿದೆ |
| 49. | ಹಾಸನ | ಹಂದಿನ ಕೆರೆ | 3.17 | – | |
| 50. | ಹಾಸನ | ಹುಣಸಿನಕೆರೆ | 6:68 | – | |
| 51. | ಹಾಸನ | ಹೊಳಲು ದೊಡ್ಡಕೆರೆ | 3.20 | – | |
| 52. | ಬೇಲೂರು | ವಿಷ್ಣು ಸಮುದ್ರ ಕೆರೆ | 0.37 | – | |
| 53. | ಬೇಲೂರು | ಹಳೇಬೀಡು ದೊಡ್ಡಕೆರೆ | 13.34 | – | |
| 54. | ಬೇಲೂರು | ಹಣಿಕೆರೆ | 0.69 | – | |
| 55. | ಬೇಲೂರು | ಘಟ್ಟದಹಳ್ಳಿ ದೊಡ್ಡಕೆರೆ | 2.68 | – | |
| 56. | ಬೇಲೂರು | ಅರಸೀಕೆರೆ ದೊಡ್ಡಕೆರೆ | 2.43 | – | |

| 1 | 2 | 3 | 4 | 5 | 6 |
|---|---|---|---|---|---|
| 57. | ಬೇಲೂರು | ಅಡಗೂರು ಕೆರೆ | 1.83 | – | |
| 58. | ಆಲೂರು | ಹೊಸಹಳ್ಳಿ ದೊಡ್ಡಕೆರೆ | 0.60 | – | |
| 59. | ಆಲೂರು | ಗಂಗರಕೆರೆ | – | – | |
| 60. | ಚನ್ನರಾಯಪಟ್ಟಣ | ಹಿರೇಸಾವೆ ದೊಡ್ಡಕೆರೆ | 6.00 | – | |
| 61. | ಸಕಲೇಶಪುರ | ಬೈಕೆರೆ ಊರ ಮುಂದಿನ ಕೆರೆ | – | – | |
| 62. | ಸಕಲೇಶಪುರ | ಬೈಕೆರೆ ದೇವರಕೆರೆ | – | – | |
| 63. | ಸಕಲೇಶಪುರ | ಬೈಕೆರೆ ಕಿರಗದ್ದೆಕೆರೆ | – | – | |
| 64. | ಸಕಲೇಶಪುರ | ಬೆಳಗೋಡು ಈಶ್ವರಹಳ್ಳಿ ಕೆರೆ | – | – | |
| 65. | ಸಕಲೇಶಪುರ | ಮಟ್ಟಸಾಗರ ಚಂದ್ರಾಪುರ ಕೆರೆ | – | – | |
| 66. | ಸಕಲೇಶಪುರ | ಮಟ್ಟಸಾಗರ ಸಾವಿತ್ರಮ್ಮನ ಕೆರೆ | – | – | |
| 67. | ಸಕಲೇಶಪುರ | ಮಟ್ಟಸಾಗರ ಪುರದಮ್ಮನ ಕೆರೆ | – | – | |
| 68. | ಸಕಲೇಶಪುರ | ಹಳೇಬೇಲೂರು ಊರಬಾಗಿಲ ಕೆರೆ | – | – | |
| 69. | ಸಕಲೇಶಪುರ | ಮಟ್ಟಸಾಗರ ತೂಬಿನಕೆರೆ | – | – | |
| 70. | ಸಕಲೇಶಪುರ | ಮಟ್ಟಸಾಗರ ದೊಡ್ಡಕೆರೆ | – | – | |
| | | **ಉಡುಪಿ ಜಿಲ್ಲೆ** | | | |
| 71. | ಕುಂದಾಪುರ | ಕಂದವಾರ ಗ್ರಾಮದ | 0.59 | – | |
| | | **ಕೊಡಗು ಜಿಲ್ಲೆ** | | | |
| 72. | ಸೋಮವಾರ ಪೇಟೆ | ದೊಡ್ಡಮಳ್ತೆ ಗ್ರಾಮದ ಹೊನ್ನಮ್ಮ ಕೆರೆ | 0.17 | – | ತೆರವುಗೊಳಿಸಲು ಕಂದಾಯ ಇಲಾಖೆಯನ್ನು ಕೋರಲಾಗಿದೆ. |
| | | **ಸಣ್ಣ ನೀರಾವರಿ ಉತ್ತರ ವಲಯ** | | | |
| | | **ಬೆಳಗಾಂ ಜಿಲ್ಲೆ** | | | |
| 1. | ಖಾನಾಪುರ | ರೂಲಗಿ | – | – | ವಿವರ ಸರ್ವೆ ಕೆಲಸ ಕೈಗೊಂಡು ವರದಿಯನ್ನು ಸಲ್ಲಿಸ ಲಾಗುವುದು. |

| 1 | 2 | 3 | 4 | 5 | 6 |
|---|---|---|---|---|---|
| 2. | ಖಾನಾಪುರ | ಅವರೋ | – | – | ವಿವರ ಸರ್ವೆ ಕೆಲಸ ಕೈಗೊಂಡು ವರದಿಯನ್ನು ಸಲ್ಲಿಸ ಲಾಗುವುದು. |
| 3. | ಖಾನಾಪುರ | ತಾರಿಶ್ವಾಡ | – | – | ವಿವರ ಸರ್ವೆ ಕೆಲಸ ಕೈಗೊಂಡು ವರದಿಯನ್ನು ಸಲ್ಲಿಸ ಲಾಗುವುದು. ಹಾಗೂ ಒತ್ತುವರಿ ತೆರವುಗೊಳಿಸಲು ನೋಟೀಸ್ ನೀಡಲಾಗಿದೆ. |
| 4. | ಖಾನಾಪುರ | ಬಾಚೋಳಿ | – | – | ವಿವರ ಸರ್ವೆ ಕೆಲಸ ಕೈಗೊಂಡು ವರದಿಯನ್ನು ಸಲ್ಲಿಸ ಲಾಗುವುದು. |
| 5. | ಖಾನಾಪುರ | ಸ.ನಂ. 343 ಇಟಗಿ | – | – | ಸರ್ವೆ ಕೆಲಸ ಕೈಗೊಂಡು ವರದಿ ಸಲ್ಲಿಸ ಲಾಗುವುದು. |
| 6. | ಬೆಳಗಾವ | ಕಿಲ್ಲಾಕೆರೆ | – | – | ಒತ್ತುವರಿಯನ್ನು ಈಗಾಗಲೇ ತೆರವುಗೊಳಿಸಿದೆ |
| 7. | ಬೆಳಗಾಂವ | ಆನೆಗುಂದಿ | – | – | ಒತ್ತುವರಿಯನ್ನು ಈಗಾಗಲೇ ತೆರವುಗೊಳಿಸಿದೆ |
| 8. | ಹುಕ್ಕೇರಿ | ಕೆರೆಕಿಟ್ನಿ | – | – | ಒತ್ತುವರಿಯನ್ನು ಈಗಾಗಲೇ ತೆರವುಗೊಳಿಸಿದೆ |

| 1 | 2 | 3 | 4 | 5 | 6 |
|---|---|---|---|---|---|
| 9. | ಬೈಲಹೊಂಗಲ | ಕಿತ್ತೂರು ಸ.ನಂ. 91 | – | – | ರಾಷ್ಟ್ರೀಯ ಹೆದ್ದಾರಿ 4ರ ಅಗಲಿಕರಣ ಕಾರ್ಯಧಲ್ಲಿ ಸದರಿ ಒತ್ತುವರಿಗಳನ್ನು ತೆರವುಗೊಳಿಸ ಲಾಗುತ್ತಿದೆ. |
| 10. | ಬೆಳಗಾಂವ | ಎಳ್ಳೂರು ಕೆರೆ ರಿ.ಸ. 1150 | – | – | ಒತ್ತುವರಿ ತೆರವು ಗೊಳಿಸಲು ಸಣ್ಣ ನೀರಾವರಿ ಉಪ ವಿಭಾಗ ಬೆಳಗಾವಿಯಿಂದ ನೋಟೀಸು ಗಳನ್ನು ಗ್ರಾಮ ಪಂಚಾಯತ ಎಳ್ಳೂರು ಇವರಿಗೆ ನೀಡಲಾಗಿದೆ. |
| | | **ಹಾವೇರಿ ಜಿಲ್ಲೆ** | | | |
| 11. | ಬ್ಯಾಡಗಿ | ಅಂಗಾರಗಟ್ಟಿ ಕೆರೆ | – | – | ಆರ್.ಟಿ.ಸಿ.ಯಲ್ಲಿ ಕೆರೆಗೆ ಮುಳುಗಡೆ ಯಾದ ಕ್ಷೇತ್ರಕ್ಕೆ ಸರಕಾರದ ಹೆಸರು ಇನ್ನೂ ದಾಖಲಾಗದೆ ಇರುವ ಕಾರಣ ಒತ್ತುವರಿ ಮಾಡಿರುವ ಜನರ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ. ಹಕ್ಕು ಬದಲಾವಣೆ |

| 1 | 2 | 3 | 4 | 5 | 6 |
|---|---|---|---|---|---|
| | | | | | ಮಾಡುವ ಕುರಿತು ಜಿಲ್ಲಾಧಿಕಾರಿ, ಹಾವೇರಿ ಇವರಿಗೆ ಈಗಾಗಲೇ ಅನೇಕ ಬಾರಿ ವಿನಂತಿ ಸಲಾಗಿದೆ. ಹಕ್ಕು ಬದಲಾವಣೆ ಯಾದ ಕೂಡಲೇ ಒತ್ತುವರಿ ತೆರವುಗೊಳಿಸಲು ಕ್ರಮ ಜರುಗಿ ಸಲಾಗುವುದು. |
| | | ಉತ್ತರ ಕನ್ನಡ ಜಿಲ್ಲೆ | | | |
| 12. | ಹಳಿಯಾಳ | ಮಾವಿನಕೊಪ್ಪ ಕೆರೆ | – | – | ಮಾವಿನಕೊಪ್ಪ ಕೆರೆ ಅಂಗಳದಲ್ಲಿ ಅತಿಕ್ರಮಣ ಆಗಿದ್ದು. ಪಟ್ಟಿ ತಯಾರಿಸಿ ತೆರವುಗೊಳಿಸಿ ಮಾನ್ಯ ಜಿಲ್ಲಾಧಿಕಾರಿಗಳು ಧಾರವಾಡ ಇವರಿಗೆ ವಿನಂತಿಸಿ ಕೊಂಡಿದೆ. |
| 13. | ಹಳಿಯಾಳ | ಕಾವಲವಾಡ | – | – | ಅದರಂತೆ ಹಳಿಯಾಳ ತಾಲ್ಲೂಕಿನ ಕಾವಲವಾಡ ಕೆರೆಯಲ್ಲಿ ಅತಿಕ್ರಮಣ ಆಗಿದ್ದು ಅದನ್ನು ತೆರವು ಗೊಳಿಸಲಾಗಿದೆ. |

| 1 | 2 | 3 | 4 | 5 | 6 |
|---|---|---|---|---|---|
| | | ಬೀದರ್ ಜಿಲ್ಲೆ | | | |
| 14. | ಬಸವಕಲ್ಯಾಣ | ತ್ರಿಪುರಾಂತ ಕೆರೆ | – | – | ಒತ್ತುವರಿ ಪ್ರದೇಶ ವನ್ನು ತೆರವು ಗೊಳಿಸಲು ಬೀದರ್ ವಿಭಾಗದ ವತಿಯಿಂದ ಪತ್ರ ಸಂಖ್ಯೆ 221 ದಿನಾಂಕ 25–6–2003ರ ಮೂಲಕ ಸಹಾಯಕ ಆಯುಕ್ತರು ಬಸವಕಲ್ಯಾಣ ಇವರಿಗೆ ಕೋರಲಾಗಿದೆ. ಅದರಂತೆ ಸಹಾಯಕ ಆಯುಕ್ತರು ಬಸವ ಕಲ್ಯಾಣ ರವರು ಭೂ ದಾಖಲೆಗಳ ಉಪ ನಿರ್ದೇಶಕರು ಬಸವ ಕಲ್ಯಾಣ ಇವರಿಂದ ಕೆರೆ ಅಂಗಳದ ಮೋಜಣಿ ಮಾಡಿಸಿರುತ್ತಾರೆ. ತದನಂತರದ ನಡವಳಿಗಳ ಬಗ್ಗೆ ವರದಿ ಈ ಕಛೇರಿಗೆ ಪೂರೈ ಸಿರುವುದಿಲ್ಲ (ಈಗಲೂ ಒತ್ತುವರಿ ಜಾರಿ ಇದೆ) |

| 1 | 2 | 3 | 4 | 5 | 6 |
|---|---|---|---|---|---|
| | | ಗುಲ್ಬರ್ಗಾ ಜಿಲ್ಲೆ | | | |
| 15. | ಅಫ್ಜಲಪುರ | ಅಫ್ಜಲಪುರ ಕೆರೆ | – | – | ಅಫ್ಜಲಪುರ ಕೆರೆಯ ಟೇಲ್ ಚೆನಾದಲ್ಲಿ ಅಕ್ರಮ ಒತ್ತುವರಿ ತೆರವು ಗೊಳಿಸಲು ಸಂಬಂಧಪಟ್ಟ 10 ಜನರಿಗೆ ನೋಟೀಸ್ ನೀಡಿ ತೆರವುಗೊಳಿಸುವ ಪ್ರಕ್ರಿಯೆ. |

535(792) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾಗುವ ಜಮೀನು ವಿಸ್ತೀರ್ಣವೆಷ್ಟು; ನಿರ್ವಸತಿಗರಾಗುವ ಜನರ ಸಂಖ್ಯೆ ಎಷ್ಟು; (ಗ್ರಾಮವಾರು, ತಾಲ್ಲೂಕುವಾರು ವಿವರ ನೀಡುವುದು);

ಆ) ಮುಳುಗಡೆಯಾಗುವ ರೈತರಿಗೆ ಪರಿಹಾರ ನೀಡಲು ಮತ್ತು ಪುನರ್ವಸತಿ ಕಲ್ಪಿಸಲು ಸರ್ಕಾರ ಇದುವರೆಗೆ ಯಾವ ಕ್ರಮ ಕೈಗೊಂಡಿದೆ;

ಇ) ಅಣೆಕಟ್ಟೆಯಲ್ಲಿ ಪೂರ್ಣ ಪ್ರಮಾಣದಲ್ಲಿ ನೀರನ್ನು ಎಂದಿನಿಂದ ನಿಲ್ಲಿಸಲಾಗುವುದು;

ಈ) ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ತನಕ ಸದರಿ ಅಣೆಕಟ್ಟೆಯಲ್ಲಿ ಪೂರ್ಣ ಪ್ರಮಾಣದಲ್ಲಿ ನೀರು ನಿಲ್ಲಿಸದಿರಲು ಆ ಭಾಗದ ನಿರ್ವಸತಿಗರು ಮತ್ತು ಜನ ಪ್ರತಿನಿಧಿಗಳು ಮಾಡಿರುವ ಮನವಿ ಸರ್ಕಾರದ ಗಮನದಲ್ಲಿ ಇದೆಯೇ;

ಉ) ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾಗುವ ಜಮೀನು ವಿಸ್ತೀರ್ಣವು 131ಎ–14 ಗುಂ. ಇದು ನಿರ್ವಸತಿಗರಾಗುವ ಜನಸಂಖ್ಯೆ 2635. ಗ್ರಾಮವಾರು ಹಾಗೂ ತಾಲ್ಲೂಕುವಾರಿ ವಿವರಗಳು ಈ ಕೆಳಕಂಡಂತೆ ಇರುತ್ತದೆ.

**1. ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ**

| | | | |
|---|---|---|---|
| ಅ) | ಲಿಂಗಾಪುರ | – | 23ಎ–12 ಗುಂ. |
| ಆ) | ಕಣಗಾಲಕೊಪ್ಪ | – | 64ಎ–38 ಗುಂ. |
| ಇ) | ಬೊಮ್ಮನಹಳ್ಳಿ | – | 2ಎ–16ಗುಂ. |
| | | | **90ಎ–26ಗುಂ.** |

**2. ಎನ್.ಆರ್. ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

ಅ) ಮುತ್ತಿನಕೊಪ್ಪ - 1ಎ-37 ಗುಂ.

ಆ) ಕೆ. ಕಣಬೂರು - 38ಎ-31 ಗುಂ.

**ಯೋಜನೆಯಡಿ ಒಟ್ಟು40ಎ-28 ಗುಂ.**

**ನಿರ್ವಸತಿಗರಾಗುವ ಜನರ ಸಂಖ್ಯೆ**

**ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ**

ಅ) ಲಿಂಗಾಪುರ ಗ್ರಾಮ - 1813

ಆ) ಕೂಗಾಲಕೊಪ್ಪ ಗ್ರಾಮ - 822

**ಒಟ್ಟು 2635**

ಆ) ಮುಳುಗಡೆಯಾಗುವ ರೈತರಿಗೆ ಪರಿಹಾರ ನೀಡಲು ಗ್ರಾಮವಾರು ಪ್ರಸ್ತಾವನೆಯು ಜಂಟಿ ಅಳತೆಯ ಮುಂದಿನ ಪ್ರಕ್ರಿಯೆಯಲ್ಲಿರುತ್ತದೆ.

ಪುನರ್ವಸತಿ ಕುರಿತಾಗಿ ಕೇಂದ್ರವನ್ನು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಶಿವಮೊಗ್ಗ ತಾಲ್ಲೂಕು ನಿದಿಗೆ ಹೋಬಳಿ ಮಾಚೇನಹಳ್ಳಿ ಗ್ರಾಮದಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ವಸತಿ ನಿವೇಶನಗಳ ಪೈಕಿ ನಿವೇಶನ ನೀಡಲು ಪುನರ್ವಸತಿ ಸಲಹಾ ಸಮಿತಿಯ ನಿರ್ಣಯದ ಮೇರೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಪ್ರಾಧಿಕಾರಕ್ಕೆ ರೂ. 150.00 ಲಕ್ಷಗಳನ್ನು ಮಾರ್ಚ್ 2004ರಲ್ಲಿ ಪಾವತಿಸಲಾಗಿದೆ. ಅಭಿವೃದ್ಧಿ ಕಾರ್ಯಗಳು ಪ್ರಾಧಿಕಾರದ ವತಿಯಿಂದ ಪ್ರಗತಿಯಲ್ಲಿವೆ. ಸಂತ್ರಸ್ಥರ ಆಸ್ತಿಪಾಸ್ತಿಗಳ ಮೌಲ್ಯೀಕರಣ ಕಾರ್ಯ ಮುಗಿದಿದ್ದು, ಅಂದಾಜುಗಳು ತಾಂತ್ರಿಕ ಪರಿಶೀಲನೆ ಹಂತದಲ್ಲಿದೆ.

ಇ) ಪುನರ್ವಸತಿ ಕೇಂದ್ರ ನಿರ್ಮಿಸಿ, ಪುನರ್ವಸತಿ ಹಾಗೂ ಪುನರ್‌ನಿರ್ಮಾಣ ಕಾರ್ಯ ಪೂರ್ಣಗೊಳಿಸಿದ ನಂತರ ಅಣೆಕಟ್ಟೆಯಲ್ಲಿ ಪೂರ್ಣಪ್ರಮಾಣದಲ್ಲಿ ನೀರನ್ನು ಎಫ್.ಆರ್.ಎಲ್. ಮಟ್ಟದವರೆಗೆ ನಿಯಂತ್ರಿಸುವ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಇದೆ.

ಉ) ಮುಳುಗಡೆ ಪರಿಹಾರ ಹಾಗೂ ಪುನರ್ವಸತಿ / ಪುನರ್‌ನಿರ್ಮಾಣ ಕಾರ್ಯ ಪೂರ್ಣಗೊಳ್ಳದೆ ಅಣೆಕಟ್ಟೆಯಲ್ಲಿ ತುಂಬು ನೀರಿನ ಮಟ್ಟ (ಎಫ್.ಆರ್.ಎಲ್). ದವರೆಗೆ ನೀರು ನಿಲ್ಲಿಸುವ ಉದ್ದೇಶ ಇರುವುದಿಲ್ಲ.

536(793) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವರಾಹಿ ಯೋಜನೆಯ ಪ್ರದೇಶವಾದ ಮಾಸ್ತಿಕಟ್ಟೆಯಲ್ಲಿ ನಿಗಮಕ್ಕೆ ಸಂಬಂಧಪಟ್ಟ ಯಾವ ಯಾವ ಕಛೇರಿಗಳಿವೆ; ಹಾಗೂ ಅಲ್ಲಿರುವ ಅಧಿಕಾರಿಗಳ ಮತ್ತು ಇತರೆ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು;

ಆ) ಅಲ್ಲಿರುವ ಕಛೇರಿಗಳನ್ನು ಅನಗತ್ಯವಾಗಿ ಹೊಸಂಗಡಿಗೆ ಸ್ಥಳಾಂತರಿಸಿರುವುದು ನಿಜವೇ;

ಇ) ಇದಕ್ಕೆ ಕಾರಣಗಳೇನು;

ಈ) ಮಾಸ್ತಿಕಟ್ಟೆಯಲ್ಲಿ ಇತ್ತೀಚೆಗೆ ಅಧಿಕಾರಿ ಮತ್ತು ಇತರೆ ಸಿಬ್ಬಂದಿಯವರೆ ವಸತಿಗಾಗಿ ನಿರ್ಮಾಣ ಮಾಡಿರುವ ಮನೆಗಳ ಸಂಖ್ಯೆ ಎಷ್ಟು ಹಾಗೂ ಇದಕ್ಕೆ ತಗುಲಿದ ವೆಚ್ಚವೆಷ್ಟು;

ಉ) ಆರಂಭದಿಂದ ಮಾಸ್ತಿಕಟ್ಟೆಯಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಕಛೇರಿ ಮತ್ತು ಇತರೆ ಸ್ಥಿರ ಆಸ್ತಿಗಾಗಿ ಮಾಡಿದ ಖರ್ಚು ಎಷ್ಟು;

ಊ) ಈಗ ಕಛೇರಿ ಸ್ಥಳಾಂತರದಿಂದ ವಸತಿ ಗೃಹಗಳ ನಿರ್ಮಾಣಕ್ಕಾಗಿ ಮಾಡಿದ ಖರ್ಚು ನಿರರ್ಥಕ ಅಲ್ಲವೇ;

ಋ) ಈ ರೀತಿ ತಪ್ಪು ನಿರ್ವಹಣೆ ಮಾಡಿದ ಅಧಿಕಾರಿಗಳು ಯಾರು ಮತ್ತು ಅನಗತ್ಯ ನಿಗಮಕ್ಕೆ ನಷ್ಟ ಉಂಟು ಮಾಡಿದ ಇವರ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು ಹಾಗೂ ಯಾವಾಗ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ವರಾಹಿ ಯೋಜನೆಯ ಮಾಸ್ತಿ ಕಟ್ಟೆ ವಸಾಹತುವಿನಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್) ಕಾರ್ಯ ನಿರ್ವಾಹಕ ಇಂಜಿನಿಯರ್ (ವಿದ್ಯುತ್), ಸಹಾಯಕ ಕಾರ್ಯನಿರ್ವಾಹಕ (ಯಾಂತ್ರಿಕ), ವೈದ್ಯಕೀಯ, ಭದ್ರತಾಧಿಕಾರಿ ಹಾಗೂ ಶಾಲೆಗಳು ಹೀಗೆ 6 ಕಛೇರಿಗಳಿರುತ್ತವೆ.

ನೌಕರರ ಸಂಖ್ಯೆ: ಅಧಿಕಾರಿಗಳು : 28, ಕಾರ್ಮಿಕ ವರ್ಗ: 134, ಒಟ್ಟು : 162.

ಆ) ಅಧೀಕ್ಷಕ ಇಂಜಿನಿಯರ್ (ಸಿವಿಲ್), ಸಿಬ್ಬಂದಿ ಅಧಿಕಾರಿ ಹಾಗೂ ಲೆಕ್ಕಾಧಿಕಾರಿ, ಈ ಕಛೇರಿಗಳನ್ನು ಅಗತ್ಯಕ್ಕೆ ಅನುಗುಣವಾಗಿ, ಹೊಸಂಗಡಿಗೆ ಸ್ಥಳಾಂತರಿಸಲಾಗಿದೆ.

ಇ) ಕರ್ನಾಟಕ ಸರ್ಕಾರವು ವರಾಹಿ ಯೋಜನೆಯ 2 ಮತ್ತು 4ನೇಯ ಘಟಕದ (ಹೊಸಂಗಡಿ ವಿದ್ಯುದಾಗಾರದ) ವಿಸ್ತರಣೆ (2x115 M.W.)ಯನ್ನು ನಿಗಮಕ್ಕೆ ವಹಿಸಿದೆ. ಆದುದರಿಂದ, ಯೋಜನೆಯ ನಿರ್ವಹಣೆಗಾಗಿ ಮೇಲ್ಕಂಡ ಕಛೇರಿಗಳನ್ನು ನೌಕರರ ಸಹಿತ ಹೊಸಂಗಡಿಗೆ ವರ್ಗಾಯಿಸಲಾಗಿದೆ.

ಈ) 1998–2000 ಅವಧಿಯಲ್ಲಿ ನಿರ್ಮಾಣ ಮಾಡಿರುವ ಮನೆಗಳ ಸಂಖ್ಯೆ :

ಅಧಿಕಾರಿಗಳಿಗಾಗಿ 29 ಮನೆಗಳು ಹಾಗೂ ಸಿಬ್ಬಂದಿಗಾಗಿ 64 ಮನೆಗಳು ಒಟ್ಟಾರೆ 93 ಮನೆಗಳು.

ಮನೆಗಳ ನಿರ್ಮಾಣಕ್ಕೆ 574.00 ಲಕ್ಷ ರೂಪಾಯಿಗಳು ಖರ್ಚಾಗಿದೆ.

ಉ) ಮೇಲಿನ 574.00 ಲಕ್ಷ ರೂ.ಗಳನ್ನು ಹೊರತುಪಡಿಸಿ. ಆರಂಭದಿಂದ ಮಾಸ್ತಿಕಟ್ಟೆಯಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಕಛೇರಿ ಮತ್ತು ಇತರೆ ಸ್ಥಿರ ಆಸ್ತಿಗಾಗಿ ಮಾಡಿದ ಖರ್ಚು 410 ಲಕ್ಷ ರೂ.ಗಳು (ನಿಗಮದ ಸ್ಥಿರಾಸ್ತಿ ಪಟ್ಟಿಯ ಪ್ರಕಾರ).

ಊ) ವರಾಹಿ ಯೋಜನೆಯ ನಿರ್ಮಾಣ ಕಾರ್ಯ ಪೂರ್ಣಗೊಂಡ 15 ವರ್ಷಗಳು ಕಳೆದಿವೆ. ಮಾಸ್ತಿಕಟ್ಟೆಡ ವಸಾಹತುವಿನಲ್ಲಿ 1977-78ರ ಅವಧಿಯಲ್ಲಿ ತಾತ್ಕಾಲಿಕ (Temporary) ಮನೆಗಳನ್ನು ಕಟ್ಟಲಾಗಿತ್ತು. ಸುಮಾರು 25 ವರ್ಷ ಉಪಯೋಗಿಸಿ ಈ ಮನೆಗಳ ಸಂಪೂರ್ಣ ಪ್ರಯೋಜನ ಪಡೆಯಲಾಗಿದೆ. ಈ ತಾತ್ಕಾಲಿಕ ಮನೆಗಳು ತೀರಾ ದುರಸ್ತಿಯಲ್ಲಿದ್ದು ವಾಸಯೋಗ್ಯವಿರುವುದಿಲ್ಲ.

ಅಗತ್ಯ ಸೇವಾ ನೌಕರರಿಗೆ ಮಾತ್ರ 1998-2000ದಲ್ಲಿ ಖಾಯಂ ನಿವಾಸಗಳ ನಿರ್ಮಾಣವಾಗಿದೆ.

ಋ) ಖಾಯಂ ನಿವಾಸಗಳ ನಿರ್ಮಾಣ ಮೇಲಿನ ಕಂಡಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಆಗಿದೆ. ಕಛೇರಿಗಳ ಸ್ಥಳಾಂತರವನ್ನು ಯೋಜನಾ ಕಾರ್ಯದ ನಿರ್ವಹಣೆಯ ಹಿತ ದೃಷ್ಟಿಯಿಂದ ಕೈಗೊಳ್ಳಲಾಗಿದೆ. ಆದುದರಿಂದ, ಸರಿಯಾದ ನಿಟ್ಟಿನಲ್ಲೇ ತೀರ್ಮಾನ ತೆಗೆದುಕೊಳ್ಳಲಾಗಿದೆ.

537(790) : ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ. (ಕೊಪ್ಪಳ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಲಿಗುಡ್ಡ ನೀರಾವರಿ ಯೋಜನೆ ಯಾವ ಹಂತದಲ್ಲಿದೆ;

ಆ) ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ಎಷ್ಟು ಕ್ಷೇತ್ರ ನೀರಾವರಿಯಲ್ಲಿವೆ ಹಾಗೂ ಅವು ಯಾವುವು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಸಿಂಗಟಾಲೂರು-ಹುಲಿಗುಡ್ಡ ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ ಸಂಖ್ಯೆ: ಜಸಂಇ 115 ವಿಬ್ಯಾಇ 2003, ದಿನಾಂಕ 6-9-2003ರನ್ವಯ ರೂ. 787 ಕೋಟಿ ಮೊತ್ತದ ಮಾರ್ಪಡಿತ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಆಡಳಿತಾತ್ಮಕ ಅನುಮೋದನೆಗಾಗಿ ಕರ್ನಾಟಕ ನೀರಾವರಿ ನಿಗಮದಿಂದ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಲಾಗುವುದು ಬ್ಯಾರೇಜ್ ಮತ್ತು ಗೇಟಿನ ಕೆಲಸಗಳನ್ನು ವಹಿಸಿಕೊಡಲಾಗಿದೆ. ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಕಡಿಮೆಯಾದಾಗ ಬ್ಯಾರೇಜ್ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ, ಯೋಜನಾವಾರು ನೀರಾವರಿಗೊಳಪಡುವ ಹಾಗೂ ಈಗಾಗಲೇ ನೀರಾವರಿಯಾಗುತ್ತಿರುವ ಕ್ಷೇತ್ರದ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ. | ಯೋಜನೆಯ ಹೆಸರು | ನೀರಾವರಿಗೊಳಪಡುವ ಕ್ಷೇತ್ರ (ಎಕರೆಗಳಲ್ಲಿ) | ಈವರೆಗೆ ನೀರಾವರಿಯಾಗುತ್ತಿರುವ ಕ್ಷೇತ್ರ (ಎಕರೆಗಳಲ್ಲಿ) |
|---|---|---|---|
| 1. | ಟಿ.ಬಿ.ಪಿ. ಎಡದಂಡೆ ಮೇಲ್ಮಟ್ಟದ ಕಾಲುವೆ | 1159 | 1159 |
| 2. | ಟಿ.ಬಿ.ಪಿ. ಎಡದಂಡೆ ಮುಖ್ಯ ಕಾಲುವ | 153512 | 153512 |
| 3. | ಹಿರೇಹಳ್ಳ ಯೋಜನೆ | 20583 | 5950 |
| 4. | ಸಿಂಗಟಾಲೂರು–ಹುಲಿಗುಡ್ಡ ಏತ ನೀರಾವರಿ ಯೋಜನೆ | 36000 | – |
| | **ಒಟ್ಟು** | **211254** | **160621** |

538(847) : ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದಿನ ಸರ್ಕಾರ ಆಯವ್ಯಯ ಭಾಷಣದಲ್ಲಿ ಆಲಮಟ್ಟಿ ಜಲಾಶಯದ ಎತ್ತರವನ್ನು 524–25 ಮೀ.ಕ್ಕೆ ಎತ್ತರಿಸಲು ಬದ್ಧವಾಗಿದೆ ಎಂದು ತಿಳಿಸಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಆ ಬಗ್ಗೆ ಈವರೆಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ;

ಇ) ಜಲಾಶಯನ ಎತ್ತರವನ್ನು ಹೆಚ್ಚಿಸಿದಲ್ಲಿ ಬಾಗಲಕೋಟೆ ಪಟ್ಟಣದ ಉಳಿದ ಪ್ರದೇಶವನ್ನು ಬಾಧಿತ ಪ್ರದೇಶವೆಂದು ಪರಿಗಣಿಸಲಾಗುವುದೆ;

ಈ) ಪರಿಗಣಿಸಿದಲ್ಲಿ ಭೂಸ್ವಾಧೀನ ಮತ್ತು ಪುನರ್ ವಸತಿ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಹೌದು.

ಆ) ಈಗ ಹೊಸದಾಗಿ ರಚಿಸಲಾಗಿರುವ ಕೃಷ್ಣಾ ಜಲ ವಿವಾಧ ನ್ಯಾಯಮಂಡಳಿಯ ಅಂತಿಮ ನಿರ್ಮಾಣದ ನಂತರ ಆಲಮಟ್ಟಿ ಜಲಾಶಯದಲ್ಲಿ 524.256 ಮೀ ಮಟ್ಟಕ್ಕೆ ನೀರನ್ನು ಶೇಖರಿಸುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಈ ಮೇಲಿನ ಉತ್ತರದಂತೆ ಸಧ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ಮೇಲಿನ ಉತ್ತರದಂತೆ ಸಧ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

541(481) : ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮರೋಳ ಏತ ನೀರಾವರಿ ಯೋಜನೆಯನ್ನು ಸಮಗ್ರ ಹುನಗುಂದ ತಾಲ್ಲೂಕಿನಾದ್ಯಂತ ವಿಸ್ತರಿಸುವ ಕಾರ್ಯ ಪ್ರಗತಿಯಲ್ಲಿದೆಯೇ;

ಆ) ಇದ್ದಲ್ಲಿ ಈಗ ಯಾವ ಹಂತದಲ್ಲಿದೆ;

ಇ) ಅದರ ಸರ್ವೆ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುತ್ತದೆ; ಒಂದು ವೇಳೆ ಸರ್ವೆ ಕಾರ್ಯ ಪ್ರಾರಂಭಿಸಿದ್ದಲ್ಲಿ, ಈವರೆಗೆ ಸಾಧಿಸಿದ ಪ್ರಗತಿ ಏನು; (ವಿವರವನ್ನು ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಮರೋಳ ಏತ ನೀರಾವರಿ ಯೋಜನೆಯನ್ನು ಸಮಗ್ರ ಹುನಗುಂದ ತಾಲ್ಲೂಕಿನ ಉಳಿದ ಭಾಗಕ್ಕೆ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸದರಿ ಮರೋಳ ಏತ ನೀರಾವರಿ ಯೋಜನೆಯನ್ನು ಹುನಗುಂದ ತಾಲ್ಲೂಕಿನಾದ್ಯಂತ ವಿಸ್ತರಿಸಲು ಹೆಚ್ಚುವರಿಯಾಗಿ 9 ಟಿಎಂಸಿ ಯ ನೀರಿನ ಅವಶ್ಯಕತೆ ಇದ್ದು, ಈ ನೀರನ್ನು ಸ್ಕೀಂ 'ಬಿ' ಅಡಿಯಲ್ಲಿ ಒದಗಿಸುವ ಪ್ರಸ್ತಾವನೆ ಇದೆ.

ಇ) ಯೋಜನೆಯನ್ನು ವಿಸ್ತರಿಸುವ ಬಗ್ಗೆ ಅವಶ್ಯವಿರುವ 9 ಟಿ.ಎಂ.ಸಿ. ನೀರು ಸ್ಕಿ 'ಬಿ' ಅಡಿಯಲ್ಲಿ ಸರ್ವೆ ಕಾರ್ಯವನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

542(641) : ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ 17ರ ಕಾರವಾರ ಬಳಿ ಕಾಳಿ ನದಿಗೆ ಸೇತುವೆ ನಿರ್ಮಿಸಿದ್ದು ಯಾವಾಗ ಮತ್ತು ಅದರ ಅಂದಾಜು ವೆಚ್ಚ ಎಷ್ಟು;

ಆ) ಸೇತುವೆಯ ಶುಲ್ಕ ಅಕರಣೆಯಿಂದ ಸರ್ಕಾರಕ್ಕೆ ಬರುವ ಆದಾಯ ಎಷ್ಟು;

ಇ) ಶುಲ್ಕ ಅಕರಣೆ ಯಾವಾಗ ನಿಲ್ಲಿಸಲಾಗುವುದು ಹಾಗೂ ಸ್ಥಳೀಯರಿಗೆ ಶುಲ್ಕ ವಿನಾಯಿತಿ ನೀಡುವ ವಿಚಾರ ಸರ್ಕಾರಕ್ಕೆ ಇದೆಯೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕಾಳಿ ನದಿಗೆ ಅಡ್ಡಲಾಗಿ ಬೃಹತ್ ಸೇತುವೆಯನ್ನು 1983ನೇ ಇಸವಿಯಲ್ಲಿ ನಿರ್ಮಿಸಲಾಯಿತು ಹಾಗೂ ಇದಕ್ಕಾಗಿ 400 ಲಕ್ಷ ರೂ. ಗಳ ವೆಚ್ಚವಾಗಿರುತ್ತದೆ.

ಆ) ಸೇತುವೆಯ ಶುಲ್ಕ ವಸೂಲಾತಿಯಿಂದ ಜೂನ್ 2004ರವರೆಗೆ ಕೇಂದ್ರ ಸರ್ಕಾರಕ್ಕೆ 513 ಲಕ್ಷ ರೂ.ಗಳು ಸಂದಾಯವಾಗಿರುತ್ತದೆ. (ಪ್ರತಿ ವಾರ ರೂ.87,500 ಶುಲ್ಕ ಆಕರಣೆ ಇರುತ್ತದೆ).

ಇ) ಸೇತುವೆ ಮೇಲೆ ಶುಲ್ಕ ವಸೂಲಾತಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ 1978ರ ಅಧಿಸೂಚನೆಯಂತೆ, ಸೇತುವೆ ನಿರ್ಮಾಣ ಪೂರ್ಣ

ವೆಚ್ಚ, ನಿರ್ವಹಣೆ, ದುರಸ್ತಿ ವೆಚ್ಚ ಹಾಗೂ ಇದರ ಮೇಲಿನ ವರ್ಷಾವಾರು ಬಡ್ಡಿ ಇತ್ಯಾದಿ ವಸೂಲಾಗುವವರೆಗೆ ಮುಂದುವರೆಸಲಾಗುವುದು. ಹಾಗೂ ಈ ಅಧಿಸೂಚನೆಯಂತೆ ಸ್ಥಳೀಯರಿಗೆ ಶುಲ್ಕ ವಿನಾಯಿತಿ ಇರುವುದಿಲ್ಲ.

543(733) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ 33 ಕೆ.ವಿ. ಮತ್ತು 110 ಕೆ.ವಿ. ಠಾಣೆಗಳ ಸಂಖ್ಯೆ ಎಷ್ಟು;

ಆ) ಈ-ತಾಲ್ಲೂಕಿನಲ್ಲಿ ವಿದ್ಯುತ್ ತೊಂದರೆಯನ್ನು ತಪ್ಪಿಸಲು ಯಾವ ಯಾವ ಸ್ಥಳಗಳಲ್ಲಿ ಹೊಸ ವಿದ್ಯುತ್ ಠಾಣೆ ಮತ್ತು ಉಪ ಠಾಣೆಗಳನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ;

ಇ) ಇವುಗಳ ಸಾಮರ್ಥ್ಯವೆಷ್ಟು;

ಈ) ಎಷ್ಟು ವಿದ್ಯುತ್ ಠಾಣೆಗಳ ಸ್ಥಾಪನಾಕಾರ್ಯ ಪ್ರಗತಿಯಲ್ಲಿದೆ (ಗ್ರಾಮಾವಾರು ವಿವರಗಳನ್ನು ಒದಗಿಸುವುದು);

ಉ) ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನಲ್ಲಿ ಉಂಟಾಗುತ್ತಿರುವ ವ್ಯತ್ಯಯವನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಔರಾದ್ ತಾಲ್ಲೂಕಿನಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳ ಸಂಖ್ಯೆ–3. ಈ ತಾಲ್ಲೂಕಿನಲ್ಲಿ ಪ್ರಸ್ತುತ ಯಾವುದೇ 110 ಕೆ.ವಿ. ವಿದ್ಯುತ್ ಕೇಂದ್ರವು ಇರುವುದಿಲ್ಲ.

ಆ) ಆ ಮತ್ತು ಇ

ಔರಾದ್ ತಾಲ್ಲೂಕಿನಲ್ಲಿ ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸುವ ಮತ್ತು ಹಾಲಿ ಇರುವ ಉಪ ಕೇಂದ್ರವನ್ನು ಉನ್ನತೀಕರಣಗೊಳಿಸುವ ಪ್ರಸ್ತಾವನೆಗಳು ಇದ್ದು. ಅವುಗಳ ವಿವರಗಳು ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಸ್ಥಳ | ಸಾಮರ್ಥ್ಯ |
|---|---|---|
| 1. | ಸಂತಮರದಲ್ಲಿ ಹಾಲಿ ಇರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 110 ಕೆ.ವಿ.ಗೆ ಉನ್ನತೀಕರಣಗೊಳಿಸುವುದು. | 10 ಎಂ.ವಿ.ಎ. 110x11 ಕೆ.ವಿ. ಮತ್ತು 1x20 ಎಂ.ವಿ.ಎ. 110/33ರರ ಕೆ.ವಿ. |
| 2. | ಲಾಧ | 2x10 ಎಂ.ವಿ.ಎ 110/11 ಕೆ.ವಿ. |
| 3. | ಖೇರ್ಡಾ (ಬಿ) | 2x5 ಎಂ.ವಿ.ಎ. 33/11ಕೆ.ವಿ. |

ಈ) ಈ ಪೈಕಿ, ಸಂತಮರದಲ್ಲಿ ಹಾಲಿ ಇರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 110 ಕೆ.ವಿ. ಉಪ ಕೇಂದ್ರವನ್ನಾಗಿ ಉನ್ನತೀಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.

ಉ) ಸಂತಪುರದ 33 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು 110 ಕೆ.ವಿ. ಗೆ ಉನ್ನತೀ ಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದ್ದು. ಅಕ್ಟೋಬರ್ 2004ರ ಅಂತ್ಯದ ವೇಳೆಗೆ ಇದು ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಪ್ರಸ್ತುತ ಈ ತಾಲ್ಲೂಕಿನ ಕಮಲನಗರ ಮತ್ತು ಔರಾದ್‌ಗಳಲ್ಲಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳಿಗೆ ಭಾಲ್ಕಿಯಲ್ಲಿರುವ 110 ಕೆ.ವಿ. ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ. ಸಂತಪುರದಲ್ಲಿ 110 ಕೆ.ವಿ.ಗೆ ಉನ್ನತೀಕರಣಗೊಂಡ ವಿದ್ಯುತ್ ಉಪ ಕೇಂದ್ರವು ಕಾರ್ಯಾರಂಭ ಮಾಡಿದ ನಂತರ ಸದರೀ ವಿದ್ಯುತ್ ಉಪ ಕೇಂದ್ರದಿಂದಲೇ ಕಮಲನಗರ ಮತ್ತು ಔರಾದ್‌ಗಳಲ್ಲಿರುವ 33 ಕೆ.ವಿ. ವಿದ್ಯುತ್ ಉಪ ಕೇಂದ್ರಗಳಿಗೆ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಈ ಕ್ರಮದಿಂದಾಗಿ, ಔರಾದ್ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ವ್ಯತ್ಯಯದಲ್ಲಿ ಸಾಕಷ್ಟು ಸುಧಾರಣೆ ಉಂಟಾಗುವುದರ ಜೊತೆ ವೋಲ್ಟೇಜ್ ಗುಣಮಟ್ಟವೂ ಸಹ ಸುಧಾರಣೆಗೊಳ್ಳುತ್ತದೆ.

544(734) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯು ಎಷ್ಟು ಕಿ.ಮೀ. ರಸ್ತೆಯನ್ನು ನಿರ್ವಹಣೆ ಮಾಡುತ್ತಿದೆ (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಆ) ಕಳೆದ 3 ವರ್ಷಗಳಲ್ಲಿ ಈ ರಸ್ತೆಗಳ ನಿರ್ವಹಣೆಗಾಗಿ ಪ್ರತಿ ವರ್ಷ ಖರ್ಚು ಮಾಡಿದ ಹಣವೆಷ್ಟು (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು);

ಇ) ಜಿಲ್ಲೆಯ ಬಹುತೇಕ ರಸ್ತೆಗಳು ಮುಖ್ಯವಾಗಿ ಅಂತರ ರಾಜ್ಯಕ್ಕೆ ಸಂಪರ್ಕವನ್ನು ಕಲ್ಪಿಸುವ ರಸ್ತೆಗಳು ಶಿಥಿಲಗೊಂಡು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಅಂತಹ ರಸ್ತೆಗಳನ್ನು ದುರಸ್ತಿ ಮಾಡಲು ಸರ್ಕಾರ ಪ್ರಸಕ್ತ ಸಾಲಿನಲ್ಲಿ ಎಷ್ಟು ಯಾವ ಕ್ರಮಗಳನ್ನು ರೂಪಿಸಲಿದೆ;

ಉ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಹೊಸದಾಗಿ ರಸ್ತೆ ನಿರ್ಮಾಣ ಕಾರ್ಯವನ್ನೇನಾದರು ತೆಗೆದುಕೊಳ್ಳಲಾಗುವುದೇ;

ಊ) ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯು 937-50 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಗಳನ್ನು ಹಾಗೂ 446.00 ಕಿಮೀ ಉದ್ದದ ರಾಜ್ಯ ಹೆದ್ದಾರಿಗಳ ರಸ್ತೆ ನಿರ್ವಹಣೆ ಮಾಡುತ್ತಿದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ರಸ್ತೆಗಳ ವರ್ಗ | ಔರಾದ | ಭಾಲ್ಕಿ | ಬೀದರ್ | ಬಸವ ಕಲ್ಯಾಣ | ಹುಮ್ನಾ ಬಾದ್ | ಒಟ್ಟು |
|---|---|---|---|---|---|---|---|
| 1. | ರಾಜ್ಯ ಹೆದ್ದಾರಿ | 66.70 | 114.70 | 91.80 | 102.20 | 70.80 | 446.00 |
| 2. | ಜಿಲ್ಲಾ ಮುಖ್ಯ ರಸ್ತೆ | 256.60 | 168.70 | 184.10 | 168.10 | 160.00 | 937.50 |
| | ಒಟ್ಟು | 323.30 | 283.40 | 375.70 | 270.30 | 230.80 | 1383.50 |

ಆ) ಕಳೆದ 3 ವರ್ಷಗಳಲ್ಲಿ ಈ ರಸ್ತೆಗಳ ನಿರ್ವಹಣೆಗಾಗಿ ಪ್ರತಿ ವರ್ಷ ಖರ್ಚು ಮಾಡಿದ ಹಣದ ಅಂಕಿ ಅಂಶಗಳು ಈ ಕೆಳಗಿನಂತಿವೆ.

| ಕ್ರ ಸಂ. | ತಾಲ್ಲೂಕು | 2001-2002ನೇ ಸಾಲಿನ ವೆಚ್ಚ | 2002-2003ನೇ ಸಾಲಿನ ವೆಚ್ಚ | 2003-2004ನೇ ಸಾಲಿನ ವೆಚ್ಚ | ಒಟ್ಟು |
|---|---|---|---|---|---|
| | ರಾಜ್ಯ ಹೆದ್ದಾರಿ | | | | |
| 1. | ಬೀದರ್ | 2100 | 2403 | 1350 | 5862 |
| 2. | ಭಾಲ್ಕಿ | 6.82 | 3.06 | 7.12 | 17.00 |
| 3. | ಔರಾದ | 10.39 | 8.89 | 8.39 | 27.67 |
| 4. | ಬಸವ ಕಲ್ಯಾಣ | 34.24 | 4.78 | 1.66 | 40.68 |
| 5. | ಹುಮ್ನಾಬಾದ್ | 11.80 | 4.15 | 1.63 | 17.58 |
| | ಒಟ್ಟು | 84.25 | 44.91 | 32.39 | 161.55 |
| | ಜಿಲ್ಲಾ ಮುಖ್ಯ ರಸ್ತೆ | | | | |
| 1. | ಬೀದರ್ | 41.15 | 79.26 | 63.54 | 183.95 |
| 2. | ಭಾಲ್ಕಿ | 47.81 | 70.70 | 55.09 | 173.60 |
| 3. | ಔರಾದ | 40.15 | 85.26 | 90.05 | 215.46 |
| 4. | ಬಸವಕಲ್ಯಾಣ | 34.39 | 51.95 | 36.31 | 121.75 |
| 5. | ಹುಮ್ನಾಬಾದ್ | 23.09 | 54.11 | 38.48 | 115.68 |
| | ಒಟ್ಟು | 186.59 | 340.71 | 283.50 | 810.80 |
| | ಒಟ್ಟಾರೆ | 270.84 | 385.62 | 315.89 | 972.35 |

ಇ) ಹೌದು.

ಈ) ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದು ಇದಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಹಾಗೂ ಈ ಕಾರ್ಯಕ್ರಮವನ್ನು ಸಧ್ಯದಲ್ಲಿ ಪೂರ್ಣಗೊಳಿಸಿ ರಸ್ತೆಗಳನ್ನು ರೂಪಿಸಲಿದೆ.

ಉ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ನಬಾರ್ಡ್ ಯೋಜನೆಯಡಿ ರಸ್ತೆ ಸುಧಾರಣೆ ಕಾರ್ಯ ತೆಗೆದುಕೊಳ್ಳಲಾಗುತ್ತಿದೆ.

ಊ) ಬೀದರ್ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ರಸ್ತೆ ಸುಧಾರಣೆ ಕಾಮಗಾರಿಗಳನ್ನು ನಬಾರ್ಡ್ ಸಾಲಿನ ನೆರವಿನ ಅಡಿಯಲ್ಲಿ ಕೈಗೊಳ್ಳಲು ಮಂಜೂರಾಗಿರುತ್ತವೆ.

| ಕ್ರ. ಸಂ. | ರಸ್ತೆಯ ಹೆಸರು | ಯೋಜನೆ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ರಸ್ತೆ ಅಭಿವೃದ್ಧಿಪಡಿಸುವ ಉದ್ದ (ಕಿಮೀ) |
|---|---|---|---|---|
| | **ಔರಾದ ತಾಲ್ಲೂಕು** | | | |
| 1. | ಔರಾದ್ ತಾಲ್ಲೂಕಿನ ಕೌಟಾ ಔರಾದ್ ರಸ್ತೆ ಸುಧಾರಣೆ | ನಬಾರ್ಡ್ | 70.00 | 8.80 |
| | **ಬಸವಕಲ್ಯಾಣ ತಾಲ್ಲೂಕು** | | | |
| 2. | ಸಸ್ತಾಪೂರ ಹತ್ಯಾಳ ರಸ್ತೆ ಸುಧಾರಣೆ | ನಬಾರ್ಡ್ | 170.00 | 15.00 |
| 3. | ರಾಜೇಶ್ವರ ಲಿಂಗದಳ್ಳಿ ರಸ್ತೆ ಸುಧಾರಣೆ | ನಬಾರ್ಡ್ | 58.00 | 6.50 |
| 4. | ಧನ್ನೂರು (ಕೆ.ಕ್ರಾಸ್‌ದಿಂದ ಘಾಟಿಬೋರಾಳ) | ನಬಾರ್ಡ್ | 95.00 | 10.00 |
| 5. | ಕನಗಾಂವ ದೇವಿ ತಾಂಡಾ ಕಲಖೋರ ರಸ್ತೆ | ನಬಾರ್ಡ್ | 40.00 | 6.00 |
| | **ಹುಮ್ನಾಬಾದ್ ತಾಲ್ಲೂಕು** | | | |
| 6. | ದುಬಲಗುಂಡಿ ಕಬೀರಾಬಾವಾಡಿ ರಸ್ತೆ ಸುಧಾರಣೆ | ನಬಾರ್ಡ್ | 20.00 | 4.00 |
| 7. | ಕುಮಾರ ಚಿಂಚೋಳಿ ಹಂದಿಕೇರಾ ರಸ್ತೆ | ನಬಾರ್ಡ್ | 33.50 | 3.00 |
| 8. | ಹುಮ್ನಾಬಾದ ಬೋರಂಪಳ್ಳಿ ರಸ್ತೆ | ನಬಾರ್ಡ್ | 60.00 | 9.00 |
| | **ಭಾಲ್ಕಿ ತಾಲ್ಲೂಕು** | | | |
| 9. | ಡಳಕಪೂರ ಹಳ್ಳಿಖೇಡ ರಸ್ತೆ | ನಬಾರ್ಡ್ | 20.00 | 3.00 |
| 10. | ಮುರಂಬಿ ಆರ್. ಗೌಡಗಾಂವ ರಸ್ತೆ | ನಬಾರ್ಡ್ | 17.00 | 2.00 |
| | | | **583.50** | **67.30** |

ಕ್ರಮ ಸಂಖ್ಯೆ 2ರಲ್ಲಿನ ಒಂದು ಕಾಮಗಾರಿಯು ಪ್ರಗತಿಯಲ್ಲಿದ್ದು ಉಳಿದೆಲ್ಲ 9 ಕೆಲಸಗಳಿಗೆ ಟೆಂಡರ್ ಪ್ರಕ್ರಿಯೆಯಲ್ಲಿದ್ದು ಗುತ್ತಿಗೆದಾರರನ್ನು ನೇಮಕ ಮಾಡಿ ಕೆಲಸವನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು.

545(736) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಯಾವ ಯಾವ ತಾಲ್ಲೂಕು ಕೇಂದ್ರ ಸ್ಥಾನದಿಂದ ಬೆಂಗಳೂರಿಗೆ ನೇರ ಬಸ್ಸಿನ ಸೌಲಭ್ಯವನ್ನು ಕಲ್ಪಿಸಲಾಗಿದೆ; ಹಾಗೂ ಇವು ಕೇಂದ್ರ ಸ್ಥಳದಿಂದ ಹೊರಡುವ ಹಾಗೂ ಬೆಂಗಳೂರನ್ನು ತಲುಪುವ ವಿವರಗಳನ್ನು ಒದಗಿಸುವುದು;

ಆ) ಔರಾದ್‌ನಿಂದ ಬೆಂಗಳೂರಿಗೆ ನೇರ ಬಸ್ಸಿನ ಸೌಲಭ್ಯವಿದೇಯೇ;

ಇ) ಇಲ್ಲದಿದ್ದಲ್ಲಿ, ಈ ಭಾಗದ ಜನರು ಬೆಂಗಳೂರಿಗೆ ಬರುವ ಸಂದರ್ಭದಲ್ಲಿ ಬೀದರ್‌ನ ಮಾರ್ಗವಾಗಿ ಬರುವುದರಿಂದ ಹಣ ಮತ್ತು ಸಮಯ ವ್ಯರ್ಥವಾಗುತ್ತಿರುವುದರಿಂದ ಔರಾದ್‌ನಿಂದಲೇ ನೇರವಾಗಿ ಬೆಂಗಳೂರು ನಗರಕ್ಕೆ ರಾಜಹಂಸ ಬಸ್ಸನ್ನು ಓಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ;

ಈ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬೀದರ್, ಭಾಲ್ಕಿ, ಬಸವಕಲ್ಯಾಣ ಹಾಗೂ ಹುಮನಾಬಾದ್ ತಾಲ್ಲೂಕು ಕೇಂದ್ರಗಳಿಂದ ಬೆಂಗಳೂರಿಗೆ ನೇರವಾಗಿ ಸಾರಿಗೆ ಸೌಕರ್ಯವಿರುತ್ತದೆ, (ವಿವರವನ್ನು ಅನುಬಂಧದಲ್ಲಿ ನೀಡಿದೆ)

ಆ) ಇಲ್ಲ

ಇ) ಪ್ರಯಾಣಿಕರ ಒತ್ತಡ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಈ) ಉದ್ಭವಿಸುವುದಿಲ್ಲ.

## ಅನುಬಂಧ

| ಘಟಕ | ಅನುಸೂಚಿ ಸಂಖ್ಯೆ | ಮಾರ್ಗ ಯಿಂದ–ವರೆಗೆ | ನಿರ್ಗಮನ | ಆಗಮನ | ವಯಾ |
|---|---|---|---|---|---|
| ಬೀದರ್ | 251 | ಬೀದರ್–ಬೆಂಗಳೂರು (ರಾಜಹಂಸ) | 18.00 ಬೀದರ್ | 09.45 ಬೆಂಗಳೂರು | ಹೈದ್ರಾಬಾದ್ |
| ಬೀದರ್ | 252 | ಬೆಂಗಳೂರು–ಬೀದರ್ (ರಾಜಹಂಸ) | 18.00 ಬೆಂಗಳೂರು | 09.45 ಬೀದರ್ | ಹೈದ್ರಾಬಾದ್ |
| ಬೀದರ್ | 3 | ಬೀದರ್–ಬೆಂಗಳೂರು (ವೇಗದೂತ) | 14.45 ಬೀದರ್ | 08.30 ಬೆಂಗಳೂರು | ಗುಲ್ಬರ್ಗಾ |
| ಬೀದರ್ | 4 | ಬೆಂಗಳೂರು–ಬೀದರ್ (ವೇಗದೂತ) | 16.30 ಬೆಂಗಳೂರು | 10.15 ಬೀದರ್ | ಗುಲ್ಬರ್ಗಾ |
| ಹುಮನಾಬಾದ್ | 54 | ಹುಮನಾಬಾದ್–ಬೆಂಗಳೂರು (ವೇಗದೂತ) | 14.00 ಹುಮನಾಬಾದ್ | 07.00 ಬೆಂಗಳೂರು | ಗುಲ್ಬರ್ಗಾ |
| ಹುಮನಾಬಾದ್ | 55 | ಬೆಂಗಳೂರು–ಹುಮನಾಬಾದ್ (ವೇಗದೂತ) | 19.00 ಬೆಂಗಳೂರು | 12.00 ಹುಮನಾಬಾದ್ | ಗುಲ್ಬರ್ಗಾ |
| ಭಾಲ್ಕಿ | 221 | ಭಾಲ್ಕಿ–ಬೆಂಗಳೂರು (ರಾಜಹಂಸ) | 15.00 ಭಾಲ್ಕಿ | 08.15 ಬೆಂಗಳೂರು | ಹೈದ್ರಾಬಾದ್ |
| ಭಾಲ್ಕಿ | 221 | ಭಾಲ್ಕಿ–ಬೆಂಗಳೂರು (ರಾಜಹಂಸ) | 15.00 | 08.15 | ಹೈದ್ರಾಬಾದ್ |

| 1 | 2 | 3 | 4 | 5 | 6 |
|---|---|---|---|---|---|
| ಭಾಲ್ಕಿ | 222 | ಬೆಂಗಳೂರು–ಭಾಲ್ಕಿ (ರಾಜಹಂಸ) | 18.45 ಬೆಂಗಳೂರು | 11.15 ಭಾಲ್ಕಿ | ಹೈದ್ರಾಬಾದ್ |
| ಬಸವಕಲ್ಯಾಣ | 221 | ಬಸವಕಲ್ಯಾಣ–ಬೆಂಗಳೂರು (ವೇಗದೂತ) | 10.30 ಬಸವಕಲ್ಯಾಣ | 04.15 ಬೆಂಗಳೂರು | ಗುಲ್ಬರ್ಗಾ ಹೊಸಪೇಟೆ |
| ಬಸವಕಲ್ಯಾಣ | 222 | ಬೆಂಗಳೂರು–ಬಸವಕಲ್ಯಾಣ (ವೇಗದೂತ) | 13.30 ಬೆಂಗಳೂರು | 07.00 ಬಸವಕಲ್ಯಾಣ | ಹೊಸಪೇಟೆ ಗುಲ್ಬರ್ಗಾ |
| ಬಸವಕಲ್ಯಾಣ | 229 | ಬಸವಕಲ್ಯಾಣ–ಬೆಂಗಳೂರು (ರಾಜಹಂಸ) | 1[illegible] 00 ಬಸವಕಲ್ಯಾಣ | 06.15 ಬೆಂಗಳೂರು | ಹೈದ್ರಾಬಾದ್ |
| ಬಸವಕಲ್ಯಾಣ | 230 | ಬೆಂಗಳೂರು–ಬಸವಕಲ್ಯಾಣ (ರಾಜಹಂಸ) | 16.30 ಬೆಂಗಳೂರು | 09.45 ಬಸವಕಲ್ಯಾಣ | ಹೈದ್ರಾಬಾದ್ |

546(739) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ಈಗ ಇರುವ ಕೆರೆಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಆ) ಈ ಕೆರೆಗಳ ಪೈಕಿ ಎಷ್ಟು ಕೆರೆಗಳಲ್ಲಿ ನೀರಿದ್ದು, ಜನರಿಗೆ ಉಪಯುಕ್ತವಾಗುತ್ತಿದೆ; ಹಾಗೂ ಎಷ್ಟು ಕೆರೆಗಳು ನೀರಿಲ್ಲದೆ ಬತ್ತಿ ಹೋಗಿ ನಿಷ್ಕ್ರಿಯವಾಗಿವೆ;

ಇ) ಈ ಕೆರೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ರೂಪಿಸಿದೆ;

ಈ) ತಾಲ್ಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸಲು ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿದೆ;

ಉ) ಸರ್ವೆ ಕಾರ್ಯವನ್ನು ಮುಗಿಸಿ ಹಲವಾರು ವರ್ಷಗಳಾಗಿದ್ದರೂ ಹೊಸ ಕೆರೆಗಳನ್ನು ನಿರ್ಮಿಸುವ ಕಾರ್ಯವನ್ನು ತೆಗೆದುಕೊಳ್ಳದಿರುವುದು ನಿಜವಲ್ಲವೇ: ಹಾಗೂ ಇದಕ್ಕೆ ಕಾರಣಗಳೇನು;

ಊ) ಔರಾದ್ ತಾಲ್ಲೂಕಿನಲ್ಲಿ ಜನ ಜಾನುವಾರುಗಳಿಗೆ ತೀವ್ರವಾದ ನೀರಿನ ಕೊರತೆ ಇರುವುದರಿಂದ ಈಗಾಗಲೇ ಸರ್ವೆ ಕಾರ್ಯ ಪೂರ್ಣಗೊಂಡಿರುವ ಸ್ಥಳಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೇ;

ಋ) ಪ್ರಸಕ್ತ ಆಯವ್ಯಯದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸಕೆರೆಗಳನ್ನು ನಿರ್ಮಿಸ ಲಾಗುವುದು; ಹಾಗೂ ಇದಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ನಿಗದಿಪಡಿಸಲಾಗುವುದು?

-ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಔರಾದ್ ತಾಲ್ಲೂಕಿನಲ್ಲಿ 28 ಕೆರೆಗಳಿವೆ.

ಆ) ದಿನಾಂಕ 22-7-04ರಂದು ಎಲ್ಲಾ ಕೆರೆಯಲ್ಲಿ ನೀರು ತೂಬಿನ ಮಟ್ಟದ ಕೆಳಗೆ ಇರುತ್ತದೆ

ಇ) ರೈತ ಕಾಯಕ ಕೆರೆ ಅಡಿಯಲ್ಲಿ 3 ಕೆರೆಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಈ) ಆಲೂರು ಬೇಲೂರು ಕೆರೆ ಪ್ರಗತಿಯಲ್ಲಿದೆ ಹಾಗೂ ಬೆಂಬ್ರಾ ಕೆರೆ ನಿರ್ವಹಿಸಲು ಗುತ್ತಿಗೆದಾರರನ್ನು ನಿಗದಿಪಡಿಸಲಾಗಿದೆ.

ಉ) ಅನುದಾನದ ಕೊರತೆ.

ಊ) ಅನುದಾನದ ಲಭ್ಯತೆ ಮೇಲೆ ಆಧಾರವಾಗಿರುತ್ತದೆ.

ಋ) ಈ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

547(741) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಚಾವತ್ ತೀರ್ಪಿನ ಅನ್ವಯ ಗೋದಾವರಿ ಬೇಸಿನ್‌ನಿಂದ ರಾಜ್ಯದ (ಕರ್ನಾಟಕ) ಪಾಲಿಗೆ ಎಷ್ಟು ಟಿ.ಎಂ.ಸಿ. ನೀರು ಬರಬೇಕಾಗಿದೆ;

ಆ) ಈ ನೀರಿನಲ್ಲಿ ಈಗ ನಿಜಾಂ ಸಾಗರದ ಹೊರಗೆ ಮತ್ತು ಒಳಗೆ ಹರಿಯುತ್ತಿರುವ ನೀರಿನ ಪ್ರಮಾಣವೆಷ್ಟು;

ಇ) ರಾಜ್ಯದ ಪಾಲಿನ ನೀರನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರವು ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ;

ಈ) ರಾಜ್ಯದ ಪಾಲಿನ ನೀರಿನ ಬಳಕೆಗಾಗಿ ಕಾಲಮಿತಿಯನ್ನೇನಾದರೂ ನಿಗದಿಪಡಿಸಲಾಗಿದೆಯೇ;

ಉ) ಹಾಗಿದ್ದಲ್ಲಿ, ಎಷ್ಟು ಸಮಯದೊಳಗಾಗಿ ನಮ್ಮ ರಾಜ್ಯದ ಪಾಲಿನ ನೀರನ್ನು ಬಳಸಿಕೊಳ್ಳಬೇಕಾಗಿದೆ;

ಊ) ಈ ನೀರಿನ ಉಪಯೋಗ ಬೀದರ್ ಜಿಲ್ಲೆಯ ಯಾವ ಯಾವ ತಾಲ್ಲೂಕಿಗೆ ಲಭ್ಯವಾಗಲಿದೆ;

ಋ) ಈ ನೀರಿನ ಬಹುಪಾಲು ಉಪಯೋಗ ಔರಾದ್ ತಾಲ್ಲೂಕಿಗೆ ಆಗುವುದರಿಂದ ನಮ್ಮ ರಾಜ್ಯದ ಪಾಲಿನ ನೀರನ್ನು ಸಂಗ್ರಹಿಸಲು ಮಿನಿ ಡ್ಯಾಂಗಳನ್ನಾಗಲ್ಲಿ ಬ್ಯಾರೇಜ್‌ಗಳನ್ನಾಗಲಿ ಅಥವಾ ಕೆರೆಕಟ್ಟೆಗಳನ್ನಾಗಲಿ ನಿರ್ಮಿಸಲಾಗಿದೆಯೇ;

ಋ) ಒಂದು ವೇಳೆ ನಿರ್ಮಿಸದಿದ್ದಲ್ಲಿ, ರೈತರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ನಮ್ಮ ರಾಜ್ಯದ ಪಾಲಿನ ನೀರನ್ನು ಪೂರ್ಣವಾಗಿ ಬಳಸಿಕೊಳ್ಳುವ ದೃಷ್ಟಿಯಿಂದ ಮಿನಿಡ್ಯಾಂ, ಬ್ಯಾರೇಜುಗಳನ್ನು ನಿರ್ಮಿಸಲಾಗುವುದೇ?

ಎ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಗೋದಾವರಿ ಬೇಸಿನ್‌ನಿಂದ ಗೋದಾವರಿ ಜಲ ವಿವಾದ ನ್ಯಾಯಾಧೀಕರಣದಂತೆ ಕರ್ನಾಟಕ ರಾಜ್ಯಕ್ಕೆ 22.37 ಟಿ.ಎಂ.ಸಿ. ನೀರು ಹಂಚಿಕೆಯಾಗಿದೆ.

ಆ) ಕರ್ನಾಟಕ ಭಾಗದ ನಿಜಾಂ ಸಾಗರದ ಕೆಳಗಿನ ಭಾಗದಲ್ಲಿ ಸಣ್ಣ ನೀರಾವರಿ ಉಪಯೋಗಕ್ಕಾಗಿ 2.053 ಟಿ.ಎಂ.ಸಿ. ಇರುತ್ತದೆ.

ಇ) ಕರ್ನಾಟಕಕ್ಕೆ ಲಭ್ಯವಿರುವ ನೀರಿನ ಪಾಲನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಈ) ಇಲ್ಲ.

ಉ) ಸಮಯದ ಗಡುವು ನಿಗಧಿಪಡಿಸಿರುವುದಿಲ್ಲ.

ಊ) ಈ ನೀರಿನ ಉಪಯೋಗ ಬೀದರ್, ಭಾಲ್ಕಿ, ಬಸವಕಲ್ಯಾಣ, ಔರಾದ್ ತಾಲ್ಲೂಕುಗಳಿಗೆ ಲಭ್ಯವಾಗಲಿದೆ.

ಋ) ನಮ್ಮ ರಾಜ್ಯದ ಪಾಲಿನ ನೀರನ್ನು ಬ್ಯಾರೇಜ್‌ಗಳನ್ನು ನಿರ್ಮಿಸುವ ಮೂಲಕ ಉಪಯೋಗಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ೠ) ಬ್ಯಾರೇಜ್‌ಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ನಿರ್ಮಿಸಲಾಗುತ್ತಿದೆ.

ಎ) ಉದ್ಭವಿಸುವುದಿಲ್ಲ.

548(463) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯ ಪುರಸಭೆ-ನಗರಸಭೆ ವ್ಯಾಪ್ತಿಯಲ್ಲಿ ಎಷ್ಟು ಕಿಮೀ ಉದ್ದದ ಕಾಂಕ್ರಿಟೀಕರಣ ರಸ್ತೆಗಳಿವೆ (ಪುರಸಭೆ-ನಗರಸಭೆವಾರು ಮಾಹಿತಿ ಒದಗಿಸುವುದು);

ಆ) ಉಡುಪಿ ಜಿಲ್ಲೆಯ ಕುಂದಾಪುರ ಪುರಸಭೆ ವ್ಯಾಪ್ತಿಯ ಲೋಕೋಪಯೋಗಿ ಇಲಾಖೆಗೆ ಸೇರಿದ 1.6 ಕಿಮೀ ಉದ್ದದ ರಸ್ತೆಯನ್ನು ಕಾಂಕ್ರೀಟಿಕರಣಗೊಳಿಸದೇ, ಉಡುಪಿ ಜಿಲ್ಲೆಯಲ್ಲಿ ಕುಂದಾಪುರ ಪುರಸಭೆಗೆ ಮಾತ್ರ ತಾರತಮ್ಯವೆಸಗಲು ಕಾರಣವೇನು;

ಇ) 2003-04ನೇ ಸಾಲಿನಲ್ಲಿ ಸದರಿ 1.6 ಕಿಮೀ ರಸ್ತೆಯನ್ನು ಕಾಂಕ್ರಿಟೀಕರಣಗೊಳಿಸುವ ಉದ್ದೇಶವಿದೆಯೇ;

ಈ) ಇದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು ಮತ್ತು ಕಾಂಕ್ರಿಟೀಕರಣಕ್ಕೆ ತಗಲುವ ವೆಚ್ಚ ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿ ಪುರಸಭೆ ನಗರಸಭೆ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆ ರಸ್ತೆಗಳಲ್ಲಿ ಕಾಂಕ್ರೀಟೀಕರಣಗೊಳಿಸಿದ ಬಗ್ಗೆ ವಿವರಗಳು ಈ ಕೆಳಗಿನಂತಿವೆ.

1) ಉಡುಪಿ ನಗರಸಭೆ 4.14 ಕಿಮೀ
2) ಸಾಲಿಗ್ರಾಮ ಪುರಸಭೆ 0.60 ಕಿಮೀ
3) ಕುಂದಾಪುರ ಪುರಸಭೆ 0.15 ಕಿಮೀ
4) ಕಾರ್ಕಳ ಪುರಸಭೆ ಇಲ್ಲ

ಆ) ಯಾವುದೇ ತಾರತಮ್ಯ ಆಗಿರುವುದಿಲ್ಲ.

ಇ) ಅನುದಾನ ಲಭ್ಯತೆಯನ್ನು ಆಧರಿಸಿ ಕಾಂಕ್ರೀಟಿಕರಣಗೊಳಿಸಲಾಗುವುದು.

ಈ) ಲೋಕೋಪಯೋಗಿ ಇಲಾಖೆಯ ಜಿಲ್ಲಾ ಮುಖ್ಯ ರಸ್ತೆ 1.65 ಕಿಮೀ ಉದ್ದವನ್ನು ಕಾಂಕ್ರೀಟೀಕರಣಗೊಳಿಸಲು ಸುಮಾರು ರೂ. 170.00 ಲಕ್ಷ ಬೇಕಾಗಬಹುದೆಂದು ಅಂದಾಜಿಸಲಾಗಿದೆ. ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

550(466) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಸ್ತೆ ನಿಯಂತ್ರಣ ರೇಖೆ ಪ್ರಕಾರ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಮೇಜರ್ ಡಿಸ್ಟ್ರಿಕ್ಟ್ ರೋಡ್ (ಎಂಡಿಆರ್) ಪಂಚಾಯತ್ ರೋಡ್, ಪುರಸಭಾ ರಸ್ತೆಗಳಿಗೆ ಸಂಬಂಧಿಸಿದಂತೆ ನಿಯಂತ್ರಣ ರೇಖೆಯ ದೂರ ಎಷ್ಟಿರಬೇಕು?;

ಆ) ಸದರಿ ರಸ್ತೆಗಳಿಗೆ ನಿಯಂತ್ರಣ ರೇಖೆಯಿಂದ ಇರಬೇಕಾದ ದೂರವನ್ನು ಈಗಾಗಲೇ ಗುರುತಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಜಮೀನನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿದೆಯೇ;

ಈ) ಜಮೀನು ಕಳೆದುಕೊಳ್ಳುವ ಖಾಸಗಿಯವರಿಗೆ ಪರಿಹಾರ ನೀಡಲಾಗುವುದೇ ಪರಿಹಾರ ಯಾವ ದರದಲ್ಲಿ ನೀಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) 1. ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 75 ಮೀಟರ್ ಹಾಗೂ

2. ಜಿಲ್ಲಾ ಮುಖ್ಯ ರಸ್ತೆಗಳಿಗೆ (ಎಂಡಿಆರ್) ಸಂಬಂಧಿಸಿದಂತೆ ರಸ್ತೆಯ ಮಧ್ಯ ಭಾಗದಿಂದ 50 ಮೀಟರ್

3. ಪಂಚಾಯತ್ ರಸ್ತೆಗಳಿಗೆ (ಒಡಿಆರ್) ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 17.50 ಮೀಟರ್ ನಿಯಂತ್ರಣ ರೇಖೆಯ ದೂರವಿರಬೇಕು. ಇನ್ನುಳಿದ ಪುರಸಭೆ ರಸ್ತೆಗಳನ್ನು ಈ ಇಲಾಖೆಯಿಂದ ನಿರ್ವಹಿಸಲಾಗುವುದಿಲ್ಲ.

ಆ) ಕರ್ನಾಟಕ ಹೆದ್ದಾರಿ ಕಾಯ್ದೆ 1964ರ ನಿಯಮ 7(1). (2) ಹಾಗೂ 8ರಂತೆ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿ, ರಸ್ತೆಯ ಗಡಿರೇಖೆ, ಕಟ್ಟಡ ರೇಖೆ ಹಾಗೂ ನಿಯಂತ್ರಣ ರೇಖೆಗಳನ್ನು ಗುರುತಿಸಲಾಗಿದೆ. ಆದರೆ ಜಿಲ್ಲಾ ಮುಖ್ಯ ರಸ್ತೆಗಳಿಗೆ ಸಂಬಂಧಿಸಿದಂತೆ ನಿಯಂತ್ರಣ ರೇಖೆಯನ್ನು ಗುರ್ತಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಇ) ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿ, ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಹೆದ್ದಾರಿ ಕಾಯ್ದೆ 1964ರ ನಿಯಮ 7(1) (2) ಹಾಗೂ 8ರಂತೆ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಘೋಷಿಸಲಾಗಿದೆ.

ಈ) ಕರ್ನಾಟಕ ಹೆದ್ದಾರಿ ಕಾಯ್ದೆ 1964ರ ನಿಯಮ 39ರ ಪ್ರಕಾರ ಸರ್ಕಾರ ನಿಯಂತ್ರಣ ರೇಖೆಯೊಳಗೆ ಬರುವ ಆಕ್ಷೇಪಣೆ ಸಲ್ಲಿಸಿದ ಭೂ ಮಾಲೀಕರಿಂದ ಜಮೀನು ಸ್ವಾಧೀನಪಡಿಸಿಕೊಳ್ಳುವ ಮೊದಲು ಅವರಿಗೆ ಪರಿಹಾರ ನೀಡಬೇಕಾಗುತ್ತದೆ. ಆಯಾಯ ಸಂದರ್ಭಗಳಲ್ಲಿ ಸಂಬಂಧಿಸಿದ ನೋಂದಣಾಧಿಕಾರಿಗಳಿಂದ ಜಮೀನಿನ ದರದ ವಿವರವನ್ನು ಪಡೆದು ಪರಿಹಾರ ಧನ ನೀಡಿ ಅಗತ್ಯವಾಗಿ ಬೇಕಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು.

551 (468) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–03 ಮತ್ತು 2003–04ನೇ ಸಾಲುಗಳಲ್ಲಿ ಕುಂದಾಪುರ ವಿಧಾನಸಭಾ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಯೋಜನೆಯಡಿಯಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾವನೆ ಬಂದಿದ್ದೆ;

ಆ) ಸದರಿ ಪ್ರಸ್ತಾವನೆಗಳಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಮಂಜೂರಾತಿ ನೀಡಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 2002–03ನೇ ಸಾಲಿನಲ್ಲಿ 52 ಪ್ರಸ್ತಾವನೆಗಳು 2003–04ನೇ ಸಾಲಿನಲ್ಲಿ 57 ಪ್ರಸ್ತಾವನೆಗಳು ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಅಭಿಯಂತರರಿಗೆ ಬಂದಿವೆ.

ಆ) ಸದರಿ ಪ್ರಸ್ತಾವನೆಗಳಲ್ಲಿ 2002–03ನೇ ಸಾಲಿನಲ್ಲಿ ಕುಂದಾಪುರ ತಾಲ್ಲೂಕಿನ ಅನಗಳ್ಳಿ ಗ್ರಾಮದ ರೆಬೆಲ್ಲೋ ಕೇರಿ ಎಂಬಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿಯನ್ನು ರೂ.10.00 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೆತ್ತಿಕೊಂಡಿದ್ದು, ಕಾಮಗಾರಿಯು ಪೂರ್ಣಗೊಂಡಿರುತ್ತದೆ.

552(470) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಕಾಮಗಾರಿಗಳನ್ನು ಪ್ರಾರಂಭಿಸುವ ಮೊದಲು ಮತ್ತು ಕಾಮಗಾರಿ ಮುಕ್ತಾಯದ ನಂತರ ಸಂಬಂಧಪಟ್ಟ ಇಂಜಿನಿಯರಿಂಗ್ ವಿಭಾಗದವರು ಆಯಾ ಕ್ಷೇತ್ರದ ಶಾಸಕರಿಗೆ ಕಾಮಗಾರಿಗಳ ಮಾಹಿತಿ ಒದಗಿಸಲು ಸರಕಾರ ನಿರ್ದೇಶನ ನೀಡುವುದೇ;

ಆ) ಕಾಮಗಾರಿಗಳು ಪಾರದರ್ಶಕತೆಯಿಂದ ಜರುಗಲು ಕಾಮಗಾರಿಗಳು ಜರುಗುವ ಸ್ಥಳದಲ್ಲಿ ಕಾಮಗಾರಿಗಳ ವಿವರವುಳ್ಳ ನಾಮಫಲಕವನ್ನು ಹಾಕಲು ವ್ಯವಸ್ಥೆ ಮಾಡಲಾಗುವುದೇ;

ಇ) ಕಾಮಗಾರಿಗಳು ಜರುಗುವ ಸ್ಥಳಗಳ ಗ್ರಾಮ ಪಂಚಾಯತ್‌ಗಳಿಗೆ ಜರುಗುವ ಕಾಮಗಾರಿಗಳ ಮಾಹಿತಿ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಲೋಕೋಪಯೋಗಿ ಇಲಾಖೆಯಲ್ಲಿ ಪ್ರತಿ ಯೋಜನೆ ಕಾಮಗಾರಿಗಳನ್ನು ಪ್ರಾರಂಭಿಸುವ ಮೊದಲು ಹಾಗೂ ಮುಗಿದು ಉದ್ಘಾಟನೆಯಾಗುವ ಪೂರ್ವದಲ್ಲಿ ಸಂಬಂಧಿಸಿದ ಅಧಿಕಾರಿಗಳು ಆಯಾ ಕ್ಷೇತ್ರದ ಶಾಸಕರುಗಳನ್ನು ಸಂಪರ್ಕಿಸಿ ಮಾಹಿತಿ ಒದಗಿಸುತ್ತಿದ್ದಾರೆ.

ಆ) ಲೋಕೋಪಯೋಗಿ ಇಲಾಖೆಯಲ್ಲಿ ಪ್ರತಿ ಯೋಜನೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಒಳಗೊಂಡ ನಾಮಫಲಕಗಳನ್ನು ಕೆಲಸ ನಡೆಯುವ ಸ್ಥಳದಲ್ಲಿ ಕಡ್ಡಾಯವಾಗಿ ಹಾಕಲು ಸರ್ಕಾರ ಸೂಚನೆ ನೀಡಿದ್ದು, ಇದನ್ನು ಎಲ್ಲಾ ಕಡೆ ಅನುಸರಿಸಲಾಗುತ್ತಿದೆ.

ಇ) ಲೋಕೋಪಯೋಗಿ ಇಲಾಖೆ ಗ್ರಾಮೀಣ ಹಾಗೂ ಪಂಚಾಯತ್ ರಾಜ್ ಇಲಾಖೆಯಿಂದ ಬೇರೆಯಾಗಿರುವುದರಿಂದ ಲೋಕೋಪಯೋಗಿ ಇಲಾಖಾ ಕಾಮಗಾರಿಗಳ ಮಾಹಿತಿಗಳನ್ನು ಗ್ರಾಮ ಪಂಚಾಯತ್‌ಗಳಿಗೆ ಒದಗಿಸಲಾಗುತ್ತಿಲ್ಲ. ಆದರೆ ಪ್ರತಿ ತಿಂಗಳು ನಡೆಸುವ ತಾಲ್ಲೂಕು ಮಟ್ಟದ ಕೆಡಿಪಿ ಸಭೆಯಲ್ಲಿ ಇಲಾಖೆಯ ಅಧಿಕಾರಿಗಳು ಇಲಾಖೆಯ ಚಟುವಟಿಕೆಗಳ ವಿವರಗಳನ್ನು ಒದಗಿಸುತ್ತಿದ್ದಾರೆ.

553(609) : ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಏತ ನೀರಾವರಿ ಯೋಜನೆ ಯಾವ ಹಂತದಲ್ಲಿದೆ;

ಆ) ಈ ಯೋಜನೆಗೆ ಇರುವ ಅಡತಡೆಗಳೇನು;

ಇ) ಅಡತಡೆಗಳಿದ್ದರೆ, ಅದನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಈ) ಈ ಯೋಜನೆಯ ಅಂದಾಜು ವೆಚ್ಚವೆಷ್ಟು;

ಉ) ಈ ಯೋಜನೆಗೆ ಇದುವರೆವಿಗೂ ಬಿಡುಗಡೆಯಾದ ಮೊತ್ತವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ತುಂಗಾ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ದೊರೆತಿದ್ದು ಅವಶ್ಯವಿರುವ ಅರಣ್ಯ ಪ್ರದೇಶ ಬಿಡುಗಡೆ ಆಗದೇ ಇರುವುದರಿಂದ ಇನ್ನೂ ಪ್ರಾರಂಭಿಕ ಹಂತದಲ್ಲಿರುತ್ತದೆ.

ಆ) ಈ ಯೋಜನೆಯ ಅನುಷ್ಠಾನಕ್ಕೆ ಮುಖ್ಯವಾದ ಅಡಚಣೆಯೆಂದರೆ ಈ ಯೋಜನೆಗೆ ಅವಶ್ಯವಿರುವ 173 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಬಿಡಿಸಿಕೊಳ್ಳುವುದಾಗಿರುತ್ತದೆ.

ಇ) ಈ ಯೋಜನೆಗೆ ಬೇಕಿರುವ 173 ಎಕರೆ ಅಭಯಾರಣ್ಯ ಪ್ರದೇಶದ ಬಿಡುಗಡೆಗೆ ಅರಣ್ಯ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ.

ಈ) ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯಂತೆ ಅನ್ವಯ ಈ ಯೋಜನೆ ಅಂದಾಜು ಮೊತ್ತ ರೂ. 2412 ಲಕ್ಷಗಳು.

ಉ) ಈ ಯೋಜನೆಗೆ ಇದುವರೆಗೂ ಆಗಿರುವ ವೆಚ್ಚ ರೂ. 30,094.00

554(452) : ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್‌ಖಾನ್ (ಹುಬ್ಬಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ (ವ್ಯಾಪ್ತಿ)ಯಲ್ಲಿರುವ ರಾಷ್ಟ್ರೀಯ ಹೆದ್ದಾರಿ ನಂ. 4 ಅನ್ನು ಬೈಪಾಸ್ ರಸ್ತೆಯ ಬಳಕೆಯ ನಂತರ ಕಡೆಗಣಿಸಿರುವುದರಿಂದ ಉಂಟಾಗಿರುವ ದರಸ್ಥಿತಿಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಹುಬ್ಬಳ್ಳಿ–ಧಾರವಾಡ ಮಧ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನು ನಾಲ್ಕು ಮಾರ್ಗಗಳಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;

ಇ) ಹಾಗಿದ್ದಲ್ಲಿ ಸದರಿ ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ದೊರೆತಿದೆಯೇ;

ಈ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಸರ್ಕಾರದ ಆದೇಶ ಸಂಖ್ಯೆ: ಲೋಇ 15 ಮಾತಂಕೋ 2003, ಬೆಂಗಳೂರು ದಿನಾಂಕ 18–5–2004ರ ಪ್ರಕಾರ ಹುಬ್ಬಳ್ಳಿ–ಧಾರವಾಡ ಮಧ್ಯದ ಮೊದಲಿನ ರಾಷ್ಟ್ರೀಯ ಹೆದ್ದಾರಿ 4ನ್ನು (ಕಿಮೀ 403.80 ದಿಂದ 433.00 ಗಬ್ಬೂರ ಕ್ರಾಸ್‌ದಿಂದ ನರೇಂದ್ರ ಕ್ರಾಸ್‌ವರೆಗೆ ಮಂಗಸೂಳಿ–ಲಕ್ಷ್ಮೇಶ್ವರ ರಾಜ್ಯ ಹೆದ್ದಾರಿ 73ರಲ್ಲಿ ಸೇರ್ಪಡಿಸಲಾಗಿದೆ. ಈ ರಸ್ತೆಯನ್ನು ಜುಲೈ 2004ರಲ್ಲಿ ರಾಷ್ಟ್ರೀಯ ಹೆದ್ದಾರಿ ವಿಭಾಗದಿಂದ ಹಸ್ತಾಂತರಿಸಿಕೊಂಡಿದ್ದು ಈಗ ಈ ರಸ್ತೆಯಲ್ಲಿಯ ತಗ್ಗು–ಗುಂಡಿಗಳನ್ನು ತುಂಬಲು ಧಾರವಾಡ ವಿಭಾಗ ಧಾರವಾಡ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಪತ್ರ ಸಂ: 877 ದಿನಾಂಕ 3–7–2004 ರಂದು 4.38 ಲಕ್ಷ ರೂ. ಅನುದಾನದ ನಿರೀಕ್ಷೆಯೊಂದಿಗೆ ಟೆಂಡರ್ ಕರೆಯಲಾಗಿದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಈ) ಈ ಯೋಜನೆಗೆ ಸುಮಾರು ರೂ. 2750 ಲಕ್ಷ ಅಂದಾಜು ಮಾಡಲಾಗಿದೆ.

555(455) : ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್‌ಖಾನ್ (ಹುಬ್ಬಳ್ಳಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿಯ ಹೆಗ್ಗೇರಿ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಹೊಸ ಸಿಟಿ ಬಸ್ ನಿಲ್ದಾಣದ ಕೆಲಸ ಈಗ ಯಾವ ಹಂತದಲ್ಲಿದೆ;

ಆ) ಸದರಿ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸಿಟಿ ಬಸ್ ನಿಲ್ದಾಣದ ನೀಲ ನಕ್ಷೆ ಸಿದ್ಧವಾಗಿದೆಯೇ;

ಇ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು;

ಈ) ಸಿಟಿ ಬಸ್ ನಿಲ್ದಾಣದ ಕೆಲಸಕ್ಕೆ ಯಾವಾಗ ಶಂಕುಸ್ಥಾಪನೆ ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಇವರ ಸ್ವಾಧೀನದಲ್ಲಿರುವ 1 ಎಕರೆ 10 ಗುಂಟೆ ನಿವೇಶನಕ್ಕಾಗಿ ರೂ. 3,75,000/– ಗಳನ್ನು ಆಯುಕ್ತರು ಹುಬ್ಬಳ್ಳಿ ಧಾರವಾಡ ಮಹಾನಗರಸಭೆ ಇವರಿಗೆ ಪಾವತಿ ಮಾಡಲಾಗಿತ್ತು. ಆದರೆ, ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯವರು ಇತ್ತೀಚಿನ ಮಾರುಕಟ್ಟೆ ದರದಂತೆ ರೂ. 43,58,000/–ಗಳನ್ನು ಪಾವತಿಸಬೇಕೆಂದು ತಿಳಿಸಿರುವ ಹಿನ್ನಲೆಯಲ್ಲಿ, ಮೊದಲು ಪಾವತಿಸಿದ ದರದಲ್ಲಿ ನಿವೇಶನಗಳನ್ನು ಒದಗಿಸಲು ಮತ್ತೊಮ್ಮೆ ಆಯುಕ್ತರನ್ನು ಕೋರಲಾಗುವುದು.

ಆ) ಬಸ್ ನಿಲ್ದಾಣಕ್ಕಾಗಿ ಜಮೀನನ್ನು ಸಂಸ್ಥೆಯ ವಶಕ್ಕೆ ಪಡೆದುಕೊಂಡ ನಂತರ ನೀಲಿ ನಕ್ಷೆಯನ್ನು ತಯಾರಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಸಧ್ಯಕ್ಕೆ ಉದ್ಭವಿಸುವುದಿಲ್ಲ.

557(458) : ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್‌ಖಾನ್ (ಹುಬ್ಬಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿದ್ಯುತ್ ಕಡಿತ ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮವೇನು;

ಆ) ಹುಬ್ಬಳ್ಳಿ–ಧಾರವಾಡ ನಗರ ಪ್ರದೇಶಗಳಲ್ಲಿ ಯಾವ ಯಾವ ಪ್ರದೇಶಗಳಲ್ಲಿ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ (ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿದ್ಯುತ್ ಕಡಿತ (Load Shedding)ಇರುವುದಿಲ್ಲ. ಆದರೆ ಕೆಲವೊಂದು ಈ ಕೆಳಗಿನ ಪ್ರಸಂಗಗಳಲ್ಲಿ ವಿದ್ಯುತ್ ನಿಲುಗಡೆ ಆಗುತ್ತಲಿದೆ.

1. ಲೈನ್ ದೋಷವಾದಾಗ.

2. ಲೈನ್ ನಿರ್ವಹಣೆಗೆ ಮುಂಜಾಗ್ರತೆ ಪತ್ರಿಕೆಯ ಮೂಲಕ ತಿಳಿಸಿ ನಿಲುಗಡೆ ಮಾಡಿದಾಗ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ (ಎ.ಪಿ.ಡಿ.ಆರ್.ಪಿ.) ಕಾರ್ಯ ಯೋಜನೆಯಡಿಯಲ್ಲಿ ಸುಮಾರು 50.40 ಕೋಟಿ ರೂ.ಗಳ ಸುಧಾರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅವುಗಳು ಈ ಕೆಳಕಂಡಂತಿವೆ:-

ಅ. ಹಾಲಿ ಇರುವ ವಾಹಕಗಳನ್ನು ಹೆಚ್ಚಿನ ಸಾಮರ್ಥ್ಯದ ವಾಹಕಗಳಿಂದ ಪುನರ್ ವಾಹಕಗೊಳಿಸುವುದು.

ಆ. ಹೆಚ್ಚುವರಿ ವಿತರಣಾ ಪರಿವರ್ತಕಗಳನ್ನು ಅಳವಡಿಸುವುದು.

ಇ ಓವರ್ ಹೆಡ್ ವಾಹಕಗಳನ್ನು ಭೂಗತ ವಾಹಕಗಳಾಗಿ ಪರಿವರ್ತಿಸಿ ಹೊಸ ಮಾದರಿಯ ಫೀಡರ್ ಪಿಲ್ಲರ್ ಬಾಕ್ಸ್‌ಗಳನ್ನು ಅಳವಡಿಸುವುದು.

ಈ ಮೇಲಿನ ಸುಧಾರಣಾ ಕಾರ್ಯಗಳು ಜೂನ್ 2003 ರಿಂದ ಪ್ರಾರಂಭವಾಗಿದ್ದು ಡಿಸೆಂಬರ್ 2004ರಲ್ಲಿ ಮುಕ್ತಾಯಗೊಳ್ಳುವ ನಿರೀಕ್ಷೆಯಿದೆ. ಕಾರ್ಯಪ್ರಗತಿ ಸಮಯದಲ್ಲಿ ಕೆಲವೊಂದು ಪ್ರದೇಶಗಳಲ್ಲಿ ನಿಗದಿತ ವೇಳೆಯಲ್ಲಿ ವಿದ್ಯುತ್ ನಿಲುಗಡೆ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿದೆ. ಈ ಕಾರ್ಯಗಳು ಮುಗಿಯುತ್ತಾ ಬಂದಂತೆ ವಿದ್ಯುತ್ ನಿಲುಗಡೆ ಕಡಿಮೆಯಾಗುತ್ತದೆ ಮತ್ತು ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ಉಂಟಾಗುತ್ತದೆ.

ಆ) ಹುಬ್ಬಳ್ಳಿ-ಧಾರವಾಡ ನಗರ ಪರದೇಶಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ವಿದ್ಯುತ್ ಸಬ್-ಸ್ಟೇಷನ್‌ಗಳ ಪ್ರದೇಶವಾರು ವಿವರಗಳು ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಪ್ರದೇಶ | ಉದ್ದೇಶಿತ ಸಬ್-ಸ್ಟೇಷನ್ನಿನ ಸಾಮರ್ಥ್ಯ |
|---|---|---|
| 1. | ಮೃತ್ಯುಂಜಯ ನಗರ | 110/11 ಕೆ.ವಿ. 1x10 ಎಂ.ವಿ.ಎ. |
| 2. | ಗದಗ ರೋಡ್ | 110/11 ಕೆ.ವಿ. 1x10 ಎಂ.ವಿ.ಎ. |
| 3. | ಗಬ್ಬೂರು | 110/11 ಕೆ.ವಿ. 2x10 ಎಂ.ವಿ.ಎ. |
| 4. | ಆನಂದ ನಗರ | 110/33 ಕೆ.ವಿ. 2x10 ಎಂ.ವಿ.ಎ. |
| 5. | ಪಿ.ಹೆಚ್.ಸಿ. ಕಾಂಪೌಂಡ್ | 110/33 ಕೆ.ವಿ. 2x10 ಎಂ.ವಿ.ಎ. ಉನ್ನತೀಕರಣ |
| 6. | ತಡಸನ ಕೊಪ್ಪ | 110/11 ಕೆ.ವಿ. 1x10 ಎಂ.ವಿ.ಎ |
| 7. | ಅಕ್ಷಯ ಕಾಲೋನಿ | 110/11 ಕೆ.ವಿ. 2x10 ಎಂ.ವಿ.ಎ |
| 8. | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | 110/33 ಕೆ.ವಿ. 2x10 ಎಂ.ವಿ.ಎ ಉನ್ನತೀಕರಣ |
| 9. | ಕೃಷಿ ವಿಶ್ವವಿದ್ಯಾಲಯ, ಧಾರವಾಡ | 33/11 ಕೆ.ವಿ. 2x10 ಎಂ.ವಿ.ಎ |
| 10. | ಕೆ.ಎಂ.ಸಿ. ಹುಬ್ಬಳ್ಳಿ | 33/11 ಕೆ.ವಿ. 2x5 ಎಂ.ವಿ.ಎ (ಕೆಲಸ ಪ್ರಗತಿಯಲ್ಲಿದೆ) |
| 11. | ಕುಸುಗಲ್ ರೋಡ್ | 33/11 ಕೆ.ವಿ. 2x5 ಎಂ.ವಿ.ಎ (ಕೆಲಸ ಪ್ರಗತಿಯಲ್ಲಿದೆ) |

558(579) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾಂ, ಬಿಜಾಪುರ, ಬಾಗಲಕೋಟೆ ಜಿಲ್ಲೆಗಳು ತೀವ್ರ ಬರಗಾಲ ಉಂಟಾಗಿರುವ ಪರಿಣಾಮ ಅಗತ್ಯ ನೀರಿಗೆ ಕೈಗೊಂಡ ಕ್ರಮಗಳೇನು;

ಆ) ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿ ಮೂಲಕ ನೀರು ಹರಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ;

ಇ) ಇದಕ್ಕೆ ಮಹಾರಾಷ್ಟ್ರ ಸರ್ಕಾರದ ಪ್ರತಿಕ್ರಿಯೆ ಏನು;

ಈ) ಈಗಾಗಲೇ ನೀರು ಬಿಡುಗಡೆ ಮಾಡಲಾಗಿದೆಯೇ ಮತ್ತು ಎಷ್ಟು ಟಿ.ಎಂ.ಸಿ. ನೀರು ಬಿಡುಗಡೆ ಮಾಡಲಾಗಿದೆ; ಹಾಗೂ ಇದರ ಉಪಯೋಗ ಯಾವ ಪ್ರದೇಶಕ್ಕಾಗಿದೆ;

ಉ) ನೀರು ತಲುಪದಿರುವ ಕೆಲವು ಪ್ರದೇಶಗಳಿಗೆ ಯಾವ ಕ್ರಮ ಜರುಗಿಸಲಾಗುತ್ತದೆ. ಇದಕ್ಕಾಗಿ ಮಹಾರಾಷ್ಟ್ರದೊಂದಿಗೆ ಮಾತುಕತೆ ಮಾಡಲಾಗಿದೆಯೇ ಮತ್ತು ಪ್ರಾತಿ ಯಾವ ಹಂತದಲ್ಲಿದೆ ವಿವರಿಸಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಬೆಳಗಾಂ ಜಿಲ್ಲೆಯ ಕೃಷ್ಣಾ ನದಿಯ ದಂಡೆಯಲ್ಲಿ ಚಿಕ್ಕೋಡಿ, ರಾಯಬಾಗ್, ಅಥಣಿ ಹಾಗೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನಲ್ಲಿ ತೀವ್ರ ಬರಗಾಲದಿಂದ ಕುಡಿಯುವ ನೀರಿನ ಅಭಾವ ಉಂಟಾಗಿದ್ದು, ಕರ್ನಾಟಕ ರಾಜ್ಯದ ಹಿಡಕಲ್ ಜಲಾಶಯದಿಂದ ಘಟಪ್ರಭಾ ನದಿಯ ಮೂಲಕ ನೀರನ್ನು ಹರಿಸಿ, ದೂದ್‌ಗಂಗಾ ಅಂತರರಾಜ್ಯ ಯೋಜನೆಯ ಒಪ್ಪಂದದಡಿ ಕಳ್ಳಂವಾಡಿ ಜಲಾಶಯದಿಂದ ಕರ್ನಾಟಕ ರಾಜ್ಯದ ಪಾಲಿನ ನೀರಿನಲ್ಲಿ ನೀರನ್ನು ಪಡೆದು ಹಾಗೂ ಮಹಾರಾಷ್ಟ್ರದಿಂದ ಕೊಯ್ನಾ, ವಾರಣಾದಿಂದ ಕೂಡ ನೀರನ್ನು ಬಿಡುಗಡೆ ಮಾಡಲಾಗಿದೆ. ಇದಲ್ಲದೆ, ಬಿಜಾಪುರ ಜಿಲ್ಲೆಯಲ್ಲಿ ಭೀಮಾ ನದಿಯ ದಂಡೆಯ ಮೇಲಿರುವ ಗ್ರಾಮಗಳಲ್ಲಿ ಮಹಾರಾಷ್ಟ್ರ ಸರ್ಕಾರವು ಉಜನಿ ಜಲಾಶಯದಿಂದ ಸೋಲಾಪುರ ಹಾಗೂ ಅಕ್ಕಲಕೋಟ್ ಪಟ್ಟಣಗಳಿಗೆ ಕುಡಿಯುವ ನೀರಿನ ಅಭಾವವನ್ನು ಪೂರೈಸಲು ಭೀಮಾ ನದಿಯಲ್ಲಿ ಬಿಡುಗಡೆ ಮಾಡಿದ ನೀರನ್ನು ಕರ್ನಾಟಕದ ಗ್ರಾಮದ ಜನ ಜಾನುವಾರುಗಳೂ ಸಹ ಕುಡಿಯುವ ನೀರಿನ ಬಳಕೆಗಾಗಿ ಉಪಯೋಗ ಪಡೆದಿರುತ್ತಾರೆ.

ಬಾಗಲಕೋಟೆ ಜಿಲ್ಲೆಯಲ್ಲಿ ಜಮಖಂಡಿ ಹಾಗೂ ಇತರ ಭಾಗಗಳಲ್ಲಿ ಕುಡಿಯುವ ನೀರಿನ ಅಭಾವವನ್ನು ಶಾಶ್ವತವಾಗಿ ಪರಿಹರಿಸಲು ಕೃಷ್ಣಾ ನದಿಗೆ ಅಡ್ಡಲಾಗಿ ಹಿಪ್ಪರಗಿ ಬ್ಯಾರೇಜ್‌ನ್ನು ನಿರ್ಮಿಸಲಾಗಿದೆ.

ಆ) ಬೆಳಗಾಂ ಜಿಲ್ಲೆಯ ರಾಯಬಾಗ್, ಚಿಕ್ಕೋಡಿ ಹಾಗೂ ಅಥಣಿ ತಾಲ್ಲೂಕುಗಳಲ್ಲಿ ಕೃಷ್ಣಾ ನದಿಯ ದಂಡೆಯ ಮೇಲಿರುವ ಗ್ರಾಮಗಳಿಗೆ ಹಾಗೂ ಪಟ್ಟಣಗಳಿಗೆ ಕುಡಿಯುವ ನೀರಿನ ಅಭಾವವನ್ನು ಪೂರೈಸಲು ಮಹಾರಾಷ್ಟ್ರದ ವಾರಣಾ ಜಲಾಶಯದಿಂದ ರಾಜಾಪೂರ ಬ್ಯಾರೇಜಿನಿಂದ ಕೃಷ್ಣಾ ನದಿ ಮೂಲಕ ನೀರು ಹರಿಸಲು ಸರ್ಕಾರವು

 ಕ್ರಮ ತೆಗೆದುಕೊಂಡಿದೆ.

ಇ) ಮಹಾರಾಷ್ಟ್ರ ಸರ್ಕಾರವು ದಿನಾಂಕ 13–4–2004 ರಿಂದ 27–4–2004ರವರೆಗೆ ನೀರನ್ನು ಬಿಡುಗಡೆ ಮಾಡಿದೆ.

ಈ) ಹೌದು, ಈಗಾಗಲೇ ರಾಜಾಪೂರ ಬ್ಯಾರೇಜಿನಿಂದ 2004ನೇ ಸಾಲಿನಲ್ಲಿ 1.00 ಟಿಎಂಸಿ ನೀರನ್ನು ಬಿಡುಗಡೆ ಮಾಡಲಾಗಿದ್ದು. ಇದರಿಂದ ಬೆಳಗಾಂವ ಜಿಲ್ಲೆಯ ಚಿಕ್ಕೋಡಿ, ರಾಯಬಾಗ್ ಮತ್ತು ಅಥಣಿ ತಾಲ್ಲೂಕುಗಳಲ್ಲಿ ಜನ ಜಾನುವಾರುಗಳ ಕುಡಿಯುವ ನೀರಿನ ಬಳಕೆಗಾಗಿ ಉಪಯೋಗಿಸಲಾಗಿದೆ.

ಉ) ನೀರು ತಲುಪದಿರುವ ಕೆಲವು ಪ್ರದೇಶಗಳಿಗೂ ಸಹ ನೀರು ಒದಗಿಸಲು ಮಹಾರಾಷ್ಟ್ರದಿಂದ ಹೆಚ್ಚಿನ ನೀರು ಬಿಡಿಸುವ ಕೋರಿಕೆಯೊಂದಿಗೆ, ಕರ್ನಾಟಕ ರಾಜ್ಯದಿಂದ ಒಂದು ತಂಡವು ಮಹಾರಾಷ್ಟ್ರಕ್ಕೆ ಭೇಟಿ ನೀಡಿತ್ತು. ಆದರೆ ಮಹಾರಾಷ್ಟ್ರವು ರಾಜ್ಯದ ಕೋರಿಕೆಯನ್ನು ನಿರಾಕರಿಸಿರುತ್ತದೆ.

559(582) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವದ ಅತಿದೊಡ್ಡ ನೀರಾವರಿ ಮತ್ತು ಪುನರ್ವಸತಿ ಯೋಜನೆಯಾಗಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಎಂಬುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ತಿಳಿದಿದ್ದಲ್ಲಿ ಸಧ್ಯದ ಸ್ಥಿತಿ–ಗತಿ ಏನು; (ಪೂರ್ಣ ವಿವರ ನೀಡುವುದು);

ಇ) ಸದರಿ ಯೋಜನೆಯ ಮುಖ್ಯ ಹುದ್ದೆಗಳೆ ಖಾಲಿ ಬಿದ್ದಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಯಾವ ಯಾವ ಪ್ರಮುಖ ಹುದ್ದೆಗಳು ಖಾಲಿ ಇವೆ;

ಉ) 12 ಸಾವಿರ ಕೋಟಿ ರೂ. ವೆಚ್ಚದಲ್ಲಿ 20 ಲಕ್ಷ ಎಕರೆ ಜಮೀನಿಗೆ ನೀರಾವರಿ ಕಲ್ಪಿಸುವ ಇದಕ್ಕೆ ಈ ಗತಿಯಾದರೆ ಯೋಜನೆ ಕುಂಠಿತವಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ;

ಊ) ಭಾವಿಸಿದ್ದಲ್ಲಿ, ಪ್ರಮುಖ ಹುದ್ದೆಗಳು ಖಾಲಿ ಇರಲು ಕಾರಣಗಳೇನು ಹಾಗೂ ಈ ಹುದ್ದೆಗಳ ಭರ್ತಿಗೆ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ;

ಋ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುತ್ತದೆ ಹಾಗೂ ನೇಮಕ ವಿಳಂಬದಿಂದ ಉಂಟಾದ ಅವ್ಯವಸ್ಥೆ ಗೊಂದಲಗಳಿಗೆ ಯಾವ ಪರಿಹಾರ ಒದಗಿಸಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ತಿಳಿದಿದೆ

ಆ) ಈ ಯೋಜನೆಯಡಿಯಲ್ಲಿ ವಿವಿಧ ಅಂಗಗಳ ಇತ್ತೀಚಿನ ಪರಿಸ್ಥಿತಿಯನ್ನು ಈ ಕೆಳಗಿ ವಿವರಿಸಿದೆ.

| | | |
|---|---|---|
| 1. | ಆಲಮಟ್ಟಿ ಅಣೆಕಟ್ಟು | – ಮುಗಿದಿದೆ |
| 2. | ನಾರಾಯಣಪುರ ಅಣೆಕಟ್ಟು | – ಮುಗಿದಿದೆ |
| 3. | ನಾರಾಯಣಪುರ ಎಡದಂಡೆ ಕಾಲುವೆ | |

| | | |
|---|---|---|
| | ಶಹಾಪುರ ಶಾಖಾ ಕಾಲುವೆ<br>ಮುದಬಾಳ್ ಶಾಖಾ ಕಾಲುವೆ ಮತ್ತು<br>ಇಂಡಿ ಶಾಖಾ ಕಾಲುವೆಗಳು | ಪೂರ್ಣಗೊಂಡಿದೆ |
| 4. | ಜೇವರ್ಗಿ ಶಾಖಾ ಕಾಲುವೆ, ಆಲಮಟ್ಟಿ ಎಡದಂಡೆ<br>ಏತ ಕಾಲುವೆ ಆಲಮಟ್ಟಿ ಬಲದಂಡೆ ಕಾಲುವೆ<br>ನಾರಾಯಣಪುರ ಬಲದಂಡೆ ಕಾಲುವೆ<br>ಹಾಗೂ ರಾಂಪುರ ಏತ ನೀರಾವರಿ<br>ಯೋಜನೆಗಳು | ಮುಕ್ತಾಯ ಹಂತದಲ್ಲಿ<br>ಇರುತ್ತದೆ.<br>ಬಾಕಿ ಕಾಮಗಾರಿಗಳು<br>ಮಾರ್ಚ್ 2005 ರೊಳಗೆ<br>ಪೂರ್ಣಗೊಳ್ಳಲಿವೆ. |
| 5. | ಇತರೆ ಏತ ನೀರಾವರಿ ಕಾಮಗಾರಿಗಳಾದ<br>ಮುಳವಾಡ ಏತ ನೀರಾವರಿ<br>ಇಂಡಿ ಏತ ನೀರಾವರಿ | ಇವುಗಳ ಕಾಮಗಾರಿಗಳು<br>ಪ್ರಗತಿಯಲ್ಲಿದ್ದು ಡಿಸೆಂಬರ್<br>2005 ವೇಳೆಗೆ ಪೂರ್ಣಗೊಳಿಸಲು<br>ಯೋಜಿಸಲಾಗಿದೆ. |

ಒಟ್ಟಾರೆ ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಕೀಂ-ಎ ರಡಿಯಲ್ಲಿಯ ಎಲ್ಲಾ ಕಾಮಗಾರಿಗಳನ್ನು ಡಿಸೆಂಬರ್ 2005ರೊಳಗಾಗಿ ಪೂರ್ಣಗೊಳ್ಳಲಿವೆ.

ಇ) ಹೌದು.

ಈ) ಈ ಯೋಜನೆಯಲ್ಲಿ ಪ್ರಮುಖ ಹುದ್ದೆಗಳ ವಿವರ ಈ ಕೆಳಗಿನಂತಿದೆ. ಆಯುಕ್ತರು, ಕೃಷ್ಣಾ ಮೇಲ್ದಂಡೆ ಯೋಜನೆ, ಪುನರ್ ವಸತಿ ಮತ್ತು ಭೂಸ್ವಾಧೀನ.

**ಮುಖ್ಯ ಇಂಜಿನಿಯರ್ ಹುದ್ದೆಗಳು**

1. ಅಣೆಕಟ್ಟು ವಲಯ ಆಲಮಟ್ಟಿ-ಖಾಲಿ ಇರುತ್ತದೆ.
2. ಕಾಲುವೆ ವಲಯ ನಂ. 1 ಭೀಮರಾಯನಗುಡಿ-ಖಾಲಿ ಇರುತ್ತದೆ.
3. ಕಾಲುವೆ ವಲಯ ನಂ. 2 ಕೆಂಭಾವಿ-ಖಾಲಿ ಇರುತ್ತದೆ.
4. ಕಾರ್ಯಾಚರಣೆ ಮತ್ತು ನಿರ್ವಾಹಣೆ ವಲಯ, ನಾರಾಯಣಪುರ-ಖಾಲಿ ಇರುತ್ತದೆ.

**ಅಧೀಕ್ಷಕ ಅಭಿಯಂತರರು**

1. ಅಧೀಕ್ಷಕ ಅಭಿಯಂತರರು,
   ವ್ಯವಸ್ಥಾಪಕ ನಿರ್ದೇಶಕರ ಕಛೇರಿ, ಆಲಮಟ್ಟಿ-ಭರ್ತಿ ಮಾಡಬೇಕಾಗಿದೆ
   ಗುಣ ನಿಯಂತ್ರಣ ಮತ್ತು ತನಿಖಾ ವೃತ್ತ ಭೀಮರಾಯನಗುಡಿ-ಭರ್ತಿಮಾಡಬೇಕಾಗಿದೆ.

ಉ) ಇಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆ ಸ್ಕೀ-ಎ ರಡಿಯ ಎಲ್ಲಾ ಕಾಮಗಾರಿಗಳು ತೀವ್ರ ಗತಿಯಲ್ಲಿ ಪ್ರಗತಿಯಲ್ಲಿದ್ದು ಎಲ್ಲಾ ಬಾಕಿ ಕಾಮಗಾರಿಗಳನ್ನು ಡಿಸೆಂಬರ್ 2005ರೊಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಯಡಿ ಕಲ್ಪಿಸಲು ಯೋಜಿಸಲಾಗಿರುವ 6.22 ಲಕ್ಷ ಹೆ. (15.40 ಲಕ್ಷ ಎಕರೆ) ಪ್ರದೇಶದ ಪೈಕಿ ಈಗಾಗಲೇ 4.61 ಲಕ್ಷ ಹೆ. (11.40 ಲಕ್ಷ ಎಕರೆ) ಪ್ರದೇಶದ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ ಹಾಗೂ ಈ ಪೈಕಿ 3.80 ಲಕ್ಷ

ಹೆ. (9.40 ಲಕ್ಷ ಎಕರೆ) ಪ್ರದೇಶಕ್ಕೆ 2004ರ ಮುಂಗಾರಿನಲ್ಲಿ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಉಳಿದ ಪ್ರದೇಶಕ್ಕೆ ರೈತರು ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ನೀರೆತ್ತಿ ಉಪಯೋಗಿಸುತ್ತಿದ್ದಾರೆ.

ಊ) ಮುಖ್ಯ ಅಭಿಯಂತರರ ಹುದ್ದೆಗಳು ವಯೋನಿವೃತ್ತಿಯಿಂದಾಗಿ ಹುದ್ದೆಗಳು ಖಾಲಿ ಇರುತ್ತವೆ.

ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಋ) ಖಾಲಿ ಹುದ್ದೆಗಳಿಗೆ ಪ್ರಭಾರ ವ್ಯವಸ್ಥೆ ಮಾಡಿರುವುದರಿಂದ ಇದು ಉದ್ಭವಿಸುವುದಿಲ್ಲ.

560(586) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ನಾರಾಯಣಪುರ ಎಡದಂಡೆ ಕಾಲುವೆ ಹಾಗೂ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಿಗೆ ನೀರೊದಗಿಸುವ ತುಂಗಭದ್ರಾ ಎಡದಂಡೆ ಮುಖ್ಯ ನಾಲೆಗಳ ದುರಸ್ಥಿ ಕಾರ್ಯ ಪೂರ್ಣಗೊಂಡಿದೆಯೇ;

ಆ) ಇನ್ನೂ ಪೂರ್ಣಗೊಳ್ಳದೇ ಇರಲು ಕಾರಣಗಳೇನು;

ಇ) ನಾಲೆಗಳ ದುರಸ್ತಿ ಕಾರ್ಯ ಪೂರ್ಣವಾಗದಿರುವ ಹಿನ್ನೆಲೆಯಲ್ಲಿ ಕಾಲುವೆಗಳ ಮೂಲಕ ನೀರು ಹರಿಸಲು ಅನುಕೂಲವಾಗಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಪೂರ್ಣಗೊಂಡಿರುತ್ತದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

561(608) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಲಪ್ರಭಾ ನದಿಗೆ ಹೆಚ್ಚುವರಿ 7.5 ಟಿಎಂಸಿ ನೀರು ಸಂಗ್ರಹವಾಗುವ ಕಳಸಾಬಂಡೂರ ನಾಲಾ ಯೋಜನೆ ವಿವರಗಳೇನು; ಹಾಗೂ ಈ ಯೋಜನೆ ಅನುಷ್ಠಾನ ತಡವಾಗಲು ಕಾರಣಗಳು ಯಾವುವು;

ಆ) ಈ ಯೋಜನೆ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಇನ್ನು ಎಷ್ಟು ಅವಧಿಯಲ್ಲಿ ಈ ಯೋಜನೆ ಅನುಷ್ಠಾನ ಆಗಲಿದೆ (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಅ) "ಕಳಸಾ ನಾಲಾ" ಮತ್ತು "ಬಂಡೂರ ನಾಲಾ" ಯೋಜನೆಯ ವಿವರಗಳು:

| ವಿವರಗಳು | | ಕಳಸಾ ನಾಲಾ ಯೋಜನೆ | ಬಂಡೂರ ನಾಲಾ ಯೋಜನೆ |
|---|---|---|---|
| 1. | ಉದ್ದೇಶ | 3.56 ಟಿಎಂಸಿ ಪ್ರಮಾಣದ ನೀರನ್ನು ಮಲಪ್ರಭಾ ನದಿಗೆ ಹೊರಳಿಸುವುದು | 4.00 ಟಿಎಂಸಿ ಪ್ರಮಾಣದ ನೀರನ್ನು ಮಲಪ್ರಭಾ ನದಿಗೆ ಹೊರಳಿಸುವುದು |
| 2 | ಅಂದಾಜು ಮೊತ್ತ | ರೂ. 44.78 ಕೋಟಿ | ರೂ. 49.20 ಕೋಟಿ |
| 3 | ನೀರಿನ ಮೂಲ | ಕಳಸಾ, ಸುರ್ಲಾ ಮತ್ತು ಹಲ್ತಾರ ನಾಲಾಗಳು | ಬಂಡೂರ ನಾಲಾ ಮತ್ತು ಸಿಂಗಾರ ನಾಲಾ |
| 4 | ಸ್ಥಳ | ಖಾನಾಪುರ ತಾಲ್ಲೂಕಿನ ಕಣತುಂಬಿ ಗ್ರಾಮದ ಹತ್ತಿರ ಕಳಸಾ ನಾಲಾ | ಖಾನಾಪೂರ ತಾಲ್ಲೂಕಿನ ನೆರ್ಸೆ ಗ್ರಾಮದ ಹತ್ತಿರ ಬಂಡೂರ ನಾಲಾ |

ಆ) ಯೋಜನೆ ಅನುಷ್ಠಾನಗೊಳಿಸಲು ಇರುವಂತಹ ಅಡೆತಡೆಗಳು

1) ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಇಲಾಖೆಯ ಪತ್ರ ದಿನಾಂಕ 30-4-02ರಲ್ಲಿ ಹುಬ್ಬಳ್ಳಿ ಧಾರವಾಡ ನಗರಗಳ ಕುಡಿಯುವ ನೀರು ಪೂರೈಕೆ ಸಲುವಾಗಿ ಮಹಾದಾಯಿ ಕಣಿವೆಯಿಂದ ಮಲಪ್ರಭಾ ನದಿಗೆ 7.56 ಟಿಎಂಸಿ. ನೀರನ್ನು ಹೊರಳಿಸಲು ಕೆಲವು ಷರತ್ತುಗಳೊಡನೆ ಒಪ್ಪಿಗೆ ನೀಡಿತ್ತು. ಆದರೆ ಗೋವಾ ರಾಜ್ಯ ಸರ್ಕಾರವು ಈ ತಾತ್ವಿಕ ಒಪ್ಪಿಗೆಯನ್ನು ವಿರೋಧಿಸಿ ಅಂತರ ರಾಜ್ಯ ನೀರ ಹಂಚಿಕೆಯ ವಿವಾದ ನ್ಯಾಯ ಮಂಡಳಿ ರಚಿಸಲು ಬೇಡಿಕೆ ಸಲ್ಲಿಸಿದ್ದನ್ನು ಪರಿಗಣಿಸಿ ಕೇಂದ್ರ ಸರ್ಕಾರವು 19-9-02 ರಂದು ಹಿಂದೆ ನೀಡಿದ್ದ ತಾತ್ವಿಕ ಒಪ್ಪಿಗೆಯನ್ನು ತಡೆಹಿಡಿದಿರುತ್ತದೆ.

2) ಕಳಸಾನಾಲಾ ಮತ್ತು ಬಂಡೂರು ನಾಲಾ ಯೋಜನೆಗಳ ಅರಣ್ಯ ಭೂಮಿ ಸ್ವಾಧೀನಕ್ಕೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಜಲ ಸಂಪನ್ಮೂಲ ಇಲಾಖೆಯ, ಅಂತರ ರಾಜ್ಯ ವಿಷಯಕ್ಕೆ ಸಂಬಂಧ ಪಟ್ಟ ವಿಷಯವಾಗಿರುವುದರಿಂದ ಜಲವಿವಾದ ಕಾಯ್ದೆಯ ಪ್ರಕಾರ ವಿವಾದವು ಬಗೆಹರಿಯುವವರೆಗೆ ತೀರುವಳಿ ನೀಡಬಾರದೆಂದು ತಿಳಿಸಿರುತ್ತಾರೆ.

ಆ) ತಡೆಹಿಡಿದಿರುವ ಆದೇಶವನ್ನು ಹಿಂದಕ್ಕೆ ಪಡೆದು ಅನುಮೋದನೆಯ ಆದೇಶವನ್ನು ಪುನಃ ನೀಡುವಂತೆ ಕೇಂದ್ರ ಸರ್ಕಾರವನ್ನು ಜಲ ಸಂಪನ್ಮೂಲ ಸಚಿವರು ಮತ್ತು ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆರವರು ಹಲವಾರು ಪತ್ರಗಳನ್ನು ಬರೆದು ಒತ್ತಾಯಿಸಲಾಗಿದೆ.

ಇ) ಯೋಜನೆಗಳ ಪ್ರಾಥಮಿಕ ತನಿಖಾ ಕಾರ್ಯ ಕೈಗೊಳ್ಳಲಾಗಿದೆ. ಮೇಲೆ ನಮೂದಿಸಲಾಗಿರುವ ಅಡೆತಡೆಗಳು ನಿವಾರಣೆಯಾದಲ್ಲಿ 2006ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

562(690) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆ ಕಾಮಗಾರಿ ಪೂರ್ಣಗೊಂಡಿದೆಯೇ;

ಆ) ಪೂರ್ಣಗೊಂಡಿದ್ದರೆ, ಗರಿಷ್ಠ ಮಟ್ಟಕ್ಕೆ ನೀರು ನಿಲ್ಲಿಸಲಾಗುವುದೇ;

ಇ) ಈ ಯೋಜನೆಯಡಿ ಮುಳುಗಡೆಯಾಗುವ ರೈತರಿಗೆ ಇನ್ನೂ ಪರಿಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕಾಲಮಿತಿಯೊಳಗೆ ಪರಿಹಾರ ನೀಡಲು ಮತ್ತು ಪುನರ್ವಸತಿ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಪರಿಹಾರ ಮತ್ತು ಪುನರ್ವಸತಿ ನೀಡುವವರೆಗೆ ಗರಿಷ್ಠ ಮಟ್ಟದವರೆಗೆ ನೀರು ನಿಲ್ಲಿಸದೇ ಯಥಾ ಸ್ಥಿತಿ ಕಾಪಾಡಿಕೊಳ್ಳಲಾಗುವುದೇ;

ಊ) ಈ ಸಾಲಿನಲ್ಲಿ ಪರಿಹಾರ ನೀಡಲು ಹಣ ನಿಗದಿಪಡಿಸಲಾಗಿದೆಯೇ;

ಋ) ನಿಗದಿಪಡಿಸಲಾಗಿದ್ದರೆ, ಅದರ ಮೊತ್ತವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಪ್ರಗತಿಯಲ್ಲಿವೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮುಳುಗಡೆಯಾಗುವ ರೈತರಿಗೆ ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದ್ದು ಪರಿಹಾರ ಇನ್ನೂ ನೀಡಬೇಕಿದೆ.

ಈ) ಅಣೆಕಟ್ಟು ಕಾರ್ಯ ಪೂರ್ಣಗೊಂಡು ಜಲಾಶಯದಲ್ಲಿ ನೀರು ಗರಿಷ್ಠ ಮಟ್ಟಕ್ಕೆ ನಿಲ್ಲಿಸುವ ಮುನ್ನ (ಮುಳುಗಡೆ ಸಂತ್ರಸ್ತರಿಗೆ) ಪರಿಹಾರ ನೀಡಲು ಮತ್ತು ಪುನರ್ವಸತಿ (ಕೇಂದ್ರ) ಕಲ್ಪಿಸಲೂ ಕ್ರಮ ತೆಗೆದುಕೊಳ್ಳಲಾಗುವುದು.

ಉ) ಹೌದು.

ಊ) ಹೌದು.

ಋ) ರೂ. 500.00 ಲಕ್ಷಗಳು

563(694) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಎನ್.ಆರ್. ಪುರ ತಾಲ್ಲೂಕಿನ ಕಣಬೂರು ಏತ ನೀರಾವರಿ ಯೋಜನೆಯು ನಿರ್ವಹಣೆ ಇಲ್ಲದೆ ರೈತರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹರಿಜನರೇ ಹೆಚ್ಚಿನ ಫಲಾನುಭವಿಗಳಾಗಿರುವ ಈ ಯೋಜನೆಯಲ್ಲಿ ಕೊಳವೆಗಳನ್ನು ದುರಸ್ತಿಗೊಳಿಸಿ, ಖಾಲಿ ಇರುವ ಸಿಬ್ಬಂದಿ ಹುದ್ದೆಗಳನ್ನು ತುಂಬಲು ಸರ್ಕಾರ ತಕ್ಷಣ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಂದಿದೆ

ಆ) ಈ ಯೋಜನೆಯ ಕೊಳವೆಗಳಲ್ಲಿ ಸೋರುವಿಕೆ ಗೋಚರಿಸಿದಾಗ ಇದನ್ನು ವಾರ್ಷಿಕ ನಿರ್ವಹಣೆಯಲ್ಲಿ ದುರಸ್ತಿಪಡಿಸಿಕೊಂಡು ಅಚ್ಚುಕಟ್ಟುದಾರರಿಗೆ ಅನಾನುಕೂಲವಾಗದಂತೆ ನೀರಿನ ಲಭ್ಯತೆಗೆ ಅನುಗುಣವಾಗಿ ನೀರನ್ನು ಒದಗಿಸಲಾಗುತ್ತಿದೆ. ಯಾವುದೇ ಹೊಸ ಹುದ್ದೆಯನ್ನು ಭರ್ತಿ ಮಾಡಲು ಅಥವಾ ಹೊಸ ಹುದ್ದೆಯನ್ನು ಸೃಜಿಸಲು ನಿರ್ಬಂಧವಿರುವುದರಿಂದ ಸಿಬ್ಬಂದಿ ನೇಮಕ ಮಾಡಲಾಗಿಲ್ಲ.

564(700) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ, ಎನ್.ಆರ್. ಪುರ ತಾಲ್ಲೂಕುಗಳಲ್ಲಿ ಮಂಜೂರಾದರೂ ಸಹ ಕಾಮಗಾರಿ ಪ್ರಾರಂಭಗೊಳ್ಳದ ಏತ ನೀರಾವರಿ ಕಾಮಗಾರಿಗಳ ಸಂಖ್ಯೆ ಎಷ್ಟು;

ಆ) ಈ ಯೋಜನೆಗಳನ್ನು ಯಾವ ಸಾಲಿನಲ್ಲಿ ಮಂಜೂರು ಮಾಡಲಾಗಿತ್ತು ಮತ್ತು ಅದರ ಅಂದಾಜು ವೆಚ್ಚ ಎಷ್ಟು;

ಇ) ಈ ಯೋಜನೆಗಳಿಗೆ ಈ ಸಾಲಿನಲ್ಲಿ ಹಣ ಮಂಜೂರು ಮಾಡಲಾಗುವುದೇ; ಎಷ್ಟು ಹಣ ಮಂಜೂರು ಮಾಡಲಾಗುವುದು; (ಕಾಮಗಾರಿವಾರು ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಮಂಜೂರಾಗಿ ಪ್ರಾರಂಭಗೊಳ್ಳದ ಯಾವ ಕಾಮಗಾರಿಯೂ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

565(788) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಎನ್.ಆರ್. ಪುರ-ಕುದುರೆಗುಂಡಿ-ಕೊಪ್ಪ ರಸ್ತೆ ಬೆಳ್ಳುರು ಮಾರ್ಗವಾಗಿ ನಾದುರಸ್ಥಿಯಾಗಿ, ಸಾರ್ವಜನಿಕರ ಓಡಾಡಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ ಸಾಲಿನಲ್ಲಿ ಕೊಪ್ಪ, ಶೃಂಗೇರಿ ಮತ್ತು ಎನ್.ಆರ್. ಪುರ ತಾಲ್ಲೂಕುಗಳ ರಸ್ತೆಗಳ ನಿರ್ವಹಣೆಗಾಗಿ ನಿಗಧಿಪಡಿಸಿದ ಮತ್ತು ಖರ್ಚು ಮಾಡಿದ ಹಣವೆಷ್ಟು;

ಇ) ಸರ್ಕಾರ ಈ ರಸ್ತೆಯನ್ನು ದುರಸ್ತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಂದಿರುತ್ತದೆ

ಆ) ಕೊಪ್ಪ–ಶೃಂಗೇರಿ–ಎನ್.ಆರ್. ಪುರ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಒಟ್ಟು 395.10 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆ ಹೊಂದಿದ್ದು, 2003–04ನೇ ಸಾಲಿನಲ್ಲಿ ಒಟ್ಟು, 36.96 ಲಕ್ಷಗಳಿಗೆ ಕಾರ್ಯಕ್ರಮದ ಪಟ್ಟಿ ಅನುಮೋದನೆಗೊಂಡಿರುತ್ತದೆ. ನಿರ್ವಹಣೆಗೆ ಖರ್ಚಾದ ವೆಚ್ಚ ರೂ.46,52,286.00ಗಳು ಆಗಿರುತ್ತದೆ.

ಇ) ರಸ್ತೆಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

566(572) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮೀಟರ್ ರಹಿತ ವಿದ್ಯುತ್ ಸಂಪರ್ಕಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ಈ ಸಂಪರ್ಕಗಳಿಗೆ ಮೀಟರ್ ಅಳವಡಿಸಲು ಕ್ರಮ ಕೈಗೊಂಡಿದೆಯೇ ಇಂತಹ ಮೀಟರ್ ಅಳವಡಿಕೆಯಲ್ಲಿ ವ್ಯಾಪಕ ಅವ್ಯವಹಾರ ನಡೆದಿರುವುದು ಕಂಡು ಬಂದಿದೆಯೇ (ವಿವರ ನೀಡುವುದು);

ಇ) ಅವುಗಳನ್ನು ಎಲ್ಲಿಂದ ಖರೀದಿ ಮಾಡಲಾಯ್ತು ಮತ್ತು ಇದರ ಬೆಲೆ ಎಷ್ಟು;

ಈ) ಇದಕ್ಕೆ ನೀಡಿದ್ದ ಗ್ಯಾರಂಟಿ ಅವಧಿ ಎಷ್ಟು ಮತ್ತು ಆ ಪೈಕಿ ವಿಫಲವಾದ ವಿದ್ಯುತ್ ಮೀಟರ್‌ಗಳೆಷ್ಟು;

ಉ) ಇನ್ನು ಅಳವಡಿಸಲು ಉದ್ದೇಶಿಸಿರುವ ಮೀಟರ್‌ಗಳ ಸಂಖ್ಯೆ ಎಷ್ಟು ಹಾಗೂ ಇದಕ್ಕೆ ತಗಲಿರುವ ವೆಚ್ಚವೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ದಿನಾಂಕ 31–3–2004 ರಲ್ಲಿದ್ದಂತೆ ರಾಜ್ಯದಲ್ಲಿರುವ ಮೀಟರ್ ರಹಿತ ವಿದ್ಯುತ್ ಸಂಪರ್ಕಗಳ ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಜಿಲ್ಲೆ | ಮೀಟರ್ ರಹಿತ ಸ್ಥಾವರಗಳ ಸಂಖ್ಯೆ |
|---|---|---|
| 1. | ಬೆಂಗಳೂರು ನಗರ | 14.329 |
| 2. | ಬೆಂಗಳೂರು ಗ್ರಾಮಾಂತರ | 208.717 |
| 3. | ಕೋಲಾರ | 2,47,467 |
| 4. | ತುಮಕೂರು | 2,53,075 |
| 5. | ದಾವಣಗೆರೆ | 73.433 |
| 6. | ಚಿತ್ರದುರ್ಗ | 1,24,141 |

| 1 | 2 | 3 |
|---|---|---|
| 7. | ದಕ್ಷಿಣ ಕನ್ನಡ | 13,443 |
| 8. | ಉಡುಪಿ | 7,647 |
| 9. | ಶಿವಮೊಗ್ಗ | 42,085 |
| 10. | ಚಿಕ್ಕಮಗಳೂರು | 34,403 |
| 11. | ಮೈಸೂರು | 33,600 |
| 12. | ಚಾಮರಾಜನಗರ | 32,283 |
| 13. | ಮಂಡ್ಯ | 69,914 |
| 14. | ಹಾಸನ | 51,238 |
| 15. | ಮಡಿಕೇರಿ | 4.272 |
| 16. | ಧಾರವಾಡ | 8,250 |
| 17. | ಗದಗ | 23,136 |
| 18. | ಉತ್ತರ ಕನ್ನಡ | 3,837 |
| 19. | ಹಾವೇರಿ | 49,711 |
| 20. | ಬೆಳಗಾಂ | 1,15,551 |
| 21. | ಬಿಜಾಪುರ | 98,105 |
| 22. | ಬಾಗಲಕೋಟೆ | 59,648 |
| 23. | ಬೀದರ್ | 1,29,006 |
| 24. | ಗುಲ್ಬರ್ಗಾ | 1,65,839 |
| 25. | ರಾಯಚೂರು | 95,557 |

ಆ) ಹೌದು. ಮೀಟರ್ ಅಳವಡಿಕೆಯಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ.

ಇ, ಈ) ಮೀಟರ್‌ಗಳ ಖರೀದಿಗೆ ಸಂಬಂಧಿಸಿದಂತೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಉ) 2004-05ರಲ್ಲಿ ರಾಜ್ಯಾದ್ಯಂತ ಸುಮಾರು 6,98,480 ಮೀಟರ್ ರಹಿತ ವಿದ್ಯುತ್ ಸ್ಥಾವರಗಳಿಗೆ ಮೀಟರ್‌ಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಇದಕ್ಕೆ ತಗುಲಲಿರುವ ವೆಚ್ಚ ಸುಮಾರು 118.41 ಕೋಟಿ ರೂ.ಗಳು.

## ಸಂಖ್ಯೆ 572ಕ್ಕೆ ಅನುಬಂಧ

### ಮೀಟರ್‌ಗಳ ಖರೀದಿಗೆ ಸಂಬಂಧಿಸಿದಂತೆ ವಿವರಗಳು ಈ ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ಮೀಟರ್‌ಗಳನ್ನು ಸರಬರಾಜು ಮಾಡಿದ ಸಂಸ್ಥೆಯ ಹೆಸರು | ಖರೀದಿಸಲಾದ ಮೀಟರ್‌ಗಳ ಸಂಖ್ಯೆ ಸಿಂಗಲ್ ಫೇಸ್ | ಖರೀದಿಸಲಾದ ಮೀಟರ್‌ಗಳ ಸಂಖ್ಯೆ ಮೂರು ಫೇಸ್ | ಮೀಟರ್‌ನ ಬೆಲೆ (ರೂ. ಗಳಲ್ಲಿ) ಸಿಂಗಲ್ ಫೇಸ್ | ಮೀಟರ್‌ನ ಬೆಲೆ (ರೂ. ಗಳಲ್ಲಿ) ಮೂರು ಫೇಸ್ | ಗ್ಯಾರಂಟಿ ಅವಧಿ | ವಿಫಲವಾದ ಮೀಟರ್ ಸಿಂಗಲ್ ಫೇಸ್ | ವಿಫಲವಾದ ಮೀಟರ್ ಮೂರು ಫೇಸ್ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ:** | | | | | | | |
| 1. | ಅವಾನ್ ಮೀಟರ್ ಲಿಮಿಟೆಡ್ | 1000000 | – | 776 | – | 10 ವರ್ಷ | – | – |
| 2. | ಆರ್.ಸಿ. ಎನರ್ಜಿ ಮೀಟರ್ | 52000 | – | 776 | – | 10 ವರ್ಷ | – | – |
| 3. | ಟ್ರಾವಲ್ಸ್ ಲಿಮಿಟೆಡ್ | 52000 | – | 776 | – | 10 ವರ್ಷ | – | – |
| 4. | ಟಿ.ಟಿ.ಎಲ್. ಲಿಮಿಟೆಡ್ | 52000 | 13000 | 776 | 1200 | 10 ವರ್ಷ | – | – |

ಮೀಟರ್‌ನ ಬೆಲೆಯಲ್ಲಿ ಮೀಟರ್‌ನ್ನು ಸರಬರಾಜು ಮಾಡುವ ಮತ್ತು ಅಳವಡಿಸುವ ವೆಚ್ಚವೂ ಸೇರಿರುತ್ತದೆ.

| ಕ್ರಮ ಸಂಖ್ಯೆ | ಮೀಟರ್‌ಗಳನ್ನು ಸರಬರಾಜು ಮಾಡಿದ ಸಂಸ್ಥೆಯ ಹೆಸರು | ಖರೀದಿಸಲಾದ ಮೀಟರ್‌ಗಳ ಸಂಖ್ಯೆ ಸಿಂಗಲ್ ಫೇಸ್ | ಖರೀದಿಸಲಾದ ಮೀಟರ್‌ಗಳ ಸಂಖ್ಯೆ ಮೂರು ಫೇಸ್ | ಮೀಟರ್‌ನ ಬೆಲೆ (ರೂ. ಗಳಲ್ಲಿ) ಸಿಂಗಲ್ ಫೇಸ್ | ಮೀಟರ್‌ನ ಬೆಲೆ (ರೂ. ಗಳಲ್ಲಿ) ಮೂರು ಫೇಸ್ | ಗ್ಯಾರಂಟಿ ಅವಧಿ | ವಿಫಲವಾದ ಮೀಟರ್ ಸಿಂಗಲ್ ಫೇಸ್ | ವಿಫಲವಾದ ಮೀಟರ್ ಮೂರು ಫೇಸ್ |
|---|---|---|---|---|---|---|---|---|
| | **ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ:** | | | | | | | |
| 1. | ಪ್ರಿಶಿಸನ್ ಮೀಟರ್ಸ್ | 2717 | 66276 | 1663.44 | 2795.15 | 1 ವರ್ಷ | – | – |
| 2. | ಹಾವೆಲ್ಸ್ ಇಂಡಿಯಾ ಲಿಮಿಟೆಡ್ | 750 | 37964 | 1663.44 | 2795.15 | 1 ವರ್ಷ | – | – |
| 3. | ಪ್ರಿಶಿಸನ್ ಮೀಟರ್ಸ್ | 31050 | – | 1020 | – | 10 ವರ್ಷ | – | – |
| 4. | ಪ್ರಿಶಿಸನ್ ಮೀಟರ್ಸ್ | 3230 | – | 775.98 | – | 10 ವರ್ಷ | – | – |
| 5. | ಹಾವೆಲ್ಸ್ ಇಂಡಿಯಾ ಲಿಮಿಟೆಡ್ | 16500 | – | 1020 | – | 10 ವರ್ಷ | – | – |
| 6. | ಎಲ್ ಅಂಡ್ ಟಿ.ಲಿ. | 30640 | – | 1020 | – | 10 ವರ್ಷ | – | – |
| 7. | ಎಲೆಕ್ಟ್ರಾನ್ ಎನರ್ಜಿ ಎಕ್ವೂಪ್‌ಮೆಂಟ್ | 33640 | – | 1020 | – | 10 ವರ್ಷ | – | – |
| 8. | ಎಂಕೋ ಲಿಮಿಟೆಡ್ | 14265 | – | 1020 | – | 10 ವರ್ಷ | – | – |
| 9. | ನಾಮ್ ಟೆಕ್ | 13094 | – | 713.94 | – | 10 ವರ್ಷ | – | – |

| 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|
| 10. | ಹೆಚ್.ಪಿ.ಎಲ್. ಸೋಕೋಮೆಕ್ ಲಿಮಿಟೆಡ್ | | – | 713.94 | – | 10 ವರ್ಷ | – | – |
| 11. | ಟಿ.ಟಿ.ಎಲ್. ಲಿಮಿಟೆಡ್ | 805 | – | 2799 | – | 10 ವರ್ಷ | – | – |
| 12. | ಕಾಂಟಿ ಮೀಟರ್ಸ್ ಲಿಮಿಟೆಡ್ | 1402 | – | 2799 | – | 10 ವರ್ಷ | – | – |

ಮೀಟರ್‌ನ ಬೆಲೆಯಲ್ಲಿ ಮೀಟರ್ ಬಾಕ್ಸ್, ಬೋರ್ಡ್, ಕಟ್ ಔಟ್, ವಯರ್ ಮತ್ತು ಮಾಪಕ ಅಳವಡಿಕೆಯ ವೆಚ್ಚವೂ ಸೇರಿರುತ್ತದೆ.

ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ :

| | | | | | | | | |
|---|---|---|---|---|---|---|---|---|
| 1. | ಕಾಂಟಿ ಮೀಟರ್ಸ್ ಮತ್ತು ಎಲೆಕ್ಟ್ರಿಕಲ್ಸ್ ಹೊಸದಿಲ್ಲಿ | 5386 | – | 2799 | – | 1 ವರ್ಷ | – | – |
| 2. | ಟಿ.ಟಿ.ಎಲ್ ಲಿಮಿಟೆಡ್ ಹೊಸದಿಲ್ಲಿ | 2700 | – | 2799 | – | 1 ವರ್ಷ | – | – |
| 3. | ಹಾವೆಲ್ಸ್ ಇಂಡಿಯಾ ಲಿಮಿಟೆಡ್ ಹೊಸದಿಲ್ಲಿ | – | 10647 | – | 2795 | 10 ವರ್ಷ | – | – |
| 4. | ಕ್ಯಾಪಿಟಲ್ ಮೀಟರ್ಸ್ ನೊಯ್ಡಾ ಯು.ಪಿ. | – | 87336 | – | 2795 | 10 ವರ್ಷ | – | – |
| 5. | ಆರ್.ಸಿ. ಎನರ್ಜಿ ಮೀಟರ್ಸ್ ಹೊಸದಿಲ್ಲಿ | 18279 | – | 1020 | – | 10 ವರ್ಷ | – | – |
| 6. | ಕ್ಯಾಪಿಟಲ್ ಪವರ್ ಸಿಸ್ಟಮ್ ನೊಯ್ಡಾ ಯು.ಪಿ. | 105915 | – | 1020 | – | 10 ವರ್ಷ | – | – |
| 7. | ಹಾವೇಲ್ಸ್ ಇಂಡಿಯಾ ಲಿಮಿಟೆಡ್, ನೊಯ್ಡಾ ಯು.ಪಿ. | 44789 | – | 1020 | – | 10 ವರ್ಷ | – | – |
| 8. | ಕ್ಯಾಪಿಟಲ್ ಮೀಟರ್ಸ್ ನೊಯ್ಡಾ ಯು.ಪಿ. | 11711 | – | 1020 | – | 10 ವರ್ಷ | – | – |

| 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|
| 9. | ಟ್ರಿಸೀನ್ ಮೀಟರ್ಸ್ ಹೊಸದಿಲ್ಲಿ | 113533 | – | 1020 | – | 10 ವರ್ಷ | – | – |

ಮೀಟರ್‌ನ ಬೆಲೆಯಲ್ಲಿ ಮೀಟರ್‌ನ್ನು ಅಳವಡಿಸುವ ವೆಚ್ಚವೂ ಸೇರಿರುತ್ತದೆ

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ:

| 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|
| 1. | ಬಿ.ಹೆಚ್.ಇ.ಎಲ್. ಬೆಂಗಳೂರು | 4000 | – | 626.30 | – | 10 ವರ್ಷ | 98 | – |
| 2. | ಇ.ಸಿ.ಇ. ಇಂಡಸ್ಟ್ರೀಸ್ ಲಿಮಿಟೆಡ್ ಹೈದರಾಬಾದ್ | 50000 | – | 626.30 | – | 10 ವರ್ಷ | 4 | – |
| 3. | ಕ್ಯಾಪಿಟಲ್ ಪವರ್ ಮೀಟರ್ಸ್ ನೊಯ್ಡಾ | 5000 | – | 626.30 | – | 10 ವರ್ಷ | 26 | – |
| 4. | ಕ್ಯಾಪಿಟಲ್ ಸಿಸ್ಟಂ ಲಿಮಿಟೆಡ್ ನೊಯ್ಡಾ | 5000 | – | 626.30 | – | 10 ವರ್ಷ | – | – |
| 5. | ಹಾವೇಲ್ಸ್ ಇಂಡಿಯಾ ಲಿಮಿಟೆಡ್ ಸಿವಿಲ್ ಲೈನ್ಸ್ ದಿಲ್ಲಿ | 5000 | – | 626.30 | – | 10 ವರ್ಷ | – | – |
| 6. | ಹೆಚ್.ಎಸ್. ಚಾವ್ಲಾ ಮತ್ತು ಕಂಪನಿ, ದಿಲ್ಲಿ | 5000 | – | 626.30 | – | 10 ವರ್ಷ | – | – |
| 7. | ಸೀಹಾರ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ತಿರುಚಿರಾಪಳ್ಳಿ | – | 3000 | – | 3920 | 10 ವರ್ಷ | – | 29 |
| 8. | ಸೀಮೆನ್ಸ್ ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್ ಜಕೋಟ (ಡಬ್ಲ್ಯೂಬಿ) | – | 1500 | – | 3920 | 10 ವರ್ಷ | – | – |
| 9. | ಸಿ.ಜಿ. ಸೀಮ್‌ಡೆರ್ಗರ್ ಇಲೆಕ್ಟ್ರಿಸಿಟಿ ಮ್ಯಾನೇಜ್‌ಮೆಂಟ್ ಲಿಮಿಟೆಡ್ ದಿಲ್ಲಿ | – | 1500 | – | 3920 | 10 ವರ್ಷ | – | 9 |
| 10. | ಬಿ.ಹೆಚ್.ಇ.ಎಲ್. ಬೆಂಗಳೂರು (ಐ.ಪಿ. ಸೆಟ್ ಮೀಟರ್ಸ್) | – | 25000 | – | 1170.26 | 10 ವರ್ಷ | – | 111 |

| 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|
| 11. | ಸೆಮಿ ಕಂಡಕ್ಟರ್ ಕಾಂಪ್ಲೆಕ್ಸ್ ಹರ್‍ಯಾಣ | 13000 | – | 477 | – | 10 ವರ್ಷ | 24 | – |
| 12. | ಇಲೆಕ್ಟ್ರಾನ್ ಎನರ್ಜಿ ಎಕ್ವ್ಯಾಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ನೊಯ್ಡಾ | 13000 | – | 477 | – | 10 ವರ್ಷ | – | – |
| 13. | ಕೆ.ಸಿ. ಮರ್ಕಂಟೈಲ್ ಲಿಮಿಟೆಡ್, ಜೈಪುರ | 13000 | – | 477 | – | 10 ವರ್ಷ | 45 | – |
| 14. | ಜೀನಸ್ ಓವರ್‌ಸೀಸ್ ಲಿಮಿಟೆಡ್, ಜೈಪುರ | 13000 | – | 477 | – | 10 ವರ್ಷ | 26 | – |
| 15. | ಆರ್.ಸಿ. ಎನರ್ಜಿ ಮ್ಯಾನುಫ್ಯಾಕ್ಚರಿಂಗ್ ಲಿಮಿಟೆಡ್ ದಿಲ್ಲಿ | 13000 | – | 477 | – | 10 ವರ್ಷ | 209 | – |

567(575) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ವಸತಿ ಸಮುಚ್ಚಯಗಳು ಯಾವುವು; ಹಾಗೂ ಈ ವಸತಿ ಸಮುಚ್ಚಯಗಳನ್ನು ಯಾವಾಗ ನಿರ್ಮಿಸಲಾಯಿತು;

ಆ) ಈವರೆಗೂ ಎಷ್ಟು ಬಾರಿ ಈ ವಸತಿ ಸಮುಚ್ಚಯಗಳನ್ನು ದುರಸ್ಥಿ ಮಾಡಲಾಗಿದೆ;

ಇ) ವಸತಿ ಸಮುಚ್ಚಯಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ವಸತಿ ಸಮುಚ್ಚಯಗಳ ದುರಸ್ಥಿಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ಹೊಸದಾಗಿ ವಸತಿ ಸಮುಚ್ಚಯಗಳನ್ನು ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು)

ಅ)

| ಕ್ರಮ ಸಂ. | ಬೆಂಗಳೂರು ನಗರದಲ್ಲಿರುವ ಲೋಕೋಪಯೋಗಿ ಇಲಾಖೆಗೆ ವ್ಯಾಪ್ತಿಗೆ ಒಳಪಡುವ ವಸತಿ ಸಮುಚ್ಚಯಗಳ ವಿವರ | ನಿರ್ಮಿಸಿದ ವರ್ಷ |
|---|---|---|
| 1. | ವಸಂತನಗರ | 1985 |
| 2. | ಜಯಮಹಲ್ (ಸಿ ಮತ್ತು ಡಿ ಮಾದರಿ) | 1940 |
| 3. | ಆರ್.ಎಂ.ವಿ. ಎರಡನೇ ಹಂತ | 1992 |
| 4. | ನಂದಿನಿ ಬಡಾವಣೆ (ಎಂ.ಐ.ಜಿ) | 1985 |
| 5. | ನಂದಿನಿ ಬಡಾವಣೆ (ಎಲ್.ಐ.ಜಿ.) | 1985 |
| 6. | ರಾಜಾಜಿನಗರ (ಆರ್.ಎಚ್.ಎಸ್) | 1967 |
| 7. | ಜೀವನಭೀಮಾನಗರ (ಎ, ಬಿ, ಸಿ ಮತ್ತು ಡಿ ಮಾದರಿ) | 1976 |
| 8. | ಕೋರಮಂಗಲ | 1997 |
| 9. | ತಿಮ್ಮೇನಹಳ್ಳಿ | 1978 |
| 10. | ವಿಲ್ಸನ್ ಗಾರ್ಡನ್ (15 ಸಮುಚ್ಚಯಗಳು) | 1970 |
| 11. | ವಿಲ್ಸನ್ ಗಾರ್ಡನ್ (3 ಸಮುಚ್ಚಯಗಳು) | 1992 |
| 12. | ವಿಲ್ಸನ್ ಗಾರ್ಡನ್ (1 ಸಮುಚ್ಚಯ) | 2001 |
| 13. | ಜಯನಗರ 9ನೇ ಬ್ಲಾಕ್ | 1975 |
| 14. | ಲಾಲ್‌ಬಾಗ್ ಸಿದ್ದಾಪುರ | 1976 |
| 15. | ಕಾವಲ್‌ಬೈರಸಂದ್ರ | 1990 |

ಆ) ಪ್ರತಿ ವರ್ಷದ ಅನುದಾನದ ಲಭ್ಯತೆಯನ್ನಾಧರಿಸಿ ಸದರಿ ವಸತಿ ಸಮುಚ್ಚಯಗಳ ದುರಸ್ತಿ ಕಾರ್ಯ ಕೈಗೊಂಡು ಸುಸ್ಥಿತಿಯಲ್ಲಿಡಲಾಗುತ್ತಿದೆ.

ಇ) ಯಾವುದೇ ವಸತಿ ಸಮುಚ್ಚಯವು ಶಿಥಿಲಾವಸ್ಥೆಯಲ್ಲಿ ಇರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಸಧ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

569(193) : ಶ್ರೀ ಕೃಷ್ಣ ಪಾಲೇಮಾರ್ ಜೆ. (ಸೂರತ್ಕಲ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸಾರಿಗೆ ಸಂಸ್ಥೆಯವರು ಗ್ರಾಮೀಣ ಸಾರಿಗೆ ಯೋಜನೆಯಡಿಯಲ್ಲಿ ಖರೀದಿಸಿರುವ ಮಿನಿ ವಾಹನಗಳ ಸಂಖ್ಯೆ ಎಷ್ಟು;

ಆ) ಈ ಯೋಜನೆಯು ಲಾಭವನ್ನು ಹೊಂದುತ್ತಿದೆಯೇ;

ಇ) ಇನ್ನೂ ಹೆಚ್ಚಿನ ಬಸ್ಸುಗಳನ್ನು ಗ್ರಾಮೀಣ ಪ್ರದೇಶಕ್ಕೆ ಒದಗಿಸಿಕೊಟ್ಟು ಗ್ರಾಮೀಣ ಸಂಚಾರಕ್ಕೆ ಅನುಕೂಲ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ)

| | | |
|---|---|---|
| 1) | ಕ.ರಾ.ರ. ಸಾ.ಸಂ. | 150 |
| 2) | ವಾ.ಕ.ರ.ಸಾ.ಸಂ. | 155 |
| 3) | ಈ.ಕ.ರ.ಸಾ.ಸಂ. | 02 |
| | ಒಟ್ಟು | 307 |

ಆ) ಹೌದು

ಇ) ಪ್ರಯಾಣಿಕರ ಒತ್ತಡ ಮತ್ತು ಸಾರಿಗೆ ಕಾರ್ಯಾಚರಣೆಯ ಆರ್ಥಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅವಶ್ಯ ಕ್ರಮವನ್ನು ತೆಗೆದುಕೊಳ್ಳಲಾಗುವುದು.

570(195) : ಶ್ರೀ ಕೃಷ್ಣ ಪಾಲೇಮಾರ್ ಜೆ. (ಸೂರತ್ಕಲ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರಾವಳಿ ಪ್ರದೇಶದಲ್ಲಿ ಕಡಲ ಕೊರೆತವನ್ನು ತಡೆಗಟ್ಟಲು ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮಗಳೇನು ಹಾಗೂ ಅದಕ್ಕಾಗಿ ಕಳೆದ 3 ವರ್ಷಗಳ ಅವಧಿಯಲ್ಲಿ ವಿನಿಯೋಗಿಸಲಾದ ಹಣದ ಮೊತ್ತವೆಷ್ಟು;

ಆ) ಕರಾವಳಿ ಪ್ರದೇಶದ ಯಾವ ಯಾವ ಭಾಗಗಳಲ್ಲಿ ತಡೆಗೋಡೆಯನ್ನು ನಿರ್ಮಿಸಲಾಗಿದೆ;

ಇ) ತಡೆಗೋಡೆ ನಿರ್ಮಾಣದಲ್ಲಿ ಬಳಸುವ ತಂತ್ರಜ್ಞಾನವು ಫಲಕಾರಿಯಾಗಿದೆಯೇ? ಇಲ್ಲವಾದಲ್ಲಿ, ಮುಂದಿನ ಕ್ರಮಗಳೇನು;

ಈ) ಕಡಲ ಕೊರೆತದ ಕಾಮಗಾರಿಗಾಗಿ ಕೆಲಸ ವಹಿಸಿಕೊಂಡ ಗುತ್ತಿಗೆದಾರರಿಗೆ ಹಣ ಪಾವತಿ ಆಗಿಲ್ಲ ಎಂಬುದು ನಿಜವೇ;

ಉ) ಈ ಕಾರಣದಿಂದಾಗಿ ಕಾಮಗಾರಿಗಳನ್ನು ಮಾಡಲು ಗುತ್ತಿಗೆದಾರರು ಮುಂದೆ ಬರದೆ ಕಾಮಗಾರಿಗಳು ಸ್ಥಗಿತಗೊಂಡಿರುವುದು ನಿಜವೇ;

ಊ) ಗುತ್ತಿಗೆದಾರರ ಬಾಕಿ ಹಣವನ್ನು ಯಾವಾಗ ಪಾವತಿಸಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಪ್ರದೇಶಗಳಲ್ಲಿ ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್, ಪುಣೆ ಮತ್ತು ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್, ಕೆ.ಆರ್. ಸಾಗರ ಇವರಿಂದ ವಿನ್ಯಾಸ ಮತ್ತು ಸಲಹೆ ಪಡೆದು ಅನುದಾನದ ಲಭ್ಯತೆಗೊಳಪಟ್ಟು ಕಾಲಕಾಲಕ್ಕೆ ಶಾಶ್ವತ / ತುರ್ತು ಸಮುದ್ರ ಕೊರೆತ ತಡೆಗೋಡೆಗಳನ್ನು ನಿರ್ಮಿಸಿ ಕರಾವಳಿ ಪ್ರದೇಶಗಳಲ್ಲಿ ಕಡಲ ಕೊರೆತವನ್ನು ತಡೆಗಟ್ಟಲಾಗುತ್ತಿದೆ. ಈಗಾಗಲೇ 56.19 ಕಿಮೀ. ಉದ್ದದ ಶಾಶ್ವತ ತಡೆಗೋಡೆಯನ್ನು ರಾಜ್ಯ ಸರ್ಕಾರದ ವತಿಯಿಂದ ನಿರ್ಮಿಸಲಾಗಿದೆ. ಕೇಂದ್ರ ಸರ್ಕಾರದ ಸಹಾಯಧನದಲ್ಲಿ "ನ್ಯಾಷನಲ್ ಕೋಸ್ಟಲ್ ಪ್ರೊಟೆಕ್ಷನ್ ಪ್ರಾಜೆಕ್ಟ್" ಕಾರ್ಯಕ್ರಮದ ಅಡಿಯಲ್ಲಿ 48.875 ಕಿ.ಮೀ. ಉದ್ದದ ಶಾಶ್ವತ ತಡೆಗೋಡೆ ನಿರ್ಮಿಸಲು ರೂ. 135.95 ಕೋಟಿ ಅಂದಾಜಿನ ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಮಂಜೂರಾತಿ ನಿರೀಕ್ಷಿಸಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ವಿನಿಯೋಗಿಸಲಾದ ಹಣದ ಮೊತ್ತ

| | |
|---|---|
| | ರೂ. ಲಕ್ಷಗಳಲ್ಲಿ |
| 2001–02 | ರೂ. 395.44 |
| 2002–03 | ರೂ. 431.51 |
| 2003-04 | ರೂ. 372.22 |
| ಒಟ್ಟು | **ರೂ. 1199.17** |

ಆ) ರಾಜ್ಯದ ಕರಾವಳಿಯ ಉಳ್ಳಾಲ, ಕೋಟೆಪುರ, ಸುರತ್ಕಲ್, ಉದ್ಯಾವರ, ಪಡುಕೆರೆ, ಮಣ್ಣೂರು, ಅಡ್ಡ ಬೆಂಗ್ರೆ, ಹೊನ್ನೆಗದ್ದೆ, ಗೊರಟಿ, ಜಾಲಿ, ತರಂಗ ಮಠ, ಬೆಳಂಬರ, ದೇಶಿನಭಾಗ ದೇವಭಾಗ ಇತ್ಯಾದಿ ಪ್ರದೇಶಗಳಲ್ಲಿ ಒಟ್ಟು 56.19 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆ ನಿರ್ಮಿಸಲಾಗಿದೆ.

ಇ) ಹೌದು. ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್, ಪುಣೆ ಮತ್ತು ಕರ್ನಾಟಕ ಇಂಜಿನಿಯರಿಂಗ್ ರಿಸರ್ಚ್ ಸ್ಟೇಷನ್, ಕೆ.ಆರ್. ಸಾಗರ ಇವರಿಂದ ವಿನ್ಯಾಸ ಹಾಗೂ ತಾಂತ್ರಿಕ ಪರಿಣಿತರ ಸಮಿತಿಯ ಸಲಹೆಯನ್ನು ಪಡೆದು ತಡೆಗೋಡೆಯನ್ನು ನಿರ್ಮಿಸಲಾಗುತ್ತಿದೆ. ಅತಿ ತೀವ್ರ ಸಮುದ್ರ ಕೊರೆತ ಸಂಭವಿಸುತ್ತಿರುವ ಕೆಲವೊಂದು ಪ್ರದೇಶಗಳನ್ನು ಬಿಟ್ಟು ಹೆಚ್ಚಿನ ಪ್ರದೇಶಗಳಲ್ಲಿ ಈ ವ್ಯವಸ್ಥೆ ಫಲಕಾರಿಯಾಗಿದೆ.

ಫ್ರಾನ್ಸ್ ದೇಶದ ಒಂದು ಕಂಪನಿಯು ಅಭಿವೃದ್ಧಿಪಡಿಸಿ 'ಪೇಟೆಂಟ್' ಆಗಿರುವ 'ಸ್ಟೆಬಿಪ್ಲೇಜ್' ಎಂಬ ತಂತ್ರಜ್ಞಾನವನ್ನು ಅಳವಡಿಸಿ ಮಂಗಳೂರಿನ ಉಳ್ಳಾಲ, ಕೋಟೆಪುರ ಪ್ರದೇಶದಲ್ಲಿ 1.5 ಕಿ.ಮೀ. ಉದ್ದಕ್ಕೆ ಶಾಶ್ವತ ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್ ಪುಣೆ ಇವರ ವಿನ್ಯಾಸ ಮತ್ತು ಸಲಹೆಯಂತೆ 'ಟಿ' ಗ್ರೇಯಿನ್ಸ್ ನಿರ್ಮಿಸಿ ಉಲ್ಲಾಳ ಪ್ರದೇಶದಲ್ಲಿ ಸಮುದ್ರ ಕೊರೆತೆ ತಡೆಗಟ್ಟುವ ಯೋಜನೆಯೊಂದು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹೌದು. ಅನುದಾನದ ಕೊರತೆಯಿಂದಾಗಿ ಬಹಳಷ್ಟು ಕಾಮಗಾರಿಗಳ ಬಿಲ್ಲು ಪಾವತಿಗಾಗಿ ಬಾಕಿಯಿರುತ್ತದೆ.

ಉ) ಹೌದು. ಆದರೂ ತುರ್ತು ಪ್ರದೇಶಗಳಲ್ಲಿ ಗುತ್ತಿಗೆದಾರರ ಮನವೊಲಿಸಿ ಕಾಮಗಾರಿ ಪೂರ್ತಿಗೊಳಿಸಲು ಪ್ರಯತ್ನಿಸಲಾಗುತ್ತಿದೆ.

ಊ) ಅನುದಾನ ಲಭ್ಯತೆಯನ್ವಯ ಪಾವತಿಸಲಾಗುವುದು.

571(198) : ಶ್ರೀ ಕೃಷ್ಣ ಪಾಲೇಮಾರ್ ಕೆ. (ಸೂರತ್ಕಲ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯವು ರೈತರಿಗೆ ಉಚಿತ ವಿದ್ಯುತ್ ಸರಬರಾಜು ನೀಡಲು ಮುಂದಾಗಿರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಹೌದಾದಲ್ಲಿ ರಾಜ್ಯದಲ್ಲೂ ರೈತರಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲು ಕೈಗೊಂಡಿರುವ ಕ್ರಮಗಳೇನು;

ಇ) ರಾಜ್ಯದಲ್ಲಿನ ರೈತರಿಗೆ ಉಚಿತ ವಿದ್ಯುತ್ ನೀಡಿದ್ದಲ್ಲಿ, ಸರ್ಕಾರದ ಮೇಲೆ ಬೀಳುವ ಅಧಿಕ ಹೊರೆಯೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯವು ರೈತರಿಗೆ ಉಚಿತ ವಿದ್ಯುತ್ ಸರಬರಾಜು ನೀಡಲು ಮುಂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇಂತಹ ತೀರ್ಮಾನವನ್ನು ತೆಗೆದುಕೊಂಡಿರುವುದಿಲ್ಲ.

ಇ) ಪ್ರಸ್ತುತ ರೈತರಿಗೆ ಸರಬರಾಜು ಮಾಡುತ್ತಿರುವ 8395 ದಶಲಕ್ಷ ಯೂನಿಟ್‌ಗಳಿಗೆ ವಿದ್ಯುತ್‌ನ ವೆಚ್ಚ ಸುಮಾರು 2863 ಕೋಟಿ ರೂ.ಗಳಾಗಿರುತ್ತದೆ. ಇದರಲ್ಲಿ ಪಂಪು ಸೆಟ್ಟು ಮಾಲೀಕರುಗಳು ವಾರ್ಷಿಕ ರೂ. 540 ಪ್ರತಿ ಅಶ್ವ ಶಕ್ತಿಗೆ ಪಾವತಿಸಬೇಕಾಗಿರುತ್ತದೆ. ಇದರ ಮೊತ್ತವು ರೂ. 604 ಕೋಟಿಗಳಾಗುವುದು. ಉಳಿದ ಹಣವನ್ನು ಸರ್ಕಾರವೇ ಭರಿಸಬೇಕಾಗಿರುತ್ತದೆ. ಒಂದು ವೇಳೆ ಉಚಿತ ವಿದ್ಯುತ್ ನೀಡಿದಲ್ಲಿ ಸರ್ಕಾರದ ಮೇಲೆ ಪೂರ್ಣ ಹೊರೆ ಬೀಳುವುದು.

572(200) : ಶ್ರೀ ಕೃಷ್ಣ ಪಾಲೇಮಾರ್ ಜೆ. (ಸೂರತ್ಕಲ್) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನೀರಾವರಿಗಾಗಿ ಯೋಜನೆಗಳ ಅನ್ವೇಷಣಾ ಕಾರ್ಯ ಕೈಗೊಂಡಿರುವುದು ನಿಜವೇ; (ವಿವರಗಳನ್ನು ನೀಡುವುದು);

ಆ) ಸದರಿ ಜಿಲ್ಲೆಗಳಲ್ಲಿ ಹರಿಯುತ್ತಿರುವ ನೀರನ್ನು ಬಳಸಲು ಯೋಜನೆಗಳನ್ನು ಸರ್ಕಾರ ರೂಪಿಸಿದೆಯೇ; (ವಿವರಗಳನ್ನು ನೀಡುವುದು);

ಇ) ನೀರಾವರಿ ಯೋಜನೆಯ ಕುರಿತಾಗಿ ಅಧ್ಯಯನ ನಡೆಸಲು ರಚಿಸಲಾದ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆಯೇ; (ವಿವರಗಳನ್ನು ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ನಿಜ. ಅನ್ವೇಷಣೆಯಲ್ಲಿರುವ ಯೋಜನೆಗಳು ಈ ಕೆಳಕಂಡಂತಿವೆ:

1. ಸ್ವರ್ಣ, 2) ಕೊಲ್ಲೂರು 3) ಸಿಟ್ಟಿ 4) ಮಹಾದಾಯಿ ಮತ್ತು 5) ಬಾರಾಪೊಳೆ

ಆ) ಅಧ್ಯಯನ ನಡೆಸುತ್ತಿದ್ದು ಅಧ್ಯಯನ ಸಮಿತಿಯ ವರದಿಯು ಬಂದ ನಂತರ ನಿರ್ಧರಿಸಲಾಗುವುದು.

ಇ) ಪಶ್ಚಿಮಾಭಿಮುಖವಾಗಿ ಹರಿಯುವ ನದಿಯ ನೀರನ್ನು ಸಮಗ್ರವಾಗಿ ಬಳಸಲು ಕ್ಯಾಪ್ಟನ್ ಎಸ್. ರಾಜಾರಾವ್ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ತನ್ನ ವರದಿಯನ್ನು ಇದುವರೆವಿಗೂ ಸಲ್ಲಿಸಿರುವುದಿಲ್ಲ.

573(826) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ಮತಕ್ಷೇತ್ರದಲ್ಲಿನ ರಸ್ತೆಗಳು ಓಡಾಡಲು ಯೋಗ್ಯವಾಗಿಲ್ಲದಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಅವುಗಳನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ತುರುವೇಕೆರೆ ಮತ ಕ್ಷೇತ್ರದಲ್ಲಿನ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಕೆಲವು ರಸ್ತೆಗಳ ಹಲವು ಭಾಗಗಳು ಇತ್ತೀಚೆಗೆ ಹಾಳಾಗಿರುವುದು ಗಮನಕ್ಕೆ ಬಂದಿದೆ.

ಆ) ತುರುವೇಕೆರೆ ಕ್ಷೇತ್ರದಲ್ಲಿನ ರಾಜ್ಯ ಹೆದ್ದಾರಿಯ ಅಭಿವೃದ್ಧಿ: ದುರಸ್ತಿ ಕೆಲಸವನ್ನು ಕರ್ನಾಟಕ ರಾಜ್ಯ ಹೆದ್ದಾರಿ ಅನುಷ್ಠಾನ ಯೋಜನೆಯು ಕೈಗೊಂಡಿದೆ. ಉಳಿದಂತೆ ಇರುವ ಜಿಲ್ಲಾ ಮುಖ್ಯ ರಸ್ತೆಗಳ ಡಾಂಬರು ಮೇಲ್ಮೈನ ಗುಂಡಿಗಳನ್ನು ಮುಚ್ಚುವ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು, ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ಇ) ಪ್ರಸಕ್ತ ಜಿಲ್ಲಾ ಮುಖ್ಯ ರಸ್ತೆಗಳ ಡಾಂಬರು ಮೇಲ್ಮೈನಲ್ಲಿನ ಗುಂಡಿಗಳನ್ನು ಮುಚ್ಚಿ ದುರಸ್ತಿಗೊಳಿಸಲು ರೂ. 13.00 ಲಕ್ಷ ಅಂದಾಜು ಮಾಡಲಾಗಿರುತ್ತದೆ. ಸಧ್ಯದಲ್ಲಿಯೇ ಈ ಕಾಮಗಾರಿಯನ್ನು ಪೂರೈಸಲಾಗುವುದು.

574(827) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾವೇರಿ ಕಣಿವೆಯಲ್ಲಿ ಬಾಕಿ ಇರುವ ನೀರಾವರಿ ಯೋಜನೆಗಳು ಯಾವುವು;

ಆ) ಕಾವೇರಿ ನಿಗಮ ಅಸ್ತಿತ್ವಕ್ಕೆ ಬಂದ ದಿನದಿಂದ ಈ ಯೋಜನೆಗಳನ್ನು ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಈ ಯೋಜನೆಗಳು ಪೂರ್ಣವಾಗಲು ಬೇಕಾಗಿರುವ ಒಟ್ಟು ಹಣವೆಷ್ಟು (ಯೋಜನಾವಾರು ವಿವರಗಳನ್ನು ಒದಗಿಸುವುದು)

ಈ) ಈ ಮೊಬಲಗನ್ನು ಯಾವ ರೀತಿ ಕ್ರೋಢೀಕರಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಡಿ.ಡಿ. ಅರಸ್ ನಾಲೆ, ಕಬಿನಿ, ಹಾರಂಗಿ, ಅರ್ಕಾವತಿ, ತಾರಕ ಏತ ನೀರಾವರಿ ಯೋಜನೆ, ಉಡುತೊರೆಹಳ್ಳ, ಇಗ್ಗಲೂರು, ಮಂಚನಬೆಲೆ, ನಂಜಾಪುರ ಏತ ನೀರಾವರಿ, ಹೇಮಾವತಿ, ಯಗಚಿ, ಕಾಮಸಮುದ್ರ ಏತ ನೀರಾವರಿ, ಹುಚ್ಚನಕೊಪ್ಪಲು ಏತ ನೀರಾವರಿ, ಕಾಚೇನಹಳ್ಳಿ ಏತ ನೀರಾವರಿ.

ಆ) ಕಾವೇರಿ ನೀರಾವರಿ ನಿಗಮವು ಜೂನ್ 2003ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಈ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಉದ್ದೇಶದಿಂದ ಒಟ್ಟು ರೂ. 1500.00 ಕೋಟಿಗಳ ಬಂಡವಾಳವನ್ನು ಕ್ರೋಡೀಕರಿಸುವ ಗುರಿಯನ್ನು ಹೊಂದಿದ್ದು 2003-04ನೇ ಸಾಲಿನಲ್ಲಿ ರೂ.250.00 ಕೋಟಿಗಳನ್ನು ಸಂಗ್ರಹಿಸಲು ಸರ್ಕಾರ ಅನುಮೋದನೆ ನೀಡಿದ್ದು. ಅದರಂತೆ ಕಾಮಗಾರಿ ಕೈಗೊಳ್ಳಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ, 2004-05ನೇ ಸಾಲಿಗೆ ರೂ.200.00 ಕೋಟಿಗಳನ್ನು ಸಂಗ್ರಹಿಸಲು ಸರ್ಕಾರದಿಂದ ಅನುಮೋದನೆ ನೀಡಲಾಗಿದೆ. ಅದರಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇ) ಈ ಯೋಜನೆಗಳನ್ನು ಪೂರ್ಣಗೊಳಿಸಲು ಸುಮಾರು ರೂ. 5000.00 ಕೋಟಿಗಳ ಅವಶ್ಯಕತೆ ಇರುತ್ತದೆ. ಯೋಜನಾವಾರು ವಿವರ ಲಗತ್ತಿಸಿದೆ.

ಈ) ಸರ್ಕಾರವು ನೀಡುವ ಭದ್ರತೆಯ ಮೇರೆಗೆ ಯೋಜನೆಗಳನ್ನು ಪೂರ್ಣಗೊಳಿಸಲು ಶೇರು ಬಂಡವಾಳದ ಮೂಲಕ ಕ್ರೋಢೀಕರಿಸಲಾಗುವುದು.

575(828) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇತ್ತೀಚೆಗೆ ತುರುವೇಕೆರೆಯ ಯಂ. ಬೇವಿನಹಳ್ಳಿಯಲ್ಲಿ ಮತ್ತು ಸಂಗಲಾಪುರದಲ್ಲಿನ ವಿದ್ಯುತ್ ತಂತಿಯ ಸ್ಪರ್ಷದಿಂದಾದ ಘಟನೆಯಲ್ಲಿ ಮಡಿದವರಿಗೆ ಮತ್ತು ಗಾಯಗೊಂಡಿರುವವರಿಗೆ ಸರ್ಕಾರ ನೀಡಿದ ಪರಿಹಾರವೆಷ್ಟು;

ಆ) ಇದಕ್ಕೆ ಕಾರಣಕರ್ತರಾದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ದಿನಾಂಕ 23-5-2004ರಂದು ಎಂ. ಬೇವಿನಹಳ್ಳಿಯ ಹತ್ತಿರವಿರುವ ಎಂ. ಗಂಗಂನಹಳ್ಳಿ ಗ್ರಾಮದಲ್ಲಿ ನೀರಾವರಿ ಪಂಪುಸೆಟ್ಟಿನ ಸೆಕೆಂಡರಿ ಮಾರ್ಗದ ವಿದ್ಯುತ್ ವಾಹಕದ ಮೇಲೆ ತೆಂಗಿನ ಗರಿ ಬಿದ್ದು ವಾಹಕವು ಮುಳ್ಳು ಬೇಲಿಯ ಮೇಲೆ ಕಡಿದು ಬಿದ್ದು, ಮುಳ್ಳು ತಂತಿಯಲ್ಲಿ ವಿದ್ಯುತ್ ಪ್ರವಹಿಸಿ, ಆಕಸ್ಮಿಕವಾಗಿ ಶ್ರೀಮತಿ ಲಕ್ಷ್ಮಿ ದೇವಮ್ಮ ಎಂಬುವವರು ಮುಳ್ಳು ತಂತಿ ಬೇಲಿಯನ್ನು ಸ್ಪರ್ಶಿಸಿ ಮರಣ ಹೊಂದಿರುತ್ತಾರೆ. ದಿನಾಂಕ 27-7-2004 ರಂದು ಪ್ರಧಾನ ವ್ಯವಸ್ಥಾಪಕರು, ತುಮಕೂರು ಇವರು ಒಂದು ಲಕ್ಷ ರೂ.ಗಳ ಪರಿಹಾರ ಧನವನ್ನು ಮಂಜೂರು ಮಾಡಿರುತ್ತಾರೆ.

ದಿನಾಂಕ 28-5-2004ರಂದು ಸಂಗಲಾಪುರ ಊರಿನ ಸಮೀಪ ಸೆಕೆಂಡರಿ ಮಾರ್ಗದ ತಂತಿಯೊಂದು ಕಡಿದು ನೆಲದ ಮೇಲೆ ಬಿದ್ದಿದ್ದು ಸಚಿನ ಕುಮಾರ್ ಎಂಬ 6 ವರ್ಷದ ಬಾಲಕ ಆಕಸ್ಮಿಕವಾಗಿ ವಿದ್ಯುತ್ ತಂತಿ ಸ್ಪರ್ಶಿಸಿದಾಗ ಕೈ ಬೆರಳುಗಳು ಸುಟ್ಟಿರುತ್ತದೆ. ಈ ಬಾಲಕನಿಗೆ ರೂ.11,000/ ಗಳ ಪರಿಹಾರ ಧನವನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ವರದಿಗಳನ್ನು ಆಧರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

576(829) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದ ಸಲಕರಣೆಗಳಾದ ಪರಿವರ್ತಕಗಳು ಮತ್ತು ಹೆಚ್ಚುವರಿ ಪರಿವರ್ತಕಗಳು ಸಿಮೆಂಟ್ ಕಂಬಗಳು ಮುಂತಾದವುಗಳನ್ನು ಸರಬರಾಜು ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ದಿಶೆಯಲ್ಲಿ ಕೈಗೊಂಡ ಕ್ರಮಗಳೇನು;

ಇ) ಸಂಪಿಗೆ, ಶೆಟ್ಟಿಗೊಂಡನಹಳ್ಳಿ, ವಿಠಲಾಪುರಗಳಲ್ಲಿ ಉಪ ಸಬ್‌ಸ್ಟೇಷನ್ ತೆರೆಯುವುದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದ ಸಲಕರಣೆಗಳಾದ ಪರಿವರ್ತಕಗಳು ಮತ್ತು ಸಿಮೆಂಟ್ ಕಂಬಗಳು ಮುಂತಾದವುಗಳನ್ನು ಸರಬರಾಜು ಮಾಡದೇ ಇರುವುದರಿಂದ, ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈಗ ಆರ್.ಸಿ.ಸಿ. ಕಂಬಗಳ ಸರಬರಾಜು ಪ್ರಾರಂಭಗೊಂಡಿದ್ದು, ಇವುಗಳ ಸರಬರಾಜು ಏಕೆಯು ಮುಂಬರುವ ದಿನಗಳಲ್ಲಿ ಸುಧಾರಿಸುವುದರಿಂದ, ಸಾರ್ವಜನಿಕರಿಗೆ ಅನುಕೂಲವಾಗಲಿದೆ.

ವಿಫಲಗೊಂಡ ಪರಿವರ್ತಕವನ್ನು ಬದಲಾಯಿಸುವ ಕಾರ್ಯಕ್ಕೆ ಸಾಮಾನ್ಯವಾಗಿ ದುರಸ್ತಿಗೊಂಡ ಪರಿವರ್ತಕವನ್ನೇ ಬಳಸಲಾಗುತ್ತಿದೆ. ಆದರೆ ವಿಫಲಗೊಂಡ ಪರಿವರ್ತಕಗಳನ್ನು ದುರಸ್ತಿ ಪಡಿಸುವಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ಕೆಲವು ಸಮಸ್ಯೆಗಳು ತಲೆದೋರಿವೆ. ಈ ಸಮಸ್ಯೆಗಳು ಸಂಪೂರ್ಣವಾಗಿ ನಿವಾರಣೆಗೊಳ್ಳುವವರೆಗೆ, ವಿಫಲಗೊಂಡ ಪರಿವರ್ತಕಗಳನ್ನು ಸಾರ್ವಜನಿಕರ ಹಿತದೃಷ್ಟಿಯನ್ನು ಪರಿಗಣಿಸಿ ಹೊಸ ಪರಿವರ್ತಕಗಳ ಮೂಲಕ ಬದಲಾಯಿಸಲಾಗುತ್ತಿದೆ, ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಹೊಸ ವಿತರಣಾ ಪರಿವರ್ತಕಗಳನ್ನು ಖರೀದಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) ಸಂಪಿಗೆಯಲ್ಲಿ ಒಂದು 110/11 ಕೆ.ವಿ. ವಿದ್ಯುತ್ ಸಬ್‌ಸ್ಟೇಷನ್ನನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಬೇಕಾಗಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಹೊಸ ವಿದ್ಯುತ್ ಸಬ್‌ಸ್ಟೇಷನ್‌ಗಳನ್ನು ನಿರ್ಮಾಣ ಮಾಡಬೇಕಾದರೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯವನ್ನು ಪಡೆಯುವುದು ಅನಿವಾರ್ಯವಾಗಿರುತ್ತದೆ. ಅಲ್ಲದೇ, ಸದರಿ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿ, ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದ ನಂತರ ಆರ್ಥಿಕ ಸಂಸ್ಥೆಗಳಿಗೆ ಸಾಲ ಸೌಲಭ್ಯ ಪಡೆಯಲು ಮಂಜೂರಾದ ವಿವರವಾದ ಯೋಜನಾ ವರದಿಯನ್ನು ಸಲ್ಲಿಸಲಾಗುವುದು. ಆರ್ಥಿಕ ವ್ಯವಸ್ಥೆಯು ಆದ ನಂತರವೇ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಮುಂಬರುವ ವರ್ಷದಲ್ಲಿ ಈ ಉದ್ದೇಶಿತ ವಿದ್ಯುತ್ ಸಬ್–ಸ್ಟೇಷನ್ನಿನ ನಿರ್ಮಾಣವನ್ನು ಪ್ರಾರಂಭಿಸುವ ಗುರಿಯನ್ನು ಹಮ್ಮಿಕೊಳ್ಳಲಾಗಿದೆ.

ಶೆಟ್ಟಿಗೊಂಡನಹಳ್ಳಿ ಮತ್ತು ವಿಠಲಾಪುರಗಳಲ್ಲಿ ಹೊಸ ವಿದ್ಯುತ್ ಸಬ್–ಸ್ಟೇಷನ್‌ಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯು ಇರುವುದಿಲ್ಲ.

577(830) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿ ಬರುವ ಯಾವ ಯಾವ ನಿಗಮಗಳು ತಮ್ಮ ಲೆಕ್ಕ ಪರಿಶೋಧನೆ ಮತ್ತು ವಾರ್ಷಿಕ ವರದಿಗಳನ್ನು ಪ್ರಸಕ್ತ ಸಾಲಿನವರೆವಿಗೂ ಸಲ್ಲಿಸಿರುವುದಿಲ್ಲ; (ನಿಗಮವಾರು ವಿವರಗಳನ್ನು ಒದಗಿಸುವುದು);

ಆ) ಹಾಗಿದ್ದಲ್ಲಿ, ಯಾವ ಯಾವ ಸಾಲಿನ ವರದಿಗಳು ಬಾಕಿ ಇವೆ;

ಇ) ಸಕಾಲಕ್ಕೆ ಸರಿಯಾಗಿ ವರದಿಗಳನ್ನು ಸಲ್ಲಿಸದೇ ಇರುವವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಜಲ ಸಂಪನ್ಮೂಲ ಇಲಾಖೆಯಡಿ ಮೂರು ನಿಗಮಗಳು ಬರುತ್ತವೆ.

1 ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

2. ಕರ್ನಾಟಕ ನೀರಾವರಿ ನಿಗಮ ನಿಯಮಿತ

3 ಕಾವೇರಿ ನೀರಾವರಿ ನಿಗಮ ನಿಯಮಿತ ಕೃಷ್ಣಾ ಭಾಗ್ಯ ಜಲ ನಿಗಮ ಮತ್ತು ಕರ್ನಾಟಕ ನೀರಾವರಿ ನಿಗಮದವರು ಪ್ರಸಕ್ತ ಸಾಲಿನವರೆಗೂ ತಮ್ಮ ತಮ್ಮ ಲೆಕ್ಕ ಪರಿಶೋಧನೆ ಮತ್ತು ವಾರ್ಷಿಕ ವರದಿಗಳನ್ನು ಸಲ್ಲಿಸಿರುತ್ತಾರೆ.

ಕಾವೇರಿ ನೀರಾವರಿ ನಿಗಮ ನಿಯಮಿತವು 2003ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಆದ್ದರಿಂದ ತನ್ನ ಪ್ರಥಮ ವರ್ಷದ ಲೆಕ್ಕ ಪರಿಶೋಧನೆ ಮತ್ತು ವಾರ್ಷಿಕ ವರದಿ ಸಲ್ಲಿಕೆ ಬಾಕಿ ಇದೆ. ಅಂತಿಮ ವರದಿ ತಯಾರಿಕೆ ಕಾರ್ಯವು ಪ್ರಗತಿಯಲ್ಲಿದೆ. ಇಂತಹ ವರದಿಗಳ ಸಲ್ಲಿಕೆಗೆ ಕಂಪನಿಗಳ ಕಾಯ್ದೆಯಡಿ ಪ್ರತೀ ವರ್ಷದ ಡಿಸೆಂಬರ್ 31ರವರೆಗೆ ಕಾಲಾವಕಾಶವಿದೆ. ಅದರಂತೆ ಕ್ರಮ ಕೈಗೊಳ್ಳಲಾಗುವುದು.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸಕಾಲಕ್ಕೆ ವರದಿ ಸಲ್ಲಿಸಲಾಗುತ್ತಿರುವುದರಿಂದ ನಿಗಮಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

578(774) : ಶ್ರೀ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿರುವ ಬಸ್ ಡಿಪೋಗಳ ಹಾಗೂ ಬಸ್‌ಗಳ ಸಂಖ್ಯೆ ಎಷ್ಟು; (ಡಿಪೋವಾರು ವಿವರ ನೀಡುವುದು);

ಆ) ಕಳೆದ 3 ವರ್ಷಗಳಲ್ಲಿ ಈ ಡಿಪೋಗಳಿಂದ ತಲಾವಾರು ಬಂದಿರುವ ಆದಾಯ ಎಷ್ಟು;

ಇ) ಗ್ರಾಮಾಂತರ ಪ್ರದೇಶಗಳಲ್ಲಿ ಸರಿಯಾದ ಬಸ್ ಸೌಕರ್ಯ ಒದಗಿಸುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಈ) ನಕಲಿ ಪಾಸ್‌ಗಳನ್ನು ವಿತರಣೆ ಮಾಡಿ ವಂಚಿಸಿರುವ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿ ಕ್ರಮ ತೆಗೆದುಕೊಳ್ಳಲಾಗಿದೆ; (ವಿವರಗಳನ್ನು ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 4.

| ಡಿಪೋ | ಬಸ್‌ಗಳ ಸಂಖ್ಯೆ |
|---|---|
| 1. ತುಮಕೂರು | 110 |
| 2. ಕುಣಿಗಲ್ | 81 |
| 3. ತುರುವೇಕೆರೆ | 76 |
| 4. ಶಿರಾ | 30 |
| ಒಟ್ಟು | **297** |

ಆ) ಕಳೆದ 3 ವರ್ಷಗಳಲ್ಲಿ ಡಿಪೋವಾರು ಗಳಿಸಿದ ಆದಾಯದ ವಿವರ ಈ ಕೆಳಗೆ ನೀಡಲಾಗಿದೆ:

| ಕ್ರ. ಸಂ. | ಡಿಪೋ | 01–02 | 02–03 | 03–04 |
|---|---|---|---|---|
| 1. | ತುಮಕೂರು | 1701.17 | 1775.85 | 1757.62 |
| 2. | ಕುಣಿಗಲ್ | 1153.25 | 1233.24 | 1258.44 |
| 3. | ತುರುವೇಕೆರೆ | 816.42 | 878.80 | 961.46 |
| 4. | ಶಿರಾ | – | 81.08 | 381.53 |
| | ಒಟ್ಟು | **3670.84** | **3968.97** | **4359.05** |

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತುಮಕೂರು ಜಿಲ್ಲೆಯ ರಾಷ್ಟ್ರೀಕೃತವಾದ ವಲಯದಲ್ಲಿರುವ ಎಲ್ಲಾ 391 ಗ್ರಾಮಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಿದೆ.

ಈ) 9 ಪ್ರಕರಣಗಳನ್ನು ಪತ್ತೆ ಹಚ್ಚಿ ಕ್ರಮ ತೆಗೆದುಕೊಳ್ಳಲಾಗಿದೆ.

579(777) : ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಬೆಳ್ಳಾವಿ ಕ್ಷೇತ್ರ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ಉದ್ದ ಎಷ್ಟು? (ಕಿಮೀ.ಗಳಲ್ಲಿ) ಈ ರಸ್ತೆಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಸರ್ಕಾರ ನಿಗದಿ ಮಾಡಿದ್ದ ಹಣ ಎಷ್ಟು ಅದರಲ್ಲಿ ಖರ್ಚು ಮಾಡಿರುವ ಹಣ ಎಷ್ಟು (ವರ್ಷವಾರು ವಿವರಗಳನ್ನು ಒದಗಿಸುವುದು);

ಆ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿರುವ ಒಟ್ಟು ಸೇತುವೆಗಳ ಸಂಖ್ಯೆ ಎಷ್ಟು? ಅವು ಯಾವುವು?

ಇ) ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳು ಯಾವುವು? ಇವುಗಳಲ್ಲಿ ಪುನರ್‌ನಿರ್ಮಾಣವಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? ಇದಕ್ಕಾಗಿ ಕಳೆದ 3 ವರ್ಷಗಳಲ್ಲಿ ಮೀಸಲಿಟ್ಟಿದ್ದ ಹಣ ಮತ್ತು ಖರ್ಚು ಮಾಡಿರುವ ಹಣ ಎಷ್ಟು;

ಈ) ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳಿಗೆ ಹಾಕಿದ್ದ ಡಾಂಬರು ಕಿತ್ತು ಹೋಗಿ ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಬಂದಿದ್ದಲ್ಲಿ, ಈ ರಸ್ತೆಗಳಿಗೆ ಡಾಂಬರು ಹಾಕಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ತುಮಕೂರು ಜಿಲ್ಲೆ ಬೆಳ್ಳಾವಿ ಕ್ಷೇತ್ರ ವ್ಯಾಪ್ತಿಯು 4 ತಾಲ್ಲೂಕುಗಳಲ್ಲಿ ಹರಡಿಕೊಂಡಿದ್ದು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ 31.58 ಕಿಮೀಗಳಷ್ಟು ಉದ್ದದ ರಾಜ್ಯ ಹೆದ್ದಾರಿಯೂ ಮತ್ತು 191.90 ಕಿಮೀಗಳಷ್ಟು ಉದ್ದದ ಜಿಲ್ಲಾ ಮುಖ್ಯ ರಸ್ತೆಗಳೂ ಇರುತ್ತವೆ.

ಈ ರಸ್ತೆಗಳ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ನಿಗದಿ ಮಾಡಿದ್ದ ಹಾಗೂ ಖರ್ಚು ಮಾಡಿರುವ ವಿವರ ಹೀಗಿದೆ.

| ಸಂ. | ವರ್ಷ | ನಿಗದಿ ಮಾಡಿದ ಹಣ ಲಕ್ಷ ರೂ. | ಖರ್ಚು ಮಾಡಿರುವ ಹಣ ಲಕ್ಷ ರೂ. |
|---|---|---|---|
| 1. | 2001-02 | 197.00 | 136.55 |
| 2 | 2002-03 | 111.50 | 144.84 |
| 3. | 2003-04 | 311.82 | 109.75 |
| 4. | 2004-05 | - | 61.22 |
| | ಒಟ್ಟು | **620.32** | **452.36** |

ಆ) ತುಮಕೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟಾರೆ 3747 ಸೇತುವೆಗಳಿದ್ದು, ಇದರಲ್ಲಿ ರಾಜ್ಯ ಹೆದ್ದಾರಿಗಳಲ್ಲಿ 912 ಸಂಖ್ಯೆ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ 2835 ಸಂಖ್ಯೆಯಷ್ಟು ಸೇತುವೆಗಳಿರುತ್ತವೆ.

ಇ) ತುಮಕೂರು ಜಿಲ್ಲೆಯಲ್ಲಿ ಒಟ್ಟಾರೆ 20 ಶಿಥಿಲಾವಸ್ಥೆಯಲ್ಲಿರುವ ಸೇತುವೆಗಳನ್ನು ಗುರುತಿಸಿದ್ದು, ಇವುಗಳಲ್ಲಿ ಈಗಾಗಲೇ 13 ಸೇತುವೆಗಳನ್ನು ವಿವಿಧ ಶೀರ್ಷಿಕೆಯಡಿ ಪುನರ್ ನಿರ್ಮಾಣಕ್ಕೆ ಕ್ರಮಕೈಗೊಂಡಿದೆ. ಇವುಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರವು ಒಟ್ಟಾರೆ ರೂ.292.44 ಲಕ್ಷಗಳನ್ನು ನಿಗಧಿಪಡಿಸಿದ್ದು, ಇದಕ್ಕೆದುರಾಗಿ ಪ್ರಸಕ್ತ ವರ್ಷದವರೆಗೆ ಒಟ್ಟಾರೆ ರೂ.214.24 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಉಳಿದ 7 ಸೇತುವೆ ಕಾಮಗಾರಿಗಳನ್ನು ಪುನರ್ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ. ಹೀಗಿರುವ ಶಿಥಿಲಾವಸ್ಥೆಯಲ್ಲಿದ್ದ ಸೇತುವೆಗಳ ಪಟ್ಟಿಯನ್ನು ಅನುಬಂಧ-1 ಮತ್ತು 2ಗಳಲ್ಲಿ ನೀಡಿದೆ.

ಈ) ಬಂದಿದೆ.

ಉ) ತುಮಕೂರು ಜಿಲ್ಲೆಯಲ್ಲಿನ 13 ವಿಧಾನ ಸಭಾಕ್ಷೇತ್ರಗಳಲ್ಲಿ ಹರಡಿಕೊಂಡಿರುವ ಜಿಲ್ಲಾ ಮುಖ್ಯ ರಸ್ತೆಗಳಲ್ಲಿನ ಡಾಂಬರು ಮೇಲ್ಮೈನಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಲು ಒಟ್ಟಾರೆ ರೂ.168.90 ಲಕ್ಷ ಮೊತ್ತದ ಕಾರ್ಯಕ್ರಮವನ್ನು ರೂಪಿಸಿದ್ದು,

ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ. ಇದೇ ರೀತಿ ರಾಜ್ಯ ಹೆದ್ದಾರಿಗಳಿಗೂ ಸಹ ಕಾರ್ಯಕ್ರಮವನ್ನು ರೂಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

580(778) : ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಮತ್ತು ಬೆಂಗಳೂರು ನಡುವೆ ಅನಧಿಕೃತವಾಗಿ ಎಷ್ಟು ಖಾಸಗಿ ವಾಹನಗಳು ಪ್ರಯಾಣಿಕರನ್ನು ಪ್ರತಿ ದಿನ ಸಾಗಿಸುತ್ತಿವೆ; (ವಾಹನಗಳ ದರ್ಜೆವಾರು ಮಾಹಿತಿ ಒದಗಿಸುವುದು);

ಆ) ಖಾಸಗಿ ವಾಹನದವರು ಅನಧಿಕೃತವಾಗಿ ಪ್ರಯಾಣಿಕರನ್ನು ಸಾಗಿಸುತ್ತಿದ್ದುದ್ದರಿಂದ ಪ್ರತಿ ತಿಂಗಳು ಸರ್ಕಾರಕ್ಕೆ ಆಗುತ್ತಿರುವ ಆರ್ಥಿಕ ನಷ್ಟ ಎಷ್ಟು;

ಇ) ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ಬಸ್‌ಗಳನ್ನು ಓಡಿಸದಿರುವುದಕ್ಕೆ ಕಾರಣಗಳೇನು;

ಈ) ಪ್ರಯಾಣಿಕರನ್ನು ಅನಧಿಕೃತವಾಗಿ ಸಾಗಿಸುತ್ತಿರುವ ಖಾಸಗಿ ವಾಹನ ಮಾಲೀಕರ ವಿರುದ್ಧ ಕಳೆದ 3 ವರ್ಷಗಳಲ್ಲಿ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ತುಮಕೂರು-ಬೆಂಗಳೂರು ನಡುವೆ 42 ಒಪ್ಪಂದ ಕರಾರು ವಾಹನಗಳು ಅಧಿಕೃತವಾಗಿ ರಹದಾರಿ ಪಡೆದು ಸಂಚರಿಸುತ್ತಿವೆ, ರಹದಾರಿ ಪಡೆಯದೇ ಅನಧಿಕೃತವಾಗಿ ಸಂಚರಿಸುತ್ತಿರುವ ವಾಹನಗಳನ್ನು ತಪಾಸಿಸಿ, ಅವುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತುಮಕೂರಿನಿಂದ ಬೆಂಗಳೂರು ಹಾಗೂ ಬೆಂಗಳೂರಿನಿಂದ ತುಮಕೂರಿನವರೆಗೆ 418 ಟ್ರಿಪ್‌ಗಳನ್ನು ಆಚರಣೆ ಮಾಡುತ್ತಿದೆ. ಸದರಿ ಸಾರಿಗೆಗಳು ಸದ್ಯದ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿರುತ್ತದೆ.

ಈ) 1,747 ಮಜಲು ವಾಹನಗಳು ಮತ್ತು 1,061 ಮ್ಯಾಕ್ಸಿಕ್ಯಾಬ್‌ಗಳನ್ನು ತಪಾಸಣೆ ಮಾಡಲಾಗಿದ್ದು, ಈ ಪೈಕಿ 533 ಮಜಲು ವಾಹನಗಳು ಮತ್ತು 1061 ಮ್ಯಾಕ್ಸಿಕ್ಯಾಬ್‌ಗಳನ್ನು ವಿರುದ್ಧ ಪ್ರಕರಣವನ್ನು ದಾಖಲಿಸಿ ಮೋಟಾರು ವಾಹನ ಕಾಯ್ದೆ 1988ರ ವಿಧಿ 200ರಡಿಯಲ್ಲಿ ರೂ.29,25,397/-ಗಳ ದಂಡ ವಸೂಲಿ ಮಾಡಲಾಗಿದೆ.

581(776) : ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್‌ಚ್ಛಕ್ತಿ ಪ್ರಮಾಣ ಎಷ್ಟು; ಬೇಡಿಕೆ ಇರುವ ಪ್ರಮಾಣ ಎಷ್ಟು;

ಆ) ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ಪ್ರಮಾಣದ ವಿದ್ಯುತ್‌ಚ್ಛಕ್ತಿ ಉತ್ಪಾದಿಸಲಾಗುತ್ತದೆ (ಪೂರ್ಣ ವಿವರ ನೀಡುವುದು);

ಇ) ಕೊರತೆ ವಿದ್ಯುತ್‌ಚ್ಛಕ್ತಿಯನ್ನು ತುಂಬುವುದಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು ಹಾಗೂ ಈ ಯೋಜನೆಗಳಿಗಾಗಿ ನಿಗದಿಪಡಿಸಲಾಗಿರುವ ಮೊತ್ತ ಎಷ್ಟು;

ಈ) ಹೊಸ ವಿದ್ಯುತ್‌ಚ್ಛಕ್ತಿ ಉತ್ಪಾದನಾ ಯೋಜನೆಗಳಿಗೆ ಕಳೆದ 3 ವರ್ಷಗಳಲ್ಲಿ ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ಹಣವನ್ನು ಪಡೆಯಲಾಗಿದೆ; ಇದರಲ್ಲಿ ಯಾವ ಯೋಜನೆಗಳಿಗೆ ಕಳೆದ 3 ವರ್ಷಗಳಿಂದ ಎಷ್ಟೆಷ್ಟು ಹಣವನ್ನು ಖರ್ಚು ಮಾಡಲಾಗಿದೆ; ಯೋಜನೆಗಳ ಪ್ರಗತಿಯು ಯಾವ ಹಂತಗಳಲ್ಲಿವೆ;

ಉ) ತುಮಕೂರು ಜಿಲ್ಲೆ ಬೆಳ್ಳಾವಿ ಕ್ಷೇತ್ರ ವ್ಯಾಪ್ತಿಯಲ್ಲಿ ವಿದ್ಯುತ್‌ಚ್ಛಕ್ತಿ ವೋಲ್ಟೇಜ್ ಗುಣಮಟ್ಟ ಸುಧಾರಿಸುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಪ್ರಸಕ್ತ ವರ್ಷವಾದ 2004-05ರಲ್ಲಿ ರಾಜ್ಯ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಎರಡು ಸಂಸ್ಥೆಗಳಾದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಮತ್ತು ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತವು ಒಟ್ಟು 5 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿವೆಯೆಂದು ಅಂದಾಜಿಸಲಾಗಿದೆ.

ಅಲ್ಲದೇ ಖಾಸಗೀ ಕ್ಷೇತ್ರದಲ್ಲಿ, ರಾಜ್ಯದಲ್ಲಿ ಇರುವ ಸ್ವತಂತ್ರ ವಿದ್ಯುತ್ ಉತ್ಪಾದಕರೂ ಸಹ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದ್ದು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸುಮಾರು 3143 ದಶಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಖರೀದಿಸುವುದೆಂದು ಅಂದಾಜು ಮಾಡಲಾಗಿದೆ.

ಅಲ್ಲದೇ. ರಾಜ್ಯಕ್ಕೆ ಕೇಂದ್ರ ಸ್ವಾಮ್ಯದಲ್ಲಿರುವ ವಿದ್ಯುತ್ ಘಟಕಗಳಿಂದ ಸುಮಾರು 3271 ದಶಲಕ್ಷ ಯೂನಿಟ್‌ಗಳ ಪಾಲೂ ಸಹ ಲಭ್ಯಗೊಳ್ಳುವ ನಿರೀಕ್ಷೆ ಇದೆ. ಹೀಗಾಗಿ ಪ್ರಸಕ್ತ ವರ್ಷದಲ್ಲಿ (2004-05) ಮೇಲ್ಕಂಡ ಎಲ್ಲಾ ಮೂಲಗಳಿಂದ ಲಭ್ಯವಾಗುವುದೆಂದು ಅಂದಾಜು ಮಾಡಲ್ಪಟ್ಟ ವಿದ್ಯುತ್ತಿನ ಒಟ್ಟು ಪ್ರಮಾಣ 33735 ದಶಲಕ್ಷ ಯೂನಿಟ್ಟುಗಳು.

ಪ್ರಸಕ್ತ ವರ್ಷವಾದ 2004-05ರಲ್ಲಿ ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆಯು 39,000 ದಶಲಕ್ಷ ಯೂನಿಟ್‌ಗಳೆಂದು ಅಂದಾಜು ಮಾಡಲಾಗಿದೆ.

ಆ) ಮೂಲವಾರು ವಿವರಗಳು ಕೆಳಕಂಡಂತಿವೆ:

| ಕ್ರಮ ಸಂಖ್ಯೆ | ಉತ್ಪಾದನೆಯ ಮೂಲ | 2004-05ರಲ್ಲಿ ಅಂದಾಜಿಸಲ್ಪಟ್ಟ ವಿದ್ಯುತ್ ಉತ್ಪಾದನೆಯ ಪ್ರಮಾಣ ದಶಲಕ್ಷ ಯೂನಿಟ್‌ಗಳಲ್ಲಿ |
|---|---|---|
| | **ಅ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ:** | |
| 1. | ಜಲ | 7,327 |
| 2. | ಶಾಖೋತ್ಪನ್ನ | 10,250 |
| | ಒಟ್ಟು | 17,577 |
| | **ಆ. ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ:** | |
| 1. | ಜಲ | 468 |
| 2. | ಶಾಖೋತ್ಪನ್ನ | 720 |
| | ಒಟ್ಟು | 1,188 |
| | **ಇ. ಸ್ವತಂತ್ರ ವಿದ್ಯುತ್ ಉತ್ಪಾದಕರ (ಖಾಸಗಿ ವಲಯ) ಉತ್ಪಾದಿಸಲ್ಪಟ್ಟ ವಿದ್ಯುತ್ತನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಖರೀದಿಸುತ್ತಿದೆ.** | |
| 1. | ಶಾಖೋತ್ಪನ್ನ | 3143 |
| 2. | ಅಸಂಪ್ರದಾಯಿ ಇಂಧನ ಮೂಲ ಯೋಜನೆಗಳು (ಕಿರು ಜಲ ವಿದ್ಯುತ್, ಗಾಳಿ ಸಹ ಉತ್ಪಾದನೆ ಮತ್ತು ಜೈವಿಕ ಅನಿಲ) | 2606 |
| | ಒಟ್ಟು | 5749 |
| ಈ. | ಕೇಂದ್ರೀಯ ವಿದ್ಯುತ್ ಉತ್ಪಾದನಾ ಘಟಕಗಳು (ಸಿ.ಜಿ.ಎಸ್.) | 9271 |
| | ಒಟ್ಟು ಮೊತ್ತ (ಅ+ಆ+ಇ+ಈ) | 33785 |

ಇ) ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಜ್ಯದ ವಿದ್ಯುತ್ ಕೊರತೆಯನ್ನು ನೀಗಲು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ.

ಕೋಟಿ ರೂ.ಗಳಲ್ಲಿ

| ಯೋಜನೆ | ಅಂದಾಜು ವೆಚ್ಚ | 2004-05ರ ಉದ್ದೇಶಿತ ವೆಚ್ಚ |
|---|---|---|
| ಆಕಮಟ್ಟಿ | 674.38 | 163.00 |
| ವರಾಹಿ-2 | 300.00 | 20.00 |
| ಬಳ್ಳಾರಿ-1 | 2100.00 | 200.00 |
| ರಾಯಚೂರು | 674.00 | 2.00 |
| 8ನೇ ಘಟಕ ಬಿಡದಿ | 3712.00 | 325.00 |

ರಾಜ್ಯದ ವಿದ್ಯುತ್ ಕೊರತೆಯನ್ನು ನೀಗಲು ರಾಜ್ಯ ಸರ್ಕಾರವು ಸ್ವತಂತ್ರ ವಿದ್ಯುತ್ ಉತ್ಪಾದಕರಿಗೆ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪರವಾನಿಗೆಯನ್ನು ನೀಡಿದೆ.

ಈ) ವಿವಿಧ ಹಣಕಾಸು ಸಂಸ್ಥೆಗಳಿಂದ ಹೊಸ ವಿದ್ಯುತ್ ಯೋಜನೆಗಳಿಗಾಗಿ ಕಳೆದ ಮೂರು ವರ್ಷಗಳಿಂದ ಪಡೆದ ಹಣಕಾಸಿನ ವಿವರ ಈ ಕೆಳಕಂಡಂತಿದೆ:

| ವರ್ಷ | ರಾ.ಶಾ.ವಿ. ಕೇಂದ್ರ | ಆಲಮಟ್ಟಿ ವಿದ್ಯುದಾಗಾರ ಘಟಕ 7 | ಬಳ್ಳಾರಿ ಶಾ.ವಿ.ಕೇ. | ಪವನ ಶಕ್ತಿ |
|---|---|---|---|---|
| 2000–01 | 63.72 | 0.0 | 0.00 | 0.00 |
| 2001–02 | 167.8470.40 | 0.00 | 0.00 | |
| 2002–03 | 188.44 | 29.01 | 0.00 | 11.62 |
| 2003–04 | 70.00 | 149.40 | 162.00 | – |
| **ಒಟ್ಟು** | **490** | **248.81** | **162** | **11.62** |

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಹೊಸ ವಿದ್ಯುತ್ ಯೋಜನೆಗಳಿಗಾಗಿ ಮಾಡಿದ ಹಣಕಾಸಿನ ವೆಚ್ಚದ ವಿವರ:

(ಕೋಟಿ ರೂ.ಗಳಲ್ಲಿ)

| ವರ್ಷ | ರಾ.ಶಾ.ವಿ. ಕೇಂದ್ರ ಘಟಕ | ಆಲಮಟ್ಟಿ ವಿದ್ಯುದಾಗಾರ ಘಟಕ 7 | ಬಳ್ಳಾರಿ ಶಾ.ವಿ.ಕೇ. | ಪವನ ಶಕ್ತಿ |
|---|---|---|---|---|
| 2000–01 | 74.42 | 7.06 | 8.74 | – |
| 2001–02 | 310.16 | 65.39 | 9.08 | – |
| 2002–03 | 175.86 | 25.98 | 8.39 | 14.53 |
| 2003–04 | 12.29 | 166.30 | 181.48 | – |
| **ಒಟ್ಟು** | **572.73** | **264.73** | **207.69** | **14.53** |

ಯೋಜನೆಗಳು ಪ್ರಸ್ತುತ ಸ್ಥಿತಿಗತಿಗಳ ವಿವರ ರಾ.ಶಾ.ವಿ. ಕೇಂದ್ರ ಘಟಕ 7 (1x210 ಮೆಗಾ ವ್ಯಾಟ್)

ಘಟಕವು 13–4–2003 ಯಶಸ್ವಿಯಾಗಿ ಕಾರ್ಯಾರಂಭ ಮಾಡಿದೆ.

ಆಲಮಟ್ಟಿ ಅಣೆಕಟ್ಟು ವಿದ್ಯುದಾಗಾರ ( ಮೆಗಾ ವ್ಯಾಟ್)

ಈ ಯೋಜನೆಯ 15 ಮೆಗಾ ವ್ಯಾಟ್ ಸಾಮರ್ಥ್ಯದ ಮೊದಲನೆ ಘಟಕವನ್ನು 26–3–2004ರಲ್ಲಿ ಯಶಸ್ವಿಯಾಗಿ ಕಾರ್ಯಾರಂಭ ಮಾಡಿದೆ ಹಾಗೂ ಉಳಿದ 5 ಘಟಕಗಳನ್ನು ಹಂತ ಹಂತವಾಗಿ ಜುಲೈ 2005ರ ಒಳಗೆ ಪೂರ್ಣಗೊಳಿಸಲಾಗುವುದು.

ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ (1x500 ಮೆಗಾ ವ್ಯಾಟ್)

ಮೆಸರ್ಸ್ ಬಿ.ಹೆಚ್.ಇ.ಎಲ್. ರವರಿಗೆ ಇ.ಪಿ.ಸಿ. ಯನ್ನೊಳಗೊಂಡ ಹಣಕಾಸಿನ ಗುತ್ತಿಗೆಯನ್ನು ಡಿಸೆಂಬರ್ 2003ರಲ್ಲಿ ನೀಡಲಾಗಿದೆ ಹಾಗೂ ಈ ಯೋಜನೆಯನ್ನು ಡಿಸೆಂಬರ್ 2006ರ ಒಳಗೆ ಕಾರ್ಯಾರಂಭಗೊಳಿಸುವ ಉದ್ದೇಶವಿದೆ.

ಪವನ ಶಕ್ತಿ : (2.530 ಮೆಗಾ ವ್ಯಾಟ್)

ಜುಲೈ 2002ರಲ್ಲಿ ಎಲ್ಲಾ 22 ಯಂತ್ರಗಳನ್ನು ಅನುಷ್ಠಾನಗೊಳಿಸಲಾಗಿದ್ದು ಯಂತ್ರಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ.

ಸ್ವತಂತ್ರ ವಿದ್ಯುತ್ ಉತ್ಪಾದಕರಾದ ಮೆಸರ್ಸ್ ನಾಗಾರ್ಜುನ ಪವರ್ ಕಾರ್ಪೋರೇಷನ್‌ನವರು (ಸ್ಥಾಪನ ಸಾಮರ್ಥ್ಯ 1015 ಮೆಗಾ ವ್ಯಾಟ್) ಸದ್ಯದಲ್ಲಿಯೇ ಕಾಮಗಾರಿಗಳನ್ನು ಪ್ರಾರಂಭಿಸಲಿದ್ದು 2007ರಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಸಾಧ್ಯತೆ ಇದೆ.

ಉ) ತುಮಕೂರು ಜಿಲ್ಲೆ ಬೆಳ್ಳಾವಿ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವೋಲ್ಟೇಜ್ ಗುಣಮಟ್ಟ ಸುಧಾರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಬೆಳ್ಳಾವಿಯಲ್ಲಿ ಒಂದು 66 ಕೆ.ವಿ. ವಿದ್ಯುತ್ ಸಬ್-ಸ್ಟೇಷನನ್ನು ನಿರ್ಮಾಣ ಮಾಡಲಾಗುತ್ತಿದೆ. ಅಕ್ಟೋಬರ್ 2004ರ ಅಂತ್ಯದ ವೇಳೆಗೆ ಈ ವಿದ್ಯುತ್ ಸಬ್‌ಸ್ಟೇಷನನ್ನು ಚಾಲನೆಗೊಳಿಸುವ ಗುರಿಯನ್ನು ಹೊಂದಲಾಗಿದೆ.

2 ಮಧುಗಿರಿಯಲ್ಲಿ ದಿನಾಂಕ 3-7-2003 ರಂದು ಒಂದು 220 ಕೆ.ವಿ. ವಿದ್ಯುತ್ ಸಬ್‌ಸ್ಟೇಷನ್‌ನ್ನು ಚಾಲನೆಗೊಳಿಸಲಾಗಿದ್ದು, ಇದರಿಂದ ಮಧುಗಿರಿ ತಾಲ್ಲೂಕು ಮಾತ್ರವಲ್ಲದೆ ಪಕ್ಕದ ಶಿರಾ ತಾಲ್ಲೂಕಿನ ಬೆಳ್ಳಾವಿ ಕ್ಷೇತ್ರದಲ್ಲೂ ಸಹ ಬಹಳಷ್ಟು ಪ್ರಮಾಣದಲ್ಲಿ ವೋಲ್ಟೇಜ್ ಗುಣಮಟ್ಟದಲ್ಲಿ ಸುಧಾರಣೆ ಉಂಟಾಗಿರುತ್ತದೆ.

3. ಬಡವನಹಳ್ಳಿ ಮತ್ತು ಮಧುಗಿರಿಗಳಲ್ಲಿರುವ 66 ಕೆ.ವಿ. ವಿದ್ಯುತ್ ಸಬ್‌ಸ್ಟೇಷನ್‌ಗಳಿಂದ ಬೆಳ್ಳಾವಿ ವಿಧಾನಸಭಾ ಕ್ಷೇತ್ರದ ದೊಡ್ಡೇರಿ ಹೋಬಳಿ ವ್ಯಾಪ್ತಿಯ ಗ್ರಾಮಗಳಿಗೆ ಪ್ರಸ್ತುತ ವಿದ್ಯುತ್ ಸರಬರಾಜಾಗುತ್ತಿದೆ. ಇತ್ತೀಚೆಗಷ್ಟೆ ಅಂದರೆ ದಿನಾಂಕ 5-7-2004 ರಂದು ಬಡವನಹಳ್ಳಿ 66 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನಿನ ಸಾಮರ್ಥ್ಯವನ್ನು ಹೆಚ್ಚಳಗೊಳಿಸಲಾಗಿದೆ. 8 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್‌ನ್ನು 12.5 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್ ಮೂಲಕ ಬದಲಾಯಿಸಲಾಗಿದೆ. ಇದರಿಂದಾಗಿ ಸದರಿ ವಿದ್ಯುತ್ ಸಬ್-ಸ್ಟೇಷನ್ನಿನ ಸಾಮರ್ಥ್ಯವು 20.5 ಎಂ.ವಿ.ಎ. ಯಿಂದ 25 ಎಂ.ವಿ.ಎ. ಗಳಿಗೆ ಹೆಚ್ಚಳಗೊಂಡಿರುತ್ತದೆ. ಈ ಸುಧಾರಣಾ ಕ್ರಮದಿಂದಾಗಿ ಗ್ರಾಮಾಂತರ ಪ್ರದೇಶಗಳಿಗೆ ದಿನವಹಿ 18 ರಿಂದ 20 ಗಂಟೆಗಳ ಮೂರು ಫೇಸ್‌ನಲ್ಲಿ ವಿದ್ಯುತ್ ಸರಬರಾಜನ್ನು ಪ್ರಸ್ತುತ ಮಾಡಲಾಗುತ್ತಿದೆ.

4. ದೊಡ್ಡೇರಿ ಹೋಬಳಿಯ ಗಡಿ ಭಾಗದ ಗ್ರಾಮಗಳಾದಂತಹ ಪುಲಮನ ಘಟ್ಟ, ದೆಂಟ್ವಾಳ, ಸಜ್ಜೇಹೊಸಹಳ್ಳಿ, ಕಿಟ್ಟಗಳ್ಳಿ ಮತ್ತು ಸಿಂಗಾರವರ್ತನಹಳ್ಳಿ-ಇವುಗಳು ಬಡವನಹಳ್ಳಿ ವಿದ್ಯುತ್ ಸಬ್-ಸ್ಟೇಷನ್ನಿಂದ ಸುಮಾರು 20 ಕಿ.ಮೀ. ದೂರದಲ್ಲಿವೆ. ಈ ಗಡಿ ಭಾಗದ ಗ್ರಾಮಗಳು ಕಡಿಮೆ ವೋಲ್ಟೇಜ್ ಸಮಸ್ಯೆಗಳನ್ನು ಎದುರಿಸುತ್ತಿದ್ದ

ತಕ್ಷಣದ ಪರಿಹಾರವಾಗಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು (ಬೆಸ್ಕಾಂ) ಈ ಕೆಳಕಂಡ ಸುಧಾರಣಾ ಕ್ರಮಗಳನ್ನು ತೆಗೆದುಕೊಂಡಿರುತ್ತದೆ.

ಅ. ಬಡವನಹಳ್ಳಿಯಿಂದ ರಂಟ್ವಾಳ ಗ್ರಾಮಕ್ಕೆ ಸುಮಾರು 15 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ಫೀಡರ್ ನಿರ್ಮಾಣ.

ಆ. ಹಾಲಿ ಇರುವ ರಂಟ್ವಾಳ ಫೀಡರ್‌ನ ತಾಮ್ರದ ವಿದ್ಯುತ್ ವಾಹಕವನ್ನು ರ್‍ಯಾಬಿಟ್ ವಿದ್ಯುತ್ ವಾಹಕದ ಮೂಲಕ ಸುಮಾರು 10 ಕಿ.ಮೀ. ಉದ್ದಕ್ಕೆ ಬದಲಾಯಿಸುವುದು. ಬಾಕಿ ಉಳಿಯುವ ಸುಮಾರು 8 ಕಿ.ಮೀ. ಉದ್ದದ ತಾಮ್ರದ ವಿದ್ಯುತ್ ವಾಹಕವನ್ನು ರ್‍ಯಾಬಿಟ್ ವಿದ್ಯುತ್ ವಾಹಕದ ಮೂಲಕ ನಂತರದ ಹಂತದಲ್ಲಿ ಬದಲಾಯಿಸುವುದು. ಅಲ್ಲದೇ, ದೊಡ್ಡೇರಿ ಹೋಬಳಿಯ ಇನ್ನೆರಡು ಗಡಿ ಭಾಗದ ಗ್ರಾಮಗಳಾದ ವಿಟ್ಲಾಪುರ ಮತ್ತು ಗೋರಮುತ್ತನಹಳ್ಳಿಗಳಲ್ಲಿಯೂ ಸಹ ಕಡಿಮೆ ವೋಲ್ಟೇಜ್ ಸಮಸ್ಯೆ ಇದೆ. ಮಧುಗಿರಿ ವಿದ್ಯುತ್ ಸಬ್–ಸ್ಟೇಷನ್ನಿನ ಹಾಲಿ ಇರುವ ಚಂದ್ರಬಾವಿ ಫೀಡರ್‌ಗೆ ಎಕ್ಸ್‌ಪ್ರೆಸ್ ಫೀಡರ್‌ನ್ನು ನಿರ್ಮಾಣ ಮಾಡುವ ಮೂಲಕ ಈ ಸಮಸ್ಯೆಯನ್ನು ಬಗೆ ಹರಿಸಲಾಗುತ್ತಿದೆ.

582(472) : ಶ್ರೀ ಲಕ್ಷ್ಮಣ್ ಸಂಗಪ್ಪ ಸಾವದಿ (ಅಥಣಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಅಥಣಿಯಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಡಿಪೋವನ್ನು ಮರಳಿ ಚಿಕ್ಕೋಡಿ ಡಿಪೋಗೆ ನಿಯುಕ್ತಿಗೊಳಿಸುವಂತೆ ಸಮಸ್ತ ಸಾರ್ವಜನಿಕರು ಕೋರಿದ್ದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಸದರಿ ಡಿಪೋದಲ್ಲಿ ನಿರುಪಯುಕ್ತವಾಗಿ ನಿಂತಿರುವ ಬಸ್‌ಗಳೆಷ್ಟು ಅವುಗಳ ವಿಲೇವಾರಿಗೆ ಸರ್ಕಾರವು ಕ್ರಮ ಜರುಗಿಸುವುದೇ;

ಇ) ಈ ಡಿಪೋದಲ್ಲಿ ಸರಿಯಾದ ಸಮಯಕ್ಕೆ ಬಸ್ ಸಂಚಾರವು ಇಲ್ಲದಿರುವ ಬಗ್ಗೆ ಸರ್ಕಾರವು ಕ್ರಮ ಜರುಗಿಸುವುದೇ;

ಈ) ಇಲ್ಲಿಯ ಡಿಪೋ ನಿಲ್ದಾಣದಲ್ಲಿ ಇರುವ ಕೊಳಚೆ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಪ್ರಸ್ತುತ ಚಿಕ್ಕೋಡಿ ಡಿಪೋದಲ್ಲಿ ಪೂರ್ಣ ಪ್ರಮಾಣದ ವಿಭಾಗೀಯ ಕಾರ್ಯಾಗಾರ ಇಲ್ಲದಿರುವುದರಿಂದ, ವಾಹನಗಳ ಹೆಚ್ಚಿನ ದುರಸ್ತಿ ಕಾರ್ಯಗಳಿಗೆ ವಿಜಾಪುರ ಅಥವಾ ಬೆಳಗಾವಿ ವಿಭಾಗೀಯ ಕಾರ್ಯಾಗಾರವನ್ನು ಅವಲಂಬಿಸಬೇಕಾಗಿರುತ್ತದೆ. ಕಾರಣ, ಅಥಣಿಯಲ್ಲಿರುವ ಡಿಪೋವನ್ನು ಚಿಕ್ಕೋಡಿಗೆ ನಿಯುಕ್ತಿಗೊಳಿಸಲು ಸಾಧ್ಯವಿರುವುದಿಲ್ಲ.

ಆ) 29. ಈ ಪೈಕಿ 27 ವಾಹನಗಳನ್ನು ಪ್ರಸಕ್ತ ಸಾಲಿನಲ್ಲಿ ಅನುಪಯುಕ್ತಗೊಳಿಸಲು ಯೋಜಿಸಲಾಗಿದೆ.

ಇ) ಮಾರ್ಗಗಳು ಕಾರ್ಯಾಚರಣೆ ವೇಳೆಗೆ ಸರಿಯಾಗಿ ಆಗುತ್ತಿದೆ.

ಈ) ಹೌದು.

583(590) ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಹೇಮಾವತಿ ವಲಯದಲ್ಲಿ ಕಾಮಗಾರಿಗಳು ಸ್ಥಗಿತವಾಗಿರುವುದು ಅಥವಾ ತೀರಾ ಕಡಿಮೆಯಾಗಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ವಿತರಣಾ ನಾಲೆಗಳು ಆಗದೆ ರೈತರಿಗೆ ಈ ಯೋಜನೆಯಿಂದ ಯಾವ ಪ್ರಯೋಜನವೂ ಆಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಹಣ ಒದಗಿಸಿ ಆಧ್ಯತೆಯ ಮೇಲೆ ಕೆಲಸ ಕೈಗೊಳ್ಳಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಈ ವಲಯದಲ್ಲಿ ಬರುವ ತುಮಕೂರು ಶಾಖಾ ನಾಲೆ ಮತ್ತು ನಾಗಮಂಗಲ ಶಾಖಾ ನಾಲೆ ಹಾಗೂ ಇವುಗಳ ವಿತರಣಾ ನಾಲೆಗಳು ನಿಗಮದ ಅನುಮೋದಿತ ಕಾರ್ಯಕ್ರಮದಂತೆ ಪ್ರಗತಿಯಲ್ಲಿರುತ್ತದೆ.

ಆ) ತುಮಕೂರು ಶಾಖಾ ನಾಲೆ ಅಡಿಯಲ್ಲಿ 30 ವಿತರಣಾ ನಾಲೆಗಳು ಬರುತ್ತಿದ್ದು ವಿತರಣಾ ನಾಲೆ 1 ರಿಂದ 27(ಎ) ವರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ವಿತರಣಾ ನಾಲೆ 1 ರಿಂದ 22 ರವರೆಗೆ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿರುತ್ತದೆ. ವಿತರಣಾ ನಾಲೆ 23 ರಿಂದ 27(ಎ) ವರೆಗೆ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತದೆ. ಸಧ್ಯದಲ್ಲಿ ಭೂ ಅಭಿವೃದ್ಧಿ ಚಟುವಟಿಕೆಗಳಿಗೆ ಮತ್ತು ಕುಡಿಯುವ ನೀರಿನ ಸಲುವಾಗಿ ಮಾತ್ರ ವಿತರಣಾ ನಾಲೆಗಳಲ್ಲಿ ನೀರನ್ನು ಹರಿಸಲಾಗುತ್ತಿದೆ.

ನಾಗಮಂಗಲ ಶಾಖಾ ನಾಲೆ ಅಡಿಯಲ್ಲಿ ವಿತರಣಾ ನಾಲೆ 1 ರಿಂದ 9ರ ವರೆಗೆ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ವಿತರಣಾ ನಾಲೆ 10 ರಿಂದ 14 ಪ್ರಗತಿಯಲ್ಲಿರುತ್ತದೆ. ವಿತರಣಾ ನಾಲೆ 15 ರಿಂದ 19ರ ವರೆಗೆ ನಾಲಾ ಪಂಕ್ತೀಕರಣದ ಸರ್ವೆ ಕೆಲಸ ಮುಗಿದಿರುತ್ತದೆ. ಸಧ್ಯದಲ್ಲಿ ನೀರನ್ನು ವಿತರಣಾ ನಾಲೆಗಳಲ್ಲಿ ಜನಜಾನುವಾರುಗಳಿಗೆ ಕುಡಿಯುವ ಹಾಗೂ ಭೂ ಅಭಿವೃದ್ಧಿ ಚಟುವಟಿಕೆಗಳಿಗೆ ಮಾತ್ರ ಹರಿಸಲಾಗಿದೆ.

ಇ) ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು ವತಿಯಿಂದ ಆಧ್ಯತೆ ಮೇಲೆ ಕಾರ್ಯಕ್ರಮ ರೂಪಿಸಿಕೊಂಡು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

584(594) : ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಹೇಮಾವತಿ ವಲಯದಲ್ಲಿ ಗುತ್ತಿಗೆದಾರರಿಗೆ ಸರ್ಕಾರ ಕೊಡಬೇಕಾಗಿರುವ ಮೊಬಲಗು ಎಷ್ಟು;

ಆ) ಎಷ್ಟು ವರ್ಷಗಳಿಂದ ಬಾಕಿ ಉಳಿದಿದೆ ಹಾಗೂ ಈ ಬಿಲ್‌ಗಳು ಪಾಸ್ ಮಾಡಿದ ಮೇಲೆ ಗುತ್ತಿಗೆದಾರರಿಂದ ಹಣ ಕಟಾವು (ಕಡಿತ) ಮಾಡಿರುವುದು ನಿಜವೇ;

ಇ) ಇದ್ದಲ್ಲಿ, ಹೀಗೆ ಮಾಡಲು ಇರುವ ಕಾನೂನಿನ ಅವಕಾಶಗಳೇನು ಹಾಗೂ ಇದು ಪಾರದರ್ಶಕತೆ ಕಾನೂನಿನ (Law of Transparecy) ಒಳಗೆ ಬರುತ್ತದೆಯೇ;

ಈ) ಬಾಕಿ ಉಳಿದಿರುವ ಬಿಲ್ ಪಾವತಿಸಲು ಸರ್ಕಾರ ಉದ್ದೇಶಿಸಿದೆಯೇ ಹಾಗಿದ್ದಲ್ಲಿ, ಯಾವ ಕಾಲಕ್ಕೆ ನಿರೀಕ್ಷಿಸಬಹುದು;

ಉ) ಬಾಕಿ ಮೊತ್ತದ ಮೇಲೆ ಬಡ್ಡಿ : ಏನಾದರೂ ಕೊಡಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

| | | |
|---|---|---|
| ಅ)1. | ಸರ್ಕಾರದಿಂದ ನಿಗಮಕ್ಕೆ ವರ್ಗಾವಣೆಯಾದ ಕಾಮಗಾರಿಗಳ ಬಾಬ್ತು ಬಾಕಿ ಇರುವ ಬಿಲ್ಲುಗಳ ಮೊತ್ತ | 21.50 ಕೋಟಿ |
| 2. | ನಿಗಮದಿಂದ ಮಂಜೂರಾದ ಕಾಮಗಾರಿಗಳು ಬಾಬ್ತು ಬಾಕಿ ಇರುವ ಬಿಲ್ಲುಗಳ ಮೊತ್ತ | 23.25 ಕೋಟಿ |
| | **ಒಟ್ಟು ಬಾಕಿ :** | **44.75 ಕೋಟಿ** |

ಆ) 2002–03 ರಿಂದ 2003–04ರ ಸಾಲಿಗೆ ಬಾಕಿ ಇರುತ್ತದೆ. ಗುತ್ತಿಗೆದಾರರಿಂದ ಯಾವುದೇ ಹಣ ಬಿಲ್ಲುಗಳಲ್ಲಿ ಕಟಾವು ಮಾಡಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ನಿಗಮಕ್ಕೆ ಬಿಲ್ಲುಗಳು ಹಸ್ತಾಂತರಗೊಂಡಿವೆ. ಸಂಪನ್ಮೂಲಗಳ ಲಭ್ಯತೆಯಂತೆ ಬಾಕಿ ಉಳಿದಿರುವ ಬಿಲ್ಲುಗಳನ್ನು ಪಾವತಿಸಲು ನಿಗಮ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಉ) ಇಲ್ಲಾ.

585(597) : ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಹಂದನಕೆರೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಒಂದು ಎಂ.ಯು.ಎಸ್.ಎಸ್. ಯಾವಾಗ ಮಂಜೂರಾಯಿತು;

ಆ) ಅದು ಈವರೆವಿಗೂ ಕಾರ್ಯರೂಪಕ್ಕೆ ಬರಲು ಇರುವ ಅಡಚಣೆ ಏನು;

ಇ) ಇದರಿಂದಾಗಿ ಆ ಭಾಗದ ಜನ voltage ಇಲ್ಲದೆ ತತ್ತರಿಸುತ್ತಿರುವುದು ಸರ್ಕಾರದ ಗಮನದಲ್ಲಿಯೇ;

ಈ) ಇದನ್ನು ಯಾವ ಕಾಲದಲ್ಲಿ ಆರಂಭಿಸಿ ಯಾವಾಗ ಮುಗಿಸುವ ಯೋಜನೆ ಹಾಕಿಕೊಳ್ಳಲಾಗಿದೆ

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಚಿಕ್ಕನಾಯಕನಹಳ್ಳಿ ಹಂದನಕೆರೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ 110/11 ಕೆ.ವಿ. ಎಂ.ಯು.ಎಸ್.ಎಸ್. ಸ್ಥಾಪನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ಮೇ 2003ರಲ್ಲಿ ನೀಡಲಾಗಿರುತ್ತದೆ.

ಆ) ಹೊಸ ವಿದ್ಯುತ್ ಸಬ್–ಸ್ಟೇಷನ್‌ಗಳ (MUSS) ನಿರ್ಮಾಣವನ್ನು ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯವನ್ನು ಪಡೆದೇ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಕೈಗೊಳ್ಳಬೇಕಾಗಿರುತ್ತದೆ. ಸ್ವಂತ ಆರ್ಥಿಕ ಸಂಪನ್ಮೂಲಗಳು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಲಭ್ಯವಿರುವುದಿಲ್ಲ. ಸದರಿ ಹಂದನಕೆರೆ ಎಂ.ಯು.ಎಸ್.ಎಸ್. ನಿರ್ಮಾಣಕ್ಕೂ ಸಹ ಆರ್ಥಿಕ ಸಂಸ್ಥೆಗಳು ಸಾಲ ಸೌಲಭ್ಯದ ಅವಶ್ಯಕತೆ ಇದ್ದುದರಿಂದ ಸದರಿ ಕಾರ್ಯದ ಸವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿ. ಆರ್ಥಿಕ ಸಂಸ್ಥೆಗಳಿಗೆ ಸಾಲ ಸೌಲಭ್ಯದ ಮಂಜೂರಾತಿಗಾಗಿ ಸಲ್ಲಿಸುವುದು ಅನಿವಾರ್ಯವಾಯಿತು. ಈ ಎಲ್ಲಾ ಪ್ರಕ್ರಿಯೆಗಳಿಗೆ ಕಾಲಾವಕಾಶ ಅಗತ್ಯವಿರುತ್ತದೆ. ಈಗ ಹುಡ್ಕೋ ಸಂಸ್ಥೆಯು ಸಾಲ ಸೌಲಭ್ಯವನ್ನು ಮಂಜೂರು ಮಾಡಿರುವುದರಿಂದ. ಸದರಿ ಎಂ.ಯು.ಎಸ್.ಎಸ್. ನ ನಿರ್ಮಾಣದ ಕಾರ್ಯಗಳನ್ನು ಟರ್ನ್ ಕೀ ಆಧಾರದ ಮೇಲೆ ಕೈಗೊಳ್ಳಲು ಟೆಂಡರ್ ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗಿದೆ.

ಇ) ಆ ಭಾಗದಲ್ಲಿ ಕೆಲವು ಕಡೆ ಕಡಿಮೆ ವೋಲ್ಟೇಜ್ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಈಗಾಗಲೇ ಟರ್ನ್ ಕೀ ಟೆಂಡರ್ ಪ್ರಕ್ರಿಯೆಗಳು ಪ್ರಾರಂಭವಾಗಿರುತ್ತವೆ. ಟರ್ನ್ ಕೀ ಗುತ್ತಿಗೆದಾರರನ್ನು ಗೊತ್ತುಪಡಿಸಿದ ನಂತರ ನಿರ್ಮಾಣ ಕಾರ್ಯಗಳನ್ನು ಪೂರ್ಣಗೊಳಿಸಲು ಸುಮಾರು 9 ರಿಂದ 10 ತಿಂಗಳ ಕಾಲಾವಧಿ ಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಮುಂಬರುವ ವರ್ಷವಾದ 2005-06ರ ಜೂನ್ 2005ರ ಅಂತ್ಯದ ವೇಳೆಗೆ ಸದರಿ ಎಂ.ಯು.ಎಸ್.ಎಸ್. ನ ನಿರ್ಮಾಣ ಕಾರ್ಯ ಪೂರ್ಣಗೊಳಿಸುವ ಗುರಿಯನ್ನು ಹಮ್ಮಿಕೊಳ್ಳಲಾಗಿದೆ.

ತತ್ಕಾಲದ ಕ್ರಮವಾಗಿ ತುರುವೇಕೆರೆ ತಾಲ್ಲೂಕಿನಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ವಿತರಣಾ ವ್ಯವಸ್ಥೆಯಲ್ಲಿ ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರವನ್ನು ಸ್ಥಾಪಿಸುವುದು. ಕಡಿಮೆ ಗಾತ್ರದ ವಿದ್ಯುತ್ ವಾಹಕಗಳನ್ನು ಹೆಚ್ಚಿನ ಗಾತ್ರದ ವಿದ್ಯುತ್ ವಾಹಕಗಳ ಮೂಲಕ ಬದಲಾಯಿಸುವುದು ಇತ್ಯಾದಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಉದ್ದೇಶಿತ ಎಂ.ಯು.ಎಸ್.ಎಸ್. ಕಾರ್ಯರಂಭ ಮಾಡಿದ ನಂತರ ಹಂದನಕೆರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಮತ್ತು ವೋಲ್ಟೇಜ್ ಗುಣಮಟ್ಟ ಸುಧಾರಣೆಗೊಳ್ಳುವುದರಿಂದಾಗಿ ಈ ಭಾಗದ ಜನರ ವೋಲ್ಟೇಜ್ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ.

586(702) : ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ಯಾಕೇಜಿಂಗ್ ಗುತ್ತಿಗೆಯಡಿಯಲ್ಲಿ ನಿರ್ಮಾಣ ಮಾಡಿದ ರಸ್ತೆಗಳನ್ನು ನಿರ್ವಹಣೆ ಮಾಡಲು ಸಾಮಾನ್ಯ ನಿಬಂಧನೆ ಎಷ್ಟು ವರ್ಷ ನಿಗಧಿಪಡಿಸಿದೆ;

ಆ) ಶ್ರೀರಂಗಪಟ್ಟಣ ಮತ್ತು ಬೀದರ್ ರಸ್ತೆಯ ಚಿಕ್ಕನಾಯಕನಹಳ್ಳಿ ಭಾಗದ ಗುತ್ತಿಗೆದಾರರು (ಯಾರು);

ಇ) ಗುಂಡಿ ಬಿದ್ದಿರುವ ರಸ್ತೆಗಳನ್ನು ಮುಚ್ಚುವವರಾರು;

ಈ) ಲೋಕೋಪಯೋಗಿ ಇಲಾಖೆಯವರು ಈ ರಸ್ತೆಗಳ ದುರಸ್ತಿಗೆ ಹೊಂದಿರುವ ಜವಾಬ್ದಾರಿಯೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಪ್ಯಾಕೇಜಿಂಗ್ ಗುತ್ತಿಗೆಯಲ್ಲಿ ರಸ್ತೆಗಳ ಅಗಲೀಕರಣ ಮತ್ತು ಬಲಪಡಿಸುವ ಕಾರ್ಯವನ್ನು ತೆಗೆದುಕೊಂಡಿದ್ದು, ಈ ಕಾಮಗಾರಿಗಳು ಪೂರ್ಣಗೊಂಡ ನಂತರ 1 ವರ್ಷ ಕಾಲ ಕಾಮಗಾರಿಗಳಲ್ಲಿ ಕಂಡು ಬಂದ ದೋಷಗಳನ್ನು ಸರಿಪಡಿಸುವುದು ಮತ್ತು ಮುಂದೆ ಎರಡು ವರ್ಷ ರಸ್ತೆಯ ನಿರ್ವಹಣೆ ಮಾಡುವುದನ್ನು ನಿಗಧಿಪಡಿಸಲಾಗಿದೆ. ವಿಶ್ವಬ್ಯಾಂಕ್ ನೆರವಿನ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಪ್ಯಾಕೇಜ್ ಗುತ್ತಿಗೆಯಡಿ ನಿರ್ಮಾಣ ಮಾಡಿದ ರಸ್ತೆಯ ನಿರ್ವಹಣೆಗೆ ನಿಗಧಿಪಡಿಸಲಾದ ಅವಧಿಯು "ನಿರ್ಮಾಣ ಹಂತ ಮುಗಿದ ಬಗ್ಗೆ ದೃಢೀಕರಿಸಿದ ದಿನಾಂಕದಿಂದ ನಿರ್ವಹಣಾ ಅವಧಿಯು 1 ವರ್ಷ".

ಆ) ಶ್ರೀರಂಗಪಟ್ಟಣ ಬೀದರ್ ರಸ್ತೆಯ ಭಾಗವಾದ ಕಿಬ್ಬನಹಳ್ಳಿ ಕ್ರಾಸ್‌ನಿಂದ ಹುಳಿಯಾರ ಪುನಃಶ್ಚೇತನ ರಸ್ತೆ (ಚಿಕ್ಕನಾಯಕನಹಳ್ಳಿ ಭಾಗವು ಸೇರಿರುವಂತೆ) ಪ್ಯಾಕೇಜಿನ ಗುತ್ತಿಗೆದಾರರು ಮೆ: ನ್ಯಾಷನಲ್ ಆಸ್‌ಫಾಲ್ಟ್ ಪ್ರಾಡಕ್ಟ್ ಅಂಡ್ ಕನ್‌ಸ್ಟ್ರಕ್ಷನ್ ಕಂಪನಿ, ಚೆನ್ನೈ

ಇ) ಪ್ಯಾಕೇಜ್ ಅಡಿಯಲ್ಲಿ ನಿಗಧಿಪಡಿಸಲಾದ ನಿರ್ವಹಣಾ ಅವಧಿಯಲ್ಲಿ ಆಗುವ ಗುಂಡಿಗಳನ್ನು ಮುಚ್ಚುವುದು ಪ್ಯಾಕೇಜಿನ ಗುತ್ತಿಗೆದಾರರ ಜವಾಬ್ದಾರಿ ಆಗಿದೆ.

ಈ) ಪ್ಯಾಕೇಜಿನ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ ಅವಧಿಯು ಮುಗಿದ ನಂತರ, ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗುವುದು. ತದನಂತರ, ಈ ರಸ್ತೆಗಳ ದುರಸ್ತಿ ಸಂಬಂಧಿತ ಎಲ್ಲಾ ಜವಾಬ್ದಾರಿಯು ಲೋಕೋಪಯೋಗಿ ಇಲಾಖೆಗೆ ಒಳಪಡುತ್ತದೆ.

587(725) : ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಬರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಎಷ್ಟು ಕೆರೆಗಳಲ್ಲಿ ನೀರಿದೆ ಹಾಗೂ ಎಷ್ಟು ಕೆರೆಗಳು ಬತ್ತಿ ಹೋಗಿವೆ;

ಇ) ಈ ಕೆರೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈ ಮತಕ್ಷೇತ್ರದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳನ್ನು ನಿರ್ಮಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಮುಂದಿದೆ;

ಉ) ಈ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಊ) ಇದಕ್ಕೆ ಅಗತ್ಯವಿರುವ ಹಣಕಾಸಿನ ವಿವರಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 11 ಕೆರೆಗಳಿವೆ.

ಆ) 9 ಕೆರೆಗಳಲ್ಲಿ ನೀರಿದೆ. 2 ಕೆರೆಗಳು ಬತ್ತಿವೆ.

ಇ) ನಾರಾಯಣಪುರ ಕೆರೆ, ಬೆಟಬಾಲಕುಂದಾ ಕೆರೆ ಮತ್ತು ಕಲಖೋರಾ ಕೆರೆಗಳನ್ನು ರೈತ ಕಾಯಕ ಕೆರೆ ಯೋಜನೆಯಡಿ ಪುನರುಜ್ಜೀವನಗೊಳಿಸಲಾಗಿದೆ.

ಈ) 515.00 ಲಕ್ಷ ರೂ.ಗಳ ಅಂದಾಜಿನ ಸೈದಾಪುರ ಕೆರೆ, 29.90 ಲಕ್ಷ ರೂ.ಗಳ ಅಂದಾಜಿನ ಹಿರೆನಾಗಾಂ ಇಂಗುಕೆರೆ ಪ್ರಗತಿಯಲ್ಲಿವೆ, 26.00 ಲಕ್ಷ ರೂ.ಗಳ ಅಂದಾಜಿನ ಕಲಖೋರಾ ತಾಂಡಾ ಇಂಗುಕೆರೆ ಮತ್ತು 29.90 ಲಕ್ಷ ರೂ.ಗಳ ಹಾರಕುಡ ತಾಂಡಾ ಇಂಗುಕೆರೆಗಳ ನಿರ್ವಹಣೆಗಾಗಿ ಗುತ್ತಿಗೆದಾರರನ್ನು ನೇಮಿಸಲಾಗಿದೆ.

ಉ) ಅನುದಾನದ ಲಭ್ಯತೆ ಮೇಲೆ ಕ್ರಮ ಜರುಗಿಸಲಾಗುವುದು.

ಊ) 'ಈ' ನಲ್ಲಿ ಉತ್ತರಿಸಿದಂತೆ.

588(727) : ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬ (ಬಸವಕಲ್ಯಾಣ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸವಕಲ್ಯಾಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ 25 ಕೆ.ವಿ.ಯ ಒಂದು ಟ್ರಾನ್ಸ್‌ಫಾರ್ಮರ್, 63 ಕೆ.ವಿ.ಯ ಎಂಟು ಟ್ರಾನ್ಸ್‌ಫಾರ್ಮರ್‌ಗಳು. 100 ಕೆ.ವಿ.ಯ 21 ಟ್ರಾನ್ಸ್‌ಫಾರ್ಮರ್‌ಗಳು ಮತ್ತು 250 ಕೆ.ವಿ.ಯ ಎರಡು ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವ ವಿಷಯ ಸರ್ಕಾರಕ್ಕೆ ತಿಳಿದಿದೆಯೇ;

ಆ) ಹಾಗಿದ್ದಲ್ಲಿ, ಈ ಟ್ರಾನ್ಸ್‌ಫಾರ್ಮರ್‌ಗಳನ್ನು ತುರ್ತಾಗಿ ದುರಸ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವುದರಿಂದ ರೈತರ ಹೊಲಗದ್ದೆಗಳಿಗೆ ಹಾಗೂ ಜನರಿಗೆ ಕುಡಿಯುವ ನೀರಿನ ಸರಬರಾಜಿನಲ್ಲಿ ತೀವ್ರ ಸಮಸ್ಯೆಯಾಗಿರುವುದರಿಂದ ಸರ್ಕಾರವು ತೀವ್ರಗತಿಯಲ್ಲಿ ಈ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು.

ಆ) ದಿನಾಂಕ 23-7-2004ರಲ್ಲಿದ್ದಂತೆ 3 ಸಂಖ್ಯೆಯ 63 ಕೆ.ವಿ.ಎ. 4 ಸಂಖ್ಯೆಯ 100 ಕೆ.ವಿ.ಎ ಮತ್ತು ಒಂದು 25 ಕೆ.ವಿ.ಎ. ಸಾಮರ್ಥ್ಯದ ಪರಿವರ್ತಕಗಳನ್ನು ದುರಸ್ತಿಗೊಳಿಸಿ, ಅಳವಡಿಸಲಾಗಿದೆ, ಸುಟ್ಟು ಹೋದ ಬಾಕಿ ಪರಿವರ್ತಕಗಳ ದುರಸ್ತಿಗಾಗಿ ಸೂಕ್ತ ಜರೂರು ಕ್ರಮಗಳನ್ನು ಕೈಗೊಳ್ಳಲಾಗಿದೆ.

ಇ) ಹೌದು ದುರಸ್ತಿಯಲ್ಲಿರುವ / ಸುಟ್ಟು ಹೋಗಿರುವ ಪರಿವರ್ತಕಗಳನ್ನು ಸರಿಪಡಿಸಲು / ಬದಲಾಯಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

589(729) : ಶ್ರೀ ಮಲ್ಲಿಕಾರ್ಜುನ್ ಸಿದ್ಧರಾಮಪ್ಪ ಖೂಬ (ಬಸವಕಲ್ಯಾಣ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸಕಲ್ಯಾಣ ಮತಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳು ಯಾವುವು ಹಾಗೂ ಇವು ಎಷ್ಟು ಕಿಮೀ ಉದ್ದದ ರಸ್ತೆಗಳಾಗಿವೆ;

ಆ) ಈ ರಸ್ತೆಗಳ ಪೈಕಿ ಅಂತರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು ಯಾವುವು;

ಇ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ದುರಸ್ಥಿಗಾಗಿ ಇಲಾಖೆಯು ಕಳೆದ 3 ವರ್ಷಗಳಿಂದ ಪ್ರತಿ ವರ್ಷ ವೆಚ್ಚ ಮಾಡಿದ ಹಣವೆಷ್ಟು;

ಈ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ವಿಶೇಷವಾಗಿ ನೆರೆಯ ಮಹಾರಾಷ್ಟ್ರಕ್ಕೆ ಸಂಪರ್ಕವನ್ನು ಕಲ್ಪಿಸುವ ರಸ್ತೆಗಳು ಅತ್ಯಂತ ದುಸ್ಥಿತಿಯಲ್ಲಿದ್ದು ಇವುಗಳ ದುರಸ್ಥಿಗಾಗಿ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ;

ಉ) ಪ್ರಸಕ್ತ ಸಾಲಿನಲ್ಲಿ ಈ ಕಾರ್ಯಕ್ಕಾಗಿ ವೆಚ್ಚ ಮಾಡುವ ಹಣವೆಷ್ಟು;

ಊ) ಈ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಹಾಗೂ ಇದ್ದಲ್ಲಿ ಯಾವ ಯಾವ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಸವಕಲ್ಯಾಣ ಮತ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಉದ್ದದ ವಿವರಗಳು ಈ ಕೆಳಗಿನಂತಿವೆ.

| ರಸ್ತೆಯ ಹೆಸರು | ರಸ್ತೆಯ ಉದ್ದ (ಕಿಮೀಗಳಲ್ಲಿ) |
|---|---|
| **ರಾಜ್ಯ ಹೆದ್ದಾರಿಗಳು:** | |
| 1. ರಾಜ್ಯದ ಗಡಿಯಿಂದ ಹಲಸೂರು, ಬಸವಕಲ್ಯಾಣ, ಮೂಡಬಿ ಮಹಾಗಾಂವ್‌ರಸ್ತೆ (ರಾಜ್ಯ ಹೆದ್ದಾರಿ ಸಂ. (1) | 36.40 |
| 2 ಔರಾದ್–ಸದಾಶಿವಗಡ ರಾಜ್ಯ ಹೆದ್ದಾರಿ ಸಂ. 34 | 43.80 |
| **ಒಟ್ಟು ರಾಜ್ಯ ಹೆದ್ದಾರಿಗಳು** | **80.20** |
| **ಜಿಲ್ಲಾ ಮುಖ್ಯ ರಸ್ತೆಗಳು:** | |
| 1. ಬಸವಕಲ್ಯಾಣ ರಾಜೋಳಾ ರಸ್ತೆ | 12.00 |
| 2. ಬಸವಕಲ್ಯಾಣ ಪರತಾಪೂರಾ–ತಾಂಬೋಳಾ ರಸ್ತೆ | 7.00 |
| 3. ಭೋಸಗಾದಿಂದ ಮುಡಬಿ ರಸ್ತೆ | 15.00 |
| 4. ಕಂಡಕಾಪೂರ–ಬಾರ್ಡರದಿಂದ ಹತ್ತರಗಾ ರಸ್ತೆ | 20.00 |
| 5. ಪರತಾಪೂರ–ಜಾಜನಮುಗಳಿ ರಸ್ತೆ | 25.00 |

| ರಸ್ತೆಯ ಹೆಸರು | ರಸ್ತೆಯ ಉದ್ದ (ಕಿಮೀಗಳಲ್ಲಿ) |
|---|---|
| 6. ಬಸವಕಲ್ಯಾಣ–ಬಿ.ಎನ್. ರಸ್ತೆ | 9.00 |
| 7. ರಾಜೋಳು–ರಾಜೇಶ್ವರ ರಸ್ತೆ | 7.00 |
| 8. ರಾಜೇಶ್ವರ–ಮುಡಬಿ ರಸ್ತೆ | 15.00 |
| 9. ಮುಡಬಿ–ಹಳ್ಳಿಖೇಡ ರಸ್ತೆ | 17.00 |
| 10. ಮುಡಬಿ–ವರನಾಳ ರಸ್ತೆ | 10.50 |
| 11. ಕೊಹಿನೂರ–ಹತ್ತಂಗ ರಸ್ತೆ | 13.50 |
| 12. ಬೆಟಗೇರಾ–ಬೆಳಂಬಗಿ ರಸ್ತೆ | 7.00 |
| ಒಟ್ಟು ಜಿಲ್ಲಾ ಮುಖ್ಯ ರಸ್ತೆ | 158.00 |

ಆ) ಅಂತರರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳು ಈ ಕೆಳಗಿನಂತಿವೆ:

1. ರಾಜ್ಯ ಗಡಿಯಿಂದ ಹುಲಸೂರು–ಬಸವಕಲ್ಯಾಣ–ಮುಡಬಿ–ಮುಡಗಾಂವ್ ರಸ್ತೆ (ರಾಜ್ಯ ಹೆದ್ದಾರಿ ಸಂ. 11)
2. ಬಸವಕಲ್ಯಾಣ–ಪರತಾಪೂರ–ತಾಂಬೋಳಾ ರಸ್ತೆ (ಜಿಲ್ಲಾ ಮುಖ್ಯ ರಸ್ತೆ)
3. ಚಂಡಕಾಪೂರ–ಬಾರ್ಡ್‌ರದಿಂದ ಹತ್ತರಗಾ ರಸ್ತೆ (ಜಿಲ್ಲಾ ಮುಖ್ಯ ರಸ್ತೆ)
4 ಪರತಾಪೂರ–ಚಾಜನಮುಗಳಿ ರಸ್ತೆ (ಜಿಲ್ಲಾ ಮುಖ್ಯ ರಸ್ತೆ)
5. ಬಸವಕಲ್ಯಾಣ–ಬಿ.ಎನ್. ರಸ್ತೆ (ಜಿಲ್ಲಾ ಮುಖ್ಯ ರಸ್ತೆ)

ಇ) ಬಸಕಲ್ಯಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಿಗೆ ಕಳೆದ 3 ವರ್ಷಗಳಿಂದ ಮಾಡಲಾದ ವೆಚ್ಚದ ವಿವರ ಈ ಕೆಳಗಿನಂತಿವೆ

1. 2001–02 ರೂ. 68.63 ಲಕ್ಷಗಳು
2. 2002–03 ರೂ. 56.13 ಲಕ್ಷಗಳು
3. 2003–04 ರೂ. 47.97 ಲಕ್ಷಗಳು

ಒಟ್ಟು ರೂ. 172.73 ಲಕ್ಷಗಳು

ಈ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ವಿಶೇಷವಾಗಿ ನೆರೆಯ ಮಹಾರಾಷ್ಟ್ರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಾಗಿದ್ದು ಸಿಆರ್‌ಎಫ್, ನಬಾರ್ಡ್ ಹಾಗೂ ಹೆಚ್‌ಕೆಡಿಬಿ ಯೋಜನೆಯಡಿಯಲ್ಲಿ ಸುಧಾರಣೆ ಮಾಡಿ ಸುಸ್ಥಿತಿಯಲ್ಲಿಡಲಾಗಿದೆ.

ಉ) ಪ್ರಸಕ್ತ ಸಾಲಿನಲ್ಲಿ ಸೂಕ್ತ ಅನುದಾನವನ್ನು ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಊ) ಈ ಮೇಲಿನ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳು ಇರುವುದಿಲ್ಲ, ಆದರೆ ಮಹಾರಾಷ್ಟ್ರಕ್ಕೆ ಸಂಪರ್ಕ ಕಲ್ಪಿಸುವ 36.00 ಕಿಮೀ ಉದ್ದದ ಗ್ರಾಮೀಣ ರಸ್ತೆಯು ಮಂಠಾಳ ಗುಂಡೂರು ಯಲ್ಲದಗುಂಡಿ ಭೋಸಗಾ ಲಾಡವಂತಿ ರಾಮತೀರ್ಥ (ಡಿ) ದಿಂದ ಗದಲೇಗಾಂವ್‌ವರೆಗಿನ ಈ ಗ್ರಾಮಗಳ ಮೂಲಕ

ಹಾದು ಹೋಗುವ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಗೆ ಮೇಲ್ದರ್ಜೆಗೇರಿಸಲು ಪರಿಶೀಲಿಸಲಾಗುತ್ತಿದೆ.

590(743) : ಶ್ರೀ ನರಸಿಂಹ ನಾಯಕ್ (ಸುರಪುರ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುರಪುರ ತಾಲ್ಲೂಕಿನ ಗ್ರಾಮಗಳಲ್ಲಿ ಸುಮಾರು 45ಕ್ಕೂ ಹೆಚ್ಚಿನ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳು, ಐ.ಪಿ. ಸೆಟ್‌ಗಳು ಸುಟ್ಟು ಹೋಗಿ ವಿದ್ಯುತ್ ಹಾಗೂ ನೀರಿನ ತೊಂದರೆಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಐ.ಪಿ. ಸೆಟ್ ಅಳವಡಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಸದರಿ ವಿಷಯದ ಬಗ್ಗೆ ಈಗಾಗಲೇ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಂಡಿದ್ದರೂ ಸಹ ಗುಲ್ಬರ್ಗಾ ಜೆಸ್ಕಾಂ ಅಧಿಕಾರಿಗಳು 10 ತಿಂಗಳಿನಿಂದ ನಿರ್ಲಕ್ಷ್ಯ ತೋರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಎಷ್ಟು ದಿನಗಳಲ್ಲಿ 45 ಹಳ್ಳಿಗಳಿಗೆ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಐ.ಪಿ. ಸೆಟ್ ಅಳವಡಿಸುವ ಕಾರ್ಯ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು ಗಮನಕ್ಕೆ ಬಂದಿದೆ.

ಆ) 25 ಕೆ.ವಿ.ಯ 11 ಪರಿವರ್ತಕಗಳಲ್ಲಿ 9 ಪರಿವರ್ತಕಗಳನ್ನು ಬದಲಾಯಿಸಲಾಗಿದ್ದು, ಉಳಿದ 2ನ್ನು ಬದಲಾಯಿಸಬೇಕಾಗಿದೆ. 63 ಕೆ.ವಿ.ಯ 34 ಪರಿವರ್ತಕಗಳಲ್ಲಿ 12 ಪರಿವರ್ತಕಗಳನ್ನು ಬದಲಾಯಿಸಲಾಗಿದ್ದು ಉಳಿದ 22ನ್ನು ಬದಲಾಯಿಸಬೇಕಾಗಿದೆ. 100 ಕೆ.ವಿ.ಯ 18 ಪರಿವರ್ತಕಗಳಲ್ಲಿ 12 ಪರಿವರ್ತಕಗಳನ್ನು ಬದಲಾಯಿಸಲಾಗಿದ್ದು ಉಳಿದ 6ನ್ನು ಬದಲಾಯಿಸಬೇಕಾಗಿದೆ ಮತ್ತು 250 ಕೆ.ವಿ.ಎ. 3 ಪರಿವರ್ತಕಗಳನ್ನು ಬದಲಾಯಿಸಬೇಕಾಗಿದೆ.

ವಿಫಲವಾದ ಪರಿವರ್ತಕಗಳ ಕೊರತೆಯನ್ನು ನೀಗಿಸಲು ಬೇರೆ ವಿದ್ಯುತ್ ಸರಬರಾಜು ಕಂಪೆನಿಗಳಿಂದ ಎಣ್ಣೆ ಮತ್ತು ಪರಿವರ್ತಕಗಳನ್ನು ತರಿಸಲು ವ್ಯವಸ್ಥೆ ಮಾಡಲಾಗಿದೆ. ಎಣ್ಣೆ ಮತ್ತು ಪರಿವರ್ತಕಗಳು ಬಂದ ಕೂಡಲೇ ಪರಿವರ್ತಕಗಳನ್ನು ಬದಲಾಯಿಸಲು ಕ್ರಮ ಜರುಗಿಸಲಾಗುವುದು.

ಇ) ಕಳೆದ ಕೆಲವು ತಿಂಗಳುಗಳಲ್ಲಿ ಎಣ್ಣೆ ಹಾಗೂ ಮತ್ತಿತರ ಸಾಮಗ್ರಿಗಳ ಕೊರತೆಯಿಂದಾಗಿ ಮತ್ತು ನಿಸರ್ಗದ ಪ್ರಕೋಪದಿಂದಾಗಿ (ಹೆಚ್ಚು ಗಾಳಿ ಬೀಸಿ) ಪರಿವರ್ತಕಗಳು ಹೆಚ್ಚು ವಿಫಲವಾಗಿದ್ದು, ನಿರೀಕ್ಷಿತ ಮಟ್ಟದಲ್ಲಿ ದುರಸ್ತಿ ಮಾಡಲು ಹಾಗೂ ಬದಲಾಯಿಸಲು ಸಾಧ್ಯವಾಗಿಲ್ಲ. ಆದಷ್ಟು ಬೇಗನೆ ಪರಿವರ್ತಕಗಳನ್ನು ಬದಲಾಯಿಸುವ ಕ್ರಮ ಜರುಗಿಸಲಾಗುವುದು.

ಈ) ಆದಷ್ಟು ಬೇಗನೆ ಆದ್ಯತೆಯ ಮೇರೆಗೆ ಸುಟ್ಟು ಹೋದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಮತ್ತು ಐ.ಪಿ. ಸೆಟ್ ಟ್ರಾನ್ಸ್‌ಫಾರ್ಮರ್ ಬದಲಾಯಿಸಲಾಗುವುದು.

591(745) : ಶ್ರೀ ನರಸಿಂಹ ನಾಯಕ್ (ರಾಜೂಗೌಡ) (ಸುರಪುರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುರಪುರ ತಾಲ್ಲೂಕಿನ ಹುಣಸಗಿ ಪಟ್ಟಣದಲ್ಲಿ ಸಾರ್ವಜನಿಕರು ಸರ್ಕಾರದ ಜಮೀನನ್ನು ಅತಿಕ್ರಮಿಸಿ ಕಟ್ಟಡವನ್ನು ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ತಪ್ಪಿತಸ್ಥರ ವಿರುದ್ಧ ಯಾವ ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಬಂದಿದೆ.

ಆ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ ಸೇರಿದ ಸುಮಾರು 500 ಚದರ ಅಡಿ ಜಾಗದಲ್ಲಿ ಸಾರ್ವಜನಿಕರಿಂದ ಅನಧಿಕೃತ ಕಟ್ಟಡಗಳು ನಿರ್ಮಿಸಲ್ಪಟ್ಟಿದ್ದವು. ಈ ಬಗ್ಗೆ ತಕ್ಷಣವೇ ಕ್ರಮ ಕೈಗೊಂಡು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಲಾಗಿದೆ ಮತ್ತು ಈ ಸಂಬಂಧ ಅತಿಕ್ರಮಣಕಾರರಿಗೆ ಸೂಕ್ತ ಎಚ್ಚರಿಕೆ ನೀಡಿ ಅನಧಿಕೃತ ಕಟ್ಟಡ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ.

592(852) : ಶ್ರೀ ನಿಂಗಪ್ಪ ಹೆಚ್. (ಕುಣಿಗಲ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಣಿಗಲ್ ಕ್ಷೇತ್ರದ ಹೆಬ್ಬೂರು-ಗೂಳೂರು ಹೋಬಳಿಗಳ ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಏತ ನೀರಾವರಿ ಯೋಜನೆ ಮಂಜೂರಾಗಿದ್ದರೂ ಸಹ ಕೆಲಸ ಪ್ರಾರಂಭಿಸದಿರಲು ಕಾರಣವೇನು;

ಆ) ಈ ದಿಸೆಯಲ್ಲಿ ಪ್ರಿ-ಕ್ವಾಲಿಫಿಕೇಶನ್ ಟೆಂಡರನ್ನು ಕರೆದಿದ್ದರೂ ಸಹ ಮುಂದಿನ ಕೆಲಸ ಪ್ರಾರಂಭವಾಗದಿರಲು ಕಾರಣವೇನು;

ಇ) ಎಷ್ಟು ಅವಧಿಯಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಿ ಕುಡಿಯುವ ನೀರನ್ನು ಈ ಪ್ರದೇಶದ ಜನತೆಗೆ ದೊರೆಯುವಂತೆ ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಈ ಯೋಜನೆಗೆ ದಿನಾಂಕ 21-10-2002ರಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಯಾಗಿರುತ್ತದೆ. ಈ ಯೋಜನೆಯಲ್ಲಿ ಹೇಮಾವತಿ ಯೋಜನೆಯಿಂದ ಗೂಳೂರು ಮತ್ತು ಹೆಬ್ಬೂರು ಹೋಬಳಿಗಳ 54 ಕೆರೆಗಳಿಗೆ ಜೋಡಣಾ ವ್ಯವಸ್ಥೆಯಿಂದ ಕುಡಿಯುವ ನೀರು ಒದಗಿಸಬೇಕಾಗಿದ್ದು ವಿಶೇಷ ಸಮಿತಿಯ ನಂತರ ತಯಾರಿಸಿದ ಯೋಜನಾ ಅಂದಾಜಿಗೆ ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಸಮಿತಿಯಿಂದ ದಿನಾಂಕ 19-1-2004ರಲ್ಲಿ ಒಪ್ಪಿಗೆ ಪಡೆದು ದಿನಾಂಕ 22-1-04ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತದೆ. ಕಾಮಗಾರಿಯನ್ನು ಪ್ರಾರಂಭಿಸುವ ಉದ್ದೇಶದಿಂದ ದಿನಾಂಕ 24-1-04 ರಂದು ಪರಿಶೀಲನೆಯಲ್ಲಿದೆ.

ಆ) ಆಹ್ವಾನಿಸಿದ ಪೂರ್ವಾರ್ಹತೆ ಟೆಂಡರ್ ಪ್ರಕ್ರಿಯೆಯನ್ನು ಲೋಕಸಭಾ ಮತ್ತು ರಾಜ್ಯ ಸಭಾ ಚುನಾವಣೆಗಳು ಪೂರ್ಣಗೊಂಡ ನಂತರ ದಿನಾಂಕ 6-5-04 ರಂದು ಟೆಂಡರ್‌ಗಳು ಪರಿಶೀಲನೆಯಲ್ಲಿದೆ.

ಇ) ಯೋಜನೆಗೆ ಸೂಕ್ತ ಅನುದಾನವನ್ನು ಒದಗಿಸಿಕೊಂಡು ಪ್ರಸ್ತಾಪಿತ ಯೋಜನೆಯನ್ನು 24 ತಿಂಗಳುಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

593(853) : ಶ್ರೀ ನಿಂಗಪ್ಪ ಹೆಚ್. (ಕುಣಿಗಲ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅತೀ ವೃಷ್ಟಿಯಿಂದ ಕುಣಿಗಲ್ ಕ್ಷೇತ್ರದ ಗುನ್ನಾಗೆರೆ ನೀರು ಊರೊಳಗೆ ನುಗ್ಗಿ ಸುಮಾರು ಮನೆಗಳಿಗೆ ಜಖಂ ಆಗಿರುವುದಲ್ಲದೆ, ಆಹಾರ ಧಾನ್ಯಗಳು ಕೊಚ್ಚಿಹೋಗಿ ಅಪಾರ ನಷ್ಟವಾಗಿರುವುದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಸೇರಿರುವ ಈ ಕೆರೆಯ ಹಿಂಭಾಗದ ಸಂತಸ್ಥರಿಗೆ ನಿಗಮದ ವತಿಯಿಂದ ಪರಿಹಾರ ಇದುವರೆವಿಗೂ ನೀಡದಿರಲು ಕಾರಣಗಳೇನು;

ಇ) ನೀಡುವುದಿದ್ದಲ್ಲಿ, ಪರಿಹಾರವನ್ನು ಯಾವಾಗ ನೀಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ದಿನಾಂಕ 9-7-04 ರಂದು ಬಿದ್ದ ಭಾರಿ ಮಳೆಯಿಂದಾಗಿ ಕುಣಿಗಲ್ ಕ್ಷೇತ್ರದ ಗುನ್ನಾಗೆರೆ ಕೆರೆಯ ನೀರು ಊರೊಳಗೆ ನುಗ್ಗಿ 15 ಮನೆಗಳಿಗೆ ಜಖಂ ಆಗಿರುತ್ತದೆಂದು ಪರಿಹಾರದ ಸಂಬಂಧ ರೂ.61,800.00 ಗಳಾಗುತ್ತದೆಂದು ತಹಶೀಲ್ದಾರ್ ಕುಣಿಗಲ್‌ರವರು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆ) ಪ್ರಕೃತಿ ವಿಕೋಪದ ಸಂತ್ರಸ್ತರಿಗೆ ನಿಗಮದ ವತಿಯಿಂದ ಪರಿಹಾರ ನೀಡಲು ಅವಕಾಶವಿರುವುದಿಲ್ಲ. ಅನಾಹುತಗಳನ್ನು ತಪ್ಪಿಸಲು ಕೆರೆಯ ಕೋಡಿ ಮತ್ತು ಡ್ರಾಪ್ಟ್ ಚಾನಲ್ ಅಭಿವೃದ್ಧಿಕೈಗೊಳ್ಳಲು ನಿಗಮದವತಿಯಿಂದ ತಾತ್ಕಾಲಿಕ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ ಹಾಗೂ ಶಾಶ್ವತ ದುರಸ್ತಿಗಾಗಿ ನಿಗಮದಿಂದ ಕಾರ್ಯಕ್ರಮಕ್ಕೆ ಅನುಮೋದನೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಅತಿ ವೃಷ್ಟಿಗೆ ಒಳಗಾದ ಸಂತ್ರಸ್ಥರನ್ನು ಗುರ್ತಿಸಿ ಜಿಲ್ಲಾಡಳಿತವು ಪರಿಹಾರ ನೀಡಬೇಕಾಗಿರುತ್ತದೆ. ತಹಶೀಲ್ದಾರರು, ಕುಣಿಗಲ್‌ರವರು ಜಿಲ್ಲಾಧಿಕಾರಿಗಳಿಗೆ ಮಂಜೂರಾತಿ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿಗಳಿಂದ ಮಂಜೂರಾತಿ ಪಡೆದ ನಂತರ ತಹಶೀಲ್ದಾರ್ ಕುಣಿಗಲ್‌ರವರು ಪರಿಹಾರ ವಿತರಿಸಬೇಕಾಗುತ್ತದೆ.

594(189) : ಶ್ರೀ ಪದ್ಮನಾಭ ಕೊಟ್ಟಾರಿ (ವಿಟ್ಲ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರು ಬಿ.ಸಿ. ರೋಡ್, ಪುತ್ತೂರು, ಸುಳ್ಯ, ಧರ್ಮಸ್ಥಳ ಮುಂತಾದ ಕೆಲವು ಮಾರ್ಗಗಳಲ್ಲಿ ಖಾಸಗಿ ಕಂಟ್ರಾಕ್ಟ್ ಕ್ಯಾರಿಯೇಜ್ ಬಸ್ಸುಗಳಿಗೆ ಪರವಾನಿಗೆ ನೀಡಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಪರವಾನಿಗೆ ನೀಡಲಾದ ಮಾರ್ಗಗಳ ವಿವರಗಳನ್ನು ಒದಗಿಸುವುದು;

ಇ) ಸದರಿ ಮಾರ್ಗಗಳಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವಾಗ ಖಾಸಗಿಯವರಿಗೆ ಪರವಾನಿಗೆ ನೀಡಲು ಕಾರಣಗಳೇನು?

ಈ) ಈ ರೀತಿ ಪರವಾನಿಗೆ ನೀಡಿರುವುದರಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಉಂಟಾದ ನಷ್ಟ ಎಷ್ಟು ಮತ್ತು ಅದನ್ನು ಹೇಗೆ ಭರಿಸಲಾಗುವುದು;

ಉ) ಹೀಗೆ ಖಾಸಗಿ ಬಸ್ಸುಗಳಿಗೆ ಪರವಾನಿಗೆ ನೀಡುವ ಮೂಲಕ ಬಡ ಟ್ಯಾಕ್ಸಿ ಚಾಲಕರಿಗೆ ಹಾಗೂ ಮಾಲೀಕರಿಗೆ ಉಂಟಾದ ತೊಂದರೆ ಬಗ್ಗೆ ಸರ್ಕಾರ ಗಮನಿಸಿದೆಯೆ;

ಊ) ಹೌದಾದಲ್ಲಿ ಅವರಿಗೆ ಒದಗಿಸುವ ಪರಿಹಾರಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು.

ಆ) ಅನುಬಂಧದಲ್ಲಿ ನೀಡಲಾಗಿದೆ.

ಇ) ಕರ್ನಾಟಕ ಒಪ್ಪಂದ ವಾಹನ (ಸ್ವಾಧೀನ) ಕಾಯ್ದೆ 1976ನ್ನು ದಿನಾಂಕ 1-04-2003ರಿಂದ ಅನ್ವಯಿಸುವಂತೆ ನಿರಶನಗೊಳಿಸಿರುವುದಿಂದ ಖಾಸಗಿಯವರು ಒಪ್ಪಂದ ವಾಹನಗಳಿಗೆ ರಹದಾರಿ ಪಡೆಯಲು ಅವಕಾಶವಿದೆ.

ಈ) ಉದ್ಭವಿಸುವುದಿಲ್ಲ.

ಉ) ಟ್ಯಾಕ್ಸಿ ಚಾಲಕರಿಗೆ ಹಾಗೂ ಮಾಲೀಕರಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ.

ಊ) ಉದ್ಭವಿಸುವುದಿಲ್ಲ.

**Annexure to Unstarred L.A.Question No.189 of Sri Padmanabha Kottari K**

| Permit No.and date of issue | M.V.No. | Route | Name of the permit holder |
|---|---|---|---|
| KACC-01/STA 26-4-2003 | KA-20/D-5577 | Dharmasthala to Hubli | Sri Praveen Ballal, Karkala |
| KA/CC-05/STA 6-5-2003 | KA-12/A-9977 | Mysore to M'lore | Sri B. Sheshagiri Prabhu Kodagu |
| KA/CC-07/STA 16-5-2003 | KA-19/AB-5555 | Dharmasthala to Hubli | Sri P.M. Narayana Moodabidri |
| KA/CC-08/STA 23-5-2003 | KA-18/7299 | Kukkesubramanya to M'lore | Sri K.P. Abdul Gaffar M'lore |
| KA/CC-09/STA | KA-19/AC-5969 | Dharmasthala | Sri S. Rathnakar |

| 1 | 2 | 3 | 4 |
|---|---|---|---|
| KA/CC-11/STA 1-6-2003 | KA-19/AB-8284 | Dharmasthala to Karwar | Sri P. Jayagovinda Bhatt, M'lore. |
| KA/CC-12/STA 4-6-2003 | KA-21/C-7557 | M'lore to Sakaleshpura | Sri P. Usman, Uppinangady |
| KA/CC-16/STA 9-6-2003 | KA-21/B-8284 | M'lore to Mandya | Sri P. Gopalakrishna Bhat, M'lore D.K. |
| KA/CC-18-STA 23-6-2003 | KA-19A-2017 | M'lore to Dharmasthala | Sri K. Ganapathi Kamath, M'lore. |
| KA/CC-19/STA 21-6-2003 | KA-36/A-3510 | Hubli to Raichur | Sri Shivaputrappa Raichur |
| KA/CC-20/STA 2-7-2003 | KA-12/A-5335 | Kutta to M'lore | Sri K.P. Bojanna, Kodagu Dist. |
| KA/CC-21/STA 3-7-2003 | KA-20/B-4797 | Ullal to M'lore | Sri Dayananda Kille, M'lore |
| KA/CC-25/STA 14-7-2003 | KA-19/A-3736 | M'lore to Dharmastala via. | Sri K. Ganapathi Kamath, M'lore. |
| KA/CC-26/STA 14-7-2003 | KA-20/B-300 | Dharmastala to M'lore | Smt. Shailini Jain M'lore-2 |
| KA/CC27/STA | 14-7-2003 | | |
| KA/CC-28/STA 14-7-2003 | KA-19/AD-3969 | Dhamastala to M'lore | Sri S. Rathnakar Adhikari, M'lore-2 |
| KA/CC-29/STA 15-7-2003 | KA-19/AC-333 | M'lore to Mysore | Sri K. Radha krishna Rai, |
| KA/CC-30/STA 15-7-2003 | KA-20/8088 | M'lore to Subramanya | Sri B. Purandar, Kamath, M'lore |
| KA/CC-31/STA 15-7-2003 | KA-19/AC-5767 | Dhamastala to M'lore | Smt. Shailini Jain, M'lore-2 |
| KA/CC-32/STA 15-7-2003 | KA-19/AC-5969 | Dharmastala to M'lore | Sri S. Ratnakar Adhkari, M'lore |
| KA/CC-32/STA 15-7-2003 | KA-19/AC-333 | M'lore to Mysore | Sri K. Radhakrishna Rai |
| KA/CC-30/STA 15-7-2003 | KA-20/8088 | M'lore to | Sri B. Purandar Kamanth, M'lore |

| 1 | 2 | 3 | 4 |
|---|---|---|---|
| KA/CC-31/STA 15-7-2003 | KA-19/AC-5767 | Dharmastala to M'lore | Smt. Shailini Jain, M'lore-2 |
| KA/CC-32/STA 15-7-2003 | KA-19/AC-5969 | Dharmastala to M'lore | Sri S. Rathnakar Adhikari, M'lore |
| KACC-33/STA 15-7-2003 | KA-21/B-786 | Chickmagalur to M'lore | Sri Abdul Rahiman, D.K. |
| KA/CC-35/STA 16-7-2003 | KA-19/AC-7477 | M'lore to Sampije | Smt. Gladya Perieru |
| KACC-36/STA 17-7-2003 | KA-19/C-7477 | M'lore to Charmudi | - do - |
| KA/CC-37/STA 17-7-2003 | KA-21/6164 | Sulliay to Mysore | Sri P. Narayana Pai, Sullia. |
| KA/CC-38/STA 17-7-2003 | KA-21/6163 | Sullia to Mysore | - do - |
| KA/CC-39/STA 18-7-2003 | KA-19/AC-7977 | M'lore to Chickmagalore | Sri L. Jawahar Nazarath |
| KA/CC-40/STA 22-7-2003 | KA-19/B-3739 | M'lore to Dharmastala | Smt. Shalini Jain |
| KA/CC-41/STA 22-7-2003 | KA-10/AB-3333 | M'lore to Birur | Sri Kiran Lob M'lore |
| KA/CC-42/STA 1-8-2003 | KA-05/AD-6399 | Anekal to Dharmastala | Sri K.R. Ramesh Bangalore-68 |
| KA/CC/43/STA 1-8-2003 | KA-05/D-5958 | Attibele to Dharmastala | - do - |
| KA/CC-44/STA 2-8-2003 | KA-19/AB-5457 | Sullia to M'lore | Sri M. Shantharam Shetty, Mangalore |
| KA/CC-45/STA 2-8-2003 | KA-19/AB-7977 | M'lore to Birur | Smt. Anitha Nazarath, M'lore |
| KA/CC-46/STA | KA-19/AD-5477 | M'lore to Dharmasthala | Sri b. Jawahar Nazarath, M'lore. |
| KA/CC-47-STA 03/2003 | KA-19/C-4559 | M'lore to Shimoga | Sri Avil Mathias M'lore |

| 1 | 2 | 3 | 4 |
|---|---|---|---|
| KA/CC-48-STA | KA-19-AA-001 | Birur to M'lore | Sri Vasanth Kumar, M'lore |
| KA/CC-49/STA 2-8-2003 | KA-19/AC-0003 | Meyar to M'lore | Sri Balakrishna Bhandary, M'lore. |
| KA/CC-50/STA 5-8-2003 | KA-20/B-8888 | M'lore to Dharmastala | Smt. Shailini Jain, M'lore-2 |
| KA/CC-60/STA 6-8-2003 | KA-20/B-0009 | M'lore to Sullia | Sri K. Ganesh, Mangalore |
| KA/CC-61/STA 8-8-2003 | KA-19/C-3787 | Madikeri to M'lore | Sri K. Gopala Krishna Bhat, D.K. |
| KA/CC-62/STA 8-8-2003 | KA-19/AC-5727 | Gandhibagilu to M'lore | Sri Chandrahas Ullal, Ullal M'lore |
| KA/CC-63/ST 11-8-2003 | KA-19/C-0268 | M'lore to Chickmagalur | Sri Robert D'souza, Mangalore |
| KA/CC-64/STA 11-8-2003 | KA-19/AC-9597 | Mangalore to Subramanya | Sri Padmanabha C. Moolya, Mangalore |
| KA/CC-65/STA 11-8-2003 | KA-21/C-1234 | Naria to M'lore | Sri Frankey D'souza D.K. |
| KA/CC-66/STA 12-8-2003 | KA-19/AC-7377 | M'lore to Birur | Smt. Glady's Pereira, M'lore |
| KA/CC-67/STA 13-8-2003 | KA-19/AD-9099 | M'lore to Madikeri | Smt. Vidya Prabhu M'lore |
| KA/CC-68/STA 13-8-2003 | KA-19/AB-7077 | M'lore to Dharmastala | Sri T Anand, M'lore |
| KA/CC-72-STA 16-8-2003 | KA-19/AD-9099 | Somwarpet to M'lore | Sri K Shivaraj Shetty, Mangalore |
| KA/CC-73/STA 16-8-2003 | KA-19/AD-66 | M'lore Dharmastala | Sri K. Ganapathi M'lore |
| KA/CC/74-STA 16-8-2003 | KA-19/AC-66 | M'lore to Dharmastala | Sri K. Ganapathi Kamath. M'lore |

| 1 | 2 | 3 | 4 |
|---|---|---|---|
| KA/CC-75/STA 16-8-2003 | KA-19/D-2255 | M'lore to Dharmastala | Sri Jayadeep Rao M'lore; D.K. |
| KA/CC-76/STA 18-8-2003 | KA-19/D-7477 | M'lore to Shimoga | Smt. Glady's Pereira M'lore |
| KA/CC-77/STA 18-8-2003 | KA-19/A-2017 | M'lore to Dharmastala | Sri K. Ganapathi Kamath, M'lore. |
| KA/CC-78/STA 20-8-2003 | KA-19/AD-9799 | Somwarpet to M'lore via. | Sri K. Shivaraj Shetty, M'lore |
| KA/CC-79/STA 21-3-2003 | KA-20/7990 | Subramanya to M'lore | Sri Subhash Shetty, D.K. |
| KA/CC-80/STA 22-8-2003 | KA-19/B-5859 | Somwarpet to M'lore via | Sri B. Narayana Shetty, M'lore D.K. |
| KA/CC-81/STA 25-8-2003 | KA-19/A-8692 | M'lore to Miyar | B.N. Nivedita, D.K. |
| KA/CC-82/STA 25-8-2003 | KA-20/A-130 | M'lore to Dharmastala | Sri Narayan Hundar Bantawal Tq. D.K. |
| KA/CC-84/STA 26-8-2003 | KA-19/AB-4001 | M'lore to Punnur | Sri Nelson Pereira M'lore D.K. |
| KA/CC-85/STA 2-9-2003 | KA-19/AD-7899 | M'lore to Madikeri | Sri Radhakrishna Rai, M'lore D.K. |
| KA/CC-86/STA 2-9-2003 | KA-19/AC-7899 | M'lore to Madikeri | Sri K.Sadananda Shetty, M'lore D.K. |
| KA/CC-87/STA 2-9-2003 | KA-19/AD-0777 | M'lore to Sringeri | Sri L. Jawahar Nazarath, M'lore |
| KA/CC-89/STA 2-9-2003 | KA-19/D-1959 | M'lore to Mysore | Sri K. Jayanthkumar M'lore D.K. |
| KA/CC-90/STA 2-9-2003 | KA-19/AD-7929 | M'lore to Mysore | Sri Sheshappa Hegde, D.K. |
| KA/CC/91-STA 2-9-2003 | KA-21/6273 | Sullia to Madikeri | Sri P. Narayana Rai.P Sullia Tq, D.K. |
| KA/CC-92/STA 2-9-2003 | KA-21/6274 | M'lore to Hassan | Sri Mohammed Rafeeq, Puttur, D.K. |

| 1 | 2 | 3 | 4 |
|---|---|---|---|
| KA/CC-93/STA 2-9-2003 | KA-20/D-6598 | M'lore to Bellary | Sri K. Ajith Kumar Shetty, Udupi Tq and Dist. |
| KA/CC-94/STA 2-9-2003 | KA-12/B-7777 | Dharmastala-Mysore | Sri B. Sheshagiri Prabhu, Kodagu |
| KA/CC-95/STA 2-9-2003 | KA-12/A-2777 | M'lore to Mysore | Sri B. Janardhan Prabhu, Kodagu |
| KA/CC-96/STA 2-9-2003 | KA-20/B-6598 | M'lore to Bellary | Sri K.Ajith Kumar Shetty, Udupi Tq and Dist. |
| KA/CC-98/STA 3-9-2003 | KA-21/C-5328 | M'lore to Uppinangady | Sri Jayanth Nayak, Belthangady Tq |
| KA/CC-99/STA 4-9-2003 | KA-19/AD-333 | M'lore to Puttur | Sri R. Radhakrishna Rai, M'lore |
| KA/CC-100/STA 4-9-2003 | KA-19/AD-9285 | M'lore to Sullia | Sri C. Prakash Shetty, Bantwal Taluk, D.K. |
| KA/CC-101/STA 4-9-2003 | KA-19/AD-7577 | M'lore to Mysore | Sri Praveen Shetty P.T. M'lore D.K. |
| KA/CC-102/STA 4-9-2003 | KA-19/C-7977 | M'lore to Chickmagalur | Sri B. Sharath Shetty M'lore D.K. |
| KA/CC-103/STA 4-9-2003 | KA-20/C-7577 | M'lore to Puttur | Sri B. Sharath Shetty M'lore, D.K. |
| KA/CC-107/STA 4-9-2003 | KA-20/B-888 | M'lore to Chickmagalur | Sri Sudhakar M'lore |
| KA/CC-108/STA 4-9-2003 | KA-20/C-2799 | Sulia to Kutta | Smt. Vijaya N. Rai, Sulia, D.K. |
| KA/CC-111/STA 4-9-2003 | KA-19-AB-1119 | M'lore to Subramanya | Sri Madeshwaran M.V. M'lore |
| KA/CC-112/STA 4-9-2003 | KA-19-9294 | M'lore to Madikeri | Sri Sandeep M'lore, D.K. |

| 1 | 2 | 3 | 4 |
|---|---|---|---|
| KA/CC-114/STA 8-9-2003 | KA-19/AD-0077 | M'lore to Dharmastala | Smt. Anitha Nazareth, M'lore D.K. |
| KA/CC-116/STA 8-9-2003 | KA-19/AC-7977 | Sullia to M'lore | Smt. Philomina D'Souza M'lore D.K. |
| KA/CC-121/STA 9-9-2003 | KA-19/C-2535 | Puttur to Uppinangady | Sri Sudhakar Nayak Belthangady Taluk, D.K. |
| KA/CC/133/STA 15-9-2003 | KA-21/C-3313 | M'lore to Chickmagalur | Sri B. Adam Belthangady Tq. DK |
| KA/CC/134/STA 16-9-2003 | KA-19/A-3922 | M'lore to Birur | Sri Wilson Bryan Lobo M'lore |
| KA/CC/139/STA 19-9-2003 | KA-21/A-9899 | M'lore to Dharmastala | Sri N. Vivekananda Shetty, Bantwal |
| KA/CC/143/STA 20-9-2003 | KA-19/A-3922 | Sullia to M'lore via | Sri M. Shantharama Shetty, D.K. |
| KA/CC/153/STA 26-9-2003 | KA-06/B-6064 | Hassan to M'lore | Rajendra Shetty, M'lore D.K. |
| KA/CC/154/STA 26-9-2003 | KA-19/A-9373 | M'lore to Bangalore | Sri Kiran Kumar B.K. Bantwal Taluk |
| KA/CC/158/STA 3-10-2003 | KA-19/AD-9369 | M'lore to Dharmastala | Sri Tharanatha Pargade, Kankanady, M'lore. |
| KA/CC/159/STA 3-10-2003 | KA-19/AC-6444 | M'lore to Bangalore | Smt. M. Leelavathi M'lore |
| KA/CC/160/STA 3-10-2003 | KA-19/AD/5999 | M'lore to Nelyadi via | Sri Imtiyaz Ahamed Kodialbail, M'lore |
| KA/CC-161/STA 3-10-2003 | KA-19/AB/7333 | M'lore to Bangalore | Sri T. Rajesh Uchila M'lore |
| KA/CC/164/STA 3-10-2003 | KA-19/AD/1222 | Karwar to Bangalore | Sri Madhava M'lore |

| 1 | 2 | 3 | 4 |
|---|---|---|---|
| KA/Cc/168/STA 3-10-2003 | KA-21/C/6263 | Sullia to Sullia | Smt. Vijaya N. Rai M'lore. |
| KA/CC/169/STA 6-10-2003 | KA/21/C/264 | Sulia to Sulia | Smt. Vijaya N. Rai M.Lorl. |
| KA/CC/172/STA 6-10-2003 | KA-21/C-1089 | State Bank (M'lore) | Sri M. Mohammed Haji Puttur Talu, D.K. |
| KA/CC/173/STA 6-10-2003 | KA-19/C-3559 | (M'lore) to Panchanahalli | Sri Franky D'Souza Belthangady, DK |
| KA/CC/176/STA 7-10-2003 | KA-19/D-2289 | M'lore to Bangalore | Sri Avil Menezes, D.K. |
| KA/CC/177/STA 7-10-2003 | KA-19/AD-0033 | M'lore to Sullia | Sri Radhakrishna M'l[illegible]e, D.K. |
| KA/CC/178/STA 7-10-2003 | KA-19/AD/0005 | M'lore (University) to Mysore | Sri Rameeza M'lore, D.K. |
| KACC/179/STA 8-10-2003 | KA-19/AA/8886 | M'lore to Bangalore | Smt. Nasrina D., M'lore |
| KA/CC/182/STA 10-10-2003 | KA-19/AA/8886 | M'lore to Arasikere | Sri Abdul Rehaman Puttur, Tq. |
| KA/CC/183/STA 10-10-2003 | KA-19/AD-8509 | M'lore to Bangalore | Sri Ashwathama Hegde M'lore |
| KA/CC/184/STA 10-10-2003 | KA-21/C-8509 | M'lore to Bangalore | Sri Manish Rai D.K. |
| KA/CC/185/STA 10-10-2003 | KA-19/AD/9295 | Talapady to Mysore | Sri Rakesh Rai, Karambettu, M'lore |
| KA/CC/186/STA 10-10-2003 | KA-19/AD/4959 | Talapady to Mysore | Sri Manoj Kumar Mysore |
| KA/CC/187/STA 10-10-2003 | KA-19/AD/3969 | Talapady to Mysore | Smt. Subbalakshmi Mysore |
| KA/CC/189/STA 10-10-2003 | KA-21/A-6353 | Sullia to M'lore via. | Sri N. Balasubra manya, Sullia D.K. |

| 1 | 2 | 3 | 4 |
|---|---|---|---|
| KA/CC/190/STA 10-10-2003 | KA-21/6353 | M'lore to Madikeri | Sri N. Balasubramanya, Sullia, D.K. |
| KA/CC/220/STA 17-10-2003 | KA-19/AD/9009 | Mysore to M'lore | Sri Narayana Shetty, Bantwal Taluk, |
| KA/CC/222/STA 18-10-2003 | KA-21/C-777 | Subramanya to M'lore | Sri Sanjeeva Poojary D.K. |
| KA/CC/226/STA 21-10-2003 | KA-21/3369 | Sullia to M'lore- | Sri Ganesh S. Shetty M'lore, D.K. |
| KACC/227/STA 21-10-2003 | KA-12A-2889 | M'lore to B.C. Ropad | Sri K. Padmanabha Kini, Kodagu |
| KA/CC/250/STA 23-10-2003 | KA-19A-2844 | M'lore Sullia | Sri Sukumar K. Salian, M'lore |
| KA/CC/261/STA 31-10-2003 | KA-21-C-6389 | Sulia to Kalmakar | Sri M.G Ullas Kumar Sullia |
| KA/CC/262/STA 31-10-2003 | KA-21/C-6365 | Sulia to Subramanya | Sri M.C. UllasKumar Sullia |
| KA/CC/263/STA 3-11-2003 | KA-20/B-8888 | Dharmastala to Kanvadi | Smt. Shailini R. Jain M'lore |
| KA/CC/264/STA 3-11-2003 | KA-19/AD-5969 | Dharmastala to Kanyadi | Sri S. Rathnakar Adhikari, M'lore |
| KA/CC/265/STA 3-11-2003 | KA-21/C-9592 | Sulia Bus Stand to Jaslur | Sri Dayananda Kille M'lore |
| KA/CC/267/STA 4-11-2003 | KA-21/C-4849 | M'lore to B'lore | Sri A.K. Jayaram Sheka, Belthangadi |
| KA/CC/275/STA 4-11-2003 | KA-21/6393 | M'lore to Arasikere | Sri Subraya Karanth Puttur |
| KA/CC/276/STA 4-11-2003 | KA-21/6394 | - do - | Sri N. Shantakumar Mayya, Puttur |
| KA/CC/279/STA 5-11-2003 | KA-19/AC-5677 | C M'lore to80/ M'lore | Sri M. Radhakrishna Rai, M'lore. |
| KA/CC/280/STA 5-11-2003 | KA-12/5335 | Kutta to M'lore | Sri K.P. Bojanna Kodagu |

| 1 | 2 | 3 | 4 |
|---|---|---|---|
| KA/CC/283/STA 7-11-2003 | KA-19/AC-5999 | Ullal to Puttur | Sri Ramdas, Ullal |
| KA/CC/284-STA 7-11-2003 | KA-21/P-3777 | Alike to M'lore Bus STand | Sri P. Sadashiva Shetty, M'lore |
| KA/CC/291/STA 10-11-2003 | KA-19/AE-786 | M'lore to Nangli | Sri N.S. Kareem, M'lore |
| KA/CC/295/STA 11-11-2003 | KA-21/6405 | Sullia to Subramanya | Sri M.S. Prakash, Sullia |
| KA/CC/312/STA 15-11-2003 | KA-21/6425 | M'lore to B'lore | Sri Chandrakanth, Puttur |
| KA/CC/314/STA 17-11-2003 | KA-19/AE-8989 | M'lore to B.C. Road | Sri M. Mohan Bhandary, M'lore |
| KA/CC/340/STA 3-12-2003 | KA-19/AC-9994 | M'lore to Mandeklu | Sri Bernar D'souza, M'lore |
| KA/CC/354/STA 5-12-2003 | KA-19/AE-9009 | Talapady to B'lore | Sri B. Ragunath Pai, M'lore |
| KA/CC/361/STA 10-12-2003 | KA-20/8265 | Sullia to M'lore | Sri Felix D' souza, Puttur |
| KA/CC/367/STA 12-12-2003 | KA-19/AE-3333 | M'lore to Hassan | Sri Madhava Shetty, M'lore |
| KA/CC/370/STA 12-12-2003 | KA-21/6470 | M'lore to Miyar | Sri Ramachandra, Puttur |
| KA/CC/421/STA 20-1-2004 | KA-19/AE-9909 | M'lore to B'lore | Sri Ramachandra, Kukiyan, M'lore |
| KA/CC/455/STA 4-3-2004 | KA-19/AE-4993 | M'lore to Birur | Sri M.K. Moosa Kunhi, M'lore |
| KA/CC/480/STA 19-4-2004 | KA-21/B-6595 | Mangalore to Chickmagalore | Sri M.A. Kasim Belthangady |
| KA/CC/522/STA 18-6-2004 | KA-21/C-777 | Sullia to Subramanya | Sri Sathya Shankara Sulia |
| KA/CC/530/STA 7-7-2004 | KA-19/A-7149 | M'lore to Talapady | Sri Dayananda Kille M'lore |

595(459) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ಹಾಗೂ ಪೂರ್ಣಗೊಂಡಿರುವ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳು ಯಾವುವು;

ಆ) ಪೂರ್ಣಗೊಳ್ಳದಿರುವ ಯೋಜನೆಗಳು ಪೂರ್ಣಗೊಳ್ಳಲು ಎಷ್ಟು ಕಾಲ ಬೇಕು ಹಾಗೂ ಎಷ್ಟು ಹಣ ಬೇಕಾಗುವುದು;

ಇ) ಎಲ್ಲ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳು ಪೂರ್ಣಗೊಂಡಾಗ ಎಷ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುವುದು;

ಈ) ರಾಜ್ಯದ ಜಲ ನೀತಿಯಲ್ಲಿ ಭರವಸೆ ನೀಡಿದಂತೆ 2005ರ ಅಂತ್ಯದ ವೇಳೆಗೆ ಈ ಎಲ್ಲ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲಾಗುವುದೇ;

ಉ) ರಾಜ್ಯದ ನೀರಾವರಿ ಪ್ರದೇಶದ ನೀರು ಬಳಕೆದಾರರ ರೈತರನ್ನು ಅಧಿಕಾರಯುಕ್ತರನ್ನಾಗಿ ಮಾಡುವ ಉದ್ದೇಶದಿಂದ ರಚಿಸಲಾದ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಉಳಿಸಿ ಬಲಗೊಳಿಸಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ರಾಜ್ಯದಲ್ಲಿ ಪೂರ್ಣಗೊಂಡಿರುವ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ಸಂಖ್ಯೆ-41 ಹಾಗೂ ಅನುಷ್ಠಾನಗೊಳ್ಳುತ್ತಿರುವ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ಸಂಖ್ಯೆ-38 ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪೂರ್ಣಗೊಳ್ಳದಿರುವ ಯೋಜನೆಗಳನ್ನು ಪೂರ್ಣಗೊಳಿಸಲು ರೂ. 7040.46 ಕೋಟಿಗಳು ಬೇಕಾಗಿರುತ್ತದೆ. ಯೋಜನೆಗಳನ್ನು ಆರ್ಥಿಕ ಸಂಪನ್ಮೂಲಗಳ ಲಭ್ಯತೆ ಮೇರೆಗೆ ಪೂರ್ಣಗೊಳಿಸಲಾಗುವುದು.

ಇ) ರಾಜ್ಯದ ಎಲ್ಲ ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳು ಪೂರ್ಣಗೊಂಡಾಗ ಸುಮಾರು 35 ಲಕ್ಷ ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯುವುದು;

ಈ) ರಾಜ್ಯದ ಜಲ ನೀತಿಯಂತೆ ಪ್ರಗತಿಯಲ್ಲಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಸಂಪನ್ಮೂಲಗಳ ಲಭ್ಯತೆ ಅನುಗುಣವಾಗಿ ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಉ) ಹೌದು ರಾಜ್ಯದ ನೀರಾವರಿ ಪ್ರದೇಶದ ನೀರು ಬಳಕೆದಾರರ ರೈತರನ್ನು ಅಧಿಕಾರ ಯುಕ್ತರನ್ನಾಗಿ ಮಾಡುವ ಉದ್ದೇಶದಿಂದ ರಚಿಸಲಾದ ನೀರು ಬಳಕೆದಾರರ ಸಹಕಾರ ಸಂಘಗಳನ್ನು ಉಳಿಸಿ ಉಳಿದ ಪ್ರದೇಶಗಳಲ್ಲಿ ನೀರು ಬಳಕೆದಾರರ ಸಂಘಗಳನ್ನು ಸ್ಥಾಪಿಸಲು ಪ್ರಯತ್ನಿಸಲಾಗುತ್ತಿದೆ.

# ಅನುಬಂಧ

## ರಾಜ್ಯದ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿವರಗಳು

| ಕ್ರ.ಸಂ. | ಯೋಜನೆ | ಬಾಕಿ ವೆಚ್ಚ |
|---|---|---|
| | **ಪೂರ್ಣಗೊಂಡಿರುವ ಯೋಜನೆಗಳು : ಭಾರಿ ನೀರಾವರಿ ಯೋಜನೆಗಳು** | |
| 1. | ತುಂಗಾ ಅಣೆಕಟ್ಟು | – |
| 2. | ತುಂಗಭದ್ರಾ ಬಲದಂಡೆ ಕೆಳಮಟ್ಟದ ಕಾಲುವೆ | – |
| 3. | ವಾಣಿವಿಲಾಸ ಸಾಗರ | – |
| 4. | ಭದ್ರಾ ಜಲಾಶಯ | – |
| 5. | ಘಟಪ್ರಭಾ ಹಂತ 1 ಮತ್ತು 2 | – |
| 6. | ಕೃಷ್ಣರಾಜಸಾಗರ | – |
| 7. | ಕಾವೇರಿ ಅಣೆಕಟ್ಟು ನಾಲೆಗಳು | – |
| 8. | ನುಗು ಜಲಾಶಯ | – |
| | **ಪೂರ್ಣಗೊಂಡಿರುವ ಯೋಜನೆಗಳು : ಮಧ್ಯಮ ನೀರಾವರಿ ಯೋಜನೆಗಳು** | |
| 1. | ಅಂಬ್ಲಿಗೋಳ | – |
| 2. | ಅಂಜನಾಪುರ | – |
| 3. | ಅರೆಶಂಕರ | – |
| 4. | ಚಂದ್ರಂಪಳ್ಳಿ | – |
| 5. | ಚಿತವಾಡಗಿ | – |
| 6. | ಧರ್ಮ | – |
| 7. | ಗಾಯತ್ರಿ | – |
| 8. | ಹಗರಿಬೊಮ್ಮನಹಳ್ಳಿ | – |
| 9. | ಹತ್ತಿಕುಣಿ | – |
| 10. | ಜಂಬದಹಳ್ಳ | – |
| 11. | ಕಳಾಸ್‌ಕೋಪ್ | – |
| 12. | ಕನಕನಾಲಾ | – |
| 13. | ಕೊಳ್ಚಿ ವಿಯರ್ | – |
| 14. | ನಾಗಥಾಣಾ | – |
| 15. | ನಾರಾಯಣಪುರ | – |
| 16. | ನಾರೀಹಳ್ಳ | – |
| 17. | ರಜೋಲಿಬಂಡಾ | – |
| 18. | ರಾಮನಹಳ್ಳಿ | – |
| 19. | ಸೌದಾಗರ್ | – |
| 20. | ಬೈರಮಂಗಳಾ | – |

| 1 | 2 | 3 |
|---|---|---|
| 21. | ಗುಂಡಾಲ್ | – |
| 22. | ಹೆಬ್ಬಳ್ಳ | – |
| 23. | ಕಣ್ವ | – |
| 24. | ಮಂಗಳಾ | – |
| 25. | ಮಾರ್ಕೋನಹಳ್ಳಿ | – |
| 26. | ನಲ್ಲೂರು ಅಮ್ಮಣ್ಣಿಕೆರೆ | – |
| 27. | ಸುವರ್ಣಾವತಿ | – |
| 28. | ಬಾಚಂಕಿ | – |
| 29. | ತೀತಾ | – |
| 30. | ಭದ್ರಾ ಅಣೆಕಟ್ಟು | – |
| 31. | ಗೋಕಾಕ್ ಕೆನಾಲ್ | – |
| 32. | ಮುಲ್ಲಾಮರಿ ಮೇಲ್ದಂಡೆ ಯೋಜನೆ | – |
| 33. | ರಾಣಿಕೆರೆಗೆ ಪೂರಕ ಕಾಲುವೆ | – |

ಪ್ರಗತಿಯಲ್ಲಿರುವ ಯೋಜನೆಗಳು : ಭಾರಿ ನೀರಾವರಿ ಯೋಜನೆಗಳು ಬಾಕಿ ವೆಚ್ಚ

(ರೂ. ಲಕ್ಷಗಳಲ್ಲಿ)

| | | |
|---|---|---|
| 1. | ಘಟಪ್ರಭಾ ಹಂತ–3 | 31388.27 |
| 2. | ಬೆಣ್ಣೆತೊರಾ | 6539.46 |
| 3. | ಹಿಪ್ಪರಗಿ | 83336.13 |
| 4. | ಮಲಪ್ರಭಾ | 12803.11 |
| 5. | ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ–1 ಮತ್ತು 2 | 65489.81 |
| 6. | ತುಂಗಾ ಮೇಲ್ದಂಡೆ ಯೋಜನೆ | 64960.72 |
| 7. | ಮಾರ್ಕಂಡೇಯ | 3605.83 |
| 8. | ಸಿಂಗಟಾಲೂರು | 56788.36 |
| 9. | ದೂದ್‌ಗಂಗಾ | 10636.29 |
| 10. | ಭೀಮಾ ಏತ ನೀರಾವರಿ | 14125.23 |
| 11. | ತುಂಗಭದ್ರಾ ಎಡದಂಡೆ ಕಾಲುವೆ | 1841.43 |
| 12. | ತುಂಗಭದ್ರಾ ಬಲಮೇಲ್ದಂಡೆ ಕಾಲುವೆ | 5219.62 |
| 13. | ಡಿ. ದೇವರಾಜ ಅರಸು ನಾಲೆ | 3393.06 |
| 14. | ಹಾರಂಗಿ | 5849.76 |
| 15. | ಹೇಮಾವತಿ | 199128.68 |
| 16. | ಕಬಿನಿ | 82488.84 |
| 17. | ಕೆ.ಆರ್.ಎಸ್. ಆಧುನೀಕರಣ | 6909.05 |

| 1 | 2 | 3 |
|---|---|---|
| 18. | ಯಗಚಿ | 15401.74 |
| 19. | ವಾರಾಹಿ | 9267.61 |
| 20. | ಕಾರಂಜಾ | 7520.86 |
| | **ಪ್ರಗತಿಯಲ್ಲಿರುವ ಯೋಜನೆಗಳು : ಮಧ್ಯಮ ನೀರಾವರಿ ಯೋಜನೆಗಳು** | |
| 1. | ಅಮರ್ಜಾ | 2322.67 |
| 2. | ಇಟಗಿ-ಸಾಸಲವಾಡ ಏತ | 735.25 |
| 3. | ಬಸಾಪುರ ಏತ | 779.83 |
| 4. | ಗಂಡೋರಿನಾಲಾ | 4835.68 |
| 5. | ಹಿರೇಹಳ್ಳ | 2070.69 |
| 6. | ಮುಲ್ಲಾಮಾರಿ ಕೆಳದಂಡೆ | 2798.45 |
| 7. | ಮೆಸ್ಕಿನಾಲಾ | 551.41 |
| 8. | ಹರಿನಾಲಾ | 319.5 |
| 9. | ಅರ್ಕಾವತಿ | 3039.95 |
| 10. | ಹುಚ್ಚನಕೊಪ್ಪಲು | 1249.96 |
| 11. | ಇಗ್ಗಲೂರು | 1920.17 |
| 12. | ಕಾಮಸಮುದ್ರ | 910.11 |
| 13. | ಮಂಚನಬೆಲೆ | 350.9 |
| 14. | ತಾರಕ | 2046.64 |
| 15. | ಉಡುತೊರೆಹಳ್ಳ | 1847.22 |
| 16. | ವಾಟೆಹೊಳೆ | 619.18 |
| 17. | ಚಿಕ್ಲಿಹೊಳೆ | 34.92 |
| 18. | ಚುಲ್ಕಿನಾಲಾ | 554.43 |
| | ಒಟ್ಟು | 704045.82 |

596(460) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಅದರ ಅಂಗ ಸಂಸ್ಥೆಗಳು ಹೊಂದಿರುವ ಬಸ್ಸುಗಳು ಎಷ್ಟು;

ಆ) ಸಂಸ್ಥೆ ಎಷ್ಟು ವಿಭಾಗಗಳನ್ನು ಹೊಂದಿದೆ ಹಾಗೂ ವಿಭಾಗದಲ್ಲಿ ಎಷ್ಟು ಶೆಡ್ಯೂಲ್‌ಗಳನ್ನು ಹೊಂದಿದೆ (ವಿಭಾಗವಾರು ವಿವರ ನೀಡುವುದು);

ಇ) ಸಂಸ್ಥೆಯಲ್ಲಿ ಖಾಯಂ ಆಗಿ ಸೇವೆ ಸಲ್ಲಿಸುತ್ತಿರುವ ಚಾಲಕ-ನಿರ್ವಾಹಕರು ಎಷ್ಟು;

ಈ) ಖಾಸಗಿಯವರು ಕೆ.ಎಸ್.ಆರ್.ಟಿ.ಸಿ. ಲಾಂಛನದಲ್ಲಿ ಓಡಿಸುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು;

ಉ) ಖಾಸಗಿ ಬಸ್ಸುಗಳ ಹೆಚ್ಚಳದಿಂದ ಕೆ.ಎಸ್.ಆರ್.ಟಿ.ಸಿ. ಚಾಲಕರು ಕೆಲಸವಿಲ್ಲದಂತಾಗಿ ರುವುದರಿಂದ ಇವರ ರಕ್ಷಣೆಗೆ ಕೈಗೊಂಡ ಕ್ರಮಗಳಾವುವು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 12,159

| | |
|---|---|
| ಕ.ರಾ.ರ.ಸಾ.ಸಂಸ್ಥೆ – | 4217 |
| ವಾ.ಕ.ರ.ಸಾ.ಸಂಸ್ಥೆ – | 3292 |
| ಈ.ಕ.ರ.ಸಾ.ಸಂಸ್ಥೆ – | 1734 |
| ಬೆಂ.ಮ.ನ.ಸಾ.ಸಂಸ್ಥೆ – | 2916 |
| | 12,159 |

ಆ)

| | |
|---|---|
| ಕ.ರಾ.ರ.ಸಾ.ಸಂಸ್ಥೆ – | 10 ವಿಭಾಗ |
| ವಾ.ಕ.ರ.ಸಾ.ಸಂಸ್ಥೆ – | 8 |
| ಈ.ಕ.ರ.ಸಾ.ಸಂಸ್ಥೆ – | 6 |

ಕಾರ್ಯಾಚರಣೆ ಮಾಡುತ್ತಿರುವ ಅನುಸೂಚಿಗಳ ವಿವರ ಅನುಬಂಧದಲ್ಲಿ ನೀಡಲಾಗಿದೆ.

ಇ)

| ಸಂಸ್ಥೆ | ಚಾಲಕ | ನಿರ್ವಾಹಕ | ಚಾಲಕ–ಕಂ ನಿರ್ವಾಹಕ |
|---|---|---|---|
| ಕ.ರಾ.ರ.ಸಾ.ಸಂಸ್ಥೆ | 6634 | 5826 | 1063 |
| ಬೆಂ.ಮ.ಸಾ.ಸಂಸ್ಥೆ | 4782 | 4520 | – |
| ಈ.ಕ.ರ.ಸಾ.ಸಂಸ್ಥೆ | 3012 | 2851 | 244 |
| ವಾ.ಕ.ರ.ಸಾ.ಸಂಸ್ಥೆ | 7057 | 7213 | – |

ಈ) ಖಾಸಗಿ ವಾಹನಗಳ ಸಂಖ್ಯೆ:
ಕ.ರಾ.ರ.ಸಾ. ಸಂಸ್ಥೆ 223

ಉ) ಉದ್ಭವಿಸುವುದಿಲ್ಲ.

**ಅನುಬಂಧ**

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ**

| ವಿಭಾಗ | ಅನುಸೂಚಿಗಳ ಸಂಖ್ಯೆ |
|---|---|
| ಬೆಂಗಳೂರು (ಕೇಂದ್ರ) | 506 |
| ಬೆಂಗಳೂರು (ಗ್ರಾಮಾಂತರ) | 293 |
| ತುಮಕೂರು | 267 |
| ಕೋಲಾರ | 568 |
| ಮೈಸೂರು (ನಗರ) | 499 |
| ಮೈಸೂರು (ಗ್ರಾಮಾಂತರ) | 404 |

| | |
|---|---|
| ಹಾಸನ | 353 |
| ಚಿಕ್ಕಮಗಳೂರು | 330 |
| ಮಂಗಳೂರು | 526 |
| ದಾವಣಗೆರೆ | 337 |
| ಒಟ್ಟು | **4083** |

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**

| ವಿಭಾಗ | ಅನುಸೂಚಿಗಳ ಸಂಖ್ಯೆ |
|---|---|
| ಬೆಂಗಳೂರು | 3440 |

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**

| ವಿಭಾಗ | ಅನುಸೂಚಿಗಳ ಸಂಖ್ಯೆ |
|---|---|
| ಬೆಳಗಾವಿ | 500 |
| ಚಿಕ್ಕೋಡಿ | 382 |
| ಹುಬ್ಬಳ್ಳಿ | 560 |
| ವಿಜಾಪುರ | 470 |
| ಉತ್ತರಕನ್ನಡ | 462 |
| ಬಾಗಲಕೋಟೆ | 430 |
| ಗದಗ | 384 |
| ಹಾವೇರಿ | 278 |
| ಒಟ್ಟು | **3466** |

**ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**

| ವಿಭಾಗ | ಅನುಸೂಚಿಗಳ ಸಂಖ್ಯೆ |
|---|---|
| ಗುಲ್ಬರ್ಗಾ | 397 |
| ಯಾದಗಿರ್ | 225 |
| ಕೊಪ್ಪಳ | 242 |
| ರಾಯಚೂರ | 395 |
| ಬೀದರ್ | 389 |
| ಬಳ್ಳಾರಿ | 559 |
| ಒಟ್ಟು | **2207** |

597(461) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ರಸ್ತೆ ಅಭಿವೃದ್ಧಿ ನಿಗಮದಿಂದ ನಿರ್ಮಾಣಗೊಂಡ ರಸ್ತೆಗಳಾವುವು ಮತ್ತು ಅವುಗಳ ಉದ್ದ ಎಷ್ಟು;

ಆ) ಇದಕ್ಕಾಗಿ ಮಾಡಲಾದ ಒಟ್ಟು ವೆಚ್ಚ ಎಷ್ಟು;

ಇ) ನಿರ್ಮಾಣಗೊಳ್ಳುತ್ತಿರುವ ರಸ್ತೆಗಳಾವುವು;

ಈ) ಅವುಗಳು ಯಾವ ಹಂತದಲ್ಲಿವೆ (ವಿವರಗಳನ್ನು ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೆಳಕಂಡ ರಸ್ತೆಗಳ ನಿರ್ಮಾಣವನ್ನು ಮಾಡಲಾಗಿದೆ.

| ರಸ್ತೆಯ ಹೆಸರು | ತೆಗೆದುಕೊಂಡ ಉದ್ದ (ಕಿ.ಮೀ.ಗಳಲ್ಲಿ) |
|---|---|
| 1. ಗುಲ್ಬರ್ಗಾ ನಗರಕ್ಕೆ ವರ್ತುಲ ರಸ್ತೆ (1ನೇ ಹಂತ) | 9.90 |
| 2. ಮಂಡ್ಯ ಪಟ್ಟಣದಲ್ಲಿ ಹಳೆ ಮದ್ರಾಸ್-ಕಣ್ಣಾನೂರು ರಸ್ತೆ | 7.00 |
| 3. ವಾಗ್ದಾರಿ-ರಿಬ್ಬನಪಲ್ಲಿ ರಸ್ತೆ | 6.00 |
| 4. ಸದಲಗಾ ದತ್ತವಾಡ ರಸ್ತೆಯಲ್ಲಿನ ಸೇತುವೆಗೆ ಕೂಡು ರಸ್ತೆ ನಿರ್ಮಾಣ | 6.00 |

ಆ) ಈ ಕಾಮಗಾರಿಗಾಗಿ ಮಾಡಲಾದ ಒಟ್ಟು ವೆಚ್ಚ:

| ರಸ್ತೆಯ ಹೆಸರು | ವೆಚ್ಚ (ರೂ. ಕೋಟಿಗಳಲ್ಲಿ) |
|---|---|
| 1. ಗುಲ್ಬರ್ಗಾ ನಗರಕ್ಕೆ ವರ್ತುಲ ರಸ್ತೆ (1ನೇ ಹಂತ) | 13.99 |
| 2. ಮಂಡ್ಯ ಪಟ್ಟಣದಲ್ಲಿ ಹಳೆ ಮದ್ರಾಸ್-ಕಣ್ಣಾನೂರು ರಸ್ತೆ | 4.30 |
| 3. ವಾಗ್ದಾರಿ-ರಿಬ್ಬನಪಲ್ಲಿ ರಸ್ತೆ | 2.40 |
| 4. ಸದಲಗಾ ದತ್ತವಾಡ ರಸ್ತೆಯಲ್ಲಿನ ಸೇತುವೆಗೆ ಕೂಡು ರಸ್ತೆ ನಿರ್ಮಾಣ | 0.99 |

ಇ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ನಿರ್ಮಾಣಗೊಳ್ಳುತ್ತಿರುವ ರಸ್ತೆಗಳ ವಿವರಗಳು:

1. ಜೇವರಗಿ-ವಿಜಾಪುರ ರಾಜ್ಯ ಹೆದ್ದಾರಿ – 119.00 ಕಿಮೀ.
2. ಬಿಳಿಕೆರೆ-ಬೇಲೂರು ರಾಜ್ಯ ಹೆದ್ದಾರಿ – 119.00 ಕಿಮೀ.
3. ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿ – 111.00 ಕಿಮೀ. ಯನ್ನು ನಾಲ್ಕು ಪಥಗಳ ರಸ್ತೆಯನ್ನಾಗಿ ಪರಿವರ್ತಿಸುವುದು
4. ಗುಲ್ಬರ್ಗಾ ವರ್ತುಲ ರಸ್ತೆಯ 2ನೇ ಹಂತದ ನಿರ್ಮಾಣ – 4.70 ಕಿಮೀ
5. ವಾಡಿ-ರಾಯಚೂರು ರಸ್ತೆ – 88.00 ಕಿಮೀ.
6. ಗದಗ-ರೋಣ-ಬಾದಾಮಿ ರಸ್ತೆ – 72.40 ಕಿಮೀ
7. ತಮಿಳುನಾಡು-ಆಂಧ್ರಪ್ರದೇಶ ಗಡಿರಸ್ತೆ – 30.00 ಕಿಮೀ

ಈ) ನಿರ್ಮಾಣಗೊಳ್ಳುತ್ತಿರುವ ರಸ್ತೆಯ ಪ್ರಗತಿಯ ವಿವರ ಕೆಳಗಿನಂತಿದೆ

1. ಜೇವರಗಿ-ವಿಜಾಪುರ ರಸ್ತೆಯನ್ನು ನಾಲ್ಕು ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದ್ದು, ಜೇವರಿಗಿಯಿಂದ ಮೊರಟಗಿವರೆಗಿನ ಮೊದಲನೇ ಪ್ಯಾಕೇಜಿನ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು, ಬಾಕಿ ಮೂರು ಪ್ಯಾಕೇಜಿನ ಕಾರ್ಯಗಳು ಪ್ರಗತಿಯಲ್ಲಿವೆ.

2. ಬಿಳಿಕೆರೆ–ಬೇಲೂರು ರಸ್ತೆಯನ್ನು ನಾಲ್ಕು ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದ್ದು, ಬೇರ್ಯಾದಿಂದ ಹಾಸನದವರೆಗಿನ ಪ್ಯಾಕೇಜ್–2ರ ಕಾರ್ಯ ಮುಕ್ತಾಯದ ಹಂತದಲ್ಲಿದ್ದು, ಬಾಕಿ ಎರಡು ಪ್ಯಾಕೇಜುಗಳಾದ ಬಿಳಿಕೆರೆಯಿಂದ ಬೇರ್ಯಾವರೆಗೆ (ಬಿ.ಬಿ. 1) ಮತ್ತು ಹಾಸನದಿಂದ–ಬೇಲೂರುವರೆಗಿನ (ಬಿ.ಬಿ.3) ಗಳ ಕಾರ್ಯ ಪ್ರಗತಿಯಲ್ಲಿದ್ದು, ಬಿ.ಬಿ. 4 ಪ್ಯಾಕೇಜಿನಲ್ಲಿನ ಕಾವೇರಿ ಮತ್ತು ಲಕ್ಷ್ಮಣತೀರ್ಥ ನದಿಗಳಿಗೆ ಸೇತುವೆಗಳ ನಿರ್ಮಾಣಕ್ಕಾಗಿ ಗುತ್ತಿಗೆ ಕರೆಯಬೇಕಾಗಿದೆ.

3. ಬೆಂಗಳೂರು–ಮೈಸೂರು ನಾಲ್ಕು ಪಥದ ರಸ್ತೆ ಕಾರ್ಯವು ಪ್ರಗತಿಯಲ್ಲಿದೆ.

4. ಗುಲ್ಬರ್ಗಾ ವರ್ತುಲ ರಸ್ತೆಯ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ.

5. ವಾಡಿ–ರಾಯಚೂರು ರಸ್ತೆಯ ಕಾರ್ಯವು ಪ್ರಗತಿಯಲ್ಲಿದೆ

6. ಗದಗ–ರೋಣ ಬಾದಾಮಿ ರಸ್ತೆಯ ಕಾರ್ಯವು ಪ್ರಗತಿಯಲ್ಲಿದೆ

7. ತಮಿಳುನಾಡು–ಆಂಧ್ರಪ್ರದೇಶ ಗಡಿ ರಸ್ತೆಯ ಕಾರ್ಯವು ಪ್ರಗತಿಯಲ್ಲಿದೆ.

598(462) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಭದ್ರಾ ನದಿಗೆ ಮುಂಡರಗಿ ತಾಲ್ಲೂಕ ಕೋರ್ಲಹಳ್ಳಿ ಬಳಿ ನಿರ್ಮಿಸಲಾಗಿರುವ ಸೇತುವೆ ಪೂರ್ಣಗೊಂಡಿದ್ದು ಕೋರ್ಲಹಳ್ಳಿ–ಗದಗ ಸಂಪರ್ಕ ರಸ್ತೆ ಕೋರ್ಲಹಳ್ಳಿ–ಹಡಗಲಿ ಸಂಪರ್ಕ ರಸ್ತೆ ಅಭಿವೃದ್ಧಿಪಡಿಸಲು ಸರ್ಕಾರ ಕ್ರಮಕೊಳ್ಳುವುದೇ;

ಆ) ಈ ಸೇತುವೆಯ ಪೂರ್ಣ ಪ್ರಯೋಜನವಾಗಲು ಸೊಲ್ಲಾಪುರ–ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿಗೆ ಸೇತುವೆಯಿಂದ ರಸ್ತೆ ಸಂಪರ್ಕವನ್ನು ಕಲ್ಪಿಸಲು ಕ್ರಮಕೈಗೊಂಡಿದೆಯೇ;

ಇ) ಇಲ್ಲವಾದಲ್ಲಿ ಯಾವಾಗ ಈ ಕಾರ್ಯ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೋರ್ಲಹಳ್ಳಿ ಹಡಗಲಿ ರಸ್ತೆಯು ಅರಭಾವಿ ಚಳ್ಳಕೆರೆ ರಾಜ್ಯ ಹೆದ್ದಾರಿ 45ರ ಭಾಗವಾಗಿದ್ದು 11.20 ಕಿಮೀ ಉದ್ದವಿರುತ್ತದೆ. ಸದರಿ ರಸ್ತೆಯ ಸುಧಾರಣೆ ಕಾಮಗಾರಿಯನ್ನು ಬಳ್ಳಾರಿ ವಿಶೇಷ ಅಭಿವೃದ್ಧಿ ಯೋಜನೆ ಹಂತ–1ರ ಅಡಿಯಲ್ಲಿ ರೂ.42.00 ಲಕ್ಷ ಹಾಗೂ ಹಂತ–3ರಲ್ಲಿ ರೂ.22.00 ಲಕ್ಷಕ್ಕೆ ಕೈಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಕೋರ್ಲಹಳ್ಳಿಯಿಂದ ಗದಗವರೆಗಿನ ಸಂಪರ್ಕ ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಸದ್ಯಕ್ಕೆ ಪ್ರಸ್ತಾವನೆ ಇರುವುದಿಲ್ಲ.

ಆ) ಸರ್ಕಾರಿ ಆದೇಶ ಸಂ: ಲೊಇ–15 ಮಾತಂಕೊ–2003 ಬೆಂಗಳೂರು ದಿನಾಂಕ 18–5–2004ರಲ್ಲಿ ಆರಭಾವಿ–ಚಳ್ಳಕೆರೆ ರಾಜ್ಯ ಹೆದ್ದಾರಿ 45 ಎಂದು (ಗೋಕಾಕ, ನರಗುಂದ, ಶಲವಡಿ, ಶಿರಹಟ್ಟಿ, ಮುಂಡರಗಿ, ಹಡಗಲಿ, ಮೈಲಾರ ಇಟಗಿ, ಉಜ್ಜನಿ, ಜಗಳೂರು ಮೂಲಕ ಚಳ್ಳಕೆರೆ) ಮೇಲ್ದರ್ಜೆಗೇರಿಸಲಾಗಿದೆ. ಈ

ರಸ್ತೆಯು ಪ್ರಸ್ತಾಪಿಸಲಾದ ಸೇತುವೆಯ ಮೂಲಕ ಸೋಲಾಪುರ ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ 13ನ್ನು ಸೇರುತ್ತದೆ. ಸದರಿ ರಾಜ್ಯ ಹೆದ್ದಾರಿ 45ನ್ನು ಹಂತ ಹಂತವಾಗಿ ಅನುದಾನದ ಲಭ್ಯತೆಗನುಗುಣವಾಗಿ ಅಭಿವೃದ್ಧಿಪಡಿಸಲಾಗುವುದು.

ಇ) ಅನುದಾನದ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಈ ರಸ್ತೆಯ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದು.

599(794) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣಾ ನದಿ ಕಣಿವೆಯಲ್ಲಿ ಬಚಾವತ್ ಐತೀರ್ಪಿನಂತೆ ಹಂಚಿಕೆಯಾದ ರಾಜ್ಯದ ಪಾಲಿನ ನೀರಿನ ಬಳಕೆಗೆ ವ್ಯವಸ್ಥೆ ಆಗಿದೆಯೇ;

ಆ) ಕೃಷ್ಣಾ ಕಣಿವೆಯಲ್ಲಿ ಬಹು ಕಾಲದಿಂದ ಪೂರ್ಣಗೊಳ್ಳದಿರುವ ಯೋಜನೆಗಳನ್ನು ಸರ್ಕಾರ 2005ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವುದೇ;

ಇ) ಪೂರ್ಣಗೊಳಿಸುವುದಾದರೆ ಅದಕ್ಕೆ ಹಣಕಾಸು ವ್ಯವಸ್ಥೆ ಮಾಡಲಾಗಿದೆಯೇ;

ಈ) ಕೇಂದ್ರ ಸರ್ಕಾರ ನೇಮಕ ಮಾಡಿರುವ ಕೃಷ್ಣಾ ನದಿ ಕಣಿವೆಯಲ್ಲಿ ಹೆಚ್ಚುವರಿ ನೀರಿನ ಹಂಚಿಕೆ ಕುರಿತು ಆಯೋಗಕ್ಕೆ ನೀಡಲಾಗಿರುವ ಪರ್ಯಾಲೋಚಿಸಬೇಕಾದ ವಿಷಯಗಳಲ್ಲಿ ರಾಜ್ಯದ ಹಿತಕ್ಕೆ ಧಕ್ಕೆಯನ್ನುಂಟು ಮಾಡುವ ಅಂಶಗಳಿವೆಯೇ;

ಉ) ಇದ್ದಲ್ಲಿ, ಇದನ್ನು ಬದಲಾಯಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಳಸಿಕೊಳ್ಳಲು ವ್ಯವಸ್ಥೆ ಮಾಡಲಾಗುತ್ತಿದೆ.

ಆ) 29 ಯೋಜನೆಗಳು ಈಗಾಗಲೇ ಪೂರ್ಣಗೊಂಡಿವೆ, ಇನ್ನು 12 ಯೋಜನೆಗಳನ್ನು 2005ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಉಳಿದ 20 ಯೋಜನೆಗಳನ್ನು 2007ರ ನಂತರ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಇ) ನಿಗಮಗಳ ವತಿಯಿಂದ ಹಾಗೂ ಎ.ಐ.ಬಿ.ಪಿ. ರಡಿಯಲ್ಲಿ ಕೇಂದ್ರ ಸರ್ಕಾರದ ಧನ ಸಹಾಯದ ಮೂಲಕ ಹಣಕಾಸು ಒದಗಿಸಿಕೊಳ್ಳಲು ವ್ಯವಸ್ಥೆ ಮಾಡಲಾಗುತ್ತಿದೆ.

ಈ) ದಿನಾಂಕ 24/2004ರ ಕೇಂದ್ರ ಸರ್ಕಾರದ ಅಧಿಸೂಚನೆಯಂತೆ ಕೃಷ್ಣಾ ಜಲ ವಿವಾದ್ ಮಂಡಳಿ ರಚನೆಯಾಗಿದ್ದು, ಈ ಮಂಡಳಿಯು ಪರಿಯಾಲೋಚಿಸಬೇಕಾಗಿರುವ ವಿಷಯಗಳನ್ನು ಕೇಂದ್ರ ಸರ್ಕಾರವು ನ್ಯಾಯಾಧಿಕರಣಕ್ಕೆ ಸಲ್ಲಿಸಿರುವ ಬಗ್ಗೆ ಮಾಹಿತಿ ಇರುವುದಿಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

600(782) : ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಜಿಲ್ಲೆಯ ಹುಲಿಗುಡ್ಡ ಏತ ನೀರಾವರಿ ಯೋಜನೆಗೆ ಈಗಾಗಲೇ ಖರ್ಚಾದ ಹಣವೆಷ್ಟು;

ಆ) ಯೋಜನೆ ಪೂರ್ಣಗೊಳಿಸಲು ಈ ವರ್ಷ ಬಜೆಟ್‌ನಲ್ಲಿ ಎಷ್ಟು ಹಣ ಒದಗಿಸಲಾಗಿದೆ;

ಇ) ಕಾಮಗಾರಿಯನ್ನು ಪೂರ್ಣಗೊಳಿಸಿ ರೈತರಿಗೆ ನೀರು ಒದಗಿಸಲು ಕಾಲಮಿತಿ ಏನಾದರೂ ಹಾಕಿಕೊಂಡಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಸಿಂಗಟಾಲೂರು-ಹುಲಿಗುಡ್ಡ ಏತ ನೀರಾವರಿ ಯೋಜನೆಗೆ ಜೂನ್ 2004ರ ಅಂತ್ಯದ ವರೆಗೆ ರೂ.2729.16 ಲಕ್ಷ ಮೊತ್ತವನ್ನು ವೆಚ್ಚ ಮಾಡಲಾಗಿದೆ.

ಆ) 2004-05ನೇ ಸಾಲಿನಲ್ಲಿ ಸದರಿ ಯೋಜನೆಗೆ ರೂ.1800 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಇ) ಸದರಿ ಯೋಜನೆಯನ್ನು ಮಾರ್ಚ್ 2007ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

601(783) : ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೆದ್ದಾರಿ ಸಂಖ್ಯೆ 63ರ ಗದಗ ಜಿಲ್ಲೆ ಗದಗ ತಾಲ್ಲೂಕು ಅಡವಿ ಸೋಮಾಪುರದಿಂದ ಮುಂಡರಗಿ-ಕೊರ್ಲಹಳ್ಳಿ-ಹಡಗಲಿ-ಇಟಗಿ-ಕೊಟ್ಟೂರು-ಉಜ್ಜಯಿನಿ-ಜಗಳೂರು ಮಾರ್ಗವಾಗಿ ಹೆದ್ದಾರಿ ಸಂಖ್ಯೆ 13ರವರೆಗೆ ಇದ್ದ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಆಗಿ ಪರಿವರ್ತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಸದ್ಯಕ್ಕೆ ಪ್ರಸ್ತಾವನೆ ಇರುವುದಿಲ್ಲ. ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಗಳನ್ವಯ ಪರಿಶೀಲಿಸಿ ಸೂಕ್ತವಾದಲ್ಲಿ ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

602(784) : ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕು ಡೋಣಿ ಗ್ರಾಮದ ಹತ್ತಿರ ಕಟ್ಟುತ್ತಿರುವ ಹದ್ದಿನಬಂಡಿ ಬಾಂದಾರದ ಯೋಜನೆಯ ಅಂದಾಜು ವೆಚ್ಚ ಎಷ್ಟು;

ಆ) ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗಿದೆ ಹಾಗೂ ಸದರಿ ಯೋಜನೆ ಮುಗಿಯಲು ಇದ್ದ ಅವಧಿ ಎಷ್ಟು;

ಇ) ಇನ್ನೂ ಮುಗಿಯದಿರಲು ಕಾರಣಗಳೇನು;

ಈ) ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 28.95 ಲಕ್ಷ ರೂ.ಗಳು

ಆ) ದಿನಾಂಕ 1-9-2000ರಂದು ಪ್ರಾರಂಭಿಸಲಾಗಿದೆ. ಈ ಕಾಮಗಾರಿಯನ್ನು ಮುಗಿಸಲು 4 ತಿಂಗಳ ಕಾಲಾವಧಿ ಕೊಡಲಾಗಿದೆ.

ಇ) ಗುತ್ತಿಗೆದಾರರಿಗೆ ಕಾಮಗಾರಿಯ ಹಣ ಸಂದಾಯವಾಗದ ಕಾರಣ ಕಾಮಗಾರಿಯನ್ನು ಟೆಂಡರಿನಲ್ಲಿ ನಿಗದಿಪಡಿಸಿದ ಅವಧಿಯಲ್ಲಿ ಮುಗಿಸಿರುವುದಿಲ್ಲ.

ಈ) ಅನುದಾನದ ಲಭ್ಯತೆ ಮೇಲೆ ಪೂರ್ಣಗೊಳಿಸಲಾಗುವುದು.

603(785) : ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ದುರಸ್ತಿಗಾಗಿ ಪ್ರತಿ ಕಿಲೋ ಮೀಟರ್‌ಗೆ ಎಷ್ಟು ಹಣ ಒದಗಿಸಲಾಗಿದೆ;

ಆ) ಮುಂಡರಗಿ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳೆಷ್ಟು; (ಕಿಲೋ ಮೀಟರ್ ವಿವರ ನೀಡುವುದು);

ಇ) ಸದರಿ ರಸ್ತೆಗಳು ಹಾಳಾಗಿದ್ದು, ಅವುಗಳನ್ನು ದುರಸ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣಗಳೇನು;

ಈ) ಕೂಡಲೇ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಗೆ ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಉಳಿದ ರಾಜ್ಯ ಹೆದ್ದಾರಿಗಳ ನಿರ್ವಹಣೆಗೆ ಪ್ರತಿ ಕಿಮೀ ರೂ. 10,000ದಂತೆ ದುರಸ್ತಿಗಾಗಿ 2003-04ನೇ ಸಾಲಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ಮುಂಡರಗಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳ ವಿವರ ಈ ಕೆಳಗಿನಂತೆ ಇದೆ.

| | ಸಂಖ್ಯೆ | ಉದ್ದ |
|---|---|---|
| ರಾಜ್ಯ ಹೆದ್ದಾರಿ | 2 | 72.69 ಕಿಮೀ |
| ಜಿಲ್ಲಾ ಮುಖ್ಯ ರಸ್ತೆ | 7 | 116.31 ಕಿಮೀ |
| **ಒಟ್ಟು** | **9** | **189.00 ಕಿಮೀ** |

ಇ,ಈ) ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದು ಇದಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ ಹಾಗೂ ಈ ಕಾರ್ಯಕ್ರಮವನ್ನು ಸಧ್ಯದಲ್ಲಿ ಪೂರ್ಣಗೊಳಿಸಿ ಸುಸ್ಥಿತಿಯಲ್ಲಿ ಇಡಲಾಗುವುದು.

604(786) : ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕೊರ್ಲಹಳ್ಳಿ ಬಳಿ ಸೇತುವೆ ನಿರ್ಮಾಣ ಮಾಡುವುದರಿಂದ ಗದಗ-ಮುಂಡರಗಿ-ಹಡಗಲಿ ಮಾರ್ಗವಾಗಿ ಬೆಂಗಳೂರಿಗೆ ಹೋಗಲು ಎಷ್ಟು ಕಿಲೋಮೀಟರ್ ಉಳಿತಾಯವಾಗಿದೆ;

ಆ) ಸದರಿ ಸೇತುವೆ ಆದ ನಂತರ ವಾಹನಗಳ ಸಂಚಾರ ಹೆಚ್ಚಾಗಿರುವುದು ನಿಜವೇ;

ಇ) ಗದಗ ತಾಲ್ಲೂಕು ಅಡವಿ ಸೋಮಾಪುರದಿಂದ ಮುಂಡರಗಿ ತಾಲ್ಲೂಕು ಹಮ್ಮಿಗೆ–ವಿಠಲಾಪುರವರೆಗಿನ ಹೆದ್ದಾರಿ ಸಂಖ್ಯೆ 63ರ ರಸ್ತೆಯನ್ನು ಸುಧಾರಿಸಲು ಸಿ.ಆರ್.ಎಫ್. ಅಡಿಯಲ್ಲಿ ತರಲಾಗುವುದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ತುಂಗಭದ್ರಾ ಸೇತುವೆ ನಿರ್ಮಾಣದ ಮೊದಲು ಗದಗದಿಂದ ಮುಂಡರಗಿ ಹಡಗಲಿ ಮುಖಾಂತರ ಬೆಂಗಳೂರಿಗೆ ಹೋಗಲು 428 ಕಿಮೀ ಆಗುತ್ತಿದ್ದು, ಸೇತುವೆ ನಿರ್ಮಾಣದ ನಂತರ ಈ ದೂರವು 377 ಕಿಮೀ ಆಗಿರುತ್ತದೆ. ಇದರಿಂದ 51 ಕಿಮೀ ಉಳಿತಾಯವಾಗಿರುತ್ತದೆ.

ಆ) ಸದರಿ ಸೇತುವೆ ಆದ ನಂತರ ವಾಹನಗಳ ಸಂಚಾರವು ಹೆಚ್ಚಿಗೆ ಆಗಿರುವುದು ನಿಜ.

ಇ) ಈ ರಸ್ತೆಯನ್ನು ಕೇಂದ್ರ ರಸ್ತೆ ನಿಧಿಯಡಿ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

605(467) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಯಾವ ಯಾವ ನದಿಗಳಿಗೆ ಸೇತುವೆ ನಿರ್ಮಾಣ ಮಾಡುವ ಕ್ರಿಯಾ ಯೋಜನೆಯನ್ನು ಸರ್ಕಾರ ಸಿದ್ಧಪಡಿಸಿದೆ;

ಆ) 2004–05ನೇ ಸಾಲಿನಲ್ಲಿ ಯಾವ ಯಾವ ಯೋಜನೆಯಲ್ಲಿ ಎಷ್ಟು ಸೇತುವೆಗಳನ್ನು ನಿರ್ಮಿಸಿಕೊಡುವ ಸರ್ಕಾರದ ಮುಂದಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸೇತುವೆಗಳ ನಿರ್ಮಾಣಕ್ಕೆ ಪ್ರಸ್ತುತ ಯಾವುದೇ ಕ್ರಿಯಾ ಯೋಜನೆಯನ್ನು ರೂಪಿಸಲಾಗಿರುವುದಿಲ್ಲ.

ಆ) ಸಧ್ಯದಲ್ಲಿ ನಬಾರ್ಡ್ ಯೋಜನೆಯಡಿ 2003–04ನೇ ಸಾಲಿನಲ್ಲಿ ಗುರುತಿಸಲಾಗಿದ್ದ ವೇಣೂರು ಪೆರ್ಮುಡ ರಸ್ತೆಯಲ್ಲಿನ ಪೆರ್ಮುಡ ಹತ್ತಿರ ಸೇತುವೆ ನಿರ್ಮಾಣ ಕಾಮಗಾರಿಯ ಅಂದಾಜನ್ನು ರೂ. 70.00 ಲಕ್ಷಗಳಿಗೆ ನಬಾರ್ಡನ ಅನುಮೋದನೆಗೆ ಕಳುಹಿಸಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ. ನಬಾರ್ಡನಿಂದ ಅನುಮೋದನೆ ದೊರೆತನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

606(471) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ಯಾವ ಯಾವ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಗಳು ಬಂದಿವೆ;

ಆ) ಇಲಾಖಾ ವತಿಯಿಂದ 2004–05ನೇ ಸಾಲಿಗೆ ಎಷ್ಟು ಕಿ.ಮೀ. ರಸ್ತೆಗಳನ್ನು ಡಾಂಬರೀಕರಣಗೊಳಿಸಲು ಯೋಜಿಸಲಾಗಿದೆ? (ವಿವರ ನೀಡುವುದು)

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಸ್ತೆಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ. ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ.

ಆ) ಅನುದಾನದ ಲಭ್ಯತೆಯ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಅನುಬಂಧ-1

(ರಸ್ತೆಗಳ ವಿವರಗಳು)

ವಿಧಾನಸಭೆಯ ಸದಸ್ಯರಾದ ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ರವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 471ಕ್ಕೆ ಪೂರಕ ಟಿಪ್ಪಣಿ:

ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ ವ್ಯಾಪ್ತಿಯಲ್ಲಿ ಬರುವ ಬೆಳ್ತಂಗಡಿ ತಾಲ್ಲೂಕಿನ ಈ ಕೆಳಕಂಡ ರಸ್ತೆಗಳನ್ನು ಕೇಂದ್ರ ನಿಧಿ ಯೋಜನೆಯಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಹಂತದಲ್ಲಿದೆ.

1. ಬೆಳ್ತಂಗಡಿ ತಾಲ್ಲೂಕಿನ ಕಡೂರು ಬಂಟ್ವಾಳ ಈಗ ಪುನರ್ ನಾಮಕರಣಗೊಂಡಂತೆ ಕಡೂರು ಕಾಂಞಗಡ್ ರಸ್ತೆ ಕಿಮೀ 99.27 ರಿಂದ 110.00 ಕಿಮೀ ವರೆಗೆ ಚಾರ್ಮುಡಿ ಘಾಟ್ ಪ್ರದೇಶವನ್ನು ಅಭಿವೃದ್ಧಿಪಡಿಸುವುದು. ಅಂದಾಜು ಮೊತ್ತ ರೂ. 100.00 ಲಕ್ಷ.

2 ಬೆಳ್ತಂಗಡಿ ತಾಲ್ಲೂಕು ವೇಣೂರು-ಅಂಡಿಂಜೆ-ಮಾರಾವಿ ರಸ್ತೆ ಕಿಮೀ 0.00 ರಿಂದ 15.00 ಕಿಮೀ ವರೆಗೆ ಅಭಿವೃದ್ಧಿಪಡಿಸುವುದು ಅಂದಾಜು ಮೊತ್ತ ರೂ. 150.00 ಲಕ್ಷ

3. ಬೆಳ್ತಂಗಡಿ ತಾಲ್ಲೂಕು ಕಿಲ್ಲೂರು ಕಾಜೂರು ರಸ್ತೆ ಕಿಮೀ 0.00 ರಿಂದ 17.60 ವರೆಗೆ ಅಭಿವೃದ್ಧಿಪಡಿಸುವುದು ಅಂದಾಜು ಮೊತ್ತ ರೂ. 140.00 ಲಕ್ಷ.

4. ಬೆಳ್ತಂಗಡಿ ತಾಲ್ಲೂಕು ಅಜೇಕರ್ ಮಿಯಾರು ನಾರಾವಿ ಗುರುವಾಯನಕೆರೆ-ಉಪ್ಪಿನಂಗಡಿ ರಸ್ತೆಯನ್ನು ಅಭಿವೃದ್ಧಿಪಡಿಸುವುದು ಅಂದಾಜು ಮೊತ್ತ ರೂ. 181.00 ಲಕ್ಷ.

607(473) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿಯಾದ ಕಡೂರು-ಬಂಟ್ವಾಳ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ : ಯೋಜನೆ ಸರ್ಕಾರದ ಮುಂದೆ ಇದೆಯೆ;

ಆ) ಹಾಗಿದ್ದಲ್ಲಿ ಈ ಪ್ರಸ್ತಾವಿತ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ತೀರ್ಮಾನ ಹಾಗೂ ಅನುಷ್ಠಾನಕ್ಕೆ ಈವರೆಗೆ ಕೈಗೊಂಡಿರುವ ಕ್ರಮಗಳೇನು;

ಇ) ಸರ್ಕಾರವು ಹಾನಿಗೀಡಾದ ಈ ರಸ್ತೆಗಳ ದುರಸ್ತಿ ಸೇರಿದಂತೆ ಚಾರ್ಮುಡಿ ಘಾಟಿಯ ರಸ್ತೆ ಮತ್ತು ಹಿಮ್ಮುರಿ ತಿರುವುಗಳ ದುರಸ್ತಿ ಹಾಗೂ ಪುನರ್ ನಿರ್ಮಾಣ ಕಾರ್ಯಕ್ಕೆ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿಯಾದ ಬಂಟ್ವಾಳದಿಂದ ಚಿಕ್ಕಮಗಳೂರುವರೆಗಿನ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು 1988ರಲ್ಲಿ ರಾಜ್ಯ ಸರ್ಕಾರದಿಂದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಆ) ಈ ವಿಷಯವು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಚಾರ್ಮಾಡಿ ಘಾಟ್ ರಸ್ತೆ ಕೆಲವು ಅತ್ಯವಶ್ಯಕ ಭಾಗಗಳಲ್ಲಿ ಗೈಡ್‌ವಾಲ್, ಮೋರಿಗಳು ಮತ್ತು ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ಅನುದಾನದ ಲಭ್ಯತೆಯನ್ನಾದರಿಸಿ ಕ್ರಮವನ್ನು ಕೈಗೊಳ್ಳಲಾಗುವುದು.

ಇದಲ್ಲದೆ ಕೆ.ಆರ್.ಡಿ.ಸಿ.ಎಲ್. ಅಡಿಯಲ್ಲಿ ಚಾರ್ಮಾಡಿ ಘಾಟ್ ರಸ್ತೆಯಲ್ಲಿ (ಈಗ ಕಡೂರು–ಕಾಯಿನಿಂಗಡೆ ರಾಜ್ಯ ಹೆದ್ದಾರಿ) 2 ಕಿಮೀಗಳ ಡಾಂಬರೀಕರಣ ಮಾಡುವ ಕೆಲಸ ಬಾಕಿ ಇದ್ದು, ಮಳೆಯ ಕಾರಣ ಕಾಮಗಾರಿ ಸ್ಥಗಿತಗೊಂಡಿದ್ದು ಮಳೆಗಾಲದ ನಂತರ ಕಾಮಗಾರಿ ಮುಗಿಸಲಾಗುವುದು. (ರೂ. 301.00 ಲಕ್ಷ ಕಡೂರು–ಬಂಟ್ವಾಳ ಟೆಂಡರ್ ಕಾಮಗಾರಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಅಡಿಯಲ್ಲಿ (50 ಕಿಮೀ ಉದ್ದ)

608(475) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ಕ್ಷೇತ್ರದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಪ್ರಸ್ತುತ ನೀಡುತ್ತಿರುವ ವಿದ್ಯುತ್ ಸೌಲಭ್ಯದ ಅವಧಿಯೆಷ್ಟು; (ವಿವರಗಳನ್ನು ನೀಡುವುದು)

ಆ) ಈ ರೀತಿಯ "ಲೋಡ್ ಶೆಡ್ಡಿಂಗ್" ನಿಂದಾಗಿ ಕುಡಿಯುವ ನೀರಿನ ಪೂರೈಕೆಗೆ ತೊಂದರೆ ಆಗಿರುವುದನ್ನು ಸರ್ಕಾರ ಗಮನಿಸಿದೆಯೇ;

ಇ) ಗಮನಿಸಿದ್ದಲ್ಲಿ, ಸರ್ಕಾರ ಆ ಬಗ್ಗೆ ಕೈಗೊಂಡ ಪರಿಹಾರ ಕ್ರಮಗಳೇನು;

ಈ) ಸಣ್ಣ ಕೈಗಾರಿಕಾ ವಲಯಕ್ಕೂ ಕೂಡ "3 ಫೇಸ್" ವಿದ್ಯುತ್ ನಿಲುಗಡೆಯ ಸಂದರ್ಭಧಲ್ಲಿ ಸಿಂಗಲ್ ಫೇಸ್ ವಿದ್ಯುತ್ ಕೊಡಲು ಕ್ರಮ ಜರುಗಿಸಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳ್ತಂಗಡಿ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಿಗೆ ದಿನಾಂಕ 19–6–2004 ರಿಂದ 20 ಗಂಟೆಗಳ ಅವಧಿಗೆ 3 ಫೇಸ್ ಮತ್ತು 4 ಗಂಟೆಗಳ ಅವಧಿಗೆ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಆ) 20 ಗಂಟೆಗಳ ಅವಧಿಗೆ 3 ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿರುವುದರಿಂದ, ಕುಡಿಯುವ ನೀರಿನ ಪೂರೈಕೆಗೆ ಯಾವುದೇ ತೊಂದರೆಯಾಗುವ ಸಂಭವವಿಲ್ಲ.

ಇ) ಇದು ಉದ್ಭವಿಸುವುದಿಲ್ಲ.

ಈ) ಗ್ರಾಮೀಣ ಪ್ರದೇಶದಲ್ಲಿ 3 ಫೇಸ್ ವಿದ್ಯುತ್ ನಿಲುಗಡೆಯ ಸಮಯದಲ್ಲಿ ಗ್ರಾಮ ಜ್ಯೋತಿ ಯೋಜನೆಯಲ್ಲಿ ಗೃಹ ವಿದ್ಯುತ್ ಬಳಕೆದಾರರಿಗೆ ಒಂದು ಫೇಸ್ ವಿದ್ಯುತ್ ಕೊಡಲಾಗುವುದು. 10 ಹೆಚ್.ಪಿ. ವರೆಗೂ ಒಂದು ಫೇಸ್ ಮೋಟಾರ್ ಇರುವ ಸಣ್ಣ ಕೈಗಾರಿಕೆಗಳೂ ಸಹ 24 ತಾಸು ಈ ಯೋಜನೆಯಡಿಯಲ್ಲಿ ವಿದ್ಯುತ್ ಹೊಂದುವರು. ಈ ಯೋಜನೆ ಪ್ರಾಯೋಗಿಕ ಹಂತದಲ್ಲಿದ್ದು ಇದರ ಸಫಲತೆಯನ್ನು ಅವಲಂಭಿಸಿ ರಾಜ್ಯಾದ್ಯಂತ ಎಲ್ಲ ಕಡೆಯೂ ವಿಸ್ತರಿಸುವ ಯೋಜನೆ ಇದೆ.

609(479) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಉಪ ಗ್ರಾಮ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಎಷ್ಟು ಪ್ರದೇಶಗಳನ್ನು ಗುರುತಿಸಲಾಗಿದೆ;

ಆ) ಈ ಯೋಜನೆಯಡಿಯಲ್ಲಿ ಗುರುತಿಸಲಾದ ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಯಾವ ಸಾಲಿನಲ್ಲಿ ಮಂಜೂರಾತಿಯನ್ನು ನೀಡಲಾಗಿದೆ;

ಇ) ಮಂಜೂರಾತಿ ನೀಡಿ ಇಷ್ಟು ವರ್ಷವಾದರೂ ಈವರೆಗೆ ಈ ಯೋಜನೆಯು ಅನುಷ್ಠಾನಗೊಳ್ಳಲು ಆಗಿರುವ ವಿಳಂಬಕ್ಕೆ ಕಾರಣಗಳೇನು;

ಈ) ಈ ಯೋಜನೆಯನ್ನು ತ್ವರಿತವಾಗಿ ಪ್ರಾರಂಭಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಉಪ ಗ್ರಾಮ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು 225 ಉಪ ಗ್ರಾಮಗಳನ್ನು ಗುರುತಿಸಲಾಗಿದೆ.

ಆ) ಈ ಯೋಜನೆಯು ಗ್ರಾಮೀಣ ವಿದ್ಯುದೀಕರಣ ನಿಗಮ ನಿಯಮಿತ. ನವದೆಹಲಿ ಇವರಿಂದ 1999-2000ನೇ ಸಾಲಿನಲ್ಲಿ ಮಂಜೂರಾಗಿದೆ.

ಇ) ಗ್ರಾಮೀಣ ವಿದ್ಯುದೀಕರಣ ನಿಗಮ ನಿಯಮಿತ, ನವದೆಹಲಿ ಇವರ ಮಂಜೂರಾತಿಯ ನಂತರ, ಫೆಬ್ರವರಿ 2002ರಲ್ಲಿ ಬೆಳ್ತಂಗಡಿ ತಾಲ್ಲೂಕಿನ 87 ಉಪ ಗ್ರಾಮಗಳೂ ಸೇರಿದಂತೆ. ಪುತ್ತೂರು, ಸೂಳ್ಯ ಮತ್ತು ಬಂಟ್ವಾಳ ತಾಲ್ಲೂಕಿನಲ್ಲಿಯ ಉಪ ಗ್ರಾಮಗಳ ವಿದ್ಯುದೀಕರಣಗೊಳಿಸುವ ಕಾಮಗಾರಿಯನ್ನು ಟರ್ನ್‌ಕೀ ಆಧಾರದ ಮೇಲೆ ಮೆಸರ್ಸ್ ಮೈಸೂರು ಲ್ಯಾಂಪ್ ವರ್ಕ್ಸ್. ಬೆಂಗಳೂರು ಇವರಿಗೆ ವಹಿಸಲಾಯಿತು. ಆದರೆ, ಸದರಿ ಗುತ್ತಿಗೆದಾರರು ಪುತ್ತೂರು, ಸೂಳ್ಯ ಮತ್ತು ಬಂಟ್ವಾಳ ತಾಲ್ಲೂಕಿನಲ್ಲಿ ಕಾಮಗಾರಿಗಳನ್ನು ಜಾರಿಗೊಳಿಸಿದರು. ಬೆಳ್ತಂಗಡಿ ತಾಲ್ಲೂಕಿನ ಉಪ ಗ್ರಾಮಗಳಲ್ಲಿ ವಿದ್ಯುದೀಕರಣ ಕಾಮಗಾರಿಯನ್ನು ಪ್ರಾರಂಭಿಸಲು ಒತ್ತಾಯ ಮಾಡಿದರೂ ಸಹಾ ಕೆಲಸವನ್ನು ಪ್ರಾರಂಭಿಸದ ಕಾರಣ ಅವರೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ಸೆಪ್ಟೆಂಬರ್ 2003ರಲ್ಲಿ ರದ್ದು ಮಾಡಲಾಯಿತು. ಪುನ: ಈ 87 ಉಪ ಗ್ರಾಮಗಳನ್ನು ವಿದ್ಯುದೀಕರಣಗೊಳಿಸಲು ಡಿಸೆಂಬರ್

2003ರಲ್ಲಿ ಟೆಂಡರ್‌ಗಳನ್ನು ಕರೆಯಲಾಯಿತು. ಇದಕ್ಕೆ ಒಬ್ಬರು ಮಾತ್ರ ಸದರಿ ವಿದ್ಯುದೀಕರಣ ಕೆಲಸಕ್ಕೆ ಟೆಂಡರ್. ಹಾಕಿದುದರಿಂದ ಅದರ ಅನುಮೋದನೆಯಾಗಲಿಲ್ಲ. 87 ಉಪ ಗ್ರಾಮಗಳನ್ನು 3 ಭಾಗಗಳಾಗಿ ವಿಂಗಡಿಸಿ ಪುನ: ಟೆಂಡರ್‌ಗಳನ್ನು ಕರೆಯಲಾಗಿದ್ದು. ಬಂದಿರುವ ಟೆಂಡರ್‌ಗಳನ್ನು ಪರಿಶೀಲಿಸಲಾಗುತ್ತಿದೆ.

ಈ) ಈ ಕಾಮಗಾರಿಯನ್ನು ಅರ್ಹ ಗುತ್ತಿಗೆದಾರರಿಗೆ ವಹಿಸುವ ಪ್ರಕ್ರಿಯೆಯು ಜಾರಿಯಲ್ಲಿದ್ದು. ಶೀಘ್ರವೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

610(356) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ-ಶ್ರೀರಂಗಪಟ್ಟಣ ರಸ್ತೆ ನಿರ್ಮಾಣವು ಕ.ರಾ.ರ.ಅ.ನಿ. ದಿಂದ ನಿರ್ಮಿಸುತ್ತಿರುವುದು ನಿಜವೆ;

ಆ) ಬೀದರ ಜಿಲ್ಲೆಯ ಹುಮನಾಬಾದ-ಬೀದರ ರಸ್ತೆಯು ಬಹಳಷ್ಟು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ರಸ್ತೆಯ ದುರಸ್ತಿಗಾಗಿ ಬಾಲ್ಕಿಯಿಂದ ಬ್ಯಾಲಹಳ್ಳಿ ಗ್ರಾಮದ ಹತ್ತಿರ ಜನರು ಸತ್ಯಾಗ್ರಹ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ ಮತ್ತು ಕೈಗೊಳ್ಳಲಿರುವ ಕ್ರಮಗಳಾವುವು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೀದರ್-ಶ್ರೀರಂಗಪಟ್ಟಣ ರಸ್ತೆ ನಿರ್ಮಾಣವನ್ನು ವಿಶ್ವಬ್ಯಾಂಕ್ ನೆರವಿನಡಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ (ಕ.ರಾ.ಹೆ.ಅ.ಯೋ) ತೆಗೆದುಕೊಳ್ಳಲಾಗಿದೆ.

ಆ) ಹುಮ್ನಾಬಾದ್-ಬೀದರ್ ರಸ್ತೆಯ ಕೆಲವು ಭಾಗಗಳು ಕೆಟ್ಟಿದ್ದು, ಇದರಲ್ಲಿ ಕಿಮೀ. 694.14 ರಿಂದ 694.64 ಬಹಳಷ್ಟು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ರಸ್ತೆಯ ದುರಸ್ತಿಗಾಗಿ ಬ್ಯಾಲಹಳ್ಳಿ ಸ್ಥಳೀಯ ಜನರು ದಿನಾಂಕ 11-6-2004ರಂದು ರಸ್ತೆ ತಡೆ ಮಾಡಿ ಒತ್ತಾಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಟೆಂಡರ್ ಕರಾರಿನ ಪ್ರಕಾರ ಈ ಮೈಲಿಗಲ್ಲು ರಸ್ತೆಯು ಜನವರಿ 2005ರಲ್ಲಿ ತೆಗೆದುಕೊಂಡು ಜನವರಿ 2006ರಲ್ಲಿ ಮುಗಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಅಲ್ಲಿಯವರೆಗೆ, ರಸ್ತೆ ದುರಸ್ತಿ ಮಾಡಲಾಗುತ್ತಿದೆ. ಆದರೆ, ಕಿಮೀ. 694.14 ರಿಂದ 694.64 ಭಾಗದ ರಸ್ತೆಯು ಕಪ್ಪು ಮಣ್ಣಿನ ಭಾಗದಲ್ಲಿ (Black Cotton Soil) ಇದ್ದು ದುರಸ್ತಿ ಮಾಡಿದರೂ ನಿಲ್ಲುವ ಸಾಧ್ಯತೆಯಿಲ್ಲ. ಆದ್ದರಿಂದ ಈ ಕೆಟ್ಟಿರುವ ಭಾಗದ ರಸ್ತೆಯನ್ನು ಗುತ್ತಿಗೆದಾರರಿಂದ ಗುತ್ತಿಗೆ ವಿನ್ಯಾಸಗಳ ಪ್ರಕಾರ ಹೊಸ ರಸ್ತೆಯ ನಿರ್ಮಾಣವನ್ನು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಮುಂದುವರೆದು ಹಾಲಿ ರಸ್ತೆಯ ಉಳಿದ ಆಯ್ದ ಭಾಗಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು.

611(610) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಲ್ಕಿ ತಾಲ್ಲೂಕಿನ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿರುವ ಟಿ.ಸಿ.ಗಳು ಮೇಲಿಂದ ಮೇಲೆ ಸುಡುತ್ತಲಿದ್ದು, ಇದರಿಂದ ಕುಡಿಯುವ ನೀರಿಗೆ ಮತ್ತು ರೈತರ ಹೊಲಗಳಿಗೆ ಬಹಳಷ್ಟು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತೊಂದರೆಗೊಳಗಾದ ಜನರು ಟಿ.ಸಿ. ಸಲುವಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಮುತ್ತಿಗೆ ಹಾಕಿ ಧರಣಿ ನಡೆಸಿರುವುದು ಸರ್ಕಾರದ ಗಮನದಲ್ಲಿದೆಯೇ;

ಇ) ಹಾಗಿದ್ದಲ್ಲಿ, ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ದಿನಾಂಕ 24-7-2004ಕ್ಕೆ ಇದ್ದಂತೆ 84 ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಬೇಕಾಗಿದೆ. ಈ 84 ಟ್ರಾನ್ಸ್‌ಫಾರ್ಮರ್‌ಗಳಲ್ಲಿ 60 ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಿಸಿ ಅಳವಡಿಸಲಾಗಿರುತ್ತದೆ. ಉಳಿದ 24 ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಿ ಶೀಘ್ರದಲ್ಲಿಯೇ ಅಳವಡಿಸಲಾಗುವುದು.

612(611) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಲ್ಕಿ ತಾಲ್ಲೂಕಿನ ಭಾತಂಬ್ರಾ ಗ್ರಾಮದಲ್ಲಿ ಹೊಸ 33 ಕೆ.ವಿ. ಸ್ಟೇಷನ್ ಸ್ಥಾಪನೆ ಮಾಡುವ ಉದ್ದೇಶ ಸರ್ಕಾರದ ಮುಂದೆ ಇದೆಯೆ;

ಆ) ಇದ್ದಲ್ಲಿ, ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

ಇ) ಭಾಲ್ಕಿ ತಾಲ್ಲೂಕಿನಲ್ಲಿ ನಡೆಯುತ್ತಿರುವ "ಪ್ರಧಾನ ಮಂತ್ರಿ ವಿದ್ಯುತೀಕರಣ ಯೋಜನೆ"ಯ ಕಾಮಗಾರಿಗಳು ಯಾವ ಹಂತದಲ್ಲಿವೆ;

ಈ) ಈ ಯೋಜನೆ ಇನ್ನು ಎಷ್ಟು ಸಮಯದಲ್ಲಿ ಪೂರ್ಣ ಮಾಡುವ ಉದ್ದೇಶ ಇದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು. ಭಾಲ್ಕಿ ತಾಲ್ಲೂಕಿನ ಭಾತಂಬ್ರಾ ಗ್ರಾಮದಲ್ಲಿ ಹೊಸ 33/11 ಕೆ.ವಿ. ಸ್ಟೇಷನ್ ಸ್ಥಾಪನೆ ಮಾಡುವ ಉದ್ದೇಶ ಇದೆ.

ಆ) ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಸಲ್ಲಿಸಲು 30 ದಿನಗಳ ಅವಧಿಯ ನೋಟೀಸ್‌ನ್ನು ಸದ್ಯದಲ್ಲೆ ಜಾರಿಗೊಳಿಸಲಾಗುವುದು. ನೋಟೀಸ ಅವಧಿ ಮುಗಿದ ಕೂಡಲೆ ಟೆಂಡರ್‌ಗಳನ್ನು ಕರೆದು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಭಾಲ್ಕಿ ತಾಲ್ಲೂಕಿನಲ್ಲಿ "ಪ್ರಧಾನ ಮಂತ್ರಿ ವಿದ್ಯುದೀಕರಣ ಯೋಜನೆ" ಯಡಿಯಲ್ಲಿ ವಿದ್ಯುದೀಕರಣಕ್ಕಾಗಿ 58 ಗ್ರಾಮಗಳು ಒಳಗೊಂಡಿದ್ದು, ಕಾಮಗಾರಿಗಳ ವಿವರಗಳು ಕೆಳಕಂಡಂತಿವೆ.

ಅ. ವಿದ್ಯುದೀಕರಣ ಕಾಮಗಾರಿಗಳು ಪೂರ್ಣಗೊಂಡ 16 ಗ್ರಾಮಗಳ ವಿವರಗಳು:

1. ಹಾಜನಳ
2. ಎಕಲಾಸಪುರ
3. ಕೊಟಗ್ಯಾಳ
4. ನಾವದಗಿ
5. ಮೊರಂಬಿ
6. ಮಾವಿನಾಳ್ಳಿ
7. ಕಾಪಲಪುರ
8. ಡಾವರಗಾಂವ
9. ಪಂಡರಿ (ಸಾಯಗಾಂವ)
10. ಹಲ್ಕಿ (ಎಲ್)
11. ಸೊನಪುರ
12. ಲಂಜವಾಡಾ
13. ಕೊನ್ನಡಿ
14. ಗುರಪ್ಪಖೆಳಗಿ
15. ಭಟಸಂಗವಿ
16. ಹೋಣಗಾರೂರ್

ಆ. ವಿದ್ಯುದೀಕರಣ ಕಾಮಗಾರಿಗಳು ಪ್ರಗತಿಯಲ್ಲಿರುವ 23 ಗ್ರಾಮಗಳ ವಿವರಗಳು:

1. ಮದಕಟ್ಟಿ
2. ರಾಜನಾಳ
3. ಹೈಸಾಪುರ
4. ಕೆರೂರ್
5. ಹುಪಳಾ
6. ವಳಸಂಗ
7. ಹಲಬರ್ಗಾ
8. ತೆಗಂಪೂರ
9. ಕೂಸು
10. ಬ್ಯಾಲಳ್ಳಿ (ಕೆ)
11. ಜಾಂತಿ
12. ತೆರನಳ್ಳಿ
13. ಹಾಳಗೊಟ್ರ್ಗಾ
14. ಮೇಹಕರ
15. ಕಂಗಟಿ
16. ಜಮಾಂಡಿ
17. ಪಂಜರಖೇಡ
18. ಗುಂಜರ್ಗಾ
19. ಭೊಳೆಗಾಂವ
20. ಕೆಸರ ಜಾವಳಗಾ
21. ಬೀರಿ
22. ಕಳಸದಾಳ
23. ಕೂಜಿ

ಆ. ವಿದ್ಯುದೀಕರಣ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವ 19 ಗ್ರಾಮಗಳ ವಿವರಗಳು:

1. ಸಿದ್ದೇಶ್ವರ (ಜೆ.ಪಿ.)
2. ಕುಂಟೆಸಿರ್ಸಿ (ಹಾಬ)
3. ದಾಡಗಿ (ಅಕಾ)
4. ಅಂಜಿಸಾಂಗವಿ
11. ಹಣಮಾಯಿ
12. ಈತರ್ಗಾ
13. ಮಾಣಿಕೇಶ್ವರಾ
14. ಲಾನಗಾಂವ್

| | | | |
|---|---|---|---|
| 5. | ಮಳಜಾಪುರ | 15. | ಟಳವಾಡ (ಎಮ್) |
| 6. | ಖಟಕ ಚಿಂಚೋಳಿ | 16. | ತೇಲಗಾಂವ್ |
| 7. | ಉಚ್ಚಾ | 17. | ಬೌತಂಬ್ರಾ |
| 8. | ಕುರುಬ ಖೇಳಗಿ | 18. | ಕೆಸರ ಗಾಂವ್ |
| 9. | ಚಾಳಕಾಪುರ | 19. | ಕಾಕನಾಳ |
| 10. | ಹಲ್ಲಿಸಿ ತುಗಾಂವ್ | | |

ಈ) ಈ ಕಾಮಗಾರಿಗಳನ್ನು ನಾಲ್ಕು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

613(612) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರದಲ್ಲಿ ಸಂಚರಿಸುವ ಕ.ರಾ.ರ.ಸಾ.ಸಂ. ಕೆಲವು ಹಳ್ಳಿಗಳಲ್ಲಿ ಆದಾಯ ಬರುತ್ತಿಲ್ಲಾ ಎಂದು ಸಂಚಾರ ನಿಲ್ಲಿಸಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಅದರಿಂದ ಇಂತಹ ಹಳ್ಳಿಗಳ ರೂಟ್‌ನಲ್ಲಿನ ವಿದ್ಯಾರ್ಥಿಗಳು, ಬಡಜನರು, ರೋಗಿಗಳು ಹಾಗೂ ಸಾರ್ವಜನಿಕರು ತಾಲ್ಲೂಕು ಮತ್ತು ಜಿಲ್ಲಾ ಸ್ಥಳಗಳಿಗೆ ಬರಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಜನರಿಗಾಗುತ್ತಿರುವ ತೊಂದರೆ ನಿವಾರಿಸಲು ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕೆಲವು ಮಾರ್ಗಗಳಲ್ಲಿ ಒಂದೆರಡು ಸುತ್ತುಗಳನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ವಿದ್ಯಾರ್ಥಿಗಳು, ಬಡಜನರು, ರೋಗಿಗಳು ಹಾಗೂ ಸಾರ್ವಜನಿಕರು ತಾಲ್ಲೂಕು ಮತ್ತು ಜಿಲ್ಲಾ ಸ್ಥಳಗಳಿಗೆ ಬರಲು, ದಿನಕ್ಕೆ ಕನಿಷ್ಠ 2 ಸುತ್ತುಗಳ ಮತ್ತು ಶಾಲಾ ಮತ್ತು ಕಾಲೇಜು ಸಮಯದ ಸುತ್ತುಗಳು ಕಾರ್ಯಾಚರಣೆಯಲ್ಲಿವೆ. ತೊಂದರೆ ಆಗಿಲ್ಲ.

ಇ) ಪ್ರಯಾಣಿಕರ ಒತ್ತಡ ಇರುವ ಕಡೆ ಹೆಚ್ಚಿನ ಬಸ್ಸುಗಳ ಸೌಕರ್ಯ ಒದಗಿಸಲಾಗುವುದು.

614(568) : ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಹಲವಾರು ಮಂದಿ ಕಳೆದ 10–20 ವರ್ಷಗಳಿಂದ ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ವಾಸ್ತವ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಇಂತಹ ನೂರಾರು ಮನೆಗಳಿಗೆ ಪಡಿತರ ಚೀಟಿ ಮತದಾರರ ಗುರುತು ಚೀಟಿ ಮುಂತಾದ ಮೂಲಭೂತ ಸೌಕರ್ಯಗಳನ್ನು ನೀಡಿದ್ದಾಗ್ಯೂ ವಿದ್ಯುತ್

ಸಂಪರ್ಕ ನೀಡಲಾಗುತ್ತಿಲ್ಲವೆಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹೌದಾದಲ್ಲಿ, ಅಂತಹ ಅರ್ಜಿ ನಿವೇಶನ ವಸತಿ ರಹಿತರಿಗೆ ಹಕ್ಕುಪತ್ರ ನೀಡುವ ತನಕ ಕುಟೀರ ಜ್ಯೋತಿ ಸಂಪರ್ಕ ನೀಡಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿ ಸರ್ಕಾರಿ ಜಾಗದಲ್ಲಿ ಹಲವಾರು ಮಂಡಿ ಕಳೆದ 10–20 ವರ್ಷಗಳಿಂದ ಅನಧಿಕೃತವಾಗಿ ವಾಸ್ತವ್ಯ ಇರುವ ಬಗ್ಗೆ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಮಾಹಿತಿಗಳು ಇರುವುದಿಲ್ಲ.

ಆ) ಮನೆಗಳಲ್ಲಿ ವಾಸ್ತವ್ಯ ಇರುವ ಬಗ್ಗೆ ಪಡಿತರ ಚೀಟಿ ಅಥವಾ ಮತದಾರರ ಗುರುತು ಚೀಟಿಗಳನ್ನು ಹಾಜರುಪಡಿಸಿ ದೃಢೀಕರಿಸಿದಲ್ಲಿ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ವಿದ್ಯುತ್ ಸಂಪರ್ಕವನ್ನು ಕಲ್ಪಿಸುತ್ತದೆ.

ಇ) ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕಗಳನ್ನು ಕಲ್ಪಿಸಬೇಕಾದಲ್ಲಿ ಫಲಾನುಭವಿಗಳನ್ನು ತಾಲ್ಲೂಕು ಪಂಚಾಯತಿಯು ಗುರುತಿಸಬೇಕಾಗಿರುತ್ತದೆ. "ಬಡತನ ರೇಖೆಗಿಂತ ಕೆಳಗಿನವರು" ಯೆಂದು ತಾಲ್ಲೂಕು ಪಂಚಾಯತಿ ವತಿಯಿಂದ ಗುರುತಿಸಲ್ಪಟ್ಟ ಫಲಾನುಭವಿಗಳಿಗೆ ಮಾತ್ರ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಬಗ್ಗೆ ನಿಯಮಾನುಸಾರ ಕ್ರಮ ಜರುಗಿಸುತ್ತದೆ.

615(486) : ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಮೆಸ್ಕಾಂ ಇಲಾಖೆಗೆ ಮಂಜೂರಾಗಿರುವ ಲೈನ್‌ಮನ್ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಹಾಲಿ ಕೆಲಸ ನಿರ್ವಹಿಸುತ್ತಿರುವ ಲೈನ್‌ಮನ್‌ಗಳ ಸಂಖ್ಯೆ ಎಷ್ಟು;

ಇ) ಖಾಲಿ ಇರುವ ಲೈನ್‌ಮನ್‌ಗಳ ಹುದ್ದೆಯನ್ನು ಯಾವಾಗ ತುಂಬಲಾಗುವುದು;

ಈ) ಉಡುಪಿ ತಾಲ್ಲೂಕಿನ ಹಿರಿಯಣ್ಣ ಮತ್ತು ಪಡುಕೆರೆ ಉದ್ಯಾವರ ಪ್ರದೇಶದಲ್ಲಿ ಲೈನ್‌ಮನ್‌ಗಳ ಕೊರತೆಯಿಂದ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲತೆಯನ್ನು ಪರಿಹರಿಸಲು ತಕ್ಷಣ ಬದಲಿ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿರುವ ಲೈನ್‌ಮನ್ ಮತ್ತು ಸಹಾಯಕ ಲೈನ್‌ಮನ್ ಹುದ್ದೆಗಳ ಸಂಖ್ಯೆಯು ಅನುಕ್ರಮವಾಗಿ 243 ಮತ್ತು 220 ಇರುತ್ತದೆ.

ಆ) ಪ್ರಸ್ತುತ 185 ಲೈನ್‌ಮನ್ ಮತ್ತು 4 ಸಹಾಯಕ ಲೈನ್‌ಮನ್‌ಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ) ಸರ್ಕಾರವು ಲೈನ್‌ಮನ್‌ಗಳ ಕೊರತೆಯ ಸಮಸ್ಯೆಯನ್ನು ಮನಗಂಡಿದ್ದು. ಇದರ ನಿವಾರಣೆಗಾಗಿ ತಾತ್ಕಾಲಿಕ ಗ್ಯಾಂಗ್‌ಮನ್‌ಗಳ ಸೇವೆಯನ್ನು ಉಪಯೋಗಿಸಿಕೊಳ್ಳಲು ಕ್ರಮಗಳನ್ನು ಜರುಗಿಸಲಾಗಿದೆ.

ಈ) ಉಡುಪಿ ಜಿಲ್ಲೆಯಲ್ಲಿ 186 ಮಂದಿ ತಾತ್ಕಾಲಿಕ ಗ್ಯಾಂಗ್ ಮೆನ್‌ಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಇವರುಗಳ ಸೇವೆಯನ್ನು ಲೈನ್‌ಮನ್‌ಗಳಂತೆ ಉಪಯೋಗಿಸಿಕೊಳ್ಳಲಾಗುತ್ತಿದೆ. ಉಡುಪಿ ತಾಲ್ಲೂಕಿನಲ್ಲಿ ಲಭ್ಯವಿರುವ ಗ್ಯಾಂಗ್‌ಮೆನ್‌ಗಳ ಸಂಖ್ಯೆ 12 (ಹಿರಿಯಡ್ಕ-7, ಪಡುಕೆರೆ ಉದ್ಯಾವರ 5)

616(487) : ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಕೃಷಿಕರ ಪಂಪ್‌ಸೆಟ್‌ಗೆ ಸಂಪರ್ಕ ನೀಡುವಲ್ಲಿ ಆಗುತ್ತಿರುವ ವಿಳಂಬ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇಂತಹ ಎಷ್ಟು ಅರ್ಜಿಗಳು ಉಡುಪಿಯಲ್ಲಿ ಬಾಕಿ ಇವೆ;

ಇ) ಕೃಷಿಕರು ಸಂಪರ್ಕ ಬೇಕಿದ್ದಲ್ಲಿ ರೂ. 25,000 ಠೇವಣಿ ಪಾವತಿಸಿ ಪ್ರತ್ಯೇಕ ಟ್ರಾನ್ಸ್‌ಫಾರ್ಮರ್ ಅಳವಡಿಸಬೇಕೆಂಬ ನಿರ್ಬಂದ ಹೇರಿರುವುದು ನಿಜವೇ;

ಈ) ಕೃಷಿ ಪಂಪ್‌ಗಾಗಿ ಉಡುಪಿ ಜಿಲ್ಲೆಯಲ್ಲಿ ನೋಂದಾಯಿತ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು. ಗಮನಕ್ಕೆ ಬಂದಿದೆ. ಉಡುಪಿ ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ಆದ್ಯತಾಪಟ್ಟಿಯಲ್ಲಿನ ಹಿರಿತನದ ಆಧಾರದ ಮೇಲೆ ಆರ್ಥಿಕ ಸಂಪನ್ಮೂಲಗಳ ಲಭ್ಯತೆಗನುಗುಣವಾಗಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಬೇಕಾಗಿರುವುದರಿಂದ. ಈ ಕಾರ್ಯವು ವಿಳಂಭವಾಗುತ್ತಿದೆ.

ಆ) ಉಡುಪಿ ಜಿಲ್ಲೆಯಲ್ಲಿ 317 ಅರ್ಜಿಗಳು ವಿದ್ಯುತ್ ಸಂಪರ್ಕಕ್ಕಾಗಿ ಬಾಕಿ ಉಳಿದಿರುತ್ತದೆ.

ಇ) ದಿನಾಂಕ 21-10-2003ರ ಸರ್ಕಾರಿ ಆದೇಶದ ಪ್ರಕಾರ ನೀರಾವರಿ ಪಂಪುಸೆಟ್ಟುಗಳ ಅರ್ಜಿಗಳನ್ನು "ಸ್ವಯಂ ಪರಿವರ್ತಕ ಹೊಂದುವ" (ಒ.ವೈ.ಟಿ.) ಯೋಜನೆಯಡಿಯಲ್ಲಿ ಸ್ವೀಕರಿಸಬೇಕಾಗಿದೆ. ಈ ಯೋಜನೆಯಲ್ಲಿ ರೈತ ಗ್ರಾಹಕರು ರೂ. 25000/-ಗಳನ್ನು ಒಟ್ಟಾರೆಯಾಗಿ ಇಲ್ಲವೆ ಎರಡು ಕಂತುಗಳಲ್ಲಿ ಪಾವತಿಸಬೇಕಾಗುತ್ತದೆ. ನೀರಾವರಿ ಪಂಪುಸೆಟ್ಟುಗಳಿಗೆ ಈ ಯೋಜನೆಯಡಿಯಲ್ಲಿ ಒಂದು ಪ್ರತ್ಯೇಕ ಟ್ರಾನ್ಸ್‌ಫಾರ್ಮರ್ ಅಳವಡಿಸಿ ಸಂಪರ್ಕ ಕಲ್ಪಿಸಲಾಗುವುದು.

ಈ) ಉಡುಪಿ ಜಿಲ್ಲೆಯಲ್ಲಿ ಕೃಷಿ ಪಂಪ್‌ಸೆಟ್‌ಗಾಗಿ ವಿದ್ಯುತ್ ಕೋರಿ ನೋಂದಾಯಿಸಿರುವ ಅರ್ಜಿಗಳ ಸಂಖ್ಯೆ: 6298.

617(839) : ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಖಿಲ ಭಾರತ ಪರವಾನಿಗೆ ಹೊಂದಿರುವ ಪ್ರವಾಸಿ ಕಾರುಗಳಿಗೆ ತೆರಿಗೆ ವಸೂಲಿಯಲ್ಲಿ ಆಗುತ್ತಿರುವ ಕಿರುಕುಳದ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ;

ಆ) ತೆರಿಗೆ ವಿಧಾನದಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿರುವುದು ನಿಜವೇ;

ಇ) ತಾಲ್ಲೂಕು ಕೇಂದ್ರ, ಜಿಲ್ಲಾ ಕೇಂದ್ರಗಳಲ್ಲಿ ವಾಹನಗಳಿಗೆ ಫಿಲ್ಲಿಂಗ್ ಗ್ಯಾಸ್ ಬಂಕ್ ಸ್ಥಾಪನೆ ಬಗ್ಗೆ ಕಾರು ಚಾಲಕ ಮಾಲಿಕರಿಂದ ಸರ್ಕಾರಕ್ಕೆ ಒತ್ತಾಯ ಬಂದಿದೆಯೇ;

ಈ) ಬಂದಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲು ಸರಕಾರ ಇಚ್ಛಿಸಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

618(841) : ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ /ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಕರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲು ವಿಳಂಬವಾಗುತ್ತಿರುವುದು ನಿಜವೇ;

ಆ) ಇಂತಹ ಎಷ್ಟು ಅರ್ಜಿಗಳು ಬಾಕಿ ಇವೆ;

ಇ) ಕೃಷಿಕರ ಪಂಪ್‌ಸೆಟ್ಟಿನ ಸಂಪರ್ಕಕ್ಕಾಗಿ ರೂ. 25,000/– ಠೇವಣಿ ಬಗ್ಗೆ ಒತ್ತಾಯಿಸುವುದು ನಿಜವೇ;

ಈ) ಬಾಕಿ ಅರ್ಜಿಗಳಿಗೆ ಯಾವಾಗ ಸಂಪರ್ಕ ನೀಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ನೀರಾವರಿ ಪಂಪ್‌ಸೆಟ್ಟುಗಳಿಗೆ ಆದ್ಯತಾ ಪಟ್ಟಿಯಲ್ಲಿನ ಹಿರಿತನದ ಆಧಾರದ ಮೇಲೆ ಮತ್ತು ಅರ್ಥಿಕ ಸಂಪನ್ಮೂಲಗಳ ಲಭ್ಯತೆಗನುಸಾರವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿರುವುದರಿಂದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಲ್ಲಿ ವಿಳಂಬವಾಗಿರುವುದು ನಿಜ.

ಆ) ಬಾಕಿ ಉಳಿದಿರುವ ನೀರಾವರಿ ಪಂಪ್‌ಸೆಟ್ಟುಗಳ ಅರ್ಜಿಗಳ ಸಂಖ್ಯೆಗಳ ವಿವರಗಳು ಕೆಳಕಂಡಂತಿವೆ:

| | |
|---|---|
| ದಕ್ಷಿಣ ಕನ್ನಡ | 1693 |
| ಉಡುಪಿ ಜಿಲ್ಲೆ | 317 |

ಇ) ದಿನಾಂಕ 21–10–2003ರ ಸರ್ಕಾರದ ಆದೇಶದ ಪ್ರಕಾರ ಸದರೀ ಸರ್ಕಾರಿ ಆದೇಶದ ನಂತರ ಸ್ವೀಕೃತಗೊಂಡ ನೀರಾವರಿ ಪಂಪುಸೆಟ್ಟು ಅರ್ಜಿಗಳ

ಅರ್ಜಿದಾರರುಗಳಿಗೆ "ನಿಮ್ಮದೇ ಆದ ಟ್ರಾನ್ಸ್‌ಫಾರ್ಮರ್ (ಒ.ವೈ.ಟಿ.) ಹೊಂದಿ" ಯೋಜನೆಯಡಿಯಲ್ಲಿ ಮಾತ್ರ ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿರುತ್ತದೆ. ಸದರೀ ಯೋಜನೆಯಡಿ ಇತರ ಠೇವಣಿಗಳ ಜೊತೆಗೆ ನೀರಾವರಿ ಪಂಪ್‌ಸೆಟ್ಟುಗಳ ಅರ್ಜಿದಾರರು ರೂ. 25,000/– ಮೊಬಲಗನ್ನು ಪೂರ್ಣ ಪ್ರಮಾಣದಲ್ಲಿ ಒಂದೇ ಬಾರಿಗೆ ಅಥವಾ ಎರಡು ಕಂತುಗಳಲ್ಲಿ ಪಾವತಿಸಬೇಕಾಗಿರುತ್ತದೆ.

ಈ) ವಿದ್ಯುತ್ ಸಂಪರ್ಕಕ್ಕಾಗಿ ಬಾಕಿ ಉಳಿದಿರುವ ನೀರಾವರಿ ಪಂಪ್‌ಸೆಟ್ಟುಗಳ ಅರ್ಜಿದಾರರುಗಳಿಗೆ ಆದ್ಯತಾ ಪಟ್ಟಿಯಲ್ಲಿನ ಹಿರಿತನದ ಆಧಾರದ ಮೇಲೆ ಮತ್ತು ಆರ್ಥಿಕ ಸಂಪನ್ಮೂಲಗಳ ಲಭ್ಯತೆಗನುಗುಣವಾಗಿ ಮುಂಬರುವ ವರ್ಷಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

619(895) : ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್.) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಜಿ.ಎಫ್. ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಒಟ್ಟು ರಸ್ತೆಗಳೆಷ್ಟು; (ಇದರ ವರ್ಗೀಕರಣ ಮತ್ತು ಉದ್ದದ ವಿವರಗಳನ್ನು ಒದಗಿಸುವುದು);

ಆ) ಕಳೆದ 3 ವರ್ಷಗಳಲ್ಲಿ ಯಾವುದಾದರೂ ಹೊಸ ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆಯೇ? ಹಾಗಿದ್ದಲ್ಲಿ ಈ ರಸ್ತೆಗಳ ನಿರ್ಮಾಣಕ್ಕಾಗಿ ವೆಚ್ಚವಾಗಿರುವ ಮೊತ್ತವೆಷ್ಟು;

ಇ) ಇಲ್ಲದಿದ್ದಲ್ಲಿ ಕಾರಣಗಳೇನು;

ಈ) ಕೆ.ಜಿ.ಎಫ್. ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಸರ್ಕಾರ ಸದರಿ ರಸ್ತೆಗಳನ್ನು ದುರಸ್ಥಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು;

ಊ) ಇದಕ್ಕಾಗಿ ಒದಗಿಸಲಾದ ಮೊತ್ತವೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಕಳೆದ 3 ವರ್ಷಗಳಲ್ಲಿ ಕೆ.ಜಿ.ಎಫ್. ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಹೊಸ ರಸ್ತೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿರುವುದಿಲ್ಲ.

ಇ) ಅವಶ್ಯಕತೆಗನುಗುಣವಾಗಿ ಹೊಸ ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ಈ) ಕೆ.ಜಿ.ಎಫ್. ಕ್ಷೇತ್ರದಲ್ಲಿ ಕೆಲವು ರಸ್ತೆಗಳು ದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಉ) ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚಿ ವಾಹನಗಳ ಸಂಚಾರಕ್ಕೆ ಯೋಗ್ಯವಾಗಿಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ಇದಕ್ಕಾಗಿ ಸುಮಾರು 34.90 ಲಕ್ಷ ರೂ.ಗಳನ್ನು ಲೆ.ಶೀ. 3054 (ಯೋಜನೇತರ) ಅಡಿಯಲ್ಲಿ ಒದಗಿಸಲಾಗಿದೆ.

**Annexure Sl. No. 795**

| Sl. No. | Name of the Road | Category | Length in Kms. |
|---|---|---|---|
| 1. | K.G.F. State Fund road (Main Road) Ch: 6.20 to 11.20 kms. | M.D.R. | 5.00 Kms. |
| 2. | Krishnarajendra Road under KGF State Fund road Ch: 11.20 to 16.00 | M.D.R. | 4.80 Kms. |
| 3. | Station road under KGF State Fund road Ch: 0.00 to 2.05 K.M. | M.D.R. | 2.05 Kms. |
| 4. | Loop Road under KGF State Fund road Ch: 0.00 to 3.40 Kms. | M.D.R. | 3.40 Kms. |
| 5. | Plumber Road under K.G.F. State Fund road Ch: 0.00 to 1.20 Kms. | M.D.R. | 1.20 Kms. |
| 6. | Geetha Road under K.G.F. State Fund Road Ch: 0.00 to 0.60 Kms. | M.D.R. | 0.60 Kms. |
| 7. | Giffered Road under KGF State Fund Road Ch: 0.00 to 1.60 kms. | M.D.R. | 1.60 kms. |
| 8. | '0' danil road under KGF State Fund road Ch: 0.00 to 1.80 km. | M.D.R. | 1.80 kms. |
| 9. | Smith Road under KGF State Fund Road Ch: 0.00 to 5.00 K.m. | M.D.R. | 5.00 kms |
| 10. | Belghaat Marikuppam Road Ch: 0.00 to 9.770 k.m. | M.D.R. | 9.77 kms. |
| | | | **35.22 Kms.** |

621(687) : ಶ್ರೀ ರಾಜೇಂದ್ರ ವರ್ಮ (ಹುಲಸೂರು) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಲಸೂರು ಮೀಸಲು ಕ್ಷೇತ್ರದ ವ್ಯಾಪ್ತಿಗೆ ಬಹಳಷ್ಟು ಹಳ್ಳಿಗಳಿಗೆ ಕರ್ನಾಟಕ ರಸ್ತೆ ರಾಜ್ಯ ಸಾರಿಗೆ ಸಂಸ್ಥೆಯ ಯಾವುದೇ ಬಸ್ಸುಗಳು ಓಡಾಡುತ್ತಿಲ್ಲದಿರುವುದು ಸರ್ಕಾರದ ಗಮನದಲ್ಲಿ ಇದೆಯೇ;

ಆ) ಹಾಗಿದ್ದಲ್ಲಿ, ಹುಲಸೂರು ಕ್ಷೇತ್ರದ ಹಳ್ಳಿಗಳಿಗೆ ಯಾವಾಗ ಬಸ್ಸುಗಳನ್ನು ಒದಗಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಂದಿದೆ.

ಆ) ಬಸ್ ಸಂಚಾರಕ್ಕೆ ಯೋಗ್ಯವಾದ ರಸ್ತೆ ನಿರ್ಮಾಣವಾದ ಕೂಡಲೇ ಸಾರಿಗೆ ಸೌಲಭ್ಯ ಒದಗಿಸಲಾಗುವುದು.

622(791) : ಶ್ರೀ ರಮೇಶ್‌ಕುಮಾರ್ ಕೆ.ಆರ್. (ಶ್ರೀನಿವಾಸಪುರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬೃಹತ್ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಹೆಸರುಗಳೇನು;

ಆ) ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮಧ್ಯಮ ನೀರಾವರಿ ಯೋಜನೆಗಳು ಎಷ್ಟು ಮತ್ತು ಅವುಗಳ ಹೆಸರುಗಳೇನು;

ಇ) ಸರ್ಕಾರ ಈವರೆವಿಗೂ ಈ ಯೋಜನೆಗಳಿಗಾಗಿ ಖರ್ಚು ಮಾಡಿರುವ ಒಟ್ಟು ಹಣವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮೇಲಿನಂತೆ.

623(832) : ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ನಾಲೆ ಕಾಮಗಾರಿಗಳು ನೆನೆಗುದಿಗೆ ಬಿದ್ದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಇದಕ್ಕಾಗಿ ಮಂಜೂರಾಗಿರುವ ಹಣ ಎಷ್ಟು;

ಈ) ಖರ್ಚು ಮಾಡಿರುವ ಮೊತ್ತವೆಷ್ಟು;

ಉ) ಈ ಕಾಮಗಾರಿಗಳನ್ನು ಮುಗಿಸಲು ಕಾಲಮಿತಿಯನ್ನು ನಿಗದಿಗೊಳಿಸಲಾಗಿದೆಯೇ; ಯಾವಾಗ ಮುಗಿಸಲಾಗುವುದು; (ವಿವರ ಒದಗಿಸುವುದು);

ಊ) ತುಂಗಾ ಮತ್ತು ಭದ್ರಾ ಎಡನಾಲೆಗಳ ದುರಸ್ಥಿ ನೆನೆಗುದಿಗೆ ಬಿದ್ದಿದ್ದು ಕೆಳಹಂತದ ರೈತರಿಗೆ ಸರಿಯಾಗಿ ನೀರು ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಬಂದಿದ್ದಲ್ಲಿ ಸದರಿ ನಾಲೆಗಳ ದುರಸ್ಥಿಗೆ ಯಾವ ಕ್ರಮವನ್ನು ಸರ್ಕಾರ ಕೈಗೊಂಡಿದೆ ಹಾಗೂ ಇದಕ್ಕಾಗಿ ನೀಡುವ ಹಣ ಎಷ್ಟು (ವಿವರ ಒದಗಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಯೋಜನೆಯ ಮುಖ್ಯ ಕಾಲುವೆ ಕಾಮಗಾರಿಗಳನ್ನು ಕಿಮೀ 174 ರವರೆಗೆ ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ ಕಿಮೀ 1 ಮತ್ತು 2ರಲ್ಲಿ ಕೇಂದ್ರ ಸರ್ಕಾರದ ಅರಣ್ಯ ಇಲಾಖೆಯ ಅಂತಿಮ ಪರವಾನಿಗೆ ನಿರೀಕ್ಷಿಸುತ್ತಿದ್ದು, ದೊರೆತ ಕೂಡಲೇ ಪ್ರಾರಂಭಿಸಲಾಗುವುದು. ಕಿಮೀ 11 ರಿಂದ 35 ರವರೆಗಿನ ಕಾಲುವೆ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಕೆಲವು ಐಟಂಗಳ ದರದ ವಿಚಾರದಲ್ಲಿ ನಿಗಮದ ಕ್ರಮವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಮೂಲಕ ಸದರಿ ದರಗಳ ಅನುಷ್ಠಾನಕ್ಕೆ ತಡೆಯಾಜ್ಞೆಯನ್ನು ತಂದಿರುತ್ತಾರೆ. ಈ ವಿಷಯವು ನ್ಯಾಯಾಲಯದಲ್ಲಿ ಇತ್ಯರ್ಥವಾಗಬೇಕಾಗಿದ್ದು, ಕಾಲುವೆಯ ಈ ಭಾಗದಲ್ಲಿ ಕಾಮಗಾರಿಯ ಪ್ರಗತಿ ಕುಂಠಿತಗೊಂಡಿರುತ್ತದೆ.

ಆ) ನ್ಯಾಯಾಲಯವು ಪ್ರಕರಣವನ್ನು ತ್ವರಿತವಾಗಿ ವಿಚಾರಣೆ ತೆಗೆದುಕೊಳ್ಳಬೇಕೆಂದು ನಿಗಮವು ಅರ್ಜಿ ದಾಖಲಿಸಿದ್ದು, ಪ್ರಕರಣದ ವಿಚಾರಣೆಯು ಈಗಾಗಲೇ ಭಾಗಶಃ, ಮುಗಿದಿದ್ದು, ಅಂತಿಮ ವಿಚಾರಣೆ ಸದ್ಯದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಇ) ಪರಿಷ್ಕರಿಸಲಾದ ಯೋಜನಾ ಅಂದಾಜು ಮೊತ್ತ ರೂ.1052.33 ಕೋಟಿ. 2004-05ನೇ ಸಾಲಿಗೆ ರೂ. 92.00 ಕೋಟಿ ಅನುದಾನವನ್ನು ನಿಗದಿಗೊಳಿಸಿದೆ.

ಈ) ತುಂಗಾ ಮೇಲ್ದಂಡೆ ಯೋಜನೆಗಾಗಿ ಯೋಜನೆಯ ಪ್ರಾರಂಭದಿಂದ ಜೂನ್ 2004ರ ಅಂತ್ಯಕ್ಕೆ ಖರ್ಚು ಮಾಡಲಾದ ಒಟ್ಟು ಮೊತ್ತ ರೂ.368.25 ಕೋಟಿಗಳು.

ಉ) ತುಂಗಾ ಮೇಲ್ದಂಡೆ ಯೋಜನೆಯ ಕಾಮಗಾರಿಯನ್ನು 2006-07ನೇ ಸಾಲಿನ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಊ) ಬಂದಿರುತ್ತದೆ.

ಋ) ಸದರಿ ನಾಲೆಗಳ ದುರಸ್ಥಿಯನ್ನು ತುಂಗಾ ಹಾಗೂ ಭದ್ರಾ ನಾಲೆಗಳ ಆಧುನೀಕರಣ ಯೋಜನೆಯಡಿಯಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತ ವತಿಯಿಂದ ಕೈಗೊಳ್ಳಲು ಉದ್ದೇಶಿಸಲಾಗಿದೆ.

ತುಂಗಾ ನಾಲೆಗಳ ಆಧುನೀಕರಣಕ್ಕಾಗಿ ರೂ.66.85 ಕೋಟಿ ಹಾಗೂ ಭದ್ರಾ ನಾಲೆಗಳ ಆಧುನೀಕರಣಕ್ಕಾಗಿ ರೂ.365.00 ಕೋಟಿ ಮೊತ್ತಗಳ ಪ್ರಸ್ತಾವನೆ ಇರುತ್ತದೆ. ಇವುಗಳಲ್ಲಿ ತುಂಗಾ ಎಡದಂಡೆ ನಾಲೆಗೆ ರೂ.34.80 ಕೋಟಿ ಹಾಗೂ ಭದ್ರಾ ಎಡದಂಡೆ ನಾಲೆಗೆ ರೂ. 27.75 ಕೋಟಿಗಳಾಗುತ್ತದೆ.

624(833) : ಶ್ರೀ ರೇಣುಕಾಚಾರ್ಯ, ಎಂ.ಪಿ. (ಹೊನ್ನಾಳಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ಸವಳಂಗ ಕೆರೆಗೆ ತುಂಗಾ ಏತ ನೀರಾವರಿ ಮೂಲಕ ನೀರನ್ನು ಒದಗಿಸುವ ವಿಚಾರ ಸರಕಾರಕ್ಕೆ ಇದೆಯೇ;

ಆ) ಈ ನಿಟ್ಟಿನಲ್ಲಿ ಸರಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ಯೋಜನೆಯ ನೀಲಿ ನಕ್ಷೆ ತಯಾರಿಸಲಾಗಿದೆಯೇ (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಅನುಮೋದಿತ ತುಂಗಾ ಏತ ನೀರಾವರಿ ಯೋಜನೆಯಲ್ಲಿ ಹೊನ್ನಾಳಿ ತಾಲ್ಲೂಕಿನ ಸವಳಂಗ ಕೆರೆಗೆ ನೀರನ್ನು ಒದಗಿಸುವ ಪ್ರಸ್ತಾವನೆಯು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

625(837) : ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆ ನೀಡುವಾಗ ಪ್ಯಾಕೇಜ್ ಪದ್ಧತಿ ಅಳವಡಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಎಂದಿನಿಂದ ಈ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ;

ಇ) ಈ ಪದ್ಧತಿಯಿಂದ ಆಗಿರುವ ಪ್ರಯೋಜನಗಳೇನು;

ಈ) ಪ್ಯಾಕೇಜ್ ಪದ್ಧತಿಯನ್ನು ಕೈಬಿಟ್ಟು ಗುತ್ತಿಗೆದಾರರಿಗೆ ತುಂಡು ಗುತ್ತಿಗೆ ನೀಡುವ ಬಗ್ಗೆ ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಆಯ್ದ ಸಂದರ್ಭಗಳಲ್ಲಿ ಪ್ಯಾಕೇಜ್ ಪದ್ಧತಿ ಅಳವಡಿಸಿ ಗುತ್ತಿಗೆ ಕರೆಯುತ್ತಿರುವುದು ನಿಜ.

ಆ) 1999-2000 ರಿಂದ ಅಳವಡಿಸಿಕೊಳ್ಳಲಾಗಿದೆ.

ಇ) ಈ ಪದ್ಧತಿಯನ್ನು ಅಳವಡಿಸುವುದರಿಂದ ಆಗಿರುವ ಪ್ರಯೋಜನೆಗಳು:

1. ನಿರ್ವಹಣೆಯ ಕಾರ್ಯದ ಉಸ್ತುವಾರಿಯನ್ನು ಸುಗಮವಾಗಿ ಮಾಡಬಹುದು.

2. ರಸ್ತೆಯ ನಿರ್ವಹಣೆಯ ಕಾಮಗಾರಿಗಳನ್ನು ಯಂತ್ರೋಪಕರಣಗಳನ್ನು ಉಪಯೋಗಿಸಿ ಮಾಡುವುದರಿಂದ ಕಾಮಗಾರಿಯ ಗುಣಮಟ್ಟ ಒಳ್ಳೆಯದಾಗಿರುತ್ತದೆ.

3. ಗುತ್ತಿಗೆದಾರರು ಮೊದಲ ವರ್ಷ ನಿರ್ವಹಿಸಿರುವ ಕಾರ್ಯವನ್ನು ಎರಡನೇ ಮತ್ತು ಮೂರನೇ ವರ್ಷದಲ್ಲಿ ತಮ್ಮ ಖರ್ಚಿನಲ್ಲಿಯೇ ನಿರ್ವಹಣೆ ಮಾಡಬೇಕಾಗಿರುವುದರಿಂದ ಗುತ್ತಿಗೆದಾರರ ಹೊಣೆಗಾರಿಕೆಯು ಹೆಚ್ಚಿರುತ್ತದೆ.

ಈ) ಗುಣಮಟ್ಟ ಕಾಪಾಡುವ ದೃಷ್ಟಿಯಿಂದ ಹಾಗೂ ಆಧುನಿಕ ತಂತ್ರಜ್ಞಾನ ಹೊಂದಿರುವ ಯಂತ್ರೋಪಕರಣಗಳನ್ನು ಉಪಯೋಗಿಸಿ ತ್ವರಿತವಾಗಿ ಕೆಲಸ ನಿರ್ವಹಿಸಲು ಅನುವು ಮಾಡಿಕೊಡುವ ಉದ್ದೇಶದಿಂದ ಹಾಗೂ ಸ್ಪರ್ಧಾತ್ಮಕ ಕೊಡುಗೆಗಳನ್ನು ಪಡೆಯುವ ಸಲುವಾಗಿ ಈ ಪದ್ಧತಿಯನ್ನು ಅಳವಡಿಸಲಾಗಿದೆ.

ಕೆಲವು ಅನಿವಾರ್ಯ ಸಂದರ್ಭದಲ್ಲಿ ಪ್ಯಾಕೇಜ್ ಪದ್ಧತಿ ಎಲ್ಲಿ ಸಾಧ್ಯವಿಲ್ಲವೋ ಅಂತಹ ಪರಿಸ್ಥಿತಿಯಲ್ಲಿ ತುಂಡು ಗುತ್ತಿಗೆ ನೀಡುವ ಸಾಧ್ಯತೆಯಿದೆ. ಆದ್ದರಿಂದ ಪ್ಯಾಕೇಜ್ ಪದ್ಧತಿ ಕೈಬಿಡಲು ಸಾಧ್ಯವಿಲ್ಲ.

626(787) : ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾಳಿ ತಾಲ್ಲೂಕಿನ ಸವಳಂಗ ಕೆರೆಯನ್ನು ರೈತ ಕಾಯಕ ಕೆರೆ ಯೋಜನೆಯಡಿ ಕೈಗೆತ್ತಿಕೊಳ್ಳಲಾಗಿರುವುದು ನಿಜವೇ;

ಆ) ಸದರಿ ಕಾಮಗಾರಿ ಈಗ ಯಾವ ಹಂತದಲ್ಲಿದೆ ಹಾಗೂ ಈವರೆವಿಗೂ ಅದಕ್ಕಾಗಿ ಮಾಡಿರುವ ವೆಚ್ಚವೆಷ್ಟು;

ಇ) ಈ ಕಾಮಗಾರಿಯನ್ನು ಯಾರಿಗೆ ವಹಿಸಲಾಗಿತ್ತು;

ಈ) ಈ ಕಾಮಗಾರಿಯಲ್ಲಿ ಅವ್ಯವಹಾರಗಳು ನಡೆದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಹಿನ್ನೆಲೆಯಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು.

ಆ) ಕಾಮಗಾರಿಯು ಪ್ರಗತಿಯಲ್ಲಿದ್ದು, ಈವರೆವಿಗೂ ನಗದು ಮತ್ತು ಕಾಳಿಗೆ ಮೌಲ್ಯವೂ ಸೇರಿ ರೂ. 24.99 ಲಕ್ಷ ವೆಚ್ಚವಾಗಿದೆ.

ಇ) ಕರ್ನಾಟಕ ಭೂಸೇನಾ ನಿಗಮಕ್ಕೆ ವಹಿಸಲಾಗಿದೆ.

ಈ) ಬಂದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

627(749) : ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಿಂದ ನೀರಾವರಿ ಇಲಾಖೆಗೆ ಖಾಯಂ ಆಧಾರದ ಮೇಲೆ ಸಹಾಯಕ ಇಂಜಿನಿಯರ್‌ಗಳನ್ನು ವರ್ಗಾಯಿಸಿ ನೇಮಕ ಮಾಡಿರುವುದು ನಿಜವಲ್ಲವೇ;

ಆ) ಹಾಗಿದ್ದಲ್ಲಿ, ಸರ್ಕಾರದ ಆದೇಶ ಸಂಖ್ಯೆ: 578 ಎಸ್‌ಸಿಎನ್ 86, ದಿನಾಂಕ 27–2–1991ರಲ್ಲಿ ಪ್ರಕಟಿಸಲಾದ ಪಟ್ಟಿಯು ಅನುಮೋದನೆಯಾಗಿದೆಯೇ;

ಇ) ಇಲ್ಲದಿದ್ದಲ್ಲಿ, ಅನುಮೋದನೆಯು ಈಗ ಯಾವ ಹಂತದಲ್ಲಿದೆ;

ಈ) ಸರ್ಕಾರಿ ಆದೇಶ ಸಂಖ್ಯೆ: ಜಸಂಇ 33 ಸೇಸಕಿ 2001, ದಿನಾಂಕ 14–11–2003ರಲ್ಲಿ ಪ್ರಕಟಿಸಲಾದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಿಸದಿರುವುದಕ್ಕೆ ಕಾರಣಗಳೇನು; ಯಾವಾಗ ಅಂತಿಮ ಪಟ್ಟಿ ಪ್ರಕಟಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು.

ಆ) ಹೌದು.

ಇ) ಮೇಲಿನ (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ.

ಈ) ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಜಲ ಸಂಪನ್ಮೂಲ ಇಲಾಖೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ 1-1-04ರಂದು ಪ್ರಕಟಿಸಲಾಗಿದ್ದು, ಸಂಬಂಧಿಸಿದ ಸಹಾಯಕ ಇಂಜಿನಿಯರ್‌ಗಳಿಂದ ಆಕ್ಷೇಪಣೆ / ಸೂಚನೆಗಳು ಬಂದಿದ್ದು ಅವುಗಳ ಪರಿಶೀಲನೆಯ ನಂತರ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗುವುದೆಂದು ಆ ಇಲಾಖೆ ವರದಿ ಮಾಡಿದೆ.

628(192) : ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರಿಯ ರಸ್ತೆ ನಿಧಿಯ ಅಡಿಯಲ್ಲಿ ರಾಜ್ಯದ ರಸ್ತೆಗಳಿಗೆ ಕೇಂದ್ರ ಸರ್ಕಾರ 2003-04, 2004-05ನೇ ಸಾಲಿನ ಸಾಲುಗಳಲ್ಲಿ ಬಿಡುಗಡೆ ಮಾಡಿದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಕೇಂದ್ರ ರಸ್ತೆ ನಿಧಿಯಿಂದ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ; (ವಿವರ ನೀಡುವುದು)

ಇ) ಸದರಿ ಅನುದಾನವನ್ನು ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೆ ಸಮನಾಗಿ ಹಂಚುವ ಕ್ರಮವನ್ನು ಸರ್ಕಾರ ಅನುಸರಿಸುವುದೇ;

ಈ) ಸಮಾನ ಹಂಚಿಕೆ ಕುರಿತು ಸರ್ಕಾರದ ನಿಲುವು ಏನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಮೊತ್ತವನ್ನು ರಾಜ್ಯಕ್ಕೆ ಒಟ್ಟಾರೆಯಾಗಿ ಬಿಡುಗಡೆ ಮಾಡಲಾಗುತ್ತದೆ, ಜಿಲ್ಲಾವಾರು ಬಿಡುಗಡೆ ಮಾಡುವುದಿಲ್ಲ. 2003-04ನೇ ಸಾಲಿನ ಹಾಗೂ 2004-05ನೇ ಸಾಲಿಗೆ (ಮುಂದುವರೆದ ಕಾಮಗಾರಿಗಳಿಗಾಗಿ) ಬಿಡುಗಡೆ ಮಾಡಿರುವ ಮೊತ್ತದ ವಿವರಗಳು ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ವರ್ಷ | ಬಿಡುಗಡೆಯಾದ ಮೊತ್ತ ಕೋಟಿ ರೂ.ಗಳಲ್ಲಿ |
|---|---|---|
| 1. | 2003-04 | 55.11 |
| 2. | 2004-05 ಜೂನ್ 04 ಅಂತ್ಯದವರೆಗೆ | 7.50 |

ಆ) ಕೇಂದ್ರ ರಸ್ತೆ ನಿಧಿ ಅಡಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ 2003-04ನೇ ಸಾಲಿಗೆ ಮಂಜೂರಾದ ಕಾಮಗಾರಿಗಳ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.

ರೂ. ಲಕ್ಷಗಳಲ್ಲಿ

| ಕ್ರ ಸಂ. | ಜಿಲ್ಲೆ | ವರ್ಷ | ಕಾಮಗಾರಿಗಳ ಸಂಖ್ಯೆ | ಕಾಮಗಾರಿಗಳ ಮೊತ್ತ |
|---|---|---|---|---|
| 1. | ದಕ್ಷಿಣ ಕನ್ನಡ | 2003–04 | 11 | 790.00 |
| 2. | ಉಡುಪಿ | 2003–04 | 4 | 300.00 |

ಇ) ಅನುಸರಿಸಲಾಗುತ್ತಿದೆ.

ಈ) ಜನಪ್ರತಿನಿಧಿಗಳ ಕೋರಿಕೆಯ ಮೇರೆಗೆ ಅನುದಾನದ ಲಭ್ಯತೆಗೆ ಅನುಗುಣವಾಗಿ ಹಂತಹಂತವಾಗಿ ಎಲ್ಲಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿಯೂ ಕಾಮಗಾರಿಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪನೆಗಳನ್ನು ಸಲ್ಲಿಸಿ ಅನುಮೋದನೆ ಪಡೆಯಲು ಕ್ರಮ ಕೈಗೊಳ್ಳಲಾಗುತ್ತದೆ.

629(483) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿನ ಯಾವ ಯಾವ ಬಡಾವಣೆಗಳ ಯಾವ ಯಾವ ರಸ್ತೆಗಳಲ್ಲಿ ವೋಲ್ಟೇಜ್ ಸಮಸ್ಯೆ ಇದೆ;

ಆ) ಈ ಸಮಸ್ಯೆ ಬಗೆಹರಿಸಲು ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುವುದು;

ಇ) ಅದಕ್ಕೆ ಎಷ್ಟು ವೆಚ್ಚ ತಗಲುವುದು;

ಈ) ಈ ಸಮಸ್ಯೆ ಬಗೆಹರಿಸಲು ಸರ್ಕಾರ ಎಷ್ಟು ಸಮಯ ತೆಗೆದುಕೊಳ್ಳುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮೈಸೂರು ನಗರದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ರಸ್ತೆಗಳಲ್ಲಿ ಅಥವಾ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆ ಇರುವುದಿಲ್ಲ.

ಆ) ಮೇಲೆ ಹೇಳಿರುವಂತೆ ವೋಲ್ಟೇಜ್ ಸಮಸ್ಯೆ ಇಲ್ಲದಿದ್ದರೂ. ಹೆಚ್ಚುತ್ತಿರುವ ಬೇಡಿಕೆ ಪೂರೈಸಲು ಮೈಸೂರು ನಗರದಲ್ಲಿ. ವಿತರಣಾ ಜಾಲವನ್ನು ಇನ್ನಷ್ಟು ಸುಧಾರಣೆಗೊಳಿಸಲು ಎ.ಪಿ.ಡಿ.ಆರ್.ಪಿ. ಯೋಜನೆಯಡಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಡಿ ಹೊಸ 11 ಕೆ.ವಿ. ಮಾರ್ಗಗಳ ನಿರ್ಮಾಣ. ಹೊಸ ಪರಿವರ್ತಕಗಳ ಅಳವಡಿಕೆ. ಕಡಿಮೆ ಸಾಮರ್ಥ್ಯದ ಹಳೆಯ ವಾಹಕವನ್ನು ಹೆಚ್ಚು ಸಾಮರ್ಥ್ಯದ ವಾಹಕಗಳಿಂದ ಬದಲಾಯಿಸುವಿಕೆ ಮತ್ತು ಇತರೆ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ.

ಇ) ಈ ಯೋಜನೆಗೆ ತಗಲುವ ವೆಚ್ಚ 33.06 ಕೋಟಿ ರೂ.ಗಳು.

ಈ) ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು, ಮೇಲ್ಕಂಡ ಕೆಲಸಗಳನ್ನು ನಿರಂತರವಾಗಿ ತೆಗೆದುಕೊಳ್ಳಲಾಗುತ್ತಿದೆ. ಆದರ, ಎ.ಪಿ.ಡಿ.ಆರ್.ಪಿ. ಯೋಜನೆಯಡಿಯಲ್ಲಿರುವ ಕಾಮಗಾರಿಗಳನ್ನು ಒಂದು ವರ್ಷದೊಳಗೆ ಕಾರ್ಯರೂಪಕ್ಕೆ ತರಲು ಉದ್ದೇಶಿಸಲಾಗಿದೆ.

630(489) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಯಾವ ಯಾವ ಜಿಲ್ಲೆಗಳ ಯಾವ ಯಾವ ಊರುಗಳಲ್ಲಿ ಎಷ್ಟೆಷ್ಟು ಆಟೋರಿಕ್ಷಾಗಳಿವೆ;

ಆ) ಸದರಿ ಆಟೋರಿಕ್ಷಾಗಳಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ (ಟ್ಯಾಕ್ಸ್ ರೂಪದಲ್ಲಿ) ಆದಾಯದ ವಿವರ ನೀಡುವುದು;

ಇ) ಆಟೋರಿಕ್ಷಾ ನಿರ್ವಹಣೆ ನಂಬಿ ಜೀವನ ನಡೆಸುತ್ತಿರುವ ಚಾಲಕರ ಮತ್ತು ಚಾಲಕರ ಕುಟುಂಬಗಳ ಜೀವನ ಭದ್ರತೆಗೆ ಹಾಗೂ ಆರೋಗ್ಯ ಭದ್ರತೆಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ ಹಾಗೂ ಮುಂದೆ ಯಾವ ಯಾವ ಕ್ರಮ ಕೈಗೊಳ್ಳುವುವು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪ್ರತಿ ಆಟೋರಿಕ್ಷಾಗಳಿಗೆ ನೋಂದಣಿ ಸಮಯದಲ್ಲಿ ಜೀವಾವದಿ ತೆರಿಗೆ ರೂಪದಲ್ಲಿ ರೂ.2,500/- ಗಳನ್ನು ವಿಧಿಸಲಾಗುತ್ತಿದ್ದು, 2003-04ನೇ ಸಾಲಿನ ಆರ್ಥಿಕ ವರ್ಷದಲ್ಲಿ ರೂ.4,09,35,000/-ಗಳು ವಸೂಲಿ ಮಾಡಲಾಗಿದೆ.

ಇ) ಆಟೋರಿಕ್ಷಾ ಚಾಲಕರಿಗೆ ಅಪಘಾತ ಪರಿಹಾರ ನಿಯಮಾವಳಿಯನ್ನು ರೂಪಿಸಲಾಗಿದ್ದು, ನಿಯಮಾವಳಿಯಂತೆ ಅಂಗವಿಕಲತೆ ಹೊಂದಿದ ಅಥವಾ ಮೃತರಾದ ಆಟೋ ಚಾಲಕರ ಕುಟುಂಬಕ್ಕೆ ರೂ. 50,000/- ಗಳನ್ನು ಪರಿಹಾರವಾಗಿ ನೀಡಲಾಗುವುದು.

## Annexure

**1.Bangalore Division**

| | | |
|---|---|---|
| Bangalore City | - | 73,242 |
| Hoskote | - | 280 |
| Nelamangala | - | 339 |
| Magadi | - | 232 |
| Anekal | - | 769 |
| Tumkur City | - | 4592 |
| Madhugiri | - | 198 |
| Koratagere | - | 48 |
| Pavagada | - | 188 |
| Sira | - | 348 |
| Gubbi | - | 117 |

| | | |
|---|---|---|
| Kunigal | - | 172 |
| Kolar City | - | 1250 |
| Chintamani | - | 641 |
| Mulabagal | - | 363 |
| Srinivasapur | - | 185 |
| Vemagal | - | 04 |
| Narasapura | | 13 |
| Ramanagar | - | 1717 |
| Channapatna | - | 1238 |
| Kanakapura | - | 508 |
| Chickballapur | - | 351 |
| Bagepalli | - | 81 |
| Gowribidanur | - | 228 |
| Gudibande | - | 02 |
| Shidlaghatta | - | 124 |
| K.G.F. | - | 506 |
| Malur | - | 218 |
| Bangarpet | - | 490 |
| Devanahalli | - | 88 |
| Doddaballapur | - | 128 |
| Tiptur | - | 578 |
| Chicknayakanahalli | - | 114 |
| Turuvekere | - | 203 |
| Hulivar | - | 36 |
| Total | - | 89,591 |

**2. Mysore Division**

| | | |
|---|---|---|
| Mysore City | - | 12328 |
| T. Narasipura | - | 125 |
| Bannur | - | 22 |
| Nanjangud | - | 219 |
| Mandya | - | 1909 |
| Maddur | - | 276 |
| Malavalli | - | 273 |

| | | |
|---|---|---|
| K.R. Pet | - | 258 |
| Nagamangala | - | 270 |
| Tandavapura | - | 162 |
| Sri Rangapatna | - | 181 |
| Madikeri | - | 817 |
| Somawarpet | - | 1060 |
| Virajpet | - | 864 |
| Hassan | - | 2240 |
| Sakaleshpura | - | 547 |
| Alur | - | 118 |
| Belur | - | 302 |
| Arasikere | - | 561 |
| Channarayapatna | - | 614 |
| Arakalgud | - | 207 |
| Holenarasipura | - | 240 |
| Chamarajnagar | - | 265 |
| Yalandur | - | 144 |
| Gundlupet | - | 207 |
| Kollegal | - | 208 |
| Hunsur | - | 194 |
| H.D. Kote | - | 95 |
| K.R. Nagar | - | 165 |
| Periyapatna | - | 136 |
| **Total** | - | **25,007** |

**3. Belgaum Division**

| | | |
|---|---|---|
| Belgaum City | - | 4000 |
| Khanapur | - | 85 |
| Nippani | - | 393 |
| Chikkodi | - | 147 |
| Rayabag | - | 09 |
| Athani | - | 80 |
| Bailhongal | - | 104 |
| Savadatti | - | 275 |

| | | |
|---|---|---|
| Ramadurga | - | 28 |
| Kittur | - | 87 |
| Gokak | - | 294 |
| Ghataprabha | - | 22 |
| Hukkeri | - | 62 |
| Sankeshwara | - | 116 |
| Yamakanamaradi | - | 28 |
| Dharwar | - | 3737 |
| Hubli | - | 5103 |
| Navalgunda | - | 155 |
| Kundagola | - | 166 |
| Kalaghatagi | - | 96 |
| Gadag | - | 633 |
| Naragund | - | 79 |
| Rona | - | 42 |
| Shirahatti | - | 41 |
| Mundaragi | - | 07 |
| Haveri | - | 408 |
| Hanagal | - | 257 |
| Shiggaoan | - | 95 |
| Savanur | - | 93 |
| Ranebennur | - | 654 |
| Hirekerur | - | 258 |
| Byadagi | - | 73 |
| Kumarapatna | - | 18 |
| Samasabadi | - | 05 |
| Rattihalli | - | 18 |
| Guttala | - | 15 |
| Bagalkot | - | 404 |
| Hunagund | - | 98 |
| Beelagi | - | 21 |
| Badami | - | 84 |
| Bijapur | - | 2151 |

| | | |
|---|---|---|
| Muddebihal | - | 104 |
| B.Bagewadi | - | 108 |
| Indi | - | 95 |
| Sindhgi | - | 92 |
| Jamakhandi | - | 170 |
| Rabakavi | - | 35 |
| Banahatti | - | 23 |
| Hosur | - | 10 |
| Ramanapur | - | 08 |
| Hungali | - | 04 |
| Harihara | - | 05 |
| Teradala | - | 12 |
| Savalagi | - | 09 |
| Mudhol | - | 50 |
| Mahalingapur | - | 20 |
| Lokapur | - | 02 |
| Karwar | - | 852 |
| Ankola | - | 154 |
| J. Ramanagar | - | 01 |
| Sirsi | - | 654 |
| Siddapur | - | 85 |
| Mundagola | - | 54 |
| Yallapura | - | 101 |
| Haliyala | - | 25 |
| Dandeli | - | 198 |
| Banasa | - | 02 |
| Honnavara | - | 312 |
| Bhatkala | - | 548 |
| **Total** | - | **7,968** |

**4. Shimoga District**

| | | |
|---|---|---|
| Shimoga | - | 2436 |
| Bhadravathi | - | 1491 |
| Thirthahalli | - | 240 |

| | | |
|---|---|---|
| Sagara | - | 467 |
| Hosanagara | - | 69 |
| Shikaripura | - | 69 |
| Soraba | - | 35 |
| Chitradurga | - | 2065 |
| Challakere | - | 471 |
| Hiriyur | - | 487 |
| Hosadurga | - | 132 |
| Holalkere | - | 86 |
| Molakalmur | - | 45 |
| Davangere | - | 4193 |
| Harihara | - | 502 |
| Jagalur | - | 86 |
| Harapanahalli | - | 125 |
| Channagiri | - | 116 |
| Honnali | - | 66 |
| Chickmagalore | - | 1366 |
| Shringeri | - | 120 |
| Mudigere | - | 405 |
| Koppal | - | 225 |
| Tarikere | - | 305 |
| N.R. Pura | - | 188 |
| Kuduremukha | - | 255 |
| Mangalore | - | 10430 |
| Bantwal | - | 1977 |
| Udupi | - | 3680 |
| Kundapura | - | 1561 |
| Karkala | - | 1133 |
| Puttur | - | 1721 |
| Beltangadi | - | 1480 |
| Sullia | - | 1163 |
| **Total** | | **55,396** |

**5. Gulbarga Division**

| | | |
|---|---|---|
| Gulbarga | - | 5266 |
| Yadagiri | - | 1243 |

| | | |
|---|---|---|
| Bidar | - | 1377 |
| Bhalki | - | 893 |
| Bellary | - | 1947 |
| Hospet | - | 781 |
| Raichur | - | 1210 |
| Koppal | - | 477 |
| **Total** | - | **13,194** |
| **Grand Total** | | **1,91,156** |

632(492) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಗ್ರಾಮಾಂತರ ಬಸ್ ನಿಲ್ದಾಣವನ್ನು ಎಷ್ಟು ವೆಚ್ಚದಲ್ಲಿ ಆಧುನೀಕರಿಸಲಾಗುತ್ತಿದೆ; (ವಿವರವಾಗಿ ತಿಳಿಸುವುದು);

ಆ) ಹಾಗೆಯೇ, ಮೈಸೂರು ನಗರ ಬಸ್ ನಿಲ್ದಾಣವನ್ನು ಸಹ ಆಧುನೀಕರಿಸಲು ಎಷ್ಟು ವೆಚ್ಚ ಆಗುವುದು; (ವಿವರವಾಗಿ ತಿಳಿಸುವುದು);

ಇ) ನಗರ ಬಸ್ ನಿಲ್ದಾಣವನ್ನು ಆಧುನೀಕರಿಸುವಲ್ಲಿ ಸರ್ಕಾರದ ನಿಲುವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ರೂ. 1,93,27,000.00

ಕೆಲಸಗಳು:

1. ಆವರಣಕ್ಕೆ ಆರ್.ಸಿ.ಸಿ. ಕಾಂಕ್ರೀಟ್ ಅಳವಡಿಸುವುದು.
2. ಬಸ್ ನಿಲ್ದಾಣದ ಪಕ್ಕದಲ್ಲಿರುವ ವಾಣಿಜ್ಯ ಸಂಕೀರ್ಣದ ಮೊದಲ ಅಂತಸ್ತಿನಲ್ಲಿ ಮಳಿಗೆಗಳನ್ನು ನಿರ್ಮಿಸುವುದು.
3. ಅತ್ಯಾಧುನಿಕ ಶೌಚಾಲಯ ನಿರ್ಮಿಸುವುದು.
4. ಮುಖ್ಯ ಕಟ್ಟಡವನ್ನು ನವೀಕರಿಸುವುದು.
5. ಬಸ್ ನಿಲ್ದಾಣದ ಒಳ ದ್ವಾರ, ಆಸನಗಳ ವ್ಯವಸ್ಥೆ, ವಿಚಾರಣಾ ಕೌಂಟರ್ಸ್ ಮತ್ತು ಇತರೆ ಸೌಲಭ್ಯಗಳನ್ನು ಆಧುನೀಕರಿಸುವುದು.

ಆ) ಸಧ್ಯಕ್ಕೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ಸಧ್ಯಕ್ಕೆ ಉದ್ಭವಿಸುವುದಿಲ್ಲ.

633(601) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಕ್ಕೇರಿ ಮತ ಕ್ಷೇತ್ರದ ಹಿರಣ್ಯಕೇಶಿ ನದಿಗೆ ಮತ್ತು ಘಟಪ್ರಭಾ ನದಿಗೆ ಸಂಗಮದ ಸ್ಥಳದಲ್ಲಿ ಬ್ಯಾರೇಜ್ ನಿರ್ಮಿಸುವ ಬಗ್ಗೆ ಸರ್ವೇ ಆಗಿದೆಯೇ;

ಆ) ಇದರ ಅಂದಾಜು ವೆಚ್ಚ ಎಷ್ಟು;

ಇ) ಇದನ್ನು ಯಾವ ಯೋಜನೆಯಲ್ಲಿ ಕಾರ್ಯಗತಗೊಳಿಸುತ್ತೀರಿ;

ಈ) ಇದರಿಂದ ಎಷ್ಟು ಹಳ್ಳಿಗೆ ನೀರು ಬೇಸಿಗೆಯಲ್ಲಿ ಅನುಕೂಲ ಆಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಸರ್ವೆ ಕೆಲಸವನ್ನು ಕೈಗೊಳ್ಳಲಾಗುತ್ತಿದೆ.

ಆ) ಸರ್ವೆ ಕೆಲಸ ಪೂರ್ಣಗೊಂಡು ಅಂದಾಜು ತಯಾರಿಸಿದ ನಂತರ ನಿಖರವಾದ ಮಾಹಿತಿ ಲಭ್ಯವಾಗುವುದು.

ಇ) ಈ ಕಾಮಗಾರಿಯನ್ನು 'ನಮ್ಮೂರ ಬಾಂಧಾರ' ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

ಈ) ಹುಕ್ಕೇರಿ ತಾಲ್ಲೂಕಿನ ಸುಮಾರು 10 ಹಳ್ಳಿಗಳಿಗೆ ಬೇಸಿಗೆಯಲ್ಲಿ ನೀರಿನ ಅನುಕೂಲವಾಗುತ್ತದೆ.

635(604) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಕ್ಕೇರಿ ಕ್ಷೇತ್ರದ ಬೆಳವಿ ಗ್ರಾಮದಲ್ಲಿ ಕೆರೆ ನಿರ್ಮಾಣದ ಕೆಲಸ 5 ರಿಂದ 6 ಲಕ್ಷ ಖರ್ಚು ಮಾಡಿ ಇಲ್ಲಿಯವರೆಗೆ ಸ್ಥಗಿತಗೊಂಡಿರಲು ಕಾರಣಗಳೇನು; ಮತ್ತು ಇದರ ಮೊದಲಿನ ಅಂದಾಜು ವೆಚ್ಚ ಎಷ್ಟು;

ಆ) ಕಾಮಗಾರಿಯನ್ನು ಪುನರ್ ಪ್ರಾರಂಭಿಸಲು ಸರ್ಕಾರ ಯೋಜಿಸಿದೆಯೇ;

ಇ) ಹಾಗಿದ್ದಲ್ಲಿ, ಇದನ್ನು ಯಾವಾಗ ಪ್ರಾರಂಭಿಸಲಾಗುವುದು; ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು; (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಈ ಕೆಲಸಕ್ಕೆ 5.43 ಲಕ್ಷಗಳನ್ನು ಭೂಸ್ವಾಧೀನಕ್ಕೆ ಖರ್ಚಾಗಿದ್ದು, ಇತರೆ ಕೆಲಸಕ್ಕೆ ಕೇವಲ 21,644 ರೂ.ಗಳು ಖರ್ಚಾಗಿದೆ. ಈ ಕೆಲಸದ ಸ್ಥಗಿತಕ್ಕೆ ಕಾರಣಗಳು ಈ ಕೆಳಕಂಡಂತೆ ಇವೆ:

1. ಕಾಮಗಾರಿಯ ಮೊದಲನೇ ಗುತ್ತಿಗೆದಾರರು ಕೆಲಸವನ್ನು ಸರಿಯಾಗಿ ನಿರ್ವಹಿಸದಿದ್ದುದ ರಿಂದ, 1997ರಲ್ಲಿ ಗುತ್ತಿಗೆಯನ್ನು ರದ್ದುಗೊಳಿಸಲಾಗಿಯಿತು.

2. 1987–88ರಲ್ಲಿ ಈ ಕಾಮಗಾರಿಯನ್ನು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ವರ್ಗಾಯಿಸಿದ್ದು, ಪುನ: 1992–93ರಲ್ಲಿ ಮರು ವರ್ಗಾವಣೆಯಾಯಿತು.

3. ಅನುದಾನದ ಕೊರತೆಯಿಂದ.

ಈ ಕಾಮಗಾರಿಯ ಮೊದಲನೇ ಅಂದಾಜು 8.68 ಲಕ್ಷ ರೂ.ಗಳು.

ಆ,ಇ) ಕಾಮಗಾರಿಯ ಈಗಿನ ಅಂದಾಜು ವೆಚ್ಚ 43.48 ಲಕ್ಷ ರೂ.ಗಳಾಗಿದ್ದು, ಅನುದಾನದ ಲಭ್ಯತೆ ಮೇಲೆ ಕಾಮಗಾರಿಯನ್ನು ಪ್ರಾರಂಭಿಸಲು ಮುಂದಿನ ಕ್ರಮ ಜರುಗಿಸಲಾಗುವುದು.

636(606) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಕ್ಕೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಿಂದ ಒದಗಿಸಲಾದ ಹಣ ಎಷ್ಟು;

ಆ) ಈ ಪೈಕಿ ವೆಚ್ಚ ಮಾಡಲಾದ ಹಣ ಎಷ್ಟು, ಮತ್ತು ಈ ಹಣದಲ್ಲಿ ಕೈಗೊಂಡ ಕಾಮಗಾರಿಗಳ ಮಾಹಿತಿ ನೀಡುವುದು;

ಇ) 2004-05ನೇ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿಗೆ ಬಿಡುಗಡೆ ಮಾಡಲಾದ ಹಣ ಎಷ್ಟು (ಕಾಮಗಾರಿವಾರು ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹುಕ್ಕೇರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿಗಾಗಿ ವಿವಧ ಯೋಜನೆಗಳಡಿಯಲ್ಲಿ 2001-02 ಸಾಲಿನಲ್ಲಿ 7 ಕಾಮಗಾರಿಗಳಿಗೆ ರೂ.124.00 ಲಕ್ಷ ಒದಗಿಸಲಾಗಿದೆ. ಅದರಂತೆ 2002-03 ಸಾಲಿನಲ್ಲಿ ನಾಲ್ಕು ಕಾಮಗಾರಿಗಳಿಗೆ ರೂ.275.00 ಲಕ್ಷ ಹಣ ಹಾಗೂ 2003-04ನೇ ಸಾಲಿನಲ್ಲಿ ನಾಲ್ಕು ಕಾಮಗಾರಿಗಳಿಗೆ ರೂ. 87.00 ಲಕ್ಷ ಹಣ ಒದಗಿಸಿರುತ್ತದೆ.

ಆ) 2001-02ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಿಗಾಗಿ 103.63 ಲಕ್ಷಗಳು ಖರ್ಚು ಮಾಡಲಾಗಿದೆ. ಅದರಂತೆ 2002-03ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಿಗೆ 189.45 ಲಕ್ಷ ಹಾಗೂ 2003-04ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಿಗೆ 21.91 ಲಕ್ಷ ಹಣ ಖರ್ಚು ಮಾಡಲಾಗಿದೆ. ಈ ಹಣದಲ್ಲಿ ಅಭಿವೃದ್ಧಿಗಾಗಿ ಕೈಗೊಂಡ ಒಟ್ಟು 15 ಕಾಮಗಾರಿಗಳಲ್ಲಿ 10 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. 3 ಕಾಮಗಾರಿಗಳಿಗೆ ಹೈಕೋರ್ಟ್ ತಡೆಯಾಜ್ಞೆಯಿರುವುದರಿಂದ ಗುತ್ತಿಗೆ ಪ್ರಕ್ರಿಯೆ ಸ್ಥಗಿತಗೊಂಡಿದೆ, ಇನ್ನುಳಿದ 2 ಕಾಮಗಾರಿಗಳು ಪ್ರಗತಿಯಲ್ಲಿವೆ. ಕಾಮಗಾರಿಗಳ ವಿವರಗಳನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.

| ಯೋಜನೆ | ಖರ್ಚು ಮಾಡಲಾದ ಹಣ ರೂ. ಲಕ್ಷಗಳಲ್ಲಿ | | | | | |
|---|---|---|---|---|---|---|
| | 2001-02ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಿಗೆ | | 2002-03ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಿಗೆ | | 2003-04ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಿಗೆ | |
| | ಸಂ. | ವೆಚ್ಚ | ಸಂ. | ವೆಚ್ಚ | ಸಂ. | ವೆಚ್ಚ |
| 1 | 2 | 3 | 4 | 5 | 6 | 7 |
| ನಬಾರ್ಡ್ ಆರ್.ಐ.ಡಿ.ಎಫ್. | 2 | 75.45 | 2 | 143.04 | – | – |
| ನಬಾರ್ಡ್ ಎಂ.ಎ.ಡಿ.ಬಿ. | – | – | 2 | 46.41 | – | – |
| ಕೇಂದ್ರ ರಸ್ತೆ ನಿಧಿ (ಸಿಆರ್‌ಎಫ್) | – | – | – | – | 1 | 21.91 |
| ಸಕ್ಕರೆ ಕಾರ್ಖಾನೆ ರಸ್ತೆ ಕರನಿಧಿ (ಎಲ್.ಸಿ.ಸಿ.ಎಫ್.) | 4 | 28.18 | – | – | – | – |
| ಮಲೆನಾಡು ಪ್ರದೇಶ ಅಭಿವೃದ್ಧಿ ಯೋಜನೆ | – | – | – | – | – | – |
| **ಒಟ್ಟು** | **6** | **103.63** | **4** | **189.45** | **1** | **21.91** |

ಇ) 2004-05ನೇ ಸಾಲಿನ ರಸ್ತೆಗಳ ಅಭಿವೃದ್ಧಿಗಾಗಿ ಇದುವರೆಗೆ ಯಾವುದೇ ಅನುದಾನವನ್ನು ಸರಕಾರದಿಂದ ಬಿಡುಗಡೆ ಮಾಡಿರುವುದಿಲ್ಲ.

ಹುಕ್ಕೇರಿ ವಿಧಾನಸಭಾ ಮತಕ್ಷೇತ್ರದಲ್ಲಿ ನಬಾರ್ಡ ಯೋಜನೆಯಡಿ ರಸ್ತೆ ಅಭಿವೃದ್ಧಿಗಾಗಿ ಒದಗಿಸಿದ ಹಣ ಹಾಗೂ ವೆಚ್ಚಗಳ ವಿವರ

| ಕ್ರ ಸಂ. | ವರ್ಷ | ಕಾಮಗಾರಿಯ ಹೆಸರು (ರಸ್ತೆ ಹಾಗೂ ಸೇತುವೆ) | ನಬಾರ್ಡ್ ಆರ್.ಐ.ಡಿ.ಎಫ್. ಹಂತ | ಒದಗಿಸಿದ ಹಣ/ ಮಂಜೂರಾದ ಅಂದಾಜು ಮೊತ್ತ | ಇಲ್ಲಿಯವರೆಗೆ ಮಾಡಲಾದ ವೆಚ್ಚ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1. | 2001–02 | ಪಕ್ಷಿಯಿಂದ ಹಿಡಕಲಡ್ಯಾಂ ವ್ಹಾಯಾ | | | | |
| 19.68 | | ಕೆಲಸ | | ಆರ್.ಐ.ಡಿ.ಎಫ್–VI | | 2100 |
| | | ಸುಲ್ತಾನಪುರ ರಸ್ತೆ ಸುಧಾರಣೆ | | | | |
| 2. | | ಪಾಶ್ವಾಪುರ ರೈಲ್ವೆ ಸ್ಟೇಶನ್‌ನಿಂದ ವೆಂಟಮೂರಿ ರಸ್ತೆ ಸುಧಾರಣೆ | ಆರ್.ಐ.ಡಿ.ಎಫ್–VI | 64.00 | 55.77 | ಪೂರ್ಣಗೊಂಡಿದೆ ಕೆಲಸ ಪೂರ್ಣಗೊಂಡಿದೆ |
| | | | ಒಟ್ಟು | **85.00** | **75.45** | |
| 3 | 2002–03 | ನೋಗಿಹಾಳ ಘೋಡಗೇರಿ ಹತ್ತಿರ ಘಟಪ್ರಭಾ ನದಿಗೆ ಮುಳುಗು ಸೇತುವೆ ನಿರ್ಮಾಣ | ಆರ್.ಐ.ಡಿ.ಎಫ್–VI | 170.00 | 104.16 | ಕೆಲಸ ಪೂರ್ಣಗೊಂಡಿದೆ |
| 4 | – | ಜಾಗನೂರದಿಂದ ಎಂಎನ್ ರಸ್ತೆಗೆ ಕೂಡು ರಸ್ತೆ | ಆರ್.ಐ.ಡಿ.ಎಫ್–VII | 42.00 | 38.88 | ಕೆಲಸ ಪೂರ್ಣಗೊಂಡಿದೆ |
| | | | | 212.00 | 143.04 | ಕೆಲಸ ಪೂರ್ಣಗೊಂಡಿದೆ |
| | 2003–04 | ಯಾವುದೂ ಇಲ್ಲ | | | | |

**ಎಂ.ಎ.ಡಿ.ಬಿ. ನಬಾರ್ಡ ಕಾಮಗಾರಿಗಳು**

2001–02 ಯಾವುದೂ ಇಲ್ಲ

| 1 | 2 | 3 | 4 | 5 | 6 | 7 |
|---|---|---|---|---|---|---|
| 1. | 2002–03 | ಪಾಶ್ಚಾಪೂರದಿಂದ ಹಿಡಕಲ ಡ್ಯಾಂ ಕೂಡು ರಸ್ತೆ ವ್ಯಾಯಾ ಮವನುರ ಸರತನೆಟ್ಟಿ ರಸ್ತೆ | ಎಂ.ಎ.ಡಿ.ಬಿ. ನಬಾರ್ಡ ಆರ್.ಐ.ಡಿ.ಎಫ್–III | 34.00 | 39.00 | ಕೆಲಸ ಪೂರ್ಣಗೊಂಡಿದೆ |
| 2 | – | ಬೆಲ್ಲದ ಬಾಗೇವಾಡಿ ಹಟ್ಟಿ ಕಡಪಟ್ಟಿ ಮತ್ತು ಕಡೆಪಟ್ಟಿ ಚೌಕಿಯವರೆಗೆ ರಸ್ತೆ ಸುಧಾರಣೆ | ಎಂ.ಎ.ಡಿ.ಬಿ. ನಬಾರ್ಡ ಆರ್.ಐ.ಡಿ.ಎಫ್–VII | 29.30 | 7.41 | ಕೆಲಸ ಪೂರ್ಣಗೊಂಡಿದೆ |
| | 2003–04 | ಯಾವುದೂ ಇಲ್ಲ | | **63.00** | **46.41** | |

**ಹುಕ್ಕೇರಿ ವಿಧಾನಸಭಾ ಮತಕ್ಷೇತ್ರದಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿ ರಸ್ತೆ ಅಭಿವೃದ್ಧಿಗಾಗಿ ಒದಗಿಸಿದ ಹಣ ಹಾಗೂ ವೆಚ್ಚಗಳ ವಿವರ**

| ಕ್ರ ಸಂ. | ವರ್ಷ | ಕಾಮಗಾರಿಯ ಹೆಸರು (ರಸ್ತೆ ಹಾಗೂ ಸೇತುವೆ) | ಸಿ.ಆರ್.ಎಫ್. ಹಂತ | ಒದಗಿಸಿದ ಹಣ/ ಮಂಜೂರಾದ ಅಂದಾಜು ಮೊತ್ತ | ಇಲ್ಲಿಯವರೆಗೆ ಮಾಡಲಾದ ವೆಚ್ಚ | ಷರಾ |
|---|---|---|---|---|---|---|
| 1. | 2001–02 | ಯಾವುದೂ ಇಲ್ಲ | | | | |
| | 2002–03 | ಯಾವುದೂ ಇಲ್ಲ | | | | |
| | 2003–04 | ಕಟ್ಟೂರ ಬೆಲ್ಲದ ಬಾಗೇವಾಡಿ ಘಟಪ್ರಭಾ ರಸ್ತೆ ಸುಧಾರಣೆ ಕಿಮೀ ನಂ. ದಿಂದ 12.60 ವರೆಗೆ | ಸಿಆರ್‌ಎಫ್–4 | 60.00 | 21.91 | ಕೆಲಸ ಪ್ರಗತಿಯಲ್ಲಿದೆ |
| | | ಒಟ್ಟು | | **60.00** | **21.91** | |

ಹುಕ್ಕೇರಿ ವಿಧಾನಸಭಾ ಮತಕ್ಷೇತ್ರದಲ್ಲಿ ಎಸ್.ಸಿ.ಸಿ.ಎಫ್. (ಸಕ್ಕರೆ ಕಾರ್ಖಾನೆ ರಸ್ತೆ ಕರೆ) ಯೋಜನೆಯಡಿ ರಸ್ತೆ ಅಭಿವೃದ್ಧಿಗಾಗಿ ಒದಗಿಸಿದ ಹಣ ಹಾಗೂ ವೆಚ್ಚಗಳ ವಿವ

| ಕ್ರ ಸಂ. | ವರ್ಷ | ಕಾಮಗಾರಿಯ ಹೆಸರು (ರಸ್ತೆ ಹಾಗೂ ಸೇತುವೆ) | ಹಂತ | ಒದಗಿಸಿದ ಹಣ/ ಮಂಜೂರಾದ ಅಂದಾಜು ಮೊತ್ತ | ಇಲ್ಲಿಯವರೆಗೆ ಮಾಡಲಾದ ವೆಚ್ಚ | ಷರಾ |
|---|---|---|---|---|---|---|
| 1. | 2001–02 | ಬಾಗೇವಾಡಿ ಹುಕ್ಕೇರಿ ರಸ್ತೆ ಕಿಮೀ ನಂ. 1 ರಿಂದ 3ರಲ್ಲಿ ಸುಧಾರಣೆ | – | 12.00 | 7.96 | ಕೆಲಸ ಪೂರ್ಣಗೊಂಡಿದೆ |
| 2. | – | ಚಿಕ್ಕೋಡಿ ಹತ್ತರಗಿ ರಸ್ತೆ ಕಿಮೀ ನಂ. 31ರಲ್ಲಿ ಅಭಿವೃದ್ಧಿ | – | 5.00 | 4.95 | ಕೆಲಸ ಪೂರ್ಣಗೊಂಡಿದೆ |
| 3 | – | ಸಂಕೇಶ್ವರ ಗೋಕಾಕ ರಸ್ತೆಯಿಂದ ಮುಧೋಳ ನಿಪ್ಪಾಣಿ ರಸ್ತೆಗೆ ಲಿಂಕ ರಸ್ತೆ ವ್ಹಾಯಾ ಬೆಲ್ಲದ ಬಾಗೇವಾಡಿ ಕಬ್ಬೂರು ರಸ್ತೆ ಕಿಮೀ ನಂ. 5 ಮತ್ತು 6ರಲ್ಲಿ | – | 6.00 | 6.27 | ಕೆಲಸ ಪೂರ್ಣಗೊಂಡಿದೆ |
| 4. | – | –ಸದರ– ರಸ್ತೆ ಕಿಮೀ ನಂ. 9 ಮತ್ತು 10ರಲ್ಲಿ ಸುಧಾರಣೆ | | – | 10.00 | 9.00 ಕೆಲಸ ಪೂರ್ಣಗೊಂಡಿದೆ |
| | 2002–03 | ಯಾವುದೂ ಇಲ್ಲ | | | | |
| 5. | 2003–04 | ಬೆಲ್ಲದ ಬಾಗೇವಾಡಿಯಿಂದ ಹುಕ್ಕೇರಿ ರಸ್ತೆ ಕಿಮೀ ನಂ. 000 ರಿಂದ 5.00 ರಲ್ಲಿ ಅಗಲೀಕರಣ | – | 3.50 | – | ಹೈಕೋರ್ಟ್ ತಡೆಯಾಜ್ಞೆ ಇರುವವರಿಂದ ಗುತ್ತಿಗೆ ಪ್ರಕ್ರಿಯೆ ಸ್ಥಗಿತಗೊಂಡಿದೆ |

| 1 | 2 | 3 | 4 | 5 | 6 | 7 |
|---|---|---|---|---|---|---|
| 6. | – | –ಸದರ–ರಸ್ತೆ ಕಿಮೀ ನಂ. 6.00 ರಿಂದ –ಸದರ–ರಸ್ತೆ ಕಿಮೀ ನಂ. 6.00 ರವರೆಗೆ | – | 3.50 | – | ಹೈಕೋರ್ಟ್ ತಡೆಯಾಜ್ಞೆ ಇರುವವರಿಂದ ಗುತ್ತಿಗೆ ಪ್ರಕ್ರಿಯೆ ಸ್ಥಗಿತಗೊಂಡಿದೆ |
| 7. | – | ಬಡಕುಂದ್ರಿ ಕ್ರಾಸದಿಂದ ಯರಗಟ್ಟಿ ಯರನಾಳ ಇಂಗಳ ನಿರ್ಮಾಣ ರಸ್ತೆ ಆಗಲೀಕರಣ | – | 20.00 | – | –ಸದರ– |
| | | | | 27.00 | – | |

ಹುಕ್ಕೇರಿ ವಿಧಾನಸಭಾ ಮತಕ್ಷೇತ್ರದಲ್ಲಿ ಮಲೆನಾಡು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಯೋಜನೆಯಡಿ ರಸ್ತೆ ಅಭಿವೃದ್ಧಿಗಾಗಿ ಒದಗಿಸಿದ ಹಣ ಹಾಗೂ ವೆಚ್ಚಗಳ ವಿವರ

| ಕ್ರ. ಸಂ. | ವರ್ಷ | ಕಾಮಗಾರಿಯ ಹೆಸರು (ರಸ್ತೆ ಹಾಗೂ ಸೇತುವೆ) | ಹಂತ | ಒದಗಿಸಿದ ಹಣ/ ಮಂಜೂರಾದ ಅಂದಾಜು ಮೊತ್ತ | ಇಲ್ಲಿಯವರೆಗೆ ಮಾಡಲಾದ ವೆಚ್ಚ | ಷರಾ |
|---|---|---|---|---|---|---|
| 1. | 2001–02 | ಸಂಕೇಶ್ವರ ಗೋಕಾಕ ರಸ್ತೆ ಕಿಮೀ ನಂ.23.00–ರಿಂದ 26.00 ವರೆಗೆ ಸುಧಾರಣೆ | | 6.00 | – | ಕೆಲಸ ಮುಗಿದಿದೆ ಜಿಲ್ಲಾ ಪಾವತಿಯಾಗಬೇಕು |
| | | | | 6.00 | | |
| | 2002–03 | ಯಾವುದೂ ಇಲ್ಲ | | | | |
| | 2003–04 | ಯಾವುದೂ ಇಲ್ಲ | | | | |

637(607) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾರ್ಕಾಂಡೇಯ ನದಿಗೆ ಡ್ಯಾಂ ನಿರ್ಮಿಸಲಾಗಿದ್ದು, ಸದರಿ ಡ್ಯಾಂ ಈವರೆಗೆ ಪೂರ್ಣಗೊಳ್ಳದಿರಲು ಕಾರಣಗಳೇನು;

ಆ) ಡ್ಯಾಂ ನಿರ್ಮಾಣ ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮ ಏನು;

ಇ) ಈ ಕಾಮಗಾರಿಯನ್ನು ಯಾವಾಗ ಪೂರ್ತಿಗೊಳಿಸಲಾಗುವುದು;

ಈ) ಕಾಲುವೆಗಳು ಎಷ್ಟು ನಿರ್ಮಾಣಗೊಂಡಿವೆ; ಮತ್ತು ಇನ್ನು ಬಾಕಿ ಉಳಿದ ಕಾಲುವೆ ಎಷ್ಟು;

ಉ) ರೈತರ ಗದ್ದೆಗಳ ಹಣ ಮುಟ್ಟಿದೆಯೇ; ಮನೆಗಳಿಗೆ ಸ್ಥಳ ದೊರಕಿದೆಯೇ;

ಊ) ಈ ಜಲಾಶಯದ 60 ಎಕರೆ ಭೂಮಿಯ ವ್ಯಾಜ್ಯ ಮುಗಿಸಲು ತೆಗೆದುಕೊಂಡ ಕ್ರಮ ಏನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಮಾರ್ಕಂಡೇಯ ಅಣೆಕಟ್ಟಿನ ಒಟ್ಟು 26 ಬ್ಲಾಕುಗಳ ಪೈಕಿ, 24 ಬ್ಲಾಕುಗಳ ಕಾಂಕ್ರೀಟ್ ಕೆಲಸವು ಸಂಪೂರ್ಣಗೊಂಡಿದೆ. ಈ ಯೋಜನೆ ಅಡಿ ಮುಳುಗಡೆ ಆಗಲಿರುವ ಗ್ರಾಮಗಳಾದ ರಂಗಧೋಳಿ, ನಂದಿ, ನಿಂಗ್ಯಾನಟ್ಟಿ, ಕೆಂಚನಟ್ಟಿ, ಮಾವಿನಹೊಳಿ ಬೈಲೂರ ಹಾಗೂ ಗುತ್ತಿ ಗ್ರಾಮದ ಜನರು ತಮ್ಮ ಜಮೀನುಗಳು, ಮನೆಗಳು ಹಾಗೂ ಇತರೆ ಆಸ್ತಿಪಾಸ್ತಿಗಳ ಪರಿಹಾರ ಧನವನ್ನು ವಿತರಿಸುವಲ್ಲಿ ಭೂಸ್ವಾಧೀನ ಅಧಿಕಾರಿಗಳಿಂದ ವಿಳಂಬ ಆಗಿರುತ್ತದೆಯೆಂದು ಹಾಗೂ ಪೂರ್ಣ ಪ್ರಮಾಣದ ಪರಿಹಾರ ದೊರೆಯುವವರೆಗೆ ಉಳಿದ ಬ್ಲಾಕ್‌ಗಳ ಕಾಮಗಾರಿಯನ್ನು ಪ್ರಾರಂಭಿಸಲು ಅಡ್ಡಿಯುಂಟುಮಾಡಿರುತ್ತಾರೆ. ಆದ್ದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಳಂಬವಾಗಿರುತ್ತದೆ.

ಆ) ಮಾರ್ಕಂಡೇಯ ಡ್ಯಾಂ ಪೂರ್ಣಗೊಳ್ಳಲು ಉಳಿದ 2 ಬ್ಲಾಕುಗಳ ಕಾಂಕ್ರೀಟ್ ಕಾಮಗಾರಿಯನ್ನು ಮುಗಿಸಬೇಕಾಗುತ್ತದೆ. ಆದರೆ, ಮುಳುಗಡೆಯಾಗುವ 7 ಗ್ರಾಮಗಳ ಗ್ರಾಮಸ್ಥರ ಪ್ರತಿಭಟನೆಯ ಕಾರಣದಿಂದ ಇದು ಸ್ಥಗಿತಗೊಂಡಿದೆ. ಸದರಿ ಬ್ಲಾಕುಗಳನ್ನು ಪೂರ್ಣಗೊಳಿಸಲು ಪ್ರತಿಭಟಿಸುತ್ತಿರುವ ಈ ಗ್ರಾಮಗಳ ಜನರನ್ನು ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಬೇಕಾಗುವುದು. ಈಗಾಗಲೇ ವಾಘವಾಡ ಹಾಗೂ ಸಂತಿಬಸ್ತವಾಡೆ ಪುನರ್ವಸತಿ ಕೇಂದ್ರದಲ್ಲಿ ನಿರಾಶ್ರತರಾಗುವ ಜನರಿಗೆ ಪೂರ್ಣ ಪ್ರಮಾಣದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಅಲ್ಲದೇ ಗುತ್ತಿ ಹಾಗೂ ರಂಗಧೂಳಿ ಗ್ರಾಮಸ್ಥರಿಗೆ ಹೊಸ ಪುನರ್ವಸತಿ ಕೇಂದ್ರವನ್ನು ಬೆಳಗಾವಿ ತಾಲ್ಲೂಕಿನ ಬಸವನ ಕುಡಚಿ ಗ್ರಾಮದಲ್ಲಿ ಕಲ್ಪಿಸಲು ಯೋಜಿಸಲಾಗಿದ್ದು, ದಿನಾಂಕ 5–7–2004ರಂದು ಭೂಸ್ವಾಧೀನಾಧಿಕಾರಿಗಳಿಂದ, ನಿಗಮದ ಅಧಿಕಾರಿಗಳಿಗೆ ಜಮೀನನ್ನು ಹಸ್ತಾಂತರಿಸಿಕೊಳ್ಳಲಾಗಿದೆ. ಸದರಿ ಜಮೀನುಗಳಲ್ಲಿ ರಸ್ತೆ ನಿರ್ಮಾಣ,

ಗಟಾರ ನಿರ್ಮಾಣ, ಫ್ಲಾಟ್ ಮತ್ತು ಕಟ್ಟಡಗಳು, ನೀರು ಸರಬರಾಜು ಯೋಜನೆಗಳ ಕುರಿತು ಅಂದಾಜು ಪತ್ರಿಕೆ ತಯಾರಿಸಲಾಗುತ್ತಿದೆ. ಶೀಘ್ರ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಈ ಕಾಮಗಾರಿಯನ್ನು ಮಾರ್ಚ್ 2007ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಿದೆ

ಈ) ಅ) ಮಾರ್ಕಂಡೇಯ ಬಲದಂಡೆ ಕಾಲುವೆಯ ಒಟ್ಟು ಉದ್ದವು 71 ಕಿಮೀಗಳಿದ್ದು, ಈ ಪೈಕಿ ರೈಲ್ವೆ ಕ್ರಾಸಿಂಗ್ ಹೊರತುಪಡಿಸಿ ಉಳಿದೆಲ್ಲಾ ಕಾಮಗಾರಿಗಳು ಮುಗಿಯುವ ಹಂತದಲ್ಲಿವೆ. ಈ ಕಾಲುವೆಯ ವಿತರಣಾ ನಾಲೆಯ ಕೆಲಸಗಳು ಪ್ರಗತಿಯಲ್ಲಿದೆ.

ಬ) ಮಾರ್ಕಂಡೇಯ ಎಡದಂಡೆ ಕಾಲುವೆಯ ಒಟ್ಟು ಉದ್ದವು 15 ಕಿಮೀಗಳಿದ್ದು, ಈ ಕಾಲುವೆ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಉ) ಈ ಯೋಜನೆಯಡಿಯಲ್ಲಿ ಬರುವ ಕೆಲಸದ ನಿರ್ಮಾಣದಲ್ಲಿ ಜಮೀನು ಕಳೆದುಕೊಂಡ ರೈತರಿಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಿಡಕಲ್ ಡ್ಯಾಂ ಇವರಿಂದ ಹಂತಹಂತವಾಗಿ ಪರಿಹಾರ ಧನ ವಿತರಿಸಲಾಗುತ್ತಿದೆ. ಹಾಗೂ ಜಲಾಶಯದ ಹಿನ್ನೀರಿನಿಂದ ಬಾಧಿತವಾಗುವ ಮನೆಗಳು ಮತ್ತು ಜಮೀನುಗಳಿಗೂ ಸಹ ಪರಿಹಾರ ಧನ ವಿತರಿಸಿದೆ. ಮನೆ ಕಳೆದುಕೊಂಡ ಗ್ರಾಮಸ್ಥರಿಗೆ ವಾಘವಾಡೆ ಹಾಗೂ ಸಂತಿ-ಬಸ್ತವಾಡ ಪುನರ್ವಸತಿ ಕೇಂದ್ರಗಳಲ್ಲಿ ಫ್ಲಾಟ್‌ಗಳನ್ನು ನಿರ್ಮಿಸಲಾಗಿದೆ. ಗುತ್ತಿ ಹಾಗೂ ರಂಗಧೂಳಿ ಗ್ರಾಮಸ್ಥರಿಗೆ ಬಸವನ ಕೊಡಚಿಯಲ್ಲಿ ಇನ್ನೊಂದು ಪುನರ್ವಸತಿ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ.

ಊ) ಮಾರ್ಕಂಡೇಯ ಯೋಜನೆಯಡಿ ಮುಳುಗಡೆಯಾಗಲಿರುವ ಗುತ್ತಿ ರಂಗದೋಳಿ, ಕೆಂಚನಟ್ಟಿ ಗ್ರಾಮಗಳಿಗೆ ಸಂಬಂಧಿಸಿದಂತೆ ಭೂಸುಧಾರಣೆ ಕಾಯ್ದೆ ಕಲಂ 77ಎ ಪ್ರಕಾರ ರೈತರಿಗೆ ಭೂಮಿ ಮಂಜೂರು ಮಾಡಿ ಉಪ ವಿಭಾಗಾಧಿಕಾರಿಗಳು, ಬೆಳಗಾವಿ ಇವರು ಆದೇಶ ಹೊರಡಿಸಿದ್ದು, ಇವುಗಳ ವಿರುದ್ಧ ಹಿತಾಸಕ್ತಿಯುಳ್ಳವರು ಕರ್ನಾಟಕ ಕಂದಾಯ ಕಾಯ್ದೆಯಡಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿ ವಿಚಾರಣೆ ಮಾಡಿದ ಮಂಡಳಿಯು ಸದರಿ ಪ್ರಕರಣದಲ್ಲಿ ಪುನರ್ ವಿಚಾರಣೆ ನಡೆಸಿ, ತೀರ್ಮಾನಿಸಲು ಉಪ ವಿಭಾಗಾಧಿಕಾರಿಗಳು, ಬೆಳಗಾವಿ ಇವರಿಗೆ ಆದೇಶಿಸಿದ್ದು, ಇದರಂತೆ ಈ ಪ್ರಕರಣಗಳು ವಿಚಾರಣೆಯಲ್ಲಿವೆ. ಈ ಪ್ರಕರಣಗಳು ಅಂತಿಮವಾಗಿ ಇತ್ಯರ್ಥವಾದ ಮೇಲೆ ಅದರಂತೆ, ಪರಿಹಾರ ಧನ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು.

638(477) : ಶ್ರೀ ಶಿವಾನಂದ ನಾಯಕ್ (ಭಟ್ಕಳ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಮಂಕಿಯಲ್ಲಿ ಏತ ನೀರಾವರಿ ಯೋಜನೆಗೆ ಸರ್ಕಾರ ಯಾವಾಗ ಮಂಜೂರಾತಿ ನೀಡಿರುವುದು;

ಆ) ಈ ಯೋಜನೆಗೆ ಮಂಜೂರಾತಿ ನೀಡಿದರೂ ಸಹ ಈವರೆಗೆ ಅನುಷ್ಠಾನಕ್ಕೆ ಬಾರದೆ ಇರಲು ಕಾರಣವೇನು;

ಇ) ಸದರಿ ಯೋಜನೆಯು ಯಾವಾಗ ಅನುಷ್ಠಾನಕ್ಕೆ ಬರಲಿದೆ ಹಾಗೂ ಈ ಯೋಜನೆಯಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿದಂತಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

639(478) : ಶ್ರೀ ಶಿವಾನಂದ ನಾಯಕ್ (ಭಟ್ಕಳ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಶಿರಸಿ ವಿಭಾಗದಿಂದ ಈಗ ಓಡುತ್ತಿರುವ ಒಟ್ಟು ಖಾಸಗಿ ಬಸ್‌ಗಳು ಎಷ್ಟು ಹಾಗೂ ಈ ಬಸ್‌ಗಳ ಮಾಲೀಕರು ಯಾರು;

ಆ) ಖಾಸಗಿ ಬಸ್ಸುಗಳನ್ನು ಓಡಿಸಲು ಇರುವ ನಿಯಮಗಳಾವುವು ಹಾಗೂ ಖಾಸಗಿ ಬಸ್ಸುಗಳನ್ನು ಓಡಿಸುವ ಮೊದಲು ಸರಕಾರ ಸಾರ್ವಜನಿಕರಿಗೆ ಸೂಚನೆ ನೀಡಿತ್ತೇ;

ಇ) ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕುಗಳ ಗ್ರಾಮೀಣ ಭಾಗದಲ್ಲಿ ಬಸ್ಸುಗಳು ಸರಿಯಾಗಿ ಓಡಾಡದಿರುವುದು ಹಾಗೂ ಕೆಲವು ಮಾರ್ಗಗಳು ರದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಾಡಿಗೆ ಆಧಾರದ ಮೇಲೆ ಓಡುತ್ತಿರುವ ಖಾಸಗಿ ಬಸ್‌ಗಳ ಸಂಖ್ಯೆ. 103

**ಮಾಲೀಕರುಗಳ ಹೆಸರು ಕೆಳಗಿನಂತಿದೆ:**

1) ಶ್ರೀ ಕೆ. ಪದ್ಮಾಕರ ಪ್ರಭು 2) ಶ್ರೀ ಕೆ. ಪ್ರಭಾಕರ ಪ್ರಭು 3) ಶ್ರೀ ಮಹಮ್ಮದ್ ಮತೀನ್4) ಶ್ರೀ ಅಬ್ದುಲ್ ಅಜೀಜ್ 5) ಶ್ರೀ ಅಬ್ದುಲ್ ಮುನಾಫ್ 6) ಶ್ರೀ ಎಂ.ಎಸ್. ಪಾಲಾಕ್ಷ 7) ಶ್ರೀ ಸತೀಶ್ ಕುಮಾರ್ ಶೆಟ್ಟಿ 8) ಶ್ರೀ ಅಶೋಕ್ ಶೆಟ್ಟಿ, 9) ಶ್ರೀ ಭಾಸ್ಕರ್ ಕೆ.ಎನ್. 10) ಶ್ರೀ ಸಿ.ಎಲ್. ಶ್ರೀಧರ್ 11) ಶ್ರೀ ಕೆ. ಮುರಳೀಧರ 12) ಶ್ರೀ ಡಿ ನಿತ್ಯಾನಂದ, 13) ಶ್ರೀಮತಿ ರೋಶಿನಿ ಭಟ್ 14) ಶ್ರೀ ಎಸ್.ಜೆ.ನಾಯಕ್ 15) ಶ್ರೀ ಎಲ್.ಎಚ್. ಪಟಗಾರ 16) ಶ್ರೀ ಅಬ್ದುಲ್ ರಜಾಕ್, 17) ಶ್ರೀ ಬಿ.ವಿ. ಮೋಹನ್‌ರಾಜ್ 18) ಶ್ರೀಮತಿ ಎನ್.ಜಿ. ನಾರ್ವೇಕರ್ 19) ಶ್ರೀ ಮಂಜೂನಾಥ್ ಮಳಗಿ 20) ಶ್ರೀ ಎಂ.ಎಸ್. ನಾಯಕ್ 21) ಶ್ರೀ ದಿಲೀಫ್ ರೋಖಡೆ

ಆ) ಖಾಸಗಿ ಬಸ್ಸುಗಳನ್ನು ಬಾಡಿಗೆ ಆಧಾರದ ಮೇಲೆ ನಿರ್ದಿಷ್ಟವಾದ ನಿಭಂದನೆಗೊಳಪಟ್ಟು ಪಡೆಯಲಾಗುತ್ತದೆ. ಖಾಸಗಿ ಬಸ್ಸುಗಳನ್ನು ಬಾಡಿಗೆ ಆಧಾರದ

ಮೇಲೆ ಓಡಿಸುವ ಮೊದಲು, ಕರ್ನಾಟಕ ಸರ್ಕಾರದ ಗೆಜೆಟ್ ಹಾಗೂ ದಿನಪತ್ರಿಕೆಗಳಲ್ಲಿ ಟೆಂಡರ್ ವಿವರಗಳನ್ನು ಪ್ರಕಟಿಸುವ ಮೂಲಕ ಸಾರ್ವಜನಿಕರಿಗೆ ಸೂಚನೆ ನೀಡಲಾಗಿತ್ತು.

ಇ) ಬಸ್‌ಗಳು ಸರಿಯಾಗಿ ಓಡಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಎರಡು ಅನುಸೂಚಿಗಳನ್ನು ರದ್ದು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ) ಮಳೆಗಾಲ ಮುಗಿದ ನಂತರ ರದ್ದು ಪಡಿಸಿರುವ ಎರಡು ಅನುಸೂಚಿಗಳನ್ನು ಮೊದಲಿನಂತೆ ಪ್ರಾರಂಭಿಸಲಾಗುವುದು.

640(779) : ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ ವತಿಯಿಂದ ಆಲಮಟ್ಟಿ ಜಲಾಶಯ ಹಾಗೂ ಅದರ ಹಿನ್ನೀರಿನಿಂದ ಬಾಧಿತಗೊಂಡವರನ್ನು ಸ್ಥಳಾಂತರಗೊಳಿಸಿರುವ ಬಾಗಲಕೋಟೆ ಪವನಗರದಲ್ಲಿನ ಕೋಲಾರದ ರಸ್ತೆಗಳನ್ನು ಡಾಂಬರೀಕರಣಗೊಳಿಸಲಾಗಿದೆಯೇ;

ಆ) ಡಾಂಬರೀಕರಣಗೊಳಿಸದಿದ್ದಲ್ಲಿ, ಅದಕ್ಕೆ ಕಾರಣಗಳೇನು;

ಇ) ಯಾವಾಗ ಈ ಕಾರ್ಯ ಪೂರ್ತಿಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕೋಲಾರ ಪುನರ್ ವಸತಿ ಕೇಂದ್ರ ಮುಖ್ಯ ರಸ್ತೆಗಳಿಗೆ ಕಡಿಕರಣಗೊಳಿಸಿದ್ದು ಈ ಪೈಕಿ ಪ್ರಮುಖವಾದ ಸಂಪರ್ಕಗೊಳಿಸುವ ರಸ್ತೆಗಳಿಗೆ (3.9 ಕಿಮೀ) ಡಾಂಬರೀಕರಣಗೊಳಿಸಲಾಗಿದೆ.

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ನಿರ್ಮಿಸಲಾದ ಪುನರ್ ವಸತಿ ಕೇಂದ್ರಗಳಲ್ಲಿ ಆಂತರೀಕ ರಸ್ತೆಗಳಿಗೆ ಡಾಂಬರೀಕರಣ ಮಾಡಿರುವುದಿಲ್ಲ. ಕೇವಲ ಪುನರ್ ವಸತಿ ಕೇಂದ್ರಗಳಿಂದ ಮಾತ್ರ ಡಾಂಬರೀಕರಣ ಮಾಡಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

641(781) : ಶ್ರೀ ಶಿವಾನಂದ ಪಾಟೀಲ್ (ಬಸವನಬಾಗೇವಾಡಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ತಾಲ್ಲೂಕು ಮತ್ತು ಬಸವನಬಾಗೇವಾಡಿ ತಾಲ್ಲೂಕಿನ ಸುಮಾರು 42,000 ಹೆ. ಪ್ರದೇಶ ಆರ್.ಎಲ್. 590 ನಿಂದ 640 ಆರ್.ಎಲ್. ವರೆಗಿನ ಜಮೀನುಗಳು ನೀರಾವರಿಯಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮುಳುವಾಡ ಏತ ನೀರಾವರಿಯಲ್ಲಿ ಬರತಕ್ಕಂತಹ ಸದರಿ ಜಮೀನುಗಳಿಗೆ ಸರ್ವೆ ಸಮೀಕ್ಷಾ ಕಾರ್ಯ ಕೈಗೊಳ್ಳುವ ಸಲುವಾಗಿ ಹಿಂದಿನ ಭಾರೀ ನೀರಾವರಿ ಸಚಿವರು ಆದೇಶಿಸಿದ್ದು ನಿಜವೇ;

ಇ) ಸರ್ವೇ ಕಾರ್ಯ ಈಗ ಯಾವ ಹಂತದಲ್ಲಿದೆ;

ಈ) ಸರ್ವೆ ಕಾರ್ಯ ಪ್ರಗತಿಯಲ್ಲಿದ್ದರೆ ಸರ್ಕಾರ ಯಾವಾಗ ಕಾರ್ಯಗತಗೊಳಿಸುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು.

ಆ) ಹೌದು.

ಇ) ಅಂತಿಮ ಹಂತದಲ್ಲಿರುತ್ತದೆ.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

642(789) : ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಾರಿಗೆ ಇಲಾಖೆ ಗ್ರಾಮಾಂತರ ಸಾರಿಗೆಯನ್ನು ಕಡೆಗಣಿಸಿರುವುದು ಏಕೆ ಹಾಗೂ ಇದರ ಬಗ್ಗೆ ಸರ್ಕಾರವು ಗಮನ ಹರಿಸಿಲ್ಲದಿರುವುದೇಕೆ;

ಆ) ಗಮನ ಹರಿಸಿದ್ದಲ್ಲಿ, ಏನು ಕ್ರಮ ಕೈಗೊಳ್ಳಲಾಗಿದೆ;

ಇ) ಗೌರಿಬಿದನೂರು ತಾಲ್ಲೂಕಿನ ಹಲವು ಗ್ರಾಮಗಳಿಗೆ ಸಾರಿಗೆ ವ್ಯವಸ್ಥೆಯೇ ಇಲ್ಲದೇ ಇರುವ ಬಗ್ಗೆ ಸರ್ಕಾರಕ್ಕೆ ಹಲವಾರು ದೂರುಗಳನ್ನು ಸಲ್ಲಿಸಿದ್ದರೂ ಅದರ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು

ಈ) ಗೌರಿಬಿದನೂರು ತಾಲ್ಲೂಕಿನಲ್ಲಿ ಗ್ರಾಮೀಣ ಆಂತರಿಕ ಮಾರ್ಗಗಳನ್ನು ರದ್ದುಪಡಿಸಿದಕ್ಕೆ ಕಾರಣವೇನು;

ಉ) ಅವುಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕಡೆಗಣಿಸಿರುವುದಿಲ್ಲ.

ಆ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಿಂದ 20 ಕಿ.ಮೀ. ವ್ಯಾಪ್ತಿಯಲ್ಲಿ ಖಾಸಗಿಯವರು ರಹದಾರಿ ಪಡೆದು ಸಾರಿಗೆ ಸೇವೆ ಒದಗಿಸಲು ಅವಕಾಶ ಕಲ್ಪಿಸಿದ್ದು, ಗ್ರಾಮೀಣ ಜನತೆಯ ಬೇಡಿಕೆಗಳನ್ನು ಗುಣವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಾರಿಗೆ ಸೇವೆಯನ್ನು ಒದಗಿಸಿರುತ್ತದೆ.

ಇ) ಪ್ರಸ್ತುತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಗೌರಿಬಿದನೂರು ತಾಲ್ಲೂಕಿನ ರಾಷ್ಟ್ರೀಕೃತ ವಲಯದಲ್ಲಿರುವ ಎಲ್ಲಾ 89 ಗ್ರಾಮಗಳಿಗೂ ಸಾರಿಗೆ ಸೌಲಭ್ಯ ಕಲ್ಪಿಸಿದೆ. ರಾಷ್ಟ್ರೀಕೃತವಲ್ಲದ ವಲಯದಲ್ಲಿ ಬರುವ 122 ಗ್ರಾಮಗಳ ಪೈಕಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಯಾಣಿಕರ ಒತ್ತಡದ ಅನುಗುಣವಾಗಿ 78 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಿದೆ.

ಈ) ಆದಾಯ ತುಂಬಾ ಕಡಿಮೆ ಬಂದ ಕಾರಣ, 3 ಆಂತರಿಕ ಮಾರ್ಗಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿದೆ. ಪ್ರಸ್ತುತ, ಈ ಮಾರ್ಗಗಳಲ್ಲಿ ಖಾಸಗಿ ಪ್ರವರ್ತಕರು ಸಾರಿಗೆ ಸೌಲಭ್ಯವನ್ನು ಕಲ್ಪಿಸಿರುತ್ತಾರೆ.

ಉ) ಅಕ್ಟೋಬರ್ 2004ರಿಂದ ಪ್ರಾರಂಭಿಸಲಾಗುವುದು.

643(201) : ಶ್ರೀಮತಿ ಸುನೀತ ವೀರಪ್ಪಗೌಡ ಜೆ. (ಬನ್ನೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನಾದ್ಯಂತ ಟ್ರಾನ್ಸ್‌ಫಾರ್ಮರ್‌ಗಳು (ಟಿ.ಸಿ.)ಗಳು ಪದೇ ಪದೇ ಕೆಟ್ಟು ಹೋಗುತ್ತಿರುವುದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಟ್ರಾನ್ಸ್‌ಫಾರ್ಮರ್‌ಗಳು (ಟಿ.ಸಿ.)ಗಳು ಹೀಗೆ ಪದೇ ಪದೇ ಕೆಟ್ಟು ಹೋಗಲು ಕಾರಣವೇನು;

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕಾರಣಗಳು:

1. ಪ್ರಕೃತಿ ವಿಕೋಪ-ಸಿಡಿಲು, ಮಳೆ, ಗಾಳಿ ಇತ್ಯಾದಿಗಳಿಂದ ಹಾನಿಯಾಗುವುದು.

2. ಅನಧಿಕೃತ ಪಂಪ್‌ಸೆಟ್ಟುಗಳು ಅಧಿಕವಾಗಿರುವುದು.

ಇ) 2004-05ನೇ ಸಾಲಿನಲ್ಲಿ ದಿನಾಂಕ 24-7-2004ರವರೆಗೆ 73 ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾಗಿದ್ದು. ಅದರಲ್ಲಿ 67 ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಿಸಿ ಅಳವಡಿಸಲಾಗಿರುತ್ತದೆ. ಉಳಿದ 6 ಟ್ರಾನ್ಸ್‌ಫಾರ್ಮರ್‌ಗಳನ್ನು ರಿಪೇರಿ ಮಾಡಿ ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗಿರುತ್ತದೆ.

ಟಿ. ನರಸೀಪುರ ತಾಲ್ಲೂಕಿನಲ್ಲಿ ಎ.ಪಿ.ಡಿ.ಆರ್.ಪಿ. ಯೋಜನೆಯಡಿ ಕಳೆದ ಎರಡು ವರ್ಷಗಳಲ್ಲಿ ಅಂದರೆ 2002-03 ಮತ್ತು 2003-04ನೇ ಸಾಲಿನಲ್ಲಿ ಅಧಿಕವಾಗಿ 285 ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗಿದೆ. ಹಾಗೂ ಪ್ರಸ್ತುತ 2004-05ನೇ ಸಾಲಿನಲ್ಲಿ ಹೆಚ್ಚುವರಿಯಾಗಿ 21 ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸಲಾಗುವುದು.

644(203) : ಶ್ರೀಮತಿ ಸುನಿತ ವೀರಪ್ಪಗೌಡ ಜೆ. (ಬನ್ನೂರು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಿಂದ ಬನ್ನೂರು ಮಾರ್ಗವಾಗಿ ಟಿ. ನರಸೀಪುರ ಪಟ್ಟಣಕ್ಕೆ ಬೆಳಗಿನ ವೇಳೆಯಲ್ಲಿ ಮತ್ತು ಟಿ. ನರಸೀಪುರ ಟೌನ್‌ನಿಂದ ಬನ್ನೂರು ಮಾರ್ಗವಾಗಿ ಬೆಂಗಳೂರಿಗೆ ಮಧ್ಯಾಹ್ನ ನಂತರದ ವೇಳೆಯಲ್ಲಿ ಬಸ್ಸಿನ ಸೌಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ವೇಳೆಯಲ್ಲಿ ಬಸ್ಸಿನ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹೌದು.

ಆ) ಹೌದು.

645(599) : ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ), ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಚಾವತ್ ನ್ಯಾಯ ಮಂಡಳಿಯಿಂದ ಕರ್ನಾಟಕಕ್ಕೆ ಹಂಚಿಕೆಯಾದ ನೀರು ಎಷ್ಟು;

ಆ) ಅದರಲ್ಲಿ ಗುಲ್ಬರ್ಗಾ ಹಾಗೂ ಬೀದರ್ ಜಿಲ್ಲೆಯ ಅಪ್ಪರ ಮುಲ್ಲಾಮಾಂ ಲೋವರ್ ಮುಲ್ಲಾಮಾಂ ಹಾಗೂ ಹತ್ತಿಕುಣಿ ನೀರಾವರಿ ಯೋಜನೆಗಳಿಗೆ ಹಂಚಿಕೆಯಾದ ನೀರಿನ ಪ್ರಮಾಣ ಎಷ್ಟು;

ಇ) ಮೊದಲು ಹಂಚಿಕೆಯಾದ ನೀರಿನಲ್ಲಿ ಯಾವುದಾದರೂ ಬದಲಾವಣೆಯಾಗಿದೆಯೇ; ಅದಕ್ಕೆ ಕಾರಣಗಳೇನು; (ವಿವರ ತಿಳಿಸುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಬಚಾವತ್ ನ್ಯಾಯಮಂಡಳಿಯಿಂದ ಕರ್ನಾಟಕ ರಾಜ್ಯಕ್ಕೆ 734 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಿದೆ.

ಆ) ಬಚಾವತ್ ನ್ಯಾಯಮಂಡಳಿಯು ಈ ಯೋಜನೆಗಳಿಗೆ ಕೆಳಗಿನಂತೆ ನೀರಿನ ಹಂಚಿಕೆ ಮಾಡಿದೆ.

| | | |
|---|---|---|
| 1. | ಅಪ್ಪರ್ ಮುಲ್ಲಾಮಾಂ | 1.30 ಟಿ.ಎಂ.ಸಿ. |
| 2. | ಲೋಯರ್ ಮುಲ್ಲಾಮಾಂ | 4.40 ಟಿ.ಎಂ.ಸಿ. |
| 3. | ಹತ್ತಿಕೋಣಿ | 0.50 ಟಿ.ಎಂ.ಸಿ. |

ಇ) ಹೌದು. ಈ ಯೋಜನೆಗಳಿಗೆ ನೀರಿನ ಹಂಚಿಕೆಯಲ್ಲಿ ಕೆಳಗಿನಂತೆ ಬದಲಾವಣೆ ಮಾಡಲಾಗಿದೆ.

| | | |
|---|---|---|
| 1. | ಅಪ್ಪರ್ ಮುಲ್ಲಾಮಾಂ | 1.08 ಟಿ.ಎಂ.ಸಿ. |
| 2. | ಲೋಯರ್ ಮುಲ್ಲಾಮಾಂ | 2.61 ಟಿ.ಎಂ.ಸಿ. |
| 3. | ಹತ್ತಿಕೋಣಿ | 0.40 ಟಿ.ಎಂ.ಸಿ. |

ಕೃಷ್ಣಾ ಕೊಳ್ಳದ ಸ್ಕೀಂ 'ಎ'ರಡಿಯಲ್ಲಿ ಲಭ್ಯವಿರುವ ನೀರಿನ ಸದ್ಬಳಕೆಗಾಗಿ ಅಧ್ಯಾಯನ ನಡೆಸಿ, ವರದಿ ಶಿಫಾರಸ್ಸು ಮಾಡಲು ರಚಿಸಲಾಗಿದ್ದ ಮಾಸ್ಟರ್ ಪ್ಲಾನ್ ಸಮಿತಿಯು, ಸದರಿ ಯೋಜನೆಗಳ ಅಣೆಕಟ್ಟುಗಳಲ್ಲಿ ಲಭ್ಯವಿರುವ ನೀರಿನ ಬಗ್ಗೆ ಅಧ್ಯಯನವನ್ನು ಮಾಡಿ, ಸದರಿ ಯೋಜನೆಗಳಿಗೆ ಮೇಲಿನಂತೆ ಪರಿಷ್ಕೃತ ನೀರಿನ ಹಂಚಿಕೆ ಮಾಡಿರುತ್ತದೆ.

646(808) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳೆಂದು ಕರೆಯಲ್ಪಡುವ ಮಾರ್ಗಗಳ ಉದ್ದದ ವಿಸ್ತೀರ್ಣವೆಷ್ಟು; (ಪೂರ್ಣ ವಿವರಗಳನ್ನು ಒದಗಿಸುವುದು);

ಆ) ಕಳೆದ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಎಷ್ಟು ವಿಸ್ತೀರ್ಣದ ಯೋಜನೆಯನ್ನು ಯಾವ ಯಾವ ಮಾರ್ಗಗಳಿಗೆ ಮಂಜೂರಾತಿಯನ್ನು ಕೇಂದ್ರ ಸರ್ಕಾರ ನೀಡಿದೆ;

ಇ) ಬೆಂಗಳೂರು–ಎಂ ಎಂ ಹಿಲ್ಸ್, ಬೆಂಗಳೂರು–ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕೆಲಸವು ಯಾವ ಹಂತದಲ್ಲಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದಲ್ಲಿ 14 ರಾಷ್ಟ್ರೀಯ ಹೆದ್ದಾರಿಗಳಿವೆ. ಅವುಗಳ ಒಟ್ಟು ಉದ್ದ 3973 ಕಿಮೀಗಳಿವೆ (ವಿವರ ಅನುಬಂಧ 1ರಲ್ಲಿ ಲಗತ್ತಿಸಿದೆ).

ರಾಜ್ಯದಲ್ಲಿ 105 ರಾಜ್ಯ ಹೆದ್ದಾರಿಗಳಿದ್ದು ಅವುಗಳ ಉದ್ದ 17075 ಕಿಮೀ.ಗಳಾಗಿರುತ್ತದೆ. (ವಿವರ ಅನುಬಂಧ 2ರಲ್ಲಿ ಲಗತ್ತಿಸಿದೆ).

ಆ) ಕಳೆದ ಮೂರು ವರ್ಷಗಳಲ್ಲಿ ಎರಡು (2) ರಾಷ್ಟ್ರೀಯ ಹೆದ್ದಾರಿಗಳಿಗೆ ಮಂಜೂರಾತಿಯನ್ನು ಕೇಂದ್ರ ಸರ್ಕಾರ ನೀಡಿದೆ : ಅವುಗಳ ಉದ್ದ 247 ಕಿಮೀ. ಈ ಹೆದ್ದಾರಿಗಳ ವಿವರಗಳು ಕೆಳಕಂಡಂತಿದೆ.

1. ಮೆಟ್ಟುಪಾಳ್ಯಂ – ಊಟಿ–ಗುಡ್ಲೂರು–ಗುಂಡ್ಲುಪೇಟೆ
   ರಾ.ಹೆ. 67 ಇ – 27 ಕಿಮೀ (ಕರ್ನಾಟಕದಲ್ಲಿ)
2. ಬಿಜಾಪುರ–ಜೇವರ್ಗಿ–ಹುಮನಾಬಾದ್–ರಾ.ಹೆ. 218 ಇ–220 ಕಿಮೀ.

ಇ) ಬೆಂಗಳೂರು ಮಲೈ ಮಹದೇಶ್ವರ ಬೆಟ್ಟ ರಸ್ತೆಯು ಬೆಂಗಳೂರಿನಿಂದ ಕೊಳ್ಳೆಗಾಲದವರೆಗೆ ರಾಷ್ಟ್ರೀಯ ಹೆದ್ದಾರಿ 209ರ ವ್ಯಾಪ್ತಿಗೆ ಒಳಪಡುತ್ತದೆ. ಕೊಳ್ಳೆಗಾಲದಿಂದ ಮಲೈ ಮಹದೇಶ್ವರ ಬೆಟ್ಟದವರೆಗೆ ರಾಜ್ಯ ಹೆದ್ದಾರಿಯಾಗಿದ್ದು ರಸ್ತೆಯಲ್ಲಿನ ಆಯ್ದ ಭಾಗಗಳಲ್ಲಿ ಗುಂಡಿ ಮುಚ್ಚುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು ಚಾಮರಾಜನಗರ ರಸ್ತೆಯು ರಾ.ಹೆ. 209.

## ಅನುಬಂಧ–1

## ಕರ್ನಾಟಕ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳು

| ಕ್ರಮ ಸಂ. | ರಾಹೆ ಸಂ. | ವಿವರ | ಒಟ್ಟು ಉದ್ದದ ಕಿ.ಮೀಗಳಲ್ಲಿ |
|---|---|---|---|
| 1 | 2 | 3 | 4 |
| 1. | 4 | ಮದ್ರಾಸ್–ಕೋಲಾರ–ಬೆಂಗಳೂರು–ಹುಬ್ಬಳ್ಳಿ–ಬೆಳಗಾಂ–ಪೂನಾ–ಬಾಂಬೆ | 700 |
| 2 | 4ಎ | ಬೆಳಗಾಂ–ಖಾನಾಪುರ–ಅನ್‌ಮೋಡ್–ಪಣಜಿ | 84 |
| 3 | 7 | ಬನಾರಸ್–ನಾಗಪುರ್–ಹೈದರಾಬಾದ್–ಬೆಂಗಳೂರು ಹೊಸೂರು–ಕೃಷ್ಣಗಿರಿ–ಮಧುರೈ–ಕೇಪ್ ಕಮೋರಿಯನ್ | 128 |
| 4. | 9 | ಪೂನಾ–ಶೋಲಾಪುರ–ಹುಮನಾಬಾದ್–ಹೈದರಾಬಾದ್–ವಿಜಯವಾಡ | 75 |

| 1 | 2 | 3 | 4 |
|---|---|---|---|
| 5. | 13 | ಶೋಲಾಪುರ–ಚಿತ್ರದುರ್ಗ–ಶಿವಮೊಗ್ಗ–ಶೃಂಗೇರಿ–ಕಾರ್ಕಳ–ಮಂಗಳೂರು | 715 |
| 6. | 17 | ಪನವೇಲ್–ಪಣಜಿಮ್–ಕಾರವಾರ–ಉಡುಪಿ–ಮಂಗಳೂರು–ಕಣ್ಣಾನೂರು–ತ್ರಿಚೂರ್ | 297 |
| 7. | 48 | ಬೆಂಗಳೂರು–ನೆಲಮಂಗಲ–ಕುಣಿಗಲ್–ಹಾಸನ ಮಂಗಳೂರು | 320 |
| 8. | 63 | ಅಂಕೋಲಾ–ಹುಬ್ಬಳ್ಳಿ–ಹೊಸಪೇಟೆ–ಬಳ್ಳಾರಿ ಗೂಟಿ | 369 |
| 9. | 67 (ಮುಂದು ವರೆದುದು) | ಮೆಟ್ಟುಪಾಳ್ಯಂ–ಊಟಿ–ಗುಡ್ಲೂರು–ಗುಂಡ್ಲುಪೇಟೆ–ಬಳಿ ರಾಹೆ 212ರ ಜಂಕ್ಷನ್ | 27 |
| 10. | 206 | ತುಮಕೂರು–ಶಿವಮೊಗ್ಗ–ಹೊನ್ನಾವರ | 370 |
| 11. | 207 | ಹೊಸೂರು (ರಾಹೆ 4ರ ಮೇಲೆ) ಸರ್ಜಾಪುರ–ದೇವನಹಳ್ಳಿ–ದಾಬಸ್‌ಪೇಟೆ | 122 |
| 12. | 209 | ದಿಂಡಿಗಲ್–ಪಲ್ಲಾಚಿ–ಕೊಯಮತ್ತೂರು–ಅನ್ನೂರು–ಚಾಮರಾಜನಗರ–ಕೊಳ್ಳೇಗಾಲ–ಬೆಂಗಳೂರು | 203 |
| 13. | 212 | ರಾಹೆ 17ರ ಕೇರಳದ ಕೋಜಿಕೋಡ್ ಬಳಿ ಮೈಸೂರು ಮೂಲಕ ರಾಹೆ 209ರ ಕರ್ನಾಟಕದ ಕೊಳ್ಳೇಗಾಲಕ್ಕೆ ಸೇರುವ ರಸ್ತೆ | 150 |
| 14. | 218 | ಬಿಜಾಪುರ–ಹುಬ್ಬಳ್ಳಿ ರಸ್ತೆ | 193 |
| | 218 (ಮುಂದು ವರೆದುದು) | ಬಿಜಾಪುರ–ಜೇವರ್ಗಿ–ಹುಮನಾಬಾದ್ | 220 |
| | | ಒಟ್ಟು | 3973 |

647(810) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಬಿನಿ ಎರಡನೇ ಹಂತದ ಕಾಮಗಾರಿ ಕೆಲಸದ ಶಂಕುಸ್ಥಾಪನೆ ಯಾವಾಗ ಅಯಿತು;

ಆ) ಸದರಿ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು;

ಇ) ಪ್ರಸ್ತುತ ಸದರಿ ಯೋಜನೆಯ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಇಲ್ಲಿಯವರೆವಿಗೆ ಖರ್ಚು ಮಾಡಲಾಗಿರುವ ಹಣದ ಮೊತ್ತವೆಷ್ಟು;

ಉ) ಇಲ್ಲದಿದ್ದಲ್ಲಿ, ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಊ) ಸದರಿ ಕಾಮಗಾರಿ ಕೆಲಸಗಳನ್ನು ಪೂರೈಸಲು ಸರ್ಕಾರ ಯಾವುದಾದರೂ ಕಾಲಮಿತಿಯನ್ನು ಹಾಕಿಕೊಳ್ಳಲು ಉದ್ದೇಶಿಸಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಶಂಕುಸ್ಥಾಪನೆಯು 1987ರಲ್ಲಿ ಆಯಿತು.

ಆ) ಕಬಿನಿ ಸಮಗ್ರ ಯೋಜನೆಯ ಪರಿಷ್ಕೃತ ಯೋಜನೆಯಲ್ಲಿ ಏತ ನೀರಾವರಿ ಯೋಜನೆಗೆ ರೂ. 702 ಕೋಟಿಗಳ ಮೊತ್ತವನ್ನು ಒದಗಿಸಿದೆ.

ಇ) ಸದರಿ ಯೋಜನೆಯ ಸರ್ವೇ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ) ಇಲ್ಲಿಯವರೆವಿಗೆ ಸರ್ವೇ ಕಾಮಗಾರಿಗಾಗಿ ರೂ. 4.08 ಲಕ್ಷ ಖರ್ಚು ಮಾಡಲಾಗಿದೆ.

ಉ) ಸರ್ವೇ ಕಾರ್ಯಗಳನ್ನು ಪೂರ್ಣಗೊಳಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಊ) ಸದರಿ ಕಾಮಗಾರಿ ಕೆಲಸಗಳನ್ನು 2010ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

648(812) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಧಾನ ಸೌಧದ ಪಕ್ಕದಲ್ಲಿ ಭಾರೀ ಕಟ್ಟಡದ ಅವಶ್ಯಕತೆ ಇತ್ತೇ;

ಆ) ಇದರಿಂದ ವಿಧಾನ ಸೌಧದ ಪ್ರತಿಷ್ಠೆಗೆ ಕುಂದುಂಟಾಗುವುದಿಲ್ಲವೇ;

ಇ) ಸದರಿ ಕಟ್ಟಡದ ನಿರ್ಮಾಣಕ್ಕಾಗಿ ತಗಲುವ ವೆಚ್ಚವೆಷ್ಟು;

ಈ) ಇದುವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಉ) ಸದರಿ ಕಟ್ಟಡದ ಪೂರ್ಣ ಕಾಮಗಾರಿಗಳನ್ನು ಮುಗಿಸಲು ಹಾಕಿಕೊಂಡಿರುವ ಕಾಲಮಿತಿ ಯಾವುದು;

ಊ) ಸದರಿ ಕಟ್ಟಡಕ್ಕೆ ಕೆಂಗಲ್ ಹನುಮಂತಯ್ಯನವರ ಹೆಸರಿನಲ್ಲಿ "ಕೆಂಗಲ್ ಹನುಮಂತಯ್ಯ" ಭವನವೆಂದು ನಾಮಕರಣ ಮಾಡಲು ಸರ್ಕಾರ ತೀರ್ಮಾನಿಸಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು)

ಅ) ಹೌದು.

ಆ) ಇಲ್ಲಾ.

ಇ) ಸದರಿ ಕಟ್ಟಡದ ನಿರ್ಮಾಣಕ್ಕಾಗಿ ತಗಲುವ ವೆಚ್ಚ ಸುಮಾರು ರೂ. 125.00 ಕೋಟಿಗಳು.

ಈ) ಜೂನ್ 2004ರ ಅಂತ್ಯದವರೆಗೆ ರೂ. 88.36 ಕೋಟಿಗಳು ವೆಚ್ಚವಾಗಿರುತ್ತದೆ.

ಉ) ಟೆಂಡರ್ ಕರಾರಿನಂತೆ ಕಟ್ಟಡದ ಮೂಲ ಗುತ್ತಿಗೆ ಕಾಮಗಾರಿಗಳು ದಿನಾಂಕ 31-8-2004ರ ಒಳಗೆ ಪೂರ್ಣಗೊಳ್ಳುತ್ತವೆ. ಹಾಗೂ ಇತರೆ ಕಾಮಗಾರಿಗಳು ಪೂರ್ಣಗೊಳ್ಳುವ ವಿವಿಧ ಹಂತಗಳಲ್ಲಿವೆ.

ಊ) ಇಲ್ಲ. ಸಧ್ಯಕ್ಕೆ ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

649(814) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜ ನಗರದಲ್ಲಿ ವಿದ್ಯುತ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಕೊರತೆಯನ್ನು ನೀಗಿಸಲು ಸರ್ಕಾರ ಹಮ್ಮಿಕೊಂಡಿರುವ ಕ್ರಮಗಳೇನು;

ಇ) ಚಾಮರಾಜನಗರದಲ್ಲಿನ ಸುಮಾರು ಒಂದು ನೂರಕ್ಕೂ ಹೆಚ್ಚು ಹೊಸ ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲದೆ ಕಗ್ಗತ್ತಲಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು ಬಂದಿದೆ.

ಆ) ಚಾಮರಾಜನಗರ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಈಗಾಗಲೇ ಈ ಕೆಳಕಂಡ ಕ್ರಮಗಳನ್ನು ಕೈಗೊಂಡು, ಪೂರ್ಣಗೊಳಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ಪೂರ್ಣಗೊಂಡ ಕೆಲಸದ ವಿವರಗಳು | ಚಾಲಗೊಳಿಸಿದ ದಿನಾಂಕ / ವರ್ಷ |
|---|---|---|
| 1. | ಚಾಮರಾಜನಗರದಲ್ಲಿ 220/66 ಕೆ.ವಿ. ವಿದ್ಯುತ್ ಸಬ್–ಸ್ಟೇಷನನ್ನು ನಿರ್ಮಾಣ ಮಾಡಿ ಚಾಲನೆಗೊಳಿಸಲಾಗಿದೆ | 30–3–2002 |
| 2. | ಬೊಮ್ಮಲಾಪುರದಲ್ಲಿ 66 ಕೆ.ವಿ. ವಿದ್ಯುತ್ ಸಬ್–ಸ್ಟೇಷನನ್ನು ನಿರ್ಮಾಣ ಮಾಡಿ ಚಾಲನೆಗೊಳಿಸಲಾಗಿದೆ. | 9–9–2002 |
| 3. | ಗುಂಡ್ಲುಪೇಟೆಯ 66 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ನಿನ ಸಾಮರ್ಥ್ಯವನ್ನು 14.3 ಎಂ.ವಿ.ಎ. ನಿಂದ 25 ಎಂ.ವಿ.ಎ ಹೆಚ್ಚಳಗೊಳಿಸಲಾಗಿದೆ. | 2002–03 ಮತ್ತು 2003–04 |
| 4. | ಹನೂರಿನಲ್ಲಿರುವ 66 ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ನಿನ ಸಾಮರ್ಥ್ಯವನ್ನು 5 ಎಂ.ವಿ.ಎ.ಗೆ ಹೆಚ್ಚಳಗೊಳಿಸಲಾಗಿದೆ. | 26–12–2002 |

ಈ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸುಧಾರಿಸಲು ಈ ಕೆಳಕಂಡ ಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

| ಕ್ರಮ ಸಂಖ್ಯೆ | ಕಾಮಗಾರಿಯ ವಿವರ | ಷರಾ |
|---|---|---|
| 1. | ಕೊಳ್ಳೇಗಾಲದಲ್ಲಿ 220 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನ ನಿರ್ಮಾಣ | ಕೆಲಸ ಪ್ರಗತಿಯಲ್ಲಿದೆ. |
| 2. | ಪಿ.ಜಿ. ಪಾಳ್ಯದಲ್ಲಿ 66 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನ ನಿರ್ಮಾಣ | ಟೆಂಡರ್ ಹಂತದಲ್ಲಿದೆ |
| 3. | ಮರಟ ಹಳ್ಳಿಯಲ್ಲಿ 66 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನ ನಿರ್ಮಾಣ | ಟೆಂಡರ್ ಹಂತದಲ್ಲಿದೆ |

ಇ) ಹೌದು ಗಮನಕ್ಕೆ ಬಂದಿದೆ.

ಈ) ಈ ಹೊಸ ಬಡಾವಣೆಗಳನ್ನು ವಿದ್ಯುದೀಕರಣಗೊಳಿಸಲು ಈಗಾಗಲೇ ಕ್ರಮ ಜರುಗಿಸಲಾಗಿದ್ದು, ಕಾಮಗಾರಿಗಳನ್ನು "ಟರ್ನ್ ಕೀ" ಆಧಾರದಲ್ಲಿ ಕೈಗೊಳ್ಳಲು ನಿರ್ಧರಿಸಲಾಗಿದೆ. ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಗುತ್ತಿಗೆದಾರರನ್ನು ಗೊತ್ತುಪಡಿಸಿ ವಿದ್ಯುದೀಕರಣ ಕಾರ್ಯವನ್ನು ಕೈಗೊಳ್ಳಲು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

651(643) : ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಾದ್ಯಂತ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಸಂಪೂರ್ನ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇವನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ದುರಸ್ತಿಗಾಗಿ ನಿಗದಿಪಡಿಸಿರುವ ಹಣವೆಷ್ಟು;

ಈ) ಅದನ್ನು ಯಾವಾಗ ಪೂರೈಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಸ್ತೆಗಳ ಕೆಲವು ಭಾಗಗಳು ದುರಸ್ತಿಪಡಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ,ಈ) ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದು ಇದಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ ಹಾಗೂ ಈ ಕಾರ್ಯಕ್ರಮವನ್ನು ಸಧ್ಯದಲ್ಲಿ ಪೂರ್ಣಗೊಳಿಸಿ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಲಾಗುವುದು.

653(871) : ಶ್ರೀ ಯಡಿಯೂರಪ್ಪ ಬಿ.ಎಸ್. (ಶಿಕಾರಿಪುರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿದ್ಯುತ್ ಉತ್ಪಾದನೆ ಮಾಡುವ ಸಕ್ಕರೆ ಕಾರ್ಖಾನೆಗಳು ರಾಜ್ಯದಲ್ಲಿ ಎಷ್ಟಿವೆ ಹಾಗೂ ಅವು ಯಾವುವು;

ಆ) ಪ್ರತಿ ಕಾರ್ಖಾನೆಗಳು ಉತ್ಪಾದಿಸುವ ವಿದ್ಯುತ್ ಪ್ರಮಾಣ ಎಷ್ಟು;

ಇ) ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುವ ವಿದ್ಯುತ್‌ಗೆ ಆಗಲಿರುವ ವೆಚ್ಚ ಎಷ್ಟು ಹಾಗೂ ಸರ್ಕಾರ ಈ ಕಾರ್ಖಾನೆಗಳು ಉತ್ಪಾದಿಸುವ ವಿದ್ಯುತ್ ಖರೀದಿಸಲು ನಿರ್ಬಂಧ ಹೇರಿದೆಯೇ;

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು;

ಉ) ಈ ನಿರ್ಬಂಧವನ್ನು ತೆಗೆದು ಹಾಕುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಅ ಮತ್ತು ಆ

ರಾಜ್ಯದಲ್ಲಿ ಪ್ರಸ್ತುತ ಸಹ ವಿದ್ಯುತ್ ಉತ್ಪಾದನಾ ಘಟಕಗಳನ್ನು ಹೊಂದಿರುವ 13 ಸಕ್ಕರೆ ಕಾರ್ಖಾನೆಗಳು ವಿದ್ಯುತ್ತನ್ನು ರಫ್ತು ಮಾಡುತ್ತಿವೆ. ಸಹ ವಿದ್ಯುತ್ ಉತ್ಪಾದನಾ ಘಟಕಗಳನ್ನು ಹೊಂದಿರುವ ಅಂತಹ ಸಕ್ಕರೆ ಕಾರ್ಖಾನೆಗಳ ಹೆಸರುಗಳು ಮತ್ತು 2003-04ನೇ ಸಾಲಿನಲ್ಲಿ ಪ್ರತಿಯೊಂದು ಘಟಕದಿಂದ ಖರೀದಿಸಿದ ವಿದ್ಯುತ್ತಿನ ಪ್ರಮಾಣದ ವಿವರಗಳು ಈ ಕೆಳಕಂಡಂತಿದೆ:

| ಕ್ರಮ ಸಂಖ್ಯೆ | ಸಹ ವಿದ್ಯುತ್ ಉತ್ಪಾದನೆ ಘಟಕವನ್ನು ಹೊಂದಿರುವ ಸಕ್ಕರೆ ಕಾರ್ಖಾನೆಯ ಹೆಸರು | 2003-04ನೇ ಸಾಲಿನಲ್ಲಿ ಕರ್ನಾಟಕದ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಖರೀದಿಸಿದ ವಿದ್ಯುತ್ತಿನ ಪ್ರಮಾಣ ದಶಲಕ್ಷ ಯೂನಿಟ್ಟುಗಳಲ್ಲಿ |
|---|---|---|
| 1. | ಶಾಮನೂರು ಸಕ್ಕರೆ | 111.895 |
| 2. | ಐ.ಸಿ.ಎಲ್. ಸಕ್ಕರೆ | 14.187 |
| 3. | ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ನಿಯಮಿತ (ಹೆಚ್ಚುವರಿ ಸೇರಿಸಿ) | 76.271 |
| 4. | ಶ್ರೀ ರೇಣುಕಾ ಸಕ್ಕರೆ ಕಾರ್ಖಾನೆ | 45.962 |
| 5. | ಶ್ರೀ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆ | 34.069 |
| 6. | ಉಗಾರ್ ಕೋ-ಜನರೇಷನ್ ಪ್ಲಾಂಟ್ (I & II) | 55.482 |
| 7. | ರೈತರ ಸಹಕಾರಿ ಸಕ್ಕರೆ ಕಾರ್ಖಾನೆ | 2.544 |
| 8. | ಜಮಖಂಡಿ ಸಕ್ಕರೆ ನಿಯಮಿತ | 13.465 |
| 9. | **ಗೋದಾವರಿ ಸಕ್ಕರೆ ನಿಯಮಿತ** | 96.095 |
| 10. | ಜೆಮ್ ಸಕ್ಕರೆ ಕಾರ್ಖಾನೆ | 27.590 |
| 11. | ದಾವಣಗೆರೆ ಸಕ್ಕರೆ ಕಂಪನಿ ನಿಯಮಿತ | 1,687 |
| 12. | ದೂದ್ ಗಂಗಾ ಕೆ.ಎಸ್.ಎಸ್.ಕೆ.ಎಸ್. | - |
| 13. | ಎಸ್.ಸಿ.ಎಂ. ಸಕ್ಕರೆ | - |
| | ಒಟ್ಟು | **479,227** |

**ಟಿಪ್ಪಣಿ :** ಸಕ್ಕರೆ ಕಾರ್ಖಾನೆಗಳು ಉತ್ಪಾದನೆ ಮಾಡುವ ಒಟ್ಟು ವಿದ್ಯುತ್ತಿನ ಪ್ರಮುಖಿಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಮಾನಿಟರ್ ಮಾಡುತ್ತಿಲ್ಲ.

ಇ,ಈ) ವಿದ್ಯುತ್ ಉತ್ಪಾದನೆಗೆ ತಗಲುವ ವೆಚ್ಚವು ವಿದ್ಯುತ್ ಉತ್ಪಾದಕರಿಗೆ ಮಾತ್ರ ತಿಳಿದಿರುತ್ತದೆ. ಸಾಮಾನ್ಯವಾಗಿ, ವಿದ್ಯುತ್ ಜಾಲಕ್ಕೆ ವಿದ್ಯುತ್ ಪೂರೈಸಲು ಈ ಸಕ್ಕರೆ ಕಾರ್ಖಾನೆಗಳಿಗೆ ಯಾವುದೇ ನಿರ್ಭಂದ ಇರುವುದಿಲ್ಲ. ಆದಾಗ್ಯೂ ರಾತ್ರಿ ವೇಳೆಯಲ್ಲಿ ವಿದ್ಯುತ್‌ನ ಬೇಡಿಕೆಯು ಕಡಿಮೆ ಇರುವುದರಿಂದ. ಹೆಚ್ಚಿನ ವೋಲ್ಟೇಜ್ ಮತ್ತು ಹೆಚ್ಚಿನ ಫ್ರೀಕ್ವೆನ್ಸಿಗಳನ್ನು ನಿಯಂತ್ರಿಸುವ ಹಾಗು ವಿದ್ಯುತ್ ಜಾಲದ ಸ್ಥಿರತೆಯನ್ನು ಕಾಪಾಡುವ ದೃಷ್ಟಿಯಿಂದ ರಾತ್ರಿಯ ಸಮಯವಾದ 11 ಗಂಟೆಯಿಂದ ಮಾರನೇ ದಿನ ಬೆಳಿಗ್ಗೆ 7 ಗಂಟೆವರೆಗೆ ತಮ್ಮ ವಿದ್ಯುತ್ ಉತ್ಪಾದನೆಯ ಶೇಕಡ 60ರಷ್ಟಕೆ ವಿದ್ಯುತ್ ರಫ್ತನ್ನು ದಿನಾಂಕ 18-6-2004 ರಿಂದ ಸೀಮಿತಗೊಳಿಸಲು ಸಹ ವಿದ್ಯುತ್ ಉತ್ಪಾದಕಾ ಘಟಕಗಳಿಗೆ ತಿಳಿಸಲಾಗಿದೆ.

ಉ) ಇದನ್ನು ಸರ್ಕಾರವು ಪರಿಶೀಲಿಸುತ್ತದೆ.

654(674) : ಶ್ರೀ ಯಡಿಯೂರಪ್ಪ ಬಿ.ಎಸ್. (ಶಿಕಾರಿಪುರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ಹಾಗೂ ಅನೇಕ ವರ್ಷಗಳಿಂದ ಕುಂಠಿತಗೊಂಡಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಯಾವುವು;

ಆ) ಈ ಯೋಜನೆಗಳು ಯಾವಾಗ ಆರಂಭವಾಗಿವೆ ಹಾಗೂ ಯಾವಾಗ ಮುಗಿಯಬೇಕಾಗಿತ್ತು;

ಇ) ಈಗಿನ ಪ್ರಕಾರ ಯಾವಾಗ ಮುಗಿಯಲಿದೆ; (ವಿವರಗಳನ್ನು ಯೋಜನೆವಾರು ನೀಡುವುದು)

ಈ) ಸದರಿ ಯೋಜನೆಗಳಿಗೆ ಆರಂಭದಲ್ಲಿ ಮಾಡಿದ್ದ ಅಂದಾಜು ಎಷ್ಟು ಹಾಗೂ ಈಗಿನ ಪರಿಷ್ಕೃತ ಅಂದಾಜು ಎಷ್ಟು (ಯೋಜನಾವಾರು ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ಹಾಗೂ ಅನೇಕ ವರ್ಷಗಳಿಂದ *ಕುಂಠಿತಗೊಂಡಿರುವ ಭಾರಿ ನೀರಾವರಿ ಯೋಜನೆಗಳ ಸಂಖ್ಯೆ 20 ಹಾಗೂ* ಮಧ್ಯಮ ನೀರಾವರಿ ಯೋಜನೆಗಳ ಸಂಖ್ಯೆ 18 ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಯೋಜನೆಗಳ ಆರಂಭಿಕ ಹಾಗೂ ಮುಗಿದ/ಮುಗಿಯಬೇಕಾಗಿದ್ದ ವರ್ಷದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಯೋಜನಾವಾರು ಅಂದಾಜು ಮತ್ತು ಪರಿಷ್ಕೃತ ಮೊತ್ತದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

## ಅನುಬಂಧ

## ಪ್ರಗತಿಯಲ್ಲಿರುವ ಹಾಗೂ ಕುಂಠಿತಗೊಂಡಿರುವ ನೀರಾವರಿ ಯೋಜನೆಗಳ ವಿವರಗಳು ಭಾರಿ ಯೋಜನೆಗಳು

| ಕ್ರ. ಸಂ. | ಯೋಜನೆ | ಅಂದಾಜು ಮೊತ್ತ | ಪರಿಷ್ಕೃತ ಅಂದಾಜು ಮೊತ್ತ | ಆರಂಭಿಕ ವರ್ಷ | ಪೂರ್ಣಗೊಳ್ಳುವ ವರ್ಷ (ನಿಗದಿತ) | (ಉದ್ದೇಶಿತ) |
|---|---|---|---|---|---|---|
| 1. | ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ-1 ಮತ್ತು 2 | 357324 | 856841 | 1964 | 2000 | 2005 |
| 2. | ತುಂಗಾ ಮೇಲ್ದಂಡೆ | 27140 | 105233 | 1991 | 2002 | 2007 |
| 3. | ತುಂಗಾಭದ್ರ ಎಡದಂಡೆ ಕಾಲುವೆ | 19444 | 27511 | 1945 | ಮುಗಿದಿದೆ | ಮುಗಿದೆದೆ |
| 4. | ತುಂಗಭದ್ರಾ ಬಲಮೇಲ್ದಂಡೆ ಕಾಲುವೆ | 2500 | 10500 | 1959 | ಮುಗಿದಿದೆ | ಮುಗಿದಿದೆ |
| 5. | ಬೆಣ್ಣೆತೋರಾ | 7323 | 28597 | 1992 | 1999 | 2004 |
| 6. | ಭೀಮಾ ಏತ | 9417 | 15300 | 1992 | 2000 | 2006 |
| 7. | ಹಿಪ್ಪರಗಿ | 18670 | 90100 | 1973 | 1993 | 2007 |
| 8. | ಮಲಪ್ರಭಾ | 16209 | 81600 | 1960 | 1981 | 2007 |
| 9. | ಘಟಪ್ರಭಾ-3 | 9054 | 94700 | 1972 | 1985 | 2007 |
| 10. | ದೂಧ್‌ಗಂಗಾ | 12400 | 12400 | 1992 | 2005 | 2007 |
| 11. | ಮಾರ್ಕಂಡೇಯ | 12000 | 20985 | 1998 | 2002 | 2007 |
| 12. | ಸಿಂಗಟಲೂರು | 59550 | 78700 | 1993 | 2000 | 2008 |
| 13. | ಡಿ. ದೇವರಾಜು ಅರಸು ನಾಲೆ * | 1350 | 32600 | 1979 | 1990 | 2005 |
| 14. | ಹಾರಂಗಿ * | 12200 | 40000 | 1964 | 1974 | 2005 |
| 15. | ಹೇಮಾವತಿ * | 58800 | 371000 | 1968 | | 2040 |
| 16. | ಯಗಚಿ * | 3538 | 30250 | 1983 | | 2005 |
| 17. | ಕಬಿನಿ * | 2480 | 123300 | 1959 | | 2010 |
| 18. | ಕೆ.ಆರ್. ಸಾಗರ ಆಧುನೀಕರಣ * | 1480 | 35000 | 1979 | | 2005 |
| 19. | ಕಾರಂಜಾ | 990.00 | 45000 | 1969 | 1997 | 2004 |
| 20. | ವಾರಾಹಿ | 940 | 34500 | 1980 | 1995 | 2006 |
| | **ಮಧ್ಯಮ ಯೋಜನೆಗಳು** | | | | | |
| 1. | ಅಮರ್ಜಾ | 570 | 11946 | 1978 | 1982 | 2004 |

| 1 | 2 | 3 | 4 | 5 | 6 | 7 |
|---|---|---|---|---|---|---|
| 2. | ಇಟಗಿ–ಸಾಸಲವಾಡ ಏತ | 427 | 800 | 1992 | 2001 | 2005 |
| 3. | ಬಸಾಪುರ ಏತ | 455 | 936 | 1992 | 2001 | 2005 |
| 4. | ಗಂಡೋರಿನಾಲಾ | 6600 | 13295 | 1993 | 2001 | 2006 |
| 5. | ಹಿರೇಹಳ್ಳ | 635 | 17850 | 1977 | 1980 | 2004 |
| 6. | ಮುಲ್ಲಾಮಾರಿ ಕೆಳದಂಡೆ | 4500 | 14836 | 1973 | 1982 | 2006 |
| 7. | ಮಸ್ಕಿನಾಲಾ | 2357 | 4700 | 1976 | 1980 | 2004 |
| 8. | ಹರಿನಾಲಾ | 2695 | 5556 | 1998 | 2002 | 2005 |
| 9. | ಅರ್ಕಾವತಿ * | 2260 | | 1975 | 1989 | 2005 |
| 10. | ಚಿಕ್ಲಿಹೊಳೆ * | 340 | 1800 | 1978 | | 2005 |
| 11. | ಹುಚ್ಚನಕೊಪ್ಪಲು * | 690 | 2750 | 1991 | | 2005 |
| 12. | ಇಗ್ಗಲೂರು * | 1075 | 6965 | 1979 | 1990 | 2005 |
| 13. | ಕಾಮಸಮುದ್ರ * | 630 | 2875 | 1985 | | 2005 |
| 14. | ಮಂಚನಬೆಲೆ * | 1850 | 7465 | 1970 | 1982 | 2005 |
| 15. | ತಾರಕ * | 170 | 5100 | 1970 | | 2005 |
| 16. | ಉಡುತೊರೆಹಳ್ಳ * | 3230 | 15610 | 1978 | 1995 | 2005 |
| 17. | ವಾಟೆಹೊಳೆ * | 205 | 5202 | 1977 | | 2005 |
| 18. | ಚುಲ್ಕಿನಾಲಾ | 380 | 15276 | 1976 | 1982 | 2004 |

*ಕಾವೇರಿ ಕೊಳ್ಳದ ಯೋಜನೆಗಳಾದುದರಿಂದ ಪೂರ್ಣಗೊಳ್ಳುವ ವರ್ಷ ಭಾಗಶ: ತೋರಿಸಿಲ್ಲ.

657(867) : ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಪುರಸಭೆ, ಪಟ್ಟಣ ಪಂಚಾಯಿತಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಈ ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿಗಳ ಜನಸಂಖ್ಯೆ ಎಷ್ಟು ಹಾಗೂ ಇವುಗಳಿಂದ ಬರುವ ಆದಾಯವೆಷ್ಟು; (ವಿವರಗಳನ್ನು ಒದಗಿಸುವುದು)

ಇ) ಅರಸೀಕೆರೆ ತಾಲ್ಲೂಕು ಬಾಣಾವರವನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಈ) ಅರಸೀಕೆರೆ ಬಾಣಾವರ ಹಾಗೂ ಇತರೆ ದೊಡ್ಡ ಪಟ್ಟಣಗಳಿಗೆ ಕುಡಿಯುವ ನೀರು ಹಾಗೂ ಇತರೆ ಮೂಲಭೂತ ಸೌಕರ್ಯಕ್ಕಾಗಿ ಕೈಗೊಂಡಿರುವ ಕ್ರಮಗಳೇನು;

ಉ) ಹೇಮಾವತಿಯಿಂದ ಇದಕ್ಕಾಗಿ ಎಷ್ಟು ಸಾಮರ್ಥ್ಯದ ನೀರನ್ನು ಹರಿಸಲಾಗುತ್ತಿದೆ.

ಊ) ಇದು ಎಷ್ಟು ಪಟ್ಟಣಗಳಿಗೆ ಅನುಕೂಲ ಕಲ್ಪಿಸಿದೆ (ವಿವರ ಒದಗಿಸುವುದು)?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು)

ಅ) **ಪುರಸಭೆ–4**

ಅರಸೀಕೆರೆ, ಚನ್ನರಾಯಪಟ್ಟಣ, ಹೊಳೆನರಸೀಪುರ

**ಪಟ್ಟಣ ಪಂಚಾಯಿತಿ–3**

ಆಲೂರು, ಬೇಲೂರು, ಅರಕಲಗೂಡು

ಆ)

| | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ಆದಾಯ (ಲಕ್ಷಗಳಲ್ಲಿ) |
|---|---|---|
| **ಪುರಸಭೆ–4** | | |
| ಅರಸೀಕೆರೆ | 45,166 | 360.060 |
| ಚನ್ನರಾಯಪಟ್ಟಣ | 34,515 | 322.190 |
| ಹೊಳೆನರಸೀಪುರ | 27,024 | 348.200 |
| ಸಕಲೇಶಪುರ | 23,176 | 320.022 |
| **ಪಟ್ಟಣ ಪಂಚಾಯಿತಿ–3** | | |
| ಆಲೂರು | 6,133 | 51,910 |
| ಬೇಲೂರು | 20,228 | 265.477 |
| ಅರಕಲಗೂಡು | 15,169 | 129,630 |

ಇ) ಇಲ್ಲ.

ಈ) 1. ಬಾಣಾವರವು ಹಾಲಿ ಗ್ರಾಮ ಪಂಚಾಯಿತಿಯಾಗಿದ್ದು ಜಿಲ್ಲಾ ಪಂಚಾಯಿತಿ ಅಧೀನದಲ್ಲಿರುತ್ತದೆ.

2. ಅರಸೀಕೆರೆಗೆ ಸಂಬಂಧಿಸಿದಂತೆ ಈಗಾಗಲೇ ತಿಪಟೂರು ಬಳಿ ಇರುವ ಈಚನೂರು ಕೆರೆಯಿಂದ ಒಂದನೇ ಹಂತದ ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ಪೂರೈಸಿ ಚಾಲನೆಗೊಳಿಸಿ ನೀರು ಸರಬರಾಜು ಮಾಡಲಾಗುತ್ತಿದೆ.

3. *ನಾಗತಿಹಳ್ಳಿ ಬಳಿ ಹಳೆಯ ನೀರು ಸರಬರಾಜು ಯೋಜನೆಯನ್ನು* ಪುನಶ್ಚೇತನಗೊಳಿಸಿ ನೀರು ಸರಬರಾಜು ಮಾಡಲಾಗುತ್ತಿದೆ.

4. ಪಟ್ಟಣದಲ್ಲಿ ಈಗಾಗಲೇ ಒಳಚರಂಡಿ ವ್ಯವಸ್ಥೆ ಹಾಗೂ ಇತರೆ ಮೂಲಭೂತ ಸೌಕರ್ಯಗಳು ಲಭ್ಯವಿದ್ದು ವಿವಿಧ ಅಭಿವೃದ್ಧಿ ಯೋಜನೆಗಳಡಿಯಲ್ಲಿ ಕೈಗೊಳ್ಳಲಾಗಿದೆ.

ಉ) ಹೇಮಾವತಿ ಬಲದಂಡೆ ಕಾಲುವೆಯಿಂದ ಪ್ರತಿ ವರ್ಷ ಜೂನ್–ಜುಲೈ–ಆಗಸ್ಟ್– ಡಿಸೆಂಬರ್–ಜನವರಿ–ಫೆಬ್ರವರಿ ತಿಂಗಳಲ್ಲಿ 2000 ಕ್ಯೂಸೆಕ್ಸ್‌ಗಳ ನೀರನ್ನು ಬಿಡಲಾಗುತ್ತಿದ್ದು ಇದರಿಂದ ಈಚನೂರು ಕೆರೆಯನ್ನು ತುಂಬಿಸಿ ನೀರು ಸರಬರಾಜು

ಮಾಡಲಾಗುತ್ತಿರುತ್ತದೆ. (ಈಚನೂರು ಕೆರೆಯ ಸಾಮರ್ಥ್ಯ 450 ಎಂ.ಜಿ)

ಊ) ಇದು ಅರಸೀಕೆರೆ, ತಿಪಟೂರು ಪಟ್ಟಣಗಳು ಮತ್ತು ತುಮಕೂರು ನಗರಕ್ಕೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಿದೆ.

658(869) : ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಹಾಗೂ ಬೃಹತ್ ಹಾಗೂ ಸಣ್ಣ ಕೈಗಾರಿಕೆಗಳವಾರು ವಿವರ ಒದಗಿಸುವುದು)

ಆ) ಇವುಗಳಲ್ಲಿ ಲಾಭದಲ್ಲಿರುವ ಕೈಗಾರಿಕೆಗಳೆಷ್ಟು ಹಾಗೂ ನಷ್ಟದಲ್ಲಿರುವ ಕೈಗಾರಿಕೆಗಳೆಷ್ಟು;

ಇ) ನಷ್ಟದಲ್ಲಿರುವ ಕೈಗಾರಿಕೆಗಳ ಪುನಃಶ್ಚೇತನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಕೊಡುವ ಸಬ್ಸಿಡಿ (ಸಹಾಯಧನ) ಮಂಜೂರಾತಿಗಾಗಿ ಬಾಕಿ ಇರುವ ಪ್ರಕರಣಗಳೆಷ್ಟು ಹಾಗೂ ಎಷ್ಟು ಹಣ ಬಾಕಿ ಇದೆ;

ಉ) ಯಾವಾಗ ಮಂಜೂರು ಮಾಡಿ ಬಿಡುಗಡೆಗೊಳಿಸಲಾಗುವುದು;

ಊ) ವಿಳಂಭಕ್ಕೆ ಕಾರಣಗಳೇನು (ವಿವರ ಒದಗಿಸುವುದು)

ಋ) ಅರಸೀಕೆರೆ ತಾಲ್ಲೂಕಿನಲ್ಲಿರುವ ಸಣ್ಣ ಕೈಗಾರಿಕೆಗಳ ಸ್ಥಿತಿ-ಗತಿ ಬಗ್ಗೆ ಸಹಾಯ ಧನದ ಬಾಕಿ ಕುರಿತು ವಿವರಗಳನ್ನು ನೀಡುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದಿನಾಂಕ 31-3-2004ರ ಅಂತ್ಯಕ್ಕೆ ವಿವರಗಳು ಈ ಕೆಳಕಂಡಂತಿವೆ:

| | ಬೃಹತ್ ಮತ್ತು ಮಧ್ಯಮ ಪ್ರಮಾಣ ಕೈಗಾರಿಕೆಗಳು | ನೋಂದಾಯಿಸಲಾದ ಸಣ್ಣ ಕೈಗಾರಿಕೆಗಳು |
|---|---|---|
| 1. ಆಲೂರು | – | 519 |
| 2. ಅರಕಲಗೂಡು | – | 761 |
| 3. ಅರಸೀಕೆರೆ | 1 | 1,447 |
| 4. ಬೇಲೂರು | – | 765 |
| 5. ಚನ್ನರಾಯಪಟ್ಟಣ | 2 | 1,247 |
| 6. ಹಾಸನ | 9 | 2,274 |
| 7. ಹೊಳೆನರಸೀಪುರ | – | 869 |
| 8. ಸಕಲೇಶಪುರ | – | 970 |
| **ಒಟ್ಟು** | **12** | **8,852** |

ಆ) ಹಾಸನ ಜಿಲ್ಲೆಯಲ್ಲಿ 3 ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಮುಚ್ಚಿರುತ್ತವೆ. ಉಳಿದ 12 ಘಟಕಗಳು ಕಾರ್ಯಾಚರಣೆಯಲ್ಲಿರುತ್ತವೆ.

ನಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಆದರೆ ಮೂರನೇ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಗಣತಿ ಪ್ರಾಥಮಿಕ ವರದಿ ಪ್ರಕಾರ ಶೇ. 67.35ರಷ್ಟು ಸಣ್ಣ ಕೈಗಾರಿಕೆಗಳು ಮಾತ್ರ ಕಾರ್ಯನಿರ್ವಹಿಸುತ್ತಿರುವುದಾಗಿಯೂ ಉಳಿದ ಘಟಕಗಳು ರೋಗಗ್ರಸ್ತ ಅಥವಾ ರೋಗಗ್ರಸ್ತವಾಗುವ ಹಾದಿಯಲ್ಲಿ ಅಥವಾ ಮುಚ್ಚಿರುವುದಾಗಿಯೂ ತಿಳಿದು ಬಂದಿದೆ.

ಇ) ನಷ್ಟದಲ್ಲಿರುವ ಕೈಗಾರಿಕೆಗಳ ಪುನ:ಶ್ಚೇತನಕ್ಕೆ ಯಾವುದೇ ಯೋಜನೆಗಳು ಇರುವುದಿಲ್ಲ. ಆದರೆ ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಗಳಂತೆ ಗುರುತಿಸಿ ಸಣ್ಣ ಕೈಗಾರಿಕೆಗಳನ್ನು ರೋಗಗ್ರಸ್ತವೆಂದು ಘೋಷಿಸಿ ನಂತರ ಪುನ:ಶ್ಚೇತನಗೊಳಿಸಲಾದ ಕೈಗಾರಿಕೆಗಳಿಗೆ ರೋಗಗ್ರಸ್ತ ಕೈಗಾರಿಕೆಗಳ ಪುನ:ಶ್ಚೇತನ ಕಾರ್ಯಕ್ರಮದಡಿಯಲ್ಲಿ ರಿಯಾಯಿತಿ ಸೌಲಭ್ಯಗಳನ್ನು ನೀಡಲಾಗುತ್ತದೆ.

ಸರ್ಕಾರದಿಂದ ಈ ಕೆಳಕಂಡ ರಿಯಾಯಿತಿ ಹಾಗೂ ಸವಲತ್ತುಗಳನ್ನು ನೀಡಲಾಗುತ್ತಿದೆ.

1. ಘಟಕದ ಪುನ:ಶ್ಚೇತನ ಯೋಜನಾ ವೆಚ್ಚದ ಶೇ. 25ರಷ್ಟು ಹಣವನ್ನು ರೂ. 2.50 ಲಕ್ಷಗಳ ಮಿತಿಗೊಳಪಟ್ಟು ಬಡ್ಡಿ ರಹಿತ ಬೀಜಧನ ಸಾಲದ ರೂಪದಲ್ಲಿ ನೀಡಲಾಗುತ್ತದೆ.

2. ಕೆ.ಪಿ.ಟಿ.ಸಿ.ಎಲ್. ಹಾಗೂ ಇತರ ಪ್ರಾಂತೀಯ ವಿದ್ಯುತ್ ಸರಬರಾಜು ಕಂಪನಿಗಳು ಘಟಕವು ಮುಚ್ಚಿದ ಅವಧಿಯಲ್ಲಿ ನಿಗದಿತ ದರ ಹಾಗೂ ಬೇಡಿಕೆ ದರ ಪಾವತಿಯಿಂದ ವಿನಾಯಿತಿ ನೀಡುವುದು.

3. ವಿದ್ಯುತ್ ಬಾಕಿ ದರಗಳನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ. 6ರ ಬಡ್ಡಿ ದರದಲ್ಲಿ ಪಾವತಿಸಲು ಅವಕಾಶ.

4. ಘಟಕವು ಮುಚ್ಚಿದ ಅವಧಿಗೆ ಬಡ್ಡಿ ಪಾವತಿಯಿಂದ ವಿನಾಯಿತಿ.

5. ಕೆಐಎಡಿಬಿ : ಕೆಎಸ್ಎಸ್ಐಡಿಸಿ : ಕಿಯೋನಿಕ್ಸ್‌ಗಳ ಬಾಕಿ ಸಾಲ ಪಾವತಿಯನ್ನು ಒಂದು ವರ್ಷಗಳವರೆಗೆ ಮುಂದೂಡಿ ಅದನ್ನು ನಾಲ್ಕು ವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

6. ಅಭಿವೃದ್ಧಿ ಸಾಲ ಮರು ಪಾವತಿಯನ್ನು ಕೈಗಾರಿಕೆಯು ಪುನ:ಶ್ಚೇತನಗೊಳಿಸಿದ ನಂತರ ಮೂರು ವರ್ಷದ ಅವಧಿಯಲ್ಲಿ ಬಡ್ಡಿ ಇಲ್ಲದೆ ಪಾವತಿಸಲು ಅವಕಾಶ.

7. ವಾಣಿಜ್ಯ ತೆರಿಗೆ ಬಾಕಿಯನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ. 6ರ ಬಡ್ಡಿ ದರದಲ್ಲಿ ಮರುಪಾವತಿಸಲು ಅವಕಾಶ.

8. ಘಟಕವು ಪುನ:ಶ್ಚೇತನಗೊಂಡ ನಂತರ ಮುಂದೆ ಪಾವತಿಸಬೇಕಾದ ವಾಣಿಜ್ಯ ತೆರಿಗೆಯನ್ನು ಬಡ್ಡಿ ಇಲ್ಲದೆ ಮೂರು ವರ್ಷಗಳವರೆಗೆ ಮುಂದೂಡಲು ಅವಕಾಶ. ಹಾಗೂ ಈ ಮೊತ್ತವನ್ನು ಮೂರು ವಾರ್ಷಿಕ ಕಂತುಗಳಲ್ಲಿ ಪ್ರಸ್ತುತ ತೆರಿಗೆಯೊಡನೆ ಪಾವತಿಸಬೇಕಾಗುತ್ತದೆ.

ಈ) ಸಹಾಯಧನ ಮಂಜೂರಾತಿಗಾಗಿ ಪ್ರಕರಣಗಳು ಬಾಕಿ ಇರುವುದಿಲ್ಲ. ದಿನಾಂಕ 31-3-04ರಲ್ಲಿ ಇದ್ದಂತೆ 19,555 ಕೈಗಾರಿಕಾ ಘಟಕಗಳಿಗೆ ಮಂಜೂರಾದ ಸಹಾಯಧನ ಬಾಕಿ ರೂ. 429.43 ಕೋಟಿಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

ಉ) ಮೇಲ್ಕಂಡ 19,555 ಕೈಗಾರಿಕೆ ಘಟಕಗಳಿಗೆ ಸಹಾಯಧನ ರೂ. 429.43 ಕೋಟಿಗಳನ್ನು ಮಂಜೂರು ಮಾಡಲಾಗಿದೆ. ಈಗಾಗಲೇ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ರೂ. 81.00 ಕೋಟಿಗಳನ್ನು ಬಾಂಡ್‌ಗಳ ಮೂಲಕ ಹಣ ಸಂಗ್ರಹಿಸಿದ್ದು, ಮಂಜೂರಾದ ಘಟಕಗಳಿಗೆ ವಿತರಿಸಲು ಕ್ರಮ ಜರುಗಿಸಲಾಗುತ್ತಿದೆ.

ಊ) ಅನುದಾನದ ಕೊರತೆಯಿಂದ ಕಾಲಕಾಲಕ್ಕೆ ಬಿಡುಗಡೆಯಾಗದೇ ಇರುವ ಕಾರಣ ಸಹಾಯಧನ ಬಿಡುಗಡೆಯಲ್ಲಿ ವಿಳಂಬವಾಗಿರುತ್ತದೆ.

ಋ) ದಿನಾಂಕ 31-3-04ರಲ್ಲಿದ್ದಂತೆ ಅರಸೀಕೆರೆ ತಾಲ್ಲೂಕಿನಲ್ಲಿ 1,447 ಸಣ್ಣ ಕೈಗಾರಿಕೆಗಳು ನೋಂದಣಿಯಾಗಿರುತ್ತದೆ. ಮೂರನೇ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಗಣತಿ ವರದಿ ಪ್ರಕಾರ ಇವುಗಳಲ್ಲಿ 113 ಘಟಕಗಳು ಮುಚ್ಚಿರುವುದಾಗಿ ತಿಳಿದು ಬಂದಿದೆ.

ಅರಸೀಕೆರೆ ತಾಲ್ಲೂಕಿನಲ್ಲಿ 132 ಸಣ್ಣ ಕೈಗಾರಿಕೆಗಳಿಗೆ ರೂ. 1,30,23,050-00 ಸಹಾಯಧನ ಬಿಡುಗಡೆಗೆ ಬಾಕಿ ಉಳಿದಿರುತ್ತದೆ.

659(485) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಬಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ನಗರದಲ್ಲಿ ಕಳೆದ ಮೂರು ವರ್ಷದ ಹಿಂದೆ ನಿರ್ಮಿಸಿದ ಕಾಂಕ್ರೀಟ್ ರಸ್ತೆ ಕಳಪೆ ಕಾಮಗಾರಿಯಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರ ಇವುಗಳ ದುರಸ್ಥಿಗೆ ಯಾವ ಕ್ರಮ ಕೈಗೊಂಡಿದೆ;

ಇ) ಈ ಕಾಮಗಾರಿಗಾಗಿ ಸರ್ಕಾರ ವೆಚ್ಚ ಮಾಡಿದ ಹಣವೆಷ್ಟು; ಮತ್ತು ಯಾವ ಸಂಸ್ಥೆಯ ಮೂಲಕ ಈ ಕಾಮಗಾರಿಗಳನ್ನು ಮಾಡಿಸಲಾಗಿದೆ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಹೌದು.

ಆ) ಈ ಬಗ್ಗೆ ಕಾಮಗಾರಿಯನ್ನು ನಿರ್ವಹಿಸಿದ ಮೆ: ಚಂದ್ರಗಿರಿ ಕನ್ಸಸ್ಟ್ರಕ್ಷನ್ ಕಂ. ಲಿಮಿಟೆಡ್ ಇವರ ವೆಚ್ಚದಲ್ಲಿಯೇ ಆಗಿರುವ ಲೋಪವನ್ನು ಸರಿಪಡಿಸಲು ಕ್ರಮ ವಹಿಸಲಾಗಿದೆ.

ಇ) ಈ ಕಾಮಗಾರಿಗೆ ರೂ.25.00 ಲಕ್ಷಗಳಷ್ಟು ವೆಚ್ಚವಾಗಿದ್ದು ಇದನ್ನು ಹುಡ್ಕೋ ಸಾಲದ ನೆರವಿನಿಂದ ಭರಿಸಲಾಗಿದೆ. ಈ ಕಾಮಗಾರಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ಮೆ: ಚಂದ್ರಗಿರಿ ಕನ್ಸಸ್ಟ್ರಕ್ಷನ್ಸ್ ಕಂ. ಲಿಮಿಟೆಡ್‌ರವರ ಮೂಲಕ ಮಾಡಿಸಿದ್ದಾರೆ.

660(881) : ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ನಗರಕ್ಕೆ ಭೇತ್ರಿ ಬಳಿಯಿರುವ ಕಾವೇರಿ ನದಿಯಿಂದ ನೀರು ಸರಬರಾಜು ಮಾಡುವ ಯೋಜನೆಯನ್ನು ಸಮರ್ಪಕವಾಗಿ ಯೋಜಿಸದೆ ಇರುವುದರಿಂದ ಕೋಟ್ಯಾಂತರ ರೂಪಾಯಿ ವೆಚ್ಚದ ಈ ಯೋಜನೆ ಇನ್ನೂ ಪೂರ್ಣ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಈ ರೀತಿಯ ಅಸಮರ್ಪಕ ಯೋಜನೆಗೆ ಕಾರಣಕರ್ತರಾದವರು ಯಾರು; ಮತ್ತು ಅವರ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಇ) ಈವರೆವಿಗೂ ಈ ಯೋಜನೆಗಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ವಿರಾಜಪೇಟೆ ನೀರು ಸರಬರಾಜು ಯೋಜನೆಯನ್ನು ಕಾವೇರಿ ನದಿ ಮೂಲದಿಂದ ರೂ.260.00 ಲಕ್ಷಗಳಿಗೆ ತಯಾರಿಸಲಾಗಿದೆ. ಸದರಿ ಯೋಜನೆಯಡಿ 2031ನೇ ಇಸವಿಗೆ ಉದ್ದೇಶಿತ 24,000 ಜನಸಂಖ್ಯೆಗೆ ದಿನಂಪ್ರತಿ ತಲಾ 70 ಲೀಟರ್ ನೀರು ಪೂರೈಸಲು ವಿನ್ಯಾಸಿಸಲಾಗಿದೆ. ಯೋಜಿಸಿದಂತೆ ವಿರಾಜಪೇಟೆ ನೀರು ಸರಬರಾಜು ಯೋಜನೆಯಡಿ ಮೂಲ ಸ್ಥಾವರ, 200 ಮೀ.ಮೀ. ವ್ಯಾಸದ ಏರು ಕೊಳವೆ ಮಾರ್ಗ, ಜಲಶುದ್ಧೀಕರಣಗಾರದ ಪುನ:ಶ್ಚೇತನ, ಫೀಡರ್ ಮೈನ್ ಹಾಗೂ ವಿತರಣಾ ಕೊಳವೆ ಜಾಲವನ್ನು ಸಮರ್ಪಕವಾಗಿ ಪೂರ್ಣಗೊಳಿಸಿ, ಈ ಯೋಜನೆಯಲ್ಲಿ ದಿನಾಂಕ 30–3–2004ರಂದು ಚಾಲನೆಗೊಳಿಸಲಾಗಿದೆ.

ಆ) ಉದ್ಭವಿಸುವುದಿಲ್ಲ

ಇ) ಜೂನ್–2004ರ ಅಂತ್ಯದವರೆಗೆ ರೂ.293.50 ಲಕ್ಷಗಳು ವೆಚ್ಚವಾಗಿದೆ.

661(882) : ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟೆ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿರಾಜಪೇಟೆ ಟೌನ್ ಪಂಚಾಯತಿಗೆ ಸಂಬಂಧಿಸಿದಂತೆ ನಡೆದ ಹಲವಾರು ಅವ್ಯವಹಾರಗಳನ್ನು ಲೋಕಾಯುಕ್ತರ ಮೂಲಕ ತನಿಖೆ ನಡೆಸಬೇಕೆಂದು ಕೌನ್ಸಿಲರ್‌ಗಳು ನಡವಳಿಕೆ (ಟೌನ್ ಪಂಚಾಯತಿ ಸಭೆಯಲ್ಲಿ) ಮಾಡಿದ್ದು, ಈವರೆವಿಗೆ ಲೋಕಾಯುಕ್ತಕ್ಕೆ ಈ ಅವ್ಯವಹಾರಗಳನ್ನು ತನಿಖೆ ಮಾಡಬೇಕೆಂಬ ಶಿಫಾರಸ್ಸು ಕಳಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ ಸರ್ಕಾರ ಈ ಬಗ್ಗೆ ಎನು ಕ್ರಮ ಕೈಗೊಂಡಿದೆ; ಹಾಗೂ ತನಿಖೆಗೆ ಒಳಪಡಿಸಿರುವ ಅವ್ಯವಹಾರಗಳು ಯಾವುವು?

ಶ್ರೀ ಎಸ್.ಆರ್. ಮೋರೆ (ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಹೌದು.

ಆ) ಈ ಬಗ್ಗೆ ಪ್ರಸ್ತಾವನೆ ಇನ್ನು ಸರ್ಕಾರಕ್ಕೆ ತಲುಪಿರುವುದಿಲ್ಲ. ವರದಿ ಬಂದ ಕೂಡಲೇ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

662(871) : ಶ್ರೀ ದೊಡ್ಡನಗೌಡ ಹನುಮಗೌಡ ಪಾಟೀಲ್ (ಕುಷ್ಟಗಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣಾ ನದಿಯಿಂದ ಕೊಪ್ಪಳ ಜಿಲ್ಲೆಯ ಕುಷ್ಟಗಿ ಪಟ್ಟಣಕ್ಕೆ ಕುಡಿಯುವ ನೀರು ಪೂರೈಕೆ ಯೋಜನೆಯನ್ನು ಯಾವ ವರ್ಷ ಹಮ್ಮಿಕೊಂಡು ಯಾವ ವರ್ಷ ಮುಗಿಸಲಾಗಿದೆ, ಹಾಗೂ ಖರ್ಚು ಮಾಡಿರುವ ಒಟ್ಟು ಹಣವೆಷ್ಟು;

ಆ) ಇಂದಿಗೂ ಸರಿಯಾಗಿ ಅಲ್ಲಿ ನೀರಿನ ಪೂರೈಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು;

ಈ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 50–50 ಅನುದಾನದ ಮೇರೆಗೆ ರಾಜ್ಯದ ಯಾವ ಯಾವ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಕುಡಿಯುವ ನೀರಿನ ಶಾಶ್ವತ ಯೋಜನೆ ಅಡಿಯಲ್ಲಿ 1989–90ನೇ ಆರ್ಥಿಕ ಸಾಲಿನಿಂದ ಇಂದಿನವರೆವಿಗೂ ಮಂಜೂರಾತಿ ಪಡೆಯಲಾಗಿದೆ;

ಉ) ರಾಯಚೂರು ಜಿಲ್ಲೆಯ ಮುದಗಲ್ಲ ಪಟ್ಟಣದ ಶಾಶ್ವತ ಕುಡಿಯುವ ನೀರಿನ ಪೂರೈಕೆ ಯೋಜನೆ (ನಾರಾಯಣಪುರ ಅಣೆಕಟ್ಟಿನ ಬಸವಸಾಗರ ಜಲಾಶಯದಿಂದ) ಇಂದಿಗೂ ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಿರುವುದು ನಿಜವೇ;

ಊ) ಈ ಅನಗತ್ಯ ವಿಳಂಬಕ್ಕೆ ಕಾರಣಗಳೇನು;

ಋ) ಕೇಂದ್ರ ಸರ್ಕಾರದ ಒಪ್ಪಿಗೆ ದೊರೆಯಲು ವಿಳಂಬವಾಗಿದ್ದರಿಂದ ರಾಜ್ಯ ಸರ್ಕಾರದ ಅನುದಾನದಿಂದ 2004–05ನೇ ಆರ್ಥಿಕ ಸಾಲಿನಿಂದಲೇ ಈ ಯೋಜನೆ ಜಾರಿಗೆ ತರಲಾಗುವುದೆಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು

ಮಾರ್ಚ್ ತಿಂಗಳಲ್ಲಿ ರಾಯಚೂರಿಗೆ ಭೇಟಿ ನೀಡಿದಾಗ ಖಚಿತ ಭರವಸೆ ನೀಡಿದ್ದರೂ ಕಾರ್ಯಾಚರಣೆಗೆ ಬರದಿರುವುದಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಕೃಷ್ಣ ನದಿಯಿಂದ ಕೊಪ್ಪಳ ಜಿಲ್ಲೆಯ ಕುಷ್ಟಗಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಗೆ 1997ರಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದೆ. 1999ರಲ್ಲಿ ಯೋಜನೆಯ ವಿವಿಧ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಯಿತು. ಸದರಿ ಯೋಜನೆಯನ್ನು ಡಿಸೆಂಬರ್ 2001ರಲ್ಲಿ ಮುಗಿಸಿ ಕಾರ್ಯಾರಂಭ ಮಾಡಲಾಗಿದೆ. ಈ ಯೋಜನೆಗಾಗಿ ಇಲ್ಲಿಯವರೆಗೆ ರೂ. 7863.75 ಲಕ್ಷಗಳು ಖರ್ಚಾಗಿದೆ.

ಆ) ಬಂದಿದೆ.

ಇ) ಧನ್ನೂರ ಮೂಲ ಸ್ಥಾವರದಿಂದ ಇಳಕಲ್‌ರವರೆಗೆ ಅಳವಡಿಸಲಾಗಿರುವ ಕೊಳವೆ ಮಾರ್ಗದ ಸೋರುವಿಕೆಯ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಈ ಸೋರುವಿಕೆಯನ್ನು ತಡೆಯಲು ಕೊಳವೆ ಮಾರ್ಗದಲ್ಲಿ ಸರ್ಜ ನಿವಾರಣಾ ಉಪಕರಣಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ನೀರು ಸರಬರಾಜು ವ್ಯವಸ್ಥೆಯ ಸಮರ್ಪಕ ನಿರ್ವಹಣೆಗಾಗಿ ಅವಶ್ಯವಿರುವ ಹಣವನ್ನು ಹುನಗುಂದ, ಇಳಕಲ್ ಹಾಗೂ ಕುಷ್ಟಗಿ ಪುರಸಭೆಗಳಿಂದ ಭರಿಸಲು ಸೂಚಿಸಲಾಗಿದೆ.

ಈ) 1989–90ನೇ ಆರ್ಥಿಕ ಸಾಲಿನಿಂದ ಇಂದಿನವರೆಗೆ 35 ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 50:50 ಅನುದಾನದ ಮೇರೆಗೆ ಮಂಜೂರಾತಿಯನ್ನು ಪಡೆಯಲಾಗಿದೆ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಉ) ಮುದಗಲ್ ಪಟ್ಟಣದ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ತ್ವರಿತ ನೀರು ಸರಬರಾಜು ಯೋಜನೆಯಡಿಯಲ್ಲಿ ಈಗಾಗಲೇ ಕೇಂದ್ರ ಸರ್ಕಾರದ ಅನುಮತಿ ದೊರೆತಿದ್ದು, ರಾಜ್ಯ ಸರ್ಕಾರದಿಂದ ರೂ. 802.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ, ಸದರಿ ಯೋಜನೆಯ ಕಾಮಗಾರಿಯನ್ನು ನೇಮಿಸಲಾಗಿದೆ.

ಊ) ಯೋಜನೆಯಲ್ಲಿ ಅನಗತ್ಯ ವಿಳಂಬವಾಗಿರುವುದಿಲ್ಲ.

ಋ) ಈ ಯೋಜನೆಯನ್ನು ನಿರ್ವಹಿಸಲು ಗುತ್ತಿಗೆದಾರರನ್ನು ಈಗಾಗಲೇ ನೇಮಿಸಲಾಗಿದ್ದು ಕಾಮಗಾರಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು.

## ಅನುಬಂಧ-1

| ಕ್ರ.ಸಂ. | ಭಾರತ ಸರ್ಕಾರದಿಂದ ತಾಂತ್ರಿಕ ಮಂಜೂರಾತಿ ದೊರೆತ ವರ್ಷ | ನೀರು ಸರಬರಾಜು ಯೋಜನೆಯ ಹೆಸರು | ತಾಂತ್ರಿಕ ಮಂಜೂರಾತಿ ಪಡೆದ ಯೋಜನೆಯ ಸಂಖ್ಯೆ |
|---|---|---|---|
| 1. | 1991–92 | ಸದಲಗಾ | 1 |
| 2. | 1992–93 | – – | – |
| 3. | 1993–94 | – – | – |
| 4. | 1994–95 | – – | – |
| 5. | 1995–96 | ಕೆರೂರ | 1 |
| 6. | 1996–97 | ಬೇಲೂರು, ಸಾಲಿಗ್ರಾಮ, ಕೊಟ್ಟೂರು ಮುಂಡರಗಿ, ನವಲಗುಂದ | 5 |
| 7. | 1997–98 | ಶ್ರೀನಿವಾಸಪುರ, ಅರಕಲಗೂಡು | 2 |
| 8. | 1998–99 | ಚಿಟಗುಪ್ಪ, ಬದಾಮಿ, ಪಿರಿಯಾಪಟ್ಟಣ ಕಲಘಟಗಿ, ನಾಗಮಂಗಲ, ಬೀಳಗಿ ಮತ್ತು ಶೃಂಗೇರಿ | 7 |
| 9. | 1999–2000 | ಆಲೂರು, ತುರುವೇಕೆರೆ | 2 |
| 10. | 2000–01 | ದೇವದುರ್ಗ, ಕೊಪ್ಪ, ವಿರಾಜಪೇಟೆ ಬಾಗೇಪಲ್ಲಿ, ಮೊಳಕಾಲ್ಮೂರು ಮತ್ತು ಹೆಚ್.ಡಿ. ಕೋಟೆ | 6 |
| 11. | 2001–02 | ಗುರ್‌ಮಿಟ್ಕಲ್, ಹೊಸದುರ್ಗ, ಕೆ.ಆರ್. ಪೇಟೆ, ಗುಬ್ಬಿ, ರಾಯಭಾಗ | 5 |
| 12. | 2002–03 | ಪಾವಗಡ, ಗುಡಿಬಂಡೆ, ಮುದಗಲ್ ಯಲ್ಲಾಪುರ | 4 |
| 13. | 2003–04 | ಜಗಳೂರು, ಹೊಳಲ್ಕೆರೆ | 2 |
| | ಒಟ್ಟು ತಾಂತ್ರಿಕ ಮಂಜೂರಾತಿ ಪಡೆದ ಯೋಜನೆಗಳ ಸಂಖ್ಯೆ | | 35 ಯೋಜನೆಗಳು |

663(872) : ಶ್ರೀ ದೊಡ್ಡನಗೌಡ ಹನುಮಗೌಡ ಪಾಟೀಲ್ (ಕುಷ್ಟಗಿ) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಗರ ಪುರಸಭೆಗಳ ಮತ್ತು ಪಟ್ಟಣಪಂಚಾಯತಿಗಳ ಒಳಚರಂಡಿ ಮತ್ತು ರಸ್ತೆಗಳ ಅಗಲೀಕರಣ ನವೀಕರಣ ಇತ್ಯಾದಿ ಕಾಮಗಾರಿಗಳಿಗಾಗಿ 2001–02ನೇ ಆರ್ಥಿಕ ಸಾಲಿನಿಂದ ಸಾಲದ ರೂಪದಲ್ಲಿ ಅನುದಾನ ನೀಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ನಗರ ಸ್ಥಳೀಯ ಸಂಸ್ಥೆ ಈ ಅನುದಾನ ಬಳಕೆ ಮಾಡಿಕೊಂಡಿದೆ;

ಇ) ರಾಯಚೂರು ಜಿಲ್ಲೆಯ ಮುದಗಲ್ಲು ಮತ್ತು ಕುಷ್ಟಗಿ ಪಟ್ಟಣ ಪಂಚಾಯತಿಗಳಿಗೆ ಈ ವಿಶೇಷ ಅನುದಾನದ ಹಣವನ್ನು ಯಾವ ಯಾವ ಕಾಮಗಾರಿ ಸಲುವಾಗಿ ವಿನಿಯೋಗಿಸಲು ಚುನಾಯಿತ ಮಂಡಳಿ ನಿರ್ಣಯ ಕೈಗೊಳ್ಳಲಾಗಿತ್ತು;

ಈ) ಅವುಗಳಲ್ಲಿ ಮಾರ್ಪಾಡು ಏನಾದರೂ ನಂತರದ ದಿನಗಳಲ್ಲಿ ಮಾಡಿಕೊಳ್ಳಲಾಗಿದೆಯೇ;

ಉ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು;

ಊ) ಕುಷ್ಟಗಿ ಮತ್ತು ಮುದಗಲ್ಲು ಪಟ್ಟಣ ಪಂಚಾಯತಿಯ ಸದಸ್ಯರಲ್ಲಿ ಎಷ್ಟು ಜನ ಸಭೆಗೆ ಹಾಜರಾಗಿ ರುಜು ಹಾಕಿರುವರು, ಹಾಗೂ ಅವರಾರು; (ನಿರ್ಣಯದ ಪ್ರತಿ ಲಗತ್ತಿಸುವುದು)

ಋ) ಮುದಗಲ್ಲು ಪಟ್ಟಣ ಪಂಚಾಯತಿಯಲ್ಲಿ ಈ ವಿಶೇಷ ಅನುದಾನದ ಕಾಮಗಾರಿಗಳನ್ನು ಇಂದಿಗೂ ಕೈಗೆತ್ತಿಕೊಳ್ಳದೆ ನಿರ್ಲಕ್ಷಿಸಿದ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮವೇನು; ಯಾವ ಕ್ರಮ ಕೈಗೊಂಡಿರುವುದು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು)

ಅ) ಹೌದು.

ಆ) ಈ ಕಾರ್ಯಕ್ರಮದ ಅಡಿಯಲ್ಲಿ 199 ಪಟ್ಟಣಗಳಲ್ಲಿ ಅನುದಾನ ಬಳಕೆ ಮಾಡಿಕೊಂಡಿದೆ.

ಇ) ಪ್ರತಿ ಪಟ್ಟಣ ಪಂಚಾಯತಿಗೆ ರೂ. 25.00 ಲಕ್ಷಗಳನ್ನು ಒದಗಿಸಿದ್ದು, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಆಯ್ಕೆ ಮಾಡಿದಂತೆ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿದೆ.

ಮುದಗಲ್:

1. ಹಳೇಪೇಟೆ ರಸ್ತೆಗೆ ಕೂಡುವ ಕಡೆಯ ಮಾರ್ಗವಾಗಿ ಚಾವಡಿಯಿಂದ ಲಿಂಗಸಗೂರು ಹಾಗೂ ಗಂಗಾವತಿ ಪಟ್ಟಣಗಳಿಗೆ ಹೋಗುವ ರಸ್ತೆಗಳ ಡಾಂಭರೀಕರಣ.
2. ಮೇಲಿನ ರಸ್ತೆ ಇಕ್ಕೆಲಗಳಲ್ಲಿ ಚರಂಡಿ ನಿರ್ಮಾಣ.
3. ಮೇಲಿನ ರಸ್ತೆಯಲ್ಲಿ ಕಲ್ವರ್ಟ್‌ಗಳ ನಿರ್ಮಾಣ
4. ಮೇಲಿನ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು.
5. ಚಾವಡಿ ಹಿಂದಿನಿಂದ ಬಾಗಲಕೋಟೆ ಲಿಂಕ್ ರಸ್ತೆಯ ಡಾಂಬರೀಕರಣ.

ಕುಷ್ಟಗಿ:

1. ಚನ್ನಕೇಶ್ವರ ರಸ್ತೆಯಿಂದ ತೆಂಗುಂಟೆ ರಸ್ತೆಯವರೆಗೆ ಚರಂಡಿ ಹಾಗೂ ರಸ್ತೆಗಳ ನಿರ್ಮಾಣ.

2. ಆಯುಬ್‌ಖಾನ್ ಮನೆಯ ಬಳಿ ಚರಂಡಿ ನಿರ್ಮಾಣ

3. ಶಮೀದಸಾಬ್ ದೇವರಕಟ್ಟೆಯಿಂದ ಹನುಮಸಾಗರದವರೆಗೆ ಚರಂಡಿ ನಿರ್ಮಾಣ

4. ಆಶ್ರಯ ಬಡಾವಣೆಯಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು

ಈ) ಹೌದು, ಮುದಗಲ್ ಪಟ್ಟಣದಲ್ಲಿ ಬದಲಾವಣೆ ಮಾಡಲಾಗಿದೆ.

ಉ) ಮುದಗಲ್ ಪಟ್ಟಣದಲ್ಲಿ ಸ್ಥಳೀಯ ಸಂಸ್ಥೆಯ ತೀರ್ಮಾನದಂತೆ ಬೀದಿ ದೀಪಗಳ ಬದಲು ರಾಘವೇಂದ್ರ ಸ್ವಾಮಿ ದೇವಸ್ಥಾನದಿಂದ ಹುಸೇನ್‌ಭಾಷಾ ದರ್ಗಾದವರೆಗೆ ಹಾಗೂ ಡಾ: ಶಾಹೀಮ ಮನೆಯವರೆಗೆ ಮೆಟಲಿಂಗ್ ಹಾಗೂ ಡಾಂಬರೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಊ) 14 ಜನ ಸದಸ್ಯರು ಹಾಜರಾಗಿರುತ್ತಾರೆ. (ನಿರ್ಣಯದ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು).

ಋ) ಇಂತಹ ಪ್ರಸಂಗ ಉದ್ಭವಿಸಿರುವುದಿಲ್ಲ.

664(863) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಔರಾದ್ ಪಟ್ಟಣ ಪಂಚಾಯ್ತಿ / ಪುರಸಭೆಗೆ ಮಂಜೂರಾಗಿರುವ ಸಿಬ್ಬಂದಿ ಸಂಖ್ಯೆ ಎಷ್ಟು (ಸಿಬ್ಬಂದಿ ದರ್ಜೆವಾರು ವಿವರಗಳನ್ನು ಒದಗಿಸುವುದು);

ಆ) ಈ ಪೈಕಿ ಈಗ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು;

ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ದರ್ಜೆವಾರು ವಿವರಗಳನ್ನು ಒದಗಿಸುವುದು);

ಈ) ಎಷ್ಟು ಅವಧಿಯಿಂದ ಈ ಹುದ್ದೆಗಳು ಖಾಲಿ ಇದೆ;

ಉ) ವಿವಿಧ ವರ್ಗದ ಹುದ್ದೆಗಳು ಬಹಳ ಕಾಲದಿಂದ ಖಾಲಿ ಇರುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದಷ್ಟು ತೀವ್ರವಾಗಿ ಭರ್ತಿಮಾಡಲು ಸರ್ಕಾರ ಅನುಸರಿಸುವ ಕ್ರಮಗಳೇನು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು)

ಅ)

| ಕ್ರಮ ಸಂಖ್ಯೆ | ದರ್ಜೆಗಳು | ಮಂಜೂರಾದ ಹುದ್ದೆಗಳು |
|---|---|---|
| 1. | ಮುಖ್ಯಾಧಿಕಾರಿಗಳ ದರ್ಜೆ-2 | 1 |
| 2. | ಕಿರಿಯ ಅಭಿಯಂತರರು | 1 |
| 3. | ಮೊದಲನೆ ದರ್ಜೆ ಸಹಾಯಕ | 1 |
| 4. | ಸಮುದಾಯ ವ್ಯವಹಾರ ಅಧಿಕಾರಿ | 1 |
| 5. | ಪ್ರ.ದ.ಕಂದಾಯಾಧಿಕಾರಿ | 1 |
| 6. | ನೀರು ಸರಬರಾಜು ಅಪರೇಟರ್ | 1 |
| 7. | ಕಂಪ್ಯೂಟರ್ ಅಪರೇಟರ್ / ಡಾಟಾ ಎಂಟ್ರಿಅಪರೇಟರ್ | 1 |
| 8. | ಕಿರಿಯ ಆರೋಗ್ಯ ನಿರೀಕ್ಷಕರು | 1 |
| 9. | ಸಮುದಾಯ ಸಂಘಟಕರು | 1 |
| 10. | ದ್ವಿತೀಯ ದರ್ಜೆ ಸಹಾಯಕ | 3 |
| 11. | ಕರವಸೂಲಿಗಾರ | 1 |
| 12. | ವಾಹನ ಚಾಲಕ | 1 |
| 13. | ಸಹಾಯಕ ನೀರು ಸರಬರಾಜು ಅಪರೇಟರ್ | 1 |
| 14. | ಸ್ಯಾನಿಟರಿ ಸೂಪರ್‌ವೈಸರ್ | 1 |
| 15. | ಸೀನಿಯರ್ ವಾಲ್ವಮೆನ್ | 1 |
| 16. | ಪೌರಕಾರ್ಮಿಕರು | 15 |
| 17. | ದಲಾಯತ್ | 1 |
| 18. | ಲೋಡರ್ಸ್ | 4 |
| 19. | ಜವಾನ/ನೀರು ಸರಬರಾಜು ವಾಲ್ವಮೆನ್ | 3 |
| ಆ) 1. | ಪ್ರಭಾರಿ ಆರೋಗ್ಯ ನೀರಿಕ್ಷರಕು ಮುಖ್ಯಾಧಿಕಾರಿಗಳು | - |
| 2. | ಕಿರಿಯ ಅರೋಗ್ಯ ನಿರೀಕ್ಷಕರು | 1 |
| 3. | ದ್ವಿತೀಯ ದರ್ಜೆ ಸಹಾಯಕ | 2 |
| 4. | ಪಂಪ್ ಚಾಲಕ | 4 |
| 5. | ಕರವಸೂಲಿಗಾರ | 2 |
| 6. | ಜವಾನ | 4 |
| 7. | ಪೌರಕಾರ್ಮಿಕರು | 6 |
| ಇ) 1. | ಮುಖ್ಯಾಧಿಕಾರಿಗಳು ದರ್ಜೆ-2 | 1 |
| 2. | ಕಿರಿಯ ಅಭಿಯಂತರರು | 1 |
| 3. | ಮೊದಲನೆ ದರ್ಜೆ ಸಹಾಯಕ | 1 |

| 1 | 2 | 3 |
|---|---|---|
| 4. | ಸಮುದಾಯ ವ್ಯವಹಾರ ಅಧಿಕಾರಿ | 1 |
| 5. | ಪ್ರ.ದ. ಕಂದಾಯಾಧಿಕಾರಿ | 1 |
| 6. | ನೀರು ಸರಬರಾಜು ಅಪರೇಟರ್ | 1 |
| 7. | ಕಂಪ್ಯೂಟರ್ ಅಪರೇಟರ್/ಡಾಟಾ ಎಂಟ್ರಿ ಅಪರೇಟರ್ | 1 |
| 8. | ಸಮುದಾಯ ಸಂಘಟಕರು | 1 |
| 9. | ದ್ವಿತೀಯ ದರ್ಜೆ ಸಹಾಯಕ | 1 |
| 10. | ವಾಹನಚಾಲಕ | 1 |
| 11. | ಸಹಾಯಕ ನೀರು ಸರಬರಾಜು ಅಪರೇಟರ್ | 1 |
| 12. | ಸ್ಯಾನಿಟರಿ ಸೂಪರ್‌ವೈಸರ್ | 1 |
| 13. | ಸೀನಿಯರ್ ವಾಲ್ವಮೆನ್ | 1 |
| 14. | ಪೌರಕಾರ್ಮಿಕರು | 9 |
| 15. | ದಲಾಯತ್ | 1 |
| 16. | ಲೋಡರ್ | 4 |

ಈ) 1–1–86ರ ನಂತರ ಯಾವುದೇ ತರಹದ ನೇಮಕಾತಿಗೆ ನಿರ್ಬಂದವಿದ್ದ ಕಾರಣ ಸದರಿ ಹುದ್ದೆಗಳು ಖಾಲಿ ಇರುತ್ತವೆ.

ಉ) ಲಭ್ಯವಿರುವ ಸಿಬ್ಬಂದಿಯವರಿಂದ ಕರ್ತವ್ಯ ನಿರ್ವಹಿಸಲಾಗುತ್ತಿದೆ.

ಊ) ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

665(864) : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾಗಿರುವ ಸಬ್ಸಿಡಿ ಮೊತ್ತ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

ಆ) ಈ ಸಬ್ಸಿಡಿ ಹಣವು ಎಷ್ಟು ಅವಧಿಯಿಂದ ಬಾಕಿ ಇದೆ;

ಇ) ರಾಜ್ಯದಲ್ಲಿ ಬಹುತೇಕ ಕೈಗಾರಿಕೆಗಳು ವಿಶೇಷವಾಗಿ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಬರುವ ಕೈಗಾರಿಕೆಗಳು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದರಿಂದ ಸರ್ಕಾರವು ಆದಷ್ಟು ಶೀಘ್ರವಾಗಿ ಹಲವಾರು ವರ್ಷಗಳಿಂದ ಬಾಕಿ ಇರುವ ಸಬ್ಸಿಡಿ ಹಣವನ್ನು ಬಿಡುಗಡೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಪ್ರಸಕ್ತ ಕೈಗಾರಿಕಾ ನೀತಿಯಡಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಗೆ

111-92 ಸಹಾಯಧನ ನೀಡಲು ಅವಕಾಶವಿರುವುದಿಲ್ಲ. ದಿನಾಂಕ 31–3–04 ರವರೆಗೆ

19,555 ಸಣ್ಣ ಕೈಗಾರಿಕಾ ಘಟಕಗಳಿಗೆ ರೂ. 429.43 ಕೋಟಿಗಳ ಸಹಾಯಧನ ನೀಡಬೇಕಾಗಿರುತ್ತದೆ. ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ.

ಆ) ದಿನಾಂಕ 1-1-99 ರಿಂದ ಈ ಸಹಾಯಧನ ಬಿಡುಗಡೆಗೆ ಬಾಕಿ ಇರುತ್ತದೆ.

ಇ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಬಾಂಡ್‌ಗಳ ಮೂಲಕ ರೂ. 84.00 ಕೋಟಿಗಳನ್ನು ಸಂಗ್ರಹಿಸಿ ಬಾಕಿ ಇರುವ ಸಹಾಯಧನವನ್ನು ನೀಡಲು ಸರ್ಕಾರದ ಆದೇಶವನ್ನು ಹೊರಡಿಸಿ, ಈಗಾಗಲೇ 81.00 ಕೋಟಿಗಳನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸಂಗ್ರಹಿಸಿದ್ದು, ಸಣ್ಣ ಕೈಗಾರಿಕಾ ಘಟಕಗಳಿಗೆ ಬಿಡುಗಡೆಗೊಳಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

**District-Wise Details of State Investment Subsidy Pending for Release as on 31st March 2004**

| Sl.No. | Name of the Dist. | No. of Units | Amount Rs. in Lakhs |
|---|---|---|---|
| 1. | Bangalore (Urban) | 1332 | 6279.30 |
| 2. | Bangalore (Rural) | 1851 | 5205.80 |
| 3. | Bagalkot | 362 | 644.31 |
| 4. | Belgaum | 1474 | 1946.87 |
| 5. | Bellary | 654 | 1706.03 |
| 6. | Bidar | 562 | 525.83 |
| 7. | Bijapur | 548 | 823.93 |
| 8. | Chamarajnagar | 230 | 255.47 |
| 9. | Chitradurga | 471 | 898.40 |
| 10. | Chickmagalur | 326 | 491.93 |
| 11. | Davangere | 322 | 713.18 |
| 12. | Dharwad | 714 | 1524.78 |
| 13. | Dakshina Kannada | 917 | 1910.45 |
| 14. | Gadag | 343 | 369.64 |
| 15. | Gulbarga | 557 | 1358.87 |
| 16. | Hassan | 622 | 904.77 |
| 17. | Haveri | 250 | 279.28 |
| 18. | Karwar | 1271 | 1959.00 |
| 19. | Kodagu | 153 | 378.79 |

| 1 | 2 | 3 | 4 |
|---|---|---|---|
| 20. | Kolar | 1738 | 3989.49 |
| 21. | Koppal | 313 | 1341.12 |
| 22. | Mandya | 458 | 667.53 |
| 23. | Mysore | 948 | 2495.00 |
| 24. | Raichur | 271 | 718.22 |
| 25. | Shimoga | 471 | 737.78 |
| 26. | Tumkur | 1342 | 2882.70 |
| 27. | Udupi | 1045 | 1935.50 |
| | **Total** | **19555** | **42943.52** |

666(876) : ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) ಮಾನ್ಯ ಬೃಹತ್ ಮತ್ತು ಮಧ್ಯಮ, ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಎ.ಕೆ.ಜಿ.ಎಫ್.ಸಿ. ಬಿ.ಜೆ.ಎಮ್.ಎಲ್. ಸಂಸ್ಥೆಯ ಮಾಜಿ ನೌಕರರಿಗೆ ಪರ್ಯಾಯ ಉದ್ಯೋಗಾವಕಾಶ ಒದಗಿಸಲು ದೃಷ್ಟಿಯಿಂದ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್ ಮತ್ತು ಮಧ್ಯಮ, ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಕರ್ಯ ಸಚಿವರು)

ಅ) ಬಿ.ಜಿ.ಎಮ್.ಎಲ್. ಸಂಸ್ಥೆಯು ಏಪ್ರಿಲ್ 2000ರಂದು ನಿಷ್ಕ್ರೀಯವಾಗಿದೆ. ಬಿ.ಜಿ.ಎಮ್.ಎಲ್. ಸಂಸ್ಥೆಯು 8 ಚದುರ ಕಿಲೋ ಮೀಟರ್ಸ್ ವ್ಯಾಪ್ತಿಯಲ್ಲಿ ಹರಡಿದ್ದು ಗಣಿಗಾರಿಕೆ ಪ್ರದೇಶದ ಜೊತೆಗೆ 11,000 ವಾಸದ ಮನೆಗಳನ್ನು ಹೊಂದಿದೆ. ಈ ಕಂಪನಿಯಲ್ಲಿ ಒಟ್ಟು 4,838 ಹೆಕ್ಟೇರ್ (ಅಂದಾಜು 12,000 ಎಕರೆ) ಭೂಮಿಯ ವಿವರ ಈ ಕೆಳಕಂಡಂತೆ ಲಭ್ಯವಿದೆ.

| | | | |
|---|---|---|---|
| 1. | ಕೃಷಿ ಉಪಯೋಗಕ್ಕೆ ಸೂಕ್ತವಾದ ಜಮೀನು | – | 834.74 |
| 2. | ಉದ್ಯಾನ ಮತ್ತು ಅರಣ್ಯ | – | 1035.91 |
| 3. | ಕೃಷಿಯೇತರ ಬಂಜರು ಜಮೀನು (ಕೈಗಾರಿಕಾ ಉಪಯೋಗಕ್ಕೆ ಬಳಸಬಹುದಾದದ್ದು) | – | 2967.35 |
| | **ಒಟ್ಟು** | | **4838.00** |

ಈಗಾಗಲೇ ಮುಚ್ಚಲ್ಪಟ್ಟಿರುವ ಗಣಿಗಳಲ್ಲಿ ಲಭ್ಯವಿರುವ ಅಂತರಜಲ ಕೈಗಾರಿಕಾ ಉಪಯೋಗಕ್ಕೆ ಬಳಸಬಹುದೆಂದು ನೌಕರರು ಅಭಿಪ್ರಾಯ ಪಟ್ಟಿದ್ದಾರೆ.

ಮೇಲ್ಕಂಡ ಪ್ರದೇಶದಲ್ಲಿ ಪರ್ಯಾಯವಾಗಿ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವ ಬಗ್ಗೆ ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯ

ಅಧ್ಯಕ್ಷತೆಯಲ್ಲಿ ಒಂದು ನೌಕರರ ಸಮಿತಿಯನ್ನು ರಚಿಸಲಾಗಿದ್ದು ಈ ನೌಕರರ ಸಮಿತಿಯು ಏಪ್ರಿಲ್ 2003ರಲ್ಲಿ ನೀಡಿರುವ ವರದಿಯಲ್ಲಿ (i) ಆಟೋಮೋಬೈಲ್ ಕೈಗಾರಿಕೆಗಳು (ii) ಜೆವಗ್ ಮತ್ತು ಜೂಯಲರಿ ಉದ್ಯಾನವನ, (iii) ಪ್ರವಾಸೋದ್ಯಮ ಮತ್ತು ಮನೋರಂಜನಾ ಕೇಂದ್ರಗಳು ಹಾಗೂ (iv) ಆರೋಗ್ಯ ಕ್ಷೇತ್ರದಲ್ಲಿ ಚಟುವಟಿಕೆಗಳನ್ನು ಕೈಗೊಳ್ಳಬಹುದೆಂದು ಶಿಫಾರಸ್ಸು ಮಾಡಲಾಗಿದೆ. ಜೊತೆಗೆ ಬೃಹತ್ ಪ್ರಮಾಣದ ಕೃಷಿ ವ್ಯಾಪಾರ, ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಕಾರ್ಪೋರೇಟ್ ಕೃಷಿ ಕಾರ್ಯಯೋಜನೆಯ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಶಿಫಾರಸ್ಸು ಮಾಡಿದೆ.

ಮೇಲ್ಕಂಡ ನೌಕರರ ಸಮಿತಿಯ ಶಿಫಾರಸ್ಸುಗಳನ್ನು ಗಮನದಲ್ಲಿರಿಸಿಕೊಂಡು ರಾಷ್ಟ್ರದ ಮತ್ತು ವಿದೇಶಿ ಕಂಪನಿಗಳನ್ನು ಸಂಪರ್ಕಿಸಿ ಸರ್ಕಾರವು ಇಂಜಿನಿಯರಿಂಗ್, ಆಟೋಮೋಬೈಲ್, ಆಗ್ರೋ ಆಫ್ ಪ್ರೋಸೆಸಿಂಗ್, ಜಮ್ಸ್ ಮತ್ತು ಜುಯಲರಿ ಪಾರ್ಕ್ ಮತ್ತು ಪ್ರವಾಸೋದ್ಯಮ, ಕೈಗಾರಿಕಾ ಘಟಕಗಳನ್ನು ಕೆ.ಜಿ.ಎಫ್.ನಲ್ಲಿ ಸ್ಥಾಪಿಸಲು ಪ್ರಯತ್ನಿಸಲಾಗುವುದು.

ಪ್ರಾರಂಭಿಕವಾಗಿ, ಈ ದಿಸೆಯಲ್ಲಿ ಕ್ರಮ ಕೈಗೊಳ್ಳುವ ಮೊದಲು ಬಿ.ಜೆ.ಎಮ್.ಎಲ್/ಕೇಂದ್ರ ಸರ್ಕಾರದ ವಶದಲ್ಲಿರುವ ಮೇಲ್ಕಂಡ ಜಮೀನಿನ ಭಾಗಶ: ಪ್ರದೇಶವನ್ನು ರಾಜ್ಯಮಟ್ಟದ ಸಂಸ್ಥೆಯಾದ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ವರ್ಗಾಯಿಸಲು ಕ್ರಮಕೈಗೊಳ್ಳುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುವುದು.

667(500) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಮನಗರದಲ್ಲಿ ನಿವೇಶನಗಳನ್ನು ನಿರ್ಮಿಸಲು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ಖರ್ಚು ಮಾಡಿದ ಹಣವೆಷ್ಟು;

ಆ) ಈ ನಿವೇಶನಗಳನ್ನು ಯಾವಾಗ ಸಿದ್ಧಪಡಿಸಲಾಯಿತು; ಹಾಗೂ ಎಷ್ಟು ನಿವೇಶನಗಳನ್ನು ನಿರ್ಮಾಣ ಮಾಡಲಾಗಿದೆ;

ಇ) ಈ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಈ) ಈ ನಿವೇಶನಗಳನ್ನು ನಿರ್ಮಿಸಲು ಗುರುತಿಸಲಾದ ಜಾಗ ಸರಿಯಾಗಿಲ್ಲವಾದ್ದರಿಂದ ಈ ನಿವೇಶನಗಳಿಗೆ ಬೇಡಿಕೆ ಇಲ್ಲದೆ ಮೇಲ್ಕಂಡ ನಿಗಮ ಹಣ ದುರ್ವಿನಿಯೋಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಬಗ್ಗೆ ಕೂಡಲೇ ವಿಚಾರಣೆಗೆ ಸರ್ಕಾರ ಆದೇಶಿಸುತ್ತದೆಯೇ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು)

ಅ) ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ರಾಮನಗರದ ಶಿಡ್ಲಕಲ್ಲು ಹಾಗೂ ಜೀಗೇನಹಳ್ಳಿಯಲ್ಲಿ ನಿರ್ಮಿಸಿರುವ ವಸತಿ ನಿವೇಶನದ ಯೋಜನೆಗೆ ಒಟ್ಟು 6.23 ಕೋಟಿ ರೂ.ಗಳ ವೆಚ್ಚ (ಭೂಸ್ವಾಧೀನದ ವೆಚ್ಚವೂ ಸೇರಿ)ದನ್ನು ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ಮಾಡಿರುತ್ತದೆ.

ಆ) ಈ ನಿವೇಶನಗಳನ್ನು ಮೇ 2001ರಲ್ಲಿ ಸಿದ್ಧಪಡಿಸಲಾಯಿತು. ಜೀಗೇನಹಳ್ಳಿಯಲ್ಲಿ 564 ನಿವೇಶನಗಳನ್ನು ಮತ್ತು ಶಿಡ್ಲಕಲ್ಲುನಲ್ಲಿ 204 ನಿವೇಶನಗಳನ್ನು ಒಟ್ಟು 768 ನಿವೇಶನಗಳನ್ನು ನಿರ್ಮಿಸಲಾಗಿದೆ.

ಇ) ಈ ನಿವೇಶನಗಳ ಹಂಚಿಕೆಯನ್ನು ಇನ್ನೂ ಮಾಡಲಾಗಿಲ್ಲ. ಈ ನಿವೇಶನಗಳ ಹಂಚಿಕೆಗೆ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ರಾಮನಗರ, ಚೆನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರವು ಕೊಟ್ಟಿದ್ದು ಇದಕ್ಕೆ ಅತಿ ಕಡಿಮೆ ಅರ್ಜಿಗಳು ಬಂದಿದ್ದು, ನಿವೇಶನಗಳ ಹಂಚಿಕೆ ಮಾಡಲಾಗಿಲ್ಲ.

ತದ ನಂತರ, ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದವರು 30x40 ಅಳತೆಯ ನಿವೇಶನಗಳನ್ನು ಒಟ್ಟಾಗಿ ಸಂಘದ ಸದಸ್ಯರಿಗೆ ಹಂಚಿಕೆ ಮಾಡಲು ಕೋರಿದ್ದರು. ಆದರೆ ಅವರು ನಿವೇಶನಗಳ ಬೆಲೆಯನ್ನು ಅತಿ ಕಡಿಮೆಗೆ ಕೇಳಿದ್ದರಿಂದ ನಿವೇಶನಗಳನ್ನು ಹಂಚಲಾಗಿಲ್ಲ.

ಈ) ಈ ನಿವೇಶನಗಳನ್ನು ನಿರ್ಮಿಸಲು ಜಮೀನನ್ನು ರಾಮನಗರ ನಗರ ಸಭೆಯವರೇ ಆಯ್ಕೆ ಮಾಡಿರುತ್ತಾರೆ ಹಾಗೂ ಈ ಜಮೀನನ್ನು ಬಿಟ್ಟು ಇನ್ನೆಲ್ಲೂ ಜಾಗ ಹೊರಕದಿದ್ದ ಕಾರಣದಿಂದ ನಿವೇಶನಗಳನ್ನು ಶಿಡ್ಲಕಲ್ಲು ಹಾಗೂ ಜೀಗೇನಹಳ್ಳಿಯಲ್ಲಿ ನಿರ್ಮಿಸಲಾಯಿತು. ನಿವೇಶನಗಳನ್ನು ಉತ್ತಮ ರೀತಿಯಲ್ಲಿ ನಿರ್ಮಿಸಿದ್ದು, ಯಾವುದೇ ಹಣವು ದುರ್ವಿನಿಯೋಗವಾಗಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

668(631) : ಶ್ರೀ ಕೃಷ್ಣಾ ಪಾಲೇಮಾರ್ (ಸುರತ್ಕಲ್) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುರತ್ಕಲ್ ನಗರ ಪ್ರದೇಶಕ್ಕೆ ಅಗತ್ಯವುಳ್ಳ ಒಳಚರಂಡಿ ಯೋಜನೆಯನ್ನು ಸರಕಾರ ರೂಪಿಸಿದೆಯೇ; (ವಿವರವನ್ನು ನೀಡುವುದು);

ಆ) ಒಳಚರಂಡಿ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗುವುದು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು)

ಅ) ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಸಾಲದ ನೆರವಿನೊಂದಿಗೆ ರಾಜ್ಯದಲ್ಲಿ

ಜಾರಿಗೊಳಿಸುತ್ತಿರುವ ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣಾ ಯೋಜನೆಯಡಿಯಲ್ಲಿ, ಸುರತ್ಕಲ್‌ಗೆ ಒಳಚರಂಡಿ ಯೋಜನೆಯನ್ನು ರೂಪಿಸಿದೆ. ಈ ಯೋಜನೆಗಾಗಿ 35 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಕಾಮಗಾರಿಗಳ ಟೆಂಡರುಗಳನ್ನು ಕರೆದು ಯಶಸ್ವಿ ಬಿಡ್ಡುದಾರರಿಗೆ ಕಾಮಗಾರಿಗಳನ್ನು ವಹಿಸಿಕೊಡಲಾಗಿದೆ.

ಆ) ಕಾಮಗಾರಿಗಳನ್ನು ಮಳೆಗಾಲದ ನಂತರ ಸೆಪ್ಟೆಂಬರ್ 2004 ರಿಂದ ಪ್ರಾರಂಭಿಸಲಾಗುತ್ತದೆ.

669(495) : ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದ ಸೌಂದರ್ಯವನ್ನು ಹೆಚ್ಚಿಸಿದ ಉದ್ಯಾನವನಗಳಿಗೆ ಹೆಸರುಗಳನ್ನು ಇಡದೇ ಇರುವುದಕ್ಕೆ ಕಾರಣಗಳೇನು;

ಆ) ಈ ಉದ್ಯಾನವನಗಳಿಗೆ ಕನ್ನಡನಾಡು ನುಡಿಗಳಿಗಾಗಿ ಶ್ರಮಿಸಿದ ಮಹನೀಯರುಗಳ ಹೆಸರನ್ನಿಡಲು ಸರಕಾರ ಕ್ರಮ ಜರುಗಿಸುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಉದ್ಯಾನವನಗಳಿಗೆ ಈಗಾಗಲೇ ಮಹನೀಯರ ಹೆಸರುಗಳನ್ನು ಇಡಲಾಗಿದೆ. ಉದಾಹರಣೆಗೆ ಮಹಾತ್ಮ ಗಾಂಧಿ ಉದ್ಯಾನವನ, ಅಂಬೇಡ್ಕರ್ ಉದ್ಯಾನವನ, ಲಕ್ಷ್ಮೀದೇವಿ ಉದ್ಯಾನವನ, ಕುವೆಂಪು ಉದ್ಯಾನವನ, ಚಾಚಾ ನೆಹರು ಉದ್ಯಾನವನ, ರವೀಂದ್ರನಾಥ್ ಠಾಗೂರ್ ಉದ್ಯಾನವನ, ಸುಭಾಷ್ ಚಂದ್ರ, ಬೋಸ್ ಉದ್ಯಾನವನ, ಸರ್.ಎಂ. ವಿಶ್ವೇಶ್ವರಯ್ಯ ಉದ್ಯಾನವನ, ದಿವಂಗತ ಶ್ರೀ ಮಹಾದೇವ ಬಣಕಾರ್ ಉದ್ಯಾನವನ, ಸಂತ ಸಿದ್ಧಾರೂಢ ಉದ್ಯಾನವನ, ಎ. ಸಾಂಬಿ ಮೂರ್ತಿ ಉದ್ಯಾನವನ.

ಆ) ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಣಯದಂತೆ ಕ್ರಮ ವಹಿಸಲಾಗುವುದು.

670(802) : ಶ್ರೀ ಕ್ಯಾಂತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ಥಾಪನೆಗೊಂಡಿರುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದ ವತಿಯಿಂದ ಕೊಡಬೇಕಾದ ಸಹಾಯಧನದ ಬಾಕಿ ಮೊತ್ತವೆಷ್ಟು; (ವರ್ಷಾವಾರು ಮಾಹಿತಿ ನೀಡುವುದು);

ಆ) ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾಗಿರುವ ಸಹಾಯಧನವನ್ನು ಕೊಡದಿರುವುದರಿಂದ ಅವುಗಳು ಸಂಕಷ್ಟಕ್ಕೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬ್ಯಾಂಕ್‌ಗಳ ಮೂಲಕ ಸಾಲ ಪಡೆದು ಪ್ರಾರಂಭಿಸಲಾಗಿರುವ ಕೈಗಾರಿಕೆಗಳಿಗೆ ಸರ್ಕಾರದ ವತಿಯಿಂದ ಕೊಡಬೇಕಾಗಿರುವ ಸಹಾಯಧನವನ್ನು ಬ್ಯಾಂಕ್ ಸಾಲದ ಕಂತಿಗೆ ಅಥವಾ ವಿದ್ಯುಚ್ಛಕ್ತಿ ಬಿಲ್‌ಗೆ ಬಾಕಿಗೆ ಸರಿಯಾಗಿರುವ ಸಂಬಂಧ ಸರ್ಕಾರ

ಕ್ರಮ ತೆಗೆದುಕೊಳ್ಳುವುದೇ ಅಥವಾ ಸಹಾಯಧನವನ್ನು ಬಿಡುಗಡೆ ಮಾಡುವ ಬಗ್ಗೆ ನಿರ್ದಿಷ್ಟ ಕಾಲಮಿತಿಯನ್ನು ನಿಗದಿಗೊಳಿಸಲಾಗುವುದೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದಿನಾಂಕ 31–3–04 ರವರೆಗೆ 19,555 ಘಟಕಗಳಿಗೆ ರೂ. 429.43 ಕೋಟಿಗಳನ್ನು ಸಹಾಯಧನ ಬಾಕಿಯಾಗಿ ನೀಡಬೇಕಾಗಿರುತ್ತದೆ. ವರ್ಷಾವಾರು ಸಹಾಯಧನ ಬಾಕಿಯ ವಿವರಗಳು ಈ ಕೆಳಕಂಡಂತಿದೆ.

| ವರ್ಷ | ಘಟಕಗಳು | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 31–3–99 | 1005 | 1621.97 |
| 31–3–00 | 6470 | 15965.43 |
| 31–3–01 | 5151 | 11662.48 |
| 31–3–02 | 3646 | 7779.76 |
| 31–3–03 | 2007 | 3537.72 |
| 31–3–04 | 1276 | 2376.16 |

ಆ) ಬಂದಿದೆ.

ಇ) ಪ್ರಸಕ್ತ ಕೈಗಾರಿಕಾ ನೀತಿಯಂತೆ, ಸಹಾಯಧನವನ್ನು ವಿದ್ಯುಚ್ಛಕ್ತಿ ಬಾಕಿಗಾಗಿ ಹೊಂದಾಣಿಕೆ ಮಾಡಲು ಅವಕಾಶವಿರುವುದಿಲ್ಲ. ಆದಾಗ್ಯೂ ಸಹಾಯಧನವನ್ನು ಸಾಲ ನೀಡಿದ ಆಯಾ ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು.

ಈ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಬಾಂಡ್‌ಗಳ ಮೂಲಕ ರೂ. 84.00 ಕೋಟಿಗಳನ್ನು ಸಂಗ್ರಹಿಸಿ ಬಾಕಿ ಇರುವ ಸಹಾಯಧನವನ್ನು ನೀಡಲು ಸರ್ಕಾರ ಆದೇಸ ಹೊರಡಿಸಿದೆ. ಈಗಾಗಲೇ 81.00 ಕೋಟಿಗಳನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸಂಗ್ರಹಿಸಿದ್ದು, ಸಣ್ಣ ಕೈಗಾರಿಕಾ ಘಟಕಗಳಿಗೆ ಬಿಡುಗಡೆಗೊಳಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

671(801) : ಶ್ರೀ ಕ್ಯಾಂತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳು ಯಾವುವು; ಅವುಗಳಲ್ಲಿ ಹೂಡಿರುವ ಬಂಡವಾಳ ಎಷ್ಟು (ಉದ್ದಿಮವಾರು ಮಾಹಿತಿ ನೀಡುವುದು)

ಆ) ಕಳೆದ 3 ವರ್ಷಗಳಲ್ಲಿ ಈ ಉದ್ದಿಮೆಗಳು ಗಳಿಸಿರುವ ಲಾಭ ಮತ್ತು ನಷ್ಟಗಳು ಎಷ್ಟು (ಉದ್ದಿಮೆವಾರು) ವಿವರ ನೀಡುವುದು;

ಇ) ಉದ್ದಿಮೆಗಳು ನಷ್ಟ ಹೊಂದುವುದಕ್ಕೆ ಕಾರಣವೇನೆಂದು ತನಿಖೆ **ಮಾಡಲಾಗಿದೆಯೇ? (ತನಿಖೆಯ ವಿವರಗಳನ್ನು ಒದಗಿಸುವುದು);**

ಈ) ಉದ್ದಿಮೆಗಳು ನಷ್ಟ ಹೊಂದುವುದಕ್ಕೆ ಕಾರಣರಾಗಿರುವ ಎಷ್ಟು ಅಧಿಕಾರಿಗಳ ಮೇಲೆ ಯಾವ ಯಾವ ಕ್ರಮ ತೆಗೆದುಕೊಳ್ಳಲಾಗಿದೆ;

ಉ) ನಷ್ಟದ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ನಿರ್ಧರಿಸಿದೆಯೇ;

ಊ) ಹಾಗಿದ್ದಲ್ಲಿ, ಯಾವ ಯಾವ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲಾಗುತ್ತದೆ ಹಾಗೂ ಅದಕ್ಕಾಗಿ ಮಾಡಿರುವ ರೂಪುರೇಷೆಗಳೇನು;

ಋ) ಉದ್ದಿಮೆಗಳ ಮೇಲ್ವಿಚಾರಕರಾಗಿ ಐ.ಎ.ಎಸ್. ಅಧಿಕಾರಿಗಳನ್ನು ನೇಮಿಸುವ ಬದಲು ತಾಂತ್ರಿಕತೆಯಲ್ಲಿ ಪರಿಣತಿ ಹೊಂದಿರುವವರನ್ನು ಮಾತ್ರ ಮೇಲ್ವಿಚಾರಕರಾಗಿ ನೇಮಿಸಿ, ಉದ್ದಿಮೆಗಳ ನಷ್ಟಕ್ಕೆ ಅವರನ್ನೇ ಜವಾಬ್ದಾರರನ್ನಾಗಿ ಮಾಡುವ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ 31–3–2003ರ ಅಂತ್ಯಕ್ಕೆ 90 ಸಾರ್ವಜನಿಕ ಉದ್ದಿಮೆಗಳಿವೆ. ಇವುಗಳಲ್ಲಿ ಹೂಡಿದ ಒಟ್ಟು ಬಂಡವಾಳ ರೂ.34,655,42 ಕೋಟಿಗಳು, ಅವುಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಸಾರ್ವಜನಿಕ ಉದ್ದಿಮೆಗಳ ಒಟ್ಟಾರೆ ಲಾಭ/ನಷ್ಟಗಳು ಈ ಕೆಳಗಿನಂತಿವೆ.

| | | ಒಟ್ಟಾರೆ ಲಾಭ (+)/ನಷ್ಟ (–) ರೊ. ಕೋಟಿಗಳಲ್ಲಿ |
|---|---|---|
| 1. | 2000–01 | –151.37 |
| 2. | 2001–02 | 40.04 |
| 3. | 2002–03 | –41.06 |

ಉದ್ದಿಮೆವಾರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ಉದ್ದಿಮೆಗಳ ನಷ್ಟ ಹೊಂದಲು ಉದ್ದಿಮೆವಾರು ಅವುಗಳದೇ ಆದ ಬೇರೆ ಬೇರೆ ಕಾರಣಗಳಿರುತ್ತವೆ.

ಈ) ಸಂಬಂಧಿಸಿದ ಆಡಳಿತ ಇಲಾಖೆಗಳಿಂದ ಮಾಹಿತಿ ಪಡೆಯಲಾಗುತ್ತಿದೆ.

ಉ) ನಷ್ಟದಲ್ಲಿರುವ ಉದ್ದಿಮೆಗಳ ಪುನಶ್ಚೇತನವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರವು ದಿನಾಂಕ 6–2–2001ರಲ್ಲಿ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಸುಧಾರಣೆ ಮತ್ತು ಖಾಸಗೀಕರಣ ನೀತಿಯನ್ನು ಹೊರತಂದಿರುತ್ತದೆ.

ಊ) ಅ) ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ

ಆ) ಶ್ರೀ ಕಂಠೀರವ ಸ್ಟುಡಿಯೋಸ್ ಲಿಮಿಟೆಡ್

ಇ) ಉದ್ದಿಮೆಗಳನ್ನು ಪುನಶ್ಚೇತನಕ್ಕೆ ಗುರ್ತಿಸುವ ಸಲುವಾಗಿ ಉದ್ದಿಮೆಗಳ ಸಮಗ್ರ ಪರಿಶೀಲನೆಗಾಗಿ ಕಾರ್ಯಕ್ರಮವನ್ನು ಯೋಜಿಸಲಾಗುತ್ತಿದೆ.

ಋ) ಸರ್ಕಾರವು ಉದ್ದಿಮೆಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ನೇಮಿಸುವಾಗ ಪರಿಗಣಿಸಿದ ನಂತರ ನೇಮಿಸುತ್ತದೆ. ಈ ರೀತಿ ನೇಮಕಗೊಂಡ ಎಲ್ಲರೂ ಉದ್ದಿಮೆಗಳ ಕಾರ್ಯನಿರ್ವಹಣೆಗೆ ಜವಾಬ್ದಾರರಾಗಿರುತ್ತಾರೆ. ಈ

ಕೆಳಕಂಡ ಅಂಶಗಳಂತೆ ಉದ್ದಿಮೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಾಹಿಸಬೇಕಾಗಿದೆ.

1) ಕಂಪನಿಯ ಕಾಯ್ದೆಯಡಿ ಕಾರ್ಯನಿರ್ವಹಿಸುವುದು. ಕಾರ್ಪೋರೇಟ್ ಗವರ್ನೆನ್ಸ್‌ನಂತೆ ಕಾರ್ಯನಿರ್ವಹಣೆ

2) ಪ್ರತಿ ವರ್ಷ ಕಂಪನಿಯ ಲೆಕ್ಕಪತ್ರಗಳು ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರಿಂದ ಪರಿಶೋಧನೆಗೊಳಗಾಗುತ್ತವೆ.

3) ಸರ್ಕಾರವು ಈಗಾಗಲೇ ದಿನಾಂಕ 7–5–2003ರಲ್ಲಿ ಸಾರ್ವಜನಿಕ ಉದ್ದಿಮೆಗಳ ಆಡಳಿತ ನಿರ್ವಾಹಕ ಮಂಡಳಿಯ ನಿರ್ದೇಶಕರುಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಕ್ಷರು, ಮುಖ್ಯ ಕಾರ್ಯ ನಿರ್ವಾಹಕರು, ಅರೆಕಾಲಿಕೆ ಅಧಿಕಾರಸ್ಥ ಮತ್ತು ಅಧಿಕಾರೇತರ ನಿರ್ದೇಶಕರುಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಕುರಿತು ಅಧಿಕೃತ ಜ್ಞಾಪನವನ್ನು ಹೊರಡಿಸಿದೆ.

4) 1956ರ ಕಂಪೆನಿಯ ಕಾಯ್ದೆ ಸೆಕ್ಷನ್ 217(2ಎಎ)ರ ಪ್ರಕಾರ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಲ್ಲದೆ, ಇತರೆ ಎಲ್ಲಾ ನಿರ್ದೇಶಕರುಗಳು "ನಿರ್ದೇಶಕರುಗಳ ಜವಾಬ್ದಾರಿ ವಿವರಣೆ ಪಟ್ಟಿಯಲ್ಲಿ" ನೀಡಬೇಕಾಗಿದ್ದು ಅದನ್ನು ವಾರ್ಷಿಕ ವರದಿಯಲ್ಲಿಯೂ ಮುದ್ರಿಸಬೇಕಾಗಿರುತ್ತದೆ.

## ಅನುಬಂಧ–1

## ರಾಜ್ಯ ಸಾರ್ವಜನಿಕ ಉದ್ದಿಮೆಗಳಲ್ಲಿ ಬಂಡವಾಳ ಹೂಡಿಕೆ

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಸಾರ್ವಜನಿಕ ಉದ್ದಿಮೆಗಳ ಹೆಸರು | ಬಂಡವಾಳ ಹೂಡಿಕೆ |
|---|---|---|
| | **ಸಾರ್ವಜನಿಕ ಉಪಯುಕ್ತತೆಯ ಉದ್ಯಮಗಳು** | |
| 1. | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | 349187.69 |
| 2. | ಕರ್ನಾಟಕ ವಿದ್ಯುತ್‌ಚಕ್ತಿ ನಿಗಮ, ಬಿಡದಿ | 2335.96 |
| 3. | ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ | 17724.21 |
| 4. | ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ | 400840.00 |
| 5. | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 125351.94 |
| 6. | ಹುಬ್ಬಳ್ಳಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 65631.25 |
| 7. | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 70295.19 |
| 8. | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 39208.94 |
| 9. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ | 35645.62 |
| 10. | ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ | 20061.98 |

| ಕ್ರ.ಸಂ. | ಸಾರ್ವಜನಿಕ ಉದ್ದಿಮೆಗಳ ಹೆಸರು | ಬಂಡವಾಳ ಹೂಡಿಕೆ |
|---|---|---|
| 11. | ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ | 13972.55 |
| 12. | ಬೆಂಗಳೂರು ಮಹಾನಗರ ಸಾರಿಗೆ ನಿಗಮ | 10599.20 |
| | **ಮೊತ್ತ** | **1150854.53** |
| | **ಹಣಕಾಸು ಸಂಸ್ಥೆಗಳು** | |
| 13. | ಕರ್ನಾಟಕ ರಾಜ್ಯ ಹಣಕಾಸು ನಿಗಮ ನಿಯಮಿತ | 210333.98 |
| 14. | ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ | 135482.00 |
| | **ಮೊತ್ತ** | **345815.98** |
| | **ಅಭಿವೃದ್ಧಿಶೀಲ ಉದ್ಯಮಗಳು (ವಾಣಿಜ್ಯೇತರ)** | |
| 15. | ಕರ್ನಾಟಕ ಪ.ಜಾ./ಪ.ಪಂ. ಅಭಿವೃದ್ಧಿ ನಿಗಮ ನಿಯಮಿತ | 17835.11 |
| 16. | ಕರ್ನಾಟಕ ಹಿಂದುಳಿದ ವರ್ಗ ಅಭಿವೃದ್ಧಿ ನಿಗಮ ನಿಯಮಿತ | 9483.68 |
| 17. | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ | 6199.63 |
| 18. | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ | 1077.84 |
| 19. | ಕರ್ನಾಟಕ ರಾಜ್ಯ ಪೊಲೀಸ್ ಹೌಸಿಂಗ್ ನಿಗಮ ನಿಯಮಿತ | 19866.07 |
| | **ಮೊತ್ತ** | **54462.33** |
| | **ಅಭಿವೃದ್ಧಿಶೀಲ ಉದ್ಯಮಗಳು (ವಾಣಿಜ್ಯ)** | |
| 20. | ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ | 670.03 |
| 21. | ಕರ್ನಾಟಕ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್ | 8387.67 |
| 22. | ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ | 320.74 |
| 23. | ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ | 724.42 |
| 24. | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ | 2148.15 |
| 25. | ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ | 424.23 |
| 26. | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ | 6853.04 |
| 27. | ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ | 896.50 |
| 28. | ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿಯಮಿತ | 8967.32 |
| **29.** | **ಕರ್ನಾಟಕ** ಗೋಡಂಬಿ ಅಭಿವೃದ್ಧಿ ನಿಗಮ ನಿಯಮಿತ | 611.70 |
| **30.** | **ಕರ್ನಾಟಕ** ಇನ್‌ಲ್ಯಾಂಡ್ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ (*) | 0.00 |
| 31. | ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತ | 594.30 |
| 32. | ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ ನಿಯಮಿತ | 151.18 |
| 33. | ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ | 500.00 |
| 34. | ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ (*) | 0.00 |
| | **ಮೊತ್ತ** | **31249.28** |

| ಕ್ರ.ಸಂ. | ಸಾರ್ವಜನಿಕ ಉದ್ದಿಮೆಗಳ ಹೆಸರು | ಬಂಡವಾಳ ಹೂಡಿಕೆ |
|---|---|---|
| | **ಸೇವಾ ಉದ್ಯಮಗಳು** | |
| 35. | ಕರ್ನಾಟಕ ಹೌಸಿಂಗ್ ಬೋರ್ಡ್ | 104768.62 |
| 36. | ರಾಜೀವ್ ಗಾಂಧಿ ಹೌಸಿಂಗ್ ನಿಗಮ ನಿಯಮಿತ | 40556.79 |
| 37. | ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ | 4869.45 |
| 38. | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ | 4616.40 |
| 39. | ಶ್ರೀ ಕಂಠೀರವ್ ಸ್ಟುಡಿಯೋಸ್ ಲಿಮಿಟೆಡ್ | 119.49 |
| 40. | ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ | 1600.29 |
| 41. | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ | 1163.45 |
| 42. | ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ | 2639.61 |
| 43. | ಕರ್ನಾಟಕ ಭೂಸೇನಾ ನಿಗಮ ನಿಯಮಿತ | 15225.00 |
| 44. | ಅರಣ್ಯ ವಸತಿ ಗೃಹಗಳು ಮತ್ತು ವಿಹಾರಧಾಮಗಳು ನಿಯಮಿತ | 113.84 |
| 45. | ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ನಿಯಮಿತ | 85.07 |
| 46. | ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 137538.21 |
| 47. | ಕರ್ನಾಟಕ ರಾಜ್ಯ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 86697.78 |
| 48. | ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ನಿಗಮ | 806.49 |
| 49. | ಕೃಷ್ಣ ಜಲ ಭಾಗ್ಯ ನಿಗಮ ನಿಯಮಿತ | 996526.80 |
| 50. | ಕರ್ನಾಟಕ ನೀರಾವರಿ ನಿಗಮ ನಿಯಮಿತ | 253006.01 |
| 51. | ಬೆಂಗಳೂರು ಮಾಸ್ ರಾಪಿಡ್ ಟ್ರಾನ್ಸಿಟ್ ಲಿಮಿಟೆಡ್ | 27443.84 |
| 52. | ಕರ್ನಾಟಕ ರಿನಿವೆಬಲ್ ಎನರ್ಜಿ ಅಭಿವೃದ್ಧಿ ನಿಗಮ ನಿಯಮಿತ | 13630.00 |
| 53. | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | 34576.16 |
| 54. | ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಪ್ರೈವೇಟ್ ಲಿಮಿಟೆಡ್ | 50.00 |
| 55. | ಕರ್ನಾಟಕ ಟ್ರಸ್ಟಿ ಮ್ಯಾನೇಜ್‌ಮೆಂಟ್ ಕಂಪನಿ ಲಿಮಿಟೆಡ್ | 1.00 |
| | **ಮೊತ್ತ** | **1726034.30** |
| | **ತಯಾರಿಕಾ ಉದ್ಯಮಗಳು** | |
| 56. | ಮೈಸೂರು ಸಕ್ಕರೆ ಕಂಪನಿ ನಿಯಮಿತ | 10353.79 |
| 57. | ಮೈಸೂರು ಕಾಗದ ಕಾರ್ಖಾನೆ ನಿಯಮಿತ | 32269.85 |
| 58. | ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ | 7358.36 |
| 59. | ಮೈಸೂರು ಟೋಬ್ಯಾಕೋ ಕಂಪನಿ ನಿಯಮಿತ | 1013.26 |
| 60. | ಮೈಸೂರು ಮ್ಯಾಚ್ ಕಂಪನಿ ನಿಯಮಿತ | 129.36 |
| 61. | ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ನಿಯಮಿತ | 5.00 |

| ಕ್ರ.ಸಂ. | ಸಾರ್ವಜನಿಕ ಉದ್ದಿಮೆಗಳ ಹೆಸರು | ಬಂಡವಾಳ ಹೂಡಿಕೆ |
|---|---|---|
| 62. | ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತ | 536.98 |
| 63. | ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ | 4618.20 |
| 64. | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ | 4219.02 |
| 65. | ಎನ್.ಜಿ.ಇ.ಎಫ್. ಲಿಮಿಟೆಡ್ | 34289.07 |
| 66. | ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪೆನಿ ನಿಯಮಿತ | 2528.85 |
| 67. | ಮೈಸೂರು ಮಿನರಲ್ಸ್ ಲಿಮಿಟೆಡ್ | 4364.27 |
| 68. | ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್ | 205.07 |
| 69. | ಕರ್ನಾಟಕ ರಾಜ್ಯ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ನಿಯಮಿತ | 1073.37 |
| 70. | ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ | 313.11 |
| 71. | ಕರ್ನಾಟಕ ರಾಜ್ಯ ವೆನೀರ್ಸ್ ನಿಯಮಿತ | 449.67 |
| 72. | ಚಾಮುಂಡಿ ಮಷಿನ್ ಟೂಲ್ಸ್ ನಿಯಮಿತ | 639.21 |
| 73. | ಕರ್ನಾಟಕ ಆಗ್ರೋ ಪ್ರೋಟೀನ್ಸ್ ನಿಯಮಿತ | 60.93 |
| 74. | ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ | 4329.60 |
| 75. | ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತ | 4750.99 |
| 76. | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ | 6504.79 |
| 77. | ಕರ್ನಾಟಕ ರಾಜ್ಯ ಜವಳಿ ನಿಯಮಿತ | 2144.78 |
| 78. | ಕರ್ನಾಟಕ ಟೆಲಿಕಾಂ ನಿಯಮಿತ | 3752.90 |
| 79. | ಕರ್ನಾಟಕ ಪಲ್ಪ್‌ವುಡ್ ನಿಯಮಿತ | 1820.95 |
| 80. | ಕರ್ನಾಟಕ ಟಂಗ್‌ಸ್ಟನ್ ಮೋಲಿ ನಿಯಮಿತ (*) | 0.00 |
| 81. | ಎನ್.ಜಿ.ಇ.ಎಫ್. (ಹುಬ್ಬಳ್ಳಿ) ನಿಯಮಿತ | 671.01 |
| 82. | ವಿಜಯನಗರ ಸ್ಟೀಲ್ ಲಿಮಿಟೆಡ್ | 1351.93 |
| | **ಮೊತ್ತ.** | **129754.32** |
| | **ಮಾರುಕಟ್ಟೆ ಮತ್ತು ಜಾಹಿರಾತು ಉದ್ಯಮಗಳು** | |
| 83. | ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ | 6039.15 |
| 84. | ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ ಅಂಡ್ ಏಜೆನ್ಸೀಸ್ ನಿಯಮಿತ | 509.99 |
| 85. | ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ | 580.14 |
| 86. | ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತ | 153.50 |
| 87. | ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ | 3185.95 |
| 88. | ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮ ನಿಯಮಿತ | 171.00 |

| ಕ್ರ.ಸಂ. | ಸಾರ್ವಜನಿಕ ಉದ್ದಿಮೆಗಳ ಹೆಸರು | ಬಂಡವಾಳ ಹೂಡಿಕೆ |
|---|---|---|
| 89. | ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ | 16682.01 |
| 90. | ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಮಾರಾಟ ಮತ್ತು ರಫ್ತು ನಿಯಮಿತ | 50.00 |
| | **ಮೊತ್ತ** | **27371.74** |
| | **ಒಟ್ಟು** | **3465542.48** |

*ಸ್ಥಗಿತಗೊಂಡಿರುವ / ಮಾಹಿತಿ ಲಭ್ಯವಿರುವುದಿಲ್ಲ.

## ಅನುಬಂಧ-2

## ಕಳೆದ ಮೂರು ವರ್ಷಗಳಲ್ಲಿ ಸಾರ್ವಜನಿಕ ಉದ್ದಿಮೆಗಳು ಗಳಿಸಿದ ನಿವ್ವಳ ಲಾಭ (+)/ನಷ್ಟ(–) (ಹಿಂದಿನ ವರ್ಷಗಳ ಹೊಂದಾಣಿಕೆಯ ನಂತರ)

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಸಾರ್ವಜನಿಕ ಉದ್ದಿಮೆಗಳ ಹೆಸರು | 2000–2001 | 2001–2002 | 2002–2003 |
|---|---|---|---|---|
| | **ಸಾರ್ವಜನಿಕ ಉಪಯುಕ್ತತೆಯ ಉದ್ಯಮಗಳು** | | | |
| 1. | ಕರ್ನಾಟಕ ವಿದ್ಯುತ್ ನಿಗಮ ನಿಯಮಿತ | –10007.94 | 25344.91 | 24070.30 |
| 2. | ಕರ್ನಾಟಕ ವಿದ್ಯುತ್‌ಚಕ್ತಿ ನಿಗಮ, ಬಿಡದಿ | –77.44 | –138.32 | –166.82 |
| 3. | ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ | 765.43 | 1094.86 | 271.04 |
| 4. | ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತ | 7508.00 | 7941.00 | 4945.00 |
| 5. | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 0.00 | 0.00 | 2150.92 |
| 6. | ಹುಬ್ಬಳ್ಳಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 0.00 | 0.00 | 963.00 |
| 7. | ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 0.00 | 0.00 | 1117.51 |
| 8. | ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 0.00 | 0.00 | 808.89 |
| 9. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ನಿಯಮಿತ | –1653.07 | 1579.64 | 3271.14 |
| 10. | ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ | 506.97 | 1171.54 | 1228.14 |
| 11. | ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ | –2118.43 | –1818.69 | –1498.08 |
| 12. | ಬೆಂಗಳೂರು ಮಹಾನಗರ ಸಾರಿಗೆ ನಿಗಮ | 1311.86 | 2670.27 | 2764.76 |
| | **ಮೊತ್ತ** | **–3764.62** | **37845.21** | **39925.80** |
| | **ಹಣಕಾಸು ಸಂಸ್ಥೆಗಳು** | | | |
| 13. | ಕರ್ನಾಟಕ ರಾಜ್ಯ ಹಣಕಾಸು ನಿಗಮ ನಿಯಮಿತ | –10341.40 | –13942.68 | –13774.34 |

| 1 | 2 | 3 | 4 | 5 |
|---|---|---|---|---|
| 14. | ಕರ್ನಾಟಕ ಸ್ಟೇಟ್ ಇಂಡಸ್ಟ್ರೀಯಲ್ ಇನ್‌ವೆಸ್ಟ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ | –4306.00 | –11805.00 | –8583.00 |
| | ಮೊತ್ತ | –14647.40 | –25747.58 | –22357–34 |
| | ಅಭಿವೃದ್ಧಿಶೀಲ ಉದ್ಯಮಗಳು (ವಾಣಿಜ್ಯೇತರ) | | | |
| 15. | ಕರ್ನಾಟಕ ಪ.ಜಾ./ಪ.ಪಂ. ಅಭಿವೃದ್ಧಿ ನಿಗಮ ನಿಯಮಿತ | –176.78 | 293.78 | 199.42 |
| 16. | ಕರ್ನಾಟಕ ಹಿಂದುಳಿದ ವರ್ಗ ಅಭಿವೃದ್ಧಿ ನಿಗಮ ನಿಯಮಿತ | –165.48 | –147.02 | –238.62 |
| 17. | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ | –139.94 | –193.37 | –183.08 |
| 18. | ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ | 137.15 | –72.47 | –1.84 |
| 19. | ಕರ್ನಾಟಕ ರಾಜ್ಯ ಪೋಲಿಸ್ ಹೌಸಿಂಗ್ ನಿಗಮ ನಿಯಮಿತ | 0.00 | 0.00 | 0.00 |
| | ಮೊತ್ತ | –345.05 | –119.08 | –224.12 |
| | ಅಭಿವೃದ್ಧಿಶೀಲ ಉದ್ಯಮಗಳು (ವಾಣಿಜ್ಯ) | | | |
| 20. | ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ | 6.66 | 3.99 | –8.76 |
| 21. | ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್ | –604.25 | –1077.25 | –278.35 |
| 22. | ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ | –19.42 | –26.17 | –9.07 |
| 23. | ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ | –61.38 | –127.40 | 118.35 |
| 24. | ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ | –501.08 | –511.26 | 118.35 |
| 25. | ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ | 12.54 | –3.08 | 5.51 |
| 26. | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ | –953.65 | –1180.75 | –1482.58 |
| 27. | ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ | –213.00 | –190.65 | –60.65 |
| 28. | ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿಯಮಿತ | –185.16 | 161.28 | –26.74 |
| 29. | ಕರ್ನಾಟಕ ಗೋಡಂಬಿ ಅಭಿವೃದ್ಧಿ ನಿಗಮ ನಿಯಮಿತ | –61.03 | 166.44 | 405.98 |
| 30. | ಕರ್ನಾಟಕ ಇನ್‌ಲಾಂಡ್ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ (**) | 0.00 | 0.00 | 0.00 |

| 1 | 2 | 3 | 4 | 5 |
|---|---|---|---|---|
| 31. | ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತ | –16.01 | –55.24 | –58.53 |
| 32. | ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ ನಿಯಮಿತ | 71.82 | 40.31 | 45.95 |
| 33. | ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ | 0.00 | 0.00 | 0.33 |
| 34. | ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ (**) | 0.00 | 0.00 | 0.00 |
| | **ಮೊತ್ತ** | **–2523.96** | **–2799.78** | **–1566.68** |
| | **ಸೇವಾ ಉದ್ಯಮಗಳು** | | | |
| 35. | ಕರ್ನಾಟಕ ಹೌಸಿಂಗ್ ಬೋರ್ಡ್ | 180.30 | 10.18 | 73.34 |
| 36. | ರಾಜೀವ್ ಗಾಂಧಿ ಹೌಸಿಂಗ್ ನಿಗಮ ನಿಯಮಿತ | 201.79 | –210.39 | –369.62 |
| 37. | ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ | 704.76 | 935.46 | 547.94 |
| 38. | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ | 120.05 | 35.98 | 78.72 |
| 39. | ಶ್ರೀ ಕಂಠೀರವ್ ಸ್ಟುಡಿಯೋಸ್ ಲಿಮಿಟೆಡ್ | –3.74 | 0.64 | –3.28 |
| 40. | ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ | 744.98 | 202.59 | –298.50 |
| 41. | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ | –104.48 | –108.05 | –44.55 |
| 42. | ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ | 335.52 | 566.70 | 128.17 |
| 43. | ಕರ್ನಾಟಕ ಭೂಸೇನಾ ನಿಗಮ ನಿಯಮಿತ | 71.65 | 662.88 | 375.69 |
| 44. | ಅರಣ್ಯ ವಸತಿ ಗೃಹಗಳು ಮತ್ತು ವಿಹಾರಧಾಮಗಳು ನಿಯಮಿತ | 32.35 | –4.14 | 34.00 |
| 45. | ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ನಿಯಮಿತ | 0.36 | 11.33 | 22.98 |
| 46. | ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | –214.54 | –1438.47 | –513.88 |
| 47. | ಕರ್ನಾಟಕ ರಾಜ್ಯ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 4987.61 | 5906.06 | 1344.20 |
| 48. | ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಣಕಾಸು ನಿಗಮ | 728.92 | 853.90 | 454.01 |
| 49. | ಕೃಷ್ಣ ಜಲ ಭಾಗ್ಯ ನಿಗಮ ನಿಯಮಿತ (*) | 0.00 | 0.00 | 0.00 |
| 50. | ಕರ್ನಾಟಕ ನೀರಾವರಿ ನಿಗಮ ನಿಯಮಿತ (*) | 0.00 | 0.00 | 0.00 |
| 51. | ಬೆಂಗಳೂರು ಮಾಸ್ ರಾಪಿಡ್ ಟ್ರಾನ್ಸಿಟ್ ಲಿಮಿಟೆಡ್ (*) | 0.00 | 0.00 | 0.00 |

| 1 | 2 | 3 | 4 | 5 |
|---|---|---|---|---|
| 52. | ಕರ್ನಾಟಕ ರಿನಿವೆಬಲ್ ಎನರ್ಜಿ ಅಭಿವೃದ್ಧಿ ನಿಗಮ ನಿಯಮಿತ | 28.90 | 36.10 | 48.97 |
| 53. | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ | –121.51 | –149.08 | –1495.95 |
| 54. | ಕರ್ನಾಟಕ ಅಸೆಟ್ ಮ್ಯಾನೆಜ್‌ಮೆಂಟ್ ಕಂಪನಿ ಪ್ರೈವೇಟ್ ಲಿಮಿಟೆಡ್ | 20.96 | 5.18 | 5.49 |
| 55. | ಕರ್ನಾಟಕ ಟ್ರಸ್ಟಿ ಮ್ಯಾನೆಜ್‌ಮೆಂಟ್ ಕಂಪನಿ ಲಿಮಿಟೆಡ್ | –0.08 | 0.31 | 0.04 |
| | **ಮೊತ್ತ** | **7713.80** | **7317.18** | **1546.77** |
| | **ತಯಾರಿಕಾ ಉದ್ಯಮಗಳು** | | | |
| 56. | ಮೈಸೂರು ಸಕ್ಕರೆ ಕಂಪನಿ ನಿಯಮಿತ | –160.54 | –42.76 | –2729.76 |
| 57. | ಮೈಸೂರು ಕಾಗದ ಕಾರ್ಖಾನೆ ನಿಯಮಿತ | 796.55 | –3486.22 | –2085.60 |
| 58. | ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ | –1505.59 | –2360.46 | 0.00* |
| 59. | ಮೈಸೂರು ಟೋಬ್ಯಾಕೋ ಕಂಪನಿ ನಿಯಮಿತ | –56.63 | –37.60 | –32.64 |
| 60. | ಮೈಸೂರು ಮ್ಯಾಚ್ ಕಂಪನಿ ನಿಯಮಿತ | 159.07 | 26.39 | 130.17 |
| 61. | ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ನಿಯಮಿತ. | –0.12 | –4.27 | –0.32 |
| 62. | ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತ | –7.96 | 21.28 | 214.27 |
| 63. | ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ | –150.79 | –258.87 | –499.55 |
| 64. | ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ | –633.93 | –1062.00 | 1313.94 |
| 65. | ಎನ್.ಜಿ.ಇ.ಎಫ್. ಲಿಮಿಟೆಡ್ | 2131.20 | –5349.74 | –15747.89 |
| 66. | ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ನಿಯಮಿತ | –127.29 | –16.15 | 0.00** |
| 67. | ಮೈಸೂರು ಮಿನರಲ್ಸ್ ಲಿಮಿಟೆಡ್ | –1909.45 | –622.28 | –588.97 |
| 68. | ಮೈಸೂರು ಕಾಸ್ಮೆಟಿಕ್ಸ್ ಲಿಮಿಟೆಡ್ | –5.41 | –55.88 | –45.97 |
| 69. | ಕರ್ನಾಟಕ ರಾಜ್ಯ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ನಿಯಮಿತ | 318.37 | 637.84 | 613.29 |
| 70. | ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ | 13.82 | 13.84 | 81.01 |
| 71. | ಕರ್ನಾಟಕ ರಾಜ್ಯ ವೆನೀರ್ಸ್ ನಿಯಮಿತ | –117.87 | –143.10 | –62.44 |
| 72. | ಚಾಮುಂಡಿ ಮಷಿನ್ ಟೂಲ್ಸ್ ನಿಯಮಿತ | –269.87 | –35.76 | 8.02 |
| 73. | ಕರ್ನಾಟಕ ಆಗ್ರೋ ಪ್ರೋಟೀನ್ಸ್ ನಿಯಮಿತ | 0.00 | 51.47 | 233.92 |
| 74. | ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ | 160.17 | 56.45 | –471.11 |

| 1 | 2 | 3 | 4 | 5 |
|---|---|---|---|---|
| 75. | ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತ | –314.44 | –638.93 | –736.63 |
| 76. | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ | 60.39 | 122.33 | 142.62 |
| 77. | ಕರ್ನಾಟಕ ಟೆಲಿಕಾಂ ನಿಯಮಿತ | –62.76 | –61.81 | –620.71 |
| 78. | ಕರ್ನಾಟಕ ರಾಜ್ಯ ಜವಳಿ ನಿಯಮಿತ | –933.54 | –753.15 | 0.00** |
| 79. | ಕರ್ನಾಟಕ ಪಲ್ಪ್‌ವುಡ್ ನಿಯಮಿತ | –120.41 | 111.41 | –127.35 |
| 80. | ಕರ್ನಾಟಕ ಟಂಗ್‌ಸ್ಟನ್ ಮೋಲಿ ನಿಯಮಿತ (*) | 0.00 | 0.00 | 0.00 |
| 81. | ಎನ್.ಜಿ.ಇ.ಎಫ್. (ಹುಬ್ಬಳ್ಳಿ) ನಿಯಮಿತ | 16.76 | 19.95 | 8.22 |
| 82. | ವಿಜಯನಗರ ಸ್ಟೀಲ್ ಲಿಮಿಟೆಡ್ | 0.00 | 0.00 | 0.00 |
| | ಮೊತ್ತ | –2720.27 | –13868.22 | –21003.48 |
| | ಮಾರುಕಟ್ಟೆ ಮತ್ತು ಜಾಹಿರಾತು ಉದ್ಯಮಗಳು | | | |
| 83. | ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ | 1055.17 | 1226.05 | 444.17 |
| 84. | ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ ಅಂಡ್ ಏಜೆನ್ಸೀಸ್ ನಿಯಮಿತ | 17.56 | 57.45 | 59.13 |
| 85. | ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ | 32.81 | 22.21 | –113.36 |
| 86. | ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತ | –21.12 | –3.91 | 0.97 |
| 87. | ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ | 18.21 | –26.85 | –823.50 |
| 88. | ಕರ್ನಾಟಕ ಸಣ್ಣ ಕೈಗಾರಿಕಾ ಮಾರುಕಟ್ಟೆ ನಿಗಮ ನಿಯಮಿತ | –8.81 | –27.96 | –61.27 |
| 89. | ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ | 0.00 | 0.00 | 0.00 |
| 90. | ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಮಾರಾಟ ಮತ್ತು ರಫ್ತು ನಿಯಮಿತ | 56.71 | 129.35 | 66.39 |
| | ಮೊತ್ತ | 1150.53 | 1376.34 | –427.47 |
| | ಒಟ್ಟು | –15136.97 | 4004.07 | –4106.52 |

* ಲಾಭ/ನಷ್ಟಯಿಲ್ಲದ/ಇಂಪ್ಲಿಮೆಂಟೇಷನ್ ಹಂತದಲ್ಲಿರುವ ಉದ್ದಿಮೆಗಳು

**ಸ್ಥಗಿತಗೊಂಡಿರುವ / ಮಾಹಿತಿ ಲಭ್ಯವಿರುವುದಿಲ್ಲ

672(803) : ಶ್ರೀ ಕ್ಯಾಂತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಜೇನುಕೃಷಿಯನ್ನು ಯಾವ ಯಾವ ಭಾಗದಲ್ಲಿ ಮಾಡಲಾಗುತ್ತಿದೆ? (ಜಿಲ್ಲಾ ಹಾಗೂ ತಾಲ್ಲೂಕು ವಿವರ ನೀಡುವುದು)

ಆ) ಜೇನು ಸಾಕಾಣಿಕೆಗೆ ಬೇಕಾದ ಪರಿಕರಗಳಿಗೆ ಕೊಡುತ್ತಿದ್ದ ಸಹಾಯಧನವನ್ನು ಎಂದಿನಿಂದ ನಿಲ್ಲಿಸಲಾಗಿದೆ? ನಿಲ್ಲಿಸಿರುವುದಕ್ಕೆ ಕಾರಣಗಳೇನು; ಸಹಾಯಧನವನ್ನು ಮುಂದುವರೆಸಲಾಗುವುದೇ;

ಇ) ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ಹೆಚ್ಚಿನ ಇಳುವರಿಗೆ ಸಹಾಯ ಮಾಡುವ ಜೇನುಸಾಕಣೆ ಉಪ ಕಸುಬಿನ ಸಂಬಂಧವಾಗಿ ರೈತರುಗಳಿಗೆ ತಿಳುವಳಿಕೆ ಕೊಡಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಈ) ಕಳೆದ 3 ವರ್ಷಗಳಿಂದ ಎಷ್ಟು ಜನರಿಗೆ ಈ ಬಗ್ಗೆ ತರಬೇತಿ ಕೊಡಲಾಗಿದೆ; ತರಬೇತಿ ಹೊಂದಿದ ಎಷ್ಟು ಜನ ಜೇನುಸಾಕಣೆ ಮಾಡುತ್ತಿದ್ದಾರೆ;

ಉ) ಜೇನು ಕೃಷಿ ಪ್ರೋತ್ಸಾಹಕ್ಕಾಗಿ ಕಳೆದ 3 ವರ್ಷಗಳಿಂದ ಸರ್ಕಾರ ಖರ್ಚು ಮಾಡಿರುವ ಮೊತ್ತವೆಷ್ಟು; ಇದರಿಂದ ಎಷ್ಟರಮಟ್ಟಿಗೆ ಉಪಯೋಗವಾಗಿದೆ;

ಊ) ಜೇನುಕೃಷಿ ಅಭಿವೃದ್ಧಿಗಾಗಿ ಇತರ ರಾಜ್ಯಗಳು ಕೊಡುತ್ತಿರುವ ಪ್ರೋತ್ಸಾಹದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೆ;

ಋ) ಹಾಗಿದ್ದಲ್ಲಿ ಈ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ರಾಜ್ಯದಲ್ಲಿ ಜೇನುಕೃಷಿಯನ್ನು ಬೆಂಗಳೂರು (ನಗರ), ಬೆಂಗಳೂರು (ಗ್ರಾಮಾಂತರ), ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ದಕ್ಷಿಣ ಕನ್ನಡ, ಧಾರವಾಡ, ಗದಗ, ಗುಲ್ಬರ್ಗಾ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಮಾಡಲಾಗುತ್ತಿದೆ.

ಜಿಲ್ಲೆ ಹಾಗೂ ತಾಲ್ಲೂಕುವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ರಾಜ್ಯ ವಲಯದ ಜೇನುಕೃಷಿ ಯೋಜನೆಯಡಿ ಜೇನು ಸಾಕಾಣಿಕೆಗೆ ಬೇಕಾದ ಪರಿಕರಗಳಿಗೆ ಕೊಡುತ್ತಿದ್ದ ಸಹಾಯಧನವನ್ನು 2002-03ನೇ ಸಾಲಿನಿಂದ ನಿಲ್ಲಿಸಲಾಗಿದೆ.

2000-01 ಹಾಗೂ 2001-02ನೇ ಸಾಲುಗಳಲ್ಲಿ ಜೇನು ಕೃಷಿ ಅಭಿವೃದ್ಧಿ ಕಾರ್ಯಕ್ರಮದಡಿ ಹೆಚ್ಚಿನ ಪ್ರಮಾಣದಲ್ಲಿ ತರಬೇತಿಯನ್ನು ಹಮ್ಮಿಕೊಂಡಿದ್ದು ಒಟ್ಟು 7000ಕ್ಕೂ ಹೆಚ್ಚು ಆಸಕ್ತರಿಗೆ ತರಬೇತಿ ನೀಡಲಾಗಿದ್ದು, ಸುಮಾರು 11,764 ಪೆಟ್ಟಿಗೆಗಳನ್ನು ಧನ ಸಹಾಯ ನೀಡಿ ವಿತರಿಸಲಾಗಿದೆ. ಜೇನು ಕೃಷಿಯ ಬಗ್ಗೆ ಜನರಲ್ಲಿ ಸಾಕಷ್ಟು ಅರಿವು ಮೂಡಿಸಿದ್ದು, ಸಾಕಷ್ಟು ಜೇನು ಪೆಟ್ಟಿಗೆಗಳನ್ನು ಸಹಾಯಧನದಡಿ ಒದಗಿಸಿದ್ದು, ಇನ್ನು ಮುಂದೆ ಸಹಾಯಧನ ಇಲ್ಲದೆಯೇ ಈ ಕ್ಷೇತ್ರದಲ್ಲಿ ಅಭಿವೃದ್ಧಿಯ ಸಾಧ್ಯತೆಯನ್ನು ಮನಗಂಡು ಹಾಗೂ ಹಿಂದಿನ ಸಾಲುಗಳಲ್ಲಿ ಅನುದಾನವನ್ನು x x x ಕಡಿತಗೊಳಿಸುತ್ತಾ ಬಂದಿರುವ ಹಿನ್ನಲೆಯಲ್ಲಿ ಜೇನು

ಪೆಟ್ಟಿಗೆಗಳಿಗೆ ಸಹಾಯಧನ ನೀಡುವುದನ್ನು ಕೈ ಬಿಡಲಾಗಿದೆ. ವಿವರಗಳು ಕೆಳಗಿನಂತಿದೆ

(ರೂ. ಲಕ್ಷಗಳಲ್ಲಿ)

| ವರ್ಷ | ಹಂಚಿಕೆಯಾದ ಆಯವ್ಯಯ | ಬಿಡುಗಡೆಯಾದ ಆಯವ್ಯಯ |
|---|---|---|
| 2000-01 | 40.00 | 20.00 |
| 2001-02 | 30.00 | 15.00 |
| 2002-03 | 30.00 | 15.00 |
| 2003-04 | 20.00 | 15.00 |

ಆದರೆ ಜೇನುಕೃಷಿ ಪೆಟ್ಟಿಗೆ ಇತರೆ ಸಲಕರಣೆಗಳನ್ನು ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯಿಂದ ಅನುಷ್ಠಾನಗೊಳಿಸುತ್ತಿರುವ ಮಾರ್ಜಿನ್ ಮನಿ (ಅಂಚಿನ ಹಣ) ಯೋಜನೆಯೊಂದಿಗೆ ಸಂಯೋಜಿಸಿದ್ದು ಶೇ. 25 ರಿಂದ 30ರಷ್ಟು ಅಂಚಿನ ಹಣವನ್ನು ಸಹಾಯಧನದ ರೂಪದಲ್ಲಿ ಪಡೆಯಲು ಅವಕಾಶವಿರುತ್ತದೆ. ಈ ಯೋಜನೆಯಲ್ಲಿ ಜೇನು ಪೆಟ್ಟಿಗೆಗಳನ್ನು ಪಡೆಯುವ ಸಂಖ್ಯೆಯ ಮೇಲೆ ಯಾವುದೇ ಮಿತಿ ಇರುವುದಿಲ್ಲ.

ಇದಲ್ಲದೇ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿಯಲ್ಲಿಯೂ ಸಹ ಸಾಲ ಸೌಲಭ್ಯವನ್ನು ಪಡೆಯಲು ಅವಕಾಶವಿದ್ದು, ಈ ಯೋಜನೆಯಲ್ಲಿ ಶೇ. 15ರಷ್ಟು ಅನುದಾನದಲ್ಲಿ (ಗರಿಷ್ಠ ರೂ. 7500-00) ಜೇನು ಪೆಟ್ಟಿಗೆಗಳನ್ನು ಪಡೆಯಬಹುದಾಗಿದೆ. ಈಗಾಗಲೇ ಈ ಯೋಜನೆಯಲ್ಲಿ ಜೇನುಕೃಷಿಕರಿಗೆ ಸಾಲ ಸೌಲಭ್ಯ ನೀಡಲು ಸಂಬಂಧಿಸಿದ ಬ್ಯಾಂಕುಗಳಿಗೆ ಅರಿವು ಮೂಡಿಸಲಾಗಿದೆ. ಹಾಗೂ ರಾಜ್ಯದಾದ್ಯಂತ ಕೆಲವರು ಈಗಾಗಲೇ ಈ ಯೋಜನೆಯಲ್ಲಿ ಸಾಲ ಸೌಲಭ್ಯ ಪಡೆದು ಜೇನುಕೃಷಿ ಪ್ರಾರಂಭಿಸಿರುತ್ತಾರೆ. ಜಿಲ್ಲಾ ವಲಯದಡಿ ಕೂಡಾ ಕೆಲವು ಜಿಲ್ಲೆಗಳಲ್ಲಿ ಜೇನುಕೃಷಿ ಯೋಜನೆಯನ್ನು ಜಿಲ್ಲಾ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ.

ಇ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಜೇನುಕೃಷಿ ಅಭಿವೃದ್ಧಿಗಾಗಿ 2000-01, 2001-02 ಮತ್ತು 2003-04ನೇ ಸಾಲುಗಳಲ್ಲಿ ನೀಡಲಾಗಿದೆ.

**1. ಜಾಗೃತಿ ಕಾರ್ಯಕ್ರಮ:**

ಜೇನು ಸಾಕಾಣಿದಾರರಾಗಿ ತರಬೇತಿಯನ್ನು ಪಡೆಯಲು ಆಸಕ್ತಿ ಇರುವವರಿಗೆ ಜೇನು ಸಾಕಾಣಿಕೆ ಮತ್ತು ಅದರ ಉಪಯೋಗಗಳ ಬಗ್ಗೆ ಸ್ಥೂಲ ವಿಚಾರಗಳನ್ನು ನೀಡಲು ಒಂದು ದಿನದ ಜಾಗೃತಿ ಕಾರ್ಯಕ್ರಮವನ್ನು ನೀಡಲಾಗಿರುತ್ತದೆ.

**2. ಏಳು ದಿನಗಳ ಏಪಿಸ್ ಸೆರೆನಾ ತರಬೇತಿ ಕಾರ್ಯಕ್ರಮ :**

ನಿರುದ್ಯೋಗಿ ಗ್ರಾಮೀಣ ಯುವಕರು ಮತ್ತು ಯುವತಿಯರಿಗೆ ವಿಶೇಷವಾಗಿ ಜೇನು ಸಾಕಾಣಿಕೆ ಬಗ್ಗೆ ಉಚಿತವಾಗಿ ತರಬೇತಿ ನೀಡಲಾಗಿದೆ

**3. ಏಳು ದಿನಗಳ ಏಪಿಸ್ ಮೆಲ್ಲಿಫೆರಾ ಜೇನುಕೃಷಿ ತರಬೇತಿ ಕಾರ್ಯಕ್ರಮ :**

ಏಪಿಸ್ ಮೆಲ್ಲಿಫೆರಾ ವಿದೇಶಿ ತಳಿಯ ಜೇನು ಕೃಷಿಯ ಬಗ್ಗೆ ಏಳು ದಿನಗಳ ತರಬೇತಿ ಕಾರ್ಯಕ್ರಮವನ್ನು ನೀಡಲಾಗಿದೆ.

**4. ಹೆಜ್ಜೇನಿನಿಂದ (ಏಪಿಸ್ ಡಾರ್‌ಸೆಟಾ) ಜೇನು ತೆಗೆಯುವ ಕಾರ್ಯಕ್ರಮ :**

ಹೆಜ್ಜೇನು (ಏಪೀಸ್ ಡಾರ್‌ಸೆಟಾ), ಕಾಡು ಜೇನು ಸಂಗ್ರಹಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಇದರಿಂದ ಜೇನು ನೊಣಗಳನ್ನು ನಾಶಪಡಿಸದೇ ಜೇನು ತುಪ್ಪವನ್ನು ತೆಗೆಯಲು ತರಬೇತಿ ನೀಡಲಾಗುತ್ತಿದೆ.

**5. ಉಪನ್ಯಾಸ :**

ಜೇನು ಕೃಷಿಯನ್ನು ಅನುಷ್ಠಾನಗೊಳಿಸಲು ಅನೇಕ ಗ್ರಾಮೀಣ / ನಗರ ಪ್ರದೇಶಗಳಲ್ಲಿನ ಶಾಲಾ ಕಾಲೇಜುಗಳಲ್ಲಿ ಒಂದು ಗಂಟೆ ಅವಧಿಯ ಉಪನ್ಯಾಸವನ್ನು ಸಹ ನೀಡಲಾಗಿದೆ.

**6. ಪ್ರವಾಸ :**

ಜೇನು ಕೃಷಿಕರಿಗೆ ಜೇನು ಸಾಕಾಣಿಕೆಯ ಬಗ್ಗೆ. ಹೆಚ್ಚಿನ ಅನುಭವ ಪಡೆಯಲು ಅನುಕೂಲವಾಗುವಂತೆ ಒಳ ಹಾಗೂ ಹೊರ ರಾಜ್ಯ ಪ್ರವಾಸಗಳನ್ನು ಏರ್ಪಡಿಸಲಾಗಿದೆ

**7. ಜೇನು ಪೆಟ್ಟಿಗೆ, ಜೇನು ಕುಟುಂಬ (ತಳಿ) ಇತರೆ ಸಲಕರಣೆಗಳನ್ನು ಶೇಕಡವಾರು ಅನುದಾನದಲ್ಲಿ ಒದಗಿಸುವ ಬಗ್ಗೆ:**

ಜೇನು ಕೃಷಿಯನ್ನು ಹೆಚ್ಚಾಗಿ ಅನುಷ್ಠಾನಗೊಳಿಸಲು ಅನುವಾಗುವಂತೆ ಜೇನು ಪೆಟ್ಟಿಗೆ, ಜೇನು ತಳಿ ಹಾಗೂ ಇತರೆ ಸಲಕರಣೆಗಳಿಗೆ ಶೇ. 50ರಂತೆ ಸಹಾಯಧನವನ್ನು ನೀಡಲಾಗಿದೆ. ತರಬೇತಿ ಪಡೆದ ಪರಿಶಿಷ್ಟ ಜಾತಿಯವರಿಗೆ ತಲಾ 5 ಪೆಟ್ಟಿಗೆಗಳನ್ನು ಶೇ. 60ರಂತೆ ಹಾಗೂ ಪರಿಶಿಷ್ಟ ಪಂಗಡದವರಿಗೆ ಗರಿಷ್ಟ 5 ಪೆಟ್ಟಿಗೆಗಳಿಗೆ ಶೇ. 100ರಂತೆ ಸಹಾಯಧನದಲ್ಲಿ ಪೆಟ್ಟಿಗೆ ನೀಡಲಾಗಿದೆ.

ಅನುದಾನದ ಕೊರತೆಯಿಂದಾಗಿ, ಸಹಾಯಧನವನ್ನು 2002-03ನೇ ಸಾಲಿನಲ್ಲಿ ನೀಡಿರುವುದಿಲ್ಲ. ಆದರೆ ಮಾರ್ಜಿನ್ ಮನಿ (ಅಂಚಿನ ಹಣ) ಯೋಜನೆಯಡಿಯಲ್ಲಿ (ಶೇ. 25 ರಿಂದ 30 ರಷ್ಟು) ಸಹಾಯಧನ ಹಾಗೂ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿಯಲ್ಲಿ (ಶೇ. 15ರಷ್ಟು ಸಹಾಯಧನ) ಜೇನು ಪೆಟ್ಟಿಗೆ ಉಪಕರಣಗಳನ್ನು ಪಡೆಯಲು, ಸಾಲ ಸೌಲಭ್ಯ ಒದಗಿಸಲಾಗಿದೆ.

ಈ) ಕಳೆದ 3 ವರ್ಷಗಳಿಂದ ಸುಮಾರು 7000 ಜನರಿಗೆ ತರಬೇತಿಯನ್ನು ಕೊಡಲಾಗಿದೆ. ವರ್ಷವಾರು ವಿವರ ಈ ಕೆಳಗಿನಂತಿದೆ.

2000-01ರಲ್ಲಿ ಒಟ್ಟು 3065

2001-02ರಲ್ಲಿ ಒಟ್ಟು 3644

2002-03ರಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿಲ್ಲ

2003-04ರಲ್ಲಿ ಒಟ್ಟು 240

ತರಬೇತಿ ಹೊಂದಿರುವವರಲ್ಲಿ ಸುಮಾರು 2000 ಅಭ್ಯರ್ಥಿಗಳು ಜೇನುಕೃಷಿ ಸಾಕಾಣಿ ಮಾಡುತ್ತಿದ್ದಾರೆ.

ಉ) 2001–02ರಲ್ಲಿ ರೂ. 15.00 ಲಕ್ಷ
2002–03ರಲ್ಲಿ ರೂ. 15.00 ಲಕ್ಷ
2003–04ರಲ್ಲಿ ರೂ. 15.00 ಲಕ್ಷ
ಒಟ್ಟು ರೂ. 45.00 ಲಕ್ಷ

ಸರ್ಕಾರವು ಕಳೆದ 3 ಸಾಲುಗಳಲ್ಲಿ ರೂ.45.00 ಲಕ್ಷಗಳನ್ನು ಖರ್ಚು ಮಾಡಿರುತ್ತದೆ.

ಇದರಿಂದ ಜನರಲ್ಲಿ ಹೆಚ್ಚು ಅರಿವು ಮೂಡಿದ್ದು, ಜೇನುಕೃಷಿಯಲ್ಲಿ ತೊಡಗಲು ಅನುಕೂಲವಾಗಿರುತ್ತದೆ.

ಜೇನುಕೃಷಿಯಲ್ಲಿ ತೊಡಗಿರುವುದರಿಂದ ವಿವಿಧ ಬೆಳೆಗಳಲ್ಲಿ ಶೇಕಡಾ 8 ರಿಂದ 30ರವರೆಗೆ ಹೆಚ್ಚು ಇಳುವರಿ ಬರುತ್ತಿದೆ.

ಊ) ಆಂಧ್ರ ಪ್ರದೇಶದ ಮಾಹಿತಿಯಿರುತ್ತದೆ.

ಋ) ಆಂಧ್ರಪ್ರದೇಶದಲ್ಲಿ ಜೇನುಕೃಷಿ ಅಭಿವೃದ್ಧಿ ಯೋಜನೆಯಡಿ ಗುರುತಿಸಿದ ಹಾಗೂ ತರಬೇತಿ ಪಡೆದಂತಹ ಅಭ್ಯರ್ಥಿಗಳಿಗೆ ಜೇನು ಕುಟುಂಬ, ಜೇನು ಪೆಟ್ಟಿಗೆ ಇತರ ಸಲಕರಣೆಗಳನ್ನು ನೀಡಲಾಗಿದೆಯೆಂಬ ಬಗ್ಗೆ ತಿಳಿದು ಬಂದಿರುತ್ತದೆ.

## ಅನುಬಂಧ

**1. ಬೆಂಗಳೂರು ಗ್ರಾಮಾಂತರ**

| | |
|---|---|
| 1. ಶಿಕಾರಿಪುರ | 2. ಮಾಗಡಿ |
| 3. ಹೊಸಕೋಟೆ | 4. ನೆಲಮಂಗಲ |
| 5. ರಾಮನಗರ | 6. ದೊಡ್ಡಬಳ್ಳಾಪುರ |
| 7. ಚನ್ನಪಟ್ಟಣ | 8. ದೇವನಹಳ್ಳಿ |

**2. ಬೆಂಗಳೂರು ನಗರ**

| | |
|---|---|
| 1. ಬೆಂಗಳೂರು ದಕ್ಷಿಣ | 2. ಬೆಂಗಳೂರು ಉತ್ತರ |
| 3. ಆನೇಕಲ್ | 4. ಬೆಂಗಳೂರು ಪೂರ್ವ |

**3. ಬಾಲಕೋಟೆ**

| | |
|---|---|
| 1. ಬಾಗಲಕೋಟೆ | 3. ಬಾದಾಮಿ |
| 2. ಹುನಗುಂದ | 4. ಮುಧೋಳ್ |

**4. ಬೆಳಗಾಂ**

| | | |
|---|---|---|
| 1. ಬೆಳಗಾಂ | 5. ಸವದತ್ತಿ | 9. ಗೋಕಾಕ್ |
| 2. ಬೈಲಹೊಂಗಲ | 6. ರಾಮದುರ್ಗಾ | 10. ಖಾನಾಪುರ |
| 3. ಚಿಕ್ಕೋಡಿ | 7. ರಾಯ್‌ಬಾಗ್ | |
| 4. ಅಥಣಿ | 8. ಹುಕ್ಕೇರಿ | |

5. **ಬಳ್ಳಾರಿ**

1. ಸಂಡೂರು
2. ಹೊಸಪೇಟೆ
3. ಹೆಚ್.ಬಿ. ಹಳ್ಳಿ

6. **ಚಾಮರಾಜನಗರ**

1. ಚಾಮರಾಜನಗರ
2. ಗುಂಡ್ಲುಪೇಟೆ
3. ಯಳಂದೂರು
4. ಕೊಳ್ಳೇಗಾಲ

7. **ಚಿಕ್ಕಮಗಳೂರು**

1. ಚಿಕ್ಕಮಗಳೂರು
2. ಮೂಡಿಗೆರೆ
3. ತರೀಕೆರೆ
4. ಕಡೂರು
5. ಶೃಂಗೇರಿ
6. ಎನ್.ಆರ್. ಪುರ
7. ಕೊಪ್ಪ

8. **ಚಿತ್ರದುರ್ಗ**

1. ಚಿತ್ರದುರ್ಗ
2. ಹೊಸದುರ್ಗ
3. ಹೊಳಲ್ಕೆರೆ
4. ಹಿರಿಯೂರು

9. **ದಕ್ಷಿಣಕನ್ನಡ**

1. ಮಂಗಳೂರು
2. ಬಂಟ್ವಾಳ
3. ಸುಳ್ಯ
4. ಪುತ್ತೂರು
5. ಬೆಳ್ತಂಗಡಿ

10. **ದಾವಣಗೆರೆ**

1. ಚನ್ನಗಿರಿ
2. ಹರಪನಹಳ್ಳಿ
3. ಹರಿಹರ
4. ಹೊನ್ನಾಳಿ
5. ಜಗಳೂರು
6. ದಾವಣಗೆರೆ
7.

11. **ಧಾರವಾಡ**

1. ಧಾರವಾಡ
2. ಹುಬ್ಬಳ್ಳಿ
3. ಕುಂದಗೋಳ್
4. ಕಲಘಟಗಿ
5. ಹವಲಗುಂದ

12. **ಗದಗ್**

1. ಗದಗ್

13. **ಗುಲ್ಬರ್ಗಾ**

1. ಚಿಂಚೋಳಿ

14. **ಹಾಸನ**

1. ಆಲೂರು
2. ಅರಕಲಗೂಡು
3. ಅರಸೀಕೆರೆ
4. ಬೇಲೂರು
5. ಚನ್ನರಾಯಪಟ್ಟಣ
6. ಹಾಸನ
7. ಸಕಲೇಶಪುರ

673(866) : ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಯ್ಯ ಖೂಬ (ಬಸವಕಲ್ಯಾಣ) ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸವಕಲ್ಯಾಣ ಪುರಸಭೆ (ಟಿ.ಎಂ.ಸಿ)ಗೆ ಮಂಜೂರಾಗಿರುವ ಸಿಬ್ಬಂದಿ ಸಂಖ್ಯೆ ಎಷ್ಟು (ಸಿಬ್ಬಂದಿ ದರ್ಜೆವಾರು ವಿವರಗಳನ್ನು ಒದಗಿಸುವುದು);

ಆ) ಈ ಪೈಕಿ ಈಗ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು;

ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು (ದರ್ಜೆವಾರು ವಿವರಗಳನ್ನು ಒದಗಿಸುವುದು);

ಈ) ಎಷ್ಟು ಅವಧಿಯಿಂದ ಈ ಹುದ್ದೆಗಳು ಖಾಲಿ ಇದೆ;

ಉ) ಪುರಸಭೆಯಲ್ಲಿ ಹಲವಾರು ವರ್ಗದ ಹುದ್ದೆಗಳು ಬಹಳ ಕಾಲದಿಂದ ಖಾಲಿ ಇರುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಶೀಘ್ರವಾಗಿ ಭರ್ತಿ ಮಾಡಲು ಸರ್ಕಾರ ಅನುಸರಿಸುವ ಕ್ರಮಗಳೇನು?

ಶ್ರೀ ಎಸ್. ಮೋರೆ (ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು)

ಅ)

| ಕ್ರ.ಸಂ. | ದರ್ಜೆಗಳು | ಮಂಜೂರಾದ ಹುದ್ದೆಗಳು |
|---|---|---|
| 1. | ಮುಖ್ಯಾಧಿಕಾರಿಗಳು ಶ್ರೇಣಿ–1 | 1 |
| 2. | ಪರಿಸರ ಅಭಿಯಂತರರು | 1 |
| 3. | ಲೆಕ್ಕಾಧಿಕ್ಷಕರು | 1 |
| 4. | ಕಛೇರಿ ವ್ಯವಸ್ಥಾಪಕರು | 1 |
| 5. | ಕಂದಾಯ ಅಧಿಕಾರಿಗಳು | 1 |
| 6. | ಕಿರಿಯ ಅಭಿಯಂತರರು | 2 |
| 7. | ಹಿರಿಯ ಆರೋಗ್ಯ ನಿರೀಕ್ಷಕರು | 1 |
| 8. | ಮೊದಲನೆ ದರ್ಜೆ ಸಹಾಯಕ | 2 |
| 9. | ಸಮುದಾಯ ವ್ಯವಹಾರ ಅಧಿಕಾರಿ | 1 |
| 10. | ಶೀಘ್ರಲಿಪಿಗಾರ | 1 |
| 11. | ಜೂನಿಯರ್ ಪ್ರೋಗ್ರಾಮರ್ | 1 |
| 12. | ಪ್ರ.ದ. ಕಂದಾಯಾಧಿಕಾರಿ | 1 |
| 13. | ನೀರು ಸರಬರಾಜು ಅಪರೇಟರ್ | 4 |
| 14. | ಕಂಪ್ಯೂಟರ್ ಅಪರೇಟರ್/ಡಾಟಾ ಎಂಟ್ರಿ ಅಪರೇಟರ್ | 2 |
| 15. | ಕಿರಿಯ ಆರೋಗ್ಯ ನಿರೀಕ್ಷಕರು | 2 |
| 16. | ಸಮುದಾಯ ಸಂಘಟಕರು | 1 |
| 17. | ದ್ವಿತೀಯ ದರ್ಜೆ ಸಹಾಯಕ | 3 |

| 1 | 2 | 3 |
|---|---|---|
| 18. | ಕರವಸೂಲಿಗಾರ | 2 |
| 19. | ವಾಹನಚಾಲಕ | 3 |
| 20. | ಸಹಾಯಕ ನೀರು ಸರಬರಾಜು ಅಪರೇಟರ್ | 4 |
| 21. | ಪ್ಲಂಬರ್ | 1 |
| 22. | ಸ್ಯಾನಿಟರ್ ಸೂಪರ್‌ವೈಸರ್ | 2 |
| 23. | ಸೀನಿಯರ್ ವಾಲ್ವಮೆನ್ | 2 |
| 24. | ಪೌರಕಾರ್ಮಿಕರು | 35 |
| 25. | ದಲಾಯತ್ | 3 |
| 26. | ಲೋಡರ್ಸ್ | 8 |
| 27. | ಕ್ಲೀಯರ್ಸ್ | 2 |
| 28. | ಉದ್ಯಾನಮಾಲಿ | 1 |
| 29. | ಜವಾನ/ನೀರು ಸರಬರಾಜು ವಾಲ್ವಮೆನ್ | 8 |
| ಆ) | | |
| 1 | ಸ್ವಂತ ವೇತನ ಶ್ರೇಣಿ ಒಬ್ಬ ಪ್ರದ.ಸ. ಮುಖ್ಯಾಧಿಕಾರಿಗಳು | – |
| 2 | ಮೊದಲನೆ ದರ್ಜೆ ಸಹಾಯಕ | 2 |
| 3. | ಕಿರಿಯ ಆರೋಗ್ಯ ನಿರೀಕ್ಷಕರು | 1 |
| 4. | ದ್ವಿತೀಯ ದರ್ಜೆ ಸಹಾಯಕ | 5 |
| 5. | ಪಂಪ್ ಚಾಲಕ | 9 |
| 6. | ಕರವಸೂಲಿಗಾರ | 2 |
| 7. | ಉದ್ಯಾನಮಾಲಿ | 2 |
| 8. | ಜವಾನ | 4 |
| 9. | ಪೌರಕಾರ್ಮಿಕರು | 26 |
| ಇ) | | |
| 1. | ಮುಖ್ಯಾಧಿಕಾರಿಗಳು ಶ್ರೇಣಿ–1 | 1 |
| 2. | ಪರಿಸರ ಅಭಿಯಂತರರು | 1 |
| 3. | ಲೆಕ್ಕಾಧಿಕ್ಷಕರು | 1 |
| 4. | ಕಛೇರಿ ವ್ಯವಸ್ಥಾಪಕರು | 1 |
| 5. | ಕಂದಾಯ ಅಧಿಕಾರಿಗಳು | 1 |
| 6. | ಕಿರಿಯ ಅಭಿಯಂತರರು | 2 |
| 7. | ಹಿರಿಯ ಆರೋಗ್ಯ ನಿರೀಕ್ಷಕರು | 1 |
| 8. | ಸಮುದಾಯ ವ್ಯವಹಾರ ಅಧಿಕಾರಿ | 1 |
| 9. | ಶೀಘ್ರಲಿಪಿಗಾರ | 1 |
| 10. | ಜೂನಿಯರ್ ಪ್ರೋಗ್ರಾಮರ್ | 1 |
| 11. | ಪ್ರ.ದ. ಕಂದಾಯಾಧಿಕಾರಿ | 1 |

| 1 | 2 | 3 |
|---|---|---|
| 12. | ಕಂಪ್ಯೂಟರ್ ಅಪರೇಟರ್/ಡಾಟಾ ಎಂಟ್ರ ಅಪರೇಟರ್ | 2 |
| 13. | ಕಿರಿಯ ಆರೋಗ್ಯ ನಿರೀಕ್ಷಕರು | 2 |
| 14. | ಸಮುದಾಯ ಸಂಘಟಕರು | 1 |
| 15. | ವಾಹನಚಾಲಕ | 3 |
| 16. | ಪ್ಲಂಬರ್ | 1 |
| 17. | ಸ್ಯಾನಿಟರ್ ಸೂಪರ್‌ವೈಸರ್ | 2 |
| 18. | ಸೀನಿಯರ್ ವಾಲ್ವಮೆನ್ | 2 |
| 19. | ಪೌರಕಾರ್ಮಿಕರು | 9 |
| 20. | ದಲಾಯತ್ | 3 |
| 21. | ಲೋಡರ್ಸ್ | 8 |
| 22. | ಕ್ಲೀಯರ್ಸ್ | 2 |
| 23. | ಜವಾನ/ನೀರು ಸರಬರಾಜು ವಾಲ್ವಮೆನ್ | 4 |

ಈ) 1–1–86ರ ನಂತರ ಯಾವುದೇ ತರಹದ ನೇಮಕಾತಿಗೆ ನಿರ್ಭಂಧವಿದ್ದ ಕಾರಣ ಸದರಿ ಹುದ್ದೆಗಳು ಖಾಲಿ ಇರುತ್ತವೆ.

ಉ) ಲಭ್ಯವಿರುವ ಸಿಬ್ಬಂದಿಯವರಿಂದ ಕರ್ತವ್ಯ ನಿರ್ವಹಿಸಲಾಗುತ್ತಿದೆ.

ಊ) ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

675(502) : ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದ ನಗರಗಳಲ್ಲಿ ಮೂಲಭೂತ ಸೌಲಭ್ಯ ನಿರ್ಮಿಸುವ ಎ.ಡಿ.ಬಿ. ನೆರವಿನ ಯೋಜನೆಯ ಅನುಷ್ಠಾನ ಈಗ ಯಾವ ಹಂತದಲ್ಲಿದೆ;

ಆ) ಈ ಯೋಜನೆಯ ಅಂದಾಜು ವೆಚ್ಚ ಎಷ್ಟು (ನಗರವಾರು ವಿವರ ನೀಡುವುದು);

ಇ) ಈ ಯೋಜನೆಯ ಅನುಷ್ಠಾನದಿಂದ ಸಂಬಂಧಿಸಿದ ನಗರಗಳ ನಾಗರೀಕರು ಪಡೆಯುವ ಪ್ರಯೋಜನಗಳೇನು;

ಈ) ಈ ಯೋಜನೆಯನ್ನು ಎಷ್ಟು ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು)

ಅ) ಪ್ರಸ್ತುತ ಉತ್ತರ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯು ಯೋಜನಾ ತಯಾರಿಕೆ ಹಂತದಲ್ಲಿದೆ. ಏಷ್ಯಿಯನ್ ಅಭಿವೃದ್ಧಿ ಬ್ಯಾಂಕಿನ ನೆರವನ್ನು ಪಡೆಯಲು ಸಲ್ಲಿಸಬೇಕಾದ ಅಂತಿಮ ವರದಿಯು ಸೆಪ್ಟೆಂಬರ್ 2004 ರಷ್ಟರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಆ) ಯೋಜನೆಯು ತಯಾರಿಕೆ ಹಂತದಲ್ಲಿರುವದರಿಂದ ಇದುವರೆವಿಗೂ ವಿವರಗಳು ಅಂತಿಮಗೊಂಡಿರುವುದಿಲ್ಲ.

ಇ) ಈ ಕೆಳಕಂಡ ನಗರ ಮೂಲಸೌಕರ್ಯ ಅಭಿವೃದ್ಧಿ ಆದ್ಯತೆಯ ಕಾಮಗಾರಿಗಳನ್ನು ತೆಗೆದುಕೊಳ್ಳಲು ಯೋಜಿಸಲಾಗಿದೆ.

– ನೀರು ಸರಬರಾಜು ಮತ್ತು ಒಳ ಚರಂಡಿ ವ್ಯವಸ್ಥೆ
– ಘನತ್ಯಾಜ್ಯ ವಸ್ತುಗಳ ನಿರ್ವಹಣೆ
– ಮಳೆ ನೀರಿನ ಚರಂಡಿಗಳು
– ರಸ್ತೆ ಅಭಿವೃದ್ಧಿ
– ಬಡತನ ಉಪಶಮನ

ಇದರ ಅನುಷ್ಠಾನದಿಂದ ಉತ್ತಮ ನೀರು ಸರಬರಾಜು, ಒಳಚರಂಡಿ ಮತ್ತು ಘನತ್ಯಾಜ ವಸ್ತುಗಳ ನಿರ್ವಹಣೆಯಿಂದ ಉತ್ತಮ ಪರಿಸರ, ಉತ್ತಮ ರಸ್ತೆಗಳು ಹಾಗೂ ಬಡತನ ಉಪಶಮನಗಳು ಉಂಟಾಗುವುದೆಂದು ನಿರೀಕ್ಷಿಸಲಾಗಿದೆ.

ಈ) ಏಷ್ಯಿಯನ್ ಅಭಿವೃದ್ಧಿ ಬ್ಯಾಂಕು ನೆರವಿಗೆ ಒಪ್ಪಿದ ನಂತರ ಯೋಜನೆಯು ಐದು ವರ್ಷಗಳ ಕಾಲಾವಧಿಯದಾಗಿರುತ್ತದೆ.

676(804) : ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಜಿಲ್ಲೆ ಮುಂಡರಗಿ ಹಾಗೂ ಮುಳಗುಂದ ಪಟ್ಟಣಗಳಿಗೆ ಐ.ಡಿ.ಎಸ್.ಎಂ.ಟಿ. ಯೋಜನೆ ಮಂಜೂರಾಗಿದೆಯೇ;

ಆ) ಮಂಜೂರಾಗಿದ್ದರೆ, ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಇ) ಉಳಿದ ಹಣ ಯಾವಾಗ ಬಿಡುಗಡೆ ಮಾಡಲಾಗುವುದು? ಯೋಜನೆಯ ಪ್ರಗತಿ ವಿವರ ನೀಡುವುದು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು)

ಅ) ಹೌದು.

ಆ) ಮುಂಡರಗಿ : ಈ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ರೂ. 51.28 ಲಕ್ಷಗಳ ಯೋಜನಾ ವರದಿ ಮಂಜೂರಾಗಿದ್ದು, ಪ್ರಥಮ ಕಂತಿನಲ್ಲಿ ರೂ. 20.50 ಲಕ್ಷಗಳನ್ನು (ಕೇಂದ್ರ ಹಾಗೂ ರಾಜ್ಯದ ಪಾಲು ಬಿಡುಗಡೆ ಮಾಡಲಾಗಿದೆ.

ಮುಳಗುಂದ: ಈ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ರೂ. 104.45 ಲಕ್ಷಗಳ ಯೋಜನಾ ವರದಿ ಮಂಜೂರಾಗಿದ್ದು, ಪ್ರಥಮ ಕಂತಿನಲ್ಲಿ ರೂ. 40.00 ಲಕ್ಷಗಳನ್ನು (ಕೇಂದ್ರ ಹಾಗೂ ರಾಜ್ಯದ ಪಾಲು) ಬಿಡುಗಡೆ ಮಾಡಲಾಗಿದೆ.

ಇ) ಪ್ರಥಮ ಕಂತಿನಲ್ಲಿ ಬಿಡುಗಡೆಯಾದ ಮೊತ್ತದ ಶೇಕಡಾ 70ರಷ್ಟು ಮೊತ್ತವನ್ನು ಖರ್ಚು ಮಾಡಿ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳನ್ನು ಸಲ್ಲಿಸಿದ ನಂತರ ಎರಡನೇ ಕಂತಿನ ಹಣವನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.

ಮುಂಡರಗಿ ಪಟ್ಟಣದ ಪ್ರಗತಿ ವರದಿ:

| | |
|---|---|
| ರಸ್ತೆ ಹಾಗೂ ಚರಂಡಿ ಕಾಮಗಾರಿಗಳಿಗೆ | ರೂ. 15.60 ಲಕ್ಷ |
| (6 ರಸ್ತೆ ಹಾಗೂ 6 ಚರಂಡಿ ಕಾಮಗಾರಿಗಳಿಗೆ) | |
| ಮುಳಗುಂದ ಪಟ್ಟಣದ ಪ್ರಗತಿ ವರದಿ: | |
| ವಾಣಿಜ್ಯ ಮಳಿಗೆ ನಿರ್ಮಾಣ | ರೂ. 6.05 ಲಕ್ಷ |
| ಕಛೇರಿ ಕಟ್ಟದ ಕಾಮಗಾರಿ | ರೂ. 17.23 ಲಕ್ಷ |
| (ಪ್ರಗತಿಯಲ್ಲಿದೆ) | |
| 7 ರಸ್ತೆ ಕಾಮಗಾರಿಗಳು | ರೂ. 16.72 ಲಕ್ಷ |

(ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಸದ್ಯದಲ್ಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು) ಮುಂಡರಗಿ ಪಟ್ಟಣವು ಶೇಕಡಾ 70ಕ್ಕಿಂತ ಹೆಚ್ಚಿನ ಮೊತ್ತವನ್ನು ಖರ್ಚು ಮಾಡಿ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸಿದ್ದು, 2ನೇ ಕಂತಿನ ಹಣವನ್ನು ಬಿಡುಗಡೆ ಮಾಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ.

ಈ) ಯೋಜನೆಯ ಮಾರ್ಗಸೂಚಿಯನುಸಾರ ಕಾಮಗಾರಿಗಳನ್ನು ಪೂರ್ಣಗೊಳಿಸಲು 5 ವರ್ಷಗಳ ಕಾಲಮಿತಿ ಇರುತ್ತದೆ.

677(805) : ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಡ್ಕೋ ಸಾಲದ ಯೋಜನೆಯಲ್ಲಿ ಪುರಸಭೆ, ನಗರಸಭೆ ಮತ್ತು ಪಟ್ಟಣ ಪಂಚಾಯತಿಗಳಿಗೆ ಮಂಜೂರಾದ ಸಾಲವೆಷ್ಟು; (ವಿವರ ನೀಡುವುದು).

ಆ) ಸದರಿ ಕಾಮಗಾರಿಗಳ ಪ್ರಗತಿ ಯಾವ ಹಂತದಲ್ಲಿದೆ; (ವಿವರ ನೀಡುವುದು)

ಇ) ಈ ಕಾಮಗಾರಿಗಳಲ್ಲಿ ಹಣದ ದುರುಪಯೋಗ ಆಗಿದೆಯೇ;

ಈ) ಹಾಗಿದ್ದಲ್ಲಿ ಯಾವ ಯಾವ ಕಾಮಗಾರಿಗಳಲ್ಲಿ ದುರುಪಯೋಗ ಆಗಿದೆ; (ವಿವರ ನೀಡುವುದು)?

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು)

ಅ) ಒಟ್ಟು 130.00 ಕೋಟಿ ರೂ.ಗಳು.

| | | |
|---|---|---|
| ನಗರ ಪಾಲಿಕೆಗಳಿಗೆ | : | 2.00 ಕೋಟಿ ರೂ.ಗಳು |
| ನಗರಸಭೆಗಳಿಗೆ | : | 1.00 ಕೋಟಿ ರೂ.ಗಳು |
| ಪುರಸಭೆಗಳಿಗೆ | : | 50.00 ಲಕ್ಷ ರೂಗಳು |
| ಪಟ್ಟಣ ಪಂಚಾಯತಿಗಳಿಗೆ | : | 25.00 ಲಕ್ಷ ರೂಗಳು |

ಆ) ಬಹುತೇಕ ಪೂರ್ಣಗೊಂಡಿವೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

678(637) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಬೆಳ್ತಂಗಡಿ ಪ್ರದೇಶಕ್ಕೆ ಅಗತ್ಯವುಳ್ಳ ಒಳಚರಂಡಿ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ;

ಆ) ರೂಪಿಸಿದಲ್ಲಿ ಯಾವಾಗ ಜಾರಿಗೆ ತರುವುದು;

ಇ) ಜಾರಿಗೆ ತರಲು ವಿಳಂಬವಾಗಲು ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಸರ್ವೆ ಕಾರ್ಯ ಹಾಗೂ ಅಂದಾಜು ಮತ್ತು ವಿನ್ಯಾಸಕ್ಕಾಗಿ ಅಂದಾಜು ರೂ. 4.00 ಲಕ್ಷಗಳನ್ನು ನಗರ ಪಂಚಾಯ್ತಿ ತುಂಬ ಬೇಕಾಗುತ್ತದೆ. ಹಣ ಠೇವಣಿ ಮಾಡಿದ ಕೂಡಲೇ ಸರ್ವೆ ವಿನ್ಯಾಸ ಹಾಗೂ ಅಂದಾಜು ತಯಾರಿಸಲು ಕ್ರಮ ಜರುಗಿಸಲಾಗುವುದು.

680(635) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ನಗರ ಪ್ರದೇಶಕ್ಕೆ ಈಗಾಗಲೇ ಒದಗಿಸಿಕೊಟ್ಟಿರುವ ಮೂಲಭೂತ ಸೌಕರ್ಯಗಳಾವುವು (ವಿವರಗಳನ್ನು ನೀಡುವುದು);

ಆ) ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ;

ಇ) ಈ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆಗಾಗಿ ಕೈಗೊಳ್ಳಲಿರುವ ಕ್ರಮಗಳೇನು;

ಈ) ಸುದೆಮುಗೇರು ಎಂಬಲ್ಲಿ ಕಿಂಡಿ ಅಣೆಕಟ್ಟನ್ನು ನಿರ್ಮಿಸಿ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವರೇ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಬೆಳ್ತಂಗಡಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಮಾರ್ಚ್ 1995ರಲ್ಲಿ ಪೂರ್ಣಗೊಳಿಸಲಾಗಿದೆ. ಸದರಿ ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆಯನ್ನು ನಗರ ಸಭೆಯವರೇ ನಿರ್ವಹಿಸುತ್ತಿದ್ದಾರೆ.

ಆ) ಕುಡಿಯುವ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲಾಗಿದೆ. ಒಳಚರಂಡಿ ವ್ಯವಸ್ಥೆ ಕಲ್ಪಿಸಿರುವುದಿಲ್ಲ.

ಇ) ಶೇಖರಣಾ ವ್ಯವಸ್ಥೆಯನ್ನು ಹೆಚ್ಚಿಸಲು ಮೇಲ್ಮಟ್ಟದ ಜಲಸಂಗ್ರಹಾಗಾರಗಳು ನಿರ್ಮಿಸಲು ಹಾಗೂ ಏರು ಕೊಳವೆ ಮಾರ್ಗದ ಸಂಪರ್ಕ ಕಲ್ಪಿಸಲು, ಸರ್ವೆ ಮಾಡಲು ಅಂದಾಜಿನ ಮೊತ್ತವನ್ನು ನಗರ ಪಂಚಾಯಿತಿಯವರಿಂದ ಪಡೆದು ಸರ್ವೇ ಕಾರ್ಯ ಕೈಗೊಳ್ಳಲಾಗುವುದು.

ಈ) ಸರ್ವೇ ಕಾರ್ಯ ಕೈಗೊಳ್ಳಲು ನಗರ ಪಂಚಾಯಿತಿಯವರು ಹಣವನ್ನು 2.00 ಲಕ್ಷ ಸರ್ವೇ ಚಾರ್ಜನ್ನು ತುಂಬಬೇಕಾಗುತ್ತದೆ. ಹಣ ಠೇವಣಿ ಮಾಡಿದ ಕೂಡಲೇ ಸರ್ವೇ ಕೆಲಸ ಮುಗಿಸಿ ಕಿಂಡಿ ಅಣೆಕಟ್ಟು ಸೇರಿಸಿ ಯೋಜನೆಯನ್ನು ತಯಾರಿಸಲಾಗುವುದು.

681(633) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಅಸ್ತಿತ್ವದಲ್ಲಿರುವ ಸಣ್ಣ ಕೈಗಾರಿಕಾ ಘಟಕಗಳೆಷ್ಟು;

ಆ) ಸಣ್ಣ ಕೈಗಾರಿಕಾ ಪ್ರದೇಶ ಎಂದು ಘೋಷಿಸಿದ ಸ್ಥಳ ಮತ್ತು ಅವುಗಳ ವಿಸ್ತೀರ್ಣ ಎಷ್ಟು ಹಾಗೂ ಘೋಷಿತ ಕೈಗಾರಿಕಾ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ಘಟಕಗಳೆಷ್ಟು (ಪೂರ್ಣ ವಿವರ ನೀಡುವುದು);

ಇ) ಇರುವ ಕೈಗಾರಿಕಾ ಶೆಡ್‌ಗಳಲ್ಲಿ ಖಾಲಿ ಇರುವ ಶೆಡ್‌ಗಳ ಸಂಖ್ಯೆ ಎಷ್ಟು ಹಾಗೂ ಯಾವ ಕಾರಣಕ್ಕಾಗಿ ಅವುಗಳನ್ನು ಖಾಲಿ ಇರಿಸಲಾಗಿದೆ;

ಈ) ದೀರ್ಘ ಕಾಲದಿಂದ ಖಾಲಿ ಇರುವ ಶೆಡ್‌ಗಳ ನಿಯಮಗಳನ್ನು ಸಡಿಲಿಸಿ ಮಂಜೂರು ಮಾಡಲು ಕ್ರಮ ಜರುಗಿಸಲಾಗುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ದಿನಾಂಕ 31-3-2004ರಲ್ಲಿದ್ದಂತೆ 907 ಸಣ್ಣ ಕೈಗಾರಿಕೆಗಳು ಬೆಳ್ತಂಗಡಿ ತಾಲ್ಲೂಕಿನಲ್ಲಿ ನೋಂದಾಯಿಸಲ್ಪಟ್ಟಿವೆ.

ಆ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತವು ಬೆಳ್ತಂಗಡಿ ತಾಲ್ಲೂಕಿನಲ್ಲಿ ಸ್ಥಾಪಿಸಿರುವ ಕೈಗಾರಿಕಾ ವಸಾಹತುಗಳ ವಿವರಗಳು ಈ ಕೆಳಕಂಡಂತಿವೆ:

| ಕೈ.ವ. ಹೆಸರು | ವಿಸ್ತೀರ್ಣ (ವಿವರಗಳಲ್ಲಿ) | ನಿರ್ಮಿಸಿರುವ ಶೆಡ್‌ಗಳ ಸಂಖ್ಯೆ ಸಂಖ್ಯೆ | ಹಂಚಿಕೆಯಾಗಿರುವ ಶೆಡ್ಡುಗಳ | ಖಾಲಿ ಶೆಡ್‌ಗಳ ಸಂಖ್ಯೆ |
|---|---|---|---|---|
| ಕಾತಿಬೆಟ್ಟ | 0.90 | 10 | 6 (+1 ಕಛೇರಿ ಉಪಯೋಗಕ್ಕೆ) | 3 |
| | 9.88 | 0 | 0 | 0 |

ಇ) ಒಟ್ಟು 3 ಸೂಪರ್ ಮಿನಿ ಶೆಡ್ಡುಗಳು ಖಾಲಿ ಇರುತ್ತವೆ. ಈ ಶೆಡ್ಡುಗಳನ್ನು ಡಾ: ಅಂಬೇಡ್ಕರ್ ಜನ್ಮಶತಾಬ್ದಿ ಯೋಜನೆಯಡಿ ನಿರ್ಮಿಸಲಾಗಿದ್ದು. ಈ ಶೆಡ್ಡುಗಳನ್ನು ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ ಮೀಸಲಿಡಲಾಗಿದೆ. ಮೇಲಿನ ಶೆಡ್ಡುಗಳನ್ನು ಹಂಚಿಕೆ ಮಾಡುವ ಸಂಬಂಧ ಅನೇಕ ಬಾರಿ ಜಾಹೀರಾತು ಹೊರಡಿಸಿದ್ದರೂ ಸಹ ಹಂಚಿಕೆಗಾಗಿ ಅರ್ಜಿಗಳು ಬಂದಿರುವುದಿಲ್ಲ.

ಈ) ಸಾಮಾನ್ಯವಾಗಿ ಶೆಡ್ಡುಗಳನ್ನು ಕಂತು-ಖರೀದಿ ಆಧಾರದಲ್ಲಿ ಹಂಚಿಕೆ ಮಾಡಲಾಗುತ್ತಿದ್ದು, ಬಹು ದಿನಗಳಿಂದಲೂ ಖಾಲಿ ಇರುವ ಶೆಡ್ಡುಗಳನ್ನು ಹಂಚಿಕೆ ಮಾಡುವ ಸಲುವಾಗಿ, ಶೆಡ್ಡುಗಳನ್ನು ಬಾಡಿಗೆ ಆಧಾರದಲ್ಲಿಯೂ ಸಹ ಹಂಚಿಕೆಗೆ ಲಭ್ಯ ಮಾಡಲಾಗಿದೆ.

682(498) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗಾಗಿ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ;

ಇ) ಈ ಸಮಸ್ಯೆಯ ತಾತ್ಕಾಲಿಕ ಪರಿಹಾರಕ್ಕಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

ಈ) ಇಲ್ಲದಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಬಂದಿದೆ

ಆ) ಭಾಲ್ಕಿ ಪಟ್ಟಣಕ್ಕೆ ಕಾರಂಜಾ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆಯ ರೂ. 603.20 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಯೋಜನೆಯ ಪ್ರಸ್ತಾವನೆಗಳನ್ನು ತಾಂತ್ರಿಕವಾಗಿ ಮತ್ತೊಮ್ಮೆ ಪರಿಶೀಲಿಸಿ ಸದರಿ ಯೋಜನೆಗೆ ತಾಂತ್ರಿಕ ಮಂಜೂರಾತಿಯನ್ನು ಮಂಡಳಿಯಿಂದ ದಿನಾಂಕ 29-1-2003ರಲ್ಲಿ ನೀಡಲಾಗಿರುತ್ತದೆ. ಹಾಗೂ ಸದರಿ ಯೋಜನೆಯ ಕಾಮಗಾರಿಗಳನ್ನು ಪ್ಯಾಕೇಜ್ ಟೆಂಡರ್ ಆಧಾರದ ಮೇಲೆ ಕೈಗೆತ್ತಿಕೊಂಡು ಕಾಮಗಾರಿಗಳು ಪ್ರಗತಿಯಲ್ಲಿದೆ.

ಇ) ಭಾಲ್ಕಿ ಪಟ್ಟಣದ ಕುಡಿಯುವ ನೀರಿನ ಸಮಸ್ಯೆಯ ತಾತ್ಕಾಲಿಕ ಪರಿಹಾರಕ್ಕಾಗಿ 2003-04ನೇ ಸಾಲಿನ ಬರಪರಿಹಾರ ಕಾಮಗಾರಿಯಡಿಯಲ್ಲಿ ಒಟ್ಟು ರೂ. 12.45 ಲಕ್ಷಗಳ ಅನುದಾನದಲ್ಲಿ ಕಾರಂಜಾ ನದಿಗೆ ತಾತ್ಕಾಲಿಕ ಒಡ್ಡು ನಿರ್ಮಿಸಲಾಗಿದೆ, ಕೊಳವೆ ಬಾವಿಗಳನ್ನು ಕೊರೆದು ವಿದ್ಯುತ್ ಪಂಪಗಳನ್ನು ಅಳವಡಿಸಿ ವಿವಿಧ ಬಡಾವಣೆಗಳಿಗೆ ಕೊಳವೆ ಮಾರ್ಗಗಳನ್ನು ಅಳವಡಿಸಲಾಗಿದೆ. ಹಾಗೂ ಹಾಲಿ ಇರುವ ಕೊಳವೆ ಬಾವಿಗಳನ್ನು ಸ್ವಚ್ಛಗೊಳಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.

ಈ) ಭಾಲ್ಕಿ ಪಟ್ಟಣಕ್ಕೆ ಕಾರಂಜಾ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗಿದೆ. ಹಾಗೂ ಈಗಾಗಲೇ ಬರಪರಿಹಾರ ಕಾಮಗಾರಿಯಡಿಯಲ್ಲಿ ಕೆಲವು ಬಡಾವಣೆಗಳಿಗೆ ಕೊಳವೆ ಮಾರ್ಗದ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

683(499) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ ಕೇಂದ್ರ ಮತ್ತ ರಾಜ್ಯ ಸರ್ಕಾರಗಳು ಅನುದಾನ ನೀಡಿರುವ 2 ಕೋಟಿ ಹಣದ ಉಪಯೋಗವು ಇಲ್ಲಿಯವರೆಗೆ ಯಾವ ಕೆಲಸಗಳಿಗೆ ವಿನಿಯೋಗಿಸಲಾಗಿದೆ;

ಆ) ಆ ಕೆಲಸಗಳು ಯಾವ ಹಂತದಲ್ಲಿವೆ;

ಇ) ಸರ್ಕಾರಗಳು ಬಿಡುಗಡೆ ಮಾಡಿರುವ ಪೂರ್ತಿ ಹಣ ವಿನಿಯೋಗಿಸಲಾಗಿದೆಯೇ;

ಈ) ಇಲ್ಲದಿದ್ದರೆ ಈ ಕೆಲಸಗಳನ್ನು ಮುಗಿಸಲು ಕಾಲಮಿತಿ (Time limit) ಹಾಕಲಾಗಿದೆಯೇ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಭಾಲ್ಕಿ ಪಟ್ಟಣಕ್ಕೆ ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ರೂ. 194.25 ಲಕ್ಷಗಳ ಯೋಜನಾ ವರದಿಯು ಮಂಜೂರಾಗಿದ್ದು, ಇದರಲ್ಲಿ ರೂ.72.83 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಮಂಜೂರಾಗಿರುವ ಕಾಮಗಾರಿಗಳು ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| | | ಮಂಜೂರಾದ ಮೊತ್ತ | ವಿನಿಯೋಗಿಸಿದ ಮೊತ್ತ |
|---|---|---|---|
| 1 | ಪುರಸಭಾ ಕಛೇರಿ ಆವರಣದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ | 80.00 | |
| 2 | ತರಕಾರಿ ಮಾರುಕಟ್ಟೆ ನಿರ್ಮಾಣ | 13.00 | |
| 3 | ಹಣ್ಣು ಮತ್ತು ತರಕಾರಿ ಸಂರಕ್ಷಣೆಗಾಗಿ ಕೋಲ್ಡ್ | 47.00 | |
| 4 | ರಸ್ತೆ ಕಾಮಗಾರಿಗಳಿಗೆ (ಎರಡು) | 23.75 | 23.50 |
| 5 | ಬೀದಿ ದೀಪಗಳಿಗೆ | 30.50 | 16.50 |

ಆ) ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿ ಪ್ರಗತಿಯಲ್ಲಿದೆ.

ಇ) ಬಿಡುಗಡೆಯಾದ ರೂ. 72.83 ಲಕ್ಷಗಳಲ್ಲಿ ರೂ. 40.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಈ) ಯೋಜನೆಯ ಮಾರ್ಗಸೂಚಿಯನುಸಾರ ಕಾಮಗಾರಿಗಳನ್ನು ಪೂರ್ಣಗೊಳಿಸಲು 5 ವರ್ಷಗಳ ಕಾಲಮಿತಿ ಇರುತ್ತದೆ.

684(497) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿ ಕುಡಿಯುವ ನೀರಿಗಾಗಿ 6.3 ಕೋಟಿ ರೂ. ಬಿಡುಗಡೆಯಾಗಿದ್ದು ನಿಜವೇ;

ಆ) ಹಾಗಿದ್ದಲ್ಲಿ, ಈ ಯೋಜನೆಯ ಕಾಮಗಾರಿಗಳನ್ನು ಯಾವಾಗ ಪ್ರಾರಂಭ ಮಾಡಲಾಗಿದೆ;

ಇ) ಕಾಮಗಾರಿಯ ಇಂದಿನ ಸ್ಥಿತಿ ಏನು;

ಈ) ಈ ಕಾಮಗಾರಿ ಮುಗಿಸಲು ಕಾಲಮಿತಿ (Time limit) ಹಾಕಲಾಗಿದೆಯೇ;

ಉ) ನಿಗಧಿತ ಸಮಯದಲ್ಲಿ ಮುಗಿಯದಿದ್ದರೆ, ಸರ್ಕಾರ ಏನು ಕ್ರಮ ಕೈಗೊಳ್ಳುವುದು;

ಊ) ಈ ಕುಡಿಯುವ ನೀರಿನ ಯೋಜನೆಯಲ್ಲಿ ವಿತರಣಾ ಕಾಲುವೆ ಇಲ್ಲದೆ ಇರುವುದು ಸರ್ಕಾರ ಗಮನದಲ್ಲಿದೆಯೇ; ಹಾಗೂ ವಿತರಣಾ ಮಾರ್ಗ ಇಲ್ಲದೆ ಈ ಕೆಲಸ ಮುಗಿಸುವುದು ಸಾಧ್ಯವಿಲ್ಲದಿರುವುದರಿಂದ ಇದಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಭಾಲ್ಕಿ ಪಟ್ಟಣಕ್ಕೆ ಕಾರಂಜಾ ನದಿ ಮೂಲದಿಂದ ಕುಡಿಯುವ ನೀರು ಸರಬರಾಜು ಯೋಜನೆಯ ರೂ. 603.20 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಈ ಯೋಜನೆಗೆ 2003–2004ನೇ ಸಾಲಿನ ಮಾರ್ಚ್ 2004ರಲ್ಲಿ ರೂ. 251.24 ಲಕ್ಷ ಜೀವ ವಿಮಾ ನಿಗಮದಿಂದ ಸಾಲ ಬಿಡುಗಡೆಯಾಗಿರುತ್ತದೆ.

ಆ) ಸದರಿ ಯೋಜನೆ ಕಾಮಗಾರಿಗಳನ್ನು ಪ್ಯಾಕೇಜ್ ಟೆಂಡರ್ ಆಧಾರದ ಮೇಲೆ ಮೆ:ಜಿ.ವಿ.ಪಿ.ಆರ್. ಇಂಜಿನಿಯರ್ ಲಿ., ಹೈದರಾಬಾದ್ ಇವರಿಗೆ ದಿನಾಂಕ 20–10–2003ರಲ್ಲಿ ವಹಿಸಿ ಕೊಡಲಾಗಿದೆ. ನವೆಂಬರ್ 2003ರಿಂದ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

ಇ) ಸದರಿ ಯೋಜನೆಯಡಿ ಜಾಕ್‌ವೆಲ್ ಕಂ ಪಂಪ್ ಹೌಸ್ ಕಾಮಗಾರಿಯ ಫೌಂಡೇಶನ್ ಪೂರ್ಣಗೊಳಿಸಿ ಸ್ಟೀನಿಂಗ್ ಕೆಲಸ ಪ್ರಗತಿಯಲ್ಲಿರುತ್ತದೆ. ಮೇಲ್ಮಟ್ಟದ ಜಲಸಂಗ್ರಹಾಗಾರಗಳನ್ನು ಭೂ ಮಟ್ಟದಿಂದ 3 ಮಿ. ಎತ್ತರದವರೆಗೆ ಪೂರ್ಣಗೊಳಿಸಲಾಗಿದ್ದು ಉಳಿದ ಕೆಲಸಗಳು ಪ್ರಗತಿಯಲ್ಲಿವೆ ಕಾರಂಜಾ ನದಿಗೆ ಅಡ್ಡಲಾಗಿ ನಿರ್ಮಿಸಬೇಕಾದ ಬ್ಯಾರೇಜ್ ಕಾಮಗಾರಿಯ ವಿನ್ಯಾಸ ಮತ್ತು ಅಂದಾಜು ತಾಂತ್ರಿಕ ಪರಿಶೀಲನೆಯಲ್ಲಿದೆ. ಹಾಗೂ 120 ಅಶ್ವಶಕ್ತಿ ಡೀಪ್‌ವೆಲ್ ಟರ್ಬೈನ್ ಪಂಪ್‌ಸೆಟ್ ಮತ್ತು ಅಶ್ವಶಕ್ತಿಯ ಸೆಂಟ್ರಿಫ್ಯೂಗಲ್ ಪಂಪ್‌ಸೆಟ್‌ಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿಯು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.

ಈ) ಈ ಯೋಜನೆಯಡಿ ಪ್ಯಾಕೇಜ್ ಟೆಂಡರ್ ಆಧಾರದ ಮೇಲೆ ತೆಗೆದುಕೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮೇ 2005ವರೆಗೆ ಕಾಲಮಿತಿ ನಿಗದಿಪಡಿಸಲಾಗಿದೆ. ಈ ಕಾಮಗಾರಿಗಳಿಗೆ ಸಕಾಲದಲ್ಲಿ ಆರ್ಥಿಕ ಸಂಸ್ಥೆಗಳಿಂದ ಸಾಲ ಒದಗಿ ಬಂದಲ್ಲಿ ಸದರಿ ಯೋಜನೆಯನ್ನು ಮೇ 2005ರೊಳಗಾಗಿ ಪೂರ್ತಿಗೊಳಿಸಿ ಚಾಲನೆಗೊಳಿಸಲಾಗುವುದು.

ಉ) ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಊ) ಯೋಜನೆಯಡಿ ವಿತರಣಾ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಗೆ ಅವಕಾಶ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಾರಣ ವಿತರಣಾ ಜಾಲ ಅಳವಡಿಸುವ ಸಲುವಾಗಿ ಪ್ರತ್ಯೇಕವಾಗಿ ಅಂದಾಜನ್ನು ತಯಾರಿಸಲು ಕ್ರಮ ಜರುಗಿಸಲಾಗುವುದು.

685(496) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಲ್ಕಿ ಪುರಸಭೆಯಲ್ಲಿ ಚುನಾಯಿತ ಸದಸ್ಯರ ಸಮಿತಿಯ ಅನುಮೋದನೆ ಇಲ್ಲದೆ ರೂ.25.00 ಲಕ್ಷ ಹಣದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಹಣದ ಅವ್ಯವಹಾರದ ಬಗ್ಗೆ ಪುರಸಭೆಯ ಸಾಮಾನ್ಯ ಸಭೆಯಲ್ಲಿ ತನಿಖೆ ನಡೆಸುವಂತೆ ನಿರ್ಣಯ ತೆಗೆದುಕೊಂಡು ಸರ್ಕಾರಕ್ಕೆ ಮನವಿ ಮಾಡಿರುವುದು ನಿಜವೇ;

ಇ) ಈ ವಿಷಯದ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಹೌದು.

ಆ) ಹೌದು.

ಇ) ಬಸವಕಲ್ಯಾಣ ಸಹಾಯಕ ಆಯುಕ್ತರು ತನಿಖೆಯನ್ನು ನಡೆಸುತ್ತಿದ್ದಾರೆ.

686(878) : ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000–03ರಲ್ಲಿ ಕೆ.ಜಿ.ಎಫ್. ನಗರಸಭೆಯ ಲೆಕ್ಕಪರಿಶೋಧನೆ ನಡೆಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಲೆಕ್ಕಪರಿಶೋಧನೆ ಆಕ್ಷೇಪಣೆಗಳ ಸ್ವರೂಪ ಮತ್ತು ಈ ಆಕ್ಷೇಪಣೆಗಳ ಮೇಲೆಕೈಗೊಂಡ ಕ್ರಮ;

ಇ) ಈ ನಗರಸಭೆಯ ಕಳೆದ 3 ವರ್ಷಗಳ ಆಯವ್ಯಯ;

ಈ) ಸದರಿ ಆಯವ್ಯಯದಲ್ಲಿ 18% ಯೋಜನೆಯಡಿ ಕೈಗೊಂಡ ವಿವಿಧ ಕಾಮಗಾರಿಗಳಿಗೆ ಮಾಡಿರುವ ವೆಚ್ಚವೆಷ್ಟು;

ಉ) ಹಾಗಿದ್ದಲ್ಲಿ ಈ ಕಾಮಗಾರಿಗಳ ವಿವರ ಮತ್ತು ಖರ್ಚಾದ ಮೊತ್ತವೆಷ್ಟು (ವಿವರಗಳನ್ನು ನೀಡುವುದು)?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ಹೌದು, ಇದುವರೆವಿಗೂ ಲೆಕ್ಕ ಪರಿಶೋಧನಾ ವರದಿಯು ಬಂದಿರುವುದಿಲ್ಲ.

ಆ) ಸದ್ಯಕ್ಕೆ ಉದ್ಭವಿಸುವುದಿಲ್ಲ.

ಇ) 2001-02 ರೂ. 2,67,87,122

2002-03 ರೂ. 3,28,01,270

2003-04 ರೂ. 2,95,25,853

ಈ) 2001–02 ರೂ. 12,52,649

2002–03 ರೂ. 17,14,000

2003–04 ರೂ. 4,53,427

ಉ) ಅನುಬಂಧದಲ್ಲಿ ಲಗತ್ತಿಸಿದೆ.

## ಅನುಬಂಧ–1

## ಕಾಮಗಾರಿಗಳ ವಿವರ

1. ಸುಸ್ಯೆಪಾಳ್ಯಂನಲ್ಲಿ ಶೌಚಾಲಯ ರಿಪೇರಿ
2. ಅಶೋಕನಗರ ರಾಮಯ್ಯ ಕಾಲೋನಿಯಲ್ಲಿ ಪೈಪ್‌ಲೈನ್ ವರ್ಕ್ಸ್
3 ಸುಸ್ಯೆಪಾಳ್ಯಂನಲ್ಲಿ ಚರಂಡಿ ಕಾಮಗಾರಿ
4 ಅಂಡರ್‌ಸನ್ ಪೇಟೆಯ ಆಂಡ್ರ್ಯೂಲೈನ್‌ನಲ್ಲಿ ಸಿ.ಸಿ. ರಸ್ತೆ
5. ಚಾಮರಾಜಪೇಟೆಯಲ್ಲಿ ಎಸ್.ಎಸ್.ಎಂ. ಚರಂಡಿ ಕಾಮಗಾರಿ

6. ಕಾರ್ನೇಷನ್ ಟೌನ್‌ನಲ್ಲಿ ಸಿ.ಸಿ. ರಸ್ತೆ
7. ಇರುದಿಯಾಪುರಂನಲ್ಲಿ ಸಿ.ಸಿ. ರಸ್ತೆ
8. ಪರಿಶಿಷ್ಟ ಜಾತಿಯವರಿಗೆ ಹೊಲಿಗೆ ಯಂತ್ರಗಳ ವಿತರಣೆ
9. ಊರುಗುಂಪೇಟ್‌ಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಕಾಲೋನಿಯಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ
10. ಸುಸ್ಸೈಪಾಳ್ಯಂನ ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗದ ಕಾಲೋನಿಯಲ್ಲಿ ರಸ್ತೆ ಡಾಂಬರೀಕರಣ.
11. ಚಾಮರಾಜಪೇಟೆಯಲ್ಲಿ ರಸ್ತೆ ಡಾಂಬರೀಕರಣ.
12. ಇರುದಿಯಾಪುರಂನಲ್ಲಿ ಮೆಟಲಿಂಗ್ ರಸ್ತೆ
13. ಕೃಷ್ಣಗಿರಿಲೈನ್‌ನಲ್ಲಿ ರಸ್ತೆ ಡಾಂಬರೀಕರಣ
14. ಚಾಮರಾಜಪೇಟೆಯಲ್ಲಿ ಸಿ.ಸಿ. ರಸ್ತೆ
15. ರೋಡ್ಜರ್ಸ್ ಕ್ಯಾಂಪ್‌ನಲ್ಲಿ ಸಿ.ಸಿ. ರಸ್ತೆ
16. ಅಂಬೇಡ್ಕರ್ ನಗರದಲ್ಲಿ ಎಸ್.ಎಸ್.ಎಂ. ಚರಂಡಿ ಕಾಮಗಾರಿ
17. ಅಂಬೇಡ್ಕರ್ ನಗರದಲ್ಲಿ ಸಿ.ಸಿ. ರಸ್ತೆ
18. ಅಂಡರ್ಸನ್ ಪೇಟೆಯ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಕಾಲೋನಿಯಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ
19. ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಶಾಲಾ ಮಕ್ಕಳಿಗೆ ನೋಟ್‌ಪುಸ್ತಕಗಳ ವಿತರಣೆ
20. ಶೌಚಾಲಯಗಳ ರಿಪೇರಿ.
21. ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗದ ಜನರಿಗೆ ವೈದ್ಯಕೀಯ ಪರಿಹಾರ.

689(885) : ಶ್ರೀ ಎನ್.ಎಚ್. ಶಿವಶಂಕರ ರೆಡ್ಡಿ (ಗೌರಿಬಿದನೂರು) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ಪಟ್ಟಣದಲ್ಲಿ ಕೈಗಾರಿಕಾ ವಸಾಹತು ಸಂಕೀರ್ಣ ಸ್ಥಾಪನೆಯಾಗಿದ್ದು, ಇದರಲ್ಲಿ ಹಲವರಿಗೆ ನಿವೇಶನಗಳನ್ನು ಕೈಗಾರಿಕೆಗಳನ್ನು ತೆರೆಯಲು ನೀಡಲಾಗಿದ್ದು, ಸದರಿ ನಿವೇಶನಗಳನ್ನು ಬೇನಾಮಿಯಾಗಿ ಬೇರೆಯವರಿಗೆ ಮಾರಾಟ ಮಾಡಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಕೈಗಾರಿಕೆ ತೆರೆಯಲು ಪಡೆದ ನಿವೇಶನಗಳನ್ನು ಬೇರೆಯವರಿಗೆ ಮಾರಾಟ ಮಾಡಲು ಕಾನೂನಿನಲ್ಲಿ ಅವಕಾಶವಿದೆಯೇ;

ಇ) ಇಲ್ಲದಿದ್ದಲ್ಲಿ, ಇಂತಹವರ ಬಗ್ಗೆ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶ ಇದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಇಲ್ಲ.

ಆ) ಇದೆ.

ಇ) ಉದ್ಭವಿಸುವುದಿಲ್ಲ.

690(884) : ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರಿನಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೇ ನಾಗರೀಕರು ತುಂಬಾ ತೊಂದರೆಗೀಡಾಗಿದ್ದು, ಒಳಚರಂಡಿ ವ್ಯವಸ್ಥೆ ಮಾಡಿಸಲು ಈ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ನಿಗಧಿಪಡಿಸಲಾಗಿದೆಯೇ;

ಆ) ನಿಗಧಿಪಡಿಸಿದ್ದಲ್ಲಿ, ಈ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಸೇರಿಸಿ ಕಾರ್ಯರೂಪಕ್ಕೆ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಇಲ್ಲ

ಆ) ಗೌರಿಬಿದನೂರು ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕಾದಲ್ಲಿ ಸಿಪಿಹೆಚ್ಇಇ ಓ ನಿಯಮಾವಳಿ ಪ್ರಕಾರ ನೀರು ಸರಬರಾಜಿನ ಪ್ರಮಾಣ ತಲಾ ದಿನಂಪ್ರತಿ ಕನಿಷ್ಟ 100 ಲೀಟರ್ ಇರ ಬೇಕಾಗಿರುತ್ತದೆ. ಪಟ್ಟಣದ ಹಾಲಿ ನೀರು ಸರಬರಾಜಿನ ಪ್ರಮಾಣವು ದಿನಂಪ್ರತಿ ತಲಾ 40 ಲೀಟರ್ ಗಳಾಗಿದ್ದು ಪಟ್ಟಣದ ನೀರು ಸರಬರಾಜು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಉತ್ತರ ಪಿನಾಕಿನಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಕಂಡಿ ಅಣೆಕಟ್ಟಿನ ಹಿನ್ನೀರನ್ನು ಬಳಸಿಕೊಂಡು ಕುಡಿಯುವ ನೀರಿನ ಸೌಕರ್ಯ ಕಲ್ಪಿಸುವ ರೂ. 400.05 ಲಕ್ಷಗಳ ಯೋಜನೆಯನ್ನು ತಯಾರಿಸಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಯೋಜನೆ ಪೂರ್ಣಗೊಂಡು ಅಗತ್ಯ ಪ್ರಮಾಣದ ಸಮರ್ಪಕ ನೀರು ಸರಬರಾಜು ವ್ಯವಸ್ಥೆಯಾದ ನಂತರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಯೋಜನೆಯನ್ನು ರೂಪಿಸಲಾಗುವುದು.

691(798) : ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮಾಂತರ ವಿದ್ಯಾವಂತ ಯುವಕರಿಗೆ ಸ್ವ-ಉದ್ಯೋಗದಡಿಯಲ್ಲಿ ಸಣ್ಣ ಕೈಗಾರಿಕಾ ಪ್ರಾರಂಭಕ್ಕೆ ಸರ್ಕಾರವು ಪ್ರೋತ್ಸಾಹ ನೀಡುತ್ತಿದೆಯೇ;

ಆ) ಸಾಮಾನ್ಯ ವಿದ್ಯಾವಂತರಿಗೆ ಸಣ್ಣ ಕೈಗಾರಿಕೆಗಳನ್ನು ತೆರೆಯಲು ಸರ್ಕಾರವು ನೀಡುತ್ತಿರುವ ಪ್ರೋತ್ಸಾಹ ಯಾವುದಕ್ಕೂ ಸಾಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದರೆ ಪ್ರೋತ್ಸಾಹ ಧನ ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಅಭಿವೃದ್ಧಿ ಸಚಿವರು)

ಅ) ವಿದ್ಯಾವಂತ ಯುವಕರಿಗೆ ಸ್ವಯಂ ಉದ್ಯೋಗ ಕಾರ್ಯಕ್ರಮವಾದ ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯಡಿಯಲ್ಲಿ ಗ್ರಾಮಾಂತರ ವಿದ್ಯಾವಂತ ಯುವಕರಿಗೆ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಪ್ರೋತ್ಸಾಹ ನೀಡುತ್ತಿದೆ.

ಆ) ಇದು ಸಾಲದೇ ಇರುವ ಬಗ್ಗೆ ಇದುವರೆವಿಗೂ ಯಾವುದೇ ಪ್ರಸ್ತಾವನೆಯು ಇಲಾಖೆಗೆ ಬಂದಿರುವುದಿಲ್ಲ. ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆಯು ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದ್ದು. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಮಂಜೂರಾದ ಫಲಾನುಭವಿ ಯೋಜನಾ ವೆಚ್ಚದ ಮೇಲೆ ಶೇ. 15ರಷ್ಟು ಗರಿಷ್ಠ ರೂ. 7,500–00 ಗಳನ್ನು ಸಹಾಯಧನ ನೀಡಲಾಗುತ್ತಿದೆ. ಅದಲ್ಲದೆ, ರಾಜ್ಯ ಸರ್ಕಾರದ ನೂತನ ಕೈಗಾರಿಕಾ ನೀತಿ 2001–06 ರಂತೆ ಸಣ್ಣ ಕೈಗಾರಿಕೆಗಳು ಹೆಚ್ಚುವರಿ ಬಂಡವಾಳ ಸಹಾಯಧನಕ್ಕೆ ಅರ್ಹವಿದ್ದಲ್ಲಿ ಪರಿಗಣಿಸಲಾಗುವುದು. ಆದ್ಯತೆ ಮೇಲೆ ಕೈಗಾರಿಕಾ ಶೆಡ್ ವಿದ್ಯುಚ್ಛಕ್ತಿ ಇತ್ಯಾದಿ ಹಂಚಿಕೆ ಕೋರಿಕೆಗಳನ್ನು ಪರಿಗಣಿಸಲಾಗುವುದು.

ಇ) ಮೇಲೆ ವಿವರಿಸಿದ ಸಂದರ್ಭದಲ್ಲಿ, ಸಬ್ಸಿಡಿ ಅಥವಾ ಇನ್ನಾವುದೇ ರೀತಿಯ ಪ್ರೋತ್ಸಾಹಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

692(580) : ಶ್ರೀ ಡಾ: ಸುಧಾಕರ್ ಎಂ.ಸಿ. (ಚಿಂತಾಮಣಿ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂತಾಮಣಿ ನಗರದಲ್ಲಿ ಸುಮಾರು 75 ಸಾವಿರ ಜನಸಂಖ್ಯೆ ಇದ್ದು ಮತ್ತು ಇದು ವಾಣಿಜ್ಯ ಕೇಂದ್ರವಾಗಿರುವುದರಿಂದ ಜನ ಸಂಪರ್ಕ ಕೂಡ ಜಾಸ್ತಿ ಇದ್ದು ಇಲ್ಲಿ ಕುಡಿಯುವ ನೀರು ಜನಸಂಖ್ಯೆಗೆ ಅನುಗುಣವಾಗಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ನಗರದಲ್ಲಿ ಅನೇಕ ಕೊಳವೆ ಬಾವಿಗಳು ಬತ್ತಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಏನಾದರೂ ಯೋಜನೆಗಳನ್ನು ಸಿದ್ಧಪಡಿಸಿದೆಯೇ; ಹಾಗೂ ಈ ಬಗ್ಗೆ ಕೈಗೊಳ್ಳುವ ಕ್ರಮಗಳಾವುವು? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಬಂದಿದೆ

ಆ) ಬಂದಿದೆ.

ಇ) ಹಾಲಿ ಪಟ್ಟಣದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ರೂ. 43.20 ಲಕ್ಷಗಳ ಅಂದಾಜು ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿದೆ. ಅಲ್ಲದೇ ಕೊಳವೆ ಬಾವಿಗಳ ಮೂಲದಿಂದ ನೀರನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಚಿಂತಾಮಣಿ ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚು ಅಂತರ್ಜಲ ದೊರೆಯಬಹುದಾದ ಸ್ಥಳವನ್ನು ಗುರುತಿಸಿಕೊಡಲು ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ತಂತ್ರಜ್ಞಾನ ಬಳಕೆ ಕೇಂದ್ರವನ್ನು ಸಂಪರ್ಕಿಸಲಾಗಿದ್ದು ಇವರು ನೀಡುವ ಸಲಹೆ ಆಧರಿಸಿ ನೀರು ಸರಬರಾಜು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಅ) ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯನ್ನು ರಾಜ್ಯದ ನಗರ ಸಂಸ್ಥೆಗಳಿಗೆ, ನಗರ ಮೂಲ ಸೌಕರ್ಯವನ್ನು ಅಭಿವೃದ್ಧಿಪಡಿಸಲು ಬೇಕಾದ ಯೋಜನೆ, ಹಣಕಾಸು ನೆರವು ಮತ್ತು ತಜ್ಞ ಸಹಕಾರವನ್ನು ನೀಡಲು ಸ್ಥಾಪಿಸಲಾಯಿತು. ಸಂಸ್ಥೆಯ ಧ್ಯೇಯೋದ್ದೇಶಗಳು

ನಗರ ಮೂಲಸೌಕರ್ಯಾಭಿವೃದ್ಧಿ ಯೋಜನೆಗಳನ್ನು ಸಿದ್ದಪಡಿಸಿ ಪರಿಶೀಲಿಸುವುದು, ಯೋಜನಾ ಮೇಲ್ವಿಚಾರಣೆ ಮತ್ತು ಅನುಷ್ಠಾನ

ಮುನಿಸಿಪಾಲಿಟಿಗಳು ಹಾಗೂ ನಗರಾಭಿವೃದ್ಧಿ ಸಂಸ್ಥೆಗಳಿಗೆ ಆರ್ಥಿಕ ಹಾಗೂ ತಾಂತ್ರಿಕ ನೆರವನ್ನು ನೀಡುವುದು.

ವಿವಧ ಮೂಲಗಳಿಂದ ಹಣವನ್ನು ಕ್ರೋಢೀಕರಿಸುವುದು.

ನಾಗರೀಕ ಸೇವೆಗಳ ಪರಿಣಾಮಕಾರಿ ಪೂರೈಕೆಗಾಗಿ ಮುನಿಸಿಪಾಲಿಟಿಗಳು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ತಾಂತ್ರಿಕ ಹಾಗೂ ಆಂತರಿಕ ಸಾಮರ್ಥ್ಯ ಅಭಿವೃದ್ಧಿಪಡಿಸುವುದು.

ಆ) ಕೆಯುಐಡಿಎಫ್‌ಸಿ ಯು ಈಗಾಗಲೇ ಒಂದು ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ನಗರ ಮೂಲ ಸೌಕರ್ಯ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಇನ್ನೊಂದು ಏಷ್ಯಿಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನ ಯೋಜನೆಯ ಅನುಷ್ಠಾನ ಕಾರ್ಯ ಪ್ರಗತಿಯಲ್ಲಿದೆ.

ಕೆಯುಐಡಿಎಫ್‌ಸಿ ಯು ವಿಶ್ವಬ್ಯಾಂಕ್ ನೆರವಿನ ಮತ್ತೆರಡು ಯೋಜನೆಗಳನ್ನು ತೆಗೆದುಕೊಳ್ಳುತ್ತಿದೆ. ಕೆಯುಐಡಿಎಫ್‌ಸಿ ಯು ಬೆಂಗಳೂರು ನಗರದಲ್ಲಿ ಅನುಷ್ಠಾನಗೊಳ್ಳುತ್ತಿರುವ ಮೆಗಾಸಿಟಿ ಯೋಜನೆಗಳಿಗೆ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಏಷ್ಯಿಯನ್ ಅಭಿವೃದ್ಧಿ ಬ್ಯಾಂಕಿನ ನೆರವಿಗೆ ಮಂಡಿಸಲು, ಪ್ರಸ್ತಾವಿತ ಉತ್ತರ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯ ಯೋಜನಾ ವರದಿಯನ್ನು ಕೆ.ಯು.ಐ.ಡಿ. ಎಫ್.ಸಿ.ಯು ತಯಾರಿಸುತ್ತಿದೆ.

ಇ) ಪ್ರಸ್ತುತ ಉತ್ತರ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯು ಯೋಜನಾ ತಯಾರಿ ಹಂತದಲ್ಲಿದೆ. ಏಷ್ಯಿಯನ್ ಅಭಿವೃದ್ಧಿ ಬ್ಯಾಂಕಿನ ನೆರವನ್ನು ಪಡೆಯಲು ಸಲ್ಲಿಸಬೇಕಾದ ಅಂತಿಮ ವರದಿಯು ಸೆಪ್ಟೆಂಬರ್ 2004ರಷ್ಟರಲ್ಲಿ ಯೋಜಿಸಿದಂತೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಏಷ್ಯಿಯನ್ ಅಭಿವೃದ್ಧಿ ಬ್ಯಾಂಕು ನೆರವು ನೀಡಲು ಅಂಗೀಕರಿಸಿದ ನಂತರ ಯೋಜನೆಯು ಐದು ವರ್ಷಗಳ ಕಾಲಾವಧಿಯದಾಗಿರುತ್ತದೆ.

ಈ) ಯೋಜನಾ ತಯಾರಿ ಕಾರ್ಯ ಪ್ರಗತಿಯಲ್ಲಿದೆ. ಪಟ್ಟಣ ಹಂತದ ಕಾರ್ಯಾಗಾರಗಳನ್ನು ಪ್ರತಿ ಪಟ್ಟಣದಲ್ಲೂ ನಡೆಸಲಾಗುತ್ತಿದ್ದು, ಸ್ಥಳೀಯ ನಗರ ಸಂಸ್ಥೆಗಳು, ಜಿಲ್ಲಾಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಇವುಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

4(120) : ಶ್ರೀ ಅಂಗಾರ್ ಎಸ್. (ಸೂಳ್ಯ) ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಹೆಸರಿನಲ್ಲಿ ಬೀಡಿ ಕಂಪನಿಗಳಿವೆ? (ಜಿಲ್ಲಾವಾರು ವಿವರ ನೀಡುವುದು);

ಆ) ಈ ಕಂಪನಿಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು; (ವಿವರ ನೀಡುವುದು)

ಇ) ಕಾರ್ಮಿಕರಿಗೆ ನೀಡುತ್ತಿರುವ ಕನಿಷ್ಠ ವೇತನ ಎಷ್ಟು?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು)

ಅ) ವಿವರಗಳನ್ನು ಅನುಬಂಧ-'ಎ'ರಲ್ಲಿ ನೀಡಿದೆ.

ಆ) ಕಾರ್ಮಿಕರ ಸಂಖ್ಯೆ 3939 ವಿವರಗಳನ್ನು ಅನುಬಂಧ-'ಬಿ'ರಲ್ಲಿ ನೀಡಿದೆ.

ಇ) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 249 ಎಲ್‌ಎಂಡಬ್ಲ್ಯೂ 93, ದಿನಾಂಕ 24-10-1996ರ ಪ್ರಕಾರ ಕನಿಷ್ಠ ವೇತನ-

1. 1000 ಬೀಡಿ ಸುತ್ತಲು ದಿನಕ್ಕೆ ರೂ. 74.50

2. ಬೀಡಿ ಕಟ್ಟು ಮಾಡಲು (ಪ್ರತಿ ಲಕ್ಷಕ್ಕೆ) ದಿನಕ್ಕೆ ರೂ. 93.91

3. ತರಾಯೀವಾಲ, ಭಟ್ಟಿವಾಲ, ತಂಬಾಕು ಮಿಶ್ರಣ ಮಾಡುವವ, ಎಲೆ ಹಾಗೂ ತಂಬಾಕು ಹಂಚುವವ ಇವರಿಗೆ ಪ್ರತಿ ತಿಂಗಳಿಗೆ ರೂ. 2000.15, ದಿನಾಂಕ 24-10-1996ರ ಅಧಿಸೂಚನೆ ವಿರುದ್ಧ ಆಡಳಿತವರ್ಗದವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿಯನ್ನು ಪರಿಗಣಿಸಿ ಅಧಿಸೂಚನೆಯನ್ನು ನ್ಯಾಯಾಲಯ ರದ್ದು ಮಾಡಿರುತ್ತದೆ. ಈ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲಿಸಿ ವಿಭಾಗೀಯ ಪೀಠವು ದಿನಾಂಕ 3-6-2003ರ ಆದೇಶದಲ್ಲಿ ಸರ್ಕಾರದ ಅಧಿಸೂಚನೆಯನ್ನು ಎತ್ತಿ ಹಿಡಿದಿರುತ್ತದೆ. ಈ ಆದೇಶದ ವಿರುದ್ಧ ಆಡಳಿತ ವರ್ಗದವರು ಸುಪ್ರೀಂಕೋರ್ಟ್ ನ್ಯಾಯಾಲಯದಲ್ಲಿ ಸಲ್ಲಿಸಿರುವ ಸ್ಪೆಷಲ್ ಲೀವ್ ಪಿಟಿಷನ್ ವಿಚಾರಣೆ ಹಂತದಲ್ಲಿರುತ್ತದೆ.

## ಅನುಬಂಧ-ಎ

## ರಾಜ್ಯದಲ್ಲಿರುವ ಬೀಡಿ ಕಂಪನಿಗಳ ವಿವರ

| ಕ್ರ.ಸಂ. | ಜಿಲ್ಲೆ | ವಿವಿಧ ಬೀಡಿಗಳು |
|---|---|---|

1. ಬೆಂಗಳೂರು ನಗರ / ಗ್ರಾಮಾಂತರ

| | | | |
|---|---|---|---|
| 1. | ರಾಜು ಟಿ.ಎಸ್. ಬೀಡಿ | 17. | ಕರ್ನಾಟಕ ಜ್ಯೋತಿ ಬೀಡಿ |
| 2. | ನಟರಾಜ ಬೀಡಿ | 18. | ತಾಜ್ ಬೀಡಿ |
| 3. | ಎಸ್.ಕೆ. ಭಾಷ್ಯ ಬೀಡಿ | 19. | ಅಸ್ಲಂ ಬೀಡಿ |
| 4. | ಲಕ್ಷ್ಮೀ ಬೀಡಿ | 20. | ಕೆ.ಎಂ. ಪೀರ್ ಬೀಡಿ |
| 5. | ಗೋಪಿ ಬೀಡಿ | 21. | ರಾಜ್‌ಕುಮಾರ್ ಬೀಡಿ |
| 6. | ಕುಂಚಾಲಿ ಬೀಡಿ | 22. | ರಶೀದ್ ಬೀಡಿ |
| 7. | ಸೀತಾ ಸ್ಪೆಷಲ್ ಬೀಡಿ | 23. | ಶಾಂ ಬೀಡಿ |
| 8. | ಬಾಬು ಬೀಡಿ | 24. | ವಿಷ್ಣುವರ್ಧನ ಬೀಡಿ |
| 9. | ನಾಗೇಶ್ ಬೀಡಿ | 25. | ಶಾಂತಿ ಬೀಡಿ |
| 10. | ಜ್ಯೋತಿ ಬೀಡಿ | 26. | ಎಂ.ಜಿ. ಬೀಡಿ |
| 11. | ಗಣೇಶ್ ಬೀಡಿ | 27. | ಹಬೀಬ್ ಬೀಡಿ |
| 12. | ಗೌರಿ ಬೀಡಿ | 28. | ನಂ. 1 ಬೀಡಿ |

| 1 | 2 | 3 |
|---|---|---|
| 13. | ಪಾಪು ಬೀಡಿ | 29. ನಂ. 5 ಬೀಡಿ |
| 14. | ಮಂಗಳೂರು ಗಣೇಶ್ ಬೀಡಿ | 30. ನಂ. 10 ಬೀಡಿ |
| 15. | ಎಸ್.ಕೆ. ಬೀಡಿ | 31. ನಂ. 6 ಬೀಡಿ |
| 16. | ಅಶೋಕಾ ಬೀಡಿ | 32. ಜ್ಯೋತಿ ಹೋಂ ಇಂಡಸ್ಟ್ರೀಸ್ |
| **2. ಹಾಸನ** | | |
| 1. | ಸ್ಪೆಷಲ್ ನಾಟಿ ಗ್ರೀನ್ ಬೀಡಿ | 8. ರಫೀಕ್ ನಾಟಿ ಬೀಡಿ |
| 2. | ಸ್ಪೆಷಲ್ ರೆಟ್ ನಾಟಿ ಪೀರ್ ಬೀಡಿ | 9. ಕರ್ನಾಟಕ ಜನತಾ ಬೀಡಿ |
| 3. | ಬೂದಿನಾ ಬೀಡಿ- | 10. ಸವರನ್ ನಾಟಿ ಬೀಡಿ |
| 4. | ಅಸಲಿ ಕಿಸಾನ್ ನಾಟಿ ಬೀಡಿ | 11. ಬಾಜಿ ನಾಟಿ ಬೀಡಿ |
| 5. | ಬಾನು ಬೀಡಿ | 12. ಶಾಹಿನಾ ಬೀಡಿ |
| 6. | ಎಸ್.ಕೆ. ನಟರಾಜ ಬೀಡಿ | 13. ಅರ್ಜುನ ಬೀಡಿ |
| 7. | ಎ–1 ರಾಜು ಬೀಡಿ | |
| **3. ಮಂಗಳೂರು** | | |
| 1. | ದೇಸಾಯಿ ಬೀಡಿ | 21. ಮೆ: ಬಿ.ವಿ. ಬಾಳಿಗಾ ಅಂಡ್ ಬಿ.ಕೆ. ಪ್ರಭು ಬೀಡೀಸ್ |
| 2. | ಡಿ.ಕೆ. ಪ್ರಾಡಕ್ಸ್ ಬೀಡಿ | 22. ಮೆ: ಮಂಗಳೂರು ಶುಭಾ ಬೀಡೀಸ್ |
| 3. | ಎಸ್.ಕೆ. ಹೋಂ ಇಂಡಸ್ಟ್ರೀಸ್ ಬೀಡಿ | 23. ಮಂಗಳೂರು ನ್ಯೂ ಸುಲ್ತಾನ್ ಬೀಡಿ |
| 4. | ಭಾರತ್ ಬೀಡಿ | 24. ಕೆ.ಎಸ್. ಬೀಡಿ |
| 5. | ಆನಂದ ಟಬಾಕೋ ಬೀಡಿ | 25. ಮೆ: ಸತೀಶ್ ಬೀಡಿ |
| 6. | ಪ್ರಕಾಶ ಬೀಡಿ | 26. ಮೆ: ಅಲಂಕಾರ್ ಬೀಡಿ |
| 7. | ಮಂಗಳೂರು ಗಣೇಶ್ ಬೀಡಿ | 27. ಮೆ: ನಜಾರ್ ಬೀಡಿ |
| 8. | ಮೆಟ್ರೋ ಬೀಡಿ | 28. ಮೆ: ಮಹಾಲಕ್ಷ್ಮಿ ಬೀಡಿ |
| 9. | ವಿವೇಕ ಸಂಘ ಬೀಡಿ | 29. ಮೆ: ಸಿಂಗಾರಿ ಬೀಡಿ |
| 10. | ಸಿ.ಈ. ಟಬಾಕೋ ಬೀಡಿ | 30. ಮೆ. ಜನತಾ ಬೀಡಿ |
| 11. | ಸುಹಾಸಿನಿ ಬೀಡಿ | 31. ಮಂಗಳೂರು ಅಮೀನ್ ಬೀಡಿ |
| 12. | ಕಣ್ಣೂರು ಬೀಡಿ | 32. ಮಂಗಳೂರು ಎ–1 ಬೀಡಿ |
| 13. | ಗ್ರೇಟ್ ದರ್ಬಾರ್ ಬೀಡಿ | 33. ಅನಿತಾ ಬೀಡಿ |
| 14. | ಗುರುಕೃಪ ಬೀಡಿ | 34. ಮಂಗಲೂರು ಪ್ರೀತಿ ಬೀಡಿ |
| 15. | ರೈಫಲ್ ಬೀಡಿ | 35. ಮಂಗಳೂರು ಅಮರ್ ಬೀಡಿ |
| 16. | ಮೆ. ದೀಪಕ್ ಎಂಟರ್ ಪ್ರೈಸಸ್ | 36. ಮೆ: ಗಣಪತಿ ಕೀ ಇಂಡಸ್ಟ್ರೀಸ್ |
| 17. | ಪಿ.ವಿ.ಎಸ್. ಬೀಡೀಸ್ | 37. ಮೆ: ಸದರ್ನ್ ಇಂಡಿಯಾ ಬೀಡಿ |
| 18. | ನಸೀಮಾ ಬೀಡಿ | 38. ಮೆ: ಜೆ.ಪಿ. ಟೋಬ್ಯಾಕೋ ಪ್ರಾಡಕ್ಟ್ಸ್ |

1 2 3

19. ಮೆ. ಶರ್ಮಿಳಬೀಡಿ
20. ಮಂಗಳೂರು ಹಜಾಜ್ ಬೀಡಿ
39. ಮಂಗಳೂರು ಮಧುರಾ ಬೀಡೀಸ್
40. ನಂ. 69 ಆರ್.ಎಸ್. ಬೀಡೀಸ್

**4. ಶಿವಮೊಗ್ಗ**

1. ಜಯಲಕ್ಷ್ಮೀ ಬೀಡಿ ವರ್ಕ್ಸ್
2. ಸೂಪರ್ ತ್ರೀ ಬೀಡಿಗಳು
3. ನಿತ್ಯನಂದ ಸ್ಪೆಷಲ್ ಬೀಡಿ
4. ವೈ. ನಾಗೇಶ್ ಪೈ ಭಾರತ್ ಬೀಡಿ ವರ್ಕ್ಸ್
5. ನಂ. 39 ಮಾರ್ಕಿನ ಬೀಡಿಗಳು
6. ಅಬ್ದುಲ್ ಸುಭಾಸ್, ಮಲನಾಡು ಬೀಡಿ ವರ್ಕ್ಸ್
7. ಟಿ.ಎಸ್. ಅಲಿಖಾನ್ ಎ–1, ನಂ. 9 ಬೀಡಿಗಗಳು
8. ಬೀಕ್ ಹಸನ್ ಕೈ ಬೀಡಿ
9. ಅನ್ವರ್ ಭಾಷಾ ಬೀಡಿ
10. ಮಂಗಳೂರು ರಾಜೇಶ್ ಬೀಡಿ
11. ಅಬ್ದುಲ್ ಮಜೀದ್ ಬೀಡಿ ವರ್ಕ್ಸ್
12. ಮೆ.ಬಿ.ವಿ. ಬಲೀಲ್ ಬೀಡಿ ವರ್ಕ್ಸ್
13. ಮುರುಗನ್ ಬೀಡಿ ವರ್ಕ್ಸ್
14. ಆರ್.ಕೆ. ಬೀಡಿ ವರ್ಕ್ಸ್
15. ಮಧು ಬೀಡಿ ವರ್ಕ್ಸ್
16. ಮಯೂರಾ ಬೀಡಿ ವರ್ಕ್ಸ್
17. ಆಶೋಕಾ ಬೀಡಿ ವರ್ಕ್ಸ್
18. ವಿಶ್ವನಾಥ ಬೀಡಿ ವರ್ಕ್ಸ್
19. ಮಂಗಳೂರು ಸ್ಪೆಷಲ್ ಸಂದೇಶ ಬೀಡಿ ವರ್ಕ್ಸ್

**5. ಉಡುಪಿ**

1. ಮೆ: ಶರ್ಮದ್ದೀನ್ ಜಾಫರ್ ಅಂಡ್ ಕಂ. ಬೀಡಿ
2. ಮನೋಹರ್ ಬೀಡಿ ವರ್ಕ್ಸ್
3. ಮೆ: ಶೆಣೈ ಬೀಡಿ ವರ್ಕ್ಸ್
4. ಕರಾವಳಿ ಸ್ಪೆಷಲ್ ತೃಪ್ತಿ ಬೀಡೀಸ್
5. ಶಕ್ತಿ ಬೀಡೀಸ್
6. ಮೆ: ಮುಸಫೀರ್ ಬೀಡಿ ವರ್ಕ್ಸ್

**6. ಮೈಸೂರು**

1. ಮಂಗಳೂರು ಗಣೇಶ್ ಬೀಡಿ
2. ಜ್ಯೋತಿ ಹೋಂ ಇಂಡಸ್ಟ್ರೀಸ್
3. ಮೈಸೂರು ಕಾಲೇಜ್ ಬೀಡಿ ವರ್ಕ್ಸ್
4. ಫೈನ್ ಕಾಲೇಜ್ ಬೀಡಿ

**7. ಚಾಮರಾಜನಗರ**

1. ಜ್ಯೋತಿ ಹೋಂ ಇಂಡಸ್ಟ್ರೀಸ್
2. ಮಂಗಳೂರು ಗಣೇಶ್ ಬೀಡಿ

**8. ಮಂಡ್ಯ**

1. ಜ್ಯೋತಿ ಹೋಂ ಇಂಡಸ್ಟ್ರೀಸ್
2. ಗುರು ಬೀಡಿ

**9. ಬೆಳಗಾವಿ ಜಿಲ್ಲೆ**

1. ರಾಯಲ್ ಬೀಡಿ
2. ಪಿಸ್ತೂಲ್ ಬೀಡಿ
3. ವಿಲಾಸ್ ಬೀಡಿ
4. ಸಾಂಬಾರ ಬೀಡಿ
5. ಮೊವಿನ್ ಬೀಡಿ
6. ದರಬಾರ್ ಬೀಡಿ
7. ಕಾಜ ಬೀಡಿ

| 1 | 2 | 3 |
|---|---|---|

10. ಬಿಜಾಪುರ

1. ಬೀಕುಷಾ ಯಮುನಾ ಬೀಡಿ

11. ಬಾಗಲಕೋಟೆ

1. ವಿಲಾಸ್ ಬೀಡಿ
2. ಛೋಟಾ ಮುನ್ನಿ
3. ಮುಸಾ ಬೀಡಿ

12. ಗುಲ್ಬರ್ಗಾ

1. ಭಾರತ್ ಬೀಡಿ
2. ಗೋಲ್ಡನ್ ಬೀಡಿ
3. ಸಾಂಗ್ಲಿ ಬೀಡಿ
4. ವಕೀಲಾ ಬೀಡಿ
5. ನಂ. 1 ಬೀಡಿ
6. ಭಾಷಾ ಬೀಡಿ

13. ದಾವಣಗೆರೆ

1. ಜ್ಯೋತಿ ಹೋಂ ಇಂಡಸ್ಟ್ರೀಸ್
2. ಭಾರತ್ ನಂ. 30 ಬೀಡಿ
3. ಸ್ಪೆಷಲ್ ಅಶೋಕಾ ಬೀಡಿ
4. ಮಂಗಳೂರು ಮಧುರಾ ಬೀಡಿ
5. ಬಿ.ಕೆ. ಬೀಡಿ
6. ಪೈಜಿ ಬೀಡಿ ವರ್ಕ್ಸ್
7. ಶಾಸ್ತ್ರಿ ಅಂಡ್ ಕಂಪನಿ
8. ರಾಜ್‌ಕಮಲ್ ಬೀಡಿ ವರ್ಕ್ಸ್
9. ಅಶೋಕ ಬೀಡಿ ವರ್ಕ್ಸ್
10. ವಕೀಲ್ ಬೀಡಿ ವರ್ಕ್ಸ್

14. ಬಳ್ಳಾರಿ

1. ಸಿತಾರಾ ಬೀಡಿ ವರ್ಕ್ಸ್
2. ಅಹ್ಮದ್ ಬೀಡಿ ವರ್ಕ್ಸ್
3. ಸಾವರಿಸ್ ಬೀಡಿ
4. ಮಯೂರ ಬೀಡಿ
5. ಪ್ರಜಾ ಬೀಡಿ ವರ್ಕ್ಸ್
6. ಕಮಲ್ ಬೀಡಿ

15. ಕೊಪ್ಪಳ

1. ಹಂಸರಾಜ ಬೀಡಿ
2. ಧನರಾಜ ಬೀಡಿ
3. ರಾಖಿ ಬೀಡಿ
4. ಮೈಸೂರ ಡೈಮಂಡ್ ಬೀಡಿ
5. ಪ್ರಕಾಶ ಬೀಡಿ
6. ಹೇಮರಾಜ ಬೀಡಿ

16. ಧಾರವಾಡ

1. ರಾಯಲ್ ಬೀಡಿ
2. ಜನತಾ ಬೀಡಿ
3. ಅಮರ್ ಬೀಡಿ
4. ಸ್ಪೆಷಲ್ ಬೀಡಿ
5. ನರಸಿಂಹ ಬೀಡಿ

17. ಗದಗ

1. ಸಿಂದೂರ್ ಬೀಡಿ
2. ಹರಿಹರ ಬೀಡಿ

| 1 | 2 | 3 |
|---|---|---|
| 18. ಹಾವೇರಿ | | |
| | 1. ಫೈಜಾ ಬೀಡಿ | 3. ಜ್ಯೋತಿ ಹೋಂ ಇಂಡಸ್ಟ್ರೀಸ್ |
| | 2. ಎಲ್.ವಿ. ರಝಾಯಿ ಬೀಡಿ | 4. ನಂ. 30 ಬೀಡಿ |
| 19. ಕೋಲಾರ | | |
| | 1. ಜ್ಯೋತಿ ಹೋಂ ಇಂಡಸ್ಟ್ರೀಸ್ | 15. ಎ.ಟಿ.ಎಸ್. ಬೀಡಿ |
| | 2. ಮಂಗಳೂರು ಗಣೇಶ್ ಬೀಡಿ | 16. ನಾರಾಯಣ ಬೀಡಿ |
| | 3. ಸಾಗರ ಬೀಡಿ | 17. ರಶೀದ್ ಬೀಡಿ |
| | 4. ಭಾರತ್ ಬೀಡಿ | 18. ಬಾಬು ಬೀಡಿ |
| | 5. ಸಂಗಮ್ ಬೀಡಿ | 19. ರೋಶನ್ ಬೀಡಿ |
| | 6. ಸ್ಟಾರ್ ಬೀಡಿ | 20. ಬಾಬಾ ಬೀಡಿ |
| | 7. ಪಿಸ್ತೂಲ್ ಬೀಡಿ | 21. ರಾಜು ಬೀಡಿ |
| | 8. ನಟರಾಜ್ ಬೀಡಿ | 22. ನ್ಯೂ ಸವರನ್ ಬೀಡಿ |
| | 9. ಜೋಕರ್ ಬೀಡಿ | 23. ಸ್ವಾಸ್ತಿಕ್ ಬೀಡಿ |
| | 10. ಮೈಸೂರು ಬೀಡಿ | 24. ಭಾರತ್ ಬೀಡಿ |
| | 11. ನಂ. 5 ಬೀಡಿ | 25. ಜೈ ಹಿಂದ ಬೀಡಿ |
| | 12. ವಿಜಯಪುರ ಕೃಷ್ಣ ಬೀಡಿ | 26. ಕಿಸಾನ್ ಬೀಡಿ |
| | 13. ವಿಜಯಪುರ ಸ್ಪೆಷಲ್ ಬೀಡಿ | 27. ಮೋಹನ್ ಬೀಡಿ |
| | 14. ಬೆಂಗಳೂರು ಈಶ್ವರ್ ಬೀಡಿ | 28. ಅಶ್ವಥ್ ಬೀಡಿ |
| | 15. ಎ.ಟಿ.ಎಸ್. ಬೀಡಿ | |
| 20. ತುಮಕೂರು | | |
| | 1. ಜ್ಯೋತಿ ಹೋಂ ಇಂಡಸ್ಟ್ರೀಸ್ | 9. ಸಮಾಚ್ ಬೀಡಿ |
| | 2. ಮಂಗಳೂರು ಗಣೇಶ ಬೀಡಿ | 10. ಶಂಕರ್ ಬೀಡಿ |
| | 3. ಮಲಬಾರ್ ಬೀಡಿ | 11. ಮಂಗಳೂರು ವಿಜಯ ಬೀಡಿ |
| | 4. ವೆಂಕಟೇಶ್ ಬೀಡಿ | 12. ಕೃಷ್ಣ ಬೀಡಿ |
| | 5. ಭಾರತ್ ಬೀಡಿ | 13. ಸುಂದರ್ ಬೀಡಿ |
| | 6. ಜೀವನ್ ಬೀಡಿ | 14. ಶಾಂತಿ ಬೀಡಿ |
| | 7. ಕರ್ನಾಟಕ ಬೀಡಿ | 15. ಜಿ.ಎಸ್. ರಾಜು ಬೀಡಿ |
| | 8. ಸರಸ್ವತಿ ಬೀಡಿ | |

ಅನುಬಂಧ-ಬಿ
ಬೀಡಿ ಕಂಪನಿಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ವಿವರಗಳು

| ಕ್ರ.ಸಂ. | ಜಿಲ್ಲೆ | ಕಾರ್ಮಿಕರ ಸಂಖ್ಯೆ |
|---|---|---|
| 1. | ಬೆಂಗಳೂರು | 200 |
| 2. | ಮೈಸೂರು | 393 |
| 3. | ಮಂಡ್ಯ | 6 |
| 4. | ಶಿವಮೊಗ್ಗ | 40 |
| 5. | ಕೋಲಾರ | 110 |
| 6. | ತುಮಕೂರು | 391 |
| 7. | ಹಾಸನ | 199 |
| 8. | ಮಂಗಳೂರು | 1599 |
| 9. | ಉಡುಪಿ | 292 |
| 10. | ಹುಬ್ಬಳ್ಳಿ | 37 |
| 11. | ಬಳ್ಳಾರಿ | 86 |
| 12. | ದಾವಣಗೆರೆ | 30 |
| 13. | ಗುಲ್ಬರ್ಗಾ | 52 |
| 14. | ಬಿಜಾಪುರ | 4 |
| 15. | ಬೆಳಗಾಂ | 118 |
| 16. | ಹಾವೇರಿ | 62 |
| 17. | ಗದಗ | 7 |
| 18. | ಕೊಪ್ಪಳ | 13 |
| 19. | ಬಾಗಲಕೋಟೆ | 13 |
| 20. | ಚಾಮರಾಜನಗರ | 87 |
| | ಒಟ್ಟು | 3939 |

ಶಿವಮೊಗ್ಗ ನಗರದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನಗಳ ಬಗ್ಗೆ

19(08) : ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ನಿರ್ಮಿಸುತ್ತಿರುವ ಅಂಬೇಡ್ಕರ್ ಭವನಕ್ಕೆ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ;

ಆ) ಅದನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಹಣ ಬೇಕಾಗುತ್ತದೆ; ಹಾಗೂ ಎಷ್ಟು ದಿನದಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರೂ. 59.00 ಲಕ್ಷಗಳು.

ಆ) ಈ ಕಾರ್ಯಕ್ರಮದ ಅಂದಾಜು ವೆಚ್ಚ ರೂ. 99.50 ಲಕ್ಷ ಸಮಾಜ ಕಲ್ಯಾಣ ಇಲಾಖೆಯು ಹೊರಡಿಸಿದ ಸರ್ಕಾರಿ ಆದೇಶದಂತೆ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ನಿರ್ಮಿಸುವ ಪ್ರತಿ ಭವನಕ್ಕೆ ನಿಗದಿಪಡಿಸಿದ ಅಂದಾಜು ಮೊತ್ತ 40.00

ಲಕ್ಷಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ. 10.00 ಲಕ್ಷಗಳನ್ನು ನಿರ್ಮಾಣದ ಸಲುವಾಗಿ ಇಲಾಖಾ ವತಿಯಿಂದ ನೀಡಬೇಕಾಗಿರುತ್ತದೆ. ಅದರಂತೆ ರೂ.5.00 ಲಕ್ಷಗಳನ್ನು ಬಿಡುಗಡೆಗೊಳಿಸಿದೆ. ಉಳಿದ ರೂ. 5.00 ಲಕ್ಷಗಳನ್ನು ಬಿಡುಗಡೆಗೊಳಿಸಲು ಪರಿಶೀಲಿಸಲಾಗುತ್ತಿದೆ. ಮತ್ತೆ ಹೆಚ್ಚುವರಿ ಮೊತ್ತವನ್ನು ಸ್ಥಳೀಯ ಸಂಸ್ಥೆಗಳಿಂದ ಭರಿಸತಕ್ಕದ್ದು.

**ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಪ್ರಕರಣಗಳ ಬಗ್ಗೆ**

76 (290) : ಶ್ರೀ ರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಪ್ರಕರಣಗಳ ಸಂಖ್ಯೆ ಎಷ್ಟು;

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ದಿನಾಂಕ 1-6-2004ರ ಅಂತ್ಯಕ್ಕೆ ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ 10,65,366 ಪ್ರಕರಣಗಳು ಬಾಕಿ ಇವೆ.

| | | |
|---|---|---|
| ಸಿವಿಲ್ ಪ್ರಕರಣಗಳು | – | 6,11,326 |
| ಕ್ರಿಮಿನಲ್ ಪ್ರಕರಣಗಳು | – | 4,54,040 |

168 (362) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ ವಿಧಾನ ಸಭಾ ಕ್ಷೇತ್ರ) ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಾದ್ಯಂತ ಮುಚ್ಚಲ್ಪಟ್ಟ ಕಾರ್ಖಾನೆಗಳು ಯಾವುವು;

ಆ) ಸದರಿ ಕಾರ್ಖಾನೆಗಳು ಮುಚ್ಚಲ್ಪಡಲು ಕಾರಣಗಳೇನು;

ಇ) ಈ ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದರಿಂದ ಬೀದಿಪಾಲಾದ ಕಾರ್ಮಿಕರ ಸಂಖ್ಯೆ ಎಷ್ಟು;

ಈ) ಸದರಿ ಕಾರ್ಮಿಕರುಗಳಿಗೆ ಕಾರ್ಖಾನೆಗಳ ವತಿಯಿಂದ ನೀಡಬೇಕಾದ ಹಣದ ಮೊತ್ತ ಎಷ್ಟು; ಹಾಗೂ ಈವರೆಗೆ ಎಷ್ಟು ಮಂದಿಗೆ ಬಾಕಿ ಹಣ ನೀಡಲಾಗಿದೆ; ಕಾರ್ಖಾನೆವಾರು ವಿವರಗಳನ್ನು ಒದಗಿಸುವುದು

ಉ) ಸದರಿ ಬಾಕಿ ಮೊತ್ತವನ್ನು ಪಾವತಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಮೈಸೂರು ಜಿಲ್ಲೆಯಾದ್ಯಂತ ಒಟ್ಟು ಮುಚ್ಚಿರುವ ಘಟಕಗಳು-70 ಪಟ್ಟಿ ಲಗತ್ತಿಸಲಾಗಿದೆ.

ಆ) ಇವುಗಳು ಮುಚ್ಚಲು ಮುಖ್ಯ ಕಾರಣಗಳು ಈ ಕೆಳಕಂಡಂತಿವೆ:

1. ಮಾರುಕಟ್ಟೆ ಪೈಪೋಟಿ
2. ಕಾರ್ಮಿಕರ ಮುಷ್ಕರ
3. ಕಚ್ಚಾಮಾಲುಗಳ ಬೆಲೆಯಲ್ಲಿ ಏರಿಳಿತಗಳು
4. ದುಡಿಯುವ ಬಂಡವಾಳ ಕೊರತೆ
5. ಆಡಳಿತ ವರ್ಗದಲ್ಲಿ ಹೊಂದಾಣಿಕೆ ಕೊರತೆ.

ಇ) ಒಟ್ಟು 9,152 ಜನ ಕೆಲಸ ಕಳೆದುಕೊಂಡಿದ್ದಾರೆ.

ಈ) ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನೀಡಲಾಗಿದೆ.

ಉ) ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನೀಡಲಾಗಿದೆ.

## ಅನುಬಂಧ

| ಕ್ರ.ಸಂ. | ಮುಚ್ಚಿದ ಸಂಸ್ಥೆಯ ಹೆಸರು ಮತ್ತು ವಿಳಾಸ | ಮುಚ್ಚಿರುವ ದಿನಾಂಕ | ಕೆಲಸ ಕಳೆದುಕೊಂಡ ಕಾರ್ಮಿಕರು | ಪರಿಹಾರ ಪಡೆದ ಕಾರ್ಮಿಕರು | ಪರಿಹಾರದ ಮೊತ್ತ | ಪರಿಹಾರದ ಧನ ಪಾವತಿ ಬಗ್ಗೆ ವಿವರಗಳು |
|---|---|---|---|---|---|---|
| 1. | ಎಸ್. ಕೆಮಿಕಲ್ಸ್ ಪ್ರೈಲಿ. ಊಟಗಳ್ಳಿ ಇಂಡಸ್ಟ್ರಿಯಲ ಏರಿಯಾ, ಮೈಸೂರು | 1990 | 50 | – | – | ಕಾರ್ಮಿಕ ನ್ಯಾಯಾಲಯದಲ್ಲಿ ಇದೆ ಎಂದು ತಿಳಿದು ಬಂದಿರುತ್ತದೆ. |
| 2. | ಅಲ್ಫಾ ಡೈ ಕ್ಯಾಸ್ಟ್ ಪ್ರೈಲಿ. ಊಟಗಳ್ಳಿ, ಮೈಸೂರು | 11-12-19 | 55 | 55 | - | ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 18(1)ರ ಅಡಿಯಲ್ಲಿ ದ್ವಿಪಕ್ಷೀಯ ಒಪ್ಪಂದವಾಗಿರುತ್ತದೆ. |
| 3. | ಏಷ್ಯನ್ ಕೇಬಲ್ಸ್ ಲಿ. (ವಿಲ್‌ಟೆಕ್ ಇಂಡಿಯಾ ಲಿ | 2000 | 285 | 285 | – | ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 18(1)ರ ಅಡಿಯಲ್ಲಿ ದ್ವಿಪಕ್ಷೀಯ ಒಪ್ಪಂದವಾಗಿರುತ್ತದೆ |
| 4. | ಬೆಲ್ಸ್ ಕಂಟ್ರೋಲ್ ಇಂಡಸ್ಟ್ರೀಯಲ್ ಲಿ. ಇಂಡಸ್ಟ್ರೀಯಲ್ ಏರಿಯಾ, ಮೈಸೂರು | 1996 | 206 | 206 | – | ಇತ್ಯರ್ಥವಾಗಿರುತ್ತದೆ ಎಂದು ತಿಳಿದು ಬಂದಿದೆ. |
| 5 | ಡೈಮೆಂಡ್ ಡೈಸ್ ಮ್ಯಾನುಫಾಕ್ಚರಿಂಗ್ ಕಂಪನಿ, ಮೈಸೂರು | ಮಾರ್ಚ್ 1996 | 110 | – | – | ಕಾರ್ಮಿಕ ನ್ಯಾಯಾಲಯದಲ್ಲಿ ವಿಲೇವಾರಿಗಾಗಿ ಬಾಕಿ ಇದೆ. |
| 6. | ಜಿಂಕೋ ಲಿ. ಊಟಗಳ್ಳಿ ಮೈಸೂರು | 1996 | 40 | – | - | ಮಾಹಿತಿ ಬಂದಿರುವುದಿಲ್ಲ. |
| 7. | ಐಡಿಯಲ್ ಜಾವಾ (ಇಂಡಿಯಾ ಲಿ., ಯಾದವಗಿರಿ, ಮೈಸೂರು | 1996 | 1800 | – | - | ಲಿಕ್ವಿಡೇಟರ್ ನೇಮಕಗೊಂಡಿರುತ್ತಾರೆ |

| 1 | 2 | 3 | 4 | 5 | 6 | 7 |
|---|---|---|---|---|---|---|
| 8.* | ಇಂಡಿಯನ್ ಪಿಸ್ಟೋ ರೆಸ್ಕೋ ಲಿ. ಬೆಳವಾಡಿ ಮೈಸೂರು | 31-3-1999 | 21 | 21 | | ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 18(1)ರ ಅಡಿಯಲ್ಲಿ ದ್ವಿಪಕ್ಷೀಯ ಒಪ್ಪಂದವಾಗಿರುತ್ತದೆ |
| 9.* | ಜೆ. ಎಲೆಕ್ಟ್ರಿಕಲ್ ವೈರ್ ಕಾರ್ಪೋರೇಷನ್ ಲಿ. ಕೆಆರ್‌ಎಸ್ ರಸ್ತೆ, ಮೈಸೂರು | 96–97 | 213 | – | – | ಬಿಐಎಫ್‌ಆರ್ ಮುಂದೆ ಬಾಕಿ ಇದೆ ಎಂದು ತಿಳಿದು ಬಂದಿರುತ್ತದೆ. |
| 10.* | ಜೆ ನೀಡಲ್ ಬೇರಿಂಗ್ಸ್ ಬೆಳವಾಡಿ ಇಂಡಸ್ಟ್ರಿಯಲ್ ಏರಿಯಾ, ಮೈಸೂರು | 1996 | 124 | – | – | ಬಿಐಎಫ್‌ಆರ್ ಮುಂದೆ ಬಾಕಿ ಇದೆ ಎಂದು ತಿಳಿದು ಬಂದಿರುತ್ತದೆ |
| 11.* | ಕ್ಯಾಪ್‌ಕೆಮ್ ಲಿ. ಬೆಳಗೊಳ, ಮೈಸೂರು | 1993 | 120 | – | – | ಕಾರ್ಮಿಕ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದು ತಿಳಿದು ಬಂದಿರುತ್ತದೆ |
| 12.* | ಕರ್ನಾಟಕ ಬಾಲ್ ಬೇರಿಂಗ್ಸ್ ಕಾರ್ಪೋರೇಷನ್, ಬೆಳವಾಡಿ, ಮೈಸೂರು | ಜೂನ್ 1995 | 406 | – | – | ಬಿಐಎಫ್‌ಆರ್ ಮುಂದೆ ಬಾಕಿ ಇದೆ ಎಂದು ತಿಳಿದು ಬಂದಿರುತ್ತದೆ |
| 13.* | ಕೊಡಗು ಫುಡ್ಸ್ ಪ್ರೈ.ಲಿ. ಮೇಟಗಳ್ಳಿ, ಮೈಸೂರು | | 150 | – | – | ಗ್ಲೋಬ್ ಫುಡ್ಸ್ ಎಂದು ಹೆಸರು ಬದಲಾವಣೆಯಾಗಿ, ಈಗ ಚಾಲ್ತಿಯಲ್ಲಿರುತ್ತದೆ |

| 1 | 2 | 3 | 4 | 5 | 6 | 7 |
|---|---|---|---|---|---|---|
| 14. | ಮೆಸನರಿ ಮ್ಯಾನುಫ್ಯಾಕ್ಚರಿಂಗ್ ಕಾರ್ಪೋರೇಷನ್ ಲಿ. ಬೆಳವಾಡಿ ಇಂಡಸ್ಟ್ರೀಯಲ್ ಏರಿಯಾ, ಮೈಸೂರು | 9–5–1988 | 714 | – | – | ಲಿಕ್ವಿಡೇಟರ್ ರವರು ನೇಮಕ ಗೊಂಡಿರುತ್ತಾರೆ. |
| 15.* | ಮೆಟಲ್ ಲ್ಯಾಂಪ್ಸ್ ಕ್ಯಾಪ್ಸ್ (ಇಂ) ಲಿ, ಹೆಬ್ಬಾಳ, ಮೈಸೂರು | 1997 | 92. | – | – | ಕಾರ್ಮಿಕ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದು ತಿಳಿದು ಬಂದಿರುತ್ತದೆ. |
| 16. | ಮರುಗುಪ್ಪ ಎಲೆಕ್ಟ್ರಾನಿಕ್ಸ್ ಲಿ. ಹೆಬ್ಬಾಳ, ಇಂಡಸ್ಟ್ರಿಯಲ್ ಏರಿಯಾ, ಮೈಸೂರು (ಮೆಲ್‌ಟ್ರಾಕ್) | ಜುಲೈ 2002 | 50 | 50 | – | ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 18(1)ರ ಅಡಿಯಲ್ಲಿ ದ್ವಿಪಕ್ಷೀಯ ಒಪ್ಪಂದವಾಗಿರುತ್ತದೆ |
| 17. | ಮೈಸೂರು ರೇಸಿನ್ಸ್ ಅಂಡ್ ಕೆಮಿಕಲ್ಸ್ ಲಿ, ಮೈಸೂರು | – | – | – | – | ಮಾಹಿತಿ ಲಭ್ಯವಿರುವುದಿಲ್ಲ |
| 18.* | ಆರ್.ಸಿ. ಎಲೆಕ್ಟ್ರಾನಿಕ್ಸ್ ಲಿ. ಮೈಸೂರು | 10–4–1996 | 60 | – | – | ಲಿಕ್ವಿಡೇಟರ್‌ರವರು ನೇಮಕ ಗೊಂಡಿರುತ್ತಾರೆಂದು ತಿಳಿದು ಬಂದಿರುತ್ತದೆ |
| 19.* | ರಾಮನ್ಸ್ ಸ್ಟೀಲ್‌ಮಟ್ ಲಿ. ಇಂಡಸ್ಟ್ರಿಯಲ್ ಸಬರ್ಬ್, ಮೈಸೂರು | 2000 | 12 | – | - | ಆಡಳಿತ ವರ್ಗದವರೊಡನೆ ಕಾರ್ಮಿಕರು ಇತ್ಯರ್ಥ ಮಾಡಿಕೊಂಡಿರುತ್ತಾರೆಂದು ತಿಳಿದು ಬಂದಿರುತ್ತದೆ |
| 20. | ರೈನಿಂಗ್ ಲೈಟಿಂಗ್ (ಇ) ಲಿ, ಇಂಡಸ್ಟ್ರಿಯಲ್ ಸಬರ್ಬ್, ಮೈಸೂರು | 1997 | 50 | – | – | ಮಾಹಿತಿ ಲಭ್ಯವಿರುವುದಿಲ್ಲ |

| 1 | 2 | 3 | 4 | 5 | 6 | 7 |
|---|---|---|---|---|---|---|
| 21.* | ಶಿವಮೊಗ್ಗ ಸ್ಟೀಲ್, ಕೆಆರ್‌ಎಸ್ ರಸ್ತೆ, ಮೇಟಗಳ್ಳಿ, ಮೈಸೂರು | 1993 | 80 | – | – | ಕಾರ್ಮಿಕ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದು ತಿಳಿದು ಬಂದಿರುತ್ತದೆ. |
| 22. | ಎಸ್.ಆರ್.ಪಿ. ಮಿಲ್ಸ್ ಮೈಸೂರು | – | – | – | – | ಮಾಹಿತಿ ಲಭ್ಯವಿರುವುದಿಲ್ಲ |
| 23. | ತ್ರಿವೇಣಿ ಇಂಜಿನಿಯರಿಂಗ್ ವರ್ಕ್ಸ್ ಲಿ. ಮೇಟಗಳ್ಳಿ ಮೈಸೂರು | – | – | – | - | ತ್ರಿವೇಣಿ ಇಂಜಿನಿಯರಿಂಗ್ ಅಂಡ್ ಇಂಡಸ್ಟ್ರೀಸ್ ಲಿ. ಎಂದು ಹೆಸರು ಬದಲಾವಣೆಯಾಗಿದ್ದು, ಈಗ ಚಾಲ್ತಿಯಲ್ಲಿ ಇರುತ್ತದೆ. |
| 24.* | ವೀಕಯರ್ ರಬ್ಬರ್ ಮ್ಯಾನುಫ್ಯಾಕ್ಚರಿಂಗ್ ಲಿ., ಹೆಬ್ಬಾಳ್, ಮೈಸೂರು | 1997 | 26 | 26 | – | ಇತ್ಯರ್ಥವಾಗಿದೆ ಎಂದು ತಿಳಿದು ಬಂದಿರುತ್ತದೆ. ಈಗ ಸದರಿ ಸಂಸ್ಥೆಯು ಎನ್.ಎ. ರಬ್ಬರ್ ಎಂದು ಚಾಲ್ತಿಯಲ್ಲಿ ಇರುತ್ತದೆಯೆಂದು ತಿಳಿದು ಬಂದಿರುತ್ತದೆ. |
| 25. | ವಿಜಯಾ ವೈರ್ಸ್ ಅಂಡ್ ಫಿಲಮೆಂಟ್ಸ್ ಲಿ, ಹೆಬ್ಬಾಳ್ ಇಂಡಸ್ಟ್ರೀಯಲ್ ಏರಿಯಾ, ಮೈಸೂರು (ಯೂನಿಟ್ 2) | 27–1–2000 | 25 | – | – | ಕಾರ್ಮಿಕ ನ್ಯಾಯಾಲಯದಲ್ಲಿ ಇದೆ (ವಿಲೇವಾರಿಗಾಗಿ) |

| 1 | 2 | 3 | 4 | 5 | 6 | 7 |
|---|---|---|---|---|---|---|
| 26. | ವಿಜಯಾ ವೈರ್ಸ್ ಅಂಡ್ ಫಿಲಮೆಂಟ್ಸ್ ಲಿ. ಮೇಟಗಳ್ಳಿ, ಮೈಸೂರು (ಯೂನಿಟ್–1) | | | – | – | ಚಾಲ್ತಿಯಲ್ಲಿರುತ್ತದೆ |
| 27. | ವಿಜಿಲ್ ಫಿಲಿಮೆಂಟ್ಸ್ ಪ್ರೈ. ಲಿ. ಮೈಸೂರು | 11–6–1996 | 11 | 11 | – | ಕಾರ್ಮಿಕ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ |
| 28.* | ರೆಮಿಂಗ್ ಟನ್ ರ್‍ಯಾಂಡ್ ಮೈಸೂರು | 5–3–99 | 50 | 50 | – | ಆಡಳಿತ ವರ್ಗದವರೊಡನೆ ಕಾರ್ಮಿಕರು ಒಪ್ಪಂದ ಮಾಡಿ ಕೊಂಡಿರುತ್ತಾರೆಂದು ತಿಳಿದು ಬಂದಿರುತ್ತದೆ |
| 29. | ಫ್ಯೂಜಿ ಅಂಬ್ರೆಲಂ ಪ್ರೈ.ಲಿ. ಮೈಸೂರು | 17–9–2001 | 124 | 124 | – | ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 18(1)ರ ಅಡಿಯಲ್ಲಿ ದ್ವಿಪಕ್ಷೀಯ ಒಪ್ಪಂದವಾಗಿರುತ್ತದೆ |
| 30. | ವಿನಾಯಕ ಹೀಟ್ ಟ್ರೀಟರ್ಸ್ ಬೆಳವಾಡಿ, ಮೈಸೂರು | 14–4–1995 | 13 | – | – | ಡಿಫಾಲ್ಟರ್ಸ್ ಆಗಿರುವುದರಿಂದ ಕೆ.ಎಸ್.ಎಫ್.ಸಿ. ಯವರು ಕಾರ್ಖಾನೆಯನ್ನು ಬೀಗ ಮುದ್ರೆಗೊಳಿಸಿ ಅವರ ವಶಕ್ಕೆ ತೆಗೆದುಕೊಂಡಿರುತ್ತಾರೆ. |
| 31. | ಪಾಪರಾಮ್ ಬ್ರಿಕ್ಸ್ ಅಂಡ್ ಟೈಲ್ಸ್ ಹಿನಕಲ್ ಅಂಚೆ, ಮೈಸೂರು | 27–12–1999 | 16 | 16 | – | ಕೈಗಾರಿಕಾ ವಿವಾದ ಕಾಯ್ದೆ 1947ರ ಕಲಂ 18(1)ರ ಆಡಿಯಲ್ಲಿ ದ್ವಿಪಕ್ಷೀಯ ಒಪ್ಪಂದವಾಗಿರುತ್ತದೆ |

| 1 | 2 | 3 | 4 | 5 | 6 | 7 |
|---|---|---|---|---|---|---|
| 32. | ಅಡ್ವಾನ್ಸ್ ಲೈಟಿಂಗ್ಸ್ ಪ್ರೈ.ಲಿ. ತಾಂಡವಪುರ, ನಂಜನಗೂಡು | 1996–97 | 70 | | - | ಮಾಹಿತಿ ಲಭ್ಯವಿಲ್ಲ |
| 33.* | ಡನ್‌ಫೋರ್ಡ್ ಇಂಜಿನಿಯರಿಂಗ್ ಕಂ. ಬಸವನಪುರ ನಂಜನಗೂಡು | 28–1–1997 | 184 | – | – | ಉಚ್ಛ ನ್ಯಾಯಾಲಯದಲ್ಲಿ ವಿವಾದ ವಿಲೇವಾರಿಗಾಗಿ ಬಾಕಿ ಇರುತ್ತದೆ ಎಂದು ತಿಳಿದು ಬಂದಿರುತ್ತದೆ |
| 34. | ಗಂಗಾ ಫಾಸ್‌ಫೆರಸ್ ಅಂಡ್ ಕೆಮಿಕಲ್ಸ್ ನಂಜನಗೂಡು | | | – | – | ಮಾಹಿತಿ ಲಭ್ಯವಿರುವುದಿಲ್ಲ |
| 35. | ಕಬಿನಿ ಪೇಪರ್ ಮಿಲ್ಸ್ ಲಿ., ನಂಜನಗೂಡು | 1984 | 160 | 160 | | ಕಾರ್ಮಿಕರ ಒಪ್ಪಂದ ಮಾಡಿ ಕೊಂಡಿರುತ್ತಾರೆಂದು ತಿಳಿದು ಬಂದಿರುತ್ತದೆ |
| 36. | ಪ್ಯಾಂಟೇಪ್ ಮ್ಯಾಗನೆಟಿಕ್ಸ್ ನಂಜನಗೂಡು | 1994 | 80 | | | ಮಾಹಿತಿ ಲಭ್ಯವಿರುವುದಿಲ್ಲ |
| 37. | ಪ್ರಿಸಿಷನ್ ಪ್ಯಾನಲ್ ವರ್ಕ್ಸ್ ಪ್ರೈ.ಲಿ. ಇಂಡಸ್ಟ್ರೀಲ್ ಏರಿಯಾ, ನಂಜನಗೂಡು | ಏಪ್ರಿಲ್ 2002 | 122 | 122 | 89,70,228 | ದಿನಾಂಕ 17–2–2004 ರಂದು ಸಂಧಾನದಲ್ಲಿ ಒಪ್ಪಂದ ವಾಗಿರುತ್ತದೆ |
| 38.* | ರಾಮಗೋಪಾಲ ಪೇಪರ್ ಮಿಲ್ಸ್, ನಂಜನಗೂ | 3–9–1997 | 70 | – | | ಕಾರ್ಖಾನೆ ವೈಂಡ್ ಆಫ್ ಆಗಿದ್ದು, ಲಿಕ್ವಿಡೇಟರ್‌ರವರನ್ನು ನೇಮಕ ಮಾಡಲಾಗಿದೆ ಎಂದು ತಿಳಿದು ಬಂದಿರುತ್ತದೆ. |

| 1 | 2 | 3 | 4 | 5 | 6 | 7 |
|---|---|---|---|---|---|---|
| 40.* | ಸುಜಾತ ಟೆಕ್ಸ್‌ಟೈಲ್ಸ್ ಮೈಸೂರು ರಸ್ತೆ, ನಂಜನಗೂಡು | 1-10-1999 | 2140 | 2146 | – | ಇತ್ಯರ್ಥಕ್ಕಾಗಿ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದು ತಿಳಿದು ಬಂದಿರುತ್ತದೆ. |
| 41. | ಸುಂದರಂ ಪಾಲಿಮರ್ಸ್ ಲಿ. ನಂಜನಗೂಡು | – | – | – | | ಈ ಸಂಸ್ಥೆಯ ಬ್ರೇಕ್ಸ್ ಇಂಡಿಯಾ ಲಿ., ಸಂಸ್ಥೆಯೊಂದಿಗೆ ವಿಲೀನ ಗೊಂಡಿರುತ್ತದೆ ಹಾಗೂ ಚಾಲ್ತಿಯಲ್ಲಿದೆ ಎಂದು ತಿಳಿದು ಬಂದಿರುತ್ತದೆ |
| 42. | ಯುನಿಟೆಕ್ ನೀಡಲ್ಸ್ ಇಂಡಸ್ಟ್ರೀಯಲ್ ಏರಿಯಾ ನಂಜನಗೂಡು | 23-3-1994 | 15 | – | – | ಮಾಹಿತಿ ಲಭ್ಯವಿರುವುದಿಲ್ಲ |
| 43. | ಮಧು ಪೇಪರ್ ಮಿಲ್ಸ್ ರಂಗನಾಥಪುರ, ಟಿ. ನರಸೀಪುರ | 21-7-2000 | 50 | – | – | ಕಂಪನಿ ವೈಂಡ್ ಆಫ್ ಆಗಿ ಲಿಕ್ವಿಡೇಟರ್ ಇವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಕೆಎಸ್ ಐಐಡಿಸಿರವರು ಸಂಸ್ಥೆಯನ್ನು ಸೀಸ್ ಮಾಡಿರುತ್ತಾರೆಂದು ತಿಳಿದು ಬಂದಿರುತ್ತದೆ |
| 44. | ಅನಿತಾ ಸಾಸೇಜಸ್ ಫುಡ್ ಪ್ರೈ. ಲಿ., ಮಲ್ಲಿನಾಥಪುರ, ಹಣಸೂರು | | – | – | | ಮಾಹಿತಿ ಲಭ್ಯವಿರುವುದಿಲ್ಲ |

| 1 | 2 | 3 | 4 | 5 | 6 | 7 |
|---|---|---|---|---|---|---|
| 45. | ಮೆ: ವಿಷ್ಣು ಫೋರ್ಜ್ ಲಿ, ಮೈಸೂರು | 16–3–2001 | 91 | 91 | 61.7 ಲಕ್ಷ | ಕಾರ್ಖಾನೆ ಮುಚ್ಚಿದ ಬಗ್ಗೆ ದಿ: 4–5–2001ರಲ್ಲಿ ಸಂಧಾನವು ಒಪ್ಪಂದದಲ್ಲಿ ಮುಕ್ತಾಯವಾಗಿದೆ |
| 46. | ಪ್ಯಾನಲ್ ಬೋರ್ಡ್ ತಾಂಡವಪುರ, ಮೈಸೂರು | 30–10–2001 | 101 | – | – | ಕಾರ್ಖಾನೆ ಮುಚ್ಚುವಿಕೆ ಬಗ್ಗೆ ವಿವಾದವು ಕಾರ್ಮಿಕ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. |
| 47. | ಕರೀ ಸಿಲ್ಕ್ ಇಂಟರ್‌ನ್ಯಾಷನಲ್ ಲಿ., ಮೈಸೂರು | 25–1–2002 | 166 | – | – | ದಿ: 30–4–2004ರಿಂದ ತಾತ್ಕಾಲಿಕವಾಗಿ ಕಾರ್ಖಾನೆಯನ್ನು ಮುಚ್ಚಿರುವುದಾಗಿ ವರದಿಯಾಗಿದ್ದು, ಮುಚ್ಚುವಿಕೆಯ ಬಗ್ಗೆ ಆಡಳಿತ ವರ್ಗದವರು ಸರ್ಕಾರದ ಮುಂದೆ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿರುವುದಾಗಿ ತಿಳಿದುಬಂದಿದೆ ಬೀಗಮುದ್ರೆಯನ್ನು ಸರ್ಕಾರ ನಿಷೇಧಗೊಳಿಸಿದ ಆದೇಶವನ್ನು ಉಲ್ಲಂಘಿಸದ್ದರ ಬಗ್ಗೆ ಕಾರ್ಮಿಕ ಸಂಘಕ್ಕೆ ದಾವೆ ಹೂಡಲು |

| 1 | 2 | 3 | 4 | 5 | 6 | 7 |
|---|---|---|---|---|---|---|
| | | | | | | ಅನುಮತಿ ನೀಡಬಹುದೆಂದು ಸರ್ಕಾರಕ್ಕೆ ದಿನಾಂಕ 2–4–2004 ರಂದು ಶಿಫಾರಸ್ಸು ಮಾಡಲಾಗಿದೆ. |
| 48. | ಟೆಕ್ನೋ ಟೂಲ್ಸ್ ಲಿ. ಬೆಳವಾಡಿ, ಮೈಸೂರು | 8–9–2003 | 10 | 10 | 2,73,093 | ದಿ: 20–3–2004 ರಂದು ಕಾರ್ಮಿಕ ಅಧಿಕಾರಿ ಮೈಸೂರು ರವರ ಕಛೇರಿಯಲ್ಲಿ ಕೈಗಾರಿಕಾ ವಿವಾದಗಳ ಕಾಯ್ದೆ 1947ರ ಕಲಂ 12(3)ರ ಅಡಿ ಒಪ್ಪಂದ ವಾಗಿದೆ. |
| 49. | ಧ್ರುವ ಎನರ್ಜಿ ಸಿಸ್ಟಂ, ಯಾದವಗಿರಿ, ಮೈಸೂರು | 09–2–2004 | 14 | 14 | 8,30,000 | 12(3) ಒಪ್ಪಂದವಾಗಿರುತ್ತದೆ. |
| 50. | ಮೈಸೂರು ಟಾಯ್ಸ್ ಅಂಡ್ ಹೌಸ್ ವೇರ್, ಕಡಕೊಳ ಗ್ರಾಮ | 21–2–2004 | 70 | – | | ದಿನಾಂಕ 15–4–2004ರಂದು ಕೈಗಾರಿಕಾ ವಿವಾದ ಕಾಯ್ದೆಯ ಸೆಕ್ಷನ್ 18(1)ರಲ್ಲಿ ಒಪ್ಪಂದ ವಾಗಿರುತ್ತದೆ |
| 51. | ಮೋಹನ್ ವುಲ್ಲನ್ ಮಿಲ್ಸ್ ಲಿ. ಹುಣಸೂರು | 27–12–2002 | 76 | 76 | | ದಿ: 29–1–2003 ರಂದು 12(3) ಒಪ್ಪಂದವಾಗಿರುತ್ತದೆ |

| 1 | 2 | 3 | 4 | 5 | 6 | 7 |
|---|---|---|---|---|---|---|
| 52. | ಮೆ: ಮಿಲೇನಿಯಂ ಕೆಮಿ ಫಾರ್ಮ (ಮೈಸೂರು) ಪ್ರೈ.ಲಿ., | 3–10–2003 | 17 | 17 | 84,429.00 | ದಿ: 18–11–2003 ರಂದು ಉಭಯತ್ರರ ನಡುವೆ ಕೈಗಾರಿಕಾ ವಿವಾದ ಕಾಯ್ದೆಯ ಸೆಕ್ಷನ್ 18(1)ರಲ್ಲಿ ಒಪ್ಪಂದ ವಾಗಿರುವುದಾಗಿ ತಿಳಿಸಿರುತ್ತಾರೆ |
| 53. | ಡೆಬ್ಲೂಎಫ್ ಇಂಡಸ್ಟ್ರೀಸ್ ಮೇಟಗಳ್ಳಿ, ಮೈಸೂರು | 27–01–2000 | 25 | – | – | ಕಾರ್ಮಿಕ ನ್ಯಾಯಾಲಯದಲ್ಲಿ ವಿಲೇವಾರಿಗಾಗಿ ಬಾಕಿ ಇದೆ |
| 54. | ವಾಸವಿ ಸಾಫ್ಟ್ ಡ್ರಿಂಕ್ಸ್ ಮೇಟಗಳ್ಳಿ, ಮೈಸೂರು | 15–3–2001 | 20 | 20 | 8.74 ಲಕ್ಷ | ಕಾನೂನು ರೀತ್ಯಾ ಪರಿಹಾರ ನೀಡಿದ್ದು ಕೈಗಾರಿಕಾ ವಿವಾದ ಕಾಯ್ದೆಯ ಸೆಕ್ಷನ್ 18(1)ರನ್ವಯ ಇತ್ಯರ್ಥ ಮಾಡಿಕೊಂಡಿರುತ್ತಾರೆ |
| 55. | ಮೆಟಲ್ ಕಟರ್ಸ್ ಮೇಟಗಳ್ಳಿ, ಮೈಸೂರು | 16–3–2001 | 20 | 20 | 61.7 ಲಕ್ಷ | ಮೆ: ವಿಷ್ಣು ಪೋರ್ಜ್‌ನ ಅಂಗ ಸಂಸ್ಥೆಯಾಗಿದ್ದು. 3 ಸಂಸ್ಥೆಯಿಂದ 91 ಜನ ಕಾರ್ಮಿಕರು 6.17 ಲಕ್ಷ ರೂ.ಗಳ ಪರಿಹಾರ ಪಡೆದಿರುತ್ತಾರೆ |
| 56. | ಮೈಸೂರು ಕಾಫಿ ಪ್ರೊಸೆಸಿಂಗ್ ಕಂಪನಿ, ಕೆಆರ್‌ಎಸ್ ರಸ್ತೆ, ಮೈಸೂರು | 28–12–99 | 155 | 155 | 3.50 ಲಕ್ಷ | ದಿ: 7–1–2000 ರಂದು 12(3) ಅಡಿಯಲ್ಲಿ ಒಪ್ಪಂದವಾಗಿರುತ್ತದೆ |

| 1 | 2 | 3 | 4 | 5 | 6 | 7 |
|---|---|---|---|---|---|---|
| 57. | ಸ್ಟೀಲ್ ಟ್ರೇಡರ್ಸ್ ಮೇಟಗಳ್ಳಿ, ಮೈಸೂರು | 16–3–2001 | 7 | 7 | 61.7 ಲಕ್ಷ | ಮೆ: ವಿಷ್ಣು ಮೋರ್ಜ್‌ನ ಅಂಗ ಸಂಸ್ಥೆಯಾಗಿದ್ದು, 3 ಸಂಸ್ಥೆಯಿಂದ 91ರಷ್ಟು ಕಾರ್ಮಿಕರು 61.7 ಲಕ್ಷ ರೂ.ಗಳ ಪರಿಹಾರ ಪಡೆದಿರುತ್ತಾರೆ |
| 58. | ಶಿವಮೊಗ್ಗ ಕ್ಯಾಸ್ಟಿಂಗ್ಸ್ ಕೆಆರ್‌ಎಸ್. ರಸ್ತೆ, ಮೈಸೂರು | 3–6–2000 | 104 | – | | ಕಾರ್ಮಿಕ ನ್ಯಾಯಾಲಯದಲ್ಲಿ ವಿಲೇವಾರಿಗಾಗಿ ಬಾಕಿ ಇದೆ. |
| 59. | ಜೇಸನ್ ಇಂಜನಿಯರಿಂಗ್ ಕೆಆರ್‌ಎಸ್ ರಸ್ತೆ, ಮೈಸೂರು | 10–4–2001 | 35 | – | | ಕಾರ್ಮಿಕ ನ್ಯಾಯಾಲಯದಲ್ಲಿ ವಿಲೇವಾರಿಗಾಗಿ ಬಾಕಿ ಇದೆ |
| 60. | ಚಾಮುಂಡಿ ಮಿಷನ್ ಟೂಲ್ಸ್ ಕೆಆರ್‌ಎಸ್ ರಸ್ತೆ, ಮೈಸೂರು | 1–4–2001 | 78 | – | – | ಉಭಯತ್ರರ ನಡುವೆ ಒಪ್ಪಂದವಾಗಿರುತ್ತದೆ |
| 61. | ಬಿಜೆಪಿ ಸ್ಯಾಕ್ಸ್ ನಂಜನಗೂಡು ರಸ್ತೆ | 14–7–2001 | 55 | – | – | ಕಾರ್ಮಿಕ ನ್ಯಾಯಾಲಯದಲ್ಲಿ ವಿಲೇವಾರಿಗಾಗಿ ಬಾಕಿ ಇದೆ |
| 62. | ಸೌಮ್ಯ ಎಂಟರ್‌ಪ್ರೈಸಸ್ ಕೆಆರ್ ಮೊಹಲ್ಲ, ಮೈಸೂರು | 2–6–2002 | 14 | 14 | 120000.00 | ದಿ: 22–10–2002 ರಂದು 12(3)ರಲ್ಲಿ ಒಪ್ಪಂದವಾಗಿರುತ್ತದೆ |
| 63. | ಧನಲಕ್ಷ್ಮೀ ಎಂಟರ್‌ಪ್ರೈಸಸ್ ಕೆ.ಆರ್. ಮೊಹಲ್ಲ, ಮೈಸೂರು | 9–2–2002 | 13 | 13 | 168000.00 | ದಿ: 15–11–2002 ರಂದು 12(3)ರಡಿಯಲ್ಲಿ ಒಪ್ಪಂದವಾಗಿರುತ್ತದೆ |
| 64. | ಟಿಬೆಟಿಯನ್ ಕಾಫಿ ಕ್ಯೂರಿಂಗ್ ಬೈಲುಕುಪ್ಪ, ಮೈಸೂರು ಜಿಲ್ಲೆ | 12–7–2001 | 53 | – | – | ಕಾರ್ಮಿಕ ನ್ಯಾಯಾಲಯದಲ್ಲಿ ವಿಲೇವಾರಿಗಾಗಿ ಬಾಕಿ ಇದೆ |

111-4( )

| 1 | 2 | 3 | 4 | 5 | 6 | 7 |
|---|---|---|---|---|---|---|
| 65. | ಕೆನರಾ ಚಿಕೋರಿ ಲಿ., ಯಾದವಗಿರಿ ಮೈಸೂರು | 1-2-2002 | 30 | – | – | ಕಾರ್ಮಿಕ ನ್ಯಾಯಾಲಯದಲ್ಲಿ ವಿಲೇವಾರಿಗಾಗಿ ಬಾಕಿ ಇದೆ |
| 66. | ಹೆರಿಟೇಜ್ ಅಗರ್‌ಬತ್ತೀಸ್ ನಂಜನಗೂಡು | 3-4-2003 | 18 | – | – | ಕಾರ್ಮಿಕ ನ್ಯಾಯಾಲಯದಲ್ಲಿ ವಿಲೇವಾರಿಗಾಗಿ ಬಾಕಿ ಇದೆ |
| 67. | ವಾಸು ಅಗರ್ ಬತ್ತೀಸ್, ನಂಜನಗೂಡು | 3-4-2003 | 15 | – | – | ಕಾರ್ಮಿಕ ನ್ಯಾಯಾಲಯದಲ್ಲಿ ವಿಲೇವಾರಿಗಾಗಿ ಬಾಕಿ ಇದೆ |
| 68. | ಷಾ ವಾಲೇಸ್ ಹುಣಸೂರು ರಸ್ತೆ, ಮೈಸೂರು | 31-3-2004 | 16 | 16 | 464100.00 | ಕೈಗಾರಿಕಾ ವಿವಾದ ಕಾಯ್ದೆಯ ಸೆಕ್ಷನ್ 18(1)ರಡಿಯಲ್ಲಿ ಒಪ್ಪಂದವಾಗಿರುತ್ತದೆ. |
| 69. | ಮೈಸೂರು ಸೆರಾಮಿಕ್ಸ್ ಮೈಸೂರು | 1-1-2000 | 21 | 21 | – | ಆಡಳಿತವರ್ಗದವರು ಪರಿಹಾರ ನೀಡಿರುವುದಾಗಿ ತಿಳಿಸಿರುತ್ತಾರೆ |
| 70. | ಮೆಲೆಟ್ರಾಕ್ಸ್ ಇಂ ಪ್ರೈ. ಲಿ., ಮೈಸೂರು | ಜುಲೈ 2002 | 50 | 50 | – | ಆಡಳಿತ ವರ್ಗ ನೀಡಿರುವುದು ತಿಳಿಸಿರುತ್ತಾರೆ. |

| ಕ್ರ.ಸಂ. | ಜಿಲ್ಲೆಗಳ ಹೆಸರು | ರೂ. |
|---|---|---|
| 16. | ಚಾಮರಾಜನಗರ | 3,96,079 |
| 17. | ಉಡುಪಿ | 16,32,150 |
| 18. | ಧಾರವಾಡ | 2,12,000 |
| 19. | ಮೈಸೂರು | 10,19,383 |
| 20. | ಚಿಕ್ಕಮಗಳೂರು | ಇಲ್ಲ |
| 21. | ತುಮಕೂರು | 2,17,652 |
| 22. | ಕೋಲಾರ | 2,14,946 |
| 23. | ರಾಯಚೂರು | 23,84,157 |
| 24. | ಚಿತ್ರದುರ್ಗ | 76,017 |
| 25. | ದಾವಣಗೆರೆ | 7,23,716 |
| 26. | ವಿಜಾಪುರ | 3,94,983 |
| 27. | ಶಿವಮೊಗ್ಗ | 2,13,16,378 |
| | ಒಟ್ಟು | 5,29,80,869 |

## ಅನುಬಂಧ-2
## ಶಿವಮೊಗ್ಗ ಜಿಲ್ಲೆ
## ತಾಲ್ಲೂಕು ವಿವರ

| ಕ್ರ.ಸಂ. | ತಾಲ್ಲೂಕುಗಳ ಹೆಸರು | ರೂ. |
|---|---|---|
| 1. | ಶಿವಮೊಗ್ಗ | 29,81,727-00 |
| 2. | ಭದ್ರಾವತಿ | 7,81,545-00 |
| 3. | ತೀರ್ಥಹಳ್ಳಿ | 69,72,285-00 |
| 4. | ಸಾಗರ | 88,87,458-00 |
| 5. | ಸೊರಬ | 2,19,372-85 |
| 6. | ಶಿಕಾರಿಪುರ | 4,60,000-00 |
| 7. | ಹೊಸನಗರ | 10,13,990-15 |
| | ಒಟ್ಟು | 2,13,16,378-00 |

635(602) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಕ್ಕೇರಿ ಕ್ಷೇತ್ರದಲ್ಲಿ ಕೊಟಬಾಗಿ, ರುಸ್ತುಮಾಪೂರ, ದಡ್ಡಿನಾಗನೂರ ಏತ ನೀರಾವರಿಗಳು ಯಾವ ಸಾಲಿನಲ್ಲಿ ಮಂಜೂರಾಗಿರುವುದು; ಮತ್ತು ಒಂದನೇ ಹಂತದ ಕೆಲಸ ಮುಗಿದಿದೆಯೇ; ಹಾಗೂ ಎರಡನೇ ಹಂತದ ಕೆಲಸ ಯಾವಾಗ ಪ್ರಾರಂಭ ಮಾಡಿ ಮುಗಿಸುವಿರಿ; ಮತ್ತು ಇವುಗಳ ವೆಚ್ಚ ಎಷ್ಟು;

ಆ) ಚಿಕ್ಕೋಡಿ ಹೈಲೆವೆಲ್ ಕೆನಾಲ ಮತ್ತು ಕುರಣಿ ಏತ ನೀರಾವರಿ ಕೆನಾಲ, ಹರಿ ಕಾಲುವೆ, ಕೋಚರಿ ಏತ ನೀರಾವರಿ ಮತ್ತು ಹರಿ ಕಾಲುವೆ ಕೆಲಸ ಮುಗಿದು ಎಷ್ಟು ವರ್ಷಗಳಾಗಿದೆ; ಮತ್ತು ಸರಿಯಾಗಿ ಗದ್ದೆಗಳಿಗೆ ನೀರು ಒದಗುತ್ತಿದೆಯೇ; ಇದಕ್ಕೆ ಖರ್ಚು ಮಾಡಿರುವ ಹಣ ಎಷ್ಟು; (ವಿವರ ನೀಡುವುದು)

ಇ) ಈ ಕಾಲುವೆಗಳ ಹಾಗೂ ಏತ ನೀರಾವರಿಗಳ ಎಷ್ಟು ವರ್ಷದ ಉಪಯೋಗಕ್ಕೆ ಎಂದು ಪ್ರಾರಂಭ ಮಾಡಿದದ್ದು ಕಾಲುವೆವಾರು ಹಾಗೂ ಏತ ನೀರಾವರಿವಾರು ವಿವರ ನೀಡುವುದು;

ಈ) ಈ ಕಾಲುವೆಗಳು ಹಾಗೂ ಏತ ನೀರಾವರಿಗಳು ; ಉಪಯೋಗಕ್ಕೆ ಬಾರದ ರೀತಿಯಾಗಿರುವುದು ಸರ್ಕಾರದ ಗಮನಕ್ಕೆ ಓ ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾ/ ಸಚಿವರು)

ಅ) ಹುಕ್ಕೇರಿ ಕ್ಷೇತ್ರದಲ್ಲಿರುವ ಕೊಟಬಾಗಿ, ರುಸ್ತುಂಪುರ ಮತ್ತು ದಡ್ಡಿನಾಗನೂರ ಏತ ನೀರಾವರಿ ಯೋಜನೆಗಳು 1991-92ನೇ ಸಾಲಿನಲ್ಲಿ ಮಂಜೂರಾಗಿರುತ್ತವೆ.

ರುಸ್ತುಂಪುರ ಮತ್ತು ದಡ್ಡಿನಾಗನೂರ ಏತ ನೀರಾವರಿ ಯೋಜನೆಗಳ 1ನೇ ಹಂತದ ಹೆಡ್‌ವರ್ಕ್ಸ್ ಕಾಮಗಾರಿಗಳು ಮುಗಿದಿರುತ್ತವೆ ಹಾಗೂ ಕಾಲುವೆ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ.

ಕೊಟಬಾಗಿ ಏತ ನೀರಾವರಿ ಯೋಜನೆಯ 1ನೇ ಹಂತದ ಜಾಕ್‌ವೆಲ್ ಕೆಲಸ ಪೂರ್ಣಗೊಂಡಿದೆ. 1ನೇ ಹಂತದ ಕಾಲುವೆ ಕೆಲಸಗಳು ಪೂರ್ಣಗೊಂಡಿವೆ.

ಕೊಟಬಾಗಿ ಏತ ನೀರಾವರಿ ಯೋಜನೆಯ 1ನೇ ಹಂತದಲ್ಲಿ ಬಾಕಿ ಇರುವ ಪಂಪಹೌಸ್ ಡೆಲಿವರಿ ಚೇಂಬರ್ ಮತ್ತು 2ನೇ ಹಂತದ ಹೆಡ್‌ವರ್ಕ್ಸ್ ಕಾಮಗಾರಿಗಳು ಪ್ರಗತಿಯಲ್ಲಿವೆ. ಹಾಗೂ 2ನೇ ಹಂತದ ಕಾಲುವೆಗಳ ಸರ್ವೆ ಕೆಲಸ ಮುಗಿದಿದ್ದು, ಅಂದಾಜು ಪಟ್ಟಿಗಳನ್ನು ತಯಾರಿಸಲಗುತ್ತಿದೆ.

ರುಸ್ತುಂಪುರ, ದಡ್ಡಿನಾಗನೂರ ಮತ್ತು ಕೊಟಬಾಗಿ ಏತ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ 2ನೇ ಹಂತದ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಕೈಗೊಂಡಿದ್ದು, ಸದರಿ ಯೋಜನೆಗಳನ್ನು ಡಿಸೆಂಬರ್ 2005ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ರುಸ್ತುಂಪುರ, ದಡ್ಡಿನಾಗನೂರ ಮತ್ತು ಕೊಟಬಾಗಿ ಏತ ನೀರಾವರಿ ಯೋಜನೆಗಳಿಗೆ ಜೂನ್ 2004ರವರೆಗೆ ಆಗಿರುವ ಒಟ್ಟು ವೆಚ್ಚ ಅನುಕ್ರಮವಾಗಿ ರೂ. 561.33 ಲಕ್ಷ ರೂ. 425.32 ಲಕ್ಷ ಮತ್ತು ರೂ. 669.91 ಲಕ್ಷ.

ಆ) 1. ಚಿಕ್ಕೋಡಿ ಹೈ ಲೆವಲ್ ಕೆನಾಲ್ ಎಂಬ ಕಾಲುವೆ ಇರುವುದಿಲ್ಲ.

2. ಕುರ್ಣಿ 1ನೇ ಹಂತದ ಏತ ನೀರಾವರಿ ಮತ್ತು ಹರಿಕಾಲುವೆಯ ಕಾಮಗಾರಿಗಳು 1985-86ರಲ್ಲಿ ಪೂರ್ಣಗೊಂಡಿವೆ. ಕುರ್ಣಿ 2 ಹಾಗೂ 3ನೇ ಹಂತದ ಕಾಮಗಾರಿಗಳು 1995-96ರಲ್ಲಿ ಪೂರ್ಣಗೊಂಡಿವೆ. ಹರಿ ಕಾಲುವೆಗೆ ಸಮರ್ಪಕವಾಗಿ ನೀರು ಪೂರೈಸಲಾಗುತ್ತಿದೆ. ಕೊಚರಿ ಹರಿ ನೀರಾವರಿ ಯೋಜನೆ ಮತ್ತು ಏತ ನೀರಾವರಿ ಯೋಜನೆಗಳು 1986ರಲ್ಲಿ ಪೂರ್ಣಗೊಂಡಿವೆ. ಹರಿ ನೀರಾವರಿಯಲ್ಲಿ ನೀರನ್ನು ಸಮರ್ಪಕವಾಗಿ ಪೂರೈಸಲಾಗುತ್ತಿದೆ. ಏತ ನೀರಾವರಿಗೆ ಒಳಪಡುವ ಕ್ಷೇತ್ರಕ್ಕೆ ವಿದ್ಯುತ್ ಸರಬರಾಜು ಅವಲಂಭಿಸಿ ಸಮರ್ಪಕವಾಗಿ ನೀರು ಬಿಡಲಾಗುತ್ತಿದೆ.

ಕುರ್ಣಿ 1, 2 ಹಾಗೂ 3ನೇ ಹಂತದ ಏತ ನೀರಾವರಿಗಳಿಗೆ ಆಗಿರುವ ಒಟ್ಟು ವೆಚ್ಚ ರೂ.677.65 ಲಕ್ಷಗಳು. ಕೊಚರಿ ಯೋಜನೆಗೆ ಆಗಿರುವ ಒಟ್ಟು ವೆಚ ರೂ. 783.10 ಲಕ್ಷಗಳು.

ಇ) ಮೇಲ್ಕಂಡ ಏತ ನೀರಾವರಿ ಯೋಜನೆಗಳ ಪಂಪ್‌ಸೆಟ್ಟುಗಳ ಬಾಳಿಕೆ 12 ವರ್ಷವೆಂದು ಮುಖ್ಯ ಇಂಜಿನಿಯರರು, ಯಾಂತ್ರಿಕ ಸಂಸ್ಥೆ, ಬೆಂಗಳೂರು ಇವರ ಸುತ್ತೋಲೆ ಪ್ರಕಾರ ಅಳವಡಿಸಲಾಗಿದೆ.

,, ಸದರಿ ಕಾಲುವೆಗಳಿಗೆ ರೈತರು ಹಾನಿ ಮಾಡದೆ ಸಮರ್ಪಕವಾಗಿ ಉಪಯೋಗಿಸಿದರೆ ಹಾಗೂ ಸರಿಯಾಗಿ ನಿರ್ವಹಿಸಿದಾಗ ಸುಮಾರು 50 ವರ್ಷಗಳವರೆಗೆ ಬಾಳಿಕೆ ಬರುತ್ತವೆ.

ಈ) 1. ಕುರ್ಣಿ ನೀರಾವರಿ ಹರಿಗಾಲುವೆ, ಕುರ್ಣಿ 1 ಮತ್ತು 2ನೇ ಹಂತದ ಏತ ನೀರಾವರಿ ಯೋಜನೆಗಳಡಿ ನೀರನ್ನು ಕಾಲುವೆಗಳ ಮುಖಾಂತರ ಹರಿಸಲಾಗುತ್ತಿದ್ದು, ಅಧಿಸೂಚಿತ ಕ್ಷೇತ್ರಗಳಿಗೆ ನೀರನ್ನು ಪೂರೈಸಲಾಗುತ್ತಿದ್ದು, ರಾಷ್ಟ್ರೀಯ ಹೆದ್ದಾರಿ 4ರ ಕೆಲಸವು ಪ್ರಗತಿಯಲ್ಲಿದ್ದುದರಿಂದ ಏತ ನೀರಾವರಿ ಕಾಲುವೆ ಕಿ.ಮೀ. 28 ಮತ್ತು 2ನೇ ಹಂತದ ಕಿ.ಮೀ. ನಂ. 6, 7, 9 ಮತ್ತು 10ರಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನು ಕ್ರಾಸ್ ಮಾಡುತ್ತಿದ್ದು ರಾಷ್ಟ್ರೀಯ ಹೆದ್ದಾರಿಯ ಎಡ ಮತ್ತು ಬಲ ಭಾಗಗಳಲ್ಲಿ ಹಂಚು ಕಾಲುವೆ ಮತ್ತು ಲ್ಯಾಟರಲ್ಸ್ ಹಾನಿಗೀಡಾಗಿದ್ದು; ಪೂರ್ಣ ಪ್ರಮಾಣದಲ್ಲಿ ನೀರನ್ನು ಪೂರೈಸಲಾಗಿರಲಿಲ್ಲ.

ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯು ಈಗ ಮುಗಿಯುವ ಹಂತದಲ್ಲಿದ್ದು, ಕೆನಾಲಗಳನ್ನು ಪುನರ್ ನಿರ್ಮಿಸಿ ಜಮೀನುಗಳಿಗೆ ನೀರನ್ನು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

2. ಕೋಚರಿ ಹರಿ ಕಾಲುವೆಯಿಂದ 480 ಹೆಕ್ಟೇರಿಗೆ ಅಧಿಸೂಚನೆ ಹೊರಡಿಸಿದ್ದು 400 ಹೆ. ಜಮೀನುಗಳಿಗೆ ನೀರನ್ನು ಪೂರೈಸಲಾಗುತ್ತಿದೆ. ಈ ಕಾಲುವೆಯ ಒಟ್ಟು ಉದ್ದ 20 ಕಿ.ಮೀ. ಇದ್ದು, 12 ಕಿ.ಮೀ. ವರೆಗೆ ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ 8 ಕಿ.ಮೀ. ಗಳಲ್ಲಿ ಹೊಲಗಾಲುವೆ ನಿರ್ಮಿಸಲು ರೈತರು ಅಡ್ಡಿಪಡಿಸಿದ್ದು, ಇದರಿಂದಾಗಿ ಪೂರ್ಣ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಪೂರೈಸಲು ತೊಂದರೆಯಾಗಿರುತ್ತದೆ. ಇದನ್ನು ಸರಿಪಡಿಸಿ ನೀರು ಪೂರೈಸಲು ತ್ವರಿತ ಕ್ರಮ ಕೈಗೊಳ್ಳಲಾಗುತ್ತಿದೆ.

05(1) : ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೆ;

ಆ) ಹಾಗಿದ್ದಲ್ಲಿ ಯಾವಾಗ ಸ್ಥಾಪನೆಯಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

76(290) ಶ್ರೀ ರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಪ್ರಕರಣಗಳ ಸಂಖ್ಯೆ ಎಷ್ಟು. (ಸಿವಿಲ್ ಮತ್ತು ಕ್ರಿಮಿನಲ್ ಪ್ರತ್ಯೇಕವಾಗಿ)

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ದಿನಾಂಕ 1-6-2004ರ ಅಂತ್ಯಕ್ಕೆ ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ 10,55,56 ಪ್ರಕರಣಗಳು ಬಾಕಿ ಇವೆ.

ಸಿವಿಲ್ ಪ್ರಕರಣಗಳು ಕ್ರಿಮಿನಲ್ –

ಪ್ರಕರಣಗಳು –

394 (247) : ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರಿ ಶಾಲೆಗಳ ಪೈಕಿ ಹಾಲಿ ಮುಚ್ಚಲ್ಪಟ್ಟಿರುವಂತಹ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಸದರಿ ಶಾಲೆಗಳನ್ನು ಮುಚ್ಚಲು ಕಾರಣಗಳೇನು;

ಇ) ಶಾಲೆಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವ ಅಥವಾ ಕಟ್ಟಡದ ದುರಸ್ತಿ ಕಾರಣದಿಂದ ಮುಚ್ಚಲ್ಪಟ್ಟಿದೆಯೇ;

ಈ) ಈ ರೀತಿಯ ಶಾಲೆಗಳು ಚಿಕ್ಕಮಗಳೂರಿನಲ್ಲಿ ಎಷ್ಟಿವೆ ಹಾಗೂ ಅವುಗಳನ್ನು ಪುನಃ ತೆರೆಯಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? (ವಿವರ ಒದಗಿಸುವುದು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ ಒಟ್ಟು 2892 ಸರ್ಕಾರಿ ಪ್ರೌಢಶಾಲೆಗಳಿದ್ದು, ಯಾವ ಪ್ರೌಢ ಶಾಲೆಯನ್ನೂ ಮುಚ್ಚಲ್ಪಟ್ಟಿರುವುದಿಲ್ಲ. ರಾಜ್ಯದಲ್ಲಿ ಆಸ್ತಿತ್ವದಲ್ಲಿರುವ ಒಟ್ಟು 43.239 ಸರ್ಕಾರಿ ಪ್ರಾಥಮಿಕ ಶಾಲೆಗಳ ಪೈಕಿ 153 ಪ್ರಾಥಮಿಕ ಶಾಲೆಗಳು ಮುಚ್ಚಿರುತ್ತವೆ. (ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ).

ಆ) ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಕಾರಣ ಶಾಲೆಗಳನ್ನು ಮುಚ್ಚಲಾಗಿದೆ.

ಇ) ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವ ಕಾರಣದಿಂದ ಶಾಲೆಗಳನ್ನು ಮುಚ್ಚಲಾಗಿದೆ. ಕಟ್ಟಡ ದುರಸ್ತಿಯ ಕಾರಣದಿಂದ ಶಾಲೆ ಮುಚ್ಚಿರುವುದಿಲ್ಲ.

ಈ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 41 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚಲಾಗಿದೆ. ಸ್ಥಳೀಯ ಅವಶ್ಯಕತೆಗಳ ಆಧಾರದ ಮೇಲೆ ಅಗತ್ಯವಿದ್ದಲ್ಲಿ ಪುನ: ಈ ಶಾಲೆಗಳನ್ನು ತೆರೆಯುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

**ಜಿಲ್ಲಾವಾರು ಮಾಹಿತಿ**

| ಕ್ರಸಂ. | ಜಿಲ್ಲೆಯ ಹೆಸರು | ಶಾಲೆಗಳ ಸಂಖ್ಯೆ |
|---|---|---|
| 1. | ಬೆಂಗಳೂರು ಉತ್ತರ | ಇಲ್ಲ |
| 2. | ಬೆಂಗಳೂರು ದಕ್ಷಿಣ | 01 |
| 3. | ಬೆಂಗಳೂರು ಗ್ರಾಮಾಂತರ | 16 |
| 4. | ಕೋಲಾರ | ಇಲ್ಲ |
| 5. | ಚಿಕ್ಕಬಳ್ಳಾಪುರ | 06 |
| 6. | ತುಮಕೂರು | 07 |
| 7. | ಮಧುಗಿರಿ | 12 |
| 8. | ಶಿವಮೊಗ್ಗ | 07 |
| 9. | ಚಿತ್ರದುರ್ಗ | ಇಲ್ಲ |
| 10. | ಧಾವಣಗೆರೆ | ಇಲ್ಲ |
| 11. | ಮೈಸೂರು | 01 |
| 12. | ಚಾಮರಾಜನಗರ | 04 |
| 13. | ಮಂಡ್ಯ | 10 |
| 14. | ಹಾಸನ | 28 |
| 15. | ಚಿಕ್ಕಮಗಳೂರು | 41 |
| 16. | ಕೊಡಗು | 02 |
| 17. | ದಕ್ಷಿಣ ಕನ್ನಡ | ಇಲ್ಲ |

| ಕ್ರ.ಸಂ. | ಜಿಲ್ಲೆಯ ಹೆಸರು | ಶಾಲೆಗಳ ಸಂಖ್ಯೆ |
|---|---|---|
| 18. | ಉಡುಪಿ | 06 |
| 19. | ಬೆಳಗಾಂ | ಇಲ್ಲ |
| 20. | ಚಿಕ್ಕೋಡಿ | ಇಲ್ಲ |
| 21. | ಬಿಜಾಪುರ | ಇಲ್ಲ |
| 22. | ಬಾಗಲಕೋಟೆ | ಇಲ್ಲ |
| 23. | ಧಾರವಾಡ | 01 |
| 24. | ಗದಗ್ | ಇಲ್ಲ |
| 25. | ಹಾವೇರಿ | ಇಲ್ಲ |
| 26. | ಉತ್ತರ ಕನ್ನಡ | 04 |
| 27. | ಗುಲ್ಬರ್ಗಾ | ಇಲ್ಲ |
| 28. | ಯಾದಗಿರಿ | ಇಲ್ಲ |
| 29. | ಬಳ್ಳಾರಿ | 07 |
| 30. | ರಾಯಚೂರು | ಇಲ್ಲ |
| 31. | ಕೊಪ್ಪಳ | ಇಲ್ಲ |
| 32. | ಬೀದರ್ | ಇಲ್ಲ |
| | ಒಟ್ಟು | **153** |

679 (636) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ನಗರ ಪ್ರದೇಶದಲ್ಲಿರುವ ರಸ್ತೆಗಳು ಡಾಂಬರೀಕರಣವಿಲ್ಲದೇ ಅವ್ಯವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗುರುವಾಯನಕೆರೆಯಿಂದ ಬೆಳ್ತಂಗಡಿ ಪೇಟೆಯ ಸೇತುವೆಯವರೆಗಿನ ನಗರ ವ್ಯಾಪ್ತಿಯ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸಿ ದ್ವಿಮುಖ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)

ಇ) ಅತೀ ಹೆಚ್ಚು ವಾಹನ ಸಂಚಾರ ದಟ್ಟಣೆಯಿರುವ ಈ ರಸ್ತೆಯನ್ನು ಕೂಡಲೇ ಕಾಂಕ್ರೀಟಿಕರಣಗೊಳಿಸಲು ಕ್ರಮ ಜರುಗಿಸಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳ್ತಂಗಡಿ-ನಗರ ಪ್ರದೇಶದಲ್ಲಿರುವ ರಸ್ತೆಗಳು ಬೆಳ್ತಂಗಡಿ ನಗರಸಭಾ ವ್ಯಾಪ್ತಿಯಲ್ಲಿದ್ದು, ಲೋಕೋಪಯೋಗಿ ಇಲಾಖೆಯ ಕಾರ್ಯ ವ್ಯಾಪ್ತಿಗೆ ಬರುವುದಿಲ್ಲ.

ಆ) ಮೇಲೆ ತಿಳಿಸಿದಂತೆ, ಸದರಿ ರಸ್ತೆಯು ನಗರಸಭಾ ವ್ಯಾಪ್ತಿಯಲ್ಲಿ ಬರುವುದರಿಂದ, ಈ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸಿ ದ್ವಿಮುಖ ರಸ್ತೆಯನ್ನಾಗಿ

ಮಾಡುವ ಯಾವುದೇ ಪ್ರಸ್ತಾವನೆ ಲೋಕೋಪಯೋಗಿ ಇಲಾಖೆಯ ಮುಂದಿರುವುದಿಲ್ಲ.

ಇ) ಉಪ ಪ್ರಶ್ನೆ (ಆ)ರಲ್ಲಿನ ಉತ್ತರದಿಂದಾಗಿ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

**ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ)ಯವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 636ಕ್ಕೆ ಪೂರಕ ಟಿಪ್ಪಣಿ**

ಬೆಳ್ತಂಗಡಿ ನಗರ ಪ್ರದೇಶದಲ್ಲಿರುವ ರಸ್ತೆಗಳು ಬೆಳ್ತಂಗಡಿ ನಗರಸಭಾ ವ್ಯಾಪ್ತಿಗೆ ಬರುವುದಿದ್ದು, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಗುರುವಾಯನಕೆರೆಯಿಂದ ಬೆಳ್ತಂಗಡಿ ಪೇಟೆಯ ಸೇತುವೆ ರಸ್ತೆಯು ಕಡೂರು-ಕಾಂಇಂಗಾಡ್ ರಾಜ್ಯ ಹೆದ್ದಾರಿ (ನಂ. 64) ರಸ್ತೆಯಾಗಿದ್ದು, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಈ ರಸ್ತೆಯ ಕಿಮೀ. 129.80 ರಿಂದ 133.60 ವರೆಗಿನ ಕ್ಯಾರೇಜ್‌ವೇ ಅಗಲವು 7.50 ಕಿಮೀ. ಇದ್ದು ಉಳಿದಂತೆ ಗುರುವಾಯನಕೆರೆ ಪೇಟೆ ಭಾಗ, ಮಸೀದಿ ಹತ್ತಿರ ಹಾಗೂ ಬೆಳ್ತಂಗಡ್ಡಿ ಸೇತುವೆಯ ಕೂಡು ರಸ್ತೆ ಭಾಗದಲ್ಲಿ 5.50 ಮೀ. ಅಗಲ ವಿರುತ್ತದೆ. ಈ ರಸ್ತೆಯನ್ನು ಕಿಮೀ. 124.80 ರಿಂದ 135.00 ವರೆಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ನಿರ್ವಹಣೆ ಕಾಮಗಾರಿಯನ್ನು ಕೈಗೊಂಡು ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿಡಲಾಗಿದೆ. ಸದರಿ ರಸ್ತೆಯು ನಗರಸಭಾ ವ್ಯಾಪ್ತಿಯಲ್ಲಿ ಬರುವುದರಿಂದ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಿಂದಾಗಲೀ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದಾಗಲೀ ಕಾಂಕ್ರೀಟೀಕರಣಗೊಳಿಸಿ ದ್ವಿಮುಖ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆಯು ಸರ್ಕಾರದಲ್ಲಿ ಇರುವುದಿಲ್ಲ. ಕಡೂರು ಬಂಟ್ವಾಳ ರಸ್ತೆಯನ್ನು ರಾಜ್ಯ ಹೆದ್ದಾರಿಯ ಮೂರು ವರ್ಷಗಳ ನಿರ್ವಹಣೆಯ ಯೋಜನೆಯ ಅಡಿಯಲ್ಲಿ ಜೂನ್ 2001ರಲ್ಲಿ ನಿರ್ವಹಣೆ ಪ್ರಾರಂಭಿಸಿ ಜೂನ್ 2004ರಲ್ಲಿ ಮುಕ್ತಾಯಗೊಳಿಸಲಾಗಿದೆ.

8 (29) : ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) ಶ್ರೀ ಧರ್ಮಸಿಂಗ್ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರತಿ ವರ್ಷ ಬಡತನ ರೇಖೆಯ ಕೆಳಗಿರುವ ಮಹಿಳೆಯರಿಗೆ ಉಚಿತ ಸೀರೆ ಮತ್ತು ಉಚಿತ ಬೆಡ್‌ಶೀಟ್ ನೀಡಲು ಸರ್ಕಾರ ತೀರ್ಮಾನಿಸಿದೆಯೇ;

ಆ) ಈ ಯೋಜನೆ ಎಂದಿನಿಂದ ಜಾರಿಗೆ ಬರಲಿದೆ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಇಲ್ಲ

ಆ) ಅನ್ವಯಿಸುವುದಿಲ್ಲ.

412(509) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯು 2004ರ ವರೆಗೆ ಹೊಂದಿರತಕ್ಕಂತಹ ಒಟ್ಟು ಸಾಲ ಮತ್ತು ಬಡ್ಡಿ ಎಷ್ಟು;

ಆ) 2004ರವರೆಗೆ ನ್ಯಾಷನಲ್ ಸೇವಿಂಗ್ ಸರ್ಟಿಫಿಕೇಟ್ ಮತ್ತು ಇಂದಿರಾ ವಿಕಾಸ ಪತ್ರಗಳು ಎರಡು ಬಾರಿ ಇಮ್ಮಡಿಯಾಗಿದ್ದು ಇದರ ಮೊತ್ತ ಎಷ್ಟು; ಈ ಹಣವನ್ನು ರೈತ ಸದಸ್ಯರಿಗೆ ಕೂಡಲ ಹಂಚುವಂತೆ ಕ್ರಮ ಕೈಗೊಳ್ಳಲಾಗುವುದೇ;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಕಾರ್ಖಾನೆ ಜುಲೈ 2004ರವರೆಗೆ ಒಟ್ಟು ಕೊಡತಕ್ಕ ಸಾಲ ಹಾಗೂ ಬಡ್ಡಿ ವಿವರ ಈ ಕೆಳಕಂಡಂತೆ ಇರುತ್ತದೆ.

1. ಸಕ್ಕರೆ ದಾಸ್ತಾನಿನ ಮೇಲೆ ಸಕ್ಕರೆ ಅಡುವಿನ ಸಾಲ ರೂ. 78.00 ಕೋಟಿ
2. ಸ್ಟೋರ್ ಮೆಟೀರಿಯಲ್ ಮೇಲೆ ಅಡುವಿನ ಸಾಲ ರೂ. 00.28 ಕೋಟಿ
3. ಸ್ಪಿರಿಟ್ ದಾಸ್ತಾನಿನ ಮೇಲೆ ಅಡುವಿನ ಸಾಲ ರೂ. 1.46 ಕೋಟಿ
4. 2004-05ನೇ ಪೂರ್ವ ಹಂಗಾಮಿನ ಸಾಲ ರೂ. 00.96 ಕೋಟಿ
5. ಟ್ರಕ್, ಡಂಪರ್ ಹಾಗೂ 1 ಟ್ರಾಕ್ಟರ್ ಟ್ರಾಲಿ ವಾಹನಗಳ ಅಡುವಿನ ಸಾಲ ರೂ. 00.13 ಕೋಟಿ

   2002-03ನೇ ಆರ್ಥಿಕ ವರ್ಷದಲ್ಲಿ ದೇಶಿ ಸಕ್ಕರೆ ಮಾರುಕಟ್ಟೆ ಕುಸಿದ ಕಾರಣ ದುಡಿಯುವ ಬಂಡವಾಳ ಸಾಲ ಖಾತೆಗೆ ಉಂಟಾದ ಶಾರ್ಟೀ ಮಾರ್ಜಿನ್‌ನ ಮಧ್ಯಮಾವಧಿ ಸಾಲಬಾಕಿ ರೂ. 22.76 ಕೋಟಿ

   ಒಟ್ಟು ಬಾಕಿ 103.59 ಕೋಟಿ

ಆ) 2004ರವರೆಗೆ ಇಂದಿರಾ ವಿಕಾಸ್ ಪತ್ರ ಹಾಗೂ ಕಿಸಾನ್ ವಿಕಾಸ್ ಪತ್ರಗಳು ಒಮ್ಮೆ ಮಾತ್ರ ಇಮ್ಮಡಿಯಾಗಿದ್ದು ಒಟ್ಟು ಕೊಡತಕ್ಕ ಹಣ 1099 ಕೋಟಿ ರೂ. ಆಗಿರುತ್ತದೆ. ಕಾರ್ಖಾನೆಯ ಆರ್ಥಿಕ ಸ್ಥಿತಿ ಸುಧಾರಿಸಿದ ಮೇಲೆ ಹಂತ ಹಂತವಾಗಿ ಆದ್ಯತೆ ಮೇರೆಗೆ ಪಾವತಿ ಮಾಡಲಾಗುತ್ತದೆ. ನ್ಯಾಷನಲ್ ಸೇವಿಂಗ್ ಸರ್ಟಿಫಿಕೇಟಗಳನ್ನು ರೈತರಿಗೆ ಹಂಚಿದ್ದ ಪ್ರಯುಕ್ತ ಹಿಂದಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

454(623) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ಪ್ರವೇಶ ನೀಡಿಕೆಯಲ್ಲಿ ರೋಸ್ಟರ್ ಪದ್ಧತಿ ಅನುಸರಿಸದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರೋಸ್ಟರ್ ಪದ್ಧತಿ ಅನುಸರಿಸದಿರುವ ಶಿಕ್ಷಣ ಸಂಸ್ಥೆಗಳು ಯಾವುವು ಹಾಗೂ ಅಂತಹ ಶಿಕ್ಷಣ ಸಂಸ್ಥೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು;

ಇ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ನೀಡುತ್ತಿರುವ ಅನುದಾನದ ಮೊತ್ತ ಎಷ್ಟು (ಶಿಕ್ಷಣ ಸಂಸ್ಥೆವಾರು ಮಾಹಿತಿ ನೀಡುವುದು);

ಈ) ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅನುದಾನದ ವ್ಯಾಪ್ತಿಗೆ ತರುವಾಗ ವಿಧಿಸುವ ಷರತ್ತುಗಳೇನು;

ಉ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು;

ಊ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕಾರಣದಿಂದ ಅನುಮತಿ ನಿರಾಕರಿಸಲಾಗಿದೆ;

ಋ) ಹಾಗೂ ಭರ್ತಿ ಮಾಡಲು ಅನುಮತಿ ಯಾವಾಗ ಕೊಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ನೀಡುತ್ತಿರುವ ಅನುದಾನದ ಒಟ್ಟು ಮೊತ್ತ:

| | | |
|---|---|---|
| ಪ್ರಾಥಮಿಕ | – | 149.08 ಕೋಟಿ |
| ಪ್ರೌಢ | – | 375.49 ಕೋಟಿ |
| ಪದವಿ ಪೂರ್ವ | – | 10,725.54 ಲಕ್ಷ |
| ತಾಂತ್ರಿಕ ಶಿಕ್ಷಣ | – | 145.00 ಲಕ್ಷ |
| ಕಾಲೇಜು ಶಿಕ್ಷಣ | – | 22,832.90 ಲಕ್ಷ |

(ಶಿಕ್ಷಣ ಸಂಸ್ಥೆವಾರು ಮಾಹಿತಿ ಲಗತ್ತಿಸಿದೆ)

ಈ) 1) ಮೂಲಭೂತ ಸೌಲಭ್ಯಗಳಾದ ಕಟ್ಟಡ, ಆಟದ ಮೈದಾನ, ಪಾಠೋಪಕರಣ, ಪೀಠೋಪಕರಣ ಶೌಚಾಲಯ ಇತ್ಯಾದಿ ಸೌಲಭ್ಯಗಳನ್ನು ಹೊಂದಿರಬೇಕು.

2) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ನಿಗಧಿತ ವಿದ್ಯಾರ್ಥಿ ಸಂಖ್ಯೆಯನ್ನು ಶಿಕ್ಷಣ ಕಾಯ್ದೆ ನಿಯಮಾನುಸಾರ ಹೊಂದಿರಬೇಕು.

3) ಶಿಕ್ಷಣ ಕಾಯ್ದೆಯನ್ವಯ ನಿಗಧಿತ ವಿದ್ಯಾರ್ಹತೆ ಹೊಂದಿದ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿರಬೇಕು ಮತ್ತು ಮೀಸಲಾತಿ ನಿಯಮವನ್ನು ಪಾಲಿಸಬೇಕು.

4) ಪ್ರತಿ ವರ್ಷ ಶೈಕ್ಷಣಿಕ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು.

5) ಕಾಲ ಕಾಲಕ್ಕೆ ಸರ್ಕಾರದಿಂದ ಹೊರಡಿಸಲಾಗುವ ಆದೇಶಗಳನ್ನು ಮತ್ತು ಸುತ್ತೋಲೆಗಳನ್ನು ಪಾಲಿಸಬೇಕು.

6) ಆಡಳಿತ ಮಂಡಳಿಯು ನೇಮಕಾತಿ ನಿಯಮಗಳನ್ನು ಹಾಗೂ ಶಿಕ್ಷಣ ಸಂಹಿತೆಯ ಎಲ್ಲಾ ಷರತ್ತುಗಳನ್ನು ಪೂರೈಸಿರಬೇಕು ಹಾಗೂ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೆಚ್ಚಿಸಿಕೊಂಡು ಕಾಯ್ದುಕೊಳ್ಳತಕ್ಕದ್ದು.

7) ಆಡಳಿತ ಮಂಡಳಿಯು ಮಾಡಿರುವ ನೇಮಕಾತಿಗಳು ಈಗಾಗಲೇ ಸರ್ಕಾರವು ಅನುಮೋದಿಸಿರುವ ಅಂಗೀಕೃತ ಸಿಬ್ಬಂದಿ ನಮೂನೆಯಲ್ಲಿರತಕ್ಕದ್ದು.

8) ಆಡಳಿತ ಮಂಡಳಿಯು ಖಾಲಿ ಹುದ್ದೆಗಳನ್ನು ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಿ ಆ ಹುದ್ದೆಗಳನ್ನು ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಂದ ತುಂಬಬೇಕು. ಇದರ ಜೊತೆಗೆ ಮುಂದೆಯೂ ನಿಯಮಾನುಸಾರ ಎಸ್.ಸಿ : ಎಸ್.ಟಿ ಅಭ್ಯರ್ಥಿಗಳ ಜೊತೆಗೆ ಇತರೆ ಹಿಂದುಳಿದ ವರ್ಗಗಳ ನೇಮಕಾತಿ ಮಾಡಿಕೊಂಡು ಮೀಸಲಾತಿ ಅನುಪಾತ ಸರಿದೂಗಿಸಿಕೊಳ್ಳತಕ್ಕದ್ದು.

9) ಪ್ರತಿ ವರ್ಷವೂ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

10) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳನ್ನು ಅನುದಾನದ ವ್ಯಾಪ್ತಿಗೆ ತರುವಾಗ ಕರ್ನಾಟಕ ಶಿಕ್ಷಣ ಕಾಯ್ದೆ 1983ರಲ್ಲಿನ ಷರತ್ತುಗಳನ್ನು ಪೂರೈಸಿರಬೇಕು.

ಉ) ಖಾಲಿ ಇರುವ ಹುದ್ದೆಗಳ ವಿವರ:

| | | |
|---|---|---|
| ಪ್ರಾಥಮಿಕ | – | 430 |
| ಪ್ರೌಢ | – | 2120 |
| ತಾಂತ್ರಿಕ | – | 547 |
| ಕಾಲೇಜು ಶಿಕ್ಷಣ | – | 2818 |
| ಪದವಿ ಪೂರ್ವ | – | 64 |

ಊ) ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ 2144 ಹೆಚ್ಚುವರಿ ಶಿಕ್ಷಕರು ಇರುವ ಕಾರಣದಿಂದ ದಿನಾಂಕ 1–6–99 ರಿಂದ ಸಾಮಾನ್ಯ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ದಿನಾಂಕ 23–1–2002 ರಿಂದ ಅಲ್ಪಸಂಖ್ಯಾತ ಶಾಲೆಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಸರ್ಕಾರವು ನಿಷೇಧಿಸಿದೆ.

ಪ್ರೌಢ ಶಿಕ್ಷಣ / ತಾಂತ್ರಿಕ / ಕಾಲೇಜು ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದ ಆದೇಶದ ಸಂಖ್ಯೆ: ಆಇ 2 ಬಿಇಎಂ 2003, ದಿನಾಂಕ 12–01–2004ರ ಪ್ರಕಾರ ಆರ್ಥಿಕ ಮಿತವ್ಯಯ ಜಾರಿಗೆ ತಂದಿರುವ ಹಿನ್ನೆಲೆಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನಿರಾಕರಿಸಲಾಗಿದೆ.

ಋ) ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ 249ರ (ಇ)ಗೆ ಸಂಬಂಧಿಸಿದಂತೆ ಉತ್ತರ 73

(B) 025236



## Department of Collegiate Education
## Statement showing the Budget estimates of Private Aided Colleges for the year 2004-05 2202-03-104-1-01-101
## Abstract

| Sl. No. | Name of the Region | Budget estimates of Private Colleges coming under City jurisdiction | Budget estimates of Private Colleges coming under Rural jurisdiction | Total Budget estimates of Private Colleges both Urban & Rural |
|---|---|---|---|---|
| 1. | Bangalore | 3894.54 | 1489.45 | 5383.99 |
| 2. | Mysore | 853.07 | 1297.09 | 2150.16 |
| 3. | Shimoga | | 1786.40 | 1786.40 |
| 4. | Mangalore | 1155.68 | 2104.91 | 3260.59 |
| 5. | Gulbarga | 526.06 | 1915.53 | 2441.59 |
| 6. | Dharwad | 2435.45 | 5374.72 | 7810.17 |
| | **Total** | **8864.80** | **13968.10** | **22832.90** |

| Accounts for the year 2002-03 | Budget estimates for the year 2003-04 | Budget estimates for the year 2004-05 |
|---|---|---|
| 23642.80 | 24217.00 | 22832.90 |

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮುಬೆ. ಕಾಶೂ. 111, 350 ಪುಸ್ತಕಗಳು, ದಿನಾಂಕ: 17-9-2005